
ಶ್ರೀ ವಿವೇಕಾನಂದ ವಿಜಯಂ

-ಮಲ್ಲಿಕಾ





ಓ ಮಾನವಾ! ಅತೀತದ ಪೂಜೆಯಿಂ ಪ್ರತ್ಯ-
ಕ್ಷದ ಪೂಜೆಗೆ ನಿನಗಿದೂ ಆಹ್ವಾನ! ಗತಾನು-
ಶೋಚನೆಯಿಂ ಆಧುನಿಕ ನವ ಪ್ರಯತ್ನಕೆ ನಿನ-
ಗಿದೋ ಆಹ್ವಾನ! ಲುಪ್ತ ಪಂಥದ ಪುನರುದ್ಧ-
ರಣ ಸಾಹಸದ ವೃಥಾ ಶಕ್ತಿ ಕ್ಷಯದಿಂ ಸಧ್ಯೋ-
ನಿರ್ಮಿತ ವಿಶಾಲ ಸನ್ನಿಕಟ ಪಂಥಕೆ ನಿನಗಿದೋ
ಆಹ್ವಾನ! ಓ, ಬುದ್ಧಿಮಾನ್ ಮಾನವಾ! ಇದಂ
ತಿಳಿದು ನೀಂ ಸಿದ್ಧನಾಗು, ಪ್ರಬುದ್ಧನಾಗು! ಆವ
ಶಕ್ತಿಯಾ ಉನ್ಮೇಷ ಮಾತ್ರದಿಂ ದಿಗ್ದಿಗಂತ
ವ್ಯಾಪಿಯಾದ ಪ್ರತಿಧ್ವನಿಯಿಂದ ಜಗಜಾಗ್ರತ-
ಮಾದಪುದೋ ಆ ಶಕ್ತಿಯ ಪೂರ್ಣತ್ವವಂ- ಪರಿ
ಭಾವಿಸಿ ಅನುಭವಿಸು! ವೃಥಾ ಸಂದೇಹ ಬೇಡ,
ದುರ್ಬಲತೆ ಬೇಡ! ದಾಸಜಾತಿ ಸುಲಭ ಈರ್ಷ್ಯಾ
ದ್ವೇಷಗಳನು ದೂರಗೈದು ಈ ಮಹಾಯುಗಚಕ್ರ
ಪರಿವರ್ತನೆಯ ಸಹಾಯಾರ್ಥಂ ಹೆಗಲುಕೊಟ್ಟು
ನಿಲ್ಲು; ಸೊಂಟ ಕಟ್ಟಿ ನಿಲ್ಲು; ಧೀರನಾಗಿ ನಿಲ್ಲು!

ಶ್ರೀವಿವೇಕಾನಂದ ವಿಜಯಂ

-ಮಲ್ಲಿಕಾ

SRI VIVEKANANDA VIJAYAM—Written by Mallika
Pages : 1274 Price : Rs. 600/- Year : 1998

ಶ್ರೀಮದ್ಗುರು ಪಾದಾರ್ಪಣಮಸ್ತು

ಲೇಖಕರು ✿ ಪ್ರಕಾಶಕರು :

ಲಕ್ಷ್ಮೀ ಪ್ರಕಾಶನ
359, ಕಡಿದಾಳ್ ನಿಲಯ
ಸದಾಶಿವನಗರ
ಬೆಂಗಳೂರು-560 080

ಮುದ್ರಕರು :
ಶ್ರೀರಂಗ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಭವಾನಿನಗರ, ಬೆಂಗಳೂರು - 19
☎ : 6524757, 6679333

ಮಲ್ಲಿಕಾ ವಿರಚಿತ ಮಹಾಕಾವ್ಯ ''ಶ್ರೀ ವಿವೇಕಾನಂದ ವಿಜಯಂ'' ಕರ್ನಾಟಕ ಸರಕಾರದಿಂದ ಒಂದು ಲಕ್ಷ ರೂಪಾಯಿಗಳ ಉದಾರವಾದ ಅನುದಾನವನ್ನು ಪಡೆದ ಮಹತ್ಕೃತಿ. ಭಾರತ ರಾಷ್ಟ್ರದಲ್ಲಿ ಇದುವೇ ಪ್ರಪ್ರಥಮವಾಗಿ ಮಹಾಕಾವ್ಯರೂಪದಲ್ಲಿ ಮೂಡಿ ಪ್ರಕಾಶಿತವಾದ ಶ್ರೀ ವಿವೇಕಾನಂದರ ಸಂಜೀವನ ವಾಹಿನಿ.

ಆಶ್ವಯುಜ ಚತುರ್ದಶಿ ಬುಧವಾರ

ಈ ಸತ್ಕೃತಿಯನೊರೆಯಲೆನಗೆ ಆವ
ದೈವೀಶಕ್ತಿಯು ಪ್ರೇರಣೆಯನಿತ್ತುದೊ
ಅದೇ ಮಹಾನ್ ಶಕ್ತಿಯು ದಿನದಿನಂ
ಹೇಳಿ ಬರೆಯಿಸಿರೆ ಆನಲ್ಲ ಕವಯಿತ್ರಿ
ಲೇಖನಿಯ ಮಸಿಯೊರತೆಯ ಹರಿಸಿದುದು
ಮಾತ್ರಮೆ ಎನ್ನಯ ನಿಜ ಕಾಯಕ ಕಣಾ !

ಮಲ್ಲಿಕಾ

ಉತ್ತಿಷ್ಠತ ! ಜಾಗ್ರತ !
ಪ್ರಾಪ್ಯವರಾನ್ ನಿಬೋಧತ !

"ಶ್ರೀ ವಿವೇಕಾನಂದ ವಿಜಯಂ"
ಮಹಾಕಾವ್ಯ ಲಕ್ಷ್ಮೀ ಪ್ರಕಾಶನದ
೫೫ನೆಯ ಕೃತಿರತ್ನವಾಗಿ
ಪ್ರಕಟವಾಗಿದೆ.







ಸ್ವರ್ಣಮಯೀ ದೇವಿ (ವಿವೇಕಾನಂದರ ಅಕ್ಕ)



ಭುವನೇಶ್ವರಿ ದೇವಿ (ವಿವೇಕಾನಂದರ ಮಾತೆ)




ಭೂಪೇಂದ್ರನಾಥ ದತ್ತ (ವಿವೇಕಾನಂದರ ತಮ್ಮ)




ಮಹೇಂದ್ರನಾಥ ದತ್ತ (ವಿವೇಕಾನಂದರ ತಮ್ಮ)










ಸೋದರಿ ಕ್ರಿಸ್ಟೀನ್

ಸೋದರಿ ನಿವೇದಿತಾ





ಚಿಕಾಗೋ ಅಧಿವೇಶನದ ವೇದಿಕಿಯ ಮೇಲೆ ವಿವೇಕಾನಂದ








ವಿವೇಕಾನಂದ ತಮ್ಮ ಶಿಷ್ಯರೊಡನೆ



ವಿವೇಕಾನಂದರ ನಾಲ್ವರು ಶಿಷ್ಯಯರು




Thou art the father the Lord the
the husband and love
Vivekananda



Kali the mother

The stars are blotted out,
The clouds are covering clouds,
It is darkness vibrant, sonant;
In the roaring whirling wind,
are the souls of a million lunatics;
Just loosed from prison house,
wrenching trees by the roots,
Sweeping all from the path.
The sea has joined the fray,
and swirls up mountain-waves,
to reach the pitchy sky.
The flash of lurid light
reveals on every side
a thousand thousand shades
of death begrimed and black,
Scattering plagues and sorrows,
Dancing mad with joy.
Come mother come.

For terror is thy name,
Death is in thy breath,
And every shaking step,
destroys a world for e'er.
time = Kali (f) Thou "time" the all destroyer.
Then come O mother come

Who dares misery love,
And hug the form of death,
Enjoy destructions dance,
To him the mother comes.

ವಿವೇಕಾನಂದರ ಹಸ್ತಾಕ್ಷರ



ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ವಿವೇಕಾನಂದ

ಮಂಡೂಕೋಪನಿಷದ್ ವಾಹಿನಿ

ಹೇ ಭೀಷ್ಮಕಾಂತ! ಶ್ರೀ ಹಿಮವಂತ! ವೇದಾಂತ
ಗಿರಿಶಿಖರ, ಭಾರತೋತ್ತಮ, ಪರಮ ವ್ಯಕ್ತಿ ಶ್ರೀ!
ಎನಿತೊಂದು ಸುರುಚಿಯೋ ನಿನ್ನ ಬಣ್ಣನೆಯ ನುಡಿ!
ಶತಮಾನದ ಗಾಲಿಯುರುಳಿಯುಂ ಕುಡಿಮಾಸದ
ಸುಂದರ – ಸುರ ಸುಂದರ ನಾಮಧೇಯದೈಸಿರಿಯ
ಹೇಳಿ ಬಿಡಲೇ ಸ್ವಾಮಿ? ಕಲುಷಿತ ಕಲಂಕಮಯ
ಮಾದೆನ್ನ ಸ್ಮೃತಿಯಲಿ ಶೃತಿಯಂ ಮೀಂಟುವೊಡೆ
ನಿನ್ನ ನಲ್ ವೆಸರುಸಿರಲೆನಗೆ ನೀನೆ ದಯೆಯಿಂ
ಅನುಮತಿಯ ನೀಡೆಲೈ ಶ್ರೀ ಮದ್ಗುರುವರನೇ!
ಕಲಿಯುಗೀಯ ಕಲಿಭೀಮ 'ಸ್ವಾಮಿ ವಿವೇಕಾನಂದ'
ನೀನೆಂದು ಹೇಳಿಬಿಡಲೇ ಹೇ ಧರ್ಮದುರಂಧರ!
ಅಹ, ಗಗನಾಕಾರಮಲ್ತೇ ತವ ದೈವದತ್ತ ವೃತ್ತಾಂತಂ?
ಅದನೆಂತಾಂ ಉಲ್ಲೇಖಿಸಲಿ ಪೇಳ್ಳೈ ಘನವಂತ?

ಓ ಪ್ರಭುವೇ! ದಿವಿಜ ನದಿಯ ಆಳನೀಳವ
ನಳೆಯೆ ಆವಾವ ಮಾನದಂಡವು ಸಲ್ಲುವುದೈ,
ಈ ಕಿರುಮನದ ಪೆಣ್ಣ ಲೆಕ್ಕಣಿಕೆಯ ಕೃತಿಗೆ?
ಇನ್ನೆಬರಮಾನು ಸಾಹಿತ್ಯ ಸರಸತಿಯ ಪದ
ಯುಗ್ಮಗಳಲಿ ಸಲ್ಲಿಸಿದ ಪರಮಾಧಿಕ್ಯ ತರಾ
ವ್ರತಬಲದಿಂ ನಿನ್ನ ಪರಿಪುಣ್ಯಚರಿತಾಮೃತ
ವಾಹಿನಿಯಳೊಂದೇ ಒಂದು ಹನಿ ಸೆರೆ ಹಿಡಿದೆನೆನ್ನೀ

ಕಿರು ಲೆಕ್ಕಣಿಕೆಯಲ್ಲಿ! ರೆಕ್ಕೆ ಬಲಿಯದ ಹಕ್ಕಿ ಮರಿ
ಎನಲ್ ಜಗದ ಚೆಂಬೆಳಕಿಗೆ ಹಾರ ಬಿಡುವೊಡೆ
ನಿನ್ನಪ್ಪಣೆಯಂ ಕಾಲ್ವಿಡಿದು ಬೇಡುವೆನಯ್
ಹೇ ಜನಮನದ ಕಲ್ಪತರುವೆ, ಶ್ರೀ ನಿಜಗುರವೆ!
ನಿನ್ನ ಕಾಲದೊಳಾನಿರಲಿಲ್ಲಂ, ನಿನ್ನ ಮಹತ್
ಕಾರ್ಯ ಕುಶಲತೆಯಂ ಸ್ವತಃ ಅರಿತು ತಿಳಿದೆನಿಲ್ಲಂ.
ಹಲ ಕೆಲವು ಗ್ರಂಥಾಂತರಂಗದೊಳ್ ಮುಳುಗೆದ್ದು
ಅಲ್ಲಲ್ಲಿ ಸಿರಿ ರತ್ನಗಳನಾಯ್ದು ಮನಗೊಂಡು
ಕೋದಿರುವೆನೀ ದಿವ್ಯ ಕಾವ್ಯಮಣಿ ಮಾಲೆಯಂ.
ಸಿರಿಗನ್ನಡ ನುಡಿಯಕ್ಕರಗಳನರಿಯದಾನು
ಕಾಲದೇಶವರಿಯದಾನು ಲೋಕಪ್ರಜ್ಞೆಯಂ
ಗಳಿಸದಾನು ಜ್ಞಾನ ವಿಜ್ಞಾನ ಸುಜ್ಞಾನ
ಪ್ರಜ್ಞಾನ ಮಂದಿರವ ಕಟ್ಟದಿಹ ಪಶುಳೆಯನೆ
ಬಾಳ್ದಾನು ಮಹಾ ಪಂಡಿತೋತ್ತಮರಾ ಮುಂತೆ
ಲೇಖಿಸಲಿಹುದೆ ನಿನ್ನಯ ಸಿರಿಚರಿತೆಯ! ಅಂದು,
ಧೂಳಾಡಿ ಮಣ್ಣಾಡಿ ಚೆಲ್ಲಾಡಿ ಕಳೆದ ದಿನ
ಮಾನಮಂ ನೆನೆದಿಂದು ಮರುಗುವೆ ಗುರವೆ! ಅಂದು
ಕಾಲದೇಶಗಳೊಲಿಯದಿರೆ ಜಗದ ಚೆಂಬೆಳಕು
ಬಾರದಾಯ್ತು ಬಾಳ್ಗುಡಿಗೆ. ಬಿಜ್ಜೆಯ ಜೇನ್ಪನಿಯು
ಒಸರದೆ ಬರಡು ಬದುಕು ಬರೀ ಕರುಣದ ಕಥೆಯ
ಕಥೆಯಾಯ್ತು. ಜೊತೆಜೊತೆಗೆ ಜಡತನಂ ಗುಡಿಗಟ್ಟಿ
ಮುಂಬೆಳೆದು ಕಂಗಳಲಿ ತರಿಸಿತು ಬಿಸುಗಂಬನಿ
ಧಾರೆಯಪ್ಪಂತೆ. ಒಡಲ ಸಂಕಟದ ಝುರಿಯುಂ
ಭುಗಿಲೆದ್ದು ಗಾಳಿಯೊಳಾಡಿ ಹಬ್ಬಿ ಹರಡಿರಲ್
ದೂರದ ಅಸಂಬಂಧಿತ ಧಾತುವಿನಿಂದೈದ

ಭ್ರಾತೃದ್ವಯರ್ ಆಲೈಸಿ ದಯೆಯಿಂ ಮುಂದೈದು
ನೆರವಿತ್ತು ಮಾನಿಸಿದುದಾಂ ನೆನೆಯದಿರಲಾರೆ.
ಸಾಹಿತ್ಯ ಸಂಸ್ಕರಣಕೆ ಚಂದ್ರಮೌಳೀಶ್ವರಂ
ಸಾಹಿತ್ಯ ಪ್ರಕಾಶನಕೆ ಮೂಡಲೇಶ್ವರಂ
ಎಡಬಲದೆರಡು ಎರೆಂಕೆಗಳ ತೆರದಲಿ ನಿಂದು
ನೆರವಿತ್ತುದೆನಗೆ ಪಾರಮಿರದ ವರವಾಯಿತ್ತು.
ಕಾವ್ಯವಾಹಿನಿಗೆ ಜೀವಾಮೃತವ ನೆರೆವಂತೆ.
ಅವರನುಂ ಎಂದಿಗುಂ ಈಶ ಪರವೇಶನುಂ
ಪರಿಪಾಲಿಸಲೆಂದೆಂದು ಬೇಳ್ದಪೆಂ ಈಯನ್ನ
ಲೆಕ್ಕಣಿಕೆಯಂ ಕೈಕೊಳುವ ಮುನ್ನಂ; ಮತ್ತಮಾ
ಅಚ್ಚಿನ ಮನೆಯಂ ಪುಗುವ ಮೊದಲ್ ಓದಿಯೋದಿ
ನಲ್ನುಡಿಯಲಿ ಹರಸಿದ ಹಿರಿಕಿರಿಯರಂ ಮನದಿ
ನೆನೆದು ಎಲ್ಲರ್ಗೆನ್ನ ವಂದನೆಯನರ್ಪಿಪೆನ್.
ಮೇಣೆಲ್ಲರ ಬದುಕಿಗೆ ಶುಭವ ಕೋರುವೆ "**ಸರ್ವೇ
ಜನಾಃ ಸುಖಿನೋ ಭವಂತು**" ಎಂದೆಂಬ ಸಮತಾ
ಮನೋಭಾವದಲಿ ಶ್ರೀ ಗುರವೇ! ಸಿರಿತರುವೇ!
    ಅಂದಿನಿಂ ಬಾವಿತಲದ ಸಂಸಾರಿಯೆನಲಾಂ
ಮಂಡೂಕವದು ಪಾಡಿದೊಡೆಂತಂತು ಪಾಡುವೆ
ನೀ ಕೃತಿಯ ಪಂಕ್ತಿ ಪಂಕ್ತಿಗಳಂ ಜ್ಞಾನವಂತ
ಜನಮಾನ್ಯರ ಮುಂತೆ! ಮಮಕೃತಿಯುಮಿದರೊಳ್
ಪೊದಳ್ದಿಲ್ಲ ತಪ್ಪೊಪ್ಪುಗಳ ಮನ್ನಿಪುದೆನುತ್ತೆ
ನಯವಿನಯದಿಂ ಬೇಳ್ದಪೆನ್ ಕರಗಳಂ ಮುಗಿದು,
ಈಯೆನ್ನ ಮಂಡೂಕೋಪನಿಷದ್ ವಾಹಿನಿಯ
ಅಕ್ಕರಕ್ಕರಗಳಲಿ ನಿವೇದನೆಯ ನುಡಿ ನುಡಿಸಿ.

ಹರಿಃ ಓಂ ತತ್ ಸತ್

ಪ್ರಾರ್ಥನೆ

ಅಜ್ಞಾನ ತಿಮಿರಾಂಧಸ್ಯ
ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ
ತಸ್ಮೈ ಶ್ರೀಗುರವೇ ನಮಃ ॥

ಪರಬ್ರಹ್ಮ ಮಹದ್ ಮಾನಸ ಗರ್ಭ ಸಂಭವೇ,
ಸತ್ಯಾರ್ಥ ಪ್ರಕಾಶಿತೇ ಪರಮ ಪವಿತ್ರ ಪ್ರಭವೇ!
ದೇವೀ ವಿಭವೇ ಶಾರದೇ ಸುರವರದೇ ಸುಂದರೀ
ಸುರಾಂಗನೇ ಪರಮ ಕಲ್ಯಾಣೀ ಭುವನೇಶ್ವರೀ!
ಮಧುರ ಮಾಯೇ ವಿಶ್ವಮೋಹಿನೀ ಗಾಯತ್ರಿ!
ಪುರಾಣೀ ಪುಣ್ಯವತೀ ಪರಾತ್ಪರೇ ತ್ರಿಲೋಕ
ಭವಭಯಹರೇ ಸುರವರ ವರದೇ ಸುರಾರ್ಚಿತೇ,
ಜ್ಞಾನದಾಯಿನಿ ಸಕಲವಿದ್ಯಾ ಸುಶೋಭಿನೀ
ಸರ್ವಾಂಗ ಸುಂದರೀ ಅಜಜಾಯೆ ವೀಣಾಪಾಣಿ!
ಭಕ್ತಜನ ಸಂಪ್ರೀತೆ ಲೋಕ ಕಲ್ಯಾಣಿ ತವ
ಪರಮ ಪಾದಗಳಿಂಗೆ ಈ ಜಡ ಶರೀರವಂ
ಉದ್ದಂಡವೆರಗಿ ಬೇಡುವೆನ್ ಭಯಭಕ್ತಿಯಿಂ.
ಕರುಣದಿಂ ಆಲಿಸೌ ಹೇ ಎನ್ನ ಜನನಿಯೇ,
ಭಾರತದ ಚಾರಿತ್ರ್ಯವಾಹಿನಿಯಲಿ ಎಂದಿಗು
ಕುಡಿಮಾಸದ ಜ್ಯೋತಿರ್ಕಿಡಿಯಾಗಿ ತೊಳಗಿ ಬೆಳಗಿ
ಉಜ್ವಲೋಜ್ವಲಿಸಿದ ಮಹಾಪುರುಷ ವರೇಣ್ಯನ
ಸಂಜೀವನವಾಹಿನಿಯ ಕನ್ನಡದ ಕಾವ್ಯರಸ
ಮಂಜರಿಯು ಕಂಪು ಪೆಂಪುಗಳ ಸೊಂಪುಕ್ಕಿ ಜಳ
ಜಳಿಸಿ ಹರಿವಂದದಿ ಹರಸೌ, ಹೃದಯರಾಗಿಣಿ!

ಛಂದ ಲಯ ರಹಿತ ಗಾನಗೇಯದದಲಿ ಸ್ವಚ್ಛಂದ
ಸ್ವಾತಂತ್ರ್ಯ ಧುನಿ ಹರಿಯಲಿ ಕನ್ನಾಡಿನ್ಯೆರ್ದೆಯ
ಕೋಗಿಲೆಗಳ್ ಪ್ರತಿಧ್ವನಿಸುವ ಮಾಳ್ಕೆಯಲಿ.
ಮೊಲ್ಲೆಬನದಲಿ ಅರಳಿದೀ ಮಲ್ಲಿಕಾ ಪೂವಳಿಯ
ತವ ಪದಾಂಬುಜಗಳಿಗೆ ಸಮರ್ಪಿಸಿ ಪೂಜಿಪೆನೊ
ನಿನ್ನ ಚೈತನ್ಯದ ಕಿರು ಹನಿಯನು ಕರುಣಿಸಿ
ಹರಸೆನ್ನನುಂ ನಮೋ ನಮೋ ಅಜನರಾಣಿ!
"ಯಾದೇವಿ ಸರ್ವಭೂತೇಷು ಚೇತನೇತ್ಯ ಬಧೀಯತೇ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ"

ಹರಿಃ ಓಂ ತತ್ ಸತ್

❋ ❋

ಭಾರತ ಮಾತೆಗೆ

ಧನ್ಯೆ ಭಾರತ ಜನನೀ! ಪುಣ್ಯವತಿ ಮಾನಿನೀ,
ತ್ರಿಲೋಕ ವಂದಿತೇ! ಪರಿಪಾವನ ಸಂಸ್ಕಾರ
ಸರ್ಪಿಣೀ ಪರಮೋಚ್ಚ ಪ್ರಜ್ಞಾನ ದಾಯಿನೀ!
ಈಶ್ವರೀ ವಿಶ್ವಂಭರಿ ಜಗನ್ಮಾತಾಮಯೀ
ಮಹಾ ಪರ್ಣಾರ್ಣದುಡೆಯಲಿ ಪಚ್ಚರಾಗಿಣೀ!
ಗಂಗಾ ಯಮುನಾ ಕೃಷ್ಣಾ ಕಾವೇರಿ ಸರಯೂ
ಭಾಗೀರಥೀ ಸರಸ್ವತಿ! ಮುಂತಪ್ಪ ಪುಣ್ಯ
ನದಿಗಳ ಕೊರಳ್ಮಾಲಾ ಸುಶೋಭಿನೀ, ದೇವಿ!
ಸಕಲ ವೈಭವೋಪೇತ ಸಿರಿಸಂಪದವಾಂತ
ಸೌಭಾಗ್ಯಶಾಲಿನಿ, ಹಿಮವತ್ ಪರ್ವತ ಶ್ರೇಣಿ

ಶಿಲೋಚ್ಛಯ ಶರೀರೆ, ವೇದವೇದಾಂತರಸ
ಪ್ರಸೂತೆ, ಸದಯಿ ಪ್ರೇಮ ಸಂಜೀವನಿ ನಿತ್ಯ
ಮಾತೃಮಯಿ ತವ ಪದಾಂಭೋಜಗಳಿಗೆನ್ನಯ
ನಮ್ರ ವಿನಮ್ರ ನಮನಂ. ನಿನ್ನ ಸರ್ವಾಂಗ
ಸುಂದರ ಉಡಿಯಲಿ ಮೂಡಿ ಲೋಕದೊಳ್ ಅದ್ಭುತ
ಕೀರ್ತಿಮಾಲೆಯಂ ಧರಿಸಿ ನಿನ್ನೊಡಲ್ ತಣಿಸಿದ
ಮನುಕುಲವ ನೆನೆದು ವಿರಚಿಸುವೆ ಕಾವ್ಯಮಾಲೆಯ
ಮುಕ್ತಮನದಿಂ ನೀನೆನ್ನ ಹರಸಮ್ಮ ತಾಯೇ!
ಸುಸಂಸ್ಕೃತಿಯ ವಜ್ರದೊಡಲಿಂದ್ಯೆದು ವಜ್ರವೆ
ಮೂರ್ತಿವೆತ್ತವೊಲ್ ವಜ್ರೋಪಮ ಮನಮತಿಯಿಂ
ಸಿಡಿಲಾಳ್ ಎನಿಸಿ ವಿಜೃಂಭಿಸಿ ಜಡತ್ವವಂ
ಮುಟ್ಟಿ ತಟ್ಟಿ ಬಡಿದೆಬ್ಬಿಸಿ ಎಚ್ಚರಿಸಿ ದಿವ್ಯ
ಜ್ಞಾನದಾ ಅಮೃತರಸದೊಳದ್ದಿ ಪುರಿದುಂಬಿಸಿ
ಸನ್ಮಾರ್ಗವಂ ತೋರ್ದು ವಿಶ್ವದಿ ವಿಖ್ಯಾತಿಯಂ
ಪಡೆದ ಲೋಕಾನುಭವಿ ಸ್ವಾಮಿವಿವೇಕಾನಂದ
ಎಂಬ ಪುಣ್ಯನಾಮವಂ ಚರಿತಾರ್ಹಗೊಳಿಸಿದ
ಯೋಗೀಶ್ವರನ ದಿವ್ಯ ಸಂಕ್ಷಿಪ್ತ ಜೀವನೀ
ಧಾರೆಯಂ ಚೆಂಬೆಳಕಿಗೆ ಇಡುವೆನ್ನೆ ಕಾವ್ಯರಸ
ರೂಪಿನಲಿ. ದೇವಗುರು ಬೃಹಸ್ಪತಿಯಂ ನಮಿಸಿ
ಗುರುಜನರ ಜನಕರಾಗಿಹ ವಿಶ್ವಾಮಿತ್ರ
ವಾಲ್ಮೀಕಿ ವಶಿಷ್ಠ ಪರಾಶರ ನಾರದ ವ್ಯಾಸ
ಜೈಮಿನಿ ಮೇಣ್ ರನ್ನ ಪಂಪ ಜನ್ನ ಕುವೆಂಪು
ಎಲ್ಲರಂ ಬೇಡ್ವೆಂ, ಅಕಿಂಚನ ಅಕುಶಲತೆಯ
ಕಾವ್ಯರಸ ಘೃತ್ ಕರಡಿಗೆಯಿಂ ಹರಿಯಲಿ ನವ
ಭಾರತದ ನಲ್ಮೆಯೌರಸ ಪುತ್ರನ ಸುಚರಿತೆಯೀ,

ವೇದಾಂತ ಪುಣ್ಯ ಕೇಸರಿಯೀ, ಅನನ್ಯತರ
ದೇವಮಾನುಷಿಯೀ, ಪರಮೋನ್ನತ ರಿಸಿಯೀ,
ಪ್ರಸಿದ್ಧ ಸುಜ್ಞಾನಿಯೀ, ಆಚಂದ್ರಾರ್ಕ ಕೀರ್ತಿ
ಶಾಲಿಯೀ, ಸನಾತನ ಧರ್ಮ ಧುರಂಧರನೀ,
ಲೋಕೋತ್ತರ ಶಿಕ್ಷಕನೀ, ವಿಶ್ವಧಾತೃವೀ,
ವಿಶ್ವನಾಥದತ್ತನ ಜ್ಞಾನಸಂಪುಟ ನಿಜ
ರತ್ನಾಭರಣನೀ, ವಿರಾಟ್ ವಿಶ್ವ ಪ್ರೇಮದ
ಖನಿಯೀ, ಭುವನೇಶ್ವರೀಯಾತ್ಮ ಪರಂ
ಜ್ಯೋತಿಯೀ, ಶ್ರೀರಾಮಕೃಷ್ಣ ಪರಮಹಂಸರ
ಮಾನಸ ಪುತ್ರನೀ, ಸ್ವಾಮಿ ವಿವೇಕಾನಂದ
ಎಂದೆಂಬ ನಲ್ಪೆಸರ್ ಪಡೆದು ನಡುಗಾಲದೊಳ್
ಆತ್ಮನಂ ಪರಮಾತ್ಮನ ಕರಕಮಲಂಗಳಿಗೆ
ಅರ್ಪಿಸಿದ ಯುಗಪ್ರವರ್ತಕನಂ ನಮಿಸಿ ನಮಿಸಿ
ಸಲಿಪೆನೆನ್ನಯ ಮನುಕುಲದ ರಿಣಂ, ಜನನಿಯೇ!
ಮಲ್ಲಿಕಾ ಕುಸುಮ ಕೋಟಿಯ ನೊತ್ತಿ ಪೂಜಿಪೆನೊ
ಪರಂಜ್ಯೋತಿಯೇ ನಿನಗೆನ್ನ ನಮನಂ. ನಮನಂ.

ಹರಿಃ ಓಂ ತತ್ ಸತ್

ಪ್ರಥಮೋಲ್ಲಾಸಂ

ಸಂಭವಾಮಿ ಯುಗೇ ಯುಗೇ

ಭಾರತವರ್ಷ! ಹೇ ಪುಣ್ಯಭೂಮಿ ಭಾರತವರ್ಷ!!
ನಿನ್ನ ಪರಮ ಉಡಿಯಲಿ ಮೂಡಿ ಧ್ರುವ ನಕ್ಷತ್ರದ
ಪಾಂಗಿನಲಿ ವಿಜೃಂಭಿಸಿದ ಧೀರಾತಿಧೀರರ
ಮೇಣ್ ಸಂಭವಾಮಿ ಯುಗೇ ಯುಗೇ ಎಂದವನ
ನೆನೆವೆನಿಂದು ಮನದಿ ಪರಮಭಕ್ತಿ ಭಾವದಿಂ.
ಭಾರತವರ್ಷೀಯ ಧರ್ಮಗಂಧ ಗಂಧಿತ ದಿವ್ಯ
ಉಡಿಯಲಿ ಒಡಮೂಡಿದ ಮಹಾ ಬಂಗಾಲದ
ಭೂಮಿಯುಂ–ಬಡತನಂ–ಸಿರಿತನಂ–ಜಡತನಂ
ಒಗ್ಗೂಡುತೆ ಒಂದಕ್ಕೊಂದು ಹೊಯ್‌ಕೈಯಾಗಿ
ಬಹುಜನಗಣ ಬಾಹುಳ್ಯದಿಂ ಕಿಕ್ಕಿರಿದು ತುಂಬಿ
ವಿಜೃಂಭಿಸಿರ್ದ ಸಿರಿಭೂ ಪಾರಾವಾರಂ!
ಜ್ಞಾನ ಅಜ್ಞಾನಗಳ ನೆಲೆಬೆಲೆಯ ಅದುಭುತ
ಬಲೆಯಲಿ ಸಿಲುಕಿದ ಜನಜೀವನ ರಥವಿಡಿದುದು
ಏಕರೀತಿಯ ಪುರಾತತ್ತ್ವಂ ಪ್ರಣೀತ ಪಥಂ.
ಶ್ರೀ ವಿಶ್ವನಾಥದತ್ತ ಮಹಾಶಯಂ ಪರಮ
ಧೀರ ಗಾಂಭೀರ್ಯದಿಂ ಜನ–ಧನ–ಸೌಭಾಗ್ಯದಿಂ
ಯಂತ್ರೋಪಮ ನವನವೋತ್ಸಾಹದಿಂ ನಿತ್ಯ
ಕರ್ಮಮಯ ಕ್ರಾಂತಿ, ಶಾಂತಿಮಯ ಸತ್ಕಾರ್ಯದೊಳ್
ನಿರತಂ. ಸದಾಕಾಲಂ ಸಾಮಾಜಿಕರ ಕೂಟದಿಂ
ಸನಾತನ ಧರ್ಮದೈಶ್ವರ್ಯದಿಂ ಮೇಣಧಿಕ
ಸತ್ ಚಿಂತನಾ ಶೀಲತೆಯಿಂ ಮೆರೆದು ಕೀರ್ತಿಯ
ಪತಾಕೆಯನೇರ್ಪಡಿಸಿದಂ ಗಗನದೆತ್ತರಕೆ.

ಕಾಯಸ್ಥ ಕ್ಷತ್ರಿಯ ಕುಲದ ವಕೀಲನಿರುತಿರ್ದು
ಸಕಲ ಜನಕೋಟಿಯಿಂದಾದರಿತ ವ್ಯಕ್ತಿಶ್ರೀ.
ವಿದ್ಯೆ ಬುದ್ಧಿಯಲಿ ವೃತ್ತಿ ಪ್ರವೃತ್ತಿಯಲಿ ನಿಚ್ಚ
ಧೀಮಂತ ಮನೋಹರ ಶೈಲಿಯಲಿ ತೊಳಗಿದವಂ.
ತಲತಲಾಂತರದಿಂದೆ ವಂಶೀಯ ವಾಹಿಯಲಿ
ಜ್ಞಾನಿಗಳ್ ಸಂಜನಿಸಿ ಮೆರೆದ ಸದ್ ವಂಶಸ್ಥ.
ಅಂದಬಳಿಕಂ, ಮೊಲ್ಲೆ ಬನದಲಿ ಮಲ್ಲಿಗೆಯು
ತಾನಲ್ಲದೆ ಬೇರೊಂದು ಮೊಳೆತು ಅರಳಲುಂಟೆ?
ಸದ್ವಂಶದ ಕುಡಿಗೆ ಮಲರಿದರಿಲ್ ಎಂಬವೊಲ್
ಶ್ರೀ ವಿಶ್ವನಾಥದತ್ತಂ ತೊಳಗಿ ಬೆಳಗಿದಂ
ತನ್ನ ಪ್ರೌಢಾವಸ್ಥೆಯಲಿ; ಸದ್ಗುಣಗಳ ಗಣಿ
ಎನಿಸಿ ದೀನ ಜನರಿಂಗೆ ಸುಖಾಶ್ರಯವನಿತ್ತು
ಪ್ರಖ್ಯಾತನಾಮನಾದಂ. ಬಾಳ್ ದೇಗುಲಕೆ
ಸಂಗಾತಿಯೆನೆ ಪರಮ ಸಾಧ್ವೀಮಣಿ ಶ್ರೀಮತಿ
ಭುವನೇಶ್ವರೀದೇವಿಯಂ ಅಗ್ನಿಸಾಕ್ಷಿಯಲಿ
ಪಾಣಿಗ್ರಹಣಗೈದು ಮನತುಂಬಿ ಮನೆತುಂಬಿದ
ಗಂಭೀರ ಗೃಹಸ್ಥಂ. ಪತಿಯ ಸಹಚರಿಯಾದ
ಸತೀಮಣಿ ಭುವನೇಶ್ವರೀ ದೇವಿಯುಂ ವಿಮಲ
ವಿಶಾಲ ಹೃದಯವಂತಿಕೆಯಿಂ ಪತಿವರ್ಯಂಗೆ
ಕರ್ಮಕೌಶಲದೊಳ್ ಹೊಯ್ಕಯ್ಯಾಗಿ ಸರ್ವಾಂಗ
ಸುಂದರ ಸಫಲತೆಯೊಳ್ ಮುದವಿತ್ತ ಪುಣ್ಯ
ಸದ್ಗೃಹಿಣಿ ಶಿವಭಕ್ತಿ ಪರಾಯಣೆ. ರಮಣನುಂ
ಎಲ್ಲಮಿರುತಿರ್ದೇನಿರದ ಪರಿಯಲಿ ವಿರಕ್ತಿ
ಭಾವದಿಂ ಮೆರೆದು ನಿಚ್ಚ ನಿರೀಶ್ವರವಾದದಿ
ಮುಳುಗಿ ನಿಶ್ಚಿಂತೆಯೊಳ್ ತಾನಿರುತಿರಲಾ ಸತಿ

ಭುವನೇಶ್ವರೀದೇವಿಯುಂ ಮನಮರುಗಿ ನೊಂದು
ನೋಯುತೆ ಪತಿಯ ವಿರಕ್ತಭಾವದುನ್ಮನದಾ
ಶೂನ್ಯತೆಗೆ ತಾಂ ಪೂಣೆಯ್ಯೆಸಲಿಚ್ಛಿಸದಾತನಾ
ಭಾಗದ ದೈವ ಚಿಂತನೆಯ ಭಾರವ ತಾಂವಹಿಸಿ
ಅದ್ವಿತೀಯ ದೈವ ಭಕ್ತಿರಸ ಪಾನಂಗೈವಳ್.
ಇಂತಿಂತು ಪರಮ ಸೇವಾ ಪರಾಯಣೆಯುಂ
ತಾನಾಗಿ ಭರತ ವರ್ಷದ ನಾರೀತತ್ತ್ವದಿಂ
ವಿಜೃಂಭಿಸಿದ ಭಾಗ್ಯವತಿ, ಅನನ್ಯ ಶುಭಾಂಗಿನಿ.
ದಿನದಿನಂ ಸತೀಮಣಿಯ ಅಪಾರ ದೈವಭಕ್ತಿ
ಭಾಗ್ಯಮಂ ಲಕ್ಷಿಸಿಯುಂ ವಿಶ್ವನಾಥದತ್ತನುಂ
ಆವೊಂದು ವಿಶೇಷತರದಾಸಕ್ತಿಯನಿನಿತು
ತೋರದೆಯೆ ತಾನಿರ್ದನ್ ತನ್ನ ಅನುದಿನಂಗಳ
ವೃತ್ತಿಪ್ರವೃತ್ತಿಯಲಿ. ಈವಗೆಯ ದಿನಚರಿಯು
ಸಾಗಿದುದು ನಿರಾತಂಕದಿಂ. ಶಾಂತಪ್ರಶಾಂತ
ಭಾವದಿಂ; ನಿತ್ಯ ಕರ್ಮಯೋಗದಿಂ; ಅನುಭಾವ
ಘನಿಸಿದ ಪರಮಾನಂದದಿಂ, ನೀಲ ಕುಂತಳೆ
ಮಡದಿಯುಂ ತನ್ನ ವದನಾರವಿಂದದೊಳ್ ನಿಚ್ಚ
ಎಳೆನಗುವಿನ ಬೆಳುದಿಂಗಳ್ ಹರಿಯಿಸಿ ಎಡೆವಿಡದೆ
ದುಡಿಯುವಳ್ ಅನವರತಂ ತನುಮನಗಳ್ ದಣಿವನಕ.

ಪಚ್ಚನೆಯ ಅಟವಿಯಂಚಿಗೆ ಬೆಂಕಿ ಹೊತ್ತಿತೆನೆ
ಹೊನ್ನಿನುರಿ ಹರಡಿ ಹರಡಿ ರಯ್ಯನೆ ಹಬ್ಬುತಲಿ
ಬೆಣ್ಣೆಯುಣ್ಣೆ ಮುಗಿಲಿನ ಹಾಸು ಹೊಕ್ಕಿನೊಲೆಸೆಯುತೆ
ಸಂಚಲಿಪ ಹೊನ್ನಸಿರಿ ರಂಜಿಸಿತು ಕೆಂಗಲಿಸಿ;
ಅದೆ ಗಳಿಗೆಯೊಳ್ ಕಣ್‌ಗೊಳಿಸಿತು ಥಳಥಳಿಸುತಿಹ
ಹೊಂಗಿರಣನುಜ್ವಲೋಜ್ವಲ ಕನಕ ಮಂಡಳಂ.

ಅಪರಂಜಿ ನಾಣ್ಯಮಂ ಕ್ಷೀರದೊಳ್ ತೇಯ್ದು ಬನ
ಸಿರಿಗೆ ಲೇಪಿಸಿದ ಮಾಳ್ಕೆಯಲಿ ಚೆಲ್ವಿನೈಸಿರಿ
ಭಾಸಣಿಸುತಿರಲುರೆ ಚಂದನದ ಕಾಂತಿ ಹರಡಿ
ಹಿಮರೋಚಿಯಂಬುಧಿಯ ವೀಚಿ ವೀಚಿಯ ಮೇಲೆ
ತೇಲಿತು ಜಗತ್ತು ಮನ ಮೋಹನೀಯ ವಿಶೇಷದಲಿ.
ಒಡನೊಡನೆ ವನವಕ್ಕಿ ಸಂಕುಲದ ಕೊರಳಿನಲಿ
ಉಕ್ಕಿ ಹರಿಯಿತು ರಾಗ ಭೋಗದ ಸುಮನೋಹರ
ರಾಗಾರುಣತಾನದೊಳ್ ಸುಪ್ರಭಾತದ ರುತಿ.
ತಂಬೂರಿಯ ಟಿಂಟಣಿಯೋ ಹೊನ್ನಗೆಜ್ಜೆಗಳ್
ಅಲುಗಿಸಿದ ಜಿಂಜಿಣಿಯೋ ತುಂಬುರ ಮುನಿಗಳ ರುದ್ರ
ವೀಣೆಯುಲಿದ ತನನತಾನವೊ ಎನಲ್ ಶುಭಕರಂ.
    ವಿಶ್ವನಾಥದತ್ತ ಮಹನೀಯನ ಬಾಲ್ಯದೊಳ್
ಪಿತ ದುರ್ಗಾ ಚರಣದತ್ತನುಂ ದೈವಯೋಗದಿಂ
ಅಷ್ಟೈಶ್ವರ್ಯ ಸಂಪದಮಂ ಹೊಂದಿ, ಜೀವನದ
ಸೌಭಾಗ್ಯ ನೆನೆಕೊನೆಯೇರ್ದು ಸುಸುಂದರ
ಸಂಸಾರದೊಳಿರ್ದ ಘನವಂತಂ. ಅಖಿಲ ಬಂಧು
ಬಾಂಧವರ ಮಧ್ಯೆ ಸುಖಭೋಗ ಸಂತೋಷದಿಂ
ಬಾಳ್ದು ಬಹುಜನರಿಗೆ ಆಶ್ರಯಮಿತ್ತು ಕೀರ್ತಿ
ಶಿಖರವೇರಿಯುಂ ಶಾಂತಿ ಸಂತೃಪ್ತಿಯ ಶ್ರೀರಕ್ಷೆ
ದೂರದೂರವುಳಿದು ತನುಮನಗಳ್ ಸುಟ್ಟುರಿದು
ಬದುಕು ಬೆಂಗಾಡಿನೊಲ್ ಬಣಬಣಿಸಿತು. ಸತ್ಯದ
ಕಿರಣಗಳಿಗಾಗಿ ತಹತಹಿಪ ಮನದಿಂ ಗೃಹ
ತ್ಯಾಗಿಯಾಗಿ ಮನ ಮಥಿಸಿ ಮಥಿಸಿ ಸಂನ್ಯಾಸ
ದೀಕ್ಷೆಯಂ ತೊಟ್ಟು ಕಣ್ಮರೆಯಾದನ್, ಊರಿಂ
ದೂರವಾಗಿ. ಪತಿವ್ರತಾ ಶಿರೋಮಣಿ ಮಡದಿ

ಪತಿಯ ಜಾಡನರಿಯದೆ ಕೊರಗಿಕೊರಗಿ ತಬ್ಬಲಿ
ಕಂದನ ಭವಿಷ್ಯಮಂ ನೆನೆನೆನೆದು ಮರುಗಿದಳ್
ಶೋಕಾಶ್ರುವಿನ ಕುಂಡದೊಳ್ ಕಂದನಂ ಅದ್ದಿ.
ಮರುಗುವವರಿಲ್ಲ. ಕರುಣದಿ ಕರೆದು ಕೂಳಿಕ್ಕಿ
ಆದರಿಪರಿಲ್ಲ. ಭಂಗ ಬನ್ನದ ರುದ್ರತರ
ರಣಗೋಳಿನಲಿ ಪಾಲಿಸಿದಳ್ ಕಂದನಂ ಬಲು
ಮುದ್ದಿನಿಂ. ಕುವರ ವಿಶ್ವನಾಥದತ್ತಂ ದಿನದಿನ
ಪೆತ್ತಮ್ಮೆಯ ದುಃಖದುಗುಡಗಳಿಗೆ ಕಾರಣೀ
ಭೂತನಾದ ಮನೆಯೊಡೆಯ–ಪಿತೃವಿನ ಸುಲಭದ
ಸಂಕಲ್ಪ ತೀವ್ರತರ ಅಪಚಾರಮೆಂದೆಂದು
ತನ್ನೊಳ್ ಬಗೆದು ಜುಗುಪ್ಸೆ ದ್ವೇಷ ಅಪಹಾಸ್ಯದಿಂ
ಪಡಿನುಡಿಗಳನಾಡುತೆ ರಜೋಗುಣಗಣಗಳಂ
ಕೆಳೆಕೊಂಡು ಪಿತೃದ್ವೇಷಿಯೆನಿಸಿ ಬೆಳೆಯುತಿರ್ದಂ
ಬಾಲಕ ಶಿರೋಮಣಿಯು ತಾನಾಗಿ. ಇಂತಿಂತು
ಕಳೆದುವಾ ಬಾಲ್ಯದ ದಿನಮಾನಗಳ್, ಭೀಕರ
ಬಡತನದಿಂ. ದಿನದಿನಂ ಪೆತ್ತಮ್ಮೆಯ ಬವಣೆಯಂ
ಕಂಡು ಕಾಣುತ್ತೆ ಮನದುಂಬಿ ಮೈದುಂಬಿ ತಾಂ
ತಾರುಣ್ಯದ ಹೊಸ್ತಿಲೇರಿ ನಿಂದಂ ಶ್ರೀವಿಶ್ವ
ನಾಥದತ್ತಂ. ಜ್ಞಾನಚಕ್ಷು ತೆರೆದ ಕಾಲದೊಳ್
ಎತ್ತೆತ್ತಲು ಜಡಿಕುಟ್ಟಿ ಬೀಸುತಲಿರುತಿರ್ದ
ಭೀಮ ಬಿರುಸಿನ ನವ್ಯ ಪಾಶ್ಚಾತ್ಯ ಸಂಸ್ಕೃತಿಯ
ಗಂಧಗಾಳಿ ಬಂಗಾಳ ಮನೀಷಿಯ ಮೈಯ್ಯಂ
ಮುಟ್ಟಿ ತಟ್ಟಿ ಪುರುಪಿತ್ತು ಅದ್ಭುತ ತಳುಕುಗಳ
ಬೆಳಕಿನ ಛವಿ ಬೀರಿ ಚೋದಿಸಿದತ್ತು. ಅದ್ಭುತ
ತೇಜದಿಂ ಮೆರೆದತ್ತು. ಎಲ್ಲಿಲ್ಲದ ಬೆಡಗಿನ

ವೈಭವದ ತೆರದಿ. ಅದೆ ಆಗಳೇ ಸುವಿಶಾಲ
ಜಗತ್ತಿನ ಮೇಲೆ ಬಿರುಗಣ್ಣ ನೋಟವ ನೆಟ್ಟು
ನಿಟ್ಟಾಲಿಯಾಗಿ ಮತಿಗೆಟ್ಟು ಕಂಗೆಟ್ಟು ಪಥ
ಭ್ರಾಂತರಾಗಿ ಬಾಳ್ಗೆಟ್ಟು ಮತಿಗೆಟ್ಟ ಯುವಕರ್
ಸಂಭ್ರಮದ ಮುನ್ನಡೆಯ ಲೀಲೆಯಲಿ ತೊಡಗಿರೆ
ಹುರಿ ಹರಿದ ಗೂಳಿಯಾಯ್ತು ಸಾಮಾಜಿಕ ರಥದ
ಸಾರಥ್ಯ. "**ಧರ್ಮೋ ಜಯತಿ ನ ಅಧರ್ಮಃ**" ಎಂಬ
ಚೆಲುವಿನ ನುಡಿಗಟ್ಟಿನ ಹುರುಳ್ ಅರಿಯದ ಮುಗ್ಧ
ಮಂದಿ ಮುಂದೈದರ್ ವಿಧರ್ಮಗಳ ಸುಳಿಗಾಳಿಗೆ
ಸಿಲುಕಿ; ವಿಧರ್ಮೀಯರ 'ಅನಾತ್ಮ ವಿಜ್ಞಾನ' ವದು
ಮುಂಬೆಳೆದು ಮುಂದೈದು ಭಾರತದ ಜನಜೀವನ
ರಥವೆಳೆಯೆ ಸಿದ್ಧಮಾದತ್ತು ನವನವೋನ್ಮೇಶ
ವೈಯಾರದಿಂ. ಸುರಲೋಕಿ ಕ್ರಿಸ್ತ ಪ್ರಣೀತ
ತತ್ತ್ವವದು ವಿಜೃಂಭಿಸಿ ಅವ್ವಳಿಸ ತೊಡಗಿತು
ಭಾರತವರ್ಷದ ಮೇಲೆ! ನೆರೆನಂಬಿ ಒಲಿದವರ್
ಕೆಲಬರಾದೊಡೆ ಕೆರಳಿ ಮುನಿದವರ್ ಬಹುಮಂದಿ.
ಏನಿರ್ದೊಡೇಂ? ಬರುಸಿನ ಬಿರುಗಾಳಿ ಬೀಸಿಯೇ
ಬೀಸಿದುದು ಬೋರಾಡಿ! ಜನ ಸಾಗರ ಕನಲ್ದು
ಬೆಬ್ಬಳಿಸಿ ಗಾರಾಗಿ ಮರವಟ್ಟು ಕಣ್ಕಣ್ಣು
ಬಿಡುವಂತೆ ಘನಿಸಿದುದು ಸಾಮಾಜಿಕ ವಿಪ್ಲವಂ.
ಆಂಗ್ಲೇಯರಾಳ್ವಿಕೆಯಲಿ ಥಳಥಳಿಪ ವಿನೂತನ
ಸಂಸ್ಕೃತಿ, ಪೊಚ್ಚಪೊಸ ಬಗೆಯ ರೀತಿನೀತಿಯು
ಬೋಂಕನೆ ಎದುರ್ವೆತ್ತು ಮೆರೆದಿರಲದರ ಫಲದಿಂ
ಮೂಡಿದುದು ಚಾರ್ವಾಕ ಲಕ್ಷಣಂ. "**ಸಂಭವಾಮಿ
ಯುಗೇ ಯುಗೇ**" ಎಂದ ಪರಮಾತ್ಮನುಂ ತನ್ನಾತ್ಮ

ಪ್ರತಿನಿಧಿಯೆನಿಪ ಪುರುಷಸಿಂಹನನು ನಿರ್ಮಿಪ
ಕಾರ್ಯದೊಳ್ ನಿರತನೊ ಎನೆ ಕಾಲಗತಿ ವಿಚಿತ್ರಂ!
ಇಂತಪ್ಪ ಪರ್ವಕಾಲದೊಳ್ ಚಿಂತನಾಗತಿ
ಆವಾವ ದಿಕ್ಕುದಿಶೆಗಳಿಗೆ ಬಡಿದು ದೀಂಕಿಡೆ
ಏನಪ್ಪುದೊ ಎಂತಪ್ಪುದೊ ಎಂಬ ಸಂಕೆಯುಂ
ಕಾಡುತಿರೆ ಬುದ್ಧಿ ಸಂಪುಟಮಂ, ವಿಶ್ವನಾಥಂ
ಸನಾತನ ಧರ್ಮೀಯ ಸಾರ ಸರ್ವಸ್ವಮಂ
ಬಂಡಿಳಿಸಿ ಮೆಚ್ಚಲರಿಯದೆ, ವಿಧರ್ಮದ ತಳುಕು
ಬೆಳಕುಗಳೆಳೆಗಳ ಹಿಂಜಿ ತಿಳಿಯೆ ಸಹನೆಯಿರದೆ
ಸಂದೇಹದ ವೇದಿಯನೇರಿದಂ. ಧೀಮಂತ
ಹೃದಯದಲಿ ಕಹಿಸಿಹಿಯ ಮಿಶ್ರಣ ತುಂಬಿರಲ್,
ಆತ್ಮ-ಪರಮಾತ್ಮ, ತಪಸ್ಸು-ಸಂನ್ಯಾಸ ಇಂತೀ
ಗಹನತರದ ವಿಚಾರಾತ್ಮಕ ವಿಶೇಷರಂಗದ
ಮೇಲೆ ಅಂಡಲೆಯುವನ್ ತಾನೇಕಾಂಗಿ. ಜಗದೊಳ್
ಸುಖ ಸಂಪದಮೆಂತಂತು ಸಂಕಷ್ಟ ಸಂಕಟದ
ರಾಶಿಯುಮಂತು ಬಾಳ್ಬದುಕಿಗೆ ಪೆರತಲ್ಲಂ ಗಡ?
ಅಂದಬಳಿಕಂ, ನಿರೀಶ್ವರವಾದಮೆ ತಕ್ಕದುಂ
ಎಂಬುದೆ ಮನಕ್ಕೊಪ್ಪಂ ವಿಶ್ವನಾಥದತ್ತಂಗೆ.
ದೃಷ್ಟಿಗೆಟುಕದ ಮನಕೆ ನಿಲುಕದ ಚಿಂತನಾ
ವೇಶಕ್ಕೆ ಗಹನಾತಿಗಹನಮಾದ ದೇವರ್ಕಳ
ನೆನೆನೆನೆದು ಗೋಜಲಾಗಿ ಪರಿತಪಿಸುವುದು, ಬರಿ
ಶಾಸ್ತ್ರ ಸೂತ್ರಗಳ ಸಂಕೋಲೆಯಿಂ ಬಳಲುವುದು
ಸುವ್ಯರ್ಥಂ. ಅದುಮಲ್ಲದೆಯೆ ಯಾವತ್ಕಾಲಂ
ಸಂದೇಹಾಸ್ಪದಮಾದ ಸಗ್ಗದ ಮರೀಚಿಕೆಯ
ನೆರೆನಂಬಿ ಬೆಂಬಿಡಿವುದೆನಲದು ಬುದ್ಧಿಗೇಡು!

ಇಹಲೋಕದೊಳ್ ಕೈಗೆಟುಕುವ ಸಮಸ್ತ ಸುಖಗಳ
ಸಂಪದಮಂ ಕಂಡು ಕಂಡು ದೂರೀಕರಿಪುದೆನೆ
ಮರುಳ್ತನ! ಎಂದಿಗುಂ ಸಾಮಾಜಿಕ ಕಟ್ಟಿಗೆ
ಸರಕಾರದ ಕಟ್ಟಳೆಗೆ ಭಂಗವೊದಗದವೊಲ್
ಇರುತಿರುತಿರೆ ಸಾಲ್ಗುಂ ಎಂಬುದದು ಆಧುನಿಕ
ಚಿಂತನಾಶೀಲ ವಿಶ್ವನಾಥದತ್ತನ ಮನದ
ನಿರ್ಣಯಂ. ನಿರಂಕುಶ ಮತಿಯುಂ ಧನವಂತನುಂ
ಆಗಿರ್ದಾತನ ಮನೋಧರ್ಮವೊಂದೆನೆ ನಿಚ್ಚ
ರಸಚಿಂತನೆಯುಮಿನ್ನೊಂದು. ಆತ್ಮತತ್ತ್ವಂ
ಎಂತಂತು ಅನಾತ್ಮ ತತ್ತ್ವದಲಿಯುಂ ಕೃಪಣ
ನಿರದೆ ರಾಜರಸಿಕನಾಗಿ ಧೀರೋದ್ದಾತಮಯ
ಭಾವದಿಂ ಬಾಳ್ದು ಕೃತವಿದ್ಯನುಂ ಅನನ್ಯ
ಸದ್ಗುಣಿಯುಂ ಇರುತಿರ್ದು ಅಮಿತ ಗೌರವ
ಪ್ರಾಪ್ತಿಯಿಂ ಜನಾದರಣೀಯತೆ ಪಡೆದು ಗಣ್ಯ
ಜನರೊಳತಿ ಗಣ್ಯನಾದಂ ವಿಶ್ವನಾಥದತ್ತಂ.
ಮತ್ತಮಾ ಬಂಧು ವತ್ಸಲಂ ಆಶ್ರಿತ ಪಾಲಕಂ
ಎನಲ್ ತನ್ನೆಡೆಗೆ ಬೆರಳ್ ತೋರ್ಪರ್ ಇಲ್ಲದೊಲ್
ಹಸನಾಯ್ತು ಬಾಳ್ವದುಕು. ವ್ಯಕ್ತಿತ್ವ ಬೆಳೆದತ್ತು
ಭೂಮವಾಗಿ.
ಸನಾತನಿ ಪರಮಸತಿ ವಿಶ್ವನಾಥ
ದತ್ತನ ಅರ್ಧಾಂಗಿ ಭುವನೇಶ್ವರೀ ದೇವಿಯುಂ
ತನ್ನ ರತ್ನಗರ್ಭಾಶಯದೊಳಾಗಳೆ ಸುಪುತ್ರಿ
ದ್ವಯರಂ ಪಡೆದು ಧನ್ಯಳಿರ್ದೊಡಮವಳಿಗೆ ಕುಲ
ಪುತ್ರನಂಪಡೆವ ಅತ್ಯಾಸೆ ಗಗನವೇರ್ದುದು.
ಎಗಳುಂ ಸುಪುತ್ರನ ಸಂಪ್ರಾಪ್ತಿಗಾಗಿ ಶಿವ

ಪೂಜೆಯೊಳ್ ಮನವಿಡುವಳ್; ಮಿಂದು ಮಡಿಯನುಟ್ಟು
ವ್ರತ ಪ್ರಾರ್ಥನೆಗಳಂ ಸಲಿಸುವಳ್ ಎಡೆವಿಡದೆ.
ಶಿವಭಕ್ತಿ ಪಾರಾಯಣೆಯ ಹೃನ್ಮನಂಗಳ್ ನಿಚ್ಚ
ಹಾತೊರೆದುವು ಲೋಕದಿತರ ತಾಯಂದಿರ ತೆರದಿ.
ಸಂಸಾರದೊಳ್ ಬಂಧು ಬಾಂಧವರ ಸೇವೆಯಂ
ಅದೆಂತುಗೈದಪಳೋ ಇನ್ನೆಂತು ಆ ಶಿವನ
ವ್ರತ ನಿಷ್ಠೆಗೆ ಸಮಯ ಪಡೆದಪಳೊ ಎಂಬಂತೆ
ನಡೆವುದಾ ಸತೀಮಣಿಯ ಕಾರ್ಯಗತಿ ನಿಜದಿಂ.
ಧ್ಯಾನನಿಷ್ಠೆಯಲಿ ವ್ರತವಿಶೇಷದಲಿ ಭಾವ
ಗಾಂಭೀರ್ಯದಲಿ ಭಕ್ತಿಯುಂ ತುಂಬಿ ಕಂಗಳಲಿ
ಮುಕ್ತಾಶ್ರುಗಳ್ ಉದುರಿದಪವು ಹನಿಹನಿಯಾಗಿ.
ಕಪೋಲದ ಪಾಲಿಗಳ್ ತೊಯ್ಯುವುವು ಮತ್ತೆ ಮತ್ತೆ.
ತೀಡುವಳ್ ಉಟ್ಟ ಮಡಿಯಿಂದಲಿ ಮರಳಿ ಮರಳಿ.
ಹೃದಯಹಾರೀ ಹಾರೈಕೆಯದು ವೆರ್ಚಿದುದು ಅನು
ದಿನಂ. ಪಗಲಿರುಳ್ ಅದೆ ಧ್ಯಾನ, ಅದೆ ಕನಸು, ಅದೆ
ನೆನಸು; ಸುಕುಮಾರಾಕಾಂಕ್ಷಿಣಿ ಸತೀಮಣಿಗೆ. ಮನದೊಳ್
ಚಿಂತನಾದ್ರುಮ ಘನಿಸಿತು ಮಂಜಿನ ತೆರದಲಿ.
"**ಅಹರ್ನಿಶಂ ವರ್ಷತಿ ವಾರಿವಾಹ ತಥಾಪಿ
ಪತ್ರತ್ರಿತ್ರಯಃ ಪಲಾಶಃ**" ಎಂಬವೊಲಾಯ್ತು ಸತಿಯ
ಪರಮೋಚ್ಚತರ ದೀನ ಬೇಡಿಕೆಯ ಪರಿಪಾಠ.
ಅಂದಿನ ದಿನಚರಿಯ ಕರ್ಮಕಾಂಡಮಂ ತೀರ್ಚಿ
ಭಾವನಾ ಭಾರದಿಂ ರಾತ್ರಿಯಲಿ ಸೆಜ್ಜೆಯಂ
ಸೇರ್ದು ಪವಡಿಸಿದಳ್ ಮಡದಿ ಶ್ರಾಂತೆ. ಮೆಲ್ಲನೆಯೆ
ನಿದ್ದೆಯ ಮಡಿಲಲಿ ಜಾರಿ ಮೈಮರೆಯೆ ಕಂಡಳ್
ಕನಸನೊಂದಂ; ವಿಸ್ಮಯ ವಿಭ್ರಮೆಗಳಿಂದೆ

ಗರ ಬಡಿದವೋಲ್ ಬಿರುಬಿರನೆ ನೋಡಿದಳ್ ನೆಟ್ಟ
ನಿಟ್ಟಾಲಿಗಳ್ ಚಲಿಸದೆ. ತುಷಾರ ಧವಳಿಮಾ
ಮುಕುಟಧರ ಕೈಲಾಸ ಪರ್ವತಾಗ್ರದಿಂದೆ
ಇಳಿತಂದ ಈಶ್ವರಂ ಎದುರ್ವೆತ್ತು ನಿಂದಂ!
ಜಟಾಜೂಟ ಶೋಭಿತ ತ್ರಿಶೂಲಧರಂ! ನೆಟ್ಟ
ನೋಟ ಕೋರೈಸುವಂತೆ ಪ್ರತ್ಯಕ್ಷನಿರೆ, ಭವ್ಯ
ರೂಪಿನೆದುರ್ ನುಡಿವೆನೆನೆ ಬಾಯಿ ಬಿರಿಯದಾಯ್ತು.
ಚಣದೊಳ್ ಶಿವಂ ಶಿಶುವಾಗಿ ಪವಡಿಸಿದಂ ಪೆಣ್ಣ
ಮಡಿಲಲಿ! ಅಹ, ಮುಟ್ಟುವೆನೆನೆ ಕನಸೊಡೆದು ಆಸೆ
ಬಯಲಾಯ್ತು, ಕಳೆದುದಾ ದಿವ್ಯಘಳಿಗೆ. ತನುಮನಂ
ಒಯ್ಯನೆಯೆ ತೋಷದಿಂ ಪುಟಿದು ಪುಳಕಮಾದುವು.
ಆನಂದ ಮೋದದಿಂ ಭಕ್ತಿಯಿಂ ಶಿವನಿಂಗೆ
ಪರಕೆಗೊಂಡಳ್ ಕೈಮುಗಿದು ಮತ್ತೆ ಮತ್ತೆ ಬೇಡಿ.
ಸೆಜ್ಜೆಯೊಳ್ ಮೈಛಾಟಿಯುಂ ನಿದ್ದೆಯು ಬಾರದಿರೆ
ಕಂಗಳಿಗೆ, ಮುಂಬೆಳಕು ಮೂಡುವುದನೆದುರುಗೊಳೆ
ಹಾ ತೊರೆದುದು ಜೀವನಿಧಿ. ಮೂಡಣದಿ ಚಿಮ್ಮುವ
ಚಿಮು ಚಿಮು ಬೆಳಕು ತುಳುಂಕಿದೊಡನೆಯೆ ರಮಣನಂ
ಎಬ್ಬಿಸಿ ವಿಷಯಂವೊರೆದು ಹುರುಪಿನ ಧ್ವನಿಯಲಿ
ಬಿತ್ತರಿಸಿ ಎದೆಯ ಹರುಷಮಂ ಬಸಿದಳ್ ಮಡದಿ
ಸಂತೋಷದಾವೇಗದಿಂ. ದಂಪತಿಗಳ ಮನ
ಮುದಿಸಿ ಸಾನುರಾಗದಲಿ ಭವಿಷ್ಯಮಂ ತಂ
ತಮ್ಮೊಳ್, ನೆನೆನೆನೆದು ರೂಪಿಸುವರ್ ಮನೋಗತಿಗೆ
ಅನುಗುಣಮಾಗಿ. ಆಗಳೀಗಳ್ ಶುಭಶಕುನಂ
ತೋರ್ದಪವು ತೋಷಮಂ ಇರ್ಮಡಿಗೊಳಿಸುವಂತೆ.
ವನಪಕ್ಕಿಗಳುಲಿದುವು ರಾಗಾರುಣತಾನಮಂ

ಹರಿಸಿ ಲಾಲಿಸುವ ಪಾಂಗಿನಲಿ. ಸುಯ್ಯಾಳಿಯುಂ
ಒಯ್ಯನೊಯ್ಯನೆ ಸುಯ್ದು ಸುಮ್ಮಾನದಿಂದೆ ಬೀಸಿ
ವೀಸಿ ತರಿದು ತರ್ಪುದು ಸುರಗಿಯ ನರುಗಂಪಂ.
ಪ್ರಾತಃಕಾಲೀನ ತಣ್ಪಿನ ತನಿಯನುಂಡು ಬಹ
ಬಂಭ್ರಮರಂಗಳ್ ಝೇಂಕರಿಸಿದುವು ನಿಜ
ಓಂಕಾರದೋಜೆಯಲಿ. ದಿನದಿನ ಪ್ರತಿದಿನ
ಸತೀ ಭುವನೇಶ್ವರೀ ದೇವಿಯುಂ ಅಂತಪ್ಪ
ಶುಭಶಕುನಗಳನೋನುತೆ ಒಡಲ್‌ತುಂಬುವಳ್.
ಶಿವ ಪೂಜೆಗೆ ಕುಳಿತೊಡನೆ ಶಿವನ ಮುಡಿಯಿಂ ಪೂ
ಉದುರಿ ಬಿಳ್ದು ಪ್ರಸಾದಂಲಭಿಸಿ ಮುದಗೊಳ್ವುದು
ಸಂಭ್ರಮಿತ ಮನಂ. ಕೃಷ್ಣಪಕ್ಷ ಉರುಳಿ ಶುಕ್ಲ
ಪಕ್ಷಮೆಂತೈದುದೊ ಮತ್ತೆ ಮಾಸಗಳ್ ಎಂತೆಂತು
ಕಳೆದುವೊ ಅರಿಯದೊಲ್ ಉರುಳಿತು ಆ ಸಂಭ್ರಮಿತ
ಕಾಲಮಾನಂ. ಬೆಸಲೆಯಾದ ಮಡದಿಗೆ ಶಿವನ
ವರವೊಂದೆ ನೆನಹು ಮನದಲಿ; ಪ್ರಾಣ ಪಾತ್ರದಲಿ.
ಸ್ವಸ್ತಿ, ಕ್ರಿಸ್ತಾಬ್ದ ಸಾವಿರದೆಂಟನೂರರವತ್
ಮೂರನೆಯ ಸಂವತ್ಸರದ ಜನವರಿ ತಿಂಗಳ
ಹನ್ನೆರಡನೇ ತೇದಿಯ ಪರಿ ಪುಣ್ಯಕಾಲದಲಿ,
ಸುಪ್ರಭಾತದೊಳ್ ಕುರುಳ್ಗುಟಿಕಾವೃತ ಹಿಮಮಯಿ
ಪುಷ್ಯ ಸಂಕ್ರಾಂತಿ ಸಡಗರಿಸಿರಲ್ ಮುಂಬೆಳಕು
ಮೂಡಿತು ದಿಗ್ ತಟಾಂತ ಸಂಲಗ್ನದಲಿ ಉಜ್ವಲ
ಕಾಂತಿಯಂ ಚೆಲ್ಲಿ ಸೂಸಿ. ಬೃಹದ್ ಕಲ್‌ಕತ್ತೆ
ನಗರಿಯ ನರನಾರಿಯರುಂ ಮಕರ ಸಪ್ತಮಿಯ
ಪುಣ್ಯ ಸ್ನಾನದಿಚ್ಛೆಯಲಿ ಕೋಡಿಗಟ್ಟಿದ ತೆರದಿ
ನಡೆದಿರ್ದರ್ ಭಾಗೀರಥಿ ನದಿಗಭಿಮುಖವಾಗಿ.

ರಾಷ್ಟ್ರೀಯ ದೇಗುಲಗಳಲಿ ಪುಣ್ಯಕಾಲೀನ
ವಿಶೇಷತಮ ಜಪವ್ರತಗಳ್ ನಡೆದುವು ನಿಚ್ಚ
ನೇಮದ ಪರಿಯಲಿ. ಸಂಕ್ರಾಂತಿಯ ಪುರುಡೊಡೆದ
ಪ್ರಾತಃಸ್ಫೂರ್ತಿ ಮಿಂಚಿ ಮೆರೆದುದು ಜನಗಣಮನದಿ.
ಕೆಲರ್ ಹಾಡಿಪಾಡುತಿರೆ, ಮಂತ್ರಗಳಂ ಪಠಿಸಿ
ನುತಿಸಿದರೆನಿತೊ ಮಂದಿ. ಮತ್ತಮಾ ಗಂಟೆಗಳ್
ಜಿಣಿಜಿಣಿಸಿದುವು; ಕಹಳೆಗಳ್ ಕೂಗಿದುವು. ಜಾಗಟೆ
ಶಂಖಗಳ್ ಮೊಳಗಿದುವು ಸಂಭ್ರಮ ಸಡಗರದಿಂ;
ಸಕಲ ದೇಗುಲಗಳಲಿ ಪೂಜಾವ್ರತ ವಿಶೇಷ
ನೇಮದಿಂ ಪೂಜೆಯದು ನಡೆಯುತಿರ್ದುದು ವರ್ಷೇ
ವರ್ಷೇ ನಡೆವ ತೆರದಲಿ. ವೇದಮಂತ್ರಗಳುಂ
ಮೊಳಗುತಿರೆ ಮದ್ದಲೆ ನಗಾರಿಗಳ್ ನಲ್‌ಬಡಿದು
ಬಾಜಿಸಿದುವು ಮಂಗಳಮಯ ಪೊಳ್ತಿನಲಿ. ಬಿರಿದ
ಕುಸುಮಗಳ ಕಂಪು, ಧೂಪದೀಪಗಳ ಸುಗಂಧ
ಭರಿತ ಪೆಂಪು ಮೆರೆದುದು ನಗರದೇಶಂ ತುಂಬಿ
ಘಮಘಮಿಸುವೊಲ್! ಪ್ರಾತಃಸಮೀರಂ ತಣ್ಣನೆಯ
ಹಿಮರಾಶಿಯ ತಣ್ಪುಂಡು ತನಿರಸವೂಡುವೊಲ್
ಬಿಜ್ಜಣಿಗೆಯನಿಕ್ಕುತಿರೆ ಗಡಗಡ ನಡುಗುವುವು
ಮೈಮನಗಳ್. ದೈವಭಕ್ತಿಯು ಧರ್ಮದೃಢತೆಯ
ಮಹೋದಾರ ವೈಭವದಿಂದೆ; ಬಗೆವೆರ್ಚುತುತ್ಸಾಹ
ಒಡಮೂಡಿ ವಿವಿಧ ಭಾವಾನುಭವಗಳಿಂದಲಿ
ಪ್ರವಹಿಪ ನವರಸಂಗಳೊಳ್ ತೇಲ್ವಂತೆ, ಜನ
ಜಂಗುಳಿಯು ಸಾಲ್ವರಿದು ಮರಳುತಿರ್ದುದು ಮಿಂದು
ಮಡಿಯುಟ್ಟು, ಭಕ್ತಿಭಾರಾಯತನದಾವೇಶ
ಭೂಷಣದಲಿ. ಆಗಳ್ ಆ ಸುಂದರ ಘಟಿಯಲಿ

ದತ್ತಭವನದೊಳಮನೆಯೊಳ್ ಸಂಜನಿಸಿತೊಂದು
ಸುಸುಂದರ ಶಿಶು ಮಾತೆ ಭುವನೇಶ್ವರೀ ದೇವಿಯ
ರತ್ನಗರ್ಭಾಶಯಂ ಶ್ರೀಮಂತಗೊಳಿಪಂತೆ!
ಧನ್ಯೆ! ಮಾತಾಮಯಿ, ಭುವನೇಶ್ವರೀ ದೇವಿ!
ಅಪೂರ್ವ ಪುರುಷಸಿಂಹನಂ ಪೆತ್ತು! ಪುರಾಣ
ಕಾಲೀನ ಉಪನಿಷತ್ ಕೃತಿಕಾರ ಮಹರ್ಷಿ
ವರ್ಯರ ಒಡಲ್ ಕುಡಿಯೊ ಎಂಬವೊಲ್ ಸರ್ವಥಾ
ಧರ್ಮ ಧುರಂಧರನೆನೆ ಪ್ರಖ್ಯಾತ ನಾಮನಾಗಿ
ಘನಗೊಳ್ವ ಮಹಿಮಾಮಯಂ ಆ ಶಿಶುರತ್ನಂ!
ರಾಷ್ಟ್ರದ ಜಡತನದುಬ್ಬರದಲೆಗಳಿಗೆಸೆದ
ಪ್ರಥಮ ಪವಿತ್ರನುಡಿಗಟ್ಟುಗಳ್ ಕೇಳಿರ್ಪ್ಪೆ
''**ಮಾತೃದೇವೋಭವ ಪಿತೃದೇವೋಭವ ಮೇಣ್**
ಆಚಾರ್ಯದೇವೋಭವ'' ಕಂಚಿನ ಕೊರಳುಲಿಯಲಿ
ಮೊಳಗಿರೆ ನಿಯಮನಿಯತಿಯಲಿ ಮೂಡಿತು ಇನ್ನೊರ್
ಒಡಲಾಳದ ಅಕ್ಕರೆಯ ಸವಿಸೂಸುವ ಒಳ್ನುಡಿಯು
ಭಾವನಾವೇಗದಿಂ ''**ದರಿದ್ರದೇವೋಭವ**''
ಎಂಬಂಥ ನೀತಿಯಂ ಧೀಂಕಿಣಿಸಿ ದಶದಿಶೆ
ಮುಟ್ಟಿಸಿ ಮರುದನಿಕೊಡುವಂತೆ ಶ್ರಮ ಸಾಧನಾ
ಪಟುವಾದ ಪ್ರಖ್ಯಾತ ಪುರುಷನ ಶುಭಜನನ!
ಭುವನೇಶ್ವರೀ ದೇವಿಯುಂ ತನ್ನಾತ್ಮ ರುಂದ್ರ
ಸತ್ವದ ಬಹಿಶ್ವರ ವಿಗ್ರಹವಂ ಕಣ್ ಕೀಲಿಸದೆ
ಕಂಡು ಸಿತಸ್ಮಿತ ವದನೆಯಾಗಿ ಎದೆಗೆತ್ತಿ ನಲ್
ಮುದ್ದಿಟ್ಟು ಶಿವನನುಗ್ರಹಮಂ ನೆನೆದು ನಮಿಸಿ
ನುತಿಸಿದಳ್ ಮನದಿ. ಪಿತ ವಿಶ್ವನಾಥದತ್ತಂ
ತಪಸ್ತೇಜೋ ಪ್ರದೀಪಾಕ್ಷಿ ಪುಣ್ಯನಂ ಬಲು

ಅಕ್ಕರೆಯ ಸಕ್ಕರೆಯ ಸವಿಸೂಸಿ ಎದೆಗೆತ್ತಿ
ಮುದ್ದಿಸಿದನ್ ಪರಮಾನಂದದಿಂ. ಐದಾರು
ದಿನಗಳ್ ಕಳೆದುವು, ಮತ್ತೆ ಪಕ್ಷಮಾನವೊಂದು
ಕಳೆಯಿತ್ತು. ಕುಲ ಪುರೋಹಿತ ಸಜ್ಜನರೈದರ್,
ಶಿಶುವಿನ ಜನುಮ ಕುಂಡಲಿಯ ನೋಡಿ ಭವಿಷ್ಯದ
ಯೋಗಾಯೋಗಮಂ ಅಳೆದು ತಿಳಿದು ಮನಮೆಚ್ಚುತೆ
ಪೊಗಳಿಪಾಡಿ ಭಾರತದ ವಿನೂತನ ಭರತನಂ
ಹರಸಿದರ್ ಮನತುಂಬಿ. "ಮುಂದೆ ಈ ಜಾತಕನುಂ
ಮಹೋನ್ನತ ಭವಿಷ್ಯದ ವೇದಿಯಂ ಏರುವಂ.
ಭವ್ಯ ಭವಿಷ್ಯಮಿರ್ದು ಜಗತ್ ಕೀರ್ತಿ ಪಡೆದಪಂ.
ಸುವಿದ್ಯಾಘನನಿವಂ ಎನಲ್ಕೆಮಗೆ ಸಂತಸ
ಉಕ್ಕುವುದು. ಶ್ರೀಶಿವನ ರಕ್ಷೆ ಇರಲಿವನಿಂಗೆ!"
ಶುಭಹಾರೈಸಿ ಫಲಪುಷ್ಪ ದಕ್ಷಿಣೆಗಳೆಲ್ಲವಂ
ಪಡೆದು ಒಟ್ಟಯಿಸಿ ಬೆನ್ ಭಾರದಿಂ ಜಗ್ಗಿದೊಲ್
ಶಿರಬಾಗಿ ಪೊರಮಟ್ಟರ್ ಹರುಷದಲಿ ಪುರೋಹಿತ
ಭೂಸುರಾದ್ಯರ್. ಪೆತ್ತವರ ಒಡಲ್ ತುಂಬಿದುದು
ಆನಂದ ರಸಾಯನದಿಂ. ಮುದ್ದಿನ ಕುವರಂ
ಕಣ್ಮಣಿಯು ತಾನಾಗೆ ತೋಷದಲಿ ತೇಲಿದುದು
ದತ್ತಭವನಂ. ಕಳೆದುವಾ ದಿನಗಳ್ ಒಂದರ
ಬಳಿಕೊಂದರೊಂದರಂತೆ ಆನಂದ ಭೋಗವ
ಸಲಿಸಿ ಸಂಸಾರಕ್ಕೆ. ಮೂದಿಂಗಳೋಡಿದುವು
ಕೈಗೆಟುಕದಂತೆವೊಲ್. ಬಳಿಕ, ಶುಭದಿನವನಾರೈದು
ಶಿಶುವಿನಾ ನಾಮಕರಣಂಗೈಯುವೊಡೆ ಪರಿಪೂಜ್ಯ
ಪುರೋಹಿತರಂ ಬರಮಾಡಿದಂ ಶ್ರೀವಿಶ್ವನಾಥ
ದತ್ತಂ. ಭವನ ಸಮುಚ್ಚಯಂ ಮೈಕೊಡವಿ ಮಡಿ

ಯುಟ್ಟು ತಳಿರ್ ತೋರಣಗಳ್ ಮೆರೆದು ಜೃಂಭಿಸಿ
ಸ್ವಾಗತಿಸಿದುದು ಸಕಲ ಬಂಧು ಬಳಗಮಂ. ಬಲು
ಆಕರದಲಿ, ಪೂಜಾ ವ್ರತಗಳ್ ನಡೆದುವು
ಶಾಸ್ತ್ರೋಕ್ತವಾಗಿ. "**ಆಚಾರಃ ಪರಮೋ ಧರ್ಮಃ**"
ಎಂಬೊಂದು ಬದ್ಧನಿಯಮದೊಳ್ ಮುದ್ದಿನ ಪೆಸರ್
ಮುದ್ರೆಯೊತ್ತುವೊಡೆ, ಸಂಭ್ರಮದ ಆಚರಣೆಯದು
ವಿಜೃಂಭಿಸಿತು ಬಹುಜನ ವೇಷ್ಟಿತ ಭವನದಲಿ.
ವಂಶೀಯ ಪಿತಾಮಹ ಜ್ಞಾನವೇತ್ತನುಂ ವರ
ಸಂನ್ಯಾಸಿಯುಂ ಆಗಿ ಕುಲಪುರೋಹಿತನೆನಿಸಿದ
ದೈವೀಕ ಪುರುಷ ದುರ್ಗಾಚರಣದತ್ತನಾ
ಜ್ಞಾಪಕಾರ್ಥಂ ಕುಮಾರ ಶ್ರೀ ಕೇಸರಿಗೆ ಆ
ನಲ್ಪೆಸರಿಡಲ್ ಆಶಿಸಿದರ್ ಪಿರಿಯರ್. ಇಂತು,
ಮುಂದ್ವೈದ ಕುಟುಂಬಿಗರಿಗೆ ಭುವನೇಶ್ವರೀದೇವಿ
ತಾಂ ವಿಶ್ವೇಶ್ವರನಿಂಗೆ ಹರಕೆವೊತ್ತು ನಿಯಮದಿ
ವ್ರತವಂ ಪಿಡಿದು ಪಡೆದ ಕಂದಂಗೆ ಶಿವನಿಗಾಗಿ
'ವೀರೇಶ್ವರ' ಎಂದು ಪೆಸರಿಸೆ ಕೋರಿಕೊಂಡಳ್
ಎರ್ದೆಯಾಶೆಯಂ ಹೊರಚೆಲ್ಲಿ, ಬಿಗಿದ ಕೊರಳಿಂ
ಪೊರಬಿಳ್ದ ಬೇಡಿಕೆಗೆ ಪಿರಿಯರೊಪ್ಪಿ, ಬ್ರಾಹ್ಮಣ
ಗುರುಗಳೊಪ್ಪಿ ಬಂಧು ಬಳಗವೊಪ್ಪಿ, ದೊರಕಿದುದು
ಸಮ್ಮತಿ; ತರುವಾಯದೊಳ್ 'ವೀರೇಶ್ವರ' ಎಂದೆ
ನಾಮಕರಣ ಮಾದತ್ತು ಕಂದನಿಗೆ. ಆಗಳ್
ಪತಿ ವಿಶ್ವನಾಥದತ್ತ ಮಹೋದಯಂ ಬಹುಲ
ಪ್ರೇಮದಿಂ 'ವೀರೇಶ್ವರ' ಎಂದು ಕರೆದಂ ಶಿಶು
ರತ್ನನಂ ಮೂಮೂರು ಬಾರಿ. ಹೃದಯ ತುಂಬಿ
ನಲಿದಾಡಿದುದು ದತ್ತಭವನಂ ಪರಮಾನಂದ

ಮೋದದಿಂ. ಪಿರಿಯರ್ಗೆ ಬ್ರಾಹ್ಮಣಾದ್ಯರ್ಗೆ ವರ
ಅತಿಥಿಗಳ್ಗೆ ಪ್ರೀತ್ಯಾದರದಿಂ ಬೀಳುಕೊಟ್ಟರ್.
ಫಲಪುಷ್ಪ ವಸ್ತ್ರಗಳನೋದಿಸುತ್ತೆ.
ಇಂತಿಂತು
ಸಂಭ್ರಮ ಸಡಗರಗಳ ಕಡಲುಕ್ಕಿ ಹರಿಯುತಿರೆ
ದಿನ ನಿಚ್ಚ ಸಂಸಾರಯೋಗದಲಿ ಸುಪುತ್ರನ
ಪರಿ ಪಾಲನೆಯುಂ ಅಂತೆಯೆ ಮುಂಬರಿದುದು ಕಾಲ
ಗತಿಗೆ ಮನವೊತವೊಲ್. ಹರಿಯೆಂದು ಹರನೆಂದು
ಪರಿಭಾವಿಸುತೆ ಪೂಜ್ಯಭಾವದಿಂ ಕಾಂಬುವಳ್ ಜನನಿ.
ಕೈಗಳ್ ಮಲಿನಮಿರಲ್ ಮುಟ್ಟಲೊಪ್ಪದು ಮನಂ.
ಕೈತೊಳೆದು ಸ್ವಚ್ಛಗೊಂಡಬಳಿಕ ಕುಮಾರಕನ
ಗ್ರಹಣಂ. ಇಂತು ಶಿಶುಪುಣ್ಯನ ಪರಿಪಾಲನೆ
ನಡೆದುದತಿ ಸೂಕ್ಷ್ಮಗ್ರತಿಯಲಿ, ಮಾತೃ ಹೃದಯದ
ಅಮೃತರಸಧಾರೆಯ ಹೊನಲ್ ಹರಿಸಿ. ಕುವರಂ
ದಿನದಿನಂ ಶುಕ್ಲಪಕ್ಷದ ಚಂದ್ರನಂತೆವೊಲ್
ಬೆಳೆಯುತಿರ್ದನ್ ತನುಮನಗಳ ಶ್ರೀಕಲಶಮಂ
ನೆರೆತುಂಬಿ. ಕಾಲಕ್ರಮದೊಳ್ ಕಂದನ ನಾಮ
ಧೇಯವದು 'ನರೇಂದ್ರನಾಥದತ್ತ' ಎಂದಾಯ್ತು.
ಪೆತ್ತವರ್ಗೆ 'ನರೇನ್' 'ನರೇನ್' ಎನಲ್ ಚುಟುಕು
ಮೊಟಕುಗೊಳಿಸಿದ ಪೆಸರ್ ಹಿತವಾಯ್ತು; ಘನವಾಯ್ತು;
ಸರಾಗದಲಿ ಪ್ರೇಮರಸವಾಹಿಯುಂ ಹರಿಸಲ್.
ದಿನ ನಿಚ್ಚ ಎಳೆದನಿಗಳ ದಿವ್ಯ ಮೊಳಗೇ ಮೊಳಗು
ದತ್ತ ಭವನದಲಿ. ಮುಮ್ಮಾತು, ನಲ್ಮಾತುಗಳ
ಸೋನೆ ಮಳೆ ಸುರಿವುದು ಸದಾ ಹರುಷದ ಹೊಳೆಹರಿಸಿ,
ಪೆತ್ತವರ ಒಡಲ್ ಹಾಲ್ಗಡಲಾಗುವ ತೆರದಲಿ.

ತಾಯಿ ಭುವನೇಶ್ವರೀ ದೇವಿಯುಂ ಬಹು ಬಗೆಯ
ಕಾರ್ಯವಾಹಿಯೊಳ್ ದೃಢಗತಿಯಲಿ ಮುಳುಗಿ ತಾಂ
ದುಡಿಯುವಳ್ ಸಂಜೀವನೋದ್ಧಾರಮಂ ಮನದಿ
ಗುರಿಗೊಂಡು. "**ಭವಾರಣ್ಯ ಕುಠಾರಿಕಾ**" ಎಂದಾವ
ದೇವಿಯಂ ಮಾನಿಸುತೆ ಮುನಿರಿಸಿಗಳ್ ಸರ್ವತ್ರ
ಪೂಜಿಪರೋ ಅಂತಂತು ಶ್ರೀಮಾತೆ ಭುವನೇ-
ಶ್ವರೀ ದೇವಿಯುಂ ಪೂಜಾರ್ಹ ಶ್ರೀವನಿತೆಯೆನಲ್
ಗೃಹಿಣೀತ್ವದಲಿ ವಿಜೃಂಭಿಸಿದಳ್. ಮಗುವಿನ
ಒಂದೆಳ್ಡಕ್ಕರಗಳ ಮುದ್ದಾದ ಮಾತುಗಳ ನುಡಿ
ಮುತ್ತುಗಳುದುರುತಿರೆ ಮನೆ ಮನಗಳ್ ಉಜ್ವಲ
ತೇಜದಿಂವೆಳಗುವ ರವಿಸದನವೊ ಎನೆ ಸುಖದ
ಬೀಡಾಯ್ತು, ದಿನದಿನಂ ನವೋದಯಮಾದವೊಲ್!
ಸುಖತೋಷದ ಹೊನಲಲಿ ಮುಳುಗೇಳುತಿರೆ ದಿವಸ
ವಾರಗಳ್ ಎಂತುರುಳ್ದುವೊ ಪಕ್ಷಮಾನವದು
ಕಳೆದುದೆಂತೊ ಚಾಂದ್ರಮಾನಮೆಂತಡರ್ದುದೊ ಎಂದು
ಬೆಮೆಗೊಳ್ವಮಾಳ್ಕೆಯಲಿ ಉರುಳಿತು ಸಮಯವಾಹಿ.
ಕಂದನ ನವನೂತನ ಅಭ್ಯುದಯಮಂ ನಿಚ್ಚ
ಕಂಡುಕಾಣುತಿರೆ ತೊದಲ್ ತೊದಲ್ ನುಡಿಮಾತಿನ
ಮೋಡಿ, ಮುಮ್ಮಾತುಗಳ ಮುದ್ದು ನುಡಿಗಟ್ಟು
ಹೃದ್ಗಡಲ್ ತುಂಬುವುವು. ಎರಳ್ಡಕ್ಕರ ಮೂರು
ನಾಲ್ಕಕ್ಕರಗಳ್ ಕೂಡಿ ನೆಯ್ದ ಸುರಸುಂದರ
ಬೇಡಿಕೆಯ ಹೇಳಿಕೆಗಳ್ ಮುತ್ತಿನ ಮಣಿಗಳೊಲ್
ಉದುರುತಿರೆ ಎತ್ತಿ ಮುದ್ದಾಡಿದ ಮಾತೆ ಮುದ್ದು
ಸೇಸೆಯಂ ಸೂಸುವಳ್ ಬಲ್ಮೆಯಿಂ. ಹೆತ್ತೊಡಲ್
ಮಿಡಿವುದು ಶಿವನಡಿಗಳಲಿ ಭಕ್ತಿಯ ಗೌರವಂ

ಸೂಸಿ. ದತ್ತ ಕುಟುಂಬದ ಮನಮನದಿಂ ಎರ್ದೆ
ಎರ್ದೆಯಿಂ ಉಣ್ಮಿ ಬಹ ಪ್ರೇಮಾನಂದದ ರಸ
ಪೂರ್ಣ ಜೇನ್ಸನಿಯ ಸವಿ ಸೋರ್ದು ಭಾವೋದ್ವೇಗದ
ಝುರಿ ಹರಿದು ರಾಗ ಬಿಂದೂತ್ಕರಂಗಳ್ ಸೂಸೆ
ರುಕ್ಮರಾಗಾತಪಂ ಮೆರೆದತ್ತು ಹೆಪ್ಪಿಟ್ಟ
ಮಾಳ್ಕೆಯಲಿ.
ವಿಶ್ವನಾಥದತ್ತಂ ಸರ್ವತ್ರ ಸದಾ
ಬಂಧುವತ್ಸಲಂ, ದೀನದಲಿತರ ಪೋಷಕಂ
ಭವನದೊಳ್ ಏವೊಳ್ತು ಬಹುಜನ ಸುಖಾಶ್ರಿತರ್
ಬದುಕುವರ್ ದುಡಿವ ಗೋಜನಿತಿರದೆ. ಅವರವರ
ಅಭಿರುಚಿಗೆ ತಕ್ಕಂತೆ ಅಂಟಿ ಬಲ್ತು ರಕ್ತದ
ನಂಟೆನೆ ಮೈಗೊಂಡ ಚುಟ್ಟಾ ಸಿಗರೇಟ್ ಬೀಡಿ
ಮುಂತಪ್ಪ ಕಿರು ಚಟಗಳಿಂಗೆ ಬಲ್ಮೆಯಿಂದಲಿ
ಹಣವನೀಯುವನ್ ವಿಶ್ವನಾಥದತ್ತಂ. ಜೊತೆಗೆ
ಯಾವತ್ಕಾಲಂ ಸಾಧುಸಂತರಿಗೆ ಭವನದೊಳ್
ರಾಜಾಶ್ರಯದಂತೆ ಸುಖೀಜೀವನದ ಭೋಗ
ಯೋಗಂ ಎನೆ, ಆ ಎಲ್ಲರ ಊಟೋಪಚಾರಗಳ
ಭಾರ ಗೃಹಿಣಿ ಭುವನೇಶ್ವರೀದೇವಿಯ ದಿವ್ಯ
ಭುಜವೇರ್ದುದು; ಶ್ರಮವನೆ ಶ್ರಮಿಸಿ ಬೆಮರ್ ಬಸಿದು
ಕರ್ಮಕಾಂಡದಲಿ ಕಳೆವಳ್ ಮಡದಿ ನಿಡುವೊಳ್ತು.
"ಚತುರ್ಬಾಹು ಸಮನ್ವಿತಾ" ಎಂದಾವ ದೇವಿಯಂ
ಮುನಿರಿಸಿಗಳ್ ಅನುಗಾಲಂ ಪಾಡಿ ನುತಿಸುವರೊ
ಅಂತಪ್ಪ ದೇವಿಯ ಬಣಗಣದಿಂದ್ಯೆವ ನಾರೀ
ಮಣಿಯರ್ಗೆ ಅನುದಿನಂ ಕಾರ್ಯಭಾರದ ದೇವ
ನದಿಯಲ್ಲಿ ಮಿಂದು ಮಡಿಯುಟ್ಟು ಬಾಳ್ಗುಡಿಯ ಸಿರಿ

ಜ್ಯೋತಿರ್ಕಿಡಿಯುಂ ಕುಡಿ ಕಟ್ಟಿದವೊಲ್ ಉರಿಸುವ
ಪರಿಪಾಠ ಭಾರತ ಸಾಮ್ರಾಜ್ಯದಾದ್ಯಂತಂ!
ವರ್ಷಮಾನಂಗಳೈದುವೆಂತಂತು ಸಂದುವು
ಅಂತೆಯೆ ಸುಖದುಃಖಗಳ ಹೊನಲ್ ಹರಿಸಿ ಹರಿಸಿ.
ಶಿಶು ನರೇಂದ್ರಂ ಆಡಿ ಪಾಡಿ ಕುಣಿದು ಕುಪ್ಪಳಿಸಿ
ಬಾಲಕನಾದಂ. ನೆರೆಹೊರೆಯ ಕಿರಿಯ ಚಿಣ್ಣ
ಬಾಲಚಮೂದಳಕೆ ತಾಂ ನಾಯಕಂಬೆತ್ತು ಮೆರೆದಂ.
ಅಕ್ಕಂದಿರಂ ಕಾಡಿ ಗುದ್ದಿ ಕೆಡಪಿ ಜಡೆಯೆಳೆದು
ಕಾಡುವಂ. ಮತ್ತಂ ಎಳೆನಗುವಿನ ಕೇಕೆಯಂ
ಹಾಕಿ ಕೂಗಿ ಕೇಳಿಸುವಂ ಕೋಕಿಯ ತೆರದಲಿ.
ತಾಯಿಯಂ ಮರೆವೊಕ್ಕು ರಕ್ಷಣೆ ಪಡೆದಲ್ಲದೆ
ಗತಿಯಿಲ್ಲವಾ ಅಣುಗನಕ್ಕಂದಿರಿಗೆ. ಒರ್ಮೆ
ಎಲ್ಲರ್ ನಗೆಮೊಗದಲಿ ಚಕ್ಕಂದವಾಡಿದೊಡೆ
ಮತ್ತೊರ್ಮೆ ಅದೇ ಗತಿ ಮಕ್ಕಳೊಳ್. ಮಗದೊರ್ಮೆ
ತಮ್ಮನ ಜಡಿಗುದ್ದು ಸಹಿಸಲಾರದೆ ಪೆಣ್ಗಳ್
ಬೆನ್ನಟ್ಟಿ ಪೋದಪರ್ ಕೋಪದಿಂ ಕುದಿಕುದಿದು.
ಆಗಳಾ ತುಂಟರತಿಪುಂಡರ ಗುರುನಾಯಕ
ಮಿಣ್ಣನಿರ್ಪನೇಂ? ಹಾದಿಯಂಚಿನಲಿ ನಿಂತ
ಕೊಟ್ಟಿರಾಡಿಯೊಳಿಳಿದು ಕೆಸರ್ ಕೈಯೊಳಗಾಂತು
ಬನ್ನಿರೇ!' ಎನುತೆ ಬೀಸಿ ರಾಚಿಬಿಡಲೊಡನೆ
ಸಿದ್ಧನಾಗೆ ಏಂ ಗೈವರಾ ಬಾಲೆಯರ್? ಮತ್ತೆ
ಗೋಳಾಗಿ ಓಡಿಪೋದಪರ್ ತಾಯಿಯ ಮರೆಗೆ,
ಬೆಚ್ಚಿ ಬೆದರಿದ ಹುಲ್ಲೆ ಮರಿಗಳಂತೆ. ಪ್ರೀತಿಯ
ದಾದಿಯಂ ಗುದ್ದಿ ದಿಂಡುರುಳ್ಚುವನ್. ಮತ್ತೊರ್ಮೆ
ಅವಳ ತೊಡೆಯೇರಿ ಮುದ್ದಿಸುವನ್. ಒಡನಾಡುವ

ಮಕ್ಕಳಂ ಪಿಡಿದು ಜಡಿ ನೂಂಕಿ ಪುಂಡಿನ
ಪುಂಡಾಟಿಕೆಯಲಿ ಗುದ್ದಿ ಕೆಡಗಿ ನೆರೆ ಗೋಳಿನ
ಕಣಕ್ಕಿಳಿದು ಪುಂಡಾಡುವನ್. ಮತ್ತೆ ಮನಮುದಿಸಿ
ರಮಿಸಿ ಕೂಡಾಡುವನ್ ನೇಹದ ಖನಿಯಾಗುತೆ.
ತಾಯಿ ಮೋಹಕ್ಕೆ ಕರೆದೊಯ್ದೊಡದೆ ತಂಬಿಗೆಯ
ನೀರಂ ಎರಚಿ ಎರಚಿ ಮಜ್ಜನಗೊಳಿಪಂ ಆ
ತಾಯಿಗೆ. ಕುಣಿಕುಣಿದು ಕಿರುವಾಯ್ ಕಿಸಿದು ನಕ್ಕು
ಕೇಕಾದಸಿಯಲಿ ನಗೆ ಮುದ್ದು ಹರಿಸುವನ್. ಇಂತು
ಬಗೆಬಗೆಯಲಿ ಕಾಡುತಿರೆ ಮನನೊಂದು ನೋಯುತೆ
ನೋವುಂಡು ಕಣ್ಣನಿಯು ಸೋಸೋರಿ ಆ ಶಿವನ
ನೆನೆನೆನೆದು ತಾಯಿ ಭುವನೇಶ್ವರೀ ದೇವಿಯುಂ
"ಶಿವನೆ! ನೀನೇಂಗೈದೆ? ಸುಪುತ್ರನಂ ನೀಡೆಂದು
ಪ್ರಾರ್ಥಿಸಿದಲ್ ನಿನ್ನಯ ಗಣದ ತಂಟಲಮಾರಿ
ಎನಿಸಿದೀ ಕನಿಷ್ಠನ ಕರುಣಿಸಿ ನೆರೆಗೋಳಿನ
ಕಣಜದಲ್ಲಿ ನೂಂಕಿಹೆನೆನ್ನಂ" ಎನುತೆ ಕಂಬನಿ
ಸೂಸಿ ಗೋಳ್ಗರೆಯುವಳ್ ಎನಿತೊಬಾರಿ, ಬಳಲ್ದು!
"**ಅಶ್ವ ಲಕ್ಷಣಂ ವೇಗೋ...**" ಎಂಬವೊಲ್ ಪುರುಡಿನ
ಮೂರ್ತಿಯೇ ತಾನಾದಪನಾ ನರೇಂದ್ರನಾಥಂ.
ಸಸ್ಯಕೋಟಿಗೆ ಪುಷ್ಪಗಳ ಅಲಂಕಾರವದು
ಎಂತಂತು ಮನುಕುಲಕೆ ವೃತ್ತಿಪ್ರವೃತ್ತಿಗಳ
ಸಾಹಸಮೆ ಗುರಿ ಎಂಬುದದು ದಿಟಂ, ಎನಲ್ಕಾ
ಪುಟ್ಟ ದಿಟ್ಟ ಧೀರೋತ್ತಮನಂ ತಡೆವರಾರ್?
ಬಾಲಕನ ಸಾಹಸ ಪ್ರವೃತ್ತಿಯಂ ಕಣ್ತುಂಬ
ಕಂಡುಂಡ ಪಿರಿಯ ಮಾಸಿಸರ್ ತೆಕ್ಕನೆ ಮಿಡುಕಿ
ಇದೇನೆಂದು ಮನಮಥಿಸಿ ಭಾವನಾವೇಶದಲಿ

ತಮ್ಮೊಳ್ ವಿಚಾರಶೀಲರಾದಪರ್. ಶಶ್ವತ್
ಪ್ರಶ್ನೋಪಪ್ರಶ್ನೆಗಳ್ ಏಳ್ದಪವು. ಆದೊಡಾ
ವಿಚಾರಂ ಗಹನಾತಿಗಹನಂ. ಬಾಲಕನುಂ
ವಿವಿಧ ರೀತಿಯಲಿ ತಾನೊಂದು ಅಚ್ಚರಿಯ
ವಸ್ತುವಾದೊಡಂ ತಾನೇನರಿಯನ್. ಎಂದಿನೊಲ್
ಆಟಗಳ ಅರಗಿಣಿಯು ತಾನಾಗಿ ದಿನಗಳೆವಂ
ನಿಜ ಸ್ಫೂರ್ತಿಯಲಿ. ಪಿರಿಯ ಮಾನಿಸರೆದುರ್ವೆತ್ತೊಡೆ
ಬಹುಬಗೆಯ ಪ್ರಶ್ನೆಗಳ ಬಾಣಜಾಲವನ್ನೇ
ಕರೆಯುವಂ ಬುದ್ಧಿಜೀವಿಗಳ ಮಾಳ್ಕೆಯಲಿ. ಆ
ಎಳೆಯನ ಘನ ಪ್ರಶ್ನೋಪಪ್ರಶ್ನೆಗಳಿಗೆ ತಕ್ಕನ
ಉತ್ತರವನೀಯಲಾರದೆ ನೋಳ್ಪರ್ ನೆಟ್ಟಿಹ
ಕಣ್ಣಾಲಿಗಳ್ ವಿಚಲಿಸದೆ. ಇದೆಂತಿಂತಿಂತು
ಗಹನವಾದ ಪ್ರಶ್ನೆಯನೆತ್ತುವನ್ ಎಂಬುದದು
ಒಡೆಯಲಾಗದಿಹ ಕಗ್ಗಂಟು. ಮಾತೆಯು ತನ್ನ
ಅಂಕದೊಳ್ ಕುಳ್ಳಿರಿಸಿ ಕಂದನಂ ಮುದ್ದಿಸುತೆ
ಬಹುಲ ಪ್ರೇಮಾತುರದಿಂದೆ ಮೈದಡವಿ ಮಂಡೆಯಂ
ಮೂಸಿ ಮುಂಡಾಡಿ "ಶಿವ ಶಿವಾ!" ಎನುತೆ ತೋಷದಿ
ಎದೆಯೋತು ಮನವೋತು ನಲ್ ನುಡಿಸುತೆ ಪುರಾಣ
ಪ್ರಥಿತ ಪವಿತ್ರ ಕಥನಗಳಂ ತಿಳಿಸಿ ತಿಳಿಸಿ
ವೀರಗಾಥೆಗಳಂ ಪರಿ ಬೋಧಿಸುವಳ್ ತನ್ನ
ಕುಮಾರನ ಮನವೊಪ್ಪುವ ಮಾಳ್ಕೆಯಲಿ. ವಿವಿಧ
ವೀರಪಟುಗಳ ಕಥಾನಕವಂ ಅರಿದು ಮನದಿ
ಮಥಿಸಿ ತನುದುಂಬುತಿರೆ ತಾನೆ ವೀರಯೋಧನ್
ತಾನೆ ಭೀಮಾರ್ಜುನರ್, ತಾನೆ ಭೀಷ್ಮ ಮತ್ತಂ
ಎಲ್ಲವುಂ ತಾನೆ ಎಂಬಂತೆ ಎಳೆ ನೆತ್ತರಿನ

ಝುರಿ ಬಿಸಿಗೊಳುವುದು ದೇಹದಾದ್ಯಂತಂ. ಮೆತ್ತೇಂ
ಆಲೈಸುತ್ತಾಲೈಸುತ್ತಾಲೈಸಿ ತನುಮನಗಳ್
ತುಂಬಿ ಗೊಮ್ಮಟನವೊಲ್ ಬೆಳೆಯುತಿರ್ದನ್ ಬಾಲ
ನರೇಂದ್ರನಾಥದತ್ತಂ. ದಿನದಿನಂ ವೀರ
ತೇಜವೇ ಮೈವೆತ್ತು ಬಂದಂತೆವೊಲ್ ತನುಹಗುರ
ಪ್ರಾಣನಿಧಿಗೆ. ಅಮ್ಮನ ತೊಡೆಯಿಂದಿಳಿದು ಪೊರ
ಹೊಸ್ತಿಲಂ ದಾಂಟಿದೊಡೆ ಮುಗಿಯಿತ್ತು; ಮತ್ತದೇ
ತುಂಟರ ಗುರುತನ ಭಾಸಣಿಪುದು ಕಳೆಯುಕಟ್ಟಿ.
ಒರ್ಮೆ ತಾಳಲಾರದ ಪೆತ್ತಮ್ಮ ಮನಮರುಗಿ
ಕರಗಿ ನೊಂದು ನೋಯುತೆ ಕೇಳಿಸಿದಳ್ ‘ಎಲೆ, ಬಿಲೆ!
ಕೇಳೈ ನಿನ್ನ ತುಂಟತನ ಅತಿಯಾಯ್ತು. ಆನುಂ
ತಾಳ್ವೆನೆಂತಿದಂ? ಇಂತಪ್ಪ ತುಂಟತನ ಸರಿ
ಎಂಬೆಯಾ? ನೀನೇಂದರಿದೆಯ್ ಕಂದ? ಯೋಚಿಸು
ನಿನ್ನೊಳ್.”
ಮಿದು ಮಂದ ದನಿಯಲಿ ಹರಿಯೆ ತಾಯಿಯ
ಪ್ರಶ್ನೆ, ಮರುನುಡಿಯಲಾರದೆ ಬೆಳ್ನಗೆಯ ಮಂದ
ಬೆಳುದಿಂಗಳ್ ಹರಿಸಿದವಂ ಮರುಚಣಂ ಜಾರಿರೆ,
ತಾಯಿಯು ನುಡಿದ ಬೆಳ್ನುಡಿ ಒಳ್ನುಡಿಗಳುಳಿವುವು
ಬೆನ್ನ ಹಿಂದೆಯೆ. ಕುವರ ನೆಗೆದೋಡುವನ್ ಹುಲ್ಲೆ
ಕರುವಿನವೊಲ್. ಕಿಲಕಿಲ ನಗುವಿನಲಹರಿಯ್ಯೆಸಿರಿ
ಮಾರ್ದನಿಸಿತು ದತ್ತ ಭವನದ ಹಿರಿಮಾಡಿನಲಿ.
ನಿಂತೆಡೆಯೆ ನಿಂದು ಕಣ್ಣಿಟ್ಟು ನೋಡಿದಳ್ ಆ
ತಾಯಿ ಸುಖದುಃಖಗಳ ಪಡಿಯಚ್ಚು ತಾನಾಗಿ.
ದಿನಗಳುರುಳಿ ಕಾಲಾದೀನವಾದಂತೆ ಸುತ
ನರೇಂದ್ರನಾಥನ ಅಭ್ಯುದಯ ಪಳಕು ಗಾಜುಗಳ

ಛವಿಯು ಮಿಂಚಿದೊಲಾಯ್ತು. ಉಜ್ವಲ ಕಂಗಳಲಿ
ನಗೆವಾತಿನಲಿ ಬುದ್ಧಿಮತ್ತೆಯಲಿ ಆನಂದ
ಮೋದದಲಿ ಪುಂಡರ ಗುರುವಿನ ಸ್ಥಾನೀಕರಲಿ
ಮುಂಬಿಗನೆನೆ ಎಲ್ಲರ ಮನಮನದಿ ಅಚ್ಚಳಿಯದೆ
ಉಳಿವಂ, ಸುರಸುಂದರ ವೈಭವದಲಿ. ಪಿರಿಯರ್
ಕುಲಗೌರವದಿಂ ಪ್ರೇಮಬಂಧನದಿಂ ಸುತನ
ಮನನೋಯಿಸರ್; ಸಜ್ಜನಿಕೆಯ ನಲ್ವಾತುಗಳ
ಸರಿಸುರಿದು ಬೋಳೈಸುವರ್ ಮನದಣಿಸಿ ಮುದ್ದಿಸಿ;
ಮತ್ತೆಮತ್ತೆಮೇಣ್ಮತ್ತೆ ವೀರರ ಗಾಥೆಯೊರೆದು
ಮತಿ ತಣಿಪರ್ ಕೆರಳದ ರೀತಿಯಲಿ. ಅದೊಂದೇ
ಸುಲಭ ಪಥ ಕುಮಾರನ ಪುರ್ಚಿಗೆ ಕಡಿವಣಂ ಬಗಿ
ತೊಡಿಸೆ. ಭಾರತ ಜನನಿ ತಾಂ ಅನ್ಯಥಾ ಕ್ರೂರ
ಶೃಂಖಲಾಬದ್ಧತೆಯಲಿ ನರಳಿ ಮನನೊಂದು ಬೆಂದು
ಬೇವಾಗಿ ಚಿಂತಾಸಮುದ್ರದೊಳ್ ಕುದಿಗೊಳಲ್
ಸಿಡಿಲ್ಮರಿ ಸಂಜನಿಸಿತೊ, ದುಃಖಕರ ಹೃದಯ
ದರ್ಪಣವೊಡೆದು ಸಿಡಿದ ಮುರಿವೊಂದು ಮಿಂಚುಮರಿ
ತಾನಾಯ್ತೊ, ಗಗನದಿಂ ನಕ್ಷತ್ರವೊಂದು ಉದುರಿ
ದರೆಗಿಳಿತಂದು ಶಿಶುವಾಯ್ತೊ, ವರಮುತ್ತಿನ ಖನಿಯೊ,
ಕೆಂಪು ನೀಲಿಗಳ ಮಧ್ಯೆ ಕೋದ ಬಜ್ಜರದ ಕಿಡಿ
ಹರಳೊ, ಹಸುರು ಗಿಡದೊಳ್ ಬಿರಿದರಳಿದ ಮಂದಾರ
ಹೂವಿನ ಸಿರಿಮೊಗವೊ, ಮರುಧರೆಯಲಿ ಉಕ್ಕುತಿಹ
ಜಲಬುಗ್ಗೆಯೊ ಎನುವೊಲ್ ಸ್ವರ್ಗೋಪಮವಾದುದು
ಸದ್ವಂಶದ ಸತ್ಕೀರ್ತಿ ಪತಾಕೆಯಂ ಆಕಾಶ
ದೇಶಕೇರ್ಪಡಿಪೊಂದು ಸುಯೋಗದಲಿ. ಭಾರತ
ಮಾತೆಯ ಒಡಲಿನೈಸಿರಿಯು ಮಿಂಚಿಮೆರೆವವೊಲ್

ಅಭ್ಯುದಯಮಾಗುತಲಿರ್ದುದು ಸುಕುಮಾರನ
ಚಿನ್ಮಯ ಶರೀರದ ಸುಮನೋಹರ ಸಂಪುಟಂ!
　ಒರೋರ್ಮೆ ಮಗನ ಪುಂಡುತನ ಪುಂಡಾಟಿಕೆಯು
ಪೆರ್ಚಿರಲ್ ಮನಸೋತು ಮತಿಸೋತು ತೀವ್ರತರ
ಬೆಸನದಿಂ ಮೋನದಿಂ 'ಶಿವ ಶಿವಾ' ಎಂದುಸಿರಿ
ಜಲಸೇಚನಗೈವಳ್ ಕಂದನ ತಲೆಯಮೇಲೆ.
ಒಡನೊಡನೆ ಮಂತ್ರಮುಗ್ಧ ಫಣಿಯತೆರದಿ ಸುತಂ
ಮಿಣ್ಣನಾದಪಂ ತಾನೇನರಿಯದ ಪಾಂಗಿನಲಿ.
ಭುವನೇಶ್ವರೀ ದೇವಿಯುಂ ನರೇಂದ್ರನಾಥನಂ
ಮುದ್ದಿಸಿ ಬಲುಮೆಯಿಂ ಮೊಗಮಂ ನೀಳ್ದು ನುಡಿದಳ್,
　"ಬಿಲೆ, ನೀನ್ ಎಮ್ಮಯ ಕಣ್ಮಣಿಯಲ್ತೇ?
ಇಂತಿಂತು ಅತಿ ತುಂಟತನಕಿಳಿದೊಡೆಂತು? ಶಿವ
ನಿನ್ನನವನ ಕೈಲಾಸಕೆ ಸೇರಿಸುವನೇನ್ನೈ?
ಅವಂ ಕುಪಿತನಾದೊಡೆ ಎಂ ಗತಿ? ಸರಸ ವಿರಸ
ಗತಿಗಿಳಿದೊಡೆ ಬಟ್ಟೆಗೆಡುವೆಯಲ್ತೇ? ನಿನ್ನೊಳಿದ
ನೀನೆ ಯೋಚಿಸಿ ನೋಡೆಲೆ ಕಂದಾ! ಏವೊಳ್ತು
ಪುಂಡುತನಕಿಳಿದು ಕೇಡಾಡಿಯಾಗದಿರ್. ಶಿವ
ಮೆಚ್ಚನಿದನೆನೆ ನಂಬು, ಎನ್ನನುಡಿ ಪೊಳ್ಳಲ್ಲ.
ನೀನಿಂತಿರುತಿರೆ ಆವ ದೇವಗುರುವು ನಿನ್ನ
ಕ್ಷಮಿಸಲಾರ ಎಚ್ಚರಿರು ಮಗನೇ!"
　　　　　　　　　　ನಲ್ನುಡಿಯು
ಮನಮತಿಗಳಂ ಮುಟ್ಟಿ ತಟ್ಟಿ ಮುದ್ರಿಸಲ್ ಕುವರ
ಮಣಿಯುಮಂ ನಲ್ಮಾತಿನ ಚಬುಕಿನೇಟಿಗೆ. ಮತ್ತೆ
ನುಡಿಸಿ ನಗಿಸಿ ಮುದದಿಂ ಮೈದಡವಿ ಆನಂದ
ದ್ರವ್ಯಮಂ ಮನತುಂಬಿ ಬೋಳೈಸುವಳಾ ತಾಯಿ.

ಸಂವತ್ಸರಗಳೈದು ಕಳೆಯೆ ಕುಲಪುತ್ರನಿಗೆ
ಶುಭದಿನದೊಳ್ ಶುಭಗಳಿಗೆಯನಾರೈದು ಪ್ರಥಮ
ಅಕ್ಷರಾಭ್ಯಾಸಕೆಂದು ಭವನಕೆ ಪುರೋಹಿತ
ಶಾಸ್ತ್ರಜ್ಞರ್ಥಂ ಕರೆದು ಪ್ರಥಮತಹ ಸರಸ್ವತೀ
ಪೂಜೆಯಂ ಸಲಿಸಿದ ಬಳಿಕ ಶಾಲೆಗೆ ಸೇರಿಸೆ
ಕರೆದೊಯ್ದನ್ ಪಿತ ವಿಶ್ವನಾಥದತ್ತಂ. ಆ
ಶಾಲೆಯಂ ಪೊಕ್ಕೊಡನೆ ಕಂದನಂ ಕೂಡಿಟ್ಟ
ಮಾಳ್ಕೆಯಲಿ ಮೂಡಿದುದು ಮಾನಸಿಕ ಕಳವಳಂ.
ಅನ್ನೆಬರಮಿರುತಿರ್ದ ಸ್ವಚ್ಛಂದ ಸ್ವಾತಂತ್ರ್ಯ
ಕಿಂಚಿತ್ ದೊರೆಯದಾಯ್ತು. ಮೈಮುದುಡಿ ಬೆಂಚಿನಲಿ
ಕೂಡುವುದೆನೆ ಬಹುಲ ಜುಗುಪ್ಸೆ. ಬರೆಯಲಾರಂ.
ಓದಲಾರಂ. ಪೊರಗೋಡುವೆನೆನೆ ಬಗಿಗಾವಲ್.
ಎಳೆಯಣುಗನ ಮುಖಬಿಂಬಂ ರುದ್ರ ಗಾಂಭೀರ್ಯಕೆ
ಎರವಾಯ್ತು. ಒರ್ಮೆ ಅತ್ತಿತ್ತ ನೋಡುವನ್. ಕಣ್
ನೆಟ್ಟು ಬೆಳಕಿಂಡಿಯಲಿ ಇಣುಕುವನ್. ಬಾಗಿಲೆಡೆ
ಕಣ್ಣೋಡಿಸುವನ್. ಸಹ ಬಾಲಕರ ನಗೆಮೊಗಂ
ಕಂಡು ಸಿಟ್ಟಿನಿಂ ಮೊಗ ತಿರುಹುವನ್, ಮತ್ತವರ್
ನಕ್ಕು ಹಲ್ಕಿರಿದೊಡೆ ಗುದ್ದುವನ್. ಮತ್ತೆ
ತಾನೆ ಅಣಕಿಪಂ. ಇಂತಿಂತಿಂತು ಶಾಲೆಯದು
ಕಟು ಕಠಿಣಮಾಯಿತ್ತು; ಬಾಲಕನ ಸ್ವಾತಂತ್ರ್ಯ
ಸಾಮ್ರಾಜ್ಯಕೆ ಅಪಾರ ಧಕ್ಕೆಯೊಡ್ಡಿ. ಶಾಲೆಯ
ಗುರುಗಳಿಗೆ ಬಾಲವಟುವಿನ ಮನಃಸ್ಥಿತಿಯುಂ
ಅರಿವಾದೊಡಂ ಸಾವರಿಸುವೊಡೆ ಅಪಾರತಮ
ಶಿರೋಭಾರಂ. ಷೋಡಶ ಕಳೆಯುಕ್ಕುವ ಕಂದ
ಇಂತುಟು ತನಗೆ ಭಂಗದ ಖನಿಯಾದಪನೆಂದು

ಮನದಿ ಬಗೆಯದಿರೆ, ಅಕ್ಕರಕ್ಕರವಂ ಕಲಿಪಿ
ತಿದ್ದುವೊಡೆ ಸಾಕುಸಾಕೆನಿಪ ಭಂಗದ ಕಣಂ.
ಕುಳಿತೆಡೆಯೆ ಕೂಡಿಸುವೊಡೆ ಅತೀವ ಹಗರಣಂ.
ಮಿಕ್ಕ ಅಣುಗರ್ ಅಕ್ಕರಮಂ ಓದಿ ನುಡಿದಿರೆ
ಒಕ್ಕಣಿಸಿ; ನರೇಂದ್ರನಾಥನ ಮನಕದು ಜುಗುಪ್ಸೆ.
ಬಿಮ್ಮನೆ ಬಿಗಿದು ಕುಳಿತ ಅವಂಗೆ ಬೆಳಕಿಂಡಿಯ
ಕಡೆಗೆ ದಿಟ್ಟಿ. ಕೀಚೆಂದು ಚೀರಿತು ಪಕ್ಷಿಗಳ
ಕೊರಳ್. ಒಯ್ಯನೆ ನುಗ್ಗಿ ಒಕ್ಕಣಿಸಿದುದು ಗಾಳಿ;
ಬೆಕ್ಕಸದೊಳಾಲಿಸಿತ್ತು ಕೊಡಂಕೆ. ಅಕ್ಕಜ ವಗೆ
ತೆಕ್ಕನತ್ತಣಿಂ ಪಿಂಮರಳದು ಬರವಣಿಗೆಯ
ಕಡೆಗೆ. ಅಂತಿಂತಿಂತು ಅಲ್ಲಲ್ಲಿ ಹರಿದಾಡಿ
ಹಕ್ಕಿಯೊಲ್ ಪಿಂದಿರುಗಿ ಬರ್ಪುದು ಮನೋಗತಿಯು
ತಾನಿರ್ಪೆಡೆಗೆ. ಗುರುಗಳ್ ಗೊಗ್ಗರ ಧ್ವನಿಯೊಳ್
ಗದರಿ ಬೋಧಿಪರ್. ಮತ್ತೊರ್ಮೆ ನಲ್ ಪ್ರೀತಿಯಂ
ತೋರ್ದು ಒಳ್ನುಡಿಯಲಿ ನುಡಿದು ನುಡಿಸಿ ಬೋಧಿಪರ್.
ಎನಿತೆನಿತೊ ದಿನಮಾನಗಳುರುಳುರುಳಿ ಸರಿದುವು
ಇತಿಹಾಸ ಪುಟಗಳಿಗಡರಿ. ಕ್ರಮ ಕ್ರಮೇಣ
ಅಕ್ಕರಕ್ಕರಗಳಲಿ ಅಕ್ಕರೆಯು ಸಕ್ಕರೆಯ
ಸವಿಯವೊಲ್ ಒಡಮೂಡಿ ಮನಗೊಳ್ಳುತಿರೆ ಅರಿವು
ಮುಂಬೆಳೆದು ಕ್ರಮಾನುಕ್ರಮದೊಳ್ ಶಾಲೆಯದು
ನಿರ್ಬಂಧಮೆನಿಸದೆ ಮತಿಯೊಪ್ಪಿ ಮನವೊಪ್ಪಿತು
ಸರಾಗದಲಿ. "**ಅಸಂತೋಷಂ ಶ್ರೀಯೋರ್ಮೂಲಂ**"
ಎಂಬವೊಲ್ ಬೇಸರದ ಕುಂಡವೊಡೆದಾತೆರದಿ
ಹಗುರಾಯ್ತು ಜೀವ. ಕಿನಿಸಿಗೆಯು ದೂರದೂರವಾಗಿ.
    ಕಾಲಚಕ್ರವುರುಳಿ ಕಳೆದುವು ದಿವಸಮಾನಂ

ಯಥೋಚಿತವಾಗಿ. ಬಾಲನರೇಂದ್ರನ ತನುಮನ
ದಿನದಿನಂ ವೆರ್ಚಿ ಬಿಜ್ಜೆಯೊಳ್ ನಿಷ್ಠೆ ಬೆಳೆಯೆ
ಕೀಲಿಸಿತು ದೃಷ್ಟಿ ದಿನಚರಿಗೆ. ಕೀಲಿಸಿತು ಕೈ
ಲೇಖನಿಗೆ. ಕೀಲಿಸಿತು ಕಣ್ ಪುಸ್ತಕದ ಪುಟಕೆ.
ಕೀಲಿಸಿತು ಉಸಿರ್ ಸರಸತಿಯ ಗುಡಿಗೆ. ಕೀಲಿಸಿತು
ತನ್ನತಾಂ ಸರ್ವಕ್ಕೆ. ಒಂದೆರಳ್ ಮೂರ್ನಾಲ್ಕು
ತಿಂಗಳಲಿ ಜಗದ ಬೆಳಕಿಗೆ ಕಾಲ್ಕುಸಿದು ನಿಲ್ವ
ತೆರದೊಳಾಯ್ತು ಮನಮಲೆತು. ಆವ ದೈವವೋ
ಬಂದೌಂಕಿದಂತೆ ಒಯ್ಯನೆಳ್ಚತ್ತು ಮತಿಯೊಲಿದು
ಮಿಂಚಿತ್ತು ವಿದ್ವತ್ತಿನ ಛಾಯೆ ತಲೆತುಂಬಿದೊಲ್.
ನರೇಂದ್ರಂ ಓದುವನ್, ಬರೆಯುವನ್. ಕುಣಿಯುವನ್
ತಕಥೈ ಚೆಲುವಿನ ಚೆಲುವಾಂತು. ಮಠದಲಿ ನೆಚ್ಚು.
ಪಿರಿಯರಲಿ ಮೆಚ್ಚು. ಓರಗೆಯರಲಿ ಅಚ್ಚುಮೆಚ್ಚು.
ಕುವರ ಶಾಲೆಯ ಬಂಟನಾದ. ತುಂಟರ ಗಣಿಗೆ
ಗುರುವಾದ. ಪಾಠದೊಳ್ ಎಂತಂತು ಆಟದಲಿ
ಅಂತಂತು ಮುಂಬಿಗನೆನಿಸಿದ. ಮೇಣೆಲ್ಲತರ
ಬಿಜ್ಜೆತನದೆಳೆಗೋಷ್ಠಿಗೆ ಸೇನಾನಿ ತಾನಾದ.
ಪಗಲಿರುಳ್ ಗಾಲಿಗಳ ಮೇಲೆ ದಿನಮಾನಗಳ
ರಥ ಉರುಳುರುಳಿ ಕಳೆಯಿತು ಕಾಲನಿಧಿ.
ಒಂದೆರಳ್ಡು ಮೂರ್ನಾಲ್ಕು ಸಂವತ್ಸರಂಗಳೆ
ಕಳೆದುವು ಸರಾಗದಿಂ. ಶಾಲೆಯ ದಿನಚರಿಯುಂ
ಯಥಾವತ್ ಕಳೆದುದು. ಇತರ ಅಂತೇವಾಸಿಗಳ
ಜೊತೆಗೂಡಿದ ನರೇಂದ್ರನಾಥಂಗೆ. ವಿದ್ಯೆಯುಂ
ಹಸ್ತಗತ. ಜ್ಞಾನವುಂ ಮನೋಗತ. ಪುರುಡು ಪುರುಪು
ಎಂದೆಂಬ ತೇಜಿಗಳ ಸಾರಥ್ಯ ಕೈಕೊಂಡಂ.

ಶಾಲೆಯೊಳ್ ಶಿಕ್ಷಕರ್ಗೆ ಪ್ರಶ್ನೋಪಪ್ರಶ್ನೆಯಂ
ಎದೆಗವಿಯ ಗುಡಿಯಿಂದೆಳೆದ ದಿವ್ಯ ಬಾಣಗಳ
ಜಲದೊಲೆಸೆದು ಕಂಗೆಡಿಸುವಂ. ಒಡನೊಡನೆಯೇ
ಉತ್ತರಿಸುವೊಡೆ ತಿಳಿಯದೆ ತತ್ತರಿಪರ ಕಡೆಗೆ
ನೋನೋಡಿ ಇತರ ಚಿಣ್ಣರ್ 'ಹೋ' ಎನುತೆ ಚೀರಿ
ಚೀರಾಡಿ ಕೇಕಿಗಳವೊಲ್ ಕೂಗಿ ಬೊಬ್ಬಿರಿಯೆ
ಮಿಣ್ಣನೆ ನಗೆ ಬೆಳ್ದಿಂಗಳ್ ಹರಿಸುವರ್, ಗುರುಗಳ್
ಅಚ್ಚರಿಯ ಮಂಡಿಗೆಯನುಂಡು. ಮಾಡು ಮೊಳಗಿ
ಸದ್ದು ಗದ್ದಲವೆರ್ಚಲ್ ಚಿಣ್ಣರ ಕಡೆಗೆ ಬಿರು
ಗಣ್ಣ ನೋಟವೆಸೆದು ಗದರಿಸಿ ಕೂಡಿಸುವರಾ
ಶಿಕ್ಷಕ ಮಹನೀಯರ್. ಮಗದೊರ್ಮೆ 'ಭಲೆ ಭಲೇ'
ಎನುತೆ ಮನ ಮರೆಸಿ ಮತಿಮರೆಸಿ ಪುರಿದುಂಬಿಸುತೆ
ಒಲವಿನಿಂ ಚೋದಿಸಿ ಪರಿ ಬೋಧಿಸುವರ್ ತಮ್ಮ
ಸೋಲಂ ಮರೆತು ನಾಣ್ಚಿ, ಬಾಲಕನ ಅಭ್ಯುದಯ
ಮೆರೆದತ್ತು ರೋಮರೋಮ ಹರ್ಷಕ ವೇಶದಲಿ.
ಹಾಸ್ಯ ಪರಿಹಾಸ್ಯಗಳ ಆಮೋದಪ್ರದದಲಿ
ಕಳಿವುದು ದಿನಮಾನಂ ಜಲಧಾರೆ ಹರಿಹರಿದು
ಹೋಹ ತೆರದಲಿ. ಅಣುಗರೊಳ್ ರಾಗರಸವಂಬಿತ್ತಿ.

ಹರಿಃ ಓಂ ತತ್ ಸತ್

❋ ❋

ದ್ವಿತೀಯೋಲ್ಲಾಸಂ

ಜ್ಯೋತಿರ್ಕಿರಣ

ಗುಣಂ ಪೃಚ್ಛಸ್ವ ಮಾ ರೂಪಂ
ಶೀಲಂ ಪೃಚ್ಛಸ್ವ ಮಾ ಕುಲಂ ।
ಸಿದ್ಧಿಂ ಪೃಚ್ಛಸ್ವ ಮಾ ವಿದ್ಯಾಂ
ಭೋಗಂ ಪೃಚ್ಛಸ್ವ ಮಾ ಧನಂ ॥

ಪಡುಗಣ ದಿಗ್‌ದೇಶದ ಅಂಚಿನಲಿ ಕೆನ್ನೀಲ
ಮೋಡಗಳು ವಿರಚಿಸಿದುವು ನವೋನವ ಬೃಹದ್
ಗುಡಿಗೋಪುರಗಳ್ ಸಾಲ್ಗಟ್ಟಿ. ಅರುಣಾರುಣಂ
ಮೆಲುಮೆಲ್ಲನೆ ಇಳಿಯುತಿರೆ ಅಸ್ತಗಿರಿಯ ಚೂಡದ
ಮೇಲೆ ಸಾಯಂಗೀತಗಳಂ ಹಾಡಿದುವು ಹಕ್ಕಿ
ವಿವಿಧ ರಾಗಗಳಲಿ: ದಿನಾಂತ ಕಾಲೀನ ಶುಭ
ಶಾಂತವಾರ್ತೆ ಹರಡಿತು ದೇಶದಾದ್ಯಂತ. ಬಲು
ಆಮೋದ ಪ್ರಮೋದದಿಂ ಬೀಸಿಬಹ ಗಾಳಿ
ಸುಯ್‌ಸುಯ್ದು ಸುಳಿಯುತೊರ್ಮೆ, ವೇಗದಿ ಬೀಸುತೊರ್ಮೆ
ಮರ್ಮರನೆ ಮರ್ಮರಿಸಿ ಮರುಗುತೊರ್ಮೆ ಭೋರನೆ
ಬೀಸುಬೀಸುತ್ತೆ ಭೋರ್ಗಾಳಿಯಾಗುತೊರ್ಮೆ, ಬಿಳಿ
ಮೋಡಮಾಲೆಗಳ ವಿವಿಧ ಆಕೃತಿಗಳ ಜಡಿದು
ನೂಂಕಿ ಓಡಿಸುತೊರ್ಮೆ ಆಟಗಳ ಕೂಟಸ್ಥ
ಅನಿಲದೇವ ಮೆರೆದಪಂ ಜಗತ್ ಕಲ್ಯಾಣಾರ್ಥಂ.
ಮಾಮರದೆಲೆಗಳ ಹೊದರಿನಲಿ ಹುದುಗಿ ಅಡಗಿದ
ಕೋಗಿಲೆ ಹರಿಸಿತು ಕೊರಳ್ ದನಿಯಿಂಪಿನ ಮಧುರ
ಗಾನ ತೂರ್ಯಮಂ ರಾಗರಸವಾಗಿ ಧ್ಯಾನದ

ಶ್ಲೋಕವಾಗಿ. "**ಹರೇರ್ನಾಮ ಹರೇರ್ನಾಮ ಹರೇರ್ನಾಮ**
ಏವಂ ಕೇವಲಂ..." ಎಂಬವೊಲ್ ಪೊಣ್ಮಿದುದು ಭಾವುಕತೆ
ಉಕ್ಕಿಹರಿವ ತೆರದಲಿ. ರಾಗ ಮಾಧುರ್ಯವದು
ಕರ್ಣಗಹ್ವರಮಂ ಪುಗುವುದು ಭಾರತತ್ವವಂ
ಬೋಧಿಪಂತೆ. ಅದೊ, ಇಳಿದನ್ ಸ್ವರ್ಣ ರವಿ ಗಿರಿ
ಶಿಖರದೆಡೆಯ ಹೊನ್ನೀಲ ನೀಲಿಯಲಿ. ಆಗಳ್
ದತ್ತಭವನದ ಬಿಸಿಲು ಮಚ್ಚಿನಲಿ ನಿಂದಿರ್ದು
ಪ್ರತೀಕ್ಷಿಸುವ ಬಾಲಕ ನರೇಂದ್ರನಾಥದತ್ತಂ
ತಾನೊಂದು ಜೋತಿರ್ಕಿಡಿಯೊ ಎನಲ್ ಹನಿಮುತ್ತು
ಮಿಂಚುವೊಲ್ ಮಿಂಚಿದಂ ರವಿಛಾಯೆ ಪ್ರತಿಫಲಿಸಿ.
ಬಾಲಕಂ ನೆಟ್ಟನಿಟ್ಟಾಲಿಯಾಗಿ ನಿಟ್ಟಿಸಿ
ನೋಡುತಿರೆ ವಿಚಿತ್ರತರ ರೂಪಿಂ ಮೈಗೊಂಡ
ಕರ್ಬೆಟ್ಟು ಹೆಗ್ಗಲ್ಲು ಕಗ್ಗಲ್ಲು ಚಿಣ್ಣ ಕಲ್ಲುಗಳ್
ಕೂಡಿ ತರತರದ ರನ್ನಗಳಗಣಿಯೊ ಎಂಬವೊಲ್
ಮೆರೆದತ್ತು. ಮೆಯ್ಗೆ ಪಚ್ಚ ಪಸುರಿನ ಪಟ್ಟುಡೆಯೊ
ಎನಲ್ ಪಚ್ಚರಾಜಿಯು ನಳನಳಿಸಿದುದು ವಿವಿಧ
ವರ್ಣವರ್ಣಾಂತ ತಳಿರ ಶೋಭೆಯಲಿ. ನಿತ್ತರಿಸಿ
ನಿಲ್ದ ಬೆಟ್ಟಗೋಡು ವಿರಾಜಮಾನಮಾದತ್ತು
ನೋಳ್ಪ ಕಣ್ ಮಮ್ಮಲಿಸುವ ಪಾಂಗಿನಲಿ. ಬಾಲಕ
ನರೇಂದ್ರನಾಥಂ ಆ ಬೆಟ್ಟಗೋಡನೇರ್ದೊಡೆನ್ನ
ಕೈಗೆಟುಕುವನೆ ರವಿ ಎನುತೆನುತಚ್ಚರಿಯಲ್ಲಿ
ನೋಡುತಿರೆಯಿರೆ ರವಿ ಮುಳುಗಿ ಅಸ್ತಂಗತನಾಗಿ
ಮರೆಯಾದನಾಗಳಿಗೆಯಲಿ. ನರೇಂದ್ರನಾಥಂ
ದಡದಡನೆ ಇಳಿತಂದು ಮುಂಜಗಲಿಯಂಚಿನಲಿ
ಕಾಲೂರಿ ನಿಂದೊಡನೆ ಕಿವಿಮುಟ್ಟಿತೊರ್ ತೀರ

ಕೀಚಲು ದನಿ "ಭಿಕ್ಷಾಂದೇಹಿ" ಥಟ್ಟನೆ ಮಿಡುಕಿ
ಬೀಳ್ವಪರಿಯಲ್ಲಿ, ಕಣ್ದಿಟ್ಟಿ ಹೊರಳಿತತ್ತಲ್.
ಚಣಹಿಂದೆ ಕಣ್ಗೆತ್ತ ದೃಶ್ಯಮಾನ ಸೌಂದರ್ಯ
ರಾಶಿಯೆದುರ್ ಎಂತಪ್ಪ ಹೀನಗತಿ? ಹಾಯ್!
ಮನಮಿಡುಕಿತು ಎಳೆಜೀವ ತತ್ತರಿಪ ತೆರದಲಿ.
ಆ ದೀನ ದನಿ ಮೊಳಗಿತು ಮಗದೊರ್ಮೆ. ಒಡನೆಯೆ
ನರೇಂದ್ರಂ ಒಳಕೊಠಡಿಯಂ ಬೊಕ್ಕು ಬೊಪ್ಪನಾ
ಅಂಗಿಜೇಬಿನೊಳಗಿನ ಹಿಡಿಗಾಸುಗಳ್ ಮೊಗೆದು
ಆ ಭಿಕ್ಷುಕನ ಬೊಗಸೆಯೊಡ್ಡಿರ್ದ ಕೈಗಳಿಗೆ
ಸುರಿದಂ. ಆಗಳೇಂ ದೀನ ದರಿದ್ರನ ಮೊಗವದು
ಅರಳಿದ ಪರಿ! ಅದಂ ಕಣ್‌ತುಂಬಿ ಮನಂತುಂಬಿ
ನೋಡಿದನ್ ನರೇಂದ್ರಂ. ಭಿಕ್ಷುಕಂ ತೋಷದಿಂ
ಕೈಯೆತ್ತಿ ಮುಗಿದಂ ಹಿಡಿಗಾಸಂ ಜೇಬಿಗಿಳಿಸಿ.
ಕರಡಿ ರೂವಿನ ಮೊಗಂ ಅರಳ್ಚಿ ಮಗದೊರ್ಮೆ
ಕೈಮುಗಿದನ್. ಆಗಳ್ ಅಲ್ಲಿಗೈದ ವರಪಿತ
ವಿಶ್ವನಾಥದತ್ತಂ ಕುವರನ ಉದಾರತ್ವಮಂ
ಕಂಡು ಮೆಚ್ಚಿಯುಂ ನಸು ಬೆರಗಾದನಂತೆಯೇ.
ಭಿಕ್ಷುಕಂ ಕೈಯೆತ್ತಿ ಮತ್ತೆ ಮುಗಿದಂ ದೀನ
ಭಂಗಿಯಲಿ. ಮತ್ತೆಮತ್ತೆ ನಮಿಸಿದ ಪರಿಯಿಂದೆ
ಎಳೆಯನೊಡಲ್ ಸುಖದುಃಖದ ಮಡಿಲ್ ತಾನಾಯ್ತು,
ಪಿತ ವಿಶ್ವನಾಥದತ್ತಂ ಸುತನಿಗಿಂತೆಂದಂ,
"ಎಲೆ, ವತ್ಸ! ಏಂಗೈದೆಯ್? ಓರ್ವಂಗೆ ಕುಡುವುದೊರ್
ಬಿಡಿಗಾಸು ಮಾತ್ರವಲ್ತೆ? ನೀನೇನಿಂತು ಹಿಡಿ
ನಾಣ್ಯಮಂ ಸುರಿದೆ? ಉಳಿದರ್ಗೆ ನೀನೇನೀವೆಂ?
ನಿನ್ನ ಮನದೊಳ್ ತಿಳಿದು ನೋಡೆಲ್ಲೆ ಕುಮಾರಾ!"

ನುಡಿ ಮನಂ ಮುಟ್ಟೆ, ಭಾವಾವೇಶದಲಿ ನುಡಿದ
ನರೇಂದ್ರಂ 'ಬಾಬಾ! ಸಾಧು ಎನೆ ನೀಂ ಕಾಣಿರಾ!
ದೀನ ದಲಿತನಿವಂ ತೀರಾ ಕನಿಷ್ಠನೈಸಲೆ?
ಒರ್ ಬಿಡಿಗಾಸಿನಿಂದೇಂ ಬಪ್ಪುದಿವನೊಡಲಿಂಗೆ?"
"ಇರ್ಕೆ ಕಂದ! ನಿನ್ನ ಮಾತನೊಪ್ಪಿದೊಡೆ ಮುಂಬಹ
ನೂರಾರು ಭಿಕ್ಷುಕರಿಗೇನೀವೆ? ನೀಂ ಪೇಳ್!
ದೇಶಕ್ಕೆ ದೇಶವೇ ಬಡತನದ ದಳ್ಳುರಿಯ
ಕಿಚ್ಚಿನಲಿ ಬೇಯುತಿದೆ, ಆರ್ಗು ಒಪ್ಪತ್ತಿಗುಂ
ಒಡಲ್ ತುಂಬ ಕೂಳು ದೊರೆವುದು ಭಂಗವೇ ಈ
ದೇಶದ ಬಡವರಿಗೆನಲ್ ಏಂಗೈವೆ ಪೇಳಯ್ಯ?"
"ಆ ಎಲ್ಲರಿಲ್ಲಿಗೆಯ್ಯಲಾರರಲ್ತೆ? ಮತ್ತೇಂ!
ನಿಮ್ಮೊಳ್ ಕಾಳಜಿ?"
"ಅಂತೆಂದೊಡೆಂತೈ? ಕೆಲವೇ ಜನರೈದೊಡಂ
ಇಂತು ಪೂರೈಸಲಾದಪುದೇಂ? ಯೋಚಿಸೈ ನೀಂ
ಮನದೊಳ್."
ಕುವರಂ ಸಿತಸ್ಮಿತ ವದನಾಂಭೋಜದೊಳೆಂದಂ
"ಇಂದು ಮಾತ್ರಮಿದೆನ್ನ ಹಿರಿ ಕಾಣಿಕೆ ಬಾಬಾ!"
"ಆಯಾಯ್ತು ಕಂದ!"
ಅಂತೆಂದೊಡಾ ಬಾಲಕಂ
ಮುಂದೆ ಆವೊರ್ವ ಭಿಕ್ಷುಕನೈದೊಡವಂಗೆ ತಾಂ
ಆಪನಿತು ಕೈತುಂಬ ನೀಡುವೊಡೆ ಸರ್ವಥಾ
ಮುಂದು ಪುರುಡುವೆತ್ತವೊಲ್.
ನರೇಂದ್ರನ ಬೊಪ್ಪನ
ಬೊಪ್ಪ ಕಾಳಿದಾಸ ಪ್ರಸಾದದತ್ತಂ ಮುದ್ದಿನ ಮುಮ್ಮಗ
ನರೇಂದ್ರನಾಥನಂ ಬಳಿಯೊಳ್ ಕರೆದು ಕೂಡಿಸಿ

ಬಲ್ಮೆಯಿಂ ನಲ್ಮೆಯಿಂ ಒಳ್ನುಡಿಯ ಜಾಲದಲಿ
ಮಂತ್ರಮುಗ್ಧಗೊಳಿಪಂತೆ ವೇದೋಪನಿಷತ್
ಪ್ರಣೀತ ಮಹಾಗ್ರಂಥಗಳಿಂ ವೀರಪುರುಷರ
ಮೇಣ್ ವೀರ ನಾರೀಮಣಿಯರ ಕಥಾವಳಿಯ
ನೊರೆದೊರೆದು ಎಳೆಯನ ಮನದುಂಬುವನ್; ನಿಚ್ಚಂ
ವೀರರಸಪಾನ ನೀಡುವ ಮಾಳ್ಕೆಯಲಿ. ಜ್ಞಾನ
ದೀವಿಯನುರಿಸುವನ್ ಪರಮ ಜ್ಯೋತಿರ್ಕಿಡಿಯೊಲ್.
ಬೆನ್ತಟ್ಟಿ ಮಂಡೆಯಂ ನೀಳ್ದು ಲೋಕ ಪ್ರಜ್ಞೆಯ
ಬೇರಿಳಿಸುವನ್ ಕಂದನಾ ಮನೋಮಂಡಲಕೆ.
ಮತ್ತೆ ಮತ್ತೆ ಧರ್ಮ ಕರ್ಮಗಳ ನ್ಯಾಯ ನೀತಿಗಳ
ಪರಿಧಿಯಂ ಹಿಂಜಿ ಬಿಡಿಬಿಡಿಸಿ ಹಿಡಿಗೊಳಿಸಿ ಎಳೆ
ಮನಮತಿಗಳಿಂಗೆ ಜಡಿತುಂಬಿ ಗಗನಕೇರಿಪ
ಮಹಾಕಾರ್ಯವೆಸಗುವನ್, ಎಳೆಯನ ತನುಮನಂ
ಪುಳಕಗೊಳಿಪಂತೆ. ಶಾಲೆಯಿಂ ಪಿಂಮರಳಿ ಬರೆ
ಬಾಲಕಂ ಬೊಪ್ಪನೊಡಗೂಡುತೊರ್ಮೆ ಪುರಾತನ
ವೀರಗಾಥೆಗಳಿಗೆ ಮನಂಗೊಟ್ಟೊಡೆ, ಮಗದೊರ್ಮೆ
ತಾಯಿಯ ತೊಡೆಯನೇರ್ದು ಆಲಿಸುತೆ ತನುಮನಂ
ತುಂಬಿ ಹೆಗ್ಗೂಡಾದಪನ್ ಭಾವನಾವೇಶಿ.
ಮುಂದೆ ಕಾಳೀಪ್ರಸಾದ ದತ್ತಂ ವೃದ್ಧಾಪ್ಯದ
ರೋಗಪರವಶತೆಯಲಿ ನರಳಿ ಮರಣ ಶಯ್ಯೆಯಂ
ಅಡರೆ ಪ್ರಾಣಾಸನ್ನ ಸಮಯದಲಿ, ಶೀರ್ಣದೀರ್ಣ
ದೇಹಂ ಗಳಿಗೆಗಳಿಗೆಗೆ ಸೋಲ್ದು ಬರಿ ಬೆಂಡಿನ
ಹಂದರದಲಿ ಉಸಿರಾಡುತಿರೆ ಕಂದನ ಕರೆದು
ಬಳಿಗೆ ಬರಮಾಡಿನುಡಿಸಿದಂ "ಎಲೈ ಕಂದಾ!
ನಿನಗೆನ್ನ ಪರಕೆಯಿರ್ಪುದು. ಶ್ರೀಕಾಳಿಯ ರಕ್ಷೆ

ಸದಾಕಾಲ ನಿನಗಿರಲೆಂದಾನ್ ಬೇಳ್ವೆನೆನ್.
"**ಕುರ್ಯಾತ್ ಸದಾ ಮಂಗಲಂ**" ಯಾವತ್ ಕಾಲಂ
ದೈವಭಕ್ತಿಯೊಳ್ ನಿಷ್ಠೆಯಿಂದಿರ್ದು ಪಡೆಯಯ್
ಸತ್ಕೀರ್ತಿಯಂ ಕುವರ! "**ವಿನಯೀ ವಿಜಯೀ ಭವ!**"
ಸುಕುಮಾರಕನ ತಲೆಯಮೇಲೆ ವರ ಹಸ್ತವಂ
ಇರಿಸಿ ಹರಸಿದನ್ ಪಿತಾಮಹ ತಾನಂದು.
ಪ್ರಾಣೋತ್ಕ್ರಮಣ ಕಾಲದ ಪರಕೆಯು ವರವಾಯ್ತು;
ಸ್ಥಿರವಾಯ್ತು; ಸುತನ ಭವಿಷ್ಯ ಮಿಸುನಿಯಪ್ಪಂತೆ.
ಅದೊ, ಮೂಡಣ ಭಿತ್ತಿಯ ಮೇಲೆ ಅರುಣಾರುಣನ
ಸಹಸ್ರಾರು ಚಕ್ರಚರಣಗಳ ಚೆಂದೇರು ಸುರ
ತೇಜದಿಂ ಉಜ್ವಲೋಜ್ವಲಿಸುತ ಮುಗಿಲ್ ದಿಣ್ಣೆ
ಏರುತೇರಿ ಸಾರಿದನ್ ಸುಂದರ ದಿನಚರಿಯ.
ಪ್ರಾತಃಸ್ಫೂರ್ತಿಗಳ ಖನಿಯಾಗಿ ನಿತ್ಯಕರ್ಮದ
ಪ್ರಶಾಸನದ ಅಧ್ವರ್ಯು ತಾನಾಗಿ ಪ್ರಚ್ಛನ್ನ
ಭಾವದಿಂ ಪ್ರಚ್ಛನ್ನಯೋಗದಿಂ ಭಯಂಕರ
ತಪಸ್ಸಾಧನಾ ರಕ್ತಿಯಿಂ ಕಾರ್ಯಕಾರಣ
ಯೋಗ ಯೋಜನಾ ಪ್ರವೃತ್ತಿಯಿಂ ತ್ರಿಲೋಕ
ಶಕ್ತಿಯುದ್ದೀಪನೆಗೆ ಸೃಷ್ಟಿರಸವಾರಿಸುತೊರ್ಮೆ
ವೃದ್ಧಿಸುತಲೊರ್ಮೆ ಜೀವರಾಶಿಗಳಂ ಕಾವ
ಜಗತ್ ಕನಕರತ್ನ ಶಿರೋಮಣಿಯೆ ತಾನಾದಂ.
"**ಆತ್ಮಾನಾಂ ವಿದ್ದಿ**" ಎಂದೇ ಸಾರುತ್ತದೆ ಸೂರ್ಯ
ದೇವನ ನಿತ್ಯನಿರಂತರ ಗಮನಾಗಮನಂ.
ಉಜ್ವಲಿಪ ಅರುಣಾರುಣಂ ಪ್ರಶಾಂತ ಭಾವದಿಂ
ಇಳಿದಿಳಿದು ಬರುತಿರಲ್ ತನ್ನರಮನೆಗೆ ಪ್ರಾಚೀ
ದಿಗ್ವಧು ಕಡುಕೆಂಪಿನ ವಸನಧಾರಿಣಿಯಾಗಿ

ಸ್ವಾಗತಿಸಿದಳ್ ಪರಮಪ್ರೇಮದಿಂ ನೇಮದಿಂ
ಸ್ನೇಹಾರ್ದ್ರರೂಪಿಣಿಯ ಸುಮಾನಸ ರೂವಿನಲಿ.
ತೆಂಕಣ ದಿಶೆಯಿಂ ಬೀಸಿತು ಮಂದಮಾರುತಂ.
ರಯ್ಯನೊಯ್ಯನೊಯ್ಯನೆ ಮೂಡಿ ಪಗಲಿರುಳ್ಗಳ್
ಕಳಿದುವೇಳೇಳ್ ದಿನ ಮಾನಂಗಳ್ ಸರಸದಿ
ತುಳಿಲ್‌ಗೆಯ್ದು ಸರಿದುವು ಸ್ವಚ್ಛಂದ ಚೆಂದದಿಂ.
ಬಾಲಕ ನರೇಂದ್ರಂ ಸುವೇಗಗಾಮಿನಿಯಾದ
ಕಾಲಗತಿಯಂ ಗಮನಿಸುವಂ ತನ್ನೊಳ್ ತಾನ್.
ವಸಂತ ಪ್ರಭುವಿನ ರಾಜ್ಯಭಾರಂ ಸಂಭ್ರಮದ
ತೇಜದಿಂ, ಕುಸುಮಕೋಟಿಯ ವೈಭವೋಪೇತ
ಶೃಂಗಾರ ಶೈಲಿಯಿಂ ಕಳೆಯಿತು ಸುಮನೋಹರ
ತೇಜದಿಂ. ವಸಂತ ಪ್ರಭುವೆಂತು ಸರಿದನಂತು
ಗ್ರೀಷ್ಮರಾಜಂವಿಡಿದನ್ ರಾಜ್ಯಾಡಳಿತಮಂ
ಉಗ್ರತೇಜೋರಾಶಿಯ ಯೋಗದಲಿ. ದಿನದಿನಂ
ಉರಿದುರಿದು ಕ್ಷೇಮಕ್ಷಯಿಸಿತೊ ಎನಲ್ ತಲ್ಲಣಿಸಿ
ಕುದಿಗೊಂಡಿತು ಜಗತ್ತು ಗ್ರೀಷ್ಮನೂಷ್ಮವೊತ್ತೊತ್ತಿ.
ಕಡುವೇಸಗೆಯ ರಣವಿಸಿಲ್ ಧಳಧಳಿಸಿರೆ ತನು
ಮನಂಗಳ್ ಬಸಿದುವು ಬೆಮರ್ ಎಡೆವಿಡದ ತೆರದಿ.
ಶಾಲೆಯೊಳ್ ಪಾಠಗಳ್ ಮುಗಿದು ಪರೀಕ್ಷೆಯು ತೀರ್ಚಿ
ಆನೆವಾಗಿಲ್ ಮುಚ್ಚಿತು ರಜೆಯಂ ಘೋಷಿಸಿ. ಆ
ಬಳಿಕಲೇಂ ತರುವಲಿಗಳ್ ಪುರುಡೆತ್ತ ಪರಿಯ?
ನರೇಂದ್ರಂ ಬಿಡುತೆಗೊಂಡ ತೇಜಿಯೊಲ್ ನಲಿನಲಿದು
ಮಿತ್ರವೃಂದಮಂ ಜೊತೆಗೂಡಿಸಿ ವಿವಿಧ ಆಟ
ಪಾಠಂಗಳಲಿ ನಗೆವಾತಿನ ಸಂಭ್ರಮದಲಿ ತಾಂ
ರಂಜಿಸುವನೆಲ್ಲ ಅಣುಗರ ಮನಮತಿಗಳನುಂ.

ಸರಳ ಸುಂದರ ಭಾವದ ರಸಮಂಜರಿಯು ನೆರೆ
ತುಂಬಿ ಹೃದ್ಗಡಲ್ ಕಲಾಲಯಮಾದಪುದು ನಿಚ್ಚ.
ಉತ್ಸುಕಮನ ಉತ್ಸುಕತೇಜ ಎಂದೆನಲ್
ಉತ್ಸುಕವೆ ಎಲ್ಲ. ಸಂಗೀತ ಕಲೆ ಬಲಿಯಿತ್ತು.
ಬಗೆಬಗೆಯ ಬಿಜ್ಜೆಗಳ್ ಕೈಸಾರ್ದುವು. ಅನಿತಿನಿತು
ಬಿಡುವಿಲ್ಲದ ಪರಿಯಲಿ ಕಳೆವುದು ದಿನಮಾನಂ.
ಸರ್ವತ್ರ ಸಾಧನಾ ಯೋಗದಲಿ ಪಡೆದನಾ
ನರೇಂದ್ರನಾಥದತ್ತಂ ಶಡ್ದರ್ಶನ ಭಾಗ್ಯಂ.
ಆಟದೊಳ್ ಸಡಗರ. ಭಜನಗೀತೆಯೊಳ್ ಅಮಿತ
ಸಡಗರ. ಗೆಣೆಯರಂ, ಪುರಿದುಂಬಿಸುವ ಸಡಗರ.
ಸಾಹಿತ್ಯ ಕಲೆಯೊಳ್ ಸಡಗರ. ನಾಟಕಕಲೆಯೊಳ್
ಸಡಗರ. ಕಲೆಗಳೆಂತಂತು ತನ್ನೊಳ್ ಐಕ್ಯಮೋ
ತಾನಂತಂತು ಕಲೆಯೊಳ್ ಐಕ್ಯಮೆನಲ್ ಸಲ್ವುದು.
ಸಂಗೀತಮಂ ಕಲಿತು ಬಲಿತು ಸಂಗೀತದೊಳ್
ಕಲಾಕೋವಿದನೆನೆ ಪೆಸರ್ವೆತ್ತಂ. ವಿಧವಿಧದ
ರಸವಿದ್ಯೆಗಳ್ ಕೈಸಾರ್ದಂತೆ ಮೊಗವರಳ್ದುದು
ಷೋಡಶ ಕಳೆಯಂ ಬೆಳಗಿ. ಕುವರಂ ಪೆತ್ತವರ
ಒಡಲ್ ತಣಿಸಿದಂ. ಸಹಚರಿಗಳ ಮನತಣಿಸಿದಂ.
ಬಹುಮುಖೀ ಪ್ರತಿಭೆಯಲಿ ಜ್ಯೋತಿರ್ಕಿರಣವಾಗಿ.
   ಇರುಳ್ ಬೆಳಗಿರ್ದ ಬೆಳ್ಳನೆ ಬೆಳ್ದಿಂಗಳಿನಲ್ಲಿ
ವಿಶ್ವಶಾಂತಿಯುಗುವ ಸವಿನಿದ್ದೆಯೊಳ್ ಕಣ್ಣಿಗೆ
ಕನಸಿನೊಲಿರೆ ಬೊಮ್ಮಾಂಡಂ ನೀರವ ನಿಶ್ಶಬ್ದ
ವೈಭವದಲಿ ನಿತ್ಯಸಮೃದ್ಧಮೆಂಬಿನಂ ನದಿಯ
ತೀರ ದ್ರುಮಗಳ್ ತಂಗಾಳಿಯಾಟದಲಿ ನಲಿದು
ಮರ್ಮರಿಸಿ ಶೃತಿ ಮೀಂಟಿದುವು ಚಂದ್ರಶೋಭಾ

ಸೌಂದರ್ಯದೊಡ್ಡೋಲಗದ ಶಾಂತಿಯವತರಣಕೆ.
ಒರ್ಮೆ ಭುವನೇಶ್ವರೀ ದೇವಿಯುಂ ಕುವರನಂ
ಅಂಕದೊಳ್ ಕುಳ್ಳಿರಿಸಿ ಗಲ್ಲಮಂ ಮುದ್ದಿಸುತೆ
ನಲ್‌ವಾತಿನಲಿ "ಕೇಳ್ ಕಂದ! ಮುಂದೆ ನೀ ಬೆಳೆದು
ಬಲ್ಲಿದನ್ನೆದ ಬಳಿಕ ಏಂಗೈದಪೆ ಪೇಳೆಂಬೆ."
ನಗೆಮೊಗದ ಕುಮಾರಕನುಂ ಪುರುಪಿನಿಂ "ಓವೊ!
ಮುಂದಾನ್ ಕೋಚ್‌ಗಾಡಿ ಹೊಡೆಯುವ ಕೋಚ್‌ಮ್ಯಾನ್
ಆದಪೆನ್!" ನಲ್ ಮಾತಿನ ಪ್ರತ್ಯುತ್ತರಂ ಕೇಳ್ದು,
"ಅಹಹ! ಇದು ನಿನ್ನ ಘನತೆಗೆ ತಕ್ಕುದೇಂ ಪೇಳ್?"
"ಕೋಚ್‌ಗಾಡಿಯ ಎತ್ತರದ ಪೀಠದಲಿ ಕುಳಿತು
ಜೋಡಿ ಅಶ್ವಂಗಳಂ ನಡೆಸುವುದು ಸಾಮಾನ್ಯಮೇ?"
ವಾಘೆಯಂ ಪಿಡಿದು ಮುಟ್ಟಿ ತಟ್ಟಿ ಬೆನ್ ಚಪ್ಪಳೆ
ತಟ್ಟಿ ಹೈ ಹೈ ಎನುತೆ ನಡೆಸುವುದು ಕಮ್ಮಿಯೇಂ?"
"ಇದೇನೀ ತಮಾಷೆ? ಇಷ್ಟೇಂ ನಿನ್ನ ಸಾಧನೆ?"
ಅಂತೆಂದೊಡಂ ಚಿತ್ತಪಕ್ಷಿ ಹಾರಿತ್ತು ಬಲು
ದೂರದೂರದ ದ್ವಾಪರಯುಗಕೆ. ಅರ್ಜುನಂಗೆ
ಶ್ರೀಕೃಷ್ಣ ಸಾರಥ್ಯಗೈದನಲ್ತೆ? ಎನಿಸಿರಲ್,
ತಾಯಿಗೆ. ಮರು ನುಡಿದಂ ನರೇಂದ್ರನಾಥದತ್ತಂ,
"ರಂಗುರಂಗಿನ ಉಡುಪು ತೊಟ್ಟು ಗಂಟೆ ಬಾಜಿಸಿ
ಚಾಟಿ ಹಿಡಿದು ಕುದುರೆಗಳನೋಡಿಪುದು ಹಿತಮಲ್ತೆ?
ರಾಜಪಥವಿಡಿದು ಪೋಪುದು ಎನಿತು ಚೆಂದವೋ
ನೆನೆಯಲಲದನ್, ಮನಮೈ ತಕಥೈ ತಕಥೈ ಕುಣಿ
ಕುಣಿವುದೆನ್ನ!"
ಮಿಂಚಿನ ನಗೆ ಹೊನಲ್ ಹರಿಸುತ್ತೆ
ನುಡಿದ ಕಂದನ ನುಡಿಗಟ್ಟು ಮನವಂ ಮುಟ್ಟಿತು.

ಶ್ರೀಮಾತೆಯುಸುರುವ ಕಥೆಗಳೋಳಿಯಲಿ ರಾಮ
ಚಂದ್ರನ ಬಂಟ, ಆತ್ಮೀಯ ಪ್ರಿಯಶಿಷ್ಯನ
ಸಾಸದ ಕಥೆಗಳೆನೆ ನವಕಿಶೋರ ನರೇಂದ್ರುಂಗೆ
ಬಲು ಆಸ್ತೆ. ಕಥೆ ಕೇಳಲ್ ಮೈಯೆಲ್ಲ ಮನಸ್ಸೆನೆ
ತನು ಮಿಸುಕದೆ ಕುಳಿತು ಕಥೆಯಂ ಕೇಳಿ ತಿಳಿವಂ.
ಜೊತೆಜೊತೆಯೊಳ್ ಆತನ ಅನನ್ಯ ಶಿಷ್ಯತ್ವಂ
ಚಿತ್ತಾಗ್ರದಲಿ ನಿಂದು ಸೆಳೆವುದು ಮನವಂ ಬಲು
ಸೂಕ್ಷ್ಮಗ್ರತಿಯಲಿ. ಹನುಮನಂ ಕಾಣ್ಬ ಪುರ್ಚುಬೆಳೆ
ಬೆಳೆದು ಗುಡಿಗಟ್ಟಿ ಗಗನವೇರಿರಲ್, ದಿನದಿನಂ
ತೋಂಟದಲಿ ದೂರದೂರದ ಹೆಮ್ಮರಗಳಲಿ ಕಣ್
ದಿಟ್ಟಿಯಟ್ಟಿ ಕುತೂಹಲಿತ ಮನವರಳಿ ಕಾದು
ನಿಲ್ವನ್ ಕಪಿಗಳವಿಂಡಿನಲಿ ಧೀರ ಹನುಮನಂ
ಕಾಣ್ಬೆನೇನೋ ಎಂದೆಂಬ ಭಾವಾವೇಶದಲಿ.
ಓರೋರ್ಮೆ ಕುಮಾರನ ತುಂಟತನ ವೆರ್ಚಿತೆನೆ
ಹದ್ದು ಮೀರುವ ಅರ್ಭಕಂಗೆ 'ಬಾಳೆಯ ಬನದ
ಬೇಲಿಯಲಿ ಕುಳಿತಿಹನ್ ಹನುಮ' ಎಂದೊಡೆ ಸಾಲ್ಗುಂ,
ನೆಗೆದೋಡುವನಲ್ಲಿಗೆ ನರೇಂದ್ರನಾಥಂ. ಪಗಲಿಡಿ
ಕಾದುಕಾದು ಪಿಂತಿರುಗುವಂ ಕಡು ಬೇಸರದೆ
ಕಹಿರಸವನುಂಡು.

ಧರಣಿಯೊಳ್ ತೃಣತೃಣಂಗಳ
ಜೀವನಾಲವಾಲದಲಿ ಮೊಳೆತು ಬೆಳೆದು ತೊಳಗಿ
ಪ್ರವಹಿಪಾ ಜೀವನೀಯ ಸ್ಫೂರ್ತಿ ಮಧುರ ಪಚ್ಚ
ತರದ ಮನಮತಿಗಳಿಗೆ ಅಧಿಕ ಜೈತನ್ಯ ಧುನಿ.
ಎಳೆಜೀವ ನಲಿನಲಿವುದು ನಿಸರ್ಗ ಜೈತನ್ಯದ
ಕಣಕಣದಲಿ ಮಿನುಮಿನುಗುವ ಜೀವಕಣಂಗಳ

ಜೀವನೀಯ ಪ್ರಕಾರಂಗಳ ತಿಳಿದರಿಯುವಂ.
ಗಿಡುಮರಂಗಳ್ ಹುಟ್ಟಿ ಬೆಳೆದು ಬಲಿತು ಬಾಳುವ
ರೀತಿ, ಪೂತು ಅರಳಿ ಫಲಿಸುವ ವಿಧಾನ ಮೇಣುಂ
ಪ್ರಾಣಿ ಪಕ್ಷಿ ಕೀಟಂಗಳ ಉದಯಾಂತಗಳ ನಿಜ
ಸ್ವರೂಪಮಂ ಗಮನಿಸುತೆ ವಿಚಾರಪರನಿರೆ,
ಪಜ್ಜೆಪಜ್ಜೆಗೆ ನಿಂತು ಮೈಯೆಲ್ಲಾ ಕಣ್ಣಾಗಿ
ಕಿವಿಯಾಗಿ ಪರಿಭಾವಿಸುತೆ ನಡೆವನ್ ಚಿಂತನಾ
ವೇಶದಲಿ. ಬನಗಾಳಿ ತಣ್ಣನೆಯ ತನಿಯೂಡಿ
ಬೀಸುತಿರೆ ಯಂತ್ರೋಚ್ಛ್ವಸಿತಮೆಂಬವೊಲ್ ಸುಯ್ದು
ಸುಯ್ಯುತ್ತೆ ತಿರ್ರನೆಯೆ ತೀವ್ರಗತಿಯಲಿ ತೀಡಿ
ಪ್ರೋಲ್ಲಾಸವನೂಡಿಪುದು ಜೀವನವಂ ಬೆಳಗೆ.
  ಅನುದಿನದ ಬಿಡುವಿನ ಸಮಯದಲಿ ಜನನಿಯುಂ
ಕಂದನಾ ಹೃದಯಾಂತರಾಳವರ್ತೀ ನವೋ
ನವ ಭಾವನಾಮಯತೆಯಿಂದುಣ್ಮಿದ ಗಭೀರ
ಪ್ರಶ್ನೋಪಪ್ರಶ್ನೆಗಳಿಗೆ ಉತ್ತರಿಸುವೊಡೆ ತಾಂ
ತತ್ತರಿಸುವಳ್ ಮುಗ್ಧದುಗ್ಧೆ. ದಶರಥನ ಪರಮ
ಸುತ ರಾಮಚಂದ್ರನ ಚರಿತಾಮೃತ–ರಾಮಾಯಣದ
ಕಥಾವಳಿಯನುಲಿಯುತಿರೆ ಜನನಿ, ಮನವನಿಟ್ಟು
ಕಿವಿಗೊಟ್ಟು ಆಲಿಸುವನ್ ನರೇಂದ್ರನಾಥಂ. ಆ
ಕಥೆಯನಾಲಿಸಾಲಿಸುತೆ ಭಕ್ತಿರಸ ಘನಿಸಿತು.
ಭಾವನಾಭರಿತ ಹನಿಗಣ್ ಥಳಥಳಿಸಿದ್ದುವು
ಕೆಂಗೆಂಪು ತಳೆದು. ಹೂಗೆನ್ನೆಗಳು ರಂಗೊರೆದು
ಮಿದುಮನದ ಕೋಮಲತೆ ಮರೆದುದು ಆಂತರ್ಯದ
ಭಾವನೆಯನು ಸ್ಫುರಿಸಿ. ಜನನಿ ಮಗನ ಮೈದಡವಿ
ಸಂತೈಸುವೊಲ್ "ಕಂದ ಇದೇನ್ ಇಂತು ಬೇಸರಂ?"

"ಅಮ್ಮಾ, ಘನವಂತರ್ಗಿದು ಸಲ್ವುದೇಂ? ಭಂಗ
ಬನ್ನಂಗಳ್ ಏಕಿಂತು ಬಂದಪವು? ರಾಮಂ
ಜಾಣನಲ್ತೆ? ಜಾಣರ್ಗಿದು ಬಂದುದೆಂತು? ಹಾ,
ತರವಲ್ತಿದು? ನೀಂ ಮನದಿ ತಿಳಿದು ನೋಡಮ್ಮ"
ಅರಳಿರ್ದ ಕಂಗಳಿಗೆ ಶಿವನ ಮುಕ್ಕಣ್ಣ ತೇಜಂ
ಗಳಿಗೆಕಾಲ ಬಂದೊದವಿತೋ ಎನೆ ಉಜ್ವಲಿಸೆ
ನೋಡಿದಳ್ ಮಾತೆ ನೆಟ್ಟ ಕಣ್ಣಾಲಿಯನಿನಿತು
ಕೀಲಿಸದೆ, ರೋಮೋದ್ಗತ ಭಾವಾವೇಶದಲಿ.
ಉರುಳಿದುವು ಕೆಲಚಣಂಗಳ್ ಬಳಿಕಲೆಳ್ಚತ್ತು
ಮುಖಬಿಂಬಮಂ ನೀಳ್ದು ಮುದ್ದಿಸಿ ನಯದಿಂ ನುಡಿ
ಮುತ್ತಂ ನಲ್‌ಸೂಸಿದಳೆಂತೆನೆ "ಎಲೆ, ಕಂದಾ!
ಮನಂಗೆಡದೆ ಕೇಳ್ ಕಥೆಯಂ ಮುಂದೆ." ಆಗಳ್
ಎಳೆಯವಟು "ಅಮ್ಮಾ ಆ ರಾಜಮಹಾರಾಜರುಂ
ಪುಣ್ಯವಂತರಲ್ತೇ? ಅವರಿಗೇಕೀ ಸಂಕಷ್ಟಂ?
ಇವೆಂತು ಒದಗುವುದವರಿಂಗೆ?"
"ಎಲ್ಲರ್ಗು ಭಂಗ ಬನ್ನಮಿಪ್ಪುದು. ಅವರೆಮ್ಮ
ಮಾಳ್ಕೆಯಲಿ ಮನು ಕುಲಜರೇ ವಲಂ. ಸತ್‌ಕಾರ್ಯ
ಕೈಕೊಂಡು ಸದ್ಗುಣಿಗಳೈಸಿ ಪುಣ್ಯವಶದಿಂದೆ
ಲೋಕೋತ್ತರಕೇರ್ದ ಮಹನೀಯರ್! ಅವರವರ
ಜಾಯಮಾನದಿಂ ಆಚಂದ್ರಾರ್ಕ ಕೀರ್ತಿಯಂ
ಪಡೆದವರ್! ಸತ್ಕರ್ಮ ಫಲದಿಂ ಪೆಸರ್ ಚಿರಂ
ಕಣಾ ಧರೆಯೊಳ್! ಅಚ್ಚಳಿಯದ ಪ್ರಖ್ಯಾತಿಯಿಂ
ಚಿರಸ್ಥಾಯಿಯಾದತ್ತು, ಅವರವರ ಚರಿತಾಮೃತಂ."
"ಅಮ್ಮಾ ದಶರಥರಾಮಚಂದ್ರನ ಚರಿತೆಯಂ
ಕೇಳ್ದೆನ್ನ ಮನಂ ಆಕರಿಪುದು ರಘುರಾಮನ ಪೂಜಿಸಲ್.

ಆಂ ಪೂಜಿಪುದು ಒಳ್ಳಿತಲ್ತೆ?"
"ಆಯ್ತು ಕುವರಾ!
ನೀಂ ಪೂಜಿಪುದು ಒಳ್ಳಿತು, ಅವಂ! ಪರಿಪೂಜ್ಯಂ!
ಅವಂ ಪರಮಪುರುಷಂ! ಮಹಾತ್ಮನೆನೆ ದಿಟಂ!"
"ಆಯ್ತಾಯ್ತು. ಆನಿಂದಿನಿಂದೆ ಶ್ರೀ ರಾಮನಂ
ಪೂಜಿಪೆನ್."
ಬಾಲಕಂ ದಡದಡನೆ ಮೆಟ್ಟಿಲಿಳಿದು
ಅಂಗಡಿಯ ಸಾಲಿಂಗೆ ನಡೆದನ್ ತನಗೆ ಹಿತಮಿಹ
ಶ್ರೀರಾಮ ವಿಗ್ರಹಂ ಕೊಂಡುತರೆ. ಅಲ್ಲಲ್ಲಿ
ಹುಡುಕ್ಹುಡಿಕಿ ಅನೇಕ ವಿಗ್ರಹಗಳಂ ನೋನೋಡಿ
ಮನವೊಪ್ಪದೆ ತನ್ನೊಂದು ವಿಶೇಷತಮ ಆಸೆಯ
ಪೂರೈಕೆಗೆ ಹಿಡಿಸುವ ಸುಸುಂದರಮಯ ವಿಗ್ರಹ
ರಾಮನಂ ಅರಸುತಿರೆ ಕಂಡನೊಂದು ಕಿರಿದಾದ
ಮೂರ್ತಿಯಂ. ಒಡನೆ ಮುಮ್ಮಾರುವೋಗಿ ಕೀರ್ತಿಗೆ
ತಕ್ಕ ವಿಗ್ರಹಮಿದೆಂದು ಮನವೊಪ್ಪಿ ಮೆಚ್ಚಿ ತಂದನ್
ಭವನಕ್ಕೆ. ಉಪ್ಪರಿಗೆಯ ಮೇಲಿನ ಕೊಠಡಿಯಲಿ
ಅಮೂಲ್ಯತರ ಸೀತಾರಾಮರಾ ಮೂರ್ತಿಯಂ
ಮಣೆಯಮೇಲಿರಿಸಿ ಸ್ವರ್ಗೋಪಮ ಸುಖತೋಷದ
ವೈಭವದಲಿ ಪೂವಿರಿಸಿ ದೀಪವರ್ತಿಕೆಯೊಳ್
ತೈಲವೆರೆದು ತುಂಬಿಸಿ ಹೊತ್ತಿಸಿದಂ ದೀಪವಂ.
ಸಿದ್ಧಾಸನದೊಳ್ ಕುಳಿತು ಪಾಡಿದನ್ ನರೇಂದ್ರಂ;
"ರಾಮರಾಮಾಯ ರಾಮಚಂದ್ರಾಯ..." ಎನುತೆನುತೆ
ಎನಿತೊ ಗೀತೆಗಳನುಲಿದುದು ಕೊರಳ್ ಕಂಠಂ
ಕಂಚುಮಿಡಿದಂತೆ. ಹಾಡಿ ಪಾಡಿದನ್ ನಲವಿಂ.
ಮತ್ತೆ ಮಂಗಳಾರತಿಯಂ ಬೆಳಗಿ ಪೂರೈಸಿಯೆ

ಕೆಳಗಿಳಿದು ಬಂದಂ, ಬಹುಲ ಅಳ್ಕರೆಯ ಪೂಜೆ
ಸಂದುದು ರಘುರಾಮನ ಮನೋಹರ ಮೂರುತಿಗೆ.
ಇಂತಿಂತು ಉರುಳಿದುವೆನಿತೊ ದಿವಸಮಾನಗಳ್
ಪೃನ್ಮ್ರಂಗಳ್ ರಸದೂಟೆಯಾದುವು ಆನಂದ
ಸುಧಾರಸಮುಂಡು. ಭುವನೇಶ್ವರೀ, ದೇವಿಯುಂ
ಕುಮಾರನ ಅಪರಿಮಿತ ರಾಮಭಕ್ತಿಯಂ ಸ್ವತಃ
ಕಂಡರಿದು ಮುದವೆತ್ತು ಪತಿಗಿರದ ಭಕ್ತಿಯದು
ಕಂದನಲಿ ಭವಿಸಿತೆಂದು ಮನದುಂಬಿದಳ್ ಬಲ್
ತೋಷದಲಿ. ಕಂಗಳಲಿ ಮೊಳೆತುವು ಸುಖಾಶ್ರುಗಳ್.
ಕಂದನಂ ಬಿಗಿದಪ್ಪಿ ಪ್ರೇಮದಿಂ ಮಂಡೆಯಂ
ನೀಳ್ದು ಒಳ್ ನುಡಿಯಲ್ಲಿ ಪರಸಿದಳ್ "ಸರ್ವತ್ರ
ಸದಾ ನಿನಗೆ ಜಗಜ್ಜನನಿಯುಂ ರಕ್ಷೆ ನೀಡುಗೆ."
ಮಾತೆಯ ಮಮತೆಯ ಮುದ್ದಿನಂಕದಲಿ ಮುದ್ದಿನ
ಮಗುವಾಗಿ ಕುಳ್ಳಿರ್ದು ತಾಯೊರೆವ ಪುರಾತನ
ರಾಮಾಯಣ ಕಥಾನಕಮಂ ಕೇಳುತಿರುತಿರೆ
ಮೈಯೆಲ್ಲ ಮನಸು ಎಂಬವೊಲ್ ಬಾಲಕನಿಂಗೆ
ಎಲ್ಲಿಲ್ಲದಿಹ ಕಥಾನಿಷ್ಠೆ. ಜನನಿಯುಂ ಸೀತಾರಾಮ
ವಿವಾಹದ ಸಂದರ್ಭಮಂ ಬಣ್ಣಿಸುತಿರೆ, ಆ
ರಾಜಸಭೆಯೊಳ್ ಬಹು ಜನರ ಮಧ್ಯೆ ಉದ್ದಂಡ
ಕೋಯಂಡಮಂ ಎತ್ತಿ ಸಂಧಾನಗೈದು ಗೆಲ್ದ
ವೀರಾಧಿವೀರ ಎಂಬುದಂ ಬಣ್ಣಿಸಿದಳಾ
ಜನನಿ ಪೊಗಳಿ ಪಾಡಿ. ಬಹುಬಗೆಯಲಿ ಕೇಳರಿದ
ಮಂಗಲಮಯ ಬಣ್ಣನೆಯದು ಚಿತ್ರವತ್ತಾಗಿ
ನಲಿದತ್ತು ಬಾಲಕನ ಚಿತ್ತಭಿತ್ತಿಯಲಿ. ಹಾ!
ಆಗಳೇಂ ಕಂದನ ಮನೋಗತಿಯ ಮರ್ಮಂ?

ಕೋಮಲ ಕಪೋಲ ಪಾಲಿಗಳ್ ರಂಗು ತಳೆದುವು
ಕೆಂಗೆಂಪು ಒರೆದೊಲ್. ಬಿಸುಗಂಬನಿಯಧಾರೆಯು
ಮಿಂಚಿದುದು ಕಣ್ಣಂಚಿನಲಿ ವೆಳ್ಳಿವಾರಿಯಾ
ತೆರದೊಲ್ "ಏನ್ನೈ ಕಂದ! ಏನಾಯ್ತು ನಿನ್ನೊಳ್
ಏತಕೀಪರಿ ನೊಂದ್ಯೆ?"
"ಅಮ್ಮಾ! ಆನಿನ್ನೆಂತು
ಪೂಜಿಸಲಿ ಶ್ರೀರಾಮ ಚಂದ್ರನಂ?"
"ಏಂ ಸಂಶಯ
ಮನದಿ?"
"ರಾಮಚಂದ್ರಂ ವಿವಾಹಿತನಲ್ತೆ? ವಿವಾಹಿತ
ರಾಮನಂ ಆಂ ಪೂಜಿಸಲಾರೆನ್. ಒಪ್ಪವೆನ್ನ
ಹೃನ್ಮನಗಳ್."
"ಸರಿಬಿಡು, ರಾಮನಲ್ಲದೊಡೇಂ,
ಬೇರೆ ಮೂರ್ತಿಯಂ ಪೂಜಿಸು ಮಗನೆ! ನಿನ್ನಮನ
ಒಪ್ಪಿದೊಡೆ ಶಿವನನ್ನೆ ಪೂಜಿಸ್ಯೆ" ಎಂದಳಾ
ಪೂಜ್ಯಜನನಿ, ಬಾಲಕನ ಮನದೊಳ್ ನಡೆವೆಲ್ಲ
ಕೋಲಾಹಲಮಂ ಗಮನಿಸಿ ಸ್ವಾಂತನಮಂ ನೀಡೆ.
ನರೇಂದ್ರನಾಥಂ ತನ್ನೊಳ್ ರಘುರಾಮನ ಗುಣ
ಧರ್ಮಗಳ್ ಮೆಚ್ಚಿರಲ್ ಹೃನ್ಮನಂ ಮಮ್ಮಲಿಸಿ
ಮುಳುಗಿದುವು ಚಿಂತನಾ ವೇಶದಲಿ. ಬಾಲಕಂ
ಆಲಿಸಿದನಾತ್ಮ ಸಂಸ್ಫೂರ್ತಿಕರ ನಿರ್ಣಯಂ.
ಅಂದು, ಮಾತೆಯುಂ ಬೋಧಿಸಿದ ರಾಮಚಂದ್ರನ
ಪ್ರಾರ್ಥನಾ ಶ್ಲೋಕವೊಂದು ಉಣ್ಮಿತು ಹೃದಯದ
ಕುಂಡದಿಂ ಮನೋಹರವಾಗಿ. ಭಕ್ತಿಯುತವಾಗಿ.

“ನೀಲಾಂಭುಜ ಶ್ಯಾಮಲ ಕೋಮಲಾಂಗಂ
ಸೀತಾ ಸಮಾರೋಪಿತ ವಾಮ ಭಾಗಮ್ ।
ಪಾಣಾ ಮಹಾ ಸಾಯಕ ಚಾರು ಚಾಪಂ
ನಮಾಮಿ ರಾಮಂ ರಘುವಂಶ ನಾಥಂ ॥”

ಸಂಗೀತ ಸಂಗೀತವೇ! ಎರ್ದೆಯ ಬೀಣೆಯು
ಹಾಡುತ್ತಿದೆ ಭಕ್ತಿರಸ ಸ್ಫೂರ್ತಿಯಿಂ. ಮನಮಾತ್ರಂ
ಇನ್ನೆಲ್ಲೊ ಪಾರ್ದುದು ಎರೆಂಕೆಗಳ ಬಿದಿರ್ಚುತೆ.
ಸಂಕೆಯುಂ ಬಲಿತುದು ನರನರದೊಳ್. ಬಾಲಕಂ
ತನ್ನೊಳ್ ವಿಚಾರಕ್ರಾಂತನಾದಂ, ಎಳೆಮನದ
ಪಕ್ಷಿ ಎರೆಂಕೆಗಳಂ ಬಿದಿರ್ಚಿ. ವಿಯದ್ರಂಗದಲಿ
ತೇಲಿ ದಿಕ್ಕೆಟ್ಟು ಗತಿತಪ್ಪಿ ಅಂಡಲೆಯಿತ್ತು
ತಾನೆ ತಾನ್ಯೆಸಿ. ಚಿಂತನಾದ್ರುವ್ಯ ಘನಿಸಿರಲ್
ಭಾವನಾ ಭಾರವೇ ಕುಸಿದು ಬಿಳ್ದತ್ತು; ಮರ
ಅಲುಗಿಸೆ ಮಿಡಿಕಾಯ್ಗಳುದುರುವವೊಲ್. ಬಾಲಕಂ
ಯೋಚನೆಯ ಬಲೆಯಲಿ ಸಿಲುಕಿ ನಲುಗಿದಂ. ಮನದಿ
ಭಕ್ತಿ ಭಾವವೇ ಗತಿತಪ್ಪಿ ಬಯಲಾಯ್ತು. ಅದೆ
ಆಗಳೇ ಮನೋಗತಿ ಚಂಚಲಗೊಳೆ ತಳುವದೆ
ವಿದ್ಯುದ್ವೇಗದಿಂ ದಡದಡನೆ ಮೆಟ್ಟಿಲೇರಿದಂ
ಉಪ್ಪರಿಗೆಯ. ಸೀತಾರಾಮರ ವಿಗ್ರಹಮಂ
ಮುಂದಿರಿಸಿ ವಿಚಾರ ವಿಮರ್ಶೆಯಿಂ ಎನಿತೆನಿತು
ಜಾನಿಸಿದೊಡಮದಂ ಮನವೊಲ್ಲದು. ಕಳೆದುರುಳಿ
ಪೋದುವೆನಿತೊ ಗಳಿಗೆಗಳ್. ಎಳೆಮನಮತಿಗಳಲಿ
ಜಿಹಾಸೆ ಘನವಾಯ್ತು. ರಘುರಾಮನ ಪರಿಪೂಜೆ
ಒಲ್ಲದಾಯ್ತು ಮನಂ. ಎದೆಯಗಡಲಲಿ ಭಕ್ತಿಯ
ರಸಬತ್ತಿ ವಿರಕ್ತಿಯ ಬೇರಿಳಿಯಿತು. ವಿವಾಹ

ವಿತೃಷ್ಣೆಯು ಅವ್ವಳಿಸಿತು ಮನದಲೆಗಳಮೇಲೆ.
ಶ್ರೀರಾಮ ಭಕ್ತಿಯೊಂದು ಕಡೆ, ಸಂಸಾರ ವಿತೃಷ್ಣೆಯು
ಮತ್ತೊಂದು ಕಡೆ. ಮುಗ್ಧದುಗ್ಧ ಮನ ಮತಿಗಳುಂ
ಭರಿಸಲಾರದೊಲ್ ದಣಿದುವು ಬಳಲಿ. ವಿವಾಹಿತ
ಜೀವನಂ ಉನ್ನತವೊ ಕನಿಷ್ಠವೊ ಅದಾವುದರ
ವಿಮರ್ಶೆಯ ಚಿಂತನೆಯುಮಿಲ್ಲ, ಅದವನ ದಿವ್ಯ
ಆದರ್ಶಮೇನಲ್ಲ. ಬೆಣ್ಣೆಮೊಗದ ಮುದ್ದಿನ
ಅಣುಗನ ಮನದೊಳ್ ಅಗಾಧ ಧರ್ಮಯುದ್ಧವೇ
ನಡೆದುದು ಬಲು ಗಂಭೀರ ಗತಿಯಲಿ. ಚಣಗಳೈದು
ಉರುಳಿದುವು ತಾನರಿಯದಂತೆವೊಲ್. ಯೋಚನೆ
ಭಾರದಲಿ ಮನಸೋತು ಜ್ಞಾನವೇ ಸೋತು ಆ
ವಿಗ್ರಹವಂ ಕೈಕೊಂಡು ನಡೆದಂ ಬಿಸಿಲ್ ಮಚ್ಚಿಗೆ.
ಪೊಂಬಿಸಿಲ್ ಚಳಚಳಿಸುತಲಿತ್ತು ನಡುನೆತ್ತಿ
ಸುಡುವಂತೆ. ಹಾದಿಯಲಿ ಹರಿದುದು ಜನರರಾಶಿ
ಕರ್ಪು ಇರುಂಬೆಗಳ ಮಾಳ್ಕೆಯಲಿ. ನೋನೋಡಿ, ಆ
ದೂರದ ಪಥದಂಚಿಗೆ ಬೀಸಿ ಎಸೆದನಾ ರಾಮಚಂದ್ರನ
ವಿಗ್ರಹಂ. ರೊಯ್ಯನೆ ಬಿದ್ದ ರಭಸಕದು ನುಚ್ಚು
ನೂರಾಯ್ತು! ಜಿಹಾಸೆಯ ಮತಿಗತಿ ತಣ್ಣಗಾಯ್ತು.
ನರೇಂದ್ರಂ ತನ್ನೊಳ್ ಸಮಾಧಾನಗೊಂಡಂತೆ
ನಿಶ್ಚಿಂತನಾದಂ. ಎದೆಯ ಭಾರವಿಳಿದು ಮನ
ಹಗುರಾಯ್ತು. ವಿಷಯಮರಿತ ಭುವನೇಶ್ವರೀದೇವಿ
ಅಚ್ಚರಿಯ ಕುಂಡದಲಿ ಮುಳುಗೆದ್ದು ಅತ್ಯಂತ
ಕ್ಲೇಶದಿಂ ಬೆಸನದಿಂ ಕಣ್‌ಮಿಸುಗದೆ ನೋಡುತೆ
ಕಾತರಿತ ದನಿಯಲಿ ಬೆಸಸಿದಳ್ "ಇದೇಂ ಗೈದೆಯೊ
ಮಗನೆ, ಏನಾಯ್ತು? ಏಕಿಂತು ಮತಿಗೆಟ್ಟೆಲೈ?"

"ಅಮ್ಮ! ಸೀತಾದೇವಿ ರಾಮಸತಿಯಲ್ತೆ? ಆಂ
ದಂಪತಿಗಳಂ ಪೂಜಿಪುದು ಸರಿಯೇಂ?"
ಅಣುಗನ
ಬಾಲಭಾವನೆಯಲಿ ಒಡಮೂಡಿ ಸಿಡಿದ ಕಿಡಿಯ
ಮಾಳ್ಕೆಯಲಿ ಪೊಣ್ಮಿದಾ ಪ್ರಶ್ನೆಯಿಂ ಮರುನುಡಿಯೆ
ಮಾತುಬಾರದೆ ಕುವರನಂ ಮುದ್ದಿಸಿ ಮುದ್ದಿಸಿ
ಮುದ್ದುಗೈದು ಮುಂಡಾಡಿ ನುಡಿದಳ್ ಮಾತೃಕಾ
ಮಯಿ "ಬಿಡು ಮಗನೆ! ನಿನಗಹಿತಮಾದೊಡಮದನುಂ
ಮರೆತು ಇಷ್ಟದೈವದೊಳ್ ಮನವಿಡೈ!" ಎಂದಳತಿ
ಪ್ರೀತಿವಿಶ್ವಾಸಗಳ ಗಣಿಯಾಗಿ. ನರೇಂದ್ರಂ
ಮನವೊಪ್ಪಿ, ತಲೆಯಲುಗಿಸಿ ಸೂಸಿದನ್
ಅನುಮತಿಯನನುನಯದಲಿ.
ಸಂಧ್ಯಾರುಣನ ರಥ
ನೀಲೀಮಾಬಿತ್ತಿಯಲಿ ಇಳಿತಂದು ಕೆಂಗಾಂತಿ
ಚೆಲ್ಲಿ ಸೂಸಿ ಓಕುಳಿಯಾಡಿ ಪಡುಗಣ ಗಿರಿಯ
ಶಿಖಿಯ ಮೇಲೆ ವಿಶ್ರಮಿಸುವನೊ ಎನೆ ಜೃಂಭಿಸುತೆ
ಮೆರೆದನ್ ಮಹಾಪರಂಜ್ಯೋತಿಯು ತಾನಾಗಿ!
ಸಾಯಂ ಸಮಯದ ಇನಿವೊಳ್ತು ತನಿಯೂಡುವೊಲ್
ಚೆಲುವಾಯ್ತು. ಉಲಿದುವು ವನವಿಹಂಗಮಗಳ್ ಇನಿ
ರಾಗದಲಿ ವಿವಿಧ ಕಂಠರುತಿ ಚೆಲ್ಲಿ ಸೂಸುತೆ.
ಭವನದ ಬಿಸಿಲು ಮಚ್ಚಿನಲಿ ನಿಂದು ಬೈಗಿನಲಿ
ಜೃಂಭಿಸುವ ಅಸ್ತಮಾನ ಶೋಭಾ ಶೈಲಿಯಂ
ಗಮನಿಸುತಲಿರ್ದ ನರೇಂದ್ರಂ ರಸವಶತೆಯಿಂ
ತಾನೆ ರವಿಯಾದಂತೆ ತಾನೆ ಗಿರಿಯಾದಂತೆ,
ತಾನೆ ಬಾನಾದಂತೆ, ತಾನೆ ಮರವಾದಂತೆ

ತಾನೆ ಪಕ್ಕಿಯಾದಂತೆ ತಾನೆಲ್ಲಮಾದಂತೆ
ಮೇಣೆಲ್ಲಮುಂ ತನ್ನೊಳೈಕ್ಯಮಾದಂತೆ
ದಿವ್ಯಾನುಭೂತಿಯಿಂ ಜಗಮರೆತನಾ ಜ್ಞಾನ
ಪಿಪಾಸಿ. ನಿಸರ್ಗದೈಶ್ವರ್ಯ ತಾನೆಲ್ಲಕ್ಕು
ಸಾಕ್ಷಿಯಾಯ್ತು ಭಗವನ್ ಸತ್ಯಸೂತ್ರದಿ ಸಿಲ್ಕಿ.
    ಪೊಳ್ತುರುಳಿತು. ಸಂಜೆಯ ಪಾಠದಲಿ ಮನವನಿಡೆ
ಕಂದನುಂ ಕಣ್ಗೆಸೆಯದಿರೆ ಅಲ್ಲಲ್ಲಿ ನಿಣುಕುತೆ
ಉಪ್ಪರಿಗೆಯೇರಿ ಬಂದಳ್ ತಾಯಿ ಸುತನೆಡೆಗೆ.
ಬಿಸಿಲು ಮಚ್ಚಿನಲಿ ಪದ್ಮಾಸನದೊಳ್ ಧ್ಯಾನದ
ಭಂಗಿಯೊಳ್ ದಿವ್ಯ ಗಾಂಭೀರ್ಯ ತೇಜದಿಂ ಕಣ್
ಮುಗಿದು ಹಿರಿಯರಂತೆ ಕುಳಿತ ಪರಿ ಧೃತಿಗೆಡಿಸಿತು.
ಅಹ ಇದೇನಿದೇನ್ ಎನೆ ಅಚ್ಚರಿಯಲಿ ನಿಂತು
ನೋಡಿದಳ್ ಮರವಟ್ಟು. ದೃಶ್ಯಮಾನ ಬಂಧುರ
ಶೋಭಾಯಮಾನ ನಿಧಿಯಂ ಕಂಡು ಬೆಚ್ಚಿದಳ್!
ಪಜ್ಜೆಯಂ ಕೀಲಿಸದೆ ಮರವಟ್ಟು, ಕಣ್ಣಿಟ್ಟು
ನಿಲ್ದಳಲ್ಲಿ ಮಿಣ್ಣನೆ, ಉಸಿರ್ ಬಿಗಿವಿಡಿದಂತೆ.
ಕಳೆಯಿತ್ತು ನಸುವೊಳ್ತು. ಬೈಗುವೊಳ್ತಿನ ತಣ್ಪು
ಸೂಸುವ ತನಿಗಾಳಿ ತನುಮನ ನಡುಗಿಸುವವೊಲ್
ತೀಡಿತು ಚಳಿಯೊತ್ತಿ. ಒಡನೆಳ್ಚತ್ತು ಕಣ್‌ತೆರೆದ
ನರೇಂದ್ರನಾಥದತ್ತಂ. ನಿಂತ ನಿಲುವು ಕದಲದೆ
ಸ್ಥಿರ ಮೂರ್ತಿಯೊಲ್ ಕಣ್ಣೆತ್ತ ಜನನಿಯಂ ಕಣ್
ನೆಟ್ಟುನೋಡಿ ಮೊಗದಲಿ ಒಡಮೂಡಿದ ಅಪೂರ್ವ
ಅಚ್ಚರಿಯ ಮುದ್ರೆಯಂ ಕಂಡರಿದು "ಏನಮ್ಮಾ?"
ಎಂದಂ ತವಕದಲಿ.
                    "ಬಿಲೆ, ನಿನ್ನಯ ಧ್ಯಾನವಂ

ಕಂಡಾಂ ನೆಲೆನಿಂದೆಂ. ಮತ್ತೇನ್ ಇಲ್ಲ ಕಣಾ!"
"ಶಿವ ಧ್ಯಾನದೊಳಿರ್ದೆನ್. ಇನ್ನಾಂ ಪಠಿಸುವೆನೆನ್ನ
ಪಾಠಮಂ."
ಒಳನಡೆದನವಂ ತಾಯಿಯೊಡಗೂಡಿ.
ಎಂದಿನೊಲ್ ಪಾಠಪ್ರವಚನಗಳಲಿ ಮನವಿಟ್ಟು
ಹೇಳಿಕೇಳಿ ಪ್ರಶ್ನೋಪಪ್ರಶ್ನೆಗಳಿಂದ ಮನ
ಮತಿವೆಳಗಿ ತಾನಾದಪಂ ಬೃಹದ್ ನಿಘಂಟು.
ಜನನಿಯ ನಲ್‌ವಾತಿನೊಳ್ ಬಗೆಬಗೆ ಕಥೆಗಳಲಿ
ಸ್ಫುರಿಸುವ ಧರ್ಮಜ ಭೀಮಾರ್ಜುನರ ದಿವ್ಯ
ಗುಣ ವಿಶೇಷಮಂ ಮೇಣ್ ಮಹಾವೀರಾವೇಶ
ವಿಸ್ಮಯಂಗಳ ಚಾರು ಧೀರ ಚರಿತಾಮೃತವ
ಕೇಳುತಿರೆ ಕಿವಿಗೊಟ್ಟು ರೋಮಹರ್ಷಿತನಾಗಿ
ಪುಟಿಪುಟಿವುದು ಎಳೆಯ ಜೀವ. ಕೆಚ್ಚು ನೆಚ್ಚುಗಳ್
ಒಗ್ಗೂಡಿ ಪರಾಜಯಮೆ ಜಯದನಿಯಂಗೈದು
ದುಃಖ ಸಂಕಟಮೆ ಸುಖಮಯಮಾಗಿ, ದಿವ್ಯಮಾ
ಚಿಂತನೆಯೆ ಪ್ರಾಣ ಸ್ಫುಲಿಂಗಮಾಗಿ ಸೊಗಮಂ
ಭರಿಸಿತು ದಿನದಿನಗಳ ಸಂಯೋಗದಲಿ.
ಓವೊ,
ಎಲ್ಲಿಯದೊ ಎಂತೈದುದೊ ಎನೆ ಭೋರನೆ ವೀಸುತೆ
ಬರಲ್ ಬಿರುಗಾಳಿ ತರುಗುಲ್ಮಗಳ್ ತಿರುತಿರುಪಿ
ನೂಂಕಿ ಜಡಿದಾರ್ದು ಕೆಡಹುತ್ತ, ಪೊಡವಿಯನೆ ತಾಂ
ಜಡಿಕುಟ್ಟಿ ಪುಡಿಪುಡಿಗೈದಪುದೋ ಎಂಬವೊಲ್
ಸುಟ್ಟುರೆಯ ಕಟ್ಟುರಿಯ ಧೂಳಿಯಂ ಭಸ್ಮಮಂ
ಭುಗಿಲೇಳಿಸಿ ಸ್ತೂಪದೊಲ್ ರಂಜಿಸುತೆ ಬಾನಿಗೆ
ಬೀಸಿತೈ ಬಿರುಸಿನ ಬಿರುಗಾಳಿ ಎಳೆಯರ ಮನ

ಕಿಡಿಸುವ ತೆರದ! ಆಟದ ಬಯಲೊಳ್ ಕೂಡಿರ್ದ
ಬಾಲಚಮೂದಳಂ ಎನುಮಿದೇನೆನುವುದರೊಳ್
ಬಿರುಗಾಳಿಯ ಬಿರುಸಿನ ಬೀಸಿನಿಂ ಉರುಳುರುಳಿ
ಬಿಳ್ದರ್ ತರಗೆಲೆಗಳ ಮಾಳ್ಕೆಯಲಿ! ಭೋರ್ಗ್ಗಾಳಿ
ಭೀಮಿಸಿತು ಭೋರಾಡಿ. ಎಲ್ಲರುಂ ಮೈಬಾಗಿ
ಅಂಬೆಗಾಲಿಡುವ ಮಾಳ್ಕೆಯಲಿ ತೆವಳಿ ತೆವಳಿಯೆ
ಭವನದ ಪಥವಿಡಿದರ್ ನರೇಂದ್ರನೊಡಗೂಡಿ.
ಬಳಿಕಲವರ್ ಬೆಳಕಿಂಡಿಯಲಿ ಇಣಿಕಿನೋಡೆ
ಆ ವಾತಭೂತೋದ್ಭೂತ ಮಹಾನ್ ಋತಶಕ್ತಿ
ರುದ್ರ ರೌದ್ರ ಭೀಷಣ ಭೀಭತ್ಸ ರೋಷದಲಿ
ಮುನ್ನುಗ್ಗುತಿರ್ದುದು ಪೆರ್ಮರಂಗಳಂ ಜಡಿಕುಟ್ಟಿ,
ತಿರುಚಿಮುರಿದು ಎಲೆ ಕಡ್ಡಿ ಕೊಂಬೆಗಳಂ ಕೆಡಗಿ
ಮುಂದೆ ಮುಂದೆ ಸಾಗುತೆ ಗಡಿದಾಂಟುವ ತೆರದಲಿ
ಸಾರ್ದುದಾ ದೂರ ಬಯಲಂ ದಾಂಟಿ. ಆದೊಡಾ
ಭೋರ್ಗಾಳಿಯಾರಭಸ ಪೆರ್ಮರಗಳಂ ನೂಂಕಿ
ಕೆಡಗಿದ್ದ ಭಯಂಕರ ದೃಶ್ಯ ಎದೆಯಂ ಕಿಡಿಸಿ
ನಡುಗಿಸಿದ ಪರಿ ನೆನೆದೊಡೆ ಮೈ ಜುಂ ಗುಡುವುದು ಮತ್ತೆ.
ತನುಮನಂಗಳಲಿ ಎಳೆಯರಿಗಾದ ಅನುಭವವದು
ಘನವಾಯ್ತು; ನಕ್ಕು ನಲಿದಾಡೆ.

ಒರ್ಮೆ ಬಾಲಕ
ನರೇಂದ್ರಂ ತನ್ನಯ ಗೆಳೆಯದೊಡಂ ಕೂಡಾಡಿ
ತೋಷದಿಂ ಬಲ್ಮೆಯಿಂ ಮರಕೋತಿಯಾಡುತಿರೆ
ಮುದ್ದಿನ ನಗೆವಾತುಗಳ ಗದ್ದಲ ಚೀರಾಟ
ಓಡಾಟಗಳ ಕಿರಿಕಿರಿಯಂ ತಾಳಲಾರನೊ ಎನೆ
ನೆರೆಮನೆಯೊಡೆಯ ವೃದ್ಧ ಮಹನೀಯನುಂ ಕೋಪ

ತಾಪಾದಿಗಳಿಂ ಬುಸುಗುಡುತೆ ಬಲವಂತದಿಂ
ಗಡಿದಾಂಟಿಸಲ್ಕೆ ಪ್ರಯತ್ನ ಬಟ್ಟಂ. ಎನಿತೊ
ರೀತಿಯೊಳ್ ಹೇಳಿ ಕೇಳಿ ಬೋಧಿಸಿಯುಂ, ವೃದ್ಧ
ಸಫಲಮಂ ಪಡೆಯಲಾಗದೆಯೆ ಬೇರೊಂದಾದ
ತಂತ್ರೋಪತಂತ್ರಮಂ ಹೂಡಿದಂ. ಅದೆಂತೆನೆ,
"ಎಲೆಲೆ, ಮಕ್ಕಳಿರಾ! ಇದುವರೆಗಾಯ್ತು ನಿಮ್ಮಯ
ಚೆಲ್ಲಾಟ. ಇಂ ಮುಂದಿದು ನಡೆಯದಿಲ್ಲಿ, ಇದೇ ಈ
ಚಂಪಕದ್ರುಮವಂ ಏನೆಂದು ತಿಳಿದಿರ್ಪೆ?
ಏಂ ಬೃಹದ್ ಗಾತ್ರದ ಕೀರ್ತಿ ಇದಕಿದೆ! ಎಲ್ಲ
ದೇಗುಲಗಳಿಗೆ ಇದರ ಪುಷ್ಪರಾಜಿ ಪೋಪುದು
ಬುಟ್ಟಿ ಬುಟ್ಟಿಗಳಲಿ. ಇದರ ಮೇಲೆ ನೀಮಿಂತು
ಹತ್ತಿ ಜಿಗಿದಾಡಿ ರೆಂಬೆಕೊಂಬೆಗಳಂ ತುಳಿದು
ಕುಡಿ ಮುರಿದು ಮುರಿದು ಪಾಳ್ಗೆಡಿಸಲ್, ನೋಡುತ್ತೆ
ಸುಮ್ಮನಿಪ್ಪುದೇಂ ದೇವಗಣ? ಹಾ, ಅದು ಬಂಡ
ಕೂಟಗಳ ಪುಂಡಾಟಿಕೆಯಂ ಸಹಿಸದು ಕಣಾ!
ನೋಡಿಲ್ಲಿ! ಎನಿತೆನಿತು ಮೊಗ್ಗು ಹೂ ಎಲೆ ಕುಡಿ
ಕಡ್ಡಿಗಳ್ ಪುಡಿಪುಡಿಯೈಸಿ ಬಿಳ್ದಿವೆ ತಳದಲಿ!
ಹಾ! ಚಂಪಕ ದ್ರುಮವೆ ಹಾಳಾಯ್ತು ನಿಮ್ಮಿಂದೆ!
ನೀವೇಂ ಕಪಿಗಳೆ ಇಂತು ಮರಹತ್ತಿ ಕುಣಿಯುತೆ
ಜಿಗಿದಾಡೆ? ನೋಡಾ ನರೇಂದ್ರನಂ? ಅದೆಂತಹ
ಪುಂಡಾಟ? ಕಾಲ್ಜಾರ್ದು ನೇತು ಬಿದ್ದಿಹಂ!
ಒಂದಿನಿತು ಜಾರ್ದೊಡೆ ಕೆಳಬಿಳ್ದು ತಲೆಯೊಡೆದೇ
ಸಾಯ್ವನಿಲ್ಲಿಯೆ. ಇದೆಲ್ಲಾ ಸರಿಯಲ್ತು. ಇದರಿಂ
ಬೇಸತ್ತು ಮನಂಗೆಟ್ಟು, ದೇವಗಣದ ಕ್ರೂರ
ಬ್ರಹ್ಮ ರಾಕ್ಷಸನೈದಿಹಂ ಮರದ ಕಾವಲ್ಗೆ

ಬೆಳ್ಮುಗಿಲಿನ ಮಂಜುಬೊಂಬೆಯ ತೆರದಿ ರಾತ್ರಿಯೊಳ್
ಬೃಹದಾಕಾರದೊಳ್ ಕಂಗೊಳಿಪ ಭೂತಂಗೆ
ಕೋಪ ಮೂಡಿತೆಂದೊಡೆ ಮುಗಿಯಿತ್ತೈ ನಿಮ್ಮನುಂ
ಒಂದೆ ಬಾರಿಗೆ ಮುಗಿಸಿ ನುಂಗಿ ನೀರ್ಕುಡಿವಂ!
ತಿಳಿಯಿರಿ ಅಣುಗರೆ! ಇಂ ಅಣುಗಾಟ ಸಲ್ಲ ಕಣಾ!"
ಒಡನೊಡನೆಯೇ ಎಲ್ಲ ಅಣುಗರುಂ ಬೆಚ್ಚಿರ್ದ
ಹುಲ್ಲೆಕರುಗಳ ಮಾಳ್ಕೆಯಲಿ ಓಡುತಿರೆ ಮರದ
ಕೊಂಬೆಯಿಂ ದೊಪ್ಪನೆ ನೆಗೆದಿಳಿಯುತೆ ಮಿತ್ರರಂ
ಕೂಗಿ ಬರಮಾಡಿ ಜಬರಿಸಿದಂ ನರೇಂದ್ರನಾಥಂ,
"ಎಂ ಷಂಡತನಂ? ಇಂತು ಬೆಚ್ಚಿ ಬೆದರಿ ಓಡಿ
ಪೋಗುವೊಡೆ ಏನಿಪ್ಪುದಿಲ್ಲಿ? ಪುಲಿಯೆ, ಕರಡಿಯೆ?
ಬಿಡಿ, ಬಿಡಿ, ನಿಮಗೆ ಸಲ್ಲದೀ ಷಂಡತನಂ. ಛೀಃ!"
ಗಹಗಹಿಸಿ ನಗುತೆ ಆ ವೃದ್ಧ ಮಹನೀಯನೆದುರ್
ನಿಂತು "ಇದೇನೈ ಬೊಪ್ಪ? ಇಂತು ಬೆದರಿಸಿದೈ
ಚಿಣ್ಣರಂ? ಎಲ್ಲಿದೆಯೊ ಆ ಭೂತ? ತೋರೆನಗೆ."
"ವತ್ಸ! ಅದು ಪಗಲ್ ಕಾಣಿಸದು! ರಾತ್ರಿಯೊಳೈದು
ಮರದನೆತ್ತಿಯೊಳ್ ಕುಳ್ಳಿರ್ದು ಕಾಪುದು ಮರಮಂ ಎನಲಿದು
ಪೊಳ್ಳಲ್ಲ. ನೀಂ ಪೊರಡು ಮನಂ ಗೆಡಿಸದಿರದರ.
"ಅಹಹ! ಅದೇಂಗೈವುದೆನ್ನ? ಪೇಳೀಗಳೆ ಬೊಪ್ಪ!"
"ನೀನರಿಯೆ ಅದರ ರಕ್ಕಸತನಂ! ನಿಮ್ಮನುಂ
ಹಿಂಡಿ ಹಿಸುಕಿ ಹಿಪ್ಪೆಗೈದು ನೆತ್ತರ್ ಪೀರ್ದಪುದು!
ಈಗಳೇ ಪೊರಡಿಮ್ ಅಣುಗರೆ!" ಎಂದಂ ಬಿಳಿಯ
ಬೆಳ್ನವಿರಿನ ವೃದ್ಧಂ. ನರೇಂದ್ರನಾಥಂ ಒಡನೊಡನೆ
ಕೇಕಿಯೊಲ್ ಕೇಗಿ ಕ್ರೇಂಕರಿಸಿ ನಗುನಗುತೆ
ಹೀಯಾಳಿಸಿ "ಈ ಪರಿ ಸುಳ್ಳಿನ ವರದಿ ಸಾಕು...

ಸಾಕು ಮಾಡ್ಯೆ ಬೊಪ್ಪ! ಮುಂದಿದರ ಸೊಲ್ಲೆತ್ತದಿರ್!"
ಬಾಲಕ ನರೇಂದ್ರನಾಥದತ್ತನಲಿ ಅನುದಿನಂ
ಸಹೃದಯದಾಯೀ ಆಶೋತ್ತರಂಗಳ್ ಬೆಳೆದು
ಮುಂಬೆಳೆದು ಕುದಿಗೊಂಡು ಭುಗಿಲೆಳ್ದಿರೆ ದಣಿವುದು
ಎಳೆಮನಂ. ಮೌನಗತಿಯಲೆಲ್ಲಂ ಭರಿಸುತ್ತೆ ಭವಿಷ್ಯದ
ವೇದಿಯಲಿ ಅಂಡಲೆಯುವಂ ತಾನೆ ತಾನ್ಯೆಸಿ.
ಒರ್ಮೆ ಲಘು ವಿನೋದಮಿರೆ ಇನ್ನೊರ್ಮೆ ಎಂದಿನ
ತುಂಟತನ ತಾನಾದಪುದು. ಮತ್ತೊರ್ಮೆ ಭವಿಷ್ಯದ
ಚಿಂತನಾವೇಶ. ಇಂತೊಂದು ವಿವಿಧ ರೂವಿನ
ಬಾಲಾತಪದಲಿ ವಿಜೃಂಭಿಸಿ ಇನಿಗಾಳಿಯ
ವಟ್ಟೆಯೊಳ್ ಒಯ್ಯನೊಯ್ಯನೆ ವಿಲಾಸ ಸ್ಥಿತಿಯ
ಅಂಬರದಲಿ ತೇಲುತೆ ಮೆರೆದಪನ್ ಅನುದಿನದ
ವಿದ್ಯಾರ್ಥಿ ತೇಜದಲಿ ಜ್ಯೋತಿರ್ಕಿರಣ ಎಂಬವೊಲ್.
ಅನ್ನೆಗಂ ಭೀಷ್ಮ ದಿಙ್ಮಂಡಲದ ಪೂರ್ವವಧು
ಇನಿದಿನಿದು ಕಣ್ತೆರೆದು ನೋಳ್ಪಂತೆ ದಿನಮುಖದಿ
ಮಿಂಚಿಬಹ ಕೆಂಗಾಂತಿಯು ಚಂದನಮಯ ವರ್ಣ
ಜಾಲದಲಿ ಮೆಲುಮೆಲ್ಲನೆ ಮೈದೋರ್ವುದು, ಇರುಳ್
ನಿದ್ದೆಹರಿದು ಬ್ರಹ್ಮಾಂಡಮೆಳ್ಚರುವ ಮುನ್ನಂ.
ಶೀತಶೀತಲಶಾಂತಪುಶಾಂತವಾಶಾಂತ
ಶೋಭಾಮಯ ವೈಭವೋಪೇತ ಶೈತ್ಯದಿಂದಲಿ
ಭಾವಗರ್ಭಿತ ಮೌನದಲಿ ಮೆರೆದುದು ಧ್ಯಾನದಾ
ಮಹದೈಶ್ವರ್ಯಮಂ ಹೋಲಿ! ಪೊಗರೇರುತಿಹ
ಆಗಸದಲಿ ಉಕ್ಕಿದುದು ಹೂಗೆಂಪು ತಿಳಿಗೆಂಪು
ಕಡುಗೆಂಪು ಹರಿದ್ರಾ ಕುಂಕುಮ ಕರ್‌ನೀಲಿಯ
ವಿಚಿತ್ರತರಗೆಂಪುಗಳಿಂಗೆ ನೀಲಿ ನೀಲಿಯ

ಒನ್ನೆಲೆಯಿರೆ ವರ್ಣೋಪವರ್ಣಗಳೆಸೆದುವು ಮಹಾ
ಕಾದಂಬಿನಿಗಳ ಹೇರಾಶಿಯಲಿ. ಕರ್ಮಮಯ
ನೇಮದಲಿ ಸಾಲು ಸಾಲ್ಗೈಸಿ ಗುಡಿಗೋಪುರಗಳಂ
ನಿಮಿರ್ಚಿ, ರವಿಯಾಗಮನಕೆ ಸ್ವಾಗತ ಸಮಿತಿಯ
ವಿರಚಿಸಿ, ಚಣಚಣಂ ದಿನೋದಯದ ಪುರುಡೆನೆ
ರಂಜಿಸಿದುದು ಅನುಪಮ ಸುಪ್ರಭಾತ ಕಾವ್ಯಂ.

ಹರಿಃ ಓಂ ತತ್ ಸತ್

❋ ❋

ತೃತೀಯೋಲ್ಲಾಸಂ

ಶಕ್ತಿ ಸಂಚಯನ

ನ ದಾನ ತುಲ್ಯಂ ಧನ ಮನ್ಯದಸ್ತಿ

ಏಳು ಏಳೆನ್ನ ವಾಗ್ಜ್ಞಾನ್ನವಿಯೆ, ಏಳೈ ಎನ್ನೆದೆ
ಗವಿಯಿಂದೆ, ಉಕ್ಕುಕ್ಕಿ ಹರಿವ ತೆರದಲಿ. ನಿಚ್ಚ
ಕೈಸೋಲಲೀಯದೊಲ್ ಜಳಜಳಿಸಿ ಹರಿಯೌ
ಭಾವಭಾರದಲಿ. ಕಮನೀಯ ಕಾವ್ಯ ಶೈಲಿಯ
ಸರಳ ಸಿಂಗರದಿ ತಪ ಮಂತ್ರದುಕ್ತಿ ರಸನೆ
ಹರಿದಿರಲದು ಕಾಲದ ಕಣ್ಗೆ ತನಿರಸವಾಗಿ.
ನೀಂ ಸಾಕ್ಷಿ, ಸರ್ವಕಾಲೀನ ಕಾವ್ಯಮಾಲೆಯ
ಚರಿತಾಮೃತಗಳ ಪಾತ್ರಕ್ಕೆ. ಜಗಮರಿದೆಯೆನೆ
ನೀಂ ಗಾನಗೆಯ್ ಮಧುರ ಶ್ರುತಿಯಿಂ ಝೇಂಕರಿಪ
ಶತತಂತ್ರಿಗಳಂ ಮಿಡಿದು. ಪ್ರತಿಭೆ ಘನಿಸುತೆರ್ದೆ
ಕರಂಡದಿ ನಿನ್ನ ದರ್ಶನವೆಮ್ಮ ದರ್ಶನಮೆ
ತಾನಪ್ಪವೊಲ್. ಅಂದಿನ ಜನ್ನಂಗೆ ಪಂಪಂಗೆ
ರಾಘವಾಂಕ ವಾಲ್ಮೀಕಿ ವ್ಯಾಸ ಮೊದಲಹ ಆ
ಕವಿಕುಲತಿಲಕರಿಗೆ ಕರುಣೆಯಿಂದೆ ನೀನೊಸೆದು
ಕೃಪೆಗೈದು ವೈದ್ಯುತ ಬಿಜ್ಜೆಗಳ ನೀಡಿದೊಲ್
ಕಲ್ಪನಾ ಶಕ್ತಿಯಂ ದೀಪಿಸುತೆ ವಾಙ್ಮಂತ್ರ
ತಂತ್ರದುಕ್ತಿಯನಿತ್ತು ಮೇಣ್ ಆಯುರಾರೋಗ್ಯ
ಭಾಗ್ಯಮಿತ್ತು ಸಿರಿಗನ್ನಡದೀ ಕವಿಕೃತಿಯ
ಹರಸೌ ತೊಳಗಿ ಬೆಳಗುವ ಪರಿಯಲಿ ಹೇ, ತಾಯೆ!
ನಿನ್ನ ಕಾಲ್ವಿಡಿದು ಸಿರ ಮಣಿದು ಬೇಡುವೆನಮ್ಮ
ದಿವ್ಯಶಕ್ತಿ ಸಂಚಯನವಾಗುತಿರಲಿ ಸದಾ.

ವಿಶ್ವನಾಥದತ್ತನ ಮಂದಿರಕೆ ಏವೊಳ್ತು
ಸಾಧುಗಳ್, ಪಂಡಿತರ್, ಫಕೀರರ್, ಸುಜ್ಞಾನ
ವೇತ್ತರ್, ಧರ್ಮಧುರಂಧರರ್, ನ್ಯಾಯವಾದಿಗಳ್
ಸಭೆಗೂಡೆ ಆಗಳಾಗಳೈದುತೆ ಮಹೋನ್ನತ
ನ್ಯಾಯಧರ್ಮ ನೀತಿಗಳ ವಿಧಿವಿಧಾನಗಳಂ
ಕುರಿತು ವಾದವಿವಾದ ಹೂಡುವರ್. ವಿಧವಿಧದ
ಪಂಥೀಯ ಧರ್ಮಗಳ ಸಾರಸರ್ವಸ್ವಮಂ
ಹಿಸಿದು ಹಿಂಜಿ ತರ್ಕಿಪರ್ ತನುಮನ ದಣಿವನ್ನ.
ಚರ್ಚೆ ಕಳೆಯೇರಿ ಜೃಂಭಿಪುದು ಎಲ್ಲರ ಜ್ಞಾನ
ಸಂಪುಟಂ ಬಿಸಿಗೊಳ್ವ ಮಾಳ್ಕೆಯಲಿ. ಭಾವನಾ
ವೇಶದತಿಶಯದೊಳ್ ನಡೆವ ಸಭೆಗೆ ತಪ್ಪದೆ
ಬಂದು ಕೂಡುವನ್ ಬಾಲಕ ನರೇಂದ್ರನಾಥಂ.
ಅತಿಥಿ ಅಭ್ಯಾಗತರ್ ಪರಮ ಸಾಧುಸಂತರ್
ಷೋಡಶ ಕಳೆಯುಗುವ ಅಣುಗನಂ ಕಣ್ ಚಲಿಸದೆ
ನೋನೋಡಿ ಹರ್ಷಿತಮನದಿಂ ಶುಭ ಹಾರೈಸುತೆ
ಕಂದಂಗೆ 'ಅಭಿವೃದ್ಧಿ ಶೀಲ'ನಾಗೆಂದು ಒಳ್
ನುಡಿಮುತ್ತುಗಳಂ ಚೆಲ್ಲಿ ಸೂಸಾಡುವರ್. ತಲೆ
ಬೆನ್ ಸವರಿ ನೇವರಿಸಿ ಚಪ್ಪರಿಸಿ ಪುರುಪಿತ್ತು
ಪೊರಡುವರ್ ನಂದದಿಂ. ಅಂತಿಂತು ಪಂಡಿತರ
ಕುಲಗೋಷ್ಠಿಗೆ ಅನನ್ಯ ವಸ್ತು ತಾನಿರೆ ಕುವರಂ
ತನ್ನೊಳ್ ಮನಮಥಿಸಿ ಮಥಿಸಿ ತಾನ್ ಮುಂದೆ
ಎಂದಾದೊಡಂ ಅವರೊಲ್ ಪಾಂಡಿತ್ಯಮಂ ಗಳಿಸಿ
ಕೊಂಬುವ ಮನಮತಿಯಿಚ್ಛೆಯಂ ಬೆಳೆಸತೊಡಗಿದಂ.
ಮನುಜೀವನದ ವೈವಿಧ್ಯಮಯ ರಸಚೇತನಂ
ಕಂಡರಿದು ವಿಚಾರಪರವಶತೆಯಲಿ ಮುಳುಂಗಿ

ಮೈಮರೆಯುತಿರೆ ತದೇಕ ಭಾವದಲಿ, ಪಂಡಿತ
ವರ್ಯರ ಸಹಕೂಟ ಮಧುರಕಾವ್ಯದ ತೆರದಲಿ
ಸೆಳೆವುದು ಮನವಂ. ಎಲ್ಲರ ಮತಿಯನೋದುವನ್;
ವಿಷಯಮಂ ಮನನಗೆಯ್ಯುವನ್; ಮತ್ತೆ ಮತ್ತೆ.
  ದತ್ತ ಮಂದಿರದ ಒಳಕೊಠಡಿಯಲಿ ಪೂಜಿಸಿದ
ಈಶ್ವರನ ಮೂರುತಿಯು ಓಜೆಯಿಂ ಗಂಭೀರ
ತೇಜದಿಂ ಜಟಾಜೂಟದಿಂ ಉಜ್ವಲ ನಯನ
ತ್ರಯಗಳಿಂ ರುದ್ರಾಕ್ಷ ಮಾಲೆಯಿಂ ಭವ್ಯತರ
ರೂಪಿಂದೆ ವಿಜೃಂಭಿಪುದು ಕಣ್ಸೆಸಿರಿಯಾಗಿ.
ಧ್ಯಾನಗತಿಯಲ್ಲಿ ಸಿದ್ಧಾಸನದೊಳ್ ಕುಳಿತಂ
ಕಣ್ಮುಚ್ಚಿ ಶಿವನ ಮುಂತೆ. ಪೊಳ್ತುರುಳಿ ಘನಿಸಿತು
ಧ್ಯಾನ ಗಾಂಭೀರ್ಯಂ. ತನುಮನ ಮಿಸುಕದಾಯ್ತೆನೆ
ಇತ್ತ ಪರಿವೆಯೆ ಇಲ್ಲ. ಏಕಾಗ್ರ ಚಿಂತನೆಗೆ
ಸಂದನಾ ಬಾಲವಟು ಭಕ್ತಿಭಾವದಿಂದಲಿ.
ಅದೇ ಗಳಿಗೆಯೊಳಲ್ಲಿಗೈದಾ ಜನನಿಯುಂ
ಕಣ್ಣೆತ್ತ ದೃಶ್ಯದಿಂ ದಿಗ್ಭ್ರಮೆ ಬಡಿದೊಲ್ ತಾಂ
ನಿಂತಳಲ್ಲೆ. ಆಶ್ಚರ್ಯ ವಿಸ್ತೃತ ಚೈತ್ಯಾಕ್ಷಿಗಳ್ ಎವೆ
ಇಕ್ಕದಾದುವು. ನೋಡುತಿರೆಯಿರೆ ಶಿವನ ತೆರೆದಿಹ
ಫಾಲಾಕ್ಷಿಯಿಂ ಚೆಂಬೆಳಕಿನ ಕಿರಣಧಾರೆಯು
ಪೊಂಬಿಸಿಲ್ ಕೋಲಿನೊಲ್ ಚಿಮ್ಮಿ ಮಿಂಚಿ ಸರ್ರನೆ
ಎಳೆತಾಪಸಿ ನರೇಂದ್ರನೊಳ್ ಐಕ್ಯಮಾಯಿತ್ತು!
'ಹಾ, ಏನಿದೇನ್?' ಎನುವುದರೊಳ್ ಬಿಸಿಲ್‌ಕೋಲ್
ಮಿಂಚಿನೊಲ್ ಮಾಯಮಾಯ್ತು. ನಸುವೊಳ್ತು ಏನುಂ
ನುಡಿಯದಾದಳ್ ತಾಯಿ. ಸುಖಾಶ್ರುಗಳ್ ಮೊಳೆತುವು
ಕಂಗಳಲಿ. ಒಂದೆರಳ್ದು ಮೂರ್ನಾಲಕು ಗಳಿಗೆಗಳ್

ಸರಿಯೆ ಬಾಲಕನೆಳ್ಚರಗೊಳ್ಳುತೆ ಕಣ್ತೆರೆದು
ನೋಡಿ ಅರಳ್‌ಗಂಗಳ್ ವಿಸ್ಫಾರಿಸಿ ನುಡಿದಂ,
“ಅಮ್ಮಾ ಇದೋ ನೋಡು! ನಾನು ಶಿವ!
ನಾನು ಶಿವ!”
ಜಗದ ಸತ್ ಸೌಂದರ್ಯ ಸಾರವಂ
ಬಸಿದು ಮೈಗೊಂಡ ಮುದ್ದು ಕುವರನ ಪ್ರಸನ್ನ
ವದನಾರವಿಂದಮಂ ನೀಳ್ದು ಲಟಿಕೆಯಂ ಮುರಿದು
ಮುಂಡಾಡಿದಳ್ ಹೃದಯ ಕುಸುಮವರಳಿ. ನುಡಿಯೆ
ಬಾಯಿಬಾರದಾಯಿತು. ಪ್ರಮೋದದಿಂ ಮನಂ
ಹೆಪ್ಪಿಟ್ಟ ಮಾಳ್ಕೆಯಲಿ ಘನಿಸಿರೆ ಶಿವಮೂರ್ತಿಗೆ
ಕರವಮುಗಿದು ಬೇಡಿದಳ್ ಭಯಭಕ್ತಿಯಲಿ “ಹೇ
ಸ್ವಾಮಿ! ನಿನ್ನಿಚ್ಛೆ ಅಂತಿರಲ್ ಎನ್ನದೇಂ ಪೇಳ್.
ಎಂತಿರ್ದೊಡಂ ಕಂದನುಂ ನಿನ್ನವನೇ, ನೀಂ
ನಡೆಸಿವನ ಸರಿದಾರಿಯಲಿ ಶಿವನೆ! ಕಾಲ್ವಿಡಿದು
ಬೇಳ್ಡಪೆನ್ ನಿನ್ನನುಂ. ಉದ್ಧರಿಸು ಕಂದನಂ.”
ಬಾಲಕ ನರೇಂದ್ರನಾಥನುಂ ತಾಯ ಭಕ್ತಿಯುತ
ಬೇಡಿಕೆಯನಾಲೈಸಿ ಮನಗೊಳಲುರೆ ಮತಿಗತಿಗೆ
ಅಮೃತರಸನೆಯ ಸ್ವಾದವೋ ಎನೆ ಘನ ಪ್ರೇಮ
ರೋಚಕವು ತಾನಾಯ್ತು. ಅವಂ ಹಣೆ ಭುಜಗಳಿಗೆ
ವಿಭೂತಿಯಂ ಬಳಿದು “ನಾನು ಶಿವ! ನಾನು ಶಿವ!”
ಎನುತೆ ತಾಯಂ ಬಿಗಿಪಿಡಿದಪ್ಪಿದನ್. ಪುತ್ರನ
ಪ್ರೀತಿಯಾಪರ್ಮೆಯಪ್ಪುಗೆ ಸ್ವರ್ಗಸೌಖ್ಯಮಂ
ಇತ್ತುದು ಮನೋದಧಿಗೆ.
“ಅಮ್ಮಾ! ಗೆಳೆಯನೊರ್ವ.
ಪೇಳ್ದನೆನಗಂದಿಂತು “ಶಿವವೇಶಧಾರಿಯಾಗಿ

ಧ್ಯಾನಗೈಯೆ ಶಿವನವೊಲ್ ಜಟೆ ಬೆಳೆದಪುದೆಂದು!
ಆನಾಗಿನಿಂ ಧ್ಯಾನದೊಳಿರ್ದೆನ್ ಮತ್ತೇಕೆ
ಜಟೆಬೆಳೆಯಲಿಲ್ಲವೆನಗೆ?"
"ಹಾ! ತಪ್ಪು ಕಲ್ಪನೆ!
ಅತ್ಯಲ್ಪಕಾಲದೊಳ್ ಜಟೆ ಬೆಳೆಯುವುದೆಂತು?"
"ಅಹುದಹುದು. ಆಂ ತಪ್ಪಿದೆನ್...ಕೇಳ್, ಪೂರ್ವದೊಳಾಂ
ಸಂನ್ಯಾಸಿಯಾಗಿರ್ದೆನ್! ಆನೀಗಳಂತೆಯೇ
ಸಂನ್ಯಾಸಿಯಾಗಲಿಚ್ಚೈಸಿಹೆನ್. ಶಿವನಿನೆನ್ನಂ
ಕೈಲಾಸಕೆ ಸೇರಿಸಿಕೊಂಬನಲ್ತೆ?"
ಕುವರನ
ಮಾತಿಂಗೆ ಪ್ರಸನ್ನ ವದನದಿಂ "ಮೊದಲಿನಿತು
ತುಂಟತನ ಪುಂಡುತನಗಳಂ ವರ್ಜಿಸಿ ವಿದ್ಯೆ
ಬುದ್ಧಿಗಳ್ ಕಲಿತು ಬಲಿಯೈ, ಬಳಿಕಲೆಲ್ಲದರ
ನಿರ್ಣಯ ಕಣಾ!" ಎಂದಳ್ ಜನನಿ ಅನುನಯದಿಂದೆ.
"ಆಯ್ತಾಯ್ತು. ನಿನ್ನ ಪರಕೆಯಲಿ ಸಲ್ವುದು ಎನ್ನ
ಇಚ್ಛೆಯುಂ ಪಣ್ತು, ಆಂ ಧನ್ಯನಾದಪೆನೈಸಲೇ?"
ಮಾತೆ ಸುಖದುಃಖಗಳ ಮೂಟೆಯೊಲ್ ಉಬ್ಬಿದಳ್
ಒಡಲ್‌ತುಂಬಿ. ನುಡಿಗಟ್ಟು ಚೆಂಗಟ್ಟು ಬಿಗಿದತ್ತು,
ನಾಳನಾಳಗಳಲಿ ಸೊಗಮುಕ್ಕಿಹರಿದ ತೆರದಿ.
'ಸಾಧು, ಸಾಧು' ಎಂದೆನುತೆ ಮಂಡೆಯಂ ನಿಳುಪಿದಳ್
ಕುಮಾರನ. ಮತ್ತೆ ಪರಕೆಗೈದಳ್ "ಒಳ್ಳಿತ್ತೈ
ಕುವರ! ಶಿವನ ಅನುಗ್ರಹಮೊದವಿ ನಿನಗೆ ಭವ್ಯ
ಭವಿಷ್ಯಮಿಹುದೆಂದು ನುಡಿಯುತಿಹುದು ಎನ್ನದೆಯ
ದಿವ್ಯವಾಣಿ. ಕೇಳ್, ಮಗನೆ! ನಿತ್ಯನಿರಂತರ
ಸದ್ವಿದ್ಯೆಯಲಿ ನೀಂ ಮನವಿಟ್ಟೊಡೆಮಗೆ ಅದೇ

ಪರಮ ಭಂಡಾರ. ಅದಕಿನ್ನೇನಿಹುದು ಮಿಗಿಲ್?"
ತಾಯಿ ಭುವನೇಶ್ವರೀದೇವಿಯುಂ ಪರಮೋಚ್ಚ
ಧ್ಯೇಯಧೋರಣೆಗಳ ಗಣಿ ಇರುತಿರೆ ಕುಮಾರನ
ಮುಂಪಥ ಸುಲಲಿತಮಾಯ್ತು ದಾರಿಗೆ ದೀಪ್ತಿಯಾಗಿ.
ಏವೊಳ್ತು ಮನದೋಳ್ ಜ್ಞಾನ ವಿಜ್ಞಾನಗಳ
ಸಹಿತ ಬಲಿವ, ಬಲ್ತು ಗಗನಕೇರ್ಪಡುವ ಸ್ವಚ್ಛ
ಸ್ವಚ್ಛಂದ ಸುಂದರತಮ ಸಂಜೀವನಕಾಗಿ
ಸುವಿದ್ಯಾದಾಹ ಪೆರ್ಚುತಿರೆ ತೀಕ್ಷ್ಣ ಚಿತ್ತದ
ದೃಷ್ಟಿಕೋನವೇ ಬೇರೆ. ವಿಚಾರ ವಿಶ್ವವೇ ಬೇರೆ. ಆ
ಶಾಲೆ, ಆ ಅಣುಗವಳಗವೇನಿರ್ದೊಡಮದರ
ಕೂಟವೇ ಬೇರೆ. ಮೂರು ತಲೆಮಾರಿನ ಜ್ಞಾನ
ಸುಜ್ಞಾನಗಳ ಕುಂಡ ಭಾರಮಂ ಭರಿಸಿರ್ದ
ತನುಮನಗಳಿಗೆ ಚೆಂಬೆಳಕಿನ ಕಿರಣಂಗಳಂ
ಅರಸುವಾ ಹೃದಯಾತ್ಮಕ ಆಸೆಯ ಕಿಡಿಯಿಂ
ಷೋಡಶಕಳೆಗಳ್ ಮೈಗೂಡುತಿರ್ದುವು ದಿನದಿನಂ.
ಬಾಲಕನ ಅಭ್ಯುದಯ ಒಳಗೊಳಗೇ ಉರಿದುರಿದು
ಕಿಡಿಯಾಗಿ ಜ್ವಲಿಪುದು ಭಸ್ಮಾವೃತ ಕೆಂಡದೊಲ್.
ಮತ್ತಮಾ ಮಿತ್ರವಳಗದೊಳ್ ತಾನೊಂದಾಗೆ
ಸಾಹಿತ್ಯ ಸಂಗೀತ ಮೇಣೆಲ್ಲ ಬಗೆಬಗೆಯ
ಬಯಲಾಟಗಳಲಿ ತಾಂ ಮುಂದು. ತನ್ನ ನವ್ಯತೆ
ತನಗೇ ಬೆರಗುವಡಿಸುವೊಲ್ ಮುಂಬೆಳೆಯುತಿರಲ್
ಹಿಗ್ಗುವನೆ ತನ್ನೊಳ್! ಕಲಿಕೆ–ಕಲಿಕೆಯುಮಲ್ಲದೆ
ಬೇರೊಂದು ಸುಳಿಯದೀ ಬಳಿಯೊಳ್ ಗುರುಕುಲದ
ಬಹುತರದ ಅಂತೇವಾಸಿಗಳ ಮಂಡಲಿಯ ಮಧ್ಯೆ
ತಾನೊಂದು ಅಪೂರ್ವ ವಟುವಾಗಿ ಬೆಳೆಯುತಿರಲ್

ಎಲ್ಲಿಯ ಸಮಯಮೊ ಅತ್ತಿತ್ತ ವಿಚಲಿತಗೊಳಲ್?
ಏವೊಳ್ತು ಮನದಿ ನವನವೀನಾಶಾಕಿರಣ
ದ್ಯುತಿ ಅರಳಿ ಅರಳಿ ತೊಳಗುತಿರಲ್ಕೆ ಅನುದಿನ
ವರ ಬಿಜ್ಜೆಯಾಕರದಲಿ ತನ್ಮಯನಿರುತಿರಲ್
ಪಚ್ಚೆಯೋ ಪಳದಿಯೋ ಆವೊಂದೊದವಿ ಬರಲ್
ಅದರ ವಿಶ್ಲೇಷಣೆಗೈಯೆ ಅಧಿಕ ಹೃದಯಹಾರೀ
ಆತುರಾಕರಗಳಿಂಗೆ ಬಾಲಕಂ ಸಂಪೂರ್ಣ
ತನ್ಮಯನಿರೆ ಹೃನ್ಮನಂಗಳ ತುಡಿತ ಮೇರೆಯಂ
ಮೀರಿ ದಶದಿಶೆಗೆ ಧೀಂಕೀಡುವ ತೆರದಿ ಹಲುಬಿತು
ಜೀವ. ಮಿಡಿಯಿತು ನರನಾಡಿ ಆತುರಕಾತರ
ವೆರಸಿ. ಬಾಲಕಂ ಅಂತರ್ಮುಖಿಯಾದಂ.
ಹಕ್ಕಿಯೊಲ್ ಎರೆಂಕೆ ಬಿದಿರ್ಚಿ ಹರಿದಾಡಿದುವು
ಮನಃಚಿತ್ತಗಳ್ ಭುವನಮಂಡಲದ ವ್ಯಾಪ್ತಿಯಲಿ.
ಈ ಮಧ್ಯೆ ಬಾಲಕ ನರೇಂದ್ರನ ಗೆಳೆಯಬಳಗ
ಮಂಡಲವೆರಸಿದುದು; ಆಟ ಪಾಠಗಳ್ ಕಲಿಯೆ
ಬೇಸಗೆಯ ಬಿಡುವಿನ ಸಮಯದಲಿ ಒಡನಾಡುತೆ
ಒಂದೆಡೆ ಕಲೆಯುವರ್; ನಲಿವರ್ ಕಲಿವರ್ ಕೂಡಿ
ಪಾಡುವರ್ ನಾಟಕ ಮಂಡಳಿಯ ರಚಿಸುವರ್.
ಅಂತಿಂತು ಗೆಳೆಯರ ಬಳಗದ ಕೂಟಂ ಹಂತ
ಹಂತವಾಗಿ ಮೇಲೇರಿಸುವ ಸಾಧನಮಾದುದು,
ಎಲ್ಲರೊಗ್ಗಿನಲಿ ಕೂಡಾಡುವ ಅರ್ಭಕಂಗೆ.
ಒರ್ಮೆ, ಭವನದೊಳ್ ಕಲೆತ ಅಣುಗರ್ ಪಾಠದಲಿ
ನಿಮಗ್ನರಿರೆ ನರೇಂದ್ರನಾಥಂ ಕಣ್ಮುಚ್ಚಿದಂ.
ಒಡನೆಯೆ ಮನಂ ಶಿವನ ಧ್ಯಾನದೊಳ್ ನೆರೆ ಮುಳುಗಿ
ಧ್ಯಾನಲೀನಮಾದುದು; ಮೈಮರೆತು ಜಗಮರೆತು.

ರುದ್ರಗಾಂಭೀರ್ಯದಿಂ ಸಗ್ಗದ ವಿಹಾರದಲಿ
ತಾನ್ ಮುಳುಗಿದಂ. ಇತರ ಅಣುಗರ್ ಅಂತೆಯೇ
ನರೇಂದ್ರನನುಸರಿಸುತೆ ಕಣ್ಮುಚ್ಚಿ ಕಾಲ್ಮಡಿದು
ಕುಳಿತರ್ ಶಿವಧ್ಯಾನದಲಿ. ಕಳೆಯಿತು ನಸುವೊಳ್ತು
ಸದ್ದುಗಳ ಸೊಲ್ಲಿಲ್ಲದೆ ಸತ್‌ಶಾಂತಿಯಲಿ. ಆ
ಅಣುಕು ಶಿವಧ್ಯಾನಿಗಳ ಮಧ್ಯೆ ಕುಳಿತ ನರೇಂದ್ರ
ನಾಥದತ್ತಂ ಸಂಪೂರ್ಣ ಧ್ಯಾನಸ್ಥನಾದಂ.
ಮನಃಚಿತ್ತಗಳಲಿ ಶಿವಧ್ಯಾನಂ ಅಲ್ಲದೆಯೆ
ಮತ್ತೇನ್ ಸುಳಿಯದಾಯ್ತು. ವಿದ್ಯೆವಿಚಾರಂ
ಅರುಗಾಯ್ತು. ಮಿತ್ರುಬಳಗ ಕಣ್ಮರೆಸಿತು. ಜ್ಞಾನ
ವಿಜ್ಞಾನಗಳ್ ಸರಿದುವು. ಪೆತ್ತವರ್ ಗುರುಗಳ್
ದೂರವಾದರ್. ಶಿವನ ಧ್ಯಾನವೊಂದೆ ನಿಚ್ಚಳಂ.
ಸನಿಹದಲಿ ಸುಯ್ಯನೆ ಸರಿದು ಬಂದ ಕಿರುಸದ್ದು
ಕೇಳಿಬರೆ ಇತರಿತರ ಅಣುಗರ್ ಬೆದರಿದೊಲ್
ಥಟ್ಟನೆ ಮನಮಿಡುಕಿ ಬೆರಗಾಗಿ ಕಣ್ತೆರೆದು ಆ
ಎಡೆಯತ್ತ ನಿಟ್ಟಿಸಿದರ್ ನಿಟ್ಟಾಲಿಯಂನೆಟ್ಟು,
ಹಾ, ಎನ್ ಅಚ್ಚರಿಯೊ! ನರೇಂದ್ರನ ಎದುರುಗಡೆ
ಕರಿ ನಾಗರ! ಅವನೆತ್ತರಕೆ ಹೆಡೆಯೆತ್ತಿ ನಿಂದ
ಘೋರಾತಿಘೋರ ದೃಶ್ಯ! ಕುಟುಕಿದೊಡದು ಇಲ್ಲ
ನರೇಂದ್ರನಗತಿ! ಭಯಭ್ರಾಂತ ಬಾಲವೃಂದ ಗಡಗಡ
ನಡುಗಿತು. ಡವಡವಿಸಿದುವು ಎಳೆ ಹೃದಯಂಗಳ್.
ದಡದಡನೆ ಒಳಗೋಡಿ ಘೋರ ಸುದ್ದಿಯಂ ಜಡಿ
ಕುಟ್ಟಿದೊಲ್ ಒದರಿದರ್ ತಾಯಿ ಭುವನೇಶ್ವರೀ
ದೇವಿಯವರ ಮುಂತೆ! ಎದೆಯೊಡೆವಂತೆ ಭಯ
ಭೀತಿ ಮೂಡಲಾ ತಾಯಿ ಬಿದ್ದೆಳ್ದು ಧಾವಿಸಿ

ಬಂದಳಲ್ಲಿಗೆ. ನೋಡೆ, ಕಣ್ಗೆಸೆಯಿತು ಭೀಕರ
ದೃಶ್ಯ! ಕುವರನಿಗಿತ್ತಣ ಪರಿವೆಯೆ ಇಲ್ಲ, ಆ
ಪಾಂಬಿಗುಂ ಲೋಕದರಿವಿಲ್ಲ. ನುಡಿವೆನೆನೆ ಬಾಯಿ
ಬಾರದಾಯ್ತು. ಸುಮ್ಮನೆ ಬೆಪ್ಪಾಗಿ ಸೊಪ್ಪಾಗಿ
ನಿಂತಳ್ ತನುಮನ ಮರವಟ್ಟು. ಬಾಲಕ ವೃಂದ
ಕೂಗಿತು ಮನಗೆಟ್ಟು, "ನರೇಂದ್ರ ಏಳ್! ಬೇಗನೆ
ಎದ್ದೇಳ್! ನಿನ್ನ ಬಳಿಗೆ ನಾಗರಹಾವು ಬಂದು
ನಿಂತಿದೆ! ಕಣ್ ತೆರೆದೇಳ್ಳೆ ನರೇನ್!" ಹಲವುದನಿ
ಹಲವು ಬಗೆಯಲಿ ಮೊಳಗಿದೊಡನೆ ಅಣುಗನೆದ್ದಂ.
ಬೊಬ್ಬೆಗಳ ಗಾತ್ರ ಬೋಂಕನೆ ಚಿತ್ರವತ್ ಮುತ್ತೆ
ಕಣ್ಮನಂ, ಶಾಂತ ಚಿತ್ತದಿಂ ನೋಡಿದನ್. ನಾಗರಹಾವು
ಸದ್ದಿಲ್ಲದೆಯೆ ಹರಿದು ಹೋದುದಾ ಗಳಿಗೆಯಲಿ.
ದುರ್ಬರಚಣ ಕಳೆಯಿತು. ಎಲ್ಲರ್ ಬಗಿವಿಡಿದಿರ್ದ
ಉಸಿರ್ ಹರಿದಾಡಿತು ಸರಾಗದಲಿ. ಮಾತೆಯುಂ
ಕಠಿಣ ಕಂಟಕವೊಂದು ಕಳೆಯಿತೆಂದು ಹರುಷದಿ
ನಮಿಸಿದಳ್ ಇಷ್ಟದೈವಕೆ. ಆ ಕರಿನಾಗರ
ಎಲ್ಲಿಂದೈದುದೊ ಮತ್ತದೆಂತು ಮಾಯಮಾದುದೊ
ಅರಿಯದೊಲ್ ಮಂಗಮಾಯಮಾಯಿತು ಕಣ್ಮರೆಸಿ.
ಬಾಲವೃಂದ ಕೇಕಾ ದನಿಯಲಿ ನಲಿದುನಕ್ಕು
ಕೈಪರೆ ತಟ್ಟಿತು ಆನಂದ ಮೋದದಿಂ. ಗರ
ಬಡಿದೊಲ್ ವಿಚಲಿಸದೆ ಗಮನಿಸುತ್ತೆ. "ಹಾ! ಇದುಂ
ವಿಚಿತ್ರಂ! ಇನ್ನೆಬರಮೆಲ್ಲಿಯುಂ ಕಂಡರಿದು
ಕೇಳರಿದು ತಿಳಿದ ಸಂಗತಿಯಲ್ಲವೆನಲ್ ಬಲು
ಅಚ್ಚರಿಯೆ! ಶಿವನ ದಯೆಯಿಂ ನಾಗರ ಕಚ್ಚದೆ
ಹಾನಿಗೈಯದೆ ಪೋದುದೆಮ್ಮ ಪುಣ್ಯ!" ಎನ್ನುತೆ

ಜನನಿ ಬಿಗಿದಪ್ಪಿದಳ್ ಕಂದನಂ. ಅಣುಗರುಂ
ಮಿತ್ರನಂ ಮುದ್ದಿಟ್ಟು ಮುದ್ದಾಡಿ ಕುಣಿಕುಣಿದು
ತೋಷಮಂ ಸೂಸಿದರ್, ಸುತ್ತಮುತ್ತಲ್ ನೆರೆದು.
ಆವದೈವದಾಣತಿಯೊ ಮತ್ತಾವ ಗಂಧರ್ವ
ಗಾರುಡಿಗನ ಆಸ್ಥೆಯೊ ಇನ್ನಾವ ಕಾಳಿಕೆಯ
ಮಂತ್ರಮಾಯದಾಟವೊ ಮೇಣಾವ ಗುರುಜನರ
ಶುಭಾಶೀರ್ವಾದಮೊ ಘುಮಂತ್ರು ಮುಗ್ಧಗೊಳಿಸಿತು
ಗಂಭೀರ ಗಳಿಗೆಯಂ. ನಸುವೊಳ್ತಿನ ಬಳಿಕಂ
ನರೇಂದ್ರನಾಥದತ್ತಂ "ಆನರಿಯೆ, ನಾಗರಂ
ಬಂದೆನ್ನ ಎದುರ್ವೆತ್ತುದಂ. ಆನಾಗಳುಂ
ಸಂಪೂರ್ಣ ಆನಂದ ಸ್ಥಿತಿಯೊಳ್ ಮುಳುಗಿರ್ದೆನ್
ಎನಗಿತ್ತಣ ಅರಿವು ಇರಲಿಲ್ಲಮೆನಲನ್ಯಮಲ್ತು."
ಆನಂದ ಪ್ರೀತ ಜನನಿಯ ಕಂಗಳ್ ಸುಖಾಶ್ರು
ಜಲದಿಂದೆ ತುಂಬಿದುವು ಥಳಥಳನೆ ಮಿಂಚುವೊಲ್.
 ಪೀತಕೌಶೇಯ ವಸ್ತ್ರಧಾರಣಿ ಮಧುರಾಂಗಿ
ಉಷಾಕಾಂತೆ ಭೂಮಿಯ ವಿವಿಧ ಬಗೆಯ ರಸಮಯ
ಜೀವನವ ಸುಸುಂದರಗೊಳಿಸೆ ಮೂಡಣ ತಟಿಯ
ವಿಹಾರಕ್ಕೈತಂದಳೊ ಎನೆ ಮಂಗಳಕರ ಛವಿ
ಹರಿದು ಹೊಂಬೆಳಕು ಪ್ರವಹಿಸಿತು ಇಳೆಯ ಮೇಲೆ.
ಪ್ರಾತಃಕಾಲೀನ ಸೌಂದರ್ಯರಾಶಿಯುಂ ನೆರೆ
ಮೆರೆದತ್ತು ಲೋಕೋತ್ತರ ಶೈಲಿಯಲಿ. ಪಕ್ಷಿಗಳ
ನಲ್‌ಗೊರಳ ರಾಗಾರುಣತಾನಂ ನವುರಾಗಿ
ಹರಿಯಿತು ಜಗದಗಲ, ಜಯಧ್ವನಿಯ ಮಾಳ್ಕೆಯಲಿ.
 ಉದಯ ಪ್ರಶಾಂತಿಯೈಸಿರಿ ಮೂಡಿ ಹರಹರಡಿ
ಲೋಕಮೆಳ್ಚರಿಸಿಯುಂ ಕುವರನಿನ್ನು ಸೆಜ್ಜೆಯ

ಬಿಟ್ಟು ಎದ್ದನಿಲ್ಲಂ. ತಾಯಿ ಭುವನೇಶ್ವರೀ
ದೇವಿಯುಂ ಒಳಗೈದಳ್ ಕುವರನಂ ಕರೆದು
ಎಬ್ಬಿಸೆ. ಬೆಳಕಿಂಡಿಯಲಿ ಹರಿದ ಬಿಸಿಲ್‌ಕೋಲ್
ಮುದ್ದಿಸಿವೆ ನಿದ್ರಿತನಂ. ನೋಡುತಿರೆಯಿರೆ ಬಿಸಿಲ್
ಕೋಲ್ ಮಿಂಚು ಕುವರನ ಭ್ರೂ ಮಧ್ಯೆ ವರ್ತುಲಾ
ಕಾರದಲಿ ಐಕ್ಯಮಾದುದು ನೆಟ್ಟು ಕಣ್ಮುಂತೆ!
ಆ ಅಪೂರ್ವ ತೇಜೋಖನಿಯ ದರ್ಶನದಿಂದೆ
ಧನ್ಯಮಾಯ್ತು ಮಾತೃಹೃದಯ. ಆ ಕಲಿ ಕುವರಂ
ಅದೇನೊಂದನರಿಯದೆ 'ಏನಮ್ಮ' ಎನುತೆಳ್ದು
ಸೆಜ್ಜೆಯಂ ಬಿಟ್ಟು ಬಂದಂ ತಾಯ ಬಳಿಗೆ.
"ಏನಿಲ್ಲ, ಬಿಲೇ, ಹೊರಡು ಶಾಲೆಯ ಸಮಯಮಿದು."
ತಾನರಿದ ಆಶ್ಚರ್ಯಾನಂದಮಂ ಎರ್ದೆಯೊಳ್
ಹುಗಿದಿಟ್ಟು ಕಂದನಂ ಚೋದಿಸಿದಳ್ ಅಂಗನೆ.
ಬಾಲಕಂ. ಸುಖ ಮಜ್ಜನಂ ತೀರ್ಚಿ ಪೊರಟಂ
ಲಗುಬಗನೆ ಓರಗೆಯ ಬಾಲಕವಳಗದೊಡಂ.
ಎಡವಕ್ಕದ ಭೂವಿಸ್ತಾರದಲಿ ಮೈಗೊಂಡ
ಕಿರುವಗೆಯ ಪುಷ್ಕರಣಿಯ ಜಳದಲಿ ಓಕುಳಿಯ
ಚೆಲ್ಲಿದೊಲ್ ರಮ್ಯಾರುಣ ಜ್ಯೋತಿಯು ಮಾರ್ಪೊಳೆದು
ತೋರ್ದುದೈ ಕೆಮ್ಮನೆ ಜಳವುರಿವ ತೆರದಲಿ. ಅಹ
ಕುಮುದಿನಿಗೆ ಮೊಗಬಾಡಿ ಕಮಲಿನಿಗೆ ಹೂನಗೆಯು
ಹೊಮ್ಮಿತು ತನಿಗಾಳಿಯ ಮುದ್ದಿನಿಂದೆ, ಕೆಮ್ಮನೆ
ಕೆಂದಳಿರೊಡೆದ ಮಾಮರದೆಲೆಗೊಂಚಲಲಿ ಮೈ
ಹುಗಿದು ಹಾಡುವ ಕೋಗಿಲೆಯ ರಾಗದೊಡಂ, ಗಿಳಿ
ಮೈನಾ ಚೋರೆ ಕಾಮಳ್ಳಿಗಳ್ ಮುಂತಪ್ಪ ಇನಿ
ದನಿವಕ್ಕಿಗಳ ರಾಗಧುನಿ ಹರಿದುದು ವ್ಯಾಪಕ

ರೀತಿಯಲಿ. ಮನಮತ್ತ ಮಧುಪಂಗಳ್ ಮುದದಿಂ
ದಂಡೈಸಿ ಬರುತೆ ಸುಮಗಳೊಡಲಿನ ಕರಂಡಮಂ
ಬೊಕ್ಕು ಹೊಂಧೂಳಿಯೊಳ್ ಹೊರಳಿ ಮಕರಂದಮಂ
ಪೀರ್ದು ಮಲರಿಂ ಮಲರಿಗೆ ಪಾರುತೆ ತೋಷದಿಂ
ಝೇಂಕರಿಸುವ ಚಿತ್ರಂ ಹಿತಮಾದುದು ಕಂಗಳ
ಅವಲೋಕನಕೆ. ಅರೆಬಿರಿದರಳಿದ ಕುಸುಮಗಳ
ನರುಗಂಪು ಹೃನ್ಮನಂ ಮುತ್ತುವುದು ಆನಂದ
ಸಂಭ್ರಮದ ಸಿರಿಯ ಮುದ್ರೆಯನೊತ್ತುವ ತೆರದಲಿ.
ಬೈಗುವೊಳ್ತಿನಲಿ ಭೋರೆಂದು ಭೋರಾಡುತ್ತೆ
ರುದ್ರ ಬಂಟನೋ ಎನೆ ಸುರಿದುದಯ್ ಶ್ರಾವಣ
ಕಾಲೀನ ವರ್ಷಧಾರೆ ಭೋರ್ಭೋರೆಂದು ಸರಿ
ಸುರಿಸಿ, ಪೊಳಲಂ ತೊಳೆತೊಳೆದು ಸ್ವಚ್ಛಕಾರ್ಯದ
ಪೂಣೆಯ ಪೊತ್ತವೊಲ್ ಶ್ರೀ ಜಲಗಾರನೈದಿರಲ್
ಮನೆಮಠಗಳ್ ಮಿಂದುವು. ಕಡುಕಲ್ಮಶ ತುಂಬಿ
ನಾರುತಿಹ ಹಾದಿ ಬೀದಿಗಳ್ ಸ್ವಚ್ಛ ಸ್ನಾನದಿಂ
ಮಿಂದುವು. ಪಡುವಣ ವೆಟ್ಟಿನ ಮುಡಿಯ ಮೇಗಡೆ
ಮೋಡಗಳ ಮಂಜು ತುಂಬಿ ಹರಡುತ್ತ ಇಳಿದೊಡೆ
ತೆರೆಮರೆಯೊಳ್ ಹುದುಗಿದ ದಿವಸ್ಪತಿ ಕಂಗಳಿಗೆ
ಕಾಂಬನೇಂ? ಕೀಲಾಲ ಕ್ರೀಡೆಗಳ ಆಕರದಿ
ನಡೆದತ್ತು ಚಕ್ರಾಯಣಂ ಎಂದಿನ ತೆರದಲಿ.
ಗೃಹಿಣೀ ಪದವಂ ಧರ್ಮಕರ್ಮಗಳ ನೇಮದಿ
ಭಕ್ತಿಯಿಂ ಸ್ವೀಕರಿಸಿದ ಮಾತೆ ಭುವನೇಶ್ವರೀ
ದೇವಿಯುಂ ಸಂಸಾರ ನಿರ್ವಹಣೆಯ ಭಾರಕೆ
ಭುಜಕೊಟ್ಟು ಪರಮ ಪೂಣೆಯಂ ಪೊತ್ತು ಶ್ರಮವನೆ
ಶ್ರಮಿಸಿಶ್ರಮಿಸಿ ಹಿಂಡಿ ಸ್ವೇದಬಿಂದುಗಳ್ ಸುರಿಸಿ

ಕಂಗಳಿಗೆ ಪುಗೆಯೊತ್ತಿ ಕಣ್ಣೀರ್ ಬಸಿಯುವಳ್
ಭಂಗದಿಂ. ತಾಯಿಯ ಭುಜಭಾರವನರಿದರಿದು
ಮನಮರುಗುವ ಸುಕುಮಾರ ಕಂಠೀರವನೊರ್ಮೆ
ಕಡುಬೇಸರಿಸಿ ಪಿತನ ಮುಂದ್ಯೆದು ಕೇಳಿದಂ,
"ಎಲೆ, ಬಾಬಾ! ನಿನ್ನ ಎಣೆಯಿಲ್ಲದ ದಯೆಯಿಂ
ಎನಿತೆನಿತು ಮೂರ್ಖರ್ ಶತಸೋಮಾರಿಗಳ್ ಈ
ಭವನದೊಳ್ ಸುಖಾಶ್ರಯಂ ಪಡೆದು ಧರಿತ್ರಿಗೆ
ಭಾರವಾಗಿ ಸಂಸಾರಕೆ ಹೊರೆಯಾಗಿ ಬದುಕಿ
ಬಾಳುತಿಹರ್ ವ್ಯರ್ಥದಾ ಹಾದಿಯಲಿ? ನೀನಿಂತು
ಈ ವ್ಯರ್ಥ ಜೀವಿಗಳ್ ಮನೆಯೊಳಿರ್ಕೆ ಏಗಳ್
ಸುಖಾಶ್ರಯವನೀವುದು ತರವೇಂ? ಅದಲ್ಲದೆಮ್ಮ
ಸಂಸಾರಕಿದು ತೀವ್ರ ಹೊರೆಯಲ್ತೆ?"
ನಸುವೊಳ್ತು
ಮಿಣ್ಣನಿರ್ದ ವಿಶ್ವನಾಥದತ್ತ ಮಹಾಶಯಂ
ಸತ್‌ಶಾಂತಿ ಸಮಾಧಾನದ ಗತಿಯಲಿ ಕುವರನ
ಶಿರೋದೇಶದಮೇಲೆ ಹಸ್ತವನಿರಿಸಿ ದಿವ್ಯ
ಮುದ್ದಿನಿಂ ನಲ್ಮೆಯಿಂ ಬೆಸಸಿದಂ "ಎಲೆ ಕಂದ!
ನಿನ್ನೆಲ್ಲ ವಿಚಾರವದು ಸಾಧು ಎಂದೊಡದನುಂ
ನೀಂ ನಿನ್ನೊಳ್ ಮತ್ತೆ ಪರಾಮರ್ಶೆಗ್ಯೆದು ಅಮಿತ
ಸಮಾಧಾನದಿಂ ಸಾವಧಾನದ ಖಡ್ಗದಲುಗಿನ ಮೇಲೆ
ಒರೆಹಚ್ಚಿ ನೋಡ್ಯೆ! ನಮ್ಮ ಆಶ್ರಿತರ್ ಮನೆಯಂ
ತೊರೆದು ಬಟ್ಟೆಗೆಟ್ಟು ಮನಂಗೆಟ್ಟು ಬದುಕಿನಲಿ
ರಣಗೋಳ್ ಅನುಭವಿಸಿಯುಂ ಮೃತ್ಯುವಿನ ರುದ್ರ
ಪಾಶಕೆ ನಿಲುಕದುಳಿದು ಎನ್ನಾಶ್ರಯಂ ಬೇಡಿ
ಬಂದವರ್, ಎನಲ್ಕೆ ಅವರಂ ದೂರೀಕರಿಪುದು

ತರವೇಂ?"
"ಸರಿಯೆನಲ್ ಬಾಯಿಬಾರದು ಬಾಬ!
ಅವರ ಪರಿಪೋಷಣೆಯುಮಲ್ಲದೆ ಅವರವರಾ
ದುಶ್ಚಟಮೆನಿಪ್ಪ ಬೀಡಿ ನಸ್ಯ ಸಿಗರೇಟು
ಮುಂತಪ್ಪ ಮಾದಕ ಪದಾರ್ಥಗಳಿಗೆ ಧನವಂ
ನೀಡುವುದು ತಪ್ಪಲ್ತೆ?"
"ಇರ್ಕೈ ಅದರಿಂದವರ
ದುಃಖಭಾರ ಕಿಂಚಿತ್ ದೂರಮಾಗಿ ಮನಸಿಗೆ
ಶಾಂತಿಯಂ ಪಡೆದಪರೆನೆ ನೀನದಕೇಕಿಂತು
ಅಡ್ಡಿಬಂದಪೆ ಪೇಳ್?"
ದೇವಸದೃಶ ಪಿತಂ
ನುಡಿದ ನಲ್‌ವಾತು ಶೀತಶೈತ್ಯವನತಿ ಶಾಂತ
ಶೀತಲಗೊಳಿಪ ಮಂಜುವಾರಿ ಅಂತರಿಕ್ಷದಿಂ
ಸುರಿದವೊಲ್ ಮನಮಂಡಲಮಂ ಮುಚ್ಚಿತು. ಒಡನೆ
ಮರುನುಡಿಯೆ ಬಾಯಿಬಾರದೆ ವಿಚಾರಾಸಕ್ತಿ
ಭುಗಿಲೆಳ್ದುದು ತನ್ನೊಳ್. ಲೋಕಕ್ಕೈವಿಟ್ಟು ಗತಿ
ತಪ್ಪಿ ನಿರ್ಗತಿಕರಾದವರ ಸಂಕಟಭರಿತ
ಬದುಕು ಬಾಳು ಧಾರಣಮೆಂಬುದು ತಿಳಿವಳಿಕೆಗೆ
ದೂರಮಲ್ಲ. ಚಿಂತನಮಂಥನವೆರಸಿ ಪಿತನ
ಔದಾರ್ಯಮಂ ಮಣಿದು ಮನಂಗೊಂಡನಾ ಚಾರು
ಧೀರ ಸುತ ನರೇಂದ್ರನಾಥದತ್ತನಂದು.
ಆಗಳಾಗಳ್ ಪರಮ ಪಿತ ವಿಶ್ವನಾಥದತ್ತ
ಮಹೋದಯನುಂ ನಿಚ್ಚ ಸಾಯಂಸಮಯದ ತನಿ
ವೊಳ್ತಿನಲಿ ಕುವರನಿಂಗೆ ಸೃಷ್ಟಿ–ಸ್ಥಿತಿ–ಲಯ
ಇತ್ಯಾದಿಗಳ ವಿಚಾರ ಸಂಪದಮಂ ಎಳೆಯ

ಮನವೊಪ್ಪುವೊಲ್ ಓತಮಿತ ಶೈಲಿಯಲಿ ತಿಳಿಪುತೆ
ಮತಿಗತಿಯ ಚೋದಿಸುವನ್ ಉರಿವಗ್ಗಿಗೆ ತೈಲ
ವೆರೆದು ಉದ್ದೀಪನಗೊಳಿಪಂತೆ. ಜಗತ್ ಚಕ್ರ
ವಿರಾಟ್ ಬ್ರಹ್ಮಾಂಡದಲಿ ಪರಿಭ್ರಮಣಗೈವ ಪರಿಯ
ಕಾರ್ಯಕಾರಣಗಳ್ ವಿವರಿಸುವಂ. ಉಪನಿಷದ್
ವೇದ ವೇದಾಂಗಗಳಂ ಅರ್ಥವತ್ ವಿವರಿಸುತೆ
ಏಗಳ್ ಮನಮಂ ತುಂಬುವನ್ ಕ್ರಮವತ್ತಾಗಿ.
ಎಳೆಯಂಗೆ ಬಿಜ್ಜೆಯೆಂತಂತು ಆಟದ ಬಯಲೊಳ್.
ಅಂತಂತು ದಿವ್ಯಾಸಕ್ತಿ. ಚೆಂಡುದಾಂಡುಗಳ
ಮಾತಿರ್ಕೆ ಮಲ್ಲಯುದ್ಧ ಮುಷ್ಟಿ ಕಾಳೆಗದ
ಅಂಗಣದಲಿಯುಂ ಅವನಿರದೆ ಶೋಭಿಸದಾಯ್ತು
ಮಿತ್ರಮಂಡಲಿಯ ಕೂಟಂ. ಅಂತುಮಲ್ಲದೆಯೆ,
ಯೋಗ ಸಾಧನೆಯಲಿಯು ಮುಂದು. ನಗೆವಾತುಗಳ
ಹಾಸ್ಯ ಪರಿಹಾಸ್ಯದೊಳ್ ನಿಸ್ಸೀಮನಿರುತಿರಲ್,
ನಲಿನಲಿದು ರಂಜಿಸುವ ಅಣುಗರೆಲ್ಲರ ಮನವಂ.
ಮೇಣೆಲ್ಲಿ ಭಂಗ ಬವಣೆಗಳ್ ಮೈದೋರ್ದುವೋ
ತಾನಲ್ಲಿಗುಯ್ವನ್ ಸಹಕಾರದ ಹಸ್ತಮಂ
ನೀಡೆ. ಅಂತಿಂತು ಎಲ್ಲವಗೆಯಾ ಕ್ಷೇತ್ರಾನು
ಕ್ಷೇತ್ರಗಳಲಿ ಹರಿ ಹಾಯ್ದುದು ಮೃದುಮಧುರಮಯ
ಹೃದ್ದೀಪ್ತಿಗೆ ನಸುನಸುವೆ ತೈಲವನೆರೆವಂತೆ.
ವಿಶ್ವನಾಥದತ್ತಂ ತನ್ನ ಉದಾರತನದಿಂ
ರೂಪಿಸಿದ ಅಭ್ಯಾಸಗಳ್ ತನುಮನಂಗೂಡಿ
ರಕ್ತಗತಮಾದತ್ತು. ಅತ್ಯಂತ ಉಲ್ಲಾಸ
ಬದುಕಿನೊಳ್ ವರ್ತಮಾನವನಲ್ಲದೆಯೆ
ಭವಿಷ್ಯದೆಡೆಗೆ ಗಮನಿಸಿದನಿಲ್ಲ. ಸರಸ–ಸರಳ–

ಸಮತೆಯ ಅನುರಾಗದಲಿ ಕಳೆವುದು ಕಾಲಗತಿ.
ಒರ್ಮೆ ಬಾಲಕ ನರೇಂದ್ರನಾಥಂ ಎಲ್ಲವಂ
ಮನಗೊಳಿಸಿ ವಿಚಾರಾಸಕ್ತಿಯಲಿ ನೆರೆಮುಳುಗಿ
ಚಿಂತನಂಮಂಥನಂಗೈದು ಪಿತನ ಮುಂದ್ಯೆದುತೆ
ಗಂಭೀರ ಭಾವದಿಂ ಕೇಳಿಸಿದನಿಂತು "ಹೇ, ಬಾಬಾ!
ನಿಮ್ಮೊಂದು ಮುಂಗೆಡುವ ರೀತಿಯಂ ನೀತಿಯಂ
ಕಣ್ತುಂಬ ಕಂಡು ಕಾಣುತಿರುತಿರಲ್ ಒಡಲೊಳ್
ಕಳವಳಂ ಕವಿದಪುದು. ಯೋಚಿಸ್ಯೆ, ನೀಮೆನಗಾಗಿ
ಏಂ ಕೊಟ್ಟಿರುವೆ? ಏನಿಟ್ಟಿರುವೆ?" ಒಡಲಾಳದಿಂ
ಧ್ವನಿಹರಿದು ಬರೆ ವಿಶ್ವನಾಥದತ್ತಂ ಗಳಿಗೆ
ಕಾಲ ಮಗನಂ ನೆಟ್ಟ ನಿಟ್ಟಾಲಿಯಿಂ ನೋಡಿ
ಮುಗ್ಧಮನದ ಕಸಿವಿಸಿಯಂ ಅರಿದು ಮನದುಂಬಿ,
"ವತ್ಸ! ನೀಂ ಒಳಗುಯ್ಯು ಕನ್ನಡಿಯ ಮುಂದ್ಯೆದು
ನೋಡ್ಯೆ!"
ಎಂತಪ್ಪ ಆಶ್ಚರ್ಯ! ಆ ದರ್ಪಣದೊಳ್
ಏನಿರಲ್ ಸಾಧ್ಯಂ?... ಕುತೂಹಲದಿ ಕುದಿಯುತಿರೆ
ಕಣ್ಮನಂ, ಓಡುತ್ತ ಒಳಗುಯ್ಯು ಕನ್ನಡಿಯ
ಮುಂತೆ ನಿಲ್ದಂ! ಅಹ ನಯನಗಳಿಗೆಸೆದ ಅಮೂಲ್ಯ
ಚಿತ್ರ ಸತ್ಯ ಸುಂದರವಾಗಿ ತೋರ್ದತ್ತು. ಚಣ
ಕಾಲ ವಿಚಲಿಸದೆ ಕಣ್ಣಿಟ್ಟು ನೋಡುತಿರುತಿರೆ
ಕಂಡುದೇಂ ಆ ದರ್ಪಣದೊಳ್? ಓ ಎಂತಪ್ಪ
ದಿವ್ಯತಮ ಶರೀರದ ಸಂಪುಟಂ! ಸುವಿಶಾಲ
ವಕ್ಷಸ್ಥಲ, ಆಜಾನುಬಾಹು, ಉರ್ಬಿದೆದೆ ಇಂ
ಬೇರೇನ್ ವೇಳ್ಕುಂ? ಶಿವನೇ! ನೀನೆನಗಿತ್ತ
ದೃಢವಾದ ಕೈಗಳಿದ್ದು ಬುದ್ಧಿಯುಮಿರುತಿರ್ದು

ಸಾಲದೇಂ ಎನ್ನೀ ಬದುಕಿಗೆ? ಮತ್ತೇಕೆನ್ನ ಬೇಡಿಕೆಯೊ,
ಭಗವಂತನೆಲ್ಲವಂ ನೀಡಿರಲ್ ದುಡಿಯುವುದೆ
ದಿವ್ಯಕಾಯಕಂ ಎಂಬೊಂದು ದೃಢ ನಿರ್ಧಾರ
ಮೂಡಿದುದು ಮನದಿ. ಬಾಲಕ ಹರ್ಷಿತನಾದಂ.
ವೇಸಗೆಯ ಬಿಡುವು ಕಳೆವಮುನ್ನಮೆ ನರೇಂದ್ರನ
ಮೈಗೆ ಆವಾವ ರಾಹುಕೇತುವಿನ ಗ್ರಹಣ
ಬಡಿದುದೋ ಎನೆ ಉದರವಾಯುರೋಗವುಂ ಅಂಟಿ
ಕಾಡಿ ಹಿಂಡಿದುದು ಜೀವ ಕಣಕಣಗಳಂ. ಆವ
ಓಷಧಿ ಕಷಾಯಮಂ ನೀಡಿದೊಡಮದು ಬಗ್ಗಿ
ತಗ್ಗಿ ಮಣಿಯದಾಯ್ತು. ಕುವರಂ ನರಳಿ ಹೊರಳುತೆ
ಬಳಲಿದಂ ಮೈಸೊರಗಿ ಸೋಲ್ತು ಸೀಗಡ್ಡಿಯೈಸಿ
ತೀವ್ರ ರೋಗಿಯಾಗಿ ಹಿಡಿದಂ ಸೆಜ್ಜೆಯಂ. ಆ
ಕರುಣಾಯಿತ ಚಿತ್ತಾರ ಪೆತ್ತವರ ಕಂಗಳಲಿ
ಹರಿಸಿತು ಬಿಸುಗಂಬನಿಯ. ಬಿಷಗ್ರತ್ನರುಂ
ಬಿರುದಾಂಕಿತ ಪಂಡಿತರುಂ ನುರಿತ ಘನವೈದ್ಯ
ಮಹನೀಯರುಂ ಆಗಮಿಸಿ ದೈಹಿಕ ಸ್ಥಿತಿಯ
ಅರಿದು ಓಷಧಿನಿತ್ತು ಪಾಲಿಸಿದೊಡಂ ಮೈ
ಗೂಡದಾಯ್ತು ಚಿಕಿತ್ಸೆ. ಪೆತ್ತವರ್ ದುಃಖದ
ಕಡಲಲಿ ಮುಳುಂಗಿ ಇಷ್ಟದೈವಕೆ ಪರಕೆಯಂ
ಪೊತ್ತು ಬೇಡಿದರ್ ಕಾಡಿ. ಕುವರನ ಶರೀರಂ
ಅಸ್ತಿ ಪಂಜರಮಾಗುತಿರೆ ರುಗ್ಣ ಶಯ್ಯೆಯಲಿ,
ಪಿತ ವಿಶ್ವನಾಥದತ್ತಂ ಹವಾ ಬದಲಿಸಲ್
ದೂರ ರಾಯ್ ಪುರಕೆ ಕರೆದೊಯ್ದಂ. ಸತೀಮಣಿ
ಭುವನೇಶ್ವರೀ ದೇವಿಯುಂ ಮನದೊಳತಿ ನೊಂದು
ಸಿಂಹಿಣಿ ಕಿಶೋರ ಕೇಸರಿಯಂ ಪರಿಪಾಲಿಪ

ಮಾಳ್ಕೆಯಲಿ ಪಾಲಿಸಿದೆನಾದೊಡೇಂ ಶಿವನೆನ್ನ
ಕಂದಂಗೆ ಈವಗೆಯ ಘೋರ ರೂವಿನ ರೋಗ
ಬಾಧೆಯಂ ಇತ್ತು ಸಂಕಟಪಡಿಸಿದನೇಕೋ"
ಎನುತ್ತೆ ಮಿಡಿದಳ್ ನಿಡುಗಂಬನಿಯ. ಕಳಿದತ್ತು
ಕಾಲಮಾನಂ ಒಡಲ ಸಂಕಟದಲಿ.

ದೂರದಾ
ರಾಯ್‌ಪುರದ ಗಗನಾಂಗಣದಲಿ ಅದಾವಾವ
ನಲ್‌ಗ್ರಹಗಳ್ ಉಪಾರೂಢಮಾಗಿರ್ದುವೊ
ಎಂದೆನಲ್ ಕುವರಂಗೆ ಸುದೈವದ ಅನುಗ್ರಹ
ಒದವಿದುದು ಅನುಕ್ರಮವಾಗಿ. ಸೃಷ್ಟಿಪುಷ್ಟಿಯ ೪೩೦
ಸುಖಮುದ್ರೆಯದು ಒತ್ತುಗೊಟ್ಟವೊಲ್ ಸತ್ ಸಮಯ
ಬೋಂಕನೆ ಒದವಿ ಬಂದುದು ಪೆತ್ತವರ ಮೊರೆಯಂ
ಕೇಳಿ. ಧೀಮಂತ ದೇವ ಕುಲೀನನೆನೆ ಪರಮ
ವಯೋವೃದ್ಧ ಧನ್ವಂತ್ರಿಯು ಆಗಮಿಸಿದನಾ
ಬಾಲರೋಗಿಯ ಬಳಿಗೆ. ಕ್ಷೀಣಿತ ಶರೀರದ
ಕರುಣಾಯಿತ ಚಿತ್ತಾರಮಂ ಕಂಡು ಮರ್ಮರ ಮರುಗಿ
ನಾಡಿಗ್ರಂಥವನೋದಿ ರೋಗ ಮೂಲಗತಿಯಂ
ಕಂಡುಕೊಂಡು ಬೇರಿಗೆ ಕಿಚ್ಚಿಡುವ ಮಾಳ್ಕೆಯಲಿ
ಔಷಧೋಪಚಾರಂ ನೀಡಿದನ್ ಧನ್ವಂತ್ರಿ.
ಅಂದಿನಿಂ ರೋಗದುಗ್ರದುಪಟಳವದು ತಗ್ಗಿ ೪೪೦
ಕುಗ್ಗುತ ನಡೆದಿರೆ ಬಾಲಕ ಮೆಲ್ಲಮೆಲ್ಲನೆಯೆ
ಚೇತರಿಸಿಕೊಳ್ಳತೊಡಗಿದಂ. ಬಾಲಕನ ಮುಖ
ಬಿಂಬದೊಳ್ ಬೆಳಂಗುವ ಷೋಡಶ ಕಳೆಗಳಿಂದೆ
ಧೀಮಂತಿಕೆಯನೋದಿದ ಧನ್ವಂತ್ರಿಯು ಮನದೊಳ್
ಮೆಚ್ಚಿ ಬೆಚ್ಚಿ ತೋಷರಸಾನ್ನವುಂಡು ಅತೀವ

ಪ್ರೇಮಕಾತರತೆಯಲಿ ತನ್ನೊಳಿಹ ತರತರದ
ಬಿಜ್ಜೆಯಂ ಬಸಿದು ಬಾಲಕನ ಮನತುಂಬುವೊಲ್
ಕಲಿಸತೊಡಗಿದಂ. ಮದ್ದಿನ ಕಷಾಯದೊಡಂ
ಬಿಜ್ಜೆಯ ರಸಾಯನಂ ಮೈಗೂಡಿದುದು ಅಣುಗ
ನರೇಂದ್ರನಾಥಂಗೆ. ಶ್ರೀಯುತ ವಿಶ್ವನಾಥದತ್ತಂ
ಶಾಲೆಯಿಂ ಪೊರಗುಳಿದ ಕಂದಂಗೆ ಗುರುವಾಗಿ
ಅನುದಿನಂ ಪಾಠಮಂ ಹೇಳಿ ಬರೆಯಿಸಿ ತಾನೆ
ಕಲಿಪುವಂ. ಜಗತ್ ಪ್ರಜ್ಞೆಯಂ ಮೂಡಿಸಲ್ ಹಂತ
ಹಂತದೊಳ್ ಧೀಶಕ್ತಿಯಂ ಉದ್ದೀಪಿಸುವಂ
ಎಂದಿಗುಂ ಸೋಲಲೀಯದ ಪಾಂಗಿನಲಿ. ಕಾಲ
ವಾಹಿ ಉರುಳುತಲಿರ್ದುದಯ್ ಸರಾಗದಲಿ, ಮೇಣ್
ಜೊತೆಜೊತೆಗೆ ಪರಮ ವಾತಾವರಣದ ತಂಗಾಳಿ
ಮುದ್ದಿಸಿ ನಲವಿಂ ಪುಷ್ಟೀಕರಿಸುತಿರೆ ತನ್ನ
ಭಾಗ್ಯದ ಕಿರುವಾಗಿಲ್ ತೆರೆದವೊಲಾಯ್ತು ಗಭೀರ
ರುಗ್ಣ ಶಯ್ಯೆಯಲಿರ್ದ ಬಾಲಕಂಗೆ. ಅನೇಕ
ಬಗೆಯೊಳ್ ಮನಃಸ್ವಾಸ್ಥ್ಯಂಬಡೆಯೆ ಅನುಕೂಲಕರ
ವಾತಭೂತ ಆದರದಿಂದೈವುದು ದಿನದಿನಂ.
ದೈಹಿಕಾರೋಗ್ಯಮೆಂತಂತು ಮನಃಚಿತ್ತಗಳ
ಆರೋಗ್ಯಮಂತಂತು ಉದ್ದೀಪಿಸಿ ನಿಚ್ಚಂ
ಪಾಠಪಠ್ಯಗಳ್ ಮಾತ್ರಮಲ್ಲದೆ ಭಾರತದ
ಸಂಸ್ಕೃತಿ, ಪೂರ್ವೇತಿಹಾಸ, ವೇದಾಂತ ಷಡ್ದರ್ಶನ
ಮೇಣ್ ರಾಜಕೀಯದ ರೀತಿನೀತಿಗಳ ಬೋಧೆ
ಸಲ್ವುದು ದಿನಚರಿಯಲಿ; ರಾಯ್‌ಪುರದ ಘನವೆತ್ತ
ಪಂಡಿತೋತ್ತಮರ್ ವಿಶ್ವನಾಥದತ್ತನೊಡಂ
ವಿಚಾರ ವಿನಿಮಯ ಮೇಣ್ ಕಾವ್ಯಮೀಮಾಂಸೆ

ಮುಂತಪ್ಪ ಬಗೆಬಗೆಯ ವಿಮರ್ಶಾ ಸಮೀಕ್ಷೆಯಂ
ನಡೆಸುತಿರೆ, ಪಿತನಿಂದೆ ಆಹೂತ ನರೇಂದ್ರಂ
ಭಾಗ ವಹಿಸುತ್ತೆ ದಳಬಿರಿದ ಹೊಸ ಹೂವಾಗಿ
ಎಲ್ಲರ ಕಣ್ಮನಂ ಸೆಳೆದಂ ಜ್ಞಾನದೀಪಿಯಂ
ಉಜ್ವಲಿಸಿ. ಒರ್ಮೆ ಪ್ರಖ್ಯಾತನಾಮನಿರ್ದಾ
ವಂಗಲೇಖಕನಾಗಮಿಸಿ ವಿಶ್ವನಾಥನೊಳ್
ಅತಿಥಿಯಾಗಿರೆ ದಿನದಿನ ಬಾಲಕ ನರೇಂದ್ರನ
ಧೀಶಕ್ತಿಯಂ ಅರ್ಥವತ್ ಗಮನಿಸಿ ಬೆಕ್ಕಸ
ಬೆರಗುವಟ್ಟು ಅತ್ಯಾನಂದ ಭಾವದಿಂದಲಿ
ನುಡಿದಂ "ಎಲೆ, ವತ್ಸಾ! ಮುಂದೆ ನಿನ್ನಿಂದೆಮ್ಮ
ವಂಗ ಸಾಹಿತ್ಯ ಪಿರಿದಪ್ಪಿ ಮಿಗೆ ಶ್ರೀಮಂತ
ಸಿರಿಯಿಂದೆ ವಿಜೃಂಭಿಸಿ ದಿವ್ಯಮಾದಪುದು ಘನ
ಸತ್ಯ! ಭಗವಂತ ನಿನಗೆ ಸನ್ಮಂಗಳಮೆಸಗುಗೆ!"
ಎನುತೆ ತೋಷದಿಂ ಹರಸಿದಂ, ತಲೆಯ ಮೇಗಡೆ
ಹಸ್ತವನಿರಿಸಿ ವರದ ಮುದ್ರೆಯಂ ಒತ್ತಿ. ಮುಖ
ಮಂಡಲದಲಿ ಬೆಳ್ನಗೆಯ ಬೆಳುದಿಂಗಳ್ ಹರಿಸಿ
ಆನಂದದಿಂ ಪೆರ್ಮೆಯ ಮನೋಭಾವದಿಂ ಮತ್ತೆ
ಮತ್ತೆ ಒಳ್ನುಡಿಗಳಂ ಚೆಲ್ಲಿ ಸೂಸಾಡಿದಂ.
ದಿನದಿನಂ ಇನಿದಿನಿದು ಮೈಗೂಡುತಿರೆ ದೈಹಿಕ
ಆರೋಗ್ಯಭಾಗ್ಯವದು ಮಾನಸಿಕ ಚೇತನಂ
ಚೇತರಿಸಿ ಚೋದಿಸಿತು ಸಾನಂದದಿಂ ಕುವರ
ನರೇಂದ್ರನ. ದೈವದತ್ತ ಮನೋಹರಾಕೃತಿಯ
ರುಕ್ಮರಾಗಾತಪ ಸುಸ್ನಾತನುಂ ಪ್ರಜ್ಞಾನಿ
ಅಂತೇವಾಸಿಯುಂ ಆಗಿರ್ದ ತಾಪಸತೇಜಿ
ನರೇಂದ್ರನಾಥನಲಿ ಸ್ವರ್ಗೀಯ ಸೌಂದರ್ಯ

ರಾಶಿಯ ಕಣಕಣಗಳ್ ಮೈಗೂಡಿ ಬಂದಿಹವೊ
ಎಂಬಿನಂ ಅಚ್ಚರಿಯ ಕುಂಡದಲಿ ಮುಳುಗಿಪುದು
ನೋಳ್ಪ ಕಣ್ಣಾಲಿಯಂ. ದಿನದಿನಂ ಶ್ರೀಮುಖದಿ
ಚಿಂತನಾವೇಶಂ ವೆರ್ಚುವೆಳೆಯಂ ಭವಧಿಯಿಂ
ನಿರುತಕ್ಕೆ ನಿಟ್ಟಿಸುತಿರೆ ದಿವ್ಯಾಕ್ಷಿಗಳ ಶೋಭೆ
ಹೃದಯಾಂತರಾಳದಿಂದ್ಯೆದ ಭಕ್ತಿರಸದಿಂದೆ
ಸಮುಜ್ಜ್ವಲಮಾದವೊಲ್ ಕಣ್ಗೆಸೆವುದು ಸಂತತಂ.
ಬಾಲಕಂ ಅಂದಂದಿನ ಬಾಣಸಿಗತನದಲಿ
ಕೈನುರಿತು ರಸವಿದ್ಯೆಯ ಸ್ನಾತನೆನೆ ರಂಜಿಸಿ
ಬಲಿಯುತಿರ್ದಂ. ಪ್ರೀತಿಯಲಿ ನೇಹದಲಿ ತನ್ನ
ನಾಮ ಲಕ್ಷ್ಯಕೆ ಸುಲಕ್ಷಣಂ ತಾನೆನಲ್ ತಾಂ
ರಸಕಾವ್ಯ ಸತ್ಕಲಾಭ್ಯಾಸದಧ್ಯಾತ್ಮದಲಿ
ಮುಳುಗಿ ಛಾಯಾ ಶರೀರಮನೆ ಜೃಂಭಿಸಿರ್ದಂ!
ಅಂತಿಂತು ವರ್ಷ ತ್ರಯಗಳ್ ಉರುಳಿದುವಲ್ಲಿ.
ದೈಹಿಕಾರೋಗ್ಯ ಮಾನಸಿಕದಾರೋಗ್ಯ ತುಂಬಿಬರೆ
ಗೊಬ್ಬರವ ಸುರಿದು ನೀರೆರೆದ ಸಸಿಯವೊಲಾಯ್ತು
ಬಾಲಕನ ವಜ್ರದೇಹ ಸಂಪದಂ ನಳನಳಿಸಿ.
ಉಲ್ಲಾಸ ಉತ್ಸಾಹ ಮೇಣಧಿಕ ಧೀಶಕ್ತಿ
ಧುಮುಧುಮಿಸಿ ಚಿಂಬೆಳೆಯೆ ಎಳೆಯ ತೇಜಿಯೊಲ್ ತಾಂ
ಧೀಮಂತ ದಿನಚರಿಗೆ ಸನ್ನದ್ಧನಾದನಾ
ಹದಿಹರೆಯದ ಕೆಚ್ಚೆದೆಯ ಕಟ್ಟಾಳು. ತರುವಾಯಿ
ಪಿಮ್ಮರಳಿದರ್ ಹಿಂದಿನ ತಮ್ಮಯ ಕಲ್ಕತ್ತ
ಗೃಹದ್ದೇಶಕೆ. ಬಹುದಿನಗಳ ಬಳಿಕ ನರೇಂದ್ರಂ
ಗೆಣೆಯರಂ ಬಂಧುಬಳಗಮಂ ಕಂಡು ಹರ್ಷಿತ
ಹೃನ್ಮನಗಳಿಂ ದಿನಚರಿಯನಾರೈದಂ. ತಾಂ

ಶಾಲೆಯಿಂ ದೂರಾಗಿ ಬಿಜ್ಜೆಯಿಂ ಪೊರತಾಗಿ
ಉಳಿದಿರಲ್ ಶಾಲೆಯೊಳ್ ಮುಂಬಿನ ಸುವಿದ್ಯೆಗಳ
ಅಭ್ಯಸನಕೆ ಪ್ರವೇಶಂ ದೊರೆಯದಾಯಿತ್ತು.
ಶಾಲೆಗಳ ಬಾಗಿಲಿಂ ಬಾಗಿಲಿಂಗೆ ಅಲೆದಲೆದು
ಪ್ರವೇಶಮಂ ಕೋರಿದಂ. ತಾನ್ ಸಂಪೂರ್ಣ
ಪಾಠಗಳ್ ಓದಿರುವುದಂ ಬೆಸಸಿಯುಂ ಶಾಲೆ
ಒಲ್ಲದಾಯ್ತು ಬಾಲಕನಂ ಒಳಗೊಳಲ್! ಶಾಲೆಯ
ಗುರು ಪ್ರಮುಖರಿಂಗೆ ತರುವಲಿಯ ಮನಮೋಹಕ
ಮುಖಾಂಭೋಜದ ಉಜ್ವಲ ತೇಜಃಕಾಂತಿಯಂ
ಕಂಡರಿದು ಮನತುಂಬಿ ಎದೆ ತುಂಬಿಯುಂ ತಾವ್
ಉಪಕರಿಸಲಾರದಿರೆ ನೊಂದುಬೆಂದರ್ ತಂತಮ್ಮ
ಮನದೊಳ್. ತರುವಲಿಗೆ ಅವಕಾಶವ ನೀಡುವೊಡೆ
ಶಾಲೆಯ ನಿಯಮದ ಪ್ರಕಾರದೊಳ್ ಆಗದಿರೆ
ಮಿಣ್ಣನಾದರ್ ಕೆಮ್ಮನೆ ಬಿಸುಸುಯ್ದು. ಮಾನಸ
ಮುರುಳಿ ಹಾಡಿತು ವೀತರಾಗದಲಿ. ಪ್ರವೇಶ
ದೂರದೂರವೇ ಉಳಿಯಿತೆನೆ ನರೇಂದ್ರನಾಥಂ
ತೀವ್ರ ಚಿಂತಾಬ್ಧಿಯಲಿ ಮುಳುಗಿ ಅಂಗಣದಲ್ಲಿ
ಮುಂಬೆಳೆದ ಬೃಹದ್ ಸಿರಿಹೊನ್ನೆ ಮರದಡಿಯೊಳ್
ಸುತ್ತುವರಿದ ಕಲ್ಲು ಕಟ್ಟೆಯಮೇಲೆ ಮಂಡಿಸಿದಂ.
ಕಂದಿದ ಮುಖಬಿಂಬ ನುಡಿಯದಾಯ್ತು. ಮನದಾಸೆಯ
ಕುಡಿ ಮುದುಡಿತು. ಮಿಣ್ಣನೆ ಧ್ಯಾನದೊಳ್ ಮುಳುಗಿರಲ್,
ಮನದ ಕಸಿವಿಸಿ ಅರುಗಾಗಿ ಶಾಂತಿಯು ನೆಲೆಸಿದತ್ತು;
ಕಳೆದುರುಳಿದುವು ಹಲಕೆಲಗಳಿಗೆಗಳ್. ಕಿವಿಗಳ
ಸನಿಹದಲಿಯೆ ಮೆಲ್ಲನೆ ಮೃದು ಮಂದ ದನಿಯಲಿ
ಮೊಳಗಿತೊಂದು ಅಶರೀರ ವಾಣಿ "ಮಗುವೇ, ನೀಂ

ಮೆಟ್ರೊ ಪೋಲಿಟನ್ ಇನ್ಸಿಟ್ಯೂಟ್-ಗೆ ಪೋಗಲ್ಕೆ!''
ಥಟ್ಟನೆ ಕಣ್ ತೆರೆದನ್ ನರೇಂದ್ರನಾಥಂ. ನೋಡೆ,
ಆ ಬಳಿಯೊಳ್ ಆರಿಲ್ಲ. ಮಿಳ್‌ಮಿಳನೆ ನೋಡಿದಂ
ಸುತ್ತಮುತ್ತಲ್, ಮತ್ತೆ ಉಸುರಿನ ಸುಳಿವಿಲ್ಲ.
'ಹಾ, ಇದು ದೈವವಾಣಿಯುಮಲ್ಲದೇನಿರದು, ಎನೆ
ಆನೀಗಳೆ ಪೋದಪೆನ್' ಎನುತೆನುತೆ ತೆಕ್ಕನೆ
ಎಳ್ದು ನಮಿಸಿ ಅಶರೀರವಾಣಿಗೆ, ತೋಷದಿಂ
ಜಿಗಿದೋಡಿದಂ ಜಿಂಕೆಯೊಲ್ ಮೆಟ್ರೊಪೋಲಿಟನ್
ಶಾಲೆಯೆಡೆಗೆ. ಪಥಕಳೆವ ಮುನ್ನಮೆ ಆತುರದಿ
ಜಿಗಿಯಿತು ಮನ. ಜಿಗಿಯಿತು ಹೃದಯ. ಜಿಗಿಯಿತು ಕಣ್.
ಜಿಗಿಯಿತ್ತು ಕಾಲ್. ನರೇಂದ್ರಂ ಶಾಲೆಯಂ ಬೊಕ್ಕ
ಚಣದೊಳ್ ಎದುರ್ವೆತ್ತ ಗುರು ಪ್ರಮುಖರ್ ಕಂಡರ್
ಪೊಚ್ಚ ಪೊಸ ವದನಮಂ. ನಿಂತ ನಿಲುವಂ ಬದಲ್
ಗೊಳಿಸದೆ ನೆಟ್ಟಕಣ್ ಕೀಲಿಸದೆ ನೋಡುತೆ ''ಏನೈ?''
ಎನಲ್ಕೆ ನರೇಂದ್ರಂ ಶಿರ ಬಾಗಿ ನಮಿಸಿ ತನ್ನ
ವೃತ್ತಾಂತಮಂ ಬೆಸಸಿದನ್ ವಿನಯದಿಂ. ಒಡನೆ
ತನ್ನೊಂದು ಅದೃಷ್ಟ ಬಲವೋ ದೈವಬಲವೋ
ಆಕಸ್ಮಿಕವೋ ಅಂತಿಂತು ಪ್ರಪ್ರಥಮ ದೃಷ್ಟಿ
ಯಷ್ಟಿಗೆಸೆದ ಶಾಂತಿಯ ಕಾಂತಿಯ ಮಧುಕುಂಡದ
ಆಳಕೆ ಜಿಗಿದು ಅರಿದು ಮೆಚ್ಚಿದೊಲ್ ಸ್ವಾಗತಿಸಿ
ಮಾನಿಸಿದರ್, ಗುರುಕುಲದ ಮದ್ದುಗ್ರು ಸ್ಥಾನೀಕರ್.
''ಅಯ್ಯಾ, ಕುಮಾರ ನಿನ್ನಂಥ ಪ್ರತಿಭೆಯುಳ್ಳ
ಅಂತೇವಾಸಿ ಪ್ರವೇಶಂ ಪಡೆಯದಿರಲಾರ್ಗೆ
ಸಲ್ಲುವುದು ಪೇಳ್? ನಿನ್ನಂ ತಳ್ಳಿಬಿಡೆ ಮನಂ
ಎಂತು ಸಂತು? ನಿನ್ನ ಮುಖಮಂಡಲದೊಳಿಹ ದಿವ್ಯ

ಆತ್ಮಿಕ ಕಳೆಯೆ ಸಾಕ್ಷಿ ಎದೆಯಾಳದ ಅದ್ಭುತ
ಧೀಮಂತಿಕೆಗೆ ಕಣಾ! ಇದೋ, ಓಡಿ ಈ ನಂಬು
ಗೈಯಂ!" ಎನುತೆ ಹಸ್ತಲಾಘವಂ ನೀಡಿದರ್
ಪ್ರಸನ್ನಮುಖಿಯಾಗಿ. ಒಳ್ನುಡಿಗಳನಾಡಿ ಶುಭಾಶಯಂ
ಕೋರಿ, ಬೀಳ್ಕೊಟ್ಟರ್ ಗುರು ಪ್ರಮುಖರ್. ನರೇಂದ್ರ
ನಾಥಂ ಮರಳಿದಂ ಭವನ ಮಂಡಲಕೆ. ಸದ್ಯಃ
ಪ್ರವೇಶಂ ದೊರೆತೊಡಂ ಕಳೆದ ವರ್ಷತ್ರಯಗಳ
ಬಿಜ್ಜೆಯಂ ಒರ್ಮೆಗೇ ಕರಗತಗೊಳಿಪ ಮಹಾ
ಸಾಧನೆಯ ಭೂತ ಎದುರ್‌ವೆತ್ತು ಗಂಭೀರತೆಯ
ರೂಪಿನಿಂ ನಿಲ್ವುದು ಮಹತ್ ಕರ್ತವ್ಯಭಾರಂ
ನೆನೆಪಿಸುವೊಲ್, ಆತ್ಮವಾಣಿ ವಿನೀತ ಭಾವದಲಿ
ರಾಗಾರುಣತಾನಂವೆರೆಸಿ ಹಾಡಿತೊಂದು
ಸಮಯೋಚಿತ ಸಂಗೀತೆಯಂ ಕೊರಳ್‌ರುತಿಯಲಿ,

"ಶರೀರ ನಿರಪೇಕ್ಷಸ್ಯ ವ್ಯವಸಾಯಿನಃ ।
ಬುದ್ಧಿ ಪ್ರಾರಬ್ಧ ಕಾರ್ಯಸ್ಯ ನಾಸ್ತಿ ಕಿಂಚನ ದುಷ್ಕರಂ ॥"

ಅಂದು ವಿಶ್ವವಿದ್ಯಾಲಯ ತೆರೆದ ಸುಸುಂದರ
ದಿನ. ಪ್ರಾತಃಕಾಲೀನ ಸೊಂಪು ಹರಡಿದುದು ಸುರ
ಸಂವೃದ್ಧಮಾಗಿ. ಅಂತೇವಾಸಿಗಳ್ ತುಂಬಿ
ತುಳುಕಿರ್ದರ್ ಶಾಲೆಯ ಆವರಣದೊಳ್. ಕಲಿತು
ಬಲಿತು ಹೊಂಗೊಡಮಾದ ತರುವಲಿಗಳ ಸಮುದಯ
ನಗೆವಾತುಗಳ ಮೋದದಿಂ ಮೆರೆದತ್ತು ಲಘುವಾಗಿ.
ಪಿರಿಕಿರಿ ಗುರುಗಳೈದರ್ ಸಾಲ್ಗಟ್ಟಿ. ಶಾಲೆಯ
ಗಂಟೆಯುಂ ಬಾಜಿಸಿತು ಢಣಢಣಿಸಿ. ಎಲ್ಲರುಂ
ಒಳಗೈಯುತಿರೆ ಗುರುಬ್ರಹ್ಮರ್ ಎದುರ್ವೆತ್ತು
ಮುದದಿಂ ನುಡಿಸಿದರ್ "ಎಲೆ ವತ್ಸಾ! ಮೂಮೂರು

ವರ್ಷಗಳ ಪಾಠಮಂ ಮನಗೊಳ್ವೊಡೆ ಶ್ರಮದ-
ಪರಿಶ್ರಮದ ತೇಜಿಯನೇರದೆ ಗತಿಯಿಲ್ಲಂ.
ನಿನ್ನಂಥ ಧೀಮಂತ ಚಕ್ರವರ್ತಿಗದು ಏಂ
ವಿಶೇಷಮೆನಿಸದು ಬಿಡು. ಇತರಿತರ ವಿದ್ಯಾರ್ಥಿ
ಸಮುದಯಕೆ ನಿನ್ನ ಮಾರ್ಗದರ್ಶನ ಲಭಿಸಿದೊಡೆ
ಒಳಿತೆಂಬೆ, ಕೊನೆವರಂ ನೀನಿಲ್ಲೆ ಸೊಗದಿಂದೆ
ಕಲಿತು ಬಲಿತು ಈ ಗುರುಕುಲಕೆ ಸತ್ಕೀರ್ತಿಗಳ
ಮಾಲೆಯಂ ತೊಡಿಸಿ ನೀಂ ಕೀರ್ತಿಶಾಲಿಯಾಗೆಲ್ಲೈ!
ಶ್ರೀಶಈಶನ ದಿವ್ಯ ಕರುಣೆಯುಂ ನಿನಗಿರ್ಕೆ."
    ಗುರುಬ್ರಹ್ಮರ ಶುಭಾಶಯ, ಕಲಿಕೆಯ ಉತ್ಸುಕತೆ,
ಪ್ರತಿಭೆಯ ಪುರ್ಚು ಎಲ್ಲವುಂ ಒಗ್ಗೂಡಿರಲ್
ಯುವ ನರೇಂದ್ರುಂ ಸಮುತ್ಸಾಹದಲಿ ಕಲಿಕೆಯೊಳ್
ನಿರತನಾದಂ. ಚಿತ್ತ ದಳದಳವರಳಿ ದಿವ್ಯ
ಹೃಜ್ಯೋತಿಯಂ ಬೆಳಗಿ ಕರಕುಶಲತೆಗೇರ್ದಂ.
ಓರಗೆಯ ತರುವಲಿಗಳ್ ಮುಂದಿರೆ ನರೇಂದ್ರು
ತಗ್ಗಿಬಗ್ಗಿದನೇಂ? ಮನಕೊರಗಿ ಕರಗಿದನೇಂ?
ಭಯ ಬನ್ನಗಳಂ ತತ್ತಳ ತುಳಿದಂ ದ್ವಾಪರ
ಯುಗೀಯ ಜನನಾಯಕ ಶ್ರೀಕೃಷ್ಣ ಪರಮಾತ್ಮ
ಕಾಳಿಂದಿ ಮಡುವಿನಲಿ ಧುಮುಕಿ ಕಾಳಿಂಗ ಮರ್ದನ
ಗೈದ ತೆರದಲ್ಲಿ ಜಯಶೀಲನಾದಂ ಧೀರ
ಧೀಮಂತ ಪ್ರಭು! ಧೀಮತಿಯ ಹಮ್ಮುಬಿಮ್ಮುಗಳ್
'ಹೆಂಬೇಡಿಯು ನೀನಲ್ಲ, ಕಲಿತು ಕಲಿಯಾಗೆಲ್ಲೈ'
ಎನುತೆನುತೆ ಬೆನ್ನಟ್ಟಿ ಚಪ್ಪರಿಸಿ ಪುರುಪಿತ್ತು
ಸುಜ್ಞಾನದಭಿಷೇಕಗೈಯುತಿರಲ್ "**ಅಶ್ವಸ್ಯ**
ಲಕ್ಷಣಂ ವೇಗೋ" ಎಂಬಿನಂ ವಟು ವರ್ಯಂಗೆ

ಅತ್ಯದ್ಭುತ ಶ್ರದ್ಧೆಯ ಶ್ರೀರಕ್ಷೆ, ಕುಲಬಲದಿಂ
ಚಿಚ್ಛಕ್ತಿಯಿಂದುತ್ಕಂಠಿತಾತ್ಮದ ಕಾಂಕ್ಷೆಯಿಂ
ಭೀಮಿಸಿದವೊಲ್ ಭಾವನಾಲೋಕದಲಿ ಮುಳುಗಿ
ವಿಹರಿಸುವನೇಕಾಂಗಿ. ಬಾಲ್ಯದೊಳ್ ಮುಗ್ಧಮನ
ಮತಿಗತಿಯ ಮೇಲೆ ಅಚ್ಚೊತ್ತಿದ ಜನನಿಯ ನಲ್
ಮಾತುಗಳ ಮಣಿಮಾಲೆ ಬಾಡಿಬತ್ತದೆ ರುದ್ರ
ಮುದ್ರೆಯಾಗಿರಲದರ ಮೇಲೆ ಬೇರಾರ ಇತಿ
ಮಿತಿಗಳ ಪ್ರಭಾವದ ಅಗತ್ಯಮಿಲ್ಲಂ. ಆ
ಮೃದುಮಧುರತರ ನುಡಿಮುತ್ತುಗಳ ಮುದ್ರೆಯೇ
ಮುದ್ರೆ. ಸತ್ಯ ಧರ್ಮಾತ್ಮಕ ವಿಷಯ ವಿಪ್ಲವದ
ಬೋಧೆಯೇ ಬೋಧೆ. ಮುಂದೆ ಭವಿಷ್ಯದ ಅನನ್ಯ
ವೇದಿಯೇರಿದ ಯುವ ಧುರೀಣ ನರೇಂದ್ರನಾಥಂ
ಸ್ವಾಮಿ ವಿವೇಕಾನಂದರಾದಮೇಲೊರ್ಮೆ ತಾಂ
ನೀಡಿದ ಉಪದೇಶದೊಳ್ ನುಡಿದ ನುಡಿಗಟ್ಟಿದು,
"ತಾಯಿಯಂ ಪೂರ್ಣಗೌರವದಿಂ ಪರಿಪೂಜಿಸಿ
ಸಂಬಾಳಿಸದಾವ ಪುರುಷನುಂ ಮಹೋನ್ನತಿಗೆ
ಏರಲಾರ. ಉನ್ನತಿಯಂ ಪಡೆಯಲಾರ. ಇದು
ದಿಟಂ. ಭಾರತ ಸಾಮ್ರಾಜ್ಯ ಮಾತೆಯರಿಗಿತ್ತಿಹ
ಗೌರವ ಅಪಾರ. ಭಕ್ತಿಯುಂ ಅಪಾರ. ಮೇಣುಂ
ಸತೀತ್ವಕಿಂ ಮಾತೃತ್ವವೆ ಮಿಗಿಲಾದ ದ್ರವ್ಯಂ.
ಸತೀತ್ವದಲಿ ಕಾಮಭೋಗಗಳ ವಾಸನೆಯು
ಇರ್ಪುದು ಸಹಜ. ಜನನಿ ತ್ಯಾಗಮಯಿ ಅವಳೆಮಗೆ
ಗೃಹದೇವತೆ! ಮಾತೃನುಡಿಯೆ ವೇದನುಡಿ! ಮೇಣ್
ಅವಳಿಚ್ಛೆಯ ದೈವೇಚ್ಛೆ! ಇಂತೀ ಗೌರವ ಭಾವದಿಂದಲ್ತೆ
ಜಗತ್ ಚೈತನ್ಯ ತತ್ತ್ವಮಂ ಏಕ ಭಾವದಿಂ

ಜಗನ್ಮಾತೆಯೆಂದು ಆರಾಧಿಪುದು? ತಾಯಿಯರ
ಕೂಡ ಮಕ್ಕಳ ಸಂಬಂಧ ಬಹುಮೂಲ್ಯಂ. ದೈವಿಕ
ತತ್ತ್ವದ ಪರಮ ಸಂಬಂಧವದು ಸ್ವಾರ್ಥರಹಿತಂ.
ಅಸ್ವಾರ್ಥ ದ್ರವ್ಯವಂ ಕಾಂಬುದೆನಲ್ ಮಾತೆಯ
ಹೃದಯದೊಳಲ್ಲದೆಯೆ ಬೇರಿಲ್ಲ. ಮಾತೆಯರೆ
ಇಳೆಯ ಸಾಕ್ಷಾತ್ ದೈವ!" ಅಹ ಎಂತಹ ನುಡಿಮುತ್ತು!
    ಬಾಲಕನ ಅಭ್ಯುದಯದ ಮಾಯಾವರಣದೊಳ್
ನುಸಿದು ನೋಳ್ಪರ್ಗೆ ಕಾಂಬುವ ಸತ್ಯಚಿತ್ರಮೆನಲಿದೆ-
ಶ್ರೀಗುರು ಹಿರಿಯರಂ ಪರಮ ಗೌರವದಿಂ ಬಲು
ಸನ್ಮಾನದಿಂ ಪೂಜಿಸಿದ ಸೌಭಾಗ್ಯದಿಂದಲಿ
ಪಡೆಕೊಂಡ ಶುಭಾಶೀರ್ವಾದ ಸರ್ವತ್ರ ಸದಾ
ಶಿರೋದೇಶದ ಮೇಲಿರುತಿರೆ ಭವ್ಯ ಭವಿಷ್ಯ
ಧಾತ್ರಿಯೊಳ್ ಪರಮ ಜ್ಞಾನ ಸ್ನಾತಕನಾಗಿ ಸತ್
ಕೀರ್ತಿಶಾಲಿಯಾಗಿ ಜನಮನದಲಿ ಆದ್ಯಂತ
ಸ್ಥಿರಸ್ಥಾಯಿಯಾಗಿ ಉಳಿದು ಬಾಳ್ದು ಬೆಳಗಿದುದು
ಪ್ರಭಾಸಮಕ್ಕುಂ. ಪ್ರತ್ಯಕ್ಷಮಕ್ಕುಂ. ಅಂದು,
ಶೈಶವ ಕಿಶೋರ ಕೌಮಾರ್ಯಗಳ ಶುಭಗಾಲದೊಳ್
ನಿಚ್ಚ ಹಂತಹಂತದಲಿ ತಿದ್ದಿ ಸುಂದರ ಸಂಜೀವನ
ಹೃಜ್ಯೋತಿ ಕಿರಣಗಳನುಜ್ವಲಿಸಿ, ಉತ್ತರೋತ್ತರ
ಜೀವಮಾನದೊಳ್ ಸಿಂಹ ಶಾಬಕಮಂ ಜಗತ್
ವೇದಿಗೇರಿಸಿದುದೋ ಅಥ ಮಹೋನ್ನತಮಾದ
ದತ್ತವಂಶ ಪ್ರಭಾವೀ ಜ್ಞಾನ ಜ್ಯೋತಿರ್ಕಿಡಿಯು
ಉರಿದುರಿದು ಉಜ್ವಲಿಸಿ ಪುರೋಭಿವೃದ್ಧಿಯಂ
ಕಡೆದುದೋ ಅಥ ಅವೆರಡರ ಒಮ್ಮನದೊಮ್ಮತ
ವೊಗೆದು ಕಲ್ಪವೃಕ್ಷವೆ ತಾನಾದುದೊ ಎನಲ್ಕೆ

ವಿಶ್ವದೇಕ ಮೂರ್ತಿಯೆನೆ ಜೃಂಭಿಸಿದ ವೀರವಟು!
ನರೇಂದ್ರ – ನರೇಂದ್ರನೆನೆ ತೊಟ್ಟಿಲ ಶಿಶುವಾಗಿ
ಒಡಮೂಡಿ ಶಾಲೆಯ ಅಣುಗನಾಗಿ ಜತನದಿಂ
ಕಾಲೇಜಿನ ಮೆಟ್ಟಿಲವರೆಗೈದ ನರೇಂದ್ರನ
ಜೀವನೀ ಕ್ಷೇತ್ರದ ಸುಚಿತ್ರವದು ಸುಸುಂದರ;
ಸತ್ಯಸುಂದರ; ಅಮೋಘಸುಂದರ; ಸರ್ವತ್ರ
ಸುಂದರ; ಮನೋರಮಾ ವೈಖರಿಯ ಶ್ರೀಸುಂದರ!
  ಪ್ರಸ್ತುತ, ಆ ಶಾಲೆಯೊಳ್ ಪ್ರವೇಶದೊರೆಯಿತ್ತು.
ತರಗತಿಗಳ್ ನಡೆಸುವ ಗುರುಗಳೈದರ್. ಪಾಠದ
ಹುರುಳ್ ಬಗೆದು ವಿವರಿಸಿದೊಡಂ ಬಿಜ್ಜೆಯ ದಾಹ
ಹಿಂಗದು. ಗುರುಗಳ ಪಾತ್ರ ಸಾಲದು ಎಂಬವೊಲ್
ತಹತಹಿಪುದು ಮನಂ. ಎನಿತೆನಿತು ಕಲಿತು ನುರಿತು
ಮನಗೊಂಡೊಡಂ ಕಿರುವಗೆಯ ಚಿಂತೆ ಕೀಟದೊಲ್
ಕೊರೆವುದು ಮತಿಯಂ. ಅರ್ಥವತ್ ದ್ವೈದೀ ಭಾವ
ವಿಭಾವಗಳ ಅಲೆಗಳೋಳಿಯಲಿ ಸಿಲುಕಿ ಈಸಿ
ಮುಳುಮುಳುಗಿ ಬಗೆಬಗೆದು ನಿಚ್ಚ ತುಲನಾತ್ಮಕವಾಗಿ
ಮನ ಮಥಿಸಿ ಮಥಿಸಿ ವಿಷಯ ಕ್ರಾಂತಿಯಲಿ ತೊಡಗಿದ
ತರುಣಂಗೆ ಸಾಧನಾಶೀಲತೆಯು ಕಠಿಣತರ
ವ್ರತಮಾಯ್ತು. ಉನ್ನೆಬರಂ ಸುಲಭಮಿರ್ದೆಲ್ಲ
ತರಗತಿಗಳ್ ತಲೆ ಭಾರಮೆನೆ ಭಂಗದ ಕಣಕೆ
ಇಳಿದೊಲಾಯ್ತು. ಆದೊಡದಂ ಭರಿಸೆ ಬೆದರಿದನೆ?
ಪಿಂಜರಿದನೆ? ಅಶಕ್ತ ಶರೀರ ಬಳಲಿತೆ? ಆ
ಕಲಿತು ಬಲಿತ ಅಂತೇವಾಸಿಗಳ ಮಧ್ಯೆ ತಾಂ
ಕಿರಿಯನಿರ್ದೊಡಂ ಜಾನದೀವಿಯನುಜ್ವಲಿಸಿ
ಶ್ರಮವಂ ಶ್ರಮಿಸಿ ಬೆನ್ನೀರ್ ಬಸಿದು ಬಸಿದು

ಕಲಿಕೆಯ ಪುರುಪು ಪುರುಡುಗಳ ತೇಜಿಯನೇರಿದ
ತರುಣಂಗೆ, ಮೂಮೂರು ವರ್ಷಗಳ ಸಂಪೂರ್ಣ
ಪಾಠಪಠ್ಯಮಂ ಮನಮತಿ ತುಂಬಿ ಜೀರ್ಣಿಸುತ
ಪ್ರಾಣಕೋಶಮಂ ಹಿಗ್ಗಲಿಸೆ ಶಕ್ತಿ ಸಂಚಯನ
ಪಾತ್ರಿ ಆವ ದಿಶೆಯಿಂದ್ಯೆದುದೊ ಎಂದಚ್ಚರಿಯ
ಕುಂಡದಲಿ ಮುಳುಗುವವೊಲಾಯ್ತು ನೋಳ್ಪ ಕಂಗಳಿಗೆ.
ಎರ್ದೆಯ ಹುಮ್ಮಸ್ಸು ಬೆಳೆಯುತಿರೆ ನರೇಂದ್ರನ
ಕೆಚ್ಚಿನ ಕಿಡಿ ಚಿಮ್ಮಿತು ಮುಗಿಲ್ಮಂಚಕೆ. ಮುಂದೆ
ವರ್ಷಾಂತ್ಯದಲಿ ಎಂಟ್ರೆನ್ಸ್ ಪರೀಕ್ಷೆ ಬಳಿಸಾರ್ದು
ಸ್ವಾಗತಿಸಿತು ಧೀಮಂತ ತರುಣನ. ಮನಮತಿಯ
ಪುರುಪು ತನುಗೂಡಿರೆ ಮನಃಸ್ವಾಸ್ಥ್ಯದ ಜೊತೆಗೂಡಿ
ಬಂದತ್ತು ಮೈಸ್ವಾಸ್ಥ್ಯ. ಎಂಟ್ರೆನ್ಸ್ ಪರೀಕ್ಷೆಗೆ
ಕುಳಿತಂ ನರೇಂದ್ರನಾಥದತ್ತಂ. ಪರೀಕ್ಷೆಯು
ಮುಗಿಯಿತು. ಒರ್ಮೆಗೇ ಕಟ್ಟುಸಿರ್ ಬಿಟ್ಟಂತೆ
ಹಗುರವಾಯ್ತು ತನಮನಗಳಿಗೆ, ಕೃತವಿದ್ಯನಾಗಿ
ಮಿತ್ರ ಮಂಡಳಿಯೊಡಂ ಹೊರಬಿಳ್ದಂ ಶಾಲೆಯಿಂದೆ.
ಅಂದು ಶಾಲೆಯ ಶಿಕ್ಷಕನೊರ್ವಂಗೆ ದೂರದ
ಊರಿಂಗೆ ವರ್ಗವಾಗಿ ಪೋಗಲಿರ್ದ ಸಮಯದಿ
ಆತನಂ ಬೀಳ್ಕೊಂಬ ಸಮಾರಂಭವೇರ್ಪಟ್ಟು
ಶಾಲೆಯ ಮಹಾವರಣದೊಳ್ ಕೂಡಿರ್ದ ಸರಳ
ಸುಸುಂದರ ವಿಜೃಂಭಣೆ ಮೆರೆಯಿತು ತರುವಲಿಗಳ
ತನುಮನಂ ಹಿಗ್ಗಳಿಸಿ ವೆಗ್ಗಳಿಸಿ ನಲಿವವೊಲ್!
ಸಾಯಂಕಾಲೀನ ಸುಂದರವಾದ ಪೊಳ್ತಿನಲಿ
ಗುರುಗಳೈದರ್. ಮಿತ್ರರೈದರ್ ಶಾಲೆಯ ವೃಂದ
ಒಗ್ಗೂಡಿ ಹಿಗ್ಗಿತು ಸಭೆಯ ಗಾತ್ರಂ. ಆ ಗುರುವಿನ

ಗುಣಗಾನಗೈದು ಮಾನಪತ್ರಂ ಸಮರ್ಪಿಸುವ
ಕರ್ತವ್ಯ ಶಿಷ್ಯರದು. ಅನ್ನೆಬರಮಾರಿಂಗು
ಸಭೆಯೊಳ್ ವೇದಿಯಲಿ ನಿಂತು ಮಾತಾಡುವಾ
ಕೆಚ್ಚು ನೆಚ್ಚು ಇರದಿರೆ ನಸುಕಂಪನದ ಹೊನಲ್
ಹರಿಯಿತ್ತು ತರುವಲಿಗಳ ದೇಹದಾದ್ಯಂತ ಕಣಾ!
ತಾವಾಗಿ ಭಾಷಣದ ಮಾಲೆಯಂ ನೆಯ್ದುಲಿವ
ವಾಚಾಳಿ ಆರಿರದಿರೆ ಯುವಜನಗಳ ನಡುವೆ
ಮೂಡಿತು ಗಲಿಬಿಲಿ. ಪರಸ್ಪರ ಹೇಳಿ ಕೇಳಿಕೆಯು
ನಡೆದುದು ನಸುವೊಳ್ತು. ಆರ್ಮುಂದೆ ಬಾರದಿರೆ
ನರೇಂದ್ರನಾಥನಾ ತಲೆಗೇರಿದುದ್ದೈ. ಆ ಸಭೆಯ
ಅಧ್ಯಕ್ಷಸ್ಥಾನೀಕರ್ ರಾಷ್ಟ್ರ ಪ್ರಖ್ಯಾತ ವಾಗ್ಮಿ
ಪ್ರವರನಿರ್ದ ಸುರೇಂದ್ರನಾಥಂ. ಅವರೆದುರ್ಗೆ
ಹದಿಹರೆಯದ ಎಳೆಯರ್ ಧೈರ್ಯದಿಂ ಕೆಚ್ಚಿನಿಂ
ವೇದಿಯೇರಿ ಮಾತಿನ ಧಾರೆಯಂ ಹರಿಸುವೊಡೆ
ಎಂಟೆರ್ದೆಯಿರವೇಳ್ಕುಂ! ಅಂತಪ್ಪ ಧೀಮಂತ
ಜವ್ವನಿಗನಿರದೆಯೆ ಆಗದದು. ಎಲ್ಲರುಂ
ನರೇಂದ್ರನ ಸುತ್ತುವರಿದು ಚೋದಿಸಿ ವೇದಿಯಂ
ಏರಿಸಿದರ್. ಅನ್ನೆಬರಂಮೆಂದು ಭಾಷಣಂ
ಗೈದುದಿಲ್ಲ. ಆದೊಡಮದುಂ ತಳ್ಳಲಾರದೊಲ್
ಅನಿವಾರ್ಯಮಿರೆ ನರೇಂದ್ರಂ ಸಭೆಗೆ ಕೈಮುಗಿದು
ತಲೆಬಾಗಿ ವಂದಿಸಿ ಮಧುರ ಶೈಲಿಯಲಿ ತನ್ನ
ಭಾಷಣವನಾರಂಭಿಸಿದನ್, ಆಶುಭಾಷಣ
ಪೊಣ್ಮಿತು ಸರಳ ಭಾವದ ಸರಳ ಭಾಷೆಯೊಳ್
ಹಿರಿಯರ್ ಕಿರಿಯರ್ ಕಿವಿಗೊಟ್ಟು ತಲೆದೂಗುವೊಲ್!

“**ಸ್ವೇ ಸ್ವೇ ಕರ್ಮಣ್ಯ ಭಿರತಃ ಸಂಸಿದ್ಧಿಂ**
ಲಭ್ಯತೇ ನರಃ” ಎಂಬೊಂದು ವಾಕ್ಯವನನುಸರಿಸಿ
ಎಮ್ಮನೆಲ್ಲ ಮುನ್ನಡೆಸಿದ ಗುರುಗಳ ಮಹತ್ತಂ
ಬಣ್ಣಿಸುವೊಡೆ ಎಂಟೆರ್ದೆಯಿರವೇಳ್ಕುಂ.! ಎನುತ್ತೆ
ಮುಂದಿನಾಶು ಭಾಷಣಮಂ ಒಳ್ನುಡಿಯಲಿ ತಾಂ
ಹಲಕೆಲವು ಮಾತಾಡಿ ಭಾವನಾರಸದೋಳ್
ಹಾಸ್ಯರಸವಂವೆರಸಿ ಸಭಿಕರ ಮನವಂ ನೆರೆ
ತಣಿಸಿದಂ. ಸುರೇಂದ್ರನಾಥರುಂ ಮೆಚ್ಚಿದರ್.
ಸಮಾರಂಭ ಕಳೆಕಟ್ಟಿತು. ಎಲ್ಲರ ವದನಂ
ತೋಷದ ಹೊನಲ್ ಹರಿಸಿ ಶಾಲೆಯ ಘನ ಗೌರವ
ವೆರ್ಚಿತೆನೆ ಕಂಗಳ್ ಅರಳಿಸಿದರ್ ಅಚ್ಚರಿಯಲಿ.
ಸಭೆಯೊಳ್ ಮತ್ತೆ ಮತ್ತೆ ‘ಹೋ’ಯೆಂದು ಆನಂದ
ಮೋದದಿಂದೆ ಕರತಾಳವಿಕ್ಕಿತು ಜನವೃಂದ.
ಬಳಿಕಲಾ ಸುರೇಂದ್ರನಾಥರ್ ಮನಮೆಚ್ಚಿ
ಮತಿವಂತ ವಿದ್ಯಾರ್ಥಿಯಂ ಹರಸಿ ಕೊಂಡಾಡಿ
‘ಎಲ್ಲ ವಿದ್ಯಾರ್ಥಿಗಳ್ ನರೇಂದ್ರನನುಕರಿಸಿ
ವಿದ್ಯಾವಂತರಾಗಿ ಕೀರ್ತಿಶಿಖರವನೇರಿರ್ಕೆ’
ಎನುತೆ ಒಳ್ನುಡಿ ಬೆಳ್ನುಡಿಗಳ ದಿವ್ಯಝರಿಯಂ
ಹರಿಸಿದರ್ ಎಲ್ಲರ ಮನತಣಿಸುವ ಪಾಂಗಿನಲಿ.
ವಿಶೇಷತರದ ಸಮಾರಂಭ ಮುಗಿಯಿತ್ತು. ಸಭೆಗೆ
ಆಗಮಿಸಿದ ನೇಹಿಗರ್ ಪೊರಮಟ್ಟರ್.
ಪಡುಗಣ
ದಿಗ್‌ತಟಿಗೆ ಇಳಿಯುತಿರ್ದುದು ಸ್ವರ್ಣರವಿದೇರು,
ಮೆಲುಮೆಲ್ಲ ಗತಿಯಲಿ. ದಿಗ್ ಭಿತ್ತಿಯಲಿ ಕೆಮ್ಮನೆ
ರಕ್ತಾಕ್ತ ಓಕುಳಿಯ ಚೆಲ್ಲಿದೊಲ್ ಕೆಂಪುರಸ

ಕೆನ್ನೀಲಿಯಲಿ ಹಬ್ಬಿ ಹರಡಿದುದು ಚಿತ್ರಗಳ
ಪ್ರದರ್ಶನವೊ ಎಂಬವೊಲ್ ರಂಗು ರಂಗುಗಳ್
ಕೂಡಿ ಚಿತ್ರವತ್ತಾಗಿ. ಸಾಯಂ ಸೊಂಪು ಹರಡಿ
ಜಗಕೆ ಶಾಂತಿ ಸಂದೇಶಮಂ ಸಾರಿತು ಮಧುರ
ಮನೋಹರ ರೂಪಿನಲಿ. ಹೇಮಂತದಂತಿಮದ
ಮಂಜುಮಯ ಹಿಮಶೀತಮಯ ಹವೆಯು ಒತ್ತೊತ್ತಿ
ಇಳಿಯುತಿರ್ದುದು ಇಳೆಯಮೇಲೆ, ಬೃಹದ್ ಜಗಕೆ
ಚಳಿಯ ದಿವ್ಯ ಮುದ್ರೆಯನೊತ್ತಿ ಮುದ್ದಿಸುವವೊಲ್.
ನರೇಂದ್ರನಾಥದತ್ತಂ ಮೋನದಿಂ ಧ್ಯಾನದಿಂ
ಏಕಾಂತದೊಳ್ ಯೋಚನಾಶೀಲತೆಯಿಂದಲಿ
ಸದಾ ಸಾಧನೆಯ ಸಾರ್ಥಕ ಬರ್ದುಕಿನೊಳ್ ನಿಂದು
ಅಜೇಯ ಭೀಷ್ಮ ಭೀಷಣ ಸಾಹಸದ ಧೀರ
ಯೋಧನೆನೆ ಹೋರ್ವ ಸಾಧಕನಾದನಾ ಪರಮ
ದಿನಂ. ಆದೊಡಂ, ಅನಿಶ್ಚಯತೆಯ ಭವಿತವ್ಯದ
ತೂಗುಯ್ಯಲೆಯಲಿ ತೂಗಾಡಿ ತೊನೆದು ಜೋಲ್ವುದು
ದಿವ್ಯಾತ್ಮ ಚೈತನ್ಯ ಪಕ್ಷಿ. ಅನುಗಾಲವುಂ
ಸಾಧನಾ ಸಾಸಿಯಾದ ಅಂತೇವಾಸಿಯುಂ
ಪ್ರತಿ ರಾತ್ರಿಯಲಿ ನಿಶ್ಶಬ್ದ ನೀರವತೆಗಳ
ಸಮೃದ್ಧ ಶಾಂತಿಯ ಸಮಾರಂಭದಲಿ ತಾಂ
ಪಲ್ಲಂಕದಮೇಲೆ ಕುಳಿತು ಕೈಮುಗಿದು ಕಣ್
ಮುಚ್ಚಿ ಭಾವನಾವೇಶಾವೇಶದಲಿ ಮೆಯ್ಯಂ
ಮರೆತು ಜಗತ್ ಮಂಡಲಮಂ ಮರೆತು ಪ್ರಾರ್ಥಿಸುತೆ
ಕಳೆಯುವಂ ಬಹುವೊಳ್ತು – "ಹೇ ದೇವ! ಸರಿದಾರಿ
ತೋರೆನಗೆ. ಹಲವಾರು ಪಥಕೂಡುವೆಡೆಯಲ್ಲಿ
ಕಡು ಕಳ್ತಲೆ ದಟ್ಟಣಿಸಿ ಬಿರಿಬಿಟ್ಟ ಕಣ್ಣಿಗೆ
ಕಳ್ತಲೆಯ ಕರಿಮುಸುಗಿ ಪಥವರಿಯದೆ ಭೀತಿಯ

ಭಾವದಲಿ ತತ್ತರಿಸಿ ನಿನ್ನ ಮಾರ್ಗಸೂಚನೆ
ಏನುಮೇನೆಂದರಿಯದೆ ತೊಳಲುತಿಹೆನ್ನೈ. ದಯೆ
ದೋರೆನಗೆ ಪರಮಬಂಧುವೇ!" ಎನುತೆ ಬೇಡಿದ
ಬಳಿಕ ನಿದ್ದೆಗಯ್ದುಂ, ಶಾಂತಿಯಲಿ.
ಆದೊಡಾ
ಕಾಲಗತಿಯಂ ಗಮನಿಸಿದೊಡಮದು 'ಸಾಮಾನ್ಯ'
ಎನಲುಂಟೆ? ಮಿಂಚಿನೊಲ್ ಮಿಂಚಿ ಸರಿದು ಪೋಪುದು
ಮತಿಗೆಟ್ಟುಕದ ತೆರದಲಿ. ಏನದರ ಭೀಮಿಸುವ
ರಭಸದಾಯಣಂ? ಕಾಲಪುರುಷನ ಪಜ್ಜೆಗಳ
ಗುರುತಿಸದಿರಲೆಲ್ಲಿಯ ಮಹತ್ಸಾಧನೆ? ಎಂಬ
ಪ್ರಶ್ನೆ ಭುಗಿಲೇಳ್ವುದು ಮನೋಭಿತ್ತಿಯು ತತ್ತರಿಸಿ
ತಲ್ಲಣಿಪ ಪಾಂಗಿನಲಿ. ವಿಚಾರಭರಿತಮನಂ
ಪರಿಭಾವಿಸುತಿರುತಿರೆ ಏಂಗೊಂದಣಮೊ ನಿಚ್ಚ
ಚಿಂತನಾ ರಂಗದಲಿ? ಗಂಭೀರ ಮಂಥನಂ
ಸುಳಿಸುತ್ತಿ ನುರ್ಗುತಿರೆ ರಭಸದಲಿ ಮತಿಯಚ್ಚು
ಬಿರಿದು ಸಿಡಿವುದೊ ಎನಲ್ ಸರ್ವಥಾ ಪುಟನೆಗೆವ
ಆವೇಗ ವಿಕ್ರಮವನಾಕ್ರಮಿಸುವ ಪ್ರಚಂಡ
ಭಾವುಕತೆಯೆ ಗಾಂಭೀರ್ಯ ನಿಶ್ಚಲ ಬಂಧುರಂ.
ಬಿತ್ತರದ ಬಾಂದಳದಲಿ ಪಶ್ಚಿಮ ಪಯೋಧಿಯ
ಪ್ರಾಚೀ ಹರಿದ್ರೇಖಾ ಚಲಜ್ಜಲಂ ಜಾಜ್ವಲಿಸೆ
ಜಾತರೂಪಂ ದ್ರವೀಭವಿಸಿ ಸಲಿಲ ತರಳತೆ
ತಾಂ ಸಲೀಲತೆಯನಾಂತವೊಲ್ ತೆರೆಯ ಮಿಂಚೆಸೆದು.
ಚಂಚಲಿಸಿತು ಸಂಚಲಿಸಿತು ಮುಂಚಲಿಸಿತು ಖೇ
ಮಾರ್ಗದಾಯಣಂ ಸಂಮುದಂ ಘನವೆತ್ತಂತೆ.

ಹರಿಃ ಓಂ ತತ್ ಸತ್

❋ ❋

ಚತುರ್ಥೋಲ್ಲಾಸಂ

ಅಗ್ನಿ ಪರೀಕ್ಷೆ

ತ್ರೈಭುವನ ಪ್ರಾಣ ವೀಣಾಪಾಣಿ, ಓ ಎನ್ನ
ಎರ್ದೆಯ ರಸರೂವಿನ ರಾಣಿ! ತವ ಪಾದ
ಪದ್ಮಂಗಳಿಗೆ ಶಿರಮುಡಿ ಚಾಚಿ ನಮಿಸುವೆನಮ್ಮ
ಎಡೆವಿಡದೆ ಮಿಡಿಸು ಎನ್ನಾತ್ಮ ತಂತ್ರಿಯಂ ಈ
ಕಾವ್ಯರಸವಾಹಿ ನಿಚ್ಚಳಿಸಿ ಹರಿಯುವ ತೆರದಿ;
ಪೆತ್ತಮ್ಮೆ ಶಿಶುವಿನ ಕರವಿಡಿದು ನಡೆಯಿಪಂತೆ
ನೀ ನಡೆಸೌ ಜ್ಞಾನ ದಾಯಿನಿ ಅಜನರಾಣಿ!
ಬಲ್ಲೆನಾಂ ಮುಂದಿರ್ಪ ಕಟು ಕಠಿಣ ಯಾತ್ರೆಯ
ಮಹಾ ದೂರಾದ್ದೂರಂ. ಅದ್ಭುತ ಶಿರೋಭಾರಂ.
ಹಸುಳೆ ಮನ ಹೆರರ ಕಂಡಳಕುವೊಲ್ ಅಳುಕಿದಸು
ಹೆದರಿ ಬೆದರಿ ಬೇಡುತಿಹುದು ನಿನ್ನ ಕಾಲ್ವಿಡಿದು
ಅಡಿಗಡಿಗೆ ಚಿಂತೆಯಲಿ ಜಾನಿಸುತ ಬೇಳ್ದಪೆನೊ
ಮನಮುಟ್ಟಿ. ಗುರುವರನ ಅಸಾಧಾರಣ ಬಾಳು
ಬರ್ದುಕಿನ ವರ್ಣನೆಯದಂ ಕಿರಿಯ ಲೆಕ್ಕಣಿಕೆಯು
ಉಲ್ಲೇಖಿಸುವ ಕೆರ್ಚು ನೆಚ್ಚು ಒಡಮೂಡಿಸೌ
ತಾಯೆ, ಮುಂಪಥಂ ತಪ್ಪದ ತೆರದಿ, ಮಲ್ಲಿಕಾ
ಬನದ ಪೂವಳಿಗಳಂ ಬಿಡಿಸಿ ತಂದು ವಿಧವಿಧ
ರೂವಿನ ಸುರಸುಂದರ ಮಾಲೆಗಳ ನೇಯ್ದು ತವ
ಸನ್ನಿಧಿಗೆ ಸಮರ್ಪಿಸುವೆನೊ ಹೇ ಮಮ ತಾಯೆ!
ಈ ಹೃದ್ಯ ಕುಸುಮಗಳನೊಪ್ಪಿ ಎನ್ನನುಂ
ಕರುಣದಿಂ ಉದ್ಧರಿಸು ಶಿರಮಣಿದು ಬೇಡುವೆನ್ನೈ.
ಹೇ ಕೃಪಾ ನಿಧಿಯೆ!

ನಿಶಿಯ ತಣ್ಪುವೊಳೆ ಹರಿದುದು
ಅಭಿಜಿನ್ ಮುಹೂರ್ತಮಂ ದಾಂಟಿ ಧುಮುಕಿತು ಇಂದ್ರ
ಮುಹೂರ್ತದ ದಿವ್ಯಘಟಿಗೆ. ಬಾನಂಗಣದೊಳ್
ಉಜ್ವಲಿಪ ಅರಿಲ್ ಕುಲಕೋಟಿ ಮಿಂಚಿ ಮಿನುಗುತೆ
ಅರಳಿಮಲರಿ ಅಳಿದುವೆನೆ ಮತ್ತೆ ಮೂಡಿ ಮಿನುಗುವ
ಮಾಯದಾಟ ನಡೆದುದಯ್ ತಾರಾಲೋಕದಲ್ಲಿ.

"ಸತ್ಯಪಿ ಭೇದಾಗಮೇ ನಾಥ
ತವಾಹಂ ನ ಮಾಮಕೀನಸ್ತ್ವಂ ।
ಸಾಮುದ್ರೋ ಹಿ ತರಂಗಃ ಕ್ವಚನ
ಸಮುದ್ರೋ ನ ತಾರಂಗಃ ॥"

ಲೋಕದೊಳ್ ಕಾಲಚಕ್ರವುರುಳಿ ದಿನ ಮಾನದ
ದಂಡು ಪಿಂದುಳಿದು ಮಾಸಮಾನಗಳ್ ಕಳಿದುವು
ಅಮಿತ ಸುಖದುಃಖಗಳ್ ಹರಿಸಿ. ವೇಸಗೆಯ
ಸುಡುವಿಸಿಲ್ ರಣರಣಿಸಿ ಧಳಧಳಿಸಿದುದು ಚಿತ್ತ
ಕಲ್ಪಕ್ಕೆ ಕೆಚ್ಚಿನ ಕಿಡಿ ಸಿಡಿಸುವ ಪಾಂಗಿನಲಿ.
ಉರಿಮೈಗೆ ಬಿಸಿಮುತ್ತಿಡುವ ತೆರದಿ ಬೀಸಿತ್ತು
ಸುಡುಗಾಳಿ. ಚೈತ್ರ ವೈಶಾಖ ಪ್ರಭುವಿನ ಗಂಭೀರ
ಒಡ್ಡೋಲಗಂ ತೆರೆಯಿತು ಲೋಕದ ಲೋಗರಿಗೆ
ಬಿಡುವಿನ ಗಣಿಯಾಗಿ. ವನವಿಹಂಗಮಗಳ ಸಿರಿ
ಕಂಠರುತಿ ಹರಿಯಿತು ಸುಪ್ರಭಾತದ ತಂತಿಗಳ
ಮಿಡಿಮಿಡಿದು. ಎಲ್ಲೆಡೆ ಹರಿಯಿತು ರಾಗರಸಂಗಳ
ಹಿರಿ ಹೊಳೆ, ಮನಮೋಹಕ ಶೈಲಿಯ ಸುರನುತಿಯೊಲ್.
ಪರ್ಣರಾಜಿಯ ಮಹಾ ವಿಸ್ತೀರ್ಣದೊಳ್ ಮನಂ
ನಲಿನಲಿದು ಹಸುರಾಗಿ ಪಳದಿಪಚ್ಚೆಗಳಾಗಿ ಪೂವಾಗಿ
ತಳಿರಾಗಿ ಕೆಂಪಾಗಿ ಬಿಳಿಯಾಗಿ ಸಿರಿಯಾಗಿ

ರಂಗುರಂಗಿನ ಜಗದೊಳಲೆವ ವಿವಿಧ ಕಣಗಳ
ತೆರದಿ ಮೆರೆಯುತಿದೆ ಮೆರೆಯುತಿದೆ ಬಲು ಹಿತವಾಗಿ.
ವಿಶ್ವವಿದ್ಯಾಲಯದ ಒಡ್ಡೋಲಗಂ ಪಾಠ
ಮುಗಿಸಿ ಆನೆವಾಗಿಲ್ ಮುಚ್ಚಿತದು ವೇಸಗೆಯ
ರಜೆಯೆಂದು ಘೋಷಿಸಿ. ಬಿಗಿಗಟ್ಟಿನ ಕಗ್ಗಂಟು
ಬಿಚ್ಚಿ ಬಿಡುತೆಗೊಂಡ ಎಳೆ ತಟ್ಟುಗಳಂತೆವೊಲ್
ತೋಷದಿಂ ತರುವಲಿಗಳ ತಂಡವದು ದಂಡೈಸಿ
ಜಿಗಿದುದು ಪೊರವಲಯಕೆ. ಅಗ್ನಿ ಪರೀಕ್ಷೆಯು ಕಳೆಯೆ
ಬಿಡುವಿನಲಿ ಬಹುಮುಖೀ ಚಟುವಟಿಕೆಯ ಪ್ರತಿಭೆ
ಪುಟಿದುದು ವಿವಿಧ ರಂಗಗಳಲಿ. ದಿನಗಳ್ ಕಳೆದು
ಗ್ರೀಷ್ಮ ಪ್ರಭುವಿನ ಊಷ್ಮದುಸಿರ್ ಮೆಲುಮೆಲ್ಲನೆ
ತಣಿಯುತಿದೆ ತನುತಣಿಪ ಪಾಂಗಿನಲಿ. ಮಾರುತನ
ಬಿಜ್ಜಣಿಗೆಯ ಸೇವೆಯು ಸಲ್ಲುತಿರೆ ದಿನದಿನದ
ಉರಿಮುಖದಿ ಬೆವರಿಳಿದು ತೊಯ್ದು ತಣ್ಣಗಾಯ್ತೋ
ಎನೆ ನಸುನಸುವೆ ತಣಿದು ತಣ್ಣಗಾಗತೊಡಗಿತು
ಕಾಲಮಾನಂ. ಸುಡುವಿಸಿಲಿನ ಬಿಸಿಯುಸಿರೊರ್ಮೆಗೆ
ತಣಿಯಿತ್ತು.
ವಿದ್ಯಾಲಯಂ ವರ್ಷಾಂತ್ಯದೊಳ್ ತಾಂ
ನಡೆಸಿರ್ದ ಪರೀಕ್ಷೆಯ ಫಲಿತಾಂಶಮಂ ಅಂದು
ಪ್ರಕಟಿಸಿರಲ್ ಶಾಲೆಯಂತೇವಾಸಿಗಳ್ ಒಡನೆ
ಬಂದು ಕೂಡಿದರ್ ಶಾಲೆಯಾವರಣದೊಳ್. ಆ
ವಿದ್ಯಾರ್ಥಿ ಸಂದೋಹದಲಿ ಕುತೂಹಲ ಕುದಿದು
ಆತುರಾತುರದಲಿ ಕಣ್‌ನೋಟಗಳ್ ಹರಿದುವು
ಫಲಿತಾಂಶದ ಮೇಲೆ. ನರೇಂದ್ರನಾಥನು ಈಸಲಿ
ಅನುತ್ತೀರ್ಣನೇ ಸರಿಯೆಂದೇ ಪರಿಭಾವಿಸಿದ

ವಿದ್ಯಾರ್ಥಿ ವೃಂದದ ಕಣ್ನೋಟಕೆ ಕಂಡುದುದು
ನರೇಂದ್ರನಾಥನ ಪ್ರಪ್ರಥಮ ಶ್ರೇಣಿಯ ದಿವ್ಯ
ಫಲಿತಾಂಶ! ಇದೇನ್ ಎನುತೆ ಮತ್ತೆ ಕಣ್ಣುದ್ದಿ
ನೋಡಿದೊಡೆ ಅದೇ ಸರಿ! ಅಗ್ನಿಪರೀಕ್ಷೆಯಂ ತಾಂ
ದೃಢ ಗತಿಯಲಿ ದಾಂಟಿದ ಮಹಿಮಾಮಯನವಂ!
ಆಶ್ಚರ್ಯ ಮುಗ್ಧತೆಯು ಹರಿದ ಬಳಿಕಲೇನ್ ಆ
ಗೆಳೆಯರ ಪರಮೋತ್ಸಾಹದ ಪರಿಯ? ಮನಮಸಗಿ
ಕೋಲಾಹಲ ಮೂಡಿ ನಲ್ದನಿಯ ಸಿರಿಮೊಳಗಿನ
ಶುಭಾಶಯಗಳ್ ಮುತ್ತಿದುವು ಹೃನ್ಮನಂ ತುಂಬಿ
ಕೋಡಿವರಿವ ಪಾಂಗಿನಲಿ. ಮೊಳಗಿದುವು ಎಲ್ಲರ
ಕೈಪರೆಗಳ್ ಪಟಪಟಿಸಿ. ಹರಿಯಿತು ನಗೆಯಹಿರಿ
ಕಿರಿ ಹೊನಲ್. ನರೇಂದ್ರನಾಥಂ ಸಿತಸ್ಮಿತನಾದಂ.
ತೋಷಮಂ ಪರಮತೋಷಗೊಳಿಪಂತೆ ಹರಿದುದು
ಸುತ್ತಲ್ ಪರಕೆಯ ದನಿ! ನರೇಂದ್ರ ಎಲ್ಲರ್ಗೆ
ಸುಪ್ರಸನ್ನ ಭಾವದಲಿ ನಗೆ ಮುಗುಳ್ ಅರಳಿಸಿ
ಅಭಿವಂದಿಸಿದಂ. ಹೃದ್ಗಡಲು ತೋಷದಿಂ ತುಂಬಿ
ತುಯ್ಯಲಾಡಿತು ತಾನರಿಯದಂತೆ. ಎದೆಯಲ್ಲಿ
ಭಾರವಂ ಇಳುಹಿ ಸರಾಗದಿಂ ಹರಿದಾಡಿದುದು
ಸಂಭ್ರಮದ ಬಿಸಿಯುಸಿರ್. ತನ್ನ ಮೈದುಂಬಿದ
ಹರ್ಷಿತ ಪ್ರಾಣ ಪಾತ್ರೆ ಕುದಿದೆದ್ದುದು ತಕಪಕನೆ
ಎದೆಯ ಗುಡಿಯಲ್ಲಿ. ಮುಂದೆ ವಿಶ್ವವಿಶಾಲ ಜಗಕೆ
ಮಹಾ ಹೆದ್ದಾರಿಯ ದ್ವಾರ ತೆರೆದಿದೆ ಹರವಾಗಿ.
ಮನಮುದಿಸಿ ತೋಷದ ಕಡಲಲಿ ಮುಳುಗೆದ್ದನಾ
ಯುವ ಮುನೀಷಿ. ವಿಷಯಮರಿತು ತೋಷಗುಡಿಗಟ್ಟಿ
ಗುರುಗಳೈದರ್ ದಂಡುಗೊಂಡು. ಮೋಹಕ ತೇಜದಲಿ

ಲಾವಣ್ಯಮಯ ರೋಚಿಯಂ ಬೆಳಗುವ ಮುಖಬಿಂಬ
ನಂದದಿಂ ಚಳಚಳಿಸುತಿರೆ ಎಳೆಯನಂ ಹರಸಿ
ಬೆನ್ತಟ್ಟಿ ಪುರಿದುಂಬಿಸಿದರ್ ಶುಭ ವಚನಗಳ್
ಹರಿಸಿ. ಕಳೆಯಿತು ಆ ಸುಖಮಯ ಘಟಿ
ಮುಂದಿನ ಘಟಿಯಾವರ್ತನಕೆ ಸಿಲ್ಕಿ.
ಪರೀಕ್ಷೆಯದು ಕಳೆದು ಮುಂದಾರಿ ಸುಗಮವಾಗೆ
ವಿಶ್ವವಿದ್ಯಾಲಯದ ಮಿಸುನಿವಾಗಿಲ್ ತೆರೆವ
ವಿಚಾರ ಮನರೋಚಕಮಾಯ್ತು. ಯುವ ತೇಜಸ್ವಿ
ಭಾವನಾವೇಶದಲಿ ಪೊರಮಟ್ಟನಲ್ಲಿಂದೆ.
ಪೊಳ್ತೇರ್ದು ಪಗಲುರುಳಿ ಅಡರ್ದುದು ಕೆಂಗೆಂಪು
ಕಾರ್ಪ್ವ ಮುಸ್ಸಂಜೆ. ಪೊಡವಿ ಕೆಂಪಾಗಿ ಹರವಿತು
ಹೊನ್ನಛವಿ ಪರ್ಣರಾಜಿಯ ಮೇಲೆ. ಸಸ್ಯ ಗಿಡು
ಮರಂಗಳ ಕೊಂಬೆರೆಂಬೆಗಳಲಿ ಕುಳಿತ ಪಕ್ಷಿ
ಸಂಕುಲ ಎರೆಂಕೆಯೊದರಿ ಹಾಡಿದುವು ಸಾಂಧ್ಯ
ರಾಗಧುನಿಯಂ. ತರತರಗೊರಳಿನ ತರತರದ
ರಾಗಮಾಲೆ ಹರಿದುದು ರಾಗಭಾವದಿಂದಲಿ.
ಸ್ವರ್ಣರವಿದೇರು ಒಯ್ಯೊಯ್ಯನೆ ಇಳಿಯುತ್ತಿಳಿದು
ಪ್ರಾಚೀ ಕಡಲಂಚಿನಲಿ ಮುಳುಗಿದೊಲ್ ಕಣ್ಣಿಗೆ
ಮರೆಯಾಯ್ತು. ರವಿರಹಿತ ಹೊಂಗಾವಿ ಮೆರೆದಿದೆ
ದಿಗ್ದೇಶದಗಲ ನೋನೋಳ್ಪ ಕಣ್ ಮಮ್ಮಲಿಪಂತೆ.
ಆವಾವ ಕುಜನಗಳ ಕುದೃಷ್ಟಿ ಎರಗಿದುದೋ
ಅವಾವ ಪ್ರೇತಗಣಗಳ್ ಎದುರ್ವೆತ್ತುವೊ ಎನಲ್
ಮಲೇರಿಯ ರೋಗವದು ಸರಾಗದಲಿ ಸಾರ್ದುದು
ತನ್ನ ಧೂರ್ತ ಸಾಮ್ರಾಜ್ಯಮಂ ಯುವ ಶ್ರೇಷ್ಠನಾ
ಸುಂದರ ಶರೀರ ಸಂಪುಟಮಂ ಗತಿಗೆಡಿಸುವ

ತೆರದಲ್ಲಿ! ನೆತ್ತರಿನ ಕಣಂಗಳ್ ಬತ್ತಿದುವು
ಮೈಸೊರಗಿ ಬಿದಿರಿನ ಒಣದೆಬ್ಬೆಯು ತಾನಾಯ್ತು.
ಧೀಮಂತ ತರುಣಂ ಮತ್ತೆ ಬಿಷಗ್ರತ್ನರಾ
ಕೈಗೊಂಬೆ ಎನಲ್ ಸಂದಂ ಚಿಕಿತ್ಸೆಯಿಕ್ಕುಳಕೆ.
ದುಷ್ಪರೋಗವಂ ಬೊಗ್ಗು ಬಡಿಯೆ ನಡೆದ ದಿವ್ಯ
ಪ್ರಯತ್ನಕೆ ಸೋಲಾಗಿ ತಹತಹಿಸಿತು ಜೀವ
ಒಳಗೊಳಗೆ. ರೋಗದ ಹಿಡಿತದೊಳ್ ಸಿಲುಕಿ ನರಳಿ
ನಲುಂಗಿದನ್ ನರೇಂದ್ರನಾಥಂ. ಕಳಿದುವಾ ದಿನಮಾನ
ಹಿಂಸ್ರಕಮಯವಾಗಿ ಒರ್ಮೆಶಾಲೆಯನೆ ಮಗದೊರ್ಮೆ
ಮನೆಯ ಸೆಜ್ಜೆ ಎಂಬವೊಲ್ ಕಳೆದುದಯ್ ಅಮೂಲ್ಯ
ದಿನಮಾನ. ವಿದ್ಯೆಯೊಳ್ ಮುಂದಿರ್ದು ಎರ್ದೆಯೊಳ್
ನೆಚ್ಚಿರ್ದು ವಿದ್ಯಾಲಯಕೆ ಹಾಜರಿ ಅಸ್ತಿತ್ವದ
ಕೊರಮಾಯ್ತು. ಮಿಸುನಿಯ ಕರಂಡದಲಿ ವಿಷವಾಯು
ತುಂಬಿದವೊಲಾಯ್ತಲಾ ದುರ್ದೈವದ ಗರಬಡಿದು.
ಹಾಜರಿಯ ಕೊರತೆಯಂ ತುಂಬಲಾರದಿರೆ ಕೊನೆ
ಹಂತದ ಪರೀಕ್ಷೆಗೆ ಕೂಡಗೊಡಿಸಲ್ ಮಣಿಯದಾಯ್ತು
ಪ್ರೆಸಿಡೆನ್ಸಿ ಕಾಲೇಜು. "**ಜ್ಞಾನದೇವತು ಕೈವಲ್ಯಂ...**"
ಮುಂದೆ ಗತಿಯೇವುದು? ಹಿರಿಯ ಪ್ರಶ್ನೆ ತಲೆಯೆತ್ತಿ
ನಿಂದುದು ಫಣಿಯವೊಲ್. ಬಲು ಭಂಗದ ಕೋಟೆಯಲಿ
ಸಿಲ್ಕಿ ಉನ್ನೆಬರಮಿಂತು ಬಿಜ್ಜೆಯ ಹಂತಗಳ
ಏರುತ್ತೆ ಬಂದೊಡಂ ಇಂತೊಂದು ಭಂಗವುಂ
ಬಂದಪುದೆಂದೆಂದು ಭಾವಿಸಿದೆನಿಲ್ಲ ಎನುತ್ತೆ
ಮರುಗಿದಂ ನರೇಂದ್ರನಾಥದತ್ತಂ ತನ್ನೊಳುಂ.
ಕಡು ಚಿಂತೆಯಾ ಕೀಟವದು ಕೊರೆಯ ತೊಡಗಿದುದು
ಮನೋಮಂಡಲಮಂ ಹಿರಿಯ ಬೈರಿಗೆಯ ತೆರಂ.

ಶಾಲೆಯಿಂ ಪಿಂಮರುಳುವ ಪಥದೊಳ್ ಅಂಚಿನಲಿ
ನೆಲೆನಿಂದ ಪೆರ್ಮರನ ತಲದೊಳಿಹ ಕಗ್ಗಲ್ಲ
ಪೀಠದಲಿ ಮಂಡಿಸಿದನ್. ಒಂದೆರಳ್ಡು ಮೂರು
ಗಳಿಗೆಗಳ್ ಕಳೆದುವೈ ಕಿಂಚಿತ್ ಕಿರುಸೊಲ್ಲಿನ
ದನಿಯಿಲ್ಲದೆ. ಎದೆಯ ಬನದಲಿ ಹುದುಗಿದ ಪಕ್ಷಿ
ಕರುಣರಸವ ಹರಿಸಿದವೊಲ್ ಹಾಡಿದುದು "**ಆತ್ಮ
ಬಲಂ ತೇಜೋ ಬಲಂ**..." ಅಹ, ಎಂ ಉಪದೇಶ?
ಎನುತಚ್ಚರಿ ಬಡುತ್ತಿರಲ್ ಕಿವಿಯ ಸನಿಹದೊಳ್
ಮೊಳಗಿತೊಂದು ಅದೇಹವಾಣಿ, "ಕೇಳ್, ವತ್ಸಾ!
"ಸ್ಕಾಟಿಷ್ ಜನರಲ್ ಮಿಷನರಿ ಬೋರ್ಡ್" ನಡೆಸುತಿಹ
ಸ್ಕಾಟಿಷ್ ಚರ್ಚ್ ಕಾಲೇಜ್ ಸೇರ್ದೊಡೆ ಸುಗಮ ಕಣಾ!"
ಒಡನೊಡನೆ ಮನದಾಸೆಯ ಉರಿಕಿಡಿ ಬೆಳಗಿದುದು
ಉಜ್ವಲಿಸಿ. ತೆಕ್ಕನೆಳ್ದು ಹಿಡಿದಂ ಸ್ಕಾಟಿಷ್ ಚರ್ಚ್
ಕಾಲೇಜ್ ವೀಥಿಯಂ. ಬಿರುಬಿರನೆ ನಡೆನಡೆದು
ಸಾಗಿದುವು ಪದದ್ವಯಗಳ್, ಮುನ್ನೆಟ್ಟ ನಿಟ್ಟಾಲಿ
ನಿಟ್ಟಿಸಿದುವು ಕೀಲಿಸದೆ. ದೂರದ ಕಾಲೇಜ್
ಕಣ್ಗೆಸೆದುದು ಹಾದಿಯ ನೇರಕ್ಕೆ. ನರೇಂದ್ರಂ
ತೆರೆದ ಮುಂಬಾಗಿಲೊಳ್ ಒಳಗಡೆಗೆ ಪದಾರ್ಪಣೆ
ಗೈದಂ. ಆಗಳೇ ಕಣ್ಗೆಸೆದ ಕಾಲೇಜಿನಾ
ಗುರುಬ್ರಹ್ಮರ್ ನರೇಂದ್ರನ ತೇಜೋಭರಿತ ವದನ
ಮಂಡಲಂ ಕಂಡು ಆನಂದದಿಂ ಬರಮಾಡಿ
ಸ್ವಾಗತಿಸಿ ವಿಷಯಮರಿತು ಸಾವರಿಸಿ ದಯೆಯಿಂ
ಪರೀಕ್ಷೆಗೆ ಸ್ಥಳಾವಕಾಶಮಂ ಕಲ್ಪಿಸಿದರ್.
ತರುವಾಯಿ, ನರೇಂದ್ರಂ ಸಂತುಷ್ಟಿಯಲಿ ಒಪ್ಪಿ
ನೆಚ್ಚಿ ವಿದ್ಯಾತಿರೇಕದಿಂ ಪರೀಕ್ಷೆಗೆ ಬರೆದು

ಪೂರೈಸಿದನ್ ಕರ್ತವ್ಯ ಭಾರಮಂ ಕೈಕೊಂಡು.
ಅಶಕ್ತ ಶರೀರದಲಿ ಪುರುಪು ಪುರುಡುಗಳ್ ನೆರೆ
ಉಕ್ಕಿ ಬಂದೊಲಾಯ್ತು ಸಮಯೋಚಿತ ಗಳಿಗೆಯಲಿ.
ಎಂಟ್ರೆನ್ಸ್ ಪರೀಕ್ಷೆಯ ಫಲಿತಾಂಶ ಪೊರಬಿಳ್ಪ
ಅನಾರೋಗ್ಯದ ಕಾರಣದಿಂ ಪ್ರಥಮ ಶ್ರೇಣಿಯು
ಕೈತಪ್ಪಿ ದ್ವಿತೀಯ ಶ್ರೇಣಿಯಲಿ ತೇರ್ಗಡೆಯ
ಪುಣ್ಯ ಲಭ್ಯಮಾಯ್ತು. ಮನಂ ಕಹಿರಸಮುಂಡೊಡಂ
ಮುಂದೆ ಅಲ್ಲಿಯೆ ಮುಂಬಿನ ವಿದ್ಯಾಭ್ಯಾಸಮಂ
ಪಡೆಯುವೊಡೆ ಸದವಕಾಶಮೊದವಿ ಮುದವಿತ್ತುದು
ಅಭ್ಯರ್ಥಿಗೆ. ಅಂದಿನ ತನ್ನ ಸಂಕಟಮರಿತು
ಹೃತ್ ಹಾರೀ ಸ್ವಾಗತಮಿತ್ತು ಉಪಕರಿಸಿದ
ಗುರುಬ್ರಹ್ಮರಂ ನಮಿಸಿದಂ ಮನದೊಳ್ ಸ್ಮರಿಸಿ.
    ಶಾಲೆ ನಡೆಯುತಿದೆ. ಬಿಜ್ಜೆ ಕೈಗೂಡತ್ತಲಿದೆ.
ತನುಮನಂಗಳ್ ಗರಿಹಗುರಾಗಿ ಭರಿಸುತಲಿವೆ.
ಎಲ್ಲವುಂ ಸಮರ್ಪಕ. ವೀರೋಚಿತಗತಿ. ಅಹ
ಮತ್ತೇನೊ ಕೊರಂ ಮನದೊಳ್. ಅಶಾಂತಿಯ ನೆರಳ್
ಮೈಚಾಚಿತು ಚಿದ್‌ಗಗನದಲಿ, ತಾನರಿಯದೊಲ್.
ಶೂನ್ಯತೆಯ ಗಂಭೀರಗತಿ ತುಂಬಿತು ಹೃದಯ
ಧಾತ್ರಿಯಂ. ಏನುಮೇನಂದರಿಯ. ಜಗವೊರ್ಮೆ
ಶುಷ್ಕವಾಗಿ ನಿರರ್ಥಕವಾಗಿ ವಿಫಲವಾಗಿ
ತೋರ್ಪುದು ಮನಗಿಡಿಸುವ ಪಾಂಗಿನಲಿ. ಕಡುಚಿಂತೆ
ತರ್ಕವಿತರ್ಕ ಹೂಡುವುದು ತನ್ನೊಳ್. ಚಿಂತನೆ
ಕಗ್ಗಂಟಿನ ತೆರದಲಿ ಮನಮಂಡಲದೊಳಗೊಳಗೆ
ಕುದಿಕುದಿದುದು ಇಕ್ಷುರಸದ ಮಾಳ್ಪೆಯಲಿ. ಆವ
ಕಾರಣಂ ತಾನರಿಯ. ಮತ್ತೊರ್ಮೆ ಎಚ್ಚರಿಕೆ

ನೀಡಿದುದು ಹೃದಯವಾಣಿ "ಹಾ, ಕೇಳ್ ವತ್ಸಾ!
ಇಲ್ಲಿಗೇ ಮುಗಿಯದೈ ಕಾಲವಾಹಿ! ಸತ್ಕಾರ್ಯ
ಯೋಜನೆಗೆ ಕೊರಮಿಲ್ಲಂ; ಮುಂದೆ ಮುಂದೆ ನಡೆಯೈ!"
ಸಮಯೋಚಿತ ಉಪದೇಶ ತುಂಬಿತು ಎದೆಗುಡಿಯ
ಕಲಶಮಂ, ಸಮಯಸ್ಫೂರ್ತಿಯಂ ನೀಡುವ ತೆರದಿ.
ಯುವಶಕ್ತಿ ಮೈಕೊಡವಿ ಪುಟಿದೆದ್ದುದು, ತೆಕ್ಕನೆ.
ಮುಂದಾವ ಎಡರು ತೊಡರುಗಳ್ ಕಠಿಣಕೋಟಲೆಯ
ಕಲಿಗಳೈದು ಮಾರೊಡ್ಡದೊಲ್ ಕಟ್ಟೆಚ್ಚರಂ
ವಹಿಸಿದಂ ನರೇಂದ್ರನಾಥದತ್ತ ಮಹನೀಯಂ.
    ಬೆಳಗುಂಬೊಳ್ತು ಹೂಗ್ಲಿ ನದಿಯ ತಣ್ಣನೆಯ ತಟದಿ
ದೀರ್ಘಾತಿದೀರ್ಘ ವಿಸ್ತೃತ ದೀರ್ಘತೆಯ ರಜತ
ಶಯ್ಯಾಪದ ಪ್ರಾಂತದೊಳ್ ಚಾರಣಗೈದಿರ್ದ
ನರೇಂದ್ರನಾಥದತ್ತಂ ಭಾರತದ ಸಾಮ್ರಾಜ್ಯದ
ಆದ್ಯಂತ ಮನವಂ ಹರಿಸಿದಂ ವಿಶ್ಲೇಷೆಗೈವ
ರೀತಿಯಲಿ. ಒಂದಾನೊಂದು ಕಾಲದೊಳ್ ಭಾರತ
ವರ್ಷ ಸತ್ ಸಂವೃದ್ಧಿಯಿಂ ಮೆರೆದ ಮಹೋನ್ನತ
ರಾಷ್ಟ್ರ. ಇಂದು ಪರರಾಳ್ವಿಕೆಯೊಳ್ ನಲುಗಿ ಒಣಗಿ
ಎಲುಬು ಚರ್ಮವಾಗಿಹ ಭಾರತ ಜನನಿಯ ಕಡು
ದಾರುಣಮಯ ಬದುಕು ದಯನೀಯಂ ಎನಿಸಿದುದು.
ಅಂದಿನಾ ಪರಿಸ್ಥಿತಿಯಲಿ, ತನ್ನೊಳಗೊಳಗೆ
ಕಂಬನಿಗಡಲಲಿ ಈಸುತಿಹ ಭಾರತಧಾತ್ರಿಯ
ಎನಿತುನೆನೆದೊಡನಿತು ಮನೊಮಂಡಲಕೆ ದುಃಖ
ಸಂಕಟಂ. ಯೋಚಿಸಿ ಬಿಸುಸುಯ್ದು ತಟಿನಿಯಲಿಹ
ಕಗ್ಗಲ್ಲ ಕರಿಬಂಡೆಯ ಮೇಲೇರಿ ಕಾಲ್ಮಡಿದು
ವಜ್ರಾಸನ ಹೂಡಿ ಕುಳಿತಂ. ಜಲರಾಶಿಯುಂ

ಹರಿದಿರ್ದುದು ಜುಳುಜುಳು ಮಂಜುಳರವ ಮೊಳಗಿಸಿ.
ವಿಜಯಘೋಷವೊ ಎನಲ್ ಮೆರೆವುದು ಸುಸಂಭ್ರಮಿತ
ಮುನ್ನಡೆಯಲಿ, ರಾಗಾರುಣ ತಾನದ ಸ್ವರಂ
ಮೀಂಟಿ. ಚೆಲುವಂ ಚೆಲುವಾಗಿಸುವ ಬಣ್ಣ
ಬಣ್ಣದ ಹಿರಿಕಿರಿ ಮೀಂಗಳ್ ಗೈವ ಸರಸಮಂ
ಕಂಡು ಕಾಣುತ್ತೆ ಮನಕೆ ನಸು ಸ್ವಾಂತನಂ ನೀಡಿ
ಸೆಳೆದುದು ಮನವಂ. ನದಿಯ ಇಕ್ಕೆಲದಲಿ ಬೇರು
ಬಿಟ್ಟು ಮೈಸೊರ್ಕಿ ಜಲಧಿಯ ತನಿರಸವನುಂಡು
ಪಚ್ಚ ಪಸುರಿನ ಪಟ್ಟುಡೆಯಂ ಧರಿಸಿದ ಸಸ್ಯ
ಗಿಡ ಮರಂಗಳ ಮನೋರಮಾ ಪರ್ಣರಾಜಿಯ
ಸಂಪದಂ ಕುಸುಮಾವೃತಮಾಗಿಹ ದೃಶ್ಯವದು
ಕಣ್ಮನಕೆ ಮುದಮಿತ್ತುದು ವರ್ಣಮಯತೆಯಿಂದೆ.
ನರೇಂದ್ರನಾಥದತ್ತಂ ತೀರದಿಂ ಪೊರಮಟ್ಟಂ
ಗೃಹಾಭಿಮುಖವಾಗಿ. ಪ್ರಾಂಗಣದೊಳ್ ಚಾರಣ
ಗೈದಿರ್ದ ಪಿತ ವಿಶ್ವನಾಥದತ್ತಂ ಸುತನ
ವದನಾರವಿಂದಮಂ ಗಮನಿಸಿ ಬಹುಲ ಪ್ರೇಮ
ಭಾವದಿಂ ಮಂಡೆಯಂ ನೀಳ್ದು ಶಾಂತ ಮನದಿಂ
ನುಡಿಸಿದನ್ "ಕೇಳ್ ವತ್ಸ! ನಿನ್ನ ಬಾಳ್ಮೆಯಂ
ರೂಪಿಸುವೊಡೆ ಮನದಿ ಮಥಿಸಿ ಸ್ಥಿರೀಕರಿಸೈ.
ಏಗಳ್ ಸುಸುಂದರ ಮನೋಹರ ಮಧುರಮಿರಲಿ
ಬಾಳ್ವದುಕು, ಇಂದಿನೀ ನಾಗರಿಕತೆವೊಪ್ಪುವೊಲ್.
ಉದಾರತನಮಿರಲಿ, ಜಿಪುಣನಾಗದಿರ್. ಬದುಕು
ದೀರ್ಘಮಾಗಿರೆ ಅಥ ಬಲು ಕುಬ್ಜಮಿರೆ ಸಾಧನೆ
ಇರಲಿ ಸತತ. ನೀನೊರ್ಮೆ ಯೋಚಿಸಿ ನೋಡೆಲೈ
ಒಂದೇ ಭಾವವೆಂತು ಅನೇಕ ಭಾಷೆಯೊಳ್ ಮೊಳೆತು

ಬೆಳೆವುದೆಂತಂತು ಒಂದೇ ಪರಮ ಸತ್ಯದ್ರುವ್ಯ
ಎಲ್ಲ ಮತಗಳಲಿ ಮೈದೋರ್ವುದು. ಮತಗಳೆಲ್ಲಂ
ಒಂದೇ ಸತ್ಯದ ದೃಷ್ಟಿಬೇಧಗತಮಾದ ದಿವ್ಯ
ದರ್ಶನಂಗಳ್. ಮೇಣ್ ಕೇಳ್. ವತ್ಸಾ! ಯಾರು
ತಮ್ಮಗ್ರಗಳ ಪೂರ್ವಿಕರ ಸನಾತನ ಇತಿಹಾಸದಲಿ
ನಂಬುಗೆಗೆಡುವರೋ ಅವರಿಂಗೆ ಎಲ್ಲಿಯುಂ
ಗೌರವಾದರ ದೊರಕದು. ಪರಕೀಯರು ಭುವಿಯಂ
ಗೆಲ್ದೊಡೆ ಜನರಂ ಗೆಲ್ದಂತಾಗದು. ಈ ಜನ
ಸಂಸ್ಕೃತಿಯಂ ಗೆಲ್ದು ಮಾನಸಿಕ ಬೌದ್ಧಿಕ
ಮಹದೈಶ್ವರ್ಯಮಂ ಸುಲಿದು ತರಿದು ಉಂಡೊಡೆ
ಸರ್ವನಾಶವಪ್ಪುದು ಸುನಿಶ್ಚಯ ಎಂದು ತಿಳಿ!"
ಇಂತು ಮುಂತಾಗಿ ಅಂದಂದಿನ ನವನವೀನ
ವಿದ್ಯಮಾನಂಗಳಂ ಕುರಿತು ಘನವಿಚಾರ
ವಿಮರ್ಶಾದಿಗಳಿಂದೆ ಸುಜ್ಞಾನ ವಿಜ್ಞಾನ
ವಿಶೇಷಗಳ ಮೇಲೆ ಯಥಾವತ್ ಚೆಂಬೆಳಕು
ಚೆಲ್ಲಿ ಲೋಕಪ್ರಜ್ಞೆಯ ಕುಡಿಯಂ ಕೊನರೇರಿಸಿ
ಒಳಗಣ್ ಅರಳಿಸುವನ್ ಸುಕುಮಾರ ನರೇಂದ್ರನ.
ಇಂತೆನಿತ್ತೊ ವಿಚಾರಗಳ ವಿಹಾರಭಾರಂ
ಆಧುನಿಕ ಚೇತನದ್ವಯಂಗಳ ಜಿಹ್ವೆಯಲಿ
ಪುಟಿಪುಟಿದು ಚರ್ವಿತಚರ್ವಣಮಾಗಿ ಸುಜ್ಞಾನ
ಮಂಡಲಂ ಮುಟ್ಟಿತಟ್ಟಿ ಭೂಮಗೊಳ್ವುದು ನಿಚ್ಚ
ಚಿಂತನಾಶೀಲತೆಯ ಮಹಾ ಚಿತ್ಕೋಶದಲಿ.
ಪಿತನೊಡಂ ವಿಚಾರವಿಹಾರದಲಿ ನೆರೆಮುಳುಗೆ
ಮೈವೆರ್ಚೆ ಮನವೆರ್ಚೆಗರಿಹಗುರಮಾದಪುದು ಎದೆಯ
ಜೊನ್ನ ಉಸಿರ್ ನೆಗಳ್ವುದು ಪೊನ್ನಪ್ಪಂತೆವೊಲ್.

ಮತ್ತಂದಿನ ಭಾರತಿಯ ವೃತ್ತಾಂತಮಂ ಅರಿತು
ಮನದುಂಬಿದೊಡೆ ಎಂಥ ಉತ್ಕಟ ಪರಿಸ್ಥಿತಿಯ
ಪರ್ವಕಾಲದೊಳ್ ನರೇಂದ್ರನ ಶುಭಜನನವಾಯ್ತು
ಎಂಬುದದು ಅಂಗೈ ದರ್ಪಣದವೊಲ್ ಸುಸ್ಪಷ್ಟಂ.
ಭಾರತವರ್ಷೀಯ ಪರಮೋಚ್ಚ ರಮ್ಯಸುರಮ್ಯ
ನಿಸರ್ಗದೈಸಿರಿಯಂ, ಮಹಾಭೂವಲಯ ದೇಶ
ಕೋಶ ವಿಸ್ತೀರ್ಣಮಂ, ರಾಜಾಧಿರಾಜರುಗಳ
ಮಹಾ ಮಂಡಲೀಕರ ಪಾಳೆಯಗಾರರ ಮೇಣ್
ಅಧಿಕ ಶ್ರೀಮಂತರ ಕುಬೇರ ಸದೃಶ ಮಹಾ
ರಾಷ್ಟ್ರದ ಐಶ್ವರ್ಯರಾಶಿಯಂ ಕಂಡರಿದು ಮಿಗೆ
ಕೇಳರಿದು ಬಾಯ್‌ಬಾಯ್ಬಿಟ್ಟು ಮನದಾಸೆಯುಂ
ಉಕ್ಕುಕ್ಕಿ ಬರಲುರೆ ಬಗೆಬಗೆಯ ಬಿಳಿಯ ಜನರ್
ಪಾಶ್ಚಾತ್ಯ ಭುವಿಯಿಂದೆ ಆಗಳಾಗಳ್ ಬರುತೆ
ಭಾರತದ ಮಿಸುನಿ ಭೂಮಿಯಂ ಕಂಡು ಕಣ್ಣಿಟ್ಟು
ನೋನೋಡಿ ಅಲಕಾವತಿಯಂ, ಅಮರಾವತಿಯಂ
ಮೀರಿ ಮುಂಬೆಳೆದ ಸಕಲೈಶ್ವರ್ಯ ಸಂಪದವ
ತರುಬಿಕೊಂಡೊಯ್ಯಲ್ ಉದ್ದೇಶಿಸಿ ಸುಲಭ ಸಂಚು
ಹೂಡಿ ತಳುಕು ಬೆಳಕಿನ ಜಾಲವಂ ಹರಡಿದರ್.
ಪಾಶ್ಚಿಮಾತ್ಯ ಕಿಸೆಗಳ್ಳರ್ ದುರಾಸೆಯ ಧೂರ್ತ
ಕಲ್ಮಿಗಳ್, ಹೇರಾಸೆಗಳ ಸ್ವಾರ್ಥ ಸಾಧಕರ್.
ಬೆಳ್ಮಯಿನ ಕಲ್ಮಶ ಮನಸಿಗರ್, ಮನುಕುಲದಲಿ
ಸಂಭವಿಸಿದ ಪವಿತ್ರಾತ್ಮವಿದೂರರ್, ಪರಸ್ಪರ
ಪೈಪೋಟಿಯೊಳಿರ್ದರ್ ಅಮೂಲ್ಯ ಭಾರತವರ್ಷ
ಸಾಮ್ರಾಜ್ಯಮಂ ಅಂತ್ರುತಂತ್ರದಿಂ ಮಿಗಿಲಾಗಿ
ಅಬ್ಬರದ ಅಟಾಟೋಪದಿಂ ಕಬಳಿಸೆ. ಅಂದು,

ಮಹಾಸಾಗರ ಸಾಸವದು ಫಲಿಸಿ ಭೂಭಾಗ
ಇನಿದಿನಿದಾಗಿ ಸಾಸಿಗರ ಕೈವಶವಾಗುತಿರೆ
ಪುರುಪು ಪುರುಡುವೆತ್ತುದು ನಾನಾಬಗೆಗಳಲ್ಲಿ.
ಭಾರತ ಪರಿಪುಣ್ಯ ಭುವಿಯಾದ್ಯಂತ ಪುರಾತನ
ವಿನೂತಗಳ್ಸಿರಿಯೊಗ್ಗಿನಿಂ ಬೆಳೆಸಿರ್ದಾ
ಸಂಸ್ಕೃತಿಯ ಕಲ್ಪವೃಕ್ಷದ ಬೇರಿಂಗೆ ನಿರ್ಮಲ
ಜಲಸೇಚನೆಗೈದಿರಲುರೆ ಶ್ರೀಮಂತ ಕಾಂತಿಯ
ವಜ್ರ ಕಿರೀಟದೈಸಿರಿಯು ಭಾಸಣಿಸಿದುದು
ದೂರದೂರಕೆ. ಒಳನುಗ್ಗಿ ಬರಲ್ಯೆಸಿದ ಪರಕೀಯರ
ಕಣ್ಗೆ ನಿಜ ಸೂಜಿಗಲ್ಲಾಯ್ತು!
ಕ್ರಿಸ್ತಾಬ್ದ ಸಾವಿರ
ದಾರನೂರರೊಳ್ ಜನ್ಮ ತಳೆದ 'ಈಸ್ಟ್ ಇಂಡಿಯಾ'
ಎಂಬೊಂದು ವಾಣಿಜ್ಯ ಸಂಸ್ಥೆಯುಂ ಪಾಶ್ಚಾತ್ಯ
ಪ್ರಭೃತಿಗಳ ಪ್ರತಿನಿಧಿಯೆನಿಸಿ ಮೆರೆದುದು ಬಲು
ಸಂಭ್ರಮದ ವಿಜಯೋತ್ಸವದ ನೇಮದಲಿ ನಿಂದು.
ತಂತ್ರದಿಂ ವಿನಯದಿಂ ತಳುಕಿನಿಂ ಆಧುನಿಕ
ಶೋಭೆಯಿಂ ಸುಶೋಭಿತಮಾದ ಸಂಸ್ಥೆ
ಮನಸೆಳೆದುದು ಭಾರತೀಯ ಪ್ರಜಾಕೋಟಿಯಂ.
ಮುಂದೆ, ಸಾವಿರದಾರಹದಿಮೂರರೊಳ್ ದೆಹಲಿ
ಚಕ್ರವರ್ತಿ ಜಹಂಗೀರ್ ನಿಂದೆ ಪರವಾನಗಿ
ಪಡೆದು ಅಪ್ಪಣೆಯ ರಾಜ ಮುದ್ರೆಯನೊತ್ತಿಸುತೆ
ಮುಂಕಾರ್ಯ ಚಟುವಟಿಕೆ ಆರಂಭಿಸಿದರ್. ಬಹು
ತರದ ವ್ಯಾಪಾರ ಕೋಠಿಯಲಿ. ಸೂರತ್ತಿನೊಳ್
ತಳವೂರಿದ ಬಳಿಕಂ ಒಂದೆರಳ್ಡು ಮೂರನೆ
ವರ್ಷಗಳ ಅಂತರದೊಳ್ ಮಚಲೀ ಪತ್ತನದಿ

ಮೂಡಿತು ಮಗದೊಂದು, ಅದೇ ವಗೆಯ
ವಾಣಿಜ್ಯ ಸಂಸ್ಥೆ. ಅನಂತರದೊಳ್ ಅಲ್ಲಲ್ಲಿ
ಹಿರಿಯತಲಗಳಲಿ, ಪ್ರಮುಖ ನಗರಗಳಲಿ ಸಮಯ
ಸಾಧಿಸಿ ಹದವರಿತು ಆಳನೀಳವನರಿತು ಬಹು
ಮುಖ್ಯತರ ಸ್ಥಾನಗಳನಾರೈದು ಕೈವಶಪಡಿಸಿ
ತಮ್ಮ ಪ್ರಥಮ ಹೆಜ್ಜೆಗಳಂ ದೃಢಪಡಿಸಿದರ್.
ಬಳಿಕಿತರ ಕಾರಸ್ಥಾನಂಗಳಂ ಸಾಧಿಸೆ ಭುಜಕೊಟ್ಟರ್.
ವ್ಯಾಪಾರ ನಿಮಿತ್ತಲ್ಯೆದು ಭಾರತ ಪುಣ್ಯಭೂ
ವಿಸ್ತಾರದಲಿ ಪದಾರ್ಪಣೆಗೈದ ಇಂಗ್ಲೀಷರ್
ತಮ್ಮ ನೆರೆಹೊರೆಯರೆನಿಪ ಡಚ್ಚರ ಮೇಣುಂ
ಫ್ರೆಂಚರ ರೀತಿನೀತಿಗಳಂ ಅನುಸರಿಸಿ ರಾಜ್ಯ
ಕಟ್ಟುವಿಕೆಯಲಿ ಮುಂದ್ಯೆದರ್ ನವ ಅಭಿರುಚಿಯಂ
ತೋರ್ದು. ಅಂದಿರ್ದ ಭರತವರ್ಷದ ರಾಜಕೀಯ
ದುಸ್ಥಿತಿ ದುರವಸ್ಥೆಗಳ್ ಬಿಳಿಯರ ದುರುದ್ದೇಶ
ಪೂರಿತ ಉದ್ಯಮಾಗ್ನಿ ಜ್ವಾಲೆಗೆ ನೆಯ್ಯ ನೆರೆಯುತ್ತೆ
ಜ್ವಲಂತಗೊಳಿಸೆ ಸುಲಭ ಕೈತವಕೆ ನೆರವಾಯ್ತು.
ಭಾರತ ಭುವಿಯ ನೈಸರ್ಗಿಕ ಸಂಪದಂ ಮೇಣ್
ಮುಗ್ಧಮನದ ಜನರಾಶಿಯುಂ ಪರಕೀಯರಂ
ಘನವಾಗಿ ಆನಂದ ಪೂರ್ಣವಾಗಿ ಅನುಪಮ
ಆಸೆ ಆಕಾಂಕ್ಷೆಗಳ ಮೂಟೆಯಾಗಿ ದಿನದಿನ
ಆಕರ್ಷಿಸಿದುದು ಸತ್ಯಂ. ಬಿಳಿಯರ ಮುನ್ನಡೆಗೆ
ಎಲ್ಲಿಯುಂ ತಡೆಬಡೆಯ ಮಾರೊಡ್ಡು ಇಲ್ಲದಿರೆ
ಬಿಳಿಯರ್ ಎರೆಂಕೆಗೆದುರುತುತ್ಸಾಹದಿ ನಡೆದರ್
ಒಳಒಳಾಂತರಕೆ; ಸಂಜೀವನ ಸಂಕ್ರಾಂತಿಯಂ
ಬಯಸಿ ಸುಖಭೋಗದ ಸುವಾಸನೆಯನಾರೈಯುತೆ.

ಅಂದು, ಭಾರತೀಯರ ಮುಗ್ಧದುಗ್ಧ ಮಾನಸ
ಪ್ರವೃತ್ತಿ ಅರಿಯದಾಯ್ತು ಬೆಳ್ಳನರ ಕಠೋರ
ಕಮನೀಯ ಕುತಂತ್ರಗತಿಯ ಆಳನೀಳಮಂ;
ಎನಲ್ಕವರ ವ್ಯಾಪಾರ ಮಾತ್ರದಿಂ ಕೇಡಿಲ್ಲ
ಎಂಬೊಂದು ಶಾಂತಿ ಸಾವಧಾನಗಳ್ ಮನವಂ
ತುಂಬಿರಲ್ ಗಜಿಬಿಜಿಯ ಕಾಳಜಿಯೇನಿರದಂತೆ
ಮಿಣ್ಣನಿರ್ದರ್ ಸ್ವಾಗತಿಪ ತೆರದಲಿ. ಹೃದ್ಗಡಲ್
ನೇಹಜಳಮಂ ಬಸಿದುದು ಮನಃಪೂರ್ವಕವಾಗಿ,
ಎಂಬೊಲಾ ರಾಷ್ಟ್ರೀಯ ಸನ್ನಿವೇಶದ ವಿವಿಧ
ಕೂರಲುಗಿಗೆ ಸಿಲ್ಕಿ ಅರೆಮನದಿಂ ಭಾರತದ
ಉದ್ಧಾರಕೆಂದ್ಯೆದಿಹ ಮಹನೀಯರೆಂದೆಂದು
ಸ್ವಾಗತಿಸಿದವರೆನಿತೊ ಮೇಣ್ ಕೆಂಗಣ್ಣುಗಳ
ಕಿಡಿಕಾರುತೆ ಸಿಡಿಮದ್ದಾದವರ್ ಮತ್ತೆನಿತೊ.
ಅಂತಿಂತು ಭರತವರ್ಷದ ಆಂತರಿಕ ದುರ್ಬರ
ಪರಿಸ್ಥಿತಿಯರಿದರಿದು ಸನ್ನಿವೇಶದ ಲಾಭ-
ದುರ್ಲಾಭಗಳಂ ಪಡೆದು ತಮ್ಮ ಲಘು ಉದ್ಯಮ
ಕೋಠಿಯಂ ತುಂಬಿದರ್ ಹೊನ್ನ ಹೊಳೆಯ ಹರಿಸಿ.
ಉದ್ಯಮ ನಡೆದುದು ನಡೆದುದು ಸತತ ಪ್ರೋತ್ಸಾಹ
ಸಹಕಾರ ಹಸ್ತ ನೀಡಿದ ಸ್ಥಳ ವಂದಿಗರಿಂ.
ಮುಂದೆ ಸಾವಿರದಾರನೂರಎಂಬತ್ತೆಂಟರ
ಕಾಲಮಾನದಲಿ ಬಿಳಿಯರ್ ತಮ್ಮ ಗುಪ್ತಮಯ
ಕಾರ್ಯಾಗಾರದೊಳ್ ಗೆಯ್ದ ನಿರ್ಣಯಮಂ ಗಮನ
ಗೊಳಿಸಿ ಪರಿಶೀಲಿಸಿದೊಡೆ ಗುಟ್ಟು ಬಯಲಪ್ಪುದು.
"ತಮ್ಮದಾದ ನಾಗರಿಕ ನೆಲೆ, ಸೈನಿಕ ನೆಲೆಯ
ನಿರ್ಮಿಸುವೊಡೆ ಭಾರತ ರಾಷ್ಟ್ರದೊಳ್ ಆಂಗ್ಲೇಯ

ಚಕ್ರಾಧಿಪತ್ಯವಂ ಬೆಳೆಸಲಾವು ಇಲ್ಲಿಯೇ
ಸ್ಥಿರ ಸ್ಥಿತಿಯೊಳ್ ನಿಲ್ವುದೊಳ್ಳಿತು" ಎಂಬುದೇ
ಆ ನಿರ್ಣಯಂ! ಬಿಳಿಯರೆರ್ದೆಗವಿಯೊಳದು ಬಹು
ತರದ ತಂತ್ರೋಪಾಯಗಳಿಗೆ ಆಗರಮಾಯ್ತು.
ಬಳಿಕಲಾ ಶಿಥಿಲಗೊಳ್ಳುತಲಿರ್ದ ಭಾರತದ
ಸ್ಥಿತಿಗತಿಯಂ ಅರಿತು ಮನನಗೈದು ಕುಮತಿಯ
ಕುಟಿಲ ಚತುರೋಪಾಯಗಳ ಯುಕ್ತಿಯಿಂದೆಯಿಂ
ಬಗೆಬಗೆಯ ಜಟಿಲ ರೀತಿನೀತಿಗಳಿಂದೆಯಿಂ
ನಿಜತಂತ್ರ ಕುತಂತ್ರದ ಹಿರಿ ಜಾಲದಿಂದೆಯಿಂ
ಸುಧರ್ಮಾಧರ್ಮಗಳ ಪ್ರಭಾವದಿಂದೆಯಿಂ
ವರ್ಣಾವರ್ಣಮಯ ಮಾಯ ವಂಚನೆಗಳಿಂದೆಯಿಂ
ನಿರಂತರ ರಾಜಕೀಯದ ಬಿಜ್ಜೆಯಿಂದೆಯಿಂ
ಬಹುಲ ಸ್ನೇಹ ಸಂಪದದ ನಟನೆಗಳಿಂದೆಯಿಂ
ಧನದಾಹ ಅಧಿಕಾರ ದಾಹಂಗಳಿಂದೆಯಿಂ
ಸಮರಾಂಗಣದ ನೀತಿ ಪ್ರಯೋಗದಿಂದೆಯಿಂ
ಅನನ್ಯ ಅನುಪಮ ಸಾಸದ ಮೇಳದಿಂದೆಯಿಂ
ಭಾರತೀಯರಂ ನುಡಿಸಿ ನಲಿಸಿ ಅರಿತು ವರ
ಮೋಜಿನಿಂದೊರ್ಮೆ ರೋಷದಿಂದೊರ್ಮೆ ಅಲಕ್ಷ್ಯ
ಗತಿಯಲೊರ್ಮೆ ನಿಜ ತೇಜದಿಂದೊರ್ಮೆ ಮತ್ತಂ
ಪ್ರಭಾವಯುತ ಪ್ರಯಾಸದಿಂದೊರ್ಮೆ ಸಾಸ
ಗೆಯ್ಯುತೆ ಕೈಚಳಕಿಗರ್ ಮೇಲ್ಗೈಯಾದರ್; ಭರತ
ವರ್ಷದ ಭುವಿಯಂ ಕೈವಶಂಬಡಿಸಿ ತಾಮೇ
ವಿಜಯ ಕೇತನ ಹಾರಿಸಿದರ್ ಭರತ ಖಂಡದಲಿ!
ಬ್ರಿಟಿಷ್ ಚಕ್ರಾಧಿಪತ್ಯದ ವೈಜಯಂತಿ ಮುಗಿಲ್
ಮುಟ್ಟಿ ನಲಿದಾಡಿದುದು ಅಂಬರದ ದಾಣದಲಿ.

ರಂಗುರಂಗಿನ ಧ್ವಜ ಮೆರೆದುದು ಭರತವರ್ಷದ
ಪರಿಪುಣ್ಯ ಭೂಮಿಯಲಿ. ಶ್ವೇತವರ್ಣೀಯರುಂ
ರಾಷ್ಟ್ರದಂಗಾಂಗಗಳಲಿ ಕೆಂದಿರುವೆಗಳಂತೆ
ಮುತ್ತಿ ನೆತ್ತರ್ ಪಿಪಾಸಿಗಳಾಗಿ ಆನಂದ
ರಸಜ್ಞತೆಯಲಿ ಮೆರೆಯುತೆ ವಿಜೃಂಭಿಸಿದರ್!
ಇತ್ತ ದೇಶೀಯ ರಾಜಮಹಾರಾಜರುಗಳ್
ಲೋಕ ಪ್ರಜ್ಞೆಯಿಂ ದೂರ್ರಾಗಿ ಸ್ವಾರ್ಥ ಸಂಪ್ರೀತ
ಭೋಗ ಲೋಲುಪ್ತಿಯಲಿ ಮುಳುಗಿ ರಾಷ್ಟ್ರದೇಳ್ಗೆಯಂ
ನಿರ್ಲಕ್ಷಿಸಿರುತಿರೆ ಪಾಶ್ಚಾತ್ಯರಿಂಗದು ಅನುಕೂಲ
ಸಿಂಧುವಾಯಿತ್ತು, ಸತ್ ಸಂಪದವಂ ಭಾರತ
ರಾಷ್ಟ್ರದಿಂ ಬಾಚಿಯೇ ಬಾಚಿದರ್ ಕೈತುಂಬ.
ಅಂತಿಂತು ಭಾರತದ ಪ್ರಜೆಗಳ್ ಗಂಭೀರ
ನಿರುತ್ಸಾಹ ನಿರ್ಲಕ್ಷ್ಯ ನಿರ್ವಿದ್ಯೆ ಅಜ್ಞಾನ
ಅವ್ಯವಸ್ಥೆಗಳ ಕೂಟದೊಳ್ ಮುಳುಗಿ ತೇಲುತೆ
ಎಲ್ಲವಂ ಅರಿತೊ ಅರಿಯದೆಯೊ ತಿಳಿದೊ ತಿಳಿಯದೆಯೊ
ಕಣ್ಮುಚ್ಚಿ ಇರುತಿರಲ್ ಬೆಳ್ಜನರ ಕೈತವದಿಂ
ಭಾರತ ಮಹಾಕಲ್ಪವೃಕ್ಷವೆ ಸಮೂಲವಾಗಿ
ಅಲುಗ ತೊಡಗಿತು ಜಗದ ತೆರೆದ ಕಣ್ಗಳ ಮುಂತೆ!
ಸುಸಂಸ್ಕೃತ ಪರಿಪುಣ್ಯಭೂಮಿ ಭಾರತವರ್ಷ!
ವೇದಪರಿಮಳಮಂ ಜಗದಾದ್ಯಂತ ಪಸರಿಸಿದ
ದಿವ್ಯಭಾರತ! ಬೌದ್ಧಿಕಸ್ತರಮಂ ಶತಕೋಟಿ
ಸಹಸ್ರತರ ಕಿರಣಗಳಿಂದಾಕರ್ಷಿಸಿದ ಭಾರತ!
ಪ್ರಕೃತಿಯ ಮಹದೈಶ್ವರ್ಯ ತುಂಬಿ ತುಳುಕಿದ
ಸಮೃದ್ಧ ಭಾರತ! ಆಶ್ಚರ್ಯವಿಸ್ತೃತ ಭವ್ಯ
ಚೈತ್ಯಾಕ್ಷಿಗಳಿಗೆ ಪರಮ ಕಲಾವತಿ ಭಾರತ!

ಮಹೋನ್ನತ ನದನದಿ ಸಾಗರಗಳೈಶ್ವರ್ಯಗಳ
ಜಲಮಾಲಿನಿ ಭಾರತ! ಪ್ರಕೃತಿಯ ವಿಧವಿಧದ
ವಿಶ್ವಾಂಡ ವೈಚಿತ್ರ್ಯದ ಕಮನೀಯ ಕಠೋರ
ರಾಜೀವಿ ಭಾರತ! ಜಗತ್ ಖ್ಯಾತಿವೆತ್ತ ಘನ
ತೇಜೋನ್ವಿತೆ ಜಗತಾರಿಣಿ ವರ ಜನನಿ ಭಾರತ!
ಜ್ಞಾನ ಸುಜ್ಞಾನ ವಿಜ್ಞಾನ ಪ್ರಜ್ಞಾನಗಳ
ಮಹಾ ಮಾತೃಮಯಿ ಭಾರತ! ಪರಮ ಪವಿತ್ರ
ಪುಣ್ಯಕ್ಷೇತ್ರಗಳ ಮಹಾಭಾರತ! ಕಾಲಾನು
ಕಾಲದಿಂ ಮಹಾಪುರುಷರಿಂಗೆ ಮುನಿಋಷಿಗಳಿಗೆ
ಮೇಣಧಿಕ ಸರ್ವತೋಮುಖಿ ಪರಮೋಚ್ಚ ಪುಣ್ಯ
ಮಾತೃಕಾಮಯಿಯವರಿಂಗೆ ಜನ್ಮವನಿತ್ತ ಭಾರತ!
ವಿನಾಕಾರಣ ಪದಾಕ್ರಾಂತವಾಗಿ ಶೃಂಖಲಾ
ಬದ್ಧೆಯಾದ ಭಾರತ ಜನನಿ ಕಡುಸಂಕಟದ
ದುಃಖ ದುಮ್ಮಾನಗಳಲಿ ಸಿಲ್ಕಿ ನರಳಿ ಬೆಂದು
ಸುಟ್ಟುರಿದು ಕಟ್ಟುರಿಯಲಿ ಕರಿಮುರಿಯಾದಳಯ್.
ಕಣ್ಣಕೋಡಿಯಿಂ ನಿಚ್ಚ ಹರಿಸಿ ಮನಂಗೆಡುತ್ತೆ.
    ತರುವಾಯಿ, ಪೇಳಲೇಂ ಭಾರತದ ದುರ್ದೆಶೆಯ?
ಶ್ವೇತ ವರ್ಣೀಯರ ದುರುದುಂಬಿತನಂ ವೆರ್ಚಿ
ದುಮ್ಮಾನ ದುರಭಿಲಾಷೆಯಿಂದೆ ಕಡಲರಾಣಿ
ಧವಳಾಂಗನೆಯ ಆಳ್ವಿಕೆಯದು ಅತ್ತಿತ್ತಲುಂ
ಹರೆಗೈಚಾಚಿ ಮುಂಬೆಳೆಯ ಹತ್ತಿತು ಭಾರತದ
ಉದ್ದಗಲದಲಿ. ಕ್ಷುದ್ರ ಕಾಯಿದೆಯ ಕಟ್ಟಳೆಯು
ರೂಕ್ಷತನದಿಂ ಎಲ್ಲೆಡೆಯುಂ ಅಕಾಂಡತಾಂಡವ
ನೃತ್ಯಮಂಗೈದತ್ತು, ದಯ ದಾಕ್ಷಿಣ್ಯಮಿಲ್ಲದೊಲ್.
ಪಜ್ಜೆಪಜ್ಜೆಯೊಳ್ ಮುಂಬರಿಯುತಿರ್ದುದು ಮದ್ದು

ಗುಂಡು ಮೇಣ್ ತಕ್ಕಡಿಯ ಜೊತೆಜೊತೆಗೆ ಹಬ್ಬಿದುದು
ಪಾಶ್ಚಾತ್ತ್ಯ ಸಂಸ್ಕೃತಿ; ಗುರುಜನ ಹಿರಿಜನ ಕಣ್
ಕೆರಳಿಸಿ ಉರಿದುರಿದು ಕೈಬಾಯ್ ಸೋಲ್ದು ಬಳಲ್ದು
ಬೆಂಡಾದರ್. ಬೆಬ್ಬಳಿಸಿದುವು ಮನಃಪ್ರಾಣಗಳ್.
ಕ್ರಮಾನುಕ್ರಮದೊಳ್ ಪಾಶ್ಚತ್ತ್ಯರಾ ರೀತಿ
ನೀತಿಗಳ್ ಬೇರು ಬಿಡಿಸೆ ಮಿಷನರಿಗಳೈದರ್
ಸ್ವಧರ್ಮದ ಢಂಗೂರ ಹೊಡೆಯುತ್ತೆ! ಭಾರತದ
ಸಂಸ್ಕೃತಿಯಂ ಹಳಿದು ಸನಾತನ ಧರ್ಮವಂ
ತುಚ್ಛೀಕರಿಸಿ ತೆಗಳಿ ಜಿಹ್ವೆಯ ಚಪಲತೆಯಂ
ತಣಿಸಿದರ್, ಒಲಿಸಿದರ್ ಮನದಣಿಯುವನ್ನ. ಆ
ಪ್ರಚಾರದ ಭರಾಟೆಯಲಿ ಭಾರತದ ತರುಣ
ಮಂಡಳಿಯ ಗಮನಪಕ್ಷಿಯಂ ಸೆಳೆದು ಮಿಣ್ಣನೆ
ಮುಗ್ಧಮತಿಗಳಿಗೆ ಕ್ರಿಸ್ತ ಧರ್ಮದ ನವನೀತ
ಬುತ್ತಿಯಂ ಒತ್ತಿಯೊತ್ತಿ ಉಣಿಸುತೆ ನಲಿಸಿದರ್!
ಆಗಳುಂ ನಿಡುಗಣ್ ತೆರೆಯುತ್ತೆ ಜಗದ್ಬೆಳಕಿಗೆ
ನಿಟ್ಟಾಲಿಯಂ ನೆಟ್ಟು ನೋಡುತಿರುತಿರ್ದ ಆ
ಪುರ್ಚುಪುರುಪಿನ ತರುವಲಿಗಳಿಂಗೆ ಭಂಗಿಯಂ
ಕುಡಿಸಿದವೊಲಾಯ್ತುಲಾ ಭಾರತವರ್ಷದಾದ್ಯಂತ!
ಪರಿಪರಿಯಲಿ ಕ್ರಿಸ್ತಧರ್ಮ ಬೋಧೆಯುಂ ಹರಡುತಿರೆ
ತಮ್ಮತನಂ ಕಡೆಗಣ್ಚಿ ಸ್ವಧರ್ಮಮಂ ಕೀಳ್ಗೈದು
ಗತಿತಪ್ಪಿ ಅನ್ಯಸಂಸ್ಕೃತಿಯ ದೀಪದಕುಡಿಗೆ
ಮುಗಿಬಿಳ್ದು ಸುಟ್ಟುರಿದು ಹೋಹ ತರುವಲಿಗಳಿಗೆ
ಗತಿ ತೋರ್ವರಿಲ್ಲವಾಯಿತ್ತು. ಭಾರತಿ ಬೆದರಿ
ಬೆಚ್ಚಿ ಕಂಗಾಲಾದಳ್.
ಪರಿಸ್ಥಿತಿಯ ದಿವ್ಯ

ದುರ್ಲಾಭವಂ ಪಡೆದ ಉನ್ಮತ್ತ ಇಂಗ್ಲಿಷರ್
ಬಗೆಬಗೆಯ ಕಾರ್ಯಕಾರಣಂಗಳ್ ಮುಂದೊಡ್ಡಿ
ಶಿಥಿಲಗತಿಗಿಳಿದ ರಾಜಕೀಯ ಬಲಮಂ ಬಲಿ
ತೆಗೆದು ರೆಕ್ಕೆಗಳಂ ಮುರಿದು ಮುರಿದು ಜಡಿಕುಟ್ಟಿ
ತುಂಡರಿಸಿ ಮೂಲೆಗೊತ್ತಿರೆ ಎಲ್ಲಂ ಹದಮಾಯ್ತು.
ಪ್ರತ್ಯಕ್ಷಮೊ ಅಪ್ರತ್ಯಕ್ಷಮೊ ಸತ್ಯಮೊ ಮಿಥ್ಯಮೊ
ಧರ್ಮಮೊ ಅಧರ್ಮವೊ ಲೆಕ್ಕಿಸದೆ ಮಾನಿಸದೆ
ಪೊಸರಾಜ್ಯ ಸೂತ್ರಮಂ ತಂತ್ರದಿಂ ಮಂತ್ರದಿಂ
ಕೋದು ಪುಣ್ಯಭೂಮಿ ಭಾರತವರ್ಷದ ಮೋಹನ
ಪ್ರಭೆಯಂ ಕಡೆಗಣ್ಣಿ ಬೆನ್ನೇರಿ ಭುಜವೇರಿ
ಶಿರವೇರಿ ಕೂರ ಕಟ್ಟು ಕಟ್ಟಳೆಗಳ ಗಂಟು
ಕಗ್ಗಂಟುಗಳ ಪಾಶದಿಂ ಬಿಗಿಯ ತೊಡಗಿದರ್
ಬೆಳ್ಜನರ್. ದೇಶೀಯ ಪ್ರಜೆಗಳ್ ನೋವುಂಡು
ನೊಂದು ಬೆಂದು ಬೆಂಡಾಗಿ ಬೇವಾಗಿ ಸಹನೆಯ
ಕೊಂಡಿ ಕಳಚಿ ಕುದಿಕುದಿದು ಹೂಂಕರಿಸುತೆ ಕೈಕೈ
ಮಸಗಿದರ್. ಅಂತಿಂತು ಸೂಕ್ಷ್ಮಸಮಯಂ ಕಾದು
ಒಗ್ಗೂಡಿ ಸೈನ್ಯವೆರಸಿ ಹೂಡಿದರ್ ಬಿಳಿಯರ
ವಿರುದ್ಧದಲಿ ಸಂಗ್ರಾಮವಂ ಘೋಷಿಸಿ! ಧೈರ್ಯ
ಸಾಸ ಕೆಚ್ಚು ನೆಚ್ಚುಗಳ ಬಿಸಿನೆತ್ತರಿನ ಕೆಲ
ಯುವ ಜನಾಂಗಮೆಳ್ಚತ್ತು, ಈಟಿ ಭಲ್ಲೆ ಖಡ್ಗ
ಗದೆ ಗುರಾಣಿ ತ್ರಿಶೂಲ ಮುಂತಪ್ಪ ಆಯುಧ
ಭರಿತ ಸೈನಿಕರ್ "ಜೈ ಕಾಳಿ! ಜೈ ದುರ್ಗಿ! ಜೈ
ಶಂಭೊ!" ಎನುತೆನುತೆ ನುಗ್ಗಿದರ್ ಬೆಳ್ಜನಾಂಗದ
ಮೇಲೆ! ಘನ ಘೋಷಣೆಯ ಮೊಳಗು ಗಗನ ಭೇರಿಯೋ
ಎನೆ ಮೊಳಗಿತು ಬೋರಾಡಿ. ಹೊಡಿ ಬಡಿ ಕಡಿ ಕೊಚ್ಚು

ಎಂಬ ವೀರಾವೇಶದ ನುಡಿಗಟ್ಟು, ಖಡ್ಗ ಗುರಾಣಿಗಳ
ಝಣತ್ಕಾರಗಳ್ ಸಂಗ್ರಾಮದ ಹಿರಿಮೆಯಂ ಸಾರಿ
ಹೇಳುತಿರೆ ಬಿಳಿಯರ್ ಮಸಿಗುಂಡುಗಳಂ ಒಗೆದು
ಉಡಾಯಿಸಿ ಬೊಗ್ಗುಬಡಿದರ್ ಸ್ವಾತಂತ್ರ್ಯ ಸಂಗ್ರಾಮ
ಹೂಡಿರ್ದ ಆ ಧೀರ ತರುಣರಂ. ಅಂದಿನಾ
ಭಾರತೀಯರ ಘೋರ ಸ್ವಾತಂತ್ರ್ಯದ ಸಂಗ್ರಾಮ
ಕಾರ್ಯಕ್ರಮಮಂ 'ಸಿಪಾಯಿದಂಗೆ' ಎಂದೆಂದು
ಪೆಸರಿಸಿದರಾ ಇಂಗ್ಲಿಷರು. 'ಪ್ರಥಮ ಸ್ವಾತಂತ್ರ್ಯ
ಸಂಗ್ರಾಮ' ಎಂದರ್ ಭರತ ವಂಶಜರ್. ಇಂತು,
ಕಾರ್ಯಾಚರಣೆಯಲ್ಲಿ ಸೋಲ್ದು ಸೋಲುಂಡೊಡನೆ
ಇನ್ನಿನಿತು ಘನವಾಯ್ತು ಶ್ವೇತ ವರ್ಣೀಯರ ಕೈ
ಮೇಲಾಗಿ! ಸಾವಿರದೆಂಟನೂರೈವತ್ತೆಂಟರಲಿ
ದೂರದೂರದಾ ಭವ್ಯ ಸಾಗರದಾಚೆಯಲಿ
ನೆಲೆಗೊಂಡ ಇಂಗ್ಲೆಂಡ್ ರಾಜ್ಯದ ಸಿರಿರಾಣಿಯ
ಕೈವಶಮಾದ, ಸ್ವತಂತ್ರ ಭಾರತ ಸಾಮ್ರಾಜ್ಯ
ಬ್ರಿಟಿಷ್ ಆಡಳಿತದೊಳ್ ಉಸಿರಾಡಿತುಸಿರ್ಗಟ್ಟಿ.
ಮಹತ್ತರಮಾದ ಅಪರಿಮಿತ ಪರಿಪುಣ್ಯ ಭೂ
ವಿಸ್ತಾರದ ಒಡೆತನಮೊದವಿಬರೆ ಘನತೆಯುಂ
ಪೆರ್ಚಿ 'ಚಕ್ರವರ್ತಿನಿ' ಎಂಬ ಬಿರುದಿನಿಂದಲಿ
ತಾಂ ವಿಜೃಂಭಿಸಿದಳ್ ವಿಕ್ಟೋರಿಯಾ ರಾಣಿ!
ವಿಶ್ವಖ್ಯಾತಿಯಂ ಬಡೆದ ಚಕ್ರವರ್ತಿನಿಯುಂ
ಯಜ್ಞಾಂತ್ಯದಲಿ ಶಾಂತಿ ಮಂತ್ರಮಂ ಜಪಿಸುವೊಲ್
ಭಾರತದ ಮಹಾ ಪ್ರಜೆಗಳಿಗೆ ಕಾರುಣ್ಯ ಮಳೆ
ಸುರಿಸುವ ತೆರದಿ ಕಳಿಪಿದ ಸಂದೇಶ ಪುಟದಲಿ
ಕರುಣೆ ಭರವಸೆ ಶಾಂತಿ ರಕ್ಷಣೆ ಔದಾರ್ಯ ಪ್ರೀತಿ

ಮುಂತಪ್ಪ ಅನನ್ಯ ಗುಣಗಳಿಂ ಪರಿಶೋಭಿತ
ಒಕ್ಕಣೆಯ ದಿವ್ಯಧಾರೆ ಹರಿದುದು ಶಾಂತ ಮುಗ್ಧ
ಪರಮ ಭಾರತೀಯರ ಉನ್ನತೋನ್ನತಿಗಾಗಿ!
ಸರ್ವೋತ್ತಮಾಡಳಿತದ ಸುಖೀ ಸೌಕರ್ಯಕಾಗಿ!
ಇತಿ, ಬ್ರಿಟಿಷ್ ರಾಜ್ಞಿಯ ಸಂದೇಶಮಿಂತೈದುದು
ಭಾರತದ ಪ್ರಜಾಸಮೂಹಮಂ ಕುರಿತಂತೆ,
"ವರ ಪ್ರಜೆಗಳೆ! ಎಮಗಿರುತಿಹ ರಾಜ್ಯಭಾರಂ
ಇನ್ನಿನ್ನು ಮತ್ತೆಮತ್ತೆ ಸುವಿಸ್ತರಿಪ ಆಸೆಯುಂ
ಎಮಗಿಲ್ಲ, ದೇಶೀಯ ರಾಜರುಗಳ ರಾಜ್ಯದ
ಹಕ್ಕುಭಾದ್ಯತೆಗಳಿಗೆ ಚ್ಯುತಿಯಂ ತಾರದೆಯೆ
ನಮ್ಮೆಲ್ಲ ಹಕ್ಕು ಭಾದ್ಯತೆ ಗೌರವಗಳಿಗೆ ಸರಿ
ಸಮವೆಂಬವೊಲ್ ಭಾವಿಸಿ ಗೌರವಗಳ ನೀವೆಂ.
ಸಕಲತರ ಜನಾಂಗದೊಳ್ ಮತಬೇಧವೆಣಿಸದೆ
ಸರಿಸಮತೆಯಿಂ ಪರಿಗ್ರಹಿಸಿ ಗೌರವವ ನೀವೆಂ.
ಎಂದುಮೆಂದಿಗುಂ ಮತದ ನೆವದಿಂ ಆಚಾರದ
ನೆವದಿಂ ಪಕ್ಷ ಪಾತದ ಅಪಚಾರವೆಸಗದೆ
ಮೇಣ್ ಪಕ್ಷಪಾತಗೊಳಿಸದೆ ಕಾಯಿದೆಯ ಪರಮ
ನಿಯಮ ದೃಷ್ಟಿಯೊಳ್ ರಾಜಚಿತ್ತಮಿಹುದೆಂಬುದಂ
ಸಾರುವೆಂ..... ಮೇಣೆಮ್ಮ ಪ್ರಜೆಗಳಿಗೆ, ಅವರಾವ
ಜನಾಂಗಮಿರಲಿ ಆವ ಧರ್ಮಮಿರಲಿ ವಿದ್ಯಾ
ಸಾಮರ್ಥ್ಯ ಕರ್ತವ್ಯ ಬುದ್ಧಿಗಳಿರುವೊಡೆ ಪರಿ
ಬೇಧಮೇನಿಲ್ಲದೆಯೆ ಸ್ಥಾನಮಾನ ಗೌರವಾದಿ
ಅಧಿಕಾರಮೀವುದೆಂಬುದಂ ಎಲ್ಲರುಂ ತಿಳಿದು
ನಡೆವಂತೆ ಸಾರುವೆಂ...."
ಈ ಎಲ್ಲ ಭಾಷೆಮಾತು

ನಡೆದುವೆನಿತೊ ನಡೆಯದಿಹುದೆನಿತೊ ಎನಲೆಲ್ಲವುಂ
ಸಾರ್ಥಕಾಸಾರ್ಥಕದ ಪಥದೊಳ್ ನಡೆದುವಂದು.
ಇಂಗ್ಲೆಂಡ್ ಸಾಮ್ರಾಜ್ಞಿಯ ನಿರೂಪ ಭಾರತದ
ಪ್ರಜೆಗಳ ಮನಮುಟ್ಟುವ ಪಾಂಗಿನಲಿ ಹರಿದುದು
ದೃಢ ನಂಬುಗೆಯಮೃತರಸನೆಯಂ ಸೂಸಿ.
ಅಂತಿಂತು ಭವ್ಯ ಜಗನ್ನಿಯಂತ್ರ ಶಕ್ತಿಯುಂ
ಕಡಲರಾಣಿ ಮೇಣ್ ಭರತಮಾತೆಯರ ಜೀವನ
ಬಂಧ ಸೂತ್ರಂಗಳಂ ಹೆಣೆದು ಗಂಟಿಕ್ಕಿದುದು
ವಿಧಿ ನಿಯಮದಿಂದೆ. ಒರ್ಮೆ, ಇದೆಮ್ಮ ಮೂರ್ಖತೆಯ
ಕುರುಹೆಂದು ಪರಿಭಾವಿಸಿ ಮರ್ಮರ ಮರುಗಿದೊಡಂ,
ಮತ್ತೊರ್ಮೆ ಹೊಸನೀರ್ಬೈದು ಹಳೆನೀರಂ ಕೊಚ್ಚಿ
ಹೋಹ ಪುರೋಭಾಗ್ಯದ ಸುಮಂಗಲಕರ ಘಟನೆ
ಎನುತೆ ತೋಷದ ರಸಾನ್ನವನುಂಬ ಸುಯೋಗಂ
ಎಂಬುದದು ಸತ್ಯಸ್ಯ ಸತ್ಯ. ಉಷ್ಣೋಷ್ಣವಲಯದ
ರಣಬಿಸಿಲ ರಶ್ಮಿಯ ಝಳದಿಂ ಸುಟ್ಟುರಿದು ಮಿಗೆ
ಬತ್ತಿ ಜಲನಿಧಿ ಹರಿಯದೊಲ್ ತಂಗಿ ಪಚ್ಚನೆಯ
ಪಾಚಿ ಹಬ್ಬಿ ಮಡುಗಟ್ಟಿ ಪುಳುಬಿಳ್ದು ಕೋಳ್ಕೆಸರ
ಮಾಳ್ಕೆಯಲಿ ಕೊಳೆಗೇರಿಯೆನಿಸಿದ ಭಾರತ
ಭೂಮಿಯ ಜಡಬಾಳಿಗೆ ಪಾಶ್ಚಾತ್ಯ ಉಷ್ಣೋಷ್ಣ
ಅರುಣಾರುಣನ ಕಿರಣ ಹರಿದು ಬರಲುರೆ ಸುಪ್ತ
ಮನಮತಿಗಳಂ ಮುಟ್ಟಿ ತಟ್ಟಿ ಎಬ್ಬಿಸಿದವೊಲ್
ಒಳಗಣ್ ತೆರೆದತ್ತು ಮೆಲುಮೆಲ್ಲನೆ. ಪುರಾತನ
ವಿಶಿಷ್ಟ ಬದುಕಿಗೆ ನವನವೀನ ಚೈತನ್ಯಯುತ
ಕಾರ್ಯಕಾರಣಗಳುತ್ಸಾಹದ ನೈಪುಣ್ಯಮಂ
ಲೇಪಿಸಿ ಜಡಮನಮತಿಯ ಮೂಢಮತಗಟ್ಟೆಯ

ವಿಧ್ವಂಶಕ ವೈಜ್ಞಾನಿಕ ಜ್ಞಾನ ಸಂಪದದ
ಬಿತ್ತವಂ ಬಿತ್ತುತಲಿರೆ ಪಾಶ್ಚಾತ್ಯಜೀವನ
ಪರ್ವತದ ಶಿರದ ನಿರ್ಜರಣಿಯ ಮುನ್ನೀರು ಜಳ
ಜಳಿಸಿ ಹರಿದವೊಲಾಯ್ತು ಜಡ ಜೀವನದ ಮೇಲೆ.
ಆಗಳೇನಾ ರಭಸದಲಿ ಕಸಕಡ್ಡಿ ಪಾಚಿಗಳ್
ಮಾತ್ರಮೇಂ, ಮನೆ ಮಠ ಪೊಲ ಪೂದೋಂಟ
ಮೇಣ್ ಕಲ್ಪವೃಕ್ಷಗಳೆನಿತೊ ಕೊಚ್ಚಿ ಪೋದುವು
ಉರುಳುರುಳಿ; ನೋನೋಳ್ಪ ಧೀಮಂತ ಕಣ್ಣುಗಳ
ಮುಂತೆ. ಆದೊಡದು ಅನಿವಾರ್ಯಂ. ಎಲ್ಲೆಲ್ಲಿಯುಂ
ಮಹಾ ಸಂಧಿಕಾಲದೊಳೊದಗುವ ಪರ್ವ ಪ್ರಸಂಗ
ಸನ್ನಿವೇಶದಲಿ. ಮತ್ತಾಗಳುಂ ಭಾರತದ
ವಿಪ್ಲವ ವಿಶೇಷದೊಳ್ ಉನ್ನತೋನ್ನತ ಜೀವ
ಬ್ರಹ್ಮರ್ ಸಕಾಲದೊಳ್ ಉದ್ಭವಿಸಿ ಸ್ವಧರ್ಮದ
ರಕ್ಷಣೆಯ ನೊಗಭಾರಕೆ ಭುಜಕೊಟ್ಟ ಪ್ರಸಂಗ
ಇರ್ಪುದು ಭಾರತವರ್ಷದ ಗತೇತಿಹಾಸದೊಳ್
ಇಣಿಕಿ ನೋಡೆ. ಆ ಪರ್ವಕಾಲದಲಿ ಒದವಿದ
ಸುಖದುಃಖಗಳ್ ಪಾಠಗಲಿಸಿದುವು ಪ್ರಜೆಗಳ
ಮಂದ ಮಂದ ಕೂರ್ಮಗತಿಗೆ.
ಬ್ರಿಟಿಷ್‌ಗಾದಿಯ
ಕಟ್ಟುನಿಟ್ಟಿನ ಕಾಯಿದೆಗಳ ರುದ್ರಪಾಶವು
ಎಳೆಎಳೆಗಳಾಗಿ ಕೊರಳಿಗೆ ತೊಡರ್ದುವು ಧೀರ
ಗಂಭೀರ ಗತಿಯಲಿ. ದಿನದಿನವುಂ ದುಮ್ಮಾನ
ದುರಾಸೆಗಳ್ ವೆರ್ಚೆ ಬಹುಲ ರೀತಿಯಲಿ ನಲಿದು
ಸುಲಿದು ಒಡಲ್ ತುಂಬ ತೊಡಂಗಿದರ್ ಬಿಳಿಜನರ್
ಭಾರತ ಧರಿತ್ರಿಯಂ! ಬಡತನದ ಬೇಗೆಯೊಳ್

ಬೇಯುವವರ ಒಡಲ್ ಗಿಚ್ಚಿಗೆ ನೆಯ್ಯನೆರೆವವೊಲ್!
ದಿನದಿನಂ ದಾರಿದ್ರ್ಯಲಕ್ಷ್ಮಿಯಂ ಕೈವೀಸಿ
ಬರಮಾಡಿದರ್ ನಿರ್ದಯೆ ನಿರ್ದಾಕ್ಷಿಣ್ಯದಿಂ.
ಭಾರತದ ಪುಣ್ಯ ಭೂಮಿಯಲಿ ಭೀಕರ ಭಂಗ
ಬನ್ನಗಳ್ ತುಂಬಿ ತುಳುಕಿದುವು. ರಾಷ್ಟ್ರದ ವಜ್ರ
ತುಲ್ಯ ಒಡಲಿನಲಿ ದುಃಖದ ಮಹಾಪೂರವೇ
ಹರಿದತ್ತು, ದಿನ ನಿಚ್ಚಂ. ದೇಶೀಯ ರಾಜರುಂ
ಇರ್ದರ್ ಬಿಳಿಯರ ಕೈಗೊಂಬೆಗಳ್ ತಾವಾಗಿ.
ವನವಕ್ಕಿಗಳ್ ಹಾಡಿದುವು ವೀತರಾಗದಲಿ.
ತಳಮಳಿಸಿತು ಭಾರತ ಜನನಿಯ ಹೂವೊಡಲ್.
ಶ್ವೇತವರ್ಣೀಯರ್ ಅಧಿಕಾರದ ದರ್ಪದಿಂ
ತಂತಮ್ಮ ಸುಖೀ ಜೀವನದ ಲೋಲುಪ್ತಿಯಲಿ
ತಮಗಾಗಿ ಬೃಹದ್ ನವ ನವೀನ, ಸುಸುಂದರ
ಭವ್ಯ ಭವನಗಳಂ ನಿರ್ಮಿರ್ಚಿದರ್. ಎಲ್ಲೆಡೆಯು
ಕೇರಿಕೇರಿಗಳ್ ಬೆಳೆದುವು; ನಾಗರಿಕ ಶೈಲಿ
ಮೆರೆದುದು ಕಣ್ ಕುಕ್ಕುವ ಪಾಂಗಿನಲಿ. ಭಾರತದ
ಪ್ರಜೆಗಳ್ ಅಲ್ಲಿ ನಿಣುಕದವೊಲ್ ಸುಭದ್ರತರ
ಸರ್ಪಕಾವಲ್ ಇರ್ದುದು ಕ್ರಮಾನುಕ್ರಮದಲಿ.
ಭಾರತೀಯ ಪ್ರಜಾಕೋಟಿಯಂ ಕಡೆಗಣ್ಚಿ
ತಿರ್ಯಗ್ಜಂತುಗಳವೊಲ್ ಇರಿಸಿದರ್ ದೂರದಲಿ!
ಭಾರತಿಯ ಉಡಿಯಲ್ಲಿ ಭಾರತೀಯರಿಂಗೇ
ಸ್ಥಾನಮಾನಮಿರದಾಯ್ತು! ಪ್ರಜೆಗಳಿಗೆ ನಿಚ್ಚ
ಅಜ್ಞಾನದ ಕತ್ತಲೆ, ನಿರಕ್ಷರದ ಕತ್ತಲೆ, ದಾರಿದ್ರ್ಯದ
ಕತ್ತಲೆ, ಮತಿಮೌಢ್ಯದ ಕತ್ತಲೆ, ಅಸ್ವಾತಂತ್ರ್ಯ
ಬಾಳ್ಬದುಕಿನ ಕತ್ತಲೆ ನಿರರ್ಥಕ ಜೀವನದ ಕತ್ತಲೆ,

ಧನ್ಯ ಜೀವನಕೆ ತೆರೆಯನೊಡ್ಡಿದ ಕತ್ತಲೆ, ಕಟು
ಕಠಿಣ ರೋಗಗಳ ಬೀಡಿನ ಕತ್ತಲೆ, ಅನನ್ಯ
ಪುಣ್ಯ ಕ್ಷೇತ್ರಾನುಕ್ಷೇತ್ರವಾದ ಭುವಿ ದುಃಖದ
ಕಡಲಲಿ ಮುಳುಗಿದ ಕತ್ತಲೆ ಎಂಬುವ ಅನೇಕ
ಕತ್ತಲೆಗಳ ಸಮುದಯಗಳಿಂ ಕಡು ಕತ್ತಲೆಯೆ
ತುಂಬಿದತ್ತು ಭಾರತದ ಅಂಗಾಂಗಳಲಿ. ಈ
ಪರಿಪುಣ್ಯ ಭುವಿಯಾದ್ಯಂತಂ ಬ್ರಿಟಿಷ್ ರಾಷ್ಟ್ರೀಯ
ಬೆಳ್ಜನಾಂಗವದು ತುಂಬಿ ನಲಿದುದು ಪರಮೋಚ್ಚ
ಭಾರತದ ಸವಿಗಾಳಿಯಂ ನೆರೆ ಸವಿದು. ಪುಷ್ಪ
ಗಂಧ ಪರಿಮಳಮಂ ಮನತುಂಬಿ. ಅಪೂರ್ವತರ
ನಿಸರ್ಗ ಸೌಂದರ್ಯದ ರಾಶಿಯದು ಅಂತಿರ್ಕೆ,
ನಿಸರ್ಗ ಸತ್ ಸಂಪದಮಂ ಶೋಧಿಸಿ ಬಾಚುತ
ದಿನಕಳೆದರ್ ಆನಂದದಿಂ! ಅಂತುಮಲ್ಲದೆಯೆ
ರಾಷ್ಟ್ರೀಯ ಉತ್ಪನ್ನದಲಿ ಸಿಂಹಪಾಲು ತಾಂ
ಪಡೆಯುತುಂ ಶೋಷಣೆಗೆ ಆದಿಅಂತ್ಯಗಳಿಲ್ಲ
ಎಂಬವೊಲ್ ನಡೆದತ್ತು ಶೋಷಣೆಗಳ ಕಾಂಡಂ!
ಭವ್ಯ ಭಾರತಂ ಹಿರಿದು ಹಿಂಡಿ ಹಿಪ್ಪೆಯಾಗುತೆ
ನರಳುತಿರೆ ಬಳಿಯರ್ ಸುಸುಖಲೋಲುಪ್ತಿಯಲ್ಲಿ
ಮೆರೆದರ್ ಘನವಾಗಿ ಪಿರಿಯ ಪೆರ್ಬುಲಿಗಳಂತೆ
ಬೀಗಿ. ಭರತ ಖಂಡದ ಸ್ವರ್ಣ ಶುಕ್ತಿ ದಿನದಿನ
ಬರಿದಪ್ಪುತಿರ್ದುದು ಬಿಳಿಯರ ದುಷ್ಟ ದುರಾಶೆ
ದುರ್ನೀತಿಗಳಿಂದೆ.
ಸಾವಿರದೆಂಟನೂರ ಮೂ-
ವತ್ತೈದನೆಯ ಮಾರ್ಚಿ ಏಳನೆಯ ತೇದಿಯುಂ
ಕಾಲೂರಿದ ಸಂಧಿ ಸಮಯದೊಳ್ ಗಮಿಸಿರ್ದಾ

ಗೌರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಕನ್
ಎಂಬಾತನ ಆಳ್ವಿಕೆಯಲಿ ಲಾರ್ಡ್ ಮೆಕಾಲೆಯಾ
ಸಲಹೆಯಂ ಮನಗೊಂಡು ಒಪ್ಪಿಮೆಚ್ಚಿ ಇಂಗ್ಲಿಷ್
ಭಾಷೆಯಂ ಭಾರತದ ರಾಜಭಾಷೆಯಂಗೈದು
ಮೆರೆಸಿದೊಡದು ಬ್ರಿಟಿಷ್ ಸಾಮ್ರಾಜ್ಯದ ಶೋಭೆಗೆ
ಸರಿಯಪ್ಪುದೆಂಬ ನಿರ್ಣಯಮಾಯ್ತು; ಬೆಂಟಿಕನ್
ಕರೆದ ಹಿರಿಯ ಅಧಿಕಾರಿಗಳ ಸಭೆಯೊಳ್. ಲಾರ್ಡ್
ಮೆಕಾಲೆಯು ನೊಂದು ಬೆಂದವರ ಮುಂತೆ ತಮ್ಮಗಳ
ಅಧಿಕಾರ ವಿಜೃಂಭಣೆ, ದರ್ಪ ಅಟಾಟೋಪ
ವೈಯ್ಯಾರದ ವಿಜೃಂಭಣೆ, ಜ್ಞಾನ ಪ್ರಜ್ಞಾನ
ವಿಜೃಂಭಣೆ ಮೆರೆದುವು ಲೋಕೋತ್ತರವೋ ಎನೆ.
ಸಾಗರಕೆ ಹೊಯ್ಕಯ್ ಎನುವೊಲ್ ಎಂದೊಡಮದುಂ
ಸಾಗರದ ವಿಸ್ತಾರ ಆಳನೀಳಗಳನ್ನು
ಇನಿತರಿಯದ ರಾಜತ್ವದ ಠೀವಿ ಮಾತ್ರಮೇ
ವಿಜೃಂಭಣೆಗೆ ಮೂಲವಾಯ್ತು. ಪ್ರಜೆಗಳ ಸುಖ
ದುಃಖಗಳ ಗೊಡವೆಯಿರದ ರಾಜಕೀಯ ವಿಷ
ರಂಗದಲಿ ಬಿರುಗಾಳಿಗುಬ್ಬೆದ್ದ ವಿಕ್ಷುಬ್ಧ
ಸಾಗರ ಜಲದ ತರಂಗಗಳೋಳಿ ಧುಮುಧುಮಿಸಿ
ಬೋರಾಡುವೊಲ್ ಮೆರೆದುದು ಬೆಳ್ಜನರಾಧಿಪತ್ಯ!

ಹರಿಃ ಓಂ ತತ್ ಸತ್

❋ ❋

ಪಂಚಮೋಲ್ಲಾಸಂ

ಜ್ಞಾನದೇವತು ಕೈವಲ್ಯಂ

ಚಿತ್ರಭಾನುಗ್ರಸ್ತ ಚೈತ್ರಸುಂದರ ಕಾನನ
ಪ್ರದೇಶಂ. ಶ್ರೀಗಂಧ ಚಂದನ ಮಾವು ಬೇವು
ಬಾಳೆ ಕಲ್ಬಾಳೆ ಹೊಂಬಾಳೆ ಚಂದ್ರಬಾಳೆಯಿಂ
ತೆಂಗಿನಿಂ ಕೌಂಗಿನಿಂ ಬಿದಿರು ಬೆತ್ತ ವಾಟೆ
ಪನ್ನೇರಳೆ ಕಿತ್ತಲೆ ನೇರಳೆಗಳಿಂ ಹಲಸು
ಮತ್ತೆನಿತೆನಿತೊ ಭೂಜೇಶ ಕುಲಕೀರ್ತಿಗಳಿಂ
ತುಂಬಿ ಪರ್ಣರಾಜಿಯ ಮಹದೈಶ್ವರ್ಯಮೆನೆ
ಹೊಳೆ ಕೆರೆಗಳ ನೀರುಂಡು ಮೈವೆರ್ಚಿ ತಂಪಿನ
ಆಗರವು ತಾನಾಗಿ ದೀರ್ಘಭಾಹುಗಳ ಚಾಚಿ
ಚಾಚಿ ಮುಂಚಾಚಿ ಶಾಖೋಪಶಾಖೆಗಳೆತ್ತು
ರೆಂಬೆಕೊಂಬೆಗಳ್ವೆರಸಿ ಸಿಕ್ಕುಸಿಕ್ಕಾಗಿ ಹೆಣೆದು
ಕಠಿಣಾತಿಕಠಿಣವಾದ ಬನದೇಶದೊಳ್ ರವಿ
ಕಿರಣಂಗಳ್ ಪುಗಲಾರದನಿತು ಘನಸುಂದರಂ.
ಜನಸಾಗರಕೆ ಅತ್ಯಗತ್ಯಮನೆ ಮುಂಬೆಳೆದ
ಸಂಬಾರ ಸಾಮಗ್ರಿಯು ಮೆರೆದತ್ತು. ಲವಂಗ
ಜಾಪತ್ರೆ ಏಲಕ್ಕಿ ಮೆಣಸು ಲಿಂಬೆ ಮಾದಲ
ಎಳ್ಳು ದನಿಯ ಮುಂತಪ್ಪ ವಿಧವಿಧ ವರ್ಗೀಯ
ರುಚಿಕರಮೆನಿಪ ಬಹುತರ ಸಂಬಾರ ಬೆಳೆಗಳ್
ಅಲ್ಲದೆ ವಿವಿಧ ಪುಷ್ಪಕೋಟಿಗಳ್ ಮಿಡಿಮೊಗ್ಗು
ಓರಿಮೊಗ್ಗು ಅರಳಿ ಮೆರೆದಿರ್ದುವು ಸೊಗದಿಂ.
ಪಶ್ಚಿಮಾದ್ರಿ ಕಾನನ ಕ್ಲೇಶಯಾತ್ರೆಗೆ ದಣಿದು
ಸೋಲ್ದ ಅಲಕನಂದೆಯ ನೀರ್ ನಿದ್ರೆಯ ಮಾರ್ಗ

ದೂರಾಯಣಂ ವಿಶ್ರಾಂತಿ ಮಂಚಮೆನೆ ಮಂದ
ಮಂದ ಪ್ರವಾಹ ಮೆಸೆವುದು ಕಣ್ಣನೋಟಕ್ಕೆ.
ಅತ್ತಲಾ ಬೆಟ್ಟದಪ್ಪಲಿನ ಸರೋವರ ತುಂಬಿ
ತುಳುಕುವೊಲಿದೆ ಪಂಪಾ ಸರೋವರಮಂ ಪೋಲ್ದು
ಮೆರೆವುದು ಅಮೋಘ ಜಲರಾಶಿ ನೀಲದರ್ಪಣದೊಲ್.
"**ಜ್ಞಾನದೇವತು ಕೈವಲ್ಯಂ**" ಎಂಬ ಸುಮಂತ್ರದ
ಸೂತ್ರಸಾರಮಂ ಮನಗೊಂಡು ಜೀರ್ಣಿಸಿ ತಾಂ
ಲೋಕದೊಳ್ ಸತ್ಕೀರ್ತಿ ಪರಿಮಳಂ ಪಸರಿಸಿ
ವೇದಾಂತ ಮಾತೆಯೆನೆ ಅತ್ಯಂತ ಗೌರವದ
ಶ್ರೀಮಾಲೆಯಂ ಧರಿಸಿದ ಪುಣ್ಯವತಿ ಭಾರತಿ.
ಸಕಲತರ ಮಾನ್ಯತೆಯಂ ಬಡೆದು ವಿರಾಜಿಸಿ
ಧಾರ್ಮಿಕ ಬದುಕಂ ಕಂಡ ಯೋಗಿನಿ. ಬೆಳ್ಳನರ
ಕೈತವದಿ ಶೃಂಖಲಾ ಬದ್ದೆಯಾಗಿ ಕಂಡಳ್, ಕಂಬನಿಯ
ಕೋಡಿಯಂ. ಮುವತ್ಕೋಟಿ ಮಕ್ಕಳ ತಾಯಾಗಿ
ಅನನ್ಯ ಸುರಸುಂದರ ಧಾರ್ಮಿಕ ಬದುಕಂ ನೆರೆ
ಬಾಳ್ದ ಯೋಗಿನಿಯುಂ ತಳಮಳಿಸುತಿರೆ ಅಂದಿನ
ಭಾರತೀಯರ್ಗೆ 'ತಮ್ಮತನ' ಮಂ ಅರಿತುಕೊಳೆ
ಕಾಲವೇ ಕುಬ್ಜಮೋ ಮನಮತಿಗಳೇ ಕುಬ್ಜಮೋ
ಎನಲ್ಕಾ ದುಃಖ ಸಂಕಟಂಗಳ್ ಯಥಾವತ್
ನಲಿದುವು.
ಮೆಕಾಲೆಯುಂ ಭಾರತ ಅರೇಬಿಯಾ
ಭಾಷಾ ಜ್ಞಾನದರಿವಿರದೆಯೆ ಸ್ವತಃ ಅಜ್ಞಾನಿ
ತಾನಿರ್ದು ಗೆಯ್ದೊಂದು ಕಟ್ಟುನಿಟ್ಟನಪ್ಪಣೆ
ಸಾರ್ದು ಇಂಗ್ಲಿಷ್ ಭಾಷೆಯಂ ರಾಜಭಾಷೆಗೆಯ್ದು
ಸಾಧನೆಯು ಸ್ವಾರ್ಥಮೂಲಮಾದೊಡಮದು ಸಧ್ಯ

ನಾಗರಿಕ ಕಾಲಮಾನಕ್ಕೆ ಬಿತ್ತ ತಾನಾಯ್ತು.
ಜನಗಣಮನದಿ ಕುತೂಹಲ ಕೊನರಿ ಭಾರತದ
ಬಡತನಂ ಜಡತನಂ ಪುಬ್ಬೆತ್ತಿ ನೋಡಿದುದು
ಸುವಿಶಾಲ ಜಗತ್ತಿನ ಪ್ರಜ್ಞಾನದ ಕಿಡಿಯಂ.
ಅಂತಿಂತು, ಭಾರತ ರಾಷ್ಟ್ರದಾದ್ಯಂತ ಇಂಗ್ಲಿಷ್
ಭಾಷೆಯ ಬೀಜಾಕ್ಷರಗಳ ಬಿತ್ತನೆ ಹುಲುಸಾಗಿ
ನಡೆದುದ್ಯೆ; ಆರಾರ ಅಡೆತಡೆಯು ಇಲ್ಲದಿರೆ
ಸದ್ದು ಗದ್ದಲಗಳ ಕಿರು ಸೊಲ್ಲು ಹೊರಡದಾಯ್ತು.
ಇಂಗ್ಲಿಷ್ ಭಾಷೆಯಂ ರಾಜಭಾಷೆಯೆನೆ ಗೌರವಿಸಿ ಬಲು
ಶ್ರದ್ಧೆಯಿಂ ಸಡ್ಡೆಯಿಂ ಪಟ್ಟಕಟ್ಟಿದರ್ ಭರತ
ಖಂಡದಾದ್ಯಂತ ಹುಲು ಬೆಳಸಂ ಬೆಳೆಸುವಂತೆ.
ಭಾರತರಾಷ್ಟ್ರವಂ ರಾಜ್ಯಭಾರ ಸೂತ್ರದಲಿ ಒಂದು
ಗೂಡಿಸಿದ ತೆರದಿ ಇಂಗ್ಲಿಷ್ ಭಾಷಾ ಸೂತ್ರದಿಂ
ಬೆಸೆದು ಒಂದು ಗೂಡಿಸಿತು ಇನ್ನೆಂದು ಕಡಿಯದ
ಮಾಳ್ಕೆಯಲಿ. ಇಂತಿಂತು ಮಿನ್ನೆಂದು ಏಕರಾಜ್ಯ
ಏಕಭಾಷೆಗಳ ಐಕ್ಯಮತ್ಯಂ ಒಗ್ಗೂಡಿ
ಏಕಛತ್ರದಡಿ ಬಾಳ್ವುದಿಲ್ಲಮೆನೆ ವಿಶೇಷ
ಸೂತ್ರ ಬದ್ಧಮಾದುದು ಸತ್ಯ. ಒಳಿತು ಕೆಡುಕಿನ
ಹಾಸು ಹೊಕ್ಕಿನ ಮುಸುಗು ತಾನಾಯ್ತು ಭಾರತಿಗೆ.
ಜೊತೆಜೊತೆಗೆ ಕ್ರಿಸ್ತಧರ್ಮದ ಮಹಾಪೂರಮಂ
ಹರಿಸಲ್ಯೆದ ಮಿಷನರಿಗಳ ಪ್ರತಿಭೆಯ ಬೆಳಕು
ಮಿಂಚಿನೊಲ್ ಮಿಂಚಿದುದು ಎಲ್ಲೆಡೆಯಲಿ ಜನಗಣ
ಮನ ಸೆಳೆವ ಪಾಂಗಿನಲಿ. ಮಿಷನರಿಗಳ ಅಬ್ಬರ
ಬೆಳೆದು ಪ್ರಭಾವಯುತ ಢಂಗೂರ ಬಡಿಬಡಿದು
ಬಾರಿಸುತಿರೆ ಸಾಮಾನ್ಯರ ಪಂಚೇಂದ್ರಿಯಂಗಳ್

ತಲ್ಲಣಿಪ ಪಾಂಗಿನಲಿ, ಹಿಂದೂ ಮತದ ತರುವಲಿ
ವೃಂದ ಮುಂದ್ಯೆದುದ್ಯೆ ಮನಗೆಟ್ಟು ಮುಂಗೆಟ್ಟು
'ತಮ್ಮತನ'ಮಂ ಮರೆತು ಸನಾತನ ಧರ್ಮಮಂ
ತಿರಸ್ಕರಿಸಿ, ಹಿರಿಯರ ಒಳ್ನುಡಿಯ ಕಡೆಗಣ್ಚಿ
ದೀಪದ ಕುಡಿಗೆರಗಿ ಪಟಪಟ ಸುಟ್ಟುರಿಯುವ
ಕೀಟಗಳ್ ಹೋಲಿ! ಸನಾತನ ಧರ್ಮನಿಧಿ
ಬೆಬ್ಬಳಿಸಿ ಬೆಕ್ಕಸ ಬೆರಗುವಟ್ಟು, ನರಳಿದುದು
ತನ್ನಯ ಸುಧರ್ಮ ನೀತಿಯದು ಅರಣ್ಯರೋದನ
ಮಾದ ರಣಗೋಳ್ ಭಾರದಿಂ, ನೊಂದು ನೋವಿನ
ಬೀಡಾಗಿ ಮರುಗಿ ಕಂಬನಿ ಮಿಡಿದಳ್ ಭಾರತಿ.
    ಇಂತೊಂದು ರುದ್ರ ಗಂಭೀರ ಪರಿಸ್ಥಿತಿಯಲಿ
ಬೆಂದು ಸುಟ್ಟುರಿದು ಕಟ್ಟುರಿಯಾದ ಭಾರತಿಯ
ವಿರಾಟ್ ಗಜಗರ್ಭದಲಿ ಮಿಸುನಿಯ ಮೊಟ್ಟೆಯುಂ
ಮೂಡಿ ಒಡೊಡೆದು ಮಹೋನ್ನತ ಧೀರ ಧೀಮಂತ
ವ್ಯಕ್ತಿಗಳುದಿಸಿದರ್ ಭರತಮಾತೆಯ ವಿರಾಟ್
ವಜ್ರದೇಹಿಗಳಾಗಿ! ಶ್ರೀರಾಮ ಕೃಷ್ಣ ಪರಮ
ಹಂಸರ್, ಕೇಶವಚಂದ್ರಸೇನ, ಪ್ರತಾಪಚಂದ್ರ
ಮುಜಮದಾರ, ಈಶ್ವರ ಚಂದ್ರವಿದ್ಯಾಸಾಗರ
ದೇವೇಂದ್ರನಾಥ ಟಾಗೂರ್, ರಾಮಮೋಹನ
ರಾಯ್, ರವೀಂದ್ರನಾಥ ಟಾಗೂರ್ ಮತ್ತಮಾ
ಸ್ವಾಮಿ ವಿವೇಕಾನಂದ!
                ಮುಂತಪ್ಪ ಪರಮೋಚ್ಚ
ಜ್ಞಾನವೇತ್ತರ್ ಮುಂದ್ಯೆದು ಎದುರ್ವೆತ್ತು ಭಾರತ
ಧಾತ್ರಿಯಾ ಸನಾತನ ಧರ್ಮಜ್ಯೋತಿಯಂ ನಭ
ನೀಲಿಗೇರ್ವಡಿಸುತ ಭುಜ ಸ್ಫಾಲನೆಗ್ಯೆದು
ಭಾರತ ಸುಸಂಸ್ಕೃತಿಯ ಪರಿಮಳದುಸಿರ್ ಹರಿಸಿ

ಬ್ರಿಟಿಷರ ತಂತ್ರಮಂ ಕೊಡವಿ ಜಾಡಿಸಿ ತಮ್ಮ
ಸ್ಥಿತಿಗತಿಯಂ ಉದ್ಘೋಷಿಸಿ ಜನಗಣಮನಮಂ
ಉದ್ರೇಕಿಸಿ ಸ್ವಧರ್ಮದ ಹುರುಳಂ ಜಡಮತಿಗಳ
ಗೊಂಡಾಟವಿಗೆ ತುಂಬಿದರ್, ಕೆರಳಿ ಕೆಂಪಾಗಿ
ಕೊರಳೆತ್ತಿ ನೋಳ್ಪಂತೆ! ಮತ್ತಮಾ ಭಾರತದ
ರಾಜಕೀಯದ ಸುಧಾರಣೆಗೆ ಸರ್ವತ್ರ ಪಣ
ಕಟ್ಟಿದರ್ ಜೀವನವ ಮುಡಿಪಿಟ್ಟರ್. ಅದ್ಭುತ
ಸಾಹಸದ ಪಥವಿಡಿದರ್! ಅಧಿಕತರ ಯೋಜಿತ
ಪಾದ್ರಿಗಳ ಅಬ್ಬರವದೊಂದು ಕಡೆ, ಚಿಂತಿತರ
ದುಃಖಿತರ ಪ್ರತಿನಿಧಿಗಳೆನಿಸಿದ ಧೀಮಂತ
ಧೀರೋದ್ದಾತ ಹಿಂದೂ ಪ್ರಜ್ಞಾನವೇತ್ತರ್
ಮತ್ತೊಂದು ಕಡೆ; ಬಡತನ ಜಡತನಗಳ ದಿವ್ಯ
ನಂಟು ಮಗದೊಂದು ಕಡೆ; ಜೊತೆಜೊತೆಗೆ ಆವೊಂದು
ವಿದ್ಯಮಾನಮಂ ಮನಗೊಳದ ನಿಶ್ಚಿಂತಾಲಸ್ಯ
ಬಡಭಾವನೆಯು ಮುಸುಗಿದ ಜನರಾಶಿಯು ನಿಚ್ಚ
ಕಣ್ಣಿದ್ದು ಕುರುಡಾದ ರೀತಿಯೊಂದು ಕಡೆ; ಮೇಣ್
ಇಂಗ್ಲಿಷರ ಬಾಲಬಡುಕ ರಾಜಮಹಾರಾಜರ
ಮೇಳಮಿನ್ನೊಂದು ಕಡೆ ಎನಲ್ ದೇಶದ ದಿವ್ಯ
ಪರಿಸ್ಥಿತಿಯಂ ಆಪನಿತು ಅವಲೋಕಿಸು ಮನವೇ!
ಭಾರತ ಧರಿತ್ರಿಯ ಸಮಾಜ ತಲ್ಲಣಿಸಿ ನೆರೆ
ಅಲ್ಲೋಲಕಲ್ಲೋಲಿತಮಾಯ್ತು ಅಪೂರ್ವತರ
ರಾಗದ್ವೇಷಗಳಿಂದೆ ತುಂಬಿ; ಆಗಳೇನಾ
ಪ್ರಾಚೀನ ಅರ್ವಾಚೀನಗಳ ಮಧ್ಯೆ ಉರಿಕಿಡಿ
ಭುಗಿಲ್ವೆತ್ತ ರೀತಿಯು ಅವರ್ಣನಮಯಮೋ ಎನೆ
ಧರಿತ್ರಿಯೊಳ್ ತೀವ್ರ ಜಟಿಲ ಕುಟಿಲತರಮಾಯ್ತು!

ಅಂದಿನಾ ಪರ್ವಕಾಲದಲಿ ಧರ್ಮಯುದ್ಧದ
ಕಣದೊಳ್ ಇಳಿದು ಧೀರತನದಿಂ ಮುಗಿಬಿಳ್ದೊಲ್
ಹೋರಿ ಹೋರಾಡಿ ಕೆರಳಿ ಕೆಂಡವೆ ತಾನಾದ
ರಾಜಾರಾಮಮೋಹನರಾಯ್ ಕೈಸೋಲ್ದು ಬಾಯ್
ಸೋಲ್ದು ಪಿಂಜರಿದನೇ ಪ್ರಾಚೀನ ಕಾಲೀನ
ಮೂರ್ಖಮತಿಗಳ ಮುಂತೆ? ಇಡೀ ಸಮಾಜವೇ
ಎದುರ್ವೆತ್ತು ಕೈಮಸೆದೊಡಂಬಿಡದೆ ತಾನೊರ್ವ
ಬರಿಗೈಯ ಕಲಿಬಂಟನಿರ್ದು ಕ್ಷುದ್ರ ಮನಮತಿಯ
ಬಂಗಾಳಿಗಳ ಮುಂತೆ ರುದ್ರಭೀಷಣ ಕ್ರೂರ
ಘೋರಾತಿಘೋರಮಪ್ಪ ಸತಿಸಹಗಮನಮಂ
ಕೀಳ್ಕೈಯ್ಯು, ಕಟು ನುಡಿಯ ಕಡಿಗತ್ತಿಯಂ ಬೀಸಿ
ಒಗೆದು ಬಾಯ್ ಕಾಳೆಗ ಹೂಡಿಯುಂ ಕುಬುದ್ಧಿಯಂ
ಮಣಿಸಲಾಗದಿರೆ ಚಕ್ರವ್ಯೂಹದಿಂ ತನ್ನ
ಹೆಜ್ಜೆ ಹಿಮ್ಮೆಟ್ಟಿಸದೆ ರೋಸಗೀಸದ ಕಟ್ಟು
ನಿಟ್ಟುಗಳ ಕಟ್ಬಾಳ್ ತಾನಾಗಿ ಆಳ್ವ ಬಿಳಿ
ಜನರ ಕಣ್ಣು ತೆರೆಸುವೊಡೆ ತಾಂ ರಣಯುದ್ಧ
ಸಿದ್ಧನಾದನಾ ಸಾಮಾಜಿಕರ ದಿವ್ಯಕುಲ
ತಿಲಕಮಣಿ! ರಾಜ ಕಾರ್ಯಭಾರದೊಡಂ ತನ್ನ
ಸ್ವಕಾರ್ಯಸಾಧನೆಯ ಪರಮಗುರಿ ಭುಜವೇರಿ
ನಿಂದತ್ತು ಗಂಭೀರ ಹೊರೆಯಾಗಿ. ಬಹುದೂರ–
ದೂರದ ವಿಲಾಯತಿಗೆ ಪಯಣಿಸಿದನ್ ಸಾಗರ
ಪಥವಿಡಿದು. ಬ್ರಿಟಿಷ್ ಪಾರ್ಲಿಮೆಂಟಿನ ಸದನ ಸಭೆ
ನಡೆಯುತಿರೆ ಸುಗಮಮಾಯ್ತು ಕಾರ್ಯದ ಸಾಧನಾ
ರಂಗಮಂ ಪುಗಲ್. ಧೀರ ಧೀರೋತ್ತಮ ರಾಯ್
ಉಸಿರ್ಗಟ್ಟಿ ಬಹುಮಂದಿ ಸದನ ಸದಸ್ಯರ್ ಕಂಡು

ಕರುಳ ಕರುಣೆಯ ಕತೆಯನೊರೆದು ಕೋರಿದಂ ಕಟು
ಕಠಿಣ ಕಾಯಿದೆಯ ಕಡುಗತ್ತಿಯಂ ಬೀಸುತ್ತೆ
ಬಗ್ಗು ಬಡಿಯಿರೆಂದು! ಕಡು ಕ್ರೂರ ವಿಷಯಮರಿತ
ಸದನವದು ಚೀರಾಡಿ ಕೂಗಾಡಿ ಥೂತ್ಕರಿಸಿ
ಮಾಂಕರಿಸಿ ಕರುಣದಿಂ ಒಮ್ಮತದ ಸಮ್ಮತಿಯಲಿ
ಕಾಯಿದೆಯ ಕಟ್ಟಳೆಯ ವಿಧಿವಿಧಾನಂ ಕೋದು
ಮಹಾರಾಜ್ಞಿಯ ಒಪ್ಪಿಗೆಯ ಮುದ್ರೆಯಂ ಒತ್ತಿ
ಎಲ್ಲಿಲ್ಲದ ಸಂಕಟದ ದಳ್ಳುರಿಯ ಬೆಂಕೆಗೆ
ನೀರೆರೆಯೆ ಕಾಯಿದೆಯ ಬಾಯ್ಗೆ ಸಕ್ಕರೆ ತುರುಕಿ
ದುಷ್ಟರೂಢಿಯಂ ಕೊನೆಗಾಣಿಸಿದನ್ ಮುಂದಿನ
ಪೆಣ್ಮಣಿಯರ ಬದುಕಿಗೆ ಜ್ಯೋತಿರ್ಕಿಡಿಯಂವೆಳಗಿ.
ಮಹಾರಾಜ್ಞಿಯ ಮುದ್ರಾಮುದ್ರಿತ ಅಪೂರ್ವತಮ
ಕೂರ್ವಾಣ ಭಾರತಕ್ಕೈದುದು ಮೂಢಮತಿಯಂ
ಕೊರೆದು ಕೋರ್ವೆಪ ಕಾಯಿದೆಯು ಉರಿಕಿಡಿ ಕಾರಿ!
ಸಾವಿರದೆಂಟನೂರಿಪ್ಪತ್ತನೆಯ ಇಸವಿ ಡಿಸೆಂಬರ್
ಎಂಟನೆಯ ತೇದಿ ಬಂಗಾಳಿ ಭುವಿಯ ನಾರೀ
ಮಣಿಯರ ಮಹಾಮಂಗಳದ ದಿನ! ಸತಿ ಸಹಗಮನ
ಕೂರಾತಿಕೂರ ರಣರೂಢಿಯಂ ಕಡಿದೊಗೆದು
ಮಹಿಳೆಯರನುದ್ಧರಿಸಿದ ಸುಂದರ ದಿನ. ಕಠಿಣ
ಕುಕರ್ಮದ ಕೊರಳ್ ತಿರ್ರನೆ ತಿರುಚಿದ ಪರಮದಿನ.
ಪೆತ್ತವರ ಕಂಬನಿಯಂ ತೊಡೆದಾ ಪವಿತ್ರದಿನ.
ಅಂದು, ಪೆಣ್ಮಣಿಯರ್ ಮನತಣಿದು ಸರಾಗದಿಂ
ಉಸಿರಾಡಿ ರಾಜಾರಾಮಮೋಹನರಾಯನಂ
ತಂದೆಯೆಂದು ಬ್ರಿಟಿಷ್ ರಾಜ್ಞಿಯಂ ತಾಯಿಯೆಂದು
ಪರಿಭಾವಿಸಿ ಹೃತ್ಪೂರ್ವಕ ವಂದನೆಯಂ ಸಲಿಸಿ

ಕೃತಾರ್ಥರಾದರ್ ಬಹಜೀವಿಗಳ್! ರಾಜಾ
ರಾಮಮೋಹನರಾಯನುಂ ಭಾರತದ ದಿವ್ಯ
ಬಹುಮೂಲ್ಯ ಸತ್ಕೀರ್ತಿ ಪರಿಮಳಮದೆಂದಿಗುಂ
ಕಂದಿ ಕುಂದಿ ಬಾಡದೆ ತೊಳಗಿ ಬೆಳಗಿ ಉಜ್ವಲ
ತೇಜದಿಂ ಸ್ಥಿರಸ್ಥಾಯಿಗೊಳೆ ಶ್ರಮಿಸಿ ಶ್ರಮಿಸಿ
ಶ್ರಮ ಜೀವಿಯಾಗಿಯೆ ಕಾಲವಶನೈದ ಧೀರ
ಮಹನೀಯ! ಇಂತಿಂತು ಪರ್ವಕಾಲದಲಿ ಕಣ್
ತೆರೆದುನೋಡಿ 'ತಮ್ಮತನ'ವನರಿಯುತೆ ದೂರದ
ಜಗತ್ತಿನ ಚೆಂಬೆಳಕಿನ ಕಿರಣವ ಬರಮಾಡಿ
ಕೀಳ್ಮತಿಯ ಕೀಳ್ಮಾಡಿ ಕೊಲೆಗೈದು ಈಡಾಡಿ
ಕುಸಂಸ್ಕಾರ ಪ್ರಭಂಜನಾರ್ಥಂ, ಸುಸಂಸ್ಕಾರ
ಸಂಯೋಗಾರ್ಥಂ ಧೀರ ಧೀಮಂತರ್ ಕನಲ್ಬು
ರೊಚ್ಚಿಗೆಳ್ದ ಚಿತ್ರವದಂತು ಘೋರಾತಿಘೋರ
ಕರ್ಮಕಾಂಡಮಾಯ್ತು. ಅದನರಿದರಿದು ಸುಶಾಂತಿ
ಮಂತ್ರಮಂ ಹಾಡಿಯುಂ ಕೂರ ಸಾಮಾಜಿಕ
ಪಿತೃವರ್ಗ ಮಿಣ್ಣನೆ ಇರ್ದುದೇಂ? ತೋಷದಿಂ
ಒಪ್ಪಿತೇಂ? ಸತಿಸಹಗಮನ 'ಶಾಸ್ತ್ರ ಸಮ್ಮತಂ'
ಎನುತ್ತೆ ಅಧಿಕ ರೋಷದ ಕಿಡಿಗಳ್ ಕಾರಿ ಎಡೆ
ಬಿಡದೆ ರೇಗಿ ಕೇಗಿ ಅವಾಚ್ಯ ವಾಕ್ಯಗಳಿಂದೆ
ಜಿಹ್ವೆಯಂ ತಣಿಸಿ ವಿಷಕಾರಿದರ್ ಮನದಣಿಯೆ.
ಆದೊಡಂ, ಕಾಯಿದೆಯದು ಎಂದೆಂದಿಗುಂ ದಿಟ್ಟ
ಕಾಯಿದೆಯೆ! ಒರ್ಮೆ ಬೀಸಿದ ಖಡ್ಗ ಪಿಮ್ಮರ‍್ಳಿ
ಬರಲುಂಟೆ? ಸಿಟ್ಟಿನ ಸೊಗಡೇರಿ ಪಲ್ ಕಡಿಯುತೆ
ರಾಜಾ ರಾಮಮೋಹನರಾಯನಂ ಕಡಿಕೊಚ್ಚಿ
ಕೊಲ್ವ ರೋಷ ಉಕ್ಕುತಿರೆ ಎದೆಎದೆಯಲಿ ನಿಚ್ಚ

ಗೊಂದಣಂ. ಆದೊಡವನಿರ್ದುದು ಸುದೂರದಾ
ವಿಲಾಯತಿಯಲ್ಲಿ! ಸಾಮಾಜಿಕ ಸುಧಾರಣಾ
ರಂಗದಲಿ ತನ್ನಂ ಮುಡಿಪಾಗಿಟ್ಟು, ಜೀವದ
ಹಂಗು ತೊರೆದು ದುಡಿದು ಮಡಿದ ವೀರವರ ಕಾಣ್
ರಾಜಾರಾಮಮೋಹನರಾಯ್! ಅಂದಿನಾ ಜನ
ರಾಶಿ ಆ ಕಾಲಮಾನ, ಆ ಮತಿಗೆಟ್ಟ ನವ
ತರುವಲಿಗಳ ರೌದ್ರಾವತಾರ, ಆ ಬೆಳ್ಳನರ
ಕುಟಿಲ ನೀತಿ ಎಲ್ಲವಂ ಎಡೆಎಡೆಯೊಳೆದುರಿಸಿ
ಪೆಣ್ಮಣಿಯರಿಗಾಗಿ, ಸುಸಂಸ್ಕೃತಿಯ ಉಳಿವಿಗಾಗಿ
ಮೆಯ್ಯನೆತ್ತರಿನ ಕಣಕಣಂ ಬಸಿದು ಜನ್ಮವಂ
ಸಾರ್ಥಕಗೊಳಿಸಿದ ಪರಮ ವೀರ ರಾಜಾರಾಮ
ಮೋಹನರಾಯ್! ಭಾರತಿಯ ಔರಸ ಪುತ್ರರತ್ನ!
ಆದೊಡಂ ಕಡುಧೂರ್ತ ಸಮಾಜದಿಂ ದೂರದೊಳ್
ಉಳಿದು ರಾಷ್ಟ್ರದ ದುರ್ದೆಶೆಯಂ ನೆನೆದು ಮನದಲಿ
ಮರುಗುವಂ, ಕರಗುವಂ. ಇಂತಿಂತು ನೋಯುತಿರೆ
ಮನಂಗೆಟ್ಟು, ಆರೋಗ್ಯಭಾಗ್ಯವೇ ಮೈವಿಟ್ಟು
ಹದಗೆಟ್ಟು, ರೋಗಬಾಧೆಗೊಳಗಾದನಾ ನಿಜ
ಪರದೇಶಿ. ಕುಟುಂಬಿಗರಿಲ್ಲ. ಮರುಗುವರಿಲ್ಲ
ಬಡತನದ ಬವಣೆಯಲಿ ಸಿಲ್ಕಿದಂ ವಿಲಾಯತಿ
ನಗರಿಯಲಿ. ತಾಯಿ ಭಾರತಿಯ ಜೀವನಂ ನೆರೆ
ನೆಗಳ್ದು ಸಂಬಾಳಿಪ ಮಹೋದ್ದೇಶಮಂ ಪೊಂದಿ
ಹೋರಾಡಿದ ವೀರಂ ಪರದೇಶಿಯೈಸಿ ಅಲ್ಲೆ
ನೆಲೆನಿಲ್ದು ಪರಾಶ್ರಯದೊಳ್ ಕಂಬನಿಯ ಕೂಳ್
ಉಂಡು ವಿಧಿವಶನಾದ ನತದೃಷ್ಟ ಬ್ರಾಹ್ಮಣ!
ಭಾರತ ಭುವನ ಮಂಡಲ ದೇಶೋ ವಿಶಾಲಂ

ಪ್ರವಹಿಸಿತು ಎಂದಿನೊಲ್ ನಾಗರಿಕ ಕಾಲನದಿ
ಮುಂಪಥವಿಡಿದು. ಹರಿದ್ರ ವರ್ಣಮಯ ತೇಜದಿ
ರವಿ ಮುಗಿಲ್ಮಂಚವೇರಿ. ವಿಜೃಂಭಿಸಿದಂ ಅಸ್ತ
ಮಾನ ಶೋಭೆಯಲಿ. ದಿಕ್ತಟದಿ ಕೆಂಪಿನೋಕುಳಿ
ಜೀರ್ಕೊಳವಿಯೊಳ್ ಎರಚಿ ಮೆರೆದತ್ತು ಹೊಸರಂಗು.
ಇರುಳ್ ಮುಡಿಗೆ ಮಲರಿದುವರಿಲ್ ಚುಕ್ಕಿ ಚುಕ್ಕಿ.
ಮೆಲುಮೆಲ್ಲನೆ ಪರ್ಬಿತ್ತಂಬುಧಿಯಮೇಲೆಲ್ಲ
ಮರ್ಬುದಿಂಗಳ ನವುರುಮಯ ಮಧುರ ಹಾಸಿನಾ
ಲೀಲೆ. ಮಂಜು ಜೊನ್ನವೊಳೆ ಪೊನಲ್ವರಿದುದು ಮುಂ
ಮುಂದೆ ದೂರ ತಟನಿಗಭಿಮುಖವಾಗಿ. ಆತುರ
ಕಾತರದಿ ಧುಮುಧುಮಿಸಿ ಪಾತ್ರಮಂ ಮುದ್ದಿಸುವ
ಗುರಿ ಸರಿಲ್ಲಕ್ಷಿಯ ಯೋಧಗತಿಗೆ. ಗಿರಿರಾಜನ
ಶಿಖರದೇಶಂ ಮೆರೆದುದು ಸಾಯಂ ಶೋಭೆಯುಂ
ಮೈಯ್ಗೊಂಡು ಭವ್ಯ ಸ್ವರ್ಗೀಯ ವೈಭವ ಮೀರಿ!
ಎಲ್ಲೆಡೆಯಲಿ ಸಂಪೂರ್ಣ ಪ್ರಶಾಂತ ಸಮಯದ
ರಾಗಾರುಣತಾನಂ ಹರಡಿದುದು ಎಂದಿನೊಲ್.
ಬೈಗುಗಪ್ಪು ಇಳಿದಿಳಿದು ಮುಸುಗಿತು ಬ್ರೊಮ್ಹಾಂಡ
ಮಂಡಲಂ. ಶಾಂತಿಯಿಂ ಸಾರಿತು ನಿಶಿರಾಜ್ಯಂ.
    ನಿಶಿಯುರುಳಿ ದಳದಳ ಅರಳಿತು ಸುಪ್ರಭಾತದ
ಪುಷ್ಪ. ದಿನಚರಿಯ ಭಾರದಲಿ ತೇಂಕಾಡಿದುದು
ಜನರಾಶಿ. ವನವಕ್ಕಿಗಳು ಹಾಡಿದುವು ಸಕಲ
ತರ ತಂತ್ರಿಯಂ ಮೀಂಟಿ. ಉಕ್ಕಿ ಹರಿಯಿತು
ಜಯಗಾಥದ ಕಲ್ಯಾಣರಾಗಧುನಿ. ಪರಿಮಳ
ದ್ರವ್ಯದಿಂ ತುಂಬಿದೆ ಅನಿಲ ಮಂಡಳಂ. ಅರಳಿ
ದಳಬಿರಿದ ಪುಷ್ಪಕೋಟಿಯುಗುತಿವೆ ನರುಗಂಪು.

ಏನ್ ಗಾನಮಯ ಸಂಪದಂ? ಏನ್ ಗಂಧಮಯ
ಪರಿಮಳಂ? ಸುಖದುಃಖ ಮೂರ್ಛೆಗೆ ಸಲ್ಲಿದೊಲ್
ಬೆಬ್ಬಳಿಸಿ ಆತುರಮಯಮಾದುದು ಜೀವನದಿ.
ಭವ್ಯಬಂಗಾಳದ ಮಿಸುನಿ ಭೂಮಿಯಲಿ ಮೂಡಿ
ಬಗೆಬಗೆಯ ಪ್ರಕಾರಗಳಲಿ ಅರ್ವಾಚೀನ
ಸಂಯೋಜನೆಯುಂ ಹೊಂಚಿದ ಜ್ಞಾನ ಪ್ರಜ್ಞಾನ
ತಂತ್ರ ಜ್ಞಾನಗಳಾದಿ ವಿದ್ಯಾವಿಶೇಷಗಳ್
ತಲೆಯೆತ್ತಿದುವು ದೂರ ಪಾಶ್ಚಾತ್ಯ ಗಾಳಿಯಿಂ
ಭುಗಿಲ್ಗೊಂಡು; ಧೀಮಂತ ಜನ ಸಂಸರ್ಗದಿಂ
ಮುಂಬೆಳೆದುವು ಅಮರಾತ್ಮಕವಾಗಿ. ತತ್ತ್ವಶಾಸ್ತ್ರ
ಧುರಂಧರರ್ ಮುಂದ್ಯೆದು ನವನವೀನತರತಮ
ಅತಿಶಯದಾವಿಷ್ಕಾರಂಗಳಂ ಸೈದ್ಧಾಂತಿಕ
ಸ್ಥಿರ ತತ್ತ್ವಗಳನಂಗೀಕರಿಸಿ ಬಗೆಬಗೆಯ
ವಿದ್ಯಾಲಯಗಳ್ ತತ್ತ್ವ ಮಂದಿರಗಳ್ ಕಟ್ಟಿ
ಬೆಳೆಸಿದರ್. ವ್ಯಕ್ತಿ ಸ್ವಾತಂತ್ರ್ಯದ ಪರಮ ಹಕ್ಕು
ಬಾಧ್ಯತೆಗಳಂ ಸಾರಿ ಜನಮನಗಣಮಂ ಮಿಡಿದರ್.
ಕಬ್ಬಿಗರ್ ನವಯುಗದ ನವದೃಷ್ಟಿಯ ಸುಮಧುರ
ಕಾವ್ಯವಂ ಹಾಡಿದರ್ ಯುಗಯುಗದ ಜಡನಿದ್ದೆ
ಹರಿಸುವ ತೆರದಲಿ. ಮಾನಸಿಕ ಕ್ರಾಂತಿ ಬೌದ್ಧಿಕ
ಕ್ರಾಂತಿ ನಾಗರಿಕ ಕ್ರಾಂತಿಗಳ ಕಿಡಿಗಳ್ ಮೂಡಿ
ಸಿಡಿಯುವವೊಲಾಯ್ತು! ದೂರದ ಫ್ರಾನ್ಸ್ ದೇಶದಲ್ಲಿ
ಪ್ರಚಂಡ ಕ್ರಾಂತಿಯ ಬಿರುಗಾಳಿಯು ಬೀಸಿರಲ್,
ಆ ಬಿಸಿಯ ಬೆಂಕೆಯುಂ ಮುಟ್ಟಿತಟ್ಟಿ ಕೆರಳಿಸಿ
ಇತರೆಡೆಗಳಲಿ ತಲೆಯನೆತ್ತಿದುದು ಮಹಾ ರಾಜಕೀಯದ
ವಿಪ್ಲವ. ಮನುಕುಲಜರ್ ಜನ್ಮತಃ ಸ್ವತಂತ್ರರ್, ಸರಿ

ಸಮಾನರ್ ಮೇಣ್ ಸೋದರರ್ ಎಂದೆಂಬುವೊಡೆ
ಉದಾರತೆಯ ತತ್ತ್ವಂ ವ್ಯಾಪಕವಾಗಿ ಪ್ರಪಂಚ
ವಿಶಾಲಕರವಾಗಿ ಹರಡಿ ಹಬ್ಬುವೊಲ್ ಮಿಂಚಿ
ಮೆರೆದುದು ಸುಪಥವಿಡಿದು.
ಅಂತೊಂದು ರಾಜಕೀಯ
ವಿಪ್ಲವ ವಿಶೇಷವದು ಸಾಮಾಜಿಕಗತಿಯಂ
ಮುಟ್ಟಿ ತಟ್ಟಿ ಚೋದಿಸಲುರೆ ಪಾಶ್ಚಿಮಾತ್ಯಕ್ರಾಂತಿ
ಬಿರುಗಾಳಿಯಲಿ ತೇಲುತಲ್ಕೈದುದು ಭಾರತದ
ಭೂತಲಕ್ಕೆ. ಆ ಕೆಂಜರಿಯ ಪ್ರಳಯಪೂರ
ನುಗ್ಗಿ ಬರುತಿರಲದಂ ಕಂಡು ಕಾಣುತ್ತಲಿ
ಭಾರತೀಯರೆಳೆನೆತ್ತರ್ ಕುದಿಯದಿರ್ದೊಡದು
ಸಂಜೀವನದ ಸೂಚನೆಯೇಂ? ಅಹ ಕಣ್ಣಿರ್ದು
ಕುರುಡಾಗಿ ಉಳಿಯಲುಂಟೆ ನೆಡೆವೆಣಗಳ ತೆರಂ?
ಭಾರತೀಯರ ಎಳೆಯ ನೆತ್ತರ್ ಕುದಿದು ತರುಣ
ಗಣಂ ತಮ್ಮ ಆತ್ಮೋದ್ಧಾರದೊಳ್ ನೆಚ್ಚಿಟ್ಟು
ಕೆಚ್ಚಿನ ಕಲಿಗಳೆನೆ ನವ ಪುರುಷಿನ ಸೆಳೆತದಲಿ
ಕೊಚ್ಚಿಹೋದುದು ಮಹೋನ್ನತ ಸಮಯ ಸ್ಫೂರ್ತಿಯ
ಶುಭಸಂಕೇತ! ಭೋಂಕನೆ ಸಿಡಿದು ಪಜ್ಜೆಯಂ
ಮುಂದೂಡುವಾ ಸನ್ನಿವೇಶ! ಮೂಢಮತಿಗತಿಯ
ಇಲ್ಲಣದ ರಾಶಿಯಂ ಕೊಚ್ಚಿ ವಿಜ್ಞಾನಯುಗದ
ದಿವ್ಯಾಂಕುರಕೆ ಬಿತ್ತ ಬಿಳ್ದತ್ತು! ಸುಜ್ಞಾನ
ಪಿಪಾಸಿಗಳಿಂಗೆ ಕಲಿತು ಬಲಿವಾಸೆ ಕೊನರಿರೆ
ಆಪನಿತು, ಆಪನಿತು ಆವೇಶದಾವೇಶದಿಂ
"ಸಂಭವಾಮಿ ಯುಗೇ ಯುಗೇ" ಎಂದೆಂದು ಸಾರಿದ
ಭಗವಾನ್ ಶ್ರೀಕೃಷ್ಣನ ಆಶ್ವಾಸನೆಯದೇಂ

ಪೊಳ್ಳಲ್ಲಮೆಂದು ಮೆಯ್ಮರೆತು ಪ್ರತೀಕ್ಷಿಸಿತಾ
'ಸಂದಿಗ್ಧ ಪರಿಸ್ಥಿತಿ' ಪರಮಾತ್ಮ ಸಹಾಯಂ.
ಈ ಎಲ್ಲ ವಗೆಯ ಹಗರಣದ ಜಂಜಡದೊಳ್
ಮೂಡಿ ಧಗಧಗಿಸಿದ ಪರಿಸ್ಥಿತಿಯ ಸಾರಮಂ
ಬಸಿದು ಮೈಗೊಂಡು ಅನುಭವದ ಸ್ವರ್ಣನಿಧಿಯುಂ
ತಾನಾಗಿ ಬೆಳೆಯುತಿರ್ದನಾ ಧೀರ ವೇದಾಂತ
ಕೇಸರಿ ವಾಗ್ಮಿ ಪ್ರವರ ಶ್ರೀಪುರುಷೋತ್ತಮ ಸ್ವಾಮಿ
ವಿವೇಕಾನಂದ ಗುರುವರ್ಯನುಂ ಲೋಕೋತ್ತರವಾಗಿ!
ಭೀಷ್ಮ ದಿಗ್ ನಗರಿಯಿಂ ರೊಯ್ಯನೈತಂದ
ಗಾಳಿ, ತಂಗಾಳಿಯ ಮೃದು ಮಂದಗತಿಯ ಮಧುರ
ಸಂಚಲನ ಸುಸುಂದರ ಮದನಾರವಿಂದಮಂ
ಮೋಹನೀಯ ತಣ್ಗೈಗಳಿಂ ಮುದ್ದಿಸಿ ನಡೆದಿರೆ
ಮೈನಡುಗುವನಿತು ಶೀತ ಶೀತಲತೆಯ ಮುದ್ರಾ
ಮುದ್ರಣ ತಾನಾಯ್ತು! ನರೇಂದ್ರನುಂ ಪ್ರಾಂಗಣದೊಳ್
ಪದಚಾರಣಂಗೈಯುತೆ ಆಲೋಚನಾಶೀಲ
ಗಾಂಭೀರ್ಯದಲಿ ಮುಳುಗಿದನ್. ಬಗೆಬಗೆಯ ವಿಶ್ವ
ವಿಚಾರಗಳ ಸಾಹಿತ್ಯ ಜಡಿತುಂಬಿದುದು ಮನ
ಮಂಥನಕೆ ಬಿತ್ತಾಗಿ. ಚಿಂತನಾವೇಶದಲಿ
ಜಗಮಂ ಮರೆತು ಜಾನಿಪನ್ ತನ್ನೊಳೇಕಾಂತದಿ.
ವರ್ಣವರ್ಣಾಂತ ಪುಷ್ಪಭರಿತ ನವೋದಯದಿ
ವಸಂತನ ಮಾನಸ ಲಸಲ್ಲತೆಗೆ ಮನ ಬೀತು
ಹೋದ ಪಾಂಗಿನಲಿ, ಎಳೆಯನ ಚಿಂತನಾದ್ರವ್ಯ
ಘನಿಸಿ ಹೆಪ್ಪಿಟ್ಟುದೊ ಎನಲ್ ವಿಕಸನಮಾದುದು
ಮನದಿ. ಆಲೋಚನೆಯಲೆಯಲಿ ಪ್ರಶ್ನೆಗಳೆದ್ದು
ನಿಲ್ಲುವುವು ಪುಂಖಾನುಪುಂಖಮಪ್ಪಿ. ತನ್ನೊಳ್

ಯೋಚಿಸಿದನಿತು ಜಟಿಲಗೊಳ್ವುದು ಸಮಸ್ಯೆಗಳ
ಜಾಲ. ನಾನಾ ಬಗೆಯ ದರ್ಶನ ಶಾಸ್ತ್ರಗಳನೋದಿ
ಹಳೆಹಳೆಯ ಕುರುಡು ನಂಬಿಕೆಯೋಡೊಡೆದು ಚೂರು
ಚೂರುಗೈದು ಜಾಡಿಸುವಂ. ದೂರ ಪಾಶ್ಚಾತ್ಯ
ತತ್ತ್ವಶಾಸ್ತ್ರಗಳ ಅಧ್ಯಯನಗೈವಂ. ಪೂರ್ವ
ಪಶ್ಚಿಮಗಳ ತಾರತಮ್ಯವಂ ತುಲನೆಗೈವಂ.
ಹೃದಯಾಬ್ಧಿಯಲಿ ಸಂಶಯಗಳಲೆಗಳೋಳಿಯ
ತುಮುಲ ಯುದ್ಧಂ ನಡೆದಪುದು ಎಣೆಯಿರದ ತೆರದಿ.
ಯೋಚಿಸುತೆ ಮನವಂ ವಿದೇಶದ ಭುವಿಯಲಿ ನೆಲೆ
ಗೊಳಿಸಿ ಹೇಕಾರ್ಟನ ಅಹಂವಾದ, ಹ್ಯೂಮ್-ನ
ನಾಸ್ತಿಕ ನಿರೀಶ್ವರವಾದ, ಸ್ಪೆನ್ಸರನ ಅಜ್ಞೇಯ
ವಾದ ಇತ್ಯಾದಿ ವಿಭಿನ್ನದರ್ಶನಗಳ ಮಹಾ
ಜಟಿಲಮಯ ವಿಚಾರದಲಿ ಸಿಲ್ಕಿ ತೊಳಲಿಬಳಲುತೆ
ಸತ್ಯದರ್ಶನಕಾಗಿ ಹಾತೊರೆಯುವಂ, ತರುಣ.
ಭವ್ಯ ಬ್ರಹ್ಮಾಂಡದ ಸಂಯೋಜನೆಯ ಕ್ರಮಗಳ್
ಏವುದು? ಪಂಚೇಂದ್ರಿಯ ಗ್ರಾಹ್ಯಮಾದ ಜಗ ಜೀವನ
ವ್ಯಾಪಕತೆಯೊಳ್ ಸೂತ್ರದಾರೀ ಶಕುತಿಯೇವುದು?
ಮನುಕುಲದ ಗುರಿಯೇವುದು? ಆನೇಕಿಲ್ಲಿಗೈದೆಂ?
ಪೋಪುದೆಲ್ಲಿಗೆ? ಈವಗೆಯ ನಿತ್ಯಾಗಮನಾಗ-
ಮನವಾದೊಡಂ ಏಕೆ? ಮಾನವನುಗಮದ ನಿಜ
ಉದ್ದೇಶವೇಂ? ಜ್ಞಾನದ ಚೆಂಬೆಳಕಿನಲಿರ್ದು
ಪ್ರಜ್ಞಾನಮಂ ಪಡೆಯನೇಕೆ? ಜಗದ ಆದಿಯೆಲ್ಲಿ?
ಅಂತ್ಯಮೆಲ್ಲಿ? ಇದರ ರಹಸ್ಯಮೇಂ? ಎಂಗೈಯೆ
ತಿಳಿಯಲಳವು? ಇಂತಪ್ಪ ಬ್ರಹ್ಮಾಂಡ ರಹಸ್ಯ
ಪೂರ್ಣ ಪ್ರಶ್ನೋಪಪ್ರಶ್ನೆಗಳ್ ಏಳುತಿರುತಿರೆ

ಅತೀಂದ್ರಿಯ ಲೋಕವುಂ ಜಟಿಲಾತಿಜಟಿಲಂ.
ತತ್ತ್ವಶಾಸ್ತ್ರಂಗಳ ಮಹಾಟವಿಯಲಿ ಅಲೆಯುತೆ
ತೊಳಲಿ ಬಳಲಿ ಬೆಂಡಾದನ್ ತರುಣ ಜಿಹಾಸಿ.
 ಸನಾತನ ಧರ್ಮ ವೇದವೇದಾಂತಗಳ್, ಉಪ-
ನಿಷತ್ತುಗಳ್ ಷಡ್ದರ್ಶನಗಳ್, ಪುರಾಣ ಪ್ರಥಿತ
ಕಥೋಪಕಥನಗಳ್ ವಾಲ್ಮೀಖಿ ವ್ಯಾಸ ಶುಕ
ಮೇಣ್ ಕಾಂಟ್ ಅರಿಸ್ಟಾಟಲ್ ಹೇಗಲ್ ಪ್ಲೇಟೊ
ವರ್ಡ್ಸ್‌ವರ್ತ್ ಷೆಲ್ಲಿ ಇವೆಲ್ಲದರ ಅಧ್ಯಯನ
ನಡೆಸಿ ಮುಗಿಬಗಿಯಾಯ್ತು. ಅದರಿಂದೇನ್ ಕದಡಿದ
ಮನೋದಧಿಗೆ ಶಾಂತಿಯ ಝರಿ ಹರಿಯದಿರಲಾ
ತರುಣ ಯೋಚಿಸಿಯೋಚಿಸಿ ಭಾವನೆಗಳ ಭಾರ
ಯೋಗದಲಿ ಹೆಗ್ಗೂಡಾದಂ, ಸಂದೇಹ – ಸಮಸ್ಯೆಗಳ್
ಘನಿಸಿದುವು ಬಗೆಗದಡುವ ತೆರದಲಿ.
 ಇನ್ನೇನ್
ಗತಿ? ಎಂತಿದರ ಪೂರ್ಣ ಪರಿಹಾರ? ಎಂಬೊಂದು
ಚಿಂತೆಯುಂಕಾಡಿ ಕೊರೆಯುತಿರ್ದುದು ಸರ್ವತ್ರ
ಸದಾ. "**ಸಂಶಯಾತ್ಮಾವಿನಶ್ಯತಿ**" ಎಂಬುದರ
ಅರಿವು ಇರ್ದೊಡೇಂ ಅಶಾಂತಿಯ ಬಲವೇಬಲ.
ಸಂದೇಹ ಸಮಸ್ಯೆಗಳ ಜಾಲದಲಿ ಸಿಲ್ಕಿ ತೊಳಲಿದುದು
ಚಿತ್ತಪ್ರವೃತ್ತಿ. ತೊಡಕು ಬಿಡಿಸದ ಜಟಿಲಾತಿ
ಜಟಿಲತೆಯು ಎಡೆಬಿಡದೆ ಬೈರಿಗೆಯೊಲ್ ಕೊರೆವುದು
ತಲೆಯಂ. ಭರತ ಭೂಮಿಯ ಜೀವನ ವಾಹಿಯಲಿ
ಮಹಾ ಪುರುಷವರೇಣ್ಯರುಂ ಜ್ಯೋತಿರ್ಧಾರಿಗಳ್
ತಾವಾಗಿ ಕಾಲಕಾಲದೊಳ್ಬೈದು ಸನ್ಮಾರ್ಗ
ದರ್ಶನಗೊಳಿಸಿದ ಮಹೋನ್ನತ ಚಿತ್ತಾರ

ಮನೋಭಿತ್ತಿಯಲಿ ಸುಳಿವುದು, ಆತ್ಮ ಜ್ಯೋತಿರ್ಕಿಡಿಗೆ
ತೈಲವೆರೆವಂತೆ. ತಾರುಣ್ಯದೈಸಿರಿಯುರ್ಬಿ
ಶಕ್ತಿ ಸಂಪುಟ ಜೃಂಭಿಸಿತು ಕೇಸರಿಯ ಓರಿಮೆ
ಮೈಗೂಡಿದ ಪರಿಯಲಿ. ವಿದ್ಯಾರ್ಥಿ ವೃಂದದೊಳ್
ಗಂಭೀರ ಸುಚಿಂತಕನಿರ್ದು ಪ್ರತಿಭಾನ್ವಿತ
ಸಂಪನ್ನನಾಗಿ, ವಿಮಲ ಹೃದಯನಾಗಿ ತಾಂ
ಬೆಳೆಯುತಿರ್ದಂ ನೂತನ ವ್ಯಕ್ತಿತ್ವವಂ ಕಡೆ
ಕಡೆದು. ವಿಶ್ವತೋಮುಖ ವಿಶ್ವವಿದ್ಯಾಲಯದ
ಚೈತನ್ಯ ಮೂರ್ತಿಯೆನೆ ಬೆಳಗಿದನ್ ವಿದ್ಯಾರ್ಥಿ
ಮಂಡಲದ ಮಧ್ಯೆ. ಕಾಲಚಕ್ರಮುರುಳಿಯುರುಳಿ
ಮಾಸವದೊಂದು ಕಳೆದುದು ಚಿಂತೆಯ ಹೊನಲ್ ಹರಿಸಿ.
ಕಡುವೇಸಗೆಯ ಸುಡುವಿಸಿಲ್ ಧಣಧಣಿಸಿತು ಉರಿ
ಕಿಡಿ ಸುರಿಸುವ ತೆರದಿ, ಉರಿಮೈಗೆ ಸುಡುಮುತ್ತಿನ
ಮುದ್ರೆಯೊತ್ತಿ. ಚೈತ್ರವೈಶಾಖೀ ಪ್ರಭುವಿನ
ಒಡ್ಡೋಲಗದೊಳ್ ಬೀಸಿಯೇ ಬೀಸಿತಾ ಸುಡು
ಗಾಳಿ. ಮೆಯ್ಯರೋಮಂಗಳಂ ಸುಟ್ಟುರಿಸುವ
ವೆಗ್ಗತನದಿಂ ಅಗ್ನಿ ಸ್ಫುಲ್ಲಿಂಗಗೊಳಿಪಂತೆ
ಉರಿದುದು ಘನಿಸಿ ಬಿರುಬೇಸಗೆಯ ಸುಡುಗಾಲಂ.
ನರೇಂದ್ರಂ ದಿನದಿನ ಬಳಿಸಾರಿಬಹ ಪರೀಕ್ಷೆಯ
ಸಲುವಾಗಿ ಮುಳುಗಿದಂ ಪಾಠದಲಿ. ಇತರಿತರ
ಮಾನಸಿಕ ಚಿಂತನಾ ದ್ರುವ್ಯದ ತುಮುಲಗಳುಂ
ಅರುಗಾದುವು ಅತ್ತಿತ್ತಲ್. ಇಂತಿಂತು ಗಂಭೀರ
ಗತಿಯ ಖಡ್ಗದಲುಗಿನ ಮೇಲೆ ಹರಿದಾಡುತಿರೆ
ಮನೋಗತಿ, ಅಂದಿನ ತರಗತಿಯಲಿ ಪಾಠಕ್ಕೆ
ಸದ್ವಸ್ತು ಆಂಗ್ಲೇಯ ಮಹಾನ್ ಕವಿಋಷಿಯೊಲ್

ಜೃಂಭಿಸಿದ ವರ್ಡ್ಸ್‌ವರ್ತ್ ಮಹನೀಯನ ಕಾವ್ಯ
ಧಾರೆಯಂ ಓದಿ ವಿವರಿಸುತಲಿರ್ದ ಕೆಮ್ಮೊಗ್ಗದ
ಆಂಗ್ಲೇಯ ಅಧ್ಯಾಪಕಂ, ಆ ಕವಿಋಷಿಯುಂ
ತನಗಾದ ಸಮಾಧ್ಯವಸ್ಥೆಯಂ ಬಣ್ಣಿಸಿದ
ಪಂಕ್ತಿಗಳನೋದಿ ವಿವರಿಸಿ ಕೇಳಿಸಿದನಿಂತು,
"ನೀಮಿದರ ಅಂತರಾರ್ಥಮಂ ಸುಲಭದಿ ಅರಿತು
ಕೊಂಬುವೊಡೆ ದಕ್ಷಿಣೇಶ್ವರದ ಶ್ರೀರಾಮಕೃಷ್ಣರಂ
ಕಂಡರಿದು ತಿಳಿಯಿರ್ಪೈ. ಆ ಅನಿರ್ವಚನೀಯ
ಸ್ಥಿತಿಯಂ ಕಣ್ಣಿನಿಂ ಕಾಂಬ ಭಾಗ್ಯ ನಿಮಗಕ್ಕುಂ!"
ಅನ್ನೆಬರಮೆಂದು ಶ್ರೀರಾಮಕೃಷ್ಣರ ಪೆಸರ್
ಕೇಳರಿದ ವಿಚಾರಮಿರದಿರೆ ಆಂಗ್ಲೇಯನಾದ
ಅಧ್ಯಾಪಕನ ಬಾಯೊಳುಣ್ಮಿದ ಅಪೂರ್ವತರ
ವಿಷಯ ಅಚ್ಚೊತ್ತಿದುದು ನರೇಂದ್ರನ ಮನಃಚಿತ್ತ
ಪಟಲದಮೇಲೆ.
ಮಲಗಿರ್ದ ಮಳೆರಾಯನೆದ್ದು
ತುದಿಗಾಲಿನಲಿ, ನಿಂತಂತೆ ನೂಲ್ ಸೋನೆಯಾ
ತೆರೆಮರೆಯನೆತ್ತೆ ಸುರಿಯಲ್ ಕಾನನ ವಧುವಿನ
ಶ್ಯಾಮಲಾಂಬರಂ ತೊಳೆದು ಶುಭ್ರ ಸ್ನಾತಳ್ಳೈಸಿ
ಸ್ವಚ್ಛಮಾದತ್ತು ಭೂವಿಸ್ತಾರಂ. ಮುಸ್ಸಂಜೆ
ಮುಸುಂಗಿರಲ್ ನೂಲ್ ಸೋನೆಯ ಧಾರೆಯುಂ
ಸುರಿಸುರಿದು ವಿರಳಮಾಯ್ತು ತಾನೇ ಸೋಲ್ದವೊಲ್.
ಸಾಯಂ ಸೊಬಗು ಹರಡಿದ ಶುಭಸಮಯದೊಳ್ಳೆದ
ನರೇಂದ್ರನಾಥನ ಮಿತ್ರವರ್ಯನಂ ತನ್ನ ಮನೆಯೊಳ್
ಅಧಿಕತರ ಪೂಜಾವ್ರತದ ಸತ್ಕಾರ್ಯಮಿರುತಿರೆ
ನರೇಂದ್ರನಾಥನಂ ನಲವಿಂ ಆಹ್ವಾನಿಸಿದಂ.

ಸಭಾಮಂಟಪಂ ತಳಿರ್ ತೋರಣಗಳಿಂ ನೆರೆ
ಮೆರೆದತ್ತು ಶೃಂಗಾರ ಮಯತೆಯಲಿ ಅಂದದಿಂ
ನಳನಳಿಸಿ. ಹಕ್ಕಿಗಳುಲಿದುವು ಸಂಧ್ಯಾರಾಗ
ಧುನಿ ಹರಿಸಿ. ಶುಭದಿನದ ಶುಭಗಳಿಗೆಯಾರ್ಯ್ದುದು
ಅದೃಷ್ಟದ ಖನಿಯಾಗಿ.
ಸಾವಿರದೆಂಟನೂ-
ರೆಂಬತ್ತೊಂದನೆಯ ನವೆಂಬರ್ ತಿಂಗಳ ಸುಂದರ
ಶುಭದಿನದೊಳ್ ಮೂಡಿತ್ತೊಂದು ಶುಭ ನಕ್ಷತ್ರ.
ಕಲ್ಕತ್ತ ನಗರಿಯಲಿ ಸಿಮ್ಲಾಪಳ್ಳಿ ನಿವಾಸಿ
ಸುರೇಂದ್ರನಾಥಮಿತ್ರಂ ಬಂಧು ಬಳಗವಂ
ವೆರಸಿ, ಅಧಿಕ ಪುರೋಹಿತರಂ ಕರೆಸಿ ಕಾಳೀ
ಪೂಜಾ ಮಹೋತ್ಸವದ ಅಂಗವಾಗಿ ಬೃಹದ್
ಸಮಾರಂಭಮಂ ಏರ್ಪಡಿಸಿದನ್, ಕಿಕ್ಕಿರಿದು
ತುಂಬಿತು ಸಭೆ. ಪೂಜಾಸಾಮಗ್ರಿಗಳ್ಯೆದುವು;
ಧೂಪ ದೀಪ ಕರ್ಪೂರ ಫಲಪುಷ್ಪಗಳ ಕಂಪು
ತುಂಬಿದುವು ತನುಮನಂಗಳಂ ಘಮ್ಮನೆ ಮುತ್ತಿ.
ಸಭಾ ಸದನಂ ಮೆರೆದುದು ತಳಿರ್ಗಳ ತೋರಣ,
ಫಲಪುಷ್ಪಗಳ ಹಾರದಿಂ ಪರಿಶೋಭಿಸಿ. ಪೂಜಾ
ಮಂಟಪಂ ಸಾಲಂಕೃತಮಾದುದು ರಂಗೋಲಿ
ಕಲೆಯಿಂದೆ. ಮಂತ್ರಘೋಷ ಮೊಳಗಿತು ಎಡೆಬಿಡದೆ.
ಸಂಗೀತಗಾರನಾಗಿ ನರೇಂದ್ರನ್ಯೆದನ್.
ಶ್ರೀರಾಮ ಕೃಷ್ಣ ಪರಮ ಹಂಸರಿರುತಿರ್ದರ್
ಗುರುಪೀಠಸ್ಥಾನೀಕರಾಗಿ. ಅರ್ಚನೆಯು
ಮುಗಿದ ಬಳಿಕ ನರೇಂದ್ರ ನಾಥದತ್ತನ ಭಜನ
ಗೀತ ಗಾಯನಂ ಸಿರಿಕಂಠದುಲಿಯಲಿ ಹರಿದು

ತುಂಬಿತು ಸಭಾಭವನಮಂ ಭಕ್ತಿರಸದಿಂದೆ.
ಒರ್ರಿ ಸಭೆಯು ಮಂತ್ರಮುಗ್ಧಮಾದುದು ಬಾವಾರ್ಥ
ಮನತುಂಬಿ. ಪಾಪಾಡಿಗನ ಮುಂತೆ ಮನನೆಟ್ಟಿ
ಫಣಿಯಾದರ್ ಶ್ರೀರಾಮ ಕೃಷ್ಣ ಪರಮಹಂಸ
ಮಹೋದಯರುಂ. ಪೂಜೆಯ ವ್ರತಂ ಮುಗಿಯಿತ್ತು;
ಸಂಗೀತವುಂ ಮುಗಿಯಿತ್ತು, ಚದುರಿತು ಭಕ್ತಜನ.
ಶ್ರೀರಾಮಕೃಷ್ಣರುಂ ನವತರುಣ ನರೇಂದ್ರನಂ
ಕರೆದು ಬಳಿಗೆ ಬರಮಾಡಿ ಮುದದಿಂ ನುಡಿಸಿದರ್,
"ವತ್ಸಾ! ನರೇಂದ್ರ, ನೀನೊರ್ಮೆ ದಕ್ಷಿಣೇಶ್ವರ
ಕಾಳಿ ಮಂದಿರಕೆ ಬಾರ್‍ಯ. ನಿನ್ನಯ ಸಂಗೀತ
ಮೇಣ್ ಭಕ್ತಿಭಾವವೆಮ್ಮ ಎರ್ದೆಯಂ ತುಂಬಿಹುದು,
ಆನಿಂದು ಸಂತಸಭರಿತನಾದೆನ್, ತಿಳಿಯಾ."
ನರೇಂದ್ರನ ಕೈಹಿಡಿದು ನಲವಿಂ ಶುಭವಚನದಿ
ಹರಸಿ ಮಧುರ ಕರೆಯಂ ನೀಡಿದರ್ ಮತ್ತೆ ಮತ್ತೆ.
ಬೆಳ್ನೆಯ ಬೆಳ್ನವಿರಿನ ಪ್ರಾಚೀನತೆಯುಂ ಸಿರಿ
ಜವ್ವನದ ದಿವ್ಯ ಅರ್ವಾಚೀನಮುಂ ಬಲ್ಮೆ
ತುಂಬಿದ ಸವಿದನಿಯೊಳ್ ಆಹ್ವಾನಿಸಿತು! ಅಹಾ,
ಅಪೂರ್ವತರ ಮಧುರ ಮಹೋನ್ನತಮಾ ಆಹ್ವಾನ!
ಗುರುದೇವನಾ ಮನದೊಳೆಂತಂತು ಶ್ರೀ ಶಿಷ್ಯ
ವರೇಣ್ಯನ ಎರ್ದೆಯೊಳ್ ಅಂತೆಯೇ ಎಲ್ಲಿರದ
ಗುರುಭಾವ ಮೂಡಿತು ಭಕುತಿರಸ ಕೊನರಿದ ತೆರಂ.
ಕಳಿದುವು ದಿನಗಳ್: ಕಳಿದುವು ವಾರಗಳ್, ಕಾಲ
ವಾಹಿ ಸಾರ್ದುದು ಮುಂದೆ ಮುಂದೆ ಸಾಗಾಲ್ ಬೀಸಿ.
ನರೇಂದ್ರ ಸಾಥವತ್ತ ಮಹೋದಯಂ ದಿನನಿತ್ಯ
ಎಲ್ಲರೊಳು ತಾನುವೊಂದಾಗಿ ವಿದ್ಯಾಲಯದ

ಮೂಸೆಯೊಳ್ ಕರಗಿ ಪರಿಸ್ಫುಟಿಸಿದ ಅಪರಂಜಿ
ಎಂಬೊಲ್ ಬೆಳೆಯುತಿರ್ದನ್ ವಟುವರ್ಯನಾಗಿ.
ವಿಶ್ವವಿದ್ಯಾಲಯಮೆನೆ ಬಲ್ಲಿದರೊಡನಾಟ,
ಗಹನ ವಿಷಯ ಸಂಪತ್ತಿಯ ಚಿಂತನಮಂಥನಂ
ಹೃದಯ ಕಮಲಮಂ ಅರಳಿಸಿ ದಳದಳಗಳ್
ಬಿರಿಸಿದುವು ಮನಪುಳಕಗೊಳ್ವಂತೆ. ಆದೊಡಾ
ಸುಜ್ಞಾನ ಪಿಪಾಸಿ ತರುಣ ಪ್ರಭೃತಿಯ ಮನೋ
ಮಂಡಲಂ ಬರಿದೆಂಬವೊಲ್ ಎಲ್ಲಮಿರ್ದೇನ್
ಇಲ್ಲದ ತೆರದಲಿ ಕಿರುವಗೆಯಾ ಅಶಾಂತಿಯುಂ
ಮನಂಬೊಕ್ಕು ಕೊರೆವುದು ಕೀಟದವೊಲ್. ಏಗಳ್
ಸುವಿದ್ಯಾಸ್ನಾತರೊಡಗೂಡಿ ತರ್ಕವಿತರ್ಕ
ಹೂಡುವಂ. ಸತ್ಯದ ಕಿರಣ ದ್ಯುತಿಯಂ ಅರಸಿ
ಅರಸಿ ಕಗ್ಗಂಟಂ ಬಿಡಿಸಿ ಚಿಪ್ಪೊಡೆವ ಸಾಸ
ಗೈವಂ. ಚಿತ್ ಶಾಂತಿಯನರಸುವೊಡೆ ದಿನದಿನಂ
ಪ್ರಯತ್ನದ ಪಥವಿಡಿಯುವಂ, ಪಾಠಪಠ್ಯಗಳ
ಪಾಠಾಂತರದಿಂದೆಯದು ಕೈಗೂಡದಾಯಿತು.
ಹೃತ್ ಮಂಡಲದ ಆತುರಕಾತರಗಳಿಂಗೆ
ಸತ್ಯ ಕಿರಣಂಗಳರಿವು ದೂರವೆ. ಎದೆಗುಡಿಯ
ಕುದಿವೆಂಕೆ ಶಾಂತವಾಗದು, ಮನದ ಇಚ್ಛೆಯುಂ
ಕೈಗೂಡದೆ. ಹಸಿರು ಬನಗಳಂಚಿನಲಿ ಅರಸಿ
ದಣಿಯುವಂ. ಉದಯಾಸ್ತಮಾನಗಳ ವರ್ಣಮಯ
ಮುಗಿಲೋಳಿಯ ಅನಂತ ಯಾತ್ರೆಯಂ ಗಮನಿಸುತೆ
ಮೈಮರೆವನ್ ರಸಸಮಯದಿ ಮುಳುಗಿ. ಶಾಲೆಗಳ
ಸಮಾರಂಭದಲಿ ಕೊರಳ್ದನಿ ಹರಿಸಿ ಭಾವೋ-
ದ್ವೇಗದಿಂದಲಿ ಹಾಡುವಂ ಭಕ್ತಿರಸ ಸೂಸಿ.

ಬ್ರಹ್ಮ ಸಮಾಜದೊಳ್ ಹಾಡಿ ಬ್ರಹ್ಮಸಮಾಜಿಗಳ
ಮನತಣಿಸುವಂ. ಆದೊಡಂ ತನ್ನೆದೆಯ ಬಯಕೆ
ತಣಿಯದಿರೆ ಪರಿತಪಿಸುವಂ ಮನಶಾಂತಿಯಿಂ
ದೂರಾಗಿ. ಎಂತು ಯಾವ ರೀತಿಯೊಳ್ ತನ್ನ
ಮನಃಸ್ವಾಸ್ಥ್ಯವೊ ಎಂಬೊಂದು ಚಿಂತೆಯಲಿ ಸಿಲುಕಿರೆ
ಆತ್ಮ ಪರಮಾತ್ಮಗಳ ಸತ್ಯ ತೃಷಿತ ದೀನ
ಮಾನಸಪಕ್ಷಿ ನರಳಿತು ಸತ್ಯಾನ್ವೇಷಣೆಯ
ಕಾರ್ಯರಂಗಮಂ ಬೊಕ್ಕು. ಆಸೆ–ನಿರಾಸೆಗಳ
ಹೊಯ್ದಾಟದಲಿ ಬೇಗುದಿಗೊಂಡು ತಹತಹಿಸುವ
ಮನಮತಿಗಳ ಸ್ವಾಸ್ಥ್ಯಕೆ ಉಪನಿಷತ್ ಗ್ರಂಥಗಳ
ಆಸರೆಯೆ ದಿವ್ಯಾಸರೆ. ಅಂತಿಂಥ ಹೀನತರ
ಧರ್ಮನಟರಂ ಕಂಡು ತಿಳಿವ ಪಾಡಿಗಿಂತಲ್,
ಮಿಗಿಲೆಂಬ ಕಟು ಸತ್ಯ ಮಿಂಚಿದುದು ಮನದಲ್ಲಿ.
    ಏಕಾಂಗಿ ನರೇಂದ್ರಂ ಏಕಾಗ್ರ ಚಿತ್ತದಲಿ
ಚಿಂತನಾ ಶೀಲತೆಗೊಳಗಾದನೆನೆ ಅನುಭವ
ಘನಿಸಿ ಚಿತ್ತಭಿತ್ತಿಯಲಿ ಸುಳಿವ ಜೀವನೀಯ
ಚಿತ್ರಗಳೈಶ್ವರ್ಯಮೆರಡು. ಒಂದನೆಯ ಚಿತ್ರಂ,
ನರೇಂದ್ರ ಸಂಸಾರಿ, ಮಹಾಭೋಗಿ ಅನನ್ಯ
ಐಶ್ವರ್ಯದಧಿಪತಿ, ಪರಮೋನ್ನತ ಅಧಿಕಾರಿ!
ಮೇಣ್ ಗೌರವಾನ್ವಿತ ಸುಖಸಂಪದದಿಂದೊಪ್ಪಿ
ಜನಾದರಣೀಯ ವಿಶ್ವಾಸ ಪಾತ್ರಧಾರಿ
ಸಾಮಾಜಿಕ ಮತ್ಸದ್ದಿ! ದ್ವಿತೀಯ ಚಿತ್ರವದು
ನರೇಂದ್ರಂ ಮಹಾನ್ ಸಂನ್ಯಾಸಿ ತ್ಯಾಗಿ. ಧಾರ್ಮಿಕ
ಕ್ಷೇತ್ರದಲಿ ನೆಲೆನಿಲ್ವ ಬೈರಾಗಿ. ಆವುದರಲಿ
ಹಿತವೊ ಹಿರಿಮೆಯೊ ಗರಿಮೆಯೊ ಮೇಣಾವುದೆನಗೆ

ಸಲ್ಲುವುದೊ ತಿಳಿಯದಾಯ್ತು. ಈಗಾಗಳೆ ಅರಿವುದು
ಅಸಾಧ್ಯಮೆನೆ ವಿಚಾರ ಸಂಪತ್ತಿ ಉಳಿದತ್ತು
ಘನವಾಗಿ ಮನಮತಿಗಳಲಿ. ದೂರ ಭವಿಷ್ಯದ
ವೇದಿಯಲಿ ಅಂಡಲೆವನ್ ತಾನೇಕಾಂತದಲಿ.
ನಿಚ್ಚ ಭಗವದ್ಗೀತೆಯ ಪಠಣದ ಪರಿಪಾಠ
ನಡೆದತ್ತು ಮನಃಶಾಂತಿಯ ಸಲುವಾಗಿ. ಸದಾ
ಚಿಂತನಾವೇಶಮೇ ತನ್ನ ನಿಜ ಉಜ್ಜುಗವೊ
ಜನ್ಮತಃ ತಾನೊರ್ವ ಮಹರ್ಷಿಯೊ ಎಂಬವೊಲ್
ನಡೆದುದಾ ತಾಪಸೀ ಮಾನುಷೀಯ ಪಂಬಲಂ.
"**ಉಷ್ಣಂ ಉಷ್ಣೇನ ಶಮ್ಯತೇ**" ಎಂಬ ಉಕ್ತಿಯು
ಚಿತ್ತ ಭಿತ್ತಿಯೊಳ್ ಅಚ್ಚೊತ್ತಿರುತಿರೆ ಸದ್ಗುರುವು
ದೊರಕದೆ ಬಗೆಹರಿಯದೀ ಸಮಸ್ಯೆ ಎಂಬುವ
ದೃಢ ನಿರ್ಧಾರ ಮನಃತೇಜಿಗೆ ಬಿಗಿವುದು ಕಟು
ಕಠಿಣ ಕಡಿವಣಮಂ. ಅಂತುಮಲ್ಲದೆಯೆ, ಮುಂದೆ
ಮುಂಪಥಂ ತೋರ್ಪ ಮಹಿಮಾಮಯರ್ ದೊರೆವನ್ನ
ಉದ್ಗ್ರಂಥಗಳೇ ಗುರುವೆನಗೆ ಎಂಬುದದು ಕರ
ತಲಾಮಲಕಂ. ಬಿಡುವಿನ ವೇಳೆಯಲಿ ಕಾಣದ
ಮದ್ಗುರುಗಳಂ ಮನದಿ ನೆನೆಯುತೆ "**ಕೃಪಾಂಕುರು
ಸದ್ಗುರುವೆ**" ಎನುತೆನುತೆ ಗೀಳಿಡುವುದು ಮಾನಸ
ಪಕ್ಷಿ. ಗತೇತಿಹಾಸೀಯ ಜೀವನೀ ರಂಗದೆಡೆ
ತಿರುಗಿ ನೋಡಲಾ ಕಾಲಪಥ ವಿಜೃಂಭಿಸಿದೆ
ಧೀಮಂತ ಸ್ತ್ರೀಪುರುಷರ ಆಧ್ಯಾತ್ಮಿಕ ಪ್ರಭೆಯ
ಜ್ಯೋತಿರ್ಮಯ ಚೆಂಬೆಳಕಿನಿಂ! ತಾಪಸರೆರೆಯರ್
ಬ್ರಹ್ಮ ಸತ್ಯದ ಮಂಗಳ ವೇಡೆಯಲಿ ಪಂಚಾಗ್ನಿ
ಮಧ್ಯೆ ಭೀಷಣ ತಪಸ್ಸಾದನಾನುರಕ್ತಿಯಲಿ

ಮುಳುಂಗಿ ಅವರ್ಣನೀಯ ನಿರ್ವಿಕಲ್ಪ ಸಮಾಧಿ
ಶಾಂತಿ ಸುಖ ಸಂಪದಂ ಪಡೆದ ಧನ್ಯರ್, ಮಾನ್ಯರ್.
ಅಂತೊರ್ವ ಗುರುದೇವನುಂ ದೊರೆಯದಿರಲೆಲ್ಲಿ
ಮನದ ಮಾಯಾವಲಯದಮರಾವತಿಗೆ ಸತ್ಯ
ಶಾಂತಿರಸವಾಹಿ? ಎಳೆ ಗೋಡಿನೆಳೆಗೂಳಿಯುಂ
ಪುರುಪಿನಿಂ ಪುರುಡಿನಿಂ ಇತರ ಗೂಳಿಗಳ
ತಿವಿತಿವಿದು ಉತ್ಸಾಹಗೊಳುವ ತೆರದಲಿ ಯುವ
ಪ್ರತಿಭಾ ಶಕ್ತಿಯುಂ ಮತಿಖಡ್ಗಮಂ ಬೀಸಿವೀಸಿ
ಹಳೆಹಳೆಯ ಆಚಾರ ವಿಚಾರಗಳಂ ಶೀಳಿ
ಶ್ರುತಿ ಸ್ಮೃತಿಗಳ ಕೊಚ್ಚಿ ಬಗೆದು ಪರಿಶೀಲಿಸಿ
ಜೊಳ್ಳು ಟೊಳ್ಳುಗಳನಪ್ಪಳಿಸಿ ತೂರಿ ಬಲಿವಂ.
ನರೇಂದ್ರಂ ಯೌವ್ವನದ ಹೊಸ್ತಿಲೇರಿ ನಿಂದಿರೆ
ಎಳೆ ಕೇಸರಿಗೆ ವಜ್ರನಖ ಮೂಡಿ ನಾಂದಿಯಂ
ಹಾಡಿದುದು ಅದ್ಭುತ ವಿಚಾರ ವಿಪ್ಲವಕೆ. ಆ
ಮಹೋನ್ನತ ಯೌಗಿಕಮಯ ಭಾಗ್ಯಂ ಚಣಚಣಂ
ಹೃನ್ಮನಗಳಂ ಸೂರೆಗೊಳಲ್ ತದೇಕಾಂತ
ನಿಷ್ಠೆಯು ಬೆಳೆದುದತ್ತಲೆ. ಕರ್ತವ್ಯಭಾರದ
ಹಣಾಹಣಿಯಲಿ ಪರೀಕ್ಷೆ ಅಡರಿ ಮುಗಿದುದದರ
ಅಂಕಂ. ಬಳಿಕಂ ಸಕಲತರ ಚಟುವಟಿಕೆಗಳ
ಬೀಡಾದುದು ಶರೀರ ಸಂಪದಂ. ಏಗಳುಂ
ಅಭ್ಯಾಸಮಲ್ಲದೇನಿಲ್ಲಂ. ಯೋಗಾಭ್ಯಾಸ
ಕರಗತಗೊಳಿಸಿದಂ, ಮಹದ್ಗ್ರಂಥಗಳ ಹುರುಳ್
ಮನೋಗತವಾಯ್ತು. ಪ್ರೌಢವಟು ಪ್ರೌಢಮನಮತಿ
ಸ್ಫುರಿಪುದು ಪ್ರೌಢಿಮೆಯಂ, ರೋಮರೋಮೋದ್ಗತ
ಅಗ್ನಿಸ್ಫುಲ್ಲಿಂಗಗಳ್ ಸ್ಫುರಿಸುವುವು, ಇರುಳಿನ

ಬೆಳ್ದಿಂಗಳ್ ಹೋಲಿ! ಸುತನ ಪ್ರೌಢಿಮೆಯನರಿದು
ಮನಮೆಚ್ಚಿ ಪಿತ ವಿಶ್ವನಾಥದತ್ತಂ ಅವನ
ಪ್ರತಿಭಾನ್ವಿತ ಶಕ್ತಿಮತಿಗತಿಗನುಗುಣಮಪ್ಪಂತೆ
ಕನ್ಯಾಮಣಿಯಂ ಅರಸುತ್ತೆ ಸಂಲಗ್ನಮಂ
ನೆರವೇರಿಸುವೊಡೆ ತಾಂ ಪ್ರಯತ್ನಶೀಲತೆಯ
ಪಥವಿಡಿದನ್, ತೀವ್ರಾಸಕ್ತಿಯಲಿ. ಕುಮಾರನ
ಮೇಲೆ ಲಗ್ನದೊತ್ತಡಮಂ ಹೇರುತಿಹ ಪಿತನ
ಆತುರದ ವಾಂಛೆಯುಂ ವಾತ್ಸಲ್ಯ ಪೂರ್ಣಮಿರೆ
ಒತ್ತಂಕೆಯ ವಿಲಾಪವದು ಕಿವಿಗಳಂ ಮುಟ್ಟೆ
ಕಿರುನಗೆ ಹೊಮ್ಮಿದುದು ಚೆಲುವಿನೊಳ್ ಚೆಲುವಾಂತ
ಕಳೆವೆಳಗಿ. ಆಜನ್ಮ ಲಗ್ನ ವಿತೃಷ್ಣತೆಯು
ನೆತ್ತರ್ಗತಮಾಗಿರೆ ಮುಖಾಂಭೋಜಂ ಬಾಯಿ
ಬಿಡಿಸದಾಯಿತು ಪಿತನ ಮುಂತೆ. ಮನವೊಪ್ಪದೆಯೆ
ಎಲ್ಲಿಯ ವಿವಾಹದನುಬಂಧ? ಆದೊಡವನೇಂ
ಬಿಡುವುದುಂಟೆ? ಮತ್ತೆ ಅರಸಿಯೇ ಅರಸಿದನಾ
ವಿಶ್ವನಾಥದತ್ತಂ. ಸುತನಿಚ್ಛೆಯೇ ಬೇರೆ. ಪೆತ್ತವರ
ಅಭಿಲಾಷೆಯೇ ಬೇರೆ. ಆದೊಡಂ ಪ್ರಯತ್ನ
ನಡೆದುದು ಪಿತನ ಇಚ್ಛೆ ಬಲಿತು. ಕುವರನ ಮೇಲೆ
ಒತ್ತಡಂ ಪೆರ್ಚುತಿರ್ದುದು ದಿನದಿನ. ವಿಮುಖೀ
ನರೇಂದ್ರಂ ಗೋರ್ಕಲ್ಲಮೇಲೆ ಮಳೆಗರೆದಂತೆ
ಮಿಣ್ಣನಿರ್ದಂ. ವಿಶ್ವನಾಥನುಂ ತನ್ನಾಪ್ತ
ಮಿತ್ರ ರಾಮಚಂದ್ರ ಮಹೋದಯನ ಬರಮಾಡಿ
ಕುವರನ ವಿಮುಖತೆಯ ನೊರೆಯುತೆ ಅವನಂ ಕಂಡು
ಮನವೊಲಿಸುವೊಡೆ ಕೋರಿದಂ. ಅದುಂ ಕೈಗೂಡಿ
ಬಾರದಿರೆ ರಾಮಚಂದ್ರಂ ಅವನ ಮನವರಿತು

ಚಿತ್ತ ಪ್ರವೃತ್ತಿಯರಿತು ಹೃದಯೇಚ್ಛೆಯರಿತು
ಪ್ರಶಾಂತಮನೋಹರ ಸಸ್ನೇಹಪೂರ್ಣತಾ
ಭಾವದಿಂ ಬೆಸಸಿದನೆಂತೆನೆ "ಅಯ್ಯಾ ನರೇಂದ್ರ!
ನಿನಗಿನಿತು ವೈರಾಗ್ಯವಿರುತಿರೆ ತಳುವುದೇಕೆ?
ಶ್ರೀರಾಮ ಕೃಷ್ಣ ಪರಮಹಂಸರಂ ಕಂಡೊಡೆ
ಒಳ್ಳಿತೈ. ನಿನ್ನಯ ಮನೋಗತಿಯನೊರೆಯುತ್ತೆ
ಪ್ರಜ್ಞಾನಮಂ ಪಡೆವುದೊಳ್ಳಿತೆಂಬೆ. ಆನವರ
ಗೃಹೀ ಭಕುತನೇ ವಲಂ. ಅವರೆನ್ನ ಪರಮ
ಗುರು ಕಣಾ! ನೀನವರ ಶಿಷ್ಯತ್ವವಂ ಪಡೆದು
ಆಧ್ಯಾತ್ಮಿಕ ಸಾಧನೆಯೊಳ್ ಕೃತಕೃತ್ಯನಾಗೈ."
ಶುಭನುಡಿಯೊಳೊದವಿತು ಉಪದೇಶಂ ಒಡನೆ ಮನದ
ಮರುಧರೆಯಮೇಲೆ ಮಧುರ ಶೀತಶೀತಲವಾರಿ
ಹರಿದೊಲಾಯ್ತು. ನರೇಂದ್ರನಾಥನುಂ ನಸುವೊಳ್ತು
ಮನ ಮಂಥನಮೆಸಗಿರುತಿರಲ್ ಮತ್ತೆಂದನಾ
ರಾಮಚಂದ್ರ ಮಹನೀಯಂ "ವತ್ಸ! ನೀಂ ಮನದೆ
ಬೇರೊಂದು ಬಗೆಯದೆಯೆ ಕಾಳಿಕಾದೇವಿಯಾ
ದಿವ್ಯ ಸನ್ನಿಧಿಗೆತ್ತು ಶ್ರೀರಾಮ ಕೃಷ್ಣರಂ
ಕಂಡು ಅವರ ಜಾನಜಲದೊಳ್ ಈಸಿ ಮುಳುಂಗಿ
ಪರಿತೃಪ್ತನಾಗೆಲೈ. ಅವರಿಂದೆ ಬಹುಮೂಲ್ಯ
ಉಪದೇಶಮಂ ಪಡೆದು ಸರ್ವಧರ್ಮಾನುಭವ
ಪಡೆದಪೆಯೆನೆ ನಿನಗಪ್ಪುದೈ ಪೂರ್ಣಾನುಭವ
ಕಣಾ! ಒರ್ಮೆ ಅವರಬಳಿಗೆತ್ತೊಡೆ ನೀನರಿವೆ."
"ಆನಿನ್ನೆಬರಂ ಎನಿತೆನಿತು ಧರ್ಮಗುರುಗಳ್
ಕಂಡರಿದೆನಿಲ್ಲಂ. ಗುರುವಿವರುಂ ಅಂತೆಯೇ
ಇರಲಕ್ಕು" ಎನುತೆನುತೆ ವ್ಯಂಗ್ಯವಾಡಿದ ನರೇಂದ್ರಂ.

“ನೀನೊರ್ಮೆ ಪರಿಕಿಸಿದೊಡೆ ಅರಿತುಕೊಳುವೆ ಎನಲ್
ಅನ್ಯಮಲ್ತು.”
“ಆಯ್ತಾಯ್ತು ಭಗವದ್ ಭಕ್ತರೇ!”
ಆ ಪಿರಿಯನ ಮಾತಿನ ಅಂತರಾರ್ಥಾಮೃತಂ
ಹೃನ್ಮರ್ಮಂಗಳಂ ಸೆಳೆದುದು ಯಕ್ಷಿಣಿಯ ಮಂತ್ರದ
ಮಾಳ್ಕೆಯಲಿ. ಒಡನೊಡನೆ ಮನಃಪಕ್ಷಿ ಎರೆಂಕೆಯ
ಬಿದಿರ್ಚಿ ಗರಿಗೆದರಿ ಸರ್ರನೆ ಪಾರ್ದುದು ದೂರದ
ದಕ್ಷಿಣೇಶ್ವರ ದೇಗುಲದ ದೇವ ಗುರುವಿನಾ
ಪದತಲಕೆ. ಅಂದು ತಾನೋದಿ ಮನಗೊಳಿಸಿರ್ದ
ಗುರುಸ್ತುತಿ ಮನಮಂಡಲದಲಿ ಸುಳಿದು ಕೊರಳಿನ
ಸ್ವರದಲಿ ಹರಿಯಿತು ನಲ್ ರಾಗದ ಭಾವದಲಿ.

ಅಜ್ಞಾನ ತಿಮಿರಾಂಧಸ್ಯ
ಜ್ಞಾನಾಂಜನ ಶಲಾಕಯಾ ।
ಚಕ್ಷುಃ ಉನ್ಮೀಲಿತಂ ಏನ
ತಸ್ಮೈ ಶ್ರೀಗುರವೇ ನಮಃ ॥

ದೂರ ಪಡುವಣ ಭಿತ್ತಿಯ ತಟಾಂತದಲಿ ಸ್ವರ್ಣ
ಕಮಲ ಮೂಡಿದ ತೆರದಿ ಸಂಧ್ಯಾ ಕುಸುಮವರಳಿ
ಮೆರೆದುದು ಕಡುಕೆಂಪಿನ ಓಕುಳಿಯಲಿ ಮಿಂದುದೊ
ಎನಲ್ ರಕ್ತಾಕ್ತವಾಗಿ. ಅರುಣಾರುಣನ ಹೊನ್ನ –
ಹೊಂದೇರು ಒಯ್ಯನೊಯ್ಯನೆ ಇಳಿದುದು ಹಿಮವತ್
ಗಿರಿಶಿಖರದ ಬೆಂಗಡೆಯ ಸೀಮೆಯಲಿ ಕಣ್ಣಿಗೆ
ಮರೆಯಾಗಿ. ವನವಿಹಂಗಮಗಳ್ ಉಲಿಯುತಿವೆ ವಿಧ
ವಿಧ ಕಂಠಗಳಲಿ ರಾಗಾನುರಾಗಗಳ ಝರಿ
ಹರಿಸಿ. ಸಾಯಂ ಸೊಂಪು ರಾಗದಿಂಪು ಶಾಂತಿಯ
ಪೆಂಪುಗಳ್ ಒಗ್ಗೂಡಿ ಹಸನಾದುದು ಸಾಯಂ

ಸೊಬಗಿನಾ ಮನೋಹರ ಸುರಸುಂದರವಾದ ಶೈಲಿ.
ಹಕ್ಕಿಗಳುಲಿಯಲಿ ಎಲೆಗಳ ಮರ್ಮರದಲಿ ಗಾಳಿ-
ತಂಗಾಳಿಯ ಸುಯ್ಲಿನಲಿ ಕೇಳಿಬಹುದೊಂದೇ
ರಾಗರಸಧಾರೆ "ಜ್ಞಾನ ದೇವತು ಕೈವಲ್ಯಂ"

ಹರಿಃ ಓಂ ತತ್ ಸತ್

❈ ❈

ಷಷ್ಠಮೋಲ್ಲಾಸಂ

ಚಿಂತನ ಶೀಲ

ಮೂಡುವೆಟ್ಟಿನ ಮೇಗಡೆ ತಪನೀಯ ಮಣಿಯೊಲ್
ಮೂಡಿ ವೆಳಗಿ ಥಳಥಳಿಸಿತುದಯ ರವಿಯ ಸ್ವರ್ಣ
ಮಂಡಳಂ. ಕೆನ್ನೀಲ ಪಯೋನಿಧಿಗಳ ಮಹಾ
ರಾಶಿಯಲಿ ಇನಿದಿನಿದು ಮೇಲೇರುತಿರುತಲಿರೆ
ಘನಿತ ಬಾಲಾತಪದ ಅಗ್ನಿತೇಜದ ದಿವ್ಯ
ರೂಪಿಂದೆ ಪ್ರಜ್ವಲಿಸಿದುದು ಬಿಂಬ ಮೋಹನಾ
ಕಾರದಲಿ. ಉದಯ ಮಾನದ್ಯೆಸಿರಿಗೆ ಬಯಕೆಯ
ಬಿಸಿಯುಸಿರ್ ಒಯ್ಯನೊಯ್ಯನೊಯ್ಯನೆ ವಿಲಾಸದಿ
ನುರ್ಗಿವಂದುದೊ ಎನಲ್ ಮುಗಿಲ್‌ವಟ್ಟೆಯೊಳಾಡಿ
ಸುಯ್ ಸುಯ್ಯನೆ ಸುಯ್ದುದು ಗಂಧಗಾಳಿಯು ಬೀಸಿ.
ವನವಿಹಂಗಮಗಳುಲಿದುವು ವಿವಿಧ ಸವಿಗೊರಳ್
ರಾಗಾನುರಾಗವ ಮೆರೆದು ಜಗತ್ ಮಂಗಲಕೆ
ಸುಪ್ರಭಾತವ ಹಾಡಿ. ಸತ್ ಶಾಂತಿಯವತರಣ
ಮಾಯ್ತು ಜಗದಾದ್ಯಂತ ಶಾಂತರಸ ಸೂಸಿ.
ಸನ್ ಸಾವಿರದೆಂಟನೂರೆಂಭತ್ತೆರಡನೆಯ
ಸಂವತ್ಸರದ ಚೈತ್ರಪ್ರಭು ನಿರ್ಗಮಿಸಿ ಶಿಶಿರ
ಮಹಾಪ್ರಭು ದಿಟ್ಟ ಹೆಜ್ಜೆಯಂ ಮುಂದಿರಿಸಿದಂ.
ಎಲ್ಲೆಡೆಗಳಲಿ ಪ್ರಕೃತಿ ಸೌಂದರ್ಯದ ಅನುಪಮ
ಚಿತ್ತಾರ ಕಂಗಳಿಗೆ ರಸದೌತಣವನೀವ
ಸಗ್ಗ ಸುಧೆಯೇ ಧರೆಗಿಳಿದತ್ತು ಮನತಣಿವೊಲ್.
ಪಚ್ಚನೆಯ ಪಟ್ಟುಡೆಯನುಟ್ಟ ಪರ್ಣಾರ್ಣವಂ
ವಿವಿಧ ವರ್ಣವರ್ಣಾಂತ ಪುಷ್ಪಗಳ ಸಿಂಗರಂ

ಮನೋರಮ ಶೈಲಿಯಲಿ ಮೆರೆದುದು ಕಣ್ಸಿಂಬಾಗಿ.
ಮಹಾಭಾಗೀರಥಿಯ ಪರಮ ಪಾವನ ತೀರದೊಳ್
ಭಕ್ತ ಜನ ಸಂದೋಹ ಆಗಳೇ ನೆರೆದತ್ತು
ಅಲ್ಲಲ್ಲಿ ಪುಣ್ಯಸ್ನಾನಕಾಗಿ. ಎನಿತೊ ಮಂದಿ
ಸ್ನಾನಮಂ ಮುಗಿರ್ಚಿ ಮಡಿಯನುಟ್ಟು ದೇಗುಲದ
ಸೋಪಾನಗಳನೇರುತಲಿರ್ದರು ಸಾಲ್ಗಟ್ಟಿ.
ಶತಪತ್ರನೇತ್ರ ಸಿಂಹ ಕಿಶೋರ ಚಿಂತನಶೀಲ
ನರೇಂದ್ರನಾಥನುಂ ಮಿತ್ರ ಮಂಡಲಿಯೊಡಂ
ರವಿರಥ ನಭವನೇರ್ವ ಮುನ್ನಮೆ ದಕ್ಷಿಣೇಶ್ವರ
ದೇಗುಲದ ಮೆಟ್ಟಿಲೇರುತಿರ್ದಂ. ಪುಣ್ಯ ಕ್ಷೇತ್ರದ ಪವಿತ್ರ
ಪರಿಸರಂ ಶ್ರೀಗಂಧಮಾಲ್ಯಾದಿ ಸುಮಂಗಳ
ದ್ರವ್ಯಗಳ ಪರಮ ಕಂಪಿನಿಂ ತುಂಬಿ ಮೆರೆದುದು
ಹೃನ್ಮನಗಳಂ ಸೆಳೆವ ತೆರದಿ. ಶ್ರೀಗುರುಮುಖದ
ಉಪನಿಷತ್ತಿನ ಪ್ರವಾಣಿಯುಂ ಹರಿದು ತುಂಬಿದುದು
ಕೊಡಂಕೆಯ ಗವಿಗಳಂ. ನರೇಂದ್ರನಾಥನುಂ
ಅತ್ತಲೇ ಮನಗೊಟ್ಟು ಕಿವಿಗೊಟ್ಟು ಆಲೈಸಿದಂ,
"ಯಸ್ಯದೇವೇ ಪರಾಭರ್ಕ್ತಿರ್ಯಥಾದೇವೇ ತಥಾ ಗುರೌ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ॥"
ಆಗಳುಂ ಮನದಿ ಭಾವವಿಭಾವಗಳ ದಿವ್ಯ
ಗಣಿಯಾಗಿ ತೀವ್ರ ಕುತೂಹಲ ಕೊನರಿ ಮುಂಬರಿಯೆ
ಭಕ್ತಜನ ಸಂದೋಹ ಭಕ್ತಿಭಾವ ಭರದಿಂ
ತುಂಬಿ ತುಳುಕುವೊಲ್ ಫಲಪುಷ್ಪಗಳ ಸಹಿತ
ನಡೆದಿರ್ದರ್ ಜೊತೆ ಜೊತೆಯೊಳ್. ಭಕ್ತರ ಹೃದಯ
ಕುಂಡ ತುಂಬಿ ಹರಿದಿಹ ಭಕ್ತಿರಸ ಪಾನದಿಂ
ನರೇಂದ್ರನೊಡಲ್ ತುಂಬಿತು ಸಮುದ್ಧದಿಂ. ಗುಡಿಯ

ಬಳಿಗೈದೊಡನೆ ದೇವಿಯ ದರ್ಶನಮಾಯಿತ್ತು.
ಗರಿಗಲ್ಲಿನ ಶಿಲೆಯೊಳ್ ಕರಕುಶಲ ಕಲೆಗಳಿಂ
ಮೈಯೊಡೆದು ರೂಪುಗೊಂಡ ಕಮನೀಯ ಕಠೋರ
ಕಾಳಿಕಾಮಾತೆ. ಹೋಮ ಹವನಗಳಿಂ ಗರ್ಭ
ಗುಡಿಯೊಳ್ ಪ್ರತಿಷ್ಠಿತಮಾದ ಪಾವನಮೂರ್ತಿ.
ಒರ್ಮೆಗೇ ಮನಃಚಿತ್ತಗಳಾವೇಶದಾವೇಶ
ದೈಶ್ವರ್ಯದಲಿ ಮುಳುಗಿ ಮನೋಜನಿತ ಭಾವ
ಭಾರದಿಂ ಮೇಣಧಿಕ ವಿಚಾರಾಸಕ್ತಿಯಿಂ
ಆಸೆಯಿಂದುರ್ಬುತಾಸಂಕೆಯಿಂ ನೋಡಿದಂ
ಕಣ್ಣೆಟ್ಟು. ಪುರೋಹಿತರ ಪ್ರಾತಃಪೂಜಾಕ್ರಮದ
ವೈಭವೋಪೇತ ಮಂತ್ರಘೋಷದೊಡನೆ ಗಂಟೆ
ಶಂಖ ಜಾಗಟೆಗಳ ಮೊಳಗು, ಮಂಗಳ ದ್ರವ್ಯಗಳ
ಮೇಣ್ ಪುಷ್ಪಕೋಟಿಯ ಪರಿಮಳಂಗಳ್ ತೆಕ್ಕನೆ
ಸುಸ್ವಾಗತಮಿತ್ತುವು ಯುವಧುರೀಣರಿಂಗೆ. ಆ
ಪ್ರಾತಃಸ್ಫೂರ್ತಿಯ ಘನಾಕರ್ಷಣೆಯ ಜಾಲದಲಿ
ಸಿಲ್ಕಿದರೊ ಎನೆ ಪ್ರಾಂಗಣ ತುಂಬಿ ತುಳುಕುವಂತೆ
ಸೇರಿರ್ದುದು ಭಕ್ತಜನರಾಶಿ. ಮಹಾಕಾಳಿ
ದೇವಮೂರ್ತಿಯ ದರ್ಶನಂ ಪಡೆದ ನರೇಂದ್ರನ
ಮಾನಸ ಪಕ್ಷಿಯು ಸ್ವಚಿಂತನಾಬ್ಧಿಯಲಿ ಮುಳುಗಿ
ಉಲಿಯಿತು ಪರಮಾನಂದದಿಂ "**ಯೋಗಃ ಕರ್ಮಸು**
ಕೌಶಲಂ..." ಸಮಯೋಚಿತ ಪರಿಜ್ಞಾನದಿಂ
ಚಿಂತನಂಮಂಥನಂವೆರಸಿ ತುಂಬಿದ ಕೊಡದೊಲ್
ಮಿತ್ರಮಂಡಲಿಯೊಡಂ ತೆರಳಿದಂ; ಪೌಳಿಯಲಿ
ಒಳಗೊಳಗೆ ವಾಮಾಂಗದಾಂತರ್ಯದ ಕೊಟಡಿಯ
ಕಡೆಗೆ. ಒಳಗೊಂದು ಬಿಚ್ಚಿ ಹಾಸಿರ್ದ ಚಾಪೆಯ

ಹಾಸು. ಸಾಮಾನ್ಯ ಕೊಟಡಿಗೊಪ್ಪುವ ಸಾಮಾನ್ಯ
ರೀತಿಯಲಿ ಕಾಲ್ಮಡಿದು ಕುಳಿತ ಗುರು ವರೇಣ್ಯರ್
ಕಂಗೊಳಿಸಿದರ್. ಸುತ್ತಲ್ ಸುತ್ತುವರಿದು ಕುಳಿತ
ವಿದ್ವನ್ಮಣಿ ಶ್ರೋತೃಗಳೆಸೆದರ್ ಲಿಖಿತ ಚಿತ್ರ
ಪ್ರತಿಗಳ ಮಾಲ್ಕೆಯಲಿ. ನರೇಂದ್ರಂ ಕೈಮುಗಿದು
ಮಿತ್ರರೊಡನೆ ಪಿಂಗಡೆಯಲಿ ಮಂಡಿಸಿದಂ ಮಂತ್ರ
ಮುಗ್ಧಗತಿಯಲಿ. ನಾಲ್ವರ್ ಗೆಳೆಯರ್ ಮಂಡಿಸಿದರ್
ಬಳಿಯಲಿ. ಗುರುಮುಖದಿಂ ಪ್ರವಚನಧಾರೆಯುಂ
ಪ್ರವಹಿಸುತಿರ್ದುದು ತದೇಕರೀತಿಯಲಿ. ಆ
ವಾಗ್ಜಾಹ್ನವಿಯ ಧಾರೆ ಅಮೃತರಸದವೋಲ್
ಹರಿಯುತಿರ್ದುದು ಮರಣ ಹರಣವಾಣಿಯಲಿ. ಆ
ದಿವ್ಯದೇವತರುವಿನ ಸುತ್ತಮುತ್ತಲ್ ಕುಳಿತ
ಸದ್ಭಕ್ತವರೇಣ್ಯರ ಮನತಣಿಸುವೊಲ್ ಬಹುಲ
ಪ್ರವಚನಗಳಂ ಬಿತ್ತರಿಸಿದ ಬಳಿಕಂ ಪೊಚ್ಚ
ಪೊಸ ಶಿಷ್ಯ ನರೇಂದ್ರನಾಥನಂ ಕೆಲವು
ಬಂಗಾಳಿ ಭಜನಾವಳಿಯಂ ಹಾಡಲು ಬಲ್ಮೆ
ತುಂಬಿದ ದನಿಯೊಳ್ ಬೆಸಸಿದರ್ ಅಂದಿನ ತೆರಂ.
ಗುರುದೇವನ ಶಾಂತ ಸುಮಧುರ ವದನದಿಂದಲಿ
ಉಣ್ಮಿದ ನುಡಿ ಮುತ್ತಿನ ಕೋರಿಕೆಯಂ ಮನಗೊಂಡು
ನರೇಂದ್ರನಾಥಂ ಹಾಡಿದನ್ ಕೆಲ ಬಂಗಾಳಿ
ಗೀತೆಯಂ ಭಕ್ತಿರಸ ಪೂರ್ಣವಾಗಿ. ಗುರುಗಳ
ಮನಂ ರಾಗ ಸುಧಾ ಸೂತಿಯಲಿ ಮುಳುಂಗಿ
ತಣಿದುದು. ಗೃಹೀ ಭಕ್ತರ್ ಮನತಣಿದು ಹೃದಯ
ತಣಿದು ಮೆಚ್ಚಿದರ್ ನೆಚ್ಚಿ ಮುಂದೊರ್ಮೆ ತಮ್ಮ
ಶಿಷ್ಯನಾ ಪ್ರಪ್ರಥಮಾಗಮನಮಂ ಕುರಿತು

ಶ್ರೀರಾಮ ಕೃಷ್ಣ ಪರಮಹಂಸರ್ ನುಡಿದಿರ್ದುದು
ಎಂತೆನೆ: “ನರೇಂದ್ರನಂದು ಮುಂಬಿನ ಪಾಶ್ಚಿಮಾತ್ಯ
ದ್ವಾರದಿಂ ಮಂದಿರ ಪ್ರವೇಶಗೈದನ್. ಅವನ
ಮುಖಭಾವದೊಳ್ ದಿವ್ಯ ನಿರ್ಲಕ್ಷ್ಯ ಇರ್ದುದಂ
ಕಂಡೆ. ವೇಶಭೂಷಣಗಳಲಿ ನಿರಾಸಕ್ತಿಯಂ
ಅರಿದೆ. ನಡೆನುಡಿಗಳಲಿ ಸರಳತನಮೆಸೆಯಿತ್ತು.
ಅಂತರ್ಮುಖೀ ಭಾವನೆಗಳ ಶಾಂತರಸಮುಕ್ಕಿ
ಮುಖ ಮಂಡಲದಲ್ಲಿ ಘನಿತವೊಲ್ ಅಪೂರ್ವತಮ
ಶಾಂತಿರಸಮಂ ಕಂಡೆ. ಇತರರಂತಲ್ಲದವಂ
ಅಂತರ್ಮುಖಿಯಾಗಿರುತಿರ್ದಂ. ನಯನದ್ವಯಂ
ಆಂತರಂಗಿಕ ವಿಚಾರವಿಹಾರಿಗಳ ತೆರಂ
ನಿಮೀಲಿತ ಮಾಗಿರ್ದುಮೆಂದೊಡದು ತಪ್ಪಲ್ಲ.
ಕಲ್‌ಕತ್ತನಗರಿಯ ಜಡಜೀವನಗಳ ಮಧ್ಯೆ
ಇಂತಪ್ಪ ಪರಿಶುಭ್ರಮನದ ಧರ್ಮಜೀವಿಯು
ಇರ್ದುದಂ ಅರಿತೆನಗೆ ಅಚ್ಚರಿಯೊಳಚ್ಚರಿಯೆ
ತುಂಬಿದುದು ತಲೆಯಂ. ಅವನ ಗೆಣೆಯರ ರೀತಿಯೆ
ಬೇರೆ. ಬರಿದೆ ಭೋಗಾಸಕ್ತರಾಗಿ ಕಂಡರ್.
ಅವರಂ ಬರಮಾಡುತ ಚಾಪೆಯಲಿ ಮಂಡಿಸಲ್
ಬೆಸಸಿದೆನ್. ಪ್ರವಚನಮಂ ಮುಗಿಸಿದ ಬಳಿಕ
ನರೇಂದ್ರನಂ ಕೆಲ ಗೀತೆಯಂ ಹಾಡಲಾಂ ಹೇಳಿ
ಕೇಳಿದ ಬಳಿಕ ಅವಂ ಮರುನುಡಿಯದೆ ಹಲಕೆಲ
ಬಂಗಾಳಿ ಭಜನಗಳ್ ಹಾಡಿದನ್. ಗಾನರಸ
ಬಲು ಸಾವದಾನದಿಂದುಕ್ಕಿ ಹರಿಯಿತು. ಭಕ್ತ
ಹೃದಯದ ಯೋಗಿವಾಣಿ ಭಾವರಸದಿಂ ತುಂಬಿ
ತುಳುಕುವವೊಲ್ ಮುಟ್ಟಿತು ಕಿವಿಗಳಿಗೆ ಆನಂದ

ಮಂಗಳಕರವಾಗಿ. ದನಿ ಭಕ್ತಿರಸ ಗದ್ಗದ
ಮಪ್ಪಂತೆ ತುಂಬಿ ತುಳುಕುತಿರ್ದುದು ಶ್ರೋತೃಗಳ್
ತಲೆದೂಗುವೊಲ್. ಭಾವನಾವೇಶವಾವರಿಸಿ
ತೊಂಕುತೆನ್ನಂ ಮನೋರಮ ವಿಶೇಷಂ ಬಿಗಿಯೆ
ಥಟ್ಟನೆ ಸಮಾಧಿಸ್ತನಾದೆನೆನ್."
ತರುವಾಯಿ,
ಮುಂದಾದ ಪ್ರಕರಣಮಂ ಸ್ವಾಮಿ ವಿವೇಕಾ
ನಂದರಿಂತು ಬಣ್ಣಿಸಿಹರ್: "ಅವರ ಕೇಳಿಕೆಯ
ಪ್ರಕಾರಮೆ ಹಾಡಿದೆನಾಂ ಭಜನ ಗೀತೆಗಳಂ.
ಗುರುದೇವಂ ಆನಂದ ಭಾವದಲಿ ಕೇಳಿದರ್
ಮನಗೊಟ್ಟು. ತೆಕ್ಕನವರ್ ಸಮಾಧಿಸ್ಥರಾದುದಂ
ಕಂಡೆ. ನಸುವೊಳ್ತಿನ ಬಳಿಕಂ ಎಚ್ಚತ್ತು ಕೊಳುತೆ
ಅವರ್ ಕುಳಿತಲ್ಲಿಂದೆದ್ದೆನ್ನ ಕೈಯಂ ಮುದದಿಂ
ಹಿಡಿದು ಗುಡಿಯ ಉತ್ತರ ಭಾಗೀಯ ಮುಂಗಡೆಯ
ಅಂಗಣದ ಆಚೆಯ ಜಗಲಿಯೆಡೆಗೆ ಕರೆದೊಯ್ದು,
ಕಿರಿದಾದ ಕೊಠಡಿಗೆ ನುಸುಳ್ದು ಕದವಿಕ್ಕಿದರ್.
ನಾವೀರ್ವರೇ ಉಳಿದೆವಲ್ಲಿ. ಅಹ ಎನಗಾಗಿ
ಏನಾದರ್ ಉಪದೇಶಗೆಯ್ವರೆಂದಾನ್ ಪರಿ
ಭಾವಿಸಿದೆನ್. ಆದೊಡವಂ ವರ್ತಿಸಿದ ರೀತಿ
ಬಲು ವಿಚಿತ್ರಂ! ಅವನ ಕಜ್ಜಮಂ ಕಂಡು
ಬೆಚ್ಚಿ ಬೆರಗಾದೆ. ಚಿರಪರಿಚಿತನೊ ಎಂಬವೊಲ್
ಪಿಡಿದೆನ್ನನುಂ ಭುಜದಮೇಲೆ ಕರವೊತ್ತೊತ್ತಿ
ನಯನದ್ವಯಗಳಲಿ ಕಂಬನಿ ಸೂಸುತೆ "ಏಕೆಲೆ,
ವತ್ಸ! ಇಲ್ಲಿಗೆ ಬರಲಿನಿತು ತಡಗೈದೆ? ಎನ್ನಂ
ಈಪರಿ ಕಾಯಿಸಲ್ ಮನವೆಂತು ಸಂತು? ಪೇಳ್,

ಈ ಪ್ರಾಪಂಚಿಕರ ಮಾತಂ ಕೇಳಿ ಕೇಳಿಯೇ
ಕರ್ಣಗಹ್ವರಗಳೆನ್ನ ಕೊರೆಕೊರೆದು ಈಗಲೆ
ಬೆಂದು ಹೋಗಲಿವೆ! ಅಯ್ಯೊ, ಎದುತಲಿಹೆ ನಾನ್
ಎನ್ನಂತರಂಗದ ಅನುಭವವಂ ಸರಿಯಪ್ಪ
ಅಧಿಕಾರಿ ದೊರಕಿದೊಡೆ ತೋಷದಿಂ ವಹಿಸಿಬಿಡೆ
ಕಾತರಿಪುದೆನ್ನ ಮನಂ....'' ಎನುತೆನುತೆ ಬಿಕ್ಕಳಿಸಿ
ಬಿಕ್ಕಿ ಬಿಕ್ಕಿ ಅಳತೊಡಗಿದನ್. ತರುವಾಯಿ ಕಣ್ಣು
ಉದ್ದಿ ಉತ್ತರೀಯದ ಅಂಚಿನಲಿ ತನ್ನನುಂ
ತಾಂ ಸೈಪಿ ನುಡಿದನ್ ಮತ್ತೆ "ವತ್ಸ, ಕೇಳಯ್
ಆನೆಲ್ಲ ಬಲ್ಲೆ ನೀಂ ನಿಜದಿ ಆ ಸಪ್ತರ್ಷಿಗಳ
ಮಂಡಲದ ಋಷಿ! ನರರೂಪಿನ ನಾರಾಯಣ! ಜನ
ಜೀವನದ ಕಲ್ಯಾಣಾರ್ಥಂ ಈ ದೇಹ ಧಾರಣೆ
ಗೈದು ಭೂಮಿಗವತರಿಸಿಹೆ!'' ಎಂದೆನ್ನ ನಲಿವಿಂ
ಸಂಬೋಧಿಸುತಲಿರಲ್ ಆನೇನ್ ನುಡಿಯುವೆನ್?
ನಿಜದಿಂದಲಾನ್ ಬೆಚ್ಚಿ ಬೆರಗುವಡುತೆ ನೆಟ್ಟು
ಕಣ್ ಕೀಲಿಸದೆ ನೋಡಿದೆ. ಎನಗೇಂ ಮರುಳೆ? ಆಂ
ಆರನುಂ ನೋಡಲ್ಕೆತಂದೆನ್? ಇವಂ ಬರಿಯ
ಮರುಳನಾಗಿರಲಕ್ಕು! ಇದೇನಿದು? ಆನ್ ಶ್ರೀ
ವಿಶ್ವನಾಥದತ್ತನ ಸುತ ನರೇಂದ್ರನಾಥಂ!
ಎನ್ನಂ ನರನಾರಾಯಣ ಎನಲೇನ್ ಕತಂ?''
    ಮನದಿ ಯೋಚಿಸಿ ಅಚ್ಚರಿಯ ಕುಂಡದೊಳ್ ಮುಳುಗಿ
ನುಡಿಯಲಾರದೆಯೆ ಮಿಣ್ಣನಿರಲಾನು ಅವರುಂ
ಎನ್ನನಲ್ಲಿಯೆ ಇರಲ್ ಬೆಸಸಿ ಒಳಕೊಠಡಿಯೊಳ್
ನುಸಿದು ಸಕ್ಕರೆ ಮಿಠಾಯಿ ಬೆಣ್ಣೆಗಳಂ ತಂದು
ಎನಗೆ ತಿನ್ನಿಸ ತೊಡಗಿರೆ ಎಂಪೇಳಲಿ? 'ಬೇಡ'

ಎನಲ್ ಕೇಳರ್ "ಪೊರಗಡೆಯಲಿ ಗೆಳೆಯರಿರ್ಪರ್
ಆನವರೊಡಂ ಕೂಡಿ ತಿಂಬುವೆ" ಎನಲವರಿಗೆ
ಕೇಳ್ವನೇಂ?
"ಅವರಿಂಗೆ ಅನಂತರ ಕೊಡೋಣ"
ಎನುತೆನುತೆ ಎಲ್ಲವಂ ಎನಗೆ ತಿನಿಸಿದ ಬಳಿಕ
ಎನ್ನ ಕೈವಿಟ್ಟರ್. ಮರುಗಳಿಗೆಯಲಿ ಎನ್ನಂ
ಕೈಪಿಡಿದು ಆತುರಾತುರದಿಂ ನುಡಿಸಿದರಿಂತು,
"ನೀಂ ಮತ್ತೆ ಖಂಡಿತ ಬರುವೆನಾಂ" ಎಂದೆನಗೆ ಮಾತು
ಕೊಡು"
ಬಲುಮೆಯ ಬಲವತ್ತರದ ನುಡಿಯೊಳ್ ಪೇಳ್ದು
ಕೈವಿಟ್ಟರೆನ್ನನುಂ. ಆನೈದೆನ್ ಮುನ್ನಿರ್ದ
ಕೊಠಡಿಗೆ. ಗೆಳೆಯರಿರ್ದರಲ್ಲಿ ಎನ್ನಯ ದಿವ್ಯ
ನಿರೀಕ್ಷೆಯಲಿ. ನೋಡುತಿರುತಿರೆ ಪ್ರತಾಪಚಂದ್ರ
ಮುಜುಮದಾರಂ ಗೊಮ್ಮಟನವೊಲ್ಯೆದನ್. ಸ್ವತಃ
ಪ್ರಜ್ಞಾನಿ ತಾನಿರೆ ಗುರುವಿನ ಬಳಿ ನಮ್ರತೆಯ
ಅಣುಗನವೊಲ್ ಕುಳಿತುದುದಂ ಕಂಡು ಅಚ್ಚರಿಯ
ಕುಂಡದಲಿ ಮುಳುಗಿದೆನೆನ್. ಅವನುಂ ಕಾಳಿಕಾ
ದೇವಿಯ ಗುಡಿಗೆತ್ತು ಜಗಜ್ಜನನಿಯ ದರ್ಶನ
ಭಾಗ್ಯಂ ಪಡೆದು ಮಾನಸ ಪೂಜೆಯನುಂ ಸಲಿಸಿ
ಗುರುಗಳ ಬಳಿಗೈದಿದನ್. ಗರುಗಳ ಪದತಲದಿ
ಕುಳಿತ ಭಂಗಿಯಂತು ಬಲು ಸಂದ್ಯಶ್ಯಮಾನಂ.
ಮುಂದೆ, ಪ್ರತಾಪ ಚಂದ್ರ ಮುಜುಮದಾರನುಂ
ತನ್ನ ಲೇಖನಿಯಲಿ ಕೊರೆದು ಅನುಭವ ಸಾರವ
ಜನಮನಕೆ ಮುಟ್ಟಿಸುವೊಲ್ ಪ್ರಕಟಿಸಿಹರಿಂತು,
"ಆನಂದು, ಪ್ರಪ್ರಥಮವಾಗಿ ದಕ್ಷಿಣೇಶ್ವರ

ಗುಡಿಯೊಳ್ ಜಗನ್ಮಾತೆಯ ದರುಶನಮಂ ಪಡೆಯೆ
ಪೋದುದು ದಿಟಂ. ಮಹಾದ್ವಾರಮಂ ಪುಗಲೊಡನೆ
ವಾಮಾಂಗದ ಕೊಠಡಿಯೆಡೆಯಿಂದಲಿ ಜಾನದ್ಯೆ-
ಸಿರಿಯ ನಿಜಗಂಧ ಪರಿಮಳ ನುಗ್ಗಿ ಬಂದತ್ತು
ಎನ್ನನುಂ ಸ್ವಾಗತಿಸಿ ಸೆಳೆಯುವವೊಲ್. ಚಣಚಣ
ಅತ್ತಲಾಕರಿಸುತಿರೆ ಮನವಂ ನಸುವೊಳ್ತು ನಾಂ
ನಿಂತು ಆಲೈಸಿದೆ. ಪ್ರವಚನಧಾರೆಯು ಕರ್ಣ
ದ್ವಾರಮಂ ಮುಟ್ಟಲೊಡನೆ ತೇಯ್ದು ಸಿರಿಗಂಧದ
ಕಂಪು ಪೂಸಿದೊಲಾಯ್ತು ನಾಸಿಕಾಗ್ರಕೆ. ಪಜ್ಜೆ
ಕೀಳದೆ ನಸುವೊಳ್ತು ಮನಗೊಟ್ಟಾಲೈಸಿರಲಾಂ
ಒರ್ಮೆಗೇ ತನುಮನಂಗಳ್ ಸೂರೆಯಾದುವಾ
ಚಣದೊಳ್. ಒಳಕೊಠಡಿಗೆ ಸದ್ದಿಲ್ಲದೆ ನಡೆದೆ.
ಶ್ರೀದನಿ ಮೊಳಗುತಲಿರ್ದುದು ಎಡೆವಿಡದೆ. ಆನ್
ಮುಂಕೊಂಡು ಒಳಗೃಹದೆಡೆಗೈತರೆ ಕಂಡೆನ್
ಶ್ರೀರಾಮ ಕೃಷ್ಣರುಂ ಕಣ್ಮುಗಿದು ಕುಳಿತುದಂ.
ಪ್ರವಚನಧಾರೆ ಹೊಮ್ಮುತಲಿದೆ ಧ್ಯಾನಲೀನ
ಭಂಗಿಯಲಿ, ಇತ್ತಣ ಪರಿವೆಯಿಲ್ಲ. ಜ್ಞಾನವೇ
ಮೂರ್ತಿಯೆತ್ತಿದಂತಿರ್ದ ಪುಣ್ಯ ಪುರುಷನ ಮುಖ
ದರ್ಶನದ ಭಾಗ್ಯದಿಂ ವಿಮುಖಗೊಳಲಾರದಾಂ
ಮಂಡಿಸಿದೆನ್ ಅವರ ಪದತಲದಲಿ. ಸುಮಂತ್ರಿತ
ಫಣಿಯಂತೆ ಮನಮತಿಗಳೆನ್ನ ಅವರ ಪ್ರಜ್ಞಾನ
ಜ್ಯೋತಿರ್ಕಿರಣಧಾರೆಯಲಿ ಮಿಂದು ಘನವಾಗಿ
ಪುನೀತಮಪ್ಪಿದುವೊ ಎನೆ ಆನಲ್ಲಿಯೆ ಕುಳಿತೆನ್....
ಆ ದೇಹ ಯಷ್ಟಿಯುಂ ಜ್ಯೋತಿರ್ಮಯಮಾಗಿಹ
ಸ್ಫುಲಿಂಗಗಳ್ ಸ್ಫುರಿಸುವೊಲ್ ಜ್ವಲಂತಮಿರೆ

ಸೂಜಿಗಲ್ಲಿನ ಮಾಳ್ಕೆಯಲಿ ಆಕರ್ಷಣೀಯಂ!
ಆದೊಡಂ, ನಮ್ಮೊರ್ವರಿಂಗೆ ಇರ್ಪ ಅನನ್ಯ
ಸಾದೃಶವಾದೊಡಂ ಎಂತಾದ್ದು? ಆಂ ಕಲಿತುಬಲಿತು
ಲೋಕಪ್ರಜ್ಞೆಯುಮುಳ್ಳ ನವನಾಗರಿಕ ವ್ಯಕ್ತಿ!
ಯೂರೋಪೀಯ ಭಾವಾಪನ್ನಂ, ಸ್ವಾಭಿಮಾನಿ,
ಅರೆಸಂದೇಹವಾದಿ. ಸುಶಿಕ್ಷಿತಯುಕ್ತಿವಾದಿ. ಆತಂ
ದರಿದ್ರಂ, ಲೋಕಜ್ಞಾನಹೀನಂ, ಸದಭಿರುಚಿ
ಹೀನಂ, ವಿಗ್ರಹ ಪೂಜಕಂ, ಹಿಂದೂಮತದ
ಭಕ್ತಂ; ಎನಲ್ಕೆ ಈ ಎಲ್ಲವಂ ಅಳೆದಳೆದು
ಮನದೊಳ್ ತುಲನೆಗೈದು ಮನಗೊಳ್ಳೆ ಅವನೊರ್ವ
ಸಾಮಾನ್ಯನೆ ವಲಂ! ಅದನರಿದರಿದು ಕಂಗಳ್
ತೆರೆದು ನೋಡಿ ಆತನುಲಿವ ಮಾತುಗಳಿಂಗಾಂ
ಕಿವಿಗುಡುವೆನೇಕೆ? ಆಂ ಡಿಸ್ರೇಲಿ, ಪಾಸೆಟ್,
ಸ್ಟಾನ್ಲಿ, ಮ್ಯಾಕ್ಸ್‌ಮುಲ್ಲರ್ ಮೊದಲಪ್ಪ ಮಹಾನ್
ಐರೋಪ್ಯ ಜ್ಞಾನನಿಧಿಗಳ ಮೇಣ್ ಘನಮಹಿಮ
ಮನೀಷಿಗಳ ಧರ್ಮಪ್ರಚಾರಕರ ವಾಗ್ವಿಲಾಸ
ದೈಶ್ವರ್ಯಮಂ ಕಂಡು ಮನತುಂಬಿ ಆನಂದ
ಭೋಗವಂ ಪಡೆದವಂ! ಮತ್ತಿವನ ಪದತಲದಿ
ಕುಳಿತು ಜೋಂಪಿಡುವುದೆನೆ ಬಲು ವಿಶೇಷಂ.
ಆಂ ಏಸುಕ್ರಿಸ್ತನ ಭಕುತಿರಸವನುಂಡು ಕ್ರೈಸ್ತ
ಪಾದ್ರಿಗಳ ಆತ್ಮೀಯ ಗೆಣೆತನಂ ಬೆಳೆಸಿ, ಅದೆ
ಕ್ರಿಸ್ತ ಧರ್ಮ ಪ್ರಚಾರಕನಿರುತ್ತೆ ಸರ್ವಥಾ
ಯುಕ್ತಿ ಪಂಥಿಯ್ಯೆಸಿದ ಬ್ರಾಹ್ಮ ಸಮಾಜಿ! ಇಂತೇಂ
ಮರುಳಾದಪೆಂ? ಇದೆನಗೆ ಅರ್ಥೈಸಲ್ ಆಗದ
ಕರ್ಮಕಾಂಡ! ಎನ್ನ ಜ್ಞಾನವಲಯವೆ ಪಿರಿದಪ್ಪಿ

ಬಿರಿಯುವಂತಿರೆ ಸಾಲದೇಂ? ಎಂಬೊಂದು ದಿವ್ಯತರ
ಪ್ರಶ್ನೆಯೆಳ್ಚಪುದು ಮನವಂ ಕೊರೆಯುವ ತೆರದಲಿ!
ಆದೊಡೀ ಪುಣ್ಯಪುರುಷನ ಮುಂತೆ ಎಲ್ಲವುಂ
ಗೌಣ, ಗಾಳಿಗೋಪುರ, ಕನಸಿನ ಗಂಟು ಎನಿಸುಗೆ,
ಮನಂ ಮರುಗಳಿಗೆಯಾವರ್ತನದೊಳ್ ಸಿಲುಕಿತು.'
ಅಂತುಮಲ್ಲದೆಯುಂ ಆನೊರ್ವ ಮಾತ್ರಮೇಂ ಆ
ಮಹಾಪುರುಷನ ಪದತಲದಲಿ? ಎನ್ನವೊಲ್ ಬಹು
ಮಂದಿ ಪ್ರಜ್ಞಾನಿಗಳ್ ಮಂತ್ರಮುಗ್ಧ ಫಣಿಯೊಲ್
ಕುಳಿತುಕೊಂಬರ್ ಕಣ್ಣೆವೆಯಿಕ್ಕದೆಯೆ. ಇಂತಿರಲ್,
ಎಲ್ಲಿಯತನಕನವನ್ ಎಮ್ಮಯಬಳಿ ಜೀವಂತ
ಮೂರ್ತಿಯೆನಿಸಿ ಇರ್ಪನಲ್ಲಿಯತಕನವನೆಮ್ಮಯ
ಗುರುವರ್ಯನೇ ವಲಂ. "**ಗುರುಣಾಂ ಗುರುಃ**" ಎಂಬ
ನುಡಿಗಟ್ಟು ಸಲ್ಪುದವನಿಗೆ. ಮತಭೇದ ಮತ್ತಂ
ವರ್ಗಭೇದಗಳ ಕೀಳರಿಮೆಯಿರದ ಮಹಾನ್
ಪುರುಷೋತ್ತಮ. ಅವನ ಪದತಲದ ಸುಗಂಧಕ್ಕೆ
ನುಗ್ಗುವ ಅತಿಕಾಮಿಗಳಪ್ಪ ಭ್ರಮರಂಗಳ
ಮಾಳ್ಕೆಯಲಿ ಗಂಧ ಮಕರಂದಮಂ ಪೀರ್ದು
ಆತ್ಮತೋಷಂ ಸ್ಫುರಿಸಿ ಪವಿತ್ರತೆ ವೈರಾಗ್ಯ
ಆಧ್ಯಾತ್ಮಿಕತೆ ಭಗವನ್‌ಭಕ್ತಿ ಮುಂತಪ್ಪ ವರ
ಧರ್ಮಕಥೆಗಳ ಶ್ರವಣ ಮಾಳ್ಪುದೆಮಗೊದವಿದ
ಅಹೋ ಭಾಗ್ಯಮೆನಲನ್ಯಮಲ್ತು! ಅವಂ ಮಂತ್ರ
ಮಾಟಗಾರನಲ್ಲಂ. ಮಾಯಾವಿಯುಂ ಅಲ್ಲ.
ಭಕ್ತಿಧ್ಯಾನವನಲ್ಲದೆ ಮತ್ತೇನ್ ಅರಿಯದ
ಮಹಾ ಸಾತ್ವಿಕ ಪುರುಷನೆನೆ ಪೆರ್ಮೆ ಎಂಬೆನಾಂ.
ಇಂದಿನೀ ರಾಷ್ಟ್ರ ಕಂಟಕಿತ ದುಷ್ಕಾಲದಲಿ

ಇಂತಪ್ಪ ಧಾರ್ಮಿಕ ಗುರು ಲಭಿಸಿದುದೆಮ್ಮ ಪರಮ
ಭಾಗ್ಯವೇ ವಲಂ. ಅಂದಿನ ಪುರಾಣ ಪ್ರಥಿತ
ಮುನಿರಿಸಿಗಳ ಜ್ಞಾನ ಭಂಡಾರದ ಕಿಡಿಯೊಂದು
ಸಿಡಿದವತರಿಸಿತೊ ಶ್ರೀರಾಮಚಂದ್ರನ ಧರ್ಮ
ಕಿರಣಛವಿ ಹರಿದುದೊ ಶ್ರೀ ಕೃಷ್ಣನ ಪರಿಜ್ಞಾನದ
ಲೀಲಾ ವಿನೋದದ ರಸದೂಟೆಯ ಹಸಿರ್ಕಿಡಿ
ಹೊಳೆದುದೊ ಎನಲ್ ಅರಿಯಲಾರದ ಪರಿಸ್ಥಿತಿಯ
ಕೊಳದೊಳಾಂ ಮುಳುಮುಳುಗಿ ತೇಲುತಿಹೆ ಭಕ್ತಿಯಲಿ."
    ಪ್ರತಾಪಚಂದ್ರಮುಜುಮದಾರನೊರೆದಿರ್ದಾ
ಉಲ್ಲೇಖವನೋದಿಯು ತನ್ನಮನದಾಶಂಕೆ
ಕಳಿಯದಾಯ್ತು ನರೇಂದ್ರನಾಥಂಗೆ. ವರ ಮಹಾ
ವಿದ್ವನ್ಮಣಿ ಪ್ರತಾಪಚಂದ್ರನ ಉಲ್ಲೇಖ,
ಮೇಣಧಿಕ ಇತರಿತರ ಮಹನೀಯರನೇಕರ
ಸಹವಾಸ ದೊರೆತು ಪರಿಚಯ ಪಡೆದು ಪರಸ್ಪರ
ವಿಚಾರ ವಿನಿಮಯ ಹೊಂದಿಯುಂ ಮನದಾಶಂಕೆ
ತೊಲಗದಾಯ್ತು.
    ದಕ್ಷಿಣೇಶ್ವರದ ಕಾಳಿಕಾದೇವಿ
ಮಂದಿರಂ ಬಾಗೀರಥಿ ಮಹಾನದಿಯ ತೀರದಿ
ನೆಲೆಸಿ ಸರ್ವತ್ರ ಸರಿ ಸಮನೆನೆ ಸದಾಕಾಲ
ಭಕ್ತಜನ ಬಾಹುಳ್ಯದಿಂ ತುಂಬಿ ತುಳುಂಕುವ
ಪರಿಪೂರ್ಣ್ಯ ಪೂಜಾತಲಮಿರೆ ಭಕ್ತಿ ಯೋಗದ
ಅನುಭವವೆ ಅಮೃತರಸಪಾನಂ. ಆ ಸಾಲ್
ಸಾಲ್ಗೈದ ಗುಡಿಗಳ ಮಧ್ಯೆ ವಿರಾಜಿಸಿ, ಭಕ್ತರ
ಸಕಲಜ್ಞಾನ ಸಿದ್ಧ್ಯರ್ಥಂ ಶಿಲಾಮಯಿ ಮೂರ್ತಿಯು
ದೇವಮಯಿ ಮಾತಾಮಯಿ ಚಿನ್ಮಯಿ ಪ್ರಾಣಮಯಿ

ಲೋಕಮಯಿ ತ್ರಿಕಾಲಜ್ಞಾನಮಯಿ ಎಂದೆಂಬ
ಅಮಿತ ಮಯಿಗಳಿಂದಲಿ ವಿಜೃಂಭಿಸಿದ ಜಗತ್
ತಾರಿಣಿಯ ದೇಗುಲಂ ಜನಪ್ರಿಯಮಾದತ್ತು.
ಭಕ್ತಜನ ಸಂದೋಹ ಮಾಕಾಳಿ ಸನ್ನಿಧಿಗೆ
ಭಕ್ತಿ ಗೌರವಗಳಿಂ ಫಲಪುಷ್ಪಗಳ್ ಪೊತ್ತು
ಬಂದಪರ್ ಗುಂಪಾಗಿ. ದೇವೀ ಗುಡಿಯ
ಅರ್ಚಕಂ ಪೂಜಾವ್ರತಾದಿ ಕೈಂಕರ್ಯಮಂ
ನಿಷ್ಠೆಯೊಳ್ ನಡೆಸಿರ್ದೊಡಂ ಮನಮತಿಯಂ
ಶಕ್ತಿಸಾಧನೆಯೊಳಿರ್ರಿ ಅನುದಿನ ನಿರ್ವಿಕಲ್ಪ
ಸಮಾಧಿಯಲಿ ಮುಳುಮುಳುಂಗಿ ಮೈಮರೆಯುವಂ.
ಮಹಾ ಯೋಗಿಯುಂ ಭಕ್ತ ಚೂಡಾಮಣಿಯುಂ
ವೈಷ್ಣವ ಮುಸಲ್ಮಾನ ಶಾಕ್ತ ಕ್ರೈಸ್ತ ಇತ್ಯಾದಿ
ಭಿನ್ನಭಿನ್ನ ಧರ್ಮ ಮಾರ್ಗೀಯ ಜ್ಞಾನ ಬುದ್ಧಂ
ಭಾರತೀಯರಾ ಸೌಭಾಗ್ಯವಶದಿಂ ಸಂಜನಿಸಿ
ಕಲುಷಿತ ಸಮಾಜವಂ ಸಂಸ್ಕರಿಸಿ ಪುಟವಿಟ್ಟು
ಸಂಬಾಳಿಸೆ ಆಗಮಿಸಿದ ದೇವರ ದೂತಂ!
ಪಾಶ್ಚಾತ್ಯ ಭುವಿಯ ಬೌದ್ಧಿಕ ಕರಂಡವನಾವ
ಮಾನದಂಡದಿಂದಳೆಯೆ ಕಂಡುಬಹ ಸತ್ಯವೆನೆ
ಹದಿನೆಂಟನೆಯಾಶತಮಾನ ಕಾಲಂ ಎಮಗೆ
ಪ್ರಬೋಧಯುಗಮೆನಿಪುದು ಮತ್ತಂ
ಹತ್ತೊಂಬತ್ತನೆಯ ಶತಮಾನವದು ವಿಜ್ಞಾನ
ಯುಗಮೆನಿಸಿ ಪ್ರಸಿದ್ಧಿ ಪಡೆದುದೇ ದಿಟಂ. ಆ
ಯುಗದ್ವಯಗಳ್ ಕಾಲೋಚಿತಮಪ್ಪ ಪ್ರಚ್ಛನ್ನ
ವಿಧಿವಿಧಾನಂಗಳಿಂದೆ ಮುಗಿಲೆತ್ತರಕೆ ಏರ್ದು ತಟ್ಟನೆ
ಮಾನಸಿಕ ಪರಿವರ್ತನೆಯೊಡಂ ಪುಟಿಪುಟಿಯುತೆ

ರಾಜಕೀಯ ಆಂದೋಳನ ನಡೆಸುವ ಪುರುಷಂ
ಮೂಡಿಸಿತು ಬೌದ್ಧಿಕ ಬಲದಿಂ. ಹೆಬ್ಬಂಡೆಯಿಂ
ಏರ್ದ ಕೇಸರಿಯುಂ ಪರಿಸರದೆಡೆಯೆಡೆಯೆಡೆಗೆ
ಕಣ್ಣೆಟ್ಟು ನಿಟ್ಟಿಸುತೆ ಪರಿಸ್ಥಿತಿಯನರಿಯುವ
ತೆರದಿ ಭಾರತೀಯರ ದೃಷ್ಟಿ ಹರಿದುದು ದೂರ
ದೂರ. ಹಾರಾಡಿತು ಮಾನಸ ಪಕ್ಷಿ ಸ್ವತಂತ್ರ
ರಾಷ್ಟ್ರಗಳಮೇಲೆ. ನವಸಮಾಜದ ನಿರ್ಮಾಣ
ಸೂತ್ರವ ಪಿಡಿಯೆ ಪರಿಪರಿಯಲಿ ಜಾನಿಪ ಶಕ್ತಿ
ಮೊಳೆಯಿತು ಮನದ ಕಳ್ತಲೆ ಗವಿಯಲಿ ಮಿಂಚಿನೊಲ್!
ಅಂದಿನ ಸುಗಾಲವದು ಅತಿ ಗೌರವಾನ್ವಿತಂ
ಎನಿಪ ಕಾಲಮಾನಂ ಪರಿಭಾವಿಸಿ ನೋಡಲ್.
ಜ್ಞಾನ ವಿಜ್ಞಾನ ಅಭಿಜ್ಞಾನ ವಿಶ್ವಜ್ಞಾನದ
ಸಮುದಾಯದ ಕಾರೊಡಲ ದಿಶೆದಿಶೆಯೊಳ್ ನುಗ್ಗಿ
ಹರಿದಾಡಿ ತೇಲಾಡಿ ಸಕಲ ವಿದ್ಯಮಾನಂ
ಮನಗೊಂಡು ವಿಶ್ವವೈಶಾಲ್ಯತೆಯ ಅರಿತರಿತು
ಭಾವ ಸಂಪುಟ ಬಿರಿದುದೊ ಎನೆ ತರ್ಕವಿತರ್ಕ
ಭುಗಿಲೆಳ್ದುವು ಮತಿಯಚ್ಚು ಬಿರಿವ ತೆರದಿ. ಮತ್ತೆ
ಮತ್ತೆ ಮೈಕೊಡವಿ ಚಿಂತನಾವೇಶಾವೇಶದಿಂ
ಬೆಳೆದು ಮುಂಬೆಳೆದು ನೆನೆಕೊನೆಯೇರೆ ಮೂಡಿದುವು
ಆಶಂಕೆ ಸಂದೇಹಗಳ್ ಚಿತ್ತಭಿತ್ತಿಯಲಿ
ಅದ್ಭುತ ಮನೋನಿಶ್ಚಿತ ಸಿದ್ಧಾಂತಗಳ್ ಜಲ
ಬುಗ್ಗೆಯೊಲ್ ಚಿಮ್ಮಿ ಬಂದುವು ಸಂಜೀವನೋಚಿತಂ.
ಮನಮತಿಗಳ್ ಮಸೆದುವು ಬಿದಿರುಮೆಳೆಯ ತೆರದಲಿ.
ಕಾಲವಾಹಿಯುರುಳೆ ದಿನದಿನಗಳಳಿದು ಸರಿದು
ಗತೇತಿಹಾಸೀಯ ಸಂಪುಟಂ ಸೇರಿದುವು. ಆರ

ಗಣನೆಗೆಟುಕದ ಪರಿಯಲಿ. ನಿತ್ಯವಿನೂತನತೆ
ಸೆಳೆಯುತಿರೆ ಪುರಾತನಮಂ ಪಿಂತಿಡುವ ತೆರದಿ
ಅಂಧಶ್ರದ್ಧೆಯ ಜಾಲದೆಳೆಗಳ್ ಕಡಿದೊಡೊಂದು
ಮೂಡುವುದು ಹತ್ತಿಪ್ಪತ್ತು. ಅಂಧಕಾರದೋಡಂ
ಕುಕ್ಕಿ ಕುಕ್ಕಿ ಒಡೆಯಲೆನೆ ಒಡಮೂಡಿದ ಧರ್ಮ
ಗುರುದೇವ ಶ್ರೀರಾಮ ಕೃಷ್ಣ ಪರಮಹಂಸರ್,
ಜನಮನವ ಓದೋದಿ ದಣಿದೊಡಂ ಪೇಸಿದರೆ?
ಕೋಡಿದರೆ? ಧರ್ಮಬೋಧೆಯಂ ಕೈವಿಟ್ಟರೆ?
ಅನುದಿನಂ ಎಡೆವಿಡದೆ ಪ್ರವಚನ ಧಾರೆಯಂ
ಹರಿಸಿಯೇ ಹರಿಸಿದರ್ ಎದೆಯುಸಿರ್ ಕಳೆವನ್ನ.
    ನರೇಂದ್ರಂ ಪುರಾಣ ಪ್ರಣೀತ ದೇವಾನ್
ದೇವತೆಗಳಪ್ಪ ಹರಿ ಕಾಳಿ ಕೃಷ್ಣ ಈಶ್ವರ
ಇತಿ ಬಗೆಬಗೆಯ ದೇವದೇವಿಯರನೆಲ್ಲವಂ
ಮನೋಮಂಡಲದಿಂದೆ ದೂರೀಕರಿಸಿರ್ದಾ
ದಿನಮಾನವದು! ಶ್ರೀರಾಮ ಕೃಷ್ಣ ಪರಮಹಂಸ
ದೇವಂ ಅನುದಿನಗಳ ಪ್ರವಚನ ಮಾಲೆಯಲಿ
ಜಗದಂಬೆಯಂ 'ಕಾಳಿ' ಎಂದೆಂದು ವಿವರಿಸುತೆ
ಶ್ರದ್ಧೆಯಿಂ ವಿನಮ್ರತೆಯಿಂ ಭಕ್ತಿ ಭಾವದಿಂ
ನುಡಿವ ಧಾಟಿಯಂ ಮನದಿ ನೆನೆನೆನೆದು ತನ್ನೊಳ್
"ಎಲ್ಲವುಂ ಶುದ್ಧ ಮೂರ್ಖತನ! ಕೆಲಕಾಲದೊಳ್
ಮುದುಕಂಗೆ ತಿಳಿವು ಮೂಡುವುದು ತನ್ನ ಕಾಳಿಯು
ಬರೀ ಕಟ್ಟು ಕತೆಯೆಂದು! ಪುರಾಣವೊಗೆದೊಂದು
ಕಂತೆಮಿದು ಮಾತ್ರಮೆಂದು!" ತರುಣಮತಿ ಭುಗಿಲ್ಲು
ಓೀಯಾಳಿಸಿ ನುಡಿಯಲ್ ಅಂತರಾತ್ಮ ಒಪ್ಪಿತೆ?
ಅಣುಗುತನಕೆ ಮಣಿಯಿತೆ? ಮರುಚಣಮೆ ಆ ಮರುಳು

ಅರ್ಚಕನೆಡೆಗೇ ಪಾರ್ವುದು ಮನಃಪಕ್ಷಿಯೊಡಂ
ಮತ್ತೆಮತ್ತೆಮೇಣತ್ತ್. ಆ ಮರುಳುತನಮಂ
ಮರೆದು ವಿದ್ವನ್ಮಣಿಗಳಂ ಸೆಳೆವ ಪೂಜಾರಿ
ಪದೇ ಪದೇ ಮನೋಭಿತ್ತಿಯಲಿ ಮೂಡಿ ನಿಲ್ವನ್.
ಶಾಂತಿ ಕಿರಣಂಗಳಂ ಸ್ಫುರಿಸುವೊಲ್ ಪ್ರಶಾಂತ
ಮುಗ್ಧಂ. ಅವನ ಶಿಷ್ಯಗಣದೋಳ್ ವಿಲಾಯತಿ
ಪ್ರತ್ಯಾಗತ ಕೇಶವಚಂದ್ರಸೇನಂ ಸ್ವತಃ
ವಿದ್ವತ್ತಿನ ಭಂಡಾರ ಮಿರುತಿರ್ದು ದಾಸರ
ದಾಸನೆನೆ ಶ್ರೀರಾಮಕೃಷ್ಣರ ಪದತಲದಲಿ
ವಿನಮ್ರತೆಯಿಂ ಕುಳಿತು ಕೊಂಬುದಂ ನೋಡುತಿರೆ,
ನರೇಂದ್ರನ ಮನಮತಿಗಳಾಸಂಕೆ ಬುಡಗಳಚಿ
ಬಾಡಿದೊಲ್ ಮುದುಡಿಯುಂ ನರೇಂದ್ರಂ ಕಗ್ಗಲ್ಲ
ಬಂಡೆಯೊಲ್ ಸ್ಥಿರಂ! ಅವನಂ ಸಂಪೂರ್ಣವೇ
ಅರಿತು ಮನಗೊಂಡ ಬಳಿಕ ನಿರ್ಣಯ ಎಂಬೊಂದು
ದೃಢಯೋಚನೆ ತನ್ನೊಳ್. ಅಣುಗುತನದ ಅಣುಗು
ಮತಿ ಎದೆಯ ಕಾತರಕೆ ಶಾಂತಿರಸಮಂ ತುಂಬಿ
ಪೂರೈಸದು. ಏಕಾಂತ ಚಿಂತನೆಯಲಿ ಯೋಚಿಸಿ
ಯೋಚಿಸಿ ದಣಿವಂ. ನೋಡುತಿರೆಯಿರೆ ಆ ಮಾನ್ಯ
ನಾಗಮಹಾಶಯನುಂ ಹದವರಿತು 'ದೇವಗುರು'
'ಕಲ್ಪತರು' ಎನುತೆ ಶ್ರೀರಾಮಕೃಷ್ಣರಂ ತಾಂ
ಮೆಚ್ಚಿ ನೆಚ್ಚಿ ಶಿಷ್ಯತ್ವವನೊಪ್ಪಿ ವರಶಿಷ್ಯ
ತಾನಾಗಿ ಮೆರೆದಪಂ! ಕಲ್ಮಯೀ ವಿಗ್ರಹದಿ
ಚಿನ್ಮಯೀ ಮಾತೆಯಂ ಕಂಡರಿದು ಭಕ್ತಿಯಿಂ
ಮೂರ್ತಿಪೂಜೆಯಂ ಅತ್ಯಂತ ನೇಮದಿಂದಲಿ
ಸನ್ಮಾನಿಸಿದನ್. ಅವನಂತೆಯೇ ಇನ್ನೆನಿತೋ

ವಿದ್ವನ್ಮಣಿಗಳ್ ಪ್ರಜ್ಞಾನವೇತ್ತರ್ ಗೃಹೀ
ಭಕ್ತರ್ ಪರಮ ಶಿಷ್ಯರ್ ಕೂಡಿರುತೆ ಸಭೆಯುಂ
ಓಗ್ಗಿ ತುಂಬಿ ತುಳುಕುವುದು ಗುರು ಸಮ್ಮುಖದಲ್ಲಿ
ಎದೆಯಾಳದಲಿ ಜ್ಞಾನ ದೀಪ್ತಿ ಬೆಳಗಿ ಜ್ವಲಿಸಿ.
ತದೇಕಾಂತ ಚಿತ್ತದಲಿ ವೇದಾಂತದ ಸಾರ
ಸರ್ವಸ್ವವಂ ಜಳಜಳನೆ ನೀರ್‌ಧಾರೆಯೊಲ್
ಹರಿಸುತಿರೆ ರಾಮಕೃಷ್ಣ ಪರಮಹಂಸರ್,
ಆಲೈಸುವ ಶ್ರೋತೃಗಳ್ ಮಿಸುಕಾಡರ್. ಆದೊಡೇಂ
ಯುವಮನೀಷಿಯ ಚಿತ್ತ ಕಲ್ಪದ ವಿಚಾರಾಂತ
ತರ್ಕವೇ ಬೇರೆ. ತನ್ನ ವ್ಯಕ್ತಿತ್ವವನ್ನೆ ಅಲುಗಿಸುವ
ಕ್ರಮವತ್ ಸನಾತನ ಮುನಿರಿಷಿಗಳ ಉಪದೇಶ
ವಾಹಿ ಪಣ್ತು ಫಲಪ್ರದವಾಯ್ತೊ ಸರಸತಿಯಾ
ಶುಭಾಶೀರ್ವಾದವೇ ಅಕ್ಷತೆಯೊಲ್ ಒಸರ್ದುದೊ
ಎಂಬವೊಲ್ ಅನುಕ್ರಮದೊಳ್ ನಸುನಸುವಾಗಿ ನವ
ತರುಣನ ಮನೋ ಮಂಡಲಂ ತುಂಬಿತು ಗುರುವಿನ
ಪ್ರವಚನ ರಸಧಾರೆಯಿಂ. ರೋಮರೋಮಗಳ್
ನಿಮಿರಿದುವು; ಆನಂದ ರೋಚಕ ಶೈಲಿಯಲಿ.
ಪ್ರವಚನ ಮುಗಿಯೆ ತರುಣಜಿಹಾಸಿ ಮೇಲೆಳ್ದು
ತನ್ನಯ ಗೆಳೆಯರೊಡನೆ ಪೊರಮಟ್ಟನ್. ಇರುಳು
ಅಡರಿತು. ದಿನಮಾನಗಳೆನಿತೊ ಉರುಳಿದುವು. ಮನ
ಮತಿಗಳಿಗೆ ಅಪಾರತರ ಕೈಂಕರ್ಯಂ ಹಚ್ಚಿ,
ಪರಂತು, ಅರಳು ಮರುಳು ಮಾನುಷಿಯ ವಿಚಾರಂ
ತೆಕ್ಕನೆ ಮನದಿಂ ತಳ್ಳಿಬಿಡಲುಂಟೆ? ನೆನೆದೊಡೆ
ಮತಿಗತಿಯೆ ತತ್ತರಿಸಿ ನಿತ್ತರಿಸಿ ಎತ್ತರಿಸಿ
ಓಲೈಸುತೆ ಲಾಲಿ ಹಾಡುವುದು ಮತಿಗೆಡಿಸಿ. ತಾಂ

ಇನ್ನೊರ್ಮೆ ದಕ್ಷಿಣೇಶ್ವರಕೆ ಪೋಗಿ ಬಂದಪುದೆ
ಒಳ್ಳಿತು ಎನಿಸೆ, ಮನದಿ ನರೇಂದ್ರನಾಥದತ್ತಂ
ಪೊರಟನೇಕಾಂಗಿ. ದಕ್ಷಿಣೇಶ್ವರ ದೇಗುಲದ
ಪಥಮಂಪಿಡಿದು. ಕಳಿದುದು ಸುಪಥ ಸುಗಮವಾಗಿ.
ಅಂದಿನಾ ಸಂದರ್ಶನದ ಅನುಭವದ ವಿಚಾರಂಕುರಿತು
ಮುಂದೆ ತಮ್ಮ ಲೇಖನಿಯೊಳ್ ತಾಮೆ ಬರೆದಿಹರ್
ಉಲ್ಲೇಖವನಿಂತು,
"ಅವರ ಕೊಠಡಿಗಾಂಬೊಕ್ಕು
ನೋಡೆ, ಬೇರಾರ್ ಇರಲಿಲ್ಲವಾ ಕೊಠಡಿಯೊಳ್.
ನೆಲ ಹಾಸಿನಲಿ ಕುಳಿತ ಅವರ್ ನಗುಮುಖದಿಂ ಎನ್ನ
ಅದೆ ಚಾಪೆಯಮೇಲೆ ಕುಳಿತುಕೊಳಲ್ ಬೆಸಸಿದರ್.
ಧ್ಯಾನಮಯ ಮುಖಭಂಗಿಯಲಿ ತೇಜಪುಂಜತಮ
ವರ್ಚಸ್ಸು ಬೆಳಗುತಲಿರ್ದುದಂ ಕಂಡೆ. ಅನನ್ಯ
ಪ್ರೇಮದಿಂ ಆನಂದ ತುಂದಿಲತೆಯಿಂ ನುಡಿಸಿ
ಬಳಿಗೆ ಕರೆದು ಸನಿಹದೊಳ್ ಕುಳ್ಳಿರಿಸುತೆ, ಇತ್ತ
ಸರಿಸರಿದು ಬಳಿಗೈತಂದರ್ ಅಂದಿನ ಮಾಳ್ಕೆಯಲಿ
ವಿಚಿತ್ರತರವರ್ತನೆಯಲಿ ತೊಡಗುವರೊ ಎನಿಸಿ
ಕಣ್ಮನವ ನಟ್ಟು ನೋಡುತಿರಲಾಂ ತನ್ನ ಬಲ
ಗಾಲ್ ಚಾಚಿ ಎನ್ನ ತೊಡೆಯ ಮೇಲಿರಿಸಿದರ್. ಹಾ!
ಆಗಣದ ದಿವ್ಯಾನುಭವವನುಂ ಬಣ್ಣಿಪುದು
ಅಸಾಧ್ಯಂ! ಕಣ್ತೆರೆದು ನೋಡುತ್ತಲಿರ್ದನಾಂ.
ಒಡನೊಡನೆ ದೇವಿ ಮಂದಿರದ ಭಿತ್ತಿಗಳ್, ಕಣ್
ಎದುರಿನ ಸಕಲ ವಸ್ತುಗಳ್ ಕಂಪನದಲೆಯೊಳ್
ಸಿಲ್ಕಿ ವಿದ್ಯುದ್ವೇಗದಿಂ ಮಾಯಮಾದುವೆಮ್ಮ
ಕಣ್ಮುಂತೆಯೇ! ಅಹ, ಅನಿರ್ವಚನೀಯಮಾದ

ರಹಸ್ಯತಮ ಶೂನ್ಯದಲಿ ಇಡೀಜಗಮಂಡಲದ
ಜೊತೆಗಾನು ಲೀಯಮಾನನಾದೆಂ! ಭೀಕರ
ಭೀಭತ್ಸ ಅನುಭವದ ಸುಳಿಗೆ ಸಿಲ್ಕಿದಾನುಂ
ಸಹಿಸಲಾರದೆಯೆ ಭಯ ಭೀತಿಯುಂ ಆವರಿಸಿ
ಮೃತ್ಯುಮುಖನಾದವೊಲ್ ತೋರಿಬರೆ ಚೀರಿದೆನ್
"ಅಯ್ಯೋ, ಇದೇಂಗೈದಿರಿ? ತಾಯ್ತಂದೆ ಇಹರೆನಗೆ!"
ಅಹ, ಅಹಂಕಾರದಾ ವಿಸ್ಮೃತಿ ಮರಣಕೇನು
ಕಡಿಮೆಯೇ? ಹಾ, ಎಂತುಟು ಧಾರಣ ಅನುಭವಂ?
ಒಡನವರ್ ಗಹಗಹಿಸಿ ನಗುತೆ ಎನ್ನೆದೆಯೋಳ್
ತಮ್ಮ ಹಸ್ತವನೆಳೆದು ಪ್ರೇಮದಿಂ ನೇವರಿಸಿ
ಮೃದುವಚನಗಳ ಹಾಲ್ಜೇನ್ ಹರಿಸಿದರ್ "ಎಲೆ,
ವತ್ಸ! ಇಂದಿಗಿಷ್ಟೇ ಸಾಲ್ಗುಮೆನೆ ಮುಂದಿನದು
ಮುಂದೆಯೇ ಇರ್ಪುದ್ಯೆ. ಈಗಳಿದೊರ್ ನಿನ್ನಯ
ಮನೋಗತಿಗೆ ಸಾಮಾನ್ಯ ಕಿರು ಅನುಭವವಾಯ್ತು."
    ಅದೇ ಗಳಿಗೆಯೊಳ್ ಭೀಕರ ಭಯಾನಕಮಾದ
ಅನುಭವವಳಿದು ಮಂತ್ರಮಾಯದಾಟದ ತೆರದಿ
ಮಾಯವಾಯ್ತು! ಆಶ್ಚರ್ಯವಿಮೂಕನೆನಲಾನು
ಸ್ತಬ್ಧಗತಿಗಿಳಿದೆಂ. ಘಟಿತ ಘಟನಾವಳಿಯುಂ
ಮನಮಂಡಲದಲಿ ಸುಳಿಸುತ್ತುತಿದೆಯಾದೊಡಂ
ಏನೆಂದದಂ ಅರ್ಥೈಸಲಾರದಿರೆ ಮರುಚಣಂ
ಶಾಂತಿಸಾಗರದೊಳ್ ಮುಳುಗಿದ ಪರಿ ಸುಖಾನುಭವ
ತುಂಬಿ ಹರಡಿ ಮನಂ ತಿಳಿಯಾಯ್ತು. ಸುತ್ತಲುಂ
ನೋಡಿದೆನೆನ್. ಆವೊಂದು ವ್ಯತ್ಯಸ್ಥಮಿಲ್ಲದ
ಪ್ರಶಾಂತ ಸ್ಥಿತಿ. ಗಳಿಗೆಕಾಲವೊದವಿದ ಆ
ರೋಮೋದ್ಗತ ವಿಚಿತ್ರ ಅನುಭವವು ಎನ್ನಂಥ

ದೃಢ ಮಾನಸಿಕನಂ ಸೋಲ್ಗೆಡಗಿ ಅವಸ್ಥಾಂತರ
ಗೈವ ಅದ್ಭುತಮಾದ ಸಾಮರ್ಥ್ಯಮುಳ್ಳವ
ಮೇಣಧಿಕ ವೇದಾಂತ ಜ್ಞಾನಿಯಂ ಮರುಳನೆನೆ
ತಳ್ಳಿ ಬಿಡುವ ಎದೆಗಾರಿಕೆ ಮುರಿದು ಮುರುಟಿರ್ದ
ಪಕ್ಕಿಯಾಯ್ತು! ಯೋಚನೆಯ ಭ್ರಮರ ಕೀಟದೊಲ್
ಕೊರೆಯುತಿರೆ ನಂಬಲಾರೆ; ಬಿಡಲಾರೆ ಎಂಬವೊಲ್
ವಿಸ್ಮಯ ಭರಿತಮಾಯ್ತು ಬಗೆಗಡಲ್. ಆದೊಡಂ
ವ್ಯಕ್ತಿಯ ರಹಸ್ಯಮಂ ಸಂಪೂರ್ಣಮರಿಯದೆಯೆ
ಅವತಾರ ಪುರುಷನೆನೆ ಒರ್ಮೆಗೇ ಒಪ್ಪದೆಮ್ಮ
ಮನಃಚಿತ್ತಗಳ್. ತರ್ಕ ವಿತರ್ಕಗಳ ಅಲುಗಿಗೆ
ಸಿಲ್ಕಿ ಜಜ್ಜರಿತವಾಯ್ತೆನ್ನ ಹೃದಯಧಾತ್ರಿ.
    ಕಳಿದುದು ಎನಿತೆನಿತೊ ದಿನಮಾನಂ. ಕುತೂಹಲ
ತುಂಬಿ ಉತ್ಕಂಠಿತ ಮನದ ಸಂಕೆಯುಂ ಘನಿಸಿ
ತೂಗುಯ್ಯಲೆಯನೇರಿದುದು ಚಿತ್ತ ಪ್ರವೃತ್ತಿ.
ಯುಕ್ತಿ ಪಂಥಿಯಾಗಿದ್ದೆನ್ನ ಅಹಂಕಾರವುಂ
ಮಹಾಪುರುಷನಾ ದುರ್ಜ್ಞೇಯ ವರ್ತನೆಗಳ
ಆಘಾತವ್ಯಘಾತದಲಿ ಪಿಂಜರಿದು ಪಾದ
ಧೂಳಿಯಲಿ ಲೀನವಾಯ್ತು. ಆ ಮಹನೀಯನಾ
ವ್ಯಕ್ತಿತ್ವದ ಮುಂತೆಮ್ಮ ಶಕ್ತಿಯುಂ ಸೋರ್ದವೊಲ್,
ಪ್ರಾಣವಾಯು ಕಂಪಿತಮಾದವೊಲ್, ಜಗಶೂನ್ಯ
ಮಾದವೊಲ್ ಎಲ್ಲಮಿರ್ದು ಏನಿರದ ಪರಿಯಲಿ
ಮಂಜು ಕವಿದುದು ಮನಮತಿಗೆ. ಆದೊಡಂಮಾನು
ಒಪ್ಪದೆಯೆ ನಂಬದೆಯೆ ಗಂಭೀರ ರಹಸ್ಯದ
ಸತ್ಯಾರ್ಥಮಂ ಭೇದಿಸುವ ದೃಢ ನಿರ್ಧಾರದ
ದಿವ್ಯತೇಜಿಯೇರಿದೆನ್." ಇಂತು, ಏಕಾಂತದೊಳ್

ನರೇಂದ್ರನಾಥಂ ತನ್ನೊಳ್ ತರ್ಕಿಸುವಂ ಮತ್ತೆ
ಪರಿಭಾವಿಸುವಂ, ತಾನೆ ತಾನ್ಯೆಸಿ. ಹೃದಯದಲಿ
ಹುದುಗಿರ್ದ ಪ್ರಶ್ನೆಯಂ ನೆನೆದು ಇತರ ಧರ್ಮ
ಪ್ರಚಾರಕರಿಗೆಸೆದ ವಿಸ್ಮಯಭರಿತಮಾದ
ಪ್ರಶ್ನೆಯಂ ಕೇಳಿಸಿದನೊರ್ಮೆ "ಗುರುವೇ ನೀವ್
ದೇವರಂ ಕಂಡಿರ್ಪಿರಾ?" ಎರ್ದೆಯಾಕರಂ
ಪೂಸಿರ್ದ ಪ್ರಶ್ನೆಯಂ ಆಲೈಸಿದರ್, ಗುರುವರ
ಶ್ರೀರಾಮ ಕೃಷ್ಣ ಪರಮಹಂಸರ್. ವದನದೊಳ್,
ಸಿತಸ್ಮಿತವರಳಿ ಹೂವಾಯ್ತು. ಕಿಂಚಿತ್ ಮನಂ
ವಿಚಲಿತಗೊಳಿಸದೆ ಶಾಂತ ಪ್ರಶಾಂತ ಭಾವದಿ,
"ವತ್ಸ! ಕಂಡಿಹೆನ್ಯೆ ನಿನ್ನನೆಂತಂತು ಅಂತೆಯೆ
ಕಂಡಿಹೆನ್ ನಿನಗವನಂ ತೋರ್ವೆ ಕಣಾ!"
ಎಂತುಟು ಸಮಾಧಾನದಿಂ ಪೊದಳ್ದುದಾ ದನಿ!
ನರೇಂದ್ರಂ ಭಾವನೋಜ್ವಲತೆಯಿಂ ಕಣ್ಣಿಟ್ಟು
ನೋಡಿದನ್ ಶ್ರೀಗುರು ವದನಾಂಭೋಜವನುಂ.
ಇನ್ನೆಬರಮಾರ್ ದೇವರಂ ತೋರ್ವ ಭರವಸೆ
ಇತ್ತವರ್ ಇಲ್ಲವೆನೆ ಪೂರ್ಣ ಸಾವಧಾನದ
ಉಸಿರ್ ಬಿಟ್ಟು ತನ್ನೊಳ್ ಸೂಕ್ತ ಸಮಯಕಾಗಿ
ಕಾದಿರುತಿರೆ ಮತ್ತೆಂದರಾ ಗುರುದೇವ "ಎಲೆ,
ವತ್ಸ! ನೋಡಿರುವೆ, ಮೇಣ್ ನೋಡುತ್ತಲೆ ಇರ್ಪೆ.
ನಿಮ್ಮೆಲ್ಲರೆಂತಾನ್ ನೋಳ್ಪೆನೆಂತಂತು ಕಣ್
ತುಂಬ ನೋಳ್ಪೆ ಕಣಾ! ದರ್ಶನ ಮಾತ್ರಮೇಂ? ನಿಚ್ಚ
ಸಂಭಾಷಣೆ ಸಾಧ್ಯಂ. ಆದೊಡಾ ಭಗವಂತ
ಆರ್ಗೆ ವೇಳ್ಕುಂ? ಹೊನ್ನು ಹೆಣ್ಣು ಮಣ್ಣುಗಳಿಗಾಗಿ
ಕೊಡಗಟ್ಟಲೆ ಕಂಬನಿ ಸುರಿಸುವರ್. ದೇವರ

ಒಲುಮೆಗಾಗಿ ಮನಮುಟ್ಟಿ ಅತ್ತೊಡೆ ಭಗವಂತ
ದರ್ಶನವನೀವುದು ಕಮನೀಯ ಕಠೋರತಮ
ಸತ್ಯ!''
ದೃಢಮನದಿಂ ಅಗ್ನಿ ಕಿಡಿ ಹಾರಿದೊಲ್
ಸಿಡಿದು ಬಂದುದು ಗುರುವಿನ ಮುಖವಾಣಿ. ಜಿಹಾಸಿ
ನರೇಂದ್ರಂ ಮಂತ್ರಮುಗ್ಧನಾದನ್. ಮರುಮಾತು
ನುಡಿವೆನೆನೆ ತುಟಿಗಳ್ ಬಿರಿಯದಾದುವು. ಆದೊಡೆ
ಅಂದು ತನ್ನೊಡಂ ಸಂವರ್ತಿಸಿದ ರೀತಿಯಂ
ನೆನೆದು ಮನಃಶಾಸ್ತ್ರ ಮೀಮಾಂಸೆಯಲಿ ಪಾಂಡಿತ್ಯ
ಅಪಾರಮಿರೆ ಶ್ರೀಗುರುವರ್ಯನುಂ ಸಂಪೂರ್ಣ
ಉನ್ಮತ್ತನಲ್ಲದೊಡೆ ಅರೆಮರುಳನಿಪ್ಪನೆನೆ
ಅನ್ಯಮಲ್ತು; ಎಂಬುದದು ಅಂತಿಮ ನಿರ್ಧಾರ
ಮನದೊಳ್. ನರೇಂದ್ರನಾಥನುಂ ಗುರುವಂ ಬೀಳು
ಕೊಟ್ಟು ಪಿಂದಿರುಗಿದನ್ ದತ್ತಭವನಕೆ. ಮನವಂ
ಗುರುದೇವನಾಕ್ರಮಿಸಿರುತಿರೆ ಎನಿತೆನಿತು ತಾಂ
ಯೋಚಿಸಿದೊಡಂ ಅರ್ಥೈಸಲ್ ಬಾರದೆಯೆ ಮತಿಯೆ
ಸೋಲೊಪ್ಪಿದುದು ಸರಾಗದಿಂ. ಒರ್ಮೆ ಮರುಳಂ
ಎನಿಸಿದೊಡೆ ಮಗದೊರ್ಮೆ ಪರಮಪುರುಷನೆ ವಲಂ
ಎಂಬುದರೊಳ್ ಸಂಕೆಯುಮಿಲ್ಲ. ಅಂತಿರದಿರಲ್
ಕೇಶವ ಚಂದ್ರಸೇನ ವಿಜಯಕೃಷ್ಣಗೋಸ್ವಾಮಿ
ಪ್ರತಾಪಚಂದ್ರ ಮುಜುಮದಾರ ಮೊದಲಪ್ಪ
ಸುಪ್ರಸಿದ್ಧ ಆಚಾರ್ಯ ವರ್ಗದ ಮಹೋನ್ನತ
ಧೀಮಂತರ ಧಾರ್ಮಿಕ ಜೀವನದೊಳ್ ಆರಿಂ
ಅದ್ಭುತ ಪರಿವರ್ತನೆ ಉಂಟಾದುದೊ ಅಂತುಟು
ಮಹಿಮಾಮಯ ವ್ಯಕ್ತಿಯನೆಂತಾನ್ ಅಲಕ್ಷಿಸಿ

ದೂರೀಕರಿಪೆನ್? ಎಂಬೊಂದು ಘನವಾದ ಪ್ರಶ್ನೆ
ಏಳ್ವುದು ಬಿತ್ತರದ ಮನೋಮಂಡಲದೊಳಗೆ.
ಸುವಿಚಾರ ಬಾರ್ತೆ ದೀರ್ಘದೀರ್ಘಿಕಾ ಮೌನದಿ
ತಲೆಕೊರೆವ ಉದ್ದಂಡ ಬೈರಿಗೆಯು ತಾನಾಯ್ತು,
ಗಂಭೀರ ಜಿಹಾಸೆಗೆ ಪುಟಗೊಡುವ ಪಾಂಗಿನಲಿ.
ಅಂದ ಬಳಿಕಂ, ಅವನಾಳ ನೀಳಂ ಅಳೆಯದೆಯೆ
ಅರಿತು ತಿಳಿಯದೆಯೆ ಅವನಂ ಪರಮಪುರುಷ-ಶಿವ
ದರ್ಶಿ ಎಂದುಮೆಂದೊಪ್ಪಿಕೊಂಬುದು ಮೂರ್ಖತನ.
ಈಗಳೇ ಅವನಾವ ಪಾರ್ಥಿವ ಗುರುಕುಲಾಂಬುಧಿಯ
ಕೌಸ್ತುಭಂ ಎಂದರಿಯದಾಂ ಒಪ್ಪಿ ನಂಬಿಕೊಳೆ
ಮನವೊಪ್ಪದು. ಅವಸರಿಸಲಾಸಲ್ಲ, ಎಂಬುವ
ನಿರ್ಧಾರ ಘನಿಸಿದುದು ಹೆಪ್ಪಿಟ್ಟವೊಲ್ ಚಿತ್ತ
ಕೋಶದಲಿ. ಗುರುವಿನ ಶಿಶುಭಾವ ಅಭಿಮಾನೀ
ಶೂನ್ಯದಾಚರಣೆ ನಯ ವಿನಯಪೂರ್ಣ ಸುಮಧುರ
ವಾಕ್ಯಲಹರಿ ಇವುಗಳ್ ಅನುಭವರಸಾಮೃತದಿಂ
ಬಂದಪುದೆನೆ ಸಲ್ವುದು, ನೇಹಪರ ನಿಷ್ಕಾಮ
ವಾತ್ಸಲ್ಯ ಸಾಮಾನ್ಯಮೆನಲುಂಟೆ? ಆ ಪ್ರಶ್ನೆ
ಕವಿಗಳ ಸನಿಹದಲ್ಲಿಯೇ ಮೊಳಗುತಲಿರ್ಪುದು
ಸರ್ವತ್ರ ಸದಾ.
ಅಂದು, ಶ್ರೀರಾಮಕೃಷ್ಣರುಂ
ತಮ್ಮ ಶಿಷ್ಯ ಮಂಡಲಿಯ ಮುಂದೆ ಇಂದಿಲ್ಲಿಗೆ
ನರೇಂದ್ರನಾಥದತ್ತಂ ಬಂದೇ ಬಂದಪಂ ಎನಲ್
ಅನ್ಯಮಲ್ತು. ಅದನೆನ್ನಯ ಅಂತರಾತ್ಮ ನುಡಿದಿದೆ.
ನೀವ್ ಈ ಭವಿಷ್ಯವಂ ಕೆಲಸಮಯಂ ಕಾದು
ನೋಡಿದೊಡೆ ತಿಳಿವುದೈ ಎಂದರ್ ಕಡುಸಂತಸ

ಉಕ್ಕುವ ದನಿಯೊಳ್. ಗುರುವರ್ಯನ ಭವಿಷ್ಯಮಂ
ಕೇಳ್ದು ಶಿಷ್ಯರುಂ ಮರುನುಡಿಯದೆಯೆ ಮುಂದಿನ
ಅಮೃತಚಣದ ಕಡೆ ಗಮನ ಹರಿಸಿದವೊಲ್ ಕಣ್
ನೆಟ್ಟಿರು ಪಥದೆಡೆಗೆ. ಗುರುವರ್ಯಂ ಆ ಶಿಷ್ಯ
ವರೇಣ್ಯನನುಂ ತಮ್ಮ ಆತ್ಮೀಯ ಶಿಷ್ಯನೆನೆ
ಸ್ವೀಕರಿಸುವೊಡೆ ಪರಿಕಿಸದೆ ಸುಮ್ಮಸುಮ್ಮನೇ
ಮನವೊಪ್ಪಿದರೇ? ಸುಜ್ಞಾನ ದಿವ್ಯಾಗ್ನಿಯಾ
ಮೂಹದೊಳ್ ಮೀಯಿಸಿ ಸುಸಂಸ್ಕರಿಸಿ ಘನವೆತ್ತ
ಬಳಿಕ ಮೆಚ್ಚಿ ನೆಚ್ಚಿದರ್!
ನಸುವೊಳ್ತು ಕಳಿಯಿತು.
ಗುರುದೇವನ ಸೂಕ್ಷ್ಮತಮ ದೃಷ್ಟಿಗೆ ನರೇಂದ್ರನ
ಪುನರಾಗಮನಂ ಬಿಳ್ದುದು ದೂರದೂರದಿಂ.
ಅತ್ತ ದೃಷ್ಟಿಯಂ ಹರಿಸಿ ಮಧುರ ಸಿತಸ್ಮಿತಂ
ಬೆಳಗಿದರ್ ವದನ ಮಂಡಲದಲ್ಲಿ ಆನಂದ
ಸಂಪ್ರೀತರಾಗಿ. ಶಿಷ್ಯ ನರೇಂದ್ರಂ ಗಮಿಸಿದನ್
ಭಾವನೋತ್ಫುಲ್ಲತಾ ನಯನಗಳಲಿ ಕಾಂತಿಯ
ಛವಿಯಂ ಚೆಲ್ಲಿ. ಒಳಗೈದ ಶಿಷ್ಯಂ ನಮಿಸಿ ಗುರು
ಸನ್ನಿಧಿಗೆ, ಮಂಡಿಸಿದನ್ ಚಾಪೆಯ ಅಂಚಿನಲಿ.
ಗುರುಮುಖಂ ಪ್ರಸನ್ನ ಭಾವದಿಂ ಅರಳಿದುದು,
ಶಿಷ್ಯನ ಕಣ್‌ನೋಟದಲಿ ಪೊಣ್ಮಿದ ಅಧ್ಯಯನ
ಕಾಂಕ್ಷೆಯಂ ಅರಿದು. ತಾನಂದು ಸಮಾಧಿಸ್ಥಿತಿಯ
ಧ್ಯಾನದೊಳ್ ಗುರುತಿಸಿದ ವರ ರಿಸಿ ಇವನಿರುತಿರೆ
ಆಂ ಮುಟ್ಟಿ ಕಿರುವಗೆಯಲಿ ಸಮಾಧ್ಯವಸ್ಥೆಯಂ
ಬರಿಸಿದೊಡೆ ತಾಳಲಾರದೆ ಚೀರಿದನೇತಕೆ?
ಬಗೆದಪ್ಪಿನಿಂದಾಂ ಮತಿಗೆಟ್ಟು ಗುರುತಿಸಿದೆನೇ?

ಎಂಬೊಂದು ಸಂಕೆಯಲಿ ಸಿಲ್ಕಿರುತೆ ಮುಟ್ಟಿದರ್
ಶಿಷ್ಯನಂ. ಒಡನೆ ನರೇಂದ್ರನಾಥಂ ಬಾಹ್ಯ
ಪ್ರಜ್ಞೆ ಕಳೆದು ಕಣ್ಮುಚ್ಚಿ ಭಾವಸಮಾಧಿಯೊಳ್
ಮುಳುಗಿದಂ ಋಷಿತನಕೆ ತಾಂ ತಗುವ ಪಾಂಗಿನಲಿ.
ಗುರುವರ್ಯ ಶ್ರೀರಾಮ ಕೃಷ್ಣ ಪರಮಹಂಸರ್
ಅನೇಕವಗೆಯ ಪ್ರಶ್ನೆಗಳನೊಗೆದು ಸಮರ್ಪಕ
ಪ್ರತ್ಯುತ್ತರಂಬಡೆದು ಆನಂದ ಸಂಪ್ರೀತ
ಭಾವದಿಂ ಆಂತರಂಗಿಕ ಶಿಷ್ಯನಂ ಮೆಚ್ಚಿದರ್.
ಹೃದಯದ ಹೆಬ್ಬಾಗಿಲ್ ತೆರೆಯಿತು, ಮನವರಿದು
ಧೀರ ಧೀಮಂತ ಪುರುಷನೆಂಬುದು ಬಯಲಾಯ್ತು.
ಚಿತ್ತಾಭ್ರದಲಿ ತುಂಬಿತು ಪ್ರೇಮಾತುರ ಪೂರ್ಣ
ಕುಂಭಗೌರವಾದರದ ಸಂಸ್ಫೂರ್ತಿಮಯ ಧರ್ಮ
ಕಾತರಂ. ಆಂತರ್ಯದ ಒಳಗುದಿಗೆ ತಣ್ಣನೆ
ತಣ್ಣೀರ್ ಎರಚಿದತ್ತು ಮನೋಜನಿತ ದಿವ್ಯ
ಸ್ವಾಂತನಂ, ಸ್ವರ್ಣ ಪುತ್ಥಳಿಯಾದ ನರೇಂದ್ರಂ.
ಆತ್ಮೀಯ ಶಿಷ್ಯನೈಸೆ ಹರುಷರಸವೆರಸಿದ
ಅಮೃತದಕೊಡ ಒದಗಿದವೊಲಾಯ್ತು, ಗುರುವರ
ಶ್ರೀರಾಮ ಕೃಷ್ಣ ಪರಮಹಂಸ ಮಹೋದಯನ
ವರಸನ್ನಿಧಿಗೆ. ಕಂಗಳ್ ತವಕಿಪುವುವು ದೂರ
ಪಥದೆಡೆಗೆ ನಟ್ಟು, ನಾಂಟಿ. ಶಿಷ್ಯಸಮುದಯದಲಿ
ಅವನಿರದಿರೆ ಶೋಭೆಯುಮಿಲ್ಲ. ಸಂತೃಪ್ತಿಯುಂ
ಇಲ್ಲವಾಯ್ತು ಗುರುದೇವಂಗೆ. ದಿನಗಳೆಯುತಿವೆ
ಎಂದಿನೊಲ್ ಉದಯಾಸ್ತಮಾನಗಳ ಆಚರಿಸಿ.
    ''**ಸ್ವರಸ್ಯ ಕಂಪೋ ಗಮಕಃ ಶ್ರೋತೃಚಿತ್ತ
ಸುಖಾವಃ**'' ಆದೊಡವನನುದಿನ ಮಿತ್ತ ಬಾರದಿರೆ

ಕೂರ್ಮ್ಳಿನ ಚುಚ್ಚು ಗುರುವರನ ಮನೋಗತಿಗೆ.
ಶಿಷ್ಯಂ ಗುರುದೇವನ ಮನದಿಂಗಿತವನರಿದು
ಹೃದಯ ಕರಂಡಮಂ ತುಂಬಿಯುಂ ಆಸಂಕೆ
ಜಿಹಾಸೆಗಳ ಆಳಾಗಿ ತೂಗುಯ್ಯಲೆಯಲ್ಲಿ
ತೂಗಾಡುತೆ ಪಿಂದುಳಿಯುವಂ. ಗುರುಗಳ ಗೃಹೀ
ಭಕ್ತರೊಡನೆ ಚರ್ಚೆ, ಗೆಳೆಯರೊಂದಿಗೆ ವಿಚಾರ
ವಿಹಾರ, ಮನದೊಳ್ ತುಲಾಭಾರ. ಎನಿತೆನಿತು ತಾಂ
ಪ್ರಯತ್ನಿಸಿದೊಡಮದರ ಮೊತ್ತವು ಒಂದೆಂಬ
ನಿರ್ಧಾರ ಬಲಿಯಿತ್ತು. ಆತ್ಮವಾಣಿ ನುಡಿಯಿತು,
"ಅತಿ ದೀಪ್ತೋಪಿ ಖದ್ಯೋತೋ ನ ಪಾವಕಃ"
ಇಂತು ಆಗಳಾಗಳ್ ಸಮಯೋಚಿತ ನುಡಿಗಳ್
ಮರ್ಮರಿಸುತಿರಲ್ ಆಸಂಕೆಯ ಕುಡಿಗಳಂ
ಕತ್ತರಿಸಿ ಕೊಚ್ಚಿ ಪೋದಪುದು ಸಮಯೋಚಿತಂ.
ಓರೊರ್ಮೆ ಇಂತೊಂದು ಆಸಂಕೆಗೆ ಮನಂಗುಡೆ
ಕತಮೇಂ? ಎಲ್ಲವಂ ಕರತಲಾಮಲಕಮಿರೆ
'ಮತ್ತೇಕೆ ಆಸಂಕೆ' ಎಂಬ ಜಾಗ್ರುತ ಮನದ
ಕುಡಿ ನಿಮಿರಿ ನಿಲ್ವುದು ಮಸ್ತಕ ನೀರೇಜದಲಿ.
ಶಿವನಾಥ ಶಾಸ್ತ್ರಿ ಎಂಬೊರ್ವ ಕುಸ್ಥಿತಮನದ
ಹಿರಿಯ ಬ್ರಹ್ಮ ಸಮಾಜಿಯುಂ ಮುಂದ್ಯೆದು ತನ್ನಯ
ಕೀಳ್ಮನಮತಿಗಳ ಚಾಪಲ್ಯಂ ತೀರ್ಚಿಕೊಳಲುರೆ
ನರೇಂದ್ರನಾಥನಂ ಬಳಿಗೆ ಕರೆದು ಬರಮಾಡಿಸಿ
ಎಕ್ಕಟಿಗೆ ಕರೆದೊಯ್ದು ಬಿತ್ತರಿಸಿದನೆಂತೆನೆ,
"ಎಲೆ, ನರೇಂದ್ರ ಕೇಳಿಲ್ಲಿ! ಆ ರಾಮಕೃಷ್ಣನ
ಮನೋಜನಿತ ಪ್ರಾಚೀನ ಕತೆಯನಿಷ್ಟು! ಅವನಾ
ರೋಗದ ವಿವರ ನೀನರಿಯೆ! ಅವನಂ ಕಾಂಬ

ಗೀಳ್ ವ್ಯರ್ಥ ಕಣಾ! ಅವನ ಸಮಾಧ್ಯವಸ್ಥೆಯು
ಬರೀ ನರಗಳ ದೌರ್ಬಲ್ಯಮಲ್ಲದೆ ಬೇರೇನು
ಅಲ್ಲ. ಬೌದ್ಧಿಕ ಶಿಥಿಲತೆ ನರಗಳ ಶಿಥಿಲತೆಯಿರೆ
ಅವನಂ ಕುಣಿಸುತಿದೆ. ಅದೊರ್ ವಿಶೇಷ ಜಾಡ್ಯವೆ.
ಕಠಿಣತರ ದೈಹಿಕ ದುರಭ್ಯಾಸದಿ ತಲೆಗೆಟ್ಟು
ಮತಿಗೆಟ್ಟು ಪುರ್ಚಾಗಿಹನ್. ಅವನೊಳಿರ್ಪುದದು
ಪುರ್ಚು ಮಾತ್ರಮೆ. ನೀನದಂ ನೆಮ್ಮಿ ಮಣಿಯದಿರ್."
ಆ ವಿಶ್ವನಾಥ ಶಾಸ್ತ್ರಿಯುಂ ತರುಣನ ಮನಕೆ
ಉಪದೇಶದ ಕಹಿತುಂಬಿ ಹೀಯಾಳಿಸಿ ಕೀಳ್
ಅರಿಮೆಯಂ ಮೂಡಿಸಿ ಎಳೆತನದ ಉತ್ಸುಕ ಮನಕೆ
ಕಹಿಯೂಡಿ ಕಾಳಮುದ್ರೆಯನೊತ್ತಿ ಕೈವಿಟ್ಟನ್
ವಿಭ್ರಮೆಯ ಕಳ್ತಲೆಗೆ ತಳ್ಳಿ. ಇಂತೊದವಿರ್ದ
ವಿವಿಧ ರೀತಿಯ ಅಭಿಮತಗಳಿಂ ಮನೋಗತಿಯು
ಗಾಢ ಚಿಂತನೆಯೊಳಗೊಳಗೆ ಮುಳುಗಿತು ಹೃದಯ
ಭಾರದಿಂ. ಯೋಚನಾಕ್ರಾಂತಮಾದುದು ಚಿತ್ತ
ಕಲ್ಪಿಂ. ಕಿಡಿವಾತುಗಳ ನಂಬದಿರೆಯುಂ ಅವನಂ
ತಟ್ಟನೆ ಮನದಿಂ ತಳ್ಳಿಬಿಡುವುದು ಅಸಾಧ್ಯಮಿರೆ
ಅನುದಿನಂ ಮಾನಸಿಕ ವಿಪ್ಲವಕೆ ಕಾರಣಂ
ತಾನಾಯ್ತು. ನರೇಂದ್ರನಾಥದತ್ತಂ ಮುನ್ನಿನಾ
ಪರಿಚಣದ ಕಾರ್ಯಮಂ ಮುಂಬರಿಸಿದನ್ ಆತ್ಮ
ಸಂತೃಪ್ತಿಗಾಗಿ, ಅತ್ತಲಾ ಗುರು ವರೇಣ್ಯಂ
ತಮ್ಮ ಆತ್ಮೀಯ ನೆಚ್ಚಿನ ಶಿಷ್ಯ ಶ್ರೇಷ್ಠನಾ
ಜ್ಯೋತಿರ್ಮಯ ಜೀವನಯಾತ್ರೆಯಂ ನೆನೆನೆನೆದು
ನಿರೂಪಿಸುತಿರ್ದರ್ ಜಗತ್ ಧರ್ಮ ಕಲ್ಯಾಣ
ಕಾರ್ಯಭಾರಮಂ ಭುಜವೇರಿಸಲ್. ಅಂತಿಂತು,

ಶ್ರೀರಾಮಕೃಷ್ಣ ಪರಮಹಂಸರ್ ಮಿಸುನಿಯಂ
ಪುಟವಿಟ್ಟು ಪರಿಸ್ಫುಟಗೊಳಿಸುವ ಮಹಾಕಾರ್ಯ
ವಾಹಿಯಲಿ ಮುಳುಗಿದರ್ ತಮ್ಮೊಳಗೆ. ಶಿಷ್ಯರಂ
ಒಟ್ಟೈಯಿಸಿ ತಮ್ಮ ಒಡಲ ಕರೆಯಂ ಕೇಳಿಪರ್
ಪರಮಶಿಷ್ಯನ ನಿಚ್ಚ ಗಮನಾಗಮನದಿಂದೆ
ತಮ್ಮೊಡಲಿನ ಧಾರ್ಮಿಕ ನಿರ್ಘೋಷ ನಿಲ್ವುದೇಂ?
ಎಲ್ಲರ ಬದುಕಂ ಸರಿಸಮನಿಸುತೆ ಪ್ರವಚನ
ಧಾರೆಯಂ ಹರಿಯಬಿಡುವರ್ ಧರ್ಮ ಯೋಜನೆಗೆ
ಅದೊಂದೇ ಸಯ್ಪು ಭಕ್ತ ಜನರ ಮನಂ ತಣಿಸೆ.
ಸರ್ವಧರ್ಮಗಳ ಸಾರ ಸರ್ವಸ್ವವಂ ಅರಿದು
ಓರಿ ಒಡಲ್‌ದುಂಬಿ ಮನದುಂಬಿ ಆವಾವ
ಧರ್ಮವಂ ಕೀಳ್ಗೈಯ್ಯದೆ ಆರ ಮನಮತಿಯಂ
ಕಿಡಿಸದೆ ಸಮದರ್ಶಿತ್ವವಂ ಸಾರಿ ಪೇಳ್ವರ್
ಸರಳ ಶೈಲಿಯಲಿ ಆನಂದ ಮೋದವಂ ನೆರೆ
ವೆರಸಿ. ನಿತ್ಯಂ ಸಹಕಾರ ಸಹ ಜೀವನಗಳ
ದ್ಯುತಿಯಂ ಬೆಳಗಿ ತೊಳಗಿಸುವ ಮಹತ್‌ಕಾರ್ಯದ
ರಂಗ. ಸಿದ್ಧವಾಗುತಲಿರ್ದುದು ಪರಮಕಾಲ
ಗತಿಗನುಗುಣವಾಗಿ. ಅಮೋಘ ತಪಸ್ಸಾಧನೆ
ಮೇಣ್‌ದೂರದರ್ಶಿತ್ವದಿಂ, ಸರ್ವಧರ್ಮವಂ
ಸಮದೃಷ್ಟಿಯಿಂ ಕಂಡರಿದ ಪರಮಹಂಸರುಂ
ನೀಡುತಲಿರುತಿರ್ದ ಉಪದೇಶಾಮೃತವದು
ಸರ್ವಸಮ್ಮತಂ ಮೇಣ್ ಸರ್ವಜನಮಾನ್ಯಂ.
ಅವರೆಂದು ಪರಧರ್ಮ ವಿನಾಶಕಮಾದಾ
ವಾಮಪಂಥಿಯಾಗಿರದೆ ಸರ್ವತ್ರ ಪೋಷಕ
ಪಥಗಾಮಿಯಾಗಿರ್ದು "ಸಕಲ ಧರ್ಮಗಳ್ ಸತ್ಯ

ಮತವಿರುವೊಲ್ ಪಥ” ಎಂಬ ಅನುಭವಾಮೃತಂ
ಪಡೆದ ಧನ್ಯಾತ್ಮ ಗುರುದೇವ ಠಾಕೂರರುಂ.
ಅವರವರ ರಕ್ತಗತಮಾದ ಧರ್ಮ ವಿಧಾನ
ಸಂಸ್ಕಾರ ಮೇಣಭಿರುಚಿಗಳಿಂಗೆ ತಕ್ಕಂತೆ
ಪರಿಪಕ್ವ ಉಪದೇಶಮಂ ಈವ ಪರಿಯಂತು
ಅದ್ಭುತಂ! ಸಕಲತರ ಕುಶಲ ಕರ್ಮಿಗಳವೊಲ್
ಅತ್ಯಂತ ಚಾತುರ್ಯ ಸಮರ್ಥರ್. ಆವುದೋ
ಎರಕದೊಳ್ ಸರ್ವಧರ್ಮಮೂರ್ತಿಯಾಗಿ ಬಂದ
ದೇವಗುರುವಿನ ಭಾವನಾವೇಶದಾವೇಶ
ಉಕ್ಕಿ ಎರ್ದೆಗಡಲಿಂಕೋಡಿವರಿಯುತಿರುತಿರೆ
ವರಶಿಷ್ಯ ನರೇಂದ್ರುನಾಥಂ ಮೈಮರೆತು ಕೇಳ್ವಂ,
ಮೈಯೆಲ್ಲ ಮನಸ್ಸಾಗಿ; ಮನವೆಲ್ಲ ಕಿವಿಯಾಗಿ.

ಹರಿಃ ಓಂ ತತ್ ಸತ್

❋ ❋

ಸಪ್ತಮೋಲ್ಲಾಸಂ

ಜಿಹಾಸೆ ಜಿಹಾಸೆ

ಹತೋಽಪಿ ಲಭತೇ ಸ್ವರ್ಗಂ
ಜಿತ್ವಾತು ಲಭತೇ ಯಶಃ ।
ಉಭೇ ಬಹುಮತೇ ಲೋಕೆ
ನಾಸ್ತಿ ನಿಷ್ಫಲತಾ ರಣೇ ॥

ಮೂಡಣದ ದಿಗ್ಭಿತ್ತಿಯಲಿ ಬೆಳ್ಳಿದಾರಗೆಯ
ಮೊಗ ಬಾಡಿ, ಬೆಟ್ಟಗೋಡಂ ಮೆಟ್ಟಿ ಸ್ವರ್ಣರವಿ
ಮೂಡೆ, ಪಕ್ಷಿಗೊರಳ್ ಸುಪ್ರಭಾತಂ ಹಾಡೆ, ಸಿರಿ
ದೇಗುಲದ ವಿವಿಧ ವಾದ್ಯತತಿ ಸ್ವರರಾಗಮಂ
ಮೊಂಟೆ, ಭಕುತಜನಂ ಮಂಗಳ ಪ್ರಭಾತಂ
ಮೊಳಗೆ, ಅರ್ಚಕರ್ ಮಂತ್ರಪಠಣಂಗೈಯೆ ಅಲ್ಲಿ
ಸ್ವರ್ಗೀಯ ಸುರಮ್ಯತೆಯುಂ ಧರೆಗಿಳಿದು ಬಂದ
ಮಾಳ್ಕೆಯಲಿ ಮೆರೆದತ್ತು ದಕ್ಷಿಣೇಶ್ವರದ ದಿವ್ಯ
ಪರಿಸರಂ. ತಂಗಾಳಿಯ ತನಿವುಂಡ ತಣ್ಣನೆ
ತನಿವೊಳ್ತು ತನುಮನಗಳಿಗೆ ಸುಖದ ಮುದ್ರೆಯಂ
ಒತ್ತಿ ಮುದ್ದಿಸುತ್ತಿರೆ ಪ್ರಾಂಗಣದಿ ಚೆಂಬಿಸಿಲ್
ಮೋಹಕ್ಕೆ ಮೈಗೊಟ್ಟ ನರೇಂದ್ರಂ ಆನಂದ
ಭಾವದಿಂ ಪ್ರಾತಃಸ್ಫೂರ್ತಿಯಂ ಪಡೆಯುತಿರುತಿರೆ
ಶಾಂತಪ್ರಶಾಂತವಾಶಾಂತಸುಶಾಂತನಿಶಾಂತ
ವೇಶದಿಂ ಮೆರೆದತ್ತು ದೇವಮಂದಿರದ ಸಿರಿ
ವಲಯಂ. ನರೇಂದ್ರನಾಥನುಂ ಬ್ರಹ್ಮಸಮಾಜಿ
ಇರುತಿರ್ದು ಕಟ್ಟುನಿಟ್ಟಿನ ಸಗುಣ ನಿರಾಕಾರ
ಬ್ರಹ್ಮೋಪಾಸಕನಿರಲ್ ಮೂರ್ತಿ ಪೂಜೆಯೊಳ್ ಅತಿ

ವಿರಕ್ತಂ. ಆದೊಡಾ ಗುರುದೇವನ ಮತ್ತಾ
ದೇಗುಲದ ಸನ್ನಿಧಾನಂ ತನ್ನ ನಿರ್ಧಾರ
ಸಾಫಲ್ಯಕೊಂದು ತಡೆಗಟ್ಟೆ. ಮನದಿ ಜಿಹಾಸೆ
ಬೆಳೆವುದು ಕಿರುಮುಳ್ಳು ಕಂಟಿಗಳಲಿ ಫಲಪುಷ್ಪಂ
ಬೆಳೆವ ತೆರದಿ. ಜಿಹಾಸೆ-ಜಿಹಾಸೆಗಳ್ ದಿನದಿನಂ
ಸಿಕ್ಕು ಸಿಕ್ಕಾಗಿ ಬೆಳೆಯುತೆ ತನ್ನ ಅಸ್ತಿತ್ವ
ಮೇಣ್ ಪರಮ ವ್ಯಕ್ತಿತ್ವವನ್ನೆ ಸಮೂಲವಾಗಿ
ಅಲುಗಿಪುದು. ಓರೋರ್ಮೆ, ದಿನವೆಲ್ಲ ಎಲ್ಲೆಲ್ಲಿ
ಯಾವಯಾವ ಕ್ಷೇತ್ರದಲಿ ನೋಡಲ್ ಕಂಡುಬಹ
ಚಿರ ಸತ್ಯ ''**ಉದರ ನಿಮಿತ್ತಮ್ ಬಹುಕೃತ ವೇಷಂ**''
ಒಡನೆ ಪಿಂಗಡೆ ಚಾರಣಂಗಳ ಕಿರುಸದ್ದು
ಕೇಳಿಬರಲತ್ತಂ ತಿರುಗಿ ನೋಡಿದನ್ ತರುಣ
ನರೇಂದ್ರನಾಥದತ್ತಂ; ತನ್ನೊಡಂ ಬಗೆವಗೆಯ
ಕಾರ್ಯಕ್ರಮಗಳಲ್ಲಿ ಬ್ರಹ್ಮಸಮಾಜದಲ್ಲಿ
ಆಗಾಗಳ್ ಬೆರೆಯುತಿರ್ದ ರಾಖಾಲ ಚಂದ್ರ
ಘೋಷಂ ಕಣ್ಗೆಸೆಯೆ ಪರಸ್ಪರ ಮುಗುಳ್‌ನಗೆಯ
ಬೆಳುದಿಂಗಳ್ ಹರಿಸಿದರ್ ಭಾವಾಪನ್ನತೆಯ
ಮೋದದಲಿ. ಬ್ರಹ್ಮಸಮಾಜಿಯಾದಾಮತಿಮಾನ್ಯ
ರಾಖಾಲ ಚಂದ್ರಘೋಷಂ ಸದಾ ಗುರಿ ಹಿಡಿವ
ನಿಟ್ಟಿನಲಿ ಮುಂಬರಿವ ದಿಟ್ಟವ್ಯಕ್ತಿ. ಮೆಟ್ಟಿಲ್
ಹತ್ತಿ ಜಗಲಿಯೇರಿ ಗುಡಿಮುಟ್ಟಿ ಭಯಭಕ್ತಿಯ
ನೇಮದಲಿ ಉದ್ದಂಡ ಪ್ರಣಾಮ ಸಲಿಸಿದಂ,
ಕಾಳಿಕಾದೇವಿ ಮೂರ್ತಿಯ ಮುಂದೆ. ಆಗಳೇ
ಅದಂ ಕಂಡ ನರೇಂದ್ರ ನಾಥಂ ಸಿಡಿದೇಳುವ
ರೀತಿಯಲಿ ಬಿರುನುಡಿಗಳನಾಡಿದನ್ ಕನಲ್ದು.

ಗುರುದೇವ ಶ್ರೀರಾಮ ಕೃಷ್ಣ ಪರಮ ಹಂಸರ
ಕಣ್ಮುಂತೆಯೇ ಮನಸ್ವೀ ತೆಗಳಿ ಜರಿಯುತ್ತೆ
ಹೀಯಾಳಿಸಿದನ್. 'ಬ್ರಹ್ಮಸಮಾಜಿಗಳಿಂಗಿದು
ಸರ್ವತ್ರ ನಿಶಿದ್ಧಮಿರೆ ಮೂರ್ತಿಯ ಮುಂತೆ ಶಿರ
ಬಾಗಿ ನಮಿಪುದುಂಟೇ?' ಎನಲಾ ರಾಖಾಲಂ
ಅಂತಪ್ಪ ಭರ್ತ್ಸನೆಗೆ ಮರುನುಡಿಯದೆ ಶಿರವಂ
ಬಾಗಿ ಮಿಣ್ಣನಾದಂ ಎಳೆಯರ ತೆರದಲಿ. ಆ
ಚಿತ್ರಮಂ ಕಣ್ಣಾರೆ ಕಂಡ ಗುರುದೇವನುಂ
ಮನ ಮರುಗಿದೊಲ್ ತಾವ್ ರಾಖಾಲಚಂದ್ರನಾ
ಹೃದಯ ಸೂತ್ರವಿಡಿದು ನುಡಿಸಿದರಿಂತು "ಅಯ್ಯಾ
ನರೇಂದ್ರಾ, ನೀನವನ ಜರಿವುದೇಕೆ? ಆರಾರ್
ಭಕ್ತಿಯ ರಸತೀರ್ಥದೊಳ್ ಮುಳುಗಿದಪರೊ ಅಂಥ
ಭಕ್ತರಂ ತಡೆವ ಗೋಜಿಗೇಕೆ ನೀಂ ಪೋದಪುದು?
ಅವರವರ ಇಚ್ಛಾನುಸಾರದೊಳವರ್ ಮೂರ್ತಿಯ
ಪೂಜೆಗೈದೊಡೇಂ ತಪ್ಪು? ನಿನ್ನಯ ಧೋರಣೆಯು
ಇರಲಿ ನಿನಗೆ. ಇತರರ ಮೇಲದಂ ಹೇರಲೇಂ
ಅಧಿಕಾರ ನಿನಗೆ? ಮನದಿ ಯೋಚಿಸ್ಯೆ ಒಳಗಣ್
ತೆರೆದು."
ನಭೋದೇಶದಿಂ ಶೀತ ಶೈತ್ಯ ಜಲಧಾರೆಯೇ
ಸುರಿದವೊಲಾಯ್ತು ಗುರುವರನ ಶ್ರೀಮುಖದಿಂ ಹರಿದ
ಹಿತವಚನಗಳ ಮಾಲೆ. ಅಕ್ಕರಕ್ಕರಗಳಲಿ
ಸಾವಧಾನದ ಮಧುರ ಕಾವ್ಯ ಹರಿದು ಮನವಂ
ಮುಗ್ಧಗೊಳಿಸೆ ನರೇಂದ್ರನಾಥದತ್ತಂ ಮತ್ತೆ
ಮರುನುಡಿಯದಾದಂ. ಮನೋಮಂಡಲದೊಳದೇ
ವಿಚಾರವಿಮರ್ಶೆ ನಡೆದುದು ಮಿಣ್ಣನೆ. ಗುರುವರಂ

ಶಿಷ್ಯಶ್ರೇಷ್ಠನ ಮನೋಜನಿತ ಭಾವವಿಭಾವದ
ಅಲೆಯಲೆಯನವಲೋಕಿಸುತವನಮನವನರಿದರ್.
ಸುಗುಣ ನಿರಾಕಾರ ಬ್ರಹ್ಮದೊಳಿರ್ದ ಒಲವಿಂಗೆ
ಕತ್ತರಿಯನೊಡ್ಡದೆಯೆ ಅವನ ಮಾನಸೇಚ್ಛೆಯ
ಪ್ರಕಾರದೊಳ್ ದಿನದಿನ ನಿರಾಕಾರ ಬ್ರಹ್ಮದ
ಮೇಲೆಯೇ ತತ್ತ್ವೋಪದೇಶಮಂ ನೀಡುತವನ
ಪ್ರಶ್ನೆಗಳಿಂಗೆ ಹಿತವನೂಡುವರ್. ಮುದದಿಂ
ಅವರವರ ಮನೋಧರ್ಮವೆ ಅವರವರ ಸುಪಥ
ಎಂಬೊಂದು ತಾತ್ವಿಕಾರ್ಥದಲಿಯೆ ಉಪದೇಶವದು
ಪೊಣ್ಮುವುದು ನುಡಿನುಡಿಗಳಲಿ. ಮುಂದೆ ಜಗತ್ತಿಗೆ
ಸರ್ವಧರ್ಮಮಂ ಪ್ರಚುರಗೊಳಿಪ ಧ್ಯೇಯದೊಳ್
ಸಂಜನಿಸಿದ ಧೀಮತಿಗೆ ಸಂಕುಚಿತ ಭಾವನೆ
ಅಂಟಿದೊಡೆ ಶುಭವೆಲ್ಲಿ? ಧ್ಯೇಯವೆಲ್ಲಿ? ಎಗಳ್
ಸರ್ವಶ್ರೇಷ್ಠಮಾದಾ ಸರ್ವಭೂಮತ್ವವುಂ
ಸರ್ವಮತ ಗ್ರಾಸಿಯುಂ ಸರ್ವಾರ್ಥ ಬೋಧಿಯುಂ
ಆದಪುದೆ ವೇದಾಂತ ದರ್ಶನಂ, ಎಂಬೊಂದು
ದಿವ್ಯತಮ ಆದರ್ಶದ ಪಂಥಮಂ ಮುಂದಿಟ್ಟು
ಬೋಧಿಸುವರ್ ಶಿಷ್ಯನ ಮನಮುಟ್ಟುವೊಲ್. ಅಖಿಲ
ಶಿಷ್ಯ ಸಮುದಯವೊಪ್ಪಿ ತಲೆದೂಗಿದೊಡಮದುಂ
ನರೇಂದ್ರನಾಥದತ್ತನ ಮನೋಗತಿಗೆ ದೂರವೇ.
ಚಿಂತನಾವೇಶದಲಿ ವಿಚಾರ ಕ್ರಾಂತಿಯೊಳಗೊಳಗೆ
ಮುಳುಗಿ ಮೈಮರೆಯುವಂ. ವರಶಿಷ್ಯನ ಮನೋಗತಿಯ
ಅರಿತು ನುರಿತು ಸುಮ್ಮನಿರುವರೇಂ ಗುರುದೇವಂ?
ಗುರುಪೀಠದೊಳಿರ್ದು ಗುರುತತ್ತ್ವವನುಂ ತಾನ್
ಪಾಲಿಸದಿರಲುಂಟೇ? ಅದು ಸಾಧ್ಯಮೇ ಗುರುಸ್ಥಾನ

ಪಡೆದ ಸದ್ಗುರುವಿಂಗೆ? ಶಿಷ್ಯನಂ ಬರಮಾಡಿ
ಬಳಿಯೊಳ್ ಕುಳಿತುಕೊಳ್ಳೆ ಬೆಸಸಿದರ್. 'ತತ್ತ್ವಮಸಿ'
ಎಂಬ ತತ್ತ್ವವಂ ಪರಿಬೋಧಿಸಿ ನಿರೂಪಿಸುತೆ
'ಸರ್ವಂ ಬ್ರಹ್ಮಮಯಂ' ಎನೆ 'ನೀನ್ ಬ್ರಹ್ಮ' ಮೇಣ್
'ಎಲ್ಲವುಂ ಬ್ರಹ್ಮ' ಎಂದುಪದೇಶವನಿತ್ತರ್,
ನರೇಂದ್ರನಾಥನ ಎರ್ದೆಯ ಕುಂಡ ತುಂಬಿಕೋಡಿಹರಿವ
ಪಾಂಗಿನಲಿ. ಆದೊಡದನೊಪ್ಪಿದನೆ ನರೇಂದ್ರಂ? ೧೦೦

"ಅಹ, ಆನ್ ಬ್ರಹ್ಮ? ಇದಲ್ತೆ ಶಿಶುತನದ ಪುರ್ಚು
ಪುಲಾಪ? ಬಾಲಿಶ ಎಳೆ ಬುದ್ಧಿಯ ಅಪಲಾಪ!
ಎನಲಿದೇಂ ತಪ್ಪಲ್ಲ. ಈವಗೆಯ ಉಪದೇಶ
ಹುರುಳಿಲ್ಲದ್ದು. ಬರಿಯ ಒಣ ಮಾತಿನ ಚಟ!" ಎಂದು
ತಿರುಗು ಬಾಣವ ಬಿಟ್ಟನ್ ದಯದಾಕ್ಷಿಣ್ಯಮಿನಿತು
ತೋರದೆ.

ಆ ಶಿಷ್ಯನ ಪ್ರಪ್ರಥಮ ಭೇಟಿಯಲ್ಲಿಯೆ ಗುರು
ಶ್ರೀರಾಮಕೃಷ್ಣರುಂ ಮುಂದೆ ಅದ್ವೈತಾದ್ವೈತ
ವೇದಾಂತ ರಹಸ್ಯಗಳಲಿ ಸಿದ್ಧಿ ಪಡೆಯುವೊಡೆ
ಇವನೇ ಅಧಿಕಾರಿ ಪುರುಷನೆಂಬುದಂ ತಾವ್ ೧೧೦
ಅರಿದರ್ ಪರಮಯೋಗ ದೃಷ್ಟಿಯಿಂ! ಶಿಷ್ಯನಂ
ಪಳಗಿಸುವೊಡೆ ಅವನ ಮನೋಗತಿಯ ತೇಜಿಯಂ
ಕಣ್ಕಟ್ಟಿ ನೇರ ಹಾದಿಗೆ ಹಚ್ಚುವುದೆ ಮಂತ್ರ
ತಂತ್ರವೆಂಬೊಂದು ನೆಚ್ಚಿನಿಂ. ನರೇಂದ್ರನಾಥಂ
ತಮ್ಮಬಳಿಗೆ ಬರುತಿರ್ದೊಡಂ, ಅವನ ಮನಸಿಗೆ
"ಅಹಂ ಬ್ರಹ್ಮಾಸ್ಮಿ" "ಶಿವೋಹಂ" "ತತ್ತ್ವಮಸಿ" ಎಂಬ
ಬಗೆಬಗೆಯ ಮಾತುಗಳ್ ಒಲ್ಲವು. ಅದನರಿದರಿದು
ಭಗವಾನ್ ಶ್ರೀರಾಮ ಕೃಷ್ಣರ್ ನರೇಂದ್ರನಾಥಂ

ಆಗಮಿಸಿದೊಡನೆ "ಅಷ್ಟಾವಕ್ರಸಂಹಿತೆ" ಈ
ಮೊದಲಪ್ಪ ಅದ್ವೈತ ದರ್ಶನದ ಸಂಬಂಧಿತ
ಗ್ರಂಥಗಳ ತಮಗೆ ಓದೋದಿ ಪೇಳಲ್ ಅವನ
ನಿಯಮಿಸಿಕೊಳುವರ್ ಸಂಯೋಜನಾ ಕ್ರಾಂತಿಯಲಿ.
ನರೇಂದ್ರನಾಥಂ ಓದಿಯೋದಿ ಹೇಳುತ್ತೆ ಮಧ್ಯೆ
ಮಧ್ಯೆ ಮನಃಚಿತ್ತ ಜನಿತ ಜುಗುಪ್ಸೆಯಂ ಕಕ್ಕಿ
"ಅನುಂ ಬ್ರಹ್ಮ ನೀನುಂ ಬ್ರಹ್ಮ ಎಲ್ಲವುಂ
ಬ್ರಹ್ಮ! ಅಹಹ, ಇದು ಕಾಡು ಹರಟೆಯಲ್ಲದೆ
ಬೇರಲ್ಲ. ಇದಂ ಬರೆದ ಋಷಿಗಳಿಗೆ ನಿಜದಿಂ
ತಲೆಕೆಟ್ಟಿತೆಂದೆ ತೋರ್ರ್ವುದು!"
ಎನುತ್ತೆನುತೆ ತಾಂ
ಕಿಂಚಿತ್ ಅನುಮಾನಿಸದೆ ಗುರುವರ ಶ್ರೀರಾಮ
ಕೃಷ್ಣರ ಕಣ್‌ಮುಂತೆಯೇ ಅಣಕಿಸಿದನ್ ದಿವ್ಯ
ಸ್ಫೂರ್ತಿಯುಕ್ಕುವ ಧೀರ ನರೇಂದ್ರನಾಥದತ್ತಂ!
ಆಗಳ್ ತಟಕ್ಕನೆ ಶಿಷ್ಯನ ಭಾವಭಂಗಂ
ಗೈಯಲಿಚ್ಚಿಸದೆ ನುಡಿದರಿಂತು "ಎಲೆ, ನರೇಂದ್ರ
ನಿನಗವರ ಅಭಿಮತ ರುಚಿಸದಿರೆ ಬಿಡು. ಅವರಂ
ನಿಂದಿಪುದು ಸರಿಯೇಂ? ಪರಮಾತ್ಮನ ಅದ್ಭುತ
ಅನಂತತ್ವಕೆ ಮೇರೆಯಂ ಕಲ್ಪಿಸುವರೇನ್ನೈ?
ನೀಂ ಸರ್ವತ್ರ ಸದಾ ಪರಮಾತ್ಮನ ಧ್ಯಾನಗೈ.
ಅವನಾವ ಸುಪಥವಂ ತೋರ್ವನೋ ಅದರೊಳೇ
ನೀಂ ಶ್ರದ್ಧೆಯಿಂ ಸಡ್ಡೆಯಿಂ ಮುಂಬರಿಯಯ್, ಈ
ವಿಧವಾದ ರಂಧ್ರಾನ್ವೇಷಣೆಯಿಂದೆ ಏಂಬಹುದು?
ನೀಂ ನಿನ್ನೊಳ್ ತಿಳಿದು ಪರಿಭಾವಿಸಿ ನೋಡೈ!"
ನಲ್ನುಡಿಯ ಹೂಬಾಣವದು ವೀಸಿ ಬರೆ ತರುಣ

ಮನದಿ ಚಿಂತನಮಂಥನಗಳ ಆಳದಿ ಮುಳುಗಿ
ಜಗ ಮರೆತನ್. ತನಗಾವುದು ಮಿಥ್ಯ ಎನಿಪುದದಂ
ಸತ್ಯವೆನೆ ಮನವೊಪ್ಪದಿರೆ ಅದ್ವೈತ ವೇದಾಂತ
ದ್ರುವ್ಯವಂ ಲಘುವಾಗಿ ಪರಿಹಾಸ್ಯಗೈದಪಂ.
ಗುರುದೇವನುಂ ಶಿಷ್ಯನ ಪ್ರಜ್ಞಾನ ಪಥವಂ
ಅರಿತು ಅದ್ವೈತವೇ ಅವನಂ ಹಂತಹಂತದಲಿ
ಉನ್ನತೋನ್ನತ ಸ್ಥಿತಿಗೇರಿಪುದು ಎಂಬುದಂ
ಅರಿತಿರೆ ಸಮಾಧಾನದಿಂ. ಮಿಣ್ಣನಾದಪರ್.
ಬಳಿಕಲೊರ್ಮೆ ಜೀವಬ್ರಹ್ಮೈಕ್ಯಮಂ ಆ
ಶಿಷ್ಯಂಗೆ ಯುಕ್ತಿಯಿಂ ತಿಳಿಸುವೊಡೆ ಇಚ್ಛಿಸಿರೆ,
ವರ ಶಿಷ್ಯನದಂ ಲೆಕ್ಕಿಸದೆ ಪ್ರತಾಪ ಚಂದ್ರ
ಹಜರನೊಡಗೂಡಿ ಪೊರಗುಯ್ದು ಸಿಗರೇಟ್ ಪುಗೆ
ಎಳೆಯುತ್ತೆ ಅದರ ಸ್ವಾದದೊಳ್ ಮನವಿಟ್ಟು ಎಳೆ
ನಗುಮುಖದಲಿ ನುಡಿದಂ "ಕೇಳ್ಳೈ ಜೀವಬ್ರಹ್ಮರು
ಒಂದೆಯಂತೆ! ಅದೆಂತಾದೀತು? ಹೂಜೆಯು ಬ್ರಹ್ಮ
ನೀರು ಬ್ರಹ್ಮ! ಸಿಗರೇಟು ಬ್ರಹ್ಮ ಪುಗೆಯು ಬ್ರಹ್ಮ
ನೀನ್ ಬ್ರಹ್ಮ! ಆನ್ ಬ್ರಹ್ಮ! ಎಲ್ಲಾದೊಡಮಿದು
ಒಪ್ಪುಗುಮೆ? ಇದು ಮರುಳ್ತನಮಲ್ತೆ? ಪಿತ್ತರಸ
ನೆತ್ತಿಗೇರ್ದೊಡಿದು ಸರಿ ಎನಲಕ್ಕುಂ! ಎನಿತೊಂದು
ಹಾಸ್ಯಾಸ್ಪದ?" ನಗೆಯ ಹೊನಲ್ ಹರಿಸಿದನಾ
ವೀರವಟು ಪರಿಹಾಸ್ಯ ಪರಿಪೂರ್ಣ ರೀತಿಯಲಿ.
    ಒಳಗಿರ್ದ ಠಾಕೂರರ ಕರ್ಣಪಟಲಂಗಳ
ಮೇಲೆ ತಟ್ಟನೆ ತಾಗಿದುದು ಶಿಷ್ಯನ ವಿಚಿತ್ರ
ಹೀಯಾಳಿಕೆಯ ದಿವ್ಯ ನುಡಿಗಟ್ಟು. ಆಗಳಾ
ಶ್ರೀರಾಮ ಕೃಷ್ಣ ಪರಮ ಹಂಸರ್ ಎಳ್ದು ಎಡ

ಕೊಂಕುಳಲಿ ಅರಿವೆಯೊಂದಂ ಇರ್‍ಕಿ ಪೊರವಂದು
ಸಿತಸ್ಮಿತ ವದನಾರವಿಂದದಿಂ ನೋನೋಡಿ,
"ಓಹೊ! ಏಂ ವಿಚಾರಮೊ ನಿಮ್ಮೊಳಗೆ?" ಎಂದವರೆ
ವರ ಶಿಷ್ಯ ನರೇಂದ್ರನ ಮೈಯ್ಯಂ ಪೆರಳುಗಳಿಂ
ಮುಟ್ಟಿದರ್. ಹಾ, ಅದೊಂದು ಬಣ್ಣಿಸಲಾಗದಿಹ
ದಿವ್ಯಾನುಭವ! ಅದೆ ಚಣದೊಳ್ ಜಗಂಮರೆತು
ಸಮಾಧಿಸ್ಥನಾದಂ ವರಶಿಷ್ಯ ನರೇಂದ್ರಂ! ಅಂದು,
ತನ್ನ ಪರಮಾನುಭವದಾ ಘಟನೆಯಂ ಕುರಿತು
ಮೈಯರಿವು ಮೂಡಿದ ಬಳಿಕಲಾ ನರೇಂದ್ರನುಂ
ನೆನೆದು ವಿವರಿಸಿ ಕರೀ ಅಕ್ಕರಗಳಲಿ ಲೇಖಿಸಿ
ಪ್ರಕಟಿಸಿದ ಉಲ್ಲೇಖಮಿದುಃ ಆಕ್ಷಣ ಐಂದ್ರ
ಜಾಲಿಕ ಸ್ಪರ್ಶದಿಂದೆನ್ನ ಬಗೆಯೇ ಬೇರೆ
ರೂಪು ತಳೆದತ್ತು! ಅಬ್ರಹ್ಮವಸ್ತುವೀ ಭವ್ಯ
ಬ್ರಹ್ಮಾಂಡದೊಳಾವುದನುಂ ಗುರುತಿಪುದೆ ಎನಗೆ
ಅಸಾಧ್ಯಮೆನಿಸಿತ್ತು. ಎಲ್ಲೆಲ್ಲಿ ನೋಡಿದೊಡಲ್ಲಿ
ಬ್ರಹ್ಮವಲ್ಲದೆಯೆ ಬೇರೊಂದಿಲ್ಲ. ಅಚ್ಚರಿಯ
ಕುಂಡದೊಳ್ ಮುಳುಗೆದ್ದೆ. ಹಾ! ಸರ್ವಸ್ವವುಂ ಆ
ಬ್ರಹ್ಮಮಯಮೇ! ಅಮಿತ ವಿಸ್ಮಯ ವಿಮೂಕತೆಯು
ವ್ಯಾಪಿಸಿತೆನ್ನ ಶರೀರದಾದ್ಯಂತಂ. ಅವಿಚಲಿತ
ಮನಮತಿಗಳಿರ್ದುವು ತಿಳಿಯಾಗಿ. ಆ ವಿಷೇಶತಮ
ಭಾವನೆಯದು ಎನಿತು ಸಮಯಮಿರ್ಪುದೊ ತಿಳಿಯಲ್
ಮಿಣ್ಣನಿರ್ದನೆನ್. ಪೊಳ್ತು ಉರುಳಿತು ಸದ್ದುಗಳ
ಸೊಲ್ಲಿಲ್ಲದೆ. ಅರೆಯರಳಿ ದಳಬಿರಿಯಲಿಹ ಎಳೆ
ನೀಲಾಂಬರ ಪುಷ್ಪಗಳ ಕಂಪು ನರುಗಂಪಾಗಿ
ಮುತ್ತಿತು ಮನಮತಿಗಳ ಮುಟ್ಟಿತಟ್ಟಿ ಎಚ್ಚರ

ಗೊಳಿಪ ಮಾಳ್ಕೆಯಲಿ! ಹಾ! ಎಂತಪ್ಪ ಎಣೆಯಿರದ
ದಿವ್ಯಾನುಭವ? ಎಂತು ಎನ್ನನಾಂ ಸೈಪಿದೆನೊ
ಆನರಿಯೆ. ಮನೆಗೆ ಮರಳಿದೆನ್. ಸಕಲ ವಸ್ತು
ಸ್ಥಿತಿ ಎಲ್ಲವುಂ ಬ್ರಹ್ಮಮಯಂ! ಮಣೆಯಮೇಲೆ
ಕುಳಿತೆನ್ ಭೋಜನದ ಶಾಲೆಯಲಿ. ಬಾಣಸಿಗ
ಬಟ್ಟಲು ಬಸಿ ಎಲ್ಲವುಂ ಬ್ರಹ್ಮಮಯಮಾಯಿತ್ತು.
ಮಂಕುಮಾಯೆ ಬಿಡಲೊಲ್ಲದು. ತುತ್ತು ನುಂಗಿದೆನ್.
ನೀರ್ಕುಡಿದೆನ್. ಆದೊಡದು ಬಿಡದೆನ್ನ. ಉಂಬುದು
ಮರೆತು ಮರವಟ್ಟು ಕುಳಿತೆನ್, ಅಮ್ಮ ಬಳಿಗೈದು
"ಇದೇನೈ?" ಎಂದಳ್ ಅಚ್ಚರಿ ತುಂಬಿರ್ದ ಕಂಗಳಿಂ
ನೋಡುತೆನ್ನಂ. ಆಗಳಾಂ ಬೆಚ್ಚಿದೆನ್. ಮನಂ
ಬೇಪಾಯ್ತು. ಅಲ್ಲಿಗೇಂ ಮುಗಿಯದಾ ಧ್ಯಾನಮಯ
ಬ್ರಹ್ಮಸತ್ಯಂ. ಸರ್ವದಾ ಅದೇ ಅವಸ್ಥೆಯೆ.
ದಿವ್ಯ ಬ್ರಹ್ಮಮಯ ಸ್ಥಿತಿ ಪಿಂಜರಿಯದಿರಲುರೆ
ಕಣ್ಮನಗಳಿಂಗೆ ಆವ ತೆರೆ ಕವಿದುದೊ ಎನಲ್
ಎನ್ನರಿವಿಗೆ ಆವೊಂದು ಬರದಾಯಿತು. ಅಮ್ಮ
ಭವನ ತಿಳಿಯದಾದುವು. ಹಾದಿ ನಡೆದಿರೆ ಎಲ್ಲಿ
ಯಾವೆಡೆಗೆ ಪಯಣ? ಆನೆಲ್ಲಿ? ಗುರಿಯಿಹುದೆಲ್ಲಿ?
ಆವೊಂದು ತಿಳಿಯದಾಯ್ತು. ಎದುರಿಗೆ ಶಕಟಗಳ್
ಬರೆ ಸರಿದು ನಿಲ್ವ ಪ್ರೇರಣೆಯು ಮೂಡದು ಮನದಿ.
ಶಕಟವುಂ ಬ್ರಹ್ಮ ಆನುಂ ಬ್ರಹ್ಮ ಎನಲದೇಂ
ಗಡಿಬಿಡಿ? ಮನಮತಿಗಳ್ ಬ್ರಹ್ಮಮಯಮಾಗಿರಲ್
ಯೋಚಿಸುವುದೆಂತು? ತಿಳಿವುದೆಂತು? ಒಡಲಾಳದ
ತಳಮಳಂ ಪೆರ್ಚಿಯುಂ ಆವುದರೊಳ್ ಅಭಿರುಚಿ
ಮೂಡದಾಯ್ತು. ತಿಂಬುವೆನೆನೆ ಆರೊ ತಿಂದವೊಲ್

ಭಾಸಮಾದಪುದು. ನಡುನಡುವೆ ನಿದ್ರೆ, ಪೊಳ್ತಿನ
ಅರಿವಿರದೆ ಪೊಳ್ತಲ್ಲದ ಪೊಳ್ತಿನಲಿ ಭೋಜನ.
ಅಮ್ಮ ಎನ್ನ ಸ್ಥಿತಿಗತಿಯಂ ಕಂಡು ಕಾಣುತೆ
ಅದಾವವಗೆಯ ರೋಗವೋ ಎಂದು ತಳಮಳಿಸಿ
ಮರುಗಿ ಕರಗಿ ಕುಸಿಯುವಳೊ ಎನೆ ಚಿಂತೆಗೆತ್ತಳ್.
ಮಾತಾಡಿ ನುಡಿಸುವಳ್, ನಗಿಸುವಳ್ ಎನ್ನನುಂ
ಎಳೆಯರ ತೆರದಲಿ, ಎಳ್ದು ಮೂರ್ನಾಲ್ಕು ದಿನಗಳ್
ಕಳೆದುವು, ಮನದ ಮಂಪರ ಹರಿಯದೆ ಉಳಿಯಿತ್ತು.
ಕಾಲೇಜಿನ ಪಥವಿಡಿದೆ. ಕನಸಿನವೊಲ್ ತೋರ್ದುದು
ಪದ ಸಂಚರಣಂ. ಮುನ್ನಡೆಯ ಮಧ್ಯೆ ಮುಟ್ಟಿದೆನ್
ಕಾರ್ನವಾಲೀಸ್ ಚೌಕಮಂ. ಅದನ್ ದಾಂಟುತೆ
ಮುಂಬರಿದಿರೆ ಹಾದಿಯ ಅಂಚಿನಲಿ ನಿಂದಿಹ
ತಂತಿ ಕಂಬಕೆನ್ನಯ ತಲೆಹೊಯ್ದು ಅವುಂಗಳ್
ಸತ್ಯಮೋ ಮಿಥ್ಯಮೋ ಎಂಬುದಂ ಪರಿಕಿಸಿದೆ.
ಅಂತಿಂತು ಕೆಲಗಾಲ ಕಳೆಯಿತಿಂತು ಮತಿಗತಿ
ನಿರ್ಮಲಗೊಳುವನ್ನ. ಬಳಿಕಲಾಂ ಅರಿದೆ; ಅಂದು,
ಆಂ ಕಂಡ ದರ್ಶನಂ ಅದ್ವೈತ ಸಿದ್ಧಿಯ ಕ್ಷಣಿಕ
ದರ್ಶನಮದೆಂದು. ಶಾಸ್ತ್ರವೇತ್ತರ ನುಡಿಗಟ್ಟು
ಸುಳ್ಳಾಗದೆನಿಸಿತು. ಮನದೊಳ್ ಅದ್ವೈತ ಮಿಂಚು
ಪೊಳಪನುಜ್ವಲಿಸಿದಾ ಚಿತ್ರಣಂ ನಿಜಸಿದ್ಧಿ
ಎಂಬುದರ ಅರಿವಾಯ್ತು. ಸಂಕೆ ಸಂದೇಹಗಳ್
ದೂರಾಗಿ ಅಪನಂಬಿಕೆಯ ಕೊಂಡಿ ಕಳಚಿದುದು
ಕೀಲು ಮುರಿದಂತೆ. ದೃಷ್ಟಿಕಕ್ಷೆಯ ದಟ್ಟತೆರೆ
ಪವ್ವನೆಯೆ ಶೀಳ್ದು ಪೊರೆಯಂ, ವಿಶ್ವವೈಶಾಲ್ಯ
ಕಿರಣರಾಶಿ ಮುಸುಗಿತು ಅಗ್ನಿಸ್ಫುಲ್ಲಿಂಗಗಳ

ತೇಜಮಂ ಹೋಲಿ! ಕಂಡೆನಾ ವಿರಾಟ್ ವಿಶ್ವ
ಬ್ರಹ್ಮಾಂಡದಾ ಮಹಾ ಪರಿಧಿಯಂ! ಉನ್ನೆಬರಂ
ಆನ್ ಬ್ರಹ್ಮಸಮಾಜಿಯೆನುತೆ ಬಾವಿಯಾಳದ
ಮಂಡೂಕಮೆಸಗುವ ಕುಶಲಕರ್ಮಗತಿಯನ್ನೆ
ಅನುಸರಿಸಿ ಕಳೆದುದಾಯ್ತು ಕಾಲಸಲಿಲಂ. ಆ
ದೈವಸೃಷ್ಟಿಯ ಅನನ್ಯ ಅನಿರ್ವಚನೀಯತಾ
ವಿರಾಟ್ ಅದುಭುತ ಸಾಧನಾ ಸಿದ್ಧಿರಾಶಿಯ
ಮುಂತೆ ನಾವೆತ್ತ? ಆಂ ತಾಂ ಎಂಬೊಡದೆಮ್ಮಯ
ಅರ್ಥಹೀನ ಸಾಂಗತ್ಯಮಲ್ತೇ? ಇಂತಿಂತು,
ಮನೋಮಂಡಲದೊಳ್ ಸುಯೋಚನಾಲಹರಿಯುಂ
ಸುಳಿಸುಳಿದು ಸುತ್ತುತಲಿರೆ ಭೀಮ ಬೈರವಶಿಷ್ಯ
ನರೇಂದ್ರನಾಥನ ಮನಮತಿಗಳ್ ಗರಿಗೆದರಿ ಮರಿ
ಹಕ್ಕಿಯೊಲ್ ಪಾರ್ದುದು ದಕ್ಷಿಣೇಶ್ವರದ ಗುರುವಿನ
ಬಳಿಗೆ. ಶಿಷ್ಯವರೇಣ್ಯ ಜಿಹಾಸೆಯ ಮಡಿಲಿನಲಿ
ಹೊರಳಿಹೊರಳಿ ಬರೆ ಗುರುವಿನ ಖಗ ಕಣ್‌ದೃಷ್ಟಿಗೆ
ಶಿಷ್ಯನಂತರಂಗದೊಳ್ ಸ್ವಾರ್ಥಹೀನತೆ, ತೀವ್ರ
ವೈರಾಗ್ಯ, ಅಹೇತುಕ ಭಕ್ತಿ, ನಿರ್ಮಲಚಿತ್ತ,
ಅಮಿತ ಶಕ್ತಿ, ಗಂಭೀರ ಚಿಂತನೆ, ಸುತೀಕ್ಷ್ಣಮತಿ
ಇಂತಪ್ಪ ಗುಣಗಳ ಗಣಿಯೆ ಕಾಂಬುದೆನೆ ಅಮಿತ
ಪ್ರೀತಿಯಿಂ ತೋಷದಿಂ ಸ್ವಾಗತಿಸುವರಾ ಶ್ರೀ
ಗುರುವರ್ಯ ಅಂತರ್ಗುಡಿಯ ಕದತೆರೆದು. ಶಿಷ್ಯ
ಪುಣ್ಯ ಪುರುಷೋತ್ತಮಂ ಆಗಳುಂ ಜಿಹಾಸಿಯೆ.
ಬಳಿಕಲೇಂ ಗುರುಶಿಷ್ಯರ ಆತ್ಮೀಯನುಬಂಧ?
ತಾಯಿಪಶು ಪಾಲ್ತುಂಬಿ ಕೆಚ್ಚಲು ಬಿಗಿದು ತನ್ನ
ಕರುವಿಗಾಕರಿಪಂತೆ ಕಣ್ಣಿಡುವರ್ ಶಿಷ್ಯಂ

ಗಮಿಸುವ ಪಥದೊಳ್. ಆತುರಕಾತರಗಳಿಂ
ತುಂಬಿದ ದನಿಯಲಿ "ಎಲ್ಲಿ ನರೇಂದ್ರ? ಅವನೇಕೆ
ಬಾರನ್? ಅವಂಗೇನ್ ಬಿಡುವು ದೊರೆಯದಾಯಿತೆ?"
ಎನುತೆನುತೆ ಭಾವನಾಪನ್ನತೆಯಲಿ ಗಮನಿಸಿ
ನೋಳ್ಪರ್ ಅವನಾಗಮನಮಂ, ಕುತೂಹಲಂ
ಕೆರಳಿ.

ಒರ್ಮೆ ವಾರದ ಗಾಲಿಯುರುಳಿ ಜಾರಿತ್ತು
ಶಿಷ್ಯವರ್ಯನ ದರ್ಶನಗೊಳಿಸದೆ. ದಿನದಿನಂ
ಉರುಳುತಿರೆ ಗುರುದೇವ ಶ್ರೀರಾಮ ಕೃಷ್ಣರಾ
ಮನ ಚಡಪಡಿಸಿದತ್ತು ಒಳಗೊಳಗೆ. ಕಾತರಿಸಿ
ನೋಡುತಿರೆಯಿರೆ ಮತ್ತೆ ಕೆಲವು ದಿನಮಾನಗಳ್
ಉರುಳಿ ಗತಕಾಲವಂ ಸೇರ್ದು ಕಣ್ಮರೆಯಾಗಿ
ತಳಮಳವನುಂ ವರ್ಚಿಸಿದುವು ಗುರುದೇವನಾ.
ಪ್ರೇಮ ತೃಷಿತ ಮನ ತಡೆಯದಾಯ್ತು. ತಮ್ಮೊಳುಂ
ಚಿಂತಿಸಿ ಮತಿಗೆಟ್ಟವೊಲ್ ಅಲ್ಲಲ್ಲೆ ಚಾರಣ
ಗೈಯುತ್ತೆ ತಮ್ಮನುಂ ತಾವ್ ಸೈಸಲಾರದ
ಪರಿಯಲಿ ಪೊರಮಟ್ಟರ್ ಕಲಿಕತ್ತ ನಗರಿಯಂ
ಗುರಿಗೊಂಡು. ತಾವಲ್ಲಿಗುಯ್ವುದು ಸರಿಯೆ? ತಪ್ಪೆ?
ಎಂಬುದರ ತುಲನೆಯೇ ಇಲ್ಲವಾಯ್ತು. ತಾವುಂ
ಬ್ರಹ್ಮ ಸಮಾಜಿಯುಂ ಅಲ್ಲ; ಆಹೂತರಂತು
ಅಲ್ಲ. ಆದೊಡಂ ಬ್ರಹ್ಮ ಸಭೆಗೆ ಪುಗುವೊಡೆ ಗುರು
ದೇವನುಂ ಸಂಕೋಚಿಸಲಿಲ್ಲಂ. ರವಿವಾರ,
ಬ್ರಹ್ಮ ಸಭೆ ನಡೆಯುತ್ತಲಿರೆ ಅಧಿಕ ಸಂಖ್ಯೆಯಲಿ
ಕೂಡಿರ್ದರು ಬ್ರಹ್ಮಸಮಾಜಿಗಳ್. ಒಳಗಡೆಯ
ಕೊಠಡಿಯಲಿ ನರೇಂದ್ರನ ಸಂಗೀತ ಕಛೇರಿಯು

ನಡೆಯುತಿರೆ ತರುಣವಳಗ ನೆರೆದಿರ್ದುದು ಅಲ್ಲಿ,
ಪ್ರವಚನ ಮೇಣ್ ಸಂಗೀತಾದಿಗಳ್ ನಡೆದು
ಸಭೆಯು ಗಂಭೀರಗತಿಯೊಳಿರ್ದುದು ಗಮನಕ್ಕೆ
ಬರಲಿಲ್ಲವಾ ಗುರುವಿಗೆ. ಮಂತ್ರಮುಗ್ಧರೊಲ್
ಸುತ್ತಲುಂ ನೋಡಿದರೊ ಇಲ್ಲವೊ ಮನೋಗತಿಯ
ಮೇಲೆ ಅವ್ವಳಿಸಿತು ಸಮಾಧಿಕಲ್ಪ. "ನರೇನ್!
ನರೇನ್!" ಎನುತೆ ಒಳಕೊಂಡಿಗೈದೊಡನಲ್ಲಿಯೆ
ಸಮಾಧಿಸ್ಥರಾದರ್ ಗುರುವರಂ. ಒಡನೊಡನೆ
ಗಲಿಬಿಲಿಯು ಮೂಡಿದುದು ಸಭೆಯೊಳ್. ಅದಾರೆಂಬ
ಕುತೂಹಲ ಕೊನರ್ದುದಲ್ಲದೆಯೆ ಸಮಾಧಿಯಂ
ಕಣ್ತುಂಬ ಕಾಂಬ ಇಚ್ಛೆ ಘನಿಸಿ ಗುರುವರ್ಯನ
ಕಡೆಗೆ ದೃಷ್ಟಿಯಷ್ಟಿಗಳ್ ಹರಿದುವು ತೆಕ್ಕನತ್ತ
ಬಾಣಾವಲಿಗಳ್ ಎರಗಿದ ಪಾಂಗಿನಲಿ. ಗಡಿಬಿಡಿ
ಗದ್ದಲಗಳೆದ್ದುವು ಮನಮತಿಗಳ್ ಮಿಡುಕಿದಂತೆ.
ಆಗಂತುಕನ ಆಗಮನದಿಂದೆ ಭಾವನಾ
ಲೋಕವೇ ಆಲೋಡಿತವಾಯಿತು ಬಹುತರದಿ.
ಸಂಗೀತ ಲಹರಿ ನಿಲ್ಲು ತಟಸ್ಥವಾಯಿತು ಸಭೆ.
ದಿಙ್ಮೇಖಲಾ ವಲಯಮಂ ಚೊಕ್ಕ ಬಾಣದೊಲ್
ಅಚ್ಚರಿಯ ಗಲಿಬಿಲಿಯಲಿ ನರೇಂದ್ರನಾಥನುಂ
ಗುರುಗಳೆಡೆಗೆ ಧಾವಿಸಿದಂ. ನೋಡೆ, ಮಾತಿಲ್ಲ,
ಅರೆ ಬಿರಿದ ದೃಷ್ಟಿ. ಜಗದ ಪರಿವೆಯೆ ಇಲ್ಲ. ಆ
ಸಭೆಯೊಳ್ ಸಮಾಧಿ ಸ್ಥಿತಿಯಂ ಪ್ರದರ್ಶಿಸಿದ
ಪಾಂಗಿನೊಳ್ ನಡೆದುದಾ ಅಪೂರ್ವ ಘಟನಾವಳಿ!
ಜನ ಸಮುದಯಂ ಅಚ್ಚರಿಯ ಮನೋಗತಿಯಲ್ಲಿ
ಬೆರಗುವಟ್ಟು ನುಗ್ಗಿದುದು ಗುರುವಿನ ಸಮಾಧಿಯಂ

ನೋಳ್ಪ ಪಂಬಲದಿಂದಲಿ. ಎಲ್ಲರ ಗಡಿಬಿಡಿಯ
ಮಧ್ಯದೊಳ್ ಸಮಾಧ್ಯವಸ್ಥೆಯೊಳಿಹ ಗುರುವರನಂ
ಅಲ್ಲಿಂದ ಕರೆದೊಯ್ವು ಬಗೆಯದು ಬಲು ಕಠಿಣ
ದಾಯಕಮೆನಿಸಿದತ್ತು ನರೇಂದ್ರನಾಥಂಗೆ.
ಆದೊಡಂ ತಳುವದೆ ಕರೆದೊಯ್ವ ಗತಿಯೊದವಿತು.
ಅಚ್ಚರಿಯೊಳಚ್ಚರಿಯ ಸಂಗತಿಯು ಜನಮನಂ
ಆಕರ್ಷಿಸಿರೆ, ಶಿಷ್ಯವರೇಣ್ಯಂ ಆಕ್ಷಣವೆ
ಪಿಂಗಡೆಯ ವಾಗಿಲೊಳ್ ಒಂಟೆತ್ತಿನ ಶಕಟಂ
ಬರಮಾಡಿ, ಗೆಳೆಯರೊಡನೆ ಪೊತ್ತು ಗುರುವರನಂ
ಸಾಗಿಸಿದನ್ ಅಲ್ಲಿಂದೆ. ನರೇಂದ್ರನಾಥನುಂ
ಬಂಡಿಯೇರಿದನ್ ಗುರುವಿನೊಡಗೂಡಿ. ಮನದೊಳ್
ಕಿರಿಕಿರಿ ಕಸಿವಿಸಿಗಳ ಗೊಂದಣಂ. ಬಂಡಿಯದು
ಹರಿಯಿತ್ತು ದೂರದಾ ದಕ್ಷಿಣೇಶ್ವರ ಗುಡಿಯ
ಅಭಿಮುಖೀ ಪಥವಿಡಿದು. ಅರೆ ಹಾದಿಯುಂ ಕಳೆಯೆ
ಭಾವ ಸಮಾಧಿಯಿಂ ಎಚ್ಚತ್ತು ನೋಡಿದರ್ ಶ್ರೀ
ರಾಮ ಕೃಷ್ಣರುಂ. ಗಾಡಿಯೋಡುತಿದೆ. ಗೈಲ್ ಗೈಲ್
ಎನುತೆನುತೆ ಗೆಜ್ಜೆಗಳ ಮಧುರರವ ಇಂಪಾಗಿ
ಮುಟ್ಟುತಿದೆ ಕಿವಿಗಳಂ, ಹೃನ್ಮನಂಗಳಂ ನೆರೆ
ತಣಿಪ ತೆರದಿ. ಹಾದಿಯ ಧೂಳು ಕೆಮ್ಮನೆ ತೆರೆಯ
ಮಾಳ್ಕೆಯಲಿ ಮೇಲೇರುತಿದೆ. ಬೈಗುವೊಳ್ತಿನಾ
ಸೊಂಪು ಇಳಿದಿದೆ ಇಳೆಯ ಮೇಲೆ. ವರ ಶಿಷ್ಯ
ನರೇಂದ್ರಂ ಮಂಡಿಸಿಹನೊಡನೆ. ತಿರುಗಿ ಅವನಂ
ನೋಡಿದೊಡನೆಯೇ ಆಕ್ಷೇಪಣೆಯ ಧ್ವನಿಯೊಳ್
ನುಡಿದನಾ ವರಶಿಷ್ಯ "ಗುರುವರ್ಯ! ಇದೇನಯ್
ನಿಮ್ಮ ಇಂದಿನೀ ವ್ಯವಹಾರ? ತವ ಗೌರವ

ಮಾನ ಮರ್ಯಾದೆಯಂ ಕಡೆಗಣ್ಚಿ ಬಂದಪುದೆ
ಬ್ರಹ್ಮ ಸಭೆಗೆ? ಆಹ್ವಾನಿತರಲ್ಲದೆ, ಹೊತ್ತಿನ
ಪರಿವೆಯಿಲ್ಲದೆ ಅಣುಗರ ಮಾಳ್ಕೆಯಲಿ ಎನ್ನನುಂ
ಪುಡುಕಲ್ ಬರುವುದೆನಲ್ ಹಾಸ್ಯಾಸ್ಪದಮಿದಲ್ತೆ?
ಜನ ಜಂಗುಳಿ ಏನೆಂದಪುದು? ನೀಮಿಂತು ಜಪ
ತಪ ಧ್ಯಾನ ಆರಾಧನೆಗಳನೆಲ್ಲಂ ಬಿಟ್ಟು
ಎನ್ನನುಂ ಕುರಿತು ಚಿಂತಿಸುತಿರೆ ತವ ಮುಂದಿನ
ಜನುಮದಲಿ ನೀವಾದಪುದು ಎನ್ನವೋಲಂತೆ!
ಮಿನ್ನೆ ಭರತ ರಾಜಂ ತನ್ನಯ ಬಲು ಮುದ್ದಿನ
ಜಿಂಕೆಯ ಮರಿಯಂ ನೆನೆನೆನೆದು ಕಟ್ಟಕಡೆಗೇ
ಮರುಜನ್ಮದಲಿ ತಾನೆ ಜಿಂಕೆಯಾದನೆಂಬುವ
ಕಥೆಯಂ ತಿಳಿದಿರುವಿರಿ. ಮುಂದದೇ ಪರಿಪಾಡು
ನಿಮಗಪ್ಪುದಲ್ತೆ?"
ಶಿಷ್ಯವರ್ಯನ ಮಾನಸೀ
ಮುರುಳಿಯುಂ ಕೋಪತಾಪಗಳ ರಾಗರಸ ಕಕ್ಕಿ
ಭರ್ತ್ಸನೆಗೈಯ್ಯಲುರೆ ಗುರುಗಳ್ ಮುನಿದರೇಂ? ಸಿಟ್ಟು
ಸೊಗಡಿಂ ಮನ ನೊಂದು ನುಡಿದರೇಂ? ಕಿಂಚಿತ್ತು
ನೋಯದೆ ಮರುಗದೆ ಕಾಳಿ ಮಂದಿರಕೆ ನಡೆದರ್
ಮಿಣ್ಣನೆ. ನಸುವೊಳ್ತಿನ ಬಳಿಕ ಪಿಂದಿರುಗಿ ಬಂದು
"ಕೇಳ್, ನರೇನ್! ತಾಯಿ ನನಗೆಲ್ಲವನೊರೆದಿಹಳ್
ಇಂತು, ಅವನಿಂ ಅಣುಗ. ಅವನ ಮಾತಿನಿಂದೇಂ?
ಬಿಡು, ಚಿಂತೆಯಂ. ಅವನೊಳ್ ನಾರಾಯಣನಂ
ಕಾಂಬುದರಿಂ ನೀನಾಕರ್ಷಿತನಾಗಿಹೆ, ಅಷ್ಟೆ."
ಎಂದಳವಳ್. ವತ್ಸಾ! ನಿನ್ನೊಳಾನು ನಿಚ್ಚಂ
ನಾರಾಯಣನನ್ನೇ ವಿಧ್ಯುಕ್ತವಾಗಿ ಕಂಡು

ಕಾಂಬುವೆನ್. ಅಂತಲ್ಲದೊಡೆ ನಿನ್ನ ವದನಮಂ
ನೋಡೆನಾಂ!"
ನರೇಂದ್ರನಾಥಂ ಮನ ಮಿಡುಕಿದಂ.
ವಿಚಿತ್ರತರ ಬೆಮೆಯುಂ ಆವರಿಸಿತು ತಲೆಯಂ.
ತನ್ನಂತಹ ವಟುವಂ 'ನಾರಾಯಣ' ಎಂಬುವ
ಗುರುದೇವನ ಮನಃಸ್ಥಿತಿಯಂ ಅರಿವುದು ತನ್ನ
ಚಿಂತನೆಗೆ ನಿಲುಕದ ವಿಷಯಮಾಯ್ತು.
ಮುಂಬೊಳ್ತು
ಮೂಡುತಿರೆ ಕೆಂಗೆಂಪು ಎಡೆಎಡೆಗಳಿಂದುಣ್ಮಿ
ಜಿರ್ರೆಂದು ರಂಗೇರಚಿ ಹೆಮ್ಮರಗಳ ವಿಧವಿಧ
ಕೋನದಲಿ ಛಾಯಾಂಧತೆಯೊಳೆಲ್ಲೆಡೆಗಳಿಂದೆ
ಚಿಂಬಿಸಲ್ ಎಲೆಎಲೆಗಳ ನಡುವೆ ನುಸಿದು ಬರಲ್
ಕಿರಣಮೆಸೆದುವು ಥಳಥಳಿಪ ಅಪರಂಜಿಯ ಕೋಲು
ಕೋಲ್ಗಳಾಗಿ; ಮೋಹಕ ದೃಷ್ಟಿಗೆ ರಸವತ್ತಾಗಿ.
ತಣ್ಣೆಳಲ್ ಮಿರುಪಸಲೆಯ ಹರವಿನ ತುಂಬೆಲ್ಲ
ಹೊನ್ನೀರ್ ಮಂಜುದುರಿ ಹಚ್ಚ ಹಸುರಿನಲಿ ಹನಿ
ಹನಿಗಳೈಸಿ ತಂಗಿದುವು ಮಿರುಗುವ ಬಿಂದುಗಳಾಗಿ.
ಇಂದ್ರ ದಿಙ್ಮಂಡಲದೆಡೆಯಿಂ ಬೀಸುತಲೈದಾ
ಮೃದು ಮಂದ ಮಂದಾನಿಲಂ ಎಲೆಎಲೆಎಲೆಯ
ನಡುವೆ ನುಸುಳಿ ಉದಯ ರಾಗದತಾನಕೆ ಶೃತಿ
ಮೂಡಿಸಿತು ಮರ್ಮರನೆ ಮರ್ಮರಿಸಿ. ಸಕಲತರ
ಪಕ್ಷಿಕೋಟಿಯುಂ ತಂತಮ್ಮ ಗೂಡುಗಳನರಸುತೆ
ಸುಳಿಸುತ್ತಿ ಅಂಡಲೆದು ಹಾರಿಹೋಗಲೆನೆ ಮೈನಾ
ಕಾಮಳ್ಳಿ, ಪಿಕಳಾರಿ ಬುಲ್‌ಬುಲ್ ಗಿಳಿ ಕೋಗಿಲೆ
ಗುಬ್ಬಿಗಳ್ ಉಲಿದ ರಾಗಮಾಲೆಯು ಮೆರೆದುದಾ

ಪರಿಸರದ ಹೃದಯ ಮಂಡಲ ತಣಿಸುವಂತೆವೊಲ್,
ಪ್ರಾತಃಸಮಯದ ಪ್ರಶಾಂತಿಯದು ತುಂತುಂಬಿ
ಹಬ್ಬಿಹರಡಿತು ರಂಗುರಂಗಿನೋಕುಳಿಯಂ ದಶ
ದಿಶೆಗೆ ಚೆಲ್ಲಿ ಚಿಮುಕಿಸಿ.
ಕಾಳಿ ಮಂದಿರದಲ್ಲಿ
ಪ್ರಶಾಂತ ಕಾಲೀನ ಪೂಜಾ ವಿಧಿವಿಧಾನ
ಪರಮಮಂತ್ರೋಚ್ಚಾರಣೆಯಲಿ ಆರಂಭರುತಿ
ನಲವಿಂದೆ ಭಕ್ತಿರಸ ಸೂಸಾಡಿ ಹರಿಯಿತ್ತು.

ಯಾದೇವೀ ಸರ್ವಭೂತೇಷು
ವಿಷ್ಣುಮಾಯೇತಿ ಶಬ್ದಿತಾ ।
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋನಮಃ ॥

ವಾದ್ಯ ವೃಂದ ಮೊಳಗಿತು, ತಾಳ ಗಂಟೆ ಜಾಗಟೆ
ಶಂಖಗಳ ಸಹಿತ. ಗಂಧ ಕುಸುಮಾದಿ ಪರಿಮಳ
ದ್ರವ್ಯ ಧೂಪ ಕಪ್ಪುರಗಳಾ ಪರಿಮಳ ದ್ರವ್ಯ
ಹೃನ್ಮನಗಳಂ ಮುಟ್ಟಿ ತಟ್ಟಿ ಚೋದಿಪ ಭಕ್ತಿ
ರಂಗಮಾದತ್ತು ಪೂಜಾ ವ್ರತದ ಸುಂದರ
ಘಟಿ. ಭಕ್ತಿ ಜಾಲದ ಪರಿಪುಣ್ಯ ನಿಯಮಾವಳಿ
ತನುಮನಂಗಳಿಗೆ ದಿವ್ಯ ಆಕರಮೇ ಆಯ್ತು.
ಶ್ರೀರಾಮ ಕೃಷ್ಣ ಪರಮ ಹಂಸರ್ ಭಾವನಾ
ಲೋಕದಲಿ ತೀವ್ರ ಮುಳುಗಿ ವಿಹರಿಪ ಹಕ್ಕಿಯನೆ
ಸಭಾಂಗಣದಿ ಮೈಮರೆತವೊಲ್ ಸುಶಾಂತತಾ
ಭಾವದೊಳ್ ಮಂಡಿಸಿರ್ದರ್. ಅದಾಗಳೆ ದೇವಿ
ಅರ್ಚನೆಯು ಮುಗಿದಿತ್ತು. ಆರಾಧನೆಯ ಮಂತ್ರ

ಮನದೊಳ್ ಗುನುಗುತಿತ್ತು. ಧೂಪಾರತಿಯ ಪುಗೆಯು
ಉಂಗುರುಂಗುರವಾಗಿ ಹೊರಹೊಮ್ಮಿ ಒಳಗೆಲ್ಲ
ಹರಡುತಿತ್ತು ಲಘುವಾಗಿ. ಮಧುರ ಕುಸುಮಂಗಳ
ನರುಗಂಪು ಹರಡಿತ್ತು ಮಂದಿರದೊಳ್ ಗಮ್ಮನೆ.
ನೆಲ ಹಾಸು ಚಾಪೆಯಲಿ ಪದ್ಮಾಸನದೊಳ್ ಗುರು
ದೇವನುಂ ಮಂಡಿಸಿದೊಡನೆಯೆ ಗಮಿಸಿದರ್ ಬಹು
ಮಂದಿ ಶ್ರೋತೃಗಳ್. ಕೇಶವ ಚಂದ್ರಸೇನ ವಿಜಯ
ಕೃಷ್ಣ ಗೋಸ್ವಾಮಿ ಪ್ರತಾಪ ಚಂದ್ರ ಮುಜುಮದಾರ
ನಾಗಮಹಾಶಯ ಇಂತಪ್ಪ ಆಚಾರ್ಯ ಕುಲ
ತಿಲಕಮಣಿಗಳ್ ಕುಳಿತರ್ ಸುತ್ತುವರಿದು. ಕೊಠಡಿ
ಕಳೆಕಟ್ಟಿತು ಪ್ರವಚನಗಳ ಧಾರೆ ಪ್ರವಹಿಸಿ
ಮನಮನದ ಭಿತ್ತಿಗಳ ಮೇಲೆ ಅಚ್ಚೊತ್ತುತ್ತಿರೆ
ನಟ್ಟು ನಾಂಟಿ. ಪರಮೋನ್ನತ ಶಿಷ್ಯ ನರೇಂದ್ರಂ
ಇಂ ಗಮಿಸದಿರ್ದುದಂ ಕಂಡು ಗುರುವರ್ಯನುಂ
ನುಡಿಸಿದರ್ ಇಂತಿಂತು– "ಶ್ರೋತೃಗಳೆ, ನೀಮೆಲ್ಲ
ಕಂಡರಿದು ತಿಳಿದಂತೆ ನರೇಂದ್ರಂ ಸಾಮಾನ್ಯ
ವಟುವಲ್ಲ; ಮಹಾ ಸಾಮರ್ಥ್ಯ ಸ್ಫೂರ್ತಿವಂತನೆ
ವಲಂ. ಏವೊಳ್ತು ತರ್ಕವಿತರ್ಕಗಳ ಕೋಟೆ
ಕೊತ್ತಲಗಳಲಿ ಚರಿಸಿ ತಿರುಳ್ ಹಿಂಜಿ ಹಿಂಡುತೆ
ಬಸಿವಂ ರಸಧಾರೆಯುಂ. ಅರಿಯದೆ ನುರಿಯದೆ ತನ್ನ
ಬಾಯ್ದೆರೆವನಲ್ಲ. ಅವನೊರ್ವ ಧೀರನಿರುತಿರೆ
ಭಾರತದ ಭವಿಷ್ಯಕೆ ಅವನಿಂದೆ ಸಲ್ಲಲಿಹ
ಸೇವೆಯುಂ ಅಪಾರ, ಅಗಾಧ ಎನಲನ್ಯಮಲ್ತು."
ಶ್ರೋತೃಗಳ್ ಆಲೈಸಿದರ್ ಠಾಕೂರರ ದಿವ್ಯ
ಅಭಿಮತಂ ಎಲ್ಲರೊಪ್ಪಿದರೊ ಒಪ್ಪದೆ ಮಿಣ್ಣನೆ

ನುಂಗಿದರೊ. ಅಂತಿಂತು ಆರುಂ ಮರುನುಡಿಯದೆ
ಕೇಳಿದರ್ ಕಿವಿಗೊಟ್ಟು. ನಸುವೊಳ್ತು ಕಳೆಯಿತ್ತು.
ನರೇಂದ್ರನಾಥದತ್ತಂ ಆಗಮಿಸಿ ಪಿಂಗಡೆಯ
ಸಾಲಿನಲಿ ಕುಳಿತಂ. ಗುರುದೇವಂ ಪ್ರವಚನ
ಧಾರೆಯಂ ಮುಂಬರಿಸಿದರ್ ಮುನ್ನಿನಂತೆವೊಲ್.
ಪೊಳ್ತುರುಳುರುಳಿ ಪ್ರವಚನ ಧಾರೆಯುಂ ಮುಗಿದು
ದೊರೆಯಿತು ಬಿಡುವು. ಕೇಶವ, ಪ್ರತಾಪ
ವಿಜಯರ್ ಪೊರವೊಂಟರ್ ಅಲ್ಲಿಂದೆ. ಧೀಮಂತ
ಶಿಷ್ಯಗಣ ನಿರ್ಗಮಿಸಿ ತೆರವಾಯ್ತು ಗುರುಕೊಠಡಿ.
ಶ್ರೀರಾಮ ಕೃಷ್ಣರ್ ಉಳಿದ ಶಿಷ್ಯರ ಕಡೆ ಕಣ್
ಹೊರಳಿಸಿ ಪರಮ ತೋಷ ಭಾವದಿಂ ನುಡಿಸಿದರ್,
"ನೋಡಿ, ಈ ಯುವ ಸುಜ್ಞಾನಿಯ ಮುಂತೆ ಆ ಎಲ್ಲ
ಪ್ರಜ್ಞಾನಿಗಳೆತ್ತ? ಅಹ ಜ್ಞಾನರವಿಯ ಮುಂತೆ
ಮಿಣುಮಿಣುಕುವ ಹಣತೆಯ ಕುಡಿ!" ಆಗಳಾ ವಾಕ್ಯವ
ಕೇಳುಕೇಳುತೆಳ್ದ ನರೇಂದ್ರನುಂ ಮುಂದೈದು
ಆಶ್ಚರ್ಯ ವಿಸ್ತೃತ ನಯನ ಪಕ್ಷ್ಮಗಳನಿನಿತು
ಸಂಚಲಿಸದೆ ನೋಡುತೆ ಕೇಳಿಸಿದನಿಂತು– "ಓ!
ಇದೇನೆಂಬಿರಿ ಮಹಾಶಯಾ ? ಶಾಲೆಯ ಅಣುಗ
ನಾನೆಲ್ಲಿ? ಜಗದ್ವಿಖ್ಯಾತರಾದ ಆ ಕೇಶವ ಚಂದ್ರ
ಸೇನರೆಲ್ಲಿ? ನಿಮ್ಮ ನುಡಿ ಕೇಳ್ದೊಡೆ ಜನರೇನ್
ತಿಳಿದಪರ್ ? ನಿಮ್ಮನ್ನೆ ಮರುಳು ಎಂಬರಲ್ತೇ?
ಇದುಂ ಸರ್ವಥಾ ಹಾಸ್ಯಾಸ್ಪದ!" ಬೆರಗು ವಟ್ಟ
ಮಾಳ್ಕೆಯಲಿ ಮನೋಜನಿತ ಗಲಿಬಿಲಿಯಿಂ ನುಡಿದ
ನರೇಂದ್ರನಾಥಂ. ಗುರುವರ್ಯಂ ಭಾವನಾವೇಶದ
ಮಂಪರದೊಳಿರುತಿರ್ದೊಡಂ ಕಿಂಚಿತ್ ಮಿಡುಕದೆ

ವಿಚಲಿತಗೊಳದೆ ಎಳೆಮುಗುಳಿನ ಬೆಳುದಿಂಗಳಂ
ಹರಿಸಿ ಬೆಸಗೊಂಡರ್– "ಎಲೆ ವತ್ಸಾ! ಆನೇಂಗೈವೆ
ಪೇಳ್? ಆ ತಾಯೆನ್ನ ನುಡಿಪಳ್, ತನಗೆ ತೋರ್ದ
ಸತ್ಯಾಸತ್ಯಗಳಂ. ಅವಳ ಕೈಗೊಂಬೆ ನಾಂ ಎನೆ
ಸಲ್ವುದು ಕಣಾ!"
ಗುರುದೇವನೊಳ್ನುಡಿಯಲಿನಿತು
ಡಾಂಬಿಕತೆ ಯಾ ಕಲ್ಮಶಮಿರದಿರ್ದುದಂ ತಾಂ
ಅರಿದೊಡಂ ಕನಲ್ದವೊಲ್ ಬಗೆಗೆಡುತ್ತೆ ತೀವ್ರ
ಅಸಮಾಧಾನದುಸಿರಂ ಬಿಟ್ಟು ಮರುನುಡಿಸಿದಂ,
"ಆರ್ಯ ! ಆ ತಾಯಿ ನುಡಿಸಿದಳೊ ಅಥ ನಿಮ್ಮೊಂದು
ಮರುಳುತನಮೊ ಆನದನೆಂತರಿವೆ? ಇರಲಿರಲಿ,
ನೀಮಿನ್ನು ಮುಂತೆ ದುಡುಕದಿರಿ ಎಂದಾಂ ಬೇಡ್ವೆನ್,
ಆನಿನ್ನು ಕಲಿಕೆಯ ತರುಣಂ. ಆ ವಿದ್ವನ್ಮಣಿಗಳೆಲ್ಲಿ?
ಆನೆಲ್ಲಿ ? ಇದುಂ ಬರಿ ಬಾಲಿಶ ನುಡಿಗಳಾಯ್ತು!
ಆರಾರ್ ಯೋಚಿಸಿ ತಿಳಿಯಲಿದು ಮರುಳ್ತನಂ
ಅಲ್ಲದೆಯೆ ಬೇರಲ್ಲ ಎಂಬೆನಾಂ!"
ಅಂತೆಂದ
ದಿಟ್ಟತನದ ಅಕ್ಷರಕ್ಷರಂ ಎದೆಯ ಮಿಸುನಿಯ
ಸಂಪುಟಕಿಳಿಯುತಿರೆ ಮುದದಿಂ ಆಲೈಸಿ ನೆಚ್ಚಿ
ಮೆಚ್ಚಿದರ್ ಆ ಶಿಷ್ಯನ ದೃಢಮನೋಗತಿಗೆ,
ಶುದ್ಧ ಹೃದಯದ ಭರ್ತ್ಸನೆಗೆ, ಧೀರೋದ್ದಾತ
ಪರಾಮರ್ಶೆಗೆ ಬಹುಲ ತೋಷದಿಂ ಮನದುಂಬಿ
ಪುಷ್ಟೀಕರಿಸಿದರ್; ಬೆನ್ ತಟ್ಟಿ ಪ್ರೋತ್ಸಾಹಿಸುವ
ಪಾಂಗಿನಲಿ. ಅನ್ನೆಬರಮವರ ಉಪದೇಶಮಾದ
"ಶಿವೋಹಂ" "ಅಹಂ ಬ್ರಹ್ಮಾಸ್ಮಿ" "ತತ್ತ್ವಮಸಿ"

ಇತಿ ವಿವಿಧ ವೇದವಚನಗಳನೊಪ್ಪದಿರೆಯುಂ
ದಕ್ಷಿಣೇಶ್ವರದ ದೇವಿ ಕಾಳಿಕೆಯ ಸನ್ನಿಧಿಗೆ
ಬರ್ಪ ಶಿಷ್ಯೋತ್ತಮನ ಸಂಕೆ ಸಂದೇಹಗಳ
ಆಳಮಂ ಅರಿದರಿದು ಕಾಲಕ್ರಮದಲಿ ಯುವ
ಮನೀಷಿ ಸರಿದಾರಿಯೆಡೆಗೆ ಸರಿವನೆಂಬ ಸತ್ಯ
ಘನಿಸಿರಲ್ ಮುಂಬಿನಾ ಮಾಳ್ಕೆಯಲಿ. ಒಡಲಿನೊಳ್
ಸುಖದುಃಖಗಳ ಬೆಸನಮಿಲ್ಲ, ತವಕವುಂ ಇಲ್ಲ,
ಎಲ್ಲವುಂ ದೇವಿಯ ಪದತಲಕೆ ಸಮರ್ಪಿತಂ.
ಪರಂತು, ನರೇಂದ್ರನಾಥದತ್ತಂ ಚಿಂತನಾ
ಭಾವ ಮತ್ತತೆಯಲಿ ಪಡಿನೆಳಲಿಂದೆ ನಿರುತಕ್ಕೆ
ದಿಟ್ಟಿಯಟ್ಟಿಲ್ ಅಲ್ಲಿ ಭಕ್ತಿಯೆ ಹಿನ್ನಲೆಯಾಗೆ
ಮೈಮರೆತು ಮಗ್ಗುಲಿಕ್ಕಿದ ಕರಿಮರಿಯ ತೆರಂ
ಗುರುವಿನ ಪದತಲದಿ ಶಿರಮಣಿದು ತಪೋಮಯದ
ಅಮಲ ಕೃತಿಯಾಗೆಸೆವನ್ ಲೋಕದ ಲೋಚನಕೆ.
ಪ್ರವಚನಗಳ ಭಾವ ಭಾರದಿಂ ದಿನದಿನಂ
ವಿಕಸನಗೊಳುತಿರ್ದಂ ಪ್ರೌಢವಟು ದಳವಿರಿದ
ಮಂದಾರ ಕುಸುಮದೊಲ್. ಅಂದಿನಾ ಭಾವನಾ
ಸಂಪುಟಂ ಬಿರುಕು ಬಿಟ್ಟು ಒಡೊಡೆದ ತೆರದಲಿ
ಮೆಲು ಮೆಲ್ಲನೆ ಅನುಕ್ರಮದೊಳ್ ದಿನಚರಿಯಲ್ಲಿ
ಕ್ರಮವತ್ ಜಪತಪಾದಿ ಸೇವೆಗಳ್ ಸಲ್ಲುವುವು
ಮನೋದಿಷ್ಟ ಸನ್ನಿಧಿಗೆ. ಜೊತೆಜೊತೆಗೆ ಆತ್ಮವತ್
ವಿವಾಹದ ವಿತೃಷ್ಣೆ ವೈರಾಗ್ಯ ತ್ಯಾಗಗಳ್
ಬಲಿತುವು ಜಲವುಣಿಸಿದ ಕದಳಿಸಸಿಯಂತೆವೊಲ್
ಭಗವಾನ್ ರಾಮಕೃಷ್ಣರುಂ ಒರ್ಮೆ ತಮ್ಮೊಳ್
ಯೋಚಿಸಿ ಪುನರ್ಯೋಚಿಸಿ ತರ್ಕದ ಸುಳಿಯಲ್ಲಿ

ಸುಳಿಸುತ್ತಿ ಶಿಷ್ಯನಿವನಂ ಪರಿಕಿಸಿ ಗುರುತರ
ಮೂಸೆಯೊಳ್ ಪುಟವಿಟ್ಟು ಅಪರಂಜಿಗೊಳಿಸದೆಯೆ
ಆಂತರಂಗಿಕ ಶಿಷ್ಯನೆಂದು ಸ್ಥಿರೀಕರಿಸಲಾಸಲ್ಲ
ಎಂಬ ತಮ್ಮಾತ್ಮ ನಿರ್ಣಯಕೆ ತಲೆ ಬಾಗಿದರ್.
ದಿನಗಳೆದುವು ಶಿಷ್ಯನ ಗಮನಾಗಮನ ನಿಚ್ಚ
ನಡೆದಿರ್ದುದು ಯಾಂತ್ರಿಕಮಯವಾಗಿ. ಆತನಾ
ಆಂತರ್ಯದ ಉದ್ಭಾವನೆಗೆ ದರ್ಪಣ ವಿಡಿವ
ಯೋಜನೆಯ ಹೂಡಿದರ್ ತಮ್ಮೊಳಗೆ ಗುರುವರಂ,
ಆರರಿಯದೊಲ್ ಸೂಕ್ಷ್ಮತರವಾಗಿ. ಅಂದಿನಾ
ಬೈಗುವೊಳ್ತು ರಂಜಿಸಿ ಮೆರೆದ ಹೊನ್ನ ಹೊಳೆಯಲಿ
ಮಿಂದು ಕೇಸರಿಯ ಶಾಬಕಮೆನೆ ಗಮಿಸಿದ ಸಿರಿ
ಶಿಷ್ಯ ನರೇಂದ್ರನಾಥಂ ಗುರುಗಳ ಕೊಠಡಿಗೈದು
ಶಿರಮಣಿದು ಮಂಡಿಸಿದನೆಕ್ಕಟಿಗೆ. ಗುರುವರ್ಯ
ಶ್ರೀರಾಮ ಕೃಷ್ಣರುಂ ಕಂಡುಕಾಣದಾವೊಲ್
ಮಿಣ್ಣನಿರ್ದು ಕಣ್ ತೆರೆದು ನೋಡದೆ ಕುಳಿತರ್
ಧ್ಯಾನ ಭಂಗಿಯಲಿ. ಇನ್ನೊರ್ಮೆ ಮತ್ತೊರ್ಮೆ ಸೈ
ಗೆಡಿಪನಿತು ಮತ್ತೆ ಮತ್ತೆ. ಅದೇ ತೆರಂ ತಾವ್
ನಿರ್ಲಕ್ಷ್ಯ ತೋರಿದರ್. ದೂರ ಕಲಿಕತ್ತೆಯಿಂ
ಆಗಮಿಸಿ ಪೊರಗಡೆಯಲಿ ಕಾದಿರ್ದು ಗುರುಗಳ
ಸತ್ಸಂಗ ದೊರೆಯದೆಯೆ ಪಿಂದಿರುಗಿ ಪೋಗಿಯುಂ
ಮರಳಿ ಮರಳಿ ಬಂದನ್ ಧೀರ ಧೀರೋತ್ತಮಾ!
ಗುರುದೇವನುಂ ಧ್ಯಾನಾವಸ್ಥಿತಿಯೊಳಿರ್ಪನ್
ಎಂದೆಂದು ಬಗೆದು ಮನದೊಳ್, ಪ್ರಾಂಗಣದಿ ಪೊಳ್ತು
ಕಳೆದು ಗೆಳೆಯ ಬಳಗದೊಡಂ ಮಾತಿನ ಬೆಳೆಯಂ
ಬೆಳೆದು ಮರಳಿ ಪೋದಪನ್ ನಗರಿಗೆ. ನರೇಂದ್ರಂ

ಬೇಸರಿಸಿದನಿಲ್ಲಂ. ಕಳೆದುವೆನಿತೊ ದಿನಗಳ್
ಗುರುಕುಲದ ಸಂಯಾತ್ರೆಯಲಿ; ಗುರುವರನ ದಿವ್ಯ
ತಪೋಮಯ ವದನಾರವಿಂದದವಲೋಕನದಿ
ಸಂತೃಪ್ತಿಯಂಬಡೆದು ಪೊರಗುಯ್ದು ಮಿತ್ರರಂ
ಕೂಡುವಂ; ವಿಚಾರ ವಿಮರ್ಶೆಯುಂ ನಡೆದಪುದು
ಮಿತ್ರವರ್ಗೀಯ ಕಿರುಕೂಟದಲಿ. ತರುವಾಯಿ,
ಮರಳುವಂ ದತ್ತ ಭವನಕೆ. ಶ್ರೀಗುರು ಮುಖದಿಂ
ನಲ್‌ವಾತುಗಳ್ ಪೊರಡದಿರೆ ನೊಂದು ನೋವುಂಡು
ಕೊರಗಿ ಕರಗಿದನೇಂ ತರುಣ? ಸೋಲ್ದು ಮೊಗದಿರುವಿ
ಪೋದನೆ? ಸಹನೆ ಭಕ್ತಿಗಳಿಂ ಗುರುವಿನ ಧ್ಯಾನ
ವಿಮುಖತೆಯ ಗಳಿಗೆಗಾಗಿ ಕಾದಿರ್ದನ್ ಧರ್ಮ
ನಿಷ್ಠೆಯ ಪೊದರ್‌ಗೂದಲಿನ ಶಿಷ್ಯ ಶಿರೋಮಣಿ!
ಗುರುದೇವ ರಾಮಕೃಷ್ಣ ಪರಮ ಹಂಸರುಂ
ಶಿಷ್ಯವರ್ಯನ ತಾಳ್ಮೆ ಭಕ್ತಿಗಳ್ ಕಂಡರಿದು
ತೋಷದಿಂ ಪರಮಾದರದಿಂ ಕರೆದು ಕೊಠಡಿಗೆ
ಬರಮಾಡಿ ನಲವಿಂ ನುಡಿಸಿದರ್ "ಎಲೆ, ವತ್ಸಾ!
ನಿನ್ನಂ ನಿರ್ಲಕ್ಷಿಸಿದೊಡಮಾನು ನೀನೆನ್ನಂ
ಅಲಕ್ಷಿಸದೆ ಬರುತ್ತಿಹೆ ಭಕ್ತಿವ್ರತ ನಿಷ್ಠೆಯಲಿ.
ನೀನಹುದು ಪ್ರಿಯ ಶಿಷ್ಯ. ಕಾಳೀ ಮಾತೆಯಾ
ಕೃಪೆಯುಂ ನಿನ್ನ ಮೇಲಿರ್ಕೆ ಬಾ, ಕುಳಿತುಕೋ."
ಗುರುದೇವನ ನಲ್ನುಡಿಗಳ್ ಮೊಳಗಿದುವು ಮತ್ತೆ
ಕರ್ಣ ಗಹ್ವರದಲಿ ಶುಭವಂ ಹಾರೈಸುವೊಲ್.
ಶಿಷ್ಯನ ಸಿತಸ್ಮಿತ ಮುಖಾರವಿಂದಂ ಅರಳಿ
ದಳವಿರಿದ ವಾಸಂತಿ ಹೂವಿನೊಲ್ ಭಾಸಣಿಸಿ
ಶಿಷ್ಯ ಭಾವವಂ ತೋರ್ದುದು ಕಣ್ಗೆ ಮುದ್ದಾಗಿ.

ನರೇಂದ್ರನಾಥದತ್ತಂ ಗುರುವಿಂಗೆ ಶಿರಮಣಿದು
ಹೂಮನದಲಿ ರಸಪುಷ್ಟಿಯ ಹಾಲ್ ಸಕ್ಕರೆಯು
ತುಂಬಿದೊಲ್ ಸವಿದನಿಯಲಿ ನುಡಿದಂ "ಗುರವರ್ಯ,
ನಿಮ್ಮಯಾ ಪ್ರವಚನಗಳ ಪ್ರಭಾವ ಎನ್ನ
ಮನವಂ ಸೆಳೆವುದು ಸೂಜಿಗಲ್ಲಿನ ಮಾಳ್ಕೆಯಲಿ
ಆಂ ನಿಮ್ಮ ಪರಮ ಭಕ್ತ."
ನಲವಿಂ ಕರ ಮುಗಿದ
ಬಳಿಕ ಮಂಡಿಸಿದನ್ ಬಳಿಯಲಿ. ಆ ಹದಿಹರೆಯ
ಉಕ್ಕಿ ಷೋಡಶಕಳೆ ಬೆಳಗುವ ಶಿಷ್ಯೋತ್ತಮನ
ಕಣ್ತುಂಬ ನೋಡುತ್ತೆ ಆನಂದ ತುಂದಿಲತೆ
ವೆರ್ಚಿ ಮೃದುನುಡಿಯಿಂ ಕೇಳಿಸಿದರ್ "ವತ್ಸಾ!
ನಿನ್ನಂ ಪರಿಕಿಸಲೆಂದಾಂ ಹೂಡಿದೆನ್ನೈ ಈ
ನಾಟಕಂ. ನಿನ್ನ ಸಹನೆ ಸೌಹಾರ್ದವನೆಲ್ಲ
ಒಂದೇ ಸಲಿಗೆ ಅಳೆದವೊಲಾಯ್ತು. ಪರಮ ಶಿಷ್ಯ
ನೀನಹುದು ಕಣಾ, ನಿನಗಿಹುದು ಭವ್ಯ ಭವಿಷ್ಯಂ.
"**ಜಿತೇನ ಲಭ್ಯತೇ ಸರಸ್ವತಿ:**"
ಮಾಯಾ ಜಗದೊಳ್ ಎಣೆಯಿಲ್ಲದಿಹ ಬಂಧಾನು
ಬಂಧಗಳ್ ವಜ್ರೋಪಮ ಕಠಿಣಾತಿಕಠಿಣಂ.
ಘನನಿಬಿಡ ಅಜ್ಞಾನ ತಿಮಿರಾಂಧಕಾರದಲಿ
ಸಿಲುಕಿ ತೊಳಲಿ ಬಳಲುವ ಮನಮತಿಗಳ ಚಪಲತೆ
ಮೇಣುಂ ವಿಧವಿಧ ಪ್ರಲೋಭನೆಗಳ ಕೂರ ಸೆಳೆತ
ಸಾಮಾನ್ಯಮೇ? ಶಿವನ ವಜ್ರ ಕುಠಾರೋಪಮ
ಆತ್ಮಶಕ್ತಿಯ ಬಲವು ಇಲ್ಲದಿರೆ ಸಾಧನೆಯ
ಶಕ್ತಿಯುಂ ವ್ಯರ್ಥ. ಗುರಿಯುಂ ವ್ಯರ್ಥ. ಸಿದ್ಧಿಯದು
ನಿಚ್ಚ ದೂರಾದ್ದೂರಂ.

ಮಹಾನ್ ಗುರು ವರೇಣ್ಯ
ಶ್ರೀರಾಮ ಕೃಷ್ಣ ಪರಮಹಂಸರ್ ಜಗದೋಳ್
ಸನಾತನ ಧರ್ಮೋದ್ಧರಣೆಗಾಗಿ ಸುಜ್ಞಾನ
ವೇತೃವಾಗಿ ಭಾರತ ಜನನಿಯ ಸುಪುತ್ರನಾಗಿ
ಸತಿ ಶಾರದಾಮಣಿಯ ಹೃತ್‌ದೇವನಾಗಿ, ಶಿಷ್ಯ
ಗಣದ ಮಹದ್‌ಗುರುವಾಗಿ, ದೇವೀ ಮಂದಿರದ
ಪರಮ ಅರ್ಚಕನಾಗಿ. ವಿದ್ಯಾ ಸರಸ್ವತಿಯ
ದಿವ್ಯಕಿಂಕರನಾಗಿ, ಮಹದ್ ವೇದ ವೇದಾಂಗ
ವಿದನಾಗಿ, ಸರ್ವಧರ್ಮ ಸಮನ್ವಯಾಚಾರ್ಯ
ತಾನಾಗಿ, ನರೇಂದ್ರನಾಥನ ಮದ್ಗುರುವಾಗಿ,
ಮಹಾಜ್ಞಾನಿಯಾಗಿ, ಸುಗುಣ ಬ್ರಹ್ಮಕೆ ಪಕ್ಕಾಗಿ,
ನಿರ್ಗುಣ ಬ್ರಹ್ಮದೊಲ್ ನಿಸ್ಪೃಹನಾಗಿ, ಸೂಕ್ಷ್ಮಾತಿ
ಸೂಕ್ಷ್ಮವಾಗಿ, ದೇವಿ ಭಕ್ತನಾಗಿ, ಧರ್ಮಕರ್ಮದ
ಯೋಗಿಯಾಗಿ, ಆಧ್ಯಾತ್ಮಿಕ ಗುರುಗಳಾಗಿ, ನಿತ್ಯವು
ಭೂಮ ವ್ಯಕ್ತಿಯಾಗಿ, ಅವತಾರ ಪುರುಷನಾಗಿ,
ವರ್ತಮಾನಯುಗದ ಧರ್ಮದರ್ಶಿಯು ತಾನಾಗಿ,
ಲೋಕ ಪ್ರಖ್ಯಾತನಾಮನಾಗಿ, ಜನಮನದಲಿ
ಅಖಂಡ ಗುರುತೇಜದೊಳ್ ನೆಲೆಗೊಂಡ ಅದ್ಭುತ
ಕಲಿಯುಗೀಯ ಏಕೈಕ ಗುರುವರ್ಯನೇ ಆದಂ
ಶ್ರೀರಾಮ ಕೃಷ್ಣ ಪರಮ ಹಂಸ ಮಹೋದಯಂ.
ಶಾಲೆಯೊಳ್ ಕಲಿಯದ ಬ್ರಾಹ್ಮಣ, ವೇದವನೋದದ
ಬ್ರಾಹ್ಮಣ, ಮುಂದೆ ಗುರುವಿಲ್ಲದ ಬ್ರಾಹ್ಮಣ, ಹಿಂದೆ
ಹಿರಿಯರಿಲ್ಲದ ಬ್ರಾಹ್ಮಣ, ತ್ಯಾಗಜೀವನದ ಕಲಿ
ಬ್ರಾಹ್ಮಣ, ತ್ರಿಲೋಕ ಜ್ಞಾನಿ ಬ್ರಾಹ್ಮಣ, ಧರ್ಮ
ಶಾಸ್ತ್ರಕೋವಿದ ಬ್ರಾಹ್ಮಣ, ಯುಗಾಚಾರ್ಯ ಸಿರಿ

ಬ್ರಾಹ್ಮಣ "**ತ್ರಿಗುಣಾತೀತಮನಂತಂಪರಂ**
ಬ್ರಹ್ಮಾಹಂ" ಎನಿಪ ವೇದದೈಶ್ವರ್ಯ ಘನನಿಧಿ
ಬ್ರಾಹ್ಮಣ, ಪ್ರಸಿದ್ಧ ಪ್ರವಾಣಿ ಬ್ರಾಹ್ಮಣ,
ನವಯುಗ ಪ್ರವರ್ತಕಾಚಾರ್ಯ ಬ್ರಾಹ್ಮಣಶ್ರೀ!

ಹರಿಃ ಓಂ ತತ್ ಸತ್

❊ ❊

ಅಷ್ಟಮೋಲ್ಲಾಸಂ

ಉದ್ಧರೇತ್ ಆತ್ಮನಾತ್ಮಾನಂ

ಪೂರ್ವೀ ದಿಗ್ ಭಿತ್ತಿಯ ನೀಲಿಮಾ ಪಟಲದಲಿ
ಬಾಲಾರುಣಂ ಬೆಳ್ ಮುಗಿಲ್ ದಿಣ್ಣೆಯನೇರೆ
ಬೆಳ್ಮುಗಿಲ್ ಕರ್ಮುಗಿಲ್ ಹೆಮ್ಮುಗಿಲ್ ಕೆಮ್ಮುಗಿಲ್
ಶಿಶುಗಳ್ ಕಲೆತು ಸುತ್ತಲುಂ ವರ್ಣವರ್ಣಾಂತ
ಭವ್ಯ ಪ್ರಭಾಳೆಯ ವಿರಚಿಸಿ ಗ್ರಹಕುಲ ತಿಲಕ
ಶಿರೋಮಣಿಯ ಆರಾಧಿಸಿ ಓಲೈಸಿ ಮೆರೆದುವು
ಸೌಂದರ್ಯ ಸೊಬಗಿನ ಸಂದೃಶ್ಯಮಾನದಾ
ಲೋಲುಪ್ತಿಯಲಿ. ತಣ್ಣನೆ ತನಿಯುಗುವ ತಂಪಿನ
ಸೊಂಪಿನ ಬನಿಯಿಂಪಿನ ವಾಯುಮಾನಮಿರ್ದುದು
ಲೋಕಮೋಹಕ ವೈಖರಿಯಲಿ. ಪಕ್ಷಿಕೋಟಿಯು
ಸುಪ್ರಭಾತ ಹಾಡಿ ಮುಗಿಸಿ ದಶದಿಶೆಗೆತ್ತಿರೆ
ಎಲ್ಲಿಯುಂ ಕಿರು ಸದ್ದು ಗದ್ದಲದ ಸೊಲ್ಲಿಲ್ಲ.
ನಿರ್ಜನ ನಿರಾತಂಕ ನೀರವತೆಗಳ ಮಧ್ಯೆ
"ಉದ್ಧರೇತ್ ಆತ್ಮನಾತ್ಮಾನಂ" ಎಂಬ ಉಲಿ
ಚಿರ ಸತ್ಯವಾಗಿ ಮಿಡಿಯುತಿದೆ ಎದೆಯ ನೆಲೆಯಲಿ
ಪದೇಪದೆ. ಆಲಿಸಾಲಿಸುತಲಿ ನಡಿಗೆ ಭರದಿ
ಸಾಗುತಿದೆ ಏಕ ನಿಷ್ಠೆಯಲಿ. ನರೇಂದ್ರನಾಥಂ
ಕೆಂಧೂಳಿ ಧೂಸರಿತ ಪಥವಿಡಿದು ನಡೆದಿರ್ದ
ನೇಕಾಂಗಿ. ನಡೆನಡೆದು ಕೆಂಧೂಳೊರೆದ ಕಾಲ್
ಕೆಂಪಾದುವು ಕೆಂಧೂಳೊತ್ತಿ. ಮುಂಪಥ ಕಳೆದು
ಭಾಗೀರಥೀ ನದಿಯ ತಟಿಗಿಳಿದು ಕೈಕಾಲ್
ಉದ್ದಿ ಉದ್ದಿ ತೊಳೆದು ಮುಖ ಮಜ್ಜನವಂಗೈದು

ಶುದ್ಧೀಕರಿಸಿ ದಕ್ಷಿಣೇಶ್ವರದ ಕಾಳಿಕಾ ಮಂದಿರದ
ಸಾಲ್ ಮೆಟ್ಟಿಲುಗಳಂ ಏರಿದಂ. ಕಾಳಿಕಾ
ಮಂದಿರದೊಳ್ ಅರ್ಚನೆಯ ಮಂತ್ರಗಳ ಘೋಷವು
ಮುಟ್ಟುತಿದೆ ಅಂತರಂಗಮಂ. ದೇವ ಗುರುವಿನ
ಆಗಮನದ ನಿರೀಕ್ಷೆಯೊಳ್ ಜಗಲಿಯಂಚಿನಲಿ
ಕಾಲ್ಮಡಿದು ಕುಳಿತು ಕಿವಿಗೊಟ್ಟಾಲೈಸಿದಂ ಗುರು
ದೇವನ ಕೊರಳ್ ತುಂಬಿ ಹರಿಯುತ್ತಿಹ ಪುರಾಣ
ಪ್ರಥಿತ ಶ್ಲೋಕಸಂಗೀತೆಯಂ. ಗುರುವಿನ ಭಕ್ತಿ
ರಸಪೂತ ಪೂಜಾವ್ರತವದು ಮುಗಿಯಿತ್ತು.
ಗುರುವರಂ ದೇವಿ ಮೂರ್ತಿಯ ಸೇವೆಯಂ ತೀರ್ಚಿ
ಪಾದ ಸನ್ನಿಧಿಗೆ ಉದ್ದಂಡ ನಮನಮಂ ಸಲಿಸಿ
ಕರಮುಗಿದು ಭಕ್ತಿಭಾವದಲಿ ಶಿರ ಮಣಿದು ಪೊರ
ಗೈದಾಗಳೆ ಗೃಹೀ ಭಕ್ತಜನರುಂ ನುರ್ಗಿ
ಬಂದರ್ ಗುರುವಿನ ದರ್ಶನ ಭಾಗ್ಯಮಂ ಬಯಸಿ.
ಗುರುವರಂ ಎಲ್ಲರೊಡಗೂಡಿ ಕೊಠಡಿಗೈದರ್.
ನೆಲಹಾಸಿನಮೇಲೆ ಎರಡು ಕಾಲ್ಗಳಂ ಮಡಿದು
ಕುಳಿತು, ಎಲ್ಲರಂ ಕುಳಿತುಕೊಳ್ಳಲ್ ಬೆಸಸಿದರ್,
ಬಹುಲ ಪ್ರೇಮಾನುರಾಗದಿಂ. ಭಕುತ ಜನಗಳ
ದರ್ಶನದಲಿ ಮನವರಳಿ ಸಂತಸದಿಂ ತಮ್ಮ
ಕೊರಳ್ ಧ್ವನಿಯುಂ ಹರಿಯ ಬಿಟ್ಟರ್. ಇಂತಿಂತು,

ಯಸ್ಮಿನ್ಸರ್ವ ಯತಸ್ಸರ್ವಂ
ಯಸ್ಸರ್ವಂ ಸರ್ವತಶ್ಚಯಂ ।
ಯಶ್ಚ ಸರ್ವಮಯೋ ದೇವಃ
ತಸ್ಮೈ ಸರ್ವಾತ್ಮನೇ ನಮಃ ॥

ತದನಂತರಂ ಹರಿಯಿತು ಪ್ರವಚನ ಧಾರಾ
ವಾಹಿ ಪೊಳ್ತು ಏರುವತನಕಂ. ಬಳಿಕಲ್ಲೆಲ್ಲ
ಭಕ್ತರ್ ಶಿರಮಣಿದು ಪೊರಮಟ್ಟರ್ ತಂತಮ್ಮ
ಮನೆಗಳ ಪಥವಿಡಿದು. ಗುರುದೇವಂ ಮಧ್ಯಾಹ್ನ
ಒದವಿರ್ದ ಬಿಡುವಿನಲಿ ಪರಮ ಶಿಷ್ಯ ನರೇಂದ್ರ
ದತ್ತನೊಡಗೂಡಿ ಪಂಚವಟಿ ಎಂಬ ಸ್ಥಲಂ
ಕುರಿತು ನಡೆದರ್. ಶ್ರೀವದನದಿಂ ಪೊನ್ನುಡಿಗಳ್
ಪೊಣ್ಮಿದುವಿಂತು "ವತ್ಸ! ಎನ್ನೊಳ್ ಕಠೋರತಮ ಸತ್
ಸಾಧನಾ ಸ್ಫೂರ್ತಿಯ ಅಲೌಕಿಕ ಶಕ್ತಿಯಿರ್ಪುದು
ಅಣಿಮಾದಿ ಅಷ್ಟಸಿದ್ಧಿಗಳ್ ಮನಗೂಡಿಹುದು.
ಅವೆನ್ನಯ ಆತ್ಮಗತಮಾಡೊಡಂ ಎನಗದರಿಂ
ಉಪಯೋಗಮೇನಿಲ್ಲಂ. ಜಗನ್ಮಾತೆಯ ಅನುಜ್ಞೆ
ಪಡೆದು ಎಲ್ಲ ಶಕ್ತಿಯ ಸಂಪದಂ ಸೂಕ್ತ ವಟು
ಮಹೋದಯನಿಂಗೆ ಧಾರೆಯೆರೆವ ಬೆಸನದೊಳಾಂ
ಮುಳುಗಿರ್ಪೆಂ. ನೀನೊಪ್ಪಿದೊಡೆ ನಿನಗವಂ ನೀಡಿ
ಆಂ ಧನ್ಯನಾದಪೆನ್. ನಿನಗಿದುಂ ಸಮ್ಮತವೆ?"
ಮಂದಹಾಸವಂ ಬೀರ್ದು ಪ್ರಸನ್ನ ಮುಖದಿಂ
ನೋಡಿದರ್ಯೆ ಭೂಮ ವ್ಯಕ್ತಿಯುಂ ತಾನ್ಯೆಸಿ. ಆ
ವಿಚಿತ್ರ ತನನ ತಾನವಂ ಬೀರ್ದ ಗಳಿಗೆಯುಂ
ಕೊರಳ್ಗಿತ್ತ ಉರುಳಿನೊಲ್ ತೋರಿಬರೆ ತರುಣಂ
ಗಳಿಗೆಯೊಂದು ಯೋಚಿಸಿ ಪರಾಮರಿಸಿ ತನ್ನೊಳ್,
ನಿವೇದಿಸಿದನಿಂತು "ಗುರುಗಳೆ, ಈವಗೆಯ ಪೊರ
ಶಕ್ತಿ ಸಮುದಯಗಳಿಂದೇನಪ್ಪುದು? ಬ್ರಹ್ಮ
ಸಾಕ್ಷಾತ್ಕಾರಕ್ಕಿದೆನಗೆ ಸಲ್ಪುದೇಂ?"
"ಇಲ್ಲ ಕಣಾ!

ಮುಂತೆ ಮುಂತೆ ಶಿವದರ್ಶನದ ಬಳಿಕ, ಜನಪದ
ಸೇವೆಗಿದು ಅನುಕೂಲಿಪ ಬಿಜ್ಜೆಯೆಂಬೆನಾಂ ನೀಂ
ಮನದಿ ತಿಳಿದು ನೋಡೆಲ್ಯೆ."
"ಆರ್ಯಾ, ಮೊದಲೆನಗೆ
ಶಿವದರ್ಶನಂ, ಮುಖ್ಯ. ಬಳಿಕಮಿತರ ದರ್ಶನದ
ನಿರ್ಣಯಂ. ಈಗಳೇನಂ ಒಲ್ಲೆ ನಾಂ" ಎಂದ
ಗಂಭೀರಗತಿಯ ಘನವಂತ. ಮತ್ತೆ ಯೋಚಿಸಿ
ಇಂತೆಂದನ್ ನರೇಂದ್ರ "ಗುರುದೇವ! ಎನಗೀಗಳಿವೆಲ್ಲಂ
ಕೈಗೂಡಿದೊಡೆ ನಿಚ್ಚದ ಧ್ಯೇಯದ ಕೊಂಡಿಗಳ್
ಕಳಚಿಬಿಳ್ದು ಅಸಾರ್ಥಕತೆಯ ಬೇರು ಬಲಿಯುತೆ
ಅಡ್ಡ ಹಾದಿಗೆನ್ನಂ ಎಳೆಯದೇಂ? ಅದರಿಂ
ಎನ್ನೆಲ್ಲ ಧ್ಯೇಯ ದಿವ್ಯಾಕಾಂಕ್ಷೆಗಳ್ ಅಳಿದು
ನಶಿಸಿ ಪೋಗವೇಂ?"
"ಮೆಚ್ಚಿದೆನ್! ಮೆಚ್ಚಿದೆನ್ ಕಣಾ!
ನಿನ್ನಯ ಸಮಯೋಚಿತ ಪರಿಜ್ಞಾನದದ್ಭುತಂ!
ಮುಂತೆ ಕಾಳಿಕಾದೇವಿಯುಂ ನಿನಗೆ ಹಿತಮಿಹ
ಸುಪಥವಂ ತೋರ್ದು ಮನ್ನಡೆಸುಗೆ. ನರೇಂದ್ರಾ!
"ಸ್ಮರೇನ್ನಿತ್ಯಂ ಸರ್ವ ಶುಭಂ."
ಮತ್ತದೇ ಹಿಂ
ಪಥವಿಡಿದು ಹಿನ್ನಡೆದರ್ ದೇಗುಲಂ ಗುರಿಗೊಂಡು
ಹಾದಿಯಾ ಇಕ್ಕೆಲಗಳಲಿ ಬೇರು ಬಿಟ್ಟು ಜಡಿ
ನಿಲ್ದ ಗಿಡು ಸಸ್ಯ ಮರಗಳ ವಿವಿಧ ವರ್ಣಗಳ್
ತಳಿರ್ ಶಿಖರಗಳ ಸಿಂಗರದಿಂ ಸುಶೋಭಿಸಿದ
ಭೂಜೇಶ ಕೀರ್ತಿಶಾಲಿಗಳ್ ಮೆರೆದಿರ್ದುವೆನೆ
ಪದಚಾರಣ ಹಿತಮಾಯ್ತು, ಪಚ್ಚ ಪಸುರ್ ಮೆರೆದ

ತಣ್ಣೆಳಲ ಪಸಲೆಯಲಿ, ತನಿಯಿಂಪಿನ ತಣ್ಣನೆ
ಸ್ವಾದಮಂ ಸವಿದು ತನುಮನಂ ತುಂಬಿ ನಡೆದಿರೆ
ಹಾದಿಗಡ್ಡೈಸಿದ ಕಾಲ್ವಾಯಿಯಂ ದಾಂಟಿದರೀರ್ವರ್.
“ಕೇಳ್ ನರೇಂದ್ರಾ! “**ಉದ್ಧರೇತ್ ಆತ್ಮನಾತ್ಮಾನಂ**”
ಎಂಬುದರ ಸತ್ಯಮಂ ಎಲ್ಲರರಿಯವೇಳ್ಕುಂ.
ಕಾಲಾನುಕಾಲದಿಂ ವೇದಋಷಿಗಳ್ ಇಂತು
ಹಿತವಾದವನಿತ್ತು ಪರಿಬೋಧಿಸಿ ನುಡಿಯಂತೆ
ನಡೆದು ಮೇಲ್ಪಂಕ್ತಿಯಲಿ ವಿರಾಜಿಸಿ ತಂತಮ್ಮ
ಪದ ಚಿನ್ಹೆಗಳನೊತ್ತಿಯೊತ್ತಿ ಪೋಗಿಹರಲ್ತೆ ?
ಅದನರಿದರಿದು ಅರ್ಥೈಸಲಾರದ ನಮ್ಮೊಳ್ಜನ
ಜಡಭರತ ತತ್ವವಂ ಮನಗೊಂಬ ಹುಂಬತನ
ಇಂದಿಗುಂ ಎಂದಿಗುಂ ಪ್ರಸ್ತುತಂ, ಎನಲೇನ್
ಪೇಳ್ವುದೈ? ಕೇಳ್ಳೈ ಈ ಉಪದೇಶ ದ್ರವ್ಯವಂ,

“ತ್ವರೋತ್ತಿಷ್ಟಶ್ರೇಷ್ಠಂ ಸುಯುಗಮಿಹ ಸೇದಿಷ್ಠಮಭಯಂ
ಸಕೃದೃಷ್ಟ್ವಾ ಪ್ರೇಷ್ಠಂ ಭುವನ ಪರಮೇಷ್ಠಂ ತವಪುರಾ ॥
ಯುಗೋಪಾಸ್ಯಂ ವಿಶ್ವಾಸ್ತುತ ಚರಣರೇಣುಂ ನರಹರಿಂ
ಕೃತಾರ್ಥತ್ವಂ ಯಾತು ಪ್ರಭವತು ಚ ಜೀವಃ ಸಪದಿತೇ ॥

“ವತ್ಸ! ಇಂತಿಂತಿಂತು ಬೋಧಪ್ರದ ಸಾಹಿತ್ಯ
ಭಂಡಾರ ಇರುತಿರಲ್ ನಮ್ಮೊಳ್ ಕೊರಮೆಲ್ಲಿಯದು
ಕಲಿಯೆ. ಮನುಕುಲದೊಳಾವ ಪುಣ್ಯವಶದಿಂದಲೊ
ಸಂಜನಿಸಿರುತೆ ಜಗಮರೆತು ಕಣ್ಮುಚ್ಚಿದೊಡೇನ್
ಭಾಗ್ಯಂ? ಮನದೆ ಯೋಚಿಸಿ ಪರಾಮರಿಸಿ ತಿಳಿವು
ಮೂಡಿಪುದೆ ಚರಮ ಸತ್ಯಂ.
ಪಿಂತೆ ಶಿಷ್ಯಜನ
ಗೋಷ್ಠಿಯಲಿ ಗುರುದೇವನೊರ್ಮೆ ಉಪನ್ಯಾಸ

ಗೈವ ಸಮಯದೊಳ್ "ಎಲೆ, ಶಿಷ್ಯರೇ, ನೀಮಿನ್ನು
ಸದ್ಗುರುಗಳೆಂದಾರನುಂ ಒಪ್ಪಿಕೊಂಬುವಾ
ಮುನ್ನಂ ಒಳಹೊರಗಂ ಪರಿಕಿಸದೆ ನಂಬದಿರಿ."
ಎಂದುದಂ ನೆನೆನೆನೆದು ಏಕಾಂತ ಗತಿಯಲ್ಲಿ
ತನ್ನೊಳ್ ಘನಚಿಂತಾವಲೋಕನದಲಿ ಮುಳುಗಿ
ಯೋಚಿಸುವರ್, ನಾಮಿಂತಿಂತು ಪರಿಕಿಸದೆಯೇ
ಗುರುದೇವನಂ ಮದ್ಗುರುವೆಂದೊಪ್ಪಿದುದು 'ಸರಿ'
ಎನಲುಂಟೆ? ಒರ್ಮೆಯಾದೊಡಮಾವ್ ಪ್ರಶ್ನೆಯಂ
ಕೇಳ್ದುದಿಲ್ಲಂ ಅವರುಲಿವ ಅಕ್ಕರಕ್ಕರಂ
ನಂಬಿ ಒಪ್ಪಿ ಮಾನಿಸಿ ಮನಗೊಳುವುದು ಸರಿಯೇಂ?
ಇಂತಿಂಥ ಪ್ರಶ್ನೆಗಳ್ ಏಳ್ದಪವು; ದಿನದಿನಂ
ನರೇಂದ್ರ ಘನಾಘನ ಚಿಂತನಾವೇಶದಲಿ
ಜಾನಿಸಿ ಗುರು ಶ್ರೀರಾಮ ಕೃಷ್ಣ ಪರಮಹಂಸ
ದೇವನಂ ಒರ್ಮೆ ಪರಿಕಿಸಿ ನೋಳ್ಪುದರೊಳ್
ತಪ್ಪಿಲ್ಲ. ಆನೊರ್ಮೆ ಪ್ರಯತ್ನಿಪುದೊಳ್ಳಿತು
ಎಂಬೊಂದು ನಿರ್ಣಯಕೆ ಶಿರಮಣಿದನ್ ಸ್ಫೂರ್ತಿಯ
ಕಿಡಿಯಾಗಿ. ಗುರುದೇವ ಶ್ರೀರಾಮ ಕೃಷ್ಣರುಂ
ಹೊನ್ನು ಮಣ್ಣುಗಳಂ ಸಮ್ಯಕ್ ದೃಷ್ಟಿ ಕೋನದಿಂ
ಕಂಡು ಭಾಗೀರಥಿ ನದಿಗೆಸೆದ ಮಹಾ ಧನ್ಯ
ಜೀವಿಗಳ್ ಎಂಬುದರ ಅರಿವಿರುತಿರಲದನುಂ
ತಾನೊರ್ಮೆ ಪರಿಕಿಪುದರೊಳ್ ತಪ್ಪು ಇಲ್ಲವೆನೆ
ಸೂಕ್ತ ಸಮಯದಲಿ ಪರಿಕಿಸಿದರಾಯ್ತು ಎಂಬುವ
ನಿರ್ಧಾರ ಮೂಡಿದುದು ಮನದೊಳ್. ನರೇಂದ್ರನುಂ
ವಿಚಾರಾತ್ಮಕ ವಿಶ್ವಸಂಪುಟದೊಳ್ ಮೆರೆದಂ.
ಆಧುನಿಕ ಗುರು ಯಾವತ್ಕಾಲಂ ಪ್ರಶಾಂತ

ಭಾವದಿಂ ತ್ಯಾಗಮಯ ಭಕ್ತಿಮಯ ಮೂರ್ತಿಯುಂ
ತಾನಾಗಿ ಬಾಳ್ವ ಧರ್ಮನಿಷ್ಠನಿರೆ ಏಗಳ್
ಸ್ವರ್ಣ ರೌಪ್ಯ ಸ್ಪರ್ಶಗಳಿಂದವರ ಶರೀರದ
ಸಂಪುಟಂ ಕಂಪಿಸಿ ಸೆಟೆದುಕೊಂಬುದು ಮಂಜಿನ
ಗಡ್ಡೆಯಂ ಒತ್ತಿದ ತೆರದಿ, ಎನಲವರ ನಿಸ್ಪೃಹ
ಸಂವಿಧಾನಕೆ ಸಾಕ್ಷಿ. ಆದೊಡಂ ಪರಿಕಿಸುವ
ಇಚ್ಚೆಯುಂ ಆತ್ಮ ಪ್ರೇರಿತಂ. ನೆನೆದದಂ ತನು
ಮನಂ ಗಂಭೀರ ಪುಳಕಮಾಯ್ತು ಸರಸದ ಕಿರು
ತುಂಟತನವೆರಸಿ. ಚಿಂತನಾವೇಶದಲಿ ಮೈ
ಮರೆತು ಪಿಂದಿರುಗಿದಂ ಧೀರವಟು ಪುಂಗವಂ.
ಕಲ್‌ಕತ್ತೆಯ ಜಡ ಜೀವನದ ಜಂಜಡದಲ್ಲಿ
ಕಳೆದುವು ದಿನಗಳ್, ವಾರಗಳ್ ಅನುಕ್ರಮದೊಳ್.
ಶಂಕೆ ಸಂದೇಹ ಭಕ್ತಿಗಳ್ ಸಂಮಿಶ್ರಣಂ
ತುಂಬಿದ ಶಿರೋಭಾರದ ಒತ್ತಡವ ಹೊರುವ
ನೆಲೆಯ ಬಲೆಯಲಿ ಸಿಲ್ಕಿರೆ, ಬಂಡಿಡಿವ ಪೂವಿನ
ಎರ್ದೆಯಂಚಿನೆಡೆಯೊಳ್ ಕುಳಿತು ನೀರಡಿಸಿರ್ದ
ಆರಡಿಯು ಬಂಡುಣಲ್ ಕಾತರಿಸಿ ಆಕರಿಸಿ
ಚಡಪಡಿಸಿದಂತಾಯ್ತು ವರ ಶಿಷ್ಯನಿಚ್ಛೆಯುಂ.
ಮುಂದೊರ್ದಿನಂ ನರೇಂದ್ರಂ ದಕ್ಷಿಣೇಶ್ವರಕೆ
ಬೀಸುಗಾಲ್ ಬೀಸಿ ನಡೆದಂ ಎಂದಿನ ತೆರದಲಿ.
ಒಳಪುಗುತ್ತೈತರೆ ಗುರುಕೊಠಡಿಗೆ ಗುರುವರ್ಯಂ
ಕಂಡುದಿಲ್ಲ, ಗರ್ಭಗುಡಿಯಲಿ ಅಂಗಣದಲಿ ಪೌಳಿ
ಮಂಟಪದಲಿ ಎಲ್ಲಿಯುಮವರಂ ಕಂಡು ಕಾಣದೆ
ಪೋಗೆ ನರೇಂದ್ರನಾಥಂ ಕೇಳಿದನ್ ಓರ್ವನಂ.
ಅವನೆಂದನೆಂತೆನೆ, "ಗುರುಗಳ್, ಕಲ್‌ಕತ್ತೆ ಕಡೆ

ಪಯಣ ಹೂಡಿದರ್ ಪೊಳ್ತು ಮೂಡುವ ಮುನ್ನಮೆಯೆ.
ಇನ್ನೇಂ ಅವರ್ ಪಿಂದಿರುಗುವ ಪೊಳ್ತು. ಇದೀಗ
ಪಿಂದಿರುಗಿ ಬಂದಪರ್..."

ಗುರುದೇವನಿರದ ಗುಡಿ ಬಣಬಣವೆನಿಸಿದತ್ತು.
ಅಲ್ಲಿಯೆ ನಸುವೊಳ್ತು ಪದಚಾರಣದಲಿ ಕಳೆದು
ಗುರುಗಳ ಕೊಠಡಿಗೈದನ್, ಚಾಪೆಯ ಮೇಲೊಂದು
ದುಪ್ಪಟಿಯ ಹಾಸು. ಸ್ವಚ್ಛಸುಂದರ ಒಳಕೊಠಡಿ. ೧೭
ಚಣದೊಳ್ ಒಳ ಜೇಬಿನ ನಾಣ್ಯವೊಂದಂ ತೆಗೆದು
ದುಪ್ಪಟಿಯ ಹಾಸಿನಡಿಯೊಳ್ ಹುದುಗಿಸಿ ಪೊರಗಡೆಯ
ಪ್ರಾಂಗಣದೊಳ್ ವಿಚರಿಸುತೆ ಗುರುದೇವನ
ಪ್ರತೀಕ್ಷೆಯೊಳಿರ್ದನ್. ಪೂಜೆಯುಂ ಮುಗಿದಿರಲ್
ಭಕ್ತಾದಿಗಳ ಗೊಂದಣವದಿಲ್ಲ. ನಿಶ್ಯಬ್ದ
ಶಾಂತಿಯಲಿ ಕಳೆಯಿತ್ತು ಪೊಳ್ತು. ಗುರುಗಳೈದರ್
ಕದಿಗುದಿಯಲಿ. ವದನದ ತುಂಬೆಲ್ಲ ಬೆಮರ್ ಹನಿ
ಹನಿಹನಿಗಳ್ ತುಂತುರ್ ತುಂತುರಾಗಿ ಮೂಡಿರೆ
ಮುಖಬಿಂಬದಲಿ ರವಿಕಿರಣಗಳ್ ಪ್ರತಿಫಲಿಸಿ
ಜಗಜಗಿಸಿತು ಬಜ್ಜರದ ಮೂರ್ತಿಯಂ ಹೋಲಿ! ೧೮
ಸಾಲು ಮೆಟ್ಟಿಲಂ ಏರುತ್ತೇರಿ ದೋತಿಧರ
ಬಂದರ್ಯೆ ಮೇಲೊಂದು ಬೆಳ್ಮಡಿಯ ಉತ್ತರೀಯ
ಹೊದ್ದು. ಹೊಂಪುಳಿಯೇಳಿಸುವ ಹೊನ್ನ ವರ್ಣದಿಂ
ಶೋಭಿಸುವ ವ್ಯಕ್ತಿ ಶೋಭೆ ಸೆಳೆದುದು ಮನವಂ.
ನರೇಂದ್ರನಂ ಕಂಡು ಹರ್ಷಿತ ವದನದಿಂದೆ
ಒಳಗೈದರ್, ಭಾವರಸ ಸ್ಫೂರ್ತಿಯಲಿ. ನರೇಂದ್ರಂ
ಪಿಂಬಾಲಿಸಿದಂ ಗುರು ದೇವನಂ. ಕೊಠಡಿಯೊಳ್
ಪದಾರ್ಪಣೆಗೈದು ಕುಳಿತರ್ ಕಾಲ್ಮಡಿದು ತಮ್ಮಯ

ನೆಲಹಾಸಿನ ಚಾಪೆಯಮೇಲೆ. ಆಕ್ಷಣಮೇ
ಮಿಡುಕಿ ಬಿಳ್ದು ತೆಕ್ಕನೆಳ್ದು ಹಾರಿದರ್ ಕೊಠಡಿಯ
ಬದಿಗೆ. ಶಿಷ್ಯ ನರೇಂದ್ರನಾಥಂ ಬಿರುಗಣ್ಣಿನ
ನೋಟವಂ ಬೀರಿದೊಡಂ ತಾನೇನರಿಯದವೊಲ್
ಮಿಣ್ಣನೆ ಗಮನಿಸಿದಂ ಗುರುಗಳ ಚಡಪಡಿಕೆಯ.
"ಇದೇನೈ? ಕುಳಿತುಕೊಂಬುವುದರೊಳ್ ಜಡಿಮುಳ್ಳಿನ
ಚುಚ್ಚು ಚುಚ್ಚಿತೆನ್ನಂ. ಎಲ್ಲಿಯದು ಈ ಕೂರ್ಮುಳ್ಳು?"
ಅದೆ ವೇಳೆಗಲ್ಲಿಗೈದ ಚಾಕರನುಂ ದುಪ್ಪಟಿ
ತೆಗೆದು ಕೊಡವಿದಂ ಇರುವೆಯಿರುವ ಸಂಕೆಯಿಂ.
ಒಡನೊಡನೆ ನಾಣ್ಯವದು ಹಾರಿ ಬಿಳ್ದು ಸಾರಿದುದು
ತನ್ನಿರುವನಾಗಳೇ. ಗುರು ಕಿಂಕರರೀರ್ವರ್
ನಿಟ್ಟಿಸಿದರ್ ಆ ವೆಳ್ಳಿಯ ನಾಣ್ಯಮಂ. ತುಂಟ
ಗುರು ನರೇಂದ್ರನಾಥಂ ಮಿಣ್ಣನೆ ತಲೆ ಬಾಗಿರೆ
ತುಟಿಗಳ್ ಬಿರಿಯದಾದುವು. ಗುರುದೇವನುಂ ಆ
ಕ್ಷಣದೊಳ್ ವಿಷಯಮರಿತು ಮೆಚ್ಚಿದರ್ ಶಿಷ್ಯನ
ಜಾಣ್ಮೆಯಂ ಮೇಣ್ ದಿಟ್ಟತನಮಂ.
ನರೇಂದ್ರಂ
ಗುರುಚಿತ್ತಮಂ ಪರೀಕ್ಷಣದ ಒರೆಗಲ್ಲಿಂಗೆ
ಹಚ್ಚಿದ ಪರಿಯಂ ನೆನೆನೆನೆದು ಮೋದದಿಂದಲಿ
ಕಿರುನಗೆಯ ಬೆಳುದಿಂಗಳ್‌ವೆಳಗಿ ಸರಿದಂ ಪೊರ
ಅಂಗಣಕೆ. ಮನಮತಿಗಳ್ ತುಂಬಿದವೊಲ್ ಅರಳೆ
ಹಗುರಾದುವು. ವಿಚಾರ ಕ್ರಾಂತತೆಯಲಿ ಮುಳುಗಿ
ಶತಪಥ ತಿರುಗಿದನ್. ನಸುಬೆಚ್ಚಗೆ ಹರವಿರ್ದ
ಪೊಂಬಿಸಿಲಿಗೆ ಮೈಗೊಡೆ ಮುಖಾಂಭೋಜದಲಿ ಎಳೆ
ಮುಗುಳ್ ಅರಳ್ವುದೊರ್ಮೆ. ಘನಗಂಭೀರತೆ ಮೂಡಿ

ಯೋಚಿಸುವನೊರ್ಮೆ, ಬೆಂಗದಿರನ ಸುರಸುಂದರ
ಪೆಂಪಿನೊಡನೆ ಬೆರೆತ ಪಡುವಣದೆಲರಿನ ತಂಪು
ಚೂತ ಪೂತ ಸುಮರಾಶಿಯ ಕಂಪು, ಪಚ್ಚನೆಯ
ಪಟ್ಟುಡೆಯನುಟ್ಟ ಸಸ್ಯರಾಜಿಯ ಸೊಂಪು ನವ
ನವೀನತೆಯ ಸತ್‌ಭಾವನೋತ್ಫುಲ್ಲ ಚಿತ್ರಂ
ಸ್ಮೃತಿಗೆ ಸುಳಿವ ಪೆಂಪು ಎಲ್ಲವುಂ ಒಗ್ಗೂಡಿ
ಹಸನಾಯ್ತು ತನ್ನ ಅಂಗೋಪಾಂಗದಲಿ ಸುತ್ತಿ
ಮುತ್ತಿ ಮುದ್ದಿಟ್ಟು ರಮಿಸುವ ತೆರದಿ.
ಸನ್ ಸಾವಿರ
ದೆಂಟನೂರೆಂಬತ್ತನಾಲ್ಕರಲಿ ಬಿ.ಎ. ಪದವಿ
ಪರೀಕ್ಷೆ ಮುಗಿದಿತ್ತು. ಬಿಡುವಿನ ದಿನಮಾನಗಳ್
ಸ್ವಚ್ಛಂದ ಸ್ವಾತಂತ್ರ್ಯವಂ ನೀಡಿ ತಣಿಸಿದುವು.
ತನುಮನಗಳಂ. ನರೇಂದ್ರನಾಥಂ ಗ್ರಂಥಗಳ
ಭಂಡಾರದಲಿ ಕುಳಿತು ಪೊಳ್ತು ಕಳೆದೊಡಮಲ್ಲಿ
ಮನೋಗತಿಗೆ ಸರಿಯಪ್ಪ ಪುರುಡಿನ ಕುಮ್ಮಕ್ಕು
ದೊರೆಯದಾಯ್ತು. ಅಂತಿಂತು ಪುಸ್ತಕ ಪಠಣವದು
ದಿನಚರಿಯ ಧ್ಯಾನಕೆ ಎನಿತೆನಿತೋ ಪೂರಕಂ.
ನರೇಂದ್ರನಾಥದತ್ತಂ ತಣ್ಣನೆಯ ತನಿಯುಗುವ
ಮುಂಜಾವದೊಳ್ ಎದ್ದು ಸಂಗೀತವಂ ಹಾಡಿ
ಕೊರಳ್ ಬಲಿಸಿ ಮನತಣಿಸಿ ಭಕ್ತಿರಸಪಾನದಿ
ಒಡಲ್ ತುಂಬುವನ್ ಬಳಿಕ ದೂರ ಬಯಲಿನಲ್ಲಿ
ಅಡ್ಡಾಡಿ ಪದಚಾರಣಂಗೈದು ಪಕ್ಷಿಗೊರಳಿನ
ಸುಪ್ರಭಾತವನಾಲೈಸಿ ಬಯಲೆಲರಿನ ತನಿಯ
ಸವಿದು ಮರಳುವನ್ ದತ್ತ ಭವನಕೆ. ದಿನದಿನಂ
ಹೊಂಚಿ ಹಂಚಿದ ಪೊಳ್ತಿನ ವ್ಯಯಂ ಚಣಪಿಂಚು

ಮುಂಚಾಗದವೊಲ್ ನಡೆವುದು ದಿನಚರಿ. ದಿನದಿನ
ಪ್ರತಿದಿನ ಒಂದಲ್ಲ ಒಂದೆಡೆಯ ವನಸ್ಥಲಿ
ಜಲಸ್ಥಲಿ ಪುಲಿನಸ್ಥಲಿ ಗಿರಿಸ್ಥಲಿಗಳೆಡೆಗೆ
ಬೇಟೆ. ಗೆಳೆಯರ ಕೂಟ ಸಾಯಂಸಮಯದ ಇನಿ
ಪೊಳ್ತಿನಲಿ ಜನಜೀವನದ ವಿಶೇಷಂಗಳ ಮನನಂ.
ಪ್ರಾಚೀನ ಮೇಣರ್ವಾಚೀನ ರೀತಿನೀತಿಯ
ವಿಶ್ಲೇಷಣೆ, ಭಾರತ ಜನನಿಯ ಪರಾಕ್ರಾಂತ
ಸಂಕಷ್ಟದ ಬರ್ದುಕು ಇತಿ ವಿಷಯಾವಳಿಗಳ
ಮೆಲುಕು. ಇವುಗಳಲಿಯೆ ಕಳೆವುದು ಪೊಳ್ತು ಅನುದಿನಂ.
ಪೂರ್ವದಿಶಾ ಭಿತ್ತಿಯ ರೋದೋಂತದೆಡೆಯಲಿ
ಪೂವಡಿಗಳುಷೆವೆಣ್ಣು ಕೆಂದುಟಿಯ ಬಿರಿಬಿರಿದು
ಕೆನ್ನೆಗೆಯು ಪೊಳೆಪೊಳೆದು ಹೊಂಗದಿರ್ಕೈಗಳಿಂದೆ
ಮಂಜುಹನಿ ಮುತ್ತುಗಳ ಸೇಸೆಯಂ ಸೂಸಿದಳ್
ವಸುಂಧರೆಯ ಸಿರಿಹಸುರಿನ ಪಟ್ಟುಡೆಯ ಮೇಲೆ.
ರವಿಕಿರಣ ಪ್ರತಿಫಲನದಿಂ ಮಿರುಮಿರುಗಿದುವು
ಹನಿಮುತ್ತುಗಳ ಬಜ್ಜರದ ಕಿಡಿಗಳಂ ಹೋಲಿ!
ಸುರ ಸುಂದರ ಪ್ರಾತಃಕಾಲೀನ ತಣ್ಣನೆಯ
ಶೀತಲತೆಯ ಶೈತ್ಯ ಕಳೆವ ಮುನ್ನಮೆ ಸಹಪಾಟಿ
ಬಂಧುವೊರ್ವನುಂ ನಂದದಿಂ ನೋಂಪಿಯಿಂ ಮೈ
ಕುಲುಕಿಸುತ ನೇಹವೇ ಮೈವೆತ್ತು ಬಂದವೊಲ್
ಆಗಮಿಸಿದನ್ ನರೇಂದ್ರುನಾ ಭವನ ದೇಶಕೆ.
ನರೇಂದ್ರುಂ ಗೆಳೆಯನಂ ಸ್ವಾಗತಿಸಿ ಬರಮಾಡಿ
ಒಳಮನೆಯೊಳ್ ಕೂಡಿಸಿ ಉಪಹಾರವನೀಯುತೆ
ಉಪಚರಿಸಿದನ್ ಸಾಂಪ್ರದಾಯಿಕ ಅತಿಥೇಯಂ
ತಾನಾಗಿ. ಬಳಿಕಲಾ ಸಹಾಧ್ಯಾಯಿಯಂ ಅನು

ನಯದಿಂ ಗೆಳೆಯ ನರೇಂದ್ರನಿಂಗೆ ಸವಿನಯದಲಿ
ಆಮಂತ್ರಣವನಿತ್ತು ನುಡಿಸಿದಂ "ನರೇಂದ್ರಾ,
ಇಂದೆಮ್ಮ ತೋಂಟದ ಎಲೆಮನೆಯೊಳ್ ಎನ್ನೆಲ್ಲ
ಗೆಳೆಯ ಮಂಡಲಿಗೆ ಮಂತಣಮಿತ್ತಿಹೆನೆನ್ ವನ
ಭೋಜನಕೆ." ಎಂದೆಂದು ತನ್ನೊಡನೆಯೇ ಪ್ರಾಣ
ಮಿತ್ರ ನರೇಂದ್ರನಂ ಎಳೆದೊಯ್ದಂ ಮಧ್ಯಾಹ್ನ
ಕಾಲೀನ ಔತಣದ ಕೂಟಕೆ. ಎಲೆಮನೆಯಾ
ಸುತ್ತಲುಂ ಫಲಪುಷ್ಪಗಳ ಗಿಡುಮರಂ ತುಂಬಿ
ಪಸುರುಕ್ಕುತಿರಲ್ ಶೋಭಾಯಮಾನಮಾದುದು
ಪರ್ಣಕುಟಿಯ ಸುಂದರ ದಾಣಂ. ಅನೇಕ ಜನ
ಗೆಳೆಯರ್ ನೆರೆದಿರೆ ಸಂತಸದ ಹೊನಲ್ ಹರಿಯಿತು
ನಲ್ವಾತುಗಳ ಬೆಳ್ನಗೆಯಂ ಸೂಸಿ. ಚಣಚಣಂ
ಕಳೆ ಕಟ್ಟಿತು, ಗೆಳೆಯರ ಕೂಟ. ಮತ್ತೆ ಭೂರೀ
ಭೋಜನಂ ಮುಗಿಯಿತು. ತರುವಾಯಿ, ನರೇಂದ್ರನಾ
ಸಂಗೀತದ ಸುಮನೋಹರ ಮೇಳ. ತಂಬೂರಿ
ಮದ್ದಲೆಯು ಮೊಳಗಿ ಶ್ರುತಿ ಗೂಡಿದುವು. ಭಕ್ತಿಯ
ರಸಧಾರೆ ಉಕ್ಕಿ ಹರಿವ ಭಜನಗೇಯಂಗಳ್
ಹರಿಯುತಿರೆ ಸರಾಗದಲಿ ಕಳೆಯಿತು ಸಿರಿವೊಳ್ತು.
"ಸ್ವರಸ್ಯ ಕಂಪೊ ಗಮಕಃ ಶ್ರೋತೃಚಿತ್ತ ಸುಖಾವಃ"
ಎಂಬವೊಲಾಯ್ತು ಸಂಗೀತ ಸುಧಾಲಹರಿಯ ಸಿರಿ
ಕಂಪು. ಇಂತಿಂತಿಂತು ಕಳೆಯುತಿರೆ ಇನಿವೊಳ್ತು
ದೂತನೊರ್ವಂ ಬೆಬ್ಬಳಿಸಿದ ಮನದಿಂ ನೊಂದು
ಬಿರುಗಾಳಿಯೊಲ್ ನುರ್ಗಿವಂದನ್ ಮನಮತಿಗಳ್
ಗತಿ ತಪ್ಪಿದಂತೆ! "ಹಾ ಇದೇನೈ?" ಕೇಳಿಸಿದರೆಲ್ಲರ್
ಒರ್ಮೆಗೇ ದನಿಯೆತ್ತಿ. ದೂತನಾರ್ತ ದನಿಯಲಿ

ಚೀರಿದಂ "ಅಯ್ಯೋ ದೇವರೇ! ಏನಾಗಿಹೋಯ್ತು?
ಆನೆಂತು ಉಸಿರಲಿ ಕಡು ದುಃಖದ ಬಾರ್ತೆಯಂ!
ಅಯ್ಯಯ್ಯೊ! ತಾಳೆನಾಂ ಮಾಣ್, ದೈವಂ ಕುರುಡು
ಕಣಾ! ಶುದ್ಧ ಕುರುಡು!"
ನರೇಂದ್ರಂ ಭಯ ಭರಿತ ದನಿಯಲ್ಲಿ ಕೇಳಿದಂ,
"ಏನ್ಯೆ ಇಂತು ಪುಲಾಪಿಸುತಿಹೆ? ಛಿಃ ಪೇಳದೇನ್!
ವಿಚಾರಂ? ಏನಾಯ್ತು ಬರಿದೆ ಪುಲಾಪಿಸುತೆ
ಎನ್ನನೇಕೆ ಪೇಚಿಗೆ ಸಿಕ್ಕಿಸುತಿಹೆ? ಪೇಳೆಲೆ,
ಏನಾಯ್ತು? ಏಂ ತೊಂದರೆ ಉಸಿರೈ ಬಾಯ್ಬಿಟ್ಟು!"
"ನರೇಂದ್ರ! ಇದು ಬಲು ಸಂಕಟದ ಸುದ್ದಿ! ಮನೆಯೊಳ್
ಬುದ್ಧಿಗಳ್ ಒರ್ ಚಣದಲ್ಲಿಯೆ ತೀರಿಕೊಂಡರ್!
ಚಳಿಯಿಲ್ಲ; ಜ್ವರವಿಲ್ಲ. ಏಂ ಕಾರಣಮೋ ಆ
ದೇವರೇ ಬಲ್ಲ ಕಣಾ!"
ಬಿಕ್ಕಿ ಬಿಕ್ಕಳುತೆ ಬಲು
ಕಷ್ಟಸಂಕಷ್ಟಗಳಿಂ ಒದರಿದ ಸುದ್ದಿಯಂ!
ಘೋರ ಸುದ್ದಿ ಅಪ್ಪಳಿಸಿತು ಬುದ್ಧಿಮಂಡಲಂ
ತಟ್ಟಿ. ಒರ್ಮೆಗೆ ಬರಸಿಡಿಲ್ ಬಡಿದೊಲಾಯ್ತು
ಎದೆ ಗುಂಡಿಗೆಯಮೇಲೆ! ನರೇಂದ್ರಂ ಎಲ್ಲವಂ
ಅಲ್ಲಲ್ಲಿಯೆ ಕೈವಿಟ್ಟು ನಿಬ್ಬೆರಗಾಗಿ ಮಿತ್ರ
ಮಂಡಲಿಯೊಡಗೂಡಿ ಕಲ್‌ಕತ್ತ ನಗರಿಯ
ಪಥವಿಡಿದು ನಡೆದನಾ ದತ್ತಭವನದ ಕಡೆಗೆ.
ನಡುವಗಲಿನ ಸುಡುವಿಸಿಲ್ ರಣರಣಿಸುತಿರ್ದುದು
ನಡುನೆತ್ತಿಯಮೇಲೆ. ಭರದಲಿ ನಡೆಯುತ್ತಿರುತಿರೆ
ಜವದಿ ಮುಟ್ಟಿದರ್ ಭವನಮಂ. ಜನ ರಾಶಿಯುಂ
ತುಂಬಿರ್ದುದು ಕಿಕ್ಕಿರಿದು. ಪಿತನ ಕಳೇವರಂ

ಒರಗಿರ್ದುದು ಪಲ್ಲಂಕದ ಮೇಲೆ. ದುಃಖಾಂತ
ಹೃದ್ಗಡಲ ಸಂಕಟದಲಿ ಕುಸಿದಿರ್ದಳ್ ಶ್ರೀ ಸತಿ
ಭುವನೇಶ್ವರೀದೇವಿ. ಅಕ್ಕ ತಮ್ಮಂದಿರುಗಳ
ಅಳುಗೋಳೆಸೆದುದು ಕಣ್ಗೆ. ಶೋಕವು ಮಡುಗಟ್ಟಿ
ಕಣ್‌ಕೊಳಗಳಲಿ ಅಶ್ರುಗಳು ಉದುರಿದುವು ತಟ
ಪಟನೆ. ತಾನೆಲ್ಲರಂ ಸೈಪುವನೊರ್ಮೆ, ಮಗದೊರ್ಮೆ
ಶೇಷ ಕರ್ತವ್ಯಭಾರಂ ನೆನೆದು ಚಿಂತನೆಯ
ವಿಚಾರದ ಕಡಲಲಿ ಮುಳುಂಗಿದಪನ್. ಅನನ್ಯ
ಕರುಣಾಯಿತ ಚಿತ್ರದ ನೋಟದಿಂ ಹೃನ್ಮನಂ
ಕರಗಿ ದ್ರವಿಸಿದುವೊ ಎನೆ ನರನರಗಳ್ ಶೀಳಿ
ಹೋದಂತೆ ಅರಳ್ದುವು. ನರೇಂದ್ರಂ ಮುಂಕಾರ್ಯ
ಭಾರಂ ನೆನೆದು ಚಿಂತೆಯ ಮನಃಕ್ಲೇಶಮಂ ಜಡಿ
ಕೊಡವಿ ಜಾಡಿಸಿದನ್.
                                    ಗಳಿಗೆಗಳಿಗೆಯೊತ್ತೊತ್ತಿ
ಮುಸ್ಸಂಜೆ ಕವಿಯಿತು. ಮಸುಗರ್ಪಿನ ಸೀರೆಯಂ
ಉಟ್ಟು ಮೆರೆದಳ್ ನಿಶಿಯ ಮಹಾರಾಣಿ. ಮೈಯೊಳ್
ಧರಿಸಿದಾಭರಣ ರಾಶಿಯೆ ತಾರೆಗಳೊ, ಕರ್ಪು
ಸೀರೆಯೋ ಗಗನ ನೀಲಿಮೆಯೋ, ಚೆಲ್ಲಾಡಿದಾ
ಚಿಕುರ ಕಂತೆ ಬೊಂತೆಗಳೆ ಕತ್ತಲೆಯ ಮೊತ್ತಮೊ
ಎಂಬವೊಲ್ ಭಾಸಣಿಸಿ ಕಳೆಯಿತಾ ನಿಡುರಾತ್ರಿ.
ಭವನದ ಉಸಿರ್ ಸೋಲ್ದು ಸೊಗಡಪ್ಪಿ ಬಿಳ್ಪಿರಲ್
ಕಟ್ಟಕಡೆಯಶ್ರುತರ್ಪಣಂ ಬಿಟ್ಟು ವಂಶದ
ಜೇಷ್ಠ ಕುವರನಾಗಿ ಮುಂದ್ಯೆದು ಶವಸಂಸ್ಕಾರಮಂ
ಪೂರೈಸಿದಂ ನರೇಂದ್ರನಾಥದತ್ತಂ. ಪಿತನಿರದ
ಭವನಂ ಬಣಬಣಿಸಿತು ನಿಜ ಭೂಷಣಂ ಕಳೆದು.

ರಾಜ ಮಂದಿರದೊಲ್ ಮೆರೆದಿರ್ದ ಭವನವದು
ದುಃಖಸಂಕಟದ ನೆಲೆ ಮಾತ್ರಮಲ್ಲದೆಯೆ ಕಡು
ಆರ್ಥಿಕ ದುರವಸ್ಥೆಗೆ ನಿಲ್ಮನೆಯು ತಾನಾಯ್ತು.
ಬಾಳ್ವದುಕು ಸುಟ್ಟುರಿದು ಕಟ್ಟುರಿಯ ರಾಶಿಯ್ಕೆಸಿ
ಕತ್ತರಿಗೊ ಕತ್ತಿಯಲುಗಿಗೊ ಕರಗಸದ ಬಾಯ್ಗೊ
ಒಡ್ಡಿದವೊಲಾಯ್ತು ಸಂಸಾರದ ಬವಣೆ. ಶುದ್ಧ
ಶೀತ ಕಿರಣ ಸ್ನಾತ ಸುಶುಭ್ರೋರ್ಣದಭ್ರುವಂ
ತೆಕ್ಕನೆ ಕರಿಯ ಕಾಲ ಮೇಘವಾವರಿಸುವೊಲ್
ಸಂಘಟಿಸಿದ ಸಂಕಷ್ಟದ ಕೋಟಲೆಯು ತುಂಬಿ
ತಳವೂರಿತು ಗೃಹವಲಯದಲಿ. ಮೊದಲ್ ನಾವ್
ಅರಿತು ತಿಳಿದಂತೆ ವಿಶ್ವನಾಥದತ್ತಂ ತನ್ನ
ಆರ್ಜನೆಯನಂದಂದಿಗೇ ತೀರ್ಚಿ ಬಿಡುವನೆನೆ
ಸಂಗ್ರಹಕೆ ಎಲ್ಲಿಯ ಅವಕಾಶಂ? ಎರ್ದೆಯೊಳ್
ಅತೀ ಧಾರಾಳತ್ವದ ಗಣಿಯಿರುತಿರೆ ಕರುಣೆ
ದಯೆಗಳ ಅಮೂಲ್ಯ ದ್ರವ್ಯ ತುಂಬಿರ್ದುದು ಮನದ
ರನ್ನ ಗಿಂಡಿಯಲಿ

ಸತಿ ಭುವನೇಶ್ವರೀದೇವಿ

ತಹತಹಿಸಿದಳ್ ಪತಿಯ ಉತ್ತರಕ್ರಿಯಾದಿಗಳ
ಕರ್ಮಕಾಂಡಕೆ ಹಣಕ್ಕೆಗೂಡದಿರಲ್; ಮುಂತೆ
ಏಂ ಗತಿಯೆನುತೆ ಬಗೆಯಲಿ ಚಿಂತೆಯು ಘನಿಸಿದುದು
ಹೆಪ್ಪಿಟ್ಟು ಮಾಳ್ಕೆಯಲಿ. ಎಂತೊ ಏನೋ ಕಳೆಯಿತು
ಉತ್ತರಕ್ರಿಯಾದಿಗಳ ಅದ್ಭುತ ಕಾಂಡಂ! ಇಂ
ಮುಂತೇಂ? ಪ್ರಶ್ನೆಯದು ಅದ್ಭುತವಾಗಿ ಬೆಳೆಯಿತ್ತು
ಭರಿಸಲಾರದ ತೆರದಿ. ಆವಾವ ಬಗೆಯೊಳೋ
ಕಳೆದುವು ದಿನಮಾನಂ. ತಾಯ ಕಂಬನಿ ಕಡಲ್

ಸೋಸೋರಿ ಬರಿದಾಯ್ತು. ಜೀವನ ಪಥದಲಿ ತಡೆ
ಗಟ್ಟೆಯಾಗಿರುತಿರ್ದ ಪೆರ್ಬಂಡೆಯಂ ಝಾಡಿಸುವ
ಗತಿ ತಿಳಿಯದಾಯ್ತು. ಅನ್ನೆಬರಮೆಲ್ಲವುಂ ಗರಿ
ಹಗುರವಾಗಿ, ಸರಳ ಸಲಿಲವಾಗಿ ಕಂಡಿರ್ದ
ಬದುಕು ಮಣಭಾರವಾಯ್ತು. ಜೇಷ್ಠಪುತ್ರ ನರೇಂದ್ರ
ನಾಥಂ ಭವಸಾಗರದ ಅಲೆಗಳೊಡಂ ನುರ್ಗಿ
ಈಸಿ ಜೈಸುವೊಡೆ ಹೋರಾಟಕಿಳಿದಂ. ಜಗದ
ವಿಕೃತ ಕರಾಳ ರೂಪು ನಲಿವುದು ಕಣ್ಗಳ
ಮುಂತೆ. ತನಗೊಂದು ಚಾಕರಿಗಾಗಿ ಸರಕಾರಿ
ಕಚೇರಿಯ ಬಾಗಿಲಿಂ ಬಾಗಿಲಿಗೆ ಅಲೆ ಅಲೆವ
ದುರ್ಗತಿಯೊದವಿತು. ಪಿತನ ಮರಣದ ದುಃಖವುಂ
ಆರುವಾ ಮುನ್ನಮೆ ಕೆಲಸದ ಬೇಟೆಯೆನೆ ಮನ
ಮತಿಗಳ್ ಮುದುಡಿದುವು. ಅಲಕ್ಷಿಸುವುದೆನೆ ಬೇರೆ
ಗತಿಯಿಲ್ಲವಾಯಿತ್ತು. ಮುಂದೆ ನರೇಂದ್ರನ ಲೇಖ
ಉಲ್ಲೇಖಗಳ್ ಹರಿದ ರೀತಿ ಇಂತಿಹುದುಃ "ಅಂದು,
ಆ ತಕ್ಷಣಮೇ ಇಂತೊಂದು ದುರ್ಗತಿಗೆತ್ತು
ಪಾಡುಪಡುವೆನೆಂದರಿದೆನಿಲ್ಲಂ. ಕಾಲ್ಗಳಿಗೆ
ಜೋಡುಗಳಿರಲಿಲ್ಲಂ. ಹೊಟ್ಟೆಗಿಲ್ಲವಾಯಿತು
ಹಿಡಿಗೂಳು. ರಣರಣಿಪ ಸುಡುಬಿಸಿಲ್ ನೆತ್ತಿಯಲಿ.
ಪ್ರೌಢಾರುಣನ ಘನ ನಿದಾಘಮಯ ತೀಕ್ಷ್ಣಾತಪ
ಸ್ನಾತ ದೇಹ ಸಂಪುಟ ಸುಟ್ಟು ಕಟ್ಟುರಿಯಾಗೆ
ಪರಿತಪಿಸುವುದು ಜೀವಕಣ. ಸ್ವೇದ ಬಿಂದುಗಳ್
ಬಸಿದು ತೊಪ್ಪನೆ ತೊಯ್ದುದು ತೊಟ್ಟಿಹ
ಉಡುಪುಗಳ್. ಕೆಲವೊರ್ಮೆ ಮಿತ್ರರುಂ ಬೆಂಬಲಿಸಿ
ಪಂಬಲಿಸಿ ಬರುತಿರ್ದರೆನ್ನೊಡಂ. ಆವಾವ

ಮನೀಷಿಯುಮೆನಗೆ ಕರುಣೆದೋರುವುದಿರಲಿ, ಕಟು
ಕಠಿಣ ಮನದ ಕುಟುಕಿಗಳ್ ದರ್ಪದಿಂ ಮೇಣ್
ವಕ್ರೋಕ್ತಿಗಳಂ ಖಂಡಿಸಿ ಪೊರಗೆ ದಬ್ಬಿ ಕದ
ಮುಚ್ಚಿ ಕೊಂಬುವ ಹೀನ ಧೀರತನವಂ
ತೋರಲೇಂ ಹೇಸಲಿಲ್ಲಂ. ನಿರ್ದಯೆ ತೋರ್ಪುದು
ರೋಷದ ಅಟಾಟೋಪಮಂ. ಎಲ್ಲೆಡೆಗಳಲ್ಲಿ
ಕಣ್ಗೆಸೆದುದು ಸ್ವಾರ್ಥವೆ ಪರಮಾರ್ಥ ಎಂಬಂತೆ.
ನಿರ್ದಾಕ್ಷಿಣ್ಯದ ಚಬುಕಿನೇಟುಗಳ್ ತಿಂದೆ. ಅತಿ
ದರ್ಪದೋರಣೆಗಳಂ ಕಂಡೆ. ಮಾನವೀಯತೆ
ಎಲ್ಲಿಯುಂ ಕಾಣದಾಯ್ತು. ಎನ್ನ ಬಿಜ್ಜೆಯಂ
ಗಣಿಸಿದವರಿಲ್ಲ. ಮನಕರಗಿ ಮರುಗಿದರಿಲ್ಲ.
ಮನನೊಂದು ತನುಬಳಲಿರೆ ಬೇಸತ್ತ ಮಿತ್ರರ
ಮಾನಿಸುತೆ, ಉಬ್ಬೆಗಂ ಬಡುತಿರ್ದರಿಗೆ ಬರಿದೆ
ಸಹಜಗತಿಯಲಿ ನೆವವ ನೊರೆದು ಆನಿರ್ದೆನಾ
ಪ್ರಾಣಮಯ ಚಲನಮಯ ಚಿಂತನಾಮಯಮೆನಿಪ್ಪ
ಕಾರ್ಯರಂಗದಲಿ. ಅನ್ನೆಬರಂ ಎನಗೆ ಅಮಿತ
ಸಹಕಾರವನೀಯುತಲಿರ್ದ ಸಹಾಧ್ಯಾಯಿಗಳ್
ಅನುಕ್ರಮವಾಗಿ ದೂರದೂರ ಸರಿದು ಪೋಗಿ
ಕಣ್ಮರೆಸಿದರ್. ದುಃಖ ದಾರಿದ್ರ್ಯವೊಂದೆನ್ನ
ಬೆಂಬಿಡದೆ ಬೆಂಬಲಿಸಿ ನಿಂದತ್ತು ಒಡಲಿಂಗೆ
ದುಳ್ಳುರಿಯು ತಾನಾಗಿ. ಒರ್ಮೆ, ಕೆಲಸದ ಬೇಂಟೆ
ರಾಟೆಯಲಿ ಸುಳಿಸುತ್ತಿ ಬೇಸತ್ತು ತನುಸೋತು
ಕಾಲ್ಸೋತು ಅಕ್ಬರ್‌ಲೋನಿ ಸ್ಮಾರಕ ಸ್ತೂಪದಾ
ಎಡೆಯಲ್ಲಿ ಬೇರೂರಿ ನಿಂದ ಭೂಜೇಶಶಿವ
ಬೀಸಿವೀಸಿದ ಬೃಹದ್ ಶಾಖೋಪಶಾಖೆಯ

ತಣ್ಣೆಳಲ್ ಕೈವೀಸಿ ಕರೆಯೆ ತಲದಲಿ ಇರ್ದ
ಗರಿಗಲ್ಲಿನ ಪೀಠದಲಿ ಮಂಡಿಸಿದೆನ್. ಸುಡು
ಬಿಸಿಲಿನ ಕಡುವೇಗೆಗೆ ತಡೆಯೊಡ್ಡೆ ಹಾಯೆನಿಸಿ
ಮುಖದ ಬೆವರ್ ಒರಿಸಿದೆ, ಒರಿಸಿದೆ ಮನದ ಸೋಲ್
ತೊಡೆಯುವಂದದಿ. ಮತ್ತೆ ಮುಖ ಮೈಗಳ್ ಬೆಮರ್ದು
ಮಜ್ಜನದ ವೈಭವದಲಿ ಮೈಗಂಟಿದುವು ಉಟ್ಟ
ಬಟ್ಟೆಗಳ್. ಅದೇ ವೇಳೆಗಲ್ಲಿಗೆ ಗಮಿಸಿದಾ
ಹಳೆ ಹಳೆಯ ಗೆಳೆಯನೊರ್ವನುಂ ಬಳಿಯಲಿ ಕುಳಿತು
'ಪರಮಾತ್ಮ ಬಲು ಕೃಪಾ ಸಾಗರನೆ ವಲಂ' ಎಂಬ
ಪರಮಾರ್ಥ ಉಕ್ಕುವ ವರ ಸಂಗೀತೆಯೊಂದಂ
ಹಾಡಿದನ್ ಭಕ್ತಿಭಾವವಂ ಸ್ಫುರಿಸಿ. ಎನ್ನ
ಮನವಂ ತಣಿಸಲೆಂದವಂ ಹಾಡಿದುದರೊಳೇಂ
ಸಂಕೆಯುಮಿನಿತಿಲ್ಲಂ. ಆದೊಡದು ಎನ್ನನುಂ
ಕೂರ್ಮುಳ್ಳಿನೊಲ್ ಚುಚ್ಚಿ ಘಾಸಿವಡಿಸಿತು. ಒಡನೆ
ಕೆರಳಿ ಕೆಂಗಿಡಿಯಾಗಿ ಚೀರಿದೆನೆನ್ "ಅಯ್ಯಾ
ಸಾಕುಮಾಡೈ. ನಿನ್ನಯ ಸಂಗೀತೆಯಂ. ಆನ್
ಕೇಳಲಾರೆ! ತಾಳಲಾರೆ!"
ಅವನೆನ್ನನುಂ ಸಂತೈಸೆ
ಪ್ರಯತ್ನಿಸಿದನ್. ಅವನ ಉದ್ದೇಶ ಒಳ್ಳಿತೇ
ಇರ್ದೊಡಂ ಎನಗದು ಶಿರೋಭಾರವಾಗಿಯೇ
ತೋರ್ದತ್ತು, ಅಸಹಾಯಕತೆಯ ಬೇಗೆಯಲಿ ನೆರೆ
ಬೇಯ್ದು ಸುಕುಟುಂಬದ ನೆನವಿನಿಂದೆಮ ರೋಷದ
ಕಟ್ಟೆಯೊಡೆದು ಕೋಡಿವರಿಯಿತು. ತೀವ್ರತರದಲಿ
ಘರ್ಜಿಸಿದೆನೆನ್ "ಸಾಕು, ನಿಲ್ಲಿಸು! ಆನಿದಂ
ಕೇಳಲಾರೆ. ಶ್ರೀಮಂತ ವರ್ಗಕಿದು ಸಲ್ವುದು.

ಇಂಪಾಗಿ ಸೊಂಪಾಗಿ. ಎನಗಿದು ಕಠಿಣ ಕ್ರೂರ
ಕಠೋರಮಯಂ! ಎನ್ನ ತಿವಿದು ಪರಿಹಾಸ್ಯದಲಿ
ಕೊಲ್ವ ಸಾಧನ ಕಣಾ! ಕಠಿಣಾತಿಕಠಿಣಮೀ
ಬದುಕು ಬಾಳು!
ಆ ಮಿತ್ರ ಅವಮಾನಿತನಾಗಿ
ಪಡಿಮೊಗದಿಂ ಪೊರವಂಟನಲ್ಲಿಂದೆ. ಯೋಚಿಸಿದೆ,
ದೈವ–ಜಗತ್ ಕಹಿಯಾಗಿ ಮಿಥ್ಯೆಯಾ ಅನನ್ಯ
ಶತ್ರುವಾಗಿ ತೋರ್ದುವು. ತಮೋಗುಣಗಳ್ ಗೂಡಿ
ನಿಲ್ದ ವಿಕೃತತೂಪ ಹಲ್ಕಿರಿಯುತೆ ಸುತ್ತ
ಮುತ್ತ ನಲಿದಾಡಿದುದು ಒಡಲಿಂಗೆ ಕಿಚ್ಚಿಡುವ
ಪಾಂಗಿನಲಿ. ಕಳೆದುವು ಗಳಿಗೆಗಳ್. ಕೂರ್ಮುಳ್ಳು
ಚುಚ್ಚಿ ಕೋರೈಸುವ ತೆರದಿ ಕಣ್ ಮುಗಿದು ಚಿಂತೆಯ
ಆವೇಶದಲಿ ತೇಲಿ ತೇಲಾಡಿ ಮೈಮರೆತೆ.
ಜಗತ್ ದೂರವಾಯ್ತು. ಕುಟುಂಬ ದೂರವಾಯಿತು.
ಭಾವನಾ ಲೋಕವೇ ಕಕ್ಕಸದ ಗಣಿಯಾಯ್ತು.
ಉರುಳಿತು ನಿಡುಪೊಳ್ತು. ನೆರೆ ಸುಯ್ಯುತೆ ಬೀಸಿತ್ತು
ಪುಷ್ಪಗಂಧಗಾಳಿ. ಮುಗಿದ ಕಣ್, ಮುಗಿದ ಮನಂ,
ಆನೇನ್ ಅರಿಯದಾದೆ. ಪೊಳ್ತೆಂತುರುಳಿತೋ
ಖಗಗಾನವದೆಂತು ಹರಿದು ಮುಗಿಬಗಿಯಾಯ್ತೋ
ನಿಶಿಯೆಂತಡರಿತೋ ಬೆಳಕೆಂತು ಮೂಡಿತೋ
ಅರಿಯದೊಲ್ ಪಗಲಿರುಳ್ ಕಳಿದುವು ಸರಾಗದಿಂ.
ಚೆಂಬಳಕು ಕಣ್ಗೆಮುತ್ತಿ ಎಚ್ಚೆತ್ತು ನೋಡಲ್
ಮುಂಬಕ್ಕಿಗಳ ಪ್ರಾರ್ಥನಾ ಹುದ ಮೊಳಗಿದುದು
ಹೃನ್ಮನಂ ತಣಿಪುವೊಲ್ ರಾಗಾನುರಾಗದಲಿ.
ಎನ್ನೊಳಗೊಳಗೇ ತೀವ್ರ ಯೋಚನೆಯ ಆಳದಲಿ

ಮುಳುಗಿದೆನ್. ಕುಬೇರನ ದಿಙ್ನಗರಿಯೆಡೆಯಿಂದೆ
ಒಯ್ಯನೊಯ್ಯನೆ ಸುಯ್ದು ಸುಯ್ಯುತಲೈದ ಮಂದ
ಮಾರುತಂ ಮೈಮನಗಳಂ ಮುದ್ದಿಸಿಯುಂ ಮತಿ
ತಣಿಯದಾಯ್ತು. ಒಡಲ್ ತುಂಬದಾಯ್ತು. ಮರದೆಲೆಗಳ
ನಡುನಡುವೆ ತೂರಿಬಹ ಬಿಸಿಲ್ ಕೋಲುಗಳು ಎಡೆ
ಎಡೆಯಲ್ಲಿ ನೆರಳು ಬೆಳಕುಗಳ ಚೆಂಬಲೆಗಳಂ
ನೆಯ್ದಿರ್ದುವು ಉಂಗುರ ಉಂಗುರದ ರೂಪಿನಲಿ.
ಪೊಳ್ತುರುಳುರುಳಿ ಸುವರ್ಣಮುಖಿ ರವಿ ಮೈದೋರಿ
ಮೇಲೇರಿದಂ. ನೋಡು ನೋಡುತ್ತೆ ಅಲ್ಲಿಂದ
ಪೊರಮಟ್ಟೆನ್ ಗೃಹಾಭಿಮುಖವಾಗಿ. ಮನದಲಿ
ಪುರಾಣ ಪ್ರಥಿತ ಶ್ಲೋಕವೊಂದು ಮೂಡಿ ಉಣ್ಮಿತು
ಬಲುದೀನದುಲಿಯಲ್ಲಿ. ಎನ್ನಿಚ್ಚೆಯಂ ಮೀರಿ
ಹೊಮ್ಮಿದುದೊ ಎನಲ್ಕೆ ಚಡಪಡಿಸಿದೆ ಚಿಂತೆಯಲಿ.

"ನಿಶ್ವಾಸೇ ನಹಿ ವಿಶ್ವಾಸಃ
ಕದಾರುದ್ಧೋ ಭವಿಷ್ಯತಿ ।
ಕೀರ್ತನೀಯ ಮತೋ ಬಾಲ್ಯಾದ್
ಹರೇರ್ನಾಮೈವ ಕೇವಲಮ್ ॥"

ಆದೊಡೇಂ ಆಂಗೈದ ಧ್ಯಾನ ಭಕ್ತಿಯ ಫಲಮ್
ಬಡತನದ ಉಂಬಳಿ; ಎನಿಸಿದುದು, ಹಲಹಲವು
ಯೋಚನೆಗಳ ಸುಳಿಯಲಿ ಸಿಲ್ಕಿ ಕೆಮ್ಮನಿರದಾಂ
ಮನದೊಳ್ ಗುನುಗಿದೆ ಕೆಲವು ಸಂಗೀತೆಯಂ ಪಥ
ಗಮನದೊಳ್. ಮತಿಭ್ರಮಣೆಯೊ ಚಿಂತನಾ ಭ್ರಮೆಯೊ
ಮುಸುಗಿ ಹೆಡೆಮುರಿಗಟ್ಟಿದೊಲ್ ಗಭೀರವಾಗಿರೆ
ಪಥಗೆಡದೆ ಮುಂಬರಿದುದೇ ವಿಶೇಷ ಎಂಬೆ ನಾಂ.
ದೂರ ದಿಗಂತ ತಟಾಂತ ಲಗ್ನದಲಿ ಜೃಂಭಿಸುತೆ

ಉಜ್ವಲೋಜ್ವಲ ಬಾಲಾರುಣಂ ಮೂಡುವೆಟ್ಟಿನ
ಉದಯ ಚೂಡದಲಿ ರುಕ್ಮರಾಗದ ರೂವಿನಲಿ
ಕ್ರಕಚಿತ ರೇಖೆಯಂ ಎರ ತೊಡಗಿದುದು ಬೆಳ್
ಮುಗಿಲ್ ದಿಣ್ಣೆಯ ಮೇಲೆ. ಮಿನ್ನೆ, ಸಂನ್ಯಾಸಮಂ
ಸ್ವೀಕರಿಸಿ ದೇಶಾಂತರಿಯಾದೆನ್ನ ಬೊಪ್ಪನ
ನೆನಹು ಮೂಡಿತು ಮನದಿ. ಆ ಮಹೋದಯನವೊಲ್
ಆನ್ ಸಂನ್ಯಾಸಮಂ ಸ್ವೀಕರಿಪುದೊಳ್ಳಿತೆಂಬ
ಮನೋಭಾವದಲಿ ಮುಟ್ಟಿದೆ ಭವನದ ಬಾಗಿಲ್.
ಮನದಿಚ್ಚೆಯ ಬಹಿರಂಗಗೊಳಿಸದೆ ಸುದಿನಮಂ
ಬಲವಂದು ಸೂಕ್ಷ್ಮವಾಗಿ ಎದುರುನೋಡತೊಡಗಿದೆ
ಭಾವನಾ ಸಮುದ್ರದಲಿ ಮುಳುಗಿ. ಅದೇ ದಿನಂ
ಗುರುದೇವನುಂ ಕಲಿಕತ್ತೆಗೆ ಬರಲಿಹನೆಂದು
ತಿಳಿದು ಬರಲ್ ಅದೊರ್ ಶುಭಕರ ಸುದ್ದಿಯಾಯಿತು
ಕರ್ಣಗವ್ಹರಗಳಿಂಗೆ. ಗುರ್ವಾಶೀರ್ವಾದ
ಮೇಣೀಶ್ವರ ಅನುಗ್ರಹ ಕೈಗೂಡೆ ಸಾಲ್ಗುಂ
ಎನಿಸಿ ಪ್ರಾರ್ಥಿಸಿದೆನೆನ್. ಮನಂ ಮಣಿಯುವುದೊರ್ಮೆ
ಮುನಿವುದೊರ್ಮೆ. ಬಳಲುವುದೊರ್ಮೆ ತಿಣುಕುವುದೊರ್ಮೆ.
“ಬಾಲ್ಯದಾರಭ್ಯಮಿಂತೊಂದು ದುರ್ಬರಮಾದ
ದಿನಗಳಂ ಕಂಡರಿದೆನಿಲ್ಲ. ದಾರಿದ್ರ್ಯಕರ
ದುರ್ಯೋಗ ಕಾಡುತಿರ್ದುದೆನ್ನ ರಾಹು ಕೇತುವೊಲ್.
ಅನುದಿನದ ಉಣಿಸಿಂಗೆ ಗತಿಯಿಲ್ಲದೊಲ್ ಕಠಿಣ
ಬಡತನ ಬೆಳೆದತ್ತು. ಸಕಲೈಶ್ವರ್ಯಸಮೃದ್ಧ
ದತ್ತಭವನದೊಳಿಂದು ದಾರಿದ್ರ್ಯದೇವತೆಯ
ಉತ್ತಾಲ ನರ್ತನದ ಪರಿತಾಪ. ಕೆಲವೊರ್ಮೆ
ಮನೆಯೊಳ್ ಉಣಿಸಿಗೆ ಕೊರಮಿರುತಿರಲ್ ಅಮ್ಮನಿಗೆ

ಗಣೆಯರೆನ್ನನುಂ ಕರೆದಿಹರೆನುತೆ ಪೊರಗುಯ್ದು
ಬರಿ ಹೊಟ್ಟೆಯೊಳ್ ಪಿಂದಿರುಗುತಿರ್ದೆನ್, ಅಮ್ಮನ
ಅರಿವಿಂಗೆ ಬಾರದೊಲ್. ಮೇಣಾತ್ಮಗೌರವಕೆ
ಧಕ್ಕೆಯನಿನಿತು ತಾರದೊಲ್. ಎನಿತೆನಿತೊ ಕಾಲ
ಮಾನಮಿಂತೆ ಕಳೆಯಿತು. ಹಸಿವು ತೃಷೆ ಸಂಕಟ
ಮನಃಕ್ಲೇಷಂಗಳೆನ್ನ ನಿಚ್ಚ ಸಂಗಾತಿಗಳಾದುವು.
ಕೆಲವೊರ್ಮೆ ಶ್ರೀಮಂತ ಮಿತ್ರರೆಮ್ಮ ಸಂಗೀತ
ಸಾಹಿತ್ಯದಭಿರುಚಿಯಲಿ ಮನಭೋಜನಕೆಂದು
ಎಳೆದೊಯ್ವರ್. ಅವರೊಡನೆ ಸಂತಸದುಲ್ಲಸದ
ಭಾವದಿಂ ಹಾಡಿ ಪಾಡಿ ಮಿತ್ರವೃಂದಮಂ
ತಣಿಸುತಿರ್ದೆನ್. ಮನದ ಪರಿತಾಪದ ಗುಟ್ಟಂ
ರಟ್ಟುಗೊಳಿಸದೆ ನಗೆಯ ಮುಖವಾಡಮಂ ತೊಟ್ಟು.
ಅದೆಂತೋ ಎನ್ನೊರ್ವ ಸಿರಿವಂತ ನೇಹಿಗಂ
ಅರಿತೆನ್ನ ದುರವಸ್ಥೆಯಂ ಅಮ್ಮಂಗೆ ಅಪ್ಪಿಪ್ಪು
ಹಣವಂ ಕಳಿಪತೊಡಗಿದಂ, ಪೆಸರ್ ತಿಳಿಪದೆಯೆ.
ಅದರಿಂದೆನಿತೋ ಉಪಕಾರವಾಯ್ತೆಮ್ಮ ಬಾಳ್
ಬದುಕಿನ ರಥದ ಮುನ್ನಡೆಗೆ. ಇದೊರ್ ದೈವದಾ
ಕೃಪೆಯೆಂಬುದದು ಸತ್ಯಂ.
ಎನ್ನ ಮಿತ್ರರೊಳ್
ಕೆಲರ್ ಕಟುಕೆಟ್ಟ ಬಿಜ್ಜೆಯಿಂ ಅರ್ಥಸಾಧನೆಯ
ಹಾದಿಯಂ ಕಂಡುಕೊಂಡಿರ್ದರ್. ಅದೆಗುಂಪಿಗೆ
ಎನ್ನನೆಳೆಯಲ್ ಸರ್ವಥಾ ಪ್ರಯತ್ನಿಸಿ ಕಾಡಿ
"**ಕಾಂಚಾಣಂ ಕಾರ್ಯಸಿದ್ಧಿ!**" ಎಂದೆನುತೆ ಬಲವಂದು
ಹಣದಾಸೆಯಂ ತೋರಿದರ್. ಇಂ ಕೆಲರೆಮ್ಮ ಕಷ್ಟ
ಪರಿಸ್ಥಿತಿಯಂ ಕಂಡು ಮರುಗಿದರ್ ಎಮಗಾಗಿ.

ಮೇಣೊರ್ವ ಶ್ರೀಮಂತ ಸುಂದರಿಯುಮೆನ್ನನುಂ
ಸೆಳೆದು ದುರ್ಮಾರ್ಗ ಪ್ರವರ್ತಕಗೊಳಿಸುವೊಂದು
ದುರುದ್ದೇಶದಿಂ ಧನ ಸಹಾಯಗೈಯಲೆಂದು
ಮುಂದೈದಳ್! ಇನ್ನೊರ್ವ ಲಲನೆಯುಂ ಮುಂದೈದು
ಪ್ರಲೋಭನೆಯ ಜಾಲಮಂ ಬೀಸಿದಳ್! ಒಂದೆ
ಎರಡೆ? ಮೂರೆ? ಬಗೆಬಗೆಯ ಲೋಭಮೋಹಗಳ್
ಮಿಂಚಿನೊಲ್ ಹೊಂಚಿ ಕಾಡಿದುವೆನ್ನ ಸುಳಿಸುತ್ತಿ.
ಅಂತಪ್ಪ ಮಾಯೆಗಳ ಪಾಶಕೆ ಸಿಲುಕದುಳಿದು
ಬರ್ದುಕಿದುದೆನ್ನ ಗುರುವಿನ ಕೃಪೆಯಲ್ಲದೇನಲ್ಲಂ.
ಇಂತಿಂತು ಘನವಾದ ಭಂಗಮೊದವಿ ಬಂದಿರೆ
ಇಷ್ಟದೈವ ಈಶ್ವರನೊಳಿರ್ದೆನ್ನ ನಂಬುಗೆ
ಅಳಿಯದುಳಿದುದು ಆವ ಜನ್ಮದ ಸುಕೃತಿಯೊ!
ಅನುದಿನಂ ಸೆಜ್ಜೆಯುಂ ಬಿಟ್ಟೇಳುವ ಮುನ್ನಂ
"ಓಂ ಶಿವಾಯ ನಮಃ! ಓಂ ಶಿವಾಯ ನಮಃ"
ಎಂದಾಂ ಶಿವಧ್ಯಾನಗೈಯದೆಯೆ ಬಿಡೆಂ. ಇಂತು
ಎನ್ನಯ ಶಿವಸ್ಮರಣೆಯಂ ಕಂಡರಿದ ಅಮ್ಮ
ತಮ್ಮೊಂದು ದುಃಖ ದುಮ್ಮಾನದೊತ್ತಡದಿಂದೆ
ಮನಗೆಟ್ಟವೊಲ್ ನೊಂದು ನುಡಿದಳಿಂತು - "ವತ್ಸಾ!
ಸಾಕೈ ಈವಗೆಯ ಪ್ರಲಾಪ! ಬಾಲ್ಯದಿಂದಲಿ
'ಈಶ್ವರ' ಎನುತೊರಲುತಿಹೆ! ಆ ಶಿವನಿರುತಿರಲ್
ಎಮ್ಮಗೋಳನೇಕೆ ಕೇಳಂ?"
ಆ ನುಡಿಗಳಿಂ
ಪಿಂದೊರ್ಮೆ ಈಶ್ವರ ಚಂದ್ರವಿದ್ಯಾಸಾಗರಂ
ನುಡಿದಿರ್ದ ಅರ್ಥಪೂರ್ಣ ನುಡಿಗಳ್ ಮೆಲ್ಲನೆಯ
ಕಿವಿಗಳಲಿ ಮರ್ಮರಿಸಿದುವು 'ಈಶ್ವರನಿಪ್ಪುದು

ಸಹಜಮಿರೆ ಆತನೊಳ್ ಕರುಣೆ ದಯೆ ಧರ್ಮಗಳ್
ಲುಪ್ತಮಾದುದೇಕೆ? ಭುವಿಯೊಳ್ ಈ ಪರಿ ಜನರ್
ಉದರ ಪೋಷಣೆಯುಮಿಲ್ಲದೆ ಸಾಯ್ವುದು ತರವೇಂ?"
ಆ ರಿಕ್ತ ಪರಿಹಾಸ್ಯದ ಮಾತುಗಳೆನ್ನಯ ಎದೆಗುಡಿಯಲಿ
ಮರ್ಮರಿಸಿದುವು ಮತ್ತೆ ಮತ್ತೆ. ಮನದಲಿ ನೊಂದು
ನೋಯುತ್ತೆ ಈಶ್ವರನನು ನಿಂದಿಸಿದೆನೆನ್. ಆ
ಸಂಧಿಗ್ಧ ಕಡು ಕ್ಲಿಷ್ಟ ಸಮಯಮಂ ಹೊಂಚಿರ್ದ
ಮಾಳ್ಕೆಯಲಿ ಸಂಶಯ ಪಿಶಾಚಿಯೆನ್ನದೆ ಗುಡಿಯಂ
ಬೊಕ್ಕು ವ್ಯಾಪಿಸಿ ವಾಸ್ತವ್ಯ ಹೂಡಿದತ್ತು ದೃಢವಾಗಿ.
ಅನುದಿನದ ರುದ್ರು ಗಂಭೀರತಮ ಜುಗುಪ್ಸಾ
ತಾಪಗಳ ಕಿರುಕುಳಂ ಮನಂಗೆಡಿಸಲುರೆ ಆಂ
ಅನುಮಾನದ ಸುಳಿಯಲಿ ಸಿಲ್ಕಿ ಮನಬಿಚ್ಚಿಯೇ
ಒದರಿದೆನ್ "ಈಶ್ವರನೆ ಇಲ್ಲ! ಅವನಿರ್ದೊಡಂ
ಅವನಿಂದೆ ಎಮಗೇನ್ ಆಗದು. ಅವನಂ ಮಿಗೆ
ಪೂಜಿಸುತೆ ಕರೆಕರೆದು ಬೇಡಿ ಭಕ್ತಿರಸವಂ
ಸೂಸುವುದರೊಳ್ ಆದಪುದೇನಿಲ್ಲಂ. ಭಕ್ತಿ
ಎಂದೊರಲ್ವುದು ಮರುಳ್ತನ!" ಜುಗುಪ್ಸೆ ನಿರಾಸೆ
ಪರಿತಾಪಗಳ ಗಣಿಯಾಗಿ ವಾದಿಸತೊಡಗಿದೆ.
ತರುವಾಯಿ, ಅದರಿಂ ಎಣೆಯಿರದ ಗಜಿಬಿಜಿಯಾ
ಗುಲ್ಲು ಹಬ್ಬಿದುದು ಊರೊಳ್. ಆನೊರ್ವ ನಾಸ್ತಿಕ
ಕುಡುಕ ದುರ್ಬುದ್ಧಿ ಪ್ರಖ್ಯಾತ ಸ್ತ್ರೀಲೋಲ ಎನೆ
ಅಸಹ್ಯಕರ ಡಂಗೂರ ಹೊಯ್ದರ್ ಊರ ಜನ!
ಎನೆಗಿನ್ನಿನಿತು ರೇಗಿತು. ನೆನೆಗುದಿಯಲಿ ಎನ್ನ
ಹೃದಯ ಬೆಂದು ಬೇಯತೊಡಗಿರುತಿರೆ ಸಿಟ್ಟಿನಿಂ
ಚೀರಿದೆ "ಕುಡುಕತನ ನಾಸ್ತಿಕವಾದ ದುಃಖಮಯ

ಪ್ರಪಂಚದೊಳೆಮಗೆ ಸುಖವೊದಗಿಸುವೊಡೆ ನಿಜದಿಂ
ದುರ್ನೀತಿಯೆ ಲೇಸು!"
ಜನಜನಿತ ಮಾದುದು ಬಿಸಿ
ಬಿಸಿ ಸುದ್ದಿ. ಅತ್ತಲಿತ್ತಲ್ ಹರಡಿ ಹಬ್ಬಿ ಗುರು
ದೇವನಾ ಕರ್ಣಕುಂಡಲಿನಿಗೂ ಮುಟ್ಟಿತದು
ಎಲ್ಲ ಶಿಷ್ಯರಿಂದೆ ಮೇಣ್ ಗೃಹೀಭಕ್ತರಿಂದೆ
ಗುರುವಿನೆಡೆಯಿಂ ಕೆಲರ್ ಎನ್ನಬಳಿಗೈದು "ಸುದ್ದಿ
ಇದುಂ ನಿಜವೇ?" ಎನಲ್ ಎನ್ನಾತ್ಮಗೌರವಕೆ
ಭಂಗಮೊದವಿದ ಪರಿಯಲಿ ಬಿತ್ತರಿಸಿದೆನಾನ್
"ಕೇಳ್, ನರಕದ ಭಯದಲಿ ಶಿವನಂ ಒಲ್ಸೈಸುತೆ
ಆರಾಧಿಪುದು ಹೇಡಿತನಮಲ್ಲದೆ ಬೇರಲ್ಲ.
ಈಶನಿಹುದು ಸುಳ್ಳಿನೊಳ್ ಹೆಣೆದ ಪರಮಕಂತೆ!
ಪಾಶ್ಚಾತ್ಯ ತತ್ತ್ವಜ್ಞರ ನಾಸ್ತಿಕವಾದವೇ
ಸತ್ಯ!" ಎನುತಾಂ ವಾದಿಸುತವರ ಮನಂಗೆಡಿಸಿ
ಕಂಗೆಡಿಸಿದೆನ್. ಆಗಳೇಂ ಅವರ ಕಳವಳ
ತಳಮಳಗಳ ಆವೇಗದ ಪರಿಯ? ಆಸೆಂತು
ಸಂಪೂರ್ಣ ಕೆಟ್ಟುಹೋದೆನೆಂದೆಂದು ಭಾವಿಸಿ
ಹತಾಶ ಮನದಿಂ ನೊಂದು ಬೆಂದು ಬೇವಾಗಿ
ಪಿಮ್ಮರಳಿದರ್ ಗುರುವಿನೆಡೆಗೆ. ಬಳಿಕಲಾನೆನ್ನ
ಚೆಲ್ಲಾಟದ ಪುರುಡಿಂಗೆ ನಲಿನಲಿದೆ. ಮೇಣ್
ಗುರುದೇವ ನೆನ್ನ ಉದ್ಧಟತನಂ ನಂಬಿದೊಡೆ
ಕುಪಿತನಾದಪನೆಂದು ಪರಿಭಾವಿಸಿ ಯೋಚಿಸಿ
ವಿಚಿತ್ರತರ ಧರ್ಮ ಮುನಿಸಿನಿಂದೆದೆಯ ಕಡಲ್
ಕುದಿಕುದಿಯೆ ಸೋಲ್ದುದೆನ್ನ ಜೀವಕಣ. ಮತ್ತಂ
ವಿಚಾರಾಕ್ರಾಂತಿಯಲಿ ಮುಳುಗಿ ಜಗಮಂ ಮರೆತೆ.

ಚಿಂತೆಯ ಹಿರಿ ಕೀಟ ಕೊರೆಯುತಿರ್ದುದು ಗುಂಗಿಯ
ತೆರದಿ. ಮನದ ಪರಿತಾಪಯುಕ್ತ ಉಸಿರಿನ ಸುಡು
ಗಾವು ತಟ್ಟಿತು ಎದೆಯ ಬನಕೆ ಕಿಚ್ಚಿಡುವಂತೆ.
ತದೇಕಾಂತ ಚಿಂತನೆಯಲಿ ಮುಳುಗಿರೆ ವಿಷಯಂ
ಬಗೆಹರಿಯದಾಯ್ತು. ಶಿವ ನಿರ್ಜೀವಿ. ಅವನಿಂದೆ
ಏನಾದೀತು ? ಅವನಂ ನೆರೆನಂಬಿ ಬೇಡುವುದು
ಸುವ್ಯರ್ಥಂ. ಭಕ್ತಿಯೆಂಬುದು ಬೆಮೆಯುಮಲ್ಲದೇಂ
ಅಲ್ಲಂ. ವಿಧಿಬರೆದ ಲಿಪಿಯಂ ಅಳಿಸಲುಂಟೇ?
ಇಂತಿಂತು ವಿಚಾರಾಂತದೋಹನದೊಳ್ ನಿಚ್ಚ
ನೆಗಳ್ದಿಪೆನೆನ್ನ ಮನವಂ. ಕಳೆದಪವು ಗಳಿಗೆ
ಗಳಿಗೆಗಳ್ ಮನಕೆಟುಕದ ಪರಿಯಲಿ. ಸೃಷ್ಟಿಸ್ಥಿತಿ
ಸೂತ್ರಂಗಳಂ ಬಿಗಿವಿಡಿದು ನಡೆಯಿಪ ವಿರಾಟ್
ಜಗಚ್ಛಕ್ತಿಯದ್ಭುತ ಶಕ್ತಿಯಾ ಕರ್ಮ ಕಾಂಡಂ
ನೆನೆನೆನೆದು ತನ್ನೊಂದು ಕಿರಿ ಬಾಳ್ಗಡಲ್ ಈಸಿ
ದಾಂಟುವುದು ಮಹತ್ತರಮೇನಲ್ಲ. ಎಂಬ ಚಿರ
ಸತ್ಯ ಮಿಂಚಿದುದು ಮನದಲಿ ತಟ್ಟನೆ ಕತ್ತಲೆ
ದಾಣದೊಳ್ ದೀಪವಂ ಬೆಳಗಿಸಿದ ಮಾಳ್ಕೆಯಲಿ.
ಕಳೆದುವಿಂತೆ ಕೆಲದಿನಮಾನಗಳ್. ಗುರುದೇವ
ಶ್ರೀರಾಮಕೃಷ್ಣರುಂ ಎನ್ನೀ ಮನೋಗತಿಯ
ವಿಚಿತ್ರಪರಿವರ್ತನೆಯಂ ಅರಿದು ಮನಕದಂ
ತಾರದೆಯೆ ಉದಾಸೀನ ಭಾವದೊಳ್ ಮಿಣ್ಣನೆ
ತಿರಸ್ಕರಿಸಿ ಶಿಷ್ಯರಿಗೆ ಒಗಟಿನ ಮುದ್ದೆಯೊಲ್
ತಾನಿರ್ದುದು ತಿಳಿದುಬರಲ್ ಮೂಕ ವಿಸ್ಮಿತತೆ
ಮೆರೆದುದು ಮನದಿ. ಸಹಾಧ್ಯಾಯಿ ಭವನಾಥನುಂ
ಎನ್ನಪದೆಶೆಯಂ ಕುರಿತು ಗುರುವರ್ಯನೆದುರ್ಗೆ

ಕಂಬನಿಗರೆಯುತೆ ಬಣ್ಣಿಸಿದೊಡಮದಂ ಕಿಂಚಿತ್
ನಂಬದ ಗುರುದೇವಂ ಕಿರುಮುನಿಸಿಂ ''ಅಯ್ಯ ಭವ,
ನೀನಿದ ನಂಬಿದೊಡೆ ಆನ್ ನಂಬಲುಂಟೆ ? ಬಿಡು,
ಬಿಡು. ಇದೆಲ್ಲಂ ಅಪಾರ್ಥಂ.'' ಗುರುವಚನಗಳಂ
ಕೇಳ್ದು ಮನಮತಿತಣಿದೊಡಂ ತನ್ನನುಂ ತಾನ್
ತಣಿಸಲಾರದೆಯೆ ಭವನಾಥನುಂ ವಿಷಯಮಂ
ಮತ್ತೆ ಮನಗೆಟ್ಟವೊಲ್ ಸಮರ್ಥಿಸಲುರೆ ಅಮಿತ
ಕ್ಲೇಶದಿಂ ಶ್ರೀರಾಮಕೃಷ್ಣರುಂ ಕುಪಿತಗೊಳೆ,
''ಮೂರ್ಖ ! ನೀನೆನಗೇನ್ ಪೇಳದಿರ್. ಜಗನ್ಮಾತೆ
ಎನಗೆಲ್ಲವನೊರೆದಿಹಳ್, ಇದೆಲ್ಲವುಂ ಬರೀ
ಸುಳ್ಳುಸುಳ್ಳೆ ಹೆಣೆದೊಂದು ಕಂತೆಯು ಮಾತ್ರಮೆಂದು !
ಎನಗೊತ್ತು, ನೀನದಂ ಅರಿತುಕೊಂಡೊಡೆ ದುಃಖ
ಇನಿತಿಲ್ಲ ಯೋಚಿಸಿ ತಿಳಿ !''
ಗುರುದೇವನ ದಿಟ್ಟ
ವ್ಯಾಖ್ಯಾನಮೆನಗೆ ತಿಳಿದುಬರೆ ತೋಷಾಶ್ಚರ್ಯಂ
ಒಗ್ಗೂಡಿ ಬೆಚ್ಚಿ ನೆಚ್ಚಿದುದು ಮನವೆನ್ನ. ಅದೆ
ವಿಷಯವಾಹಿಯಲಿ ಮುಳುಗಿ ಗುರುದೇವನ ಎದೆಯ
ಬನದಲಿ ಮರಿಹಕ್ಕಿಯೆನೆ ಹಾರಿ ಕುಣಿದು ನಲಿದೆ.
ಈ ಪರಿಯ ಸಮಾಧಾನಮಂ ಆನೆಲ್ಲಿಯುಂ
ಕಂಡೆನಿಲ್ಲಂ. ಕೇಳ್ದು ಅರಿದೆನಿಲ್ಲಂ. ಮಾತು
ಉಡುಗಿದೊಳ್ ಮೂಲವಿಸ್ಮಿತನಾದೆನ್. ಮನಂ
ಬಿಸಿಲಟ್ಟಿದ ಮಂಜಿನೊಲ್ ಕರಂಗಿ ನೀರಾಗಿ
ಹರಿಯಿತು ನರನಾಡಿಗಳ್ ಕೊರೆದು ಕೋರೈಸುವಂತೆ.
ಮೂಕನಾದೆನ್ ಮತ್ತಾಂ, ತುಷ್ಟನಾದೆನ್.
ಭವನಾಥನುಂ ಗುರುವಿನ ಮುಂತೆ ಮನಃಕ್ಲೇಷಂ

ಮೂಡಿ ದುಃಖದುಮ್ಮಾನದಿಂ ಕಂಬನಿಗರೆಯುತೆ
ಎನ್ನೆಲ್ಲ ದುರದೃಷ್ಟಕರ ವಿಚಾರಮಂ ಮರು
ಪ್ರಸ್ತಾಪಿಸಿ ಅಳಲಿರೆ ಗುರುದೇವನುಂ ರೋಷ
ಕುಪಿತ ವದನಾರವಿಂದದಿಂ "ಕೇಳ್ ಭವಾ! ನೀಂ
ಇಂತು ತಲೆಕೆಡಿಸಿಕೊಳ್ಳಲೇಕೈ? ಮನಂನೊಂದು
ನೋಯದೆಯೆ ಮಿಣ್ಣನಿರ್ ಕಾಳೀ ಜಗನ್ಮಾತೆ
ಎನಗೆಲ್ಲವಂ ತಿಳಿಸಿಹಳ್, ಇದೆಲ್ಲಂ ಹಬ್ಬಿ
ಹರಡಿದ ಬರಿಸುಳ್ಳಿನ ಮಹಾ ಕಂತೆಯುಮೆಂದು,
ನೀನಿಂತು ಈ ಕುಹುಕ ವಿಚಾರಂ ಕುರಿತು ತಲೆ
ಕೆಟ್ಟು ಮಾತಾಡಿದೊಡೆ ನಿನ್ನಯ ಮೊಗವನೆಂದು
ನೋಡೆನಾಂ!" ಎಂದರೆಂದು ಕೇಳ್ದರಿದೆ ಆಗಳೆನ್ನ
ತನುಮನಗಳ್ ಪುಟಿಪುಟಿದುವು ವಿಚಾರಕ್ರಾಂತಿಯ
ಕುಂಡದಲಿ ಮುಳುಗಿ.
ಕಾಲಚಕ್ರವುರುಳಿ ದಿನ
ಗಳೆದಂತೆ ಭಂಗ ಬನ್ನಗಳೇಂ ಕಳೆಯದೆಯೆ
ಬಲಿತು ಕಾಲ್ತೊಡಕಾಗಿ ಕಾಡಿದುವೆನ್ನ ಎಂದಿನೊಲ್.
ಸುಡುವೇಸಗೆಯ ಸುಡುವಿಸಿಲ್ ರಣರಣಿಪ ದಿನಂ
ಕಳೆದಳಿದು ಘೋರ್ಗರೆವ ವರ್ಷಾಗಮನಂ ಬಳಿ
ಸಾರ್ದು, ಬಿರುಗಾಳಿ ಸುಯ್ಗಾಳಿ ತನಿಗಾಳಿಗಳ
ಆಮೋದ ಶೀತವನತಿ ಶೀತಲಗೊಳಿಪಂತೆ
ಬೀಸಿದುದು ದ್ವಿಗುಣಿಸಿ. ಎನ್ನ ಚಾಕರಿಗಾಗಿ
ಶಿಕಾರಿಯದು ನಡೆದುದು ಯಥಾ ಪ್ರಕಾರದೊಳ್.
ನಗರಿಯಾ ಜನಜನಿತ ಹಾದಿ ಬೀದಿಗಳಲ್ಲಿ
ಅಲೆದಲೆದು ಕಛೇರಿಗಳ ಮೆಟ್ಟಿಲ್ ಹತ್ತಿಳಿದು
ತೊಳಲಿ ಬಳಲಿ ಬೇಸತ್ತು ಹೆಮ್ಮರಗಳ ತಳದ

ತಣ್ಣೆಳಲ್ ಆಶ್ರಯಿಸಿ ಕಳೆದೆನ್ ಎನಿತೊವೊಳ್ತು,
ಅನುದಿನಂ ಸಂಕಟದ ವೈತರಣಿಯಲಿ ಮುಳುಗಿ
ಮಿಂದು ತೊಳಲುತಿರ್ದೊಡೆಯುಂ ಶಿವನ ಭಕ್ತಿಯಂ
ಕಿಂಚಿತ್ ಕಳೆದೆನಿಲ್ಲ, ಗುರುದೇವನ ಕೃಪೆಯು
ಹಂತ ಹಂತದಲಿಯುಂ ಬೀಳ್ಗೊಡದೆ ಎತ್ತುತಿಹ
ಘನಾನುಭವ ಮುಟ್ಟುತಲಿರ್ದುದು ಎದೆ ಗಣಿಯಂ.
ಈಶ್ವರನ ಸಾಕ್ಷಾತ್ಕಾರವಿಲ್ಲದೆ ಈ ಜನ್ಮ
ಸಾರ್ಥಕಗೊಳದೆಂಬುವ ಶ್ರದ್ಧೆಯಿಂ ಕಳೆದೆನೆನ್ನ
ಸಮಯಮಂ. ಆವುದೋ ದಿವ್ಯ ಶಕ್ತಿಯುವೊಂದು
ಆವರಿಸುತೆನ್ನ ಮುಸುಕಂ ಕಿತ್ತೊಗೆದಂತೆ
ಉದ್ಭಾಸಮಾದುದು. ಒಳಗುದಿ ಸಂಶಯಂಗಳ್
ಜೊಳ್ಳುತೂರಿದವೊಲ್ ಜಡಿ ಹಾರಿದುವು, ಮನವಂ
ಬಿಟ್ಟು. ಲೋಕದ ಸುಖದುಃಖಗಳ ಅರ್ಥಮೆನ್ನಯ
ಮನೋಮಯ ಪ್ರಾಣಮಯ ಜ್ಞಾನಮಯ ಕೋಶದಲಿ
ಪ್ರಜ್ವಲಿಸಿ ಬೆಸ್ತಟ್ಟಿತು ಹೃನ್ಮನಂ ಎಚ್ಚರಿಪಂತೆ,
ಒರ್ಮೆ ಗುರುಮಹಾರಾಜರುಂ ಕಲಿಕತ್ತೆಗೈವ
ಸುದ್ದಿಯುಂ ತಿಳಿದುಬರಲ್ ಅರಳಿದುದೆನ್ನ ನೊಂದ
ಮನಃಕುಸುಮ. ಅದೊಂದು ಶುಭ ಸೂಚನೆಯೆನಿಸಿ
ಅವರಂ ಕಣ್ ತುಂಬ ಕಾಂಬುವ ಆಸೆಯ ಕುಡಿ
ಕೊನರಿದುದು ಮನೋಮಂದಿರದಲಿ. ಅವರಾಗಮನ
ವಾರ್ತೆಯುಂ ಕಾದು ಎದುರು ನೋಡುತಲಿರ್ದಾಗ್
ಕಿಂಚಿತ್ ಭರವಸೆಯಾಶಾದ್ಯುತಿಯ ಕಿರಣಮಂ
ಭರಿಸಿ ಮನತುಂಬಿ ಪೊರಮಟ್ಟೆಂ ನೇಹಿಗನ
ಗೃಹದೇಶಮಿಹ ವೀಥಿಯಂ ಗುರಿಗೊಂಡು. ಜನ
ಭರಿತಮಾದ ನಗರಿಯ ನರನಾಡಿಗಳಲುಕ್ಕಿ

ಉರಿಹೊತ್ತಿ ಧಗಧಗಿಸಿದುದೊ ಎನಲ್ಕೆ ಅವಸರದ
ಭರಾಟೆಯೆ ಎಲ್ಲಿಲ್ಲ. ಜನಸಮುದಯದ ಮಹಾ
ವೇಲೆಯಂ ದಾಂಟೆ ನಡೆದೆನ್, ನಡೆದೆನ್, ನಡೆದೆನ್,
ದೂರದೂರದ ಹಾದಿಯಂ ಕಳೆದು ನೆಲೆಮುಟ್ಟಿ
ಮಿತ್ರಮಹನೀಯನ ಸುಖೀ ಭವನಮಂ ಬೊಕ್ಕ
ತನಿವೊಳ್ತಿನೊಳ್ ಕಂಗೊಳಿಸಿದರ್ ಗುರುದೇವಂ.
ಅವರ ವದನಾಂಭೋಜ ದರ್ಶನ ಮಾತ್ರದಿಂ
ಕುದಿವೆನ್ನೆದೆಗೆ ಶಾಂತಿಸೇಚನೆಯಾದವೊಲ್
ತಣಿಯಿತೆನ್ನಮನಂ. ಒಡಲುಂ ತಣಿಯಿತು. ಗುರವಿನ
ಪ್ರಸನ್ನ ಮೊಗಬಿಂಬ ಸ್ವಾಗತಿಸಿದುದು ಬಲುಮೆಯ
ಮಳೆಗರೆದು. ನಲ್ನುಡಿಗಳ ಉಪದೇಶ ಹೊಮ್ಮಿತು
ಶ್ರೀಮುಖದಲಿ.. ಮನಗೊಟ್ಟಾಲ್ಸಿಸಿದೆಂ ಹೃದಯ
ಧಾತ್ರಿ ತಣಿವನ್ನ. ಚಿತ್ತಕಲ್ಪ ಅರಳುವನ್ನ.
ಮನೋ ಭಾರವಿಳಿಯದು. ಕರ್ತವ್ಯದ ಹೊಣೆಯಂ
ಅರಿದೆನ್. ಬದುಕಿನ ಹುರುಳದು ಘನವಾಯ್ತು.
ಹೃದಯ ಹಗುರಾಯ್ತು. ಗುರುದೇವನಲ್ಲಿಂದೆ
ಪೊರಡುವ ಗಳಿಗೆಯೊಳೆನ್ನಂ ದಕ್ಷಿಣೇಶ್ವರ
ಕಾಳಿ ಮಂದಿರಕೆ ಬರಲ್ ಬಲ್ಮೆಯ ಸವಿಜೇನ್
ಒಸರುವ ದನಿಯಲಿ ಪುನಃ ಪುನಃ ಕರೆಯಿತ್ತರ್.
ಮರು ನುಡಿವೆನೆನೆ ಬಾಯಿ ಬಿರಿಯಲೊಲ್ಲದು ಅವರ
ಪ್ರೇಮಕಾತರಿತ ಆಹ್ವಾನದ ಮುಂತೆ ದಲ್
ಬೇಕೆ, ಬೇಡವೆ, ಎಂಬ ಕತಮೇಕೆ ಚಿತ್ತಗತಿ
ತತ್ತರಿತವಾದವಂಗೆ? ಗುರುಗಳ ಬೆಂಬಿಡಿದು
ಆಗಳೇ ಗಾಡಿಯೇರಿದೆನ್. ನೆರಳಿಗಾಗಿ
ಮೇಲ್ಚಾವಣಿಯಿರದಿದ್ದ ಬೋಳು ಶಕಟದೊಳ್

ಸಾಗಿತು ಪಯಣಂ. ಕುಳ್ಳಿರಲ್ ಮೆತ್ತೆಯೆನೆ ಒಣ
ಹುಲ್ಲಿನ ಎಳೆಗಳ ಹಾಸು. ಎತ್ತಿನ ಕೊರಳ್ಗೆಜ್ಜೆ
ಟೆಂಟಣಿಸುವ ಮೃದುಮಯ ಮಧುರದನಿ ಕಿವಿಯಂ
ಮುಟ್ಟುತ್ತಿರ್ದುದು ಉಲ್ಲಸಕರವಾಗಿ. ಕೆಂದೂಳ್
ಎಳ್ದು ಕೆಮ್ಮನೆ ಹರಡುತಲಿರ್ದುದು ಸುತ್ತಲುಂ.
ಹರೆಯ ಉಕ್ಕುವೆತ್ತುಗಳ ಅಷ್ಟಪದದೋಟಂ
ಸರಾಗದಲಿ ಮುಟ್ಟಿಸಿತು ದೇಗುಲದಂಗಣಂ.
ಮುಸ್ಸಂಜೆಯ ಸೊಂಪು ಹರಡುತಿರೆ ಇಳೆಯಮೇಲೆ
ಹೊಂಗಾಂತಿಯ ಲೇಪಂ ಒರೆದವೊಲ್ ಚೆಂದದಿಂ
ಮೆರೆದುದು ವನರಾಜಿಯತಿ ಸುವರ್ಣಮಯವಾಗಿ.
ಗಿಡಮರಂಗಳ್ ಬಾಯೊಡೆದುವೊ ಎನಲ್ ಪಕ್ಷಿಗಳ
ಸಂಕುಲಂ ಇನಿದನಿಯಲಿ ರಾಗಾರುಣತಾನ
ದೈಶ್ವರ್ಯಮಂ ಸಕಲ ರಾಗಾನುರಾಗದಲಿ
ಬಿತ್ತರಿಸಿದುವು ಸಂಧ್ಯಾ ತಪೋ ನಿಷ್ಠೆಯ ದಿವ್ಯ
ನೇಮದಲಿ. ಸಾಯಂ ಸುಶಾಂತಿಯಂ ಮನತುಂಬಿ
ಗಾಡಿಯಿಂದಿಳಿದು ಗುರುದೇವನಂ ಬೆಂಬಿಡಿದು
ಒಳನಡೆದೆನಾಂ. ಗುರುದೇವಂ ಕುಳಿತರ್ ಕಾಲ್ಮಡಿದು
ಪದ್ಮಾಸನದಲಿ. ಸಗ್ಗದಿಂದೈದ ಶ್ರೀನಾರದ
ಮಹರ್ಷಿಯೊ ಎನಲ್ ವರ್ತಮಾನಯುಗೀಯ ನವ
ಮಹರ್ಷಿ ಮಹೋದಯರ್ ಕಣ್ಗೆಸೆದರ್ ಮಹೋನ್ನತ
ಗುರುವಾಗಿ. ಏನೊಂದೆನಗೆ ನುಡಿಯದೆ ಭಕ್ತಿಯ
ಸಂಗೀತೆಯೊಂದಂ ಕೊರಳ್ ತುಂಬಿ ಹಾಡಿದರ್
ಕಮನೀಯ ಕಂಠದುಲಿಯಲಿ. ಭಕ್ತಿಪರವಶತೆ
ಬಿಗಿಗಟ್ಟು ಬಿಗಿದಿರೆ ರಸವಶನಾಗಿ ಆಲೈಸಿದೆನ್.

ಭಿಕ್ಷುಕೋऽಪಿ ಸಕಲೇಪ್ಸಿತದಾತಾ
ಪ್ರೇತಭೂಮಿನಿಲಯೋऽಪಿ ಪವಿತ್ರಃ ।
ಭೂತವಿಕ್ರಮುಸಿಯೋऽಭಯ ಸತ್ರಿ
ತಂ ವಿಚಿತ್ರ ಚರಿತಂ ಶಿವಮೀಡೇ ॥

ಭಾವಸಾವೇಶದಾವೇಶದಲಿ ಭಕ್ತಿಯೇ
ಮೈವೆತ್ತು ಬಂದಂತೆ, ಧ್ಯಾನಸ್ಫೂರ್ತಿಯೆ ಘನಿಸಿ
ಮೂರ್ತೀ ಭವಿಸಿದಂತೆ, ಪರಮಾತ್ಮ ಭಾವವೇ
ಒಡಮೂಡಿದಂತೆ, ನೆರೆ ಕಾರುಣ್ಯ ದ್ರವ್ಯವೆ
ಗುಡಿಗಟ್ಟಿದಂತೆ ಎಂಬೊಲಾ ಗುರುದೇವನಂ
ಕಣ್ತುಂಬ ಕಂಡೆ, ಇಂದೇ ಪೊಸತೆಂಬವೊಲ್. ಆ
ಸತ್ಯ ಸುಂದರ ಚಿತ್ರ ಎನ್ನ ಕಂಗಳಂ ಆನೆ
ನಂಬಲಾರದವೊಲೆಸೆಯೆ ಸುಖದುಃಖಾಶ್ರುಗಳ್
ಮೊಳೆತುವು ಕಣ್ ಕೊಳದಲಿ. ಅನೇಕಾನೇಕ ಬಗೆ
ಶ್ರೋತೃಗಳೈದರ್ ಗುರುಗಳ ಸನ್ನಿಧಿಗೆ. ಎಲ್ಲ
ಭಕ್ತರ ಮನೋಗತಿಯನರಿದು ತಕ್ಕಸ ಪರುಷ
ಮೂಡಿಪಂತೆ ಉಪದೇಶಮೀವರ್ 'ಭವದೀಯ
ಖಿನ್ನಬಿನ್ನಗಳಿಂಗೆ ಅಂಜಿ ಆತಂಕಗೊಳೆ
ಕಾರಣಮಿನಿತಿಲ್ಲ. ಜಗನ್ಮಾತೆಯು ಕೊಡುವೆಲ್ಲ
ಸಂಕಷ್ಟ ಒರ್ಮೆಗೇ ಬಗೆಹರಿಪ ಧನ್ವಂತ್ರಿಯು
ಆನಲ್ಲ, ಇದೆಮ್ಮಯ ಆಂತರಂಗಿಕ ಸುದ್ದಿ,
ಎನುತೆನುತೆ ಕಿರುಹಾಸವಂ ಬೀರಿದರ್ ದೀನ
ದುಃಖಿಗಳ ಪರಿತಾಪವಂ ತರಿದು ಪೋಗಾಡೆ.
ತರುಣವೃಂದಂ ಮನದ ಸಂಕೆಯಂ ಬದಿಗೊತ್ತಿ
ಮುಸ್ಸಂಜೆಯ ತನಿವೊಳ್ಪಿನಲಿ ತಂತಮ್ಮ ವಾಸ
ಸ್ಥಾನಂಗಳಿಗೆ ಪೊರಮಟ್ಟರ್ ಶ್ರೀಗುರುಮುಖದಿಂ

ಪೊರಬಿಳ್ದ ಒಳ್ನುಡಿಯ ಬೀಳ್ಕೊಡಿಗೆಯ ನುಡಿಯಿಂ
ಸಂತುಷ್ಟರಾಗಿ.
ಮಿಡಿದುದು ನಿಶಾರಾಣಿಯಾ
ಹೃದಯ ಧರಿತ್ರಿ ನೀರವದ ಮಧ್ಯೆ ಮಿಣ್ಣನೆ
ಶಾಂತಿಮಯವಾಗಿ. ಕಳಿಯಿತು ರಾತ್ರಿ. ಮೂಡಿದುದು
ಮುಂಬೆಳಕು ಮೂಡುವೆಟ್ಟಿನ ಚೂಡದಲಿ. ಒಡನೆ
ಮುಂಬಕ್ಕಿಗಳ್ ಮೊಳಗಿದುವು ವಿವಿಧ ರಾಗದಲಿ.
ಅಲ್ಲಲ್ಲಿ ಕೇಳಿಸಿದುದು ಕೋಳಿಗಳ ಮೊಳಗಿನ
ಬಿತ್ತರದ ದನಿ. ಮತ್ತೆ ಮತ್ತೆ ನವಿಲುಗಳ ಕಡು
ದೀರ್ಘಾಯತ ಕ್ರೇಂಕಾರವ. ಎಲ್ಲವಗೆಯ ವರ
ಮಧುರಗಾನವಂ ಮನತುಂಬಿ ಪೊರಮಟ್ಟನಾ
ನರೇಂದ್ರನಾಥದತ್ತಂ ಗುರುಗಳಪ್ಪಣೆಯಂ ಪಡೆ
ಕೊಂಡು. ಮೆಟ್ಟಿಲಿಳಿವ ಮೊದಲ್ ಗುರುಗಳೆಂದರ್,
"ವತ್ಸ ! ನಾಬಲ್ಲೆ. ನೀಂ ಜಗನ್ಮಾತೆಯುಂ ವಹಿಸಿ
ಕೊಟ್ಟ ಕಾರ್ಯಭಾರದ ದಿವ್ಯ ಹೊಣೆಯಂ ಹೊರಲ್
ಜಗಕ್ಕೈದಿಹ ಧೀರಕಲಿ! ನೀನೆಂದಿಗುಂ ಇಲ್ಲಿ
ಪ್ರಾಪಂಚಿಕನಾಗಿ ಉಳಿಯಲಾರೆ. ನೀಂ ಕೆಲವು
ದಿನಮಾನಯೆಮ್ಮೊಳಿರವೇಳ್ಕುಂ."
ನುಡಿಗೊಂಚಲ್
ಮಿಂಚುವನ್ನ ಕಂಗಳಲಿ ಸುಖಾಶ್ರುಗಳ್ ಮೊಳೆತು
ಥಳಥಳಿಸಿದುವು ಬೆಳ್ಳಿಯ ರಸದಂತೆವೊಲ್. ಆ
ದೃಶ್ಯಮಂ ನೆನೆನೆನೆಯುತೆ, ಬೀಸುವನಿಲನ ಮೈ
ಭೇದಿಸುವೊಲ್ ಮುನ್ನಡೆದಂ ಬೀಸುಗಾಲ್ಗಳಿಂ
ಬೀಸಿ ಪೀಸಿ. ಮನೋಗತಿಯಲಿ ದೂರದ ಭವ್ಯ
ಭವಿತವ್ಯದ ವೇದಿಯನೇರಿ ಅಂಡಲೆಯಿತ್ತು

ಮಾನಸೀಯ ಪಕ್ಷಿ. ಎನಿತೆನಿತು ಪರಿಭಾವಿಸಿ
ಪರ್ಯಾಲೋಚಿಸಿದೊಡಮದು ನಿಲುಕದ ವಿಚಾರಂ.
ಆನೇನಾದಪೆ ? ಏನಾಗ ವೇಳ್ಕುಂ ? ಎಂಬುದೊರ್
ತಲೆಕೊರೆವ ಗುಂಗಿಯಾಯ್ತು. ಮುಂಪಥವದೆಂತು
ಕಳೆಯಿತೊ ಅರಿಯದಾಯ್ತು ಮನಂ. ಮುಂಬಾಗಿಲೊಳ್
ತಾಯಿ ಭುವನೇಶ್ವರೀ ದೇವಿಯುಂ ಎದುರೆದ್ದೈದುಬರೆ,
ಪರಮದರ್ಶನವಾಯ್ತು. ಆ ಮೂರ್ತಿಯಂ ಕಣ್ತುಂಬ
ಕಂಡಾಗಳೇ ಅತ್ತಣದರಿವು.

ನರೇಂದ್ರನಾಥಂ

ಹರಿ ವಕೀಲನೊಡಂ ಕಛೇರಿಯ ಹೊಣೆಹೊತ್ತು
ದುಡಿಯುತಿರೆ ಅರೆಕಾಲಿಕ ದುಡಿಮೆಯದು ನೀಡಿತು
ಅಲ್ಪಸ್ವಲ್ಪ ದ್ರವ್ಯಮಂ. ಆದರದು ಎಟುಕದು
ಬಾಳ್‌ನೌಕೆಯ ಬೃಹದ್ ಒಡಲಿಂಗೆ. ಅನನ್ಯ
ಸಂಧಿಗ್ಧ ಪರಿಸ್ಥಿತಿಯಂ ಎದುರಿಸಲಾರದೆ
ಎದುರಿಸುತಲಿರ್ದುದು ನವತಾರುಣ್ಯದ ಚಿತ್ತ
ಪ್ರವೃತ್ತಿ ಗೂಢವಾಗಿ, ಅತಿ ಸೂಕ್ಷ್ಮವಾಗಿ.
ಯೋಚಿಸಿದೊಡೆ ತಿಳಿವುದರ ಮೊತ್ತವೆ ಬೇರೆಯಲ್ತೆ?
ವಿಶ್ವನಾಥದದತ್ತನಂತಿಂತು ಗಳಿಸಿದ ಅಮಿತ
ದ್ರವ್ಯರಾಶಿಯಂ ಗಂಟ ಕಟ್ಟಿಟ್ಟಿರ್ದೊಡಾ
ನರೇಂದ್ರನ ಭವಿಷ್ಯವದು ಆವಾವರೂಪಿನ
ಜಾಡು ಹಿಡಿಯುತಿರ್ದುದೊ ಅದಾರರಿಯಬಲ್ಲರ್?
ಲೋಕದೊಳ್ ಆವಾವ ದುಷ್ಟ ಪ್ರಲೋಭನೆಗೆ
ಬಲಿಯಾಗದೆ ಸಮಸ್ತ ಜಗತ್ತಿನ ವಿಶ್ವಾಸ
ಗೌರವಾದರಗಳಿಗೆ ಸತ್ ಪಾತ್ರನೆನೆ ಜೃಂಭಿಸಿ
ಲೋಕಕೀರ್ತಿ ಪಡೆಯಲಿ ಎಂದೆಂದು ಆವಾವ
ದೈವ ಕೃಪೆಯೊ ವಿವಾಹ ವಿತೃಷ್ಣೆಗೆ ದೊರಕಿತು

ಬಿತ್ತು ಪುತ್ರ ಪ್ರಬುದ್ಧನ ವಿವಾಹ ಸನ್ನಾಹದ
ಮಧ್ಯೆ ವಿಶ್ವನಾಥದತ್ತಮಹಾಶಯಂ ಮರಣಿಸಿ.
ಇಂತು, ನರೇಂದ್ರನಾಥನ ಜೀವಮಾನದೊಳ್ ಒದವಿ
ಬಂದ ಸಂಸಾರ ಲೀಲಾಮುಖೀ ಅಮಂಗಳ
ದಿಕ್ಸೂಚಿಯುಂ ದಿಶೆ ಬದಲಿಸುತೆ ವಿಲಾಯತಿಯಿಂ
ದಕ್ಷಿಣೇಶ್ವರಾಭಿಮುಖಗೊಳಿಸಿತು ಬಹುಬಗೆಯ
ಕಾರ್ಯಕಾರಣರಂಗಕಿಳಿಸುವ ಸಲುವಾಗಿಯೆ.
ವಿಶ್ವನಾಥದತ್ತ ಮಹಾಶಯಂ ಹಠಾತ್ತನೆ
ವಿಧಿವತ್ ಮರಣಶಾಸನಕೆ ಶಿರಮಣಿಯೆ ಅಂದು,
ಸಂಭ್ರಮದಲಿ ಕನ್ಯಾದಾನಂಗೈಯೆ ಮುಂದ್ಯೆದ
ಶ್ರೀಮಂತ ಮಹಾನುಭಾವನುಂ ಮಿಣ್ಣನೆಯೆ
ಪಿಂಜರಿದು ಕಣ್ಮರೆಗೆ ಸರಿದಂ. ಅದಲ್ಲದೆಯೆ
ಇನ್ನೆನಿತೊ ಸುಮಂಗಲ ಕನ್ಯಾಮಣಿಯರ್ ದಿಶೆ
ದಿಶೆಗೆ ಸರಿದರ್. ನರೇಂದ್ರನ ಸಂಜೀವನ ಪಥಂ
ಶ್ರೀಗುರುವಿನ ಪದಸನ್ನಿಧಿಗೆ ಹರಿಯೆ ಸರಾಗ
ಮೇಣತಿ ಸುಲಲಿತಮಾಯ್ತು.
ಪಿಂದೊರ್ಮೆ ಸಕಲ
ತರ ಐಶ್ವರ್ಯದಿಂ ತುಂಬಿ ತುಳುಕುತೆ ಹಲವಾರು
ಮಂದಿಗೆ ಸುಖಾಶ್ರಯಂ ನೀಡಿ ಆದರಿಸಿರ್ದ
ಗೃಹಮಿಂದು ದಾರಿದ್ರ್ಯಪರವಶತೆಯಿಂದಲಿ
ಬಣಬಣಿಸೆ ಸಮೀಪದ ಬಂಧುಗಳ್ ಸಾರಿದರ್
ದೂರದೂರಕೆ. ಎನಿತೊ ಮಿತ್ರರುಂ ಕಣ್ಮರೆಸಿ
ಮಾಯವಾದರ್. ''**ಅಸಂತೋಷಂ ಶ್ರೀಯೋರ್ಮೂಲಂ**''
ಎಂಬವೊಲ್ ಪೀಠಿಕೆಮಿದಾಯ್ತು ಮಹದ್ ಭವಿಷ್ಯಕೆ.
''**ಉದ್ಧರೇತ್ ಆತ್ಮನಾತ್ಮಾನಂ**'' ಎಂಬುವಾ

ದಿವ್ಯ ಸೂಕ್ತಿ ಸುಧಾವಾಹಿಯೊಳ್ ಮುಳುಮುಳುಗಿಸಿ
ಭಾರತದ ಬಹುಮೂಲ್ಯ ಧರ್ಮೋದ್ಧರಣ ಕಾರ್ಯ
ಕೃತಿಗೆ ಉದ್ದಾಮ ಕರ್ತೃವಂ ಬೆಳೆಸಿತು ಜಗಹಿತಕಾಗಿ.

ನಂದುತ್ಯುದಿತ ಆದಿತ್ಯೇ
ನಂದತ್ಯಸ್ತಮಿತೇ ರವೌ ।
ಆತ್ಮನೋನಾವಬುದ್ಧ್ಯಂತೇ
ಮನುಷ್ಯಾ ಜೀವಿತ ಕ್ಷಯಮ್ ॥

ಹರಿಃ ಓಂ ತತ್ ಸತ್

❀ ❀

ನವಮೋಲ್ಲಾಸಂ

ಬೈರಾಗಿ ನರೇನ್

ಓ ಭಾವನಾ ಸುಂದರಿಯೇ ಶ್ರೀ ಗಾಯತ್ರಿ
ಸಕಲ ವಿದ್ಯಾ ವಿಶಾರದೆ ತವ ಪದಾಂಭೋಜಕೆ
ಶಿರಮಣಿದು ವಂದಿಸುವೆ ಜನನಿಯೇ! ನೀನೆನಗೆ
ಜವದಿ ಕೃಪೆದೋರಿ ಕರುಣಿಸಮ್ಮ ಮಾತಾಯೆ!
ನೀಂ ಕರುಣೆದೋರೆ ತೊದಲುತಿಹ ಜಿಹ್ವೆಯಿದೆನ್ನ
ಪಾಡದೆ ಪರಮ ಗಾನಗೇಯಮಂ ರಾಗಾನು
ರಾಗಪೂರ್ಣವಾಗಿ? ಜನನೀ ತೇಜೋಮಯಿ
ಸುರಾಂಗನೆ, ರಾಮಾಭಿರಾಮೆ, ದಯೆಗೈದೆನ್ನ
ಹರಸಮ್ಮ ಕಾಲ್ಪಿಡಿದು ಬೇಡುವೆನೋ ಹೇ ತಾಯೆ!
ಭಂಗ ಬನ್ನಗಳ ಕಣದಲಿ ಜ್ಞಾನ ದೇವನಂ
ಕನ್ನಡಿಸುವ ಮರುಳುತನಕ್ಕೆ ನೀನಲ್ಲೆನಗೆ
ಒತ್ತುಕೊಟ್ಟವಳು? ಇಂ ನೀನೇ ಕಡೆಹಾಯಿಸು
ತಾಯೇ ಜಗಜ್ಜನನಿ! ಶಕ್ತಿಯಂ ನೀಡೆನೆಗೆ
ಕರುಣಾಯಿತ ದೃಷ್ಟಿಯಲಿ ನೋಡಿ ಹರಸು ತಾಯೆ!
ಮನೋಮಯ ಜ್ಞಾನಮಯ ಸಂಜೀವಿನಿಯಾಗಿಸಿ.

ನರೇಂದ್ರನಾಥನುಂ ಜ್ಞಾನ ಗಂಗೋತ್ರಿಯಲಿ ಮಿಂದು
ವಿಶ್ವಾತ್ಮಕ ವಿಚಾರ ಗರ್ಭಿತನಿರೆ ಆರ್ಥಿಕ
ದುರ್ಬಲತೆಯಲಿ ಸಿಲ್ಕಿ ನರಳಿ ಪರಿತಪಿಸುತ್ತೆ
ಚಲನಮಯ ಸಂಚಲನಮಯ ದೇಹಗತಿ ನಿಂತ
ನೀರಾಗದ ತೆರದಲಿ ಚಲಿಸುವಂ ಮುಂಮುಂದೆ.
ಶಕ್ರದಿಕ್ಷಕ್ರಾಭಿಮುಖೀ ಧ್ಯೇಯೋಭಿಲಾಶೆಯು
ಎಳೆವುದು ಎಳೆವುದು ಮೂಗುದಾರವ ಪಿಡಿದವೊಲ್

ರಾಜಮಾರ್ಗಕೆ. ಶ್ರೀಗುರುದೇವಂ ಮಾತ್ರಮೇ
ಮಾರ್ಗದರ್ಶಕರಾಗಿ ಜ್ಞಾನ ಬೋಧಕರಾಗಿ
ತೋರಿವಂದರ್. ಅವರ ಆದರ್ಶದ ಸೂತ್ರಂ
ಸುಸೂತ್ರಮೆನೆ ನರೇನ್ ಬೈರಾಗಿಯ ದಕ್ಷಿಣೇಶ್ವರ
ದೇಗುಲದ ಸಂಯಾತ್ರೆ ನಡೆದತ್ತು ನಿರಂತರ.
    ಒರ್ಮೆ ನಮ್ರವಿನಮ್ರ ಭಾವದಲಿ ಗುರುವರ್ಯ
ಶ್ರೀರಾಮ ಕೃಷ್ಣ ಪರಮಹಂಸರ ಮುಂತೆ ಕಡು
ಸಂಕೋಚ ಭರಿತ ಒಡಲ ಕೋರಿಕೆಯಂ ಇಂತು
ಮಂಡಿಸಿದನ್ ನರೇಂದ್ರನಾಥದತ್ತಂ ''ಗುರುವೆ,
ನಿಮ್ಮೊಳೆನ್ನದೊಂದು ಕಿರುಕೋರಿಕೆ ಇಹುದಿಂದು
ಗುರುದೇವ ಮನ್ನಿಸಿಂ. ಎನ್ನ ಜೀವನದ ಕಡು
ಸಂಕಟಕರ ಪ್ರಸಂಗಮಂ ನೀವರಿಯದಿಲ್ಲ.
ಆರ್ಥಿಕ ಬಡತನದಿಂ ಬಳಲುತಿಹುದೆಮ್ಮ ಸಣ್ಣ
ಸುಕುಟುಂಬ, ಬೊಪ್ಪನ ಮರಣಾನಂತರವೆಮ್ಮ
ಕುಟುಂಬಕೆ ರಾಹುಕೇತುಗಳಂಟಿದುವು. ಆಂ
ಪಿರಿಯನಿರುತಿರ್ದು ಕೈಗೆ ತಕ್ಕಿನ ಚಾಕರಿಯು
ದೊರೆಯದಿರೆ ದಿವ್ಯ ಬಡತನಕೆ ಕಾರಣಂ.
ಅಂದಬಳಿಕ, ನೀಮೆನ್ನ ಪರವಾಗಿ ದೇವಿಯ
ಪ್ರಾರ್ಥನೆಗೈದು ಎನಗೆ ಧನ ಪ್ರಾಪ್ತಿಗಾಗೊರ್ಮೆ
ಬೇಡಿದೊಡೆ ಒಳ್ಳಿತೆಂಬೆ'' ಖಿನ್ನಮನದಿಂ
ಉಣ್ಮಿದ ನುಡಿಗಳನ್ನು ಆಲೈಸಿದ ಗುರುದೇವ
ನುಡಿಸಿದರ್ ''ಕೇಳ್ ವತ್ಸ! ಅಂತೆಂದಾಂ ಬೇಡಿ
ಕೊಳ್ಳಲಾರೆ, ನೀಂ ಗುಡಿಗುಯ್ದು ಬೇಡಿಕೊಂಬುದು
ಲೇಸು ಕಣ! ಅವಳಂ ತಿರಸ್ಕರಿಸಿದುದರಿಂದಲೆ
ನಿನ್ನನುಂ ಕಾಡುತಿವೆ ರುದ್ರ ಸಂಕಷ್ಟಗಳ್.''

"ಗುರುವರ್ಯ, ಎನಗವಳ ನಿಕಟ ಪರಿಚಯಮಿಲ್ಲ.
ಇನ್ನೆಬರಮೆನ್ನ ನಿಜಭಕ್ತಿ ಅವಳೆಡೆಗೆ ಹರಿ
ಹಾಯ್ದುದಿಲ್ಲ. ಈಗಳಾಂ ಬೇಡುವುದು ಸರಿಯೇ?
ಎನ್ನ ಸಲುವಾಗಿ ನೀಂ ಬೇಡಿದೊಡೆ ಒಳ್ಳಿತೆನೆ
ಅನ್ಯಮಲ್ತು. ಆನೆನ್ನ ಪ್ರಯತ್ನಂಗೈಯುತೆ
ಸಫಲತೆಯ ಕಾಣದೇ ಬೇಡುತಿಹೆ ನಿಮ್ಮನುಂ.
ನೀಮೆ ದಯೆದೋರಿ ಪ್ರಾರ್ಥಿಸಿದೊಡೆ ಕಾಳಿಯುಂ
ಪ್ರಸನ್ನಳಾದಪಳ್ ಎಂಬೊಂದು ನಂಬುಗೆಯು
ಎನಗುಂಟು."
"ನರೇಂದ್ರ, ನಿನಗೆಂದಾಂ ಎನಿತೆನಿತೊ
ಪ್ರಾರ್ಥಿಸಿಹೆನವಳಂ. ನಿನಗೆ ಮಾತೆಯೊಳ್ ಪೂರ್ಣ
ನಂಬಿಕೆಯುಮಿರದಿರಲ್ ಆನೇಂಗೈದಪೆ ಪೇಳ್?
ಈವೊಳ್ತು ಶುಭದಿನಂ. ಮಂಗಳವಾರದಂದು
ಸುಪ್ರಸನ್ನೆಯಾಗಿರ್ಪಳ್ ತಾಯಿ. ರಾತ್ರಿ ನೀಂ
ಗುಡಿಗೈದು ನಮಿಸಿ ಪ್ರಾರ್ಥಿಸಿ ಬೇಕೆನಿಸಿದುದಂ
ಬೇಡಿಕೊಳ್ಳೈ. ದಯೆತೋರ್ಪಳವಳ್. ಕರುಣಾಕರಿ,
ಸಚ್ಚಿದಾನಂದಮಯಿ ಸರ್ವಶಕ್ತೆ, ಅಬಲರ
ತಾಯಿ. ಭಕ್ತರನೆಂದು ಕೈಬಿಡಲಾರಳ್ ಕಣಾ!
ಅವಳಿಂದ ಆಗದಿಹ ಕಾರ್ಯಮಿಹುದೇಂ ಜಗದೊಳ್?"
ಗುರುಗಳ್ ನುಡಿ ಮನದಾಳಕಿಳಿಯಿತು. ತನ್ನೆಲ್ಲ
ಹಮ್ಮುಬಿಮ್ಮುಗಳ ಬದಿಗೊತ್ತಿ ನಡೆದಂ ದೇವಿ
ಮಂದಿರಕೆ. ಸಾಯಂಸಮಯದ ಪೂಜೆಯ ವ್ರತ
ಮುಗಿದತ್ತು. ಭಕ್ತಜನ ನಿರ್ಗಮಿಸಿ ನಿಶ್ಶಬ್ದ
ಘನಿಸಿದತ್ತು. ನೋಡೆ, ಸಕಲತರ ಕುಸುಮಗಳಿಂ
ಸಂಪೂಜಿತೆ. ಗಂಧಕುಸುಮಗಳಿಂ ಅಲಂಕೃತ

ಅಲಂಕಾರ ಪ್ರಿಯೆ. ನರೇಂದ್ರನ ನಯನಂಗಳ್
ಚಲಿಸದಾದುವು. ಮಿಣ್ಣನೆ ನೋಡಿದನ್. ಜ್ಯೋತಿ
ದೇವಿಯಾ ವದನಾರವಿಂದವಂ ಬೆಳಗುತಿದೆ.
ತೆರೆದ ಕಂಗಳ್, ಹಣೆಯಲಿ ತಿಲಕ, ಕಿರೀಟಧರೆ.
ನಿಟ್ಟಿಸಿದನ್ ಕಣ್ಣೆವೆಯಿಕ್ಕದೆಯೆ. ಒಡನೊಡನೆ
ಮನದಲಿ ಭಕುತಿಯ ಭಾವ ಘನಿಸಿತು. ಬೇಡುವೊಡೆ
ತುಟಿಗಳ್ ಬಿರಿಯದಾದುವು. ಧ್ಯಾನಿಸಿದನ್ ಮಾತ್ರ.
ಸಮಯಮೆನಿತೊ ಉರುಳಿತು. ಪ್ರಜ್ಞೆಯಂ ಘನಗೊಳಿಸಿ
ಪ್ರಾರ್ಥಿಸಿದನ್, ಮನಮುಟ್ಟಿ. "ಜನನೀ ದಯೆದೋರು
ಧ್ಯಾನ ಭಕ್ತಿಗಳನಿತ್ತು ಉಪಕರಿಸು, ತಾಯೇ ಬೇಡುವೆನ್."
ಕಾಳಿಕೆಯು ಭಕ್ತನ ಎದೆಯ ರನ್ನ ಗುಡಿಯನುಂ
ರಂಜಿಸಿದಳ್. ಶಿಷ್ಯಂ ಆನಂದ ಭಾವದಿಂ
ಪಿಂದಿರುಗಿ ಬಂದೊಡನೆಯೆ ಕೇಳಿದರ್ ಗುರುಗಳ್,
"ವತ್ಸಾ! ಧನ ಪ್ರಾಪ್ತಿಗೆ ತಾಯಿಯಂ ಬೇಡಿದೆಯ?"
"ಇಲ್ಲ, ಆಂ ನಿಜದಿಂ ಮರೆತುಬಿಟ್ಟೆ. ಈಗಳೇಂ
ಗೈಯಲಿ?"
"ಇದೇನಯ್ಯ, ತಾಯಿಯ ಬಳಿ ಬೇಡದೆಯೆ
ಬಂದಿರ್ಪೆ? ಆದೊಡೇಂ ಇನ್ನೊಮ್ಮೆ ಪ್ರಯತ್ನಿಸೈ"
"ಮತ್ತೆಂತು ಬೇಡಲಿ ? ಗುರುವರ್ಯಾ?"
"ಅದರೊಳೇಂ
ಕಕ್ಕುಲತೆ ಬೇಸರವೊ? ನೀಂ ಪೋಗಿ ಮತ್ತೆ ಕರ
ಜೋಡಿಸಿ ಭಯಭಕ್ತಿಯಲಿ ಕೇಳಿಕೊ. ಅವಳ್ ನಿಜ
ದಯಾಮಯಿ."
ನರೇಂದ್ರಂ ಪಿಂದಿರುಗಿದಂ ಮತ್ತೆ.
ದೇವಿ ಮೂರ್ತಿಯ ಮುಂತೆ ವಿನಮ್ರತೆಯಲಿ ಶಿರವಂ

ಬಾಗಿ ಪ್ರಾರ್ಥಿಸಿದನ್, ವರನಾಮಗಳ ಸ್ಮರಣೆ
ಮಾತ್ರಮಲ್ಲದೆ ಬೇರೊಂದು ನುಡಿ ಹೊಮ್ಮದಾಯಿತ್ತು.
ಪ್ರಯತ್ನಿಸಿಯುಂ ಸೋಲ್ದು ಪಿಂದಿರುಗಿ ಬಂದನಾ
ಗುರುವಿನ ಪದಸನ್ನಿಧಿಗೆ.
"ವತ್ಸಾ! ತಾಯಿಯಂ
ಧನಪ್ರಾಪ್ತಿಗಾಗಿ ಬೇಡಿದೆಯೇನ್ನೈ?"
ನರೇಂದ್ರಂ
ಯೋಚಿಸಿದನ್ ತನ್ನೊಳ್, ಉತ್ತರಿಸುವೊಡೆ ಬಾಯಿ
ಬಿರಿಯದಾಯ್ತು. ಗುರುಗಳ್ ನುಡಿಸಿದರ್ ಕರುಣೆಯಿಂ,
"ವತ್ಸ! ನೀಂ ಮತ್ತೆ ಪ್ರಯತ್ನಿಸು. ದಯಾಮಯೀ
ಶ್ರೀದೇವಿ ಕಣಾ! ಆಕೆಯಿಂದಾಗದ ಕಜ್ಜವದಿನ್ನಿಲ್ಲ.
ನರೇಂದ್ರನಾಥಂ ಮತ್ತೈದಿದಂ ದೇವಿ ಮಂದಿರಕೆ.
ಮೂರ್ತಿಯಂ ನೆಟ್ಟನಿಟ್ಟಾಲಿಯಂ ವಿಚಲಿಸದೆ
ನೋಡಿದಂ. ಪ್ರಸನ್ನ ವದನಂ ತನಗೇನೋ
ತಿಳಿಪುವೊಲ್ ತೋರ್ದತ್ತು. ಭಾವನೋದ್ವೇಗದಿಂ
ಪ್ರಾರ್ಥಿಸಿದನ್ "ಹೇ ತಾಯೆ, ತ್ರಿಲೋಕ ಧಾರಿಣಿ!
ಶಿರವಂ ಮಣಿವೆ ತವ ಪರಮ ಪಾದ ಪಂಕೇಜ
ದ್ವಯಂಗಳಿಗೆ. ಆನೇನ ಬೇಡಲಿ ತವ ದಿವ್ಯ
ಸೇವೆಯಂ ಬಿಟ್ಟು. ಮುನ್ನಡೆಸೆಮ್ಮ ಕೈಹಿಡಿದು
ವರಪಥಕೆ.

"ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ
ಓಂ ಶಾಂತಿ ಶ್ಶಾಂತಿ ಶ್ಶಾಂತಿ: ॥"

ಮೈಮನ ಮರವಟ್ಟುವೊಲಲ್ಲೇ ಕೆಲಕಾಲ
ನಿಂತು ನೋಡಿದನ್ ತರುಣ ಮನೀಷಿ. ಮುನ್ನೋಟ
ಕೀಲಿಸದೆ. ಕಳಿದುವು ಕೆಲಗಳಿಗೆಗಳ್. ಯೋಚಿಸಿ
ನೋಡೆ, ಅಹ. ಆನೆಂಥ ಮೂರ್ಖ! ಚಕ್ರವರ್ತಿಯ
ಬಳಿಯೊಳ್ ಬದನೆ ಸೊಪ್ಪುಸೊಗಡುಗಳಂ ಬೇಳ್ಪಪರೆ?
ಲಜ್ಜೆಗೇಡು! ಈವಗೆಯ ಮರುಳ್ತನ ಮಿನ್ನುಂ
ಎಲ್ಲಾದೊಡುಂಟೆ? ಹಾ. ಏಂಗೈದೆಂ? ಮನ್ನಿಸೆನ್ನ
ದುರಿತಮಂ ತಾಯೆ! ಕಾಲ್ವಿಡಿದು ಬೇಳ್ವಪೆಂ ನಿನ್ನ."
ಕಾಳಿಮೂರ್ತಿಯ ಪದತಲದಿ ಉದ್ದಂಡ ಪ್ರಣಾಮ
ಸಲಿಸಿ ಪೊರವಂದಂ. ನಡೆದುವು ಕಾಲ್ಗಳ್ ಮನದ
ಆದೇಶಮಿಲ್ಲದೆಯೆ ಗುರುಗಳ ಕೊಠಡಿಗೆ. ಮುಖ
ಬಿಂಬದಲಿ ಗಾಂಭೀರ್ಯ ಭಾವ ತುಂಬಿತುಳುಕುವ
ತೆರದೊಳಿರ್ದುದಂ ಕಂಡ ಗುರುಗಳ್ ಎಳೆಮುಗುಳ್
ಸ್ವಾಗತವ ನೀಡಿದರ್ "ಬಾ ವತ್ಸ! ಕುಳಿತುಕೋ."
ನರೇಂದ್ರಂ ಧ್ಯಾನಮೌನಮೂಕತೆಯೊಳಿರುತಿರೆ
ಗುರುದೇವನ ಸುಸ್ವಾಗತ ತಣಿಸಿದುದು ನೊಂದ
ಹೃದಯದ ಸ್ವರ್ಣಕುಂಡಮಂ. ನುಡಿಯೆ ನಾಲಿಗೆ
ಹೊರಳದಾಯ್ತು.
"ವತ್ಸಾ! ಜಗನ್ಮಯಿ ಕಾಳಿಮಾ
ದೇವಿಯಂ ಬೇಡಿದೆಯ ದ್ರವ್ಯಲಾಭಕ್ಕಾಗಿ?"
ಗುರುದೇವನ ನುಡಿ ಕರ್ಣಪಟಲಂ ತಾಗುತೆಮ್ಮ
ಹೃತ್ ಬೀಣೆಯಂ ಮಿಡಿಸಿತು.
"ಇದೆಲ್ಲಂ ನಿಮ್ಮ
ಮಾಯಾದಾಟ! ದೇವಿಯ ದರ್ಶನಂ ಭಯಭಕ್ತಿ
ಜ್ಞಾನ ವೈರಾಗ್ಯಗಳ ಬೇಡಿಕೆಗೆ ಮಾತ್ರಮೇ

ಅಲ್ಲದೆಯೆ ಕಾಂಚಾಣ ದ್ರವ್ಯಗಳಿಗಲ್ಲ. ಎನ್ನ
ಗುರುತರ ಸಮಸ್ಯೆಗೆ ಸರಿದಾರಿಯಂ ನೀಮೆನಗೆ
ತೋರ್ದು ಉಪಕರಿಸಿ ಗುರುವರ್ಯ!"
"ವತ್ಸಾ! ನಿನ್ನಾ
ಪ್ರಾರ್ಥನೆಯದು ಈಗಾಗಳೆ ದೇವಿಯ ದಿವ್ಯ
ಪದತಲಕೆ ಸಂದಿಹುದು. ಮುಂದೆ ಆಕೆಯ ಪೂರ್ಣ
ಅನುಗ್ರಹ ಒದಗಿ ಬಂದಪುದು ನೀಂ ಚಿಂತಿಸುವ
ಅಗತ್ಯಮದಿಲ್ಲಂ. ಸದಾ ದೇವಿಯೊಳ್ ನಂಬಿಗೆಯನಿಡೈ!"
ಅಂತಿಂತು ಗಗನ ಮಂಡಲದೊಳಾವಾವ ಗ್ರಹ
ಕೋಟಿಗಳ್ ಉಪಾರೂಢಮಾಗಿರ್ದುವೊ ಎನಲ್
ಕಿರುನಗೆಯ ಶುಭಗಳಿಗೆಯಾಗಮಿಸಿತು, ನರೇಂದ್ರ
ನಾಥನ ಕದಡಿದ ಬಗೆಗೆ ಸಾಂತ್ವನ ನೀಡುವೊಲ್.
ಗುರುವಿನ ಶುಭವಚನ ಫಲಿಸಿತೊ ಆ ಕಾಳಿ
ಮಾತೆಯು ಅಭಯ ಹಸ್ತ ತೋರ್ದಳೊ ಎನುವ ತೆರದಿ.
ವೃತ್ತಿಯಾಕಾಂಕ್ಷಿ ಯುವ ಪ್ರಭೃತಿ ನರೇಂದ್ರನಾ
ಆರ್ಥಿಕ ಪರಿಸ್ಥಿತಿಯು ಕಿಂಚಿತ್ ಅನುಕೂಲತೆ
ಪಡೆಕೊಳ್ಳವೊಲ್ ದೊರಕಿದುದು ಶಾಲೆಯ ಸುವೃತ್ತಿ.
ಕಿರಿಯ ಮಕ್ಕಳ ಮನಕೆ ಜ್ಞಾನ ಪರಿಜ್ಞಾನಮಂ
ಸುಲಲಿತತರದಲಿ ಕಲಿಪುವೊಡೆ ವಿದ್ಯಾ ಸಾಗರ
ಪಾಠಶಾಲೆಯುಂ ಕೈವೀಸಿ ಕರೆಯಿತು ಬಲ್ಮೆ
ತುಂಬಿದ ದನಿಯೊಳ್. ಕಿರಿಯರ ಶಾಲೆ ಎನಲ್ಕದು
ಸಾಮಾನ್ಯಮೆ ವಲಂ. ಪಗಾರವುಂ ಅತಿಕಿರಿದು,
ಆದೊಡಮದು ಸಮಯೋಚಿತ ಬಿತ್ತಮೆಂದಾಯ್ತು.
ಮಕ್ಕಳೊಡನಾಟಂ ಮನೋವಾರ್ಧಿಗೆ ಕಿಂಚಿತ್
ಸಂತಸವನೂಡಿಸಿದೊಡಂ ತನಗದು ಅಹಿತಂ.

ಸಂನ್ಯಾಸಿ ವ್ರತದೊಳಿಹ ದಾಹ ಮನಮತಿಯಂ
ಪರಮಯೋಗ ಭೋಗದ ಭುವಿಯತ್ತಲ್ ಸೆಳೆವುದು
ಹೃತ್‌ಕುಂಡಮಂ. ತಾಯಿ ಭುವನೇಶ್ವರೀ ದೇವಿ
ಕುವರನ ಮಹೋನ್ನತ ಭವಿಷ್ಯಮಂ ನೆನೆನೆನೆದು
ಹಾಡುವಳ್ ಪಾಡುವಳ್ ನುತಿಸುವಳ್ ದೇವಿವ್ರತ
ವ್ರತಿಯಾಗಿ. ಒರ್ಮೆ ಮನಕೆ ಕಿನಿಸಿಗೆಯೊತ್ತಿದೊಡೆ
ಮಗದೊರ್ಮೆ ಶಿವನ ಆಶೀರ್ವಾದವಂ ನೆನೆದು
ಸಮಾಧಾನದ ಮೂಟೆಯಾದಪಳ್, ತನ್ನೊಳುಂ.
ಹೃತ್ಕಮಲದ ಚೈತ್ರಸೂರ್ಯ ಸಂಸ್ಕಾರವತ್
ತೊಳಗಿ ಬೆಳಗಿದಪನೆಂದೆಂಬ ದೃಢ ನಂಬಿಗೆ
ಇರ್ದುದು ಚಿರವಾಗಿ. ಎದೆಯಲಿ ಆತ್ಮವಾಣಿಯು
ಪಾಡುತಿಂತು ಧೈರ್ಯದ ಹೊನಲ್ ಹರಿಪುದು ಸದಾ.

ಪ್ರದೋಷೇ ದೀಪಕಶ್ಚಂದ್ರ:
ಪ್ರಭಾತೇ ದೀಪಕೋ ರವಿ: ।
ತ್ರೈಲೋಕ್ಯೇ ದೀಪಕೋ ಧರ್ಮ:
ಸುಪುತ್ರ: ಕುಲ ದೀಪಕ: ॥

ಚಿತ್ರಭಾನು ಗ್ರಸ್ತಾ ಚೈತ್ರಸುಂದರ ಭವ್ಯ
ಕಾಲಂ; ಸಿರಿಗಂಧ ಸುಗಂಧಿತ ಅರಣ್ಯಾನಿ
ಶೋಭಿತ ಸುಸಂಭ್ರಮಿತ ತರತರದ ತಳಿರ್‌ಗಳ್
ಪರಿವೇಶ್ಟಿತಂ; ಭೀಷ್ಮ ಭೂಷಣ ಸಿರಿಚಂದನದ
ದ್ರುಮಕೋಟಿ ಶಾಖೋಪಶಾಖೆಗಳಂ ಹರಡಿ
ಹಬ್ಬಿರ್ದ ಭೂಮ ದೃಶ್ಯಂ. ಸಕಲ ಕುಸುಮಕುಲ
ಸಂಕುಲಮುಗುವ ಸೌರಭ ದ್ರವ್ಯಂ; ಇಂದಿಂದಿರ ಶೋಭಾ
ಸುಮಕರಂಡಲೋಕಂ. ಮತ್ತಮಾ ಭೂಜೇಶ
ವೈಭವೋಪೇತ ರುದ್ರ ಭಯಂಕರ ರೂಪಿನ

ವೇಶಾವೇಶದಟವಿಯ ರಂಗಂ. ವಿವಿಧ ಸುಂದರ
ವರ್ಣವರ್ಣಾಂತ ಹಿರಿಕಿರಿಯ ಕುಸುಮಸಂಪದ
ಮನಮೋಹಕ ಪರಿಷತ್ತಿನ ಸಮಾವೇಶನಂ.
ಕೋಟಿಕೋಟಿ ಝಿಲ್ಲಿಕಾ ಭೀಮತೂರ್ಯ ಕರ್ಕಶ
ಗದ್ದಲಂ; ವನವಿಹಂಗಮ ಕೂಜಿತ ವಿಧವಿಧ
ರಾಗಾನುರಾಗಗಳುಗುವ ತಾನವಿತಾನಂ.
ಮಂದಮಂದಾನಿಲನ ಚಾಮರೀಕೃತ ಸೇವೆ
ಸಮಯೋಚಿತಂ. ಇಂತು ಎಲ್ಲವಗೆಯ ಪ್ರಕೃತಿ
ಚಿತ್ರಣಂ ಭವ್ಯ ಸುಂದರಂ.
ನರೇಂದ್ರನಾಥಂ.
ಪೆತ್ತಮ್ಮೆಯ ಕಾರುಣ್ಯಪೂರ್ಣತಾ ಸುವಿಶಾಲ
ವಕ್ಷವೇದಿಯಲಿ ಧೈರ್ಯಸ್ಥೈರ್ಯದ ದಿವ್ಯತಮ
ಹೊನಲ್ ತುಂಬಿ ಹೊನ್ನಿನ ಹೊಂಗೊಡವಾದುದಂ
ಅರಿಯದವನಲ್ಲಂ. ಬಲು ಶ್ರದ್ಧೆಯಿಂ ಸಡ್ಡೆಯಿಂ
ನಿರ್ವಹಿಸುವ ಕಾರ್ಯದ ಭಾರಂ ಭರತವರ್ಷ
ಬೋಧಿಸುವ ನಾರೀತತ್ತ್ವ ಪ್ರತಿಪಾದನೆಯೆನೆ
ತನಗೆಲ್ಲವುಂ ಕರತಲಾಮಲಕ ಸತ್ಯವೇ.
ಆ ತಾಯಿಯ ಜೀವನ ಮೌಲ್ಯಮೆಂದೆನೆ ಸುತನ
ಸರ್ವೋತ್ತಮ ಉತ್ಥಾನ. ಅಂತಲೇ ತನ್ನ ಪಥ
ಸತ್ಪಥಮಿರಲಕ್ಕುಂ ಎಂದೆಂಬ ಗೌರವದಿಂ
ನೇಮದಿಂಗೈವ ಸಾಧನಾಶೀಲತೆಯದು
ದಿಟಂ. ನರೇಂದ್ರನಾಥಂ ಆಗಳಾಗಳ್ ಶ್ರೀ
ಮದ್ಗುರುವಿನ ದರ್ಶನ ಭಾಗ್ಯಕಾಗಿ ಕಾಳೀ
ಮಂದಿರದ ಪುಣ್ಯಪಥವಂ ತುಳಿವನೇಕಾಂಗಿ.
ಧ್ಯಾನಭಕ್ತಿ ಗರ್ಭಿತ ದೇಹ ಸಂಪದದುಸಿರ್

ಬಿಸಿಯಪ್ಪುದು ಮೈಮನಗಳಿಗೆ ಒತ್ತುಕುಡುವೊಲ್.
ಗುರುಶಿಷ್ಯರ ಪೂರ್ಣಮನದ ಸ್ನೇಹಾರುಣಂ ಘನ
ವೆತ್ತವೊಲ್ ಘನಿಸಿ ವೆರ್ಚಿದುದು ಬೆಸುಗೆಯಂ ಬಿಗಿ
ಬೆಸೆದವೊಲ್. ಓರ್ವರನುಳಿದೊರ್ವನುಂ ಬಿಡಿಸಿ
ವಿವೇಚಿಸಿದೊಡೆಮ್ಮ ಭಾಗಕ್ಕದು ಅಪೂರ್ಣ ಕಣಾ!
ದ್ವಿದಳಧಾನ್ಯದವೊಲ್ ನಿಬಂಧಂಮೆಸೆಯುವುದು
ಗುರುಶಿಷ್ಯರ ಬಂಧಾನುಬಂಧದಲಿ. ಎಲ್ಲಿಯಂ
ಕಂಡುಬರದ ಮತ್ತೆಲ್ಲಿಯುಂ ದೊರೆಯದ ದಿವ್ಯ
ಅದ್ವಿತೀಯ ಬೌದ್ಧಿಕ ಕರಂಡಗಳ್. "**ಏಕಮೇವಾ
ದ್ವಿತೀಯಂ**" ಎಂಬವೊಲ್. ಮೊತ್ತಮೊದಲ್ ದಿವ್ಯ
ಆಕಸ್ಮಿಕಮೊ ಎನೆ ಎರಗಿದ ಗುರುದೃಷ್ಟಿಯು
ಗರುಡ ದೃಷ್ಟಿಗಿಂ ಮಿಗಿಲಾಯ್ತು ; ಯುವ ಚೇತನಂ
ಎದುರ್ವೆತ್ತ ಪ್ರಪ್ರಥಮ ಭೇಟಿಯೊಳ್ ಮನವಾರೆ
ಮೆಚ್ಚಿ ನೆಚ್ಚಿದ ಬಳಿಕಲಾ ಪ್ರೌಢ ಪ್ರಭೃತಿಗೆ
ವರಶಿಷ್ಯತ್ವವಂ ನೀಡಿ ದೈವತ್ವವಂ ಕಂಡು
ಮನದುಂಬಿದ ಪರಮಗುರು ಶ್ರೀರಾಮಕೃಷ್ಣ
ಪರಮಹಂಸರ್, ಶಿಷ್ಯನೊಳ್ಪಿಗಾಗಿ ಸನಾತನ
ಧರ್ಮದೊಳ್ಪಿಗಾಗಿ, ಜಗತ್ಒಳ್ಪಿಗಾಗಿ, ಕೈ
ಕೊಂಡ ಗುರುತರ ಕಾರ್ಯವದು ಅಪಾರ. ಶ್ರೀಗುರು
ಮಹೋದಯರ್ ತಮ್ಮ ಅನುಭವ ಸಂಪುಟದಲ್ಲಿ
ತುಂಬಿರ್ದ ಅಕ್ಕರೆಯ ಸಕ್ಕರೆಯ ಪಾಕದೊಳ್
ಮುಳುಗಿಸಿ ಅನನ್ಯ ವೇದಾಂತ ಜ್ಞಾನ ಯಜ್ಞದ
ಕುಂಡದಲಿ ಪುಟವಿಟ್ಟು ಅಪರಂಜಿಯಂಗೈದು
ಬೃಹದ್ ಜಗತ್ ಪಾರಾವಾರಕ್ಕೆ ಕೋಗಿಲೆಯ
ಮರಿಯಂತೆವೊಲ್ ಹಾರಬಿಟ್ಟು ಧರ್ಮ ಸಾಧನೆ

ಗೈದ ವಿಶಿಷ್ಟತಮ ಸಂಬಂಧವೆ ಸಂಬಂಧ!
ಅದುಂ ಸರ್ವತ್ರ ಪ್ರಾಕೃತಧರ್ಮಮಾಗಿರದೆ
ಆಧ್ಯಾತ್ಮಯೌಗಿಕ ಧರ್ಮಮಾಗಿರ್ದುದು ಪರಮ
ಚಾರಿತ್ರಿಕ ಸಂಪದಕೆ! ಹಿಂದಿಲ್ಲದ ಮುಂದಿರದ
ಅಪಾರ ಮನಕೌಶಲದ ಮೇಣಧಿಕ ಬೌದ್ಧಿಕ
ಕರಂಡದ ಚಮತ್ಕಾರಂ. ಶಿಷ್ಯವರೇಣ್ಯನುಂ
ಗುರುದೇವನ ಕೂರ್ಮೆಯಲಿ ಒಡಮೂಡಿದ ದಿವ್ಯ
ಮೂರುತಿಯು ಮಾತ್ರವಲ್ಲಂ. ನಾಡಿನ ಪ್ರಾಣದ
ನಾಡಿನಾಡಿಗಳ ಆವೇಶದಾವೇಶದಲಿಯೆ
ಪ್ರತಿರೂಪೊಡೆದಾ ತೇಜೋನ್ವಿತ ತೇಜಸ್ವಿ!
ಮಹದ್ವ್ಯಕ್ತಿದ್ವಯರ ವಿದ್ಯುದ್ವಾಲಿಂಗನದ ದಿವ್ಯ
ಪರಾಕಾಷ್ಠೆಯಿಂ ಸಿಡಿದ ಅದ್ವಿತೀಯ ಆತ್ಮಜ್ಯೋತಿ
ಉರಿದುರಿದು ಲೋಕ ಕೀರ್ತಿಪಡೆದ ಅದ್ವಿತೀಯ.
ಗುರುಶಿಷ್ಯರೀರ್ವರುಂ ಒಂದೇ ಚೈತನ್ಯದ
ಮುಖದ್ವಯಗಳ ತೆರದಿ ವಿಜೃಂಭಿಸಿದ ಅವಳಿ
ಮೂರ್ತಿಗಳ್! ಬಂಗಾಳ ಮಾತೆಯ ಉಡಿಯಲಿ ಒಡ
ಮೂಡಿ **"ಮಾತೃದೇವೋಭವ ಪಿತೃದೇವೋಭವ**
ಗುರುರ್ದೇವೋಭವ" ಮಂತ್ರಮಂ ಮಠಗಳ
ಅಂತರಾಳದಿಂ ಪೊರಗೆಳೆದು ದಾಕ್ಷಿಣ್ಯಕತನ
ವೆರಸಿ ಜಗದ ಚೆಂಬೆಳಕಿಗೆ ಬಿಟ್ಟು ಮನಮನವ
ಮುಟ್ಟಿತಟ್ಟಿ ತುಂಬಿ ಬಡಿದೆಬ್ಬಿಸಿದ ಮಾನವರ್!
ಮುಂದೆ, ನರೇಂದ್ರನಾಥದತ್ತಂ ಕಾಲಗತಿಯಲಿ
ಸಂಜೀವನದ ಹೊಣೆಗಾರಿಕೆಯೊಳ್ ಜಡಿನಿಂದು
ಕಾವಿವಸನಧಾರಿಯೈಸಿ ಜಗತ್ ಪ್ರಖ್ಯಾತಿ
ಪಡೆದು ಧೀರ ಧೀಮಂತನಾಗಿ ಘನತೆವೆತ್ತು

ವಿಜೃಂಭಿಸಿದಾಗಳುಂ ಮಾತೆಯಂ ಮರೆತನೇಂ
ಮೈವೆರ್ಚಿ? ಅಂದಿನ ಸರಸ ಸರಳ ಸಂಭಾಷಣೆ
ಸಹಕಾರ ಸಹಾಯಗಳ್ ಹಚ್ಚ ಹಸುರಾಗಿಯೆ
ಉಳಿದಿರ್ದುವು ಅಚ್ಚಳಿಯದ ತೆರದಿ. ವಿದೇಶದ
ಯಾತ್ರೆಯಂ ಕೈಕೊಳ್ವ ಮುನ್ನ ತಾಂ ಆಗಾಗ
ಪೂರ್ವಾಶ್ರಮವಂ ಬೊಕ್ಕು ಎಲ್ಲರ ಜೊತೆಗೂಡಿ,
ಪ್ರೇಮಾದರದಿಂ ಜನನಿಯ ಪಾದಪದ್ಮಗಳ
ಸನ್ನಿಧಿಗೆ ಶಿರಮಣಿಯದೆಯೆ ಬಂದವರಲ್ಲಂ.
ಜನನಿಗೆ ಅವರಿತ್ತ ಅನನ್ಯ ಪ್ರೀತ್ಯಾದರಂ
ಭಾರತದ ತತ್ವಕನುಗುಣಮಾಗಿ ಮೆರೆದತ್ತು,
ಭಾರತೀಯತೆಯ ಸುಂದರ ಶೋಭಾ ಶೈಲಿಯಲಿ.
ಸಂಜೀವನಾಲವಾಲದಲಿ ಸತ್-ಚಿತ್-ಮೃತ್
ಚಿಂತನಾವೇಶದೋಳ್ ಭಾವಸಮಾಧಿಯಲಿ
ದಿವ್ಯ ಅನುಭವಾಮೃತ ಘನಿಸೆ ಸ್ವಾತಿ ಹನಿಗಳ್
ಮುತ್ತಾಗುವ ತೆರದಿ ಜನುಮ ಸಾಫಲ್ಯದ ಬಲ್ಮೆ
ಬಲಿಯುವುದು ದಿಟ. ಮನುಕುಲಕೆ ಜ್ಞಾನ ಪ್ರಜ್ಞಾನಂ
ಮುಂಬೆಳಸಿ ಪ್ರೋಜ್ವಲಿಪುದೆ ಬದುಕಿನ ಹೆಗ್ಗುರಿ.
ಗಿಡ ಬಳ್ಳಿಗಳಿಗೆ ದಿವ್ಯಮಾ ಸುಮರಾಜಿಯಲಿ
ಹೊಂಪುಳಿಯು ಮೆಂತಂತು ಮನುಕುಲದಲಿ ಪ್ರಜ್ಞಾನ
ಶೋಭೆಯಂತು ಹೊಂಪುಳಿಯಲ್ತೇ ಸರ್ವಧರ್ಮಗಳ
ಆಚರಣೆಗೆ ಮನ್ನಣೆಯನಿತ್ತು ಗೌರವದಿಂ
ರಕ್ಷಾಬಂಧಮಂ ಕಟ್ಟಿದ ಮಹರ್ಷಿವರೇಣ್ಯರಂ
ಸಾಮಾನ್ಯ ಹುಲುಮಾನವರುಂ ಅರಿತುಕೊಂಬುದೆನೆ
ಸಾಮಾನ್ಯಮೇ? ಭೂಮಮಂ ಅರಿವೊಡೆ ಇನ್ನೊರ್
ಭೂಮಮಲ್ಲದೆ ಬೇರಾರ್ ಅರಿವರ್ ಮನುಕುಲದಿ?

ಅಂತಿಂತು, ಓ ಅಂದು, ಪಾಪನಾಶಿನಿ ದೇವ
ಗಂಗೆಯಲಿ ಸುಳಿದಾಡಿ ಹೊಂಚಿನೋಡಿ ತಟಿಯೊಳ್
ಕಾದಿರ್ದ ಅದ್ಭುತ ಮಕರವದು ಜಲಧಿಯ ಸುಖ
ವಾಸದೊಳ್ ಸಂತೃಪ್ತಿ ಪಡೆದುದೇಂ? ತನ್ನೊಂದು
ನಿಜ ಸಾಧನೆಯ ರಂಗಕೆ ದಿವ್ಯತಮ ರಿಸಿ ಪಾತ್ರ
ಧಾರಿಯಂ ಪುಡುಕುಡುಕಿ ಕಟ್ಟಕಡೆಯಲಿ ಸರಿ
ದೋರ್ದ ಸಿಂಹ ಶಾಬಕಮಂ ತನ್ನಯ ವಿದ್ವತ್
ಪೂರ್ಣತಾ ದಂತದಿಂ ಪಿಡಿದುದು ಅತ್ತಿತ್ತಲುಗದ
ಪಾಂಗಿನಲಿ. ಶಾಬಕಂ ಕೊಸರಾಡಿದುದೆ ತನ್ನ
ಬಂಧನದ ಬಿಡುಗಡೆಗೆ? ಕೋಡಿದುದೆ ಕೈಮಸಗಿ?
ಅಂಜಿದುದೆ ಅಧೀರತೆಯಿಂ? ಅಹ, ಪರಿಸ್ಥಿತಿಗೆ
ಅನುಗುಣಮಾಗಿ ತಲೆಬಾಗಿದಂ ವೀರಯೋಧನ
ತೇಜದಲಿ! ಕುಗ್ಗಿದ ಸ್ವಧರ್ಮ ಸುಸಂಸ್ಕೃತಿಗಳ
ಉಜ್ಜೀವನಕಾಗಿ ಭುಜಕೊಡುವ ಪಣವಂ ತೊಟ್ಟ
ಸೇನಾನಿ. ಮಹಾ ಮಾನಸ ಮಂಡಲದ ತುಮುಲ
ನಡೆದಿರಲ್ ತಿರ್ರನೆ ತಿರುಗುವ ಚಿಂತನಾಬ್ಧಿಯ
ಮಂಥನಗಳೋಳಿಯಲಿ ಅತೀಂದ್ರಿಯ ಪ್ರಜ್ಞೆಯುಂ
ಜೃಂಭಿಸಿದ ಜೀವದ್ವಯಗಳ್ ಮುಳುಮುಳುಗಾಡಿ
ಈಸಿದುವು ಧರ್ಮತೀರ್ಥದಲಿ, ತನುಮನಂಗಳ್
ದಣಿವನ್ನ. ಧಾರ್ಮಿಕ ಯಜ್ಞದಲಿ ಬೇಯುವುದೆನೆ
ಧಗಧಗಿಪ ಅಗ್ನಿಯ ಮುಖಂ ಪುಗದೆ ಗತಿಯಿಲ್ಲ.
ತಪಸ್ವಿಗಳ ವರ ಸಾನಿಧ್ಯಂ ತಪಸ್ಸಿಗಿಂ ಸರ್ವಥಾ
ಮಿಗಿಲ್. ಪ್ರಜ್ಞಾನ ಕೃಷಿಗಿಂ ಅಧಿಕ. ವಿಜ್ಞಾನ
ಸಂಯೋಜನೆಗಿಂ ಪ್ರಯಾಸ. ಇಂತಿಂತಿರಲ್
ನಿಚ್ಚಸಾಧನೆಯತೀ ಕ್ಲಿಷ್ಟಕರ. ನರೇಂದ್ರಂ

ಪ್ರಜ್ಞಾನ ಪುಳಕಿತನೆನೆ ವಜ್ರಮತಿ ಇನ್ನಿನಿತು
ಬಲಿತು ಆಮ್ರವೃಕ್ಷದೊಲ್ ನೆಗಳ್ದು ಗಗನಕ್ಕೆ
ಧರ್ಮಕರ್ಮಗಳ ಹರೆಗೈ ಚಾಚಿ ವಿಧವಿಧ
ಕ್ಷೇತ್ರಗಳ ಕ್ಷೇತ್ರಜ್ಞನಾಗಿ ಗುರುವರ್ಯನಾ
ಶುಭಾಶೀರ್ವಾದದ ಸತ್ ಸಾಗರದಾಳದಲಿ
ದ್ವೈದೀಭಾವವಿಭಾವಗಳ ಪ್ರಚಂಡತರತಮ
ಅಲೆಗಳಲಿ ಸಿಲುಕಿ ಈಸಿ ಈಸಾಡಿ ಕಲಿತನ
ಮೈಗೊಂಡು ಬೋಧನಾ ಸಾಧನಾ ಮತಿಗತಿಗೆ
ಸನಾತನ ಧರ್ಮಮೆಂತಂತು ನಾಗರಿಕ ಪ್ರಜ್ಞಾನ
ಜ್ಞಾನಮಂತು ವಿಜ್ರಂಭಿಸಿದುದು ಅನವರತಂ.
ಗುರುವರೇಣ್ಯನ ಶಕ್ತಿಯುಕ್ತಿ ಪರಿಪೂರ್ಣತೆಯ
ಅನುಭಾವದ ಶಾಸ್ತ್ರೀಯ ಸಿದ್ಧಾಂತಗಳಿಂದೆ
ಮನಃತೃಷ್ಣೆಯುಂ ತಣಿಯದೊ ಎನಲ್ ದಿನನಿತ್ಯ
ಸತ್ಯಸಾಧನೆಯ ಸಾಕ್ಷಾತ್ಕಾರದ ಸವಿಯುಂಬ
ಉತ್ಕಟಾಭಿಲಾಷೆಯು ಭೂಮಗೊಳ್ಳುತಿರ್ದತ್ತು
ದಿನದಿನಂ. ಹಿರಿಜನರ ಗುರುಜನರ ಸದ್ಗ್ರಂಥ
ಬಂಢಾರದ ಕಾಣ್ಕೆಯನು ಮನದುಂಬಿದ ಬಳಿಕಂ
ಪ್ರಜ್ಞಪ್ತಿ ಪ್ರಜ್ಞೆಯಲಿ ಪ್ರಕಾಶಿತ ಶ್ರೀಗುರು
ರಾಮಕೃಷ್ಣ ಪರಮಹಂಸರ ದಿವ್ಯಚರಣಗಳ
ಸಾನ್ನಿಧ್ಯದಲಿ "**ನಹಿ ಜ್ಞಾನೇನ ಸದೃಶಂ**" ಎಂಬ
ವಾಕ್ಯಲಹರಿ ಕರ್ಣಪಟಲದ ಸನಿಹದಲಿಯೇ
ಮೊಳಗುವುದು ಮತ್ತೆ ಮತ್ತೆ ಮನ ವಿಸ್ಮೃತಿಯಲ್ಲಿ
ಮುಳುಗದ ಪರಿಯಲಿ.
ಇಂತಿಂತಿಂತು ಪ್ರಶಾಂತ
ರಸನೆಯ ಪರಮ ದ್ರವ್ಯ ಒಸರಿ ಹೃದಯದ ಸಿರಿ

ಕರಂಡಂ ತುಂಬಿ ತುಳುಕಿದುದು ಕೋಡಿವರಿದೊಲ್
ನಿಚ್ಚಂ ಅಧ್ಯಯನ ಜಿಜ್ಞಾಸೆ ಸಂವಾದ ಧರ್ಮ
ಸುವಿಚಾರ ವಿಶ್ಲೇಷಣೆ ತಾತ್ವಿಕ ಮತ್ತಮಾ
ಪರಿವ್ರಾಜಕತೆ ಇಂತು ಅನೇಕ ಬಗೆಬಗೆಯ
ಸಂಜೀವನ ಮೌಲ್ಯಂ ಹೃದಯಗತಗೊಳಿಪಂ.
ದೂರದೂರ ದಿಗಂತದಾಚೆಯ ಜಗದ್ಭೆಸಿರಿ
ಸಂಪದವನರಿತು ತಿಳಿದುಕೊಂಬುವ ಆಸೆಯುಂ
ಬಲಿವುದು ಭಾವನಾವೇಶದಲಿ. ಗುರುವರ್ಯನ.
ಆತ್ಮಾನಂದದಗ್ನಿ ಜ್ವಾಲೆಗೆ ಸಿಲುಕಿದ ಪತಂಗಂ
ತಾನಾಗಿಹ ನರೇಂದ್ರನಾಥನುಂ ತನ್ನಿರುವ
ತಾನರಿಯದೊಲ್, ಪಜ್ಜೆಪಜ್ಜೆಗುಂ ಅತ್ತತ್ತ
ದಕ್ಷಿಣೇಶ್ವರ ದೇಗುಲದತ್ತಲೆ ನಡೆವ, ದಿಗ್
ಸೂಚಿಯನನುಸರಿಪ ಜಹಜಿನ ಮಾಳ್ಕೆಯಲಿ. ಆ
ಪಥಗಾಮಿಯ ಮನದಲಿ ಬಂಗಾಲಿ ಮನುಕುಲದ
ಮನೋವಿಪ್ಲವದ ರುದ್ರುಕಾಂಡದೊಳ್ ಮೂಡುವ
ಸನಾತನ ಮೇಣರ್ವಾಚೀನತೆಯ ತಿಕ್ಕಾಟ
ಭುಗಿಲೆಳ್ಪ ರೋಷಭೀಷಣತೆಯಾ ಅಕಾಂಡ
ತಾಂಡವ ನೃತ್ಯವಿಶೇಷ ಜ್ಞಾನಾಂಧತೆಯುಂ ಎಳೆ
ಎಳೆಯಾಗಿ ತೋರುತಿದೆ ಹಿಂಜಿಹಿಂಜಿ; ಜಗತ್ತಿನ
ಕಲ್ಯಾಣಕಾಗಿ ತಾಂ ತುಳಿವ ಪಥ ಸುಧರ್ಮದ
ಪಥವೆ ಇರಮೇಳ್ಕುಮೆನುತೆ ನಡೆವ ಮುಂದೆ ಮುಂದೆ.
ಸನ್ ಸಾವಿರದೆಂಟನೂರೆಂಬತ್ತೈದನೆಯ ವರ್ಷ
ಮಾಸವುಂ ಬರಬರುತೆ ಚಂದ್ರಮನ ಚಂದ್ರಿಕೆಯ
ಹರವು ಬತ್ತಿಬಾಡಿದುದೊ, ಬಂಗಾಳ ಲಕ್ಷ್ಮಿಯ
ಮನಮುದುಡಿ ಜಡತ್ವಂ ಪಡೆದು ಪ್ರತಿಮೆಯಾದಳೊ,

ಧರ್ಮದೇವತೆಯುಂ ಕುಪಥಂಚರರ ಕುಮತಿಗತಿಗೆ
ಪೇಸಿ ಬೇಸತ್ತು ಪಡಿಮೊಗಮಾದಳೊ, ಕಟುತರ
ವೇಸಿಗೆಯ ದಿನಮಾನ ಜಾರಿ ಸುಡು ವಿಸಿಲಿನಾ
ವೇಗೆ ರಣರಣಿಸಿದುದೊ ಎನಲ್ ಉಷ್ಣೋಷ್ಣತಮ
ವಾತಾವರಣಂ ಸುಡುತಲಿರ್ದುದು ಕಟ್ಟುರಿಯ
ಕಾಯ್ಪಿನಲಿ ರಾಹುಕೇತುಗಳವೊಲ್ ಕಾಡುತ್ತೆ.
ಮೇಣಾವ ಅಪಗ್ರಹ ಉಪಾರೂಢಮಾದುದೊ
ಅಂಬರೋದ್ಯಾನದಲಿ ಎಂಬಿನಂ ಶ್ರೀರಾಮ
ಕೃಷ್ಣದೇವನ ಮೈಸಿರಿಗೆ ಬಡಿದುದು ಬೋಂಕನೆ
ಕುದೃಷ್ಟಿಯ ಕೂರ್ಬಾಣ ತನುಮನಂ ತಲ್ಲಣಿಪ
ತೆರದಲಿ. ಉಣಲಾರ, ಬಿಡಲಾರ, ನುಡಿಯಲಾರ
ಸೂಕ್ಷ್ಮಾತಿಸೂಕ್ಷ್ಮ ಚಿತ್ತಪ್ರವೃತ್ತಿಯದು ಮಂಕು
ಕವಿದವೊಲಾಯ್ತು. ಶಿಷ್ಯಮಂಡಳಿ ಬೆದರಿ ಬೆಂಡಾಗಿ
ತಹತಹಿಸಿತು ನರೇಂದ್ರನ ನೇತೃತ್ವದಲಿ. ಆಗ,
ಮುಗ್ಧದುಗ್ಧತೆಯ ಕತ್ತಲೆಯ ಕರ್ನೆಳಲ್ ನೆರೆ
ಹರಡಿರ್ದ ಕಾಲಮಾನ. ವೈದ್ಯಕೀಯ ಶಿಶು
ಕಣ್ಣಿಣ್ ಬಿಡುತಿರ್ದ ನಸುಬೆಳಕಿನೆಳೆಯತನಂ.
ಮನೆಮದ್ದು, ಪಿತ್ತಿಲಿನ ಮದ್ದು, ವೈದ್ಯರ ಮದ್ದು,
ಬಿಷಗ್ರತ್ನರ ಮದ್ದು, ದೇವಧನ್ವಂತ್ರಿಗಳ
ದಿವ್ಯ ಮದ್ದು ಕಷಾಯಗಳ್ ಮೈಸೇರಿದುವು
ರೋಗಿ ಶ್ರೀರಾಮಕೃಷ್ಣರ. ವಿಧಿಯ ಕರ್ರನೆಯ
ಛಾಯೆಯಿಕ್ಕುಳಂ ಮುಂಚಾಚಿತವರ ಕೊರಳ್ಗೆ!
ದಿನದಿನಂ ನೋವುನಿಡಿಗಳ್ವೆರ್ಚೆ ಪ್ರಾಣಕಣ
ಕಣಗಳಂ ಹಿಂಡುತಿರ್ದುದು ಆವುದಾವೊಂದು
ಚಿಕಿತ್ಸೆಯ ನಿಜಮದ್ದು ಮೈಗೊಡಗೊಡಿಸದೆಯೆ.

ನೆತ್ತರ ಝರಿ ಹಿಂಗಿದುದೊ ಪ್ರಾಣವಾಯು ತಾಳದೆ
ತತ್ತರಿಸಿದುದೊ ಮೆಯ್ಯ ಸ್ನಾಯುಗಳ್ ಕರಕರಗಿ
ದುರ್ಬಲಮಾದುವೊ ನರತಂತುಗಳ್ ಕಡಿದುವೊ
ಎನಲ್ ಅಮಿತ ತ್ರಾಸಭರಿತ ರೋಗದ ಹಸ್ತಂ
ಹಿಸುಕಿ ಹಿಂಡಿ ಹೀರುತ್ತಲಿರ್ದುದು ನೆತ್ತರಿನ
ಕಣಕಣಗಳಂ ದೇಹ ಸೊರಗಿ ಬರಡಾಗುವೊಲ್!
ಪರಮ ದೈವ ಭಕ್ತ, ಸಕಲಮನುಕುಲದ ದಿವ್ಯ
ಧನ್ವಂತ್ರಿ, ಸನಾತನ ಧರ್ಮ ದೃಷ್ಟಾರನೆನೆ
ಪ್ರಖ್ಯಾತಿಯಂ ಪಡೆದ ಧರ್ಮಪುರುಷ ಅನನ್ಯ
ವ್ಯಕ್ತಿಶ್ರೀಗೆ ಕಟ್ಟಕಡೆಗಾಲದೊಳ್ ಸುಖಮರಣ
ಭಾಗ್ಯದೊರೆಯದೆ ನರಳ್ವ ಗತಿಯೊದವಿಬಂದುದು.
ಅಗಾಧ ಉರಿ ನೋವುಗಳಿರೆ ಮಲಗಿ ಸುಖ ನಿದ್ರಿಪ
ಭಾಗ್ಯವುಂ ಇಲ್ಲವಾಯಿತು ಶ್ರೀ ಮದ್ಗುರುವಿಂಗೆ.
ಚಿಕಿತ್ಸಕ ಧನ್ವಂತ್ರಿಗಳ್ ಭಗವಾನ್ ಶ್ರೀರಾಮ
ಕೃಷ್ಣರ ಅಗಾಧವಾದ ನೋವಂ ಅರಿದೊಡೇಂ
ಕೈಸಾಗದೆ ಸೋಲೊಪ್ಪುವ ತೆರದಿ ಪಡಿಮೊಗದಿ
ಹನಿಸೂಸುವರ್. ಗುರುಗಳ ಕೊರಳೊಳ್ ಆಹಾರ
ಪುಗದಾಯ್ತು. ಅನುದಿನಂ ಕ್ಷೀಣಿಸತೊಡಗಿತು ಗುರು
ದೇವನ ಶರೀರ ಸಂಪುಟಂ. ಶಿಷ್ಯಗಣಂ ಭಯ
ದುಃಖಸಂಕಟಗಳ ಗಣಿಗಳಾದರ್, ದಿನದಿನ.
ಕಂಗೆಟ್ಟು, ಮತಿಗೆಟ್ಟು ಮುಂಗಾಣದೆ ಅಳಲ್ದು
ಬಳಲ್ದು ಸೋತು ಸೊಗಡಪ್ಪಿರೆ ನರೇಂದ್ರನೇ
ಎಲ್ಲರಿಗೊರ್ ದಾರೀದೀಪ! ನರೇಂದ್ರಂ ಶಾಲೆ
ಬಿಟ್ಟೈದನ್. ಶಿಷ್ಯರ್ ಮನೆ ಬಿಟ್ಟೈದರ್. ಗೃಹೀ
ಭಕ್ತರೈದರ್ ಕಂಬನಿ ತುಂಬಿ. ದೂರದೂರದ

ಭಕ್ತಜನ ಓಡುತಲೈದರ್ ಗುರುವಿನ ದರ್ಶನ
ಭಾಗ್ಯಮಂ ಬಯಸಿ. ರೋಗವುಂ ಹಿಮ್ಮೆಟ್ಟದಿರೆ
ಗುರುವರ್ಯನುಂ ಕ್ಷೀಣಿತದನಿಯಲಿ ಪ್ರವಚನ
ಧಾರೆಯಂ ಹರಿಸುವರ್ ಎಲ್ಲರ ಸಮಾಧಾನ
ಸುಖ ತೋಷಗಳಿಗಾಗಿ. ದೇವಿಪೂಜೆಯಂಗೈದು
ಮೆಲ್ಲನೆಯೆ ಮಂತ್ರಗಳ ಗುನುಗುವರ್ ಗದ್ಗದಿಪ
ಸ್ವರದಲಿ. ಸಂತತ ಪರಿಶ್ರಮದಿಂ ಭಕ್ತಿಯಿಂ
ಆರೈಕೆಗೈದೊಡಂ ಕಠಿಣರೋಗ ಪಿಂಜರಿವ
ಲಕ್ಷಣಂ ಇಲ್ಲಮಾಯ್ತು. ಗುರವಿಂಗೆ ದ್ರವೀ
ಕರಿಸಿದಾಹಾರ ಮಾತ್ರಮೆ ಇಳಿವುದು ಗಂಟಲ
ನಾಳದಲಿ. ಸತಿ ಶಾರದಾ ಮಣಿದೇವಿಯುಂ ಪತಿ
ಸೇವೆಯೊಳ್ ನಿಂದು ಕಂಬನಿಗಡಲಲಿ ಮಿಂದಳ್.
ಅಸಹಾಯಕತೆಯ ಕಟು ಕಠಿಣ ಗಳಿಗೆಗಳುರುಳಿ.
ಅಳಿದುವು ಮತಿ ಖಡ್ಗದಲುಗಿನ ಮೇಲೆ. ಶಿಷ್ಯರ್
ಮನಸೋತು ಕಲ್‌ಕತ್ತೆಯ ವೈದ್ಯ ಮಹೋದಯರ
ಬಳಿಗೆ ಕರೆದೊಯ್ದು ಹಿರಿ ಚಿಕಿತ್ಸೆಯ ಘಟಕದೊಳ್
ಇರಿಸಿ ಶುಶ್ರೂಷೆಗೆ ಉಳಿದರ್ ಕಿರು ನೆಚ್ಚಿನಿಂ
ನರೇಂದ್ರನ ಜೊತೆಗೂಡಿ. ಗುರುದೇವ ನಿಶ್ಚಿಂತ
ಮನೋಗತಿಯಲಿ ತಾನಿರುತಿರ್ದರ್ ಪ್ರಪಂಚದ
ಸುಖದುಃಖಗಳಂ ಬದಿಗೊತ್ತಿ. ಕಳೆದುವು ಕೆಲವು
ದಿನಮಾನಗಳ್ ಹಿರಿಯ ಚಿಕಿತ್ಸೆಯದು ಪೊಸತೇಂ
ನೀಡದಾಯ್ತು. ವೈದ್ಯರ ಕೈಸೋತು ಮನಸೋತು
ಬೌದ್ಧಿಕ ಕರಂಡವೇ ಸೋತು ವಟುಗಳ ಕರೆದು
ಎಕ್ಕಟಿಗೆ "ಈ ಪತ್ತನದ ಕಲುಷಿತ ವಾಯುಗುಣ
ಇನ್ನಿನಿತು ಪಾಳ್ಗೆವುದು ಗುರುವರ್ಯನ ದೇಹದ

ಸ್ಥಿತಿಗತಿಯಂ. ನೀಮಿವರಂ ತೋಂಟದ ಬಳಿಯ
ತಣ್ಣನೆಯ ತಣ್ಪಿನಲಿ ಸಂಬಾಳಿಪುದೊಳ್ಳಿತು,
ಎಂಬುದೆನ್ನಯ ಸಲಹೆ. ಮನ್ನಿಸೆನ್ನಂ, ಆನ್
ಏಂಗೆಯ್ಯಲಾರೆ.” ಎಂದನಾ ವೈದ್ಯ ಮನೀಷಿ.
    ನರೇಂದ್ರುಂ ಎನಿತೆನಿತು ನಂಬಿಗೆಯ ಕೂರ್ಮೆಯಲಿ
ಪತ್ತನದ ಪಥವಿಡಿದನೊ ಗುರುವಿನೊಡಂ, ಅಂತಪ್ಪ
ಆಸೆಯ ಕುಡಿ ಮುದುಡಿ ಮುರುಟಿ ಬಿಳ್ದು ಬೆರೆದತ್ತು
ಮಣ್ಣಹುಡಿಯಲಿ ತಾನು ಹುಡಿಯಾಗಿ. ಕಡೆಗೊರ್ಮೆ
ವಟುಗಳ್ ಶಕಟವೊಂದನುಂ ತಂದು ಗುರುವರ್ಯನ
ಕೂಡೆ ಪೊರಮಟ್ಟರ್ ಅಮಿತ ಕ್ಲೇಶದಿಂ. ದೂರ
ಪಯಣ ಸಾಗಿತ್ತು ಜೋಡೆತ್ತುಗಳ ಗಾಡಿಯಲಿ
ಶಿಷ್ಯರ್ ಮರೆಯೊಳ್ ಸುರಿಸುವರ್ ನಿಡುಗಂಬನಿಯ.
ದಕ್ಷಿಣೇಶ್ವರ ದೇಗುಲದ ಕೊಠಡಿಯಲಿ ಹಲವು
ದಿನಮಾನಗಳ್ ಕಳೆದುವು ದುಃಖಸಂಕಟಗಳ
ಸುಯ್ಲಾಡಿಸಿ. ಚಿಕಿತ್ಸೆ ನಡೆದುದು ಯಥೋಚಿತವಾಗಿ,
ಗೃಹೀಭಕ್ತರ್ ಕಂಬನಿಗರೆದರ್ ಮರೆಯಲಿ.
ಶಿಷ್ಯರ್ ಅಳಲಿದರ್ ಬಸಬಸನೆ ಜಗಲಿಯಲ್ಲಿ,
ಶ್ರೋತೃಗಳ್ ಪೆಣ್ಮಣಿಯರ್ ಅಳ್ತಳ್ತು ಸೂಸಿದರ್
ಬಿಸುಗಂಬನಿಯ. ದೇಗುಲದೊಳ್ ಇನ್ನುಳಿವುದದು
ತರವಲ್ಲವೆನುತೆ ಯೋಚನೆಯಲಿ ಮುಳುಗಿತು ಶಿಷ್ಯ
ವೃಂದ. ಚಿಕಿತ್ಸೆ ಶುಶ್ರೂಷೆಗಳ್ ಮೈಗೂಡದಿರೆ
ಮುಂದಿನ ಅಮಂಗಳ ದಿನಂಗಳಂ ನೆನೆಯುವರ್
ದುಃಖಭಾರದಲಿ. ಕಳೆದುವೆನಿತೋ ದುರ್ದಿನಂ
ನೋವಿನಿಂ ನರಳಿ ನರಳಿ. ಮತ್ತೆದುವೆನಿತೊ ಕಡು
ದಾರಣ ದಿನಗಳ್ ಮರಳಿಮರಳಿ. ಜಗದಂಬೆಯ

ಗುಡಿ ದಕ್ಷಿಣೇಶ್ವರದ ಪುಣ್ಯತಲದಿಂ ಕಾಶೀ
ಪುರದ ಮಠಕೆ ಕರೆತಂದರಾ ವಟು ಸಮುದಯಂ
ಒಗ್ಗೂಡಿ. ಸದ್ದು ಗದ್ದಲಂ ಕಳೆಯಿತು; ತೋಂಟದ
ತಣ್ಪು ತಣಿಸಿತು ಉರಿ ಮೈಗೆ ತಂಪು ಚಿಮುಕಿಸಿ.
ಕಳೆದುವು ಹಲಕೆಲವು ದಿನಮಾನಂ. ಭಗವಾನ್
ಠಾಕೂರರು ಕಾಶೀಪುರದೊಳಿಹ ಸುದ್ದಿಯದು
ಹರಡಿದುದು ಸುತ್ತಮುತ್ತಲ್. ಭಕ್ತಜನವೃಂದ
ಸಾಲ್ಗಟ್ಟಿ ಬರತೊಡಗಿದರಲ್ಲಿಗೆ ಗುರುವರನ
ಸಂದರ್ಶನವಂ ಬಯಸಿ. ನಿತ್ಯಂ ಸಂಯಾತ್ರಾ
ತಲವೆನೆ ಗಜಿಬಿಜಿಯಾದದು ತೋಂಟದ ಕಿರುವನೆ.
ಬಹುತರದ ಲೋಗರಿಂ ಕೂಡಿದ ಜನಸಂದಣಿ
ದುಃಖದ ಬಿಸುಸುಯ್ಲಾಡಿಸಿ ಕಂಬನಿಗರೆದರ್
ಹೊರಗಿನಂಗಣದಲಿ. ವರಶಿಷ್ಯ ನರೇಂದ್ರನಾಥ
ದತ್ತಂ ಚಿಕಿತ್ಸೆಯಾ ಮೇಣ್ ಶುಶ್ರೂಷೆಯಾ
ಭಾರದ ಹೊಣೆಯಂ ಹೊತ್ತು ಪಗಲಿರುಳ್ ತನ್ನಯ
ಸಹಾಧ್ಯಾಯಿಗಳೊಡನೆ ಸೇವೆ ಸಲ್ಲಿಸುವನಾ
ಪರಮೋನ್ನತ ಗುರುವಿನಾ. ಕೈಯೊಳ್ ಕಾಸಿರದ
ಹೊಣೆಗಾರಿಕೆ. ಯುವಜನರ, ದೃಢಮನವಂ ಬಲು
ನೆಚ್ಚಿಮೆಚ್ಚಿದ ಭಕ್ತಜನರ್ ಗೃಹೀಭಕ್ತರ್
ಸರತಿಯಲಿ ಅಷ್ಟಿಷ್ಟು ದಾನಗೈವರ್, ಅಕ್ಕಿ
ನುಚ್ಚಂ ತರುವರ್ ತಂತಮ್ಮ ಶಕ್ತ್ಯಾನುಗುಣ
ಗಣಿಗಳಾಗಿ. ಅಂತಿಂತು ಎಲ್ಲರ ಕೈಗಾಣಿಕೆ
ಸಲ್ಲಿದುದು ಗುರುದೇವನ ಆರೈಕೆಗೆ. ಅಂದಿನ
ಭಂಗಬನ್ನಗಳ ಸಂಕಷ್ಟಮಂ ಆ ಶಿಷ್ಯ
ಮಂಡಲಿಯೆ ಅರಿದತ್ತು. ಶ್ರಾಂತ ಗುರುವರ್ಯನಾ

ಪ್ರಶಾಂತ ವದನ ಬಿಂಬವಂ ನೋನೋಡುತ್ತೆ
ಮೈಮನ ಮರವಟ್ಟವೊಲ್ ಕುಳಿತು ಬಿಡುವರೆನಿತೊ
ಮಂದಿ. ಗುರುದೇವಂ ವಿಸ್ಮೃತಿಯಿಂದೆಚ್ಚತ್ತ
ಬಳಿಕ ಕೆಲವು ಮಂತ್ರಗಳಂ ಗುನುಗುವರ್ ಕ್ಷೀಣ
ಕ್ಷೀಣಿತದನಿಯಲಿ. ಸುತ್ತಲ್ ನೆರೆದ ಭಕ್ತಜನ
ಪರಿವಾರವಂ ನೋಡುವರ್ ಕಣ್ತೆರೆದು. ಸನ್ನೆ
ಗೈದು ಬಳಿಗೆ ಬರಮಾಡಿ "'**ಕುರ್ಯಾತ್ ಸದಾ
ಮಂಗಲಂ**'' ಎಂದೊರೆವರ್ ಪ್ರಸನ್ನ ಭಾವದಿ.
ಅಲ್ಲಿಗೇ ತತ್ತರಿಸಿ ಉಸಿರ್ಗಟ್ಟಿ ತಡೆದುದು
ಕ್ಷೀಣಿತ ಕೊರಳ್ ಸ್ವನ. ಧ್ವನಿಯ ಕರಂಡವೇ
ಉಡುಗಿದೊಲ್ ಕೊರಳ್‌ಗಟ್ಟಿ ಮಿಣ್ಣನೆ ಕಂಗಳ್
ಮುಚ್ಚಿದರ್ ವೇದನೆಯ ಅಗಾಧತರ ನೋವಂ
ಸಹಿಸಲಾರದೆ. ಗುರುವರನ ಸಂಕಟ ಎಲ್ಲರ
ಮನವಂ ಮರುಗಿಸಿತು ಅಪಾರ ಕನಿಕರದಿಂದೆ.
ಸನಾತನ ಧಾರ್ಮಿಕ ಸಂಯೋಜನೆಯ ಬೋಧನಾ
ಚಾರ್ಯಂಗೆ ಧರ್ಮದೇವತೆಯೆ ನೆರವೀಯದಿರೆ
ಇನ್ನಾರ್ ಸಲಹುವರ್? ಶಾರದಾ ಮಣಿದೇವಿ
ಕಂಗೆಟ್ಟು ಕುಳಿತಳ್ ಬಳಿಯಲಿ ಕಂಬನಿ ಮಿಡಿದು.
ಮೂಡುವೆಟ್ಟಿನ ಮಸ್ತಕದ ಮೇಲೆ ನೀಲಿಮಾ
ದಿಗಂತದಂಚಿನಲಿ ಉದಯರವಿಯುಂ ಮೂಡಿಬರೆ
ರಾಮಣೀಯಕ ಶೈಲಿಯಲಿ ಹೃನ್ಮನಂ ಸೂರೆ
ಗೈವ ತೆರದೊಳಾಯ್ತು ಉದಯಮಾನದೈಸಿರಿ.
ಕೆನ್ನೀಲಿ ನೀಲಿಯಲಿ ಮೋಡಗಳ ದಿವ್ಯಮಾ
ಗುಡಿಗೋಪುರಗಳ್ ಮೂಡಿದ್ದುವು ದಿಗಂತದಲಿ
ಸಾಲ್ಗಟ್ಟಿ. ಹೊಂಗಾಂತಿ ಹರಿದುದು ಚೈತ್ರಾಭ್ರದಿಂ

ಲೋಕೋತ್ತರವಾಗಿ. ಪರ್ಣರಾಜಿಯು ಸ್ವರ್ಣಮಯ
ಲೇಪದಿಂ ಮೆರೆದಿತ್ತು ಸ್ವಚ್ಛಂದ ಚಂದದಿಂ.
ಗಿಡುಮರಗಳಲಿ ಚಿಲಿಪಿಲಿಸುವ ಪಕ್ಷಿವೃಂದಂ
ರಾಗಾರುಣತಾನದನುಸ್ವರದಲಿ ಉಲಿದುವು
ಪ್ರಾತಃಸ್ಫೂರ್ತಿಯ ಮೋದದಿಂ. ಎಲ್ಲಿಂದೆಲ್ಲಿಯು
ಪರಿಸರಮದೆಲ್ಲವುಂ ನಿಶ್ಶಬ್ದ ಶಾಂತಿಯಲಿ
ಮೆರೆದತ್ತು ತಾಳಲಯ ಬದ್ಧವಾಗಿ. ಹೆಮ್ಮೋಡ
ಕರ್ಮೋಡ ಬೆಳ್ಮೋಡ ಹಿರಿಮೋಡ ಕಿರಿಮೋಡ
ಮರಿಮೋಡಗಳ್ ಮೇಳವಿಸಿದ ಗಗನ ಮಂಡಲ
ಸುಚಿತ್ರ ವಿಚಿತ್ರತರ ಕಲಾಶಾಲೆಯೆನೆ ಮೆರೆದು
ವೈಭವೋಪೇತಮಾದತ್ತು ನೀಲಾಕಾಶ.
ನರೇಂದ್ರನಾಥನುಂ ಸಹಾಧ್ಯಾಯಿಗಳಪ್ಪ
ರಾಖಾಲ ರಾಮದಯಾಲರೊಡಂ ಪೊರಮಟ್ಟು
ನಡೆದಂ ಬೆಳಗಿನ ತಣ್ಪಿನಿಂಪಿಗೆ ಮೈಗೊಟ್ಟು.
ಪಚ್ಚೆಪಸುರಿನ ಮೃದುಮಂದ ಶಾದ್ವಲತಡಿಯ
ಪರ್ಯಂಕದಲ್ಲಿ ಪದ ಸಂಚರಣಗೈಯುತೆ ಅಲ್ಲಿಯೆ
ಸುತ್ತಿಸುತ್ತಿ ಅಡ್ಡಾಡಿ ಚಾರಣದೊಳ್ ಮನಂ
ಮುದಗೊಳಿಸಲುರೆ ದಾಂಟಿದುವು ಪಜ್ಜೆಪಜ್ಜೆಗಳ್
ಮುಂದೆ ನಡೆನಡೆದು ಕಾಶೀಪುರದ ಎಲ್ಲೆಯಂ.
ದುಃಖಬಾಷ್ಪಗಳಿಂ ಆದಾರಿ ಈ ಊರು
ಎಂಬೊಂದು ನಿರ್ದಿಷ್ಟಗುರಿಯಿಲ್ಲದ ಮನೀಷಿ
ನರೇಂದ್ರಂಗೆ ಮುನ್ನಡೆಯೊಂದು ಕಿರು ಸಂತೃಪ್ತಿ.
ಜನ ದನ ಚರಣಂ ಸಂಚಲದ್ ರೇಖಾ ಕುಪಥ
ಹರಿದುದೆಂತಂತು ನಡೆದುವಂತಂತು ಪದಗಳ್.
ಮುನ್ನಡೆಯ ಸಂತೃಪ್ತಿಗೆ ಮತ್ತೊಂದರ ಅರಿವು

ಇನಿತಿಲ್ಲ. ವಿಶ್ವಾತ್ಮಕ ಚರಿತೆ ಮನದ ಗಣಿಯಿಂ
ಸರಿದು ಅರುಗಾಯ್ತು. ಸುಖದುಃಖಗಳ್ ಮರೆಯಾದುವು.
ಹೃದಯ ಧರಿತ್ರಿಯ ವರ ಭಾವನಾ ಲೋಕವೇ
ಕೊಂಡಿ ಕಳಚಿತು. ನಡಿಗೆ ನಿರಾಳ. ಮನಃಚಿತ್ತವು
ನಿರಾಳ. ಅದ್ವೈತಾನುಭವ ಮಾತ್ರಮೇ ಸ್ಥಿರಂ.
ಗುರುದೇವನ ಕೃಪಾಪೋಷಣೆಯಲಿ ಲಭಿಸಿದ
ಜಾಗೃತ್–ಸ್ವಪ್ನ–ಸುಷುಪ್ತಿ–ತುರೀಯಂಗಳ ದಿವ್ಯ
ಬ್ರಹ್ಮಾತ್ಮೈಕ್ಯದ ಸ್ವಾಪ್ನಿಕ ಪರಮಾನುಭವದಿಂ
ಸ್ವಸ್ವರೂಪವನರಿದು ಚಿದಾಕಾಶದೊಳ್ ವಿಹರಿಸುತ್ತೆ
ದೂರ–ಬಹುದೂರ ಸಾಗಿತು ಹಾದಿ. ಅದೋ, ಅದೋ
ಓ ಅಲ್ಲಿ, ಬುದ್ಧಗಯೆ! ಬುದ್ಧನುಂ ತಪಸಿನಿಂ
ಪ್ರಬುದ್ಧತೆಯಂಬಡೆದ ಬುದ್ಧಗಯೆ! ಅಹ ಎಂ
ಪ್ರಶಾಂತ ಪರಿಮಳಮೆಸೆದತ್ತು ಮನಃಕುಸುಮವ
ಕೈಬೀಸಿ ಕರೆವವೊಲ್! ಮೂವರುಂ ಬೊಕ್ಕರಾ
ಬೋಧಿಸತ್ವನ ಪುಣ್ಯಕ್ಷೇತ್ರಮಂ. ಬುದ್ಧಗುರು
ಮಂದಿರದಲಿ ಬುದ್ಧದರ್ಶನ ಭಾಗ್ಯ ಲಭಿಸಿದುದು
ಭೀಷ್ಮ ಶಾಂತಿಯಲಿ. ಮೈಯೆಲ್ಲ ಧ್ಯಾನಮಯತೆಯು
ತುಂಬಿ ಹುರಿಸುತ್ತಿ ಬಿಗಿಯಿತು ಹೆಡೆಮುರಿಗಟ್ಟಿದ
ಪಾಂಗಿನಲಿ. ನಿಚ್ಚ ಮರಣಾಕ್ಲಿಷ್ಟ ಸುಖದುಃಖ
ನಿವಾರಣಾರ್ಥಂ ಸ್ವಾನುಭವಪೂರ್ಣ ಧರ್ಮಸಿರಿ
ಕಿರಣಗಳ್ ಹರಿಸಿ ಚೆಲ್ಲಿ ಸೂಸಾದಿರ್ದ ಭೂ!
ಪರಮೋಚ್ಚ ಶಾಂತಿಧಾಮ! ಮಂಜು ಹನಿ ಮಣಿಮಣಿ
ಮುಕ್ತಕಗಳ ರಾಶಿಯಲಿ ರವಿಕಿರಣಗಳ್ ಪ್ರತಿ
ಫಲಿಸಿರಲ್ ಪ್ರಜ್ವಲಿಪ ಬಜ್ಜರದ ಲೋಕವೇ
ಕಣ್ಗೆಸೆದುದು ಶಾದ್ವಲ ತಡಿಯ ನಿಡು ಹಾಸಿನಲಿ.

ನರೇಂದ್ರನಾಥಂ ಮುನ್ನಡೆದನ್ ಮೃದುಮಂದ
ಪಚ್ಚಹಾಸಿನಲಿ ಶಾಂತಿಧೂತ ಗುರುದೇವನಾ
ಬುದ್ಧಾತ್ಮ ಸ್ವರೂಪೀ ಬೋಧಿವೃಕ್ಷದ ನೆಲೆಗೆ.
ಚೆಂದಳಿರ್ ಕೆಂದಳಿರ್ ಎಳೆದಳಿರ್ ತುಂಬಿರ್ದು
ಅಲಂಕಾರಮಯಮಾದ ಬೃಹತ್ತಮ ಬೋಧೀ
ವೃಕ್ಷದೇವ! ಸಂದೃಶ್ಯಮಾನ ಸೌಂದರ್ಯಮೆ
ಎಲ್ಲೆಲ್ಲು! ಪ್ರಶಾಂತ ಸಂತೋಷಮಾನಂದ
ಶೋಭೆಯಂ ಪಸರಿಸಿ ಪಸರಿಸಿ ರಾಮಣೀಯಕ
ತೇಜದಲಿ ಮೆರೆದತ್ತು ಯುವಮೈಸಿರಿಯ ಸೂಸಿ.
ನೋನೋಡುತೆ ಗೆಳೆಯರ ಪಿಂತಿರ್ಕಿ ಗಿಡುಮರದ
ಸಸ್ಯರಾಜಿಯೈಸಿರಿಯಲಿ ನುಸುಳಿ ನಡೆನಡೆದು
ಕಣ್ಮರೆಸಿದನಾ ಯುವ ಮನೀಷಿ ನರೇಂದ್ರನಾಥಂ.
    ಮಿತ್ರರೀರ್ವರುಂ ತಮ್ಮ ನಾಯಕನುಂ ಈಗ
ಬಂದಾನು ಆಗ ಬಂದಾನು ಎಂದೆಂದು
ಕಾದಿರುತಿರೆ ಪಗಲುರುಳಿತು. ನಿಶಿಯು ಆಗಮಿಸಿ
ಮುಂಬೆಳಗು ಮೂಡಿತು. ವನ ವಿಹಂಗಮಗಳೆದ್ದು
ತರತರದ ರಾಗಾನುರಾಗದಲಿ ಸುಪ್ರಭಾತ
ಹಾಡಿದುವು ಕೊರಳೆತ್ತಿ. ಮೂಡಿದನು ಉದಯರವಿ.
ಭಿಕ್ಷಾಟನೆಯೊಳ್ ಕಳೆದುವು ಮೂದಿನಗಳ್ ಮಿತ್ರ
ದ್ವಯರಿಗೆ. ನರೇಂದ್ರನಾಥನಾ ಗತಿಯೇನಾಯ್ತೊ
ಎಂಬ ಕಸಿವಿಸಿಯಲಿ ಸಿಲುಕಿ ನೊಂದು ನೀರಾಗಿ
ವನರಾಜಿಯಂ ಬೊಕ್ಕು ಅಲ್ಲಲ್ಲಿ ಹುಡುಕುಡುಕಿ
ಎಲ್ಲಿಯುಂ ಕಣ್ಗೆಸೆಯದಿರೆ ಸೋಲ್ದು ಬಲುಬಳಲಿ
ಅಳಲಿ ಅಶ್ರುಲೋಚನರಾಗಿ ಪಿಂತಿರುಗಿದರ್
ಕಾಶೀಪುರದಾಶ್ರಮದಾಣಕೆ. ಗುರುದೇವಂ

ಎಂದಿನವೊಲ್ ಉಸಿರಾಡುತಿರ್ದರ್, ಕ್ಷೀಣಗತಿ
ಎಂಬಿನಂ ಮೆಲುಮೆಲ್ಲನೆ. ತರುಣರೀರ್ವರುಂ
ಗುರುವಿನಾ ಶಯ್ಯಾತಲದಿ ಮಂಡಿಗಾಲೂರಿ
ಕುಳ್ಳಿರ್ದು ಕಂಬನಿಗರೆದರ್ ವಿಷಯವನೊರೆದು.
ಪೊರಬಿಳ್ದುದು ಗುರುವರ್ಯನ ಮೆಲ್ಲುಸಿರ್ "ಚಿಂತೆ
ಬಿಡಿರ್ಯ, ಅವನೆಲ್ಲಿಗೆ ಪೋದಾನ್. ಪಿಂದಿರುಗಿ
ಇಲ್ಲಿಗೈತಹನ್, ಇದಂ ನಂಬಿ ಮಿಣ್ಣನಿರ್ಪುದು."
ಅಣುಗರಿಂಗೆ ಗುರುವಿನ ಆಸ್ವಾಸನೆಯೊಳ್ ನಿಜ
ಭರವಸೆಯು ಮೂಡಿದೊಡಮದರಿಂದೆ ಯೋಚನೆಯು
ತಪ್ಪಿತೆನಲುಂಟೆ? ಮನ ನೊಂದು ಬೇವಸ ಮೂಡಿ
ಬೆಬ್ಬಳಿಸಿ ಬಾಗಿಲೆಡೆಗೆ ದೃಷ್ಟಿಯ ನೆಟ್ಟು ಬಲ್
ಆತುರಾತುರ ಕಾತರಗಳಿಂದಲಿ ಕಾದರ್ಯ
ಇತರ ವಟುಗಳೊಡಗೂಡಿ. ಗುರುವಿನ ಶುಶ್ರೂಷೆ
ನಡೆದಿತ್ತು ಯಥಾಕ್ರಮದೊಳ್. ವಟುಗಳ ಮನಸಿನ
ಕಳಕಳಿಯನರಿದು ಕೈಸನ್ನೆಯಲಿ ಸೈಪಿ 'ಆ
ಕಾಳಿಕಾಮಾತೆಯುಂ ಅವನಂ ಬಿಡದೆ ರಕ್ಷಣೆ
ನೀಡುವಳ್' ಎಂಬವೊಲ್ ತಿಳಿಪಿ ಸಂತೈಸಿದರಾ
ಗುರು ರಾಮಕೃಷ್ಣರುಂ.
ಅತ್ತಲಾ ನರೇಂದ್ರಂ
ಜೊತೆಗೂಡುತಲೈದ ಗೆಳೆಯದ್ವಯರಿಂದಗಲಿ
ದೂರಾಗಿ ವನಾಂತರಮಂ ಬೊಕ್ಕು ಸಂಮೃದ್ಧ
ಬೋಧಿ ದ್ರುಮದಡಿಯ ತಣ್ಣೆಳಲಿ ತನಿಯುಗುವ
ಪ್ರಸ್ತರಾಸನದಮೇಲೆ ಮಂಡಿಸಿ ಕಣ್ಮುಗಿದು
ಧ್ಯಾನಾವಸ್ಥಿತಯೋಗದಲಿ ಮೈಮರೆಸಿದನ್.
ಜಗಮರೆಸಿದನ್. ಧ್ಯಾನಮೊಂದೆ ಸ್ಥಿರಮಾಯಿತ್ತು.

ಭಕ್ತಿ ಭಾವ ಸಮುಜ್ವಲಿತ ಸುಖಾಶ್ರುಬಿಂದುಗಳ್
ಇಳಿದುವು ರಜತವಾರಿಯೊಲ್ ಥಳಥಳಿಸಿ. ಪೊಳ್ತು
ಎಂತುರುಳ್ದುದೊ ಸಂಜೆಯೆಂತಡರ್ದುದೊ ನಿಶಿ
ಇನ್ನೆಂತು ಮುಂದ್ವೈದಳೊ ತಾನರಿಯದೊಲ್ ಕಳೆದು
ಹೋದುದು ದಿನಮಾನಂ. ಒಂದೆರಡ್ಮೂರು ದಿವಸಂ
ಎಂತೆಂತು ಸರಿದುಹೋದುವೊ ತಿಳಿಯದಾಯಿತ್ತು.
ತರುವಾಯಿ, ಕಣ್ತೆರೆದು ಮೆಲ್ಲನತ್ತಲಿತ್ತಲ್
ದಿಟ್ಟಿಹಾಯಿಸಿ ನೋಡಿದನ್ ನರೇಂದ್ರನಾಥಂ.
ಮಿತ್ರರಿಲ್ಲ ಬಳಿಯಲಿ. ಹಸಿವು ತೃಷೆ ಒಡಲಲಿ
ಭುಗಿಲೆಳ್ದುದು ಅಗ್ನಿಯುರಿವ ತೆರದಿ. ನಿದ್ದೆಯಾ
ಮಂಪರ ನಯನಗಳಲಿ. ಮೈಮುರಿಯುತೆಳ್ದ ತಾಂ
ಪೊರಮಟ್ಟನಲ್ಲಿಂದೆ ಕಾಶೀಪುರಕಭಿಮುಖೀ
ಪಥವಿಡಿದು. ಏರಿದುದು ಸ್ವಂತರಿತ ಮಾನಸಂ
ಗರಿಗೆದರಿ ಪ್ರೋದ್ದೀಪ್ತ ತೇಜಸಂ ಪಸರಿಸುವ
ನಿಟ್ಟಿನಲಿ. ಪರ್ಣಾರ್ಣವದ ಪುಷ್ಪಿತ ಶರೀರಂ
ಸುಸುಂದರ ಗಂಧಸೌರಭಮಂ ಬೀರುತೆ ಸ್ವರ್ಗ
ದ್ಯುತಿ ಚುಂಬಿತ ಪಚ್ಚ ಪಸುರಿನುನ್ನತವೆಟ್ಟಂ
ಸಿಂಗರಿಸಿ ಮೆರೆದಿರ್ದುದು ವೈಭವಯುತವಾಗಿ.
ನರೇಂದ್ರನಾಥಂ ನಡೆದನೇಕಾಂಗಿ ಕುಪಥದಲಿ
ದಾಪುಗಾಲಿಡುತೆ. ಪಜ್ಜೆಪಜ್ಜೆಗಳಿಗುಂ ಆ
ಅರಣ್ಯಕ ಪ್ರದೇಶಮಂ ದಾಂಟಿ ಕಲ್ಲು
ಮುಳ್ಳುಗಳ ಪಥಮಂ ಕಳೆದುಬಯಲಿಗೆತ್ತಂ.
ಪ್ರಾತಃಕಾಲೀನ ಶಾಂತ ಸಮೀರಣಂ ಮಂದ
ಮಂದ ಶೈಲಿಯಲಿ ಬೀಸುತ್ತೈತರೆ ತನುಮನಂ
ಮುದ್ದಿಸುವ ನೋಂಪಿಯಲಿ ತಣಿವಾಯ್ತು ಮೈತಣಿದು

ತಂಪಾಯ್ತು ಬಳಲಿದ್ದ ಜೀವ. ಪಥದಂಚಿನಲಿ
ಹರವಾಗಿ ಹರವಿದ ಜಲ ರಾಶಿಯಲಿ ಮುಖವಂ
ತೊಳೆದು ಸುಖ ಮಜ್ಜನಂಗೈದು ಪ್ರಾತರ್ವಿಧಿಯಂ
ತೀರ್ಚಿ ನಸುವೊಳ್ತು ಕುಳ್ತು ದಣಿವಾರಿಸಿದಬಳಿಕ
ಪ್ರಶಾಂತ ತೋಷದಿಂ ಕೊರಳ್ ದನಿಯಂ ಹರಿಸಿ
ಹಾಡಿದನ್ ಪುರಾಣ ಪ್ರಥಿತ ಶ್ಲೋಕ ಗೀತೆಯಂ

"ಸತ್ಯಪಿ ಭೇದಾಗಮೇ ನಾಥ
ತವಾಹಂ ನ ಮಾಮ ಕೀನಸ್ತ್ವಂ ।
ಸಾಮುದ್ರೋ ಹಿ ತರಂಗಃ ಕ್ವಚನ
ಸಮುದ್ರೋ ನ ತಾರಂಗಃ ॥"

ಪಾಡಿದನನೇಕ ಸಂಗೀತೆಗಳ ತನುಮನಂ
ತಣಿಸಿ, ಮನಕೆ ಅಮಿತ ಸುಶಾಂತಿಯಂ ಪಡೆದು ಮುಂ
ದಾರಿಯಂ ಪಿಡಿದಂ, ಅದೇ ಬಗೆಯ ಕುಪಥಂ. ಅದೇ
ವಗೆಯ ಕಲ್ಲು ಮುಳ್ಳುಗಳೊತ್ತು. ಪದದ್ವಯಗಳ್
ಬಿರಿಯುವುವೊ ಎನಲ್ ನೋವೂಡುತಿರೆ ಲೆಕ್ಕಿಸದದಂ
ಶ್ರೀಶ್ರೀ ಗುರುದೇವನ ಅಮಂಗಳ ದಿನಗಳಂ
ನೆನೆದು ನೊಂದು ನೀರಾಗಿ ನಡೆನಡೆದು ಕಾಶೀ
ಪುರವಂ ಪುಗುತೆ ನೇರವಾಗಿ ಪೋದಂ ಮಠದ
ವಾಗಿಲಿಗೆ. ನಾಲ್ಕೈದುದಿನದಿಂ ಅದೃಶ್ಯವಾಗಿ ಎಲ್ಲರ
ಮನಕೆ ಕಳವಳವನೂಡಿಸಿರ್ದ ನರೇಂದ್ರನಾಥಂ
ಒರ್ಮೆಗೇ ತಲೆವಾಗಿಲಲಿ ಪ್ರತ್ಯಕ್ಷಗೊಳ್ಳಲ್
ಸಹಾಧ್ಯಾಯಿಗಳ ಮೊಗವರಳಿ ಮಲ್ಲಿಗೆಯ ಸುಮ
ದಳಬಿರಿದವೊಲಾಯ್ತು. ನರೇಂದ್ರಂ ಗುರುದೇವನ
ಬಳಿಗೆಯ್ದು ಮಂಡಿಗಾಲೂರಿ ಕುಳಿತು ಕೈವಿಡಿದು
"ಗುರುದೇವ...." ಎಂದನ್ ಮೆಲುದನಿಯಲಿ. ಆಗಳಾ

ಗುರುವರ್ಯನುಂ ಕಣ್ತೆರೆದು ನೋಡಿ ಬಲುಮೆಯಿಂ
ಮೆಲುದನಿಯ ಬಲವಂದು ಬರಿಸಿ "ಕೇಳ್, ವತ್ಸಾ!
ನಿನ್ನಯ ನಿರ್ವಿಕಲ್ಪ ಸಮಾಧಿಯ ಸಾಧನೆಯದು
ಸಾಧುಕಣ! ಅದರಿಂ ಸುಕ್ಷೇಮವದು ನಿನಗಷ್ಟೆ?
ಜಗದ ಕ್ಷೇಮಕದು ಮಿತ್ತು! ಮನದಿ ತಿಳಿದು ನೋಡೈ."
ನರೇಂದ್ರನಾಥನ ತುಟಿಗಳ್ ಬಿರಿಯದಾದುವು, ಮಿಣ್ಣನೆ
ಶಿರವ ಬಾಗಿದಂ. ಪಗಲ್ ಉರುಳಿತು, ಮುಸ್ಸಂಜೆ
ಅಡರಿದುದು ಎಂದಿನವೊಲ್. ದಿವಸಾನಸಮಯದ
ಕುಳಿರ್ಗಾಳಿಯು ನುರ್ಗಿಸುಯ್ಯನೆಯೆ ಸುಯ್ಯುತ್ತೆ
ಮೈಮನಗಳಂ ಮುದ್ದಿಸಿದುದು ನಡುಗುವ ತೆರದಿ.
ಶೀತಲತೆಯ ಶೈತ್ಯ ಚಣಚಣಂ ಭುಗಿಲ್ಗೊಂಡ
ಮಾಳ್ಕೆಯಲಿ ವೆರ್ಚುತಿರೆ ವಟುಗಳ್ ಒಣಕಡ್ಡಿಯ
ಮುರಿಮುರಿದು ಒಟ್ಗೊಟ್ಟಿ, ದರುಗೆಲೆಯ ಪುರುಲೆಗಳ್
ಪೇರಿಸುತೆ ಕಡ್ಡಿಗೀರಿ ಉರಿಸಿದರ್‌ಗ್ಗಿಯ ಧುನಿ.
ಅದರಮೇಲೆ ಸವುದೆಯ ನಿಟ್ಟು ಕುಳಿತರೆಲ್ಲಾ
ವಟುಗಳದರ ಸುತ್ತಲ್, ದುಂಡುಮೇಜಿನ ವರಿಷ್ಠ
ಮಂಡಳಿಯು ಕೂಡಿದಂತೆವೊಲ್! ಅಗ್ನಿದೇವಂ
ಕೆನ್ನಾಲಿಗೆಗಳಂ ಕಿರುವಗೆಯಲಿ ಚೂಪನೆಯ
ಕೆಂಗತ್ತಿಯೊಲ್ ಚೂಪುಚೂಪಗೆ ಅಲೆಯಲೆಯೆನೆ
ಉರಿದುವು ಧಗಧಗಿಸಿ. ಚಟಪಟಿಸಿ ಉರಿನಾಲಿಗೆ
ಚಾಚಿ ಚಾಚಿ. ಉರಿವಗ್ಗಿಗೆ ಹೊಯ್ಕುಯ್ ತಾನೆನಿಸಿ
ಮೆಯ್ಯ ನಾಳನಾಳಗಳಲಿ ಚಂಡ ಪ್ರಚಂಡ
ಶಕ್ತಿಯ ಝರಿಯೊಂದು ಝುಳಝುಳಿಸುತೆ
ವಿದ್ಯುತ್ ಝರಿಯ ತೆರದಿ ಹರಿದಾಡಿತು ಜರ್ರನೆ.
ಮೆಯ್ಗೆ ಅಗ್ಗಿಯ ಕಿಡಿ ಸಿಡಿದುದೊ ನಿಜ ಭಾವನಾ

ವೇಶದಿಂ ಮೂಡಿದುದೊ ಹೃದ್ಗಡಲಿನ ಕೋಡಿ
ಉಕ್ಕಿ ಹರಿದುದೊ ಎಂದೆನಲ್ ಅಂತಃಶಕ್ತಿ
ಚಳಚಳಿಸಿದುದು ನಾಳನಾಳಗಳನು ಶೀಳಿ
ಹೊರಹೊಮ್ಮುವೊಲ್, ನರೇಂದ್ರನಾಥದತ್ತನುಂ
ತನ್ನತಾಂ ಅವಲೋಕಿಸುತಿರೆ ಈ ಶಕ್ತಿಯಿಂ
ಅನ್ಯರ ಮನೋರಾಜ್ಯದಲಿ ಅಪೂರ್ವತರದಾ
ಪರಿವರ್ತನೆಗೊಳಿಸುವ ಶಕ್ತಿಯಿಹುದು ಎಂಬುದುಂ
ಮನವರಿಕೆಯಾದುದು. ಈಗಳದರ ಮಹಿಮೆಯನಿನಿತು
ಪರಿಕಿಸುವುದೊಳ್ಳಿತೆಂಬ ಯೋಚನೆಯು ಮೊಳೆಯಿತು
ಮನದಲಿ. ತರುಣ ಸುಲಭ ಚಪಲತೆ ಘನಿಸುತಿರೆ,
ಹೆಪ್ಪಿಟ್ಟ ಮಾಳ್ಕೆಯಲಿ; ತನ್ನೊಳ್ ವಿಚಾರವಂ
ಚರ್ವಿತಚರ್ವಣಗೊಳಿಸುತೆ ಅಂತಃಶಕ್ತಿಯಂ
ಮಿಣ್ಣನೆ ಅವಲೋಕಿಸಿದಂ, ಉಷ್ಣೋಷ್ಣತರತಮ
ಝರಿಯು ಹರಿಯುತ್ತಲೇ ಇರ್ದುದು ಯಥೋಚಿತಂ.
    ನರೇಂದ್ರನಾಥಂ ಒಳಗೈದು ಗುರುದೇವನ ಬಳಿ
ಇರ್ದು ಸಾಯಂ ಶುಶ್ರೂಷೆಯಂ ತೀರ್ಚಿದಂ.
ಗುರುದೇವನುಂ ಒರಗು ದಿಂಬುಗಳ ಮೇಲೊರಗಿ
ಮಲಗಿದರ್ ಅರ್ಧಶಯನಾವಸ್ಥೆಯಲಿ. ಮತ್ತೆ
ಪಿಂತಿರುಗಿದನ್ ನರೇಂದ್ರನಾಥಂ, ಗುರುಭಾಯಿ
ಪರಿವಾರದ ಕೂಟಕೆ. ಹೊರ ಅಂಗಣದ ಮಧ್ಯೆ
ಉರಿಯುತಿರ್ದುದು ಕೆಮ್ಮನೆ ಕಿರಿವೆಂಕೆಯಾ ಧುನಿ.
ಗುರುಭಾಯಿಗಳ್ ಸುತ್ತುವರಿದಿರ್ದರ್ ಎಂದಿನ
ಮಾಳ್ಕೆಯಲಿ. ಅವರೊಳುಂ ತಾನುಮೊಂದಾಗಿ ಕುಳಿತ
ನರೇಂದ್ರುಂ ತನ್ನ ಅಂತಃಶಕ್ತಿಯಂ ಪರಿಕಿಸಲ್
ಮುಟ್ಟಿದಂ ಗುರುಭಾಯಿ ರಾಖಾಲನಂ. ಒಡನೆ

ಮಿಡುಕಿ ಬಿಳ್ದ ರಾಖಾಲಂ ತಿರುಗಿ ನೋಡಿ "ಓ!
ಇ....ಇದೇನ್ಯೆ?" ಆಶ್ಚರ್ಯಚಕಿತ ದನಿ ಮೊಳಗಿದುದು
ಆವೇಶದಿಂದೆ, ತೆಕ್ಕನೆ ತುಪಾಕಿಯ ಹೊಡೆದು
ಹಾರಿಸಿದ ಪರಿಯಲಿ. ಉಳಿದೆಲ್ಲರ್ ಒಗ್ಗೂಡಿ
"ಏನ್ಯೆ ಏನ್ಯೆ" ಎನುತ್ತೆ ಕಣ್ಕಣ್ ಬಿರಿಬಿಟ್ಟರ್,
ನರೇಂದ್ರನಾಥಂ ಮಿಣ್ಣನೆ ಮುಗುಳುನಗೆಯಂ ಬೀರಿ
ತನ್ನಾ ಗೆಳೆಯರ ಅಚ್ಚರಿಯ ಮನೋಗತಿಗೆ ತನಿ
ಎರಚುವೊಲ್ ಶಾಂತಿರಸ ಹರಿಸುವಂತೆ ನುಡಿದಂ,
"ಭ್ರಾತೃವರ್ಯರೆ, ಇದೆನ್ನಯ ತಪಶ್ಚರ್ಯ
ಸಾಧನೆಯಲಿ ಸಾಧಿತಮಾದ ಶಕ್ತಿ ಕಣಮೆಂದು
ತಿಳಿಯಿರ್ಯೆ. ಎಲ್ಲವುಂ ಗುರುವರ್ಯನ ಹಾರೈಕೆ
ಅಥ ಆಶೀರ್ವಾದ ಅಥ ಭಗವತ್ಕೃಪೆ ಕಣಾ!
ಅದಂ ಪರಿಕಿಸಿನೋಳ್ಪ ಸಲುವಾಗಿ ಸ್ವಲ್ಪವೇ
ಶಕ್ತಿಝುರಿಯಂ ನಿನ್ನ ಮೇಲೆ ಹರಿಸಿದೆ ಮಾತ್ರಂ."
"ಹಾ! ಇದುಂ ಪ್ರಚಂಡ ಶಕ್ತಿ ಕಣಾ! ದೇವಿಯುಂ
ನಿನ್ನಂ ಸಂರಕ್ಷಿಸಲಿ! ನೀನಹುದು ಭೈರಾಗಿ
ನರೇನ್!" ಹರಸಿದನ್ ರಾಖಾಲ ಬಾಯಿತುಂಬ.
ಉರಿಯುತಿರ್ದ ಧುನಿ ಬತ್ತಿ ಆರಿ ಬರಿ ಭಸ್ಮದ
ಹುಡಿ ಬೆಳ್ಳನೆ ಹರಡಿತ್ತು ನವುರಾಗಿ. ಎಲ್ಲರ್
ಗುರುದೇವನ ಸೆಜ್ಜೆಯ ಬಳಿಗೆತ್ತು ಸುತ್ತಲುಂ
ಸುತ್ತುವರಿದು ನಿಂದರ್ ದ್ವಾದಶಗ್ರುಹಗಳಂ
ಹೋಲಿ! ಗುರುದೇವನುಂ ಸುತ್ತಲುಂ ನೆರೆದಿರ್ದ
ಶಿಷ್ಯಮಂಡಲಿಯನೊರ್ಮೆ ತಿರುತಿರುಗಿ ನೋಡುತೆ
ದಿಟ್ಟಿಗೆಸೆಯದಿರೆ ನರೇಂದ್ರುಂ ಹೃದಯಹಾರೀ
ಉತ್ಕಂಠಿತಾತ್ಮದಾಕಾಂಕ್ಷೆಯಿಂದೆ "ನರೇನ್!"

ಎಂದರ್ ಬಲುಕಷ್ಟದಲಿ ತೊದಲಿ. ಒಡನೊಡನೆಯೆ
ನರೇಂದ್ರಂ ಮುಂದ್ಯೆದು "ಆನಿಲ್ಲಿಹೆ ಗುರುವೇ!"
  ಗುರುಗಳ ಬಲು ಕ್ಷೀಣಿತ ದನಿ, ಸಂಕಟದಲಿ ಪೊರ
ಬಿಳ್ದತ್ತು "ಏನ್ಯೆ ವತ್ಸ! ಸಂಗ್ರಹಿಪುದರೊಳೇ
ವ್ಯಯಿಪುದೆ? ಇದೇಂಗ್ಯೆದೆ? ತರವೇನಿದು? ಎಚ್ಚರ!
ಯೋಚಿಸದೆ ಮುಂದಿಡದಿರ್ ಪಜ್ಜೆಗಳಂ?"

ಖೇದ

ಕ್ಲೇಶಗಳ್ ತುಂಬಿದ ಗುರುಮುಖವಾಣಿಯು ಮೊಳಗೆ
ಕಿವಿಗೊಟ್ಟು ಆಲ್ಯೆಸಿದನ್ ನರೇಂದ್ರಂ. ಆ ದಿವ್ಯ
ಸಂದೇಶ ಅಥ ಉಪದೇಶ ಅಥ ಆದೇಶವದು
ಕರ್ಣ ಕುಂಡಲಿನಿಯಲಿ ಮೊಳಗಿ ಮರ್ಮರಿಸಿದುದು
ಮತ್ತೆ ಮತ್ತೆ. ಉನ್ನೆಬರಂ ದ್ಯೆತವಾದಿಯುಂ
ಸುಗುಣ ಸಾಕಾರೇಶ್ವರ ಭಕ್ತನುಂ ಆಗಿರ್ದು,
ತಟ್ಟನೆ ಗಳಿಗೆ ಕಾಲದೊಳ್ ಅದ್ವೈತವಾದಿ
ತಾನ್ನೆಸಿ, ಜ್ಞಾನಯೋಗಿಯುಂ ಆಗಿ ದಿವ್ಯ
ಪರಿವರ್ತನೆ ಪೊಂದಿದುದು ಅಚ್ಚರಿಯೆ! ಸದ್ಗುರು
ರುಗ್ಣ ಶಯ್ಯೆಯೊಳೊರಗಿರುತಿರ್ದು ಗಳಿಗೆಯೊಳ್
ಅರಿದುದದು ಯೋಗದೃಷ್ಟಿಯ ನಿಚ್ಚಳತೆಯನ್ನೆ
ತೋರ್ಪಡಿಪುದೆಂಬುದಂಮರಿದು ಅಚ್ಚರಿಯ ರಸ
ಕುದಿದುದು ಮನೋಮಂಡಲದಲಿ. ನಮ್ರತೆಯಿಂದೆ
ಶಿರವಬಾಗಿ ಮಂಡಿಯನೂರಿ ಕುಳಿತು ಕಿವಿಯಂ
ಗೊಟ್ಟು ಆಲ್ಯೆಸಿದಂ. ಗುರುಗಳ್ ಶಿಷ್ಯನ ಕಣ್ಣು
ಕೋಡಿವರಿದೊಲ್ ಸೂಸುವ ಭಾವಾ ವೇಶದಲಿ
ಪೊಣ್ಮಿದಶ್ರುಧಾರೆಯ ಸೋವುತೊಯ್ಯನೆ ಅಮಿತ
ಶಾಂತಸ್ವರದಲಿ ಕ್ಷೀಣಾತಿಕ್ಷೀಣ ದನಿಯಂ

ಹರಿಯಬಿಟ್ಟರ್ "ಜ್ಞಾನ ಸಂಗ್ರಹಂ ಎಂದಿಗುಂ
ಸಂಗ್ರಹಮೆ ವತ್ಸ! ಅದರೊಳ್ ಪಜ್ಜೆ ಸಡಲಿಸದಿರ್!"
ಮತ್ತೊರ್ಮೆ, ಆಶ್ರಮದ ನಭೋದೇಶವೆಲ್ಲಾ,
ಕದ್ದಿಂಗಳ ಕಾರ್ಗಪ್ಪು ಕವಿದುದು ಕೋಟ್ಯಾನು
ಕೋಟಿ ತಾರಗೆಗಳುಜ್ವಲ ಮಾಲೆಯಂ ಸೂಡಿ.
ರೇಖಾಕೃತಿಯ ಚಂದ್ರಮ ಕಂಡೂ ಕಾಣದೊಲ್
ತಾರೆಗಳ ಮಧ್ಯೆ ತಾನಿರ್ದನ್ ಸುವಿಶ್ರಾಂತಿ
ಪಡೆವಂತೆವೋಲ್. ಜಗಜಗಿಪ ಆಕಾಶದಲಿ
ಮಧ್ಯೆ ತೊಳಗಿ ಬೆಳಗಿ ವಿರಾಜಮಾನಮಾದಾ
ಉಜ್ವಲೋಜ್ವಲ ಧ್ರುವತಾರೆ ಶಾಂತ ನಿಶ್ಚಲಂ.
ಆ ಸಂದೃಶ್ಯಮಾನದ ವೈಭವದಲಿ ಮುಳುಂಗಿ
ಮೈಮರೆತ ಯುವ ಮನೀಷಿಯಾಗಳೆ ಸಂಮುಗ್ಧ
ನಿಶ್ಚಲಂ. ಹೃದಯದ ಬಜ್ಜರದ ಕರಂಡವು
ಕರಗಿತೊ ಎನೆ ಮೆರೆದುದು ಅಂತಃಸ್ಫೃತಿಯಲಂಪು.
ನುಡಿಯಲಾರ, ಬಿಡಲಾರ. ವಕ್ಷದ ಮೇಲೆ ಕೈ-
ಗಳ್ ಕಟ್ಟಿ ಬಂಧಿಸಿರೆ ಸಮಯಮೇ ಕುಬ್ಜಂ.
ದಿವ್ಯಾಂಬರದಲಿ ಮೋಡಗಳ ಮಾಲೆ ನಾನಾ
ಅಮಂಗಳ ರೂವಿನಾಕೃತಿಗಳಂ ಮೂಡಿಸಿ
ಚಲಿಸುತಿವೆ ಎಡೆಎಡೆಗೆ. ಆ ಕಕ್ಕಸವಗೆಯಾ
ಚಿತ್ತಾರ ಮನಂಗೆಡಿಸುತಿರೆ ಒಳಗಡೆಗೈದಂ
ಗುರುವಿನ ಬಳಿಗೆ. ಅಲ್ಲಿ ಆರಿರದೆ ಹಿತವಾಯ್ತು
ಗುರುವರ್ಯನ ಸನ್ನಿಧಿ. ಗುರುವಿನ ಮೊಗದ ಮೇಲೆ
ಮೂಡಿದ ಬೆವರಿನ ತುಂತುರು ತುಂತುರು ಹನಿಗಳ್
ಉದ್ಧಿ ಬಿರಿದ ಬಾಯಿಯ ಜೊಲ್ಲು ಒರಿಸಿ ಹಾಲಿನ
ಬಿಳ್ಪೆಯಲಿರ್ದ ಹಾಲಂ ಹನಿಹನಿಯೆನೆ ಗುರುವಿನ

ಬಾಯಿಗೆ ಸುರಿದಂ. ಆದೊಡದು ಕೊರಳೊಳ್ ಪುಗದೆ
ಕಟವಾಯೊಳ್ ಇಳಿಯಿತು. ಸಂಕಟಾವತರಣದ
ಚಿತ್ತಾರ ಮೆಸೆದುದು ಕರುಳ್ ಕೋರೈಸುವ ತೆರದಿ
ಶಿಷ್ಯಂ ಮನದೊಳ್ ನೊಂದು ನೀರಾದಂ. ಬಳಿಕ
ತನ್ನ ಮನದಾಸಂಕೆಯಂ ಹುಗಿಯದೆ ವಿಚಾರ
ಸಾಹಿತ್ಯಮಂ ತಿಳಿಪುವ ಕತಮಿರ್ದೊಡಮದಂ
ಬಾಯ್ಬಿಡಲ್ ಬಿರಿಯದಾದುವು ತುಟಿಗಳ್. ಮಿಣ್ಣನೆ
ಗುರುವದನಮಂ ನೋಡಿದಂ. ಆಗಳಾ ಶಿಷ್ಯ
ಪುಣ್ಯನ ಮನೋಭಿತ್ತಿಯನೋದಿದ ಗುರುವರಂ
ಮೆಲ್ಲನೆ ನುಡಿದರಿಂತು "ನರೇಂದ್ರಾ! ಆವಾವ
ವಿಷಯಮಿಹುದು ನಿನ್ನೊಳ್? ಏನಿರ್ದೊಡದನುಂ
ಕಿಂಚಿತ್ ತಳುವದುಸಿರ್ಕೈ ಈಗಳೆ!"
                                        ಆ ಕ್ಷೀಣ
ದನಿಯಲಿ ಪೊದಳ್ದ ಆತುರ ಕಾತರಂ ಮನವಂ
ಮಿಡಿದುದು ಸುನಿಶ್ಚಿತ ಅಘೂರ್ಣನ ಆವೇಗದಿಂ.
ಶಿಷ್ಯಂ, ಗಮನಿಸಿದಂ. ಆ ದಯನೀಯ ಕರೆಯಂ
ಬಾವಿಯಾಳದಲಿ ನುಡಿದಂತೆ ದನಿ ಹೊಮ್ಮಿತು.
ಆ ತೊದಲು ತೊದಲು ದನಿ ಉಸಿರಿಡಿದು ತಡವರಿಸಿ
ಸಂಕಟದ ಝುರಿಯಾಗಿ ಹರಿದುಬರೆ ನರೇಂದ್ರನ
ಎರ್ದೆಯಿಂ ದುಃಖದುಸಿರ್ ಹೊರಹೊಮ್ಮದಾಯಿತ್ತು.
ಕೆಲವೊಳ್ತು ಮಿಣ್ಣನೆ ಮನದೊಳ್ ಚಿಂತಿಸಿ ನಮ್ರ
ವಿನಮ್ರತೆಯಿಂ ದುಃಖಭಾರವಂ ಭರಿಸಿ ಬಲು
ಗದ್ಗದಿತ ಉತ್ಕಂಠಿತ ದನಿಯೊಳ್ ಗುರುವರನ
ಮನ ತಣಿಸುವ ಸಲುವಾಗಿ ಭಕ್ತಿಭರಿತ ಗೀತೆ
ಸಂಗೀತೆಯಂ ಹಾಡಿದನ್ ನರೇಂದ್ರನಾಥಂ

"ಉನ್ಮೀಲಯ ಮನ್ನಯನೇತ್ವಂ
ಮಾನ್ಯೇ ಲಕ್ಷ್ಮೀ ಲೋಕಮಾತಾನೀ ।
ಚಿನ್ಮಯಸುಭಗಾವಯವೇ ಕರ್ಮಕರಃ
ಸ್ಯಾಮ ಹಂಚತಕ ವಕ ಮಿತುಃ ॥"

"ಸರ್ವಜ್ಞಂ ತದಹಂ ವಂದೇ
ಪರಂಜ್ಯೋತಿಸ್ರಮೋಪಹಂ ।
ಪ್ರವೃತ್ತಾಯನ್ಮುಖಾದ್ದೇವೀ
ಸರ್ವಭಾಷಾ ಸರಸ್ವತೀ ॥

ಹರಿಃ ಓಂ ತತ್ ಸತ್

❋ ❋

ದಶಮೋಲ್ಲಾಸಂ

ಮಹಾ ನಿರ್ಯಾಣಂ

"ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಂ ।
ಇಹ ಸಂಸಾರೇ ಬಹು ದುಸ್ತಾರೇ
ಕೃಪಯಾ ಪಾರೇ ಪಾಹಿ ಮುರಾರೆ ॥"

ಓ ವಾಙ್ಮಯಿಯೆ, ನಿತ್ಯ ಸತ್ಯಾರ್ಥ ಚಿಂತನಂ
ನಿಕ್ವಣಿಸುವೊಲ್ ಮಿಡಿಯೈ ವಚಸ್ ತಂತ್ರಿಯಂ
ಕವಿ ಮನೋಜನಿತ ಚಿದ್ಯಂತ್ರ ತುಲ್ಯ ಜ್ಞಾನದ
ಬೀಣೆಯಂ, ತನನತಾನ ತನನ ತಾನತನನ.
ಶ್ರೀಮದ್ಗುರು ಕೃಪೆಯನಾಂತ ಯುವ ಸಾಧಕನು
ಮನೋಮಯಂ ಪ್ರಾಣಮಯಂ ಯೋಗಮಯಮಂ
ಬೊಕ್ಕು ಪ್ರವೇಶಿಸುತೆ ಊರ್ಧ್ವಗಮ ಚಿತ್ ಚೇತ
ಸ್ವರೂಪಕಿಂಬುಗೊಟ್ಟಂ, ಮಾನಸಿಕ ದ್ವೈದೀ
ಭಾವವಿಭಾವಗಳ ತಮಃಪ್ರವೃತ್ತಿಯಂ ಜಡಿದು
ಜಾಡಿಸುತೆ ತನ್ನಭೀಪ್ಸಾ ಸಿದ್ಧಿ ಬಯಕೆಯಂ
ಸುಪ್ತ ಚಿತ್ತದ ಗುಪ್ತ ತಿಮಿರದ ಸೆರೆಯ ಚೈತ್ಯ
ಸಂಪ್ರಜ್ಞೆಯ ತಂತ್ರಿಯಂ ಮೀಂಟುವೊಡೆ ಸಾಧನಾ
ಕ್ಷೇತ್ರಮೊಂದೆನಲ್ ಸತ್ ಪಥದರ್ಶನಮೆಂತೋ
ಎಂಬೊಂದು ಆಸಂಕೆಯ ತುಡಿತ ಮನಕೆ ಬಹುಲ
ತವಕವಂ ಮೂಡಿಸಿದುದು; ನರೇಂದ್ರ ನಾಥನುಂ
ಮಂಡಿಸಿದಂ ಗುರುದೇವನ ಶಯ್ಯಾ ಪ್ರಾಂತ್ಯದಲಿ.
ಗುರುಗಳ ಶುಶ್ರೂಷೆಯಲಿ ತಾನಿರ್ದು ಮನದೊಳ್
ಗುರುದೇವನಾ ಮಹಾ ನಿರ್ಯಾಣಮಂ ನೆನೆದು

ಮುಂದೇನ್ ಎಂಬ ಯೋಚನೆಯಲಿ ನೆರೆ ಮುಳುಗಿದಂ.
ಆಗಳಾ ಶೀರ್ಣದೀರ್ಣಿತ ಮುಖದಿಂ ಗುರುವರಂ
ವರಶಿಷ್ಯನ ಮನೋಜನಿತ ತುಡಿತದ ಗೀಳಂ
ಅರಿತು ನುಡಿದರ್ ಬಲೂ ಕ್ಷೀಣಿತ ದನಿಯ ಹರಿಸಿ,
"ವತ್ಸಾ! ಇದೀಗ ನಿನ್ನೊಳೇಂ ಸಂಕೆ ತಿಳಿಪುದು.
ಅದನೆನ್ನ ಮನಕೆ ತಾರದೆ ಇರ್ದೊಡೆಂತದರ
ಪರಿಹಾರಮೊ?"
"ಗುರುದೇವ! ನಿಮ್ಮಾ ಸಂಕಟದ
ಸ್ಥಿತಿಯಲಿ ನುಡಿಯಲೆನ್ನಯ ಮನಂ ಪಿಂಜರಿದು
ಎರ್ದೆಗೆಡಿಪುದು."
"ಮಾಣ್, ಶಂಕಿತ ಮನದಿ ಕುದಿವೆ
ಏಕೆ? ಎನಿರ್ದೊಡದರ ಸಂಕೆಯ ಪರಿಹರಿಸಿ
ಕೊಂಬುದದು ಲೇಸು."
"ಗುರುದೇವ! ಆಂ ನಿಮ್ಮವೊಲ್
ಸರ್ವತ್ರ ನಿರ್ವಿಕಲ್ಪ ಸಮಾಧಿಯಲಿ ಮುಳುಗೆ
ತುಡಿಯುವುದೆನ್ನ ಮನಮತಿಗಳ್!"
ಗುರುವರಂ ತನ್ನ
ಮನವಳ್ಕಿದೊಲ್ ತಮ್ಮೊಳ್ ಯೋಚಿಸಿ ಕೆಲವೊಂದು
ಗಳಿಗೆ ತಾಳ್ದು ಕೇಳಿಸಿದರ್ "ಅದೇ ವಾತುಗಳ್
ಮರಳಿ ನುಡಿಯೆ ಲಜ್ಜೆಯೆನಿಸದೆ ನಿನಗೆ? ಯೋಚಿಸು,
ಇನಿತುಕಾಲ ತಪಿಸಿ ಧ್ಯಾನಿಸಿ ಪರಿಭಾವಿಸಿದುದು
ಎನ್ನೈ? ವಟವೃಕ್ಷದೊಲ್ ಬೆಳೆದಿರ್ಪ ಶತಕೋಟಿ
ಕೋಟ್ಯಾನುಕೋಟಿ ರಾಷ್ಟ್ರೀಯ ದೀನ ದರಿದ್ರ–
ದೀನಾತಿದೀನ ಜನರಾಶಿಯ ಮನೋದಧಿಗೆ
ಶಾಂತಿವಾರಿಯಂ ನೀಂ ನೀಡದೆಯೆ ನಿನ್ನೊಂದು

ಸ್ವಮುಕ್ತಿಗಾಗಿ ಬಾಯಿ ಬಿಡುವರೇನ್ನೈ? ನಿನ್ನಯ
ಅರ್ಥಹೀನ ಆತುರ ಕಾತರಗಳ್ ಭಾರತದ
ಸಂಯೋಜನೆಗಲ್ಲಂ! ಯೋಚಿಸಿ ತಿಳಿದು ನೋಡು!"
ಮುಂದೆ ಮಾತಾಡದಾದರ್. ಶಕ್ತಿಯು ಉಡುಗಿತು.
ನಸುವೊಳ್ತು ಕಣ್ಮುಚ್ಚಿ , ಯೋಚನಾ ಕರಂಡಂ
ಮುಚ್ಚಿ ಮಿಣ್ಣನಾದರ್. ಭಾರತ ಜನನಿಯ ನಿಜ
ಪರಿತಾಪದುಸಿರ್ ತಂಗಾಳಿಯಲಿ ತೇಲಿಬಂದು
ತನುಮನಗಳಂ ಮುಟ್ಟಿತಟ್ಟಿ ಎಚ್ಚರಿಸಿದತ್ತು.
ನಸುವೊಳ್ತಿನ ಬಳಿಕಂ ನೋವು ನುಂಗಿ ನುಡಿದರ್,
"ಈವೊಂದು ಕ್ಷುದ್ರುತರ ಆದರ್ಶವೆ ನಿನ್ನದು?
ಇದಿಷ್ಟೆಯೇಂ ನೀನಿನ್ನೆಬರಂ ಕಲಿತುದು ಪೇಳ್?"
ಗುರುನುಡಿದ ಭರ್ತ್ಸನೆಯ ಮಾತುಗಳನು ಕೇಳ್ದಾ
ನರೇಂದ್ರನ ವಿಸ್ತೃತ ವಿಶಾಲ ನೇತ್ರದ್ವಯಗಳ್
ಅಶ್ರುಜಲ ಪೂರ್ಣಮಾಗಿ ಕೆಂಪು ತಳೆದುವು ನಿಜ
ಉಲ್ಕೆಯೊಲ್. ಆದೊಡಂ ಸ್ವಾಭಿಮಾನ ತುಂಬಿದ
ಮನಂ ತಣಿಯದಾಯ್ತು. ಗುರಿ ಮುಟ್ಟುವ ತರಾತುರಿ
ನುಡಿಸಿದುದು ಮತ್ತೆ "ಗುರುವರ್ಯ, ಮನ್ನಿಸಿ ಎನ್ನ.
ನಿರ್ವಿಕಲ್ಪ ಸಮಾಧಿಯಂಬಡೆವ ಇಚ್ಚೆಯು
ಕೈಗೂಡುವ ಮುನ್ನಂ ಆನೇನ್‌ಗೈಯಲಾರೆ!"
"ಎಲ್ಲ ನಿನ್ನಿಚ್ಛೆಯೆಂದು ಭಾವಿಸಿಹೆಯಾ? ಇದು
ಪುಸಿ ಕಣಾ! ಜಗದಂಬೆಯು ಕತ್ತು ಹಿಡಿದು ಬಗ್ಗಿಸಿ
ಕಾರ್ಯಮಂ ನಡೆಸುವಳ್!"
ನರೇಂದ್ರಂ ಮತ್ತೆಯುಂ
ಒತ್ತಾಯಿಸಿ ಬೇಡುತೆ ಕಂಬನಿಯ ಸೂಸಿದನ್
ಎಳೆಯರ ಪರಿಯಲಿ. ಮರಳಿ ಮರಳಿ ಕಾಡಿ ಬೇಡಿ.

ಗುರುದೇವನೆಂದರ್ ಕಡೆಗೆ "ಆಗಲಿ, ವತ್ಸಾ!
ನಿರ್ವಿಕಲ್ಪ ಸಮಾಧಿ ಲಭಿಸುಗೆ ನಿನಗೆ!"

ಪರಕೆ

ಸಾವಿರ ಹೆಡೆಯ ನಾಗರ ಸಹಸ್ರಗತಿಯಲ್ಲಿ
ಹರಸಿದವೊಲಾಯ್ತು! ಧ್ಯಾನಯೋಗದಲಿ ಮಂಡಿಸಿ
ಮೈಮರೆತು ಕಣ್ಮುಗಿದ ಸಮಯೆ ಶಿಷ್ಯ ನರೇಂದ್ರಂ
ನಿರ್ವಿಕಲ್ಪ ಸಮಾಧಿಯ ಗಂಭೀರ ಕಲ್ಪದ
ಮೂಸೆಯಲಿ ಮುಳುಗಿದಂ. ಸರ್ವೇಂದ್ರಿಯ ಗ್ರಾಹ್ಯದ
ಬೃಹದ್ ಬ್ರಹ್ಮಾಂಡ ಕೋಶಂ ಕಣ್ ಮರೆಸಿದತ್ತು
ದೃಶ್ಯಮಾನ ಚಿತ್ರಣಮೆಲ್ಲಂ ಮರೆಯಾಯ್ತು. ಮನ
ಚಂಚಲತೆಯುಂ ದೂರದೂರಮಾಯ್ತು. ನಿಚ್ಚಂ
ಬುದ್ಧಿಗಮ್ಯಮಾದ ಕಾಮಕಾಮಾದಿಗಳ ಸುಳಿವಿಲ್ಲ
ದೇಶಕಾಲಾನಿಮಿತ್ತಾತೀತಮಪ್ಪ ಚಿಂತನ
ಪರಿಬೋಧನ ಸ್ವರೂಪೀ ಸ್ವಮಹಿಮಾಮಯ
ನಿತ್ಯಾತ್ಮ ಮಾತ್ರಮೇ ರಾರಾಜಿಸಿತು, ಮನೋ
ಭಿತ್ತಿಯಲಿ. ಅದೇಂ ಸಣ್ಣ ಸಾಮಾನ್ಯ ಅವಸ್ಥೆಯೆ?
ಮಾನವೀಯ ಭಾಷೆಗೆ ನಿಲುಕಲುಂಟೆ? ನುಡಿಯಲ್
ದಿವ್ಯಕೋಶದ ಮೌಲ್ಯಮಾಪನೆಗೆ ದೊರಕುವುದೆ?
ಮಹಾ ಸಾಗರದ ವೈಭವವಂ ಬೆದರಿ ನೋಳ್ಪಂತೆ
ನೋಡಿದರ್, ಜೊತೆಗಿರ್ದ ಸಹಾಧ್ಯಾಯಿಗಳಿಂಗೆ
ಅಚ್ಚರಿಯೆನಿಸಿ, ಕಿಂಚಿತ್ ಸದ್ದಿನ ಸೊಲ್ಲಿರದೆ
ಗಂಭೀರ ಶೂನ್ಯತೆಯು ಹರಿದಾಡಿದುದಾತನ
ಸುತ್ತಮುತ್ತಲ್. ಅರೆ ಮುಚ್ಚಿದ ಕಂಗಳಲಿ ಅಗ್ನಿ
ಸ್ಫುಲ್ಲಿಂಗಗಳ್ ಹೊಮ್ಮಿದುವೊ ಎನಲ್ ವದನಮಂ
ಸುತ್ತುವರಿದ ಪ್ರಭಾಳಿಯುಂ ಕಣ್ಗೆತ್ತುದು ನೆರೆ

ಅಚ್ಚರಿಗೊಳಿಪ ತೆರದಿ. ಮಂದ ಮಂದಾನಿಲಂ
ತೀಡಿದುದು ನಲವಿಂ. ನಿಶಿಯಂ ಕಳೆದು ಮೂಡಿತು
ಮುಂಬೆಳಕು ಮೂಡಣದಿ. ಗೆಳೆಯನಂ ಕಣ್ಣಿಟ್ಟು
ನೋಡುತಿಹ ಸಹಾಧ್ಯಾಯಿಗಳ ತನುಮನಂ ಮಿಡುಕಿ
ಬೆರಗುವಟ್ಟುವು ಬೆಚ್ಚಿಬೆದರಿ. ಕೆಲಬರುಂ ಕೂಗಿ
ಮುಟ್ಟಿ ಕರೆದು ಮೈ ಅಲುಗಾಡಿಸಿದರ್ ವಿಸ್ಮೃತ
ಶಕ್ತಿಯಂ ಬಲವಂದು ಎಚ್ಚರಿಸೆ. ಆದೊಡಂ
ನಿಶ್ಚಲಂ ಕಾಷ್ಠ ಸದೃಶ ಶರೀರ ಸಂಪದಂ.
ಬಾಹ್ಯ ಜಗದರಿವಿಲ್ಲ. ಉಸಿರಾಡುವ ಸದ್ದಿಲ್ಲ.
ನಿಶ್ಪಂದ, ನೀರವ, ನಿರಾತಂಕ, ಗಂಭೀರ!
ಅಣುಗರ್ ಮನಂಗೆಟ್ಟರ್. ಮುಂದೇಂ ಗತಿಯೆಂಬ
ಭಯಭೀತಿ ಆವರಿಸಿತು ಮನಮನವಂ. ಕೆಲರ್
ಓಡಿದರ್ ಗುರುವರನ ಸೆಜ್ಜೆಯ ಬಳಿಗೆ. ನೋಡೆ,
ಎಂತಪ್ಪ ಪ್ರಶಾಂತ ಭಾವ ಮೊಗ ಬಿಂಬದಲಿ!
ಸೀರಿ ಶೀರ್ಣಿತಮಾದೊಡಂ ಮುಗುಳು ನಗೆಯ ಸಿರಿ
ಹರವು; ಕಂಗಳಲ್ಲಿ ಅಪೂರ್ವತಮ ಸಮಾಧಾನ
ಶಿಷ್ಯ ಸಂದೋಹವದು ಭಯದಿಂ ಕಳವಳಿಸಿರೆ,
ಒಣಗಿ ದೆಬ್ಬೆಯಾದಾ ಕೈಯೆತ್ತಿ ಅಭಯವಂ
ತೋರ್ದರಾ ಗುರುವರಂ! ಆರುಂ ವಿಚಾರಮಂ
ತಿಳಿಪುವ ಮೊದಲೆಂತರಿದರ್ ಎಂಬ ಅಚ್ಚರಿಯ
ಕುಂಡದಲಿ ಮುಳುಗಿ ಗರ ಬಡಿದೊಲಾಯ್ತು ವಟುಗಳ
ಸಮುದಯಕೆ. ನುಡಿಸುವೆನೆನೆ ಬಾಯಿಯು ಬರದಾಯ್ತು
ಮೂಕಮೌನ ತಾಳಿದರ್.
"ಇರಲಿರಲಿ, ತರುಣರೆ,
ಇದಕಾಗಿ ನರೇಂದ್ರನೆನ್ನ ಕಾಡಿದ್ದನ್. ನೀವ್

ಅವಂ ಕುರಿತು ಚಿಂತಿಸುವ ಕತಮಿಲ್ಲಂ.” ಧ್ವನಿ
ಕಡುನೋವಿನಾ ಕರ್ಮ ಕಾಂಡದಲ್ಲಿ ಪೊಣ್ಮಿತು.
ಸದ್ಯ ಹೃನ್ಮನದ ಭಾರಮಿಳಿದು ನೆಮ್ಮದಿ ಮೂಡಿ
ಬರೆ ಶಾಂತ ಭಾವದಿಂ ಪಿಂಮರಳಿದರ್ ಗೆಳೆಯ
ನರೇಂದ್ರನ ಸಮಕ್ಷಮಕೆ. ಯುವರಿಸಿಯ ಸ್ಥಿತಿಯು
ಯಥಾಕ್ರಮಗೊಳಿರ್ದುದು. ಎರಳ್ಡುಮೂರು ದಿನಗಳ್
ಕಳಿದುವು. ಆ ಬಳಿಕ ಸಮಾಧಿಸ್ಥಿತಿಯು ಇಳಿದು
ಬಾಹ್ಯಪ್ರಜ್ಞೆ ಮೂಡಿಬಹ ನಲ್ ಸೂಚನೆಯದುಂ
ತೋರಿಬರೆ ಗೆಳೆಯರುಂ ತುಷ್ಟರಾಗಿ ಕಾದರ್
ಗೆಳೆಯನ ವಿಮುಖತೆಯಂ. ಮೂಡುರವಿ ಬಾನೇರ್ವ
ಮುನ್ನಮೇ ನರೇಂದ್ರಂ ಕಣ್ತೆರೆದು ನೋಡಿದನ್.
ಮತ್ತೆ ಮುಚ್ಚಿತೆರೆತೆರೆದು ನೋಡುತೆ ಜ್ಞಾನವಂ
ಬರಿಸಿದನ್ ಬಲವಂದು. ಕಣ್ ತೆರೆದೊಡನೆ ಮಂದ
ಬಂಧುರಮಯ ಚಿಂಬೆಳಕು ಮುತ್ತಿತು ಕಂಗಳಂ.
ಕಣ್ ಮಿಟುಮಿಟುಕಿಸಿ ಪೂರ್ಣ ಪ್ರಜ್ಞೆಯಂ ಪಡೆದರಳೆ
ಒಮ್ಮೆಗೇ ಭಯ ಚಕಿತತೆಯಲಿ ಮನ ಮಿಡುಕಿದೊಲ್
ಭಾವನೋದ್ವೇಗದ ಸುಳಿಯಲಿ ಸಿಲ್ಕಿ ಚೀರಿದಂ,
“ಅಯ್ಯೊ ಏನಾಗಿ ಹೋಯ್ತು! ನನ್ನ ಶರೀರವೆಲ್ಲಿ?”
ತೆರೆದ ನಯನ ಚೈತ್ಯಾಕ್ಷಿಗಳಲ್ಲಿ ಕಳಕಳಿಯ
ಛಾಯೆ ಭೋಂಕನೆ ಮೂಡಿ ಅರಳಿದುವು ವಿಸ್ತರಿಸಿ.
“ಇಲ್ಲಿದೆ! ಇಲ್ಲಿದೆ!” ಮೈ ಮುಟ್ಟಿತೋರಿದುವು ಕೆಲ
ಕೈಗಳ್.
ನರೇಂದ್ರನಾಥಂ ಪೂರ್ಣ ಮೈತಿಳಿದು
ನೋಡಿದನ್ ನೇರ ಕಣ್ಣಾಲಿಯಂ ನೆಟ್ಟು. ಆ
ಮುಹೂರ್ತದಲಿ ಆವುದೊ ದಿವ್ಯ ಲೋಕದಿಂದೈದ

ಪರಿಯಲಿ ಬೆಮೆಗೊಂಡಿತು ಮನಂ. ಗೆಣೆಯರ ವದನ
ಮಂಡಲಂ ಕಂಡು ಬಗೆ ತಿಳಿಗೊಳ್ಳೆ ಪೊಸವಗೆಯ
ಶಕ್ತಿಯೊಂದು ಮೈಯ್ಯನಾಕ್ರಮಿಸಿದಂತೆವೊಲ್
ಭಾಸಣಿಸಿತು. ನಸುವೊಳ್ತು ಜಾನಿಸಿ ಸ್ವಂತರಿತ
ಮಾನಸಂ ಕೊಡವಿ ಪರಿಸ್ಫುಟಗೊಳಿಸಿ ಸುಂದರ
ವದನದಲಿ ಕಿರುನಗೆಯ ಚೆಲುವು ಚೆಲ್ಲಿ ಮುದದಿಂ
ಗೆಣೆಯರ ಮಾನಿಸಿದಂ. ನಿರ್ವಿಕಲ್ಪ ಸಮಾಧಿ
ಆಧ್ಯಾತ್ಮ ಸಾಧನೆಗೆ ಪುಷ್ಟಿಯಾಯ್ತು. ಮತ್ತಂ
ಆತ್ಮಶಕ್ತಿಯುದ್ದೀಪನೆಗೆ ಬಿತ್ತು ತಾನಾಯ್ತು.
ಭಾರತ ನಭದಲಿ ಹಾರಿತು ಮಾನಸ ಪಕ್ಷಿಯು
ಸುರಧನು ರ್‍ಯಾನದಲಿ. ಧಮನಿಧಮನಿಗಳಲ್ಲಿ
ಪೊಚ್ಚ ಪೊಸ ಶಕ್ತಿಸಂಚಯನಮಾದ ಭೀಮವಪು
ನಡೆದುದು ರಿಸಿಪ್ರತಿಭೆವೆರಸಿ, ವಿಶ್ವತೋಮುಖ
ಸ್ವಪ್ನ ರಾಜ್ಯದ ರಸಲ್ಲೋಕದಿ ಪರಿಭ್ರಮಿಸಿ
ಬೌದ್ಧಿಕ ಕುಷಾಗ್ರತೆಯಲಿ ನಳನಳಿಸಿತು ಹೃದಯ
ಬನದ ಪಕ್ಷಿ. ಮನಮತಿಗಳ ವ್ಯವಹಾರಮಂ
ಅವಲೋಕಿಸುತೆ ಗುರುಗಳ ಕೊಠಡಿಯಂ ಬೊಕ್ಕಂ.
ಗುರುದೇವನುಂ ಮೆಲ್ಲನೆ ಕಣ್ತೆರೆದು ನೋಡುತೆ
ಪ್ರಿಯತಮ ಶಿಷ್ಯನಂ ಬಳಿಗೆ ಬರಿಸಿ ಮಾನಿಸಿ,
    "ವತ್ಸ! ಜಗದಂಬೆ ನಿನಗೆಲ್ಲವಂ ತೋರ್ದಳಲ್ತೆ ?
ಇಂ ನಿನಗದು ಕೈಗೆಟುಕದ ಪರಿಯಲಿ ಬೀಗವ
ಜಡಿದಿರಿಸುವೆಂ. ಬೀಗದಕೈ ಇರ್ಪುದೆನ್ನಯ
ಎದೆಯ ಭಂಡಾರದೊಳ್. ಮುಂದೆ ನೀಂಗೆಯ್ಯಲಿಹ
ಎಲ್ಲಬಗೆಯ ಕಾರ್ಯಕ್ರಮಗಳ್ ಮುಗಿದ ಬಳಿಕ
ಬೀಗವಂ ತೆಗೆವೆ ಕಣಾ!"

ಅಕ್ಕರಕ್ಕರವುಂ ಕಡುನೋವಿನ ಗೋಳಿನೊಳ್
ಹೊಮ್ಮಲಾರದ ಪರಿಯಲಿ ಹೊಮ್ಮಿತು ತಡೆತಡೆದು.
ನರೇಂದ್ರನುಂ ಗುರುಗಳಂ ಮೈದಡವಿ ಹಣೆಯೊತ್ತಿ
ಸೈಪಿ ಮೃದುವಚನಗಳಿಂ ಸಂತವಿಸಿ ವೀತ
ರಾಗದಲಿ ಭಜನಗೀತಗಳ ಮೆಲು ಕಂಠದಲಿ
ಹಾಡಿದಂ ಗುರುಗಳ ಕೊರಳಿನ ನೋವು ಮರೆಸುವ
ತೆರದಿ. ಆ ಭಕ್ತಿ ಗೀತೆಯ ರಸನೆಯಲಿ ತೇಲಿ
ತೇಲಿ ಮುಳುಗೇಳುತೆ ಗುರುದೇವಂ ಜಗಜ್ಜನನಿ
ಕಾಳಿಮಾತೆಯಂ ಕುರಿತು ಪ್ರಾರ್ಥಿಸಿದನೆಂತೆನೆ,
"ಅಮ್ಮಾ ತಾಯಿ ಕೈಮುಗಿದು ಬೇಳ್ಪೆನ್.
ನಿನ್ನ ಶಿಷ್ಯವರೇಣ್ಯನ ಅದ್ವೈತಾನುಭೂತಿಯ
ಮೇಲೆ ನಿನ್ನ ಮಾಯಾವರಣವಂ ಕೃಪೆಯಿಂ
ಬೀಸಿ ಉದ್ಧರಿಸು. ಅವನಿಂದಲಾಂ ಮಾಡಿಸಲ್
ಇಚ್ಚಿಸಿಹ ಕೆಲಸ ಕಾರ್ಯಗಳ್ ಬಹುಲಮಿರ್ಕುಂ."
ಮಠದ ಪರಿಸರದ ಪಚ್ಚ ಪಸುರಿನ ಪಸಲೆಯಲ್ಲಿ
ಕೆಂಬಣ್ಣದ ರಾಮಗಿಳಿಯೊಂದು ಅರಸಿ ಅರಸಿ
ಪಣ್ಗಳ ಸಿಹಿ ಪರ್ಬವನುಂಡು ಉಲಿಯಿತು ಮುದದಿ.
ಅಲ್ಲಿಯೇ ಒಳಗೊಳಗೊಳಗಣ ಪಾಲಿವಾಣದ
ಪೆರ್ಮರದ ನೆತ್ತಿಯೊಳ್ ಕುಳಿತ ಮತ್ತೊಂದುಲಿದು
ಮುದದಿಂ ಕೊಟ್ಟಿತು ಮರುದನಿಯ. ಅದೇ ರೀತಿಯೊಳ್
ಮತ್ತೆ ಮೇಣ್ಮತ್ತೆ ಪೊಣ್ಮಿದುದು ರಾಗಭಾವದ
ಸುಸುಂದರ ಸ್ವರವಾಹಿ. ಬಳಿಕಂ ಕಾಜಾಣ
ತಾಂ ಹರಿಸಿತು ಹಿರಿದನಿಯಲಿ ಕೊರಲ್ ತೂರ್ಯಮಂ.
ಆಗಳೇಂ ಪೊದಲ್ದ ವಿಧವಿಧ ಹಕ್ಕಿಪಕ್ಕಿಗಳ
ರಾಗಾರುಣತಾನದುಲಿಯ! ಸಗ್ಗದ ಪೊನ್ನಿನ

ಗೆಜ್ಜೆಗಳ್ ಅಲುಗಿದುವೊ ಎನಲ್ ಕರ್ಣಾನಂದ
ರಸಮಾಯ್ತು, ವಟುಜನರ ಮಾನಸಾಂದೋಳನದ
ಹತಿಗತಿಗೆ ಕಿರುವಗೆಯ ರಸಚೇತನವೂಡಿದೊಲ್!
ನರೇಂದ್ರನಾಥದತ್ತಂ ಏಕಾಂತಚಿಂತನೆಯ
ನಿಚ್ಚಸಾಧನೆಯೊಳ್ ಸಕಲ ಧರ್ಮಮಂ ಬೆಳೆಸಿ
ಆದರಿಸಿದ ಪರಮ ರಿಸಿ! ಶಾಕ್ತ, ಶೈವ, ಬ್ರಾಹ್ಮಣ
ಬೌದ್ಧ, ಕ್ರಿಸ್ತ, ಮುಸಲ್ಮಾನ, ಹಿಂದೂ ವೈಷ್ಣವ
ಎಲ್ಲ ಮತಗಳ ಧರ್ಮಮಾರ್ಗಗಳ್ ಮುಂಮುಂದೆ
ಒಗ್ಗೂಡಿ ಹರಿಹರಿದು ಏಕಮಾತ್ರವಾಗುತೆ
ಪರಮಾತ್ಮನೆಡೆಗೆ ಪೋದಪುದು ದಿಟಮೆನಲ್ ಇಂ
ಎಲ್ಲಿಯದು ಬೇಧಭಾವ ಧರ್ಮಧರ್ಮಗಳಲಿ?
ಯೋಚಿಸುತೆ ತನ್ನೊಳಗೆ ದಿವ್ಯ ತತ್ವಾನುಭವ
ಪೊಂದಿ ಸರ್ವಧರ್ಮದ ಸಾರರಸಮುಂಡ ಘನ
ತೇಜೋಮತಿಯು ಕ್ರಮವತ್ ದ್ವೈತ ಅದ್ವೈತ
ವಿಶಿಷ್ಟಾದ್ವೈತ ಎಂಬೆಲ್ಲ ಧರ್ಮ ದರ್ಶನಂಗಳು
ವಿವಿಧ ಭಾವ ದೃಷ್ಟಿಗೆ ತೋರಿಬಹ ಚಿತ್ರಣಂ
"ಏಕಮೇವಾ ದ್ವಿತೀಯ" ಮಾಗಿರ್ಪ ಸತ್ಯದ
ವಿವಿಧ ರೂಪಗಳೆಂಬುದಂ ನಿತ್ಯ ಪರಮಾರ್ಥ
ಭಾವದಿಂ ತನುಮನಗಳಂ ತುಂಬಿ ವಿಜೃಂಭಿಸಿದ
ಶ್ರೀಮಹಾನುಭಾವಂ! ಪುರುಷ ಸಿಂಹನಾಗಿ
ವಿಜೃಂಭಿಸಿ ಶ್ರೀ ರಾಮಕೃಷ್ಣ ಪರಮಹಂಸರ
ಏಕೈಕ ಮಾನಸ ಪುತ್ರನಾಗಿ ಭಾರತಜನನಿಯ
ಪವಿತ್ರಾತ್ಮನಿಧಿ ತಾನಾದ ಪುಣ್ಯಪುರುಷಂ!
ಮುನ್ನೇಸರ್ ಮೂಡುವ ಮೂಡಣ್ಗೆ ಮೊಗ ಮಾಡಿರ್ದು
ನೋಡುತಿರೆ ನರೇಂದ್ರನ ಕೆಚ್ಚೆನೆದೆಯಲಿ ನೆಚ್ಚು

ನಿಚ್ಚವುಂ ಇರ್ಪುದಕಿಂ ಮಿಗಿಲಪ್ಪಿ ಜೃಂಭಿಸುತೆ
ಪ್ರಭಾಸಣಿಸಿರ್ದುದಯ್ ತಾನೆ ಅಚ್ಚರಿಗೊಳ್ವ
ತೆರಂ. ಅಹ ಮನ್ಮನಂ ತಾನಾಯ್ತು ಹಿಮಾಚಲ
ಸ್ಪರ್ಧಿ, ನಭಶ್ಚುಂಬಿ! ರಾಷ್ಟ್ರರಥ ಸಂಗಿ, ಬ್ರಹ್ಮಾಂಡ
ವ್ಯಾಪಿ ಬ್ರಹ್ಮಾಸ್ಮಿ! ಬ್ರಹ್ಮ ತೇಜೋಬಲ ಭಾತಿ!
ಸಾವಿರದೆಂಟನೂರೆಂಬತ್ತಾರನೆಯ ಗ್ರೀಷ್ಮ
ಋತುರಾಜನಾಸ್ಥಾನದಧ್ಯಾಯ ಜೃಂಭಿಸಿತು
ಜ್ವಾಲೋಜ್ವಲ ಸೂರ್ಯ ಸುರತೇಜೋರಾಶಿಯ
ಜಾಜ್ವಲ್ಯಮಾನ ಪ್ರಚಂಡ ಕಿರಣಂಗಳಿಂ
ತನುಮನಗಳ್ ಸುಟ್ಟುರಿದು ಬೆಮರ್ ಬಸಿವ ತೆರದಿ.
ಮತ್ತೆ ವರ್ಷ ಋತುರಾಜನಾ ಪುಣ್ಯಾಗಮನಂ
ಸಕಾಲದಲಿ. ಬೋರ್ ಬೋರನೆ ಬೋರ್‌ಗುಡಿಯುತೆ
ಮುಂಗಾರ್ ಮಳೆಗಾಳಿಗಳ ಆರ್ಭಟಂ ಮೆರೆದು
ಮುಂದ್ಯೆದು ವೀರ ಪೂಜೆಯಂ ಹಿಡಿದನ್ ತಾನೆ
ತಾನ್ಯೆಸಿ. ಸುರಿದುದೊರ್ಮೆ ಪೂವಾಲಿಗಲ್ಮಳೆಯು
ಪಟಿಪಟಿಸುತ ಕನ್ನಡಿಯ ಮಣಿಗಳಂ ಹೋಲಿ! ಜಲ
ರಾಶಿಯಲಿ ಮಿಂದು ಮೈದುಂಬಿ ಒಡಲ್‌ದುಂಬಿರೆ
ಪಚ್ಚ ಪಸುರದು ಪಟ್ಟುಡೆಯನುಟ್ಟು ಜೃಂಭಿಸಿದುವು
ಕಣ್ಗೆಡ್ಡಮಾಗಿ. ಪೂವಾಲಿಗಲ್ಮಳೆಗರೆಯಲ್
ಎಲೆಎಲೆಗಳ್ ಒಣಕಡ್ಡಿಗಳ್ ಕುಸುಮಗಳ್ ಮಿಡಿ
ಮೊಗ್ಗು ಕಾಯಿಗಳ್ ಉದುರಿದುವು ಬಳಬಳನೆ. ಆ
ರೋಷಭೀಷಣತೆಯ ಮಳೆಗಾಳಿಗಳ ಮಹಾನ್
ಯುದ್ಧಕಾಂಡ ಎಡೆಬಿಡದೆ ಜಡಿದಾರ್ದು ಗಗನವೆ
ತೂತಾಯ್ತೆನೆ ಸೋಸೋರಿ ಸುರಿದುದು ಜಲರಾಶಿ
ಧಾರೆಧಾರೆಯಾಗಿ. ಗುಡುಗು ಮಿಂಚುಗಳ ಮೇಳ

ಕಾರ್ಮೆಘಗಳ ಹಿಂಡು ಭಯಾನಕಮಾಗೆಸೆದು
ಕಂಗೆಡಿಸಿದುದು ಭೀಕರ ವರ್ಷಾಕಾಲಂ. ಭೂ
ತಲದಲ್ಲಿ ಎಲ್ಲವಗೆಯ ಶೇಷಾವಶೇಷಂ
ಕಲೆಕಲೆತು ಬೆಳೆಬೆಳೆದು ದಟ್ಟೈಸಿ ವಿಚಿತ್ರತರ
ರಂಗೋಲಿಯನೊರೆದುದು ವ್ಯಾಪಕವಾಗಿ. ಹರ್ಮ್ಯ
ಸಿರಿಸಾಲ್ ಸುಖಮಜ್ಜನಂಗೈದು ಶುಭ್ರತಾ
ವೇಶದಲಿ ನಳನಳಸಿದುವು. ಆದೊಡೇಂ, ಭೀಮ
ಭೀಷಣ ಬಿರುಗಾಳಿಯು ರೌದ್ರ ಪ್ರಭಂಜನೋ
ಚ್ಛ್ವಾಸದಿಂ ಭೋರಿಡುತೆ ಬೀಸಿ ಬರುತಿರೆ ಕಾಣಾ
ಆವೇಶದಾವೇಶಮಂ! ಮನೆಗಳಂ ನೂಂಕಿ ಜಡಿ
ಕುಟ್ಟಿ ಕೆಡವಿ, ಪೆರ್ಮರಗಳಂ ಮುರಿಮುರಿದು ನೆರೆ
ತಿರುಚಿ ಬೇರುಡಿದು ಬೀಳ್ವಂತೆ ನೂಕಿ ಮೆರೆದುದು
ಗಾಳಿ ಮಳೆಗಳ ಅದ್ಭುತ ವರ್ಷಾಕಾಲಂ
ತರುವಾಯಿ, ಮುಂಗಾರ್ ಋತುವರನ ಮನತಣಿದು
ಕಾರ್ಮೋಡಗಳ್ ಚೆದರಿ ದೂರ ದೇಶಾಂತರಂ
ಬೆತ್ತು ಹೊಂಬಿಸಿಲ್ ಹರಡಿತು ಭುವಿಯ ಮೇಲೆಲ್ಲ.
ಒಂದೆರಳ್ದು ವಾರಗಳ ರುದ್ರಾಟ್ಟಾಹಾಸವದು
ಮೈಮುದುಡಿ ಮಲಗಿದತ್ತು ಭೂ ಶಾಂತಿಗೆ ಬಿಡುವು
ಕೊಡಮಾಡಿ.

ಭಾದ್ರಪದದುತ್ತರೀ ಭಾಗದೊಳ್
ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ
ಗಂಟಲಿನ ಉಗ್ರರೋಗವದು ಕ್ರಮಶಃ ಮುಂ
ಬೆಳೆದು ಭೀಷಣ ತರದಲಿ ಮೈನೆತ್ತರ್ ಹೀರಿ
ಪ್ರಾಣಮಂ ಹಿಂಡತೊಡಗಿತು, ಕರ್ಬುನದ ಗಾಣ
ತಾನಾಗಿ. ಉಸಿರೊರ್ಮೆ ಹರಿದೊಡೆ ಸರಾಗದಲಿ,

ಮತ್ತೊರ್ಮೆ ಮಾತುಳಿದು ಸ್ವರವುಡುಗಿ ಧ್ವನಿಯ
ಕರಂಡಂ ಕುಸಿದು ಕೊರಳ್ ಕಟ್ಟಿ ನರಳುವರಮಿತ
ನೋವಿನಲಿ. ಸುತ್ತುವರಿದ ಭಕ್ತರಂ ಸನ್ನೆಯೊಳ್
ಬಳಿಗೆ ಬರಿಸಿ ಹಿತವಚನ ನುಡಿವರ್ ಭಂಗದಲಿ.
ಮೆಲ್ಲುಲಿ ಹರಿಸಿ, ದುಃಖಿತರಂ ಸೈಪುವರ್ ದಯೆ
ದೋರಿ. ನರೇಂದ್ರನ ಕೈಹಿಡಿದು ಮೆಲ್ದನಿಯಲಿ "ಎಲೈ
ವತ್ಸ! ಎನ್ನ ಶಿಷ್ಯಗಣದಲಿ ನೀಂ ಪಿರಿಯನಿರೆ
ಉಳಿದವರ ಹೊಣೆ ನಿನ್ನದಯ್ ನೀನೇ ಮಾರ್ಗ
ದರ್ಶಿ ಎಂದಾಂ ಪೇಳ್ವ ಕತಮಿಲ್ಲೈ. ನಿನಗೆನ್ನ
ಸರ್ವಸ್ವಂ ನೀಡಿದಾಂ ಫಕೀರನೆ ವಲಂ.
ಶೀಘ್ರದೊಳ್ ಆನೀ ಶರೀರ ತ್ಯಾಗಗೈದಪೆ.
ಮುಂದಿನದು ನಿನ್ನಯ ಹೊಣೆಗಾರಿಕೆಯಿರಲೆನಗೆ
ನಿಶ್ಚಿಂತೆ."
        ತಡೆತಡೆದು ನುಡಿಯಲಾರದೆ ನುಡಿದು
ಮುಗಿಸಿದರ್. ಎಲ್ಲರ್ ಕಣ್ ಹನಿತುವು ದುಃಖದಿಂ.
ಗುರುವರನ ಲೀಲಾವಸಾನ ಆವ ಚಣದೊಳ್
ಬಂದಪುದೊ, ಎಂದೆಂಬ ಕಳವಳದಲಿ ತಲೆಬಾಗಿ
ಕುಳಿತರ್ ಮರುನುಡಿಯಲ್ ಬಾಯಿ ಬಿರಿಯದೆ. ಗಳಿಗೆ
ಗಳಿಗೆಗಳ್ ಕಳಿದುವು. ದಿನದಿನಗಳ್ ಉರುಳಿದುವು
ನರೇಂದ್ರಂ ಒರ್ಮೆ ಸಮಾಧಾನಿಯಾದೊಡೆ ಮತ್ತೆ
ಮರುಗಳಿಗೆಯಲಿ ಶೋಕತಪ್ತನೆನೆ ಪೊರಗುಯ್ದು
ಬಿಸುಗಂಬನಿಗರೆವನ್, ಎಳೆಯರಂತೆ; ಮತ್ತಂ
ತನ್ನತಾಂ ಸೈಪುವಂ. ರುದ್ರಭೀಷಣ ದಿನಂ
ಸನ್ನಿಹಿತಮಾದತ್ತು, ಮೃತ್ಯುವಿನ ಕರಿನೆರಳ್
ಚಾಚಿ ದಟ್ಟೈಸಿ.

ಸಾವಿರದೆಂಟನೂರೆಂಬತ್ತಾರನೆ
ಇಸವಿಯ ಆಗಸ್ಟ್ ತಿಂಗಳಿನ ಕ್ರೂರ
ರವಿವಾರ ಆಗಮಿಸಿತು, ಭಾರತದ ನೀಲಿಯ
ಬಾಂದಳದಲಿ ಕರ್ಮೋಡಗಳ ದಟ್ಟ ತೆರೆಯಂ
ಹರಡಿ. ಸಕಲ ಪಕ್ಷಿಕೋಟಿಯ ಕಂಠ ಸ್ವರದಲಿ
ವೀತರಾಗರಸ ಹರಿದುದು ಒಡಲ ಸಂಕಟದ
ಗೋಳಂ ನೆರೆ ಹರಿಸಿ. ತನಿಗಾಳಿಯು ಬೀಸಿದುದು
ಸುಯ್ಯನೆಯ ಸುಯ್ದುಯ್ದು ಸುಯ್ಯುತ್ತೆ. ಎಲ್ಲೆಡೆಯು
ಶೋಕತಪ್ತ ಅವನತ ಮುಖಗಳ ಬಿಸುಸುಯ್ಲಿನ
ಪರಿತಾಪದ ರಣಗೋಳು. ಅಂದು, ದುಃಖಭಾರಾಂತ
ಹೃದಯಂ ಪೊತ್ತು ಪಡಿಮೊಗನಾದ ನರೇಂದ್ರಂ
ಗುರುದೇವನಾರುಗ್ಣ ಶಯ್ಯೆಯ ಬಳಿಯಲಿರ್ದಂ.
ಮನದೊಳ್ ಗುರುದೇವನ ಈ ಅಂತಿಮ ಚಣದೊಳ್
ಸಂಧಿಗ್ಧ ಪರಿಸ್ಥಿತಿಯಲಿಯುಂ ಬಲುದಿನದಿಂ
ಉಳಿದಿರ್ದ ವಿಚಿತ್ರತರ ಆಸಂಕೆಯು ಮೊಳೆತು
ನಿಂದತ್ತು ಮನೋದರ್ಪಣದ ಮೇಲೆ. ಆಗಳ್
ಶ್ರೀರಾಮ ಕೃಷ್ಣರ್ ಅವನೆಡೆಗೆ ಮೊಗಂದಿರಿವಿ
ಬಲು ಕಷ್ಟದಿಂ ಉಸುರಿದರ್ ಕಳೆದುಳಿದ ಶಕ್ತಿ
ಕಣಗಳಂ ಕ್ರೋಢೀಕರಿಸಿದಂತೆ "ನರೇನ್, ನಿನಗಿನ್ನುಂ
ನಂಬುಗೆಯು ಬಾರದಾಯ್ತೇ? ಮಿನ್ನೆ ರಾಮನಾಗಿ
ಕೃಷ್ಣನಾಗಿ ಆರ್ ಪುಟ್ಟಿದನೊ ಅವನೀಗಳೀ
ದೇಹದೊಳ್ ರಾಮಕೃಷ್ಣನಾಗಿಹನ್. ಎಂದೊಡೆ,
ತಿಳಿದಿರ್ಪೆ ನಿನ್ನ ವೇದಾಂತ ದೃಷ್ಟಿಯಿಂದಲ್ಲ
ಇದುಂ ಸತ್ಯಸ್ಯ ಸತ್ಯ"
ನರೇಂದ್ರನಿಗೊರ್ಮೆಗೇ

ಬರಸಿಡಿಲ್ ಬಡಿದವೊಲ್ ಭಾಸವಾಯ್ತು! ಹಾ, ಎಂ
ಅಚ್ಚರಿ? ಅದಂ ನೆನೆದೆನಲ್ಲದೆ ಬಾಯ್ದೆರೆದು
ನುಡಿದೆನಿಲ್ಲಂ. ಮೃತ್ಯುಮುಖದೊಳಿರ್ದು ಎನ್ನಯ
ಮನವನೋದಿದುದು ಅಚ್ಚರಿಯಲ್ತೆ? ಎನಗೆ
ಪಲವಾರು ಅಪೂರ್ವತರ ಅನುಭವ ರಾಶಿಯಂ
ದಿವ್ಯದರ್ಶನಗಳಂ ತೋರಿಯುಂ ಗುರುವರನ
ಭವ್ಯತೆಯಂ ಶಂಕಿಸಿದೆನೇಕೆ? ಎಂಬ ಲಜ್ಜೆಯ
ರಾಹು ತನುಮನಂಗಳನೊತ್ತಿ ಹೆಡೆಮುರಿಗಟ್ಟಿ
ಬಿಗಿದವೊಲ್ ತೋರ್ದುದು. ನರೇಂದ್ರಂ ಮರುನುಡಿಯದೆ
ತಲೆ ಬಾಗಿದಂ. ಆದೊಡರಿಂದೆ ಗುರುದೇವಂಗೆ
ತಮ್ಮಯ ಅವತಾರತ್ವವಂ ಜಗಕ್ಕೆ ಶೃತ
ಪಡಿಸುವೊಡೆ ಪರಮ ಶಿಷ್ಯಂ ನಿಮಿತ್ತಮಾತ್ರಂ,
ಅಲ್ಲದೊಡದೆಂತದರ ನಿರ್ಣಯಮೊ? ಸತ್ಯಾರ್ಥ
ಪ್ರಕಾಶನಂ ಘನಿಸುವೊಡದು ಘಂಟಾಘೋಷ
ಮಾಗದೆಯೆ ಬಾಳದೈ ಬಹುಕಾಲ; ಚಿರಕಾಲ.
ಶಿಷ್ಯವರ್ಯನ ಸಂಕೆ ಮೂಡಿದುದು ಸರ್ವಥಾ
ಸಮಯೋಚಿತಂ! ಗುರುಗಳ ಅವತಾರದ ಗುಟ್ಟು
ದೃಢವಟ್ಟು, ತರುವಲಿಗಳ್ ಭಯಚಕಿತರಾಗೆ
ಕಟ್ಟುಸಿರ್ ಬಿಗಿದುದು ಮನತಲ್ಲಣಿಸುವ ತೆರದಿ.
ಮಿಣ್ಣನೆಲ್ಲರ್ ಸೆಜ್ಜೆಯಂ ಸುತ್ತುವರಿದರ್ ಕಡು
ದುಃಖ ಭಾರದಿಂ ಪಡಿಮೊಗವಾಗಿ. ಕಂಬನಿಗಳ್
ಉದುರಿದುವು ಕಂಗಳಲಿ. ನರೇಂದ್ರನಾಥನುಂ
ದುಃಖಾಂತ ಹೃದಯಂ ಭರಿಸಲಾರದೆ ಭರಿಸಿ
ಸೆಜ್ಜೆಯ ಬಳಿ ಕುಳಿತಂ ಅಶ್ರುಲೋಚನನಾಗಿ.
ತಲೆದಿಶೆಯಲಿ ದುಃಖಾಶ್ರುಧಾರೆಯಂ ಸೂಸುತ್ತೆ

ಸತಿ ಶಾರದಾಮಣಿದೇವಿಯುಂ ಮಂಡಿಸಿರ್ದಳ್
ಅವನತಮುಖಿಯಾಗಿ. ಗೃಹೀಭಕ್ತರ್ ಶಿಷ್ಯರ್
ಶ್ರೋತೃಗಳ್ ಎಲ್ಲರುಂ ಇರ್ದರಲ್ಲಿಯೆ. ಕಠಿಣ
ಕಠೋರ ಚಿರ ಸಮಾಧಿಯ ಪ್ರತೀಕ್ಷೆಯಲಿ ಮನ
ಮತಿಗಳ್ ಉಡುಗಿ ಸ್ತಬ್ಧಿತಮಾದುವೊ ಎಂಬಿನಂ
ನಿಶ್ಶಬ್ದ ನೀರವತೆಗಳ್ ತಾಂಡವಾಡಿದುವು
ಗುರು ಕೊಠಡಿಯೊಳ್. ಗಳಿಗೆಗಳಿಗೆಗಳುರುಳುರುಳಿ
ಇತಿಹಾಸಕಡರುತಿರ್ದುವು ಮುಂಬಹ ದುರ್ಭರ
ಗಳಿಗೆಗೆಡೆಮಾಡಿಕುಡುವ ಯೋಜನೆಯಂ ಹೂಡಿ.
ಕಾಲದೇವನ ರುದ್ರಪಾಶವೊಗೆದ ಬಿಗಿತದಿ
ಉಸಿರಿಡಿದು ದುಃಖಿತರ ಕಡೆಗೊರ್ಮೆ ನೋನೋಡಿ
ಶೀರ್ಣದೀರ್ಣ ತುಟಿಗಳ ಬಲವಂದು ಬಿರಿಸಿದರ್,
ಗುರುದೇವಂ, ಅಲುಗಿದುವು ತುಟಿಗಳ್ ಭಂಗದಲಿ.
ಮೆಲುಸಿರ್ ಹೊರಬಿಳ್ದುದು–"ನೀಮೆಲ್ಲರುಂ ಮುಂದೆ
ನರೇಂದ್ರನ ನೇತೃತ್ವದೊಳ್ ನಿಮ್ಮಯ ಭವಿಷ್ಯ
ಜೀವನವ ನಿರೂಪಿಸಿಕೊಂಬುದದು ಉತ್ತಮಂ.
ದುಡುಕಿ ಮುಂಗೆಡದಿರಿ ನಿಮಗಿರ್ಕುಂ ದೈವರಕ್ಷೆ."
ಬಳಿಕಲಾ ನರೇಂದ್ರಂಗೆ ಕೇಳಿಸಿದರೆಂತೆನೆ,
"ವತ್ಸಾ! ವಟುಗಳೆಲ್ಲರಂ ನಿನ್ನ ರಕ್ಷಣೆಯೊಳ್
ಇರಿಸಿ ವಿರಮಿಸುವೆನೆನ್. ನೀನವರನೊಟ್ಟಯಿಸಿ
ಧರ್ಮರಕ್ಷೆಯಿತ್ತು ಸಹಾಧ್ಯಾಯಿ ಬಂಧುಗಳ
ನೇಮದಲಿ ಮುನ್ನಡೆಸ್ಯೆ . ಸನಾತನ ಧರ್ಮ
ಪ್ರಸಾರ ಕಾರ್ಯಮಂ ಕೈಬಿಡದಿರ್ ಕಂದಾ!"
ಜುಲೈ ತಿಂಗಳ ಮಾಸವದು ಸರಿಸರಿದು ಹೋಹೆ
ಗತೇತೀಯ ಹಾಸಕೆ ಜುಗುಳಿ, ಬಳಿಕ ಆಗಸ್ಟ್

ಪ್ರಭು ಆಗಮಿಸಿ ರಾಜ್ಯಭಾರದ ಸೂತ್ರಮಂ
ಪಿಡಿದಂ. ಎಳೆವಿಸಿಲ್ ಹೊಂಬಿಸಿಲ್ ಚೆಂಬಿಸಿಲ್
ಸುಡುಬಿಸಿಲ್ ಹರಡಿ ದಿನದಿನಂ ಪಗಲು ರಾತ್ರಿಗಳ್
ತಣಿವಿತ್ತೊಡಂ, ಜೊತೆಜೊತೆಗೆ ವಿಧಿಯ ಅವಕೃಪೆ
ಒದವಿದುದು ಗುರುವರನ ರೋಗವುಂ ಉಲ್ಬಣಿಸೆ.
ಗಂಟಲಿನ ಹುಣ್ಣು ಪೆರ್ಚಿ ಸಂಪೂರ್ಣ ಬೆಳೆಬೆಳೆದು
ಅಂತರ್ಮುಖಿಯಾಗಿ ಶಿವಧ್ಯಾನದೊಳ್ ಮುಳುಗಿರೆ
ಬಾಹ್ಯ ಜಗದ ಅರಿವಿಲ್ಲ. ಮುಚ್ಚಿದ ಕಂಗಳ್
ತೆರೆಯವು. ಎದೆಯಾಳದೊಳ್ ಕುಟುಕುಸಿರ್ ಮಿಡಿವುದು
ಆರ್ ಅರಿಯದ ತೆರದಲ್ಲಿ. ಕ್ಷೀಣದೀರ್ಣ ಶರೀರ
ಒಣಗಿದ ಕಿರಿಯ ಕಾಷ್ಠದೊಲ್ ಒರಗಿತ್ತು ಒರಗುವ
ದಿಂಬಿನಾಶ್ರಯದಲಿ. "ಗುರುದೇವನುಂ ಸದ್ಯ
ನಿರ್ಗಮಿಸಿದ ಬಳಿಕ ಜಗದೊಳ್ ಮತ್ತಾರೆಮಗೆ
ಗುರುಗಳ್?" ಎನುವೊಂದು ಕರುಣ ಕಾತರದುಂಬಿದ
ಆಸಂಕೆ ಎಲ್ಲರ ಮನದಲಿ. ಪಗಲುರುಳುರುಳಿ ನಿಶಿ
ಅಡರಿದುದು ಎಂದಿನೊಲ್. ಕಾರಿರುಳು ಕರ್ರನೆಯ
ಕರಿಯ ತೆರೆ ಹರಡಿ ಮೆರೆದತ್ತು ಜಗಜಗಿಪ ಕಿರು
ತಾರಗೆಗಳ ಮಾಲೆಗಳಂ ಸೂಡಿ. ನಿಶ್ಯಬ್ದ
ನೀರವತೆಯಾ ಮಧ್ಯೆ ದುರ್ಭರ ಚಣಂಗಳುಂ
ಉರುಳುತಿರ್ದುವು ಒಂದೊಂದಾಗಿ. ಅಸ್ತಮಾನ
ಶೋಭೆ ಮೂಡಿತು ಗುರುವರನ ವದನ ಬಿಂಬದಲಿ.
ಶ್ಲೋಕಗಳ ಪಠಣ ದುರ್ಗಾ ಭಜನೆ ಎಡೆವಿಡದೆ
ನಡೆದತ್ತು ಸೆಜ್ಜೆಯ ಬಳಿ "**ಸರ್ವ ಮಂಗಲ ಮಾಂಗಲ್ಯೇ
ಶಿವೇ...**" ಒಕ್ಕೊರಲಿಂ ಹರಿದುದು ದುರ್ಗಾಮಾತೆಯ
ಅಖಂಡ ಸ್ತುತಿ. ಪೊಳ್ತುರುಳುರುಳಿ ಬ್ರಾಹ್ಮೀ

ಮುಹೂರ್ತಮಡರಿತು ಮೆಲ್ಲನೆ "ಕಾಳೀ ಭುವನೇಶ್ವರೀ
ಹ್ರೀಂಕಾರಿ ನಿರ್ವಾಣ ಸುಖದಾಯಿನಿ ದೇವೀ"
ಶ್ರೀಗುರುಗಳ್ ಕಣ್ತೆರೆಯದೆ ಕ್ಷೀಣಿತ ದನಿಯೊಳ್
'ಕಾಳಿ ಕಾಳಿ ಕಾಳಿ' ಎನುತೆ ಒರ್ಮೆ ಸುತ್ತಲುಂ
ನೋಡಿ ಕಣ್ಮುಚ್ಚಿದರ್. ದೇಹ ಸಂಪುಟಂ ನಸು
ಕಂಪಿಸಿತು ಕಣ್ ದೃಷ್ಟಿ ನೆಟ್ಟಿತು ನಾಸಿಕಾಗ್ರದಲಿ
ರೋಮರೋಮಗಳ್ ನಿಗುರ್ದುವು ಸೋತು ಹೋದಂತೆ!
ನರೇಂದ್ರನಾಥನ ನೇತೃತ್ವದಲಿ ವೀತ ಕಂಠದಿಂ
"**ಹರಿಃ ಓಂ ತತ್ ಸತ್**" ಎಂದುಚ್ಚರಿಸ ತೊಡಗಿದುದು
ಭಕ್ತ ಜನ ವೃಂದಂ. ಮಂತ್ರ ಪಠಣ ನಡೆದಿರಲ್ ಆ
ಕುಟಿಯ ಮಾಡು ಕೊಟ್ಟಿತು ಮರುದನಿಯ. ದುಃಖಾಂತ
ದನಿ ಕರೆಯಿತು ಜನಕೋಟಿಯ. ಕಿಕ್ಕಿರಿದು ತುಂಬಿ
ನೆರೆದ ಜನರಾಶಿ. ಹರಿಸಿತು ವೀತರಾಗದನಿಯ.
ಮಿನ್ನೆ ಗುರುದೇವನುಂ ಸಮಾಧಿಸ್ಥನಾಗಿಹ
ಸಮಯದೊಳ್ "**ಹರಿಃ ಓಂ ತತ್ ಸತ್**" ಎಂಬ ಮಂತ್ರಂ
ಪಠಿಸಿ ಪಠಿಸಿ ಸಮಾಧಿ ಸ್ಥಿತಿಯಂ ಇನಿದಿನಿದು
ವಿಮುಖಗೊಳಿಪ ಪರಿಪಾಠಮಿರ್ದುದು ವಟುಗಳಲಿ.
ಅಂತಪ್ಪ ನಂಬುಗೆಯು ಇರದೆಯುಂ ಮಂತ್ರಗಳ
ಪಠಣ ನಡೆದುದು ಕೊರಳ್ ತುಂಬಿ. ಬೆಳಗುಂಬೊಳ್ತು
ಉದಯ ರವಿ ಬಾನೇರುವನಕ ನಡೆದುದಾ ಮಂತ್ರ
ಪಠಣ. ಆದೊಡಂ ಗುರುವರ್ಯನುಂ ಕಣ್ತೆರೆದು
ನೋಡಲಿಲ್ಲದಿರೆ ಶಿಷ್ಯರೆದೆಯ ಆಶಾಕಿರಣ
ಧಾರೆ ಬತ್ತಿ ಬಾಡಿತು, ವೇಸಗೆಯ ತೊರೆಯ ಝರಿ
ಬತ್ತಿಹೋಹ ಪರಿಯಲಿ. ತಣ್ಣಗೆ ಹಿಮಮಂಜಿನ
ಮೂರ್ತಿಯಾಗತೊಡಗಿತು ನಿರ್ಜೀವ ಶರೀರದ

ಸಂಪುಟಂ. ವೈದ್ಯ ಚೂಡಾಮಣಿಗಳ್ ಮತ್ತಂ
ಧನ್ವಂತ್ರಿಗಳ್ ಗಮಿಸಿದರ್. ಪಾರ್ಥಿವ ಶರೀರದ
ಪರೀಕ್ಷೆ ನಡೆದುದು ಆದ್ಯಂತಂ. ಉಹೂ, ಆರ
ವದನ ಬಿಂಬದಲಿ ಆಶಾಕಿರಣದ ಪೊಳಪಿನ
ಸುಳಿವಿಲ್ಲ, ಶಿರಬಾಗಿ ಗೋಣಾಡಿಸಿದರೆಲ್ಲ .
ಒಡನೊಡನೆ ಗೋಳಿಟ್ಟಿತು ಜನ ವೃಂದ. ಗೋಳಿನ
ಬಿಸುಸುಯ್ಲು ಹರಡಿತು ಪರಿಸರದಲಿ. ವೈದ್ಯಗಣ
ಮರಣ ಬಾರ್ತೆಯಂ ದುಃಖಕ್ಲೇಶದ ಧ್ವನಿಯಲಿ
ಬಿತ್ತರಿಸಿದುದು ನುಡಿಯಲಾರದೆಯೆ ನುಡಿವವೊಲ್.
ಕ್ಯಾಪ್ಟನ್ ವಿಶ್ವನಾಥ್, ವೈದ್ಯ ಮಹೇಂದ್ರುಲಾಲ, ವೈದ್ಯ
ಸರ್ಕಾರ್ ಮುಂತಪ್ಪ ಹಿರಿಯ ಪಂಡಿತೋತ್ತಮ
ಪುರುಷರ್ ಗಮಿಸಿದರ್ ಗುರುದೇವನ ದರ್ಶನಂ
ಪಡೆಯೆ. ಆರೈದೊಡೇಂ ಎಲ್ಲರದು ಒಮ್ಮತ್ರದ
ಅಭಿಮತಂ "ಶ್ರೀ ರಾಮಕೃಷ್ಣರುಂ ಶರೀರವ
ತ್ಯಾಗಗೈದುದು ದಿಟಂ." ಎಂಬುದದು ಜನಜನಿತ
ಮಾದುದು. ಶ್ರೀರಾಮಕೃಷ್ಣರ ಪಿರಿಯಣ್ಣಂದಿರ
ಸುತ ರಾಮಲಾಲನು ಆಗಮಿಸಿದನ್. ಅವಂಗೆ
ಚಿಕ್ಕಪ್ಪನ ದೀರ್ಘ ಸಂಸರ್ಗ ಮಿರುತಿರ್ದು
ಅವರಿರುವಿನ ಅರಿವಿರ್ದುದು ಸಕಲ ರೀತಿಯಲಿ.
ಅವನ ಅಭಿಮತಮಂ ಇದಿರುನೋಡಿದುದು ಶಿಷ್ಯ
ಗಣಂ. ಮತ್ತೆ ದೈಹಿಕ ಪರೀಕ್ಷೆ ನಡೆಯಿತ್ತು
ಸಾಂಗವಾಗಿ. "ನಡುನೆತ್ತಿಯೊಳ್ ನಸು ಬಿಸಿಯಿಹುದು
ಕೆಲಸಮಯಮಂ ಕಾದು ನೋಳ್ಪುದೇ ಒಳ್ಳಿತ್ತೈ."
ಎನುತೆನುತೆ ಕಿರುವಗೆಯ ಆಶಾಕಿರಣವನುಂ
ಮೂಡಿಸಿದನ್. ಭಕ್ತಜನ ಕಣ್ಗಳ್ ಬಿಟ್ಟು ಮನ

ನೆಟ್ಟು ನೋಡಿದರ್ ಕಾದು. ಬಳಿಕಲದುಂ ಪುಸಿಯೆ
ಆದುದೆಲ್ಲರ ಮನವಂ ಸೋಲ್ಗೆಡಗಿ. ತನ್ನೊಂದು
ಆಸೆಯಕುಡಿಯು ಕಳ್ತರಿಸಿ ಬೀಳೆ ಬಿಕ್ಕಳಿಸಿ
ಅಳ್ತು ಗೋಳಾಡಿದನ್ ರಾಮಲಾಲಂ. ಮಡದಿ
ಶಾರದಾಮಣಿದೇವಿಯುಂ ಪರಮ ದುಃಖದಿಂ
ದುರ್ಗಿಯಂ ಕುರಿತು 'ತಾಯಿ ಶುಭಕರಿ ಇದೇಂಗೈದೆ?
ಎಂತು ಸೈಸಲಿ?' ಎನುತೆನುತ್ತೆ ಪ್ರಲಾಪಿಸುತ
ಕಂಬನಿಯ ಕಾಣಿಕೆ ಸಲಿಸಿದಳ್ ಮನಗರಗಿ ಮತಿ
ಗರಗಿ ಹೃದಯಾಬ್ಧಿಯೆ ಕರಗಿ. ಅಂತಿಂತು ಆ
ಕುಟೀರಂ ದುಃಖದ ಕಡಲಾಯ್ತು ಸತಿ ಶಾರದಾ
ಮಣಿದೇವಿಯುಂ ಹಿಂದೂ ಶಾಸ್ತ್ರ ಸಂಪ್ರದಾಯದ
ಪ್ರಕಾರಂ ಮಂಗಳ ದ್ರವ್ಯಗಳನೆಲ್ಲವಂ
ಕಳಚಲಿರೆ ತೆಕ್ಕನೆ ಪತಿವರ್ಯಂ ಎದುರಿಂಗೆ
ಚೆಂಬೆಳಕು ಮಿಂಚಿದ ತೆರದಿ ಪ್ರತ್ಯಕ್ಷನಾಗಿ
ನುಡಿದರೆಂತೆನೆ "ಏಂಗೈದಪೆ? ಆನೆತ್ತ ಪೋದೆ
ಎಂದಿಂತು ಈ ಕೃತಿಗಿಳಿದೆ? ಒರ್ ಕೋಠಡಿಯಿಂ
ಇನ್ನೊರ್ ಕೋಠಡಿಗೆ ದಾಂಟಿಹೆ ಮಾತ್ರವಷ್ಟೆ? ನೀಂ
ತೆಗೆಯದಿರ್."
ಮರುಚಣದಲಿ ಮಂಗಳ ಮಾಯಮಾಯ್ತು
ಠಾಕೂರರ ಮಂಗಳ ಮೂರ್ತಿ! ದಿಗ್‌ಭ್ರಾಂತಿಯಲಿ
ಮಿಡುಕಿ ಬಿಳ್ದು ನೋಡಿದರತ್ತಲೇ ಸತೀಮಣಿ.
ಓ ಎನಿದೆ ಅಲ್ಲಿ ? ಪತಿಯುಂ ಇಲ್ಲ; ಮಿಂಚಿದ
ಚೆಂಬೆಳಕು ಇಲ್ಲವೇ ಇಲ್ಲ. ಅತ್ತಲೇ ಕಣ್
ಉದ್ದಿ ನೋಡಿದರು ಮಾತಾಮಯಿ ಪತಿದೇವನ
ಪುನದರ್ಶನಮಾಗದೆ ಕೆಮ್ಮನೆ ಕೈಮುಗಿದರ್

ಸಂಪೂರ್ಣ ವಿಶ್ವತಾ ಮೋಹನ ಪ್ರಶಾಂತ
ಶಾಂತಿಯಲಿ ಮುಳುಗಿದ ಗುರುದೇವನ ಪವಿತ್ರ
ಹಸ್ತಗಳಲಿ ಪ್ರಾಣ ಕುಸುಮವಂ ಸಮರ್ಪಿಸಿದ
ಮನೋಧರ್ಮದಲಿ.
ಪ್ರಾತಃಮುಹೂರ್ತಮಡರಿಬರೆ
ಅಂತ್ಯದರ್ಶನಂಬಡೆಯೆ ಬಂಗಾಳಿ ಪ್ರಜಾ
ಕೋಟಿಯೇ ನುರ್ಗಿ ಧಾವಿಸುತ್ತೈದು ಕೂಡಿದುದು
ಬಡಕುಟಿಯಲಿ. "ಜೈರಾಮಕೃಷ್ಣ!" ಜಯಘೋಷಣೆ
ಪ್ರಾಂಗಣದಲಿ ನಡೆದಿರೆ ಒಳಗಡೆ ಹರಿನಾಮದ
ಸಂಕೀರ್ತನೆಗಳ್ ಮೊಳಗಿದುವು ವೀತರಾಗದಿ.
ಬಳಿಕ ಸ್ಮಶಾಣಯಾತ್ರೆ! ರುದ್ರ ಮಸಣದಾಣಂ
ತುಂಬಿರ್ದುದು ಜನಕೋಟಿಯಿಂ. ಗಂಧ ಚಂದನ
ಕಾಷ್ಟಂಗಳ ದಿವ್ಯ ಚಿತೆಯೇರಿತು, ಕುಂಕುಮ
ಗಂಧ ಭೂಷಿತ ಗುರುವಿನ ಪಾರ್ಥಿವ ಶರೀರಂ.
ತೈಲ ಘೃತಗಳನೆರೆದು ಚಿತೆಗೆ ಉರಿವ ಪಂಜಿನ
ಅಗ್ನಿ ಸ್ಪರ್ಶಗೊಳಿಸಿದರ್ ಶಿಷ್ಯಗಣಂ ಕೂಡಿ.
ಆಗಳೇಂ ಜನಪದದ ರಣಗೋಳು? 'ಹೋ' ಎಂದು
ಅಳಲಿತು ಒಡಲಸಂಕಟದಿಂದಲಿ ಬಿಕ್ಕಿ ಬಿಕ್ಕಿ.
ಜೊತೆಜೊತೆಗೆ ಮೊಳಗಿದುದು ಉತ್ಕಂಠಗಳ ಮಂತ್ರ
ಘನಘೋಷ! ಪೊತ್ತುರಿವ ಚಿತೆಯಗ್ನಿ ಧಗಧಗಿಸಿ
ಸ್ಫುಲಿಂಗಗಳೆದ್ದುವು ಮಸಿಗರ್ಪಿನ ಪುಗೆಯಂ
ಕಾರಿ. ದುಃಖಸಂಕಟಗಳ ಶಂಕರ ಭಯಂಕರ
ವೇಶದಾವೇಶ ಮೆರೆದುದು ಸ್ಥೂಲ ಸೂಕ್ಷ್ಮವಾಗಿ.
ಬನಗಾಳಿ ವೀಸಿವೀಸಿ ಚಾಮರಿಸಿ ಅಗ್ನಿಯಂ
ಪ್ರೋಜ್ವಲಿಸಲುರೆ ಕೆನ್ನಾಲಿಗೆಗಳ್ ಕೆಂಗತ್ತಿ

ಎಂಬಿನಂ ಚೂಪು ಚೂಪಾಗಿ ನೆರೆ ಮೆರೆಯುತ್ತೆ
ಕೆನ್ನೀಲ ಹರಿದ್ರು ಅರುಣ ಸ್ವರ್ಣ ಮುಂತಪ್ಪ
ವರ್ಣವರ್ಣಾಂತ ಉರಿನಾಲಿಗೆಗಳ್ ನೊಣೆದುವು
ಪ್ರಜ್ವಲಿಸಿ ಕೆಂಡದುಂಡೆಗಳಾಗಿ. ಆ ಜಯಕಾರ
ಆ ಮಂತ್ರಘೋಷ, ಆ ರೋದನದ ರಣಗೋಳು
ಒಗ್ಗೂಡಿ ಮೊರೆದುವು ಕಿವಿಗಡಚಿಕ್ಕುವ ತೆರದಿ.
ಜಯ ಭಗವಾನ್! ಜಯ ಜಯ ಠಾಕೂರ್! ಜಯ
ಜಯ ರಾಮಕೃಷ್ಣದೇವ! ಜಯ ಜಯ ಪರಮಹಂಸ!
ಜಯ ಜಯ ಜಯ ಜಯ ಹೇ! ಜಯ ಜಯ ಜಯ
ಜಯ ಹೇ!

ಶ್ರೀರಾಮಕೃಷ್ಣ ಪರಮಹಂಸರೊಗೆದ ದೇಹ
ಯಷ್ಟಿಯಂ ಅಗ್ನಿದೇವಂಗೆ ಸಂಸ್ಕಾರವತ್
ಸಮರ್ಪಿತವಾದ ಬಳಿಕಂ ಕಾಶೀಪುರದ ಮಠ
ಬಣಬಣಿಸಿದುದು ದೇವನಿಲ್ಲದ ಗುಡಿಯ ತೆರದಿ.
ವಟುಗಳಿಗೆ ಕೆಲವಾನುದಿನಂ ಅಂತ್ಯಕರ್ಮಗಳ
ವಿಧಿವಿಧಾನಗಳಲ್ಲಿ ಮತ್ತೆ ಕೆಲವಾನುದಿನ
ಶಾಂತಿ ಪೂಜಾವ್ರತಗಳಲಿ ಕಳೆದುವು ದಿನದ
ಚಣಚಣಮೆಲ್ಲ. ಗುರುದೇವನ ಕರ್ಮಾಂತರಂಗಳ್
ಮುಗಿಯಿತ್ತು. ಇನ್ನು ಮುಂದೇನ್? ಎಂಬೊಂದು ಪಿರಿ
ಪ್ರಶ್ನೆ ಫಣಿಯಂತೆ ತಲೆಯೆತ್ತಿ ನಿಂದತ್ತು ಮನ
ಮನಗಳಲಿ. ಆಗಳೆನಿತೊ ಪಿರಿಯರ್ ನೇಹಿಗರ್
ಹಿತಚಿಂತಕರ್ ಬಂಡೈಸಿ ಮಂದೈಸಿ ಬಂದಪರ್
ತಂತಮ್ಮ ವಟುಗಳಂ ಆಶ್ರಮದ ಬಾಳ್ಮೆಯಿಂ
ಪಿಂದೆಳೆಯೆ. ಆದಡೊದು ಸಾಗದೆ ಮನಸೋತು
ಮತಿಸೋತು ಪಿಂದಿರುಗಿದರ್ ಖಿನ್ನ ಮನದಿಂದೆ.

ಅಂದೊಡಂ ಅಲ್ಲಿಗೆ ಮುಗಿಯದಾಯ್ತು. ಆಗಾಗ
ಗಮಿಸುವರ್ ಕುಲಪುತ್ರರಿಗಾಗಿ ಮರುಮರುಗುತೆ
ಕರಗುವರ್ ಪರಿತಪಿಸುವರ್. ಕಂಬನಿಗರೆವರ್.
ಪರಂತು, ದೃಢಮನದ ದ್ವಾದಶ ನವತರುಣರುಂ
ಮನಗುಡದೆ ಮೌನವಾಂತರ್. ಶಾಲೆಯಂ ತೊರೆದು,
ಅತ್ತ ವಿದ್ಯೆಯಂ ಪೂರೈಸದೆ ಇತ್ತ ಬಾಳಿನ
ಗುಡಿಗೆ ಅಡಿಗಲ್ಲಿಡದೆ ಅತಂತ್ರ ಬದುಕಿಗಂಟಿ
ಕಡು ಬಡತನದ ಇಕ್ಕುಳದಲಿ ಸಿಲ್ಕಿ ನರಳುತೆ
ಧ್ಯಾನ ವ್ರತಗಳಲಿ ತೊಡಗಿ ಪಡುವ ಪರಿತಾಪ
ಪೆತ್ತವರ ಕರುಳ್ ಕೋರೈಸುವುದು ಕಣ್ಹನಿಯುವ
ಪಾಂಗಿನಲಿ. ನರೇಂದ್ರನಾಥದತ್ತಂ ಒಡನಾಡಿ
ಯುವ ಜನರ ಸುಕ್ಷೇಮದ ವಿಷಯಮಂ ಬದಿಗೊತ್ತಿ
ಕೈಬಿಟ್ಟವನಲ್ಲಂ. ಎಲ್ಲ ಯುವ ಪ್ರಭೃತಿಗಳ
ಸಂಜೀವನವ ನಿರೂಪಿಸುವನ್ನ ಮನಕಿಲ್ಲ
ಶಾಂತಿ. ಉಡಲಿಲ್ಲ, ಉಣಲಿಲ್ಲ. ಇರಲೊಂದು ಕಿರು
ನೆಲೆಯಿಲ್ಲ. ಆ ಕಾಶೀಪುರದಾಶ್ರಮದೊಳಿರಲ್
ವಟು ಮಹೋದಯರಿಂಗೆ ಹಲಕೆಲವು ದಿನಂಗಳ
ಕಾಲಾವಕಾಶಮೊದವಿ ಮಹದುಪಕಾರಮಾಯ್ತು.
ಎಲ್ಲರುಂ ನಿಜಭಕ್ತಿ ಮನೋಭಾವದಿಂ ಗುರು
ನಾಯಕನನೆನೆ ನರೇಂದ್ರನನೊಪ್ಪಿದರ್ ಒಮ್ಮತ
ಮೇಣೊಮ್ಮನದಿಂ. ಅಂತೆಯೆ ನರೇಂದ್ರನೆಲ್ಲರಂ
ತನ್ನ ಸನಿಹದೊಳ್ ಇರಿಸಿ ಕೂಡಿಸಿ ಬಲ್ಮೆಯಿಂ
ಪರಿಪೋಷಿಸಿ ಸಂಮೋದದಿಂ ನುಡಿಸಿ ಸನಾತನ
ಧರ್ಮದ ನಲ್ ಬಿತ್ತಂ ಬಿತ್ತಿ ಧರ್ಮದ ಕಿಡಿಯ
ನುದ್ದೀಪಿಸಿ ಮುಂಪಥಮಂ ನಿರ್ವಿಘ್ನಗೊಳಿಸಿದಂ.

ಆದೊಡಂ ಸಾಧನಾಶೀಲತೆ ಸುಲಭಮೆಂದು
ಬಗೆಯಲುಂಟೇ? ಮುಂದದಂ ನೇರ್ಪಡಿಸಿ ತಾನ್
ಮುಂಬಿಗನೆನೆ ನಿರ್ವಹಿಪ ಕಾರ್ಯದ ಭಾರಮಂ
ನೆನೆದೊಡೆ ಅದೊಂದು ಬೆದರು ಬೊಂಬೆಯ ಭೂತವೇ!
ಸಕಲ ಕಾರ್ಯಗತಿಯೊಳ್ ಭುಜಕುಡುವ ಗುರುಭಾಯಿ
ಯೋಧರ್ ಇರುತಿರೆ ಭಯಮಿಲ್ಲ. ಮುಂದೆ ಗುರುವಿನ
ದಿವ್ಯ ಆಶೀರ್ವಾದಮೊಂದಿರಲ್ ಸಾಲ್ಗುಂ ಎನಿಸಿರಲ್ಕೆ
ಸಾವಧಾನದಿಂ ನುಡಿದಂ ಗುರುಭಾಯಿಗಳಿಗೆ,

"ಸ್ವೇ ಸ್ವೇ ಕರ್ಮಣ್ಯ ಭಾರತ:
ಸಂ ಸಿದ್ಧಿಂ ಲಭತೇ ನರ:"

ಭ್ರಾತೃ ಭಾಯಿಗಳೆ, ನೀವ್ ನೆಚ್ಚುತ್ತಲೆನ್ನನುಂ
ಒಗ್ಗೂಡಿ ಬಾಳ್ವುದಂ ನೋನೋಡಿ ಎನ್ನೆದೆಯು,
ಆನಂದಾಮೃತದಿಂ ತುಂಬಿ ತುಳುಕುವ
ಹೊಂಗೊಡವಾಯ್ತು. ನೀವ್ ಮನೆ ಮಠಗಳ್ ತೊರೆದುಳಿದು
ಧಾರ್ಮಿಕ ಬದುಕಿಗೆ ತಕ್ಕಿನ ವ್ರತವಿಡಿದು ಈ
ಮಹತ್ತರಮಾದ ಸಂನ್ಯಾಸಮಂ ಸ್ವೀಕರಿಸಿ
ಸೇವಾ ಕ್ಷೇತ್ರಕಿಳಿದುದು ಭಾರತ ಜನನಿಯ ಭಾಗ್ಯ!
ಇನ್ನೆಮ್ಮಯ ಜೀವನ ನದಿ ಸರಾಗದಲಿ ಹರಿದು
ಓಡದಿರ್ದೊಡೆ ಲಜ್ಜೆಗೇಡಿಯಾದಪುದಲ್ಲದೆ
ಬೇರಲ್ಲ. ಎಲ್ಲರುಂ ನಿಂನಿಮ್ಮ ಮನವೊಪ್ಪಿ
ಹೃದಯವೊರೆದ ರೀತಿಯಲ್ಲಿ ಬಾಳ್ವುದೇ ಲೇಸು.
ಇಂತಿಂತು, ಮುಂದಿಟ್ಟ ಪಜ್ಜೆಯಂ ಪಿಂದಿಡದೆ
ನೇರ ಪಥದೊಳ್ ನಟ್ಟು ನಾಂಟಿ ನಡೆವುದರೊಳ್
ರಾಷ್ಟ್ರೀಯ ರಥದ ಮಿಣಿವಿಡಿಯಲದು ಸರಾಗಂ.
ಒಮ್ಮನದಲಿ ಗೈವೊಂದು ಕಜ್ಜವದು ಗುರಿಯಂ

ಮುಟ್ಟಿಸುವೊಡೆ ಸುಲಲಿತಮೆಮಗೆ ಮೇಣ್ ಲೋಕಕೆ."
ಬಳಿಕಲಾ ದ್ವಾದಶ ಯುವ ಧೀಮಂತರುಂ ಏಕ
ಮನಸಿನಿಂ. ಏಕವ್ರತದಿಂ ತದೇಕ ಧರ್ಮದ ೫೭೦
ಚಿಂತೆಯಿಂ ಲೋಕ ಕಲ್ಯಾಣಾರ್ಥ ದೀಕ್ಷೆಯಂ
ಕೈಕೊಂಡರ್ ಪಣಕಟ್ಟಿ! ಸಂನ್ಯಾಸ ಧರ್ಮವಂ
ಸ್ವೀಕರಿಸಿ ಸಾಧನದ ಕಣಕ್ಕಿಳಿಯಲೆಲ್ಲರ್
ಒಮ್ಮತದಲಿ ಸಿದ್ಧ ಮನರಿರಲ್, ನರೇಂದ್ರಂ
ನೇಹಪ್ರೇಮತೋಷಾತ್ಮಕ ಸಲ್ಗೆಯೊಲ್ಮೆಯಿಂ,

"ಯೂಯಂ ತತ್ಸತ್ಯಶವಸ ಆವಿಷ್ಕರ್ತ ಮಹಿತ್ವನಾ ।
ವಿದ್ಯತಾ ವಿದ್ಯುತಾ ರಕ್ಷಃ ॥"

ಕೇಳಿಲ್ಲಿ, ಗುರುಭಾಯಿಗಳೇ! ಭಾರತವಿಂದು
ಸದ್ಭಾರತವಾಗಿ ಉಳಿದಿಲ್ಲ. ಕಡುಬಡತನ, ರೋಗಗಳ
ಬೀಡು ತಾನಾಗಿ ನರಳುತಿಹುದ ಕಂಡರಿದು
ಮಿಣ್ಣನಿರಲು ಸಲ್ಲ. ಪರಮ ಸೇವಾ ಪಥದೊಳ್
ನಮ್ಮಗಳ ಮುನ್ನಡೆ ಎನೆ ಸಲ್ವುದು. ಯೋಚಿಸಿರಿ. ೫೮೦

"ಆಸ್ತೇ ಭಗ ಆಸೀನಸ್ಯ । ಊರ್ಧ್ವ ತಿಷ್ಠತಿ ತಿಷ್ಠತಃ
ಶೇತೇ ನಿಪದ್ಯ ಮಾನಸ್ಯ । ಚರಾತಿ ಚರತೋ ಭಗಃ
ಚರೈವೇತಿ! ಚರೈವೇತಿ!"

ಹಲ ಕೆಲವು ದಿನ ಮಾನಗಳ್ ಮಾತ್ರಮೆ ಆ ಮನೆ
ಇತ್ತುದಾಶ್ರಯಮಂ ವಟುಗಳಿಗೆ. ತರುವಾಯಿ,
ವಟುಮಾನ್ಯರುಂ ಆಶ್ರಯದಪ್ಪುತೆ ಅತ್ತಿತ್ತ
ತೊಳಲಾಡಿ ಬಳಲುತಿರೆ ಗುರುದೇವ ಶ್ರೀರಾಮ
ಕೃಷ್ಣ ಪರಮಹಂಸರ ಗೃಹೀ ಭಕ್ತನಿರ್ದಾ
ಸುರೇಂದ್ರನಾಥ ಮಿತ್ರ ಮಹಾಶಯನ ಘನ

ಔದಾರ್ಯದಿಂ ಪಾಳು ಬಿಳ್ದ ಕುಟಿಯೊಂದು ಅತಿ
ಸುಲಭ ಕಂತಿನ ಬಾಡಿಗೆಗೆ ದೊರಕಿದುದಯ್ ಬಡ
ವಟುಗಳ ನಿವಾಸಸ್ಥಾನವಾಗಿ. ಗುರುದೇವನ
ದೇಹಾವಸಾನವಾದ ಬಳಿಕಂ ಅನ್ನ ಪಾನಾದಿಗಳ
ಕೊರತೆಯುಂ ಭುಜವೇರಿದುದು ತಲೆಗಿಡಿಸುವಂತೆ.
ಅನ್ನ ವಸನ ವಸತಿಗಳ ಕೊರತೆಯುಂ ಗಂಟಲಿಗೆ
ಗಾಣವಾಗಿರೆ ಜಗ್ಗಿದರೇ? ಕುಗ್ಗಿದರೇ? ಬಳಲಿದರೇ?
ಸನ್ಯಾಸ ದೀಕ್ಷೆಯಂ ಕೈವಿಟ್ಟು ಮರಳಿದರೇ?
ಎಲ್ಲ ಬಗೆಯ ಭಂಗದ ರಣಗೋಳ್ ಅನುಭವಿಸಿ
ಭೀಮ ಧೈರ್ಯದಿಂ ಭೀಷ್ಮ ಸಾಹಸದಿಂ ಎರ್ದೆ
ಗೊಟ್ಟು ನಿಂದರಯ್ ಕಾಷಾಯ ವಸನಧಾರೀ
ದ್ವಾದಶ ವಟುಮಹೋದಯರ್ ಒಮ್ಮನ ಒಮ್ಮತ
ಮತ್ತಮಾ ದೀಕ್ಷಾವ್ರತ ಸಂಯೋಜನೆಯಲ್ಲಿ!
ಕೊಳ್ಳಿರಿದೊ, ದ್ವಾದಶ ವಟುಮಹೋದಯರೇ, ಎನ್ನಯ
ಹೃತ್ಪೂರ್ವಕಮಾದೀ ಸಹಸ್ರಾನುಸಹಸ್ರ
ಅಭಿನಂದನೆ ಮೇಣಧಿಕ ಪ್ರಾರ್ಥನಾ ಸಮೇತ
ನಮನಮಂ. ಶತಮಾನ ಉರುಳಿಯುಂ ಕುಡಿಯಿನಿತು
ಮಾಸದಿಹ ಸತ್ಕೀರ್ತಿ ಉಳಿದು ಬಾಳ್ಗೆ! ಗೆಲ್ಗೆ!
ನಿಮ್ಮಯ ಸನಾತನ ಧರ್ಮದುದ್ಧರಣ ಕಾರ್ಯಂ
ಕಾಳಿಕಾ ಮಾತೆಯ ಶುಭಾಶೀರ್ವಾದದಿಂದಲಿ
ಕೈಗೂಡಿ ಮನಂಗೂಡಿ ಜಾಯಮಾನಂ ಬೆಳಗಿ
ತೊಳಗಿದಿರ್ಕೆ, ಗುರುದೇವನಾ ಬಲ್ಮೆಯಾ
ಕೃಪಾಶೀರ್ವಾದ ಶಿರವಂ ಮುಟ್ಟಿ. ನಿಮ್ಮಗಳ
ಅಮೂಲ್ಯತಮ ಜೀವಮಾನದಾ ಕೃತಾರ್ಥ
ಸಾಧನಾ ಸರ್ವಸ್ವ ಆಚಂದ್ರಾರ್ಕವಾಗುಳಿದು

ತೊಳಗಲಿ ಜಗದ್ಧಾತ್ರಿಯಲಿ ಎಂದೆಂದಾಂ ಪರಕೆ
ಗೈವೆ, ದೇವೀ ಪದತಲದಲಿ ಸದ್ಗುರುಗಳೇ!

ದುರ್ಲಭಂ ತ್ರಯಮೇವೈ
ತದ್ದೈವಾನುಗ್ರಹಹೇತುಕಂ ।
ಮನುಷ್ಯತ್ವಂ ಮುಮುಕ್ಷುತ್ವಂ
ಮಹಾ ಪುರುಷ ಸಂಶ್ರಯಃ ॥

ಹರಿಃ ಓಂ ತತ್ ಸತ್

❋ ❋

ಏಕಾದಶೋಲ್ಲಾಸಂ

ನ ಭೂತೋ ನ ಭವಿಷ್ಯತಿ

ಅತ್ರಾಪಿ ಭಾರತಂ ಶ್ರೇಷ್ಠಂ
ಜಂಬೂದ್ವೀಪೇ ಮಹಾಮುನೇ ।
ಯತೋಹಿ ಕರ್ಮ ಯೋರೇಷಾ
ಹ್ಯತೋನ್ಯಾ ಭೋಗ ಭೂಮಯಂ ॥

ದಳದಳಂ ಮಲರ್ದುದು ಮೂಡುವೆಟ್ಟಿನಡೆಯಲಿ
ಬಾನಂಚಿನೊಳ್ ಪ್ರತೀಕ್ಷಿತ ಫಾಲ್ಗುಣರವಿಯ
ಶಿಶಿರ ಪುಣ್ಯೋದಯದ ಉಷಃಕಾಂತಿ. ಕೆನ್ನೀಲ
ರಕ್ತಾಕ್ತ ಕಾಂತಿಯ ಗುಡಿಗೋಪುರಗಳ ಸಾಲ್
ಮೆರೆದುವು; ದಿಗ್‌ತಟಾಂತ ಸಂಲಗ್ನದಲಿ ವಿವಿಧ
ರೂವಿನಲಿ ವಿವಿಧ ವೇಶ ಭೂಷಣಮಂ ಸೂಸಿ.
ಹಿರಿಸಾಲ್ ಕಿರಿಸಾಲ್ ಕೂಡಿ ತೆಕ್ಕೆಯಾಡುವ
ಪರಿಯೊಳ್ ಎಸೆದಿವೆ ಪ್ರಾತಃಕಾಲೀನ ಅದ್ಭುತ
ಸೊಬಗಿನ ನೆಲೆಯಲ್ಲಿ ಮೋಡಗಳ ವರ್ಣವೈಖರಿ.
ಧಳಧಳಂ ಮೊಳಗಿದುದು ಪ್ರಸ್ಥಾನ ಭೇರೀ
ರವಂ ಜೀವನಾಲವಾಲದಂತರಂಗಗಳಂ
ಮುಟ್ಟಿ ತಟ್ಟುವ ತೆರಂ. ಆಗಳೇನಾ ಜೀವ
ಕೋಟಿಗಳ್ ನವಿರ್ ನಿಮಿರಿ ಪುಳಕಿಸಿದ ಪರಿಯ?
ಎಲ್ಲೆಡೆಯು ಚಟುವಟಿಕೆಯ ಅಕಾಂಡತಾಂಡವ
ನೃತ್ಯ ನಡೆದತ್ತು ರುದ್ರತರ ಗಡಿ ಬಿಡಿ ಹೂಡಿ.
ಲೋಕದೊಳ್ ಕಮನೀಯ ಕರಾಳ ತನುಛಾಯೆ
ಚೆಲ್ಲಿ ಸತ್ಯ ಸೌಂದರ್ಯಮಾನದ ಕಾಲಾತ್ಮಕ
ತೇಜದಲಿ ಹರಿಯಿತ್ತು ಕಾಲನದಿ. ಇಂದ್ರದಿಗ್

ನಗರಿಯಿಂ ಪಿಂಡು ಪಿಂಡೈಸಿ ಬಂದ ಮುಗಿಲ್‌ಗಳ
ಮಾಲೆಗಳ್ ಜಲಜ್ವಲ ಜಾತರೂಪಿನಲಿ ಕೂಡಿ
ಘನವೆತ್ತು ಕುಸಿಯುವುವೊ ಎನಲ್ ಭಾರಗತಿಯಲಿ
ತೇಲುತೇಲುತೆ ಉಜ್ವಲ ತೇಜೋನ್ವಿತ ರವಿಯ
ಮಂಡಲಂ ಸುತ್ತುವರಿದು ಮುತ್ತಿ ಮರೆದಿರ್ದುವು
ಲೋಕೋತ್ತರವಾಗಿ. ಬೆಳ್ಮುಗಿಲ್ ಬೆಳ್ಳಿಯಧಾರೆ
ಸ್ವರ್ಗಗಾಮಿಯೋ ಎನೆ ನಭನೀಲಿಯಂ
ಬಗೆದು ತೂರುತಿವೆ ವೀರ ವೈಭವದಲಿ.
   ಕಾವ್ಯ ಕಾನನದುನ್ನತಯಾತ್ರೆಯ ಮುನ್ನಮೆಯೆ
ತಪಸ್ಸಿಗೆಡರುವ ಕವಿಮನ ಕಲ್ಪಿಸುವ ತೆರದಲಿ
ವಜ್ರತನು ನರೇಂದ್ರನಾಥಂ ಜೀವನ ಯಾತ್ರೆಯ
ದೂರಾದ್ದೂರವಂ ಅಳೆವನ್ ಮತಿವೆಟ್ಟಿನ ಹೇಮ
ಕುತ್ಕೀಲಮಂ ಏರಿ ನಿಂದ ಸಿಂಹ ಶಾಬಕ
ತಾನಾದವೊಲ್. ವಿಶ್ರಾಂತಿಗೆ ಮುನ್ನ ಸಾಗಲ್ಕಿದೆ
ಯೋಜನ ಯೋಜನ ಮಹಾಯೋಜನೆಯ ದಾರಿಯಂ!
   "ಮನರ್ಭವ ಜನಯಾ ದೈವಂ ಜನಂ"
ಹರಿಯಿತಿಂತು ಎದೆಯ ನೆಲೆಯ ವಿಚಾರವಾಹಿನಿ.
ಅಂದು, ವಟು ಮಹೋದಯರುಂ ಮಂದೈಸಿ ತಮ್ಮಯ
ಉಡಿಗೆ ತೊಡಿಗೆಗಳ ಕೈಚೀಲದೊಡನೆ ಪೊರಟರ್
ಕಾಶೀಪುರದ ಆಶ್ರಮವಂ ಬಿಟ್ಟು. ಗುರುವರ
ಶ್ರೀರಾಮಕೃಷ್ಣರ ನೆನಹು ಮರುಕಳಿಸಿ ನಿಡುಗಂಬನಿ
ಉದುರಿದುವು ತಟಪಟನೆ. ಭಗವಾನ್ ಶ್ರೀರಾಮ
ಕೃಷ್ಣರ ಚಿತಾಭಸ್ಮಾಸ್ಥಿಯುಮಿರ್ದ ಕಲಶಮಂ
ಶಿರೋದೇಶದೊಳ್ ಪೊತ್ತು ನಡೆದಂ ಮುಂಬಿಗಂ.
ಕಾಲ್ನಡೆಯಲಿ ಸಾಗಿದುದು ವಟುಗಳ ಪಯಣ. ಪೊಸ

ಮುರುಕಲು ಕುಟಿಗೆ. ದೂರಪಥಂ ಕಳಿದು ಕುಟಿಯಂ
ಬೊಕ್ಕು ನೋಡೆ ಅದೊರ್ ನಿಜ ಪಾಳ್ಮನೆಯೆ ವಲಂ.
ಸುತ್ತುಮುತ್ತಿನ ಅಂಗಣದೊಳ್ ಪಾಳು ಮೂಳುಂ
ತುಂಬಿ ಪಾಳ್ಗಿಟ್ಟು ಸುರಿಯುತಿರ್ದುದು ಹೊಲಬೆತ್ತು.
ಪ್ರಥಮಾಂಕಮನೆ ಗುಡಿಸಿ ಸಾರಿಸಿ ಸರ್ವತ್ರ
ಶುಚಿಗೊಳಿಸಿ ಅನುಕೂಲಿಸಿದರ್ ವಾಸ್ತವ್ಯಕ್ಕೆ.
ಮತ್ತೆ ಅಂಗಣದ ಕಳೆಯಂ ಕಿತ್ತು ಸಾಲಾಗಿ
ಗೂಟಗಳ್ ನೆಟ್ಟು ಇಪ್ಪೆಸಾರಿನಿಂ ಬಿಗಿದು ಕಟ್ಟಿ
ಅಂಗಣಂ ನಿಮಿರ್ಚಿದರ್. ಕಿರು ಕುಟಿಗೊಂದು ಕಿರು
ಬಗೆಯ ಮುಂದಾಣಮೆನಲ್ ಪಕ್ಕಾಯ್ತು ಆಶ್ರಮಕೆ.
ನಗರದೆಡೆಗೆ ಪೋಗ್ವುದೆನೆ ಹಗ್ಗದ ಮೇಲೊಂದು
ಅಂಗಿದೋತಿ ಇರುತಿರೆ ಆರಿಂಗದು ಅವಶ್ಯಮೊ
ಅದಂ ಧರಿಸಿ ಪೋದಪರ್. ಪಿಂದಿರುಗಿ ಬರಲವರ್
ಮತ್ತದುಂ ಹಗ್ಗವೇರ್ವುದು ದಿಟಂ. ಮರುದಿನಂ
ಮತ್ತಾರ ಅವಶ್ಯಕಮೊ ಅದಂ ಪೂರೈಸುವುದಾ
ಅಂಗಿ ದೋತಿ. ಅಂತಪ್ಪ ಪರಿಸ್ಥಿತಿಯಲಿ ಶಿಷ್ಯರಿಗೆ ನಿಚ್ಚ
ಗುರುನಾಯಕನ ಸ್ಫೂತಿರಸಧಾರೆ ತುಂಬುವುದು
ಹೃನ್ಮನಂಗಳಂ. ಆ ವ್ರತ ನಿಷ್ಠೆಯಲಿಯೇ
ದಿನಗಳೆಯುತಿರುತಿರೆ ವಟುಗಳ್ ಗುರು ನಾಯಕನ
ಹಿತವಚನಗಳ ಸ್ಫೂರ್ತಿ ಪಜ್ಜೆ ಪಜ್ಜೆಯಂ ಮುಂ
ದೂಡುವುದು ನೇರ ಪಥದೊಳ್. ಶಿಷ್ಯವೃಂದದಲಿ
ಆರುಂ ಜುಗುಳಿ ಹೋಹದ ಪರಿಯಲಿ ನರೇಂದ್ರುಂ
ಹೃದಯಾಮೃತಮಂ ಬಸಿಯುವಂ ಎಡೆವಿಡದೆ.

"ಯದಸ್ತಿ ಹೃದಯಂ ಮಮ ತಥಸ್ತು
ಹೃದಯಂ ತವ" ಎಂಬುದದು ಘನೋದ್ದೇಶಮನೆ

ಸಲ್ವುದು, ನರೇಂದ್ರನಾಥಂ ಮತ್ತೆ ಮತ್ತೆ ತಾಂ
ಉದ್ಧರಿಸುವನ್ ಅದೇ ನುಡಿಗಟ್ಟಂ. ಪ್ರೇಮ, ದಯೆ,
ಪ್ರೋತ್ಸಾಹ, ಪ್ರಜ್ಞಾನ, ಆಧ್ಯಾತ್ಮಗಳ ಪಾಠ
ನಡೆವುದು ಅನುಕ್ರಮದೊಳ್, ನರೇಂದ್ರನ ಮುಖದಿಂ.
ಮುಂದೆ ಗುರುನಾಯಕನಿರುತಿದೆ ಎಲ್ಲಿಯದಯ್ಯ
ಭಯಂ? ಧೀರಧೀಮಂತರುಂ ತಾಮಿರುತಿರಲ್
ಪಿಂದಿರುಗಲ್ ಜವ್ವನದ ಮನ ಒಪ್ಪುಗುಮೆ? ಆ
ಕಾಲಮಾನ, ಆ ಜನಜಂಗುಳಿ ಆ ಬಿಳಿಯರ
ಆಳ್ವಿಕೆ ಇತಿ ಬಗೆವಗೆಯ ಸಂಕಷ್ಟಗಳ ಹೊರೆ
ರಾಶಿ ರಾಶಿಯಿರುತಿರೆ ಚಿಂತೆಯಗತಿ ಘನವೆತ್ತು
ನಿಲ್ವುದು ಮನೋದರ್ಪಣದ ಮೇಲೆ. ನರೇಂದ್ರಂ
ಗುರುಭಾಯಿಗಳಂ ಕುರಿತು ನುಡಿಸಿದನೆಂತೆನೆ,
"ಭಗವಾನ್ ಶ್ರೀಕೃಷ್ಣನ ಉವಾಚಮಿಂತಿಹುದು,

"ನ ಹಿ ಧರ್ಮವಿಭಾಗಜ್ಞಃ
ಕುರ್ಯಾದೇವಂ ಧನಂಜಯ ।
ಯಥಾತ್ವಂ ಪಾಂಡವಾದ್ಯೇಹ
ಧರ್ಮಭೀರುರ ಪಂಡಿತಃ ॥"

ಗೀತಾಚಾರ್ಯನುಪದೇಶಮಿರಲಿಂತು ಅರ್ಜುನಂ
ಪಿಂಜರಿದು ವಿಮುಖನಾದಪುದೆಂತು? ಕೇಳಿಲ್ಲಿ,
ಮೊತ್ತಮೊದಲ್ ನಂನಮ್ಮಗಳ ಕರ್ತವ್ಯಮಂ
ನಾವರಿದೊಡೆ ಸಾಲ್ಗುಂ. ತರುವಾಯಿ, ದೈವೇಚ್ಛೆ
ಎಂತಿರ್ದೊಡಂತು ನಡೆವುದೆಮ್ಮ ಜೀವನದ ಗತಿ"
    ಮನಮನಂಗಳಲಿ ಭಾವನದಿಯುಕ್ಕಿ ಹರಿದಿರೆ
ಕೋಡಿಯಾಗಿ ಗೃಹಸ್ಥಾಶ್ರಮಕೆ ಪಿಂಗಿರುಗಲ್
ಒಪ್ಪುದೇಂ ಮನಂ? ಜವ್ವನದ ಸ್ಫೂರ್ತಿ ಸಲ್ವುದೆ

ಹೊಲಬಿನ ಅಹೇತುಕ ಬದುಕಿಗೆ? ಬಲ ಭೀಮರುಂ,
ಅಚಲ ಶ್ರದ್ಧಾವಂತರುಂ, ಭಾರತಾಂಬೆಯಾ
ಧೀರ ಪುತ್ರರುಂ ವೇದಾಂತ ಧರ್ಮವೇತ್ತರುಂ,
ಭಾರತ ಭುವಿಯ ಪುನರ್ ಉಜ್ಜೀವನ ಕರ್ತರುಂ,
ಶ್ರೀರಾಮ ಕೃಷ್ಣ ಪರಮಹಂಸರ ಅಧಿಮಾನಸ
ಪುತ್ರರುಂ ಕರ್ತವ್ಯ ವಿಮುಖರಾದಪುದುಂಟೆ?
ನರೇಂದ್ರನಾಥನುಂ ಸಾಯಂ ಭಜನೆಗಳಂ
ಹಾಡಿ ಪಾಡಿ ಭಕ್ತಿರಸವಂ ಹರಿಸಿ ತನ್ನಂ
ತಾಂ ತಣಿಸಿ, ಸಹಾಧ್ಯಾಯಿಗಳ ಮನಮಂ ತಣಿಸಿ
ಗುರುದೇವನಂ ನೆನೆದು "**ಓಂ ಈಶಾವಾಸ್ಯಮಿದಂ**
ಸರ್ವಂ" ಎನುತೆ ನುಡಿಸಿದಂ "ಎಲೆ, ಸಹೋದರರೆ,
ನಂನಮ್ಮಯ ಹೃನ್ಮನಗಳ ಸಾಂತ್ವನಕ್ಕೆ ಮೇಣ್
ಗುರುದೇವನಾ ಆತ್ಮಶಾಂತಿಗೆ ಅನುಗುಣಮಿಹ
ಸಂನ್ಯಾಸಿ ಜೀವನದ ಬದುಕಂ ಲೋಕ ಕ್ಷೇಮದ
ಸಲುವಾಗಿ, ಕಲ್ಯಾಣಕರವಾಗಿ ರೂಪಿಸುತೆ
ಕಿರಿಯರ ದಾರಿದೀಪವಾದಪುದೆ ಸುಸುಂದರ
ಜೀವನಂ. ನಮ್ಮ ಕರ್ತವ್ಯ ಸಾಧನೆಗೆ ಗುರು
ದೇವನ ಅಭೂತಪೂರ್ವ ಉನ್ನತಾದರ್ಶಮಂ
ಮುಂದಿರ್ಕಿದೊಡೆಮ್ಮಯ ಸಾಧನೆಯ ಬರ್ದುಕಿಗೆ
ಪಥದರ್ಶಿ ತಾನಾದಪುದು ಎನಲನ್ಯಮೇನಲ್ತು.
ತೀವ್ರ ಘನಗಂಭೀರ ವೈರಾಗಿ ಶ್ರೀಮಾನ್
ಶಂಕರಾಚಾರ್ಯರುಂ ಭಾರತ ಧಾತ್ರಿಯಂ
ಕಾಲ್ನಡಿಗೆಯೊಳ್ ಸುತ್ತಿ ಸುಸಂಸ್ಕೃತಿ ಪರಿಮಳಂ
ಬೀರಿ ಎಡೆಎಡೆಯೊಳ್ ಜನಮನವನಾಕರ್ಷಿಸಿ
ಸೂಕ್ತ ಸ್ಥಳಗಳಲಿ ಶ್ರೀಶಾರದಾ ಪೀಠಮಂ

ನಿರ್ಮಿರ್ಚಿದರ್. ಮನುಕುಲದುದ್ಧರಣಕ್ಕೆ ಶ್ರಮವಂ
ಶ್ರಮಿಸಿ ಬೆಮರ್ ಸುರಿಸಿ ಪರಿಬೋಧಿಸಿ ಸಜ್ಜನ
ಗೋಷ್ಠಿಗೆ ವರಗುರುವಾಗಿ ಜಗದೊಳ್ ಜೃಂಭಿಸಿದ
ಮಹಾ ಮಹಿಮಾಮಯ ಶ್ರೀಶಂಕರ ಗುರುವಿನ ಸತ್
ಚರಿತೆಯ ನೆನೆದು ನುಡಿದು ತಿಳಿಪಿ ಯುವ ಗೋಷ್ಠಿಯೊಳ್
ಅಪರಿಮಿತ ಪ್ರೋತ್ಸಾಹವನಿತ್ತಂ. ಅದೆಂತೆನೆ,
"ಕೇಳಿಲ್ಲಿ, ಎನ್ನ ಭ್ರಾತೃಭಾಯಿಗಳೇ "**ಉತ್ತಿಷ್ಠತ**
ಜಾಗ್ರತ ಪ್ರಾಪ್ಯವರಾನ್ ನಿಬೋಧತ" ಎಂಬುವ
ಸನ್ಮಂತ್ರವದು ನಿಮ್ಮಗಳ ಮನೋಗತಮಾಗಿ
ರಕ್ತಗತಮಾದೊಡೆಲ್ಲಿಯ ಕೊರಂ? ಮುಂದೆ ಮುಂದೆ
ನಿಮಗೆ ನೀವೇ ರಾಜ! ಮುಂದಾರಿ ಎಂದಿಗುಂ
ಸುಗಮ ಎನೆ ತಿಳಿದು ಮನವರಿತು ಕೊಳ್ಳವೇಳ್ಕುಂ!"
ಆ ದೃಢ ಮನೋಹರ ಶ್ರೀವಾಣಿಯಂ ಕೇಳಿ
ತಲೆದೂಗಿದಳ್ ನಭೋಲಕ್ಷ್ಮಿ! ಕಿವಿಗೊಟ್ಟಾಲೈಸಿತು
ಪರ್ಣಕೋಟಿ. ಪಕ್ಷಿಗೊರಳ್ ಉಲಿದುದು ರಾಗಾ
ರುಣತಾನಮಂ ಮಿಂಟಿ. ತಂಗಾಳಿ ಒಯ್ಯನೆಯ
ತೀಡಿ ಬೇಹಿನಾಳಿನೆ ಹರಡಿದುದು ಸುಸುದ್ದಿಯ
ಸಾರಮಂ. ರಾಷ್ಟ್ರೀಯ ಪರಿಸ್ಥಿತಿ ಬೆನ್ತಟ್ಟಿ
ಒಡಲ ದುಸ್ಥಿತಿಯಂ ಹಿರಿದು ಹಿಂಜಿ ತೋರ್ದತ್ತು
ಎಂದಿಗುಂ ಸೋಲ್ಗೆಡದ ಮಾಳ್ಕೆಯಲಿ.
ಇಂತಿಂತು
ಜನಸೇವೆಗೆ ಅಣಿಗೊಳುತಿರೆ ತರುಣದಳ ಸಧ್ಯ
ದುರ್ದೆಶೆಯಂ ಹೊಂಚಿ ಕಾದಿರ್ದ ದುಷ್ಟಜನರ
ಕೂಟಸ್ಥ ಧೂರ್ತ ಬಂಧುವೊರ್ವಂ ದತ್ತ ಮನೆ
ತನದ ಭವನಂ ಕಬಳಿಸುವ ಕೀಳ್ಮತಿಯ ಖಡ್ಗ

ಬೀಸಿ ಕುಟುಂಬದ ವಿರುದ್ಧ ನ್ಯಾಯಾಲಯದಲಿ
ಮೊಕದ್ದಮೆಯಂ ಹೂಡಿದಂ. ಭಂಗ ಬನ್ನಗಳ
ಬೀಡಿನಲಿ ಇದೊರ್ ರಾಹು ಕೇತುಗಳೆನೆ ನಿಚ್ಚ
ಕಾಡತೊಡಗಿದುದು. ನಿತ್ಯ ಭೂತ ದರ್ಶನದೊಲ್
ಹಿಂಸ್ರಕಮಾಯ್ತು. ಜೇಷ್ಠ ಕುವರ ನರೇಂದ್ರನಾಥಂಗೆ
ಭುಜಗೊಡುವ ಕತಮೊದವಿತು. ಆಗಾಗ ದೂರದ
ವಿರಾಟ್ ನಗರಿಯಾದ ಕಲಿಕತ್ತೆಯಾ ನ್ಯಾಯ
ಮಂದಿರಕೆ ಅಲೆಯುವುದು ಪಿರಿದಾಯ್ತು. ಪ್ರಾರಂಭಿಕ
ಅನನ್ಯ ಅನುಪಮ ಚಟುವಟಿಕೆಗಳಿಗೆ ಸರ್ವದಾ
ಹೀನಾತಿಹೀನತರ ಅಡ್ಡಿ. ಔರಸ ಪುತ್ರ
ನರೇಂದ್ರನಾಥನಿಗಲ್ಲದೆ ಅದರ ಬಗೆಹರಿಕೆಯುಂ
ಇತರರಿಂಗೆ ತಗದೆನಲ್ ಭುಜಗುಡದೆ ವಿಧಿಯೇ
ಇಲ್ಲವಾಯಿತ್ತು. ಕಡುಬಡತನದ ಬದುಕಿಂಗೆ
ಅದೊರ್ ಕಟು ಕಠಿಣ ತ್ರಾಸದ ಕಜ್ಜ ತಾನಾಯ್ತು.
ನರೇಂದ್ರನಾಥದತ್ತಂ ಆಗಳಾಗಳ್ ಮತ್ತೆ
ಮತ್ತೆ ಕಲ್‌ಕತ್ತೆಯಾ ಹಾದಿ ಹಿಡಿಯುತ್ತೆ ಬರಿ
ಬೇಸರದ ಕಹಿಯುಂಡೊಡಂ ನ್ಯಾಯವಾದಿಗಳ,
ನ್ಯಾಯಾಧೀಶರ ಮನವಂ ಸೂರೆಗೊಂಡಂ ತನ್ನ
ವಾಗ್ಜಾಲವಂ ಹರಿಸಿ. ತರುಣ ಯೋಗಿಯ ದಿವ್ಯ
ಪ್ರತಿಭಾ ಶಕ್ತಿಯಂ ಕಂಡು ಬೆರಗಾಗಿ "ಈ
ಬಗೆಯ ವ್ಯಕ್ತಿತ್ವವಂ ಮಿನ್ನೆ ಕಂಡುದಿಲ್ಲಂ"
ಎಂದೆಂಬ ಅಚ್ಚರಿಯ ಕುಂಡದಲಿ ಮುಳುಗೆದ್ದು
ತೇಲಿದರ್ ಮತ್ತಂ ನರೇಂದ್ರನಾಥನ ಪತ್ತೆ
ಸಾರ್ದು "ಅಯ್ಯಾ ಯೋಗಿಮರ್ಯ ನಿನ್ನೊಳಿಹ ಈ
ಅದ್ಭುತತಮ ದೀಶಕ್ತಿಯನೇಕೆ ಸುಂಸುಮ್ಮನೆ

ವ್ಯರ್ಥಗೊಳಿಸುವೆ? ನೀಂ ವಕೀಲಿವೃತ್ತಿ ಪಡೆದೊಡೆ
ಒಳ್ಳಿತಲ್ತೆ? ನೀನಿದಕೆ ತಕ್ಕಿನ ವ್ಯಕ್ತಿ ಕಣಾ!
ಎಂದವರ್ ಅನೇಕರ್. "ಖಂಡಿತ ನಿನಗೀವಗೆ
ಪ್ರವೃತ್ತಿ ಹಿತ ಮೇಣ್ ಸರಾಗಂ, ಸುಲಲಿತಂ.
ದೃಢಚಿತ್ತದಿಂದೆ ಬಂದು ಬಿಡೈ." ಎಂದನೊರ್ವ
ವಕೀಲಂ ಕಟ್ಪೊತ್ತಾಯದಿಂ. ನರೇಂದ್ರನಾಥಂ
ಮುಗುಳ್ನಗೆಯ ಸವಿಸೂಸಿ ಮೊಕದ್ದಮೆಯಂಗೆಲ್ದು
ವಿಜಯಿಯಾಗಿ ಪಿಂಮರಳಿದನ್ ದತ್ತ ಭವನಕೆ.
ಮಮತೆಯ ಜನನಿಯ ಪದಯುಗ್ಮಗಳಿಗೆ ಶಿರವಂ
ಮಣಿದು ಆನಂದವಾರ್ತೆಯನೊರೆದು ಒಂದೆರಳ್ಡು
ದಿನಮಲ್ಲಿರುತಿರ್ದು ಜನನಿಯ ಮನಕೆ ಮುದವಂ
ಊಡಿಸಿದನ್, ವೈರಾಗ್ಯ ಜೀವನದ ಪ್ರಥಮ
ಹೆಜ್ಜೆಯೊಳ್ ನ್ಯಾಯಾಲಯದ ಕಟಕಟೆಯ ಹತ್ತಿ
ಇಳಿದ ಚಿತ್ರ ಮತ್ತಮಾ ಕೀಳರಿಮೆಯ ಸುಳ್ಳಿನ
ಕಂತೆಯಾದ ಮೊಕದ್ದಮೆಯನೆದುರ್ಚಿ ಕೊರಳ್
ಬಿಗಿದು ಉರುಳ್ ತೊಡಿಸಿ, ಕೊಡವಿ ಜಾಡಿಸಿ ತತ್ತಳ
ತುಳಿದಚಿತ್ರ ಮನೋಗತಿಯಲಿ ಸುಳಿಸುಳಿಯುತ್ತೆ
ಸಂನ್ಯಾಸಿ ಧರ್ಮದ ಒರೆಗತ್ತಿಯ ಅಲುಗಿನಲಿ
ಹರಿದಾಡಿ ಒರೆ ಹಚ್ಚಿ ಸುಖದುಃಖಗಳೊತ್ತಡ
ಹೇರಿದುದು ಮನೋಮಂಡಲ ಬಿಗಿವ ಪಾಂಗಿನಲಿ.
ಕಾಲವಶಿ ವಿವೇಚನೆಯದು ನಿಮುರ್ದು. ಇಂದಿಗೆ
ಮುಗಿಯಿತ್ತು, ಮತ್ತೆ ಮತ್ತೆ ನ್ಯಾಯಾಲಯದ ಪಥ
ತುಳಿಯುವುದದು ತಪ್ಪಿತು. ಮತ್ತದರ ಕಿರಿಕಿರಿಯು
ಕಳಿಯಿತು ಎನಲ್ ಎನಿತೆನಿತೊ ಸಮಾಧಾನ ಮನ
ಮತಿಗಳಿಗೆ. ಆದೊಡೇನಾ ನ್ಯಾಯ ಮಂದಿರದ

ಪೀಠದೆದುರ್ ನಲಿವ ಅತಿ ಅಸಹ್ಯಕರಮಾದ
ಸುಳ್ಳುಪೊಳ್ಳುಗಳ ನಿಡು ಕಂತೆ ಸಾಮಾನ್ಯಮೇ?
"ಸರ್ವೇ ಗುಣಾಃ ಕಾಂಚನ ಮಾಶ್ರಯಂತಿ"
ಎಂಬುದದು ಸತ್ಯಸ್ಯ ಸತ್ಯ. ಇದಂ ದೇವರೇ
ಬಗೆ ಹರಿಕುಮೆನದೆ ಗತಿಯಿಲ್ಲ. ಅಂತಿಂತೆನಗೆ
ಗುರುದೇವನ ಕೃಪೆಯೊ ಕಾಳಿಮಾತೆಯ ದಯಾ
ದೃಷ್ಟಿಯೋ ಮತ್ತಾವ ಗ್ರಹದ ಶುಭಾಶಯದ
ಪರಕೆಯೊ ಎನಲ್ ಎಲ್ಲವಗೆಯ ಸಂಕಷ್ಟಗಳ್
ಅರುಗಾಗಿ ಹಾದಿ ಸುಗಮವಾಯ್ತು. ಪದಗಳಿಂಗೆ
ಅಡರಿ ತೊಡರುತಿರ್ದ ಕಿರುಕುಳಗಳ ಹೇರಾಶಿ
ದೂರಾಯ್ತು. ಎಂಬೊಂದು ದಿವ್ಯ ತೋಷ ಮನಸಿಗೆ.
ಅಂದು ಪೊಳ್ತು ಏರುವ ಮುನ್ನಮೆ ಅಣಿಯಾದನ್
ಕಾಶೀಪುರದ ಆಶ್ರಮದ ಕುಟಿಗೆ ಸುಕುಟುಂಬ
ಸ್ವಗೃಹಗಳಂ ಬಿಟ್ಟು ಪೊರಡಲ್ಕೆ, ಕಂಬನಿ
ಮಿಡಿಯುತಿರ್ದ ಜನನಿಯ, ಸೋದರಿಯರ ಸಂತೈಸಿ
ಕಂಬನಿ ತೊಡೆದು ಪೊರಟನಾ ಗೃಹತ್ಯಾಗಿ ರಿಸಿ
ನಡೆದುವು ಪದದ್ವಯಗಳು ಬಿರುಬಿರನೆ ದೂರದ
ಹಾದಿವಿಡಿದು. ತನಿವೊಳ್ತಿನ ತಂಪು ತಣ್ಣನೆಯ
ತಂಪೂಡಿ ತಣಿಸುತಿರೆ ತನುಮನಮಂ ನರೇಂದ್ರಂ
ಮುನ್ನಡೆದನ್ ಕಾಲನೊಡಂ ಸ್ಪರ್ಧೆ ಹೂಡಿದೊಲ್,
ನಿಶ್ಶಬ್ದ ನೀರವಗಳ ಶಾಂತಿ ಸಮುದಯದಲಿ
ಕಿವಿಗೆ ಕೇಳಿಸಿತೊಂದು ಅತನು ವಾಣಿ ಸುಸ್ಪಷ್ಟ ದನಿಯಲಿ,

"ಆಯಂ ನಾಭಾ ವದತಿ ವಲ್ಗುವೋ ಗೃಹೇ
ದೇವ ಪುತ್ರಾ ಋಕ್ಷಯಸ್ತಚ್ಛೃಣೋತನೇ ।

ಸುಬ್ರಮಣ್ಯಮಂಗಿರಸೋ ವೋ ಅಸ್ತು
ಪ್ರತಿ ಗೃಬ್ಣೀತ ಮಾನವಂಶು ಮೇಧಸ: ॥"

ನರೇಂದ್ರನಾಥಂ ಭಾವನಾ ಪನ್ನತೆಯಲಿ ನೆರೆ
ಮುಳುಗಿ ವೇದಜ್ಞರ್ಗಂ ಮನದಿ ನೆನೆದು ಗಭೀರ
ಧ್ಯಾನೋತ್ಫುಲ್ಲ ರಸಸ್ನಾತ ಚೇತನ ಪುಳಕನೆನೆ
ದೃಷ್ಟಿಕಕ್ಷೆಯಲಿ ಕಣ್ ನೆಟ್ಟು ನಾಂಟಿ ನೋಡಲ್
ಪ್ರಕೃತಿಯ ಪ್ರದೇಶದಲಿ ದರ್ಶನ ಮಾದತ್ತು
ತಾಯಿ ಭಾರತಿಯ ಭೂಮ ವ್ಯಕ್ತಿತ್ವಂ. ನೋಡೆ,
ನೋಡೆ, ಸಸಂಭ್ರಮೆಯಾದವೊಲ್ ಮರ್ಮರ
ದನಿಯ ಹರಿಸವೇ ಹರಿಸಂ ಪರ್ಣರಾಜಿಯಲಿ.
ಏಕಭಾವದ ತದೇಕ ನಿಷ್ಠೆಯ ಸಂಯಾತ್ರೆಯ
ಸಂನ್ಯಾಸಿ ವ್ರತಮೆನೆ ಸುಖದು:ಖಗಳ್ ನಿಚ್ಚ
ಬಂದು ಪೋದಪವು ಗಣನೆಗೆ ಬಾರದ ಪರಿಯಲಿ.
ನರೇಂದ್ರನಾಥನಂ ಗುರುನಾಯಕನೆನೆ ಒಮ್ಮನ
ಒಮ್ಮತಗಳಿಂ ಗದ್ದಿಗೆಯ ನೇರಿಸಿರುತಿರಲ್
ಮಿಣ್ಣನಿರಲುಂಟೆ? ಗುರು ಭಾಯಿಗಳೆಲ್ಲರಂ
ಬಹುಲ ರೀತಿಯೊಳ್ ವರ ಮಾತೃಪ್ರೇಮಭಾವದ
ದಿವ್ಯ ಸೂತ್ರದಲಿ ಕಟ್ಟಿ ಏಕ ಛತ್ರಿಯಡಿಯಲಿ
ಸಂಬಾಳಿಸುತಿರೆ ಅತ್ತಿತ್ತಲುಗದವೊಲ್ ನೆರೆ
ಬಿಗಿಗಟ್ಟಿ, ಸಲ್ಲಿದರೆಲ್ಲ ಸಂನ್ಯಾಸಿವ್ರತ
ಧರ್ಮನಿಷ್ಠೆಗೆ ಗುರುನಾಯಕನ ನೇತೃತ್ವದಲಿ.
ಒರ್ದಿನಂ ಗುರುದೇವನ ಪರಮ ಚಿತಾ ಭಸ್ಮ
ತುಂಬಿರ್ದ ಕರಂಡಿಗೆಯಂಬಡೆಯೆ ಹಿರಿಕಿರಿಯ
ಗೃಹೀಭಕ್ತ ಜನರೈದರ್ ಬಡಕುಟಗೆ. ವಟುಗಳ್
ಬಿಟ್ಟುಕುಡಲೊಪ್ಪರೆನೆ ಭಕ್ತರ್ ಬಿಡಲೊಪ್ಪರ್

ಎನಲ್ ಬೆಳೆದುದು ವಾಗ್ವಾದ ಗಭೀರಗತಿಯಲಿ.
ನರೇಂದ್ರಂ ಮುಂದ್ಪೈದು ಪರಮಶಾಂತಿ ಮಂತ್ರಮಂ
ಪಠಿಸಿ ಕಿರಿಯರಂ ಎಕ್ಕಟಿಗೆ ಬರಮಾಡಿ ಕಿವಿ
ಮಾತು ನುಡಿಸಿ ಒಪ್ಪಿಸಿ ನುಡಿದನ್ ನರೇಂದ್ರನಾಥಂ,
"ಕೇಳಿ ಭಾರತ ಪುತ್ರರೇ! ಎಲ್ಲಮಿರುತಲಿರ್ದು
ಏನಿಲ್ಲದ ಪರಿಯಲಿ ನಮ್ಮಗಳ ವರ್ತನೆಯು
ಲೋಗರ್ಗೆ ಕೈಗನ್ನಡಿಯಾದಪುದಲ್ಲದೆಯೆ
ಬೇರಲ್ಲ. ಸಂನ್ಯಾಸಿ ಧರ್ಮವು ಜಗಕೆ ದಿವ್ಯ
ಮಾದರಿಯೆನೆ ಜ್ವಲಿಸಲಕ್ಕುಂ. ನೋಳ್ಪ ಕಂಗಳ್
ಮೆಚ್ಚಿ ತಲೆ ತೂನೆಯಲಕ್ಕುಂ. "**ಸತ್ಯಂ ಬ್ರೂಯಾತ್**
ಪ್ರಿಯಂ ಬ್ರೂಯಾತ್." ನಿಂನಿಮ್ಮೊಳ್ ಭಾವಿಸಿರ್ಪೈ
ಸಮಾಧಾನದಿಂ. ಸಾವಧಾನಮಿರಲಿ ಸದಾ.

"ಆದೇಶಕಾಲಜ್ಞಮನಾಯತಿಕ್ಷಮಂ
ಯದಪ್ರಿಯಂ ಲಾಘವಕಾರಿಚಾತ್ಮನಃ ।
ಯೋಽತ್ರಾಬ್ರವೀತ್ಕಾರಣ ವರ್ಜಿತಂ ವಚೋ
ನ ತದ್ವಚಃ ಸ್ಯಾದ್ವಿಷಮೇವ ತದ್ವಚಃ ॥"

"ಎಲೆ, ಭ್ರಾತೃಭಾಯಿಗಳೆ! ಈವೊಂದು ಕಿರುವಗೆಯ
ವಿಚಾರದೊಳ್ ಮನಮಸಗಿ ತಲೆಕಿಡಿಸಿ ಲೋಕದ
ನಿಂದೆಗಾವ್ ಒಳಗಾದಪುದು ಸರಿಯೆ? ಕೇಳಿ,
ಸಂನ್ಯಾಸಿ ಧರ್ಮವಂ ಅರಿತು ನಿಮ್ಮ ಮುಂದಿನ
ಕರ್ತವ್ಯಮರಿತು ಇಂತೇಂ ಇರಿಸುಮುರಿಸುಗಳಲಿ
ಮನಂಗೊಂಡು ಪರಿತಪಿಸುತಿರ್ಪಿರಿಮ್? ಕೇಳ್ವರಿಗೆ
ನೀಡುವುದೆ ನಿಮ್ಮ ಧರ್ಮಮೆನಲ್? ಇನಿತು ಮನದಿ
ಸಂಕೋಚಮಿಹುದೇಕೆ? ಇಂತಿಂತು ಮನಸಿನೊಳ್
ಕಿನಿಸಿಗೆಯ ಬೆಳಸಿ ಹಗರಣಂ ಮೈಗೊಂಡೊಡದೆ

ಕರ್ತವ್ಯಕೆ ಮಿತ್ತು ಎನಲದನೀಗಳೆ ನಿಮ್ಮ
ಎದೆಯಭಾರಮಿಳಿಸುವುದು ಒಳ್ಳಿತು. "ಗುರುವರನ
ಪ್ರವಾಣಿ ಕಿವಿಗಳಂ ಬೊಕ್ಕು ಎರಕೆ ಹೊಯ್ದುದೊ
ಎನೆ ಮಿಂಚಿದುದು ಬಗೆಯೊಳ್ ಗೃಹೀಭಕ್ತಜನ
ಜಂಗುಳಿಯ ಪಂಬಲದ ಹಿರಿಯಾಸೆಯ ಕಳಕಳಿ.
ಒಡನೊಡನೆ ವಟುಗಳ್ ಒಳಗೆತ್ತು ಗುರುದೇವನ
ಚಿತಾಭಸ್ಮದ ಕರಂಡಿಗೆಯಿಂ ಕೆಲಂಶವಂ
ಬೈತಿಟ್ಟು ತಂದೊಪ್ಪಿಸಿದರ್ ಗೃಹೀಭಕ್ತ
ಜನರಿಂಗೆ. ಶಾಂತಿಯಲಿ ಬಗೆಹರಿದುದು ಜಿಹಾಸೆ.

"ಉದ್ಯಂತು ಶತಮಾದಿತ್ಯಾ
ಉದ್ಯಂತು ಶತಮಿಂದವ: ।
ನವಿನಾ ವಿದುಷಾಂ ವಾಕ್ಯೈರ್ನ
ಶ್ಯತ್ಯಾಭ್ಯಂತರಂ ತಮ: ॥"

ಭಕ್ತಜನರ್ ಶ್ರೀಗುರುವರೇಣ್ಯನ ಪರಮೋಚ್ಚ
ಭಸ್ಮಾಸ್ತಿಯ ಕರಂಡಿಗೆಯಂ ಪೊತ್ತು ಅಪಾರ
ಭಕ್ತಿಗೌರವ ಭಾವದಿಂ ನಡೆದರಯ್ ಬಲು
ಸಂತೋಷದಿಂದುಕ್ಕುವ ಹೃದಯಂ ತಾವೊತ್ತು.
ಮತ್ತೆಂದನಾ ನರೇಂದ್ರನಾಥಂ "ಭಾಯಿಗಳೆ,
ಆವುಂ ಪಿಡಿದ ಪಥವದು ಧಾರ್ಮಿಕ ಕ್ಷೇತ್ರಮಂ
ಪ್ರತಿನಿಧಿಪ ಮಹಾ ಸತ್‌ಕ್ಷೇತ್ರಂ ಎಂಬುದಂ
ಮರೆಯಲಾಸಲ್ಲ. ಪಜ್ಜೆ ಪಜ್ಜೆಯದು ಸುಕೃತಿಗಕ್ಕುಂ.

"ಉದೀರಿತೋಽರ್ಥಃ ಪಶುನಾಪಿ ಗೃಹ್ಯತೇ
ಹಯಾಶ್ಚ ನಾಗಾಶ್ಚ ವಹಂತಿ ದೇಶಿತಾಃ ।
ಅನುಕ್ತಮಪ್ಯೂಹತಿ ಪಂಡಿತೋ ಜನಃ
ಪರೇಂಗಿತಜ್ಞಾನಫಲಾ ಹಿ ಬುದ್ಧಯಃ ॥"

ಅನೇಕರ ಕಂಗಳಲಿ ಸುಖದುಃಖಾಶ್ರುಗಳ್ ಥಳ
ಥಳಿಸಿದುವು ವೆಳ್ಳಿಯ ಗೆರೆಯ ಮಾಳ್ಕೆಯಲಿ. ತೋಷ
ಭಾವದಿಂ ಒಳಗೈದ ನರೇಂದ್ರುಂ, ಎಲ್ಲರ ಮನೋಗತಿಯ
ಓದಿ ಅವಲೋಕಿಸಿ "ಸೋದರರೆ, ಇಂ ನಿಂನಿಮ್ಮ
ಕಾರ್ಯಯೋಜನೆಗೆ ನಿಶ್ಚಿಂತೆಯಿಂ ಧೈರ್ಯದಿಂ
ಮನಗುಡುವುದೇ ಲೇಸು. ಲೋಕದಲಿ ಲೋಗರುಂ
ಗುರುಸ್ಥಾನದೊಳಿರ್ದು ಗುರುಗಳ ಭಸ್ಮಾಸ್ಥಿಗಾಗಿ
ಕಿತ್ತಾಡಿದರೆಂದೆಂದು ನಗದಿರ್ಪರೇಂ? ಈ
ಪ್ರಕರಣ ಸುಶಾಂತಿಯಲಿ ಮುಗಿದುದು ಸರ್ವತ್ರ
ಒಳ್ಳಿತಾಯ್ತು. ಮಾನವತೆಯಂ ಮರೆಯದಿರಿ. ಗುರು
ದೇವ ಶ್ರೀರಾಮಕೃಷ್ಣರ ಮಹದ್ ಉಪದೇಶ
ನಮ್ಮಯ ಶಿರೋದೇಶದೊಳಿರ್ದೊಡೆ ಅದೆಮ್ಮಯ
ಸೌಭಾಗ್ಯಮಲ್ತೆ? "**ವಚಸ್ಯೇಕಂ ಮನಸ್ಯೇಕಂ**
ಕರ್ಮಣ್ಯೇಕಂ ಮಹಾತ್ಮನಃ" ಎಂಬುದಂ ಮನದಿ
ಸ್ಥಿರೀಕರಿಸಿದೊಡುದುವೆ ಪಥದರ್ಶಿ. ಮನದೊಳಿದಂ
ತಿಳಿದು ನೋಡಿ. ಏಂಗೈದೊಡದುಂ ಸರ್ವತ್ರುಂ
ಒಮ್ಮನದೊಳೊಮ್ಮತದ ಲಚ್ಚಣದಲಿ ಮುಂದೈಸಿ
ಮುಂದೈದು ದುಡಿವ ಗುರಿಯಿರವೇಳ್ಕುಂ. ಶ್ರೀರಾಮ
ಕೃಷ್ಣ ಸಂಘಮಂ ನಿರ್ಮಿಸಿ ತನ್ಮೂಲಕ ದೇಶ
ಸೇವೆ ಈಶ ಸೇವೆಯಂಗೈದು ಬದುಕುಬಾಳ್ಗಳ
ಪುನೀತಗೊಳಿಸಿದೊಡೆ ನರಜನ್ಮವು ಸಾರ್ಥಕಂ.
"**ನ ಧನೇನ ನ ಚೇಜ್ಯಯಾ ತ್ಯಾಗೇನೈಕೇನ**
ಅಮೃತತ್ವ ಮಾನುಷ" ಗುರಿಯಾದಪುದೆಮಗದು
ಸರ್ವತ್ರ ಲೇಸು. ರಾಮಾನುಜ, ಕಬೀರ, ಚೈತನ್ಯ
ಮೊದಲಪ್ಪ ಮಹಾನ್ ಗುರುಗಳ್ ಕೆಳ ವರ್ಗೀಯ

ಜನಜಂಗುಳಿಯಂ ಮೇಲೆತ್ತಲ್‌ಗೈದ ಯತ್ನ
ಅಸಮಾನ್ಯಮೆನೆ ಅನ್ಯಮಲ್ತು. ಆದೊಡಾ ಶ್ರೀ
ಪ್ರಾಚಾರ್ಯರುಂ ಕಾಲವಶವಾದ ಶತಮಾನ
ಪರ್ಯಂತಮುಳಿದ ಬೋಧನೆಗಳೆಲ್ಲಮಂತೆಯ
ನಶಿಸಿ ಕಣ್ಮರೆಯಾಗೆ ಕಾರಣವದೇನ್? ಎನೆ
ಆ ವಿಷಯವಾಹಿನಿಯೊಳ್ ಮುಳುಗಿದೊಡೆ ಅಂದಿನ
ಲೋಪದೋಷವನರಿಯುತೆಮ್ಮ ಹಾದಿಯೊಳಿರ್ಪ
ಎಲ್ಲವಗೆಯಾ ನ್ಯೂನ್ಯತೆಗಳಂ ಝಾಡಿಸುವುದು
ಸುಲಭಮಕ್ಕುಂ. ಸಂಯೋಜನೆಯಕ್ಕುಂ. ಮತ್ತಮಾ
ನಮ್ಮೆಲ್ಲ ಕಾರ್ಯನಿರ್ವಹಣೆಯಲಿ ತೊಡುಕುಗಳ್
ಪರಿಹಾರಮಕ್ಕುಂ. ಮುಂದೆ ನೇರ ಪಥವಂ
ಪಿಡಿಯುವೊಡೆ ದಾರಿದೀಪ ತಾನಕ್ಕುಂ ನಿಜದಿಂ.
"**ಶ್ರೇಯಾಂಸಿ ಬಹು ವಿಘ್ನಾನಿ**" ಎಂಬುದಂ ಮರೆಯದೆ
ಮನಕೆ ನೆಚ್ಚುಗೂಡಿಪುದೆ ಕೆಚ್ಚಿನ ಕಿಡಿಯಕ್ಕುಂ.
ಪುರುಷ ತೇಜವಕ್ಕುಂ. ಗುರುಪೀಠದ ಘನವಕ್ಕುಂ.
ಕಾಲನಾ ಸಂಭ್ರಮದ ಸುಲೀಲಾಖೇಲನದಿ
ಹಾರಿಯೋ ಜಾರಿಯೋ ಬಿಳ್ದು ಹೋಹದ ಪರಿಯಲಿ
ದೃಢವಕ್ಕುಂ. ಶ್ರದ್ಧೆ ಸಡ್ಡೆಗಳ್ ಒಗ್ಗೂಡಿ ಬರೆ
ಕ್ಷೇಮವಕ್ಕುಂ. ಜ್ಞಾನದ ಬುಗ್ಗೆಯಕ್ಕುಂ. ನೀಮಿದಂ
ಯೋಚಿಸಿ ತಿಳಿಯಿರ್ಯೆ. ನೀಮೆಲ್ಲರುಂ ಜ್ಞಾನವೇತ್ತರ್
ಮನುಕುಲದ ಸಂಪನ್ನರ್ ಎನಲೆಲ್ಲಿಯ ಜಿಹಾಸೆ?"
ಗುರುನಾಯಕನ ಮೊಗದಲಿ ಅರಳಿದ ಹೂನಗೆಯ
ಹರವಿನಲಿ ಮಂದಸ್ಮಿತಂ ಬೆರೆಸಿದ ವಟುಗಳ್
ಆತನೆದೆ ಕರಂಡಿಗೆಯಿಂದುಣ್ಮಿದ ನೀತಿ
ರೀತಿಗಳ ರಸಧಾರೆ ಪ್ರಾಣಪಾತ್ರದಲಿ ನೆರೆ

ಕುದಿದೆದ್ದುದಂ ಗಮನಿಸಿದರ್ ಗಂಭೀರತೆಯ
ಭಾವದಲಿ. ಮೈಮನಗಳ್ ರೋಮಾಂಚನಮಾದುವು
ಬೈಗುವೊಳ್ತಿನಲಿ ಬಾನೆಡೆಯ ಪಡುವಣದೊಳ್
ಮರ್ಬು ಚುಕ್ಕಿಗಳಾಗಿ ಮಿನುಗಿದುವರಿಲ್ ಅರಳಿ
ಮರಳಿ. ಸಾಯಂ ಸೊಬಗಿನ ಲಸತ್ ಪರಿವಾರಂ
ಮೆರೆದಿರ್ದುದು ಮನೋರಮಾ ಶೈಲಿಯಲಿ. ಅತ್ತ
ಒಡಲ್ದುಂಬಿದಾನಂದ ಮೋದದಲಿ ನೀರವ
ಶಾಂತಿಯಲಿ ತೋಷರಸವಂ ಹರಿಯ ಬಿಟ್ಟುದೋ
ಎನಲ್ ಸಿಳ್ಳಿರಿಯ ತೊಡಗಿತ್ತೊಂದು ಬೆಳ್ಮೈಯ್ಯ
ಕರ್ಪುಚುಕ್ಕಿಚುಕ್ಕಿಯ ಬಾನಕ್ಕಿ, ಬಳಿಯಿರ್ದ
ಸಿರಿಹೊನ್ನೆಮರದ ಹೊದರಿಂದೆ ಮಾರುಲಿಯಿತ್ತು
ಮತ್ತೊಂದು ಜೋಡಿಹಕ್ಕಿ. ಎಲೆಯಿರದೆ ಬೋಳಾದ
ಮುತ್ತುಗದ ಕೊಂಬೆಯಲಿ ಮಂಡಿಸಿದ ಅದೆ ಹಕ್ಕಿ
ಮಾರುಲಿಯಿತು ಸುಸ್ವರದಲಿ. ಬಕುಳ ಹೂಗಂಪು
ಹರಡಿರುತಿರೆ ಸೊಂಪಿನ ಕಂಪಿನ ತನಿ ತಂಪಿನ
ವೇಲೆಯಲಿ ಮೊಳಗಿತೊಂದು ಮಾರ್ದನಿ ಇಂಪಾಗಿ.
ಸಂಜೆಯ ಬನಿ ಬಲಿತು ಮಲೆತು ಕರ್ಪು ವರ್ಣಾಂತು
ನಿಶಾರಾಣಿಯ ಕರಕಮಲಗಳಿಗೊಪ್ಪಿಸಿತು ಪಗಲ್
ಗಾಲಿ ತಿರುಚಿ. ಮತ್ತೆ ಇರುಳ್ ಪಗಲಿಸುವನಕಂ
ಶಾಂತಿಮಯಮಾ ಪರಮಶಾಂತಿಯ ರಸಾಯನಂ.
ನರೇಂದ್ರಂ ಭಾವನಾವೇಶದಲಿ ಪೊಳ್ತುಪೊಳ್ತಿಗೆ
ವೇದಾಂಗಗಳಂ ಪರಿಬೋಧಿಸಿ, ಅನುದಿನಗಳ್
ವೇದೋಪನಿಷತ್ತಿನ ಶ್ಲೋಕಮಂ ತಾಂ ಹಾಡಿ
ಪ್ರತಿ ಪದಗಳ ಅಂತರಾರ್ಥವಂ ವಿವರಿಸುತೆ
ವೇದಕಾಲೀನ ಋಷಿ ಮಹೋದಯರ ಜೀವನ

ಸಂದೇಶಮಂ ಸಾರಿದ ಬಗೆಯಂ ವಿವರಿಸುತೆ
ಪ್ರವಚನಗಳಂ ಸಾರವತ್ತಾಗಿ ರಸವಂ
ಹರಿಸುವ ತೆರದಲಿ ವಿವರಿಸುವಂ ಗುರುಸೋದರ
ಬಂಧುಗಳ ತನುಮನಗಳಂ ತಣಿಸುವ ತೆರದಲಿ.
ಮೇಣ್ ಹೃನ್ಮನಗಳ್ ಅರಳಿ ಮಂದಾರಮಪ್ಪುವ
ಮನಮೋಹಕ ಶೈಲಿಯಲಿ. ಪುರಾಣ ಪ್ರಥಿತ
ಧರ್ಮಕಥೆಗಳನರುಹಿ ವಿವರಿಸುವನ್ ಮಧುರ
ಮೋಹನತರ ಭಾವದಲಿ. ಭ್ರಾತೃಭಾಯಿಗಳಂ
ಸೋಲಲೀಯದೆ ಸದಾಚಾರಗಳಲಿ ಮುಳುಗಿಸಿ
ಮೈದಡವಿ ನೆಚ್ಚಿನೆದೆಗೆ ಕೆಚ್ಚಿನ ಧಾರೆಯಂ
ಹರಿಸುವಂ. ನರೇಂದ್ರನಾಥದತ್ತನ ಮಹೋನ್ನತ
ನಾಯಕತ್ವ ವಟುಗಳ ಮನೋದಧಿಗೆ ಅಮೃತವಂ
ನವರಸಗಳ ರೂಪಿನಲಿ ಊಡಿಸಿ ಬಿಗಿಗಟ್ಟು
ಬಿಗಿಯಿತು ಸಂನ್ಯಾಸಿ ಜೀವನದ ಕಟು ಕಠಿಣ
ಹಾದಿಗೆ. ನರೇಂದ್ರಂ ಸರಳ ಸುಂದರ ಭಾವದ
ಮೇಣಧಿಕ ಹಿತವಾದದ ಸಂಗೀತೆಯೊಂದಂ
ಹಾಡಿದನ್ ತರುಣವರ್ಗದ ಮನ ಮಿಡಿಯುವಂತೆ,

"ಕ್ಷಣಶಃ ಕಣಶಶ್ಚೈವ
ವಿದ್ಯಾಮರ್ಥಂ ಚ ಸಾಧಯೇತ್ ।
ಕ್ಷಣತ್ಯಾಗೇ ಕುತೋ ವಿದ್ಯಾ ಕಣ
ತ್ಯಾಗೇ ಕುತಃ ಸುಖಂ ॥"

ನರೇಂದ್ರನ ದೃಷ್ಟಿಯಷ್ಟಿಯದು ಹರಿಯಿತು ಗೋಡೆ
ಗೂಡಿನೆಡೆಗೆ. ಅಲ್ಲೊಂದು ಕಿರಿಯ ಕುಡಿಕೆಯುಂ
ಕಣ್ಗೆಸೆದುದು. ನೋಡೆ, ಅದರ ಮೇಲೆ ಮಘಮಘಿಪ
ದಳಬಿರಿದರಳಿದ ಕುಸುಮ. "ಇದೇನ್ನೈ?" ಎನಲ್ಕೆ

ರಾಮಕೃಷ್ಣಾನಂದರ್ ಪ್ರಸನ್ನ ಮನದಲಿ
ತಾವ್ ಗುರುವಿನ ಭಸ್ಮಾಸ್ಥಿಯಲೊಂದು ಭಾಗಮಂ
ಉಳಿಸಿರ್ದುದಂ ನೆನೆನೆನೆದು ವದನಮಂಡಲದ
ಮೇಲೆ ವಿಷಯ ಸೂಚಿಯ ಮುಗುಳುನಗೆಯಂಬರಿಸಿ
ನಗೆಗಡಲಲಿ ಮುಳುಂಗಿ ತೇಲಿದರ್ ಸಂತಸದ
ಸಾರವನುಂಡು. ತರುವಾಯಿ, ಶಾರದಾನಂದರ
ಮುಖವಾಣಿ ಹೊರಬಿಳ್ದುದು ಪ್ರಸನ್ನ ಮನದಿಂ,
**"ಭಕ್ತಿ: ಕಿಂ ನ ಕರೋತ್ಯಹೋವನ ಚರೋ
ಭಕ್ತಾವತಂ ಸಾಯತೇ"** ಎಂಬೊಂದು ಮಾತಂ
ಅರಿದು ಪರಿಭಾವಿಸಿದೊಡೆ ಎನಿತೆನಿತು ಸಾಜಂ?
  ನರೇಂದ್ರನಾಥಂ ಸಿತಸ್ಮಿತವರಳಿಸಿ ನುಡಿದಂ,
  "ಭ್ರಾತೃಭಾಯಿಗಳೆ, **ಬ್ರಹ್ಮಸತ್ಯಂ ಜಗತ್ ಸ್ಫೂರ್ತಿ:"**
ಎಂಬುದರೊಳ್ ನೆಚ್ಚಿಟ್ಟು ಕೆಚ್ಚಿಟ್ಟು ನಡೆದೊಡೆ
ಕೊರಮಿಲ್ಲವೆಮ್ಮ ನಿತ್ಯ ಸ್ಫೂರ್ತಿಗೆ. ಇನ್ನೆಬರಂ
ಎಮಗೊದವಿದ ಸುಖದು:ಖಗಳ ಘಾತ ವಿಗ್ರಹಂ
ಕಡೆವಂತೆ ಕಡೆದುವೆಮ್ಮ ವ್ಯಕ್ತಿತ್ವಂ. ಮುಂದೆ
ಆವಾವ ಎಡುರುತೊಡರುಗಳ್ಳೆದೊಡಮದನೆಮ್ಮ
ಮತಿಖಡ್ಗವ ಬೀಸಿ ಒಗೆದು ಝಾಡಿಸುವ ಧೈರ್ಯ
ಸ್ಥೈರ್ಯ ಬೆಳೆದುದೆಮ್ಮ ಎರ್ದೆ ಗುಂಡಿಗೆಯೊಳ್. ದೈವ
ಸಹಾಯವೊದವಿದೊಡೆಮಗೆ ಸಾಲ್ಗುಂ. ಗುರುದೇವ
ಪರಮಹಂಸರ ಕೃಪೆ ಮತ್ತಮಾ ಶ್ರೀಮಾತೆ
ಶಾರದಾ ಮಣಿದೇವಿಯವರ ಆಶೀರ್ವಾದ
ಸರ್ವದಾ ಎಮ್ಮಮೇಲಿರ್ಝುಂ, ಎನಲ್ಕೆಮ್ಮ
ಸಾಧನೆಯದೊಂದೆ ಮುಂದಿಹ ಮಾರ್ಗ. ಏನೆಂಬಿರಿ?
  ಆಗಳೆಲ್ಲರುಂ ತಲೆದೂಗಿ ಸೊಗದಿಂ ತೋಷ

ಭಾವದಿಂ ಸುಸಮ್ಮತಿಯಂ ಸೂಸಿದರ್, ಇನಿತು
ಇರಿಸುಮುರಿಸಿಲ್ಲದೆ ಮನದಿ. ನರೇಂದ್ರನ ಮನಂ
ತುಷ್ಟಗೊಳ್ಳುತೆರದಿ. ಅವನೊರ್ಮೆ ಸುವಿಜ್ಞಾನಿ.
ಇನ್ನೊರ್ಮೆ ಭಕ್ತಶಿಖಾಮಣಿ, ಮತ್ತೊಮ್ಮೆ ಸೇವೆಯೆ
ಚರಮ ಲಕ್ಷ್ಯವೆಂಬುವ ಪರಮ ಸೇವಕರ ಸೇವಕ.
ಮಗದೊರ್ಮೆ ಧ್ಯಾನದಿ ಸಮಾಧಿವೆರಸಿ ಉನ್ನತ
ಆದರ್ಶವಾಂತ ಘನ ವೇದಾಂತಿ. ದಿನದಿನಂ
ಸಾಧುಸಂತರ ವೇದಾಂತಿಗಳ ಸಲಹೆ ಪಡೆವಂ.
ಯೋಚಿಸಿ ಮನಮಥಿಸಿ ಅಧಿಕಾರ ವಾಣಿಯ ಖಡ್ಗ
ಬೀಸುವಂ. ನೆಚ್ಚು ಕೆಚ್ಚುಗಳ ಉತ್ಸಾಹದಿಂ,
ಮುಂದೇನುಮೇನೆಂದು ಯೋಚಿಸುವುದರೊಳ್ ದಿನ
ಉರುಳುರುಳಿ ಮರುದಿವಸದಾವರ್ತನಕ್ಕೆ ಸಿಲ್ಕಿ
ಪುರಾತನಮಾದಪುದು ಬರ್ದಿಲದ ಚಿನ್ತೆಯುಂ
ಏನಿಲ್ಲದೆ. ಗುರುದೇವನ ಗೃಹೀ ಭಕ್ತರಾದ
ಬಲರಾಮವಸು, ಗಿರೀಶ ಚಂದ್ರ ಘೋಷ್, ನಾಗ
ಮಹಾಶಯ, ಸುರೇಂದ್ರನಾಥ ಮಿತ್ರ, ಮಾಸ್ಟರ್
ಮಹಾಶಯ ಮೊದಲಪ್ಪ ಹಿರಿಯರೈದು ಕಿರಿಯರ
ಯೋಗಕ್ಷೇಮಮಂ ಅರಿತು ಶುಭ ಹಾರೈಸಿ ನಿಚ್ಚ
ಅನಿತಿನಿತು ಆರ್ಥಿಕ ಸಹಾಯಮಂ ನೀಡುವರ್
ಸಮಯೋಚಿತವಾಗಿ. ನರೇಂದ್ರನ ಅಧಿಮಾನಸ
ವಿದ್ವತ್ಪೂರ್ಣ ಮಧುರ ಮನೋಜ್ಞ ಸಂಭಾಷಣೆಯು
ಹಿರಿಕಿರಿಯರಂ ಆಕರ್ಷಿಪುದು ಪುಷ್ಪಕೋಟಿಯು
ಮಧುವನಿತ್ತು ಮಧುಕರಿಗಳನಾಕರ್ಷಿಸುವಂತೆ!
    ಇಂತಿರುತಿರೆಯಿರೆ ಸಂನ್ಯಾಸಿ ಭ್ರಾತೃಗಳಲೋರ್ವ
ಪ್ರೇಮಾನಂದರ ಪ್ರಿಯ ಜನನಿ ಇರುತಿರ್ದೊಂದು

ತೋಂಟದಾಣಂ ತಣ್ಪುಗುವ ತಣ್ಣನೆಯ ಗ್ರಾಮ
ರಾಜ್ಯಂ. ಅದರ ಒಡತಿಯುಂ ಕಾರುಣ್ಯಮಯೀ
ಸುಹೃದಯಿ ಎನಲವಳ್ ಪ್ರಶಾಂತಿಯಂ ಬಯಸಿ
ಆರಾಧಿಸುವ ಮಾನಿನಿ. ಸರ್ವತ್ರ ಸದಾ ಶಾಂತಿ
ಸಮುದಯದಲಿ ಬದುಕಿ ಬಾಳಿ ಶಾಂತಿಯೆ ತಾನಾದ
ಸದ್ಗೃಹಣಿ. ವಟುಗಳ ಬವಣೆಯರಿತ ದಯಾಮಯಿ.
ಅಂದಿನಿಂ ಶ್ರೀರಾಮ ಕೃಷ್ಣ ಪರಮಹಂಸರ
ಗೃಹೀ ಭಕ್ತೆಯಿರುತಿರ್ದು ವಟುಗಳ ಕ್ಷೇಮವಂ
ಹಾರೈಸಿದ ಪರಮ ಸ್ವಾಮಿನಿ. ತನ್ನೊಡಲ ಕೀರ್ತಿಕುಡಿ
ಪ್ರೇಮಾನಂದರ ಕೂಡೆ ಎಲ್ಲ ವಟುಗಳಿಗೊಂದು
ಮಧುರ ಆಹ್ವಾನಮಂ ಕಳಿಪಿದಳ್ ಆಂಟ್ಪುರಕೆ.
ಪತ್ತನದ ಗದ್ದಲ ಗಡಿಬಿಡಿಗಳ ಕಿರಿಕಿರಿಯ
ಮಾಲಿನ್ಯದಿಂ ದೂರೈದು ಪಚ್ಚ ಪಸುರಿನ ನಲ್
ದಾಣದಲಿ ನೆಲೆಗೊಂಡ ಆಂಟ್ಪುರಂ ಗ್ರಾಮೀಣ
ಜೀವನದ ನಿಜ ಶಾಂತಿಧಾಮ. ಗದ್ದೆಹೊಲಗಳ
ಸಮತಟ್ಟಿನ ಭೂವಲಯಂ. ನಿಚ್ಚ ಪಸುರಾದ
ಗಿಡುಮರನಿಡುಬಳ್ಳಿಗಳ್ ವಿರಳಮಿರುತಿರುತಿರೆ
ಹರವಾಗಿ, ಪಸುರಾಗಿ ಮೈದಳೆದು ಸುಸುಂದರ
ಗ್ರಾಮ್ಯಬದುಕಿಂಗೆ ಕಳೆಗೊಟ್ಟ ಭೂವಲಯಮಾ
ಆಂಟ್ಪುರ ಸುದೇಶಂ. ಜನನಿಯ ಆಹ್ವಾನ ಮನ
ಮುಟ್ಟಿ ಸೆಳೆದಿರೆ ಮೃದುಮಾಧುರ್ಯ ಸವಿತುಂಬಿ,
ಪ್ರೇಮ ರಾಗಾನುರಾಗದ ಸಿಹಿರಸವೆ ತುಂಬಿ,
ಪೊರಮಟ್ಟರೆಲ್ಲ ನರೇಂದ್ರನಾಥನೊಡಂ ಗೂಡಿ.
ಆಂಟ್ಪುರ ಪಸುರ್ಗಡಲೆನೆ ಪಸುರುಕ್ಕುವ ಗದ್ದೆ
ಹೊಲಗಳ ಸುಸುಂದರತರ ಪಚ್ಚ ಪಸುರುಕ್ಕುತಿಹ

ವನಸ್ಥಲಿ. ನಿಶ್ಶಬ್ದ ನೀರವ ನಿರಾತಂಕ
ಮಯಮಾದ ಶಾಂತ ಪ್ರಶಾಂತ ತೋಂಟಂ.
ಅಣುಗರೆಲ್ಲ ಬೇಲಿಯ ಉಣುಗೋಲ್ ದಾಂಟಿ ಹೊಲ
ಗದ್ದೆಗಳ ಹರವಂ ಹರಿಹಾಯ್ದು ಮನೆಯ ಬಳಿಗೆ
ಪುರುಪಿನಿಂದೈದರ್. ಬೆಳ್ಳಿಯ ಬೆಳ್ಳವಿರ್ ಬೆಳಗಿದ
ವೃದ್ಧ ವದನಂ ಬೆಳ್ಳಿಯ ಪ್ರಭಾಳೆಯ ಮಧ್ಯೆ
ಸಿತಸ್ಮಿತವಂ ಅರಳಿಸಿದ ಮುದ್ರೆಯಂನೊತ್ತಿ
ವಟುಗಳಿಗೆ ಸ್ವಾಗತ ಬಯಸಿದಳಾಗಳಿಗೆಯಲಿ.
ಧವಳ ಕಾಂತಿಯ ದುಕೂಲವಂ ಧರಿಸಿದ ನೀರೆ
ಶ್ರೀ ಜನನಿಯಾಗೆಸೆದಳ್ ನೋಳ್ಪ ಕಣ್ ನೋಟಕೆ.
ಕೈಕಾಲ್ಗೆ ನೀರಿತ್ತು ನಡುಮನೆಗೆ ಬರಮಾಡಿ
ಕರ್ಬಿನ ಸಿಹಿರಸವ ಕುಡಿಯಲಿತ್ತು ತಣಿಸಿದಳ್
ತೃಷೆಯೊಡಲ ದಾಹಕೆ ತನಿರಸವನೂಡಿಪೊಲ್.
ನಿಶ್ಶಬ್ದ ನೀರವ ನಿರಾತಂಕಮಯವಾದ
ಗ್ರಾಮೀಣ ಸಂಸ್ಕೃತಿಯ ಶಾರದೆಯ ದರ್ಶನಂ
ಚೆಲುವಾಯ್ತು. ತನಿಯುಣಿಪ ಪ್ರಶಾಂತ ನಿಕೇತನ
ಸ್ವರ್ಗೀಯ ಕುಟಿಯೊ ಎನಲ್ ಶಾಂತಿಧಾಮವಾಯ್ತು.
ಏಗಳುಂ ಪ್ರೇಮಾನಂದಂ ಗೆಳೆಯ ವೃಂದಮಂ
ತೋಂಟದ ವಲಯದೋಳ್ ಚಾರಣಗೈಸೆ ಮುದದಿ
ಕರೆದೊಯ್ವನ್, ಪೆರ್ಮರಗಳ ತಣ್ಣೆಳಲ್ ತಣ್ಪು
ತನುಮನಗಳಿಗೆ ಪೆಂಪು ಬೀರುತಿರೆ ಅಲ್ಲಲ್ಲಿ
ನಿಂತು ಕುಳ್ತು ಮಾತಾಡಿ ಭವಿಷ್ಯದ ವಿಚಾರ
ವಾಹಿಯಲಿ ಮುಳುಗೇಳುವರ್; ವೀರ ಗೋಷ್ಠಿಯಲಿ
ವೀರೋಚಿತವಾದ ಭವಿತವ್ಯಕೆ ಅಡಿಗಲ್ಲು
ಇಡುವೊಡೆ ವಿಚಾರವಿನಿಮಯಮಾದಪುದು ತಮ್ಮ

ತಮ್ಮೊಳ್ ಬರಿಗೈಯಲಿ ಭವ್ಯ ಭವಿತವ್ಯವಂ
ನಿರೂಪಿಸುವ ಯೋಜನೆಯು ಸುರೂಪಗೊಳುತಿರ್ದು
ಉತ್ಸುಕ ಮನರಾದರ್ ತರುಣರ್. ಮನೋಜನಿತ
ಧೈರ್ಯಸ್ಥೈರ್ಯ ಸ್ವಪ್ರಯತ್ನ ಮಾತ್ರಮೆ ತಮ್ಮಗಳ
ಸಾಧನಾ ಶೀಲತೆಯ ಖಡ್ಗ. **"ಭಾರತ ತೈಲ**
ಪೂರ್ಣ ಪ್ರಜ್ವಾಲತೋ ಜ್ಞಾನಮಯ ಪ್ರದೀಪ"
ಎಂಬವೊಲ್ ಪ್ರಜ್ಞಾನ ಮಂಡಲಂ ಬೆಳಬೆಳಗಿ
ಉಜ್ವಲಿಸಲುರೆ ಪಣವ ತೊಟ್ಟರೆಲ್ಲ ತದೇಕ
ಭಾವನೆಯಲಿ. ಗುರುದೇವನ ಧ್ಯೇಯೋದ್ದೇಶಮಂ
ನಿರೂಪಿಸಿ ಸತ್ ಸಂಘಮಂ ಸ್ಥಾಪಿಸುವ ನಿಷ್ಠೆ
ಬೆಳೆದತ್ತು ಉದ್ದಂಡವಾಗಿ. ಭಾರತ ಜನನಿಯ
ಭವಿಷ್ಯ ಪರಮ ಸನಾತನಧರ್ಮದ ಭವಿಷ್ಯ
ಸಮಾಜದ ಭವಿಷ್ಯ ಸುಸಂಸ್ಕೃತಿಯ ಭವಿಷ್ಯ
ವೇದವೇದಾಂಗಗಳ ಭವಿಷ್ಯ ಇತಿ ಎಲ್ಲಂ
ಗುಡಿಗೋಪುರವೆತ್ತು ಉದ್ದಂಡ ರೀತಿಯೊಳ್
ಭಯಾವಹದ ಸ್ವರೂಪದಲಿ ನಿಂದಿರಲ್ ಆ
ಎಲ್ಲವಂ ಏಕತ್ರ ನಿರ್ವಹಿಸಲ್ ತಕ್ಕಿನ
ವ್ಯಕ್ತಿಯೆನೆ ಗುರುನಾಯಕ ನರೇಂದ್ರನೆಂಬೊಂದು
ದೃಢ ನಿರ್ಧಾರ ಯುವ ವಟುಗಳಿಗೆ. ನಾಯಕನ
ಪ್ರಾಣಪಾತ್ರದಲಿ ಕುದಿಗೊಂಡ ನೆತ್ತರಧಾರೆ
ಸಲ್ವುದೇ ವೀರಪೂಜೆಗೆ. ಅವಂ ಪುಟ್ಟಿದುದೇ
ವರವಾಗಿ ಕಲಿಯಾಗಿ ಎಂಬುದಂ ಗುರುಭಾಯಿ
ಸೋದರರ್ ಬಲ್ಲರ್. ಅದೆಲ್ಲರ್ಗೆ ಸ್ಫೂರ್ತಿನೆಲೆ.
    ನರೇಂದ್ರನಾಥಂ ತನ್ನಲಿಯೇ ತರ್ಕವಿತರ್ಕದ
ಚಕ್ರದಲಿ ಸಿಲ್ಕಿರ್ದೊಲ್ ವಿಚಾರಾಂತ ಖಡ್ಗದ

ಅಲುಗಿನಲಿ ಹರಿಯಬಿಟ್ಟಂ ಚಿಚ್ಛಕ್ತಿಯಂ ಭಕ್ತಿ
ಭಾವರಾಗದಲಿ ಹೃದಯಹಾರೀ ಸಂಗೀತೆ
ಹರಿದುದು ತನುಮನ ತುಂಬಿ ದನಿತುಂಬಿ.

"ತಸ್ಮಾದ್ಧರ್ಮಂ ಸಹಾಯಾರ್ಥಂ
ನಿತ್ಯಂ ಸಂಚಿನುಯಾಚ್ಛನೈಃ ।
ಧರ್ಮೇಣ ಹಿ ಸಹಾಯೇನ
ತಮಸ್ತರತಿ ದುಸ್ತರಂ ॥"

ಕೇಸರಿಯ ಶಾಬಕಂ ಕಣ್ಮುಚ್ಚಿ ಮನಮುಚ್ಚಿ
ಚಿಂತನದ ಮಂಥನ ಕಿಡಿಕಲ್ಪವೆ ಮುಚ್ಚಿ ತಾಂ
ಬರೀ ಧರ್ಮಮೋಹಕೊಳಗಾದಪನೆ ? ಮುನ್ನಿನ
ತಾರುಣ್ಯದ ಬಟ್ಟೆ ಕಳಚಿತು. ಮನಃಕಲ್ಪದಲಿ
ಕುದಿದೆದ್ದ ವೀರಾವೇಶದ ಪೊಗರ್ ಸೂಸಿದುವು
ಜ್ಯೋತಿರ್ಕಿರಣಗಳ್ ಥಳಥಳಥಳಿಪಂತೆ. ಅಹ
"ಶರೀರ ಮಾದ್ಯಂ ಖಲುಧರ್ಮ ಸಾಧನಂ"
ಮನತುಂಬಿದ ಪರಿಯಲಿ ಯೋಗಾಸನಾಭ್ಯಾಸ
ಅಂಗಸಾಧನೆ ಧ್ಯಾನ ರೂಢಿಯಂ ತಪ್ಪಿಸಂ.
"ಉತ್ತಿಷ್ಠತ ಜಾಗ್ರುತ ಪ್ರಾಪ್ಯವರಾನ್ ನಿಬೋಧತ"
ಎಂಬೊಂದು ಪರಮೋಚ್ಚ ಸಂದೇಶಮಂ ಸಾರಿ
ಸಾರಿ ಹೇಳುತ್ತೆ ಜಡ ನಿದ್ರಿತ ಮನುಕುಲಮಂ
ಜಡಿ ತಟ್ಟಿ ಮುಟ್ಟಿ ಕಿಟ್ಟಿ ಎಬ್ಬಿಸಿ ಸಾಧನಾ
ಸತ್ಪಥಂ ತೋರ್ದು ಬಾಳ್‌ಬೆಳಗುವ ಮಹದ್
ಚಿಂತನೆ ಸದಾ ಮನದೊಳಿರಲ್ ಚಿಂತನೆಯಲ್ಲಿ
ಮುಂದು, ತರ್ಕವಿತರ್ಕದಲಿ ಮುಂದು, ಸನಾತನ
ಧರ್ಮ ಚಿಂತನೆಯಲ್ಲಿ ಮುಂದು ಯೋಧಗತಿಯಲಿ
ಮುಂದು, ಗುರುದೇವನಾ ಜ್ಞಾನ ಬಂಢಾರಮೇ

ಅಹವಾಹನೆಯಾದುದೊ ಎನಲ್ ಸಾಧನ ಸೂತ್ರ
ಪಿಡಿದವರೊಳ್ ಮುಂದು; ಎಂದೆನಲ್ಕೆ ನರೇಂದ್ರನಾ
ಸಾಧನೆಯ ಪ್ರಥಮಾಂಕವೆ ಶುಭ್ರ ಸುಂದರಂ;
ಸ್ವಚ್ಛ ಪರಿಜ್ಞಾನಸುಂದರಂ. ವರ ದಾರ್ಶನಿಕ
ಸುಂದರಂ. ವೇದಾಂತ ಸುಂದರಂ. ಭರತತ್ವ
ಸುಂದರಂ. ಸತ್ಯಾರ್ಥ ಸುಂದರಂ. ಲೋಕಹಿತ
ಸುಂದರಂ ಎಂಬೆಲ್ಲ ಅಮೋಘತಮ ಸುಂದರ
ವಾರಾಶಿಯಲಿ ಮಿಂದು ಪುಟಗೊಂಡ ವ್ಯಕ್ತಿತ್ವ
ಬೆಳಬೆಳಗಿ ತೊಳಗಿತೊಳಗಿ ಧ್ರುವನಕ್ಷತ್ರವೇ
ತಾನಾಯ್ತು ಭಾರತ ನಭೋದೇಶ ನೀಲಿಯಲಿ!
ಆಂಟ್ಪುರದೊಳ್ ಕಳೆದ ದಿನಮಾನಂ ಭಾವನಾ
ವೇಗಕ್ಕೆ ಸೊಗಮಾಯ್ತು, ಚಿತ್ರಭಾನುಗ್ರಸ್ತ
ಸುಯೋಗದ ಪೆಂಪು ಸೊಂಪು ಇಂಪುಗಳೊತ್ತೊತ್ತಿ
ಗಿಡುಸಸ್ಯರಾಜಿಯಲಿ ಪೊಸದಳಿರ್ ಮೊಳೆಮೊಳೆತು
ಮಿಡಿಮೊಗ್ಗು ಮೂಡಿ ಪೂತು ದಳಗಳ್ ಬಿರಿಬಿರಿದು
ಕಾನನೋದ್ಯಾನ ಮೆರೆದತ್ತು ಸುಮಸೌರಭವ
ಬೀರಿ. ವರ್ಣವರ್ಣಾಂತ ಕುಸುಮಾವಳಿಯಿಂದೆ
ಸಿಂಗರಂಗೊಂಡು ನಳನಳಿಸಿರೆ ಮನಮೋಹಕ
ಶೈಲಿಯಲಿ, ಬದುಕಿನ ಭಾರವೇ ಹಗುರಾಯ್ತು.
ಮುಂದಿನ ಪರಮೋದ್ದೇಶದ ಗುರಿಯ
ಮಹಾ ಮಂಟಪಕೆ ಅಡಿಗಲ್ ಇಡುವ ಯೋಜನೆಯು
ಸಿದ್ಧವಾಯ್ತು ಎಲ್ಲರ ಮನವೊಪ್ಪಿ ಏಕತ್ರ
ರೀತಿಯಲಿ.
ಒರ್ದಿನಂ ಪೊಳ್ತು ಮೂಡುವ ಮುನ್ನ
ನರೇಂದ್ರಂ ಪ್ರಾಂಗಣದ ಅಂಚಿನಲಿ ನಿಂದತ್ತಲ್

ನೋಡುತಿರೆಯಿರೆ ಮೂಡಲ್ ಪಣೆಯಲಿ ಪನಿಕಿಡಿಯ
ಮಾಳ್ಕೆಯಲಿ, ತಳತಳಿಸಿತೊಂದು ಬೆಳ್ಳಿಯ ಚುಕ್ಕಿ.
ನೋನೋಳ್ಪ ಕಣ್ಣಾಲಿಗಳ್ ಚಲಿಸದಾದುವಾ
ಎಡೆಯಿಂದೆ. ನೀಲ ಭಿತ್ತಿಯ ತಟಾಂತ ಸೀಮಾ
ದೇಶದಲಿ ತುಳುತುಳುಕಿತು ಚೆಂಬೆಳಕಿನ ಮಿಸುನಿ
ಛವಿ; ನೇಸರಿನ ಸುಖಾಗಮನಮಂ ಸಾರುವೊಲ್.
ಒಡನೊಡನೆ ಬೆಳ್ಳಿಯ ಹಿರಿ ಚುಕ್ಕಿ ಅಳಿದು ಮಳಿದು
ಕಣ್ಮರೆಸಿದುದು ನೋಳ್ಪುವಾಸೆಯ ಕಣ್‌ಛವಿಗೆ
ಬೆರಳ್ ಚುಚ್ಚಿ, ಮನೆಯೊಡತಿಯುಂ ಕರೆಯಲೈತರೆ,
ಪಿಮ್ಮರಳಿದುದು ದೃಷ್ಟಿ. "ನೀನಿಲ್ಲಿ ಏಂಗೈದಪೆ
ಮಗನೆ? ಎಲ್ಲರ್ ಕಾದಿರ್ಪರ್ ನಿನಗಾಗಿ ಎಲೆಯ
ಮುಂದೆ ಕುಳಿತು."
ಮುಗಳ್ ನಗೆಯ ಉತ್ತರಂ ನೀಡಿ
ಪಿಂಬಾಲಿಸಿದನ್ ಒಳಮನೆಗೆ. ಗುರುಭಾಯಿಗಳ್
ಇರ್ದರ್ ಕಣ್ ನೋಟವ ಇತ್ತಲೇ ನೆಟ್ಟಂತೆ.
ಅವಲಕ್ಕಿ ಮೊಸರಿನ ಉಪಹಾರವ ನೀಡಿದಳ್
ಜನನಿ. ಜೊತೆಜೊತೆಗೆ ಪುಡಿಬೆಲ್ಲವಂ ಏಲಮಂ
ಇತ್ತಳ್ಬೆರಸೆ. ತರುಣರ್ ಗುರುನಾಯಕನೊಡಗೂಡಿ
ಕೈಬಾಯ್‌ಗಳ ಕಾಳೆಗ ನಡೆಸಿದರ್ ಸರಸದ
ದಾರೆಯಂ ಹರಿಸಿ. ಗುರುನಾಯಕ ನರೇಂದ್ರನುಂ
"ಭ್ರಾತೃಭಾಯಿಗಳೆ, ಕೇಳಿ! ಯುಗಯುಗಗಳಿಂದಾವ್
ಘೋರಾತಿಘೋರ ತುಳಿತಕ್ಕೆ ತುತ್ತಾಗಿ ಹೆರರ
ಅಸೂಯೆಯಲಿ ಉರಿದುರಿದು ಬೇಯುತೆ ಕಿಚ್ಚಾಗಿ
ಹಾಳಾಗಿ ಹೋಪುದಂ ನಾವರಿಯದುದು ನಮ್ಮ
ಕೀಳರಿಮೆಗೆ ಒಡಲ್ಗಿಚ್ಚಿಗೆ ಅನಾರ್ಯತೆಗೆ ದಿವ್ಯ

ದರ್ಪಣಂ. ಪರರ ಸಿರಿವಂತಿಕೆಯೆಮಗೇಕಿಲ್ಲ?
ದೇವರ ಪೂಜೆಯೊಳ್ ಎಮಗೇಕಿಲ್ಲ ಪ್ರಾಧಾನ್ಯ?
ಈ ವಗೆವಗೆಯ ಅನಾಗರಿಕ ದಾಸ್ಯಕೂಪದಿ
ನಾವಿರ್ಪುದಂ ಅರಿಯಿರಾ? ದ್ವೇಷ ಮಾತ್ಸರ್ಯ
ಅಳಿಸಿ, ಶುನಕನೊಲ್ ಪರಸ್ಪರ ಗುರ್‌ಗುರ್
ಎಂಬುವ ಬೊಗಳುವ ಚಟ ಬಿಟ್ಟಲ್ಲದೆಲ್ಲಿಯದೈ
ಸಂಜೀವನಾ? ಸದುದ್ದೇಶಕ್ಕಾಗಿ ಎದ್ದು ನಿಲ್ಲಿರೈ!
ಸತ್ಪಥದೊಳ್ ಸತ್ಯದ ನಿಷ್ಠೆಯಲಿ ಮುಂದಾಗಿ!
ನಿರ್ಭಯತೆ ನಿರಾತಂಕತೆ ಇರಲಿ, ಗುಲಾಮತನ
ಹಣೆಯಮೇಲೊತ್ತಿದ ಬಲು ಮತ್ಸರದ ಮುದ್ರೆಯ
ತೊಳೆದು ಬಿಡಿ. ಮತ್ಸರ, ಅಕಾರ್ಯ ಬೇಡವೆಬೇಡ.
ಅಬಲರೆಡೆಗೆ ನಿಮ್ಮ ನೆರವಿನ ಹಸ್ತ ಸರ್ವತ್ರ
ಸದಾ ಸಿದ್ಧವಿರಲಿ! ಪ್ರತಿಯೋರ್ವ ವ್ಯಕ್ತಿ ಅಥ
ಪ್ರತಿಯೊಂದು ರಾಷ್ಟ್ರವುಂ ಶ್ರೇಷ್ಠಮಿರೆ ಈ ಮೂರು
ಸಂಗತಿಗಳ ಅಗತ್ಯಮಿರ್ಪುದು. ಒಂದೋ, ಒಳಿತಿನ
ಸಾಮರ್ಥ್ಯದಲಿ ಅಚಲ ಶ್ರದ್ಧೆ, ಎರಡೊ, ಅಸೂಯೆ
ಸಂಶಯಗಳ ನಿರ್ಮೂಲನೆ. ಮೂರೊ, ಸತ್ಕಾರ್ಯ
ಕರ್ತರಿಗೆ, ಸಜ್ಜನರಿಗೆ ಸಹಾಯ. ಇವುಂ ಬಲು
ಅಗತ್ಯವೆಮಗೆ. ಅದ್ಭುತ ಬುದ್ಧಿಶಕ್ತಿಯುಮಿರ್ದು,
ಸಕಲ ಗುಣ ಧರ್ಮಗಳಿರುತಿರ್ದು ಹಿಂದೂ ರಾಷ್ಟ್ರ
ಒಡೆದು ಹೋಳಾದುದೇಕೆ? ಇದಕೆನ್ನಯ ಉತ್ತರ
ಅಸೂಯೆ! ಈ ಹತ ಭಾಗ್ಯ ಹಿಂದೂ ಜನಾಂಗದಲಿ
ಉಳ್ಳನಿತು ಪರಸ್ಪರ ಮಾತ್ಸರ್ಯ ಇನ್ನೆಲ್ಲು
ಇರಲಾರದು ಎನಿಪುದೆನಗೆ. ಈ ಅವಗುಣಗಳ್
ಸಂಘಟನೆಗೇ ಮಿತ್ತು! ಇನ್ನೆಬರಮಾವೆಲ್ಲ

ಗೈದುದೇಂ? ಭೂತವಂ ನೆನೆದು ಭಯ ಪಡುವುದೇಂ
ಸಲ್ಲ. ವರ್ತಮಾನಮೆನುವ ಕಾಲವೇ ಇಲ್ಲ!
ಎಚ್ಚರೆಚ್ಚರ! ಸೂಜಿಮೊನೆ ಚುಚ್ಚುವನಿತರೊಳ್
ಉರುಳಿ ಜಾರಿಪೋಪುದದು. ಇಂ ಉಳಿವುದೆಂದೊಡೆ
ಭವಿಷ್ಯ! ಅದುವೆ, ಸತ್ಪಥಕೆ ಸಂಜೀವನಕೆ ಗತಿ!

“ಯೂಯಂ ತತ್ ಸತ್ಯಶವಸ ಆವಿಷ್ಕರ್ತ
ಮಹಿತ್ವನಾ ವಿದ್ಯತಾ ವಿದ್ಯುತಾ ರಕ್ಷಃ ॥”

ಆಂಟ್ಪುರದ ಮಾತಾಮಯಿಯ ಕುಟೀರದಲಿ ಹಿಮ
ವೊತ್ತಿ ಚಳಿಯುವೆರ್ಚೆ ಗಡಗಡ ನಡುಗುತಿರುತಿರೆ
ತರುಣ ಸಂನ್ಯಾಸಿಗಳ್ ಮುಂಜಾವದೊಳ್ ಎಳ್ದು
ಪ್ರಾತರ್ವಿಧಿಯಂ ತೀರ್ಚಿ ಅಂಗಣದಂಚಿನಲಿ
ಒಣಕಾಷ್ಠಗಳನಿಡುಕಿ ತರಗೆಲೆಯ ನರಸರಸಿ
ಹೆಕ್ಕಿತಂದು ಪೇರಿಸಿ ಅಗ್ಗಿಯಂ ಉರಿಸಿದರ್.
ಅಗ್ಗಿಯಲೆ ಕೆಮ್ಮನೆ ಕಡು ಕೆಂಪಾಗಿ ಕೆಂಗಲಿಸಿ
ಕೆನ್ನಾಲಿಗೆಗಳ್ ಚಾಚಿ ಚಾಚಿ ಉರಿಉರಿಯುತೆ,
ಚಟಿಲ್ ನಿಟಿಲ್ ಕಿರು ಸದ್ದು ಮೂಡಿಸಿತುರಿ ಹೊತ್ತಿ.
ಲೇಲಿಹ್ಯಮಾನಮಾದ ಜ್ವಾಲಾಕುಡಿಗಳಿಂ
ವಿಜೃಂಭಿಸಿತು ಕಿರುವಗೆಯಾ ಕುಡಿವೆಂಕೆ. ಆ
ಸುಸಮಯದೊಳ್ ಸುತ್ತುವರಿದು ಕುಳಿತ ಮಿತ್ರರಂ
ಕುರಿತು ನುಡಿದನಾ ಯುವನಾಯಕ ನರೇಂದ್ರಂ,
“.......ಮಸಲರಿಲ್ಲಿಗೆ ಎನಿತು ಸೈನಿಕರಂ ಕರೆತಂದರ್?
ಇಲ್ಲಿಗೈದ ಬಿಳಿಯರ ಸಂಖ್ಯೆಯಾದರೆನಿತು?
ಕೇವಲ ಕೆಲವೇ ಕೆಲವು ರೂಪಾಯಿಗಳಿಗಾಗಿ
ದೇಶ ಬಾಂಧವರ ಕೊರಳ್ ಕೊಯ್ಯುವ ಲಕ್ಷಾವಧಿ
ಕುಕರ್ಮಿಗಳ್ ಭಾರತದೊಳಲ್ಲದೆ ಇನ್ನೆಲ್ಲಿ

ಸಿಕ್ಕುವರ್? ಏಳುನೂರು ವರ್ಷಗಳ ಮುಸಲರ
ಆಳ್ವಿಕೆಯಲಿ ಆರುಕೋಟಿ ಮುಸಲರ್ ಮತ್ತಮಾ
ಎರಡುನೂರು ವರ್ಷಗಳ್ ಕ್ರಿಸ್ತ ಜನರ್ ಹಿಡಿದ
ಆಳ್ವಿಕೆಯಲಿ ಇಪ್ಪತ್ತು ಲಕ್ಷ ಕ್ರಿಸ್ತ ಜನರ್
ಎಂತೈದರ್? ಭ್ರಾತೃಭಾಯಿಗಳೆ ಯೋಚಿಸಿ ನೋಡಿ!
ನಮ್ಮ ಪರಮ ಮೌಲ್ವಿಕತೆ ಎಂತಳಿಯಿತು? ಈ
ವಿಚಾರವನೆಂದಾದೊಡಂ ಯೋಚಿಸಿರುವಿರೇಂ?
ಬಿಳಿಯರೊಡಂ ಸ್ಪರ್ಧೆಗೆ ಇಳಿಯಲಾರದೆಮ್ಮಯ
ಕುಶಲ ಕಲೆಗಾರರ್ ಕಣ್ಮರೆಯಾಗುತಿಹರೇಕೆ?
ಜರ್ಮನಿಯ ಕಾರ್ಮಿಕರ್ ಅದಾವ ಶಕುತಿಯಿಂದೆ
ಅನೇಕ ಶತಕಗಳಿಂ ಬೇರೂರಿದ ಇಂಗ್ಲೀಷ್
ಕಾರ್ಮಿಕರ ಸ್ಥಾನಮಂ ಕದಲಿಸಿದರ್? ಪೇಳ್ವುದು.
"ಯೋಚಿಸಿ ಮನದಿ. ಯೋಚಿಸಿ, ವಿಷಯಾತ್ಮಕವಾಗಿ.
ಯೋಚನೆಯ ಆಳದಲಿ ಮುಳುಗಿ ಪರ್ಯಾಲೋಚಿಸಿ
ತಿಳಿದೊಡೆಮಗೆ ದೊರೆವ ಸರಿಯುತ್ತರಂ ಎಂದೊಡೆ
ವಿಜ್ಞಾನದಿಂ ಕೂಡಿರದ, ಸದ್ವಿದ್ಯಾ ಸಂಸ್ಕಾರ
ಸಂಸ್ಕೃತಿ ಇವುಂಗಳ ಕೊರತೆಯೆಮ್ಮವರ ಮನಂ
ಕಿಡಿಸಿ ದೇಶ ಧರ್ಮಗಳ್ ನಶಿಸಲ್ ಕಾರಣಂ.
ಇನ್ನಾದೊಡಂ ನಮ್ಮೊಳ್ ವಿದ್ಯೆ-ಬುದ್ಧಿ, ಜ್ಞಾನ-
ವಿಜ್ಞಾನಗಳ್ ಸಾರ್ವತ್ರಿಕವಾಗಿ ಹಬ್ಬಿ ಹರಡಿ
ಬೆಳೆದಲ್ಲದೆ ಜಡಭರತತ್ತ್ವ ಹರಿಯದು. ಮೇಣ್
ಮತಿಮೌಢ್ಯದಿಂ ಘನಿಸಿಹ ಅಂದಶ್ರದ್ಧೆಯಂ
ಬೆನ್ನಟ್ಟಿ ಜಡಿಕುಟ್ಟಿ ಓಡಿಸಿ ಗಡಿದಾಟಿಸಿ
ಸಮೃದ್ಧಿಯ ಸಾಧಿಸಿದಲ್ಲದೆಯೆ ಎಮಗಿಲ್ಲ
ವಿಜ್ಞಾನದ ಬೆಳಕು. ಬಾವಿಯಾಳದ ಮಂಡೂಕ

ವರ್ಗಕ್ಕೆ ಮಹಾಸಾಗರದಾಳನೀಳಮಂ
ತೋರ್ದು ಕಡು ಕತ್ತಲೆಯ ಬರ್ದುಕಿಗೆ ಚೆಂಬೆಳಕಿನ
ಛವಿಯಂ ಹರಿಸುವ ಸಾಸಿಗರ್ ಮುಂದ್ಯೆದು ಧೀರ
ಗತಿಯಲಿ ಪಣಕಟ್ಟದೆ ಗತಿಯಿಲ್ಲ. ನಮಗಿಂದು
ಸರ್ವಸಾಸಿಗರ್ ವೇಳ್ಕುಂ ಮನದಲಿ ಯೋಚಿಸಿ
ತಿಳಿಯಿರ್ಪೆ! ಈ ಪ್ರಥಮಾಂಕದಲಿಹ ಸಾಸವದು ಮುಖ್ಯಂ,

"ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋ ರ್ಮಾಽಮೃತಂಗಮಯ
ಓಂ ಶಾಂತಿ ಶಾಂತಿ ಶಾಂತಿಃ ॥"

ಸಂಧ್ಯಾಕಾಲೀನ ಪ್ರಕೃತಿಯ ಸೌಂದರ್ಯದಾ
ದಿವ್ಯ ರಸಸ್ವಾದನೆಯ ಆಮೋದದಿಂ ವೆರ್ಚಿ
ಸರಸ ಸರಳ ಸಂಭಾಷಣೆಯಲಿ ಮನಂನೆಟ್ಟು
ದ್ವಾದಶ ವಟುಮಾನ್ಯರ್ ಭಾಗೀರಥಿಯಲಿ ಮಿಂದು
ಮೈಗೆ ತನಿಯೂಡಿ ಪುಣ್ಯಸ್ನಾನದ ಕ್ರಿಯೆಯಂ
ತೀರ್ಚಿದರ್ ಅಭಿರಾಮ ಭಂಗಿಯಲಿ. ಎಂದಿನೊಲ್
ಅಸ್ತಮಾನ ಶೋಭಾ ಶೈಲಿಯಲಿ ಹೊಮ್ಮಿರ್ದ
ಚೆಂಬಿಸಿಲಿಗೆ ಮೈಗೊಟ್ಟು ಹರ್ಮ್ಯದೇಶದ ಹಾದಿ
ಹಿಡಿದರೆಲ್ಲ, ಚೆಂಗಾಂತಿ ಛವಿಮುದ್ರೆಯನೊತ್ತಿ
ಮೆರೆದ ಚಂದನ ವಸನಗಳ್ ತೋರ್ದುವು ಗರಿಗರಿ
ಶುಭ್ರವಾಗಿ. ನರೇಂದ್ರಂ... **"ಸರ್ವ ಸ್ವಾಹಮಾತ್ಮಾ**
ಸರ್ವೋಽಹ ಮಸ್ಮಿ" ಮಂತ್ರಪಠಣದೊಡಂ ಪಜ್ಜೆ
ಪಜ್ಜೆಗಳ್ ಮುಂದಿಡುವನ್ ಪುರುಪಿನ ತೇಜದಲಿ.
ಉಳಿದ ತರುವಲಿಗಳ್ ನಿಜ ಶರಣರ ಮಾಳ್ಕೆಯಲಿ
ನಡೆದಪರ್ ಜೊತೆಗೂಡಿ. ಮನೆಯಲಿ ಫಲಹಾರ

ತೀರ್ಚಿದ ಬಳಿಕಂ ತಾರಕೇಶ್ವರನ ಗುಡಿಯಂ
ಗುರಿಗೊಂಡು ಪೊರಟರ್ ವನಸ್ಥಲಿಯ ಕುಪಥವಂ
ಹಿಡಿದು, ತ್ಯಾಗಿ ಕುಲ ಚಕ್ರವರ್ತಿ ಶಿವನಿಗೆ ಭಯ
ಭಕ್ತಿಯಿಂ ಪ್ರಾರ್ಥನೆಯಂ ಸಲಿಸಿ ಪರಿಸರದಲ್ಲಿ
ಹಬ್ಬಿ ಹರಡಿರ್ದ ಪರ್ಣಾರ್ಣವದ ಸೊಬಗಿನಲಿ
ಮುಳುಗೆದ್ದು ಮನಕೆ ಮುದವಂ ನೀಡಿ ತಪೋವನ
ವೈಭವದಲಿ ಆನಂದ ಪುಳಕಿತ ಮತಿಗತಿಯಂ
ಉಲ್ಲಸಗೊಳಿಸಿದರ್ ತರುಣರ್ ಹೃದಯವೆರ್ಚಿ.
ಮತ್ತಂ ಅದೆ ಪಥವಿಡಿದು ಪೊರಮಟ್ಟರ್ ದೂರ
ಆಂಟ್ಪುರದ ತೋಂಟದ ಮನೆಗೆ. ಕೊಂಕಣ ದಿಶೆಯಿಂ
ತೀಡಿ ಬಹ ಬಿರುಸಿನ ಬಿರುಗಾಳಿಯು ನುಗ್ಗಿಬರೆ
ಗಿಡುಮರಗಳ್ ನೂಂಕುವೊಲ್ ಜಡಿಕುಟ್ಟಿ. ರಕ್ಕಸ
ವಗೆಯ ವೈಭವ ಮೆರೆದುದು ಚಣಚಣಂ ಅತ್ಯುಗ್ರ
ರೂವಿನಲಿ. ತ್ರಿಭುವನವನಲುಗಿಪ ಪ್ರಲಯದ
ಪ್ರಭಂಜನೆಯಲಿ ಗಿಡುಮರಗಳಂ ಜಡಿಕುಟ್ಟಿ
ನೂಂಕಿ ಅತ್ತಿತ್ತ ತುಯ್ಯಲಾಡಿಸುತೆಡಬಲಕೆ
ನುಗ್ಗಿ ಬರುತಿದೆ, ತರುಣ ವೃಂದ ರಭಸಕೆ ಸಿಲ್ಕಿ
ತೂರಿ ತಾರಾಡಿಯುಂ ಸೋಲೊಪ್ಪದೆ ನಡೆದರ್
ಮೈಬಾಗಿ ತಲೆಗುಡದೆ. ಕಸ ಕಡ್ಡಿ ಧೂಳುಗಳ್
ಪುಟದೆದ್ದು ಹಾರಿದುವು ಕಣ್ಣುಕಿವಿಗಳಿಗೊತ್ತಿ
ಚದರಿ ಹಾರಿದುವು ದಶದಿಶೆಗೆ. ಕಾರ್ಮುಗಿಲೆದ್ದು
ಒಗ್ಗೂಡಿದುವು ಗಗನದ ವಿಸ್ತಾರದಲಿ. ಆ
ಗಳಿಗೆಯೊಳ್ ಮೋಡ ಮೋಡಗಳ ಮಧ್ಯೆ ಪೊಣ್ಮಿದ
ಕೆಮ್ಮಿಂಚು ಕುಡಿಮಿಂಚು ಹೆಮ್ಮಿಂಚು ಕೋಲ್ಮಿಂಚು
ಫಳ್ಳನೆ ಮಿನುಗಿ ಮಿಂಚಿ ಮಾಯಮಾದುವು ಮತ್ತೆ

ಮತ್ತೆ. ದಿಗ್ಭಿತ್ತಿಗಳ ಬೆಸುಗೆ ಬಿರಿಯುವ ತೆರದಿ
ಗುಡುಗುಗಳ ಘನ ಘೋರ ಘರ್ಜನೆಯು ಹೊಮ್ಮಿದುದು
ಎರ್ದೆ ನಡುಗಿಸುವ ಪಾಂಗಿನಲಿ. ಇನ್ನೇನ್ ಜಡಿ
ಮಳೆ ಸುರಿಯಲಿದೆ ಎಂಬವೊಲ್ ಮಳೆ ಗಾಳಿಗಳ ರಣ
ಕೇಳಿ ನಡೆದತ್ತು ಎಡೆವಿಡದೆ. ಗುರು ಭಾಯಿಗಳ್
ಪುರುಪಿತ್ತರ್ ಪಜ್ಜೆಗಳಿಗೆ. ಬಿರುಬಿರನೆ ಸಾಗಿ
ಪಿಂದುಳಿಯುತಲಿರ್ದುದು ಕಾಲ್ಪಥ. ಬಿರುಗಾಳಿಯು
ಭೀಮಿಸುತಿರುತಿರೆ ನಿಲ್ಲಲೆಲ್ಲಿಯು ತಾವಿಲ್ಲ.
"**ಹರೇರ್ನಾಮ ಹರೇರ್ನಾಮ ಏವಂ ಕೇವಲಂ**"
ಧ್ಯಾನಮಯ ಘಟಿ ಮುನ್ನಡೆಸಿದುದು ತರುಣರಂ
ಸಕಾಲದೊಳ್ ಆಂಟ್ಪುರದ ಮನೆಯ ಮಡಿಲಿಂಗೆ
ತೋರ್ಧನಿ ಉದುರುವ ಮುನ್ನ. ಜಗಲಿಯ ಅಂಚಿನಲಿ
ನಿಂತು ನೋಡುತಿರೆ ಬೋರ್ಮಳೆ ಬೋರ್ಗರೆದು ಸುರಿದು
ಹರಿಯಿತ್ತು ಆಲಿಗಲ್ಗಳೊಡಗೂಡಿ. ಅಂಗಣ ದಾಣವದು
ಮುಚ್ಚುವನಿತು ಆಲಿಗಲ್ಗಳ್ ಬಿಳ್ದು ಹರಡಿದುವು
ರಾಶಿರಾಶಿಯಾಗಿ. ಆ ಮೋಹಕ ಮಧುರ ಚಿತ್ರ
ಕಣ್ಗೆಸೆದಿರಲ್ ನಿಂತು ನೋಡಿದರ್ ಸಾಲಾಗಿ
ಭ್ರಾತೃಭಾಯಿಗಳ್, ಪ್ರಕೃತಿಯ ವೈಭವ ವಿಶ್ವ
ವಿಶೇಷಮಂ!
ಅಂದು, ಆಂಟ್ಪುರದ ಮನೆಯಂ ಬಿಟ್ಟು
ಪೊರಡಲ್ ಮನೆಯೊಡತಿಯ ಕಂಗಳ್ ಕರುಣಕಾತರ
ಪ್ರೇಮದಿಂ ಸೂಸಿದುವಶ್ರು ಜಲವಂ. ಹೃದಯ
ಧರಿತ್ರಿ ಕೊರಗಿ ಕರಗಿ ನೀರಾಗಿ ಹರಿದುದೋ
ಎನೆ ಮಾತೃಮಯಿ ದುಃಖಿತಳಾದಳ್. ಗದ್ಗದಿತೆ
ಹರಸಿದಳ್ "ಹೇ ಕಂದರಿರಾ! ನಿಮ್ಮೆಲ್ಲರ್ಗೆ

ಶುಭಮಕ್ಕೆ! ಒಳ್ಳಿತಕ್ಕೆ! ಜಯಮಕ್ಕೆ ! ಮಂಗಳ
ಮಕ್ಕೆ! ದುರ್ಗಾದೇವಿಯುಂ ಎಲ್ಲ ಕಂದರಂ
ತಲೆಗಾಯ್ದು ಬೆನ್‌ಗಾಯ್ದು ಕಾಪಾಡಲಿ! ಪ್ರೇಮದ
"ಪುತ್ರರಿರಾ! **ಉತ್ತರೋತ್ತರ ಅಭಿವೃದ್ಧಿರಸ್ತು."**
ಕೊರಳ್ ತುಂಬಿ ಹರಿದುದು ಹೃದಯಾಬ್ಧಿಯಮೃತ
ವಾಣಿ. ವಟುಗಳ್ ಜನನಿಯ ಪಾದಕಮಲಗಳಿಗೆ
ನಮಿಸಿ ಬಲ್ಮೆಯಿಂ ಬೀಳ್ಕೊಂಡು ಪೊರಡಲ್ ಜನನಿ
ಬೆಂಬಳಿಯೆ ನಡೆತಂದಳ್ ತೋಂಟದ ಗಡಿವರೆಗೆ.
ಮೊಗಬಾಡಿ ಕಣ್‌ತೊಯ್ದು ನಿಂತಳಲ್ಲಿ ಕಂದರ
ನಿರ್ಗಮನಮಂ ನೋಡುತೆ. ಮನನೊಂದ ಜನನಿಯ
ಸಂತೈಸಿ ನಲ್ ನುಡಿಗಳಿಂ ಬೋಳೈಸಿ ಪೊರಮಟ್ಟರ್
ಉತ್ಸುಕ ಪ್ರತಿಮೆಗಳಾಗಿ. ಆಶಿಷ್ಠರ್ ಬಲಿಷ್ಠರ್
ದೃಢಿಷ್ಠರ್ ಮೇಣ್ ಸತ್ಪಥದ ಯೋಧರ್ ತಾವಾಗಿ!
ಆಂಟ್ಪುರದಲಿ ಒಗ್ಗೂಡಿ ನಿರ್ಣಯಿಸಿದ ಭವ್ಯ
ಭವಿಷ್ಯದ ನಿರ್ಣಯಮೆ ನಿರ್ಣಯಂ. ಕೆಲರ್ಗೆ
ಅಧ್ಯಾತ್ಮಿಕತೆಯ ಇಚ್ಛೆ. ಕೆಲರ್ಗೆ ಪರಿವ್ರಾಜ
ಬಾಳಿನಲಿ ಇಚ್ಛೆ. ಇಂಕೆಲರ್ಗೆ ಸೇವೆಯ ಇಚ್ಛೆ.

"ಯಥಾಗಾರಂ ಸುಚ್ಛನ್ನಂ
ವೃಷ್ಟಿರ್ನ ಸಮತಿ ವಿಧ್ಯತಿ ।
ಏವಂ ಸುಭಾವಿತಂ ಚಿತ್ತಂ
ರಾಗೋನ ಸಮತಿ ವಿಧ್ಯತಿ ॥"

ಹರಿಃ ಓಂ ತತ್ ಸತ್

❀ ❀

ದ್ವಾದಶೋಲ್ಲಾಸಂ

ಪರಿವ್ರಾಜಕ ಸಂನ್ಯಾಸಿ

ಹೇಳು! ಮಾನಸ ಮುರುಳಿಯೇ ಹೇಳು! ಸೌಂದರ್ಯ
ರಾಗಿಣಿಯೆ, ಹೇಳುಹೇಳೆಲೇ ಕಾವ್ಯ ಕಾಮಿನಿಯೆ,
ಹೇಳು! ಚಿಂತನಾವೇಶದಾವೇಶದ ಪ್ರತಿಭಾ
ಸುಂದರಿಯೆ, ಹೇಳುಹೇಳೌ ಮುಂದಿನ ಬಹುಮೂಲ್ಯ
ಚರಿತಾಮೃತಮಂ. ತೇಜಮಯ ಶಕ್ತಿಮಯ ನಿಜ
ತ್ರಾಸಮಯ ಸಾಸಮಯ ಕಾಲಮಾನಮಂ ಎಳೆ
ಎಳೆಯಾಗಿ ಬಿಡಿಬಿಡಿಯಾಗಿ ಸುಲಲಿತ ಶೈಲಿಯಲಿ.
ಅಕುಶಲಮತಿಗೆ ಇನಿದಿನಿದಾಗಿ ವರ ವೈದ್ಯುತ
ಶಕ್ತಿಯ ದಯಪಾಲಿಸು ಕಾವ್ಯಾಮೃತ ಗಂಧದ
ಸೌರಭ ಪರಿಮಳಿಸುವೊಲ್. ನಿನ್ನಯ ಕಾಲ್ವಿಡಿದು
ಬೇಳ್ವೆನೆನ್. ಇಂದೆನ್ನ ಹೃದಯ ತಂತ್ರಿಯಂ ಘನ
ಗೊಳಿಸೌ. ಭಾರತಿಯ ಪುತ್ರರತ್ನನ ಸಂಜೀವನ
ಚರಿತಾಮೃತ ಹರಿಯಲೀ ಧಾರಿಣಿಯೊಳ್ ಸದಾ
ಕಾವ್ಯಕತ್ತುರಿಯಾಗಿ. ಹಿಂದಿರದ ಮುಂಬರದ
ಆ ಮಹಾನ್ ವ್ಯಕ್ತಿಯ ಶಕ್ತಿಸಂಪುಟಮೆರೆದು,
ಭವ್ಯ ಕಾಲದೇಶಾಂಡದ ಡಿಂಡಿಮವಂ ಬಡಿದು
ಬಾಜಿಸಿ ಅನಂತತೆಯ ಮುಟ್ಟಿ ಬ್ರಹ್ಮವ ತಬ್ಬಿ
ಜಡಮನುಕುಲದೆದೆಗೆ ವರ ಜ್ಞಾನದ ಕಿಡಿವೊಗೆದ
ಜ್ಞಾತೃವಿನ ಭವ್ಯ ಜೈತ್ರಯಾತ್ರೆಯಲಿ, ಸತ್ಯದ
ಪಥವಿಡಿದು ಸುಸಂಸ್ಕೃತಿಯ ಪರಿಚಯಿಸಿದ ಧೀರ
ಧೀಮಂತ ಕುವರನ ಪರಿಪುಣ್ಯ ಚರಿತೆಯ ನೀ
ಹರಿಸು ತಾಯೆ! ಸಂಸ್ಕಾರ ಸರ್ಪಿಣಿಯ! ಬೇಡುವೆ

ನೀನಲ್ಲದೆ ಕರುಣಿಪರಾರಮ್ಮ ಪೇಳ್ತಾಯೆ?
ಒರ್ಮೆ ಸ್ವಂತ ಕಾರ್ಯಾರ್ಥಂ ನಗರದ್ದೇಶಮಂ
ಗುರಿಗೊಂಡು ಪೊರವಂಟನ್ ಗುರುನಾಯಕನಿರ್ದ
ನರೇಂದ್ರನಾಥದತ್ತಂ. ರವಿ ಮುಳುಗಿ ಮುಸ್ಸಂಜೆ
ಕವಿಯುತಿರೆ ಪಿಂದಿರುಗಿ ಬಂದನಾ ಕುಟೀರಕೆ.
ನೋಡೆ, ಶಾರದಾನಂದರುಂ ಎಲ್ಲಿಯುಂ ಕಣ್ಗೆ
ಕಂಡರಿಲ್ಲಂ. ಭವ್ಯ ಭವಿಷ್ಯದ ನಿರೂಪಣೆಯ
ಕಾರ್ಯಗಾರಮಾದಾ ಚಿತ್ತಪ್ರವೃತ್ತಿಗದು ಕಿಂಚಿತ್
ಕಿರಿಕಿರಿಯನೊರೆದಿರೆ ಅರಸಿದೊಡೆಸೆದರಿಲ್ಲ.
"ಗುರುಭಾಯಿ ಅವರ್ ಕುಟಿಯಂ ಬಿಟ್ಟುಪೋದುದಂ
ಕಾಣೆನಾವ್. ಆರಿಂಗು ಪೇಳಿಲ್ಲ, ಎತ್ತ ಪಯಣಸಿಹರೊ
ತಿಳಿಯದೆಮಗೆ."
ವಿಷಯಮರಿದು ಚಿಂತಿತನಾದಾ
ನರೇಂದ್ರನಾಥದತ್ತಂ ಅತ್ತಲಿತ್ತ ಪುಡುಕುತ
ಪೊರಗೈದು ಎಡೆಎಡೆಯಲಿ ಕಣ್ಣಾಡಿ ಮನವಂ
ನೆಟ್ಟುನಾಂಟಿ ಯೋಚಿಸಿ ಪೊದೆಯಲಿ ಪೆರ್ಮರಗಳ
ತಲದಲಿ ಕೆರೆಯಂಚಿನಲಿ ಬಿದಿರಮೆಳೆಯಲಿ ಕಣ್
ನೋಟ ಹರಿಸಿ ಪಿಮ್ಮರಳಿ ನುಡಿದನ್ ಶಿಷ್ಯರಿಗೆ,
"ಬಿಡಿ, ಅವನ ಚಿಂತೆಯಂ. ಅವನೆಲ್ಲಿ ಪೋದಾನ್?
ಪಿಂದಿರುಗಿ ಬಂದಪಂ ಎಂದಾದೊಡೊರ್ಮೆ, ನಮ್ಮ
ಮಠಕೆ."
ಸಂದುವು ಕೆಲದಿನಮಾನಂ. ಉರುಳಿದುವು
ಕೆಲವಾರಗಳ್ ಶಾರದಾ ನಂದರ ಸುಳಿವೇಂ
ದೊರೆಯದಾಯ್ತು, ಏನಿದರ ರಹಸ್ಯಮೆಂದೆನುತೆ
ಮನಮತಿಗಳ್ ಪರಿತಪಿಸುತಿರೆ ಪತ್ರಲೇಖವು

ಮತಕ್ಕೈದುದು ಶಾರದರಿಂ, ನರೇಂದ್ರ ನಾಥಂಗೆ.
"ಗುರುಭಾಯಿ, ನರೇಂದ್ರ! ಬಲುದಿವಸಗಳಿಂದೆಮ್ಮ
ಮನಂಗೆಟ್ಟು ಚಿತ್ತದ ಸ್ವಾಸ್ಥ್ಯವಳಿದು ಕಳವಳ
ತುಂಬಿ ಕುಟುಂಬಿಗರನುಂ ಕಾಂಬಗೀಳು ಬೆಳೆದುದು
ಎರ್ದೆಯುಂ ಹಾತೊರೆವ ತೆರದಿ. ಬಳಿಕಲಾನೆಮ್ಮ
ಮನವಂ ಹಲವು ಹತ್ತು ಬಗೆಯಲಿ ಅದುಮಿ ಹಿಡಿವ
ಕ್ರಮವಂ ದೂರೀಕರಿಸಿ ಕುಟುಂಬಿಗರ ಕಂಡು
ಬರ್ಪುದೆ ಸರಿಯೆಂಬಾಸೆಗೆ ಮಣಿದೆನ್. ಆನೊರ್ಮೆ
ಮನೆಗುಯ್ದು ಎಲ್ಲರಂ ಕಣ್ತುಂಬ ನೋನೋಡಿ
ಮಾತಾಡಿ ಮನತುಂಬಿದ ಬೇಸರಂ ಕಳೆಕೊಂಡು
ಬಪ್ಪುದೆ ಸರಿಯೆನಿಸಿ ಪೊರ್ಮಟ್ಟೆನ್ ಆರ್ಗುಂ
ತಿಳಿಪದೆಯೆ, ನಿನ್ನನುಂ ಕಾಣದೆಯೆ. ಕುಟುಂಬದ
ದರ್ಶನಂಬಡೆದು ಪೆತ್ತವರೊಡಂಗೂಡಿ ಸೊಗದ
ಸುಧೆಯುಂಡು ವಾರವೊಂದು ಕಳೆದಾಯ್ತು. ಎನ್ನ
ಮನಃಕ್ಲೇಷಮಂ ಕಳೆದು, ಸುಖ ಶಾಂತಿಯ ತನಿರಸ
ಪೀರ್ದು ಜೀರ್ಣಿಸಿ ನೆಮ್ಮದಿಯೊಳಿಹೆನ್, ಮನ್ನಿಸೈ.
ಕುಟುಂಬದ ದರ್ಶನದ ಭಾಗ್ಯದಿಂ ಪಡೆಕೊಂಡ
ಮನಸ್ತೃಪ್ತಿ ಅಪಾರ; ಅಪರಂಪಾರ. ಇನ್ನುಂ
ಎನ್ನೆಲ್ಲ ಕಾರ್ಯಭಾರಂ ನಿರ್ವಹಿಸಬಲ್ಲೆ
ಎನೆ ತೋಷಮಕ್ಕುಂ. ಆನಂದಮಕ್ಕುಂ. ಹೃದಯ
ಹಗುರಮಕ್ಕುಂ. ಅಲ್ಲದೆ, ಇಂತೊಂದು ಬಾಲಿಶದ
ಮತಿಗತಿಗೆ ಕುಟುಂಬಿಗರ ಸನಿಹದೊಳಿರೆ ಶಾಂತಿ
ಭಂಗಮಾದಪುದು ದಿಟಮೆನಿಸಿ ಗೃಹದಿಂ ಪೊರ
ಬಿಳ್ದು ದೂರ ದೂರಾಗಿ ಉಳಿಯೆ ನಡೆದಿಹೆನ್.
ಮತ್ತೊರ್ಮೆ ಕೇಳ್ದಪೆನ್ ಮನ್ನಿಸೈ, ಮನ್ನಿಸೈ.

ಪತ್ರಸಾರವದು ಎಲ್ಲರ ಮನಮತಿಯಂ ಸುಖ
ಶಾಂತಿ ಸಂತೃಪ್ತಿಗಳ ಹಂತಕೇರಿಸೆ ಹಿಡಿದ
ಕಟ್ಟುಸಿರ್ ಹರಿದಾಡಿತು ಸರಾಗದಲಿ. ಆಗಳ್
ಅಮಿತ ಹರ್ಷದಿಂ ರಾಖಾಲ ನಿಂತೆಂದಂ 'ಹಾ!
ಈಗಳ್ ಹಗುರಾಯ್ತೆನ್ನ ಹೃದಯ ಸಂಪುಟಂ.
ಆನಿನ್ನು ತೀರ್ಥಯಾತ್ರೆಯಂಗೈದಪೆನೆನಲ್
ಎಲ್ಲರ್ ಅನುಮತಿಯಂ ಇತ್ತು ಮಾನಿಸುವಿರೆಂಬ
ನಂಬುಗೆ ಇಹುದೆನಗೆ."
ಮಿತ್ರನ ನುಡಿಯನಾಲಿಸಿ
ಪ್ರಸನ್ನ ವದನಾರವಿಂದದಿಂ. ನರೇಂದ್ರಂ
ತನ್ನೊಳ್ ಮನಮಥಿಸುತೆ ಮರುನುಡಿಸಿದಂ "ಎಲೆ,
ಭ್ರಾತೃ ಭಾಯಿಗಳೆ, ಇದನೆಲ್ಲರುಂ ಕೂಡಿಯೇ
ನಿರ್ಣಾಯಿಪುದೊಳ್ಳಿತು ಗಡ? ನಿಂನಿಮ್ಮಯ ಮನೋ
ಧರ್ಮಕಾಂ ಅಡ್ಡಿ ಪಡಿಸಲಾರೆನ್ ಎಲ್ಲರ್
ಅವರವರ ಪಥವಿಡಿದು ಪೊರಮಟ್ಟೊಡೆ ಮಠದ
ಗತಿಯೇಂ? ಇದನೆಂತೆಂತು ನಿರ್ವಹಿಪುದು? ಎಂಬ
ವಿಚಾರಂ ನಿರ್ಣಯಿಸಿದ ಬಳಿಕಮಿತರ ಕಜ್ಜ
ಎಂಬುದಂ ಮರೆಯಲಾಸಲ್ಲ.
"ಈಗದು ಎಮ್ಮ
ಎದುರಿನಲಿ ಬೆದರು ಬೊಂಬೆಯೊಲ್ ನಿಂತಿರ್ಪುದೆನೆ
ಸತ್ಯ, ಎಲ್ಲರ ಅಭಿಮತಕೆನ್ನಯ ಶಿರಮಣಿವೆ."
"ನಿಂನಿಮ್ಮ ಮನೋ ನಿಶ್ಚಯಮಂ ಕಿಡಿಸುವೊಂದು
ದುರಭಿಮತಮೆನಗಿಲ್ಲಂ. ನಿಮ್ಮನುಂ ನಿರ್ಬಂಧಿಸೆ
ಆನಾರ್? ಎಲ್ಲರುಂ ಅವರವರ ಮುಂಪಥಂ
ತಾವ್ ತಾವೇ ನಿರ್ಣಯಿಪುದು ಸರಿಯೆಂಬೆನಾಂ.

"ಆಯ್ತಾಯ್ತು."
ಗುರು ಭ್ರಾತೃಗಳ ಮೇಲೆನ್ನ ಅಧಿಕಾರ ಸಲ್ಲದು.
ಆದೊಡೆಮ ಸಂಘಶಕ್ತಿಯಂ ಮುರಿದು ಪತನಕೆ
ಎಡೆಗೊಡದೊಲ್ ಒಮ್ಮನದೊಮ್ಮತದ ಪಥವಿಡಿದು
ನಡೆವುದದು ಎಲ್ಲರ ಶಿರೋಭಾರಮಿರಲಕ್ಕುಂ.
ಇದನಾರ್ ಮರೆಯದೆ ಅಲಕ್ಷಿಸದೆ ನಡೆದೊಡದೆ
ಸರಿಯೆಂಬೆ. ಅದಲ್ಲದೆ ನಿಂನಿಮ್ಮ ಕರ್ತವ್ಯ
ಭಾರದಲಿ ಸರ್ವ ಸ್ವತಂತ್ರರಿರ್ಪುದೆ ಒಳ್ಳಿತು.
ನೀವ್ ಯಾವತ್‌ಕಾಲವುಂ ಭ್ರಾತೃಭಾಯಿಗಳ
ಒಡನಾಟ ಅಥವಾ ಸತ್ ಸಂಪರ್ಕದೊಳಿರ್ಪುದು
ಸರ್ವಹಿತ. ಇಂತೆಂದು ಆನೊರೆದೊಡದರಿಂದೆ
ಬಿಡುತೆ ಬಯಸುವೆನಾಂ. ಏಕೆನಲ್ ಪರಿವ್ರಾಜಕ
ವ್ರತವಿಡಿದು ಈ ಭಾರತ ಧಾತ್ರಿಯ ಪ್ರತಿಯೊಂದು
ರಾಜ್ಯಮಂ ಸುತ್ತಿ ತಿಳಿದು ಅರಿತುಕೊಳದೆಲ್ಲಿಯ
ಭಾರತೀಯತೆ? ಆನಿದನರಿದು ಇಡಿ ಭಾರತ
ಧಾತ್ರಿಯಂ ಸುತ್ತಿ ಸ್ಥಿತಿಗತಿಯಂ ಮತ್ತಮಾ
ಆಚಾರ ವ್ಯವಹಾರ ಸಂಸ್ಕೃತಿಯ ಮನಗೊಂಡು
ದೀನ ದರಿದ್ರರ ಕಂಬನಿಯೊರಸೆ ಸುವಿದ್ಯಾ
ಪ್ರಚಾರ ಕಾರ್ಯಮಂ ಕೈಕೊಂಬುವ ಯೋಚನೆ
ಗೈದಿಹೆನೆನ್. ಪ್ರಥಮಾಂಕಮೆನೆ ಪರಿವ್ರಾಜಕತೆ.
ಬಳಿಕಲೆಲ್ಲ ವಟುಗಳ ಇಚ್ಚೆಯಂ ಮನಗೊಟ್ಟು
ಆಲಿಸಾಲಿಸಿ ಎಲ್ಲರು ಮೊಂದೊಂದು ಅಭಿಮತ
ವ್ಯಕ್ತ ಪಡಿಸಲುರೆ ಒಮ್ಮತದ ನಿರ್ಣಯಮಾಯ್ತು.
ಪೂರ್ವೀ ದಿಗ್ ತಟಾಂತ ಲಗ್ನದಲಿ ಪೂವಡಿಯ
ಉಷೆವೆಣ್ಣು ಮೆಲುಮೆಲ್ಲನೆ ಮುಂಬರೆ ಚೆಂದುಟಿಯ

ಹೊನ್ನಗೆಯಂ ಬೀರಿ, ಸೂಸಿದಳ್ ಹನಿಮುತ್ತುಗಳ
ಸೇಸೆಯಂ ಬಿತ್ತರದ ಧಾರಿಣಿಯ ಹಸುರುಡೆಯ
ಮೇಲೆ. ನಸುವೊಳ್ತು ಉರುಳುವುದರೊಳ್ ಬಾಲರವಿ
ಕೋಮಲ ಕಿರಣ ಮಾಲೆಗಳ ಚೆಲ್ಲಿ ಸೂಸುತ್ತೆ
ಮೇಲೇರೆ, ಶಾದ್ವಲದ ಹಚ್ಚ ಹಾಸಿನಲಿ ಸಿರಿ
ಸಂಪದದ ಲೇಪವೊರೆದ ಪರಿ ಚೆಲ್ವಾಯ್ತು; ಮಿಗೆ
ಮನೋಹರಮಾಯ್ತು. ಪ್ರಾತಃಕಾಲೀನ ಸುಂದರ
ಸೊಬಗಿನ ತನಿಯಿಂಪು ಪಕ್ಷಿಗೊರಳಿನ ದನಿಯಿಂಪು
ಮಂದಮಾರುತನ ಚಾಮರ ಸೇವೆಯ ಸೊಗದಿಂಪು
ಅರೆಬಿರಿದ ಪುಷ್ಪಗಳ ನರುಗಂಪಿನಿಂಪು ಆ
ಪರಿಸರಂ ಕುಂಭಕರ್ಣಯೋಗದೊಳಿರೆ ಶಾಂತಿ
ಸಂಪದದ ಸಿರಿಯಿಂಪು ಮುಟ್ಟಿ ತಟ್ಟಿ ಪುರುಪಿನ
ಉಸಿರ್ವಿಟ್ಟು ತಳ್ಕಯ್ಸಿ ಬೋಳೈಸಿ ತೋಷದಿಂ
ಶಿರದ ಮೇಲೆ ಅಕ್ಷತೆ ತಳಿವಂತೆ ಮಂಜುಹನಿ
ಮುತ್ತುಗಳ್ ಸೂಸಾಡಿ ಬೀಳುಕೊಡುತಿರುತಿರಲ್
ಸಹಾಧ್ಯಾಯಿಗಳ್ ಗಾಢಾಲಿಂಗನದ ಮಧುರ
ಬೀಳ್ಕೊಡಿಗೆಯನಿತ್ತರ್ ಹನಿಗಣ್ಣು ಕೆಂಪಾಗಿ.
ನರೇಂದ್ರನಾಥದತ್ತಂ ಮನತುಂಬಿ ವಿನಮ್ರ
ಬಂಧುರ ನುಡಿಯೊಳೆಲ್ಲರಿಂಗೆ ವಿದಾಯಂ ಬೇಳ್ದು
ಪೊರಮಟ್ಟನ್ ಮಠಮಂ, ವಟುಗಳಂ ಪಿಂತಿರ್ಕಿ.
ಪರಿವ್ರಾಜಕ ವ್ರತದಿ ದಂಡಕಮಂಡಲ ಧಾರಿ
ಯಾದವಗೆ ಕೈಚೀಲಮಲ್ಲದೇನಿಲ್ಲ ಸಿರಿ
ವಸ್ತುಗಳ್. ಬರಿಗಾಲೊಳ್ ಸಾಗಿದುದು ಪಯಣಂ.
ಪ್ರಪ್ರಥಮವಾಗಿ ದಕ್ಷಿಣೇಶ್ವರಕೈದು ದೇವಿ
ಕಾಳೀಮಾತೆಯ ದರ್ಶನಂಬಡೆದು ತರುವಾಯಿ,

ಶ್ರೀಮಾತೆ ಶಾರದಾಮಣಿದೇವಿಯವರ ಪದ
ಯುಗಗ್ಮಳಿಂಗೆ ಶಿರಮಣಿದಂ. ಆಗಲಾ ಮಾತೆ
ಸಂತಸದಲಿ ಹರಸುತೆ ಶುಭಮಂ ನುಡಿದು ಬಹುಲ
ಪ್ರೇಮದಿಂ ತಲೆಯ ನೇವರಿಸಿ ಬೀಳುಕೊಟ್ಟಳ್
ಧೀರ ಧೀಮಂತ ಶಿಷ್ಯವರೇಣ್ಯನಂ. ಬಳಿಕ
ದತ್ತ ಭವನಕಯ್ಯುತೆ ಪೆತ್ತಮ್ಮೆಯ ಕಂಡು
ತನ್ನ ವ್ರತನಿಷ್ಠೆಯನರುಹಿ ಮಾತೆಯ ದಿವ್ಯ
ಪಾದಪದ್ಮಗಳಿಗೆ ಶಿರಮಣಿದು ಶುಭಾಶೀರ್ವಾದ
ಪಡೆದರ್. ವಿಷಯಂ ಕೇಳ್ದು ಮನನಟ್ಟು ಕಣ್ಣಂ
ನೆಟ್ಟು ಬಿಸುಸುಯ್ದು "ನೀನೆಂತು ಸಹಿಪೆ ಮಗನೇ?"
ಎಂದಬಳಿಕ ಚಣಂ ತಡೆದು ಮತ್ತೆಂದಳ್ ತಾಯಿ,
"ನಿನ್ನನುಂ ತಾಯಿ ಕಾಳಿಕೆಯು ಸದಾ ಬೆಂಗಾಯಲಿ"
ಸುಖದುಃಖ ಗದ್ಗದಿತ ದನಿ ಹೊಮ್ಮಿದುದು ಎರ್ದೆ
ಸಂಪುಟದ ತಂತುಗಳ್ ಮಿಡಿದುವೊ ಎನೆ ಅತಿಶಯ
ರೀತಿಯಲಿ. ನರೇಂದ್ರ ನಾಥಂ ಪೊರಮಡಲಲ್ಲಿಂದೆ,
ಮತ್ತೆಂದಳಾ ತಾಯಿ "**ವತ್ಸಾ ವಿಜಯೀ ಭವ!**"
ಆ ಧ್ವನಿ ಮೊರೆದುದು ಕರ್ಣಪಟಲಗಳ ಮೇಲೆ
ಮತ್ತೆ ಮತ್ತೆ. ಎದೆಯೊಳ್ ಶಾಂತಿರಸ ಕುಂಭಮಂ
ತುಂಬಿ. ಕಾಲ್ನಡೆ ಮುಂಬರಿದುದು ಊರು ಅರಣ್ಯ
ಬಯಲು ಹಳ್ಳಿ ಕೇರಿಗಳ ಹರಿಹಾಯುತೆ, ಸಾಗಿತು
ಪಯಣ ಬಹುತರದ ಭಾರತೀಯರಂ ಕಂಡುಕಾಣುತ್ತೆ.
ಸುತ್ತು ಮುತ್ತಿನ ಪರ್ಣಕುಲೋದ್ಯಾನದೊಳ್ ಅರಳಿ
ದಳಬಿರಿಯಲಿಹ ಕುಸುಮ ಕೋಟಿಯಲಿ ಬಗೆಬಗೆಯ
ನರುಗಂಪುಗುವ ಸೌರಭ ಮುಟ್ಟುತ್ತಲಿರ್ದುದು
ಹೃನ್ಮನಂ ಸಂಮೋಹನಕರವಾಗಿ. ಸಾಯಂ

ಸಮಯದ ಅರುಣಾರುಣನ ಹೊಂದೇರ್ ಬಡಗಣ
ದಿಗ್ ಭಿತ್ತಿಯಲಿ ಇಳಿಮೊಗವಾಗಿ ಹರಿಯುತಲಿರೆ
ಮಂಜುಮುಗಿಲ್ ಮೇಳಂ ಹೊನ್ನೀರ್ ಓಕುಳಿಯ
ಚೆಲ್ಲಿ ಸೂಸಾಡಿ ಮಿಂದುವೊ ಎನಲ್ ರಕ್ತಾಕ್ತ
ಕನಕ ಕಾಂತಿ ಹರಡಿತು ಮನೋಹರ ಶೈಲಿಯಂ
ಸೂಸಿ. ಸಂಧ್ಯಾರಾಗದ ಹೊನ್ನಿನ ಧಾರೆಯಲಿ
ಮಿಂದು ಸೊಂಪಿನ ಪೆಂಪಿನ ಸವಿಯಂ ಸವಿಯುತ್ತೆ
ಗೂಡುಗಳನರಸಲೈದು ಗಿಡಮರ ತರುಗಳಂ
ಆಶ್ರಯಿಸಿದ ಶುಕ ಪಿಕ ಪಿಕಳಾರ ಕಾಜಾಣ
ಕೋಗಿಲೆ ಕಲವಿಂಕ ಬುಲ್‌ಬುಲ್ ಕಾಮಳ್ಳಿ ಮೈನಾ
ಚೋರೆ ಮಿತ್ಯಾದಿ ವನವಿಹಂಗಮ ಕೋಟಿಯುಂ
ಸಂಧ್ಯಾರುಣನಂ ಪ್ರಾರ್ಥಿಸಿ ನಿವೇದಿಸುತಿರೆ
ದಿನಚರಿಯ ರಾಗತಾನಂ ಹರಿಯಿತ್ತು ದಿವ್ಯ
ಸುರಗಾನದ ವೈಭೋಗದಲಿ. ಅದೊ, ನೇಸರಿನ
ರಥ ಇಳಿದುದು ದೂರ ಗಿರಿಯ ಕುತ್ಕೀಲದ ಮೇಲೆ.
ಮುಸ್ಸಂಜೆ ಕವಿಯಿತ್ತು ನಸುಗೆಂಪಾಗಿ ಮಸಕು
ಮಸಕಾಗಿ. ಮುನ್ನಡೆದಿರೆ ಬೀಸುಗಾಲ್ ಬೀಸಿ
ಪರಿವ್ರಾಜಕ ಸಂನ್ಯಾಸಿಯುಂ ಪಜ್ಜೆ ಪಜ್ಜೆಗು
ಕಾಲ್ಪಥವಂ ಪಿಂತಿರ್ಕುತಿರ್ದಂತೆಯೇ ದೂರದ
ಬಡಹಳ್ಳಿಯಂ ಸೇರ್ದರ್ ಬಹುವಾಗಿ ಬಳಲಿ.
ಸಾಲ್ಮನೆಗಳೆಸೆದುವು ಬಲು ದೂರದ ಕಣ್ ದೃಷ್ಟಿ
ಯಷ್ಟಿಗೆ. ಜನ ಜಂಗುಳಿಯುಂ ಪಿಮ್ಮರಳುತಿರ್ದುದು
ಹೊಲಗದ್ದೆಗಳಿಂದಲಿ. ನರೇಂದ್ರನಾಥದತ್ತನ
ಚಂದನ ವಸನ ದಂಡಕಮಂಡಲುಗಳ ವೇಷ
ಮೇಣ್ ಶೋಡಷಕಳೆಯ ತೇಜೋನ್ವಿತ ವರಿಷ್ಠ

ವ್ಯಕ್ತಿತ್ವವಂ ಕಂಡು ಕೈಮುಗಿದು ಬಹುಲ ಭಕ್ತಿ
ಭಾವದಿಂ ಕುಶಲ ಪ್ರಶ್ನೆಗೈದರ್ "ಸ್ವಾಮೀಜಿ,
ಎತ್ತಣಿಂದಿತ್ತ ಪಯಣವೊ?"
"ದಕ್ಷಿಣೇಶ್ವರದ
ಕಡೆಯಿಂದ್ಯೆದಿಹೆನ್."
"ಇದೀಗಳುಂ ಕತ್ತಲೆಯು
ಕವಿವುದ್ಯೆ ಸ್ವಾಮೀಜಿ. ನೀಮಿಂದು ಇಲ್ಲಿಯೇ
ತಂಗಿದೊಡೆ ಲೇಸು ಲೇಸು." ನುಡಿದ ಗುಡಿಸಲೊಡೆಯ.
ನರೇಂದ್ರನಾಥನ ಶರೀರಯಷ್ಟಿಯದು ವರ
ಕಳೆಗಳಿಂ ಬೆಳಗುವುದರೊಂದಿಗವರ ಚಂದನ
ಕಾನ್ತಿಯ ವಸನ ದಂಡ ಕಮಂಡಲುಗಳ ವೇಷ
'ಸ್ವಾಮೀಜಿ' ಎನಿಸೆ ದಿವ್ಯ ಕುರುಹುಮಿರೆ ನಿಜದಿಂ
ನರೇಂದ್ರನಾಥದತ್ತಂ ಅಂದಿನ ದಿನಂಗಳಿಂ
'ಸ್ವಾಮೀಜಿ' ತಾನಾದರ್. ಸರ್ವತ್ರ ಸಾರ್ವತ್ರಿಕ
ಕ್ಷೇತ್ರದಲಿ ಮಂಗಲಮಯ ಶರೀರ ಸಂಪುಟದ
ಆಂತರ್ಯದಲಿ ಆತ್ಮಪ್ರಭೆಯಂ ಹುದುಗಿಟ್ಟು
ಸಾಮಾನ್ಯರಿಂಗೆ ಸಾಮಾನ್ಯನುಂ ತಾನಾಗಿ
ತೋರ್ಪವೊಲ್ ಎಲ್ಲಿಯುಂ ಆಂಗ್ಲಭಾಷೆಯನಿನಿತು
ಬಿತ್ತರಿಸದೆ ಗುಡಿಸಲು ಜೋಪಡಿಯ ವಾಸಕ್ಕೆ
ತಕ್ಕಿನ ಯುವ ಮಾನುಷಿ ತಾನಿರೆ ಬಹುತರದಲಿ
ಸ್ಪಂದಿಸಿದುವು ಬಡವರ ಹೃದಯ ಧರಿತ್ರಿಗಳ್.
ಆ ಹಳ್ಳಿಯ ಬಡಬಂಧುವಿನ ಸುಮಧುರ ಸಲಹೆ
ಬೇಡಿಕೆಯೊಡನೆ ಹರಿದು ಮನಮುಟ್ಟಿತು ನಯದಿಂ
ಸ್ವಾಮೀಜಿಯ.
"ಅಹುದಹುದು. ಅದುವೇ ಎನಗಿಪ್ಪ

ಅಭಿಲಾಷೆ ದೂರ ಪಯಣದಿಂದಾನ್ ಬಳಲಿಹೆ.
ಒಂದೆರಳ್ಡು ದಿನ ವಿಶ್ರಾಂತಿವೇಳ್ಕುಂಮೆನಗೆ.
ತಂಗಲ್ ವಸತಿದೊರೆವುದೇಂ ಆರ್ಯ?"
"ಆಯ್ತಾಯ್ತು
ನಿಮ್ಮಂಥ ಮುನಿರಿಸಿಗಳಿಂಗೆ ಊಟವಸತಿಯ
ನೀಡದಿರಲದು ತಕ್ಕುದೇ ನಮ್ಮ ಸಂಸ್ಕೃತಿಗೆ?
ಬನ್ನಿ. ಎಮ್ಮೊ ಜೋಪಡಿಯಲಿಂದು ತಂಗುವೊಡೆ
ತೋಷಮಕ್ಕುಂ. ಎಮಗಿಪ್ಪುದು ಗಂಜಿಯೂಟ ಕಣಾ,
ಮತ್ತೇನಿರದು. ದೈವ ಎನಗಿತ್ತುದಂ ನಿನಗೆ
ಈಯುವುದರೋಳ್ ಸಂಕೋಚಮಿಲ್ಲ; ಬಾರೆಲೆ!"
ಬೆಳ್ನವಿರ್ ಮೆರುಗಿನ ಗುಡಿಸಲೊಡೆಯ ಕರೆಯಿತ್ತಂ.
ಅಂದಲ್ಲಿನ ಮೊದಲ ಬಡಕುಟಿಯಲಿ ದೊರೆಯಿತ್ತು
ಅಸನವಸತಿಗಳ ಸಂಪದಂ. ಉಣಲಿತ್ತು, ಹೊದೆಯೆ
ದುಪ್ಪಟಿಯನಿತ್ತು ಭಯ ಭಕ್ತಿ ಗೌರವಗಳಿಂ
ತಾನುಂ ಪವಡಿಸಿದನ್ ಮನೆಯೊಡೆಯ ಯುವರಿಸಿಯ
ಬಳಿಯೆ. ಆ ಬಡಕುಟುಂಬದ ಆತಿಥ್ಯವದು ತನಿ
ಯೂಡಿಸುವೊಲ್ ಮುಟ್ಟಿತು ಮನಮತಿಯ ಕಲ್ಪಮಂ.
ಮುಂಜಾವದೊಳೆದ್ದು ನಸುದೂರದ ತಿಳಿಜಲದ
ಕೆರೆಯಂಚಿನಲ್ಲಿ ಪ್ರಾತರ್ವಿಧಿಯನುಮುಗಿಸಿದ
ಬಳಿಕ ಧ್ಯಾನಾರೂಢರಾದರ್ ನಸುಸಮಯಂ.
ಮೂಡಣದ ಸೀಮಾಂತ ರೇಖೆಯಲಿ ತಿಳಿಬೆಳಕು
ತುಳುತುಳುಕಿ ಹರಿದು ಬೆಳಗಿತು ಜಗದ್ ವಲಯಮಂ.
ಅಂದು, ಆ ಹಳ್ಳಿಯೊಳ್ ಕಾಲಾಡಿ ಸುತ್ತಾಡಿ
ಮಳೆಬೆಳೆಯ ವಿಚಾರ ಬದುಕು ಬಾಳ್ಮೆಗಳ
ವೃತ್ತಾಂತ ಮತ್ತಮತ್ತಂ ಮನುಕುಲದ ಸ್ನೇಹ

ಸೌಜನ್ಯಮಂ ಮನಗೊಂಡು ಸಂತೃಪ್ತಿಯಂಬಡೆಯೆ
ಒಡಲ್ ತುಂಬಿದ ಹಾಲ್ಗಡಲ್ ಉಕ್ಕುವವೊಲಾಯ್ತು
ದಿನವೊಂದು ಕಳಿಯಿತಲ್ಲಿ, ಕೆರೆಯ ತಿಳಿಜಳದಲಿ,
ಮಿಂದು ಮಡಿಯುಟ್ಟು ತೊಟ್ಟುಡುಗೆಯಂ ಒಗೆದು ಮಡಿ
ಗೈದು ಒಣಗಿಸಿ ತುಂಬಿದರ್ ಚೀಲಕೆ. ಮರುದಿನ
ನಸುಬೆಳಕು ಮೂಡ್ವ ಮುನ್ನಮೆಯೆ ಪೊರವಂಟರಾ
ಸ್ವಾಮಿೂಜಿ ಅತಿಥೇಯ ಬಂಧುಗಳಿಗೆ ವಂದನೆಯಂ
ಸಲಿಸಿ. ಪಯಣಂ ಸಾಗಿತು ಎಡೆವಿಡದೆ. ಪದಗಳ್
ಚಲಿಸಿದುವು ಗುಡಿಸಿಲಿಂ ಗುಡಿಸಿಲಿಗೆ. ಮನೆಗಳಿಂ
ಮನೆಗಳಿಗೆ. ಜನಜಂಗುಳಿಯ ಸ್ಥಿತಿಗತಿ, ಜಾತಿ
ಭೇದದ ಕಠಿಣ ಪಿಡುಗು, ಮೇಲುಕೀಳುಗಳ ಅತಿ
ಧಾರಣ ಅಸಹ್ಯ ಪ್ರವೃತ್ತಿ, ಬಡತನ, ದಿವ್ಯ
ಜಡತನಗಳ ಕೆಳತನ, ಕುಮತಿಯ ಮೌಢ್ಯಗತಿ,
ದಾರಿದ್ರ್ಯದೇವತೆಯ ಉತ್ತಾಲನರ್ತನ, ಅಸಂಖ್ಯ ಜನ
ರಾಶಿ, ಅರ್ಥಹೀನ ಬದುಕು, ಇತಿ ವಿವಿಧ ಬಾಳ್
ಬದುಕುಗಳ ನವಲೋಕಿಸಲೊಂದು ಸದವಕಾಶ
ದೊರೆಯಿತ್ತು ಸಂಯೋಜನಾ ಪೂರಕಮೆಂಬೊಲ್.
ದಿನದಿನದ ಪರಿಭ್ರಮಣದೊಳ್ ಕಾಲಹರಣಮೆನೆ
ತಾಳಲಾಗದ ರಣರಣಿಪ ಸುಡುಬಿಸಿಲೊರ್ಮೆ,
ಮುಂಗಾರ್ ಮಳೆಯ ಆರ್ಭಟವೊರ್ಮೆ, ಮರದಡಿಯ
ನೆಳಲ ತಾವಿನಲಿ ತಂಗುವುದೊರ್ಮೆ, ಬಡಜನರ
ಗುಡಿಸಿಲಿನಲಿ ಉಳಿವರೊರ್ಮೆ, ರಾಜರುಗಳ ಅರಮನೆ
ಹಿರಿಮನೆಗಳಲಿ ಇರುವರೊರ್ಮೆ ಎಲ್ಲೆಂದರಲ್ಲಿಯೇ
ತಂಗುದಾಣಂ. ಒರ್ಮೆ ಗಂಜಿಯೂಟ, ಮಗದೊರ್ಮೆ ಕದನ್ನ
ಮತ್ತೊರ್ಮೆ ಭಿಕ್ಷಾನ್ನ, ಇನ್ನೊರ್ಮೆ ಉಪವಾಸ

ಇಂತಿಂತು ಕಳೆಯುವುದು ದಿನಮಾನಂ ಭಾರತದ
ಯಾತ್ರೆಯಲಿ. ಹಳ್ಳಿ ಊರು ಕೇರಿ ಗಿರಿ ಬೆಟ್ಟ
ಅಟವಿ ಹೊಳೆ ಕೆರೆ ಕಾಲ್ವಾಯಿ ಎಲ್ಲವುಗಳ ನೋಟ
ಎದುರ್ವೆತ್ತು ಪಿಂಜರಿದುವು ಕಾಲಕ್ರಮದೋಳ್.
ಎಲ್ಲೆಡೆಗಳಲಿ ಜನಮನಮತಿಯಂ ಓದೋದಿ
ತಿಳಿಯುವರ್ ಸಾಮಾಜಿಕ ಸಂಸ್ಕೃತಿಯಂ ಮನ
ತುಂಬಿ ರಾಷ್ಟ್ರೀಯ ಬಡತನಕೆ ಮರುಗಿ ಕರಗುವ
ಹೃದಯವ ತಾನೆ ಸೈಪುವರ್. ಸುಖ ದುಃಖಗಳ
ಸಮ್ಮಿಳನದಲಿ ಮಿಡಿಯುವುವು ಜೀವ ನಾಡಿಗಳ್.
ರಾಜಮಹರಾಜರುಗಳ ಅಟ್ಟಹಾಸ, ಧನಿಕರ
ಆಡಂಬರ ಎಲ್ಲ ಬಗೆಯ ಚಿತ್ರಗಳ ರಾಶಿ
ಕಣ್ಗೆತ್ತುವು ಮನಮಿಡಿಸುವ ತೆರದಿ. ಅನುದಿನಂ
ಹಳ್ಳ ದಿಣ್ಣೆ ಬಯಲು ಅಟವಿಗಳಲಿ ಚಾರಣಂ.
ಹೊಳೆ ಕೆರೆ ಪುಷ್ಕರಣಿಗಳಲಿ ಸುಖ ಮಜ್ಜನಂ. ಇತಿ
ಎಲ್ಲ ಕ್ಷೇತ್ರಾನುಕ್ಷೇತ್ರಗಳಲ್ಲಿನ ದರ್ಶನಂ
ಸಂದೃಶ್ಯಮಾನಮಾಯ್ತು. ಜ್ಞಾನನಿಧಿಯ ಕುಂಭ
ತುಂಬಿ ತುಳುಕುವವೊಲ್ ಘನಿಸಿತು ಅನುಭವಘೃತ.
    ಒರ್ಮೆ, ಸ್ವಾಮಿಜಿ ಬಂಡೆಗಲ್ಲಿನ ಮೇಲೆ ಕರ
ಮುಗಿದು ಕುಳಿತು ಧ್ಯಾನರೂಢರಾಗಿರುತೆ ಭಾರತ
ವರ್ಷದಾ ಸಕಲತರ ಚಿತ್ತಾರಮಂ ನೆನೆದರ್
ಪಾರಮಾರ್ಥಿಕ ಮೌನದಲಿ. ಬಗೆಯಲಿ ಮಿಂಚಿತು
ಸುಖದುಃಖದ ಚಿತ್ರಂ ಮನೋಭಿತ್ತಿಯ ಮೇಗಡೆ.
ನಲಿದುದು ನಿಸರ್ಗ ಸೌಂದರ್ಯರಾಶಿ ಅದ್ಭುತ
ದೃಶ್ಯಮಾನ ತೇಜದಲಿ. ಎಲ್ಲಂ ಮನಗೊಳುತೆ
ಅನುಭವಾಮೃತ ಘನಿಸಿದ ಯೋಗದಲಿ ಚಿಂತನ

ದ್ರವ್ಯ ಬೆಳೆದುದು ವಿಶ್ವ ವೈಶಾಲ್ಯದಲಿ. ಮನದಿ
ಕಾರ್ಯಾಂಗ ನ್ಯಾಯಾಂಗ ಧರ್ಮಾಂಗಗಳ ಕುರಿತು
ಪರ್ಯಾಲೋಚಿಸಿ ಚಿತ್ತವರಳಿ ಕೆಚ್ಚುದಿಸಿ ನಿಜ
ಕೇಸರಿಯು ತಾನಾದರ್. ಯಯಾವರ ಬದುಕಿನಲಿ
ಕಲಿತುದೆ ಮಿಗಿಲ್ ವಿಶ್ವವಿದ್ಯಾಲಯಂ ಕಲಿಸಿದ
ವಿದ್ಯೆಗಿಂ. ಊರು ಕೇರಿಯಲಿ ಕಣ್ಸೆಳೆತ್ತ ಪಿರಿ
ಕಿರಿಯ ದೇವಾಲಯಗಳು, ವಿವಿಧ ರೀತಿಯ ಜನ
ಜೀವನ, ನಿಸರ್ಗದೈಶ್ವರ್ಯದ ಸುರಸುಂದರ
ದೃಶ್ಯಮಾನ ವೈಭವ ಚಿತ್ರುವತ್ ಮೆರೆಯುವುದು
ಅಕ್ಷಿಪಟಲಗಳ ಮೇಲೆ. ಅಹ ಏನದ್ಭುತಮಾ
ಪುಣ್ಯಭೂಮಿ ಭಾರತ! ಭಾರತ! ಭಾರತವರ್ಷ!

"ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಯೋ ಭಾರತ ಭೂಮಿ ಭಾಗೇ ।
ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ
ಭವಂತಿ ಭೂಯಃ ಪುರುಷಾನ್ ಸುರತ್ವಾತ್ ॥"

ಮೂರನೆಯ ಗುಡಿಸಲಿನಲಿ ತಂಗಿರ್ದ ಯುವಗುರು
ರಾತ್ರಿಯೂಟವಂ ತೀರ್ಚಿ ಕಾರ್ಗತ್ತಲೆಯ ತೆರೆ
ಸೆರಗಂ ಹರಿಯುವವೊಲ್ ನಡೆದರ್ ಸನಿಹದಲಿಹ
ನದೀತೀರಕೆ. ಸಾಲು ಸೋಪಾನಗಳನಿಳಿದು
ಬತ್ತಿದ ಜಳದಲಿ ಕೈಕಾಲ್ ಆಡಿಸಿ ತೊಳೆದು
ಮುಖಮಜ್ಜನಂಗೈದು ಮೇಲೇರಿ ಬಂದರಾ
ತಟನಿಯಲಿ ಮೆರೆದ ಹಾಸುಗಲ್ಲಿನ ಹರವಾದ
ಪೀಠಕೆ. ಕಿರುಸದ್ದಿರದ ಸುಖ ಶಾಂತಿಯ ಮಡಿಲ್
ಸೊಗಯಿಸಿದುದು ತನುಮನಗಳ ಸುವಿಶ್ರಾಂತತೆಗೆ.
ಕಾರ್ಗತ್ತಲೆಯ ಗರ್ಭದೊಳ್ ನಿಮಿರಿನಿಂತ ವೃಕ್ಷ

ಸಂಪದಂ ಮೌನದೇಕಾಂತದಲಿ ಮಿಂಚುತಿಹ
ಮಿನುಮಿನುಗಿ ಹಾರಾಡುವ ಖದ್ಯೋತ ಸಂಕುಲ
ಜೃಂಭಿಸಿದುದು ಸಹಸ್ರ ಸಂಖ್ಯೆಯಲಿ. ಕಣ್ಮನಂ
ನೆಟ್ಟ ಸ್ವಾಮಿಜಿ ಮೈಮರೆತಿರಲ್ ಉರುಳಿದುದು
ಪೊಳ್ತು ತಾನರಿಯದೊಲ್. ಚಳಿಯೊತ್ತಿ ನಡುಗಲುರೆ
ಮೈ, ಒಡನೆದ್ದು ಪೊರಟರ್ ಗುಡಿಸಲ ದಾಣಕೆ.
    ಅವರಿಂದು ಗುರುದೇವನ ಮಾನಸ ಕುವರನುಂ
ಮಾತ್ರವಲ್ಲ; ರಾಮಕೃಷ್ಣ ಸಂಘದ ಪರಮ
ಅಧಿಕಾರಿ. ಗೌರವಾನ್ವಿತ ಯುವಗುರು. ಜಗತ್ತು
ಧರ್ಮಭಾವದಿಂ ಆತುರಕಾತರಗಳಿಂ ಯುವ
ಗುರುವಿಗಾಗಿ ಕಾದಿಹ ಘನವಂತ. ಸರ್ವಥಾ
ಧರ್ಮಬೋಧೆಗಾಗಿ, ಕಲುಷಿತಮಾದ ಬೃಹದ್
ಸಮಾಜದ ನವೀಕರಣಕಾಗಿ, ಅನನ್ಯ ಆತ್ಮ
ಪರಮಾತ್ಮಗಳ ಮಹಾ ಅನುಬಂಧಕಾಗಿ ಆ
ಮುಂದೆ, ಪುರುಷ ಪುಣ್ಯನಾಗಿ, ಸ್ವಧರ್ಮದ
ಗುರುವಾಗಿ ವಿಶ್ವವಿಖ್ಯಾತನಾಗಿ, ತ್ರಿಲೋಕ
ಕಲ್ಯಾಣ ಕೃತ್ತಾಗಿ, ಸರ್ವಧರ್ಮ ಸಮನ್ವಯ
ದಾಚಾರ್ಯನಾಗಿ, ನವಯುಗ ಪ್ರವರ್ತಕನಾಗಿ
ಭಾರತವರ್ಷೀಯ ಚಿರನೂತನ ಸಚೇತಕ
ಗುರುವಾಗಿ, ಮಹಾನ್ ರಾಷ್ಟ್ರದ ಪುನುರುತ್ಥಾನ
ಕಾರಣನಾಗಿ, ಆಚಂದ್ರಾರ್ಕ ಕೀರ್ತಿಶಾಲಿಯು
ತಾನಾಗಿ ಬಾಳ್ದು ತಾಯುಡಿಯ ಮಣ್ಣಲಿ
ಮಣ್ಣಾಗಿ ವಿಶ್ರಮಿಸೆ ಶಾಂತಿಯ ಶಿಶುವೇ
ತಾನಾದ ಪರಿಪುಣ್ಯ ಚೇತನಾಧಿಚೇತನಂ!
    ನೆಲೆಗೊಟ್ಟ ಜೋಪಡಿಯ ಅಂಚಿನಲಿ ಮಲಗಿರ್ದ

ಸ್ವಾಮೀಜಿಯುಂ ಮಿಣ್ಣನೆ ಸೊಗದಿಂ ಮುಸುಗಿಟ್ಟು
ಜನನಿ ನಿದ್ರಾದೇವಿಯ ಸುಖಾಶ್ರಯದೊಳಿರಲ್
ಕಂಡರಾ ಗುರುದೇವನಂ ಕನಸಿನ ಮಾಯಾ
ಪ್ರಪಂಚದಲಿ. ಪ್ರವಚನ ಧಾರೆಯನಂತರಂ
ವರದ ಹಸ್ತವನೆತ್ತಿ ಅಭಯಮಂ ತೋರ್ದು "**ಅಭೀಃ
ಅಭೀಃ**" ಎಂದರ್ ದೃಢಕಂಠದಲಿ. ಒಡನೊಡನೆ
ಎಚ್ಚತ್ತು ಕಣ್ಣುಗಳ್ ಬಿರಿಬಿರಿ ಬಿರಿಸಿ ನೋಡೆ
ಗುರುದೇವನಿಲ್ಲ. ಮುಂಬೆಳಕಿನ ಛವಿ ಹರಡಿತು
ಭೂಮಿಯಾದ್ಯಂತ. ಮುಂಬಕ್ಕಿಗಳ ಸಿರಿಮೊಳಗು
ಮೊಳಗುತಿದೆ ಕರ್ಣಮೋಹಕವಾಗಿ. ತಂಗಾಳಿ
ತೀಡುತಿದೆ ಮೈ ಚಿಲ್ಲನೆ ನಡುಗಿಪ ಮೋದದಿಂ
ಆತ್ಮ ಹರ್ಷೋನ್ಮತ್ತ ಭಾವದಲಿ. ಮಂಜುಹನಿ
ಉದುರಿದುವು ತುಂತುರು ಮಳೆಯ ಹನಿಗಳಂ ಹೋಲಿ!
ತರುಗುಲ್ಮಲತೆಗಳಲಿ ಶಾದ್ವಲದ ಹಾಸಿನಲಿ
ಮಿಂಚಿದುವು ಹನಿಮುತ್ತುಗಳ್ ಬಜ್ಜರದ ಕಿಡಿಯ
ಜಾಲರಿಯ ಮಾಳ್ಕೆಯಲಿ. ನಸುವೊಳ್ತಿನಲಿ ಮೂಡು
ರವಿ ಮೂಡಿ ಇನಿದಿನಿದಾಗಿ ಮೇಲೇರಿದಂ. ತ್ರಿ
ಲೋಕಮಂ ಬೆಳಗುತ್ತೆ. ರಮ್ಯಾರುಣ ಜ್ಯೋತಿಯು
ಪ್ರತಿಫಲಿಸಿದತ್ತು ಹನಿ ಮುತ್ತುಗಳ ಅನಂತ
ಜಾಲದಲಿ. ನದಿಯೆದೆಯಲಿ ಥಳಥಳಿಸಿ ನೀರ್
ಉರಿವ ತೆರದಿ ಕೆಂಪಾಗಿ ರಂಜಿಸಿತು ಸೂರ್ಯನ
ತೇಜೋಮಯ ರಾಶಿ. ಕುಮುದಿನಿಗೆ ಮೊಗಂ
ಬಾಡಿ ಕಮಲಿನಿಗೆ ಮೊಗವರಳಿಸಿ ಅನುರಾಗದ
ನೋಂಪಿಯಲಿ ಹರಡಿತು ಉದಯಮಾನದೈಸಿರಿಯ
ಸುಂದರ ಸೊಬಗು ನೀರವ ನಿಶ್ಶಬ್ದ ಶಾಂತಿಯ

ಹರವಿನಲಿ ತೆಕ್ಕನೆ ಮೊಳಗಿತು ನವಿಲ್‌ಜೋಡಿಯ
ಕ್ರೇಂಕಾರವ ಮನವಂ ಮುಟ್ಟಿ ತಟ್ಟಿ ಎಚ್ಚರಿಪ
ಕ್ರಾಂತಿ ಕಹಳೆ ತಾನಾಗಿ. ಜೊತೆಜೊತೆಗೆ ಕೋಳಿಗಳ
ಕಾಗೆಗಳ ವನವಕ್ಕಿಗಳ ರಾಗವುಂ ಸಮ್ಮಿಳಿಸಿದತ್ತು.
ಎಲ್ಲಕ್ಕು ನಲ್ ಶೃತಿಯೂಡಿಸುವೊಲ್ ಮಧುಪಂ
ಪೂವೊಡಲಿನಿಂ ಪೂವೊಡಲಿಗೆ ಹಾರಿ ಝೇಯೆನೆ
ಝೇಂಕರಿಸಿ ಓಂಕಾರ ನಾದವಂ ಮೊಳಮೊಳಗಿ
ಮುದವನೂಡಿಸುತಿರ್ದುವು ಲೋಕೋತ್ತರವಾಗಿ.
ಗುಡಿಸಲ ಅತೀಥೆಯರ್ಗ್ಗೆ ವಿದಾಯಮಂ ಸಲಿಸಿ
ತಣ್ಪುವೊಳ್ತಿನಲಿ ಪೊರಟರಲ್ಲಿಂದೆ. ಎಡೆಎಡೆಯ
ರಾಷ್ಟ್ರೀಯಸ್ಥಿತಿಗತಿಯಂ ಕಂಡು ಕಾಣುತ್ತೆ
ಸುಖದುಃಖಗಳ ಕಠಿಣವಾಹಿನಿಯಲಿ ಮಿಾಯುತ್ತೆ
ಮುಂದೆ ಮುಂದೆ ಪಯಣಂಬೋಗೆ ಬೊಕ್ಕಿದರ್ ಶ್ರೀ
ಕಾಶೀಕ್ಷೇತ್ರಮಂ. ಮುಂಬೆಳಗಿನ ವರಪೂಜೆಯು
ಮುಗಿದತ್ತು. ಭಕ್ತಾದಿ ಜನವೃಂದ ಪ್ರಸಾದ
ಭರಿತ ತಟ್ಟೆ ಬುಟ್ಟಿಗಳ ಸಹಿತ ಮರಳುತಿರ್ದ
ಚಿತ್ತಾರವದು ಕಣ್ಗೆಸೆದತ್ತು ಮುಖಮಂಡಲದಲಿ
ಸುಖದುಃಖ ಭಕ್ತಿಭಾವಗಳ ಮುದ್ರೆಯೊತ್ತಿದ
ರೂವಿನಲಿ. ಸ್ವಾಮಿಾಜಿ ಗುಡಿಯಂ ಬೊಕ್ಕು ಶ್ರೀ
ವಿಶ್ವೇಶ್ವರಂಗೆ ಪೂಜೆಯಂ ಸಲಿಸಿ ಭಕ್ತಿಯ
ಭಾವರಸಸೂಸಿ ದಂಡವತ್ ಪ್ರಣಾಮಗೈದು
ಪೊರಮಟ್ಟರ್, ಗುಡಿಯಿಂ. ಶಿವಕ್ಷೇತ್ರದಾಸ್ಥಾನ
ಪ್ರತಿಷ್ಠಿತ ಶ್ರೀಭೂದೇವ ಮುಖ್ಯೋಪಾಧ್ಯಾಯ
ಎಂಬೊರ್ವ ಪಂಡಿತೋತ್ತಮನ ಪರಿಚಯಂ ತಾಂ
ಪಡೆದು ಪರಸ್ಪರ ಸ್ನೇಹ ಸೌರಭಂ ಬೆಳೆಸುತ್ತೆ

ತರ್ಕವಿತರ್ಕಗಳಿಗಿಳಿದರ್. ಪಂಡಿತೋತ್ತಮ
ಮಹೋದಯನುಂ ತರುಣ ಸನ್ಯಾಸಿಯ ಅದ್ಭುತ
ಧೀಶಕ್ತಿಯನರಿತು ಬೆರಗುವಟ್ಟು ಬಿರುಗಣ್ಣಿನ
ನೋಟದಿಂ ನೋಡಿ "ನೀನಹುದು ಧೀಮಂತ ಎನೆ
ಅನ್ಯಮಲ್ತು. ನಿನಗೆ ದೈವರಕ್ಷೆ ಇರ್ಕೆ!" ಎಂದೆನುತೆ
ಹರಸಿದನ್ ಒಡಲ ಪ್ರೇಮರಸಮಂ ಬಸಿದು. ಆ
ಬಳಿಕಲೀರ್ವರುಂ ಭಾರತ ಸನಾತನಧರ್ಮ,
ಸಾಮಾಜಿಕ ನೀತಿ, ಭರತ ವರ್ಷದುದ್ಧಾರ,
ಮತ್ತಮಾ ಭಾರತದ ಸಂಸ್ಕೃತಿ ಸಕಲತರ
ವಿಚಾರಗಳ್ ಕುರಿತು ಲಘು ಚರ್ಚೆಯೊಳ್ ಮನವಂ
ತೊಡರ್ಚಿದರ್ ದಿನವೆಲ್ಲ. ಬಳಿಕಂ ಮುನಿರಿಸಿಯ
ಮನಮತಿ ಪುಳಕಮಪ್ಪಿ ಹರ್ಷಿತವದನದಿಂದೆ
ಹರಸಿದನ್ "ಎಲೈ ವತ್ಸ! ನಿನಗೆ ದಿವ್ಯಭವಿಷ್ಯ
ಮಿರ್ಕೆ" ಆ ಶುಭಹಾರೈಕೆಗೆ ಆನಂದಪೂರ್ಣ ಮನ
ಮತಿಗಳಿಂ ಅಭಿವಂದನೆ ಸಲಿಸಿದನಾ ತರುಣ
ಸನ್ಯಾಸಿ.
"ಭಾರತ ಸನಾತನಧರ್ಮಮಿಂದು
ನಿನ್ನಂಥ ಧೀಮಂತರ ಬುದ್ಧಿಮತ್ತೆಯಿಂದಲಿ
ಉಳಿಯವೇಳ್ಕುಂ. ದೈವಕೃಪೆಯಿರೆ ನೀಂ ಮುಂದೆ
ಜಗದ್ವಿಖ್ಯಾತಿಯಂ ಪಡೆವುದು ದಿಟಂ!" ಹೃದಯದ
ಆಳದಿಂ ಹೊಮ್ಮಿದ ವಚನಗಳಲಿ ಆನಂದ
ರಸಪೂತದಮೃತದ ಧಾರೆಯದು ಹರಿದತ್ತು
ತರುಣನಂ ಉತ್ತೇಜಿಸಲುಿರೆ, ಆ ಪಂಡಿತಂ
ಸಿತಸ್ಮಿತವನರಳಿಸಿ "ಆರ್ಯಾ, **ಕೃತಾರ್ಥೋಽಸಿ!**"
ಎಂದನ್ ಮುದದಿ ಧನ್ಯ ಭಾವವಂ ಸ್ಫುರಿಸುತೆ.

ಪಿರಿಯರಿಂ ನಲ್ಮೆಯಿಂದಲಿ ಬೀಳುಕೊಂಡು ತಾಂ
ಪೊರಮಟ್ಟರ್ ಎಲ್ಲರ ಶುಭಾಶಯ ಮತ್ತಮಾ
ಆಶೀರ್ವಾದದ ಅಕ್ಷತೆ ಶಿರೋದೇಶದೊಳ್
ಪೊತ್ತು. ಧ್ಯಾನಾಂಧ ಮನದಲ್ಲಿ ಶ್ರೀಗುರುದೇವ
ಶ್ರೀರಾಮಕೃಷ್ಣರಂ ನೆನೆಯುವರ್.
                                ಈ ಮಧ್ಯೆ
ದೇಗುಲದ ಪರಿಸರದಲಿ ಕಣ್ಗೆಸೆದ ತ್ರೈಲಿಂಗ
ಸ್ವಾಮಿಗಳನೊರ್ಮೆ ಭೇಟಿಗೈವ ಸುಸಮಯ
ಒದವಿ ಬಂದುದ್ಯೆ ಮನ ಮುದಿಪಂತೆ. ಒಡನೊಡನೆ
ಹಾದಿಯಂ ಪುಡುಕುತೆ ನಡೆಯಲುರೆ ದೂರದಲಿ
ಕಂಡರವರ ಆಶ್ರಮದ ಜೋಪಡಿಯ ನೆಲೆಯಂ.
ಅವರೊಡಂ ಮಾತುಕತೆವೆರಸಿ. ಅಂದಿಂದಿನ ವಿಚಾರಮಂ
ಕುರಿತು ಮನಬಿಚ್ಚಿ ಮಾತಾಡಿ ಧಾರ್ಮಿಕ ವಿಷಯ
ಕುರಿತು ಚರ್ಚಿಸಿ ಜ್ಞಾನ ಕುಂಡಮಂ ದುಂಬಿದರ್
ಎಡೆವಿಡದೆ. ತರುವಾಯಿ ಭಾಸ್ಕರಾನಂದರೆನೆ
ಪ್ರಸಿದ್ಧಿವೊಡೆದ ತತ್ವಶಾಸ್ತ್ರವೇತ್ತರ ಸತ್ಕೀರ್ತಿ
ಮಾಲೆಯಂ ಕೇಳರಿದು, ಅವರ ನೆಲೆಯಂ ಪುಡುಕಿ
ಪುಡುಕಿ ಅಲೆದಲೆದು ಬೇಸತ್ತು ಚಿಂತಿಸಿರೆ
ಕೊನೆಗೊರ್ಮೆ ದಕ್ಕಿದುದು ಅವರ ನೆಲೆವನೆ. ಆಗ
ಪೊರಮಟ್ಟರೊಡನೆ ಸ್ವಾಮಿಜಿ ಭಾಸ್ಕರಾನಂದ
ಸ್ವಾಮಿಗಳ ಭೇಟಿಗೆ. ಬಹುಜನ ಶ್ರೋತೃಗಳವರ
ಸುತ್ತುವರಿದು ಮಂಡಿಸಿರುತಿರೆ ಗುರುಗಳ್ ದಿವ್ಯ
ಅನುಭವಾಮೃತವನೊರೆಯುತಲಿರ್ದರ್ ತಮ್ಮ
ಕೊರಳ್ ಕೋಡಿ ಹರಿಸಿ. ಸಿರಿನುಡಿಯನೊರೆಯುತ್ತಲಿ
ನುಡಿದರೆಂತೆನೆ "ಶಿಷ್ಯ ವರೇಣ್ಯರೇ ಕೇಳಿ, ಈ

ಜಗತ್ತಿನೊಳ್ ಕಾಮಿನಿ ಕಾಂಚನಂ ಕಡೆಗಣಿಸಿ
ಸಂಪೂರ್ಣ ವರ್ಜಿಸಿದ ಪರಿಪೂರ್ಣ ವ್ಯಕ್ತಿಯಾರ್
ಇಲ್ಲಮನೆ ಅನ್ಯಮಲ್ತು!"
                ಅದಂ ಮನಗೊಳ್ಳುತೆ
ಸ್ವಾಮೀಜಿಯುಂ "ಇದೇನೆಂಬಿರಿ? ಮಹರಾಜ್
ಕಾಮಿನೀ ಕಾಂಚನಗಳಂ ಪೂರ್ಣ ಮನದಿಂದೆ
ಮೇಣಾತ್ಮ ತೋಷದಿಂದೆ ವರ್ಜಿಸಿದ ಮಹಾನು
ಭಾವ ಶ್ರೀರಾಮ ಕೃಷ್ಣ ಪರಮಹಂಸರಂ ಆಂ
ಕಣ್ಣಿಂದೆ ಕಂಡಿರ್ಪೆನ್."
                ಆಗಳಾ ಮಾತಂ
ನಿರ್ಲಕ್ಷಿಸಿ, "ನೀನಿಂ ತರುಣ ಇದಂ ಪೂರ್ಣಮರಿತು
ತಿಳಿಯಲಾರೆ, ಇದರೊಳೇಂ ಉತ್ಪ್ರೇಕ್ಷೆಯಿಲ್ಲವೈ!"
ನಿರ್ಲಕ್ಷ್ಯದ ಲಘುಭಾವದಲಿ ನುಡಿಸಿದರ್, ಆ
ಭಾಸ್ಕರಾನಂದರುಂ. ಸ್ವಾಮೀಜಿಯದನರಿದು
ಪ್ರತಿಭಟಿಸಿದೊಡಂ ಗುರುದೇವನಮಲ ಚರಿತೆಗೆ
ಕಳಂಕವೊದವಿದುದಂ ಸಹಿಸಲಾರದೆಯೆ ದೃಢ
ಭಾವದಿಂ ನಿರ್ಭೀತ ಧ್ವನಿಯಲಿ ಮತ್ತೆ ತಾಂ
ಪ್ರತಿಪಾದಿಸಲುದ್ಯುತಗೊಳೆ ತೇಜಸ್ವಿ ಯುವ
ಸನ್ಯಾಸಿಯ ಘನ ಸತ್ವ ಪೂರ್ಣತೆಯ ಧೀಮಂತ
ವಚನಧಾರೆಯಂ ಆಲೈಸಿದ ಭಾಸ್ಕರಾನಂದ
ಸ್ವಾಮಿಗಳ್ ಮತ್ತಮಾ ಭಕ್ತಜನರುಂ ಕೇಳಿ
ಮೂಕವಿಸ್ಮಿತರಾದರ್. ನೆಟ್ಟದಿಟ್ಟಿಯಂ ನಟ್ಟು
ನಾಂಟಿ ಅಹಹ ಎಂತಪ್ಪ ವಾಗ್ಧಾರೆ ಈತನ
ಕಂಠದೊಳ್ ಸರಸ್ವತಿಯೆ ನೆಲೆಸಿರಲಕ್ಕು ಶ್ರೀ
ಹೃದಯದಲಿ ಪರಮೋಚ್ಛ ಜ್ಞಾನ ಜ್ಯೋತಿ ಬೆಳಗಿ

ಥಳಥಳಿಪುದು ಸತ್ಯಂ! ಎಂದೆಂದು ಕೊಂಡಾಡಿ
ಪೊಗಳಿದರ್. ಆದೊಡಂ ಗುರುನಿಂದೆ ಸಂಭವಿಸಿ
ಮೆರೆದ ಸ್ಥಳದಲಿ ಇರಲೊಪ್ಪದಿರೆ ಮನಂ, ಆ
ಕೂಡಲೇ ಪೊರವಂಟರಲ್ಲಿಂದೆ ಸ್ವಾಮೀಜಿ.
ಮರುದಿನಂ ಬ್ರಾಹ್ಮೀ ಮುಹೂರ್ತದೊಳ್ ದೇಗುಲದ
ಪೌಳಿಯಿಂ ಪೊರವಂದು ಅಯೋಧ್ಯಾ ನಗರಿಯಂ
ಗುರಿಗೊಂಡು ಕಾಶೀಕ್ಷೇತ್ರಮಂ ಬಿಟ್ಟರ್, ದೂರ
ದೂರದಾ ಪಥ ಹರಿದಿದೆ ಕೊನೆಗೊಳ್ಳದ ತೆರದಿ.
ಕದ್ದಿಂಗಲ ಮಸುಗಾಂತಿ ದಾರಿಯ ದೀಪಮಂ
ಹಿಡಿಯಿತ್ತು. ಮುಂದೆ ಮುಂದೆ ಮುಂಕೊಂಡು ನಡೆದಿರೆ
ದೂರದಲಿ ಕಾಡುಕೋಳಿಗಳ ಮೊಳಗು ಮುಟ್ಟಿತು
ಕರ್ಣಪಟಲಮಂ. ಮೊಲ ಮುಂಗುಸಿ ಕುರಿ ಸಾರಂಗ
ಇತಿ ಸಾಧು ಪ್ರಾಣಿಗಳ್ ದಾರಿಗಡ್ಡೈಸಿ ದಾಟಿ
ಹೋದುವು ಎಡೆಯಿಂದೆಡೆಗೆ. ಹಳ್ಳಿಗಳ ಕುಪಥಂ
ಕಲ್ಲು ಉಬ್ಬುತಗ್ಗುಗಳಿಂ ಕೂಡಿ ತ್ರಾಸಕರ
ಮಾದತ್ತು ಕಾಲ್ನಡಿಗೆಗೆ. ಹೃನ್ಮನಗಳಲಿ ಹರ
ನಾಮ ಧ್ಯಾನರಸ ಘನಿಸಿರೆ ದಿವ್ಯ ಭಾರಾಂತುದು
ಮತಿಕ್ರಾಂತಿ. ಸಾಗಿದುದು ಹಾದಿ ಏಕರೀತಿಯ
ನಡಿಗೆಯಲಿ. ಪಸಿವು ಧಗೆಗಳ್ ಭುಗಿಲ್‌ಗೊಳ್ಳುತಿರೆ
ಎಲ್ಲಿಯುಂ ಮನೆಮಠಗಳ್ ಕಣ್ಗೆಸೆಯವು. ಸೋಲ್ದು
ಬಿರುಸಿನಿಂದೆ ನಡೆದಿರೆ ಬೊಕ್ಕರ್ ಕುಗ್ರಾಮಂ.
ಗ್ರಾಮಸ್ಥನೊರ್ವನಂ ಯಾಚಿಸಿದರ್ ನೀರ್ಕುಡಿಯೆ.
ಆ ತರುಣ ಸ್ವಾಮೀಜಿಯಂ ಅಡಿಯಿಂ ಮುಡಿವರೆಗೆ
ನೋನೋಡಿ ಆಶ್ಚರ್ಯಚಕಿತನಾಗಿ ನುಡಿದಂ,
“ಅಯ್ಯಾ, ಭಗವದ್ಭಕ್ತರೆ, ನೀನೆಮ್ಮ ಕೈಯಿಂದೆ

ನೀರ್ಕುಡಿಯಲಾಸಲ್ಲ. ಪಂಚಮನಿರ್‌ಲೆಂತಾಂ
ನೀಡುವೆನ್ನೈ ಶುದ್ಧ ಜಲವಂ? ಆಗದಾಗದು!"
ಎನಲಾ ಯುವ, ಮನೀಷಿ ಮನವೊಪ್ಪಿ! ಮತಿಯೊಪ್ಪಿ!
ಒಂದೆರಳ್ಡು ಹೆಜ್ಜೆಗಳ್ ನಡೆದಬಳಿಕ ಮರಳಿ
ಮನದಿ ಯೋಚಿಸಿ.... ಛೆ:! ಆನೆಂತ ಮರುಳ! ಪಂಚಮನ
ಕೈಯಿಂದೆ ನೀರ್ಕುಡಿದೊಡೇಂ ತಪ್ಪು? ಆಂ ಜಾತಿ
ನೀತಿಗಳ ಕಟ್ಟುಪಾಡಿಗೊಳಗಾದಪುದು ಸರಿಯೇಂ? ಎಂಬ
ಆತ್ಮ ಭರ್ತ್ಸನೆಯಲಿ ಮನಮಿಡುಕಿ ಎದೆಗರಂಗಿ
ಪಿಂದಿರುಗಿ ಬಂದು ನೀರ್ಕುಡಿದರ್ ಬೊಗಸೆಯೊಡ್ಡಿ.
ಪಂಚಮನ ಸೇವೆಯಂ ತೋಷದಿಂ ಪ್ರೀತಿಯಿಂ
ಹೃತ್ಪೂರ್ವಕವಾಗಿಯೇ ಸ್ವೀಕರಿಸಿ ಮಾನಿಸಿ
ಮುಂಬರಿದರ್ ಸ್ವಾಮೀಜಿ, ನೇರ ಪಥಂಪಿಡಿದು.
    ಇಂತಿಂತೋರೊಂದು ಪರಿವ್ರಾಜಕತನದಿಂದಲಿ
ಅನನ್ಯ ಘನಾನುಭವ ಘನಿಸಿ ಜ್ಞಾನವಲಯಂ
ಬಿರಿಯುತಿರೆ, ಶರೀರಂ ದೇವೇಂದ್ರನ ಬಂಧುರ
ಐರಾವತವೆ ನಡೆತಂದವೊಲ್ ಪ್ರಭಾಸಮೆನೆ
ಅನ್ಯಮಲ್ತು. ಸ್ವಾಮೀಜಿಯುಂ ನಡೆನಡೆದು ಅತಿ
ದೂರದ ಅಯೋಧ್ಯೆಯಂ ಕಂಡು ಆನಂದದಿಂ
ರಾಜವೀಥಿಯಂ ಮುಟ್ಟಿದರ್. ನೋಡೆ ರಾಮನ
ಸತ್ಕೀರ್ತಿ ಪರಿಮಳಂ ಇಂತು ಘನಿಸಿಹುದೊ ಎನಲ್
ಶಾಂತಿ ಪರಿಮಳವೆ ಎಲ್ಲೆಲ್ಲು! ಓವೊ, ಪುರಾಣ
ಪ್ರಸಿದ್ಧ ಅಯೋಧ್ಯೆ! ದಶರಥನ ಸಾಮ್ರಾಜ್ಯ!
ತ್ರಿಲೋಕವಂದಿತನೆನೆ ಪ್ರಖ್ಯಾತಿವೆತ್ತಾ
ಶ್ರೀರಾಮಚಂದ್ರನ ಅಯೋಧ್ಯೆ! ಪಜ್ಜೆಗಳಿಂಗೆ
ಹಿತಮೆನಿಪ್ಪ ಪರಿಪುಣ್ಯ ಭೂಮಿ! ನಿಸರ್ಗಸಿರಿ

ಸಂದೃಶ್ಯಮಾನಮಾದ ಮಹದೈಶ್ವರ್ಯನಿಧಿ!
ಸೂರ್ಯವಂಶದ ಅಲಘು ಪರಾಕ್ರಮಿಗಳ ಭವ್ಯ
ರಾಜಧಾನಿ! ಸೀತಾರಾಮರ ಚರಣಧೂಳಿ
ಪವಿತ್ರೀಕರಿಸಿದ ದಿವ್ಯ ಪ್ರಶಾಂತ ಪ್ರದೇಶ!
ಸ್ವಾಮಿಜಿಯುಂ ಎಲ್ಲೆಡೆಗಳಲಿ ಕಣ್ ಹಾಯಿಸಿ
ನೋಡುತೆ ಒಳ ಪಥವಿಡಿದರ್ ದ್ವಾಪರಯುಗೀಯ
ಪ್ರೇಮಪರಿಮಳಂ ಎದೆಯಂ ಮುಟ್ಟಿ ನಾಂಟಿದುದು
ಸ್ವೇಚ್ಛೆಯಲಿ. ಉದ್ವಗಲದೊಳ್ ವಿಚರಿಸಿ ನೋಡಲ್
ಎಲ್ಲೆಡೆಗಳಲಿ ದೇಗುಲಗಳ್ ತಲೆಯೆತ್ತಿ ನಿಂದ
ಶ್ರೀ ಸೊಬಗು ದೃಶ್ಯಮಾನ ಸೌಂದರ್ಯಮಾದುದು;
ನೋನೋಡುತೆ ತನುಮನಕೆ ಸಂತಸರಸವೂಡಿದರ್
ಸ್ವಾಮಿಜಿ. ಶ್ರೀರಾಮನಾ ಕುಲಕೀರ್ತಿಯಂ ಮಿಗೆ
ಸಾರಿ ಪೇಳ್ವ ಗುಡಿಗೋಪುರಗಳಿನೆ ಕೆಲವಾನು
ದೇಗುಲಗಳಂ ಬೊಕ್ಕು ದರ್ಶನದ ಭಾಗ್ಯಂ
ಪಡೆದು ವಿರಮಿಸಿದರಲ್ಲಿಂದೆ.
ತರುವಾಯಿ,
ಲಕ್ನೋ ಮಾರ್ಗವಿಡಿದರ್. ಏಕಾಂತ ಚಿಂತನಾ
ಏಕಾಂತ ಪಯಣ ಏಕಾಂತ ನಿಷ್ಠೆಯೇ ಎಲ್ಲ.
ಒರ್ಮೆ ಸಂಗೀತವಂ ಹಾಡುವರ್. ಇನ್ನೊರ್ಮೆ
ಭಾವನಾ ವೇಶದಲಿ ಮೈಮರೆಯುವರ್.....ಭರತ
ವರ್ಷದ ವಿಶಾಲತೆ ಎನಿತಿರ್ದೊಡೇಂ? ತೀವ್ರ
ನಿರಕ್ಷರಕುಕ್ಷಿತನದಿಂ ವೈಭವೀಕರಿಸಿದ
ಅದ್ಭುತ ಸಮಾಜ ಸುವಿದ್ಯೆಯಿಂದಲಲ್ಲದೆಯೇ
ಎಚ್ಚೆತ್ತುಕೊಳ್ಳದೆಂಬುವ ದೃಢ ನಿರ್ಧಾರ
ಮೂಡಿದುದು ಮನದೊಳ್. ಸ್ಥಿತಿಗತಿಯಂ ನೆನೆಯುತಿರೆ

ಮನೋಮಂಡಲವೆ ಕುಸಿದುಬೀಳ್ವಂತೆ ಒಡಲಿನ
ಬಳ್ಳಿ ಕಟ್ ಕಟ್ಟನೆ ಕಡಿದು ತುಂಡು ಗೊಳ್ವಂತೆ
ಭಾಸಣಿಪುದು ಮೆಯ್ಯ ಬಳಲ್ಕೆ ಒಡಲ ಬಳಲ್ಕೆ
ಮಾನಸಿಕ ಬಳಲ್ಕೆಗಳ್ ಕೂಡಿ ಶರೀರ ಸಂಪುಟ
ಸೋಲ್ದು ಹೆಮ್ಮರದ ತಣ್ಣೆಳಲಲಿ ಕುಳಿತು ದಣಿವು
ನಿವಾರಿಸುವರ್ ನಸುವೊಳ್ತು. ಮತ್ತೆ ಪಯಣದ ಗುರಿ
ಎಂದಿನವೊಲ್. ನಸು ದೂರದಲಿ ಮೇಯುತಿಹ ಜೋಡಿ
ನವಿಲ್ ದೃಷ್ಟಿಗೆತ್ತಿರೆ ಅವುಗಳ ಮೆಯ್ಯ ಸೊಬಗು
ಸೆಳೆದುದು ಮನವಂ. ಒರ್ಮೆಗೇ ತಲೆಯೆತ್ತಿ ಕೊರಳ್
ತೂರ್ಯಮಂ ಹರಿಸಿತಾ ನವಿಲ್. ಅಲ್ಲಿಯೆ ಬೇರೆ
ಎಡೆಯಲೆಲ್ಲೋ ಇನ್ನೊರ್ ನವಿಲ್ ಮರುದನಿಯಂ
ಕೊಟ್ಟಿತು ಸುಖಾನಂದ ಪೂರ್ವಕದಭಿರುಚಿಯಲಿ.
ನಡಿಗೆ ಮುಂಬರಿದು ಅವು ಕಣ್ಮರೆಗೊಳೆ ತನ್ನಯ
ಏಕಾಂಗಿತನಕೆ ಮರುಗಿ ತಾನ್ಯೆದುದೊ ಎನಲ್
ಸಿಪಿಲೆಯೊಂದು ಉದ್ದನೆಯ ಪುಕ್ಕದ ಗರಿಗಳಂ
ಕೆದರ್ದು ಕೊರಳ್‌ರಾಗಮಂ ಹರಿಸಿತು ಹೃನ್ಮನ
ಅರಳುವಂತೆ. ಕಾಮಳ್ಳಿಯ ಕಂಠಸ್ವನ 'ಕ್ಹೂ
ಕೂವಯ್ಯೋ' ಎಂದು ಹರಿಯಿತು ಕರ್ಣಪಟಲಮಂ
ನವುರಾಗಿ ಮುಟ್ಟುವಂತೆ. ಸ್ವಾಮಿಜಿ ಅತ್ತಲ್
ನಿಟ್ಟಿಸುತಿರೆ ಮತ್ತೆ ಕೊರಳೆತ್ತಿ ಹರಿಸಿದತ್ತು
ಕಂಠಸ್ವನಮಂ. ಸ್ವಾಮಿಜಿ ಸರಸರನೆ ನಡೆದು
ಹಾದಿ ಕ್ರಮಿಸತೊಡಗಿದರ್. ಎಳೆವಿಸಿಲ್ ಬೆಳ್ಳಗೆ
ಬಿರಿಯಿತು ನಸು ಬೆಚ್ಚಗೆ ಹರಡಿ. ಸೊಗಮಾದುದದು
ಬಿಸಿಲ್ ಮೊಹಕೆ. ಪಥ ಕಳಿದು ಪಿಂದುಳಿಯುತಲಿರೆ
ದೂರದೂರದಲಿ ಕಂಗೊಳಿಸಿತು ಸುರಮ್ಯ ಆಗ್ರಾನಗರಿ.

ಜಗತ್ ಪ್ರಸಿದ್ಧ ಟಾಜ್‌ಮಹಲಂ ಉಡಿಯೊಳಾಂತ
ಸುರಸುಂದರ ನಗರಿಯದು ಪಚ್ಚಪಸುರ್ ದ್ರುಮ
ಕೋಟಿಯಂ ಹೊಂದಿ ನಳನಳಿಸಿ ಮೆರೆದುದು ಪರ್ಣ
ವೈಭವದಲಿ. ಜನ ಸಾಗರ ಹರಿಯುತಲಿರ್ದುದು
ಹಾದಿ ಬೀದಿಗಳಲಿ ನೆರೆ ತುಂಬಿ. ಜನಮನಗಳ
ಕುತೂಹಲಮಂ ಕಂಡರಿದು ಚಿತ್ತ ಕಲ್ಪಮಂ
ತುಂಬಿ ತಾಜ್‌ಮಹಲ್ ಭವನಮಂ ಕಣ್‌ನೋಟಂ
ನೆಟ್ಟು ನೋಡಿದರ್ ದಿವಿನಾದ ಸೌಂದರ್ಯರಸ
ಋಷಿ ತಾನಾಗಿ. ಅದ್ಭುತ ಕಲಾಕಲೆಯ ವೀಕ್ಷಣೆ
ಮುದವಿತ್ತುದು ಮನಃಪ್ರಾಣಗಳ ಶುಕ್ತಿಗೆ. ಅಲ್ಲಿ
ಕಳೆದುದೆನಿತೊ ಪೊಳ್ತು ಗಮನಕೆ ಬಾರದ ತೆರದಿ.
ಸ್ವಾಮೀಜಿಯುಂ ಇತರ ಸಹಸ್ರಾರು ಸಹ
ವೀಕ್ಷಕರೊಳ್ ತಾನುಂಮೊಂದಾಗಿ ನೋಡಿದರ್
ಪರಮ ಪ್ರೇಮದ ಕುರುಹಾದ ಬೃಹದ್ ಆಲಯ
ಸಂಪುಟಮಂ ಯಮುನಾ ನದಿಯ ತಟನಿಯಲಿ ನೆಲೆ
ನಿಂದು ಜೃಂಭಿಸಿರೆ ಸುರಲೋಕವೇ ಧರೆಗಿಳಿದು
ಬಂದಿಹುದೊ ಎನಲ್ ಸುಂದರವಾದ ಅಮೃತ ಮಹಲ್.
ಸ್ವಾಮೀಜಿ ಸಾನಂದದಿಂ ವೀಕ್ಷಣೆಯಂ ಮುಗಿ
ಬಗಿಗೊಳಿಸಿ ಪೊರಮಟ್ಟರ್ ದೇಶೋ ವಿಶಾಲಮಾ
ಪರಿವ್ರಾಜಕತೆಯ ನೇಮ ನಿಷ್ಠೆಯಲಿ. ಮತ್ತಂ
ಮುಂಬರಿದು ನಗರ ಬಯಲುಗಳ್ ದಾಂಟಿ ಭೀಕರ
ಭೂಮ ಗಿರಿ ವನಧಿಗಳ ಒಡಲ್ ಬೊಕ್ಕು ಕಠೋರ
ಕಾನನದಲಿ ಅಡ್ಡಾಡಿ ಹಳ್ಳವಿಳಿದು ತಿಟ್ಟ
ನೇರುತೇರಿ ನಡೆದರ್ ಮುಂದೆ ಮುಂದೆ. ನದಿಹೊಳೆ
ಬಯಲು ಪಿಂದುಳಿದುವು, ಕುರಿ ಸಾರಗ ಬಲ್ಲೂಕ

ಮೊಲ ಚಿರತೆಮಿತ್ಯಾದಿ ಚೆಲುವುಳ್ಳ ಪ್ರಾಣಿಗಳ
ಮನಮೋಹಕ ರೂಪು ತಣಿಸಿದುದು ಕಣ್ ಮನಮಂ.
ಎಲ್ಲಿಯುಂ ಒಂದೆರಳ್ದು ದಿನ ತಂಗಿ ವಿಶ್ರಾಂತಿ
ಪಡೆದರಿಲ್ಲ. ಎನಿತೋ ಸಾಧುಸಂತರ ಭೇಟಿ
ಯಾಯ್ತು. ಅವರೊಡಂ ನಸುವೊಳ್ತು ಇರುತಿರ್ದು ಕೆಲ
ಮಾತುಗಳನಾಡಿ ಮನಮತಿಗಳಂ ಸೋಸಿದರ್
ಬಿಜ್ಜೆಯಾಕರದಲ್ಲಿ. "**ಬ್ರಹ್ಮತೇಜೋ ಬಲಂ**
ಬಲಂ. ದಿವ್ಯಾತ್ಮ ಶಕ್ತಿಯೆ ಸರ್ವಬಲಂ." ಎನೆ
ಸಾಗಿದುದು ಪಯಣ ಎಂದಿನವೋಲ್,
ಓ, ಅಲ್ಲಿ
ದೇವನದಿ ಯಮುನೆಯಾ ಪ್ರವಾಹದ ವಾರಾಶಿ!
ಸರಸ ಸಲಿಲ ಜುಳು ಜುಳಿಪ ಮಂಜುಳ ರಾಗಧುನಿ
ಕರ್ಣಪಟಲಗಳಿಂಗೊರೆಯುತಿದೆ! ಅದೇ ಆ
ಮಂಜುಳರವದ ಕರೆಯು ಮುಟ್ಟಿದುದು ಹೃದಯದ
ಗಹ್ವರಂ. ಸ್ವಾಮೀಜಿ ನಡೆದರ್ ನದೀ ತಟಿಗೆ.
ಬೃಂದಾವನ! ಶ್ರೀಕೃಷ್ಣ ಪರಮಾತ್ಮನ ಬಾಲ್ಯದ
ಲೀಲಾ ವಿನೋದ ಖೇಲನ ನಡೆದುದು ಅಲ್ಲಿಯೆ!
ಭಾರತವರ್ಷದ ಕವಿಜನ ವರ್ಣಿತ ಮಹೋನ್ನತ
ಬೃಂದಾವನ. ಗೋಪಾಲಕರ ಮನ ಹರಣಗೈದ
ಯಮುನಾ ನದೀತೀರ. ಸ್ವಾಮೀಜಿಯುಂ ನದೀ
ಜಳದೊಳ್ ಕೈಕಾಲ್ ತೊಳೆದು ಮುಖ ಮಜ್ಜನಂ
ಗೈದು ಬೊಗಸೆಯೆತ್ತಿ ಒಡಲ್‌ತುಂಬ ನೀರ್ಕುಡಿದು
ದಣಿವಾರಿಸಿಕೊಂಡರ್ ನಸುವೊಳ್ತು. ಕಾಲ್ಚಾಚಿ
ನದೀ ನೀರಿನೊಳ್ ಇಳಿಬಿಟ್ಟಿರೆ ಪಿರಿಕಿರಿಯಾ
ಮೀಂಗಳೊಗ್ಗರಂ ಸುತ್ತಮುತ್ತಲ್ ಸುಳಿಸುತ್ತಿ

ಮೂಸಿ ಮುಟ್ಟಿ ಏನೆಂದು ಪರಿಕಿಸುವೊಲ್ ಬಂದು
ಬಂದು, ಪೋದಪವು ಮಿಂಚಿಮಿಣುಕಿ ಎಡೆಎಡೆಯಲಿ
ಕಣ್ಣಾಡಿಸಿದರ್ ಸ್ವಾಮಿಜಿ, ತೀರದಲಿ ಗಿಡ
ಗೆಂಟೆಗಳ್ ಕಣ್ಗೆತ್ತುವು. ಹಲಕೆಲಂ ಗೋಪಿಕಾ
ರಮಣಿಯರ ಹೋಲಿ! ಮತ್ತೊಂದು ಕೆಂದುಡಿಗೆಯಲಿ
ಮೆರೆವ ಪೀತಾಂಬರಧರ ಶ್ರೀಕೃಷ್ಣನ ಹೋಲಿ!
ಮತ್ತೆನಿತೊ ವರ್ಣವರ್ಣಾಂತ ಧೇನುಕರುಗಳ
ಹೋಲಿ! ದ್ವಾಪರ ಯುಗೀಯ ಶ್ರೀಕೃಷ್ಣನ ಮುದ್ದು
ಲೀಲಾ ವಿನೋದದ ಸುಸುಂದರತಮ ವೈಖರಿ
ಮೆರೆದುದು ಕಣ್ಮುಂದೆ, ಲಲಿತ ಖೇಲಿವನಂ ಪೊಸ
ಪೊಚ್ಚದೆನೆ ವಿಜೃಂಭಿಸಿದುದು ಚಿತ್ತಭಿತ್ತಿಯ
ಮೇಲೆ! ಮಂದಸ್ಮಿತ ಮುಖಾರವಿಂದದಲಿ ಆ
ಸತ್ಯ ಸುಂದರ ಚಿತ್ರವ ನೆನೆದು ನದೀ
ನೀರ್ಗಿಳಿದು ಬಟ್ಟೆಗಳಚಿ ತೀರದೊಳಿರಿಸಿದರ್.
ನಸುವೊಳ್ತು ಈಸಿ ಸುಖಮಜ್ಜನಂಗೈದ ಬಳಿಕ
ಮೈಮನಂಗಳ್ ಹಗುರವಾದುವು. ಶರೀರವಂ
ಕೊಡವಿ ಜಲವಂ ಬಳಿದು ಉಡಿಗೆಯಂ ಕೈಗೆತ್ತು
ನೋಡೆ, ಕೌಪೀನವೇ ಮಂಗ ಮಾಯಮಾಗಿತ್ತು!
ಎನಿತಾಶ್ಚರ್ಯ! ಅಲ್ಲಾರ್ ಇರದೆ ನಿರ್‌ಜನಮಾ
ಪ್ರದೇಶ. ಕಂಗಳೆಲ್ಲೆಡೆಯು ಹರಿದಾಡಿದರೆ
ಎಲ್ಲಿಯುಂ ಕಾಣದಾಯ್ತು ಕೌಪೀನಂ ಇನ್ನು
ಪಯಣಿಪುದು ಎಂತೆಂದು ಲಜ್ಜೆಯ ಮುಜುಗರವದು
ಆವರಿಸಿ ಕಂಗಾಲೈಸಿ ಅತ್ತಿತ್ತ ನೋಡುತಿರೆ
ಮಿಳೆಮಿಳನೆ ಕಡು ಚಿಂತೆಯಲಿ, ಉತ್ಕಟ ಲಜ್ಜೆಯು
ಮುಸುಗಿತು ಮನವಂ. ಶ್ರೀಕೃಷ್ಣ ಪರಮಾತ್ಮನಂ

ನೆನೆದು ಉಡಿಗೆಯನುಟ್ಟು ತಟನಿಗೈದು ಮನದೊಳ್
"ಕೃಷ್ಣಾಯ ವಾಸುದೇವಾಯ....." ಎನುತೆನುತೆ ಕರ
ಜೋಡಿಸಿದರ್ ಭಕ್ತಿರಸಪೂರ್ವಕವಾಗಿ. ಆ
ಗಂಭೀರ ಕ್ಷಣದಲಿ ಕನಕಕಾನ್ತಿಯ ಭವ್ಯ
ತೇಜದಿಂ ಎದುರ್ವೆತ್ತ ತಾಪಸಿಯೊರ್ವನುಂ
ಮೊಗದೊಳ್ ಮಿದುಮಂದ ಸುಹಾಸಮಂ ಬೆಳಗಿಸುತೆ
"ವತ್ಸ! ಚಿಂತಿಸದಿರ್...." ಎನುತ್ತೆ ಕೌಪೀನಗಳ್
ನೀಡಿದಂ! ಒಡನೆ ಗೌರವದಿಂ ಕರ ಜೋಡಿಸೆ
ಎಲ್ಲಿಹನ್ ಆ ತಾಪಸಿ? ಹಾ! ಎಂತೈದನವನ್
ಸಮಯೋಚಿತವಾಗಿ? ಇದೇಂ ಕೃಷ್ಣ ಪರಮಾತ್ಮ
ದೇವನ ಮಹಿಮೆಯೊ? ಎನೆ ಅಚ್ಚರಿಯ ಕುಂಡದಲಿ
ಮುಳುಗಿ ಮನಮುಟ್ಟಿ ಹೃದಯ ತುಂಬಿ ಪ್ರಾರ್ಥಿಸಿದರ್,

"ಕೃಷ್ಣಾಯ ಯಾದವೇಂದ್ರಾಯ
ಜ್ಞಾನ ಮುದ್ರಾಯ ಯೋಗಿನೇ ।
ನಾಥಾಯ ರುಕ್ಮಿಣೀಶಾಯ
ನಮೋ ವೇದಾಂತ ವೇದಿನೇ॥"

ಮನದೊಳ್ ಗುರುದೇವನ ನೆನೆದು ವಂದಿಸಿ ವ್ರತ
ನಿಷ್ಠೆಯಲಿ ಮುಂಬರಿದರ್. ಮುಂಪಥದ ನೇರಕೆ
ಕಣ್ಣು ಹಾಯಿಸಿ ನೋಡೆ ಕಣ್ಗೆಸೆದುದು ದೂರಕೆ
ಹರಿದ ಪಥ. ಮುಂದೆ ಜನ ಭರಿತಮಿರೆ ಮಾತುಗಳ
ಮರ್ಮರ, ಗಾಡಿ ಬಂಡಿಗಳ ಗಡಬಡ ಸೊಲ್ಲು ಪೆರ್
ನಗರಿಯ ಸಕಲ ಲಕ್ಷಣಂ ತುಂಬಿದ ಕಿರಿಕಿರಿ
ಪಿರಿಪಿರಿಗಳ ಅನುಭವ ತಟ್ಟಿತು ಮನ ಮತಿಯಂ.
ಪಿಡಿದ ಪಥ ಹರಿದುದು ನಗರಿಯ ಉಗಿ ಬಂಡಿಗಳ
ನಿಲ್ದಾಣಕೆ. ಒಡಲ ಪಸಿವೆ ಭುಗಿಲೆಳ್ದುದು ಮೂರು

ದಿನಗಳಿಂ ನೀರು ಮಾತ್ರವಲ್ಲದೆ ಬೇರೇನ್
ದೊರೆತುದಿಲ್ಲಂ. ಒಳಹೊರಗೆ ಜನಗಳ ಗದ್ದಲ
ಅತಿಯಾದುದು. ಪೆರ್ಮರವೊಂದು ಛತ್ರಿಯ ತೆರದಿ
ಹರಡಿ ತಲದಲಿ ತಣ್ಣೆಳಲ್ ತುಂಬಿರೆ ಕರೆಯಿತ್ತು
ಕೈಬೀಸಿ. ಬಳಲಿದ ತನು ಕುಸಿಯುವೊಲಿರೆ ಕುಸಿದು
ಕುಳಿತರಲ್ಲಿಯೆ. ಮೈಬಳಲಿಕೆ ಒರ್ಮೆಗೇ ಆಕ್ರಮಿಸಿ
ಧಾಳಿಯಿಟ್ಟವೊಲ್ ಬಳಲಿ ಬೆಂಡಾಯ್ತು ಶರೀರಂ.
ಚಣಚಣ ಮುರುಳುತಲಿದೆ ಪೊಳ್ತು. ಕ್ಷುದ್ ಬಾಧೆಯು
ಅಗ್ನಿಯುರಿಯ ಮಾಳ್ಕೆಯಲಿ ಧಹಿಪುದು ಧಗಧಗಿಸಿ.
ಅಲ್ಲೊಂದೆರಳ್ದು ಮೂರು ದಿನಗಳ ವಿಶ್ರಾಂತಿ
ಪಡೆಯದಿರೆ ದೂರ ಬದರಿಕಾಶ್ರಮ ದಾಣಂ
ಗುರಿಗೊಂಡು ನಡೆಯುವುದೆನೆ ಅಸಾಧ್ಯಮಿನ್ನೆನಲ್
ದಿಟ ಎಂಬುವ ಚಿಂತೆಯು ಮನಃಚಿತ್ತಂಗಳಂ
ಆಕ್ರಮಿಸಿ ಮೆರೆದುದು ಘನವೆತ್ತಂತೆ. ಸ್ವಾಮಿಜಿ
ಮುಗಿದ ಕಣ್ ಬಿರಿಯದೆ ಹಿಡಿದರ್ ಧ್ಯಾನ ವ್ರತವ.
ಕಛೇರಿಯೊಡೆಯ (ಸ್ಟೇಷನ್‌ಮಾಸ್ಟರ್) ಶ್ರೀಶರತ್‌ಚಂದ್ರ
ಗುಪ್ತನುಂ ಬೆಳಕಿಂಡಿಯೊಳ್ ಕಣ್ಗೆಸೆದ ವ್ಯಕ್ತಿ
ಚಿತ್ರಮಂ ಮನ ತುಂಬಿ ವಿಸ್ಮಿತ ಚಿತ್ತದಿಂ
ಪೊರಗೈದು ಕಣ್ತುಂಬಿ ಜಾನತುಂಬಿ ಬಳಿಯೋಳ್
ಕೆಲವೊಳ್ತು ನಿಂತು ನೋಡಿ "ಗುರುವೆ, ನಿಮ್ಮನುಂ
ದರ್ಶನಗೈಯಲೆಂದು ಆನೈದಿಹೆನ್. ತಾವ್
ದಯದಿಂ ಕಣ್ತೆರೆದು ಪರಸಿಮೆನ್ನನುಂ. ಬೇಡಿ
ಕೊಂಬೆನೆನ್."

ಭಕ್ತಿರಸದಿಂ ಕೂಡಿದ ಸವಿದನಿ
ಕಿವಿಮುಟ್ಟೆ ಕಣ್ ತೆರೆದರ್ ಯುವಗುರು ಅದೆ

ಚಣದಿ. ನೋಡೆ, ಭಕ್ತಿಯೆ ಮೂರ್ತಿಯೆತ್ತಿ ಬಂದೊಲ್
ನಿಂತಿರ್ದನಾ ಶರತ್ ಚಂದ್ರಗುಪ್ತ. ಸ್ವಾಮೀಜಿ
ಪ್ರಸನ್ನ ಮೊಗದಿಂ,
"ಅಯ್ಯ, ಸಜ್ಜನನೆ! ನಿನಗೆ
ಒಳ್ಳಿತಕ್ಕೆ!"
"ಗುರುಗಳೆ, ನೀಮೆನ್ನೊಡನೆನ್ನಯ
ಗೃಹಕೈದು ಆತಿಥ್ಯಮಂ ಸ್ವೀಕರಿಸಿ ಕರುಣೆಯಿಂ
ಬಡವನಂ ಕೃತಾರ್ಥಗೊಳಿಸಿಮೆಂದು ಬೇಡುವೆ.
ದಯವಿಟ್ಟು ಎನ್ನೊಡನೆ ಬಂದಪುದು"
ಮುಗಿದ ಕೈ
ಇಳಿಸದೆಯೆ ವಿನೀತ ಮನೋಭಾವದಲಿ ನಿಂದ
ಶರತ್ ಚಂದ್ರಗುಪ್ತನ ಬೆಂಬಳಿಯೆ ನಡೆದರಾ
ಸ್ವಾಮೀಜಿ ಮುದದಿಂದವನ ಆಲಯಕ್ಕೆ. ಬಿಸಿ
ನೀರ್ ಮಜ್ಜನಂಗೈದು ಬೆಚ್ಚನ್ನ ಊಟವಂ
ಪಡೆದುದಾವ ದಿನಮೋ, ಅಂತಿಂತು ತನುಮನದ
ಶ್ರಾಂತಿಯಂ ಕಳೆದು ಪ್ರಾಂಗಣಕೈದರ್. ಉನ್ನೆಗಂ,
ಕಾರ್ತಿಕಾಭ್ರದೊಳುದಿಸಿ ಬಂದನು ಸುಧಾಕರಂ
ಶಾಂತ ಶೀತಲ ಕಿರಣಮಂ ಹರಿಸುತ ಬೆಳ್ಳನೆಯ
ಹಾಲ್ಬೆಳಕು ಚೆಲ್ಲಿಸೂಸಿ. ಕಣ್ಮನಕೆ ಸೊಬಗಿನ
ಮಾಯೆಯಂ ಬೀಸಿದಾ ಸಮ್ಮೋಹನ ದೃಶ್ಯದ
ಸಂವೀಕ್ಷಕರಾಗಿ ಕುಳಿತರಲ್ಲಿಯೆ, ಸ್ವಾಮೀಜಿ.
ಚಂದ್ರಮನ ಪೂರ್ಣ ಬಿಂಬ ಕಾಂಚನ ಕಾಂತಿಯಲಿ
ಮರೆದಿರಲ್ ಅಭಿರಾಮ ಭಂಗಿಯಲಿ, ತೋಷದಿಂ
ಕಳೆದುದು ತನಿವೊಳ್ತು ಶರತ್ ಚಂದ್ರನೊಡಗೂಡಿ.
ಎಗಳುಂ ಶಾಸ್ತ್ರಾರ್ಥಗಳುಲಿವುವು ಸರ್ವಥಾ

ಪರಮ ಈಶ್ವರದರ್ಶನಾರ್ಥಿಗೆ ಗುರುದೈವಂ
ತಾನಾಗಿ ಒಲಿದು ಬಂದಪುದೆಂದು! ಶರತ್‌ಚಂದ್ರ
ಗುಪ್ತಂಗೆ ದೈವಯೋಗ ಒಲಿದುದು ಅಂತೆಯೇ.
ಆತನೊಡಲಿನೊಳ್ ದೈವಭಕ್ತಿ ಘನಿಸಿ ಧರ್ಮ
ತೃಷ್ಣೆಯದು ಆಕರಿಸುತಿರೆ ಕುದಿಕುದಿದು, ಸಮಯ
ಸ್ಫೂರ್ತಿಯಾಗಿ ಒದವಿದ ಗುರುದೇವನಂ ಕಂಡು
ಮರುಧರೆಗೆ ಜಲಬುಗ್ಗೆಯೇ ಹರಿದು ಬಂದಂತೆ
ಶರತ್ ಚಂದ್ರನ ಹೃದಯ ಕರಂಡ ಆನಂದ
ರಸ ತುಂಬಿ ತುಳುಕಿ ಕೋಡಿವರಿಯಿತು; ಒರ್ಮೆಗೇ
ಹೃದಯ ಧರಿತ್ರಿ ಬಿರಿದು ಹೋಳಾಗುವ ತೆರದಿ.
ಗುರುಶಿಷ್ಯರೊಳ್ ಬೆಳೆದುದು ಪರಸ್ಪರ ಬಂಧುರ
ಸ್ನೇಹಾನುರಾಗಂ. ದಿವಸಗಳಾರೇಳುರುಳಿ
ಕಳೆದುವು ಗತಕಾಲಕಡರಿ, ಶರತ್ ಚಂದ್ರನುಂ
ಗುರುದೇವನ ಮುಂಗೆತ್ತು ನಮ್ರ ವಿನಮ್ರತೆಯ
ಧ್ವನಿಯಲಿ ಕೇಳ್ದನಿಂತು "ಸ್ವಾಮಿ! ಗುರುದೇವ!
ಎನ್ನೊಂದು ಬೇಡಿಕೆಯಿಹುದು ತಮ್ಮ ಪಾದಗಳ
ಸನ್ನಿಧಿಯಲಿ."
"ಏನೆಂದು ಅರಿಯಲ್ಕೆ ನೀನದಂ
ಮನಬಿಚ್ಚಿ ತಿಳಿಪುದು."
"ಗುರುವರ್ಯಾ! ದಯಮಾಡಿ
ಆತ್ಮಜ್ಞಾನವನೆನಗೆ ಕರುಣಿಸಿ ಉಪಕರಿಸಿರಿ.
ಇದೆನ್ನಯ ನಮ್ರ ಬೇಡಿಕೆಯಿಹುದು ತಮ್ಮ ಬಳಿ."
ಸ್ವಾಮಿಜಿಯುಂ ಮಂದಸ್ಮಿತ ವದನದೊಳ್ ಆ
ಶಿಷ್ಯನ ಮುಖಾವಲೋಕನಂಗೈದು,
"ಕೇಳ್ ವತ್ಸ!

ನಿನಗನಿತು ಆಕಾಂಕ್ಷೆ ಇರೆ, ನಿನ್ನ ಸುಸುಂದರ
ಮುಖಕೆ ಭಸ್ಮಮಂ ಬಳಿದು ತಿಕ್ತಮನದೊಳೆನ್ನ
ಮುಂದೆ ಬಂದಪೆಯೇಂ?"
"ಗುರುವೆ, ಆಂ ತವಪಾದದ
ಆಜ್ಞಾನುವರ್ತಿ. ನೀವೇನೆಂದೊಡದಂ ಗೈವೆಂ.
ನಾನಿಮ್ಮ ನಿಜಕಿಂಕರಂ."
ಮತ್ತವನ್ ಎಳ್ದು
ಒಳಗುಯ್ದನ್. ಗುರುವೆಂದಂತೆ ಭಸ್ಮಧೂಳೀ
ವೇಶ್ಚಿತ ವದನದಿಂದೆದುರ್ವೆತ್ತಂ.
"ಇದೀಗ, ಸರಿ."
ಒರ್ಮೆ, ಗುರುವರ್ಯಂ ಕಡು ಚಿಂತೆಯ ಭಾವದೊಳ್
ಖಿನ್ನ ಮನದಿಂದಿರಲ್ ಶರತ್ ಚಂದ್ರುಗುಪ್ತಂ
ಕೇಳಿಸಿದನ್ "ಗುರುದೇವಾ! ತಮ್ಮಯ ಮನದೊಳ್
ಆವ ಚಿಂತೆಯೊ ಕಾಡಿದಂತಿಹುದು. ಅದೇನೆಂದು
ತಿಳಿಯಲೊಡೆನ್ನ ಕೈಲಾದ ಸೇವೆ ಸಲಿಪೆನೆನ್."
"ವತ್ಸ ಕೇಳ್! ಮಹೋನ್ನತ ಕಾರ್ಯಂ ಎರಿಹುದು
ಎನ್ನಯ ಭುಜದ ಮೇಲೆ. ಅಲ್ಪ ಶಕ್ತಿಯುಮುಳ್ಳವಂ
ಇದಂ ನಿರ್ವಹಿಸಲ್ ಸಾಧ್ಯಮೇ ಎಂದೆಂಬ
ಚಿಂತೆಗಳ ಭಾರ ಕಾಡುತಿಹುದೆನ್ನ ಮನವಂ
ಸನಾತನ ಧರ್ಮೋದ್ಧರಣ ಕಾರ್ಯಮಂಗೈಯದೆ
ಮಾಣೆ. ಜನಬಲ ಧನಬಲಗಳಿಲ್ಲದೆ ಆವುದೆ
ಘನ ಕಾರ್ಯ? ಭಾರತದ ಮಿಸುನಿಯೊಡಲ್ ಗಭೀರ
ದಾರಿದ್ರ್ಯ ದೇವತೆಯ ಉತ್ತಾಲ ನರ್ತನದ
ತತ್ತಳ ತುಳಿತಕೆ ಸಿಲ್ಕಿ ತತ್ತರಿಸುತಿಹುದಂ
ಕಾಣೆಯಾ? ಎಂತಿದರ ಉದ್ಧರಣ ಕಾರ್ಯಮೋ?

ಅದು ಯೋಚನೆಗೆ ನಿಲುಕದ ವಿಚಾರಮಿರೆ ಸದಾ
ತಲೆಯಂ ಕೊರೆವ ಕೀಟ ತಾನಾಯ್ತು. ಈ ಮಹಾ
ಕಾರ್ಯಕ್ಕೆ ನಿನ್ನವೊಲ್ ದೃಢ ಮನದ ತರುಣರ
ಅಗಾಧಮಪ್ಪ ಬಲ–ಬೆಂಬಲವೆನಗೆ ವೇಳ್ಕುಂ.
ಯೋಚಿಸಿ ತಿಳಿಯೈ, ಇಂದಿನೀ ಸ್ಥಿತಿಯೊಳೆಮ್ಮ
ಸದ್ಧರ್ಮದ ವೈದ್ಯುತ ಶಕ್ತಿಯಂ ತುಂತುಂಬಿ
ಮೈಬಲಿತು ಕಲಿತು ಸಂಜೀವಿನಿಯು ಆದಪುದು
ಸಾಧ್ಯಮೇ? ಅದುಮಲ್ಲದೆಯೆ ಭಾರತಮಾತೆಯು
ಜಗದೊಳ್ ಮಹೋನ್ನತ ಸುಧರ್ಮಸ್ಥಾನಿ! ಜಗಮಂ
ಗೆಲ್ವ ಶಕ್ತಿಮತಿ! ಎನೆ ಯೋಚಿಸಿ ತಿಳಿ. ಆದೊಡೆ
ತನ್ನೊಡಲ ಕುರುಡು ಮಕ್ಕಳಿಂ, ಮತಿಹೀನ ದಿಗ್
ಗಜಗಳಿಂದಾಕೆ ಸೋತು ಸೋಲ್ದು ಹಣ್ಣಾಗಿಹುದು
ದಿಟಂ. ಎಂತಿದರ ದಿವ್ಯ ಪರಿಹಾರ? ಇದಕೇಂ
ಉಪಾಯ?" ನುಡಿದಿರೆ ಶ್ರೀಮುಖ ಬಹುಲ ಚಿಂತನಾ
ವೇಶದಲಿ, ಜ್ಯೋತಿರ್ಮಯ ವಿಶಾಲ ವಿಮಲ ನಯನ
ದ್ವಯಂಗಳಲಿ ಕರುಣೆ ಕಾತರತೆ ಕ್ಲೇಶಗಳಿಂ
ಪ್ರೋಜ್ವಲತೆ ಮೂಡಿದುದು ಮಿಂಚಿನೊಲ್ ಭಾವನಾ
ವೇಶದಲಿ.
"ಸ್ವಾಮೀಜಿ, ಆನಾವುದೇ ತೆರದಿ
ತಮಗೆ ನೆರವಾಗಬಲ್ಲೆನೆ ಪೇಳಿಮ್?"
ನಮ್ರತೆಯ
ಧ್ವನಿಯಲಿ ಭಕ್ತನೆಂದ ಒತ್ತಾಸೆಯ ನುಡಿಗಳ್
ಹೃದಯಾಬ್ಧಿಯಲಿ ತೋಷದ ಸುಳಿಗಳೆಬ್ಬಿಸಿತು.
ಒಡನೆ ಧೀರ ಗಂಭೀರ ನುಡಿಧಾರೆಯಂ ತಾಂ
ಕರುಣ ಕಾತರಿತ ಸ್ವರದಲಿ ಗದ್ಗದಿಸಿದ ಎದೆ

ಗಿಂಡಿಯಿಂ ಹರಿಸಿದರ್, ಅಧಿಕಾರಿಯ ಹೃದಯ
ಧಾತ್ರಿಯಂತಃಶಕ್ತಿಯನರಿವ ಇಚ್ಛೆಯಿಂದಲಿ,
"ಕೇಳ್ಳೈ, ನೀನೆನೆಗೆ ನೆರವೀವೆಯೆಂದೊಡೆ ಎನ್ನ
ಮಹಾಕಾರ್ಯಕ್ಕೆ ಒಡಗೂಡುವೆಯ? ಅಧಿಕಾರ
ಹುದ್ದೆಯಂ ಬಿಟ್ಟು ಸಂನ್ಯಾಸ ದೀಕ್ಷೆಯಂಬಡೆದು
ದಂಡ ಕಮಂಡಲಧಾರಿಯಾಗಿ ಭಿಕ್ಷೆಯಂ ಬೇಡಿ
ಜೀವಿಸುವೆಯ ಪೇಳ್?"
ಶರತ್‌ಚಂದ್ರಗುಪ್ತಂ
ಒಡನೆ ವಿಚಲಿತಗೊಳ್ಳದಿನಿತು "ಆಯ್ತು, ಗುರುವೇ!
ಇದೀಗಳೆ ಅಪ್ಪಣೆಯ ನೀವುದೆನಗೆ."
"ಆಗಲಿ,
ನಿನ್ನ ಕೈಕೆಳಗಣ ಅಧಿಕಾರಿಗಳ, ಕೂಲಿಯ
ಆಳುಗಳ ಮನೆಗಳಲಿ ಬೇಡಿ ಭಿಕ್ಷಾನ್ನವಂ
ತಾರ್ರೈ."
ಗುರುಗಳ ಹಸನ್ಮುಖವಂ ಗಮನಿಸಿ ತಾಂ
ಸುಸ್ಮಿತ ಮೊಗವರಳಿಸಿ ಪೊರಮಟ್ಟನ್ ಹೆಗಲಿಗೆ
ಜೋಳಿಗೆಯತಗಲಿಸಿ. ತರುವಾಯಿ, ಶರತ್‌ಚಂದ್ರ
ಗುಪ್ತನುಂ ಪೆತ್ತವರ ಅಪ್ಪಣೆಯ ಪಡೆದು ಗುರು
ದೇವನಿಂ ದೀಕ್ಷೆಯಂ ಪಡೆದು ಪರಮಾತ್ಮೀಯ
ಶಿಷ್ಯನಾದನ್ ಬಾಳಿನ ಕೊನೆಯಗಳಿಗೆ ಮಿಂಚಿ
ಬರುವನ್ನ. ಬಳಿಕ, ಬದರಿ ಕೇದಾರಗಳ ಪಥ
ತುಳಿದು ನಡೆದರ್ ಸಂಯಾತ್ರೆಯಂ ಕೈಕೊಂಡು.
ಕಳೆದುವು ಕೆಲದಿನಮಾನಗಳ್ ಭಿಕ್ಷಾನ್ನದಲಿ
ಪ್ರಾಣ ಪಾತ್ರೆಯಂ ತುಂಬಿ. ಕಲ್ಲು ಕಳೆ ಕಡ್ಡಿಯು
ತುಂಬಿದ ಕುಪಥ. ಹಾದಿ ಬೀದಿಗಳ್ ಮೂಡಿರದ

ಕಾಲಮಾನ. ಭಂಗ ಬವಣೆಯ ಅನುಭವಿಸುತ್ತೆ
ನಡೆದಿರೆ ಬಲುಸೂಕ್ಷ್ಮಗತಿಯ ಜೀವಿ ತಾನಾದ
ಶರತ್ ಚಂದ್ರ ಗುಪ್ತಂ ಸೋತು ಸೊಗಡಪ್ಪಿದಂ.
ಕಾಲ್ಗಳುಂ ಊದಿ ಅಂಗಾಲ್ ಒಡೆದು ನೆತ್ತರ್
ಬಸಿದು ಸೋತು ಬೆಂಡಾಗಿ ಬಳಲಿರೆ ಸ್ವಾಮೀಜಿ
ಗೆಳೆಯ ಶಿಷ್ಯಂಗೆ ಪಸುರ್ ಮದ್ದು ಅರೆದು ಪೂಸಿ
ಶುಶ್ರೂಷೆಗೈದೊಡಂ ತಾಳಲಾರದಾದಂ.
ಮೈಸುಟ್ಟುರಿವವೊಲ್ ಜ್ವರಕಾಡತೊಡಗಿತು.
ಮುಂದಡಿಯಿಡಲಾರದೆಯೆ ನೆಲಗಚ್ಚಿ ಮಲಗಿದಂ.
ಸ್ವಾಮೀಜಿಯುಂ ಬಹು ಬಗೆಯ ಭಂಗ ಮನಃಕ್ಲೇಶ
ತ್ರಾಸಗಳ್ ಸಹಿಸಿ ಎಂತೆಂತೊ ಹೃಷಿಕೇಶಕೆ
ಕರೆತಂದರ್ ತ್ರಾಸಬಡುತಿರ್ದ ಶರತ್ ಚಂದ್ರ
ಗುಪ್ತ ಭೂಪನಂ. ಬಳಿಕಲಲ್ಲಿಂದೆ ಅವನೂರಾದ
ಹಾತರಾಶಕೆ ಸಾಗಿಸಿ ಪೆತ್ತವರ ಮಡಿಲಿಗೆ
ಒಪ್ಪಿಸಿದರ್ ಶಾಂತಿ ಸಮಾಧಾನ ಪೂರ್ವಕಂ.
ಸ್ವಾಮೀಜಿಯ ಪಾದಂ ಹಾತರಾಶಕೆ ಬೆಳೆಸಿದ
ಪರಿ ಅದೆಂತು ಶಿಷ್ಯರಿಗೊದವಿತೊ ಸವಿ ಸುದ್ದಿ!
ಒಡನೊಡನೆಯೆ ಕಟ್ಟೊತ್ತಾಯದಿಂ ಬರೆದೊಂದು
ಓಲೆಯುಂ ಗುರುದೇವನ ಹಸ್ತಗತಮಾಯಿತ್ತು.
ಅದನೋದಿದ ಬಳಿಕಂ ಶಿಷ್ಯರ ಮನಮತಿಗಳ
ಸ್ವಾಂತನಕೆ ತಾಂ ಪೋಗಿಬಂದಪುದೆ ಸರಿಯೆಂಬ
ಅಂತ್ಯ ತೀರ್ಮಾನಕೆ ಹಣೆ ಮಣಿದರ್ ಸ್ವಾಮೀಜಿ.
ಹಾತರಾಶದಿಂ ಪೊಳ್ತು ಮೂಡುವ ಮೊದಲ್
ಪ್ರಾತಃರ್ವಿಧಿಯಂ ತೀರ್ಚಿ ಪೊರಮಟ್ಟರ್ ತಣ್ಪು
ಉಗುವ ತನಿವೊಳ್ತಿನಲಿ. ಗುರು ಸೋದರರಂ ಕಣ್

ತುಂಬ ಕಂಡು ಸುಖದುಃಖವನರಿದು ಅಂದಿನಾ
ಜೀವನಗತಿಗೆ ಮೇಣ್ ಶ್ರೀರಾಮಕೃಷ್ಣರಾ
ಸಂಘ ಸಂವರ್ಧನೆಗೆ ದೃಢವಾದ ಅಡಿಪಾಯ
ಇಟ್ಟಲ್ಲದೆಯೆ ತನ್ನ ಮನೋಗತಿಗೆ ಅನನ್ಯ
ಶಾಂತಿಲಭಿಸದು ಎಂದೆಂಬ ಚಿಂತನಾಭಾರ
ಎಚ್ಚರಿಸಲುರೆ ಹೆಜ್ಜೆ ಹೆಜ್ಜೆಗಳಿಗೆ ಬಿರುಸು
ತಂತಾನೆ ಮೂಡುವುದು, ಸಂಯೋಜನಾತ್ಮಕವಾಗಿ.
ಕೃಷ್ಣಸಾರಂಗವೊಂದು ಅಟವಿಯ ಅಂಚಿನಿಂ
ತಟ್ಟನೆ ಜಿಗಿಯಿತು ಹಾದಿಗೆ. ನೋಡೆ, ಎಂತಪ್ಪ
ಸೌಂದರ್ಯನಿಧಿ! ಕವಲುಗೋಡುಗಳ ಸಾರಂಗ!
ಕತ್ತೆತ್ತಿ ನೋಡಿತದು, ಗುರುವರ್ಯನ ಕಾಂಚನ
ಕಾಂತಿಯಂ ಕಾಂಚನಿಪ ದೇಹಯಷ್ಟಿಯಂ. ಓವೋ!
ಉಟ್ಟಿರ್ದ ಬಟ್ಟೆಯುಂ ಕಾಂಚನಕಾನ್ತಿಯೇ!
ಆಗಳಾ ಕೃಷ್ಣ ಸಾರಂಗ ಉಗ್ರ ಭಯೋದ್ಭೂತ
ರೂಪಂ ಕಣ್ ನೆಟ್ಟು ಪರಿವೀಕ್ಷಿಸಲಾರದೆಯೆ
ಬೆಪ್ಪಾಗಿ ಬೆದರಿ ಚಕ್ಕನೆ ಜಿಗಿದು ಓಡಿದುದು
ಅಟವಿಯೊಡಲಿಂಗೆ. ಸ್ವಾಮೀಜಿಯುಂ ನೋನೋಡಿ,
ಕಾಶೀಪುರ ಪಥವಿಡಿದು ಮುನ್ನಡೆಯುತಿರುತಿರೆ
ಮಸುಗಪ್ಪು ಕವಿಯತೊಡಗಿತು ಇಳೆಯ ಮೇಲೆಲ್ಲ.
ಸ್ವಾಮೀಜಿ ಮಠದಮನೆಬೊಕ್ಕಾಗಳೆ ಪೂಜೆಯಾ
ಘಂಟಾರವ ಕೇಳಿಸಿತು. ಮತ್ತಲ್ಲಿ ಕೈಕಾಲ್
ತೊಳೆದು ಮುಖ ಮಜ್ಜನಗೈದು ಭ್ರಾತೃ ಭಾಯಿಗಳ
ಎದುರ್ವೆತ್ತರ್. ಎಲ್ಲರ ಮೊಗಮಂಡಲ ಅರಳಿದುವು
ಹೂವಿನೊಲ್. ಪರಸ್ಪರ ಕುಶಲೋಪರಿ ನಡೆದುದು.
ಆನಂದ ಮೋದದಿಂ. ಭ್ರಾತೃಭಾಯಿ ಶಾರದಾ

ನಂದರ ಮುಖಂಡತ್ವ ನಡೆಸುತಿರ್ದುದು ಮಠಮಂ.
ಒಳಗೆ ಸಾಲ್ಗೈಸಿ ಮುತ್ತುಗದ ಎಲೆಗಳನ್ನಿರಿಸಿ
ಭೋಜನವ ಬಡಿಸಿ ಎಲೆಯ ಮುಂದೆ ಕುಳಿತ ಹಿರಿಯ
ಭ್ರಾತೃಭಾಯಿ ಶಾರದಾನಂದರ್ ಕೊರಳ್ ತುಂಬಿ
ಹಾಡಿದರ್ "**ತೇನವಿನಾ ತೇನವಿನಾ ತೃಣಮಪಿ**
ನ ಚಲತಿ" ಬಳಿಕ ಕೈಬಾಯ್ ಕಾಳಗ ಹೂಡಿದರ್....
ಒಟ್ಟಾಗಿ. ಹಾಸ್ಯಪರಿಹಾಸ್ಯಗಳ ಲಲಿತವಹ
ಸಂಭಾಷಣೆಯ ಸರಳಧಾರೆ ಉರುಳಿ ನಗೆಗಳ
ಹೊನಲ್ ಹರಿದು ಸಲಸಲಕು ಮೊಳಗಿತು ಮನೆಮಾಡು
ಕುಸಿದು ಬೀಳ್ವಂತೆ. ಪರಮಾನಂದಲಹರಿಯುಂ
ಹರಿಯಿತು ಮಠದಲಿ ಬಲುದಿನಗಳಾದ ಬಳಿಕಂ.
    ಮರುದಿನಂ ಅರುಣೋದಯಮಾಯಿತ್ತು ಎಂದಿನ
ಮಾಳ್ಕೆಯಲಿ. ಲೋಕದ ಚಟುವಟಿಕೆಯು ಜೊತೆಜೊತೆಗೆ
ಆರಂಭಮಾದುದು. ಹಿರಿಯ ಗೃಹೀ ಭಕ್ತರ್ಬೈದರ್ ಯುವ
ಗುರುನಾಯಕ ನರೇಂದ್ರನಾಥನಂ ಕಾಣುವೊಡೆ.
ಹಿರಿಯರ್ ಕಿರಿಯರ್ ಒಗ್ಗೂಡಿ ಘನವಾಯ್ತು ಸಭೆ.
ಹಳೆಹಳೆಯ-ಪೊಚ್ಚಪೊಸ ವಿಚಾರಗಳ್ ಕೂಡಿ
ವಿಜೃಂಭಿಸಿದುದು ನಿಡುಪೊಳ್ತು. ಮಠದೊಳ್ ಮುಂದೆ
ಆವಾವ ಕಾರ್ಯಕುಶಲತೆಯನೆಸಗೆ ದೇಶಕೆ
ಅನುಕೂಲ, ದೀನ ಜನರ ಸೇವೆಯ ಪರಿಯೆಂತು?
ಈವಗೆಯ ವಿವಿಧ ವಿಷಯವಾಹಿಯು ಧುತ್ತೆಂದು
ಎದುರ್ಬೈದುದು ಸೃಜನ ಶೀಲತೆಯ ಮಧ್ಯದೊಳ್.
ಕೂಡಿತು ಸಭೆ ಯುವ ಗುರು ನಾಯಕನ ಪ್ರಾಥಮಿಕ
ಕೀರ್ತಿ ಹರಡುವಂತೆ. ಬಡಜನರಿಂಗೆ ಅಕ್ಕರ
ದಾನ ರೋಗಿಗಳಿಂಗೆ ಶುಶ್ರೂಷೆ ಇತಿ ಎಲ್ಲವು

ಕಾರ್ಯರಂಗಮೊಳಿರೆ ಹಣದ ಥೈಲಿಯ ಗಂಟದು
ಅನಿತೆ ಗಹನಂ. ಎಲ್ಲವಂ ಭರಿಸೆ ಗೃಹೀಭಕ್ತ
ಜನರ ಸಹಾಯ ಸಹಕಾರಗಳನೋನುತೆ ವರ
ಸಾಂಘಿಕ ಚಟುವಟಿಕೆಗಳ್ ಮೂಡಿದುವು, ಶ್ರೀಗುರು
ರಾಮಕೃಷ್ಣ ಪರಮಹಂಸರ ನೇಮದಲಿ. ಅಂದು,
ಯುವ ನಾಯಕ ಸಭಾಸದರಂ ಕುರಿತಿಂತಿಂತು
ನಲವಿಂ ವಿಚಾರಾತ್ಮಕತೆಯಿಂ ನುಡಿದನ್ ಪುರುಡಿಂ,
“ಏಳಿ! ಎದ್ದೇಳಿ!! ಜಡನಿದ್ದೆಯಿಂ ಎಚ್ಚೆತ್ತು
ಕೊಳ್ಳಿ!! ಸತ್ವಗುಣದ ಸೋಗಿನೊಳೆಮ್ಮ ರಾಷ್ಟ್ರವುಂ
ದಿನದಿನಂ ತಮಸ್ಸಿನ ಘೋರ ಅಜ್ಞಾನದಲಿ
ಮುಳುಗುತಿಹುದಂ ನೀವ್ ಕಾಣಿರಾ? ಅತ್ಯಂತ
ದಡ್ಡನುಂ ಸಹ ತಮ್ಮ ದಡ್ಡತನಮಂ ಮುಚ್ಚಿ
ತೆರೆಯೆಳೆಯೆ, ತನುಮನಗಳ ಕ್ರಿಯೆಯ ಮೀರಿ ಆ
ಪರಮ ಜ್ಞಾನದ ಮಿಥ್ಯಾಭಿಲಾಷೆಯ ಹೊದಿಕೆಯಂ
ಹೊದಿಸುವನ್. ಪುಟ್ಟನಿಂ ಅಲಸಿಯಾಗಿಯೆ ಬೆಳೆದು
ದುಡಿಯಲಾರದ ತನ್ನ ಅಶಕ್ತತೆಯ ಮೇಲೆ
ವಿರಕ್ತಿಯ ಪರದೆಯನೆಳೆವನ್. ಸೈತಾನೀಜನ
ತಮ್ಮಗ್ರಳ ಕಡು ಕೆಟ್ಟ ಕೀಳ್‌ಚಪಲತೆಯ ಕ್ರೌರ್ಯ
ಕರ್ಮಮಂ ಧರ್ಮದೊಂದು ಅಂಗವನೆ ತೋರಿಸೆ
ಕರ್ಮಠತೆಯ ಸೋಗನ್ನೆ ಹಾಕುವರ್. ತಮ್ಮಯ
ಅಯೋಗ್ಯತೆಯ ಅರಿಯದೆ ತನ್ನ ತಪ್ಪನ್ನಿತರರ
ಮೇಲೆ ಹೊರಿಸುವರ್. ಇತರರ ವಿಚಾರಂಗಳ
ಉಚ್ಛಿಷ್ಟಮಂ ಮೆಲಕುತೆ ಅದನ್ನೆ ಜ್ಞಾನವೆಂದು
ತಿಳಿಯುವರ್. ತಮ್ಮ ಪೂರ್ವಜರ ನಾಮ ಸ್ಮರಣೆಯೊಂದೆ
ಪರಮ ವೈಭವವೆಂದರಿಯುವುದು. ಇಂತಹ ದೇಶ

ದಿನದಿನಕು ಗಾಢ ತಮಸ್ಸಿನೊಳ್ ಮುಳುಗುತ್ತಲಿದೆ
ಎನ್ನಲ್ ಮತ್ತಾವ ಋಜುವಾತು ವೇಳ್ಕುಂ ಪೇಳಿ?"
ಜಗದೊಳೆಲ್ಲಿರದನಿತು ಜಾತಿನೀತಿಗಳ್, ಮೇಲು
ಕೀಳ್‌ಗಳ ಅಸಹ್ಯ ಪ್ರವೃತ್ತಿಯಂ ನೆನೆದೊಡೆ
ಮೈವುರಿವುದು ಮನಂ ಸಿಡಿದೇಳುವುದು. ಕೇಳಿರಿ,
ನಮ್ಮ ವೇದಾಂಗಗಳ್ ಬೋಧಿಪುದೇನ್ ತಿಳಿಯದೆ?

"ಅಜ್ಯೇಷ್ಠಾಸ ಅಕನಿಷ್ಠಾಸ ಏತೇ ಸಂ
ಭ್ರಾತರೋ ವಾವೃಧುಃ ಸೌಭಗಾಯ ।
ಯುವಾ ಪಿತಾ ಸ್ವಪಾ ರುದ್ರ ಏಷಾಂ
ಸುದುಘಾ ಪೃಶ್ನಿಃ ಸುದಿನಾ ಮರುದ್ಭ್ಯಃ ॥"

ಹರಿಃ ಓಂ ತತ್ ಸತ್

❋ ❋

ತ್ರಯೋದಶೋಲ್ಲಾಸಂ

ವ್ರತ ಸಂಗೋಪನ

ಚಲಿತ ಅಚಲಿತ ತರು ಸಮೂಹದಿಂ ಬಳಬಳನೆ
ಪೂವಾಲಿಗಲ್ಮಳೆಗರೆಯೆ ಉದುರುದುರಿ ಮರವೆ
ಬರಿದಪ್ಪಿ ಮಲೆಯನೆಲ ಚೆಂದದಿಂ ಸಿಂಗರದ
ಹರವು ತಾನಾಯ್ತು. ಸಕಲ ಸುಮಶೋಭೀ ಅಟವಿಯ
ಘನನಿಬಿಡ ಸಂಯೋಜನೆಗೆ ಧೂಪಾರತಿಯಂ
ಎತ್ತಿ ವೀರಪೂಜೆಯ ಸಲ್ಲಿಸಿತು ಹಗಿನಗಂಪು.
ವಸಂತನ ಗೆಲ್ಮೆಗೆ ನವ ತೂರ್ಯದ ಧುನಿಯಾಯ್ತು
ಖಗಮೃಗ ಚೇತನ ಚಕಿತರಾವಂ. ಬೆಳಗಿನ
ಬಾನ್ನೆತ್ತಿಯ ಹೆಮ್ಮುಗಿಲ್‌ಗಳ್ ಒಂದನೊಂದಂ
ಬೆಂಬೊತ್ತಿ ಅಟ್ಟಟ್ಟಿ ಜಾಡಿಪುವು ಗರಿಚವರಿಯ
ಬೀಸುತ್ತೆ. ಅನಿಲಂ ರೊಯ್ಯನೆಯೆ ಬೀಸಿ ಬರೆ
ರೌದ್ರ ಪ್ರಭಂಜನೋಚ್ಛ್ವಾಸಮಂ ಹರಿಸುತ್ತ
ಪುಷ್ಪಗಂಧ ಮಾಧುರ್ಯಮಂ ಸಿಂಪಡಿಸುವನ್
ಎಲ್ಲೆಡೆಯು ನೈವೇದ್ಯವಾಗುವಂತೆ. ಅಟವಿಯ
ಪರಿಸರಂ ಹೃನ್ಮನಮಂ ಪುಳಕಗೊಳಿಪುದು ದಿಟಂ.

ಸ್ವಾಮಿಜಿಯುಂ ಪೊರಮಟ್ಟರ್ ಕಾಶೀಪುರದ
ಆಶ್ರಮದ ಕಿರುವನೆಯ ಬಿಟ್ಟು. ಊರು ಉಳಿಯಿತು
ಹಿಂದೆ. ಭ್ರಾತೃಭಾಯಿಗಳ್. ಉಳಿದರ್ ಅಲ್ಲಿಯೇ.
ವ್ರತ ಸಂಗೋಪನ ಭಾರಮಂ ತಾಂ ಪೊತ್ತು.
ದಂಡ ಕಮಂಡಲಧಾರಿ ಸ್ವಾಮಿಜಿ ನಡೆದರ್
ಮುಂದೆ ಮುಂದೆ. ಬ್ರಾಹ್ಮೀ ಮುಹೂರ್ತ. ತನಿಯಿಂಪಿನ
ಕದ್ದಿಂಗಳ ಕಿರುಬೆಳಕು. ಎಲ್ಲೋ ದೂರದಲಿ

ಅರಣ್ಯದ ಒಳಹೊರಗೆ ಮೊಳಗಿದುವು ಕೋಳಿಗಳ್.
ಆ ಮೊಳಗಿಗೆ ದನಿಗೂಡಿದುವೊ ಎನೆ ಅಲ್ಲಲ್ಲಿ
ಊರೊಳಗಣ ಎಡೆ ಎಡೆಯ ಗುಡಿಸಲು
ಜೋಪಡಿಗಳಲಿ ಮೊಳಗಿದುವು ಮನೆಗೋಳಿ ವಳಗಂ.
ಅರಣ್ಯಾನಿಯ ಒಳಾಂತರದಲ್ಲಿ ನರಿಹಿಂಡು
ಒರ್ಮೆಗೇ ಊಳ್ ಇಟ್ಟುದುದು ಮುಟ್ಟಿತು ಕರ್ಣ
ದೇಶಂ. ಉರುಳಿತು ನಸುವೊಳ್ತು. ಆಗಳೀಗಳ್
ಮುಂಬಕ್ಕಿಗಳ ಮೊಳಗು, ಸವಿಗೊರಳಿನ ಕೋಗಿಲೆ
ಕಾಜಾಣಗಳ ಮೊಳಗು ತನ್ನ ಏಕಾಂಗಿತನನ
ಮರೆಸಿದುವು.
ಅಸತ್ತಿನಿಂ ನಿರುತಕೆ ಸಿರಿ ದೃಷ್ಟಿ
ಯಪ್ಪಿಯಟ್ಟಲ್ ಪಚ್ಚ ಪಡಲಾಗಿಹ ಬನವೇ
ಓನ್ನಲೆಯಿರೆ ಸಕಲ ಪುಷ್ಪೋತ್ತೀರ್ಣ ಸ್ವರ್ಗೀಯ
ಸುಧಾ ಶೈಲಿಯ ದೃಶ್ಯಮಾನ ಸೌಂದರ್ಯ ವೈಭವ
ನರುಗಂಪು ಬೀರಿದುದು ಮನಂ ಮುದಗೊಳಿಪಂತೆ!
ಕೆಲದಿನಂ ಪರಿಭ್ರಮಣದಲಿ ಕಳೆದು ಸಂತಸ
ಪೂತ ಮನರಾದರ್ ಗುರುದೇವಂ. ಕಾಲಗತಿ
ಉರುಳುತಿರುತಿರೆ ಸಾವಿರದೆಂಟನೂರೆಂಬತ್ತೊಂಬ-
ತ್ತರಲಿ ಸ್ವಾಮೀಜಿಯುಂ ವರಾಹನಗರದ
ಮಠದಿಂದೆ ತಾವ್ ಪೊರವಂಟರ್; ಸುದೂರದಾ
ಬೆಟ್ಟದಾಣದ ಗುಹೆಯೊಳ್ ನೆಲೆನಿಂದು, ಪ್ರಖ್ಯಾತ
ನಾಮನಿರ್ದ ಸಾಧು ಪವಾಹಾರಿ ಬಾಬ-ನಂ
ಕಾಣಲೆಂದು. ಗಾಜಿಪುರದ ಹಾದಿಯುಂ ಕಠೋರ
ಕಮನೀಯ ಮೃಗಚರಣ ರೇಖಾ ರೂವಿನಿಂ
ಅಂಕುಡೊಂಕಾಗಿ ಹರಿದತ್ತು ಪರ್ಣಾರ್ಣವಂ

ಇಬ್ಭಾಗಿಸಿ. ಕೊನೆಯವರಿಯದಾ ಪಥ ಬಗೆಬಗೆಯ
ಮೊಣಚು ಕಲ್ಲು ಕೊರಕುಲುಗಳಿಂ ತುಂಬಿರುತಿರೆ
ನಡಿಗೆಯೊಂದು ಹಿಂಸ್ರಕಂ. ಅಲ್ಲಲ್ಲಿ ಕುಗ್ರಾಮ
ಕಣ್ಗೆಸೆದೊಡೆ ಜನಪರಿಚಯಂ ಪಡೆದು ಹೊಟ್ಟೆಯ
ಹಸಿವಿಂಗೆ ಭಿಕ್ಷಾನ್ನವಂ ಪಡೆದು ಕ್ಷುಧೆಯಂ
ತೀರ್ಚಿ ಕಮಂಡಲು ತುಂಬಿ ನಡೆವರ್ ಮುಂದೆ. ಅದೆ
ಹಾದಿಯಲಿ ಪೆರ್ಮ್ರಂಗಳ ಮೇಲಿಂದೆ ಸರ್ರನೆ
ಇಳಿತಂದ ಮಂಗಗಳ ಹಿಂಡು ಹಾದಿಗಡ್ಡೈಸಿ
ನಿಂದು ಗುರ್‌ಗುರ್ರನೆ ಹಲ್‌ಕಿರಿದು ಕಿರಿಚಿಕಿರಿಚಿ
ತಾಗಲೈದುವು ಅಡ್ಡಗಟ್ಟಿ. ಅವುಗಳಿಂದಲಿ
ಸುರಕ್ಷೆಗೊಳೆ ಓಡಿದರ್ ಸ್ವಾಮೀಜಿ ಓಡಿಯೇ
ಓಡಿದರ್. ಆದೊಡಾ ಮಂಗಗಳ ಮುಖಂಡಂ
ಪುರುಡಿನಿಂ ಓಡತಲೈದುದು ಬಿಡದೆ ಬೆನ್ನಿನ
ಹಿಂದೆಯೇ. ಪೆರ್‌ಮೆಯ್ಯ ಹಿರಿ ಮಂಗ ಓಡಿಸಿ
ಬರುತಿರೆ ಬಳಲಿದ ಮೈ ಇನ್ನಿನಿತು ಬಳಲಿದುದು
ಓಡಿಯೋಡಿ. ಆಗಳ್ ಎದುರೈದನೊರ್ವ ಹಿರಿ
ತಾಪಸಿ. "ಎಲೆ! ವತ್ಸ ಇದೇನಿಂತು ಬೆದರಿ ನೀಂ
ಓಡುತಿಹೆ? ಬಡಿಗೆಯಂ ಕೈಕೊಳ್ಳೈ!' ಒಡನೊಡನೆ
ದಂಡಮಂ ಜಡಿಕುಟ್ಟಿ ಕೆಕ್ಕರಿಸಿ ನೋಡುತ್ತೆ
"ಬಾಯಲ್ಲಿ! ಚೆಚ್ಚಿಬಿಡುವೆ!" ಎಂದರತಿ ರೋಷದ
ದನಿಯಲ್ಲಿ.
ಆಗಳಾ ಮಂಗಂ ಗುರುವಿನ ಆ
ಭೂಮ ವ್ಯಕ್ತಿತ್ವಮಂ ಕಂಡು ಬೆದರಿ ಬೆಚ್ಚುತೆ
ಪಿಂದಿರುಗಿ ಓಡಿದುದು ಬಂದ ಹಾದಿಯಂಬಿಡಿದು.
ಸ್ವಾಮೀಜಿ ತೆಕ್ಕನೆ ತಿರುಗಿ ನೋಡಿದರ್ ಸಮಯ

ಸ್ಫೂರ್ತಿ ನೀಡಿದ ತಾಪಸಿಯ ಕಡೆಗೆ. ಎಲ್ಲಿಹನ್
ಆ ತಾಪಸಿ? ಹಾ ಎಂಥ ಆಶ್ಚರ್ಯ? ಎನ್ನಯ
ಗುರುದೇವನೆನಗೆ ತಾಪಸಿಯ ವೇಷದಿಂದಲಿ
ಸಮಯಕ್ಕೊದವಿದುದಲ್ಲದೇ ಬೇರಲ್ಲ. ಇದು
ಸತ್ಯಸ್ಯ ಸತ್ಯ! ನುಡಿದುದು ಆತ್ಮನ ಸುವಾಣಿ.
ದುರ್ದಾಂತ ಅಚ್ಚರಿಯ ರಾಜ್ಯದಲಿ ಸಂಪೂರ್ಣ
ಮುಳುಗಿ ತೇಲುತೆ ದೂರದ ಆಶ್ರಮವಂ ಸೇರಿ
ನೋಡೆ, ಪವಾಹಾರಿ ಬಾಬ ಕುಳಿತಿರ್ದರ್ ಬೂರ್ಜ
ಪತ್ರ ಹಾಸಿನಮೇಲೆ. ಸ್ವಾಮೀಜಿಯುಂ ಕಂಡು
ಪ್ರಸನ್ನ ಮೊಗದಲಿ ಅಮಿತ ಪ್ರೇಮಧಾರೆಯಂ
ಸೂಸಿ ಸ್ವಾಗತಿಸಿದರ್ "ಬಾರಯ್, ಎಲೆ ವತ್ಸಾ!
ಬಲ್‌ದೂರದಿಂ ನಡೆದು ದಣಿದಿಹೆ. ಒಳಗೆ ಕುಳಿತು
ದಣಿವಾರಿಸಿಕೊಳ್ಳೈ. ಕಮಂಡಲದಲಿ ತಣ್ಣನೆ
ಗಂಗಾಜಲಮಿಹುದು, ಇದೀಗವಷ್ಟೆ ಗೆಣಸಿನ
ಗೆಡ್ಡೆಗಳ ಅಗೆದು ಕಿತ್ತು ತಂದಿಹೆ. ನಲ್ ಉಣಿಸು
ನಿನಗಿಹುದು ಕಣಾ!"
ಸ್ವಾಮೀಜಿಯುಂ ಕೈಮುಗಿದು,
ಒರಿಯ ರಿಸಿ ಮಹೋದಯನ ಬಳಿಗೈದರ್, ಶಿಷ್ಯ
ಜನೋಚಿತ ವಿನಯದಲಿ. ಪ್ರಶ್ನೋಪಪ್ರಶ್ನೆಗಳ್
ಮೊಳಗಿದುವು ಉತ್ತರಪ್ರತ್ಯುತ್ತರಗಳ್ ಹರಿದುವು,
ಮನಃಚಿತ್ತಗಳ್ ತಣಿಯುವಂತೆ. ಬಾಬನೊಳಿಹ ಆಧ್ಯಾತ್ಮ
ಜ್ಞಾನದೈಸಿರಿಯಂ ಅರಿತು ಸಂತೃಪ್ತಿ ಪಡೆದರ್
ಸ್ವಾಮೀಜಿ. ಆ ಯೋಗಿವರ್ಯನ ಪ್ರವಚನ
ಸಾಹಿತ್ಯ ಅಗಾಧಮಿರೆ ಅರಿದು ತಿಳಿಯಲ್ ಮನ
ಉತ್ಸುಕಮಿರೆ, ಸ್ವಾಮೀಜಿಯುಂ ಬಾಬನ ಶಿಷ್ಯ

ಪ್ರವೃತ್ತಿಗೆ ಶಿರಮಣಿದರ್. ಆದೊಡಾ ಮನಕೆ
ಹಿತಾಹಿತಮೆನಿತೊ ಇರ್ದುಮು ಜಿಹಾಸೆಯುಮೂಡಿ.
ಪಿಂತೆ ಬಾಬನೊರ್ಮೆ ಕುಟೀಯೊಳಿರದ
ಸಮಯ ಸಾಧಿಸಿರ್ದ ಕಪಟಿಯೊರ್ವಂ ಕುಟಿಯಿಂದೆ
ಪಂಚಪಾತ್ರೆಗಳನಪಹರಿಸಿ ಓಡುತಿರೆ ಕಂಡರ್
ಬಾಬನದಂ. ಒಳಗೆ ಕೈತಪ್ಪಿದೊಲ್ ಉಳಿದಿರ್ದ
ಇನ್ನೊರ್ ಕಿರುಪಾತ್ರೆಯದಂ ತಾವ್ ಕೈಕೊಂಡು
ಓಡಿದರ್ ಅವನಾ ಬೆಂಬಿಡಿದು! ಅವನೊರ್ಮೆ ಆ
ರಿಸಿವರ್ಯನಂ ಪಿಂದಿರುಗಿ ನೋಡಿ, ತನ್ನನುಂ
ಪಿಡಿಯಲ್ಕೈದರೆಂದರಿದು ಬೆದರಿರೆ ಪಿಂದಿರುಗಿ
ಬಂದು ಗುರುಗಳ ಪದತಲದೊಳ್ ಬಿಳ್ದಂ. "ಇಗೋ,
ಭಾಯಿ ನಿನಗಿವುಗಳ ಅವಶ್ಯಕತೆ ಅನಿತೊಂದು
ಇರುತಿರೆ ಉಳಿದಿದನುಂ ಕೊಂಡಯ್." ಎಂದರಯ್
ಕೈಯೊಳಿರ್ದುದಿನ್ನೊಂದಂ ನೀಡಿ! ಅವನದಂ
ಕೇಳ್ದು ನೊಂದು ಲಜ್ಜೆಯಲಿ ಕುಗ್ಗಿ ಕುಸಿದ ತೆರದಿ
ಅತ್ತು ಕಂಬನಿ ಸೂಸಿ ಗೋಳಾಡಿ ತನ್ನೆಲ್ಲ
ತಪ್ಪುಗಳನುಂ ಕ್ಷಮಿಸಿಮೆನುತೆ ಬೇಡಿದನ್ ರಿಸಿಯ.
ತರುವಾಯಿ, ಕಡುಗಳ್ಳನುಂ ಅವರ ಶಿಷ್ಯತ್ವದಲಿ
ದೀಕ್ಷೆ ತೊಟ್ಟ ಪ್ರಕರಣಂ ಮನದೊಳ್ ಮಿಂಚಿಮುದು;
ಸ್ವಾಮಿಜಿ ತಮ್ಮೊಳ್ "**ಅತೀ ಸಮ್ಮೋಹಾತ್ ಸ್ಮೃತಿ
ವಿಭ್ರಮ:**" ಎನಿಸಿ ಪೊರವೊಂಟರ್ ತಮ್ಮ ಬೀಡಿಂಗೆ.
ಪವಾಹಾರಿ ಬಾಬಂ ಮನಸೆಳೆಯುತಿರೆ ಮತ್ತೆ
ನಡೆದರೈ ಗಾಜಿಪುರವ ಗುರಿಗೊಂಡು ಅಂದಿನ
ಮಾಳ್ಕೆಯಲಿ. ಮುಂದೆಮುಂದೆ ಮುಂಕೊಂಡು ಬರುತಿರೆ
ಬೆಣ್ಣೆ ಬಿಣ್ಪಿನ ಮುದ್ದು ಪಾರಿವಗಳ ಬೃಹದ್

ಹಿಂಡು ರೆಕ್ಕೆ ಬಡಿಯುತ ಭರ್‌ಭರ್ರನೆ ಹಾರಿ
ಏರಿದುವು ಗಾಳಿಯಲಿ ಬೀಸು ರೆಕ್ಕೆಗಳ ಬಿರು
ಬೀಸಿವೀಸಿ. ಅಹ ಏನವುಂಗಳ ಸೌಭಾಗ್ಯ
ರಾಶಿಯೋ ಎನೆ ಅಂದ ಚೆಂದದ ಸಿರಿಯದು ಬಲ್
ಮನಮೋಹಕಂ! ಮರಿ ಮುಗಿಲ್‌ಗಳ್ ಧರೆಗಿಳಿಯುತೆ
ಬೆಣ್ಣೆ ಮೆಯ್ಯಾಗಿ ಬಿಣ್ಪಾಗಿ ಪಾರಿವಗಳೆನೆ
ಮೈತಳೆದುವೊ ಎನೆ ಸತ್ಯಸೌಂದರ್ಯವೇಶೀ!
ಸ್ವಾಮೀಜಿ ಮೈಮರೆತು ನೋಡಿದರ್ ಪಾರಿವಂ
ಸಹಸ್ರ ಸಂಖ್ಯೆಯಲಿ ಕಣ್ಮರೆಸುವನ್ನ. ಮೆಯ್ಯ
ನೋವು ಮರೆಯಾಯ್ತು. ಸೋಲುಅಳಿಯಿತು. ಕಾಲೂರಿ
ಬಿಗಿದು ನಿಂತ ನಿಲುವು ಚಲಿಸದಾಯ್ತು. ನಸುಪೊಳ್ತು
ಕಳೆದ ಬಳಿಕ ಮುನ್ನಡೆದರ್ ಮುಂಪಥವನಿಡಿಯುತೆ.
ಅದೊ, ಅಲ್ಲಿ! ಪವಾಹಾರಿ ಬಾಬನ ಎಲೆವನೆಯ
ಕುಟೀರ. ಪಥವೆಂತು ಕಳಿಯಿತೊ ತಾನೆಂತೆಡೆಗೆ
ಸೇರ್ದರೊ ಎನೆ ಅಚ್ಚರಿಯ ವಿಚಾರವಾಯಿತಾ
ಗಳಿಗೆಯಲಿ. ಪವಾಹಾರಿ ಬಾಬ ನಗುಮೊಗದಿಂ
ಸ್ವಾಗತಿಸಿದರ್ ಸ್ವಾಮೀಜಿಯಂ. ಪ್ರವಚನಗಳ
ಧಾರೆ ಹರಿದುದು ಕೊರಳ್ ತುಂಬಿ. ಆತ್ಮ-ಆಧ್ಯಾತ್ಮ
ಸಂಬಂಧ ಹೃತ್‌ತಂತುಗಳಂ ದಡದಡನೆನೆ
ಮಿಡಿಸಿತು. ಅಂದೆಲ್ಲ ಕಳೆಯಿತಲ್ಲಿಯೆ. ಪೊಳ್ತು
ತಂಗಿ ಕತ್ತಲ್ ಮುಸುಗುವ ಮುನ್ನಮೆ ಸ್ವಾಮೀಜಿ
ಪಿಂದಿರುಗಿದರ್ ಕುಟಿಗೆ. ಅಂತೆಯೇ ದಿನದಿನಂ
ಪರಿಭ್ರಮಣ ನಡೆಯುತಿರೆ ಮನಮೆಚ್ಚಿ ಸೆಳೆತಕೆ
ಸಿಲ್ಕಿದರ್ ಕ್ರಮಕ್ರಮವಾಗಿ. ಪವಾಹಾರಿ
ಬಾಬನೊಳ್ ದೀಕ್ಷಾ ಗ್ರಹಣ ಕೈಕೊಳೆ ನಿಶ್ಚಿತ

ಮನಂ ತೂಗುಯ್ಯಾಲೆಯೇರಿತು. ಹಿತಾಹಿತದ
ತುಲನೆಯದು ಒಮ್ಮೆ ಅತ್ತಲ್ ಮತ್ತಿತ್ತಲ್ ತೊನೆದು
ತೂಗಾಡಿ ಹೊಯ್ದಾಡಿ ತುಮುಲಯುದ್ಧಕೆ ಖಡ್ಗ
ಮಸೆಯಿತು. ಗುರುವರ್ಯಂ ಮಾನಸಿಕ ತುಮಲಮಂ
ಗಮನಿಸಿ ಗಮನಿಸಿ ಶ್ರೀರಾಮ ಕೃಷ್ಣರೋ? ಪವಾಹಾರಿ
ಬಾಬನೋ? ಹಾ ಶ್ರೀ ಭಗವಾನರ ಅಹೇತುಕ
ಕೃಪಾಪೋಷಣೆಗೆ ಸತ್ಪಾತ್ರನೆನೆ ಸಾಮಾನ್ಯಮೆ?
ಆದೊಡಂ ತನಗಿಂ ಮನಶ್ಶಾಂತಿ ಲಭಿಸದಿರುತಿರೆ
ಆವ ಕೊರತೆಯೋ ಮನಕೊರೆವ ಭೃಂಗಮಾಯ್ತು.
ಪವಾಹಾರಿ ಬಾಬನ ಶಿಷ್ಯನಾಗಿ ಉಳಿದೊಡೆ
ಎಂದಾದೊಡೆಮಗೆ ಶಾಂತಿರಸ ದಕ್ಕುಮೆಂಬ
ಕಿರುವಗೆಯ ನಂಬುಗೆಯ ಪುರ್ಚು ವೆರ್ಚುತಿದೆ.
ಏಗಳುಂ ಬ್ರಹ್ಮಸ್ಥನಾಗಿ ಉಳಿವ ಬಾಗ್ಯವದು
ಒದವದೆಯೆ ನಿರಾಶೆಯಲಿ ಕುದಿವೆದೆಗೆ ತಣ್ಪು
ತುಂಬಿ ತಣಿಪುದೆಂತು? ಎನಗೆಂತಾದೊಡಂತು
ಮನಶ್ಶಾಂತಿಯು ಲಭಿಸಿದೊಡದೆ ಸಾಲ್ಗುಮೆಂಬಾಸೆ
ಬಲಿತು ಮನದಳಲಿನೆಳೆವಸುರಿ ಸೆಳೆವಳತ್ತಲೆ,
ಬಿಗಿಗಚ್ಚಿ ಸಿಂಹಿಕೆಯ ದಂಷ್ಟ್ರಗಳ್ ಪಿಡಿದೆಳೆವ
ಸೂತ್ರಂಬಿಡಿದು. ಒಲ್ಲೆಒಲ್ಲೆನೆನೆ ಬಿಡುವಳೇಂ
ಛಲಬಲದೊಳೌಡುಗಚ್ಚೆಳೆವ ಸಿಂಹಿಕಾ ಚಂಡಿ!
ಇಂತಿರಲ್ ಸಾಧನೆಯ ವಾಂಛೆಯಂ ಜಗಧಾತ್ರಿ
ಪದತಲಕರ್ಪಿಸೆ ಸ್ಥಿರ ಪಥವಿಡಿಸುವಳೆನ್ನ
ಎಂದೆಂಬುವ ದೃಢಮನಗತಿ ಬಲಿಯಿತನುದಿನ;
ವಿಚಾರದ ಸಂಕ್ರಾಂತಿಯಲಿ ಮನವನಿಟ್ಟು, ಕಡು
ಚಿಂತನಾವೇಶದಲಿ ಮುಳುಗಿದರ್. ಪಗಲುರುಳಿ

ಅಡರಿತು ನಿಶಿ. ದೀರ್ಘಾಯತ ರಾತ್ರಿಯ ಗಾಲಿಯು
ಉರುಳಿ ಮೂಡಿದುದು ಬೆಳಗುಂಬೊಳ್ತು. ಹಾಡಿದರ್
ಸ್ವಾಮಿಜಿ ಬೆಳಗಿನ ಪ್ರಾರ್ಥನಾ ಸಂಗೀತೆಯಂ,

"ಶ್ರೀಮಾತಾ ಶ್ರೀಮಹಾರಾಜ್ಞೀ
ಶ್ರೀಮತ್ಸಿಂಹಾಸನೇಶ್ವರೀ ।
ಚಿದಗ್ನಿ ಕುಂಡ ಸಂಭೂತಾ
ದೇವ ಕಾರ್ಯ ಸಮುದ್ಯತಾ ॥"

ಘನನಿಬಿಡ ಗಾಢಾಂಧಕಾರ ಜೀಜೀಯ್ ಎನೆ
ಜೀರುತಿವೆ ಜೀರ್ದುಂಬಿ ಕಿರಿಕಿರಿಯ ಸೂಸುವೊಲ್.
ಮಿಣುಕ್‌ಮಿಣುಕೆನೆ ಮಿಣುಕುತಿವೆ ಖದ್ಯೋತಗಳ
ಪರಿವಾರ. ದಿವ್ಯಾಂಬರದ ಮಧ್ಯೆ ರಂಜಿಸುವ
ಅರ್ಧಚಂದ್ರಮನ ರಾಜ್ಯ ಭಾರದಲಿ ಉಜ್ವಲಿಪ
ತಾರಾ ನಿಕಾಯಗಳ ಹೇರಾಶಿಯು ಮಿನುಗುತಿವೆ
ಬಜ್ಜರ ಕಿಡಿಗಳಂ ಹೋಲಿ! ಚಿಲ್ಲನೆ ಮೈನಡುಗಿಪ
ಪಾಂಗಿನಲಿ ಬೀಸುತ ಬಹ ತೆಂಕಣದಿನಿಗಾಳಿ
ಸದ್ದುಗಳ ಸೊಲ್ಲಿನಿತಿರದ ತನಿವೊಳ್ತು ನಿಜ
ಮಧುರಶಾಂತಪ್ರಶಾಂತವಾಶಾಂತಿಯ ತಣ್ಣನೆ
ತನಿಯಿಂಪು ತುಂಬಿ ಹರಡಿದುದು ಉದ್ವಗಲದಲಿ.
ಪವಾಹಾರಿ ಬಾಬನೆಡೆಗೆ ಹೊರಡುವೆನೆನೆ ನಿಂತ
ಕಾಲ್ ಚಲಿಸವು ಗುರುವರನ. ತಾನ್ ಎನಿತೆನಿತು
ಪ್ರಯತ್ನಿಸಿದೊಡಂ ಮಣಿಯದಾದುವು ಪಜ್ಜೆಗಳ್.
ಆವುದಾವುದೊ ಅದಮ್ಯ ಶಕ್ತಿಯು ತನ್ನನುಂ
ಜಡಿದಬ್ಬಿ ಪಿಂದೂಡುತಿದೆ ಎದೆಗೆ ಕೈಗೊಟ್ಟು.
ಸೆಡೆತು ನಿಂತಿತು ಶರೀರ! ತಳಮಳಿಸಿದುದು
ಹೃದಯ ಬನದ ಪಕ್ಷಿ. ಗಳಿಗೆಯೊಂದು ತಟಸ್ಥ

ಮಾದುದಾ ಚಿಂತನಾ ದ್ರವ್ಯ ಮನದ ಭಿತ್ತಿಯ
ಮೇಗಡೆ. ಮಹಾನ್ ಗುರುದೇವ ಶ್ರೀರಾಮಕೃಷ್ಣ
ಪರಮಹಂಸರ ಅಸೀಮ ಪ್ರೇಮಮಯ ಮೂರುತಿ
ಮತ್ತಮಾ ಮಹಾನ್ ಉಪದೇಶ ಎಲ್ಲವುಂ
ಮುಟ್ಟಿ ತಟ್ಟಿ ಆಕ್ರಮಿಸಿದವೊಲ್ ತಲೆಭಾರದಿಂ
ತನು ಮುಂಬರಿಯದಾಯ್ತು! ಯೋಚಿಸುತಿರೆ ಸ್ಮೃತಿಯ
ಪಥದಲ್ಲಿ ಹೇರಾನೆಗಳ್ ನುಗ್ಗಿದೊಲ್ ದಿವ್ಯ
ಗೊಂದಣಮಯಮಾಯಿತ್ತು, ಜೀವ ಕಂಗೆಡುವಂತೆ!
"ಹಾಯ್, ಏನಾಗುತಲಿರ್ದೆನ್ ? ಅನೇಕೆ ಮತಿಗೆಟ್ಟೆ?
ತನ್ನತಾಂ ನಿಂದಿಸುತಲಿರೆ ಕಗ್ಗತ್ತಲೆ ಕವಿದ
ಕೊಠಡಿಯೊಳ್ ಒರ್ಮೆಗೇ ಪ್ರಜ್ವಲಿಪ ಚೆಂಬೆಳಕು
ಪ್ರದೀಪ್ತಮಾಯ್ತು! ಅಚ್ಚರಿಯ ಕಣ್ ಜಡಿ ನೆಟ್ಟು
ನಾಂಟಿ ನೋಡುತಿರಲ್ ಬೆಬ್ಬಳಿಸಿ ಬೆಕ್ಕಸದಲಿ
ಬೆರಗುವಟ್ಟು, ಜ್ಯೋತಿರ್ಕಿರಣಗಳ ಮಧ್ಯೆ ಆ
ದಕ್ಷಿಣೇಶ್ವರದ ಮಹಾನ್ ಆದರ್ಶ ಪುರುಷ
ದೇವಗುರು! ಹಾ, ಏನಿದೇನ್ ಎನುವುದರೊಳ್
ದೇವಗುರುವಿನ ನಯನದ್ವಯಗಳಲಿ ದಯೆ ಕರುಣೆ
ಭರ್ತ್ಸನೆಗಳ್ ಏಕಕಾಲದಲಿ ಬೆಳಗಿ ಮಿಂಚಿ
ಎರಗಿದುವು! ಮರುಕ್ಷಣದಲಿ ದೃಶ್ಯ ಮಾಯದಾ
ಆಟವಾಡಿದೊಲ್ ಮಾಯವಾಯ್ತು! ಪವಾಹಾರಿ
ಬಾಬನ ಬಳಿ ದೀಕ್ಷೆಕೈಕೊಳ್ಳುವ ಇಚ್ಛೆಯದು
ಕಳಚಿ ಬಿಳ್ದು ರೆಕ್ಕೆ ಮುರಿದ ಪಕ್ಷಿಯಂತಾಯ್ತು.
ಮೂಡಣದಲಿ ಮುಂಬೆಳಕು ಪಸರಿಸಿ ಬಾಲರವಿ
ಬಿಂಬ ಮೂಡಿ ಮೆರೆದುದ್ಯ ಉಜ್ಜಲೋಜ್ವಲಿಸಿ.
ಶತಕೋಟಿ ಸಹಸ್ರತರ ಕಿರಣಗಳ ರಾಶಿಯ

ಚೆಲ್ಲಿ ಸೂಸಾಡಿ. ಒಡನೊಡನೆ ಗಿಡು ಮರಂಗಳ್
ಬಾಯೊಡೆದುವೊ ಎನೆ ರಾಗಮಯಮಾದುದೈ ನೂತನ
ದಿನೋದಯಂ. ಸ್ವಾಮೀಜಿಯುಂ ರಾತ್ರಿಯ ಮಹಾ
ಸುಖದುಃಖಗಳ ಅನುಭವವಂ ನೆನೆನೆನೆದು ಪರಿ
ಭಾವಿಸಿ ಚರ್ವಿತಚರ್ವಣಗೊಳಿಸಿ ಇದೆನ್ನಯ
ಮನೋದೌರ್ಬಲ್ಯಮಿರಬಹುದು ಎಂದೆಂಬುವಾ
ವಿಚಾರಾತ್ಮಕ ಸುಳಿಯಲಿ ಸಿಲ್ಕಿದರ್. ಇಂದಾಂ
ಪೋಪುದೇ? ಪಿಂದುಳಿವುದೇ? ಇಂತೆಂದು ಯೋಚಿಸಿ
ಯೋಚಿಸಿ ಕಳೆದುದು ಪಗಲ್. ಕಡೆಗೊರ್ಮೆ ಇದೆನ್ನ
ದೌರ್ಬಲ್ಯ ಜನ್ಯಂಮೆನಿಸಿ ಮತ್ತಮತ್ತಂ ತರ್ಕಿಸಿ
ಪವಾಹಾರಿ ಬಾಬನ ಆಶ್ರಮಕೆ ಪೊರಡುವೊಡೆ
ಹೊಸ್ತಿಲಂ ದಾಂಟುವನಿತರೊಳ್ ತೆಕ್ಕನೆ ಮೂಡಿ
ಬೆಳಗಿದುದು ಅದೇ ಜ್ಯೋತಿರ್ಮಂಡಲಂ! ಮಧ್ಯೆಗುರು
ಶ್ರೀರಾಮ ಕೃಷ್ಣ ಪರಮಹಂಸರ ಸುಮಂಗಳ
ಮೂರ್ತಿ! ಬೆಚ್ಚಿಬೆದರಿದೊಲ್ ನಿಂತರ್ ಸ್ವಾಮೀಜಿ.
ಮಾಡಿನಿಂದುಣ್ಮಿದುದೊ? ಬೆಳಕಿಂಡಿಯಿಂದುಣ್ಮಿತೊ
ನಭದಿಂದವತರಿಸಿದುದೊ? ತಂಗಾಳಿಯೊಳೈದುದೊ?
ಚಂದ್ರಮನ ಮುಖದಿಂದೈದುದೊ? ದಕ್ಷಿಣೇಶ್ವರದ
ಕಾಲಿಮಾತೆಯೇ ಗುರುರೂಪಿಂದೈದಳೊ? ಎನಲ್
ದೃಶ್ಯಮಾನ ವೈಭವಂ ಉಜ್ವಲ ರೂಪಿನಲಿ
ಮಿಂಚಿ ಮಾಯಮಾದುದು ಕಣ್ಮುಂದೆ. ಸ್ವಾಮೀಜಿ
ವಿಸ್ಮಯವಿಮೂಕತೆಯಲಿ ನಿಂದರ್, ಹೊಸ್ತಿಲಂ
ದಾಂಟದೆಯೆ. ಆದೊಡಮದಂ ಮಾನಸಿಕ ಚೆಮೆ
ಅಥ ಶ್ರೀ ಗುರುದೇವನ ನಿಜ ಆತಂಕವೊ ತುಲಸೆ
ಗೈಯದಾಯ್ತು ಮನಃಕಲ್ಪ. ಇರಿಸುಮುರಿಸಿನೋಳ್

ಕಳೆದುದಿರುಳ್. ಆದೊಡದರ ಪ್ರಯತ್ನಂ ಬಿಡಲ್
ಜ್ಞಾನದಾಹವೊ ಕೆಚ್ಚಿನ ಕದಿಗುದಿಯೊ ತಕ್ಷಣ
ಕೈಬಿಡಲೊಪ್ಪದೆನೆ ಪ್ರಯತ್ನಂ ಮುಂಬರಿದುದು
ಎಂದಿನೊಲ್. ಇಂತೆಯೇ ಇಪ್ಪತ್ತೊಂದು ದಿನಗಳ್
ಕಳೆದುವದೆ ಪ್ರಯತ್ನದಲಿ! ಸಲಸಲವುಂ ಗುರು
ದೇವನುಂ ಎದುರ್ವೆತ್ತು ತೋರ್ದ ಅಸಮಾದಾನ
ಮನಂಮುಟ್ಟಿ ಎರ್ದೆಯಂ ಕೂರಲುಗಿನೊಲ್ ಕೊರೆದು
ಕೋರೈಸಿದೊಲಾಯ್ತು. ಅಂದು ತನ್ನೆಲ್ಲ ಇಚ್ಛೆಯ
ಮರುಳ್ತನಮಂ ಕೈಬಿಟ್ಟು, ಆರ್ತಸ್ವರದಲಿ
"ಇಲ್ಲ, ಇಲ್ಲ! ಗುರುದೇವ! ಆನಿನ್ನು ನಿನ್ನಯ
ಪದತಲವನುಳಿದು ಇರಲಾರೆ ಮನ್ನಿಸಿಂ,
ಗುರುದೇವ! ಮನ್ನಿಸಿಂ!"
ಬಲ್ ದೀನ ದೈನ್ಯತೆಯ
ಭಾವದಲಿ ದಂಡವತ್ ಪ್ರಣಾಮ ಸಲ್ಲಿಸಿದರ್
ಸ್ವಾಮಿಜಿ.
ಇತಿಮಧ್ಯೆ. ಕಳೆದುರುಳುರುಳಿದುವೆನಿತೊ
ದಿವಸಮಾನಂ. ಸ್ವಾಮಿಜಿಯುಂ ಭ್ರಾತೃಬಾಯಿಗಳ
ಸಂಪೂರ್ಣ ಸಹಕಾರ ಪ್ರೇಮ ವಿಶ್ವಾಸಗಳ
ಅನುಬಂಧದಲಿ ಅಂದಿಂದಿನ ಕೆಲಸ ಕಾರ್ಯಗಳ
ನಿರ್ವಹಣೆ ಕ್ರಮವತ್ ನಡೆಸಿದರ್. ಜನಪದಕೆ
ಎಲ್ಲೆಲ್ಲಿ ಅಗತ್ಯವೊ ಅಲ್ಲಲ್ಲಿ. ಕಾಶಿಯೊಳ್
ದೀನ ಜನ ಸೇವೆಯಲಿ ನಿರತರಿರ್ದ ಸ್ವಾಮಿ
ಅಭೇದಾನಂದರುಂ ತಾಮೆ ರೋಗವಶದಿಂ
ನರಳಿ ನೆಲಗಚ್ಚಿದ ವಿಶಾದಕರ ಸುದ್ದಿಯುಂ
ತಿಳಿದು ಬರೆ ಸ್ವಾಮಿಜಿಯುಂ ಕರುಣ ಕಾತರತೆ

ತುಂಬಿದ ಮನದಿಂ ಧಾವಿಸಿದರಲ್ಲಿಗೆ. ನೋಡೆ,
ಗುರುಭಾಯಿ ಬತ್ತಿ ಬಾಡಿ ಎಲುಬಿನ ಹಂದರವೆ
ತಾನಾಗಿಹರ್. ಒಡನೆ ತಕ್ಕಿನ ಚಿಕಿತ್ಸೆಯಂ
ನೀಡೆ ಕರೆತಂದರ್ ಹಿರಿಯ ವೈದ್ಯವಾಚಸ್ಪತಿ
ಮಹೋದಯನಂ. ಚಿಕಿತ್ಸೆ ಪಥ್ಯಪಾನಗಳ್
ಕ್ರಮವತ್ ನಡೆಯೆ ಅಭೇದಾನಂದರುಂ ಅಲ್ಪ
ಸ್ವಲ್ಪ ಗತಿಯಲಿ ಚೇತರಿಸಿಕೊಳ್ಳುತಿರೆ ಜೊತೆಗೆ
ಪ್ರೇಮಾನಂದರ ಸೇವೆಯು ಇರುತಿರಲ್,
ಸ್ವಾಮಿಜಿಯುಂ ಕಾಶೀ ಕ್ಷೇತ್ರದೊಳ್ ಪ್ರಮೋದ
ದಾಸ ಮಿತ್ರನೆನೆ ಪ್ರಸಿದ್ಧಿಯೊಡೆದ ಸಂಸ್ಕೃತ
ಭಾಷೆಯ ಘನ ಪಂಡಿತನ ಸಖ್ಯಂಬಡೆದು ಆ
ಧನ್ಯ ಜೀವಿಯ ಮಹೋನ್ನತ ವಿದ್ವತ್ ಜಳದಲಿ
ಮುಳುಗೆದ್ದು ಈಸಾಡಿ ತಮ್ಮ ಜ್ಞಾನ ಕುಂಡಮಂ
ತುಂಬಿದರ್. ಕಲಿವ ಕಲಿತು ಬಲಿವಾಸೆಯ ಪರಮ
ಜ್ಯೋತಿರ್ಕಿಡಿ ಬೆಳಗಿದುದು ನವನವೋ ತೇಜದಿಂ
ಉಜ್ವಲಿಸಿ. ದಿನದಿನಂ ಜ್ಞಾನ ಬಂಢಾರಮಾಯ್ತು
ಸ್ವಾಮಿಜಿಯ ಕೆಚ್ಚೆದೆಯ ಶರೀರ ಸಂಪುಟಂ.
ಅಂತೆಯೇ ಎಡೆಬಿಡದವೋಲ್ ಪಂಡಿತನ ಬಳಿ
ಯುವಗುರು ನೆರೆ ಅಭ್ಯಾಸದಲಿ ಮುಳುಗಿರುತಿರಲ್
ಬೋಂಕನೆ ಎದುರ್ಬದುದು ದುರ್ವಾರ್ತೆ ಮನಗಿಡಿಸೆ.
ಹಾ, ಶ್ರೀರಾಮಕೃಷ್ಣರ ಗೃಹೀಭಕ್ತರಿರ್ದಾ
ಬಾಬು ಬಲರಾಮವಸು ಮೇಣ್ ಸುರೇಂದ್ರನಾಥ
ಮಿತ್ರ ಎಂಬೀರ್ವ ಘನವಂತರುಂ ದುರ್ವಿಧಿಯ
ತೆಕ್ಕೆಗಾಂತ ಸುದ್ದಿಯದು ಘೋರ ಸಿಡಿಲ್ ಬಡಿದ
ತೆರನಾಯ್ತು! ಸ್ವಾಮಿಜಿ ಅಗಾಧತರ ದುಃಖ

ರಸ ಅನುಭವಿಸುತಿರೆ ಕಣ್ ತೊಯ್ದುಪಪುವವೆಯೆ.
ವಿಲಪಿಸಿದರ್ ಮನದೊಳ್! ಆಗಳ್ ಪ್ರಮೋದದಾಸ
ಮಿತ್ರನುಂ "ಅಯ್ಯಾ ವರ ಮಿತ್ರರೆ, ನಿಮ್ಮಂಥ
ಪ್ರೌಢವ್ಯಕ್ತಿಯುಂ ಈ ರೀತಿಯೊಳ್ ವಿಲಪಿಸುವರೆ?"
ಎಂದರತಿ ಸುಸ್ವಾಂತನತಪೂರ್ವಕ ದನಿಯೊಳ್ ಆ
ಮಾತಿಂಗೆ ಮರುನುಡಿದರಿಂತು
"ಎಲೆ, ಮಿತ್ರರೆ!
ಪ್ರೌಢ ವ್ಯಕ್ತಿ ಇರಲಿ, ಸಂನ್ಯಾಸಿ ಇರಲಿ, ಆರಿರಲಿ
ದಯೆ ಕರುಣೆಯುಮಿಲ್ಲದಿರೆ ಹೃದಯವಂತಿಕೆಯೆ?
ಸಂನ್ಯಾಸಿಯುಂ ಜಡ ಶರೀರಿಯೇನಲ್ಲವಯ್."
ಶೋಕಾಶ್ರು ವಿಗಲಿತ ನಯನ ಚೈತ್ಯಾಕ್ಷಿಗಳಿಂ
ನೋಡುತೆ ಬಹುಲ ಗದ್ಗದರಾದರ್, ಸ್ವಾಮೀಜಿ.
"ಕೇಳಿರ್ಯೆ ಮಿತ್ರರೇ, ಎಮ್ಮ ಗುರುತಲದಲ್ಲಿ ಎಲ್ಲರುಂ
ಒಟ್ಟೊಟ್ಟಿಗೆ ಕುಳಿತವರಲ್ತೆ? ಮರುಕಮಿರದ ಶಿಲಾ ಕಠಿಣ
ಹೃದಯಕೆ ಧಿಕ್ಕಾರ! ಛಿಃ! ಕಾರುಣ್ಯ ದ್ರವ್ಯವೆ
ಇಲ್ಲದಿಹ ವ್ಯಕ್ತಿಯುಂ ಮನುಷ್ಯನೆ ಅಲ್ಲವೆನೆ
ತಪ್ಪಲ್ಲ. ತಪ್ಪಲ್ಲ!" ನುಡಿಸುಯ್ದರ್ ಗುರೂಜಿ.
ಇಡಿ ರಾತ್ರಿಯು ಕಳೆದುದು ಅಶಾಂತಿಯಲಿ. ತಣ್ಣಗೆ
ತನಿವೆಳಗು ಮೂಡಿ ಬರುತಿರೆ ಪೊರಟರ್ ಕಲಿಕತ್ತೆ
ನಗರದಾ ಪಥವಿಡಿದು. ಶ್ರೀರಾಮ ಕೃಷ್ಣ ಪರಮ
ಹಂಸರ ಸಂಘಕೆ ಮೇಣೆಲ್ಲ ಸಾಮಾಜಿಕರ
ಕ್ಷೇತ್ರಗಳಿಗೆ ಮೇರುದಂಡ ಪ್ರಾಯಮೆನೆ ನಿಚ್ಚಂ
ಮುಕ್ತ ಹಸ್ತದಿಂ ಆಶ್ರಯ ನೀಡುತಲಿರ್ದ
ಗೃಹೀಭಕ್ತರ ನಿಧನದಿಂ ಬಗೆವಗೆಯ ಕಷ್ಟ
ನಷ್ಟಗಳ್ ಒದವಿದುದು, ಗುರುತರವಾಗಿ. ಮತ್ತಂ

ಶೋಕಭಾರಾಕ್ರಾಂತ ಗುರು ಭ್ರಾತೃಗಳ ಬಂಧು
ಬಳಗಮಂ ಕಂಡು ತಮ್ಮೆಲ್ಲ ಸಂಪೂರ್ಣ ಪರಿ
ತಾಪಮಂ ತೋರ್ಪು ಸಂತೈಸಿ ಬೋಳೈಸಿ ದುಃಖದ
ಒಡಲ್ಗೆ ಸುಶಾಂತಿಯ ರಸವನೊರೆದು ಬಹು ಕಾರ್ಯ
ಭುಜವೇರ್ದುದು ಸ್ವಾಮೀಜಿಯ. ಕಲ್ಕತ್ತ ನಗರ
ದೇಶದಿಂ ಆಶ್ರಮದ ನೆಲೆ ಮುಟ್ಟುವನಿತರೊಳ್
ಮುಸ್ಸಂಜೆಯ ಮಸುಗಪ್ಪು ಮುಸುಗುತಲಿರ್ದುದಯ್
ಧರಣಿಯಂ. ಜೇನ್ದುಂಬಿಗಳ್ ಝೇಂಕರಿಸುತ ನಸು
ದೂರದೂರದಾ ತಂತಮ್ಮ ಗೂಡಿಗೆ ಮರಳಿ
ಹೋಹಾತುರದೊಳ್ ಪಾರುತಿರ್ದುವು ಸಾಲ್ಗಟ್ಟಿ.
ಆಶ್ರಮದ ಒಳಹೊಕ್ಕರ್ ಸ್ವಾಮೀಜಿ. ಸಾಯಂ
ಭಜನೆಯು ನಡೆಯುತಿರಲ್ ಆಗಮನದ ಸುದ್ದಿಯುಂ
ಮುಟ್ಟಿರಲಿಲ್ಲಮವರ್ಗೆ, ಸ್ವಾಮೀಜಿ ಒಳಗುಯ್ದು
ಕೈಕಾಲ್ ತೊಳೆದು ಸ್ವಚ್ಛಗೈದು ಬಳಿಗೈತರಲ್
ಭ್ರಾತೃಭಾಯಿಗಳ್ ಹರ್ಷ ಚಿತ್ತದೊಳ್ ನಾಯಕ
ಭ್ರಾತೃವಂ ಸ್ವಾಗತಿಸಿದರ್, ಬಹುಲ ಪ್ರೀತಿಯ
ರಸಸೂಸಿ. ಉಭಯ ಕುಶಲೋಪರಿಯ ಬಳಿಕಲಾ
ಕುಟೀಯಲಿ ಕಳೆಯಿತು ರಾತ್ರಿ ಶಾಂತಿಯಲಿ. ನಾಯಕ
ನರೇಂದ್ರನಾಥಂ ದೂರದೂರದ ಗೃಹೀಭಕ್ತ
ಬಂಧುಗಳ ಕಾಣುತ್ತೆ ಒಡಲ ಸಂತಾಪಮಂ
ಸಲಿಸಿದರ್, ಸ್ವಾಂತನದ ಮಾತಾಡಿ ನಲವಿಂದೆ.
ಬಳಿಕಲಾ ಗೃಹೀಭಕ್ತರುಂ ಶ್ರೀ ಗುರುದೇವನ
ಪಾದ ಸನ್ನಿಧಿಯ ನೇಮದಲಿ ದೀನದಲಿತರ
ಸೇವೆಯುಂ ಎಂದಿನೊಲ್ ತಮ್ಮಯ ಮನಸೇಚ್ಛೆ ಕೈ
ಕೊಂಬುವೊಡೆ ದೀಕ್ಷೆಯುಂ ತೊಟ್ಟರೆಲ್ಲ. ತಮ್ಮಯ

ಒಮ್ಮತದ ನಿರ್ಣಯದಿಂ. ಗುರುಭಾಯಿಗಳ್ ಎಡೆ
ಎಡೆಯೊಳ್ ಬಗೆಬಗೆಯಲಿ ಶುಶ್ರೂಷೆಯ ಕಾರ್ಯಂ
ಪುಡುಪುಡುಕಿ ಪಡೆದರ್ ಮನಮೆಚ್ಚಿ. ಗುರುದೇವಂ
ಬಳಿಕಂ ಪರಿಭ್ರಮಣ ಕಾರ್ಯಕ್ಷೇತ್ರವಿಡಿದರ್.
ಮೂಡಣದ ದಿಗ್‌ದೇಶದಲಿ ಮೂಡಿತು ಬೆಳ್ಳನೆಯ
ಬೆಳ್ಳಂಬೆಳಕು. ಕೆಮ್ಮನೆ ಕೆನ್ನೀಲ ಭಿತ್ತಿಯಲಿ
ರವಿ ಕಿರಣಗಳ್ ರಾಚಿದುವು ಕೋಟ್ಯಾನುಕೋಟಿ
ಸೂಜಿಗಳ ಹೋಲಿ! ಹೊಂಬೆಳಕಿನ ಮಂಗಳ ಹರವು
ಹರಡಿತು ಇಳೆಯಮೇಲೆ. ಹಿಮಾಲಯ ಪರ್ವತದ
ಪವಿತ್ರ ಪದಪ್ರಾಂತದ ಮಹಾವಿಸ್ತಾರದಲಿ
ನೆಲೆಗೊಂಡ ಅಲ್ಮೋರ ಪ್ರಾಂತ್ಯಮಂ ಮುಟ್ಟಿದರ್.
ಅತ್ಯದ್ಭುತ ಪ್ರಕೃತಿ ಮಾತೆಯೈಸಿರಿ ನೋಳ್ಪ
ನೋಟಮಂ ಮುಗ್ಧದುಗ್ಧಗೊಳಿಪವೊಲಿರೆ ಜೊತೆಗೆ
ಒಡಗೂಡುತಲೈದ ಅಖಂಡಾನಂದರ್ ಆ
ಅಭೂತಪೂರ್ವಕಮಾದ ನಿಸರ್ಗದೈಸಿರಿಯಂ
ಕಂಡು ಮನ ಮೆಚ್ಚಿ ಮಾರುವೋಗಿ ಬೆರಗಾದರ್
ಬೆಪ್ಪಾಗಿ ಸುಖ ಮುಚ್ಚ್ಗೆ ಸಲ್ಲುವೊಲ್. ಅಪಾರ
ಅಪರಿಮಿತ ನಿಸರ್ಗದೈಶ್ವರ್ಯದ ರಾಶಿಯ
ಮೈಸಿರಿಗೆ, ಹಿಮವಂತನ ಶೀತಲೀಕರಣದ
ವೈಭವಕೆ, ರಜತ ಕಿರೀಟವೊತ್ತ ಗಿರಿಗಳೈಸಿರಿಗೆ
ಮನನೆಟ್ಟು, ಮರೆತರ್ ಹಸಿವು ತೃಷೆಗಳ ಒಡಲ್
ಗೋಳಂ. ಗಿರಿಸಿರಿಯ ಪದತಲಂ ಬಹು ಬಗೆಯಲಿ
ಮೈದಾಳ್ದ ನಿಮ್ನೋನ್ನತ ಪ್ರದೇಶದಲಿ ಪದ
ಚಾರಣಂಗೈಯುತ್ತೆ ಮುಂಬರಿದರೀರ್ವರ್.
ಇಂತಿಂತು ಅಲ್ಲೆಲ್ಲೆಡೆಯೊಳ್ ಅಲೆದು ಸುಂದರ

ಬಂಧುರ ಕಿರಿ ನೆಲೆಗಾಗಿ ಪುಡುಕುತಿರಲ್ ಆರ
ಕೃಪೆಯೊ ಎನೆ ಕಣ್ಗೆಸೆದರೊರ್ವ ಮುನೀಶ್ವರಂ.
ಒಡನೊಡನೆ ಮುನಿಯುಂ ಷೋಡಶಕಳೆಯುಕ್ಕುವ
ಯುವ ಪ್ರಭೃತಿಯಂ ಕಂಡು ಪ್ರಸನ್ನ ಮುಖದಿಂ
ಕರೆದೊಯ್ದರ್ ತಮ್ಮಯ ಕುಟಿಗೆ. ಅವರೊಡಗೂಡಿ
ವೇದೋಪನಿಷತ್ತಿನ ವಿಚಾರವಿಹಾರದೊಳ್
ವಿಚರಿಸಿ ವಿಚರಿಸಿ ಆತ್ಮ ಸಂವರ್ಧನೆಗೆ ಮನ
ಮತಿಗಳುತ್ಕಟೇಚ್ಛೆಗೆ ಇಂಬೀಯುತೆ ಸಂತತ
ಆತ್ಮ-ಪರಮಾತ್ಮಗಳ ಸಂಬಂಧದ ಅದ್ಭುತ
ಜಲಧಿಯಲಿ ಮಿಂದು ಈಸಾಡಿ ವಿಹರಿಸುತ್ತಲಿ
ತೇಲಿದರ್ ತೇಲು ಹಂಸೆಗಳಾಗಿ. ಸ್ವಾಮೀಜಿ
ಒರ್ಮೆ ಅಖಂಡಾನಂದರಂ ಕುರಿತಿಂತು ನುಡಿಸಿದರ್,
"ಆಧುನಿಕ ಭಾರತವರ್ಷದಲಿ ಅನಿಶ್ಚಿತಮಿಹ
ಪಾರಲೌಕಿಕ ಕಲ್ಯಾಣದ ವ್ಯರ್ಥ ಪಂಬಲಕೆ
ಬಲಿಯಾಗುತಾಂ ಬದುಕುತಿಹೆನೇ ಎಂಬುವಾಸಂಕೆ
ಏಳ್ವುದೋರೋರ್ಮೆ. ಆದೊಡದಕೊಂದು ಸಜ್ಜಿನ
ಪ್ರತ್ಯುತ್ತರಮೋ ಎನುವವೊಲ್ ಹೃದ್ದೇಶದಿಂ
ಕೇಳ್ವಪುದೊರ್ ಮಂತ್ರನುಡಿ! ಇದಂ ಕೇಳರಿಯೈ,
"ಇತಿ ಸಂಸಾರೇ ಸ್ಫುಟತರ ದೋಷಃ ಕಥಮಿಹ
ಮಾನವತವ ಸಂತೋಷ "
ಆಗಳಾ ಮಾನಸ
ಮುರುಳಿಯೆನ್ನ ಶಾಂತಿಯ ರಾಗಾಲಾಪನೆಗೈವುದು
ಒಡಲ್ ಮಮ್ಮಳಿಸುವೊಲ್."
ಅದಂಕೇಳಿ ವರಶಿಷ್ಯ
ಅಖಂಡಾನಂದರಿಂತೆಂದರ್ "ಭಾಯೀ! ಇದಂ

ಯೋಚಿಸಿದೊಡೆ ಆಧುನಿಕ ಭಾರತಂ ಮುಂದೈಸಿ
ಮುಂದೈದು ಪಾಶ್ಚಾತ್ಯ ಆಚಾರ ವಿಹಾರಮಂ
ಅನುಕರಿಸಿದೊಡವರೊಲ್ ಪ್ರಬಲರಾಗಿ ಬೆಳೆಯುತೆ
ಪ್ರಭಾವಿತರಪ್ಪುದು ದಿಟಮೆಂಬ ಮಂಕುಮಾ
ಯೆಯ ಬಂಧನದಲಿ ಸಿಲ್ಕಿ ವೈಯ್ಯಾರದಲಿ ನೆರೆ
ಮೆರೆದಪರ್ ಬಿಳಿಯರಂತೆವೊಲ್! ಆದೊಡಂ ಬಲ್
ಕಿರಿಕಿರಿಗೆ ಮನರೋಸಿ ಹೇಸಿ ಕುದಿದೆದ್ದ ನಮ್ಮ
ಪ್ರಾಚೀನ ಭಾರತಂ "ಹೇ ಮೂಢರೇ! ಪರರ
ಅನುಕರಿಸಿ ನಕಲಿಗಳೈಸಿ ನೀವಾದಪುದೆಂತು
ಪಾಶ್ಚಾತ್ಯರ್? ಅವರ ವಿಚಾರವಾಹಿ ಅಕ್ಕುಮೆ
ನಿಮಗೆ? ನೀವರಿದು ಗಳಿಸಿದುದು ಮಾತ್ರವಲ್ಲದೆ
ಬೇರೊಂದು ದಕ್ಕದೈ! ಸಿಂಹದ ತೊಗಲ್ ಹೊದ್ದೊಡೆ
ಗಾರ್ದಭಂ ತಾನೆಂತು ಸಿಂಹವಾದಪುದು?"
ಆ
ಭರ್ತ್ಸನೆ ಎಡೆಎಡೆಯಲಿ ಕೇಳಿ ಬಂದಪುದು ಎನೆ
ಮುಂದೈದ ಜನರುಂ ಪಿಂಜರಿದರೇಂ? ಇದಂತುಂ
ವಿಷಾದಕರ."
ಮರುದಿನಂ ಪೊಳ್ತೇರಿ ನೆತ್ತಿಯೊಳ್
ರಣರಣಿಸುತಿರುತಿರೆ ಗುರುನಾಯಕನಂ ಅರಸಿ
ಅರಸಿ ಊರೂರು ಸುತ್ತುತಲೈದ ಸ್ವಾಮಿ ಕೃಪಾ
ನಂದರುಂ ಸ್ವಾಮಿ ಶಾರದಾನಂದರುಂ ತಮ್ಮ
ಗುರುವರೇಣ್ಯನಂ ಕಂಡು ಒಡಗೂಡಿದರ್ ನಿಜ
ತೋಷದಿಂ. ಬಳಿಕಲೆಲ್ಲರುಂ ಪಿಂಮರಳಿದರ್
ವರಾಹ ನಗರಿಯ ಬಡಮಠದ ಕುಟಿಗೆ. ಭ್ರಾತೃ
ಬಾಯಿಗಳ ಒಕ್ಕೂಟ ಸಹವಾಸ ಮುದವೂಡಿ

ಸಂತಸದ ಕಳೆ ಬೆಳಗಿತು ಮುಖ ಮಂಡಲಗಳಲ್ಲಿ.
ಭವಿಷ್ಯದ ಭವ್ಯವೇದಿಯಂ ನಿರ್ಮಿಸುವೊಂದು
ಮಹಾಕಾರ್ಯ ನಿರೂಪಿತಮಾದತ್ತು ತರುಣರ
ಮಧ್ಯೆ. ತಂತಮ್ಮ ವ್ರತ ಸಂಗೋಪನೆಯನುಂ
ಎಂದು ಕೈಬಿಡದ ಮಾಳ್ಕೆಯಲಿ ಘನವಾಯಿತ್ತು.
ಸ್ವಾಮೀಜಿಯುಂ ಭ್ರಾತೃಬಾಯಿಗಳ್ ಕುರಿತು ಬಲ್
ನಲ್ಮೆಯಿಂ ಪ್ರೇಮಕಾತರದಿಂ ಎದೆಯ ಭಾವ
ಧಾರೆಯಂ ಬಿತ್ತರಿಸಿದರಿಂತು "**ಅನಿತ್ಯಂ
ಅಸುಖಂ ಇಮಂ ಪ್ರಾಪ್ಯ ಭಜಸ್ವ ಮಾಂ...**"
ಮಠದ ನೆಲೆಯಲಿ ವಾರವೊಂದುರುಳಿತು. ಸನ್ಯಾಸಿ
ಸೋದರರ್ ತಂತಮ್ಮ ಆತ್ಮದೊಳ್ಪಿಗಾಗಿ ಜಗದೊಳ್ಪಿಗಾಗಿ
ಮಠದಿಂ ಪೊರತೆರಳ್ದು ಕಠೋರ ತಪಶ್ಚರ್ಯೆಯಲಿ
ಕೆಲಗಾಲ ಉಳಿವೊಂದು ಮನೋನಿಶ್ಚಯದಿಂದೆ
ಪೊರಮಟ್ಟರ್ ಪೊಳ್ತೇರುವ ಮುನ್ನ. ಕೆಲಬರುಂ
ಹೃಷಿಕೇಶ ಹರಿದ್ವಾರದೊಳ್ ಮತ್ತೆ ಕೆಲಬರುಂ
ಹಿಮಾಲಯದ ನಿರ್ಜನ–ನೀರವ–ನಿರಾತಂಕಿತ
ಗುಹಾ ಪ್ರಾಂತಗಳಂ ಪೊಕ್ಕು ಮುಳುಗಿದರ್ ಸುದೀರ್ಘ
ತಪಶ್ಚರ್ಯದಲಿ. ಶಾರದಾನಂದಜಿಯೊಡಗೂಡಿ
ಪೊರವೊಂಟ ಸ್ವಾಮೀಜಿಯುಂ ಮತ್ತೆ ಹಿಮಾಲಯ
ಪರ್ವತದ ಸಾನುಪ್ರದೇಶಕೈದರ್. ಅಲ್ಲಲ್ಲಿ
ಇಕ್ಕಟ್ಟಿನ ದಾಣದೊಳ್ ನುರ್ಗುತೆ ಅರಸುತಿರೆ
ಅಲಕನಂದ ನದೀತೀರದಲಿ ಗುಹೆಯೊಂದು ಕಣ್
ದೃಷ್ಟಿಗೆಸೆಯೆ ಒಳಪೊಕ್ಕುನೋಡಲದಂ, ತಮಗೆ
ಹಿತವಾಯ್ತು. ಘನವಾಯ್ತು. ಈರ್ವರುಂ ಮೆಚ್ಚಿದರ್
ಒಳಗೊಳಗೆ ವಿಶಾಲಮಿರೆ ಸ್ವಚ್ಛ ಶುಭ್ರತೆಗೇಂ

ಕೊರಮಿಲ್ಲ. ಆವ ಮುನಿರಿಸಿಯ ನಿವಾಸವೋ
ಮುನ್ನಿನ ಒಣ ಹುಲ್ಲು ಹಾಸಿನ ಮೆತ್ತೆಯಿರ್ದುದಾ
ಬದಿಯೊಳ್! ಆ ಪವಿತ್ರ ನೆಲ, ಆ ಮಹಾನದಿ
ಸುಂದರ ತಟಿನಿಯ ಪಾತ್ರ, ಅ ಪರ್ವತದೇಶ
ಶ್ರೇಣಿಗಳ ಸರ್ವಾಂಗ ಸುರಸುಂದರ ಪದತಲ,
ಎಲ್ಲವುಂ ಎನಿತೊಂದು ಆಪ್ಯಾಯ ಮಾನವೋ.
ಪರಂತಪನ ಪಚ್ಚನೆಯ ಶಯ್ಯೆಯ ಪಾಂಗಿನಲಿ
ಮೆರೆದತ್ತು ಶಾದ್ವಲಂ' ಹಬ್ಬಿಹರಡಿದ ಹಾಸು.
ಅದೊ, ಅಲ್ಲಿ; ಅಲಕನಂದೆಯ ಜುಳುಜುಳು ಮಂಜುಳ
ರವದ ಮಧುರಗಾನ. ತಿಳಿಜಳದಲಿ ಮೈನೋವುಂ
ಮುಡಿಸೆ ಈಸಾಡಿ ಮುಳುಗೆದ್ದು ಮಿಾಹಂಗೈದು
ಮಡಿಯುಟ್ಟು ಕಳೆದ ಉಡುಪಂ ಒಗೆದು ಒಣಗಿಸಲ್
ಹರವಿದರ್ ಶಾದ್ವಲದ ಪಚ್ಚ ಹಾಸಿನ ಮೇಲೆ.
ಗುರುಭಾಯಿ ಶಾರದಾನಂದರಂ ಕುರಿತಿಂತು
ನುಡಿದರ್ ಗುರುದೇವಂ "ಮಿತ್ರ! ಭಾರತದೊಳ್
ಹಿಂದೂಧರ್ಮವುಂ ಮಾನವತೆಯ ಪ್ರೌಢಿಮೆಯಂ
ಎತ್ತಿ ಹಿಡಿದನಿತ್ತು ಉದಾತ್ತ ಧಾಟಿಯಲಿ ಈ
ಜಗತ್ತಿನೊಳ್ ಇನ್ನಾವ ಧರ್ಮವುಂ ಉಪದೇಶ
ನೀಡಿಲ್ಲಮೆನೆ ಅನ್ಯಮಲ್ತು. ಅಂತೆಯೆ, ದೀನ
ಜನಕೋಟಿಯಂ ಹಿಂದೂ ರೀತಿ ನೀತಿಗಳ್ ಜಡಿ
ಕುಟ್ಟಿ ತತ್ತಳ ತುಳಿದನಿತು ಇನ್ನಾವ ಧರ್ಮವುಂ
ತುಳಿದಿಲ್ಲಮೆಂಬುದು ಅನಿತೆ ಸತ್ಯದಾ ಕ್ರೂರ
ಮುಖ! ಆದೊಡದೇಂ ಧರ್ಮದ ತಪ್ಪಲ್ಲ! ಮೂಢ
ಮತಿಯ ಸಾಮಾಜಿಕರ ಸ್ವಾರ್ಥ ಬುದ್ಧಿಯ ಉಚ್ಛ
ನೀಚ ತತ್ವಗಳಂ ವ್ಯವಹಾರದೊಳ್ ತಂದುದು

ತೀವ್ರತಮ ವ್ಯಘಾತ ಕಣಾ! 'ಪಾರಮಾರ್ಥಿಕ'
'ವ್ಯವಹಾರಿಕ' ಇತ್ಯಾದಿಗಳಂ ತತ್ವಗಳ
ಸೋಗಿನಲಿ ಸೂಡಿ, ಅಸಹ್ಯಕರ ದಬ್ಬಾಳಿಕೆಯ
ಯಂತ್ರಗಳ ಸೃಷ್ಟಿದಾತರ್ ಈ ಸಾಮಾಜಿಕರ್!
ಇರಲಿರಲಿ, ಇಂತೆಲ್ಲ ಗಬ್ಬುಹೊಲಸಿನ ಕೊರಳ್
ಕಿವುಂಚುವುದೇ ತರುಣವೃಂದದ ಕಡುನಿಷ್ಠೆಯ
ಕರ್ತವ್ಯ. ಇದರೊಳೇಂ ನಿರಾಸೆಯಂ ಬೆಳಸದಿರ್.
ಗೀತಾಚಾರ್ಯನೆಂದ ಸರಳತರ ಬೋಧನೆಯನರಿ,
    "ಕರ್ಮಣ್ಯೇವಾಧಿಕಾ ರಸ್ತೇ ಮಾ ಫಲೇಶು ಕದಾಚನ"
ಈ ನೀತಿಯನುಕರಿಸಿ ಕಾರ್ಯರಂಕ್ಕೇಳಿ! ಈ
ನೀತಿಯೇ ವರದಾನ. ಪುರುಡುವೆತ್ತು ದುಡಿಯಿರಿ."
    ಆ ಪರ್ವತ ಪ್ರದೇಶಗಳ ಪದತಲದಲಿ ನಡೆದು
ಓಡಾಡಿ ಪದ ಚಾರಣಂಗೈದು ವಿವಿಧ ಗಿಡು
ದ್ರುಮ ಕೋಟಿಗಳಲಿ ಬಲಿತು ಪಣ್ತು ಜೋಲುತಿಹ
ಪಣ್ಗಳಂ ಕಿತ್ತು ತಿಂದು ಗೆಡ್ಡೆ ಗೆಣಸುಗಳಂ
ಬಗೆದು ಅಗೆದು ತೊಳೆದು ಸಿಹಿಕಹಿಗಳ ರುಚಿನೋಡಿ
ತಿಂಬುವರ್ ಕಾಲಕಾಲಕೆ. ತಪಸ್ಸಾಧನೆಯ
ಕಾಲದೊಳ್ ಈರ್ವರುಂ ಬೇರೆಬೇರೆಯೆ. ಮತ್ತೆ
ಕೆಲವೊರ್ಮೆ ಹಲಕೆಲದಿನಗಳ್ ಪರಸ್ಪರ ಭೇಟಿ
ದೊರೆಯದೊಲ್ ದೂರದೂರವಾದಪರ್. ಆ ಬೃಹದ್ ಗಿರಿ
ಪರ್ವತದ ಪ್ರಶರೀರದಮೇಲೆ ಅಂಡಲೆದು
ಪ್ರಕೃತಿಯ ಸೌಂದರ್ಯರಾಶಿಯಂ ಸವಿಸವಿದು
ಮೊಗೆದೀಂಟಿ ಒಡಲ್ ತುಂಬುವರ್. ವಿರಾಟ್ ವಿಶ್ವದ
ಬೃಹನ್ ಲೀಲಾ ಪ್ರವೃತ್ತಿಯಂ ನೆನೆದು ತುಂಬು
ಹೃದಯದಿಂ 'ಧನ್ಯನಾಂ. ಧನ್ಯನಾಂ.' ಎಂದರಾ

ಸ್ವಾಮೀಜಿ ಬೆಳುದಿಂಗಳ ಹಾಲ್ಬೆಳಕಿನಲಿ ಪದ
ಚಾಲನೆಗೈಯುತೆ ಗೆಳೆಯನಂ ಕುರಿತಿಂತೆಂದರ್,
"ಕೇಳ್! ಶಾರದಾನಂದಜಿ, ಪ್ರತಿ ಮನುಜಂಗೆಂತು
ವ್ಯಕ್ತಿತ್ವಮಿರ್ಪುದೋ ರಾಷ್ಟ್ರವುಂ ಅಂತೆಯೇ
ತನ್ನೊಂದು ಸಮೃದ್ಧ ವ್ಯಕ್ತಿತ್ವಮಂ ಪೊಂದಿ
ವಿಜೃಂಭಿಪುದು ಸತ್ಯಸ್ಯ ಸತ್ಯಂ. ಮತ್ತಮಾ
ಮನುಜಮನುಜರ ಮಧ್ಯೆ ಅವರವರ ಗುಣಧರ್ಮ
ಪ್ರಕಾರದೊಳ್ ವಿಶೇಷತಮ ವಿಭಿನ್ನತೆಯೆಂತು
ಇಹುದಂತು ವಿವಿಧ ರಾಷ್ಟ್ರಗಳಲಿಯುಂ ತೀರ
ವಿಭಿನ್ನತರ ವಿಶೇಷತೆಮಿರ್ಪುದು ತಿಳಿವುದಯ್
ಪರಿಭಾವಿಸಿ ನೋಡೆ. ವಿಚಾರ ಬಲವೇ ಬಲಂ.
ಮಿತ್ರಾ, ಯೋಚಿಸಿದೊಡೆ ಅರಿವಳಿಕೆಗೆ ಬಹ ಸತ್ಯ
ವಿಚಾರವೆ ಬೇರೆ. ಜಾಗತಿಕ ಪ್ರಜ್ಞೆಯಭಿಮತವೆ
ಬೇರೆ. ನಾಗರಿಕ ತೇಜಿಯ ಬೆನ್ನೇರಿ ಮುನ್ನಡೆಯೆ
ಧೈರ್ಯಸ್ಥೈರ್ಯಗಳ್ ವೇಳ್ಕುಂ. ಅಜ್ಞಾನದ
ಅಂಧಕಾರದವಲಯದೊಳಾವುಂ ದೀಪದಾರಿ
ಗಳೈಸದಿರೆ ಬೆಳಕಿಲ್ಲ ಜಡಜೀವನಗತಿಗೆ.
ಸಮಾಜದ ಅಜ್ಞಾನದ ಲಾಭವ ಪಡೆದು ಈ
ಪಾದ್ರಿಗಳ್ ತಮ್ಮ ಧರ್ಮೀಯ ಪ್ರಭಾವವಂ
ಬೀರಿ ಜನಮನವಂ ಸೆಳೆದಪರ್ ಸುಲಭದೋಳ್.
ಈ ಮೂವತ್ತೂರು ಕೋಟಿ ದುರದೃಷ್ಟ ಪೀಡಿತ
ದೀನದಲಿತ ಭಾರತೀಯರ ಪರಮ ಉದ್ಧಾರ
ಕಾರ್ಯಕ್ಕಾಗಿಯೇ ಈ ಜನುಮಧಾರಣೆ ಎಂದು
ಪ್ರತಿಜ್ಞೆಯಂ ಕೈಕೊಳ್ಳಲ್ ಪಿಂಜರಿಯದಿರಿ!

"ನಿಂದಂತು ನೀತಿ ನಿಪುಣಾ ಯದಿ ವಾಸ್ತುವಂತು
ಲಕ್ಷ್ಮೀ: ಸಮಾವಿಶತು ಗಚ್ಛತು ವಾ ಯಥೇಷ್ಟಮ್ ।
ಅದ್ವೈವಾ ಮರಣ ಮಸ್ತು ಯುಗಾಂತರೇ ವಾ
ನ್ಯಾಯಾತ್ಪಥ: ಪ್ರವಿಚಲಂತಿ ಪದಂ ನಧೀರಾ: ॥"

"ಕೇಳ್ಳೈ ವತ್ಸ! ಈ ಮೂರು ಗುಣ ಬೆಳಸಿಮೆಂದೆಂದೆ
ಇಂತಪ್ಪ ವಿಪುಲ ಸಾಹಿತ್ಯ ಸಂಪದವಂ
ಎಣೆಯಿಲ್ಲದೊಲ್ ನೆರೆಬರೆದೆಮಗೆ ಉಪದೇಶದ
ಆದೇಶವನಿತ್ತುದು ನಮ್ಮಗಳ ಒಳಿತಕ್ಕೆ.
ಸಮಾಜದ ಒಳಿತಕ್ಕೆ. ಭಾರತದ ಒಳಿತಕ್ಕೆ.
ಜಗತ್ತಿನ ಪುರೋಭಿವೃದ್ಧಿಗೆ ಎನಲೆಲ್ಲಕೆ
ಬೋಧಿಸಿ ಉಪದೇಶಿಸಿ ಆದೇಶಿಸಿ ಪೋಗಿಹ
ಪ್ರಾಚೀನರಂ ಮರೆತೊಡೆ ಭಾರತ ಧಾತ್ರಿಯನೆ
ಮರೆತಂತೆ; ಮರೆತಂತೆ! ಧ್ಯೇಯೋದ್ದೇಶಂಗಳ
ತೇಜಸ್ಸೇ ನಿಮ್ಮೊಳಿರುತಿರೆ ನೀಂ ಗುಹೆಯೊಳಿರೆ,
ಸುತ್ತಮುತ್ತಲ ಬಂಡೆ ಬಂಡೆಯಂ ಸೀಳಿ ಹೊರ
ಬಂದಪುದು ನಿಮ್ಮಗಳ ವಿಚಾರಾತ್ಮಕ ಸತ್ಯ!
ನಿಮ್ಮಯ ಮುಖಕಮಲಗಳಲಿ ಚಿಮ್ಮಿ ಬಂದಪುದು
ಎದೆಯ ಶ್ರದ್ಧಾಜ್ಯೋತಿಯ ಚೆಂಬೆಳಕಿನ ದಿವ್ಯ
ಚೇತನದ ಷೋಡಶ ಕಳೆ!"
ಸಾಯಂ ಸೊಬಗಳಿದು
ನಿಶಾರಾಣಿಯ ಕಗ್ಗತ್ತಲೆಯ ಉತ್ತರೀಯ
ಹರಡಿತು ಇಳೆಯಮೇಲೆ. ಕಂಗಳಿಗೆ ನಿದ್ರೆಯ
ಮಬ್ಬು ಕವಿದು ಬರೆ ಮಲಗಿದರೀರ್ವರ್ ಗುಹೆಯಲಿ.
ಗಾಢ ನಿದ್ದೆ ಹತ್ತಿರೆ ಮಧ್ಯ ರಾತ್ರಿಯಲಿ ಕಿವಿ
ಗಪ್ಪರದ ಸನಿಹದಲಿಯೆ ಕೇಳಿಸಿತೊಂದು ದಿವ್ಯ

ಅತನು ವಾಣಿ "ಎಲೆ ವತ್ಸ! ಸರ್ವತ್ರ ಸದಾ
"ಉತ್ತರೋತ್ತರ ಅಭಿವೃದ್ಧಿರಸ್ತು," ನಿದ್ದೆಯ
ತೆರೆಯಂ ಹರಿದು ಮುಟ್ಟಿತು ಮನವಂ. ಸ್ವಾಮಿಜಿ
ಕಣ್ಣರಳಿಸಿ ಬಿರಿಬಿರಿ ನೋಡಿದರ್. ಶಾರದಾ
ನಂದಜಿ ಮುಳುಂಗಿಹರ್ ನಿದ್ದೆಯ ಭಾರದಲಿ.
ಆ ಆಶೀರ್ವಚನಂ ದೈವವಾಣಿಯಲ್ಲದೆ
ಬೇರಲ್ಲ. ಮನದೊಳ್ ನೆಚ್ಚಿರೆ ಎದೆಯೊಳ್ ಕೆಚ್ಚಿನ
ಕಿಡಿ ಮೂಡುವುದೈ ತಂತಾನೆ... ಎಂಬ ಯೋಚನಾ
ನಿಧಿಯಂ ಮನತುಂಬಿ ಎದ್ದು ಕುಳಿತರ್ ಸ್ವಾಮಿಜಿ.
ಎಳೆದಿಂಗಳ್ ಚಾಚಿದುದು ಒಳಗಡೆ. ಹೊರಗಡೆಯ
ಸೊಂಪುತಂಪುಗಳ ಹರವು ಸೆಳೆಯಿತು ಚಿತ್ತಮಂ.
ಉತ್ತರೀಯಮಂ ಹೊದ್ದು ಹೊರನಡೆದರ್. ಗವಿಯು
ಪಿಂದುಳಿಯಿತು. ಶಾರದಾನಂದರ್ ಮರೆಯಾದರ್
ಮನದಿಂ. ಲೌಕಿಕ ಜಗದ ವ್ಯಾಪಾರ ಲಯಮಾಯ್ತು.
ಪ್ರಕೃತಿಯ ಉಡಿಯಲ್ಲಿ ಇರುಂಪೆಯೆನೆ ಸಾಗಿದರ್
ಧ್ಯಾನಮಯ ಮೌನದಲಿ. ದೂರ ದೂರ ನಡೆದಿರೆ
ಮೂಡುವೆಟ್ಟುಗಳ ಶಿಖರಾಂತ ಪ್ರದೇಶದೊಳ್
ಮುಂಬೆಳಕಿನ ಭವಿ ನಸು ತುಳುಕಿದುದು
ಸಾಲೈಸುತೆ. ರಕ್ತ ವರ್ಣಮಯ ದಿಗ್ ಭಿತ್ತಿಯಲಿ
ಕೆನ್ನೀಲಿಯ ಪಯೋನಿಧಿಗಳ್ ಜೃಂಭಿಸಿರ್ದುವು
ತನಿವೊಳ್ತಿನಲಿ ಮಹಾತೋರಣಗಳ ಮಾಲೆಯ
ನೆಯ್ದು ಬಾಲರವಿಯಂ ಸಡಗರದಲಿ ಸ್ವಾಗತಿಸೆ.
ಸ್ವಾಮಿಜಿ ಬೆಟ್ಟವೇರಿ ಬೆಟ್ಟವಿಳಿದು, ದಾಂಟಿ
ಕಂದರಂ, ಸಾಗಿದರ್ ಮುಂದೆ ಮುಂದೆ. ದೂರದಾ
ನಿರ್ಜನ ಸುಖ ಶಾಂತಿಯ ಪ್ರದೇಶದಿ ಕಂಡರ್

ಪೆರ್ಮರ್ಂ, ಚಕ್ರದಾಕಾರದಲಿ ಹರಡಿರ್ದು
ಪಚ್ಚ ಪಸುರಾಗಿ ಮೈತುಂಬಿ ಶಿವ ಶಿವಾಣಿಯರ
ರೂಪಿನಿಂ ಮೈವೆತ್ತಂತೆ, ಅಲ್ಲಿಯೆ ಕೆಳಕೆಳಗೆ
ಗಿರಿ ಕಂಧರದಿಂ ಜಳಜಳಿಸಿ ಹರಿದುಬಹ ಝರಿ
ಥಳಥಳಿಸುತಲಿರ್ದುದು ಮನೋರಮ ಶೈಲಿಯಲಿ.
ಸ್ವಾಮಿಜಿಯುಂ ಶುದ್ಧ ಜಲದಲಿ ಜಳಕವಾಡಿ
ಆ ಪೆರ್ಮರನ ಪದತಲದಲಿಹ ಕಿರಿಯ ಹಾಸು
ಗಲ್ಲಿನ ಬಳಿಗೈದು ಕಣ್ ನೆಟ್ಟು ನಾಂಟಿದೊಲ್ ತಲೆ
ಎತ್ತಿ ನೋಡಿದರ್. ಪಚ್ಚ ಪಸುರುಕ್ಕುವ ಮರದ
ತುಂಬೆಲ್ಲ ಇನಿತು ತಾವಿರದ ಮಾಳ್ಕೆಯಲಿ ಎಲೆ
ಗೊಂಚಲ್‌ಗಳ್ ದಟ್ಟಣಿಸಿರ್ದುವು ನಳನಳಿಸುತೆ.
ಸುತ್ತಲುಂ ಇಳಿಬಿರ್ದ ಕೊಂಬೆಗಳೆಲೆಗೊಂಚಲ್
ಸಂರಕ್ಷೆ ನೀಡುವ ತೆರದಿ ಒಲ್ಯೆಸಿರುತಿರಲ್
ನೋಳ್ಪ ಕಣ್ ಮಮ್ಮಲಿಸಿದುವು ತೋಷದಿಂ. ಸ್ವಾಮಿಜಿ
ಆನಂದಭಾವದಿಂ ಕುಳಿತರಲ್ಲಿ ತಪಸಿಗೆ
ಧ್ಯಾನಾರೂಢರಾಗಿ. ಧ್ಯಾನ ಸ್ತಿಮಿತ ಮನಂ
ಮುಳುಗಿದುದು ಗಭೀರತಮ ಶಾಂತಿಯಲಿ. ಜಗತ್ತು
ಮರೆಯಾಯ್ತು. ಭಾವ ಲಯವಾಯ್ತು. ಜೀವ ಅರಳೆಯ
ಪರಿ ಹಗುರಮಾಯ್ತು. ಕಣ್ ಮುಗಿದು, ಕೈಮುಗಿದು
ಭಕ್ತಿರಸ ಪ್ರಧಾನ ಚಿತ್ತವೇ ಮುಗಿದು ಕಣ್
ದೃಷ್ಟಿಯಾಚೆಯ ಜಗತ್ತಿನೊಳ್ ಮುಳುಗಿದರ್, ತವ
ಲೌಕಿಕ ಜಗತ್ತಂ ಮರೆತು. ಉರುಳಿದುದು ಪಗಲ್.
ಅಡರಿದುದು ನಿಶಿ. ಹರಿದುದು ರಾತ್ರಿ ನಡೆದುದಿಂತೆ
ಪಗಲೆರಡು ಮೂರು. ನಿಶಿಯು ಮೂರ್ನಾಲಕ್ಕು. ಬಳಿಕ
ತಣ್ಣನೆಯ ತನಿವೊಳ್ತಿನಲಿ ಕಣ್ತೆರೆದು ನೆಟ್ಟ

ದೃಷ್ಟಿಯಂ ಅರಳ್ಚಿ ಬಿರಿಬಿರಿ ನೋಡಿದರ್, ಸುತ್ತಲ್
ಬೆಳಗಿದ ಚಿಮುಚಿಮು ಚೆಂಬೆಳಕು ಮುತ್ತಿತು ತೆರೆದ
ಕಂಗಳಂ. ನಸುವೊಳ್ತು ಪರಾಮರಿಸಿ ಜಗದರಿವು
ತಿಳಿಗೊಳಲ್ ಎದ್ದು ನಡೆದರ್ ಜಲನಿಧಿಯ ಬಳಿಗೆ.
ಪ್ರಾಥಃರ್ವಿಧಿಯಂ ತೀರ್ಚಿ ಚರಣಂಗಳಿಗಿತ್ತು
ಚಾಲನೆಯಂ ಪಿಮ್ಮರಳಿದರ್ ನದೀ ತೀರದ
ಗವಿಗೆ. ಇರ್ದರ್ ಶಾರದಾನಂದರ್ ಬೆಂಕಿಯ
ಮುಂತೆ. ಸಣ್ಣ ಸಣ್ಣ ಒಣ ಕಾಷ್ಠಗಳಡಕಿರಲ್
ತರಗೆಲೆಗಳ ಪೇರಿಸಿ, ಪುಗೆಯೆದ್ದು ಎರಿದುದು
ಉಂಗುರುಂಗುರವಾಗಿ ಮುಗಿಲ್ ಮುಟ್ಟುವ ತೆರದಿ.
ಕತ್ತೆತ್ತಿ ನೋಡಿದರ್ ಶಾರದಾ ನಂದಜೀ.
ಮಿತ್ರನವದನ ಮಂಡಲದಲಿ ಉಕ್ಕುತಿದೆ
ತಪೋಮಯ ದಿವ್ಯ ತೇಜಸ್ ಸಂವೇದನಾ
ಶೀಲತೆಯಲಿ! ನೆಟ್ಟಿ ಕಣ್ಣಾಲಿಯಂ ಕೀಲಿಸದೆ
ನುಡಿದರ್ "ಗುರುವೆ, ಈಗ ನೋಳ್ಪ ಕಂಗಳಿಗೆ ನೀಂ
ಎಂತೆಸೆವೆಯೆಂದೊಡೆ ಮುಖದರ್ಪಣದಲಿ ದಿವ್ಯ
ತೇಜಸ್ಸು ಭವಿಸಿ ಘನಿಸಿದೊಲ್ ಎನೆ ಸಲ್ವುದು."
    ಸ್ವಾಮಿಜಿಯುಂ ಮಂದಸ್ಮಿತ ಬೆಳಗಿ ವದನ
ಬಿಂಬದಲಿ "ಅದಿರ್ಕೆ, ನನಗೀಗಳ್ ಬಲು ಹಸಿವು."
ಬೆಂಕಿಯ ಬಳಿ ಕುಳಿತರ್ ಕೈಚಾಚಿ ತೀವ್ರ ಚಳಿ
ಹೊಡೆತಮಂ ಪೋಗಾಡೆ. ಗೆಡ್ಡೆಯುಣಿಸು ತುಂಬಿತು
ಒಡಲಂ.
        ಕಳೆದುವಲ್ಲಿ ಒಂದೆರಳ್ಡು ದಿವಸಗಳ್.
ತರ್ವಾಯ ಪೊರಮಟ್ಟರಲ್ಲಿಂದೆ. ಹಿಮಾಲಯ
ಪರ್ವತದ ಪರಿಶುಭ್ರ ತುಷಾರಾವೃತ ತಣ್ಪು

ಕಂಪಿನೆರೆಯ ಪ್ರಶಾಂತ ಪ್ರಾಂತ್ಯದಿಂದಿಳಿದು
ಪರ್ವತ ಪದ ಪ್ರಾಂತೀಯ ನಿಮ್ನೋನ್ನತಮಾದ
ಪ್ರದೇಶದೊಳ್ ನೆಲೆಗೊಂಡ ಊರು ಕೇರಿಯ
ಜನಜೀವನದಂಚಿಗೆ ಮುಟ್ಟಿ ನಿಂದರಯ್.
ಹಾ! ನೋಡಲೇನಾ ನಿಜ ಭೀಕರ ಗಂಭೀರ
ದಾರಿದ್ರ್ಯಸ್ಥಿತಿ? ಬಡತನ ಜಡತನಗಳ ರುದ್ರ
ಕೋಂಟೆ! ನಿರಕ್ಷರೀ ಜನರಾಶಿ, ರಾಶಿ! ಮತಿಮೌಢ್ಯ
ಘನವೆತ್ತು, ಬಾಳ್‌ಬೆಳಕಿನ ಕಿರಣಗಳಿಗಾಗಿ
ಪರಿ ತಪಿಸುವ ಜನಜಂಗುಳಿ! ಒಡನೆ ಸ್ವಚಿಂತನೆ
ಸ್ವಮುಕ್ತಿಯ ಪಂಬಲಂ ಬೇರುಡಿದು ಕುಸಿಕುಸಿದು
ಬಿಳ್ದು ಮಣ್ಣ ಹುಡಿಯಲಿ ಬೆರೆತು ಬರಿ ಮಣ್ಣಾಯ್ತು!
ಬಡತನ ಜಡತನ, ಅಜ್ಞಾನಗಳ ಕೋಂಟೆಯನೆ
ಗಿಜಿಗುಡಿವ ಜನರಾಶಿಯ ಕರುಣಾಯಿತ ಚಿತ್ರ
ಕಣ್ಗೆಸೆದುದು ಕರುಳಿರಿಯುವಂತೆ. ಆ ದಯನೀಯ
ಬಾಳ್ಗಿದುಕುಗಳ ಬೃಹದ್ ಕೂಟವ ನೋಡಲುರೆ
ಮನಮತಿಗಳ್ ಒಮ್ಮೆಲೆ ಕುಸಿದುವು ತೊಟ್ಟು ಕಳೆದ
ಹೂವಿನಂತೆವೊಲ್. ಸಂಕಟದ ಸುಯ್ಲಾಡಿದುದು
ಒಡಲಾಳದಲಿ. ಊರುಕೇರಿಯಂ ದಾಂಟುವೊಡೆ
ಘಟಿಯೊಂದು ಕಳೆದುರುಳಿತು ಸರಾಗದಲಿ. ಮುಂದೆ
ಮಾರ್ಗ್ಗಲಿಡುತೆ ನುಡಿಸಿದರ್ "ಮಿತ್ರ! ಕೇಳಯ್ಯ
ನಮ್ಮ ಈ ಜನ್ಮ ಭೂಮಿಗೆ ಜಗತ್ತು ಅಗತ್ಯ
ತೆರಬೇಕಾದ ಋಣವದು ಕಡಿಮೆಯದಲ್ಲಿಂ. ಮನು
ಕುಲದ ಅಧ್ಯಯನ ನಡೆಸಿದೊಡೆ ತಿಳಿದುಬರಲಿಹ
ಸತ್ಯದ ಹುರುಳ್ "ಸಹಿಷ್ಣು ಹಿಂದೂ" ಅಥ "ಸೌಮ್ಯ
ಹಿಂದೂ" ಇಂತಪ್ಪ ಸೌಮ್ಯವಾದಕೆ ಜಗತ್ತದು

ಋಣಿಯಿರುವನಿತಿನ್ನುಂ ಬೇರೊಂದು ಜನಾಂಗಕೆ
ಇಲ್ಲಂ; ತಿಳಿದು ನೋಡೈ. ''ಸೌಮ್ಯಹಿಂದೂ'' ಎಂದು
ಸಂಬೋಧಿಸಲಿದೆ ಏಿಹಿತ ಶಬ್ದ ಕಣಾ ಹಿಂದೂ
ಜೀವನಲಹರಿಗೆ. ಈ ಅದ್ಭುತತಮ ಸತ್ಯಂ
ಸದಾ ಪರಮೇಶ್ವರನ ಪ್ರೇಮದ ಪರಮ ಶಿಶುವೇ
ವಲಂ. ತುಹಿನಗಿರಿಯ ತನಿಯ ತಣ್ಬುಂಡು ತಣ್ಣಗೆ
ಬೆಳೆದು ಹರಡಿ ಹಬ್ಬಿದುದೆ ದಿವ್ಯತಮ ಸೌಮ್ಯದ
ಸತ್‌ಕಿರಣಗಳ ಬೆಳೆಗೆ ನಾಂದಿ. ಹಿಂದೂ ಜನಾಂಗ
ಜಗತ್ತಿಗೆ ನೀಡಿರುವುದು ಶಾಂತಿಯ ಮಂತ್ರಕಣಾ!

"ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ಭಾಗ್ಭವೇತ್ ॥
ಓಂ ಶಾಂತಿ ಶಾಂತಿಃ ಶಾಂತಿಃ॥"

ಈ ಮಂತ್ರಮಂ ಹಿಂದೂ ಅಲ್ಲದಾರು ಸ್ಮರಿಸಿ
ಪಾಲಿಸಿ ಬದುಕಿಗೆ ಸತ್ ಪ್ರೇಮದ ರಸಾನ್ನ
ಉಣಿಸಬಲ್ಲರೈ."
ಭಾರತೀಯತ್ವ ಕಲಿಸಿದುದು
ಅದೇ ಅಲ್ತೇ? ಇಂತಪ್ಪ ಧರ್ಮದುರೀಣತ್ವಂ
ಎಲ್ಲಿಯುಂ ಮೈದಾಳಿದುದಿಲ್ಲಂ." ಎನ್ನಲದು
ಅನ್ಯಮಲ್ತು.
"ನಿಜ, ನಿಜ. ಭಾರತೀಯತ್ವಕ್ಕೆ
ಅನುಗುಣಂ ಈ ಅರಣ್ಯಶ್ರೀ, ಸುರಗಿ ಸಂಪಗೆ
ಬಕುಳ ಪಾರಿಜಾತ ಸಿರಿಹೊನ್ನೆ ಅಪರಾಜಿತ
ತುಳಸಿ ಕಸ್ತೂರಿ. ಆಲ ಬೇಲ ತೆಂಗು ಕಂಗು

ವಿಳೆಯದೆಲೆ ಇತ್ಯಾದಿ ಈ ಎಲ್ಲವುಂ ಈ
ರಾಷ್ಟ್ರದೊಳ್ ಅಲ್ಲದೆಯೆ ಬೇರೆಡೆಯೊಳ್ ದೊರಕುಮೆ?
ದೊರಕಿದೊಡಮದು ವಿರಳಮಲ್ತೆ? ಯೋಚಿಸಿನೋಡಲೆ,
ಮಿತ್ರ. ಭಾರತೀಯತ್ವವೇ ಬೇರೆ. ಜಗದಿತರ
ರಾಷ್ಟ್ರಗಳ ರೀತಿನೀತಿಗಳೆ ಬೇರೆ, ಎಂಬುವೆ."
"ನಿಜ ನಿಜ; ಅದರೊಳ್ ಕಿಂಚಿತ್ ಸಂಶಯವಿಲ್ಲಂ."
"ಇಂತಪ್ಪ ಪರಿಸರದೊಳ್ ಸೌಮ್ಯತೆಯಲ್ಲದೆಯೆ
ದಯೆ ಧರ್ಮಗಳ್ ಬೆಳೆಯಲಕ್ಕುಂ. "**ಜ್ಯೋತಿಷ್ಮತ:
ಪದೋರಕ್ಷ ಧಿಯಾ ಕೃತಾನ್**" ಎನುವೆಲ್ಲ ಪದ
ಪುಂಜಗಳ್ ದಾರಿದೀಪಗಳಾದಪುದೆಮಗಲ್ತೆ?"
ತುಹಿನಗಿರಿಯ ಪದಪ್ರಾಂತದ ಹಂತಹಂತಮಂ
ಇಳಿದಿಳಿದು ದಾಂಟಿ ನದೀ ತೀರ್ಥಗಳ ಸೇರಿದರ್
ಗರ್ವಾಲ್ ಪ್ರಾಂತಂಬೊಕ್ಕು. ಕೆಲದಿನಮಲ್ಲಿಯೆ
ಕಳೆಯುತ್ತೆ ಅಲಕನಂದಾ ನದೀ ತೀರದೊಳ್
ನಡೆನಡೆದು ಮುಂಕೊಂಡು ಕರ್ಣ ಪ್ರಯಾಗದಾ
ಮುಖೇನಂ ರುದ್ರ ಪ್ರಯಾಗಮಂ ಸೇರಿದರ್.
ಪ್ರಕೃತಿ ಸೌಂದರ್ಯ ರಾಶೀಕೃತ ವೈಭವ
ಸಾಮ್ರಾಜ್ಯದಲಿ ನಯನ ಪಕ್ಷಿಗಳಂ ಹಾರಾಡಿ
ನಲಿಯೆ ಬಿಟ್ಟರ್. ಭಾಗೀರಥಿಯ ವಿಸ್ತೃತ ಸಲಿಲ
ರತ್ನಧಿಯ ರುದ್ರಾಟ್ಟಹಾಸದಲಿ ಭೋರುಡಿವ
ಭಯಂಕರತೆ ಮೆರೆದತ್ತು ಕಂಗೆಡಿಸುವವೋಲ್.
ಸ್ವಾಮಿಜಿಯುಂ ಭಾವನಾ ಭಾರದಲಿ: "ವತ್ಸಾ!
ಕೇಳ್, ಮುಂದೆ ಭಾರತ ರಾಷ್ಟ್ರ ಉತ್ಥಾನ ಪಥ
ಹಿಡಿದು ಉತ್ತುಂಗಕೇರೀತು ಅದನಿಲ್ಲವೆನೆ
ಹೊರಳದೆಮ್ಮ ನಾಲಿಗೆ. ಆ ಮಧುರ ಕ್ಷಣಂಗಳ್

ಬರ್ಪುದರೊಳ್ ಸಂಶಯಮಿಲ್ಲಕಣಾ! ಆದೊಡದು
ಜಡಭರತತನದಿಂದೆನಲಾರೆ. ತಿಳಿದುಕೊ, ಅದು
ವಿಧ್ವಂಸಕ ಧ್ವಜದಡಿಯಲಲ್ಲ. ವಿಶ್ವಾಸ
ಪ್ರೇಮ ಶಾಂತಿಗಳ ಧ್ವಜದಡಿಯಲಿ ಮತ್ತಮಾ
ಸನ್ಯಾಸಿಗಳ ಕಾವಿಯ ಧ್ವಜದಡಿಯಲಿ ಮೂಡಿ
ಬಹ ಧರ್ಮದ ಕಿರಣಗಳಿಂದೆ!! ಬಾಯಿ, ಮನದಲಿ
ಯೋಚಿಸಿ ತಿಳಿದುಕೊ. ಇದು ಸತ್ಯಸ್ಯ ಸತ್ಯಕಣಾ!''
ಮುಂದಿನ ಸುದೀರ್ಘತಮ ಪಯಣದೊಳ್ ಶ್ರೀನಗರ
ಬದರಿಕಾಶ್ರಮ ಮತ್ತಮತ್ತಂ ಅನೇಕಾನೇಕ
ಸ್ಥಳಪರಿಚಯಂಬಡೆದು ಆನಂದತುಂದಿಲ
ವೈಭೋಗದಲಿ ಮುಳುಗಿದರ್ ಮೈಮರೆತು. ಮುಂದೆ
ನಡೆದು ಬರೆಬರೆ ದೂರದೂರದಾ ಪಥ ಕಳೆದು
ಲೆಹರಿ ಸಂಸ್ಥಾನಕೈದರಾ ಸ್ವಾಮೀಜಿ. ಆ
ರಾಜ್ಯದ ಮಹೋನ್ನತ ಸುವಿಶಾಲತಮ ಭುವಿಯಲಿ
ಚರಿಸಿ ಸಂಚರಿಸಿ ಪ್ರಕೃತಿಯೈಸಿರಿಯ ರಸಾ
ಸ್ವಾದನೆಗೈಯುತೆ, ಅಹ, ಭಾರತವರ್ಷವೆನೆ ಎಂ
ಸಾಮಾನ್ಯಮೆ? ಎಂ ವಿಸ್ತಾರ? ಎನಿದರ ವರ
ಮುಮ್ಮೈಲಕ್ಷಣಂ? ಎಂತಪ್ಪ ಸಂಪದ್ಭರಿತ
ರಾಷ್ಟ್ರ? ದುರದೃಷ್ಟವಶದಿಂ ಪರಾಕ್ರಾಂತತೆಯ
ಕೂರ ನರಕದಲಿ ಸಿಲ್ಕಿ ನರಳುವ ಹೀನಗತಿ
ಭಾರದಿರ್ದೊಡಾವು ಎಂತಪ್ಪ ಧನ್ಯರ್! ಹಾ,
ಎಮ್ಮೊಳ್ ಪ್ರಮುಖತಃ ಕೊರಮೆಂದೊಡೆ ನಿರಕ್ಷರೀ
ಜನಪದಂ. "**ವಿದ್ಯಾವಿಹೀನಂ ಪಶು ಸಮಾನಂ**"
ಎಂಬುದದು ಪೊಳ್ಳಲ್ಲ. ಈ ದೇಶೋದ್ಧಾರಮೆನೆ
ಜ್ಞಾನ ಸುಜ್ಞಾನ ವಿಜ್ಞಾನ ಪ್ರಜ್ಞಾನಗಳ್

ಸಾರ್ವತ್ರಿಕಮಪ್ಪುದೆಯೆ ಸಾಧನೆ ಕಠಿಣಂ. ಜಾತಿ
ಭೇದ ಮೇಲುಕೀಲುಗಳ ಹೀನಮನೋಭಾವ
ಸಿರಿತನ–ಬಡತನಗಳ ಘೋರಾಂತರ ಇತ್ಯಾದಿ
ದುರದೃಷ್ಟಕರ ಜೀವನ ಪ್ರಸಂಗಗಳ್ ತೊಡೆಯ
ಲಕ್ಕುಂ. ಎಲ್ಲವಗೆಯ ಬದುಕು ಸಮನಿಸುವೊಡೆ ಕೆಳ
ದರ್ಜೆಯ ಬದುಕು ಮೇಲೆ ಮೇಲೇರಿ ನಿಲ್ವುದೇ
ಸರಿಯಪ್ಪ ಕ್ರಮ. ಆದೊಡದು ವಿದ್ಯಾಭ್ಯಾಸ
ಸರ್ವರಿಗೆ ದಕ್ಕದೆಯೆ ಆಗದು ಕಣಾ! ಇದನುಂ
ಪರ್ಯಾಲೋಚಿಸಿ ತಿಳಿದುಕೊ. ಭಾರತದ ಮೂವತ್ತು
ಕೋಟಿ ಜನರಾಶಿಯ ಪರಮೋದ್ಧಾರಂ ಕುರಿತು
ಪರೋಪಕಾರದ ಭಾವನೆಯು ಮನಮನದೊಳ್
ಮೂಡಿ ರಾಷ್ಟ್ರದ ವ್ಯಾಪಿಯಾದೊಡದು ಸತ್ಪಥಕೆ
ದಾರಿ, ಮೇಣ್ ಸಂವೃದ್ಧಿಗೆ ದಾರಿ. ರಾಷ್ಟ್ರೀಯ
ಪ್ರಗತಿಯ ಲಕ್ಷಣಮೇ ಇದು ತಿಳಿದುಕೊ. ಅತೀ
ಸ್ವಾರ್ಥ, ದುಮ್ಮಾನಗಳ ವಶವರ್ತಿಯಾದ ಮನು
ಕುಲಜರ್ಗೆ ತ್ಯಾಗ ಬುದ್ಧಿಯ ಮೊಳಕೆ ಮೂಡದೆಯೆ
ರಾಷ್ಟ್ರ ಬಡವಾಯ್ತು. ಭಾರತಿ ಸೊರಗಿ ಕರಗಿದಳ್.
ಇದನುಂ ಮನದಿ ಯೋಚಿಸಿ ತಿಳಿದುಕೊ. ರಾಷ್ಟ್ರೀಯ
ನಿರ್ಮಾಣ ರಾಷ್ಟ್ರೀಯರೆ ಕೈಕೊಳ್ಳವೇಳ್ಕುಂ
"**ಪರೋಪಕಾರಾಯ ಫಲಂತಿ ವೃಕ್ಷಾಃ**" ಎಂಬುದದು
ಪ್ರಪ್ರತ್ಯಕ್ಷ ದೃಷ್ಟಾಂತ ಮಲ್ತೆ? ಮತಿ ಮಾನ್ಯರ್
ಅರ್ಥೈಸದಿರಲಿದು ಭಾರತ ಜನನಿಯ ದೌರ್ಭಾಗ್ಯ
.....ದೌರ್ಭಾಗ್ಯ! ಈ ದಿಶೆಯೊಳ್ ಕಾರ್ಯಭಾರಕೆ ಬಿತ್ತ
ಬಿತ್ತುವುದು ಸನ್ಯಾಸಿಗಳ ವೃತ್ತದಿಂ ಮೂಡಿ
ಮೊಳಕೆಯೊಡೆದೊಡೆ ಜಗಕೆ ಮಾದರಿಯು ತಾನಾಗಿ

ಜಡ ಜನರ ಹೃತ್‌ಬೀಣೆ ತಂತಿಯಂ ಮಿಡಿಸಬಲ್ಲುದು.
ಈ ಎಲ್ಲವಂ ನೀನೇ ಮನದಿ ತಿಳಿದುಕೊ ಮಿತ್ರ!"
ಅಂದು, ಸ್ವಾಮಿ ಅಬೇಧಾನಂದರ್ ಗಮಿಸಿದರ್
ಅನಿರೀಕ್ಷಿತವಾಗಿ. ಅವರಂ ಕಂಡು ಹೃದಯ
ಕರಂಡಂ ತುಂಬಿ ಆನಂದ ಗದ್ಗದಿತ ಧ್ವನಿ
ಹರಿಸಿ ನಲ್ಮೆಯಿಂ ಬಲ್ಮೆಯಿಂ ಸ್ವಾಗತಿಸಿದರ್.
ಅಖಂಡಾನಂದರುಂ ಡೆಹರಾಡೂನಿನೋಳ್
ಜಡ್ತಿನಿಂ ನರುಳುತಿಹರೆಂಬುವ ಸುದ್ದಿಯಂ
ತಂದರ್. ಒಡನೆ ಅತ್ತ ಪಯಣಕಣಿಗೊಂಡರಾ
ಸ್ವಾಮಿಜಿ. ಪರ್ವಿದುದೊ ಪುಣ್ಯ ಭೂವಿಸ್ತಾರಂ
ರುದ್ರರಮಣೀಯ ತೇಜದಲಿ. ಪಸುರಿನ ಪರ್ಣ
ರಾಜಿಯೊಳ್ ವರ್ಣವರ್ಣಾಂತ ತಳಿರ್‌ಲೋಕಂ
ಮರ್ಮರಿಸುತಿದೆ ಗಾಳಿಯಾಟದಲಿ ಓಲಾಡಿ.
ಮಿತ್ರದ್ವಯರೊಡಗೂಡಿ ಸ್ವಾಮಿಜಿ ನಡೆದಿರೆ
ಹಾದಿ ಮುಂಬೆಳೆವುದೊ ಎನೆ ನಡೆದನಿತು ಕಳೆಯದು
ಭೂವಲಯಂ. ನಡೆದುನಡೆದು ಎದ್ದುವು ಬೊಕ್ಕೆಗಳ್
ಪಾದಪದ್ಮಗಳಲ್ಲಿ. ಚರ್ಮ ಹರಿದು ನೆತ್ತರ್
ಸುರಿದುದು ಬೆರಳ್‌ಗಳ ಎಡೆಯಲಿ. ಜೊತೆಗೂಡಿ
ಭ್ರಾತೃದ್ವಯರಿರುತಿರೆ ಗಮನ ಹರಿಯದತ್ತಲ್.
ಮಾತುಕತೆಯ ಮೋಡಿ; ನಿಸರ್ಗ ಸೌಂದರ್ಯ ಪರಿ
ವೀಕ್ಷಣೆಯ ಮೋಡಿ, ಜನ್ಮ ಭೂಮಿಯ ವಿರಾಟ್
ಸಮೀಕ್ಷೆಯ ಮೋಡಿ, ಒಟ್ಟುಗೂಡಿರುತಿರಲೆಲ್ಲ
ರೀತಿಯ ಸುಖದುಃಖಗಳ್ ಅರುಗಾದಪವುಂ. ಬೆಳ್
ಮುಗಿಲೇರುವ ರವಿಗಾತ್ರದೊಳ್ ಮರೆಯಾಗಿ ನಗುವ
ಸಂಖ್ಯಾತೀತ ತಾರಾ ಜ್ಯೋತಿರ್ವತ್ಸರದ ಚಿರ

ಯೌವ್ವನಾಂತ ವಿಶ್ವಾಂತರಿಕ್ಷಮೆ ಜ್ವಲಂತಂ.
ಎಣೆಯಿಲ್ಲದ ಮುಗಿಲೋಳಿಯ ಲಕ್ಷಯೋಜನೆಯ
ಸಚಿತ್ರದೊಳ್ ಬಗೆಗಡಲ್ ಮುಳುಗಿ ಧುಮಿಧುಮಿಸಿತು
ಸಾನಂದ ಮೋದದಲಿ. ಚಳಿಯ ಕೊರೆತಮಂ ಕಾವಿ
ವಸನಂ ತಡೆಯದಾಯಿತು, ಚೆಂಬಿಸಿಲ್ ಮೂಡಿದ
ಬಳಿಕ ಪುರುಪು ಕಾಲ್ಗಳಿಗೆ. ಡೆಹರಾಡೂನ್ ಮಠದ
ಬಾಗಿಲ್ ಬಳಿಗೆ ಸೇರಿದಾಗಳ್ ಅಖಂಡಾನಂ-
ದರ ದೃಷ್ಟಿಯಷ್ಟಿಯಿತ್ತಲೇ ಕಾತರತೆಯಿಂ
ನಿಟ್ಟಿಸುತಲಿರ್ದುದು ಕಣ್‌ಗೊಳಿಸಿತು. ಓರ್ವನಂ
ನಿರೀಕ್ಷಿಸಿರೆ ಮೂವರ್ಬೈದುದು ದ್ವಿಗುಣಿಸಿದುದು
ಸಂತಸಮಂ ಅಖಂಡಾನಂದರಿಗೆ. ಅಲ್ಲೇ
ಮೂವರುಳಿದು ಮಿತ್ರನ ಆರೈಕೆ ಚಿಕಿತ್ಸೆಗಳ್
ಸಲಿಸಿ ಮಿತ್ರಮಹೋದಯನುಂ ಜಡ್ಡಿನ ಕೈಯಿಂ
ಬಿಡುಗಡೆ ಪಡೆಯುವತನಕ ಇರುತಿರ್ದು ತರುವಾಯಿ,
ಪೊರಡಲ್ ಅಣಿಯಾದರ್. ಸ್ವಾಮೀಜಿ ವರಶಿಷ್ಯ
ಅಖಂಡಾನಂದರಂ ಕುರಿತು ಇಂತೆಂದರ್ "ಎಲೆ,
ಬಂಧು! ಮನದೊಳ್ ಚಿಂತಾದ್ರುವ್ಯವಂ ತುಂಬಿದೊಡೆ
ಅನಾರೋಗ್ಯಕ್ಕದುವೆ ಕಾರಣ. "**ಸುಖ ದುಃಖೇ
ಸಮೇಕೃತ್ವಾ**..." ಎಂಬುದನರಿಯೆಯಾ? "**ಧೈರ್ಯಂ
ಸರ್ವತ್ರ ಸಾಧನಂ**" ಎಂದು ಶುಭವಚನಮಂ
ನುಡಿದು ಪುರಿದುಂಬಿಸಿದರ್ ಸ್ವಾಮೀಜಿ. ಮುಂದಿನ
ಪಯಣವದು ಹೃಷಿಕೇಶಮಂ ಕುರಿತು. ದೂರದ
ಹಾದಿಯಂ ಕಳೆದು ಸೇರಿದರ್ ಹೃಷಿಕೇಶಮಂ.
ಅಹಾ, ಸುಂದರ ಹೃಷಿಕೇಶ! ವ್ಯಾಸ ಮುನಿಗಳ
ಆಶ್ರಮದ ಪುಣ್ಯತಲ. ಸತ್ಯಸಂಪದ್‌ಭರಿತ

ವೇದವೇದಾಂಗಗಳ ಕೃಷಿಕ್ಷೇತ್ರ! ಮುನಿಗಳ
ಮಹರ್ಷಿಗಳ ಸಾಧುಸಂತರ ಪರಮಬೀಡು. ಆ
ಗಿರಿಶಿಖರಗಳ ತುಹಿನ ಶೈಲಿಯಲಿ ಇಳಿತರ್ಪ
ವೀಚಿವೀಚಿಗಳ್ ಬೆಳ್ಳಿಯ ಧಾರೆಯ ತೆರದಲಿ
ಥಳಥಳಿಸುತಿರೆ ನೋಳ್ಪ ಕಣ್ಮನಂ ಮಮ್ಮಲಿಂ.
ಗಂಗಾ ಸಲಿಲಿದ ಮಹಾ ವಾರಿರಾಶಿ. ತೀರದ
ವಿಸ್ತಾರದಲಿ ಕುಟಿಗಳ ಮೋಹನ ಸಂದೋಹ.
ಲಕ್ಷಾಂತರ ಯಾತ್ರಿಕರ ತಪೋವನ! ಅಲ್ಲಿನ
ವಿಚಾರದ ವಿಶ್ವವಂ ತಮ್ಮೊಂದು ಗ್ರಂಥದೊಳ್
ಉಲ್ಲೇಖಿಸಿಹರ್ ಸ್ವಾಮಿಜಿ....... ಬಲ್ ಸುಂದರಮಾ
ಹೃಷಿಕೇಶ! ಪದತಲದೊಳ್ ಪ್ರವಹಿಪ ಗಂಗಾ
ನದಿಯ ಸುಂದರ ಚಿತ್ರಣಂ ಕಣ್ಮನಗಳಿಂಗೆ
ಅಪ್ಯಾಯಮಾನಂ. ಅಹ ನೆನಪಿನೊಳಿದೆಯೆ ಆ
ನೀಲಾಭ ನಿರ್ಮಲ ಸಲಿಲ! ಜಲಸುಳಿಗಳಿಂದೆ
ತಪ್ಪಿಸಿಕೊಳಲ್ ಸುಳಿಸುಳಿದು ಸುತ್ತಿ ನಲಿದಾಡಿ
ಮಿಂಚಿನೊಲ್ ಹೊಳೆ ಹೊಳೆವ ಹಿರಿಕಿರಿಯ ಮೀಂಗಳ್!
ಆ ವರ್ಣವರ್ಣಮಯ ಅಪೂರ್ವತರ ಚಿತ್ರಣ
ನಯನಗಳಾಕರ್ಷಕಂ. ಸುಸ್ವಾದಮಯ ಹಿಮ ಶೀತ
ಶೀತಲ ಜಲರಾಶಿ! ಜುಳುಜುಳು ರಾಗ ನಿನದಂ.

"ಗಂಗಾ ಗಂಗೇತಿ ಯೋ ಬ್ರೂಯಾತ್
ಯೋಜನಾನಾಂ ಶತೈರಪಿ ।
ಮುಚ್ಯತೇ ಸರ್ವ ಪಾಪೇಭ್ಯೋ
ವಿಷ್ಣುಂ ಲೋಕಂ ಸಗಚ್ಛತಿ ॥"

ಮತ್ತಮತ್ತಂ ಜುಳುಜುಳು ತರಂಗವಾಣಿಯಲಿ
ಹೊಮ್ಮುವ ಹರ! ಹರ! ಎನುವಾ ಸೂತ್ರಸಾರ! ಆ

ನೀರವ ನಿರ್ಝರಗಳ ಪ್ರತಿಧ್ವನಿ ಹರ! ಹರ! ಹರ!
ಆ ವಿಪಿನವಾಸ; ಆ ಮಾಧುಕರಿ ಭಿಕ್ಷೆ; ಗಂಗೆಯ
ವಿಶಾಲ ವಕ್ಷಸ್ಥಲದಿಂ ಮೇಲೆದ್ದು ಮೈದೋರ್‍ದು
ಸುಶೋಭಿಪ ಘೋರ ಹೆಬ್ಬಂಡೆಗಳ್ ಓರಿಕಿರಿಯ
ದ್ವೀಪಗಳೋಪಾದಿಯಲಿ ತೋರ್‍ವ ವರ ಚಿತ್ತಾರ!
ಅವುಗಳ ಮೇಲೇರುತೆ ಬೊಗಸೆ ಬೊಗಸೆಗಳಲಿ
ನೀರಿಂಟುವುದೆನಿತು ಹಿತಮಾದತ್ತು? ಅಲ್ಲಿನ
ತಿಳಿಜಲವದೇಂ ರುಚಿರ? ಗಂಗೆಯ ಮಹಿಮಾಮಯ
ಪ್ರೀತಿಯುಂ ಕಡಿಮೆಯೇ? ವೈರಾಗ್ಯಪ್ರದ ಮೃದು
ಸ್ಪರ್ಶ ಮಾತೃಭಾವದ ಮಧುರ ಸ್ಪರ್ಶ! ದೂರದ
ಪ್ರಾಂತದೆಡೆಗೆ ಪಯಣಂ ಬೋಪಡಾಂ ಗಂಗಾಜಳ
ನನ್ನೊಡಂ ಕೊಂಡೊಯ್ವೆಂ. ಆಗಳಾಗಳ್ ಓರ್
ಹನಿಯನೆನ್ನ ಬಾಯೊಳ್ ಹಾಕಿದೊಡೆ ಮನತುಷ್ಟಿ
ಸಂತುಷ್ಟಿ ಎಲ್ಲಾ.....
ಆ ಬಳಿಕಲವರ್ ಮುಂದಿನ
ತಮ್ಮ ಪಾಶ್ಚಾತ್ಯ ದೇಶೀಯ ಪ್ರವಾಸದೊಳ್
ತಮ್ಮೊಡನೊಯ್ದು ಗಂಗಾ ಜಲಮುಂ ಕುರಿತು ಇಂತು
ಲೇಖಿಸಿಹರ್ "ಮಿತ್ರಾ! ಅಹ ದೂರದೂರದಾ
ಪಾಶ್ಚಾತ್ಯ ದೇಶಗಳ ಪ್ರವಾಸದೊಳ್ ನಿಚ್ಚ
ಗಂಗಾಜಲಮೆನ್ನ ಮನಶ್ಶಾಂತಿಗೆ ನಿಜದಿಂ
ಪೂರಕಂ. ಆ ಜನ ಆ ಸಂಸ್ಕೃತಿಯ ನಡುವೆನ್ನ
ಬದುಕು ಸ್ಥಿರಮಿರಲ್ ಪವಿತ್ರ ಗಂಗೆಯ ಜಲವೆ
ಸನ್ಮಂತ್ರಮಾದುದು. ಅಮರಾವತಿ ಸದೃಸ
ಪ್ಯಾರಿಸ್, ನ್ಯೂಯಾರ್ಕ್, ಬರ್ಲಿನ್ ರೋಮ್ ಮೊದಲಪ್ಪ
ಎಲ್ಲವುಂ ನಿಮಿಷಮಾತ್ರದೊಳ್ ಮಾಯಮಾಗುತೆ

ಕೇಳುತಿರ್ದುದು ಕಿವಿಗಳಿಂಗೆ ಆ ಹರ! ಹರ! ಹರ!
ತರಂಗವಾಣಿ. ಚಿತ್ರವತ್ ತೋರುತಿರ್ದುದು ದೃಷ್ಟಿ
ಕಕ್ಷೆಯಲಿ ಆ ಹಿಮಾಲಯ ವಕ್ಷಸ್ಥ ನಿರ್ಜನ
ವಿಪಿನಶ್ರೀ....ಅದೇ ಜೋಗುಳದಿಂಪು ಹರ! ಹರ!
ಹರ! ಅದೇ, ಅದೇ ಹಿಮಾಲಯದ ದೃಶ್ಯಾವಳಿ!

ಹರಿಃ ಓಂ ತತ್ ಸತ್

❋ ❋

ಚತುರ್ದಶೋಲ್ಲಾಸಂ

ಪದವಾಕ್ಯ ಪ್ರಮಾಣಜ್ಞ

"ಪ್ರಾಗ್‌ಜ್ವಾಲಿತಾತ್ ಪ್ರದೀಪಾದ್
ಹಿ ದೀಪಿಕಾ ದೀಪಸಂತತಿಃ ॥"

ಪಗಲಿರುಳ್ಗಾಲಿಗಳ ಮೇಲೆ ಕಾಲಪುರುಷನ
ಸ್ವರ್ಣದೇರು ಧವಳಿಮೆಯುಕ್ಕುವ ಸುರಸುಂದರ
ಅಷ್ಟಾಶ್ವಗಳ ವಾಹಿಯೊಳ್ ಬರುತಿರೆ ಪಡುವಣ
ದಿಗ್ ತಟಾಂತದರಮನೆಗೆ, ಚೆಲುವಾಯ್ತು ಸಂಧ್ಯಾ
ಕಾಲೀನ ಸೊಂಪು. ಹೊಂಗಾಂತಿಗಳ ಪೆಂಪು. ತನಿ
ಗಾಳಿಯುಗುವ ತಂಪು. ವಿವಿದ ಪುಷ್ಪಕೋಟಿಗಳ
ನರುಗಂಪು ಎಲ್ಲವುಂ ಕೂಡಿ ನವರಸ ಘನಿಸಿ
ಮೆರೆದವೊಲ್ ಹೊಂಪುಳಿಯ ಮುದ್ರೆಯೊತ್ತಿದಾಯಿತು
ಧರೆಯಮೇಲೆ. ಸೂರ್ಯನ ಸ್ವರ್ಣದೇರು ಇಳಿಯುತೆ
ಇಳಿಯುತೆ ಮುಗಿಲದಿಣ್ಣೆಯಲಿ ನಿಲ್ದು ವಿಶ್ರಾಂತಿ
ಬಯಸಿತೊ ಎನಲ್ ಮುಗಿಲೋಳಿಗಳ್ ಮುಂಬರೆ ಒತ್ತಿ
ಮುತ್ತಿ ಸುತ್ತುವರಿದು ತೆರೆಯನೊಡ್ಡಿದುವು, ಉಜ್ವಲ
ಸ್ವರ್ಣದೇರು ತೆರೆಮರೆಗೊಳ್ವಂತೆ. ಅದೆ ಆಗಳ್
ನುರ್ಗಿವಂದ ಬಿರುಗಾಳಿ ರೊಯ್ಯನೆ ಬೀಸಿ ಬರೆ
ಚದುರಿದ ಮುಗಿಲ್ ದಶದಿಶೆವಿಡಿದು ಸರಿದುವು ಪಥ
ಬಿಟ್ಟು, ಪಿಂಜರಿದು. ನೇಸರ್ ಭಾಗೀರಥಿಯ
ಹೃದಯ ಧರಿತ್ರಿಗೆ ಕೆನ್ನೀರಿನೋಕುಳಿಯೆರಚಿ
ಕೆಂಪಾದುದೆನಲ್ ಕೆಂಗಲಿಸಿತ್ತು ನದಿಯ ಜಲ
ರಾಶಿ ಕೆಮ್ಮನೆ ಥಳಥಳಸುತೆ. ಸೂರ್ಯದೇವಂ

ಬೊಕ್ಕನ್ ತನಿ ಮಂಜಿನರಮನೆಗೆ. ಮೆಲು ಮೆಲ್ಲನೆ
ಕವಿಯುತಿರ್ದುದೈ ಮುಸ್ಸಂಜೆಯ ಪೆಂಪು ಭುವಿಯಂ.
ಹೃಷಿಕೇಶದೊಳ್ ಕಳೆದ ಕಾಲಮಾನವದು
ಸುಲಲಿತಮೆನಲುಂಟೇ? ಪ್ರಕೃತಿಯ ಮಡಿಲಿನಲಿ
ಮುಗ್ಧಮುಗ್ಧ ಮಗುವೆನೆ ಮನವೋತು ಎದೆಯೋತು
ಧ್ಯಾನಸ್ಥರಾದರ್ ಗುರುವರ್ಯರ್ಕಂ. ಆದೊಡೇಂ
ದೇವಗುರುವಿನ ಇಚ್ಛೆಯೇ ಬೇರೆಯಿರುತಿರೆ
ಕಠೋರ ಕಠಿಣ ಸಾಧನೆಯದು ದೈಹಿಕಾರೋಗ್ಯ
ಸಂಪದಕೆ ಕಳ್ತರಿಯನೊಡ್ಡಿತು! ಓಮಮಂಜಿನ
ಮುದ್ರೆಯೊತ್ತಿ ರೋಗಗ್ರಸ್ತಮಾದುದು ದೇಹ
ಸಂಪುಟಂ. ಎನಿತು ಪ್ರಯತ್ನಿಸಿದೊಡಮದು ದಿನ
ದಿನಂ ವೆರ್ಚಿ ಪ್ರಬಲಮಾಯ್ತು. ಕೈಕಾಲ್‌ಗಳ
ಶಕ್ತಿ ಉಡುಗಿ ಬಳಲಿತು ದೇಹ, ಗುರುನಾಯಕ
ನೆಲಗಚ್ಚಿದಂ. ಆರಾರಂ ಬೇಡಿಯೊ ಮದ್ದಂ
ಕುಡಿಸಿದೊಡಮದು ಮಣಿಯದಾಯ್ತು. ಗುರುಭ್ರಾತೃಗಳ್
ಕಂಗಾಲ್ ಆಗಿ ಶಿವನಾಮಸ್ಮರಣೆಯಲಿ ಮುಳುಂಗಿದರ್.
ಸ್ವಾಮೀಜಿಯಾ ಸ್ಥಿತಿ ಭೀಷಣಾವಸ್ಥೆಯಲಿ
ಸಿಲ್ಕಿ ಕಣ್ತೆರೆಯದಾದರ್. ಮಾತುಡಿದು ಪ್ರಾಣ
ಪಕ್ಷಿ ಚಡಪಡಿಸಿದುದು ದೇಹ ಸಂಪುಟದೊಳ್.
ಭ್ರಾತೃಬಾಯಿಗಳ್ ದುಃಖ ಕಳವಳದ ಮೂಸೆಯಲಿ
ಸಿಲ್ಕಿ ಗುರುನಾಯಕನ ಗತಿಮುಗಿಯಿತೆಂದೆಂದು
ಅಳ್ತುಗೋಳಾಡುತೆ ಭಗವನ್ ನಾಮಸ್ಮರಣೆ
ಗೆಯ್ಯತೊಡಗಿದರ್. ಅಲ್ಲಿ ಆ ನಿರ್ಜನಮಾದ
ವಲಯದಲಿ ದಿವ್ಯ ನಾಮ ಸ್ಮರಣೆಯಲ್ಲದೆಯೆ
ಬೇರೇನ್ ಇರದಿರೆ ಹರ ಧ್ಯಾನವದೊಂದೆ ನಿಜ

ಓಷಧಿಯೆನೆ ಹರಿದುದು ಹರಸ್ಮರಣೆ! ಶಿವ ಶಿವಾ
ಶಿವ ಶಿವಾ! ಎನುತೆನುತೆ ಹಾಹಾಕರಿಸಿತು ಗುರು
ಸೋದರರ ಹೃದಯಪಕ್ಷಿ. ಆವ ದೈವದ ಕೃಪೆಯೊ
ಹೊರವಲಯದಿಂದಲಾರೊ ನಡೆತಂದವೊಲ್ ಲರ
ಲರಿಸೆ ತರಗೆಲೆಗಳ್, ಒಡನತ್ತಲ್ ಹರಿದತ್ತು
ಭ್ರಾತೃಗಳ ದೃಷ್ಟಿಯುಷ್ಟಿ. ಅಪರಿಚಿತ ವಯೋ
ವೃದ್ಧ ಸನ್ಯಾಸಿಯೊರ್ವಂ ಸರಸರನೈಯುತೆ
ಕುಟೀರಂ ಬೊಕ್ಕು ಗೋಳಾಡುತಿರ್ದ ಶಿಷ್ಯರಿಂ
ವಿಷಯಮರಿತು ತಲೆದೂಗುತೆ ವಟುಗಳಿಂಗೆ ಶುಭ
ವಚನಮಂ ವಾಚಿಸಿ, ಬರಿ ದುಪ್ಪಟಿಯ ಮೇಲೊರಗಿ
ಶಯನ ಸ್ಥಾಯಿಯಾಗಿರ್ದು ಪ್ರಜ್ಞಾಹೀನಗತಿಯ
ಸ್ಥಿತಿಯೊಳ್ ಮೆಲ್ಲನೆ ಉಸಿರಾಡುತಿಹರೋಗಿಯಂ
ನೋಡಿದರ್ ನಿಟ್ಟಿಸಿ. ಕೈ ನಾಡಿ ಹಿಡಿದು ಗಮನಿಸಿ
ಅತೀ ವಿಪನ್ನಾವಸ್ಥೆಗೇರಿದುದನರಿದು ಬಲು
ಶ್ರದ್ಧೆಯಿಂ ತಮ್ಮಯ ಪಿಟಕದಿಂದಲೊಂದು ಕಿರು
ಗುಟಿಕೆಯಂ ತೆಗೆದು ರೋಗಿಯ ಬಾಯಿಗಿಟ್ಟು
ತಾವ್ ಬಂದ ನಿಟ್ಟಿಗೆ ಪೊರಮಟ್ಟರ್. ಕಳೆದುವು
ಗಳಿಗೆಗಳಿಗೆಗಳ್ ರುದ್ರ ಗಂಭೀರ ಗತಿಯಲಿ.
ಶಿಷ್ಯಗಣಂ ಆತಂಕಿತ ಮನದಿಂ ನೋನೋಡಿ
ನಿಟ್ಟುಸಿರ್ ಅದುಮಿ ಹಿಡಿದಿರೆ, ಗುರುವರೇಣ್ಯನುಂ
ದೀರ್ಘ ನಿಶ್ವಾಸದೊಡನೆ ಕಣ್ತೆರೆದಂ. ಗುರು
ಭ್ರಾಯಿಗಳ ಸಂಕಟ ಭರಿತ ವದನಬಿಂಬದಲಿ
ದುಃಖಾಶ್ರು ಸೂಸುತಿದೆ. ಒರ್ಮೆ ಎಲ್ಲರೆಡೆಗೆ
ನೋಡಿ ತೊದಲು ದನಿಯಲಿ ನುಡಿದರ್ "ಸೀವೇಸ್
ಭಯಪಡದಿರಿ ಎನಗೇನಾಗದು. ಎನಗಿರ್ಕುಂ

ಗುರುದೇವನ ರಕ್ಷೆ, ಕಾಲೀ ಮಾತೆಯರಕ್ಷೆ...''
ಕಳೆಯಿತಂದು ಅದೇ ಸ್ಥಿತಿಯಲಿ. ಪಗಲುರುಳುರುಳಿ
ಇರುಳ್ ಗಮಿಸಿದಾ ತನಿವೊಳ್ತಿನಲಿ ಸ್ವಾಮೀಜಿ
ಸಂಪೂರ್ಣ ಸ್ವಾಸ್ಥ್ಯಮಂ ಪಡೆದರ್. ಮೆಲು ಮೆಲ್ಲನೆ
ಎದ್ದು ಕುಳಿತು ಮೈಕೈಮುರಿದು ಮಂದ ಸ್ಮಿತವಂ
ಅರಳಿಸಿ ನುಡಿದರ್ "ಭ್ರಾತೃ ಬಾಯಿಗಳೆ, ಕೇಳಿರಿ.
ಆಂ ಅರ್ಧ ಪ್ರಜ್ಞಾವಸ್ಥೆಯೊಳಿರಲ್ ಕಂಡೆನೈ
ಎನ್ನ ಮುಂದಿನ ಕಾರ್ಯ ಭಾರಮಂ. ಅದೆಲ್ಲಂ
ಪೂರೈಸುವರೆಗಾಂ ಈ ದೇಹಮಂ ಬಿಡಲಾರೆ.
ಇದಂ ದೃಢವೆಂದು ತಿಳಿದಿರಿ."
ಕೆಲಗಾಲಮಂ
ಕಳೆದು ಸುಸ್ವಸ್ಥರಾದ ಸ್ವಾಮೀಜಿಯುಂ ತಾಂ
ಹಿಮಾಲಯ ಪರ್ವತ ಪದತಲದಿಂ ಅತ್ತಣಂ
ಕನ್ಯಾಕುಮಾರಿಯವರೆಗುಂ ಭಾರತದಾದ್ಯಂತ
ಪರ್ಯಟಣೆಯಂ ಗೈವ ಸತ್ಯಸಂಕಲ್ಪಮಂ ಪೊಂದಿ
ಭಾವಾಪನ್ನತೆಯೆಲಿ ಬಿತ್ತರಿಸಿದರ್ "ಮಿತ್ರರೆ,
ಆನಿಲ್ಲಿಂದ ಪೊರವಂಟು ಭಾರತಭುವಿಯಾದ್ಯಂತ
ಸಂಚರಿಪ ಸಂಕಲ್ಪಗೈದಿಹೆನೆನ್. ಇಂಮುಂದೆ
ಏಕಾಂಗಿಯಾಗಿ ಪಯಣಿಸುವ ಇಚ್ಛೆ ಇರುತಿರೆ
ನೀವಾರ್ ಎನ್ನನುಂ ಪಿಂಬಾಲಿಸಲಾಸಲ್ಲ.
ಪರ್ಯಟಣೆಯ ಬಳಿಕಂ ಆನೈದುವೆನಿಲ್ಲಿಗೆ.
ಗುರುನಾಯಕನೆಂದ ಸಂಕಲ್ಪದನಿಯಿಂ, ಮನ
ಮಿಡುಕಿದ ಅಖಂಡಾನಂದರುಂ ತಮ್ಮೊಳಗೆ
ಯೋಚಿಸಿದಬಳಿಕ "ನಿಮ್ಮ ಸೇವಾರ್ಥಕಂ ಆಂ
ಬಂದಪೆನ್ ನಿಮ್ಮೊಡಂ."

“ಅಯ್ಯ ವರ ಸೋದರನೆ!
ನೀನಿರಲ್ ಎನ್ನೊಡಂ ನಿನ್ನ ನೇಹಬಂಧಂ
ಎನ್ನ ಕಾರ್ಯರಂಗಕೆ ಅಂತರಾಯ ಸ್ವರೂಪ
ಅಡ್ಡಿ ಬರದೇಂ? ಆರ ಸಂಗವುಂ ದಿನನಿತ್ಯ
ನೇಹಭಾವನುದ್ರೇಕಿಸಿ ಮುಂಕಾರ್ಯಕೆ ಮಿಗೆ
ತೊಡಕೀವುದೊ ಅದರಿಂ ದೂರ ಮಿರ್ಪುದದುವೇ
ಹಿತಂ. ಸೋದರ ಸಂನ್ಯಾಸಿಗಳ ಮಧುರಮಮತೆ
ಅನುಬಂಧಗಳು ತೊಡಕು ಅಲ್ಲದೆಯೆ ಬೇರಲ್ಲ.”
ತರುಣ ಶಿಷ್ಯ ಸಂದೋಹಕೆ ಸ್ನೇಹ ಪ್ರೀತಿಯ
ವಿದಾಯಂ ಬೇಳ್ದು ಬೀಳುಕೊಂಡು ನಡೆದರ್ ಯುವ
ನಾಯಕಂ ಮುಂದೆ ಮುಂದೆ. ದೂರ ಬಹುದೂರಕೆ
ಪಯಣಂಬೆಳಸೆ, ಭಾರತಜನನಿಯ ಬೈತಲೆಯ
ತೆರದಿ ತೋರಿವಂದೊಂದು ಜನ ಮೃಗ ಚರಣಗಳ
ರೇಖಾಪಥ ಹರಿದತ್ತು ಪಸುರುಕ್ಕುತ ಮುಂಬೆಳೆದ
ಸುಫಲ ಭರಿತ ತೋಂಟದೆಡೆಗೆ. ಕೋಯಂಡಮೆನೆ
ಮೆರೆದ ಕರ್ಬಿನ ಜಲ್ಲೆಯಿಂ, ಕೆಮ್ಮನೆ ಕೆಂಪಿನ
ಪೀತಾಂಬರಮುಟ್ಟಿಹ ನೀರುಳ್ಳಿಯಿಂ, ಬೆಣ್ಣೆ
ಬಿಣ್ಪಿನ ಮಡಿಯುಟ್ಟಿಹ ಬೆಳ್ಳುಳ್ಳಿಯಿಂ. ಮಿಸುನಿ
ವರ್ಣಬೆತ್ತ ಶಾಲಿವನದಿಂ, ಮಹರ್ಷಿಯ ದಾಡಿಯೊ
ಎನಲ್ ಬೆಳೆದ ಕೆಂಜೋಳದಿಂ, ನೀರೆಯರ ಪಲ್
ಬೆಡಗಿನಿಂ ಬೆಳೆದು ನಿಂದ ದಾಡಿಮದಿಂ. ಪಚ್ಚೆ
ವರ್ಣಾಂತು ಗೊಂಚಲ್ ಗೊಂಚಲ್ವೆತ್ತ ನೆಲ್ಲಿಯಿಂ,
ತೊಳಚಿಯಿಂ ಕತ್ತುರಿಯಿಂ ಚಂಪಕ ಜಾಜಿಗಳಿಂ
ಗುಲಾಬಿ ಮಲ್ಲಿಗೆ ಸೇವಂತಿಗೆ ದಾಸವಾಳ ಇರ
ವಂತಿಗೆ ಕೇತಕಿ ಮುಂತಪ್ಪ ಕುಸುಮಕೋಟಿಯ

ಸಿಂಗರಂಗೊಂಡ ಆ ತೋಂಟಮೆಸೆದುದು ಕಣ್ಣ
ದೃಷ್ಟಿಯಂ ಸೆಳೆವ ಪಾಂಗಿನಲಿ. ಇನ್ನೊಂದೆಡೆಯಲಿ
ಸಂಬಾರಯುಕ್ತ ಮೆನಿಪ ಮೆಣಸು ಜೀರಿಗೆ ಏಲಕ್ಕಿ
ಲಾವಂಗ ಅರಿಸಿನ ಇತ್ಯಾದಿ ಇತ್ಯಾದಿಗಳವತರಣ
ತೋರ್ದತ್ತು ನೆಟ್ಟ ನಿಟ್ಟಾಲಿಗಳಿಗೆ. ನಡಿಗೆಯಂ
ನಿಧಾನಗೊಳಿಸಿ ನಡೆದರ್ ಮುಂದೆ ಗುರುದೇವಂ.
ಮುಂಪಥದೊಳ್ ಕಂಡರೆನಿತೋ ಗ್ರಾಮೀಣ ಜನ
ರಾಶಿ. ದಾರಿದ್ರ್ಯ ದೇವತೆಯ ಅರ್ಚಕರಾದ
ದೀನಾತಿದೀನರಂ ಕಂಡು ಮಾತಾಡಿಸಿ ನಲ್
ನುಡಿದು ನುಡಿಸಿ ಜೀವನಗತಿಯನೋದಿ ಮನದೊಳ್
ಮರುಗುವರ್, ಕರಗುವರ್ ಎಲ್ಲರೊಳ್ ಒಂದಾಗಿ
ತಾಂ ಬೆರೆತು. ಮುಂದೆ ಗರಿಕೆ ಪುಲ್ಹಾಸಿನ ರನ್ನದ
ಕಂಬಳಿಯ ಮಿದು ಮೆತ್ತೆಯ ಮೇಲೆ ನಡೆದಿರೆ ದೂರದಿ
ಕಂಡರೊಂದು ಪೆರ್ಬುಲಿಯಂ! ಬಯಲಿನಲಿ ಚೆಂ
ಬಿಸಿಲ್ ಮೋಹಕ್ಕೆ ಮೈಚಾಚಿದತ್ತು ನಿರ್ಜನ
ಪ್ರದೇಶದಿ ನಿರ್ಭಯದಿಂದೆ. ಇಲ್ಲಿಂದಲೇ
ಕಂಡರದನುಂ ಸ್ವಾಮೀಜಿ. ಒರ್ಮೆಗೆ ಎರ್ದೆಯುಂ
ಡವಡವಿಸಿ ಬೆದರಿ ತಟ್ಟನೆ ನಿಂತರಲ್ಲಿಯೇ.
ಮನುಷ್ಯನ ಗಂಧವಂ ಅರಿತು ಆಘ್ರಾಣಿಸುತೆ
ತೆಕ್ಕನೆದ್ದು ಕುಳಿತು ತಲೆಯೆತ್ತಿ ಇತ್ತಲೇ ಕಣ್
ನೆಟ್ಟು ನೋಡಿತು! ಅತ್ತಲದುಂ ಮಿಸುಕಲಿಲ್ಲಂ!
ಇತ್ತಲಿವರ್ ಚಲಿಸಲಿಲ್ಲಂ! ಗಂಭೀರಗತಿಯಲಿ
ತೋಳೆತ್ತಿ ಅಭಯಹಸ್ತತೋರಿದರ್ ದೈವದ
ಹೊಣೆಗೊಳಿಸಿ. ಅದು ಗಳಿಗೆಯೊಂದು ನೋಡಿ ಚಂಗನೆ
ನೆಗೆದು ಪರ್ಣಾರ್ಣವಂ ಸೇರಿ ಮಾಯಮಾದತ್ತು!

ಆವ ದೈವದ ಕೃಪೆಯೋ, ಗುರುದೇವನ ವರದ
ಹಸ್ತದ ಪರಕೆಯೊ, ಕಾಷಾಯ ವಸನಗಳುಗುವ
ಚಂದನದ ಕಾಂತಿಯೋ ಎಂದೆನಲ್ ಆ ಕೂರ
ಸನ್ನಿವೇಶಂ ಕಳೆಯಿತು ಆವ ವಿಪತ್ತು ತನಗೆ
ತಟ್ಟದ ತೆರದಲಿ. ಸ್ವಾಮೀಜಿಯುಂ ಅಂತಪ್ಪ
ಗಂಭೀರ ವಿಷಯಮಂ ತನ್ನೊಳ್ ವಿಮರ್ಶಿಸುತೆ
ನಡೆದರ್ ಹಿಡಿದ ಪಥಮಂ ಬಿಡದೆ. ಎನಿತೊ ಸಾಧು
ಸಂತ ಜನರ ಭೇಟಿಯುಂ ಲಭಿಸಿದತ್ತು, ಎಲ್ಲರ
ವಿಧವಿಧ ವಿಚಾರ ವಾಹಿಯಲಿ ಮುಳುಗಿ ತೇಲುತೆ
ರಾಜಪುತ್ರ ಸ್ಥಾನಕೆ ಪದಾರ್ಪಣೆ ಮಾಡಿದರ್.
ವೀರಾತಿವೀರ ಯೋಧರ ದಿಟ್ಟಾಸ್ಥಿಗಳಿಂ,
ಸಾಧುಸಂತರ ಪುಣ್ಯ ಪವಿತ್ರಾಸ್ಥಿಗಳಿಂ, ಸ್ತ್ರೀಜನರ
ಭಂಗ ಬಸ್ಮಗಳ ಕಂಬನಿಯ ಧಾರೆಯುಂ ಮಿಗೆ
ತುಂಬಿದ ಭೂಮಿ! ಪದ್ಮಿನಿ ಪ್ರತಾಪ ಸಿಂಹರುಂ
ಬದುಕಿ ಬಾಳಿ ಮಡಿದು ಮಣ್ಣಾಪುಡಿಯಲಿ
ಚೆಲೆತ ಪುಣ್ಯಭೂಮಿಯಲಿ ಮುನ್ನಡೆಯುತಲಿರಲ್
ಚಿತ್ರವತ್ ಕಣ್ಗೆಸೆದುದು ಪದ್ಮಿನಿ ಪ್ರತಾಪ
ಸಿಂಹರ ಬದುಕಿನ ಚಿತ್ರ.
ಮುಂಬೆಳಗು ಪೊಳ್ತಿನ
ತಣ್ಣನೆಯ ತಣ್ಪುಗುತ್ತಿರಲ್ ಮೊಳಗಿದುವು ವಿಧ
ವಿಧ ಪಕ್ಷಿಗಳ ಕೊರಲ್ ಕೂಜಿತ ವಾದ್ಯಗಳ
ರಾಗಾನುರಾಗಗಳ್. ಕರ್ಣಪಟಲಂಗಳಂ
ರಮಿಸುವಂತೆ. ನಗರಿಯ ರಾಜಪಥವಿಡಿದು ಮುಂ
ನಡೆಯೆ ಕಂಡರೆನಿತೊ ರಜಪೂತ ಕುಲೀನ ನವ
ಯುವಕರ. ಮುಖ ತೇಜದಲಿ ಅಂದಿನ ಪುರುಷಿಲ್ಲ,

ಕಳೆಯಿಲ್ಲ; ಬರೀ ನಿಸ್ತೇಜದ ಜನ ಸಾಮಾನ್ಯ
ಗತಿಯ ಎಲುಬಿನ ಹಂದರಂಗಳ್. ಬಿಳಿಯರ್ ಬಿಗಿ
ಮುಷ್ಟಿ ಓಡಿದು ಹಿಂಡಿದ ಪರಿಯೊ ಎನೆ ರಾಜ್ಯವೇ
ಪರಿಮ್ಲಾನಮಾಗಿಹುದು ಎಂಬೊಲಾ ರಾಜಸ್ಥಾನ
ಕಣ್ಗೆಸೆಯಿತು ನಿಸ್ಸಾರ ವೇಶದಲಿ! ಸ್ವಾಮೀಜಿ
ಪಜ್ಜೆ ಪಜ್ಜೆಗುಂ ನಡೆದರ್ ಮುಂದೆ ಮುಂದೆ. ಆ
ರಾಜಮಾರ್ಗ ಪಥಿಕರ್ ಸ್ವಾಮೀಜಿಯ ದರ್ಶನ
ಮಾತ್ರದಿಂ ಆನಂದ ಭಕ್ತಿಪೂತ ಮನದಿಂ ಪುಳಕಗೊಳೆ
"ಸ್ವಾಮೀಜಿ. ತಮ್ಮ ಅಭಿದಾನಮಂ ತಿಳಿಯಲಹುದೆ?"
ಆಗಳ್ ನೆನಪಾದುದು ತಾನಿನ್ನು ತನಗೊಂದು
ನಿರ್ದಿಷ್ಟ ನಾಮಧೇಯಮಂ ಪಡೆದಿಲ್ಲಮೆನೆ
ದಿಟಂ. ಶಿಷ್ಯರುಂ ತಂತಮ್ಮ ಪೆಸರ್ ಬದಲಿಸಿ
ಬೇರೊಂದು ಪಡೆದರ್ ತಮ್ಮಗಳ ಒಮ್ಮನದ
ಒಕ್ಕೂಟದೊಳ್. ಅಂದು, ತನಗಾಗಿ, ತಮ್ಮೊಂದು
ಒಪ್ಪಿಗೆಯ ಮನೋಗತಿಗಾಗಿ ಸರಿ ಹೊಂದಿಸುವ
ನಾಮಧೇಯವನರಸಿ ವಿವಿದಿಶಾನಂದ ಮತ್ತೊಂದು
ಮಗದೊಂದು ಅರಸಿ ತಮಗೊಪ್ಪಿತಮೆನಿಸದಿರಲ್,
ಅಲ್ಲಿಗೇ ಕೈಬಿಟ್ಟ ಪ್ರಸಂಗ ಮನದೊಳ್ ಸುಳಿ
ಸುಳಿದಳಿದುದು. ಒಡನೆ ಸಿತಸ್ಮಿತ ವದನದಿಂದೆ
ನುಡಿಸಿದರ್ "ಅಯ್ಯ ಆನೊರ್ವ ಸನ್ಯಾಸ ವ್ರತ
ಪಿಡಿದು ಭಾರತ ಜನನಿಯ ಸೇವೆಯನೊಲಿದವಂ.
ಸ್ವಲ್ಪಕಾಲಂ ಅನಾಮಿಕನಾಗುಳಿವ ಸದಿಚ್ಛೆಯಿಹುದೆಮ್ಮ
ಮನದೊಳ್."
ಅವನ ಭಕ್ತಿ ಮಧುರಮಯದಾಹ್ವಾನವಂ
ಸ್ವೀಕರಿಸಿ ಅಲ್ಲೊಂದೆರಳ್ದು ದಿನಗಳ್ ಕಳೆದು

ಊರು ಕೇರಿಗಳರಿತು ಬದುಕಿನ ಸ್ಥಿತಿಗತಿಯ
ಅರಿದರಿದು ಪೊರಮಟ್ಟರ್ ಮುಂಪಥವಂಬಿಡಿದು.
ಈ ರಾಷ್ಟ್ರವುಂ ಮತ್ತೆ ಉತ್ತುಂಗಕೇರುವೊಡೆ
ಆತ್ಮಶಕ್ತಿಯಲಿ ಕಿಚ್ಚೆದ್ದು ಉರಿದುರಿದುರಿದು
ಪ್ರೋಜ್ವಲಿಸಿ ಸತತ ಹೋರಾಡಿ ಗೆಲ್ವುದಲ್ಲದೆ
ಅನ್ಯಮಾರ್ಗವಿಲ್ಲಂ" ಎಂದುದು ಅತನುವಾಣಿ, ತಮ್ಮ
ಕಿವಿಗಳ ಸನಿಹದಲಿಯೆ. ಸ್ವಾಮೀಜಿ ಭಾವನಾ
ವೇಶದಲಿ ಮೈಮರೆಯುತೆ ತಲೆಯಂದೂಗಿದರ್.
ಪಯಣ ಸಾಗಿದುದು ಎಂದಿನ ಯಯಾವರತನದಲಿ.
ಹಳ್ಳಿತಿಟ್ಟುಗಳ ಏರಿಳಿದು ದಾಂಟಿ ಹೊಳೆ ಕೆರೆ
ತೊರೆಗಳಲಿ ಮುಳುಗೆದ್ದು ಶುಭ್ರಸ್ನಾತರಾಗುತೆ
ಮುಂಬರಿವರ್ ದಿಟ್ಟತನದೊಳ್. ಎಲ್ಲೆಲ್ಲಿಯುಂ
ದೀನ ದರಿದ್ರರ ದಲಿತ ಬರ್ದುಕಿನ ಚಿತ್ತಾರ!
ಧನಿಕರ–ಮಹಾರಾಜರ ಅರಮನೆಗಳ ಮಹಾ
ವೈಭವೀಕರಣದ ಒತ್ತೊತ್ತಿಗೇ ದೀನಜನ
ಕೋಟಿಯ ದಾರಿದ್ರ್ಯ ಚಿತ್ತಾರ! ನೋಡಿ, ಕಂಗಳೆ
ದಣಿದುವು; ಬಳಲಿ ಬತ್ತಿ ಬಾಡಿದುವು. ಹೃದಯದ
ತಂತುಗಳ್ ಸಂಕಟದಲಿ ಮಿಡಿದುವು. ಒಡಲುರಿಯೊಳ್
ಉಕ್ಕಿಪರಿದ ಭಾವನೆಗಳಿಗೆ ಮುಖ ಮುದ್ರೆಯೇ
ಸಾಕ್ಷಿ! ಕಣ್ಣೊಳಿಣುಕುವ ಛಾಯೆಯೇ ನಿಜ ಚಿತ್ರಣ!
ಅದೇ ಆಗಳೇ ಭಾರತ ಧಾತ್ರಿಯಲಿ ಭುಗಿಲ್
ಏಳುವೊಲ್ ಜನ ಜಾಗೃತಿ ಪಡೆಯುತಿರ್ದ ಸಮಯಂ.
ರಾಷ್ಟ್ರೀಯ ಜಾಗೃತದರಿವು ಸ್ವಾತಂತ್ರ್ಯದರಿವು
ಮೂಡುತಿರುತಿರೆ ನರೇಂದ್ರನಾಥದತ್ತನ ಹೃತ್
ಜ್ಯೋತಿರ್ಕುಡಿಗೆ ತೈಲವೆರೆದವೊಲ್ ಜ್ವಲಿಸಿತು

ಉಜ್ವಲೋಜ್ವಲವಾಗಿ. ಅನ್ನೆಬರಮಾರಾರ್
ಅರಿಯದ ತೆರದಲಿ ಅಜ್ಞಾತ ವ್ಯಕ್ತಿಯುಂ, ಮಿಗೆ
ಅನಾಮಧೇಯನುಂ ಆಗಿರ್ದ ನರೇಂದ್ರನಾಥಂ
ಸಮಸ್ತ ಭಾರತದ ಮನೋಮಯ ಮೂರ್ತಿಯಾಗುತ್ತೆ
ಅದ್ಭುತತರ ಭಾವವಿಭಾವಗಳ ಕೋಂಟೆಯೇ
ತಾನಾಗುತಲಿರ್ದಂ. ದಿನದಿನಂ ಪದ ವಾಕ್ಯ
ಪ್ರಮಾಣಜ್ಞ ಎಂಬ ಬಿರುದು ಬಲಿತು ಹಣ್ಣಾಯ್ತು.
ಜೊತೆಗೆ ಪ್ರಾಚ್ಯ ವಿದ್ಯಾ ಪ್ರತಿನಿಧಿ ಸ್ವರೂಪಿಯಾದ
ಶ್ರೀರಾಮ ಕೃಷ್ಣ ಪರಮಹಂಸರ ಪ್ರಭಾವವ
ಮನದುಂಬಿ ಪಾಶ್ಚಾತ್ಯ ವಿದ್ಯಾಭ್ಯಾಸವುಂ ನೆರೆ
ದೊರೆತು ಒಗ್ಗೂಡಿ ಹದನಿಸಿದ ವ್ಯಕ್ತಿತ್ವವದು
ಮುಂದೆ ದೇಶಭಕ್ತ ಸ್ವಾಮಿ ವಿವೇಕಾನಂದರ
ಸಂಜೀವನಾದರ್ಶಗಳಿಗೆ ನಾಂದಿಯಾದತ್ತು;
ಯಯಾವರ ಬದುಕಿನಿಂ ತನುಮನಂ ಬಲಿತವೊಲ್!
    ಆ ದೂರ ದೂರದಾ ಕೆರೆಯ ಅಂಚಿನಲಿ ನೆರೆ
ಮೆರೆದ ಶಾಲ್ಮಲೀ ವೃಕ್ಷವೊಂದು ಪೊಚ್ಚಪೊಸತೆನೆ
ಕೆಮ್ಮನೆಯ ಪೊಸ ತಳಿರೊಡೆದು ಮೈತುಂಬಿ ಚೆಂದದಿಂ
ಸಿಂಗರಂಬೆತ್ತುದಯ್ ಸೌಂದರ್ಯ ಲಕ್ಷ್ಮಿಯಂ
ಹೋಲಿ! ಕೆಂಪಿನ ಸೊಂಪಿನ ಸುಮನೋಹರ ವೃಕ್ಷ
ದೇವನ ಪದತಲದಾ ತಣ್ಣನೆಯ ನೆರಳಿನಲಿ
ಮೈಗೊಂಡ ಕರ್ರನೆಯ ಕಗ್ಗಲ್ಲ ಹಾಸಿನಲಿ
ದಣಿವಾರಿಸಿದರ್ ಸ್ವಾಮೀಜಿ. ಜಠರಾಗ್ನಿಯೊಡನೆ
ಭುಗಿಲ್‌ಗೊಂಡಿತು ಹಸಿವು ಕೆರಳಿಕೆರಳಿ. ತುಂಬಿದ
ಕಮಂಡಲದ ತಿಳಿನೀರ್ ಕುಡಿಯಲ್ ವೀರರಸ
ಪಾನಗೈದವೊಲ್ ತಣ್ಣಗಾಯ್ತು ಒಡಲ್, ಕಣ್ಣು

ಮುಚ್ಚಿದರ್ ಧ್ಯಾನ ನಿರತರಾಗಿ. ನಸುವೊಳ್ತದು
ಕಳೆವನಿತರೊಳ್ ದನಗಾಹಿಗರ್ಯೆದರ್, ಕೆರೆಯ
ನೀರ್ಕುಡಿಸೆ, ಗೋವು ಕರುಗಳ ಸಹಿತ. ಅವುಂಗಳ
ಆಗಮನದ ಸದ್ದಿಗೆ ಕಣ್ ತೆರೆದರ್ ಸ್ವಾಮೀಜಿ.
ದನಗಾಹಿ ಅಣುಗರ್ ಸನಿಹಕ್ಕೆದು ಕೈಮುಗಿದು
ಭಕ್ತಿಗೌರವಗಳಿಂ ಬೆಸಸಿದರ್ "ಅಯ್ಯ, ದೈವ
ಭಕ್ತರೇ! ತಮ್ಮ ದರ್ಶನ ಭಾಗ್ಯದಿಂದೆಮ್ಮ
ಬದುಕು ಪಾವನವಾಯ್ತು; ಜನ್ಮ ಸಾರ್ಥಕವಾಯ್ತು."
"ಸೋದರರೆ. ನಿಮ್ಮ ದರ್ಶನವೆನಗೆ ಅನಿತನಿತೆ
ಸಂತಸವನೂಡಿಸಿತು ಮನಕ್ಕೆ. ಕುಶಲಮೇನ್ನೈ?"
ಅಹುದು ಗುರುಗಳೇ! ನಮ್ಮೊಡನಾವ್ ತಂದಿರುವ
ತಂಗಳಿನ ಬುತ್ತಿಯಲಿ ರೊಟ್ಟಿ ಚಟ್ನಿಯಿರ್ಪುದು
ನೀಮಿದರೊಳ್ ಪಾಲ್ಗೊಂಬೊಡೆ ಧನ್ಯರಾವು ಎಂಬೆ.
ದಯೆಗೈದು ನಮ್ಮೊಳಿದರೊಳ್ ನೀವ್ ಪಾಲ್ಗೊಳ್ಳಿ."
"ಅಣುಗರೇ! ಆನ್ ಪಾಲ್ಗೊಂಡೊಡೆ ನಿಮಗದರೊಳ್
ಕೊರಮಾಗದೇಂ?"
"ಇಲ್ಲ, ಇದಕೊಳ್ಳಿ ದೇವರ ಮಕ್ಕಳೇ!"
ಬುತ್ತಿ ಬಿಚ್ಚಿದರವರ್ ಜೋಳದಲಿ ಗೆಯ್ದ ಅವು
ತಂಗಳಾದ ತಣ್ಣನೆಯ ರೊಟ್ಟಿ. ಮುದದಲಿ ಸ್ವಾಮೀಜಿಯುಂ
ಪಾಲ್ಗೊಂಡರಣುಗರೊಡನೆ. ರೊಟ್ಟಿಯ ದಿವ್ಯತರ
ಊಟಃ ದಕ್ಕಿತು. ಅಣುಗರಿಗೆ ಧನ್ಯವಾದಮಂ
ಸಲಿಸಿ ಪೊರಡುವೆನೆನೆ ಅಣುಗರೆಂದರ್ ಮತ್ತಂ,
"ಅಯ್ಯ, ಗುರುಗಳೇ! ಈ ದಿನಂ ತಂಗುವೊಡೆಮ್ಮ
ಬೆಂಬಳಿಯೆ ಗಮಿಸಿದೊಡೆ ನೀಂ ಉಳಿಯಬಹುದೆಮ್ಮ
ಗುಡಿಸಿಲಿನಲಿ. ರಾತ್ರಿಯ ವಿಶ್ರಾಂತಿ ಒಳ್ಳಿತೆನೆ

ಬನ್ನಿರೈ ಸಮುದ್ರಂ.''
ಸಂತಸದ ರಸಾನ್ನ
ಉಂಡವೊಲ್ ತಣಿದುದು ಗುರುವರ್ಯನ
ಒಡಲ್. ಬಳಿಕಲಾಗಳ್ ಅಣುಗರೊಡನೆ ತಾವುಂ
ದನಗಾಹಿತನವೆರಸಿ ನಡೆದರ್. ದಣಿದಿರ್ದ
ಶರೀರಕೆ ವಿಶ್ರಾಂತಿಯ ಅಗತ್ಯಮಿರ್ದುಮದು
ಅತ್ಯಧಿಕ ತೆರದಿ. ಅಣುಗರೊಡಗೂಡಿ ಊರಂ
ಸೇರುವನ್ನ ನುಡಿಸಿದರಿಂತು "ಎಲೆ! ಅಣುಗರೇ,
ನಿಮ್ಮ ದನಗಾಹಿತನದಿಂ ನಿಮಗೆ ಅಮೂಲ್ಯ
ವಿದ್ಯೆಬುದ್ಧಿಗಳ್ ದಕ್ಕದೆಹೋಯ್ತು. ಇರಲಿರಲಿ,
ನೀವಿದಂ ಮನಕೆ ತಾರದೆಯೆ ನಿಮ್ಮೊಳ್ ನೀವ್
ಕಲಿತು ಬಲಿತು ಬೆಳೆಯೆ ಪಥಮಿರ್ಪುಂ. ಪುರಾತನ
ವಿಭೂತಿ ಪುರುಷರ್ ಮಹರ್ಷಿಗಳ್ ಎನಿತೆನಿತೊ
ಮಂದಿ ಕಲಿತರಿಲ್ಲ. ಅವರ ಸಾಮರ್ಥ್ಯಮಿರ್ದುಮದು
ಬುದ್ಧಿಮತ್ತೆಯ ವಿಚಾರವಾಹಿಯಲಿ. ಯೋಚನೆ,
ಸದಾ ಆಲೋಚನೆಯಲ್ಲಿ ಪೊಳೆತ ದ್ರವ್ಯವೆ ತತ್ತ್ವ
ವಿಜ್ಞಾನ. ತರ್ಕಶಾಸ್ತ್ರದ ನಿಗೂಢತಮವರಿತು
ಪ್ರಮೇಯಗಳ ಪ್ರತಿಪಾದಿಸಿದರ್. ಏಸುಕ್ರಿಸ್ತ,
ಭಗವಾನ್ ಬುದ್ಧರುಂ ಗ್ರಂಥರಚಿಸಲಿಲ್ಲಂ;
ಉಪದೇಶಿಸಿದರ್. ನಲ್ವಾತುಗಳ ಉಪದೇಶ
ಅಂದಿಂದಿಗುಂ ಪ್ರಸ್ತುತಿ. ನೀವ್ ಸಹೃದಯರ್,
ಅಂದೊಡಿಂದು ಗುರುತರಿಯದ ಎನ್ನನೆಂತೆಂತು
ಸಹೃದಯತೆಯಿಂ ಉಪಚರಿಸಿದಿರೊ ಅಂತಂತು
ಎಲ್ಲರ್ಪೊಳ್ ಸ್ನೇಹಾಚಾರಮಿರ್ದೊಡದು ನೀವೊರ್
ಬುದ್ಧ ಅಥ ಕ್ರಿಸ್ತತ್ವಮಂ ಮುಂದೆಂದಾದೊಡಂ

ಪಡೆದಪುದು ಸತ್ಯ ಕಣಾ! ಇದುವೇ ಮನುಕುಲಜರ
ಸಾರ್ಥಕ್ಯ ಜೀವನಂ. "**ಬಹುಜನ ಹಿತಾಯ ಬಹುಜನ**
ಸುಖಾಯ," ಎಂಬುದೇ ಸುಜೀವನ ಸೂತ್ರಂ, ತಿಳಿಯಿರೈ."
ಒಂದೆರಳ್ದು ಮೂರು ದಿನಮಾನಗಳ್ ಕಳೆದುವಾ
ಹಳ್ಳಿಯಲಿ ಗುಡಿಸಲಿನ ಗುರುವಾಗಿ. ಸ್ವಾಮೀಜಿ
ಪಡೆಕೊಂಡ ಸುವಿಶ್ರಾಂತಿ ಪುರುಪಿತ್ತುದು ಮೈಗೆ.
ಅಲ್ಲಿಂದ ಪೊರಡುವನ್ನ ಅಭಿಜಿನ್ ಮುಹೂರ್ತಂ
ಬೀಳುಕೊಟ್ಟಿತು ಗುರುಗಳಂ. ತಂಪು ಕಂಪುಗಳ್
ಒಗ್ಗೂಡಿದ ಸೊಂಪಿನ ಸಂಪದಂ ಸೂಸಿ. ಆ
ಆತ್ಮೀಯಣುಗರ್ ಗುರುವಿನ ಬೆಂಬಳಿಯೆ ನಡೆದರ್
ಊರಿನ ಗಡಿಯಂ ಮುಟ್ಟುವನ್ನ ದನಗಾಹಿ
ಅತಿಥೇಯ ಸುಜನರಾಗಿ. ಪ್ರಾತಃಕಾಲೀನ ವಿಜನ
ಸುಖಂ. ಹನಿಹನಿ ಇಬ್ಬನಿ ಸ್ನಾತಾ ಶಾದ್ವಲಂ
ಸುಂದರಂ. ಮಂದ ಮಂದಾನಿಲನ ಚಾಮರಂ
ಪ್ರಶಾಂತಂ. ಮಹಾ ವೃಕ್ಷ ಗುಲ್ಮವ್ರತತಿ
ಸಂದೋಹ ಸಂವೃತಂ. ನಿಶ್ಶಬ್ದ ನೀರವಂ
ಶೋಭಿತಂ. ಅಭಿಜಿನ್ ಮುಹೂರ್ತ ಮಾನಿತಂ.
ಎಲ್ಲವಗೆಯ ಶಾಂತಿ ಸ್ವರೂಪಂ ಮಧುರವೇಶಂ.
ಅತಿಥೇಯ ಬಂಧುಗಳಿಗೆ ಬೀಳುಕೊಡಿಗೆಯಾಗಿ
ಸಲಿಸಿ ನಮನಮಂ, ನಡೆದರ್ ಬಿರುಸಿನಿಂ ಮುಂದೆ.
ಮುಂಬೆಳಕು ಪ್ರಸರಿಸಿ ಬಾಲರವಿ ಬಾನೇರುವ
ಸಮಯದೊಳ್ ಮುಂದಿನೂರಿನ ದೂರ ದಕ್ಕಿಣದ
ಪ್ರದೇಶಮಂ ಮುಟ್ಟಿದರ್ ಸ್ವಾಮೀಜಿ. ಊರಿನ
ಪೊರವಲಯದ ನದಿಯ ತಟಿನಿಯೊಳಂದಿನ ತಮ್ಮ
ಪ್ರಾತಃಹ್ನಿಕಮಂಗೈಯಲ್ಕೆದ ಶಂಭುನಾಥನೆನೆ

ಪ್ರಸಿದ್ಧ ದೈವಭಕ್ತನಂ ಸಂಧಿಸಲಾತಂ
ಪರಮ ಭಕ್ತಿಯಿಂ ಸಂತುಷ್ಟಿಯಿಂ ಗುರುವರನ
ಮುಖದರ್ಶನ ಮಾತ್ರದಿಂ ಶಿರಮಣಿದು ಗುರುವೆಂದು
ಸ್ವೀಕರಿಸುತೆ ತನ್ನ ಎಲೆಮನೆಗೆ ಕರೆದೊಯ್ದುಂ.
ಆ ಮಹನೀಯನ ಅತಿಥಿಯಾಗಿ ದೈವೀಗುರುವೆ
ತಾನಾಗಿ ಉಳಿದರವನ ಗೃಹದ್ದೇಶದಲಿ.
"**ಗುರುದೇವೋಭವ ಅತಿಥಿದೇವೋಭವ**" ಎಂಬ
ಮಂತ್ರೋಕ್ತಿಗಳ ಪೂರ್ಣಪಾಠಮಂ ಅರಿದರಿದು
ಮನಗೊಂಡು ಗುರುಸೇವೆಯಿಂ ಜ್ಞಾನದಾರ್ಜನೆ
ಗೈವ ತನ್ನ ಮನದಿಚ್ಛೆಯಂ ಗರಿಗೂಡಿಸಿದಂ.
ಅತಿಥಿಯಾ ಪ್ರಜ್ಞಾನ ಪಕ್ಷಿಯುಂ ಎರೆಂಕೆಯ
ಗರಿಗೆದರಿ ಹಾರುತಿರೆ ನಭೋದೇಶದಗಲಂ.
ಅದೇಂ ಬರಿ ಮಾಯೆಯೋ ಪ್ರಜ್ಞಾನದ ರಹಸ್ಯಮೋ
ಅರಿಯದಾಯಿತ್ತು. ಎಳಸು ಬುದ್ಧಿಯ ಕುತೂಹಲ
ಬೆಳೆಬೆಳೆದು ತಲೆ ಸಿಡಿಯುತಿರೆ ಶಂಭುನಾಥನುಂ
ಸ್ವಾಮೀಜಿಯ ಪ್ರವಚನಗಳ್ ಆಲೈಸಿ ಮನ
ತುಂಬಿಕೊಂಬುವಂ, ಉತ್ಸಾಹ ಬಂಡೆಳ್ವವೋಲ್.
ತರುವಾಯಿ ಯುವಗುರುವಿನ ಸುದ್ದಿಯು ಬಾಯಿಯಿಂ
ಬಾಯಿಗೆ ಹಬ್ಬಿ ಹರಡಿ ಕತ್ತುರಿಯ ಪರಿಮಳದ
ಪಾಂಗಿನಲಿ ಪಸರಿಸಿತು ಸಂಸ್ಥಾನದಾದ್ಯಂತಂ.
ಒಡನೊಡನೆ ಸುಜನಸಂದೋಹಂ ಆಕರ್ಷಿತಗೊಳೆ
ಪುಷ್ಪ ಕರಂಡಕೆ ಮುತ್ತ ಬಹ ಜೇನ್ದುಂಬಿಗಳ
ತೆರದಲಿ ಜನರಾಶಿಯೈದುದ್ಧು ಸ್ವಾಮೀಜಿಯಾ
ಪ್ರವಚನಗಳಂ ಕೇಳೆ. ಸಜ್ಜನ ಸಂದೋಹ
ದಿನದಿನಂ ವೆರ್ಚತೊಡಗಿತು ಭ್ರಮದ್ಭ್ರಮರಗಳ

ಸಡಗರಂ ಹೋಲಿ! ಬುದ್ಧಿಮಾನ್ಯರ್ ತತ್ತ್ವಜ್ಞಾನ
ವೇತ್ತರ್ ಗಮಿಸಿದರ್ ಯುವ ಸಂನ್ಯಾಸಿಯ ಜ್ಞಾನ
ವಲಯಮಂಬೊಕ್ಕು ಪರೀಕ್ಷಿಸಲುರೆ. ಕುತೂಹಲಿತ
ಮನಮತಿಗಳ ಸ್ಫೂರ್ತಿಯದು ಪ್ರವಚನ ಧಾರೆಯ
ಕೇಳರಿದು ಮೈಮುದುಡಿದುದು ಕುತೂಹಲಂಗಳ
ಕಾಲ್ಮುರಿದು. ಸನಾತನ ಧರ್ಮದ ವಿಚಾರಗಳ್
ವಿಶ್ಲೇಷಿಸಿ ಜಾಲಾಡುವೊಲ್ ವಾದವಿವಾದಂ
ರಂಗುರಂಗಾಗಿ ಬೆಳೆದುವು, ಜೃಂಭಿಸುತೆ ಮರೆದುವು.
ಸ್ವಾಮೀಜಿಯುಂ ಎಲ್ಲರ ಮನತಣಿಪಂತೆವೊಲ್
ಅಧಿಕ ಪ್ರವಚನಗಳ ಮಾಲೆಯಂ ಬಿತ್ತರಿಸಿ
ಜಿಹಾಸಿಗಳ ಮನ ಮೆಚ್ಚಿಸಿದರ್. ಬಗೆಬಗೆಯಾ
ಸಂಕೆಗಳ ಕಗ್ಗಂಟು ಬಿಡಿಸಿದರ್ ಸುಲಭದಲಿ.
ಅನುದಿನಂ ಗುರುದೇವನ ಉಪನ್ಯಾಸಂ ಕೇಳ್ದು
ಮನಗೊಂಡು ಮುದವೆತ್ತ ಮೌಲ್ವಿಯೊರ್ವಂ ಮೆಚ್ಚಿ
ನೆಚ್ಚಿ ಪ್ರವಚನಗಳ ಪ್ರತಿ ಪದಾರ್ಥವಂ ಅರಿತು
ನುರಿತು ಸ್ವಾಮೀಜಿಯ ಅಲೌಕಿಕ ಪ್ರವೃತ್ತಿ
ಬೆಳೆಬೆಳೆದ ರೀತಿಯಂ ಗಮನಿಸಿ ಮುದದಿಂದಲಿ
ಕರಜೋಡಿಸಿ ಬೇಳ್ದಂ "ಸ್ವಾಮೀ. ಗುರೂಜಿಯೇ,
ನಿಮ್ಮನ್ನೆಮ್ಮಯ ಗೃಹಕೆ ಕರೆದೊಯ್ವ ಇಚ್ಛೆಯು
ತುಂಬಿಹುದೆಮ್ಮ ಮನದೊಳ್. ಆದೊಡೆ ಮಡಿಮೈಲಿಗೆ
ತುಂಬಿಪ್ಪ ಸಮಾಜದ ಮುಂತೆ ಬಾಯ್ದೆರೆಯಲ್ಕೆ
ಮನ ಮುದುಡುವುದು. ಮನ್ನಿಸಿಮ್."
ಎಂದ ಬಳಿಕಲಾ
ಶಂಭುನಾಥನಂ ಎಕ್ಕಟಿಗೆ ಬರಮಾಡಿ ತಾಂ
ಮತ್ತೆ ನುಡಿದನ್ ಮೌಲ್ವಿ "ಅಯ್ಯ ದೈವ ಭಕ್ತರೆ!

ನಿಮ್ಮಳೊಂದು ಕೋರಿಕೆಯಿಹುದೆನ್ನ. ಗುರುವರನ
ನಮ್ಮನೆಗೆ ಕರೆದೊಯ್ಯಲೆನಗಾಸೆಯು ಇರ್ಪುದು,
ನೀವೇನೆಂಬಿರಿ? ಅವರುಣ್ಣುವುದಾದೊಡೆ ಬ್ರಾಹ್ಮಣ
ಜನರಂ ಕರೆಸಿ, ಅವರಿಂದಲೇ ಪಾತ್ರೆ ಪಗಡಿಯಂ
ಶುದ್ಧೀಕರಿಸಿ ಅವರ ಬಾಣಸಿಗ ತನದಿಂ
ಭೋಜನಂ ಏರ್ಪಡಿಸುವೆ ಆಯಿತೇ ಸ್ವಾಮಿ?"
ಬಲು ದೈನ್ಯ ತುಂಬಿದ ದನಿಯಲಿ ಬಿತ್ತರಿಸಿರಲ್
ಶಂಭುನಾಥಜೀಯುಂ ನಗುನಗುತೆ "ಎಲೆ, ಮೌಲ್ವಿ
ಸಾಹೇಬರೇ, ಮುಕ್ತ ಜೀವಿಗೆ ಮಡಿ ಮೈಲಿಗೆ
ಅಂಟುಗುಮೆ? ಇರಿರ್, ಅವರ್ ಬಂದೇ ಬಂದಪರ್."
"ಅಂತಾದೊಡೆ ಆಂ ಧನ್ಯ. ಆನ್ ದೂರದೊಳ್
ಕುಳಿತು ಅವರ್ ಸ್ವೀಕರಿಪ ಪ್ರಸಾದಮಂ ಈ
ಕಂಗಳಿಂ ನೋಡಿ ಸಂತಸಗೊಳ್ವೆನ್!"
"ಅಯ್ಯಾ ಸಾಹೇಬರೆ,
ಅವರ್ ನಿಮ್ಮೊಡನೆ ಸಹ ಭೋಜನಗೈವುದು ದಿಟ!
ಯೋಚಿಸದಿರಿ."
ಆ ಮಾತನಾಲ್ಕೆಸಿ ನಯನದ್ವಯ
ಮಿಂಚಿನೊಲ್ ಮಿಂಚಿದುವು ಆಶೆಯ ಕಿಡಿಯುಜ್ಜಲಿಸಿ.
ಕೈಜೋಡಿಸಿ ಬೇಡಿದನ್ ಮೌಲ್ವಿ ಸಾಹೇಬಂ,
"ಅಂತಿಪ್ಪೊಡೆ ಆಂ ಕರೆಯಲೇ ಸ್ವಾಮೀಜಿಯಂ?"
ಒಡನೆ ಅಲ್ಲಿರ್ದ ಶ್ರೋತೃಗಳ್ ಮಂದಸ್ಮಿತವ
ಅರಳಿಸಿದರ್ ಮೌಲ್ವಿಸಾಹೇಬನ ಮುಗ್ಧಮತಿ
ಗತಿಗೆ.
"ಮೌಲ್ವಿ ಸಾಹೇಬರೇ, ನಿಮ್ಮಂತ ಸದ್ಗೃಹಸ್ಥ
ಸಜ್ಜನರ ಗೃಹದೊಳ್ ಆರ್ ಉಣ್ಣರ್ ಪೇಳಿ?"

ಆಗಳ್ ಬಹುಲ ತೋಷದಿಂ ಪೊರಟನಾ ಮೌಲ್ವಿ
ಅಂದು, ಸ್ವಾಮೀಜಿಯುಂ ಮೌಲ್ವಿಸಾಹೇಬನಾ
ಮಂದಿರದೊಳ್ ತನ್ನೆಲ್ಲ ಸಹಚರಿಗಳೊಡಗೂಡಿ
ಸಹಭೋಜನಗೈದರ್ ಜಾತಿಬೇಧವ ಬದಿಗೊತ್ತಿ.
ಅಂದಿನಿಂ ಗುರುವರನ ಸುದ್ದಿ ಮತ್ತಿನಿತು ಹರಡಿ
ಹಬ್ಬಿದುದು ಎಡೆಎಡೆಗೆ. ನಿರಕ್ಷರೀ ಜನರಾಶಿ
ಗುರುದೇವನ ಮನೋಜನಿತ ಪ್ರವಚನಂಗಳ
ಅಮೃತಲಹರಿಯಂ ಮನತುಂಬಿ ಹೃತ್
ಕಲಶತುಂಬಿ ತಾವಾದರ್ ನರೇಂದ್ರನಾಥನ
ಸದ್ಭಕ್ತರ್. ಪದಯುಗ್ಮಗಳಿಗೆ ಶಿರಮಣಿದು
ಪಾದಧೂಳಿಯಂ ಸ್ವೀಕರಿಸಿದರ್ ಭಯಭಕ್ತಿ
ಭಾವದಿಂ. ಸ್ವಾಮೀಜಿ ಜಗಲಿಯಲಿ ನಿಂತುನೋಡೆ,
ಎಳೆಎಳೆಗಳ್ ಸೇರಿಸಿ ಹೊಸೆದಂತೆ ಎಸೆದತ್ತು.
ಎಡೆಎಡೆಗಳಿಂದಲೈವ ಜನರಾಶಿ ವೀಥಿಯಂ
ಸೇರ್ವದೃಶ್ಯ. ಸ್ವಾಮೀಜಿಯುಂ ಸುಖಾನಂದ
ತುಂದಿಲತೆಯಿಂ ಉದ್ಗರಿಸಿದರಿಂತಿಂತಿಂತು,
"ಮಮ ಮಂತ್ರಾಃ ಸರ್ವ ಸಮಾನತಾ"
ನಡುವಗಲ ನಡುವಿಸಿಲ್ ನಡುನೆತ್ತಿಯಲಿ
ರಣರಣಿಸಿದುದು ಮೈಯ್ಯಲಿ ಬೆಮರ್ ಬಸಿಯುವ
ತೆರದಿ. ಪಕ್ಷಿವಳಗಂ ತಣ್ಣೆಳಲ್ ಆಶ್ರಯಿಸಿ
ಗಿಡುಮರಂಗಳ ಕೊಂಬೆ ಕೊಂಬೆಗಳಲಿ ಮುದುಂಗಿ
ಕುಳಿತುವು ಎರೆಂಕೆಯೊದರಿ ಬಿದಿರ್ಚಿಸಿ ನೀಲಿಯ
ವರ್ಣದ ಕಂಠಾಭರಣ ಶೋಭೀ ಹಕ್ಕಿಪಿಂಡು
ಮೈನ ಚೋರೆಗಳ ಓಂಡು, ಬುಲ್ ಬುಲ್‌ಗಳ ಓಂಡು
ಗುಬ್ಬಿ ಗಬ್ಬಿಲಗಳ ಓಂಡು ಪಾರಿವಗಳ ಓಂಡು

ಕಣ್ಗೆಸೆದುವು ಎಡೆಎಡೆಯಲಿ. ಕೊರಳ್ದನಿ ಹುಗಿದು
ಸದ್ದಡಗಿದುದೊ ಎನಲ್ ಸದ್ದುಗಳ ಸೊಲ್ಲಿಲ್ಲ.
ರಾಗತಾನವಿತಾನಗಳಿಲ್ಲ. ಗುರುವಿನಕ್ಷಿ ಪಕ್ಷಿಯು
ಹೊಂಚಿ ನೋಡಿ ಹಾರಿತು ಅಲ್ಲಿ. ಮರಳಿ ಏರಿತು
ನೆತ್ತಿಯ ಹೊದರಿಗೆ. ಮತ್ತೆ ಎಡವಕ್ಕದ ಕೊಂಬೆ
ಎಡೆಗೆ. ಎಲ್ಲೆಲ್ಲಿಯು ಬಗೆಬಗೆಯ ಸೊಬಗುತಿಹ
ಪಕ್ಷಿಗಳ ಸುಂದರ ಸುಮನೋಹರ ಚಿತ್ರಣಮೆ
ಎನೆನೋಡಿ ದಣಿದುವು ಕಂಗಳ ದೃಷ್ಟಿಯಷ್ಟಿ.
    ರಾಜ್ಯದ ದೊರೆಯಾಗಿರ್ದ ರಾಜಾ ಮಂಗಳ ಸಿಂಗ್
ಮಹನೀಯಂ ಸುವಿದ್ಯಾಭೂಷಣನಿರುತಿರ್ದು
ಬೆಳ್ಜನರ ಕೆಳೆತನಂ ಬೆಳೆಸಿ ಸಂಬಾಳಿಸುತೆ
ಮೆರೆದವಂ. ಮೇಣವರೊಡಂಗೂಡಿ ಆಟಕೂಟಗಳ
ಮೋಜಿನಲಿ ಕೂಡಾಡಿ ಒಡನಾಡಿ ರಾಜ್ಯದಾ
ಆಡಳಿತಮಂ ನಿರ್ಲಕ್ಷಿಸಿದ ಭೂಪಂ! ಅದಂ
ಕಣ್ತುಂಬ ಕಂಡರಿದ ದಿವಾನಂ ನೊಂದೊಡಂ
ನುಡಿಯಲಾರ. ಬಿಡಲಾರ. ಕಣ್ಣಿರ್ದು ಕುರುಡನ
ಮಾಳ್ಕೆಯಲಿ ಮೂಕ ಪ್ರೇಕ್ಷಕನವೊಲ್ ಶಿರಬಾಗಿ
ತಾನಿರ್ದಂ. ಇಂತಿರುತಿರೆ ಮಿಣ್ಣನೆ, ನಾಡಿಗೈದ
ಸ್ವಾಮೀಜಿಯ ದರ್ಶನ ಭಾಗ್ಯಮಂ ಪಡೆದು ಅನು
ದಿನಂ ಪ್ರವಚನಗಳನಾಲೈಸುತ್ತಾಲೈಸುತ
ಸಂಪೂರ್ಣ ಮಾರುವೋದನ್. ಯುವರಿಸಿಯ
ವಾಗ್ಧಾರೆಯ ಅವಿರಳ ಸ್ರಾವೀ ಪದಪುಂಜಂ
ಮಂತ್ರಮುಗ್ಧಗೊಳಿಸಿತು ದಿವಾನನ. ಒಡನೊಡನೆ
ತನ್ನೊಳ್ ಮನಮಥಿಸಿ ಗುರುವರನಂ ರಾಜನಾ
ಸ್ಥಾನಕೆ ಕರೆದೊಯ್ದೊಡೆ ಸುಲಭದಿಂ ದೊರೆಯ ಮತಿ

ಗತಿಗೆ ಬಜ್ಜರದ ಸಾಣೆ ಸಲ್ವುದರೊಳ್ ಕಿಂಚಿತ್
ಸಂಕೆಯಿಲ್ಲಮೆಂದೆಂದು ಪರ್ಯಾಲೋಚಿಸುತ
ಇನ್ನೆಬರಮೆಲ್ಲಿಯುಂ ಇಂತಪ್ಪ ಮಹೋನ್ನತ
ಪದವಾಕ್ಯ ಪ್ರಮಾಣಜ್ಞನಂ ಕಂಡು ಅರಿದಿಲ್ಲ,
ಕೇಳಿತಿಳಿದಿಲ್ಲ ಎಂಬಚ್ಚರಿಯಲಿ ಮುಳುಂಗಿ
ದೊರೆಯ ಮುಂತೆ ಬಣ್ಣಿಸಿದಂ ಸ್ವಾಮಿೂಜಿಯ ದಿವ್ಯ
ಜ್ಞಾನ ಭಂಡಾರಮಂ; ಬುದ್ಧಿಯೈಸಿರಿಯಂ.
ರಾಜಾ ಮಂಗಳ ಸಿಂಗನುಂ ತೋಷದಿಂ ಪರಮ
ಗುರುವಿಗೆ ಬಲು ಆತ್ಮೀಯ ಕರೆಯೋಲೆಯಂ ತಾಂ
ಕಳಿಪಿದಂ ಭಕ್ತಿಭಾವದಿಂ. ದೌವಾರಿಕನಿಂದೈದ
ಪತ್ರಮಂ ಓದಿದರ್ ಸ್ವಾಮಿೂಜಿ. ಆಗಳಾ
ದೌವಾರಿಕನೆಂದಂ "ಸ್ವಾಮಿೂಜಿ, ನಿಮಗಾಗಿ
ಕುದುರೆಗಳ ಸಾರೋಟು ಬಂದಪುದು. ದಿವಾನರು
ಬಂದು ನಿಮ್ಮನುಂ ತಾಮೆ ಕರೆದೊಯ್ವರ್ ದೊರೆಯ
ಆಸ್ಥಾನಕೆ."
"ಆಯ್ತಾಯ್ತು. ಆನೈದಪೆನ್ ಇಂದು,
ರಾಜ ಮಂಗಳ ಸಿಂಗರ ಭೇಟಿಗೆ ಪೇಳಯ್ಯ."
ಜಗದ್‌ವಲಯದಲಿ ಕಂಪಿನೋಕುಳಿಯಂ ಎರಚಿ
ತೊಯ್ಸಿಮಿೂಯಿಸಿ ಕೆಂಗಲಿಸುವಂತೆ ಕೆಂಪಾಗಿ
ಮೆರೆದನಾ ಜಗತ್ಪತಿ ಅಸ್ತಮಾನ ಶೋಭಾ
ಶೈಲಿಯಲಿ. ಪಕ್ಷಿಸಂಕುಲಮೆಸೆದುದು ಗೂಡರಸಿ
ಒಳಪುಗುವ ಆತುರಾತುರದಲಿ. ಇನಿಗಾಳಿಯು
ತೀಡಿದುದು ತಣ್ಣಗೆ ತನಿಯುಗುವವೊಲ್. ಸಾಯಂ
ಸೊಬಗಿನೊಳಗಿನ್ನೊರ್ ಸೊಬಗೆನಲ್ ಬಿಳಿಮೆಯ್ಯಿನ
ಜೋಡು ಕುದುರೆಗಳ ಸಾರೋಟೊಂದು ಗಮಿಸಿದುದು

ರಾಜವೈಭವದೈಸಿರಿಯಲಿ ಟಿಂಟಿಣಿಪ ನಲ್
ಕಿರುಗೆಜ್ಜೆಗಳ ಮನೋರಮ ಸದ್ದು ಪೊಣ್ಮಿಸುತೆ.
ಆ ಎಳೆಯ ತೇಜಿಗಳ್, ಆ ನವೋನವಮೆನಿಪ
ಸುಸುಂದರ ಸಾರೋಟು, ಆ ಸೊಬಗುಗುವ ದಿವ್ಯ
ಅಲಂಕಾರ ಜನಗಣಮನವಂ ಸೆಳೆಯಿತು ನಿಜ
ಸೋಜಿಗಲ್ಲಿನೊಲ್ ನಾಗರಿಕ ಲಚ್ಚಣಂ ಸೂಸಿ.
ಸಾಮಾನ್ಯ ಪ್ರಜೆಯೊರ್ವನ ಅತಿ ಸಾಮಾನ್ಯ
ಕುಟೀರದ ಮುಂತೆ ರಾಜವೈಭವೀಕೃತ ನವ
ಸಾರೋಟಿನ ಚಿತ್ರಂ ಕಂಗಳಿಗೆ ಆಪ್ಯಾಯ
ಮಾನವಾದತ್ತು. ಹೃನ್ಮನಕೆ ರೋಚಕಮಾಯ್ತು
ಮೈರೋಮಾಂಚನಗೊಳ್ವಂತೆ. ದಿವಾನರದರಿಂದೆ
ಇಳಿದು ಸ್ವಾಮಿಜಿಯ ಬಳಿಗೈತಂದು ನುಡಿದನ್
ಕೈಮುಗಿದು "ಸ್ವಾಮಿಜಿ, ರಾಜರಪ್ಪಣೆಯಂತೆ
ಕರೆದೊಯ್ಯಲೈದಿಹೆನೆನ್. ತಾವೀಗ ಎನ್ನೊಡಂ
ಪೊರಡಿಮ್ ಗುರುವೇ! ರಾಜ ಮಂಗಳಸಿಂಗರುಂ
ಕಾದಿರ್ಪರ್ ತಮಗಾಗಿ."
"ಆಯ್ತಾಯ್ತು. ದಿವಾನರೆ."
ಸ್ವಾಮಿಜಿಯುಂ ದಿವಾನರೊಡಗೂಡಿ ಕುದುರೆಗಳ
ಸಾರೋಟು ಏರಿದರ್. ಸಾಗಿದುದು ಸುಖ ಪಯಣ
ಅರಮನೆಯ ಮಹಾ ದ್ವಾರದ ಬಳಿಗೆ. ನೋಡಲಲ್ಲಿ
ಆಗಳೇ ಪಂಡಿತಜನ ಪುರಜನ ಕೂಡಿರ್ದರ್
ಕಿಕ್ಕಿರಿದು. ತೋಷದಿಂ ಬಹುಲ ಭಯ ಭಕ್ತಿಯಿಂ.
ಮಹಾರಾಜರುಂ ಸ್ವಾಗತಿಸಿದರ್ ಗುರುವರನಂ
ತಮ್ಮ ಪದಾಧಿಕಾರಿಗಳ ಒಡಗೂಡಿ. ಆ
ಎಲ್ಲ ಪ್ರಜೆಗಳ ಪರಿಚಯಮುಂ ಪಡೆಕೊಂಡರ್

ಸ್ವಾಮೀಜಿ. ಆಗಳೊಂದು ಸುದೀರ್ಘ ಉಪನ್ಯಾಸ
ಕಾರ್ಯಮಂ ಹೊಂಚಿ ಜನಗಣಮನಂ ತಣಿಸಿದರ್
ಮನೋರಮ ಶೈಲಿಯಲಿ ವಿವರಿಸಿ. ಸರಳ ಸಲಿಲ
ಧಾರೆಯಂ ಸದ್ದಿಲ್ಲದಾಲೈಸಿತು ಜನವೃಂದ.
ಸಂಧ್ಯಾ ಸೊಬಗಿನ ಸೊಂಪು ಅಳಿದು ನಿಶಾರಾಣಿ
ರಾಜ್ಯಭಾರ ಸೂತ್ರವಿಡಿದಳ್. ಗಗನಾಂಗಣದ
ತುಂಬೆಲ್ಲ ಬೆಳ್ಳಿ ಚುಕ್ಕಿಯಂ ಭರಿಸಿ. ಅಲ್ಲಲ್ಲಿ
ಎಲ್ಲೆಲ್ಲಿ ನೋಡಿದೊಡಮಲ್ಲಲ್ಲಿ ಚುಕ್ಕಿಯೇ
ಚುಕ್ಕಿ. ನೀಲನೀಲಾಂಬರ ಶೋಭೀ ಅರ್ಧಾಂಗ
ಮ್ಲಾನಮುಖಿ ಚಂದ್ರಮನೆಸೆದನ್ ಕೋಮಲ ಬಿಂಬ
ತಾನ್ಯೈಸಿ. ಮನೆಮನೆಯ ದೀಪಗಳ್ ನಂದಿದುವು.
ನಗರಿ ಸೊಗನಿದ್ರೆಗೈದುದು ಸದ್ದಿಲ್ಲದ ಶಾಂತಿ
ಸಮುದಯದಲಿ. ಅರಮನೆ ಬಿಡದಿಯಲಿ ತಂಗಿದರ್
ಸ್ವಾಮೀಜಿ. ಕತ್ತಲು ಕವಿದಿದೆ. ನಿರ್ಜನ ಸುಖೀ
ಶಾಂತಿಯ ಅವತರಣಮೆ ಎಲ್ಲೆಲ್ಲಿಯುಂ ಕಣಾ!
ದಿನಾಂತ ಕಾಲೀನ ಪ್ರಾರ್ಥನೆಯ ಸಲಿಸಿದರ್
ಸ್ವಾಮೀಜಿ ಭಾವನಾವೇಶದಲಿ ಕೈಮುಗಿದು,

"ಬ್ರಹ್ಮ ಸ್ವರೂಪಾ ಪರಮಾ
ಜ್ಯೋತಿರೂಪಾ ಸನಾತನಿ ।
ಸರ್ವ ವಿದ್ಯಾಧಿದೇವಿ ಯಾ
ತಸ್ಯೈ ವಾಣ್ಯೈ ನಮೋನಮಃ ॥"

ಮಹಾರಾಜರೊಡಂ ದಿನದಿನ ಅನುದಿನ ಪ್ರತಿ
ದಿನ ಬೆಳೆದುದು ಸ್ನೇಹ ಬಳ್ಳಿ ಬಲು ಹುಲುಸಾಗಿ.
ಸಭೆಗಳಲಿ ತುಂತುಂಬಿ ನೆರೆವರ್ ಭಕುತಜನರ್,
ಪ್ರವಚನಗಳ ಸಾರ ಸರ್ವಸ್ವಮಂ ಅರಿದು

ಬಹುಮಂದಿ ಭಕ್ತಿಭಾವದಿಂ ಶಿಷ್ಯತ್ವಮಂ
ಒಪ್ಪಿದರ್ ಸ್ವಾಮಿಜಿಯ. ಮಂಗಳ ಸಿಂಗನುಂ
ಪರಮಾಪ್ತ ಶಿಷ್ಯ ತಾನಾಗಿ ಶಿರವಂ ಮಣಿದು
ಬೆಂಬಿಡಿದನ್. ಒರ್ಮೆ ಮಂಗಳ ಸಿಂಗನುಂ ತನ್ನ
ಮನೋಜನ್ಯ ಕುತೂಹಲಿತ ಪ್ರಶ್ನೆಯೊಂದನುಂ
ಕೇಳಿಸಿದನೆಂತೆನೆ "ಗುರುದೇವಾ! ನೀಮಿಂತು
ಜ್ಞಾನ ಋಷಿಯಿರ್ದು ವಿದ್ಯಾವಿಶೇಷದಿಂ ತುಂಬಿ
ತುಳುಕುವಂತಿರ್ದು ಧೀಮಂತ ಸಜ್ಜನ
ಅಪರಿಮಿತ ಧನಾರ್ಜನೆಗೈವ ಶಕ್ತಿಯಿರುತಿರ್ದು
ಫಕೀರನೊಲ್ ಅಲೆವುದು ತರವೇಂ?"
ಅದಂ ಕೇಳಿ
ಸ್ವಾಮಿಜಿಯು ವದನಾಂಭೋಜದೊಳ್ ಹಸನಾದ
ಶಾಂತಿರಸದುಂಬಿದ ಮಧುರಮಂದಹಾಸಮಂ
ಬೆಳಗಿ ಸಾವಧಾನದಲಿ ನುಡಿದರ್. "ಮಹಾರಾಜ!
ನೀಂ ರಾಜ್ಯಭಾರವಂ ಬದಿಗೊತ್ತಿ ಆಂಗ್ಲೇಯ
ಜನರೊಡಂ ಕಲೆತು, ಏಗಳುಂ ಬೇಟೆಯೊಳ್ ಮಲೆತು
ಕಾಲಹರಣಗೈವುದು ಸರಿಯೇಂ?"
ಬಳಿಯೊಳಿರ್ದ
ಅಧಿಕಾರಿಗಳ್ ತಟ್ಟನೆ ಬೆರ್ಚಿದರ್ ಮೈಗೆ ಬೆಯ್
ನೀರ್ ಎರಚಿದೊಲಾಯ್ತು; "ಇದೇಂ ಧೈರ್ಯವೊ ಈಗುರು
ಮಹಾರಾಜರ್ಗೆ?" ಎನುತೆನುತೆ ಮೇಣುಂ ತಮ್ಮ
ಮಹಾರಾಜರ ಪ್ರತಿಕ್ರಿಯೆ ಏನೆಂದು ಕಣ್
ಕಣ್ ಬಿಡುತಿರೆ, ಮಹಾರಾಜಂ ತನ್ನೊಳ್ ಯೋಚಿಸಿ
ಬಿತ್ತರಿಸಿದಂ "ನಿಜ, ಗುರುವರ್ಯಾ? ಆನೇಕೆ
ಆ ಪುರ್ಚಿನೊಳಿಹೆನೊ ಅರಿಯೆನ್. ಅಂತಿಂತು ಆಂ

ಬೇಂಟೆಯೊಳ್ ನಿರತನಿರ್ಪುದು ದಿಟಂ.”
“ರಾಜನೇ,
ಅದೇ ಎನ್ನಯ ಫಕೀರತನಕುಂ ಕಾರಣಂ!”
ಮಹಾರಾಜ ಮಂಗಳಸಿಂಗನುಂ ಭಾವನಾ
ವೇಶದಲಿ ಮುಳುಗಿ ಮಿಣ್ಣನಾದಂ. ಮತ್ತೊಮ್ಮೆ
ಸ್ವಾಮೀಜಿಯಂ ಕುರಿತು: “ಎನ್ನ ಮನದೊಳೊಂದು
ಆಸಂಕೆಯುಮಿರ್ಪುದು. ಅದೇನೆನಲ್ ಮೂರ್ತಿಗಳ
ಪೂಜಾವ್ರತದೊಳೆಮಗೆ ನಂಬುಗೆಯು ಇಲ್ಲಮೆನೆ
ಮುಂದೆನ್ನಯ ಗತಿಯೇವುದು ಎಂದೆನಿಸಿ ಚಿಂತೆ
ಕಾಡುವುದು ಮನವಂ. ಏನೆಂಬಿರಿ ಗುರುಗಳೇ?”
ಪ್ರಶ್ನೆಯುಂ ಎದೆಯಂತಸ್ಥಲವಂ ಮುಟ್ಟಿದುದು.
ಗಂಭೀರ ತೇಜದಿಂ ಬಿಗಿದತ್ತು ಮುಖಮುದ್ರೆ.
“ಇದೇಂ ಎನ್ನೊಡಂ ಸರಸವಾಡುವಿರಾ ದೊರೆಯೆ?”
“ಇಲ್ಲ ಸ್ವಾಮೀಜಿ. ಸರಸದಿಂ ನುಡಿದೆನಿಲ್ಲಂ,
ಪೂಜೆಯ ವ್ರತದೊಳ್ ನಂಬಿಗೆಯಿರದಿರೆ ಪೂಜೆಯು
ಇಲ್ಲವಾಯ್ತು. ಧ್ಯಾನಾದಿ ವ್ರತಗಳನರಿಯೆನ್.
ಎನಲ್ಕೆನಗೆ ತಮ್ಮಯ ಸಲಹೆವೇಳ್ಕುಂ ಗುರುವೆ!”
“ಇರಲಿರಲಿ, ಅದರೊಳೇಂ ತಪ್ಪು? ತಂತಮ್ಮ
ಮನೋಧರ್ಮದ ಪ್ರಕಾರ ನಡೆಯುವೊಡೆ ಅಗಾಧ
ಆಲೋಚನೆಯೆ ದಾರಿ ದೀಪ ಕಣಾ!”
ಅಧಿಕಾರಿ
ವರ್ಗ ಮಿಳ್ಮಿಳನೆ ನೋಡಿದರ್ ಮಾತ್ರ. ಮಿನ್ನೆ
ಗುರುವರೇಣ್ಯಂ ಮೂರ್ತಿಪೂಜಾವ್ರತದ ಮುಂದೆ
ಭಾವಾವಿಷ್ಟರಾಗಿ ಕುಳಿತು ಅಶ್ರುಜಲನಯನಂ
ಮುಚ್ಚಿ ಮುಗಿದು ಧ್ಯಾನರೂಢಗತಿಗೇರುತಿಹ

ದೃಶ್ಯಮಂ ಕಣ್ತುಂಬ ಕಂಡಿರ್ದ ಪ್ರಜೆಗಳ್
ವಿಸ್ಮಯ ವಿಮೂಕರಾದರ್. ಇಂದಿನಭಿಮತ
ತಲೆಕೆಳಗಾದಂತೆ ತೋರ್ದು ಭಯ ಚಕಿತರೆನೆ
ಮಿಣ್ಣನೆ ಗಮನಿಸಿದರ್. ಲಿಖಿತ ಚಿತ್ರವದಾಯ್ತು
ತುಂಬು ಸಭೆ. ಎಲ್ಲರ ಕಣ್‌ದೃಷ್ಟಿಯುಷ್ಟಿ ಸೂಜಿ
ಸೂಜಿಗಳವೊಲ್ ಹರಿದುವು ಇತ್ತಲೆ. ಗುರುವರನ
ದೃಷ್ಟಿ ಹರಿಯಿತ್ತು ಸುತ್ತಲೊರ್ಮೆ. ಅಲೆಯಲೆಯಲಿ
ಸುಳಿಸುತ್ತುವ ಭಾವನೆಗಳ ಭಾರ ಮಾಯೆಯಲಿ
ಮಿಂಚೆಸೆವ ಪರಿಯೊಳಾಯ್ತು. ಆರ್ ಬಿಡದಾದರ್
ಬಾಯಿ. ಕಣ್ಗಳ್ಗೆ ಮುಸುಗಿತೊಂದು ಅಸ್ಪಷ್ಟತೆಯ
ಮಂಜುಮರ್ಬು. ಕಳೆದುವು ಗಳಿಗೆಗಳಿಗೆಗಳ್ ಸದ್ದು
ಇನಿತಿಲ್ಲದೆ, ಬಳಿಕಲಾ ಸ್ವಾಮಿಜಿಯ ದೃಷ್ಟಿಯು
ಹರಿದುದು ಎದುರಿನ ಗೋಡೆಯ ಕಡೆಗೆ. ಭರ್ಜರಿಯ
ಭೂಷಣಂ ಮೈಗೊಂಡು ಅಲಂಕಾರ ಪ್ರಿಯಾ
ಮಹಾರಾಜನ ಚಿತ್ರ ಪರಿಶೋಭಿಸಿದತ್ತು ನವ
ನವೀನತೆಯ ಶೈಲಿಯಲಿ. "ಅದಾರ ಚಿತ್ರವೋ?"
ಕೇಳಿದರ್ ಸ್ವಾಮಿಜಿ. ಅಂದಿನಿಂ ಕಂಡಿರ್ದ
ಚಿತ್ರವದು ಆರದೆಂಬುದರ ಅರಿವಿದ್ದು ಆ
ಪ್ರಶ್ನೆಯೆಳ್ತುದರ ರಹಸ್ಯಮಾರ್ ಅರಿಯದಾಗಿ
ಕಣ್ಕಣ್ಣು ಬಿಟ್ಟು ಮಿಳ್ ಮಿಳನೆ ನೋಡಿದರ್.
ದಿವಾನರ್ ಮುಂದ್ಯೆದು ಗೌರವ ಪೂತ ಸ್ವರದಿಂ
ಬಿತ್ತರಿಸಿದರ್ "ಮಹಾರಾಜರದು" ಎಲ್ಲರುಂ
ಅಚ್ಚರಿಯ ಬೀಡಾಗಿ ಪರಿವೀಕ್ಷಿಸಿದರ್, ಆ
ಮುಂದಿನ ಸುಸಂಗತಿಯ ನರಿಯೆ. ಗಂಭೀರಮತಿ
ಗತಿ ಸ್ತಬ್ಧಕರಮಾಯ್ತು. ಆಗಳಾ ಗುರುವರನ

ನಿಗೂಢತರದ ಮನೋಧರ್ಮವನವಲೋಕಿಸೆ.
ಅಪರಿಮಿತ ಅಧಿಕಾರಿಗಳ್ ಮೇಣ್ ಸಭಾಸದರ್
ತುಂಬಿರ್ದ ಸಭೆಯಲ್ಲಿ ಸ್ವತಃ ಮಹಾರಾಜನೇ
ಆಶ್ಚರ್ಯಾವೇಗದ ವಿಸ್ತೃತನಯನಂಗಳಿಂ
ನಿಟ್ಟಿಸುತಿರೆಯಿರೆ ಪೊಳ್ತು ಹೆಪ್ಪಿಟ್ಟವೊಲಾಯ್ತು!
ಮಾತಿಲ್ಲ, ನಗೆಯಿಲ್ಲ, ನಿಡು ಉಸಿರಿನರಿವಿಲ್ಲ.
ಸ್ವಾಮೀಜಿಯುಂ ಚಿತ್ರದೆಡೆಗೆ ಬೆರಳ್ ತೋರುತೆ
"ಅದರ ಮೇಲೆ ಎಲ್ಲರ್ ಉಗುಳಿರಿ ನೋಡುವಾ!"
ದಿವಾನರ್ ಎದೆಗೆ ಸಿಡಿಲ್ ಬಡಿದೊಲ್ ಡಂಗಾಗಿ
ನೋಡಿದರ್ ಸ್ವಾಮೀಜಿಯಂ ಆ ನಿಷ್ಕಳಂಕ
ವದನಮಂಡಲಂ ಸುಂದರ ರೂಪಿನಿಂ ಬೆಳಗಿ
ತೊಳಗಿತ್ತು ಎಂದಿನೊಲ್. ಸಭೆಯಲಿ ನಿಶ್ಶಬ್ದತೆ
ನೆಲಸಿರಲ್, ದಿವಾನರ್ ಬೆದರಿದೊಲ್ ದೀರ್ಣಿತ
ಸ್ವರದೊಳ್ "ಸ್ವಾಮೀಜಿ ನೀಮಿದೇನ್ ಎಂಬಿರಿ?
ಇದೆಮ್ಮ ಮಹಾರಾಜರ ಚಿತ್ರವಲ್ತೆ? ಇದನುಂ
ಉಗುಳಿ ಅವಮಾನಿಸಲುಂಟೇ? ಇದುಂ ತರವೇಂ?"
"ಅದರೊಳೇಂ ಅಕಾರ್ಯಂ? ಚಿತ್ರದಲಿ ನಿಮ್ಮಗಳ
ಮಹಾರಾಜರ್ ಕುಳಿತಿಲ್ಲವಷ್ಟೇ? ಇದೊಳವರ
ಶರೀರವಿಲ್ಲ; ರಕ್ತವಿಲ್ಲ; ಮಾಂಸವಿಲ್ಲ, ಇದೊರ್
ಚಿತ್ರಮಾತ್ರ. ಆದೊಡಂ, ನೀವಿದಂ ಮಹಾರಾಜ
ಎಂದೆಂಬ ನಿಜಗೌರವವಂ ತೋರ್ದಿರಲ್ತೇ?
ಅಂದಬಳಿಕ, ಮನಮಥಿಸಿ ಪರ್ಯಾಲೋಚಿಯೇ
ತಿಳಿಯಿರ್ಪೈ. ಮತ್ತೆ ಮಹಾರಾಜರಂ ಕುರಿತು "ಎಲೆ
ಮಹಾರಾಜಾ ಕೇಳ್ಕೈ ಯೋಚಿಸಿದೊಡೆ ನೀನಿಹೆ
ಅದರೊಳ್. ಅದರಿಂ ನಿಜ ಗೌರವವಿಹುದು ನಿನ್ನ

ಅಧಿಕಾರಿಗಳ್ಗೆ ಪ್ರಜೆಗಳ್ಗೆ, ಇದಂ ಕಂಡು
ನೆನೆವರ್ ಮನದಿ. ಅಂದಬಳಿಕಮಾ ಮೂರ್ತಿಗಳ
ಪೂಜಾವ್ರತವುಂ ಅಂತೆಯಲ್ತೇ? ಭಕ್ತಜನ
ಕೋಟಿಯುಂ ತಂತಮ್ಮ ಮನಸೇಚ್ಛೆಯಂತೆವೋಲ್
ಮೂರ್ತಿಪೂಜೆ ಆರಾಧನೆ ವ್ರತ ಇತ್ಯಾದಿ
ಬಗೆಬಗೆಯೊಳ್ ಗೈದಪರ್. ವಿಗ್ರಹಗಳ ಮುಖೇನ
ತಂತಮ್ಮ ಮನೋದೈವವಂ ಪೂಜಿಪರಲ್ಲದೆ
ವಿಗ್ರಹಗಳನಲ್ಲಂ "ಎಲೈ ಕಲ್ಲೆ, ಎಲೈ
ಕಬ್ಬಿಣವೆ, ಎನ್ನ ಪಾಲಿಸು ಪಾಹಿಮಾಂ ಎಂಬರೆ?
ಎಲ್ಲವುಂ ಅವರವರ ಇಚ್ಛಾನುಸಾರವೋ,
ಪ್ರೀತ್ಯಾನುಸಾರವೋ, ಭಕ್ತಿಭರಿತ ಭಾವಾನು
ಸಾರವೋ ಅನಂತಾನಂತ ರೂಪಿ ಭಗವಂತಂ
ಅವರವರ ಮನಸೇಚ್ಛೆಯೊಲ್ ತೋರಿ ಬಂದಪಂ.
ವಾಗ್ಜಾಲವದು ಜಳಜಳಸಿ ಹರಿದಿರಲ್ ದಿವ್ಯ
ಭಾವಾವಿಷ್ಟ ವದನಾರವಿಂದಂ ಕೆಂಗಲಿಪ
ತೇಜೋನ್ವಿತ ಸ್ವಾಮಿಜಿಯಂ ನೋಡುತ ತನ್ನ
ಮನದ ಕಿನಿಸಿಗೆಗಾಗಿ ನಾಣ್ಚಿ ಕೈಮುಗಿದು "ಹೇ
ಗುರುವೆ, ಎನ್ನಯಾ ಅಪರಾಧಮಂ ಮನ್ನಿಸಿಂ.
ನೀಮಿಂದೆಮ್ಮ ಕಣ್ ತೆರೆಸಿದಿರಿ. ಮೂರ್ತಿಪೂಜೆಯ
ರಹಸ್ಯಂ ತಿಳಿಪಿ ಎನ್ನಯ ಸೊನ್ನೆಮನಕೆ ಜ್ಞಾನ
ಧಾರೆಯಂ ಸ್ಫುರಿಸಿ ಉಪಕರಿಸಿದಿರಿ ಸ್ವಾಮಿಜಿ.
ಕೃಪೆದೋರಿ ಎನ್ನಂ ಅನುಗ್ರಹಿಸಿಮೆಂದೆಂದು
ನಿಮ್ಮನ್ನತಿ ದೈನ್ಯದಿಂ ಕಾಲ್ವಿಡಿದು ಬೇಡ್ವನ್ಯೆ"
"ಮಹಾರಾಜ ಕೇಳಿಲ್ಲಿ, ಶ್ರೀ ಭಗವಂತನುಂ
ಮಾತ್ರ ಸಮರ್ಥಂ ಅನುಗ್ರಹಿಸಲ್. ಅವನ ಪದ

ತಲದಲಿ ಶರಣಾಗತನಾಗು, ಎಲ್ಲವುಂ ಕೈ
ಗೂಡಿದಪುದು ಕ್ರಮವತ್ ಭಕ್ತಿಧ್ಯಾನಂಗಳ್
ಮೂಡಿ ಬೆಳೆದು ನಿನ್ನಯ ಜನ್ಮಂ ಪುನೀತಗೊಳೆ
ಸಾರ್ಥಕಂ."

ಬಳಿಕಲಾ ಮಂಗಳಸಿಂಗನುಂ ದಿವಾನ್‌ಜಿಯುಂ
ಏಕ್ಕಟಿಗೆ ಬರಮಾಡಿಸಿ "ಗುರುದೇವನಂ ಇನ್ನು
ಕೆಲವಾನು ಕಾಲಮಾನಮಿಲ್ಲಿಯೆ ಉಳಿದೆಮ್ಮ
ಕಾರ್ಯಕ್ಕೆ ನೆರಂಗೂಡುವೊಡೆ ಮನವೊಲಿಸು" ಎಂದಂ.
ಮೊಗದೊಳ್ ಬಸಿದ ಬೆಮರ್ ಬಿಂದುಗಳ್ ಒರಿಸುತ್ತೆ
ಮತ್ತೆಂದನ್ "ಅಹ ಎಂತಪ್ಪ! ಸಿಡಿಲಾಳ್? ಈ
ಮಹಾಪುರುಷನ ಮುಂದೆ ಇತರ ಸ್ವಾಮಿಗಳೆತ್ತ?
ನಾವೆತ್ತ? ಧಗಧಗಿಪ ಅಗ್ನಿವೇಶಂ ಗಡಾ!
ನಮ್ಮ ಬೇಡಿಕೆಯುಂ ಮಾನಿಪನೊ ಇಲ್ಲವೊ ಅದೇ
ಅನುಮಾನಮೆನಗೆ. ನೀಂ ಪ್ರಯತ್ನಿಸಿ ನೋಡೆಲೈ."
ಸ್ವರ ತೊದಲಿತು ಆತಂಕಿತ ಮನಸಮತಿಗಳಿಂದೆ.

ಕೃತ್ತಿಕಾ ಉದಯರವಿ ದಿಗ್‌ತಟಾಂತಲಗ್ನದಿ
ಇಣಿಕಿಣಿಕಿ ಕೆನ್ನೀಲಿ ಮುಗಿಲ್‌ರಾಶಿಯನೇರಿ
ವಿಜೃಂಭಿಸಿರೆ ಜಗಜಗಿಸಿ, ಹಾಡಿದುವು ಹಕ್ಕಿ
ಸಂಕುಲಂ ರಾಗಾನುರಾಗಗಳ ಸುಪ್ರಭಾತ
ಸಿರಿಯಂ ಹರಿಸಿ. ಪ್ರಾತಃಕಾಲೀನ ಸೌಂದರ್ಯ
ರಾಶಿ ಮರೆದುದು ಮನೋಜ್ಞಮಪ್ಪಂತೆ. ಅಂದಿನಾ
ಬೆಳ್ಳನೆ ಬೆಳಗುಂಬೊಳ್ತು ಮೂಡುವ ಮುನ್ನಮೆಯೆ
ಪೊರಮಟ್ಟರ್ ಸ್ವಾಮೀಜಿ ನಲ್ಮೆಯ ವಿದಾಯಂ
ಪಡೆದು. ಊರ ಗಣ್ಯರ್ ಪುರ ಪ್ರಮುಖರ್ ಕೂಡಿ
ರಾಜರ್ ದಿವಾನರ ಸಹಿತ ಬೆಂಬಳಿಯೆ ನಡೆದು

ಬೀಳ್ಕೊಟ್ಟರು ಗುರುದೇವನಂ ಗೌರವಾದರ
ತುಂಬಿದ ಮನದಿಂ. ಪಜ್ಜೆಪಜ್ಜೆಗಳಿಗುಂ ಪಥ
ಕಳಿದು ಪಿಂದುಳಿದುದು ನಗರಿ. ಮುಂದೆ ಘನಾಟವಿ
ಪರಿವೃತಮಾದ ವಿಪುಲ ವಿಶಾಲ ಶಾಲಿವನ
ಮೆರೆದತ್ತು ಮಿಸುನಿಯ ಸುಸುಂದರವರ್ಣಂಬೆತ್ತು.
ತಂಗಾಳಿಯ ಅಲೆಪದಿಂ ಅತ್ತಿತ್ತಲೋಲಾಡಿ
ನಲಿವ ಶಾಲಿವನ ವಿಸ್ತಾರ ಕಣ್ಗೆಡ್ಡಮಾಯ್ತು
ಹೃನ್ಮನಂ ಅರಳುವಂತೆವೊಲ್. ತೆನೆವುಲ್ಗಳುಂ
ತಲೆದೂಗುತಿರೆ ಮಸೆದು ಮಸೆದು ಸುಯ್ದನಿಯಲ್ಲಿ
"ಓಂ ಶ್ರೀ ಹ್ರೀಂ" ಕಾರ ಪೊಣ್ಮುವುದು ಬೆಮೆಗೊಂಡಂತೆ.
ಸ್ವಾಮೀಜಿ ಆಳ್ವಾರಿ–ನಿಂ ಜಯಪುರದ ಕಡೆಗೆ
ಪಥವಿಡಿದರೇಕಾಂಗಿ. ಏಕಾಂತ ನಡಿಗೆಯಲಿ
ಏಕಾಂತ ಚಿಂತನೆ. ತದೇಕಾಂತ ಗುರಿ ಎನಲ್
ನಡೆಯಲ್ಲಿ ಎಡರಿಲ್ಲ. ನುಡಿಯಲ್ಲಿ ತೊಡರಿಲ್ಲ.
ಏಕ ಪ್ರಕಾರದೊಳ್ ಕಳಿದುದು ತೀರದ ಪಥ.
ಜಯಪುರಂ ಬೊಕ್ಕು ವೀಥಿವೀಥಿಗಳಂ ದಾಂಟಿ
ರಾಜಮಾರ್ಗವಂವಿಡಿದರ್. ಭಾರತೀಯಮಾದ
ಅಪೂರ್ವತಮ ಕಲಾಕಲೆಗಳ ಸುದೃಶ್ಯಮಾನ
ಸೌಂದರ್ಯವಾರಾಶಿ ಆಕ್ರಮಿಸಿತು ತೆಕ್ಕನೆ
ಹೃನ್ಮನಗಳಂ. ಅಲ್ಲಿಂದೆ ಅಬ್ಬೂ ಪರ್ವತಗಳ
ಸುರಸುಂದರ ಕ್ಷೇತ್ರದ ಪರಮಯಾತ್ರೆಯ ತುಡಿತ
ಕೈವೀಸಿ ಕರೆದುದು ಗುರುವರೇಣ್ಯನಂ ಬಲು
ಕಾತರದಿಂ. ಸ್ವಾಮೀಜಿಯ ಶರೀರ ಪ್ರಕೃತಿಯು
ಬಳಲಿ ಸೋಲ್ದು ಕುಸಿಯುವೊಲಿರ್ದೊಡಂ
ಅಬ್ಬೂ ಪರ್ವತಗಳ ಮಹತ್ಪೂರ್ಣ ಅಮೂಲ್ಯ

ಕಲಾಕೃತಿಗಳ ಕಲಾಶಾಲೆಯಂ ಕಡೆಗಣ್ಚಿ
ಹೋಹಲಾರಿಗಳವು? ಭಕ್ತಿಧ್ಯಾನ ಭರಿತಮಾದ
ಹೃದಯಧಾತ್ರಿ ಮಿಡಿಮುದು 'ಹರ! ಹರ! ಹರ!'
ಎಂಬ ನಾಮಧಾರೆಯಾ ಸುಧಾ ಶೈಲಿಯಿಂ,
ಬೆಟ್ಟವೇರೆ ಚರಣ ರೇಖಾಪಥವಂಪಿಡಿದರ್
ಅಂದಿಂದಿಗುಂ ರಾಷ್ಟ್ರ ಪರ್ಯಟಣೆಯಲಿ ನಡೆದು
ನಡೆದು ಸೋಲ್ಬು ಸೊಗಡಪ್ಪಿದ ದೇಹ ನಡುಗುತಿರೆ
ಆತ್ಮಶಕ್ತಿಯೇಂ ಕಂದಿಕುಂದುದಿಲ್ಲಂ. ಆಬಾಲ
ವೃದ್ಧರ್ ನಡೆಯುತಿರೆ ಸರಾಗದಿಂ ತಾಂ ಸೋಲ್ಬು
ಪಿಂಜರಿವುದು ತರವೇಂ? ಪರ್ವತದ ಏರುಮುಖೀ
ಕುಪಥ ಹರಿದುದು ಅಂಕುಡೊಂಕಾಗಿ. ಸ್ವಾಮೀಜಿ
ಎಲ್ಲ ಯಾತ್ರಿಗಳೊಡಂಗೂಡಿ ಏರಿದರ್ ಅಬೂ
ಪರ್ವತದ ಪ್ರಶರೀರವಂ. ಅತ್ತಲಿತ್ತಂ
ಪಕ್ಷಿನೋಟವಂ ಬೀರಿ ನಿಸರ್ಗದ ಸಿರಿಸೊಬಗು
ಸೆಳೆಯುತಿರೆ ಕಣ್ಮನಗಳಂ ನಡಿಗೆಯ ಭಂಗಂ
ಕಾಣದಾಯ್ತು. ಏರುತ್ತೇರುತ್ತೆ ತನಿಯುಗುವ
ತಣ್ಪು ಮೈಮನಗಳಂ ಮುದ್ದಿಸಿ ರಮಿಸಿದತ್ತು,
ಕಾಲ್ಗೆ ಪುರುಪು ನೀಡುವ ತೆರದಿ. ಮುಂಬೆಳಗಿನಲಿ
ಸುರಿದ ಇಬ್ಬನಿಹನಿಗಳ್ ಗರಿಕೆಯ ಹಾಸಿನಲಿ
ಉದ್ದಗಲದ ತುಂಬೆಲ್ಲ ಹರಡಿ ರವಿ ಕಿರಣಗಳ
ಪ್ರತಿಫಲನದಿಂ ಮಿರುಮಿರನೆ ಮಿರುಗುತಿರ್ದುವು,
ಬಜ್ಜರದ ಕಿಡಿಗಳಂ ಹೋಲಿ! ಎತ್ತ ಕಂಗಳ್
ಹರಿದೊಡಲ್ಲಿ ಪರ್ವತ ಪ್ರದೇಶದಗಲಗಲಂ
ದೃಶ್ಯಮಾನ ಸೌಂದರ್ಯದ ವಿಶೇಷವೇ! ಮನ
ಮರೆತು ಉತ್ತರಾಶಾಮೇಖಲೆಯ ಕಾಣುತ್ತೆ

ಗರಿಗೆದರಿಗದರಿ ಹಾರುವ ಚಿತ್ತರಾಗಿಣಿಯ
ಅನುಭವರಸ ಘನಿಸುವನಕ ನೋಡಿಯುಂ ತನಿ
ಗೊಳ್ಳದಾ ದೃಷ್ಟಿಯಷ್ಟಿ. ಪ್ರಕೃತಿಯ ವೈಭವದ
ಸಾಮ್ರಾಜ್ಯಂ ಪರಮಾತ್ಮಭಾವದಿ ಮೈದೋರೆ
ರೋಮೋದ್ಗಮಯ ತೇಜದಲಿ ಮುಳುಗಿ
ಮುಂಪಥವ ಮರೆತರಾ ಸ್ವಾಮಿಜಿ. ಭಕ್ತಾದಿ
ಜನರಾಶಿಯನನುಸರಿಸಿ ಚಲಿಸಿದುವು ಪಾದ
ದ್ವಯಂಗಳ್. ಭಕ್ತಿಧ್ಯಾನ ಪಾರಾವಾರಮೇ
ಸೆರೆಯಾಗೆ, ಮಂಜುಮಯ ಭೂಷಿತ ಸುರಸುಂದರ
ಪ್ರದೇಶಂ ಅರುಣಕಿರಣ ಸ್ನಾತ ವೈಭವ ತೋರೆ
ದೃಷ್ಟಿಯಷ್ಟಿಯುಂ ಗೆಲ್ದುದೊ ಎನೆ, ಸಹ್ಯ ಬಂಧುರ
ಪದತಲದ ಇಬ್ಬನಿಯು ಸ್ವಾದದಾ ಸಂಭ್ರಮದ
ಜಲೋಚ್ಛ್ವಾಸ ಹರಿ ಹರಿಸಿ ಸುಳಿದುದು ತನಿಗಾಳಿ.
ಮುಂದೆ ಮುಂದೆ ಏರಿದ ಸ್ವಾಮಿಜಿಯುಂ ಮೇಲೆ
ಗಮ್ಯಸ್ಥಾನವಂ ಮುಟ್ಟಿದಾಗಳೆ ಎದುರ್ವೆತ್ತ ಕೋಟಾ
ಮಹಾರಾಜರ ಮಂತ್ರಿವರ್ಯನುಂ ಪ್ರಥಮ ದರ್ಶನ
ಮಾತ್ರದಿಂ ಮಾರುವೋಗಿ, ಸ್ವಾಮಿಜಿಯಂ ಕರೆದು
ಬರಮಾಡಿ ತನ್ನ ಬಿಡದಿಗೆ, ಗೌರವದಿಂ ಬಲು
ಭಕ್ತಿಯಿಂ ಉಪಚರಿಸಿ ಸತ್ಕರಿಸಿ ಸುಖಾಶ್ರಯ
ನೀಡಿದನ್ ಸಂತೋಷದಿಂ. ಭುವನ ಕ್ಷೇತ್ರದಲಿ
ಸುವಿಶಾಲ ದಿಗ್‌ತಟಿನಿಯಂ ಮಂಜುವಾಹಿನಿಯು
ಮುತ್ತಿ ಮುದ್ದಿನ ಮುದ್ರೆಯನೊತ್ತುತ್ತೆ ಒಳಹೊರಗೆ
ದಟ್ಟೈಸಿತು. ಸ್ವಾಮಿಜಿಯುಂ ಕೈಗಳ್ ವಿಶಾಲ
ವಕ್ಷದಮೇಲೆ ಕಟ್ಟಿ ನೋಡಿದರ್ ಕಣ್ ನೆಟ್ಟು;
ಪರಮಾತ್ಮ ದೃಷ್ಟಿಯ ವೈಭವ ಲೀಲೆಯಲಿ ಮೆಲೆತು

ಪ್ರತಿದ್ವಂದಿಯನೆ ಸೃಷ್ಟಿಸಿದ ದೇಗುಲದ ಕರ
ಕುಶಲತೆಯಂ! ಅಹ ಗುರುಕುಲದಲಿ ಕಲಿಯದ ಮುಗ್ಧ
ಮನಮತಿಯರ್ ಅಹರ್ನಿಶಿ ಗೆಯ್ದು ಕರಕುಶಲಕಲೆ
ಅಸಮಾನ್ಯ! ಅಸದೃಶ ಮೇಣಗಾಧ! ಸ್ವಬುದ್ಧಿ
ಸೃಷ್ಟಿ ವೈವಿಧ್ಯಮೇ ಎಲ್ಲೆಲ್ಲು!
ಅದೆ ಸಮಯೆ,
ಅಲ್ಲಿಗೈದಾ ಖೇತ್ರಿ ರಾಜ್ಯದ ಮಹಾರಾಜರ
ವರ ಸಚಿವ ಗುರುವರೇಣ್ಯನ ಭವ್ಯ ವ್ಯಕ್ತಿತ್ವ
ಮೇಣ್ ಷೋಡಶ ಕಳೆಯುಗುವ ವದನಮಂಡಲವ
ಕಂಡು ಬೆಕ್ಕಸ ಬೆರಗುವಟ್ಟು ಬಿಡದಿಯಿಂ
ಮಹಾರಾಜರಂ ಕರೆತಂದು ಪರಿಚಯಿಸಿದಂ.
ತರುವಾಯಿ ವಿದ್ಯುಜ್ಜನರ ಕೂಟವದು ಬೆಳೆದು
ಸ್ನೇಹ ಬಳ್ಳಿಯುಂ ಚಿಗುರಿ ಕುಡಿಕೊನರಿತು ಹರೆಗೈ
ಚಾಚಿ. ರಾಜರುಂ ಮೆಚ್ಚಿನೆಚ್ಚಿ ಹೃದಯ ಬಿಚ್ಚಿ
ಮಾತಾಡಿ ತಮ್ಮಯ ಮನೋಗತ ಸಮಸ್ಯೆಯಂ
ಕಳೆಯೆ "ಜೀವನ ಎಂದೊಡೇಂ ಸ್ವಾಮಿಜಿ?" ಎಂದರ್.
"ಆತ್ಮ ಸ್ವಭಾವತಃ ವಿಕಾಸಗೊಳಲೆಳಸುತಿರೆ
ಬಾಹ್ಯ ಪ್ರಕೃತಿಯದಂ ಕೆಳಗೊತ್ತುವ ವ್ಯಾಪಾರ.
ಈ ಜಡ ಚೇತನಗಳ ನಿಚ್ಚ ಹೋರಾಟವೇ
ಜೀವನಂ."
ರಾಜರುಂ ಸ್ವಾಮಿಜಿಯು ನೀಡಿದ
ಉತ್ತರದಲಿ ಸಂತೃಪ್ತಿಯಂ ಬಡೆದ ನಂತರ
ಮತ್ತೆ ಪ್ರಶ್ನೋತ್ತರಗಳ ಮಾಲೆಯ ಬೆಳಸುತ್ತೆ
ಬೌದ್ಧಿಕ ರಸೋಲ್ಲಾಸಮಂ ಪಡೆದು ಮನದುಂಬಿ
ಸಂತೃಪ್ತಿಯ ಕಡಲಲಿ ಮುಳುಗಿದರ್. ಮತ್ತಮಾ

ಪಂಡಿತರ್ ವಿದ್ವಾಂಸರ್ ಮೆಚ್ಚಿ ತಲೆದೂಗುತೆ
ಭಲೆ! ಭಲೆ! ಎಂದೆಂಬ ತೋಷದುದ್ಗಾರ ತೆಗೆದರ್.
ಆಸ್ಥಾನದ ಕಳೆ ಬೆಳಗಿ ಭೂಮಾನುಭೂತಿಯ
ಶೋಭೆಯಂ ಸಾರುತ್ತಿರಲ್ ಸಂಜೆಯವೊಳ್ತಿನಲಿ
ಬಹುಮಂದಿ ಶ್ರೋತೃಗಳೈದರ್ ಸಾಲು ಸಾಲಾಗಿ.
ಸಭೆಯು ಪಿರಿದಾಯ್ತು, ಗುರುವಿನ ಹೃದಯಗಡಲ್
ಉಕ್ಕೇರುವಂತೆ. ಪ್ರವಚನದಾರಂಭದಳೊಂದು
ಶ್ಲೋಕವಂ ಹಾಡಿದರ್ ಕಂಚಿನ ಕೊರಳುಲಿಹರಿಸಿ,

"ಯತ್ಸರ್ವೇಣೇಚ್ಛತಿ ಜ್ಞಾತುಂ
ಯನ್ನಲಜ್ಜತಿ ಚಾಚರಸ್ ।
ಏವ ತುಷ್ಯತಿ ಚಾತ್ಮಾಸ್ಯ
ತತ್ ಸತ್ವ್ಯ ಗುಣಲಕ್ಷಣಂ ॥"

ಆ ಮಹೋನ್ನತ ಗುರುವಿನ ದರ್ಶನ ಭಾಗ್ಯವಂ
ಬಯಸಿದವರೆನಿತೊ, ಪ್ರವಚನ ಬಯಸಿದವರ್
ಇನ್ನೆನಿತೊ ಅಂತಿಂತು ತುಂಬಿತು ಸಬಾಭವನ.
ಮತ್ತೆಮತ್ತೆಮೇಣ್ಮತ್ತೆ ಬಂದು ಬಂದು ಸೇರುತೆ
ಪಿಗ್ಗಿಸಿದರ್ ಜನಸಂತತಿಯುಂ. ಸಭಾಭವನಂ
ಕಡಿದು ಬೀಳ್ವವೊಲ್ ನುರ್ಗಿದ ಒತ್ತಡಕೆ ಭವ್ಯ
ಭವನಮೇ ಕಂಪಿಸುವಂತೆ ತೋರಿದುದು ಅಚ್ಚರಿ
ತುಂಬಿದ ಕಣ್ ದಿಟ್ಟಿಗೆ. ಸ್ವಾಮಿಜಿ ಮನದುಂಬಿ
ನುಡಿಸಿದರ್ "ಹೇ, ಅಮೃತ ಪುತ್ರರಿರಾ ಕೇಳಿ!
ಮನುಕುಲದ ಧರ್ಮವಂ ಮತ್ತದರ ಪ್ರೌಢಿಮೆಯ
ಮಹತ್ತಂ ಹಿಂದೂ ಧರ್ಮವದು ಸಾರಿ ಹೇಳಿದ
ಧಾಟಿಯೊಳ್ ಜಗತ್ತಿನ ಮತ್ತಾವ ಧರ್ಮವುಂ
ಸಾರಿ ಹೇಳಿ ಉಪದೇಶಮಿತ್ತಿಲ್ಲ, ಎಂಬೆ ನಾಂ...

“ಅಪ್ರುಗಲ್ಭಸ್ಯ ಯಾ ವಿದ್ಯಾ
ಕೃಪಣಸ್ಯ ಚ ಯುದ್ಧನಂ ।
ಯಚ್ಚ ಭಾಹುಬಲಂ ಭೀರೋಃ
ವ್ಯರ್ಥಮೇ ತತ್ ತ್ರಯಂ ಭುವಿ ॥”

ಸಭೆ ಚದರುವ ಮುನ್ನಂ ಪ್ರಶ್ನೋತ್ತರಗಳೆದ್ದು
ಏರಿತುಕಳೆ, ಪ್ರಶ್ನೆಗಳಿಗುಚಿತ ಉತ್ತರವದು
ತಟ್ಟನೆ ಹೊರಹೊಮ್ಮುತಿರೆ ರಾಜರೊಡಂ ಸದನ
ಸಭಿಕರು ಮಹಾ ಪಂಡಿತೋತ್ತಮರ್ ಸಂತೃಪ್ತಿ
ಸಂತುಷ್ಟಿಗಳ ಗಣಿಯೆನೆ ನಲಿದರ್. ಮತ್ತಮತ್ತಂ
ಕೂಡಿದುದು ಸಭೆ. ಉಪನ್ಯಾಸಗಳ ಮಾಲೆಯುಂ
ತಣಿಸಿದುದು ಮನಮನಗಳಂ. ರಾಜರಾಸ್ಥಾನದ
ಪಂಡಿತಂ ಮಹಾ ವಿದ್ವಾಂಸನೆಂದು ಪೆಸರ್ವೆತ್ತ
ಮಹನೀಯನಿರೆ ಸ್ವಾಮಿಜಿಯುಂ ಅವನೊಡಗೂಡಿ
ಪಾಣಿನೀ ಸೂತ್ರಗಳ್ ಕುರಿತೊರೆದ ಪತಂಜಲಿ
ಭಾಷ್ಯಗಳ ಅಧ್ಯಯನಮಂ ನಡೆಸಿದರ್. ಆಗ
ಸ್ವಾಮಿಜಿಯಾ ಪ್ರತಿಭಾನ್ವಿತ ಶಕ್ತಿಯಂ ಮನ
ದುಂಬಿ ವಿಸ್ಮಯ ವಿಮೂಕತೆಯಲಿ ಸುಖ ಮುಚ್ಚೆಗೆ
ಸಂದನೆನೆ ಬೆಮಯೊಳಿರ್ದಂ ಪಂಡಿತಂ. ಬಳಿಕ
ತನ್ನನುಂ ತಾನೆ ಸೈಪಿ “ಸ್ವಾಮಿಜಿ, ಎನ್ನೊಳ್
ಇರುತಿರ್ದ ಅಲ್ಪ ಪ್ರತಿಭೆ ಮುಗಿಯಿತು. ಇಂತೊಂದು
ಲೋಕಾನುಭವ ವಿದ್ವತ್ ಪ್ರಜ್ಞಾನ ಓರ್ವರ
ಸ್ವತ್ತಾದಪುದೆಂಬುದನಿಂದಾಂ ಅರಿದೆ, ಅರಿದೆ.
ನೀನಹುದು ನಿಜ ಮಹರ್ಷಿ ನಿನಗೆ ಜಗಜ್ಜನನಿ
ಕಾಳೀ ಮಾತೆಯ ರಕ್ಷೆಯುಮಿರ್ಕೆ! ಬಹುಕಾಲಂ
ಬಾಳ್ಗೆ.”

ಪಂಡಿತೋತ್ತಮನ ನಲ್ನುಡಿಗಳ್ ಕೇಳಿ
ಮಂದ ಹಾಸಮಂ ಹರಿಸಿದರ್ ಸ್ವಾಮಿಜಿ ಮರು
ಮಾತಿಲ್ಲದೆ. ನೇಹದ ಬಿತ್ತಂ ಮೊಳಕೆಯೊಡೆದು
ಸಸಿಯಾಗಿ ಗಿಡವಾಯ್ತು. ಸ್ವಾಮಿಜಿ ಕೊನೆವರಂ
ಪಂಡಿತೋತ್ತಮನೊಳ್ ಗುರುಭಾವನೆಯಂ ಬೆಳೆಸಿ
ಗೌರವವನಿಟ್ಟಿರ್ದರ್.
ಖೇತ್ರಿ ಮಹಾರಾಜನುಂ ನಿಚ್ಚ
ಸ್ವಾಮಿಜಿಯ ಸನ್ನಿಧಿಯಲಿ ಇಟ್ಟಿರ್ದ ಮಹೋನ್ನತ
ಗುರುಭಾವನಾ ರಸತೀರ್ಥ ಘನಿಸಿದುದು ಮಾಗಿಯ
ಮಂಜಿನೈಕಿಲ್ ಮದಿಸಿದ ತೆರದಲಿ. ದಿನನಿತ್ಯ
ಉಪನ್ಯಾಸಗಳಲಿ ಪಾಲ್ಗೊಳ್ಳುವನ್. ಹೃನ್ಮನಂ
ವಿಚಾರಗಳ ಕತ್ತರಿಗೊಡ್ಡುವನ್. ಸ್ವಾಮಿಜಿಯ ಹೃತ್
ಕಲಶದಮೃತರಸಪಾನದಲಿ ಒಡಲ್‌ದುಂಬುವನ್.
ಪ್ರವಚನ ಕಾಲದೊಳ್ ಜಲಧಾರೆಯ ತೆರದಲಿ
ಹರಿದುಬಹ ವಿಚಾರಾವಳಿಯಲಿ ಮುಳುಗೇಳುತೆ
ಪ್ರಶ್ನೋತ್ತರ ಮಾಲೆಗಳ್ ಬೆಳೆದಪವು; ಮಂಗಲ
ಮಧುರ ಕ್ಷಣಗಳಲ್ಲಿ ಜೀವನದ ಜಂಜಡಂ
ಮರೆಯಾದಪುದು; ಮನದ ಮರುಭೂಮಿಗೆ ಶಾಂತಿಯ
ರಸಚೇತನಗೊಳಿಪಂತೆ. ಆಗಳಾಗಳ್ ಧೀರ
ಗಂಭೀರ ವಾಣಿಯಲಿ ರಾಜತಾಂತ್ರಿಕ ವಿಷಯ
ಆಡಳಿತದ ವಿಚಾರ ಮೇಣಧಿಕ ಬಿಳಿಜನರ
ಆಳ್ವಿಕೆಯ ಲೋಪದೋಷಗಳ್ ಇತಿ ಎಲ್ಲವುಂ
ವಿಮರ್ಶೆಯ ಖಡ್ಗದಲುಗಿನ ಮೇಲೆ ಹರಿದಾಡಿ
ಸ್ಫುರಿಸುವುದು ಸ್ಫೂರ್ತಿರಸವಂ ಜಳಜಳಿಸಿ. ಆ
ಸ್ಫೂರ್ತಿಕಿಡಿ ಸಿಡಿದು ದೂರಕೆ ಚಿಮ್ಮುತ್ತಿರೆ ವಿಷಯ

ಕರ್ಣಾಕರ್ಣಿಯಾಗಿ ಎಲ್ಲಿ, ಯಾವೆಡೆಯೋಳ್
ಜನಜಂಗುಳಿ ಗುಡಿಗಟ್ಟಿರೆ ಅಲ್ಲಿ ಗುರುವರನ
ಸ್ಫೂರ್ತಿಕಿಡಿ ವರ್ಣನೆಯು ಚರ್ವಿತಚರ್ವಣಮಾಗಿ
ಬೆಳೆದತ್ತು ಕೀರ್ತಿಶಿಖರ.

ಖೇತ್ರಿ ಮಹಾರಾ-
ಜನೆಂತಂತು ಶ್ರೀಗುರುವರ್ಯನಂತಂತು
ಪರಸ್ಪರ ಮನವರಿತು ಹೃದಯವರಿತು ಸ್ನೇಹದ
ಬೆಳೆಯಂ ಬೆಳೆದು ಪ್ರೇಮರಸಪಾನಗೈವರೊಡಲ್
ತುಂಬುವ ತೆರದಿ. ಅಂತೆಯೇ ಸಂಬಾಳಿಸಿದರ್
ಕೊನೆವರಂ. ಮುಂದೆ ಗುರುದೇವಂ ವಿದೇಶಗಳ
ಯಾತ್ರೆಯೊಳ್ ಉಲ್ಲೇಖಿಸಿದ ಪತ್ರಮಾಲೆಯಲಿ
ಖೇತ್ರಿ ಮಹಾರಾಜಂಗೆ ಬರೆದ ಪತ್ರಾವಳಿಯೆ ಮಿಗಿಲ್.
ಖೇತ್ರೀಯ ಮಹಾರಾಜಂ ಅಗ್ರಗಣ್ಯ ಶಿಷ್ಯರಾದಂ
ಸ್ವಾಮೀಜಿಗೆ. ಒರ್ಮೆ ಗುರುವರ್ಯನೊಡಂ ಮಹಾ-
ರಾಜನುಂ ಏಕಾಂತದೊಳಿರುತಿರೆ ಗುರುವಿಂಗೆ
ನಮ್ರವಿನಮ್ರತೆಯಿಂ ಮನವಿಯೊಂದಂ ಭಕ್ತಿ
ಯುತವಾಗಿ ಸಲಿಸಿದಂ, "ಗುರುದೇವ! ನೀಮೆನಗೆ.
ಸತ್ ಪುತ್ರ ಸಂತಾನಮಂ ಅನುಗ್ರಹಿಸಿರೈ!"
ಎಂದು ಪ್ರಾಂಜಲಿಯನೊಡ್ಡಿ ಬೇಡಿದನ್ ದೈನ್ಯದಿಂ.
ಪುತ್ರ ಸಂತಾನಮಿರದ ರಾಜನ ದನಿಯೊಳಾಸೆಯ
ಝರಿ ಸ್ಫುರಿಸಿಮುದು ಜೇನ್ದನಿಯ ತೆರದಲಿ. ಆಗ
ಗುರುದೇವನ ಮನ ಕಿಂಚಿತ್ ವಿಚಲಿತಗೊಳ್ಳಲ್,
ಒಡನೆ ಬಾಯ್ದೆರೆಯೆ ಅನುಮಾನಿಸಿದರ್. ಚಣಕಾಲ
ತುಟಿಗಳ್ ಬಿರಿಯದಾದುವು. ಚಿಂತಾಕ್ರಾಂತತೆಯಲಿ
ನಸುವೊಳ್ತು ಯೋಚಿಸಿದರ್ ಮನದಿ. ಮಹಾರಾಜಂ

ಗುರುದೇವನ ಮನಸ್ಥಿತಿಯನರಿತು ಸಂಕೆಯಲಿ
ಸಿಲ್ಕಿ ಕಾತರಿತ ದನಿಯಲಿ ಮತ್ತೆ ಬೇಡಿದಂ.
ಒಡಲಿನಾಕರವೆಲ್ಲಂ ಒರ್ಮೆಗೇ ಹೊಮ್ಮಿದುದು
ಬೇಡಿಕೆಯಲಿ. ಆಗಳ್ ವಿಚಾರಾಕ್ರಾಂತರೆನೆ
ಮಿಣ್ಣನಿರ್ದು ಶಿಷ್ಯನ ಮನೋಗತಿಯನರಿದು
ಬಲ್ಮೆಯಿಂ ಹರಸಿದರ್ ಸ್ವಾಮೀಜಿ – “ಶ್ರೀಗುರುವು
ಕೃಪೆದೋರಿ ನಿನ್ನಯ ಅಭೀಷ್ಟಮಂ ಸಲಿಸಿ
ಉದ್ಧರಿಸಲಿ.”
ಗುರುದೇವನ ಮನೋಜನ್ಯಮಾದ
ಸನಾತನ ಧರ್ಮದುದ್ಧರಣ ಕಾರ್ಯಂ ಘನಿಸಿತು.
ಸನಾತನ ಧರ್ಮಮೆನೆ ಬರಿ ಜಡವಾದಮೆಂದು
ಪರಿಭಾವಿಸಿದೊಡೆಲ್ಲವು ಅಪಾರ್ಥಗೊಂಬುವ
ಸಾಧ್ಯತೆಯುಮಿಲ್ಲದಿಲ್ಲ. ಅವರ ಉಪನ್ಯಾಸಗಳ
ಅಂತರಾಳಕ್ಕಿಳಿದೊಡೆ ಮಾತ್ರಮೆ ಮುಂಗೆಟ್ಟು
ಕುದಿವೆದೆಗೆ ಸ್ವಾಂತನಂ! ಮನಮಂಡಲದ ವಕ್ರ
ವಿಕೃತಿಗೆ ಸತ್ಪಥಂ! ಸ್ವಾಮೀಜಿ ಜಡ ಬದುಕಿನ ಮತಿ
ಗತಿಯಂ ಮುಟ್ಟಿ ತಟ್ಟಿ ಬಡಿದು ಎಬ್ಬಿಸುವ ಖಡ್ಗ–
ದಲುಗಂ ಮಸೆದು ಮಸೆದು ಹರಿಸಿದ ನುಡಿಗಟ್ಟಿದು,
“ಓ, ಕೇಳಿಲ್ಲಿ! ಎನ್ನ ನೆಚ್ಚಿನ ಭ್ರಾತೃಗಳೆ, ಹಿಂದೂ
ಎಂಬ ಉಚ್ಚಾರ ಮಾತ್ರದಿಂ ನಿಮ್ಮೊಳ್ ಮಹಾ
ಶಕ್ತಿಯಾ ವಿದ್ಯುತ್ ಸಂಚರಣಮಾದೊಡೆ ಮಾತ್ರಂ
ನೀನೋರ್ವ ದೃಢವಾದ ‘ಹಿಂದೂ’ ಎಂದು ತಿಳಿದುಕೊ!
‘ಹಿಂದೂ’ ಪೆಸರ್ವೆತ್ತು ಅವನಾವ ದೇಶದೊಳ್
ಇರ್ಕೆ ಆವುದೇ ಭಾಷೆಯವನಿರೆ ನಿನ್ನ ಅತೀ
ಅಚ್ಚುಮೆಚ್ಚಿನ ಬಂಧುವಾಗಲೇ ವೇಳ್ಕುಂ!

ಅಂತಾದೊಡೆ ಮಾತ್ರಮೇ ನೀನೊರ್ವ ದೃಢವಾದ
ಹಿಂದೂ ಎಂದು ತಿಳಿದುಕೊ! ಹಿಂದೂ ಬಂಧುಗಳಿಂ-
ಗೊದಗಿಬರ್ಪ ವಿಪತ್ತು ನಿಮ್ಮ ಹೃದ್ದೇಶಕ್ಕೆ
ಮುಟ್ಟಿ ತಟ್ಟಿ ನಿನ್ನೊಡಲ್ ಕುಡಿಯೇ ಸಂಕಟದ
ಕಡಲಲಿರ್ದವೊಲ್ ನಿನ್ನ ಹೃದಯ ತಳಮಳಿಸಿ
ತಹತಹಿಸವೇಳ್ಕುಂ! ಆಗ ಮಾತ್ರಂ, ಅಂತಾದೊಡೆ
ಮಾತ್ರಮೆ ನೀನೊರ್ವ ನಿಜವಾದ ಹಿಂದೂ ಎಂದು
ತಿಳಿದುಕೊ! ಆ ಮಹಾಪುರುಷ ಗುರುಗೋವಿಂದ ಸಿಂಹ
ನಂತೆವೊಲ್ ಹಿಂದೂಗಳಿಗಾಗಿ ನೀನೆಲ್ಲವಂ
ಸಹಿಸೆ ಸಿದ್ಧನಿರೆ ಮಾತ್ರಮೇ ನೀನೊರ್ವ ನಿಜ
ಹಿಂದೂ ಎಂದು ತಿಳಿದುಕೊ! ಅಹ ಅಷ್ಟು ಮಾತ್ರಮೇಂ?
ಆರಿಂಗಾಗಿ ಅವಂ ತನ್ನ ಕೆನ್ನೀರ್ ತೆತ್ತನೊ,
ಆರಿಂಗಾಗಿ ತನ್ನ ಅಚ್ಚುನೆಚ್ಚಿನವರ ನೆತ್ತರ್
ಚೆಲ್ಲಿ ಹರಿಸಿದನೊ ಅದೇ ಆ ಜನರ್ ತನ್ನನ್ನೆ
ಕಡೆಗಣಿಸಿ ಕೈಬಿಟ್ಟಾಗಳ್, ಆ ಮಹಾಗುರುವು
ವರ್ತಿಸಿದ ಬಗೆಯಂ ಗಮನಿಸಿ ನೋಡೈ! ಹಿಂದೂ
ಧರ್ಮದ ಉಳಿವಿಗಾಗಿ ತನ್ನ ಮೆಯ್ಯ ನೆತ್ತರ್
ಚೆಲ್ಲಿದ ಬಳಿಕ, ತನ್ನಯ ಕರುಳ್ ಕುಡಿಗಳ್ ನುರ್ಗಿ
ಕೊಳಗುಳದೊಳ್ ಬಲಿಯಾದುದಂ ಕಂಡಬಳಿಕಂ
ಆ ಗಾಯಾಳು-ಗುರುಗೋವಿಂದ ಸಿಂಹ ಶಾಂತಿಯ
ಸೆಜ್ಜೆಯಲಿ ದೇಹ ಪರಿತ್ಯಾಗಗಯ್ಯೆ ದಕ್ಷಿಣ
ಪ್ರಾಂತವನಾರ್ಯೈದಂ! ತನಗೆರಡು ಬಗೆದವರ
ವಿರುದ್ಧ ಬಿರು ನುಡಿಯಲಿಲ್ಲ; ಶಪಿಸಲಿಲ್ಲ.
"ಓ, ಅಮೃತ ಪುತ್ರರಿರಾ! ಭಾರತದ ಕಣ್ಮಣಿ
ಗಳಿರಾ! ಇಗೊ, ಕೇಳಿಲ್ಲಿ! ಕಿವಿಗೊಟ್ಟುಕೇಳಿ!

ಮನಗೊಟ್ಟು ಕೇಳಿ!! ನಿಮ್ಮ ಮಹಾನ್ ರಾಷ್ಟ್ರದ
ಹಿತವ ಸಾಧಿಸುವ ಹಂಬಲಂ ಇರ್ದೊಡೆ ನೀವ್-
ಪ್ರತಿಯೊರ್ವಂ ಒರೋರ್ವ ಗುರುಗೋವಿಂದಸಿಂಹ
ನಾಗಿ ಬಾಳಲ್ವೇಳ್ಕುಂ. ನಿಮ್ಮ ದೇಶಬಾಂಧವ
ಕುಲದೊಳ್ ಸಹಸ್ರತರ ಲೋಪದೋಷಗಳ್ ನಿಮ್ಮ
ಕಣ್ಗೆ ಕಾಣ್ಬುದು ದಿಟಂ. ಆದೊಡವರೊಳ್ 'ಹಿಂದೂ'
ರಕ್ತಮಂ ಗುರುತಿಸಿ! ಅವರ್ನಿಮಗೆ ಸರ್ವತ್ರ
ಕೇಡು ಬಗೆದೊಡೆ ಚಿಂತೆಯುಮಿಲ್ಲಂ, ಆದೊಡಂ
ನೀವ್ ಪೂಜಿಸಲೇಬೇಕಾದ ದೇವರೇ ಅವರ್!
ಅವರೆಲ್ಲ ನಿಮ್ಮ ಶಪಿಸಿದೊಡೆ ಶಪಿಸಲಿ; ಅವರ್
ಎಂದಿಗು ನಿಮ್ಮಿಂದ ಮಾತ್ರಂ ನೇಹದ ಸ್ವರಂ
ಕೇಳುತಿರಲಿ! ಮೇಣವರ್ ನಿಮ್ಮಂ ಪೊರದಬ್ಬಿ
ದೂಡಿದೊಡಮದಂ ಲೆಕ್ಕಿಸದಿರಿಂ. ಆ ದಿವ್ಯ
ನರ ಶಾರ್ದೂಲ ಗುರುಗೋವಿಂದನಂತೆವೊಲ್, ನಿಜ
ನೇಹದಿಂ ಮೌನದಿಂ ಬದಿಗೆ ಸರಿದು ಪ್ರಾಣಂ
ನೀಗಲ್ ಅಣಿಗೊಳ್ಳಿ! ಅಹ ಅಂದೊಡೆ, ಅಂತಾದೊಡೆ
ಮಾತ್ರಮೇ 'ಹಿಂದೂ' ಎನಿಸಿಕೊಳಲ್ ಸುಯೋಗ್ಯಂ!
ಅದೇ ನಮ್ಮೊಳ್ ಸರ್ವದಾ ಇರಲ್ವೇಳ್ಕುಮೆಂಬ
ಆದರ್ಶ! ಬನ್ನಿ, ನಂನಮ್ಮೊಳ್ ಹುದುಗಿಹ ಹಿರಿ
ಕಿರಿ ವೈರ ಮತ್ಸರಗಳನ್ನೆಲ್ಲ ನೆಲದಾಳದಿ
ಹುಗಿಯುವಾ. ಪ್ರೇಮದಾ ಪ್ರಚಂಡ ಸರಿತೆಯಂ
ಸರ್ವತ್ರ ಸದಾ ಪ್ರವಹಿಸುವಾ. ಜಗಹಿತದ
ಬಯಕೆ ನಮಗಿರಲಿ, ಅದೆ ಅಭ್ಯುದಯಕೆ ಪಥ!"

ಹರಿಃ ಓಂ ತತ್ ಸತ್

❋ ❋

ಪಂಚಾದಶೋಲ್ಲಾಸಂ

ವೀರ ವೇದಾಂತಿ

ಪರಬ್ರಹ್ಮ ವಿರಾಟ್ ಗರ್ಭ ಸಂಭವೆ, ದೇವಿ
ಸತ್ಯಾರ್ಥ ಭೂಷಿತೆ. ಪರಮ ಪವಿತ್ರ ಪ್ರಭವೆ,
ವಿಭವೆ ಕರುಣಾಮಯಿ ಸುರಾಂಗನೆ ಸುರಪೂಜಿತೆ,
ಭುವನೇಶ್ವರೀ ಮಧುರಮಾಯೆ, ವಿಶ್ವಮೋಹಿನಿ,
ದಿವ್ಯ ವೀಣಾಧರೆ, ಪುರಾಣಿ ಪುಣ್ಯವತಿ. ಹೇ
ಪರಾತ್ಪರೆ, ನಿನ್ನಯ ಪದಾಂಭೋಜಗಳಿಗೆ ಶಿರ
ಬಾಗಿ ನಮಿಸುವೆನಮ್ಮ! ಇನ್ನೆಬರನೆನ್ನ ಕೈ
ಹಿಡಿದು ನಡೆಸಿದ ತೆರದಿ ಮುಂದೆಯುಂ ನಡೆಸಮ್ಮ
ನಿನ್ನ ಕೃಪೆಯೊಂದಿರೆ ಸರಸ ಸರಳ ಬಿಡಿನುಡಿ
ತಾನಪ್ಪುದು ಸುಂದರ ಸಾಹಿತ್ಯ ರಸಾಯನ
ಸಾರವಾಗಿ, ಅಮೃತ ಬಿಂದುಗಳಾಗಿ. ನವ
ನವೀನ ಸುಮನ ಕೃಷಿಯಾಗಿ. ಓವೋ, ತವ
ಕೃಪಾಸಾಗರಕೆ ಮೇರೆಯುಂಟೇ? ವಿದ್ಯಾದಿ
ದೇವತೆಯೆ ತವ ಚರಣಗಳಿಗೆ ನಮಿಸುವೆ ನೀನೆ
ಅವಧರಿಸು ಹೇ ಅಜನಜಾಯೆ! ಬಲುದೈನ್ಯದಿಂ
ಪ್ರಾಂಜಲಿಯನೊಡ್ಡಿ ಬೇಡುವೆನ್ನೈ ಸದಾ ಕಾಲಂ.
ವೀರ ವೇದಾಂತಿಯ ಶುಭ ಚರಿತಾಮೃತಮಂ
ಸರಳರಾಗಮಾಲೆಯಲಿ ಹರಿಸೌ ಜನನಿಯೇ!

ಒರ್ಮೆ ಮಹರಾಜನಾಸ್ಥಾನದಾ ಪ್ರಸಿದ್ಧ
ಗಾಯಕಿಯು ತಾನೊರ್ಮೆ ಗುರುದೇವನೆಮರಿಂಗೆ
ಹಾಡಿ ತನ್ನ ಜನ್ಮವ ಪಾವನಗೊಳಿಸಿಕೊಂಬ
ಮನದಿಚ್ಛೆಯಿಂ ತೋಡಿಕೊಳುತೆ ಕೈಗಳ್ ಮುಗಿದು

ಬೇಡಿಕೊಂಡಳ್ ರಾಜ್ಯದ ಮಂತ್ರಿಮಹೋದಯನಂ
ಕಂಡು. ಮತ್ತೆಮತ್ತವರಂ ಕಾಡಿ ಬೇಡಿದಳ್,
ಗುರುಗಳಂ ಕೇಳ್ದು ಸಭೆಯನೇರ್ಪಡಿಸಿಮೆಂದೆಂದು.
ಮೊದಮೊದಲ್ ಗುರುಗಳ್ ಉದಾಸೀನದಲಿ ಮನಂ
ಗುಡದಿರಲ್ ಆ ನೀರೆಯುಂ ಬೇಡಿದಳ್ ಮತ್ತೆ
ಅಶ್ರುಗಣ್ಣಾಗಿ. ಮಂತ್ರಿವರ್ಯಂ ಗುರುವರನ
ಅಪ್ಪಣೆಯ ಪಡೆದು ಸಂಗೀತ ಸಭೆಯಂಕರೆದಂ.
ಸಾಯಂ ಸಮಯದೊಳ್ ಕೂಡಿಮುದು ಸಂಗೀತ
ಸಭೆಯು ಆಸ್ಥಾನ ಮಂಟಪದಲಿ. ಬಹುಸಂಖ್ಯೆಯ
ಸಭಿಕರಿರ್ದರ್, ರಾಜರಿರ್ದರ್. ಗಮಿಸಿದ್ದರ್
ಗುರುದೇವನ್. ಆರ ತುಟಿ ಬಿರಿಯದಿರೆ ಸದ್ದಿನ
ಸೊಲ್ಲಿಲ್ಲ. ಧವಳಾಂಬರಧಾರಿಣಿ ಗಮಿಸಿದಳ್
ತಲೆಯಮೇಲೆ ಉತ್ತರೀಯಂ ಹೊದ್ದು. ತಲೆಬಾಗಿ
ಚಾಪೆಯ ನೆಲಹಾಸಿನಲಿ ಕುಳಿತು ಕಿರುವಗೆಯಲಿ
ಆಲಾಪನೆಗೈದ ಬಳಿಕ ಹಾಡಿದಳ್ ಬಾಯ್ದೆರೆದು;
ಭಕ್ತಿರಸ ತುಂಬಿರ್ದ ಕೊರಳ್‌ದನಿ ಹರಿಯಿತ್ತು
ರಾಗವಾಗಿ ರಾಗಾರುಣ ತಾನವ ನೆರೆಸೂಸಿ.

ನೋಡದಿರೆನ್ನಯ ದೋಷವ, ದೊರೆಯೆ,
ಸಮದರ್ಶಿಯು ನೀನಲ್ಲವೆ, ಹರೀಸು ॥

೧

ಗುಡಿಯೊಳು ಮೂರ್ತಿಯು ಕಬ್ಬಿಣವೊಂದು
ಕಟುಕನ ಕತ್ತಿಯು ಮತ್ತೊಂದು
ಪರುಷವೇದಿ ತಾ ಸೋಂಕಿದರೆರಡೂ
ತಳತಳಿಸವೆ ಚಿಂಬೊನ್ನಾಗಿ?

೨

ಜುಗನೆಯೊಳಿರುವುದು ನೀರ್ಪನಿಯೊಂದು
ಕೊಚ್ಚೆಯೊಳಿರುವುದು ಮತ್ತೊಂದು
ಆ ಹನಿಯರಡೂ ಮಂಗಳವಾಗವೆ
ಗಂಗೆಯ ಸೇರಲು ತೀರ್ಥದಲಿ?

ಸ್ವಾಮೀಜಿಯುಂ ಆ ಸುಮಧುರ ಗಾಯನದ ಸಿರಿ
ಇಂಗಿತವನರಿಯೆ, ಬೇಟೆಗಾರ ವ್ಯಾಧನಂ ಕಂಡ
ವಾಲ್ಮೀಕಿಯಂತೆವೊಲ್ ವಿಚಾರಾಪನ್ನತೆಯ
ಖಡ್ಗದಲುಗಿನ ಮೇಲೆ ಹರಿಸಿದರ್ ಮನವಂ.
ಗುರುವರ್ಯ ಶ್ರೀರಾಮ ಕೃಷ್ಣ ಪರಮಹಂಸರ್
ಎಲ್ಲ ಸ್ತ್ರೀಯರುಂ ಜಗದಂಬೆಯ ಪ್ರತಿಬಿಂಬವೆ
ಎಂದೆನುತಲಿರ್ದ ನುಡಿ ಮುತ್ತುಗಳ್ ಮೆಲುಮೆಲನೆ
ಮರ್ಮರಿಸಿದುವು ಕರ್ಣಗಹ್ವರದಲಿ, ಮಿಣ್ಣನೆ
ಗುರುವಿನ ಪದಧೂಳಿಯಲಿ ಹೊರಳಿತು ಚಿತ್ತ. ಆ
ಮಾತೃ ಭಾವನೆ ಹೃದಯ ಧರಿತ್ರಿಯಲಿ ಮೂಡಿತು.
ಗಾಯಕಿಯ ಅಭಿನಂದಿಸುವೊಡೆ 'ತಾಯಿ' ಎಂದೇ
ಸಂಬೋಧಿಸಿ ಗೌರವ ತೋರಿದರ್ ನಿಜಸುತನ
ಮಾಳ್ಕೆಯಲಿ. ಆ ಗಾಯಕಿಯುಂ ಒಡಲಕುಡಿಯೊಲ್
ಭಾವಿಸಿ ಬಲುಮೆಯಿಂದೆ ಭಕ್ತಿತೋಷರಸದಲಿ
ಗುರುಪಾದ ಪ್ರಕ್ಷಾಲನೆಗೈದಳ್ ಅಂತರಾತ್ಮ
ಸಂತೃಪ್ತಿಯಿಂದೆ.
ಸ್ವಾಮೀಜಿ ಖೇತ್ರಿಯಿಂದಲಿ
ಪೊರಮಟ್ಟು ಮುಂಬಯಣಮಂ ಕೈಕೊಂಡರ್ ಚಳಿ
ಮಳೆ ಬಿಸಿಲಿನ ಹೊಡೆತವ ಲೆಕ್ಕಿಸದೆ. ಕಾಲ್ನಡಿಗೆ
ಸಾಗಿದುದು ಕುಪಥದಲಿ. ಶೌಚಾಲಯಗಳಿರದ

ಊರು ಕೇರಿಗಳ್. ನಾಗರಿಕತೆಯ ಸುಳಿವಿರದ
ಜನಜೀವನ. ಬಡತನ–ಜಡತನಗಳೊಂದಾಗಿ
ಬೆಸೆದು ದಾರಿದ್ರ್ಯ ದೇವತೆಯ ದಿಟ್ಟ ಉತ್ತಾಲ
ನರ್ತನಕೆ ಅವಕಾಶಮಿತ್ತ ಬದುಕು. ಮಣ್ಣಿನ
ಸೊಟ್ಟ ಪಟ್ಟ ಗೋಡೆಯ ಮನೆಗಳಲಿ ಮಿಜಿಗುಡಿವ
ಜನರಾಶಿ. ಶಾಲೆಗಳ್ ಔಷಧಾಲಯಗಳ್ ಚಿಕಿತ್ಸಾ
ಘಟಕಗಳ್ ಇಲ್ಲದ ಬರಡು ಬದುಕು. ಆರಾರ್
ಧನಿಕರೊ ಅವರನುಳಿದೊಡೆ ಬದುಕು ವಿಷಾದಕರ.
ಹರಕು ಗುಡಿಸಲಿನ ಚಿಂದಿ ಬಟ್ಟೆಯ ನಿಸ್ತೇಜ
ವದನಂಗಳ ಮಕ್ಕಳ್ ಎಲ್ಲೆಡೆಯು ಕಾಣ್ಬುದದು
ಸಹಜ. ಎದೆಯ ಬನದೊಳ್ ಹಕ್ಕಿ ವೀತರಾಗದಲಿ
ಪೋದ್ದಾಮ ಗೀತೆಯಂ ಹಾಡಿತು "**ದರಿದ್ರದೇವೋ
ಭವ**" ಮತ್ತೆ ಮತ್ತೆ ಮೇಣ್ಮತ್ತೆ ಹಾಡಿಯೇ ಹಾಡಿತು
"**ದರಿದ್ರದೇವೋಭವ**" ವಿವಿಧ ಪಥಿಕರನೊಡನೊರ್ಮೆ
ಏಕಾಂಗಿಯಾಗುತೊರ್ಮೆ ಕ್ರಮಿಸಿದರ್ ದೂರ
ಪಥಮಂ. ಅಲ್ಲಲ್ಲಿ ಮರುಮಯ ಪ್ರದೇಶದ ಮಹಾ
ವ್ಯಾಪ್ತಿಯಂ ದಾಂಟಿ ಮುನ್ನಡೆದು ಊರು ನಗರಿಯ
ಜನವಸತಿಯಂ ಸೇರ್ದರ್.
ಮೂಡಿದುದು ಫಾಲ್ಗುಣ
ಪ್ರಭಾತ ಸೂರ್ಯನ ಸುವರ್ಣಬಿಂಬ ಥಳಥಳ
ಥಳಿಸುತ ದಿಗ್ ತಟಾಂತ ಸೀಮೆಯಲಿ ಸಾನಂದ
ತೇಜದಿಂ. ಸ್ವಾಮಿಜಿಯುಂ ಅಹಮದಾಬಾದು,
ಲಿಂಬಡಿ, ಜುನಾಗಡ, ಭೋಜ, ಪ್ರಭಾಸ ಮತ್ತಂ
ಸೋಮನಾಥ ಇತಿ ಪ್ರಪ್ರಾಂತ್ಯಗಳ ಮಾರ್ಗದಲಿ
ತಾವ್ ಪಯಣಂ ಬೋದು ಪೋರ್ ಬಂದರಿಗೆ ಬರೆ

ತನುಮನಂಗಳ್ ಬಳಲ್ದು ಸೋಲ್ದು ಸೊಗಡು ಸೊಪ್ಪು
ಸೊಪ್ಪಾಗಿ ದಣಿದಿರ್ದುವು. ಮಧ್ಯಾಹ್ನ ಕಾಲೀನ
ಸುಡುವಿಸಿಲ್ ಸುಟ್ಟುರಿಯುತಿರೆ ತೊರೆಯ ಜಳದಲ್ಲಿ
ಕೈಕಾಲ್ ತೊಳೆದು ಸುಖ ಮಜ್ಜನಗೊಳಿಸಿ ದಣಿವು
ಕಳೆದು ಬೊಗಸೆಯಲಿ ನೀರೆತ್ತಿ ಕುಡಿದರ್ ಒಡಲ್
ತುಂಬುವನ್ನ. ಎಲ್ಲಿಯು ಸದ್ದುಗಳ ಸೊಲ್ಲಿಲ್ಲ.
ತಟಿನಿಯ ತರುಗಳ್ ಬೃಹದ್ಬಾಹುಗಳ ಹರಡಿ
ಶಾಖೋಪಶಾಖೆಗಳ್‌ವೆರಸಿ ದಟ್ಟಣಿಸುತ್ತೆ
ಅರುಣಾರುಣನ ಅಗ್ನಿಸ್ಫುಲಿಂಗಗಳಿಗೆ ತೆರೆ
ಒಡಿದು ತಣ್ಣನೆಯ ನೆರಳುಬೆಳಕಿನ ನೆಲೆಯಿತ್ತುದು
ತಲದಿ. ಸ್ವಾಮೀಜಿ ಸುತ್ತಮುತ್ತಲ್ ನೋನೋಡುತೆ
ತರುತಲದ ಕರಿಗಲ್ಲಿನ ಮೇಲೆ ಕುಳಿತರ್. ತನು
ಮನಂಗಳ ಬಳಲ್ಕೆ ಭುಗಿಲ್ಬಿದು ತಡಬಡಿಸದೆ.
ಜುಳುಜುಳಿಪ ತೊರೆಯ ನಿನದ ಮುಟ್ಟುತ್ತಲಿರ್ದುದು
ಮನಂ. ಮಧ್ಯಾಹ್ನದ ಸಮಯಂ ಪಾಳ್ಮಸಗಿದೊಲ್
ನಿಃಶಬ್ದ ಹಬ್ಬಿಹರಡಿದ ದಿವ್ಯಮಾ ಧರಾ
ತಲಂ ಪ್ರಶಾಂತ ಮುಗ್ಧಂ. ನಿಶ್ಶಬ್ದ ಮುಗ್ಧಂ.
ನಿಷ್ಕಂಪ ಮುಗ್ಧಂ.
ಭಾರತ ರಾಷ್ಟ್ರೀಯಸಂಯಾತ್ರೆಯ ಪರಿಭ್ರಮಣ
ಜೀವನಗತಿಗುನ್ನತ ಅನುಭವದ ರಸಾಯನ
ಉಣಿಸಿ ಬುದ್ಧಿಮತ್ತೆಗಿನಿದಿಸಿದುರ್ಬುಗೊಡುತಿರೆ,
ಪಾಂಥನನುದಿನದ ಪಾಂಥಸ್ಥ ಬಳಲಿಕೆ ಮೆಯ್ಗೆ
ತಟ್ಟದವೊಲ್ ಪೊಚ್ಚ ಪೊಸತಲದ ಪೊಸ ಜನಗಣ
ಪೊಸರೀತಿ ಪೊಸಭಾಷೆ ಎಲ್ಲವುಂ ಪೊಸದೆನಿಸೆ
ಕುತೂಹಲ ಕೊನರಿ ತಾನಾದಪುದು ಮತಿಗೆ ರಥಿ.

ನಿಚ್ಚ ಋಯಾವರ ಬದುಕಿನ ಅಪಮಾನ ಮನಸಂ
ಚಿಂತನಾ ದ್ರವ್ಯದೊಳಗದ್ದಿತೇ? ಕಷ್ಟವುಂ
ಸರ್ವತ್ರ ಭಾರತೀಯಮಾಗಿರಲ್ ಎಲ್ಲಿಯದ್ದೈ
ತಾಪಾನುತಾಪಗಳ ರಣಗೋಳು? ತಾಂ ಮೆಚ್ಚಿ
ಹಿಡಿದಿರ್ಪ ಪಥವೇ ಅದು, ಎನಲ್ಕೆ ಸಂಕಟವೇ
ಅಲ್ಲಂ, ಭಾರತ ಜನನಿ ಸನ್ನಿಭಂಗೆ. ಪರ್ಣ-
ಪರ್ಣಾರ್ಣವ ಪಂಕ್ತಿಯ ಚನ್ನಿಗಂಗೆ. ಅಂದಬಳಿಕ
ಚಳಿಯೇಂ? ಗಾಳಿಯೇಂ?
ಅಂದಿನ ಶುಭಗಳಿಗೆಯಲಿ
ಪೋರ್ ಬಂದರಿನೊಳ್ ಎದುರಾದ ಸಿರಿವಂತಂ
ಮೇಣ್ ಗಣ್ಯಪುರುಷಂ ಆದ ಸಜ್ಜನನೊರ್ವಂ
ಗುರುವರನ ಪ್ರಥಮ ಮುಖದರ್ಶನದಿಂ ಆತ್ಮ
ದರ್ಶನದ ಭಾಗ್ಯಮಂ ಪಡೆದು ಸಂತೋಷದಿಂ
ತನ್ನ ವಾಸಗೃಹಕೆ ಕರೆದೊಯ್ದು ಅತ್ಯಂತ
ಭಕ್ತಿಗೌರವಾದರಗಳಿಂ ಉಪಚರಿಸಿದಂ.
ಪರಸ್ಪರ ಪರಿಚಯ ಬೆಳೆಯಿತು. ಸ್ನೇಹಾನು
ರಾಗವುಂ ಬೆಳೆಯಿತ್ತು. ಒರ್ವನೊರ್ವರ್ ಅರಿತು
ಬೌದ್ಧಿಕಸ್ತರದಲಿ ಪ್ರಶ್ನನಂಗಳಂ ಬೆಸೆದರ್.
ಪಗಲುರುಳಿ ನಿಶಿಯಡರಿತು. ಮನಸಿಗೆ ನೆಮ್ಮದಿಯ
ಸಾಂತ್ವನರಸವನೂಡಿ ಸವಿನಿದ್ದೆಯ ರಾಜ್ಞಿಯು
ಸಾನಂದದಿಂದೈದು ವರಿಸಿದಳ್ ಗುರುದೇವನಂ.
ಅಕೋ, ಆ ಬೆಟ್ಟಗೋಡಿನ ಶಿರೋದೇಶದಲಿ
ಚೈತ್ರೋದಯದ ವಿಪುಲ ಸಂಪದಂ ಮೆರೆದತ್ತು
ಲೋಕಾಭಿರಾಮಭಂಗಿಯಲಿ. ವಿವಿಧ ರಂಗಿನ
ವಿವಿಧ ಗಾತ್ರದ ಪಕ್ಷಿಗಳ್ ಕೊರಳ್ ತೂರ್ಯಮಂ

ಹರಿಸಿದುವು ಸುಪ್ರಭಾತಮಂ ಕೋರಿ. ಮಂಗಳದ
ಮನೆಯೊ ಎನೆ ಘನವಾಯ್ತು ನವೋದಯದ ಸುಶಾಂತಿ.
ಅತ್ಯಂತ ಸುಂದರ ಸುಮಧುರ ಸನ್ನಿವೇಶದ
ಲಾಭವಂ ಪಡೆಯುತ್ತೆ ನಿಂದಿರಲ್ ಸ್ವಾಮೀಜಿ,
ಗಗನದಲಿ ಪಾರುತಿವೆ ಎರೆಂಕೆಗಳ್ ಬಿಚ್ಚಿ
ಬಿದಿರ್ಚಿದ ಅಸಂಖ್ಯಕ್ರೌಂಚಗಳಾತ್ಮ ದೇಹಗಳ್
ತೇಲಿದುವು ತೇಲಿದುವು ಅನಂತತೆಯ ಮಹಾನ್
ನೀಲನೀಲಾಂಬರದಲಿ ಅರಳೆಯ ಹಗುರಾಗಿ.
ಸರಸ ಸಂಪದವಾಗಿ, ಆತ್ಮ ಪರಮಾತ್ಮಗಳ
ದಿವ್ಯಮಾ ಸಂಬಂಧವಂ ನೆರೆ ಸರಳಗೊಳಿಸಿ.
ಸ್ವಾಮೀಜಿಯ ಕೀರ್ತಿ ಪರಿಮಳಂ ಹರಡುತಿರಲ್
ಊರು ಕೇರಿಗಳ ಗಡಿದಾಂಟಿ ಭಕ್ತಗಣಂ
ಹರಿದು ಬರತೊಡಗಿತು ಗುರುವರ್ಯನ ಸನ್ನಿಧಿಗೆ.
ಸುದ್ದಿಯೆಂತು ಪರ್ವಿದುದೊ ತನ್ನನರಿದವರಿರದ
ತಾವಿನಲಿ ಎಂತಿಂತ್ಯೈವರ್ ಜನರ್ ಎಂದೆಂಬ
ಅಚ್ಚರಿಯ ನೋಟ ಬೀರುತಿರೆ, ಬಂದೆ ಬಂದರ್
ಜನರಾಶಿ ಶ್ರೋತೃಗಳಾಗಿ. ಸನಿಹಕೆ ಬರಬರುತೆ
'ಜೈ! ಭಗವಾನ್' ಎನುತಾತ್ಮ ಘೋಷಗೈದುದು
ಆನಂದ ಘೋಷದ ತೆರದಲಿ.
ಸ್ವಾಮೀಜಿಯುಂ
ಕರಜೋಡಿಸಿ ಕೈಮುಗಿದು ಕಂಚಿನ ಕಂಠಮಂ
ಹರಿಯಬಿಟ್ಟರ್, 'ಓ, ಮಮದೇಶ ಬಾಂಧವರೇ
"ನಾ ಸತಃ ಸತ್ ಜಾಯತೇ" ನಿರಸ್ತಿತ್ವದಿಂ
ಅಸ್ತಿತ್ವಮಂ ಪುಟ್ಟಿಸಲಾಗದ ಮಾತು. ಈ
ವಿರಾಟ್ ವಿಶ್ವದೊಳ್ ಅತಿ ಪುರಾತನ ಮೇಣತಿ

ಪುನೀತ ಮನಿಪ ಪರಿಪುಣ್ಯ ಭೂಮಿ ಇದುವೇ
ಈ ಭಾರತ! ಜಗದೆಲ್ಲ ಜೀವಿಗಳ್ ತಮ್ಮಯ
ಕರ್ಮಕಾಂಡಮಂ ಸಮೆಸೆ ಬರಲೇಬೇಕಾದ
ಒಂದೇ ಒಂದು ಭೂಮಿ ಎನಲ್ ಇದುವೇ ಭಾರತ!
ದೇವರೆಡೆಗೆ ಸಾಗುತಿಹ ಎಲ್ಲ ಜೀವನವುಂ
ತಮಗಾಗಿ ಅಂತಿಮ ನೆಲೆಯಂ ಕಂಡುಕೊಳ್ಳಲ್
ಬರಲ್‌ಬೇಕಾದ ಕರ್ಮಭೂಮಿಯೇ ಈ ಭಾರತ!
ಸೃಜನ ಶೀಲತೆ, ಉದಾರತೆ ಶುಚಿತೆ ಸತ್ಯಾರ್ಥ
ಚಿಂತನೆಗಳಲ್ಲಿ ಮುಂದಿರ್ದು ಮಾನವತೆಯಾ
ತುಟ್ಟ ತುದಿಯಂ ಏರಿದ ನಾಡು ಇದುವೇ ಈ
ಭಾರತ! ಮೇಣಲ್ಲದೆ ಎಲ್ಲಕಿಂ ಮಿಗಿಲಾಗಿ
ವೇದಾಂತ–ಆಧ್ಯಾತ್ಮಗಳ ತವರೂರು ಈ ಭಾರತ!
ಪವಿತ್ರತಮ ನಾರೀ ತತ್ತ್ವದಿಂ ವಿಜೃಂಭಿಸಿದ ಪರಮ
ಭೂಮಿ ಈ ಭಾರತ! ಓ, ಕೇಳಿರೈ! ಸಜ್ಜನರೇ,
ಜ್ಞಾನದಕಿಡಿ ಇತರಿತರ ದೇಶಗಳಲಿ ಮೂಡಿ
ಬೆಳೆದು ಹರಡುವ ಮುನ್ನ, ಅದು ತನ್ನ ತೌರುಮನೆ
ಮಾಡಿಕೊಂಡಿರ್ದ ಪ್ರಾಚೀನ ಭೂಮಿಯೇ ಈ
ಭಾರತ! ಹಿಮಮಯ ಮುಕುಟವ ಧರಿಸಿ ಹಲವಾರು
ಶ್ರೇಣಿಗಳ್ಸೈಸಿ ಮುಗಿಲ್ ಮುಟ್ಟಿ ಸ್ವರ್ಗದ ರಹಸ್ಯ
ಕೋಟೆಯಂ ಅರಿವ ಸಂಚು ಹೂಡಿಹ ಹಿಮಾಲಯ
ಪರ್ವತಂಗಳ ಮಾತೃರೂಪ ಈ ಭಾರತ!
ವೇದಾಂತ – ಆಧ್ಯಾತ್ಮ – ಪುಣವತೆಗಳ ಸಾರ
ಸರ್ವಸ್ವವೇ ಆಗಿ ಭೋರ್ಗರೆಯುತ್ತ ಹರಿವ
ಸಾಗರೋಪಮ ಮಹಾಪುಣ್ಯ ನದಿಗಳ ನಾಡೇ
ಈ ಭಾರತ! ಇಡೀ ಜಗತ್ತಿನೊಳ್ ಅತ್ಯಂತ

ಅಗ್ರಗಣ್ಯರೆನಿಸಿದ ಋಷಿ-ಮಹರ್ಷಿಗಳ ಜನ್ಮ
ಧಾತೆ ಈ ಭಾರತ! ಈಯೊಂದು ಜನ್ಮಭೂಮಿಯ
ಮಹತ್ತಂ ಅಲ್ಪಸ್ವಲ್ಪ ಅರಿತವರುಂ ಸಗ್ಗದೇಣಿಯಂ
ಹತ್ತುವುದರೊಳ್ ಇನಿತಿನಿತು ಸಂಶಯಮಿಲ್ಲಂ....!"
ಆ ಬಳಿಕ ದಿನದಿನಂ ಬೈಗುವೊಳ್ತಿನಲಿ ಅದೆ
ತಾಣದಲಿ ಪ್ರವಚನಗಳ ಧಾರೆ ಹರಿಯುವುದು
ಮುಸ್ಸಂಜೆ ಕವಿದು ನಿಶಿ ಅಡರುವನ್ನ. ಬೆಳಗಿನ
ವೊಳ್ತಿನಲಿ ಕಲಿಕೆಯ ಪ್ರಕರಣ. ಪೋರ್‌ಬಂದರ್
ಸಂಸ್ಥಾನದಾಸ್ಥಾನದ ಸಂಸ್ಕೃತ ಪಂಡಿತನೆನೆ
ಪ್ರತಿಷ್ಠಿತ ಶಂಕರ ಪಾಂಡುರಂಗನೆಂಬ ನಾಮ
ಧೇಯದಲಿ ಪ್ರಸಿದ್ಧಿವೊಡೆದ ವಿದ್ವಾಂಸನೊಡ
ಗೂಡಿ ಸಂಸ್ಕೃತ ಭಾಷಾಧ್ಯಯನಂ ನಡೆಸಿದರ್.
ಜೊತೆ ಜೊತೆಗೆ ಫ್ರೆಂಚ್ ಭಾಷಾಧ್ಯಯನಂ
ನಡೆದತ್ತು. ಶಂಕರ ಪಾಂಡುರಂಗ ಮಹನೀಯಂ
ತರುಣ ಗುರುವಿನ ಅದ್ಭುತ ಧೀಮಂತಿಕೆಯಂ
ಕಂಡರಿದು ಬೆಚ್ಚಿ ಬೆರಗಾದನ್. ಆಧ್ಯಾತ್ಮಿಕ
ಪ್ರಜ್ಞಾನ, ದಿವ್ಯವರ್ಚಸ್ಸು ಗಂಭೀರತಮ
ಚಾರಿತ್ರ್ಯ ಇತಿ ಗುಣಗಣಗಳಗಣಿಯೆನಿಸಿರ್ದ
ತರುಣಗುರುವಿನೆತ್ತರವ ನೇರಲ್ ಎದೆಯಳುಕಿ
ಮನ ಬೆಬ್ಬಳಿಸಿ ಬೆರಗುವಟ್ಟು ನುಡಿದನೆಂತೆನೆ,
"ಗುರುವರ್ಯ ನಿಮ್ಮೊಳಿಹ ಪ್ರಜ್ಞಾನ ಬೇರೆಲ್ಲು
ಕಾಣೆನಾಂ. ನೀನು ಅಸಮಾನ್ಯ ವ್ಯಕ್ತಿ! ಇನ್ನೇಂ
ಕಲಿಕೆ ಬಿಡೈ! ನೀಂ ಇಚ್ಛಿಸಿದೊಡೆಮ್ಮಯ ದಿವ್ಯ
ಸನಾತನ ಧರ್ಮವಂ ಪಾಶ್ಚಾತ್ಯ ದೇಶಗಳ
ಮಹಾ ವ್ಯಾಪ್ತಿಯಲಿ ಬಿತ್ತಿದೊಡೆ ಅಥ ಪರಿಬೋಧಿಸಿ

ಬೆಳೆದೊಡೆ ಭಾರತದ ಹಿರಿಮೆ ಜಗತ್ತಿನೊಳ್
ಪ್ರಸಿದ್ಧಿ ಪಡೆದಪುದು. ಆಂಗ್ಲೇಯ ಭಾಷೆಯೊಳ್
ಪ್ರಜ್ಞಾನಮಿರ್ಪುದು ನಿನಗೆ, ಎನಲ್ಕೆ ನಿನಗದು
ಸುಲಭಸಾಧನೆ ಕಣಾ! ಮನವೊಪ್ಪಿದೊಡೆ ಶೀಘ್ರಂ
ಶುಭಂ ಎನೆ ತಪ್ಪಲ್ಲ."
ಪಂಡಿತ್ ಶಂಕರ ಪಾಂಡು
ರಂಗಜಿ ನುಡಿದಿರೆ ದೃಢವಾದ ದನಿಯಲಿ, ಮನ
ವೊಪ್ಪಿ ಹೃದಯವೊಪ್ಪಿ ಬಿತ್ತರಿಸಿದರ್ "ಎಲೆ,
ಪಂಡಿತ್‌ಜಿ, ಮಿನ್ನೆ ಆನೊರ್ಮೆ ಸಾಗರತಡಿಯಲಿ
ಸುಪ್ರಭಾತ ಸಮಯದೊಳ್ ಜಗತ್ ಶಿರೋಮಣಿ
ಸೂರ್ಯದೇವನ ಮಹೋತ್ಥಾನಮಂ ಮನವಿಟ್ಟು
ಗಮನಿಸುತಲಿರ್ದೆನ್. ದೂರ ದಿಗ್ ದೇಶದೊಳ್
ಕೆನ್ನೀಲಿ ಮುಗಿಲ್ ರಾಶಿಯಮೇಲೆ ಜಗಜಗಿಪ
ರವಿಯ ಉತ್ಥಾನಮಂ ಪರಿಭಾವಿಸುತೆ, ಇಂತು
ಸನಾತನ ಧರ್ಮದುತ್ಥಾನಮಾದಪುದೊಳ್ಳಿತು
ಎಂಬೊಂದು ಚಿಂತನೆಯು ಬೊಕ್ಕುದೆನ್ನಮನವಂ.
ಅದನಿಂದು ಕೈಗೂಡಿಪುದೆ ಮುಂದಿನೆನ್ನ ಶುಭ
ಕಾರ್ಯಂ ಪಂಡಿತ್‌ಜಿ!"
ಸ್ವಾಮೀಜಿಯುಂ ಅಮಿತ
ವಿಚಾರಂಗಳ ಮಾಲೆಯಂ ಗಬ್ಬದೊಳಾಂತಿರೆ
ಚಿಂತನೆಯ ಮಂಥನಂ ಸರ್ವತ್ರ ಸದಾ ನಡೆಮು
ಪುರುಪುಗೊಂಬ ಕಾರ್ಯದೊಳ್ ನಿರತರಾದರ್, ಗುರು
ದೇವಂ. ಪೋರ್‌ಬಂದರಿನೊಳ್ ಕಳೆದ ದಿನಮಾನಂ
ತಮಗಿತ್ತ ಜ್ಞಾನನಿಧಿಯುಂ ಅಪಾರ. ಮೇಣುಂ
ಜನಾನುರಾಗಿತ್ವಂ ಅಪಾರ. ಸ್ವಾಮೀಜಿಯುಂ

ಆನಂದ ಪೂತ ಮನದೊಳ್ ಪೊರಟರಲ್ಲಿಂದೆ.
ಮುಂಕೊಂಡು ನಡೆಯೆ ದ್ವಾರಕಾ, ಪಾಲಿಟಾನ್,
ಮಾಂಡಲಿ ಇತಿ ಬಗೆಬಗೆಯ ಕ್ಷೇತ್ರಂಗಳ ಸೇರಿ
ಸಂದರ್ಶಿಸಿ ಭಾರತ ಜನನಿಯಾಪಾದಂಗಳ್
ಕಂಡು ಕಾಣುತ್ತೆ, ಸುಖ ದುಃಖಗಳ ಕಡಲಿನಲಿ
ಮುಳುಗೆದ್ದು ಪೂರ್ಣಕುಂಭದೊಲ್ ತೊಳಗಿತ್ತವರ
ಆತ್ಮನಿಧಿ, ಲೋಕೋತ್ತರವಾಗಿ.
ಸಾವಿರದೆಂ-
ಟನೂರತೊಂಬತ್ತೆರಡನೆಯ ಜುಲೈ ತಿಂಗಳಿನ
ಅಂತ್ಯ ಭಾಗದೊಳ್ ಬೃಹದ್ ನಗರಿ ಬೊಂಬಾಯಿ
ಗೈತಂದರ್. ಆ ನಗರಿಯೊಳ್ ತುಂಬಿ ತುಳುಂಕುವ
ಜನ ಜಂಗುಳಿ ಕಟ್ಟಿರುಂಪೆಗಳ್ ಗಿಜಿಗುಡಿವವೊಲ್
ಚರಿಸುವರ್ ಬೀದಿ ಬೀದಿಯಲಿ. ಪರಾಶ್ರಿತ ರಾಷ್ಟ್ರ
ಪರಾಶ್ರಿತ ಜನರಾಶಿ ಎನಲ್ಕೆ ಎಲ್ಲಿಯದೈ
ಸಂಜೀವನ? ತೀವ್ರ ದಾರಿದ್ರ್ಯದ ಇಕ್ಕುಳದಲಿ
ಸಿಲ್ಕಿರೆ ಬಡತನ-ಜಡತನಗಳ್ ಒಗ್ಗೂಡಿ
ಒಂಡುತಿಹ ಘೋರ ದಾರುಣಮಯ ಬರ್ದುಕು ಎಡೆ
ಎಡೆಯಲಿ ಕಣ್ಗೆಸೆದುದು ಒಡಲ್ ಕೋರೈಸುವ
ತೆರದಿ. ಕಾರುಣ್ಯದ್ರವ್ಯ ಕರಕರಗಿ ದ್ರವಿಸಿ
ಪರಿದತ್ತು ನಾಳನಾಳಗಳ್ ಶೀಳುವಂದದಿ.
ಭವ್ಯಭಾರತದ ಭವಿತವ್ಯಮಂ ನೆನೆನೆನೆದು
ಚಿಂತನೆಯ ಹೊಂಗೊಡಂ ತಾನಾಗಿ ನಡೆಯುವರ್
ಮುಂದೆ. "ನಹಿ ಜ್ಞಾನೇನ ಸದೃಶಂ" ಅದಿಲ್ಲದ
ಮನುಕುಲವೆ ವ್ಯರ್ಥ ಎನಿಸಿತು ಮನಕೆ. ಸ್ವಾಮೀಜಿ
ದೂರ ಭವಿಷ್ಯದ ಮಹಾ ವೇದಿಯಲಿ ಅಂಡಲೆಯೆ

ಮನಃಪಕ್ಷಿಯಂ ಹಾರಬಿಟ್ಟರ್. "ಪರಮ ದುಃಖಿನಿ
ಭಾರತ ಜನನಿಯ ಕಂಬನಿಯ ತೊಡೆಯುವದಾರ್?"
ಎಂಬೊಂದು ಪ್ರಶ್ನೆ ಏಳ್ದಪುದು ಮತ್ತ ಮತ್ತಂ.
    ಮುಂಬೈ ನಗರಿಯ ಸುಪ್ರಸಿದ್ಧಿವೊಡೆದ ಧೀಮತಿ
ಬ್ಯಾರಿಷ್ಟರ್ ಓರ್ವರ ಪರಿಚಯವೊದವಿತ್ತು. ಆ
ಮನೀಷಿಯ ಸ್ನೇಹಾದರದ ಆತಿಥ್ಯಂ ಪಡೆದು
ತಂಗಿದರವರ ಸದನದಲಿ. ದಿನನಿಚ್ಚಂ ತರ್ಕ
ವಿತರ್ಕಗಳ್ ಬೆಳೆದಪವು ಸುವಿಚಾರ ವಾಹಿನಿ
ಹರಿಸಿ. ಜೊತೆಗೆ ವೇದಾಧ್ಯಯನವುಂ ನಡೆದತ್ತು
ಪರಸ್ಪರ ವಿದ್ಯಾದಾಹದನುಭೋಗದಲಿ. ದಿನ
ಮಾನಂಗಳ್ ಉರುಳಿದುದರ ಪರಿಯೆ ತಿಳಿಯದೊಲ್
ಕಳೆವುದು ದಿನಚರಿ. ಓರ್ಮೆ, ಅನಿರೀಕ್ಷಿತಮಪ್ಪ
ಘಟನಾ ಕ್ರಮದೊಳ್, ಬಿಡದಿಯಂ ಪತ್ತೆ ಹಚ್ಚಿದ
ಸ್ವಾಮಿ ಅಬೇಧಾನಂದರ್ ಗಮಿಸಿದರ್ ಸನ್ನಿಧಿಗೆ.
ಬಹುದಿನಗಳ ಬಳಿಕಲೊದವಿದ ಭೇಟಿಯಿಂದಲಿ
ಪರಸ್ಪರ ಸಂದರ್ಶನ ಭಾಗ್ಯಂ ಜೇನ್ಸನಿಯಂ
ಉಕ್ಕಿಸಿತು ಹೃದಯ ಕರಂಡದಲಿ. ಅಂದು, ಆ
ಭ್ರಾತೃಭಾಯಿಯೊಡನೆ ಕಳಿಯಿತು ಅಮೂಲ್ಯದಿನಚರಿ.
    "ಭಾಯೀ, **ವಿವೇಕ ಭ್ರಷ್ಟಾನಾಂ ಭವತಿ ವಿನಿಪಾತಃ
ಶತಮುಖೀ**..." ಭಾರತವಿಂದು ಅದೋಗತಿಗಿಳಿದುದು
ಈ ಕಾರಣದಿಂ. ಪ್ರಜ್ಞಾನ ದೀಪ್ತಿ ಬೆಳಗದೆಯೆ
ಬರ್ದುಕು ಬೆಳಗುವುದೆಂತು? ಆ ಆಳ್ವರಸರಾ
ಧೋರಣೆಗನುಗುಣಮಪ್ಪಿ ಈ ಜನರಾಶಿ ಬದುಕಿ
ಬಾಳುತಿದೆ. ಒಂದಕ್ಕೊಂದು ಹೊಯ್‌ಕಯ್ ಆಗಿರಲ್
ಘರ್ಷಣೆಯುಮಿಲ್ಲ. ಭವಿತವ್ಯದ ಘನಚಿಂತನೆ

ಮೂಡುತಲಿಲ್ಲ. ಬಡತನ ಜಡತನಗಳ ಬಾಂಧವ್ಯ
ಪಿರಿದಾಯ್ತು ಎಂದಿಗುಂ ಸೋಲ್ಗೆಡದ ರೀತಿಯಲಿ.
ಇದರ ಊನಮಂ ಸರಿಪಡಿಸುವೊಡೆ ವಜ್ರಸಾಣೆ
ವೇಳ್ಕುಂ! ಭಾಯೀ, ಯೋಚಿಸಿನೋಡೈ! ಆನಿದಂ
ಯೋಚಿಸುತೆ ಕಪಿಸಿಪಿಗಳ ಕಗ್ಗಂಟಾಗಿರ್ಪೆಂ..''
ಚಿಂತೆಯಿಂ ನಿಮಸುಯ್ದರ್ ಸ್ವಾಮಿಜಿ. ಹೃದಯ
ಕುಂಡದಲಿ ದಾವಾಗ್ನಿ ಪ್ರಜ್ವಲಿಸಿ ಸಿಡಿಲ್‌ಗಳ್
ಮಿಂಚು ಗುಡುಗುಗಳ್ ಒಡಲೊಳಾಂತ ಮುಂಗಾರ್
ಪ್ರಭುವಿನೊಲೆಸೆಯುತೆ ನುಡಿದರಿಂತು "ಎಲೆ, ವತ್ಸ!
"ಎನಗೀಗಳ್ ಅನಂತ ಶಕ್ತಿಯ ಸಂಪದಂ ಲಭಿಸಿ
ಪೆಗ್ಗೂಡಾಗಿಹೆನ್, ಎಂದು ದೇಹ ಶುಕ್ತಿಯು ಸಿಡಿದೊಡೆದು
ಪೋದಪುದೊ ಆನರಿಯೆ ಕಣಾ!''
ತಮ್ಮೊಳ್ ಮಿಣ್ಣನೆ
ಪರ್ಯಾಲೋಚಿಸುತೆ ಭಾವನಾವೇಶದಲಿ ಮುಳುಗಿ,
"ಭಾಯೀ ಕೇಳ್, ಅಥರ್ವಣ ವೇದಸಂಹಿತೆಯಲಿನ
ಅತೀಸುಂದರ ಋಕ್ಕುವದೆನ್ನಯ ದೃಷ್ಟಿಯೆದುರ್
ನಿಲ್ವುದು **ಸಂಗಚ್ಛಧ್ವಂ ಸಂವದಧ್ವಂ ಸಂವೋಮ-**
ನಾಂಸಿ ಜಾನಕಾಂ ದೇವಾ ಭಾಗಂ ಯಥಾ
ಪೂರ್ವೇ ಸಂಜಾನಾನಾ ಮುಪಾಸತೇ।''
ಮಂತ್ರಮಿದರ
ಅಂತರಾರ್ಥಮಂ ಅರಿಯುವೊಡೆ ದೂರದೂರದ
ವಿಷಯ ವಿಶ್ಲೇಷಣೆಯ ಅಗತ್ಯಮೆ ಇಲ್ಲ ಕಣಾ!
ಈ ರಾಷ್ಟ್ರೀಯ ಪ್ರತ್ಯಕ್ಷ ಉದಾಹರಣೆಯೆ ಸಾಲ್ಗುಂ!
ಕೇಳ್, ಚತುಷ್‌ಕೋಟಿ ಇಂಗ್ಲೀಷರ್ ಇಲ್ಲಿನ
ಮೂವತ್ತು ಕೋಟಿ ಪ್ರಜೆಗಳಮೇಲೆ ರಾಜ್ಯದ

ಆಡಳಿತ ನಡೆಸುವುದರ ಕಾರಣಮಂ ನೀನ್
ಯೋಚಿಸಿ ತಿಳಿ! ಅವರ ಮನೋ ವೈಜ್ಞಾನಿಕ ವಿವರ
ಏನಿರ್ಪುದು? ಆ ನಾಲ್ಕು ಕೋಟಿ ಬಿಳಿಯರ್ ತಮ್ಮ
ಇಚ್ಛಾ ಬಲಂ ಒಗ್ಗೂಡಿಸಿಹರ್ ಎರಕಹೊಯ್ದುವೊಲ್.
ಅಂದೊಡದು ಅದ್ಭುತ ಅಸೀಮ ಅಸಾಮಾನ್ಯ
ಶಕ್ತಿಕಣಾ! ಅದೇ ಇಲ್ಲಿನ ನಮ್ಮಗಳ ಸ್ಥಿತಿ?
ಹಾ! ಮೂವತ್ತು ಕೋಟಿ ಜನರ ಮನಸು ಬೇರೆಬೇರೆ.
ಅದೇ ದುರಂತಕೆ ಸಕಾರಣಂ. ಅಂದಬಳಿಕಂ,
ಭಾರತದ ಭವ್ಯ ಭವಿತವ್ಯದ ನಿರ್ಮಿತಿಯಲಿನ
ರಹಸ್ಯಂ ಸಂಘಟನೆ ಶಕ್ತಿಸಂಚಯನ ಮೇಣ್
ಮತಿಮತಿಯ ಮನಮನಂಗಳ ಜೋಡಣೆ ಇವುಂಗಳ
ಪರಮಾಶ್ರಯದೊಳಿರ್ಪುದೆನಲ್ ಸತ್ಯಸ್ಯ ಸತ್ಯಂ!
    ಉಪದೇಶದ ಒಂದೊಂದು ಅಕ್ಕರಕ್ಕರಗಳ್
ಭಾರಾಕ್ರಾಂತಮಾಗಿರ್ದೊಡಂ ದೃಢಗತಿಯೊಳ್
ಪೊಣ್ಮಿದುದು ಸ್ವೀಯಮಾನ ಗಾಂಭೀರ್ಯಯುಕ್ತದನಿ.
ಮುಂಬೈ ಪ್ರಾಂತೀಯ ಪರ್ಯಟಣೆಯ ಮಹಾ
ಪರಿಭ್ರಮಣಮಂ ತೀರ್ಚಿದ ಬಳಿಕಂ ಅಲ್ಲಿಂದೆ
ಪುಣೆಗೆಯ್ದರ್ ಸ್ವಾಮೀಜಿ. ಲೋಕಮಾನ್ಯತಿಲಕರ
ಭೇಟಿಗೆಯ್ದವರ ಅತಿಥಿಯಾಗುಳಿದರ್ ನಿಜ
ಭ್ರಾತೃಭಾವದಿಂ, ಅಲ್ಲಿ ಎನಿತೆನಿತೋ ಹಿರಿಯ
ಸಾಧು ಸಂತರಂ ಕಂಡು ಸನಾತನ ಧರ್ಮದ
ಭವಿಷ್ಯಂ ಮೇಣ್ ಭಾರತ ರಾಷ್ಟ್ರದ ಭವಿಷ್ಯಂ
ಇತಿ ಗಂಭೀರ ವಿಷಯಗಳ ಇತ್ಯರ್ಥದಲಿ
ಮನವಿಟ್ಟು ಚರ್ಚೆಯೊಳ್ ಭಾಗವಹಿಸಿ ಮತಿಯ
ಅಲುಗಿಂಗೆ ಸಾಣೆ ಹಿಡಿಸಿದರ್ ಭಾರತದೊಳ್ಪಿಂಗೆ,

ಪರಮ ಪೂಜೆಗಳೊಳ್ಪಿಗೆ. ಕಳೆದುದೊಂದು ಪಕ್ಷ
ಮಾನಂ. ನಿಯತಿಕೃತ ನಿಯಮದಿಂ, ಮನದಿ ರಾಷ್ಟ್ರ
ಪ್ರಗತಿಯ ಗುರಿಯಿಂ, ಎರ್ದೆದುಂಬಿದ ಪ್ರೋಜ್ವಲಿತ
ಧೈರ್ಯೋತ್ಸಾಹದಿಂ ಕೊರಳ್ ಕಂಠದ ಗಂಭೀರ
ಸ್ವರಮಂ ಹರಿಯ ಬಿಟ್ಟರಲ್ಲಿ, ಬಂದು ಕಾದಿರ್ದ
ಶ್ರೋತೃಗಳಿಗೆ,
"ಅಮೃತ ಪುತ್ರರಿರಾ ಕೇಳಿಲ್ಲಿ,
"**ವೀರಭೋಗ್ಯಾ ವಸುಂಧರಾ**" ಈ ಮಂತ್ರಮಂ
ನೆನೆನೆನೆದು ಅನುಸರಿಸಿ ಬೆಳೆದು ದೃಢವಾಗಿ ನಿಲ್ಲಿ!
ರಾಷ್ಟ್ರಸೇವೆಯದು ಗುರುತರವಾದ ಪೂಜಾವ್ರತ.
ನಿಮ್ಮಗ್ರಗಳ ಪೂರ್ವಜರ್ ಮಹಾ ಕಾರ್ಯಂಗೆಯ್ವ
ಸಲುವಾಗಿ ಐಹಿಕ ಭೋಗಾಸಕ್ತಿಯಂ ತ್ಯಜಿಸಿ
ಸೇವೆಗಿಳಿದರ್. ಇಂದು, ಈ ದುರ್ದಿನಂಗಳಲಿ
ಸ್ವಲಾಭದ ಸಲುವಾಗಿ ಸ್ವದೇಶಂ ತ್ಯಜಿಸುವ
ಧೀಮಂತರಿಹರ್! ಆದೊಡೆ ನೀವಿಂದು ಸಕಲ
ಆಸೆ ಪ್ರತ್ಯಾಸೆಗಳ್ ಮೇಣ್ ಸ್ವಮುಕ್ತಿಯ
ಆಸಕ್ತಿಯಂ ಬದಿಗೊತ್ತಿ ಪರರ ನೆರವಿಗಾಗಿ ಎದ್ದು
ಪಣಕಟ್ಟಿ! ಎಮಗಿಂದು ವೇಳ್ಕುಮೆನೆ ಕಬ್ಬಿನದ
ಸ್ನಾಯುಗಳ್, ಉಕ್ಕಿನ ನರಗಳ್, ಸಿಡಿಲ್ ಬಲಮಿಹ
ಹೃದಯಂಗಳ್; ಶಕ್ತಿ ಕ್ಷಾತ್ರವೀರ್ಯ ಮೇಣ್ ತೇಜಸ್!
ನಮ್ಮಲ್ಲಿ ಯುವವರ್ಗದಲಿ ಪುರುಡುಮಿರ್ಪುದದು
ದಿಟಂ. ಆದೊಡೆ, ದುರ್ದೈವ! ಮದುವೆ ಎಂದೆಂಬ
ಕ್ರೌರ್ಯದ ಬಲಿವೇದಿ ಲಕ್ಷಾಂತರ ಯುವ ಜನರಂ
ಬಲಿಗೊಳ್ವುದಂ ತಡೆಯ ಬಲ್ಲವರದಾರ್? ಓ!
ತರುಣರೇ ಎನ್ನೀ ಕೊರಗಂ ಕೇಳಲಾರಿರಾ?

ರಾಷ್ಟ್ರಕಾಗಿ ದುಡಿಯಲಾರಿರಾ? ಏಳಿ, ಎದ್ದೇಳಿ!
ಜಡನಿದ್ದೆಗೆ ಎಡೆಗುಡದೆ ಕಾರ್ಯ ಕೈಕೊಳ್ಳಿ!"
ಪುಣೆಯಿಂದೆ ಪೊರಮಟ್ಟು ಕಾಲ್ನಡೆಯಲಿ ಪಥಮಂ
ಸಮೆಸುತೆ ಮಹಾಬಲೇಶ್ವರಕೈದರ್ ಸ್ವಾಮಿಜಿ.
ಒಣಹವೆಯ ತಾಪಾನುತಾಪದೊಳ್ ಬೆಮರಂ
ಬಸಿದು ಸುಟ್ಟುರಿದು ಹಸಿವು ತೃಷೆಗಳ ಅನನ್ಯ
ದೈಹಿಕ ಹಿಂಸೆಯಂ ಸಹಿಸುತ ಎರ್ದೆಯ ಕೆಚ್ಚಿಗೆ
ಧೀರಾಮೃತ ರಸನೆಯನೂಡಿಸಿ ಪುರುಡುಗೊಳಿಸಿ
ಗಂಡುಗಲಿಯಾಗೆಸೆದರ್ ಸ್ವಾಮಿಜಿ. ಹಾದಿಯ
ಮಗ್ಗುಲಿನಲಿ ಹಬ್ಬಿಹರಡಿದ ಮಹಾ ಪುಷ್ಕರಣಿಯ
ರನ್ನಗನ್ನಡಿಯಲಿ ಮೊಗನೋಡಿ ಸುಖಮಜ್ಜನ
ಗೈದು ಕಾಲ್ಗಳಂ ತಿಳಿನೀರ್ಗಿಳಿಬಿಟ್ಟು ನಸುವೊಳ್ತು
ವಿಶ್ರಾಂತಿಪಡೆದರ್ ತಟನಿಯಲಿ; ಪ್ರಶಾಂತ ಶೀತ
ಶೀತಲ ಶೈಲಿಯ ಮೋಹನ ಮೂರ್ತಿಯು ತಾನಾಗಿ.
ಜಲಧಿಯಲಿ ಹೊಂದಾವರೆ ಬೆಳ್ದಾವರೆ ಸುನೀಲ
ತಾವರೆ ಚೆಣ್ದಾವರೆಗಳ್ ದಳಬಿರಿದು ಅರಳಿರೆ
ಮೊಗ್ಗುಗಳ್ ನಿಮಿರಿ ನಿಂತಿರ್ದು ಕಾವಲಿಗೈದ
ಯೋಧರೊ ಎನೆ ಸುಂದರ ಸುರಮ್ಯತರದ ದೃಶ್ಯ
ಮನೋಜ್ಞಮಾದತ್ತು. ಕರ್ಪಿನ ನಿಜ ಬಿಣ್ಪಿನ
ಮುದ್ದು ಕಲಹಂಸಾಳಿ ಎರೆಂಕೆಗಳ್ ಎತ್ತುತೆ
ಪಟಪಟಿಸಿ ಕೇಗಿದುವು. ಆನಂದಮೋದದಿಂ
ಸಣ್ಣಪುಟ್ಟ ಮರಿಗಳ್ ಸುತ್ತುವರಿದಿರೆ ಚೀಮ್
ಚೀಮ್ ಎಂಬ ಸುನಾದಮಂಗೈಯ್ಯುತೆ ಈಸುವ
ಸಂದೃಶ್ಯದೈಶ್ವರ್ಯದವಲೋಕನದೊಳ್ ಕಣ್
ನಟ್ಟು ನಸುವೊಳ್ತು ಮೈಮರೆತರ್. ತವ ಕಾಲ್ಗಳ್

ಸುತ್ತುವರಿದ ಕಿರಿವಗೆಯ ಮೀಂಗಳ್ ಗುಳುಗುಳನೆ
ಸಂಚಲಿಸುತಿರಲ್ ನೋನೋಡಿ ತಣಿದರ್. ತಮ್ಮ
ಕಣ್‌ದಣಿಯೆ; ಮನದಣಿಯೆ. ಸುಯ್ಯನೆಯೆ ಗಾಳಿಯೊಲ್.
ಬಂದೆರಗಿದ ಬೆಳ್ಳನೆ ಕೊಕ್ಕರೆಯು ಮೀನೊಂದ
ಹೆಕ್ಕಿ ಕರ್ಚಿವಿಡಿಯುತೆ ಸರ್ರನೇರ್ದುದು ದೂರ
ವೃಕ್ಷರಾಜನಂ ಕುರಿತು. ನುಡಿಯೇ ಬಾಯಿರದ
ಮೀನ ಮಿಲಿಮಿಲಿಗೊಳ್ವುದೆಸೆಯಿತು, ಕ್ಷಣ ಮಾತ್ರಂ.
“**ಜೀವೋ ಜೀವಸ್ಯ ಜೀವನಂ**” ಎಂದರ್ ಗುರುವರಂ.
ಮುಂಪಥಂ ಹರಿದುದೊಂದು ಪಚ್ಚ ಪಸುರುಕ್ಕುವ
ತೋಂಟದೊತ್ತಿನೊಳ್. ಪೆಂಗಳೆಯರುಂ ಬೊಂತೆಯನೆ
ಗುಂಜುಗುಂಜಾದ ಕಿರುಬೊಂತೆ ಕೂದಲ್ ಮುಡಿಗೆ
ಮಲ್ಲಿಗೆಯ ತೋರದಂಡೆಯಂ ಸೂಡಿ ನಿರಿಯಂ
ಎತ್ತಿ ಕಳೆಯಂ ಕೀಳುತಿರ್ದರ್ ನಡು ಬಾಗುತೆ.
ಶ್ರಮ–ಪರಿಶ್ರಮಗಳ ಫಲವಾದ ಸುವಿಶಾಲ
ತೋಂಟವದು ನಳನಳಿಸಿದತ್ತು ನೋಳ್ಪರ ಕಣ್ಣ
ಸೆಳೆವ ಮಾಳ್ಕೆಯಲಿ. ನಿಚ್ಚ ಪೊನಲ್ವರಿವ ತೊರೆಯ
ತಣ್ಪುಂಡು ಮೆರೆವ ಚೆಲುವು ಚೆಲ್ಲಿದೊಲೆಸೆಯಿತ್ತು
ಮಂಜುಳಮಯವಾಗಿ. ಗುರುದೇವನಂ ಕಂಡೊಡನೆ
ಆ ಪೆಣ್ಮಣಿಯರ್ ಕೆಂಜೋಳ ಹಣ್ಣುಹಂಪಲು
ಮೇಣ್ ಸೀಗೆಣಸುಗಳ್ ತಂದು ಮುಂದಿರ್ಕಿ ಕೈಗಳಂ
ಮುಗಿದು ನಮಿಸಿ ಶಿರಮಣಿದು ಪಾದಪದುಮಗಳಿಗೆ,
ತಮ್ಮ ಗುರುಭಕ್ತಿಯಂ ಸೂಸಿದರ್ ತೋಷದಿಂ.
ಸ್ವಾಮೀಜಿ ಪುಷ್ಕಳವಾದ ಉಣಿಸಂ ಕೈಕೊಂಡು
ದಾಸಿಗಳನಭಿವಂದಿಸಿ ಕುಶಲೋಪರಿಯಂಗೈದು
ಪೊರಮಟ್ಟರಲ್ಲಿಂದೆ. ಮುಂದೆ ಮುಂದೆ ಸಾಗಿತದು

ನೇರ ಹಾದಿಯಲಿ, ಸಂಧಿಸಿದರೆನಿತೋ ಸಾಧು
ಸಂತರಂ. ಅಲ್ಲಲ್ಲಿ ಕುಳಿತು ಮಾತುಕತೆಗಳ
ಬೆಳಸಿ ತಂತಮ್ಮ ಸುಪರಿಚಯಮಂ ಅರಿದೊರೆದು
ಪರಸ್ಪರ ಧ್ಯೇಯೋದ್ದೇಶಗಳನೋದಿ, ಮುಂದಿನ
ಸರ್ವತ್ರ ಸಾಧನೆಯ ಸುವಿಚಾರವಾಹಿಯೊಳ್
ಮುಳುಗೆದ್ದು ಪರಸ್ಪರ ವಿದಾಯಂ ಬೇಳ್ವಪರ್.
ಮತ್ತಮತ್ತಂ ಮುಂಪಯಣ ಬೆಳೆವುದು ಮುಂದೆ
ತಂಗುದಾಣ ದೊರೆಯುವನಕ. ನಿಲುಗಡೆಯಿಲ್ಲದ
ನಡಿಗೆಯಿಂ ದಣಿದ ಸ್ವಾಮೀಜಿಗೆ ಜುಳುಜುಳಿಸುತ
ಹರಿವ ನದಿಯೊಂದು ಕಂಗೊಳಿಸಿತು. ಒಡನೆ ಅದರ
ಬಳಿಗೆ ಧಾವಿಸಿದರ್. ಬಿಳಿಯ ಬೆಳ್ನೊರೆಯ ವೀಚಿ
ವೀಚಿಗಳ್ ನವನೂತನವಾಗಿ ಸುಸಂಮೃದ್ಧ
ರೀತಿಯಲಿ ಜೃಂಭಿಸಿರ್ದುವೆನೆ ಆನಂದಮಂ
ಮುಟ್ಟಿ ತಟ್ಟಿ ಪರಮಾನಂದಗೊಳಿಪಂತೆ. ನೆರೆ
ಮನವೊಲಿದು ಮತಿನೆಚ್ಚಿ ಆ ಮೋಹನೀಯ ನದಿ
ನೀರಿಗಿಳಿದರ್ ಸ್ವಾಮೀಜಿ. ತನುಮನ ಜನ್ಯ
ಶ್ರಾಂತಿಗೆ ವಿಶ್ರಾಂತಿ ನೀಡಿದುವು. ಮುಂಬಯಣಕ್ಕೆ
ಪುರುಡು ದೊರೆಯುವನ್ನ ಕುಳಿತು ವಿರಾಮಪಡೆವ
ಸದಿಚ್ಛೆಯೊಳ್ ತಂಗಿದರ್ ಅಲ್ಲಿಯೇ. ಓ, ಅಲ್ಲಿ
ನಿಂತ ನೀರ್ ಕಲೆತು ಮಡುವಾದೆಡೆಯಲ್ಲಿ ಬಲ್
ಮನೋರಮ ಶೈಲಿಯ ಕಲಹಂಸೆಗಳೋಳಿಯು
"ಅಲಂಕಾರೋ ಪ್ರಿಯ" ಭಂಗಿಯಲಿ ಈಸುತ್ತೆ
ಬೇಟೆಯಲ್ಲಿ ಮನವಿಟ್ಟು ಹೊಂಚಿದ ಸಂಚಿನಲಿ
ಮೆಲುಮೆಲ್ಲನೆ ಮುಂಬರಿಯುತೆ ತೆಕ್ಕನೆ ಮೇಲ್ವಹ
ಮೀಂಗಳಂ ಚಕ್ಕನೆ ಒಡಿದು ಕಬಳಿಸುತ್ತೆ

ನಂದದಿಂ ಕೀಲಾಲ ಕ್ರೀಡೆಯಲಿ ಮನವೆರ್ಚೆ
ಕ್ರೇಂಕರಿಸುತಿರ್ದುವು ಮತ್ತೆ ಮತ್ತೆ. ಇತ್ತಲ್
ಜಲರಾಶಿಯಮೇಲೆ ಬಹುಭಾರಾ ಕ್ರಾಂತತೆಯ
ಬೃಹದ್ಬಾಹುಗಳ್ ಚಾಚಿ ಶಾಖೋಪಶಾಖೆಗಳ
ಹರಡಿ ಹರಡಿ ಚಕ್ರಾಕಾರದಲಿ ಮೆರೆವ ತರು
ದ್ರುಮಗಳ್ ಪಕ್ಷಿಧಾಮವೆನಿಸಿ ಜೃಂಭಿಸಿರೆ
ನೋನೋಳ್ಪ ಕಣ್ ಮಮ್ಮಲಿಂ. ಸಹಸ್ರ ಸಹಸ್ರ
ಸಹಸ್ರಾನು ಸಹಸ್ರ ಬಗೆಬಗೆಯ ಪಕ್ಷಿಗಳ
ಸುಸುಂದರ ಧಾಮವಾಗಿಹ ಆ ಮನೋರಮಾ
ದೃಶ್ಯ ಕಣ್ಗೆಡ್ಡಮಾದುದು. ಅವು ಎಡೆಯಿಂದಲ್
ಎಡೆಎಡೆಗೆ ಹಾರುವ ಚಪಲತೆಯಲಿ ಹಾರಾಡಿ
ಎರೆಂಕೆ ಪಟಪಟಿಸಿ ಸುರಮ್ಯ ದನಿಯಲಿ ಹಾಡಿ
ನಲಿನಲಿವ ದೃಶ್ಯ ಸುಮನೋಹರಂ. ಕೊಲ್ಪಕಲೆ
ಅರಿದರಿತು ಬಿಲ್ಲುಬಾಣಗಳ ಸಹಿತ ಬಹ ಬಹು
ಕ್ರೂರ ಮನದ ಬಿಯದರಿಗಿಲ್ಲವಿಲ್ಲಿ ಪುಗಲ್ಕೆ
ಅವಕಾಶಮೆನೆ ಪಕ್ಷಿಧಾಮ ಸುರಕ್ಷಿತಂ. ಆ
ಅದ್ಭುತ ಸೌಂದರ್ಯಧಾಮದೊಳ್ ಮನವಿಟ್ಟಂತೆ
ಅದರೊಳ್ ಮುಳುಗಿ ಹೋದರ್ ಸ್ವಾಮಿಜಿ. ನೆಚ್ಚಿನ
ಚಿತ್ರ ಮನಮಂಥನಕೆ ಘನವಾಯ್ತು. ಬಹುಶ್ರಾಂತ
ಶರೀರಕೆ ಸ್ವಾಂತನವದಾಯ್ತು. ಅರೆತಾಸಿನೊಳ್
ಮತ್ತೆ ಮುಂಪಯಣಮಂ ಓಡಿದರ್. ಮಹಾಬಲೇಶ್ವರ
ನಗರಿಯಂ ಮುಟ್ಟಿ ಪುರಜನರ ಪರಿಚಯಂಬಡೆದು
ತಂಗಿದರ್ ಅಲ್ಲಿಯೇ. ಲಿಂಬಡಿ ಮಹಾರಾಜರ
ಪರಿಚಯಂದೊರೆತು ಸ್ನೇಹಬಳ್ಳಿಯು ಚಿಗುರಿ ಮನ
ಬೆಸೆಯಿತು. ಮಹಾರಾಜರ್: "ಸ್ವಾಮಿಜಿ, ಈಪರಿ

ಭಂಗವದೇಕೆ ಬದುಕಿಗೆ? ಕಾಲ್ನಡೆಯ ಪ್ರವಾಸ
ಪರಿಶ್ರಮಬಡುವಿರೇಕೆ? ನೀಮೆನ್ನೊಡನೆಮ್ಮ
ಲಿಂಬಡಿಗೈದು ಸೊಗದಿಂದೆ ಬಾಳ್ಗೆ. ಲಿಂಬಡಿಯ
ಸಂಸ್ಥಾನದೊಳ್ ನಿಮಗೊಪ್ಪುವವೊಲ್ ಎಲ್ಲವಗೆ
ಸುಖೀಸೌಕರ್ಯವಂನೀವೆನ್. ಕೃಪೆಗೈದೆಮ್ಮ
ಲಿಂಬಡಿಗೈವುದು." ರಾಜನ ಬೇಡಿಕೆಯದು
ಮನವಂ ಮಿಡಿಸುವೊಲ್ ಮುಟ್ಟಿದುದು ಹಾಲ್ಜೇನ್
ಸವಿರಸವಂ ಹರಿಸಿದೊಲ್. ಶಿಷ್ಯನ ಬೇಡಿಕೆಯುಂ
ಹೃನ್ಮನಂ ಮುಟ್ಟೆ, ಮಂದಸ್ಮಿತವಂ ಹರಿಸಿ. "ಎಲೆ,
ಮಹಾರಾಜ, ಇಂದಿಗಾಗದೆಂಬೆನ್. ಇನ್ನಾಂಗೈವ
ಕಾರ್ಯವದು ಕಡಿಮೆಯಲ್ಲ, ಎನಿತೆನಿತುಗೈದೊಡದು
ಮುಗಿಯದೈ. ಗುರುಕೃಪೆಯಿಂದಂಗೈದ ಬಳಿಕ
ನಿನ್ನಯಿಚ್ಚೆಯಂ ಪೂರೈಸುವೆನ್."
ಬಲುಮೆಯಿಂ
ತುಂಬಿರ್ದ ಅನುರಾಗ ಭಾವದಲಿ ಬೀಳ್ಕೊಂಡು
ಪೊರಮಟ್ಟರ್. ಆದೊಡಾ ಗುರುವರ್ಯನ ಇಚ್ಚೆಯು
ಕೈಗೂಡುವ ಸುದಿನಂ ಮೂಡಲಿಲ್ಲವು. ಲಿಂಬಡಿ
ಮಹಾರಾಜ ಪುಂಗವಗೆ ಆಸೆ ನಿರಾಸೆಯಾಯ್ತು.
ಪುಣೆಯ ಸಂಸ್ಥಾನದಿಂ ಪೊರಟ ಸ್ವಾಮಿಜಿಯುಂ
ಕನ್ನಡಿಗರ ಭೂಸ್ವರ್ಗಮಾದ ಕರುನಾಡಿಗೆ
ಪದಾರ್ಪಣೆಗೈದರ್. ಎಲ್ಲಿ ಯಾವೆಡೆಗಳಲಿ
ಕಣ್‌ದಿಟ್ಟಿ ಹರಿದೊಡಂ ಹೃನ್ಮನಂ ಅರಳುವೊಲ್
ಸುರ ಸುಂದರ ದೇಶೋವಿಶಾಲಂ ಗಿಡುಸಸ್ಯ
ಮರಂಗಳ್ ತುಂಬಿರ್ದ ಪಚ್ಚ ಪರ್ಣರಾಜಿಯ
ಮನೋಹರ ಚಿತ್ತಾರ! ನವೋನವ ಬಂಧುರತೆ

ಒಡಮೂಡಿದೊಲ್ ಪರ್ಣರಾಜಿಯಲಿ ಪೊಚ್ಚ ಪೊಸ
ಚಿಗುರೊಡೆದು ನಳನಳಿಸುವ ಹೊಂದಳಿರ್ ಕೆಂದಳಿರ್
ಬೆಳ್ಪಳಿರ್ ಹಚ್ಚದಳಿರ್ ಹರಿದ್ರದಳಿರ್ ಇತಿ
ಎಲ್ಲವಗೆಯ ತಳಿರ್‌ಗಳ ಲೋಕವದು ಮೆರೆದುದು
ಮನೋಜ್ಞ ವೈಭವದಲಿ. ಪರ್ಣಾರ್ಣವದೊಳಲೆವ
ತಂಗಾಳಿಯಾಟದಿಂ ಎಲೆಎಲೆಗಳ್ ಅಲೆಯುತೆ
ಮರ್ಮರಿಪ ಶ್ರುತಿಲೀಲೆ ಖಗಗಾನದ ರಮ್ಯ
ರಾಗಾರುಣತಾನಕೆ ಸರಿ ಸಾಟಿ ತಾನಾಯ್ತು.
ಉಗಿಬಂಡಿಯಿಂದಿಳಿದ ಗುರುವರಂ ಪಚ್ಚನೆಯ
ಪಚ್ಚಪಡಲ್ ಎನೆ ಪಸುರಾಗಿ ಪಸರಿಸಿದ ಮಹಾ
ಪಸುರ್ಗ್ಗಡಲಿಂಗೆ ಧುಮುಕಿದರ್. ಅಹ ಬೆಳಗಾವಿ!
ಗುರುರಾಜರ್ ಪ್ರಪ್ರಥಮತಃ ಪದಾರ್ಪಣೆಗೈದ
ಪರಿಪುಣ್ಯ ಭೂಮಿ ಬೆಳಗಾವಿ! ಆಗಳಿನ್ನು
ಜಗತ್ತಿನ ಚೆಂಬೆಳಕಿಗೆ ಬೀಳದಿರುತಿರ್ದಾ
ಗುರುವರಂ ಸಾಮಾನ್ಯ ಮನುಕುಲಕೆ ಅಪರಿಚಿತ
ವ್ಯಕ್ತಿಯಿರೆ ಎಲ್ಲ ಪಯಣಿಗರ ಮಾಳ್ಕೆಯಲಿ ಆ
ಉಗಿಬಂಡಿಯಿಂದಿಳಿದು ನಿಲ್ದಾಣದ ಉದ್ದನೆಯ
ಜಗಲಿಯಲಿ ನಡೆದರ್ ಗಜಗಾಂಭೀರ್ಯದಿಂ. ಕಣ್
ನೋಟ ಹರಿಯಿತ್ತು ಸುತ್ತಮುತ್ತಲ್. ಜನ-ಜನವೇ
ಜನ. ಹಿಂದೆ ಮುಂದೆ ಓಡಾಡುತಿರ್ದುದು ತಮ್ಮ
ತಮ್ಮಗಳ ಕಾರ್ಯಭಾರದಿಂ. ಮೈಮನ ಮುದುಡಿ
ಮುರುಟಿದುದೊ ಎನೆ ಅಕಾಲ ವೃದ್ಧಾಪ್ಯಮೆಸೆವುದು
ಬಹುಜನರ ಮುಖಮಂಡಲಗಳಲಿ. ಗುರುವರಂ
ಎಲ್ಲವಗೆಯ ಜನರ ಪರಿಧಿಯಂ ದಾಂಟಿ ನಗರಿಯ
ಹೃದಯದ ಹೆಗ್ಗುಡಿಯೆನೆ ಪೆಸರ್ವೆತ್ತ ಉತ್ತಮ

ಖಾನಾವಳಿಯುಲ ಕಳೆದರ್ ದಶದಿನಂಗಳಂ.
ಅಲ್ಲಿಗೆ ಬರಹೋಗುವ ಜನರಾಶಿಗೆ ಗುರುವಿನ
ಪರಿಚಯಂ ಅಲ್ಪಸ್ವಲ್ಪಗತಿಯಲಿ ತಿಳಿದು ಬರೆ
ಹಬ್ಬಿ ಹರಡುತಲಿರ್ದುದು ಸುದ್ದಿ ಪರಮ ಕಸ್ತುರಿ
ಪರಿಮಳದ ಮಾಳ್ಕೆಯಲಿ!
ಕಲಿಕತ್ತೆ ನಗರಿಯಿಂ
ಬಹ ದೈನಂದಿನ ಪತ್ರಿಕೆಯೊಂದು ಹಸಿವಿನಿಂದೆ
ಬಳಲಿ ತೊಳಲಿ ಮರಣಗತಿಗೆ ಸಂದ ವ್ಯಕ್ತಿಯಂ
ಕುರಿತು ತಿಳಿಪಿದ ಸುದ್ದಿ ಹೃನ್ಮನಂಗಳ ಕೊರೆಕೊರೆದು
ನೀರಿಳಿಸಿತು. ಮರ್ಮರ ಮರುಗಿದರ್ ಸ್ವಾಮಿಜಿ.
ಆ ದಾರುಣ ಸುದ್ದಿ ಮನಕೊರೆಯುವ ಭೃಂಗವೇ
ಆಗಿರೆ, ಅದೇ ಸುದ್ದಿ ಚಿತ್ರ ಸುಳಿವುದು ಅಕ್ಷಿ
ಪಟಲಗಳ ಮೇಲೆ. 'ಅಹ ಎಂತೆಂತು ಕರ್ಣಗಳ
ಕಠೋರಂ ಈ ಕಠಿಣತರ ಸುದ್ದಿ? ಸಮೃದ್ಧ
ದೇಶಮಿರ್ದು ಪಸಿವೆಯ ಕರಾಳ ಕರದಲಿ ನೆರೆ
ಸಿಲ್ಕಿ ಮರಣ! ಹಾ, ಎಮ್ಮ ದೇಶವೆ!' ಮರ್ಮರನೆ
ಮರುಗಿತು ಎದೆಯಕುಟಿಯೊಳ್ ಪ್ರಾಣಕಣ. ತಮ್ಮೊಳ್
ತಾಮೆ ಪರ್ಯಾಲೋಚನೆಗೈದು ಮನೋನಿಧಿಯ
ಸೈಪಿ ಬೇವಸದಿಂದೆ ಸಾವರಿಸಿ ತರಿಸಂದು
ಭಾವನಾಲೋಕದೊಳ್ ಎಲ್ಲವಂ ಈಶ್ವರಾ -
ರ್ಪಣೆಯಂಗೈದರ್. ಅಲ್ಲಿಂದೆ, ಪಯಣಂಬೋದು
ಕರುನಾಡಿನಲಿ ಪರಮ ನಗರಿಯನೆ ಪ್ರಸಿದ್ಧಿ
ಪಡೆದ ಬೆಂಗಳೂರಿಗೈದಿದಾ ಗುರುದೇವಂ.
ಸುಂದರ ನಗರಿಯ ಸುಂದರ ನ್ಯಾಸ. ಸುಸುಂದರ
ವಾತಾವರಣ. ಸುರಸುಂದರ ಉದ್ಯಾನದ ಹಾದಿ

ಒಡಿದವೊಲ್ ಎಲ್ಲವುಂ ಸುಂದರತರವೆ! ಅಹಾ!
ನಾಡಿನ ಹಿರಿಮೆಗರಿಮೆಗಳಂ ಸಾರಿ ಹೇಳುವ
ತೆರದಲಿ ಕಣ್ ದೃಷ್ಟಿಗೆಸೆದುದು ನಗರಿ ಮನೋಜ್ಞ
ರೂಪಿನಲಿ. ಸ್ವಾಮೀಜಿಯುಂ ಕೆಲದಿನಮಾನಂ
ಅಜ್ಞಾತಗತಿಯಲುಳಿದರ್. ಆ ಕೆಂಬೆಂಕೆಯ ಕಿಡಿ
ಭರಣಿಯಲಿ ಮುಚ್ಚಿಡಲಹುದೆ? ಒರ್ಮೆ ಧೀಮಂತ
ದೃಷ್ಟಿಯುಷ್ಟಿಯುಂ ಹರಿಯಲಿತ್ತಲ್, ಒಡನೊಡನೆ
ಬೆಳಕಿಗೆಬಂದರ್ ಸ್ವಾಮೀಜಿ. ಯುವರಿಸಿಯ ಕೀರ್ತಿ
ಪರಿಮಳ ಪಸರಿಸಿದುದು ಊರಿನಗಲ. ರಾಜ್ಯದ
ದಿವಾನರಾಗಿರ್ದು, ಶೇಷಾದ್ರಿ ಐಯ್ಯರೆನೆ
ಪೆಸರಾಂತ ಗಣ್ಯವ್ಯಕ್ತಿಯುಂ ಸ್ವಾಮೀಜಿಯಂ
ಕಂಡು ಮಾತಾಡಿ ಪರಿಚಯಂ ಪಡೆದು ಅದ್ಭುತ
ಧೀಶಕ್ತಿಯನರಿದರ್. ಯುವರಿಸಿಯ ವದನಮಂ
ಕಂಡಾಗಳ್ ಷೋಡಶಕಳೆಯುಕ್ಕುವ ವರ್ಚಸ್ಸು
ಒರ್ಮೆಗೇ ಆತ್ಮದರ್ಶನಮಾಡಿಸಿತು! ಬಳಿಕ
ತಮ್ಮ ಬಿಡದಿಯೊಳಿಹ ಕೊಠಡಿಗೆ ಬರಮಾಡುತೆಲ್ಲ
ಸೌಕರ್ಯವನಿತ್ತು ಗೌರವಾದರಗಳಿಂದಲಿ
ಸತ್ಕರಿಸಿದರ್ ಮೇಣ್ ತಮ್ಮೆಲ್ಲಿ ಮಿತ್ರರಂ
ಬರಮಾಡಿ ಸ್ವಾಮೀಜಿಯ ವಿಚಾರವನೊರೆಯುತೆ
"ಅಹ ಈ ಮನೀಷಿಯುಂ ಸಾಮಾನ್ಯನಲ್ಲವನೆ
ಅನ್ಯಮಲ್ತು. ಪರಮ ಧೀಮಂತನುಂ ಮೇಧಾವಿ
ವ್ಯಕ್ತಿಯುಂ ಆಗಿರ್ಪ ತರುಣರಿಸಿ! ಮುಂದಿವಗೆ
ಎಂದಾಡೊಡಂ ಸತ್ಕೀರ್ತಿ ಲಕ್ಷ್ಮಿಯು ಮಾಲೆಯಂ
ತೊಡಿಸುವುದರೊಳ್ ಸಂಕೆಯುಮಿಲ್ಲವೆನೆ ಎನ್ನಯ
ಮನಕೆ ಓತಮಿಹುದು. ನೀಮೆಲ್ಲ ಪರಿಚಯಹೊಂದಿ

ಮಾತಾಡಿ ಅವರಾತ್ಮದಾಳದಲಿ ಮುಳುಗೆದ್ದು
ತಿಳಿದೊಡಲ್ಲದೆ ಎಂಬಹುದು? ವದನದರ್ಶನವೆ
ಸಾಲ್ಗುಮೆನಲ್ ಹೃದಯದಾಳದಮೃತರಸ
ಪಾನದದೃಷ್ಟವೇ ಕೈದಪ್ಪುವುದು. ಅಹ ಆವಾವ
ದೈವಕೃಪೆಯೋ ಇಂತೊಂದು ಘನವಾದ ಸುರ
ಜ್ಞಾನವಂ ಬೆಳಸುವೊಡೆ. ನೋಡಲಿಂ ಯುವರಿಸಿಯೆ!
ಈಗಳೇ ಇನಿತೊಂದು ಘನಪಾಂಡಿತ್ಯವೆನೆ ಬಲ್
ಅಚ್ಚರಿಯ ವಿಚಾರಂ. ಎಮ್ಮೊಳೆನಿತೊ ಧಾರ್ಮಿಕ
ತತ್ತ್ವವೇತ್ತರಿರ್ಪರ್. ಈ ಪ್ರವಾದಿಯ ಮುಂದೆ
ಅವರೆತ್ತ? ನೇಸರಿನ ಮುಂತೆ ಹೊನ್ನೆಹುಳುವೆನೆ
ತಪ್ಪಲ್ಲ! ಈಯೊಂದು ಅಂತರಬೆಂತರಕೇನ್ನೆ
ಅರ್ಥ? ಈವಗೆಯ ಅಂತರ್ದೃಷ್ಟಿಯಂ ಮೀರಿ
ಬೆಳೆದ ಶಕ್ತಿಸಂಪದಂ ಆನೆಲ್ಲು ಕಂಡೆನಿಲ್ಲ.
ಏಂ ದಿವ್ಯ ದೃಷ್ಟಿಯೋ, ಏಂ ಭವ್ಯ ಮಾನವತೆ
ಯೈಶ್ವರ್ಯಮೋ! ಅಮಮ! ಅದ್ಭುತ ಆಗಾಧ
ಚಿಚ್ಛಕ್ತಿಯಂ ಹಿಂದೆಮೆಲ್ಲಿಯುಂ ಕೇಳರಿದೆನಿಲ್ಲ.
ಮುಂದೆಯುಂ ಇಲ್ಲ. ಸೂರ್ಯದರ್ಪಣ ಕೆಡವಿದ
ಕಿರುಮುರಿಕಣವೊಂದು ಕಲಿಯುಗೀಯ ಕಾಲಮಂ
ಚಿನ್ಮಯಗೊಳಿಸಿತೋ ಎಂದಾನೆನ್ನೊಳ್ ಯೋಚಿಸಿ
ಯೋಚಿಸಿ ದಣಿಯುತಿಹೆನ್. ಅಂತಿಂತು ಈ
ತರುಣ ಘನ ಮಹಿಮನೆ ವಲಂ. ಈಗಾಗಳೇ
ಪ್ರಾಚ್ಯ ಪಾಶ್ಚಾತ್ಯ ದರ್ಶನಂಗಳಲಿಯಲ್ಲದೆ
ವೇದ ವೇದಾಂತ ಶಾಸ್ತ್ರಂಗಳಲಿ ಇನಿತೊಂದು
ಪ್ರಾವೀಣ್ಯತೆಯಂಬಡೆದು ತುಟ್ಟತುದಿಗೇರ್ದುದೆನೆ
ಸಾಮಾನ್ಯಮೇನಲ್ಲ. ಅಮಮ ನಿಜ ಅದ್ಭುತಂ!"

ದಿವಾನರ್ ಮೇಣವರ ಮಿತ್ರಮಂಡಲಿಯು ಬಲು
ಧರ್ಮಶ್ರದ್ಧೆಯಿಂ ಕುಳಿತು ಪ್ರವಚನಗಳನುಂ
ಆಲೈಸುತಿರೆ ಹೃನ್ಮಗ್ಗಳಂ ನಟ್ಟು ಮೈಯೆಲ್ಲ
ಮನಸ್ಸಾಗಿ; ಕಳೆದುದೆನಿತೊವೊಳ್ತು. ಗುರುವರಂ
"ದಿವಾನರೇ ಕೇಳಿ, ಇಂದಿನ ವಿಚಾರವಾಹಿಯ
ಅಂಗವಾಗಿ ಶ್ಲೋಕವೊಂದಂ ಬಿತ್ತರಿಸುವೆನ್.
ವೈಚಾರಿಕತೆಗೆ ಮುನ್ನಮಿೂ ಶ್ಲೋಕಮಂ ಅರಿತು
ಕೊಂಬುದುತ್ತಮಮ್. ಇದರ ರಸಾನುಭವವಂ ಪಡೆದ
ಬಳಿಕ ನಿಮಗೆಲ್ಲವುಂ ಸುಲಭ ಸಾಧ್ಯಮಪ್ಪುದು,
ಶಾಸ್ತ್ರಾರ್ಥಮಂ ಅರಿತು ಹೃನ್ಮನಂ ತುಂಬುವೊಡೆ;

"ಶೃತಿರ್ವಿಭಿನ್ನ ಸ್ಮೃತಯೋಽಪಿ ಭಿನ್ನಃ
ತಥಾ ಮುನೀನಾಂ ಮತಯೋಽಪಿ ಭಿನ್ನಃ ।
ಧರ್ಮಸ್ಯತತ್ತ್ವಂ ನಿಹಿತಾಂ ಗುಹಾ ಯಾಂ
ಮಹಾಜನೋ ಏನಗತಃ ಸ ಪಂಥಾಃ ॥"

ಶ್ಲೋಕಾರ್ಥ ವಿವರಣೆಯ ನೊರೆದು ಧರ್ಮಚರ್ಚೆಯ
ನಡೆಸಿ ಚೆಂಬೆಳಕು ನೀಡಿದರ್ ದಿವಾನರ ಶ್ರದ್ಧೆ
ಭಕ್ತಿಗಳ್ ತುಂಬಿದ ಮನೋದಧಿಗೆ. ಪ್ರವಚನದ
ಸಾರ ಸರ್ವಸ್ವ ಮನದುಂಬೆ ಹೃದಯ ಕಲಶ ತಾಂ
ತುಂಬಿದಕೊಡಮಾಯಿತೊ ಎನಲ್ಕೆ ದಿವಾನರುಂ
ಗುರುವರ್ಯನಂ ತಮ್ಮೊಡನೆ ರಾಜಧಾನಿಯೆನೆ
ಪ್ರಸಿದ್ಧಿಯೊಡೆದ ಮೈಸೂರಿಗೆ ಕರೆದೊಯ್ದು ಶ್ರೀ
ಚಾಮರಾಜ ಒಡೆಯರ್ಗೆ ಪರಿಚಯಿಸುವ ದಿವ್ಯತಮ
ಪಂಬಲಂ ಮೂಡಿರೆ ಮನದಲಿ, ಯುವ ಜ್ಞಾನಿಯಂ
ಕಂಡು ಮಾತಾಡಿ ಪೊರಡಲೊಪ್ಪಿಗೆಯಂ ಪಡೆದು
ನಿರ್ಣಯಿಸಿದರಾ ಪಯಣದ ವೇಳೆಯಂ. ಅದೇ

ಆಗಳೇ ವಾಹನವದು ಅಣಿಯಾಗೆ ಎಲ್ಲರ್
ಏರಿದರ್ ಗುರುವರ್ಯನೊಡಂ ಆ ವಾಹನಂ.
ಓರಿ ಸದ್ದಿನೊಡನೆ ಹೊರಟಿತಾ ಯಂತ್ರಸುಸಜ್ಜಿತ
ವಾಹನಂ, ರಾಜಧಾನಿ ಮೈಸೂರು ನಗರಂ
ಗುರಿಗೊಂಡು. ಬೆಂಗಳೂರ್ ನಗರಂ ದಾಂಟಿ ಗ್ರಾಮ್ಯ
ಭೂ ಧಾತ್ರಿಯಂ ಬೊಕ್ಕೊಡನೆ ಅಮೋಘ ನಿಸರ್ಗ
ಸೌಂದರ್ಯ ರಾಶಿಯ ನಡುವೆ ಕೊರೆದ ಪಥದಲಿ
ಹರಿಯಿತಾ ವಾಹನಂ. ಇಕ್ಕೆಲದ ಪ್ರಕೃತಿಯ
ವೈಭವದಲಿ ಹರಿದಾಡಿದುವು ನೆಟ್ಟ ಕಣ್ಣುಗಳ್
ಸ್ವಾಮಿಜಿಯ. ಆ ಸಂದೃಶ್ಯಮಾನ ಅದ್ಭುತ
ಮಹೋನ್ನತ ಸೌಂದರ್ಯ ನೋನೋಳ್ಪ ಕಂಗಳಿಗೆ
ಆಪ್ಯಾಯಮಾನಂ. ಸಿರಿಭೂವಲಯದಲಿ ಕೃಷಿ
ಕ್ಷೇತ್ರಮೆಸೆದುದು ಪಚ್ಚ ಪಡಲ್ ಶೋಭಾಶ್ರೈಲಿ
ಮೆರೆಸಿ. ಹೊಲಗದ್ದೆ ತೋಂಟಗಳ್ ನಳನಳಿಸಿರಲ್
ನೋಳ್ಪ ಕಣ್ಮನಂ ಮಧುಮಯಂ. ತ್ರಿಲೋಕದೊಳ್
ಕಲ್ಪವೃಕ್ಷವೆನೆ ಪ್ರಖ್ಯಾತಿಗೊಂಡ ತೆಂಗಿನ
ತೋಂಟಗಳ್, ತಲದಲಿ ಇತರಿತರ ಹಸುರುವೊತ್ತ
ಮುಂಬೆಳೆಗಳ ಸುಂದರ ಹಾಸು. ತೆಂಗಿನ ತೋಂಟಂ
ತನ್ನ ಉದ್ದಗಲದೊಳ್ ನಳನಳಿಪ ತನ್ನಂಗಿ
ನೀರೆಯರೆನೆ ಶೋಭಿಸುವ ಬಾಳೆ ಸತಿಯರಂ
ಪೊಂದಿ ಆನಂದಮೋದದಿಂ ಓಲೈಸಿ ಓಲೈಸಿ
ಓಲಾಡುತಿವೆ ಎಲೆಎಲೆಗಳ ಮರ್ಮರ ಶ್ರುತಿ
ಸ್ವನದಿಂ ಬೀಗಿ. ದೇಶೋವಿಶಾಲಂ ದಿವ್ಯ
ಮನೋಹರ ರೂಪು ಮನಾಕರ್ಷಣೀಯಮಾದುದು
ಕಣ್ ಮಲರುವಂತೆ. ಬಹುದೂರದ ಹಾದಿಯಂ

ಕಳೆದು ರಾಜಧಾನಿಯಂ ಬೊಕ್ಕು ಅರಮನೆಯ ಮುಂ-
ಗಡೆಯಲಿ ಮಹಾ ದ್ವಾರದ ಒಳಬೊಕ್ಕು ನಿಂತಿತು
ವಾಹನಂ ಗಕ್ಕನೆ ಕಡಿವಣ ಬಿಗಿದವೊಲ್. ಆ
ಅರಮನೆಯ ದ್ವಾರ ಪಾಲಕರ್ ಮುಂದ್ಯೆದು ಅತಿಥಿ
ಗುರುವರನನು ಬರಮಾಡಿದರ್ ಕರದ್ವಯಗಳಂ
ಜೋಡಿಸಿ. ಅರಮನೆಯಾಸ್ಥಾನದಲಿಯೆ ರಾಜರ
ಭೇಟಿಯಾಯ್ತು. ದಿವಾನರ್ ತಮ್ಮ ಗೆಣೆಯರೊಡಂ
ಅಧಿಕಾರಿ ವರ್ಗದೊಡಂ ಭೇಟಿವೆರಸಿ ಪರಿಚಯ
ಬೆಳಸಿರಲ್, ಸಾನಂದದ ಕಳೆಬೆಳಗಿತು ಸಭೆಯ
ತುಂಬ. ರಾಜರ ದೃಷ್ಟಿ ಹರಿಯಿತು ಯುವ ಗುರುವಿನ
ಮೇಲೆ. ಚಂದನ ಕಾಂತಿಯ ಮನೋಹರ ವ್ಯಕ್ತಿಯ
ವದನಶ್ರೀ ಸೆಳೆಯಿತು ಕಣ್ ಮನಗಳನೊರ್ಮೆಗೇ
ಸೂಜಿಗಲ್ಲಿನ ಪಾಂಗಿನಲಿ. ಅಹ ಶುಕಮುನಿಯಂ
ಹೋಲ್ವಿನಂ ನೋಡಿಯೇ ನೋಡಿದರ್ ಕಣ್ ಕೀಲಿಸದೆ.
ಅಂದು, ದಿನಚರಿ ಧ್ಯಾನದಲ್ಲಿರಲ್ ಸ್ವಾಮಿಜಿ
ಘನಿಸಿರ್ದ ಮನೋಗತ ತಪಸಿದ್ಧಿಯಲಿ ಆತ್ಮ
ಪಕ್ಷಿಯುಂ ಹಾರಿದುದು ಗಾಳಿವಟ್ಟೆಯಲಿ ತಾಂ
ಒಯ್ಯನೊಯ್ಯನೊಯ್ಯನೆಯೆ ತೇಲುವ ಪಕ್ಕಿಯೊಲ್
ಭಾವನಾವೇಶದಲಿ. ಬಹುದಿನಗಳಿಂದೊದಗದ
ಪ್ರಶಾಂತಮಯ ಘನತೆಯಿರುತಿರೆ ಸುಖ ಶಾಂತಿಯ
ಮಡಿಲಿನಲಿ ಕಳೆದುದೆನಿತೋ ಪೊಳ್ತು. ಬಳಿಕಂ
ಬಾಗಿಲಲಿ ಕರೆದ ಮೆಲು ಸದ್ದು ಮನವಂ ಮುಟ್ಟಿ
ಎಚ್ಚರಿಸಿತು. ಮೈಮುರಿದೇಳುತೆ ತೆರೆದರ್ ಮುಂ
ಬಾಗಿಲಂ ಗುರುವರಂ. ರಾಜಸಭೆಗೆ ಕರೆಯಂ
ಹಚ್ಚ ಹಸಿರು ಪತ್ರದಲಿ ತಂದಿರ್ದನ್ ದೂತ,

ಹರಿವಾಣಮಂ ಮುಂದಿರಿಸಿ "ರಾಜರೊರೆಸಿಹ
ಓಲೆಯುವಿದು" ಎಂದನತಿ ವಿನಯದಲಿ. ಆಗಳ್
ದೂತನೊಡನೆ ನಡೆದರ್ ಸ್ವಾಮೀಜಿ, ರಾಜಸಭೆ
ನಡೆಯುತಿರ್ದ ಸಭಾಂಗಣಕೆ. ಅಲ್ಲಿ ಕೆಲವಾನು
ಅಧಿಕಾರಿಗಳ್, ಪಂಡಿತರ್ ಇರ್ದರ್. ರಾಜರ್
ಇರ್ದರ್ ರಾಜೋಚಿತ ವೇಶಭೂಷಣಗಳ ಭವ್ಯ
ಭಂಗಿಯಲಿ. ಸಭೆಯ ಕಾರ್ಯಕಲಾಪಗಳ್ ಮೆರೆಯೆ
ಕಳೆಯೇರಿತು ಸಭೆಯಲಿ. ಗುರುವರಂ ಪ್ರವೇಶ
ದ್ವಾರದೊಳ್ ಒಳಗೈತರಲೆಲ್ಲರ್ ಎದ್ದುನಿಂತು
ಗೌರವ ತೋರ್ದು ಬರಮಾಡಿ ಸ್ವಾಗತಿಸಿದರ್ ಅನು
ನಯದಿಂ. ಉಚಿತಾಸನವನೀಯುತೆ ರಾಜರುಂ
"ಕೂಡಿರಿ, ಗುರೂಜಿ" ಎಂದರ್ ಬಹುಲ ಭಕ್ತಿಯಲಿ,
ಚಾಮರಾಜ ಒಡೆಯರುಂ ಸಾಮೀಜಿಯಂ ಕುರಿತು,
"ಸ್ವಾಮೀಜಿ, ತಾವ್ ಭಾರತದಾದ್ಯಂತ ಸುತ್ತಿ
ಪರಿಭ್ರಮಣಂಗೈದು ಬಂದವರ್. ನಮ್ಮ ರಾಷ್ಟ್ರದ ಸ್ಥಿತಿ
ಗತಿಯಂ ಕಣ್ತುಂಬ ಕಂಡರಿದವರ್. ನೀವೇನ್
ಪೇಳ್ವಪಿರಿ ಭಾರತದ ಸಾಮ್ರಾಜ್ಯದ ಇರುವಂ
ಕುರಿತು? ಹಾ, ಏಂ ಕೇಳ್ವೆನ್? ಎನಿಸುವುದಾದೊಡಂ
ನಿಮ್ಮವೊಲ್ ಅನನ್ಯ ಅನುಭವಿಗಳ ಅಭಿಮತಮೆ
ಒಪ್ಪಮಲ್ತೆ? ಸ್ವಾಮೀಜಿ! ಕಂಡುದುದಂ ಕಂಡ
ರೀತಿಯೊಳ್ ಪೇಳ್ವುದರೊಳ್, ಕೇಳ್ವುದರೊಳ್ ಸಹಜತೆ
ಇರ್ಪುದು." ಸಿತಸ್ಮಿತ ವದನದೊಳ್ ಗುರುದೇವಂ.
"ಏಂ ಪೇಳ್ವೆಂ ಮಹಾರಾಜ? ಭಾರತ ಸಾಮ್ರಾಜ್ಯದ
ಸ್ಥಿತಿಗತಿಯ? ಸತ್ ಸಮೃದ್ಧ ರಾಷ್ಟ್ರಮಿಂದು ಬರಿ
ಎಲುಬುಗಳ ಹಂದರಮೆನಲ್ ಸಂಕಟಮಾದಪುದು. ಜಲ ನೆಲ

ವನಧಾತ್ರಿ ಖನಿಜ ಸಂಪತ್ತು ಎಲ್ಲವುಂ ಬಲ್
ಸಂಮೃದ್ಧಮಿರ್ದುಂ ನಯವಂತ ಜನರಿರ್ದುಂ ಕರ
ಕುಶಲತೆಯುಮಿರ್ದುಂ ಬಡತನಮೆನಲ್ ಎಂತಪ್ಪ
ಶೋಚನೀಯ? ಎಲ್ಲೆಡೆಯು ದಾರಿದ್ರ್ಯದೇವಿಯ
ದರ್ಶನಮೆ ಆಯ್ತು! ನೋಡಿದೆ, ನೋಡಲಾರದೆಯೆ
ನೋಡಿದೆನ್. ಗಗನ ಚುಂಬೀ ರಾಜ ಭವನಗಳ
ಸನಿಹದಲ್ಲಿಯೇ ಸಣ್ಣ ಗುಡಿಸಲುಗಳ ಮೇಳ......
ಮೇಳ. ಕರುಣಾಜನಕ ಸ್ಥಿತಿಯ ಜನರಾಶಿ. ನಿರಾಸೆಯ
ನಿಸ್ತೇಜದ ಮುಖಗಳ್. ಬಡಕಲು ಬಡಕಲಾದ
ಹಸು ಎತ್ತು ಎಮ್ಮೆಗಳ್; ಎಲ್ಲೆಡೆಯು ತಿಪ್ಪೆಗಳ
ರಾಶಿ. ಕಸದ ತೊಟ್ಟಿ. ಹೊಲಸು. ಹೊಲಸು. ಎಂದೊಡಿದೆ
ಸಾಲ್ಗುಂ. ಇದುವೇ ಇಂದಿನ ಭಾರತದೇಶಂ!
ರಾಜ, ಮಹಾರಾಜರ, ಧನಿಕರ ಟಾಕು ಠೀವಿಯೇ
ಬೇರೆ. ಇವರಿಗೇಕೆ ಬಡತನದರಿವಾಗದೊ ಕಾಣೆ!
ಅಂತಿಂತು ಸ್ವಾರ್ಥಸಾಧನೆಯೊಳ್ ಬದುಕಿಗೆ, ಈ
ಜೀವನದ ಅಶಾಶ್ವತತೆಯಂ ಶಾಶ್ವತಗೈವ
ಹಮ್ಮುಬಿಮ್ಮುಗಳಲ್ಲದೆ ಬೇರೇಂ ಕಾಣೆನ್.
ಇದೇ ಇಂದಿನ ಭಾರತದ ದಿವ್ಯ ಸ್ವರೂಪ!
ಅಗಾಧ ಜನರಾಶಿಯ ಕಾರುಣ್ಯಮಯ ಬದುಕು
ಒಂಡುವುದೆನ್ನ ಕರುಳಿನ ಬಳ್ಳಿಯಂ. ಅರೆಹೊಟ್ಟೆ
ಅರೆಬೆತ್ತಲೆ ಅಜ್ಞಾನ ಅತಂತ್ರಗಳೆ ಎಲ್ಲೆಲ್ಲು
ಎನಲ್ಕೆ ಮುಂದಿರ್ಪುದೊಂದೇ ಉದ್ಧರಣ ಕಾರ್ಯಂ.
ಮೊಟ್ಟಮೊದಲಿಗೆ ಅದರ ತಳಪಾಯಮೆನೆ ವಿದ್ಯೆ.
ಮಹೋನ್ನತ ವಿದ್ಯೆಯುಂ ಸಾರ್ವಜನಿಕರಿಂಗೆಟುಕಿ
ವರ ಪ್ರಜ್ಞಾನ ಹಬ್ಬಿಹರಡಿ ಒಳಗಣ್ ತೆರೆದು

ಆತ್ಮಶಕ್ತಿಯಂ ಅರಿತರಾದೊಡೆ ಭಾರತವೆ
ಜ್ಞಾನದೇಗುಲಮಾದಪುದು! ಅದಂ ನೆನೆಸಿಕೊ.
ಇಂದಿನೀ ಬಡತನ ಜಡತನಗಳ ಹಂದರಂ
ರಕ್ತಮಾಂಸದಿಂ ತುಂತುಂಬಿ ಜ್ಞಾನ ತುಂಬಿದ
ಬದುಕಂ ನೆನೆಪಿಸಿಕೊ. ಜಾತಿಗಳ ಹೀನ ತೊಡಕಂ
ಗಡಿ ದಾಂಟಿಸಿ ಆನಂದ ಮೋದದಿಂ ಮೆರೆಯುವ
ಚಿತ್ರಮಂ ನೆನಪಿಸಿಕೊ...."
ನುಡಿಯುತಿರೆ ಸ್ವಾಮಿಜಿ
ಭಾವೋದ್ವೇಗದಿಂ ಮೊಗದ ಕಳೆಯುಂ ಪೆರ್ಚಿರಲ್
ದೇವೇಂದ್ರ ಸನ್ನಿಭನೆನೆ ತೇಜೋಮಯಿಯಾಗಿ
ಕಣ್ಗೆಸೆದನ್ ಕಾಷಾಯ ವಸನಧಾರಿ! ಷೋಡಶ
ಕಳಾನಿಧಿ, ಅಜಾನು ಬಾಹು ಎಲ್ಲವುಂ ಕೂಡಿ
ಮೂರ್ತೀಭವಿಸಿದುದೋ ಎಂಬವೊಲ್ ಕಂಗೊಳಿಸಿದ
ಯುವ ಮನೀಷಿಯಂ ಅಧಿಕಾರಿವರ್ಗ ಮತ್ತಮಾ
ಪಂಡಿತರ ವರ್ಗ ಕಣ್ಣೆಟ್ಟು ನೋಡಿದುದು! ಮನದಿ
ಬೆಮೆ ತುಂಬಿರೆ ತುಟಿಗಳ್ ಬಿರಿಯದಾದುವು. ಮತ್ತೆ
ಸ್ವಾಮಿಜಿಯೆ ಇಂತೆಂದರ್ "ಇಂದು, ಧಾರ್ಮಿಕ
ಭಾವನೆಯೆ ಲುಪ್ತವಾದವೊಲ್ ಎಲ್ಲೆಡೆಗಳಲಿ
ಅಶ್ರದ್ಧೆಯ ಜೊತೆಗೆ ಬೆಳೆದ ಅಸಡ್ಡೆ ಹೆಡೆಯೆತ್ತಿ
ನಿಲ್ದಿ ಫಣಿಯಂತೆ ತೋರ್ವುದು. ಅತೀವ ನಿರಾಸೆ
ನಿರಾಸಕ್ತಿ ಬೆಳೆಯುತಿದೆ; ರಾಷ್ಟ್ರದ ಉದ್ದಗಲದ
ವ್ಯಾಪ್ತಿಯಲಿ ಭಾರತೀಯತೆಯ ನಿಜ ಪೆಂಪು ವರ
ಸೊಂಪುಗಳ್ ಮಾಯಮಾದಂತೆ ನೀರಸ ಬದುಕು,
ಎಲ್ಲೆಡೆಯು ಕಾಣ್ಬ ಚಿತ್ರಂ. ಇದುಂ ಸೋಚನೀಯ.
ಜಾತಿಬೇಧ ವರ್ಗಬೇಧ ತತ್ತಳ ತುಳಿದಿದೆ

ದೀನ ದರಿದ್ರರಂ. ರಾಷ್ಟ್ರ ಕಣ್ಣಿರ್ದುಂ ಕುರುಡು.
ಇಂದಿನ ಪರಿಸ್ಥಿತಿ ನೋಡಿ! ಸತ್ತ್ವಗುಣದ ಸೋಗು
ಹಾಕುತೆಮ್ಮಯ ರಾಷ್ಟ್ರವುಂ ತಮಸ್ಸಿನಲಿ, ಘೋರ
ಅಜ್ಞಾನದಲಿ ಮುಳುಗುತಿಹುದನುಂ ಕಾಣಿರಾ?
ನೀವ್ ಕಾಣಿರಾ? ಸತ್ತ್ವ ಪರಿಪೂರ್ಣತೆ ದೂರ
ದೂರವಾಗುತಿಹುದು. ಪರಿಶುದ್ಧರಿಗೆ, ಇಚ್ಛಿತ
ಮನಸ್ಕರಿಗೆ ದಿವ್ಯ ಪರಮಹಂಸ ಸ್ಥಿತಿಯಂ
ಮುಟ್ಟುವೊಡೆ ಎಲ್ಲಿಹುದು ಶಕ್ತಿ? ಸಾಧಕರಿಂಗೆ
ರಜಸ್ಸೇ ಪ್ರಚಂಡ ಕ್ರಿಯಾಶೀಲವಲ್ಲದೆ
ಗತಿಯಿಲ್ಲ; ಗತಿಯಿಲ್ಲ. ಇಂತಿರಲ್ ರಜಸ್ಸಿನ
ಸ್ಥಿತಿಯಂ ದಾಂಟದೆಯೆ ಮನುಜ ಆ ಪರಿಪಕ್ವ
ಸ್ಥಿತಿಯಂ ಮುಟ್ಟುವುದೆಂತು? ಭೋಗಲಾಲಸೆ
ಹಿಂಗಿಸದೆ ಯೋಗಸಿದ್ಧಿ-ಭಗವಂತನ ಪ್ರಾಪ್ತಿಯು
ಎಂತು ಸಾಧ್ಯಂ? ಸುಖಭೋಗಗಳ ಆಕರ್ಷಣೆಯು
ಕಳೆಯದೆ ವಿರಕ್ತಿ ಬಂದಪುದೆ? ಭಕ್ತಿಧ್ಯಾನದೊಳ್
ಪರಿಪಕ್ವತೆಯಿರ್ದೊಡೆ ಸಾಧನೆಯದು ಸುಲಭ
ಸಾಧ್ಯಮಪ್ಪುದು. ಬಹುಲ ಕಾಲದಿಂ ಭಾರತದೊಳ್
ಧರ್ಮ ಜಡವಾಗಿ ಬಿಳ್ದು ಹೊರಳುತಿಹುದು. ಅದಂ
ಸ್ಥಿತಿಶೀಲಗೊಳಿಸದೆ ಗತಿಯಿಲ್ಲವು. ಧರ್ಮವಂ
ರಾಜನಿಂ ರೈತನತನಕ ರಾಜಮಹಲಿನಿಂ
ಗುಡಿಸಲತನಕ ಒಯ್ದು ಮುಟ್ಟಿಸಲ್ ವೇಳ್ಕುಂ.
ಭಾರತಕೆ ಭಗವಂತನುಂ ಕರುಣಿಸಿಹ ಧರ್ಮ
ಅನರ್ಘ್ಯರತ್ನ. ಅದರ ನಿಜ ಪ್ರಚಾರದ ಕಾರ್ಯ
ಭಾರ ವಿದ್ಯುಜ್ಜನರಿಗೆ ಸಲ್ಲುವ ಪ್ರಸಾದ.
ಆ ವಿದ್ಯುದ್ದೀಪವಂ ಎತ್ತಿಹಿಡಿದು ಎಲ್ಲರ

ಮನಮನಗಳಿಗೆ ತಗುವಂತೆವೊಲ್ ಮುಟ್ಟಿಸಿ!
ಎಚ್ಚರಿಸಿ! ಏಳಿ, ಎದ್ದೇಳಿ! ಇಂದಿನೀ ಗತಿ
ಮುಂಬರಿಯಗೊಡಿಸದೆ ತಡೆಗಟ್ಟೆಯಂ ಒಡ್ಡುವೊಡೆ
ಎಡೆಎಡೆಗಳಲಿ ಜ್ಞಾನದೇಗುಲಗಳ್ ಮೂಡದೆ,
ವಿದ್ಯೆ ಸಾರ್ವಜನಿಕ ಮನಮತಿಯಂ ಮುಟ್ಟದೆಯೆ
ಎಲ್ಲಿಯ ಜನ ಪ್ರಗತಿ? ಸಣ್ಣಪುಟ್ಟ ಪಂಥಗಳ್
ನಿರ್ಮಿಸಿ ಮತ ಬೇಧಗಳ ಬಗೆಗೆ ವಾಗ್ವಾದಂ
ಹೂಡುವುದರಿಂದೇನಾಗದು. ಸರ್ವ ಸಮ್ಮತ
ಧರ್ಮವಂ ಪ್ರಚಾರ ಮಾಳ್ಪುದೇ ನಿಜವ್ರತ.
"ಯೋವ: ಶಿವತಮೋ ರಸಸ್ತಸ್ಯ ಭಾಜಯ
ತೇಹನ: ಉಪತೀರಿವ ಮಾತರ:" ಇದಂ
ನಿಂನಿಮ್ಮೊಳ್ ಅರ್ಥೈಸಿರಿ. ಜಡತನಮಂ ಮುಟ್ಟಿ
ತಟ್ಟಿ ಎಚ್ಚರಗೊಳಿಪುದೆ ಮಾನವ ಧರ್ಮ-ಕರ್ಮ.
    ಸಭೆ ಆಲೈಸಿತು ಸ್ತಬ್ಧಗತಿಯಲಿ. ಅದೆ ಚಣದೊಳ್
ನೇಸರಿಳಿದು ಪಶ್ಚಿಮ ಕಡಲ ತಟನಿಯಲಿ ಮುಳುಗಿ
ಸೇರ್ದುದು ಅನನ್ಯ ಲೋಕಮಂ. ಸಭೆ ಚದುರಿದುದು.
ಸ್ವಾಮೀಜಿಯುಂ ತಮ್ಮಯ ಬಿಡದಿಗೆ ಪಿಂದಿರುಗಿ
ಸಂಧ್ಯಾವಂದನೆಯೊಳ್ ಮನವಿಟ್ಟರ್ ಕಣ್ಮುಗಿದು.

ಹರಿಃ ಓಂ ತತ್ ಸತ್

❋ ❋

ಷೋಡಶೋಲ್ಲಾಸಂ

ಮನುಕುಲ ಪ್ರೇಮಿ

"ಆಯಂ ನಾಭಾ ವದತಿ ವಲ್ಗುವೋ ಗೃಹೇ
ದೇವ ಪುತ್ರಾ ಋಷಯಸ್ತಚ್ಛೃಣೋತನ ।
ಸುಬ್ರಹ್ಮಣ್ಯಮಂಗಿರಸೋ ವೋ ಅಸ್ತು
ಪ್ರತಿ ಗೃಭ್ಣೀತ ಮಾನವಂಶು ಮೇಧಸಃ ।"

ಮೈಸೂರೊಡೆಯ ಚಾಮರಾಜರುಂ ತರುಣರಿಸಿ
ರಾಜರ್ಷಿ ತೇಜ ಸ್ವಾಮಿಾಜಿಯೊಳ್ ಹೃನ್ಮನಂ
ನಟ್ಟು ನಾಂಟಿ ಪ್ರಗಾಢ ಸ್ನೇಹದ ಬಳ್ಳಿಯಂ
ಬೆಳಸಿದರ್ ನಳನಳಿಸುವ ತೆರದಲಿ. ತರುಣನುಂ
ಅನಿತನಿತೆ ಸುಲಭದಲಿ ರಾಜವೈಭವಕೆ ಮಾರು
ಹೋದಪನೇಂ? ಎಲ್ಲೆಲ್ಲಿ ಕುಂದುಕೊರತೆ ಕಂಡೊಡೆ
ಅದನಲ್ಲಿಯೆ ಖಂಡಿಸಿ ಒಪ್ಪುತಪ್ಪುಗಳ್ ತಿಳಿ
ಪಡಿಸಿ ತಿದ್ದುವರ್, ತಿದ್ದುವರ್ ನಿರ್ಭೀತಿಯಿಂ.
ವೇದಗಳ ಸಾರವಂ ಓಂಜಿ ಓಂಡಿ ತೋರ್ಲ್ವೊಲ್
ನುಡಿವರ್ ದೃಢಗತಿಯಲಿ. "ರಾಜಾಧಿರಾಜರುಂ
ಆಡಂಬರಕ್ಕೆ ಮರುಳಪ್ಪುವುದೆ ಸಹಜಮಿರೆ
ರಾಜಕಾರ್ಯಭಾರಕೆ ತೊಡಕಾದಪುದು ಸಹಜ.
ಭಾರತದ ರಾಜಮಹಾರಾಜರುಗಳ್ ತಮ್ಮಯ
ಆಡಂಬರ ಬದುಕಿಗೆ ಇತಿಶ್ರೀ ಹಾಡುವುದೊಳಿತು".
"ನ ಧನೇನ ನ ಚೇಜ್ಯಯಾ ತಾಗೇನೈಕೇನ
ಅಮೃತತ್ವ ಮಾನುಷಃ"
ಸ್ವಾಮಿಾಜಿಯುಂ ವದನ
ಮಂಡಲದೊಳ್ ಭೀಷ್ಮಸಂಮೋಹನ ಮಂದ ಸ್ಮಿತಮಂ

ಹರಿಸಿ ನುಡಿದಿರೆ ಚಾಮರಾಜ ಒಡೆಯರುಂ ಅತಿ
ಭಾವುಕತೆಯಿಂ ಬಿತ್ತರಿಸಿದರ್ "ಗುರೂಜಿ, ನೀಂ
ನುಡಿಮುದರೊಳ್ ಉತ್ಪ್ರೇಕ್ಷೆಯೇನಿಲ್ಲ, ಇದೆಲ್ಲ
ಕ್ರಮವತ್ ಕಾಲಾನುಕಾಲದಲಿ ಪೋದಪುದು,
ಎಂದೊಡಿದು ಸಾಂಪ್ರದಾಯಿಕಮಾದ ಉಡಿಗೆ ತೊಡಿಗೆ
ಇರಲ್, ಅವಿಂದಿಗುಂ ಪ್ರಸ್ತುತಮಾದುದು ದಿಟಂ."
ಒರ್ಮೆ ಚಾಮರಾಜ ಒಡೆಯರ್ ಆಸ್ಥಾನದೊಳ್
ಇರುತಿರೆ ಗುರುದೇವನಂ ಕುರಿತು ಹಸನ್ಮುಖದಿಂದೆ
ಮುಮ್ಮಾತುಗಳಲಿ ಮುಳುಗಿರುತಿರಲ್, ಎರ್ದೆಯೊಳ್
ಹುದುಗಿರ್ದ ಪ್ರಶ್ನೆಗಳ ಬಾಣವೊಂದಂ ಎಳೆದು
ತೆಗೆದೊಲ್ ಅಭಿಮಾನದಲಿ ಪ್ರಶ್ನಿಸಿದರೆಂತೆನೆ,
"ಗುರುದೇವ, ನಿಮ್ಮೊಳ್ಳೊಂದೆಮ್ಮ ಪ್ರಶ್ನೆಯಿರ್ಪುದು
ಕೇಳಿ, ಅದನಿನ್ನೆಬರಮಾನು ಶ್ರುತಪಡಿಸಲುರೆ
ನೆನೆದೆನಿಲ್ಲ. ಇಂದು, ಬರಿಮಾತಿಗಾಗಿ ಕೇಳ್ವೆವೆನ್,
ಸ್ವಾಮೀಜಿ. ಈ ನಮ್ಮಲ್ಲಿ ಅಧಿಕಾರಿವರ್ಗದ
ವಿಚಾರದೊಳ್ ತಮ್ಮಯ ಅಭಿಮತವನೇನೆಂದು
ತಿಳಿಯಬಯಸುವೆನ್."
ಒಡನೆ ಮಂದ ಸ್ಮಿತದಲಿ
ಅರಳಿ ಪ್ರಸನ್ನವಾದ ವದನದಿಂ ಗುರುವರಂ,
"ಮಹಾರಾಜ! ತಮ್ಮೊಳುಂ ಔದಾರ್ಯಮಿರುತಿರಲ್
ಎಲ್ಲ ಅಧಿಕಾರಿಗಳ್ ಬಲು ನೇಮದಿಂ ಮೇಣ್
ಶ್ರದ್ಧೆಯಿಂ ಮುತ್ತಿಪರ್ ಸುತ್ತಮುತ್ತ, ಇಂದಿನ
ಮಾನವ ಗುಣಮಿದು! ಅಧಿಕಾರಿಗಳ್ ಎಂದಿಗುಂ
ಅಧಿಕಾರಿಗಳೇ!....**ಕಾಂಚನ ಮಾಶ್ರಯಂತಿ**" ಆ
ಮಹೂರ್ತದೊಳ್ ಎಲ್ಲರ ಮುಖಮಂಡಲಗಳ್ ನಸು

ಗಪ್ಪು ತಳೆದು ಗಂಭೀರಮನನಾದರ್. ಆರ
ಬಾಯ್ ಪ್ರತಿ ನುಡಿಯಲ್ ಬಾರದೆಯೆ ಬಿಗಿದವೊಲ್
ಮಿಣ್ಣನಾದುವು. ಮಹಾರಾಜರ್ ಗುರುವರ್ಯನ
ಕಡೆಗೊರ್ಮೆ ಅಧಿಕಾರಿಗಳ ಕಡೆಗೊರ್ಮೆ ಮಿಣ್ಣನೆ
ನೋಡಿದರ್. ಹುಸಿನಗೆಯ ಮುದ್ರೆಯೊತ್ತಿದ ಮನಂ
ಗುರುವರ್ಯನ ದಿಟ್ಟತನಕೆ ಮೆಚ್ಚಿದೊಡಂ ಮನ
ಮಿಡುಕಿದರ್. ಆಸ್ಥಾನದ ಸಭೆಯುಂ ಮುಗಿದಿರಲ್
ಎಲ್ಲರುಂ ನಿರ್ಗಮಿಸಿದರ್. ಮಹಾರಾಜರುಂ
ಕಟ್ಟುಸಿರ್ ಬಿಟ್ಟವೊಲ್ ಒರ್ಮೆಗೆ, ಬೆಸಸಿದರ್,
"ಗುರುವರ್ಯ, ನೀಮಿಂತು ಎಲ್ಲರೆದುರ್ ನುಡಿವುದು
ಒಳ್ಳಿತಲ್ತು. ಎಲ್ಲರಂ ಸಭ್ಯರೆನಲುಂಟೇಂ?
ಮುಂದೆ ಮುಂದೆಯುಂ ನೀಮಿಂತಿರ್ದೊಡೆ ಕೇಡು
ಬಂದಪುದೆನಲಸ್ಯಮಲ್ತು. ಎನಿತೆನಿತೋ ಸಾದು
ಸಂತರಿಗೆ ದೇಶಭಕ್ತರಿಂಗೆ ವಿಷವೂಡಿಸಿ
ನಿರ್ನಾಮಗೈದುದಂ ತಾವರಿಯಿರಾ ಸ್ವಾಮಿ?"
ಒಡನೊಡನೆ ನಸುಕೋಪ ಸಂಮಿಶ್ರಿತ ದನಿಯಲಿ
ಬಿತ್ತರಿಸಿದರ್ ಸ್ವಾಮಿಜಿ "ಇದೇಂ ಪೇಳ್ವಿರಿ ನೀವ್?
ಜೀವವದು ಚಿಮ್ಮಿದೊಡಮಾನು ಅನೃತವನುಂ
ನುಡಿವೆನೇಂ? ಮುಂದೆ ನಿಮ್ಮೊಡಲ್ ಕುಡಿಗಳೆನ್ನಂ
ಕೇಳ್ದೊಡೆ ನಿಮ್ಮ ವಿಷಯಮಂ ತಿರುಚಿ ಇಲ್ಲದ
ಸಲ್ಲದ ಗುಣಗಳಂ ಸುರಿದು ಆರೋಪಿಸಿ ಪೊಗಳಿ
ಪಾಡಲೇಂ? ಅಂತು, ಮಿಥ್ಯಾವಾದಿಯಾದಪುದು
ತರವೇಂ? ಮುಖಸ್ತುತಿಗೈದು ಸುಳ್ಳುಪೊಳ್ಳು
ನುಡಿವುದದು ಆಸ್ಥಾನದಾ ಸ್ತುತಿ ಪಾಠಕರ
ಧರ್ಮ. ಸತ್ಯವಾದಂ ಸನ್ಯಾಸಿಗಳ ಧರ್ಮ."

ಇಂದ್ರ ದಿಙ್ನಗರಿಯಿಂ ನಡೆನಡೆದು ಪೊಳ್ತರೆಯ
ಚೆಂಬಿಸಿಲೊಳ್ ಮಿಾಯುತೆ ಕಾಲಯಾತ್ರಿಯುಂ ಕ್ಷಣ
ವಿಶ್ರಾಂತಿಗೊಂಡನೊ ಎನೆ ಮಧ್ಯಾಹ್ನದ ಬಿಸಿಲ
ಬೇಗೆಗೆ ಬಿಗುರ್ತು ತರುತಲವನಾಶ್ರಯಿಸಿದಂ.
ಪೊಳ್ತುರುಳೆ ವಿಶ್ರಮಿಕೊಂಡೆಳ್ದು ಮುಂದೆಸೆಗೆ
ಚಲಿಸಿದಂ, ಚಲಿಸಿದಂ ನೈರುತ್ಯ ದಿಗ್‌ದಿಶೆಯ
ಚಕ್ರಾಭಿಮುಖವಾಗಿ. ಆಗಳೇಂ ಚೆಂಗಾಂತಿ
ಹರಡಿದ ಹರವು? ದಿಗಂತದಲ್ಲಿ ದಿನೇಶನಾ
ಚಿತೆಯೊ ಎನೆ ಕೆಂಗಲಿಸಿದುದು ಹೃದಯ ಹಾರೀ
ಕೆಂಗೆಂಪಿನೋಕುಳಿ ಹರಿದವೊಲ್ ರಕ್ತಾಕ್ತ ವರ್ಣದಲಿ
ಪಡುವಣ ದಿಗ್ ಭಿತ್ತಿ.
ಮಹಾರಾಜ ಚಾಮರಾಜ
ಒಡೆಯರ್ ದಿನದಿನಂ ಗುರುವರನ ಅಗಾಧತರ
ಧರ್ಮ ಪ್ರಭಾಜ್ವಾಲೆಯ ಮೂಸೆಯಲಿ ಮುಳುಂಗಿ
ಪುಟವಿಟ್ಟು ಮಿಸುನಿಯೊಲ್ ಪರಿಸ್ಫುಟ ಮನದಿಂದೆ
ಉತ್ಸುಕತೆ ತುಂಬಿ ಸ್ವಾಮಿಾಜಿಯಂ ಕುರಿತಿಂತು
ನುಡಿಸಿದರ್ "ಗುರುಮಹಾರಾಜ್, ನೀವಿರುವನ್ನ
ನಿಮ್ಮನೊಳಗೊಂಡು ನಮ್ಮೊಳ್ಳೊಂದು ಧರ್ಮಸಭೆ
ಕರೆವ ಯೋಚನೆಯಿಹುದೆಮ್ಮ ಮನದೊಳ್. ನೀವೇನ್
ಪೇಳ್ವಿರೈ? ಇದಂ ಒಪ್ಪುವಿರಾ?"
"ಅದೊಳ್ಳಿತೆಂಬೆ.
ಕರೆಯಿರಿ, ಮಹಾರಾಜ. ಇಲ್ಲಿನೆಲ್ಲ ಪಂಡಿತ
ವರ್ಗೀಯರ್ ಗಮಿಸಲಿ. ಧರ್ಮ ಸಭೆಯೆನೆ ಎಲ್ಲ
ಸುಜ್ಞಾನ ಕೋವಿದರ್ ಕೂಡಿದೊಡೆ ಸಭೆಗೊಂದು
ನಿಜವಾದ ಘನತೆಯಿರ್ಪುದು."

ಉತ್ಸುಕರಾಗಿ ದಿವಾನರ್ಗೆ ಕರೆಯೋಲೆಗಳ್
ಬರೆಸೆ ಅಜ್ಞಾಪಿಸಿದರ್. ಒಡನೆಯೆ ಅರಮನೆಯ
ಗುರುತುಮಿರ್ದು, ರಾಜರ ಮುದ್ರೆಯೊತ್ತಿದೋಲೆಗಳ್
ಪೊರಮಟ್ಟುವು ನಿಶ್ಚಿತ ದಿನವನುಲ್ಲೇಖಿಸಿ. ಕಳಿದುವು ದಿನ
ಮಾನ, ಆ ಶುಭದಿನವಂ ಹಾರೈಸಿ. ರಾಜ ಸಭೆ
ಬಹುಜನರ ಸ್ವಾಗತಕೆ ಅಣಿಯಾಗೆ ಉಚಿತಾಸನಗಳ್
ಸಾಲೈಸಿ ಮೆರೆದುವು ತುಂಬಿ. ನಿಶ್ಚಿತ ಶುಭದಿನಂ
ಆಗಮಿಸೆ ಪಂಡಿತೋತ್ತಮರ್ ಪಣೆಯೊಳ್ ವಿವಿಧ
ಪಟ್ಟೆನಾಮಗಳ್ ಧರಿಸಿ, ಬಗೆಬಗೆಯ ರುಮಾಲು
ಉತ್ತರೀಯಗಳಿಂ ಸುಶೋಭಿಸಿ ತುಳಸಿ ರುದ್ರಾಕ್ಷ
ಮಣಿಮಾಲೆಯಿಂದಲಂಕೃತರಾಗುತ್ತೈದರ್
ಓರೋರ್ವರಾಗಿ. ತುಂಬಿತು ಸಭಾಲಯ ಇನಿತು
ತಾವಿಲ್ಲದೊಲ್ ಕಿಕ್ಕಿರಿದು. ಎಲ್ಲರಂ ಬಲ್ಮೆ
ಗೌರವಗಳಿಂ ಸ್ವಾಗತಿಸಿ ಉಚಿತಾಸನಂಗಳಲಿ
ಕುಳ್ಳಿರಿಸಿದರ್ ಸ್ವಾಗತಕಾರ ಅಧಿಕಾರಿಗಳ್.
ಚಾಮರಾಜ ಒಡೆಯರ್ ಉಪಸ್ಥಿತರ್ ಸಿಂಹಾ
ನದಮೇಲೆ. ಸ್ವಾಮೀಜಿಯುಂ ಕುಳಿತರ್ ಮುಂಗಡೆ
ಸಾಲಿನಲಿ. ಉಭಯ ಕುಶಲೋಪರಿಯ ಶುಭನುಡಿಯು
ಮೊಳಗಿರಲ್ ಮರ್ಮರಿಸಿತು ಸಭೆ. ಅತಿಥಿಗಳಿಂಗೆ
ಬಾದಾಮಿ ಏಲಿ ಕೇಸರಿ ಮಿಶ್ರಿತ ಕ್ಷೀರವದು
ವಿನಿಯೋಗಮಾದುದು. ಬಳಿಕಲಾ ಮೈಸೂರಿನ
ಪ್ರಸಿದ್ಧ ಬೆಳ್ಳನೆ ಚಿಗುರೆಲೆಗಳ ವೀಳ್ಯಮಂ
ನೀಡುತ್ತೆ ಅತಿಥಿ ಸತ್ಕಾರಮಂ ಪೂರೈಸಿದರ್,
ಸಭಾ ಘನತೆಗೊಪ್ಪುವಂತೆ.

ತರುವಾಯಿ ಸಭೆಯಲಿ
ಹಿರಿಯ ವೈದಿಕರ್ ಧರ್ಮ ಶಾಸ್ತ್ರಂಗಳಂ ಕುರಿತು
ಮಾತಾಡಿ ಸನಾತನ ಧರ್ಮದೇವತೆಗೆ ಭಯ
ಭಕ್ತಿಯಿಂ ವಜ್ರಮಯ ಸಕ್ಕದಕ್ಕರೆಯ ಬಿಗಿ
ಗಟ್ಟು ಬಿಗಿದು, ವರ್ಣಬೇಧ ಮುಂತಪ್ಪ ವಿಚಾರ
ವಾಹಿಯಲಿ ತೇಲುತೆ ಸಭೆಯ ಮನೋಮಯ ಪ್ರಾಣ
ಮಯ ನಾಡಿಯಂ ಮಿಡಿಸಿದರ್ ಬ್ರಾಹ್ಮಣ್ಯ ತೇಜಂ
ಪಿಡಿದೆತ್ತಿ. ಅಂತೆಯೆ ಅನೇಕ ಪಂಡಿತರ್ ತಮ್ಮ
ಕೊರಳ್ದನಿಯಂ ಎತ್ತರಿಸಿ ತಂತಮ್ಮ ಒಡಲಿನ
ಕರೆಯನ್ನೆ ಸಕ್ಕದ ಸವಿಯಂ ಸೂಸಿ ಹರಿಸಿದರ್,
ಹರಿಸಿದರ್. ಬಹುಮಂದಿಯ ಪ್ರವಚನಗಳಲಿ ನೆರೆ
ಹರಿದುವು. ಸನಾತನ ಧರ್ಮದ ಸನಾತನ ನೀತಿ
ನಿಯಮಗಳ್ ಮೆರೆದುವು ಭವನದ ಮಾಡು ಮೊಳಗಿಸಿ.
ಸ್ವಾಮೀಜಿಯುಂ ಎಲ್ಲವಗೆಯೋಳ್ ಪೊಣ್ಮಿರ್ದ
ವಿಚಾರಗಳ ಸಾಹಿತ್ಯದಕ್ಕರಕ್ಕರಗಳಂ
ಮನನಗೈದು ಪಂಡಿತರ ಮನವನರಿದು ತಮ್ಮ
ಸರದಿಯೊಳ್ ಮಾತಾಡಿದರ್ ನಾಲ್ಕು ಗೋಡೆಗಳ್
ಕಂಚು ಮಿಡಿದಂತೆ ಮಿಡಿದವೊಲ್ "...ವರ್ಣಬೇಧಂ
ಕಾಲೋಚಿತವಾಗಿ ಬದಲಪ್ಪಿ ಜನ ಪ್ರಗತಿಯು
ನಡೆಯುವೊಡೆ ಸಕಲತರದ ಸುವಿದ್ಯಾ ಸಂಸ್ಕಾರ
ಸಾರ್ವಜನಿಕವಾಗಿ ಹರಡಿ ಹಬ್ಬಿ ಬೆಳೆದಲ್ಲದೆ
ಪ್ರಗತಿಯು ಸಲ್ಲದೈ. ಉಚ್ಚ–ನೀಚಗಳ ಪರಿ
ಬೇಧದ ಹುರುಳಡಗಿಸಿ ವೇದಾಧ್ಯಯನವೆಲ್ಲ
ಮನುಕುಲದ ಕೈಗೆಟುಕಿ, ಜ್ಞಾನದೀಪಿಯುಜ್ವಲಿಸಿ
ಬೆಳಗಿದೊಡೆ ಜನಪ್ರಗತಿ ದೇಶ ಪ್ರಗತಿ ಎಲ್ಲ

ಒಂದೆ ನಿಟ್ಟಿನಲಿ ನಡೆವ ಸಾಧನೆಯಾದಪುದು.
ದೇವ ಭಾಷೆಯಂ ಪ್ರಜೆಗಳಿಂ ದೂರವಿರಿಸಿ
ಎಸಗಿದ ಅಪರಾಧ ಅಕ್ಷಮ್ಯ. ಆಧ್ಯಾತ್ಮದ
ತತ್ತ್ವವೇ "**ಲೋಕಾಃ ಸಮಸ್ತಾ ಸುಖಿನೊ ಭವಂತು**"
ಎಂದು ಸಾರುತಿರೆ ಇಂದಿನ ಪಂಡಿತ ಮಾನ್ಯರ,
ಮಠಾಧಿಪರ ಕೃಪಣತೆ ಲೋಗರಂ ವಂಚಿಸಿದುದು
ಸತ್ಯಂ. ಇದುಂ ವಿಷಾದಕರ. ಮಿತ್ರರೇ ಕೇಳಿ.
"**ದೇಹೋ ದೇವಾಲಯಃ ಪ್ರೋಕ್ತೋ ದೇವೋ
ಜೀವಃ ಸದಾಶಿವಃ**" ಎಂಬುದಂ ಗಮನಿಸಿದೊಡೆ
ಅರಿವಾದಪುದು. ಸಾಧನೆಯ ಪಥಂ ಪರಿಶುದ್ಧ
ಸ್ಥಿತಿಯೊಳಿರಿಸೆ ಪ್ರಯತ್ನಿಪುದೆ ಮನೋಗತಿಯ
ನಿಯಂತ್ರಣಕೆ ಪೂರಕಂ. ಸರ್ವತ್ರ ಸುಜ್ಞಾನ
ನಿಧಿಯಂ ಪಡೆವೊಡೆ ವೇದಾಧ್ಯಯನಮಲ್ಲದೆಯೆ
ಏಂ ಸಾಧ್ಯ? ವೇದೋಪನಿಷತ್ತುಗಳ್ ಮಠಗಳ
ಮೇಣ್ ವೈದಿಕ ಪಂಥೀಯರ ಅಧೀನಮಿರಲ್
ಇತರ ವರ್ಗೀಯರ್ ಉಳಿದರ್ ಕತ್ತಲೆಯ ಕರ್ಮ
ಕಾಂಡದಲಿ! ಇಂತೊಂದು ಅಗಾಧ ಅಪರಾಧಮೆ
ಜನ ಪ್ರಗತಿಗೆ ದೇಶ ಪ್ರಗತಿಗೆ ಮುಳ್ಳಾಯ್ತು!

**"ಬೋದ್ಧಾರೊ ಮತ್ಸರಗ್ರಸ್ತಾಃ
ಪ್ರಭವಸ್ಮಯ ದೂಷಿತಾಃ ।
ಅಬೋಧೋಪಹತಾಶ್ಚಾನ್ಯೇ
ಜೀರ್ಣಮಂಗೇ ಶುಭಾಷಿತಂ ॥"**

ವೇದೋಪನಿಷತ್ತುಗಳ್ ಅಲ್ಪ ಜನ ಸಮುದಯದಿ
ಉಳಿದು ಪೋಷಿತಮಾದೊಡೆ ನೀವೇ ರಾಷ್ಟ್ರಕೆ
ಮೇಣ್ ಜಗಕೆ ಏನಿತ್ತಂತಾಯಿತು? ಇಂತಪ್ಪ

ಸಂಕುಚಿತ ಮನೋಬಲದಿಂ ಪರಮ ಭೂಮತ್ವ
ಬೆಳೆಯಲಿಲ್ಲವಾಯ್ತು. ದಿವ್ಯತ್ವ ಬೆಳಗದಾಯ್ತು.
ಇದು ಸರಿಯಲ್ಲಂ, ಒಳಗಣ್ ತೆರೆದು ನೋಡಿರೈ."
  ಯುವ ಮನೀಷಿಯ ವಿಚಾರಧಾರೆಯು ಪರಿಸ್ಫುಟ
ರೀತಿಯಲಿ ಹರಿದೊಡಂ ಹೃನ್ಮನಗಳಿಗೆ ಚುಚ್ಚಿ
ಘಾಸಿಪಡಿಸುವ ಕೂರ್ಮುಳ್ಳು ತಾನಾಯ್ತು. ಅಲ್ಲಿಗೆ
ಮಿಣ್ಣನಾದರೇಂ ಸಭಾಸದರ್? ಉರಿದುರಿದು ಉರಿ
ಕಿಡಿಯಾಗಿ ಕುಲಗೋತ್ರಮರಿಯದ 'ಕುಜನರ ಮತಿ
ಗತಿಗೆ ಉಪನಿಷತ್ತುಗಳ ಮುತ್ತಿನ ಹಾರಮಂ
ತೊಡಿಸುವರೆ' ಎಂದೆಲ್ಲ ಚೀರಾಡಿಯುಂ ತರುಣ
ರಿಸಿಯ ವಾಗ್ಜಾಲದೆದುರಿನಲಿ ನುಡಿಯೆ ಎರ್ದೆಯೊಳ್
ಕೆಚ್ಚಿನ ಕಿಡಿ ಮೂಡದಾಯ್ತು. ಮಿಣ್ಣನೆ ಗರ ಬಡಿದ
ಮಾಳ್ಕೆಯಲಿ ಬಿಗುಮಾನದಿಂ ದುರುದುರು ನೋಡುತೆ
ಒಡಲ್‌ಗಿಚ್ಚಿಗೆ ತಾಮೆ ತಣ್ಣೀರೆರೆದರ್. ಯುವಕನ
ಕಾಂಚನಂ ಕಾಂಚನಿಸುವ ಮುಖಾರವಿಂದವಂ
ನೋಡಿ ಬಾಯ್ದೆರೆಯದಾದರ್. ಆ ಮುಹೂರ್ತದಲಿ,
ತರುಣ ಪ್ರಭೃತಿಯು ಲೋಕಾನುಭವವಂ ಮನದ
ಮೂಸೆಯಲಿ ಕರಗಿಸಿ ವಿಚಾರ ಮಂಥನದಿಂದೆ
ಸಂವೇದನಾಶೀಲತೆಯಂ ಮೆರೆಸಿದಂ ಬಲು
ಸೂಕ್ಷ್ಮಾತಿಸೂಕ್ಷ್ಮತೆಯಲಿ. ಒಡಲಾಳದ ದಿವ್ಯ
ಧರ್ಮಗಿಚ್ಚಿನ ಕೆಚ್ಚಿನಿದಿರೊಳೇಂ ಪಿಂಜರಿಕೆ?
ಮುಂದೆ, ಅಮೆರಿಕಾ ಇಂಗ್ಲೆಂಡ್‌ದೇಶಂಗಳಲಿ
ಗೈದ ಸಂಯಾತ್ರೆಯೊಳ್ ಆವಾವ ಅಭಿಮತಂ
ಅನುರಣಿತಮಾಗಿ ಪರಮ ಪವಿತ್ರ ವೇದಾಂತ
ದರ್ಶನದ ಭಾಗ್ಯಕ್ಕೆ "ಸಾರ್ವ ಭೌಮಿಕಾದರ್ಶ"

ಎಂದೆಂಬ ಸತ್ಕೀರ್ತಿ ಕೇತನಂ ನಭಕ್ಕೇರೆ
ಶ್ರಮಿಸಿದರೋ ಅದೇ ಶ್ರೀಮಂತ ನಿಲುವಿಂಗೆ
ವಜ್ರಗಟ್ಟಿನ ಪೀಠಿಕೆಯಂ ಬರೆದವೊಲಾಯ್ತು,
ಅಂದಿನ ಅಭಿಮತದ ನಿರೂಪಣೆ. ಸಭಾವಕ್ಷ
ಸಿಡಿದೊಡೆಯುವವೊಲ್ ದಡದಡನೆ ಮಿಡಿದೊಡಂ ಆ
ವೀರ ವೇದಾಂತಿ ಮನುಕುಲ ಪ್ರೇಮಿಯ ಮುಂದೇಂ
ನಡೆಯದೆಂಬುವ ನಗ್ನ ಸತ್ಯ ಎದುರ್ ನಿಂದಿರಲ್
ಬಿರಿಯದಾದುವು ತುಟಿಗಳ್. ಗುರುವರ್ಯ ಸತ್ಯ
ಸುಂದರತಮ ಶೈಲಿಯಲಿ ನುಡಿದರ್ "ಮಿತ್ರರೇ,
ಪ್ರಜ್ವಾಲಿತೋ ಜ್ಞಾನಮಯ ಪ್ರದೀಪ್ತಃ.....ಕೇಳಿ,
ಪ್ರಕಾಂಡ ಪಂಡಿತರೇ, ವಿದ್ಯಾದಾನಂ ಎಲ್ಲ
ದಾನಗಳಿಗಿಂತಲ್ ಪಿರಿದು. ಕಲಿತು ಬಲಿತ ಪಿರಿಯ
ಮತ್ಸದ್ದಿಗಳ್ ಕಿರಿಯರಿಂಗೆ ಕಲಿಸದಿರ್ದೊಡೆ
ವಿದ್ಯೆಯ ಅವತಾರ ಅವರೊಂದಿಗೆ ಸುಟ್ಟುರಿದು
ಮಣ್ಣೊಳ್ ಹುಡಿಯಾಗಿ ಬೆರೆತು ಹೋಹುದಲ್ತೇ?

"ಜಾಯ ಮನೋ ವೈ ಬ್ರಾಹ್ಮಣಃ
ತ್ರಿಭಿಃ ಋಣೌ ವಾಜಾಯತೇ ।
ಪ್ರಜಾಯ ಪಿತೃಭ್ಯಃ ಬ್ರಹಂ ಚರ್ಯೇಣ
ಋಷಿಭ್ಯಂ ಯಜ್ಞೇನ ದೇವೇಭ್ಯಃ ॥"

"ಇಂತಪ್ಪ ವೇದ ಮಂತ್ರಗಳನೋದಿಯುಂ ಅತಿ
ಕೃಪಣತೆಯದು ಬ್ರಾಹ್ಮಣ್ಯದೊಳ್ ಸ್ಥಾನವಂಬಡೆದು,
ಮನುಕುಲಕೆ ಮಿತ್ತಾದಪುದು ವಿಷಾದಕರ, ಎನೆ
ಅನ್ಯಮಲ್ತು. ಕೇಳಿರೈ, ಪ್ರಜೆಗಳ ಜಾನದ
ದೀವಿಯುರಿಯದಿರ್ದೊಡೆ ಅರಸೊತ್ತಿಗೆಗೆಲ್ಲಿಯ
ಶೋಭೆ? ರಾಜ್ಯಕ್ಕೆಲ್ಲಿಯ ಸುಖಮಯ ಸುಶಾಂತಿ?

"ಯೋವ: ಶಿವತಮೊ ರಸಸ್ತಸ್ಯ ಭಾಜಯ
ತೇಹನ: ಉಪತೀರಿವ ಮಾತರ:" ಇದಂ
ನಿಂನಿಮ್ಮೊಳ್ ಅರ್ಥೈಸಿರಿ. ಜಡತನಮಂ ಮುಟ್ಟಿ,
ತಟ್ಟಿ ಎಳ್ಚರಗೊಳಿಪುದೇ ಮಾನವ ಧರ್ಮ-ಕರ್ಮ."
ಎಂದರಾ ಮನುಕುಲ ಪ್ರೇಮಿ ಗಾಂಭೀರ್ಯದಿಂ.
ಒರ್ಮೆ ಶ್ರೀ ಚಾಮರಾಜ ಒಡೆಯರ್ ಹರುಷದಿಂ
ಭಾವನಾವೇಶದಲಿ ಮುಳುಗಿ ಕೇಳಿಸಿದರಯ್,
"ಸ್ವಾಮೀಜಿ, ನೀವೆಮ್ಮದೊಂದು ಕಿರುಕಾಣಿಕೆಯ
ಸ್ವೀಕರಿಸುತೆನ್ನ ಮನಕೆ ಮುದವಂ ನೀಡುವುದು"
ಕೈಮುಗಿದು ಬೇಡಿದರ್ ಸ್ವಾಮೀಜಿಯ ಸುಂದರ
ವದನಾರವಿಂದವಂ ನೋಡುತ್ತೆ. ಆಗಳಾ
ಸ್ವಾಮೀಜಿಯುಂ ಮಂದಸ್ಮಿತದೊಳ್ ಸುಸ್ವಾಗತಿಸಿ
"ಆಗಲ್ಕೈ" ಎಂದರ್. ಅನುಮತಿಯಲಿ ಶಾಂತಿಯ
ರಸಸೂಸಿ.
ಒಡನೆ ಚಾಮರಾಜಒಡೆಯರ್ ವರ
ದಿವಾನರ ಜೊತೆಮಾಡಿ ನಗರಿಯ ಪ್ರಾಮುಖ್ಯ
ಪೇಟೆಸಾಲಿಗೆ ಕಳಿಪಿದರ್ ಹಣದ ಥೈಲಿಯಂ
ಕೈಗಿತ್ತು. ದಿವಾನರ್ ಗುರುವಿನೊಡನೆ ಸಾರ್ದರ್
ಪ್ರಮುಖತರ ಪೇಟೆಯ ಸಾಲಿಗೆ. ಕರದೊಳಮಿತ
ಹಣದ ಥೈಲಿಯಿರೆ ಆವೊಂದು ಹಿರಿತರದ ಬಹು
ಮೂಲ್ಯ ವಸ್ತು ಅಥ ವಸನಗಳ್ ಕೊಡಿಸೆ ಉತ್ಸುಕ
ಮನ ಮುಂದೈದಿರೆ ಅಮೂಲ್ಯ ವಸ್ತುಗಳನೆಲ್ಲವ
ಅರಸುತ್ತಲಿರ್ದುದು ದಿವಾನ್‌ಜಿಯ ಕಣ್ನೋಟ.
ಸ್ವಾಮೀಜಿ ಅಂಗಡಿಗಳ ಸಾಲಿನ ವೈಭವತೆ
ಮೇಣ್ ವಸ್ತುವಸ್ತುಗಳ ಹೇರಾಶಿ ಎಲ್ಲವಂ

ಕಂಡುಕಾಣದವೋಲ್ ನಡೆದು ಕಿರಿದೆನಿಪೊಂದು
ಅಂಗಡಿಯಲಿ ಸಿಗರೇಟು ಸೇಯಲ್, ಕೆಲಕಾಸು
ಬೆಲೆಬಾಳ್ವ ಕಿರುಕೊಳವೆಯೊಂದನುಂ ಕೊಂಡುಕೊಳೆ
ದಿವಾನರ್ ಅಚ್ಚರಿಯ ದಟ್ಟ ಛಾಯೆದುಂಬಿದ
ಕಣ್ಣ ನೋಟಮಂ ಹರಿಸಿ "ಇದಿಷ್ಟೇಂ ಸ್ವಾಮೀಜಿ?"
"ಇಂದಿಗಿದು ಸಾಲ್ಗುಂ. ಎನಗಿನ್ನೇಂ ಬೇಡವೈ"
ದಿವಾನರ್ ಹಣದ ಥೈಲಿಯಂ ಕಿಸೆಗೊಳಿಸಿ ಗುರು
ದೇವನೊಡನೆ ನಡೆದರ್ ಅರಮನೆಯ ಪಥವಿಡಿದು.
ಕಾವೇರಿ, ನದೀ ತಟಾಕಂ. ಬಂಡೆ ಬಂಡೆಗಳ
ಗೋಷ್ಠಿಯೊಳ್ ಬಂಡೆಯಂಬಂಡೆಗಳ್ ಒತ್ತೊತ್ತಿ
ಬಂಡೆಬಂಡೆಯಮಂಡೆಯೊಂದನೊಂದಂಮಂಡೆ
ಮುದ್ದಿಡುವ ತೆರದಿ ಬಂಡೆಗಳ ಪಣೆಪಣೆಗೆ ಪಣೆ
ಒತ್ತಿ ಕಿರುಬಂಡೆ ಮರಿಬಂಡೆಗಳ ಎದೆಗಾಂತು
ಲಾಲಿಸುತ್ತೆ ಮುಂಡಾಡುವಂತೆ ಬಹುಸಂಖ್ಯೆಯ
ಗೊಂಡಾಟವಿ ಎಂಬವೋಲ್ ಬಂಡೆಗಳ ದಂಡಿನ
ರಾಶಿಯು ಎಡೆಎಡೆಯೊಳ್ ಎಸೆದುದು ಕಣ್ ಮಲೆತು
ಸೋಲ್ದುಸೋಲೊಪ್ಪುವ ತೆರದಿ. ಬಂಡೆಬಂಡೆಗಳ
ಸೌಂದರ್ಯಾಲೋಕದೊಳ್ ನುರ್ಗಿ ನುಸುಳ್ದು ರುದ್ರ
ರಾಗದಾಲಾಪನೆಗೈವ ಅನುಭವೀ ತಾಯಿ
ಕಾವೇರಿಯು ಮೊರೆವ ಮೊರೆತ ಎರ್ದೆ ಗುಂಡಿಗೆಗೆ
ಭಯಭೀತಿಯ ರಸವೂಡಿ ಗಂಡುಗಲಿಯ ಮಂಡೆ
ಬಾಗಿಪುದೊ ಪೇಳೆಂಬೊಲಾ ಬಂಡೆಬಂಡೆಗಳ್
ಒಟ್ಟೈಸಿ ನಡೆಸಿರ್ದುವು ರುದ್ರ ಭೀಕರ ಗೋಷ್ಠಿ!
ಕೃತ್ತಿಕಾ ಪ್ರಭಾತದ ಭರಣಿಯ ಅಂತಿಮದ
ಹಿಮಶೀತಶೀತಲಮಯಮಂಜುಲರಾಗಶ್ರೀ

ಹರಿದುದೊ ಮೂಡಣದ ದಿಶೆಯಿಂದೆ ಎನುವ ತೆರದಿ
ಅರುಣಕಿರಣಂಗಳ ಸಹಸ್ರಾನುಸಹಸ್ರತಮ
ಸೂಜಿಸೂಜಿಗಳೈದುವು ತ್ರಿಲೋಕವನೊರ್ಮೆಗೆ
ಮುದ್ದಿಸುವ ಆತುರಾತುರಕಾತರದಲಿ. ಆ
ಅಪೂರ್ವ ನಿಸರ್ಗಸಿರಿಯಲಿ ಮನವ ನೆಟ್ಟಂತೆ
ಸ್ವಾಮಿಜಿ ಕಳೆದರೆನಿತೊವೊಳ್ತು ತಟಾಕದಲಿ.
ದೇವನದಿ ಗಂಗೆಯ ನೆನೆವರಿಕೆಯಂ ಕಾವೇರಿ
ನದಿಯ ಮಡಿಲಲಿ ಮನಗೊಳುತೆ ಮುದವ
ಮೊಗೆದುಂಡು ತುಂಬಿದರ್ ಹೃದಯದ ಕಲಸಂ ಉಕ್ಕಿ
ಕೋಡಿ ಹರಿವವೊಲ್. ಪ್ರಾತರ್ವಿಧಿಯುಂ ಮುಗಿಯಿತ್ತು.
ಪ್ರಾತಃಧ್ಯಾನವುಂ ಮುಗಿಯಿತ್ತು. ಮನಮತಿಯಾಕರವು
ಮುಗಿಯಿತ್ತು. ಮುಂಬೊಳ್ತಿನ ನಿರ್ಜನ ಸುಶಾಂತಿಯು
ಮುಗಿಯಿತ್ತು. ಸ್ವಾಮಿಜಿ ನದೀ ತಟಿನಿಯ ಬಿಟ್ಟು
ಪೊರಮಟ್ಟರ್ ಮೈಸೂರಿಗಭಿಮುಖೀ ಪಥವಿಡಿದು.
ಹಳ್ಳಿಯಲಿ ಔದಾರ್ಯ ಸೌಜನ್ಯ ಭಯಭಕ್ತಿ
ಗೌರವಾದಿಗಳಿಂದೆಸೆವ ಸದ್ಗುಣಿಗಳ್ ಕಂಡು
ತೋಷಗೊಂಡರ್ ಸ್ವಾಮಿಜಿ. ಅನೇಕರ್ ಕೈಮುಗಿದು
ಕುಶಲೋಪರಿಯಂ ಬಗೆದು ತಿಳಿದು ಶಿರವ ಬಾಗಿ
ನಮಿಸಿದರ್, ಫಲ ಪುಷ್ಪಗಳ ನೀಯುಯುತ ಮುದದಿ.
ಆ ಪರಿಸರದ ಪ್ರಕೃತಿಯ ಸೌಂದರ್ಯರಸಪಾನ
ಮನಕೆ, ಹಸನಾಯ್ತು, ಸ್ವಾಮಿಜಿಯುಂ ಜಗದ್ಧಾತ್ರಿ
ಕಾಳಿಕೆಯ ನೆನೆನೆನೆಯುತೆ ಬಿಡದಿಯಂಬೊಕ್ಕರ್.
    ಬಾಲಾರುಣ ಏರುತ್ತೇರಿ ಬೆಳ್ಮುಗಿಲ್ ಸಿರಿ
ಸಿಂಹಾಸನದಲಿ ಮೆರೆದಂ. ಬೆಣ್ಣೆ ಮುಗಿಲ್‌ಗಳುಂ
ಸುತ್ತುವರಿದಿರೆ ಅದೊರ್ ಬೆಳ್ಳಿಯ ಮಂಟಪವೆ

ಎನಲೆಸೆದುದಾಶೋಭಾಶೈಲಿ. ಗುರುವರ್ಯರ್ಿಂ
ತಲೆಯೆತ್ತಿ ನೋಡಿ ರಾಜನಾಸ್ಥಾನದ ಒಳಗೆ
ಪದಾರ್ಪಣೆಗೈದಾಗಳೇ ದಿವಾನರ ಮತ್ತಂ
ಮಹಾರಾಜರ ಹಸನ್ಮುಖಗಳ್ ಬಲು ನೇಹದ
ಸ್ವಾಗತವ ಬಯಸಿದುವು. ಸ್ವಾಮೀಜಿ ಒಳಗೆತ್ತು
ಉಚಿತಾಸನದಲಿ ಕುಳಿತು ನುಡಿದರ್ "ದೊರೆಗಳೇ,
ನಮ್ಮ ಪುಣ್ಯಭೂಮಿ ಭರತ ವರ್ಷ ಕಠಿಣತಮ
ದುಃಖಸಂಕಟಗಳ ಕಡಲಲಿ ಮುಳುಗಿದ ಕರುಣ
ಕಥೆ ಎನ್ನ ಮನವಂ ಕೊರೆಯುತಿದೆ ಕಠಿಣತರದಿ.
ರಾಷ್ಟ್ರೀಯ ದುದ್ರುಸಂಕಟದ ಚಿತ್ತಾರಮಂ
ಆದ್ಯಂತ ನೋಡಿ ಮನವರಿತು ದುಃಖದಿಂ ಕುಸಿದು
ಬೀಳ್ವಂತಿದೆ ಹೃದಯವೆನ್ನ. ದೊರೆಗಳೆ ಕೇಳಿ!
ಸನಾತನ ಧರ್ಮೀಯ ಪರಮಗುಣಧರ್ಮವಂ
ಸಾರಿ, ಭಾರತಜನನಿಯ ಉಜ್ವಲಿಪ ಜ್ವಲಂತ
ಧರ್ಮಜ್ಯೋತಿರ್ಕಿರಣ ಧಾರೆಯಂ ಪಿಡಿದೆತ್ತಿ
ಈ ದೇಶವಿದೇಶಗಳನೆಳ್ಚರಿಪ ಉನ್ನತ
ಧ್ಯೇಯವೆನಗಿರ್ಪುದು. ಅದಂ ಪೂರೈಸಲೆಂದಾಂ
ದೂರ ಪಾಶ್ಚಾತ್ಯ ದೇಶಗಳಿಂಗೆ ಪೋದಪೆಂ.
ಭಾರತದ ಮಹೋನ್ನತ ಕೀರ್ತಿಧ್ವಜವನೆತ್ತಿ
ಪಿಡಿದು ಕಣ್ಣಿರ್ದು ಕುರುಡಾದ ಆಳ್ವರ ಕುರುಡು
ಕಣ್ ತೆರಸುವೊಂದು ಯೋಜನೆಯಿರ್ಪುದು ಎನ್ನೊಳ್.
ಈ ರಾಷ್ಟ್ರದಾದ್ಯಂತ ಜನ ಜಾಗ್ರುತಗೊಳಿಪುದೆ
ಎನ್ನ ಪ್ರಪ್ರಥಮ ಕರ್ತವ್ಯ ಎಂಬುದೆಮ್ಮ ಪಣ!
ಇಂ ಮುಂದಿನದು ಭಗೀರಥ ಪ್ರಯತ್ನ! ಇದೆನ್ನ
ಸತ್ ಸಂಕಲ್ಪ! "ಸರ್ವೇ ಜನಾಃ ಸುಖಿನೋ ಭವಂತು"

ಎಂಬುದೆಮ್ಮಗುರಿ. ಹಲಕೆಲವು ಮಂದಿ ಸುಖಿಸಿದೊಡೆ
ಅದಂ ಸುಖ ಎನಲುಂಟೆ? ಎಲ್ಲರುಂ ಸುಖಶಾಂತಿ
ಪಡೆಯಲಕ್ಕುಂ ಈಯೆಮ್ಮ ರಾಷ್ಟ್ರ ಸಕಲ ತರದ
ಸಂಪದ್ಭರಿತ ಮಹಾರಾಷ್ಟ್ರ! ಸ್ವರ್ಣಭೂಮಿ! ಹಾ!
ಕೆಂದಿರುಂಪೆಗಳ್ ಮುತ್ತಿ ತಿಂದುಳಿದ ಹಂದರ
ಮಾಗಿರ್ಪುದಿಂದು. ಜನ ಜಾಗ್ರತಿಗೊಳ್ಳೆ ಜ್ಞಾನದ
ದ್ರವ್ಯದ ಅವಶ್ಯಂ ಬಹಳಮಿರ್ಕುಂ ಎಂಬುದದು
ಸತ್ಯಸ್ಯ ಸತ್ಯಂ. ಈ ಬಗೆಯ ದುರ್ಗತಿಯಂ
ಅರಿದರಿದು ಬಾಲ ಮುದುಡಿದ ಶುನಕನ ತೆರದಲಿ
ಬರ್ದುಕುತಿಹ ಪ್ರಜಾಕೋಟಿಯಂ ನೆನೆನೆನೆದು
ಎನ್ನ ಹೃತ್ ಕರಂಡ ಬಿರಿಯುತಿದೆ. ಕೊರಗುತಿದೆ.
ಮಹಾರಾಜಾ ಕೇಳಿ! ಸಂಜೀವನೀಯೋಗದಲಿ ನಿಂದು
ವಿಜೃಂಭಿಸಲಾವೆಮ್ಮ ಸ್ವಶಕ್ತಿಯಲಲ್ಲದೆ
ವಿದೇಶೀಯರ ಮುಂತೆ ಕಣ್ಣೀರ್ ಕರೆಯುತೆಮ್ಮ
ದೌರ್ಬಲ್ಯಮಂ ಮುಂದಿರಿಸಿ ಬಿಕ್ಕೆ ಬೇಡುವುದು
ತರವಲ್ಲ. ಎಮ್ಮಯ ಹಿರಿಮೆಗರಿಮೆ ಎಮಗಿರಲ್
ಬಿಕ್ಕೆ ಬೇಡುವರೇಂ? ಅವರ ಸಂಸರ್ಗದಿಂದೆಮ
ಕೃಷಿ ಮೇಣ್ ವ್ಯಾಪಾರ ಮೊದಲಪ್ಪ ವೃತ್ತಿಯೊಳ್
ಪೆರ್ಚಿನ ವಿಚಾರ ವಿನಿಮಯ ಮೇಣಧಿಕ ತಂತ್ರ
ಜ್ಞಾನ ಸಂಪದಂ ಆರ್ಜಿಪುದು ಒಳ್ಳಿತೆಂಬೆನ್.
ಈ ಎಲ್ಲವಂ ಮನಗೊಳುತೆ ನಮ್ಮ ಉದ್ಧಾರ
ನಾವ್ ಕೈಕೊಳಲಕ್ಕುಂ. ಸ್ವಶಕ್ತಿ ಅರಿದರಿದು
ನಮ್ಮತನಮಂ ತೂಗಿ ತುಲನೆಗೈದು ಬಾಳ್ದೊಡೆ
ಎಮ್ಮ ಬರ್ದುಕಿಗೆ ಬೆಳಕು ಬಂದಪುದು ಚಿಮ್ಮುತ್ತೆ!

"ಯೂಯಂ ತತ್ ಸತ್ಯ ಶವಸ ಆವಿಷ್ಕರ್ತ
ಮಹಿತ್ವನಾ । ವಿದ್ಯತಾ ವಿದ್ಯುತಾ ರಕ್ಷಃ ॥"

"ಮಹಾರಾಜ! ಭಾರತ ಸಾಮ್ರಾಜ್ಯದೊಳ್ ದೂರ
ಪಾಶ್ಚಾತ್ತ್ಯ ವಿಜ್ಞಾನ, ತಂತ್ರಜ್ಞಾನಂಗಳಂ
ಪಡೆಯಲದರ ವಿನಿಮಯಕೆ ಎಮ್ಮೊಳೇಂ ಕೊರಂ?
ವೇದಾಂತಿಕ ಆಧ್ಯಾತ್ಮಿಕ ರೀತಿನೀತಿಗಳ್
ಸನಾತನ ಧರ್ಮಬೋಧೆ ಎಂದಿಗುಂ ತಕ್ಕಿನ
ಸತ್ ಸಮೃದ್ಧ ದಿವ್ಯಾಮೃತಮಪ್ಪುದು. ನಾವ್
ವೇದಾಂತ ದರ್ಶನದ ದ್ರವ್ಯವಂ ಔದಾರ್ಯ
ಭಾವದಿಂ ನೀಡಿ ಬೋಧಿಪುದು ವಿನಿಯಮ ಮಾತ್ರ
ಎನಲುಂಟೆ? ಸನಾತನ ಧರ್ಮ ಹಬ್ಬಿ ಹರಡಿದೊಡೆ
ಭಾರತದ ಕೀರ್ತಿಧ್ವಜ ಅಂಬರಕೇರುವುದು
ದಿಟಂ! ಈವಗೆಯ್ಳ ಆದಾನ-ಪ್ರದಾನ ಸತ್
ಸಂಬಂಧಮಂ ಸಂಸ್ಥಾಪಿಸುತೆಮ್ಮ ರಾಷ್ಟ್ರದ
ಕಲ್ಯಾಣಮಂ ಸಾಧಿಪುದು ಸರಿಯಕ್ಕುಂ. ಕೇಳಿರಿ!
ಈ ಕಲ್ಯಾಣ ಕಾರ್ಯದೊಳ್ ರಾಜಕುಲ ಪ್ರಸೂತ,
ಶ್ರೀಮಂತ ಮೇಣಿತರ ಶಕ್ತಿಶಾಲಿಗಳ್ ಮನ
ಬಿಚ್ಚಿ ಮುಂದ್ಯೆದು ಯತ್ನಿಸಿದೊಡೆ ಯಜ್ಞ
ಕಾರ್ಯಾರಂಭಮಪ್ಪುದು."
ಮಹಾರಾಜರುಂ ಆ
ತರ್ಕಬದ್ಧಚಿಂತನಾವೇಶದಲಿ ಪೊಣ್ಮಿದ
ಸ್ವಾಮಿಜಿಯ ವಿಚಾರ ಧಾರೆಯಂ ಅವಧರಿಸಿ
ಮನಗೊಂಡು ಆನಂದ ಭಾವದಿಂ; "ಸ್ವಾಮಿಜಿ!
ನೀವ್ ಈ ಕಾರ್ಯಭಾರಮಂ ಪೊತ್ತು ವಿದೇಶದ
ಯಾತ್ರೆಯಂ ಕೈಕೊಂಬುವುದಾದೊಡೆ ಆ ನಿಮ್ಮ

ವ್ಯಯಭಾರಮಂ ನಿರ್ವಹಿಸುವೆನ್ ಗುರುವೇ!"
ಬಹುಲ ತೋಷದಿಂ ಹೃದಯದ ಆಸ್ವಾಸನೆಯಂ
ಬಿತ್ತರಿಸಿದರೊಡನೆ. ಗುರುವರ್ಯರ್ಂ ದೊರೆಗಳ
ಆಸ್ವಾಸನೆಯಿಂ ಸಂತೃಪ್ತಿಯಂಬಡೆಯೆ ಮನ
ಮತಿಗಳ ತುಡಿತಕ್ಕೆ ಚೆಲ್ವಾಯ್ತು. ಭವಿತವ್ಯದಾ
ನಿರೂಪಣೆಗೈಯೆ ಅಂಕಿತಮಾಯಿತ್ತು. ಗುರುವುಂ
ವಿಚಾರಾಕ್ರಾಂತರಾದರ್ ಮನದಿ. ಸುದೂರದ
ಭವಿತವ್ಯದ ವೇದಿಯನೇರಿ ಅಂಡಲೆಯಿತ್ತು
ಮಾನಸ ಪಕ್ಷಿ.
ಚೈತ್ರ ಪ್ರಭಾತದ ಇನಿವೊಳ್ತು
ಸಕಲತರ ಪಕ್ಷಿ ಸಂಕುಲದ ಧ್ವನಿ ಸಾಂದ್ರದಿ
ರಾಗಾನುರಾಗಮಯಮಾಯ್ತು, ಚೆಲ್ವಿನ ಚೆಲುವು
ಉಕ್ಕೇರ್ದು ಹೊನ್ನರಾಜಿಯ ಚೆಂಬಿಸಿಲ ಹರವು
ಉರಿಕಿಡಿಯ ವೇಷದಲಿ ಮೆರೆದತ್ತು ಹಸನಾಗಿ.
ರಮ್ಯಾರುಣಂ ಅಂಬರವೇರಿದನ್ ಸುಂದರ
ಬಂಧುರ ಮಿಸುನಿಯುಂಡೆಯಂ ಹೋಲಿ! ಉಜ್ವಲಿಪ
ಜ್ಯೋತಿರ್ಮಯ ತೇಜಂ ಮಾರ್ಪೊಳೆದುದು ಹೃದಯ
ದರ್ಪಣಕೆ ತಾಗಿ. ಸ್ವಾಮೀಜಿಯುಂ ಭಾವನಾ
ಲೋಕದಲಿ ಮುಳುಗಾಡಿ ತೇಲಿದರ್ ಸುರತರದ
ಭವಿತವ್ಯದ ಮಹಾವೇದಿಯಂ ನೆನೆದು ನೆನೆದು.
ತಾವಂದು ಮೈಸೂರಂ ಬಿಟ್ಟು ಮುಂಪಯಣಮಂ
ಕೈಕೊಳ್ವ ಇಚ್ಚೆಯೊಳಿರುತಿರೆ ಮನ ಮಥಿಸಿ ಮಥಿಸಿ
ನುಡಿಸಿದರ್ ಭಾವನಾವೇಶದಲಿ "ಮಹಾರಾಜ!
ಆನಿನ್ನೆಬರಂ ಆವೊಂದು ಸ್ಥಿರ ಸಿದ್ಧತೆ
ಅಥ ಆವ ಸಿದ್ಧಾಂತಮಂಗೈದೆನಿಲ್ಲವೆನ್ನ ಮನದಿ.

ಪ್ರಪ್ರಥಮದೊಳೆನ್ನಯ ರಾಷ್ಟ್ರಪರ್ಯಟಣೆಯಂ
ವ್ರತದೋಪಾದಿಯಲಿ ಕೈಕೊಂಡಿಹೆನ್. ಅದಂ
ತೀರ್ಚಿದ ಬಳಿಕ ನಿರ್ಣಯಂ. ಈ ಪರಿವ್ರಾಜಕ
ವ್ರತವದು ಹಿಮಾಲಯದ ಪದತಲದಿಂ ಕನ್ಯಾ-
ಕುಮಾರಿಯವರೆಗುಂ ಸುಯಾತ್ರೆಗೈವುದೆನ್ನಯ
ಗುರಿ. ಭಾರತಜನನಿಯ ಉಡಿಯ ನೋವು ನಿಡಿಯಂ
ಅರಿವುದರೊಡಂ ಈ ವಿಶಾಲ ಭುವಿಯಾ ರೂಪು
ರೇಷೆಯನರಿತು ಕೊಂಬುದೆ ಪ್ರಥಮೋದ್ದೇಶವೆನ್ನ.
ಬಳಿಕಲಾ ವಿದೇಶಗಳಲಿ ಧರ್ಮ ಪ್ರಸರಣದ
ಕಾರ್ಯ ನಿರ್ವಹಿಪುದು ಸರಿಯಕ್ಕುಂ." ಎನುತೆನುತಲಿ
ತಮ್ಮಯ ನುಡಿಗಟ್ಟಿನ ಸರಣಿಯಂ ಮುಗಿಸಿದರ್.
ಪಗಲುರುಳುರುಳಿನಿಶಿಯುಮಡರ್ದುಉರುಳುತುರುಳಿ
ದಿನೋದಯಮಾಯಿತು ಸಕಲತರ ಪಕ್ಷಿಗಳ ವಿಧ
ವಿಧ ರಾಗಮಾಲೆಯೊಂದಿಗೆ. ಗುರುವರಂ ಪೊಳ್ತು
ಮೂಡ್ವ ಮುನ್ನಮೆಯೆ ಎಚ್ಚತ್ತು ತಮ್ಮಯ ಸಕಲ
ವಸ್ತುಗಳ್ ತುಂಬಿ ಕಟ್ಟಿ ಪೊರಡಲಣಿಯಾದರ್
ಮೈಸೂರ್ ಬಿಟ್ಟು. ಮಹಾರಾಜರುಂ ತಮ್ಮಗಳ
ಪರಿವಾರವಂ ಮಂದೈಸಿ ಮುಂದೈಸಿ ಬೆಂಬಿಡಿದು
ಪೊರಮಟ್ಟರ್ ಉಗಿಬಂಡಿಯ ನಿಲ್ಮನೆಗೆ. ಭಕ್ತಿ
ಗೌರವ ಪೂರ್ವಕವಾದ ಬೀಳ್ಕೊಡಿಗೆಯ ನೀಡುತೆ,
ಗೌರವ ಧನದ ಕಿರು ಥೈಲಿಯಂ ಇತ್ತು ಶುಭವಂ
ಹಾರೈಸಿದರ್ ಚಾಮರಾಜ ಒಡೆಯರ್ ಗುರುವಿಂಗೆ.
ಉಗಿಬಂಡಿಯು ಗಮಿಸಿತು. ಹತ್ತುವರ್ ಹತ್ತಿದರ್
ಇಳಿವವರ್ ಇಳಿದರ್. ಜನ ಜಂಗುಳಿಯ ಗದ್ದಲ,
ಮಾತುಕತೆಯ ಮರ್ಮರ, ಯಾಂತ್ರಿಕಮಯ ಗರ್ಗರ

ಎಲ್ಲವುಂ ಕೂಡಿರ್ದಸದ್ದು ಕಿವಿಗಳಂ ನೆರೆ
ಮುತ್ತಿ ಗಡಚಿಡುವೋಲಿರ್ದುದು, ಮನಕೆ
ಕಿನಿಸಿಗೆಯನೂಡುವ ತೆರದಲಿ. ಉಗಿ ಬಂಡಿಯು
ಮೊತ್ತ ಮೊದಲಿನ ಶಿಳ್ಳೆ ಊದಿ ಹೊರಡುವ ಸಮಯ
ಸೂಚಿಸಿತು, ಕಕ್ಕಸ ದನಿಯಲಿ. ಆಗಳೇಂ ಜನ
ಜಂಗುಳಿಯ ಪುರುಪು? ಒರ್ಮೆಗೇ ನುಗ್ಗಿದರ್ ಆ
ಬಂಡಿ ಈ ಬಂಡಿ ಎಲ್ಲದರಲಿ ಇನಿತು ಸ್ಥಳ
ಉಳಿಯದವೊಲ್. ತಮಗೆಂದು ಕಾಯ್ದಿರಿಸಿದ ಸ್ಥಲ
ಮಾತ್ರ ಉಳಿದುದು. ಗುರುವರಂ ತೆರೆದ ಬಾಗಿಲಿನ
ಬಳಿಯೆ ನಿಂತಿರ್ದು ಮಹಾರಾಜರ್ ವೇಣವರ
ಪರಿವಾರದ ನೇಹಿಗರ್ ಅಧಿಕಾರಿಗಳ್ ಎನೆ
ಬಹು ಸಂಖ್ಯೆಯಲಿ ನೆರೆದಿರ್ದ ಆತ್ಮೀಯ ಸ್ವಜನ
ಶೀಲರಿಗೆ ಕರಜೋಡಿಸಿ ವಿದಾಯಮಂ ಬೇಳ್ದು
ಕೈಯಾಡಿಸುತಿರೆ ಮತ್ತೆ ಮೊಳಗಿತು ಉಗಿಬಂಡಿ
ಕೂಗಿದ ಅದುಭುತ ಶಿಳ್ಳೆ. ಮತ್ತಂ ಹಲಕೆಲವು
ನಿಮಿಷಗಳ್ ಉರುಳೆ ಮತ್ತೊಂದು ಶಿಳ್ಳೆ ಮೊಳಗಿಸಿ
ಚಳಿಸಿತು ಉಗಿಬಂಡಿ. ಮೆಲುಮೆಲ್ಲನೆ ಸಂಚಲಿಸಿ
ಮತ್ತೆ ಓಡಿತು ಸಹಸ್ರ ಕಾಲೋಟಗಳ್ ಜೊತೆ
ಗೂಡಿ. ಮಹಾರಾಜರ್ ಪರಿವಾರದವರ್ ಎಲ್ಲ
ಆತ್ಮೀಯರ್ ಕಣ್ಗೆ ಮರೆಯಾದರ್. ಉಗಿಬಂಡಿ
ಶಿಳ್ಳೆಯೂದುತ್ತೂದುತೆ ಓಡಿಯೆ ಓಡಿದುದು
ಕಂಬಿಗಳಮೇಲೆ. ಗಿಡು ಮರ ಸಸ್ಯ ಕೋಟಿಗಳ್
ಓಡುತಿವೆ ಹಿಮ್ಮೊಗ್ಗದ ಕಡೆಗೆ. ಗಲಗಲ ಅಲುಗಿ
ಅಲುಗಿ ಹರಿದಿರೆ ಬಂಡಿ ಪುಸ್ತಕ ಪಠಣವದುಂ
ಸಾಧ್ಯವಾಗದೆನೆ ಮನದೊಳ್ ಭಗವನ್ ಧ್ಯಾನವೊಂದೆ

ಕಾಲಹರಣಕೆ ತಕ್ಕಿನದಾಯಿತು ಗುರುವರಂಗೆ.
ಪಗಲ್ ಮುಗಿಬಗಿಯಾಯಿತು. ಸಾಯಂ ಸಮಯದ
ಕುಳಿರ್ಗಾಳಿ ತೀಡಿದುದು ಮೈನಡುಗಿಸುವವೊಲ್.

"ಸಿದ್ಧಲಕ್ಷ್ಮೀರ್ಮೋಕ್ಷಲಕ್ಷ್ಮೀರ್ಜಯ
ಲಕ್ಷ್ಮೀ ಸರಸ್ವತೀ!
ಶ್ರೀಲಕ್ಷ್ಮೀರ್ವರಲಕ್ಷ್ಮೀಶ್ಚ ಪ್ರಸನ್ನಾ
ವರದಾ ಶುಭಾ"

ಹರಿಃ ಓಂ ತತ್ ಸತ್

❋ ❋

ಸಪ್ತದಶೋಲ್ಲಾಸಂ

ದರಿದ್ರ ದೇವೋ ಭವ

ಈ ಪೊಡವಿಯೊಳ್ ಪಡಿನಿಂದ ಕಠ್ರನೆ ಕರಿಯ
ಕಗ್ಗಲ್ಲ ಕರ್ವೆಟ್ಟಿನೆಡೆಯಿಂದೆ ರೊಯ್ಯನೆಯೆ
ಬೀಸಿ ಬಂದ ಬಿರುಗಾಳಿಯ ಪೊಯ್ಲು ಗಿಡಮರದ
ಕೊಂಬೆಕೊಂಬೆಗಳ ತಿರುತಿರುಪ್ಪಿ ಕುಡಿ ಚಿವುಂಟಿ
ಮುರಿಮುರಿದು ಕೆಡವಿತ್ತೆನಿತ್ತೊ ರೆಂಬೆರೆಂಬೆಗಳ.
ನಡುರಾತ್ರಿಯೊಳ್ ಇದೇಂ ರುದ್ರಸಂಕಟವೊ ಎನೆ
ಭಯ ಭೀತಿಯ ಛಾಯೆ ಮುಸುಗುತಿರೆ ಹೃನ್ಮನಂ
ಇನ್ನೇನುಮೇನೆಂದು ತತ್ತರಿಪ ವೊಲಾಯಿತ್ತು
ಕದ್ದಿಂಗಳ ರಾತ್ರೋರಾತ್ರಿಯ ಅದುಭುತ ವೇಲೆ.
ಉಗಿ ಬಂಡಿಯ ಜಡಿ ನೂಂಕುವುದೊ ಎಂಬಾಸಂಕೆ
ಮನಂಗೆಡಿಸುತಿರೆ ಚಣಚಣಂ ಗಡಬಡಿಸುತ್ತೆ
ಎಳ್ಚು ಕುಳಿತರೆಲ್ಲ ಪಯಣಿಗರ್. ಭಯಭೀತಿಯ
ಭೂತ ನಡುಗಿಸುತಿದೆ ತನುಮನಗಳನೆಲ್ಲ. ಉಗಿ
ಬಂಡಿಯ ಚಲನೆ ನಿಧಾನಗತಿಗಿಳಿಯಿತು. ರುದ್ರ
ಭೀಕರ ಬಿರುಗಾಳಿ ಒಳನುರ್ಗುತೆ ದಾಂಧಲೆ
ನಡೆಸಿದತ್ತು ತತ್ತರಿಪಂತೆ. ಕಳೆದುದು ರುದ್ರ
ಭಯಂಕರ ಗಳಿಗೆಗಳ್ ಹತ್ತಿಪ್ಪತ್ತು. ಒಂದೇ
ರೀತಿಯ ಕಸರತ್ತು ನಡೆಸಿದತ್ತು ಬಿರುಗಾಳಿ
ಬೈರವಂ. ಕಂಬಿಪಿಡಿದು, ಬಿಗಿ ಮುಷ್ಟಿಯಲಿ ಬಿಗಿ
ಒತ್ತಿ ಕುಳಿತು ನೋಡಿದರ್ ಸ್ವಾಮಿಜಿ. ಅದ್ಭುತ
ಬಿರುಗಾಳಿಯ ಬಿರುಸಿನ ಹೋರಾಟ ಬೋರಾಟ
ಸಿಡಿಲಾಟಗಳ ಅವ್ಯಾಹತ ಪೊಯ್ಗೆಯಂ. ಇಂದ್ರ

ಮುಹೂರ್ತಂ ಕಳೆದತ್ತು, ಮಳೆಹೊಯ್ವ ಸೂಚನೆಯ
ಕುರುಹಿಲ್ಲ. ಬರೀ ಬರುಗಾಳಿಯ ಅಟಾಟೋಪ
ನಡೆದತ್ತು. ಭೀಮ ತನುವಿನ ಭೀಮ ವಿಕ್ರಮತೆ
ಭೀಮ ಚಿತ್ತದಾ ಭೀಮಭೂಜ ಸ್ಥಾಣು ತುಲ್ಯಂ.
ಭೀಷ್ಮದೀರ್ಘತೆಯನಾರ್ದು ತರು ಸಂದೋಹದೊಳ್
ಆಶ್ರಯಿಸಿದಂಧಕಾರಮಂ ಜಡಿದು ಕುಟ್ಟಿ ಬಡಿ
ದೋಡಿಪ ತೆರದಿ ರಂಧ್ರರಂಧ್ರಗೊಳಿಸಿ ಛಿದ್ರ
ವಿಛಿದ್ರ ಪಡಿಸಿ ತಿಮಿರ ತೆರೆಯನೆತ್ತಿದ ಬೀರ
ಬೀರಾತಿಬೀರ ವಾಯುದೇವಂ. ಕಣ್ಣಿಟ್ಟು
ನೋಡದನಿತು ಉಗ್ರ. ಘನಿತ ಪೌರುಷಂ ತಡೆದು
ನಿಲ್ಲಿಸದನಿತು ಘೋರ. ತನ್ನ ಭೀಮ ಭೀಷಣ
ಕೃತಿಗಂತು ತಾನೇ ನಾಣ್ಚಿದನೋ ಎನಲ್ಕಾ ಅನಿಲನುಂ
ತನುಮನ ತಣಿದು ತನ್ನಯ ಗತಿಯಂ ಅತ್ತತ್ತ
ದೂರ ಕಡಲಿನೆಡೆಗೆ ತಿರುಪಿದಂ ಕರುಣೆದೋರಿ.
ಬೆದರಿ ಬೆಚ್ಚಿ ಹೈರಾಣಾಗಿರ್ದ ಪಯಣಿಗರ್
ಒಂದೇ ಸಲಿಗೆ ಕಟ್ಟುಸಿರ್ ಬಿಟ್ಟು ಶಾಂತಿಯಲಿ
ತಂತಮ್ಮ ಇಷ್ಟದೈವವಂ ನೆನೆದು ಕೈಮುಗಿದು
ಬೇಡುತಿರ್ದರ್ ಕಳೆದ ಗಂಡಾಂತರಕ್ಕಾಗಿ.
ಸುಖೀ ಗಳಿಗೆಯಲಿ ಜಗಮರೆತು ಜಗಧೀಶನಂ
ಮರೆತು ಮೋದದಿಂ ಇರುತಿರ್ದ ಜನರಾಶಿ
ಭಂಗ ಹರಿದ ಬಳಿಕ ನೆನೆದರ್ ಕೈ ಮುಗಿಯುತ್ತೆ.
ಅಭಿಜಿನ್ ಮುಹೂರ್ತಮಡರಿತು. ಗಾಳಿಯಲಿ ಶೈತ್ಯ
ಮೂಡಿ ನಡುಗಿಸಿತು ಮೈಮನಗಳಂ. ಸ್ವಾಮೀಜಿ
ಉತ್ತರೀಯಮಂ ಬಗಿ ಹೊದ್ದೊಡಂ ತಾಳದೊಲ್
ಕೊರೆಯುತಿಹುದು ಮೈ. ಪೊಳ್ತುರುಳಿ ಶೈತ್ಯದ ಶೀತ

ಕಳೆಯುಅರ ಇನಿದಿನಿದು ಪ್ರಾತಃಮುಹೂರ್ತಮದರಿ
ಅರುಣೋದಯಮಾದೊಡೆ ಸಾಲ್ಗುಂ ಎನುವೊಂದೇ
ಹಾರೈಕೆ ಮನಕ್ಕೆ. ಅಂತಿಂತು ಮೂಡಿತು ಮೆಲ್ಲ
ಮೆಲ್ಲನೆ ತನಿವೆಳಗು, ಕಣ್ಮನಕೆ ರಯ್ಯಮಪ್ಪಂತೆ.

ಉಗಿ ಬಂಡಿಯುಂ ಮುಂಬರಿದು ಕಿರಿ ನಿಲ್ಮನೆಯಂ
ಬೊಕ್ಕು ನಿಂದುದು ಬುಸುಗುಡಿಯುತೆ. ನಿಲ್ದಾಣದ
ವಾಮಾಂಗದಲಿ ಕಣ್ಗೆಸೆದುದೊಂದು ಕೆರೆಯಂಚಿನ
ಫಲಭರಿತ ತೋಂಟಂ. ಹುಲುಸಾಗಿ ಬೆಳೆದು ನಿಂದು
ನಳನಳಿಸಿದುದು ಮನಸೆಳೆವ ತೆರದಲಿ. ನೋಡಲ್,
ಎಡೆಎಡೆಯೊಳ್ ಪಲ್ಲವ ಪಾಣಿಗಳಲಿ ಗೊಂಚಲ್
ಗೊಂಚಲಾಗಿ ಪಣ್ತು ಜೋಲು ಬಿಳ್ದ ನೇರಿಳೆ,
ಕೆಮ್ಮನೆ ಸಿರಿರಂಗೊಡೆದು ಜೋಲುತ ಚೆಂದದಿಂ
ಕಣ್ಸೆಳೆವವೋಲ್ ರಸದುಂಬಿರ್ದ ಕಿತ್ತೀಳೆ
ನೆತ್ತಿಯೊಳ್ ಪೊಸ ಪೊಂಗಳಸಗಳಿವೆನಲ್
ಎಡೆಎಡೆಯಲಿ ಗೊಂಚಲ್ವಿಡಿದು ಜೋಲ್ದ ಚೊಂಬಿನ
ಗಾತ್ರಗಳ ತೇಂಗಾಯಿಯಿಂ, ಚಲ್ಲೆಗ್ಗಾರ್ತಿಯರ
ಕೆಮ್ಮೊಗ್ಗದ ಸುಲಿಪಲ್ಗಳನನುಕರಿಸಿ ಬೆಳದುವೆನೆ
ಇಂಬಿಡಿದ ದಾಡಿಮಗಳಿಂ, ಸಾಲ್ವರಿದು ಬೇಲಿ
ಸಾಲಿಗೆತ್ತ ಕೇತಕಿಯಲಿ ಕೂರ್ವಾಳೆನೆ ಮಿರು
ಮಿರುಗುತಿಹ ಪೊಂಗೇದಿಗೆಯಿಂ, ನರುಗಂಪುಗುವ
ಸಂಪಿಗೆಯ ಪೂವಿಂ, ಮುಗುಳ್ತ ಪಾರಿಜಾತದ
ಕುಸುಮಗಳಿಂ, ದಳವಿರಿದ ಮಂದಾರದಿಂ, ನೆನೆಯು
ಕೊನೆಯೇರ್ದ ಸುರಯಿಯಿಂ ಮತ್ತಂ ನುಡಿಯುವುದೇಂ?
ಕೊನರಿಲ್ಲದ ತಳಿರಿಲ್ಲದ ಮಿಡಿಯಿಲ್ಲದ ಮೊಗ್ಗು
ಮೂಡದ ಕಸುಗಾರ್ಯಿಲ್ಲದ ದೋರೆವಣ್ಣಿರದ

ಮರಗಿಡಂಗಳಿಲ್ಲವೆನಲ್ ತುಂಬಿ ತುಳುಂಕುವ
ಸುಸುಂದರ ಬನ ಕಣ್ಮನಕೆ ಮುದವನಿತ್ತಿರಲ್
ತೋಷದ ಕಡಲಿನಲಿ ಮುಳುಗೆದ್ದರ್ ಸ್ವಾಮಿಜಿ.
ಶೋರನೂರು ನಿಲ್ದಾಣಮಂ ಬಿಟ್ಟು ಮುಂಬಿನ
ಪಯಣಕ್ಕೆ ಒಂಟೆತ್ತಿನ ಗಾಡಿಯನರಸುತ್ತೆ
ನಿಲ್ದಾಣದ ಪೊರವಲಯದ ಉದ್ದಗಲದೆಡೆಗೆ
ಕಣ್ಣಾಡಿಸಿದರ್ ಸ್ವಾಮಿಜಿ. ಆ ಬದಿಯೊಳೊರ್
ಕಿರುಗಾಡಿಯುಂ ಎಸೆದುದು ಕಂಗಳಿಗೆ, ಒಡನೆಯೆ
ಆಯಡೆಗೆ ಸಾರ್ದು ಗಾಡಿಗಾರನನು ಕೇಳಲ್
ಅವಂಗೆ ಗುರುಭಾಷೆಯರಿವಿಲ್ಲಂ. ಸ್ವಾಮಿಜಿ
ಮಲೆಯಾಳಮಂ ಅರಿಯರ್ ಬರೀ ಕೈ
ಬಾಯ್ ಸನ್ನೆಗಳೆಸಗಿದುವು ಕಾರ್ಯಭಾರಮಂ.
ಮಣ್ಣ ಹಾದಿಯಲಿ ಧೂಳೇಳಿಸುತ ಓಡಿದುದು
ಒಂಟೆತ್ತಿನ ಗಾಡಿ. ಚಾವಣಿಯದಕೆ ಇಲ್ಲದಿರೆ
ಗಾಳಿ ಧೂಳು ಬಿಸಿಲ್‌ಗಳಿಗೆ ತಡೆಯುಮಿರದಿರಲ್
ಎಲ್ಲವಂ ವಿನಯ ಭಾರದಿಂ ಅನುಭವಿಸುವುದೆ
ವರವಾಯ್ತು. ಮುಂದಿನೂರಿನಲಿ ತಮಗೊಂದು
ತಂಗುದಾಣವಂ ಪಡೆದೊಡೆ ಅಲ್ಲಿ ಕೆಲಗಾಲ
ಉಳಿಯಬಹುದೆಂಬ ಯೋಚನೆಯೊಳ್ ಗಮನವಿಟ್ಟು
ನೋಡುತ್ತಿರುತಿರೆ ಎಡವಕ್ಕದ ಪೆರ್ ಭವನದ
ಮುಂಬಾಗಿಲಬಳಿ ಚೆಂಬಿಸಿಲ್ ಮೊಹಕ್ಕೆ ಮೈ
ಗೊಟ್ಟು ಮನೆಯೊಡೆಯನಂ ಕಂಡು ಗಾಡಿಯಿಂದಲಿ
ದೊಪ್ಪನೆ ಕೆಳಧುಮುಕುತೆ ಆ ಗೃಹಸ್ಥರ ಪತ್ತೆ
ಸಾರ್ದು ಕೇಳಿಸಿದರಯ್ "ಆರ್ಯ, ಈ ಎಡೆಯೊಳೆಲ್ಲಿ
ತಂಗಲೆಮಗೆ ವಸತಿಯ ಸೌಕರ್ಯಮದಿರ್ಪುದು?"

ವಿದ್ಯಾವಿಭೂಷಣತೆಯ ಪ್ರಭೆಯಲಿ ಬೆಳಗುತಿಹ
ವದನದೊಳ್ ಪ್ರಸನ್ನ ಭಾವವಂ ಸೂಸಿ "ಹೇ,
ಮಿತ್ರರೇ, ಮುಂಬನ್ನಿ ಜಗಲಿಯೊಳ್ ತಣ್ಪಿನೆಲೆ
ಇಹುದು."
ಆಂಗ್ಲ ಭಾಷೆಯಲಿ ಪೊದಳ್ದ ಪ್ರಶ್ನೆಯುಂ
ಪಡೆದತ್ತು ಆಂಗ್ಲ ಭಾಷೆಯ ಪ್ರತ್ಯುತ್ತರಮಂ.
ಆ ಸತ್ಪುರುಷನೊರ್ಮೆ ಯುವ ಮನೀಷಿಯಂ ಕಣ್
ನೆಟ್ಟು ಅಡಿಯಿಂದ ಮುಡಿಯವರೆಗೆ ಗಮನಿಸಿ ಬಲು
ಆನಂದ ಚಕಿತ ಮನದಿಂ ಕುಶಲೋಪರಿಯಂ
ನಡೆಸಿ ಅರಿತು ಮನತುಂಬಿ ನುಡಿಸಿದನ್ "ಸ್ವಾಮಿ,
ನೀಮೆನ್ನಯ ಹರ್ಮ್ಯದೊಳ್ ತಂಗಿದೊಡೆನಗಕ್ಕುಂ
ನಿಜ ಸಂತಸಂ." ಅತಿಥಿಯಂ ಸ್ವಾಗತಿಸಿದರತಿ
ತೋಷಾತಿರೇಕದಿಂ. ಸುಖ ಮಜ್ಜನದ ಬಳಿಕ
ಸರಳ ಊಟೋಪಚಾರಂ ನಡೆದುದಲ್ಲಿಯೆ.
ಆ ಸತ್ಪುರುಷಂ ತನ್ನಯ ಪರಿಚಯವನಿಂತು
ತಿಳಿಸಿದಂ. ಸರಕಾರದ ವಿದ್ಯಾ ಇಲಾಖೆಯ
ಸುಪ್ರತಿಷ್ಠಿತ ಅಧಿಕಾರಂ ಪೊಂದಿದವ ಎಂದು
ಈರ್ವರೊಳ್ ಸ್ನೇಹ ಬಳ್ಳಿ ಮೊಳಕೆಯೊಡೆದು ಬೆಳೆದು
ಕುಡಿ ಕವಲೊಡೆದು ಹಬ್ಬಿ ಹರಡಿತು ವಿಶ್ವಾಸ
ಪೂತ ಪೂಗಳರಳಿ. ದಿನದಿನಂ ಬಗೆಬಗೆಯಲಿ
ವಿಚಾರ ವಿಷಯಾವಳಿಯಲಿ ಮುಳುಗಿ ತೇಲಾಡಿ
ರಾಷ್ಟ್ರಸ್ಥಿತಿ ಜೀವನಧರ್ಮ ಸನಾತನ ಧರ್ಮ
ಇಂತಿಂತು ಗಹನ ವಿಷಯಂ ಚರ್ಚೆಗೆ ಗ್ರಾಸಮಿರೆ
ಹಬ್ಬಿಹರಡಿತು ಸುದ್ದಿ ಸ್ವಾಮಿಜಿಯ ಕೀರ್ತಿಗೆ
ಕಳಸವಿಕ್ಕಿ, ಸಂದರ್ಶನಕಾಗಿ, ಪ್ರವಚನ

ಚರ್ಚೆಗಳ ವಿನಿಮಯಕಾಗಿ ಬಂದಪರ್ ಕಲಿತು
ಬಲಿತು ವಿದ್ವನ್ಮಣಿಗಳಪ್ಪ ಸಜ್ಜನ ಚಂಡ
ಮಂಡ ಪಂಡಿತ ಶಿರೋಮಣಿಗಳ್. ಗುರುವರ್ಯಂ
ಎಲ್ಲರೊಡನೆ ಮನಬಿಚ್ಚಿ ಮಾತಾಡಿ ರಾಷ್ಟ್ರೀಯ
ದುಸ್ಥಿತಿ ಹಾರಿದ್ರ್ಯಗತಿಯಂ ಬಣ್ಣಿಸಿ "**ದರಿದ್ರ
ದೇವೋ ಭವ**" ಮೊದಲಪ್ಪ ತನ್ನಯ ಧರ್ಮದ
ಜ್ಯೋತಿಯಂ ಬೆಳಗಿ ಪಿಡಿದೆತ್ತಿ ದಾರಿದೀಪವ
ತೋರಿದೊಡೆ ಮಾತ್ರಮೆ ಜನಜಾಗೃತಿಗೆ ಸುಪಥಂ"
ಇಂತಿಂತು ದೃಢವಾದ ಧ್ವನಿಯ ಸರಿಹರಿಸಿ
ತಮ್ಮಾತ್ಮದ ಸಂದೇಶಮಂ ಸಾರಿ ಮುಂದಿನ
ಊರಾದ ಕಂಗ್ರನೂರ್ ಪತ್ತನದ ಪಥವಿಡಿಯೆ
ಮಿತ್ರಬಂಧುಗಳಿಂ ಪರಮಾತ್ಮೀಯಭಾವದ
ಬೀಳ್ಕೊಡಿಗೆಯಂ ಪಡೆದು ಅಭಿನಂದಿಸಿದರ್,
ಎಲ್ಲರ್ಗೆ ವರಕರಗಳ್ ಜೋಡಿಸಿ ಕೈಮುಗಿದು.
ಕಂಗ್ರನೂರ್ ಪತ್ತನವಂ ಮುಟ್ಟಿದಾಗಳೇ
ಸಾಯಂ ರವಿ ಪಡುಗಣ ದಿಗ್‌ದೇಶದಲಿ ಇಳಿದು
ವಿಜೃಂಭಿಸುತಿರ್ದ೦. ಪಕ್ಷಿಗೊರಳ ಸಾಂಧ್ಯ
ಗೀತಗಳ್ ಮೊಳಗುತಿರ್ದುದು ಎಡೆಎಡೆಯೊಳ್. ಆ
ಸ್ವಚ್ಛ ಶುಭ್ರ ತಣ್ಪುಗುವ ಸಾಯಂ ಶಾಂತಿರಸ
ಸ್ವಾಗತಿಸಿತು ಸ್ವಾಮೀಜಿಯಂ. ನೇರಪಥವಂ
ಪಿಡಿದು ಮುನ್ನಡೆಯೆ ರಾಜಮಾರ್ಗದೊಳ್ ನೆಲೆಸಿದ
ಭವ್ಯತರದ ಕಾಳಿಕಾಮಾತೆಯ ಸುರಸುಂದರ
ದೇಗುಲಮೆಸೆದುದು ಕಂಗಳಿಗೆ, ಪರಮ ಪುರಾಣ
ಕಾಲೀನ ಸುಸಂಸ್ಕೃತಿಯ ಪರಿಮಳ ಮುತ್ತಿದುದು
ತೆಕ್ಕನೆ ತನುಮನಗಳನೋಲೈಸುವ ತೆರದಿ. ಆ

ದೇಗುಲದ ಬಳಿಯೊಳ್ ನಿಂದು ಅದರ ಭವ್ಯತೆಗೆ
ಬೆರಗಾದವೊಲ್ ಕಣ್ಮನಗಳ್ ನಟ್ಟು ನಾಂಟುತೆ
ಪರಿವೀಕ್ಷಿಸಿದರ್ ಚಿತ್ತ ಕಲ್ಪವ ಪಿಂತೆಗೆಯದ
ಪಾಂಗಿನಲಿ. ಕೈಯೊಳ್ ಫಲಪುಷ್ಪಂ
ತುಂಬಿರ್ದ ತಟ್ಟೆ ಬುಟ್ಟಿಗಳನಾಂತ ಬಹುಜನ
ಭಕ್ತಾದಿಗಳ್ ಪೋಗಿ ಬಹ ಸಂಖ್ಯೆ ಅಪಾರ.
ಸ್ವಾಮೀಜಿಯುಂ ಅವರೊಳ್ ತಾನುಂವೊಂದಾಗಿ
ಪಿಂಬಾಲಿಸಿದರ್ ದೇಗುಲಕೆ. ಅನಿತರೊಳಲ್ಲಿ
ಎದುರ್ವಂದ ಅರ್ಚಕನ್ "ಎಲೆಲೆ! ತೊಲಗಿಲ್ಲಿಂದೆ!
ಅಬ್ರಾಹ್ಮಣರಿಗಿಲ್ಲಿ ಪ್ರವೇಶಿಸೆ ರಹದಾರಿ
ಇಲ್ಲ. ಎಂತೈದೆ ಇಲ್ಲಿಗೆ?"
ಗದರಿಸಿದನ್ ರೂಕ್ಷ
ದನಿಯಲಿ! ಕಟುನುಡಿ ಕರ್ಣಪಟಲಂ ಜಡಿಕುಟ್ಟಿ
ಬೋಂಕನೆ ತಾಗಿ ಧೀಂಕಿಟ್ಟಿತು, ಕಟು ನುಡಿಗಳ್
ಮತ್ತೆ ಮತ್ತೆ ಮರ್ಮರಿಪಂತೆ. ಮರು ನುಡಿಯದೆಯೆ
ಪಿಂತಿರುಗಿದರ್ ಸ್ವಾಮೀಜಿ. ಗುಡಿಯ ಎದುರ್ಗಡೆ
ಭವ್ಯ ನ್ಯಗ್ರೋಧ ವೃಕ್ಷ ಆವುದೊ ಕಾಲದೊಳ್
ಮೊಳೆತು ಹೆಮ್ಮರವಾಗಿ ಸುತ್ತಮುತ್ತಲ್ ಬಿಳಲಂ
ಬಿಟ್ಟು ಭೂಮಿಗೂರಿ ಅಗಲಗಲವಾಗಿ ಬೆಳೆದತ್ತು
ಮನೋಹರ ರೂವಿನಲಿ. ಅದರ ಸುತ್ತಗಲದೊಳ್
ಕಲ್ಲುಗಳ ನೊಟ್ಟಿಯೊಟ್ಟಿ ಜೋಡಿಸಿ ಸುಭದ್ರತೆಯ
ಸ್ಥಿತಿಗಾಗಿ ಕಟ್ಟಿರ್ದ ಕಟ್ಟೆಯದು ಶೋಭಿತಂ
ಸರ್ವರಿಗೆ ಸುಖಾಶ್ರಯಮಾಗಿ. ಕಾಳೀಮಾತೆಯ
ಗುಡಿಗೆ ಪೋಗಿಬಹ ಭಕ್ತರಿಗೇಂ ಕೊರಮಿರದಿರೆ
ಹೊತ್ತು ಮುಳುಗಿ ನಿಶಿಯಡರಿ ಕರ್ರನೆಯಾ ಕರ್ಪು

ತೆರೆ ಹರಡಿ ಹಾಸುವನಕ ಪೂಜಾವ್ರತ ವಿಧಿ
ವಿಧಾನಗಳ್ ನಡೆದುವು ದೇವಿದೇಗುಲದಲ್ಲಿ.
ಎನಿತೆನಿತೊ ಭಕ್ತಜನರ್ ತಮ್ಮಯ ಪ್ರಸಾದ
ಫಲಪುಷ್ಪಗಳಂ ತಂದಿತ್ತು ಗುರುವಿಂಗೆ ನಮಿಸಿ
ಪಿಂದಿರುಗಿ ಪೊರಮಟ್ಟರ್ ಗೃಹಾಭಿಮುಖವಾಗಿ.
ರಾತ್ರಿ ಅಗಣಿತ ತಾರಗೆಗಳ ದಿವ್ಯಾಲೋಕ
ಜಗಜಗಿಸುತಿರೆ ಅರ್ಧ ಚಂದ್ರಮ ನಿಶಿರಾಜ್ಯದ
ಪಟ್ಟವೇರಿದಂ. ಪತ್ತನದ ಸದ್ದುಗದ್ದಲ
ಅಡಗಿದತ್ತು. ಮನೆಮನೆಗಳ್ ಕದವಮುಚ್ಚಿ ಸತ್
ಶಾಂತಿಯಲಿ ನಿದ್ದೆಗೈದುವು, ಸುವಿಶ್ರಾಂತಿಗೆನೆ
ಭವ್ಯ ದೇಗುಲದ ಪೆರ್ಬಾಗಿಲ್ ಬಲವತ್ತರದಿ
ಮುಚ್ಚಿದುದೊ ಎಂಬೊಲಾ ಕದಗಳುಂ ಮುಚ್ಚಿದುವು.
ಬಾಗಿಲ ಬಳಿಯಿರ್ದ ಭಿಕ್ಷುಕರ್ ಕೆಡೆದರ್ ನಿದ್ದೆಗೆ.
ಮರದಡಿಯಲಿ ಗುರುವುಂ ಮಲಗಿದರ್ ಕೈದೋಳ್
ದಿಂಬಾಗಿಸಿ. ನಿಶಿಯುರುಳುರುಳುರುಳಿ ದಿವ್ಯಮಾ
ಇಂದ್ರ ಮುಹೂರ್ತಮಂ ದಾಂಟಿ ಅಭಿಜಿನ್ ಮುಹೂರ್ತಂ
ಅಡರಿ ಬರೆ ಅರ್ಚಕರ್ಯೆದರ್ ದಂಡುಗೊಂಡು.
ದೇಗುಲದ ಪೆರ್ಬಾಗಿಲ್ ತೆರೆಯಿತು. ಗಂಟೆಗಳ್
ಜಿಣಿಜಿಣಿಸಿದುವು. ಶಂಖ ಜಾಗಟೆ ನಗಾರಿಗಳ್
ಮೊಳಗಿದುವು. ಸುಪ್ರಭಾತವ್ರತದ ಆರಂಭ
ಮಹೋತ್ಸವ ಮಂಗಳ ವಾದ್ಯಗಳೊಡನೆ ನಡೆದಿರಲ್
ಸ್ವಾಮೀಜಿ ಎದ್ದು ಕುಳಿತು ಕೈ ಮುಗಿದು ಧ್ಯಾನಾ
ರೂಢರಾದರ್. ನಸುವೆಡಕ್ಕೆ ಬೃಹದ್ ಅರಳೀಮರ.
ಅದರ ಪದತಲದಲಿ ಅನೇಕ ನಾಗರ ಕಲ್ಲು
ಪ್ರತಿಷ್ಠಿತಮಿರೆ ಎನಿತೋ ಮಂದಿ ಗೃಹಿಣಿಯರ್

ಗಮಿಸಿದರ್ ನಾಗರ ಪೂಜೆಗೆ, ಮಂತ್ರ ಘೋಷಗಳ್
ಕೇಳಿಸಿದುವು ಮಂಗಳಕರವಾಗಿ. ಸ್ವಾಮೀಜಿ
ಅಲ್ಲಿಂದ ಪೊರಮಟ್ಟರ್ ನದೀಮುಖವನರಸೆ.
ಅದೇ ಆಗಳೆ ಅನೇಕ ಬ್ರಾಹ್ಮಣರ್ ದೂರದ
ಪುಣ್ಯತೀರ್ಥಮಂ ಕುರಿತು ನಡೆಯುತಿರೆ ತಾವುಂ
ನಡೆದರವರ ಬೆಂಬಳಿಯೆ. ನಸುದೂರದಲಿ ಆ
ಪುಣ್ಯತೀರ್ಥದ ತಟಾಕವದು ಮನತಣಿವೊಲ್
ಕಂಗೊಳಿಸಿತು ಜಲಾತ್ಮ ಸಂವೃದ್ಧಿಯಲಿ. ಅದುಂ
ಜುಳುಜುಳುಜುಳು ಮಂಜುಳ ರಾಗವಂ ಹಾಡುತಲಿ
ಮುಂಬರಿಯುತಿರ್ದುದು ಮನದಾಕರದಿಂ ದೂರ
ಸಾಗರಮುಖಿಯಾಗಿ. ಸದಾಕಾಲವುಂ ಪರಿವ
ಜಲಧಿಗಿಳಿದರ್ ಸ್ವಾಮೀಜಿ. ಪರಿಶುದ್ಧ ಸ್ನಾನಂ
ಮುಗಿಯಿತ್ತು. ಪ್ರಾತಾಃಹ್ನಿಕವುಂ ಮುಗಿಯಿತ್ತು. ಮತ್ತೆ
ಧ್ಯಾನಗತಿಯುಂ ಮುಗಿಯಿತ್ತು. ನೋಡೆ, ಆರುಮಲ್ಲಿ
ಇಲ್ಲದ ತಟಾಕಂ ನೆಲೆಯಾದತ್ತು ನಿರ್ಜನ
ಸುಖಶಾಂತಿಗೆ. ಸಂತುಷ್ಟರಾದರ್ ಗುರುವರಂ.
ನಸುವೊಳ್ತು ಕಳೆಯಿತಲ್ಲಿ ಶಾಂತಿಯ ಮಡಿಲಿನ
ಶಿಶುವಾಗಿ. ಮತ್ತೈದರ್ ನ್ಯಗ್ರೋಧ ವೃಕ್ಷಶಿವನ
ಪದತಲಕೆ. ಅದೋ! ಪೂರ್ವೀ ದಿಗ್ ತಟಾಂತದಲಿ
ಚಿಮುಚಿಮು ಬೆಳಕು ತುಳುಕಿತು ಹೊನ್ನಹೊಳೆಯವೋಲ್.
ಬಹುಲ ಭಕ್ತಾದಿಗಳ್ ತುಂಬಿರ್ದರ್ ಗುಡಿಯಲಿ.
ಕಂಗ್ರನೂರಿನ ರಾಜ ವಂಶೀಯ ಧೀಮಂತ
ಕುಮಾರರ್ ಗಮಿಸಿದರ್ ಮುಂಬೆಳಗಿನ ದೇವೀ
ಆರಾಧನೆಯಂ ಸಲಿಸೆ. ಬೆಳ್ಳಿಯಿನ ಸಾರೋಟು,
ಬೆಳ್ಳಿಯಿನ ಸುಸುಂದರ ಅಶ್ವದ್ವಯಂಗಳುಂ

ಕಂಗಳಿಗೆ ಮಿಂಚುಣಿಸುವಂತೆ ನಿಂದುವು ಅಲ್ಲೆ.
ಕುಮಾರರ್ ಸ್ವಾಮಿಜಿಯಂ ಕಂಡು ಆಸ್ಥೆಯಿಂ
ಕುಶಲ ಪ್ರಶ್ನೆಗೈದರ್. ಸಕ್ಕದ ಭಾಷೆಗೆ ಸಕ್ಕದ
ಭಾಷೆಯಲಿಯೆ ಪ್ರತ್ಯುತ್ತರ ಲಭಿಸಲ್ ತರುಣರ್
ಮೈಮನ ಪುಳಕಿತರಾದರ್. ಪುರುಪು ಉಕ್ಕೇರಿ
ಸಂಭಾಷಣೆಯಲಿ ತೊಡಗಿದರ್ ಗುರುವರನೊಡನೆ.
ಬೌದ್ಧಿಕ ಸ್ತರದ ಪ್ರದೀಪ್ತಿ ಬೆಳಗಿಸಿತವರವರ
ಹೃತ್ ದೀಪ್ತಿಯಂ. ದೇವೀ ಪೂಜೆಯು ಪಿಂದುಳಿದು
ಸಂಭಾಷಣೆ ಮುಂಬರಿಯಿತ್ತು ವಿವಿಧ ವಿಚಾರ
ದೋಹನಕೆ ಎಡೆಮಾಡಿ. ಯುವಕರ್ ಬಹುವೊಳ್ತು
ಕಳೆದರ್ ಗುರುದೇವನ ಪರಮ ಸನ್ನಿಧಿಯಲ್ಲಿ.
ಅನೇಕಾನೇಕ ಧೀಮಂತ ಭಕ್ತಜನರುಂ
ಬಂದು ಕೂಡಿದರಲ್ಲಿ ಸಂಭಾಷಣೆಯನಾಲೈಸಿ.
ತರುತಲ ಕಳೆಕಟ್ಟಿತು ಸಂಭಾಷಣೆ ರಂಗೇರಿ.
ಎಲೆಎಲೆಗಳ್ ಮರ್ಮರಿಸಿದುವು ಮರುದನಿವೂಡಿ.
ರಾಜಕುಮಾರರುಂ ಮನದಿ ಕುತೂಹಲಂ ಕೊನರಿ
"ಏನಿದೇನ್, ಸ್ವಾಮಿಜಿ ನೀವುಂ ದೇಗುಲಕೆ
ಬಾರದೆಯೆ ಕುಳಿತಿರ್ಪಿರಿಲ್ಲಿ? ಬನ್ನಿ ನಾವುಂ
ಒಳ ಪೋಗುವ."
ಸ್ವಾಮಿಜಿಯಾಗಳ್ ತಮಗಾದ
ಅನುಭವರಸಮಂ ಬಣ್ಣಿಸಿ ಎಲ್ಲರಂ ಮನದ
ಕಿನಿಸಿಗೆಯೊಳ್ ಅದ್ದಿದರ್, ಯೋಚನೆಯ ಭಾರದಿ
ಕುಗ್ಗುವ ತೆರದಿ.
"ಬನ್ನಿ ಸ್ವಾಮಿಜಿ! ನಿಮ್ಮಂಥ
ವಿದ್ವನ್ಮಣಿಗಳಿಗೇಕೆ ಅಬ್ರಾಹ್ಮಣಿಕೆಯಾ

ಪಟ್ಟ? ನಾವ್ ಕೂಡಿಯೆ ದೇಗುಲಂ ಪುಗುವುದೇ
ಸರಿಯಕ್ಕುಂ.''
"ಮಿತ್ರರೇ, ನಾನಿಲ್ಲಿಯೇ ದೇವಿ
ಕಾಳಿಯ ಪರಮ ದರ್ಶನಂ ಗೈದಿಹೆನ್. ಮತ್ತೇಕೆ
ದೇವಾಲಯಮಮಂ ಪುಗುವ ಕಾತರಂ? ಸಾಲ್ಗುಮಿದೆ
ದರ್ಶನಮೆನಗೆ. ಮಿತ್ರರೇ! ಕೇಳಿ, ನಮ್ಮವರ
ಕ್ಷುದ್ರುತರ ಜಾತಿಭೇದ ವರ್ಗಭೇದಗಳ ಅತಿ
ದುಷ್ಕರ್ಮ ದುರಾಚಾರಗಳಿಂದೆ ದೇಶವೇ
ಅಧೋಗತಿಗಿಳಿಯಿತು ಎನಲ್ ಅನ್ಯಮಲ್ತು-ಈ
ಹೀನತರ ಮನೋಭಾವವು ಅಳಿದು ಎಲ್ಲರೊಳ್
ಸರಿ ಸಮಾನತೆಯುಂ ಮೊಳಕೆಯೊಡೆದು ಬೆಳೆದೊಡೆ
ಮಾತ್ರಮೇ ಏಳಿಗೆಯ ಪ್ರಶ್ನೆ. ಅಲ್ಲದೊಡೆ ಈ
ಮನುಕುಲವೆ ವ್ಯರ್ಥ, ಎಂಬೆನ್.''
ರಾಜಕುವರರುಂ
ಗಾಡಿಯೇರ್ದು ಪಿಂಮರಳಿದರ್ ಅರಮನೆಗೆ. ಆ
ಕುದುರೆಗಾಡಿಯ ಗೆಜ್ಜೆಗಳ ಸದ್ದು ಮೊಳಗಿದುದು
ಕರ್ಣಪಟಲಗಳಿಗೆ ಬಹು ದೂರ ಸಾರುವನ್ನ.
ಪೊಳ್ತು ಏರುತ್ತೇರಿ ಆಕಾಶ ಗಂಗೆಯಂ
ಮುಟ್ಟಿ ಮತ್ತೆ ಇಳಿಮುಖವಾಗಿ ಬಹುದೂರದ
ಪಡುಗಣ ದಿಗಂತದಲಿ ಚೆಂಬೆಳಕು ಹೊನ್ನಾಗಿ
ಕೆಂಪಾಗಿ ರಕ್ತಾಕ್ತವಾಗಿ ಹರಡಿತು ರಂಗಿನ
ಓಕುಳಿಯನೆರಚಿದವೊಲ್. ದಿವಾಕರಂ ಪಡುಗಣ
ದಿಗ್‌ತಲಕೆ ಇಳಿಯುತಿಳಿಯುತೆ ತಾಂ ತ್ರೈಲೋಕ್ಯಗಳ
ಬಂಧುರ ಸೌಂದರ್ಯ ಸಾರವೀಂಟಿ ಮೈಗೊಂಡು
ಸುವರ್ಣ ಕಲಸವೆನೆ ಜಗಜಗಿಸುತೆ ಸೌಮ್ಯಸುರ

ಕಿರಣ ಸಾಂದ್ರನಾಗಿ ಜಗತ್ ಬ್ರಹ್ಮಾಂಡದಮೇಲೆ,
ಕನಕ ಕಾಂತಿಯ ಜಳಮಂ ಚೆಲ್ಲಿ ಸಿಂಚನಗೈದು
ಕಾಂಚನಿಸಿದನ್ ಅರ್ಧಾಂಶ ಭೂಕೋಶಂ ಪೀತ
ಮಪ್ಪಂತೆ. ಸಂಜೆಯ ತನಿವೊಳ್ತಿನ ತಂಪಿನಲಿ
ಸುಮಗಂಧ ಗಂಧಿತ ನರುಗಂಪು ಬೆರೆತು ನೆರೆದು
ಕಂಪಿನ ರಸಾಯನವದು ಮುಟ್ಟಿದುದು ಸಕಲೇಂ-
ದ್ರಿಯಗಳಂ ಮೃದು ಮಧುರವಾಗಿ. ಸೂರ್ಯ
ರಶ್ಮಿಗಳ್ ಕೆಂಗಾಂತಿಯ ರಸವಂ ಸೂಸುತ್ತೆ
ಮುದ್ದಿಸಿದುವು ಗುಡಿಯ ಅದುಭುತ ಗೋಪುರದೇಶ
ದಾದ್ಯಂತಮಂ. ಗಂಧರ್ವಲೋಕಮೆ ಧರೆಗಿಳಿದು
ನಿಂದುದೊಎನಲ್ ಮೆರೆದುದು ಭೂಲೋಕಂ ಸಂಜೆಯ
ಸೊಬಗಿನ ಮಹೋನ್ನತದ ವೈಭವದಲಿ. ಮೆಲ್ಲನೆ
ಸಂಜೆಯ ಸೊಬಗಿಳಿದು ಅಡರಿತು ನಿಶಿ ನಕ್ಷತ್ರಗಳ
ಮಾಲೆಯಂ ಸೂಡಿ. ಮುನ್ನಿನದಿನದೊಲ್ ಅಲ್ಲಿಯೆ
ತಂಗುದಾಣಮಾಯ್ತು ಗುರುಮರ್ಯಂಗೆ. ಘನವಾದ
ಸವಿನಿದ್ದೆಯೊಳ್ ಕಳೆಯಿತಾ ರಾತ್ರಿ. ಮಧುರತರ
ಸ್ವಪ್ನಾಂತಲೋಕದಲಿ ದಕ್ಷಿಣೇಶ್ವರದ ಗುಡಿ
ಅರ್ಚಕರ ಸನ್ನಿಧಿಯೊಳಿರ್ದರ್ ಗುರುವರ್ಯಂ.
ನಸು ಬೆಳಗು ಪಸರಿಸಿದಾಗಳೆ ಎದ್ದು ಎಂದಿನೊಲ್
ತಮ್ಮೆಲ್ಲ ಕಾರ್ಯವಿಧಿಗಳಂ ಪೂರೈಸುವನ್ನ
ಭಕ್ತಾದಿಗಳ ಪ್ರವಾಹ ಹರಿದುದು ದೇಗುಲದ
ಗರ್ಭಗುಡಿಗೆ. ರಾಜಕುಮಾರರೈದರ್ ದೇವಿ
ಪೂಜೆಯ ಸಲುವಾಗಿ. ಗುರುವರನಂ ಕಂಡು
ನ್ಯಗ್ರೋಧ ದ್ರುಮದಡಿಯಲಿಯೆ ಸಾರೋಟಿನಿಂ
ಇಳಿದರೀರ್ವರ್ ಹಸನ್ಮುಖಿಗಳಾಗಿ. ಗುರುವರನ

ಬಳಿಯೆ ಕಾಲ್ಮಡಿದು ಕುಳಿತು ನಡೆಸಿದರಂದಿನ
ಸಂಪಾದಮಂ. ಧಾರ್ಮಿಕ ನೆಲೆಯಿಂ ಸರಿದು ಜಗದ
ವಿಷಯ ತಲ್ಪದಲಿ ಮುಳುಗೆ ದೇಶದ ಬಹುಬಗೆಯ
ಸ್ಥಿತಿಗತಿಯ ವಿಚಾರ ನೆರೆಮೆರೆದು ಅರುಗಾದುದು.
ಗಹನತರ ವಿಷಯಗಳ್ ಚರ್ಚೆಗೆ ಬಿತ್ತಾಗಿರಲ್
ಸಮಯಮುರುಳಿದುದರ ಪರಿವೆಯೆ ಇರದಾಯ್ತು
ರಾಜಪುತ್ರರಿಗೆ. ಸುಡುವಿಸಿಲ್ ದಗೆಯೇರೆ ಪೊರ
ಮಟ್ಟರ್ ಅರಮನೆಗೆ. ಆ ಬಳಿಕಲಲ್ಲಿಗೆ ಬಹುಲ
ಸದ್‌ವಿದ್ಯಾಪಾರಂಗತರ್ ಪಂಡಿತರ್ ಮತ್ತಮಾ
ವೇದಾಂತಿಗಳ್ ಬಂದು ವಿಚಾರಾತ್ಮಕವಾಗಿ
ವಿಶ್ವ ವಿಷಯಾಂತರ್ಗತಗಡಲಲಿ ಮುಳುಗಿ ತೇಲಿ
ಸಲ್ಲುವರ್ ಸಾಯಂ ಸಭೆಯ ಪ್ರಭೆಯೊಳ್ ಬೆಳಗಿ.
ಅಂತೆಯೇ ನಾಲ್ಕಾರು ದಿನಗಳ್ ಉರುಳಿ ಹೋದುವು.
ಸ್ವಾಮೀಜಿಯ ಜ್ಞಾನವಲಯಂ ಅರಿದು ಅಚ್ಚರಿ
ಬೀಡಾದ ರಾಜಮನೆತನದ ಲಲನಾ ಮಣಿಯ
ರೀರ್ವರ್ ಗುರುವರನ ಸನ್ನಿಧಿಗೈದರ್ ಅನನ್ಯ
ಆಸ್ಥೆಯಲಿ. ಗುರುವಿಂಗೆ ಕೈಮುಗಿದು ಸಂಸ್ಕೃತ
ಭಾಷೆಯೊಳ್ ಆರಂಭಿಸಿದರ್ ಮಾತುಕತೆಯಂ.
ಅಂದಿನ ವಿಷಯಾವಳಿಯಂ ಮುಂದಿರಿಸಿ ವಾದ
ವಿವಾದಕೆ ಪುರುಪಿತ್ತರ್ ಕಲಿತು ಬಲಿತು ದಿವ್ಯ
ಸರಸ್ವತಿಯರೇ ಆದ ಸ್ತ್ರೀಯರ್ ಸ್ವಾಮೀಜಿಯಂ
ವಸಿಷ್ಠ ಕುಲೋದ್ಭವನೆನೆ ಪರಿಭಾವಿಸಿ ನಮಿಸಿ
ಪಿಂದಿರುಗಿದರ್ ಅರಮನೆಗೆ. ಗುರುವುಂ ರಾತ್ರಿಯಂ
ಕಳೆಯುತಲ್ಲಿ ಬೆಳಗಿನ ಪ್ರಾತಃರ್ವಿಧಿಯ ತೀರ್ಚಿ
ಮತ್ತೈದರ್ ನ್ಯಗ್ರೋಧ ಪದತಲಕೆ. ತಮಗದು

ಕಾದಿರಿಸಿದ ಸ್ಥಲಿಯೊ ಎನಲ್. ದೇಗುಲದಲಿ ವರ
ಪೂಜೆಯುಂ ನಡೆದಿರ್ದುದು ಎಂದಿನವೊಲ್. ಭಕ್ತ
ಜನ ಸಮೂಹ ಬರುತಿರ್ದುದು ಸಾಲ್ಗಟ್ಟಿ. ಅದೊರ್
ನಿತ್ಯ ಸತ್ಯ ಸುಂದರಮಾದ ಚಿತ್ರವೈಭಮಿರೆ
ಘನವೆತ್ತುದು ಕಣ್ಮನಕೆ. ಸ್ವಾಮಿಜಿ ಮನದೊಳ್
ದೇವಿಯಂ ನೆನೆನೆನೆದು ಪ್ರಾರ್ಥನೆಯ ಸಲಿಸಿದರ್,

"ಉನ್ಮೀಲಯ ಮನ್ನಯ ನೇತ್ರಂ
ಮಾನ್ಯೇ ಲಕ್ಷ್ಮೀ ಲೋಕ ಮಾತಾನಿ!
ಚಿನ್ಮಯ ಸುಭಗಾವಯವೇ ಕರ್ಮಕರಃ
ಶ್ಯಾಮ ಹಂಚತವಕ ಮಿತುः॥"

"ಯಾದೇವಿ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತೈ ನಮೋನ್ನಮಃ"

ಪೊಳ್ತೇರಿತು, ಮುಗಿಲ್ಗಳದಿಣ್ಣೆಯನೇರಿದ ರವಿ
ಮನಮೋಹಕವಾಗಿ ಮೆರೆದಿರ್ದಂ ಮಹೋಜ್ವಲ
ತೇಜದಿಂ. ದೇಗುಲದೊಳ್ ಪ್ರವೇಶ ದೊರೆಯದಿಹ
ಅಬ್ರಾಹ್ಮಣ ಕುಲಜರ ಜಾತ್ರೆ ಮೆರೆದತ್ತು ಹೊರ
ಅಂಗಣದಲಿ. ಅಲ್ಲಿಯೆ ಕೈಮುಗಿದು ಅಡ್ಡ ಬಿಳ್ದು
ಹೂವುಕಾಯಿ ಫಲಪುಷ್ಪಗಳ ಸಂವೇದಿಸುತೆ
ತಂತಮ್ಮ ಒಡಲ ಸಂಕಟವನೊರೆದು ದುಃಖವ
ತೋಡಿಕೊಂಬರ್ ದೀನಗತಿಯಲಿ. ಕರುಳಿರಿಯುವ
ದೃಶ್ಯಮಂ ನೋಡಿಯೇ ನೋಡಿದರ್ ಸ್ವಾಮಿಜಿ.
ಕಣ್ಣಿರ್ದು ಕುರುಡಾಗಿ ಮತಿಯಿರ್ದು ಮೂಕರಾಗಿ
ಮನುಕುಲಸ್ಥರುಂ ತಿರ್ಯಗ್ಜಂತುಗಳಿಂದತಿ
ಕೀಳಾಗಿ ಬರ್ದುಕುವ ದೀನಾತಿದೀನ ಜನ
ಬಂಧುಗಳ ಸ್ಥಿತಿಗತಿ ಕಂಗಳಂ ತೊಯ್ಸಿದುದು.

ಅನಕ್ಷರಿ ವಿಶ್ವಬಂಧುಗಳು ದೇವಿ ಪೂಜಾ
ವ್ರತಮಂ ಕಣ್ಣಿರ್ದು ಕಾಣಲಾರದೆ ಮನದಿ
ಬೆಬ್ಬಳಿಸಿ 'ಕಾಲಿಯೋ ಶಿವನೋ ಗೋವಿಂದನೋ
ನಾರಾಯಣನೋ ಆರೋ' ಅಂತಿಂತು ಪೂಜೆಯ
ಗೀಳಿನಿಂ 'ಗೋವಿಂದೋ ನಾರಾಯಣೋ' ಎಂದು
ಕೂಗಿ ಕೇಳಿಸುತೆ ಅಡ್ಡ ಬೀಳುವರ್ ದೂರದಿಂ.
ನೋವರಿಲ್ಲ; ಕಾವರಿಲ್ಲ; 'ಅಯ್ಯೊ' ಎನುವರಿಲ್ಲ.
ಆವಾವ ಅಪರಾಧಗೆಯ್ದದೆಯೆ ಆದ್ಯರಾ
ಜಾತಿನೀತಿಯ ಕುದೃಷ್ಟಿಗೆ ಬಿಳ್ದ ದೀನಾತಿ
ದೀನ ದಲಿತರ್. ನತದೃಷ್ಟ ಅಜ್ಞಾನಿಗಳ್
ಕೂಗಿ ಕರೆವ ಕರುಣಾಜನಕ ದೃಶ್ಯ ಕರುಳಿಗೆ
ಮುಳ್ಳಾಯ್ತು. ಕಹಿಯಾಯ್ತು. ಕಾರುಣ್ಯದ್ರವ್ಯವಂ
ಕರಗಿಸಿತು, ಬಿಸಿಲಟ್ಟಿದ ಮಂಜಿನಂತೆವೊಲ್.
    ಸ್ವಾಮೀಜಿಯುಂ ಕಂಗ್ರನೂರ್ ಬಿಟ್ಟು ಮರುದಿನ
ಪೊರಡಲ್ ಅಣಿಯಾದರ್. ಇಳಿಯುತಿರುತಿರಲ್ ಆ
ಸಾಲಾದ ಮೆಟ್ಟಿಲುಗಳಂ, ಭಕ್ತನೊರ್ವನುಂ
ಕೇಳಿದಂ ಸ್ವಾಮೀಜಿಯ ಕುರಿತು "ಸ್ವಾಮೀಜಿ,
ಆಗಲೆ ಪೊರಮಟ್ಟಿರಾ?"
                    "ಅಹುದು, ಇಲ್ಲಿರುತ್ತಿಹ
ಬ್ರಾಹ್ಮಣಾಬ್ರಾಹ್ಮಣರ ಹೀನ ಬೇಧ ನಿಜದಿಂ
ಅರ್ಥಮಿಲ್ಲದ ದುರ್ವ್ಯವಹಾರವೆನೆ ಸಲ್ಲುದು,
ಅಬ್ರಾಹ್ಮಣ ಜನಕೋಟಿ ಪ್ರಾಂಗಣದೊಳ್ ದೇವಿಗೆ
ಕೈಮುಗಿದು ಅಡ್ಡಬಿಳ್ದು ಪೋಪುದಂ ನೋಡುತಿರೆ
ಒಡಲ್ ಕನಿಕರಿಸಿ ದ್ರವಿಪುದೆನ್ನ ಮಿತ್ರರೇ.

**“ನ ಚರ್ಮಣೋ ನ ರಕ್ತಸ್ಯ
ನ ಮಾಂಸಸ್ಯ ನ ಚಾಸ್ತಿನಃ ।
ಸ ಜಾತಿರಾತ್ಮನೋ ಜಾತಿ
ವ್ಯವಹಾರ ಪ್ರಕಲ್ಪಿತಾ ॥”**

“ಇದಂ ಸ್ವತಃ ಬ್ರಾಹ್ಮಣಾದ್ಯರುಂ ಬಲ್ಲರ್ ಎನೆ
ಇದಕೇನೆಂಬಿರ್ಕೈ? ಕೇವಲ ಕೆಲವೇ ಮಂದಿ,
ಮುವತ್ಕೋಟಿ ಅಬ್ರಾಹ್ಮಣ ಜನಪದಮಂ ಕೀಳ್ಗೈದು
ಆಳ್ವುದಂ ನೆನಸಿದೊಡೆ ಎರ್ದೆಯೊಳ್ ತಣ್ಣೆತ್ತರ್
ಕುದಿಗೊಳ್ವುದು ಬಿಸಿಯಾಗಿ. ಅಂದಿನಿಂದಲಾನಿಲ್ಲಿ
ಕಂಡ ದೃಶ್ಯ ಹೃದಯ ವಿದ್ರಾವಕಂ. ಇಂಥ
ದುಷ್ಕರ್ಮ ದುಷ್ಕಾರ್ಯ ದುರ್ವ್ಯವಹಾರಮಂ
ಹುಟ್ಟಳಿಸಿ ರಾಷ್ಟ್ರದೊಳ್ ಸರ್ವತ್ರ ಆದ್ಯಂತ
ಸಮತ್ವಾವಾದವಂ ಜನಮನದೊಳ್ ಬಿತ್ತಿ ಬೆಳೆಸಿದೊಡೆ
ಸುಧಾರಣೆ ಸಾಧ್ಯವಾದೀತು. ಸಾಮಾನ್ಯ ಜನ
ಜಾಗ್ರುತರಾದಾರ್. ಅದಕಾಗಿ, ನಮ್ಮ ಸುಸಂಸ್ಕೃತಿಯ
ಉಳಿವಿಗಾಗಿ ಪ್ರಯತ್ನಿಪುದು ಇಂದಿನ ದಿವ್ಯ
ಕರ್ತವ್ಯ. ಮಿತ್ರರೇ, ಕೇಳಿ ಈ ಜಾತಿಬೇಧ
ವರ್ಗಬೇಧಗಳ್ ಮೂಡಿ ಭಾರತ ಸಂಸ್ಕೃತಿಯೆ
ಹಾಳಾಯ್ತು. ಆದೊಡಂ ಒರ್ ಸಂಗತಿ ಮಾತ್ರಂ
ನಿಶ್ಚಿತಂ. ಪ್ರಗಾಢ ಚಿಂತನೆಯುಂ ಮೊಟ್ಟಮೊದಲ್
ಪ್ರಕಟಗೊಂಡ ಈ ನಾಗರಿಕ ಉಷಾರಶ್ಮಿಯಂ
ಪ್ರಪ್ರಥಮದೊಳೆ ಕಂಡು ಕೊಂಡವಂ ಪ್ರಾಚೀನ
ಭಾರತೀಯ! ಸದ್ವಂಶದ ಸುಪುತ್ರರಾಗಿ ಆ
ಚಿಂತನಾ ಭಾವನೆಯೊಳ್ ಒಡಮೂಡಿದ ಜ್ಯೋತಿ
ಕುಂಡಿ ಅಚ್ಚಳಿಯದುಳಿಸಿ ಬಾಳ್ವ ಜನ ರಾಶಿಯಂ

ಆವಿಂದಿಗು ಕಾಣ್ಬುದೊಂದು ಪುಣ್ಯ ವಿಶೇಷಂ!
ಕೇಳಿ, ಬೃಹದ್ ನದಿ ಗಿರಿ ಪರ್ವತಗಳ್ ದಾಂಟಿ
ಆವಾವ ಅಡೆತಡೆಗಳಂ ಲೆಕ್ಕಿಸದೆ ಹಿಂದೂ ವಿಚಾರ
ಧಾರೆಯ ರುಧಿರರಸ ಸುಸ್ಪಷ್ಟವಾಗಿ ಜಗತ್ತಿನ
ಇತರ ರಾಷ್ಟ್ರಗಳ ನಾಳನಾಳಗಳಿಗೆ ಹರಿದಿದೆ!
ಇಂಮುಂದೆಯುಂ ಹರಿವುದು ಎನೆ ಮನದಿಯೋಚಿಸಿ
ತಿಳಿಯಿರಿ. ಪ್ರಾಯಶಃ ಪ್ರಾಚೀನ ಜಾಗತಿಕ
ಸುಸಂಸ್ಕೃತಿ ಸಂಪದದ ಬಹುದೊಡ್ಡ ಭಾಗವೇ
ನಮ್ಮದೆನೆ ಪೆರ್ಮೆಕಣಾ! ತೋಷಕಣಾ! ಭಾಗ್ಯಕಣಾ!
ಭಾರತವರ್ಷ ಪರಿಪುಣ್ಯ ಭೂಮಿ! ಇದರೊಳಾವ್
ಪುಟ್ಟಿ ಬೆಳೆದು ಬದುಕಿದುದು ಆವ ದೈವದ ವರವೊ!

"ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಯೋ ಭಾರತ ಭೂಮಿ ಭಾಗೇ ।
ಸ್ವರ್ಗಾಪವರ್ಗಾಸ್ಪದ ಮಾರ್ಗ ಭೂತೇ
ಭವಂತಿ ಭೂಯಃ ಪುರುಷಾನ್ ಸುರತ್ವಾತ್ ॥"

ಇಂತಪ್ಪ ಭಾರತದ ಸಮೃದ್ಧ ಸಂಸ್ಕೃತಿಯಂ
ಪಾಳ್ಗೆಡಗುವ ಈ ದುರ್ನೀತಿಗಳಾಳ ನೀಳಮಂ
ಗುರುತಿಸಿ ಕುಡಿ ಮುರುಟುವೊಲ್ ಬೇರ್ ಕಡಿದುಕೊಟ್ಟಿ
ಕಂಡರಿಪುದು ಇಂದಿನ ಯುವಕರೆಲ್ಲರ ಮುಖ್ಯ
ಕರ್ತವ್ಯ!"
ಆವೇಶದಿಂ ನುಡಿಯುತಿರೆ ದೇವಿಯ
ಗುಡಿಗೈದ ಭಕ್ತಜನ ಸಂದೋಹ ಆಲೈಸಿತು
ಸ್ವಾಮೀಜಿಯ ವಾಗ್ಧಾರೆಯಂ ಮನಗೊಟ್ಟು. ಆ
ಉತ್ಸುಕ ಮನಮತಿಗಳ ಕಡಲುಕ್ಕಿ ಹರಿಯುತಿರೆ
ಸ್ವಾಮೀಜಿಯ ಕೀರ್ತಿ ಪರಿಮಳಂ ನೆರೆ ಹರಡಿತು

ಸುಗಂಧ ಪರಿಮಳದ ತೆರದಲಿ. ಜಾನಿಗಳೈದರ್,
ಪಂಡಿತರೈದರ್, ಸ್ತ್ರೀಯರ್ರೈದರ್, ದೂರದಿಂ
ಜ್ಞಾನವೇತ್ತರ್ರೈದರ್ ಪ್ರಶ್ನೋತ್ತರಂ ಮೊಳಗಿ
ಬೆಳೆದುವು ಮನುಕುಲ ಮಿಡುಕುವ ತೆರದಿ. ಸನಾತನ
ಧಾರ್ಮಿಕ ವಿಧಿವಿಧಾನಗಳ್ ಕಳೆಯೇರಿದುವು ಸೆಳೆ
ಮಿಂಚಿನೊಲ್ ಮಿಂಚಿ. ಅರಮನೆಯ ಅಂತಃಪುರದಿಂ
ಗಮಿಸಿದಾ ಲಲನಾಮಣಿಯರ್ ಸೋಲ್ದು ಸೊಪ್ಪಾಗಿ
ಪಿಂಮರಳಿದರ್. ಆ ಬಳಿಕ ಗುರುವರನಂ ತಾವ್
ಅರಮನೆಗೆ ಆಹ್ವಾನಿಸದೆ ಪಿಂದಿರುಗಿದ ಬಗೆ
ಮನಂಗೆಡಿಸಿತು. ತಮ್ಮೊಳ್ ನೊಂದು ಅವರಂ ನಾಳೆ
ಕಂಡು ಕರೆತಂದರಾಯ್ತು ಎಂದೆಂಬ ನಿರ್ಣಯಕೆ
ಶಿರಮಣಿದರವರ್. ಮರುದಿನಂ ನ್ಯಗ್ರೋಧ ತರು
ತಲದೊಳ್ ಗುರುದೇವಂ ಇರಲಿಲ್ಲ. ತರುತಲಂ
ಬೋಳಾಗಿ ಬರಿದಾಗಿ ತೋರ್ದುದು ಬಗೆಗಣ್ಣಿಗೆ.
   ಗುರುವರಂ ಕೇರಳದ ರಾಜ್ಯದಲಿ ಏಳೇಳು
ದಿನಮಾನಗಳ್ ಸುತ್ತಿ ತಿರುಗಾಡಿ ಬಿಕ್ಕೆಯಲಿ
ಯಯಾವರ ಬಾಳ್ಮೆ ನಡೆಸಿದರ್. ಮುಂದವರ್ ದೂರ
ವಿದೇಶಗಳ ಯಾತ್ರೆಯಂ ಕೈಕೊಂಡು ಧರ್ಮಜಯ
ಪಡೆದು ಕೀರ್ತಿವೆತ್ತ ವಿಷಯಂ ದಶದಿಶೆಗಳಂ
ಮುಟ್ಟಿ ತಟ್ಟಿ ಧೀಂಕಿಡಲ್, ಕೇರಳದರಮನೆಯ
ಜ್ಞಾನವೇತ್ತರಿಗೆ ಗುರುದೇವನಂ ಅರಮನೆಗೆ
ಆಮಂತ್ರಿಸದ ಅಚಾತುರ್ಯಮಂ ನೆನೆನೆನೆದು
ಮನಮುದುಡಿತು. ಆದೊಡೇಂ ಮಿಂಚಿತ್ತು ಆದಿನಂ.
ಕಂಗ್ರನೂರ್ ಬಿಟ್ಟ ಗುರುವರ್ಯ್ಯಂ ಉಗಿಬಂಡಿ
ಪಯಣ ಕೈಕೊಂಡರ್ ಕೊಚ್ಚಿನ್ ನಗರಿಯಂ ಸೇರೆ.

ಬಂಡಿಯೊಳ್ ಇನಿತುತಲಮಿಲ್ಲದೊಲ್ ತುಂಬಿರ್ದುದು
ಜನರಾಶಿ. ಮತ್ಸ್ಯಗಾರರ್ ಮೀನ್ ಬುಟ್ಟಿಗಳ
ಸಹಿತ ಬಂದಪರ್ ತಂಡತಂಡದಲಿ. ಮತ್ಸ್ಯಗಂಧ
ಒರ್ಮೆಗೇ ಮುತ್ತಿತು ಸಕಲೇಂದ್ರಿಯಂ. ಅಕ್ಕರದ
ಅರಿವಿಲ್ಲ. ಸಂಸ್ಕೃತಿಯ ಅರಿವಿಲ್ಲ. ಮಾತುಗಳಲಿ
ನಯವಿಲ್ಲ. ಜ್ಞಾನದ ಬೆಳಕಿಲ್ಲ. ಬರೀಮಾತಿನ
ಮರ್ಮರ ಗಲಾಟೆ ಗದ್ದಲ ಕಿವಿ ಕಿವುಡಪ್ಪುವ
ಮಾಳ್ಕೆಯಲಿ; ನಡೆದುದು ಪಯಣಗತಿ ಮಸಣಮಪ್ಪ
ಪಾಂಗಿನಲಿ. ಶಾಲೆಯಿಲ್ಲ, ಗುರುವಿಲ್ಲ, ಬಿಜ್ಜೆಗಳ
ಗಂಧವಿನಿತಿಲ್ಲ ದೀನ ದಲಿತರ್. ಆಚಾರ ವಿಚಾರವಿ-
ಹೀನಗತಿಯಲಿ ಬದುಕು. ಮೀಂಗಳೇ ಸರ್ವಸ್ವ
ಎನಲ್ ಸತ್‌ಕೃತಿಯೆಲ್ಲಿ? ಸಂಸ್ಕೃತಿಯೆಲ್ಲಿ? ಬರೀ
ಬರಡು ಬದುಕಿನ ಕೂಪಕೂರ್ಮಿಗಳ್. ಅವರವರ
ಪ್ರಪಂಚವೇ ಬೇರೆ. ವಿಚಾರಾಂತ ವಿಶ್ವವೇ
ಬೇರೆ. "ಈ ಹಂತದ ಜನಜಂಗುಳಿಯು ಬಿಜ್ಜೆಯ
ದೇಗುಲಂಬೊಕ್ಕು ವಿಶ್ವಜ್ಞಾನವಂ ಪಡೆದು
ಸಂಜೀವನ ಗತಿಯಲಿ ಬಾಳ್ದೊಡೆ ಭರತವರ್ಷ
ಧನ್ಯ!" ಕಿವಿಗಳ ಸನಿಹದಲಿಯೇ ಕೂಗಿ ಹೇಳಿತು
ಆತ್ಮವಾಣಿ. ಕರುಣ ಕಾತರ ಸ್ವರದಲಿ ಮತ್ತೆ
ನುಡಿಯಿತು "**ವಿದ್ಯಾವಿಹೀನಂ ಪಶು ಸಮಾನಂ**"
ತಮ್ಮೊಳ್ ಪರಿಭಾವಿಸುತೆ...ವೃತ್ತಿಯುಮೇನಿರ್ದೊಡೇಂ
ಜ್ಞಾನ ವಿಜ್ಞಾನಗಳ್ ಬೆಳೆಯದೆ ಬದುಕಿಗಿಲ್ಲ
ಬೆಳಕು; ಇಂತು, ಸಾಗುತಿದೆ ಬರಿಬದುಕು, ಜಡಬದುಕು.
ಚಿಂತನಾವೇಶದಲಿ ದೇಶದ ಅತಿದಾರಣ ಸ್ಥಿತಿಯಂ
ನೆನೆದರ್ ಗುರುದೇವಂ. ನಿಲ್ಮನೆಯ ಮುಟ್ಟುವನ್ನ.

ಬಂಡಿಯುಂ ಮುಂಬರಿಯುತಲಿ ವೇಗವಂ ತಗ್ಗಿಸಿ
ಸೇರಿದತ್ತು ಮುಂಬಿನ ಕಿರು ನಿಲ್ದಾಣದಂಗಣಂ.
ಎಲ್ಲ ಪಯಣಿಗರೊಂದಿಗೆ ಇಳಿದರ್, ಸ್ವಾಮಿಜಿ.
ಮುಂಬೆಳಕದು ಇಂ ಮೂಡಿಲ್ಲವಾದೊಡಂ ಕಡು
ಕತ್ತಲೆಯ ಕಣ್ ತಿವಿಯುವೊಲ್ ವಾಯಸವಳಗಂ
ಎಚ್ಚತ್ತು ಕಾಕರಿಸುತೆ ಬೇಲಿಯ ಸಾಲಿನಲಿ
ಸಾಲ್ಗೈಸಿ ಕುಳಿತಿರ್ದುವು ಕರ್‍ರನೆ ಕರಿ ಬೊಂಬೆಯ
ಪಾಂಗಿನಲಿ. ನಿಲ್ದಾಣಂ ಜನರಾಶಿಯಿಂ ತುಂಬಿ
ಗಜಿಬಿಜಿಗೊಳಗಾದುದು ಸಂತೆಯಂ ಮೀರಿಸುವ
ಮಾಳ್ಕೆಯಲಿ. ಅನಿತರೊಳ್ ಮರಕೋತಿಗಳೆಚ್ಚತ್ತು
ಕೀರಲು ದನಿಯಲಿ ಕಿರಕಿರನೆ ಕಿರಿಚಿದುವು ಮನ
ಕಿಡಿಸುವ ತೆರದಲಿ, ನೋನೋಡುತಿರೆ ಮೂಡಣದ
ದಿಗ್‌ಬಿತ್ತಿಯ ತಟಾಂತ ಲಗ್ನದಲಿ ಮೆಲ್ಲನೆ
ತುಳುಕಿತು ಮೊದಲ್ ಬೆಳಕು. ತಿಳಿಯಾಗಿ, ಹಸನಾಗಿ,
ಕೆನ್ನೀಲಿಯ ಭಿತ್ತಿಯಲಿ ಅರುಣಾರುಣಂ ರೇಖಾ
ಚಿತ್ರದವೊಲ್ ನಿಣಿಕಿದಂ ಕೆಂಗಲಿಸಿ. ಕೆನ್ನೆಗೆಯ
ಚೆಲ್ಲಿ ಕೆಮ್ಮನೆ ವೈಭವೀಕರಿಸಿತು ದಿಗ್‌ದೇಶಂ.
ಮುಂಬಕ್ಕಿಗಳೆಚ್ಚೆತ್ತು ಚಿಲಿಪಿಲಿಸಿದುವು ವರ
ಕಂಠ ಕೃತಿ ಹರಿಸುತ್ತೆ. ಸ್ವಾಮಿಜಿಯುಂ ಮೆಯ್ಯಂ
ಕೊಡುವುತೆಳ್ದು ಮನದೊಳ್ ಗುರುಮಹಾರಾಜರಂ
ಸ್ಮರಿಸಿ ನೆನೆನೆನೆದು ಪುಣ್ಯಕಾಲಮಂ ಪರಿಪುಣ್ಯ
ಗೊಳಿಪಂತೆ ಸವಿಗೊರಳ ಕೃತಿಯಂ ಹರಿಸಿದರ್,

"ಗುರುರ್ಬ್ರಹ್ಮಾ ಗುರುರ್ವಿಷ್ಣುಃ
ಗುರುರ್ದೇವೋ ಮಹೇಶ್ವರಃ ।

ಗುರುರೇವ ಪರಂ ಬ್ರಹ್ಮ
ತಸ್ಮೈ ಶ್ರೀಗುರುವೇ ನಮಃ ।।"

ಮೂಡುಬಾನಂಚಿನೊಳ್ ದಳದಳ ಮಲರ್ದುದೈ
ಪ್ರತೀಕ್ಷಿತ ಶ್ರಾವಣ ದಿನೋದಯದ ಭವ್ಯಕಾಂತಿ.
ದಳದಳದಳಂ ಮೊಳಗಿದುದು ನಿಲ್ದಾಣ ಘಂಟಾ
ರವಂ, ನವಿರ್ ನಿಮಿರಿ ಕಂಪಿಸುವ ತೆರದಿ. ಆರು
ಸಲಂ ಬಾರಿಸಿ ಸಮಯ ಸೂಚಿಯಾಗೆ ನಿಲ್ಮನೆ
ಚಾರಕರ್ ಅಣಿಗೊಂಡರ್ ಬರಲಿಹ ಇನ್ನೊಂದು
ಬಂಡಿಯನೆದುರುಗೊಳಲ್, ದಳದಳ ತರಂಗದಿಂ
ನಿಲ್ಮನೆಯು ದಳದಳಿಸಿತು ಉಗಿಬಂಡಿ ಬಹ ರಭಸದ
ಗಾತ್ರಕ್ಕೆ. ನೋಡಿದರ್ ಸ್ವಾಮೀಜಿ ನೆಟ್ಟಕಣ್
ತಾನಾಗಿ, ಬಂದುದು ಉಗಿಬಂಡಿಯು ಗುಜುಗುಜಿಸಿ.
ಕೊಚ್ಚಿನ್ ನಗರಿಯಲಿ ಕಳಿದುವು ಕೆಲದಿನಮಾನಂ.
ಸುತ್ತು ಮುತ್ತಣ ಊರು ಕೇರಿಯಲಿ ಸುತ್ತಾಡಿ
ಸುಪರಿಚಯಮಂ ಪಡೆದು ಭಾರತ ಜನನಿಯೊಡಲ
ಕುಡಿಗಳ ನತದೃಷ್ಟ ಬದುಕಿನಮೇಲೆ ಕರುಣೆಯ
ಕುಡಿನೋಟವಂ ಬೀರಿ ನೊಂದು ನೀರಾದರಾ
ಸ್ವಾಮೀಜಿ, ಎಲ್ಲಿಯುಂ ಸುಖೀಬದುಕು ಎಸೆಯದು
ಕಂಗಳಿಗೆ. ರಾಷ್ಟ್ರೀಯ ಪ್ರಜೆಗಳಲಿ ಬಿಳಿಯರ
ಪಿಚಂಡಿತನದಾಳ್ವಿಕೆಯ ಕಹಿರಸವನುಣ್ಣುತೆ
ಬಾಳ್ಗುಡಿಯಲಿ ನರಳ್ವ ಬಡಬಂಧುಗಳಧಿಕಂ.
ಒರ್ಮೆ ಜಗದ ಕಂಗಳ್ ಸೆಳೆದು ಇತ್ತಹರಿಸಿದೊಡೆ
ಅದುವೆ ಪ್ರಥಮ ಹೆಜ್ಜೆ ಭಾರತದುದ್ಧಾರದ
ಕಾರ್ಯಕ್ಕೆ. ಎಂಬೊಂದು ನಿರ್ಧಾರ ದೃಡಂ,
ಗುರುವರನ ಮನೋಗತಿಯಲಿ. ಮುಂದೆ ಜಿಹಜಿನಲಿ

ಪಯಣಂಬಡೆಯೆ ಒಳ್ಳಿತೆನಿಸಿ ಜಿಹಜಿನಲೊಂದು
ಸ್ಥಳವಂ ಪಡೆದರ್ ಸ್ವಾಮಿಜಿ. ಮುಂಪಯಣಂ
ಎರ್ನಾಕುಲಂಗೆ. ಪಯಣಿಗರಿರುತಿರಲ್ ತುಂಬಿ
ಕಿಕ್ಕಿರಿದು, ಬಹುಜನ ಸುವಿದ್ಯಾವೇತ್ತರೆಸೆದರ್
ಕಂಗಳಿಗೆ. ಸ್ವಾಮಿಜಿಯ ಮುಖಾವಲೋಕನದಿ
ಮನದುಂಬಿ ಮುಂದೈವರ್ ಸ್ವಾಮಿಜಿಯ ಗೆಳೆತನಕ್ಕೆ
ಮುದವೂಡುವ ತೆರದಲಿ, ಯಾನಂ ಸುಮನೋಹರ
ಯೋಗದಿಂ ನಡೆದು ಮುಗಿಬಗಿಯಾಯ್ತು. ತೀರದಲಿ
ಲಂಗರೂರಿ ನಿಂದುದು ಜಹಜು. ಇಳಿದರ್ ಗುರುವರ
ಎಲ್ಲರೊಳ್ ತಾನುಮೊಂದಾಗಿ ಕಣ್ ನೋಟವುಂ
ಹರಿವನ್ನೆಗಂ ಸೈಕತ ಸಿರಿರಾಶಿಯ ರಜತ
ಪಟ್ಟದ ಮೃದು ಹಾಸಿನಲಿ ಮುನ್ನಡೆಯುತಿರುತಿರೆ
ಅಲ್ಲಿಯೆ ಪದಚಾರಣದಲಿ ಸೊಗಂಬಡೆಯುತಿರ್ದ
ಈರ್ವರ್ ಅನನ್ಯ ಗಣ್ಯ ಮಹನೀಯರೆಸೆದರ್
ಸ್ವಾಮಿಜಿಯ ಕಣ್ ನೋಟಕೆ. ಒಡನೊಡನೆಯೇ
ಅವರ್ ಗುರುವಿನ ಪ್ರಥಮ ದರ್ಶನ ಮಾತ್ರದಿಂ
ವ್ಯಕ್ತಿತ್ವವಂ ಗುರುತಿಸಿದಂತೆ ಕಣ್ಣುಗಳಂ
ನಟ್ಟು ನಾಂಟಿ ನೋಡಿದರ್ ಅಚ್ಚರಿಯಲಿ, ವದನ
ಮಂಡಲಂ ದೇದೀಪ್ಯಮಾನವಾಗಿ ತೋರ್ದುದು.
ಮೂವರುಂ ಸಮೀಪಿಸೆ, ಪರಸ್ಪರ ಕೈಮುಗಿದು
ಬೆಳಗಿನ ನಮನಮಂ ಸಲಿಸಿದರ್; ಪ್ರಸನ್ನ
ಭಾವದ ಮುಖಾಂಭೋಜಗಳಲಿ ಎಳೆ ಮುಗುಳರಲಿ
ದಳವಿರಿದ ಮಂದಾರಮಾದುವು. ಪರಸ್ಪರರ
ವಂದನೆಗಳ ವಿನಿಯೋಗದೊಡಂ ಸುಪರಿಚಯಂ
ಬೆಳೆಸಿದರ್. ಓರ್ವ ಮಹನೀಯನುಂ ರಾಮಯ್ಯ

ನೆಂದಾದೊಡೆ, ಇನ್ನೊರ್ವಂ ಚಂದೂಲಾಲನೆಂದು
ತಿಳಿಯಿತ್ತು. ಸ್ವಾಮೀಜಿಯ ಪರಿಚಯಮರಿತವರ್
ಎಲ್ಲಿಲ್ಲದ ತೋಷದಗಡಲಲಿ ಮುಳುಗೆದ್ದರ್.
ಈರ್ವರುಂ ಸಕಲ ಸದ್ಗುಣಗಳಿಂ ಪ್ರಖ್ಯಾತ
ನಾಮರಿರೆ ಪರಿಚಯದ ಬಳ್ಳಿ ಬೆಳೆದು ಕೊನರಿತು.
ಆತ್ಮೀಯತೆಯು ಬೆಳೆಯಿತು. ಪರಸ್ಪರ ನೇಹದಿಂ
ಮಾತಾಡುತೆ ಸೈಕತ ರಾಶಿಯ ಹರವಂ ದಾಂಟಿ
ಮುನ್ನಡೆದರ್. ಆ ಸತ್ಪುರುಷರುಂ ಎರ್ದೆಯೊಳ್
ಪರಮಾನಂದರಸಮಂ ತುಂಬಿ ಗುರುವಿನ ಸಕಲ
ಕಾರ್ಯಕ್ರಮಗಳಲ್ಲಿ ತಾವ್ ಮನವಿಟ್ಟು ಘನ
ಸಹಕಾರವಂ ನೀಡಲುರೆ ಸಿದ್ಧರಿರುವುದಂ
ತಿಳಿಪಿ ಭಾಷೆಯನಿತ್ತು ಆನಂದದಿಂ ತಮ್ಮ
ತಮ್ಮ ಮನೆಗಳಿಗೆ ಕರೆದೊಯ್ದು ಅಸನ ವಸನಮಂ
ಮೇಣೊಸತಿಯಂ ಒದವಿಸಿದರ್ ಗುರುವರ್ಯಂಗೆ,
ಆ ಗೆಣೆಯರುಂ ಕಲಿತು ಬಲಿತ ಧೀಮಂತರುಂ,
ನೆರೆಹೊರೆಯ ಗೆಣೆಯರುಂ, ಸಾಮಾಜಿಕ ಸುಧಾರಕ
ವೃತ್ತಿಯವರುಂ ಆಗಿರೆ ಸ್ವಾಮೀಜಿಯ ಮನೋ
ಭಾವದೊಳ್ ಪೊದಲ್ದ ವಿವಿಧ ಕಾರ್ಯಕ್ರಮಗಳ್
ಗೈವೊಡೆ ಸಕಲತರದ ಸಿದ್ಧತೆಗೆ ಭುಜಗೊಟ್ಟು
ನಿಲ್ದರವರ್. ಆ ಶಿಷ್ಯರಾ ಅನುಸಂಗದಿಂ
ಮನಮೆಚ್ಚಿ ಮತಿಮೆಚ್ಚಿ ಸಂತುಷ್ಟರಾದರ್ ದೇವ
ಗುರು ನರೇಂದ್ರನಾಥದತ್ತಂ. ಆ ಸರಳತರದ
ಧೀಮಂತ ಸತ್ಪುರುಷರುಂ ಅಲ್ಲಿಗೆ ಮಿಣ್ಣನೆ
ಉಳಿದರೇಂ? ತಮ್ಮಗ್ಗಳ ಸುಖತೋಷದಮೃತಮಂ
ಸಮಾಜದಗಲ ಸಕ್ಕರೆಯ ಸವಿಯೋಲ್ ಹಂಚಿ

ಸಾರಿದರ್...ಸಾರಿದರ್ ಒಳ್ನುಡಿಗಳಂ ಹರಿಸಿ.
ಒಡನೊಡನೆ ಚೆನ್ನುಡಿ ಮೊಳಗಿಮೊಳಗಿ ಸುದ್ದಿಯುಂ
ಹಬ್ಬಿ ಹರಡಿದುದು ಸ್ವಾಮೀಜಿಯ ದಿವಿಜತ್ವಂ
ದಿಗ್‌ದಿಶೆಗಳನಕ ತೊಳಗಿ ಬೆಳಗುವ ಮಾಳ್ಕೆಯಲಿ.
ದಿನದಿನಂ ಜನರಾಶಿಯದು ನೆರೆಯುತಿರ್ದುದು
ಗುರುದೇವನ ಸಂದರ್ಶನಂ ಬಯಸಿ, ಪೊಳ್ತಿನ
ಪರಿವೆಯಿಲ್ಲದೊಲ್. ಜ್ಞಾನದಾಹಿಗಳ್, ಧಾರ್ಮಿಕ
ಪಿಪಾಸುಗಳ್, ಶಾಸ್ತ್ರಕೋವಿದರ್ ಮುಂತಪ್ಪ ಬಲ್
ಧೀಮಂತ ವ್ಯಕ್ತಿಗಳ್ ಬಂದಪರ್ ಸಾಲ್ಗಟ್ಟಿ.
ಎಲ್ಲರೊಡನೆ ಮಾತುಕತೆ ಪ್ರವಚನ ಮತ್ತಂ
ತರ್ಕವಿತರ್ಕಗಳಂ ಹೂಡಿ ಮನತಣಿಸುವರ್;
ರಾಷ್ಟ್ರೀಯ ದುಸ್ಥಿತಿಯಂ ವಿವರಿಸಿ ಯುವಜನಗಳ
ಹೊಣೆಗಾರಿಕೆಯಂ ಬಿಡಿಸಿ ಹೇಳುತೆ ಎಲ್ಲರಂ
ಪುರಿದುಂಬಿಸುವರ್.
"ಓ, ಬಾಂಧವರೆ ಕೇಳಿರೈ!
ಈ ರಾಷ್ಟ್ರಕೆ ಕಂಟಕ ಪ್ರಾಯಮಾದ ನಿರಕ್ಷರ
ಕುಕ್ಷಿತನಮಂ ಬಡಿದೋಡಿಸೆ ಎಲ್ಲ ಜನರಿಂಗೆ
ವಿದ್ಯಾದಾನವಂ ನೀಡಿ ಪುರುಪೀಯಲಕ್ಕುಂ.
ಜನಸಾಗರದಲಿ ಚೈತನ್ಯಝುರಿ ಚಿಮ್ಮಿದೊಡೆ
ಮಾತ್ರಮೆ ನಿಜ ಬಾಳ್ಮೆಯೆನೆ ಸಲ್ವುದು. ಯುವಕರೊಳ್
ಪೌರುಷಪ್ರವೃತ್ತಿ ಮೂಡಲಕ್ಕುಂ. ಸತ್‌ಶೀಲತೆ
ಮೈದಾಳಲಕ್ಕುಂ. ಬಡಜನರ್ ವಿದ್ಯೆಯ ಬಳಿಗೆ
ಪೋಗರೆನೆ ವಿದ್ಯೆಯೇ ಅವರ ಬೀಡಿನೆಡೆಗೆ,
ನೇಗಿಲಿನೆಡೆಗೆ, ಕಾರ್ಖಾನೆಯೆಡೆಗೆ ಪೋಗಲ್ವೇಳ್ಕುಂ!
ಕೇಳಿ, ಇಂತಾದೊಡೆ ಮಾತ್ರಮೆ ಕಣ್ಕಿವಿಗಳ್ ಬಹು

ಉಪಯೋಗಕರಮಾದಪವು. ಪರಸ್ಪರ ಮಾತು
ಕತೆ ಸಂಭಾಷಣೆಗಳ ಮುಖೇನ ಪೊಚ್ಚ ಪೊಸ
ಕಲ್ಪನೆಗಳ್, ರೀತಿನೀತಿಯ ಆದರ್ಶಗಳ್
ಮೇಣ್ ಭವಿಷ್ಯದ ಅಭಿಲಾಷೆಗಳ್ ಮೂಡುವೊಲ್
ಪುರುಪು ನೀಡಿದೊಡದುವೆ ಪ್ರಥಮ ಹಂತಂ
ಉದ್ಧರಣ ಕಾರ್ಯಕ್ಕೆ. ಈ ವಗೆಯ ಕಾರ್ಯಗತಿ
ನೆಮ್ಮಿಕೊಂಡೊಡೆ ಮುಂಕಾರ್ಯವದು ಸುಗಮ.
ಜಗತ್ ವ್ಯವಹಾರದ ಕಡೆಗೆ ಕಣ್ಣಿಟ್ಟು ನೋಳ್ಪ
ಧೀಮತಿ ತಲೆಯೆತ್ತಿದೊಡೆ ತಂತಮ್ಮ ಉದ್ಧಾರ
ತಂತಾನೆ ಆದಪುದು ದಿಟ. ಮಾನಸಿಕ ಕ್ರಿಯೆ
ಬೌದ್ಧಿಕ ಪ್ರಕ್ರಿಯೆ ಜನಜಂಗುಳಿಯಲಿ ನಡೆದು
ಒಳಗಣ್ ತೆರೆದೊಡೆ ಆಯ್ತು. ಸೋದರರೇ ಕೇಳಿ,

"ಆಯಂ ನಾಭಾ ವದತಿ ವಲ್ಗುಮೋ ಗೃಹೇ
ದೇವ ಪುತ್ರಾ ಋಷಯಸ್ತು ಚ್ಛೃಣೋತನ ।
ಸುಬ್ರಮಣ್ಯ ಮಂಗಿರಸೋ ವೋ ಅಸ್ತು
ಪ್ರತಿ ಗೃಬ್ಣೀತ ಮಾನವಂಶು ಮೇಧಸಃ ॥"

ಒರ್ಮೆ ಶ್ರೋತೃಗಳ ಮುಂತೆ ಸ್ವಾಮೀಜಿ ಎರ್ದೆಯ
ನೆಚ್ಚು ಸ್ಫುರಿಸಿ ಜಾನದೀವಿಯಂ ಮುಂದಿರ್ಕಿ
ಹೃದಯಹಾರೀ ವ್ಯಾಖ್ಯಾನರಸ ಹರಿಸಿದರ್,
ಮನಮನಂಗಳ್ ಮುಟ್ಟಿ ತಟ್ಟಿ ಎಬ್ಬಿಸುವಂತೆ.
"ಕೇಳಿ, ನೀವ್ ಪಯಣಿಪ ನಾವೆ ತೂತು ಬಿಳ್ದೊಡೆ
ನೀವೇಂಗೈವಿರಿ? ಅದಂ ಶಪಿಸುತೆ ನಿಂನಿಮ್ಮೊಳ್
ಕಚ್ಚಾಡುತೆ ಕೂಡುವಿರೇಂ? ಅಥ ಗಡಬಡಿಸುತೆ
ಎಲ್ಲರುಂ ಒಗ್ಗೂಡಿ ತೂತವಂ ಮುಚ್ಚಿಬಿಡೆ
ಶಕ್ತಿಯಂ ಕ್ರೋಢೀಕರಿಸುವಿರಲ್ತೆ? ಅಂತೆಯೆ

ಒಗ್ಗಟ್ಟಿನಿಂ ದೇಶಕಾರ್ಯಕ್ಕಾಗಿ ಧುಮುಕುತೆ
ಎರ್ದೆಯ ಬಿಸಿ ನೆತ್ತರ್ ಬಸಿಯುವಾ. ಆ ದಿವ್ಯ
ಪ್ರಯತ್ನದೊಳ್ ವಿಫಲರಾದೊಡೆ ನಂನಮ್ಮೊಳ್
ಶುಭವಂ ಹಾರೈಸಿ ಬೋಳೈಸಿ ಎಲ್ಲರುಂ ಒಟ್ಟೈಸಿ
ವಾರ್ಧಿಯಲಿ ಮುಳುಗಿಸಾಯುವಾ! ಕೇಳಿ, ಕಿವಿಗೊಟ್ಟು!
"**ಕೃಷಿತೊ, ನಾಸ್ತಿ ದುರ್ಭಿಕ್ಷಂ ಜಪತೊ ನಾಸ್ತಿ**
ಪಾತಕಂ" ಎಂಬುದಂ ನೀವ್ ಅರ್ಥೈಸಲಾರಿರಾ?
ಏವೊಳ್ತು ಆವ್ ಸಿದ್ಧರಿರ್ಪುದೆ ಜೀವನದ
ಹೆಗ್ಗುರಿ. ನಿರಕ್ಷರಿಗಳಿಗೆ ಅಜ್ಞಾನಿಗಳಿಗೆ
ಸರ್ವತ್ರ ಸದಾ "**ಕುರ್ಯಾತ್ ಮಂಗಲಂ**" ಎನೆ
"**ಪ್ರಜ್ವಾಲಿತೊ ಜ್ಞಾನಮಯಃ ಪ್ರದೀಪ್ಯ**" ಎಂಬಸತ್ಯ
ಸತ್ಯಾರ್ಥಕೆ ದಾರಿ. ಕತ್ತಲೆಯಿಂ ಬೆಳಕಿಗೆ ದಾರಿ.
"**ಅಸತೋ ಮಾ ಸದ್ಗಮಯ ತಮಸೋ ಮಾ**
ಜ್ಯೋತಿರ್ಗಮಯ ಮೃತ್ಯೋರ್ಮಾಽಮೃತಂಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ" ಇದು ಸರ್ವರ
ಸದಾಕಾಲದ ಮಂತ್ರವಾಗಲಿ. ನೆನವಿರಲಿ, ನೆನವಿರಲಿ."
    ಎರ್ನಾಕುಲಂ ನಗರಿಯಲಿ ಕಳಿಯಿತು ವಾರದ
ದಿನಮಾನ. ಚಟ್ಟಾಂಬಿ ಸ್ವಾಮಿ ಎಂಬೊರ್ವ ಗುರು
ಮಹಾತ್ಮನ ಪೆಸರರಿತು ವಿಷಯವರಿತು ಅವರಂ
ಕಂಡು ಬರ್ಪ ಇಚ್ಛೆಯಲಿ ಪೊರಮಟ್ಟರಾ ಗುರು
ದೇವಂ. ಚಟ್ಟಾಂಬಿ ಸ್ವಾಮಿಗಳ ಬಿಡದಿಯ ಬಳಿ
ಗೈತರಲ್ ಕೇಳಿಸಿದುದು ಗುರುಗಳ ಪ್ರವಾಣಿ. ಕಿವಿ
ಗಹ್ವರಗಳಿಗಿಂಪಾಗಿ. ನಸುವೊಳ್ತು ನಿಂತಲ್ಲಿ ನೋಡಿದರ್.
ಕೊಠಡಿಯೊಳ್ ಇನಿತು ತಾವಿಲ್ಲದೊಲ್ ತುಂಬಿರ್ದ
ಶ್ರೋತೃಗಳ್ ಕಣ್ಗೆಸೆದರ್. ನೋನೋಡಿ ಇನ್ನೊರ್ಮೆ

ಬರ್ಪುದೊಳ್ಳಿತು ಎಂಬುವ ಯೋಚನೆಯೊಳ್, ಅವರ್
ಪಿಂದಿರುಗಿದರ್ ತಮ್ಮಯ ಬಿಡದಿಗೆ. ಅದನರಿದ
ಚಟ್ಟಾಂಬಿ ಸ್ವಾಮಿಗಳ್ "ಅವರ್ ಧೀಮಂತರಿರೆ
ಅವರೆನ್ನೆಡೆಗೆ ಬರ್ಪ ಶ್ರಮವದೇತಕೆ? ಆನೆ
ಪೋದಪೆಂ" ಎಂದರಾ ಗಳಿಗೆಯಲಿ ಪುರುಪಿಸಿಂ.
ಚಟ್ಟಾಂಬಿ ಸ್ವಾಮಿಗಳ್ ಬಿಡದಿಯಂ ಪಡೆದದ್ದು
ಶಂಕರ ಮೆನನ್ ಎಂಬ ಮಹೋದಯರ ಸ್ವಗೃಹ
ಸಮುಚ್ಚಯದೊಳ್, ದೂರದೂರದಾ ಬೀಡಿಂಗೆ
ಪೋಗಿಬರಲುರೆ ಬಹುಲ ಸಮಯವೇಳ್ಕುಮೆನಲ್ಕೆ
ಮರುದಿನದ ಮುಂಜಾನೆಯಲಿ ಪೊರಡುವುದೊಳ್ಳಿತು
ಎಂಬೊಂದು ನಿರ್ಣಯಕೆ ಶಿರಮಣಿದರ್ ಗುರುವರಂ.
ನಡುವಗಲ್ ಪ್ರೌಢಾರುಣನಂ ನುಂಗಲೈದುವೊ
ಎನೆ ಕರ್ಬೊಗೆಯ ಬೃಹದ್ ಕಾರ್ಮುಗಿಲ್ ಸೈನ್ಯಂ
ಮುಸುಂಗಿದುವು ರವಿಬಿಂಬಮಂ. ಅತ್ತಿತ್ತಣಿಂ
ಎತ್ತಲೆತ್ತಲಿಂ ನುಗ್ಗುತ್ತಲಿವೆ ಕಾಳಿಕಾ
ವರ್ಣಾಂತ ಕಾಳ ಮುಗಿಲೋಳಿ. ಜೊತೆಗೆ ಬನಗಾಳಿ
ಕಡಲ್ಗಾಳಿ ಕೂಡಿಯಾಡಿ ಬೀಸಿದುವು ಒಟ್ಟೈಸಿ.
ಭೂಜೇಶ ಕುಲಕೋಟಿಗಳ್ ಶಿರಮುರಿದು ಗೋಣ್
ಮುರಿದು ಅತ್ತಿತ್ತ ತೂಗಾಡಿದುವು ಸೋಲೊಪ್ಪಿ.
ರೇಜಿನಿಂ ನುರ್ಗಿವಂದ ಮುಂಗಾರ್ ಪ್ರಭುವಿನ
ಉಬ್ಬರದ ಔತ್ಪಾತಕದಲಿ ಎಲ್ಲೆಡೆಯು ಮುರಿದು
ಬಿಳ್ದ ಮುರಿವುಗಳೆ! ಎಲೆಕಡ್ಡಿ ಪುಷ್ಪ ರೇಣುಗಳ್
ಉದುರುದಿರಿ ವಿಚಿತ್ರತರ ರಂಗೋಲಿಯೊರೆದುದು
ನೆಲದಮೇಲೆ. ಸುಮಂತ್ರಿತ ಮಂತ್ರದುಸಿರಿನವೊಲ್
ಸಿರಿ ಉಸಿರಾಗಿ ಮೆಲುಮೆಲ್ಲನೆ ಪಿಂಜರಿದುದು ಘೋರ

ಕಡಲ್ಗಾಳಿ. ಆಗಳೇಂ ಮಳೆಸುರಿದ ಪರಿಯ? ತಟ
ಪಟನೆ ಮೊದಲ್ ಸುರಿದು ಕಡೆಗಾಯ್ತುದು ಕುಂಭದ್ರೋಣ
ಮಳೆ. ಕಾರ್ಮುಗಿಲೆಯ ಕಾರುತೆ ಬೋರ್ಗುಡಿದು ಮೋಡದ
ಮರೆಯಲಿ ಮಿನುಗುವ ಮಿಂಚಿನ ಗೊಂಚಲ್ ಹೊಂಚುತೆ
ಫಳ್ ಫಳ್ಳನೆ ನುರ್ಗಿದುದು ಇಂದ್ರನ ಕೂರ್ವಾಳ್
ಜಳಪಿಸಿದವೊಲ್! ಗುಡುಗಿತು ಗುಡುಗು ನಭೋದೇಶ
ಸಿಡಿಯುವಂದದಿ.
ಗುರುವರಂ ಎರ್ದೆಯ ಮೇಲೆ
ಕೈಕಟ್ಟಿ ಮಳೆಗಾಳಿಗಳ ಕಾಳೆಗ ನಡೆಯುವ
ರೀತಿಯಂ ಅವಲೋಕಿಸಿದರ್ ಅಭಿರಾಮಭಂಗಿಯ
ರಾಮಣೀಯಕ ಮೂರ್ತಿಯಾಗಿ. ಕಳಿದುವು ನಾಲ್ಕೈದು
ದಿನಮಾನಗಳ್ ಅಂಗಳಕೆ ಕಾಲಿಡದ ತೆರದಿ.
ಸ್ವಾಮೀಜಿಗೆ ವಿರಾಮದಿಂ ಗ್ರಂಥಪಠಣಮಂ
ಕೈಕೊಳಲ್ ಅವಕಾಶ ದೊರೆಯಿತ್ತು ಅದ್ಭುತ
ಶಾಂತಿಯಲಿ. ಪಗಲಿರುಳ್ ಕಳೆದುವೇಕಾಂತತೆಯ
ವೈಭವದಿ. ಬಳಿಕಲೊರ್ಮೆ ಮಳೆನಿಂತು ಚೆಂದದಿ
ಚೆಂಬಿಸಿಲ್ ಹರಿದು ಬರೆ ಪೊರವಂಟರ್ ಬೆಳಗಿನ
ಸುಸುಂದರ ಗಾಳಿಯಂ ಭೇದಿಸುವೊಲ್ ಬಿರುಬಿರು
ಬೀಸುಗಾಲ್ ಬೀಸಿ. ಒಳಕೊಠಡಿಯಲಿ ಚಿರತೆಯ
ಚರ್ಮದ ಹಸೆಯಮೇಲೆ ಮಂಡಿಸಿರ್ದು ಪುಸ್ತಕ
ಪಠಣದಲಿ ಮನವಿಟ್ಟ ಚಟ್ಟಾಂಬಿ ಸ್ವಾಮಿಗಳ್
ಆನಂದಭಾವದೊಳ್ ನೋಡುತ್ತೆ ಕುಳಿತುಕೊಳೆ
ದರ್ಭೆಹಾಸನಿತ್ತು ಸುಸ್ವಾಗತಿಸಿದರ್ ತಮ್ಮ
ಬಳಿಗೆ ಸ್ವಾಮೀಜಿಯಂ. ಬಂಗಾಲಿ ಭಾಷೆಯುಂ
ತಿಳಿಯದಿರೆ ದೇವಭಾಷೆ ಸಂಸ್ಕೃತದೊಳ್ ಉಭಯ

ಕುಶಲೋಪರಿಯಂ ನಡೆಸಿದರ್ ಚಟ್ಟಾಂಬಿಗಳ್
ಮನದಣಿಯೆ. ಬಳಿಕಲವರೆಂದರ್ "ಗುರುವರ್ಯಾ,
ನಿಮ್ಮಯಾ ಕೊರಳ್‌ದನಿಯುಂ ಬಲು ಮಧುರ! ಅಹ
ಇಂತಪ್ಪ ದನಿಯಲಿ ಹಾಡಿದೊಡೆ ಕೇಳಲೆನಿತು
ಚೆನ್ನ? ಆವ ದೈವದ ಕೃಪೆಯೊ ತವ ಸುಂದರ
ಜನ್ಮಧಾರಣೆಗೆ! ಕಾಳಿಮಾತೆಯ ಕೃಪೆ ಸದಾ
ನಿನ್ನಮೇಲಿರ್ಕೆ!" ಎಂದಬಳಿಕಂ ಚಟ್ಟಾಂಬಿ
ಸ್ವಾಮಿಗಳ್ ಮತ್ತೆಂದರ್ "ನಿನ್ನಯ ಇಂಪಾದ
ದನಿಯೊಳಾಂ ಸಂಗೀತೆಯೊಂದನುಂ ಕೇಳ್ವಾಸೆ
ಇರ್ಪುದೆನಗೆ."
"ಆಯ್ತಾಯ್ತು." ಎನುತ್ತೆ ಗುರುವರಂ
ಮನಂಮುದಿಸಿ ಹಾಡಿದರೊಂದು ಸಂಗೀತೆಯಂ.
ಅಕ್ಕರಕ್ಕರವುಂ ಹರಿದುದು ರಾಗಮಯವಾಗಿ.

"ಸ್ವಸ್ತ್ಯಸ್ತು ವಿಶ್ವಸ್ತು ಖಲಃ ಪ್ರಸೀದ ತಾಂ
ಧ್ಯಾಯಂತು ಭೂತಾನಿ ಶಿವಂ ಮಿಥೋ ಧಿಯಾ ।
ಮನಶ್ಚ ಭದ್ರಂ ಭಜತಾದದೋಷಜ
ಆವೇಶ್ಯತಾಂ ನೋಮತಿರಸ್ಯ ಹೈತುಕೀ ॥"

ಕೇಳಿದರ್ ಚಟ್ಟಾಂಗಿ ಸ್ವಾಮಿಗಳ್ ಭಾವನಾ
ವೇಶದಲಿ. ಕಂಗಳಲಿ ಭಕ್ತಿರಸಧಾರೆಯದು
ವೆಳ್ಳಿರಸವೊ ಎನೆ ಥಳಥಳಿಸಿದುದು ಸುಖಾಶ್ರುವಂ
ಸೂಸಿ. ಸ್ವಾಮೀಜಿಯುಂ ಮತ್ತೆ ಕೆಲವು ಭಜನೆಯ
ಗೇಯಗಳ್ ಹಾಡಿ ತಣಿಸಿದರ್ ಆ ಚಟ್ಟಾಂಬಿ
ಸ್ವಾಮಿಯಂ. ತರ್ವಾಯ ಸರಸ ಸಂಭಾಷಣೆಯು
ನಡೆಯಿತ್ತು. ತರ್ಕವಿತರ್ಕಗಳುಂ ನಡೆದುವು
ಪೊಳ್ತೇರುವನಕ. ಚಟ್ಟಾಂಬಿ ಸ್ವಾಮಿಯ ನೇಹ

ಜಳದೊಳ್ ನೆರೆ ಮಿಂದವೊಲ್ ತಣಿಯಿತು ಸ್ವಾಮೀಜಿಯ
ಮನಂ. ಚಟ್ಟಾಂಬಿ ಸ್ವಾಮಿಗಳುಂ ಸಹ ಮನಮೆಚ್ಚಿ
ಮೈಯ್ಯುಬ್ಬಿ ಹೃದಯಕರಂಡವೇ ತುಂತುಂಬಿ
ಶಿಷ್ಯರಿಂಗೆ ನುಡಿಸಿದರಿಂತು "ಅಹ ಈ ಸ್ವಾಮಿ
ಮಹೋದಯನ ಒಡನಾಟಮೆನೆ ಗರುಡದೇವನ
ಮುಂತೆ ನೊಣವೊಂದು ಸ್ಪರ್ಧೆಗಿಳಿದವೊಲ್ ಎನಲದು
ಸರಿಯಪ್ಪುದು. ಎಂತಪ್ಪ ತೇಜಸ್ವಿ! ಮಸುಳಿಮಸಗಿ
ರಜನಿಯಾ ಕಾಳತಮಿಶ್ರದಿಂದ್ಯೆದ ಸೂರ್ಯನೊಲ್
ಶ್ರೀನಿಧಿಯೆ ವಲಂ. ಮುಂದೆಂದಾದೊಡಂ ಭವ್ಯ
ಭವಿಷ್ಯಮಿಹುದಿವರ್ಗೆಂಬುದರೊಳಿನಿತು ಸಂಕೆ
ಇಲ್ಲಮೆನೆ ಅನ್ಯಮಲ್ತು; ತಿಳಿಯಿರ್ಕೆ." ಎಂದರಾ
ಭಾವೋತ್ಫುಲ್ಲ ಕಂಠ ಸ್ವನವಂ ಹರಿಸಿ. ಒರ್ಮೆ,
ಬಹುದೂರ - ದೂರದಿಂ ವೇದವಿದ್ಯಾವಂತ
ವಾಕ್ಕೋವಿದ ಚತುರರ್ ಜೊತೆಗೂಡುತಲ್ಯೆದರ್
ಸ್ವಾಮೀಜಿಯ ದರ್ಶನಕಾಗಿ. ಸಕ್ಕದ ಸವಿಯ
ಸಕ್ಕರೆಯ ನಲ್ಮಾತುಗಳಲಿಯೇ ಸಂವಾದ
ಸಂಭಾಷಣೆಗಳ ಬೆಳಸಿ ತಂತಮ್ಮ ಪಾಂಡಿತ್ಯ
ಶಿಖರವನೇರುತಿರೆ ಮಾತಿನ ಮಧ್ಯೆ ಪಂಡಿತ
ಮಹನೀಯಂ ನುಡಿದನಿಂತು "ಸ್ವಾಮೀಜಿ, ನಿಮ್ಮಯ
ಮಾತಿನೊಳ್ ವ್ಯಾಕರಣ ದೋಷವಂ ಕಂಡೆನ್ಯೆ!"
ಎನುತೆ ವ್ಯಂಗ ನಗೆಯಾಡಿ ತನ್ನವರ ಚೋದಿಸಿ
ನಗೆ ಗುಲ್ಲೆಬ್ಬಿಸಿದನ್. ಇನಿತು ಅಸಮಾಧಾನಗೊಳದೆ
ನುಡಿದರ್ ಗುರುದೇವಂ "ಅಯ್ಯಾ, ಪಂಡಿತೋತ್ತಮ!
ವ್ಯಾಕರಣ ಶಾಸ್ತ್ರವಂ ಆನರಸುವಾಬದಲ್
ಅದೆನ್ನಂ ಅನುಕರಿಪುದು ಎನೆ ತಿಳಿದು ನೋಡಿರ್ಕೆ."

ಅಲ್ಲಿಂದ ಪೊಳ್ತು ಮೂಡುವ ಮುನ್ನಮೆ ಪೊರಮಟ್ಟು
ಎಲ್ಲರ ಬಲ್ಮೆಯ ವಿದಾಯಂಬಡೆದ ಸ್ವಾಮಿಜಿ
ಕೊಚ್ಚಿನ್ ನಗರಿಗೈದರ್, ಕಾಲ್ನಡಿಗೆಯ ಪಯಣ.
ಯಯಾವರ ಬದುಕು, ಎನೆ ಆವುದೊ ಅದಮ್ಯತರ
ಶಕ್ತಿಯೊಂದು ಎಲ್ಲಿಯುಂ ಸೋಲ್ಗೆಡಗಲೀಯದೆ
ಮುನ್ನಡೆಸುವುದರ ಅರಿವಿರೆ ಹೃನ್ಮನಂ ನಿಶ್ಚಲಂ
ನಿಶ್ಚಿಂತಂ ನಿರಾತಂಕಂ. ಅಲ್ಲಿನ ದಿವಾನ
ಶಂಕರಯ್ಯ ಎಂಬ ಪೆಸರಾಂತ ಗಣ್ಯ ಮಹನೀಯಂ;
ಸ್ವಾಮಿಜಿಯ ಪರಿಚಯಂ ಪಡೆದು ಮನ ಮೆಚ್ಚಿ, ಆ
ರಾಜ್ಯದ ಮಹಾರಾಜಕುಮಾರನಿರುತಿರ್ದಾ
ಮಾರ್ತಾಂಡ ವರ್ಮನಿಂಗೆ ಭೇಟಿಯನೇರ್ಪಡಿಸಿ
ಪರಿಚಯಿಸಿದನ್. ಮತ್ತದೆ ಸಮಯದೊಳ್ ವೈದಿಕ
ವರ್ಗೀಯ ಸುಂದರರಾಮ ಐಯ್ಯರ್ ಎಂಬೊರ್ವ
ಅಗ್ರಗಣ್ಯ ವ್ಯಕ್ತಿಯ ಭೇಟಿಯುಂ ನಡೆಯಿತ್ತು.
ತ್ರಿಮೂರ್ತಿಗಳ್ ಕೂಡೆ ಕಳೆ ಕಟ್ಟುವುದು ಪೊಳ್ತು.
    ಒರ್ಮೆ, ವರ್ಣಾಶ್ರಮ ಧರ್ಮದೊಳ್ ಮನವನಿಟ್ಟು
ನುಡಿಸಿದರವರ್ "ಮಿತ್ರರೇ ಕೇಳಿ, ಬ್ರಾಹ್ಮಣರ್
ಎಲ್ಲಿವರ್ಗೆ ಹೃದಯಬಿಚ್ಚಿ ನಿಸ್ವಾರ್ಥ ಸೇವೆಯೊಳ್
ನಿಂದು ಮುಕ್ತಮನದಿಂ ಜ್ಞಾನದಾನವಂ ಏಕ
ರೀತಿಯೊಳ್ ಎಲ್ಲರ್ಗೆ ಸಲಿಸುವರೊ ಅಲ್ಲಿವರ್ಗೆ
ಮಾತ್ರಂ ಸಾರ್ಥಕ ಬದುಕಂ ನಡೆಸುವರ್. ಮಿನ್ನೆ
ಬ್ರಾಹ್ಮಣಂ ಭಾರತಕ್ಕಾಗಿ ಬಹಳಷ್ಟು ಗೆಯ್ದ
ಪುರಾವೆಗಳಿರ್ಪುದು. ಮುಂದೆಯುಂ ಗೆಯ್ದಪರ್."
ಮತ್ತೊರ್ಮೆ ಬೋಧನಾ ಕ್ರಮದೊಳ್ ಮನವಿಟ್ಟು
ಭಾರತೀಯ ಸ್ತ್ರೀಯರ ದುಸ್ಥಿತಿಯ ನೆನೆನೆನೆದು,

"ನಮ್ಮೊಳ್ ಮಹಿಳೆಯರ ಸ್ಥಿತಿಗತಿ ಬಲು ಹೀನಾಯ.
ವಿದ್ಯೆಯೇ ಇಲ್ಲಮೆನಲ್ ಸಾಮಾಜಿಕ ಸ್ಥಾನ
ಮಾನವುಂ ದೂರದೂರವೇ. ಅವರಂ ಸದಾ
ಕಳ್ತಲೆ ಗವಿಯೊಳಿರಿಸಿ ಆ ಶಾಸ್ತ್ರ ಈ ಶಾಸ್ತ್ರ
ಮುಂತಪ್ಪ ಹೀನ ಸಂಕೋಲೆ ತೊಡಿಸಿ ಜೀವನ–
ದಾದ್ಯಂತ ಶೋಷಿಸುವುದರ ವಿರುದ್ಧ ಎಲ್ಲರ್
ಹೋರಾಡಿಯೇ ಗೆಲ್ಲಲಕ್ಕುಂ. ಪೆಣ್ ತೀವ್ರತರ
ಶೋಷಿತೆ. ಹಿಂದುಳಿದ ಜನಾಂಗಕೆಂತಂತು
ಮಹಿಳೆಯರ್ಗಂತಂತು ಸಂಸ್ಕೃತ ವಿದ್ಯಾಭ್ಯಾಸ
ಲಭಿಸಲಕ್ಕುಂ. ಮಹಿಳೆಯರ್ ಆಧ್ಯಾತ್ಮಿಕ ದಿವ್ಯ
ಸಂಸ್ಕೃತಿಯನೊಳಗೊಂಡು ಸ್ವಜ್ಞಾನದ ಛವಿಯಂ
ಪಡೆದುಕೊಂಡೊಡೆ ತಂತಮ್ಮ ಕುಂದುಕೊರತೆಯಂ
ತಾಮೆ ಅರಿತುಕೊಂಬುದು ಸಹಜ. ಅದುವೆ ಜೀವನ
ಶೋಭೆ. ಮಹಿಳೆ ಸರ್ವ ಸಮಾನತೆಯ ಬದುಕಿನೊಳ್
ಸುಖೀ ಜೀವನ ನಡೆಸುವುದೆ ರಾಷ್ಟ್ರ ಪ್ರಗತಿಯ
ಸಲ್ಲಕ್ಷಣಮೆನೆ ಅನ್ಯಮಲ್ತು...."
ಎರ್ನಾಕುಲಂ
ಬಿಡುವ ಮುನ್ನ ತಮ್ಮೊಡಲ ಉತ್ಕಟಾಕಾಂಕ್ಷೆಯಂ
ಭಾವುಕದನಿಯೊಳಿಂತು ಬಿತ್ತರಿಸಿದರ್ "ಓವೊ,
ಕೇಳಿರ್ಪೆ! ಸಕ್ರಿಯತೆಯದು ತುಂಬಿದ ದೇಶಭಕ್ತಿ
ಎಂದೊಡದು ಕೇವಲ ಮನದ ಭಾವುಕತೆ ಮಾತ್ರ
ಅಲ್ಲವೈ. ಅದುಂ ತನ್ನ ದೇಶೀಯ ಬಂಧು
ಬಾಂಧವರ ಸೇವೆಯದು ಮಾತ್ರವಲ್ಲಂ. ರಾಷ್ಟ್ರ
ಪ್ರಗತಿಗಾಗಿ ಕಲ್ಲುಕಲ್ಲುಗಳ್ ಸಾಲಿಗ್ರಾಮ
ಗೈವ ಆತ್ಮಶಕ್ತಿಯುಮಿರ್ದೊಡೆ ಸಕಲತರದ

ಏಳಿಗೆಯು ನಡೆದಪುದು ಹಂತ ಹಂತಗಳಲ್ಲಿ.
ಬರಿ ಎಲುವಿನ ಹಂದರಮಾದ ರಾಷ್ಟ್ರಕೆ ರಕ್ತ
ಮಾಂಸಗಳ್ ತುಂಬಿ ಪುಷ್ಟೀಕರಿಪ ಯುವಶಕ್ತಿ
ತೊಳಗಿ ಬೆಳಗಲಕ್ಕುಂ! ನಮ್ಮ ರಾಷ್ಟ್ರದೊಳ್ ಏನ್
ಉಂಟು? ಏನಿಲ್ಲ? ಇದ್ದುದೆಲ್ಲವುಂ ಆಳ್ವರ
ಪಾಲು! ಸಿಂಹ ಪಾಲು! ಭರತವರ್ಷದ ಬಡತನ
ಅಜ್ಞಾನ ಸಂಕಟಗಳಮಾನೆನ್ನ ಕಣ್ಣಾರೆ
ಕಂಡಿರ್ಪೆನ್. ನೋವು ಸಂಕಷ್ಟಗಳ ಕದನ್ನ
ಉಂಡಿರ್ಪೆನ್. ಅಂದಿನಿಂದೆನ್ನ ಚೇತನವುಂ
ಉರಿಯುತಲಿದೆ ಹೊತ್ತಿ. ಭಗವಂತನ ಕಾಂಬುವೊಡೆ
ದರಿದ್ರ ನಾರಾಯಣರ ಸೇವಿಪುದೆ ಸರಿಯಪ್ಪ
ಕ್ರಮ. ಭಾರತದ ಕೋಟ್ಯಾಂತರ ಕಡು ದರಿದ್ರ
ನಾರಾಯಣರ ಸೇವೆಗೈದು ಪುನೀತರಾಗಿ...!
ಪರಿಪಾವನ ಪಟುಗಳಾಗಿ! ಸಿದ್ಧರಾಗಿ! ಪ್ರಬುದ್ಧ
ಚೇತನರಾಗಿ! ವರವಿದ್ಯಾಸಂಪನ್ನರಾಗಿ!

"ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇತ್ ಶತಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮ ಲಿಪ್ಯತೇ ನರೇ ॥"

ಅಂದು, ಸ್ವಾಮಿಜಿಯುಂ ಒಡಲ ಸಂಕಷ್ಟದಿಂ
ಪ್ರೇಮದಿಂ ಉದಾತ್ತೀಕರಿಸಿದ ನವನವೀನ
ಪೆಸರದು 'ದರಿದ್ರ ನಾರಾಯಣ' ಎಂಬ ಭಾವನಾ
ಪೂರ್ವಕ ಮನೋವೇದನೆಯುಂ ಪರಿ ಭಾವಿಸೆಲೆ
ಮನವೇ! ಆಪನಿತು ಯೋಚಿಸಿ ತಿಳಿಯೆಲೆ ಮನವೇ!
ಸುಂದರರಾಮ ಐಯ್ಯರ್‌ರವರ ಗೃಹವಾಸಿ ಗುರು

ವರ್ಯಂ ನವದಿನಮಾನಗಳಂ ಕಳೆದರಲ್ಲಿ.
ನೇಹಸುಖ ಲೋಲುಪ್ತಿ ಮೆರೆದುದು ಮನೆಯ ಪರಮ
ಪ್ರೇಮಮಯ ಮಧುರ ಬಾಂಧವ್ಯದಲಿ. ನೇಹಿಗರ್
ಶ್ರೋತೃಗಳ್ ಧರ್ಮಜ್ಞಾನಿಗಳ್ ಬಂದಪರ್ ಗುರು
ಮಹೋದಯನಂ ಕಾಂಬುವೊಡೆ. ಬಲ್ ಸರಾಗದಿಂ
ಕಳೆದುವು ದಿನಮಾನಗಳ್. ತರುವಾಯಿ, ಗುರುಗಳ್
ತಿರುವನಂತಪುರಮಂ ಗುರಿಗೊಂಡು ಪೊರಮಡುವಾ
ಮುನ್ನ ಎಲ್ಲರಿಂಗೆ ವಿನಯದಿಂ ವಿದಾಯಮಂ
ಬೇಳ್ದು ಕೈಮುಗಿದು ಪೊರಮಟ್ಟರ್. ಪಥದ ದಿಕ್ಕು
ದೆಶೆಯಂ ಅರಿತು ಸರಿಪಥವಿಡಿಯೆ, ಸಾಗಿದುದು ನಡೆ
ತಿರುವನಂತಪುರದ ಗಡಿಗೆ. ಎನಿತೆನಿತೊ ಅನನ್ಯ
ಅನುಭವ ಘನಿಸಿದ ಬುದ್ಧಿಮಾನ್ಯರ್ ಕೂಡಿದರ್
ದಾರಿಯಲಿ ತಮ್ಮೊಡನೆ ಸಹಪಥಿಕರಾಗಿ. ಘನ
ಅನುಭವಾನ್ವಿತ ಸತ್ಪುರುಷವರ್ಗಮಿರೆ ಪಯಣ
ತೋಷಪ್ರದಮಾಯ್ತು. ಬಹುಜನ ಗಣ್ಯರ ಸಖ್ಯ
ಬೆಳೆಯಿತ್ತು. ಸಹಪಯಣಿಗರ ಸಹವಾಸದಿಂ ಮನ
ಮುದಿಸಿತ್ತು. ಭಾರತ ಪ್ರವಾಸದ ಅನುಭವವಂ
ವಿವರಿಸಿ ವಿವರಿಸಿ ಶ್ರೋತೃಗಳ ಮನಮತಿಗಳಂ
ತುಂಬಿ ಜಡಮತಿಗತಿಗೆ ಪುರುಪುಪುರುಡುಗಳ ವೀರ
ರಸ ತುಂಬಿದರ್ ಶೂರ ಸೇನಾನಿಯ ತೆರದಲಿ.
ವಾರವೊಂದು ಉರುಳಿದುದು ಬಿಡುವಿರದ ಅನೇಕ
ಕಾರ್ಯಕ್ರಮಗಳ್ ನಡೆದುವು ಅನುದಿನಂ. ಬಹುಲ
ಜನರಾಶಿಯ ದರ್ಶನಮಾಯ್ತು, ಗಣ್ಯಜನಗಳ
ನಿಕಟ ಪರಿಚಯಮಾಯ್ತು. ಶ್ರೋತೃಗಳ ಮತಿತಣಿಸಿ
ಮನತಣಿಸಿ ಪೊರಡಲಣಿಗೊಂಡೊಡೆ ಅತಿಥೇಯರ

ಕಂಗಳಲಿ ಅಶ್ರುಧಾರೆ ತುಂಬಿ ತುಳುಕಿದುದು
ಅಗಲಿಕೆಯ ಭಾರದಿಂ. ಸ್ವಾಮೀಜಿಯುಂ ಕಿರಿಯ
ವಟುಗಳಂ ಬೋಳೈಸಿ ಆತಿಥೇಯರ್ಗೆ ನಯದಿಂ
ಅಭಿವಾದನ ಸಲಿಸಿ ಪೊರಮಟ್ಟರ್, ಖಿನ್ನ ಮೊಗ
ಮಂದಾರಗಳ್ ರಂಗು ತಳೆದು ಸೂಸಿದುವು ಬಿಸು
ಗಂಬನಿಯ. ಅಂತಿಂತು, ಎಲ್ಲರಿಂ ಆದರದ
ಬೀಳ್ಕೊಡಿಗೆಯಂ ಪಡೆದು ಸಾಲ್ ಮೆಟ್ಟಿಲುಗಳಂ
ಇಳಿಯುತಿರೆ, ಎದುರು ವಕ್ಕದಿಂ ವಾಂಛೀಶ್ವರ
ಶಾಸ್ತ್ರಿ ಎಂಬೊರ್ವ ಪಂಡಿತೋತ್ತಮ ಗಮಿಸಿದರ್
ಗುರುದೇವನ ಸಂದರ್ಶನಕಾಗಿ. ಸ್ವಾಮೀಜಿ
ಮೆಟ್ಟಿಲಿಳಿಯುತಲಿರ್ದುದಂ ಕಂಡು ಬಿರುಬಿರನೆ
ಬೀಸುಗಾಲಂವೀಸಿವೀಸಿ ಮುಂಬರಿದರಾ
ವಾಂಛೀಶ್ವರ ಪಂಡಿತ ಮಹನೀಯರ್. ಸಂಪೂರ್ಣ
ಸದಾಚಾರ ಸಂಪದ್ಭರಿತ ಶಾಸ್ತ್ರಿಗಳ ಕಡು
ಬಿರುಸಿನಾಗಮನಂ ಕಣ್ ನೆಟ್ಟಂತೆ ನೋಡುತೆ
ಪಜ್ಜೆ ಕೀಳದೆಯೆ ನಿಂತರಲ್ಲಿಯೆ ಸ್ವಾಮೀಜಿ.
ಆಗಳಾ ಸುಂದರರಾಮಐಯ್ಯರ್ ಮುಂಬರಿದು
ಶಾಸ್ತ್ರಿಗಳ ಬರಮಾಡಿ ಬನ್ನಿಮೆಂದು ಕರೆಯುತೆ
ಪರಿಚಯಿಸಿದರ್ ಗುರುವರಂಗೆ ಬಹುಲ ತೋಷದ
ಒಳ್ನುಡಿಗಳಲ್ಲಿ, "ಈ ಶಾಸ್ತ್ರಿಗಳ್ ಪ್ರಕಾಂಡ
ಪಂಡಿತರ್ ಈ ಪ್ರಾಂತ್ಯದೊಳ್ ಬಲುಧೀಮಂತನೆನೆ
ಸತ್ಕೀರ್ತಿ ಪಡೆದ ಮಾನ್ಯರ್" ಎಂದೆನಲ್, ಒಡನೆ
ಪರಸ್ಪರ ವಂದನೆ ಮರುವಂದನೆಗಳ್ ಪ್ರಿಯ
ಕರವಾಗಿ ತೋಷದ ನುಡಿಯಲಿ ಹೊಮ್ಮಿದ ಬಳಿಕ
ಮಾನ್ಯ ಪಂಡಿತ ಕುಲೋತ್ತಮರಾದ ವಾಂಛೀಶ್ವರ

ಶಾಸ್ತ್ರಿಗಳ್ ಸ್ವಾಮೀಜಿಯೊಡಂ ನಯದಿಂದಿಂತು
ನುಡಿಸಿದರ್ "ಸ್ವಾಮೀಜಿ, ನಿಮ್ಮೊಡಂ ನಸುವೊಳ್ತು
ಮಾತಾಡಿ ವಿಚಾರವಿನಿಮಯಗೊಳಿಪ ಇಚ್ಛೆ
ಇರ್ಪುದೆಮಗೆ, ನೀವ್ ದಯೆಯಿಂ ಸಂಭಾಷಿಸಲ್
ಸದವಕಾಶಮಂ ನೀಡಿದೊಡಮಾನು ಧನ್ಯಂ!"
"ಆಯ್ತಾಯ್ತು, ಬನ್ನಿ"
ಸುಂದರರಾಮಐಯ್ಯರೊಡಂ ಈರ್ವರುಂ ಮತ್ತೆ
ಜಗಲಿಯೇರಿದರ್. ಪ್ರಶ್ನೋತ್ತರಗಳ್ ರಂಗೇರಿ
ಕಳೆಕಟ್ಟಿ ವಿಜೃಂಭಿಸಿದುದು ಚಣಚಣದಲಿ, ಪರಮ
ವೈದಿಕಮಯ ವೇದಿಯಲಿ ಅಂಡಲೆದು, ಇಂದಿನ
ನಾಗರಿಕತೆಯವರೆಗೆ ಸರ್ವಧರ್ಮಗಳ ಒಳ
ತಿರುಳ್ ಹಿಂಜಿ ಮನಗೊಳುತೆ ತಂತಮ್ಮ ಮನಸಿಗೆ
ಸಂತೃಪ್ತಿ ಪಡೆದರ್. ವಾಂಛೀಶ್ವರ ಶಾಸ್ತ್ರಿಗಳ
ಅಪೇಕ್ಷೆಯುಂ ನೆರವೇರ್ದು ಸ್ವಾಮೀಜಿಯ ಸಂಸ್ಕೃತ
ವ್ಯಾಕರಣ ರೀತ್ಯ ಸಿದ್ಧಿಯುಂ ಲಭಿಸಿದೊಲಾಯ್ತು.
ಸ್ವಾಮೀಜಿಯುಂ ಒಡಲ ಕರುಳ ಕರೆಯನಿಂತಿಂತು
ಹಸನ್ಮುಖದಿಂದೊರೆದರ್ "ಗುರುವೇ ಕೇಳಿಲ್ಲಿ!

"ಶೃತಿರ್ವಿಭಿನ್ನ ಶೃತಯೋಽಪಿ ಭಿನ್ನಃ
ತಥಾ ಮುನಿನಾಂ ಮತಯೋಽಪಿ ಭಿನ್ನಃ
ಧರ್ಮಶ್ಯ ತತ್ವಂ ನಿಹಿತಾಂ ಗುಹಾಯಾಂ
ಮಹಾಜನೋ ಏನಗತಃ ಸ ಪಂಥಾ ॥"

ಸ್ವಾಮೀಜಿಯುಂ ಮತ್ತೆ ಎಲ್ಲರಿಂ ಬೀಳ್ಕೊಂಡು
ಪೊರವಂಟರಲ್ಲಿಂದೆ, ಐಯ್ಯರವರ ತುಂಬಿದ
ಸಂಸಾರದ ಮುಖಬಾಡಿ ಒಂಬತ್ತುದಿನಗಳಿಂ

ಬೆಳಗಿರ್ದ ದಿವ್ಯಜ್ಯೋತಿಯುಂ ಇಂದೆಮ್ಮನುಂ
ಅಗಲ್ದು ಪೊರವಂಟಿತ್ತೈ!" ಎಂದರತಿ ಬೇವಸದಿ.

"ನಿಯತಿಕೃತನಿಯಮರಹಿತಾಂ
ಹ್ಲಾದೈಕಮಯೀಮನನ್ಯ ಪರತಂತ್ರಾಂ ।
ನವರಸರುಚಿತಾಂ ನಿರ್ಮಿತಿಮಾದಧತೀ
ಬಾರತೀ ಕವೇರ್ಜಯತಿ ॥"

ಹರಿಃ ಓಂ ತತ್ ಸತ್

❋ ❋

ಅಪ್ಪಾದಶೋಲ್ಲಾಸಂ

ದೃಢ ಪ್ರತಿಜ್ಞೆ

ತಸ್ಮಾದ್ಧರ್ಮಂ ಸಹಾಯಾರ್ಥಂ
ನಿತ್ಯಂ ಸಂಚಿನುಯಾಚ್ಛನೈಃ ।
ಧರ್ಮೇಣ ಹಿ ಸಹಾಯೇನ
ತಮಸ್ತರತಿ ದುಸ್ತರಂ ॥

ಮಹೇಂದ್ರ ಗಿರಿಯ ಕುತ್ಕೀಲಮೆಸೆದುದು ದಿವ್ಯ
ಬೆಳ್ಳಿಯ ಕಿರೀಟಮಂ ಧರಿಸಿ ಮೆರೆದ ತೆರದಲಿ.
ಕಳೆದತ್ತು ಮೂದಿನಂ; ಗತಿಸಿತ್ತೈ ಮೂರಾತ್ರಿ.
ದೀರ್ಘ ಪಗಲ್‌ಗಳು, ಸುದೀರ್ಘ ರಾತ್ರಿಗಳು.
ದಿವಾರಾತ್ರಿಯನಿಶಂ ರಾಷ್ಟ್ರೀಯ ಭವಿಷ್ಯದ
ಸುವಿಚಾರ ಮಂಥನಂ. ಪರಮಾತ್ಮ ಚಿಂತನಂ.
ದೇಹಾತ್ಮರೋಚಕ ಸಮಯ ಸ್ಫೂರ್ತಿ ಪರಿವೇಶಂ.
ಪ್ರಾತಃಕಾಲೀನ ನಿಶ್ಶಬ್ದಾಬ್ಧಿಯಾಳದಲಿ
ಮುಳುಗಿದ ಗುರುದೇವಂ ಧ್ಯಾನಿಸಿದ ಮಂತ್ರವೇಂ?

"ಭಾರತಂ ತೈಲ ಪೂರ್ಣ ಪ್ರಜ್ವಾಲಿತೋ
ಜ್ಞಾನಮಯ ಪ್ರದೀಪಃ"

ಸಾವಿರದೆಂಟನೂರ ತೊಂಬತ್ತಮೂರನೆಯ
ಸಂವತ್ಸರದ ಜನವರಿ ತಿಂಗಳ ಕಾಲಮಾನಂ
ಸಂಭ್ರಮ ಸಡಗರಗಳ ದ್ಯೋತಕಮೊ ಎನಲ್ಕಾ
ದಿನೋದಯ ಬೆಳಗಿದತ್ತು ಶೋಭಾ ಶೈಲಿಯಲಿ.
ಶೀತಮಂ ಶೀತಲಿಪ ಮೌನಶಾಂತಿರಸ ಹರಿಸಿ
ಎಳೆಬೆಳಕು ಹರಿದುದು ಇಳೆಯಮೇಲೆ. ಮಘಮಘಿಪ

ಶಿಶಿರ ಪ್ರಭು ಇಳೆಯಂ ಆಕ್ರಮಿಸಿ ಸೀತಾಂತ
ಶೀತಲರಸಮಂ ಹರಡಿ ಮೈಮನಂ ಮುದುಡಿಸಿರೆ
ಮಿಸುನಿ ವರ್ಣಾಂತ ಎಲೆಗಳ್ ಉದುರಿ ಉದುರಿ
ಬಿಳ್ದುವು ಧರಾತಲಕೆ. ಪೊಸ ಚಿಗುರ್ ಇಣಿಕಿಣಕಿ
ನೋಡುತಿರ್ದುವು ಮುಂಬರೆ ಕಾಲೋಚಿತವಾಗಿ.
ಬರಲು ಬರಲಾದ ದ್ರುಮಕೋಟಿಯ ತಲದಲ್ಲಿ
ನಿಲ್ವೆನೆನೆ ನೆರಳಿಲ್ಲದ ಬರಿತಲ. ಮುಂಬೊಳ್ತು
ಪೊರಮಟ್ಟ ಸ್ವಾಮಿಜಿ ಬೋರಲುಮರಗಳ ಕಡೆ
ಕಣ್ ಹಾಯಿಸಿ ನೋನೋಡುತೆ ಮುನ್ನಡೆದರ್. ಆ
ಕುಪಥವಿಡಿದು ಕನ್ಯಾಕುಮಾರಿ ಪ್ರಾಂತ್ಯಮಂ
ಗುರಿಗೊಂಡು. ಸಾಗಿದುದು ಪಯಣಂ ಏಕಾಂತ
ನಿಷ್ಠೆಯಲಿ. ಪಜ್ಜೆಪಜ್ಜೆಗುಂ ಊರು ಕೇರಿಯ
ಹಾಯ್ದು ವನದೇಶದೊಳ್ ನುರ್ಗಿ ಬೆಟ್ಟವನೇರಿ
ತಿಟ್ಟನಿಳಿದು ಕಂದಕವಂ ಹಾರಿ ಬಂಡೆಯಿಂ
ಜಿಗಿದು ನಡೆದರ್ ಮುಂಕೊಳುತೆ. ವಾಮಪಕ್ಷದಲಿ
ಹೆಗ್ಗಲ್ಲು ಕರ್ಗಲ್ಲು ಚೆಂಗಲ್ಲು ಬೆಳ್ಗಲ್ಲು
ಕಿರುಗಲ್ಲು ದೋರ್ಗಲ್ಲು ಕೂಡಿ ಬೆರೆತು ಕಲೆತು ನಿಜ
ಕಲ್ರಾಶಿಯ ತೋಂಟವೊ ಎನಲ್ ಜೃಂಭಿಸಿದತ್ತು
ವರ್ಣವರ್ಣಮಯ ಚಿತ್ರವಿಚಿತ್ರತರಮಾಗಿ.
ಏಕಾಂತ ನಡಿಗೆಯಲಿ ತದೇಕಾಂತ ಚಿಂತನೆ
ಒಂದಕ್ಕೊಂದು ಹೊಯ್‌ಕಯ್ ಎನೆ ಪಾದಗಳ್ ಬಿರಿದು
ನೆತ್ತರ್ ಬಸಿದೊಡಂ ನಡಿಗೆ ಮುಗಿಯದು. ಗಮ್ಯತಲ
ಕಣ್ಗೆಸೆಯದು. ಅಂತಿಂತು ಎಲ್ಲಿಯುಂ ಸೋಲದೆ
ನಡೆದರಾ ಗುರುವರಂ. ದೂರದ ಬಯಲಂಚಿನ
ಪರ್ಣರಾಜಿಯಲಿ ಶ್ರೀ ಹೊನ್ನೆ ವೃಕ್ಷಗಳೇ ಮಿಗಿಲ್.

ಮುಗಿಲ್ ಮುಟ್ಟುವ ದೇವದಾರು ವಿಶೇಷಮೆನಲ್
ಸೆಳೆದುವೈ ಹೆಮ್ಮರಗಳ್ ಕಣ್‌ಮನಗಳಂ. ಆ
ಭೂತಲಕೆ ಶೋಭೆಯನೆ ಶಾಖೋಪಶಾಖೆಗಳ್
ಬೀಸಿ ಹೆಣೆದು ದಟ್ಟೈಸಿರೆ ಹಚ್ಚ ಹಸುರೆಲೆಗಳ
ಛಾವಣಿಯ ಹೊತ್ತು ಎಲೆವನೆಯೊಲ್ ಕಣ್‌ಗೊಳಿಪುದು
ಹೊಚ್ಚಹೊಸ ಚಿಗುರ್ ಮುಂಬೆಳೆದು. ಮುಂಗಾರ್ ಮಳೆ
ಬೋರಾಡಿ ಸುರಿದ ಮೋಹನ ವರ್ಷಂ ತಣಿಸಿತ್ತು;
ಅಲ್ಲಿರ್ದ ಮಹೋನ್ನತ ಘನ ಭೂವಿಸ್ತಾರಮಂ.
ಭವ್ಯ ಭೂಜೇಶ ಕುಲಕೋಟಿ ಒತ್ತೊತ್ತಾಗಿ
ಬೆಳೆದು ಜಟಿಲ ಕುಟಿಲತೆಯ ವೇಶದಲಿ ತುಂಬಿದ
ಅರಣ್ಯಾನಿ. ಮುಂಮುಂದೆ ನಡೆದಿರೆ ಸರಾಗದಲಿ
ಗುರುವರಂ, ಬಹುದೂರ ಕಳಿದುದು ಮುಂದಿನ ಪಥಂ.
ಹಾದಿಯಂಚಿನ ಕಿಬ್ಬದಿಯಲಿ ಹಬ್ಬಿ ಹರಡಿದ
ಮಹಾ ಹರವಿನಲಿ ಕಣ್ಸೆಸೆದುವು ಅನೇಕ ಬಗೆ
ಬಗೆಯಲಿ ಪೊದಳ್ದ ಕೋಡ್ಗಲ್ಲುಗಳ ಮೇಳ, ನಿಜ
ವೀರಗಲ್ಲ್ಗಳ ಹೋಲಿ! ಮತ್ತದೋ, ಆ ಎಡೆಯಲಿ
ಕರ್ನಾಗರ ಹಾವಿನ ಹುತ್ತಂ. ಎಡೆಎಡೆಯಲಿ ಬಿಲಗಳು
ಬಾಯ್ಬಿಟ್ಟು ಆಳೆತ್ತರಕೇರ್ವಡೆದ ನಾಗರಗುಡಿ.
ಬೂರುಗದ ಸುಂದರ ಮರದೊಳ್ ಕಾಯ್ ಬಲಿದಿರೆ
ಚೆಂಬಿಸಿಲ ಕಡು ಕಾಯ್ಪಿಂಗೆ ಒಡೊಡೆದು ಸಿಡಿದು
ಹೂವರಳೆ ಹಾರಿ ದೂರದೂರಕೆ ಚಿಮ್ಮಿತ್ತು.
ಹರಡಿತ್ತು. ನಲಿದಿತ್ತು. ಮೋದದಿಂ ಮೆರೆದಿತ್ತು.
    ಸ್ವಾಮೀಜಿ ಎಲ್ಲವಂ ಕಣ್ತುಂಬ ಕಾಣುತ್ತೆ
ಹೂವರಳೆಯಂ ಹೆಕ್ಕಿ ಕೈಯೊಳಾಡಿ ಮುದದಿಂ
ಮುನ್ನಡೆದರ್ ಮುಂದೆ ಮುಂದೆ, ಮುಂಕೊಳ್ಳುತ್ತೆ.

ಪಜ್ಜೆಪಜ್ಜೆಗುಂ ಕಳೆಯುತಿರುತಿರೆ ಹಾದಿ, ಬಲು
ದೂರದಲಿ ಕಣ್‌ಗೊಳಿಸಿತು ಕನ್ಯಾಕುಮಾರಿಯ
ಸುಂದರ ಬಂಧುರತಮ ಚಿತ್ತಾರ! ಜೀವವು
ಸೋತು ಬಳಲಿದೊಡಂ ಬಿರುಬಿರನೆ ನಡೆದುವು ಪದ
ಯುಗ್ಮಗಳ್ ಕನ್ಯಾಕುಮಾರಿಯ ಪದತಲಕ್ಕೆ.
ಸಾಗರತ್ರಯಗಳ ಪವಿತ್ರ ಪರಿಪುಣ್ಯ ತೀರ!
ನಿಸರ್ಗ ರಮಣಿಯ ಸಿರಿವಲಯ! ಬೃಹತ್ತಮವಾದ
ಜಲರಾಶಿ! ಭೋರ್‌ಭೋರೆನೆ ಭೋರ್ಗರೆವ ಘೋರ
ಭಯಂಕರ ಅಲೆಗಳೋಳಿ! ಚಂಡ ಪ್ರಚಂಡ
ಪ್ರವಾಹ. ತಟಿನಿಯ ಬಂಡೆ ಬಂಡೆಗಳಿಗೆ ರಪ್
ರಪ್ ರಪ್ಪನೆ ಅಪ್ಪಳಿಸುವ ಭೀಕರ ಅಲೆಗಳ
ರೋಷ ಬದ್ದ ಘಾತಂ ನೋಳ್ಪ ನಯನದೃಷ್ಟಿಗೆ
ಭಯ ಭೀತಿಯ ಈಟಿ ಇರಿಯುವಂತೆ ಇರುತಿರುತಿರೆ
ಸ್ಥೈರ್ಯಸಂಪುಟ ಬಿರಿಸುವೊಲ್ ಭಾಸಮಾದತ್ತು.
ನೋಡಿದರ್ ಮನನೆಟ್ಟು ಮಹಾ ಸೃಷ್ಟಿಯ ಭವ್ಯ
ವೈಚಿತ್ರ್ಯಮಂ. ಭಯಾನಕ ವಾರ್ಧಿತ್ರಯಗಳ
ಭವ್ಯ ಸಂಗಮ! ದಿವ್ಯಮಾ ಪ್ರಕೃತಿದೇವಿಯ
ಸೌಂದರ್ಯದೈಶ್ವರ್ಯದ ಘೋರಾತಿಘೋರಮಯ
ಚಿತ್ತಾರ! ಭೀಷಣ ಭೀಕರ ಚಂಡ ಪ್ರಚಂಡ
ಅಲೆಗಳ್ ಭೋರ್ಗರೆವ ಭಯಂಕರ ಪ್ರದೃಶ್ಯಂ!
ನೆಟ್ಟ ಕಣ್ನೋಟ ಹರಿವನ್ನೆಗಂ ಸುನೀಲಿಯ
ನೀರೇನೀರು! ಘೋರಾತಿಘೋರಮಾ ನೀರೇ
ನೀರು! ಸರಳ ಸುಂದರ ಸಲಿಲ ನೀರೇನೀರು!
ನೆಟ್ಟ ಕಣ್ ಚಲಿಸದಾಯ್ತು ಶ್ರೀಗುರುದೇವನಾ.
ಭರತ ವರ್ಷದ ತುತ್ತತುದಿಯ ತೀರ! ಬೃಹದ್

ಬ್ರಹ್ಮಾಂಡದ ಸತ್ಯ ಸುರ ಸುಂದರ ತೀರ! ಹಾ!
ಅಗಾಧವಾದ ಎಣೆಯಿಲ್ಲದ ಚಿತ್ರಮಂ ಕಂಡು
ಒರ್ಮೆ ಬೆರಗಾದರ್ ಗುರುವರ್ಯರ್ಂ. ನಯನಗಳ
ವ್ಯಾಪ್ತಿಗೆ ನಿಲುಕದಾಯ್ತು ಭವ್ಯ ದೃಶ್ಯ ವೈಭವ!
ಪ್ರಚಂಡ ಅಲೆಯೊಂದು ಭೋರ್ಗರೆಯುತ ಮುಂಬರೆ
ಅಪ್ಪಳಿಸಿತು ಇಡೀ ಮೈಗೆ ಸ್ವಚ್ಛ ಮೋಹಮಂ
ನೀಡುವ ತೆರದಿ! ಅಲೆಯ ಹೊಡೆತಕ್ಕೆ ತತ್ತರಿಸಿ
ನಿಂದರ್ ಗುರುವರ್ಯರ್ಂ. ಅಡಿಯಿಂ ಮುಡಿಯವರೆಗೆ
ತೊಪ್ಪನೆ ತೊಯ್ಸುತೆ ಪಿಂಜರಿಯಿತ್ತು ಅದುಭುತ ಅಲೆ.
ಪವಮಾನ ಹತಿಗುರ್ಬೆದ್ದ ಪ್ರಚಂಡ ಅಲೆಗಳ
ಹೋರಾಟವೇ ಹೋರಾಟ! ಒಂದರ ಮೇಲೊಂದರ
ಘೋರ ಧಾಳಿಯ ವೈಭವ. ರಾಕ್ಷಸ ಲೀಲಾ
ಖೇಲನ! ಕಣ್ಬಣಿಯೆ ಮನದಣಿಯೆ ಕಣ್ಮನಂ
ತುಂಬಿದರ್ ಸ್ವಾಮೀಜಿ. ಗಂಭೀರ ಆನಂದ
ಮೋದದಿಂ ಮಿಡಿಯಿತು ಹೃದಯಧಾತ್ರಿ!
ಕನ್ಯಾಕುಮಾರಿ ದೇಗುಲದ ಕದ ತೆರೆಯಿತ್ತು.
ಗಂಟೆಗಳ್ ಝಣಝಣಿಸಿದುವು. ಪ್ರಸ್ತರ ನಗಾರಿಯು
ಮೊಳಗಿತು. ಮಂತ್ರಘೋಷಂ ಕೇಳಿಸಿತು. ಸ್ವಾಮೀಜಿ
ನಡೆದರ್ ಗುಡಿಯೆಡೆಗೆ. ಒಳಬೊಕ್ಕು ಸಾಲುಗಂಟೆ
ಅಲುಗಿಸೆ ಢಣಢಣಿಸಿದುವು. ಆಗಳೇ ಜಾಗಟೆ
ಶಂಖಗಳ ಮೊಳಗು. ಧೂಪದೀಪಗಳ ಸುಗಂಧ,
ನಗಾರಿಯ ಮಹಾರವ. ಅರ್ಚಕರ ಮಂತ್ರಗಳ
ಘನಘೋಷ. ಗುಡಿಯ ಕೀರ್ತಿಗೆ ಒಪ್ಪುವಂತೆವೊಲ್
ವಿಜೃಂಭಣೆಯಲಿ ಮೆರೆದತ್ತು ಭಕ್ತಿರಸವಂ
ಸ್ಫುರಿಸುವಂತೆ. ಸರ್ವಾಂಗ ಭೂಷಿತ ಭೂಷಣಗಳ

ಶೋಭೆಯಿಂ, ವಿವಿಧ ಪುಷ್ಪಾಲಂಕೃತ ಸುಂದರ
ಸೊಬಗಿನಿಂ ಮೆರೆದಿರ್ದಳ್ ಕನ್ಯಾಕುಮಾರೀ!
ಕಾಲಾನುಕಾಲದಿಂ ಸಾಗರೀತ್ರಯಗಳ
ತೀರಮಂ ಪವಿತ್ರೀಕರಿಸಿದ ಆಜನ್ಮ
ಕನ್ಯಾಕುಮಾರಿ! ಸ್ವಾಮಿಜಿಯುಂ, ಶಿರಮಣಿದು
ಉದ್ದಂಡವೆರಗಿ ತೀರ್ಥ ಪ್ರಸಾದಂಗಳಂ
ಸ್ವೀಕರಿಸಿ ಪಿಂದಿರುಗುತಿರಲ್, ಮನಮಂಡಲದಿ
ಕುತೂಹಲ ಕೆರಳಿದರ್ಚಕನೊರ್ವ ಕೇಳಿದಂ
"ಸ್ವಾಮಿಜಿ, ನೀನಾವ ಪಾರ್ಥಿವ ಕುಲಜನೋ
ಎಂದೆಂಬುದನಾವ್ ತಿಳಿಯಲಕ್ಕುಮೆ?"
"ಅಯ್ಯಾ
ದೈವಭಕ್ತರೇ! ಭವ್ಯ ಭಾರತ ಜನನಿಯ ಸಿರಿ
ಒಡಲ ಸಂಜಾತನೆನ್" ಎಂದಷ್ಟು ನುಡಿಯುತೆ
ಪೊರಮಟ್ಟರ್. ಅಖಿಲ ಜನರಾಶಿಯ ಕಣ್ನೋಟ
ಹರಿದುದತ್ತ ಅಚ್ಚರಿಯ ಬೀಡಾಗಿ. ಆರುಂ,
ಅನ್ನೆಬರಮಲ್ಲಿ ಕಂಡಿರದ ತೇಜವದನ ಶ್ರೀ!
ಆರಿದಾರ್ ಎನುವುದರೊಳ್ ವ್ಯಕ್ತಿ ಹೊಸ್ತಿಲಂ
ದಾಂಟಿ ಪೊರಟಾಯ್ತು. ಸ್ವಾಮಿಜಿಯುಂ ಸಾಗರದ
ತೀರದಲಿ ನಿಂತು ನೋಡಿದರ್ ಆ ಅಗಾದವಾದ
ಜಲಧಿಯಾ ಮಹಾವೈಶಾಲ್ಯಮಂ! ಏಂ, ಮಹಾನ್
ಸಾಗರತ್ರಯಗಳ ಪರಿಪೂರ್ಣತಮ ಸಂಗಮ!
ನೋಡಿದರ್ ಕಣ್ಣೆಟ್ಟು. ಮನನೆಟ್ಟು, ಶ್ರೀಹೃದಯ
ಕಲಸವನ್ನೇ ನೆಟ್ಟು! ಧುಮುಧುಮಿಸುತಿದೆ ಭವ್ಯ
ಜಲರಾಶಿ! ಭೋರೆಂದು ಭೋರ್ಗರೆದು ನುಗ್ಗುತಿಹ.
ಸಂದೃಶ್ಯಮಾನ ವೈಭವ ಎರ್ದೆಯಂ ತಟ್ಟಿ

'ಧಸಕ್' ಎಂದು ಝಾಡಿಸಿ ಹೆಜ್ಜೆಯಂ ಹಿಮ್ಮೆಟ್ಟಿಸುವ
ಶಾಶ್ವತಿ! ನಸುದೂರದಲಿ ಮೈಗೊಂಡ ಬಂಡೆಗಳ
ದ್ವೀಪಸ್ತೋಮ. ಬಂಡೆಗಳ್ ಒಂದರ ಮೇಲೊಂದು
ಮೈಯಾಂತಂತೆ ದಿಟ್ಟಧೀರತನದಿಂ ಕೂಡಿ
ಅಂದದಿಂ ಚೆಂದದಿಂ ಒಟ್ಟೈಸಿ ಮಂದೈಸಿ ಬಲ್
ಬಲ್ಪಲದಿ ನೆಲೆಗೊಂಡು ಕಣ್ಸೆಸೆದುದು ಮೋಹನ
ಶೈಲಿಯಲಿ. ಸುಸುಂದರ ದೀವಿಯೊ ಎನೆ ದಿವ್ಯಂ.
ಭದ್ರಂ. ಶುಭಂ. ಕಣ್ಮನಮಂ ಕೀಳದಾದರ್
ಸ್ವಾಮೀಜಿ ಅಲ್ಲಿಂದ. ಹೆಬ್ಬಂಡೆಗಳ್ ಕ್ರೋಢೀ
ಕರಿಸಿದ್ದ ಭವ್ಯಮಾ ಪ್ರತಿಷ್ಠಾನ! ದೇವೀ
ಕನ್ಯಾಕುಮಾರಿಯ ತಪೋನಿಷ್ಠೆಯ ಪ್ರತಿಷ್ಠಾನ
ಎಂಬೊಲಾ ಮನೋಹರ ದೀವಿ ಕೈಬೀಸಿ ಕರೆ
ನೀಡಿದುದು ನಂದದಿಂ. ಸುವಿಶಾಲ ವಕ್ಷಸ್ಥಲದ
ಮೇಲೆ ಕೈ ಕಟ್ಟಿರ್ದ ಸ್ವಾಮೀಜಿ ಮನದೋಳ್
ಭಾವನಾವೇಶದಲಿ ಮುಳುಗಿ ಪ್ರಾರ್ಥಿಸಿದರ್.

"ಯಸ್ಮಿನ್ಸರ್ವಂ ಯತಸ್ಸರ್ವಂ
ಯಸ್ಸರ್ವಂ ಸರ್ವತಶ್ಚಯಃ ।
ಯಶ್ಚ ಸರ್ವಮಯೋ ದೇವಃ
ತಸ್ಮೈ ಸರ್ವಾತ್ಮನೇ ನಮಃ ॥"

"ಪ್ರಕೃತಿಯ ಮುಂತೆ ನಾವೆತ್ತ? ಏನೆಮ್ಮಗಳ
ಆಸೆ ಪ್ರತ್ಯಾಸೆಗಳ ಪೈಪೋಟಿ? ಎಂತಪ್ಪ
ಮೂರ್ಖತನವೊ, ಇಂದ್ಯೆದು ನಾಳೆ ಸಂದು ಹೋಗುವ
ಮನುಕುಲಕೆ? ಎಲ್ಲವುಂ ಅರ್ಥಹೀನಂ; ತಥ್ಯ
ಹೀನಂ; ದುರಾಶೆ ದುರ್ಮಾನಗಳ್ ಸುವ್ಯರ್ಥಂ
ಒಳಗುದಿಯಂ ಬದಿಗೊತ್ತಿ ನೋಟವಂ ದೀವಿಯೆಡೆ

ಹರಿಸಿದರ್. ಆ ಬಂಡೆಗಳ ರಾಶಿಯಂ ಏರ್ದು
ತಪಸ್ಸಿಗೆ ಕೂಡುವಾ ಪಂಬಲಂ ಉಕ್ಕಿದುದು
ಹೃದಯ ಧರಿತ್ರಿಯಲಿ. ಅನ್ನೆಬರಮವರ್ಗೇಂ
ತಿಳಿಯದು ಮಹಾ ವಾರ್ಧಿಯಲಿ ಈಸುವ ಸಾಸಂ.
ಮೈಯೊಳೀಸುವ ಉಡುಪುಗಳಿಲ್ಲದಿರ್ಪುದೊಂದು
ಕೊರಂ. ಆದೊಡಂ ಪಿಂಜರಿಯದೆ ಧುಮುಕಿದರಾ
ಮಹಾ ವಾರ್ಧಿಗೆ ದೃಢಮನದಿಂದೆ, ಕಾಷಾಯ
ವಸನಗಳ್ ಬಿಗಿಯುತಿವೆ ಕೈಕಾಲ್. ಸಾಸದಿಂ
ಜಾಡಿಸಿ ಜಲವಂ ಬಗೆದು ಬಗೆದು ಮನವೆರ್ಚುತೆ
ಈಸಿದರ್ ಬಂಡೆಗಲ್ಗಳ ದೀವಿಯಂ ಕುರಿತು
ಗುರಿಗೊಂಡು. ರುದ್ರಕಾಯದ ತಿಮಿಂಗಿಲಂ
ನುಗ್ಗುತಿವೆ ನೆಗ್ಗುತಿವೆ ಮುತ್ತುತಿವೆ ಸಾಲ್ಗಟ್ಟಿ.
ಅತ್ತಿತ್ತ ಗಮನಿಸೆ ಮತಿಗತಿಯಣಮಿಲ್ಲ. ಅಲೆ
ಅಲೆಗಳ್ ಜಡಿದು ಜಾಡಿಸಿ ತಳ್ಳುತಿವೆ ಹಿಂದಕೆ.
ಅತ್ತಲಿತ್ತ ತಳ್ಳಿ ಜಾಲಾಡುತಿವೆ ಮುನ್ನುಗ್ಗಿ.
ಮುಂಬರಿಯೆ ಕಂಗಳಿಗೆ ನೀರೊತ್ತಿ ಕಾಣಿಸದು
ಹೆಬ್ಬಂಡೆಗಳ ದೀವಿ. ಸರ್ವತ್ರ ಗಂಭೀರ
ಪ್ರತಿಕೂಲಮಿರುತಿರೆ ಜಗ್ಗದೆಯೆ ಕುಗ್ಗದೆಯೆ
ಮುನ್ನುರ್ಗಿ ಬಂಡೆಗಲ್ಗಳಂ ಮುಟ್ಟಿ ಏರ್ವನೆನೆ
ಪಾಚಿಯೊತ್ತಿದ ಬಂಡೆಯುಂ ಜಾರುತಿದೆ! ಅಲೆಗಳ್
ಬೇರೆ ನೂಂಕಾಡುತಿವೆ ಅತ್ತಲಿತ್ತಂ! ಸಧ್ಯ
ಭಂಗದಿಂ ಸಾಸದಿಂ ಬಂಡೆಗಲ್ಲಂ ಏರಿ
ನಿಂದರಾ ಸ್ವಾಮಿಜಿ. ಮೆಯ್ಯನೀರ್ ಇಳಿದುದು
ಧಾರೆಧಾರೆಯಪ್ಪಿ. ತನುಮನಗಳಿಗೆ ಕೆಚ್ಚಿನ
ನೆಚ್ಚೂಡಿದುದು ಪ್ರಥಮ ಸಾಸಂ; ಪೆರ್ಬಂಡೆಯ

ಶಿರವನೇರಿ ನಿಂದು ಕರಗಳ ಜೋಡಿಸಿದರ್
ಶಿಲಾ ಮೂರ್ತಿಯಂ ಹೋಲಿ! ತಂಗಾಳಿ ತೀಡಿತು
ಗಡಗಡ ನಡುಗುವ ತೆರದಿ. ಅತ್ತಲಿತ್ತಲ್ ಮೇಣ್
ಎತ್ತಲೆತ್ತಲ್ ಭೋರ್ಗರೆವ ಜಲಧಿ! ಬೆಂಗಡೆಯೊಳ್
ಭವ್ಯ ಪರಿಪುಣ್ಯಭೂಮಿ ಭಾರತವರ್ಷ! ಸಕಲ
ಸಂಪದ್ಭರಿತ ಭಾರತವರ್ಷ! ಮೂವತ್ಕೋಟಿ ಮಕ್ಕಳ
ಮಮತೆಯಾಜನನಿ ಭಾರತವರ್ಷ! ಸನಾತನ
ಧರ್ಮ ಸಂಸ್ಕೃತಿಯ ಭಾರತವರ್ಷ! ಆದೊಡೇಂ
ಎಲ್ಲಮಿರ್ದೇನಿಲ್ಲದ ಪರಿಯೊಳ್ ಜನಕೋಟಿ
ನರಳಿ ಸಾಯ್ವುದು ಜಗದ ಕಣ್ ಮುಂತೆ! ಎಂತಿದರ
ಪರಿಹಾರ? ಎಂಗೈಯಲಿ? ನಮ್ಮ ಭವ್ಯ ಭಾರತ
ರಾಷ್ಟ್ರ ತಲೆಯೆತ್ತಿ ನಿಲ್ವಬಗೆಯೆಂತು? ದಲಿತ ಮಹಾ
ಸಾಮ್ರಾಜ್ಯದ ಉದ್ಧಾರವದೆಂತು? ಉನ್ನೆಬರಂ
ಸಂನ್ಯಾಸಿಗಳೆನಿಪ್ಪ ನಾವ್ ಗೆಯ್ವುದೇಂ? ಬರಿ
ಸ್ವಮುಕ್ತಿ! ಛಿಃ! ಆನಿದೇಂ ಗೆಯ್ಯುತಿಹೆ? ಸ್ವಮುಕ್ತಿ!
ನಂನಮ್ಮ ಮೇಲ್ಮೆಯಂ ಬಯಸಿ ಸಾಧನೆಗಿಳಿದೊಡೆ
ಏಂಬಹುದು? ಕಣ್ಣಿರ್ದು ಕುರುಡಾದೊಡೆ ಏಂಗತಿ?
ಶೃಂಖಲಾ ಬದ್ಧ ಭಾರತ ಜನನಿಯ ಗೋಳಂ
ಕೇಳ್ವರಾರ್? ಇಂದು ಜಡಭರತತ್ತ್ವ ತುಂಬಿಹ
ಭಾರತ ಧರಿತ್ರಿಯ ವರಮುಕ್ತಿಯ ಬಗೆಯೆಂತು?
ಸ್ವಮುಕ್ತಿ! ಸ್ವಮುಕ್ತಿ! ಛಿಃ, ಅರ್ಥಾತ್ ಸ್ವಾರ್ಥ..!
ಸ್ವಾರ್ಥವೇ ಪರಮಾರ್ಥ! ಇನ್ನಾಂ ಬಯಸೆನೆನ್ನ
ಮುಕ್ತಿಯಂ. ಭಾರತ ಜನನಿಯ ಸೇವಾರ್ಥಮೆ
ವಿದೇಶಗಳಿಗಾಂ ತೆರಳಿ ಭಾರತದ ಸತ್ಕೀರ್ತಿ
ಪರಿಮಳಂ ಹರಡಿ, ದುರ್ಗತಿಯಂ ಕಳಿಯೆ ಸತತ

ದುಡಿವೆನ್. ಗುರುದೇವಂ ಬೆಂಬಲಿಪನೆನ್ನನುಂ.”
ಹೃನ್ಮನಗಳೊಳ್ ಅಚ್ಚೊತ್ತಿತು ದೃಢ ಪ್ರತಿಜ್ಞೆ.
ಸ್ವಾಮಿಜಿ ಪದ್ಮಾಸನದೊಳ್ ಮಂಡಿಸಿದರ್
ಸಾಗರಾನಿಲಂ ರೊಯ್ಯನೆ ಬೀಸಿವೀಸುತಿರೆ
ಪ್ರಚಂಡ ಅಲೆಗಳೋಳಿ ಭಯಂಕರ ಶಂಕರತೆ
ಮೆಯ್ಗೊಂಡು ಘೋರ್ಗ್ಗರೆದು ಮುನ್ನುರ್ಗ್ಗಿ ಬಂಡೆಗಳ
ದೀವಿಯಂ ಅಪ್ಪಳಿಸಿ ಅಪ್ಪಳಿಸಿ ಪಿಂದಿರುಗೆ
ಆವಗಳಿಗೆಯಲಿ ಬಂಡೆಗಲ್ ನೆತ್ತಿಯಂ ಮುಟ್ಟಿ
ತೊಳೆದು ತನ್ನಂ ಸೆಳೆದೊಯ್ವುದೊ ಎಂಬೋಲಾ ವಾರ್ಧಿ
ಧುಮುಧುಮಿಸುತಿಹುದು ಭೀಕರಮಾಗಿ. ಸ್ವಾಮಿಜಿ
ಕರಗಳಂ ಜೋಡಿಸಿ ಭಯಭಕ್ತಿಯಲಿ ದೀನತೆಯ
ದೈನ್ಯಭಾವದಿಂ ಕೊರಳ್ದನಿಯಂ ಹರಿಸಿದರ್.

“ತ್ವಂ ಸ್ತ್ರೀ ತ್ವಂ ಪುಮಾನಸಿ
ತ್ವಂ ಕುಮಾರ ಉತವಾ ಕುಮಾರೀ ।
ತ್ವಂ ಜೀರ್ಣೋ ದಂಡೇನ ವಂಚಸಿ
ತ್ವಂ ಜಾತೋ ಭವಸಿ ವಿಶ್ವತೋ ಮುಖಃ ॥”

“ಸರ್ವಸ್ತರತು ದುರ್ಗಾಣಿ
ಸರ್ವೋ ಭದ್ರಾಣಿ ಪಶ್ಯತು ।
ಸರ್ವಸ್ಸದ್ಬುದ್ಧಿ ಮಾಪ್ನೋತು
ಸರ್ವಃ ಸರ್ವತ್ರ ನಂದತು ॥”

ಪ್ರಾರ್ಥನೆ, ಮನವೆಲ್ಲಾ ಪ್ರಾರ್ಥನೆ, ಮೈಯ್ಯೆಲ್ಲಾ ನರ
ನರಂಗಳ್ ಹುಯ್ಯಲಿಡುವ ಪ್ರಾರ್ಥನೆ. ಉರುಳಿದುದು
ನಸುವೊಳ್ತು. ಕಣ್ತೆರೆದು ದೀರ್ಘ ನಿಶ್ವಾಸವಂ
ಬಿಟ್ಟರಾ ಸ್ವಾಮಿಜಿ. ಭಾರಭಾರಾತ್ಮಕ ಹೃತ್
ಕರಂಡಂ ಶೀಳಿ ಹರಿದವೊಲ್ ಹೊರಗೈದುದಾ

ಕಟ್ಟುಸಿರ್ ನಿಟ್ಟುಸಿರ್ ಸೂಸಿದ ಪ್ರಾರ್ಥನೆ.
ದಿವ್ಯ ದೃಷ್ಟಿಯ ಮೇಲೆಸೆದುದು ಭಾರತ ಜನನಿಯ
ಪುಶರೀರದ ವಜ್ರಮಯ ರನ್ನ ಕೋಶದಾ
ಅಂಗ ಪ್ರತ್ಯಂಗಗಳ್ ನೆತ್ತರ್ ಪಿಪಾಸಿಗಳ
ಆಕರಕೆ ಸಿಲ್ಕಿ ಹಿಂಡಿ ಹೀರಿದ ಹಿಪ್ಪೆಯೈಸಿ
ಬತ್ತಿಬಾಡಿರ್ದ ಎಲುವು ಚರ್ಮಗಳ ಘೋರಾತಿ-
ಘೋರ ಚಿತ್ತಾರ! ಒಡನೆ ಕರುಣೆಯ ಕಟ್ಟೆಯೇ
ಒಡೆದು ಕಾರುಣ್ಯದ್ರವ್ಯ ಹರಿದಾಡಿತು ಮೆಯ್ಯ
ನಾಳ ನಾಳಗಳ್ ಕೊರೆವ ತೆರದಲಿ. ಆಧ್ಯಾತ್ಮಿಕ
ಪ್ರಜ್ಞೆಯ ಪರಮ ಪುಣ್ಯವಶದಿಂದೆ ಜೃಂಭಿಸಿಹ
ಭಾರತ ಜನನಿ ಜಗತ್ತಿನ ಸಕಲ ರಾಷ್ಟ್ರಗಳ
ತಾಯಿಯೇ ತಾನಾದಪಳ್ ಎಂದೊಡದು ಸತ್ಯ!
ಇಂತಪ್ಪ ಮಹಾ ರಾಷ್ಟ್ರದ ಮನುಕುಲಕೋಟಿಯು
ಎಚ್ಚೆತ್ತೊಡೆ ಪುರುಷಸಿಂಹರ್ಗೆ ಧೀರ ಧೀಮಂತ
ಕಟ್ಟಾಳುಗಳ್ಗೇಂ ಕೊರಂ? ನಮ್ಮ ರಾಷ್ಟ್ರೀಯ
ಜಡನಿದ್ರಿತರಂ ಬಡಿದು ಎಳ್ಚರಿಪ ಕಾರ್ಯಮಂ
ಕೈಕೊಂಡೊಡೆ ರಾಷ್ಟ್ರಂ ಎಳ್ಚರುವುದು ತೆಕ್ಕನೆ.
ಆಧ್ಯಾತ್ಮ ಪ್ರಜ್ಞೆಯಿಂ ಧೀರ ಧೀಮಂತಿಕೆಯಂ
ಪಡೆದು ಜನ ಜಾಗ್ರತಿಗೊಳಲ್ ಮಾತ್ರಮೆ ರಾಷ್ಟ್ರದ
ಪುನರುತ್ಥಾನ! ಪುನರುತ್ಥಾನ! ಪುನರುತ್ಥಾನ!
ಸ್ವಾಮಿಜಿಯುಂ ಕಣ್ಮುಗಿದು ತಪೋಮಗ್ನತೆಯ
ಗಂಭೀರ ಸಾಮ್ರಾಜ್ಯದಲಿ ಮುಳುಗಿ ಮೈಮರೆತರ್.
ಆಗಳಿಂ ತೀರದೊಳ್ ನಿಂದು ಯುವ ಸಂನ್ಯಾಸಿಯ
ಧೂರ್ತ ಸಾಸಮಂ ಭಯಚಕಿತ ಮನದಿಂ ನೆಟ್ಟು
ನಾಂಟಿದ ಕಣ್‌ನೋಟಂ ಚಲಿಸದೆಯೆ ನೋಡುತ್ತ

ನಿಂತಿರ್ದರೀರ್ವರ್ ಹೃದಯವಂತ ಮಹನೀಯ
ಬಂಧುಗಳ್. ಓರ್ವಂ ಸದಾಶಿವ ಪಿಳ್ಳೆಯಾದೊಡೆ
ಇನ್ನೊರ್ವನುಂ ರಾಮಸುಬ್ಬಯ್ಯರ್ ಎಂಬುವ ಪೆಸರಿನ
ಫಲಕಮಂ ಪೊತ್ತ ಗಣ್ಯನುಂ. ಆ ಸತ್ಪುರುಷ
ಮಹೋದಯರ್ ನೋಡಿಯೆ ನೋಡಿದರ್! ಅತ್ತಿತ್ತ
ಅಡ್ಡಾಡಿ ಹೊತ್ತು ಕಳಿದು ಮತ್ತಂ ಐತಂದರ್
ತಟನಿಗೆ. ಕಣ್ ನಾಂಟಿದುವು ಯತಿಯ ಕಡೆಗೆ. ನೋಡೆ,
ವ್ಯಕ್ತಿ ನಿಶ್ಚಲಂ! ಸುತ್ತ ಮುತ್ತಣ ಪ್ರಚಂಡ
ಅಲೆಗಳೈದು ರಪ್ ರಪ್ಪನೆ ಅಪ್ಪಳಿಸುತ್ತಿವೆ
ಆ ಬಂಡೆಗಳ ದೀವಿಯಂ! ಕಣ್ಣು ಮುಚ್ಚಿದುವು
ನೋಡಲಾರದ ಪರಿಯಲಿ. ತಪೋನ್ವಿತ ತರುಣನ
ಕೆಚ್ಚೆದೆಯ ನೆಚ್ಚಂ ಮನಗೊಂಡು ಬೆರಗುವಟ್ಟು
ಬೆಕ್ಕಸಗೊಂಡಿತು ಮನಃಕಲ್ಪ; ಅಲ್ಲಿಯೆ ಇರ್ದು
ನೋನೋಡಿ ಮನೆಗೆ ಪೋಗಿಯುಂ ಮನದ ತುಡಿತಂ
ತಾಳಲಾರದೆ ಮತ್ತೆ ಪಿಂದಿರುಗಿ ಬಂದರಾ
ತೀರಕ್ಕೆ. ನೋಡಲಾ ಎಳೆಯರಿಸಿ ಅಂತೆಯೇ
ಮಂಡಿಸಿ ತಪಸ್ಸಿನೊಳ್ ತೀವ್ರ ಮಗ್ನನಿರುತಿರೆ
ಎರ್ದೆಗಡಲ್ ಒರ್ಮೆಗೇ ಅಲ್ಲೋಲ ಕಲ್ಲೋಲ
ಮಾದತ್ತು. ಕರುಣೆ ಕಾತರಗಳಿಂ, ಕಣ್ಮನಂ
ಅತ್ತಲೇ ನೆಟ್ಟು ನಾಂಟಿ ಕಾದಿರ್ದೊಡಂ ಆ
ಸಂನ್ಯಾಸಿಯಾ ತಪೋನಿಷ್ಠೆ ಅಸಮಾನ್ಯಂ.
ಮೇಣ್ ಅಚಲ; ಅಚಂಚಲ. ಪೊಳ್ತೇರಿ ಪೊಳ್ತಿಯಿತು
ಪಶ್ಚಿಮ ಜಳರಾಶಿಗೆ ಮುಸ್ಸಂಜೆ ಕವಿದುಬಂತು.
ಇಂ ಯುವ ಮುನಿ ಮಿಸುಕದಿರಲ್ ರಾತ್ರಿಯೊಳ್ ವಾರ್ಧಿ
ಉಕ್ಕಿದೊಡೆ ಮುನಿಯ ಗತಿಯಿಲ್ಲ, ಎಂಬೊಂದು ಘನ

ಚಿಂತೆಯಲಿ ನೋಡುತಿರೆ ಸುಡುಬಿಸಿಲಿನಲಿ ಮಾಘ
ಸ್ನಾನಗೈದ ಕನಕತನುಕಾಂತಿಯೆಸೆದುದು ಕಣ್
ಸೆಳೆವ ಪಾಂಗಿನಲಿ. ಐಯ್ಯರುಂ ಮನದಿ ಕಳವಳ
ದುಂಬಿ ಕಾತರಿತ ದನಿಯೊಳಿಂತೆಂದರ್ "ಅಯ್ಯ,
ಸದಾಶಿವ ಪಿಳ್ಳೆ! ಈಗಳಾವ್ ನೆರವೀಯದೆ
ಮಿಣ್ಣನಿರೆ ತರುಣ ಮುನಿಯ ಪ್ರಾಣಕೆ ಧಕ್ಕೆಯೆನೆ
ಅನ್ಯಮಲ್ತು, ಮಹಾವಾರ್ಧಿತ್ರಯಗಳ ಉಡಿಯೊಳ್
ರಾತ್ರಿಯಂ ಕಳೆಯುವೊಡೆ ಎಂಟೆರ್ದೆಯಿರವೇಳ್ಕುಂ!
ಇಂ ನವ ತರುಣನಿರ್ದು ಬದುಕು ವ್ಯರ್ಥಗೊಳಿಪುದು
ಸರಿಯಲ್ತು. ಇದನರಿದಾವ್ ಮಿಣ್ಣನಿರಲಾಸಲ್ಲ.
ಏಂಗೈವುದು, ಪೇಳ್?"
"ಈಗಳಾವ್ ನಾವೆಯೊಳ್
ಪೋಗಿ ಕರೆ ತರ್ಪುದೊಳ್ಳಿತಲ್ತೇ?"
"ಆಯ್ತಾಯ್ತು.
ನಡೆಯ್ಯ. ಅವರಂ ಕರೆತರ್ಪುದೇ ಸರಿ."
ಒಡನೆ
ಈರ್ವರಂ ನಾವೆಯಂ ಪಿಡಿದು ಆ ದೀವಿಯಂ
ಮುಟ್ಟಿ ಬಂಡೆಗಲ್ಲನೇರ್ದು ಅವರ ಬಳಿಯಂ
ಸಾರ್ದು ನೋಡೆ, ಇತ್ತಣ ಜ್ಞಾನವೇ ಇಲ್ಲದೊಲ್
ನಿಶ್ಚಲಗತಿಯ ಭಂಗಿ! ಮುಗಿದ ಕಣ್ ಬಿಗಿದ ಸಿರಿ
ಬಾಯ್, ನಸುವೊಳ್ತು ತಂತಮ್ಮೊಳ್ ಮನ ಮುಟ್ಟುವ
ತೆರದಿ ಮಾತಾಡಿದರೆ, ಮಾತಾಡಿದರ್, ಧ್ಯಾನವಂ
ಭಂಗಗೆಯ್ಯಲ್, ಆದೊಡೇಂ ಕಣ್ತೆರೆಯಲಿಲ್ಲಂ!
ರಾಮಸುಬ್ಬ ಐಯ್ಯರ್ ಬಾಯ್ತೆರೆದು ಕೂಗಿದರ್
"ಸ್ವಾಮೀಜಿ, ಸ್ವಾಮೀಜಿ."

ಮೆಲ್ಲನೆ ಅನುಮನಮೆಳ್ಚರುವೊಲ್ ಅಲುಗಿಸಿದರ್
ಅಲುಗಿಸಿದರ್. ಆಗಳೆಚ್ಚತ್ತು ಕಣ್ತೆರೆದು ನೋ
ನೋಡಿ ಮತ್ತೆ ಕಣ್ಮುಚ್ಚುತಿಂತೆಂದರ್ "ಸ್ವಾಮಿ,
ದಯಮಾಡಿ ಎನ್ನನುಂ ತಣ್ಣಗಿರೆ ಬಿಟ್ಟುಬಿಡಿ."
"ನೀವೆಮ್ಮಮೇಲೆ ಕೃಪೆ ತೋರ್ದು ನಸುವೆ ಮಾತು
ಬೆಳೆಸಿದೊಡೆ ತಿಳಿಯಲಕ್ಕುಂ. ಈ ರಾತ್ರಿಯೊಳಿಲ್ಲಿ
ಕಾಲಹರಣ ಸಲ್ಲ. ಸಮುದ್ರ ಉಬ್ಬೆದ್ದು ಈ
ದೀವಿಯಂ ಅಪ್ಪಳಿಸಿ ನಿಮ್ಮನುಂ ಸೆಳೆದೊಯ್ವ
ಅಪಾಯಮಿದೆ! ಉಣಿಸಿಲ್ಲ. ತಿನಿಸಿಲ್ಲ. ಅಲ್ಲದೆ
ನಿಮ್ಮೊ ಯುವ ಬದುಕಂ ಕಡೆಗಣ್ಚಿ ಈ ಪರಿಯ
ಘೋರ ಸಂಕಟಕೆ ಸಿಲ್ಕುವುದು ತರವಲ್ಲವೆನೆ
ಮನ್ನಿಸೆಮ್ಮ ಗುರುವೆ! ಈಗಳೆಮ್ಮಯ ಜೊತೆಗೆ
ಪೊರಟೆಮ್ಮೊಳ್ ತಂಗಿರ್ದು ಬೆಳಗೆದ್ದು ಇಲ್ಲಿಗೆ
ಬಂದಪುದು ಒಳ್ಳಿತೆಂಬೆನ್."
"ಹೇ ಮಿತ್ರರೆ,
ಎನಗಾಗಿ ನೀವಾವ ವ್ಯಾಕುಲ ಅಥ ತೊಂದರೆ
ತೆಗೆದುಕೊಳ್ಳದಿರಿಮೆಂದು ನಿವೇದಿಸಿಕೊಂಬುವೆ."
"ಸ್ವಾಮಿ, ನಿಶಿಯೊಳಿಲ್ಲಿರ್ಪುದು ಅಪಾಯ ಜೀವಕೆ.
ಕರವಂ ಮುಗಿವೆ. ಬನ್ನಿರೆಮ್ಮೊಡಂ ನಾವೆಯುಂ
ಕಾದಿಹುದು ನಿಮಗಾಗಿ. ಮನ್ನಿಪುದು ಎಮ್ಮನುಂ."
ಎನಿತೆನಿತು ಪ್ರಯತ್ನಿಸಿದೊಡಂ ಗುರುವರ್ಯಂ
ಒಪ್ಪದಾದರ್. ಆ ಭಗವದ್ಭಕ್ತರ್ ತಮ್ಮೊಳ್
ಮಾತಾಡಿ ನಿರ್ಣಯಿಸಿ ಪಿಮ್ಮರಳಿದರ್ ನಾವೆ
ಪಿಡಿದು. ಮನೆಗುಯ್ದು ಪಾಲು ಪಣ್ಗಳ ಸಹಿತ ಮತ್ತೆ
ಮರಳುತೈದರ್ ಗುರುವಿನ ಬಳಿಗೆ. ಯಥೋಚಿತಮೆ

ಗುರುವರ್ಯನ ನಿಶ್ಚಲ ಧ್ಯಾನಭಂಗಿ. ಇತ್ತಣ
ಗಮನಮಿನಿತಿಲ್ಲ. ನಡುಗುವ ಚಳಿಯಲಿ ಯುವಗುರು
ಧ್ಯಾನನಿಮಗ್ನಂ. ಅರ್ಧಚಂದ್ರಮನ ತಿಳಿಬೆಳಕು
ಹರಡಿರುತಿರೆ ಗುರುವರನ ಚಿತ್ರ ಸುಸ್ಪಷ್ಟಂ.
ಈರ್ವರುಂ ಮತ್ತೆ ಬೇಡಿ ಎಚ್ಚರಿಸಿ ಮುದದಿಂ
ಭಯ ಭಕ್ತಿಯಿಂ ಬೇಡಿದರ್ ಪಾಲ್ ಪಣ್ಗಳಂ
ಸ್ವೀಕರಿಸೆ.
"ಸ್ವಾಮೀಜಿ, ಹೊತ್ತಾರೆಯಿಂ ಸುಟ್ಟು
ಉರಿವ ಸುಡುಬಿಸಿಲ್ ಮೊಹದಲಿ ಸುಟ್ಟುರಿದು
ಬಳಲ್ದುದು ತೋರ್ವುದೆಮಗೆ. ದಯಮಾಡಿ ಇದಿನಿತು
ಪಾಲ್ಪಣ್ಣುಗ್ಗಳಂ ಸ್ವೀಕರಿಸಿತೆಮ್ಮನುಂ ದಯೆ
ದೋರ್ದುದ್ಧರಿಸಿರಿ ಗುರುಗಳೇ!"
"ನೀವದಂ ಆ
ಕುಣಿಯೊಳಿರಿಸಿ ಪಿಂಮರಳಿರ್ಸೈ ಈ ಭಾಯಿಯಂ
ಕೈವಿಟ್ಟು."
"ನೀಮಿಂತು ಬರಿಹೊಟ್ಟೆ ಬರಿಮೈಲಿ
ಉಳಿದೊಡೆ ಗತಿಯಿಲ್ಲವು. ಎಮ್ಮನುಂ ನಂಬಿದೊಡೆ
ಒಳ್ಳಿತು."
ಗುರುದೇವಂ ಕೈಮುಗಿದು ಮರುನುಡಿಯದೆ
ವಿದಾಯಂ ಬೇಳ್ದು ಮತ್ತೆ ಧ್ಯಾನ ಮಗ್ನತೆಯಲ್ಲಿ
ಮುಳುಗಿದರ್. ಆಗಳ್ ಗತಿಯಿಲ್ಲದೆ ಈರ್ವರುಂ
ಪಿಂಮರಳಿದರ್ ನಾವೆಯಲಿ. ರಾತ್ರಿ ಉರುಳಿದುದು
ರುದ್ರಗಂಭೀರಗತಿಯಲಿ. ಬೆಳಗಿನ ಸುಂದರ
ಬೆಳಕಿನ್ನೈಸಿರಿ ಪಸರಿಸಿತು ಇಳೆಯ ಮೇಲೆಲ್ಲ.
ಎಳೆಬೆಳಕು ತಿಳಿಯಾಗಿ, ಚೆಂಬೆಳಕಿನ ಛವಿಯಾಗಿ

ಹರಿದು ಬರುತಿರೆ ರವಿಯ ಸ್ವರ್ಣಬಿಂಬ ಮೆರೆದುದು
ಬೆಳ್ಮುಗಿಲ್ ದಿಣ್ಣೆಗಳಮೇಲೆ. ಮಿತ್ರದ್ವಯರ್
ಮತ್ತೈದರ್ ಗುರುವಿನ ಬಳಿಗೆ. ಧ್ಯಾನಸ್ಥಿತಿಯೊಳ್
ಮಂಡಿತ ಗುರುವರನಿಂ ಕಣ್ತೆರೆದರಿಲ್ಲ. ಹಾ!
ಇದೇನಾಶ್ಚರ್ಯ! ಈವೊಂದು ಭಯಾನಕ ಸ್ಥಲದಲಿ
ತಪಶ್ಚರ್ಯಗೈವುದೆನೆ ಅಪ್ರತಿಮ ಸಾಸಿಯಲ್ಲದೆ,
ಬೇರಾರ್ ಇಂತಪ್ಪ ಸಾಸಂಗೈಯ್ಯಲಕ್ಕುಂ?
ಅಮಮ! ಏಂ ಧೈರ್ಯಸ್ಥೈರ್ಯಮೊ ಎಂಬ
ಅಚ್ಚರಿಯು ಘನಿಸಿದುದು ಹೃತ್ ಕರಂಡದಲಿ. ಆ
ರುದ್ರಗಂಭೀರ ಸನ್ನಿವೇಶಂ ಚಳಿಯಲ್ಲಿ–
ಶೀತಲಿತ ಶೈತ್ಯದಲ್ಲಿ ರೋಮಾಂಚನಗೊಳಿಸಿತು
ತನುಮನಂ. ಶಿವರಾಮ ಪಿಳ್ಳೆಯುಂ ಭಾವನಾ
ವೇಶದಲಿ ಗರಬಡಿದೊಲ್ ನೋಡಿದಂ! ಗುರುವರನ
ಮುಖಾಂಭೋಜದಸುತ್ತಲ್ ಅಗ್ನಿಸ್ಫುಲಿಂಗಗಳ್
ಪೊಣ್ಮುತಿವೆ ದಿವ್ಯಪ್ರಭೆಯಂ ಹೋಲಿ! ಅಹ,
ಏನಾ ಪರಮ ಪುರುಷತೆ? ಏನಾ ತೇಜೋನ್ವಿತ
ವದನಮಂಡಲ? ಬೆರಗುವಟ್ಟು ನೋಡಿದರ್ ಆ
ಗುರುವರ್ಯನಂ. ಕಣ್ಮುಗಿದ ದೇವ ಮೂರ್ತಿಯುಂ
ನಿಶ್ಚಲ...ನಿಷ್ಕಂಪ...ನಿರಾತಂಕ. ತಮ್ಮುಸಿರ್
ಮಾತ್ರಮೆ ತಹತಹಿಪ ಆತಂಕದ ಕತ್ತಿಯ
ಅಲುಗಿನ ಮೇಲೆ ಹರಿದಿದೆ...ಹರಿದಿದೆ. ಸುಬ್ಬರಾಮ
ಐಯ್ಯರುಂ ಹಿಂದಿನದಿನಂ ತಾವಿರಿಸಿದ ಪಾಲ್
ಪಣ್ಣುಗಳೆಡೆಗೆ ದಿಟ್ಟಿಯಂ ಹರಿಸಿ ನುಡಿಸಿದರ್."
"ರಾತ್ರಿಯೂಟವಿಂ ಮುಟ್ಟಿಲ್ಲ. ನಾವ್ ಸಾಯಂ
ಸಮಯದೊಳ್ ಬಂದೊಡೊಳ್ಳಿತು. ನೀನೇನೆಂಬೆಲೆ?"

"ಆಯ್ತಾಯ್ತು."
ಈರ್ವರುಂ ಪಿಂಮ್ಮರಳಿದರ್ ತೀರಕೆ. ಆದೊಡಂ
ಕರುಣೆ ತುಂಬಿದ ಹೃನ್ಮನಂ ತುಡಿಯುವುದು ತರುಣ
ರಿಸಿಗಾಗಿ. ಒರ್ಮೆ ಪಿಂಮರಳಿದೊಡಂ ಆಗಾಗ
ಬಂದು ಬಂದು ನೋಳ್ಪರ್, ರಿಸಿಯಕಡೆಗೆ ನೋಟಂ
ಹರಿಸಿ. ಉರುಳಿತು ಪಗಲ್. ಅಡರಿದುದು ಮುಸ್ಸಂಜೆ.
ಶಿವರಾಮ ಪಿಳ್ಳೆಯುಂ ಸುಬ್ಬರಾಮ ಐಯ್ಯರ್
ಒಡಗೂಡಿ ಮತ್ತೆ ಪೊರಮಟ್ಟರ್ ಪಾಲ್‌ಪಣ್ಗಳ
ಸಹಿತ. ನಾವೆ ಮುಟ್ಟಿತು ದೀವಿಯಂ. ಈರ್ವರುಂ
ಇಳಿದು ನಡೆದರ್ ಗುರುಗಳಿದ್ದೆಡೆಗೆ. ನೋಡಿದರ್
ಹಿಂದಿನ ದಿನವಿರಿಸಿದ ಪಾಲ್ಪಣ್ಣುಗಳ್ ಮುಗಿದು
ಬರಿದಾದುದಾ ಮಿಳ್ಳೆ ಅದರಿಂದೆನಿತೊ ತೋಷ
ಮನಸ್ಸಿಗೆ. ಗುರುಗಳಂ ನೋಡೆ, ಯಥಾವತ್ ಧ್ಯಾನ
ಗಂಭೀರ. ನಸುವೊಳ್ತು ಸದ್ದಿಲ್ಲದೆ ನೋಡಿದರ್,
ಬೇಡಿದರ್. ಈಗ ಧ್ಯಾನ ಭಂಗಗೊಳಿಪುದು
ಸರಿಯಲ್ತು. ಪಾಲ್ಪಣ್ಣಿರಿಸಿ ನಾವ್ ಪಿಂದಿರುಗುವ.
ಮತ್ತೆ ಬಂದೊಡಾಯ್ತು." ಎನುತುಸುರಿ ಗೆಳೆಯರ್ಗೂಡಿ
ಪಿಂದಿರುಗಿದರ್ ತೀರಕೆ. ಒಂದೆರಳ್ದು ದಿನ ಕಳಿದು
ಗಮಿಸಿದುದು ಮೂರನೆಯ ದಿನಂ. ಮುನ್ನಿನೊಲ್ ಅದು
ಉರುಳಿದುದು. ನಾಲ್ಕನೆಯ ಬೆಳಗಿನಲಿ ಗೆಳೆಯರುಂ
ಗಮಿಸಿದರ್ 'ಕಾಟಮಾರನ್' ಎಂಬ ನಾವೆಯಲಿ. ಆ
ಗೆಣೆಯರುಂ ದೀವಿಯತಲಂ ಮುಟ್ಟಿ ಬಂಡೆಗಳ
ಏರುತ್ತೇರುತ್ತೈದರ್ ಸ್ವಾಮಿಜಿಯ ಸನ್ನಿಧಿಗೆ.
ಪೂರ್ವದಿಗ್ ಭಿತ್ತಿಯಲಿ ಸ್ವರ್ಣರವಿ ಕೆಮ್ಮುಗ್ಗಿಲ್
ದಿಣ್ಣೆಗಳ ಮಂಚದಲಿ ಚೆಂದದಿಂ ಮಂಡಿಸಿರೆ

ಹರಿದತ್ತು ಹೊಂಗಾಂತಿಯ ಚೆಂಬಿಸಿಲಿನ ಹರವು;
ಮೈಮನಗಳಂ ಬೆಚ್ಚನೆಯ ಮುದ್ದಿಡುವ ತೆರದಿ.
ಬಿಸಿಲ್‌ಕೋಲ್‌ಗಳ್ ಮುತ್ತುತಿರೆ ಕಂಗಳಂ, ಮೆಲು
ಮೆಲ್ಲನೆ ಕಣ್‌ತೆರೆದರ್ ಸ್ವಾಮೀಜಿ. ಪ್ರಕೃತಿಯ
ಪ್ರಥಮ ದರ್ಶನದ ಬಳಿಕ ಶಿವರಾಮಪಿಳ್ಳೆ ಮೇಣ್
ಜೊತೆಯೊಳೈದ ರಾಮಸುಬ್ಬ ಐಯ್ಯರ್ ಕಣ್ಗೆಸೆಯೆ
ಪ್ರಸನ್ನ ಮುಖಿಯಾದರ್ ಸ್ವಾಮೀಜಿ. ಒಡನೆಯೆ
ಅವರೀರ್ವರ್ ಸ್ವಾಮೀಜಿಯಂ ಕರೆ ತಂದರದೆ
ನಾವೆಯಲಿ. ಚಳಿಗಾಳಿಗಳ ಕೊರೆತದಿಂ ಕಠಿಣ
ಶಿಲೆಯನೆ ಬಿಗಿದು ಸೆಡೆತು ಸದೃಢ ಶರೀರಿಯಾದ
ಸ್ವಾಮೀಜಿಯಂ ಮುತ್ತಿದರ್ ಬಹುಬಗೆಯ ಶ್ರೋತೃ
ವರ್ಗಂ.. ಪ್ರಶ್ನೋಪಪ್ರಶ್ನೆಗಳೆದ್ದುವು ಎಲ್ಲರ
ಮನದಲಿ ಕುತೂಹಲಂ ಕೆರಳಿ. "ನಿಮ್ಮಯ ಉಗ್ರ
ತಪಸ್ಸಿನ ಗುರಿಯೇವುದು? ಇಂತಪ್ಪ ಗಭೀರ
ಚಿಂತನೆಯೇನ್ ಗುರುವರ್ಯ? ನಿಮ್ಮ ಮುಂದಿನ
ಕಾರ್ಯಗತಿಯೇವುದು? ಎಲ್ಲಿಂದ್ಯೆದಿರಿ? ಪೋದಪುದು
ಎಲ್ಲಿಗೆ?" ಇತಿ ಪ್ರಶ್ನೆಗಳಿಂಗೆ. ಕೊರಮಿಲ್ಲ, ಆ
ಎಲ್ಲರ್ಗೆ ಒಂದೆ ಮಾತಿನೊಳ್ ಉತ್ತರಿಸಿದರ್
ಗುರುವರ್ಯ "ಇಂದಿನೀ ತಪ್ಪಸ್ಸಿನ ಗುರಿಯೆಮ್ಮ
"**ಸರ್ವೇ ಜನಾಃ ಸುಖಿನೋ ಭವಂತು**" ಎಂಬುದರ
ಅನುಷ್ಠಾನ. ಭಾರತದ ಪುನರುತ್ಥಾನಮಂ
ಕುರಿತು ದೃಢಪ್ರತಿಜ್ಞೆಗೈದುದೇ ಏಕಾಂತ
ನಿಷ್ಠೆಗೆ ವರ ಕಾರಣವೆಂಬೆನೆನ್ ಬಂಧುಗಳೆ!"
ಆ ಸತ್ಪುರುಷರ ಸಂಗದಲಿ ಒಂದೆರಳ್ಡು ದಿನ
ಸೊಗದಿಂ ಕಳೆದು ಮತ್ತೆ ಪೊರಮಟ್ಟರಲ್ಲಿಂದೆ.

ಪ್ರಕೃತಿಯೈಸಿರಿಯ ಅಮೋಘ ರಾಶಿಯಲಿ ನೆರೆ
ಮುಳುಗೇಳುತೆ. ತರತರದ ವನವಿಹಂಗಮಗಳ
ಸ್ವರಾವಳಿಯ ರಾಗಗೋಷ್ಠಿಯದು ರಂಜಿಸಿದುದು
ಹೃನ್ಮನಗಳಂ. ಆ ಸುಪ್ರಭಾತ ಮನೋಹರ
ರಾಗಗಳ ಸಂಭ್ರಮದ ಇಂಪಿಗೆ ಮನವೋತು
ಎದೆಯೋತು ಮುಂಕೊಂಡು ಬರೆಬರೆ ಸುದೂರದಲಿ
ಕಂಡರೊಂದು ದಿವ್ಯ ಕುಸುಮೋಧ್ಯಾನಮಂ ಕಣ್
ತಣಿಪ ಪಾಂಗಿನಲಿ. ವಿವಿಧ ಕುಸುಮಗಳ ಸೌರಭ
ಒಗ್ಗೂಡಿ ಸೊರ್ಕುಗಂಪಾಗಿ ಮುತ್ತಿತು ಜೀವ
ಕೋಶಮಂ. ದಳಬಿರಿದ ಇರವಂತಿಗೆ ಮಲ್ಲಿಗೆ
ದಿರ್ಗಂತಿ ನೀಲನೀರುಹ ಕೇತಕಿ ಗುಲಾಬಿ
ಜಾಜಿ ಸೇವಂತಿಗೆ ಸುರಭಿ ಸಂಪಿಗೆ ಸುಗಂಧ
ರಾಜ ಇತ್ಯಾದಿ ಗಂಧ ಕುಸುಮಾದಿಗಳ್ ಹೊಸ
ಹೊಚ್ಚ ಹಸುರಾದ ಗಿಡು ಸಸ್ಯಗಳ ಮೇಲೆ ನಳ
ನಳಿಸುತೆ ಮೆರೆದಿರ್ದುವು, ನಂದನವನಂ ಹೋಲಿ!
ನೇರಿಳೆ ಮರದೊಳ್ ಪಣ್ಗಳ್ ಕಳಿತು ಹಣ್ಣಾಗಿ
ಉದುರಿದ್ದುವು ತಲದಲಿ. ಸ್ವಾಮೀಜಿ ಅವುಗಳಂ
ಹೆಕ್ಕಿ ಮಣ್ಣುದ್ದಿ ತಿಂದು ನೀರ್ಕುಡಿದರ್ ಒಡಲ್
ತಣಿವನ್ನ. ನಸುವೊಳ್ತಲ್ಲಿ ಕುಳಿತು ದಣಿವು
ಕಳಿದು ಸುಧಾರಿಸಿದ ಬಳಿಕ ಪೊರವಂಟರ್ ಮುಂ
ಪಯಣದಲ್ಲಿ ಮನವಿಟ್ಟು. ಅಲ್ಲಿಯೆ ಅನತಿದೂರ
ಪ್ರದೇಶದಲಿ ಕಳಿತು ಹಣ್ಣಾಗಿ ರಂಗೊಡೆದು
ತಂದಲ್ಸುರಿವ ರಸವತ್ ಮಘಮಘಿಸುವ ಕೆಮ್ಮನೆ
ತೋರಿವಂದುವು ತುಂಬಾರಲ ಪಣ್ಣುಗಳ್.
ಸ್ವಾಮೀಜಿ ಮರದ ತಲದಲಿ ಉದುರಿದ ಪಣ್ಗಳಂ

ಹೆಕ್ಕಿ ತಿಂದು ಕೆಲವಂ ಕೈಚೀಲದೊಳಿರಿಸುತೆ
ನಡೆದರ್ ಜನ ದನ ಚಲದ್ ರೇಖಾ ಪಥವಿಡಿದು.
ನಭೋದೇಶದಲಿ ಮಳೆ ಮಂಜು ಕೂಡಿದುವು ಮೆಲು
ಮೆಲ್ಲನೆ ಹರಿದು ಬರುತ್ತೆ. ಅದೆ ಆಗಳೇ ಗಿರಿ
ತಲದಲಿ, ಹರಿವ ತೊರೆಯ ಬಳಿಯಿಂದಲಾಕಾಶ
ಪಟಲಮಂ ಮುಟ್ಟಿ ಭೂಮ್ಯಾಕಾಶಕೆ ಒಂದೈಸಿ
ಮೂಡಿತೊಂದು ಕಾಮನ ಬಿಲ್ಲು. ಸಪ್ತವರ್ಣದ
ಮಹಾ ಕಾಯವಾಗಿ. ಅದಂ ನೋಡುತಿರೆ ಮನಂ
ಆನಂದರಸದಲಿ ಮುಳುಗಿ ತೇಲಿದೊಲಾಯಿತ್ತು;
ಸ್ವಾಪ್ನಿಕ ಲೀಲಾವೇಶದಲಿ. ಬಲು ದಿನಗಳಿಂದೆ
ಕಣ್ಣೆತ್ತಿರಲಿಲ್ಲವದು. ಸ್ವಾಮೀಜಿ ಕಣ್ತುಂಬ
ನೋಡುತಿರೆ, ಬಟ್ಟಬಯಲಿನಂಚಿನಲಿ ಮೂಡಿದ
ಕಾಮನಬಿಲ್ಲು ಗಗನದ ಮುಗಿಲ್ ಮೋಡಮಂ
ಬೊಕ್ಕು ನಿಂದತ್ತು ಸುರ ಸುಂದರಮೆನಿಸಿರ್ದಾ
ಕೋಯಂಡಮಂ ಹೋಲಿ! ಆ ಸೌಂದರ್ಯನಿಧಿಯುಂ
ತನುಮನಗಳಂ ಸೂರೆಗೊಂಡಿರಲ್ ನಸುವೊಳ್ತು
ಕಗ್ಗಲ್ಲಿನ ಶಿಲೆಯಂಚಿನಲಿ ಕುಳಿತು ಅಪೂರ್ವ
ಸಂದೃಶ್ಯಮಾನ ಸೌಂದರ್ಯರಸಪಾನಂಗೈದು
ತನುಮನಂ ತುಂಬಿದರ್. ಜೊತೆಗೆ ವಿಶ್ರಾಂತಿಯಂ
ಪಡೆಯುತೆ ಕಳೆದುವು ಗಳಿಗೆಗಳಿಗೆಗಳ್ ಅನನ್ಯ
ತೋಷದಲಿ. ಕಾಮನಬಿಲ್ಲು ಅಳಿದುದು ನಸುನಸುವೆ
ಬಾಡಿ ಬತ್ತಿ ಮಾಸಿ. ಕಳಿಯಿತು ಪಥ ಮುಂಬಿನಾ
ಪಜ್ಜೆ ಪಜ್ಜೆಗಳಲಿ. ವಿರಾಟ್ ಅಟವಿಯಂಚಿನ
ಕಾಲ್ಪಥದಲಿ ಸಾಗಿದುವು ಪಜ್ಜೆಗಳ್. ದಟ್ಟೈಸಿ
ಮುಂಬೆಳೆದು ಪೆರ್ಮರಂಗಳ ನೆರಳ್ ಚಾಚಿರಲ್

ಹಾದಿಯಲ್ಲಿ, ಸೊಗಮಾಯ್ತು ನೆತ್ತಿಗೆ. ಪುರುಡಾಯ್ತು
ಪದಸಂಚಲನೆಗೆ. ಪೆರ್ಮರನೇರಿ ರಾರಾಜಿಸಿದ ಕರಿಯ
ಮೆಣಸಿನ ಪೆರ್ ಬಳ್ಳಿಗಳ್ ತುಂಬಿ ಹರಡಿ ಹಬ್ಬಿ
ಮರಂಗಳ ಬೋಳು ಮೈಯಂ ಅಲಂಕರಿಸಿರ್ದುವು
ಹಚ್ಚ ಹಸುರಾಗಿ. ತಾಳೆ ತೆಂಗುಗಳ್ ನಭವಂ
ಚುಂಬಿಸುವ ಸ್ಪರ್ಧೆಯೆಸೆದುದು ಚಿತ್ರವತ್ತಾಗಿ.
ನಸುದೂರದಲ್ಲಿ ಶ್ರೀರಾಮೇಶ್ವರ ಪರಿಪುಣ್ಯ
ಕ್ಷೇತ್ರಮೆಸೆದಿದೆ ಕಣ್ಸೆಳೆವವೊಲ್. ಎತ್ತರದ
ಭವ್ಯಗೋಪುರ ಸಂಜೆಯ ಇಳಿವೊಳ್ತಿನಲಿ ಮನ
ಮೋಹಕರ ಶೈಲಿಯಲಿ ಕಂಗೊಳಿಸುತಿರೆ ಮನ
ಹಗುರಾಯ್ತು; ಜೀವ ಹಗುರಾಯ್ತು; ಅಂತಿಂತು,
ಹಾದಿ ಕಳಿಯಿತು ಸರಾಗದಲಿ ಎಂಬ ಸಂತಸಂ
ಹೃತ್ ಗಂಗೋತ್ರಿಗೆ. ಬಿರುಸುಗೊಂಡುವು ಕಾಲ್ಗಳ್.
ಮುನ್ನಡೆದಿರೆ ಕಂಗೊಳಿಸಿತು ಭಾರತಾಬ್ಧಿಯಾ
ಮಹಾತೀರ! ಭೋರ್ಗರೆವ ಜಲರಾಶಿ! ಅಹ್ಲಾದ
ಕರಮಾದ ವಾಯುಲೀಲಾಖೇಲನ ಮುದ್ದಿಸಿತು
ತನುಮನಗಳಂ. ಜಲಧಿಯಲ್ಲಿ ಸಂಮುದದಿಂ
ಮುಳುಗೆದ್ದು ಸುಖಮಜ್ಜನಂಗೈದರ್ ತೋಷಾ
ವೇಶದಲಿ. ಶ್ರೀರಾಮಚಂದ್ರನ ಪರಮ ಪುಣ್ಯ
ಜೀವನಾಮೃತವಂ ನೆನೆನೆನೆದು ಮನದುಂಬಿ
ನಡೆದರಾ ದಿವ್ಯ ದೇಗುಲತಡಿಗೆ. ಭವ್ಯಮಾ
ದೇಗುಲಂ ಶತಶತಶತಮಾನಗಳ ಮಳೆಗಾಳಿ
ಸುಡುವಿಸಿಲ್ ಎಡೆವಿಡದೆ ಮುದ್ದುಮುದ್ದು ಮುದ್ದಿನ
ಮುದ್ರೆಯೊತ್ತಿಯುಂ ತ್ರೈಜಗಮಚ್ಚರಿಗೊಳ್ಳುವ
ತೆರದಿ ಲೋಕೋತ್ತರಮೆನೆ ಸಲ್ವುದು. ರಾಮೇಶ್ವರ!

ಪುರಾತನ ಪವಿತ್ರತಲ ರಾಮೇಶ್ವರ! ಶ್ರೀರಾಮ
ಭಕ್ತಜನರ್ ಗೌರವಾದರದಲಿ ಕಟ್ಟಿಟ್ಟು
ಕೈಸಾರ್ದ ಭವ್ಯ ದೇಗುಲವೇ ರಾಮೇಶ್ವರ!
ಶ್ರೀರಾಮಕೀರ್ತಿಯದು ಚಿರಕಾಲ ಬಾಳಲೆಂದು
ಅಲ್ಲಲ್ಲಿ ಎಲ್ಲೆಡೆಯಲಿ ದೇಗುಲಗಳ್ ಕಟ್ಟಿ
ಸ್ಥಿರಗೊಳಿಸಿದ ಪರಿಯಿದೆನೆಲ್ ಸಲ್ಬುದು, ಭಕ್ತ
ಜನ ಸಂದೋಹ ನೆರೆದಿರ್ದುದು ಕಿಕ್ಕಿರಿದು
ತುಂಬಿ. ನಿಸ್ಸೀಮ ಸೌಂದರ್ಯ ರಾಶಿಯಲಿ
ಮೊಯುತ್ತೆ ಪೌಳಿಯಲಿ ಸುತ್ತಿ ಕರಕುಶಲಕಲೆ
ಮತ್ತಮಾ ಸುಸುಂದರ ವಿನ್ಯಾಸವ ಮನದುಂಬಿ
ಗರ್ಭಗುಡಿಯೆದುರ್ಯೆದು ನೋಡೆ, ಅಪೂರ್ವ ತೇಜೋ
ರಾಶಿಯಲಿ ವಿಜೃಂಭಿಪ ರಾಮೇಶ್ವರ! ಭಕ್ತ
ಪರಿಪಾವನ ರಾಮಚಂದ್ರನ ಮಹೋನ್ನತ ಶ್ರೀ
ರಾಮಲಿಂಗ ಮಂದಿರ. ರಾಮಲಿಂಗ ರಾಮೇಶ್ವರ!
ದಕ್ಷಿಣ ಭಾರತದ ಕುಲಕೀರ್ತಿ ರಾಮೇಶ್ವರಾ!
ಸನಾತನ ಭಾರತದ ಸಂವಿಧಾನಾತ್ಮಕತೆ
ಮೆರೆದು. ಪ್ರೇಮಾತಿಶಯದ ಮಹಿಮಾಮಯ ಮುದ್ರೆ
ಎಲ್ಲೆಡೆಯೊತ್ತಿರ್ದೊಲ್ ಪ್ರೇಮ ಸಾಗರವೆ ಹರಿದಿದೆ
ಗರ್ಭಗುಡಿಯಿಂದೆ ಎಂಬೊಲಾ ಗಂಧಪರಿಮಳ ತುಂಬೆ
ಹೃನ್ಮನಗಳಂ ತೋಷದಿಂ ಭರಿಸಿದರಾ ಪರಿ–
ವ್ರಾಜಕಾಚಾರ್ಯಂ. ಶಿರೋದೇಶಮಂ ಮಣಿದು
ನಮಿಸಿದರ್ ಭಕ್ತಿರಸ ಸೂಸಿ. ಬಳಿಕಂ ಧ್ಯಾನ
ಭಂಗಿಯಲಿ ಕಳಿಯಿತ್ತು ನಸುವೊಳ್ತು. ತರುವಾಯಿ
ಪೊರಮಟ್ಟರಲ್ಲಿಂದೆ. ರಾಮೇಶ್ವರದಿಂ ಪಿಡಿದ
ಹಾದಿಯದು ರಾಮನಾಡಿನ ಗಡಿಯಂ ಮುಟ್ಟಿಸಿತು.

ಪಥದಂಚಿನಲಿ ಕಣ್ಗೆಸೆದುದೊಂದು ಪುಷ್ಕರಣಿ.
ಸುವಿಶಾಲತಮ ಪುಷ್ಕರಣಿಯಲಿ ಅಗಾಧ ಜಲ
ರಾಶಿ. ಸಾಗರವೆ ಸಂಕ್ಷಿಪ್ತ ರೂಪದಲಿ ಜಲ
ನಿಧಿಯಾಯ್ತೊ ಎನಲ್ ರಾರಾಜಿಪ ಸುಜಲರಾಶಿ!
ಆ ಸ್ವಚ್ಛ ನಿರ್ಮಲ ಜಲಧಿಯಲಿ ಮಿಂದು ಮಡಿಯ
ತೊಟ್ಟು ಉಟ್ಟು, ಬೊಗಸೆಯೆತ್ತಿ ನೀರ್ಕುಡಿದು ಮೈಲಿಗೆ
ಉಡುಪಂ ತೊಳೆದು ಒಗೆದು ಮಡಿಗೈದು ಹರವಿದರ್
ತೀರದಾ ಶಾದ್ವಲದ ಜೊಂಡು ಹಾಸಿನ ಮೇಲೆ.
ಚೀಲದೊಳ್ ಇರಿಸಿದ ಗೆಣಸುಗೆಡ್ಡೆಗಳ್ ಹಸಿವು
ನಿವಾರಿಸಲ್, ಮಡಿಗಳ್ ಒಣಗುವನ್ನ ಕುಳಿತರ್
ಮೊಣಕಾಲ್ಗಳಂ ಕೈಗಳಿಂ ಕಟ್ಟಿ. ಇಳಿವಿಸಿಲ್
ಇಳಿಯುತಲಿರೆ ಪಶ್ಚಿಮಾದ್ರಿಯ ಕುಕ್ಕಿಲದ
ಮೇಲೆ, ಸಾಯಂ ಸೊಂಪು ಹರಡಿತು ಇಳೆಯಗಲಂ.
ಅಲ್ಪ ವಿಶ್ರಾಂತಿಯ ಬಳಿಕಂ ಆ ತಾಣಮಂ
ಬಿಟ್ಟು ಪಿಂತಿರ್ಕಿ ಮುಂಕೊಂಡು ಬರುತಿರೆ ಮುಂದೆ
ಕಣ್ಗೆತ್ತುದು ಮಧುರಾ ನಗರಿಯಾ ಪರಿಪುಣ್ಯ
ಪ್ರದೇಶಂ. ಮಧುರಾ 'ಮೀನಾಕ್ಷಿಯ ನೆಲೆಯಾದ'
ಶ್ರೀದೇಗುಲಮೆಸೆದುದು ಬಹುದೂರದಿಂ. ಅಂಬರ
ಚುಂಬೀ ಗೋಪುರಂ ವಿಜೃಂಭಿಸಿರೆ ಅಲಂಕಾರ
ಮಯಮಾಗಿ, ಸ್ವಾಮೀಜಿ ಅಮಿತಾನಂದದಿಂ ಒತ್ತು
ಕೊಟ್ಟರಾ ಪಜ್ಜೆಗಳಿಗೆ, ಬಿರುಸಾಗಿ ನಡೆಯಲ್,
ಕೆಲವೊಳ್ತಿನಲಿ ಮುಟ್ಟಿದರ್ ಬೃಹದ್ ದೇಗುಲ
ಪ್ರದೇಶಂ. ದೇವಿ ಪೂಜಾರ್ತ ನೆರೆದಿರ್ದುದು
ಬಹುಮಂದಿ. ಜನ-ಜನವೇ ಜನಂ. ಭಕ್ತಿಪೂತ
ಮನದಲ್ಲಿ ದೇವಿಮಂತ್ರವಂ ಜಪಿಸುತೆ ಸಲಿಪ

ಪೂಜಾವ್ರತ ನಡೆದುದು ಯಥಾ ಸಾಂಗವಾಗಿ.
ಅಲ್ಲಿ ದೇವಿದರ್ಶನಕೈದು ಪೂಜೆಯಂ ತೀರ್ಚಿ
ಪೊರಡಲಿರ್ದ ಸುಂದರದೇವ ಐಯ್ಯರ್ ಎಂಬ
ಸತ್ಪುರುಷನೊರ್ವಂ ಸ್ವಾಮೀಜಿಯ ಮುಖದರ್ಶನ
ಮಾತ್ರದಿಂ ಸಂತುಷ್ಟಿಯಂ ಪಡೆದು ಸಂಪ್ರೀತ
ಮನದಿಂದೆ ಯುವರಿಸಿಯ ಪರಿಚಯಂ ಅರಿತರಿತು
ಹೃನ್ಮನಂ ತುಂಬಿ ರಾಮನಾಡಾಧಿಪನಿಂಗೆ
ಪರಿಚಯದ ಪತ್ರಮಂ ಉಲ್ಲೇಖಿಸಿ ಕೊಟ್ಟರ್.
ಅದಂ ಕೈಕೊಂಡು ತಮ್ಮ ಪಯಣಮಂ ಮುಂಬರಿಸಿ
ನಡೆದರ್ ಗುರುವರ್ಯಂ. ಮಿನ್ನೆ ರಾಮಾಯಣದ
ಕಾಲದೊಳ್ ಶ್ರೀರಾಮ ಬಂಟರುಂ ಧನುಷ್ಕೋಟಿ
ಎಂಬೆಡೆಯಲಿ ನಿರ್ಮಿಸಿದ ಭವ್ಯ ಸೇತುವಂ,
ವಂಶಪಾರಂಪರ್ಯದಿಂದದರ ಒಡೆತನಂ
ಪಡೆದು 'ಸೇತುಪತಿ' ಎಂದೆಂಬುವ ಬಿರುದುವೊತ್ತ
ಅರಸಂ 'ಭಾಸ್ಕರ ಸೇತುಪತಿ' ಎನಿಸಿ ದಿವ್ಯಮಾ
ಅಭಿದಾನದಿಂ ಮರೆವ ಭೂಪಂ! ಗುರುವರ್ಯಂ
ರಾಮನಾಡಿಗೆ ಪಯಣಿಸಿ ಯುಕ್ತ ಸಮಯದೊಳ್
ಮುಟ್ಟಿದರ್ ರಾಮನಾಡಿನಾಸ್ಥಾನಮಂ. ಆ
ಭಾಸ್ಕರ ಸೇತುಪತಿಯುಂ ಗುರುವರ್ಯನಂ ಪರಮ
ಗೌರವಾದರದಿಂ ಬರಮಾಡಿ ಸ್ವಾಗತಿಸಿದಂ
ಹೃತ್ಕಲಶದ ಮೃತವಂ ಬಸಿದು. ತರುವಾಯಿ
ಅವರವರೊಳ್ ಸ್ನೇಹಬಳ್ಳಿಯುಂ ಬೆಳೆದು ಬಲಿತು
ಚಿಗುರೊಡೆದು ನಳನಳಿಸಿದತ್ತು ನೆನೆಕೊನೆಯೇರ್ದು.
ರಾಜನಾಸ್ಥಾನದಲಿ ದಿನದಿನಂ ಪ್ರವಚನ
ಧಾರೆ ಹರಿವುದು ಆಸ್ಥಾನಿಕರಂ ಕುರಿತು. ಒರ್ಮೆ

ರಾಜ್ಯದ ಅಖಿಲ ಪಂಡಿತೋತ್ತಮರ್ಗೆ ಕರೆಯಂ
ನೀಡಿ ಕರೆಯೋಲೆಗಳಿಂ, ಕೂಡಿಸಿದರ್ ಮಹತ್
ಸಭೆಯಂ. ಸುವಿದ್ಯಾವೇತ್ತರ್ ಸಭೆಯೊಳ್ ಕೂಡಿರೆ
ಕಳೆಕಟ್ಟಿದುದು ಸಭೆ. ತರ್ಕವಿತರ್ಕಗಳೆದ್ದುವು.
ವಾದವಿವಾದಗಳೆದ್ದುವು. ಬಳಿಕಲಾ ಸ್ವಾಮಿಜಿ
ಕೇಳಿಸಿದರಿಂತು "ಓ ಎನ್ನ ನೆಚ್ಚಿನ ಪ್ರಿಯ
ಬಂಧುಗಳೆ, ಭಾರತ ಸುಸಂಕ್ಕೃತಿಯಂ ನೆನೆದು
ಸತ್ಕಾರ್ಯ ತತ್ಪರತೆಯಲಿ ಮನಂ ತೊಡರ್ಚಿರ್ಯೆ.
ನಿರಕ್ಷರಿಗಳಿಂಗೆ ಬಲುಮೆಯಿಂ ಅಕ್ಷರದಾನಂ
ಗೈದು ಭಾರತಧಾತ್ರಿಯ ಪುಷ್ಟೀಕರಣಮಂ
ಸಾಧಿಸಿರ್ಯೆ. ಸಧ್ಯ ನೀವ್ ಕೈಕೊಳ್ವ ಸೇವೆಯು
ಇದೇ. "**ವಿದ್ಯಾಹೀನಂ ಪಶು ಸಮಾನಂ**" ಎಂಬ
ಉಕ್ತಿಯಂ ಅರಿಯಿರಾ? ನಮ್ಮೊಳಾವುದಿಲ್ಲಂ?
ಸಕಲ ವಿದ್ಯೆ ಬುದ್ಧಿಗಳ ಸಂಪುಟವೇ ಇಹುದು.
ದೇಶವೇ ತುಂಬಿ ತುಳುಕುವನಿತು ಸುವಿದ್ಯೆಗಳ
ಸಂಪದಂಮಿರುತಿರ್ದು "**ಬೋದ್ಧಾರೋ ಮತ್ಸರ
ಗ್ರಸ್ತಾಃ**" ಇದೊರ್ ಹೀನ ಬುದ್ಧಿಯ ಅವತರಣಂ.
ಇದಂ ಮುಂಬರಿಯದೊಲ್ ತಡೆಯಿಕ್ಕಿ ರಾಷ್ಟ್ರಕ್ಕೆ
ಕಳೆಗೂಡಿಸಿಮ್, ಈ ರಾಷ್ಟ್ರದೊಳ್ ತುಂಬಿರ್ಪ ಅತಿ
ಆಲಸ್ಯ ಅದಃಪತನಕಲ್ಲದೆಯೆ ಉತ್ಥಾನ
ಗತಿಗಲ್ಲ. ಈ ಆಲಸ್ಯ-ಅಸಡ್ಡೆ-ಅವಜ್ಞೆಗಳ
ಮಧ್ಯೆ ಘೋರ ಬಡತನ. ದುಃಖ-ರೋಗ-ವೈಷಮ್ಯ-
ಅನಾಚಾರಗಳ ಮಧ್ಯೆ ಸದ್ಭಾರತವನುಂ
ಗುರುತಿಪುದು ಸಾಧ್ಯಮೇ? ನೀವ್ ಯೋಚಿಸಿ ತಿಳಿದು
ನೋಡಿ! ಭಾರತದಸಾಮ್ರಾಜ್ಯ ಮಿನ್ನೆ ಎಂತಿತ್ತು?

ಇಂದಿದರ ಗತಿಯೇಂ? ಮನದಿ ತಿಳಿದು ನೋಡಿರೈ!
ಆಪನಿತು ನಿಮ್ಮೊಳ್ ಪರ್ಯಾಲೋಚಿಸಿ ತಿಳಿಯಿರಿ.
ಇದರ ಪರಿಶೀಲನೆ-ಸುಧಾರಣೆ ನಿಮ್ಮೆಲ್ಲರ
ಕೈಲಿದೆ. ಯೂರೋಪಿಯನರ ರೀತಿ ನೀತಿಯೆ
ಬೇರೆ. ವಿಧಿ ವಿಧಾನವೇ ಬೇರೆ. ವಿಧಿ-ನಿಷೇದಗಳ
ಪರಿವೆಯೇ ಇಲ್ಲ. ಕಟ್ಟು ಕಟ್ಟಳೆಗಳಿಲ್ಲದ
ಹೀನ ಸಂಸ್ಕಾರ. ಕುಡಿತ-ಕುಣಿತಗಳ ಲಜ್ಜೆಯು
ಇನಿತಿಲ್ಲದ ಬರ್ದುಕು, ಸಾರ್ವಜನಿಕ ಕೂಟದಲಿ
ಸ್ತ್ರೀ ಪುರುಷರ್ ಪರಸ್ಪರ ತೋಳಪ್ಪುಗೆಯಲ್ಲಿ
ಮರೆವರ್ ಜಗಮರೆತು. ಸುಸಂಸ್ಕೃತಿಯರಿವಿಲ್ಲ.
ಲಜ್ಜೆ-ಧರ್ಮ-ಹಿರಿಮೆ-ಗರಿಮೆಗಳ ಅರಿವಿಲ್ಲದ
ಸ್ವಚ್ಛಂದ ಬರ್ದುಕಿನಲಿ ಸುಸಂಸ್ಕೃತಿಯಕಣಂ
ಇರ್ಪುದದು ಸಾಧ್ಯಮೇ? ಎಲ್ಲವಂ ತುಲನೆಗೈದು
ನಂನಮ್ಮ ಸ್ಥಿತ್ಯಂತರಮಂ ನಾಮೇ ತಿದ್ದಿ
ನಿರೂಪಿಸಿ ಧರ್ಮ-ಶ್ರದ್ಧೆಗಳ ಜ್ಯೋತಿರ್ಕುಡಿಗೆ
ತೈಲವೆರೆದು ಪರಿಪೋಷಿಸಲಕ್ಕುಂ. ಶ್ರದ್ಧೆಯಿಂ
ಸಂಬಾಳಿಸಲಕ್ಕುಂ. ಸಾಧನೆಯಿದು ಸರ್ವತ್ರವಾಗಿರಲಿ!
ಪರಮ ಬಂಧುಗಳೆ ಸಾವಧಾನದಿಂ ಪರ್ಯಾಲೋಚಿಸಿ."
ಒರ್ಮೆ ತುಂಬಿದ ಸಭೆಯೊಳ್ ಮಾತಾಡಿ ಪೇಳಿದ
ಪರಿಯಿದು "ಎಲೆ ಅಮೃತ ಪುತ್ರರಿರಾ, ಎನ್ನಯ
ಭಾರತ ಪರಿಭ್ರಮಣ ಕಾಲದಲಿ ಯಯಾವರ
ಜೀವನದ ಕೆಲವೊಂದು ಘಟನೆಗಳಲಿ ಆನುಂ
ಸಾಯ್ವೆನೆಂಬ ಅರಿವು ಮೂಡಿತ್ತು. ಅಸಹನೀಯ
ಸಂಕಟದೊಳ್ ಮೃತ್ಯುವಿನ ದವಡೆಯಲ್ಲಿ ಸಿಲ್ಕಿ
ಪಾರಾಗಿಹೆ. ಎಲ್ಲವುಂ ದೈವಕೃಪೆ. ಒಡಲಲಿ

ಹಸಿವು ತೃಷೆ. ನೆತ್ತಿಯಲಿ ಉರಿವಿಸಿಲ್. ಬೆಮರುಂ
ಬಸಿವುದು ಸದಾ. ಪಾದಗಳಲಿ ಹುಣ್ಣು. ಮೈಯೊಳ್
ಅಗಾಧತರ ನೋವು. ಅಂಗ ಪ್ರತ್ಯಂಗಗಳಲಿ
ಕಠಿಣ ಸೆಳೆತ. ದಿನಗಟ್ಟಲೆ ನಿರಾಹಾರ. ಮರದ
ನೆರಳಲಿ, ಹಟ್ಟಿಯ ಜಗಲಿಯಲಿ, ಗುಡಿಸಲುಗಳಲಿ
ತಂಗುವಿಕೆ. ಕೆಲವೊರ್ಮೆ ಇನ್ನೊಂದು ಹೆಜ್ಜೆಯಂ
ಮುಂದಿರಿಸಲಾರೆ ಎನಿಪೊಂದು ಸಂಕಷ್ಟ. ಇಂ
ಮುಗಿವುದೆಮ್ಮ ಕಥೆ ಎನಿಸಿ ಕಣ್ಮುಚ್ಚಿ ಮಲಗಿರ್ದೆ.
ಆಕ್ಷಣದೊಳ್ ಮನದಾಳದಿಂ ಅಂತರ್ಜಲದೊಲ್
ಭಾವನಾಧಾರೆಗಳ್ ಚಿಮ್ಮಿಬರುತಿರ್ದುವೆನ್ನ
ಅಧೈರ್ಯದ ಮೊಟ್ಟೆಯಕುಕ್ಕಿ ಒಡೆಯೆ. ಆಗಳಾಂ
ಕೂಗಿದೆನ್, ಇಲ್ಲ, ಇಲ್ಲ. ಆಂ ಸಾಯಲಾರೆ,
ಆನೆಂದು ಹುಟ್ಟಲಿಲ್ಲ. ಎನಗೆಂದಿಗುಂ ಸಾವಿಲ್ಲ.
ಎನಗೆ ಪಸಿವೆಯಿಲ್ಲ ದಾಹವೂ ಇಲ್ಲ. ಸೋಽಹಂ
ಸೋಽಹಂ!ಸೋಽಹಂ! ಆತ್ಮನೇ ನಾನ್! ಈ
ಸಮಸ್ತ ಪ್ರಕೃತಿ ಎನಗೆದುರಾದೊಡಂ ಅದೆನ್ನಂ
ಸೋಂಕಲಾರದು! ಅದೆನ್ನಯ ಆಜ್ಞಾನುವರ್ತಿ
ಓ ಎನ್ನ ಆತ್ಮ! ನೀಂ ಸಕಲ ದೇವರ ದೇವ!
ಎನ್ನ ನಿಜ ಶಕ್ತಿಯಂ ಮೆರಸು. ನಿನ್ನಯ ನಿಜ
ಸ್ವರೂಪವಂ ಪುನಃ ಪ್ರತಿಷ್ಠಿಸು. ಎದ್ದೇಳು!
ಮುಂದೆ ಮುಂದೆ ನಡೆ ನಿಲ್ಲದಿರು, ನಿಲ್ಲದಿರು!"
ಎಂದೊದರುತಿರ್ದೆ. ಇಂತಿಂತಿಂತು ಎನಿತೆನಿತೊ
ಪ್ರಸಂಗಗಗಳಂ ನೆನೆನೆನೆದು ವಿವರಿಸಿ ತಿಳುಪಿ
ಜನಗಣಮನವಂ ತಣಿಪರ್, ಪುರುಪೀಯುವರ್.
"ಮನುಕುಲದಲಿ ಜನಿಸಿ ನಿಷ್ ಪ್ರಯೋಜನಮೆನಲ್

ಸರಿಯೇಂ? ಮನದೊಳ್ ನೆನೆನೆನೆದು ವಿಚಾರವಿಶ್ವಂ
ಬೊಕ್ಕು ಚರ್ವಿತಚರ್ವಣ ಗೊಳಿಸಿ ತುಲನೆಗೈದೊಡೆ
ತಂತಮ್ಮ ಬಾಳಿಂಗೆ ದರ್ಪಣವಿಡಿವುದು ದಿಟಂ.
ಇದುವೆ ಎಲ್ಲರ ಸಂಜೀವನ ಯಾತ್ರೆಗೆ ಸುಪಥಂ.
ಕೇಳಿ, ಯಾವತ್ ಕಾಲವುಂ ಯೋಚಿಸಿಯೋಚಿಸಿ
ತಿಳಿವುದೇ ಜ್ಞಾನದುದ್ದೀಪನೆಯ ಸಂಪದಂ.
ಇಂತಿಂತೋರೊಂದು ಉಪನ್ಯಾಸಗಳ ಭಟ್ಟಿಯಂ
ಇಳಿಸಿ ಜನಗಣಮನಕೆ ಅಮೃತರಸ ಪಾನಂ
ನೀಡಿ ಪೊರಮಟ್ಟರಲ್ಲಿಂದೆ, ಎಲ್ಲರಿಂದಲಿ
ನಲ್ಮೆಯ ಬೀಳ್ಕೊಡಿಗೆಯಂ ಪಡೆದು. ಮುಂಮುಂದೆ
ಪಾಂಡಿಚೆರಿ ಮಾರ್ಗ ತೆರೆದತ್ತು ಸ್ವಾಮಿಜಿಯಾ
ಪಾದ ಸಂಚಾಲನೆಗೆ ಸುಸ್ವಾಗತವಂ ಬಯಸಿ.
ಸಾಗಿದುದು ಹಾದಿ ಎಡರುತೊಡರುಗಳಿಲ್ಲದೆಯೆ.
ಏಕನಿಷ್ಠೆ ಏಕಪಥ ತದೇಕ ಭಾವನಾ
ಭಾರದಲಿ ಸಾಗಿತು ಹಿರಿ ಹಾದಿ. ಸಮುದ್ರದಡ
ಸಮುದ್ರ ಹವ ಸಮುದ್ರಮೊರೆತ ಎಲ್ಲವುಂ ಹಿತ.
ಬೆಳುದಿಂಗಳ ಹಸನಾದ ತಿಳಿಬೆಳಕು ಹರಡಿತು
ನವುರಾದ ಹೆದ್ದೆರೆಯನು ಹೋಲಿ! ಬೆಳುದಿಂಗಳ
ಹಾಲ್ನದಿಯಲಿ ಮಿಂದು ಮಡಿಯಾದ ನಗರದೇಶ
ವಿಜೃಂಭಿಸಿದತ್ತು ರಜತಲೇಪವೊರದಂತೆ.
ಕಣ್ಗೆಡ್ಡಮಾದ ಹುಣ್ಣಿಮೆಯ ಪೂರ್ಣಚಂದ್ರನ
ಒಡ್ಡೋಲಗದೊಳ್ ನಭೋದೇಶಮೆಸೆದುದು ವರ
ಶೃಂಗಾರ ಸೌಂದರ್ಯದಿಂ. ಗುರುವರಂ ಸಕಲ
ಸೌಂದರ್ಯ ಸಾರಮಂ ಹೀರಿ ಮೈದುಂಬಿರಲ್
ದಣಿವು ಗರಿಗೆದರಿ ಹಾರಿತು ನೂರು ಗಾವುದಂ.

ಸ್ವಾಮೀಜಿಯುಂ ಆ ಕಿರುನಗರಿಯಲಿ ಪದಚಾರಣ
ಗೈದು ಸಂತಸಪಡುತ ನಗರಿಯ ಸೌಂದರ್ಯ
ರಸವೀಂಟಿ ಮನದುಂಬಿದರ್ ಸಾನಂದದಿಂ.
ಚಿಕ್ಕ ನಗರಿಯಾ ಚೊಕ್ಕತನ ಹಿತವಾಯ್ತು.
ತಮಗೊದವಿದ ಬಿಡದಿಯಲಿ ತಂಗಿರ್ದು ತಣ್ಣನೆ
ರಾತ್ರಿಯಂ ಸುಖನಿದ್ದೆಯಲಿ ಕಳೆದರ್, ಸ್ವಾಮೀಜಿ.
ಮರುದಿವಸದ ಉದಯರವಿಯು ಮೂಡಣದಂಚಿನ
ಸೀಮಾಂತರೇಖೆಯಲಿ ಇಣುಕುವ ಮೊದಲೆ ಎದ್ದ
ಸ್ವಾಮೀಜಿ ಸಾಗರ ತಟನಿಗೈದರ್ ಅಂದಿನ
ಪ್ರಾತಃರ್ವಿಧಿಯಂ ಪೂರೈಸೆ, ಸೈಕತ ಪಟ್ಟದ
ಮಿದು ಹಾಸಿನಲ್ಲಿ ಪದ್ಮಾಸನದೊಳ್ ಕುಳಿತು ಕಣ್
ಮುಚ್ಚಿ ಧ್ಯಾನಲೀನತೆಯಲಿ ಮುಳುಗಿದರ್. ಮಹಾ
ವಾರ್ಧಿಯ ಅಲೆಯಲೆಗಳ್ ಪ್ರಚಂಡ ವೇಗದಲಿ
ಮೇಲಾಯ್ದು ಬರುಬರುತೆ, ಕೆಲವೊರ್ಮೆ ಅವುಂ ತಾವ್
ಕುಳಿತೆಡೆಯೊಳ್ ಪವ್ವನೆ ಅವ್ವಳಿಸಿ ಪಿಮ್ಮೆಳಿ
ಪೋದಪವು ತಾವರಿಯದೊಲ್. ಧ್ಯಾನಮಂ ತೀರ್ಚಿ
ಬಿಡದಿಗೈದಾಗಲೇ ಪ್ರಾಚೀನ ಕಾಲೀನ
ಸಂಪ್ರದಾಯಸ್ಥನಿರ್ದ ದಾಸ ಮಹನೀಯಂ
ಕಾದಿರ್ದನ್ ಸ್ವಾಮೀಜಿಯ ದರ್ಶನಂಬಡೆಯೆ.
ಅವರುಂ ಕಣ್ಗೆಸೆದೊಡನೆ ವಾದವಿವಾದ ಹೂಡಿ,
ತನ್ನಯ ಅತಿ ಕ್ಲಿಷ್ಟಕರವಾದ ನುಡಿಗಟ್ಟಿನ
ಪಟ್ಟು ಬಿಡದೆಯೆ ಮೊಂಡುವಾದ ಹಿಡಿದು ಮಾತಿನ
ಮುಮ್ಮಳೆಯ ಸರಿ ಸುರಿದನ್. ಹಳೆಹಳೆಯ ಅದಮ್ಯ
ಶುಷ್ಕಾಚಾರದ ಧಾಟಿ ಹಿಡಿದು ವಿಷಕೀಟದೊಲ್
ಕಾಡಿದಂ. ಅತೀವ ತಿಮಿರಾವೃತ ಮನಮತಿಯ

ಜಾಡು ತಪ್ಪದು. ಕ್ಲಿಷ್ಟಾಚಾರ ಬಿಡದು. ಅವನುಂ
ಏಳಲಾರನೆನೆ ಬೀಳಲಾರಂ. ಪೊಳ್ತು ಕೈಗಿನಿತು
ಎಟುಕದಾಯ್ತು. ಕಂಠದ ಶೋಷಣೆಯುಮಲ್ಲದೆಯೆ
ಬೇರೇನಿರದ ಪರಿಯೊಳ್ ಕಳೆಯಿತು ನಿಡುವೊಳ್ತು.
ಪ್ರಚಂಡ ವೇದಾಂತಿಯ ಆತ್ಮದ ಜ್ಯೋತಿಯಂ
ಎದುರಿಸಲ್ ತತ್ತರಿಸಿ ಅಳುಕಳಿಕಿ ಎದೆನಡುಗಿ
"ಕದಾಪಿನ! ಕದಾಪಿನ!" ಎಂಬೊಂದು ಪಲ್ಲವಿಯ
ಎಡೆಬಿಡದೆಯೆ ಹಿಡಿದಂ. ಸ್ವಾಮಿಜಿಯುಂ ತಮ್ಮ
ವದನಾರವಿಂದದೊಳ್ ಎಳೆಮುಗುಳ್ ಅರಳುಸುತೆ
ಅವನಂ ನಯದಿಂ ಬೀಳ್ಕೊಟ್ಟು ಬಳಿಕ ತಮ್ಮಯ
ಕಾರ್ಯಪ್ರಜ್ಞೆಗೆ ಇಂಬಿತ್ತರ್. ಸಾಗರ ತಟನಿಯ
ಸುಂದರ ನಗರಿಯ ವಿದ್ಯಾವೇತ್ತರ್ ಬಿಡದಿಯ
ಸುಳಿವರಿತು, ಕಾಷಾಯ ವಸನಧಾರಿಯ ವದನ
ಮಂಡಲದ ದರ್ಶನದ ಭಾಗ್ಯದಿಂ ಸಂತುಷ್ಟಿ
ಸಂತೃಪ್ತಿಗಳಂ ಪಡೆದರ್. ದಿನವಹಿ ಭಾಷಣ
ಉಪನ್ಯಾಸಗಳ್ ನಡೆದುವು ಮೇಣುಂ ದೇಗುಲದ
ದರ್ಶನಂ ಪಡೆದರ್ ಗುರುವರ್ಯರ್ಂ ಕೆಲಗಣ್ಯ
ಜನರೊಡಂಗೂಡಿ. ರಾತ್ರಿಯಲಿ ಬಿಡದಿಗೈತರೆ
ನೆಲ ಹಾಸು ಬರಿ ಚಾಪೆಯಲಿ ಕುಳಿತು ರಾತ್ರಿಯಾ
ಪ್ರಾರ್ಥನೆಯ ಭಕ್ತಿರಸ ಪೂತ ದನಿಯಲಿ ಸಲಿಸಿದರ್.

"ಸರ್ವಸ್ತರತು ದುರ್ಗಾಣಿ
ಸರ್ವೋ ಭದ್ರಾಣಿ ಪಶ್ಯತು ।
ಸರ್ವಸ್ಸುಖಮವಾಪ್ನೋತು
ಮಾ ಕಶ್ಚಿ ದುಃಖ ಭಾಗ್ಭವೇತ್ ॥"

ಮುಂಬೊಳ್ತಿನೊಳ್ ಸಾಗರ ತೀರದೊಳ್ ಸೈಕತ
ಶಯ್ಯೆಯಲಿ ಧ್ಯಾನಬದ್ಧರಾಗಿ ತೀವ್ರ ಮುಳುಂಗೆ
ಶಾಂತಿ ಸಮೃದ್ಧಿಯಿಂ ಧ್ಯಾನವ್ರತ ಸಾಗಿತು;
ತೇಲಿದರ್ ಧ್ಯಾನದ ತೇರೇರಿ ನಭದಗಲ. ಮೂಡು
ಭಿತ್ತಿಯಲಿ ರವಿಯಾಗಳೇ ಮೇಲೆಮೇಲೇರಿ
ವಿಜೃಂಭಿಸಿರ್ದಂ. ಪೊಳ್ತು ಏರಿದುದರ ಅರಿವು
ತಿಳಿಯದಾಯ್ತು. ಸ್ವಾಮಿಜಿ ಎಳ್ದು ಪೊರಡುವೆನೆನೆ
ಎದುರ್ವೆತ್ತನೊರ್ವ ಮಡಿಗೊಂಡಿಹ ಬ್ರಾಹ್ಮಣಂ.
ಸ್ವಾಮಿಜಿ ಪ್ರಸನ್ನ ಮೊಗದೊಳ್ ಎಳೆಮುಗುಳಂ
ಬಿರಿಸಿ ಕರಜೋಡಿಸಿದರ್ ಬ್ರಾಹ್ಮಣೋತ್ತಮಂಗೆ.
ಪರಸ್ಪರ ಪರಿಚಯಂಬಡೆದು ಮಿತ್ರುತ್ವಂ ಕುಡಿ
ಮೊಳೆಯೆ ಮನ್ಮಥನಾಥ ಭಟ್ಟಾಚಾರ್ಯದೇವಂ
ಸಾನಂದದಿಂ ನುಡಿಸಿದನೆಂತೆನೆ. "ಸ್ವಾಮಿಜಿ.
ತಾವ್ ಮದರಾಸಿಗೈದೊಡೆಮ್ಮಯ ಗೃಹದೊಳ್
ತಂಗಿರ್ದು ನಮ್ಮ ಸರಳಾತಿಥ್ಯಮಂ ದಯೆಯಿಂ
ಸ್ವೀಕರಿಪುದು."
ಬಳಿಕಂ ಪರಸ್ಪರ ವಿದಾಯಂ
ಬೇಳ್ದು ಬೀಳ್ಕೊಂಡರೀರ್ವರ್. ಗುರುವರಂ ನಗರ
ಸಮೀಕ್ಷೆ ನಡೆಸಿ ದೇಗುಲಂ ಬೊಕ್ಕು ಉದ್ದಂಡ
ಪ್ರಣಾಮವಂ ಸಲಿಸಿ ಪೊರವಂಟರಲ್ಲಿಂದೆ.
ಮದರಾಸ್ ಪ್ರಾಂತದ ಪಿರಿಯ ದಾರಿಯಲಿ ಪಾದ
ಸಂಚಾಲನೆ ನಡೆದುದು ಯಮಧೈರ್ಯದಿಂ, ಭೀಮ
ಬಲದಿಂ. ಬಳಲಿಕೆ ಸೋಲುಗಳ್ ಪಿಂತಿರ್ಕೆ ತಾಂ
ನಡೆದರ್ ಬಹುಲಮುಂದೆ, ಮುಂದೆಮುಂದೆ. ಮೇಗಡೆ
ಸುಡುವಿಸಿಲ್ ಕೆಳಗೆ ಕಾದ ಭುವಿ. ಎಲ್ಲೆಲ್ಲಿ ತನಿ

ಉಗುಂ ತಣ್ಣೆಳಲ್ ಲಭ್ಯಮಲ್ಲಲ್ಲಿ ಕೆಮ್ಮನೆ
ಕುಳಿತು ವಿಶ್ರಾಂತಿಯಂ ಪಡೆದು ಕಮಂಡಲ ನೀರ್
ಕುಡಿದು ಕೈಚೀಲದೊಳಿಹ ಗೆಡ್ಡೆಯ ಉಣಿಸಿನಿಂ
ತೃಪ್ತಿಪಡೆದು ಮುಂಬರಿವರ್ ನಡೆದು ನಡೆದು. ಆ
ದೂರದ ಪಥದೊಳ್ ಕ್ರಮಿಸಿ ಕ್ರಮಿಸಿ ಬಳಲಿರೆ
ಅಲ್ಲಲ್ಲಿ ಕಾಂಬ ಊರು ಕೇರಿಗಳ ಬಡವರ
ಗುಡಿಸಿಲಿನಲಿ ತಂಗಿರ್ದು ಕದನ್ನವನುಂಡು
ಮುನ್ನಡೆದರ್. ರಾಜ್ಯದ ಸ್ಥಿತಿಗತಿ ಸಮೀಕ್ಷೆಯ
ದಿಟ್ಟಿಗೆಸೆದುದು ದಾರಿದ್ರ್ಯ ದೇವಿಯ ಅತ್ಯಂತ
ಅಸಹನೀಯ ಹಿಂಸ್ರಕ ಉತ್ತಾಲನರ್ತನಮೇ
ಎಲ್ಲೆಲ್ಲು. ಆಳ್ವರ ಸಕಲತರ ಚಟುವಟಿಕೆಯ
ಕಾರ್ಯಭಾರದ ಮಹಾನ್ ನಗರಿ ಮದರಾಸ್! ಅಃ
ಸಾಗರ ತಟನಿಯ ಸುವಿಶಾಲ ತಡಿಯಲಿ ಮೂಡಿ
ಹಬ್ಬಿ ಹರಡಿದ್ದ ಬೃಹದ್ ನಗರಿ ಮದರಾಸ್.
ನಾಗರಿಕ ಕಾಲಮಾನಕೆ ಪ್ರಪ್ರಥಮ ಹೆಜ್ಜೆ
ಇಡುತಿಹ ಅಮೂಲ್ಯತರ ಕಲಾಕಲೆಗಳ ಬೀಡು
ಮದರಾಸ್ ನಗರಿ. ಸ್ವಾಮೀಜಿಯುಂ ನಗರದಲಿ
ಚರಿಸಿ ರಾಜಪಥವಿಡಿದು ನಡೆದಿರೆ ಕಿವಿಕಿಡಿಪ
ತೆರದಿ ಹರಿದುದಾ ತಮಿಳರ ತಮಿಳ್ ಭಾಷೆಯಾ
ಮಹಾ ಪೂರ! ಆಲಿಸಾಲಿಸಿ ಕೇಳಿಯುಂ ತಾವ್
ಇನಿತು ಅರ್ಥೈಸಲಾಗದ ಭಾಷಾವೈಖರಿ. ಬಲು
ಸರಳ ಸರಸ ಚೈತನ್ಯರಸ ಧುನಿಯಂತೆಸೆವ
ಲಟ್ಟಣಂ. ಜನ ಜಾತ್ರೆಯ ಪ್ರಾಣದ ಪಾತ್ರದಲಿ
ಅಣುತೃಣಗಳ ಜೀವನಾಲವಾಲದಲಿ ಪ್ರತಿ
ಬಿಂಬಿಸಿ ಪ್ರವಹಿಪ ಸ್ಫೂರ್ತಿಯುಂ ಕಮನೀಯ

ಕಠೋರತಮ ನಿರ್ಝರಣಿಯೊಲೆಸೆದುದು ತರುಣನ
ಗರುಡ ದೃಷ್ಟಿಗೆ. ರಾಜಮಾರ್ಗದೊಳ್ ಎದುರ್ವೆತ್ತ
ಮನ್ಮಥ ಬಟ್ಟಾಚಾರ್ಯರುಂ ಪರಮ ತೋಷದಿಂ
ಕರೆದೊಯ್ದರ್ ತಮ್ಮಯ ಗೃಹದ್ದೇಶ ವಲಯಕೆ,
ಯುವ ಮುನಿವರೇಣ್ಯನಂ, ಕೈಮುಗಿದು ಕರವಿಡಿದು.

ಹರಿಃ ಓಂ ತತ್ ಸತ್

❋ ❋

ಏಕೋನವಿಂಶೋಲ್ಲಾಸಂ

ಉತ್ತಿಷ್ಠ ಭಾರತ

ಓ ತಾಯೆ! ಭಾವನಾ ಸುಂದರಿಯೆ! ನಮಿಸುವೆನೊ
ನಿನ್ನಯಾ ಪದಾಂಭೋಜಗಳಿಗೆ. ಮಮ ಶಿರವಂ
ಕೆಡಹಿ ಓ ಸರಸತಿಯೆ! ಅಜನರಾಣಿ ವೀಣಾ
ಪಾಣಿ, ದಯದೋರಿ ಕರುಣಿಸೆನ್ನಂ ತವ ಕೃಪಾ
ಕಟಾಕ್ಷವಂಬೀರಿ. ಸಕ್ಕದ ಸಕ್ಕರೆಯ ಸವಿಯ
ಸೂಸಿ ಮಣಿಮಾಲೆಗಳ ನೆಯ್ದು ನೀ ನುಡಿಸೆನ್ನ
ಜಿಹ್ವೆಯಲಿ ಕಾವ್ಯವಾಹಿನಿಯು ಜಳಜಳ ಹರಿವ
ಮಾಳ್ಕೆಯಲಿ! ಎದೆಯ ಬನದ ರಸಕೋಗಿಲೆಯ ನೀಂ
ಆಲಿಸಾಲಿಸಿ ಉಲಿದುಲಿದು ಸಾರುಸಾರೆಲೇ
ಮನೋಮಯ ಪ್ರಾಣಮಯ ರಾಗಾರುಣತಾನವ
ವೆರಸಿ, ಜನಗಣಮನ ತಣಿವ ತೆರದಿ. ಸಿರಿಗನ್ನಡ
ಕತ್ತುರಿಯ ಕಂಪು ಪೆಂಪುಗಳೊಡನೆ ಕಾವ್ಯರಸ
ಧಾರೆಯುಕ್ಕಿ ಹರಿಯಲಿ ರಸಗಂಗೆ ತಾನಾಗಿ.
ಛಂದಲಯ ರಹಿತ ಗಾನಗೇಯದ ಮಾಧುರ್ಯಂ
ಹರಿದಿರಲಿ ಸ್ವಚ್ಛಂದ ಶೈಲಿಯಲಿ. ನಮೋ ನಮೋ
ಮಮ ದಿವ್ಯ ಜನನಿಯೆ!
ಕರಿಮುಗಿಲ್ಗಬ್ಬದಿಂದೊಗೆದ
ಮರಿಮಿಂಚೆನಲ್ ಮಿಂಚಿವಂದ ಗುರುವರ್ಯನ
ಜನ್ಮ ಸಾರ್ಥಕತೆ **"ಶ್ರಮಮೇವ ಜಯತೇ"** ಎಂಬ
ಮಂತ್ರದುಕ್ತಿಯಲಿಯೇ ಬರ್ದುಕಿನ ಸತ್ಯಾರ್ಥ
ಪರಮಾರ್ಥ ಎಲ್ಲವುಂ. ಸ್ವಾಮೀಜಿಯುಂ ಪರಮ
ಮಿತ್ರ ಮನ್ಮಥ ಬಾಬುಗಳೊಡನಿರುತಿರಲವರ

ನೇಹಿಗರ್ ಬಂಧುಗಳ್ ಜ್ಞಾನವೇತ್ತರ್ ಪರಮ
ಪಂಡಿತೋತ್ತಮರ್ ಬಂದು ಭೇಟಿಪಡೆದು ಬಹುಲ
ಭಕ್ತಿಗೌರವಾದರಗಳಿಂ ಪ್ರವಚನಧಾರೆ,
ಉಪನ್ಯಾಸಮಂ ಕೇಳಿ ತಿಳಿದಪರ್ ಮನಗೊಟ್ಟು.
ಆ ಮತಿಮಾನ್ಯರ ತಂಡದೊಳ್ ಪ್ರಮುಖರೆನಲ್
ಅಳಸಿಂಗ ಪೆರುಮಾಳ್, ವ್ಯಾಸರಾವ್, ವೆಂಕಟ
ರಂಗರಾವ್, ಬಾಲಾಜಿರಾವ್, ನರಸಿಂಹಾ-
ಚಾರಿ, ಡಾ॥ ನಂಜುಂಡರಾವ್ ಮುಂತಪ್ಪ ಯುವ
ಪ್ರಭೃತಿಗಳ್ ಸ್ವಾಮೀಜಿಯ ಶಿಷ್ಯತನವೊಪ್ಪಿ
ಗುರುತನವೊಪ್ಪಿ ದೈವತ್ವವೊಪ್ಪಿ ಶಿರಮಣಿದು
ಧರ್ಮಕರ್ಮಮುಕ್ತಿರಲೆರ್ದೆಯೊಳಭೂತಪೂರ್ವ
ಮುಮುಕ್ಷುಗಳಾಗಿ ಸತ್ಯಾರ್ಥಿಗಳಾಗಿ ದಿವ್ಯ
ದೈವಜ್ಞರಾಗಿ ಬಾಳ್ದು ಸ್ವಾಮೀಜಿಯಂ ಸದಾ
ಬೆಂಬಲಿಸಿದ ಮಹನೀಯರ್. ಓರ್ವರಿಂದೋರ್ವ
ರರಿತು ಸುತ್ತಮುತ್ತಣ ಜನರಾಶಿ ದೇವಗುರು
ಎಂದೆಂದು ಧರ್ಮಗುರು ಎಂದೆಂದು ಭಕ್ತಿಯಿಂ
ಪರಮಾದರದಿಂ ಗುರುದರ್ಶನವ ಬಯಸುತ್ತೆ
ಬಂದಪರ್ ದಿನದಿನಂ. ಜನರಾಶಿ ಹಿರಿದಾಯ್ತು.
ಉಪನ್ಯಾಸ ಉಪದೇಶ ಪ್ರವಚನಗಳ ಧಾರೆ
ಎಡೆವಿಡದೆ ಹರಿದುದು ಗುರುವರ್ಯನ ಶ್ರೀಕಂಠ
ದನಿಯಿಂ. ಯುವಗೋಷ್ಠಿಯುಮುಂಬೆಳೆದು ಬಗೆಬಗೆಯ
ಪ್ರಪ್ರಶ್ನೆಗಳೇಳ್ದಪವು ಕಾಲೋಚಿತಮಾಗಿಹ
ವೈಚಾರಿಕ ರೀತಿಯಲಿ. ಒರ್ಮೆ ಗುರುವರ್ಯರುಂ
ನೀಡಿದ ಉಪನ್ಯಾಸವದಿಂತು ಮೊಳಗಿತು ದಿವ್ಯ
ಕೊರಳುಲಿಯಲಿ "ಓ ಭಾರತ ಪುತ್ರರೆ! ಕಿವಿಗೊಟ್ಟು

ಕೇಳಿಲ್ಲಿ! ಈ ರಾಷ್ಟ್ರೀಯ ಜೀವನ ಸ್ಥಿತಿಯಂ
ಆಪನಿತು ಪಕ್ಷಿನೋಟವೆರಚಿ ತಿಳಿದುಕೊಂಬ
ಆಸ್ಥೆಯಿರಲಿ. ರಾಷ್ಟ್ರದ ಜೀವಮಿಪ್ಪುದು ಭವ್ಯ
ಭವನಗಳಲೆಂಬಿರಾ? ಅಲ್ತು, ಅದಿಹುದು ದೀನ
ದಲಿತರ ಗುಡಿಸಲು – ಜೋಪಡಿಗಳಲಿ! ಕೇಳಿಲ್ಲಿ,
ಜಾತೀಯತೆಯ ಹೇಯ ಕರ್ಮದಲಿ, ತಮಸ್ಸಿನ
ಮತಿ ಮೌಢ್ಯದ ಗಾಢಾಂಧಕಾರದಲಿ ಮುಳುಂಗಿ
ಜನನರಳುವುದಂ ಕಾಣಿರಾ? ಅಜ್ಞಾನದ ಕೂಪ
ಕೂರ್ಮವಾಗಿ 'ತಮ್ಮತನ' ಮಂ ಮುಚ್ಚಿಕೊಳಲುರೆ,
ಶಾರೀರಿಕ ಮಾನಸಿಕ ಪ್ರಕ್ರಿಯೆಗಳಂ ಮೀರಿ
ನಿಲ್ದ ಆ ಪರಮ ಜ್ಞಾನದ ಸತ್ಯಾಭಿಲಾಷೆಯ
ಮುಖಕೆ ಮುಸುಕಿಡುವರ್. ಪುಟ್ಟಿನಿಂದಲಿ
ಅಲಸಿತನ ಬೆಳಸಿ ಕಾರ್ಯಗೆಯ್ಯಲ್ ಆಗದಿಹ
ಅಶಕ್ತತೆಗೆ ವಿರಕ್ತಿ ಪರದೆಯನೆಳೆಯುವರ್.
ಆತ್ಯಂತಿಕ ಸೈತಾನೀ ಪ್ರವೃತ್ತಿಯ ಜನರ್
ತಮ್ಮ ಕ್ರೌರ್ಯವಂ ಧಾರ್ಮಿಕ ಅಂಗವಾಗೆಸೆಯೆ
ಕರ್ಮಠತೆಯ ಸೋಗುತೊಡುವರ್. ತನ್ನ ತಪ್ಪನು
ಇತರರಿಗೆ ಹೊರಿಸಿ ಜಾರುವರ್. ಪರವಿಚಾರದ
ಎಂಜಲಂ ಮೆಲುಕುತೆ ಅದನ್ನೆ ಪರಮ ಜ್ಞಾನಂ
ಎಂಬೊಲ್ ಗಣಿಪರ್. ಇಂತಿಹ ರಾಷ್ಟ್ರ ದಿನದಿನಂ
ಪ್ರಗಾಢ ತಮಸ್ಸಿನಲಿ ಮುಳುಗುತಿಹುದೆನಲ್ಕೆ
ಮತ್ತಾವ ಕುರುಹುವೇಳ್ಕುಂ? ಯೋಚಿಸಿ ತಿಳಿಯಿರಿ.
ಧರ್ಮಜ್ಞಾನ ಕರ್ಮಜ್ಞಾನ ತಂತ್ರಜ್ಞಾನ ಮತ್ತಂ
ಸಂಜೀವನ ಜ್ಞಾನಗಳ ಪರಿವೆಯಿಲ್ಲದ ಬರ್ದುಕು
ಏಂ ಸಾಧಿಸಬಲ್ಲುದು? "ಜ್ಞಾನಂ ವಿಜ್ಞಾನ ಸಹಿತಂ"

ಎಂಬುದಂ ಅರಿತುಕೊಳದ ಮತಿ ಮೌಢ್ಯದಿಂ ಈ
ಜೀವನ ಕೆಡಗು, ಧರ್ಮ ಕೆಡಗು. ರಾಷ್ಟ್ರವೇ ಕೆಡಗು!"
ತರುವಾಯಿ, "ಮುಂದೆ ಅಮೆರಿಕಾ ದೇಶದೊಳ್ ನೆರೆವ
ಸರ್ವಧರ್ಮ ಸಮ್ಮೇಳನಕಾನುಯ್ದು ಭಾರತ
ಸನಾತನ ಧರ್ಮವಂ ಪ್ರತಿನಿಧಿಪಭಿಲಾಷೆ
ಇರ್ಪುದೆಮಗೆ." ಎನುತೆನುತೆ ಶೃತಪಡಿಸಿ ಎಲ್ಲ
ಪುರಜನರ ಒತ್ತಾಸೆಯಂ ಕೋರಿದರ್. ಆಗಳ್
ಒಕ್ಕೊರಲಿನಿಂ ಬಹುಜನರ್ "ಭಲೆ!ಭಲೆ!" ಎಂದರ್.
ಸಾನಂದದ ಅಲೆ, ಮರ್ಮರಿಸಿತು, ಸಭೆಯೊಳ್. ಆ
ಸಭೆಯ ಬಳಿಕ ಗುರುವರಂ ವಿದೇಶಗಳ ಯಾತ್ರೆಯ
ಸುದ್ದಿ ಹರಡಿತು ನಗರಿಯೊಳ್ ಕ್ಷಿಪ್ರತರದಲಿ.
ಮರುದಿನಂ ಕೂಡಿದುದು ಬೃಹದ್ ಸಭೆ ಆಟದ
ಬಯಲಂಗಣದಲಿ. ಸ್ವಾಮೀಜಿಯುಂ ತಮ್ಮ ಸಿರಿ
ಗೊರಳ್ ಕಂಚಿನುಲಿಯಂ ಹರಿಸಿದರ್ ಇಂತಿಂತು,
"ಹೇ, ಅಮೃತ ಪುತ್ರರಿರಾ! ಶ್ರೀ ಪರಮಾತ್ಮಂ
"ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು
ಕದಾಚನ" ಎಂದು ಅಪ್ಪಣೆ ಕೊಡಿಸಿಹನ್. ಭವ್ಯ
ಜಗತ್ತು ಸುಖದುಃಖ ಕಷ್ಟಸಂಕಟಗಳ ಮೂಲಕ
ಜನಕೋಟಿಗೆ ಶಿಕ್ಷಣ ಕೊಡುತಿಹ ಮಹೋನ್ನತ
ಶಾಲೆ. ಯಾವತ್ ಕಾಲದೊಳ್, ರುದ್ರ ಪ್ರಲಯದ
ಪರಿಸ್ಥಿತಿಯಲ್ಲಿಯುಂ ಜಗ್ಗದಿಹ ಬಗ್ಗದಿಹ
ವಜ್ರ ಮನೋಬಲ ದಿವ್ಯ ಜ್ಞಾನಬಲಗಳನರಿತ
ಮಹಾತ್ಮರಂ ಪ್ರೇಷಿತರಂ ತಯಾರಿಪರಂಗ!
ಅಥ ಧೀರ ಧೀಮಂತಿಕೆಯ ಮಹೋನ್ನತಮಾದ
ಕಾರ್ಖಾನೆ! ಎನಗೊದವಿದ ಸುಖದುಃಖಗಳೆ ಎನ್ನ

ಗುರು ಎನಲ್, ಬಹುತರದ ಪಾಠಕಲಿಸಿ ಪಟುತ್ವ
ನೀಡಿದುದು ಸತ್ಯಂ. ಸಲಸಲವುಂ ಪುರಸ್ಕಾರವೆ
ದೊರೆಯಿತೆನಗೆನಲುಂಟೆ! ಧಿಕ್ಕಾರ ತಿರಸ್ಕಾರ
ಸಾದರಗಳೆಲ್ಲವುಂ ಉಂಟು. ತಿರಸ್ಕರಿಸಿದರ
ಬಗೆಗೆ ಕೋಪದ ಬದಲ್ ಮರುಕವೆನಗೆ, ಅದವರ
ತಪ್ಪಲ್ಲ. ಅವರಿಂ ಕಿರಿ ಮಕ್ಕಳೇ. ಜಾನದಾ
ಬಲವಿಲ್ಲ. ಕೆಲವೇಕೆಲವು ಗಜಗಳಷ್ಟೆ ಅವರ
ಕ್ಷಿತಿಜ. ಅದಂ ದಾಂಟಿ ತಿಳಿವ ಶಕ್ತಿಯಿಲ್ಲದವರ್
ಎನಲ್ ದಯೆ ಕರುಣೆಯೇ ಸಿರಿಮದ್ದು. ಓರಿಮದ್ದು!
"ಉದ್ಧರೇತ್ ಆತ್ಮಾನಾತ್ಮಾನಂ" ನಂನಮ್ಮಗಳ
ಉದ್ಧಾರ ನಮ್ಮಿಂದಲಲ್ಲದೆಯೆ ಬೇರಲ್ಲ.
ಸುಜ್ಞಾನದಿಂ ಸಂಜೀವನಕೆ ಚೆಂಬೆಳಕು, ಕಣಾ!
"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ"
ಎಂಬುದಂ ಗಮನದೊಳಿರಿಸಿದೊಡೆ ಬದುಕಿನಲ್ಲಿ
ಸೋಲಿಲ್ಲ. ಇಂದಿನೀ ಪರಿಸ್ಥಿತಿಗೆ ಜನಗಣ
ಮತಿಮೌಢ್ಯವೆ ಕಾರಣಂ. ಹಳೆಹಳೆ ಕಲ್ಪನೆಯ
ತಳಹದಿಯ ಮೊಳಕೆ ಮೂಢ ಮತಿಯದೆ ಆಗಿರಲ್
ಅದಂ ಬಗೆಬಗೆದು ನೋಡಿದೊಡೆ ಮಿಸುನಿಯಂಶವು
ಕಾಂಬುದು. ಹೊರಗಣ ಕಸವಂ ಓರಿದು ಬಳಿಬಳಿದು
ತೆಗೆದೊಡೆ ಒಳಗಣ ಬಂಗಾರದ ತಿರುಳ್ ದೊರೆವ
ಸಂವಿಧಾನಮಂ ನೀವ್ ಕಂಡಿರುವಿರಾ? ಇದೇ
ನೀವರಿತುಕೊಳ್ಳಲೇಬೇಕಾದ ಧೀಮಂತ
ಯುಕ್ತಿ ಶಕ್ತಿ ಮಂತ್ರ ತಂತ್ರ ಎಲ್ಲಾ ಎನಲಕ್ಕುಂ!
ವೃಥಾ ಆಲಸ್ಯ ಹರಟೆಯಲಿ ನಿಂನಿಮ್ಮಗಳ
ಶಕ್ತಿ ಸಂಪುಟವ ಪಾಳ್ಗೈವಿರೇಂ? ಮನದಿ ನಿಚ್ಚ

ಯೋಚಿಸಿಯೆ ಕಜ್ಜಂಗೈವುದು? ಒಳಿತು ಕೆಡುಕುಗಳ್
ತುಲನೆಗೈದೊಡೆ ತಪ್ಪದು ಪಥ. ಕೆಡದು ಕಜ್ಜಂ.
ಇತರಿತರ ಜನಜಂಗುಳಿಯ ಕಂಡು ಒಡಲುರಿದು
ಬರಿ ಖಂಡನೆ ಭರ್ತ್ಸನೆಗೆಯ್ಯದೆ ನೆರವೀವ ಕರ
ನೀಡಲಾರಿರಾ? ದೀನ ದಲಿತ ದರಿದ್ರ ಜನ
ರಾಶಿಯ ಕಣ್ ಒರೆಸಿ ದುಃಖದುಗುಡಂ ಕಳೆವಂತೆ
ಸ್ವಾಂತನದ ಮಾತಾಡಿ ನಡೆವೆಣಗಳಿಗೆ ಜೀವ
ತುಂಬಲಾರಿರಾ? ನಿಮ್ಮೊಳ್ ತಿಳಿದು ನೋಡಿರೈ. ೧೩೦

"ಯೂಯಂ ತತ್ ಸತ್ಯ ಶವಸ
ಆವಿಷ್ಕರ್ತ ಮಹಿತ್ವನಾ,
ವಿದ್ಯತಾ ವಿದ್ಯುತಾ ರಕ್ಷಃ ॥"

ಆವೊಂದು ಕಾರ್ಯವಾಹಿಯೊಳ್ ಪರಮಾತ್ಮನಂ
ನೆನೆದೊಡೆ ಸುಲಭ ಸಾಧ್ಯಮಪ್ಪುದು ಎನಲದಂ
ಅಲಕ್ಷಿಸದಿರಿ, ಸಜ್ಜನ ಬಂಧುಗಳೆ! ಬ್ರಹ್ಮಾಂಡ
ಸೃಷ್ಟಿಕರ್ತ ನಿಮ್ಮಯ ಮೊರೆಗೆ ಕಿವಿಕೊಡದಿಹನೆ?

"ಕಂ ಪೃಚ್ಛತ ಸ ಜಗಾಮಾ ಸ ವೇದ
ಸ ಚಿಕಿತ್ವಾನ್ ಈಯತೇ ಸಾ ಸ್ವೀಯತೇ ॥"

ಈ ಸಾಮಾಜಿಕ ಸುಧಾರಣೆಗೆ ನೀವಿಡುವ ಪ್ರತಿ
ಹೆಜ್ಜೆಯುಂ ಅಮೂಲ್ಯಂ! ನೀವ್ ಗೆಯ್ವೊಡದನುಂ
ಪ್ರಪ್ರಥಮ ಹೆಜ್ಜೆಯಂ ಮಾತ್ರಮೇ ಮುಂದಿಟ್ಟ
ವೊಲಾಯ್ತು ಗೆಳೆಯ ಬಂಧುಗಳೆ ತಿಳಿಯಿರಿ, ತಿಳಿಯಿರಿ!"
ಸ್ವಾಮೀಜಿಯ ಉಪದೇಶ ಮನಮನವಂ ಮುಟ್ಟುವಂತೆ
ತಟ್ಟಿ ಕಿಟ್ಟಿ ಎಚ್ಚರಿಸಿ ಒಳಗಣ್ ತೆರೆಸಿತು. ಸಭಾಸದರ್ ೧೪೦
ಭಕ್ತಿ ಗೌರವಗಳಿಂ ಕರಗಳಂ ಜೋಡಿಸಿ ಶಿರ ಮಣಿದರ್.

ಸಭೆಯುಂ ಮುಗಿಬಗಿಯಾಗಿ ಜನವೃಂದಂ ಚದರಿ
ಪೋಗಲುರೆ ಪಡುಗಣ ಭಿತ್ತಿಯಲಿ ಇಳಿದನಾ ರವಿ
ಸೌವರ್ಣ ತೇಜದಲಿ. ನೀಲನೀಲಾಂತ ಭಿತ್ತಿಯ
ನವುರಾದ ತೆರೆಯಮೇಲೆ ಇಳಿಯುತಿಳಿಯುತೆ ಇಳಿ
ನೇಸರ್ ಇಳಿದುದು ಅಪರ ವಾರ್ಧಿಗೆ. ರಕ್ತಾಕ್ತ
ಓಕುಳಿಯ ಚಿಮುಕಿಸಿದನೊ ಎನಲ್ ಕಡುಕೆಂಪಿನ
ವರ್ಣ ಹರಡಿತು ನೀಲ ಭಿತ್ತಿಯ ಪಟಲದ ಮೇಲೆ.
ಸಾಯಂಸಮಯದ ಶಾಂತಿಯ ಹರವು ಮುಗ್ಧಗೊಳಿಸೆ
ಮನವಂ, ಬಿಡದಿಯಂಗಣದಲಿ ಪದ ಚಾರಣಂ
ಗೆಯ್ದು ಸ್ವಾಮೀಜಿಯುಂ ವಿಶ್ರಾಂತಿ ಧಾಮದಲಿ
ಸೊಗದಿಂ ಪಡೆದರ್ ಶ್ರಾಂತ ಶರೀರಕೆ ಅನನ್ಯ
ವಿಶ್ರಾಂತಿಯಂ. ಕಳೆಯಿತು ಸದ್ದಿನ ಸೊಲ್ಲಿರದ
ರಾತ್ರಿ ಸುಶಾಂತಿಯಲಿ. ಮೆಯ್ಯ ಬಳಲ್ಕೆ ಬೇರುಡಿದು
ಬಿಳ್ದ ಗಿಡವಾಯ್ತು. ಸ್ವಾಮೀಜಿ ಪ್ರಪ್ರಯತ್ನದಿಂ
ಮರುದಿನದ ಕಾರ್ಯಕ್ರಮಗಳಿಂಗಣಿಗೊಂಡರ್.
ಅಳಸಿಂಗ ಪೆರುಮಾಳ್‌ರವರೈದು ಗುರುವರನಂ
ಕರೆದೊಯ್ದರ್ ಸಭೆಯ ಆವರಣಕೆ. ಆಗಳೇ
ಜನರಾಶಿ ತುಂಬಿರ್ದುದು ಗುರುವರ್ಯನ ದಿವ್ಯ
ನಿರೀಕ್ಷೆಯಲಿ. ವೇದಿಕೆಯನೇರಿದ ಸ್ವಾಮೀಜಿ,
"ಹೇ ಅಮೃತ ಪುತ್ರರಿರಾ! ಪುರಾಣದ ದೇವ
ದೇವತೆಗಳಲಿ ಮಾತ್ರವಲ್ಲದೆ ವಿದೇಶೀ ದೇವರುಗಳ
ಧರ್ಮ ಸತ್ವದಲಿಯುಂ ಶ್ರದ್ಧೆಯಿರದಿರಲ್ ನಿಮ್ಮಗಳ
ಉದ್ಧಾರ ನಿಮ್ಮಿಂದಲಾಗದು ಎನಲನ್ಯಮೆ
ನಿಮ್ಮೊಳ್ ತಿಳಿದು ನೋಡಿ! ಮೊತ್ತ ಮೊದಲ್ ನಿಮ್ಮಗಳ
ಆತ್ಮಶ್ರದ್ಧೆ ಬೆಳೆಸಿ ನಿಜ ಸಂಜೀವನ ಶ್ರದ್ಧೆ ಬೆಳೆಸಿ, ಆ

ಶ್ರದ್ಧೆಯ ಬಲದಿಂ ಎಲ್ಲವುಂ ಸಾಧ್ಯ. ಯೋಚಿಸಿ,
ನಿಮಗಿಂದಿನೀ ಅಗತ್ಯಮೆನೆ ಶ್ರದ್ಧೆ ಮತ್ತಂ
ಸದ್ವಿದ್ಯೆ. ಪಾಶ್ಚಾತ್ಯರ ಮುನ್ನಡೆ ಶ್ರದ್ಧೆಯಿಂ
ಸಾಧನಾ ನಿಷ್ಠೆಯಿಂ ಸದ್ವಿದ್ಯೆಯಿಂ ಗಗನ
ಗಾಮಿಯಾಗಿ ಮೆರೆವುದನುಂ ನೀವ್ ಕಾಣಿರಾ?
ನಿಮಗಿಹ ಕೊರಮೇನೆಂಬುದಂ ನೀವರಿತು
ತಿಳಿದೊಡೊಳ್ಳಿತು. ನೀವಿದಂ ಪರ್ಯಾಲೋಚಿಸಿ
ನೋಳ್ಪುದು, ಗೆಣೆಯರೇ!
ಮುಂದೆಂದಾದೊಡಂ ನಮ್ಮ
ಭಾರತರಾಷ್ಟ್ರ ಉತ್ಥಾನಮಾದಪುದು. ಅದರೊಳ್
ಸಂಶಯಗೊಳದಿರಿ. ಆದೊಡದು ಜಡ ಸಾಮರ್ಥ್ಯ-
ದಿಂದಲ್ಲ. ಆತ್ಮ ಸಾಮರ್ಥ್ಯದಿಂ. ವಿಧ್ವಂಸಕ
ಧ್ವಜದಡಿಯೊಳಲ್ಲ. ಸತ್‌ಶಾಂತಿ ಪ್ರೇಮಗಳ ದಿವ್ಯ
ಧ್ವಜದಡಿಯಲ್ಲಿ. ಸಂನ್ಯಾಸಿಗಳ ಚೆಂಗಾವಿಯ
ಧ್ವಜದಡಿಯಲ್ಲಿ!
ನಿಮ್ಮೊಳ್ ದೈವೀತೇಜಸಂ
ಚಿಮ್ಮಿಸಿ. ಹಸಿವು ದಾಹ ಬಿಸಿಲು ಚಳಿಗಳಾವುವು
ನಿಮ್ಮನುಂ ಬಾಧಿಸವು. ವಿಲಾಸೀ ಬಂಗಲೆಯ
ಬದುಕಿನಲಿ ಸಕಲಸುಖ ಸೌಲಭ್ಯ ಸವಿಯುತ್ತೆ
ಇತರರ್ಗೆ ಅರೆಬೆಂದ ಧರ್ಮದ ಗುಟುಕುಗಳ
ಈವುದು ಅಸಾಧ್ಯ. ಹೊರಸೋಗುಗಳ ಗುರುತಿಪ
ಜನ್ಮಜಾತ ದೃಷ್ಟಿ ಭಾರತದ್ದು, ಎನಲ್ಕೆ ನೀವ್
ಸರ್ವ ತ್ಯಾಗಕೆ ಸಿದ್ಧರಿರಿ! ತ್ಯಾಗಮಿಲ್ಲದೆಯೆ
ಆವೊಂದು ಮಹತ್ಕಾರ್ಯವುಂ ಆಗದಾಗದು.
ಪರಿಸ್ಥಿತಿಯನರಿತರಿತರಿತು ಬಾಳಿರ್ಪೆ ಮಮ

ಬಂಧುಗಳೆ."

ಉಪನ್ಯಾಸ ಮಾಲೆಯಂ ಮನವಿಟ್ಟು
ಕಿವಿಗೊಟ್ಟು ಕೇಳ್ದ ಶ್ರೋತೃಗಳ್ ಮಂತ್ರಮುಗ್ಧರ
ಮಾಳ್ಕೆಯಲಿ ಮನಮಣಿದು ಶಿರಮಣಿದು ಗುರುವಿಂಗೆ
ಪೊರಮಟ್ಟರ್ ಸಭೆಯಿಂ. ತರುವಾಯಿ ಸ್ವಾಮಿಜಿ
ಪಿಮ್ಮರಳಿದರ್ ಬಿಡದಿಗೆ. ರಾತ್ರಿಯ ನಿಶ್ಶಬ್ದ
ಶಾಂತಿಯಲಿ ಸಿದ್ಧಾಸನಾರೂಢರಾಗಿ ಕೈಮುಗಿದು
ಪ್ರಾರ್ಥಿಸಿದರ್ ಭಾವಾವೇಶದಲಿ, ಕೊರಳ್ತುಂಬಿ,

"ಯಾದೇವಿ ಸರ್ವಭೂತೇಷು
ಶಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ. ನಮಸ್ತಸ್ಯೈ
ನಮಸ್ತಸ್ಯೈನಮೋನಮಃ ॥"

ನಿಡುವಗಲ ಸುಡುನೇಸರ್ ಜಗಜಗಿಸಿ ಥಳಥಳಿಸಿ
ರಣರಣಿಸುತಿರೆ ನೆತ್ತಿಯುಂ ಸುಟ್ಟುರಿವ ತೆರದಿ,
ಸ್ವೇದ ಬಿಂದುಗಳ್ ವಸರಿದುವು ಮೈತೊಯ್ಯುತ್ತೆ;
ಅಂಟಿದುವು ತೊಟ್ಟಂಥ ಉಡುಗೆತೊಡಿಗೆಗಳ್, ಮೈಗೆ.
ಸ್ವಾಮಿಜಿಯುಂ ಮತ್ತೆ ತಣ್ಣೀರ್ ಮಿಹದಿಂ
ತಣಿಸಿದರ್ ಮೆಯ್ಯಂ. ಕಾಶೀಪುರ ಮಠದ ಗುರುಭಾಯಿ
ವೃಂದಮಂ ಕುರಿತು ತಮ್ಮಯ ಸುದೀರ್ಘಾನುಭವ
ರಾಶಿಯಂ ಮುದ್ದು ಮುದ್ದಿನ ಪತ್ರದಲಿ ಬರೆದು
ಮುಂದೆ ತಮ್ಮ ಅಮೇರಿಕೆಯ ಪ್ರವಾಸಮಂ ತಿಳಿಪಿ
ಇಂದಿನೀ ಸಂದರ್ಭದೊಳ್ ನಿಮ್ಮಗಳ ದರ್ಶನ
ಪಡೆದಪುದು ಅಸಾಧ್ಯಮಾದುದು. ನೀವ್ ನಿಮ್ಮಯ
ಕಾರ್ಯಗತಿಯಂ ಕಟ್ಟೆಚ್ಚರದಿಂ ನಿರ್ವಹಿಪುದು.
ಎಂಬೊಂದು ಸಂದೇಶಮಂ ಕಳಿಪಿದರ್ ಬಹುಲ

ಪ್ರೀತ್ಯಾದರದಿಂ.
ಬಳಿಕ ಸಾರ್ವಜನಿಕ ಸಭೆಯ
ವೇದಿಯೇರಿ ಅಂದಿನ ಉಪನ್ಯಾಸಮಂ ತಮ್ಮ
ಶ್ರೀಕಂಠದೋಜೆಯೊಳ್ ಬಿತ್ತರಿಸಿ ಮರಳಿದರ್
ಬಿಡದಿಗೆ. ಜೊತೆಗೂಡುತ ಬೆಂಬಳಿಯೆ ನಡೆತಂದ
ಆತ್ಮೀಯಮಿತ್ರಬಂಧು ಅಳಸಿಂಗ ಪೆರುಮಾಳ್
ಮತ್ತಿತರ ಶಿಷ್ಯರಂ ನಲ್ಮೆಯಿಂ ಬೀಳ್ಕೊಟ್ಟು
ಜಗಲಿಗೇರಿದರ್. ಅಮೆರಿಕೆಗೆ ಯಾತ್ರೆಯ ದಿನಂ,
ಬಳಿಸಾರುತಿದೆ. ತಮ್ಮಯ ಮೆಚ್ಚಿನ ವರ ಮಾತೃ
ದ್ವಯರಾದ ಶ್ರೀ ಶಾರದಾಮಣಿದೇವಿ ಮೇಣ್
ಭುವನೇಶ್ವರೀದೇವಿ ಇವರ ಬಳಿಗೆಹೋಗಿ ಕಣ್
ತುಂಬ ಕಂಡು ಕೃಪಾಶೀರ್ವಾದಮಂ ಪಡೆದು
ಬರ್ಪ ಇಚ್ಛೆಯಿರುತಿರ್ದೊಡಂಮದಕೆ ಒದವಿತು
ತೀವ್ರ ಸಮಯಾಭಾವ; ಒಡಲ ಪ್ರೇಮ ಕುಂಡಕೆ
ಕಸಿವಿಸಿಯ ಮಂಜು ಮುಸುಕಿರೆ ಆಸೆಯಂ ಬಿಡದೆ
ಗತಿಯಿಲ್ಲವಾಯಿತ್ತು. ಈರ್ವರಿಂಗು ಸುದೀರ್ಘ
ಪತ್ರಮಂ ಬರೆಯೆ ಕುಳಿತರ್; ಒಡಲ ಅಕ್ಕರೆಯು
ಸಿಹಿರಸವಾಗಿ ಭಕ್ತಿಯ ಮಸಿಯಾಗಿ ಹರಿಯಿತ್ತು
ಕಾಗದದ ಮೇಲೆ; ಸಂವೇದನೆಯ ಸಿಹಿಸಂಪದಂ.
ಪ್ರಸ್ತುತ, ಶಿಷ್ಯಜನರ್ ತಮ್ಮ ವಿದೇಶಗಳ
ಯಾತ್ರೆಯ ಸಲುವಾಗಿ ಹಣವಂ ಸಂಗ್ರಹಿಸುತ್ತೆ
ಥೈಲಿಯಂ ತುಂಬುವ ಕಜ್ಜದೊಳಿರ್ದರ್. ಆಗಳ್
ಪರಮ ಶಿಷ್ಯ ಅಳಸಿಂಗ ಪೆರುಮಾಳರಂ ಬರ
ಮಾಡಿ "ನೀಮ್ ಹಣವಂ ಶ್ರೀಮಂತರಿಂ ಮಾತ್ರ
ಪಡೆದೊಡೆ ಬಡಜನರ ಮನವಂ ಅರಿವುದೆಂತೈ?"

ಗುರುವರನ ಕಳಕಳಿಯ ಪ್ರಶ್ನೆಯಂತರಾರ್ಥಂ
ಅರಿದರಿದು ಅಳಸಿಂಗರುಂ,
“ಆಯ್ತಾಯ್ತು ಗುರುವರ್ಯ,
ಅವರಿಂದಲುಂ ವಂತಿಗೆಯಂ ಪಡೆವುದೊಳ್ಳಿತು.
ಅದನಿನ್ನು ಆರಂಭಿಸಿದೊಡಾಯ್ತು. ಬಿಡಿಗಾಸು
ದೊರೆತಡದು ಧನವೇ!”
ಮಾತೃದ್ವಯರೊಳ್ ಆಶೀರ್ವಾದವ ಬೇಡುತೆ
ಬರೆದ ಪತ್ರಮಾಲೆಗಳಿಗೆ ಪ್ರತ್ಯುತ್ತರಮಂ ಬಲ್
ಕಾತರದಲಿ ನಿರೀಕ್ಷಿಸುತಲಿರ್ದ ಎದೆಯ ಬನದ
ಪಕ್ಷಿಗೆ ಆಸೆನಿರಾಸೆಯ ಕಹಿರಸಮುಂಡುಂಡು
ಸಾಕಾಯ್ತು. ಅಂಚೆಮನೆಯ ಪಥದಲಿ ಕಣ್ಣಿಟ್ಟು
ನೋಡುತಿರೆಯಿರೆ ಆವುದಾವುದೋ ಪತ್ರಗಳ್
ಸುರಿಮಳೆಯಪೂರಮಂ ಪಡೆದೊಡಂ ಜನನಿಯರ
ಪತ್ರಗಳೈದುದಿಲ್ಲಂ. ಸ್ವಾಮಿಜಿಯುಂ ಖಿನ್ನ
ಭಾವದಿಂ ಕಾದಿರಲ್, ಕೊನೆಗೊರ್ಮೆ ಜನನಿಯರ
ಪತ್ರಗಳೈದುವು ತೋಷದಲಿ ಆಶೀರ್ವಾದ
ಮುದ್ರೆಗಳ ಸಹಿತ, ಸ್ವಾಮಿಜಿಯ ತನುಮನಗಳ್
ತುಂಬಿ ಆನಂದದಿಂ ಉಲಿದುದು ಎದೆಯಗವಿಯ
ಹಕ್ಕಿ “**ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ
ಗರೀಯಸಿ**”
ಸ್ವಾಮಿಜಿಯುಂ ಬಹುತರದ ಕಾರ್ಯ
ಗತಿಯಲಿ ಮುಳುಗಿದರ್, ಅಮೆರಿಕಾದೇಶದೊಳ್
ನಡೆಯಲಿಹ ಸರ್ವಧರ್ಮ ಸಮ್ಮೇಳನಕೆಂದು
ಭಾರತದ ಸನಾತನ ಧರ್ಮದ ಪ್ರತಿನಿಧಿಯು
ತಾನಾಗಿ ಪೊರಡಲು ಸಕಲತರ ಸಿದ್ಧತೆಯಲಿ

ತೊಡಗಿದರ್. ಆ ದೂರದೂರದಾ ವಿದೇಶದ
ಯಾತ್ರೆಯ ದಿವಸಂ ಬಳಿಸಾರಿ ಬರುತಿರುತಿರಲ್
ತುರ್ತುಸ್ಥಿತಿಯ ಕಾವು ಸುಡುವುದು ಮನಮತಿಯ.
ಹಲಕೆಲವು ಪತ್ರಗಳಿಗೆ ಕಟ್ಟುನಿಟ್ಟಿನ ರಾಜ
ಮುದ್ರೆಯ ಅವಶ್ಯಕತೆಯೊಡಂ ಪರವಾನಗಿಯ
ಅಗತ್ಯಮಿರ್ದುದು. ಇಂತಿಂಥ ವಿಚಾರಾತ್ಮಕ
ಶ್ರದ್ಧೆಯುಂ ಬೆಳೆದತ್ತು ಭುಜಭಾರಮಾದೊಲ್,
ಮತ್ತಮತ್ತಂ ಶಿಷ್ಯರ್ ಶ್ರೋತೃಗಳ್ ಗೆಳೆಯರ್
ಮುತ್ತುವರ್ ಸುತ್ತಮುತ್ತಲ್. ಎಲ್ಲರ ವಿಧವಿಧ
ಬಗೆಯ ಕೋರಿಕೆ ಬೇಡಿಕೆಗಳ ಜಂಜಡ ಬೆಳೆದು
ಕೋಂಟೆಗಟ್ಟುತಲಿರೆ ತಲೆಗುಡುವರ್ ಅತ್ತಲುಂ.
    ಮದರಾಸ್ ನಗರಿಗೈದ ಸುಗಳಿಗೆಯಿಂದಲೋ
ದೈವಕೃಪೆಯಿಂದಲೋ ಗುರುಬ್ರಹ್ಮರ ದಯೆಯೋ
ಗುರುವರೇಣ್ಯನ ಪೂರ್ಣಪರಿಚಯ ಹರಡಿ ಹಬ್ಬಿ
ಮುಂಬೆಳಸು ಹಸನಾಯ್ತು ಜಗಕೆ. ಪ್ರಪ್ರಥಮತಃ
ಗುರುವರ್ಯನ ಆತ್ಮಕಿಡಿಯಂ ಗಂಭೀರಸಿರಿ
ಯೋಜೆಯಂ ಗುರುತಿಸಿದವರ್ ಅಲ್ಲಿನ ಜನರೇ,
ಮೊತ್ತಮೊದಲ್ ಕೃತವಿದ್ಯರಪ್ಪ ಭಕ್ತಜನ
ದೊರಕಿದುದು ಮದರಾಸ್ ನಗರದಲಿಯೆ. ಬಳಿಕಂ
ಅವರ ಸರ್ವತೋಮುಖೀ ಪ್ರತಿಭಾಶಕ್ತಿಯಂ
ವಿಶ್ವತ್ ಪ್ರಶಂಸೆಗೆ ಇಂಬುಗೊಳಿಸಿದುದು ಬಹುಲ
ಉತ್ತಿಷ್ಠ ಮದರಾಸ್ ನಗರಿಯರೆ. ಗುರುವರನ
ಪರದೇಶಯಾತ್ರೆಯ ಸಕಲ ಸಿದ್ಧತೆಗೆ ಮುಂದೈದು
ಸಹಾಯ ಸಹಕಾರದ ಪರಮ ಹಸ್ತ ನೀಡಿದ
ಶಿಷ್ಯೋತ್ತಮರ್ ಮದರಾಸಿಗಳೆ. ಸ್ವಾನುಭೂತಿಯ

ಪ್ರಚಂಡೋತ್ಸಾಹದಿಂ ನೆಗಳ್ದ ಕರ್ತವ್ಯಪ್ರಜ್ಞೆ
ಅರಳ್ಚಿ ದಿವಿನಾದ ಜಾಗ್ರತಾವಸ್ಥೆಗೇರುತೆ
ಜನಸೇವೆಯ ನಿಜ ಪುಟ್ಟುವಳಿಯಾದುದು ಭವ್ಯ
ಮದರಾಸ್ ನಗರದಲಿಯೇ. ತತ್‌ಕ್ಷಣ ಎಚ್ಚೆತ್ತು
ಭಾರತದ ಸರ್ವೋಚ್ಚ ಧೀಮಂತ ಕ್ರಮವತ್
ಸಂಯೋಜಕರು ಮದರಾಸ್ ನಿವಾಸಿಗಳೆ! ಗುರುವು
ವಿದೇಶಗಳಿಂ ಪಿಮ್ಮರಳಿದ ಬಳಿಕ ಗುರುಗಳ್
ನೀಡಿರ್ದ ಅಮರ ಸಂದೇಶಮಂ ಭಾರತದ
ಆದ್ಯಂತ ಮೊತ್ತಮೊದಲ್ ಹಬ್ಬಿ ಹರಡುವಂತೆ
ಸಾರಿದವರ್ ಸುಸಂಪನ್ನ ಮದರಾಸಿಗಳೆ!
ಸನಾತನ ಪ್ರಜ್ಯೋತಿ ಕಿರಣಂಗಳಂ ಭರದಿ
ಸ್ವಾಗತಿಸಿ ರಾಷ್ಟ್ರಭಕ್ತಿಯಂ ವಿಜೃಂಭಿಸಿದ
ಶಿಷ್ಯಗಣವೆನಲ್ ಭಾಗ್ಯವಂತ ಮದರಾಸಿಗಳೆ!
   ಅಂದು, ಪ್ರಾತಃಕಾಲೀನ ಸಭೆಯೊಳ್ ಸ್ವಾಮಿಜಿ
ನುಡಿದರಿಂತು "ಎಲೈ ಅಮೃತ ಪುತ್ರರೇ ಕೇಳಿ!
ನಮ್ಮ ರಾಷ್ಟ್ರೀಯ ದಾರಿದ್ರ್ಯದ ಹುರುಳಿನ ಒಳ
ಪ್ರಾಣ ಪಾತ್ರಮಂ ಗಮನಿಸಿ ನೋಡಿ! ಪಿಂದೊರ್ಮೆ
ರಾಮರಾಜ್ಯಮೆಂಬ ಪೊಗಳ್ಕೆಗೆ ಸತ್ ಪಾತ್ರಮೆ
ತಾನಾದ ರಾಷ್ಟ್ರವಿಂದು ದಾಸ್ಯದ ನರಕದಲಿ
ನರಳುತಿರ್ಪುದು ರಾಷ್ಟ್ರೀಯರ ದುರದೃಷ್ಟ ಗಡ?
ಇನ್ನೆಮ್ಮ ಪ್ರಜೆಗಳ್ ಕಣ್ತೆರೆದು ರಾಷ್ಟ್ರವಂ
ಪ್ರಗತಿಯ ಪಥವಂ ಪಿಡಿಸುವೊಡೆ ಮೊದಲ್ ಪಜ್ಜೆ
ಎನಲ್ ಎಲ್ಲರ್ಗೆ ವಿದ್ಯಾದಾನ. ವಿದ್ಯೆಯುಂ
ಗುಡಿಸಿಲಿನಲಿ ಕೊಂಪೆಯಲಿ ಮನೆಮನೆಗೆ ಹಬ್ಬುವೊಡೆ
ಸ್ತ್ರೀಪುರುಷರ ಬೆನ್ತಟ್ಟರ್ಶೈ! ಅಂದೊಡೆ ಮಾತ್ರಮೆ

ರಾಷ್ಟ್ರಪ್ರಜ್ಞೆ, ಕರ್ತವ್ಯಪ್ರಜ್ಞೆ ಅರಳಿ ತಂತಮ್ಮ
ಆತ್ಮನಿರ್ಣಯಕೆ ಮನಗುಡುವ ಜೀವನ ಜ್ಯೋತಿ
ಬೆಳಗಿ ಎತ್ತಿಹಿಡಿವ ಸುಶಕ್ತಿ ಮೂಡಬೇಕಾದೊಡೆ.
ಈಗಳಿಲ್ಲಿ ಬಡತನದೊಡಂ ಜಡಭರತತ್ತ್ವ
ಬೆರೆತು ಕಂಗಳಿಗೆ ದಟ್ಟತೆರೆ ಹಬ್ಬಿ ಪ್ರಗತಿಯ
ಪಥವೆಲ್ಲ ವಿಷಭರಿತ ಮುಳ್ಳುಗಳ್ ದೇಶಿಗರೆ!
ಕೇಳಿಲ್ಲಿ, ಪಾಶ್ಚಾತ್ಯ ಸೀಮೆಯಲಿ ಎಂದಿನಿಂ
ವಿದ್ಯೆ ಸಂಸ್ಕೃತಿಗಳ್ ಬರೀ ಉಚ್ಚಸ್ತರದೊಳ್
ಉಳಿಯದೆ ಕೆಳಸ್ತರದವರೆಗೆ ಇಳಿಯತೊಡಗಿತೊ,
ಅಂದಿನಿಂದೆ ಅವರ ವಿಶಿಷ್ಟ ನಾಗರಿಕತೆಯು
ಬೆಳೆಬೆಳೆದು ವೈಭವೀಕರಿಸತೊಡಗಿದೆ. ಆ
ದಿವ್ಯ ಶಕ್ತಿ ಸಂಚಯನದಿಂ ಉನ್ನತಿ ಪ್ರಗತಿ
ಪಥವಿಡಿಯಿತು. ತರುವಾಯಿ, ಅಲ್ಲಿನ ಕ್ಷಿಪ್ರತಮ
ನಾಗರಿಕತೆಗುಂ ಹಿಂದೂಸ್ಥಾನ ಈಜಿಪ್ಟ್ ರೋಮ್
ಇತ್ಯಾದಿ ಹಳೆ ನಾಗರಿಕತೆಗುಂ ಬಹುಲತರ
ವ್ಯತ್ಯಾಸ ಕಾಣ್ಬುದು ಸುಲಭದಿ. ಒಂದು ರಾಷ್ಟ್ರದ
ಜನ ಸಮಾಜದೊಳ್ ಎಷ್ಟೆಷ್ಟು ವಿದ್ಯೆಬುದ್ಧಿಯು
ಬೆಳೆವುದೋ ಅನಿತನಿತೆ ರಾಷ್ಟ್ರೀಯ ಪ್ರಗತಿಗೆ
ವೈನಾದ ಬಿತ್ತುಗಳ್. ಇದನೆನ್ನ ಕಣ್ಣೆದುರ್
ಕಾಣುತಿರ್ಪೆನ್. ಭಾರತದ ದುರ್ದೆಸೆಗೆ ಒಂದು
ಹಿಡಿಯಷ್ಟು ಬೆಳ್ಜನಂ ತಮ್ಮ ರಾಜಾಶ್ರಯದ
ವರ್ಚಸ್ಸು ಪ್ರತಿಷ್ಠೆಯ ಬಲದೊಳ್ ಈ ನಾಡಿನ
ಸಕಲ ವ್ಯವಹಾರಕೆ ವಿದ್ಯೆಬುದ್ಧಿಗಳಿಂಗೆ
ನಿರ್ಣರಂ ಗುತ್ತಿಗೆದಾರರೈಸಲೇಂ ಕಾರಣಂ?
ಯೋಚಿಸಿ, ಅದವರ ಚಾಣಾಕ್ಷತೆಯ ಕುತಂತ್ರ.

ಈಗಳೆಮ್ಮ ರಾಷ್ಟ್ರಮಿದು ಮೈಕೊಡವಿ ಚೇತರಿಸಿ
ಕೊಂಬುವೊಡೆ ಸರ್ವೇ ಸಾಮಾನ್ಯರುಂ ರಾಷ್ಟ್ರೀಯ
ಸ್ಥಿತಿಗತಿಯಂ ಸಂಪೂರ್ಣ ಅರ್ಥೈಸುವಂತೆ ಬಲ್
ಸೂಕ್ಷ್ಮಾತಿಸೂಕ್ಷ್ಮತರ ವಿಚಾರವಂತರಾಗದೆ
ಗತಿಯಿಲ್ಲ. ಇದಂ ಅರಿತರಿತು ವಿದ್ಯಾಪ್ರಸಾರ
ಕಾರ್ಯ ಸಾರ್ವತ್ರಿಕಮೆ ಆಗಲಕ್ಕು! ನಮ್ಮೊಳ್
ಹಿಡಿಯಷ್ಟು ಬ್ರಾಹ್ಮಣ ಕುಲಜರ್ ಕೋಟ್ಯಾನುಕೋಟಿ
ಅಬ್ರಾಹ್ಮಣರ ಗೋಣ್ಮುರಿದು ಕೂಡಿಸಿ ತುಳಿತುಳಿದು
ದೀನದಲಿತ ಗತಿಗಿಳಿಸಿದುದಂ ತಿಳಿದು ನೋಡಿ!
ಅವರ 'ಬ್ರಾಹ್ಮಣ್ಯ'ಮಂ ಪೂರ್ಣಮನದಿಂದೊಪ್ಪಿ
ಆರಾಧಿಸಿದ ನಿಮ್ಮಗಳ ಮನೋಗತಿಗೆ ಕನ್ನಡಿ
ಹಿಡಿದುನೋಡಿ! ಈಗಳ್ ನೀವೇ ನಿಮ್ಮವನತಿಗೆ
ಕಾರಣೀಭೂತರೆಂಬುದಂ ಅರ್ಥೈಸಿಕೊಳ್ಳಿ!
"**ಉದ್ಧರೇತ್ ಆತ್ಮಾನಾತ್ಮಾನಂ**" ನಂನಮ್ಮಗಳ
ಉದ್ಧಾರ ನಾವಲ್ಲದಿನ್ನಾರ್ ಗೆಯ್ಯವೇಳ್ಕುಂ?
"**ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ**"
ಇಂತಿಂಥ ಬೋಧನಾ ರಾಶಿ ನಮ್ಮಯ ಪಾಠ,
ಘಾಠಾಂತರಗಳಲ್ಲೆ ಹುಗಿದಿರುವುದನ್ನು ನೀವ್
ಅರಿಯಲಕ್ಕುಂ. ತಿಳಿಯಲಕ್ಕುಂ. ತಿಳಿಯದೊಡೆ ಎಲ್ಲಿಯ
ಸುಜ್ಞಾನ? "**ಜನ್ಮಾನಾಂ ಜಾಯತೇ ಶೂದ್ರಃ
ಸಂಸ್ಕಾರಾತ್ ದ್ವಿಜಃ ಉಚ್ಯತೇ!**" ಎಂಬುದಂ
ಅರ್ಥೈಸಿದೊಡೆ ನಿಮಗಿಲ್ಲ ಪ್ರಜ್ಞಾನ ಕೊರಂ!"
ವಿದೇಶೀ ಯಾತ್ರೆಯ ಸಲುವಾಗಿ ಬಹುತರದಲಿ
ಕಾಯಕಗಳ್ ಮುಗಿಬಗಿಯಾಗುತಲಿರೆ ಫೆಬ್ರುವರಿ
ಮಾಸದುತ್ತರೀ, ಭಾಗದೊಳ್ ಹೈದರಾಬಾದ್

ನವಾಬ ಮಹಾಶಯನಾಸ್ಥಾನದಿಂ ಅತ್ಯಂತ
ಆತುರದ ಕರೆಯೋಲೆ ಭೋಂಕನೈತಂದತ್ತು
ಗುರುದೇವನ ಕರಕಮಲಗಳಿಂಗೆ. ಪೊಳ್ತಿರದ
ಪೊಳ್ತಿನಲಿ ನುರ್ಗಿವಂದ ಕರೆಯೋಲೆಯಂ ಕೈ
ಕೊಂಬುದೆಂತೆಂಬ ಯೋಚನೆ ಮನಕೆ ಮುಳ್ಳಾಗಿ
ಒತ್ತಿತು ನಿಜದಿಂ. ಪೋಗದಿರಲೊಪ್ಪದು ಮನಂ.
ಪೋಗಿಬಹೆನೆನೆ ಪೊಳ್ತಿಲ್ಲವಾಯಿತ್ತು. ವಿಷಯಂ
ಚಿಂತೆಗೆ ಅದುಭುತ ಕಾರಣಮಾಗಿರೆ ನವಾಬ-
ನೆಡೆಯಿಂದ್ಯೆದ ಅಮಾತ್ಯನುಂ ಕರಮುಗಿದು "ಸ್ವಾಮಿ,
ಗುರುಗಳೇ! ನಿಮ್ಮನೆನ್ನ ವಾಹನದೊಳ್ ಆನೇ
ಕರೆದೊಯ್ದು ನವಾಬರ ಭೇಟಿಯನಂತರದೊಳ್
ನಿಮ್ಮನಾನೆ ಪಿಂದಿರುಗಿ ಕರೆತರ್ಪೆನಿಲ್ಲಿಗೆ.
ಚಿಂತಿಸದಿರಿ, ನಾಳಿದ್ದೆ ಪಿಂದಿರುಗಿಪಿದೊಡೇಂ
ಪೆರ್ಚುಪೊಳ್ತು ನಷ್ಟಗೊಳದು ನೀವ್ ಪೊರಡಲೇಂ
ಯೋಚಿಸದಿರಿಮ್."
ಕಟ್ಬೊತ್ತಾಯದ ದನಿಯೊಳ್ ನುಡಿ
ಗಟ್ಟು ಪೊರಬೀಳಲುರೆ ಪ್ರಾತಃಕಾಲೀನ ಸವಿ
ತುಂಬಿದ ತನಿವೊಳ್ತಿನಲಿ ಪೊರವೊಂಟಿತಾ ನವ
ಯುಗದ ದಿವ್ಯ ತಪೋಧನನಮಲ ಸುರಸುಂದರ
ಮೂರ್ತಿ. ಆ ನವಾಬನ ವಾಹನಮೆ ಆನಂದ
ಮೋದದಿಂ ಧನ್ಯತಾನೆಂಬ ಪೆರ್ಮೆಯಲಿ ಪೊರ
ಮಟ್ಟಿತು ಹಿರಿಸದ್ದಿನ ಗಣಿಯಾಗಿ. ಪೊಳ್ತೆಂತು
ಉರುಳ್ದುದೊ ಬಂಡಿಯೆಂತು ಸಾಗಿದುದೊ ಎನಲ್ಕೆ
ಪಯಣ ಸಾಗಿದುಮ ಬೀಸುಗಾಳಿಯಂ ಭೇದಿಸುತೆ.
ಹೈದರಾಬಾದ್ ನಗರಿಯಂ ಬೊಕ್ಕು ಅರಮನೆ

ಮುಂಬಿನ ಮಹಾದ್ವಾರದ ಬಳಿ ನಿಂತಿತು ದೂರ
ದೂರ ಪಯಣಂಬೋದ ವಾಹನಂ. ನವಾಬರ
ಭೇಟಿಯು ಇತರ ಗಣ್ಯರ್ ಮತ್ತಂ ಪಂಡಿತರ್
ತುಂಬಿರ್ದ ರಾಜಸಭೆಯಲಿಯೆ ನಡೆದುದು ಸಕಲ
ಗೌರವಾದರಗಳಿಂ. ಆ ಬಳಿಕಲಾ ಸಂಜೆ
ಸೊಂಪಾಗಿ ಹರಡಿದ ತನಿವೊಳ್ತಿನಲಿ ನಡೆದುದು
ಸಾರ್ವಜನಿಕ ಸಭೆ. ಅಲ್ಲೊಂದು ಎಲ್ಲ ಸಭಿಕರ
ಮನಮೆಚ್ಚುವೊಲ್ ನೀಡಿದರ್ ಪ್ರವಚನಮಂ. ಆ
ತರ್ವಾಯ ರಾತ್ರಿಯ ಬಿಡುವಿಂಗು ಕೊರಮೆನಲ್ಕೆ
ಅನೇಕ ಘನ ವಿದ್ವಾಂಸರ್ ಗಮಿಸಿದರ್ ಗುರುವಿನ
ದರ್ಶನಕೆ. ಬಹುವೊಳ್ತು ನಡೆದುದು ಅಮೂಲ್ಯತಮ
ದರ್ಶನಂ. ಉತ್ತಿಷ್ಠ ಭಾರತದ ಉತ್ಸಾಹಿ
ಜನ ಸಂದಣಿ ಮೆರೆದುದು ನಡುರಾತ್ರಿ ಕಳೆವನ್ನ,
ಅರಮನೆಯ ಬಿಡದಿಯಲಿ. ಮರುದಿನ ಮುಂಜಾನೆ
ಹಿಂಪಯಣ ಹೂಡಿದರ್ ನವಾಬರ ಆದರದ
ಬೀಳ್ಕೊಡಿಗೆಯಂ ಪಡೆದು. ಅದೇ ವಾಹನ ಅದೇ
ದಿವಾನರನೊಳಗೊಂಡು ಸ್ವಾಮಿಜಿಯಂ ಮತ್ತೆ
ಕರೆತಂದುದ್ದೈ ಮದರಾಸ್ ನಗರಿಗೆ. ಗುರುವರನ
ಸುಖಾಗಮನದ ನಿರೀಕ್ಷೆಯಲಿ ಕಾದಿರ್ದುದು ಜನ
ಸಂದೋಹ ಬಿಡದಿಯ ಬಳಿಯಲಿ. ಗುರುಸ್ಥಾನೀಕ
ಕಣ್ಗೆಸೆಯೆ ದೂರದಿಂ ಸಾಗರ ತಟನಿಯ ಸವಿ
ಗಾಳಿಯೆ ಹರಿದು ಬಂದವೊಲಾಯ್ತು ವರಶಿಷ್ಯರ
ಗರುಡದೃಷ್ಟಿಗೆ. ಗುರುವಿಗೊಂದು ಅದ್ದೂರಿಯಲಿ
ಬೀಳ್ಕೊಡಿಗೆಯನೇರ್ವಡಿಸೆ ತರಾತುರಿಯೊಳಿರ್ದ
ಶಿಷ್ಯರುಂ ಗುರುವಂ ಸುಸ್ವಾಗತಿಸಿ ಬೀಳ್ಕೊಂಡು

ಪೊರಮಟ್ಟರ್ ತಂತಮ್ಮ ಮನೆಗಳಿಗೆ.

ಮುಸ್ಸಂಜೆ
ಅಳಿಯಿತು, ನಿಶಿಯು ಸೂತ್ರವಿಡಿಯೆ ತನಿಗಾಳಿಯು
ಜೋಗಳಿಸಿತು ತಣ್ಣಗೆ ಬೀಸಿವೀಸಿ. ನಭದಲಿ
ಕಾಲಮೇಘವಿರ್ಬನಿಯ ಹನಿ ಮಂಜು ಮುಸುಕಿತು;
ಅಲ್ಲಿ ಇಲ್ಲಿ ಅಲ್ಲಲ್ಲಿ, ಮುಗಿಲ್ ಮರಿಗಳ ರಾಶಿ
ಮೆರೆದಿವೆ ಮಧುರ ಭಂಗಿಯಲಿ. ಗುರುವರನೊರ್ಮೆ
ಜಗಲಿಯಂಚಿನಲಿ ಅಡ್ಡಾಡಿ ನಿಶಿಯ ಮೋಹಕ
ಶೈಲಿಯಲಿ ವಿಜೃಂಭಿಸುವ ನಕ್ಷತ್ರಾಳಿಯಂ
ನೋನೋಡಿ ಮನಕೆ ಮುದವೂಡಿಸಿ ಒಳಗೈತರೆ
ಬೆಳ್ಮಡಿಯ ಸೆಜ್ಜೆ ಕರೆದುದು ಕೈವೀಸಿ. ರಾತ್ರಿಯ
ಪ್ರಾರ್ಥನೆ ಸಲಿಸಿದರ್ ಮನತುಂಬಿ ಕೊರಳ್ತುಂಬಿ.
ದೂರದೂರದಲಿ ಬಿತ್ತರದ ನೀಲ ವಾರ್ಧಿಯ
ಪ್ರಚಂಡ ಅಲೆಗಳ ತಡಿಯಮೇಲೆ ಉಜ್ವಲಿಪ
ಹರ್ಷ ತೇಜೋರಾಶಿಯ ಮೂರ್ತಿಯು ನವ್ಯತೆಯ
ಬಿರುಸಿನಿಂ ನಡೆದಿದೆ? ಅದಾರೆಂದರಿಯೆ ಕಣ್
ನೆಟ್ಟು ನೋಡಿದರ್ ಸ್ವಾಮಿಜಿ. ಆ ಮೂರ್ತಿಯುಂ
ಚಣಚಣಂ ಮುಂಬರಿದಿರೆ ಕಣ್‌ದಿಟ್ಟಿಗೆ
ದೂರದೂರವೇ. ನೋಡೆ, ಪಶ್ಚಿಮ ದಿಗ್ ಭಿತ್ತಿಗೆ
ಮೊಗಮಾಡಿ ನಡೆಯುತಿಹರ್ ಗುರುದೇವ! ಅವರದೇ
ಅನನ್ಯ ಶೈಲಿ! ಒರ್ಮೆ ಪಿಂತಿರುಗಿ ಕೈವೀಸಿ
ಕರೆದು ನಡೆದರ್ ಮುಂತೆ ಮುಂತೆ! ಏನವರ
ಪುರುಡು? ಆನಿದೇಂ ಪಿಂದುಳಿದೆ? ತಟ್ಟನೆ ಎಳ್ದು
ಓಡುವೆನೆನೆ ಕತ್ತಲೆ! ಕಡು ಕತ್ತಲೆ! ಎಲ್ಲಿಯು
ಗುರುವಿಲ್ಲ; ಭೋರ್ಗರೆವ ಸಾಗರತಡಿಯಿಲ್ಲ. ಸವಿ

ನಿದ್ದೆಯಲಿ ಕಂಡ ಸವಿಕನಸು! ಪಜ್ಜೆ ತೆಗೆವೆನೆನೆ
ಎಚ್ಚೆತ್ತು ಸ್ವಪ್ನಭಂಗಮಾಯ್ತು. ಇದರಿಂದವರ್
ತನಗೊಂದು ವಿಶೇಷತರದ ಪ್ರೋತ್ಸಾಹ ನೀಡಲ್
ಐದಿಹರ್ ಎಂಬ ಧೈರ್ಯಸ್ಥೈರ್ಯಂ ಮೂಡಿ ಗುರು
ದೇವನ ಶುಭಾಶೀರ್ವಾದ ಇರ್ಪುದದು ಸರ್ವಥಾ
ದಿಟಂ. ಎಂಬೊಂದು ದೃಢ ನಿರ್ಣಯಮಾದತ್ತು
ಮನದೊಳ್. ಪ್ರೋದೀಪ್ತ ಪುರುಡಿನ ತೇಜಿಯಂ
ಏರುತ್ತೇರಿ ಯತಿ ಚಕ್ರೇಶ್ವರಂ ಚಿಂತನಾ
ವೇಶಾವವೇಶದಲಿ ಗರುಡ ರಾಜನ ತೀಕ್ಷ್ಣ
ಅಕ್ಷಿನೋಟದಿಂದೀಕ್ಷಿಸಿದರ್ ಸುಸ್ವಪ್ನದಾ
ಸಾಮ್ರಾಜ್ಯಮಂ. ದೇವಗುರು ಮುನ್ನಡೆಯುತೆನಗೆ
ಪುರಪಿತ್ತುದು ಆಡಂಬರಕಲ್ಲ, ಮಹೋನ್ನತ
ಕಾರ್ಯಗತಿಗೆ. "**ಧೈರ್ಯಂ ಸರ್ವತ್ರ ಸಾಧನಂ**" ಮಂತ್ರ
ಸರ್ವದಾ ಮನದೊಳಿರೆ ಎಲ್ಲಂ ಶುಭಮಪ್ಪುದು.
   ಮೂಡಣಿಂ ಬಡಗಣ್ಗೆ ಮೊಗಮಾಡಿ ನೆಚ್ಚುಂಡು
ಕೆಚ್ಚಿನಿಂ ಕಿಚ್ಚೆದ್ದ ಕೆಚ್ಚೆದೆಯ ಕಲಿಯಾಗಿ
ಜೃಂಭಿಸಿತು ಚಿತ್ತಕಲ್ಪ. ಸ್ವಾಮೀಜಿ ಮತ್ತಂ
ನಿದ್ದೆಗೆಯ್ಯದೆ ಭವಿಷ್ಯದ ವೇದಿಯನೇರಿದರ್.
ವಿದೇಶ ಪಯಣದ ಪುರುಪು ತೀವ್ರಗತಿಯಲಿ ವರ
ಪುರುಡೆತ್ತು ಬೆನ್ನಟ್ಟಿದುದು ಕಲಿತನವೂಡಿ.
   ದೂರದೂರ ಮೂಡಣ ದಿಗ್‌ತಟಾಂತದಾಣದ
ಗಿರಿಸಾಲ್ ಶಿರಸ್ಸಿನ ಮೇಲೆ ಹರಡಿತು ಬೆಳ್ಳನೆ
ಬೆಳಕು ತಿಳಿಯಾಗಿ ಅಲೆಯಲೆಯಾಗಿ. ಚಣಚಣಂ
ಪೆರ್ಚುತಿಹ ಚೆಂಬೆಳಕಿನಧಾರೆ ಹರಿಯಿತು ಇಡಿ
ಭೂವಲಯದಮೇಲೆ. ತನಿಗಾಳಿಯು ತೀಡಿದುದು

ತಣ್ಣಗೆ ತನುಮನಗಳ್ ನಡುಗುವ ತೆರದಿ. ಸಕಲ
ತರದ ಪಕ್ಷಿಗೊರಳಲಿ ತೆಕ್ಕನುಣ್ಮಿತು ಮೃದು
ಮಂದ ಸುರಗಾನ ರಾಗಾರುಣತಾನಮಂ ನೆರೆ
ಸ್ಫುರಿಸಿ; ಎಲ್ಲೆಡೆಯಲಿ ಮೊಳಗಿರಲ್ ಮಂಗಳಮಯ
ಸುಪ್ರಭಾತ ಧರಾತಲದಿ, ಸಗ್ಗಿಗರ ಸಗ್ಗವೆ
ಧರೆಗಿಳಿದವೊಲಾಯ್ತು ಪ್ರಾತಃಕಾಲೀನ ಸೊಬಗಿನ
ಸೌಂದರ್ಯ ಹರಡಿ ಹರಡಿ. ಸ್ವಾಮಿಜಿಯುಂ ಆ
ಎಳೆಬೆಳಕಿನ ಛವಿಯಲಿ ಮಿಂದು ಧ್ಯಾನಗಂಗೆಯ
ಮಡಿಲಲಿ ಮುಳುಗಿದರ್. ಉರುಳಿತು ಪೊಳ್ತು ಸದ್ದಿನ
ಸೊಲ್ಲಿಲ್ಲದೆ. ಚೈತ್ರೋದಯದ ನಗರ ಹೃದಯ
ಸಂಪುಟದಲಿ ಚೈತನ್ಯ ಧುನಿ ಪ್ರವಹಿಸಿದುದು
ಜನಜೀವನದ ಅದ್ಭುತ ಪ್ರಾಣಪಾತ್ರದಲಿ, ಗಿಡು
ಸಸ್ಯಮರ ಬಳ್ಳಿಗಳ ಕಾಂಡ ಕಾಂಡದಲಿ, ಮುದ್ದು
ಮುದ್ದಾದ ಹೂ ಮೊಗ್ಗುಗಳಲಿ ಖಗ ಮೃಗಗಳ
ಜೀವನಾಲವಾಲದಲಿ, ಮೇಣೆಲ್ಲ ನಿಸರ್ಗ
ದೈಶ್ವರ್ಯದಲಿ ಎಲ್ಲೆಲ್ಲಿ ನೋಡಲಲ್ಲಲ್ಲಿಯುಂ
ಪ್ರಾತಃಕಾಲೀನ ಸಮಯ ಸ್ಫೂರ್ತಿಯು ಉಕ್ಕುವುದು
ಜಲಬುಗ್ಗೆಯ ಪಾಂಗಿನಲಿ. ಬೆಳಗಿನ ಸುಸುಂದರ
ಸೊಬಗಿನ ಪ್ರತಿಷ್ಠಾನದಲಿ ನೂರ್ಮಡಿಯ ಪುರುಪು
ಮೆಯ್ಗೊಂಡಿಹ ಸಂದರ್ಶಕರ ಪ್ರವಾಹವದು
ಹರಿದು ಬಂದುದು ಬಿಡದಿಯ ಆವರಣ ಕಿಕ್ಕಿರಿದು
ತುಂಬಿ ನೆರೆವಂತೆ. ಗುರುವರ್ಯರಂ ತಪೋಮಯದ
ಹಂತದಿಂದಿಳಿತಂದು ಪೊರಗೈದರ್. ಜನತೆಯ
ದರ್ಶನಂಬಡೆಯೆ, ಎಲ್ಲರುಂ ಕರ ಜೋಡಿಸುತೆ
ಜಯಜಯಮೆನುತ್ತೆ ಹರ್ಷೋದ್ಗಾರಗೆಯ್ದರಾ

ಚಣದೊಳ್. ಗುರುದೇವಂ ಕೇಳಿಸಿದರಿಂತು "ಎಲೆ,
ದೇಶ ಬಾಂಧವರೇ, ವಿದೇಶಯಾತ್ರೆಯ ತರಾ
ತುರಿಯೊಳ್ ಕೆಲವಾತುಗಳ್ ನುಡಿವೆನೆನ್, ಕೇಳಿರಿ.
ಧರ್ಮಮೋಕ್ಷಗಳ ಕುರಿತು ನುಡಿಯುವೊಡೆ ಅತೀವ
ಅಧ್ಯಯನವೇಳ್ಕುಂ. ಇರಲಿ, ಭಾರತೀಯರಲಿ
ಮುಕ್ತಿಯೆ ಗುರಿ ಧಾರ್ಮಿಕ ಜೀವನದೊಳ್. ವಿದೇಶಿ
ಗಣ್ಯರೊಳ್ ಕರ್ಮವೇ ಅಂತಿಮ ಗುರಿಕಣಾ! ಧರ್ಮ
ಎಂಬ ಪದವ ಮೀಮಾಂಸಕರ ಅರ್ಥದೊಳ್ ನೆರೆ
ಯೋಚಿಸಿರಿ. ಧರ್ಮ ಎಂದೊಡೇಂ? ಇಹಪರದಲಿ
ಸುಖದ ಸಂಪ್ರಾಪ್ತಿಗಾಗಿ ಗೀಳಿಡುವ ಮನುಕುಲ
ಕೋಟಿಗಳ ಕಾಯಕದ ಮೇಲೆ ಪ್ರಸ್ತಾಪಿಸಿಹ
ಧರ್ಮ, ಸುಖದ ಬೆಂಬಿಡಿಯುತೆ ನಡೆಯೆ ಪಗಲಿರುಳ್
ಪ್ರೇರೇಪಿಸಿ ಮುಂದೂಡುವುದು ಮನುಕುಲಜರಂ.
'ಮುಕ್ತಿ' ಎಂದೊಡೇಂ? ಈ ಜೀವನೀಯ ಸುಖವುಂ
ಒಂದು ದಾಸ್ಯವೇ ಸರಿ ಎಂಬೆನ್. ಪರಲೋಕದ
ಸುಖವದು ಇದೇತೆರಂ. ಅದೆಂತೆನಲ್ ಇಹಪರ
ದ್ವಯಗಳ್ ನೈಸರ್ಗಿಕ ನಿಯಮಂಗಳಿಗೇನ್
ಪೆರತಲ್ಲ, ಇಹದ ದಾಸ್ಯವದು ಕಬ್ಬಿಣದ ಸರಪಳಿ.
ಪರದ ದಾಸ್ಯಂ ಮಿಸುನಿಯ ಸರಪಳಿ. ಅಲ್ಲದೆಯೆ
ಸುಖಮೆಂಬುದದು ಎಲ್ಲಿರ್ದೊಡಂ ನೈಸರ್ಗಿಕ
ನಿಯಮಂಗಳಿಗೆ ಒಳಪಡುವ ಕಾರಣಂ ಜೀವಿಗೆ
ಎಂದಾದೊಡಂ ಅಳಿವು ನಿಶ್ಚಿತಂ. ಅವೇಂ ಸದಾ
ಕಾಲ ಉಳಿವನಿತು ಶಾಶ್ವತಮಲ್ಲಮೆಂದೆನಲ್
ಅದರಿಂದೆ ಮುಕ್ತನಾದಪುದೆ ಮನುಜನ ಪ್ರಥಮ
ಮನೋರಥವಾಗಲ್ವೇಳ್ಕುಂ. ಈ ಶರೀರದಾ

ಬಂಧನಂ ದಾಂಟಿ ಮುಂದೆ ಪೋದಪುದೆ
ಲೇಸು ದಾಸ್ಯ ಒಲ್ಲದವಂಗೆ. ಈಯೊಂದುಬಗೆ
ಮೋಕ್ಷಪಥಮಿರ್ಪುದದು ಭಾರತದೊಳ್ ಮಾತ್ರಮೆ!
“ಪಿಂತೆ ಭಾರತದ ಪರಿಪುಣ್ಯತಲದಲಿ ಧರ್ಮ
ಮುಕ್ತಿಗಳೆರಡುಂ ಜೊತೆಗೂಡಿರ್ದುವು ಮಹೋನ್ನತ
ದಿವ್ಯಮೋಕ್ಷಾಕಾಂಕ್ಷಿಗಳಪ್ಪ ಶುಕ ವ್ಯಾಸ ಜನಕ
ವಶಿಷ್ಠರಂತಹ ಮಹಾ ಪ್ರಭೃತಿಗಳ ಜೊತೆಗೇ
ಯುಧಿಷ್ಠಿರ, ಅರ್ಜುನ, ದುರ್ಯೋಧನ ಭೀಷ್ಮ
ಕರ್ಣರವೊಲ್ ಧರ್ಮಾರಾಧಕರ್ ಇರ್ದರ್.
ಮುಂದೆ ಬೌದ್ಧ ಮತಂ ಒಡಮೂಡಿರೆ ಸನಾತನ
ಧರ್ಮವದು ಸಂಪೂರ್ಣ ದುರ್ಲಕ್ಷಿತಮಾಗುತೆ
ಕೇವಲ ಮೋಕ್ಷಮಾರ್ಗಮೇ ಪ್ರಾಬಲ್ಯ
ಹೊಂದಿದತ್ತು. ಕ್ರಮಾನುಕ್ರಮದೊಳ್ ಭಾರತ
ಧಾತ್ರಿ ಶತಶತಮಾನಗಳ ಹೊಡೆತದಲಿ ನಲುಗಿತು.

“ಯದ್ವತ್ರಾ ನಿಜಭಾಲ ಪಟ್ಟಲಿಖಿತಂ ಸ್ತುತಂ ಮಹದ್ವಾಧನಂ ।
ತತ್ರಾಪ್ನೋತಿ ಮರುಸ್ಥಲೇಪಿ ನಿತರಂ ಮೇಕೌತತೋನಾಧಿಕಮ್ ॥
ತದ್ವಿರೇ ಭವವಿತ್ತವಸ್ತು ಕೃಪಣಂ ವೃತ್ತಿಂ ವೃಥಾ ಮಾಕೃಥಃ ।
ಕೋಪೇ ಪಶ್ಯ ಪಯೋನಿಧಾವತಿ ಘಟೋ ಗೃಹ್ಣಾತಿ ತುಲ್ಯಂಜಲಂ॥

ಶ್ಲೋಕಾರ್ಥಮಂ ವಿವರಿಸಿ ನಿರ್ಗಮಿಸಿದರ್ ಗುರು
ದೇವಂ ಕಯ್ಮುಗಿಯುತೆಲ್ಲ ಶ್ರೋತೃಗಳ ಕಡೆಗೆ.
ಇಳಿವೊಳ್ತಿನಲಿ ತಮ್ಮ ಜೊತೆಗೈದ ಅಳಸಿಂಗ
ಪೆರುಮಾಳ್ ಮತ್ತಿತರ ಭಕ್ತಜನ ಪರಿವಾರ
ಬಿಡದಿಯಿಂ ನಿರ್ಗಮಿಸಲಾ ಸ್ಥಲಿ ಬಣಬಣಿಸಿತು
ನಿರ್ಮಾನುಷ ನೀರವ ಶಾಂತಿಯವತರಣದಿಂದೆ.
ಕಾರ್ಯಾಂಗ ಮುಗಿಯಿತ್ತು. ಬಿಳಿಯಮಡಿಬಟ್ಟೆಯಂ

ಹಾಸಿರ್ದ ಸೆಜ್ಜೆಯದು ಸುಖಾಶ್ರಯ ನೀಡುವೊಲ್
ಸಜ್ಜಾದುದು. ಸಿದ್ಧಾಸನದೊಳ್ ಕುಳಿತಲ್ಲಿಯೆ
ಪ್ರಾರ್ಥಿಸಿದರ್ ಮನಮುಟ್ಟಿ, ಕೊರಳ್ದನಿಯ ಹರಿಸಿ,

"ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವ ಭೂತಾಂತರಾತ್ಮ ॥
ಕರ್ಮಾಧ್ಯಕ್ಷಃ ಸರ್ವಭೂತಾಧಿ ವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥"

ಪೊಳ್ತುರುಳಿದುದೈ ಸದ್ದಿಲ್ಲದ ಸುಶಾಂತಿಯಲಿ
ತಾನ್ ಒಂದಾಗಿ ಬೆರೆತು. ಯೋಚಿಸಲ್ ಕಿಂಚಿತ್
ಬಿಡುವಿಲ್ಲದವೊಲ್ ಹಾಡಿದರ್ ಒಂದರ ಮೇಲೆ
ಒಂದಿನ್ನೊಂದು ಸಂಗೀತೆಗಳಂ ತವ ಮನವಂ
ತಣಿಸುವನ್ನ. ಬಳಿಕಲಾ ನಯನಗಳಿಗೆ ನಿದ್ದೆ
ತುಂಬಿ ಬರಲ್ ಕೆಡೆದರ್ ಸೆಜ್ಜೆಯಲಿ ಶಿಶುವಿನೊಲ್.
ಕಳಿದುದು ಬೆಳುದಿಂಗಳ ಮಧುರ ರಾತ್ರಿ. ಅಭಿಜಿನ್
ಮುಹೂರ್ತಂ ದಾಂಟಿ ಇಂದ್ರಮುಹೂರ್ತಮಂ ಕಳಿದು
ಮುಂಬರಿಯುತಿರೆ ಪೂರ್ವದಿಗ್ ತಟಿಯಲಿ ಮಿಂಚಿತು
ಮುಂಬೆಳಕು ಕಾಲೋಚಿತವಾಗಿ. ಉದಯರವಿಯು
ಇಣುಕುತಿರೆ ಅತ್ತಲಿತ್ತಲಿಂ ಎತ್ತೆತ್ತಲಿಂ
ಮುಂದಾಗುವ ಹೆಮ್ಮುಗಿಲ್ ಕೆಮ್ಮುಗಿಲ್ ಬೆಳ್ಮುಗಿಲ್
ಕರುಮ್ಗಿಲ್ ಹೊಮ್ಮುಗಿಲ್ ಕೆನ್ನೀಲ ಮುಗಿಲ್ಗಳ್
ಗುಡಿಗಟ್ಟಿ ಅಡ್ಡಗಟ್ಟಿಯುಂ ಸೂರ್ಯೋದಯದ
ಗಳಿಗೆಯಂ ಹಿಮ್ಮೆಟ್ಟಿಸಲಾರದೆ ಬೆರಗಾಗಿ
ನೋಡುತಿರೆ, ರವಿಮಂಡಲಂ ಮುಗಿಲ್‌ರಾಶಿಯಂ
ತಳ್ಳಿ ಬದಿಗೊತ್ತಿ ಜಡಿಮೆಟ್ಟಿ ಮೇಲೇರಿದುದು
ಚಣಚಣಂ ಗಳಿಗೆಗಳಿಗೆಯಂ ಸುಮಧುರಗೊಳಿಸಿ.

ಬೆಳಗಾಯ್ತು. ನಗರದೇಶಂ ಮೈಕೊಡವಿ ಕಾರ್ಯ
ಚಟುವಟಿಕೆಯೊಳ್ ಮನವಿಟ್ಟು ಗಡಿಬಿಡಿ ಹೂಡಿ
ಎಬ್ಬಿಸಿತು ಗದ್ದಲಂ. ವಾಹನಗಳ್ ಹರಿದುವು.
ಉಗಿಬಂಡಿಯು ಶಿಳ್ಳೆಯನೂದಿತು. ಜಹಜು ದಡದ
ಅಂಚಿಗೈದು ಮೊಳಗಿದುವು ಮಾತಿನ ಮರ್ಮರಂ
ಮರ್ಮರಿಸಿ. ಅಳಸಿಂಗ ಪೆರುಮಾಳ್ ಗಮಿಸಿದರ್
ಮಿತ್ರರೊಡಗೂಡಿ. ಆರ್ಥಿಕಥೈಲಿಯಂ ತುಂಬಿ
ಮುಂದೈದು ಗುರುಸೇವೆಯನು ಸಲಿಸಿದ ವರಭಕ್ತ
ಅಳಸಿಂಗ ಪೆರುಮಾಳ್ ಶಿರಬಾಗಿ ನಮನಮಂ
ಸಲ್ಲಿಸಿ ನುಡಿದರ್ "ಸ್ವಾಮೀಜಿ ಇಂದಿನ ಸಭೆಯು
ತವ ಬಿಡದಿಗೆ ಸಮೀಪದೊಳ್ ಏರ್ಪಡಿಸಿರ್ಪುದು.
ತಮಗದಂ ತಿಳಿಪಲೆಂದಾನೆಯ್ತಂದಿಹೆನ್. ನೀಂ
ಈಗಲೇ ಪೊರಮಡುವಗತ್ಯಮಿಲ್ಲಂ."
"ಆಯ್ತು,
ಬನ್ನಿರೈ ಅಳಸಿಂಗ ಪೆರುಮಾಳರೆ, ಇಂದಿನ
ದಿನದೊಳೆನಗೆ ಪತ್ರಲೇಖನಮಿರ್ಪುದುಕಾಣ್!"
ಸ್ವಾಮೀಜಿಯುಂ ತಮ್ಮ ಕಾರ್ಯಮಂ ಅಸವಸದಿ
ತೀರ್ಚಿ ಅಳಸಿಂಗ ಪೆರುಮಾಳರೊಡಗೂಡಿ ಪೊರ
ಮಟ್ಟರ್ ಸಭಾಮಂಟಪಕೆ. ಹಿರಿಯಂಗಣದೊಳ್
ತಾವಿರದಿನಿತು ತುಂಬಿ ತುಳುಕಿದುದು ಜನರಾಶಿ.
ಗುರುವರ್ಯನುಂ ವೇದಿಕೆಯನೇರಿ, "ಓ ಎನ್ನ
ಅಮೃತ ಪುತ್ರರಿರಾ, ಈ ದೇಶೀಯ ಜಡಭರತ
ನೀತಿಯಂ ತೊಡೆಯುವೊಡೆ ಮುಂದಾಗಿ! ಸಜ್ಜಾಗಿ!
ನಮ್ಮಹಿರಿಯ ಪುರುಷನೆನೆ ಸತ್ಕೀರ್ತಿವೊಡೆದಿಹ
ಭರ್ತೃಹರಿಯುಂ ನುಡಿದ ನೀತಿಯಂ ಅನುಸರಿಸಿ

ನಡೆವುದೇ ಅಂದಿಂದಿಗುಂ ಪ್ರಸ್ತುತಿ, ಕೇಳಿರಿ,

"ನಿಂದಂತು ನೀತಿನಿಪುಣಾ ಯದಿ ವಾಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾಯಥೇಷ್ಟಮಾ ।
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥"

ಈ ಮೂರು ಗುಣಂಗಳ್ ನಿಮ್ಮೊಳಿರ್ದೊಡೆ ಎಂತಹ
ಭಾಗ್ಯಮೋ! ಓರ್ರೋರ್ವರುಂ ಮಹಾ ಪವಾಡಂ
ಎಸಗಬಲ್ಲರಲ್ತೇ? ಅಂತಾದೊಡೆ ನೀವೇಂ
ವೃತ್ತಪತ್ರಿಕೆಗಳಲಿ ಲೇಖಿಪ ಅಗತ್ಯಮಿಲ್ಲಂ.
ಭಾಷಣಂ ಕುಡುವ ಪ್ರಸಂಗಮಿಲ್ಲಂ. ಧ್ಯೇಯ
ಧರ್ಮಗಳ ತೇಜಸ್ ನಿಮ್ಮ ಮುಖದಲಿ ಚಿಮ್ಮುವುದು
ಜಲಬುಗ್ಗೆಯ ಮಾಳ್ಕೆಯಲಿ. ನೀವ್ ಗುಹೆಯೊಳಿರೆ
ಬಂಡೆಗಲ್ಗಳಂ ಶೀಳಿ ಪೊರಗೈವುದು ನಿಮ್ಮ
ಕೀರ್ತಿ ಕಿರಣಂ. ಧೀಮಂತರ ಮನಂ ಬೊಕ್ಕು ಚಿತ್ತ
ಕಲ್ಪಮಂ ಚೋದಿಸಿ ಅದ್ಭುತ ಕಾರ್ಯಂಗೆಯ್ದಪುದು.
ಎಂದೊಡದು ಅನ್ಯಮಲ್ತು. ಅದುವೇ ಪ್ರಚಾರ
ಸಾಮರ್ಥ್ಯ. ಅದುವೇ ಕೆಲಸ ಕಾರ್ಯಗಳ ಚಾತುರ್ಯ.
"ಕೇಳಿಲ್ಲಿ, ಓ ಪ್ರಿಯ ಬಂಧುಗಳೆ, ನೀವೆಲ್ಲ
ಆತ್ಮ ಸಮರ್ಪಣೆಯ ಪ್ರತಿಜ್ಞೆ ಕೈಕೊಳ್ಳಿ! ಈ
ಪ್ರತಿಜ್ಞೆ ಒರ್‌ದಿವಸಕಾಗಿ ಅಲ್ಲಂ. ನಿಮ್ಮ
ಇಡೀ ಜೀವನಾಂತ್ಯದವರೆಗುಂ ನಡೆಸಲಿರ್ಪ
ಮಾಕಾರ್ಯಕಾಗಿ! ಮುನ್ನಡೆವ ಪಥವದು ವಿಷಮಯ
ಮುಳ್ಳಿನ ಕಣಮಾಗಿಹುದು. ಆದೊಡದಂ ಅರಿತು
ನಮ್ಮ ಸಾರಥಿಯೆೃಸೆ ಪಾರ್ಥಸಾರಥಿಯೆಮಗೆ
ಬೆಂಬಲಿಪುವ ನಂಬುಗೆಯಿರಲಿ – ನಿಮ್ಮನಂಬುಗೆ

ಮೇಣ್ ಶ್ರದ್ಧೆಯುಂ ಅವನೊಳಿರುತಿರೆ ಸರ್ವತ್ರಂ
ಆವ ಕೊರತೆಯಿಲ್ಲಂ. ಅವನ ಪರಿಪುಣ್ಯನಾಮಂ
ಉದ್ಘೋಷಿಸುತೆ ಭಾರತದೊಳ್ ಯುಗಯುಗಗಳಿಂ
ಹೇರಿದ ದುರದೃಷ್ಟಕರ ದುಃಖ ದೈನ್ಯಗಳ
ಹಿರಿ ಬೆಟ್ಟಕ್ಕೆ ಕಿಚ್ಚು ಹಚ್ಚಿರಿ, ಸುಟ್ಟುರಿದುರಿದು
ನಾಶವಾಗಲಿ ಅದು.”
ಯತೀಶ್ವರರ್ ಮುನ್ನಿನಾ
ದಿನಗಳಂ ನೆನಪಿಸಿಕೊಳ್ಳುತ್ತೆ ಮತ್ತೆಂದರ್ “ಓ,
ದೇಶಬಾಂಧವರೇ ಕೇಳಿ! ಮಿನ್ನೆ ಆಂ ಕೇಳರಿದ
ಜಪಾನೀಯರ ವಿಷಯಮಿದು. ಅಲ್ಲಿನೆಳೆತನದ
ರಮಣಿಯರ್ಗೆ ಬೊಂಬೆಗಳಲಿ ಅನನ್ಯ ಪ್ರೇಮದ
ಮನೋಭಾವಮಿರುತಿರೆ ಹೃದಯದ ಪರಮೋಚ್ಚ
ಪ್ರೇಮಾಮೃತವಂ ಬಸಿದು ಪಾಲಿಸಿ ಪೋಷಿಸಿದೊಡೆ
ಆ ಬೊಂಬೆಗಳ್ ಜೀವತಳೆದು ತಮ್ಮೊಡಂ ನಲಿ
ನಲಿಯುತ ಮುದದಿಂ ಬಾಳ್ವುದೆಂಬುವ ನಂಬುಗೆಯು
ಇರ್ಪುದೆಂಬರ್. ಅಂತೊಂದು ಘನವಾದ ವಿಚಾರ
ವಾಹಿಯಲಿ ಈಸುವುದೆನೆ ಮಮ ಹೃದಯಬನದ
ಪಕ್ಷಿ ಆನಂದ ರಸಮುಂಡು ನಲಿವುದು. ದೀನ
ದರಿದ್ರರೆಡೆಗೆ ಆಬಗೆಯ ಪ್ರೀತಿ ವಿಶ್ವಾಸದ
ಗಣಿಯಿರ್ಕುಮೆನೆ ಅನ್ಯಮಲ್ತು. ಕೇಳಿರೈ ಎಲೆ
ಭ್ರಾತೃಗಳೆ, ಪರಮೇಶ್ವರನವಕೃಪೆಗೆ ಪಾತ್ರರಾಗಿ
ಹತಭಾಗ್ಯರಾಗಿ ವಿವೇಕಶೂನ್ಯರಾಗಿ ಅಧೋ
ಗತಿಗಿಳಿದು ಹಸಿದು ಕಂಗಾಲಾಗಿ ಪರಸ್ಪರ
ಕಚ್ಚಾಟ ಮಾತ್ಸರ್ಯಗಳಿಗೀಡಾಗಿ ನರಳುವ
ಈ ನಾಡಿನ ನತದೃಷ್ಟ ಜನತೆಯ ನೋಡಿದೊಡೆ,

ಜಪಾನಿನ ಅಂಗನೆಯರ್ ಬೊಂಬೆಗಳಿಗೆ ತೋರ್ವ
ಹೃದಯ ಕರಂಡದಮೃತಮಯ ಕಾರುಣ್ಯ
ದ್ರವ್ಯಮಂ ಬಲ್ಮೆಯಿಂ ಬಸಿದು ಪ್ರೀತಿಸಿದೊಡೆಮ್ಮ
ಭರತವರ್ಷದ ಪ್ರಾಣಪಕ್ಷಿ ಎಚ್ಚರಗೊಂಬುದು
ದಿಟಂ. ರಾಷ್ಟ್ರೀಯ ಶ್ರೀಮಂತ ಸ್ತ್ರೀಪುರುಷರ
ವೈಭೋಗವಿಲಾಸ ಜೀವನದಳೊಂದು ಪಾಲು
ದಲಿತರಿಗೀಯೆ ಒಳಗಣ್ ತೆರೆಸಿದೊಡೆ ಕಾಂಬುದು
ರಾಷ್ಟ್ರೀಯ ಸ್ಥಿತಿಗತಿ. "**ದರಿದ್ರ ದೇವೋ ಭವ**"
ಎಂಬ ಮಂತ್ರ ಎಲ್ಲರ ಮನಚಿತ್ತಗಳಂ ಬಲ್
ನೇಮದಿಂ ಆವರಿಸಿದೊಡೆ ಎನಿತೆನಿತು ಸೇವೆ
ಸಲ್ವುದು ದಲಿತ ದರಿದ್ರ ಜನ ಕೋಟಿಗೆ? ಇದುಂ
ಚಿಂತನೀಯ ವಿಚಾರವಾಹಿಯೆಂಬುದು ಸರ್ವ
ಕಾಲಿಕಮಾದ ಜನಗಣಮಂತ್ರಮಾದೊಡೆ ರಾಷ್ಟ್ರ
ದಾರಿದ್ರ್ಯರೇಖೆಯಂ ದಾಂಟುವುದು ಚಿರಸತ್ಯ.
ಸನಾತನ ಧರ್ಮವುಂ ಬೆಳಗಿತೊಳಗಿ ಬಾಳ್ವೊಡೆ
ಗುಡಿಸಲುಗಳ ದೀಪದ ಕುಡಿಯಂ ಎತ್ತರಿಪುದೆ
ದೃಢ ತಳ ಪಾಯ ಧರ್ಮದೇವತೆಯ ಭವನಕೆ.
ಎನಲಿದರ ಅಂತರಾಳಮಂ ಅರಿದು ತಿಳಿಯಿರೈ.
"ನಮ್ಮ ಪಂಡಿತೋತ್ತಮರ ದೃಷ್ಟಿಯಲಿ ಹಿಂದೂ
ಸಂನ್ಯಾಸಿಯುಂ ಮಹಾ ಕಾಳ ಜಲಧಿಯ ದಾಂಟಿ
ಪೋಗಿಬರ್ಪುದದು ಅಪರಾಧ – ಶಾಸ್ತ್ರನಿಷಿದ್ಧ
ಎಂದೊಡಾಂ ಏಂವೇಳ್ವೆನ್? ಇದಕೇನಾದೊಡಂ
ಅರ್ಥಮಿಹುದೆ? ಇಂತಪ್ಪ ಕುವಿಚಾರಿಕರ ಅತಿ
ಮಡಿವಂತಿಕೆಯಿಂ ರಾಷ್ಟ್ರ ತಮೋಗುಣದಜ್ಞಾನ
ಕಾಂಡದಲಿ ಮುಳುಗುತಿರ್ಪುದಂ ನೀವರಿಯಿರಾ?

ಆತ್ಯಂತಿಕ ಸೈತಾನೀ ಜನರ್ ತಮ್ಮ ಕ್ರೌರ್ಯ
ಗುಣವ ಧರ್ಮದೊಂದಂಗವೆನೆ ತೋರ್ಪಡಿಸಲ್ಕೆ
ಕರ್ಮಠತೆಯ ಸೋಗು ತೊಡುವರ್. ಇಂತಿಂತಿಂತ
ಅವಿಚಾರ ಅನಾಚಾರಗಳಿಗೆ ಎಣೆಯೆ ಇಲ್ಲ
ಎಂಬೊಲ್ ನಡೆದಿದೆ ದುರ್ವ್ಯವಹಾರ. ಮತ್ತದಂ
ಪ್ರಜ್ಞಾನ ಎಂಬವೊಲ್ ಮೆಲಕುತ್ತೆ ವೈಭವೀ–
ಕರಿಪುದಂ ನೋಡಿ ನಿಜದಿಂ ಮನಮರಗುವೆನ್"
ಉಪನ್ಯಾಸಮಂ ತೀರ್ಚಿ ಸ್ವಾಮೀಜಿಯುಂ ಕೆಲ
ಮಿತ್ರಗಣ್ಯರೊಡಗೂಡಿ ಬಿಡದಿಗೈದಾಗಳೆ
ಖೇತ್ರಿ ರಾಜ್ಯದಿಂದೈದ ಕರ್ಮ ಸಚಿವನಾದಾ
ಜಗನ್ಮೋಹನಲಾಲ್‌ಜಿಯುಂ ಬಳಿಗೈದು ಶಿರ
ಬಾಗಿ ಕೈ ಮುಗಿದು ನುಡಿದನೆಂತೆನೆ "ಸ್ವಾಮೀಜಿ,
ಈಗಳೊರ್ ತುರ್ತುಕಾರ್ಯಯೋಜನೆಯೊಳಾನೈದೆನ್
ತಮ್ಮೆಡೆಗೆ. ತಾವದನೊಪ್ಪಿ ಖೇತ್ರಿಗೆ ಬರವೇಳ್ಕುಂ,
ಎಂದೆಂದು ಬೇಡಿಕೊಂಬೆನೈ ಗುರುವರ. ತಾವ್
ಬೇಸರಿಸದೆ ಮನ್ನಿಸಿಂ. ಮನ್ನಿಸಿಂ. ಪ್ರಭುವೇ!
ಇಂದಿನೀ ಪೊಳ್ತಿರದ ಪೊಳ್ತಿನೊಳ್ ಆನೆಯ್ದುದು
ನಿಮಗತಿ ಕಿನಿಸಿಗೆಯೇ ಸರಿ. ಆದರದಕಾಂ
ದಿವ್ಯ ಪರಿಹಾರವಂ ಕಂಡುಕೊಂಡೆಯ್ದಿಹೆನ್
ಸ್ವಾಮೀಜಿ. ದಯಮಾಡಿ ಮನ್ನಿಸಿಂ." ಸಚಿವನುಂ
ಬೇಡಿಕೆಯ ಮುಂದಿರಿಸಿ ಗುರುವಿನ ಮನೋಗತಿಯ
ಅರಿತುಕೊಳ್ಳೆ ಮುಖಾರವಿಂದವಂ ನೋಡಿದನ್
ಗಮನವಿರಿಸಿ.
"ಇದೇನೈ ಈಗಳಿಂತು ಬೇಡುತಿಹೆ?
ವಿದೇಶ ಪಯಣ ಹೂಡುವ ಈ ತುರ್ತುಸಮಯದಿ

ಖೇತ್ರಿಗೆಂತು ಪಯಣಂ? ಪೋಗಿ ಬರಲೆಲ್ಲಿದೆಯ್ಯೆ
ಪೊಳ್ತು? ಎಂತೈಯ್ವನ್ ಪೇಳ್?"
"ಮನ್ನಿಸಿಂ. ಆನದಂ
ಯೋಚಿಯೇ ಬಂದಿಹೆನ್. ಮಹಾರಾಜರಿದನೆಲ್ಲ
ಅರಿತು ತಕ್ಕಿನ ಪರಿಹಾರಕ್ರಮವನನುಸರಿಸಿ
ಎನ್ನನಿಲ್ಲಿಗೆ ಕಳಿಪಿಹರ್, ಕೇಳಿ! ಮಹರಾಜರ
ನಿರೂಪಮ್ ಇಂತಿಹುದು, ಅಂದವರ್ ನಿಮ್ಮನುಂ
ಪುತ್ರ ಸಂತಾನಕಾಗಿ ಬೇಡಿಕೆ ಸಲಿಸಿದುದು
ಸರಿಯಷ್ಟೆ? ಅಂತೆಯೇ ತಮ್ಮಯ ಶುಭಹಾರೈಕೆ
ಫಲಿಸಿ ಮಹರಾಜರಿಂಗೆ ಪುತ್ರನ ಜನನದಿಂ
ಮಹಾರಾಜರ್ ಮಾತ್ರವಲ್ಲದೆಯೆ ರಾಜ್ಯಕ್ಕೆ
ರಾಜ್ಯವೇ ತೋಷಾಂಬುಧಿಯಲಿ ಮುಳುಗಿ ತೇಲುತೆ
ಸೊಗದಿಂದಿಹುದು. ಇಂಥ ಸಂದರ್ಭಮೊದಗಿರಲ್
ತಾವೊಂದು ದಿನದ ಗಳಿಗೆಗಾದೊಡಂ ಬರ್ಪುದೆ
ಸರಿಯೆಂಬೆನ್. ನಿಮ್ಮ ಆ ಮುಂದಿನ ಪಯಣದ
ತುತ್ತತುದಿಯವರೆಗಾನಿರ್ದು ನಿಮ್ಮೊಡಗೂಡಿ
ಎಲ್ಲವಗೆಯ ಅಗತ್ಯಮಂ ಪೂರೈಸುವುದೆನ್ನ
ಕರ್ತವ್ಯ. ಸ್ವಾಮೀಜಿ, ದಯಮಾಡಿ ಒಪ್ಪಿರೈ."
ಸ್ವಾಮೀಜಿ ತಮ್ಮೊಳ್ ನಸುಯೋಚಿಸುತಿರಲಾಗ
ಮತ್ತವನ್ ನುಡಿಸಿದಂ "ಸ್ವಾಮೀಜಿ, ನೀಮಿದಂ
ಕುರಿತು ಚಿಂತಿಪ ಕತಮೆ ಇಲ್ಲಂ. ನಿಮ್ಮನಾನ್
ಮುಂಬೈ ಬಂದರಿನೊಳ್ ಜಹಜನೇರಿಸುವೆನೆಂಬೆ.
ಇನ್ನೇಕೆ ಚಿಂತೆ; ದಯಮಾಡಿ ಈಗಳೆ ಪೊರಟೊಡೆ
ಒಳ್ಳಿತು."
ಮದರಾಶಿಗಳಿಗದು ಅಹಿತಂ. ಅವರ್

ಬೀಳ್ಕೊಡಿಗೆಯ ಸಮಾರಂಭವಂ ಏರ್ಪಡಿಪ
ಸಂಭ್ರಮದೊಳಿರಲ್ ಮೊಗ ಬಾಡಿದುದು ಅಳಸಿಂಗ
ಪೆರುಮಾಳ್ ಮೇಣೆಲ್ಲ ಶಿಷ್ಯವರ್ಗಕೆ. ಆ ಕರ್ಮ
ಸಚಿವಂ ಪಿಡಿದ ಒತ್ತಂಕೆಯಿಂ ಬಿಡದಿರೆ ಎಲ್ಲ
ಶಿಷ್ಯರುಂ ಒಪ್ಪಿ ಸ್ವಾಮಿಜಿಗೆ ನಮ್ರತೆಯಿಂ
ವಿದಾಯಂ ನೀಡಿದರ್ ಖಿನ್ನಮನದಿಂ. ಆಗಳ್,
  ಸ್ವಾಮಿಜಿಯುಂ ನುಡಿದರಿಂತು "ಹೇ ಭ್ರಾತೃಗಳೇ!
ಇಂದಾನ್ ನಿಮ್ಮೆಲ್ಲರ ಆಕಾಂಕ್ಷೆಯಂ ಬಲು
ಖಿನ್ನಮನದಿಂದೆ ಪಿಂತಿರ್ಕಿ ಪೊರಡುವ ಅತೀ
ಆತುರದ ಅನಿವಾರ್ಯ ಪ್ರಸಂಗದೊಳ್ ಸಿಲ್ಕಿ
ಪೊರಡುವೆನ್. ಇಂ ಪಿಂಮರಳಿ ಬಂದ ಬಳಿಕಮೆ
ನಮ್ಮಗಳ ಪರಸ್ಪರ ಭೇಟಿ. ವೇದ ಶಾಸ್ತ್ರವು
ಎಲ್ಲ ಮನುಕುಲಕೋಟಿಯಂ ವಿದ್ಯಾಪಾರಂಗತ–
ರಾಗಲ್ಕೆ ಬೋಧಿಸಿದ ಉದ್ಗ್ರಂಥಮೆಂದೆನಲ್
ಸರಿಯಕ್ಕುಂ. ಅದಂ ಜನರಾಶಿಯ ಅರಿವಳಿಕೆಗೆ
ಬಾರದೊಲ್ ಪಿಡಿದಿಟ್ಟ ಪರಿಯೆ ನಮ್ಮವನತಿಗೆ
ಕಾರಣಂ, "**ಈಶಾವಾಸ್ಯಮಿದಂ ಸರ್ವಂ**
ಯತ್‌ಕಿಂಚ ಜಗತ್ಯಾಂ ಜಗತ್" ಸಕಲತರ
ವಿದ್ಯೆಯದು ಸಾರ್ವಜನಿಕವಾಗಿ ಹರಡಿ ಹಬ್ಬಿ
ಜನಜಾಗ್ರತಗೊಳ್ಳದೆ ರಾಷ್ಟ್ರದೇಳ್ಗೆಯಿಲ್ಲಂ.
ಜ್ಞಾನದಾನದೊಳ್ ಲಿಂಗ ಪರಿಭೇದದ ನೆರಳದು
ಚಾಚದಿರಲಿ. ನಿಮ್ಮಯ ಸೋದರಿ ವರ್ಗಕ್ಕೆ
ಜ್ಞಾನದಾಚೆಂಬೆಳಕು ನೀಡಿ ಗಾರ್ಗಿ ಮೈತ್ರೇಯಿ
ಸಾಲಿಗೇರಿಸಿ. ದೇಶದ ಗತಿಯಂ ಗಗನ ಮುಖ
ಗೊಳಿಪುದೇ ನಿಮ್ಮಗಳ ಪ್ರಪ್ರಥಮ ಕರ್ತವ್ಯ.

"ಯೋ ಬ್ರಾಹ್ಮಣಂ ವಿದಧಾತಿ ಪೂರ್ವ
ಯೋವೈ ವೇದಾಂಶ ಪ್ರಹಿಣೋತಿ ತಸ್ಮೈ ।
ತಂ ಹ ದೇವಮಾತ್ಮ ಬುದ್ಧಿ ಪ್ರಕಾಶಂ
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥"

ಭಕ್ತಿ ಭಾವದಿಂದುಣ್ಮಿದ ದನಿಯದು ಎಲ್ಲರ
ಮನಮನಂ ಮುಟ್ಟಿ ಮಿಡಿಸಿತು ಕಾರುಣ್ಯದ್ರವ್ಯ
ಕರಗಿ ನೀರಾಗಿ ದ್ರವೀಭೂತಗೊಳಿಪಂತೆ.
ಮದರಾಸ್ ನಗರಿಯಂ ಮೇಣಧಿಕ ಸದ್‌ಭಕ್ತ
ಜನ ಸಮುದಯದ ಮಹತ್ವಾಕಾಂಕ್ಷೆಯಂ ತಾಂ
ಕೈವಿಟ್ಟು ಕ್ಷಮೆಯಾಚಿಸಿ ಅಂದೆ ಅಸವಸದಿ
ಪೊರಮಟ್ಟರ್ ಜಗನ್ಮೋಹನಲಾಲ್‌ಜಿಯೊಡಂ.
ಪಯಣಂ ಸಾಗಿದುದಯ್ ಸರಾಗದಲಿ ಖೇತ್ರೀ
ರಾಜ್ಯಕೆ. ಎಳೆಬೆಳುದಿಂಗಳ ಸುಂದರ ರಾತ್ರಿಯು
ಅರಮನೆಯ ಬಿಡದಿಯೊಳ್ ಕಳಿದು ಮುಂಬೆಳಗಿನಲಿ
ಎಳ್ದು ಅಣಿಯಾದರಂದಿನ ಮಾಸಭೆಗೆ. ಅಂದು,
ರಾಜರಾ ಅಧ್ಯಕ್ಷತೆಯಲಿ ನಡೆದ ಮಹೋತ್ಸವದೊಳ್ ಭಾಗ
ವಹಿಸಿದ ಗುರುದೇವಂ ಸಭಿಕರಂ ಕುರಿತು, "ಎಲೆ
ಅಮೃತ ಪುತ್ರರಿರಾ, ಪ್ರಪ್ರಥಮದೊಳ್ ನಿಮ್ಮಯ
'ಕರ್ತವ್ಯ' ಎಂಬುದೇನೆಂಬುದಂ ಅರ್ಥೈಸಲ್
ಆಪನಿತು ಪರ್ಯಾಲೋಚಿಸಿನೋಡಿ. ರಾಷ್ಟ್ರೀಯ
ಬಡಸ್ಥಿತಿಗೆ ಹೇಳಿ ಮಾಡಿಸಿದೊಲ್ ಪ್ರಜೆಗಳ
ನಡುನಡುವೆ ಇಹ ಅಂತರ ಅಜ್ಞಾನ ನಿರಕ್ಷರ
ಕುಕ್ಷಿತನ ಇಂಥಿಂಥ ಅವಜ್ಞೆ ಅವಿಚಾರದ
ಜೀವನಂ ಬಾಳ್ದು ಬೆಳೆದು ಭಾರತ ಬಡವಾಯ್ತು.
ಮುನ್ನಂ ರಾಮಾನುಜ ಚೈತನ್ಯ ಕಬೀರರ್

ಕೀಳ್ಜನರ ವರ್ಗವಂ ಮೇಲೆತ್ತೆ ಗೆಯ್ದಿಲ್ಲ
ಪ್ರಯತ್ನಂ ಸಾರ್ಥಕಮಾದುದು ಆ ದೈವೀ ಪುರುಷ
ಮಹನೀಯರ ಜೀವಿತದೊಳ್ ಮಾತ್ರಮೆ. ಅನಂತರ
ಅಲ್ಲಿಗೇ ಮುಗಿಬಗಿಯಾಯ್ತು. ಅದಕೇಂ ಕಾರಣಂ
ಯೋಚಿಸಿ ತಿಳಿಯಿರಿ. ಅಜ್ಞಾನ ಅವಿದ್ಯೆ ಇವಲ್ತೆ
ಕಾರಣಂ? ನಮ್ಮವರ್ ಅರಿಯಬಲ್ಲರಾಗಿರ್ದೊಡೆ
ಅಂದಿನಿಂದೇ ಪ್ರಗತಿ ಪಥದೊಳ್ ಜೃಂಭಿಸುತೆ
ರಾಷ್ಟ್ರೀಯ ನಾವೆಯಾ ಚುಕ್ಕಾಣಿಯಂ ಪಿಡಿದು
ಸುಭದ್ರಗತಿಯೊಳ್ ನಡೆಸುತಲಿರ್ದರ್, ತಿಳಿಯಿರಿ.
ಅಂದಿಂದಿಗುಂ ಸಕ್ಕದ ಸಕ್ಕರೆಯ ಸವಿಯಲ್
ಭಾಷಾಜ್ಞಾನಕಾಗಿ ಅಪಾರ ಅಧ್ಯಯನಂಗೈದು,
ಅಕ್ಕರಕ್ಕರಗಳಂ ಸೋಸಿಹೆನಾದೊಡೆನಗೆ
ಪ್ರತಿಯೊಂದು ಗ್ರಂಥವು ಭಾಷಾದೃಷ್ಟಿಯಿಂದಲಿ
ಪೊಸತೆನಿಪೊಂದು ಭಿನ್ನ ಭಿನ್ನಮೆನಲನ್ಯಮಲ್ತು.
ಅಂತಪ್ಪ ಅಮೂಲ್ಯತರ ಬಿಜ್ಜೆಗಳ್ ಮನೋಗತ
ಗೆಯ್ದಲ್ಲದೆ ಎಲ್ಲಿಯ ಸುಜ್ಞಾನ? ತಿಳಿಯಿರೈ.
ಅವಿದ್ಯೆಯೆ ಮೂಲಕಣಾ ಭಾರತದ ಬಡತನಕೆ!"
ಸ್ವಾಮೀಜಿಯುಂ ರಾಜಕುಮಾರನ ಅನ್ನಪ್ರಾ-
ಸನ ಮಹೋತ್ಸವದೊಳ್ ಭಾಗವಹಿಸಿ ಪೊರಟರ್
ಅಲ್ಲಿಂದೆ; ಜಗನ್ಮೋಹನಲಾಲಜಿಯು ಜೊತೆಗೆ
ಬೆಂಬಿಡಿದು ಬರಲುರೆ ಮುಂಬಯಿಯ ಬಂದರಿಂಗೆ,
ಪಯಣಂ ಸುಗಮವಾಯ್ತು ತ್ರಾಸಮೆನಿಸದ ತೆರದಿ.
ಕರ್ಮಸಚಿವಂ ತೆಕ್ಕನೆ ಅಂಗಡಿ ಸಾಲಿಗೆಯ್ದು
ಗುರುವರ್ಯನ ಸಲುವಾಗಿ ಅಮೂಲ್ಯತರದ ಬಲು
ಬೆಲೆಯ ಕೌಶೇಯ ವಸನಗಳಂ ಕೊಂಡುಕೊಳಲ್,

ಸ್ವಾಮೀಜಿಯುಂ ಮುನಿದು ಕನಲ್ದು, "ಇದೇನೈ ಈ
ವ್ಯಾಪಾರ? ಸಂನ್ಯಾಸಿಗಳಿಂಗಿದು ತಕ್ಕುದೇಂ?"
"ಇರ್ಕೆ ಗುರುವರ್ಯ! ದೇಶೀಯ ರೀತಿನೀತಿಯು
ಏನಿರ್ದೊಡಂ ದೂರದೇಶದೊಳ್ ಗಣ್ಯರೆದುರ್
ಇಂತಿರ್ಪುದು ಸರಿಯಲ್ತು. ರಾಜಗುರುವಾಗಿಹ
ನೀವ್ ರಾಜೋಚಿತ ಗೌರವಕೊಪ್ಪುವೊಲ್ ಇರ್ಕೆ
ಸರಿಯಪ್ಪುದು."
ಜಗನ್ಮೋಹನಲಾಲಜಿಯುಂ ಬಲು
ಮೆಹನತ್ತಿನ ಉಡಿಗೆ ತೊಡಿಗೆಗಳಂ ಕೊಂಡು ತಾಂ
ಪೂರೈಸಿದನ್ ವ್ಯಾಪಾರಮಂ.
ಸಾವಿರದೆಂಟ-
ನೂರತೊಂಬತ್ತಮೂರನೆಯ ಸಂವತ್ಸರದ
ಮೇ ತಿಂಗಳ ಮೂವತ್ತೊಂದನೆಯ ದಿನಮಾನ!
ಜಗತ್ತಿನ ಧಾರ್ಮಿಕ ಇತಿಹಾಸದೊಳ್ ಎಂದಿಗುಂ
ಚಿರಸ್ಮರಣೀಯಮಾದ ದಿನಮಾನ! ಭಾರತದ
ಸನಾತನ ಧರ್ಮಜ್ಯೋತಿರ್ಧಾರಿ ಯುವ ಪ್ರಭೃತಿ
ಪಾಶ್ಚಾತ್ಯ ಸಾಮ್ರಾಜ್ಯ ಶಾಹಿಯೊಳ್ ಸದ್ಧರ್ಮದ
ಚೆಂಬೆಳಕು ಬೀರಲುರೆ ಪೊರವಂಟ ಪರಿಪುಣ್ಯ
ದಿನಮಾನ!
ತೀರದಲಿ ಜಹಜುಅಣಿಯಾಗಿ ನಿಂದತ್ತು ಬಹು
ದೂರದೂರದ ಪಶ್ಚಿಮಾಭಿಮುಖೀ ವಿದೇಶದ
ಸಂಯಾತ್ರೆಗೆ. ಪಯಣಿಗರ ಗಜಿಬಿಜಿ ನಡೆವಂತೆ
ನೆರೆದುದು ಜನರಾಶಿ. ಪೊರಡುವ ಸಮಯಂ ಬಳಿಗೆ
ಸಾರಿಬರೆ ಕಕ್ಕಸ ದನಿಯಲಿ ಶಿಳ್ಳೆಹಾಕಿತು
ಜಹಜು. ಸ್ವಾಮೀಜಿಯ ಒಡಲ್ ಜನ್ಮಭೂಮಿಯಂ,

ಆತ್ಮೀಯ ಶಿಷ್ಯಗಣಮಂ ಅಗಲಿ ಹೋಹ ಕಳ
ಕಳಿಯಲಿ ನಸು ನಲುಗಿರೆ ತಮ್ಮೊಳ್ಳದನುಂ ಹುಗಿದು
ಕರಮುಗಿದು ವಿದಾಯಂ ಬೇಳ್ದರ್ ಬಲುಮೆಯಿಂ. ಓ!
ಅದೆಂತೈದರೊ ಎನಲ್ಕೆ ಅಸವಸದೊಳ್ ಜುಮ್ಮನೆ
ಅಳಸಿಂಗ ಪೆರುಮಾಳರ್ ಜನಜಂಗುಳಿಯನುಂ
ಭೇದಿಸುವೊಲ್ ನುರ್ಗುತಲೈದರ್ ಕುಸುಮಾಲೆಯ
ಸಹಿತ. ಅಳಸಿಂಗರ್ ಪೂಮಾಲೆಯಂ ಗುರುಕೊರಳ್
ತುಂಬಿ ಕಾಲ್ವಿಡಿದು ಭಕ್ತಿಯಿಂ ನಮಿಸಿ ಕಂಬನಿ
ಸೂಸಿದರ್ ಕರ್ಮಸಚಿವಂ ಕುಸುಮ ಗುಚ್ಚವನಿತ್ತು
ನಮಿಸಿದಂ ಕಾಲ್ವಿಡಿದು. ಮನಮನದಲಿ ಸುಖದುಃಖ
ಮೂಡಿ ಹನಿತುವು ಕಂಗಳು ಮತ್ತೆ. ಜಹಜು ಶಿಳ್ಳೆ
ಹಾಕಿ ಚಲಿಸಿತು. ಜನರಾಶಿ ಹರ್ಷಘೋಷವಗೈದು
ಕೈಪರೆಯಗುಟ್ಟಿತು ಕಿವಿ ಗಡಚಿಕ್ಕುವತೆರದಿ.

ಹರಿಃ ಓಂ ತತ್ ಸತ್

❋ ❋

ವಿಂಶತಿತಮೋಲ್ಲಾಸಂ

ವಿದೇಶ ಯಾತ್ರಿ

"ವಿಶ್ವ ತಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಭಾಹುರುತ ವಿಶ್ವತಸ್ಪಾತ್ ।
ಸಂ ಭಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾ
ಭೂಮೀ ಜನಯನ್ ದೇವ ಏಕಃ ॥"

ಬೃಹದ್ ಭೈತ್ರವದು ಜಲರಾಶಿಯಂ ಕೊರೆಕೊರೆದು
ಕೀಸಿ ಜರ್ರನೆ ಪ್ರಕ್ಷಾಲನೆ ಗೈಯ್ಯುತೆ ಸೈವರಿದುದು
ವಿದೇಶಾಭಿಮುಖವಾಗಿ. ಸ್ವಾಮಿಜಿಯುಂ ಕಣ್
ನೆಟ್ಟು ನೋಡಿದರ್ ಭಾರತ ಭುವಿಯೆಡೆಗೆ. ದೂರ
ದೂರವಾಗುತೆ ಕಣ್ಮರೆಸುತಿತ್ತಾ ವರಭೂಮಿ.
ಮತ್ತೆ ಗಳಿಗೆ ಮಾತ್ರದಲಿ ಭುವಿಯುಂ ಮರೆಯಾಯ್ತು.
ಬಂದರುಂ ಕಣ್ಮರೆಸಿ ಮಂಗಮಾಯವಾಯಿತ್ತು.
ಸುತ್ತಮುತ್ತಲ್ ಭೋರ್ಗರೆವ ವಾರಿ ರಾಶಿಯೇ
ರಾಶಿ. ಭೋರೆಂದು ಭೋರ್ಗರೆವ ಜಲಧಿ ಥಳಥಳ
ಥಳಿಪ ನೀರ್ದರ್ಪಣಂ! ಕೋಟಿ ಕೋಟಿ ಕೋಟ್ಯಾನು
ಕೋಟಿ ಪ್ರಚಂಡ ಅಲೆಗಳ್ ದಂಡೈಸಿ ಮೇಲಾಯ್ದು
ಭೋರ್ಗರೆಯುತ ಬರುತಿರೆ ಎರ್ದೆ ಬಿರಿಯುವನಿತ್ತು
ಭಯಾನಕಂ! ಅಲೆಯೇರಿ ಅಲೆಯಿಳಿದು ತೇಲುವುದು
ಜಹಜು ತೊಟ್ಟಿಲು ತೂಗುವೊಲ್ ತುಯ್ಯಲಾಡುತ್ತೆ.
ಸುತ್ತಲುಂ ಜಲಚರಂಗಳ್ ದಂಡು ದಂಡೈಸುತ
ಗುಳುಗಾಡುತಿವೆ ಮುದ್ದಿನಗಣಿಯೈಸಿ. ಬಿಸಿಲಿನ
ಝಳಕೆ ವೆಳ್ಳಿಮ್ಮೈ ಮಿಂಚುವುದು ಥಳಥಳಿಸಿ. ರಣ
ವಿಸಿಲ್ ರಣರಣಿಸಿತು ನೆತ್ತಿಯುರಿವವೊಲ್. ತಣ್ಣಗೆ

ತನಿಗಾಳಿ ಬೀಸುವುದು ಓರೋರ್ಮೆ ತನುಮನಂ
ತಣಿಯುವ ತೆರದಿ. ಪಯಣಿಗರಲೆನಿತೋ ಮಂದಿ
ಸನಾತನ ಧರ್ಮಾವಲಂಬಿಗಳ್ ಇರುತಿರಲ್
ನಿಜ ವಿದೇಶಯಾತ್ರೆ ಎನಿಸದಾಯಿತು. ಪಯಣಂ
ಪೊಳ್ತೆನಿತೊ ಕಳೆವುದು ನಲ್‌ಮಾತಿನಲಿ; ಮತ್ತಂ
ಗ್ರಾಂಥಿಕ ಪಠಣದಲಿ. ಅಂತಿಂತು ಕಾಲಹರಣಂ
ಸೊಗಮಾಯ್ತು. ಆದೊಡಂ ಕಿರುವಗೆಯದಾಣದಲಿ
ಪದಚಾರಣಂ. ಎತ್ತೆತ್ತಲುಂ ಅದೇ ದೃಶ್ಯಮಾನಂ.
ಓರೋರ್ಮೆ ಬಿರುಗಾಳಿಯ ಬಿರು ಹೊಡೆತ. ಮಗದೊರ್ಮೆ
ತೀವ್ರ ಬಿಸಿಗಾಳಿಯ ಹೊಡೆತ. ಇನ್ನೊರ್ಮೆ ಶೀತ
ಶೀತಲತೆಯ ಚಳಿಗಾಳಿಯ ಹೊಡೆತ. ಎನಲ್ ಬಗೆ
ವಗೆಯ ಅನುಭಾವ ಮನವಂ ಮುಟ್ಟಿ ತಟ್ಟುವುದು
ಜಾಲಾಡಿಪಂತೆ. ಸುತ್ತಮುತ್ತಣ ಪ್ರಚಂಡ
ಅಲೆಗಳೋಳಿ ನುರ್ಗುತಿರೆ ತಿರ್ರನೆ ತಿರುಗುವುದು
ಜಹಜು ಏರಿಳಿಯುತ್ತೆ; ಚಿತ್ತಮಂಡಳಂ 'ಜುಂ'
ಎನುವ ತೆರದಿ. ಎಲ್ಲ ಗಳಿಗೆಯಲಿ ಎಲ್ಲ ಚಣದಲಿ
ದೈವರಕ್ಷೆ ಇರ್ದುದೆನಲ್ ಪಯಣ ಸರಾಗಂ.
    ಶ್ರೀರಾಮಕೃಷ್ಣ ಪರಮಹಂಸರ ಶ್ರೇಷ್ಠತರ
ಮಾನಸ ಕುವರಂ, ದೇಶಭಕ್ತ ಸನಾತನೀ
ಧರ್ಮ ದುರಂಧರಂ, ಶ್ರೀಪುರುಷವಲ್ಲಭಂ ಆದ
ತರುಣಸನ್ಯಾಸಿಯುಂ ಚಂದನದ ಕಾನ್ತಿಯಲಿ
ಕೆಮ್ಮನೆ ಮಿನುಗಿ ಮಿಂಚಿ ಅಗ್ನಿ ಮೂರ್ತಿಯೆನಲ್
ಜೃಂಭಿಸಿರೆ ಅಖಿಲ ಜನಗೋಷ್ಠಿಯಲಿ ತಾನೊಂದು
ವಿಶೇಷಂ. ಕಾಲ ಸಾಗರೀ ಯಾನಂ ಜರ್ರನೆ
ಜಾರುವೊಲ್ ಮುಂಬರಿದು ಸಂಚಲಿಸಿ ಮುಂಚಲಿಸಿ

ದಕ್ಷಿಣದ ಸೂಚಿಯ ಪಥದ ಜಾಡಿನಲಿ ಹರಿದು
ಸಾಗುತಿದೆ ಸಾಗುತಿದೆ ಸಾಗರದಾಚೆಯ ಮೈತ್ರಿ
ಪುಜ್ಞೆಯಂ ಹುಲುಸಾಗಿ ಬೆಳಸೆ.
ಅಂದು ದೂರದ
ಅಮೆರಿಕಾ ದೇಶದೊಳ್ ಸರ್ವಧರ್ಮಗಳ ಮಹಾ
ಪ್ರತಿನಿಧಿಗಳ್ ಕೂಡಿ ನಡೆಸುವ ಮಹಾನ್ ಸಭೆಯ
ಅಧಿವೇಶನಂ ತಿಳಿದುಬಂದಾಗಳೇ ಮನಂ
ಪುರ್ಚೆದ್ದುದು ವಿಶ್ವಾಸದ ಗಣಿಯಾಯ್ತು ತನ್ನೊಳ್.
ಆತುರ ಕಾತರಗಳ್ ಒಡಮೂಡಿದುವು. ತರುಣನ
ಪ್ರತಿಭಾ ಸ್ಫೂರ್ತಿಯೆಂತಂತು ಭಕ್ತಜನಗಣ
ಮನದ ಉತ್ಸಾಹ ಮಂತಂತು ಗರಿಗೆದರಿ ನೆರೆ
ಹುರುಪುಗೊಂಡಿರೆ ಅದರ ಸಾಧ್ಯಾಸಾಧ್ಯತೆಯಂ
ಕಿಂಚಿತ್ ಗಮನಿಸದೆ ಹಿಂದೂಧರ್ಮದ ಸಂದೇಶ
ವಾಹಿಯಂ ಜಗಜಾಹಿರ್‌ಗೊಳಿಪ ನವೋತ್ಸಾಹ
ರೋಮಹರ್ಷಕವಾಯ್ತು. ಆ ಮಹತ್ತರಮಾದ
ವಿಶ್ವಧರ್ಮ ಸಮ್ಮೇಳನಂ ಪ್ರತಿನಿಧಿಸಲ್
ಆವಾವ ಕ್ರಮವೇಳ್ಕುಂ, ಅದರ ರೀತಿಯೇಂ?
ನೀತಿಯೆಂ? ವಿಧಿ ವಿಧಾನಗಳೇವುದು? ಎಂತದರ
ಪ್ರವೇಶ? ಇತ್ಯಾದಿ, ಇತ್ಯಾದಿಗಳ್ ಆರ
ತಲೆಯಂ ಪುಗದಿರೆ ಎಲ್ಲ ಸುಲಭ ಸಾಧ್ಯಂ
ಎಂದಾಯ್ತು. ಸಮಯೋಚಿತವಾಗಿ ಅಲ್ಲಿರ್ದೊಡೆ
ಸರಿ ಎನ್ನುವೊಂದು ಸುಲಭ ಚಿಂತನೆ ಮೂಡಿದತ್ತು
ಭಾವನಾವೇಶದಲಿ. ದೂರ ಪಯಣವದೊಂದೆ
ನವ ನವೀನ ವಿಷಯಂ. ರಾಮಾಯಣ ಕಾಲದೊಳ್
ಸೀತೆಯನರಸುವೊಡೆ ಹನುಮಂತನಂ ಕಳಿಪಿದ

ವೊಲಾಯ್ತು ಗುರುವರೇಣ್ಯನ ಪಯಣಂ.
ದೃಢಮನದಲಿ ಎಲ್ಲವುಂ ಸರಾಗಮೆನಿಸಿರೆ
ಹಾಡಿದುದು ಮಾನಸ ಮುರುಳಿ ರಾಗರಸ ಹರಿಸಿ,

"ನ ಕರ್ತಾ ಕಶ್ಯಚಿತ್ಕ ಶ್ಚಿನ್ನಿಯೊಗೆ ಚಾಪಿನೇಶ್ವರಃ ।
ಸ್ವಭಾವೇ ವರ್ತತೇ ಲೋಕಃ ತಸ್ಯಕಾಲಾಃ ಪರಾಯಣಂ ॥"

ಅಂದಬಳಿಕಂ ಎಲ್ಲವುಂ ಕಾಲಾಧಿಪನದೀನ
ಎಂದಾಯ್ತು, ಎಂಬೊಂದು ನಿರಾಳತನದಿಂದಲಿ
ಆಧ್ಯಾತ್ಮ ಸ್ಫೂರ್ತಿಯಾ ಗಾಯತ್ರಿಯನೇರುತ
ಭೂರ್ಭುವಸ್ಸವರ್ಲೋಕಗಳಂ ತುಂಬಿ ಭೋಗಿಪ
ಬ್ರಹ್ಮ ಹೃದಯ ಮಧುರಸಮಂ ಪೀರಿದರ್.
ಗುರುವರಂ.
ಜಲಧಿಯಲಿ ಭೈತ್ರಂ ಸರಿಯೆ ಮುಂಕೊಂಡು
ಮುಂದೆ ಮುಂದೆ ಕಣ್ಗಳಿಗೆಸೆಯಿತು ಬಂಡೆಬಂಡೆಗಳ್
ಒಟ್ಟೈಸಿ ಬಲುಮೆಯಿಂ ಬಲಿತುವೊ ಎನೆ ಬಂಡೆಗಳ
ಮಹಾಸ್ತೋಮ ಬಂಡೆದ್ದು ನಿಲ್ದುದು ಧೀಮಂತ
ರುದ್ರ ಶೋಭೆಯಲಿ. ಕಿರಿಯ ದೀವಿ ಎಂಬಂತೆವೊಲ್
ಮೈದಾಳಿದಾ ಬಂಡೆ ಬಂಡೆಗಳ ಸ್ತೋಮದೊಳ್
ಸಂದಿ ಸಂದಿಯಲಿ ಬೇರ್ವಿಟ್ಟು ಮುಂಬೆಳೆದ ಗಿಡು
ಮರಂಗಳ್ ಪೊಚ್ಚ ಪಸುರಾಗಿ ನಳನಳಿಸಿರ್ದುವು
ಕಣ್ಗಿಂಬಾಗಿ. ಬಲುದಿನಗಳಿಂ ಕಣ್ಗೆ ಮರೆಸಿದ
ಪಸುರ್ ಕಣ್ಗೆಸೆಯೆ ನಸುವೊಳ್ತಲ್ಲಿ ಅಡ್ಡಾಡಿ
ಬರುವಂತಿರೆ ತನುಮನಗಳಿಗೆನಿತೊ ಹಿತಮಹುದು
ಎಂಬಾಸೆ ಮನದೊಳ್ ಒಡಮೂಡಿರಲೇಂ ಅಲ್ಲಿ-
ಅತ್ತ ಕಣ್ ನೆಟ್ಟು ನಾಂಟ ನೋಳ್ಪಂತೆಯೇ ಆ
ದೀವಿಯಂ ದಾಂಟ ಮುಂಬರಿಯಿತಾ ಭೈತ್ರ ರಥ

ಜರ್ರನೆ ಜಲಸಿರಿ ಧಾರೆಯಂ ಕೀಸಿ ರಾಚುತೆ
ಸುಲೀಲಾ ಜಾಲದಲಿ ಓಲಾಡಿ, ತೇಲಾಡಿ.
ಮನದಿ ಪ್ರಾರ್ಥಿಸಿದರ್ ಗುರುವರೇಣ್ಯ, ಭಕ್ತಿಯಿಂ,

"ಉದ್ಯದ್ಭಾನು ಸಹಸ್ರಾಭಾ
ಚತುರ್ಭಾಹು ಸಮನ್ವಿತಾ ।
ರಾಗ ಸ್ವರೂಪ ಪಾಶಾಢ್ಯ
ಕ್ರೋಧಾಕಾರಾಂಕುಶೋಜ್ವಲಾ ॥"

ಸ್ವಾಮೀಜಿಯುಂ ವಿಶಾಲವಕ್ಷಸ್ಥಲದ ಮೇಲೆ
ಕೈಗಳೆರಡಂಕಟ್ಟಿ ಪದಚಾರಣಗೈಯುತೆ
ಗಗನ ಭಿತ್ತಿಯಮೇಲೆ ಕಣ್ನೋಟಮಂ ನೆಟ್ಟು
ನೋಡುತಿರೆಯಿರೆ 'ಅಹ, ಎಲ್ಲಮಿರ್ದ್ದೇನಿಲ್ಲದಿಹ
ರೀತಿಯಲಿ ಸರ್ವಮಿರ್ದು ಸಂಪೂರ್ಣವಲ್ಲದ
ಮಾಳ್ಕೆಯಲಿ ಕಾಲವಾಹಿ ಕೈಗೆಟುಕದ ದ್ರವ್ಯ
ತಾನಾಯ್ತು. ನಾವೊಂದು ಬಗೆದೊಡೆ ದೈವವೊಂದು
ಬಗೆಯುವೀ ಬರ್ದುಕಿನೊಳ್ ಸಾಧನೆಯೆತ್ತಲೋ
ಬರ್ದುಕೆತ್ತಲೋ ದೇವರಿಗೇಗೊತ್ತು ಎಂಬೊಲ್
ನಿಟ್ಟುಸಿರ್ವಿಟ್ಟರ್ ಗುರುವರ್ಯಂ.
ಓ, ಅಂದು
ಮೇತಿಂಗಳ ಮೂವತ್ತೊಂದರಂದು ಮುಂಬಯಿಯ
ಬಂದರಂ ಬಿಟ್ಟು ಪೊರವಂಟ ವರ ಪುಣ್ಯವಂತ
ಬಹಜು ಸ್ವಾಮೀಜಿಯಂ ತನ್ನುಡಿಯಲಿ ಸುಖ
ತೋಷದಿಂ ಸಾವರಿಸಿ ಸೈವರಿದುದು ಸುಶಾಂತ
ಪ್ರಶಾಂತ ಪವಮಾನದ ಅಭಯ ಸುಖಧಾಮದ
ಸಾಗರತಡಿಯಲಿ ತೇಲಿ. ಬ್ರಹ್ಮ ಸುಸಂಲಗ್ನ
ಸಂಮುದಿತ ಮನಮತಿ ವಿಚಲಿಸದೆಯೆ ಗುರುವರಂ

ಧ್ಯಾನಸ್ಥರಾದರಾ ತೂಗುತೊಟ್ಟಿಲಿನೊಳ್.
ಪ್ರಶಾಂತ ಗತಿಯ ಪಯಣದ ಪಥದಲಿ ಜಹಜು
ಕೊಲೊಂಬೊ ಪಿನಾಂಗ್ ಸಿಂಗಪುರ ಹಾಂಗ್‌ಕಾಂಗ್ ಕ್ಯಾಂ-
ಟನ್ ನಾಗಾಸಾಕಿ ಯಾಕೊಹಾಮ ಒಸಾಕ ಟೋ-
ಕಿಯೊ ಮುಂತಪ್ಪ ವಿವಿಧ ದೇಶದ ವಿವಿಧ ಜನ
ಜಂಗುಳಿಯ ವಿವಿಧ ಸಂಸ್ಕೃತಿಯ ರಾಷ್ಟ್ರಂಗಳಂ
ನಗರದೇಶಂಗಳಂ ಮೇಣ್ ಪಚ್ಚ ಪಸುರುಕ್ಕುವ
ಪರ್ಣರಾಜಿಯಂ ಕಾಂಬುವ ಸುಯೋಗವೊದವಿದುದು
ಪಯಣಿಗರಿಗೆ. ಒಂದೊಂದು ದೇಶದ ಸುಪರಿಚಯ
ಒಂದೊಂದು ನಗರದ ಪರಿವೀಕ್ಷಣೆ ಮತ್ತಮಾ
ಭೂಹವೆಯ ವರದಾನ ಹಿತವಾದುದೆಲ್ಲರಿಗೆ.
ಸ್ವಾಮೀಜಿ ಮೇಲಿಂದಮೇಲೆ ಲಭಿಸುವ ಭುವಿಯ
ವಾತಾವರಣದಿಂದೆ ಹರ್ಷಿತಮನರಾದಪರ್
ಅಪರಿಮಿತ ಪರಿತಾಪವ ನೀಗಿದವೊಲ್. ಅಂತಿಂತು
ರಯ್ಯನೊಯ್ಯನೆಯೆ ಸಾಗಿದುದು ಜಹಜು ಸುಂದರ
ಶಾಂತ ಪವಮಾನದ ಬಲು ಹರ್ಷಮಯ ಮುದ್ರೆಯ
ಸಾಂತ್ವನದ ಬಲ್ಮೆಯಿಂ. ದೂರದೂರದಿಂ ಕಣ್
ದೃಷ್ಟಿಗೆಸೆದುದು ಹಾಂಗ್‌ಕಾಂಗ್ ಸಿರಿಭೂವಲಯ
ಹಚ್ಚ ಹಸುರಾಗಿ. ಹಸುರಿನ ಹಿನ್ನೆಲೆಯಲಿ ಕಣ್
ಸೆಳೆಯುತ್ತಲಿದೆ ಪತ್ತನಂ ಲಿಖಿತ ಚಿತ್ರದೊಲ್.
ಸಾಗರೀ ಗಂಧದೊಳ್ ಉಸಿರಾಡಿದ ಜೀವಕೆ
ಭೂಮಿಯ ಸುಗಂಧ ಪರಿಮಳಂ ಆಘ್ರಾಣಿಸುವ
ಆತುರಂ ಕುದಿದತ್ತು ಎರ್ದೆಯಲಿ. ಸ್ವಾಮೀಜಿ
ಭಾವನಾವೇಶದಲಿ ನಿಟ್ಟಿಸಿದರ್ ಅತ್ತಲೆ
ಕಣ್ಣೆಟ್ಟು. ಜಹಜು ತುಯ್ಯಲಾಡುತ ಅಲೆಯೇರಿ

ಅಲೆಯಿಳಿದು ತೀರಮಂ ಮುಟ್ಟಿದುದು ಸುಖವಾಗಿ.
ಆ ಪತ್ತನದೊಳ್ ಮೂದಿನಂ ಭೂವಾಸಮೆನೆ
ತನುಮನಗಳ್ ಹಿಗ್ಗಿದುವು ಆನಂದಭಾವಂ
ಉಕ್ಕೇರಿ. ಇಳಿದರಲ್ಲಿ ಯಾನಿಗಳ್. ಅವರೊಳ್
ತಾನುಮೊಂದಾಗಿ ಇಳಿದರ್ ಸ್ವಾಮಿಜಿ, ತಮ್ಮಯಿ
ಪಿಟಕದ ಸಹಿತ. ಊರೊಳಗೊಳಗೆ ತಿರುಗಾಡುತೆ
ಪುರವೀಕ್ಷಣೆಯಲಿ ತೊಡಗಿರೆ ಅಲ್ಲಿನ ಲೋಗರ್
ಸ್ವಾಮಿಜಿಯ ವಿಚಿತ್ರ ಉಡಿಗೆ ತೊಡಿಗೆಗಳಲಿಯೆ
ಪೆರ್ಚಿನತರ ಆಸಕ್ತಿಯಿಂ ನೋಡಿಯೇ ನೋಡಿದರ್!
ಇದಾವ ಬಗೆಯ ವಿಶೇಷಮೋ ಎಂದೆಂದು. ಆ
ಜನರಾಶಿಯ ಕಣ್ ದೃಷ್ಟಿಗೆ ವಿಚಿತ್ರ ಪಶುವೆನೆ
ಮೆರೆದರ್ ಗುರುವರ್ಯಂ; ತಮ್ಮೊಂದು ಚಂದನ
ಕಾನ್ತಿಯಂ ಚಂದನಿಸುವ ಶೈಲಿಯಲಿ ಚಂದನ
ದ್ರುಮವೇ ತಾನಾದರ್ ಗುರುದೇವಂ. ಸನಿಹದ
ಚೀನಾದೇಶೀಯ ಧಾತ್ರಿಯ ಮೇಲೆ ಇಣುಕುವೊಡೆ
ದೊರಕಿತೊಂದು ಸದವಕಾಶ ನೋಳ್ಪ ಕಂಗಳಿಗೆ.
ಅತ್ತಲತ್ತಲ್ ಸುರರ ಅಮರಾವತಿಯೊ ಎನಲ್
ಜಪಾನ್ ದೇಶೀಯ ದೃಶ್ಯಮಾನ ಸೌಂದರ್ಯ
ಕಣ್ಗಳರಳುವ ಪಾಂಗಿನೊಳೆಸೆದುದು ದಿವ್ಯಮಾ
ವಿಶೇಷ. ವಿಶಿಷ್ಟಶೈಲಿಯ ರೂಪುರೇಶೆಗಳ್.
ಯಾಂತ್ರಿಕಮಯ ಸಾಧನೆ ಯಾಂತ್ರಿಕ ಬದುಕುಬಾಳು.
ಅಹ ಜನ ಜೀವನಮೆ ಯಂತ್ರಗತಮೆನೆ ಎಲ್ಲಿಯುಂ
ಸಹಜಗತಿಯಂ ಕಾಣೆ ಎಂಬೊಂದು ಚಿಂತನೆಯ
ಕೀಟ ಮನವಂ ಬೈರಿಗೆಯೊಲ್ ಕೊರೆಯಿತು. ಆ ಜನ
ಜೀವನಂ ಮೆಚ್ಚಿ ಬೆಚ್ಚಿದರ್ ಸ್ವಾಮಿಜಿ. ಆ

ಪುರುಡು ಆ ಚಟುವಟಿಕೆ ಆ ಶಕ್ತಿ ಸಂಪದಂ
ಎಲ್ಲವುಂ ಕಣ್ಮನಗಳಿಗೆ ತುಷ್ಟಿ. ವೈಭವೀ
ಕರಿಸಿ ಲೇಖಿಸಿದ ಚಿತ್ತಾರದವೊಲ್, ಅದೇನ್
ಸ್ವಚ್ಛ ಸುಂದರ? ಅದೇನ್ ಭವ್ಯತೆಯ ರೂವು?
ಅಂತಿಂತು ನಗರಿಯ ಪರಿವೀಕ್ಷಣೆಯಲಿ ಸೊಗದಿಂ
ಕಳೆದುವು ಮೂದಿನಂಗಳ್ ಹೃನ್ಮನಗಳಿಂಗೆ
ಮೋದವಂ ನೀಡಿ. ಮತ್ತೆ ಮರುಪಯಣಕೆ ಸಿದ್ಧ
ಮಾಯಿತ್ತು ಜಹಜು. ಎಲ್ಲರೇರಿದರ್ ತಮ್ಮಯ
ನೆಲೆಯಂ ಕುರಿತು. ಬಳಿಕ ಜಹಜು ಶಿಳ್ಳೆಯನೂದಿ
ಚಲಿಸಿತು ಜುಳುಜುಳಿಸಿ. ಗುರುವರ್ಯರಂ ಮುಂಚೂಣಿ
ಅಂಗಣದಲಿ ನಡುವಣ ಕಟ್ಟೆಯಮೇಲೆ, ಕುಳಿತು
ಪಕ್ಷಿನೋಟಮಂ ಬೀರಿದರ್ ಅತುಲ ಜಲಧಿಯ
ಪ್ರಚಂಡ ಚಂಡ ಅಲೆಗಳ ಮೇಲೆ. ಭೋರಾಡಿ
ಮುನ್ನುಗ್ಗುವ ರೋಷಾಂತ ವೈಭವ ತೇಜಮಂ
ನೋಡುತಿರೆಯಿರೆ ತಳ್ಳಂಕಗೊಳ್ಳುದು ಬಗೆ ತಾಂ
ಅರಿಯದೊಲ್. ಎದೆಯಬನದ ಕೋಗಿಲೆಯು ಉಲಿದುದು
"ಸ್ವೇ ಸ್ವೇ ಕರ್ಮಣ್ಯ ಭರತಃ ಸಂಸಿದ್ಧಿಂ ಲಭತೇ ನರಃ"
ಸ್ವಾಮಿಜಿ ತಮ್ಮೊಳಗೆ ವಿಚಾರ ಮತಿಗತಿಯಂ
ಯೋಚನಾ ಖಡ್ಗದಲುಗಿನ ಮೇಲೆ ಹರಿ ಹಾಯ್ಸಿ
ಗತದಿನಗಳಲಿ ವಿಚರಿಸಿದರ್. ಅಂದು, ತಾವುಂ
ಸನ್ಯಾಸ ದೀಕ್ಷೆಯಂ ತೊಟ್ಟ ಸಮಯದೊಳೆಲ್ಲ
ಸಹಾಧ್ಯಾಯಿಗಳ್ ತಂತಮ್ಮ ಪೆಸರ್ ಬದಲಿಸಿ
ಸನ್ಯಾಸದೀಕ್ಷೆಗನುಗುಣಮಾಗಿ ಯೋಚಿಸುತೆ
ಮನಸೇಚ್ಛೆಯೊಳ್ ಪೆಸರ್ ಬದಲಿಸುತಿರುತಿರಲ್ಕೆ
ತಾನಾಗ ಹಲವು ಬಗೆಯಲಿ ಯೋಚಿಸಿದೊಡಮದಂ

ಹೃನ್ಮಿತ್ರಿಗಳೊಪ್ಪದಿರೆ ಅಲ್ಲಿಗಾಯತ್ತದರ
ಅವತರಣ ಗಾಯತ್ರಿ. ಇನ್ನಂತು ನಲ್‌ವೆಸರ್
ಅಲಂಕರಣಂ ದೂರಗೊಳಿಪಂತಿಲ್ಲ ಮೆನಲ್ಕೆ
ಚಿತ್ತವೆರಸಿ ಮನಮಥಿಸಿ 'ಸ್ವಾಮಿ ವಿವೇಕಾನಂದ'
ಎಂಬ ಉಪನಾಮಧೇಯದುಪಾಧಿಯಂ ಪೊತ್ತು
ಸಾರ್ಥಕಗೊಳಿಸಿದನಾ ತರುಣರಿಸಿ ನಂದದಿಂ.
ಕಳೆದತ್ತು ಮೂಪಗಲ್. ಗತಿಸಿತ್ತೈ ಮೂರಾತ್ರಿ.
ದೀರ್ಘ ದೀರ್ಘಿಕಾ ಭಾವಾವೇಶದಲಿ ಪೆಸರ
ಸೌರಭಕೆ ಕಾರ್ಯಗತಿಯ ನಿರೂಪಿಸುವ ಭರದಿ.
    ಭ್ರಾತೃಭಾಯಿಗಳಿಗೊಂದು ಪತ್ರಮಂ ಬಲ್ಮೆಯಿಂ
ಲೇಖಿಸಿದರಿಂತು "....ಭಾಯಿಗಳಿರಾ! ಭಾರತದ
ಜಡಭರತತ್ವವಂ ಜಡಿಕುಟ್ಟಿ ತೊಡೆಯುವೊಡೆ,
ನಮ್ಮ ಯುವ ಜನಾಂಗ ಒಗ್ಗೂಡುವುದೊಳ್ಳಿತು.
ಜಪಾನ್‌ನ ದೇಶೀಯ ಜನಜಾಗೃತಿಯನರಿತು
ಕೊಂಬುವೊಡೆ ಸ್ವತಃ ಇಲ್ಲಿಗೈದು ನೋಡಿಯೆ
ಅರಿಯಲಕ್ಕುಂ. ಇವರ ಚಟುವಟಿಕೆಯದು ನೀವುಂ
ಅನುಕರಿಪವೊಲ್ ಉನ್ನತಂ. ಭಾರತಮೆನೆ ಈ
ಪ್ರಜೆಗಳಿಗೆ ಉನ್ನತೋನ್ನತ ಸ್ವಪ್ನಲೋಕಮೆಂಬ
ಗೌರವಾದರಮಿಹುದೆನೆ ಮನಮುದಿಪುದು. ಆದೊಡೇಂ,
ನೀಮೆಂತಹ ಜನ? ದಿನವೆಲ್ಲ ಕಾಡು ಹರಟೆಯಲಿ
ಮುಳುಗಿ ತೇಲುವ ಶಂಡತನ! ಛಿಃ ನಾಚಿಗೆಗೇಡು!
ಬನ್ನಿರೆಲ್ಲ ಇಲ್ಲಿಗೆ! ಕಣ್‌ದಣಿಯೆ ನೋನೋಡಿ
ಮನದಣಿಯ ಯೋಚಿಸಿ ತಿಳಿತಿಳಿದು ಬದುಕುವುದೇ
ಸರಿದಾರಿ. ಇಲ್ಲಿಗೈದೊಡೆ ನೀವ್ ಲಜ್ಜೆಯಲಿ
ಕುಗ್ಗಿ ಹುಗಿದು ಪೋಗುವಿರೆನಲ್ ತಪ್ಪಲ್ಲ. ಶತ

ಶತಮಾನಗಳಿಂ ಮೂಢನಂಬಿಕೆ ತೀವ್ರತರ
ಕಂದಾಚಾರಗಳ ಕಂತೆಯಂ ಪೊತ್ತು ನಂಬಿದ
ಮೂಢಜನ! ಈ ಊಟ ತಿನ್ನಲಹುದೆ? ಅವರಂ
ಮುಟ್ಟಲಹುದೆ? ಎಂಬೊಂದು ಹೀನ ಮತಿ
ಗತಿಯ ವಿಮರ್ಶೆಯಲಿ ನೂರಾರು ವರ್ಷದಿಂ
ಮುಳುಗಿಪ್ಪ ನೀವ್ ಎಂಥ ಮನುಷ್ಯರ್? ಯೋಚಿಸಿ,
ಯುಗಯುಗಗಳಿಂ ಅಮಾನುಷ ಸಾಮಾಜಿಕ ಘೋರ
ದಬ್ಬಾಳಿಕೆಯಂ ನಡೆಸಿ ನಡೆಸಿ ಮನುಕುಲದ
ಮಹತ್ವಕೆ ಮಸಿ ಬಳಿದುಕೊಂಡ ನೀವ್ ಎಂತಹ
ಮನುಷ್ಯರ್? ಮತ್ತಂ, ನೀವೀಗ ಮಾಳ್ಪುದೇಂ?
ಪರಕೀಯರೊರೆದ ಗ್ರಂಥವನೋದಿ ಐರೋಪ್ಯ
ಮೆದುಳಿನಲಿ ಉದ್ಭೂತ ಯೋಚನೆಗಳ ಹಲಕೆಲವು
ಚೂರುಪಾರುಗಳಂ ಮೆಲುಕಿಸುತ ವಿಹರಿಪುದದು
ಸರಿಯೇಂ? ನಿಮಗಿದು ಲಜ್ಜೆಯೆನಿಸದೇಂ? ನಿಮ್ಮಯ
ಧ್ಯೇಯೋದ್ದೇಶಮೆಂದೊಡೆ ಮೂವತ್ತು ರೂಪಾಯಿನ
ಗುಮಾಸ್ತಗಿರಿ! ಅಥ ವಕೀಲ ವೃತ್ತಿ! ಇದಲ್ತೇ?
ನಿಮ್ಮ ಪರಮಾದರ್ಶ? ಇಷ್ಟೆ ನಿಮ್ಮ ಬದ್ರ್ಮಕು!
ಇದೇ ಭಾರತ ಯುವಕರ ಹೆಗ್ಗುರಿ! ನಿಮ್ಮೆಲ್ಲ
ಪುಸ್ತಕ ಪದವಿ ಗೌನುಗಳಂ ಮುಳುಗಿಸುವನಿತು
ನೀರಿಲ್ಲವೇಂ ನಿಮ್ಮ ಸಾಗರದೊಳ್?"

ಅಃ ಎಂಥ
ಭರ್ತ್ಸನೆಯ ಲೇಖನ? ಪತ್ರವುಂ ಮುಗಿಸಿದ ಬಳಿಕ
ಮತ್ತೆ ಬರೆದರಿಂತು "ಎಲೆ, ಭ್ರಾತೃಗಳೆ, ಆನುಂ
ಅಲ್ಲಿಯ ಗುಡಿಗಳಿಗೆತ್ತು ಪೂಜಾ ವಿಧಾನಂ
ಅರಿದೆ ಕಣಾ! ಬಂಗಾಳಿ ಲಿಪಿಯಿಂದೆ ಸಂಸ್ಕೃತ

ಮಂತ್ರುಂಗಳಂ ಗೋಡೆಯಲಿ ಉಲ್ಲೇಖಿಸಿಹರ್
ದೇಗುಲಂ ಸುತ್ತಿ ಅಡ್ಡಾಡಿ ಸಂತಸವಟ್ಟೆ."
ಕೋಬೆಯಂ ಮುಟ್ಟಿದ ಗುರುವರ್ಯಂ ಭೂಪಥಂ
ಹಿಡಿದು ಪಯಣಂಬೋದರ್ ಯೋಕೊಹಾಮ ನಗರಕೆ.
ಅಲ್ಲಿಂಗೆ ಮುಂಪಯಣಂ ಆರ್ಸಹಸ್ರ ಟನ್ ತೂಕ
ಇರ್ದೊಂದು ಬೃಹದ್ ಜಹಜು 'ಎಂಪ್ರೆಸ್ ಆಫ್
ಇಂಡಿಯ' ಎಂಬುವ ನಾಮಧೇಯದಿಂ ಜೃಂಭಿಸಿದ
ಹಡಗನ್ನೇರಿದರ್, ಸ್ವಾಮಿಜಿ. ಜುಲೈತಿಂಗಳಿನ
ಹದಿನಾಲ್ಕನೆಯ ತೇದಿಯಂದು ಪೊರವಂಟಿತಾ
ಜಹಜು ವ್ಯಾಂಕೋವರ್ ಗುರಿಗೊಂಡು. ಪುರುಪುರುಡು
ದ್ವಯಂಗಳಂ ಒಟ್ಟೈಸಿ, ಜರ್ರನೆ ಸೈವರಿದುದು
ಜಲಧಿಯಂ ಕೊರೆಕೊರೆದು. ಚಳಿ, ತಡೆಯಲಾರದಿಹ
ಚಳಿ. ಶೈತ್ಯವಂ ಶೀತಲಿಪ ಹವೆ ಕೊರೆಯುವಂತೆ
ತನಿಗಾಳಿ ಇನಿಗಾಳಿ ಬಿರುಗಾಳಿ ಚಳಿಗಾಳಿ
ಎಲ್ಲವುಂ ಒಗ್ಗೂಡಿ ದಂಡೈಸಿ ಬಿರು ಬೀಸುತೆ
ಬರಲ್ ಮೈಚರ್ಮ ಬಿರಿಯ ತೊಡಗಿತು ಉರಿವಂತೆ.
ಎನಿತೆನಿತು ಬಿಗಿದು ಹೊದ್ದೊಡಂ ಉತ್ತರೀಯದ
ರಕ್ಷಣೆ ಏನೇನ್ ಸಾಲದಾಯ್ತು ಗುರುವರಂಗೆ.
ಆಗಳಾ ಜಹಜಿನ ಘನ ನಿರ್ದೇಶಕಂ ಗುರು
ದೇವನ ನೆರವಿಂಗೈದು ಉಣ್ಣೆಯ ವಸನಮಂ
ತಂದಿತ್ತು ಉಪಕರಿಸಿದಂ. ಜಹಜಿನ ಬಲಗಡೆ
ಇರುತಿರ್ದ ಸುವಿಶಾಲ ಕೊಠಡಿಯೊಳ್ ತಂಗಿರ್ದ
ಭಾರತವರ್ಷದ ಮಹಾನ್ ಕೈಗಾರಿಕಾ ಶ್ರೀ
ಸಾಮ್ರಾಟ್ ಜೆಮ್‌ಶೆಟ್‌ಜಿ ಟಾಟಾರವರು ಕಂಡು
ಎದುರಾಗುತೆ ಗುರುವಿನ ಸುಪರಿಚಯಮಂಬಡೆದು

ತೋಷದಿಂ ಅಭಿನಂದಿಸಿದರ್ ತಮ್ಮ ಪೆಸರಂ
ಪರಿಚಯಿಸಿ.
ಅವರೊಡಂ ತಮ್ಮ ಜಪಾನ್ ಯಾತ್ರೆಯ
ಮೇಣದರ ಪರಿವೀಕ್ಷಣೆಯಂ ವಿವರಿಸಿ "ಅಂಥಪ್ಪ
ಚಟುವಟಿಕೆ ಮೇಣ್ ಚಾಣಾಕ್ಷತೆಯಂ ಪಡೆಯದಿರೆ
ನಮ್ಮವರ್ ಜಗದ ಸ್ಪರ್ಧೆಯೊಳ್ ಗೆಲ್ಮೆಯಂ ಪಡೆ
ಕೊಂಬುದದು ದುಸ್ಸಾಧ್ಯಂ. ನಮ್ಮೊಳ್ ಕರಕುಶಲತೆ
ಬೆಳೆದಿರಲ್, ಅದರ ಮಹತ್ಕ್ರಾಂತಿಯ ಬೆಳೆಯಂಬೆಳೆಸಿ
ಅರಳಿಸಿ ಬೆಳಕಿಗೆ ತರ್ಪುದೊಳ್ಳಿತು. ಅದಲ್ಲದೆ
ಉತ್ಕ್ರಾಂತಿಯೊಳ್ ಭಾರತದ ಉತ್ಥಾನದ ದಿವ್ಯ
ಪತಾಕೆಯಂ ಹಾರಿಸುವೊಡೆ ಧಾರ್ಮಿಕಮಾದ
ಹಿನ್ನಲೆಯನಿನಿತು ಕಡೆಗಣಿಸಲಾಗದು" ಎಂಬ
ಸಲಹೆಯಿತ್ತರ್ ಸ್ವಾಮಿಜಿ. ಬಳಿಕಮವರೊಳ್
ಭಾರತ ರಾಷ್ಟ್ರೀಯ ಪುನರುತ್ಥಾನವ ಕುರಿತಂತೆ
ಎನಿತೆನಿತೊ ವಿಚಾರಾವಳಿಯಲಿ ನಿರತರಿರಲ್
ತರ್ಕವಿತರ್ಕಗಳ್ ಹೂಡಿ ಮಾತಿನ ಹೊಳೆಯಂ
ಹರಿಸಿದರ್ ಸ್ವಚ್ಛಂದ ರೀತಿಯಲಿ.
ಮಧ್ಯಾಹ್ನ
ಕಾಲೀನ ಸುಡುವಿಸಿಲ್ ಉರಿದುರಿದು ಸುಡುತಿರೆ
ಒಳಹೊರಗೆ ಎಲ್ಲಿಯುಂ ತಣ್ಪಿನ ತನಿಯಿಲ್ಲಂ.
ಬೆಮರ್ದುದು ಮೈ. ಸಿಡಿದುದು ನರ ಮಂಡಲ. ಕಣ್ಣು
ಬಳಲ್ದುವು. ಸೋಲ್ದ ಜೀವಕೆ ನಿದ್ದೆಯು ಬಾರದು.
ಬಂಡೆಯ ಬಿರುಕಿನಿಂ ತೊರೆಯು ಸೋರ್ದುದೆನೆ
ವಸರಿದುವಧಿಕ ಬೆಮರ್ ಪನಿ. ಕರವಸ್ತ್ರದಿಂದೆ
ಉದ್ದಿ ವದನಂ, ಲೆಕ್ಕಣಿಕೆಯಂ ಕೈಕೊಂಡು ನೆರೆ

ಲೇಖಿಸಿದರ್ ಪತ್ರಗಳ್ ಪ್ರಬಂಧಗಳ್ ಮೇಣ್
ಸಂಗೀತೆಗಳ್. ತಮ್ಮೊಳಗೊಳಗೇ ಹಾಡಿದರ್
ಸಂಗೀತೆಯಂ; ಪುಟಪುಟಗಳ್ ತುಂಬಿದುವು ಬಲು
ಸರಾಗದಲಿ. ಒಂದೆರಳ್ಡ್ ಮೂರು ನಾಲ್ಕೈದೆನಲ್
ಕಿರಿದಾಯ್ತು. ಮೇಣ್ ಆರೇಳೆಂಟು ಒಂಬತ್ತೆನೆ
ಸಲ್ವುದು ಸಮಯೋಚಿತವಾಗಿ. ಭಾವರಸ ಝುರಿ,
ವೀರರಸ ಝುರಿ ಹರಿದುದು ಲೆಕ್ಕಣಿಕೆಯ ಕರ್ಪು
ಮಸಿಯಲ್ಲಿ. ತಮ್ಮಯ ಗುರು ಭಾಯಿಗಳಿಗೊರೆದಾ
ಸಂಗೀತೆಯಿದು ಓದಿ ಮನನಗೊಳಿಸಿ ಕೊಳ್ಳಿರೊ,
ಕಾವ್ಯಪಾರಾಯಣಪರ ಶ್ರೀಮನ್ ಬಂಧುಗಳೇ!

ಸಂನ್ಯಾಸಿ ಗೀತೆ*

ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ದೂರದಡವಿಯೊಳೆಲ್ಲಿ ಲೌಕಿಕವಿಷಯವಾಸನೆ ಮುಟ್ಟದೊ,
ಎಲ್ಲಿ ಗಿರಿಗುಹೆಕಂದರರದ ಬಳಿ ಜಗದ ಗಲಿಬಿಲಿ ತಟ್ಟದೊ,
ಎಲ್ಲಿ ಕಾಮವು ಸುಳಿಯದೊ,–ಮೇಣ್
ಎಲ್ಲಿ ಜೀವವು ತಿಳಿಯದೊ
ಕೀರ್ತಿ ಕಾಂಚನವೆಂಬುವಾಸೆಗಳಿಂದ ಜನಿಸುವ ಭ್ರಾಂತಿಯ,
ಎಲ್ಲಿ ಆತ್ಮವು ಪಡೆದು ನಲಿವುದೊ ನಿಚ್ಚವಾಗಿಹ ಶಾಂತಿಯ,
ನನ್ನಿಯರಿವಾನಂದವಾಹಿನಿಯೆಲ್ಲಿ ಸಂತತ ಹರಿವುದೊ,
ಎಲ್ಲಿ ಎಡೆಬಿಡದಿರದ ತೃಪ್ತಿಯ ಸರಿ ನಿರಂತರ ಸುರಿವುದೊ
ಅಲ್ಲಿ ಮೂಡಿದ ಹಾಡನುಲಿಯ್ಯೆ, ವೀರ ಸಂನ್ಯಾಸಿ–
ಓಂ! ತತ್! ಸತ್! ಓಂ!

೨

ಕುಟ್ಟಿ ಪುಡಿಪುಡಿಮಾಡು ಮಾಯೆಯು ಕಟ್ಟಿಬಿಗಿದಿಹ ಹಗ್ಗವ;
ಕಿತ್ತುಬಿಸುಡೈ ಹೊಳೆವ ಹೊನ್ನಿನ ಹೆಣ್ಣು ಮಣ್ಣಿನ ಕಗ್ಗವ!
ಮುದ್ದಿಸಲಿ ಪೀಡಿಸಲಿ ದಾಸನು ದಾಸನೆಂಬುದೆ ಸತ್ಯವು;
ಕಬ್ಬಿಣವೊ? ಕಾಂಚನವೊ? ಕಟ್ಟಿದ ಕಣ್ಣಿ ಕಣ್ಣಿಯೆ ನಿತ್ಯವು.
        ಪಾಪ ಪುಣ್ಯಗಳೆಂಬವು,–ಮಾ
        ತ್ಸರ್ಯ ಪ್ರೇಮಗಳೆಂಬವು
ದ್ವಂದ್ವರಾಜ್ಯದ ಧೂರ್ತಚೋರರು; ಬಿಟ್ಟುಕಳೆ, ಕಳೆಯವರನು!
ಮೋಹಗೊಳಿಪರು, ಬಿಗಿವರಿವರು; ಎಚ್ಚರಿಕೆಯಿಂದವರನು
ತಳ್ಳು ದೂರಕೆ, ಓ ವಿರಕ್ತನೆ! ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಮುಕ್ತಿಯ ಗಾನವನು, ಓ ವೀರ ಸಂನ್ಯಾಸಿ–
            ಓಂ! ತತ್! ಸತ್! ಓಂ!

೩

ಕತ್ತಲಳಿಯಲಿ; ಮಬ್ಬುಕವಿಸುವ ಭವದ ತೃಷ್ಣೆಯು ಬತ್ತಲಿ;
ಬಾಳಮೋಹವು ಮರುಮರೀಚಿಕೆ; ಮಾಯೆ ಕೆತ್ತಿದ ಪುತ್ತಳಿ!
ಜನನದೆಡೆಯಿಂ ಮರಣದೆಡೆಗಾಗೆಳೆವುದೆಮ್ಮನು ದೇಹವು!
ಜನ್ಮಜನ್ಮದಿ ಮರಳಿ ಮರಳುವುದೆಮ್ಮ ಬಿಗಿಯಲು ಮೋಹವು!
        ತನ್ನ ಜಯಿಸಿದ ಶಕ್ತನು–ಅವ
        ನೆಲ್ಲ ಜಯಿಸಿದ ಮುಕ್ತನು!
ಎಂಬುದನು ತಿಳಿ; ಹಿಂಜರಿಯದಿರು. ಸಂನ್ಯಾಸಿಯೇ, ನಡೆ
                                        ಮುಂದಕೆ.
ಗುರಿಯು ದೊರಕುವವರೆಗೆ ನಡೆ, ನಡೆ; ನೋಡದಿರು ನೀ
                                        ಹಿಂದಕೆ.

ಏಳು ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಸಿದ್ಧನೆ, ಓ ಪ್ರಬುದ್ಧನೆ, ಹಾಡು ಸಂನ್ಯಾಸಿ–
ಓಂ! ತತ್! ಸತ್! ಓಂ!

೪

“ಬೆಳೆಯ ಕೊಯ್ವನು ಬಿತ್ತಿದಾತನು; ಪಾಪ ಪಾಪಕೆ ಕಾರಣ;
ವೃಕ್ಷ ಕಾರ್‍ಯಕೆ ಬೀಜ ಕಾರಣ; ಪುಣ್ಯ ಪುಣ್ಯಕೆ ಕಾರಣ;
ಹುಟ್ಟಿ ಮೈವಡೆದಾತ್ಮ ಬಾಳಿನ ಬಲೆಯ ತಪ್ಪದೆ ಹೊರುವುದು;
ಕಟ್ಟು ಮೀರಿಹನಾವನಿರುವನು? ಕಟ್ಟು ಕಟ್ಟನೆ ಹೆರುವುದು!“
ಎಂದು ಪಂಡಿತರೆಂಬರು–ಮೇಣ್
ತತ್ತ್ವದರ್ಶಿಗಳೆಂಬರು!
ಆದೊಡೇನಂತಾತ್ಮವೆಂಬುದು ನಾಮರೂಪಾತೀತವು;
ಮುಕ್ತಿಬಂಧಗಳಿಲ್ಲದಾತ್ಮವು ಸರ್ವನಿಯಮಾತೀತವು!
ತತ್ತ್ವಮಸಿ ಎಂದರಿತು, ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಸಾರು ಸಿದ್ಧನೆ, ವಿಶ್ವವರಿಯಲಿ! ಹಾಡು ಸಂನ್ಯಾಸಿ
ಓಂ! ತತ್! ಸತ್! ಓಂ!

೫

ತಂದೆ ತಾಯಿಯು ಸತಿಯು ಮಕ್ಕಳು ಗೆಳೆಯರೆಂಬುವರರಿಯರು;
ಕನಸು ಕಾಣುತಲವರು ಸೊನ್ನೆಯೆ ಸರ್ವವೆನ್ನುತ ಮೆರೆವರು.
ಲಿಂಗವರಿಯದ ಆತ್ಮವಾರಿಗೆ ಮಗುವು? ಆರಿಗೆ ತಾತನು?
ಆರ ಮಿತ್ರನು? ಆರ ಶತ್ರುವು? ಒಂದೆಯಾಗಿರುವಾತನು?
ಆತ್ಮವೆಲ್ಲಿಯು ಇರುವುದು;–ಮೇಣ್
ಆತ್ಮವೊಂದಾಗಿರುವುದು.

ಭೇದವೆಂಬುವ ತೋರಿಕೆಯು ನಮ್ಮಾತ್ಮನಾಶಕೆ ಹೇತುವು.
ಭೇದವನು ತೊರೆದೊಂದೆಯೆಂಬುದನರಿಯೆ ಮುಕ್ತಿಗೆ ಸೇತುವು.
ಧೈರ್ಯದಿಂದಿದನೆಲ್ಲರಾಲಿಸೆ ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಸಾರು, ಜೀವನ್ಮುಕ್ತ! ಸಾರೈ ಧೀರ ಸಂನ್ಯಾಸಿ–
ಓಂ! ತತ್! ಸತ್! ಓಂ!

೬

ಇರುವುದೊಂದೇ! ನಿತ್ಯಮುಕ್ತನು, ಸರ್ವಜ್ಞಾನಿಯು ಆತ್ಮನು!
ನಾಮರೂಪಾತೀತನಾತನು; ಪಾಪಪುಣ್ಯಾತೀತನು!
ವಿಶ್ವಮಾಯಾಧೀಶನಾತನು; ಕನಸು ಕಾಣುವನಾತನು!
ಎಲ್ಲಿ ಮುಕ್ತಿಯ ಹುಡುಕುವೆ?–ಏ.
ಕಿಂತು ಸುಮ್ಮನೆ ದುಡುಕುವೆ?
ಇಹವು ತೋರದು, ಪರವು ತೋರದು; ಗುಡಿಯೊಳದು
ಮೈದೋರದು.
ವೇದ ತೋರದು, ಶಾಸ್ತ್ರ ತೋರದು; ಮತವು ಮುಕ್ತಿಯ
ತೋರದು!
ನಿನ್ನ ಕೈಲಿದೆ ನಿನ್ನ ಬಿಗಿದಿಹ ಕಬ್ಬಿಣದ ಯಮಪಾಶವು;
ಬರಿದೆ ಶೋಕಿಪುದೇಕೆ? ಬಿಡು, ಬಿಡು! ನಿನಗೆ ನೀನೇ
ಮೋಸವು!
ಬೇಡ, ಪಾಶವ ಕಡಿದು ಕೈಬಿಡು! ಹಾಡು ಸಂನ್ಯಾಸಿ–
ಓಂ! ತತ್! ಸತ್! ಓಂ!

೭

"ಶಾಂತಿ ಸರ್ವರಿಗಿರಲಿ" ಉಲಿಯೈ, "ಜೀವಜಂತುಗಳಾಳಿಗೆ
ಹಿಂಸೆಯಾಗದೆ ಇರಲಿ ನನ್ನಿಂದೆಲ್ಲ ಸೊಗದಲಿ ಬಾಳುಗೆ!

ಬಾನೊಳಾಡುವ, ನೆಲದೊಳೋಡುವ ಸರ್ವರಾತ್ಮನು ನಾನಹೆ;
ನಾಕ ನರಕಗಳಾಸೆಭಯಗಳನೆಲ್ಲ ಮನದಿಂ ದೂಡುವೆ!"
ದೇಹ ಬಾಳಲಿ, ಬೀಳಲಿ;–ಅದು
ಕರ್ಮನದಿಯಲಿ ತೇಲಲಿ!
ಕೆಲರು ಹಾರಗಳಿಂದ ಸಿಂಗರಿಸದನು ಪೂಜಿಸಿ ಬಾಗಲಿ!
ಕೆಲರು ಕಾಲಿಂದೊದೆದು ನೂಕಲಿ! ಹುಡಿಯು ಹುಡಿಯೊಳೆ
ಹೋಗಲಿ!
ಎಲ್ಲ ಒಂದಿರಲಾರು ಹೊಗಳುವರಾರು ಹೊಗಳಿಸಿಕೊಂಬರು?
ನಿಂದೆ ನಿಂದಿಪರೆಲ್ಲ ಕೂಡಲು ಯಾರು ನಿಂದೆಯನುಂಬರು?
ಪಾಶಗಳ ಕಡಿ! ಬಿಸುಡು, ಕಿತ್ತಡಿ! ಹಾಡು ಸಂನ್ಯಾಸಿ–
ಓಂ! ತತ್! ಸತ್! ಓಂ!

೮

ಎಲ್ಲಿ ಕಾಮಿನಿಯಲ್ಲಿ ಕಾಂಚನದಾಸೆ ನೆಲೆಯಾಗಿರುವುದೊ,
ಸತ್ಯವೆಂಬುವುದಲ್ಲಿ ಸುಳಿಯದು! ಎಲ್ಲಿ ಕಾಮವು ಇರುವುದೊ,
ಅಲ್ಲಿ ಮುಕ್ತಿಯು ನಾಚಿ ತೋರದು! ಎಲ್ಲಿ ಸುಳಿವುದೊ
ಭೋಗವು
ಅಲ್ಲಿ ತೆರೆಯದು ಮಾಯೆ ಬಾಗಿಲನಲ್ಲಿಹುದು ಭವರೋಗವು;
ಎಲ್ಲಿ ನೆಲಸದೊ ಚಾಗವು–ದಿಟ
ವಲ್ಲಿ ಸೇರದು ಯೋಗವು!
ಗಗನವೇ ಮನೆ! ಹಸುರೆ ಹಾಸಿಗೆ! ಮನೆಯು ಸಾಲ್ವುದೆ
ಚಾಗಿಗೆ?
ಹಸಿಯೊ, ಬಿಸಿಯೋ? ಬಿದಿಯು ಕೊಟ್ಟಾಹಾರವನ್ನವು
ಯೋಗಿಗೆ!
ಏನು ತಿಂದರೆ, ಏನು ಕುಡಿದರೆ, ಏನು? ಆತ್ಮಗೆ ಕೊರತೆಯೆ?

ಸರ್ವಪಾಪವ ತಿಂದುತೇಗುವ ಗಂಗೆಗೇಂ ಕೊಳೆ ಕೊರತೆಯೆ?
ನೀನು ಮಿಂಚೈ! ನೀನು ಸಿಡಿಲೈ! ಮೊಳಗು ಸಂನ್ಯಾಸಿ–
ಓಂ! ತತ್! ಸತ್! ಓಂ!

೯

ನಿಜವನರಿತವರೆಲ್ಲೊ ಕೆಲವರು; ನಗುವರುಳಿದವರೆಲ್ಲರೂ
ನಿನ್ನ ಕಂಡರೆ, ಹೇ ಮಹಾತ್ಮನೆ! ಕುರುಡರೇನನು ಬಲ್ಲರು?
ಗಣಿಸದವರನು ಹೋಗು, ಮುಕ್ತನೆ, ನೀನು ಊರಿಂದೂರಿಗೆ
ಸೊಗವ ಬಯಸದೆ, ಅಳಲಿಗಳುಕದೆ! ಕತ್ತಲಲಿ ಸಂಚಾರಿಗೆ
ನಿನ್ನ ಬೆಳಕನು ನೀಡಲೈ–ಸಂ
ಸಾರ ಮಾಯೆಯ ದೂಡೆಲೈ!
ಇಂತು ದಿನದಿನ ಕರ್ಮಶಕ್ತಿಯು ಮುಗಿವವರೆಗೂ ಸಾಗೆಲೈ!
ನಾನು ನೀನುಗಳಳಿದು ಆತ್ಮದೊಳಿಳಿದು ಕಡೆಯೊಳು ಹೋಗೆಲೈ!
ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ತತ್ತ್ವಮಸಿ ಎಂದರಿತು ಹಾಡೈ ಧೀರ ಸಂನ್ಯಾಸಿ–
ಓಂ! ತತ್! ಸತ್! ಓಂ!

---

* ರಾಷ್ಟ್ರಕವಿ ಕುವೆಂಪುರವರ ಅನುವಾದ

ಸ್ವಾಮಿಜಿಯುಂ ವಾಂಕೊವಾರ್ ಬಿಟ್ಟಬಳಿಕಂ
ತಮ್ಮ ಮುಂಪಯಣಮಂ ಉಗಿಬಂಡಿಯೊಳ್ ನಡೆಸೆ
ಹಿಡಿದರ್ ಉಗಿಬಂಡಿಯಂ. ಪಯಣಿಗರಿಂ ತುಂಬಿ
ತುಳುಂಕುತೆ ಸದ್ದು ಗದ್ದಲಗಳಿಂ ತುಂಬಿ ಬಲ್
ಶಬ್ದಾಯಮಾನಮಾಗಿರ್ದುದು ಕಿವಿಕಿಡಿಪ ತೆರದಿ.

ಅಲ್ಲಿನ ಹವಾ ಮಾನಕೊಪ್ಪುವ ಗಿಡುಮರಂಗಳ್
ವರ್ಣವರ್ಣಾಂತು ತಳಿರ್‌ಲೋಕದ ಶೋಭೆಯಿಂ
ಮೆರೆದಿರ್ದುವು ಕಣ್ಮನಂ ಸೆಳೆವ ಪಾಂಗಿನಲಿ.
ಪಾಶ್ಚಾತ್ಯ ರಾಷ್ಟ್ರಗಳ ವೈಜ್ಞಾನಿಕ ಮೇಣಧಿಕ
ಯಂತ್ರನಾಗರಿಕತೆಯ ಶೈಲಿಯಲಿ ಮನವಿಟ್ಟು
ನೋಡಿದರ್ ಸ್ವಾಮಿಜಿ. ಪಾಶ್ಚಾತ್ಯ ರಾಷ್ಟ್ರಗಳ
ಪಾಶ್ಚಾತ್ಯ ನಾಗರಿಕತೆಯ ಮೋಹನ ರೂಪುಂ
ಮನಮುಟ್ಟುವಂತಿರ್ದುದು ವ್ಯಾಪಕರೀತಿಯಲಿ.
ಖೇತ್ರಿಯ ಮಹಾರಾಜರುಂ ಅಪಾರ ಗೌರವ
ಪ್ರೀತ್ಯಾದರಗಳಿಂದೆ ಕೊಂಡಿತ್ತ ಬಹುಮೂಲ್ಯ
ವಸನಂಗಳ್ ಪ್ರಾಚ್ಯವೈಭವ ಪ್ರದರ್ಶಕಮಲ್ಲದೆ
ಪಾಶ್ಚಾತ್ಯ ದೇಶಗಳ ಹವಾಮಾನದ ಖಡ್ಗ
ಹತಿಯಂ ತಡೆಯೆ ತಕ್ಕುವೇಂ? ಇಂಥ
ಅಪದೆಶೆಯ ಪ್ರಸಂಗದೊಳ್ ಸಿಲ್ಕುವುದನವರ್
ಮನದೆ ನೆನೆದರಿಲ್ಲಂ. 'ಇರ್ಕೆ ಗುರುದೇವನಿರೆ
ಮುಂಪಥದೊಳ್ ಎಲ್ಲವುಂ ಮಂಗಳಮಾದಪುದು'
ಎಂಬೊಂದು ದೃಢನಂಬಿಕೆಯಿರುತಿರೆ ಗುರುವಿನ
ಪದತಲಕರ್ಪಿಸಿ ಮಿಣ್ಣನಾದಪರ್.
                                        ಲೋಕದೊಳ್
ಕಾಲದೇಶಾಂಡಮಂ ಕುಕ್ಕಿ ದಿನಮಾನಗಳ
ಹೊನಲ್ ಹರಿದು ಪಗಲಿರುಳ್ಗಳ ಗಾಲಿಗಳ ಮೇಲೆ
ಕಳಿದುದು ಸಮಯಂ ಕೈಗೆಟುಕದ ಪರಿಯಲಿ.
ಗಗನಗಂಗೆಯ ಸುನೀಲ ಪಟಲದ ಹಿನ್ನಲೆಯಲಿ
ಕರಿ ಚುಕ್ಕಿಗಳ ಹೋಲಿ ಹಾರುತಿವೆ ಕಾಮಳ್ಳಿ
ಪಕ್ಷಿಗಳ ಹಿಂಡು ಸಹಸ್ರ ಸಂಖ್ಯೆಯಂ ಮೀರಿ.

ಪರಿಶುಭ್ರ ವ್ಯೋಮಾಂಡಮಂ ನೋಡುತಿರೆ ಮುಗಿಲ್
ರಯ್ಯನೊಯ್ಯನೆ ಧರೆಗಿಳಿವುದೊ ಎನೆ ವೆಳ್ಳಿಯೊಲ್
ಥಳಿಸುತ್ತೆ ವಿದ್ಯುದ್ವಿಮಾನವಿಳಿವ ತೆರದಲಿ ದಿಕ್ತಟದ
ವಾರ್ಧಿಯಂಚಿಗೆ ಇಳಿವುದು ಚೆಲ್ವಿನೊಳ್ ಚೆಲ್ವಾಗಿ.
ಪಾಶ್ಚಾತ್ಯ ಜನಜೀವನದೊಳ್ ಎಡೆ ಎಡೆಗಳಲಿ
ಕಂಡುಬಹ ಭಿನ್ನ ವೇಶಗಳ ಭಿನ್ನ ಭಾಷೆಯ
ಭಿನಭಿನ್ನ ವಿಚಾರವಾಹಿಯಂ ತಮ್ಮೊಳಗೆ
ತಿಳಿದರಿದು ಮತಿಯಚ್ಚಿನ ಒರೆಗಲ್ಲಿಗೆ ಹಚ್ಚಿ
ಮಿಣ್ಣನೆ ಅವಲೋಕಿಸುವರ್ ಗುರುವರಂ. ಸುತ್ತ
ಮುತ್ತಣಿಂ ಸಂವೀಕ್ಷಕರ ಕಂಗಳಿಗೆ ತಾವ್
ತಮ್ಮ ಕಾಂಚನ ಕಾನ್ತಿಯ ವಸನಗಳಿಂ ಪೂರ್ಣ
ಭಿನ್ನವಾಗಿ ವಿಚಿತ್ರತರವಾಗಿ ಕಂಡಿರಲ್
ವಿಶೇಷಮೆನಲ್‌ಸಲ್ಲ, ಎಂಬುದಂ ಬಗೆಯೊಳ್
ಇರಿಸಿ ಮಿಣ್ಣನೆ ಜನ ಮನವೋದುವರ್. ಕೆಲರುಂ
ಇವನೇಂ ವಿಚಿತ್ರ ಕುರುಬನೊ ಕಾಡು ಮನುಷ್ಯನೊ
ಇರ್ಪ್ಪುಮೆಂದು ಪರಿಭಾವಿಸಿ ತಿರಸ್ಕರಿಪುದಂ
ಕಂಡುಕಾಣದವೊಲ್ ಇರುತಿರೆ, ತಮ್ಮೊಳಗೊಳಗೆ
ಮಾತಾಡಿ ಕಿಸಿಕಿಸಿ ನಗುವರ್ ಹೀಯಾಳಿಸುತೆ.
ಇಂಥೊಂದು ಕಹಿ ಅನುಭವವಾಗುತಿರೆ ಮನಸಿಗೆ
ಆಗಳಾಗಳ್; ತೀರ ಅಪರಿಚಿತ ಸ್ಥಲದೊಳ್
ತಮಗೆ ಉನ್ನತಶ್ರೇಣಿಯ ಕೂಟವೆ ಲೇಸೆಂದು
ಬಗೆದು ನಿರ್ಧರಿಸಿದರ್ ಮನದಲಿ ಗುರುದೇವಂ.
ಉಗಿಬಂಡಿಯುಂ ಮೂರನೆಯದಿನಂ ಚಿಕಾಗೋ
ನಗರಿಯಂ ಬೊಕ್ಕು ನಿಲ್ಮನೆಯಲಿ ನಿಂದುದು
ಸಹಸ್ರಾಂತ ಕಾಲೂರಿ. ಇಳಿವವರ ಗಡಿಬಡಿ,

ಹತ್ತುವವರ ಅವಸರ, ಮಾರಾಟಗಾರರುಂ
ಗೈವ ಬೊಬ್ಬೆ, ಮಾತಿನ ಮರ್ಮರ ಇವೆಲ್ಲವುಂ
ಕೂಡಿ ಬಲ್ ಶಬ್ದಾಯಮಾನಮಾದುದು ಹಿರಿಯ
ನಿಲ್ದಾಣದ ಪ್ರದೇಶಂ. ಸ್ವಾಮೀಜಿಯುಂ ತಮ್ಮ
ಪೆಟ್ಟಿಗೆಯ ಸಹಿತ ಇಳಿದರ್. ನಗರಿಯ ಪ್ರಮುಖ
ಮಾರ್ಗವಿಡಿದು ಮುಂಕೊಂಡು ಬರೆ ಕಣ್ ಗೋಳಿಸಿದುವು
ಬಗೆಬಗೆಯ ಬೃಹತ್ತಮ ಖಾನಾವಳಿಗಳ್,
ಹಲವಾರು. ಪೋಗಿ ಬರ್ಪ ಜನಸಂಖ್ಯೆ ಗಮನೀಯ
ಮಿರ್ದೊಂದು ಖಾನಾವಳಿಯಂ ಚೊಕ್ಕ ಗುರುವರಂ
ಅಲ್ಲಿನ ಘನ ವ್ಯವಹಾರಕಾರ್ತಿಯನುಂ ಕಂಡು
ತಮ್ಮ ಪೆಸರ್ ವಿವೇಕಾನಂದರೆಂದೆಂದು ಪೇಳ್ದು
ನೊಂದಾಯಿಸಿ ಪಡೆದರ್ ಕೊಠಡಿಯಂ. ಆ ಪರಮ
ವೈಭವೋಪೇತ ಸ್ವರ್ಗತುಲ್ಯ ವಸತಿಗೃಹ
ಪೊಂದಿರ್ದ ಕೋಣೆಕೋಣೆಯೊಳ್ ಸ್ವರ್ಗಲಕ್ಷ್ಮಿಯ
ನಿವಾಸಮೊ ಎನೆ ಐಶ್ವರ್ಯಾಭೋಗ ನೆಲೆಸಿದುದು
ಮನೋರಮ ಶೈಲಿಯಲಿ. ವಸತಿಗೃಹದ ಸುತ್ತ
ಮುತ್ತಲ್ ಮರ ಗಿಡು ಬಳ್ಳಿಗಳಿಂ ಮೆರೆದ ದಿವ್ಯ
ಉದ್ಯಾನವನಮಿರ್ದುದು ಕಣ್ಮನಗಳ್ ಸೆಳೆವ
ಪಾಂಗಿನಲಿ. ನಂದನವನಂ ಮೀರಿ ಬೆಳೆದಿರ್ದ
ಶೃಂಗಾರವೈಭವದಲಿ ಮನವಿಟ್ಟು ಮನಸಿಗೆ
ಆನಂದಭೋಗದರಸದೌತಣಂ ನೀಡಿದರ್.
ಖಾನಾವಳಿಯ ವಾಮಾಂಗದ ಪುಷ್ಕರಣಿಯಲಿ
ಹಂಸೆಗಳ ಕ್ರೇಂಕಾರವ ಕರ್ಣಪಟಲಗಳಿಗೆ
ತಾಗಿ ಪ್ರತಿಧ್ವನಿಸಿದುದು; ಸಾಯಂ ಸಮಯದ
ತನಿವೊಳ್ತಿನ ಮಂಗಳ ತೂರ್ಯಮೊ ಎನಲಾಪುಣ್ಯ

ರಾಗತಾನಂ. ಪಗಲ್ ನದಿ ಹರಿದುದು ಸಂಜೆಯ
ತಟನಿಯ ತಡಿಗೆ ರಾಗಮಯಮಾಗಿ. ಸ್ವಾಮಿಜಿ
ಕೊಠಡಿಯೊಳ್ ಜಳಕಮಂ ಪೂರೈಸಿ ಕದವನಿಕ್ಕಿ
ಧ್ಯಾನಾರೂಢರಾದರ್. ಕಳೆಯಿತೊಂದು ತಾಸಿನ
ಸಮಯಂ, ಅನನ್ಯ ಶಾಂತಿಯಲಿ. ಬಾಗಿಲ್ ತಟ್ಟಿ
ಸದ್ದುಗೆಯ್ದು ಒಳಬಂದಳ್ ಸದನದ ಪಿರಿನಾಯಕಿ.
ಪರಸ್ಪರ ಸಂಧ್ಯಾ ನಮನಗಳಬಳಿಕ ಉಭಯ
ಕುಶಲೋಪರಿಯುಂ ಕಳಿಯಿತು. ತರುವಾಯಿಯೊಳಾ
ದೊರೆಸಾನಿಯಂ ಕುರಿತು ಸರ್ವಧರ್ಮ ಸಭೆಯ
ವಿಚಾರಂ ಪ್ರಸ್ತಾಪಿಸಿದರ್ ಗುರುವರ್ಯಂ. ಆ
ದೊರೆಸಾನಿಯುಂ ವಿನಯದಿಂ ನುಡಿಸಿದಳೆಂತೆನೆ,
"ಅಯ್ಯ ಮಿತ್ರ, ಆ ಸಭೆಯುಂ ನಡೆಯಲಿನ್ನದಕೆ
ಮೂದಿಂಗಳ ಸಮಯಮಿಹುದು. ಧರ್ಮಸಭೆಯಂ ನೀಂ
ಪ್ರತಿನಿಧಿಸುವೊಡೆ ನಿಮ್ಮ ರಾಷ್ಟ್ರೀಯ ಪರಿಚಯ
ಪತ್ರದೊಡನೆ ನಿಮ್ಮಿಯ ಧರ್ಮ ಮುಂತಪ್ಪ ಘನ
ವಿಷಯಗಳ ವಿವರವಂ ನೀಡಿ ನಿಯಮಾವಳಿಯ
ಅನುಸಾರದೊಳ್ ಪ್ರತಿನಿಧಿಸವೇಳ್ಕುಂ. ಮಿತ್ರ,
ಅಂತುಮಲ್ಲದೆಯೆ ಪ್ರತಿನಿಧಿಸಲ್ ಅರ್ಜಿಯಂ
ಬರೆದುಕೊಂಬ ಅವಧಿಯು ಆಗಳೇ ಕಳೆದುದಯ್,
ಇನ್ನೇಂಗೈವೆ ?"
ಹಾ, ಎಂತಪ್ಪ ನಿರಾಶೆಯ ಅಲಗು
ಇರಿದುದು ಎದೆಯ ಸ್ವರ್ಣ ಕುಂಡಮಂ! ಒಡನೊಡನೆ
ಏನೊಂದುಸುರದೆ ಮನಗರಗಿ ಚಿಂತಾಕ್ರಾಂತ
ಗತಿಯಲಿ ಸಿಲುಕಿತು ಹೃದಯ ಬನದ ಕಾಮಳ್ಳಿ.
ಇನ್ ಮುಂದೇನ್ ಎಂಬೊಂದು ಪ್ರಶ್ನೆಯುಂ ಕಾಡಿದುದು

ಚಿತ್ರಗುಪ್ತನವೊಲ್, ಮೂದಿಂಗಳ ವಾಸ್ತವ್ಯ
ಎನಲ್ಕೆ ಹಣಾಭಾವದ ಭಂಗ. ಧೀಮಂತ ಗೆಳೆ
ತನಮಿರದ ಭಂಗ. ಧರ್ಮಸಭೆಗೆ ಪುಗಲಾರದ
ಭಂಗ. ದೂರದಿಂದ್ಯೆದು ಪಡೆದ ಉತ್ಸಾಹ ಭಂಗ
ಎಲ್ಲವುಂ ಒಗ್ಗೂಡಿ ಚಿತ್ತದಲಿ ಗೊಂದಲವಂ
ಹೂಡಿದುವು. ಸ್ವಾಮೀಜಿ ವಿಚಾರಾಕ್ರಾಂತತೆಯ
ಸಾಗರದಲಿ ಮುಳುಗಿದರ್. ಎಂತಪ್ಪ ಕಠಿಣಮೊ
ಆ ಸನ್ನಿವೇಶ. ಕಾಣದೂರು ಅಪರಿಚಿತ ಜನ
ಸಹಕಾರ ಸಹಾಯದೊರೆಯುವುದೇಂ ಇಲ್ಲಿ? ಶ್ರೀ
ಗುರುವಿನ ದಯೆ, ದೈವಕೃಪೆಯುಮಿಲ್ಲದೆನೇನ್
ಸುಳಿಯದು ಮನದಲಿ. ಗಳಿಗೆಗಳಿಗೆಗು ಕಠಿಣತರ
ಕರಿಯಛಾಯೆ ಚಾಚುತಿದೆ ಮೈ. ಖಾನಾವಳಿಯ
ಭವ್ಯ ಹಸ್ತ ಚಾಚುತಿದೆ ರೊಕ್ಕದಥೈಲಿಯಲಿಹ
ಕಾಸು ಕಾಸುಗಳ್ ಕಸಿಯೆ. ಇನ್ ಮುಂದೆ ಇಲ್ಲುಳಿಯೆ
ಒಂದೆರಡು ವಾರದ ಬಾಳ್ಮೆಗೆ ಸಾಲದೆಮ್ಮರೊಕ್ಕ.
ಆದೊಡಂ ಶ್ರೀಭಗವಾನರ ಶುಭಾಶೀರ್ವಾದ
ಸದಾ ಇರ್ಪುದೆಂಬೊಂದು ಪೂರ್ಣ ಮನದ ನೆಚ್ಚು
ಬಲಿವುದು ಚಣಚಣಂ. ಎಳೆಮನಸಿನ ನೇಹಿಗರ
ಮೇಣ್ ಶಿಷ್ಯರ ಮುಮ್ಮಾತಿನ ಮೋಡಿಗೆ ತಾಂ ಮಣಿದು
ಮರುಳಾಗಿ ಎಳೆಯಣುಗನ ಮಾಳ್ಕೆಯಲಿ ಮುಂದ್ಯೆದು
ಬಂದು ಅಜ್ಞನೊಲ್ ಭ್ರಾಂತನೊಲ್ ಪರಿತಪಿಸುವುದು
ಸರಿಯಲ್ತು. ಬಂದುದಾಯ್ತು, ಎಂತಾದೊಡಮಾನು
ಸರ್ವಧರ್ಮ ಸಭೆಗೆ ಪುಗುವ ಪ್ರಯತ್ನ ಪಡುವುದೆ
ಈಗಣ ಸತ್ ಕಾರ್ಯಂ; ಎಂಬುವ ಪುರುಡುಪುರುಪು
ಬತ್ತಿಬಾಡದೆ ಉಳಿದುದು ಎದೆಯ ಕರಂಡದಲಿ.

ಇಂ ತಾನುಳಿದೊಡಿಲ್ಲಿಯೆ ತನ್ನ ಬಡ ಆರ್ಥಿಕ
ಥೈಲಿಯುಂ ಕರಗಿ ತಾಂ ಬಿಕಾರಿಯೆ ಆದಪುದು
ದಿಟಂ, ಎಂದೆಂಬ ವಿಚಾರಾತ್ಮಕ ಶ್ರದ್ಧೆಯಲಿ
ಮನವಿಟ್ಟರ್ ಸ್ವಾಮಿ ವಿವೇಕಾನಂದರ್. ಅಂದು
ತಂಬೆಳಗಿನವೊಳ್ತು ದೊರೆಸಾನಿಯೆಂದಳ್ "ಕೇಳ್
ಇಲ್ಲಿಂದ ಅನತಿದೂರದ ಬೋಸ್ಟನ್ ನಗರಿಯು
ಸುಸಂಸ್ಕೃತ ಜನಗಳಿಂ ತುಂಬಿ ವಿಜೃಂಭಿಪುದು.
ನೀಂ ಧಾರ್ಮಿಕ ಸಂಕಿರಣ ನಡೆಸುವೊಡೆ ಬೋಸ್ಟನ್
ನಗರಿ ಉತ್ತಮ ಸ್ಥಳ. ಮೇಣಲ್ಲದೆಯೆ ಕಿರಿಯ
ನಗರಿಯಿರೆ ಸುಲಭ ಖರ್ಚು ನಡೆವುದರೊಳ್ ಇನಿತು
ಸಂಶಯಮೆ ಇಲ್ಲಂ."
ಅದಂ ಮನದೊಳಿರ್ಕಿ ಉಗಿ
ಬಂಡಿಯಂ ಹಿಡಿದು ಪೊರಮಟ್ಟರ್ ಗುರುವರ್ಯಂ.
ಭವ್ಯನಗರ ಪ್ರದೇಶಮಂ ದಾಂಟಿತು ಬಂಡಿ.
ಪ್ರಕೃತಿಯ ಉಡಿಯಲ್ಲಿ ಕೆನ್ನಾಗರ ಹರಿದೊಲ್
ಬುಸುಗುಡುತೆ ಹರಿಯುತಿರೆ ಇಕ್ಕೆಲದ ಊರುಗಳ್
ಹಳ್ಳಿಗಳ್ ಹೊಳೆಕೆರೆಗಳ್ ಸೇತುವೆ ಕಟ್ಟೆಗಳ್
ಸೊಗಮುಗುವ ಸುಸುಂದರ ತೋಂಟಗಳ್ ಚೆಂದದಿಂ
ಮಿಂಚಿನೊಲ್ ಮಿಂಚಿ ಸಂದುಹೋದುವು, ಕಣ್ಮಂತೆ.
ಪಚ್ಚ ಪಸುರುಕ್ಕುವ ಫಲವೃಕ್ಷ ಸಂದೋಹಮೆ
ಎಲ್ಲೆಲ್ಲು. ತರತರದ ಫಲಗಳ್ ನರುಗೆಂಪೆನೆ
ರಂಗುರಂಗಾಗಿ ಜೋಲುಬಿಳ್ದಿವೆ ಬಾಯಿಯೊಳ್
ನೀರೂರಿಸುವಂತೆ. ಉಗಿ ಬಂಡಿಗಳ ಸಹಸ್ರ
ಕಾಲೋಟ ಎಡೆವಿಡದೆ ನಡೆದಿರಲ್ ಎಲ್ಲವುಂ
ಕ್ಷಣಿಕಮಯ. ಚಣದೊಳ್ ಪಿಂಜರಿದು ಪೋದಪುದು,

ಮಿಂಚಿನ ಸೊಗಮುಗುವಂತೆ ಮಾಯದ ಆಟವಾಡಿ.
ಹರಿದುದು, ಹರಿದುದು ಉಗಿಬಂಡಿ ಗಜಗರ್ಭದೊಳ್
ನೂರಾರು ಮಂದಿಯಂ ಭರಿಸಿ. ಸ್ವಾಮಿಜಿಯಾ
ಬಂಡಿಯೊಳ್ ಇರ್ದರ್ ಬಹು ಮಂದಿ. ವರಕಾಂಚನ
ಕಾಂತಿಯ ವಸನಧಾರಿಯಂ ಸೂಕ್ಷ್ಮ ಮತಿಗತಿಯ
ಕಿರಣಂಗಳಂ ಹರಿಸಿ ಗಮನಿಸುವರ್; ಒಳಗಣ್
ತೆರೆದು. ಆಧ್ಯಾತ್ಮಿಕ ತೇಜದಿಂ ಬೆಳಂಗುವ
ಭೀಮವಪು ಮರವಟ್ಟು ಸೈಗೆಟ್ಟುದೊ ಎನಲ್ಕೆ
ನಿಶ್ಚಲಂ. ಅವರ ತನುಮನಂಗೂಡಿದ ಭಾವ
ಸಮಾಧಿಯು ಒರ್ಮೊರ್ಮೆ ಪ್ರದರ್ಶಿತಮಾಗಲ್
ಏನುಮಿದೇನೆನೆ ಅಚ್ಚರಿಯ ನೋಟ ಬೀರುತೆ
ಕೆಮ್ಮನೆ ಗಮನಿಸುವರ್; ಸಾವಧಾನದೊಳೊರ್ಮೆ
ಕೂತೂಹಲದಿಂದೊರ್ಮೆ. ಅಂತಿಂತು, ಸ್ವಾಮಿಜಿ
ಅಚ್ಚರಿಯ ವಸ್ತುವಾದರ್ ಎಲ್ಲ ಪಥಿಕರಿಗೆ.
ವೇಗವಂ ಮಿತಿಗೊಳಿಸಿ ಉಚ್ಚದನಿಯಲಿ ಕೂಗಿ
ಮುಂದಿನ ನಿಲ್‌ಮನೆಯಂ ಪುಗುವುದಂ ಸಾರಿತ್ತು
ಉಗಿಬಂಡಿ. ಸ್ವಾಮಿಜಿ ಕಂಗಳಂ ತೆರೆಯೆ
ಏನಚ್ಚರಿ! ಎಲ್ಲ ದೃಷ್ಟಿಕಿರಣಂಗಳ್ ತಮ್ಮ
ಮೇಲೆಯೇ ನೆಟ್ಟು ನಾಂಟಿವೆ! ತಾನೊಂದು ವಿಚಿತ್ರ
ಪ್ರಾಣಿಯೆಂಬೊಲ್!! ಒಡನೆ ಎಲ್ಲ ದೃಷ್ಟಿಯಷ್ಟಿಯು
ಸಿಡಿದುವತ್ತಲಿತ್ತಲ್, ಮೊಗದಿರಿವಿದರನೇಕರ್.
    ಉಗಿಬಂಡಿ ಮೆಲ್ಲನೆಯೆ ಮುಂಬಿನ ನಿಲ್ ಮನೆಯಂ
ಬೊಕ್ಕು ನಿಂದುದು ಘೋರ ಶಬುದಮಂ ತಟಕ್ಕನೆ
ನಿಲಿಸಿ. ಉಗಿಬಂಡಿಯ ಅಧಿಕಾರಿಯು ಒಳಗೈದು
ಎಲ್ಲ ಪಯಣಿಗರ ಮೌಲ್ಯಾಧಾರಿತ ಪಯಣದ

ಪ್ರವೇಶ ಪತ್ರಮಂ ಪರಿಶೀಲಿಸುತೆ ಗುರುವಿನ
ಬಳಿಗೆ ಬರೆ ಆಗಳವನೊಡಂ ಗುರುದೇವನುಂ
ಆಂಗ್ಲ ಭಾಷೆಯೊಳ್ ಸ್ವಚ್ಛಂದಗತಿಯಲಿ ಕೇಳಿ
ತಿಳಿಯುತಿರೆ, ತಮ್ಮನುಂ ತಿರಸ್ಕರಿಸಿ ಮಾತಾಡಿ
ಮೊಗತಿರಿವಿದ ಜನರ ಮುಖಬಿಂಬದಲಿ ತೆಕ್ಕನೆ
ಕಳಕಳಿಯ ಛಾಯೆ ಮುಸುಗಿ ನಾಣ್ಚಿಕೆಯ ರಂಗುರಂ-
ಗಾದುದು ಕಣ್ಗೆಸೆಯಿತು. ಕಂಡು ಕಾಣದವೊಲ್
ಮಿಣ್ಣನಾದರ್ ಸ್ವಾಮಿ ವಿವೇಕಾನಂದರುಂ.
ಮುಂಬಿನ ಪಯಣಂ ಹಚ್ಚ ಹಸುರುಕ್ಕುವ ಗ್ರಾಮ್ಯ
ಪ್ರದೇಶದೊಳಾಯ್ತು. ಹೊಲಗದ್ದೆಗಳ್, ತೋಂಟದ
ಫಲವೃಕ್ಷಗಳ್ ಕುಸುಮಕೋಟಿಯ ವಾರಾಶಿ
ಎಲ್ಲವುಂ ಸತ್ಯಸೌಂದರ್ಯದ ಮನಮೋಹನ
ದೃಶ್ಯಂ. ಎಲ್ಲಿಯುಂ ಸದ್ದುಗದ್ದಲದ ಸೊಲ್ಲಿಲ್ಲ.
ಶಾಂತಪ್ರಶಾಂತನಿಶಾಂತವಾಶಾಂತಸುಶಾಂತ
ವೇಶಾವೇಶದಲಿ ಸಗ್ಗದೈಸಿರಿಯುಕ್ಕುತಿಹ
ಹೊನ್ನಾಡೊ ಎನೆ ಸುಂದರ ಬಂಧುರಮಾದತ್ತು
ಗ್ರಾಮ ಸಾಮ್ರಾಜ್ಯಂ. ಸುದೂರದೂರದ ಬೇಲಿ
ಆವರಣದೊಳ್ ಪುಲ್ಮೇವ ಗಜಗಾತ್ರದ ಬಣ್ಣ
ಬಣ್ಣಗಳ ಧೇನುಗಳ್ ಸೌಂದರ್ಯ ಲಕ್ಷ್ಮಿಯೊಲ್
ಕಣ್ಗೆಸದುವು, ಲಲಿತಮಯವಾಗಿ. ನೋನೋಡುತ
ರಾಮರಾಜ್ಯನೆನೆದರ್ ಸ್ವಾಮಿಜಿ. ಆ ಹಚ್ಚನೆಯ ಭವ್ಯ
ಪುಲ್ಗಾವಲ್, ಆ ಪ್ರಶಾಂತ ಗ್ರಾಮ್ಯ ಜೀವನ.
ಆ ಮೋಹನಕರ ಗೋವುಗಳ್ ಆ ಕೃಷಿಕರ
ಅಮಿತ ಕಾರ್ಮಿಕ ಸದ್ದೆ ಎಲ್ಲವುಂ ಕಣ್ಗೆ ನಲ್
ಹಬ್ಬವುಣಿಸಿದುವು ಮನ ಮುಗ್ಧಗೊಳುವ ತೆರದಲಿ.

ಆಗ ಸ್ವಾಮೀಜಿ ಭಾವಾವಿಷ್ಟರಾಗಿ ಧ್ಯಾನಸಮಾಧಿ
ಅವಸ್ಥೆಯೊಳ್ ಮುಳುಗಿದರ್ ಕೆಲವೊಳ್ತು. ಬಳಿಕಂ
ಬಂಡಿಯಲಿ ಸದ್ದುಗದ್ದಲಂಗಳ ಮೊರೆತ ಕಿವಿ
ಮುಟ್ಟಿ ತಾಗುತೆಧ್ಯಾನಭಂಗಗೆಯ್ಯಲುರೆ ಕಣ್
ತೆರೆದರ್ ಗುರುವರಂ. ಜಗದ ತಳುಕು ತಳ್ಳಂಕ
ತಳಮಳಗಳ ತಿಕ್ತ ಜೀವನದಲಿ ಮುಳುಮುಳುಂಗಿ
ಸತ್ಯದ ಕಿರಣಗಳಿಂ ದೂರದೂರವಾದ ಜನ.
ಅಶಾಂತಿಯ ಮುಳ್ಳುಗಳ ಜಾಲದಲಿ ನೆರೆಸಿಲ್ಕಿ
ನರಳುವವರ ಬಾಳ್ಬದುಕಿನ ಜಂಜಡವನರಿತು
ಮನಗೊಳುತೆ ಯೋಚಿಸಿದರ್ ಸ್ವಾಮೀಜಿ. ದುರಾಸೆ
ದುಮ್ಮಾನ ತುಂಬಿರ್ದು ಗತಿತಪ್ಪಿ ಮತಿತಪ್ಪಿ
ಜೀವನದ ಗುರಿಯೇ ತಪ್ಪಿ ಬಾಳ್ವರ ಕಣ್ಣೀರ್
ಕಥೆಯುಂ ಬಹುತೇಕ ಅವರ ಮುಖಮುದ್ರೆಯಲಿ
ಕಂಡುಬಹ ಗಂಭೀರ ಚಿತ್ರಮಿರೆ; ಸ್ವಾಮೀಜಿ
ತಮ್ಮೊಳ್ ವಿಚಾರ ಪರರಾದರ್....ಮನುಕುಲಜರ
ಬಾಳ್ಬದುಕಿಗೆ ಸುಂದರತರ ಚೌಕಟ್ಟಿರದಿರೆ
ಸ್ವಚ್ಛಂದ ರಾಗ ಭಾವಕೆ ನಾಂದಿ. ಕಲುಷಿತ
ಬದುಕು ಕಲುಷಿತ ಸಮಾಜಕೆ ನಾಂದಿ.
ಇದಲ್ತೇ ಪಾಶ್ಚಾತ್ಯ ಸಂಸ್ಕೃತಿಯ ವಿಕೃತಿ!
ಸುಸಂಸ್ಕೃತಿಯುಮಿಲ್ಲದೆ ಜ್ಞಾನ ವಿಜ್ಞಾನಗಳ
ಸಮೃದ್ಧಿ ಎಷ್ಟಿರಲೇಂ? ತಾಂತ್ರಿಕ ಜ್ಞಾನ ಬಲಿತು
ಬೆಳೆದರೇಂ? ಧಾರ್ಮಿಕ ಚೌಕಟ್ಟಿಲ್ಲಮೆನಲೆಲ್ಲ
ಜೀವನಮೌಲ್ಯಂ ಕುಪಥವೇ ಸರಿ...ಎನಿಸಿ
ತಮ್ಮೊಳ್ ಬಿಸುಸುಯ್ದರ್ ವಿವೇಕಾನಂದರುಂ.
    ಚಿಕಾಗೊ ನಗರಿಯಿಂ ಸಹ ಪಯಣದಲಿ ತಮ್ಮೊಡಂ

ಪಾಲ್ಗೊಂಡ ನಾರೀಮಣಿಯೊರ್ವಳ್ ಮನವಿಟ್ಟು
ಸ್ವಾಮಿಜಿಯ ಚಲನವಲನಗಳಂ ನೋಡುತ್ತೆ
ಮನವೋತು ಎದೆಯೋತು ಅವರಯೋಗ ದೃಷ್ಟಿಯ
ಭಾಗ್ಯಮಂ ಮನನಗೈದು ನೆಚ್ಚಿರೆ ಮೆಚ್ಚಿದಳ್
ಘನ ಗೌರವ ಭಾವದ ಮೂಟೆಯಾಗಿ. ತಲೆಯೊಳ್
ವೆಳ್ಳಿವರ್ಣದ ಅಲಕರಾಶಿಯಂ ಹೊಂದಿರ್ದು,
ಹಿಂದಲೆಯೊಳ್ ಮುಡಿಗಟ್ಟಿ ಕೊರಳೊಳ್ ಮುತ್ತುಗಳ
ಹಾರಮಂಧರಿಸಿರ್ದ ಅಂಗನೆಯು ಸುಜ್ಞಾನ
ಪ್ರೌಢೆ, ವಿಧ್ಯಾಪ್ರೌಢೆ, ಸದ್ಭಾವನಾ ಪ್ರೌಢೆ.
ಧರ್ಮ ನೀತಿ ನಿಯತಿಗಳ ಪ್ರೌಢೆ ಜಗತ್ ಪ್ರೇಮ
ಭಾವನಾ ಪ್ರೌಢೆ. ಇಂತಿಂಥ ಪ್ರೌಢತನದಿಂ
ಜೃಂಭಿಸಿದ ಪರಮ ಪುಣ್ಯವತಿಯುಂ ಗುರುವರನ
ಬಳಿಗೈದು ನೆರೆ ಕುಶಲೋಪರಿಯ ನಡೆಸಿ ನುಡಿಸಿ
ಪ್ರೀತ್ಯಾದರದಿಂ ಕಂಡು ಸರ್ವಧರ್ಮ ಸಮ್ಮೇಳ
ಕೈದ ಭಾರತದ ಪ್ರತಿನಿಧಿಯೆಂಬದನರಿದು
ಶುಭಹಾರೈಸಿ ಅಭಿನಂದಿಸಿ ತನ್ನಯ ಗೃಹಕೆ
ಮಧುರತರ ಕರೆಯನಿತ್ತು ಸಂಹರ್ಷ ಭರಿತ
ಹೃದಯದಿಂ ಆಹ್ವಾನಿಸಿದಳ್ ಪ್ರೌಢ ಲಲನಾ
ಮಣಿ. ಆಗಳಾ ಗುರುವರಂ ತಮ್ಮಯ ಮಹಾನ್
ಗುರುದೇವನ ಆಶೀರ್ವಾದ ಎಂದೆನುತೆ ನೆನೆ
ನೆನೆದು ನಮಿಸಿ ಬಂಡಿಯಿಳಿದು ಆ ಗೃಹಿಣಿಯ
ಬೆಂಬಿಡಿದು ನಡೆದರ್ ಪಿಟಕದೊಡಂ. ಅದೊಂದು
ಸುವಿಶಾಲ ಕೃಷಿವಲಯದ ಮಧ್ಯೆ ನೆಲೆಗೊಂಡ
ಗೃಹದ್ದೇಶಂ. ಗೃಹಿಣಿ ಸಕಲತರ ಕರ್ಮ ಕಾಂಡದಲಿ
ನುರಿತು ಅರಿತು ಕೃಷಿಕ್ಷೇತ್ರದಲಿ ದುಡಿವ ಮಾನಿನಿ.

ಸಂಧ್ಯಾರುಣನ ಚಂದನಕಾನ್ತಿಯ ಹೊನಲ್ ಹರಿ
ಹರಿದು ತುಂಬಿ ಹರಡಿದುದು ಜಗದ್‌ವಲಯಮೆಲ್ಲ
ಕೆಂಗಲಿಸುವೋಲ್. ಸ್ವಾಮಿಜಿಯುಂ ಗ್ರಾಮೀಣ
ಭಾಸಮಾನ ತಡಿಯಂ ಕಣ್ತುಂಬ ಕಂಡು ಮನ
ಗೊಂಡು ಸಂತಸದ ರಸಾನ್ನವನುಂಡರ್. ಸಾಯಂ
ಸಮಯದ ಪದ ಚಾರಣಕಾಗಿ ಅಲ್ಲಲ್ಲಿಯೇ
ತಿರುಗಾಡುತೆ ಮುನ್ನಡೆಯೆ ಕರ್ವೆಟ್ಟಿನ ತಲದಿ
ನೆಲೆಗೊಂಡು ಹಬ್ಬಿಹರಡಿದ ಅಗಾಧ ಜಲದಿಂ
ತುಂಬಿದ ಸುರಮ್ಯ ಪುಷ್ಕರಣಿ. ಸುತ್ತಮುತ್ತಲ್
ಮುಂಬೆಳೆದು ಪಚ್ಚಪಡಲ್ ಎನೆ ವಿಜೃಂಭಿಸಿದ
ಸಮೃದ್ಧ ಪುಲ್ಗಾವಲ್ ಇರ್ದುದು ಘನವೆತ್ತು.
ಅದರ ಸುತ್ತಲ್ ಬೇಲಿಯ ಕಾವಲಿನೊಳ್ ಕಟ್ಟು
ಕಳಚಿರ್ದ ನುಣ್ಮೆಯ್ಯಿನ ಅಶ್ವಂಗಳ ಹಿಂಡು
ಕಣ್ಸೆಗೆದುದು, ಹೃನ್ಮನಗಳ್ ಸೆಳೆಯುವವೋಲ್! ಆ
ಅಶ್ವಗಳ ಪುರುಪುರುಡು ಅಗಾಧ. ಕೆನೆಯುತ್ತೆ
ನೆಗೆಯುತ್ತೆ ಪುಲ್‌ಮೇಯುತ್ತೆ ಒಂದನ್ನೊಂದು ನೆರೆ
ಮೂಸಿ ಮುಟ್ಟಿ ಮುದ್ದಿಸುವೊಲ್ ನೂಂಕಿ ರಮಿಸುತ್ತೆ
ನಲಿಯುತಿಹ ಚಿತ್ತಾರ ನೋಳ್ಪ ಕಣ್ಮನಗಳಂ
ಮುಗ್ಧಗೊಳಿಪ ದೃಶ್ಯಂ. ಸಗ್ಗದಿಂದಿಳಿತಂದ
ದೇವೇಂದ್ರನ ಅಶ್ವಗಳೊ ಗಂಧರ್ವಲೋಕದ
ತುರಗಗಳೊ ಕುರುಕ್ಷೇತ್ರದ ಘೋರತರ ಯುದ್ಧದ
ರಂಗಕೆಯ್ದ ರಾಹುತರ ಹಯಗಳೊ ಎನುತಚ್ಚರಿ
ಕುಂಡದೊಳ್ ಮುಳುಗುವಂತೆ ಇರ್ದುವು ಅಶ್ವಗಳ
ಮನಮೋಹನ ಹಿಂಡು! ಮಿಂಚುಮೆಯ್ಯಿನ ಸಂಪದಂ
ಮೆರೆಯುತ್ತೆ. "**ಅಶ್ವ ಲಕ್ಷಣಂ ವೇಗೊ**" ಎಂಬುದಂ

ಪ್ರದರ್ಶಿಸುವ ಪೊಲ್ಲಾಟ ಮನಮತಿಯಂ ಸೆಳೆದು
ಸೂರೆಗೊಂಡುದು ಸುರಮ್ಯ ಚಿತ್ತಾರ ತಾನಾಗಿ.
ಸ್ವಾಮೀಜಿ ಮರಳಿದರ್ ಬಿಡದಿಗೆ ಮಸುಗತ್ತಲ್
ಮುಸುಂಕುವ ಮುನ್ನ. ಮನದೊಳ್ ತಮ್ಮ ಮುಂದಿರ್ಪ
ವಿಚಾರದ ಕುಂಡದೊಳ್ ಮುಳುಗಿದರ್. ಈ ವಿಶ್ವ
ಜಗತ್ತಿನ ವಿಜ್ಞಾನ ಯುಗದ ತಾಂತ್ರಿಕಗತಿಯ
ಕೌತುಕಮಯ ಕ್ರಾಂತಿಯ ಮುಂತೆ ಧರ್ಮಜಯಮೆನೆ
ಸಾಮಾನ್ಯಮಲ್ತು. ಮೊಟ್ಟಮೊದಲಿಗೆ ಒಳಪುಗುವ
ಕಟ್ಟು ಕಟ್ಟಳೆಯ ನಿಬಂಧಮಂ ಹರಿ ಹಾಯ್ವ ಕಡು
ಭಂಗವೆ ಅಗಾಧಮಿರೆ, ಮುಂದೆನಗೆ ದೈವದಯೆ
ಗುರುಕೃಪೆಗಳ್ ದೊರೆಯದಿರಲ್ ಈ ನಾಡಿನಲಿ
ನನ್ನಿಂದೇನಕ್ಕುಂ? ಇನ್ನೆಲ್ಲವುಂ ದೇವೇಚ್ಛೆ!
ಎಂಬೊಂದು ವಿಚಾರದ ಮಂಥನಮಿರೆ ಮನದಲಿ
ಸ್ವಾಮೀಜಿ ವಕ್ಷಸ್ಥಲದ ಮೇಲೆ ಕೈಕಟ್ಟಿ
ಶತಪಥ ತಿರುಗಿದರ್ ಪ್ರಾಂಗಣದುದ್ದಗಲದೊಳ್.
ಇಲ್ಲಿ ಭಾರತೀಯತೆಯ ಸುಂದರ ಧರ್ಮಮಯ
ಶಾಂತಿಮಯ ದಯಾಮಯ ಮೇಣಧಿಕತರ ಪರಮ
ಅಹಿಂಸಾಮಯ ಗುಣಗಳಿರುತ್ತಿರೆ ಭೂಸ್ವರ್ಗ
ಎನಿಪುದೀ ಸಂಮೃದ್ಧ ಭೂಮಿ. "**ಉದರ ನಿಮಿತ್ತಂ
ಬಹುಕೃತ ವೇಶಂ**" ಎಂಬ ನೀತಿಯಾದೊಡೆ
ಎಲ್ಲಿಯ ಸುಶಾಂತಿ ಮನುಕುಲಕೆ? ಸಕಲ ಸದ್ಗುಣ
ಭರಿತ ಬರ್ದುಕು ನಿಚ್ಚ ಆಧ್ಯಾತ್ಮಿಕ ಸಂಗಿಯು
ತಾನಾದಪುದು....
ಚಿಂತನೆಯೋಟಂ ಓಡುತಿರೆ
ಮನೆಯ ಸ್ವಾಮಿನಿಯುಂ ಬಳಿಗೈದು ಕರೆದಳಾ

ರಾತ್ರಿಯ ಉಪಹಾರಕೆ. ಗುರುವರಂ ಲಘುತರದ
ಉಪಾಹಾರಮಂ ತೀರ್ಚಿ ಅಳಸಿಂಗ ಪೆರುಮಾಳ್
ಕುರಿತು ಪತ್ರವೊಂದಂ ಉಲ್ಲೇಖಿಸಿದರಿಂತು,
"ಅಯ್ಯ ಪರಮ ಮಿತ್ರನೆ, ಆನಿಲ್ಲಿಗೈದು ಎನಿತೊ
ಆಸೆ ನಿರಾಸೆಗಳಲಿ ಸಿಲ್ಕಿ ತೊಳಲಿದೆನಾದೊಡಂ
ಇನ್ನಾಂ ನಿರಾಸೆಯಲಿ ಬೇಯೆನ್. ಅಳಿದೊಡೆ ಸತ್
ಸಾಧನೆಯೊಳಾಂ ಅಳಿವೆನ್. ಸಕಲ ವಿಘ್ನಗಳ
ಎದುರ್ಚುತೆ ಸಂಗ್ರಾಮ ಹೂಡಿ ಗೆಲ್ಲದೆಯೆ ಆರುಂ
ಮಹಾ ಕಾರ್ಯಮಂ ಕರಗೂಡಿಸಿ ಕೊಳರ್. ಸಾಧನೆ-
ಜ್ವಲಂತಮಯ. ಸಾಧನೆಯೊಂದೇ ಸಂಜೀವನ
ಪರಾಕಾಷ್ಠೆಗೆ, ಅದಲ್ಲದೊಡೆ ಬದುಕು ವ್ಯರ್ಥಂ.
ಸಾಧನೆಯ ಸಡ್ಡೆಯುಂ ವ್ಯರ್ಥ. ಬರಿ ವ್ಯರ್ಥಕಣಾ!"
ಬೋಸ್ಟನ್ ನಗರಿಯಲಿ ಕಳೆದುವೆರಡು ದಿನಮಾನಂ.
ವಾತಾವರಣ ಶೀತಲಾತಿಶೀತಲಮಿರೆ ಚಳಿ
ಬಾಧೆ ಅತಿಯಾಗಿ ಕೊರೆಯುತಿರೆ ಮೈ ಗಡಗಡನೆ
ನಡುಗಿದುದು ಗುರುವರನ. ಅರಳೆಯುಡುಪು, ತೆಳ್ಪಗೆ
ಥಳಥಳಿಪ ಕೌಶೇಯ ವಸನಂಗಳ್ ರಕ್ಷಣೆ
ನೀಡದಾದುವು ಮೆಯ್ಗೆ. ಮನೆಯೊಡತಿಯುಂ ತಮ್ಮ
ದೇಶೀಯ ವಾಯುಗುಣವನನುಸರಿಸಿ ಬೆಚ್ಚನೆಯ
ಉಣ್ಣೆ ವಸ್ತ್ರಗಳ್ ತೊಡಲ್ ಬೆಸಸಿ ಒದಗಿಸಿದಳ್
ಉಣ್ಣೆಯ ವಸನಗಳಂ. ಸ್ವಾಮಿನಿಯುಂ ತಮ್ಮನೆರೆ
ಹೊರೆಯ ಬಹುತೇಕ ಧೀಮಂತ ವ್ಯಕ್ತಿಗಳನುಂ
ಬರಮಾಡಿ ಪರಿಚಯಿಸಿದಳ್ ಗುರುವರನಂ. ಆ
ಪರಿಜನರ್ ದಿನದಿನಂ ಬರುಬರುತೆ ಮಾತಾಡಿ
ಧರ್ಮಚರ್ಚೆಯಂ ಬೆಳೆಸಿ ಮನವರಿಕೆಗೈದರ್

ಸ್ವಾಮೀಜಿಯ ಧೀಮಂತಿಕೆಯಂ. ಬಳಿಕಂ ಪರಿಚಯಂ
ಬೆಳೆಬೆಳೆಯುತೆ ಚರ್ಚೆ ತರ್ಕವಿತರ್ಕಗಳ್ ನಡೆದುವು
ದಿನದಿನಂ. ಆಗಳೇಂ ಸುದ್ದಿ ಹರಡಿ ಬರುಹೋಗುವ
ಘನವಂತರ ಪರಿಯ! ಪೂರ್ವ-ಪೌರ್ವಾತ್ಯ ವಿಚಾರ
ವಿಮರ್ಶೆ, ತಾತ್ತ್ವಿಕ ಚರ್ಚೆ, ಧಾರ್ಮಿಕ ಸ್ಥಿತಿಗತಿ
ವರ್ಣಭೇದ ವರ್ಗಭೇದ ಈ ಎಲ್ಲವುಂ ನಿಚ್ಚ
ಚರ್ಚೆಗೆ ವಿಷಯಗಳಾಗಿ ಮೆರೆದುವು. ಹಾರ್ವರ್ಡ್
ವಿಶ್ವವಿದ್ಯಾಲಯದ ಗ್ರೀಕ್ ಭಾಷಾ ತಜ್ಞ
ಮೇಣಧ್ಯಾಪಕ ಜೆ.ಹೆಚ್. ರೈಟ್ ಎನೆ ಪೆಸರ್ವೆತ್ತ
ಸುಜ್ಞಾನಿಯೈದನ್ ಗುರುವರ್ಯನ ಬಳಿಗೆ. ಆ
ಸುವಿದ್ಯಾ ಪ್ರುಭೃತಿಗಳ್ ಈರ್ವರ್ ಒಗ್ಗೂಡಿ
ಕಲೆತು ಮಲೆತು ವಿಷಯ ವಿಮರ್ಶೆಯಲಿ ತೊಡಗಿದರ್
ಜಗಮರೆತು. ಪಗಲೆಂತು ಉರುಳಿದುದೊ ಬೈಗುವೊಳ್ತು
ಎಂತೈದುದೊ ತಿಳಿಯದೊಲ್ ಉರುಳಿತು ದಿನದಗಾಲಿ.
ರೈಟ್ ದೊರೆ ನುಡಿದರ್ ಮನಬಿಚ್ಚಿ "ಎಲೆ ಮಿತ್ರ,
ನೀಂ ಎಲ್ಲವಗೆಯ ದಾಖಲೆಗಳ ಸಹಿತ ಬಂದು
ಪ್ರತಿನಿಧಿಪುದು ಸರಿ ಎನಿಪ ಕ್ರಮಮಿರಲ್ ನೀಂ
ತಪ್ಪಿದೆಂ."
ನಗೆವಾತಿನ ತಿಳಿಹಾಸ್ಯದಲಿ ನುಡಿ
ಗಟ್ಟು ಪೊರಬೀಳೆ ತಾಂ ನಗುನಗುತೆ ಸ್ವಾಮೀಜಿ,
"ಇರ್ಕೆ ಭಾರತದ ಪ್ರತಿನಿಧಿಯೈಸಿ ಬರಲಾಂ
ಸನಾತನ ಹಿಂದೂಧರ್ಮದ ವರಿಷ್ಠರ್ ಒಪ್ಪಿ
ಋಜುವಿತ್ತ ಕೃಪಾಶೀರ್ವಾದ ಮುದ್ರಿತ ಪತ್ರಂ
ತಾರದೆಯೆ ಬಂದುದೆನ್ನಯ ಅಣುಗತನವಾಯ್ತು.
ಅಂತುಮಲ್ಲದೆಯೆ ಇಲ್ಲಿನ ರೀತಿ ನೀತಿಗಳ್

ಅರಿತುಕೊಳ್ಳದೆ ಬಂದುದೆಮ್ಮ ಮೊದಲ ತಪ್ಪಾಯ್ತು."
ತಾವಂದು ಪೊರಟ ಅಣುಗತನದ ವಿಚಾರಮಂ
ಸುಲಭ ಶೈಲಿಯಲಿ ಹಾಸ್ಯಪರಿಹಾಸ್ಯಂವೆರಸಿ,
ಹರಿಸಿದರ್, ಮತ್ತಮಾ 'ಮುಂದೇಂ?' ಎಂಬವೊಲ್ ಮುಖ
ಬಿಂಬದಲಿ ಭಾವುಕತೆಯ ಪ್ರಶ್ನೆಯ ಮುದ್ರೆಯುಂ
ತೆಕ್ಕನೆ ಮುದ್ರಿತವಾದೊಲ್ ಮಿಂಚಿತು ನೋನೋಳ್ಪ
ಕಂಗಳಿಗೆ. ಜೆ.ಹೆಚ್. ರೈಟ್ ಬೆಳ್ನಗೆ ಬೆಳ್ದಿಂಗಳ್
ಸೂಸಿ ದೃಢ ಕಂಠದಲಿ ನುಡಿದರ್ "ಏನೆಂಬೆ,
ಸ್ವಾಮೀಜಿ? ನಿಮ್ಮಿಂದ ಯೋಗ್ಯತಾ ಪತ್ರಮಂ
ಅಥ ಅಧಿಕೃತ ಪತ್ರಮಂ ಕೇಳ್ವುದೆನೆ ದೇವ
ಸೂರ್ಯನಂ "ಉಜ್ವಲಿಸೆ ನಿನಗೇನಧಿಕಾರ?" ಎಂದೊಲ್
ಹಾಸ್ಯಾಸ್ಪದಮಲ್ತೇ?" ನೀಂ ಮಿದಂ ಚಿಂತಿಸುವ
ಕಾರಣಮೆ ಇಲ್ಲ, ತಿಳಿಯ್ಯೆ. ಮುಂಕಾರ್ಯಭಾರಂ
ಆಂ ನಿರ್ವಹಿಪೆನ್. ಅಲ್ಲಿನ ಮಿತ್ರರಿಂಗೆ ತಿಳಿಪಿ
ನಿಮಗೆ ಅನುಕೂಲಗೈದಪೆನ್."
ರೈಟ್ ದೊರೆಯ
ಆಸ್ವಾಸನೆ ಮನವಂ ಮುಟ್ಟಿ ಎದೆಯ ಗಿಂಡಿಗೆ
ಶಾಂತಿವಾರಿಯಂ ಸ್ಫುರಿಸಿತು, ಹನಿ ಹನಿಯಾಗಿ;
ಸ್ವಾಮೀಜಿಯ ಎರ್ದೆಯ ಭಾರವೇ ಇಳಿವಂತೆ.
ತೀಡಿತು ತನಿಗಾಳಿ. ಮೈ ಗಡಗಡ ನಡುಗುವೊಲ್.
ಸಾಂಧ್ಯ ಗೀತಗಳ ಸುಸ್ವರಂ ಪೊಣ್ಮಿತು ಗಿಡು ಮರ
ಸಸ್ಯಗಳ ರೆಂಬೆ ಕೊಂಬೆಗಳ ಸಮೂಹದಿಂದಲಿ.
ದೂರವೆಟ್ಟದ ಪಿನ್ನೆಲೆಯಲಿ ನೇಸರಿಳಿದು ಮರೆ
ಯಾಗಿ ಆವುದೊ ಕಂಡರಿಯದ ತಾಣಕೆ ಪಯಣ
ಹೂಡಿದಂ.

ರೈಟ್ ದೊರೆಯುಂ ತರುಣ ಪ್ರಭೃತಿಯ
ವಾಗ್ಜಾಲ, ಪ್ರತಿಭಾಶಕ್ತಿ, ಲೋಕ ಪ್ರಜ್ಞೆಯು
ತಾತ್ವಿಕ ಸ್ಫೂರ್ತಿ, ವೇದಾಂತ ಶ್ರದ್ಧೆ ಅಲ್ಲದೆ
ಆಧ್ಯಾತ್ಮಿಕ ಜ್ಞಾನ ಎಲ್ಲವಂ ಅರಿದರಿದು ತಾಂ
ಅಚ್ಚರಿಯ ಮೂಟೆಯಾಗಿ ಮನಮೆಚ್ಚಿ ತನ್ನೊಳ್
ಬೆಚ್ಚಿ ಬೆರಗಾದಂ. ಮನಮುಮ್ಮಳಿಸಿರೆ ತರುಣ
ಯೋಗಿಯ ಬೆನ್ ತಟ್ಟಿ ಪರಮ ತೋಷದಿಂ ದಿವ್ಯ
ಪ್ರೇಮದಿಂ ನುಡಿಸಿದರ್ "ಅಯ್ಯ ಯುವ ಶ್ರೇಷ್ಠನೇ!
ನಿನಗೆ ಒಳ್ಳಿತಕ್ಕೆ! ಶುಭಮಕ್ಕೆ ! ನೀನಹುದು ವರ
ಧೀಮಂತ! ನೀಂ ತಕ್ಕಿನ ಭಾರತ ಪ್ರತಿನಿಧಿ!
ನಿನಗೆ ಪ್ರವೇಶಮಂ ನೀಡದಿರಲೆಮಗೆ ನಿಜ
ಅವಮಾನ ಕಣಾ! ಆನಿದಂ ನೇರ್ವಡಿಸೆ ಭರದಿ
ಪ್ರಯತ್ನಿಸುವೆನ್." ಎಂದ ಬಳಿಕ ಮನೆಯೊಡತಿಗೆ
ನುಡಿದನೆಂತೆನೆ "ದೇವಿ, ನಿನ್ನ ತೀಕ್ಷ್ಣಮತಿಯಂ
ಮೆಚ್ಚಿದೆನ್. ನೀಂ ಸೂಕ್ಷ್ಮಮತಿಯಿರೆ ಕರೆತಂದೆ
ಇವನಂ ಗುರುತಿಸಿ. ಅಸಮಾನ್ಯನಿವ ಇನ್ನೆಬರಂ
ಅನಿಂತುಟು ಆಮ್ನಾಯ ಯುವ ಪ್ರಭೃತಿಯನೆಲ್ಲು
ಕಂಡೆನಿಲ್ಲಂ. ಪರಮೋನ್ನತ ವಾಗ್ಮಿ ಸಕಲತರ
ವಿಚಾರಾಂತ ವಿಶ್ವಮಂ ಮನಗೊಂಡ ಪುರುಷ
ವರೇಣ್ಯಂ. ಸತ್ ಸಾಧನಶೀಲಂ. ಸಧ್ಯದೊಳ್
ಇವನಂ ಸರ್ವಧರ್ಮ ಸಮ್ಮೇಳನಕೆ ಪುಗಲ್
ಪರವಾನಗಿಯಂಬಡೆಯೆ ಪ್ರಯತ್ನಿಸುವೆನ್.
ನೆರವಿತ್ತೊಡಾವ್ ಇವನ ಪ್ರವೇಶಕನುಮತಿ
ದೊರೆವುದೆಂಬೆನೆನ್."
ಆಗಳಾ ಸ್ವಾಮಿನಿ ಭ್ರೂ ಭಂಗಿ

ಗೈದು "ಆನಂದು ಪ್ರಥಮ ದರ್ಶನದೊಳ್ಅರಿದೆ
ಇವನ ಪ್ರತಿಭಾ ಶಕ್ತಿಯಂ. ಅದರಿಂ ಕರೆತರೆ
ಕಾರಣಂ."
"ಸರ್ವಧರ್ಮ ಸಮ್ಮೇಳನಕೆ ಕಳಿಪಿ
ಕುಡುವ ಭಾರಮಿದೆಮ್ಮದಾಯ್ತು."
ಮತ್ತೆ ಗುರುವಂ
ಕುರಿತಿಂತು ಬೆಸಸಿದರ್ "ಆಂ ಸಭಾಧ್ಯಕ್ಷರಿಗೆ
ಪತ್ರವಂ ಬರೆದು ನಿನ್ನ ಕೈಗೀವೆನ್, ನೀಂ
ಅದಂ ಕೊಂಡು ಅವರಂ ಕಂಡು ಕೇಳಿಕೊಂಡೊಡೆ
ಸ್ಥಳಾವಕಾಶ ದೊರೆವುದೆಂದೆಮ್ಮ ನಂಬಿಗೆ ಕಣಾ!
ನಿನಗೆ ಶುಭಮಕ್ಕೆ! ಪ್ರಪ್ರಯತ್ನಮಿದು ಸಲ್ವುದು
ಎಲ್ಲರ್ಗೆ, ನೀನ್ ಪ್ರಯತ್ನಿಸೈ ಗುರುವರ್ಯ!"
"ಆಯ್ತಾಯ್ತು. ಪತ್ರಮಂ ಕೊಂಡೊಯ್ದು
ಅಧ್ಯಕ್ಷರಂ ಕಾಣ್ವೆನೆನ್. ತಮ್ಮುಪಕಾರಕೆ
ವಂದನೆಗಳ್ ರೈಟ್ ದೊರೆಗಳೆ!" ಜಗದೊಳ್ ಧರ್ಮ
ಜ್ಞಾನ ಮೂಡಿ ಪಸರಿಸಿದೊಡೆ ಜಗತ್ ಶಾಂತಿಯುಂ
ಘನಿಪುದದು ಖಂಡಿತಾ. ಆಧ್ಯಾತ್ಮಿಕ ಜ್ಞಾನಂ
ಸರ್ವತ್ರ ಹಬ್ಬಿ ಜನ ಜಾಗ್ರುತಗೊಂಡೊಡೆ ಎನಿತು
ಸತ್ಯ ಸುಂದರಂ? ಅದರಿಂದೆ ಜಗದಾದ್ಯಂತ
ಶಾಂತಿ ವ್ರತ ಹರಡಲ್ ಸದವಕಾಶಮಲ್ತೇ?"
ರೈಟ್ ದೊರೆಗಳ ಜೀವ ಪುಳಕಗೊಂಡು ಗುರುವಂ
ಅಭಿವಂದಿಸುತೆ ಪತ್ರಲೇಖಂ ಕೈಗಿತ್ತರ್. ಮಿತ್ರ
ವಳಗಮಂ ಮನೆಯೊಡತಿಯುಂ ಕರಗಳ್ ಜೋಡಿಸಿ
ನಮಿಸಿ ಬೀಳುಕೊಂಡು ಪೊರಟರ್ ಗುರುವರಂ.
ಮತ್ತೆ ರೈಟ್ ದೊರೆಗಳ್ ಡಾ॥ ಬರೋಸ್ ಎಂಬುವ

ಮಹನೀಯನ ವಿಳಾಸಮಂ ಬರೆದು ಚೀಟಿಯಂ
ಕೈಗಿತ್ತು ಅವನ ಕಾಣೆಂದು ಸಲಹೆಯನಿತ್ತರ್.
ತಿಂಗಳೆರಡರ ಬೋಸ್ಟನ್ ನಗರಿಯ ವಾಸ್ತವ್ಯ
ಪಾಶ್ಚಾತ್ಯ ಜೀವನ ಸಂಸ್ಕೃತಿಯ ಆಳನೀಳ
ಗಳಂ ಕರತಲಾಮಲಕಗೊಳಿಸಿರೆ, ಸುಜ್ಞಾನ
ವಿಜ್ಞಾನಗಳ ಅರಿವು ಮೂಡಿತು ಗುರುವರಂಗೆ.
ಉಗಿಬಂಡಿಯ ಪಯಣಂ ನಡೆದಿರೆ ಅವಿರತವಾಗಿ
ಸಹಪಯಣಿಗನೊರ್ವನ ಪರಿಚಯಂಬಡೆಯುತ್ತೆ
ಡಾ॥ ಬರೋಸರ ವಿಳಾಸಮಂ ಕುರಿತು ಅವನಂ
ಕೇಳಿದರ್ ಸ್ವಾಮೀಜಿ. ಆಗಳಾ ಪಯಣಿಗಂ "ತಾಂ
ಅವರ ಮನೆಯಂ ಕಂಡಿಹೆನ್ ನಿನಗದಂ ತೋರ್ಪೆ"
ಎನುತೆ ಆಶ್ವಾಸನೆಯನನುನಯದಿಂದೆ ನೀಡಿದಂ.
ಸ್ವಾಮೀಜಿಗಾಗ ಪುಡುಕುವ ಭಾರವು ಇಳಿಯಲುರೆ
ಸಂತುಷ್ಟರಾದರ್. ಅವನ ಗೆಣೆತನಂ ಇನ್ನಿನಿತು ಬೆಳೆದು
ಬಲಯಿತು ಪಯಣಂ ಮುಂಬರಿದು ಮುಗಿಯುವನಕಂ.
ಉಗಿ ಬಂಡಿಯುಂ ಚಿಕಾಗೊ ನಗರಿಯ ನಿಲ್ಮನೆಯಂ
ನಿಧಾನಗತಿಯಲಿ ಬೊಕ್ಕು ನಿಂದತ್ತು ಅದ್ಭುತ
ಸದ್ದು ಕಳೆದು. ಒಡನೊಡನೆ ಆ ಗೆಣೆಯಂ ತನ್ನ
ಪೆಟ್ಟಿಗೆಯೊಡಂ ಗಡಬಡಿಸಿ ಇಳಿಯುತೆ "ಮಿತ್ರನೆ,
ಎನಗಿಂದು ಡಾ॥ ಬರೋಸರ ಮನೆಯನ್ ತೋರಲ್
ಪೊಳ್ತುಮಿಲ್ಲಂ. ಎನಗಧಿಕ ಕಜ್ಜಮಿಹುದು ಕಣಾ!"
ವಾಕ್ಯಸರಣಿ ಮುಗಿಯುವನಿತರೊಳ್ ಅವಂ ತೆಕ್ಕನೆ
ಕಣ್ಮರೆಸಿದಂ. ಗುರುವರ್ಯಂ ಪೆಟ್ಟಿಗೆಯೊಡಂ ಇಳಿಯುತ್ತೆ
ಡಾ॥ ಬರೋಸರ ವಿಳಾಸಮಂ ತಡುಕಿದರ್ ತಮ್ಮ
ಕಿಸೆಯೊಳ್. ಅದಿರ್ದುದೇನ್ ಅಲ್ಲಿ? ಅದೆಂತು ಕೈ

ತಪ್ಪಿತೊ ತಿಳಿಯದಾಯ್ತು. ಪೆಟ್ಟಿಗೆಯೊಳ್ ತಡುಕಿರೆ
ಸಿಗದಾಯ್ತು. ಅದಲ್ಲದೆ ರೈಟ್‌ದೊರೆಯುಂ ಸಭೆಯ
ಅಧ್ಯಕ್ಷರಿಗೆಂದು ಬರೆದ ಪತ್ರವೆ ಇಲ್ಲದಿರೆ,
ತಳಮಳದಲಿ ಮನಂಗೆಟ್ಟು ಚಿಂತಿತರಾದರಾ
ಗುರುವರಂ. ಇನ್ನೇನ್ ಗತಿಯೆನುತೆ ಸುತ್ತಲುಂ
ಕಣ್ ನೆಟ್ಟು ನೋಡಿದರ್ ಎಲ್ಲಿಯುಂ ಪರಿಚಿತರ್
ಕಂಡರಿಲ್ಲ. ಮುಸ್ಸಂಜೆ ಕವಿದು ಬರೆ ನಿಶಿ ಹೆಜ್ಜೆ
ಮುಂದಿರಿಸಿದಳ್ ಕ್ರಮವತ್ತಾಗಿ. ನಿಲ್ದಾಣ
ದೇಶಮಂ ದಾಂಟಿ ಪೊರಗುಯ್ದೊಡೆಲ್ಲಿ ವಸತಿಯಂ
ಪುಡುಕಲಾಂ ಎಂದೆಂಬ ಚಿಂತೆಯುಂ ಕಾಡಿದುದು
ಮನಂ. ರಾತ್ರಿಯಂ ಕಳೆದೊಡಿಲ್ಲಿ ಬೆಳಗಾದೊಡೆ
ವಿಳಾಸಗಳಂ ಪುಡುಕಿಕೊಂಬುದು ಸುಸಾಧ್ಯಮಿರೆ
ಈಗಳೇಕೆ ಈ ಕಳ್ತಲೆಯೊಳ್ ಅಲೆತ ಎಂಬೊಂದು
ಯೋಚನೆಯೊಳ್ ಅತ್ತಿತ್ತ ನೋಡಿದರ್ ಕಣ್ಣಿಗೆ
ಕಣ್ಣಾಗಿ. ಜನಗಳಿರ್ದರ್ ವಿರಳವಾಗಿ. ಚಳಿಗಾಳಿ
ಭರದಿ ಬೀಸಿವೀಸಿ ಕೊರೆಯುತ್ತಿದೆ ಮೈಚರ್ಮ
ಬಿರಿಯುವ ತೆರದಿ. ಉತ್ತರೀಯಮಂ ಬಿಗಿದು ಮೈ
ತುಂಬ ಹೊದ್ದೊಡಂ ತಾಳದು ಮೈ. ಗಡಗಡಗಡ
ನುಡುಗುತ ಅತ್ತಿತ್ತ ನೋನೋಡಿ ನಿಲ್ಮನೆಯ
ಉದ್ದಗಲದೊಳ್ ತಿರುಗಲೆಲ್ಲಿಯುಂ ಮಲಗಿಕೊಳೆ
ಸರಿಯಪ್ಪ ಸ್ಥಳ ಕಾಣದಾಯಿತು. ಗೋಡೆಯಂ
ಆತುಕೊಂಡಂತೆ ಬಳಿಯೊಳ್ ಬಿದ್ದಿರ್ದ ಪೆಟ್ಟಿಗೆ
ಕಣ್ಗೆಸೆಯಿತು. ಮೈ ಬಾಗಿ ನೋಡಲದು ಹಲಗೆಯ
ಖಾಲಿ ಪೆಟ್ಟಿಗೆ. ಮೈ ಮುದುಡಿ ಮಲಗಿ ಕೊಂಬುವೊಲ್
ಹರವಾಗಿರೆ ಅದರೊಳ್ ನುಸಿದು ಮುದುಡಿ ಮಲಗುತೆ

‘ಇಷ್ಟಾದೊಡಂ ದೊರೆತುದು ಪುಣ್ಯಂ’ ಎನಿಸಿದುದು
ಮನಮತಿಗೆ. ಮುಂದೆರಡು ದಿನಗಳಲಿ ಜಗತ್ತಿನ
ಸರ್ವಧರ್ಮ ಸಮ್ಮೇಳನದ ಭವ್ಯ ವೇದಿಯ
ಮೇಲೇರಿ ಸರ್ವ ಸಮ್ಮತ ಉಪನ್ಯಾಸಮಂ
ಗೈದು ಜಗತ್ ಪ್ರಸಿದ್ಧಿ ಪಡೆವ ಮೊದಲ್ ಅವರ್
ಭಿಕಾರಿಯಾಗಿ ಪೆಟ್ಟಿಗೆಯೊಳ್ ತಂಗಿದ ವಿಷಯ
ಸರ್ವಧರ್ಮ ಸಮ್ಮೇಳನದ ಸಂಗಿಗರಾರ್
ಅರಿಯರ್. ನಾಗರಿಕರರಿಯರ್ ವಿಧಿಮಾತ್ರಬಲ್ಲುದು.
ಉಗಿಬಂಡಿಯ ನಿಲ್ದಾಣೆಯು ತಾನಾಯ್ತು ಸಾಕ್ಷಿ
ಗುರುದೇವನ ವಿದೇಶಯಾತ್ರೆಯ ಪರಿಕ್ರಮಕೆ.

ಹರಿಃ ಓಂ ತತ್ ಸತ್

❋ ❋

ಏಕವಿಂಶತಮೋಲ್ಲಾಸಂ

ವಿಶ್ವ ವಿಜಯ ಪತಾಕೆ

ಇರಲಿರಲ್, ಪ್ರಾತಃಪೂರ್ವ ಪ್ರತ್ಯುಷೆಯ ಮಂಜುಳ
ವದನದಲಿ ತಿಳಿಗೊಂಡ ಸೂರ್ಯೋದಯದ ದೂರ
ಸ್ಮೃತಿಯವೊಲ್ ಕಣ್‌ಗೊಳಿಸಿತು ಲಸತ್ ಉಷಃಸ್ಮಿತಂ.
ಲೋಚನಾಗೋಚರ ಮಹಾ ಶರೀರಿ ಅನಿಲಂ
ಸುಮಧುರ ಸುಧಾ ಶೈಲಿಯಲಿ ಬಿಜ್ಜಣಿಗೆಯ
ಬೀಸಿಬೀಸುತೆ ಸಂಭ್ರಮದೊಳ್ ಗಮಿಸುವನೆನಲ್
ಹರಡಿತ್ತು ತಂಪಿನ ಕಂಪು; ಹೂಗಂಪೆಳೆವವೊಲ್
ಮುಂಬರಿಯುತಿರೆ ತನಿಯೂಡಿ ತುಳುತುಳುಕಿತು ಉದಯ
ಮಾನದಾ ಸಿರಿಸೊಬಗು ಪ್ರದರ್ಶಿಸಿದ ಮಂದ
ಮಂದ ಬೆಳ್ಬೆಳಗು. ತನ್ನ ಎಳೆಮೆಯ್ಯ ತಾವರೆ
ಕೆಂಪಿನವೊಲ್ ಹೊಂಪುಳಿ ಹೊಗರಾಂತುದು ಉದಯ
ವದನಂ. ಉಷೆಯ ಬೆಳಗಿಗೆ ಮಂಗಳ ಗಾನಮಂ
ಪಾಡುವ ಸಹಸ್ರ ಪಲ್ಲವಿಯುಲಿವ ಪಕ್ಷಿಕುಲ
ಅಕ್ಷತೆಯೆರಚಿ ಶುಭ ಹಾರೈಸುವೊಲ್ ಮೊಳಗಿದುವು
ಮುಕ್ತ ಕಂಠಗಳಾಗಿ; ಮುಕ್ತ ಪಕ್ಷಗಳಾಗಿ.
ಜಗಜಗ ಉರಿವ ದೀಪಗಳ ಮಾಲೆ, ಗಡಬಡಿಸಿ
ಓಡಾಡುವ ಉಗಿಬಂಡಿಗಳ್, ವಿರಳಮಾದ
ಮಾತುಗಳ ಮರ್ಮರ ಕೊಡಂಕೆಯಂ ಮುಟ್ಟುತಿರೆ
ನಿದ್ರೆಯುಂ ಬಳಿಯಲಿ ಸುಳಿಯಿತೊ ಸುಳಿಯಲಿಲ್ಲವೊ
ಅಂತಿಂತು, ನಿಶಿಯ ಕರಿವೊಳೆ ಹರಿಹರಿದು ಧುಮುಕಿತಾ
ಅಭಿಜಿನ್ ಮುಹೂರ್ತದ ದಿವ್ಯ ಘಟಿಗೆ, ಮತ್ತಂ
ಮುಟ್ಟಿಮುದು ಇಂದ್ರ ಘಟಿಯಂ. ಬಾನ್ ಬಯಲಲಿ

ಮಲರ್ವರಿಲ್ ಕುಲಕೋಟಿ ಮಾಯದ ಆಟವಲಿ
ಮುಳುಗಿ ಅಳಿದು ಉಳಿದು ಕಣ್ ಮರೆಸಿರೆ
ಅಂಬರದ ಸುನೀಲ ಪಟಲ ಬೆಳಗಿದುದು ಸ್ವಚ್ಛ
ಸೌಂದರ್ಯ ತೇಜೋ ರಾಶಿಯ ಮಹಾ ವೈಭವದಲಿ.
ಸ್ವಾಮೀಜಿ ಎದ್ದು ಕುಳಿತರ್. ಯಂತ್ರ ಸಜ್ಜಾದ
ನಿಳ್ಮನೆಯು ಕಣ್ಣಾಯ್ತು ಗುರುವರ್ಯನ ಸ್ಥಿತಿಯ
ದರ್ಶನಕೆ. ವಿದ್ಯುದ್ದೀಕರಿಸಿರ್ದ ದೀಪಗಳ
ಸ್ತೋಮ ಇಣಿಕಿ ನೋಡಿದುವು ಉಜ್ವಲಿಪ ಕಂಗಳ
ದೃಷ್ಟಿಬೀರಿ. ಪೋಗಿ ಬಹ ಉಗಿ ಬಂಡಿ ಕಂಡುವು
ಕಣ್ತುಂಬ. ಸ್ವಾಮೀಜಿ ಸಜ್ಜಾದರ್ ಪ್ರಾತಃಘಟಿಗೆ.
ಸಿದ್ಧಾಸನದೊಳ್ ಕುಳಿತು ಕರ ಮುಗಿದು ಬೇಡಿವರ್,

"ಗುರುರ್ಬ್ರಹ್ಮಾ ಗುರರ್ವಿಷ್ಣುಃ
ಗುರುರ್ದೇವೋ ಮಹೇಶ್ವರಃ ।
ಗುರುಶಿವ ಪರಂ ಬ್ರಹ್ಮ
ತಸ್ಮೈ ಶ್ರೀಗುರವೇ ನಮಃ ॥"

ನಿಲ್ಮನೆಯಂ ಆಶ್ರಯಿಸಿದ ಸಹಸ್ರ ಸಂಖ್ಯೆಗಳ
ಪಾರಿವಗಳ್ ಎರೆಂಕೆಗಳಂ ಪಟಪಟಿಸಿ ಗುರು
ಗುರು ಸದ್ದು ಗೈಯುತ್ತೆ ಮಿಂಚಿ ಬಹ ಮುಂಬೆಳಕು
ಚೆಂಬೆಳಕುಗಳ ಛವಿಯ ಹರವಿಗಾಗಿ ಮುದದಿಂ
ಕಾದಿರ್ದುವು ಆತುರಕಾತರಂವೆರಸಿ. ಆ
ಉದ್ವಗಲದೊಳ್ ಅತ್ತಲಿತ್ತಲ್ ಹಣಿಕಿನಿಣಿಕಿ
ನೋಡುತಿರುವಾಗಳ್, ಮರದ ಪೆಟ್ಟಿಗೆಯೊಳಗಣ
ಮಾನಿಸನ ದುರವಸ್ಥೆಯದು ಕಣ್ಣಿಗೆ ಮುಳ್ಳು
ಚೊಕ್ಕಂತೆ ಚುಚ್ಚಿತ್ತು. ಚುಚ್ಚಿತ್ತು. ಚುಚ್ಚಿತ್ತು.
ಸುದ್ದಿಗೈಯ ತೊಡಗಿದುವು ಅತ್ತಿತ್ತಲ್ ಪಾರಿ

ಕುಪ್ಪಳಿಸಿ. ದೂರದೂರ ದಿಗಂತ ಪಾತ್ರದಲಿ
ಮುಗಿಲ್ ಮಾಲೆಗಳ್ ನೀಲಗೆಂಪಾಗಿ ಹರಿದ್ರು
ಗೆಂಪಾಗಿ ಸ್ವರ್ಣಗೆಂಪಾಗಿ ಕರ್ನೀಲ ಛವಿ
ಗೆಂಪಾಗಿ ವರ್ಣಾಂತರ ತಳೆಯುತ್ತಲಿರ್ದುವು
ಅರುಣಾರುಣನ ಸ್ವಾಗತಕೆ ಸಜ್ಜಿನ ಶೋಭೆಯ
ಗಣಿಯಾಗಿ. ಪ್ರಾತಃಪೂರ್ವ ಪ್ರತ್ಯುಷೆಯ ಸುಶಾಂತ
ಕೊರಳ್ಗಿರಿದುದೊ ಎನಲ್ ಸಿರಿಗೊರಳ್ ಕಿರುವಕ್ಕಿ
ಕೂವ್ವೂವೋ! ಕೂವ್ವೂವೋ! ರಾಗಹರಿಸಿದುದು ಮನ
ಮಿಡಿಸುವ ತೆರದಲಿ. ಸ್ವಾಮೀಜಿ ಪೆಟ್ಟಿಗೆಯಿಂದೆ
ಪೊರಬಿಳ್ದು ಸುವಿಶಾಲ ವಕ್ಷವೇದಿಯೊಳ್ ಧೈರ್ಯ
ಗಣಿಯಿರ್ದೊಡಂ ವಿಳಾಸಗಳೆ ಕಳೆದಿರೆ ಎಂತು
ಪರಿಹಾರಮೊ ಎಂದೆಂಬ ಚಿಂತೆಯು ಕಾಡಿದುದು
ಮನವಂ ಕೀಟದ ತೆರದಿ. ನಿಲ್ದಾಣಮಂ ಬಿಟ್ಟು
ಪೊರಮಡುವ ಮುನ್ನ ನಿಲ್ಮನೆಯ ಉದ್ದಗಲವಂ
ಅಳೆದರ್ ಕಣ್ ದಿಟ್ಟಿ ಹರಿಸಿ. ಬಂಡಿಗಳಿವೆ ಮುಂ
ಪಯಣಕ್ಕೆ ಅಣಿಯಾಗಿ. ಪೋಗಿಬಹ ಜನರಿಗೇಂ
ಕೊರಮಿಲ್ಲ. ಮಾತುಗಳ ಮರ್ಮರದ ಗದ್ದಲಂ
ಕಡಿಮೆಯೇನಿಲ್ಲ. ಸ್ವಾಮೀಜಿಯುಂ ಪೊರಗುಯ್ದು
ವದನಮಜ್ಜನಂಗೈದು ಪ್ರಾತರ್ವಿಧಿಯಂ ಲಗು
ಬಗನೆ ತೀರ್ಚಿದರ್. ಪ್ರಗಾಢ ಚಳಿಯುಂ ಉಣ್ಣೆ
ಯುಡುಪಿನೊಳಗಡೆ ತೂರ್ದು ಕೊರೆಯುತ್ತಿದೆ ಮೆಯ್ಯಂ.
ಉದಯರವಿ ಬಾನಂಚಿನಲಿ ಉದಿಸಿಬರೆ ಮಿಸುನಿ
ಹೊಳೆ ಹರಿದುದು ಚಿಕಾಗೊ ಭವ್ಯ ನಗರಿಯಮೇಲೆ.
ಬಹುಜನರ ಬಾಹುಳ್ಯದಿಂ ಗಿಜಿಗುಡಿವ ವೀಥಿ
ಹಿಡಿದು ನಡೆದರ್ ಗುರುವರಂ ಮುಂದೆ, ಮುಂದೆ. ಆ

ಮಹಾನ್ ನಗರದ್ದೇಶದ ಹಾದಿಯಂಚಿನಲಿ
ಮುಂಬೆಳೆದ ಪೆರ್ಮರಂಗಳ್, ಸಾಲು ಸಾಲ್ಸೈಸಿರೆ
ಕೆಂಪು ಹಳದಿ ಮಿಶ್ರಿತ ವರ್ಣವರ್ಣಾಂತ ನವ
ನವೋ ಶೋಭಾಶೈಲಿಯ ತಳಿರ್ಗಳ್ ತುಂಬಿರಲ್
ಮಹೋತ್ಸವಕೆ ಸಿಂಗರಂಬೆತ್ತವೊಲ್ ವೈಭವೀ
ಕರಿಸಿದುದು ವರ್ಣರಂಜಿತವಾಗಿ. ತಲೆಯಂ ಎತ್ತಿ
ನೋಡಲಾ ನಗರದೇಶದ ಸಂಪದಂ ದೇವ
ಲೋಕದ ಕುಬೇರನಾ ವೈಭವವೊ ಎನಲ್ಕಾ
ದೃಶ್ಯಮಾನ ಸೌಂದರ್ಯ ಶೋಭಾಯಮಾನಂ.
ರವಿಕಿರಣಗಳ್ ಮರದ ಎಲೆಎಲೆಗಳ ನಡುನಡುವೆ
ಕೋಲುಕೋಲಾಗಿ ತೂರಿ ಬರುತಿವೆ ನೆರಳುಗಳ
ನೆಲೆಯಲಿ ಬೆಳಕಿನುಂಗುರವ ಹರಡಿ. ಅಂತೊಂದು
ರಮಣೀಯ ಪ್ರಾತಃಕಾಲೀನ ಸೌಂದರ್ಯ ರಸ
ಸ್ವಾದನೆಗ್ಯೆಯುತ ಮುಂಕೊಂಡು ಬರೆಬರೆ ಮುಂದೆ
ದೂರದಲಿ ಭವ್ಯ ಗೃಹ ಶ್ರೇಣಿಯೆಸೆದುದು ಕಣ್ಗೆ.
ಸ್ವಾಮೀಜಿ ಕತ್ತೆತ್ತಿ ನೋಡಿದರ್ ಬೃಹತ್ತಮ
ಗೃಹಶ್ರೇಣಿಯಂ ನಾಗರಿಕ ಶೈಲಿಗೊಪ್ಪಾಗಿ
ಕಣ್ಗೆ ಸೊಗಯಿಸಿ ಮೆರೆದಿರ್ದುವು. ಅಹ ಎಂತಪ್ಪ
ಐಶ್ವರ್ಯದ್ಯೆಸಿರಿ? ಕರಕುಶಲಕಲೆಗಳಿಂ ಒಡ
ಮೂಡಿ ದೇವ ಕುಲೀನ ಇಂದ್ರನಾ ಅರಮನೆಗೆ
ಹೊಯ್ಕುಯ್ಯಾಗಿ ನಿಂದಿವೆ ಸಾಲ್ಗಟ್ಟಿ. ಆ ಮನೆಯ
ಒಡೆಯರಂ ಬೇಡಿದೊಡೆ ಕೈತುಂಬ ಸಹಾಯ
ದೊರೆಯಲಕ್ಕುಂ ಎಂದೆನಿಸೆ ಆಸೆಯ ಉರಿಕಿಡಿ
ಬೆಳಗಿದುದು. ಪಜ್ಜೆಗಳ್ ಮುಂಬರಿದುವು
ಅತ್ತಲತ್ತಲ್. ದೂರ–ನಸುದೂರವೇ ಇರ್ದ

ಅವುಗಳ ಬಳಿಗೆ ತ್ವರಿತಗತಿಯಲಿ ಸಾಗಿದುವು
ಪಜ್ಜೆಪಜ್ಜೆಗಳ್. ಮೊದಲ್‌ಮನೆಯ ಬಳಿ ನಿಂದು
ನೋಡೆ ಮುಂಬಾಗಿಲ್ ಕದ ಮುಚ್ಚಿಮುದೆಸೆಯಿತ್ತು
ನೆಟ್ಟ ಕಂಗಳಿಗೆ. ಅಂಗಣದೊಳಾರಿಲ್ಲದಿರೆ
ನಸುವೊಳ್ತು ಕಾದಿರ್ದು ಕೂಗಿ ಕರೆದರ್ ಸ್ವಾಮಿ
ವಿವೇಕಾನಂದರುಂ. ದನಿ ಮೊಳಗಿತು ಎರಡೆರಡು
ಬಾರಿ. ಮನೆಯೊಡೆಯ ಕದ ತೆರೆದು ಪಣಿಕಿನೋಡಲ್
ಮುಂಗೈ ಚಾಚಿ, ರೊಟ್ಟಿಗಳ್ ಬೇಡಿದರ್ ಗುರುವರಂ.
ಆಗಳಾ ಒಡೆಯಂ ದನಿಯೆತ್ತರಿಸಿ ಕಟು ಕಠಿಣ
ತರದಲಿ ಒದರಿದಂ "ಎಲೆ ತೊಲಗಾಚೆ!" ಒರಿನುಡಿ
ಪ್ರಸ್ತರಗಳ್ ಶೀಳುವೊಲ್ ಮೊಳಗಿತು! ಸ್ವಾಮೀಜಿ
ತಲೆಬಾಗಿ ಮುಂದಿನ ಮನೆಯಲಿ ಕರೆದು ಬೇಡಿದರ್.
ಅಲ್ಲಿಯುಂ ಅದೇ ಗತಿಯೊದವಿತ್ತು. ಅಂತೆಯೇ
ಮುಂದೆರಡು ಮನೆಗಳಲಿ. ಸ್ವಾಮೀಜಿ ಬೇಸತ್ತು
ಹಾದಿಯಂಚಿನ ಹೆಮ್ಮರದ ತಲದಲಿ ಮಂಡಿಸಿ
ಕಣ್ಮುಚ್ಚಿ ಧ್ಯಾನಗತಿಗಡರಿದರ್. ಸಮಯಮುರುಳಿತು.
ಬಾಲರವಿ ಬಾನೇರಿದಂ. ಬೆಳ್ಮುಗಿಲ್ ಮಂಡಲಂ
ಮೆರೆದುದು ರವಿಯ ಸುತ್ತಲ್. ಭಾವಾವೇಶದಲಿ
ಮುಗಿದ ಕಣ್ ತೆರೆಯಲಿಲ್ಲಂ. ಕಾಂಚನ ಕಾಂತಿಯ
ವಸನ ಭೂಷಿತ ಗುರುವರಂ ಸ್ವರ್ಗದಿಂ ಇಳಿದು
ಮರ್ತ್ಯಕವತರಿಸಿದನೊ ಎನೆ ದೇವ ಗಂಭೀರ
ಸುಂದರಂ. ಅಭಿಜ್ಞಾನ ಸುಂದರಂ. ಇಂತಿಂತು
ಘನವೆತ್ತ ಯುವರಿಸಿಯ ಮಹೋನ್ನತ ಚಿತ್ತಾರ
ಮೆರೆದುದು ಕಣ್ ಮನಗಳಂ ಸೆಳೆಯುವ ತೆರದಲಿ.
ಅರುಣರವಿಯು ಏರುತ್ತೇರಿ ಪೆರ್ ಮುಗಿಲ್‌ಗಳ

ಮಾರೊಡ್ಡಿನ ಅಡೆತಡೆಗಳಂ ಬದಿಗೊತ್ತಿ ತಾಂ
ವಿಜೃಂಭಿಸಿದಂ ನೀಲಶುಭ್ರ ಪಟಲದೋಳ್
ತೇಲುವ ತೆರದಿ. ಹೊಂಬಿಸಿಲ್ ಹರಡಿತು ಮೆಯ್ಯಂ
ಬೆಚ್ಚನೆಯ ಮುದ್ದಿಡುವ ಮಾಳ್ಕೆಯಲಿ, ಅಗಲಗಲ
ತ್ರಿಲೋಕದಗಲ, ರವಿ ಬೆಳಗಿದಂ ಸ್ವರ್ಣಮಯ
ಸೌವರ್ಣ ಉಂಡೆಯಂ ಹೋಲಿ! ಮನದೊಳ್ ಭಕ್ತಿ
ರಸವಾಹಿ ಹರಿಯುತಿರೆ ಪ್ರಶಾಂತ ಧುನಿಯಾಗಿ
ತಮ್ಮೊಳ್ ಮೆಲು ಮೆಲ್ಲನೆ ಹಾಡಿದರ್ ಗೀತೆಯಂ
ಭಕ್ತಿಪೂರ್ವಕವಾಗಿ. ಶಾಂತರಸ ಭರಿತವಾಗಿ.

"ಮಹೇಶ್ವರೀ, ಮಹಾಕಾಲೀ
ಮಹಾಗ್ರಾಸಾ ಮಹಾಶನಾ
ಅಪರ್ಣಾ ಚಂಡಿಕಾ
ಚಂಡಮುಂಡಾಸುರ ವಿಷೂದಿನಿ
ನಮಸ್ತೇಸ್ತು ನಮಸ್ತೇಸ್ತು ನಮಸ್ತೇಸ್ತು ॥"

ಪೊಳ್ತುವೊಳೆ ಪರಿಯಿತ್ತು ಧ್ಯಾನ ಗಾಂಭೀರ್ಯದಲಿ.
ನೈರುತ್ಯ ದಿಗ್‌ನಗರಿಯಂ ಸುಯ್ಯುತೆ ಸುಯ್ಯನೆ
ಬರ್ಪ ಊರ್ಜಸ್ವೀ ಅನಿಲದೇವನ ಸಂಮೃದ್ಧ
ಬಿಜ್ಜಣಿಗೆಯ ಸೇವೆಯುಂ ನಡೆದತ್ತು ಎಡೆವಿಡದೆ.
ಸ್ವಾಮೀಜಿಯ ಮನದಲಿ ಮಿಂಚಿನೋಲ್ ನೆನವೊಂದು
ಸುರುಳಿಯಂ ಬಿಚ್ಚಿದುದು. ಅಂದು, ನಿಷ್ಠಾವಂತ
ರೊಮೆಯ್ನ್ ರೋಲೆಂಡ್ – ಎರ್ದೆನೊಂದು ನುಡಿಸಿದ
ನುಡಿಗಟ್ಟುಮಿದು "ಸಕಲ ಸಹಸ್ರಾರು ತಂತ್ರದಿಂ,
ವಿಧಿವಿಧಾನದಿಂ ದ್ರವ್ಯ ಸಂಪಾದನೆಗೈವ
ನಾಡು, ಸಂತ ಫ್ರಾನ್ಸಿಸ್ ಸಾಧುವಿನ ನೀತಿಯಂ
ಮೆಚ್ಚದಾಯ್ತು. ಬುದ್ಧನ ಬಹಿರಂಗ ಭಿಕ್ಷಾಟನೆ

ಅಲ್ಲಿರ್ದ ಕಾಯಿದೆಗೆ ವಿರುದ್ಧ ಎನಲಾಯಿತು!"
ಹಾದಿಯಲಿ ಸಂಚಲಿಪ ಪದಘಾತಗಳ ಸದ್ದು
ಪಟಪಟಪಟತ್ಕಾರ ಮುಟ್ಟುತಿರ್ದುದು ಮನಂ.
ಮಾತುಗಳ ಮರ್ಮರಂ ಮುಟ್ಟುತಿರ್ದುದು ಎದೆಯ
ಅಂತರಂಗಮಂ. ಆರ ಗಮನವದು ಇತ್ತಲ್
ಹರಿದುದಿಲ್ಲ. 'ಛೀ! ಏಂಗತಿಯಾಯ್ತು? ನಮ್ಮವರ
ಅಣುಗತನದೊಳಾನತಿ ಅಣುಗನೆನೆ ಅನಿತಿನಿತು
ಪೂರ್ವಭಾವೀ ಯೋಚನೆಯಿನಿತಿಲ್ಲದೆಯೆ ಮೇಣ್
ರೀತಿನೀತಿ ಅರಿಯದೆ ಬಂದುದದು ತಪ್ಪಾಯ್ತು.
ಇದಂತಿರಲಿ, ಗುರುದೇವ ನೆನ್ನನೆಂತಿಲ್ಲಿಗೆ
ನೂಂಕಿದನೊ ಗತಿತಪ್ಪಿಸುವ ಪರಿಯಲಿ. ಇಲ್ಲಿನ
ಸ್ಥಿತಿಗತಿಯನರಿಯದೆ ಆನೆಂತು ಕಾರ್ಯಮಂ
ನಿರ್ವಹಿಪೆನ್? ಎಂಬೆಲ್ಲ ಯೋಚನೆಯ ಕೀಟಂ
ಕೊರೆಯುತಿರೆ ಬೈರಿಗೆಯೊಲ್ ನಿರಾಸೆಯ ಝುರಿಯದು
ಹರಿದಾಡಿತು ಒಡಲ್ ಸುಡುವ ಮಾಳ್ಕೆಯಲಿ. ಮನದಿ
ಚಿಂತೆಯು ಘನಿಸುತಿರೆ, ಎದುರುವಕ್ಕದ ಬೃಹದ್
ಭೂವಲಯದಲಿ ಅರಮನೆಯೊಲ್ ಮೈಗೊಂಡು ನೆರೆ
ಮೆರೆದಿರ್ದ ಭವನದ ಪೆರ್ವಾಗಿಲ್ ತೆರೆದು ಪೊರ
ಗೈದಳೊರ್ವ ಭದ್ರ ಮಹಿಳಾಮಣಿ. ನೆಟ್ಟ ಕಣ್
ಎದುರಾಗಿ ಕುಳಿತಿರ್ದ ಸ್ವಾಮೀಜಿ ಕಂಡರ್
ಪ್ರಪ್ರಥಮ ನೋಟಕ್ಕೆ, ಹಾ! ದಿವ್ಯ ದೃಷ್ಟಿಯಂ
ನೆಟ್ಟು ನೋಡಿಯೇ ನೋಡಿದಳ್ ಆ ಮಾತೃಮಯಿ.
ಯುವರಸಿಯ ಹೇಮೋಜ್ವಲ ತೇಜಸ್ವಿ ವದನಶ್ರೀ
ಸೆಳೆದತ್ತು ಕಣ್ಮನಗಳಂ ಸೂಜಿಗಲ್ಲಿನವೊಲ್.
'ಏನೀ ವಿಪರೀತ? ಮಹಾ ಮನೀಷಿಯಂತೊಲ್

ಕಾಣ್ಬ ವ್ಯಕ್ತಿಯಿಂತು ಅನಾಥನಿರೆ ಏಂ ಕತಂ?"
ಪ್ರಶ್ನೆಯೆಳ್ದುದು ಮಾತೃಮಯಿಯ ಎದೆಯೊಳ್ ತಾನೆ
ಮಿಡುಕುವಂತೆ. ಸನಿಹಕ್ಕೈದು ಮಿದುವಚನಗಳಿಂ
ಕೇಳಿಸಿದಳ್ "ನೀನಾರ್ ಎಂದಾನ್ ತಿಳಿಯಲಹುದೆ?"
ಒಡನೆ ಮೇಲೆಳ್ದು ಮಂದಸ್ಮಿತ ವದನದಿಂದೆ
ಬೆಳಗಿನ ನಮನಂ ಸಲ್ಲಿಸಿ ನುಡಿದರ್ "ತಾಯೆ,
ಅನಿಲ್ಲಿನ ಸರ್ವಧರ್ಮ ಸಮ್ಮೇಳನಕೆಂದು
ಭಾರತವರ್ಷದಿಂದೈದ ಸನಾತನ ಧರ್ಮಗಳ
ಪ್ರತಿನಿಧಿ. ದುರದೃಷ್ಟವಶಾತ್ ಅಗತ್ಯಮಿಹ
ಎಲ್ಲವಗೆಯ ವಿಳಾಸಗಳ ಚೀಟಿಗಳ್ ಪಯಣ
ಕಾಲದೊಳ್ ಕೈತಪ್ಪಿನಿಂ ಕಳೆದು ಹೋಗಿರಲ್
ಅನಾಥಗತಿ ಒದಗಿಹುದೆನಗೆ ತಾಯೆ! ಈಗಳ್
ಎನಗಿನಿತು ಸತ್ ಸಹಾಯವೇಳ್ಕುಂ."
"ವಿಳಾಸಂ
ಇಲ್ಲದಿರೆ ಪುಡುಕುವುದು ಕಷ್ಟಮಿೂ ಸ್ಥಳೀಕರ್ಗೆ.
ಅಂದುಬಳಿಕ ಪೊಚ್ಚಪೊಸ ಮಾನಿಸರಂಗಿದು
ಆಗದು ಗುರವೆ! ನಿನಗಾಂ ಆಪನಿತು ಸಹಾಯ
ಗೆಯ್ದಪೆನ್. ಚಿಂತಿಸದಿರ್, ಈಗಳ್ ನೀನೆನ್ನ
ಸೌಧಕ್ಕೆ ಬಾರ್ಯೆ. ನಿನಗೆಲ್ಲತರ ಸೌಕರ್ಯ
ಸವಲತ್ತುಗಳ ನೀವೆ ಕಣಾ!" ಎಂದಳಾ ನಿಜ
ಸೌಭಾಗ್ಯದಾಯಿನಿ! ಅಹ ಎಂತಪ್ಪ ಕರುಣಾ
ನಿಧಿ! ತಾಯಿ ಎನೆ ಪರಮ ಮಾತೃಕಾಮಯಿಯೆ ಸೈ!
ಮಂಡೆಯೊಳ್ ಬೆಳ್ನವಿರ್ ವೆಳ್ಳಿಯೊಲ್ ಮಿನುಮಿನುಗುವ
ಸತೀಮಣಿ, ಬಾಳ್ಗುಡಿಯ ದಿವಿನಾದ ಚಿನ್ನದಾ
ಹೊಸ್ತಿಲೇರಿ ನಿಂದ ಧೀಮಂತ ಮಹಿಳಾಮಣಿ.

ಅವಳ ಬಾಯೊಳ್ ನಲ್ನುಡಿಗಳ ಗೊಂಚಲುಗಳುಂ
ಉದುರುತಿರೆ ಬಳಬಳನೆ ಹೃನ್ಮನಗಳಂ ಮುಟ್ಟಿ
ತಟ್ಟಿ ಕಿಟ್ಟಿ ಸಂತಪ್ತರಾದರ್ ಸ್ವಾಮಿಜಿ.
ನಭಾಂಗಣದಿಂ ಭಾಗೀರಥಿಯೆ ಸುರಿದು ತಣಿಸಿದ
ಪರಿಯೊಳಾಯ್ತು ಆ ಗೃಹಿಣಿಯ ಶ್ರೀಮನದ ಮಮತೆಯ
ಕರೆಯೋಲೆ! ಹೃದಯ ತಣಿಯಿತು. ಮನವು ತಣಿಯಿತು
ಕಂಗೆಟ್ಟ ಚಿತ್ತ ತೋಷದಿಂ ಉರ್ಬಿತು. ಚಣದ
ಹಿಂದೆ ತಹತಹಿಸಿರ್ದ ಜೀವ ತಣ್ಣಗಾಯಿತು.
ದಕ್ಷಿಣೇಶ್ವರದ ಕಾಳೀಮಾತೆಯಂ ಮೇಣ್
ಶ್ರೀರಾಮ ಕೃಷ್ಣ ಪರಮಹಂಸ ಗುರುದೇವನಂ
ನೆನೆನೆನೆದರ್ ಮನದಲಿ. ಮುನ್ನಡೆದಳಾ ಮಾತೃ
ಹೃದಯಿ. ಮನೆಯ ಬಲಗಡೆಯೊಳಿರ್ದ ಅತಿಥಿಗಳ
ಗೃಹವಂ ತೋರ್ದು ಬರಮಾಡಿ, ಸೇವ್ಯರಂ ಕರೆದು
ಕ್ರಮವತ್ ನಿಯೋಜಿಸಿದಳ್ ಗೌರವಾದರದಿಂ.
ಸರ್ವ ಸಜ್ಜಿತಮಾದ ವಿಶ್ರಾಂತಿಗೃಹದೊಳ್
ಸ್ವಾಮಿಜಿಯು ಮಿಂದು ಮಡಿಯುಟ್ಟು ತೀರ್ಚಿದರ್
ಉಪಹಾರಮಂ. ಹಸಿದೊಡಲು ತಣಿಯಿತು. ನೋವಿನ
ಗಣಿಯಾದ ಉಸಿರ್ ತಣಿಯಿತು. ಮನೆಯೊಡತಿ ತನ್ನ
ಭುಜಭಾರಮಂ ನಿರ್ವಹಿಸೆ ಸರ್ವಧರ್ಮಸಭೆಯ
ಹಿರಿಯರಂ ಸಂಪರ್ಕಿಸುವ ಕಾರ್ಯದೊಳಿರ್ದಳ್.
    ಪಡುವಣದ ದಿಕ್ತಟಾಂತ ಲಗ್ನದಲಿ ಚಂದನ
ಕಾಂತಿಯು ಹರಡಿರೆ ಓಕುಳಿಯ ಚೆಲ್ಲಿ ಸೂಸಿದುದೊ,
ಕುರುಕ್ಷೇತ್ರದ ಕೆನ್ನೆತ್ತರೆರಚಿ ದಿಗ್ದೇಶವದು
ಕೆಂಗಲಿಸಿದುದೊ ಎನಲ್ ರಕ್ತಾಕ್ತ ಮಾದತ್ತು
ನೀಲಗಪ್ಪುವೆರಸಿ. ಉಜ್ವಲೋಜ್ವಲಿಪ ರವಿ

ಬಿಂಬ ಇಳಿದುದು ಅಸ್ತಗಿರಿಯ ಮಸ್ತಕದಮೇಲೆ.
ಸ್ವಾಮೀಜಿಯುಂ ಭವನದ ಪ್ರಾಂಗಣದೊಳ್ ನಿಂದು
ವಕ್ಷಸ್ಥಲದಲಿ ಕೈಕಟ್ಟಿ, ಅಸ್ತಮಾನ ಶೋಭಾ
ಶೈಲಿಯಂ ಆರಾಧಿಸುತಿರೆ ಭಕ್ತಿಪೂತ ಮಾನಸದಿ
ವಿಸ್ಮಯ ವಿಮೂಕ ಮೌನದಿಂ, ನಿಟ್ಟಿಸಿದರ್ ಆ
ಬೃಹದ್ ನಗರಿಯಮೇಲೆ ರವಿಛವಿ ಹರಿದುಬಹ
ಮನಮೋಹನೀಯ ದೃಶ್ಯಮಾನ ಸೌಂದರ್ಯಮಂ.
ತಣ್ಣಗೆ ತನುಕೊರೆವ ತರದಲಿ ತೀಡಿತು ಮಂದ
ಮಂದ ಮಾರುತಂ. ದಿವ್ಯಾಂಬರ ಸುಶೋಭಾಮಯ
ಪೂರ್ಣಚಂದ್ರಮನುದಿಸಿದನ್ ರಾಗಭಾವನಾ
ರೋಚಕನಿಧಿಯಾಗಿ. ಹರಿದುದು ಹಾಲ್ನದಿ ಭವ್ಯ
ಬ್ರಹ್ಮಾಂಡದ ಮೇಲೆ. ವನವಿಹಂಗಮಗಳೆಲ್ಲ
ಗೂಡುಗೊಂಡಿರೆ ರಾಗದ ಸುಳಿವಿಲ್ಲ. ಸದ್ದಿನ
ಸೊಲ್ಲಿಲ್ಲ. ನಸುವೊಳ್ತು ಸೌಂದರ್ಯರಸಸ್ವಾದದ
ಹಿರಿಯಾಸೆಯಿರ್ದೊಡಂ ಶೀತಲಾತಿಶೀತಲ
ಗಾಳಿಯಕೊರೆತಮಂ ತಡೆಯಲಾರದೆಯೆ ತಮ್ಮ
ಕೊಠಡಿಯಂ ಸೇರಿ ಕದ ಮುಚ್ಚಿದರ್. ಗಡಗಡನೆ
ನಡುಗುತಿಹ ಮೈಗೆ ಹೊದಿಕೆ ಎನಿತಿರ್ದೊಡಂ ಅದು
ಸಾಲದೆನಿಪ ಚಳಿಯ ಅನುಬಂಧಂ ಬಿಗಿದತ್ತು.
ಪಲ್ಲಂಕದಮೇಲೊರಗಿ ಹೊದಿಕೆಯಂ ಬಿಗಿಹೊದ್ದು
ಮಲಗಿದ ತನು ಬೆಚ್ಚಗಿನ ಮುದ್ರೆಯೊತ್ತಿದವೊಲ್
ಸುಖಮಾಯ್ತು. ಒಡನೊಡನೆ ಮನಃಪಕ್ಷಿ ಹಾರಿದುದು
ಭಾರತಧಾತ್ರಿಯ ದೀನ ದಾರಿದ್ರ್ಯತೆಯ ಕಡೆಗೆ.
"ಹಾ! ಅಖಿಲ ಭಾರತವರ್ಷದ ಕಟುಕಠಿಣತರದ
ದಾರಿದ್ರ್ಯತೆಯ ಚಿತ್ರ ಕಂಗಳಿಗೆಸೆದುದು ಕರುಳು

ಕೋರೈಸುವ ತೆರದಿ. ಬಡತನ – ತೊಡೆಯಲಾರದಿಹ
ಬಡತನ. ಹೊತ್ತುಹೊತ್ತಿನ ಅನ್ನವುಂ ಬಲ್ ಭಂಗ
ಬನ್ನಗಳ ದುಡಿಮೆ! ಹಾ, ದೈವವೇ! ಎನಿಸಲಾ
ಚಣಂ ಕರುಳ್ ಕುಡಿಯನ್ನೆ ಚಿವುಂಟಿದ ಪರಿಯೊಳ್
ಪರಿತಪಿಸಿತು ಒಡಲ್. ಅಶ್ರುಬಿಂದುಗಳುದುರಿದುವು.
ಸುಖೀ ಪಲ್ಲಂಕದೊಳ್ ಪವಡಿಪುದು ಸಂಕಟದ
ಗೋಳಾಯ್ತು. ಒಡನೊಡನೆ ಅಲ್ಲಿಂದಲೆಳ್ದು ಬಲ್
ನೊಂದು ಬೇಸರದಲಿ ನೆಲದಮೇಲೆ ಮಲಗಿದರ್.
ಹಾ! ನೊಂದೊಡಲ್ ಒಡೆದ ಕನ್ನಡಿಯೊಲ್ ಚೂರಾಯ್ತು
ನುಚ್ಚುನೂರಾಗಿ. ರಾಷ್ಟ್ರೀಯ ದುಸ್ಥಿತಿಯುಂ
ಎರ್ದೆಯಲಿ ಕಡೆದುದು ಕಡೆಗೋಲಾಗಿ, ಎನ್ನವರ್
ದುಃಖಸಂಕಟದಲಿ ನರಳುತಿರಲ್ ಆನೆಂತು
ನಿರ್ದಯದಿ ಪವಡಿಸಲಿ ಪಲ್ಲಂಕದ ಮಹಾನ್
ಸುಪ್ಪತ್ತಿಗೆಯಲಿ. "**ರಾಷ್ಟ್ರೋ ರಕ್ಷತಿ ರಕ್ಷಿತಃ**"
ರಾಷ್ಟ್ರೀಯ ಮೇಲ್ಮೆಗಾಗಿ ದುಡಿವುದೆ ಕರ್ತವ್ಯದ
ಗುರಿ. ಇದಲ್ಲದೆಯೆ ಬೇರೊಂದು ಬಾರದೆನ್ನಯ
ಮನಕೆ.... ಎನಿಸಿದಾಗಳೇ ಬಿಸಿಯುಸಿರ್ ಹೊರ ಹರಿ
ಹಾಯ್ದುದು ತನಗರಿವಿಲ್ಲದ ಪಾಂಗಿನಲಿ. ಎದ್ದು
ಬೆಳಕಿಂಡಿಯ ಬಳಿನಿಂದರ್. ದಿಟ್ಟಿಗೈದುದಾ
ಜಗಜಗಿಸುತಿರ್ದ ವಿದ್ಯುದ್ದೀಪಾಲೋಕ. ಓ,
ಕುಬೇರ ಸಿರಿಸೊಬಗಿನ ಚಿಕಾಗೊ ನಗರಿ! ಮಧ್ಯ
ರಾತ್ರಿಯೊಳ್ ಎಚ್ಚೆತ್ತ ಜನರಾಶಿ! ಭೂಸ್ವರ್ಗ
ಸ್ವರ್ಗೀಯತರಮಾಯ್ತು. ಐಶ್ವರ್ಯದಾಭೋಗ
ನೆತ್ತಿಗೇರಿ ವಿಜೃಂಭಣೆಯ ಆಮೋದದಲಿ
ಮುಂಗೆಟ್ಟು, ನಡೆಗೆಟ್ಟು, ಇಹಪರಗಳಿಗೆರವಾಗಿ

ಬರ್ದುಃಕುವ ಮನು ಕುಲಜರ್....ಒಡನೆ ಅನುಕಂಪದ
ಝರಿಯು ಹರಿದಾಡಿತು ಮೈಯ ನರನಾಡಿಗಳಲಿ.
ಉದಯಮಾನೋತ್ಸವಮಡರಿದುದು ದಿಗ್ ಭಿತ್ತಿಯ
ತಟಾಂತ ಸಂಲಗ್ನದಲಿ. ಕೆನ್ನೀರಿನೋಕುಳಿಯ ಚೆಲ್ಲಿ
ಸೂಸಾಡಿದ ಪರಿಯಲಿ ಕೆನ್ನೀಲ ಮುಗಿಲ್‌ಗಳ್
ಗುಡಿಗೋಪುರಮಂ ವಿರಚಿಸುತಿರೆ ಅಲಂಕಾರ
ಮಯಮಾಯ್ತು ಉದಯಮಾನದೈಸಿರಿ. ತಣ್ಣನೆಯ
ತನಿಯಿಂಪು. ಹೊಮ್ಮುಗಿಲಿನ ಪೆಂಪು. ಗಿಡುಮರಗಳ
ಸೊಂಪು, ಪುಷ್ಪಲೋಕದ ನರುಗಂಪು ಎಲ್ಲವುಂ
ಒಗ್ಗೂಡಿ ಬಂಡಿಳಿಸಿದ ಸೌಂದರ್ಯ ರಾಶಿಯು
ಭೀಷ್ಮ ಸಂಮೋಹನೀಯ ಸುಂದರ ಸಂಪದಂ
ಹರಡಿದತ್ತು. ಆವೊಂದು ವಿಶಿಷ್ಟ ಸಂದರ್ಭ
ದೈಶ್ವರ್ಯೋಚಿತವಾಗಿ ಮೂಡಿದುದೊ ಎಂಬವೊಲ್!
ಸಾವಿರದೆಂಟನೂರತೊಂಬತ್ತಮೂರನೆಯ
ಸೆಪ್ಟೆಂಬರ್ ತಿಂಗಳ ಹನ್ನೊಂದನೆಯ ಸೋಮ-
ವಾರ ಜಗದಿತಿಹಾಸದಲಿ ಚಿರಸ್ಮರಣೀಯ ದಿನ!
ಪ್ರಾಚ್ಯ ಪಾಶ್ಚಾತ್ಯ ರಾಷ್ಟ್ರಗಳ ವಿಭಿನ್ನ ಮತ
ಸಂಪ್ರದಾಯಗಳಂ ಪ್ರತಿನಿಧಿಪ ಜನಸಮುದಯ
ಒಂದೆಡೆಯೊಳ್ ಸಂಮಿಳಿತಮಾಗಲಿಹ ಸುದಿನ!
ಆ ರಣಾಂಗಣದ ನಾಕಮುಖ ಸೋಪಾನದಲಿ
ರಜತ ಪರ್ವತಾರೋಹಣೋದ್ಯಮಕೆ ಯುವರಿಸಿ
ತೇರೇರಿದಂ! ಷೋಡಶ ಕಳೆಗಳ ಗೈರಿಕ ವಸನ
ಧಾರಿ ಸನಾತನ ಧರ್ಮ ಧ್ವಜವಂ ಗಗನಕ್ಕೆ
ಏರ್ಪಡಿಸಿ ಮೆರೆಸಿದಂ! ಹಿರಿಯರೊಳ್ ಕಿರಿಯನಾಗಿ!
ಜಗತ್ ವಲಯದ ವಿಶಾಲರಂಗದಿ ಜೃಂಭಿಸಿದ

ಹತ್ತುವಗೆಯ ಮತಂಗಳ ಧಾರ್ಮಿಕ ಕ್ಷೇತ್ರಗಳ
ಒಕ್ಕೂಟವುಂ ನೆರೆದು ಕೂಡಿದ ಶುಭಸಮಯದ
ಸಂಕೇತಮೆನೆ ‘ಲಿಬರ್ಟಿ ಬೆಲ್’ ಹತ್ತು ಸಲ ಢಣ್
ಢಣ್ಣನೆ ಬಡಿದು ಬಾರಿಸಿದುದು ದೂರದೂರದ
ದಶದಿಶೆಯ ಭಿತ್ತಿ ಧೀಂಕಿಡುವ ಪರಿಯಲಿ! ವಿವಿಧ
ಧಾರ್ಮಿಕ ಮತಂಗಳ್ ಕೂಡಿದುವು ಪರಮೋಚ್ಛ
ಬೋಧನಾ ವೈಖರಿಯಲಿ. ಜೂಡಾಇಜಂ, ಇಸ್ಲಾಂ,
ಬೌದ್ಧ, ಹಿಂದೂ, ಟಾವೋ, ಕನ್ಫೂಷಿಯನಿಜಂ,
ಷಿಂಟೋಇಸಂ, ಜೋರತಾಷ್ಟ್ರ, ಕ್ಯಾಥೋಲಿಕ್
ಮೇಣ್ ಪ್ರಾಟೀಸ್ಟೆಂಟ್ ಮತಂಗಳಿಗೆ ಸೇರಿದ
ಧಾರ್ಮಿಕವತಿಯ ಹಿರಿಯ ವಿದ್ವಾಂಸರುಗಳ ಸಭೆ
ಜೃಂಭಿಸಿತು ಏಕ ಛತ್ರದಡಿಯಲಿ. ಬಗೆಬಗೆಯ
ವೇಷ ಭೂಷಣಗಳ್ ಮೆರೆದುವು ಅವರವರ ಮತ
ಧರ್ಮಗಳ ಸಂಕೇತವಾಗಿ. ಬಗೆಬಗೆಯ ಮುಖ
ಮಂಡಲಗಳೆಸೆದುವು ಆಯಾಯಾ ಭೂಗುಣಕೆ
ಸ್ವಾನುಗುಣಮಪ್ಪಂತೆವೊಲ್, ಸ್ವಜನ ಮತ್ತಂ
ಸ್ವದೇಶಾಭಿಮಾನಗಳಿಂ ತುಂಬಿದ ಪಂಡಿತ
ವರ್ಗಂ ಧರ್ಮವ್ರತದ ಕಲಶಗಳೋಪಾದಿಯಲಿ
ಕಂಗೊಳಿಸಿದರ್ ಸಭೆಯ ತುಂಬ. ಮತಗಳಲಿ ಬಲು
ಪ್ರಾಚೀನತಮ ಮತದ ಪ್ರತಿನಿಧಿಯುಂ ಎಲ್ಲಾ
ಧಾರ್ಮಿಕ ಪ್ರತಿನಿಧಿಗಳಲಿ ತೀರ ಕಿರಿಯನೆಂಬೆ.
ಗರ್ವಿಷ್ಠ ಪಾಶ್ಚಾತ್ಯ ರಾಷ್ಟ್ರಗಳಿಗೆ ತನ್ನಯ
ಯೋಗ್ಯತಮ ಪುತ್ರನಂ ಕಳಿಪಿ ಧನ್ಯೆಯಾದಳ್
ಭಾರತಜನನಿ! ಆಶಿಷ್ಠಂ ದೃಢಿಷ್ಠಂ ಬಲಿಷ್ಠಂ
ಮೇಣ್ ಮೇಧಾವಿಯುಂ ಆಗಿರ್ದ ಸುಪುತ್ರಂ

ಮೆರೆದನಾ ಸನಾತನ ಧರ್ಮದ ಮಹಾನ್ ವಿಧಿ
ವಿಧಾನಗಳ ಲಕ್ಷ್ಮಣ ರೇಖೆಯಂ ದಾಂಟದೆಯೆ
ತಾನೊಂದು ಮಿಸುನಿಯ ಕಲಶಕುಂಭವ ಹೋಲಿ!
ಆ ವಿರಾಟ್ ವಿಶ್ವ ಸಭೆಯೊಳ್ ವಿಜೃಂಭಿಸಿದ
ಸಹಸ್ರಾರು ಉನ್ಮುಖೀ ನರನಾರಿಯರ ಮುಂತೆ
ತಮ್ಮ ಸರ್ವಮಂಗಳ ಕಾರಕ ಉದಾರತಮ
ಅಶೀರ್ವಚನಂಗಳ ಅಕ್ಷತೆಯಂ ತಳೆಯಲ್ಕೆ
ಸ್ವಾಮಿವಿವೇಕಾನಂದರುಂ ವೇದಿಕೆಯ ಮೇಲೆ
ಸ್ವರ್ಣ ಸ್ವಪ್ನದ ಪುತ್ಥಳಿಯೊಲ್ ಕಾಂಚನ ಕಾಂತಿಯಲಿ
ನೆರೆ ಮೆರೆದ ಅಭೂತಪೂರ್ವ ಸಮಯ! ಭಾರತ
'ವಿಶ್ವ ವಿಜಯ ಪತಾಕೆ' ನಭೋದೇಶಕೇರಿದ
ಪರಿಪುಣ್ಯ ಸಮಯ!
ಅಂದಿನ ಸುಚಿತ್ರಮಂ ಕಣ್
ತುಂಬ ಕಂಡು ಆನಂದಿಸಿದ ಡಾ॥ ಆ್ಯನಿಬೆಸೆಂಟ್
ಇಂತು ಉಲ್ಲೇಖಿಸಿರ್ಪರ್, "ವೇದಿಕೆಯೊಳಿರ್ದ
ಅಪೂರ್ವತರ ಗೈರಿಕವಸನ ಭೂಷಿತ ಪರಮ
ಮಹಿಮಾಮಯನ ಮೂರ್ತರೂಪ! ಅಹ, ಚಿಕಾಗೋ
ನಗರಿಯಾ ಧೂಮಮಲಿನ ಧೂಸರ ಹೃದಯದ
ಸ್ಥಲದೊಳ್ ಭಾರತೀಯ ಭಾನು ಒಡಮೂಡಿತೊ
ಎನಲ್ ಶೋಭಾಯಮಾನಮಾದತ್ತು. ಉನ್ನತ
ಶಿರೋಮಂಡಲದಲ್ಲಿ ಮರ್ಮಭೇದೀ ವಿಶ್ವ
ವಿಶಾಲ ನಯನದ್ವಯ, ತೀಕ್ಷ್ಣದೃಷ್ಟಿ ಚಟುಲಿತ
ಓಷ್ಠಾಧರ, ಮನೋಹರ ಶರೀರ ಭಂಗಿ. ಈ
ಬಗೆಯ ಸುರಸುಂದರತಮ ರೂಪಿನಿಂ ಕಾಂಚನಂ
ಕಾಂಚನಿಪ ಗುರುವರ್ಯ ವಿವೇಕಾನಂದರುಂ

ಸರ್ವಧರ್ಮ ಸಮ್ಮೇಳನದ ಪ್ರತಿನಿಧಿಗಳಿಗೆ
ಉನ್ನತೋನ್ನತ ಶ್ರೇಣಿಯಲಿ ಏರ್ಪಡಿಸಿದ ಹಿರಿ
ವೇದಿಕೆಯ ಮೇಲೆ ಮೊತ್ತಮೊದಲೆಮ್ಮ ದೃಷ್ಟಿಯೊಳ್
ಬಿಳ್ದರ್. ಅವರ್ ಸಂನ್ಯಾಸಿಯೆಂಬುವ ಖ್ಯಾತಿಯಂ
ಮುನ್ನಮೆ ಅರಿತಿರ್ದಾಂ ಸಂನ್ಯಾಸಿ ಎಂಬುದರ
ಬದಲ್ ಯೋಧನೆನೆ ಸಲ್ವುದು ಎನ್ನಿಸಿದುದೆನಗೆ.
ಅದು ಪುಸಿಯೆನಲಾರೆ. ಅವರಿರ್ದುದು ಸರ್ವತ್ರ
ಅಂತೆಯೇ. ಏವೊಳ್ತು ಯೋಧ ಸಂನ್ಯಾಸಿಯಾಗಿ
ಜೃಂಭಿಸಿದ ಮಾನವಾತೀತಮಾನವ! ಆಹಾ,
ಆ ಭವ್ಯ ವೇದಿಕೆಯೊಳ್ ಕಣ್ ಸೆಳೆವಂತಿರ್ದುದು
ಸ್ವಾಮಿ ವಿವೇಕಾನಂದರ್ ಮಾತ್ರಮೆ.
ಅಂದಿನದೆ
ಆ ಮಹತ್ತರಮಾದ ವೇದಿಕೆಯೊಳ್ ಎರಡನೆ
ದೃಶ್ಯ...ಸ್ವಾಮೀಜಿ ಮಾತಾಡಲೆದ್ದರ್. ಅದೇ
ಗಾಂಭೀರ್ಯ. ಅದೇ, ಪ್ರತಿಭೆ, ಅದೇ ಶಕ್ತಿ ಎಲ್ಲದರ
ಕ್ರೋಢೀಕರಣ. ಆತನುಂ ತಂದ ಧರ್ಮಗಳ
ಸಂದೇಶ ಅಖಿಲ ಧೀಮಂತರ ಸಂಮುಖದೊಳ್
ಆ ಪ್ರತಿದ್ವಂದ್ವಿಯಾದ ಪ್ರಾಚ್ಯ ಋಷಿಗಳ ಮುಂತೆ
ಆಧ್ಯಾತ್ಮಿಕ ಸಂದೇಶದ ಮಹಿಮೆಯಂ ಬಣ್ಣಿಸಿ
ಅರಳೆಯಂ ಹಿಂಜುವೊಲ್ ತಿರುಳ್ ಹಿಂಜಿ ಒಳ್ನುಡಿ
ಧಾರೆಯಲಿ, ಸಾರವತ್ ತಿಳಿಪಿದರ್ ಜನಮನ
ಮುಟ್ಟುವಂತೆ. ಅಂತೆಯೆ ಶ್ರೋತೃಗಳ್ ಮನಮೆಚ್ಚಿ
ಆತನ ಸಿರಿಕಂಠದುಲಿಯಂ ಆಲಿಸಾಲಿಸೆ ನೀರವದ
ವ್ರತತೊಟ್ಟಂತಿರ್ದರ್ ತುಟಿಪಟಕೆನದವೊಲ್.
ಆ ಪ್ರವಚನದೊಳಾಂ ಮುಳುಗಲೆನ್ನ ತನುಮನ

ಪ್ರಾಣಗಳ್ ಆಬದ್ಧಮಾದುವು ಅರಿವಳಿಕೆಗೆ
ಬಾರದವೊಲ್. ಮಾತೊಂದು ಕೆಡಲಿಲ್ಲಂ ಒಂದು
ಸ್ವರವುಂ ಮೋಘಗೊಳಲಿಲ್ಲಂ."

ಇತರ ಧರ್ಮೀಯರುಂ ಕಂಠಕಹಳೆಯಂ ನೆರೆ
ಮೊಳಗಿಸಿದರ್ ನೀರಸವಾಗಿ. ಆ ತರುವಾಯಿ
ಅಧ್ಯಕ್ಷರುಂ ಶ್ರೀ ವಿವೇಕಾನಂದರಂ 'ನೀವ್
ಮಾತಾಡಿ' ಎಂದೆಂದು ಆಗಾಗಳುಂ ಕೇಳಿ
ಕೊಂಬುವರ್ ಜನಮನಕೆ ಸಾಂತ್ವನಂ ನೀಡಲುರೆ.
ಅಲ್ಲದೊಡೆ ಸಭೆಯು ಬರಿದಪ್ಪುದದು ನಿಶ್ಚಿತಂ.
ಶ್ರೀ ವಿವೇಕಾನಂದರ್ "ಸ್ವಲ್ಪವೆ ತಾಳಿರೈ
ತೀವ್ರಾಸಕ್ತಿಯಿಂದಿಹರಿಹರ್. ಅವರದಾಗಲಿ"
ಎನುತೆ ತಾಮೆ ಪಿಂದುಳಿದು ಇತರರ ಬೋಧನೆಯ
ತತ್ತ್ವಸಾರಮಂ ತಾವ್ ಗ್ರಹಿಸಿದರ್ ತಮ್ಮ
ಚಿಂತನಾವೇಶಮಂ ಬಲಿಸೆ. ಎಲ್ಲರೊಲ್ ತಾಂ
ಉಪನ್ಯಾಸಮಂ ಸಿದ್ಧಪಡಿಸಿ ಯಾ ಉಲ್ಲೇಖ
ರೂವಿನಲಿ ಒಯ್ದು ಮಹನೀಯರಲ್ಲ ಗುರುದೇವ.
ಹಲಕೆಲವರ ಉಪನ್ಯಾಸಗಳ್ ಮೊಳಗಿದುವು ಸಾರ
ರಹಿತವಾಗಿ. ಬಳಿಕಂ, ಸ್ವಾಮೀಜಿಯ ಸರದಿಯು
ಗಮಿಸಿತು ಅನುಕ್ರಮದೊಳ್. ಆ ಕೂಡಲೆ ಎದ್ದು
ನಿಂತ ಗುರುವರಂ, ಸಭೆಯ ಮೇಲೆ ದೃಷ್ಟಿಯಂ
ಪ್ರಸಾರಗೈದರ್. ಅಖಿಲ ನರನಾರಿಯರ ಕಣ್
ದೃಷ್ಟಿಯಷ್ಟಿಗಳ್ ಹರಿದುವಿತ್ತಲೆ. ಉನ್ಮುಖೀ
ಶಿರೋದೇಶಗಳ್ ಸಂಚಲಿಸದಿವೆ. ಸ್ವಾಮೀಜಿ
ಸಭಿಕರ ಮನೋಧರ್ಮವನೋದಿ ತಿಳಿದು ತಮ್ಮ
ಎರ್ದೆಗಡಲಂ ತುಂಬಿದರ್. ಹೃದಯಾಂತರಾ–

ಳದಲಿ ಮೂಡಿದ ಜ್ಞಾನ ರವಿಯ ಬೆಳಕು ಮೊಗದಲಿ
ಮಿಸುನಿ ಛವಿಯಂ ಸೂಸಿತು ತೆಕ್ಕನೆ. ಮಿಂಚಿನೊಲ್
ಮಿಂಚಿ ಉಲ್ಕೆಗಳಾದುವು ಕಂಗಳ್. ದಕ್ಷಿಣೇಶ್ವರ
ದೇವಿ ನಿಲಯದ ಮಹಾ ಯೋಗೀಶ್ವರನ ದಿವ್ಯ
ಶಕ್ತಿ ಭೋಂಕನೆ ಆವರಿಸಿತು ಮನ ಮತಿಗಳಂ
ಪ್ರಚೋದಿಸುವಂತೆ. ಕಾಲೀಮಾತೆಯಂ ಮನದಿ
ಸ್ಮರಿಸಿ, ಮೊಳಗಿಸಿದರ್ ಶ್ರೀಕಂಠ ಧ್ವನಿಯಂ,
"ಅಮೆರಿಕಾ ದೇಶದ ಭ್ರಾತೃಭಗಿನಿಯರೇ!"
ಎಂಥ ಅಮೋಘತಮ ಸಂಬೋಧನೆ! ಒಡನೆಯೆ ಕಿವಿ
ಗಡಚಿಕ್ಕುವ ತೆರದಲಿ ಜನಕೋಟಿಯ ಕರಗಳ
ತಾಡನ ಮೊಳಗಿತು ಮಾಡು ಮರುದನಿಗುಡುವಂತೆ!
ಎಂತಪ್ಪ ಆಶ್ಚರ್ಯಮೊ, ಮುಮ್ಮಾತುಗಳ್ ಇಂ
ಮೂಡುವನಿತರೊಳ್ ಕರ ತಾಡನಮೆನೆ ಇದೇನ್?
ಎಂದೆನುತೆ ಬೆರಗಾದರ್ ಸ್ವಾಮಿಜಿ, ಮನಸ್ಸು
ಅಲ್ಲೋಲ ಕಲ್ಲೋಲಮಾಯಿತ್ತು ಏನೆಂದು
ಯೋಚಿಸುತೆ ಮಂದಸ್ಮಿತರಾದರ್ ಸ್ವಾಮಿಜಿ.
ತರತಾಡನಗಳ ಮೊಳಗು ಮೊರೆಯುತಲಿದೆ. ತೋಷ
ವಾರ್ಧಿಯ ಮಹಾ ಘೋಷ! ಪುರ್ಚುತನದಾ ರುದ್ರ
ಘೋಷ! ಸ್ವಾಮಿಜಿ ವಿಸ್ಮಯ ಸ್ತಂಭಿತರೆನೆ ಕಣ್
ನೆಟ್ಟು ಮಿಣ್ಣನೆ ನಿಟ್ಟಿಸಿದರ್. ಅಂತೊಂದು ಬ್ರಹ್ಮ
ನಿನಾದದ ಅರ್ಥವೇಂ? ತನ್ನೊಳುಂ ಯೋಚಿಸಿರೆ
ಮರುಚಣದೊಳ್ ಅರಿವಾಯ್ತು ಇತರ ಗುರುಗಳ್ ತಂ-
ತಮ್ಮ ಉಪನ್ಯಾಸಾರಂಭದೊಳ್ "ಮಹಿಳೆಯರೇ
ಮಹನೀಯರೇ" ಎಂದು, ಸಂಬೋಧಿಸಿದ್ದುದರಿಂ
ತನಗೊಂದು ಕಿರೀಟ! 'ಭ್ರಾತೃಭಗಿನಿಯರೇ' ಎಂಬ

ಸಂಬೋಧನೆಗೆ ಸಂದ ಪ್ರೇಮಾದರಮಿದುವೇ!
ಎಲ್ಲರ ಮನೋಗತಿಯನುಂ ಪುರ್ಚೇಳಿಸಿದುದೇ
ಇದು!

ಅರಿವು ಫಳಕ್ಕನೆ ಮೂಡಿದುದು ಮನಮತಿಯ
ಭಿತ್ತಿಯಲಿ. ಸದ್ದಿನರವ ಕುಗ್ಗಿ ತಗ್ಗಿದೊಡನೆ
ಕರಗಳಂ ಜೋಡಿಸುತೆ, ಅಮೆರಿಕಾ ದೇಶೀಯ
ಬಂಧುಗಳಿಗೆ ಪುರಾತನ ಭಾರತವರ್ಷದ
ಪರವಾಗಿ, ಪ್ರಾಚೀನ ವೈದಿಕ ಸಂಪ್ರದಾಯದ
ಸಂನ್ಯಾಸಿಗಳ ಪರವಾಗಿ, ಸನಾತನ ಧರ್ಮದ
ಪರವಾಗಿ, ಭಾರತದ ಪ್ರಜೆಗಳ ಪರವಾಗಿ
ತಮ್ಮೊಂದು ಸುಸುಂದರ ಮನೋಹರ ಶೈಲಿಯೊಳ್
ಅಭಿನಂದಿಸಿದರಿಂತು,
"ಮೊದಲ್ ಸಭೆಗೆ ಕೈಗಳ್
ಮುಗಿದಪೆನ್, ಪಿರಿಯರ್ಗೆ ಶಿರಮಣಿವೆನ್, ಗೆಣೆಯರ್ಗೆ
ವಂದಿಪೆನ್, ಮೇಣೆಲ್ಲ ತಾಯಿತಂಗಿಯರಿಂಗೆ
ಪ್ರೀತ್ಯಾದರದಿಂ ವಂದಿಪೆನ್"
ನಮನಂ ಸಲಿಸಿ
ಭಾಷಣದ ಪ್ರಾರಂಭದೊಳ್ ಸರ್ವಧರ್ಮಗಳ
ಸಮನ್ವಯಮಂ ಸಾರಿ ಪೇಳುವ ನಲ್ ಶ್ಲೋಕವ
ಬಿತ್ತರಿಸಿದರ್ ಕೊರಳ್ ಮಧುರ ಮಾಧುರ್ಯ ಹರಿಸಿ,
ಸಭಿಕರ ಮನವಂ ಮುಟ್ಟಿ ಎರ್ದೆಗಳಂ ಕಿಟ್ಟಿ ಭಾಸಣಿಸಿ
ಭಾವನಾತ್ಮಕವಾಗಿ ಮೊಳಗಿ ಮರುಧ್ವನಿಯಂ
ಪಡೆಯಿತಾ ಪೆರ್ ಮಾಡಿನಿಂ. ಹರ್ಷಿತ ಜನಗಣ
ಹೃದಯ ಕರಂಡದೊಳ್ ಭಕ್ತಿಯಮೃತಮಂ
ತುಂಬಿಕೊಳುವ ತೆರದಲಿ, ಕೊರಳ್ ಧ್ವನಿ ಉಲಿಯಿತು.

“ತ್ರಯೀ ಸಾಂಖ್ಯಂಯೋಗಃ ಪಶುಪತಿ ಮತಂ ವೈಷ್ಣವ ಮಿತಿ।
ಪ್ರಭಿನ್ನೇ ಪ್ರಸ್ಥಾನೇ ಪರಮಿದ ಮದಃ ಪಥ್ಯಮಿತಿ ಚ ॥
ರುಚೀನಾಂ ವೈಚಿತ್ರ್ಯಾದೃಜು ಕುಟಿಲ ನಾನಾ ಪಥಜುಷಾಂ।
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ॥”

ಶ್ಲೋಕ ಬಿತ್ತರಣದ ಬಳಿಕ ಪ್ರತಿಪದಾರ್ಥಮಂ
ವಿವರಿಸಿದರ್ ಜನಗಣದ ಅಂತರಂಗಮಂ ಮುಟ್ಟಿ
ತನಿಗೊಳಿಸುವ ತೆರದಿ. ಜನಗಣಮನ ಒಡನೊಡನೆ
ಮಂತ್ರಮುಗ್ಧವಾದುದೊ ಎನಲ್ ಆನಂದ ಸುಖ
ರಸಾನ್ನವನುಂಡಂತೆ ಆಲೈಸಿತು ಸುಂದರ
ಗಂಭೀರ ಶೈಲಿಯಂ, ಮತ್ತೆ ಮುಂಬರಿದರಾ
ಗುರುವರಂ ಅದೇ ತೆರನ ಧೀಮಂತ ಉಲಿಯಲಿ

“ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ!
ಮಮ ವರ್ತ್ಮಾನು ವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ!”

ಮುನ್ನಿನವೊಲ್ ಪ್ರತಿ ಪದಾರ್ಥದ ವಿವರಣೆಯಂ
ವಿವರವಾಗಿ ಅಕ್ಕರಕ್ಕರವಂ ಬಿಡಿಸಿ ಎಳೆ
ಹಿಂಜಿ ತೋರ್ಪವೊಲ್ ವಿವರಿಸಿದರ್ ಮನ ಮುದಿಸುವ
ಪಾಂಗಿನಲಿ. ಸರ್ವ ಸದಸ್ಯರ ವದನ ಬಿಂಬದಲಿ
ಸಂತಸದ ಹೊನಲ್ ಉಕ್ಕಿ ಹರಿಯುತಲಿರ್ದುದೆನೆ
ಸಭೆಯ ಸುದರ್ಶನಮೆ ಆನಂದದಾಯಕಂ.
ಎಲ್ಲ ಧರ್ಮವೇತ್ತರ್ ತಂತಮ್ಮ ಧರ್ಮಮಂ
ಪೊಗಳಿ ಪಾಡಿದರಲ್ಲದೆ ಸರ್ವಧರ್ಮಂಗಳ
ಸಮನ್ವಯತೆಯಂ ಕುರಿತು ಪ್ರತಿಪಾದಿಸಿದವರ್
ಇಲ್ಲವೇ ಇಲ್ಲ. ಎನಲ್, ಸ್ವಾಮಿಜಿಯ ಸ್ವಧರ್ಮದ
ಪ್ರತಿಪಾದನೆಯ ನರಿಯೆ ಕುತೂಹಲದ ಗಣಿಯೆನೆ
ಕಾದಿರ್ದುದು ಜನಸ್ತೋಮ. ಅಂದಿಗೆ ಪೆರ್ಚಿನ

ಉಪನ್ಯಾಸಮಂಗೈವೊಡೆ ಸಮಯಾವಕಾಶವುಂ
ದೊರೆಯದಾಯ್ತೋ ಅಥ ಸ್ವಾಮೀಜಿಗೆ ಪುರುಪು ಪುರುಡು
ಮೂಡದಾಯ್ತೋ ಅಂತಿಂತು ಬಲೂ ಪುಟ್ಟ ಭಾಷಣ
ಗೈದು ಮುಗಿಬಗಿಗೊಳಿಸಿದರ್ ಗುರುವರಂ.

ಮತ್ತೆ

ಸೆಪ್ಟೆಂಬರ್ ಹತ್ತೊಂಬತ್ತನೆಯ ದಿನಮಾನಂ
ಸ್ವಾಮೀಜಿಯುಂ "ಹಿಂದೂ ಧರ್ಮ" ಎಂಬ ತಮ್ಮ
ಸುಪ್ರಸಿದ್ಧ ಸರ್ವಮತ ಧರ್ಮಭಾವದೊಳುದಿಸಿದ
ಸಂಸ್ಕಾರ ಗ್ರಾಸಿಯಾದ ವೇದಾಂತ ದರ್ಶನ
ದ್ರವ್ಯಮಂ ಎಲ್ಲರ ಮನಮುಟ್ಟುವೊಲ್ ವಿವರಣೆ
ನೀಡಿದರಿಂತು, "ಅಮೆರಿಕಾ ದೇಶೀಯ ಅಮೃತ
ಪುತ್ರರೇ ಕೇಳಿ! ತತ್ತ್ವಶಃ ಆತ್ಮನುಂ ನಿತ್ಯ
ಶುದ್ಧಂ. ನಿತ್ಯಮುಕ್ತಂ. ನಿತ್ಯಪವಿತ್ರಂ. ಸರ್ವ
ಜೀವಿಗಳೊಳ್ ಸಮಸ್ತ ವಿಶ್ವದೊಳ್ ನೆಲಸಿದದು
ಏಕವಾಗಿರ್ದು ಜಡಬಂಧನದ ಉಪಾಧಿಯಿಂ
ಅನೇಕವಾದವೊಲ್ ತೋರ್ವುದು. ಆ ಪರಮ
ಐಕ್ಯಾನುಭವವೇ ಮನುಕುಲದ ಚರಮಲಕ್ಷ್ಯ!
ಎಂಬೊಡೆ ಸಕಲ ನದಿಗಳೂ ಸಾಗರಾಭಿಮುಖ-
ವಾಗಿ ಹರಿವಂತೆಯೇ, ಸಕಲಧರ್ಮಗಳ ಸಾರ
ಸರ್ವಸ್ವಂ ಹರಿವುದು ಪರಮಾತ್ಮನ ಸನ್ನಿಧಿಗೆ
ಎಂಬುದದು ಪರಮ ಸತ್ಯಂ. ಅಂದಬಳಿಕಂ
ನಮ್ಮತಮ್ಮದೆಂಬ ಜಿಹಾಸೆಯೊಳ್ ಪುರುಳಿಲ್ಲಂ.
"ಆತ್ಮವುಂ ಪೊಸ ಕರ್ತನಿಂ ಪುಟ್ಟಿದ ಪೊಚ್ಚ
ಪೊಸ ಸೃಷ್ಟಿಯೇನಲ್ಲ. ಅದು ಅನಾದಿಯಾದುದು.
ಅನಂತಮಾದುದು ಅದರ ಸುಖದುಃಖಮೆಲ್ಲವುಂ

ಅಪಂಪಿಂ ಕರ್ಮದಿಂ ಸಿದ್ಧಿಪುದು. ಆನ್‌ತಾನೆಂಬ
ಅಹಂಕಾರಂ ವರ್ಜಿಪುದು. ಅಂದೊಡೆ ವ್ಯಷ್ಟಿ ವಿ-
ನಾಶ ಎಂದರ್ಥೈಪುದಲ್ಲಂ. ಸೃಷ್ಟಿ ವಿಕಾಸ
ಹೊಂದಿ ಸಮಷ್ಠಿಯಾದಪುದೆಂದರ್ಥಂ. ಯಾವಾಗ
ಕ್ಷುದ್ರ ಅಹಂಕಾರವುಂ ತೊಲಗಿ, ಸ್ವಾರ್ಥತೆಯದು
ಮಾಯಮಾದಪುದೊ ಆಗಳ್ ಅನಂತತೆಯುಂ
ಅನುಭವವೇದ್ಯಂ. ಆಗಳೇ ವ್ಯಷ್ಟಿಯುಂ
ತನ್ನ 'ಸ್ವರೂಪಮಂ ಪೊಂದಿ ಸಮಷ್ಟಿಯಾದಪುದು;
ಮತ್ತಂ ಮರಣಂ ತೊಲಗಿ ಅಮರತೆ ಬಂದಪುದು.
ಅದರೊಡಂ ದುಃಖವಳಿದು ಆನಂದವುಂ ಲಭಿಸಿ,
ಅಜ್ಞಾನ ತೊಲಗಿ ಮನುಜಂ ಜ್ಞಾನ ನಿಧಿಯೋಳ್
ವಿಲೀನನಾದಪಂ. ನೂತನ ವಿಜ್ಞಾನ ಶಾಸ್ತ್ರಂ
ಜಡಾದ್ವೈತಮಂ ಸಾಧಿಸಿದ ಪರಿಯ ನೋಡಿರೈ!
ಜಡ ಶರೀರಂ ಜಡ ಪ್ರಕೃತಿ ಸಮುದ್ರದೊಳ್ ನಲ್
ಮಿಂಚಿ ಮಾಯಗೊಳ್ವ ಒರ್ ನಶ್ವರ ತರಂಗಂ
ಎಂಬುದಂ ತೋರಿರ್ಪುದು. ಅಂತೆಯೇ ಸನಾತನ
ವೇದಾಂತವುಂ ಚೇತನಾದ್ವೈತವಂ ಸಾಧಿಸಿದತ್ತು.
ಜೀವನವು ವಿಶ್ವಾತ್ಮನೊಳ್ ಹೊಳೆದಳಿವ ಬಿಂದು.
ನಶ್ವರಮಾದ ತೋರಿಕೆ ಮಾತ್ರಮೆಂಬುದಂ ಅನು-
ಭವದಿಂದೆ ತೋರ್ವುದು. ಹಿಂದೂ ದಾರ್ಶನಿಕರ್
ಕೆಚ್ಚೆದೆಯವರ್, ಏಕೆ? ಎಂದೆಂಬ ಪ್ರಶ್ನೆಗವರ್
'ಆನರಿಯೆ' ಎಂದೆಂಬ ಉತ್ತರಂ ಧೈರ್ಯದಿಂ
ಪೇಳ್ವುದೆ ದಿಟಂ. ಅವ್ಯಕ್ತಮೇಕೆ ವ್ಯಕ್ತಮಾಯ್ತು?
ತೋರಿಕೆಗಾದೊಡಂ ಮುಕ್ತಾತ್ಮವೇಕೆ ಬಂಧಿತ-
ಮಾಯ್ತು? ಭರತ ಖಂಡದ ದಾರ್ಶನಿಕರ್ ಅದನುಂ

‘ಅನಿರ್ವಚನೀಯ’ ಮೆಂದಿಹರ್, ಅನಿರ್ವಚನೀಯ
ಎನಿಪುದು ಅಜ್ಞೇಯವಾದಮಲ್ಲಂ. ಏಕೆನಲ್,
ಅಜ್ಞಾನದ ಘೋರಾಂಧಕಾರಂ ತೊಲತೊಲಗಿ,
ಜ್ಞಾನ ಜ್ಯೋತಿ ಮೂಡಿದೊಡೆ ಬ್ರಹ್ಮ ಸಾಕ್ಷಾತ್ಕಾರ
ಲಭಿಪುದು. ಅಜ್ಞಾನಮೆಂತು ಗಮಿಸಿತು? ಯೋಚಿಸಿದೊಡೆ
ಅದಂ ನಾವರಿಯೆವೆನೆ ಅನ್ಯಮಲ್ತು. ಜ್ಞಾನದಿಂ
ಧ್ಯೇಯ ಸಾಧನೆ ಮಾಳ್ಪುದಂ ಮಾತ್ರ ಬಲ್ಲೆವಾವ್.
ಸಾಧನೆಯಲಿ ಇಷ್ಟಾರ್ಥ ಸಿದ್ಧಿ. ಬಾಳಿಗೆ ಬೆಳಕು.
“ಸ್ವೇಸ್ವೇ ಕರ್ಮಣ್ಯ ಭರತಃ ಲಭತೇ ನರಃ ।”
ಮರುದಿನದ ಮುಸ್ಸಂಜೆಯೊಳ್ ಜರುಗಿತು ಸಭೆ. ಆ
ದಿವ್ಯತಮ ಸಂಜೆಯ ಸುರಸುಂದರ ಹರವಿನಲಿ
ವೇದಿಕೆಯನೇರಿದ್ದ ಸ್ವಾಮಿ ವಿವೇಕಾನಂದ
ಗುರುವರಂ ಇಂತು ಕರೆಯನಿತ್ತರ್ ಸಭಿಕರಿಗೆ,
“ಎಲ್ಯೆ ಪವಿತ್ರ ಪುತ್ರರಿರಾ, ಹಿಂದೂಗಳ್
ನಿಮ್ಮನುಂ ಎಂದಿಗುಂ ಪಾಪಿಗಳೆಂದು ಕರೆಯರ್.
ಪಾಪಿಗಳ್ ನೀವಲ್ಲ! ದೇವರ ಮಕ್ಕಳ್ ನೀವ್!
ಅಮೃತ ಪುತ್ರರು ನೀವ್; ನಿತ್ಯ ವಿಮುಕ್ತರು ನೀವ್;
ಮಾನವರಂ ಪಾಪಿಯೆಂದು ಕರೆವುದೆ ಮಹಾ ಪಾಪ!
ಸಿಂಹಗಳೆ, ಹೊರಗೆ ಬನ್ನಿ! ಮೇಲೇಳಿ! ಕುರಿಗಳ್
ನಾವೆಂಬ ಮಾಯೆಯಂ ಕೊಡಹಿ ಬಿಡಿ! ಮುಕ್ತಾತ್ಮರ್
ನೀವ್; ಧನ್ಯಾತ್ಮರ್ ನೀವ್; ನಿತ್ಯಾತ್ಮರ್ ನೀವ್;
ನೀವ್ ಜಡರಲ್ಲ, ಶರೀರಗಳ್ ನೀವಲ್ಲ; ಜಡ
ಪ್ರಕೃತಿ ನಿಮಗೆ ದಾಸಿ. ನೀವದಕೆ ದಾಸರಲ್ಲ.
“ವೇದಗಳ್ ಬೋಧಿಪುದು ಪರಸ್ಪರ ವಿರುದ್ಧ-
ಮಾದ ಪ್ರಕೃತಿ ನಿಯಮಗಳ ಸಮುಚ್ಚಯ ಮಾತ್ರ-

ವನಲ್ಲಂ. ಪಿಳಯುರಿ, ಸಮಸ್ತ ಜಡ ಚೇತನದಲಿ
ಅಂತರ್ಯಾಮಿಯಾಗಿಹ ಪರತತ್ವಮಂ. ಕೇಳಿ,

“ಭಯಾದಸ್ಯಾಗ್ನಿ ಸ್ತಪತಿ
ಭಯಾತ್ತಪತಿ ಸೂರ್ಯಃ ।
ಭಯಾದಿಂದ್ರಶ್ವ ವಾಯುಶ್ವ
ಮೃತ್ಯುರ್ಧಾವತಿ ಪಂಚಮಃ ॥”

ಯಾರ ಭಯದಿಂ ಗಾಳಿ ಬೀಸುವುದೊ, ಬೆಂಕಿಯುರಿ–
ವುದೊ, ಮುಗಿಲ್ ಮಳೆಗರೆವುದೊ, ಸಾವು ಕರ್ತವ್ಯ ವೆಸ–
ಗುವುದೊ ಅಂಥಹ ಸರ್ವ ವ್ಯಾಪ್ತವುಂ ಸರ್ವಶಕ್ತ
ವುಂ ಕರುಣಾಮಯವುಂ ನಿರಾಕಾರವುಂ ಆದ
ಸಚ್ಚಿದಾನಂದಮಂ ಸಾಕ್ಷಾತ್ಕಾರ ಗೊಳಿಸಲ್
ಸಿದ್ಧರಾಗಿ! ಅಮೃತ ಪುತ್ರರೆಂಬ ಪೆಸರ್ಗೆ ನೀವ್
ಯೋಗ್ಯರಾಗಿ!”
ಆ ವೇದ ಗಂಭೀರ ವಾಣಿಯು
ಭವ್ಯ ಹಿಮವತ್ ಪರ್ವತ ಹಿಮಾಲಯ ಶಿಖರಂ
ಮೊಳಗಿಸಿದ ತೂರ್ಯವಾಣಿಯು ಅಮೆರಿಕೆಯೊಳ್ ಪ್ರತಿ
ಧ್ವನಿಸಿದವೊಲಾಯ್ತು, ಸಿರಿಕಂಠದುಲಿಯ ಮೊಳಗು!
ಮುನ್ನಿನ ದಿನದೊಳ್ ಅಜ್ಞಾತರುಂ ಅನಾಥರುಂ
ಆಗಿರ್ದ ಸ್ವಾಮಿಜಿ ಪುಣ್ಯಗಳಿಗೆಯೊದವಿ
ಬರೆ ದಿವಸ ಮಾತ್ರದೊಳ್ ಪ್ರಖ್ಯಾತ ಪಟ್ಟವಂ
ಏರಿದರ್ ಗಗನಗಾಮಿಯಾಗಿ. ಅವರ ಪುಣ್ಯ
ಪರಿಚಯದ ಲಾಭವಂಬಡೆಯೆ ಜನರಾಶಿಯ
ನೂಕು ನುಗ್ಗಲುಂ ಸ್ಪರ್ಧೆಯೊಳ್ ಸ್ಪರ್ಧೆ ಎಂಬೊಲಾ
ಜನಮನ ಪುಳಕಮಾಯ್ತು. ಪ್ರಖ್ಯಾತಮಾದೆಲ್ಲ
ವರ್ತಮಾನ ಪತ್ರಿಕೆಗಳ್ ಮುಖ ಪುಟದಲಿ ಚಿತ್ರ

ಸಹಿತ ಸ್ವಾಮಿ ವಿವೇಕಾನಂದರಂ ಪೊಗಳಿ
ಪಾಡಿ "ಸರ್ವಧರ್ಮ ಸಮ್ಮೇಳದೊಳ್ ಶ್ರೇಷ್ಠತಮ
ವ್ಯಕ್ತಿಯನೆ ಸ್ವಾಮಿ ವಿವೇಕಾನಂದರ್" ಎಂದೇ
ಬಣ್ಣಿಸುತೆ ಉಲ್ಲೇಖಿಸಿದುವು ಲೋಕಮೆಲ್ಲರ
ಗೊಳ್ಪಂತೆ. ಮೇಣ್ 'ಇಂತಪ್ಪ ಸುಸಂಸ್ಕೃತಮಾದ
ಜನಾಂಗಕೆ ನಮ್ಮಯ ಧರ್ಮ ಪ್ರಚಾರಕರನುಂ
ಕಳಿಪುದು ಅವಿವೇಕಮೆನೆ ಸಲ್ವುದು ಎಂದೆಂದು
ದೃಢವಾಗಿ ಪ್ರತಿಪಾದಿಸಿ ಬಿತ್ತರಿಸಿದುವು,
ಗೌರವ ವಿಶೇಷದಿಂ. ಒರ್ ಪತ್ರಿಕೆಯುಂ ಈ
ರೀತಿಯೊಳ್ ಬರೆಯಿತು.
"ವಿವೇಕಾನಂದರ್ ಧರ್ಮ
ಸಭೆಯ ನೆಚ್ಚಿನ ಕಣ್ಣು! ಅವರ ಭದ್ರಾಕಾರದ
ವಾಕ್ಯಧಾರೆಯಲಿ ಪೊಣ್ಮುವ ತತ್ತ್ವಗಳ ಮಹಾ
ವೈಭವವದು ಸಕಲ ಜನಕೋಟಿಯ ಹೃದಯಂ
ಸೂರೆಗೊಂಡಿಹುದು. ಗುರುದೇವನುಂ ವೇದಿಕೆಯ
ಮೇಲೆ ಒಂದೆಡೆಯಿಂದೆ ಇನ್ನೊಂದೆಡೆಗೆ ನಡೆಯೆ
ಪ್ರೇಕ್ಷಕರಿಗೆ ಅದೇ ಸಾಕು. ಕರ ತಾಡನಗಳಿಂ
ಕಂಪಿಪುದು ಸಭಾ ಮಂದಿರಂ! ಆದೊಡವರೊಳ್
ಅಹಂಕಾರದ ಸುಳಿವಿನಿತಿಲ್ಲಂ. ಎಳೆಯರೊಲ್
ಹೂಮನಸು......"
ಎಂದಿನವೊಲ್ ಸರ್ವಧರ್ಮಗಳಸಭೆ
ನಡೆದತ್ತು ಅನುದಿನಂ. ಶ್ರೋತೃಗಳ್ ಬಂದಪರ್
ಸ್ವಾಮಿ ವಿವೇಕಾನಂದರ ಉಪನ್ಯಾಸಕ್ಕಾಗಿ.
ಇತರ ಮಹನೀಯರ ಉಪದೇಶಮಿರುತಿರೆ ಆ
ನೀರಸ ಉಪನ್ಯಾಸವನಾಲೈಸಲ್ ಇಚ್ಚಿಸದ

ಶ್ರೋತೃಗಳ್ ಎಳ್ದು ಪೊರಡುವರ್. ಆಗಳ್ ಸಭೆಯ
ಅಧ್ಯಕ್ಷರೆದ್ದು ಕರೆಯುತ್ತೆ "ಈಗಳ್ ಸ್ವಾಮಿ
ವಿವೇಕಾನಂದರ ಉಪನ್ಯಾಸಮಿಹುದು." ಎಂದು
ನುಡಿದಪರ್. ಒಡನೊಡನೆ ನುಡಿಯನಾಲೈಸಿ ಎಲ್ಲ
ಶ್ರೋತೃಗಳ್ ಪಿಂತಿರುಗಿ ಸಬೆಯನಲಂಕರಿಪರ್.
ಯಥೋಚಿತವಾಗಿ ಮೊಗ ಮಂಡಲಗಳಲಿ ಮಂದ
ಸ್ಮಿತಮಂ ಸೂಸಿ. ಓರೋರ್ಮೆ ಸ್ವಾಮಿಜಿಯ ಉಪ
ನ್ಯಾಸಮಂ ಕಟ್ಟಕಡೆಯೊಳ್ ಇರಿಸಿ ಜನಪದಂ
ಉಳಿಸಿಕೊಂಬರ್ ಸಭೆಯ ನಿರ್ವಹಣೆಗಾಗಿ. ಆ
ಸುಮುಹೂರ್ತಕಾಗಿ ಕಾದು ಕುಳಿತುಕೊಂಬುದು
ಜನಪದಂ. ಸ್ವಾಮಿ ವಿವೇಕಾನಂದರ ಉಪನ್ಯಾಸ
ಕಾಲಮಂ ಎದುರುನೋಡುತ. ಫ್ರಾನ್ಸಿನ ಮಹಾನ್
ತತ್ತ್ವವಾದಿ ರೋಮೆಯ್ನ್ ರೋಲಾಂಡರ್ ಮನದಿ
ತೋಷಮಂ ತುಂಬಿ ಆನಂದ ಭಾವದಿಂದಲಿ
ಮೈಯುಬ್ಬಿ ನುಡಿಸಿದರಿಂತು,
"ಆ ಮಹಾ ಅಗ್ನಿಯ
ಜಿಹ್ವೆಯುಂ ಪ್ರಶಾಂತ ಮರುಭೂಮಿಗಳ ಮೇಲೆ
ಹರಡಿದ ಒಣ ಎಲೆಗಳ ಸುಲಭದಿ ದಹಿಸುವೊಲ್
ಶ್ರೋತೃ ಮಹಾಜನರ ಎರ್ದೆಯಂ ಸುಡುವುದನಾಂ
ಕಂಡೆಕಂಡೆನ್."
ಇತಿ ಮಧ್ಯೆ ಸ್ವಾಮೀಜಿಯಾ
ಯಶೋರಮೆಯುಂ ನಿಚ್ಚ ವಿಜೃಂಭಿಸುತೆ ಗಗನ
ಗಾಮಿಯಾದಪುದನುಂ ಕಣ್ ತುಂಬ ಕಂಡಿರ್ದ
ಹಲಕೆಲವು ದುಷ್ಟ ಮನಸಿಗರುಂ ಒಡಲ್ಗಿಚ್ಚು
ಕುದಿಕುದಿಯುತಿರೆ ಇಲ್ಲದ ಸಲ್ಲದ ನಿಂದೆಗಳ್

ಹರಡಿಹರಡಿ ಕೆಸರ್ ಬಳಿಯಲ್ ಮುಂದೆಯ್ದು "ಈ
ಸಂನ್ಯಾಸಿ ಸೋಗಿನ ಇವಂ ರಮಣಿಯರ ಲೋಲ
ಜಾತಿಭ್ರಷ್ಟ, ನೀತಿನಿಯಮ ಬಾಹಿರ ಭಾರತ
ದೇಶೀಯ ಭಿಕಾರಿಗಳ ವರ್ಗಕೆ ಸೇರಿಪ್ಪ
ಕ್ಷುದ್ರ, ಈತಂ ನಿಜಕು ಓಂದೂ ಧರ್ಮದಪ್ರತಿ
ನಿಧಿಯಲ್ಲ. ಈತನುಲಿವ ತತ್ತ್ವಂಗಳಂ ಆ
ಓಂದೂಗಳ್ ಕನಸುಮನಸುಗಳಲಿಯು ಕಾಣರ್.
ಈತಂ ಬಲ್ ಕೃತ್ರಿಮ ಜೀವಿ. ಅತಿ ಮೋಸಗಳ
ಮೂಟೆ, ಎನಲದು ಪುಸಿಯೆನದಿರಿ...." ಎನುತೆ ಮೋಜಿನ
ದನಿಯಲಿ ಅಣಕವಾಡುತೆ ದಿನದಿನ ಡಂಗೂರ
ಬಡಿದು ಬಾರಿಸಿದರ್. ಜೊತೆಜೊತೆಗೆ ಹಲವು ರೂಕ್ಷ
ಮನದ ಪಾದ್ರಿಗಳ್ ಮೇಣ್ ಭಾರತೀಯರ್ ಕೆಲರ್
ಕೂಡಿ ಓರಿದಾಯ್ತು ದುಷ್ಟಕೂಟಂ. ಭಾರತದ
ಬ್ರಹ್ಮ ಸಮಾಜಿಗಳ ಒಡಲ್ಗಿಚ್ಚು ಭುಗಿಲೆಳ್ದು
ಅಗ್ನಿ ಜಿಹ್ವೆಗಳ್ ಚಾಚಿ ಧಗಧಗಿಸಿ ಮೆರೆದುದು
ಊರಗಲ. ಇದನರಿದರಿದು ಒಡಲ್ ತುಂಬಿ ಮನ
ಗೆಟ್ಟು ಥಿಯಾಸಫಿ ಸಂಘದ ನಾಯಕ ಸ್ಥಾನೀಕ
ನಿರ್ದಾ ಓರಿಯ ವ್ಯಕ್ತಿಯುಂ ತಮ್ಮ ಗೆಣೆಯರಿಗೆ
ಬರೆದ ಓಲೆಯೋಳ್ ವಿವೇಕಾನಂದರಂ ಕುರಿತು
ಇಂತೆಂದರಂತೆ, "ಅವಂ ಇಲ್ಲಿಗೈದು ಕಷ್ಟಕೆ
ಸಿಲ್ಕಿಹಂ! ಅಂತೂ ಪಿಶಾಚಿ ಹೊಟ್ಟೆಗಿಲ್ಲದೆ
ಸಾಯ್ವುದೆನೆ ದಿಟ. ಸಾಯಲಿ!"
ಇಂತಪ್ಪ ಅಪಕೀರ್ತಿ
ಸತ್ಕೀರ್ತಿಗಳ ಜಂಜಡದ ಮಧ್ಯೆ ಸಿಲ್ಕಿಯುಂ
ಗುರುವರಂ ತಮ್ಮ ಮಾತೃಭೂಮಿಯಂ ಚಣಕಾಲ

ಮರೆತರಿಲ್ಲಂ. ಕನ್ಯಾಕುಮಾರಿಯ ತೀರದಲಿ
ಹೆಬ್ಬಂಡೆಗಳ ದ್ವೀಪಮಸ್ತಕದ ಮೇಲೆ ಕುಳಿತು
ಧ್ಯಾನಸ್ಥರಾಗಿ ಗೈದ ಪೂರ್ಣ್ಕೆಯದು ಎಗಳ್
ಮನದೊಳ್ ಚಿರವಾಗಿರ್ದುದು ಕರ್ತವ್ಯ ಭಾರಂ
ನೆನಪಿಸುವವೊಲ್. ತಮ್ಮವರ ದಾರಿದ್ರ್ಯಗತಿಯಂ
ನೆನೆದು ರಣಗೋಳಿನಲಿ ಬಾಳ್ವವರ ಒಳಿತಿನಲಿ
ಮನವಿಟ್ಟು ಧರ್ಮಸಭೆಯೊಳೊರ್ಮೆ ನುಡಿಸಿದರ್,
“.....ಇಂದಿನೀ ಪರಿಸ್ಥಿತಿಯಲಿ ಕ್ರೈಸ್ತರ್ ಮನದೊಳ್
ಸದ್ವಿಮರ್ಶೆಗೆ ಸಿದ್ಧರಾಗಿ! ನಿಮ್ಮಲಿಹ ಕೆಲ
ವಗೆಯ ಕುಂದುಕೊರತೆಗಳಂ ಬಯಲಿಗೆಳೆದೊಡಾಂ
ಎನ್ನನುಂ ಮನ್ನಿಸುವಿರೆಂದು ಪರಿಭಾವಿಸುವೆನ್.
ಭಾರತದ ‘ಅನಾಗರಿಕ’ರ ಆತ್ಮ ರಕ್ಷಣೆಗಾಗಿ
ಪಾದ್ರಿಗಳ ದಂಡಂ ಕಳಿಪುವಿರಿ. ಹಸಿದೊಡಲಿಗೆ
ಹಿಟ್ಟಿಲ್ಲದೆ ಸಾಯ್ವರ ದೇಹ ಸಂರಕ್ಷಣೆಗೆ
ಪ್ರಯತ್ನಿಸುತ್ತಿಲ್ಲವೇಕೆ? ಭಾರತದೇಶ
ರುದ್ರ ಭೀಕರ ಕ್ಷಾಮದೊಳ್ ಸಿಲ್ಕಿ ಹಸಿವೆಯಿಂ
ಜನ ಮಡಿದರಲ್ತೆ? ಕ್ರೈಸ್ತರ್ ಪ್ರಬುದ್ಧರಾಗಿರ್ದು
ನೀವಾವ ಉಪಕಾರವಗೈದಿರಿ? ಮತ ಧರ್ಮ
ಪ್ರಚಾರದ ಸಲುವಾಗಿ ಭಾರತದ ಎಡೆಎಡೆ-
ಗಳಲಿ ಚರ್ಚುಗಳ್ ಕಟ್ಟುತಿರುವಿರಿ, ಭಾರತಕೆ
ಇಂದಿನ ಅವಶ್ಯಕತೆ ಧರ್ಮವಲ್ಲವೇ ಅಲ್ಲ!
ಹಸಿದೊಡಲಿಗೆ ಅನ್ನ. ಅನ್ನ. ಅನ್ನ. ಅವರ ದೀನ
ಆರ್ತತೆಯ ಸಾರಸರ್ವಸ್ವ ಅನ್ನ, ವಸತಿ,
ವಿದ್ಯೆ, ಜ್ಞಾನಗಳಿಗಾಗಿ. ಅವರ ಒಣಗಂಟಲ
ಕರೆ ಅನ್ನಕಾಗಿ! ನೀವು ಕೊಡುವುದು ಬರಿಮಣ್ಣು!

ಪಸಿವೆಯಿಂ ಬಳಲಿ ಸಾಯುತಿಹ ಬಡ ಜನಾಂಗಕೆ
ಧರ್ಮೋಪದೇಶಗೈವುದು ಮಹಾ ನೀಚತನ!
ಹಸಿದವಂಗೆ ವೇದಾಂತ ಬೋಧಿಪುದುಂಟೇ?
ಇದಂ ಅಧಮಾಧಮ ಪಾಪಮೆನೆ ಅನ್ಯಮಲ್ತು.
ಭಾರತದೇಶದೊಳ್ ಆರಾದೊಡಂ ಧನಾರ್ಜನೆ
ಗೈವ ಸಲುವಾಗಿ ಧರ್ಮ ಬೋಧೆಗಿಳಿದೊಡವನ
ಕತ್ತಿಡ್ದಿದು ಹೊರದೂಡುವುದು ದಿಟಂ. ಹಸಿದು ಸಾಯ್ವ
ಎನ್ನ ಸೋದರ ಸೋದರಿಯರ ಪರವಾಗಿ ಆ-
ನಿಲ್ಲಿಗೈದಿಹೆನ್ ಕ್ರೈಸ್ತ ಭೂಮಿಯೊಳ್ ಕ್ರೈಸ್ತರ್
ಅಲ್ಲದವರಿಗೆ ಸಹಾಯವೊದಗುವುದತಿ ದುಸ್ತರ
ಎಂಬುದೆನ್ನ ಅನುಭವಂ!"
                              ದಿವ್ಯತರ ಅಧಿಕಾರ
ವಾಣಿ ಮೊಳಗಿತು ಕಹಳೆಯೂದುವಪರಿಯಲಿ. ಆ
ಸಿದ್ಧ ಪುರುಷಂಗೆ ವ್ಯೋಮವಾಣಿಯ ಮಹಾದನಿಯ
ಮುರಿವೊಂದು ವರವಾಗಿ ಲಭಿಸಿತೊ, ವರಭಾರತ
ಜನನಿಯ ಅಭಯ ಹಸ್ತದ ವರವೊ, ಸರಸ್ವತಿಯು
ಶುಭಹಾರೈಸಿ ತಳೆದ ಮಂತ್ರಾಕ್ಷತೆಯ ಫಲಮೊ,
ಭುವನೇಶ್ವರೀ ದೇವಿಯ ಎದೆ ಗುಡಿಯಿಂ ಹರಿದ
ಪ್ರೇಮದ ಸೊಲ್ಲೊ, ಶ್ರೀಗುರು ಪರಮಹಂಸರ ಘನ
ಪ್ರಭಾವಳಿಯೊ ಅಥ ಸ್ವಯಂ ಪ್ರಭೆಯ ವೈಖರಿಯೊ
ಎನಲೆನಲ್ ಅಧಿಕಾರವಾಣಿ ಸ್ಫುರಿಸಿದತ್ತು ಗಂಭೀರ
ಸಿಂಹವಾಣಿಯಂ ಹೋಲಿ!
                              ಇತರ ಮತ ಪಂಥೀಯ
ಪಂಡಿತೋತ್ತಮರ್ ಕಣ್ಣು ಕಟ್ಟಿರ್ದ ತೇಜಿಯ
ತೆರದಿ ತಮ್ಮ ಹಾದಿಯ ನೇರಕ್ಕೆ ಓಡಿಯೋಡಿ

ತಂತಮ್ಮ ಧರ್ಮವೆ ಸರಿಯೆಂಬುವ ಘನವಾದ
ನಂಬುಗೆಯೊಳ್ ಜಗವಂ ಮರೆತು ಮೆರೆದಿರುತಿರಲ್
ಸ್ವಾಮಿಜಿ ದಯೆಧರ್ಮದ ಸಾಕ್ಷಾತ್ಕಾರದಿಂ
ದಿವ್ಯ ಆಧ್ಯಾತ್ಮಿಕ ಸಿರಿ ಖಡ್ಗವನ್ ಬೀಸಿರೆ
ಸತ್ಯದ ಕಿರಣಗಳ್ ಸಿಡಿದುವು ಜನಗಣಮನಂ
ಸೆಳೆಯುವೊಲ್, ಸ್ವಾಮಿಜಿ ಮತ್ತೆಂದರ್ ಎಲ್ಲರ
ಸಂಪೂರ್ಣ ಸಹಕಾರಮಂ ಕೋರುತ್ತೆ "**ಸರ್ವೇ
ಜನಾಃ ಸುಖಿನೋ ಭವಂತು**" ಅದರಕ್ಕರಕ್ಕರಂ
ವಿವರಿಸಿ ವಿವರಣೆಯಂ ನೀಡಿ ಭಾರತದ ಆತ್ಮ
ಜ್ಯೋತಿಯಂ ಎತ್ತಿ ಹಿಡಿದರ್ ವಿಶ್ವಾತ್ಮಕವಾಗಿ!
ಸರ್ವೋದಯದ ಮಂತ್ರ ಮಾಂಗಲ್ಯಮಂ ಹರಿಸಿ
ಸಭೆಯನ್ನೆ ಮಂತ್ರಮುಗ್ಧಗೊಳಿಸಿದರಾ ಗುರುವರಂ.
ಸರ್ವಧರ್ಮಗಳ ಮಾಸಭೆಯದು ಹದಿನೇಳು
ದಿನಮಾನಗಳ ಪರ್ಯಂತರಂ ನಡೆದುದು ಅನು-
ದಿನಂ ಮೂಮೂರುಬಾರಿ ಕೂಡಿ. ತಾತ್ವಿಕ ಜಾನಂ
ಮಥಿಸಿ ಮಥಿಸಿ, ದ್ವಾಪರಯುಗದ ಸಾಗರ ಮಥನ
ನಡೆಸಿದ ಪರಿಯಲಿ ಜನಮನೋಗತಿಯ ಮಥನಂ
ಮೆರೆದುದು ಘನ ಗಂಭೀರವಾಗಿ ....ಸಾಮಾಜಿಕ
ಉತ್ಕರ್ಷಕೆ ಸಮರ್ಪಣಾ ಭಾವ ಬಲಿಯುತ್ತೆ
ಮತಿಯೋತು ಮನವೋತು ಕರ್ಮಗೈಯದೆಲ್ಲಿಯ
ಉನ್ನತೋನ್ನತ ಮಾರ್ಗ? ಬಹುಕಾಲದಿಂದಲುಂ
ಪೃಥ್ವಿಯಂ ಸ್ವಾರ್ಥಭಾವ ಆಕ್ರಮಿಸಿರೆ ಬದುಕು
ನರಕ ಸದೃಶಮಾಗಿಹುದಾದೊಡಂ ಮುಗಿಯಿತೇ?
ಮತ್ತೆಮತ್ತೆಮೇಣ್ಮತ್ತೆ ಮನುಕುಲದ ನೆತ್ತರ್
ಚೆಲ್ಲಾಡಿ ತೊಯ್ದಿಹುದು ಭೂಮಿ. ಸ್ವಾರ್ಥಪರತೆಯು

ವಿನಾಶದಪಥವಿಡಿದು ದೇಶದೇಶಂಗಳಂ ನಿರಾಶಾ
ಕೂಪದೊಳ್ ತಳ್ಳಿರ್ಪುದಂ ನೀವ್ ಕಾಣಿರಾ?
ಈಯೊಂದು ಘೋರ ರಾಕ್ಷಸೀಯ ಗುಣಧರ್ಮವು
ಇರದಿರ್ದೊಡೆ ಮನುಕುಲಂ ಇಂದಿನೀ ಸ್ಥಿತಿಯಂ
ಮೀರಿ ಮುಂಬೆಳೆದು ವಿಜೃಂಭಿಪ ಸುಯೋಗಂ
ಇರ್ದುದೆನೆ, ದಿಟಂ! ಸಮ್ಮೇಳನದ ಗೌರವಾರ್ಥ
ಮೊಳಗಿದ ಬೆಳಗಿನ ಘಂಟಾನಾದವದು ಎಲ್ಲ
ಬಗೆಯ ಕುರುಡು ಮತಾಂಧತೆಗೆ ಸತ್ಯಕಿರಣದ
ಮೃತ್ಯುಘಾತವನೀಯಲೆಂದಾನ್ ಆಶಿಸುವೆಂ.
ಅಂತುಮಲ್ಲದೆಯೆ ಖಡ್ಗಲೆಕ್ಕಣಿಕೆಯ ಮೂಲಕ
ಉಲ್ಲೇಖಿಸಿ ಹಿಂಸೆದ್ವೇಷಾಸೂಯೆಗಳಿಗೆ
ಮೇಣದೇ ಗುರಿಯೆಡೆಗೆ ಸಾಗುತಿಹ ಪಥಿಕರೊಳ್
ಜಡಿತುಂಬಿಹ ಅಸಹನೆ ಮನಸ್ತಾಪ ರೋಷಗಳ
ಪುಟ್ಟಳಿಸೆ ಭಗವಂತನೆ ಸತ್ಯ ಪಾಶಂಗಳಂ
ಒಗೆಯಲೆಂದಾನ್ ಹೃತ್ಪೂರ್ವಕಮೆ ಆಶಿಸುವೆ."
ರಣವಿಸಿಲ್ ರಣರಣಿಸಿ ನಡುನೆತ್ತಿಗೇರಿರಲ್
ಝಳಝಳಿಸಿದತ್ತು ನೆತ್ತಿಯುರಿಯುವೊಲ್, ಸಭೆಯುಂ
ವಿಸರ್ಜನೆಗೊಳೆ ಬಿಡದಿಗೈದರ್ ಸ್ವಾಮಿ ವಿವೇಕಾ
ನಂದರುಂ. ಅನ್ನೆಬರಂ ಕಳೆದ ದಿನಗಳ ಚರಿಯ
ವಿಶೇಷವನೊರೆದ ಬಳಿಕ ಲೇಖಿಸಿದರಿಂತಿಂತು–
ಗುರುಭಾಯಿಗಳಿಂಗೆ ಬಲು ಪ್ರೀತ್ಯಾದರದಿಂದಲಿ,
ಶಿಷ್ಯರೇ, ಶ್ರದ್ಧೆ, ಅನುಕಂಪ ಎನಲ್ಕೆ ತಿಳಿಯಿರಿ,
ಜ್ವಲಂತ ಶ್ರದ್ಧೆ! ಜ್ವಲಂತ ಅನುಕಂಪ! ಇವುಂ
ಸರ್ವತ್ರ ಸದಾ ಇರ್ಕು ನಿಂನಿಮ್ಮ ಎದೆಯೊಳ್.
ತಿಳಿಯಿರ್ಪೈ ಈ ಜೀವನ ಏನೇನ್ ಅಲ್ಲಂ.

ಜನನ ಮರಣಗಳ್ ಏನೂ ಅಲ್ಲಿಂ. ಹಸಿವು ಧಗೆ
ತೃಷೆ ಚಳಿ ಏನೂ ಅಲ್ಲಿಂ. ಆ ಭಗವಂತನ
ಸೃಷ್ಟಿಸ್ಥಿತಿ ಕ್ರಿಯೆಗೆ ಜಯವೆನ್ನಿ. ಅವನೆ ತವ
ಸೇನಾನಿ. ಆರ್ ಬಿದ್ದರೆಂದರಿಯೆ ಪಿಂದಿರುಗಿ
ನೋಡದೆಯೆ, ಅಳಲದೆಯೆ ಕೆಚ್ಚಿನ ಆಳಾಗಿ
ನೇರವಾಗಿ ಮುನ್ನಡೆಯಿರೈ ಮಮ ಪ್ರಾಣಪ್ರಿಯ
ಸೋದರರೆ! ಒಂದೆ ಪ್ರಕಾರದಲಿ ಒಮ್ಮನದಲಿ
ಒಮ್ಮತದಲಿ ಮುನ್ನಡೆಯೋಣ. ಸಿದ್ಧರಾಗಿ!
ಪ್ರಬುದ್ಧರಾಗಿ! ಉತ್ತಿಷ್ಠತ ಜಾಗ್ರತ ಪ್ರಾಪ್ಯ
ವರಾನ್ ನಿಬೋಧತ ಓರ್ವಂ ಬಿಳ್ದೊಡೆ ಅದಂ
ಇನ್ನೊರ್ವನ್ ಮುಂಬರಿಪನ್ ಅದೆಂದಿಗು ಸತ್ಯ
ವ್ರತ. ನಮ್ಮ ಏಳು ಬೀಳುಗಳ್ ಭಗವಂತನ ಶ್ರೀ
ಪದತಲಂಗಳಿಗಕ್ಕುಂ. ಮುಂದೆಸಾಗಿ ಇನ್ನೂ
ಮುಂದೆ ಸಾಗಿ ಸರ್ವಂ ಶುಭಂ. ಸರ್ವಂ ಶುಭಂ.''

ಹರಿಃ ಓಂ ತತ್ ಸತ್

ದ್ವಾವಿಂಶತಮೋಲ್ಲಾಸಂ

ಏಳಿ! ಎದ್ದೇಳಿ!!

"ಜಾಯ ಮನೋವೈ ಬ್ರಾಹ್ಮಣಃ
ತ್ರಿಭೀಃ ಋಣಾ ವಾ ಜಾಯತೇ ।
ಪ್ರಜಾಯ ಪಿತೃಭ್ಯಃ ಬ್ರಹಂ ಚರ್ಯೇಣ
ಋಷಿಭಸಂ ಯಜ್ಞೇನ ದೇವೇಭ್ಯಃ ॥"

ಸ್ವಾಮೀಜಿಯುಂ ಶ್ಲೋಕಮಂ ಉದ್ಧರಿಸಿ ತಮ್ಮ
ಉಪನ್ಯಾಸಮಂ ಆರಂಭಿಸಿದರ್ "ಏಳಿ! ಎದ್ದೇಳಿ!!
ಪುಟ್ಟಿನಿಂ ಸ್ವತಂತ್ರಮಾದೊಡಾವ್ ಬೆಳೆಬೆಳೆದು
ಪೂರ್ಣಗತಿಯಂ ಮುಟ್ಟಿ ಬಾಳುವೊಡೆ ನಮ್ಮಗಳ
ಸುತ್ತುಮುತ್ತಿನ ಸಕಲತರ ಶಕ್ತಿಯಂ ಪಡೆದು
ಮೈತುಂಬಿಕೊಂಬುದು ದಿಟ. ಅದರ ಪಿಸಿಮಯಂ
ಯೋಚಿಸಿ, ಋಣ ಮುಕ್ತತೆ ಎನಲ್ ಆಯಾಯಾ ಗುರು
ಸಮನಿಸಿಹ ಎಲ್ಲವಗೆಯು ಸಹಕಾರಕ್ಕೆ ಕೈ
ತುಂಬ ಮಡಿದು ಸೇವೆಗೈಮು ತೀರಿಪುದರೊಳೆಮ್ಮ
ಋಣ ಮುಕ್ತತೆ ಎನಲಕ್ಕುಂ. ಪುಟ್ಟಿನಿಂದಾವೇಸ್
ಸ್ವತಂತ್ರರೊ ಅಂತೆಯೆ ಜೀವನದೊಳ್ ಸರ್ವಥಾ
ಸ್ವತಂತ್ರರಲ್ಲಂ. ಎನಲೆಲ್ಲರ ಋಣ ಮುಕ್ತಿ
ಹೊಂದುವೊಡೆ ಜ್ಞಾನ ಜ್ಯೋತಿಯನೆತ್ತಿ. ಓಡಿಯುವುದೆ
"ಜ್ಞಾನದೇವತು ಕೈವಲ್ಯಂ."
ಸೆಪ್ಟೆಂಬರ್ ತಿಂಗಳ
ಇಪ್ಪತ್ತರಂದು ಎಲಿಜಬೆತ್ ಮಾರ್ಗರೆಟ್ ನೋಬಲ್ಲಳಿತ್ತ
ವರದಿಯಿದುಃ– "ಸ್ವಾಮೀಜಿಯುಂ ಸರ್ವಧರ್ಮಗಳ
ಸಮ್ಮೇಳನ ಮಹಾಸಭೆಯ ವೇದಿಕೆಯಮೇಲೆ

ಕಾಂಚನದ ಕಾಂತಿಯ ಶರೀರ ಪ್ರಕೃತಿಯಲಿ
ಕಣ್ಗೆಸೆದರ್ ಸುಂದರ ರೂಪಿನಿಂ. ಅಂತಪ್ಪ
ನವಮೂರ್ತಿಯಂ ಎಲ್ಲಿಯುಂ ಕಾಣದವೊಲ್ ಮನ
ಮಿಡುಕಿ ನೋಳ್ಪ ನಿಟ್ಟಾಲಿಯಂ ಕೀಲಿಸದಾದೆ.
ಸಭಾಸದರುಂ ಅಂತೆಯೆ ಕಣ್ಮನ ಸೂರೆಗೊಂಡ
ಮಾಳ್ಕೆಯಲಿ ವೇದಿಯ ಕಡೆಯೊಳ್ ನೋಳ್ಪುದ ಕಂಡೆ-
ಕಂಡೆನ್. ಸ್ವಾಮಿ ವಿವೇಕಾನಂದರ್ ಎಳ್ದರ್ ಕಾಂಚನದ
ಮೂರ್ತಿಯೇ ಎಳ್ದುನಿಲ್ದವೊಲ್! ಆಸೊಬಗನ್ನು
ನೋಡುತಿರೆಯಿರೆ ಸಭಾವೇದಿಕೆಯ ಶೋಭೆಯೇ
ಅವರಾಗಿ ತೋರಿವಂದರ್! ಅಂಥ ಷೋಡಶಕಳೆ
ಉಕ್ಕುವ ಮಗದೊಂದು ಮಹಾನ್ ವ್ಯಕ್ತಿಯಂ ತ್ರಿ
ಲೋಕದೊಳ್ ಕಂಡರಿಲ್ಲ. ಎಂದೊಡದಂ ಅಲ್ಲ
ಗಳೆಯಲಾರೆನ್. ಸ್ವಾಮಿಜಿಯ ಕಂಠಧಾರೆ
ಹರಿದತ್ತು ಪರಿ ಪುಣ್ಯಜಲಧಾರೆಯೊಲ್ ಬೋಧಪ್ರದ
ವಾಗಿ. 'ಹಿಂದೂಗಳಲಿ ಧಾರ್ಮಿಕ ಭಾವನೆಗಳ್'
ಎಂಬ ವಿಷಯ ಘನವಾಯ್ತು ಸಭಿಕರ ಮನ ಮುಟ್ಟುವ
ಮಾಳ್ಕೆಯಲಿ. ಆ ತಾತ್ವಿಕ ಸತ್ಯದ ನಿರೂಪಣೆ
ಹರಿಹರಿದು ಕೊನೆ ಮುಟ್ಟಿಸಿದಾಗಳ್ 'ಹಿಂದೂ'
ಧರ್ಮನಿಧಿಯೇ ಸುರಿದವೊಲಾಯ್ತು. ಪಿತೃಋಣ.
ಮಾತೃಋಣ ಆಚಾರ್ಯ ಋಣ ಸಾಮಾಜಿಕ ಋಣ
ಜನ್ಮ ಭೂಮಿಯ ಋಣ ಇವುಗಳ ವಿಶ್ಲೇಷಣೆಯು
ಮನರಂಜಕಮಾಯಿತು ಎಂಬುದೆ ಸರಿ, ಬೋಧಕ
ಎಂಬುದಕಿಂತಲ್.

ಮರುದಿನಂ ಎಂದೊಡಂದು-
ಸೆಪ್ಟೆಂಬರ್ ಇಪ್ಪತ್ತರ ತೇದಿಯಂದು ಅದೆ

ಭವನದೊಳ್ ಸ್ವಾಮಿಜಿಯುಂ ಕಿರುವಗೆಯ ಮಧುರ
ತರ ಉಪನ್ಯಾಸಮಂ ಕೊನೆಗೊಳಿಸುತಿಂತೆಂದರ್,
"ಕೇಳಿರೈ! ಕೇಳಿ! ಅಮೆರಿಕಾ ದೇಶೀಯ ಮಮ
ಭ್ರಾತೃಗಳೆ, ಭರತ ಖಂಡದೊಳ್ ಬರಗಾಲ ಧರ್ಮ
ನೀತಿಗಳಿಗಲ್ಲ. ವಿದ್ಯೆ ವಸನ ವಸತಿ ವಿಜ್ಞಾನ
ತಾಂತ್ರಿಕಜ್ಞಾನ ಇವುಗಳಿಗೆ. ಇವುಂ ತುಂಬಿದೊಡೆ
ಭಾರತ ಜನನಿಯುಂ ಮೈದುಂಬಿ ಧನ್ಯಳಾದಪಳ್"
ಅಂದು, ಸಭೆಯುಂ ವಿಸರ್ಜಿತಮಾಗಿ ನಡುವಗಲ
ಬಿಡುವು ಕಳೆದು ಮತ್ತೊರ್ಮೆ ಕೂಡಿದುದು ಸಂಜೆಯ
ಮಂಗಳಮುಹೂರ್ತದಲಿ. ಮಹಾ ನಗರಿಯ ನಡುವಣ
ಭುವನ ಮೋಹನೀಯ ಮಹಾಭವನ ಕಿಕ್ಕಿರಿದು
ತುಂಬಿದುದು ಜನರಾಶಿಯಿಂದೆ, ಸ್ವಾಮಿ ವಿವೇಕಾ
ನಂದರುಂ ಆನೆವಾಗಿಲ ಶ್ರೀಮುಖದಿಂ ಒಳ
ಗೈತಂದರ್, ಅದೇ ಉಡಿಗೆ ತೊಡಿಗೆಗಳ ಸರಳ
ಸುಸುಂದರ ಶೈಲಿಯಲಿ. ಪ್ರಸನ್ನ ಮನೋಹರ
ವದನಮಂಡಲದಲಿ ಮುಗುಳ್ನಗೆಯ ಚೆಂಬೆಳಕು
ಹರಿಸಿ ಸರದಿಯಂ ಎದುರು ನೋಡುತ್ತ ಕುಳಿತರ್
ಇತರರ ಉಪನ್ಯಾಸಗಳ ಕಡೆ ಮನವಿಟ್ಟು.
ಕಳೆಯಿತು ನಸುವೊಳ್ತು ಬಹುಜನ ಬಾಹುಳ್ಯದಿಂ
ಕೂಡಿದ ಮಹಾ ಸಭೆಯೊಳ್. ಆಗಳೇ ಕಿನಿಸಿಗೆ
ಬೇಸರಗಳ್ ಒಡಮೂಡುತಿರೆ ಸಭೆಯ ಅಧ್ಯಕ್ಷ
ಪೀಠ ಸ್ಥಾನೀಕನುಂ ಸ್ವಾಮಿವಿವೇಕಾನಂದ
ಮಹೋದಯರಂ ಕುರಿತು ಮಾತಾಡೆ ಕೋರಿದಂ.
"ಪರಮ ಮಿತ್ರರೇ, ನಿಮ್ಮೊಳ್ ಜ್ಞಾನ ವಿಜ್ಞಾನ
ತಂತ್ರಜ್ಞಾನ ಎನಿತಿರ್ದೊಡಮದರೊಳ್ ಧರ್ಮದ

ಕಿರಣಗಳ್ ಬೆರೆತೊಡನಿತೊ ವೆರ್ಚುವುದು ಶೋಭಾ
ಶ್ಯಲಿ. ಭಾರತದ ಎಡೆ ಎಡೆಯೊಳ್ ನೆಲೆಸಿದ ಈ
ಕ್ರಿಸ್ತ ಬಾಂಧವರ್ ಎಲ್ಲೆಲ್ಲಿಯುಂ ಇಗರ್ಜಿಗಳ್
ಕಟ್ಟುವ ಕತಮೇಂ? ಕ್ರೈಸ್ತಮಿಷನರಿಗಳ್ ಹಿಂದೂ
ಜನಾಂಗಕೆ ನವ ಜೀವನಮಂ ಕುಡುವೆನೆಂದೈದಪರ್.
ಆದೊಡದಾವ ಷರತ್ತಿನಮೇಲೆ? ಹಿಂದೂಗಳ್
ತಮ್ಮ ವಂಶ ಪರಂಪರೆಯ ಧರ್ಮವಂ ತೊರೆದು
ಕ್ರೈಸ್ತರಾಗವೇಳ್ಕುಂ, ಎಂಬ ಕಟ್ಟೊತ್ತಾಯದ
ಮೇಲೆ! ಇದು ಸರಿಯೆ? ಭ್ರಾತೃತ್ವದ ಪರಮಾರ್ಥಮಂ
ಅರಿತು ತಿಳಿದು ಸಂಬಾಳಿಸುವೊಡೆ ಅಖಿಲ ಹಿಂದೂ
ಧರ್ಮಿಯರಂ ಕರುಣೆಯಿಂ ಕಂಡು ಸರಿಯಪ್ಪ
ನವ ವಿಧಾನದೊಳ್ ಒಂದು ಹಿಡಿ ಅನ್ನವಂ ಹೆಚ್ಚು
ಪಡೆವಂತೆ ಸರಿದಾರಿ ತೋರ್ದು ಕಲಿಸೆ ಮಿಷನರಿ
ವರ್ಯರಂ ಕಳಿಪಿರಿ ಬಹು ಸಂಖ್ಯೆಯಲಿ. ಅದರಿಂ
ಇಕ್ಕೆಡೆಗಳಲಿ ಧಾರ್ಮಿಕ ಬಾಂಧವ್ಯ ಸ್ನೇಹಪರ
ಬಾಂಧವ್ಯ ದೇಶ ಬಾಂಧವ್ಯ ಒರ್ಮೆಗೇ ಲಭ್ಯ
ಎಂಬುದಂ ಮನಗಾಣಿರಿ. ಭ್ರಾತೃತ್ವದ ದಿವ್ಯ
ಪರಮಾರ್ಥಮಂ ತೋರುವ ಕೃಪೆಯು ಇರುತಿರಲ್
ನಿಷ್ಠಾವಂತ ಹಿಂದೂ ಧರ್ಮಿಯಂ ಕರುಣೆಯಿಂ
ಕಂಡು ಸರಿಯಪ್ಪ ವಿಧಿವಿಧಾನದೊಳ್ ಬಾಂಧವ್ಯ
ಬೆಳೆಸಿಕೊಳ್ಳುವೊಡೆ ಕಳಿಪಿರಿ. ಅಸಂಬದ್ಧತರ
ತಾತ್ವಿಕತೆಯಂ ಬೋಧಿಸುವೊಡಲ್ಲ, ಮಿತ್ರರೇ!"
ಅಂದು, ತಮ್ಮಯ ದೈಹಿಕಾರೋಗ್ಯ ಗತಿತಪ್ಪಿ
ಆಯಾಸ ಮೈಗೊಂಡು ಉಲ್ಲಸವ ಬಡಿದೋಡಿಸಿ
ಕಾಡುತಿರುತಿರಲ್ ಸಭೆಯಿಂ ನಿರ್ಗಮಿಸಲೆಂದು

ಕೈಮುಗಿದು ಸಭೆಯ ಅಪ್ಪಣೆಯಂ ಮೆಲುದನಿಯಲಿ
ಬೇಡಿದರ್. ಆದೊಡನೇಕರ್ ಕೈಯೆತ್ತಿ ಮುದದಿಂ
ಕೇಳಿಸಿದರ್ "ಮುಂದುವರಿಸಿ."
ಆಗಳ್ ಸ್ವಾಮೀಜಿ
ನುಡಿಸಿದರ್ ಅನುಭವರಸವಂ ಸೂಸಿ. "ಮಿತ್ರರೇ,
ಎನ್ನನುಂ ಸಭೆಗೆ ಪರಿಚಯಿಸುವೊಡೆ ಭಾರತದ
ಭಿಕ್ಷುಕರೆನೆ ಪರಿಚಿತರ್ಸ್ಯೆ ಬಳಕೆಯೊಳಿರುತಿಹ
ಸನ್ಯಾಸಿ ವರ್ಗಮಂ ಪ್ರತಿನಿಧಿಪೆನೆನ್ ಎನೆ
ಸಲ್ವುದು. ಅದೆನ್ನಯ ಬದುಕಿನ ಪೆರ್ಮೆಯ ಪರಮ
ವ್ಯಕ್ತಿತ್ವ. ಸೇವೆಯ ಘನತೆಯು ಸಾರಿ ಪೇಳ್ವುದು
"**ಸರ್ವಜನ ಹಿತಾಯ ಬಹುಜನ ಸುಖಾಯ**" ಎಂಬುವ
ಬದುಕಿನ ಧ್ಯೇಯೋದ್ದೇಶಗಳಂ ಪೊಂದಿದ
ಪಂಗಡವೆ ಹಿಂದೂ ಸನ್ಯಾಸತ್ವದ ಕುಟುಂಬ.
ಇಲ್ಲಿ ಜಾತಿಭೇದಗಳ ಹಂಗಿಲ್ಲ. ವರ್ಣ ಅಥ
ವರ್ಗಭೇದಗಳ ಜಂಜಡಮಿಲ್ಲ. ಎಲ್ಲವುಂ
ಸರಿತ್ ಸಾಗರದ ಮಾಳ್ಕೆಯಲಿ ಸರಾಗಂ ಎನೆ
ಅನ್ಯಮಲ್ತು. ಇದುವೇ ಸನ್ಯಾಸಿ ಜೀವನದ
ಧರ್ಮ. ಇದುವೇ ಸಾರ್ಥಕ್ಯ ಬದುಕಿನ ಜೀವಾಳ!"
ಅಂದೇ ಬೈಗುಗಪ್ಪು ಹರಡುತಿರೆ ಮೆಲುಮೆಲ್ಲನೆ
ಇಳೆಯಮೇಲೆ ಸಾಯಂ ಪ್ರಭೆ ಘನವೆತ್ತು ನೆರೆ
ರಂಜಿಸಿದುದು ಲೋಕೋತ್ತರವಾಗಿ. ಸಂಜೆಯಲಿ
ಕೂಡಿತು ಸಭೆ ಮೂರನೆಯ ಬಾರಿ. ಮಹಾಭವನ
ತುಂಬಿ ತುಳುಕುವೊಲ್ ಕೂಡಿದುದು ಕೆಮ್ಮೊಗದ ಜನ
ರಾಶಿ. ಎನಿತೆನಿತೊ ಗುರುಸ್ಥಾನೀಕರ್ ಉಲಿದರ್
ತಂತಮ್ಮ ಧರ್ಮಸಾರವಂ ಉದ್ಬುದ್ಧವಾಗಿ.

ಸ್ವಾಮಿ ವಿವೇಕಾನಂದರ ಒಳ್ನುಡಿಗಳಿಗಾಗಿ
ಕಾದು ಕುಳಿತವರೆನಿತೊ ಮಂದಿ ಕಣ್‌ಕಿವಿಗಳಂ
ಏಕತ್ರ ನೆಟ್ಟು ಕದಲದಾದರಲ್ಲಿಂದೆ. ಆ
ಸುಮುಹೂರ್ತಮಡರಿ ಬರಲ್ ಗುರುವರ್ಯರ್ಗಂ ಎಳ್ದು
ನಿಂತರ್. ಒಡನೊಡನೆಯೆ ಕೈಪರೆ ಗುಟ್ಟಿದುದು ಜನ
ರಾಶಿ. "ಒಂದೂ ಧರ್ಮದ ತಿರುಳು" ಎಂಬ ವಿಷಯ
ಉಪನ್ಯಾಸ ಧಾರೆಗೆ ಬಿತ್ತಾಯ್ತು. "ಈ ಜಗತ್
ದೈವಸೃಷ್ಟಿಯ ಅಂಗ, ನಾವೆಲ್ಲ ಅವನ ಸತ್
ಸಂತಾನ. ನಂನಮ್ಮೊಳ್ ಪ್ರಭೇದವ ಸೊಲ್ಲು
ಎಳ್ವುದು ಸರಿಯಲ್ತು. ಮನುಕುಲಜರೆಲ್ಲರವನ
ಅಮೃತಪುತ್ರರ್, ಎನಲಿದೇಂ ಅನ್ಯಮಲ್ತು. ಈ
ಬಾಳ್ಬದುಕು ಸತ್ಯಸುಂದರಮಿರ್ಪೊಡೆ ಸುಜ್ಞಾನ
ವಿಜ್ಞಾನ ಸಹಿತ ಜನಮಂಡಲಂ ಬೆಳಗಲಕ್ಕುಂ.
ಬೆಳಗಿ ಬಾಳಲಕ್ಕುಂ, ಎನೆ ವಿದ್ಯೆಯು ಓರ್ವರಿಂ
ಓರ್ವರಿಂಗೆ ಹರಿವುದೆ ಸರಿದಾರಿ ಮನುಕುಲದಿ.
"ಪ್ರಾಗ್ ಜ್ವಾಲಿತಾತ್ ಪ್ರದೀಪಾದ್ ಹಿ ದೀಪಿಕಾ
ದೀಪ ಸಂತತಿಃ"
ಶ್ಲೋಕಾರ್ಥಮಂ ವಿವರಿಸಿದ ಬಳಿಕ
ಅಂದಿಂದಿಗುಂ ಎಂದುಮೆಂದಿಗುಂ ಪ್ರಸ್ತುತ-
ಮಿದುಂ. ಎಲೈ ಬಂಧು ಬಾಂಧವರೇ, ಕೇಳಿ!
ಮನುಷ್ಯತ್ವವಂ ಪಡೆವುದೇ ಮಹೋನ್ನತಮಾದ
ಅಹೋ ಭಾಗ್ಯ! ಇದಂ ಸದುಪಯೋಗಪಡಿಪುದೇ
ಎಲ್ಲರ ಸತ್ ಪ್ರವೃತ್ತಿಯಿರವೇಳ್ಕುಂ. ಕೇಳಿ,
"ಯೂಯಂ ತತ್ ಸತ್ಯಶವಸ ಆವಿಷ್ಕರ್ತ
ಮಹಿತ್ವನಾ! ವಿದ್ಯತಾ ವಿದ್ಯುತಾ ರಕ್ಷಃ"

ಕತ್ತಲು ಕವಿದು ನಿಶಾರಾಣಿಯುಂ ಕರ್ಪುಡಿಗೆ
ಧರಿಸಿ ನಕ್ಷತ್ರಮಾಲೆಯಂ ಸೂಡಿ ನಭದಗಲ
ಜಗಜಗಾಯಮಾನದೊಳೊಪ್ಪಿದಳ್ ಗಂಭೀರ
ರಾಜ್ಯಭಾರದ ಸೂತ್ರವಿಡಿದು. ಸ್ವಾಮಿಜಿಯುಂ
ಸಿದ್ಧಾಸನದಲಿ ಕುಳಿತು ಚಿಂತನಾವೇಶದೊಳ್
ಮುಳುಗಿದರ್, ಭಾರತವರ್ಷ! ಹಾ, ಭಾರತ ವರ್ಷ!...
ದಾರಿದ್ರ್ಯ ಸಂಕಟದ ರಣಗೋಳಿನಲಿ ನರಳ್ವ
ಘೋರಾತಿಘೋರತಮ ಭಾರತಮಸೆದತ್ತು
ನಯನ ಪಟಲದಮೇಲೆ. ಹೃತ್‌ಗಿಂಡಿಯಂ ಕೊರೆ
ಕೊರೆವ ಬೈರಿಗೆಯು ತಾನಾಯ್ತು ಆ ಘನ
ಘೋರ ಚಿತ್ರ! ಎಂತು ಮಾತೃಭೂಮಿಯ ಪುನರುತ್ಥಾನ?
ಪರಾಕ್ರಾಂತತೆಯಲಿ ನರುಳುವ ದಿವ್ಯಭಾರತಿ
ಎಂದಾದೊಡಂ ಸಿಡಿದು ಎದ್ದಾಳು! ರಾಷ್ಟ್ರೀಯ
ಶಕ್ತಿ ಕಾಳೀಮಾತೆ ಬೆಂಬಲಿಸಿ ಹರಸಿಯಾಳು!
ಆ ನಂಬಿಗೆಯೊಳ್ ಕೈಮುಗಿದು ಪ್ರಾರ್ಥಿಸುವೆನ್.

"ಆಕಾಶಾತ್ ಪತಿತಂ ತೋಯಂ
ಯಥಾ ಗಚ್ಛತಿ ಸಾಗರಂ ।
ಸರ್ವದೇವ ನಮಸ್ಕಾರಂ
ಕೇಶವಂ ಪ್ರತಿ ಗಚ್ಛತಿ ॥"

ದೇವಾ! ಮಮ ಪ್ರಭುವೇ! ಆನೆಲ್ಲಿ ಇರ್ದೊಡಂ
ಇನ್ನೆಲ್ಲಿ ನಮಿಸಿದೊಡಂ ನಿನಗಲ್ತೆ ಸಲ್ವುದದು.
ಭಗವನ್? ಭರತವರ್ಷ ಇಲ್ಲಿಗೆ ಬಲ್ ದೂರದ
ದಾಣವಾದೊಡೇಂ ನೀನೆನಗೆ ದೂರನೆ ಕೇಶವ?
ನೀನೇ ದೈವ ನೀನೇಗುರು ನೀನೇ ಪಿತಮಾತ
ಎಲ್ಲಾ, ಇದೊ ನಿನಗೆ ಪುನಃ ಪುನಃ ನಮನಂ ಪ್ರಭುವೆ!"

ಎದೆಯಾಳದಿಂ ಪೊಣ್ಮಿದ ಭಕ್ತಿಪೂರ್ವಕವಾದ
ನಮನಂ ಅಲೆಯಲೆಯಾಗಿ ಏರ್ದುದು ಅಂಬರಮಂ.
ಮರುದಿನದ ಸರ್ವಧರ್ಮಗಳ ಸಮ್ಮೇಳನದ
ಸಭೆಗೆ ನಡೆದರ್ ಜನ ಚರಣ ಚಲದ್ ಧೂಳೀ
ಧೂಸರಿತಮಾದ ಪಥವಿಡಿದು. ಅಪರ ಭುವಿಯಾ
ವಿಶಾಲ ಮಡಿಲಲ್ಲಿ ಸುನೀಲಜಲಧಿಯು ತುಂಬಿ
ಥಳಥಳಿಸಿದತ್ತು ರವಿ ಛವಿ ಪ್ರತಿಫಲನದಿಂ.
ಜಲಪಾನ ಮತ್ತ ಪಕ್ಷಿ ಪಾದಾಂಕಿತ ಶಿಲಾ
ಕಲಾಕಲೆಯು ಚಿತ್ರಿತಂ. ವಿವಿಧ ಪಕ್ಷಿಗೊರಳ್
ರಾಗಾವಳಿ ಕೂಜಿತಂ. ಸ್ವಾಮೀಜಿ ಎಲ್ಲವಂ
ಅವಲೋಕಿಸುತೆ ನಡೆದು ಸೇರಿದರ್ ನಗರಿಯಾ
ಮಧ್ಯ ಪ್ರದೇಶದ ಸಭೆಯ ಭವನಮಂ. ನೋಡೆ,
ಒಳಗಡೆ ನರಶಿರಗಳೆ ಕಣ್ಗೆಸೆದುವು ವಿಧವಿಧ
ಟೋಪಿಗಳ ಸಹಿತ. ಅಧ್ಯಕ್ಷ ಸ್ಥಾನೀಕನುಂ
ಪ್ರಸನ್ನ ಮೊಗದಿಂ ಬರಮಾಡಿ ಕರಂಗಳಂ
ಚಾಚಿ ಕುಲುಕುಲುಕಿ ವೇದಿಯ ಮೇಗಡೆಗೆ ತಾನೆ
ಕರೆದೊಯ್ದನ್. ಸರ್ವಧರ್ಮಗಳ ಗುರುವರ್ಯರುಂ
ಗಮಿಸಿದರ್, ಎಲ್ಲರುಂ ಕೂಡಿ ತುಂಬಿತು ವೇದಿಕೆ.
ಬೌದ್ಧಧರ್ಮೀಯ ಗುರುವುಂ ಎಳ್ದು "ಮಿತ್ರರೇ,
ನಿಮ್ಮೊಳೆಮ್ಮಯ ಬಿನ್ನಪಮೆನೆ ಎಲ್ಲರುಂ ದಯೆ
ದೋರಿ ಬೌದ್ಧದರ್ಮಮಂ ಬೆಂಬಲಿಸಿ ಎಂದೆಂದು"
ಕರೆಯಂ ಬಲು ವಿಶ್ವಾಸದಿಂ ನೀಡಿ ಭಾಷಣ,
ಗೈದರ್. ಬೌದ್ಧಧರ್ಮೀಯ ಪ್ರತಿನಿಧಿಯಾದ
ಧರ್ಮಪಾಲರ್ ತಮ್ಮೆಲ್ಲ ಹೇಳಿಕೆ ಬೇಡಿಕೆ
ಪ್ರಹೇಳಿಕೆಗಳ್ ತೀರ್ಚಿದ ಬಳಿಕಂ ಸ್ವಾಮಿ

ವಿವೇಕಾನಂದರಂ ಕುರಿತು ನುಡಿದರೆಂತೆನೆ
“ಸ್ವಾಮಿ, ನೀವ್ ಬೌದ್ಧಧರ್ಮದ ಬಗ್ಗೆ ದಯಗೈದು
ನಿಮ್ಮಯ ಮನೋನಿಶ್ಚಿತ ವಿಮರ್ಶೆಯಂ ಪೂರ್ಣ
ತಿಳಿಪಿದೊಡೆ ಎಮಗಕ್ಕುಂ ಸಂತೋಷ ಎಂಬೆನಾಂ.”
ಅಬೌದ್ಧರಿಹ ಸ್ವಾಮೀಜಿಯುಂ ಪಕ್ಷಪಾತವ
ಗೈಯರೆಂಬ ದೃಢ ನಂಬುಗೆಯು ಇರುತಿರೆ ಮನದಿ,
ತೋಷದಿಂ ಸ್ವಾಮೀಜಿಯ ಒಳ್ನುಡಿಗಳ್ ಬಯಸಿ
ಎದುರು ನೋಡುತಿರ್ದರ್ ಕಣ್ಮನಗಳಂ ನೆಟ್ಟು.
‘ಬೌದ್ಧಧರ್ಮ ಹಿಂದೂ ಧರ್ಮಕೆ ಪರಿಪೂರಕ’
ಎಂಬುವಭಾಷಣಮಂ ಪ್ರಾರಂಭಿಸಿದರ್ ಸ್ವಾಮೀಜಿ
“ಸೋದರ, ಸೋದರಿಯರೇ, ನೀಮೆಲ್ಲರರಿದಂತೆ
ಆಂ ಬೌದ್ಧನಲ್ಲ, ಆದೊಡಂ ಆನೊರ್ವ ನಿಜ
ಬೌದ್ಧನೆನೆ ಸಲ್ವುದು. ಜಪಾನ್ ಚೀನಾ ಸಿಂಹಳ
ದೇಶಗಳ ಜನರ್ ಬುದ್ಧದೇವನೊರ್ವ ಮಹಾ
ಪುರುಷನೆಂದೊಪ್ಪಿ ಘನ ಗೌರವದಿಂದಾತನ
ದಿವ್ಯ ಸಂದೇಶಮಂ ಅನುಸರಿಸಿದರೆಂತಂತು
ಭಾರತ ರಾಷ್ಟ್ರವುಂ ಗೌರವದಿಂ ಭಕ್ತಿಯಿಂ ಬಲ್
ನೇಮದಿಂ ಆರಾಧಿಸಿ ಅವತಾರ ಪುರುಷಂ
ಎಂದು ಪೂಜಿಸಿ ಬೌದ್ಧಧರ್ಮವಂ ಸ್ವೀಕರಿಸಿ
ಅನುಸರಿಸಿದುದು ಸತ್ಯಂ. ನಿಮಗದಂ ಆನೀಗ
ವಿಶದೀಕರಿಸುವೆನ್, ಅವತಾರ ಪುರುಷನೆಂದಾಂ
ಆರಂ ಗೌರವ ಭಾವದಿಂ ಪೂಜಿಸಿದೆನವನಂ
ಟೀಕಿಸಬಯಸೆನ್. ಬುದ್ಧಗುರುವಂ ಅರಿದವರು
ಶಿಷ್ಯತ್ವವಂ ಸ್ವೀಕರಿಸಿ ಅನುಸರಿಸಿದವರು
ತಮ್ಮ ಗುರುವಂ ಅರಿತುಕೊಳ್ಳದಾದರ್. ಅದೆ

ಅವರಿಗಾಗಿಹ ಮಹಾ ಆಘಾತ-ವ್ಯಘಾತಗಳ್
ಎಂಬೆನಾಂ. ಹಿಂದೂ ಧರ್ಮ-ಬೌದ್ಧಧರ್ಮಗಳಿಗಿಹ
ಸಂಬಂಧಮಂ ಅಳೆದು ಸುರಿದು ನೋಡಿದೊಡಮದುಂ
ಎಂತಹ ಸಂಬಂಧಮೆಂದೆನಲ್. ಕ್ರೈಸ್ತಧರ್ಮ,
ಯಹೂದ್ಯ ಧರ್ಮಗಳಿಗಿಹ ಸಂಬಂಧದೊಲಾಯ್ತು.
ಏಸುಕ್ರಿಸ್ತ ಯಹೂದ್ಯನಿರೆ ಬುದ್ಧಂ ಹಿಂದೂ
ಮತೀಯಂ. ಯಹೂದ್ಯರ್ ಕ್ರಿಸ್ತನಂ ಸರ್ವತ್ರ
ನಿರಾಕರಿಸಿದ್ದು ಮಾತ್ರವಲ್ಲದವನನ್ನೇ
ಸಿಲುಬೆಗೇರಿಸಿದರ್. ಭರತ ವರ್ಷದ ಹಿಂದೂ
ಧರ್ಮೀಯರ್ ಶಾಕ್ಯ ಮುನೀಶ್ವರನಂ ದೇವರೆನೆ
ನೆರೆನಂಬಿ ಪೂಜಿಸಿ ನಮಿಸಿ ಆರಾದಿಸಿದರ್.
ಬುದ್ಧದೇವನುಂ ಲೋಕಕೆ ಜೀವನ ಸಫಲತೆಯಂ
ತಿಳಿಸಿ ಉದ್ಧರಿಸಲ್ಯೆದನಲ್ಲದೆ ವಿನಾಶದ
ಪಥವಿಡಿಸಲಲ್ಲ ತಿಳಿಯಿರಿ. ಅವನ ನಡೆ ಪೂರ್ಣ
ದೆಡೆಗೆ. ಅವನ ಬೋಧೆಯು ಶಾಂತಿಯೆಡೆಗೆ."

ತರುವಾಯಿ, ಸನಾತನ ಧರ್ಮವಂ ಕುರಿತಂತೆ:-
"ಸನಾತನ ಧರ್ಮ ಸಾರ್ವುದು ತಾಳ್ಮೆಯ ಬದುಕಂ.
ಸ್ವಾರ್ಥಮಂ ಜ್ಞಾನದಾ ಕಿಡಿಗಳಿಂ ಸುಟ್ಟುರಿಸಿ
ಝಾಡಿಸಿ, ಜ್ಞಾನ ವಿಜ್ಞಾನ ಪ್ರೇಮಗಳ ಗಣಿ
ತಾನ್ನೈಸಿ ಆರಾರ್ ಜೀವನಮಾನವೆಲ್ಲಂ
ಸಮೆಸಿ ಜಾನದ ತುಟ್ಟತುದಿಗೇರ್ವರೊ ಅಂತಪ್ಪ
ಬ್ರಾಹ್ಮಣಜನರಿಂದೆಮ ರಾಷ್ಟ್ರವುಂ ತುಂಬಿದೊಡೆ
ಜಗತ್ತಿನೊಳ್ ಅಧ್ಯಾತ್ಮ ಪ್ರವಣಶೀಲವಂತ
ಸಂಪನ್ನ ಸ್ತ್ರೀಪುರುಷರಿಂದೆಮ್ಮ ರಾಷ್ಟ್ರವುಂ
ಎಲ್ಲ ಕಾಯಿದೆಗಳಂ ದಾಂಟಿ ಬಿಗಿ ಬಂಧನಂ

ಕಳಚಿ ನಿಲ್ವುದರೊಳಾವ ಸಂಶಯಮಿಲ್ಲವೈ.
ಅಂತಪ್ಪ ಪ್ರಜೆಗಳ ಆಳ್ವಿಕೆಗೆ ಆಳರಸರ
ಅಗತ್ಯಮೆ ಇಲ್ಲ. ಸರ್ವರ ಹಿತ ಬಯಸುವ ಬಲ್
ಉದಾತ್ತ ಜೀವಿಗಳೆನಲವರೇ ದೇವಮಾ–
ನವರ್. ಅಂತಪ್ಪ ಆದರ್ಶದಿಂ ತುಂಬಿ
ವಿಜೃಂಭಿಸಿದ ಯುಗಂ ಇರ್ದುದು! ಅದುವೆ ಸತ್ಯ
ಯುಗ. ಆ ಸತ್ಯಯುಗದೊಳ್ ಒಂದೆ ಜಾತಿಯಿರ್ದುದು.
ಅದೇ ಬ್ರಾಹ್ಮಣ ಜಾತಿ! ಬಳಿಕಲವರ್ ಅವನತಿ
ಹೊಂದಿ ಒಡೆದು ಪಂಗಡ ಪಂಗಡಗಳಾಗಿ ವಿವಿಧ
ಜಾತಿಗಳ್ ಒಡಮೂಡಿದುವು ಎಂಬುದದು ಇಂದು
ಉಲ್ಲೇಖ ಮಾತ್ರಮಾಯಿತು. ಕೇಳಿ ಬಂಧುಗಳೆ,

"ನ ವಿಶೇಷೋऽಸ್ತಿ ವರ್ಣಾನಾಂ
ಸರ್ವ ಬ್ರಾಹ್ಮವಿದನ ಜಗತ್ ।
ಬ್ರಾಹ್ಮಣಾ ಪೂರ್ವ ಸೃಷ್ಟಂ ಹಿ
ಕರ್ಮಭಿರ್ವರ್ಣತಾಂ ಗತಮ್ ॥"

ಈಯುಗ ಚಕ್ರಮಿದೇ ತೆರದಿ ತಿರುಗುತೆ ಎಲ್ಲರ್
ಮತ್ತೊಮ್ಮೆ ಬ್ರಾಹ್ಮಣರೆನಿಪುದು ದಿಟಂ. ಇದೀಗ
ಅಂತೊಂದು ಯುಗಾಂತರದ ಸಮಯಂ ಚಕ್ರವತ್
ತಿರುಗಿ ಬರುತಿರ್ಪುದು. ಇದರತ್ತಣಂ ನಿಮ್ಮೆಲ್ಲರ
ಲಕ್ಷ್ಯವಂ ಸೆಳೆಯಲಾಂ ಬಯಸುವೆನ್. ಆದ್ದರಿಂ
"**ಸರ್ವೇ ಜನಾಃ ಸುಖಿನೋ ಭವಂತು**" ಎಂಬೊಂದು
ಉಕ್ತಿಗನುಗುಣಮಪ್ಪಿ ಸಕಲ ಅಜ್ಞಾನಿಗಳಂ
ಸುಜ್ಞಾನಿಗೊಳಿಪುದೆ ಗುರು ಸ್ಥಾನೀಕರುಂ
ನಿರ್ವಹಿಪುವ ಇಂದಿನ ದಿವಿನಾದ ಕರ್ತವ್ಯ.
ಕೇಳಿ, ಶಾಕ್ಯಮುನಿಯುಂ ಸಂಸ್ಕೃತ ಭಾಷೆಯೊಳ್

ಗುಪ್ತವಾದ ವೇದಶಾಸ್ತ್ರಗಳ ತತ್ತ್ವವಂ ಪೊರ
ಗೆಳೆದು ಜಗಕೆ ಘಂಟಾಘೋಷವಾಗಿ ಸಾರಿದ
ಸುವಿಸಾಲ ಹೃದಯಿ. ಅದುವೇ ಬುದ್ಧನ ಮಹಿಮೆ!
ಗುರು ಬುದ್ಧನ ಮಹಿಮೆಯೆನಲ್ ಸುಜ್ಞಾನ ಮೇಣ್
ಅಜ್ಞಾನಿಗಳ ನಡುವೆ ಆವೊಂದು ಭೇದಮಂ
ತೋರದೆಯೆ ಸರ್ವರಲಿ ಸಮಭಾವ ಸಹಾನುಭೂತಿ
ತೋರ್ದುದು. ಅದುವೇ ಗುರುಗಳ ಕೃಪಾ ಮಹಿಮೆ!
ಅಂದು, ಬುದ್ಧನ ಕಾಲದೊಳ್ ವೇದ ಶಾಸ್ತ್ರಗಳ್
ಇರ್ದುದು ಸಂಸ್ಕೃತ ಭಾಷೆಯೊಳ್ ಮಾತ್ರಮೇ.
ಸಂಸ್ಕೃತ ಭಾಷೆಯದು ಜನ ಸಾಮಾನ್ಯರಿಂಗೆ
ಎಟುಕಲಾರದ ಬುತ್ತಿ. ಸಂಸ್ಕೃತಂ ಮಹಾನ್
ಪಂಡಿತಜನರ ಸ್ವತ್ತಾಗಿ ಅವರುಗಳ ಭಾಷೆಯು
ಮಾತ್ರವೇ ಆಗಿ ಉಳಿದತ್ತು ಕಾಲಕಾಲಕು.

"ಬೋದ್ಧಾರೊ ಮತ್ಸರ ಗ್ರಸ್ತಾಃ
ಪ್ರಭವಸ್ಮಯ ದೂಷಿತಾಃ ।
ಅಬೋಧೋಪಹಾಶ್ಚಾನ್ಯೇ
ಜೀರ್ಣಮಂಗೇ ಸುಭಾಷಿತಂ ॥"

ಬುದ್ಧದೇವನ ಕೆಲಬ್ರಾಹ್ಮಣ ಶಿಷ್ಯರ್ ತಮ್ಮಯ
ದಿವ್ಯ ಗುರುದೇವನ ಉಪದೇಶಗಳಂ ದೇವ
ಭಾಷೆ ಸಂಸ್ಕೃತಕೆ ಅನುವಾದಿಸಲ್ ಆಶಿಸಿರೆ,
ಬುದ್ಧಗುರು ದೇವನುಂ ಒಪ್ಪದೆಯೆ ಬೆಸಸಿದಂ,
"ಶಿಷ್ಯರೇ ದೀನದಲಿತರಿಗಾಗಿ ಅವರವರ
ತಿಳಿಯಾದ ಭಾಷೆಯೊಳ್ ಮಾತಾಡಲಿಚ್ಛಿಪೆನ್.
ಸಂಸ್ಕೃತದ ಗೂಢಾರ್ಥಂ ಸಾಮಾನ್ಯರರಿಯರ್
ಅದರಿಂದೆ ಸಾಮಾನ್ಯರ ಭಾಷೆಯೊಳ್ ಇಪ್ಪುದೆ

ಲೇಸು.” ಅದರಿಂ ಇಂದಿಗುಂ ಬದ್ಧನುಪದೇಶ–
ಉಪನ್ಯಾಸಗಳ್ ಅಂದಿನ ಪಾಳೀ ಭಾಷೆಯಲಿ
ಪೆರ್ಚಿಹುದು. ಅಂತಲೇ ದಕ್ಕಿಣದ ಜನರಿಂಗೆ
ದಕ್ಕದಾಯ್ತು ಅವನುಪದೇಶಗಳ್. ಆದೊಡೆ
ಸಿದ್ಧಾಂತಮೇನಿರಲಿ ತತ್ತ್ವಗಳ್ ಇನ್ನೆಂತಿರಲಿ
ಎಲ್ಲಿಯ ತನಕ ಈ ಪ್ರಪಂಚದೊಳ್ ‘ಸಾವು’
ಎಂಬುದಿದೆಯೊ ಮನುಜನ ಹೃದಯದಲಿ ‘ಅಬಲತೆ’
ಎಂಬುದಿದೆಯೊ ಎಲ್ಲಿಯ ತನಕ ಬಳಲಿದಾಗಳ್
ಹೃದಯಾಂತರಾಳದಲಿ ಪ್ರಾರ್ಥನೆಯ ಸೊಲ್ಲುಲಿ
ಹೊಮ್ಮುವುದೊ ಅಲ್ಲಿಯತನಕ ದೇವರೊಳ್ ನಿತ್ಯ
‘ನಂಬುಗೆ’ ಎನುವೊಂದು ಪರಮದ್ರುವ್ಯವದು ಇರ್ದೇ
ಇರ್ಪುದು, ಜಗದಗಲಂ. ಬುದ್ಧಗುರುವಿನ ಶಿಷ್ಯ
ಮಂಡಲಿಯು ದೇವರ ಅಸ್ತಿತ್ವಮಂ ನಂಬದೆಯೆ
ಅಲ್ಲಗಳೆದುದರಿಂದೆ ಅತ್ಯುಗ್ರ ಸಂಕಷ್ಟ
ಸಂಕಟಗಳ್ ಸ್ವತಃ ಸಂಪಾದಿಸಿದರ್. ಮತ್ತಂ
ಅನುಷ್ಠಾನರಂಗದಿ ಸ್ತ್ರೀ ಪುರುಷರುಂ ಪ್ರೀತಿ
ಭಕ್ತಿ ಧ್ಯಾನ ಜಪತಪಾದಿಗಳಿಂದೆ ನೆಮ್ಮಿರ್ದ
ದೇವರಂ ಕಸಿದರ್! ಅದರ ಘೋರ ಪರಿಣಾಮ
ಬೌದ್ಧಧರ್ಮಕೆ ಭರತಖಂಡದೊಳ್ ಸ್ಥಾನವೇ
ಇಲ್ಲಮಾಯಿತು. ಕಟ್ಟಕಡೆಯೊಳ್ ಬೌದ್ಧಧರ್ಮದ
ತವರ್ ಮನೆಯಾದ ಭಾರತದಲಿ ತಾಂ ಬೌದ್ಧನೆನೆ
ಓರ್ವನುಂ ಉಳಿಯಲಿಲ್ಲ ತಿಳಿಯಿರಿ.
ಹಿಂದೊತ್ತಿ ಅದೇ ಸಮಯದಿ
ಬ್ರಾಹ್ಮಣ ಧರ್ಮಕ್ಕಿನಿತು ನಷ್ಟಮೊದವಿರೆ ಬೌದ್ಧ
ಧರ್ಮವುಂ ಜನ ಸಾಮಾನ್ಯರಂ ಮೇಲೆತ್ತುವ

ಉತ್ಕಟೇಚ್ಛೆಯಿಂ ಸರ್ವ ಜನಾಂಗದೆಡೆಗಳಿಗೆ
ಸಹಾನುಭೂತಿ, ಕರುಣೆಗಳಂ ಬೀರಿತೆಂಬುದದು
ದಿಟಂ. ಆಗಣ ಭರತಖಂಡದ ವಿಚಾರಮಂ
ಗ್ರೀಕ್ ಇತಿಹಾಸಜ್ಞನೊರ್ವನುಂ ಬರೆದನಿಂತು,
"ಭಾರತದಲಿ ಅನೃತಮಂ ನುಡಿವ ಹಿಂದೂ ಜನ
ಕಾಣೆನಾಂ. ವ್ಯಭಿಚಾರಿಣಿಯೆಂದು ಕರೆಸಿಕೊಂಬ
ಸ್ತ್ರೀಯಂ ಕಂಡೆನಿಲ್ಲ." ಅಂದೊಡೆ ಹಿಂದೂ ಜನ
ಸಮಾಜವ ಇಂತೊಂದು ಉತ್ತಮೋತ್ತಮ ಸ್ಥಿತಿ
ಗತಿಗೆ ಏರ್ಪಡಿಸಿದ ಸುಧಾರಣಾ ವಿಧಾನಂ
ಕಾಲಕ್ರಮದೊಳ್ ಸೊರಗಿ ನಶಿಸಿ ಕಣ್ಮರೆಯಾಯಿತು.
ಹಿಂದೂ ಧರ್ಮವುಂ ಬೌದ್ಧಧರ್ಮದ ಸಹಚರ್ಯ
ಸಹಕಾರಮಿಲ್ಲದೆಯೆ ಬಾಳಲಾರದು. ಇಂತು,
ಈರ್ವರಾ ನಟ್ಟ ನಡುವಣದ ಭೇದವೆಮಗೇಂ
ತೋರ್ವುದೆಂಬುದಂ ಗಮನಿಸಿರಿ. ಬ್ರಾಹ್ಮಣಜನರ
ಪಾಂಡಿತ್ಯ ಮೇಣ್ ತತ್ತ್ವಗಳಿಲ್ಲದೆ ಬೌದ್ಧರ್
ಉಳಿಯಲಾರರ್ ಅಥ ಬುದ್ಧದೇವನ ಹೃದಯದ
ಆಶ್ರಯವದಿಲ್ಲದೆಯ ಹಿಂದುವುಂ ಉಳಿಯಲಾರ.
ಬೌದ್ಧರ ಮೇಣ್ ಬ್ರಾಹ್ಮಣರ ಮಧ್ಯೆ ತಲೆದೋರಿದ
ಅನನ್ಯ ವಿಭಿನ್ನರುಚಿಯೇ ಭರತ ಖಂಡದಾ
ಅವನತಿಗೆ ಪರಮ ಕಾರಣಂ. ಆದ್ದರಿಂದಲೆ,
ಇಂದು ಭಾರತ ರಾಷ್ಟ್ರ ಬಡತನದ ಬೆಂಕೆಯಲಿ
ಬೇಯುತ್ತೆ ಮೂವತ್ತು ಕೋಟಿ ಭಿಕ್ಷುಕ ಮಂಡಳಿ
ಹಾಹಾಕರಿಸುತಿಹುದು ಕಳೆದ ಶತಮಾನದಿಂ
ತನ್ನ ಗೆಲ್ದವರ ಗುಲಾಮಗಿರಿಯಲಿ. ಅದ್ಯಾಪಿ,
ಬ್ರಾಹ್ಮಣರ ಅದ್ಭುತ ಧೀಶಕ್ತಿಯೊಡನೆ ಮಹಾಗುರು

ಬುದ್ಧಭಗವಂತನ ಅನುಪಮ ಪ್ರೇಮ ಅನುಕಂಪ
ಇವನೆಲ್ಲವಂ ನಾವ್ ಒಂದುಗೂಡಿಸಿ ಬಾಳ್ವ
ಶಕ್ತಿಸಂಪದಮಂ ಶ್ರೀಭಗವಂತನೆಮಗಿತ್ತು
ಕಾಪಾಡಲಿ, ಎಂದಾನ್ ಮನಸಾ ಪ್ರಾರ್ಥಿಪೆಂ.''
ಆಗಳೇಂ ಸಭೆಯೊಳ್ ಮೊಳಗಿದ ಜಯಧ್ವನಿಗಳ
ಹರ್ಷೋದ್ಗಾರ! ಮತ್ತಂ ಮೆಲುಮೆಲ್ಲನೆ ತೋಷದಿಂ
ಮರ್ಮರಿಸಿತು ನಲ್ಮಾತುಗಳ ಹೊನಲ್. ಎಲ್ಲರ
ಹರುಷ ರಸಧಾರೆಯಿಂ ಮನವೆರ್ಚಿತು ಗುರುವರನ.
ಬೌದ್ಧಗುರು ಪಂಥಿಯ ಧರ್ಮಪಾಲ್ ಸಂತುಷ್ಟ
ಹಸನ್ಮನಗಳಿಂದೆ ಅಭಿನಂದಿಸಿದರ್ ಗುರುದೇವ
ವಿವೇಕಾನಂದರಂ. ತರುವಾಯಿ ಹಿಂದೂ
ಧರ್ಮದೊಳ್ ನಿರೂಪಿತ ಪುನರ್ಜನ್ಮ ಎಂಬುವ
ಸಿದ್ಧಾಂತಮಂ ವಿವರಿಸಿದರ್. ಹಿಂದೆಯೆ ತಿಳಿದು
ಬಂದಂತೆ ಸರ್ವಧರ್ಮಸಮ್ಮೇಳನದ ಅಂಗ
ಸಂಸ್ಥೆ ವೈಜ್ಞಾನಿಕ ವಿಭಾಗದೊಳ್ ಹಲವಾರು
ಉಪನ್ಯಾಸಗಳ್ ನೀಡುವ ಅಗತ್ಯಮೊದವಿದುದು
ಸ್ವಾಮಿಜಿಗೆ. ಅಲ್ಲಿಯುಂ ಎಲ್ಲಿಯುಂ ಸೋಲುಗಳ
ಕಹಿಯುಂಬ ಗತಿಯೆಂದೂ ಸುಳಿಯದಾಯ್ತು ಗುರುವಿನ
ಬಳಿ. ವೈಜ್ಞಾನಿಕ ವಿಭಾಗದಲಿ ಅಧ್ಯಕ್ಷ
ಸ್ಥಾನದೊಳಿರ್ದ ಮರ್ವಿನ್ ಮೇರಿ ಸ್ನೆಲ್‌ರವರ್
ಮನಮೆಚ್ಚಿ, ಅನನ್ಯತರ ಸ್ನೇಹದನುಬಂಧಂ
ಬೆಳೆಸಿ ವೇದಾಂತದ ರಸದೂಟೆಯಲಿ ಮಿಂದೊಲ್
ಹರ್ಷಿತೆಯಾದಳ್ ಎದೆಯೋತು.
ಎಂದಿನೊಲ್ ಕಿಕ್ಕಿರಿದು
ತುಂಬಿರ್ದ ಸಭೆಯೊಂದರೊಳ್ ''ಸಾಂಪ್ರದಾಯಿಕ

ಹಿಂದೂಧರ್ಮ ಮೇಣ್ ವೇದಾಂತತತ್ತ್ವ" ಎಂಬ
ವಿಷಯವಾಗಿ ಪ್ರವಚನಂ ನೀಡಿದರ್. ಸಭೆಯ
ವಿದ್ವನ್ಮಣಿ ಜನರ್ ಪ್ರಶ್ನೋಪಪ್ರಶ್ನೆಗಳೆತ್ತಿ
ಜಾಡಿಸಿದರ್ ಬಾಣಾವಲಿಯ ತೆರದಿ. ಎಲ್ಲರ
ಮನಮತಿಗಳೊಪ್ಪುವೊಲ್ ಚೆಚ್ಚರದಲಿ ಪ್ರತಿ
ಉತ್ತರಂ ಬಿತ್ತರಿಸಿ ಬೆರಗುಗೊಳಿಸಿ ಮನವಂ
ತಣಿಸಿದರ್. ಬಳಿಕ ಪ್ರವಚನಮಂ ಇಂತಿಂತು
ಬಿತ್ತರಿಸಿದರ್ ಗುರುದೇವಂ "ಭ್ರಾತೃ ಭಗಿನಿಯರೆ,
ಇಂದಾನ್ ಕ್ರಿಸ್ತಾವತಾರಮಂ ನೆಚ್ಚಿ ಬಲ್
ಪ್ರೇಮ ಕಾತರತೆಯಿಂ ನೇಮದಿಂ ಬಾಳ್ಮೆಯಂ
ನಡೆಸೆ ಪೆರ್ಮೆಗೊಳುವೆನ್. ಇಂದೆನಗೆ ಏಂ ದೊರಕೆ
ಅದಂ ತಿರಿದು ತಿಂಬುವೆನ್. ಮತ್ತೆ ನಾಳಿನಾ
ವಿಚಾರಂ ಕುರಿತು ಯೋಚಿಸುವ ಅಗತ್ಯವಿಲ್ಲಂ.
ಇದೆ ವೇದಿಕೆಯೊಳ್ ಉಪಸ್ಥಿತರಿಹ ಪಂಡಿತ
ಮಹನೀಯರುಂ ಎನ್ನಯ ಹೃದಯದ ಹಾರೈಕೆಯ
ಸತ್ಯದ್ರವ್ಯವಂ ಪ್ರಮಾಣೀಕರಿಪರೆಂಬ
ನಂಬುಗೆಯು ಎನಗಿರ್ಕುಂ. ಭಗವಂತನ ಪಾದದ
ಸಲುವಾಗಿ ಭಿಕ್ಷುಕನಿರಲಾಂ ಪೆರ್ಮೆಬಡುವೆನ್
ಭಾರತದ ಸನ್ಯಾಸಿ ಬಂಧುಗಳನೆಲ್ಲರಂ
ಒಗ್ಗೂಡಿಪುದು ಸಾಧ್ಯಮಾದೊಡೆ ಅದೊರ್ ಭವ್ಯ
ಸಂಸ್ಥೆಯೇ ಆದಪುದು. ದಿವ್ಯ ಶಕ್ತಿಯ ಮೂಲ
ಅಲ್ಲಿಹುದು. ಅದಂ ಕೈಸಾಧಿಸಲ್ ದಿವ್ಯ ಆರ್ಥಿಕ
ಕೊರಂ ಮಾರೊಡ್ಡು. ಆ ವೈಫಲ್ಯಮಂ ಇಲ್ಲಿಯ
ಗಳಿಕೆಯಿಂ ತೊಡೆವ ಅಭಿಲಾಷೆಯಿರ್ಪುದೆನ್ನೊಳ್.
ಆದೊಡೆ ಕ್ರೈಸ್ತ ಧರ್ಮೀಯರಿಂ 'ಅನಾಗರಿಕ' ನೊರ್ವ

ಆವುದೇ ಸಹಾಯಂಬಡೆವುದು ಎನಿತು 'ಭಂಗ'
ಎಂಬುದೆಲ್ಲರಿಗೆ ತಿಳಿದ ವಿಚಾರ. (ಬಾರಿ ಕರ
ತಾಡನ) ಆದೊಡಂ ಸ್ವಾತಂತ್ರ್ಯದ ಸವಿಯಂ ಸವಿದು
ಒಡಲ್ತುಂಬಿದೀ ದೇಶದ ವಿಶ್ವ ವಿಚಾರಂ
ಕೇಳರಿದುದುದರಿಂದೆನಗೆ ನಿರಾಶೆಯುಮಿಲ್ಲಂ."
ದಿನದಿನಂ ಲಭಿಸಿದ ಯಶೋಲಾಭ ಸತ್ಕೀರ್ತಿ
ಶಿಖರಕೇರ್ಪಡಿಸಿದತ್ತು ಸ್ವಾಮಿ ವಿವೇಕಾನಂ-
ದರಂ. ಧರ್ಮವಿದರ ಘನ ಪಾಂಡಿತ್ಯದ ಸುದ್ದಿ
ವರ್ಣವರ್ಣಾಂತವಾಗಿ ದೇಶದೊಳ್ ಹರಡಿದುದೆ
ತಡಂ ವಿದ್ವನ್ಮಣಿಗಳ ಮನಮತಿಗಳ್ ಮಿಡುಕಿ
ಆಲೋಡಿತಮಾದುವು ಕಿಚ್ಚಿಟ್ಟ ತೆರದಿ! ಆ
ಚಿಕಾಗೊ ನಗರಿಯ ಶ್ರೀಮಂತನೊರ್ವಂ ಭರದಿ
ಮುಂದೈದು ಪರಮಾದರದಿಂ ಮಧುರ ಕರೆಯಿತ್ತು
ತನ್ನ ಬೃಹದ್ ಭವನಕೆ ಕರೆದೊಯ್ದಂ. ಅಲ್ಲಿ
ಗುರುವಿಂಗೆ ರಾಜಯೋಗ್ಯ ಸತ್ಕಾರವನಿತ್ತು
ಮಾನಿಸಿದನ್, ಪಾಲಿಸಿದನ್, ಸ್ವತಃ ಏಸುಕ್ರಿಸ್ತ
ಐದನೋ ತನ್ನುಡಿಗೆ ಎಂದೆಂದು. ಆದೊಡಾ
ಸ್ವಾಮಿಜಿಯ ಮನೋದಧಿಗೆ ಅತೀವ ಮುಜುಗರ.
ದೀನದಲಿತರ ಗುಡಿಸಲೊಳ್ ಕಳೆದ ದಿನಗಳಲಿ
ತನಗಿರುತಲಿರ್ದ ಸುಖ ಶಾಂತಿಗಳ್ ದೂರವೇ.
ಭಾರತದ ಅಗಾಧ ಬಡತನ ಎದೆಯ ಗೂಡಿನ
ನಂದನೋದ್ಯಾನಕೆ ಉರಿಕಿಡಿಯಂ ಹಚ್ಚಿದುದು
ನೆರೆ ಸುಟ್ಟುರಿವ ತೆರದಿ. ಅಮೆರಿಕಾ ಸಂಯುಕ್ತ
ರಾಜ್ಯಗಳ ಮಹದೈಶ್ವರ್ಯ ಮೇಣ್ ಭಾರತದ
ಬಡತನಂ ತೂಗಿನೋಡಿದೊಡೆ ಮೈ ಜುಂ ಎನಿಪ

ತಾರತಮ್ಯ. ಅರಳೆಯ ಮೃದುಮಯ ಪಲ್ಲಂಕ
ಕಟು ಕಠಿಣ ಮುಳ್ಳುಗಳ ಪಂಕವಾಗಿ ತೋರ್ದುದು.
ತನುಮನಗಳ್ ಗದಗದ ನಡುಗಿದುವು. ಮೈಯೊಳ್
ಸ್ವೇದಬಿಂದುಗಳ್ ಮೂಡಿದುವು ತುಂತುರು ತುಂತುರು
ಹನಿಗಳಾಗಿ. ಒಡನೆ ಮನಕೊದವಿದ ಅತ್ಯುಗ್ರ
ಘಾಸಿಯಿಂ ನಿದ್ದೆ ದೂರಾಯ್ತು ಕಂಗಳಿಗೆ. ಆ
ವಿಗಳಿಗೆಯಲಿ ಮಿಣ್ಣನೆ ಶತಪಥ ತಿರುಗಿದರಾ
ಸ್ವಾಮೀಜಿ ಕೊಠಡಿಯಲಿ. ಪದಗತಿ ಬಳಲಿಸೋಲ್ದ
ಬಳಿಕ ನೆಲದೊಳ್ ಸಿದ್ಧಾಸನದಲಿ ಕುಳಿತು ಇಂತು
ಮನತುಂಬಿ ಪ್ರಾರ್ಥಿಸಿದರ್ "ಹೇ, ಜಗಜ್ಜನನೀ,
ತಾಯಿ, ಎಮ್ಮಯ ಮಾತೃಭೂಮಿಯಂ ಬಡತನದ
ಬಾಣದಲಿ ಚುಚ್ಚಿಚುಚ್ಚಿ ಗಾಣಕೆ ಕೊಟ್ಟು, ನಿಡು
ಗೋರಳ್ ತಿರುಪಿ ವಿಚಿತ್ರತಮ ಹಿಂಸೆಗೆ ಗುರಿಪಡಿಸಿರೆ,
ನೋನೋಡುತಿಹೆ ನೀಂ! ಇದೇನೀ ವಿಪರೀತವೊ?
ತಾಳಲಾರೆ ನೋಯಲಾರೆ. ನಿಮ್ಮನಾಂ ಬೇಡುವುದು
ಮಾತ್ರಮಲ್ಲದೆ ಬೇರೇನ್ ಅರಿಯೆನ್. ಜಗಜ್ಜನನಿ!
ಅಯ್ಯೊ, ನಮ್ಮ ದುರವಸ್ಥೆ ಅದೇನ್ ಸಾಮಾನ್ಯ
ಎನಲುಂಟೆ? ಒಪ್ಪೊತ್ತು ತುತ್ತಿಗೆ ಗತಿಯಿಲ್ಲದ ಬಾಳ್ಮೆ ಈ
ದೇಶಗಳ್ ಐಶ್ವರ್ಯದ ಕೋಂಟೆಯಲಿ ಮುಳುಂಗಿವೆ.
ಇಂದೆಮ್ಮ ಬಡ ಭಾರತೀಯರಂ ಕರುಣದಿಂ
ನೆಗಳ್ವರಾರ್? ಭಾರತ ಜನನಿಯ ಶೃಂಖಲೆಯಂ
ಕಳಚುವವರಾರ್? ಎಮಗೊಂದು ಸರಿದಾರಿಯ
ತೋರ್ಪರಾರ್? ತಾಯೀ!" ಮನದಿ ನೊಂದು ನೋಯುತ
ಕಳೆದರಾ ರಾತ್ರಿಯಂ ಗುರುವರಂ.
ದಿನದಿನಂ

ಧರ್ಮಚಿಂತನಂ ಬೆಳೆಬೆಳೆದು ತುಂಬಿತು ನಗರ
ದ್ದೇಶದಲಿ, ಜ್ಞಾನದವಲಯಂ ಬೊಕ್ಕು ಕೆರಳಿಸಿ
ಧರ್ಮದಾಹದ ಪುರ್ಚು ಭುಗಿಲೆಳ್ದುದು. ಅನೇಕ
ವಿದ್ವಜ್ಜನರ್ ಬಳಿಗೈಯುತೆ ಸ್ವಾಮೀಜಿಯಂ
ಕುರಿತು "ಗುರುವರ್ಯ, ನಮ್ಮ ಅಮೆರಿಕೆಯ ಸಂಯುಕ್ತ
ಸಂಸ್ಥಾನಗಳಲಿ ಇಂತಪ್ಪ ಪ್ರವಚನಗಳ ಅಗತ್ಯಂ
ಬಹಳಮಿರ್ಕುಂ. ನೀವೆಮ್ಮೊಡನೈದು ಎಲ್ಲೆಡೆಯ
ಸಭೆ ಸಮಾರಂಭಗಳಲಿ ಪ್ರವಚನಮೀವುದು
ಒಳ್ಳಿತೆಂಬೆ. ಜನಗಣ್ಯರ ಮನೋಮಯ ಜ್ಞಾನ-
ಮಯ ಪ್ರಾಣಮಯ ಕೋಶಗಳಲಿ ಧರ್ಮಯಜ್ಞವ
ಹೂಡಿ ಜನಜಾಗೃತಿಗೆ ಒತ್ತುಕುಡುವಿರಾದೊಡೆ
ಬಲ್ ಉಪಕೃತಮಾವ್ ಎಂದಪೆಂ' ಎನುತೆನುತೆ
ಬೇಡಿ ಕೊಂಡಾಡಿ ಕಾಡಿದರ್ ಬಲು ವಿನಯದಿಂ.
    ತರುವಾಯ ಅಮೆರಿಕದ ಸಂಯುಕ್ತ ಸಂಸ್ಥಾನ
ದಾದ್ಯಂತ ಧರ್ಮಪ್ರಸಾರದ ಪ್ರಯುಕ್ತ ಪಯಣಂ
ಕೈಕೊಂಡರ್ ಸ್ವಾಮೀಜಿ, ಎಲ್ಲೆಡೆಗಳಲಿ ಚರಿಸಿ,
ಸಂಸ್ಥಾನಗಳ ಉದ್ದಗಲದೊಳ್ ಸಭೆಗೂಡಿಸಿ
ಸರಳ ರೀತಿಯ ಪ್ರಸಾರ ನಡೆಸಿದರ್. ಇನಿತು
ಬಿಡುವಿಲ್ಲದ ಕಾರ್ಯಕ್ರಮಗಳ್ ಮೂಡಿ ಸಂದುವು
ಧರ್ಮರಸಧಾರೆ ಹರಿಸಿ. ಗುರುವರ್ಯಂ ಸಾಯಂ
ಸಮಯೆ ಕೂಡಿದ ಬೃಹದ್ ಸಭೆಯಲಿ ಪ್ರವಚನದ
ಸುರಿಮಳೆ ಕರೆದರ್ "ಆತ್ಮೀಯ ಸೋದರ ಸೋದ-
ರಿಯರೆ, "**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು
ಕದಾಚನ**" ಎಂಬೊಂದು ಮಂತ್ರೋಕ್ತಿಯಂ ನುಡಿದು
ಪ್ರತಿ ಪದಾರ್ಥಮಂ ವಿಷದೀಕರಿಸಿ, ನುಡಿದರ್,

“ಎಳಿ! ಎದ್ದೇಳಿ!! ನಿಮ್ಮ ನಡುಕಟ್ಟಿ ಕಾರ್ಯಮಂ
ಕೈಕೊಳ್ಳಿ ಶ್ರೀ ಭಗವಂತ ಎಮಗಿತ್ತಹ ದಿವ್ಯ
ಸಂದೇಶ ಇದೇ! ದುಃಖ ಯಾತನೆಯ ಕತ್ತರಿ
ಅಲುಗಿನಲಿ ಸಿಲ್ಕಿದಾಗಲ್ ಧೃತಿಗೆಡದೆ ಪಣ
ತೊಟ್ಟು ದುಡಿವುದೆ ಶಾಂತಿ ವ್ರತಕೆ ಸುಪಥವೆಂಬೆ.
ಘೋರತರ ಪ್ರಳಯದ ಪರಿಸ್ಥಿತಿಯಲಿಯು ತಲೆ
ಮಣಿಯದೇ ಇರ್ಪ ವಜ್ರಮನೋಬಲಮಿರ್ದೊಡೆ
ಮತ್ತೇನ್ ವೇಳ್ಕುವೆಮಗೆ? ಎಳಿ! ಮಮ ಪ್ರೀತಿಯ
ಬಂಧುಗಳೆ! ಈ ಜಗತ್ತು ದುಃಖ ಸಂಕಟಗಳ ಮುಖೇನ
ಶಿಕ್ಷಣ ನೀಡುವ ಉದ್ದಾಮ ಪಾಠಶಾಲೆ. ಇದೆ
ಸಕಲ ಸಿದ್ಧಿಗೂ ಕೇಂದ್ರ. ಇದರಿಂದಾನ್ ಬಗೆ
ತುಂಬಿ ಮನವೋತು ಕಲಿತ ಪಾಠ ಅಪಾರ ಎನೆ
ಸಲ್ವುದು. ಸಹಾನುಭೂತಿ ಸಹಕಾರ ಉತ್ಸಾಹ
ತಾಳ್ಮೆ ಧೈರ್ಯಸ್ಥೈರ್ಯಗಳ್ ಕಲಿತುದು ಜಗತ್ತಿನ
ಶಾಲೆಯಲ್ಲಿ. ದುಃಖ ಯಾತನೆಯ ಕತ್ತರಿಯಲುಗಿನ
ನಡುವೆ ಸಿಲ್ಕಿ ಎನ್ನಯ ಜೀವನವೆಲ್ಲ ಕಳೆಯಿತು.
ಎನ್ನಾತ್ಮೀಯರ್ ಒಡಲಗಿಲ್ಲದೆ ಅಸುನೀಗಿದ
ಸಂಕಟಂ ಸಹಿಸಿಹೆನ್. ಎನ್ನಂ ಅಣಕಿಸುತ್ತೆ
ಟೀಕಿಸುವ ಜನರಿಂಗೆ ನಲ್ಮೆಯಿಂ ಬಲ್ಮೆಯಿಂ
ಸಹಾನುಭೂತಿ ತೋರಿಹೆನ್. ಅದರ ಪ್ರತಿಫಲವಾಗಿ
ಧಿಕ್ಕಾರ. ಅಪನಂಬಿಕೆ – ನೋವುಗಳ್ ದಕ್ಕಿದುವು.
ಅವೇ ಎನಗೆ ಸುಜೀವನ ಪಾಠಮಂ ಕಲಿಪಿದ್ದು.
ದಿಟಂ. ಅದರಿಂ ಲೋಕ ಪ್ರಜ್ಞೆಯುಂ ಬೆಳೆಯಿತ್ತು.
ಕಾಲಪ್ರಜ್ಞೆಯುಂ ಬೆಳೆಯಿತ್ತು. ಸುಜ್ಞಾನಮತಿ
ಬೆಳೆಯಿತ್ತು. ಬರ್ದುಕಿನ ಕ್ಷಣಿಕತೆಯನರಿದೆಂ.

ಮತ್ತೆನ್ನ ನೆಲೆಬೆಲೆಯನರಿದೆಂ. ಮನಗೆಟ್ಟೊಲ್
ಎನ್ನನುಂ ಧಿಕ್ಕರಿಸಿದರ ಬಗೆಗೆ ಮರುಗಿ ಮರುಕ
ತೋರಿಹೆನ್. ಅದವರ ಅಪರಾಧ ಎನಲಾರೆ.
ಅವರ್ ಪಿರಿಯರಿರ್ದೊಡೆ ಏನ್? ಎಳೆಯ ಮಕ್ಕಳ್
ತಾವಲ್ತೆ? ಕೇವಲ ಕೆಲವೇಕೆಲವು ಗಜಗಳ್
ಮಾತ್ರಮೇ ಅವರ ವೃತ್ತ. ಅದನುಂ ದಾಂಟಿನೋಳ್ಪ
ಶಕ್ತಿಯುಂ ಇಲ್ಲದವರ್ ಮಕ್ಕಳ್ ಮಾತ್ರಮೇ
ಎಂದೊಪ್ಪಿದೊಡೆ ತಪ್ಪೇನಲ್ಲಂ. ಅವರ ದಿನ
ಚರಿಯನೆ ಕುಡಿ ತಿನ್ನು ಗಳಿಸು ಮಕ್ಕಳು ಮರಿ ಮಾಡು
ಇದೇ ಚೌಕಟ್ಟಿನೊಳ್ ಬಾಳು ಬದುಕು ಸಾಗಿದೆ.
ಅದನುಳಿದು ಅವರ್ ಇನ್ನೇಂ ಅರಿಯರ್. ಅವರಾ
ಜಡನಿದ್ರೆಗೆ ಭಂಗಮೆಂದು ಬಾರದು. ಅಂದಬಳಿಕ
ಎಲ್ಲಿಯ ಆಕ್ಷೇಪಣೆ? ಎಲ್ಲಿಯಬೇಸರ?
ನಾಯಕನ
ಪಾತ್ರದ ನಿರ್ವಹಣೆ ಸಾಮಾನ್ಯಮಲ್ಲಂ. ಕ್ಲಿಷ್ಟ-
ಕರ ಪ್ರವೃತ್ತಿ '**ದಾಸಸ್ಯದಾಸಃ**' ಆಗಿರದಾವ
ನಾಯಕನ ಸ್ಥಾನ ನಡೆಯದು. ಸಕಲತರ ಕರ್ಮ
ಕೌಶಲಿಯುಂ ಕ್ಷಿಪ್ರ ಕ್ರಿಯಾಕಾಂಕ್ಷಿಯುಂ ಮೇಣ್
ಸೇವೆಯೇ ಧ್ಯೇಯೋದ್ದೇಶಮಿರೆ ನಿಜಭೂಷಣಂ.

"ತ್ವರೋತ್ತಿಷ್ಠ ಶ್ರೇಷ್ಠಂ ಸುಯುಗಮಿಹ ನೇದಿಷ್ಠಭಯಂ
ಸಕೃದ್ದೃಷ್ಟ್ವಾ ಪ್ರೇಷ್ಠಂ ಭುವನ ಪರಮೇಷ್ಠಂ ತವಪುರಾ
ಯೋಗೋ ಹ್ಯಾಸ್ಯಂ ವಿಶ್ವಾಸ್ತತ ಚರಣರೇಣು ಸರಹಾಂ
ಕೃತಾರ್ಥತ್ವಂ ಯಾತು ಪ್ರಭವತು ಚ ಜೀವಃ ಸಪದಿತೇ"

ಶ್ಲೋಕಾರ್ಥಮಂ ವಿವರಿಸಿದ ಬಳಿಕಲಾ ಸ್ವಾಮಿ
ವಿವೇಕಾನಂದರುಂ ನುಡಿಸಿದರ್ ಇಂತಿಂತು,

"ಪ್ರಪ್ರಥಮದೊಳ್ ನಿಮ್ಮೊಳ್ ನಿಮ್ಮ ನಂಬುಗೆಯು
ದೃಢಗೊಳ್ಳಲಿ. ನಂತರಂ ಭಗವಂತನ ಪಾದ
ಪದ್ಮಗಳಲಿ ನಂಬುಗೆಯಿಡವೇಳ್ಕುಂ. ಭಾವಿಸುವ
ಹೃದಯ, ಯೋಚಿಸುವ ಮಿದುಳು, ಪುಷ್ಟಿಕರ ಕರ್ಮಂ
ಗೈವ ಬಲಿಷ್ಠ ದೈಹಿಕ ಅಂಗಾಂಗಗಳ್ ಇರಲ್
"**ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ**" ಎನೆ
ನಾವಾವುದಂ ಮೋಕ್ಷಾರ್ಥಮೆಂದೆಂದು ಸಾಧಿಪೆವದು
ಜಗದ ಹಿತಮಂ ಸಾಧಿಸವೇಳ್ಕುಂ. ಆತ್ಮಾನ್
ಎಂಬುದದು ಸರ್ವತ್ರ ನಿಷಿದ್ಧಂ. ಎಲ್ಲರುಂ
ಗೈವ ಕಟ್ಟುನಿಟ್ಟಿನ ಸಾಧನೆಯು ಸರ್ವತ್ರ
ಜಗದಾತ್ಮಮಂ ಮುಟ್ಟಿದೊಡದು ಸತ್‌ಸಾಧನೆಯು
ಸಫಲಮಾಯ್ತೆಂಬೆನ್. ಮಾನವನ ಆತ್ಮ ಆದಿ
ಅಂತ್ಯ ರಹಿತಂ. 'ಮರಣ' ಎಂದೊಡೆ ಒರ್ ದೇಹದಿಂ
ಇನ್ನೊರ್ ದೇಹದ ಸಂಪುಟಕೆ ಅದಲಿ ಬದಲಿಯ ಗತಿ
ಮಾತ್ರಂ. ಮನುಕುಲದ ಬದುಕಿನ ಇಂದಿನ ಸ್ಥಿತಿ
ಗತಿಯು ಪೂರ್ವ ಜನ್ಮದೊಳ್‌ಗೈದೆಲ್ಲತರ ಕರ್ಮ
ಕಾಂಡದಿಂ ನಿರ್ಧಾರಿತಂ, ಎನಲ್ ಅವರವರ
ಇಂದಿನೀ ಜನ್ಮಫಲಮೆ ಮುಂದಿನ ಜೀವನದ
ಸಾಧಕ ಬಾಧಕಗಳಿಂಗೆ ಆಧಾರಮೆಂಬುದು
ಸನಾತನ ಧರ್ಮ. ಜನನ ಮರಣಗಳ್ ಕಳೆಯುತಿರೆ
ಮುಂಬರಿಯುವಾತ್ಮ ವಿಕಾಸಗೊಳ್ಳುತ್ತಲೋ ಅಥ
ಕುಗ್ಗುತ್ತಲೋ ಪೋದಪುದು. ಆದೊಡೆ ಈಗಳೊರ್
ಪ್ರಶ್ನೆಯುಂ ಎಳ್ದಪುದು. ಈ ಮಾನವಂ ಭೀಕರ
ಚಂಡಮಾರುತದೊಳ್ ಸಿಲುಕಿ ತುಯ್ಯಲಾಡುತಿಹ
ಕಿರುದೋಣಿಯೇಂ? ಅಂತೆನಲ್, ಸತ್ಕರ್ಮ ಮೇಣ್

ದುಷ್ಕರ್ಮಗಳ ತಾಡನಕೆ ತುತ್ತಾಗಿ ಅಲೆವನೆ
ಈ ಮಾನವ? ವಿಧವೆಯರ ಕಂಬನಿಗೆ ಕರಗದೆ,
ತಬ್ಬಲಿಗಳಿಗೆ ಮರುಗದೆ, ತನ್ನ ದೀರ್ಘ ಪಥದಲಿ
ಸಿಕ್ಕಿದುದನೆಲ್ಲಂ ಜಡಿಕುಟ್ಟಿ ಪುಡಿಗೆಯ್ಯುತಿಹ
ಕಾರ್ಯಕಾರಣಗಳ ಮಹಾ ಚಕ್ರದಡಿಯಲ್ಲಿ
ಸಿಲುಕಿದೊರ್ ಕೀಟವೇ ಈ ಮಾನವ? ಯೋಚಿಸೆ
ಹೃದಯ ತಲ್ಲಣಿಪುದು. ಆದೊಡಂ ಇದಲ್ತೇ
ಪ್ರಕೃತಿ ನಿಯಮ? ಅಂತಾದೊಡೆ ಇದರಿಂದೆಮ್ಮ
ಬಿಡುಗಡೆಯುಮಿಲ್ಲವೇ? ಭರವಸೆಯು ಇಲ್ಲವೇ?
ಮಾನವನ ಹತಾಶ ಹೃದಯದಾಳದಿಂ ಪೊಣ್ಮುವ
ಆರ್ತನಾದಮಿದುಂ! ಈ ಕೂಗು ಪರಮ ಕರುಣಾ
ಮೂರ್ತಿಯಾದ ಭಗವಂತನ ಪೀಠವಂ ಮುಟ್ಟಿತು.
ಮೇಣಲ್ಲಿಂದ ಭರವಸೆ ಸಮಾಧಾನಗಳ ನಲ್ನುಡಿ
ಪೃಥ್ವಿಗೆ ಇಳಿಯಿತು. ಈ ನಲ್ನುಡಿಗಳಿಂ ಸ್ಫೂರ್ತಿ
ಗಳಿಸಿದ ಋಷಿ ಜಗದೆದುರಿಗೆ ನಿಂತು ಜಯಘೋಷ
ಗೈವ ದನಿಯೊಳ್ ಉಪನಿಷತ್ತಿನ ಆನಂದಕರ
ವಾರ್ತೆಯಿಂತು ಸಾರಿದನ್ ಭಾವಾವೇಶದಲಿ,

"ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ
ಆಯೇ ಧಾಮಾನಿ ದಿವ್ಯಾನಿ ತಸ್ಥುಃ ।
ವೇದಾಹಮೇತಂ ತಮಸಃ ಪರಸ್ತಾತ್
ತ್ವಮೇವ ವಿದಿತ್ವಾ ವಿದ್ಯತೇಽಯನಾಯ ॥"

"ಓ ಅಮೃತ ಪುತ್ರರೇ ಕೇಳಿ! ಸ್ವರ್ಗದೊಳಿಹ
ಸಗ್ಗಿಗರುಂ ಕೇಳಿ! ಎಲ್ಲ ಮೋಹಗಳಾಚೆ ಎಲ್ಲ
ತಮಸ್ಸು ಭ್ರಾಂತಿಗಳಾಚೆ ಇಹ ಸನಾತನ ಪುರುಷ
ದೇವನಂ ಕಂಡಿಹೆನ್. ಅವನಂ ಅರಿವುದರಿಂ

ಮಾತ್ರಮೇ ಮೃತ್ಯುವಿನಿಂ ಪಾರಾದಪುದು ಸಾಧ್ಯ.
ಇದುಮಲ್ಲದೆಯೆ ಬೇರೊಂದು ದಾರಿಯುಮಿಲ್ಲಂ
ಅಮರತ್ವಕೆ"
"ಅಮೃತ ಪುತ್ರರು" ಎಂಬುವ ಪೆಸರ್
ಅದ್ಭುತ ತಮವಲ್ತೇ? ಎನಿತೊಂದು ಘನವಾದ
ಆಶಾದಾಯಕ? ಸೋದರರೇ, ಈ ಮಧುರತರ
ಪೆಸರಿನಿಂ ನಿಮ್ಮನುಂ ಸಂಬೋಧಿಸಲೆನಗತಿ
ಉತ್ಸುಕತೆಯಿರ್ಪುಂ. ನಿಮ್ಮನಂತು ಕರೆಯಲೆನಗೆ
ಅನುಮತಿಯ ನೀಡಿಮ್. ನೀವ್ ಭಗವಂತನ ಪುತ್ರರ್
ಅಮೃತಾನಂದದಲಿ ಸಂಪೂರ್ಣ ಭಾಗಿಗಳ್.
ನೀವ್ ಪವಿತ್ರರ್. ನೀವ್ ಪರಿಪೂರ್ಣರ್ ಓ ನವ
ಕೇಸರಿಗಳೇ, ನೀವ್ ಭ್ರಾಂತಿಯಂ ಬಿಟ್ಟುಬಿಡಿ.
ಕೀಳರಿಮೆಗಳಂ ಕೊಡಹಿರಿ. ನೀವ್ ದೇಹವಲ್ಲ.
ನೀವ್ ಪ್ರಕೃತಿಯಲ್ಲ, ಪ್ರಕೃತಿ ನಿಮ್ಮ ಅಡಿಯಾಳ್.
ನೀವಲ್ಲ ಅಡಿಯಾಳ್ ಪ್ರಕೃತಿಯ."
ಗುರುವಿನ
ಪ್ರವಚನಲಹರಿ ಮನಮನಗಳಂ ಮುಟ್ಟಿ ಎದೆಯ
ಕುಂಡಲಿನಿಗಿಳಿಯೆ ಸರ್ವೇಂದ್ರಿಯಗಳಿಗೆ ಸಕ್ಕದ
ಸಕ್ಕರೆಯ ಸವಿಯವೊಲ್ ರುಚಿರಮಾಯ್ತು. ಪರಮಾ-
ನಂದದ ರಸವೇ ತಾನಾಯ್ತು. ಸಭೆಯೊಳ್ ಸ್ವಾಮಿ
ವಿವೇಕಾನಂದರ ವ್ಯಾಖ್ಯಾನಮಂ ಏಕ ಮನ
ಚಿತ್ತೋತ್ಕರ್ಷತೆಯಿಂ ಮೂರ್ತಿಮತ್ತಾದ ಬೃಹದ್
ಜನಸಂಖ್ಯೆಯುಂ ಮಿಸುಕದೆ ಮಂತ್ರಮುಗ್ಧರ ತೆರದಿ
ಕುಳಿತಿರ್ದರ್; ಆಲಿಸುತಾಲಿಸುತೆ ಭಾವನಾ
ವೇಶದಲಿ ಮೈಮರೆತು. ಪಾದ್ರಿಗಳ್ ಮಾನವಂಗೆ

‘ಪಾಪಿ’ ಎಂಬುಪಾಧಿಯನಿತ್ತ ತಲೆಭಾರವಂ ಜಡಿ
ದೊಗೆದು ಗರಿ ಹಗುರಾದರ್. ಆದೊಡೆ ಕ್ರೈಸ್ತಧರ್ಮ
ಪ್ರಚಾರಕರಿಂಗದು ಮರ್ಮಾಘಾತಮಾಯಿತ್ತು.
ಮನುಜನಂ ‘ಪಾಪಿ’ ಎನಲದೆ ಮಹಾ ಪಾಪ ಎನೆ
ಮತ್ತೇನ್ ಉಳಿಯಿತು ಹಳಿಯೆ? ಪಾಪಿಗಳೆಲ್ಲರ
ವಿಮೋಚನೆಯ ಭರವಸೆಯಂ ನೀಡುವುದಾರಿಗೆ?
ಅದಲ್ಲದೆ ಸ್ವಾಮಿಜಿಯ ಪ್ರವಚನಮಾಲೆಯ
ಒಂದೊಂದು ನುಡಿಗಟ್ಟು ಕೇವಲ ತರ್ಕಗಳ ನಿಜ
ಆಧಾರದ ಮೇಲೆ ನಿಂದವೊಲ್ ಅಥ ಆವುದೋ
ಮತವಂ ಸಮರ್ಥಿಸಿಕೊಂಬುವೊಲ್ ತೋರದಾಯ್ತು.
ಅವುಂ ಅನುಭವರಸವೆ ಎಂಬುದರ ಅರಿವಿನಿಂ
ಮನಮನಗಳ್ ಮಿಡಿದುವು ಶಾಂತರಸವಂ ಸ್ಫುರಿಸಿ.
ಸ್ವಾಮಿ ವಿವೇಕಾನಂದರ್ ಮನವಂ ಭರತವರ್ಷದ
ಯಾತ್ರೆಗೆ ಪೊರಡುವ ಮುನ್ನ ತಾನಂದು ಶಾರದಾ
ಮಣಿದೇವಿಯವರೆಡೆಗೆ ಪೋಗಿ ಕಂಡು ನಯದಿಂ
ಶಿರಮಣಿಯೆ “ವತ್ಸಾ! ವಿಜಯೀ ಭವ” ಎಂದವರು
ಹರಸಿದುದಂ ಸ್ಮರಿಸಿದರ್. ಅನಂತರದೊಳ್ ಅವರ
ದರ್ಶನಂ ಪಡೆಯಲಾಗದುದಂ ನೆನದು ಖಿನ್ನ
ಮನದಲಿ ನಮಿಸಿದರ್ ಹೃದಯ ಪೂರ್ವಕವಾಗಿ.

ಹರಿಃ ಓಂ ತತ್ ಸತ್

❋ ❋

ತ್ರಯೋವಿಂಶೋಲ್ಲಾಸಂ

ವಿಶ್ವೋತ್ತೀರ್ಣ

ಇತರ ಪಾಪಫಲಾನಿ ಯಥೇಚ್ಛಯಾ
ವಿಲಖತಾನಿ ಸಹೇ ಚತುರಾನನ ।
ಅರಸಿಕೇಷು ಕವಿತ್ವ ನಿವೇದನಂ
ಶಿರಸಿ ಮಾಲಿಖ ಮಾಲಿಖ ಮಾಲಿಖ ॥

ಉರುಳುರುಳು ಸಂಭಾವನಾ ಚಿಂತನಾ ಖನಿಯೆ
ಧುಮುಧುಮಿಸಿ ಮಥಿಸಿಮಥಿಸಿ ವಿಚಾರ ವಿಶ್ವದೊಳ್
ಅಂಡಲೆದು ನಿರ್ನಿಮಿತ್ತಂ ವಿಜಯಲಾಂಪಟ್ಯದ
ಪ್ರೋಲ್ಲಾಸದಿಂ ಅನುಭಾವ ತರಂಗಿಣಿಯಲಿ ಮುಳು
ಮುಳುಗಿ ಮಿಂದು ಮಡಿಯಾಗಿ ಉಲಿಯೌ ಸತ್ಪುರುಷ
ಚರಿತಾಮೃತಮಂ. ವಿಶ್ವೋತ್ತೀರ್ಣ ಯೋಗದಲಿ
ಹರಿಯಲೀ ಮಹತ್ಕೃತಿಯು. ಚಿಂತನಾ ಭಾಮಿನಿಯೆ
ಪಿಂಜರಿಯದಿರ್ ಮಸಗಿ ಹೊಸಗಿದಂಬುಧಿಯ ರಸ
ಧಾರೆಯಂ ಹರಿಸು ಕಾಲೋಚಿತ ಸುಸುಂದರ
ಶೈಲಿಯಲಿ. ಎಲ್ಲಿಯುಂ ನಿಲ್ಲದಿರ್. ಎಲ್ಲಿಯುಂ
ತಗ್ಗಿ ಮುಗ್ಗಿ ಪಿಂಜರಿಯದಿರ್ ಭುವನ ಸ್ಫೂರ್ತಿಗೆ
ಎರವಾಗಿ. ಶತಸಂವತ್ಸರಗಳ್ ಉರುಳಿಯುಂ
ಮಾಸದಿಹ ವಿವೇಕಾನಂದ ಮಹನೀಯನಾ
ಪರಮ ಚರಿತೆಯುಮಿಂತೆಯೆ ಕಾಲಾನುಕಾಲಂ
ಉಳಿದು ಬೆಳೆದು ಬಾಳಲಿ ಎನುತೆನುತೆ ಬೇಡುವೆನ್
ಕಾವ್ಯದಧಿದೇವತೆಯ ಪದತಲಕೆ ಮಲ್ಲಿಕಾ
ಪೂವಳಿಗಳ ಬೊಗಸೆಗೈಯೊಳ್ ಸಮರ್ಪಿಸುತಾನು,
ಕಾಲ್ವಿಡಿದು ಶಿರಮಣಿದು ಬೇಡುವೆನೊ ಮಮ ತಾಯೆ!

ಮತ್ತಮಾ ಈ ಚಿಂಕೃತಿಯ ಅಕ್ಕರಕ್ಕರವ
ಆರ್ ತಾಳಿ ಬಾಳರೊ, ಮುದದಿಂದೊಪ್ಪರೊ ಅವರ
ಮುಂತೆ ಆರೋದದಿರಿ. ಬರಿದೆ ನುಡಿಯದಿರಿ. ಈ
ಒಡಲಿನ ಕಳಕಳಿಯ ಮನವಿಯಿದಂ ಮಾನಿಸಿರೊ
ಭವಧಿಯೊಳ್ ಎಂದೆಂಬುವ ಕರೆ ಕೇಳೀಕೇಳಿ!
    ಸ್ವಾಮೀಜಿಯುಂ ಸಂಸ್ಥಾನದುಳಿದೆಲ್ಲ ರಾಜ್ಯಗಳ
ಪರ್ಯಟನೆಯ ಮಹಾ ಪರಿಭ್ರಮಣದಲಿ ನಗರ
ನಗರಗಳ ಜನರಾಶಿಯಂ ಕಂಡು ಮಾತಾಡಿ
ಪ್ರವಚನಗಳ್, ಸಂಭಾಷಣೆಗಳ್ ಅಧಿಕತರ
ಭಾಷಣಗಳಿಂದೆ ಜನಗಣಗಳಂ ತಣಿಗೊಳಿಸಿ
ಭರತಖಂಡದ ಮೇಲಿರುತಲಿರ್ದ ಕಹಿಭಾವದ
ಅಜ್ಞಾನ ಕುಜ್ಞಾನಗಳಂ ತೊಡೆದು ಕೊಳಕಿನ
ಕಳಂಕಂ ಕಳೆದರ್. ಭಾರತದ ಪುರಾತನ
ಸಂಸ್ಕೃತಿಯ ಮುಖಾಂಭೋಜಕೆ ಮಸಿ ಬಳಿಯೆ ದುಷ್ಟ
ಪಾದ್ರಿಗಳ್ ಹಬ್ಬಿಸಿರ್ದ ಕುವಿಚಾರ ಸಾಮಗ್ರಿ
ಸಾಮಾನ್ಯಮೇನಲ್ಲಂ. ಹಿಂದೂಗಳ್ ಅನಾಗರಿಕ
ಲಜ್ಜಾ ಹೀನರ್, ನರಮಾಂಸ ಭಕ್ಷಕರ್ ನೀತಿ
ಬಾಹಿರ ಕುಲಜರ್, ಕುಟಿಲ ಮತಿಗಳ್ ಎಂಬೆಲ್ಲ
ಕ್ಷುಲ್ಲಕತರ ಸಂಗತಿಗಳಿಗೆ ಕೊರಮಿಲ್ಲದನಿತು
ಹಬ್ಬಿಸಿರ್ದರ್. ಅಂತೊಂದು ಅಸಹ್ಯಕರ
ಪುರಾವೆಗಳ್ ತೊಡೆಯುವೊಡೆ ಕಂಠ ಶೋಷಣೆಯಂ
ಗೈದು ಕಟುವಾತಿನಲಿ ಕಿಡಿವಾತಿನಲಿ ಹಾಸ್ಯ
ಪರಿಹಾಸ್ಯಗಳಲಿ ಬಳಿದು ಝಾಡಿಸಿ ನಿವಾರಿಸಿ
ಮನಮತಿಗಳಿಗೆ ಸಂತೃಪ್ತಿಯ ತನಿಯನೂಡಿದರ್.
ಎದೆಯೊಳ್ ಕಿನಿಸುಮುನಿಸಿರದನಿತು ದುಡಿದರ್ ಎಡೆ

ವಿಡದೆ ಜೀವಸೋತು ಮನಸೋತು ಬಳಲುವಂತೆ
ಸ್ವಾಮಿಜಿ. ಮುಸ್ಸಂಜೆಯುಂ ಕವಿದು ಬರೆ ತಮ್ಮ
ಬಿಡದಿಗೈದು ಯೋಚಿಸಿದರ್ ತಮ್ಮೊಳ್. ಎನಿತೆನಿತು
ಕಂಠಶೋಷಣೆಗೈದೊಡೇಂ? ಈ ಕಿವಿಯೊಳ್ ಕೇಳಿ
ಆ ಕಿವಿಯೊಳ್ ಬಿಡುವವರೇ ಪೆರ್ಚಿನೆ, ಎನ್ನಯ
ಪರಿಶ್ರಮವೇ ವ್ಯರ್ಥಮಾದಪುದು. ಕೊರಳಿನಾ
ಕರೆಗಿಂ ಗ್ರಾಂಥಿಕರೂಪವೇ ಲೇಸು. ಲೇಸು.... ಎನೆ
ಕೈಗೆ ಲೇಖನಿಯಂ ಕೊಂಡು ಕುಳಿತರ್. ಲೇಖನಿಯ
ಕೃಷಿ ಸಾಗಿದುದು ನಡುರಾತ್ರಿಯತನಕ. ಬಳಿಕ
ಪ್ರೊಫೆಸರ್ ರೈಟ್ ರವರಿಂಗೊರೆದ ಪತ್ರದೊಳ್
ಅವರ ಮನಃಸ್ಥಿತಿಯ ನೋದಿದೊಡೆಮಗೆ ತಿಳಿದಪುದು
ಜೀವನಗತಿ.
"....ಆನೀಗ ಈ ಬಾಳ್ಮೆಗತಿಗನು
ಸಾರದೊಳ್ ಬರ್ದುಕುವ ಬಗೆಯನರಿದಿಹೆನ್. ಈ
ಎಲ್ಲವುಂ ಭಗವಂತನ ಇಚ್ಛೆಯನೆ ಅನುಭವ
ವೇದ್ಯಮಾಗಿಹುದು. ಮೊದಮೊದಲ್ ಅಮೆರಿಕೆಯೊಳೆನ್ನ
ಪರಿಸ್ಥಿತಿಯು ನೀರಿನಿಂ ಹೊರತೆಗೆದ ಮೀನಿನೊಲ್
ಗೋಳಾಗಿ ತೋರ್ದುದು. ಸದಾ ಭಗವಂತನಿಂ ಪಥ
ದರ್ಶನ ಪಡೆಯುತಲಿರ್ದೆನ್ನ ರೂಢಮೂಲ
ಅಭ್ಯಾಸ ಕೈವಿಟ್ಟು ಎನ್ನಯೋಗಕ್ಷೇಮವೆ
ಮರೆತಿರ್ದೆನ್. ಕೃತಘ್ನತೆಯ ಘೋರ ಕಾಂಡಕೆ
ಇಳಿಯುತಿರೆ ಎಚ್ಚೆತ್ತು ಸರಿದಾರಿ ಹಿಡಿದೆನ್.
ಹಿಮಾಲಯದ ತುಷಾರಾವೃತ ಶಿಖರಗಳ ಮೇಲಿಂ
ಭಾರತದ ಸುಡುಬಯಲ ನಾಡಿನಲಿ ಆರೆನ್ನ
ಕೈಪಿಡಿದು ನಡೆಸುತಿರ್ದನೋ ಅವನಿಂದು ಎನ್ನ

ನಿಜ ಪಥದಿ ನಡೆಸುತಿಹನ್. ಜಯವಾಗಲಿ ಆ ಮಹಾ
ಮಹಿಮಂಗೆ. "**ಯೋ ಯಥಾ ಮಾಂ ಪ್ರಪದ್ಯಂತೇ**
ತಾಂಸ್ತಥೈವ ಭಜಾಮ್ಯಹಮ್!" ಎಂಬುದಿದು ಅವನೇ
ಎಮಗಿತ್ತ ದಿವ್ಯಸಂದೇಶ. ಹೃದಯಹಾರೀ
ಆಶ್ವಾಸನೆ ಇರುತಿರೆ ಕೊರತೆಯೇಂ ಇಲ್ಲ ಕಣಾ!
ಆಂ ಏಷಿಯಾದೊಳಿರಲಿ ಅಮೆರಿಕೆಯೊಳಿರಲಿ ಆ
ಆಶ್ವಾಸನೆಗೆ ಚ್ಯುತಿಯುಮಿಲ್ಲೈ...."
ಭಾರತೀಯರ ಬಾಳ್ಮೆಯಂ ಕುರಿತು ಎನಿತೆನಿತೊ
ಪ್ರಶ್ನೆಗಳ್ ಏಳ್ದಪವು. ಅಸಹ್ಯಕರ ಪ್ರಶ್ನೋಪ-
ಪ್ರಶ್ನೆಗಳ್ ಬೆಳೆದಪವು ಮನವಂ ಇರಿಯುವಂತೆ.
ಕೇಳ್ದು ಮನಮತಿಗೆಟ್ಟೊಡಂ ಮುನಿದು ಅನಿತಿನಿತು
ಇರಿಸುಮುರಿಸುಗೊಳ್ಳದೆ ಪ್ರಸನ್ನವದನದಿಂ
ಮೇಣ್ ದಿಟ್ಟತನದಿಂ ಉತ್ತರಿಸಿ ಕಳಂಕದ
ಪಂಕವಂ ಗೋಚಿ ರಾಚಿ ಬಿಡುವರ್ ಸರಾಗದ
ನುಡಿಗಟ್ಟಿನಲಿ. ಒರ್ಮೆಯೊರ್ವಪೆಣ್ ಮುಂದೈದು
"ಸ್ವಾಮಿಗಳೆ, ಭಾರತೀಯ ಪೆಂಗಳೆಯರ್ ತಮ್ಮ
ಹಸುಮಕ್ಕಳಂ ಮೊಸಳೆಗೆಸೆವರೆಂದಾಂ ಕೇಳಿ
ತಿಳಿದಿರ್ಪೆನ್. ಇದು ನಿಜವೇನ್ನೈ?"
ಹಾ! ಎಂತಪ್ಪ
ಪ್ರಶ್ನೆಯೋ? ಸ್ವಾಮಿಜಿ ಒಡನೊಡನೆ ಮನಮಿಡುಕಿ
ಅಚ್ಚರಿಗೊಳಗಾದೊಡಮದಂ ಲೆಕ್ಕಿಸದಿನಿತು
ಮುಖಾಂಭೋಜದಲಿ ಕಿರುನಗೆಯ ಮಿದು ಹಾಸಮಂ
ಬೆಳಗಿ ಪರಿಹಾಸ್ಯಮಂ ಸೂಸುತೆಂದರ್ "ತಾಯೆ,
ಎನ್ನನೆನ್ನಬ್ಬೆ ಎಸೆದಿರ್ದಳ್ ಮೊಸಳೆಗೆ, ಆನೆಂತೆಂತೊ
ತಪ್ಪಿಸುತೆ ಬರ್ದುಕುಳಿದೆ!" ಆಗಳ್, ಆ ಸರಸ

ರಸಮಯ ಗಳಿಗೆಯಲಿ ಸವಿನಗೆ ಸೂಸಿದರೆನಿತೊ
ಮಂದಿ. ಒರ್ಮೆ ಪರಿಹಾಸ್ಯಮಾದೊಡೆ ಮಗದೊರ್ಮೆ
ಗಾಂಭೀರ್ಯ ಮೇಣೊಮ್ಮೆ ಜ್ಞಾನದೈಸಿರಿಯ ರಸ
ಧಾರೆ ಹರಿವುದು ಸಮಯೋಚಿತಂ. ಸರ್ವತ್ರ
ಸದಾ ಸತ್ಯಧರ್ಮಕರ್ಮಗಳ ಉದ್ದಂಡತರ
ಧ್ಯೇಯವಾದಿಯಾದ ವಿವೇಕಾನಂದಗುರುವುಂ
ಇತರಿತರ ಉಪನ್ಯಾಸಕರ ತೆರದಿ ಅಮೆರಿಕೆಯ
ಕುಬೇರನೈಶ್ವರ್ಯ ವೈಭವಕೆ ಮನಸೋಲ್ದು
ಚಾಮರವ ಹಿಡಿವ ಕಾರ್ಯ ಕುಶಲತೆಯನೊಪ್ಪೆ
ಪೋದವರು ತಾವಲ್ಲ. ಅವರಿಂದಲೆ ಅವರವರ
ಕಳೆಯಂ ಬುಡಸಹಿತಮೆ ಕಿತ್ತೊಗೆಸುವ ಸಾಹಸ
ಕಾರ್ಯಕುಶಲಿಯಾಗಿ ತೆರಳಿದ ಧೀರ ಸಾಧಕ!
ದಿನದಿನಂ ಕಳಿಯೆ ಧೀರಾತಿಧೀರರ ನಡುವೆ
ಎಲ್ಲವನರಿದೇನರಿಯದ ಪಾಂಗಿನಲಿ, ಕೂರ
ಕಟುಮನದ ಪಾದ್ರಿ ಮಹನೀಯರ ಕುಜನಕೂಟ
ಬಲಿತುದು ಗುರುವರನ ತುಷಾರಾವೃತ ಪರ್ವತ
ಶಿಖರಾಗ್ರದಿಂದೆ ಪಾತಾಳಕ್ಕೆ ತಳ್ಳುವ ಕುತಂತ್ರಗಳ
ಜಾಲವೊಡ್ಡಿ ಬೊಗ್ಗುಬಡಿಯೆ. ಒಡಲ ಕಹಿರಸಂ
ತಕಪಕನೆ ಕುದಿದೆದ್ದಿರಲ್ ರೋಷ ತಾಪಗಳ
ಆಳಾಗಿ ಇಲ್ಲದ ಸಲುವಲ್ಲದ ಆರೋಪ
ಸಾಮಗ್ರಿಯಂ ಒಟ್ಟೈಸಿ ದೋಷಾರೋಪಮಂ
ಹೊರಿಸಿ ಹರಡತೊಡಗಿದರ್ ಊರಗಲಗಲ.
ಒಲವಿನ ವರ ಶಿಷ್ಯರ ಮನವಂ ಕಿಡಿಸಿ. ವರ್ತ
ಮಾನ ಪತ್ರಿಕೆಗಳಲಿ ಕುಲೇಖನವನೊರೆದರ್.
ಕೋಪದ ಕಿಡಿಕಾರಿ. ಆಗಳಾ ಗುರುವರ್ಯನ

ಹಿತಚಿಂತಕರಿರುತಿರ್ದ ಹಲಕೆಲ ಪಾದ್ರಿಗಳ್
ಆ ಕುಹುಕ ಕುತ್ಸಿತ ಮನೋಗತಿಯ ನಿಂದೆಯಂ
ಕೇಳ್ದು ಮನನೊಂದು ಸ್ವಾಮೀಜಿಯ ಬಳಿಗೆಯ್ದುತೆ
"ಇದೇನ್ ಗುರುವರ್ಯ? ಇನಿತೊಂದು ಕುಹುಕಮತಿಯ
ನಿಂದೆಗಳ್ ಕೇಳಿಯುಂ ಸುಮ್ಮನಿರ್ದೊಡೆ ಇದಂ
ನಿಮ್ಮ ಸಮ್ಮತಿಯಂ ಸೂಚಿಸದೇಂ? ಇದನರಿದರಿದು
ಮಿಣ್ಣನಿಪ್ಪುದು ಸರಿಯೆ? ನೀಮೊಗಳ್ ಜಾಡಿಸಿ
ಒದೆಯುವೊಲ್ ಪ್ರತಿಭಟಸವೇಳ್ಕುಂ. ಈ ಅಸಹ್ಯ
ಕಳಂಕವನೆಲ್ಲವಂ ತೊಳೆದು ನಿರ್ಮಲಗೊಳ್ಳಿ.
ಇದೆಮ್ಮ ಅರಿಕೆ. ಮುಂದೆ ಇದಂ ಯೋಚಿಸುವುದೇ
ಒಳ್ಳಿತು ಗುರುವರ್ಯ!"
"ಮಿತ್ರರೇ, ಕೊಳಚೆ ಕೊಚ್ಚೆಗೆ
ಕಲ್ಲೆಸೆದೊಡೆ ಏನಾದಪುದು ಅರಿಯಿರಾ? ಬಹು
ಹೇಸುಗಳ ಮತ್ತೇಕೆ ಮೈಗೊಳಲಿ? ಕಟ್ಟಕಡೆಗೆ
ಅವರೆ ಅರಿದಪರು ಎಂಬುದೆನ್ನ ಮನಃನಿರ್ಣಯಂ.
ಅಜಾತಶತ್ರು ಶ್ರೀರಾಮಕೃಷ್ಣ ಪರಮ ಹಂಸ
ದೇವನ ವರಶಿಷ್ಯನಿರೆ ಸುಖದುಃಖಮಂ ಸಮ
ದೃಷ್ಟಿಯಿಂ ಕಾಂಬುದೆನ್ನ ಧರ್ಮಮಿರಲದಂ ಮನ
ತುಂಬದಿರ್ದೊಡಾಯ್ತೆಂಬೆನ್ ಈವಗೆಯ ಕುಹುಕ
ಕುಯುಕ್ತಿಗಳಂ ಕೆಲಬರಾದೊಡಂ ಅರ್ಥೈಸಲ್
ಸಮರ್ಥರಿರೆ ಎನಿತೆನಿತೊ ತೇಜೋಬಲವೆನಗೆ.
ಹೃದಯ ಹಾರೀ ಶೀತಲಶಾಂತಿರಸ ಹರಿದು
ಬಂದುದು ಗುರುವರನ ಎದೆಗಡಲಿಂ ಗಂಭೀರ
ಗತಿಯಲಿ, ನೆರೆದ ಶಿಷ್ಯರ್ ಬೆಚ್ಚಿ ಬೆರಗುವಡುವ
ಪಾಂಗಿನಲಿ. ಬೈಗುವೊಳ್ತಿನ ದಿನೇಶ್ವರನಶ್ವ

ಖುರಪಟಧೂಳಿಯನೆ ಕೆಮ್ಮನೆ ಕೆಂಪೇರ್ದುದಾ ದಿಗ್
ಮಂಡಲಂ ಹೊನ್ನ ಛವಿಯಾಗಿ. ಪಶ್ಚಿಮದಿಶಾ
ಪರ್ವತಗಳುತ್ತಮಾಂಗವನಡರ್ದನಾ ರವಿ
ಅಸ್ತಮಾನ ಶೋಭೆಯಲಿ. ಆ ದಿವ್ಯತಮ ಸಿರಿ
ಸೊಬಗಿನೈಶ್ವರ್ಯ ಸುಧೆಯಂ ಸವಿಯುತೆ ತೋಷದ
ದನಿಯಿಂಪಿನಲಿ ಮರುನುಡಿದರ್ ಸ್ವಾಮೀಜಿ. "ಎಲೆ
ಮಿತ್ರರೇ, ದ್ವೇಷದ ಕಿಡಿಗೆ ನೆಯ್ಯನೆರೆಯುವುದು
ವಿನಾಶಕೆ ದಾರಿ. ನಾವ್ ಪ್ರತಿಕ್ರಿಯಿಸದಿರೆ
ಅದವರಿಗೆ ತಿರುಗು ಬಾಣಮಾದಪುದು ಎಂದೊಡೆ
ತಪ್ಪಲ್ಲ. ಅದರಿಂ ವಿಚಾರಶೀಲರೆ, ಮನದಿ
ನೀವೇ ತಿಳಿದು ನೋಡಿ. ದ್ವೇಷಾಸೂಯೆಗಳ
ಬೆಳೆ ಬೆಳೆದೊಡೆ ಏಂಬಹುದು?"
"ಅಹುದಹುದು
ಗುರುವೇ ನಿಮಗೆ ಒಳ್ಳಿತಕ್ಕೆ."
ಗೆಳೆಯಶಿಷ್ಯರ್
ನಿರ್ಗಮಿಸಿದರ್. ಅಲ್ಲಿರ್ದ ಅನೇಕವಗೆ ಸಂಘ
ಸಂಸ್ಥೆಗಳ ಹಿರಿಕಿರಿಯ ನಾಯಕರು ತಂತಮ್ಮ
ಸ್ವಾರ್ಥ ಸಾಧನೆಯ ಹಿರಿಯಾಸೆಯಲಿ ಮಂದ್ಯೆಸಿ
ಮುಂದ್ಯೆದು ಬಲ್ಮೆಯಲಿ ಭಕ್ತಿಗೌರವಂಗಳ
ಆದರದಲಿ ತಂತಮ್ಮ ಸಂಘಗಳ ಕರೆಯಂ
ನೀಡಿ ಪ್ರವಚನಗಳನೇರ್ವಡಿಸಿದರ್. ಗುಟ್ಟು
ಬಿಡದೆ ಒಳಗಿಂದೊಳಗೆ ಹಣದ ಹೊಳೆ ಹರಿಯುವೊಲ್
ತಂತ್ರಹೂಡಿ. ದುರಾಸೆಯ ಶಿಖರವನೇರಿದರ್.
ಅದರ ಸುಳಿವು ಸಿಗದಿರಲ್, ಸ್ವಾಮೀಜಿಯ ನಿಚ್ಚ
ಪ್ರವಚನಗಳ ಧಾರೆ ಹರಿದತ್ತು ಯಥೋಚಿತ

ರೀತಿಯಲಿ. ಕೊನೆಗೊರ್ಮೆ ಸುಳಿಯಿತದರ ಮರ್ಮದ
ಕುಟಿಲತೆಯ ಬೃಹಚ್ಚಿತ್ರ! ಗುರುವರ್ಯರ್ಗ ಸಂಘ
ಸಂಸ್ಥೆಗಳ ಸಹವಾಸಮಂ ತೊರೆದು ಮೈಕೊಡವಿ
ಕಿರುಮನದ ಹಾದಿ ಬೀದಿಯ ಮುಸಂಡಿಗಳಿಂಗೆ
ಧರ್ಮಬೋಧೆಯನೆ ಮೃಗಗಳ ಮುಂತೆ ಕಿನ್ನರಿಯ
ಬಾಜಿಸಿದೊಲ್ ಎಂದೆಂದು ಕೆಮ್ಮನೆ ಮನಮಂಥನ
ಭೋಗದೊಳ್ ಮುಳುಗಿದರ್.
ಮೂಡು ವೆಟ್ಟುಗಳೆಡೆಯ
ಕೆನ್ನೀಲ ದಿಗ್ಭಿತ್ತಿಯ ವಿಶ್ವವಿಶಾಲಮಯ
ಪಟಲದಲಿ ಉದಯಮಾನೋತ್ಸವದಾಚರಣೆ
ನೀರವತೆಯ ಉಷಾ ಉಶಸ್ಸು ಅರಳುತಿರ್ದುದು
ಇನಿದಿನಿದಾಗಿ. ವಿಶ್ವಮೆಳ್ಚರುವ ಸುಗಳಿಗೆಯ
ವೈಚಿತ್ರ್ಯಮಂ ಕಣ್ಣೆವೆಯಿಕ್ಕದೆ ಸಂವೀಕ್ಷಿಪ
ಗುರುದೇವ ವಿವೇಕಾನಂದರುಂ ಅಂಬರದ
ತೀರದೊಳ್ ಸಾಲ್ ಸಾಲಾಗಿ ಹರಿವ ತರತರದ
ಮಹಾಕಾದಂಬಿನಿಗಳ ಸುನೀಲ ಕೆಂಪು ಬಿಳಿ
ಸ್ವರ್ಣರಾಗಗಳ ದಿವ್ಯದರ್ಶನದ ಭಾವದ
ಅನುಭೋಗದಲಿ ಮನವ ನೆಟ್ಟರ್. ಮುಗಿಲ್ ಮುಗಿಲ್
ಆಟೋಟದ ಸ್ಪರ್ಧೆಗೆತ್ತುವೊ ಎನಲ್ ವಿವಿಧ
ಗುಡಿಗೋಪುರಗಳ ನೆಯ್ಯುತಿವೆ ಸ್ವಸಾಮರ್ಥ್ಯ
ಹೂಡಿ. ಗಿಡು ಮರ ಬಳ್ಳಿಗಳ ಒಡಲಿನಿಂ ಹಕ್ಕಿ
ಗೊರಳ್ ಇನಿ ದನಿಯಲಿ ಹರಿಸಿದುದು ಸುಪ್ರಭಾತ
ಕಾವ್ಯಂ. ಒಡನೊಡನೆಯೆ ನಗರದೇಶದೊಳಂದಿನ
ಚಟುವಟಿಕೆ ಕಾರ್ಯಕ್ರಮಗಳ್ ಭುಗಿಲ್‌ಗೊಂಡುವು.
ಪಗಲ್‌ಪಾಳಿಯ ನಗರ ರಕ್ಷಕರೈದು ರಾತ್ರಿ

ಪಾಳಿಯಲಿ ಸೇವಿಸಿದರಂ ಬಿಡುತೆಗೊಳಿಸುತೆ
ಬೀಳುಕೊಟ್ಟರಯ್ ಅನುಕ್ರಮದೊಳ್. ಸತ್‌ಶಾಂತಿ
ರಕ್ಷಕರೆನೆ ಧೀರ ಯೋಧರೆನೆ ಪರ್ಮೆಯಾಳ್ಗಳ್
ಸಮವಸ್ತ್ರಗಳ ಶೋಭೆಯಲಿ ಕಣ್ಗೆ ಸೊಗಸಿದರ್;
ಕುರುಕ್ಷೇತ್ರದ ಯೋಧರ್ ಕ್ಷಣಕಾಲ ದೃಷ್ಟಿಯಲಿ
ನಲಿಯುವ ತೆರದಿ. ಪೊಳ್ತುವೊಳೆ ಹರಿಯುತಿದೆ ಚಣಂ
ನಿಲುಗಡೆಯಿರದ ಪರಿಯಲಿ ಸದ್ದಿನ ಸೊಲ್ಲಿಲ್ಲ.
ಪಗಲಿರುಳ್‌ಗಳ ಗಾಲಿಯುರುಳಿಯುರುಳಿ ಪೊಳ್ತಿನ
ಜಗತ್ ಸೇವೆ ನಡೆದಿದೆ, ನಡೆದಿದೆ ಎಣೆಯಿರದೊಲ್,
    ಸ್ವಾಮೀಜಿಯುಂ ದಿನಚರಿಯ ಕಾರ್ಯಕ್ರಮಗಳ
ಯೋಜನೆಗೆ ಸಿದ್ಧರಾದರ್. ಇಂದ್ರ ಮೂಹೂರ್ತದಿ
ಸೆಜ್ಜೆ ಬಿಟ್ಟೆಳ್ದು ಲೇಖನ ಕೃಷಿಯಂಗೈದು
ಪಗಲ್ ದಿನಚರಿಗೆ ಮನಗೊಟ್ಟಿರ್ದ ಗುರುವರಂ
ಅಂದಿನ ಸಭಾಭವನಕೆ ಪೊರಮಟ್ಟರ್. ಹಿರಿಯ
ಸಭೆಗಳಂ ವರ್ಜಿಸಿ ಎಲ್ಲೆಲ್ಲಿ ಗಣ್ಯಜನರಿರೆ
ಅಲ್ಲಲ್ಲಿ ಹಿತವಾದ ಉಪನ್ಯಾಸಗೆಯ್ಯುವೊಡೆ
ನಿಶ್ಚಯಿಸಿದ ಸ್ವಾಮೀಜಿಗೆ ಅದುಂ ಮನವೊಪ್ಪಿ
ಬೆಳೆಯದಾಯ್ತು. ವಿಶ್ವಧರ್ಮದ ವೇದಿಯ ನೇರಿ
ವಿಜಯ ಕೇತನ ಹಾರಿಸಿದೊಡಂ ಮನೋದಧಿಗೆ
ಸುಖಕಾಂತಿಯ ವರ ಲಭಿಸದಾಯಿತು. ಭುಜಭಾರ
ಇಳಿಸುವೊಡೆ ಜನ್ಮಭೂಮಿ ಭಾರತದುತ್ಥಾನ
ಕನಸಿನ ಸವಿಯೊಲ್ ದೂರದೂರವೇ ಎನುವೊಡೆ
ಎಂತಿದರ ಪರಿಹಾರ ಎಂಬೊಂದು ಯೋಚನೆಯ
ಝುರಿ ಹರಿವುದು ಎರ್ದೆಯ ತಂತುಗಳ್ ಕಡಿಕಡಿದು
ತುಂಡಾಗುವಂತೆ, ಮುಂತೇಂ? ಎಂಬುದೊರ್ ಪ್ರಶ್ನೆ

ಕೀಟದೊಲ್ ಕಾಡುವುದು ಮನವಂ. ಗುರುದೇವನ
ನೆನೆವರಿಕೆಯೊಳ್ ಪ್ರಾರ್ಥಿಸಿದರ್ ದಾರಿ ತೋರೆಂದು.

'ಯಸ್ಯದೇವೇ ಪರಾರ್ಭಕ್ತಿರ್ಯಥಾ ದೇವೇ ತಥಾಗುರೌ ।
ತಸ್ಯೈತೇ ಕಥಿತಾ ವ್ಯರ್ಥಾಃ ಪ್ರಕಾಶಾನ್ತೇ ಮಹಾತ್ಮನಃ ॥

ಸುವಿಜ್ಞಾನ ಜಗತ್ತಿನ ಯಾಂತ್ರಿಕಮಯ ಬಾಳ್
ಬರ್ದುಕಿನ ತಳಹದಿಯುಮಿರ್ದುದು ಕೊಳಕು ಬೆಳಕು
ತಳುಕುಗಳ ದಟ್ಟ ಸಂಸ್ಕೃತಿಯಮೇಲೆ. ಜನಗಣ
ಮನದ ಆಳಮಂ ಬೆದಕಿದೊಡೆ ಕಾಂಬುದವರವರ
ತಳುಕುಗಳ ಹಿಂದಿನ ಹುಳುಕು. ಗುರುವರಂ ತಮ್ಮ
ಮನೋಮಂಡಲದ ತರ್ಕವಿತರ್ಕಗಳ ಸುಳಿಗೆ
ಸಿಲ್ಕಿದರ್, ಮನದಲೆಗಳ್ ಭುಗಿಲ್‌ಗೊಳುವ ತೆರದಿ;
ಚಿಂತೆಯ ಬಿರುಗಾಳಿಯು ಬೀಸತೊಡಗಿತು ಜಡಿದು
ಜಾಡಿಸುವೊಲ್. ಸ್ವಾಮಿಜಿ ವಿಚಾರ ಶೀಲರಾಗಿ
"ಧರ್ಮೋಃಹಿ ಯತ್ನೈಃಹಿ ಪುರುಷೇಣ ಸಾಧ್ಯಃ"
ಎನುತೆನುತೆ ದೃಢಗತಿಯಲಿ ತಮ್ಮ ಮುಂದಿರ್ಪ
ಕಾರ್ಯಕ್ರಮದ ಸಂಚಿಕೆಯಂ ರೂಪಿಸುವುದರೊಳ್
ಮನವಿಟ್ಟರ್.
ದಿನದಿನ ಎನಿತೆನಿತೊ ಜನರಾಶಿ
ಬಂದಪರ್ ಸ್ವಾಮಿಜಿಯ ಬಳಿಗೆ. ಹೊಸಮುಖಗಳ್
ಕಣ್ಗೆಸೆದಪವು. ಕೆಲರ್ ಭಕ್ತಿಭಾವದೊಳ್ಪೆದೊಡೆ
ಇನ್ ಕೆಲರ್ ಕುತಂತ್ರದೊಳ್ ಸಂಪಾದನೆಯ ಹಿರಿ
ಆಸೆಯಲಿ ಬರುವರ್ ತಳುಕಿನ ಬಲೆಯ ಬೀಸುತ್ತೆ.
ಅಂತಿಂತು ಶ್ರೋತೃಗಳ ದಂಡು ಹಿರಿದಾಯ್ತು. ಬಗೆ
ವಗೆಯಲ್ಲಿ ಸ್ತುತಿ ಪಾಠಕತನದೊಳ್ ಹೊಂಚಿನ
ಸಂಚಿನ ನಟನೆಯೊಡನೆ ಮುಂದೈವರ ಮುಖದೊಳ್

ಹೊಳೆದಪುದು ತಂತ್ರುದ ಗುರಿ. ಗುರುದೇವಂ ಮನದ
ತಂತ್ರಿಯ ಮಿಡಿತವನಾಲೈಸಿ ತಾಂ ಬಲ್ ಎಚ್ಚರ
ವಹಿಸುವರ್ ಸೂಕ್ಷ್ಮಗತಿಯಲಿ. ಮನಮಲೆತು ಮೇಣ್
ಮೈಯೆಲ್ಲ ಕಣ್‌ದೃಷ್ಟಿಯಾಗಿ ಪ್ರಾಣಪಾತ್ರುವು
ಸ್ಫೂರ್ತಿಯ ಝರಿಯಾಗಿ ಹರಿಯಿತು; ಭವಿತವ್ಯದೊಳ್
ಗಗನ ಗಾಮಿಯಾಗಲಿಹ ಸತ್ಕೀರ್ತಿ ಪತಾಕೆಗೆ
ಕಿಂಚಿತ್ ಮಸಿ ಚುಕ್ಕಿಯು ಅಂಟದ ತೆರದಿ. ನಿಚ್ಚ
ಸತ್-ಚಿತ್ ಧವಲಕಾಂತಿಯು ಕುಡಿಮಾಸದವೊಲ್.
ಬೃಹನ್ನೀಲಿಮಾ ರಂಗದೊಳ್ ಮುಗಿಲ್‌ಗಳನಟ್ಟುವ
ಮುಗಿಲ್‌ಗಳ ಚಿತ್ರುವೈಭವವಂ ಗಮನಿಸಿ ತಮ್ಮ
ಮನೋಮಂಡಲದ ಚಿಂತೆಗಳ ಹೊಯ್ದಾಟಮಂ
ಗಮನಿಸುತ ನಸುನಗೆಯಂ ಸೂಸಿದರ್ ತಮ್ಮೊಳ್.
ಅಂದು, ಶಿಷ್ಯರ ಮುಂತೆ ಗುರುವರಂ ನುಡಿದರಿಂತು,
"ದೇವ ಪುತ್ರುರೇ, ಕೇಳಿ! ಹಿಂದೂ ಧರ್ಮವುಂ
ಬಹುದೇವತಾ ಉಪಾಸನೆಯನುಮೋದಿಪುದು
ಎಂಬುದದು ಬಲು ವಿಚಿತ್ರುಮಲ್ಲಮೇ? ಧರ್ಮವುಂ
ದೇವರೊಬ್ಬನೇ ಎನಲ್ಕೆ ಇನಿತೊಂದು ಚಿತ್ರು
ವಿಚಿತ್ರುತರ ದೇವತೆಗಳ ಗಣಮೆಂದೊಡೇಂ? ಈ
ಪ್ರಶ್ನೆ ಯಾರಿಗಾದೊಡಂ ಏಳ್ದಪುದು ಸರಿಯೆ.
ಪ್ರಶ್ನೆಗುತ್ತರಮಾಗಿ ಪ್ರಾಥಮಿಕ ರೀತಿಯೊಳ್
ಧಾರ್ಮಿಕಮಯ ಭಾವನೆಗಳ್ ಉಪಾಸನೆಯಿಂದೆ
ಮನೋವೈಜ್ಞಾನಿಕ ಅವಶ್ಯಕತೆ ಏನೆಂದು
ನಿಮಗೀಗಳ್ ವಿವರಿಪೆನ್. ಮಿತ್ರುರೇ ಕೇಳಿ,
ವಿಗ್ರುಹಂ ದೈವತ್ವದ ಚಿಹ್ನೆಯುಮೆನಿಸೆ ಆ
ಪೂಜೆಯುಂ 'ವಿಗ್ರುಹಾರಾಧನೆ' ಎನಿಸಿಕೊಂಬುದು.

ಹಿಂದೂಗಳಿಗೆ ಧರ್ಮದ ಸಾರವಡಗಿಹುದಾವುದೋ
ತತ್ತ್ವವುಂ ಕೇವಲ ಅಂಗೀಕರಿಪುದು ಅಥ ನೀರಾ-
ಕರಿಪುದು ಇವುಗಳಲಿ ಇಲ್ಲಂ. ಧರ್ಮಮೆಂದೊಡೆ
ಅದೊಂದು ಘನಾನುಭವ ಸಾಕ್ಷಾತ್ಕಾರಮೆ ವಲಂ.
ಅಂದಬಳಿಕ ರೂಪ-ಚಿನ್ಹೆ - ಆಚರಣೆ ಎಲ್ಲಂ
ಆಧ್ಯಾತ್ಮಿಕ ಶೈಶವ ಬೆಳವಣಿಗೆಗೆ ಸಾಧನಂ
ಮಾತ್ರಮೆನೆ ಸಲ್ವುದು ಮೇಣ್ ಮತಗಳ ನಿತಾಂತ
ವೈವಿಧ್ಯತೆಯ ಹಿಂದೆ ಏಕತೆಯಿಹುದು ಸತ್ಯ."
ಸ್ವಾಮೀಜಿಯುಂ ತಮ್ಮ ವ್ಯಾಖ್ಯಾನದ ಸತ್
ಸತ್ವದ ಬಹೀಶ್ವರ ವಿಗ್ರಹದೊಲ್ ಸಾಕ್ಷಾತ್ಕರಿಸಿ
ಘನವೆತ್ತ ಸ್ವಾನುಭವಿ! ಲಸತ್ ಸತ್ಯಾಂತ ಸಿರಿ
ಕಿರಣ ಸಂಭೂತ ಗುರುವರಂ!
ಮರುದಿನದ ಸಭೆ
ನಡೆದತ್ತು ಒಂಬತ್ತರ ಇನಿವೊಳ್ತಿನಲಿ. ಬೆಳಗಿನ
ರವಿಛವಿಯು ಮುದ್ದಿಸುತಿರೆ ತನುಮನಗಳಂ ನವ
ಸ್ಫೂರ್ತಿಯ ಝುರಿ ಹರಿವುದು ನರನಾಡಿಗಳ್ ತುಂಬಿ
ಶೀಳುವಂತೆ. ಪ್ರಶಾಂತ ಸಮಯದ ಪ್ರಶಾಂತ
ಸಮುದಯ ಪ್ರಶಾಂತ ಅನಿಲಗುಣದ ಪ್ರಶಾಂತ
ಶಾಂತಿಯ ಸಮಾವೇಶ ಮೆರೆದತ್ತು ಸಂತಸದ
ನೆರೆ ಉಕ್ಕುವೊಲ್. ಸ್ವಾಮೀಜಿ ಪರಿಸರದ
ಸೊಬಗುಗುವ ಸೌಂದರ್ಯಾಸ್ವಾದನೆಯಿಂ
ಮೈಮನ ತುಂಬಿ ಸಭೆಯಂ ಬೊಕ್ಕು ಘನ
ವೇದಿಕೆಯನೇರಿದರ್. ಇರ್ದರ್ ಜೊತೆಗದರ
ವ್ಯವಸ್ಥಾಪಕರ್. ಮೊದಲವರ ಪರಿಚಯಗೊಳಿಪ
ಭಾಷಣದ ಕ್ರಮ ಮುಗಿಯಿತ್ತು. ಸ್ವಾಮಿ ವಿವೇಕಾ

ನಂದದಿಂ ತಮ್ಮೊಂದು ಕಿರು ಭಾಷಣಮಿದೆನುತೆ
ಅಪ್ಪಣೆ ಕೊಡಿಸಿದರ್ "ಸಜ್ಜನರೇ, ಕೇಳಿಲ್ಲಿ!
"ಪರೋಪಕಾರಾರ್ಥಂ ಇದಂ ಶರೀರಂ" ಎಂಬುದು
ವೇದವಾಕ್ಯಂ. ಈ ಶರೀರವಿರುವತನಕಂ
ಉಪಕಾರಾರ್ಥವಾಗಿಯೇ ದುಡಿಯಿರಿ. ದುಡಿದು
ಇತರರಿಗೆ ಉಪಕಾರಿಗಳಾಗಿ. ಪ್ರತಿಯೊಬ್ಬರ್
ಬಾಳ್ದೊಡಿಂತು ದೇಶದೊಳ್ ಕ್ಲೇಷಮಿರದು. ಮೇಣ್
ರಾಗದ್ವೇಷವೂ ಇರದು. ಲೋಕದ ಸತ್ ಶಾಂತಿ
ಅವತರಣಕೆ ಇದೇ ಪರಮ ನಾಂದಿ. ಏಸುಕ್ರಿಸ್ತ
ಹೇಳಿದೊಲ್ ಪರಸ್ಪರ ಪ್ರೀತಿಸುವುದನ್ನೇ
ಕಲಿಯಿರಿ. ಅದೊರ್ ದಿವ್ಯ ಸಂದೇಶ ಜಗತ್ತಿಗೆ.

"ಪುರಾಣ ಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯ ನವಮಿತ್ಯವದ್ಯಂ ।
ಸಂತಃ ಪರೀಕ್ಷ್ಯಾನ್ಯ ತರದ್ಭಜಂತೆ
ಮೂಢಃ ಪರತ ಪ್ರತ್ಯಯನೇಯ ಬುದ್ಧಿಃ ॥"

ಶ್ಲೋಕಾರ್ಥವಂ ವಿವರಿಸಿದ ಬಳಿಕ ನುಡಿಸಿದರ್,
"ಎಲೆ ದೇವ ಪುತ್ರರೇ, ಮೂಢ ಮತಿಗಳ ಮೂಢ
ಕಲ್ಪನೆಯ ತಮಾಷೆಯನೊಂದಂ ತಿಳಿಪುವೆ ನಾಂ
ಕೇಳಿರೈ. ಭಾರತದೊಳ್ ಅದ್ವೈತವಾದಿ ಶೈವ
ಪಂಥೀಯ ಅಸಹಿಷ್ಣು ಪಂಗಡಮಿಹುದು. ಅದರ
ಲಚ್ಚಣಮನೆ ಇತರರ ದೈವವಂ ಕಿಂಚಿತ್ತೂ
ಸಹಿಸರ್ ಮನಮೆಚ್ಚರ್. ಆ ಪಂಥದೊಳ್ ಓರ್ವ
ಶಿವಭಕ್ತ ಪ್ರಖ್ಯಾತ ನಾಮನಿರ್ದಂ. ಅವಂ
ಶಿವನಲ್ಲದೆ ಬೇರೊಂದು ದೈವದ ಪೆಸರ್ ತನ್ನ
ಕಿವಿಗಳಿಗೆ ಬೀಳದಿರಲೆಂದು ಎರಡೂ ಕಿವಿಗೆ

ಘಂಟೆಗಳ್ ಕಟ್ಟಿಕೊಂಡಿರ್ದ ಭೂಪ! ಅವನಾ
ಪುಣ್ಯನಾಮ ಘಂಟಾಕರ್ಣ! ಬೇರಾವೊಂದು
ದೈವದ ಪೆಸರ್ ಅಥ ಮಾತಿನ ಮರ್ಮರ ಸದ್ದುಗಳ
ಸೊಲ್ಲು ತನ್ನಯ ಕರ್ಣ ಕುಂಡಲಿನಿಗೆ ಕಿಂಚಿತ್
ಪುಗಿಸದಿರೆ ಸುಗಮವಾಯಿತು ಆ ವರಭಕ್ತ
ಘಂಟಾಕರ್ಣನಿಗೆ. ಏಗಳ್ ಶಿವ ಶಿವ ಎಂಬುವ
ಸ್ಮರಣೆಯು ಮಾತ್ರಮೇ ಕಿವಿಗೆ ಬೀಳುತಿರುತಿರಲ್
ಸಂತುಷ್ಟನೇ ವಲಂ. ಸರ್ವತ್ರ ಸದಾ ಶಿವ
ಧ್ಯಾನ ಮಾತ್ರವಲ್ಲದೆ ಬೇರೇನ್ ಸಹಿಸನಾ
ಘಂಟಾಕರ್ಣಂ. ಕೆಲಸ ಕಾರ್ಯಗೈವಾಗಳುಂ
ಶಿವಶಿವಾ ಎನ್ನದಿರಲಾರಂ. ಇಂತಿಂತಿಂತು
ಕಾಲಹರಣಗೈಯುತಿರೆ ಶಿವನೊರ್ಮೆ ಭಕ್ತನ
ಮನೋಜನ್ಯ ಕತ್ತಲೆಯ ಮುಸುಕಂ ಕಿತ್ತೊಗೆದು
ಸತ್ಯಾರ್ಥದ ಭವ್ಯ ತಿರುಳಂ ತೋರಿಕುಡೆ ಸತ್
ದರ್ಶನವನೀಯೆ ಹರಿಹರ ರೂವಿನಲಿ ಪರಮ
ಶಿಷ್ಯ ಘಂಟಾಕರ್ಣನ ಮುಂತೆ ಪ್ರತ್ಯಕ್ಷನಾದಂ!
ಒಡನೊಡನೆ, ಘಂಟಾಕರ್ಣಂ ಬೆರಗುವಟ್ಟು
ನೆಟ್ಟ ನಿಟ್ಟಾಲಿಯಾಗಿ ನೋಡಿದನ್ ಈಶನ
ವಿಚಿತ್ರತರ ವೇಶಂ! ಬೆಕ್ಕಸದಿ ಬೆರಗಾಗಿ
ಬೆಪ್ಪಾಗಿ ಕಣ್ಣರಳ್ಚಿ ನೋಡಿದನ್ ಶಿಷ್ಯಂ!
ಅರ್ಧದೇಹ ಶಿವನಾಗಿ, ಇನ್ನರ್ಧದೇಹಂ
ವಿಷ್ಣುವಾಗಿ ತೋರುತಿಹನ್ ಈಶ ಮಹೇಶಂ!
ತನ್ನ ಕಂಗಳಂ ತಾಂ ನಂಬಲಾರದನಿತ್ತು
ಅಚ್ಚರಿಯ ವಿಶೇಷಂ! ಆದೊಡೇಂ? ಆ ಶಿಷ್ಯ
ನಂಬಲಾರ, ಬಿಡಲಾರ! ತನ್ನೆಲ್ಲ ಅರ್ಚನೆ

ಈಶಂಗೆ ಮಾತ್ರಮೇ ಸಲ್ಲಲಕ್ಕು ಎಂಬುವ
ದುಮ್ಮಾನ ದುರ್ಮತಿಗಳ್ ಪಟ್ಟು ಹಿಡಿದೊಲ್ ಹರ
ಸಾಧಕಂ ಆ ಘಂಟಾಕರ್ಣಂ! ದೇವನೊರ್ವಂ
ನಾಮ ಹಲವು ಎಂಬರಿವು ಮೂಡಿಸಿದೊಡೇಂ? ಆ
ಶಿವಭಕ್ತನ ಮನವೊಪ್ಪದಾಯಿತು ವಿಷ್ಣುವಿನ
ಪರಿಪೂಜೆಗೆ. ಎದುರ್ವೆತ್ತ ಹರಿಹರರ್ ಇರ್ದರ್
ಒಂದಾಗಿ! ತನ್ನ ಅರ್ಚನೆಯು ಶಿವನಿಗೆ ಮಾತ್ರ
ಸಲ್ಲಲೆಂದು ಈಶನ ಭಾಗಕ್ಕೆ ಪೂಜೆಯಂ
ಸಲ್ಲಿಸಿದನ್! ಮಂಗಳ ದ್ರವ್ಯಗಳ ಪರಿಮಳಂ
ವಿಷ್ಣುವಿನೆಡೆಗೆ ಹರಿಯುತಿರೆ ಶಿಷ್ಯನದಂ ಕಣ್
ನಟ್ಟು ಮನನಟ್ಟು ನೋಡಿ ಕನಲ್ದು ವಿಷ್ಣುವಿನ
ನಾಸಿಕಾಗ್ರವನ್ನೇ ಒತ್ತಿ ಹಿಡಿದಂ! ಅಂಥ
ಕಿರುಮನಮತಿಗಳ ಮೂಢರುಂ ಇರ್ಪರ್ಯೆ ಈ
ಜಗದೊಳ್." ಸಭೆಯಲಿ ನಗೆಯ ಹೊನಲ್ ಹರಿಯಿತ್ತು
ಮಾಡುಮೊಳಗುವ ತೆರದಿ. ಮತ್ತೆ ಮುಂಬರಿದರಾ
ಸ್ವಾಮಿಜಿ, "ಪರಮ ಭ್ರಾತೃಭಗಿನಿಯರೇ, ಕೇಳಿ!
ಸಧರ್ಮಾಯ ಮೂಲದಿಂದ್ಯೆದು ಸರ್ವೋತ್ತಮವಾಗಿ
'ವಿಶ್ವಾತ್ಮಕ' ಪ್ರಜ್ಞಾನ ಪೂರ್ಣತಮ ಶೈಲಿಯ
ಚೆಂಬೆಳಕು ಕೃಷ್ಣ ಭಕ್ತರಮೇಲೆ ಪಾಪಿಗಳ
ಮೇಲೆ ಕ್ರಿಸ್ತಭಕ್ತರ ಮೇಲೆ ಪುಣ್ಯವಂತರ
ಮೇಲೆ ಮೇಣೆಲ್ಲ ಜನಕೋಟಿಗಳ ಮೇಲೆ ಸಮ
ರೀತಿಯಲಿ ಬಿಳ್ದು ಉದ್ದರಿಸವೇಳ್ಕುಂ. ಅದುಂ
ವೈದಿಕಮಾಗಲಿ ಮಹಮ್ಮದ್ದೀಯಮಾಗಲಿ ಕ್ರೈಸ್ತೀಯ
ಮಾಗಲಿ ಬೌದ್ಧಮಾಗಲಿ ಆಗಿರದೆ ಇವೆಲ್ಲದರ
ಘನ ಸಾಮಗ್ರೀಕರಣ ಮಾಗಿರವೇಳ್ಕುಂ! ಸುಧಾರಣೆ

ಅಥ ಉತ್ತರೋತ್ತರ ಅಭಿವೃದ್ಧಿಗೆ ಅಮಿತ ಕಾರ್ಯ
ಕಾರಣಾಂತ ಅಪಾರತರ ಸದವಕಾಶಮಂ
ಪೊಂದಿರುತೆ ಸಕಲಾಶ್ರಯಮಂ ನೀಡವೇಳ್ಕುಂ.
ಅದುಂ ಮೃಗೀಯ ಸ್ವಭಾವೀ ಅಟವಿಕ ಜನ
ಜಂಗುಳಿಯಂ ಮೊದಲ್ಗೊಂಡು ಹೃದಯ ಬುದ್ಧಿಗಳ
ತುತ್ತತುದಿಗೇರಿ ಮಹಾಮಾನವರಾಗಿ ಸರ್ವರ್ಗೆ
ಆಶ್ರಯವನೀವವೋಲ್ ಇರವೇಳ್ಕುಂ! ಅದರೆಲ್ಲ
ವ್ಯವಸ್ಥೆಯೊಳ್ ಹಿಂಸೆ ಅಸಹಿಷ್ಣುತೆಗಳಿಂಗೆ
ಎಡೆಯೀಯದೆ ಎಲ್ಲ ನರನಾರಿಯರ ಅನನ್ಯ
ದಿವ್ಯತೆಯನುಂ ಗುರುತಿಸುವ ಧರ್ಮ ತಾನಿರ್ಕುಂ!
ಅಂತೊಂದು ಘನವಾದ ಸಾಮರ್ಥ್ಯ ಉಳ್ಳಂಥ
'ವಿಶ್ವೋತ್ತೀರ್ಣ' ಧರ್ಮವಂ ನೀವ್ ಕೊಡುವಿರಾ?
ಅದನೆಲ್ಲ ಜಗತ್ ರಾಷ್ಟ್ರಗಳ್ ಒಪ್ಪಿ ಸಮರ್ಥಿಸಿ
ಒಮ್ಮನದ ಒಮ್ಮತಗಳಿಂ ಅನುಸರಿಪುದು ದಿಟಂ.
ಯೋಚಿಸಿ ನೋಡಿ, ಇಂಥೊಂದು ಸಮೃದ್ಧ ಧರ್ಮದ
ಆಚರಣೆ ಜಗತ್ತಿಗೆ ವೇಳ್ಕುಂ!"

ಶ್ರೀಕಂಠಸಿರಿ

ಧಾರೆ ಹರಿದುದು ಜಳಜಳಿಸಿ ಮನಮನಗಳ್ ಮುಟ್ಟಿ
ಎದೆ ಎದೆಗಳ್ ಕಿಟ್ಟಿ ನರನಾಡಿಗಳ್ ಮಿಡಿಸುವ
ಮಾಳ್ಕೆಯಲಿ. ಜನರಾಶಿಯುಂ ಪುಳಕಮಾಗಲ್.
ಮೈರೋಮ ಹರ್ಷಕಮಾದುದು ಧರ್ಮ ವಿಧಾನಂ
ಅರಿದು. ಸ್ವಾಮೀಜಿ ಮತ್ತೆಂದರ್ "ಎಲೆ ಸುಜನರೆ,
ವಿಶ್ವಧರ್ಮಾತ್ಮಕ ಸುಲಕ್ಷಣಗಳಂ ತೋರ್ದು
ತಂಪೆರೆದ ಪರಿ ಪೆರ್ಮೆಯ ದ್ಯೋತಕಮೇನಲ್ಲ.
ಮುಗುಳದ ಮನಮತಿಗಳಿಗೆ ಸುಸ್ಪಷ್ಟಗೊಳಿಪೊಂದು

ವಿಧಾನಂ ಮಾತ್ರಂ. ಈಯೊಂದು ಧರ್ಮದ ತತ್ತ್ವವು
ಅನುಸರಿಸಿ ಧರ್ಮವು ಬೆಳೆದು ಉಳಿವುದಾದೊಡೇಂ
ಕೊರಂ ಈ ಜಗತ್ತಿಗೆ? ಆದೊಡಾ ಕ್ರೈಸ್ತಜನ
ಮಿಷನರಿಗಳ್ ಬಲವಂತದಲಿ ಕೈಕೊಂಬುವಾ
ಪ್ರಸರಣ ಕಾರ್ಯವದು ಚತುರೋಪಾಯಗಳಿಂ
ಕೂಡಿ, ತಳಕು ಬೆಳಕಿನ ಜಾಲವಂ ಹರಡುತ್ತೆ
ಮೊಲಗಳಂ ಬೇಂಟೆಯಾಡುವ ತೆರದಿ ಮುಗ್ಧಮನ-
ಮುಗ್ಧಮತಿಗಳಂ ಒತ್ತಂಕೆಯಲಿ ಕಿಡಿಸುವರ್.
ಕೇಳಿ, ಒರ್ಮೆ ಅಶೋಕನಾಸ್ಥಾನ ಬೌದ್ಧ ಸಮಿತಿಯೆ
ಆಯಿತ್ತು. ಅಕ್ಬರನದು ಕಾರ್ಯತಃ ಹೆಚ್ಚೆಚ್ಚು
ವಿಸ್ತಾರಮಾದೊಡಂ ಸ್ವಾರ್ಥಮೂಲಮಾಗಿಹ
ಬರಿಯ ಚರ್ಚಾಕೂಟಮಾಯಿತ್ತು. ಭಗವಂತ
ಸರ್ವಧರ್ಮಗಳಲಿಯುಂ ತಾನಿಹನ್ ಎಂಬ
ಪರಮ ಸತ್ಯಾರ್ಥಮಂ ಜಗಕೆ ಸಾರುವ ಪುಣ್ಯ
ಅಥ ಸತ್ಕೀರ್ತಿಯಂ ಪಡೆದ ಅಮೆರಿಕ ದೇಶವುಂ
ಧನ್ಯವಾಯ್ತು. ಮೇಣಧಿಕ ಭಾರತಧರಿತ್ರಿಯ
ಧರ್ಮಸಾರವೇ ಜಗಜಗಿಸಿ ಪೊಳೆಯಿತ್ತು ಲೋಕ
ಮೆಚ್ಚುವ ತೆರದೊಳ್. ಅಕ್ಕರಕ್ಕಮಂ ತೂಗಿ
ನೋಡಿ, ಪರಿಭಾವಿಸಿ ಅರಿಯಿರಿ. ಯೋಚಿಸಿ ತಿಳಿಯಿರಿ.

"ಜಲಬಿಂದು ನಿಪಾತೇನ
ಕ್ರಮಶಃ ಪೂರ್ಣತೇ ಘಟಃ ।
ಸಹೇತುಕಃ ಸರ್ವ ವಿದ್ಯಾನಾಂ
ಧರ್ಮಸ್ಯ ಚ ಧನಸ್ಯ ಚ ॥"

ಅಂತಲೇ, ಅಲ್ಪಸ್ವಲ್ಪವೇ ಕಲಿತೊಡಮದುವೆ
ತುಂಬಿ ತುಳುಕುವುದು ಜ್ಞಾನ ಮಂಡಲ ಬಿರಿಯುವೊಲ್.

ಓ ಕೇಳಿರೈ! ಆರ್ ಹಿಂದೂಗಳ ಬ್ರಹ್ಮವೊ ಆರ್
ಯಹೂದ್ಯರ ಜೆಹೋವನೊ ಆರ್ ಜರತುಷ್ಟೀಯರ
ಅಹರವಸ್ದನೊ, ಆರ್ ಬೌದ್ಧರ ಬುದ್ಧನೊ ಆರ್
ಕ್ರೈಸ್ತರ 'ಸ್ವರ್ಗದೊಳಿಹ ತಂದೆಯೊ' ಅವಂ ನಿಮ್ಮ
ಘನೋದ್ದೇಶಮಂ ಅನುಷ್ಠಾನಗೊಳಿಸಲ್ಕೆ ಸಕಲ
ಶಕ್ತಿಸಾಮರ್ಥ್ಯಮಂ ಇತ್ತು ಪರಿಪಾಲಿಸಲಿ....!
ಪೂರ್ವೀ ದಿಗಂತದೊಳ್ ಉದಿಸಿದುದು ಸುಸುಂದರ
ಧಾರ್ಮಿಕದ ನಕ್ಷತ್ರ ಸ್ವರ್ಣದುಂಡೆಯವೋಲ್.
ಸ್ಥಿರಗತಿಯಿಂದದು ಪಯಣಿಸಿದತ್ತು ಪಶ್ಚಿಮ
ದಿಗ್ದೇಶಕೆ. ಕೆಲವೊರ್ಮೆ ಮಸುಕಾಗಿ ಮಗದೊರ್ಮೆ
ಪ್ರಖರವಾಗಿ. ಜಗತ್ತಂ ಪ್ರದಕ್ಷಿಣೆಗೈದು, ಈಗಳ್
ಅದುಂ ಮತ್ತೊರ್ಮೆ, ಅದುವೆ ಪೂರ್ವೀ ತೀರದಲಿ
ಪೆಸಿಫಿಕ್ ಸಾಗರದ ದಿಗಂತದೊಳ್ ಹಿಂದಿಗಿಂ
ಸಾಸಿರಮಡಿ ಪ್ರಕಾಶಯುಕ್ತವೆನೆ ಉದಿಸುತಿದೆ....
ನೋಡಿ, ಆಪನಿತು ಪರಿಭಾವಿಸಿ ಪರಿವೀಕ್ಷಿಸಿ!"
ಸ್ವಾಮೀಜಿಯ ವೈಚಾರಿಕ ಶುಕ್ತಿ ಮೊಟ್ಟೆಯಂ
ಕುಕ್ಕಿ ಒಡೆದು ಪೊರಗಿಟ್ಟ ಅದ್ಭುತ ವೇದಾಂತ
ರಸಧಾರೆ ಎಲ್ಲರ ಕಿವಿಗಳಲಿ ಧುಮುಧುಮಿಸುತ
ಮತ್ತೆಮತ್ತೆ ಮೊರೆದುದು ಮನತಣಿಸುವ ತೆರದಲಿ.
ಶ್ರೋತೃಗಳ್ ಶಿಷ್ಯರ್ ವರಮಿತ್ರರ್ ಮನತಣಿದು
ತನುತಣಿದು ಒಡಲ್ ದುಂಬಿದರ್ ವೈದಿಕ ಧರ್ಮ
ಸಾರವಂ, ಹಾಲ್ಜೇನ್ ಸವಿದೊಲ್, ಪರಮಾನ್ನವ
ಉಂಡವೊಲ್ ಹಿತವಾಯ್ತು ವಿದ್ಯೆಯುಂ ಹುಲುಸಾಯ್ತು.
ಶ್ರೋತೃಗಳ್ ಬಂದಪರ್ ಬಿಡುವಿನಿತಿರದ ತೆರದಿ.
ಪ್ರಶ್ನೋಪಪ್ರಶ್ನೆಗಳ್ ಏಳ್ದಪವು ಬಗೆಬಗೆಯ

ವಿಚಾರಗಳಲಿ, ಸರ್ವದಾ ಚಿಂತನ ಮಂಥನ
ದ್ರವ್ಯಂ ದಣಿಸುವುದು ಶರೀರ ಸಂಪುಟವನುಂ.
ಕಳೆದುವು ದಿವಾರಾತ್ರಿಗಳ್ ವಿವಿಧ ಕಾರ್ಯಾಂಗ
ಭಾರದಲಿ. ಭಾರತದ ಪುನರುತ್ಥಾನದ ಕಾರ್ಯಂ
ಕುರಿತು ತನ್ನೊಳ್ ತರ್ಕಿಪರ್ ಏಕಾಂತ ಚಿಂತೆಯಲಿ.
ಪಾಶ್ಚಾತ್ಯ ಪ್ರಾಂತೀಯ ಆತ್ಮೀಯ ಶಿಷ್ಯರುಂ
ಮುಂದೈದು ಭಕ್ತಿಯಿಂ ನೇಮದಿಂ ತೋಷದಿಂ
ಸ್ವಾಮೀಜಿಯ ಶಿಷ್ಯತ್ವವನೊಪ್ಪಿ ದೀಕ್ಷೆಯಂ
ಪಡೆದರ್ ನಿಜ ಸಂನ್ಯಾಸವ್ರತವ ಹಿಡಿದು. ಆ
ಅಪೂರ್ವತರ ಶಾಂತಿಯ ಜೊತೆಗೆ ಸ್ವರ್ಗೀಯ ಅನು
ಭಾವ ವೇದಾಂತದರ್ಶನ ಮೇಣ್ ಸನಾತನ
ಧರ್ಮದ ರಸಾಯನ ಇವೆಲ್ಲವುಂ ಮನದಣಿಯೆ
ಅನುಭವಿಸಿ ಸಂತೃಪ್ತಿಯಂ ಪಡೆದ ಧನ್ಯಾತ್ಮ
ತರುಣರ್. ಪೊಳ್ತುವೊಳೆ ಹರಿಯುತಿರೆ ಸರಾಗದಿ
ಪ್ರಾಚ್ಯ ಪಾಶ್ಚಾತ್ಯ ಸಂಸ್ಕೃತಿಗಳಂ ಅಧ್ಯಯನ
ಅಧ್ಯಾಪನಗಳ ಕಡೆ ಗಮನವಿಟ್ಟರ್ ಸ್ವಾಮೀಜಿ.
ಬಿಡುವಿನಲಿ ಕಾಲಗತಿಯಂಬಿಡಿದು ಬೆನ್ನಟ್ಟಿ
ಸರಿಗಟ್ಟಿ ಲೇಖನಝರಿ ಹರಿವುದು ಜೀವನದ
ಸಾರವಂ ಬಸಿದು ಲೋಗರ್ಗೆ ವರದಾನದೊಲ್
ನೀಡುವೊಡೆ. ಕಲುಷಿತ ಜನ ಜೀವನಕೆ ಬೆಳಕಿನ
ಛವಿಯ ತೋರಿ ಮುನ್ನಡೆಸುವ ಹಮ್ಮು ತುಂಬಿರಲ್
ಮನಮತಿಗಳಲಿ ಪರಿಶ್ರಮದ ಗೋಳರಿಯದಾಯ್ತು
ತರುಣ ಜೀವ. ಲೇಖನಗಳುಲ್ಲೇಖನ ಧಾರೆ
ಹರಿವುದು ಸರಳ ಶೈಲಿಯಲಿ, ಭಾರತೀಯ ವರ
ಶಿಷ್ಯರ್ಗಿಂಗೆ ಬಲ್ಮೆಯ ಸವಿಯನುಣಿಸೆ. ಅಪಾರ

ಕದಂಬಜ್ಞಾನಯಜ್ಞಕೆ ನಿಲ್ದು ಭುಜಕೊಟ್ಟು
ಅಧ್ವರ್ಯುರ್ಉದ್ಗಾತೃಹೋತಾರರುಂಋತ್ವಿಜರುಂ
ತಾವಾಗೆಸೆದರ್ ಗುರುವರಂ.
ಅನ್ನೆಗಮತ್ತಲ್
ಭಾರತದೊಳ್ ಕಾಶೀಪುರ ಮಠದ ವಟುಗಳಿಗೆ
ಅಮೆರಿಕೆಯ ಸರ್ವಧರ್ಮ ಸಮ್ಮೇಳದ ಭವ್ಯ
ವೇದಿಯಲಿ 'ಭಾರತದ ಸಂನ್ಯಾಸಿ ವಿವೇಕಾ
ನಂದರ್' ವಿಜಯ ಕೇತನ ಹಾರಿಸಿದ ಸುವಾರ್ತೆ
ಗಾಳಿಸುದ್ದಿಯ್ಯೆಸಿ ಮುಟ್ಟಿದೊಡಮದು ತಮ್ಮಯ
ಗುರುನಾಯಕ ನರೇಂದ್ರನಾಥನೆ ಇರ್ಕುಮೆನೆ
ನಂಬುಗೆಯು ದೃಢಮಾದೊಡಂ 'ವಿವೇಕಾನಂದ'
ನೆಂಬುವ ಪೆಸರ್ ಕೇಳರಿಯದ ಸುದ್ದಿಯಾದುದು.
ಆದೊಡಂ ಕಲ್ಲುಸಕ್ಕರೆಯ ಮೆದ್ದೊಲ್ ಸಂತಸದ
ಮೂಟೆಯಾದುವು ತನುಮನಗಳ್; ಒಡನೊಡನೆ
ವಟುಗಳ್ ಕುಣಿದು ಕುಪ್ಪಳಿಸುತಿರುತಿರೆ ದೂರದ
ಕಲಿಕತ್ತೆಯಿಂ ಪಿಂದಿರುಗಿ ವಂದ ಶಾರದಾ
ನಂದರುಂ ಆ ಶುಭ ಸುದ್ದಿಯಂ ದೃಢಗೊಳಿಸುತೆ
ನುಡಿದರಿಂತು "ಭ್ರಾತೃಗಳೇ ವಿವೇಕಾನಂದ
ನಮ್ಮ ಗುರುನಾಯಕನೆ ವಲಂ! ಹಾ ಎಂತಪ್ಪ
ರೋಮಾಂಚಕ ಸುದ್ದಿ! ಶ್ರೀಕಾಲಿ ಮಾತೆಯುಂ
ಅವರಂ ಸುಖಮಾಗಿ ಮರಳಿಸಲೆಮ್ಮಯ ಭುವಿಗೆ.
ಅಷ್ಟಾದೊಡೆಮಗೆ ಸಾಲ್ಗುಂ! ಶ್ರೀಗುರುದೇವಂ
ನಿಜಕ್ಕು ಕರುಣಾನಿಧಿಕಣಾ! ಗುರ್ವಾಶೀವಾದಂ
ದೈವದ ದಯೆಯನೊದವಿಸಿತು ಎನಲ್ ತಪ್ಪಲ್ಲ."

ಎರ್ದೆಯುರ್ಬಿ ಹರಿದುದು ಎದೆಯಾಳದ ಕೂರ್ಮೆಯ ತೂರ್ಯವಾಣಿ. ಬಡಕುಟಿಯೊಳ್ ಸಂತಸದ ಚಿಲುಮೆಯು ಉಕ್ಕುಕ್ಕಿ ಹರಿಯಿತ್ತು ಭಾವನಾವೇಶದಲಿ.

ಹರಿಃ ಓಂ ತತ್ ಸತ್

❋ ❋

ಚತುರ್ವಿಂಶೋಲ್ಲಾಸಂ

ಆತ್ಮವಾಣಿ

"ಶೃತಿರ್ವಿಭಿನ್ನ ಶೃತಯೋಪಿ ಭಿನ್ನಃ
ತಥಾ ಮುನಿನಾಂ ಮತಯೋಪಿ ಭಿನ್ನಃ
ಧರ್ಮಸ್ಯ ತತ್ವಂ ನಿಹಿತಾಂ ಗುಹಾಯಾಂ
ಮಹಾಜನೋ ಏನಗತಃ ಸ ಪಂಥಾ ॥"

ಇರುಳ್ನಿದ್ದೆಯಿಂ ಜಗಮೆಳ್ಚರುವ ಮುನ್ನಮೆಯೆ
ಪ್ರಾತಃಪ್ರಾರ್ಥನೆಯಂ ಮುಗಿಸಿದ ಶ್ರೀ ಗುರುವರಂ
ಪೊರಗೈತರೆ ಮುಂಬಿನ ಪ್ರಾಂಗಣಕೆ ಪ್ರಾತಃಸುಖ
ಸಮೀರಂ ಒಯ್ಯನೊಯ್ಯನೆ ಬೀಸಿ ಬರುತಿರಲ್ ನಿಜ
ಸಂಚಲನೆಯುಡುಗಿದವೊಲ್ ಮಿದು ಮುದ್ದಾಯಿತ್ತು
ಮೆಯ್ಸಿರಿಗೆ. ಗಿರಿಶೃಂಗೋತ್ತುಂಗಮಂ ಆತು
ಮುಸುಂಗಿತು ಬೆಳ್ಮೋಡದ ಸಿರಿಸಾಲ್. ಬೆಳ್ಪನೆ
ರಜತಮಣಿ ಮುಕುಟದವೊಲ್ ಮುತ್ತಿ ಗಿರಿಶ್ರೇಣಿ
ಶೃಂಗದ ಚೆಲುವು ಇರ್ಮಡಿಸಿತು, ನೋಳ್ಪ ಕಂಗಳ್
ಮಮ್ಮಲಿಪ ಪಾಂಗಿನಲಿ. ಅರೆಯರಳಿದ ಸುಮಗಳ
ಗಿರಿ ಕಂಪಿನಲಂಪು ಸಕಲೇಂದ್ರಿಯಗಳಂ ನಲ್
ಮುಟ್ಟಿ ಮುದ್ದಿಸಿತು. ಪೊಳ್ತಿನ್ನು ಪೊಗರೇರದಿರೆ
ಚೆಲುವಾಯ್ತು ಪ್ರಾತಃಸ್ಫೂರ್ತಿಯಂ ಪಡೆದುಕೊಂಬೊಡೆ.
ಶಾಂತಿಯುಂ ಘನೀಕರಿಸಿ ಮೂರ್ತಮಯಮಾದುದೊ
ಎನಲ್ ನಗರದ್ದೇಶಂ ಪ್ರಶಾಂತ ಸಮುದಯದ
ಪ್ರಕೃತಿಯುಡಿಯ ಶಿಶುವಿನೊಲ್ ಇರ್ದುದು ತಣ್ಣಗೆ.
ಭವನ ವಲಭಿಗಳಿಂದೆ ಕಪೋತಂಗಳ ಹಿಂಡು
ಎರೆಂಕೆಗಳ್ ಪಟಪಟಿಸಿ ರೊಯ್ಯನೆ ಪಾರಿದುವು

ವಿಯತ್ತಳಕೆ. ಹಾರಾಡಿ ಓಲಾಡಿ ಸಡಗರ
ಸಂಭ್ರಮಗಳ್ ವೆರಸಿ ಗುರುಗುರು ಕಂಠಸ್ವನಂ
ಹರಿಬಿಡುತ್ತಲಿಳಿದುವು ಬರಬರನೆ ಅಂಗಣಕೆ.
ಅಲ್ಲಲ್ಲಿ ಹಾರಿ ಕುಪ್ಪಳಿಸಿ ರೆಕ್ಕೆ ಬಡಿಯುತೆ
ಮತ್ತೆ ಹಾರಿದುವು ಖೇಮಾರ್ಗಕೆ. ಆ ಸುಸುಂದರ
ಮನೋಹರ ದೃಶ್ಯಮಾನದಿಂ ಆನಂದರಸ
ಪೂತ ಹೃನ್ಮನಂಗಳ್ ಪುಳಕಮಾದುವು ತಾವ್
ಅರಿಯದವೊಲ್. ಒಡನೆ ಕರೆಯಿತಾತ್ಮವಾಣಿ

"ಯಸ್ತು ಸರ್ವಾಣಿ ಭೂತಾ-
ನ್ಯಾತ್ಮನ್ಯೇವಾನು ಪಶ್ಯತಿ ।
ಸರ್ವಭೂತೇಷು ಚಾತ್ಮಾನಂ
ತತೋನ ವಿಜುಗುಪ್ಸತೇ ॥"

ಆದೊಡೆ ಮನುಕುಲಮಿದು ಎಳಸು-ಎಳಸಿನ ಮನುಕುಲಂ
ಮುನ್ನಡೆಯ ಹಮ್ಮಿನಲಿ ಹುಚ್ಚು ಆಸೆಯ ಹಾಳು
ಗೀಳಿನಲಿ ನಡೆಗೆಟ್ಟು ಮುಗ್ಗರಿಸಿ ಬಿಳ್ದು ನಗೆ
ಗೇಡಿಯಾದಪುದು ಸಾಮಾನ್ಯಮೀ ಕಾಲದಲಿ.
ಸ್ವಾಮೀಜಿ ಅಲ್ಲೆ ಅಲ್ಲಲ್ಲೆ ಪದ ಚಾರಣಂ
ಗೈದರ್. ಅಕ್ಷಿಪಟಲದ ಮುಂತೆ ಜಗದಲಿ ಹಬ್ಬಿ
ಹರಡಿದ ತಳುಕು ಹುಳುಕು ಬೆಳಕಿನ ಬದುಕು-ಬರಿ
ಬದುಕು ಸುಳಿದುದು ಚಿತ್ರವತ್ತಾಗಿ. ಒಡನೊಡನೆ
ಹೃದಯಹಾರೀ ಆತ್ಮವಾಣಿ ಘನ ಗಂಭೀರ
ಗತಿಯಲಿ ಉಲಿದುದು ಹಿತಮಿತವಾದ ಸೂಕ್ತಿಯಂ,

"ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾವಿ ಹಿತಂ ಮುಖಂ ।

ತತ್ತ್ವಂ ಪೂಷನ್ನ ಪಾವೃಣು
ಸತ್ಯ ಧರ್ಮಾಯ ದೃಷ್ಟಯೇ ॥

ಅಂದು, ರಾತ್ರಿಯೊಳ್ ಕೈಕೊಂಡ ಲೇಖನಿಯ ಮಸಿ
ಹರಿದುದಿಂತು ಕರಿಯಕ್ಕರಗಳ ಮಣಿ ಮಾಲೆಯಂ
ಕೋದು, ಪೋಣಿಸಿ. "ಕೇಳಿ, ಭಾಯಿಗಳೆ! ಈ ದೇಶ
ಈ ಜನಾಂಗ ಒಂದಕ್ಕೊಂದು ಹೊಯ್‌ಕಯ್‌ಯಾಗಿ
ಮುನ್ನಡೆದಿದೆ ಪ್ರಗತಿ ಪಥವಿಡಿದು. ಇವರ್ ಅತಿ
ಬಲಿಷ್ಠರ್ ದೃಢಿಷ್ಠರ್ ಇರುತಿರೆ ಕೈಹಿಡಿದ
ಕಾರ್ಯದ ಗತಿತಪ್ಪದು. ಸ್ತ್ರೀಪುರುಷರೊಗ್ಗಿನಿಂ
ನಡೆವ ಉತ್ತರೋತ್ತರ ಅಭಿವೃದ್ಧಿ ಸರ್ವಥಾ
ಅನುಕರಣೀಯಂ. ಇವರ ಧೈರ್ಯ ಸ್ಥೈರ್ಯದ
ಕೆಚ್ಚು ನೆಚ್ಚುಗಳ್ ಸಾಸಕಾರ್ಯಂ ಸಾಧಿಪುದು
ಎಣೆಯಿಲ್ಲದೊಲ್. ನೀವ್ ನಿಮ್ಮೊಳ್ ತಿಳಿದುನೋಡಿ,
ಪರಿಭಾವಿಸಿನೋಡಿ! ಸಾಸಕಾರ್ಯಗಳಿಂಗೆ
ಶಾಸ್ತ್ರಸಂಪದದ ಮಾರೊಡ್ಡುಸರಿಯೆ? ಶಾಸ್ತ್ರದ
ಸೋಗಿನಲಿ ಪೆಂಗಳೆಯರಂ ಪಿಂತಿರಿಸಿ ವಿದ್ಯೆ
ಬುದ್ಧಿಗಳ ರಂಗದಿಂ ದೂರಗೈದು ನೀವುಂ
ಸಾಧಿಸಿದುದೇಂ? ಲಜ್ಜೆಯನಿಸದೆ ನಿಮಗೆ? 'ಪೆಣ್ಣು'
ಎಂದೊಡದು ಸೊತ್ತು ತೊತ್ತು ಮಾತ್ರಮೆ ಸಮಾಜಕೆ!
ಛೀ! ಏಂ ಅನ್ಯಾಯ! ಯೋಚಿಸಿ, ತಿಳಿಯಿರಿ, ಕರುಣದಿ
ಕಾಣಿರಿ! ಮೇಣೆಮ್ಮಯ ಸಮಗ್ರ ಸ್ತ್ರೀಜನರ
ಮನೋದೀಪ್ತಿಗೆ ತೈಲವನೆರೆದು ಕುಡಿಯ ಬೆಳಗಿ
ತೊಳಗಿಸಿ, ಅವರ ಬಾಳಿಗೆ ಬೆಳಕಿನ ಛಾಯೆಯಂ
ತೋರಲಾರಿರಾ? ಅಜ್ಞಾನದ ಕಡುಕತ್ತಲೆಯಿಂ ದಿವ್ಯ
ಬೆಳಕಿನೆಡೆಗೆ ನಡೆಸಿ ಸಮಗ್ರ ಭಾರತಕೆ ಕೀರ್ತಿಯಂತನ್ನಿ!

ನಮ್ಮ ತರುವಲಿಗಳ್ ಕಣ್ ತೆರೆದು ಈ ವಿಶಾಲ
ಜಗತ್ತಂ ನೋಡಿ ತಿಳಿದು ನಿಂನಿಮ್ಮ ಬಾಳಿಗೆ
ಚೆಂಬೆಳಕಿನ ಛವಿಯಂ ಆಹ್ವಾನಿಸಿ ಬೆಳಗಿರಿ.
ನಮ್ಮಯ ಜನತೆಯು ಕರ್ಬುನದ ಭಾಹುಶಕ್ತಿ
ಉಕ್ಕಿನ ನರತಂತುಗಳ ಪರ್ವತೋಪಮಮಾದ
ದೈಹಿಕ ಶಕುತಿಯಂ ಪಡೆಯವೇಳ್ಕುಂ. ದೇಶದ
ಉತ್ತರೋತ್ತರ ಅಭಿವೃದ್ಧಿಯು ಒಬ್ಬಿಬ್ಬರ
ಕಾರ್ಯಮೇನಲ್ಲ. ಈ ಮಹಾ ಕಾರ್ಯದೊಳೊರ್ವ
ಅಳಿದೊಡಿನ್ನೊರ್ವನೇಳುವನ್. ಅದಕಾಗಿ ನೀಂ
ಪಿಂತಿರುಗಿ ನೋಳ್ಪ ಕತಮಿಲ್ಲಂ. ಇಂದು, ದೇಶ
ಪ್ರೇಮವೇ ದೃಢವಾದ ಧರ್ಮ ಎಂದೊಡದು ಘನ
ಗೌರವಯುತ ಧರ್ಮ ಗಡ? ಯೋಚಿಸಿ, ಆಪನಿತು
ಯೋಚಿಸಿ, ಒಳಿತು ಕೆಡಕುಗಳಂ ನೀಮೆ ನಿರ್ಣಯಿಸಿ.''
ಪಾಶ್ಚಾತ್ಯ ಭೂಮಿಯೊಳ್ ನೆಲೆನಿಂದು ಪರಮೋಚ್ಚ
ಜ್ಞಾನವೇತೃವೆನಿಸಿ ಪರಮೋಚ್ಛತಮದೈಸಿರಿಯ
ಸ್ಥಾನಮಾನದಲಿ ವೈಭವೀಕರಿಸಿ ಮೆರೆದೊಡಂ
ಬಡಭಾರತದ ದುಃಖ ಸಂಕಟದಲಿ ಸತತಂ
ಪಾಲ್ಗೊಂಡು ಹಂಬಲಿಸಿ ಪರಮಾಪ್ತ ಶಿಷ್ಯರ್ಗೆ
ಭಾರತಸಾಮ್ರಾಜ್ಯದ ಭವಿಷ್ಯಮಂ ಕುರಿತಂತೆ
ಮತ್ತೆಮತ್ತೆಮೇಣ್ಮತ್ತೆ ಹೃದಯಹಾರಿಯಾದ
ಉಲ್ಲೇಖನವನಿಂತು ಕಳಿಪುತಿರ್ದರ್ ಗುರು
ದೇವಂ,
''ಎಲೆ, ಗುರು ಭಾಯಿಗಳೆ, ಕೇಳಿ! ಇಲ್ಲಿನ
ಜನ ಜೀವನ ರಂಗವದಂ ಆವಾವ ದೃಷ್ಟಿ
ಕೋನದಿಂದೀಕ್ಷಿಸಿದೊಡಂ ಜ್ಞಾನ ವಿಜ್ಞಾನ

ತಾಂತ್ರಿಕ ಜ್ಞಾನಗಳ ಸಮುದಯದ ಬಲದಿಂ ಮೇಣ್
ಛಲದಿಂ ನಿಷ್ಠೆಯಿಂ ಸ್ಥೂಲಸೂಕ್ಷ್ಮಗಳ ಅವಿನಾ
ಭಾವದಿಂ ಒಂದೇ ಪಥದ ನಿಟ್ಟಿನಲಿ ನಿಚ್ಚ
ನಡೆದಿರಲ್ ಪ್ರಗತಿಗೆ ಹಲವಾರು ಪಥಂಗಳ್.
ಆದೊಡಂ ಸದ್ಧರ್ಮ ಲೋಪದಿಂ ಬಾಳ್ಬದುಕು
ಕಳಂಕ ಕಲುಷಿತಮಿರೆ ಮನಶ್ಶಾಂತಿಯುಮಿಲ್ಲ;
ಎಂದೆನಲ್ ಅನ್ಯಮಲ್ತು. ಪ್ರಾಚ್ಯ ಸುಸಂಸ್ಕೃತಿಯ
ಮಹತ್ತರವಾದ ದ್ರವ್ಯವಂ ಇವರಿಂಗಿತ್ತು
ಪಾಶ್ಚಾತ್ಯ ವಿಜ್ಞಾನ ಪ್ರಜ್ಞಾನ ತಾಂತ್ರಿಕದ
ಜ್ಞಾನ ವಿಷಯ ವಿಶೇಷಮಂ ಪಡೆದೊಡೆ ಒಳ್ಳಿತು.
ಅಂದೊಡೆಮ್ಮವರ್ಗಿದು ಸುಲಭ ಪಾಠಾಂತರಮೆ
ಆದಪುದು ಎಂಬೆನಾಂ. ಭಾರತದ ಸಂಸ್ಕೃತಿಗೆ
ಪ್ರಜ್ಞಾನದ ಕಿರೀಟಧಾರಣೆಗೈವ ಪುರುಪು
ಪುರುಡು ಪಡೆಕೊಂಬುದೇ ಘನವಾದ ಪ್ರಗತಿಯ
ಲಚ್ಚಣಂ. ನೀಮಿನ್ನು ಹಳೆಯ ಕಂದಾಚಾರ
ಕುರುಡು ನಂಬಿಕೆಗಳ ಕಡು ಮೂರ್ಖತೆಯ ಓಡಂ
ಕುಕ್ಕಿ ಒಡೆದು ಹೊರವಂದು ಮುನ್ನುಗ್ಗುವುದೆ ಸರಿ,
ಗುರಿಯ ಪಥವಂ ಪಿಡಿಯುವೊಡೆ. ಒಳಗಣ್ ಅರಳಿಸಿ
ನೋಡಿ. ನರಜನ್ಮದ ಘನಸಾರ್ಥಕತೆಯಂ ಸಾಧಿಪುದೆ
ಬಾಳ್ಬುದುಕಿನ ಗುರಿಯಲ್ತೆ.....?"
ದಿನಚರಿಯ ಕಟ್ಟಕಡೆಯಲಿ
ಪ್ರಾರ್ಥನೆಯ ಭಕ್ತಿರಸ ಹರಿದುದು ಕೊರಳ್ ಧ್ವನಿ
ಸೂಸಿ. ಕಳೆದುವು ಚಣಚಣಗಳ್ ಕಾಲನ ಪದಾ
ಘಾತದಲಿ ಸಿಲ್ಕಿ, ಎದೆಯಾಳದಿಂ ಆತ್ಮವಾಣಿ
ಉಲಿಯಿತು "ನೀನೆನಿತೆನಿತು ಪತ್ರಮಂ ಮತ್ತಮಾ

ಪ್ರವಚನಮಂ ಕೋಡಿ ಹರಿಸಿದೊಡಮಾದೊಡಂ
ಅಸ್ತಿತ್ವಮಿಲ್ಲದೆ ಉಳಿಯವು ಬಹುಕಾಲ ಕಣಾ.
ಉಲ್ಲೇಖಿಸೆ ಗ್ರಾಂಥಿಕ ಮಾಲೆಯ ಪರಿಪೋಣಿಸಿ,
ವೇದಾಂಗಗಳ ಸಾರಮಂ ತುಂಬಿ ಚೆಂದದಿಂ.
ಚಂಗಟ್ಟು ಬಿಗಿದವಂ ಹರಿಯ ಬಿಟ್ಟೊಡೆ ಜಗತ್
ಮಂಡಲದೊಳ್ ಶತಮಾನಗಳ ಪರ್ಯಂತರಂ
ಉಳಿವುದೈ ಜನರೊಳ್ಪಿಗಾಗಿ. ಜಗದೊಳ್ಪಿಗಾಗಿ.''
ಓರೋರ್ಮೆ ಭಾವಜ್ಞ ಮನಂ ಎಲ್ಲೆಂದರಲಿ
ಧ್ಯಾನ ಮುಗ್ಧತೆಯಲಿ ಮುಳುಗಿ ಜಗಮರೆವುದು ತಾಂ
ಅರಿಯದೊಲ್. ರಾಗವಿಲ್ಲ, ನೋವಿಲ್ಲ, ಚಂಚಲಗತಿ
ಇಲ್ಲವೇ ಇಲ್ಲಂ. ನಿರಾತಂಕಿತ ಮಾನಸೀ
ಮುರುಳಿ ಹಾಡುವುದು ಭಕ್ತಿರಸವಂ ಸೂಸಾಡಿ.
'ಟ್ರಾಮು'ಗಳಲಿ ಉಗಿಬಂಡಿಗಳಲಿ ಆಕಸ್ಮಿಕದಿ
ಧ್ಯಾನಗತಿಗೆತ್ತರೆಂದೊಡೆ ಧ್ಯಾನಸ್ಥ ಮನವದು
ಬಾನ್ಗೇರ್ದು ಜೇನ್ ಸೋನೆಯ ಜೊನ್ನಮಂ ಸವಿದು
ನಲಿಯುತಿರಲಲ್ಲಿ ಇಳೆಯಗೊಂದಣ ವೆಗ್ಗಳಮೆ
ಧ್ಯಾನಭಕ್ತಿಗಿಂ? ಟ್ರಾಮುಗಳಲಿ ಇಳಿಯುವೆಡೆಯಲಿ
ಇಳಿಯದೆ ಮರೆತು ಆಕೊನೆಯಂ ಮುಟ್ಟಿ ಮತ್ತಂ
ಪಿಂದಿರುಗಿ ದುಪ್ಪಟ್ಟು ಹಣತೆತ್ತ ಪ್ರಸಂಗಂ
ಒದವಿದುದು ಎನಿತೋ ಸಲಿ. ಅಮೆರಿಕಾ ದೇಶೀಯ
ಸಂಸ್ಥಾನಗಳೊಳ್ ಉಪದೇಶ ಯಾತ್ರೆಯಂ ತೀರ್ಚಿ
ಪಿಂಮರಳುವ ಮುನ್ನಂ ಅನೇಕ ವಿದ್ವನ್ಮಣಿ
ಮಿತ್ರರ್ ಲಭಿಸಿ ಸಂತಸಗೊಂಡರ್ ಸ್ವಾಮಿಜಿ.
ಪಾಶ್ಚಾತ್ಯ ಜೀವನದ ಸಂಸ್ಕೃತಿಯ ಅರಿವಾಯ್ತು.
ನೈಸರ್ಗಿಕ ಚಂದ್ರಿಕೆಯ ಜಾಲಾಂದ್ರದೊಳ್ ತನು

ಛಾಯೆ ಸೋರ್ದುದು ಭಾವಾವೇಶದಲಿ. ಗುರುವರಂ
ಒರ್ಮೆ ಪ್ರವಚನಧಾರೆಯಂ ಹರಿಸುತಿರೆ
ಎದುರ್ವೆತ್ತರ್ನೊರ್ವ ನಾಸ್ತಿಕವಾದಿಯುಂ ಹುಮ್ಮು
ಬಿಮ್ಮುಗಳ ತೇಜಿಯೇರಿ. ಅಮಿತ ಮತಿಮಾನ್ಯಂ
ಉತ್ಸುಕ ಮನಸಿಗನುಂ ಆಗಿರ್ದ ಇಂಗರ್ ಸಾ
ಲ್ ಪ್ರಶ್ನೋಪಪ್ರಶ್ನೆಗಳ ಜಾಲವಂನೆಸೆಯುತ್ತ
ಬಾಯ್ ಕಾಳೆಗ ಹೂಡಿದಂ. ತುಂಬಿದ ಸಭೆಯು ಕಳೆ
ಕಟ್ಟಿದುದು ರಂಗುರಂಗಿನಲಿ ಮೂಡಿ ಮೊಳಗಿದ
ಪ್ರಶ್ನೋಪಪ್ರಶ್ನೆಗಳ ಮೋಜಿನಿಂ. ಬಳಿಕಲಾ
ಅಂಗರ್‌ಸಾಲ್ ಮಹನೀಯಂ ಉಭಯ ಕುಶಲೋಪರಿ
ಬೆಳೆಸಿ ಪರಿಚಯಮಂ ಪಡೆದು ಬೆಸಸಿದನೆಂತೆನೆ,
"ಗುರುವರ್ಯ ನೀವಿಲ್ಲಿಯ ನೆಲಕ್ಕೆ ಈ ಮೊದಲ್
ಎನೆ, ಅರ್ಧ ಶತಮಾನಕೆ ಮುನ್ನಮೈದಿರ್ದೊಡೆ
ಮೇಣ್ ಈ ಜನಮಾನ್ಯರ ಮುಂತೆ ಇದೆ ಪರಿಯಲಿ
ಧಾರ್ಮಿಕಮಯಕಂತೆಯ ಬೊಂತೆಯಂ ಎಡೆವಿಡದೆ
ಒಗೆದಿರ್ದೊಡೆ ಅದರ ಪರಿಯೆ ಬೇರೆಯೆ ಬಿಡಿ....
ಅತಿಕ್ರಮಣಮಿದೆಂದೆನುತೆ 'ಗಲ್ಲು' ಶಿಕ್ಷೆಯುಂ
ಒದವುತಿರ್ದುದು; ಅಲ್ಲದೊಡೆ ಕಲ್ಲು ಒಗೆದೊಗೆದು
ಜಜ್ಜಿ ಚಿಚ್ಚಿ ಮುಗಿಸುತಲಿರ್ದರ್ ತಿಳಿಯಿತೇಂ?"
ಹಾ, ಎಂತಹ ದಾರಣ ಬಾರ್ತೆಯಿದು? ಅಮೆರಿಕೆಯ
ಜನ ಸ್ತೋಮಮಿಂತುಟು ಅನಾಗರಿಕರಿರ್ದರೇಂ?
ಎಂಬೊಂದು ಪ್ರಶ್ನೆಯುಂ ಅಚ್ಚರಿಯ ಧಾಟಿಯಲಿ
ಭೋಂಕನೆಳ್ದುದು ಮನದಲಿ. ಒಡನೊಡನೆ ಮೊಳಗಿತು
ಸಮಾಧಾನಾನಂದ ಪೂತಮಾದಾತ್ಮವಾಣಿ,

“ಪುಣ್ಯೇನ ಕಾಯಃ ಸುಖಿತಃ
ಪಾಂಡಿತ್ಯೇನ ಮನಃ ಸುಖಂ ।
ತಿಷ್ಠನ್ ಪರಾರ್ಥಂ ಸಂಸಾರೇ
ಕೃಪಾಲುಃ ಕೇನ ಖಿದ್ಯತೇ ॥

ಮತ್ತೊರ್ಮೆ ಇಂಗರ್‌ಸಾಲ್ ನುಡಿಸಿದನೆಂತೆನೆ
“ಸ್ವಾಮೀಜಿ, ಈ ಜಗತ್ ಕಟ್ಟಕಡೆಯದೆಂದಾಂ
ಕೇಳರಿದೆನ್. ಮೇಣಿದೇ ಸರ್ವಶ್ರೇಷ್ಠಮೆನೆ
ಅಲ್ಲಗಳೆಯಲಾಸಲ್ಲಂ. ಅಂದಬಳಿಕ ಈ
ಜೀವನದ ಸುಖಭೋಗ ಭಾಗ್ಯಗಳ್ ಭೋಗಿಸದೆ
ಉಳಿದೊಡಾವ್ ಸಕಲ ಸುಖ ಭೋಗದ ಭಾಗ್ಯದಿಂ
ವಂಚಿತಗೊಳಲದರಿಂ ಎಮಗಲ್ತೆ ವ್ಯಕ್ತಿಗತ
ಮಹಾ ನಷ್ಟಂ?”
ಸುಪ್ರಸನ್ನ ವದನಾಂಬೋಜ
ಬೆಳಗಿದುದು ಬೆಳ್ನಗೆಯ ಬೆಳುದಿಂಗಳ್ ಶೋಭೆಯಲಿ.
ಸ್ವಾಮೀಜಿ ಬಿತ್ತರಿಸಿದರ್, “ಮಿತ್ರಾ! ಹಣ್ಣುಗಳ್
ಹಿಂಡಿ ಬಸಿವೊಂದು ನವ್ಯ ವಿಧಾನವರಿದಿರಲ್
ಎಲ್ಲಿಯ ಕಳಕಳಿ? ರಸ ಸ್ವಾದನೆಯೊಳಾನ್ ಬಲ್
ಚತುರ ವ್ಯಕ್ತಿಯಿರೆ ಪೇಳ್ವುದೇಂ?”
“ಕೇಳ್ಳೆ ಗುರವೇ!
ಒಂದಲ್ಲ ನೂರಾರು ಬಗೆಯ ರುಚಿ ಕಟ್ಟನಿಂ
ಕೂಡಿದ ಜಗತ್ ವಿಶ್ವ ಪಾರಾವಾರದೋಳ್
ಬರೀ ಹಣ್ಣುಗಳ ರುಚಿಯಿಂದೆ ತೃಪ್ತಿ ಪಡೆವೊಡೆ
ಏಂಬಹುದು? ವಿವಿಧ ರುಚಿಗೆ ನೀಂ ಕುರುಡಾದಪೆ
ಎನಲನ್ಯಮಲ್ತು. ಯೋಚಿಸಿನೋಡು! ಈ ವಿಶಾಲ

ವಿಶ್ವ ಹಣ್ಣಿನ ರಸಕೆ ಮಾತ್ರಮೇ ಮೊಸಲೇಂ?
ಸರ್ವದಾ ಕೈಬಾಯ್‌ಗೆಟುಕುವ ಸಕಲ ಭೋಗ
ಭಾಗ್ಯಗಳಿರೆ ನೀನಿಂತಿರ್ಪೊಡೆ ನಿನಗದರಿಂ
ಹಿರಿನಷ್ಟಮಲ್ತೆ?''
"ಇರ್ಕೆ, ಈ ವಿಚಾರದೊಳಾನ್
ನಿಸ್ಪೃಹನಿರೆ ಸುಖದುಃಖಗಳಿಲ್ಲ. ಬದುಕು ಬಲ್
ನಿರಾಳ, ನಿಶ್ಚಿಂತೆ, ಎಂಬೊಲಾನ್ ಸಂನ್ಯಾಸಿ
ಜೀವನದೊಳ್ ಸಂಪೂರ್ಣ ಸುಖಿ ಎನಲ್ ಪರಮ
ಹರ್ಷಿತಂ.''
ಇಂಗರ್‌ಸಾಲ್ ನೆಟ್ಟ ನಿಟ್ಟಾಲಿಗಳಂ
ವಿಚಲಿಸದೆ ಭಾವಗಾಂಭೀರ್ಯದಿಂ ನೋಡಿದಂ.
ಗಳಿಗೆಯೊಂದು ಕಳೆದು ಉಸಿರ್ಗಟ್ಟಿದ ತೆರದಲಿ
"ಇದುಂ ಬಲ್ ವಿಚಿತ್ರಂ'' ಎಂದನಾ ಮನೀಷಿಯು.
ಸ್ವಾಂತನದ ಝರಿ ಸಾವಧಾನದಿಂ ಜಳಜಳಿಸಿ
ಹರಿವ ಪಾಂಗಿನಲಿ ಕೇಳಿಸಿದರ್ "ಕೇಳ್ಯೆ ಬಂಧು!
ಆವೊಂದು ಕಾಮಭೋಗದ ಅಭಿರುಚಿಯಿಲ್ಲವೆನಗೆ.
ಸಂಸಾರ ಭಾರವೆನಗಿಲ್ಲ. ವಿನಾಶದ ಭಯವೆನಗಿಲ್ಲ.
ಪ್ರೀತಿಸಲ್ ಬಲ್ಲೆನಾಂ. ಎಲ್ಲರುಂ ನಿಜದೈವ
ಸ್ವರೂಪರೆನಗೆ. ಮನುಜರಲಿ ನಾರಾಯಣನಂ
ಕಾಂಬುದದು ಮನಕೆ ಮಹದಾನಂದಕರ ಕಣಾ!
ಸರ್ವತೋಮುಖ ಪ್ರಗತಿಗೆ ನವೋನವ ಸೇತುವೆ
ಇದೆನೆ ಸಲ್ವುದು, ನೀಂಮತಿಯ ದಿವ್ಯ ಖಡ್ಗಮಂ
ಮಸೆದು ಮಸೆದು ಯೋಚಿಸಿದೊಡೆ ನಿನ್ನ ಅರಿವಿಂಗೆ
ಬಂದಪುದು ಪರಿಭಾವಿಸಿ ತಿಳಿಯ್ಯೆ ಭ್ರಾತೃವೇ!''
ಕೊರೆದುಕೋರ್ರೈಸುವೋಲ್ ಮಾಗಿಶ್ವರಂ ಗಮಿಸೆ

ಸಸ್ಯಕೋಟಿಯು ಗರಬಡಿದುದೆನೆ ಎಲೆಎಲೆಗಳ್
ಉದುರುದುರಿ ಗಿಡುಮರಗಳ್ ಬರಲಾಗಿರೆ ಗಾಳಿ
ಮರಗಳಲಿ ಕಾಯ್ ಬಲಿತು ಒಡೊಡೆದು ಸಿಡಿದಿರೆ
ದೂರಕ್ಕೆ ಚಿಮ್ಮಿತ್ತು, ಚೆದರಿತ್ತು, ಹರಡಿತ್ತು.
ರಂಗೋಲಿಗೆ ಚುಕ್ಕಿಯನಿಟ್ಟಂತೆ ಸೊಗಸಿತ್ತು.
ಬೋಳು ಮರಗಳ ಕಡ್ಡಿಯಂ ಮುರಿಮುರಿದು ಹಕ್ಕಿ
ಪಕ್ಕಿಗಳ್ ಗೂಡು ಕಟ್ಟುವೊಡೆ ಕೊಂಡೊಯ್ಯುವುದು
ಆಕರ್ಷಕ ಚಿತ್ರಣಂ. ಬೂರುಗದ ಹತ್ತಿಯಂ
ಹೆಕ್ಕಿಹೆಕ್ಕಿ ತಂದು ಎಲೆಕಡ್ಡಿಯ ಮನೆಗೆ ಬಲ್
ಚೆಂದದಿಂದೊತ್ತಿ ಮುದ್ದಿನ ಮನೆಯಂ ಕಟ್ಟುತ್ತ
ಸಡಗರಿಸಿ ಹಾರಾಡುವ ವಿಧವಿಧ ಹಕ್ಕಿಗಳ
ಕಾರ್ಯಭಾರಂ ಕಣ್ಗೆಸೆವುದು ಸೊಗಯಿಸುವವೊಲ್.
ಕೆಮ್ಮನೆ ಕಡು ಕೆಮ್ಪಿನ ಹಣ್ಣು ಹಣ್ಣಾದ ಸುಡು
ವಿಸಿಲಿನ ಪೊಗರೇರಿ ನಿಜಕಾಯ್ಪುಂ ಮುಟ್ಟಿರಲ್
ರಂಗುರಂಗಿನಿಂದೆಸೆದುವು ಕೆಮ್ಮಾರಲ ಪಣ್ಗಳ್.
    ಸ್ವಾಮಿಜಿಯುಂ ಕೆಲವೊರ್ಮೆ ಖಾನಾವಳಿಗೆತ್ತೊಡೆ
ಬಣ್ಣವುಂ ಕರ್ಪೆಂದು (ನಿಗ್ರೊ) ಭಾವಿಸುತೆ ಪರಿ
ಭ್ರಮಿಸಿ ಒಳಪುಗಲವಕಾಶಕೊಡದೆ ಹೊರಗಡೆ
ದಬ್ಬಿರ್ದ ಪ್ರಸಂಗವೊದವಿತೊರ್ಮೆ. ದಿನದಿನಂ
ವರ್ತಮಾನ ಪತ್ರಿಕೆಗಳಲಿ ಮೇಣವರಿವರ
ಬಾಯಿಮಾತಿನೊಳ್ ಸ್ವಾಮೀಜಿಯ ಕೀರ್ತಿಯನರಿದು
ತಾವೆಸಗಿದ ಹೀನತರ ಕಾರ್ಯಕೆ ಮರುಗಿರ್ದ
ಖಾನಾವಳಿಯೊಡೆಯನ್ ಮನನೊಂದು ನೀರಾಗಿ
ಭಾವಚಿತ್ರಗಳ ಹೋಲಿಸಿನೋಡಿ, ದಿಗ್ಭ್ರಮೆಯ
ರಾಜ್ಯದಲಿ ಮುಳುಗಿ ತೇಲಿದನ್. ಮತ್ತೆ ಗುರುವಿನ

ಬಳಿಗೆ ಧಾವಿಸಿ ನಯವಿನಯದಲಿ ನುಡಿಸಿ ಕ್ಷಮೆ
ಯಾಚನೆಗೈದು 'ಖಾನಾವಳಿಗೆ ಬನ್ನಿ' ಮೆಂದೆನುತೆ
ಮಧುರ ಆಹ್ವಾನವಂ ಇತ್ತನಾ ಖಾನಾವಳಿ
ಒಡೆಯ. ದೀನಭಾವದಿಂದ್ಯೆದವಗೆ ಗುರುವರನ
ಶಾಂತ ಸಮೃದ್ಧ ಮಧುರ ಭಾವದ ರಸಾಬ್ಧಿಯ
ಮೋಹನ ಜಲಧಿಯಲಿ ಮುಳುಗಾಡಿ ತೇಲಿದನ್.
ಮನಮತಿ ಬಲಿಯದ ಲೌಕಿಕರ ಮುಗ್ಧಭಾವಕೆ
ಸ್ವಾಮೀಜಿ ಮಂದಸ್ಮಿತವರಳಿಸಿ ಮಿಣ್ಣನಿರೆ,
ನೀಗ್ರೊ ಕುಲಜನೊರ್ವಂ ಬಳಿಗೈದು. "ಸ್ವಾಮೀಜಿ,
ನೀನೆಮ್ಮ ಕುಲಜನೆಂದರಿದಾನ್ ತೋಷದಿಂ
ನಿನ್ನ ನೋಡಲ್ಯೆದೆನ್. ನಾನಿನಗೆ ಹಸ್ತವಂ
ಕುಲುಕಲಿಚ್ಛಿಪೆನ್ಯೆ ಗುರುವೆ!"
"ಆಯ್ತು, ಸೋದರನೆ"
ಕರ್ಮೊಗದೊಳ್ ಬೆಳ್ನಗೆಯ ಚೆಲುವಂ ಆನಂದ
ಮೋದದಿಂ ಹರಿಸಿ ಎದುರ್ ನಿಂದಿಹ ಕರ್ಬುನದ
ಕಟ್ಬಾಳ್ ಮೊಗಮಂ ಕರುಣೆಯಿಂದ ನೋಡುತ್ತೆ
ಕೈನೀಡಿದರ್ ಗುರುವರಂ. ಅಹ ಅದುಭುತಮಾ
ಗೊಮ್ಮಟ ಶರೀರದಾ ಗೊಮ್ಮಟ ಕರಂಗಳುಂ
ಮುಂಚಾಚಿ ಕುಲುಕಿದ ಸಡಗರಂ – "ಎಲೆ ಮಿತ್ರನೆ!
ನೀನೆಮ್ಮ ಕುಲಜನೆಂದರಿದು ಸಂತಸವಾಯ್ತೆನಗೆ.
ಸದ್ಧರ್ಮ ನಿಷ್ಠೆಯಿಂದೆ ವಿದ್ಯೆಬುದ್ಧಿಯ ನೇಮದಿಂ ಕೀರ್ತಿ
ಲಾಭಪಡೆದುದು ತೋಷ ಕಣಾ! ನೀನ್ ಹಸ್ತಗಳ
ಲಾಘವಂ ಈಯುತೆ ಪುರಸ್ಕರಿಸಿದುದೆಮ, ಭಾಗ್ಯಂ!"
"ಎನಗುಮನಿತೆ ತೋಷ ಕಣಾ!"
ಸ್ವಾಮೀಜಿಯ ಮಿಸುನಿ

ಹಸ್ತಮಂ ಅದುಮಿ ಒಡಿದು ಮತ್ತೆಂದನಾ ನಿಜ
ಉದ್ದಂಡ ವ್ಯಕ್ತಿ "ನಿನಗೆ ಶುಭಮಕ್ಕೆ!"
"ಮಿತ್ರನೆ,
"ನಿನಗು ಒಳ್ಳಿತಕ್ಕೆ!" ಒಲುಮೆಯಿಂದೆ ಬೀಳ್ಕೊಟ್ಟು
ಸ್ವಾಮೀಜಿ ತಮ್ಮೊಳ್ ನಸುನಗುತೆ ವಿರಮಿಸುತಿಹ
ಅವನ ಅಪರದೇಶಂ ನೋಡಿದರ್ ಕಣ್ಣಿಟ್ಟು.
ಸುಸಂಧ್ಯಾಕಾಲೀನ ಸುಂದರ ಸೊಬಗುಸಿರಿಯು
ಹಬ್ಬಿಹರಡಿದ ಸಮಯದೊಳ್ ಕೂಡಿದುದು ಧರ್ಮ
ಸಭೆ, ಬೃಹದ್ ಭವನದ ಆವರಣದೊಳ್. ಜನರ
ಗೋಷ್ಠಿಯು ಇನಿತು ತಾವಿರದಂತೆ ಜಡಿ ತುಂಬಿತು
ಕಿಕ್ಕಿರಿದು. ಅಂದಿನಾಸಭೆ ಆ ಸುಹೃದಯದ
ಧೀಮಂತ ಜನರಸಂದೋಹ ಭಾವನಾತ್ಮಕ
ಭಂಗಿಯಲಿ ಮನಮಲೆತವೊಲ್ ಮೆರೆದುದು ಸದ್ದಿನ
ಸೊಲ್ಲು ಇನಿತಿರದ ಪರಿಯಲಿ. ಜನಜಲಧಿಯ ಕಣ್
ದೃಷ್ಟಿಯಷ್ಟಿ ಹರಿದುದು ವೇದಿಕೆಯಮೇಲೆ ಮನ
ಮತಿಗಳ ಸಹಿತ. ಗುರುವರಂ ಪ್ರವಚನಂಗಳ
ಧಾರೆ ಹರಿಸುತಿರೆ ಮಾತಿನ ಮಧ್ಯೆ ಕೈಯೆತ್ತಿ
ಗಂಭೀರ ಧ್ವನಿಯೊಳ್ ಇಂತೆಂದರ್ "ಮಿತ್ರರೆ,
ಯೌಗಿಕತಮ ಶಕ್ತಿ ಪಡೆದು ಸಿದ್ಧನೆನಿಸಿರ್ದ
ವ್ಯಕ್ತಿಯುಂ ಮಹತ್ ಶಕ್ತಿಯಂ ಪಡೆವನೆನಲದು
ಅನ್ಯಮಲ್ತು. ಸಾಧನೆಯು ಕೈಗೂಡುವುದು ಆ
ಸಾಧಕಂ ಬಯಸಿದಾಗ. ಇದು ಶತಸಿದ್ಧ ಕಣಾ!"
ದೃಢಕಂಠದಿಂ ಮೊಳಗಿದ ಸಂಕಲ್ಪವಾಣಿಯು
ಭವನದೆತ್ತರದ ಮಾಡಿಗೆ ಬಡಿದು ಪಡೆದುದು ಮರು
ಧ್ವನಿಯಂ. ಇದೇಂ ಸಗ್ಗಿಗರ ನುಡಿಯೊ, ವೇದಾಂತದ

ವಾಣಿಯೊ, ಪರಬ್ರಹ್ಮನ ಸವಾಲೊ ಸರಸತಿಯಾ
ಬೀಣೆಯ ಮೊಳಗೊ ಎನಲ್ ಅಚ್ಚರಿಯ ಸಿರಿಯಾಯ್ತು
ಸಭೆಯ ಹೃದಯ ಕರಂಡ. ಒಡನೊಡನೆ ಎಲ್ಲರ
ಜ್ಞಾನಮಂಡಲ ಕಲಕಿದೊಲ್ ಆಲೋಡಿತಮಾಯ್ತು.
ಪರಸ್ಪರ ಮುಖಮುಖವನವಲೋಕಿಸುತಿರುತಿರೆ
ಗಂಭೀರಪರವಶತೆಯಿಂ. ಕುತೂಹಲದುಂಬಿ
ಕುದಿದ ಒಡಲಿನವನೊರ್ವಂ ಎಳ್ದು "ಜೋರಿನಿಂ
ಕೇಳಿಸಿದನ್ "ಸ್ವಾಮಿಜಿ, ಅಂತಿಪ್ಪೊಡೆ ಎನ್ನ
ಪೂರ್ವಾಪರ ಸ್ಥಿತಿಗತಿಯೇನೆಂಬುದಂ ನೀಂ
ಈಗಳೇ ತಿಳಿಪಿನೋಡುವಾ!"
                                        ಆ ಸಿರಿವಂತ
ವ್ಯಕ್ತಿಯ ಸವಾಲ್ ಮೊಳಗಿತು ಧೀರವಾಣಿಯಲಿ.
ಸ್ವಾಮಿಜಿ ಮೈಸೆಟೆದವೊಲ್ ನೇರ ನಿಮಿರಿದರ್.
ಮರುನುಡಿಯಲೊಲ್ಲದಾಯ್ತು ಬಾಯಿ. ಮುಖಮುದ್ರೆಯು
ಬಿಗಿದು ಗಂಭೀರಮಾಯಿತ್ತು, ಆ ವ್ಯಕ್ತಿಯಂ
ನೋಡಿದರ್ ನೇರ ದೃಷ್ಟಿಯೆಸೆದು. ದೃಷ್ಟಿಯಷ್ಟಿಯ
ಕಿರಣಂಗಳ್ ಇಳಿದುವು ವ್ಯಕ್ತಿಯ ಮನೋದೇಶ
ಮಂಡಲಕೆ. ಗಳಿಗೆಯೊಂದುರುಳಿದುದು ಸದ್ದುಗಳ
ಸೊಲ್ಲಿಲ್ಲದೆ. ಆ ವ್ಯಕ್ತಿಯುಂ ಮನ ಮುದುಡಿ ಮೈ
ಮುದುಡಿ ಗದಗದ ನಡುಗುವವೊಲ್ ತೋರ್ದು ಚೀರ್ದಂ,
    "ಸ್ವಾಮಿಜಿ, ಇದೇಂಗೈದಿರಿ? ಎನ್ನಯ ಪ್ರಾಣಕಣ
ನೆಗ್ಗಿ ಮುಗ್ಗಿ ಕಡೆದು ಕೆಡಗಿದ ಮಾಳ್ಕೆಯೊಳಾಯ್ತು!
ತಾಳಲಾರೆನ್ನೈ. ಎನ್ನೆರ್ದೆಯಂ ಕಡೆದಂತೆ
ಘೋರಮಿ ರಣಗೋಳು! ಎನ್ನೆಲ್ಲ ಗುಟ್ಟುಗಳ್
ಬಯಲಪ್ಪ ಮಾಳ್ಕೆಯಲಿ ಉದ್ಭಾಸಿತಗೊಳುತಿದೆ!"

ಸ್ವಾಮೀಜಿಯುಂ ತಟ್ಟನೆ ಯೋಗ ದೃಷ್ಟಿಯನೆಳೆಯೆ
ಶ್ರೀಮಂತ ಮಹೋದಯ ಬೆದರಿರೆ ಬೆಮರಿ ಬೆಮರಿ
ಸ್ವೇದ ಬಿಂದೂತ್ಕರಂ ಮೂಡಿ ಕರದ್ವಯಗಳಿಂ
ಮೊಗಂ ಮುಚ್ಚಿ ಹಿಡಿದಂ. ನಸುವೊಳ್ತಿನಲಿ ತನ್ನ
ತಾಂ ಸಾವರಿಸಿದ ಬಳಿಕ ನುಡಿದಂ "ನಾನಿನ್ನು
ನಿಮಗೇಂ ಅಪಚಾರವನೆಸೆಗೆನ್ಯೆ. ಇನ್ನೆಬರ
ಮಿಂತಾನ್ ರಣಗೋಳಿಗೆ ಸಿಲ್ಕಿದವನಲ್ಲಂ."
"ಕೇಳ್ಕೈ, ಉನ್ನೆಬರನಾಂ ಯೋಗಶಕ್ತಿಯಬಳಕೆ
ಗೈದೆನಿಲ್ಲಂ. ಇಂದಿನ ನಿನ್ನಯ ಸವಾಲಿಗಾಂ
ಮಣಿವವೊಲ್ ನಡೆದುದೀ ಪ್ರಯೋಗದ ಕಾಂಡಂ.
ಸಮಯ ಸ್ಫೂರ್ತಿಯಂ ಸ್ಫೂರ್ತಿಸುವ ಕಜ್ಜಮಿದುಂ."
ಅಹ ಇಂತಿಂತೋರೊಂದು ಗಂಭೀರ ಸುಸುಂದರ
ಪೊಳ್ತು ಉರುಳುರುಳಿ ಸರಿದು ಸಂದು ಕಳೆಯುತಿತ್ತು
ಯಾವತ್ಕಾಲಂ ನಿರ್ಗುಣ ಬ್ರಹ್ಮನ ಹೋಲಿ! ಆ
ದೇಶ, ಆ ಅತಿಥೇಯ ಬಂಧುಗಳ್, ವೇದಾಂತ
ಜ್ಞಾನದ ಪಿಪಾಸಿ ಮಿತ್ರರ್ ಮತ್ತಮಾ ಶಿಷ್ಯ
ಗಣಂ ದಿನದಿನಂ ಮಂದೈಸಿ ಬರುತಿರ್ದರ್ ನಿಚ್ಚ
ಮನಃಚಿತ್ತಗಳ ಅನಾನ್ಯ ವೈಕಲ್ಪದಲಿ ಗುರು
ವರ್ಯನ ಪ್ರವಚನಗಳನಾಲೈಸೆ. ಸಭೆಯ ಬಳಿಕ
ಕದಡಿದ ಬಗೆಗೆ ಶಾಂತಿ ಸಂಪದವ ತುಂಬಿದೊಲ್
ಸಮಾಧಾನದಿಂ ಪಿಂಮರಳಿ ಪೋದಪರ್ ನಗು
ಮುಖದೊಳ್ ಸುಖಶಾಂತಿಯ ಛವಿಯಂ ಪಸರಿಸುತ್ತೆ.
ಓವೊ! ಅನ್ನೆಗಮಿತ್ತಲಿತ್ತಲ್ ಜನುಮಧಾತೆ
ಭಾರತ ಜನನಿಯುಂ ಪರಮ ಪುತ್ರನ ಪ್ರಥಮ
ಜೈತ್ರಯಾತ್ರೆ ನಡೆದಿರೆ ಸರ್ವತ್ರ ಸಾಧನಾ

ಪೂರ್ವಕಾವೇಶದಲಿ ಹೃದಯ ಧರಿತ್ರಿಯೊಳ್
ತೋಷದ ರಸವೂಡಿ ಪಾಶ್ಚಾತ್ಯರ ಕಡೆ ದಿಟ್ಟೆ
ಹರಿಸಿದಳ್ ತೇಜೋನ್ವಿತೆಯಾಗಿ. ಮನಮತಿಗಳ್
ನಲಿದುವು ಸಮಾಧಾನದಾಭೋಗದಲಿ. ಭಾವ
ಸಮುದ್ರದ ಅಲೆಅಲೆಗಳ್ ತುಯ್ಯುತಿರೆ ತುಳುಂಕಿ,
ದಿನದಿನಂ ಮಂಗಳಮಯ, ಧೀರೋದಾತ್ತಮಯ,
ತುಷ್ಟಿದಾತಮಯ ಎನಲ್ಕೆ ಘನವಾಯ್ತು.
ಎಂದಿರದ ಹರ್ಷಮಂ ಸಂಹರ್ಷಗೊಳಿಪಂತೆ!
    ತರುವಾಯಿಯೊಳ್ ಮುಂದೆ ಸ್ವಾಮೀಜಿಯುಂ ಒರ್ಮೆ
ಡೆಟ್ರಾಯಿಟ್‌ನೊಳ್ ಗೈದ ಉಪನ್ಯಾಸವೊಂದರಲಿ
    "ಎನ್ನ ಆತ್ಮೀಯ ಅಮೃತ ಪುತ್ರರೇ ಕೇಳಿ!
ನಿಮಗಾಂ ವಿಷಯವೊಂದಂ ವಿಶದೀಕರಿಸುವೆನ್!
ಆದೊಡಿದನುಂ ನಿಷ್ಠುರದ ಟೀಕೆ ಎಂದೆಂದು
ಪರಿಭಾವಿಸದಿರೆಂಬುದು ಎನ್ನಯ ನಯವಿನಯ
ಪೂರ್ಣ ಮನವಿ. ನೀವ್ ಮಿಷನರಿಗಳ ಕೂಟಮಂ
ಭಾರತಕೆ ಕಳಿಪುವುದರರ್ಥವೇಂ? ಭಾರತದ
ಜನಮಾನ್ಯರಿಗೆ ಧರ್ಮದಕೊರಮೇಂ? ಈ ಹಿಂದು
ಹಿಂದು ಮಿಷನರಿಗಳಲ್ಲಿ ಮಿಣ್ಣನೆ ಇರ್ಪರೇಂ?
ದೇಗುಲಗಳಿಗೈದು ಭಗವದ್ಭಕ್ತರಂ ತಿರಸ್ಕರಿಸಿ ಬರಿ
ಬೊಗಳೆ ಮಾತೊಳ್ ಬೈದು ಹೀಯಾಳಿಪರ್" ಕಲ್ಲಿನ-
ಮಣ್ಣಿನ ಅಸಹ್ಯ ಮೂರ್ತಿಗಳ ಪೂಜಕರೆ! ಈ
ವಗೆಯ ವ್ಯರ್ಥಪೂಜೆಯು ನಿಮ್ಮನುಂ ನರಕಕ್ಕೆ
ದಬ್ಬುವುದು ದಿಟ!" ಎಂಬರ್ ಅತೀವ ತಿರಸ್ಕಾರದಲಿ.
    "ಕೇಳಿ, ಸಜ್ಜನರೆ ನಮ್ಮ ಹಿಂದೂಗಳ್ ಅದುಭುತ
ಶಾಂತಿಯಲಿ "ಮೂರ್ಖಮತಿಯ ಲಜ್ಜಾಹೀನರುಂ

ಕೂಗಿಕೊಳಲಿ! ನಮಗದರಿಂ ನಷ್ಟವೇನಿಲ್ಲ.”
ಹಿಂದೂಗಳ ಸತ್ಯಚಿತ್ರದ ದೋರಣೆ ಅಂತಿರೆ
ಈ ಮಿಷನರಿಗಳಿಗೆ ಇನ್ನಿನ್ನು ಪುರುಡು ಪುರುಪು
ಪೆರ್ಚುವುದು. ಮತ್ತೆ ಮತ್ತೆ ಬೈವರ್ ಬಾಯ್ಕಿಸಿದು.
ಇದು ನಿಮ್ಮ ಮಿಷನರಿಗಳ ದಿನಚರಿಯು ಭಾರತ
ಸಾಮ್ರಾಜ್ಯದಲಿ. ಇದೆಮಗೆ ಅವಶ್ಯಕಮೆ ನೀಮೆ
ತಿಳಿದು ನೋಳ್ಪುದು. ಮಿತ್ರರೇ! ಚಿಂತನ ಮಂಥನ
ಹೂಡಿ ಪರಿಭಾವಿಸಿ ಇಲ್ಲಿ ತಿಳಿಯಿರ್ಪೈ. ಅಲ್ಲದೆಯೆ,
ಆನಿಂತು ಉಸುರಿ ನಿಮ್ಮ ಟೀಕಿಸಿದೆನಾದೊಡೆ
ಅದರ ಪರಿಣಾಮವೇ ಬೇರೆಯಾಗಿರುತಿರ್ದುದು
ಎಂಬೆನಾಂ. ಇರ್ಕೆ ಸರ್ವಧರ್ಮ ಸಮನ್ವಯತೆ
ಏನೆಂಬುದನರಿಯದೆ ತಿಳಿಯದೆ ಅಣುಗತನದಿಂ
ಗೈವ ಆಟಂಗಳಿವು ಎಂಬೊಂದು ಮಹೋನ್ನತ
ಸಮಾಧಾನಮಂ ಹೊಂದಿ ಸಾಧುವಾದವನೆತ್ತಿ
ಹಿಡಿಯುವ ಉದಾರತೆಯೆ ಸಂಜೀವನ ಮಾರ್ಗಕೆ
ಸರ್ವೋತ್ತಮ!”
ಬಾರಿ ಕರತಾಡನಗಳ ಬಳಿಕ
ಮತ್ತೆಂದರ್ “ನಾವ್ ಘನತೆವೆತ್ತ ನಾಜೂಕು
ಜನಾಂಗ ಎಂಬ ಪೆರ್ಮೆಯೊಳಗಿನ ಕಹಿರಸವ
ತೊಳೆತೊಳೆದು ಶುದ್ಧೀಕರಣಗೊಳಿಸದೆ ಘನತೆಗೆ
ಮೆರುಗಿಲ್ಲ. ಮೇಲುಕೀಳುಗಳ ವರ್ಗೀಕರಣ
ಬೆಲೆಯಿಲ್ಲದುದು. ಯೋಚಿಸಿ ತಿಳಿಯಿರಿ. ಕೇಳಿಲ್ಲಿ!

ಆಜೇಷ್ಠಾಸ ಅಕನಿಷ್ಠಾಸ ಏತೇ ಸಂ
ಭ್ರಾತರೋ ವಾ ವೃಧುಃ ಸೌಭಾಗಾಯ ।

ಯುವಾ ಪಿತಾ ಸ್ವಪಾ ರುದ್ರ ಏಷಾಂ
ಸುದುಘಾ ಪೃಶ್ನಿಃ ಸುದಿನಾ ಮರುದ್ಭ್ಯಹಂ ॥

ಎನ್ನುತ್ತದೆ ಸನಾತನ ಧರ್ಮದ ವೇದಾಂಗ,
ಎಂತಪ್ಪ ವೇದ ಪುರಾಣ ಪ್ರಣೀತ ಒಳ್ನುಡಿ?
ಅಂದ ಬಳಿಕಲಾವೆಲ್ಲವಂ ಜಗಜನನಿಯ
"**ಪಾದಾರ್ಪಣಮಸ್ತು**" ಎನುವ ಉದಾರತನಕ್ಕೆ
ಶಿರಮಣಿವುದೇ ಸರ್ವಥಾ ಸಾಧುವಲ್ತೇ?
ನಿಮ್ಮ ಕ್ರೈಸ್ತೀಕೃತ ಧರ್ಮವದೆ ಜಗತಿನೊಳ್
ಪ್ರಬಲ ಎಂದೆಂಬ ದೃಢನಂಬುಗೆ ನಿಮಗೆ. ಅದಂ
ದಿಟಮೆಂದೆ ಭಾವಿಸೋಣ. ಆದೊಡೆ ನೀವೆನಿತು
ಮಂದಿಯಂ ಪರಿವರ್ತಿಸಲ್ ಸಮರ್ಥರ್ ಪೇಳಿ!
ಲೋಕ ವ್ಯವಹಾರದ ನಿಟ್ಟಿನೊಳ್ ಮನವಿಟ್ಟು
ಪರಿಭಾವಿಸಿ ತುಲನೆಗೈದೊಡೆ ಕಾಂಬುದೆಮಗಿದೆ
ಲೋಕಾಂತರಿತ ಪರಮ ಸತ್ಯಾಂಶದ ಸುಂದರ
ಬೆಳ್ಪಂ ಬೆಳಕು, ಜಗದ್ ತಾತ್ವಿಕ ಪರಮಸ್ಫೂರ್ತಿ!
"ಈ ಜಗತ್ತಿನಲಿ ಜನಸಂಖ್ಯೆಯಂ ಪರಿಗಣಿಸೆ
ಪ್ರತಿ ಆರನೆಯ ವ್ಯಕ್ತಿಯೆನೆ ಚೀನಿ, ಮಗದೊರ್ವ
ಬೌದ್ಧ, ಸರಿಯಲ್ತೆ? ಅಲ್ಲದೆ ಜಪಾನ್ ಟಿಬೆಟ್ ರಷ್ಯಾ
ಸೈಬೀರಿಯಾ ಬರ್ಮಾ ಸಯಾಮ್ ಇವೆಲ್ಲಂ
ಬೇರೆಬೇರೆಯೇ ಇರ್ಪುದು. ಇರ್ಕೆ, ಈ ಎನ್ನ
ನುಡಿಗಳ್ ರುಚಿಸದಿರೆ ಬಿಡಿ. ಆದೊಡೆ, ನೀವೆಲ್ಲ
ಕ್ರೈಸ್ತರೆಂದೇ ಪೇಳಿಕೊಂಬ ನೈತಿಕತೆಯುಂ
ಕ್ಯಾಥೋಲಿಕ ಚರ್ಚ್, ಅದಲ್ಲದೆ ಎನಿತೆನಿತೋ
ಕಡೆಗಳಿಂ ನೆರೆ ಒದವಿ ಬಂದುದು ಸುಧರ್ಮಗಳ
ಆಸರೆಯೊಳೇಂ? ಖಡ್ಗದ ನೆರಮಿರದೆ ನಿಮ್ಮಯ

ಕ್ರೈಸ್ತಧರ್ಮವದೆಲ್ಲಿ ಯಶಮಮಂ ಪಡೆಯಿತು ಪೇಳಿ?
ಈ ಜಗದೊಳ್ ಒಂದೇ ಒಂದು ತಾಣವನಾವ್
ಗುರುತಿಸಲಿಹುದೇ? ತೋರಿರಿ ನೋಡುವಾ? ನಿಮ್ಮ
ಪೂರ್ವಜರನೆಂತು ಮತಾಂತರ ಗೊಳಿಸಿದರೆಂಬುದು
ಎನಗರಿವಿದೆ. ಅವರಿಗಿರುತಿರ್ದುದೆನೆ ಎರಡೇ
ಎರಡು ಮಾರ್ಗಗಳ್, ಮತಾಂತರ ಅಥ ಮರಣ. ಇದೇ
ದೋರಣೆಯ ಅಂತರಾರ್ಥ "ತಾಮೆ ಜಗದೇಕೈಕ ತಕ್ಕ
ಹಕ್ಕುದಾರರು" ಎಂದು! ಏಕೆಂದೊಡೆ ನೀಮೆಲ್ಲ
ಇತರರಂ ಕೊಲ್ಲಬಲ್ಲವರ್ ಎಂದು! ಅರಬ್ಬರ್
ಅಂತೆಯೇ ಮೆರೆದಪರ್ ಈಗಳೆಲ್ಲಿಹರವರ್?
ಮರುಳುಗಾಡಿನೊಳ್ ದರೋಡೆಕೋರರೈಸಿ ತಾವ್
ಬರ್ದುಕುತಿಹುದಂ ಕಾಣಿರಾ? ರೋಮನ್ನರುಂ ಅಂತೆಯೇ
ಈಗಳವರೆಲ್ಲಿ? ಈ ಸುಡು ಬೆಂಕೆಯೊಳಾವುಂ
ಶಾಂತಿಯಾಶ್ರಯದಲ್ಲಿ ಸುಸ್ಥಿರಗತಿಯಲಿಹೆವು!
ಈ ಜಗದೊಳ್ 'ಶಾಂತಿ ದೂತ' ರೇ ಧನ್ಯರ್, ಸದಾ
ಶಾಂತಿಯಿಂ ಬದುಕಿ ಶಾಂತಿಯಂ ಉಳಿಸಿ ಬಾಳಿಸಿ
ಲೋಕ ಪೂಜ್ಯತೆ ಗಳಿಸಬಲ್ಲರ್. ಅದರಿಂದಲಿ
ಜೀವ ಜಗತ್ ಕ್ಷೇಮ. ಅದಲ್ಲದೆಯೆ ಆವುದಕೆ
ಸ್ವಾರ್ಥವೇ ಆಧಾರಮಾಗಿದೆಯೊ, ಆವುದಕೆ
ಭೋಗಮೇ ಪರಮಗುರಿಯಾಗಿದೆಯೊ, ಆವುದಕೆ
ಸ್ಪರ್ಧೆಯೇ ಮೂಲಮಂತ್ರಮಾಗಿದೆಯೊ ಅದೆಲ್ಲ
ಇಂದಲ್ಲ ನಾಳೆ ಕುಸಿಯಲ್ವೇಳ್ಕುಂ. ಶಾಂತಿಯಿಂ
ಬದುಕಬೇಕೆಂಬೊಡೆ ನೀವ್ ಕ್ರಿಸ್ತನೆಡೆಗೆ ಜವದಿ
ಪಿಂದಿರುಗಿ, ಕ್ರಿಸ್ತನಂ ಅನುಸರಿಸಿ. ಅವನ ಶಾಂತಿ
ರಕ್ಷೆ ಶ್ರೀರಕ್ಷೆ, ನಿಮ್ಮೊಗ್ರಣೀ ಧರ್ಮಪ್ರಚಾರ–

ಭೋಗದ ಪೆಸರಿನೊಳ್ ನಡೆವ ಪ್ರಚಾರ! ಎಂತಹ
ವಿಧಿಯ ಅಣಕಂ? ನೀವ್ ಸುಶಾಂತಿಯಲಿ ಬದುಕುವೊಡೆ
ನಿಮ್ಮ ಧೋರಣೆಯಂ ಬಲವಂದು ಬದುಲಿಸಿರ್ಕೆ.
ಭೋಗದ ಪೆಸರಿನೊಳ್ ಧರ್ಮ ಪ್ರಚಾರಗೈವುದಂ
ತೊರೆದು ತ್ಯಾಗದ ಪೆಸರಿನೊಳ್ ಗೈವುದೆ ಸರಿಯಯ್.
ಆನಿಲ್ಲಿ. ಈ ದೇಶದೊಳ್ ಕಾಣುತಿರ್ಪುದು ಬರಿ
ಆಷಾಢಭೂತಿತ್ವ. ಇದುಂ ಸರಿಯಲ್ತು ಈ
ದೇಶ ಉಳಿದು ಬಾಳ್ವೊಡೆ ಇದು ಕ್ರಿಸ್ತನಡಿಯೆಡೆಗೆ
ಮಣಿಯವೇಳ್ಕುಂ, ಎನಲ್ ಆರಾರ್ ಪರಮಾತ್ಮ
ಭಗವಂತನಂ ಮೇಣ್ ಭೋಗಭಾಗ್ಯಮಂ ಏಕೆ
ಕಾಲದೊಳ್ ಅನುಭವಿಸಿ ಆರಾಧಿಸಲಾರರ್.
ಈ ಭೋಗಭಾಗ್ಯಗಳ್ ಕ್ರಿಸ್ತನ ಅನುಗ್ರಹಂ
ಎಂದೆಂದು ತಿಳಿದಿರ್ಪಿರೊ? ಕ್ರಿಸ್ತನಿರುತಿರ್ದೊಡೆ
ಇಂತೊಂದು ಪಾಷಾಂಡವಾದಮಂ ತಿರಸ್ಕರಿಸಿ
ಧೂಳೀಕರಿಸದಿರುತಿರ್ದನೆ? ಭೋಗಾರಾಧನೆ
ಮೂಲಕ ಪಡೆವ ಗೆಲುಮೆ ಗೆಯ್ಮೆಯಲ್ಲವು. ಅದುಂ
ಕ್ಷಣಿಕಂ....'

ಸಭಿಕರ ಮನದುಂಬಿ ಹರಿದ ಹರ್ಷ
ತೋಷದ ಹೊನಲ್ ಮರ್ಮರಿಸಿ ಕರಂಗಳ ರುದ್ರ
ತಾಡನದ ಘನನಿನಾದಂ ಮೊಳಗಿತು ಬೃಹದ್
ಭವನದೋಡು ಬಿರಿಯುವ ತೆರದಿ. ಕೆಲ ಶ್ರೋತೃಗಳ್
ಬಳಿಗೈದು ತೋಷದಿಂ ಅಭಿನಂದಿಸಿ ಕರಗಳ್
ಬಿಗಿವಿಡಿದು ಕುಲುಕಿದರ್ ಮತ್ತೆಮತ್ತೆ. ಮತ್ತಂ
ಇನ್ನೆನಿತೊ ಮಂದಿ ಒಡಲ್ ಕಿಚ್ಚಿನುರಿ ತಾಳದೆ
ಸಿಟ್ಟಿನ ಕಿಡಿ ಕಾರ್ದರ್, ರೋಷದ ಗಣಿಗಳಾಗಿ.

ಸ್ವಾಮೀಜಿಯುಂ ಮುನಿದರಂ ಸ್ವಾಂತನಗೊಳಿಸುತೆ
ಮತ್ತೆಂದರ್ "ಓ ಬಾಂಧವರೇ ಕೇಳಿಲ್ಲಿ!
ಕಿವಿಗೊಟ್ಟು ಕೇಳಿ!" ಶ್ರೀ ಮುಖದಿಂ ಹರಿದ ದಿವ್ಯ
ವಾಣಿ ಮೂಲೆ ಮೂಲೆಗಳಂ ಮುಟ್ಟಿ ಧೀಂಕಿಟ್ಟು
ರಾಷ್ಟ್ರದ ಹೃದಯಮಂ ಸಮೂಲವಾಗಿ ಅಲುಗಿಸಿ
ಮನ ಮಂಥನಂ ನಡೆಸಿತು ಧೀಮತಿ ಮಿಡುಕುವೊಲ್.
ನಿರ್ಭೀತ ನಿರಾತಂಕಿತ ವಾಣಿ ಹರಿಯಿತ್ತು
ನಿರ್ದಾಕ್ಷಿಣ್ಯ ಧಾರೆಯಲಿ, "ಪೇಳಿರೈ, ಎಲ್ಲಿಹುದು
ನಿಮ್ಮ ಕ್ರೈಸ್ತಧರ್ಮ ನಿಮ್ಮ ಸ್ವಾರ್ಥಪರವಾದ
ಹೋರಾಟದಲಿ? ನಿಮ್ಮ ವಿಧ್ವಂಸಕ ವೃತ್ತಿಯ
ಪ್ರವೃತ್ತಿಯಲಿ? ಇಲ್ಲೆಲ್ಲಿಹುದು ಏಸುಕ್ರಿಸ್ತಗೆ
ಸ್ಥಾನ? ಒಂದುವೇಳೆ ಅವಸಿಲ್ಲಿಗೈತಂದನೆನೆ
ಶಾಂತಿಯಿಂ ಕಳೆಯಲೊಂದು ಊರು ಸಿಗದೊಲ್
ಅಭಾವವಲ್ತೇ?"
ಇಂತಹ ಚಬುಕಿನೇಟು ಬಿಳ್ದಿರೆ
ಖಡ್ಗವಂ ಬೀಸಿದೋಲ್ ಕ್ರೈಸ್ತ ಸಮಾಜದಲಿ
ಮೂಡಿದ ಗಲಿಬಿಲಿಯುಂ ಉಬ್ಬೆರ್ದ ಸಾಗರದ
ಪರಿಯೊಳಾಯ್ತು, ಡೆಟ್ರಾಯ್ಟ್ ನಗರಿಯಲಿ. ಆಗಳ್
ವೃತ್ತಪತ್ರಿಕೆಗಳಲಿ ನಿಯತಕಾಲಿಕೆಗಳಲಿ
ಚರ್ಚುಗಳಲಿ ಸಭೆಗಳಲಿ ಎಡೆಎಡೆಗಳಲಿ ಗುರು
ವಿವೇಕಾನಂದರದೆ ವಿಷಯವಿಶ್ವ ಮರೆದುದು
ರಂಗುರಂಗಿನ ಬಿಸಿಬಿಸಿ ಸುದ್ದಿಯಾಗಿ. ಜೊತೆಗೆ
ವಿರೋಧಿಗಳ ಕಠಿಣ ಕಠೋರತರದ ಶಾಪ–
ಪಿಡಿಶಾಪ – ದುರ್ಭಾಷಾವಳಿಯ ಕೀಳು ಶಾಪದ
ಬೈಗಳ್ ಇರುತಿರ್ದು ಸುಖದುಃಖಗಳೊಡಗೂಡಿ

ಸಮಾವೇಶ ನಡೆಸಿದುವು ಎಲ್ಲರ ಮನಮನದಿ.
ಓರಿ ಪಾದ್ರಿಗಳ ಒಡಲ್ಗಿಚ್ಚು ಉರಿದುರಿದು ಮಿಗೆ
ರೋಷ ಕೋಪತಾಪಗಳ ಗಣಿಯಾಗಿ, ಒದರುತೆ
ತಮ್ಮೊಲ್ಲಿ ಕರ್ಮಕಾಂಡಮಂ ಬೆಂಬಲಿಪ ವಿವಿಧ
ಪತ್ರಿಕೆಗಳ ನಿಡುವಾಯ್ಗೆ ಕಾಂಚನವಂ ತುರುಕಿ
ಕರಿಯಕ್ಕರಗಳ ಕುವಿಚಾರ ಸಾಹಿತ್ಯಮಂ
ಕೊರೆಕೊರೆದು ಲೇಖಿಸಿದರುಲ್ಲೇಖನಂ. ಬಹುಲ
ತೆರದಲಿ. ಗುರುದೇವನ ಪ್ರವಚನ ಮತ್ತಮಾ
ಉಪನ್ಯಾಸಗಳ ರೀತಿನೀತಿಯಂ ತಿರುತಿರುಪಿ
ಕಿವುಂಚಿ ವಿಕೃತಗೈದು ಬಣ್ಣಗೆಡಿಸಿ ತಮ್ಮಯ
ಕಿಡಿಗೇಡಿ ಸಾಧನೆಯ ಕಡಿಖಡ್ಗ ಬೀಸಿದರ್
ಅಸಹ್ಯಕರ ಶೈಲಿಯಲಿ. ಅಂತುಮಲ್ಲದೆ ಓೀನ
ಮತಿಯ ಕೈಚಳಕಿಗರ್ ನವತರುಣಿಯರಂ ಗುರು
ದೇವನ ಬಳಿಗೆ ಕಳಿಪಿ ಪ್ರಲೋಭನೆಯ ಬಲೆಗೆ
ಸಿಲುಕಿಸಿ ತುಳಿಯೆ ಹೊಂಚಿ ಸಂಚು ಹೂಡಿದರ್ ಕಡು
ಧೂರ್ತತನದಿಂ! ದಮನ ಕಾರೀ ಅನೈತಿಕತೆಯ
ಸಂಬಂಧ ಬೆಳೆಸಿ ಕೀರ್ತಿಶಿಖರದ ನೆತ್ತಿಯಿಂ
ಒಮ್ಮೆಲೇ ಝಾಡಿಸಿ ಕೆಳಗೊಗೆದು ಪಾಳ್ಗೈವ
ಮಾಯದಾಟ ಹೂಡಿದರ್! ಅಹ ಶಿಶು ಸಹಜತರ
ಪವಿತ್ರವಾಂಛಲ್ಯ ಭಗವಂತನಡೆಗಿರುತಿರೆ
ಪ್ರೋದ್ದೀಪ್ತ ಚಿಂತನಾವೇಶದ ಸ್ವರ್ಗೀಯ
ಅನುಭೂತಿಯೇ ಬೇರೆ. ಐಹಿಕ ಸುಖದ ಆಶಾ
ಪ್ರವೃತ್ತಿಯೇ ಬೇರೆ. "**ಯದ್ಭಾವಂ ತದ್ಭವತಿ**" ಗುರು
ದೇವನ ವದನಾರವಿಂದಂ ಷೋಡಶ ಕಳೆಯಿಂ
ಬೆಳಗಿ ತೊಳಗುತಿರೆ ಆ ರಮಣಿಯರ್ ನೆರೆ ನಾಣ್ಚಿ

ಶಿರವಂ ಮಣಿದು ಜಾರಿದರಲ್ಲಿಂದೆ! ಅಲ್ಲಿಗೆ
ಮಿಣ್ಣನಾದರೇಂ ಆ ಮಿಷನರಿಗಳ್? ಇನ್ನೊರ್
ಕುತಂತ್ರವ ಹೂಡಿದರ್. ಗುರುದೇವನ ಶಿಷ್ಯರ್
ಮೇಣ್ ಅತಿಥೇಯರಾಗಿರ್ದ ಸದ್ಗೃಹಸ್ಥರ
ಮನಮುರಿಯೆ ಮತ್ತೆ ಹರಡಿದರ್ ತಂತ್ರೋಪಾಯಂ
ಪೊಸ ಬಗೆಯಲಿ. ವಿವಿಧ ಅನಾಮಧೇಯ ಪತ್ರಂ
ಸೃಷ್ಟಿಗೊಂಡುವು ಕುವಿಚಾರಂ ಪೊತ್ತು. ನಿಮ್ಮಗುರು
ಸ್ತ್ರೀಲೋಲ–ಗೋಮುಖೀ ವ್ಯಾಘ್ರ ಎಂಬುದನರಿಯದೆ
ನೆರೆನಂಬಿ ಮೋಸಹೋಗದಿರಿ ಎಂಬೊಂದು ಕಟು
ಕಠಿಣ ಎಚ್ಚರಿಕೆಯೊಡನೆ. ಆ ಗುರುವರನಂ ಬಲ್
ಆತ್ಮೀಯ ಪರಮಾದರದಿಂ ಕಂಡಿರ್ದ ಮನ
ಮತಿಗಳ್ ಮುದುಡಿ ನೊಂದು ನೋಯುವೊಲ್.
ಆದೊಡಂ ಅನೇಕರ್ ನಂಬದಾದರೆಂದೊಡಂ
ಬಿಡರ್ ಕ್ರೈಸ್ತಮಿಷನರಿಗಳ್. ಅಳ್ಕಿರ್ದೆಯ ಕೆಲ
ಅತಿಥಿ ಮಹನೀಯರ್ ತಾವಾಗಳೇ ಗುರುವರನ
ಆಹ್ವಾನಿಸಿರುತಿರ್ದು ಕುವಿಷಯಗಳಿಂ ಬೆದರಿ
ಮನಂಗೆಟ್ಟು ಸ್ವಾಮಿಜಿಯುಂ ಆಗಮಿಪ ವೇಳೆಯೊಳ್
ಮನೆಗೆ ಕದವಿಕ್ಕಿ ಬೀಗ ಜಡಿದು ತಾವ್ ಪೊರಗಡೆ
ಪೋದಪರ್ ಕಣ್ಮರೆಸಿ. ಆದೊಡದರೊಳಗಣ ಹುರುಳ್
ಅಂಶಾಂಶತಃ ಸುಳ್ಳಿನ ಕಂತೆ ಎಂಬುದನರಿತು
ಪಶ್ಚಾತ್ತಾಪದಿಂ ಓಡೋಡಿ ಬಂದಪರ್, ದಿವ್ಯಗುರು
ಸನ್ನಿಧಿಗೆ ಕ್ಷಮೆಯಂ ಕೋರೆ, ಲಜ್ಜೆಗೆಂಪಿನ
ರಂಗೊರೆದ ವದನದೊಳ್. ಸ್ವಾಮಿಜಿ ವಿಷಯಮಂ
ಅರಿತು ಇನಿತು ಕಿನಿಸಿಗೆಗೊಳದೆ ಕರುಣಾಮೂರ್ತಿ
ತಾನಾಗಿ ಪ್ರಸನ್ನ ಮೊಗದಿಂ ಅತಿಥೇಯರ

ಬರಮಾಡಿ ಸುಸ್ವಾಗತಿಸಿ ಒಲವಿನ ನುಡಿಗಳ್
ಸೂಸಾಡಿ ಸಾವಧಾನದಿಂ ಕಳಿಪಿದರ್ ಅನು
ನಯದಲಿ. ಅಮೂಲ್ಯ ಸ್ನೇಹದಬಳ್ಳಿ ಬೆಳೆಯಿತ್ತು
ಪರಸ್ಪರ ಅನುರಾಗ ಪೂರಿತ ಓಜೆಯಲಿ.
ಅಂದಿಂದಿಗುಂ ಕುಮತಿಯ ಪಾದ್ರಿಗಳ್ ಕೆಲಬರ್
ಒಡಲ್ಗಿಚ್ಚಿನಿಂ ಭಾರತೀಯರ ವಿರುದ್ಧ ಗುರುದೇವನ
ವಿರುದ್ಧ ತದೇಕರೀತಿಯಲಿಗೈಯುತಿಹ ಅಪ-
ಪ್ರಚಾರದಾ ರಾಡಿಯಂ ತೊಳೆದಳಿಪುದು ಬಲು
ಸುಲಭದ ಕಜ್ಜಮಲ್ಲದಿರೆ ಗುರುವಿನ ಅಕಲಂಕ
ಮಾನಸಂ ಮರುಗಿದುದು ಆ ಪೂರ್ವಗ್ರಹಮಂ
ತೊಳೆಯುವೊಡೆ ಹರಸಾಸಮೇವೇಳ್ಕುಮೆಂದೆಂದು.
ಬಳಿಕಲಾ ಗುರುವರ್ಯನುಂ ಬ್ಯಾಗ್‌ಲೀಯವೊಲ್
ದೃಢಮನದ ಪ್ರಭಾವ ಶಾಲೀ ವ್ಯಕ್ತಿಯಂ
ನೆನೆದು ಇಂತಪ್ಪ ವ್ಯಕ್ತಿಶಕ್ತಿಯರ್ ಮಂದೈಸಿ
ಎದುರ್ವೈತ್ತೊಡೆ ಎಲ್ಲವಂ ತೊಳೆದು ಅಳಿಪುದೇಂ
ಭಂಗಮಲ್ತು, ಎಂಬುವ ಆಲೋಚನೆಯೊಳಿರಲ್
ಮತ್ತೊರ್ ವಿಷಯ ಮನದೊಳ್ ನುಸುಳ್ದುದು, ತೆಕ್ಕನೆ.
ಶ್ರೀಮತಿ ಬ್ಯಾಗ್‌ಲೀ ಆವ ಭಾರತ ಸಾಮ್ರಾಜ್ಯದ
ನೆಲೆಬೆಲೆಯರಿತು ಗಗನಕ್ಕೇರ್ವಡಿಸಿ ಪಿಡಿದೆತ್ತೆ
ಹೃದಯಾಂತರಾಳದ ಪ್ರೇಮವಾರಿಯನೆಂತು
ಬಸಿದರೋ ಅಂತು ಭಾರತೀಯರ್ ಸಂಪೂರ್ಣ
ಒತ್ತಾಸೆ ಅಥ ಧನ್ಯವಾದ ಅಥ ಶುಭಾಶಯ-
ಮುಂತಪ್ಪ ಹೃದಯಹಾರೀ ಸಂಪ್ರದಾಯಕರ
ವಿಚಾರದ ಸುಳಿವಿಲ್ಲದೆ ಅಸಂಬಂಧವೆನುವೊಲ್
ಮಿಣ್ಣನಿರ್ದುದು ಅಚ್ಚರಿಯ ಮೇಲೆ ಅಚ್ಚರಿಯೆ.

ಇಂತೊಂದು ಗಭೀರ ಪರಿಸ್ಥಿಯು ಮುಂದಿರಲ್
ಎಲ್ಲವಂ ಕಾಳಿಕೆಯ ಪದತಲಕೆ ಸಮರ್ಪಿಸಿ
ಮಿಣ್ಣನಾದಪೆನೆನೆ ಅಪಪ್ರಚಾರಕಾರೀ
ಪಾದ್ರಿಗಳ್ ಮಿಣ್ಣನಾದಪರೇಂ, ಕೊರಳ್ ದನಿಯು
ಬಲಿಯುತಿರೆ ಎಣೆಯಿಲ್ಲದವೊಲ್? ಕುದಿಯಿತ್ತು;
ಒಡಲ್ಗಿಚ್ಚು ಮನಮಿಡುಕುವೊಲ್ ಸಾಯಂ ಸಮಯ
ಶಾಂತಿರಸ ತನಿಯುಗುತಲಿರೆ ತಂಪು ಕಂಪುಗಳ
ಮಧ್ಯೆ ಮುದಿತ ಮನಮತಿಯಂ ತೊಡರ್ಚಿ ಪತ್ರದ
ಲೇಖನಕೆ ಕುಳಿತರ್ ಗುರುದೇವಂ, ಬೆಳ್ಳನೆಯ
ಅಮೃತಶಿಲಾ ಪೀಠದೊಳ್ ಮಂಡಿತ ಮುನಿಯಂ ಹೋಲಿ!

"…. ಆಯಂ ನಾಭಾ ವದತಿ ವಲ್ಗುವೋ ಗೃಹೇ
ದೇವ ಪುತ್ರಾ ಋಷಯಸ್ತಚ್ಛ್ರಣೋತನ ।
ಸುಭ್ರಮಣ್ಯಮಂಗಿರಸೋ ವೋ ಅಸ್ತು
ಪ್ರತಿ ಗೃಭ್ಣೀತ ಮಾನವಂತು ಮೇಧಸಃ ॥"

ನಿಮ್ಮೆರ್ದೆಯೊಳ್ ಪರಸ್ಪರ ಅತಿಶಯಮೆನಿಪ್ಪ
ಪ್ರೇಮಭಾವಮಿರಲಿ. ಓರಿಕಿರಿಯ ವಿಶೇಷಗಳ
ಹೀನ ದೋರಣೆ – ಟೀಕೆಗಳಿಂಗೆ ಮನಂಗೆಡದೆ
ನಿರ್ಲಿಪ್ತ ಭಾವದಿಂದಿರಿ. "**ಜಲೇ ಚಾನಲೇ**
ಪರ್ವತೇ ಶುತ್ರುಮಧ್ಯೇ" ಎಲ್ಲೆಡೆಗಳಲಿ
ಅಪಾಯಮಿಹುದು ಸತ್ಯ. ನಿಮ್ಮೆಲ್ಲ ಕಜ್ಜದಲಿ
ಅಡ್ಡಿ ಆತಂಕಗಳ್ ಬಂದಪುದು ಸದಾ, ಎಲ್ಲ
ಭಂಗಬನ್ನಂಗಳಂ ಜಾಡಿಸಿಯೆ ಗೆಯ್ಮೆಯುಂ
ಪಡೆಯಲಕ್ಕು, ನೀವ್ ಭೂದೇವಿಯಂತೊಲ್
ಅಪಾರತಮ ಸಹಿಷ್ಣುಗಳಾಗಿರಿ. ಕಾಮ ಕ್ರೋಧ
ಮದ ಮಾತ್ಸರ್ಯಂಗಳಂ ವರ್ಜಿಸಿರಿ. ಇನ್ನೊಂದೆನೆ

ಸಂನ್ಯಾಸಿಗಳಂ ಸದಾ ಅಂಟಿಕೊಂಬ ದೋಷ
ಎಂಬುದೆನೆ ಸನ್ಯಾಸತ್ವದೊಳ್ ಅಭಿಮಾನವಂ
ತಾಳ್ವುದು. ನಿಜಯೋಗಿಯುಂ ಗೃಹಸ್ಥರ ಮತ್ತಂ
ಸನ್ಯಾಸಿಗಳ ಮಧ್ಯೆ ಆವ ಭೇದಭಾವವ
ತೋರದಿರ್ಪುದೆ ನಿಜ ಸ್ಫೂರ್ತಿಯ ಸಂನ್ಯಾಸಿ ಧರ್ಮ!
"ನಮ್ಮ ರಾಷ್ಟ್ರೀಯ ಪ್ರಗತಿಗಾವ ಭರವಸೆಯ
ಲಕ್ಷಣವದಿಲ್ಲ. ಆರೊಬ್ಬರ ಮೆದುಳಿನಲಿಯು
ಪೊಚ್ಚ ಪೊಸ ಯೋಚನಾವಳಿ ಮೊಳೆಯದು, ಮೊಳೆತು
ಬೆಳೆಯದು. ರಾಮಕೃಷ್ಣ ಪರಮಹಂಸರ್ ಅಂತಹ
ವ್ಯಕ್ತಿ ಇಂತಹ ವ್ಯಕ್ತಿ ಎಂದೆಂಬುವ ಹಳೆಹಳೆಯ
ಪಲ್ಲವಿಯ ಪಾಡುತೆ ಎಳೆದೆಳೆದು ಕಿತ್ತಾಡುವೊಲ್
ಪಳಗಿದವರೆ ಎಲ್ಲ. ತಲೆ ಬುಡಮಿರದ ಅಜ್ಜಿಯ
ಕಥೆಗಳಂ ಹೇಳಿಕೇಳಿ ಮಾತಿನ ಮಳೆಗರೆದು
ಪೊಳ್ತು ಕಳೆವರೆ? ಅಯ್ಯೊ, ದೇವರೇ! ನೀವೆಲ್ಲ
ಸಾಮಾನ್ಯಜನಗಳಿಂ ಅತ್ಯಲ್ಪಮಾದೊಡಂ
ಭಿನ್ನಮೆಂಬುದಂ ಆಚರಣೆಯೊಳ್ ತೋರುತ್ತೆ
ಉನ್ನತಪಥ ಓಡಿಯಲಾರಿರಾ? ಕೇವಲ ಹುಚ್ಚು
ಗಿಚ್ಚುತನದಲಿ ತೊಡಗುವರೆ? ಪೂಜೆಗಳಿಗಾಗಿ
ಗಂಟೆ ಬಾಜಿಪುದೊ ಜಾಗಟೆ ಬಾಜಿಪುದೊ ಶಂಖ
ಊದುವುದೊ ಅಲ್ಲದೊಡೊಂದು ಮಂಚಿಕಾ ಕಟ್ಟಿ
ಕೊಂಬುದೊ ಮತ್ತಂ ಅದರ ಕಾಲ್ಗಳಿಗೆ ವೆಳ್ಳಿಯ
ತಗಡು ಹೊದಿಸಲ್ಕೆ ಹೆಣಗುವಿಕೆ. ಬಡಜನ ಗಂಜಿ
ನೀರಿನಲಿ ಬದುಕುತಿರೆ ಸಹಸ್ರ ಸಹಸ್ರತರ
ಕಾಗಕ್ಕ ಗುಬ್ಬಕ್ಕ ಕಥೆಗಳಂ ಹರಡುವಿರಿ.
ಇಂತಿಂಥ ವಿಚಾರಲಹರಿಯಲಿ ಮುಳುಗಿರುತಿಹ

ಮುಗ್ಧಮಿಸರ್ ದರಿದ್ರರೆಂದು ಕರೆಸಿಕೊಳ್ಳಲ್
ಯೋಗ್ಯರ್, ಎನೆ ಅನ್ಯಮಲ್ತು. ಈವಗೆಯ ಬುದ್ಧಿ-
ಹೀನ ಕೃತಿಯಿಂದಲಲ್ತೇ ಭಾಗ್ಯದೇವತೆಯು
ಅಶ್ಪೃಶ್ಯರೆಂದೆಮ್ಮ ಭಾವಿಸುತೆ ದೂರಕ್ಕೆ
ತಳ್ಳಿದ್ದು? ಇಂಗ್ಲಿಷಿನೊಳಿದಂ ನಿರ್ವೀರ್ಯತೆ
(Imbicitity) ಎಂಬರ್ಯೆ. ಹಾ ಈ ಜಡತ್ವವಂ
ನಿವಾರಿಪುದೆಂತೊ ಅರಿಯೆನ್ಯೆ. ಪಾಶ್ಚಾತ್ಯರ್ ಜಗತ್ತಿನ
ಪ್ರಭುತ್ವವಂ ಪಡೆಯುತಲಿರೆ ನಾವೆಲ್ಲರಿಂ
ಛೀಮಾರಿ ಹಾಕಿಸಿಕೊಳುವಗತಿಯೆನಲ್ ಲಜ್ಜೆ
ಗೇಡಲ್ತೇ? "**ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್
ನಿಬೋಧತ**" ಭಗವಂತ ಮಹಿಮಾಮಯಂ. ಅವನೆ
ಬೆಂಗಾಯುವಂ, ಆನಿದಕಿಂತಲ್ ಇನ್ನೇನ್
ಪೇಳ್ವೆಂ? ನೀವ್ ನೆಚ್ಚಿನಿಂ ಕೆಚ್ಚಿನಿಂ ಮುಂದೆ
ಮುಂದೆ ಸಾಗಿ. ಆರಾರ್ ಶ್ರದ್ಧೆಯಿಂದೆನ್ನೀ ಪತ್ರಂ
ಓದಿ ತಿಳಿವರೊ ಅವರೆಲ್ಲರ್ ಎನ್ನ ಆತ್ಮವಾಣಿ
ಕೇಳಿ ತಿಳಿವರ್. ನಿಮ್ಮೊಳ್ನೀವ್ ವಿಶ್ವಾಸವಿಡಿ.
ನುಗ್ಗಿ, ಮುನ್ನುಗ್ಗಿ!
ಪೊಳ್ತು ನಡುರಾತ್ರಿಯಂ ದಾಂಟಿ
ಮುನ್ನಡೆಯಿತು. ಶೀತಲಾನಿಲ ಶೀತವಂ ಶೈತ್ಯೀ-
ಕರಿಸುತ್ತೆ ಮೈನಡುಗಿಸುತಿರ್ಪಂ. ಇನ್ನೆಗಂ
ಕೈಹಿಡಿದು ಬರೆಸಿದನೆನ್ನ ಶ್ರೀಗುರು. ಮುಂದೆನಗೆ
ನಸುವಿಶ್ರಾಂತಿವೇಳ್ಕುಂ. ಮರೆಯದೆನ್ನ ಸಲಹೆಯಂ
ಮಾನಿಸಿರಿ....."

ಹರಿಃ ಓಂ ತತ್ ಸತ್

❋ ❋

ಪಂಚವಿಂಶೋಲ್ಲಾಸಂ

ಸಂಭಾವನಾಸ್ಫುರಣ

"ಅತಸ್ಕರಕರಗ್ರಾಹ್ಯಮರಾಜಕವಶಂವದಂ ।
ಅದಾಯಾದವಿಭಾಗಾರ್ಹಂ ಧನಮಾರ್ಜಯ ಸುಸ್ಥಿರಂ ॥"

ದಲದಲಮಲರ್ದುದಯ್ ಮೂಡುವೆಟ್ಟಿನೆಡೆಯಲಿ
ಬಾನಂಚಿನೊಳ್ ಪ್ರತೀಕ್ಷಿತ ದಿನಕುಸುಮ ಜಾಜಿ
ಸ್ವರ್ಣಮಯವಾಗಿ. ಕೆಮ್ಮನೆ ಕೆಂಪು ರಕ್ತಾಕ್ತ
ಝರಿ ಹರಿದವೊಲ್ ಕೆಮ್ಮುಗಿಲ್ ಹರಿದುದು ರಾತ್ರಿಯ
ಕಾಳಿಕೆಯ ಕೊಲೆಯಾದುದೊ ಎನಲ್. ವಿವಿಧ ರೂಪು
ರೇಷೆಗಳ್ ಮೈವೆತ್ತು ಮೆರೆದಿರ್ದುವು ಸಾಲ್ಸೈಸಿ.
ಚಂದದ ಗುಡಿಗೋಪುರಗಳ್ ಒಡಮೂಡಿದುವು ಮನ
ರೋಚಕಗೊಳಿಪ ವೈಭವದಲಿ. ದಳದಳಮೆಂದು
ತರಂಗಿತಮಾದ ಬನದೈಸಿರಿಮೆಸೆಯಿತು ತನಿ
ಗಾಳಿಯಾಟದಲಿ ತೂಗಾಡಿ ಮರ್ಮರಿಸುತ
ಮುದವಿತ್ತುದು ನಿಶ್ಶಬ್ದ ಶಾಂತಿಯವತರಣಕೆ.
ಕೋಟಿಕೋಟಿಕೋಟಿಗಳಿನಿದನಿಯ ರಾಗಾನು
ರಾಗಗಳ ಸುಸ್ವನ ಹರಿದುದು ಹಕ್ಕಿಗೊರಲೊಳ್
ಆನಂದದಿಂದೆ, ಸಂಭಾವನಾಸ್ಫುರಣಿಗೆ
ಶುಭಕೋರ್ವವೊಲ್ ಮಧುರ ತನನ ತಾನವುಕ್ಕಿ.
ಪ್ರಾಚೀ ದಿಗಂಗನೆಯ ಕಂಗಳೆವೆಯೊಳ್ಪೆಳಗೊ,
ಮುಗಿಲ್ ಗಿರಿಯನೇರಿಬಹ ಕನಕ ತಪನ ಭವ್ಯ
ತೇರೆಳೆವ ಹಯಂಗಳ ಖುರಪುಟದಿ ಭುಗಿಲೆಳ್ದ
ಹೊಂಧೂಳಿಯೊ, ಕತ್ತಲೆಯ ಕೋಳ್ಕೆಸರನಟ್ಟುತೆ
ನೆಟ್ಟನಾರಾಚದಿಂ ಕಾರ್ದ ಕೆನ್ನೆತ್ತರದು

ಶಕ್ತಿಯಂ ಉದ್ದೀಪನಗೊಳಿಸಲ್ ಶ್ರೀಮಾತೆ
ಅವತರಿಸಿಹರ್, ತವ ಭುವಿಯಂ ಮುಟ್ಟಿ ತಟ್ಟುತೆ
ಎಳ್ಚರಗೊಳಿಪ ಮಹಾ ಕಾರ್ಯಕಾಗಿ! ಅವರಂ
ಕೇಂದ್ರವಾಗಿರಿಸಿಕೊಳ್ಳುತೆ ಇನ್ನೊರ್ಮೆ ಗಾರ್ಗಿ
ಮೈತ್ರೇಯಿಯರ್ ಉದಿಸಿ ಬರಲಿ! ಆದಿಶಕ್ತಿಯ
ಪೂಜೆಯಂ ವಿದೇಶಗಳಲಿ ಕಾಂಬುವ ಪರಿಯೇ
ಬೇರೆ. ಅಜ್ಞಾನದಗತಿಯಿಂ ಸಕಲೇಂದ್ರಿಯ
ಭೋಗದೊಳ್ ಆರಾಧಿಪರ್! ಇದೆಲ್ಲವುಂ ಈ
ಜಗತ್ ನಿಯಮಕ್ಕೆ ತದ್ವಿರುದ್ಧಂ. ನರಜನಮ
ಸಾರ್ಥಕಗೊಳುವೊಡೆ ಆದಿಶಕ್ತಿಯಂ ಜನನಿಯರ
ಸ್ಥಾನದೊಳಿರಿಸಿ ಪೂಜಿಪುದೆ ಬಾಳ್ಮೆಯಂ ಬೆಳಗೆ
ನಿಜ ಸ್ಫೂರ್ತಿ! ಸೋದರನೆ, ಕೇಳಿಲ್ಲಿ! ನಿಮಗೆಲ್ಲ
ಜೀವಂತ ದುರ್ಗೆಯಂ ಆರಾಧಿಸಿ ತೋರ್ವೆನೆನ್.
ಶ್ರೀಮಾತೆಯ ವಿಷಯದೊಳಾಂ ಮತಾಂಧನೆವಲಂ.
ಶ್ರೀ ರಾಮಕೃಷ್ಣರಂ ಗುರುವೆನ್ನಿ, ಮನುಜನೆನ್ನಿ.
ಏನಾದೊಡೆನ್ನಿ. ಶ್ರೀ ಶಾರದಾದೇವಿಯವರ್ ಮಾತ್ರಂ
ಸಾಕ್ಷಾತ್ ಜಗನ್ಮಾತೆಯೆಂದೊಪ್ಪಿ, ಆರುಂ ಸಂಪೂರ್ಣ
ಭಕ್ತಿಯಿಂ ಗೌರವಿಸರೋ ಅವರಿಗೆನ್ನಯ ಧಿಕ್ಕಾರ ಕಣಾ!
ಆನಿಲ್ಲಿ ಜಯ ಡಿಂಡಿಮವಂ ಬಡಿದು ಭಾರಿಸಿ
ವಿಜಯ ಪತಾಕೆಯಂ ಗಗನಕೇರ್ವಡಿಸಿಯುಂ
ಬಂಗಾಳದ ಮಿಸುನಿ ಭುವಿ ಸಂಜಾತರುಂ ಕಣ್
ಕಾಣದಿರ್ಪ ಕುರುಡರ ಮಾಳ್ಕೆಯಲಿ ಕಣ್ಮುಚ್ಚಿ
ಬಾಯ್ಮುಚ್ಚಿ ಕುಳಿತಿರ್ಪುದೊರ್ ಸೋಜಿಗಮೆಂದೆನೆ
ಅನ್ಯಮಲ್ತು. ಆರಿಂದಲುಂ ಶುಭ ಹಾರೈಕೆಯ
ಪತ್ರವೈದುದಿಲ್ಲಂ. ಭಾರತದ ಜಾಗೃತಿಯ

ಮನ ಇಂ ಜಡನಿದ್ದೆಯೊಳಿಪ್ಪುದು ಅಪೂರ್ವತರ
ವಿಶೇಷವೆ! ಇರ್ಕೆ, ಎಂದಿಗಿವರ್ ಜಡನಿದ್ದೆಯ
ದಟ್ಟ ತೆರೆಯಂ ಹರಿದು ಎಚ್ಚೆತ್ತು ಕೊಂಬುವರ್
ಎಂಬುದಂ ಕಾದು ನೋಡುವಾ. ಈಗಳಾನುಂ
ಭಾರತ ಜನನಿಯನೊರ್ಮೆ ಪ್ರಾರ್ಥಿಸಿ ಮನತಣಿವೆ.

"ಹಿಮಾಲಯೋತ್ತಮಾಂಗೆ ತ್ವಂ
ಕುಮಾರೀ ಪಾದ ಭೂಷಿತೇ ।
ವಿಂದ್ಯ ಪರ್ವತ ಮಧ್ಯೇ ಚ
ಪ್ರಸನ್ನಾಭವ ಭಾರತೀಂ ॥"

ಪ್ರಾಂಗಣದೊಳ್ ಬೃಹದ್ ಭೂಜೇಶ ವೈಭವಂ
ಮೆರೆದತ್ತು ಪಚ್ಚ ಪಸುರ್ ವರ್ಣಂ ಮೈಗೊಂಡು.
ನಗರಿಯದು ಅಂಗಾಂಗಗಳ್ ಕೊಡವಿ ಎಚ್ಚತ್ತು
ಶಬ್ದಾಯಮಾನಮಾದುದು! ಬಂಡೆ ಬೆಟ್ಟಗಳ್
ಅದುರೆ, ಮರದಕೋಡುಗಳುದರೆ, ಸಿಡಿಲ ಪೊರೆಯುಂ
ಸಿಡಿದೊಡೆಯೆ ಎಂತಂತು ಹಿರಿಶಬುದ ಕೊಡಂಕೆಯ
ನಿರಿದುದು ಮರಿಯಬ್ಬರದೊಲ್! ಮರಮರಂಗಳಲಿ
ಗಾಳಿತೂರ್ದು ಸುಯ್ಯುವ ಸುಯ್ ಸದ್ದು; ಒಣಕಡ್ಡಿ
ಅಲುಗಲುಗಿ ಮರಗೋಡಿನಿಂದುದುರಿ ನೆಲತಲಕೆ
ಬಳಬಳನೆ ಕೆಡೆವ ಸದ್ದು, ಸಸ್ಯಂಗಳುಚ್ಛ್ವಾಸಿಸುವ ಕಿರು
ಸದ್ದು; ಬೆಳೆಬೆಳೆವ ಪುಲ್ ನಿಃಸದ್ದು ಕೂಡಿರಲ್
ಪಿರಿದಾಯ್ತು ಪ್ರಾತಃಕಾಲೀನ ಸತ್ ಶಾಂತಿಯಂ
ಕಲಂಕುವ ತೆರದಿ. ಬೃಹದ್ ನಗರಿಯ ದಿನಚರಿ
ಎಂತಂತು ಗುರುವಿನ ದಿನಚರಿಯುಂ ಅಂತೆಯೇ
ಆರಂಭಮಾದತ್ತು ಎಂದಿನಂತೆ. ವಿಧವಿಧ
ಎಡೆಗಳಿಂ ಶ್ರೋತೃಗಳೈದರ್ ಸಂದರ್ಶನಂ

ಉರುಳಿತು. ನಡುರಾತ್ರಿಯ ಉಜ್ವಲಿಪ ನಕ್ಷತ್ರ
ಕೋಟಿಗಳ್ ಮಿನುಗುತಿವೆ ದಿವ್ಯಾಂಬರದ ನೀಲ
ಪಟಲಗಳಮೇಲೆ. ಚಂದ್ರಮನಿಲ್ಲದ ಕರ್‍ರನೆ
ಕಣ್ತಿವಿವ ಕದ್ದಿಂಗಳ ರಾತ್ರಿ; ಸಮಯಮುರುಳಿ
ಹೊರಳಿ ಸರಿದು ಮುಟ್ಟಿತು ನಡುರಾತ್ರಿಯ ಘಟಿಯಂ
ನಿರಾತಂಕಿತ ನಿರ್ಗುಣ ಬ್ರಹ್ಮವ ತಾಂ ಹೋಲಿ!
ಆ ದೇಶ, ಆ ಅತಿಥೇಯ ಬಂಧುಗಳ್, ವೇದಾಂತ
ಜ್ಞಾನಕಾಗಿ ಹಾತೊರೆವ ಮಿತ್ರರ್ ಮತ್ತಮಾ
ಅಚ್ಚು ಮೆಚ್ಚಿನ ಶಿಷ್ಯಗಣಂ ಏವೊಳ್ತು ಎಡೆ
ಬಿಡದವೊಲ್ ಸುತ್ತುವರಿದಿರೆ ಗುರುವರನಿಂಗಿನಿತು
ಬಿಡುವುದೊರೆಯದಾಯಿತು, ಲೇಖನಗಳ ಕೃಷಿಗೆ.
ಆದೊಡಂ ತಮ್ಮೆಡೆಗೆ ಮನಃಚಿತ್ತಗಳ್ ನಲುಗಿ
ಅನಾನ್ಯತಮ ವೈಕಲ್ಪದಲಿ ನೊಂದು ನೀರಾಗಿ
ನೋವಿನ ಕಹಿರಸಮುಂಡು ಜೋಲು ಮೊಗದಿಂದಲಿ
ಬರ್ಪ ಬಹುಮಂದಿಯಂ ಮಾನಿಸಿ ಚಿತ್‌ತಪಸ್
ಶಕ್ತಿಯಿಂ ದಿವ್ಯದರ್ಶನವ ತೋರ್ದು ಬಾಳ್ಮೆಯ
ನಿತ್ಯತ್ವಮಂ ಮೇಣ್ ಪ್ರಜ್ಞಾಪ್ರಪೂರ್ಣತಾ
ಲೀಲಾ ವಿಭೂತಿಯಂ ಸುರಿದು ಮನದುಂಬಿಪರ್
ಗುರುವರ್ಯ ವಿವೇಕಾನಂದರುಂ. ಅಂತಪ್ಪ
ಪರಿವಾರದ ಮಧ್ಯೆ ಸಿರಿ ಚಂದನ ಕಾಂತಶಿಲೆ
ಮೂಡಿಸಿದ ಬೈರವನ ಮೂರ್ತಿಯೋ, ಉಜ್ವಲಿಪ
ದೀಪಾಂಜನದ ರಮ್ಯಾರುಣ ಜ್ಯೋತಿರ್ಕುಡಿಯೋ,
ಕಾಷಾಯ ವಸನ ವೇಷ್ಟಿತ ವಿನೂತನ ಭರತನೋ,
ಪೌರುಷೇಯ ಭೀಷ್ಮನ ಅವತಾರವೋ, ದಿವ್ಯ
ಆಧ್ಯಾತ್ಮ ಕ್ಷೇತ್ರದೊಳ್ ಮಿಂಚುವ ವಶಿಷ್ಠನೋ,

ಸ್ಫೂರ್ತಿಯಂ ಸಂಸ್ಫೂರ್ತಿಪ ಪಾಂಡಿತ್ಯ ಪ್ರಭುವೋ,
ಸರಸ್ವತಿಯ ವಾಗ್ವೈಖರಿಯಂ ಪಡೆದ ಸೀಮಾ
ಪುರುಷನೋ ಎನಲ್ ರಾರಾಜಿಸಿದಂ ಗುರುವರಂ.

“ಯಾದೃಶೀ ಭಾವನಾಯತ್ರ ಸಿದ್ಧಿರ್ ಭವತಿ ತಾದೃಶೀ”

ಮುಂಜಾವದೊಳೆದ್ದು ಗುರುದೇವಂ ಭಾರತದ
ಆತ್ಮೀಯ ಶಿಷ್ಯರಂ ಕುರಿತು ಉಲ್ಲೇಖಿಸಿದ
ರೆಂತೆನೆ “ಎಲೈ, ಭ್ರಾತೃಜನರೇ, ಆನೀಗಳುಂ
ಪತ್ರ ಲೇಖನಂ ಕೈಕೊಂಬುವೊಡೆ ಶಾಂತಿಯುತ
ಪೊಳ್ತು ಪಡೆವುದೆ ದುಸ್ತರಂ. ನೀವ್ ಎಂದಿಗುಂ
ಪ್ರಾಮಾಣಿಕತೆಯಂ ಮರೆಯದಿರಿಮ್. ದೇವರೊಳ್
ಶ್ರದ್ಧೆಯಿಡುವುದೆ ಕಾರ್ಯಸಿದ್ಧಿಗೆ ಸುಪಥಂ. ನೀಂ
ಯೋಜನೆಯ ಹೂಡುತೆ ಕುಳಿತೊಡೆ ಸಮಯ ವ್ಯರ್ಥಂ.
ದೀನ ದಲಿತೋದ್ಧಾರಕೆ ಭಗವಂತನ ನೆರವು
ಬಂದೇ ಬಂದಪುದು ನೆರೆ ನಂಬಿರಿ. ಭಗವಂತನ
ನಂಬಿ ದ್ವಾದಶ ಸಂವತ್ಸರಂಗಳ್ ಭಾರತದ
ಮಡಿಲಿನಲಿ ಸುತ್ತಾಡಿ ದೀನಜನರ ಸಮಸ್ತ
ಸುಖದುಃಖಗಳಂ ಅರಿದಿಹೆನ್. ಶ್ರೀಮಂತರ್
‘ದೊಡ್ಡವರ್’ ಎನಿಸಿಕೊಂಡವರ ಮನೆ ಬಾಗಿಲಿಂಗೆ
ಎಡತಾಕಿರ್ಪೆನೆನ್. ಕೆನ್ನೆತ್ತರ್ ಕುದಿವ ಹೃತ್
ಕುಂಡವೊತ್ತು ಈ ಅಪರಿಚಿತ ನಾಡಿಗೈದಿಹೆ
ಸಹಾಯವನರಸಿ. ದೇವರು ದೊಡ್ಡವನಿರುತಿರೆ
ಎನಗೆಲ್ಲ ಬಗೆಯ ನೆರವಂ ನೀಡಿ ಪಾಲಿಪಂ.
ಮಿನ್ನೆಯೊರ್ಮೆ ಪಸಿವು ತೃಷೆ ಚಳಿಗಳಿಂದಲಿ ಸತ್ತು
ಮಣ್ಣಿನೊಳ್ ಮಣ್ಣಾಗಲಿರ್ದೆನ್. ಮುಂದೆಯುಂ
ಅದೆ ದುರ್ಗತಿಯೊದವಿದೊಡೆ ಅಚ್ಚರಿಯೇನಿಲ್ಲ.

ಸ್ಥೈರ್ಯಮಂ ಪಡೆಯಿರೈ. ಏಳು ಬೀಳುಗಳ ಗತಿ
ಏನೆಂಬುದೆಮಗೆ ತಿಳಿದಿರ್ಪುದು. ಅದರೊಳೆಮಗೆ
ಪೂರ್ಣ ವಿಶ್ವಾಸವಿರಲಿ. ಹೃದಯ ಶೂನ್ಯ ಆತ್ಮಶ್ರೀ
ವಿದೂರರಪ್ಪ ಶ್ರೀಮಂತರಿಗೆ ಕಾಸಿನ ಕಿಮ್ಮತ್ತು
ಕೊಡದಿರಿ. 'ವಚಸ್ಯೇಕಂ ಮನಸ್ಯೇಕಂ
ಕರ್ಮಣ್ಯೇಕಂ ಮಹಾತ್ಮನಃ' ಎಂಬುದಂ ನೀವ್
ಮರೆಯದಿರಿ. ಭ್ರಾತೃಗಳೇ, ಕಿವಿಗೊಟ್ಟು ಕೇಳಿಲ್ಲಿ!
ಯುಗಧರ್ಮವಾಣಿ ಕೂಗಿ ಕರೆಯುತಿದೆ, ಸಂತತ
ವೀರಧೀರವಾಗಿ, ರುದ್ರಶಂಕರವಾಗಿ ಕರುಣ
ಕಾತರವಾಗಿ ಕರೆಯುತಿದೆ! ನವನವೀನ ಯುಗ
ಸಂದೇಶಮಂ ಪಾಲಿಸಿ ಮಾನಿಸಿ ನೀವೆಂದೂ!

"ವಿಶ್ವ ತಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರತ ವಿಶ್ವತಸ್ಪಾತ್ ।
ಸಂ ಬಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾ
ಭೂಮಿೊ ಜನಯನ್ ದೇವ ಏಕಃ ॥"

ಆ ಧೀರ ಧೀಮಂತ ಸುರ ಸುಂದರ ವಾಣಿಯಲಿ
ಕಾಲದೇಶಗಳ ಜನ್ಯ ಸಂಕುಚಿತ ದೃಷ್ಟಿಯ
ಅಪಸ್ವರದ ಗಂಧವಿನಿತಿಲ್ಲ. ಅಸೂಯೆಯೆನೆ
ಕಹಿರಸವದಿಲ್ಲ. ವೈರದ ಕಿಡಿಯು ಇಲ್ಲವೇ
ಇಲ್ಲ. ಜುಗುಪ್ಸೆಯಾ ಕೆಸರಿಲ್ಲ. ಮೂಢ ಬುದ್ಧಿಯ
ಹ್ರಸ್ವತೆಯುಮಿಲ್ಲ. ಅಂಧ ಶ್ರದ್ಧೆಯ ಕುಬ್ಜತೆಯ
ಮಾಂದ್ಯವಿಲ್ಲ. ನಿರಂಕುಶವಾಗಿ, ಸ್ವತಂತ್ರವಾಗಿ
ವಿಚಾರ ಪೂರ್ಣವಾಗಿ ನಿಯಮಶೀಲವಾಗಿ ಹರಿದ
ಆ ಅಸೀಮ ವಾಣಿಯ ಸಂದೇಶಮಂ ಕೇಳಿ!
ಕಿವಿಗೊಟ್ಟು ಕೇಳಿ! ಮನವಿಟ್ಟು ತಿಳಿದುಕೊಳ್ಳಿರಿ.

ಓ ನವಯುಗದ ದೇಶ ಬಾಂಧವರೆ ಕೇಳಿರೈ.''
ಅತ್ತಲಾ ಭಾರತದೊಳ್ ವರಾಹ ನಗರಿಯಲಿ
ಚಿಣ್ಣ ಕುಟಿಯ ಮೇಗಡೆ ಪೊನ್ನೇಸರ ಸುವರ್ಣ
ಛವಿ ಹರಿದುದು ದೈನಂದಿನ ಕ್ರಮದಲಿ. ನೀಲ
ಭಿತ್ತಿಯುಂ ದೇವ ಸೂರ್ಯನ ವರವೊ ಎನೆ ಕೆಂಪು
ಕೆಂಪಾಗಿ ರಕ್ತಕಾಂತಿಯು ಮೆರೆದುದು ಘನವಾಗಿ.
ಆಶ್ರಮದ ವಟುಗಳಿಂ ಬರ್ಬರ ಬದುಕಿನಲಿಯೆ
ಬಾಳ್ದು ನೊಂದು ನಮೆದೊಡವರ್ ಮತಿಗೆಡದೆ ಗತಿ
ತಪ್ಪದೆ ತಂತಮ್ಮ ಕುಟುಂಬಿಗರಿಂ ದೂರ
ದೂರ್ಕೈದು ಸುಖಾಶ್ರಯರಹಿತಮಾಗಿ ಧ್ಯಾನ ತಪ
ಜಪಗಳಿಂದೆ ಮನತುಂಬಿ ಸಾಧನಾ ನಿಷ್ಠೆಯ
ಹಾದಿಯಲಿ ಎಡರುತೊಡರುಗಳೊಡಂ ತಮ್ಮ ಗುರು
ನಾಯಕನ ಅನನ್ಯಾದೇಶಕಾಗಿ ಕಾದಿರ್ದ
ಎರ್ದೆಯ ಅಮಿತ ಶ್ರದ್ಧೆಯದು ಪಾರವಿಲ್ಲದಿಹ
ಸಾಗರದೊಲ್ ಅಗಾಧ; ತಪೋನಿಷ್ಠೆಯುಂ ಎಣೆ
ಇಲ್ಲದೊಲ್ ಅಗಾಧ. ಪುರಾಣ ಪುಣ್ಯಚರಿತೆಯ
ಶಿಷ್ಯರವೊಲ್ ಜೀವನ ಶ್ರದ್ಧೆಯಲಿ ಮೆರೆದ ವರ
ಶಿಷ್ಯಗಣ ಸಾಯಂ ಸಮಯದೋಳ್ ಪ್ರಾಂಗಣದ
ಅಂಚಿನಲಿ ಮುಂಬೆಳೆದು ಪಚ್ಚ ವರ್ಣದಿಂದಲಿ
ಸುಶೋಭಿಪ ಚಂಪಕ ಮರದಡಿಯ ಗರಿಗಲ್ಲಿನ
ಮೇಲೆ ನವದಂಪೆಲರ್ಗೆಳಸಿ ಕೂಡಿದರದರಡಿ
ಸಾಯಂ ಸೊಬಗಂ ಆಸ್ವಾದಿಸುತೆ. ಶಾರದಾ
ನಂದರುಂ ಕಿರಿಯರಂ ಕುರಿತು ಇಂತೆಂದರಾಗ,
“ಭಾಯಿಗಳೆ, ಅಂದು ಗುರುವರ್ಯನೆಮಗಿತ್ತೊಂದು
ಆದೇಶವದೇಂ ಕಡಿಮೆಯೇ? ನೆನಪಿಸಿಕೊಳ್ಳಿ.

'ಈಸಬೇಕು ಇದ್ದು ಜೈಸಬೇಕು. ಜೀವನದ ಸ್ಪರ್ಧೆಯೊಳ್
ಗೆಲ್ದು ಬಾಳವೇಳ್ಕುಮೆಂದು ಬೋಧಿಸಿದುದರ ನಿಜ
ಅರ್ಥಮೇಂ?''
ಆಗಳೇಂ ಸ್ವಾಮಿಜಿಯ ಕಣ್ಣಲಿ
ತೆಕ್ಕನುಕ್ಕಿ ಹರಿದಾ ಕೋಪಜ್ವಾಲೆ!? ಒಡನೆಯೆ
ಧರ್ಮಕೋಪ ಕುದಿದಿರೆ, ಎರ್ದೆಯಲಿ ಸಿಡಿಲಾಳ್
ಸಿಡಿದೆದ್ದು ಗುಡುಗಿದರ್ ''ನೀವ್ – ಭಾರತೀಯರ್
ಮನುಷ್ಯರೇಂ? ನೀವ್ ಪಶುವಿಗಿಂ ಮೇಲಲ್ಲ, ಬರಿ
''**ನಿದ್ರಾಹಾರ ಭಯ ಮೈಥುನಂ ಚ**'' ನಿಮಗುಂ
ಚತುಷ್ಪಾದಿಗಳಿಗುಂ ಏನ್ ಅಂತರ? ಏನೊ
ಒಂದಿನಿತು ಕಿರು ಬುದ್ಧಿಶಕ್ತಿ ಮಿನುಗುವುದರಿಂ
ನಿಮಗಿನ್ನು ರೂಪಾಂತರ ಒದಗಲಿಲ್ಲಮೆನಲದು
ತಪ್ಪಲ್ಲ. ನೀವ್ ಪಶುಸ್ವಭಾವದೊಳ್ ಮುಳುಂಗಿ
ಒದ್ದಾಡುವುದರಿಂದೆ, ನಿಮ್ಮಗಳ ಮನಸೇಚ್ಛೆಗೆ
ಅನುಗುಣಮೈಸಿ ನಿಚ್ಚ ಹೋರಾಡಿ ಗೆಲ್ವಂತೆ
ಪಶುಧರ್ಮವಂ ಬೋಧಿಪುದದು ಅನಿವಾರ್ಯವೇ
ಆಗಿರ್ಪುದು ಗಡ! ಪ್ರಪ್ರಥಮದೊಳ್ ಅನ್ನಮಯ
ಪ್ರಾಣಮಯ ಸ್ಪರ್ಧೆಯೊಳ್ ಗೆಲ್ದೊಡೆ ತದನಂತರ
ಮನೋಮಯ ವಿಜ್ಞಾನಮಯ ಆನಂದಮಯಗಳ
ರುದ್ರ ಹೋರಾಟದ ಅನನ್ಯಶಕ್ತಿ ಸಲ್ವುದು
ನಿಮ್ಮಗಳಿಗೆ ''**ನಾಯಮಾತ್ಮಾ ಬಲಹೀನೇನ
ಲಭ್ಯಃ**'' ನಿರ್ಬಲಂ ಎಂತು ಪಡೆದಪನ್ ಆತ್ಮ
ಸಾಕ್ಷಾತ್ಕಾರ? ತಮ್ಮ ಒಳ್ಪಿಗಾಗಿ ಜಗತ್ತಿನ
ಶ್ರೇಯಸ್ಸಿಗಾಗಿ ಮೊತ್ತಮೊದಲ್ ಭಾರತೀಯರ್
ತಂತಮ್ಮ ಪ್ರೇಯಸಂ ಸಾಧಿಸಲ್ ಪ್ರಯತ್ನಿಪುದೆ

ಸರ್ವೋತ್ತಮ ಎಂದೆಂಬ ಅನುಬೋಧನೆಯೆ ಸರಿ!"
ಭಾವನಾವೇಶದಿಂ ನುಡಿದರ್ ಗುರುವರ್ಯಂ. ಆ
ಮಹನೀಯನ ಮನಮುಟ್ಟಿ ಎರ್ದೆಗಿಳಿವ ತೆರದಿ.
ಅದಿಂದೇ ನಡೆದುದೋ ಎಂಬನಿತು ಪಚ್ಚಮಿದೆ
ಎನ್ನಯ ನೆನಪು. ಅಂಥ ಸಿಡಿಲಾಳ್ ಇರುತ್ತಿರೆ
ಸ್ವಾಮೀಜಿಯುಂ ಎಲ್ಲಿರ್ದೊಡಂ ಗೆಲವು ಶತಸಿದ್ಧ!
ಎಂಬುದದು ದಿಟಮಿರಲ್ ಇಂ ಪೇಳ್ವುದೇನಿಹುದು?"
ತಾನೆಲ್ಲಿ ಇರ್ದೊಡಂ ವಿಜಯ ಕೇತನಮಂ ನಭ
ಕೇರ್ವಡಿಪ ಧೀಮಂತ ಕಲಿ! "**ಸಂಭವಾಮಿ ಯುಗೇ
ಯುಗೇ**" ಎಂದ ಪರಮಾತ್ಮನ ಸಮಯೋಚಿತ ಜನನ!"
ದೂರ ಅಸ್ತಗಿರಿ ಶ್ರೇಣಿಯ ಮಸ್ತಕದ ಮೇಲೆ
ಸಾಂಧ್ಯಲೋಕದ ಸ್ವರ್ಣರವಿಯ ಉಜ್ವಲೋಜ್ವಲ
ಮಂಡಲಂ ಒಯ್ಯನೊಯ್ಯನೆ ಇಳಿಯುತಲಿರ್ದುದು
ಮೋಕ್ಷಸಾಧನಾ ನಿಷ್ಠೆಯಲಿ. ದಿಗ್‌ದೇಶವಂ
ಹೊಂಗಲಿಸಿ ಹೊನ್ನವರ್ಣದ ಗುಡಿಗೋಪುರ ಕಟ್ಟಿ
ನಲಿಯುತಿವೆ ರಂಗುರಂಗಿನ ಮೋಡಗಳ ರಾಶಿ.
ಕೆನ್ನೀಲಿ ಹೊನ್ನೀಲಿ ಕರ್ನೀಲಿ ಬೆಳ್ನೀಲಿ
ಚೆನ್ನೀಲಿಗಳ್ ಕೂಡಾಡಿ ಶೋಭಾಯಮಾನದ
ವೈಖರಿಯಲಿ ಮೆರೆದಿರೆ ಸಂಧ್ಯಾ ಸುಶಾಂತಿಯಲಿ
ಗೃಹೀಭಕ್ತರ್ಬೈದರ್ ವಟುಗಳೆಡೆಗೆ ಕೈಯೊಳ್
ಗುರುವರ್ಯನ ಪತ್ರವನಾಂತು. ತಮಗೊರೆದುದಂ
ನೀಡಿದರವರ್ ವಟುಗಳ ಅವಗಾಹನೆಗೆಂದು,
"ಭಗವದ್ಭಕ್ತರೆ, ಇಲ್ಲಿ ಎನ್ನೆಲ್ಲ ಕಾರ್ಯಮಂ
ಮೆಚ್ಚಿ ನೆಚ್ಚಿ ಮಾನಿಪ ಮಿತ್ರ ಮಂಡಲಿಯೆಂತೊ
ಅಂತೆಯೇ ಜಡಿಕುಟ್ಟಿ ವಿಚ್ಛಿದ್ರಗೊಳಿಸುವೊಡೆ

ಟೊಂಕ ಕಟ್ಟಿದ ಮಹೋದಯರಿಂಗು ಕೊರಮಿಲ್ಲ!
ವಿಧ್ವಂಶಕರೇಂ ಸಾಮಾನ್ಯರೆನಲ್ ಬರ್ಕುಮೆ?
ನಾನಾ ಕುತಂತ್ರಗಳ ಜಾಲಮಂ ನವುರಾಗಿ
ಒಡ್ಡುತೆ ಮಹಾಖೆಡ್ಡದೊಳೆನ್ನನುಂ ಬೀಳಿಸಲ್
ಹವಣಿಪರೆನಿತೊ ಗೋಮುಖ ವ್ಯಾಘ್ರಗಳ್! ತಿಳಿಯಿರಿ.
ಆನಿಲ್ಲಿ ಪಜ್ಜೆಪಜ್ಜೆಯೊಳ್ ಎಚ್ಚರಿರದೊಡೆ
ಎನ್ನಯ ಸಮಾಧಿಯಾದಪುದಿಲ್ಲೆ. ಪಾದ್ರಿಗಳ್,
ನಯವಂಚಕ ದುಷ್ಟಮನಸಿನ ಸಾಮಾಜಿಕರ
ಮಧ್ಯೆ ಬಾಳುವೊಡೆ ಗುರುದೇವನ ಮೇಣೆಲ್ಲರ
ಶುಭಾಶಯ ಕಾವುದೆನ್ನಂ ಅಡಿಗಡಿಗೆ ನಿಚ್ಚ
ಬೆಂಬಲಿಸಿ. ಆನಿಲ್ಲಿರ್ದೊಡಂ ಸದಾಕಾಲವುಂ
ಭಾರತಧಾತ್ರಿಯ ಉದ್ಧರಣಮಂ ನೆನೆನೆನೆಯುತೆ
ಎನ್ನ ಕಾರ್ಯವಾಹಿಯಂ ನಿರೂಪಿಸುವೆನ್. ಆ
ಕಾಳಿಕಾ ಮಾತೆಯೆನ್ನ ಧೃತಿಗೆಡದೊಲ್ ಕಡು
ನೋಂಪಿಯಿಂ ಬೆಂಗಾಯ್ವ ಸೇನಾನಿಯಿರೆ ಎನಗೆ
ಇನ್ನೆಲ್ಲಿಯ ಅಡೆತಡೆಯೋ? ಸತತ ನೀಮೆಲ್ಲ
ತೋಷದಿಂದಿರ್ದು ಹರಸಿದೊಡೆನ್ನನುಂ ಸಾಲ್ಗು
ಮೆನಗೆ, ಕೇಳ್ಳೈ ಸೋದರ! ಭಾರತ ಮಾತೆಯ ದಿವ್ಯ
ನಾಮ ಶ್ರವಣ ಮಾತ್ರದಿಂ ಮನಕೆನಿತು ಉಲ್ಲಸ
ಪ್ರಧಾನಮೊ ಅಂತೆಂತು ಸಂಕಟದ ಕಹಿಯುಂಡು
ನರಳುವೊಲ್ ಇರ್ಪುದು ಸ್ವದೇಶದ ಪರಿಸ್ಥಿತಿಯು.
ಅದರ ಪುನರುತ್ಥಾನಮಂ ಕುರಿತು ಚಿಂತಿಸುವೆ;
ಯೋಚಿಸುವೆ. ನಮ್ಮಯ ಜನಾಂಗವದು ಸಿಡಿದೆಳ್ದು
ಕಟ್ಟೆಚ್ಚರಗೊಳ್ಳದಿರೆ ಭಾರತದ ಸಂಕಟ
ಅಳಿಯದು; ಕಳಿಯದು. ಭಾರತೀಯರ್ ಒಗ್ಗಿನಿಂ

ಸಿಡಿದೆಳ್ದು ಪುರುಷಸಿಂಹರಾಗದೆಯೆ ಎಲ್ಲಿಯ
ಪುನರುತ್ಥಾನ? ಭಾರತದ ಚೇತನಾಚೇತನ
ಇರ್ಪುದು ಭಾರತೀಯರ ಕೈಯೊಳ್. "**ರಾಷ್ಟ್ರೋ
ರಕ್ಷತಿ ರಕ್ಷಿತಃ**" ಕೇಳಿ, ಜಪಾನ್ ದೇಶೀಯರ
ಕಾಲದೇಶಗಳ ಪ್ರಜ್ಞೆ ಅಸಮಾನ್ಯ. ಆ ತ್ವರಿತ
ಗತಿಯಿಂದಲಲ್ಲದೆಯೆ ದೇಶದುದ್ಧಾರಮೇ
ಇಲ್ಲ. ಕಡುಬಡತನ ಜಡತನಗಳ ನಿಡುಗೋಂಟೆ
ಬೆಳೆಬೆಳೆದು ಗೋಪುರದೊಲ್ ಗಗನವನೇರಿರಲ್
ರಜೋಗುಣಗಳ ಗಣಿಯಲಿ ಕಾಲದೇಶಗಳ ದಿವ್ಯ
ಪ್ರಜ್ಞೆ ಮೂಡುವುದೆಂತು? ಯೋಚಿಸಿರಿ. ಆಪನಿತು
ಯೋಚಿಸಿರಿ. ಪರಮಯೋಚನೆಯೆ ಜೀವಾಳಮೀ
ಸುಂದರ ಬದುಕಿಗೆ.
"ಅಮೆರಿಕೆಯ ಪೆಂಗಳೆಯರಾ
ಕಾರಾಗೃಹದ ದಕ್ಷ ಅಧಿಕಾರ ಪೀಠಸ್ಥೆ
ಎನ್ನ ಬಿಡದಿಗೈದಳೊರ್ಮೆ. ಪರಸ್ಪರಭೇಟಿ,
ಪರಿಚಯ, ಉಭಯ ಕುಶಲೋಪರಿಯಾದ ಬಳಿಕಲಾ
ಭದ್ರ ಮಹಿಳೆ ಶ್ರೀಮತಿ ಜಾನ್‌ಸನ್ ತನ್ನೆಲ್ಲ
ಕಾರ್ಯಭಾರಮಂ ವಿವರಿಸಿದಳಿಂತು "ಗುರುವರನೆ,
ಕೇಳ್, ಮಹಿಳೆಯರ ಕಾರಾಗೃಹವನುಂ ಆವ್
'ಕಾರಾಗೃಹ' ಎಂದು ಕರೆಯದೆ 'ಸುಧಾರಣಾಗೃಹ'
ಎಂಬ ನಲ್ಪೆಸರಿಂ ಕರೆವ ರೂಢಿ. ಕೈದಿಗಳ
ಭವ್ಯ ಬಂಧುರಮಯ ಬದುಕಿಗೆ ಮಾರ್ಗದರ್ಶನ
ಮಾಳ್ಪ ನಲ್ದಾಣ ನಮ್ಮಿಯ ಸುಧಾರಣಾಗೃಹ,
ನೀವೊರ್ಮೆ ಸಂದರ್ಶಿಸಿ ತಿಳಿವುದು.

ಕೇಳಿದಾಂ ಅವಳ ಸಲಹೆಯನೊಪ್ಪಿ 'ಸುಧಾರಣಾ
ಗೃಹ'ವಂ ಸಂದರ್ಶಿಸಿ ಬಂದೆನ್ನೈ. ಅಲ್ಲಿನ
ಸಾಮಾಜಿಕ ಸುಧಾರಣೆ, ಜೈಲುವಾಸಿಗಳಿಗಿಹ
ಸಂರಕ್ಷೆ ಮೇಣತಿ ಸುಧಾರಣೆಯ ಕ್ರಮ ಇವು
ನಮ್ಮೊಳ್ ಬಲ್ ದೂರಾತಿದೂರವೆ. ನಮ್ಮವರ
ಸಂಕಟವ ನೆನೆದು ಮರುಗುವೆನ್! ಪುರುಷವರ್ಗ
ನಿರ್ದಯೆ, ನಿರಾದರದಲಿ ಸ್ತ್ರೀಯರಂ ಸೊತ್ತಾಗಿ
ತೊತ್ತಾಗಿ ಕಾಂಬ ದೃಶ್ಯವೆನ್ನ ಅಕ್ಷಿಪಟಲದ
ಮೇಲೆ ಸುಳಿಯುತಿರೆ ಒಡಲ್ ಕೋರೈಸಿ ಅಳಲ್ವುದು
ನೊಂದು ನೀರಾಗಿ. ಅಯ್ಯೊ! ಕಟುಕರಿರಾ, ಕೇಳಿಲ್ಲಿ!!
ಮಾನವತೆಯ ಮಹಿಮೆಯ ಕುರಿತಂತೆ ಹಿಂದೂ
ಧರ್ಮದವೊಲ್ ಮತ್ತಾವ ಧರ್ಮವುಂ ನೀತಿಯಂ
ರೀತಿಯಂ ಬೋಧಿಸಿ ಜನಗಣಮನವಂ ತಣಿಸಿಲ್ಲ.
ಆದೊಡಮಿದು ಎಂಥ ಕಟುಕತನಮೊ, ಹಾ! ದೀನ
ಅಬಲೆಯರ ಕೊರಳಮೇಲೆ ಕಾಲಿರಿಸಿ ತತ್ತಳ
ತುಳಿವರೇಂ? ತಪ್ಪು ಹಿಂದೂ ಧರ್ಮದಲ್ಲ, ಕಡು
ಮೂರ್ಖ ಧಾರ್ಮಿಕ ನಟಶಿಖಾಮಣಿಯರದು! ತಿಳಿದು
ನೋಡಿ!! ಒಳಗಣ್ ತೆರೆದು ನೋಡಿ!! ಧರ್ಮಪುರುಷರು
ನೀವಾಗಿ. ಭಗವಂತನಿಂ ಕರೆಬಂದಿಹುದೆನಗೆ.
ಮುಂದಿನಭ್ಯುದಯಮೆಲ್ಲವು ನಿಮ್ಮ ಕೈಯೊಳಿರ್ಪುದು.
ತರುಣರೇ ಪಣಕಟ್ಟಿ! ಸಕಲ ದೀನ ದರಿದ್ರರೊಳ್
ನಾರಾಯಣನಂ ಗುರುತಿಸಿ, ಮನಮರುಗಿ ಕರುಣ
ದ್ರುವ್ಯವಂ ನೀಡಿ. ಬಡವರ ದೀನ ದುಃಖಿಗಳ
ಪರವಾಗಿ ಕೊರಳೆತ್ತಿ ದೇವರಿಗೆ ಮೊರೆಯನಿಡಿ.

ಭಗವಂತನ ನೆರವು ಆವ ರೂಪದೊಳ್ ಬಪ್ಪುದೊ
ಅದರೊಳ್ ನೆಚ್ಚಿರಲಿ. ಕೆಚ್ಚಿರಲಿ. ಈಯೊಂದು
ಚಿಂತನೆಯ ಭಾರವೊತ್ತು ಭಾರತದ ಉಡಿಯಲ್ಲಿ
ನಿಚ್ಚ ಸಂಚರಿಸಿಹೆನ್, ಪ್ರಪಂಚಾಮಳೆ ಜನರ
ಮನವರಿಯೆ ಎನ್ನೆರ್ದೆ ನೆತ್ತರಂ ಬಸಿದಿಹೆನ್."
ಅಮೆರಿಕಾ ದೇಶಧಾತ್ರಿಗೆ ಸ್ವಾಮಿ ವಿವೇಕಾ
ನಂದರುಂ ಪದಾರ್ಪಣೆಗೈವ ಮುನ್ನಮೆಯೆ ಭರತ
ವರ್ಷದ ಸತ್ ಸಂಸ್ಕೃತಿ ಮೇಣ್ ತತ್ತ್ವಜ್ಞಾನದಾ
ಪ್ರತ್ಯುಷೆಯ ಮಂದ, ಶೀತಲಶೈತ್ಯ ಸಂಕ್ರಾಂತಿ
ಪರಿಮಳಂ ಕಸ್ತೂರಿ ಪರಿಮಳದ ಮಾಳ್ಕೆಯಲಿ
ಹರಿದತ್ತು ದಿವ್ಯ ಪೀಠಿಕೆಯ ತೆರದಿ. ಉಪನಿಷತ್
ಭಗವದ್ಗೀತೆ ಮುಂತಪ್ಪ ಗ್ರಂಥಗಳ ಭಾಷಾಂತರಂ
ಓದಿಯೋದಿ ಮನನಂಗೈದು ತನುಮನಂಗಳಂ
ತುಂಬಿರ್ದ ಪಂಡಿತರ್ ಭಾವಸ್ಫೂರ್ತಿಯ ರಸವುಕ್ಕಿ
ಉನ್ಮುಖಿಗಳಾಗಿ ಮುಂದಿನಂಕದ ನಿರೀಕ್ಷೆಯ
ತರಾತುರಿಯಲಿ ಕಾದಿಹ ಸಮಯದಲಿ ಗಮಿಸಿದ
ಸ್ವಾಮಿ ವಿವೇಕಾನಂದರಂ ಮಿಗೆ ಗೌರವಾನ್ವಿತ
ಭಾವದಿಂ ಕಂಡರವರ್. ಆ ಪಂಡಿತೋತ್ತಮ
ಮಹನೀಯರ ಗುಂಪಿನೊಳ್ ವಿಟಮಿನ್, ಎಮರ್ಸನ್
ಮೊದಲಪ್ಪ ಕವಿಪುಂಗವರ್ ಮೇಣ್ ಎನಿತೆನಿತೊ
ತತ್ತ್ವಜ್ಞಾನಿಗಳ್ ಮುಂದಿರ್ದರ್ ತಂತಮ್ಮ ಜಟಿಲ
ಸಮಸ್ಯೆಗಳಂ ಪರಿಹರಿಸಿಕೊಂಬುವಾಸೆಯಲಿ.
ಪ್ರಾಚ್ಯಗಿರಿವನಪರ್ವತಶ್ರೇಣಿಗಳ ಅದ್ಭುತ
ಮುಖವಾಣಿಯಂ ಓದಿ ತನುಮನ ತುಂಬಿ
ತಂತಮ್ಮ ಮಿತ್ರಮಂಡಲಿಯೊಡಂಗೂಡಿ ಆ

ವೇದಾಂತ ರಸ ವಾಹಿನಿಯಲಿ ಮುಳುಗಿ ತೇಲುತೆ
ಚರ್ಚಿಸಿ ಬಹುಲ ತರ್ಕವಿತರ್ಕಗಳ ಹೂಡಿಯುಂ
ಅರ್ಥೈಸಲ್ ಆಗದೆಯೆ ಬೆದರು ಗಣ್ಣಿನಿಂ ನೋಡಿ
ಬಿಸಿಯುಸಿರ್ ಬಿಡುವಗತಿಯೊದವಿದತ್ತು ಬಹುಜನ
ತತ್ತ್ವಜ್ಞಾನಿಗಳಿಂಗೆ. ಅಂದು, ಆ ಗಹನತರ
ಸುವಿಚಾರ ವಿಶ್ವವಂ ಬಿಡಿಸಿ ಅರಳೆಯೊಲ್ ನೆರೆ
ಹಿಂಜಿ ತಿರುಳ್ ತೋರಿಗುಡುವ ಗುರುವರೇಣ್ಯನ
ಅಗತ್ಯಮಿರುತಿರೆ ವೇದಾಂತರಿಸಿಯುಂ ಗಮಿಸಿ
ಹೃದಯ ಹಗುರಮಾಯ್ತು. ಭಾವ ಬಂಧುರಮಾಯ್ತು.
ಮರುಧರೆಗೆ ಭೋರನೆ ಮಳೆಯುಸುರಿದು ತಣ್ಗಂಪು
ಮೂಡಿದೊಲ್ ಮುದವೆತ್ತುದು ಘನ ಪಂಡಿತ ಜನರ
ಸಮುದಯಂ. ಜ್ಞಾನವಲಯ ತಿಳಿಯಾಯ್ತು. ಸಾತ್ವಿಕ
ಮಧುರವಾಯ್ತು.
ಸ್ವಾಮಿ ವಿವೇಕಾನಂದರುಂ ತಮ್ಮ
ಸಂಯಾತ್ರೆಯಲಿ ಅಮೆರಿಕಾ ಸಂಸ್ಥಾನಗಳ ಜನ
ಮನೋಗತಿಯನರಿದರಿದು ಜ್ಞಾನ ವಿಜ್ಞಾನಗಳ
ಮಹತ್ತರಮೆಂತಂತು ಜೀವನೀಯ ಕ್ಷೇತ್ರದ
ಲಘುತ್ವದ ಆಳಮಂತು ಕಂಡು ಕಾಣದಿರಲಿಲ್ಲ.
ಸೂಕ್ಷ್ಮ ದೃಷ್ಟಿಯಷ್ಟಿಯದು ಸೂಕ್ಷ್ಮಾತಿಸೂಕ್ಷ್ಮಮೆ
ಆಯಿತ್ತು, ತಮ್ಮ ಸತ್ಯಸುಂದರತೆಗೆ ಮಸಿಯ
ಕರ್ಪುರ ಮಾಲಿನ್ಯಮಿನಿತು ತಾಗಿಸದುಳಿವ ದೃಢ
ಶಕ್ತಿಯ ಸತ್‌ಮೂರ್ತಿಯು ತಾನಾಗೆ, ದಿವ್ಯಮಾ
ದೇಶಾಂತರಿತ ಕಾಮಕಾಮನೆಯ ಸೂತ್ರ ಮನ
ಮತಿಯಂ ಕೊರೆವುದು ಬೈರಿಗೆಯ ತೆರದಲಿ. ಸ್ವಾಮಿ
ವಿವೇಕಾನಂದರುಂ ವಿಚಾರಜಗದೊಳ್ ತೀವ್ರ

ಮುಳುಗಿ ಮೈಮರೆಯುವರ್ ಚಿಂತನಾ ದ್ರವ್ಯವದು
ಘನಿಸಿ. ಆಗಳ್ ಕರ್ಣಕುಂಡಲಿನಿಯ ಬಳಿಯೇ
ಕೇಳಿಪುದು ಅಂತರಾತ್ಮನ ಮಧುರತಮವಾಣಿ.

"ಯೂಯಂ ತತ್ ಸತ್ಯಶವಸ ಆವಿಷ್ಕರ್ತ ।
ಮಹಿತ್ವನಾ । ವಿದ್ಯತಾ ವಿದ್ಯುತಾ ರಕ್ಷಃ ॥"

ಹರಿಃ ಓಂ ತತ್ ಸತ್

❋ ❋

ಷಡ್ವಿಂಶೋಲ್ಲಾಸಂ

ವಿಶ್ವ ಮೈತ್ರಿ

**"ಶಶೀದಿವಸಧೂಸರೋ ಗಳಿತಯೌವನಾ ಕಾಮಿನೀ
ಸರೋ ವಿಗತವಾರಿಜಂ ಮುಖವಕ್ಷರಂ ಸ್ವಾಕೃತೇಃ ।
ಪ್ರಭುರ್ಧನಪರಾಯಣಃ ಸತತದುರ್ಗತಃ ಸಜ್ಜನೋ
ನೃಪಾಂಗಣಗತಃ ಖಲೋ ಮನಸಿ ಸಪ್ತ ಶಲ್ಯಾನಿಮೇ ॥"**

ಉತ್ತರದ ಬಾನ್ ಭಿತ್ತಿಯಲಿ ಕಿಕ್ಕಿರಿದುಂಬಿ
ಮೆರೆವರಿಲ್ವಟ್ಟೆಗಳ ಬಳಿಯಲ್ಲಿ ಮೃಗಶಿರಂ
ಮೈದೋರಿತು. ಅಲ್ಲೇ ದೂರದಲಿ ಸಪ್ತರ್ಷಿ
ಮಂಡಲವೆಳಗಿ ವಿರಾಜಿಸಿತು. ಅತ್ತಲತ್ತಲ್
ಪೂರ್ಣ ಚಂದ್ರಮನ ವಿಜೃಂಭಣೆ! ಮತ್ತೇನಾ
ಪಶ್ಚಿಮವರ್ತಿಯಾಗಿಳಿವ ತಿಂಗಳ್ ಜೊನ್ನಮಂ
ಮರ್ಬುಗೈವ ಸಾಸದೊಳಿರ್ದುವು ಸಕಲತರ
ನಕ್ಷತ್ರಾಳಿ. ಗೃಹದಿಂ ಗೃಹಕೆ ದಿಕ್ಕಿಂದಿಕ್ಕಿಗೆ
ಶ್ರದ್ಧೆಯಿಂದೊರ್ಮೆ ಸಂಕೆಯಿನ್ನೊರ್ಮೆ ಮುದದಿಂ
ಮೊಗವರಳುತೊರ್ಮೆ ಮಹಿಮಾಸ್ಪದದ ಭಕ್ತಿಯಿಂ
ಧರ್ಮದೃಢತೆಯ ಅನುಭಾವದಿಂದೊರ್ಮೆ ಮನ
ಮತಿವೆರ್ಚುತುತ್ಸಾಹಗೊಳುತೊರ್ಮೆ ತರತರದ
ಭಾವಾನುಭಾವಗಳ ಆವೇಗದಾವೇಗ
ಪ್ರವಹಿಸಿ ನವರಸಂಗಳೊಳ್ ತೇಲ್ವ ಹೃದಯಂ
ಕಾವ್ಯಮಾಲೆಯಂ ನೆಯ್ವುದು ಸಾರವತ್ತಾಗಿ.
ವಿಶ್ವಮೈತ್ರಿಯ ಮೋಹನ ತರಂಗಿಣಿ ಮಿಡಿವುದು
ಹೃತ್ ಬೀಣೆ ತಂತ್ರಿಯಂ ಅನುರಾಗಮಯಮಾಗಿ.
ಎಲ್ಲೆಡೆಯ ಜಡನಿದ್ರಿತರಂ ಜಡಿಕುಟ್ಟಿತಟ್ಟಿ

ಎಳ್ಚರಿಸಿ ಸಿಂಹವಾಣಿಯಲಿ ಏಳಿ! ಎದ್ದೇಳಿ!!
ಎಂದೆಂಬ ಕರೆಕೊಟ್ಟ ಧನ್ಯಾತ್ಮ ತರುಣರಿಸಿ
ಭಾವಾಪನ್ನತೆಯಲಿ ಜಗದ ಪರಿಸ್ಥಿತಿಯಂ
ಸಮೀಕ್ಷಿಸಿದರ್. ಪೂರ್ವ ಪಶ್ಚಿಮಗಳ ಜೀವನ
ಪರಂಪರೆಯ ವಿಧಿ ವಿಧಾನದ ಚಿತ್ರ ಕಟ್ಟಿದುದು
ಕಣ್ಮುಂತೆ. ನಮ್ಮವರ್ ಮೂಢನಂಬಿಕೆಗಳ
ಮೊಟ್ಟೆಯಂ ಕುಕ್ಕಿ ಹೊರ ಬರದಿರ್ದೊಡೆ ಇಲ್ಲವೆ
ಇಲ್ಲ ಉತ್ತಮಗತಿ ಎಂಬೊಂದು ಚಿಂತೆ ಮನವಂ
ಕೊರೆದತ್ತು ಬೈರಿಗೆಯೋಪಾದಿಯಲಿ. ಯೋಚನೆಯ
ಭಾರದಲಿ ಕುಳಿತಿರಲ್ ಸದ್ದಿಲ್ಲದ ಶಾಂತಿಯಲಿ
ಪೊಳ್ತುವೊಳೆ ಹರಿಯಿತು ಗಮನಂ ಅರಿಯದವೊಲ್.
ಮತ್ತಾಗಳ್. ಪೊರಮಟ್ಟರ್ ಸ್ವಾಮೀಜಿ ಬಿಡದಿ
ಮನೆಯ ವಾಗಿಲ್ ಮುಚ್ಚಿ, ಸಾಗಿದುದು ಮುಂಪಥಂ
ನಸುದೂರದ ತಿಳಿನೀರ್‌ಕೊಳದೆಡೆಗೆ. ಪೂರ್ವೀ
ದಿಗ್‌ತಟಾಂತ ರೇಖೆಯ ಸಾಲಿನಲಿ ತುಳುತುಳುಕಿ
ಮಿನುಗಿದುದು ಎಳೆಬೆಳಕಿನ ಛವಿ. ಮುಂದೆ, ನಸುವೇ
ಮುಂದೆ ಕಣ್ಗೆಸೆಯಿತು ತಿಳಿನೀರ್ಕೊಳದಲಿ ಪುಳಿನ
ಪುಂಜದೆಡೆಯಲ್ಲಿ ತಲೆಯೆತ್ತಿನಿಂದ ಬಿಣ್ಪಿನ
ಬೆಳ್ದಾವರೆ, ಕೆಂಪಿನ ಕೆಂದಾವರೆ ಮತ್ತಂ
ಕೆನ್ನೀಲ ತಾವರೆಗಳೋಳಿ ಕಂಗೊಳಿಸಿದುವು
ಮನಮುಗ್ಧಗೊಳಿಸುವ ತೆರದಿ. ವಿವಿಧ ವರ್ಣಗಳ
ಮೋಹಕತೆಯಲ್ಲಿ ಮೆರೆದಿರ್ದುವು ಕೊಳದ ತುಂಬ.
ಸಿಂಗರಗೊಳಿಸಿದವೊಲ್. ಮಧುಕರಗಳ ಹಿಂಡಿನ
ಚೆಲುವು ಝೀಎನುತೆ ಹಾರಾಡಿ ಮಧುಕರಂಡವ
ಅರಸುತ್ತೆ ಮೆರೆದುವು ಕಣ್ಮನಗಳ್ ಸೆಳೆವಂತೆ.

ಸ್ವಾಮೀಜಿ ಸ್ವಚ್ಛ ಜಲರಾಶಿಯಲಿ ಸುಖಮಾದ
ಮಜ್ಜನಂ ಬಯಸಿ ಇಳಿದರ್ ಜಲದ ಅಂಚಿನಲಿ
ಬಟ್ಟೆಗಳಚಿ ಮೆಟ್ಟಿಲಿನಮೇಲಿರಿಸಿ ಜಲದಲಿ
ಮುಳುಗಾಡಿ ಮೈಯುದ್ದಿಯುದ್ದಿ ಮೀಯುತಿರೆ ಆ
ಪರಿಸರದ ಗಿಡು ಮರ ದ್ರುಮ ಶೈಲಗಳ್ ಕಣ್ಣಾಗಿ
ಕಾದು ನೋಡಿದುವೆಲ್ಲ ಸ್ನಾನದರ್ಶನದ ನಿಜ
ಮಹತ್ವದ ಚಿತ್ತಾರಮಂ. ಮಹಾನುಭಾವರ
ಅನಿತಿನಿತು ಕೃತಿಯುಂ ಮಹತ್ತರಮಲ್ತೆ ಈ
ಲೋಕದೊಳ್? ಪೂರ್ವೀ ದಿಗ್ ತಟಿಯಲಿ ಪ್ರಚ್ಛನ್ನ
ಕಿರಣ ಶಾಲಿ ಸೂರ್ಯನ ಉದಯಮಾನೋತ್ಸವಂ
ಸ್ವಚ್ಛಂದ ಶೈಲಿಯಲಿ ನಡೆದತ್ತು ಅನುದಿನದ
ಮಾಳ್ಕೆಯಲಿ. ಆಗಳೇನಾ ಪಕ್ಷಿಗೊರಳಿನಲಿ
ಉಣ್ಮಿದ ಸುಪ್ರಭಾತದ ರಾಗರಸಂ? ನವಿರು
ನವಿರಾಗಿ ಹರಿವ ಪ್ರಾರ್ಥನಾ ಹ್ರದಂ ಮುಟ್ಟಿದುದು
ಹೃದಯ ಕಲಶಮಂ. ಗುರುವರ್ಯಂ ಸ್ನಾನಮಂ
ತೀರ್ಚಿ ನಡೆದರಲ್ಲಿಂದೆ, ಬಿಡದಿಯ ಹಿರಿಮನೆಗೆ.
ಅರೆಬಿರಿದ ಕುಸುಮಗಳಲೋಕ ತಲೆದೂಗುತೆ
ಸ್ವಾಗತಿಸಿದುದು ಸುಗಂಪನು ಬೀರಿ. ಮನೆಯೊಡತಿ
ಎಚ್ಚತ್ತಿರದಿರೆ ಚಟುವಟಿಕೆಗಳ ಸುಳಿವಿಲ್ಲ.
ಗದ್ದಲದ ಗೊಂದಣವದಿಲ್ಲ. ಸ್ಥಿರ ಪ್ರಜ್ಞೆಯ
ಶಾಂತಿಸುಖದಲಿ ಲೇಖನಕೃಷಿಯ ಬೆಳೆ ಬೆಳೆಯೆ
ಕುಳಿತರ್ ಗುರುವರ್ಯಂ. ಮನಮತಿಯ ಕಲ್ಪದಲಿ
ಕುದಿಕುದಿವ ಭಾವಾನುಭಾವಗಳ ತುಮಲದಿಂ
ಉಕ್ಕುತಿಹ ರಸವನಾಸ್ವಾದಿಸುತೆ ಲೆಕ್ಕಣಿಕೆ
ಓಡಿದುದು ಬಿಳಿಯ ಬೆಳ್ಳಿ ಬಿಣ್ಪಿನ ಕಾಗದದ

ಮೇಲೆ,

“....ಆನಿಲ್ಲಿ ಭಾರತೀಯರ ಅಭಿವೃದ್ಧಿ
ಶೀಲಮಾದ ಭವ್ಯ ಭಾರತ ಧಾತ್ರಿಯಂ ನೆನೆದು
ನೆನೆದು ಶುಭ ಹಾರೈಸುತೆ ಈ ಕಟುಕಠಿಣ ಚಳಿಯ
ಕೊರೆತದಲಿ ಸಿಲ್ಕಿ ನರಳಿ ಸಾಯ್ವೆನ್ ಎನಿಪುದೈ.
ಆದೊಡೆ ಎಲೆ, ತರುವಲಿಗಳಿರಾ ಇದೊ, ಈ ಎನ್ನ
ಕರುಣಾರ್ದ್ರ ಹೃದಯ ಕರಂಡದೊಳ್ ತುಂಬಿರ್ಪ
ಪರಮ ಕರುಣೆ ಸಹಾನುಭೂತಿಗಳ ಕಲಸಮಂ
ನಿಮಗೀವೆನ್. ಬಡವರಿಗಾಗಿ ಸಂತ್ರಸ್ಥರ
ನೆರವಿಗಾಗಿ ಅಜ್ಞಾನಿಗಳಿಗಾಗಿ ದೀನಾತಿ
ದೀನರ ನೆರವಿಗಾಗಿ ಮರುಗುವೆನ್ನಯ ಹೃತ್
ಭಾವನಾರಸವನ್ನೆ ನಿಮ್ಮಗಳಿಗೀವೆನೆನ್,

“ಸಂ ಗಚ್ಛಧ್ವಂ ಸಂ ವದಧ್ವಂ
ಸಂ ವೋ ಮನಾಂಸಿ ಜಾನತಾಮ್
ಸಮಾನೀ ಸಮಾನಃ ಮನಃ ಸಹ ಚಿತ್ತಂ ಏಷಾಂ
ಸಮಾನೀ ವ ಆಕೂತಿಃ ಸಮಾಸಾ ಹೃದಯಾನಿ ವಃ
ಸಮಾನಂ ಅಸ್ತಿ ವೋ ಮನೋ ಯಥಾವಃ ಸುಸಹಾಸತಿ”

ಈ ವೇದ ವಾಕ್ಯಮಂ ಮನನಗೈದು ಮುನ್ನಡೆಯ
ಪಥವಿಡಿಯಿರಿ. ಜಗದೀಶನ ಪದತಲದಲಿ ಮನ
ವಿಟ್ಟು ಸೇವಾಕಾರ್ಯದ ಮಾಯಜ್ಞಕೆ ಸರ್ವದಾ
ಸಿದ್ಧರಾಗಿ. ಅಯ್ಯೊ ಮೂವತ್ತುಕೋಟಿ ಭರತ
ವಂಶದ ಸಂಜಾತರುಂ ಅಧೋಗತಿಗಿಳಿಯುತಿಹರ್
ದಿನದಿನಂ! ಈಯಜ್ಞಕಾಂಡದಲಿ ಸಹಸ್ರಾ–
ನುಸಹಸ್ರ ಯೋಧರುಂ ಬಿಳ್ದು ಮಣ್ಣಹುಡಿಯಲಿ
ಬೆರೆತುಕೊಳೆ ಮತ್ತೆ ಸತ್ತವರ ಪಾಲಿಗೆ ನುಗ್ಗೆ

ಮುಂದಾಗಲಿ ಸಹಸ್ರ ಸಹಸ್ರ ಜನಪದಂ.
ಶ್ರದ್ಧೆ ಸಹನೆ ಸಹಾನುಭೂತಿಗಳಿರಲಿ. ಕೇಳ್,
ಮಹತ್ಕಾರ್ಯದಲಿ ಸತ್ತರೇಂ? ದುಃಖಿಸದಿರಿಂ.
ಜಯ್ ಜಗದೀಶ! ಎನುತ್ತೆ ನುಗ್ಗಿ! ಜಗದೀಶನೆಮ್ಮ
ಸೇನಾಧಿಪತಿ! ಅವನೆ ಸನ್ಮಾರ್ಗದರ್ಶಿ! ನೀವ್
ಪಿಂದಿರುಗಿ ನೋಡದೆಯೆ ಸಾಗಿ ಮುಂದೆ ! ಓ ಇನ್ನು
ಮುಂದೆ, ಮುಂದಾಗಿ ಸಾಗಿ! ತರುಣರೆ, ಮುಂದಾಗಿ!

"ಸಹೃದಯಂ ಸಾಂಮನಸ್ಯಂ ಅವಿದ್ವೇಷಂ ವಃ
ಅನ್ಯೋ ಅನ್ಯಂ ಅಭಿಹರ್ಯತ ವತ್ಸಂ ಜಾತಂ ಇವಾಘ್ನ್ಯಾ"

ಸ್ವಾಮಿಜಿಯ ಸಿಡಿಲಾಳ್ತನಂ ರೋಮರೋಮದ
ಕುಡಿಕುಡಿಯಲಿ ಹೊಮ್ಮುತಲಿರೆ ಮಿಂಚಿನ ಕಿಡಿಗಳ
ಮಾಳ್ಕೆಯಲಿ, ಶಿಷ್ಯಗಣವೆಂತು ಕೆಮ್ಮನಿರ್ಪುದು
ಕಿವುಡಾಗಿ? ಸಿಡಿಲ್ದನಿಯ ಉಪದೇಶ ಮೊರೆವುದು
ಕರ್ಣದೇಶಮಂ ಕೊರೆದು ಕೋರೈಸುವ ತೆರದಲಿ.

"ಓ, ಅಮೃತ ಪುತ್ರರಿರಾ! ಮುಂಬನ್ನಿ, ಮನ
ಮತಿ ಕುಗ್ಗಿ ಹೆದರಿ ಬೆದರದೆ ಧೀರರಾಗಿ ನವ
ಯೋಧರಾಗಿ ಬನ್ನಿ! ಸುಡುವ ಬೆಂಕಿಯಲಿ ಮುಳುಗಿ
ಜನರಂ ಜಗದೀಶ್ವರನೆಡೆಗೆ ಮೇಲೆತ್ತಿ! ನಿಜ
ಶ್ರದ್ಧೆಯೊಂದಿರಲ್ ಎಲ್ಲವುಂ ಸುಲಭ ಸಾಧ್ಯಮ್.
ನಿಮ್ಮ ಶ್ರೇಯಸ್ಸಿಗಾಗಿ ಪ್ರಾರ್ಥಿಸುವೆ. ನಾವೆಲ್ಲ
ಒಗ್ಗೂಡಿ ಜನ ಸೇವೆಗೈಯ್ದು ನರಜನುಮವಂ
ಸಾರ್ಥಕಗೊಳಿಸಿದೊಡಮದುವೆ ಜೀವನ್ಮುಕ್ತಿ ಗಡ!
ಭರತಖಂಡದುದ್ಧಾರವದು ನವಜನಾಂಗದ
ಹೊಣೆ! ಯೋಚಿಸಿ ನೋಡಿ. ಭಯಂಕರ ದಾರಿದ್ರ್ಯದಿಂ
ಪುರೋಹಿತರ ದೌರಾತ್ಮದಿಂ ಅಧೋಗತಿಗಿಳಿದ

ಭರತಖಂಡದ ಲಕ್ಷೋಪಲಕ್ಷ ಬಡಜೀವಿಗಳ
ಮೇಲ್ಮೆಗಾಗಿ ನಾವೆಲ್ಲರೊಗ್ಗೊಡಿ ಪ್ರಾರ್ಥಿಸುವಾ.
ಆಂ ತತ್ತ್ವಮೇತ್ತನಲ್ಲಂ. ಧರ್ಮಗುರುವಲ್ಲಂ.
ಮಹರ್ಷಿಯುಮಲ್ಲಂ. ದರಿದ್ರರಿಂಗೆ ಮರುಗುವ
ಆನೊರ್ವ ದರಿದ್ರಂ. ಕಡುದಾರಿದ್ರ್ಯ, ತೀವ್ರ
ಮತಿಮೌಢ್ಯಗಳ ವೈತರಣಿಯಲಿ ಮುಳುಗಿ ನರಳುವ
ಭಾರತೀಯರಿಂಗೆ ಮರುಗಿ ಕರಗುವ ನಾನೊರ್ವ
ಭಾರತೀಯ. ಭಾರತೀಯರಿಗೆ ಮುಂಪಥವಂ
ತೋರ್ಪರಾರ್? ಪುರೋಗತಿಯೇವುದು? ಬರ್ದುಕಿನ
ಗುಡಿಗೆ ಚೆಂಬೆಳಕೇವುದು? ವಿದ್ಯೆ ಬುದ್ಧಿಗಳ ಬಲ
ಇರದಿಹ ಜಡ ಬದುಕಿಗೆ ದಾರಿದೀಪವೆಲ್ಲಿಯದು?
ದರಿದ್ರಗಣವೆಮ್ಮಯ ದೇವರು. ಅವರಿಗಾಗಿ
ಎದೆಗರಗಿ ಮನಮರುಗುವವಂ ನಿಜ ಮಹಾತ್ಮ!
ಮರುಗದವನುಂ ದಿವ್ಯ ದುರಾತ್ಮ! ಈ ವಗೆಯ
ಕ್ಷೇತ್ರದೊಳ್ ನಾವಿರ್ದು ಕರುಣೆದೋರದೆಯೆ ನಿಜ
ಅಜ್ಞಾತರಾಗಿ, ದೀನರಾಗಿ ಭಿಕಾರಿಗಳ್
ನಾವಾಗಿ ಗತಿಸಿದೊಡದು ವಿಶೇಷವೇನಲ್ಲಂ.
ಎಲ್ಲಿಯತನಕವೆಮ್ಮ ಮನುಕುಲಂ ದಾರಿದ್ರ್ಯ
ದೇವತೆಗಳ ಉತ್ತಾಲ ನರ್ತನದ ತತ್ತಳ
ತುಳಿತಕೆ ಸಿಲುಕಿ ನೊಂದು ನೋಯ್ವುದೊ ಅನ್ನೆಬರಂ
ಶಾಂತಿಯಿಲ್ಲ, ತೋಷವಿನಿತಿಲ್ಲ, ತಿಳಿದುಕೊಳ್ಳಿ;
ದೀನ ಜನರ ನೆತ್ತರಿನ ಪಾನದೊಳ್ ವಿದ್ಯೆಯಂ
ಪಡೆದ ಧೀಮಂತನುಂ ತನ್ನ ಋಣ ವಿಮೋಚ-
ನೆಗಾಗಿ ಸುವಿದ್ಯಾದಾನಿಯಾಗದಿರಲವನಂ
ನೀಚ-ದ್ರೋಹಿ ಎಂಬೆನಾಂ! ಶಿಷ್ಯರಿರಾ, ಕೇಳಿ!

ಬಡವರಾವು. ಅಜ್ಞಾತರಾವು. ಆದೊಡಾ ಶಿವಂ
ನಮ್ಮಂತಹ ಜನಗಣಮಂ ತನ್ನ ಆಯುಧಂ
ಗೆಯ್ದು ಪ್ರಯೋಗಿಸುವಂ ಎನಲ್ ಅನ್ಯಮಲ್ತು!
ಇಂದೆನಗೆ ಅಪಘಾತ ಸಂಭವಿಸಿ ಘೋರಾತಿ
ಘೋರ ಮರಣ ಬೆಂಬೊತ್ತಿ ಬಂದೊಡದಂ ಮನಕೆ
ತಾರದೆಯೆ ಬೆಂಬಲಿಸುತೆನ್ನನುಂ ನಿಲ್ಲುವವರ್
ವೇಳ್ಕುಮೆನಗೆ. ಜಯಾಪಜಯಂಗಳ ಲೆಕ್ಕಿಸೆಂ.
ಆವೊಂದು ಗಂಡಮೊದವಿಬರೆ ಕೈಬಿಡೆನೆನ್ನಯ
ಕಾರ್ಯವಾಹಿಯಂ. ಎನ್ನವೊಲೆನ್ನ ಸಂಗಡಿಗ
ಕಾರ್ಯಕರ್ತರುಂ ಶುದ್ಧಾತ್ಮರಾಗಿ ಕಾರ್ಯತಃ
ಶೀಲರಿರವೇಳ್ಕುಂ! ಎಂದು, ಯಾವದಿನದಿಂದೆಮ್ಮ
ಭಾರತೀಯರರ್ 'ಮ್ಲೇಚ್ಛ' ಎಂಬ ಕೀಳ್ಪದವನುಂ
ಕಲಿತು ಬಲಿಸಿ ಬಾಳಿಸಿದರೊ ಅಂದಿನಿಂದಲೇ
ಅಧೋಗತಿಯ ಧ್ವಜ ಗಗನಕೇರಿದುದು ಸತ್ಯಂ!
ಇಂದು, ಭಾರತೀಯರ್ಗೆ, ಸಹಾಯ, ಸಹಕಾರ
ಸತ್ ಸೇವೆ ಮುಂತಪ್ಪ ಜೀವನೀಯೋಜಿತಂ
ಎನಿಸಿರ್ಪ ಮಾನವೀಯತೆಯ ದಿವ್ಯದರ್ಶನಂ
ಗೊಳಿಸಿ ಮನಂಗೂಡಿಪ 'ಸತ್ ಸಂಘ' ಮಂ ಕಟ್ಟಿ
ಜನಗಣಮನಮತಿಯಂ ತಿದ್ದಿ ಪರಿಬೋಧಿಸುವ
ಧೀಮಂತರ್ ಮುಂಗೆತ್ತು ನಿಲ್ಲದೆ ಗತಿಯಿಲ್ಲ.
ಧೀರ ತರುಣರೇ, ಎಚ್ಚೆತ್ತು ಕೊಳ್ಳಿ! ವಿದೇಶೀ
ಧೀಮಂತರ ತೀವ್ರಗತಿಯಂ ಅರಿದರಿದು ಅಕ್ಷಿ
ಕಕ್ಷೆಯಾಚೆಗೆ ದಿಟ್ಟಿಸಿ ನೋಡಿ! ವಿಶ್ವವಿಶಾಲ
ವೈಶಿಷ್ಟ್ಯಮಂ ಅಳೆದು ನೋಡಿ! ಪರಿವೀಕ್ಷಣಾ
ದೃಷ್ಟಿಯಷ್ಟಿಯನ್ನಟ್ಟಿನೋಡಿ! ಪರಮ ಜ್ಞಾನ

ಜಿಜ್ಞಾಸುವಾಗಿ ನೋಡಿ! ಬಾವಿತಲದ ನಿಷ್ಠ
ಮಂಡೂಕವಾಗದಿರಿ! ಭಾರತ ಸಮಾಜಮಂ
ತಿದ್ದಿ ಓರೆಕೋರೆಗಳಂ ನೇರ್ಪಡಿಸಿ ಪಥಗೆಟ್ಟ
ಪಜ್ಜೆ ಪಜ್ಜೆಗಳಂ ಸರಿಮಾರ್ಗೀಕರಣಗೆಯ್ಸಿ
ಮಾನವ ಸದ್‌ಧರ್ಮದ ಹುರುಳಂ ಅರಿತು ಪುಣ್ಯ
ವಂತರಾಗಿ! ಮುಗ್ಧತೆಯ ಪೊರೆಗಳಚಿ ಒಗೆದೊಡೆ
ವಿಘ್ನವೆಲ್ಲ ಅರುಗಾದಪುದು. ಸಂಕೆಯದೇಕೆ?
ಎಮ್ಮ ಕಿರುಕಾರ್ಯಕೆ? ಪರಿಸರದೊಳ್ ಎಲ್ಲರ್ಗೆ
ಅರುಪಿ ಮನಮೆಚ್ಚುವೊಲ್ ತಿಳಿಪಡಿಸಿ ಪುರುಪಿತ್ತು
ನಿಷ್ಠಯೋಧರಂಗೈದೊಡೆ ನಿಮ್ಮ ಶಿರೋಭಾರ
ಇಳಿದಪುದು ಸರಾಗದಲಿ. ಶ್ರೀಕಾಳಿ ಮಾತೆಯ
ಶುಭಾಶೀರ್ವಾದ ನಿಮ್ಮ ಮಸ್ತಕ ಮುಕ್ತಕದ
ನೀರೇಜದೊಳಗಿರಲಿ! ಸತ್ ಚಿಂತಕರಾಗಿ. ವೀರ
ಯೋಧರಾಗಿ! ಎದ್ದೇಳಿ! ಸಿಡಿದೇಳಿ, ಭಾಯಿಗಳೆ!"
ಸ್ವಾಮೀಜಿಯುಂ ತಮ್ಮಯ ಶರೀರಯಷ್ಟಿಯದು
ದಿನದಿನಂ ಬಳಲುತ್ತಲಿರ್ದುದಂ ಅರಿತರಿತು
ಏಗಳ್ ಅನಿತಿನಿತು ಬಿಡುವುದೊರಕಿಸಿಕೊಂಬುದು
ಒಳಿತೆಂಬುವ ನಿರ್ಣಯಮಂಗೈದೊಡಮದಂ ತಾಂ
ಪಡೆವುದತಿ ದುಸ್ತರಂ. ಸುತ್ತಮುತ್ತಲ್ ಸದಾ
ಮುತ್ತಿರ್ಪ ಅಮಿತ ಶ್ರೋತೃಗಳಿಂದೆ ವಿಶ್ರಾಂತಿ
ಸುಖ ದೂರವೆ. ಶರೀರ ಸಂಪುಟವದು ಬಳಲಿ
ಬೆಂಡಾಗುತಲಿರ್ದುದು ತಾವರಿಯದ ತೆರದಲಿ.
ಆದೊಡಂ ಪಿಡಿದ ಕಾರ್ಯಂ ಶಾಶ್ವತಗೊಳಿಪ
ಇಚ್ಛೆಯದು ಇಂಬುಗೊಂಡಿರಲ್ ಹೃನ್ಮನಗಳಲಿ
ಸ್ವಾಮೀಜಿಗೆಲ್ಲಿಯ ಬಿಡುವು? ಪಗಲಿರುಳ್ ಗಾಲಿ

ಉರುಳುವುದು ಯಥೋಚಿತವಾಗಿ. ಇಲ್ಲೊಂದಿವರ
ನಿತ್ಯೋಪಯೋಗಾರ್ಥ ಭಾರತದ ಸನಾತನ
ವೇದಾಂತ ಗುರುಕುಲಂ ಸ್ಥಾಪಿಸಿದೊಡೆ ಒಳ್ಳಿತು
ಎಂಬೊಂದು ಘನವಾದ ಚಿಂತನಾವೇಶಮಿರೆ
ಮನದಿ, ಮುಂಕಾರ್ಯದ ಹಂಬಲ ಎದೆಯ ಕಲಶದಿ.
ಅಮೆರಿಕಾ ದೇಶೀಯ ಸಂಯುಕ್ತ ಸಂಸ್ಥಾನ
ಧಾತ್ರಿಯಲಿ ಪರ್ಯಟಣೆಯಂಗೈದು ಜನಗಣಮನ
ಒಲಿಸಿ ಗೆಲ್ದು ಹೃದಯ ಹಾರೀ ಶುಭಾಶಯಂ
ಪಡೆದು ಮುಟ್ಟಿದರ್ ಬೃಹದ್ ನ್ಯೂಯಾರ್ಕ್ ನಗರ
ದೇಶಮಂ. ಸಗ್ಗದೈಸಿರಿಗಿಂ ಮಿಗಿಲಪ್ಪುವ
ಸಕಲೈಶ್ವರ್ಯದಾಗರಮಾದ ನ್ಯೂಯಾರ್ಕ್
ಮಹಾ ನಗರಿ! ಸುತ್ತಲ್ ನೀಲಸಾಗರದಿಂದೆ
ಆವೃತಮಿಹ ಸುರಸುಂದರ ನಗರಿ ನ್ಯೂಯಾರ್ಕ್!
ರವಿಕಿರಣಗಳ ದಿವ್ಯಪ್ರತಿಫಲನದಿಂ ತಳ
ತಳಿಪ ಜಲಧಿಯ ಭವ್ಯ ಚಿತ್ತಾರ! ಕಂಗಳಿಗೆ
ಕುಕ್ಕುವೊಲ್ ತೋರ್ಪ ಗಗನ ಚುಂಬೀ ಭವನಗಳ
ಅದ್ಭುತ ನಗರಿಯ ವೀದಿವೀದಿಯ ಅಂಚಿನಲಿ
ರಂಗುರಂಗಿನಿಂದೆಸೆವ ಸಾಲ್ಗೈಸಿಹ ಮರಗಳ
ಸಂದೃಶ್ಯಮಾನಮಾದ ತಳಿರ್ ಜಗತ್ತಿನಲಿ
ವಿಹರಿಪ ಅರುಣಾರುಣನ ಹೊಂಗಿರಣಗಳ ತೆಳು
ಲೇಪನದ ಹೊನ್ನವರ್ಣದಿಂದೆಸೆವ ರಂಗಿನ
ಮೋಹನಕರ ರಾಶಿ. ಸುರಮ್ಯ ಸ್ವಚ್ಛ ಸುಂದರ
ನಗರಿ. ಹಚ್ಚಹಸುರಿನ ಸಸ್ಯೋದ್ಯಾನಗಳಲಿ
ವರ್ಣವರ್ಣಾಂತ ಪುಷ್ಪಾಲಂಕೃತ ನಿಸರ್ಗ
ರಸಸ್ವಾದನಾವೇಶ ಉಕ್ಕುವೊಲ್ ಇರ್ದುದಾ

ಅಲ್ಲಿ ಇಲ್ಲಿ ಕಂಗೊಳಿಪ ಉದ್ಯಾನಲೋಕಂ.
    ಸ್ವಾಮೀಜಿಯುಂ ಬಂದರಿನಂಚಿನ ಹೆದ್ದಾರಿ
ಹಿಡಿದು ನಗರ ಹೃದಯದನಕ ಬೆಣ್ಣೆ ಬಿಣ್ಪಿನ
ವಾಹನದಲಿ ಚರಿಸಿ, ನಗರ ದರ್ಶನಮಂಗೈದರ್.
ಮರುದಿನದ ಇಳಿವೊಳ್ತಿನ ವೇಳೆಯಡರುವನಕ
ಬೇರಾವ ಕಾರ್ಯಕ್ರಮಗಳ್ ಮೂಡಿರದೆ ತಮ್ಮ
ಗೆಣೆಯರ ಬಳಗದೊಡಗೂಡಿ ನಗರಿಯಲಿ ಸುಂದರ
ದರ್ಶನೀಯ ಸ್ಥಳಗಳಿಗೆ ಭೇಟಿಯನ್ನೀಯುತೆ
ಭವ್ಯ ನಗರದ ಪರಿವೀಕ್ಷಣೆಯಲಿ ಕಳೆದರ್.
ಮರುದಿವಸದಿಂದಲಾರಂಭವಾದುದು ನಗರ
ಹೃದಯದ ನಲ್ತಲದಲಿ ಗುರುವಿನ ಗುರುಕುಲಂ.
ಕಿರುವಗೆಯ ಗೃಹವೊಂದು ಸಜ್ಜಿನ ನೆಲೆಯಾಗಿ
ಸಿದ್ಧಮಾದುದು ಸರ್ವಕಾಲಿಕ ಗುರುಕುಲಕನು-
ಗುಣಮಪ್ಪಿ. ಅನುದಿನಂ ಬೆಳಗಿನಲಿ ಮತ್ತಮಾ
ಸಂಜೆಯಲಿ ಗುರುವರಂ ಆಚಾರ್ಯಸ್ಥಾನಮಂ
ಅಲಂಕರಿಸಿ ಬೋಧಿಪರ್ ಭಾವನಾವೇಶದಲಿ.
    ಸಂಧ್ಯಾಸಮಯದ ತಂಪುಮಳೆಗರೆಯೆ ತಣ್ಣಗೆ
ಪಶ್ಚಿಮಾದ್ರಿ ಕೆಂಗಲಿಸಿತು ಪೊಂಗಲಿಸಿತು ಕಡು
ಕೆಂಪಿನೋಕುಳಿಯಲಿ ಮುಳುಗಿ ಮಿಂದ ಪಾಂಗಿನಲಿ.
ಬಿಜ್ಜೆಯಾಸಕ್ತರೆಲ್ಲ ತಂತಮ್ಮ ಮನತುಂಬಿ ಸಂತಸ
ರಸಮುಂಡು ಪೊರಮಟ್ಟರು ಸಾಯಂ ಪಾಠವತೀರ್ಚಿ.
ಸ್ವಾಮೀಜಿಯುಂ ಪೊರಡಲಿರೆ ಆನೆವಾಗಿಲಲಿ
ಪಾದ ಸಪ್ಪುಳದೊಡಂ ಬಾಗಿಲ್ ಮಿಡಿದ ಕಟಕಟ
ಸದ್ದು ಕೇಳಿ ಬರೆ ಸ್ವಾಮೀಜಿ ನಡೆದರ್ ಬಂದ
ವ್ಯಕ್ತಿಯಂ ಸ್ವಾಗತಿಸೆ. ನೋಡಲ್ ಅತಿಥಿಯಂ

ವಿಲಿಯಂ ಜೇಮ್ಸ್! ಸುಪ್ರಸಿದ್ಧ ಮನಶ್ಶಾಸ್ತ್ರಜ್ಞ
ಮಹನೀಯ! ಪಿರಿಯಂಗೆ ಸಂಧ್ಯಾವಂದನೆಯಂ
ಅರ್ಪಿಸಿ ಕರವಿಡಿಯುತೆ ಹಸ್ತಲಾಘವನೀಡಿ
ಪ್ರಸನ್ನ ಮೊಗದಿಂದಲಿ ಬರಮಾಡಿದರೊಳಗೆ.
"ಗುರುವೆ, ನಿನ್ನ ಪರಿಚಯಮಂ ಪಡೆಯೆ ನಿನ್ನನಾಂ
ಅರಸುತಲೈದೆನಿಲ್ಲಿಗೆ. ಜನರಿಂ, ವರ್ತಮಾನ
ಪತ್ರಿಕೆಗಳ ವರದಿಗಳಿಂ ನಿನ್ನ ತಿಳಿದರಿದು
ದರ್ಶನಂ ಬಯಸಿಹೆನ್ ಮಿತ್ರನೇ!"
"ಒಳ್ಳಿತೈ
ಅದರಿಂ ತವದರ್ಶನ ಭಾಗ್ಯಮೊದವಿತೆನಗುಂ!
ಬನ್ನಿ, ಬನ್ನಿ!"
ತರುವಾಯಿ ಅವರಿರ್ವರ ಸ್ನೇಹ
ಲತೆಯುಂ ಕುಡಿಕೊನರಿ ನೆನೆಕೊನೆಯೇರಿ ಬೆಳೆದುದು
ಬಾಳ್ವುದು ಕೊನೇವರಂ ಪಸುರಾಗಿ. ಚಿಗುರಾಗಿ.
ಅಂದು, ಭಾರತ ಪುಣ್ಯತಲದಿಂದೆ ಪತ್ರಗಳ
ಬೊಂತೆಯೇ ಬಂದೊದವಿದತ್ತು ಸ್ವಾಮೀಜಿಯ ಕರ
ಕಮಲಗಳ್ ತುಂಬುವೊಲ್. ಮದರಾಸು, ಮೈಸೂರು,
ಬೆಂಗಳೂರು, ಕಲಿಕತ್ತ ಮುಂಬಯಿ ಕ್ಷೇತ್ರಗಳ
ಮಿತ್ರ ಬಂಧುಗಳಿಂದೈದುವು ಶುಭ ಹಾರೈಕೆಯೊಡನೆ.
ಶುಭನುಡಿಗಳ ಸುರಿಮಳೆಯೆ ಹರಿದತ್ತು ಎಲ್ಲರ
ಪತ್ರಗಳ ತುಂಬ. ಭಾರತದ ಹೃದಯ ಧಾತ್ರಿ
ತೋಷವುಕ್ಕಿ ಪುಳಕಮಾಯ್ತೊ ಎನಲ್ಕೆ ಕೈಸಾರ್ದ
ಪತ್ರಗಳೆ ಸಾಕ್ಷಿ! ಮಂದಸ್ಮಿತವರಳಿ ಬಿರಿದು
ಹೂವಾಯ್ತು ಸ್ವಾಮೀಜಿಯ ವದನಾರವಿಂದಂ.
"**ಪ್ರಯತ್ನಂತೇ ಪರಮೇಶ್ವರ**" ಎಂದರ್ ತಮ್ಮೊಳ್

ದಿವ್ಯತಮ ಸಮಾಧಾನದಿಂ.
ಗುರುಕುಲದೊಳಿತ್ತ
ಪ್ರವಚನ ಧಾರೆಯುಂ 'ರಾಜಯೋಗ' ಎಂಬುವ
ಪುಣ್ಯನಾಮವಂಬಡೆದು ಗ್ರಾಂಥಿಕ ರೂಪದೊಳ್
ಪ್ರಕಾಶಮಾದತ್ತು ಪ್ರಕಾಶನ ಸಂಸ್ಥೆಯ
ನೆರವಿನಿಂ. ಆಗಳೇಂ ಗ್ರಂಥದ್ರವ್ಯಂ ಹಬ್ಬಿ
ಹರಡಿದ ಪರಿಯ? ಎಡೆಎಡೆಗಳಲ್ಲಿ ಧೀಮಂತ
ಜನಮಾನ್ಯರ ಕೈ ಸೇರ್ದು ಸುಪ್ತಮನಚಿತ್ತದ
ಜ್ಞಾನರಾಶಿಯಂ ಮುಟ್ಟಿ ತಟ್ಟಿ ಬಡಿದೆಬ್ಬಿಸಿ
ತೊಳಗಿ ಬೆಳಗಿಸಿತು ಮೈಪುಳಕಗೊಳ್ವ ತೆರದಲಿ.
ಅತ್ತಲಾ ಭಾರತದೊಳ್ 'The Indian
Mirror' ಎಂದೆಂಬ ವರ್ತಮಾನ ಪತ್ರಿಕೆಯು
ಸಿಡಿದೆದ್ದು ಒಡಲ್ಗಿಚ್ಚಂ ಕಾರಿ ಸಿಡಿಸಿಡಿದು
ಸಿಡಿಮಿಡಿಯ ರಾಗ ಹಾಡಿದೊಲ್ ಇತ್ತೀಚೆಗಿನ
ಸಂಚಿಕೆಯಲಿ ಸ್ವಾಮಿ ವಿವೇಕಾನಂದರ ಮೇಲೆ
ಕುಸಾಹಿತ್ಯಹರಿಸಿ ಬರೆಯಿತಿಂತು "ವಿನೂತನ
ಹಿಂದೂ ನೊರೇಂದ್ರನಾಥದತ್ತ ಆಲಿಯಾಸ್
ವಿವೇಖಾನಂದ" ಇವರಂ ತೆಗಳಿ ಹೀಗಳೆದು
ಹಲವಾರು ಪತ್ರಂಗಳಂ ಉಲ್ಲೇಖಿಸಿದತ್ತು.
"ಈ ನರೇಂದ್ರನಾಥದತ್ತನಂ ಅಣುಗತನದಿಂ
ನಾವ್ ಕಂಡರಿದ ವ್ಯಕ್ತಿ. ಆತನ ಶೀಲದೊಳ್
ಮತ್ತಂ ಕೆಲ ವಿಚಾರದೊಳ್ ನಮ್ಮಭಿಮತವದು
ಮತ್ತಾವ ಪ್ರಮಾಣದ ಹೇಳಿಕೆ ಬರವಣಿಗೆಯ
ಒತ್ತಡಗಳಿಂ ಬದಲ್‌ಗೊಳದೆಂಬುದದು ಖಡಾ
ಖಂಡಿತಂ. ಇವಂ ತನ್ನ ಈಚಿನ ಪ್ರವಚನಾದಿ

ಭಾಷಣಗಳಿಂ ಕೀರ್ತಿವೆತ್ತಿಹುದು ಎಮಗೆಲ್ಲ
ಸಂತಸವೆ. ಆದೊಡೀತನುಂ ಪ್ರತಿನಿಧಿಪ
'ಹಿಂದೂ ಧರ್ಮ' ಸಾಂಪ್ರದಾಯಿಕ ಹಿಂದೂಧರ್ಮ
ಅಲ್ಲಮೆನಲನ್ಯಮಲ್ತು. ಹಿಂದೂ ಸಂಪ್ರದಾಯಸ್ಥ
ಕಾಲವಾಹಿಯಂ(ಸಾಗರ)ದಾಂಟಿ ವಿದೇಶಖಂಡಕೆ
ಯಾತ್ರೆಗೈವುದಂತು ಬಲ್ ಪಾಪದ ಕಾರ್ಯಂ!
ಮೇಣಲ್ಲಿ ಮ್ಲೇಚ್ಛರೊಳ್ ಊಟೋಪಚಾರಮಂ
ಪಡೆವುದು ಸಿಗಾರ್ ಸೇದುವುದು ಇವು ಸಲ್ವುದೇಂ
ಹಿಂದುವಿಗೆ? 'ವಿಫೇಖಾನಂದ' ಎಂಬ ಪೆಸರಿನಿಂ
ಪ್ರಖ್ಯಾತಿ ಪಡೆಯೆ ಪ್ರಯತ್ನಿಸಿಹನ್ ಇರ್ಕೆ ಆ
ದಿಶೆಯೊಳವನ್ ಕಣ್ ಕುಕ್ಕಿಪ ಬಿಜ್ಜೆಯಂಗೈದೊಡೆ
ಮಾತ್ರನಾವದಂ ಸಹಿಸಲಾಸಲ್ಲ......ಆತನೇಂ
ಸ್ವರ್ಗದಿಂ ನೇರವಾಗಿ ಧರೆಗಿಳಿದ ಮಹರ್ಷಿಯು
ಅಲ್ಲವಷ್ಟೆ? ಸರಿ, ಸರಿ, ಅವನೊರ್ವ ಬಂಗಾಳಿ
ಬಾಬು ತಾನಷ್ಟೆ? ಇನ್ನೆನಿತು ವೇಳ್ಕುಮವನಾ
ವಿಚಾರ? ಅವನಿಲ್ಲಿ ಹಾಡು ಕುಣಿತ ನಾಟಕದ
ರಂಗದಲಿ ಪಾಲ್ಗೊಂಡ ರಸಿಕ! ಇಂತೊರ್ವ ಬರಿ
ಸಾಮಾನ್ಯನಂ, ಅಲ್ಲದೆಯೆ ತಮ್ಮವರಿಂದಲೆ
ಬಹಿಷ್ಕೃತಗೊಳಬೇಕಿರ್ದ ಸಾಮಾನ್ಯ ಮರ್ತ್ಯನಂ,
ಧೂರ್ತ ಕಪಟಿಯಂ ಪ್ರವಾದಿಯೆಂದು ಪೊಗಳುವ
ಪಾಡಿದೇಂ? ಛಿಃ! ಛಿಃ!...."

ಪತ್ರಿಕೆಯ ತುಣುಕುಗಳೆಲ್ಲಂ
ಓದಿದರ್ ಸ್ವಾಮೀಜಿ ತಮಗೇ ವಿರುದ್ಧವಾಗಿ
ನಡೆದಿರ್ದ ಎಲ್ಲವಗೆಯ ಅಪವಾದ ಮೇಣುಂ
ಅಪಪ್ರಚಾರಗಳಂ. ಸ್ವಾಮೀಜಿಗದು ವಿಶೇಷ

ಎನಿಸದಾಯ್ತು. ಮನಮತಿ ಅರಳದ ಮುಗ್ಧದುಗ್ಧ
ಮನುಜರೊಳಿದು ಸಹಜವೆ ಎಂದೆಂಬುವ ಅನನ್ಯ
ದಯೆ ಕನಿಕರ ತೋರ್ದು ವದನಬಿಂಬದಲಿ ಹಾಸ್ಯ
ರಸವಂ ಹರಿಸಿದರ್ ದಿವಿನಾಗಿ. ಶಶಿಯ ಶೀತ
ಶೀತಲ ಸುಖಾಂತ ರಸರಿಸಿಗಿರ್ಪುದೇಂ ಭವದ
ಸುಖದುಃಖ? ಅಂತುಮಲ್ಲದೆಯುಂ ತಮ್ಮ ರೀತಿ
ನೀತಿಯಂ ಸಮರ್ಥಿಸಿಕೊಂಬ ಯೋಚನೆಯಕುಡಿ
ಮೊಳೆಯದಾಯ್ತು ಎದೆಯ ಬನದಲಿ. ನಿರಾತಂಕ
ನಿಶ್ಚಿಂತೆಗಳಿಂ ದೈನಂದಿನ ಅಮೂಲ್ಯತಮ
ಕಾರ್ಯ ಚಟುವಟಿಕೆಯಲಿ ಮುಳುಂಗಿದರ್ ಎಂದಿನ
ಮಾಳ್ಕೆಯಲಿ. ಅನೇಕ ಗೆಳೆಯ ಬಂಧುಗಳ್ ಕೆರಳಿ
ಮನನೊಂದು ಬೆಂದು ಬೇವಾಗಿ ಸ್ವಾಮೀಜಿಯಂ
ಕಂಡು ಕೋರಿದರ್ "ನೀಮಿಂತು ಕೆಮ್ಮನಿರುತಿರೆ
ಮೌನಂ ಸಮ್ಮತಿ ಸೂಚಕಮಲ್ತೇ? ಇದೇನಿದು
ಮಿಣ್ಣನಿರ್ಪಿರಿ? ಬಹಿರಂಗದೊಳ್ ಸರಿಯುತ್ತರದ
ಖಡ್ಗಮಂ ಬೀಸಬಾರದೇ ಸ್ವಾಮೀಜಿ? ನೀವ್
ಸ್ವಹಿತವನಿನಿತು ಗಮನಿಸದಿರ್ದೊಡೇಂ ಗತಿಯ್ಕೆ?"
ಇಂತಿಂತು ಗಲಿಬಿಲಿ ಭರಿತ ಮನದೊಳಿರೆ
ಜನಗಣಂ ಗುರುವಿನ ಸುಶಾಂತ ಭಾವವೇ ಬೇರೆ.
ಬಳಿಕಲಾ ಮಿತ್ರಬಂಧುಗಳ್ ಒಡಲಿನ ಕಿಚ್ಚು
ವೆರ್ಚಿ ಸಿಡಿಮಿಡಿಗೊಂಡು ಕಟುಕಠಿಣ ಶೈಲಿಯಲಿ
ಕೋಪ ದುಃಖಗಳ ಕೋಡಿ ಹರಿಸುವೊಲ್ ತಾಮೇ
ಉತ್ತರವ ಬಿತ್ತರಿಸಿದರ್ ಉತ್ತಮ ಪತ್ರಿಕೆ
ಮತ್ತಂ ನಿಯತಕಾಲಿಕೆಗಳ ಮುಖೇನಮೆಲ್ಲ
ಕುಪಿತ ಕುಮನಸ್ಕರಿಂಗೆ, ಬಿಸಿಯಕ್ಕರಗಳಿಂ.

ಆರೋಪ ಪ್ರತ್ಯಾರೋಪಗಳ್ ನಡೆದುವು ಮತ್ತೆ
ಕೆಲಗಾಲ ಮನಕಿಡಿಸುವೊಲ್. ಆ ತರುವಾಯಿ,
ಕಾಷ್ಠವುರಿದುರಿದು ಭಸ್ಮವಾದ ಬಳಿಕ ಅಗ್ಗಿ
ಉರಿತಗ್ಗಿ ಶಾಂತಗೊಳುವಂತೆ ಅದರಂಕಣಂ
ಮುಗಿಬಗಿಯಾಯ್ತು, ರೋಷವುಡುಗಿದವೊಲ್.
ಮುಂದೆ ಗುರುಕುಲವಂ ನಡೆಸಿ ಬಲಿಸಿ ಬಾಳಿಸಲ್
ಶಿಷ್ಯೋತ್ತಮರ್‌ರಿರವೇಳ್ಕುಮೆಂಬ ಪಂಬಲಂ
ಮೂಡಿರೆ ಮನದಿ, ಗುರುಕೃಪೆ ಎನಲ್ಕೆ ಮುಂದ್ಯೆದು
ನಿಲ್ದರೆನಿತೊ ಶಿಷ್ಯಗಣಂ ದೀಕ್ಷೆ ಪಡೆದುಕೊಳೆ
ಸ್ವಾಮೀಜಿಯ ಮುಂದೆ. ವರ ತೋಷದಿಂದವರಂ
ಸ್ವೀಕರಿಸಿ ಗುರುಕುಲದ ನಿಯಮಾವಳಿಯ ತಿಳಿಪಿ
ಬೋಧಿಸುತೆ ತಕ್ಕಿನ ಮನಮೆಚ್ಚಿನ ಶಿಷ್ಯಗಣ
ಮಾನಕೇರ್ವಡಿಸಿದರ್ ಸ್ವಾಮೀಜಿ. ಸಂನ್ಯಾಸಿ
ಧರ್ಮದ ಹುರುಳಂ ತಿಳಿಪಿ ಸನಾತನ ಧರ್ಮದ
ಅನುಷ್ಠಾನದ ತತ್ತ್ವಬೋಧನೆಯ ಕೈಕೊಂಡರ್
ಅನುದಿನಂ. ಧರ್ಮಜ್ಞಾನದ ಅರಿವು ಅಣುಗರಂ
ಸಜ್ಜನಿಕೆಯ ತುಟ್ಟತುದಿಗೇರಿಸಿರೆ ಎಲ್ಲರ
ಎಲ್ಲವಗೆಯ ಸಹಕಾರ ಸಹಾಧ್ಯಾಯತನದಿಂ
ಸಂತುಷ್ಟರಾದರ್ ಗುರುವರಂ.

ಡೆಟ್ರಾಯ್ಟ್

ನಗರಿಯೊಳ್ ಸಂಘಟಿತ ಸುಸುಂದರ ಔತಣದ
ಕೂಟಕೂಡಿ ಉನ್ನತ ಸಮಾರಂಭ ಏರ್ಪಡಿಸಿ
ಮಧುರ ಆಹ್ವಾನ ಕಳಿಪಿದರ್ ಸ್ವಾಮೀಜಿಗಳ
ಸನ್ನಿಧಿಗೆ. ಮಧುರತರ ಕರೆಯೋಲೆ ಹೃನ್ಮನಂ
ಮುಟ್ಟಿ ಮುದವೆತ್ತು ಸಹಜಗತಿಯಲಿ ವರಮಿತ್ರ

ಮಂಡಲಿಯೊಡಗೂಡಿ ಪೊರಮಟ್ಟರ್ ಅಂದಿನಾ
ಔತಣದ ಕೂಟಕೆಂದು ಡೆಟ್ರಾಯಿಟ್ ನಗರಿಗೆ.
ಅತಿಥಿಗಳ ಮೇಣ್ ಅತಿಥೇಯರ ನಿಜ ಸಂಭ್ರಮ
ಮೆರೆದುದು ಅಮಿತ ತೋಷಹರಿಸಿ, ಆ ತೋಷದಲಿ
ಅಡಗಿರ್ದ ಕೃತ್ರಿಮತೆಯ ಕೂರತನಂ ಆರಿಗು
ಹೊಳೆಯದಾಯ್ತು. ನಗೆವಾತುಗಳ ಮಣಿ ಮುತ್ತುಗಳ್
ಸುರಿಯುತ್ತಿರೆ ಗಿರಿವೆಟ್ಟಗಳ ಮುಖವಾಣಿ ಕೊಡುತಿರ್ದುದು
ಸಿರಿ ದನಿಯನನುಸರಿಸಿ, ಮರುದನಿಯ. ಬಿಸಿ ಬೂಂದು
ರಸ ತುಂಬಿದ ಬಸಿಗಳ್ ಎಲ್ಲರ್ಗೆ ಇತ್ತವೊಲ್
ತಮಗೊಂದು ಬಸಿಯನಿತ್ತರ್ ಇತರ ತಿನಿಸುಗಳ
ಜೊತೆಗೆ. ಬೂಂದುರಸದ ಬಸಿಯಲಿ ಬಿಸಿಬಿಸಿಹಬೆಯು
ಉಂಗುರುಂಗುರವಾಗಿ ಮೇಲೇರುತಲಿರ್ದುದು
ಸುವಾಸನೆಯಂಬೀರಿ. ಒಡನೆ ಬಸಿಯನೆತ್ತಲ್
ಕೈಚಾಚಿದರ್ ಗುರುವರಂ. ಆ ಪರಿಪುಣ್ಯ
ಮೂರ್ತಿಯ ಮನಕೆ ಆವುದೇ ಕೃತ್ರಿಮತೆಯ ಕಹಿ
ಸುಳಿಯದಾಯ್ತು. ಆಕೂಡಲೆ "ಹಾ, ವಿಷ! ವಿಷ ಕಣಾ!
ಮುಟ್ಟದಿರ್!" ಸಮಯಸ್ಫುರಿತ ದಿವ್ಯ ಆದೇಶ
ಐದುದೆಲ್ಲಿಂದ? ಎದೆಯ ನೆಲೆಯಿಂದಲೇ? ಗುರು
ಪರಮ ಹಂಸರ ಎಚ್ಚರಿಕೆಯೊ, ದಕ್ಷಿಣೇಶ್ವರ
ಕಾಳಿಕಾಮಾತೆಯ ಶುಭವತ್ ಸೂಚನೆಯೊ ಎನೆ
ಗಂಭೀರಮಾಯ್ತು ಆ ಸಮಾರಂಭದ ಸಮಯಂ.

ಸ್ವಾಮಿಜಿಯುಂ ಅಂದಿನ ಸಾಯಂ ಪ್ರಾರ್ಥನೆಯ
ಪೊಳ್ತಿನಲಿ ಪದ್ಮಾಸನದೊಳ್ ಮಂಡಿಸಿ ಮನದಿ
ಹಾ! '**ನ ಗುರೋಃ ಅಧಿಕಂ**' ನಿಮ್ಮ ಮಾರ್ಗದರ್ಶನಂ
ಎನ್ನೆಲ್ಲ ಕಾರ್ಯಗತಿಗೆ ಸತತವು ಪೂರಕಂ.

**“ಗುರುರ್ಬ್ರಹ್ಮಾ ಗುರುರ್ವಿಷ್ಣುಃ
ಗುರುರ್ದೇವೋ ಮಹೇಶ್ವರಃ
ಗುರುರೇವ ಪರಂ ಬ್ರಹ್ಮ
ತಸ್ಮೈಶ್ರೀ ಗುರವೇ ನಮಃ”**

ನಿಶಿಯುರುಳುರುಳಿ ಮುಂಬೆಳಕು ಮೂಡಿತು ಮೂಡಣ
ದಿಗ್‌ದೇಶದಲಿ. ಪ್ರಾತಃರ್ವಿಧಿಯುಂ ಮುಗಿಯಿತು. ನಿತ್ಯ
ಪ್ರಾರ್ಥನೆಯುಂ ಮುಗಿಯಿತು. ಮನೆಯೊಡತಿಯು ಎಚ್ಚರ
ಗೊಳ್ಳುವನಕ ಕೈಬಿಡುವು. ಸ್ವಾಮೀಜಿ ಕುಳಿತರ್,
ಪತ್ರಲೇಖನಕೆ. ತಮ್ಮಮೇಲಿನಿತು ಸಲ್ಲದ
ಕಟು ಕಠಿಣತರ ದೋಷಮಂ ಹೊರಿಸಿ ಹೊಲೆಗೈದು
ಮನಂಗೆಡಿಸಿಯುಂ ತಾಂ ಭಂಡನವೊಲ್ ಇರ್ಪುದು
ತರವಲ್ಲಮೆನಿಸಿ ಪರಮ ಶಿಷ್ಯ ಅಳಸಿಂಗರಂ
ಕುರಿತು ಲೇಖಿಸಿದರೊಂದು ಉಲ್ಲೇಖನಮಂ,
“.....ನಿಮ್ಮಿಂದೆ ಸಾಧ್ಯಮಾದೊಡೆ ನೀವ್ ಒಗ್ಗೂಡಿ
ಬೃಹದ್ ಸಭೆಯಂ ಕರೆಯಲ್ ನಾಡಿನ ಉದ್ದಗಲ
ಓಡಾಡಿ ಪ್ರಚುರಂಬಡಿಸಿ ಸಭೆಯನೇರ್ಪಡಿಸಿ.
ಅದರ ಅಧ್ಯಕ್ಷತೆಯ ಮಹೋನ್ನತ ಗಾದಿಯೊಳ್
ತಕ್ಕ ಸಿಂಹ ಪ್ರಾಯದ ವ್ಯಕ್ತಿಯಂ ಪ್ರತಿಷ್ಠಿಸಿ
ಭರ್ಜರಿಯ ಸಭೆಯಂ ನಡೆಸಬಲ್ಲಿರಾ? ಆಂ
ಸೂಚಿಸುವುದಾದೊಡಮದಂ ಅಲಂಕರಿಸಲ್ಕೆ
ತಕ್ಕ ವ್ಯಕ್ತಿಯೆನೆ ರಾಮನಾಡಿನ ಅರಸನಿರೆ
ಒಳ್ಳಿತ್ತೈ. ಆನಿಲ್ಲಿಗೈದುದಂ ಸಮರ್ಥಿಸಿ
ಮೇಣೆನ್ನ ವಿಶ್ವಧರ್ಮ ಸಮ್ಮೇಳನದ ಜಯ
ಶೀಲತೆಗೆ ಎಲ್ಲ ಜನತೆಯ ಶುಭವಂ ಹಾರೈಸಿ,
ಠರಾವಂಗೆಯ್ದು ಸಂಪೂರ್ಣ ಅನುಮೋದನಾ

ಘೋಷಣೆಯ ಪಡೆಯಿರಿಮ್. ಬಳಿಕಲದಂ ಇಲ್ಲಿನ
"ಚಿಕಾಗೊಹೆರಾಲ್ಡ್" "ಇಂಟರ್ಓಶಿಯನ್" "ನ್ಯೂಯಾರ್ಕ್‌ಸನ್"
ಮತ್ತಮಾ ಡೆಟ್ರಾಯ್ಟ್-ನ 'ಕಮರ್ಷಿಯಲ್ ಅಡ್ವರ್-
ಟೈಜರ್' ಪತ್ರಿಕೆಗಳಿಂಗೆ ಕಳಿಪುದು; ನಿಮ್ಮಿಂದೆ
ಸಾಧ್ಯವಾದೊಡದು ಸತ್ ಕಾರ್ಯಮಪ್ಪುದು. ನಿಮ್ಮ
ಶುಭ ಹಾರೈಕೆಯ ಗೊತ್ತುವಳಿಯ ಪ್ರತಿಗಳನುಂ
ಸಮ್ಮೇಳನಾಧ್ಯಕ್ಷ ಡಾ ಬರೋಸ್-ರಿಗೆ ಮತ್ತಂ
ಶ್ರೀಮತಿ ಜೆ.ಜೆ. ಬ್ಯಾಗ್‌ಲೀರವರಿಂಗೆ ಕಳಿಪಿರೈ.
ಸಭೆಯ ಗಾತ್ರ ಮೇಣಧಿಕ ವಿದ್ವತ್‌ಪೂರ್ಣ ಶೈಲಿ
ಪರಿಗಣಿತಮಾಗುವೊಲ್ ಗಮನಿಸಿಮ್. ಶ್ರಮಿಸಿಯುಂ
ಸಾಮಾನ್ಯಮಾದೊಡದು ಸುವ್ಯರ್ಥಂ. ನಮ್ಮೆಲ್ಲ
ರಾಷ್ಟ್ರೀಯರ್ ರಾಷ್ಟ್ರಕಾಗಿ ಧರ್ಮಕಾಗಿ ಒಗ್ಗೂಡಿ
ನಡೆಸಲ್ವೇಳ್ಕುಂ. ಅಂತೆಯೇ ಮೈಸೂರ್ ರಾಜರ್,
ದಿವಾನರ್ ಮೇಣಂತೆಯೇ ಖೇತ್ರಿಯ ರಾಜರ್
ಇವರೆಲ್ಲರಿಂದೆ ಅನುಮೋದನಾ ಪತ್ರಮೋ
ಅಥ ಅಭಿನಂದನಾ ಪತ್ರಮೋ ತರಿಸಿದೊಡದುಂ
ಒಳ್ಳಿತ್ತೈ. ಸೋದರರೆ, ಎಳಿ, ಎದ್ದೇಳಿ! ಈ
ಜಗತ್ತಿನೊಳ್ ಸ್ಪರ್ಧೆಯ ಕಣಕ್ಕಿಳಿಯದೆ ನಮಗೆ
ಗತಿಯುಮಿಲ್ಲ. ಸ್ಥಾನಮಾನವುಂ ಇಲ್ಲ. ಕೇಳಿ
ಸೋದರರೆ! ಸರ್ವತ್ರ ಸದಾ ಕಾರ್ಯಕಾರಣ
ಸನ್ನದ್ಧರಾಗಿ. ಭಗವಂತನ ಅಭಯ ಹಸ್ತ
ನಿಮ್ಮ ಮೇಲಿದೆ. ನೆಚ್ಚುಗೆಡದಿರಿ. ಪಥಗೆಡದಿರಿ.
ಸರ್ವಂ ಶುಭಮಸ್ತು."
ಗುರುವರ್ಯನಿಗಂದಿನಾ
ಅಂಚೆಯೊಳೈತಂದುದು ಖೇತ್ರಿಯ ಮಹಾರಾಜನ

ಪತ್ರಲೇಖನವೊಂದು "...ಎನ್ನ ಆತ್ಮೀಯ ಪ್ರಿಯ
ಶ್ರೀಗುರುವೆ, ನಿಮ್ಮೊಳ್ಳೊಂದು ಅರಿಕೆ ಇದೆ ಎನಲ್ಕೆ
ಸಂಕೋಚಮೆನಿಪುದೆನಗೆ. ಉಜ್ವಲ ಸೂರ್ಯನೆದುರು
ಮಿಣುಕು ಹುಳುವೇ? ಇರ್ಕೆ ಆದೊಡಂ ತವ ಪಾದ
ಪದುಮದೊಳ್ ಎನ್ನದೊಂದು ಅರಿಕೆಯಿಹುದು ಸ್ವಾಮಿ.
ಬೆಂಗಡೆಯೊಳ್ ಆಡಾಡಿಕೊಂಬುವ ಹೀನರ್ಗೆ
ಮನಗೊಟ್ಟು ಜಿಗುಪ್ಸೆಗೊಳದೆ ನಿಮ್ಮ ಪ್ರವೃತ್ತಿ
ಕಾರ್ಯಮಂ ಕಿಂಚಿತ್ತು ಸ್ಥಗಿತಗೊಳಿಸದಿರಿರೆಂಬ
ಬೇಡಿಕೆಯಿದಂ ಮಾನಿಸಿರಿ. ನಿಮಗೆ ತಿಳಿದಂತೆ,
"**ಕ್ರಯ ವಿಕ್ರಯ ವೇಳಾಯಾಂ ಕಾಚಃ ಕಾಚಃ**
ಮಣಿರ್ಮಣಿಃ" ಪಾಶ್ಚಾತ್ಯದೇಶೀಯ ಉನ್ನತ
ಸುಸಂಸ್ಕೃತ ವ್ಯಕ್ತಿಗಳಿಂ ಸಹಾಯಂ ಪಡೆಯುತೆಮ್ಮ
ರಾಷ್ಟ್ರವಂ ಮೇಲೆತ್ತುವೊಂದು ದೀರ್ಘಕಾಲದ
ಯೋಜನೆಯನು ನೀವ್ ಕೈವಿಟ್ಟರೆಂತು? ನಿಮ್ಮಂ
ಉಳಿದು ಬೇರಾರಿಹರ್ ಇದಂ ಪರಿಪೂರ್ಣಗೊಳಿಸೆ?
ನಿಮ್ಮನೊರ್ಮೆ ಕಣ್ತುಂಬ ಕಾಂಬುವ ಇಚ್ಛೆಯುಂ
ಮೂಡಿರ್ಪುದು. ಅದರೊಟ್ಟಿಗೆ ಬೇರೊಂದು ಮಹತ್
ಶಕ್ತಿಯುಂ ಎನ್ನ ಮನವನೆಳೆದೆಳೆದು ಆಸೆಯ
ಬೇರಿಂಗೆ ಕೊಡಲಿಯೇಟನಿತ್ತು ಸೆಳೆವುದು ತಾಂ
ನಿಯಂತ್ರಿಸಿದೊಲ್. ಸಧ್ಯ ನೀವಲ್ಲಿ ಇರ್ಪುದದೆ
ಸುಕ್ಷೇಮಮೆನಿಪುದೆನಗೆ, ನಿಮ್ಮ ಶುಭವಂಬಯಸಿ
ಪ್ರಾರ್ಥಿಸಲ್ ಪ್ರೇರೇಪಿಸಿದತ್ತು ಎದೆಯೊಳ್ ಒಳ
ದನಿ. ಕ್ಷಮಿಸಿ ಗುರುವೇ...ದಯಮಾಡಿ ಕ್ಷಮಿಸಿಮ್."
ಸನ್ ಸಾವಿರದೆಂಟನೂರತ್ತೊಂಬತ್ತೈದನೆಯ
ವರ್ಷಮಾನದ ಜೂನ್ ತಿಂಗಳ ಪ್ರಶಾಂತಮಯ

ಸುರಸುಂದರ ಕಾಲೀನ ದಿವಸಗಳಲಿ ತಮ್ಮ
ದಿನಚರಿ ಯಥಾವತ್ ನಡೆಯುತಿರೆ ಗುರುದೇವನ
ಶರೀರಬಲ ನಸುನಸುವೆ ಕುಗ್ಗತೊಡಗಿದತ್ತು
ದಿನದಿನಂ. ಅಂದು ಬಿತ್ತಿರ್ದ ವೇದಾಂತಗಳ
ಬಿತ್ತವುಂ ಸಸಿಯಾಗಿ ಗಿಡವಾಗಿ ಬೆಳೆಬೆಳೆದು
ನಳನಳಿಸಿದತ್ತು ಜನಗಣಮನವ ಸೆಳೆವವೊಲ್.
ಗುರುದೇವ ರಾಮಕೃಷ್ಣ ಪರಮಹಂಸರ ದಯೆ
ಘನಿಸಿತೋ ಎನೆ ಹಲಹಲವು ಕಡೆಗಳಿಂ ದ್ರವ್ಯ
ಸಹಾಯ ಒದವಿ ಬಂದುದು ಧರ್ಮದ ಶ್ರದ್ಧೆಯೇ
ಹರಿದು ಬಂದವೊಲ್. ಪಾಠಪ್ರವಚನಗಳೊಡನೆ
ಸಂದರ್ಶಕರ ಸಂಖ್ಯೆಯುಂ ಬೆಳೆಯಿತು ದಿನದಿನ
ಬಹುತರದಲಿ. ಸ್ವಾಮೀಜಿಯ ದೇಹ ಸಂಪುಟಂ
ಬಳಲಿ ಬೆಂಡಾಯ್ತು. ಎಲ್ಲಾದೊಡಂ ದೂರದೊಳ್
ತಣ್ಣಗೆ ಹುದುಗಿ ಅಡಗಿರುವ ಯೋಚನೆ ಸುಳಿವುದು
ಮನದಿ. ಅನುಗಾಲಂ ಅದೇಯೋಚನೆ ಶಿರೋ
ದೇಶದಲಿ. ನಿರ್ಮಾನುಷ ಪ್ರದೇಶಗಳನುಂ
ನೆನೆವುದು ಸುಮಾನಸೀ ಪಕ್ಷಿ. ಎಲ್ಲಿಯುಂ ಸಧ್ಯ
ನಿರ್ಮಾನುಷ ನಿರ್ವಚನ ನಿಶ್ಶಬ್ದದ ನಲ್ತಾಣ
ಅರಸಿಯುಂ ಇಲ್ಲವೆನೆ ಶಾಂತಿಗಾಗಿ ಪರಿತಪಿಸಿ
ಗೀಳಿಡುವೊಲಾಯ್ತು ಮನಮತಿಗಳಿಗೆ. ಸ್ವಾಮೀಜಿ
ಶಾಂತಪ್ರಶಾಂತನಿಶಾಂತಸುಶಾಂತವಾಶಾಂತ
ಕಾಲಮಾನಮಂ ಬಯಸಿದೊಲ್ ದೃಷ್ಟಿಯಷ್ಟಿಯ
ನೆಟ್ಟಿರ್ ಅವ್ಯಕ್ತ ಜಗದ ಬ್ರಹ್ಮಾಂಡ ಕೋಶಕೆ.
ಪೊಳ್ತುರುಳಿತು ಮಿಣ್ಣನೆ ತಾವರಿಯದ ತೆರದಲಿ.
ಯೋಚನಾ ಬದ್ಧರಾಗಿ ಮತ್ತಂ ಸಾಧನಾ

ಶೀಲರಾಗಿ ಚಿಂತನಾವೇಶಿಯಾಗಿ ಕಳೆವುದು
ಕಾಲಮಾನಂ. ಬಾವವಿಭಾವಗಳಲಿ ತರ್ಕ
ವಿತರ್ಕಗಳಲಿ ಸಿಲ್ಕಿ ದಣಿವುದು ಹೃದಯಧಾತ್ರಿ.
ಮನುಕುಲದ ಉದ್ಧಾರಮಂ ಬಯಸಿ ಪಗಲಿರುಳ್
ಶಾಂತಿಯೀ ಜ್ಞಾನದೀ ಚಿಂತೆಯೀ ಸನಾತನ
ಧರ್ಮದೀ ವೈಚಾರಿಕ ಕ್ರಾಂತಿಯೀ ಸಾಧನಾ
ಶೀಲದೀ ಮನಗೊಂಡು ತನುಗೊಂಡು ಪ್ರಾಣದಾ
ಕರಂಡವೆ ತುಂಬಿ ಬದುಕಿನ ನಿಷ್ಠೆಯೇ ತುಂಬಿ
ತದೇಕ ಮನದಿಂದ ತದೇಕ ಚಿತ್ತದಿಂದ
ಎಡೆವಿಡದೆ ದುಡಿವರ್ ದಿನಚರಿಯನುಕ್ರಮದಲಿ
ಸೆರೆಸಿಲ್ಕಿ. ಕಾರ್ಯವಾಹಿ ಹರಿದುದು ಝರಿಯಾಗಿ
ತೊರೆಯಾಗಿ ಹೊಳೆಯಾಗಿ ಲೋಕೋತ್ತರವಾಗಿ.
ಸುವಿಶಾಲ ವಿಶ್ವಮೈತ್ರಿಗೆ ಅನುಗುಣವಾಗಿ.
　ಚೈತ್ರ ವೈಶಾಖನುಬ್ಬಟೆಯಿಂ ವಸಂತ ಪ್ರಭುವುಂ
ಆನಂದ ಮೋದಕತೆಯಲಿ ರಾಜ್ಯಾಂಗ ಭಾರದ
ಸೂತ್ರವಂ ಪಿಡಿದಂ. ಆಗಳಾ ವನಧಾತ್ರಿಯುಂ
ಕೆಂದಳಿರು ಹೊಂದಳಿರು ಬೆಳ್ದಳಿರು ಹಸುರ್ದಳಿರು
ಹರಿದ್ರ ದಳಿರ್ಗಳ ನವನವೀನ ವರ್ಣಮಯ
ಸೌಂದರ್ಯ ಶಾಲೀನ್ಯತಾ ಶೋಭೆಯಿಂ ಶೋಭಿಸಿ
ಮನಮೋಹಕ ಪುಷ್ಪಾಲೋಕಮಂ ಮೈಗೊಂಡು
ಸಿರಿಸೊಬಗಿನ ಪರಮಾಲಂಕಾರ ಶೋಭೆಯಲಿ
ಮೆರೆಯುತಿರೆ ಅರುಣಾರುಣನೂಷ್ಮದೈಶ್ವರ್ಯಂ
ಧಗಧಗಿಸಿದತ್ತು ತನುಮನಗಳಂ ಹಿಂಡಿದೊಲ್
ಸ್ವೇದದಾರೆಯಂ ಬಸಿದು.
　　　　　　　　ಅನೇಕ ಬಗೆವಗೆಯ

ಕರಕರೆ ಕಿನಿಸಿಗೆಗಳೊದವಿದೊಡಂ ಮನಗೆಡದೆ
ದೃಢಭಾವದಿಂ ನಿತ್ತರಿಸಿ ಉತ್ತರಿಸುವರ್
ಗುರುಸ್ಥಾನದ ಗೌರವವಂ ಕಿಡಿಸದ ತೆರದಿ.
ಸ್ವಾಮಿಜಿಯುಂ ಎನಿತೆನಿತೊಬಾರಿ ಮನಗೆಟ್ಟು
ಕೆರಳಿದೊಡಮದೆ ಗಳಿಗೆಯಲಿ ತನ್ನನುಂ ತಾನೆ
ಸೈಪುವಂತೆ ನುಡಿವರ್ ಸಮಾಧಾನದಿಂ, "ಎಲೆ,
ಅಮೃತ ಪುತ್ರರಿರಾ ಕೇಳಿ! ಕಿವಿಮನಗೊಟ್ಟು,

"ಭಯಾನಾಂ ಭಯಂ ಭೀಷಣಂ ಭೀಷಣನಾಂ
ಗತಿಃ ಪ್ರಾಣಿನಾಂ ಪಾವಕಂ ಪಾವನಾನಾಂ ।
ಮಹೋಚ್ಚೈಃ ಪದಾನಾಂ ನಿಯಂತೃತ್ವ ಮೇಕಂ
ಪರೇಷಾಂ ಪರಂ ರಕ್ಷಣಂ ರಕ್ಷಣಾನಾಂ ॥"

ಕೇಳ್, ಇಂತಿಂತಿಂತು ಸಮಸ್ತತರದಲಿ ಭಗವಂತನೇ
ಕಾರಣಕರ್ತನಿರುತಿರಲ್ ನಾವಿಂದು ಧಾರ್ಮಿಕ
ಪಂಥವನಿಡಿದೊಡೆ ಸಾಲ್ಗುಂ. ಯೋಚಿಸಿ ತಿಳಿಯಿರಿ.
ನಿಮ್ಮ ಸ್ಥಿತಿಗತಿಯಂ ನೀವೇ ಮನನಗೈದು
ನೀವೇ ನಿಮ್ ನಿಮ್ಮ ಸುಪಥಮಂ ಪುಡುಕಿಕೊಳ್ಳಿ."
ಕಾಲಮಾನವುರುಳಿತು. ಶರದೃತು ರಾಜನುಂ
ಎಂತು ನಿರ್ಗಮಿಸಿರ್ದನಂತು ಹೇಮಂತನಂತು
ಆಗಮಿಸಿದಂ ಸಡಗರ ಸಂಭ್ರಮಗಳ್‌ವೆರಸಿ.
ಮಾಗಿಯ ದೊರೆಯುಂ ಬಿಮ್ಮನಿಂ ಭೀಮಿಸುತಲೈದು
ಶೀತಲಶೈತ್ಯದ ಘನ ಚಾಮರಮಂ ಬೀಸಿ
ವೀಸಿ ತನಿಗೊಳಿಸಿದಂ, ಮಂಜಿನ್ನೈಕಿಲ್ ರಾಶಿ
ರಾಶಿಯಂ ಘನೀಕರಿಪಮೋದದಲಿ. ಶಿಶಿರನ
ರಾಜ್ಯಭಾರ ನಡೆದುದು ಹಿಮವೊತ್ತಿ. ತನಿವೊತ್ತಿ.
ಪಕ್ಷಿಸಂಕುಲಂ ಮೈಮುದುಡಿ ಕೊರಳ್ ಹುಗಿದು ಕಣ್

ಕುಗುರಿ ತಾಳಲಾರದೆ ಹಿಮಪಾತದ ಪ್ರಪಾತವಂ.
ಸ್ವದೇಶಮಂ ತೊರೆದು ದೂರದೂರದಾ ಸಮ
ಶೀತೋಷ್ಣ ವಲಯಮಂ ಕುರಿತು ಪೊರಡುತಿರ್ದುವಾ
ಪ್ರದೇಶದೆಡೆಯಡೆಗಳಿಂ ಹಿಂದು ಹಿಂದಾಗಿ
ಗುಂಪು ಗುಂಪಾಗಿ. ಅವುಗಳ ಸಂದೃಶ್ಯ ವೈಭವ
ಸೆಳೆದುದು ಮನವಂ ಸೂಜಿಗಲ್ಲಿನವೊಲ್. ಅಂಥ
ದರ್ಶನೀಯಮಾದ ಸುಂದರ ಬಂಧುರ ದೃಶ್ಯ
ಸೆಳೆಯುತಿರೆ ಉನ್ಮುಖಿ ಗುರುವರ್ಯರ್ಗಂ ಅವುಂಗಳ
ಒಗ್ಗಟ್ಟು. ಪ್ರೇಮ ಬಾಂಧವ್ಯದರಸ ಸ್ಫೂರ್ತಿಯೇ ಸರಿ
ಎನುತೆನುತೆ ಆನಂದ ತುಂದಿಲತೆಯಲಿ ಮುಳುಗಿ
ತೇಲಿದರ್. ಭರ್ ಭರ್ರನೆ ಹಾರುತ ಹಾರುತ್ತ
ಹೋಗಿಯೇ ಹೋದುವು ತೆರೆದ ಕಂಗಳ ಮುಂತೆ!
ಗಿಡುಮರ ಬಳ್ಳಿಗಳ ಜಗತ್ ಬಣಬಣಿಸಿದುದು ಪಕ್ಷಿ
ಲೋಕರಹಿತಮಾಗಿ. ಗಿಡುಮರಗಳ್ ಎಲೆಯುದುರಿ
ಹಣ್ಣೆಲೆಗಳ್ ಹರಡಿದುವು ನೆಲದಲಿ. ಎಲೆರಹಿತ
ಗಿಡುಮರಗಳ್ ಬರಲು ಬರಲಾಗಿ ಬರೀ ಬೋಳು
ಬೋಳಾಗಿ ಕರಣಾಜನಕಮಾಗಿ ಕಂಗೊಳಿಸಿ
ಕಡು ಬೇಸರವೊತ್ತುತಿರೆ ಮನಕೆ, ಹಿಮಪಾತ
ಪರಿಪಾಠಮಾಯ್ತು, ಮಾಗಿ ಪ್ರಭುವಿನ ಗಂಭೀರ
ಅಟಾಟೋಪದಿಂ. ಅರಳೆಯರಾಶಿ ಸುರಿದವೊಲ್
ಮುಚ್ಚಿತು ಭುವಿಯ ತಲಂ. ಮನೆ ಮಠಗಳೆಲ್ಲ ನೆರೆ
ಮುಚ್ಚಿದುವು ಮುಗಿಲ್ ಮಂಜಿನ ರಾಶಿಯುಂ ತುಂಬಿ.
ಸ್ವಾಮೀಜಿ ಉಣ್ಣೆಯುಡುಪಿನಲಿಯುಂ ನಡುಗಿದರ್
ಗಡಗಡನೆ. ಅಂಗಣಕಿಳಿದೊಡೆ ಕಣಕಾಲ್‌ಗಳ್
ಹುಗಿಯುವುವು ಮಂಜಿನ ಹರವಿನಲಿ. ಗಗನದಿಂದೆ

ಸುರಿವ ಮಂಜಿನ ತುಣುಕುಗಳ್ ತಲೆಮೈಗಳನುಂ
ಮುತ್ತಿ ಮುದ್ದಿಡುವುವು ತರತರ ನಡುಗಿಪಂದದಿ.
ಶೀತಲಾತಿಶೀತದ ನೋಂಪಿ, ಮಧುರತರದಲಿ
ಪೊಣ್ಮಿದ ಸುಸುಂದರ ಬಿಣ್ಪಿನಿಂಪು ಭಾಸಣಿಸೆ
ಗುರುವರಂ ಮಿತ್ರರೊಡನೆ ಮಂಜಿನ ಮೇಲಾಡಿ
ತೇಲ್ವಿ ರಸಕ್ರೀಡೆಗಳಲಿ ಪಾಲ್ಗೊಳುತೆ ಕಳೆವರ್
ಕೆಲಗಾಲವಂ. ಮಧುರ ರಸನಿಮಿಷ ಬಂದೊದವಿ
ದಣಿದ ಜೀವಾತ್ಮನಿಗೆ ಉಣಿಸಿತು ಮೃಷ್ಟಾನ್ನ
ಭೋಜನಂ. ಎಳೆತನದ ಅಧಿಪತಿಯು ತಾನಾಗೆ
ಹೂಮನವರಳಿ ಹಗುರಮಾಯ್ತು. ಸುಮಧುರವಾಯ್ತು.
ಓರ್ವ ಶಿಷ್ಯವರೇಣ್ಯನುಂ ಪರಮ ಗುರುವರನ
ದಿವ್ಯ ಸನ್ನಿಧಿಗೈದು ಭಕ್ತಿಭಾವದಿಂ ಶಿರ
ಬಾಗಿ ನಮಿಸಿ ಪ್ರಸನ್ನವದನದಲಿ ಎಳೆನಗೆ
ಮುಗುಳರಳಿಸಿ ಬೇಡಿದಂ "ಸ್ವಾಮಿಜಿ, ಎನಗಿಂದು
ಧರ್ಮಜ್ಞಾನದಾನಂಗೈದು ಉಪಕರಿಸಿಮ್" ಬಲ್
ವಿನಯದಿಂ ಬೇಡಿದವನ ಕಂಗಳಲಿ ಮಿಂಚಿರ್ದ
ಆಸೆಯ ಬೆಳಕು ಹೊಮ್ಮಿದುದು ಒಡಲಿನ ಆಸೆಯಂ
ಸೂಸುವೊಲ್. ನೋಡಿದರ್, ಸ್ವಾಮಿಜಿ ಅವನಮನ
ಮಿಡಿವ ಆಶಾ ಪ್ರವೃತ್ತಿಯಂ ಕಂಗಳಿನ ನಿಜ
ಆಳಕಿಳಿದು. ಮರುನುಡಿಯದೆ ಶಾಂತ ಭಾವದಲಿ
ಮಿಣ್ಣನಾದರ್ ಸುಸಮಯಕಾಗೆದುರು ಕಾದಂತೆ.
ತರುಣನಲ್ಲಿಗೆ ಮಿಣ್ಣನಿರದೆ ಚಿಂತಿತ ಮನದಿಂ
ಮತ್ತೆಮತ್ತೆಮೇಣ್ಮತ್ತೆ ಕಾಡುತೆ ಬೇಡಿದಂ.
ಒರ್ಮೆ ಇರ್ಮೆ ಮಗದೊರ್ಮೆ ಕೇಳುತಿರೆ ಅವನಿಗೆ
ಏನೊಂದು ತಿಳಿಪದೆ ನುಡಿಯದೆ ಎಂದಿನ ತೆರದಿ

ಮಿಣ್ಣನಿರ್ದರ್ ಗುರುವರಂ. ಆ ಮುಮುಕ್ಷುವುಂ
ಅಂತೆಯೇ ಶಾಂತ ಸ್ವರೂಪಿಯಾಗಿ ಗುರುವಿನ
ಕರುಣೆಗಾಗಿ ಕಾತರಿತ ಹೃದಯದಿಂ ಗಳಿಗೆ
ಗಳಿಗೆಗಳ್ ಕಳೆಯುತಿರ್ದನ್ ಗುರುವಿನ ಬಳಿ.
ಸ್ವಾಮಿಜಿ ನಡೆದರ್ ಅದೆ ವರಶಿಷ್ಯ ರಾಬರ್ಟ್
ಮಹನೀಯನೊಡಗೂಡಿ. ಮುಂಬೆಳಗಿನ ತಣ್ಣನೆ
ತನಿವೊಳ್ತಿನಲಿ ಸುತ್ತಣದ ಪ್ರಕೃತಿಯು ಕಣ್ಣಾಗಿ
ಮನವಾಗಿ ಇರ್ದುದು ಗುರುಶಿಷ್ಯರ ಮೇಲೆ. ಆ
ಪ್ರಕೃತಿ ಲಕ್ಷ್ಮಿಯು ಬೆಕ್ಕಸ ಬೆರಗುವಟ್ಟು ಕಣ್ಣಂ
ನೆಟ್ಟು ನಂಬಲಾಗದ ಸೊಗಕೆ ಮುಗ್ಧವಾದಳೊ
ಎನೆ ಶಾಂತಸುಂದರಂ. ಪ್ರಕೃತಿಯುಂ ಓಲೈಸೆ
ಸಂಭ್ರಮೆಯಾದವೊಲ್. ಪೀಲಿನವಿಲ್ ತಾಂ
ನೀಲಾಂಬರದ ಪಿಡಿಯ ಪಿಂಛ ಚಾಮರದಂತೆ
ಗರಿಯಂಕೆದರ್ದು ಅಗಲಿಸಿ ನಡೆನಡೆದು ರೆಕ್ಕೆ
ಬಡಿದು ಪಾರಿತು ಮರದ ಕೊಂಬೆಗೆ. ಮತ್ತೆ
ಆ ಮರದಿಂದೀ ಮರದ ಕೊಂಬೆಗೆ. ಸುಮಾನಸಂ
ತೆಕ್ಕನುಕ್ಕಿದವೊಲ್ ಕೊರಳ್ ಬೆಚ್ಚಿ ಹಾಡಿದುದು
ಕೇಕಾರವಂ ಹರಿಸಿ. ನಸುವೆ ಮುಂದೆ ಸುನೀಲ
ಜಲರಾಶಿಯು ತುಂಬಿದ ಹರವಾದ ಪುಷ್ಕರಣಿ
ಕಣ್ಗೆಸೆದುದು ತನುಮನಗಳಂಸೆಳೆವಂತೆ. ಆ
ಮಹಾಜಲರಾಶಿಯ ತಟನಿಗಿಳಿದು ಕೌಪೀನ
ಮಾತ್ರರಾಗಿ ಮುಳುಗಿ ಜಳಕವಾಡುತಿರುತಿರಲ್
ಸ್ವಾಮಿಜಿಯುಂ ಶಿಷ್ಯನ ಶಿರಮಂ ನೀರೊಳಗೆ
ಅದುಮಿಹಿಡಿದರ್ ಜಳದೊಳ್ ಮಿಲಿಮಿಲಿಗೊಳ್ವವೊಲ್.
ಗುರುವಿನ ಹಿಡಿತದಿಂ ಬಿಡಿಸುತೆಮೇಲೇಳಲಾ

ಶಿಷ್ಯನಂ ಕೇಳಿದರ್ ಸ್ವಾಮೀಜಿ "ರಾಬರ್ಟ್
ನೀಂ ನೀರಿನೊಳಿರುತಿರೆ ನಿನಗಾಗಿ ಮನಸ್ಸದು
ಬಯಸಿದುದು ಎನ್ನೈ?"
"ಉಸಿರಾಡೆ ಗಾಳಿಮಾತ್ರಂ."
"ಕೇಳ್, ನೇಹಿಗನೆ! ನಿನಗನಿತೆ ಮಮ್ಮಲಮಿದೆಯೆ
ಭಗವಂತನೊಳ್? ನಿನ್ನೊಳಾದಾಹ ಮೂಡಿದೊಡೆ
ಮಾತ್ರಂ ಭಗವಂತನಿದೇ ಗಳಿಗೆಯಲಿ ನಿನಗೆ
ದೊರಕುವನ್. ಉತ್ಕಟ ಮನದ ಪಂಬಲಮಿಲ್ಲದೆ
ನಿನ್ನಯ ಮತಿಗೆ ಬ್ರಹ್ಮಜ್ಞಾನ ಪ್ರಾಪ್ತಮಾದಪುದೆ?
ಎಲೈ ಅಮೃತ ಪುತ್ರನೇ! ನಿನ್ನ ಗ್ರಂಥಗಳ್
ಕರ್ಮಕಾಂಡಗಳ್ ಎನಿತಿರ್ದೊಡಂ ನೀನವುಗಳಲಿ
ಸೆಣಸಾಡಿ ಉಪಯೋಗಮೆ ಇಲ್ಲ ಕಣಾ! ಎಂದಿಗೆ
ನೀಂ ಪರರಿಗಾಗಿ ಮರುಗುವ ಹೃದಯಮಂಬಡೆದು
ಕೊಂಬೆಯೋ ಅಗಮಾತ್ರ ಆರ್ಹತೆ ಪಡೆದಪೆ ದಿಟ.
ಅಲ್ಲದೆ ಪ್ರಕಾಂಡ ಪಂಡಿತನಿರ್ದು ನಿನಗಿಲ್ಲ
ಬೆಲೆಯು. ಕೇವಲ ಒಣಗು ಪಾಷಾಣದ ಬದುಕದು
ನಿನ್ನದಾದಪುದು. ಇದುವೆ, ಬದುಕಿನ ವರರಹಸ್ಯಂ!"

ತತೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।
ತದಂರಸ್ಯ ಸರ್ವಸ್ಯ ತದು ಸರ್ವಸ್ಯಾ ಸ್ಯ ಬಾಹ್ಯತ ॥

ಹರಿಃ ಓಂ ತತ್ ಸತ್

❀ ❀

ಸಪ್ತವಿಂಶೋಲ್ಲಾಸಂ

ಶ್ರಯಣೀಯಂ

ಯೇ ಮಾನವಾ ವಿಗತರಾಗ ಪರಾವರಜ್ಞಾ
ನಾರಾಯಣಂ ಸುರಗುರುಂ ಸತತಂ ಸ್ಮರನ್ತಿ ।
ಧ್ಯಾನೇನ ತೇನ ಹತಕಿಲ್ಬಿಷ ಚೇತನಾಸ್ತೇ
ಮಾತುಃ ಪಯೋಧರರಸಂ ನ ಪುನಃ ಪಿಬನ್ತಿ ॥

ರಾಷ್ಟ್ರದೊಳ್ ಪಡಿನಿಂದ ಮೇರುಪರ್ವತ ತುಲ್ಯ
ದಿವ್ಯಮಾ ಆರ್ಟಿಕ್ ಗಿರಿವನದ ಸವಿಗಾಳಿಯು
ಬೀಸಿ ಬರೆ ತಣ್ಣಗೆ ತನುಮನವಂ ಮುದ್ದಿಸುವ
ಪಾಂಗಿನಲಿ ಸ್ವಾಮೀಜಿಯುಂ ವಿಶಾಲ ವಕ್ಷದ
ಮೇಲೆ ಕೈಗಳ್ ಕಟ್ಟಿ ಪ್ರಕೃತಿಯ ಸೌಂದರ್ಯ
ರಸಾಸ್ವಾದನೆಯಲಿ ಮುಳುಗಿ ಜಗಮರೆತು ಪರಮ
ಚಿಂತನಾಲೀನನಾದರ್. ಗಿರಿ ಮುಡಿಯ ತೆರೆಯ
ಮರೆಗೊಂಡು ಮುಳುಗಿಮುದು ಪೊಳ್ತು. ಮೇಣಲ್ಲಲ್ಲಿ
ಬಾನಂಗಣದಿ ಮಲರಿಮುವರಿಲ್‌ಚುಕ್ಕಿ. ಹಕ್ಕಿಯು
ಕೊರಲ್ ದನಿಯುಡುಗಿ ನಿದ್ದೆಗೈದು ತಲೆಕುಗ್ಗಿ
ತಿಪ್ಪುಳಿರ್ಕೆಯೊಳ್ ಹುಗಿದು. ನಾಯಿ ಬೆಕ್ಕುಗಳ್
ಮೈಮುದುಡಿದುವಲ್ಲಲ್ಲಿ, ವೃಕ್ಷಗಳೆಡೆ ಗಿರಿಯ
ಮೇಗಡೆ ಗವಿಗಳೆಡೆ ಪಳುವಿನೆಡೆ ಮೆಲುಮೆಲ್ಲನೆ
ಸುಯ್ಯುಯ್ದು ಹೊಂಚಿ ಸಾಧನಾಶೀಲತೆಯಲ್ಲಿ
ತೀಡುತಿತ್ತೆಲರ್ ಸಮಯೋಚಿತ ಸರಳ ಕ್ರೀಡೆ
ಹೂಡಿದ ತೆರದಲಿ. ವಿಶ್ವಧರ್ಮಕೆ ತನ್ನಾತ್ಮ
ಸಾಕ್ಷಿಯೆಂಬಂತೆವೊಲ್ ಸಹಸ್ರಾಕ್ಷ ಅಂಬರ
ಜಗಜಗಿಸಿದತ್ತು ವಿಶ್ವ ಸನೀಯವಾಗಿ. ಆ

ಮನಮೋಹನೀಯ ನಿಸರ್ಗದೈಶ್ವರ್ಯರಾಶಿಯ
ಸವಿದು ತನಿರಸವುಂಡು ಒಳಗೈದು ಲೇಖನದ
ಸಾಮಗ್ರಿಯಂ ಕೈಕೊಂಡರ್ ಸ್ವಾಮಿಜಿ, ಭ್ರಾತೃ
ಭಾಯಿಗಳಿಗೆ, "ಈ...ಒಡಲ ಕರಕರೆಯಂ ಕೇಳಿರೈ
ಆತ್ಮೀಯ ಸೋದರರರೆ! ಸಾಕಪ್ಪಾ, ಸಾಕು, ಈ
ಎಡೆಯ ನವ ಜೀವನಂ. ಅಂದಿನೆನ್ನ ಬರ್ದುಕು
ಸುಳಿಯುತಿದೆ ಅಕ್ಷಿಪಟಲದ ಮೇಲೆ. ಆಯೆನ್ನ
ಸವಕಲು ವಸನಂಗಳ್, ಆಯೆನ್ನ ಬರಿಬೋಳು
ಮಂಡೆ, ಮರಗಳಡಿಯಲಿ ತಣ್ಣಗೆ ನಿದ್ರಿಸುವ
ಆಯೆನ್ನ ಸುಖಮಯ ಬದುಕು, ಮಧುಕರ ವೃತ್ತಿಯ
ಕದನ್ನ, ನಿಮ್ಮೆಲ್ಲರ ಒಡನಾಟ, ಭಾರತಿಯ
ಉಡಿಯೊಳ್ ಶಿಶುವಾಗಿ ಬೆಳೆದ ದಿವ್ಯ ಅನುಭಾವ
ನಲಿಯುತಿದೆ ಕಣ್ಮುಂತೆ. ಎನ್ನ ಪರಮಾತ್ಮೀಯ
ಭಾಯಿಗಳಂ ಮೇಣಧಿಕ ಜನ್ಮಭೂಮಿಯಂ ಕಾಣ್ಬ
ತವಕವದು ಕುದಿಕುದಿದು ಉರಿಸುತಿಹುದು ಒಡಲಂ.
ಇಲ್ಲಿನ ಅಮಿತ ಕಾರ್ಯಗತಿಯಲ್ಲಿ ಇನ್ನಿನಿತು
ಕಾಲಮಿಲ್ಲಿ ಉಳಿಯಲ್ ವೇಳ್ಕುಂ. "**ಘೃತಾಧಾರ
ಪಾತ್ರಂ ವಾ ಪಾತ್ರಾಧಾರ ಘೃತಂ**" ಎಂಬೊಲ್
ಈ ದೇಹ ಜೀವಗಳ ಬಾಂಧವ್ಯ. ಇವುಗಳಂ
ಸುಸ್ಥಿತಿಯೊಳಿರಿಸಿದೆನಾದೊಡೆ ನಿಮ್ಮನುಂ ಸಧ್ಯ
ಕಣ್ತುಂಬ ಕಾಂಬುವೊಂದು ಸುಯೋಗ ಬಂದಪುದು".
ಅತಿಶ್ರಮಿಕ ಜೀವನದ ಬಿರುಗಾಳಿಯಲಿ ತನು
ಮನಂಗಳ್ ಸಿಲ್ಕಿ ಬಳಲಿದುವು ತತ್ತರಿಸಿ. ಗುರು
ದೇವನುಂ ಕೆಲದಿನಂ ವಿಶ್ರಾಂತಿಯಂ ಬಯಸಿ
ಕಾದರಾತ್ಮಪ್ರೇರಣೆಗಾಗಿ. ತನು ಬಳಲ್ದಿರೆ

ಆತ್ಮ ಬಳಲ್ದಪುದೆ? ದಿನದಿನಂ ವೃದ್ಧಿಸಿದತ್ತು
ಕ್ರಾರ್ಯಕ್ರಮಗಳ ಪಟ್ಟಿ. ಬಯಸಿಯುಂ ದೊರೆಯದಾ
ವಿಶ್ರಾಂತಿ. ಅಂದು ಕೂಡಿರ್ದ ಸಾಯಂ ಸಭೆಯ
ವೇದಿಯೊಳ್ ಕೇಳಿಸಿದರಿಂತು "ಎಲೆ, ಮಿತ್ರರೇ,
ಈ ಜಗದ ಪ್ರವಾದಿಗಳ ಸಾಮರ್ಥ್ಯವಂ ನೀವ್
ಜಗದ್ಯೈತಿಹಾಸೀಯ ಪುಟಗಳೋದಿ ಅರಿದಿರಾ?
ಅಂತಪ್ಪ ಇಚ್ಛೆಯುಂ ನಿಮ್ಮೊಳಿಪ್ಪುದೇಂ? ಆ
ಪ್ರಭೃತಿಗಳಾರಾದೊಡಂ ಆಯಾಯಾ ದಿನಚರಿ
ಅಥ ಕಾಲೋಚಿತಮಪ್ಪಿ ತರ್ಕಶಾಸ್ತ್ರ ಅಥ ತತ್ತ್ವ
ಜ್ಞಾನಂಗಳ ಗೂಢಾತಿಗೂಢ ಪ್ರಮೇಯಗಳ
ಕುರಿತು ಗ್ರಂಥ ರಚಿಸಿ ತಮ್ಮವರಿಗಾಗಿ ಬಿಟ್ಟಿಹರೆ?
ಉಹು, ಇಲ್ಲವೇ ಇಲ್ಲಂ! ಕೇವಲ ನುಡಿಮುತ್ತಿನ
ಮಾಲೆಗಳಂ ಚೆಲ್ಲಿ ಸೂಸಾಡಿದರ್. ಕ್ರಿಸ್ತನುಂ
ಅಂತೆಯೇ. ನೀವುಂ ಕ್ರಿಸ್ತನೊಲ್ ಓರ್ವ ಕ್ರಿಸ್ತಂ
ಆಗಿ ಬೆಳೆವುದೆನೆ ಚಿಂತನಾಶೀಲತೆ ಬೆಳಸಿರಿ.
ದೇವ ಕ್ರಿಸ್ತನೊಲ್ ನಿಮ್ಮಿಯ ದಯೆ ಕರುಣೆಯ ಝರಿ
ಹರಿಯಲಿ ದಿನದಿನ ದೀನ ದರಿದ್ರರೆಡೆಗೆ. ದೇವ
ಬುದ್ಧನ ಮನೋಭಾವನೆಗಳಂ ಪಡೆದೊಡದೆ
ಬುದ್ಧಗತಿ ದೊರೆವುದು. ನೀವೊರ್ವ ಬುದ್ಧನೆನೆ
ಜೃಂಭಿಪುವಿರಿ. ಅಂತೊಂದು ಚಿಂತನೆಯೇ ಪರಮ
ಜೀವಾಳ ಮನುಕುಲಕೆ. ಅದೇ ನಿಜ ಪ್ರಾಣನಾ
ಸುಸಾಮರ್ಥ್ಯ. ಆ ಪೂರ್ಣ ಮನದ ಭಾವನೆಗಳೇ
ಇಲ್ಲದೆಯಿರೆ ನೀವೆನಿತೆನಿತು ಬುದ್ಧಿಯಬಲದಿ
ಕಸರತ್ತುಗೈದೊಡದರಿಂ ದೇವರು ಸಿಗಲಾರ,
ಅಥ ಕರುಣಿಸಲಾರನ್. ಬುದ್ಧಿಯುಂ ಇತರಿತರ

ಅಂಗಾಂಗಗಳ ಮಾಳ್ಕೆಯಲಿ ಸ್ವಯಂ ಪ್ರೇರಣೆಯು
ಇರದೊಂದು ಅಂಗ ಮಾತ್ರಂ. ಭಾವನೆಗಳ್ ಪುಟಿದು
ಭುಗಿಲ್ಗೊಂಡು ಬುದ್ಧಿಯಂ ಮುಟ್ಟಿತಟ್ಟಿ ಚಾಲನೆ
ಇತ್ತೊಡೆ ಕೆಲಸಕಾರ್ಯ ನಿರ್ವಹಿಪ ತಂತ್ರಜ್ಞ
ತಾನಾದಪುದು. ಪ್ರಪಂಚದ ಎಲ್ಲೆಡೆಗಳಿಂಗು
ಈವಾತು ಅನ್ವಯಿಪುದು ದಿಟ ನೆನಪಿಡಿ ನೇಹಿಗರೆ!

"ಶ್ರದ್ಧಾವಾನ್ ಲಭ್ಯತೇ ಜ್ಞಾನಂ
ತತ್ಪರಂ ಸಂಯತೇಂದ್ರಿಯಃ

ಅದೇ ಭಾರತೀಯ ಹಿರಿಯ ಘನವಂತ ಪ್ರಜ್ಞಾ
ವಾನ್ ಪ್ರಭೃತಿಗಳ ವಿಷಯಕೇಳಿ! ಎಂಥೆಂಥ ಗ್ರಂಥ
ವಿರಚಿಸಿ ಮಹಾಜ್ಞಾನದ ರಾಶಿಯ ಹೊರೆಯನ್ನೆ
ನಮಗಾಗಿ, ಇಡಿ ಜಗತ್ತಿಗಾಗಿ ಬಿಟ್ಟು ಹೋಗಿರ್ಪರ್!
ಅದೂ ಅನಾಮಿಕತೆಯಲಿ! ಮಿತ್ರರೇ ತಿಳಿಯಿರಿ.
ಭಾರತೀಯರಾವು! ಸರ್ವಧರ್ಮ ಸಹಿಷ್ಣುಗಳಾವು!"
ಸ್ವಾಮಿಜಿಯುಂ ಜನ ಸಮುದ್ರದ ಮೇಲೆರಚಿ
ಮನಜಾಗೃತಿಗೊಳಿಸಿದ ಸಂದೇಶವದು ಸದ್ಯ
ಅಮೆರಿಕ ರಾಷ್ಟ್ರೀಯ ಮೂಲೆಮೂಲೆಯಂ ತಾಗಿ
ಮುಟ್ಟಿ ಕರ್ಣಾಕರ್ಣಿಯಾಗಿ ಮರು ಪ್ರಸಾರ ಹೊಂದಿ
ಜೃಂಭಿಸಿದುದು ದೇಶೋತ್ತರವಾಗಿ. ಎಡೆವಿಡದೆ
ನಡೆದ ಕಾರ್ಯಕ್ರಮಗಳ ಅಧಿಕಾಧಿಕ ಒತ್ತಡ
ತನುಮನಗಳಂ ಬಳಲಿಸಿರೆ ಸ್ವಲ್ಪಕಾಲ ತಾಂ
ವಿಶ್ರಾಂತಿಯಂ ಬಯಸಿತು ದಣಿದಿದ್ದ ಜೀವಕಣಂ.
ಎಲ್ಲಾದೊಡಂ ವನಾಂತರದ ಮಧ್ಯೆ ನಿರ್ಜನ
ಪ್ರದೇಶದೊಳಿರುತಿರ್ದು ಧ್ಯಾನ ವ್ರತಗಳ ಯೋಗ

ಭಾಗ್ಯವೊದಪಿದೊಡೆ ಸಾಲ್ಗುಮೆಂಬಾ ಇಚ್ಛೆಯುಂ
ಘನವಾಯ್ತು ದಿನದಿನಂ. ನದೀತೀರದೊಳ್, ಕೆರೆ
ಏರಿಯೊಳ್ ಪದಚಾರಣಗೈಯುತೆ ಮನದಿ ದೇವ
ಗಂಗಾ ನದೀ ತಟನಿಯಂ ನೆನೆನೆನೆದು ಶಾಂತಿ
ಸಂವೃದ್ಧಿಗಾಗಿ ಹಾರೈಸಿ ಹಾರೈಸಿ ದಣಿವುದು
ಹೃದಯ ಬನದ ಕೋಗಿಲೆ. ಧ್ಯಾನಮಯ ಭೋಗಕ್ಕೆ
ರಾತ್ರಿಯಲಿ ಮಾತ್ರಮಲ್ಲದೆ ಪಗಲೊಳಿಲ್ಲವಾಯ್ತು
ತನಿವೊಳ್ತು. ದಕ್ಷಿಣೇಶ್ವರ ಅಲಕಾ ಭಾಗೀರಥಿ
ಹೃಷಿಕೇಶ ತ್ರಿಲೋಕಕಾಂತ ಹಿಮವತ್ ರುದ್ರ
ಭೀಕರ ಹಿಮಾಲಯ ಗಿರಿಶ್ರೇಣಿಯ ಸಂದೃಶ್ಯ
ಚಿತ್ರಣಂ ಸೆಳೆವುದು ತನುಮನಂಗಳಂ. ಒಡನೆ
ಪೋಗುವೆನೆನೆ ಇನ್ ಗೆಯ್ಯಲುಳಿದಿಹ ಕಾರ್ಯಗಳ
ಭಾರವೇಂ ಕಮ್ಮಿಯ ಹೊಣೆಯಲ್ಲಂ. ಏಕಾಂತ
ಚಿಂತನೆಯ ತದೇಕಾಂತ ಭಾವನಾಭೋಗದ
ವಿಚಾರಾತ್ಮಕ ವೇದಿಯೊಳ್ ಅಂಡಲೆಯುವರ್
ತಾನೇ ತಾನ್ಯೆಸಿ,
ಭಾರತದ ಜಕ್ಕವಕ್ಕಿಯುಂ
ಪೋಲ್ವ ಪಕ್ಷಿಗಳೆರಡು ಆನಂದ ಮೋದದಿಂ
ಕಿರುವಾಯ್ ತೆರೆದು ಕೊರಳೆತ್ತಿ ಹಾಡುತಿರ್ದುವು
ರಾಗದನಿ ಹರಿಸಿ. ಗಿಡದಿಂ ಗಿಡಕೆ ಕೊಂಬೆಯಿಂ
ಕೊಂಬೆಗೆ ಜಿಗಿಯುವಂತೆ ಹಾರಿ ಆಡುವವುಗಳ
ಇನಿದನಿಯ ರಾಗಾಲಾಪ ಮನವಂ ಮುಟ್ಟುತಿರೆ
ನೋಳ್ಪ ಕಣ್ ಮಮ್ಮಲಿಸಿದುವು ಗುರುವರ ವಿವೇಕಾ
ನಂದರ.
ಪರಮ ಶಿಷ್ಯವೃಂದದೊಳೊರ್ವನುಂ ತನ್ನ

ಗುರುದೇವನ ದೈಹಿಕ ಸ್ಥಿತಿಯನರಿಯುತೆ
ತಕ್ಕಿನ ಸುವಿಶ್ರಾಂತಿಯನೊದವಿಸುವೊಡೆ ತಾನೆ
ಮುಂದಾದನ್. ದೂರದ ಸ್ಯೆಂಟ್ ಲಾರೆನ್ಸ್ ನದಿ
ಮಧ್ಯೆ ಮೈಗೊಂಡ ಸುಂದರಾತಿಸುಂದರ ದ್ವೀಪ
ಡಿ–ಎಂಬ ಮಹಿಳಾಮಣಿಯ ಒಡೆತನದೊಳಿರ್ದುದು.
ಸ್ವರ್ಗ ಸದೃಶಮಾದ ಆ ಸೌಂಯರ್ದಧಾಮದೊಳ್
ನೆಲೆಸಿ ವಿಶ್ರಾಂತಿ ಪಡೆಯುವೊಡೆ ಸ್ವಾಮೀಜಿಗಾಗಿ
ವಸತಿ ಸೌಕರ್ಯಮಂ ಒದವಿಸಿದನಾ ಶಿಷ್ಯ
ವರೇಣ್ಯಂ. ಬೃಹದ್ ಭವನಂ ಕಿರಿಯರಮನೆಯ
ಪಾಂಗಿನಲಿ ರಾರಾಜಿಸಿದುದು ದ್ವೀಪದ ಮಧ್ಯೆ!
ಸುತ್ತಮುತ್ತಲ್ ಪುಷ್ಪೋದ್ಯಾನ ರಮಣೀಯಮಾ
ರಸದೃಷ್ಟಿಗೆ. ಭವನದ ದಕ್ಕಿಣಾಂಗದೊಳ್ ದೊರೆತ
ವಸತಿಯುಂ ಗೃಹ ಸಮುಚ್ಚಯಕಾವ ನೇರತರ
ಸಂಬಂಧಮಿರದಿರೆ ಅನುಕೂಲಿಸಿತು ಗುರುವಿನ
ಏಕಾಂತ ಜೀವನಕೆ. ಕೊಠಡಿಯ ನೇರದೊಳ್
ನದೀತಲಕೆ ಸುಂದರ ಸೋಪಾನ. ಎಡಬಲದಲಿ
ಪುಷ್ಪಿತ ಗಿಡು ಮರಗಳ ಅಲಂಕಾರಮಯ ನವ
ಉದ್ಯಾನ. ಚೆಲುವಿನೊಳ್ ಕಡು ಚೆಲುವಿನ ದ್ವೀಪದ
ಮಹಾನ್ ನಿಸರ್ಗ ಸೌಂದರ್ಯ ರಾಶಿಯ ಸುಂದರ
ಕಣಕಣಗಳಂ ನೋಡುತಿರೆಯಿರೆ ಸುಖ ಮುಚ್ಚೆಗೆ
ಸಲ್ಲುವೊಲ್ ಬಂಧುರಮಯಂ. ಎಲ್ಲಿ, ಯಾವೆಡೆಯ
ಚಿತ್ರದೃಶ್ಯಂ ನೋಡಿದೊಡಮದು ಸಕಲೇಂದ್ರಿಯ
ಗೋಷ್ಠಿಗೆ "**ತಸ್ಯಭಾಸಾ ಸರ್ವಮಿದಂ ವಿಭಾತಿ**"
ಎಂಬಂತೆ ಅರ್ಥವತ್ ಉದ್ಭಾಸಮಾದಪುದು
ಅಂತರ್ದೃಷ್ಟಿಗೆ. ಸ್ವಾಮೀಜಿ ಅಲ್ಲಿ ತಳವೂರಿದ

ದಿನಮೆ ಬೈಗುವೊಳ್ತು ಉರುಳಿದನಂತರ ತಮ್ಮ
ಶಿಷ್ಯರಂ ಕುರಿತು ಲೇಖಿಸಿದರಿಂತು ಪತ್ರವಂ,
"ಓ ಎನ್ನ ಆತ್ಮೀಯ ಪುತ್ರರಿರಾ! ಎನಗಿಲ್ಲಿ
ದೊರೆತ ಸುವಿಶ್ರಾಂತಿಯಂ ಕುರಿತು ಪೆರ್ಚಿನದೇನ್
ತಿಳಿಪೆ ಪೊಳ್ತಿಲ್ಲಂ. ಒರ್ಮಾತಿನೊಳ್ ತಿಳಿಪುವೊಡೆ
ಇದೊರ್ ಸ್ವರ್ಗತುಲ್ಯತಮ ವಿಶ್ರಾಂತಿಧಾಮವೆನೆ
ಸರಿಯಕ್ಕು. ಇದರ ಪೆಸರ್ ಸೇಂಟ್ ಲಾರೆನ್ಸ್ ದ್ವೀಪ.
ಕೇಳಿರ್ಕೆ ಆನಿಂದು ನಿಮಗೊರೆವ ವಿಚಾರಂ
ಶ್ರದ್ಧೆಯಂ ಕುರಿತು, "**ನಭೂತೊ ನ ಭವಿಷ್ಯತಿ**"
ಭೂತಕಾಲಮೆ ಇಲ್ಲವಾದೊಡೆ ಭವಿಷ್ಯಮಿನ್ನೆಲ್ಲಿ?
ತನ್ನೊಳ್ ತನಗೆ ಶ್ರದ್ಧೆಯುಂ ಇಲ್ಲಮಾದೊಡದೆ
ನಾಸ್ತಿಕತೆಗೆ ದಾರಿ. ಕಠೋಪನಿಷತ್ತಿನೊಳೊರ್ವ
ರಾಜನ ಕಥೆಯಂ ನೀವ್ ಅರಿತಿರಲ್ವೇಳ್ಕುಂ.
ಆ ರಾಜನೊರ್ಮೆ ಯಜ್ಞಮಂ ಗೆಯ್ದಂ. ಅವನೀವ
ದಾನಾದಿಗಳಂ ಗಮನಿಸುತಲಿರ್ದ ನಚಿಕೇತ
ಎಂಬೊರ್ವ ಬಾಲಕಂ ಹೃನ್ಮನಂ ಒಪ್ಪದೆಯೆ
ಬೇಸತ್ತು ಮನನೊಂದು ಪುರುಪಿನಿಂ ತನ್ನನ್ನೆ
ಆ ಯಜ್ಞದಲಿ ಅರ್ಪಿಸಿಕೊಳ್ಳಲ್ ಮುಂದೈದಂ.
ಅವನಿಚ್ಛೆ ಶ್ರದ್ಧೆಯಿಂ ಪ್ರೇರಿತಂ. ಆ 'ಶ್ರದ್ಧೆ'
ಶಬ್ದದಾ ಅರ್ಥಮಂ ನೀಮೆ ಮನದೊಳ್ ಚಿತ್ರಿಸಿ
ಚಿಂತಿಸಿ ಅರಿವುದು ಲೇಸಲ್ತೆ? ಅಂತಲ್ಲದೊಡೆ
ನೀಮ್ ಆ ಪದದ ದಿವ್ಯ ಸಾಮರ್ಥ್ಯವನರಿತು
ಕೊಳ್ಳಲಾರಿರಿ. ಎಂದೊಡದು ಅನ್ಯಮಲ್ತು. ಆ
ನಚಿಕೇತನ ಉದಾಹರಣೆಯಂ ತೆಗೆದುಕೊಳ್ಳಿಮ್.
ತನ್ನ ಮನದೊಳ್ 'ಶ್ರದ್ಧೆ' ಮೂಡಿದೊಡನೆಯೆ ತನಗೆ

ತಾನೇ ನುಡಿಯತೊಡಗಿದಂ, ಸೋದರರೆ ಕೇಳಿ,

“ಬಹುನಾಮೇಮಿ ಪ್ರಥಮೋ
ಬಹೂನಾಮೇಮಿ ಮಧ್ಯಮಃ ।
ಕಿಂ ಸ್ವಿದ್ಯಮಸ್ಯ ಕರ್ತವ್ಯಂ
ಯನ್ಮಯಾಽದ್ಯ ಕರಿಷ್ಯತಿ ॥”

ಅಂತೊಂದು ಮಹತ್ತಮ ಶ್ರದ್ಧೆಯುಂ ನಿಮ್ಮೊಳುಂ
ಒಡಮೂಡಲಿ. ಪಾಶ್ಚಾತ್ಯ ರಾಷ್ಟ್ರೀಯರು ತಂತಮ್ಮ
ಸ್ನಾಯುಗಳಲಿಟ್ಟ ಸಾಮರ್ಥ್ಯ ಶ್ರದ್ಧೆಯಿಂದೈದ
ಶಕ್ತಿ! ನೀಂ ಶ್ರದ್ಧೆಯಂ ಆತ್ಮಬಲದೊಳಿಟ್ಟೊಡೆ
ನಿಮ್ಮಿಂದ ಎನಿತೆನಿತು ಪ್ರಚಂಡ ಕಾರ್ಯವದು
ಫಲಿಸೀತು!
ಅಂತಪ್ಪ ಶ್ರದ್ಧಾವಂತರೆನಗೆ
ವೇಳ್ಕುಂ. ನಿಮ್ಮೆಲ್ಲರ್ಗೆ ಅಗತ್ಯಮಾ ನಿಜಶ್ರದ್ಧೆ.
ಅದಂ ಮನಗೂಡಿಸುವ ಆ ಮಹಾ ಶ್ರದ್ಧೆಯೇ
ಇಂದಿನ ಮಹಾಕಾರ್ಯಕಾಸರೆಯು. ನಿಮಗಿಂದು
ಕೆಯ್‌ಬಲ್ಮೆ ಜಾನಬಲ್ಮೆ ಸಡ್ಡೆಬಲ್ಮೆ ಬಲಿತು
ರಕ್ತಗತಕಣಾ! ಈ ಬಗೆಯ ಶ್ರದ್ಧೆಗಳೊಂದುಂ
ನಮ್ಮ ರಾಷ್ಟ್ರದ ನೆತ್ತರ್ಗೆ ಒಲ್ಲದುದು ದುರದೃಷ್ಟ!
ಎಲ್ಲರಂ ಪ್ರಚೋದಿಸೆ ಸಮರ್ಥರಾಗಿ. ಬಲ್
ಶ್ರದ್ಧಾವಂತರಾಗಿ. ತರುವಾಯಿಯೊಳ್ ಎಲ್ಲವುಂ
ತಂತಾನೆ ಕೈಗೂಡಿದಪುದು ಶಿಷ್ಯವರ್ಯರಿರಾ!”

ಸ್ವಾಮೀಜಿಯ ದಿನಚರಿಯೊಳ್ ಪೊಳ್ತು ಬಹುತೇಕ
ಕಳೆದಪುದು ಧ್ಯಾನವ್ರತದೊಳ್. ಆ ನದೀ ತೀರ,
ಮುಲುಮುಲಿಪ ಜಲಚರಂಗಳ ರಾಶಿ ರಾಶಿ. ಆ
ಹರವಾದ ಸೋಪಾನಗಳ ಸಾಲು. ಪಚ್ಚನೆಯ

ಪಟ್ಟುಡೆಯನುಟ್ಟು ಗಿಡು ಸಸ್ಯ ಬಳ್ಳಿ ಮರಗಳ
ವೈಖರಿ, ಹೃನ್ಮನಗಳಂ ದೇವೇಂದ್ರನ ನಂದನ
ವನಮಂ ನೆನಪಿಗೆ ತರ್ಪುದು ದಿಟಂ. ಸ್ವಾಮೀಜಿ
ಅಭಿಜಿನ್ ಮುಹೂರ್ತದೊಳ್ ಮೈತಿಳಿದು ಸೆಜ್ಜೆಯಂ
ಬಿಟ್ಟು ಇಳಿವರ್ ನದೀ ತಟನಿಗೆ. ನಸುದಿಂಗಳ
ಮಂದ ಬೆಳಕಿನಲಿ ಪ್ರಾರ್ಥವಿಧಿಯಂ ಮುಗಿಸಿದ
ಬಳಿಕ ಧ್ಯಾನಾರೂಢರಾದಪರ್ ಶ್ರದ್ಧಾಭಕ್ತಿ
ಘನೀಕರಿಸಿದಂತೆವೊಲ್. ಮೂಡಣ ದಿಗಂತ
ತಟಾಂತಲಗ್ನದಲಿ ಮೈವೆತ್ತ ಬೆಳ್ಮುಗಿಲ್ ಚುಂಬಿತ
ಪಚ್ಚ ವರ್ಣಾಂತ ಭೀಮಾಭೀಲ ಭೂಜೇಶ
ದ್ರುಮಕೋಟಿ ಚೂಪಗೆ ತಲೆಯೆತ್ತಿ ಹೆಮ್ಮುಗಿಲ್
ಮುಟ್ಟಿ ಮುದ್ದಿಸುವ ಸುಮನೋಹರ ಸುರಸುಂದರ
ದೃಶ್ಯಮಾನ ಸೌಂದರ್ಯದ ಪೂರ್ಣಚಿತ್ರದೊಳ್
ಮನವಿಟ್ಟು ಸುವಿಚಾರ ವಾಹಿನಿಯೊಳ್ ಮುಳುಂಗಿ
ಕಳೆವರ್ ಪೊಳ್ತು ಸುಶಾಂತಿಯ ಮಡಿಲ ಶಿಶುವಾಗಿ.
ಅನಿತರೊಳ್ ಮೂಡಣದ ದಿಗ್‌ಪಾತ್ರದಲಿ ರಂಗು
ರಂಗಾದ ಹೊನ್ನಜಲದಲಿ ಮಿಂದು ಉಜ್ವಲಿಸಿ
ಮೈದೋರುವನ್ ಉದಯರವಿ ಚೆಲುವಿನ ಛವಿಯಂ
ಚೆಲ್ಲಿ. ನಿತ್ಯಕರ್ಮದ ದಿವ್ಯವ್ರತ ರಸಕ್ಕೋತು
ಉಜ್ವಲೋಜ್ವಲ ಕಿರಣರಾಶಿಯಲಿ ಮೆರೆದಪಂ,
ಉದಯಮಾನೋತ್ಸವದ ವೈಭವದಲಿ.

ಆಗಳ್

ಸ್ವಾಮೀಜಿ ಪದ್ಮಾಸನಂ ಬಿಟ್ಟೆಳ್ದು ತಮ್ಮಯ
ದಿನಚರಿಯೊಳ್ ಮನವಿಡುವರ್, ತನುಮನ ಮುದಿಸಿ.
ಓತಮಿತಮೆನಿಪ ಶಿಷ್ಯಗಣ. ಭಾರತೀಯಮಾದ

ಆಹಾರ, ಶಾಂತ ಸಮುದಿತ ಬದುಕು, ನೈಸರ್ಗಿಕ
ಸುಖಸಂಪದಂ. ಎಲ್ಲವುಂ ಮೆಯ್ಗೆ ಶಕ್ತಿಯಂ
ಸಂಚಯನಗೊಳಿಸುತಿರಲ್ ಉಲ್ಲಸಮಾದುದಾ
ಸ್ವಾಮಿಜಿಯ ಪ್ರಾಣಂ. ಅಂದಿನ ಗುರುಶಿಷ್ಯರ
ನೇಹಪ್ರೇಮಪೂರ್ಣತಮ ಸಂಬಂಧಮಂ ತಾಂ
ಅರಿತಂತೆ ಪರಮಶಿಷ್ಯೆ 'ಹರಿದಾಸಿ' ಎನೆ ಬಲ್
ರುಚಿರ ಉಪನಾಮವಂ ಬಡೆದ ಮಿಸ್ ವಾಲ್ಡೋ
ಎಂಬ ನಾರೀಮಣಿಯು ತನ್ನೊಂದು ಉಲ್ಲೇಖ
ವಾಹಿಯೊಳೊರೆದಳಿಂತು, "ಸುಶೀತಲ ಶೈತ್ಯದಿಂ
ಶಾಂತಿಯಿಂ ಸದ್ಭಕ್ತಿ ಭಾರದಿಂ ಕರ್ನೀಲ
ವರ್ಣದಿಂ ಮೈಗೊಂಡು ಮೆರೆದಿರ್ದ ಸ್ವಾಮಿಜಿ
ಮಹೋದಯನುಂ ಬೆಸೆದುಕೊಂಡಿರ್ದ ದಿನಚರಿಯ
ರೀತಿನೀತಿಗಳ್ ಆದರ್ಶಮಯ. ಧ್ಯಾನ ವ್ರತ
ಜಪತಪಾದಿಗಳ್ ಆದರ್ಶಮಯ. ಜೀವನಂ
ಘನವಾದ ಆದರ್ಶಮಯ, ಮತ್ತೇನ್ ಪೇಳ್ವುದಾ
ಗುರುಮಹೋದಯಂಗೆ? ಶಿರಮಣಿವ ಶಿಷ್ಯ ಜನರ್
ಸ್ವಾಮಿಜಿಯ ಆದರ್ಶಮಯ ಜೀವನಂ ಮೆಚ್ಚಿ
ನೆಚ್ಚಿರ್ದ ಧೀಮಂತರ್ ಎನಲ್ಕೆ ಸರ್ವದಾ
ಶುಭಂ. ಮಂಗಳಂ"
ಬಿಡುವಿನ ವೇಳೆಯಲಿ ಶಿಷ್ಯೆ
ಹರಿದಾಸಿಯುಂ ಸ್ವಾಮಿ ವಿವೇಕಾನಂದರಂ
ಕುರಿತು ಕೇಳ್ದಳೆಂತೆನೆ "ಸ್ವಾಮೀಜಿ, ನೀಮಿಲ್ಲಿ
ಶಿಷ್ಯಮಂಡಳಿಯಂ ನೆರೆವೆರಸುತೆ ಅಭಿವೃದ್ಧಿ
ಗೊಳಿಸಲಾರಿರಾ?"
"ಕೇಳ್, ಆರು ಪ್ರಾಪಂಚಿಕ

ಹವ್ಯಾಸಗಳಂ ತೊರೆದು ಆಶಾಪಾಶಗಳ್
ಕಿತ್ತೊಗೆದು ಲೋಕದ ಕಲ್ಯಾಣಾರ್ಥಂ ಮೇಣ್
ಆತ್ಮ ಕಲ್ಯಾಣಾರ್ಥಂ "**ಆತ್ಮನೋ ಮೋಕ್ಷಾರ್ಥಂ
ಜಗದ್ಧಿತಾಯ ಚ**" ಎಂಬೊಂದು ವೇದಾಂತಗಳ
ದರ್ಶನಾಧ್ಯಯನಮಂ ಮನಗೊಳಲ್ ಕಾತರದಿ
ಮುಂದೈವರೊ ಆರ್ ನ್ಯೂಯಾರ್ಕ್ ನಗರಿಯಿಂದಲಿ
ಮುನ್ನೂರು ಮೈಲಿಗಳ ದೂರದೊಳಿಹ ಈ ವನ
ದೇಶದಲಿ ನೆಲೆಗೊಂಡ ದ್ವೀಪದಲಿ ಬಹು ಮೂಲ್ಯ
ಪ್ರಶಾಂತ ಪ್ರಕೃತಿಯ ದೇಗುಲಕೆ ಬರಲಿಚ್ಛೆ
ಹೊಂದಿರ್ಪರೊ ಅಂತಪ್ಪ ಶಾಂತಿಪ್ರಿಯ ಜನರಂ
ಮಾತ್ರಮೇ ಸ್ವೀಕರಿಸಲಾನ್ ಸಿದ್ಧ."
ಆ ನುಡಿ
ಎದೆಯಂತರಾಳದಿಂ ಪೊದಳ್ದುದು ಸರಾಗದ
ಕೊರಳ್ ದನಿಯೊಳ್. ಪ್ರಕೃತಿಯುಡಿಯ ವನದೇಶದ
ನಿರ್ಜನರ ಪ್ರದೇಶವನಾರ್ ಬಯಸಿ ಬಂದಪರ್
ಎಂದೆಂಬ ಉದಾಸೀನ ಮನೋಜನಿತ ಭಾವ
ಘನಿಸಿರೆ ಎದೆಯಾಳದಲಿ, ನುಡಿದರ್ ಅಂತೆಂದು.
ಆದೊಡದು ಪುಸಿಯಾಯ್ತು. ಬೆಂಕಿಕಿಡಿಯಂ ಭರಣಿ
ಪಾತ್ರೆಯಲಿ ಮುಚ್ಚಿಡಲ್ ಬರ್ಕುಮೇ? ಗುರುವರನ
ಕೀರ್ತಿಪರಿಮಳಂ ಪರಿಸರದಲಿ ಪಸರಿಸುತಿರೆ
ಶ್ರೋತೃಗಳ್ ಭಕ್ತಜನರ್ ಮತ್ತಮಾ ಮನಕುದಿವ
ಪರೀಕ್ಷಾರ್ಥಿ ವಿದ್ವಜ್ಜನರ್ ಗಮಿಸುವರ್ ದರ್ಶನ
ಕೋರಿ. ಮುಮ್ಮಾತುಗಳ ಸಂಭ್ರಮ ಮುಖಾಮುಖೀ
ತರ್ಕವಿತರ್ಕ ಬೆಳೆದುದು ಹುಲುಸಾಗಿ. ಆ ಜನರ್,
ಆ ಭಕ್ತಿಪೂತ ವಾತಾವರಣ, ಆ ದಿವ್ಯ

ಉಪದೇಶ ಮನತುಂಬಿ ಕಣ್ತುಂಬಿ ಹೃದಯದ
ಕರಂಡವೇ ತುಂಬಿ ಉತ್ಸುಕಳಾದ ಮಹತ್ತರ
ಭವನದ ಸ್ವಾಮಿನಿ ಡಿ–ಗುರುವರಂಗೆ ಅನುಗುಣ
ಎನಿಪೊಂದು ಚಿಕ್ಕ ದೇಗುಲಮನಲ್ಲಿ ಕಟ್ಟಿಸಿ
ಉಪಕರಿಸಿದಳ್ ತನ್ನ ಮನಮೆಚ್ಚಿ ನೆಚ್ಚಿ. ಬಳಿಕ
ಪೆರ್ಚಿದುದು ದಿನದಿನ ವರಭಕ್ತರ ಉತ್ಸಾಹ
ದ್ವಿಗುಣಿಸಿ. ಸ್ವಾಮೀಜಿ ಭಗವದ್ಭಕ್ತಿರಸ ಪೂತ
ಸಂಗೀತೆಯಂ ಹಾಡುವರ್ ತಮ್ಮ ಶ್ರೀಕಂಠ
ನಾದವಂ ಹರಿಸಿ. ದನಿಯೇರುವುದು ಮಾಡು ಮರು
ದನಿ ಹರಿಸುವನ್ನ. ಶ್ರೋತೃಗಳ್ ಪರಮಾನಂದ
ಸಾಗರದೊಳ್ ಮುಳುಂಗಿ ಓಲಾಡುವರ್ ಜಗದ
ಸಮಸ್ತತರ ವ್ಯಾಪಾರಮಂ ಮರೆತು. ಗುರುದೇವ
ವಿವೇಕಾನಂದರ ದಿವ್ಯ ಸನ್ನಿದಿಯೆ ಈಶ್ವರ
ನಿಲಯಮೇ ಆಯ್ತು ನಿಜ ಭಕ್ತಿಭಾವರಸವುಕ್ಕಿ.
ಹರಿದಾಸಿಯುಂ ಅಂದಂದಿನ ದಿನಚರಿಯಂ ತಾಂ
ಉಲ್ಲೇಖಿಪಳ್ ಬದಿಯೊಳ್ ಕುಳಿತು. ಕರಿಯ ಮಸಿಯ
ಒರತೆ ಹರಿಯುತಿರೆ ಒಡಕಿಲ್ಲದ ತೆರದಲಿ ಪುಟ
ಪುಟಗಳಲಿ ಅಕ್ಕರಗಳ ಮಣಿಮಾಲೆಯು ತುಂಬಿ
ಜೃಂಭಿಪುದು ವಿಚಾರಾವಳಿಯ ಸೂಸಿ. ಗಭೀರ
ಚಿಂತನೆ ಗಭೀರ ಶಾಂತಿಯ ಸಮಾವೇಶದಲಿ
ಕಳೆವ ಗಳಿಗೆಗಳಿಗೆಗಳ ನಿರ್ಗಮನಂ ಆರ
ಗಮನಕ್ಕು ಬಾರದವೊಲ್ ಸುಶಾಂತ ಮುಗ್ಧಂ.
ಬೆಳಗಿನ ಉಪನ್ಯಾಸದ ಬಳಿಕ ಸ್ವಾಮೀಜಿಯುಂ
ಭಾರತೀಯಮಾದ ಸುರುಚಿರ ಖಾದ್ಯಮಂ ಗೆಯ್ದು
ಶಿಷ್ಯಗಣಕೆ ಉಣಬಡಿಸಿ ತೋಷದ ರಸವೂಡಿ

ತಣಿಸುವರ್ ಒಡಲಂ. ಬೆಳಗಿನ ತನಿವೊಳ್ತಿನಲಿ
ದ್ವೀಪದಿಂ ತಟಿನಿಗಿಳಿಯೆ ಸಾಲ್ಗೈಸಿದ ಮೆಟ್ಟಿಲ
ಮೇಲೆ ಕುಳಿತು ಆ ರಮಣೀಯಮಾದಾ ದೃಶ್ಯ
ಮಾನ ಸೌಂದರ್ಯರಾಶಿಯಲಿ ಮನವಿಟ್ಟು ತಾವ್
ಏಕಾಂಗಿಯಾಗಿ ಕಳೆವರ್ ನಸುವೊಳ್ತು. ಬಂಡೆಬಂಡೆಗಳ್
ಹೆಬ್ಬಂಡೆ ಮರಿಬಂಡೆ ಕಿರುಬಂಡೆ ಶಿಶುಬಂಡೆ
ಎಲ್ಲವುಂ ಒಗ್ಗೂಡಿ ಮೈಗೊಂಡ ಅನೇಕತರ
ಕಿರು ದೀವಿಗಳ್ ಸುತ್ತಮುತ್ತಲೆಸೆವುವು ನಯನ
ಚೈತ್ಯಾಕ್ಷಿಗಳ್ ದಣಿವ ತೆರದಲಿ. ಸಂಧಿ ಸಂಧಿಯ
ಎಡೆಎಡೆಯಲಿ ಗಿಡುಗೆಂಟೆಗಳ್ ಬೆಳೆದು ಹಚ್ಚಗೆ
ಹಸುರಾಗಿ ನಳನಳಿಸಿರಲ್ ಚಿತ್ರಕಾರನಾ
ಕುಂಚಕೆ ಒಡಮೂಡಿ ಮೈಯಾಂತವೊಲ್ ಸಂತತ
ಚೆಲುವಿನ ಗಣಿಯಾದಾ ದ್ವೀಪಗಳ ಸ್ತೋಮವಂ
ನೋಡಿದನಿತು ದಣಿಯವು ಕಣ್, ಭಾವಿಸಿದನಿತೂ
ತಣಿಯದು ಮನ. ಸುದೂರದೂರದಾ ಗಿರಿಸಾಲ್
ಹಿನ್ನೆಲೆಯಲಿ ಕ್ಲಾಯ್‌ಟನ್ ನಗರಿಯ ಚಿತ್ತಾರ
ಗೋಚರಿಪುದು ಕಣ್ಗೆಡ್ಡಮಾಗಿ. ಗಗನ ಚುಂಬೀ
ಗೃಹಶ್ರೇಣಿಗಳ್ ಮತ್ತಂ ಕೆನಡಾ ರಾಷ್ಟ್ರೀಯ
ರೇವುಗಳ್ ಕಂಗೊಳಿಪುವುವು ಒರ್ಮೆ ತಿಳಿಯಾಗಿ
ಇನ್ನೊರ್ಮೆ ಮಬ್ಬುಮಬ್ಬಾಗಿ. ಮುಗಿಲ್‌ಮಾಲೆಯ
ಶೃಂಗಾರದೊಳ್ ಮೆರೆದ ಕ್ಲಾಯ್‌ಟನ್ ನಗರಿಯುಂ
ಭೂಸ್ವರ್ಗದೊಲ್ ಎಸೆವುದು ಮುಗಿಲ್‌ಗಳ ರಾಶಿಯ
ಮಧ್ಯೆ! ದ್ವೀಪದ ಕಂದರದೊಳ್ ವಾರಿರಾಶಿಯು
ತುಂಬಿ ಮುನ್ನೀರ್ ಮಿನುಗಿ ಕಿರುರೂವಿನ ಕೊಲ್ಲಿ
ಕೊಲ್ಲಿಗಳ ನಿರ್ಮಿಸಿದುದು ಸಹಜಗತಿಯಲಿ, ಆ

ಜುಳುಜುಳಿಪ ಮಂಜುಳ ನಿನದಂ ಎದೆಯ ಬೀಣೆಯ
ತಂತ್ರಿಯಂ ಮಿಂಟಿ ಮಿಡಿಸಿತು ರಾಗಾರುಣತಾನ
ವಿತಾನಗಳಂ.
ಪರಬ್ರಹ್ಮನಗರಿಯ ಅಂಚಿನಿಂ
ಇಡಿರಾತ್ರಿಯುಂ ಮೆಲ್ಲಮೆಲ್ಲನೆ ನಡೆನಡೆಯುತೆ
ಉಷೆಯರಮನೆಗೈದ ನಿಶಿಯ ಪಾದಪದ್ಮಗಳ್
ನಸು ಸೋಲ್ದುವೊ ಎನೆ ಕ್ರಮಾನುಕ್ರಮದಲಿ ನಿಂತು
ಉಷೆಯ ಕರಗಳಿಗೆ ಉದಯದ್ಯೆಸಿರಿಯ ಕಲಶವ
ನೀಡಿ ಅದೃಶ್ಯಳಾದಳೊಡನೆ. ಉದಯ ರವಿಯ
ಸುಖಾಗಮನ ಬೆಳಗಿದುದು ತ್ರಿಲೋಕದಾದ್ಯಂತ.
ಗುರುದೇವನುಂ ಬಿಢದಿಯ ಸೋಪಾನವನೇರಿ
ಒಳಗೈತರೆ ಕಣ್ಗೆತ್ತುದು ಲೇಖನ ಸಾಮಗ್ರಿ.
ಹಿಂದಿನ ದಿನಂ ರಾತ್ರಿ ಬಲುಪೊಳ್ತಿನತನಕಂ
ಗ್ರಾಂಥಿಕಸಿರಿಯುಲ್ಲೇಖನ ಕೃಷಿಯಂಗೆಯ್ದು
ಮಲಗಿದ್ದ ಸ್ವಾಮೀಜಿಯುಂ ಗುರುಭ್ರಾತೃಗಳ
ನೆನೆದರಿಲ್ಲಂ. ಈಗಳದಂ ಪೂರೈಸೆ ಕುಳಿತರ್
ಲೆಕ್ಕಣಿಕೆಯಂ ಕೈಕೊಂಡು, ಸೋದರ ಸಂನ್ಯಾಸಿ
ಶ್ರೀಶಾರದಾನಂದರಂ ಕುರಿತಿಂತೊರೆದರ್ "ಹೇ
ಭ್ರಾತೃವರ್ಯಾ! ಕೇಳ್, ಆನಿದಂ ನಿಮಗಾಗಿ
ಒತ್ತಾಯಪೂರ್ವಕ ದನಿಯೊಳ್ ಪೂಣ್ದು ನುಡಿದಿಹೆನ್,
ಆನಿಲ್ಲಿ ದೇಹಧಾರಿಯಾಗಿರುತಿರೆ ಮನಂ
ಇರ್ಪುದು ಸದಾ ಭಾರತದಲ್ಲೇ! ಭಾರತದ
ಪುನರುತ್ಥಾನ ಕಾರ್ಯಮಂ ಕುರಿತು ಚಿಂತಿಸುವ
ವಿಚಾರಕ್ಕಿಂತಲ್ ಪಿರಿದಪ್ಪ ವಿಷಯವನುಂ
ಆನೂಹಿಸಲಾರೆ. ಇದೇನ್ ಒರ್ದಿನದ ಓಡಿ

ಕಾರ್ಯಕ್ರಮವಲ್ಲಂ. ಯಾವತ್ಕಾಲವುಂ ಪ್ರತಿ
ಭಾರತೀಯನುಂ ಪಣಕಟ್ಟಿ ದೀಕ್ಷೆತೊಡುವುದು
ಅನಿವಾರ್ಯ. ಅಗ್ಗಿಯಗುಳಿಯೊಳ್ ಮುಳುಗಿಯೇಳುವ
ಈ ಮಹಾ ಕಾರ್ಯ ಘೋರಾತಿಘೋರಮಾ ಬರಿ
ಅಳ್ಳೆರ್ದೆಯರ್ಗೆ. ಆದೊಡಾ ಮುನ್ನಡೆಯೊಳೆಮ್ಮ
ಚಾರಣದಲಿ ಸಾರಥ್ಯಂ ವಹಿಸಿ ನೆರವೀಯೆ
ಪಾರ್ಥಸಾರಥಿಯೆ ಬಂದಪನ್. ಅವನೇ ಸಜ್ಜು
ಗೊಂಡಿರಲ್ ಮತ್ತೇಂ ಕೊರಂ? ಆ ಪರಮ ಪುಣ್ಯ
ನಾಮನಂ ಸ್ಮರಿಸಿ ಅವನ ಪೆಸರ್ ಭಕ್ತಿಯಿಂ
ಉದ್ಘೋಷಿಸುತೆ, ಭಾರತದ ಪವಿತ್ರಭೂಮಿಗೆ
ಹೇರಿರ್ಪ ದುಃಖ ದೈನ್ಯಗಳ ಬೆಟ್ಟಕೆ ಕಿಚ್ಚು
ಹಚ್ಚಿಬಿಡಿ. ನಿಮ್ಮಿಂದದು ಸುಟ್ಟುರಿದು ಭಸ್ಮದ
ರಾಶಿಯಪ್ಪುದು ನಿಜ. ಅದರೊಳ್ ಸಂದೇಹವೇಂ
ಇಲ್ಲ. ನಿಮ್ಮೊಳ್ ಮುಖ್ಯಮೆನಲ್ ಶ್ರದ್ಧಾಭಕ್ತಿ
ಜಡಿ ತುಂಬಿರವೇಳ್ಕುಂ, ನಿಂನಿಮ್ಮ ಹೃದಯದ
ಕಲಶದೊಳ್. ಆ ಭಗವಾನ್ ಶ್ರೀಕೃಷ್ಣದೇವನ
ದೇಗಲಕೆ ಪೋಗಿರಿಮ್. ಗೋಕುಲದ ಅತೀಬಡ
ಗೋಪಾಲಕರ ಮಿತ್ರನಂ – ಅಂತ್ಯಜ ಗುಹನಂ
ತೋಷದಿಂ ಆಲಂಗಿಸಿದವನಂ ವಂದಿಸಿ ಪರಿಪೂಜಿಸಿ.
ತನ್ನ ಬುದ್ಧಾವತಾರದೊಳ್ ಅನೇಕ ಧನಿಕರ
ಸ್ಥಿತಿವಂತರ ನಿಮಂತ್ರಣಂ ಬದಿಗೊತ್ತಿ ಬಡ
ವೇಶ್ಯೆಯ ಕರೆಯಂ ಸ್ವೀಕರಿಸಿರ್ದ ಆ ಮಹಾ
ಪ್ರಭುವಿಂಗೆ ಶಿರಮಣಿಯಿರಿಮ್. ಆರಾರ್ ವರ
ನಿಷ್ಠೆಯಿಂ ಮುಂದೈದೊಡವರಂ ಬಹು ನೇಮದಿಂ
ಪ್ರೀತಿನೇಹಗಳೌದಾರ್ಯದಿಂ ಸ್ವೀಕರಿಸಿಮ್. ಆ

ಮಹಾತ್ಮರ ಪದಚಿನ್ಹಗಳನನುಕರಿಸಿ ನಿಮ್ಮ
ಬದುಕು ಸಾಗಲಿ. ಆರಿಗಾಗಿ ಮನಮರುಮರುಗಿ
ಕರಗಿ ಮತ್ತೆ ಮತ್ತೆ ಅವತಾರವನೆತ್ತಿ ಬಹನೊ
ಅಂತಪ್ಪ ದೀನದರಿದ್ರರಿಗಾಗಿ ನೀವ್ ದಯೆ
ಕರುಣೆ ತೋರಿ ದೀನದಲಿತರ ಉತ್ತರೋತ್ತರ
ಅಭಿವೃದ್ಧಿಗಾಗಿ ನಿಮ್ಮಯ ಬಾಳ್ಬದುಕಂ ನೆರೆ
ಮೊಸಲಿಡಿ. ದಿನದಿನಂ ಅಧೋಗತಿಗಿಳಿಯುತಿಹ
ನಮ್ಮ ಮೂವತ್ತುಮೂರುಕೋಟಿ ಜನರ ನಿತ್ಯ
ಕಲ್ಯಾಣಕಾಗಿ ನಿಮ್ಮ ಆಯುಷ್ಯದಲಿ ಕೆಲ
ಅಂಶಮಂ ಜನ್ಮಭೂಮಿಯ ಸೇವೆಗೆ ಮೊಸಲ್
ಇಡುವ ಪ್ರತಿಜ್ಞೆಯಂ ಕೈಕೊಂಡು ಕಾರ್ಯತಃ
ಶೀಲರಾಗಿ, ಏಳಿ! ಎದ್ದೇಳಿ! ಧೀರರಾಗಿ!
ಪುರುಷ ಸಿಂಹರಾಗಿ! ಭ್ರಾತೃಭಾಯಿಗಳೇ ಕೇಳಿ!

"ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ ।
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥"

ಬೆಳ್ಳಂ ಬೆಳಕು ಮೂಡಣದ್ರಿಯ ನಡುಚೂಡದ
ವಿಸ್ತಾರದಲಿ ಹರಡಿ ನಲಿನಲಿದು ಆಡುತಿರೆ,
ಪಕ್ಷಿಗೊರಳ ಅಮೋಘ ರಾಗವಾಹಿನಿ ಉಕ್ಕಿ
ತೆಕ್ಕನೆ ಹರಿದುದು ರಾಗಾರುಣತಾನಮಂ
ಹರಿ ಹಾಯಿಸಿ. ಪೊಳ್ತೇರುವ ಮುನ್ನ ಶಿಷ್ಯರುಂ
ಬಂದು ಕೂಡಿದರ್ ಸ್ವಾಮಿಜಿಯ ಪದಪದುಮದ
ಪರಮ ಸನ್ನಿಧಿಗೆ. ದಿನಕೊರ್ವರ ತೆರದಲಿ ಗುರು
ದೇವನುಲಿವ ಪ್ರವಚನಗಳನುಲ್ಲೇಖಿಸುವ

ಕಾರ್ಯಮಂ ಕೈಕೊಂಬರ್. ಅಂದಿನ ಲೇಖನಂ
ಹರಿದಾಸಿಯ ಕೈಗೊದವಿಬರಲವಳಿಂತಿಂತು
ಲೇಖಿಸಿದಳ್ ದಿನಚರಿಯಂ. "ನಾವುಗಳಿರ್ದೆವು
ದ್ವಾದಶ ಶಿಷ್ಯರ್. ಸ್ವಾಮಿ ವಿವೇಕಾನಂದರಾ
ದಿವ್ಯ ಸಾನಿಧ್ಯವೆಮಗೊಂದು ದೇಗುಲಮಾಯ್ತು.
ಅವರುಲಿಯಲಿ ಬಿಡಲಿ ಅವರ ದರ್ಶನ ಮಾತ್ರಮೆ
ಧ್ಯಾನ ವ್ರತಮಾಯಿತು. ಅವರಂ ಕಣ್ ತುಂಬಾ
ನೋಳ್ಪುದೆನೆ ಸ್ವರ್ಗೋಪಮ ಆನಂದಮಲ್ಲದೆ
ಬೇರೇನ್ ಭಾವಿಸುವ ಪರಿಯೆಂತು? ಸ್ವಾಮೀಜಿ
ಕುಳಿತೆಡೆ ಕುಳಿತಿರದೆಯೆ ನಿಂತೆಡೆಯಲಿ ನಿಲ್ಲದೆಯೆ
ಪದ ಚಾರಣಂಗೈಯ್ಯುತೆ ಯೋಧನ ಗತಿಯಲ್ಲಿ
ಪಾಠ ಪ್ರವಚನಗಳ್ ಬಿತ್ತರಿಸುವರ್ ತಮ್ಮ
ಮನಸೇಚ್ಛೆಯಲಿ. ಎಡರು ತೊಡರಿಲ್ಲದದು, ಎಲ್ಲ
ಶಿಷ್ಯರಿಂಗೆ ಸಗ್ಗದ ಧ್ವನಿ ಮುದ್ರೆಯೊ ಯಂತ್ರ
ಸಾಧನೆಯ ನುಡಿಗಟ್ಟೊ, ವಾದ್ಯತಂತ್ರಿಯ ದಿವ್ಯ
ನಿನಾದಮೊ ಎನುತಚ್ಚರಿಪಡುವೊಲ್ ಹರಿವುದಾ
ಸ್ವೇಚ್ಛ ಸರಳ ಲಲಿತ ಸಲಿಲಧಾರೆ. ಉಪನಿಷತ್,
ಭಗವದ್ಗೀತೆ, ವ್ಯಾಸರ ವೇದಾಂತ ಸೂತ್ರಗಳ್
ಮಧ್ವಾಚಾರ್ಯರ ದ್ವೈತ ಸಿದ್ಧಾಂತ, ಶಂಕರಾ
ಚಾರ್ಯರ ಅದ್ವೈತ ರಾಮಾನುಜಾಚಾರ್ಯರ
ವಿಶಿಷ್ಟಾದ್ವೈತ ಇವುಗಳಂ ಬಿಡಿಬಿಡಿಸುತ್ತ
ಹತ್ತಿಯೊಲ್ ಹಿಂಜಿ ಅಂಶಾಂಶತಃ ವಿವರಿಸುತ
ತಿಳಿಸುತಿರೆ ನಮಗದೆಲ್ಲವು ನುಂಗಲಾಗದಿಹ
ತುತ್ತುಗಳ್. ನಾವ್ ಯೋಚಿಸಿ ತಿಳಿಯಲಾಗದೆಯೆ
ತಿಣುಕುತಿರೆ ಸ್ವಾಮೀಜಿಯೆ ಬಂದಪರ್ ನೆರವಿಗೆ.

ಅಂತಿಂತು, ಒಂದೊಂದು ಅಕ್ಕರಂ ಸಕ್ಕರೆಯ
ಸವಿಗೊಳಿಸಿ ತುಂಬುವರ್ ಜಾನದ ಕರಂಡಿಗೆಯ.
ದಿನದಿನಂ ಅವರ ಪ್ರಹೇಳಿಕೆಗಳಂ ಬರೆದು
ಬರೆದು ಒಟ್ಟೈಸುತಿರಲಾವ್ ಮುಂದೆ ಗ್ರಂಥಗಳ
ಶ್ರೇಣಿಯಂ ನೆಯ್ಯಲುರೆ ಅನುಕೂಲಮಾಯಿತ್ತು.
ಉನ್ನೆಬರವಿದನಾವ್ ಗಣಿಸದಿರ್ದುದು ಎನಿತೊ
ಪ್ರವಚನಂಗಳ್ ಉಳಿಯದೆ ಅಳಿದುದು ತೀವ್ರತರ
ನಷ್ಟವಾಯ್ತು ಎನಲೀಗಳ್ ಪರಿತಪಿಸುವುದೆಮ್ಮ
ಒಡಲ್. ಅವರೀವ ಪ್ರವಚನಗಳ ಸಾರವಿದು,
“ನಿಮ್ಮೊಳಗೊಳಗೆ ಧೈರ್ಯದ ಹೊಳೆ ಹರಿಯಲಿ ಸತ್
ಸಾಗರದವೊಲ್. ಸಡ್ಡೆಯಿಂ ಶ್ರದ್ಧೆಯಿಂ ನಿತ್ಯ
ಸರ್ವತೋಮುಖವಾಗಿ ಗ್ರಹಿಸಿದೊಡಲ್ಲದೆಯೆ
ಸತ್ಯಾರ್ಥದ ಬೆಳಕಿನ ಛವಿಯಿಲ್ಲ. ಸಾಗರದ
ಪರಿಯ ನೋಡಿ. ಅಲೆಗಳ ಪರಿಯೊಳಿರಲಿ ನಿಮ್ಮಯ
ಮನಂ. ಹಿರಿಕಿರಿಯ ಪ್ರಭೇದಗೈಯದಿರಿ. ಪ್ರತಿಯೊಂದು
ಕೀಟವುಂ ಆ ಕ್ರಿಸ್ತನ ಒಡಹುಟ್ಟು. ಅದು ಇದು
ಎಂಬ ಭಾವವೇ ಬೇಡ. ಸೃಷ್ಟಿಯ ವ್ಯೂಹದೊಳ್
ಎಲ್ಲವುಂ ಒಂದೆ. ಅದರದರ ಪ್ರಗತಿಯಲ್ಲಿ
ಅದುವೆ ಮುಖ್ಯ....”
ನಿರ್ಜನ ಸುಖಶಾಂತಿ ಘನಿಸಿರಲ್
ಕೊಠಡಿಗೆಯ್ತಂದರ್. ನಿಶಾನಿಲಂ ತಣ್ಣನೆಯ
ತನಿರೂವಿನಲಿ ಕಿಟಕಿಯೊಳ್ ಒಳನುಗ್ಗಿ ಬರುತಿರೆ
ಮನಃಪ್ರಾಣಗಳಿಗೆ ತಂಪೂಡಿ ರಾತ್ರಿಯ ಧ್ಯಾನ
ವ್ರತಕಾಗಿ ಸಿದ್ಧಾಸನದೊಳ್ ಕುಳಿತರ್ ನೆಲದಲಿ,

"ತ್ವಂ ಸ್ತ್ರೀ ತ್ವಂ ಪುಮಾನಸಿ
ತ್ವಂ ಕುಮಾರ ಉತವಾ ಕುಮಾರೀ ।
ತ್ವಂ ಜೀರ್ಣೋ ದಂಡೇನ ವಂಚಸಿ
ತ್ವಂ ಜಾತೋ ಭವಸಿ ವಿಶ್ವತೋಮುಖಃ ॥"

ಮರುದಿನದ ಸಭೆಯಲಿ ಗುರುದೇವಂ ನುಡಿಸಿದರ್
"......ಲೋಕದೊಳ್ ವೈಚಾರಿಕ 'ಜಳದೊಳೀಸಬಲ್ಲರ್'
ಎಂದು ಗುರುತಿಸುವುದಾದೊಡೆ ದೊರಕುವರೇಂ ಬಲು
ಮಂದಿ? ನೀವ್ ಎಲ್ಲೆಲ್ಲಿ ನೋಸಿದೊಡಂ ನಿಮಗೆ
ಅಗ್ರಾಹ್ಯಂ ಎಂಬನಿತು ವಿಚಾರಾತ್ಮಕಂ; ಈ
ಎಲ್ಲವಂ ನಿಮ್ಮೊಳೇ ನೀವ್ ತಿಳಿದು ನೋಡಿರಿ.
ಜನ ಸಕಲತರ ಕಾಮನೆಗಳಲಿ ಮುಳುಗಿರ್ಪುದೇ
ಕಾರಣಂ ಎನೆ ಮತಿಗತಿಯ ಅವನತ ಮುಖವೇ
ಎಲ್ಲೆಲ್ಲು. ಊರ್ಧ್ವಮುಖಿಯಾಗದೆ ಜಸವದಿಲ್ಲ
ಬದುಕಿನಲಿ. ಕೇಳಿರೈ ಬಂಧುಗಳೆ, ಈಶ್ವರನ
ಕೀರ್ತನೆಗೈವೆಲ್ಲ ಮುಖವುಂ ಎನ್ನಯ ಮುಖವೆ.
ಶ್ರೀ ಭಗವಂತನಂ ಸರ್ವತ್ರ ಸದಾ ಮನವಿಟ್ಟು
ನೋಳ್ಪ ಪ್ರತಿಯೊಂದು ಕಣ್ಣು ಎನ್ನ ಕಣ್ಣೆ.
ನಾವ್ ಒಂದೊಂದು ದೇಹವಲ್ಲಂ. ವಿಶ್ವವೇ
ನಮ್ಮ ದೇಹ, ನಾವೆಲ್ಲರ್ ಐಂದ್ರ ಜಾಲಿಕರ್.
ನಮ್ಮಿಚ್ಛೆಯೊಲ್ ಜ್ಞಾನಮುಂ ಸೃಷ್ಟಿಸುವೆನೆನ್.
ಈಗಳಿನ್ನ ಮನಸ್ಸು ದೇಹಸ್ಥಂ, ಅಂತಲೇ
ಎನಗೊಂದೆ ಶಿರಸ್ಸು. ಸಮಾಧಿಯೊಳ್ ಎನಗಕ್ಕುಂ
ಸಹಸ್ರಾರು ಶಿರಗಳ್, ಆತ್ಮಚ್ಯುತಮೆಂದೊಡೆ
ಮರಣ ತೊಲಗಲಕ್ಕು. ಆನುಂ ಮೇಣೆನ್ನ ತಂದೆಯು

ಒಂದೇ ಎನುತೆ ಸದಾ ಧ್ಯಾನಿಸಿರಿ. 'ಆಂ ಪಾಪಿ'
ಎಂದು ಕುಗ್ಗುವುದಕಿಂ ಮಹಾಪಾಪ ಬೇರೇಂ
ಇಲ್ಲಂ. ನಿರ್ಭಯತೆಯೇ ಜೀವನೀಯ ರಹಸ್ಯಂ.
ಮುಕ್ತಿಯೆಂದೊಡೆ ಭಯಂಗಳ ನಾಶ. ದುರಾಲೋ-
ಚನೆ ದುರಾಚಾರದನಿತೇ ದೋಷ ಪೂರಿತಂ.
ಮನುಷ್ಯತ್ವದ ಮಹಿಮೆಯಂ ಮರೆಯದಿರಿಮ್, ಎನೆ
ಇದಕಿಂತ ಬೇರೆಯಪ್ಪ ದೇವರ್ ಮಿನ್ನೆಯುಂ
ಇರಲಿಲ್ಲ; ಮುಂದೆಯುಂ ಬರ್ಪುದಿಲ್ಲಂ. ಬುದ್ಧ
ರಾಮ ಕೃಷ್ಣ ಕ್ರಿಸ್ತರೆಲ್ಲಂ "**ಅಹಮಸ್ಮಿ**" ಎಂಬುವ
ಮಹಾವಾರ್ಧಿಯ ತರಂಗಗಳ್, ಮಾತ್ರವೆಂದೇ
ನೀವ್ ತಿಳಿಯಿರಿ. ಕರ್ಮ ಕಾಂಡದೊಳ್ ಬಡಜನರ
ಗೆಯ್ಮೆ ಸಿರಿವಂತನ ಭೋಗಭಾಗ್ಯಕೆ ಕಾರಣ
ತಾನಪ್ಪಂತೆ ಅನ್ನೆಯಮದು ಪೆರ್ಚಿದೊಡೆ ಧಾರ್ಮಿಕ
ಪ್ರಪಂಚದೊಳ್ ಅವತಾರಗಳ್ ಮೂಡುವುದು
ಶಿಷ್ಟಜನ ರಕ್ಷೆಗಾಗಿ. ಶ್ರೀ ಕೃಷ್ಣ ಪರಮಾತ್ಮ
ಅಪ್ಪಣೆಕೊಡಿಸಿಹನಿಂತು ಕೇಳಿರಿ ಮಿತ್ರರೇ,

"ಯದಾ ಯದಾಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನ ಮ ಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ ॥

ಅಂತಲೇ ಗುರುದೇವ ಶ್ರೀ ರಾಮಕೃಷ್ಣರಾ
ಅವತಾರಮಾಯಿತ್ತು, ಧರ್ಮಭೂಮಿಯೊಳ್. ಆ
ಗುರುವರನ ಶಿಷ್ಯನಾಗಿ ಆನೆಯ್ದಿನಿಲ್ಲಿಗೆ.
ಶ್ರೀಮದ್ಗುರುವಿನ ಪರಮಾದೇಶದ ಹೊರೆಯಂ
ಪೊತ್ತು ಕಟಿಬಂಧಗೈದಿಹೆನ್. ಅದಲ್ಲದೆ ಬೇರೆ

ಆವೊಂದು ಇಚ್ಛೆಯುಂ ಎನಗಿಲ್ಲಂ. "**ಧರ್ಮೋ**
ಜಯತಿ ನ ಅಧರ್ಮಃ" ಎಂಬುದಂ ಮರೆಯಲಾಸಲ್ಲ.
'ಒಂದರೊಳ್ ಅರಿತರಿತು ಪರಿಪಕ್ವತೆಯಂಬಡೆದು
ಮುಂಬರಿಯಿರಿ' ಎಂಬುದದು ಪೂರ್ವಿಕರಭಿಮತಂ.
'ಎಲ್ಲರೊಳ್ ಸಮತೆಯ ಕಾಂಬುದದು ಒಳ್ಳಿತು' ಎಂಬ
ಅಭಿಮತಂ ಅರ್ವಾಚೀನರದು. ಬುದ್ಧಿಯ ಗೃಹಿಕೆಯಂ
ಯುಕ್ತಿವಾದವುಂ ಸಂಹರಿಸುವುದಾದೊಡಂ ನಲ್
ಸಿದ್ಧಿಯೊಡೆದುದಂ ಆರ್ ಸಂಹರಿಸಲಾರರರ್.
ಅಥ ಕಿಡಿಸಲಾರರರ್. ಅದುಂ ಸರ್ವತ್ರ ಶಾಶ್ವತಂ.
ಎಲ್ಲದರೊಳ್ ಈಶ್ವರನಂ ಕಾಂಬ ಅಧ್ಯಯನ
ಅಥ ಅಭ್ಯಾಸಮಿರಲಿ. ಓ ಬುದ್ಧಿಮಾನ್ ಮಾನವಾ!
ಇದಂ ತಿಳಿ. ತಿಳಿದು ಸಿದ್ಧನಾಗು; ಪ್ರಬುದ್ಧನಾಗು!
ಆವ ಶಕ್ತಿಯಾ ಉನ್ಮೇಷ ಮಾತ್ರದಿಂ ದಿಗ್
ದಿಗಂತ ವ್ಯಾಪೀ ಜಾಗ್ರತಮಾದಪುದೊ ಆ ಶಕ್ತಿಯ
ಪೂರ್ಣತ್ವವಂ ಭಾವಿಸಿ ಅರ್ಥೈಸಿ ಅನುಭವಿಸು.
"ನಾವ್ ಪ್ರಭುವಿನ ದಾಸರ್; ಪ್ರಭುವಿನ ವರ
ಪುತ್ರರ್, ಪ್ರಭುವಿನ ಲೀಲಾ ಪ್ರವೃತ್ತಿಗೆ ನಿತ್ಯ
ಸೇವಕರ್ ಎಂಬುದಂ ತಿಳಿ. ದೃಢ ಭಾವದಿಂ
ನಿರ್ಭರತೆಯಿಂ ಕಾರ್ಯ ಕ್ಷೇತ್ರಕೆ ಧುಮುಕಿಯೇ
ಜೈಸಲಕ್ಕುಂ! ಬರ್ದುಕಿ ಬಾಳಲಕ್ಕುಂ! ಮಿತ್ರರೆ!"
ಮೈಕೇಲನೆಂಬೊರ್ವ ಶಿಷ್ಯನುಂ ಅಂದಿನಾ
ಪಾಠಪ್ರವಚನಮಂ ಕುರಿತಿಂತು ಲೇಖನಂ
ಲೇಖಿಸಿದನ್ "ಆವಿಂದು ಗುರುವರ್ಯಂ ಗೆಯ್ದಾ
ಭಾರತೀಯಮಾದ ರುಚಿ ಕಟ್ಟಾದ ಭೋಜನಂ
ಭುಂಜಿಪ ಸುಖಯೋಗಂಬಡೆದೆವೆಲ್ಲರ್. ಬಳಿಕಂ

ಗುರುಗಳ ಸರಳ ಪ್ರವಚನಧಾರೆ ಪರಿದತ್ತು
ಮನಮುಟ್ಟುವ ತೆರದಲಿ. ಭಕ್ತಿರಸ ಪ್ರಧಾನ
ರಾಗರಸ ಹರಿಯುತಿರೆ ನಿರರ್ಗಳ ಶೈಲಿಯಲಿ
ಇಹಪರಗಳ್ ಅರುಗಾಗುತಿರ್ದುವು ಚಿತ್ತದಿಂ.
ಓರೋರ್ಮೆ ಪ್ರವಚನಗಳ್ ಮನದುಂಬಿ ಭಾರದ
ಹೆಗ್ಗಂಟೆನೆ ಯೋಚನಾಭಾರದಿಂ ಕುಸಿಯುತಿರೆ
ಹಸಿವು ತೃಷೆಗಳ್ ಗಣನೆಗೆ ಬಾರವು. ಗುರುವಿನ
ಸನ್ನಿಧಿಯೆ ಪ್ರಧಾನ. ಅವರ ಪ್ರವಚನಗಳ್
ಲೇಖಿಸುತೆ ಕಳೆವ ಪೊಳ್ತು ಉಲ್ಲಾಸಕರಮೆನೆ
ಅನ್ಯಮಲ್ತು. ಅಲ್ಲಲ್ಲಿ ಪದಚಾರಣಗೈವ
ಮೇಣ್ ಖಾದ್ಯಗಳ್ ತಯಾರಿಪ ಪೊಳ್ತಿನೊಳ್
ಎಡೆವಿಡದೆ ಹರಿವುದು ಗುರುಗಳ ಪ್ರವಚನಗಳ
ದಿವ್ಯ ಲಲಿತಮಯಧಾರೆ. ಎಲ್ಲರ್ ಉಂಬುವಾ
ಸಮಯದೊಳ್ ತಮಾಷೆಯ ಕಥೆಗಳುಲಿಯುತೆ ಹಾಸ್ಯ
ಪರಿಹಾಸ್ಯಗಳ ಹೊಳೆ ಹರಿಸಿ ನಗೆಯ ಗುಲ್ಲೆಬ್ಬಿಸಿ
ಎಲ್ಲರ ನಗೆಗಡಲಿನಲಿ ತಾಂ ಮುಳುಗೇಳುವರ್,
ನವ ಅಣುಗರ ಮಾಳ್ಕೆಯಲಿ. ಏವೊಳ್ತು ಗುರುವಿನ
ವ್ಯಾಖ್ಯಾನ ವಾಹಿಯೆನೆ ವ್ಯಾಕರಣ ಛಂದಸಿನ
ಅಲಂಕಾರ ಸೂತ್ರಗಳಿಂ ಕಾವ್ಯವಂ ನೆಯ್ದು
ಪರಮಕವಿಯ ತೆರದಲಿ ಪೊಣ್ಮುವುದು ಶಿಷ್ಯರಂ
ಮಂತ್ರಮುಗ್ಧಗೊಳಿಸುವ ಪಾಂಗಿನಲಿ. ಅಹ ದೇವ
ಗುರುವಿನ ಎದೆಯ ನಿಘಂಟು ವಿಶ್ವಾತ್ಮಕಂ! ಮೇಣ್
ಪ್ರಜ್ಞಾನ ಸಂಪುಟಂ ಲೋಕೋತ್ತರಂ! ಪ್ರೀತಿ
ವಿಶ್ವಾಸಗಳ್ ಸಾಗರೋಪಮ ಸುವಿಸ್ತಾರಂ!
ಈ ಪರಿಸರದೊಳ್ ಮನಕಿಡಿಸುವ ಶಬುದಂಗಳ

ಮಾಲಿನ್ಯಮಿಲ್ಲಂ. ಕಲ್ಮಶದ ಸೋಂಕಿಲ್ಲಂ. ಜನಗಣಗಳ
ಮಾತಿನ ಗಜಿಬಿಜಿಯಿಲ್ಲಂ, ನದೀತಟಿನಿಯಲಿ
ಬಹುದೂರದನಕ ವಾಯುವಿಹಾರ. ನಾವೆಯಲಿ
ಜಲ ವಿಹಾರ. ಸದಾ ಶಿಷ್ಯರೊಡನಾಟ. ಲೇಖನ
ಕೃಷಿ. ಪಾಠಪ್ರವಚನಗಳ್. ಇಂತಿಂತಿಂತು
ಕಳೆವುದು ಗುರುವರ್ಯನ ದಿವ್ಯತಮ ಸತ್ಕಾಲಂ.
ಆವ ಜನ್ಮದ ಪುಣ್ಯಮೋ ನಮಗಿಂದು ಶ್ರೀ
ಗುರುವಿನ ಪರಮ ಸನ್ನಿಧಾನ ದೊರಕಿದುದೆಮ್ಮ
ಜನ್ಮ ಪರಿ ಪಾವನಗೊಳಿಸೆ. ಆನೇಗಳ್ ದೇವ
ದೇವತೆಯರಂ ಬೇಳ್ವೆನ್ ಶ್ರೀ ವಿವೇಕಾನಂದರಿಗೆ
ದೀರ್ಘಾಯುವಂ ಇತ್ತು ಕಾಪಿಡ್ಯೆ ಎನುತೆನುತೆ.'
ಅದಾಯ್ತು, ಮೈಕೇಲನ ಹೃತ್ ಹಾರೀ
ಲೇಖನಂ. ಮತ್ತಮಾ ಜಾನ್ ಎಂಬೋರ್ವ ಪ್ರಿಯ
ಭಕ್ತನುಂ ತನ್ನ ಲೇಖನಿಯೊಳ್ ಮಸಿಯೊರತೆಯ
ಹರಿಸಿರ್ದನೆಂತೆನೆ "ಗುರುದೇವಂ ಎಂತಿಂತು
ಪ್ರಜ್ಞಪ್ತಿ ಪ್ರಜ್ಞೆಯಂ ಪಡೆದನೊ ಎನಲೆಲ್ಲಾ
ಪ್ರಶ್ನೋಪಪ್ರಶ್ನೆಗಳಿಗೆ ಯಾವತ್ಕಾಲವುಂ
ಸಿದ್ಧ ಉತ್ತರಮೆನಲದು ಅಚ್ಚರಿಯ ಗಂಟೇ
ಸರಿ, ಋತಶಕ್ತಿಯಂಬಡೆದ ಧೀಮಂತ! ವಿದ್ಯಾ
ದೇವತೆಯ ವರಪುತ್ರ ! ಶೂನ್ಯದೆದೆಯಂ ಬಗೆದು
ಶಾಶ್ವತವನರಿಯಲ್ಕೆ ಅಕ್ಕರಕ್ಕರಂ ಒರೆಗೆ
ಹಚ್ಚುವ ಕವಿಗಳ ದರ್ಶನಂಪಡೆದ ಅನುಭವ
ಮಾಯಿತ್ತು ಮನತಣಿಯುವ ತೆರದಲಿ. ಗುರುವರನ
ಪರಿಪೂರ್ಣ್ಯ ಸಾನಿಧ್ಯದೊಳ್ ನೆಲಸಿದಾವೆಲ್ಲ
ದ್ವಾದಶ ವಟುಗಳ್ ಯಾ ಶಿಷ್ಯರುಂ ಧನ್ಯರೇ

ವಲಂ! ಇಂತಪ್ಪ ಗುರುದೇವಂಗೆ ಭಗವಂತ
ಕಾಪಾಡಲಕ್ಕುಂ. ಆವಾವ ದುಷ್ಟಗ್ರಹಗಳ್
ಮುಟ್ಟದಿರಲೆಂದು ಆ ಪರಮಾತ್ಮನೊಳ್ ಬೇಡಿ
ಬೇಡಿ ಕಾಡುವೆನೆನ್."
ಈವಗೆಯ ಪತ್ರಂಗಳ
ಬೊಂತೆಗಳಿಗೆ ಕೊನೆಮೊದಲಿರದ ಪರಿಯೊಳಾಯಿತ್ತು.
ಶ್ರೋತೃಜನ ವರ್ಗದಲಿ ಜಾನ್ ಹಾರ್ಡಿ 'ಎಂಬುವ
ನಾಮಧೇಯದಿಂ ಮೆರೆದ ಯುವ ಪ್ರಭೃತಿಯುಂ
ಮನಮೆಚ್ಚಿ ನೆಚ್ಚಿ ಲೇಖಿಸಿದ ಉಲ್ಲೇಖಮಿದು,
"ನಾಮಿಂದು ಸ್ವಾಮೀಜಿಯ ಬಳಿಗೆಯ್ದು ಪೊಳ್ತಿನಲಿ
ಭಗವದ್ಗೀತೆಯ ಪಠಣದೊಳ್ ಮನಕಲ್ಪಮಂ
ನೆಟ್ಟು ಪದ್ಮಾಸನದೊಳ್ ಕುಳಿತಿರ್ದರ್ ಕೈಲಿ
ಗ್ರಂಥವಾಂತು. ಉಳಿದೆಲ್ಲ ಶಿಷ್ಯರೈತರೆ ಬಳಿಗೆ
ಸ್ವಾಮೀಜಿಯುಂ ನಲ್ಮೆಯಿಂದಿಂತೆಂದರ್ "ಎಲೆ
ಶಿಷ್ಯರೇ, ನಿಮ್ಮಗಳಿಗಿಂದಾಂ ಭಗವದ್ಗೀತೆ
ಓದೋದಿ ವಿಷಯವಾಹಿಯಂ ಸರಳಗತಿಯಲಿ
ವಿವರಿಪೆಂ."
ಪ್ರಸನ್ನ ವದನಾಂಭೋಜದಲಿ ಸಿತ
ಸ್ಮಿತವರಳಿ ಹೂವಾಯ್ತು. ಪರಮಾದರದ ಭಾವ
ನದಿ ಉಕ್ಕಿದೊಲ್ ಸಂತಸದಲಿ ಎಲ್ಲರಂ ಬರ
ಮಾಡಿ ಬಳಿಯೊಳ್ ಕುಳ್ಳಿರಲ್ ಬೆಸಸಿ, ಶ್ರೀಕೃಷ್ಣ
ಪರಮಾತ್ಮನ ಗೀತೋಪದೇಶದ ಗೀತೆಯಂ
ತಮ್ಮ ಕಂಚುಗೊರಳುಲಿಯಲಿ ಹಾಡಿ ಅರ್ಥಮಂ
ವಿವರಿಸಿದರ್. ಅಹ ಆ ವಿವರಣೆಯ ಸಿರಿಸೊಬಗು
ಮನಮನಗಳಂ ಮುಟ್ಟಿ ಮತಿ ಕಲ್ಪಮಂ ತಟ್ಟಿ

ತುಂಬಿದುದು ಹೃದಯ ಕಲಶಮಂ. ತರುವಾಯಿಯೊಳ್
ಗುರುವರಂ ಮತ್ತಿಂತು ನುಡಿದರ್ "ಎಲೆ ಶಿಷ್ಯರೇ,
ಕೇಳಿರೈ! ಭರತವರ್ಷದಲಿ ಮೌರ್ಯ ವಂಶೀಕ
ಅಶೋಕ ಚಕ್ರವರ್ತಿಯು ನೆರೆಯ ಕಳಿಂಗ ರಾಜ್ಯದ
ರಾಜ ಮಹರಾಜರುಗಳ ನೇಹದ ಗೆಣೆತನಂ
ಬೆಳೆಸುವ ಬದಲ್ ದ್ವೇಷದ ಗಣಿಯಾಗಿ ಯುದ್ಧ
ಹೂಡಿದನ್. ಯುದ್ಧದೊಳ್ ಜಯಶ್ರೀಯಂ ಪಡೆದೊಡಂ
ಸುಖ ಶಾಂತಿಯು ದೊರೆಯದೆ ಹೋಯ್ತು ಆ ನೃಪಂಗೆ.
ರಣಯುದ್ಧದಲಿ ಕೈಕಾಲ್ ಕಳೆಕೊಂಡವರ ತನು
ಛಿದ್ರಗೊಂಡವರ ಗಾಯಾಳ್ಗಳ ರಣಗೋಳಿನ
ಚೀರಾಟ ಕೂಗಾಟ ಮನಂಗೆಡಿಸಿತು. ನೃಪ ಅಶೋಕಂ
ತಾಂಗೆಯ್ದ ಘೋರ ಅಪರಾಧಮಂ ಅರಿತು ಮನ
ಮರುಗಿ ನೋವುಂಡು ಆತ್ಮ ಶಾಂತಿಯ ನೆರೆಬಯಸಿ
ತಾಂಗೆಯ್ದ ಪಾಪಕರ್ಮಕ್ಕಾಗಿ ಮನಮರುಗಿ
ಹಾತೊರೆದು ಕಾತರಿಸಿ ಬೌದ್ಧರ ಕಮನೀಯ
ಶಾಂತಿಪರ್ವವಂ ತಾಂ ಬೊಕ್ಕಂ. ಅಧಿಕಾರದ
ದರ್ಪ ದೌಲತ್ತುಗಳ್ ಶಾಂತಿಯಂ ಎಂದಿಗುಂ
ಕರುಣಿಸವು. ಧನದಾಹ ಸುಖಶಾಂತಿಗೆ ಮಿತ್ತುಕಣಾ!
ತನ್ನೊಳ್ಪಿಗೆ ಜಗದೊಳ್ಪಿಗೆ ಶ್ರೀ ಭಗವದ್ಗೀತೆ
ಮಹಾ ಶಾಂತಿ ಸಾರ. ಭಗವಂತ ಸರ್ವಾಂತರ್ಯಾಮಿ!
ಆತನಲ್ಲದೆಯೆ ಮತ್ತಾರಿಲ್ಲ ಸತ್ ಶಾಂತಿ
ದೂತರ್."

ತನಿವೆಳಗು ಹರಿದುಬರುತಿರೆ ಸಾಯಂ
ಸುಧಾ ಮೋಹನ ಮಧುರ ಶೈಲಿ ಹೃನ್ಮನಗಳಂ
ಮುದ್ದಿಸಿರ್ದುದು ಅಮಿತರೋಮ ಹರ್ಷಕವಾಗಿ.

ಕಣ್ಣಿ ಹರಿದತ್ತಕಡೆ ದಿಟ್ಟಿಯಟ್ಟಿಲ್ ಹಬ್ಬಿ
ಹರಡಿದ ಹಸುರು ಗೋಧಿಹೊಲಂ, ಬಿತ್ತರದ ಸಿರಿ
ಮೆಯ್ಯ ಫಲಪುಷ್ಪ ತೋಂಟಂ, ಪರಿವ ತೆಳ್ಳನೆಯ
ಕಾಲ್ವಾಯಿಯಲಿ ಜಳಜಳಿಸುವ ಮಧುರ ರಾಗಂ.
ಮೊಳಕಾಲ್ ಮುಟ್ಟುವನ್ನೆಗಂ ಬೆಳೆದಿರ್ದ ಪುಲ್
ಪಚ್ಚಗೆ ಪಸುರ್ವೆತ್ತ ಅದ್ಭುತ ವಿಸ್ತಾರಂ. ವನ
ದೇಶದ ಸುರ ಬಂಧುರ ದೃಶ್ಯಮಾನಮಾದಾ
ಸೌಂದರ್ಯ ರಾಶಿಯಿಂ ಬಗೆಯು ನೀಳ್ಕುಳಿಗೊಂಡು
ಚೆಲ್ವಾಯ್ತು, ಸೊಗಮಾಯ್ತು, ಮನಕೆ ಮಧುರವೆತ್ತ
ಸಗ್ಗಸಿರಿಯಾಯ್ತು. ದೂರ ಪೆಸಿಫಿಕ್ ಸಾಗರದ
ಮೇಲೆ ತೀಡಿಬಹ ಇನಿಗಾಳಿ ತಣ್ಣಗೆ ತಣಿಸಿ
ತಣಿಸಿ ಮುಂಬರಿಯಿತು ಮುದದಿಂ. ಶ್ರೀಗುರುವರಂ
ಶಾಂತಿ ಸಮುದಯದ ಪ್ರಶಾಂತಿಯಂ ಸವಿಯುವರ್
ಭಾವನಾವೇಶದಲಿ ಏಕಾಂಗಿಯಾಗಿ. ಅಹ,
ಅಂದಿನ ವಿಶೇಷ ಸುದ್ದಿಯಿಂ ಅರಿವಳಿಕೆಗೈದ
ಪೊಚ್ಚ ಪೊಸ ವಿಷಯಂ ನೆನೆನೆನೆದು ಪುಳಕಿತ ಮನ
ಮತಿಯ ಉತ್ಸುಕತೆಯಿಂ ಬಿತ್ತರಿಸಿದರಿಂತು,
"ಭಲೆ! ಕೊಲಂಬಿಯ! ಸ್ವಾತಂತ್ರ್ಯದ ತಾಯ್ನಾಡೆ! ನಿನ್ನಯ
ದಿಗ್ವಿಜಯಕೆ ಜೈ! ಎನುವೆ! ನಾಗರಿಕ ಜಗತ್ತಿನ
ಮುಂಚೂಣಿಯಲ್ಲಿ ನೀಂ ಸರ್ವ ಸಮನ್ವತಾ ಧ್ವಜ
ಹಿಡಿದು ಕೆಚ್ಚಿನಿಂ ಪೆರ್ಮೆಯಿಂ ಮುನ್ನಡೆಯ ಧೀ-
ಮಂತಿಕೆಯ ಮಹಾಕಾರ್ಯ ನಿನ್ನಯ ಪಾಲಿಗಾಯ್ತು!
ನಡೆ, ಇನ್ನಿನ್ನು ಮುನ್ನಡೆಯೈ! ಧೀರೋದ್ದಾತ್ತ
ತೇಜದಿಂ. ನೆರೆಹೊರೆಯ ರಾಜ್ಯಗಳ ಕಿಚ್ಚಿನಿಂ
ಕೆನ್ನೆತ್ತರಿನೊಳ್ ಕೈ ಅದ್ದದಿಹ ಪುಣ್ಯವೇ

ನಿನ್ನದಾಯ್ತು. ಶ್ರೀಮಂತಿಕೆಯ ತುತ್ತತುದಿಯಂ
ಅತಿ ಸುಲಭದ ಮಾರ್ಗಮೆನೆ ಅನ್ಯರ ದೋಚುವುದು
ಎಂಬ ಕ್ರೂರ ಮಾರ್ಗಂ ಅನುಸರಿಸದಿಹ ಪುಣ್ಯ
ನಿನ್ನ ಪಾಲಿನದಾಯ್ತು. ಧನ್ಯ! ಹೇ, ಕೊಲಂಬಿಯಾ!!"
ಇಂತಿಂತು ಅನನ್ಯ ಸುಶಾಂತಿಯಂ ಕುರಿತಂತೆ
ಮನಬಿಚ್ಚಿ ಹೃತ್ ಸ್ಫೂರ್ತಿಯಿಂ ನುಡಿಯಲಾ ರೋಮ
ಹರ್ಷಕ ದನಿ ಸ್ಫುರಿಸಿತು ಆನಂದರಸವಂ
ನಾಳನಾಳಗಳ್ ಸೀಳಿಹೋಹ ತೆರದಲಿ. ಆ
ಮಹೋನ್ನತ ಶಾಂತಿ ಸಮುದಯದಲಿ ತನುಮನಗಳ್
ಉತ್ಸುಕಮಿರೆ ಜಾನ್ ಪೀಟರ್ ಎಂಬ ಪ್ರಿಯತಮ
ಶಿಷ್ಯನಿಂಗೆ ಲೇಖಿಸಿದರೊಂದು ಕಿರು ಪುತ್ರವಂ,
"ಅಯ್ಯಾ, ವರಶಿಷ್ಯನೆ! ದಿನಚರಿಯೆಮ್ಮ ನಿಯಮಿತ
ಪ್ರಕಾರದಲಿ ಸಾಗುತಿದೆ ಯಥೋಚಿತವಾಗಿ.
ಕೆಲವೊರ್ಮೆ ಸೋಲ್ದು ಬಳಲ್ದು ಸೊಗಡಪ್ಪುವೆನ್.
ಆದೊಡಾ ಗುರುದೇವನ ಕೃಪೆಯ ಬಲದಿಂದಾಂ
ತಂತಾನೆ ಸರಿಯಪ್ಪಿ ಪ್ರೋತ್ಸಾಹ ನೀಡುವುದು
ದೇವ ಧನ್ವಂತ್ರಿಯ ತೆರದಿ. "**ಜಾತಸ್ಯ ಮರಣಂ
ಧ್ರುವ**" ಪುಟ್ಟಿದ ಬಳಿಕ ಸಾವು ತಪ್ಪದು ಕಣಾ!
ಆದೊಡಂ ಎನ್ನೆಲ್ಲ ಕರ್ತವ್ಯಭಾರವದು
ಶಿರೋಪ್ರದೇಶವೇರಿರೆ ಬೇರೆ ಚಿಂತನೆಗೆ
ಅವಕಾಶ ದೊರೆಯದೆಂಬೆ. ಧಾರ್ಮಿಕ ಚಿಂತನಾ
ವೇಶದಾವೇಶ ಕುದಿಕುದಿದು ಸುಡುತಿದೆ ಒಡಲ್
ಬೆಂದು ಬೆಂಡಾಗುವೊಲ್. ಈ ಬಾಳ್ಬದುರ್ಕುಮೆಂದೂ
ಶಾಶ್ವತದಸಿರಿಯಲ್ಲ. ಎಂದಾದೊಡಂ ಈ ಶರೀರವುಂ
ಅಳಿದು ಪೊಸವಗೆಯ ಬಾಳ್ಮೆಯುಮೊಳೆಯಲ್ವೇಳ್ಕುಂ.

ಬದುಕಿರುವನಕ ಮಂಗಳಮಯ ಕಾರ್ಯಮೆಸಗುವ
ಗುರಿ ಇರ್ಕುಂ. ಬದುಕಿನ ಸತ್ಯಾರ್ಥಮಂ ಕಂಡು
ಕೊಂಬುದೆ ನಿಜ ಗುರಿಯಾದೊಡೆ ಮನುಕುಲಂ ಧನ್ಯ!
ಬರಿ ಕ್ರಿಮಿಕೀಟದವೊಲ್ ಪುಟ್ಟಳಿದೊಡೇಂಬಹುದು?
"ಜ್ಯೋತಿಷ್ಮತಃ ಪದೊರಕ್ಷ ಧಿಯಾ ಕೃತಾನ್"
ನಿನ್ನೊಳ್ ತಿಳಿದು ನೋಳ್ಪುದೆ ಸರಿ. ನೀಂ ಈ ಜನ್ಮ
ಜನ್ಮಾಂತರಗಳ ನಂಬದಿರೆಯುಂ ಯೋಚಿಸಲ್
ಅಭ್ಯಂತರವೇಂ? ಜನ್ಮಾಂತರಗಳ ಸುಕೃತ ಫಲವೆಂಬೆ
ಈ ನರಜನುಮ, ಅದಂ ಸಾರ್ಥಕಗೊಳಿಸಿಕೊಳ್ಳೆ".
    ಅಖಿಲ ಮುಂಬಕ್ಕಿ ಸಂಕುಲಂ ಹಾಡಲುರೆ ಗಿಡು
ಮರ ಬಳ್ಳಿಗಳೆಡೆಯಿಂ ಪೊದಳ್ದುದು ರಾಗರಸ
ರಾಗಾನುರಾಗಮಯವಾಗಿ. ಭಕ್ತಿಭಾವಧಾರೆಯು
ಉಕ್ಕಿ ಹರಿದುದೊ, ಸಂಭ್ರಮ ಸಡಗರ ವೆರ್ಚಿದುದೊ,
ಸುಪ್ರಭಾತ ಸ್ವಾಗತದ ಪುರುಪೊ ಎಂದೆನಲ್
ಪ್ರಾತಃಕಾಲೀನ ಸೊಬಗು ಸೊಗಯಿಸಿ ಶಾಂತಿರಸ
ಸೂಸಿರಲ್ ಲೋಕೋತ್ತರಮಾದತ್ತು ಮನಮತಿಗೆ.
ಕುಸುಮಕೋಟಿಗಳನರಸಿ ಬಹ ಇಂದಿಂದಿರಗಳ
ದಂಡು ಪೂವಿಂಪೂವಿಗೆ ಹಾರಾಡಿ ಝೇಂಕರಿಸಿ
ಓಂಕೃತಿಯಂ ಕರ್ಣಗಳಿಗೆ ಹೂಗಣೆಯಂಗೈದು
ಸಂಭ್ರಮಿಸಿದುವು ಒಡಲ್ ತುಂಬಿ. ಸ್ವಾಮೀಜಿ
ತಮ್ಮೊಳಗೆ. ತಾಯಿ ಬೆಲ್‌ಹೇಲ್-ಳಂ ನೆನೆದು
ಅವಳಿಗೊರ್ ಪತ್ರಮಂ ಲೇಖಿಸಲ್ ಲೇಖನದ
ಸಾಮಗ್ರಿಯಂ ಕೈಕೊಂಡರ್. ಮಸಿ ದೌತಿಗಳುಂ
ಬಳಿಗೈದುವು ಕಾಗದಮಂ ಮುಂದಿರ್ಕಿ ಮಸಿಯ
ಒರತೆಯಂ ಹರಿಸಿದರ್ "ಪ್ರಿಯ ತಾಯಿ, ಎನ್ನಯ

ತಾಯ್ನಾಡಿನ ಸೋದರ ಸಜ್ಜನರ ಸಮುದಾಯ
ಎನ್ನನುಂ ಪೊಗಳಿ ಪಾಡಿರಲಾನ್ ಅದನಿನಿತು
ಪೆರ್ಮೆಯಿಂ ಸ್ವೀಕರಿಸೆ, ತಿಳಿ. ಭಗವಂತನೆನಗೆ
ಸೇವೆಗೊಂದು ಅವಕಾಶಮಿತ್ತಿರಲ್ ಎನ್ನಿಂದೆ
ಕಿಂಚಿದಪಿ ಧರ್ಮ ಸೇವೆಯಂ ಸಲಿಪೆನೆನ್. ಇದಂ
ವಿಶೇಷ ಎನಲುಂಟೇ ತಾಯಿ? ಕೀರ್ತಿಯಂ ಕಟು
ಪೀಡೆ ಎಂದದಂ ದೂರೀ ಕರಿಪುದೆಲ್ಲರ್ಗೆ
ಒಳ್ಳಿತು. ಪೊಗಳಿಕೆಯೆಂಬುದದು ಮುಂದಿನ ಕಾರ್ಯ
ವಾಹಿಗೊಂದು ತಡೆಗಟ್ಟೆಯಾಗದವೊಲ್ ನಾವ್
ಎಚ್ಚರಿರದಿರೆ ಕಜ್ಜವೇ ಕೆಡಗು. ಮತಿಗತಿಯೇ
ಕೆಡಗು. ಇನ್ನೊರ್ ವಿಚಾರಮಂ ಆಂ ತಿಳಿಪುವೆನ್;
ಕ್ರೈಸ್ತರ್ಗೆ ಮೇಣವರ ಧರ್ಮಕ್ಕೆ ಮತ್ತವರ
ಪ್ರಚಾರಕರಿಂಗೆ ಕಿಂಚಿತ್ ಹಾನಿಗೈದರಿಲ್ಲ,
ನಮ್ಮವರ್. ನಮ್ಮದು ಬಲ್ ಸ್ನೇಹಪರ ಸೂತ್ರಂ
ಎನಲ್‌ತಪ್ಪಲ್ಲ. ತಾಯಿ, ಮಾತಾಜಿ! ನೆರೆಹೊರೆ
ರಾಷ್ಟ್ರಗಳ್ ಭಾರತದ ಹಿರಿಮೆಯಂ ಕುರಿತಂತೆ
ನುಡಿವ ನಲ್‌ನುಡಿಗಳ್ಕೆಸಿರಿಯು ಪ್ರೋತ್ಸಾಹಿಪುದು
ದಿಟಂ. ಈ ದೇಶೀಯರ್ ಎನ್ನೀ ವಿನಮ್ರತೆ
ಸದ್ಭಾವನೆದುಂಬಿದ ಕಾರ್ಯಮಂ ಮೆಚ್ಚಿದುದು
ಭಾರತೀಯರ್ಗೆ ಅನನ್ಯತಮ ತೋಷಗೌರವ
ಆದರಗಳ್ ಸಂದುದು ಸತ್ಯಂ. ಪರಕೀಯರ
ಆಡಳಿತದ ತತ್ತಳ ತುಳಿತ ಅವಮಾನ ಹಿಂಸೆ
ಇಂತಿಂಥ ಕ್ರೌರ್ಯಕೆ ಸಿಲುಕಿ ನರಳಿದವರಿಂಗೆ
ಕ್ರೈಸ್ತ ಕಾರ್ಯಕರ್ತರ ತೆಗಳಿಕೆಯ ವಿಷಯಮಂ
ಮನದಟ್ಟು ಮಾಡಿಕೋ! ಕೋಟ್ಯಾಂತರ ಭಾರತ

ಪ್ರಜೆಗಳ ಕಡು ಬಡತನ ಸಂಕಟಗಳ ದಿವ್ಯ
ನಿವಾರಣೆಯ ಪ್ರಯತ್ನದ ಬದಲ್ ಹೀಗಳೆದು
ಹೀಯಾಳಿಪುದು ತರವೆ? ಆವ ಉಪಕಾರಗಳ
ಮಾತಿರ್ಕೆ, ನಲ್ನುಡಿಗಳ ಪುರಸ್ಕಾರಗೈದೊಡೆ
ಎನಿತೆನಿತೊ ಉಪಕೃತ ಮಾದೆವಾವ್ ತಾಯೀ!
ಆನೆಲ್ಲ ರಾಷ್ಟ್ರಂಗಳಂ ಕೇಳಿಕೊಂಬುದೆನೆ
ಇದು ಮಾತ್ರ ತಾಯಿ! ನಿಮಗೆ ಸಾಧ್ಯಮಿರುತಿರಲ್ಕೆ
ಉಪಕರಿಸಿ. ಅದಾಗದಿರೆ ಹೀಗಳೆವುದಂ ಬಿಡಿ.
ನಿಮ್ಮ ನೆರೆಹೊರೆಯವರ್ ಸರಾಗದಲಿ ಉಸಿರಾಡೆ
ಅವಕಾಶ ಕಲ್ಪಿಸುವುದಂ ಮರೆಯದಿರಿ. ಅವರ
ಬಗ್ಗೆ ದಯೆ ಕರುಣೆಯಂ ತೋರಿಮ್. ಇದೆಂದಿಗುಂ
ಎಲ್ಲ ಮನು ಕುಲಜರ ಪರಮ ಧ್ಯೇಯವಾಗಿರಲಿ. ಹೇ,
ತಾಯೆ! ದೇವರು ಸದಾ ಕಾಲವು ಎಲ್ಲಾ ಕಡೆ
ತಾನಿರ್ಪುದು ಸಾಧ್ಯಮಿಲ್ಲಮೆಂದಲ್ತೆ ತಾಯಿಯಂ
ಸೃಷ್ಟಿಸಿಹನ್? ಅದನಾನೆಂದು ಮರೆಯನ್ ತಾಯೆ!"
ತಾಯಿಯೇ ಮೊದಲಲ್ತೇ ಜಗದ ಚೆಂಬೆಳಕಿಂಗೆ
ಇತ್ತುದೆಮ್ಮನುಂ? ತಾಯಿಯೇ ಶ್ರೇಷ್ಠಂ ಸಕಲ
ಜ್ಞಾನಿ ಕುಲಕೋಟಿಗೆ! ತಾಯೇ! ನಿನಗೆ ನಮನಂ!

"ನ ತ್ವಹಂ ಕಾಮಯೇ ರಾಜ್ಯಂ
ನ ಸ್ವರ್ಗಂ ನ ಪುನರ್ಭವಮ್ ।
ಕಾಮಯೇ ದುಃಖತಪ್ತಾನಾಂ
ಪ್ರಾಣಿನಾಮಾರ್ತಿನಾಶನಮ್ ॥"

ಹರಿಃ ಓಂ ತತ್ ಸತ್

❃ ❃

ಅಷ್ಟವಿಂಶೋಲ್ಲಾಸಂ

ಪೌರ್ವಾತ್ಯಪ್ರವಾದಿ

ಏಳು ವೀಣಾ ಪಾಣಿಯೆ! ಏಳು ನವ ಶೃಂಗಾರ
ಸುಂದರಿಯೆ! ಏಳು ಅಂತರ್ಯಾಮಿ ಚಿಂತನಾ ಖನಿಯೆ!
ಕಾವ್ಯ ಪ್ರತಿಭಾ ಕಾಮಿನಿಯೆ! ಹೇಳು ಹೇಳೆಲೆ,
ಸ್ವಾಮಿವಿವೇಕಾನಂದರ ಪ್ರಪ್ರಥಮ ಕಾವ್ಯ
ಗಾಥೆಯ ಅಮೂಲ್ಯ ಸಲಿಲಮಿದು ಹರಿಯಲಿ ಸದಾ.
ಹೇಳು, ತಾಯೆ, ಸರಸತಿಯೆ ನಿನ್ನ ಸರ್ವಾಂಗ
ಸುಂದರ ಸುಪುತ್ರನ ಮಧುಮಯ ವೇದಭೋಗದ
ಚರಿತಾಮೃತವ. ತವ ಪದತಲದಲಿ ಶಿರಮಣಿದು
ಶ್ರೀ ಪಾದಯುಗ್ಮಗಳ ಧೂಳಿಯಂ ಶಿರಸ್ಸಾ
ಧರಿಸಿ ಬೇಡಿಕೊಂಬುವೆನ್ ತಾಯೆ, ಜಗಜ್ಜನನಿ,
ವರ ಮಾತೃಕೆ! ನೀನೇ ಮುನ್ನಡೆಸು, ಮುನ್ನಡೆಸು.
ಶಾಲ್ಮಲೀ ವೃಕ್ಷದ ಎಲೆಗಳುದುರುದರಿ ಬರಲು
ಬರಲಾಗಿ ಕಾಯ್ಬಲಿತು ಒಡೊಡೆದು ರಣವಿಸಿಲ
ಕಾಯ್ಬಿಂಗೆ ಸಿಡಿದು ಹಾರಿತ್ತು. ದೂರದೂರಕೆ
ಚಿಮ್ಮಿತ್ತು. ಬೆಣ್ಣೆ ಮುದ್ದೆಗಳಂತೆ ಎಸೆದಿತ್ತು.
ಸುತ್ತಮುತ್ತ ಚೆಲ್ಲಿ ಹರಡಿತ್ತು. ನೆಲ ದುಂಬಿತ್ತು.
ಸಿಂಗರಿಸಿ ಮೆರೆದಿತ್ತು. ಚೆಂದದಿಂ ಹರವಿತ್ತು.
ಎಲ್ಲವಂ ನೋಡುತ್ತೆ ಮನದುಂಬಿ ಮುದವೆತ್ತು
ಅಟವಿಯಂಚಿನ ಪಾದ ಚಾರಣಂ ಮುಗಿಸಿ ತವ
ಬಿಡದಿಗೈದಾಗಳೇ ಎದುರಾದ ಹರಿದಾಸಿ
ಶಿಷ್ಯೆ ಕೇಳಿಸಿದಳಿಂತು 'ಸ್ವಾಮೀಜಿ ಇಂದಿನ
ಪ್ರವಚನ ವ್ಯಾಪ್ತಿಗಾವ ಗ್ರಂಥವದು ಬಪ್ಪುದು?

ಆವುದೀಗಳ್ವೇಳ್ಕುಂ?"
"ಸೋದರೀ ಇರಲಿರಲಿ,
ಈಗಳೆನ್ನ ಮನದೊಳ್ ಕೆಲವಿಚಾರ ದೋಹನಂ
ಸುಳಿಯುತಿಹುದು. ಅದನೊರ್ಮೆ ವಿಮರ್ಶಿಸುವೆನ್,
ಪೌರ್ವಾತ್ತ್ಯಪ್ರವಾದಿಯಾಗಿ ಆನೊರೆವುದಂ
ಕೇಳಿರೆಲ್ಲ, ಪ್ರಿಯತಮ ಶಿಷ್ಯವರೇಣ್ಯರೇ!
ಪಾಶ್ಚಾತ್ತ್ಯರ ದೃಷ್ಟಿಯೊಳ್ ಭಾರತೀಯರಾವ್ ಬಲ್
ರೂಕ್ಷತೆಯ ಚಿತ್ರವಾಗಿ ಎಂತೆಸೆವೆರೆನೆ ನೀವ್
ತಿಳಿವುದು ಮನದಿ. ಕಡು ಬಡತನ ಭೀಕರ ಪ್ಲೇಗು
ಮಲೇರಿಯಾ ಕಾಲರಾ ಇಂತಪ್ಪ ರೋಗಗಳ
ಬೀಡು. ಬರಿಮೈ ಅರೆಹೊಟ್ಟೆಗಳ್ ತುಂಬಿರ್ಪ
ಬದುಕು. ಭೀಷಣ ಕ್ಷಾಮಡಾಮರಗಳಿಂ ದುಃಖ
ದೈನ್ಯ ಭರಿತ ವಿಷಾದ ಕ್ಷೇತ್ರ. ವಿಫಲತೆಯಿಂದೆ
ಬಾಡಿ ಬೆಂಡಾದ ಭೂವಿಸ್ತಾರ. ಜೊತೆಜೊತೆಗೆ
ಮೋಕ್ಷ ಮಾತ್ರಮಂ ಬಯಸುವ ಗುಲಾಮಿಪ್ರವೃತ್ತಿ.
ಶ್ರದ್ಧೆಹೀನ ಬುದ್ಧಿರಹಿತ ಮೋಸ ವಿಶ್ವಾಸ
ದ್ರೋಹ ಬಲಿತು ಬಲಶಾಲಿಗಳ ಕಾಲ್ನೆಕ್ಕುವ, ಮತ್ತಂ
ತಮಗಿಂತ ನಿರ್ಬಲರ ಕೊರಳ್‌ಕೊಯ್ವ ಪ್ರವೀಣತೆ.
ಭವಿಷ್ಯ ಭ್ರಷ್ಟರ್ಗೆ ಸಹಜವಾಗಿ ಮೈಗೂಡುವ
ಅದಮ್ಯತರ ಅಂಧಶ್ರದ್ಧೆಗಳ್. ಕೊಳೆತು ನಾರುವ
ಹೆಣದ ಮೇಲಿನ ಕ್ರಿಮಿಗಳವೊಲ್ ಭಾರತದ
ಶರೀರದ ಮೇಲೆ ಮುತ್ತಿಕೊಂಡ ಮುನ್ನೂರು ದಶ
ಲಕ್ಷ ಮನುಜರ್! ಇಂತಪ್ಪ ನಂಬುಗೆ ಆಂಗ್ಲೇಯ
ಜನಾಂಗದ ಮನದಲಿ...! ಮತ್ತಂ ತಿಳಿಯಿರಿದಂ,
ಭಾರತೀಯರ ದೃಷ್ಟಿಯೋಳ್ ಪಾಶ್ಚಾತ್ತ್ಯರುಂ

ಬಗೆಬಗೆಯ ನವಾರ್ಜಿತ ಶಕ್ತಿಯೊಂದಿಗೆ ಮದಿರೆ
ಮದ್ಯ ಮಾಂಸಗಳ ಪ್ರಾಸನದಿಂದ ಮತ್ತಮನ
ಪ್ರಮತ್ತ ಮತಿಗಳಿಂ ರುದ್ರ ಉನ್ಮಾದಿತ
ಜನಾಂಗ. ತಪ್ಪೊಪ್ಪುಗಳ ಭೇದಮಿನಿತಿರದ
ವಿವೇಚನಾಶೂನ್ಯರ್. ಕಾಡುಮೃಗಗಳ ತೆರದಿ
ಕ್ರೌರ್ಯ ಧೂರ್ತತನ ವಿಷಯಲಂಪಟತನ ನೀತಿ
ನಿಯತಿಗಳ ಕಲ್ಪನೆಯಿರದ ಕೊಳಚೆಯಲಿ ಮುಳುಗಿ
ಜಡವಸ್ತುಗಳ ಆವಿಷ್ಕಾರದಲಿ ನಿರತ ಅದುಭುತ
ನಾಗರಿಕತೆ. ಇತರರ ಸೊತ್ತಂ ಬಲವಂತದಿಂ
ಅಪರಿಸುವ ದುಷ್ಪ್ರವೃತ್ತಿ. ವಿಶ್ವಾಸ ಘಾತಕತನ
ಇಂತಿಂತು ಅಭಿಜ್ಞಾನ ಶೂನ್ಯ ನದಿಯಲಿ ತೇಲ್ವ
ಜನರಾಶಿ. ಪೌರ ಲೌಕಿಕತೆಯೇ ಇಲ್ಲಮೆನೆ
ಅಸುರೀ ವೃತ್ತಿ. ಈ ಬಗೆಯ ಬರ್ದುಕಿಗಿಲ್ಲ
ಮಾನ್ಯತೆ, ಎನಲದು ಚಿರ ಸತ್ಯಂ. ಇದರಿಂದಾಗಿ
ಭಾರತೀಯರ್ಗೆ ಪಾಶ್ಚಾತ್ಯರಲಿ ಸಂಪೂರ್ಣ
ವಿಶ್ವಾಸವೇ ಮೂಡದು, ಎಂದೊಡದು ಗಭೀರ
ಸತ್ಯ ಹೀಗಿರ್ಪುವ ನೆರೆಹೊರೆಗಳ ರಾಜ್ಯಗಳ
ಆತ್ಮ ಸಂಬಂಧವಂ ನೀಂ ನಿನ್ನೊಳ್ ಕಲ್ಪಿಸಿ
ನೋಳ್ಪುದು."
ಮನದಾವೇಶದಲಿ ಜುಗುಳಿದ ಧ್ವನಿ
ಧೀಮಂತ ಎರ್ದೆಯ ಕರಂಡದಿಂ ಹರಿದವೊಲ್
ಒಡನೊಡನೆ ಸ್ತಬ್ದವಾದಂತೆನಿಸಿತು ತನ್ನಯ
ಹೃತ್ ಕುಂಡ ಹರಿದಾಸಿಗೆ. ಮರುನುಡಿಯೆ ಬಾಯಿ
ಬಾರದೆಯೆ ಮೆಲುಕಿದಳ್ ಪರಿಪರಿಯಲಿ. ಇಡಿವಗಲ್
ಶಿಷ್ಯ ಸಮುದಯದೊಳಿರ್ದ ಸ್ವಾಮಿಜಿ ಸಂಜೆಯ

ತನಿವೊಳ್ತಿನೊಳೇಕಾಂಗಿಯಾಗಿಳಿದರ್ ನದಿಯ
ತಟಿನಿಗೆ. ಜುಳುಜುಳಿಪ ಸುಮಧುರ ಮಂಗಳಗಾನ
'ಹರ !ಹರ !ಹರ !ಹರ !' ಎಂದೊರೆವುದು ಕಿವಿಗಳ ಮಿದು
ಪಟಲಗಳಿಗೆ ಮುದವಂನೀಡುವ ತೆರದಿ. ಮತ್ತೆ
ಅದೇ ಸ್ವರ ಮೊರೆವುದು ಕರ್ಣದೇಶದಲಿ ಬಲ್
ಮನೋಹರವಾಗಿ. ಭಾರತದ ಭಾಗೀರಥಿಯ ನಿಚ್ಚ
ಪ್ರವಾಹದಲಿ ಹೊಮ್ಮುವ ಅದೆ ನಿನದ ಮೊರೆವುದು
ಪರಮೋಚ್ಚವಾಗಿ. ಸ್ವಾಮಿಜಿಯುಂ ಎಳೆಯರೊಲ್
ಬಂಡೆ ಬಂಡೆಗಳನೇರಿ ಇಳಿದು ಉಲ್ಲಾಸಮಂ
ಪಡೆಯುವರ್ ತನುಮನಗಳಿಗೆ ಹರ !ಹರ !ರಾಗ
ರಸದುಂಬುತೆ. ಜಲವಿಹಾರಮಂ ತೀರ್ಚಿ ತಾಂ
ಬಿಡದಿಗೈತರೆ ಮಾತೃಮಯಿ ಬೆಲ್ ಹೇಲಳಿಂಗೆ
ಪತ್ರವಂ ಲೇಖಿಸಲ್ ಕುಳಿತರ್, ಮಸಿ ಹರಿದುದು
ಕರಿಯಕ್ಕರವಾಗಿ. "ಎಲೆ ತಾಯೇ, ಕೇಳಿಲ್ಲಿ!
ಭಾರತ ಜನಜಂಗುಳಿಯ ಹೊಗಳಿಕೆ ತೆಗಳಿಕೆ
ಎರಡಕ್ಕು ಪಾತ್ರ ನಾನಾಗಿಹೆ. ಪ್ರಾಣಕಣಕ್ಕೆ
ಇಕ್ಕುಳಂ ಈ ಕೀರ್ತಿಯ ಪಿಶಾಚಿ! ಸರಳತರ
ಕೀರ್ತಿಯಂಪಡೆಯೆ ಶಾಂತಿ – ಪ್ರಶಾಂತಿಯ ಬೆಲೆಯ
ತೆರುವುದರಿಂ ಮಾತ್ರಮೇ ಅನುಭವ ಸುಸಾಧ್ಯಕಣಾ!
ಮಿನ್ನೆ ಆನಿದಂ ಯೋಚಿಸಿ ಇದರ ಬೃಹದ್
ಗಾತ್ರಪಾತ್ರಮಂ ಅರಿದೆನಿಲ್ಲ, ಜಯನಿಕೇತನ
ಹಿಮಾಲಯ ಶಿಖರವೇರ್ದುದಂ ಅರಿತು ಈಗಳ್
ಜಿಗುಪ್ಸೆಯ ಪ್ರೇತಬೆಂಬೊತ್ತಿರ್ಪುದೆನ್ನನುಂ!
ಸಧ್ಯ, ಈ ಜಯಕೀರ್ತಿಯಪಕೀರ್ತಿಗಳ ತೊಳೆದು
ಕಿಡಿಸಿ ಅಳಿಸಿ ಕದಡಿದೆಮ್ಮಮನೋಗತಿಗೆ ಶಾಂತಿ

ಸ್ಫೂರ್ತಿಗಳ ದಾರಿಯಂ ಪರಮಾತ್ಮ ಮಾತ್ರಮೇ
ತೋರಬಲ್ಲಂ. ಮಾತ್ರಮಯಿ ಕೇಳ್, ಭಾರತದ
ಹೃದಯಾಬ್ಧಿಯಿಂ ಅತಿ ಪ್ರಶಂಸೆಯಂ ಪೊತ್ತ
ಪತ್ರಿಕಾ ಪ್ರಪಂಚವೇ ನುಗ್ಗಿ ಬರುತಲಿದೆ!
ಇದಂತೂ ಅತಿಯಾಯ್ತು! ಮನಕೆ ಮುಳ್ಳಾಯಿತ್ತು.
ಎಲ್ಲಾ ಕ್ಷೇತ್ರದಲಿಯುಂ ಇದು ಸತ್ಯಸ್ಯ ಸತ್ಯಂ.
ಆವುದೋ ಸಿದ್ಧಾಂತವೊಂದಂ ಪ್ರಚಾರಗೊಳಿಸೆ
ಸಿದ್ಧ ಪ್ರಭೃತಿಗಳಿಂಗಿದು ತಿಳಿಯದು. ಏಕೆನಲ್
ಅಂಥ ಜನಗತಿಗೆ ಧರ್ಮದರಿವು ಇರದು. ಆದೊಡೆ
ಆರು ಭಗವದಾಕಾಂಕ್ಷಿಗಳೊ ಭೋಗದ್ವೇಷಿಗಳೊ
ಅಂಥಹವರಿಗಿದು ಮನವರಿಕೆಯಾದಪುದು ದಿಟಂ.
ನಾವಾರ್ಜಿಪ ಕೀರ್ತಿಯ ಪ್ರತಿಯೊಂದು ತುಣುಕು
ನಮ್ಮ ಪಾವಿತ್ರ್ಯಮಂ ಆಹುತಿ ತೆಗೆದುಕೊಂಬುದು ದಿಟಂ.
ಸಂಪೂರ್ಣ ನಿಶ್ಸ್ವಾರ್ಥತೆಯ ಆದರ್ಶದಿಂ ಕೀರ್ತಿ
ಲಾಭದ ನಿರಾಸಕ್ತಿಯಿಂದದು ಬಲುದೂರ.''
ಮತ್ತಾಗಳೆ ಪ್ರಿಯ ಶಿಷ್ಯ ಅಳಸಿಂಗರ್ಗೆ ತಾಂ
ಇಂತು ಉಲ್ಲೇಖಿಸಿದರ್ ''ಹೇ ಪ್ರಿಯ ಮಿತ್ರನೇ
ಎನಗೀಗಳ್ ಪ್ರಶಂಸಾ ಪತ್ರಂಗಳ ಕಠಿಣ
ಹಾವಳಿಯದು ಸಾಕೆನಿಸಿ ರೋಸಿ ತಲೆಯ ಚಿಟ್ಟು
ಹಿಡಿದೊಲಾಯ್ತು. ಸಾಕೋ ಸಾಕೀ ಪ್ರಶಂಸೆಗಳ
ಪ್ರವಾಹಂ. ಇಂ ಪತ್ರಿಕೆಗಳ್ ಕಳಿಪುದಂ ನೀಂ
ನಿಲ್ಲಿಸಿಬಿಡ್ಯೆ. ಎನಗೀಗಳ್ ವಾಕರಿಕೆ ಬರುವನಿತು ಮಹಾ
ಜುಗುಪ್ಸೆ ಬೆಳೆದಿದೆ! ಈಗೀಗಳ್ ಎನ್ನಯ ಬಗೆಗೆ
ಎನಗೇ ಅಸಹ್ಯಮೆನಿಸಿ ಗೋಳಾಗಿಹುದು, ಮನ
ಮುದುಡುವಂತು ಬೇಸರದ ಕಹಿ. ಜುಗುಪ್ಸೆಯ ಒಗರು.

ನೀನಿನ್ನು ಇದಂ ಮುಂಬರಿಸದಿರ್ದೊಡೆ ಒಳ್ಳಿತು."
"ಓಂ ತಮಸೋ ಮಾರ್ಜ್ಯೋತಿರ್ಗಮಯ"
ಕಾಲವಾಹಿನಿ ಹರಿಯುತಿರ್ದುದು ಚಣಚಣಗಳ
ತಳ್ಳಿ. ಬಿಂದುಬಿಂದುಗಳ ಸರಿಸಿ ಗಳಿಗೆಗಳಿಗೆಗಳ
ಜಡಿಕುಟ್ಟಿ ಮೆರೆವಂತೆವೊಲ್. ಕಾಲಪುರುಷನುಂ
ಪಾವಕನ್ಯೆಸಲೇ? ಅವಂಗೆಲ್ಲಿಯ ಧರ್ಮ
ಕರ್ಮಗಳ ಗೋಜು? ನೋವು ನಿಡಿಗಳ ಅರಿವಿಲ್ಲ.
ತಾನಾಯ್ತು. ತನ್ನ ರಭಸದಾಯಣಮಾಯ್ತು. ಆ
ಬಿರುಬಿರುಸಿನ ಚಕ್ರಗತಿಯಲಾರ್ ಉಳಿದಪರ್?
ಧೀರ ಭೀಷಣ ತಪಸ್ಸಾಧನಾ ರಕ್ತಿಯಿಂ
ಪರಮ ಕಾರ್ಯಕಾರಣಗಳ ಯೋಗ ಪ್ರವೃತ್ತಿ
ಉಗ್ರ ಶ್ವಾಸೋಚ್ಛ್ವಾಸಗಳ್ ಘೂರ್ಣಿಸಿರುತ್ತೆ
ಸೃಷ್ಟಿರಸವಾರಿಸುತೊಮ್ಮೆ ಮೇಣ್ ವೃದ್ಧಿಸುತೊಮ್ಮೆ
ಜೀವರಾಶಿಗಳೆದೆಯ ಉಸಿರ್ ಕಟ್ಟುಸಿರಾಗಿ
ಉರಿಹೊತ್ತಿ ಉರಿದುರಿದು ಕ್ಷೇಮ ಕ್ಷಯಿಸಿತೆನಲ್
ತಲ್ಲಣಿಸಿತು ಜಗತ್ತು ಗ್ರೀಷ್ಮೂಷ್ಮವನೊತ್ತಿ.
ಪಸುಲ್ಗೋಕದ ಎಲೆಎಲೆಗಳ್ ಹಣ್ಣಾಗಿ ನೆರೆತು
ಮಿಸುನಿವರ್ಣಂಬೆತ್ತು ಉದುರುದುರಿ ಪರಿಪೂರ್ಣ್ಯ
ಭೂಮಿಯಂ ಮುಟ್ಟಿ ಮುದ್ದಿಟ್ಟು ಅಲಂಕರಿಸಿದುವು
ಚಿತ್ರವಿಚಿತ್ರತರ ರಂಗೋಲಿಯಿಟ್ಟ ಮಾಳ್ಕೆಯಲಿ.
ಹೂವಿಲ್ಲ. ತಳಿರಿಲ್ಲ. ಪರಮೆಗಳ ಝೇಂಕಾರ
ಇನಿತಿಲ್ಲ. ಪಚ್ಚಪಟ್ಟುಡೆಯ ಐಸಿರಿಯಿಲ್ಲ.
ಪಕ್ಷಿಸಂಕುಲಮಿರುತಿರ್ದೊಡಂ ರಾಗಾನುರಾಗ
ಕರ್ಣಗಳಿಗೆ ಅಡರ್ದುದಿಲ್ಲ. ಎಲೆಎಲೆಗಳುಂ
ಉಲಿವ ಮರ್ಮರ ಸದ್ದು ಇಲ್ಲಮಾಯ್ತು. ಧಗೆಯುಂ

ಸುಡುತ್ತಲಿರೆ ತಣ್ಣೀರ್ ಸುಖಮಜ್ಜನ ಲೇಸು
ಲೇಸಾಯ್ತು ಜೀವಕೋಟಿಗೆ. ಅದೇ ತನಿಯಿಮ್ಪು
ನಿಜ ಪೆಮ್ಪು ನರುಗಮ್ಪು ಎಲ್ಲವುಂ ತಾನಾಯ್ತು.
ಸ್ವಾಮಿಜಿಯ ಮನಂ ಗೆಳೆಯ ಬಂಧುಗಳ ಕಡೆಗೆ
ಹರಿಯಿತ್ತು. ಕುಳಿತರವರ್ ಪತ್ರದ ಲೇಖನದ
ಕೃಷಿಗೆ. '....ನಿನಗಾನ್ ಮಿನ್ನೆ ಬರೆದ ಪತ್ರಗಳ
ನೆನಪಿರ್ಪುದಲ್ತೇ? ನಮ್ಮಯ ಸಾಂಘಿಕ ಸಾಧನೆ
ಶಕ್ತಿಯ ಪೂರೈಕೆಗೆ ಸ್ತ್ರೀಪುರುಷರೀರ್ವರುಮೆನಗೆ
ವೇಳ್ಕುಂ, ತಿಳಿಯಿರಿ. ಅಂತರಾತ್ಮನಿಗೆ ಲಿಂಗದ
ಪ್ರಭೇದಮಿಲ್ಲಂ. ಗುರುದೇವ ಶ್ರೀ ರಾಮಕೃಷ್ಣ
ಪರಮಹಂಸರಂ ಮುಮ್ಮಾತ್ರೊಳ್ ಪೊಗಳಿ ಪಾಡಿ
ಅವತಾರ ಪುರುಷರೆಂದು ಕರೆದೊಡೆ ಏಂಬಹುದು?
ನೀಮೆಲ್ಲರ್ ಆ ಶಕ್ತಿಯ ಸಂಚಯನ ಪಡೆದು
ಕೊಳ್ಳದಿರೆ ಬರ್ದುಕು ಸುವ್ಯರ್ಥಂ. ಪಿರಿಯರೈಸಿದ
ಗೋಲಾಪ್‌ಮಾ, ಗೌರೀಮಾ, ಯೋಗಿನ್‌ಮಾ ಇವರೆಲ್ಲಿ?
ಸಂಘ ಸಂಸ್ಥಾಪನೆಯ ವಿಷಯಮಂ ಹರಡುವೊಡೆ
ಮಾತೃತ್ರಯರಿಂಗೆ ಕರೆಯಂ ನೀಡಿ ಸಂಘದ
ಕಾರ್ಯಭಾರಮಂ ವಹಿಸಿಮ್. ಹಿಮಾಲಯದಿಂದೆ
ಕನ್ಯಾಕುಮಾರಿಯತನಕ, ಉತ್ತರ ಧ್ರುವದಿಂ ದಕ್ಷಿಣ
ಧ್ರುವದನಕ ಕ್ಷಿಪ್ರಗತಿಯಲಿ ಕಾಳ್ಕಿಚ್ಚಿನೊಲ್
ಹರಡಿ ಹಬ್ಬಿಸಬಲ್ಲ ಕಾರ್ಯಕರ್ತರು ಎನಲ್ಕೆ
ಸ್ತ್ರೀಪುರುಷರ್ ಮುಂದ್ಯೆದು ಪಣಕಟ್ಟಿ ಟೊಂಕ ಕಟ್ಟಿ
ದುಡಿದಲ್ಲದೆ ಆವ ಕಾರ್ಯವುಂ ಕೈಗೂಡದೆನೆ
ಮನಬಿಚ್ಚಿ ಯೋಚಿಸುವುದೊಳ್ಳಿತು. ಬರಿ ಕೇವಲ
ಬಾಲಿಶ ಪ್ರವೃತ್ತಿಯಲಿ ಏನಾದಪುದು? ಮನದೊಳ್

ಪರ್ಯಾಲೋಚಿಸಿರಿ. ಮಕ್ಕಳಾಟಕೆ ಸಮಯಮಿಲ್ಲಮ್.
ಅಂತೊಂದು ಲಘುಭಾವನೆಯ ವ್ಯಕ್ತಿಗಳ್ ಬೇಡವೇ
ಬೇಡ. ಅವರಿಂ ಅಚಾತುರ್ಯಮೇನಾಗದಿರಲಿ.
ನಮಗೊಂದು ಅತ್ಯಗತ್ಯಮಾದ ಪರಮ ಸಂಘ
ಶಕ್ತಿ ಬೇಕೇಬೇಕು! ಸೋಮಾರಿತನಂ ದೂರ
ಬಹುದೂರಕ್ಕಟ್ಟಿ! ನೀವೇ ನೀವಾಗಿ ಹರಡಿ! ನಿಜ
ಕಾಳ್ಗಿಚ್ಚಿನಂತೆ ಹರಡಿ! ಎಲ್ಲೆಡೆಗೂ ಹರಡಿ!
ಎನ್ನನುಂ ಅವಲಂಭಿಸಿಕೊಂಡಿರಬೇಡಿರ್ಮೈ
ಆಂ ಬರ್ದುಕಿರ್ಪೆನೋ ಸಾಯ್ವೆಯೋ ನೀವಂತು
ನಿಮ್ಮೊಷ್ಪಕ್ಕೆ ಕಾರ್ಯಕ್ಷೇತ್ರಮಂ ಮುಂದುವರಿಸಿರಯ್.
ಎಮಗೀಗಳ್ ಬೇಕಿರ್ಪುದೇನೆಂದೊಡೆ ದಿವ್ಯ
ಸಂಘಟನಾ ಸಾಮರ್ಥ್ಯ, ಅರ್ಥವಾಯಿತೇಂ?
ನಮ್ಮ ಸೋದರರಪ್ಪ ತಾರಕ, ಶರತ್ ಮೇಣ್
ಹರಿ (ಸ್ವಾಮಿ ಶಿವಾನಂದ, ಸ್ವಾಮಿ ಶಾರದಾನಂದ
ಸ್ವಾಮಿ ತುರಿಯಾನಂದ) ಇವರಿಗೆ ಆ ಅದ್ಭುತ
ಸಾಮರ್ಥ್ಯಮಿಹುದು.......ನಿಗೆ ಸ್ವಂತಿಕೆ ಬಲುಕಡಿಮೆ.
ಆದೊಡವನುಂ ಅತ್ಯುತ್ತಮ ಕಾರ್ಯಕರ್ತನೇ
ವಲಂ. ಅತೀ ಛಲವಂತ! ಅದೊರ್ ಅತಿ ಪ್ರಾಮುಖ್ಯ
ಅಂಶಂ. ಎಮಗೀಗಳ್ ಕೆಲದಿಟ್ಟ ಅನುಯಾಯಿ
ತರುಣರ್–ಜಾಜ್ವಲ್ಯಮಾನರಾದ ತರುಣರುಂ
ಬೇಕೆಂಬುದು ದೃಢಸತ್ಯ. ನಿನಗರ್ಥವಾಯಿತೇ?
ಬುದ್ಧಿಮಾನ್ಯರ್, ಧೈರ್ಯ ಶಾಲಿಗಳ್ ಸಾವಿನಾ
ದವಡೆಯಂ ಪ್ರವೇಶಿಸುವ ಎದೆಗಾರಿಕೆಯುಳ್ಳ
ಧೀರೋದ್ದಾತ್ತರ್, ಕಾಲವಾಹಿಯಂ ಈಸಿ ದಾಂಟೆ
ಶತ ಸಿದ್ಧರ್ ವೇಳ್ಕುಮೆಮಗೆ. ಇಂಥ ನೂರಾರು

ಸ್ತ್ರೀ ಪುರುಷರ್ ಮುಂದೈದು ಗುರಿ ಸಾಧನೆಯತ್ತಲ್
ಶಕ್ತಿಮೀರಿ ಶ್ರಮಿಸುವ ಸಾಧಕರಿಂದಲ್ಲದೆ
ಸಾಧನೆ ಕೈಗೂಡದು. ಎನಿತೆನಿತು ಸಾಧ್ಯಮೋ
ಅನಿತನಿತು ಮಂದಿಯಂ ಸಂನ್ಯಾಸಿ ಧರ್ಮಕ್ಕೆ
ಬರಿಸು. ಅವರಂ 'ಪಾವಿತ್ರ್ಯವಂ ತೋಡ್ವಯಂತ್ರದ'
ಕಾರ್ಯಕೆ ತೊಡಗಿಸು (put them into our
purity-drilling machine) ಭಾಗ್ಯಹೀನ
ಭಾರತಕೆ ಅದರಿಂ ಇಬ್ಬಗೆಯ ಪುಣ್ಯಕಾರ್ಯ
ಸಾಧಿತಮಾದಪುದು. ಒಂದೋ ಜನಸಂಖ್ಯಾಧೀರತೆ
ಎರಡೋ ದೀನಜನ ಸೇವಾಕಾರ್ಯ. ನೆನವಿರಲಿ,
"**ಸಂಗಚ್ಛಧ್ವಂ ಸಂವದಧ್ವಂ ಸಂಮೋಹನಾಂಸಿ
ಜಾನತಾಂ**" ಇದನೆಂದು ಮರೆಯದಿರಿಮ್. ಮೇಣೆಂದು
ಅಲಕ್ಷಿಸದಿರಿಮ್ "**ದೇಶ ಧರ್ಮಸ್ತು ಪೂಜ್ಯತಾಂ**"
ಲೇಖನಿಯ ಬದಿಗಿಡಲ್ ದೃಷ್ಟಿ ಹೊರಳಿತೆದುರಿನ
ಬೆಳಕಿಂಡಿಯ ಕಡೆಗೆ, ಅಹ, ಕಂಡುದೇನಲ್ಲಿ? ಆ
ದೂರ ಖೇ ಬಿತ್ತಿಯಲ್ಲಿ ಪ್ರಾಚ್ಯ ಪರದೇವತೆ
ಕಾಳಿಕಾ ಮಾತೆಯೊಲ್ ಮೈವೆತ್ತ ಮಹಾ ಮುಗಿಲ್
ಕಣ್ತುಂಬ ಕಂಡರಾ ದೃಶ್ಯ ಮಾತೆಯಂ, ತಲೆ
ಎಲ್ಲಾ ಕಣ್ಣಾಯ್ತು ಮೈಯೆಲ್ಲ ಮನಸ್ಸಾಯ್ತು ಆ
ಸಂದೃಶ್ಯಮಾನ ವೈಭವದಿಂದೆ ತೆಕ್ಕನೆಯೆ
ಧ್ಯಾನಮುಗ್ಧರಾದರ್ ಸ್ವಾಮಿಜಿ, ಜಗತ್ ಮರೆತು.
　ಮುಂಗಾರ್ ಮಳೆ ಸುರಿಯಿತು ಬೋರಾಡಿ ವಸಂತನ
ಉಬ್ಬಟೆಗೆ ತನಿಯೂಡಿ. ಕುಂಭ ದ್ರೋಣ ರೂವಿನ
ಮಳೆಗಾಳಿ ಕಕ್ಕಸವಗೆಯಲಿ ಭವಿಸಿರೆ ದಿನದಿನ
ಬಲಿಯಿತು ನಿಜ ವರ್ಷಾಕಾಲವೊ ಎನೆ ಕಾರ್ಮೆ

ಕಾರಿ. ಗ್ರೀಷ್ಮನುಷ್ಣವನೊದ್ದು ತತ್ತಳ ತುಳಿದು
ತಣ್ಪಿನ ತನಿಯಂ ಚೆಲ್ಲಿಸೂಸಿತು ಮುಂಗಾರ್
ಮಳೆ. ಅನುಕ್ರಮದೊಳ್ ಗಿಡು ಸಸ್ಯದ್ರುಮಂಗಳ್
ನೀರುಂಡು ಮೈಗೊಂಡು ಸ್ವಚ್ಛಂದ ಚಂದದಿಂ
ನಲಿದುವು ನವಜೀವನದನುರಾಗಕೆ ಮನವೋತು
ಹಕ್ಕಿಗಳುಲಿದುವು ಚಿಲಿಪಿಲಿ ರಾಗಗಳ ಹಾಡಿ
ಕೆಂಪುಚುಕ್ಕಿಗಳ ಹೂವಕ್ಕಿಗಳ್ ಟೊಂಗೆಯಿಂ
ಟೊಂಗೆಗೆ ಪರುಷದಿ ಹಾರಿ ಉಲಿದುವು ಕೊರಳ್ದನಿ
ನೆರೆಹರಿಸಿ. ಪುಕ್ಕದ ಗರಿಗುದಿಯಂ ಕುಣಿಕುಣಿಸಿ
ಸಿಪಿಲೆ ಶಿಳ್ಳೆಯೂದಿತು ಸುದೀರ್ಘಾಯತವಾಗಿ.
ಎರೆಂಕೆ ಬಿದಿರ್ಚಿದ ಬುಲ್ ಬುಲ್ ಪಕ್ಷಿ ಪಾರ್ದುದಾ
ಪೆರ್ಮರನ ನೆತ್ತಿಯ ಎಲೆ ಗೊಂಚಲಿಗೆ. ಕಾಗೆಯು
ಕೂಗಿದುದು ಕರ್ಕಶದನಿಯಲಿ ಬಾಯ್ ಕಿಸಿದು.
ಮತ್ತಮಾ ಜೂಲುಮೆಯ್ಯಿನ ಬೆಣ್ಣೆಯ ಬಿಣ್ಪಿನ
ಸಾಕುನಾಯಿ ಪದಪ್ರಾಂತದಲಿ ಕುಳಿತು ಬಾಲವ
ಆಡಿಸುತ ಕುಂಯಿ ಕುಂಯಿ ನುಡಿಯಿತು ವಿನಯದಲಿ.
    ಅಂದು ಸಹಚರರೊಡಂಗೂಡಿ ನ್ಯೂಯಾರ್ಕ್ ಮಹಾ
ನಗರಿಗೆ ಪಯಣಂಬೋಪ ಯೋಜನೆಯು ಇರುತಿರೆ
ತಂತಮ್ಮಗಳ ಸಕಲ ವಸ್ತುಗಳ್ ಕಟ್ಟಿ ಮನೆ
ಒಡತಿಯಂ ಅನುನಯದಲಿ ಕಂಡು ವಿದಾಯಮಂ
ಬೇಳ್ದು ಕೈಮುಗಿದು ಬೀಳ್ಕೊಂಡು ತಲೆವಾಗಿಲಲಿ
ಅಣಿಗೊಂಡ ತಿಳಿನೀಲಿವರ್ಣದ ವಾಹನವ
ಏರಿ ಪೊರಮಟ್ಟರ್. ನೆರೆಬಿರುಸಿನ ವೇಗದಲಿ
ಓಡುವಾವಾಹನಂ, ಊರುಕೇರಿಗಳ ಹರಿ
ಹಾಯ್ದು ಹಳ್ಳಿಗಾಡಿನ ಬೀಸುಗಾಳಿಯಂ ಶೀಳಿ

ಹರಿಯೆ ಇಕ್ಕೆಲಗಳಲಿ ದೃಶ್ಯಮಾನಮಾದಾ
ಪ್ರಕೃತಿಯ ಸೌಂದರ್ಯ ಹೃನ್ಮಂಗಳಿಗೆ ಬಹುಲ
ಆಪ್ಯಾಯಮಾಯಿತ್ತು. ಹೊಲಗದ್ದೆಗಳಲಿ ಕೂಡಿ
ದುಡಿವ ಕೃಷಿಕತನದ ಸ್ತ್ರೀ ಪುರುಷರ ಚಿತ್ರ
ಮುದವೂಡುವುದು ಮನೋಮಂಡಲಕೆ.
ಮೇಣಧಿಕ ತಂತ್ರಜ್ಞಾನದ ವೈಭವ ಮೆರೆದುದು
ಯಾಂತ್ರಿಕ ಗುಣದೋಷವ ಸೂಸಿ. ಹೊಲದಂಚಿನ
ಪಯಣದೊಳ್ ವಾಹನವ ನಿಲ್ಲಿಸಿ ಕೃಷಿಕರೊಡನೆ
ಬೆರೆತು ಮಾತಾಡಿ ಪೊಸವಗೆಯ ಕಾರ್ಯಕುಶಲತೆ
ಕಂಡರಿದು ಮೆಚ್ಚಿ ನೆಚ್ಚಿ ಮುಂಬರಿದರ್ ಅದೇ
ನ್ಯೂಯಾರ್ಕ್ ಪಥದಲಿ. ಪಗಲುರುಳಿ ರವಿಮುಳುಗುವ
ಮುನ್ನಮೆಯೆ ಪಿರಿನಗರಮಂ ಬೊಕ್ಕು ತಾವಿಳಿವ
ಬಿಡದಿಯೆದುರು ನಿಂತುದು ನೀಲಮೈ ಮಿರುಗಿಸುತ
ಯಂತ್ರಖಚಿತ ವಾಹನಂ. ಮಿತ್ರಬಂಧುಗಳೊಡನೆ
ಇಳಿದರಲ್ಲಿ ಸ್ವಾಮೀಜಿ. ಪಿರಿಯ ಸುವಿದ್ವನ್ಮಣಿಗಳ್ ಬಹು
ಮಂದಿ ಮುಂದೈದು ಪರಮ ಸ್ವಾಗತವ ಬಯಸಿದರ್
ಪರಸ್ಪರ ಪರಿಚಯಂ ತೋಷದಿಂ ಬೆಳೆಸಿದರ್,
ಪೊಚ್ಚಪೊಸ ವಿದ್ವನ್ಮಣಿಗಳೊಡಂ ಕೂಡಾಡಿ.
ಆನಂದರಸ ಒಸರಿದುದು ಸ್ನೇಹ ಸಲಿಲವಾಗಿ.
ಪೊಳ್ತು ಉರುಳಿ ಮಿತ್ರರ್ ನಿರ್ಗಮಿಸಿದರ್ ತಮ್ಮ
ತಮ್ಮ ವಸತಿಯಂ ಗುರಿಗೊಂಡು, ಮಸುರ್ಗತ್ತಲೆಯ
ತೆರೆ ಹರಡಿದುದು ಇಳೆಯಮೇಲೆ. ವಿದ್ಯುದ್ದೀಪ
ಮಾಲೆಗಳ್ ಬೆಳಗಿದುವು ಜಗಜಗಿಸಿ. ಸ್ವಾಮೀಜಿ
ಮನೋಮಂಡಲಮಂ ಭರತವರ್ಷದ ಸುಂದರ
ಧಾತ್ರಿಯೊಳ್ ನೆಟ್ಟು ಅವಲೋಕಿಸಿದರ್ ಗಭೀರ

ಚಿಂತನೆಯಲಿ. ತದೇಕ ಭಾವ ನೆಲೆಸಿದುದತ್ತ
ಬಹುವೊಳ್ತು. ದೃಢಮತಿ ತಪವನೋಂತ ಪರಿಯಲಿ
ಶರೀರದ ಪ್ರಕೃತಿಯು ನಿಶ್ಚಲಂ. ಮಾನಸೀ
ಪಕ್ಷಿಯುಂ ನಿಶ್ಚಲಂ. ಧವಳಗಿರಿಯ ಅದ್ಭುತ
ಶಿಖರವೇದಿಯಮೇಲೆ ಕಾಳಿಕಾ ಮಾತೆಯುಂ
ಕಣ್ಗೆಸೆದಳ್. ಜೋಲ್ವ ತುದಿ ಜಿಹ್ವೆಯಲಿ ಶೋಣಿತ
ಸ್ರೋತಮಂ ಕಾರಿ. ರುಂಡಮಾಲಾಭೀಳ ಉಗ್ರ
ಕಂಠಾವತಂಸ ಸುಶೋಭಿತ ರಕ್ತವರ್ಣೀ
ವಸನಧಾರಿಣಿಯು ತಾನಾಗಿ! ದಶ ಭುಜಬಲದಿಂ
ಭೀಕರಾಯುಧಂಗಳ ಭವ್ಯ ಪರಿವೇಶಿ! ಅಹ
ಭಯಂಕರ ರೂಪಿಣಿ ದಿಗ್ ಸಾಮ್ರಾಜ್ಞಿ, ರುದ್ರ
ಕಾಳೋಗ್ರ ವೇಣಿ ತ್ರಿಜಗನ್ಮಾತೆ. ಮಾಯಾ
ದೇವಿ! ಸೃಷ್ಟಿಸ್ಥಿತಿಲಯ ಶೀಲೆ, ನಿಜ ಪ್ರಲಯಾ
ಭೀಲೆ! ಕಾಲಾತ್ಮಕೆ ! ಕಲಿಯುಗೀಯ ಜಗನ್ನಟ
ರಾಜ್ಞಿ ತಾನೆಸೆದಳ್ ಮುಗಿಲ್ ಮಿಂಚಿನ ಬೃಹದ್
ಮೂರ್ತಿಯಾಗಿ. ಪರಿಭಾವಿಸುತಿರೆಯಿರೆ ಮಹೋನ್ನತ
ಮೂರ್ತಿಯ ಪದತಲದಲಿ ಜಪಾಕುಸುಮ ಕುಂಕುಮ
ಗಂಧಗಳೆಸೆದುವಯ್ ಲಿಖಿತ ಚಿತ್ರದ ತೆರದಲಿ,
ಏಂ ಭವ್ಯ ಸುರಾರ್ಚಿತ ಬಂಧುರ ಪರಿವೇಶಂ!
ಗುರುವರಂ ಕಣ್ಣೆವೆಯ ಸಂಚಲಿಸದೆ ಮಾನಸ
ಭಿತ್ತಿಯಂ ಸಂವೀಕ್ಷಿಸಿದರ್ ಏಕ ಚಿತ್ತದ
ಭಂಗಿಯಲಿ. ಆ ಬೃಹನ್ಮೂರ್ತಿ ಆವ ಅನನ್ಯ
ಸಂದೇಶವನಿತ್ತುದೊ ಎನಲ್ ಪ್ರಸನ್ನಮೊಗ
ಬಿಂಬದಲಿ ಎಳೆನಗುವಿನ ಹರವಂ ಹರಿಸುತ್ತೆ
ತನ್ನುಡಿಯ ಪ್ರವಾದಿಯಂ ಹರಸಿದಳೊ ಎನಲ್

ಮನೋಭಿತ್ತಿಯ ಮೂರ್ತಿಯುಂ ಅಳಿಸಿ ಮರೆಯಾಯ್ತು,
ನಸುವೊಳ್ತಿನಲಿ, ಒಳನಡೆದರ್ ಗುರುವರಂ ದಿವ್ಯ
ಭಾವನಾವೇಶದಲಿ, ಸೆಜ್ಜೆಯ ಮನೆಗೈತರೆ
ವಾಸಂತಿ ಉತ್ತರೀಯಂ ಕಳೆದು ಮಡಿಸಿಟ್ಟು
ಪದ್ಮಾಸನದೊಳ್ ಕುಳಿತರ್ ಸೆಜ್ಜೆಯಲಿ. ಒಡನೆ
ಭಕ್ತಿಭಾವದಿಂದುತ್ಸ್ಫುರಿತಾತ್ಮಧ್ಯಾನದಾ
ಆಕಾಂಕ್ಷೆಯಿಂದೆ ಮನದಿ "**ಶ್ರೀಗುರುದೇವಾಲಯ**
ನಮಃ" ಎಂದು ಧ್ಯಾನಿಸಿದ ಬಳಿಕ ಹಾಡಿದರಿಂತು,

"ಭವಾನೀ ಭಾವನಾಗಮ್ಯಾ
ಭವಾರಣ್ಯ ಕುಠಾರಿಕಾ ।
ಭದ್ರ ಪ್ರಿಯಾ ಭದ್ರಮೂರ್ತಿರ್ಭಕ್ತ
ಸೌಭಾಗ್ಯದಾಯಿನೀ ನಮೋನಮಃ ॥"

ಕಳಿಯಿತಾ ರಾತ್ರಿ ಘನವಾದ ನಿದ್ದೆಯ ಶಾಂತಿ
ಸುಧೆಯಲಿ. ಮರುದಿನದೊಳ್ ಕಾರ್ಯಕ್ರಮಗಳಮಿತ
ನಿರೂಪಣೆಯಲಿ ಕಳೆಯಿತು ವಿದ್ವನ್ಮಣಿಗಳಂ
ಕೂಡಿ. ಮತ್ತಾ ಪಗಲ್ ಆವಾವ ಕಜ್ಜವದು
ಇರದಿರೆ ನಗರಿಯ ಪರಿವೀಕ್ಷಣೆಯಲಿ ಕಳೆದುದು
ಇಡಿದಿನಂ. ಸಂದೃಶ್ಯಮಾನಮಾದ ವಿದ್ಯಾ
ಭವನಗಳ್ ವಸ್ತುಸಂಗ್ರಹಾಲಯಗಳ್ ಮೇಣ್
ಇತರಿತರ ಬಹುಬಗೆಯ ಯಂತ್ರಶಾಲೆಗಳ್ ಆ
ಎಲ್ಲವಂ ಕಣ್ತುಂಬ ನೋಡಿದರ್ ಸ್ವಾಮಿಜಿ.
ಮರುದಿನಮೆ ಕಾರ್ಯಕ್ರಮಗಳ ದಿವ್ಯ ಹೊಣೆಯದು
ಭುಜವೇರಿರೆ ವಿದ್ವಜ್ಜನರ್ ಕೂಡಿದರ್. ಬಹು
ಜನ ಶ್ರೋತೃಗಳೈದರ್. ಕಿಕ್ಕಿರಿದು ತುಂಬಿದುದು
ಸಭೆ. ಕಲಿತು ಬಲಿತು ನುರಿತ ಮಹಿಳಾ ಮಂಡಲಿಯು

ಬಂದು ನೆರೆಯಿತ್ತು ಗುರುಗಳ ಪ್ರವಚನಗಳಂ
ಆಲೈಸುವ ಪುರುಪ್ರು ಪುರುಡುವೆತ್ತವೊಲ್. ಅಂದೇಂ
ಗುರುವರನ ಪ್ರವಚನಗಳಂ ಕುರಿತು ಪೆರ್ಚಿನ
ಪ್ರಚಾರಮಿರದಿರ್ದೊಡಂ ಕಿಕ್ಕಿರಿದು ನೆರೆದುದು
ವೇದಾಂತಸಭಾಭವನಂ, ಸುವಿದ್ಯಾ ವೇತ್ತ
ಜನಗೋಷ್ಠಿಯಿಂ. ಪಂಡಿತ ಶ್ರೋತೃಗಳ ದಿವ್ಯ
ಕಳೆ ಬೆಳಗಿ ಶೋಭಾಯ ಮಾನಮಾದುದು. ಆ
ಮಹೋನ್ನತ ಸಭೆ, ವಿದ್ವತ್ತಿನಾಕಳೆಯಿಂವೆಳಗಿ.
ವೇದಿಯಲಿ ಒಂದೆರಡು ಮೂರುನಾಲ್ಕೈದು ಎನಲ್
ಪ್ರೊಫೆಸರ್ ರಿ ಸಹಿತ ಅನೇಕರ್ಯೆದು ಕುಳಿತರ್
ಸ್ವಾಮಿಜಿಯ ಎಡಬಲಗಳಲಿ. ಪಾಶ್ಚಾತ್ಯರ
ಉಡುಪಿನಲಿ ಇರುತಿರ್ದ ಸ್ವಾಮಿಜಿ ಕಾಂಚನದ
ಕಾಂತಿಯ ರುಮಾಲು, ಸೊಂಟದಟ್ಟಿಯನು ಧರಿಸಿರೆ
ಭಾರತೀಯತೆಯ ಸಂಕೇತಮೆಸೆದುದು ಮನೋರಮ
ಶೋಭೆಯಲಿ, ಸಭೆಯ ದಿವ್ಯಗೋಷ್ಠಿಗೆ ಗುರುವಿನ
ಪರಿಚಯದ ಭಾಷಣಂ ಸಂಕ್ಷಿಪ್ತರೀತಿಯಲಿ
ಗೈದ ಪ್ರೊಫೆಸಲ್-ರಿ, ಜನಗಣಮನಮಂ ತಣಿಸಿ
ಅರಳಿಸಿದರ್. ಬಳಿಕಲಾ ಗುರುವರಂ ವೇದಿಯಲಿ
ಎದ್ದು ನಿಲ್ಲಲ್ ಕೈಪರೆ ಗುಟ್ಟುವಿತೆ ಸ್ವಾಗತವ
ಬಯಸಿದರ್ ಶ್ರೋತೃಗಳ್ ಹರ್ಷಸೂಚಕವಾಗಿ.
ಭವನದೊಳ್ ರಮಣೀಯ ಮೆಲುಧ್ವನಿ ಧ್ವನಿಸಿತು
ರಾಗಭಾವಮಂ ಸ್ಫುರಿಸಿ. ತರ್ವಾಯ ಸಭೆಯಂ
ವಂದಿಸಿದ ಸ್ವಾಮಿಜಿ ಕಿರಿದೊಂದು ಪ್ರವಚನಂ
ನುಡಿಸಿ ಬಿಡಿಬಿಡಿಯಾಗಿ ಓರಿದು ಓಂಜುವ ತೆರಂ
ತಿಳಿಪಿ ಎಲ್ಲರ ಮನಮೆಚ್ಚಿಸಿದರ್. ಅಂತೆಯೇ

ಮುಂಬರಿದು "**ಯಾದೃಶೀ ಭಾವನಾ ಯತ್ರ ಸಿದ್ಧಿರ್**
ಭವತಿ ತಾದೃಶೀ" ಮಿತ್ರರೇ! ನಾವೆಲ್ಲರುಂ
ಸಂಸ್ಥಾಪಿಸಿದ ವೇದಾಂತ ಭವನದ ಉದ್ದೇಶ
ಮೇಣ್ ಸಾಧನೆಯನಿನ್ನೇಂ ವಿವರಿಸಿ ವಿವರಿಸಿ
ತಿಳಿಪುವ ಅಗತ್ಯಮಿಲ್ಲಮೆನೆ ಅನ್ಯಮಾಗದು.
ನೀಮೆಲ್ಲರ್ ಅರಿತು ನುರಿತಿರಲ್ಕೆ ಎನಗಂತು
ಸಂಪೂರ್ಣ ಸಮಾಧಾನಮಿಹುದು" ಎನುತೆನುತ್ತೆ
ಆನಂದ ಭಾವದಿಂ ತಣಿಸಿದರೆಲ್ಲರ ಮನವಂ.
ದೂರದೂರದಾ ಬಾನ್ನೆತ್ತಿಯ ಮುಗಿಲ್ ಮಂಜು
ಒತ್ತಿಯೊತ್ತಿ ಮುಂಬೆಳೆದು ದಟ್ಟಣಿಸಿ ವೆಳ್ಳಿಯ
ಮುದ್ದೆಯೊಲ್ ರೂಪುಗೊಳುತೆ ಶತಸಹಸ್ರತರ
ಕರಗಳಿಂ ಔಂಕಿ ಹಿಂಡಿದೊಲ್ ಸುರಿಯತೊಡಗಿತು
ಹೂಮಳೆಯ ಹರ್ಷಸಿರಿ ಭರಿತ ಧಾರಾವರ್ಷ.
ಜೊತೆಜೊತೆಗೆ ಹೂವಿಸಿಲ್ ತುಂಬಿ ಹರಡಿರೆ ಮಿಸುನಿ
ಮಳೆಯ ಪಾಂಗಿನಲಿ ಪೊಳೆದಿವೆ ಹನಿಹನಿಹನಿಗಳು
ಶೋಭಾ ಶೈಲಿಯ ವಿರಚಿಸಿ. ದಿವ್ಯಾಂಬರ ನೀಲ
ನೀಲಿಯಲಿ ಉಜ್ವಲಿಪ ಸೂರ್ಯದೇವನಾ ಘನ
ತೇಜವದು ಕುಂದಿದುದೊ ಎನಲ್ ಮಂಜುದೆರೆಯಲಿ
ವಿಶ್ರಮಿಸಿ ಶಾಂತಿ ಮುಗ್ಧ ಗತಿಯಲಿ ತಾನಿಹಂ
ಮಂದಸ್ಮಿತನಾಗಿ. ಸುರಿದುದು ಧಾರಾವರ್ಷ
ರಮ್ಯಾರುಣ ಕಾಂತಿಯ ಮೋಜಿನಲಿ ಸುಸುಂದರ
ಹೂಮಳೆಯ ಹೊನ್ನಹೊಳೆ. ನೋಡಲಾ, ಹೂವಿಸಿಲ್
ಹೂಮಳೆಯ ಬಂಧಾನುಬಂಧಮಿರ್ದುದು ಅಲ್ಪ
ಸಮಯಮಾದೊಡಂ ಆ ಸೌಂದರ್ಯಾನುಭೂತಿಯ
ವೈಶಿಷ್ಟ್ಯ ಅಪೂರ್ವತರಮಾಯಿತು ಕಣ್ಮನಂ

ಪುಳಕಿತಗೊಳುವ ತೆರದಲಿ. ಹೂಮಳೆಯ ಸೊಬಗಿನ
ಸರಿ ಅಳಿದು ಹೂವಿಸಿಲ್ ಸಿರಿ ನಸು ಬಿಸಿಯೇರಿತು
ಜಗಕೆ ಬೆಚ್ಚನ್ನ ದಿವ್ಯ ಮುದ್ರೆಯನೊತ್ತುವೊಲ್.
ಆಗಳಾ, ಸ್ವಾಮಿಜಿ ಕರಗಳಂ ಜೋಡಿಸುತ
ಭಾವನಾವೇಶದಲಿ ಶಿರಮಣಿದು" ನಮಿಸಿದರ್
"ಜಯತುಜಯತು ಹೇ ಖೇ ಶಿರೋಮಣಿ ಜಯತುಜಯ
ಭಗವಾನ್ ಅರುಣದೇವ! ಜಯತು ಜಯಹೇ, ಸೂರ್ಯ
ಮಹಾ ಚೈತನ್ಯ! ಹೇ ಜಗತ್ ಪ್ರಭು! ತ್ರಿಲೋಕ
ಪಾಲಕ! ಜಯತು ಜಯತು ಉಜ್ವಲೋಜ್ವಲ ತೇಜ!
ಮಾನವಾತ್ಮದ ಮಹತ್ ಸಾಧನಾ ಸಿದ್ಧಿಯಲಿ
ನಿನ್ನದೇ ಮಹತ್ತರ ಪಾತ್ರ! ನೀನೆ ಉದಾತ್ತ
ಗುಣಯೋಗಿ! ಭೂಮಾನುಭೂತಿಯ ರಸ ಚೇತನ
ಸಕಲ ಗ್ರಹಕೋಟಿಗಳಿಗೆ. ಮತ್ತಮಾ ಜೀವ
ಜಗತ್ತಿಗೆ. ಹೇ ಲೋಕ ಚರಿತ! ನಿತ್ಯ ಪೂಜಿತ!
ನಮೋನಮೋ! ಪುನರ್ನಮೋ! ಮುಹುರ್ನಮೋ! ವ್ಯೋಮಶ್ರೀ!
ನಮೋನಮೋ ಓಂ ನಮೋ! ಹ್ರೀಂ ನಮೋ ರುಂದ್ರಶ್ರೀ!
ಸೂರ್ಯದೇವನ ಸ್ವರ್ಣದೇರು ದಿಗ್ ತಟಾಂತ
ಸೀಮೆಯಲಿ ಏರುತಿರೆ ಊರ್ಧ್ವಮುಖ ಯೋಗದಲಿ
ಮಿತ್ರವರ್ಗವದು ಗಮಿಸಿತು ಗುರುವರನ ತಂಗು
ದಾಣಕ್ಕೆ, ಅಂದು, ಬೇರಾವ ಕಜ್ಜದುಜ್ಜುಗ
ಕೂಡಿ ಬರದಿರೆ ದೊರೆಯಿತಂದು ನಿಜ ವಿಶ್ರಾಂತಿ.
ನಗರಿಯಾಚೆಯ ದೂರದೂರದಾ ಗ್ರಾಮೀಣ
ಹೃದಯದ ಜೀವನಂಗಳ ಕಂಡು ಪ್ರಶಾಂತ
ಚೆಲುವಿನ ರಸಸ್ವಾದವುಂಬುವ ವಿಚಾರದೊಳ್
ಮನವಿಟ್ಟು, ಪೊರಮಟ್ಟರ್ ಮಿತ್ರಗಣಂವೆರಸಿ.

ವನದೇಶದ ಮಧ್ಯೆ ಹರಿದ ಕೆಮ್ಮನೆಸೆವ ನೆರೆ
ಕೆಂಧೂಳಿನಿಂ ತುಂಬಿದ ಪಥವನಿಡಿದು ಭರದಿ
ಓಡಿತಾ ವಾಹನಂ ಬಹುಜನರ ಭಾರವಂ
ಹೊತ್ತು. ಮುಂದೆ, ಮುಂದದು ಮುಂಕೊಂಡು
ಸಾಗುತಿರೆ ಪಚ್ಚ ಪಸುರ್ ಗ್ರಾಮ್ಯವಲಯಮೆಸೆದುದು
ಕಣ್ಣಿರಿವ ಮಾಳ್ಕೆಯಲಿ. ಅಹ ಪಸುರೇ ಪಸುರು!
ನೋನೋಳ್ಪ ಕಂಗಳ್ ಪಸುರಪ್ಪುವ ತೇಜದಲಿ
ಜೃಂಭಿಸಿದುದು ರಾಮಣೀಯಕ ಶೈಲಿಯಲಿ. ಅಂದು,
ಅಲ್ಲಿಯೇ ಆ ಅಪೂರ್ವತರ ಸ್ವರ್ಗಧಾಮದ
ಗ್ರಾಮೀಣ ಬದುಕಿನೊಳ್ ತಾವ್‌ಬೆರತು ತೋಷದ
ರಸದೂಟೆಯಲಿ ಮಿಂದು ಪಗಲಿಡೀ ಸಂಚಲಿಸಿ
ಹಿಂದಿರುಗಿದರ್ ನಗರಿಯ ಮಡಿಲಿಂಗೆ.
ಮರುದಿನಂ
ವೇದಾಂತ ಭವನದಲಿ ಕಾರ್ಯಕ್ರಮಗಳ್ ಆರಂಭಿಸುವ
ಮುನ್ನಮೇ ಶ್ರೋತೃಗಳ್ ನೆರೆದು ಗುರುವರ್ಯನಾ
ಆಗಮನಮಂ ನಿರೀಕ್ಷಿಸುತೆ ಕಾದಿರ್ದರಯ್,
ಗುರುವಿಗಾಗಿ. ಸರಿವೊಳ್ತಿನಲಿ ಗುರುವುಂ ಗಮಿಸೆ
ಪ್ರೇಕ್ಷಕರ್ ಶ್ರೋತೃಗಳ್ ಮಿತ್ರಜನರ್ ದಿಗ್ಗನೆ
ಎಳ್ದು ನಿಲ್ದು ಗೌರವ ತೋರಿದರ್. ಪ್ರಸನ್ನ
ಭಾವಭರಿತ ಮುಖ ಬಿಂಬಗಳ್ ಬೆಳ್ನಗೆಯಂ
ಬೆಳಗಿದುವು ತೋಷದ ಹೊನಲಲಿ ಮಿಂದು. ಮದ್ದುಗುರು
ಮಹೋದಯನಾಗಳ್ ಜನತೆಯ ಮಧ್ಯೆ ನಡೆತಂದು
ವೇದಿಕೆಯನೇರಿ ನುಡಿಸಿದರಿಂತು. "ಆತ್ಮೀಯರೆ,
ಇಂದಾನ್ ಯೂರೋಪ್ ಪ್ರಾಂತ್ಯಗಳ ಗುರಿಗೊಂಡು
ಪಯಣಮಂ ಕೈಕೊಂಬೆನ್. ನಿಮಗಾನ್ ಈಯುವ

ಸಂದೇಶಮಿದು ಚುಟುಕು ಮಾತ್ರಂ. ಕೇಳಿರೈ
ಪ್ರಗಾಢ ಚಿಂತನೆಯದು ಮತ್ತಮೊದಲ್ ಮೂಡಿ
ಪ್ರಕಾಶಿತಮಾದೊಡನೆ ಅಂಶಾಂಶತಃ ಕಂಡು
ಕೊಂಡವರ್ ಪ್ರಾಚೀನ ಭಾರತೀಯರ್. ಅಂದು
ಇಂದು ಎಂದಿಗುಂ ಅದು ಪ್ರಸ್ತುತಿ. ಅಂದಿನಿಂ
ವಂಶ ಪಾರಂಪರ್ಯವಾಗಿ ಕೋಟಿ ಕೋಟಿ ಮಕ್ಕಳು
ಬಳಸಿ ಉಳಿಸಿ ಸತ್ಕೀರ್ತಿ ಪತಾಕೆಯಂ ಎತ್ತಿ
ಓಡಿದಿಹರ್ ನಭೋದೇಶದೆತ್ತರಕೆ. ಮತ್ತಂ
ಆ ವಂಶೀಯ ಮಾನಸ ಪುತ್ರರುಂ ಅವುಗಳ
ಚಿಂತನೆಯ ಭಾವುಕರಾಗಿ, ಆನುವಂಶಿಕರಾಗಿ
ಉಳಿದಿರುತಿರೆ ಸಂಸ್ಕೃತಿಗೆತ್ತಣ ಕೊನೆಗಾಲಂ?
ಗಿರಿ ನದಿ ವನ ಪರ್ವತಗಳ್ ದಾಂಟಿ ಮತ್ತಮಾ
ಕಾಲದೇಶಗಳ ಅಡೆತಡೆಯನುಲಕ್ಷಿಸಿ. ಆ
ಅನಂತಾನಂತಕಾಲದಿಂ ಓಂದೂಗಳ್ ನಲ್
ವೈಚಾರಿಕ ವಿಚಾರಧಾರೆಯ ರುಧಿರಂ ಬಲು ಸ್ಪಷ್ಟ
ಅಥ ಸೂಕ್ಷ್ಮತಮವಾಗಿ ಜಗತ್ತಿನಿತರರಾಷ್ಟ್ರ
ದೇಹಗಳ ನಾಳನಾಳಗಳಿಗೆ ಹರಿಸಿಹರ್. ಇನ್
ಮುಂದೆಯುಂ ಹರಿವುದು, ಹರಿವುದು ನಿಲುಗಡೆಯಿರದೆ.
ಪ್ರಾಚೀನ ಜಾಗತಿಕ ಸಂಸ್ಕೃತಿಯ ಸಂಪದದ
ಬಹ್ವಂಶವು ಪ್ರಾಯಶಃ ನಮ್ಮದೇ ಎಂದೊಡದು
ಭಾರತದ್ದೆ ಆಗಿರ್ಪುದುದು ಸತ್ಯಸ್ಯ ಸತ್ಯಂ.
"ಓ ಅಮೃತ ಪುತ್ರರೇ, ಕೇಳಿ! **ಭಗವದ್ಗೀತಾ**
ಕಂಚಿದೀತಾ" ಆರ್ ಸತ್ ಸಂಸ್ಕೃತಿಯಂ ಕಿಂಚಿತ್
ಅರಿವರದರಿಂ ದೊಡ್ಡಲಾಭಮಾದಪುದು. ಈ
ಲೋಕ ಸಮಸ್ತಂ ಶಿಶುವಾಗಿ ಹೆಮ್ಮರವಾಗಿ

ಬೆಳೆವುದದು ನಿತ್ಯಚರಿ. ಅದನರಿಯದವರ ಬದುಕೆ
ಬರಡು. ಜಗದೇಕ ಪ್ರೇಕ್ಷಕನುಂ ಪೋಷಕನುಂ
ಆದ ಭಗವಂತ ಲೋಕವಂ ನೋಡಬಲ್ಲಂ.
ಗ್ರಹಿಸಬಲ್ಲಂ. ಆತನೊಳ್ ಶ್ರದ್ಧೆಯಿಡುವುದೇ
ಲೇಸು. ಅದುವೆ ಹಿತಕರ; ಅದುವೆ ಗೆಲ್ಮೆಗೆ ದಾರಿ.

"ವಿಶ್ವತಶ್ಚಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರತ ವಿಶ್ವತಸ್ಪಾತ್ ।
ಸಂ ಬಾಹುಬ್ಯಾಂ ಧಮತಿ ಸಂ ಪತತ್ರೈರ್ದ್ಯಾವಾ
ಭೂಮಿೂ ಜನಯನ್ ದೇವ ಏಕಃ ॥"

ಆ ದೇವನೆಂಬ ವಸ್ತುವಂ ನೆನೆಯುವೊಡೆ ಅದು
ಎಂತಿಹುದು, ಎಂತದರ ಸ್ವರೂಪ ಎಂದೆಂಬ
ಪ್ರಶ್ನೆಯುಂ ಮನಮತಿಯ ಮುಟ್ಟಿ ತಟ್ಟಿ ಸೆಳೆವುದು
ವಿಚಾರಾತ್ಮಕವಾಗಿ. ತರ್ಕಬದ್ಧವಾಗಿ. ಓ
ಅದರ ಆ ಪ್ರಶ್ನೆಯ ಜಟಿಲತೆಯಂ ಸುಲಭದೊಳ್
ಪರಿಹರಿಸಿದೆ ಭಾರತ ಸನಾತನ ಸತ್‌ಧರ್ಮ.
ಓ! ಕೇಳಿ, ಕೇಳಿರೈ ಅಮೃತ ಪುತ್ರರಿರಾ!

ಶುಕ್ರಂ ಅಕಾಯಂ ಅವ್ರಣಂ ॥
ಅಸ್ನಾವಿರಂ ಶುದ್ಧಂ ಅಪಾಪವಿದ್ಧಂ
ಕವಿಃ ಮನೀಷೀ ಪರಿಭೂಃ ಸ್ವಯಂ ಭೂಃ ॥

ಹರಿಃ ಓಂ ತತ್ ಸತ್

❋ ❋

ಪಂಚವಿಂಶೋಲ್ಲಾಸಂ

ವಿವೇಕಾಮೃತ ಸಾರಂ

ಮೂಡುವೆಟ್ಟಿನೆಡೆಯಿಂ ಚೆಲುವಾಂತ ಚೆಲುವೆಂಬ
ತಣ್ಣನೆಯ ತಂಗಾಳಿ ಬಿಜ್ಜಣಿಗೆಯಂ ಪಿಡಿದು
ಬರೆ ಕಮ್ಮನೆಯ ಸಿರಿ ಮೆಳೆಯ ಮುಟ್ಟಿ ಮೇಲಾಡೆ,
ಅಹ ಅದರ ಸೊಬಗೇ ಸೊಬಗು, ಸವಿಯೆ ಸವಿ. ಮೈನ
ಪಿಕಳಾರ ಕಾಜಾಣ ಕಾಮಳ್ಳಿ ಗಿಳಿವಿಂಡು
ಕೋಗಿಲೆ ಪೆಸರರಿಯದ ಕರ್ಪುರ ಚುಕ್ಕಿ ಚುಕ್ಕಿಯ
ಹೂವಕ್ಕಿಗಳವಿಂಡು ಗಿಡದಿಂ ಗಿಡಕೆ ಮತ್ತೆ
ಕೊಂಬೆಯಿಂ ಕೊಂಬೆಗೆ ಎರೆಂಕೆಗಳ ಬಿರಿಬಿಚ್ಚಿ
ಹಾರಿ ಹಾರಾಡಿ ಹಣ್ಣು ಕಾಯಿಗಳಂ ಕಿತ್ತು
ತಿಂದು ಸಾನುರಾಗದಲಿ ಪಾಡುತೆ ಮುದದಿಂದೆ
ನಲಿದಪವು ಕೊರಳ್‌ದನಿ ಹರಿಸಿ ಹರಿಸಿ. ಮತ್ತಂ
ಕೆಂಬೊಟ್ಟೆಯು ಕರ್ಕಶದನಿಯಂ ಹರಿಪುದು ಮರಳಿ
ಮರಳಿ. ಆಗಳಾಗಳ್ ನವಿಲ್‌ಗಳ್ ಕೊರಳೆತ್ತಿ
ಎತ್ತಿ ಪಿರಿಯದನಿಯಲಿ ಕ್ರೇಂಕರಿಪುವು ಮನದೊಳ್
ಪುರುಡೆತ್ತು. ಎಲ್ಲಿಂದಲೋ ಪಾರಿ ಬಂದುದಯ್
ಚಂಚರೀಕ ಪಕ್ಷಿಯೊಂದು ಚಂಚೂ ಪುಟವಂ
ಚಾಚಿ ಚಾಚಿ ಮುಕ್ಕ ತೊಡಗಿತು ಬೇಲಿಸಾಲಿನ
ಗಿಡಗಳಲಿ ಪಣ್ತು ಮಿದುವಾದ ಬೋರೆ ಪಣ್ಗಳಂ.
ಸಕಲ ಪರ್ಣ ರಾಜಿಯಲಿ ವಿಧವಿಧ ತಳಿರ್‌ಗಳು
ವರ್ಣವರ್ಣಾಂತು ರಾಮಣೀಯಕ ಶೋಭೆಯಲಿ
ನಳನಳಿಸುತಿರೆ ಮಹಾನ್ ಶೋಭಾ ಶೈಲಿಯುಂ
ಮೆರೆದತ್ತು ನೋನೋಳ್ಪ ಕಣ್ಮನಂ ಮಮ್ಮಲಿಸಿ

ಹರುಷಗೊಳ್ವಂತೆ.
                    ಮುಂಬೆಳಗಿನ ತನಿವೊಳ್ತಿನಲಿ
ಮಿತ್ರ ಮಂಡಲಿಯೊಡಂ ನ್ಯೂಯಾರ್ಕ್ ನಗರಿಯಂ
ಬಿಟ್ಟು ಪೊರಡಲ್ ಅಣಿಗೊಂಡರ್ ಗುರುವರ್ಯಂ.
ದೂರ ಪಯಣಂಬೋದು ಪ್ಯಾರಿಸ್ ಪೊಳಲ್ ಮುಟ್ಟಿ
ಬಿಡದಿಯ ಬಳಿಗೈದಾಗಳ್ ಅಂಬರದ ನೀಲಿ
ಥಳಥಳಿಸುತಲಿರ್ದುದು ನಕ್ಷತ್ರ ಖಚಿತಮಾಗಿ.
ಉಜ್ಜಲೋಜ್ವಲಿಸಿ. ಪ್ಯಾರಿಸ್ ಮಹಾ ನಗರಿಯುಂ
ಜಗಜಗಿಸಿ ಜೃಂಭಿಸಿದುದು ವಿದ್ಯುತ್ತಿನ ದಿವ್ಯ
ಸುದೀಪಾಲೋಕದೊಳ್ ಪಗಲೆಂಬ ಭ್ರಾಂತಿಯಂ
ಮೂಡಿಸುವ ಮಾಳ್ಕೆಯಲಿ. ರಸಿಕ ಜನಗೋಷ್ಠಿಯಲಿ
ಪಗಲಿರುಳಿನ ಬೇಧಮಿನಿತಿರದ ಸಿರಿವಂತಿಕೆಯ
ನಾಡಿನಲಿ ಅಂಕೆಯಂ ಸಂಕೆಯಂ ಕಾಣದಿಹ
ಜವ್ವನಿಗರ ಅತೀವ ಬರ್ಬರ ಭೋಗ ವಿಲಾಸ
ಪ್ರಿಯ ವೈಭೋಗ ಮೆರೆದತ್ತು ಎಡೆ ಎಡೆಯಲ್ಲಿ.
ಬಿಡದಿಯಲಿ ಬೇರಾರ್ ಇರದಿರಲ್ ಸಮೃದ್ಧ
ವಿಶ್ರಾಂತಿಯೈಸಿರಿಯು ಒದವಿದುದು ಗುರುವಿಂಗೆ.
ಸದ್ದುಗದ್ದಲಮಿರದ ಪ್ರಶಾಂತಿಯ ಮಡಿಲ್
ಕರೆದತ್ತು ಜೋಗುಳಿಸಿ ನಿದ್ದೈಸುವ ತೆರಂ.
ಪ್ಯಾರಿಸ್ ನಗರಿಯ ಸಿರಿಯುಡಿಯಲಿ ಕಳೆಯಿತಾ
ಮೊತ್ತಮೊದಲ ರಾತ್ರಿ ಸವಿನಿದ್ದೆಯ ಸಂಪೂರ್ಣ
ವಿಶ್ರಾಂತಿಯಲಿ; ನಿಶಿಯ ಗಾಲಿಯುರುಳಿ ದೂರದ
ಮೂಡುವೆಟ್ಟಿನ ತಟಾಂತ ಸೀಮೆಯಲಿ ಬೆಳಕಿನ
ಛವಿ ತುಳುಕುವನ್ನ. ತಣ್ಣಗೆ ತನಿಯುಗುವ ಗಾಳಿ
ಬೀಸಿದುದು ದಿಶೆಯಿಂದಿಶೆಗೆ. ಗಗನದೇಶದಿಂ

ಬೆಳ್ಮಂಜಿನ ನವುರಾದ ತೆರೆ ಇಳಿಯುತಿರ್ದುದು
ಧರಾತಲಕೆ. ಮಿತ್ರರ್ ಸೆಜ್ಜೆಯಂ ಬಿಟ್ಟೆಳ್ದುದು
ಪೊಳ್ತು ಏರಿದ ಮೇಲೆ. ಗುರುವರಂ ತಮ್ಮೆಲ್ಲ
ಮಿತ್ರವಳಗದೊಡಗೂಡಿ ನೆಪೋಲಿಯನ್ ಚಕ್ರ
ವರ್ತಿಗಳ ಸ್ಮೃತಿ ಸ್ತೂಪದಾ ಸಂದರ್ಶನಂ
ಪಡೆದು ಹರ್ಷ ಪುಳಕಿತರಾದರ್. ಹಿತಮಿತಕರ
ಸಂಭಾಷಣೆ, ಹಿತಮಿತಕರ ದರ್ಶನೀಯಾರ್ಥ
ಸ್ಥಳಂಗಳ ಭೇಟಿ, ಹಿತಮಿತಕರ ಅಧ್ಯಾಪನ
ಎಲ್ಲವುಂ ಹಿತಮಿತವೆ. ಬೃಹದ್ ಕೈಗಾರಿಕೆಯ
ಕಾರ್ಖಾನೆಗಳ ಯಂತ್ರಸ್ಥಾವರಗಳ ಶಾಲಾ
ಭವನಗಳ್ ವಿಶ್ವವಿದ್ಯಾಲಯಗಳ್ ಆರೋಗ್ಯ
ಕೇಂದ್ರಗಳ್ ಸರಕಾರಿ ಕಛೇರಿಗಳ್ ದರ್ಶನ
ದೃಶ್ಯಗಳ್ಸಿರೆ ಕಳೆದುದು ಕಾಲ ಸರಾಗದಿಂ.
ಗುರುವರೇಣ್ಯಂ ಗೆಳೆಯ ಬಂಧುಗಳಿಗೆ ನಗೆಸಿರಿಯ
ಬೆಳ್ನುಡಿಗಳಲಿ ವಿವೇಕಾ ಮೃತವ ಸಿಂಚನಿಸಿ
ಮುದಗೊಳಿಸುತಿರೆ ಗುರುಗಳ ಸ್ನೇಹ ಸಂಪದ
ಸಕ್ಕರೆಯ ಸವಿಯಾಯ್ತು. ಅಕ್ಕರೆಯ ಜೇನಾಯ್ತು.
ಎಲ್ಲೆಡೆ ಸುಸಂಸ್ಕೃತರ್ ಕೃತವಿದ್ಯರ್ ಜ್ಞಾನ
ವೇತ್ತರ್ ಸುವಿದ್ವನ್ಮಣಿಗಳ್ ಗುರುದೇವನಂ
ಕಂಡು ಸಂದರ್ಶನಂ ಪಡೆದು ಸಂಪ್ರೀತ ಮನ
ಮತಿಯೊಳ್ ಪರಮಾದರ ತುಂಬಿ ಬೆಳೆಸಿದರ್ ಬಲ್
ನವುರಾದ ಸ್ನೇಹ ಬಳ್ಳಿಯಂ ರೋಮ ಹರ್ಷಕ
ಭಾವದಲಿ. ದುಃಖ ದುಮ್ಮಾನಗಳ ಸೋಂಕಿಲ್ಲ;
ಕಾರ್ಯಕ್ರಮಗಳ ಭಾರಮಿನಿತಿಲ್ಲ. ಕಾಲದ
ಗಾಲಿಯು ಸರಾಗ. ಹೃದಯ ಬನದ ಭಾವನಾ

ವೇಶವು ಸರಾಗ. ಕಳೆದುವು ಒಂದೆರಳ್ದು ದಿನ
ಮಾನಗಳ್ ಅಮಿತ ತೋಷದಲಿ. ಅಂದಿನಂಚೆಯ
ಮುಖೇನಮೈತಂದ ಭಾರತದ ಪತ್ರವೊಂದು
ಅಲ್ಲಲ್ಲಿ ಸುತ್ತಾಡಿ ಹಲವೆಡೆಯ ತರತರದ
ಅಂಚೆ ಮುದ್ರೆಗಳ ನಾಮವೊತ್ತು ಗುರುದೇವನ
ಕೈ ಸಾರ್ದುದು ಬಲು ತಡವಾಗಿ. ಭ್ರಾತೃಭಾಯೀ
ತಾರಕನ ಹಸ್ತಾಕ್ಷರಮೆಸೆದತ್ತು ಹಸುರಿನ
ಲಕೋಟೆಯ ಮೇಲೆ....ಆಗಳಂದಿನ ಭಾರತ
ದೇಶದ ಪರಿಸ್ಥಿತಿಯಂ ವಿವರಿಸಿದ ತಾರಕಂ
ಒಡಲಿನ ತಳಮಳಮಂ ನಿವೇದಿಸಿರ್ದನೆಂತೆನೆ,
‘ಭಾಯೀ, ಕ್ರೈಸ್ತಮಿಷನರಿಗಳ್ ನಿಮ್ಮ ಕೀರ್ತಿಯಂ
ಕಿಡಿಸೆ ನಿಮ್ಮ ಬಗ್ಗೆ ಇಲ್ಲದ ಸಲ್ಲದ ನಿಂದೆಯ
ಆರೋಪಗಳಂ ಹೊರಿಸುತೆ ಅಪಪ್ರಚಾರ
ಗೈದು ಭಾರತೀಯರ ಮನೋದಧಿಗೆ ಕಟಿರಸ
ವೆರಸಿವೆರಸಿ ದಿಕ್ಕೆಡಿಸುತಿರ್ಪರ್’..ಎಂಬುದಾಗಿ.
ಸ್ವಾಮೀಜಿಯುಂ ಪತ್ರದ ಒಕ್ಕಣೆಯನೋದಿಮುಖ
ಬಿಂಬದಲಿ ಸಿತಸ್ಮಿತದ ಬೆಳುದಿಂಗಳ್ ಬೆಳಗಿ
ಕಿಂಚಿತ್ ಅದಂ ಮನಗೊಳದೆ ಮರುದಿನಮೆ ತಮ್ಮ
ಪ್ರತ್ಯುತ್ತರಮಂ ಲೇಖಿಸಿದರಿಂತಿಂತು ‘‘ಎಲೈ,
ಭಾಯೀ, ಕುಮತಿಯ ಕುಸಂಸ್ಕಾರಕ ಮಿಷನರಿಗಳ
ಪೊಳ್ಳಾತುಗಳ್ ನಂಬಿ ನೀಮಿಂತು ಮನಗಡಲ್
ಏಂವೇಳ್ಪಂ? ಕಾಗೆಗಳ್ ಅರಚಿದೊಡೆ ಅರಚಲಿ.
ಅದಕೇಕೆ ತಳಮಳಂ? ನೀಮಿಂತು ಮನನೊಂದು
ನೋಯುವುದೆನಗೆ ಅಚ್ಚರಿ ಎಂಬೆನ್ಯೆ. ಕೇಳಿಲ್ಲಿ,
ಭಾರತೀಯರೆನ್ನಂ ಇಲ್ಲಿಯುಂ ಭಾರತದ

ಉಣಿಸುಮಂ ಭುಂಜಿಸುಮೆನುವೊಡೆ ಎನಗಾಗಿಯೇ
ಬಾಣಸಿಗನಂ ಮೇಣಧಿಕ ಹಣದ ಥೈಲಿಯಂ
ಕಳಿಪಿಮೆಂದು ತಿಳಿಸ್ಯೆ. ಆ ಜಿಪುಣ ಗಣ್ಯರುಂ
ನೀಡುವ ಉದಾರೋಪದೇಶಮಂ ಅರಿದರಿದು
ನಗುವುದಲ್ಲದೆ ಬೇರೆ ಏನೇನ್ ಕಾಣೆನಾಂ.
ಎನ್ನಯ ವಿಚಾರ ಆಚಾರಗಳಿಗೆ ಭಂಗಂ
ಒದವಿತೆಂದು ಮಿಷನರಿಗಳ್ ಒದರಿದೊಡವರ್ಗೆ
ನೀಮೆಲ್ಲಗೈವುದದು ಸುವ್ಯರ್ಥಾಲಾಪಮೆಂದೇ
ಧೈರ್ಯದಿಂ ಎದುರ್ಚುತೆ ಉತ್ತರಿಸು. ಇನ್ ಎನ್ನ
ವಿಷಯಮಂ ನುಡಿವುದಾದೊಡೆ ಆನು ಆರಾರ
ಸೊತ್ತು ಅಥ ಗುಲಾಮನು ಅಲ್ಲ. ಎನಗಾರಾರ
ಅಪ್ಪಣೆಯು ಬೇಕಿಲ್ಲ. ಅದುಮೆನಗೆ ಸಲ್ಲ ಕಣಾ!
ಎನ್ನ ಜನ್ಮೋದ್ದೇಶಮಂ ಆಂ ಅರಿದಿಹೆನ್.
ಆನೆಂತು ಭರತವರ್ಷಕ್ಕೆ ಸೇರ್ದ ವ್ಯಕ್ತಿಯೋ
ಅಂತಂತು ಜಗದ ವ್ಯಕ್ತಿಯುಂ ಸಹಜ ಎಂಬೆನ್.
ಕೇಳ್, ದೈವವೆನಗೆ ಮನುಜ, ಪೈಶಾಚಿಕ ಶಕ್ತಿ
ಸಂಪದಂ ಮೀರ್ದ ದಿವ್ಯ ಶಕ್ತಿಯ ಸಂಪುಟಂ
ಕೊಡಮಾಡಿ ಕೃಪೆದೋರಿಹನ್. ಎನಗಾರಾರ
ಸಹಾಯವದು ಬೇಕಿಲ್ಲ. ಯಾವತ್ಕಾಲವುಂ
ಆಂ ಪರರ ಸೇವಕಂ. ಹಲಕೆಲವು ಅಕ್ಷರಂ
ಕಲಿತು ಗರ್ವದಿಂದುರ್ಬಿ ಮೆರೆವ ಹಿಂದೂಗಳ್
ಮತಿಭ್ರಾಂತರುಂ ಜಾತಿಭ್ರಾಂತರುಂ ಮೂರ್ಖರುಂ
ದಯಾಹೀನ ಕೃತ್ರಿಮ ಜೀವಿಗಳ್ ಆಗಿರ್ಪೊಲ್
ಆನ್ ಬರ್ದುಕಿ ಬಾಳ್ವು ಸಾಯಲೇಂ? ಆನಂಥ
ಹೇಡಿಯಲ್ಲವೆನೆ ತೋಷಮಿರ್ಕುಂ ಪೆರ್ಮೆಯಿರ್ಕುಂ.

ಅದಲ್ಲದೆ ನಿಮ್ಮ ಮೆಳ್ಳೆಗಣ್ಗಳ ಕುಹುಕತೆಯ
ರಾಜಕೀಯದೊಳ್ ಎನಗಿನಿತು ನಂಬಿಗೆಯಿಲ್ಲ.
ಪರಮಾತ್ಮ ಮೇಣ್ ಸತ್ಯ ಎಂಬಿವೆ ಜಗತ್ತಿನ
ರಾಜನೀತಿಗಳ್ ಉಳಿದೆಲ್ಲವುಂ ವ್ಯರ್ಥಕಣಾ!

ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖ ಭಾಗ್ ಭವೇತ್ ॥

ಅಂದು, ಪಗಲ್ ಕಾರ್ಯಕಲಾಪಂ ಮುಗಿದ ಬಳಿಕ
ರಾತ್ರಿಯೊಳ್ ವಿಶ್ರಾಂತಿಗೊಲಿವ ಮುನ್ನ ತಮ್ಮಿಯ
ಅಂತರಂಗಿಕ ಶಿಷ್ಯನಿಗೊಂದು ಕಿರು ಪತ್ರದ
ಒಕ್ಕಣೆ ಹರಿದುದು ಕರಿಯಕ್ಕರದಲಿ "**ಭಾಯೀ,**
ಉತ್ತಿಷ್ಠ ಜಾಗ್ರತ ಪ್ರಾಪ್ಯ ವರಾನ್ ನಿಭೋದತ"
ಭಗವಂತನುಂ ಮಹಾ ಮಹಿಮ! ಅವನೆಮ್ಮಗಳ
ಹಿಂದೆಯೆ ಇಹಂ ಎಂದೊಡದೆ ಸಾಲ್ಗುಂ. ಆನ್
ಇದಕ್ಕಿಂತಲ್ ಪೆರ್ಚೇನ್ ಪೇಳಬಲ್ಲೆ? ಆರ್
ಎನ್ನೀ ಪತ್ರಮಂ ಶ್ರದ್ಧೆಯಿಂ ಮನನಗೈವರೊ
ಅವರೆನ್ನ ಶಕ್ತಿಯಂ ಪಡೆದಪರ್ ಮೇಣೆನ್ನ
ಅರ್ಥೈಸುವರ್. ಆತ್ಮನೊಳ್ ವಿಶ್ವಾಸವನ್ನಿಡಿ.
ಮುನ್ನುಗ್ಗಿ ಮುಂದೆಮುಂದೆ ಬೆದರದೆ ಸಾಗಿರೈ!"
ಶ್ರೀಮಾತೆ ಶಾರದಾದೇವಿಯರ್ ಮರಣಿಸುವ
ಇಪ್ಪತ್ತೈದು ವರ್ಷಮಾನಗಳ ಮುನ್ನಮೆ ಅವರ
ಆಧ್ಯಾಶಕ್ತಿತ್ವವನರಿದು ಮನದುಂಬಿದ ಗುರು
ದೇವನುಂ ಇಂತೊರೆದರೊಂದು ಪತ್ರಲೇಖವ
ಶಿವಾನಂದ ಗುರುಭಾಯಿ ಮಹೋದಯರಿಗೆ "ಎಲೆ

ವತ್ಸಾ! ಕೇಳ್ಕೈ ನಮ್ಮ ಶ್ರೀಮಾತೆ ಶಾರದಾಮಣಿ
ದೇವಿಯವರಂ ಕೇಂದ್ರಸ್ಥಾನದೊಳಿರಿಸಿ ಪರಮ
ಸಂನ್ಯಾಸಿನಿಯರ ಸಂಘವಂ ಸಂಸ್ಥಾಪಿಸುತೆ
ಸರಿಯಪ್ಪ ಪಥದೊಳ್ ಮುನ್ನಡೆಸಿ ಆಧುನಿಕ
ಭಾರತವರ್ಷದಲಿ ಸಂನ್ಯಾಸಿನಿಯರ ನವೀನ
ಪರಂಪರೆಯೊಂದಂ ಬೆಳೆಸಿಕೊಂಬುವ ಉನ್ನತ
ಉತ್ಕಟೇಚ್ಛೆಯುಂ ಇರ್ಪುದು ಕಣಾ! ನಮ್ಮಲ್ಲಿ
ಸೋದರಿಯರ ಇಂದಿನ ಬಾಳಂ ಮನದಿ ನೀನೆ
ಚಿತ್ರಿಸಿಕೊ. ಅವರ ಭಂಗ ಬನ್ನಗಳಂ ನೀನೆ
ಚಿತ್ರಿಸಿಕೊ. ಈ ಪುರುಷ ಪ್ರಧಾನ ಸಮಾಜದಲಿ
ಶಾಸ್ತ್ರಸೂತ್ರಾದಿ ನಿಜ ಸಂಕೋಲೆಗಳ ನಿಷ್ಠೆ
ನಿಯಮದೊಳ್ ಬಾಳ್ವುದಂ ನೀನೆ ಚಿತ್ರಿಸಿಕೊ. ಎಲೆ,
ತಮ್ಮಾ ಅವರ ಕಂಬನಿಯನೊರೆಸುವರಾರ್? ಈ
ಪುರುಷವರ್ಗದಾಶ್ರಯದಲಿ ನಿರಕ್ಷರಿಗಳಾಗಿ
ಬಾಳ್ವರಂ ಅಜ್ಞಾನದ ಕೂಪದಿಂ ಎತ್ತುವರ್
ಮೇಣವರ ದಿಟ್ಟಪಥಕೆ ಹಚ್ಚುವರ್ ಆರಿಹರ್?
ಅವರ ಘೋರಾಂಧಕಾರದ ಬಾಳ್ ನೀನೆ ಮನದಿ
ನೆನೆದು ಚಿತ್ರಿಸಿಕೊ. ನಮ್ಮ ಧೂರ್ತ ಸಮಾಜದಲಿ
ಅವರನುಂ ನೇರ್ವಡಿಸುವವರಾರ್? ಯೋಚಿಸ್ಯೆ.
'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ
ದೇವತಾಃ' ವೇದಮಾತೆಯ ನುಡಿಯುಮಿಂತಿರಲ್
ನಿಮ್ಮ ಬಾಳ್ಮೆಯದಂ ಮನದಿ ನೀನೆ ಚಿತ್ರಿಸಿಕೊ.
    ಕೇಳಿ, ನನ್ನ ನೆಚ್ಚಿನ ಧೀರ ಕಲಿಗಳೆ, ನೀವ್
ಸ್ಥಿರವಾಗಿ ನಿಂತು ಕಾರ್ಯೋನ್ಮುಖಿಗಳಾಗಿರಿ!
ಸಾಧನಾಶೀಲರಾಗಿ! ಭಾರತದಾ ಪುಣ್ಯ

ಧರಿತ್ರಿಯಲಿ ಮಹಾಕಾರ್ಯಮೆಸಗೆ ಜನಿಸಿದುದಂ
ದೃಢವಾಗಿ ನಂಬಿ. ನಾಯ್ಕುನ್ನಿಗಳ ಬೊಗಳಿಕೆಗೆ
ಶಿರಮಣಿಯದಿರಿ. ಅಂಜಿಕೆಯಲಿ ನಿಮ್ಮ ಕಾರ್ಯವು
ಸ್ಥಗಿತಗೊಳದಿರಲಿ! ನಭಾಂಗಣದಿ ಕಾರ್ಮುಗಿಲ್
ಕಾರ್ವ ಸಿಡಿಲ್ಗರ್ಜನೆ ನಿಮ್ಮನಂಜಿಸದಿರಲಿ! ನೀವ್
ಸ್ಥಿರವಾಗಿ ನಿಲ್ಲಿ. ಶ್ರೀಮಾತೆ ಶಾರದಾದೇವಿಯ
ಆದಿಶಕ್ತಿ ಅವತಾರಮಂ ಅರಿತು ತಿಳಿದವರ್
ಆರಿಹರ್ ಬಂಗಾಳಿ ಸಮಾಜದಲಿ? ನೀವೇ
ಉನ್ನೆಬರಮರಿದಿಲ್ಲ. ಕಾಲಕ್ರಮದೊಳ್ ನೀವ್
ಅರಿತುಕೊಂಬುದದು ದಿಟ. ಆದಿಶಕ್ತಿಯನುಗ್ರಹ
ಒದವಿ ಬರದೆ ಜಗತ್ತಿನ ಉದ್ಧಾರಮಿಲ್ಲಂ.
"ನಮ್ಮ ರಾಷ್ಟ್ರದ ಹಿಂದುಳಿಕೆಗೆ ಆದಿಶಕ್ತಿಯಂ
ಸರ್ವತ್ರ ಅರಿಯದೆಯೆ ಕಡೆಗಣಿಸಿ ಕೈವಿಟ್ಟು
ಮೂಲೋತ್ಪಾಟಗೈದುದೆ ಮೂಲಕಾರಣಂ. ನೀಂ
ಇದನರಿತುಕೊ. ಈಯೊಂದು ಅದ್ಭುತ ಶಕ್ತಿಯಂ
ಜಾಗ್ರುತಗೊಳಿಸಿ ಸಂಪೂಜೆ ನಡೆಸಲೆಂದೇ ಮಾತೆ
ಶಾರದಾಮಣಿ ದೇವಿಯವರ್ ಅವತರಿಸಿಹರ್ ಈ
ಪುಣ್ಯ ಧಾತ್ರಿಗೆ ಎಂಬುದಂ ಮರೆಯದಿರ್. ನೀನ್
ಅವರನ್ನೆ ಕೇಂದ್ರೀಕರಿಸಿ ಈ ಜಗತ್ತಿನೊಳ್
ಇನ್ನೊರ್ಮೆ ಗಾರ್ಗಿ ಮೈತ್ರೇಯಿಯರ್ ಉದಿಸಿಬರೆ
ಅವಕಾಶಮಂ ನಿಜದೊಳ್ ಕಲ್ಪಿಸಿ. ಸಹೋದರ,
ನಿನಗೀಗಳಿದು ಅರ್ಥಮಾಗದೊಡೆ ಮುಂದೆ ಕಾಲ
ಕ್ರಮದೊಳ್ ಎನ್ನಲ್ಲಿ ಅಕ್ಕರಕ್ಕರಗಳುಂ
ತಿಳಿವುದದು ಸತ್ಯ. ಅಮೆರಿಕ ಯೂರೋಪ್‌ಗಳಲಿ
ನಾವ್ ಕಾಂಬ ಶಕ್ತಿಯ ಪೂಜೆಯೇಂ ತಿಳಿಯಿತಾ?

ಅಜ್ಞಾನ ಕಾರಣದೊಳ್ ಆ ಶಕ್ತಿಯಂ ಇಂದ್ರಿಯ
ಭೋಗಗಳ ಮುಖೇನಮ್ ಆರಾಧಿಪರೆಲ್ಲರ್.
ಇದಿಲ್ಲಿನ ವಸ್ತುಸ್ಥಿತಿ. ಆರು ಅದೇ ಆದಿ
ಶಕ್ತಿಯಂ ತಮ್ಮ ಜನನಿಯೆಂದೆಂದು ಒಪ್ಪುತೆ
ಪೂರ್ಣಮನದಿಂ ಸಾತ್ವಿಕ ಭಾವದಿಂ ಪರಿಶುದ್ಧ
ಹೃದಯದಿಂ ಆರಾಧಿಸಿದೊಡೆ ಇವರಿನ್ನೆನಿತು
ಸನ್ಮಂಗಳಮಂ ಕಾಂಬರೊ ಎನಿಪುದೆನಗೆ. ಈ
ಬಗೆಯ ವೈಚಾರಿಕ ವಿಹಾರದಿಂ ಚಿಂತನೆಯ
ಆಳದಿಂ ಅಂತದೃಷ್ಟಿ ಬೆಳೆಯುತೆ ಬೆಳೆಯುತೆ
ವಿಶ್ವವಿಶಾಲಮಾದುದು ಎಂಬೆನೈ. ಇರಲಿರಲಿ,
ಮೊತ್ತಮೊದಲಾವು ಶ್ರೀಶಾರದಾಮಣಿದೇವಿ
ಮಾತೆಯರ ಪೆಸರಿನೊಳ್ ಶ್ರೀಶಾರದಾಮಠವ
ಕಟ್ಟಲ್ಕೆ ಶ್ರಮವಂ ಶ್ರಮಿಸಿ, ದುಡಿದು ಕಾರ್ಯ
ನಿರ್ವಹಿಸಿದೊಡೆ ದಿವ್ಯ ಸಾಧನೆಯದು ಕರಗತ
ಗೊಂಬುದು ದಿಟಂ. ಮೊತ್ತಮೊದಲ್ ಶಾರದಾದೇವಿ
ಮೇಣವರ ಸ್ತ್ರೀ ಸಂತಾನ. ತರುವಾಯಿ, ಗುರುವರ
ಶ್ರೀರಾಮಕೃಷ್ಣರುಂ ಮೇಣವರ ಪುರುಷ ಸಂ
ತಾನ. ನೀನಿದನಿನ್ನು ಅರ್ಥೈಸಬಲ್ಲೆಯಲ್ತೇ?
ಎನ್ನ ಪಾಲಿಂಗೆ ಶ್ರೀಗುರುದೇವನ ಕೃಪೆಗಿಂ
ಸಹಸ್ರಪಟ್ಟು ಅಮೂಲ್ಯಮಾ ಶ್ರೀಮಾತೆಯವರಾ
ಕೃಪೆಯ ಶುಭಾಶೀರ್ವಾದ! ಕೇಳ್ ಗುರುಭಾಯೀ,
ಆನ್ ನಿಜದಲಿ ವಿವೇಕಾನಂದನೆ ಇರುತಿರೆ
ನಿಮಗೆಲ್ಲ ಜೀವಂತ ದುರ್ಗೆಯಂ ಆರಾಧಿಸಿ
ತೋರಿಸಿಕೊಡುವೆಂ! ಕ್ಷಮಿಸು, ಮಾತೆಯ ವಿಷಯದೊಳ್
ಆನಂತು ಮತಾಂಧನೇ ವಲಂ. ಆ ದುರ್ಗೆ

ಏನಾದೊಡಂ ಆಜ್ಞೆಗೈದೊಡವರ ಭೂತಗಣ
ಸಾಧಿಸಿಯೆ ತೋರ್ಪುದು. ಶ್ರೀರಾಮಕೃಷ್ಣರಂ
ನೀಮೆಲ್ಲ ದೇವರೆನ್ನಿ ಗುರುವೆನ್ನಿ ಮನುಜರೆನ್ನಿ
ಅಥ ಇನ್ನೇನಾದರೆನ್ನಿ. ಆದೊಡೆ, ಶ್ರೀಮಾತೆ
ಶಾರದಾದೇವಿಯರನಾರ್ ಸಾಕ್ಷಾತ್ ಶ್ರೀ
ಜಗನ್ಮಾತೆಯೆಂದೊಪ್ಪಿ ಗೌರವಿಸಲಾರರೋ
ಅವರಿಗೆನ್ನ ಧಿಕ್ಕಾರಮಿರಲಿ..! ಕೇಳ್ಳೈ ಮಿತ್ರಾ!
"ಯಾದೇವಿ ಸರ್ವಭೂತೇಷು ಮಾತೃರೂಪೇಣ
ಸಂಸ್ಥಿತಾ" ಅಂದಿಂದಿಗುಂ ಈ ಮಹೋದ್ದೇಶ
ಸಾಧನೆಯ ಗುರಿಯೊಳ್ ಈ ಭಯಂಕರ ಚಳಿಯ
ಹಿಂಸೆಯಂ, ಅನೇಕವಗೆಯ ಅಡೆತಡೆಯಂ ಸಹಿಸಿ
ಊರಿನಿಂದೂರಿಗೆ ಅಲೆಯುತಿರ್ಪೆನ್. ನೀನ್
ನಲ್ ಸ್ಥಳಮಂ ಕೊಂಡು ಜೀವಂತ ದುರ್ಗೆಯಂ
ಸಂಸ್ಥಾಪಿದೊಡೆ ಮಾತ್ರ ಎನ್ನಯ ಮನಕೆ ಪೂರ್ಣ
ಸಮಾಧಾನಮಾದಪುದು. ಉಣಲಿರದೆ ಉಡಲಿರದೆ
ನೆರಳಿಲ್ಲದೆ ಇಹ ಜೀವಂತ ದುರ್ಗೆಯಂ ನೀಂ
ಕಣ್ಣಿಂದ ನೋಡಿಯುಂ ಮಿಣ್ಣನಿರ್ಪುದೇಂ? ಇಡೀ
ಭಾರತದ ಸ್ತ್ರೀ ಜನರ ಸ್ಥಿತಿಗತಿಯರಿತಿರ್ಪ
ಪುರುಷರಾವು ಚಿಂತಿಸದಿರ್ದೊಡೆಂತು ಸೋದರೀ
ಕುಲಕೋಟಿಯ ಉದ್ಧರಣ? ಯೋಚಿಸು, ಸ್ತ್ರೀಜನರ
ಕಲ್ಯಾಣಮಾಗದೆಯೆ ಹಿಂದೂ ಸಮಾಜದಾ
ಸಂಸ್ಕರಣಮಾಗದು. ಭಾರತದ ಉದ್ಧಾರವು
ಆಗದಾಗದು ಎಂಬುದರ ನಗ್ನ ಸತ್ಯಮಂ
ಅರಿತುಕೊ. ಶತಸಹಸ್ರ ಕಾಲಮಾನದಿಂದೀ
ಸಂಪ್ರದಾಯದ ಕುರುಡು ಕೂಪದಿಂ ಮೇಲೆದ್ದು

ಮೌಢ್ಯಮಂ ಝಾಡಿಸಿ ಜಡಿತುಳಿದುದಲ್ಲದೆಯೆ
ಎಲ್ಲಿಯ ಜನ ಜಾಗೃತಿ? ಭಾರತದ ಹಿನ್ನಡೆಯ
ಜಾಲಂದ್ರದೊಳ್ ಇಣಿಕಿದೊಡೆ ಕಾಣ್ಬ ಬರ್ಬರತೆಯ
ದೃಶ್ಯಾದೃಶ್ಯಗಳಂ. ಕಣ್ ಕುರುಡಾದ ಭಾರತ
ಧಾತ್ರಿಯ ಯುವಜನರುಂ ಕಾಣದಿರ್ಪುದದುವೇ
ವಿಷಾದ ಕಣಾ! ಚಿಂತೆ ಕಣಾ! ದುರದೃಷ್ಟ ಕಣಾ!
ನಮ್ಮ ರಾಷ್ಟ್ರೀಯ ಸ್ಥಿತಿಗತಿಯಂ ನೆನೆಯುತಿರೆ
ಮನಮತಿಗೆಡುಗು. ಇನ್ನು ಈಗಿನಿಂದೀಗಳೇ
ಬಂಡೆದ್ದು ಹೊಸಭಾವ ಹೊಸರಕ್ತ ಹೊಚ್ಚಹೊಸ
ರೀತಿಯಲಿ ಬುದ್ಧಿರಸ ನಾಳನಾಳಗಳೊಡೆದು
ಶೀಳಿಹೋಹನ್ನೆಗಂ ಹರಿಸಿದೊಡೆ ಮಾತ್ರಮೇ
ಪ್ರಗತಿಯ ಲಕ್ಷಣಂ! ದೇಶವಿದೇಶಂಗಳ
ಮುನ್ನಡೆಯ ವಿಕ್ರಮದ ವಿಶ್ವಸಾಧನೆಯರಿತು
ಕಣ್ತೆರೆಯಿರಿ. ಜಗದಾಳ ನೀಳಗಳನರಿಯದೆ
ಬೆಳಕಿಲ್ಲ ಒಂದೂ ಸಾಮಾಜಕೆ. ಧರ್ಮಜ್ಞಾನದ
ಜೊತೆಗೆ ಲೋಕಜ್ಞಾನಂ ಬೆರೆತೊಡೆ. ಬದುಕು ಬಾಳು
ಬಂಗಾರಮಾದಪುದು. ಪರ್ಯಾಲೋಚಿಸಿ ನೋಡು!

ಸರ್ವಸ್ತರತು ದುರ್ಗಾಣಿ
ಸರ್ವೋ ಭದ್ರಾಣಿ ಪಶ್ಯತು ।
ಸರ್ವ ಸದ್ಬುದ್ಧಿಮಾಪ್ನೋತು
ಸರ್ವಃ ಸರ್ವತ್ರ ನಂದತು ॥

ಪಗಲುರುಳಿ ಮುಸ್ಸಂಜೆಯ ಹೊನ್ನ ಹೊನಲ್‌ಹರಿದು
ಪಶ್ಚಿಮ ಸಮುದ್ರದಲಿ ಮುಳುಗಿ ಮಾಯಾವಾಯಿತು
ತಾನೆ ತಾನ್ಯೆಸಿ. ತರುವಾಯಿ, ನಿಶಿಯ ಕರಿಯ ಕರ್ಪು
ಸಾಮ್ರಾಜ್ಯ ಆಕ್ರಮಿಸಿದುದು ಧರಣಿಯಂ ರಾಹು

ಕೇತುವಿನ ಮಾಳ್ಕೆಯಲಿ. ಸ್ವಾಮಿಜಿಯುಂ ಅಂದು,
ಎಂದಿನೊಲ್ ಲೇಖನಿಯ ಕೃಷಿಯಲಿ ಮನವಿಟ್ಟು
ಕಾರ್ಯನಿರತರಾದರ್ ಏಕಾಂತ ಶ್ರದ್ಧೆಯಲಿ,
"ಓ, ಎನ್ನ ಪರಮ ಭಾತೃ ಭಾಯಿಗಳೆ ಕೇಳಿ,
ಅಂದಿನಿಂ ಈ ದೇಶದಲಿ ಆಪನಿತು ಸಂಚರಣಗೈದು
ಜನರಾಶಿಯ ಆಚಾರ ವ್ಯವಹಾರ ರೀತಿನೀತಿಗಳ
ಮನನಗೈದಿಹೆನ್ ಹಲಕೆಲ ವಿಷಯಗಳೆನಗೆ
ಕರತಲಾಮಲಕ. ಕಟ್ಟಕಡೆಯೊಳ್ ಆನೊಂದು
ತೀರ್ಮಾನಗೈದಿಹುದೇನೆನೆ ಈ ಜಗತ್ತಿನೊಳ್
ಧರ್ಮದ್ರವ್ಯಮಂ ನಿಜವಾಗಿ ಪರಿಸ್ಫುಟವಾಗಿ
ಅರ್ಥೈಸಿಹ ರಾಷ್ಟ್ರಮೆಂದೊಡೆ ಭಾರತವೊಂದೇ!
ಭಾರತದ ಚಿಂತನೆ ಅದರ ಧರ್ಮಶ್ರದ್ಧೆ ಅಥ
ಜ್ಞಾನವಿಜ್ಞಾನ ಮೇಣ್ ಪೂಜ್ಯರೊಳ್ ಪೂಜ್ಯತಮ
ಭಾವನೆಯ ಸಮಾಜವ ಬೇರೆಲ್ಲು ಕಾಣೆನಾಂ.
ನಿಮ್ಮಲ್ಲಿ ಲೋಪದೋಷಗಳ್ ಎನಿತಿರಲವಂ
ತೊಡೆಯುವನಿತು ಘನವೆಮ್ಮ ಪುರಾಣ ವೇದಾಂತ
ಆಧ್ಯಾತ್ಮ-ಭಕ್ತಿಗಳ ಬಹುಮೂಲ್ಯ ಸಂಪದಂ.
ಜಗದಿತರ ಜನಾಂಗದ ಮುಂತೆ ಭಾರತೀಯರ್
ಉತ್ತಮ ಎಂದಾನ್ ದೃಢವಾಗಿ ನುಡಿವೆನ್.
ಆದೊಡೆ ಜಡನಿದ್ದೆಯಲಿ ಮೈಮರೆತ ಮೈಗಳ್
ಭಾರತೀಯರುಂ ಎಚ್ಚತ್ತು ಟೊಂಕವ ಕಟ್ಟಿ ಪಣ
ತೊಟ್ಟಲ್ಲದೆ ಪ್ರಗತಿಯದು ಅಸಾಧ್ಯವೆಂಬೆನ್.
ಒಂದೂ ಸುಸಂಸ್ಕೃತಿಯೊಡಂ ಜ್ಞಾನ ವಿಜ್ಞಾನ
ಪ್ರಜ್ಞಾನಗಳಂಬಡೆದೊಡೆ ಇನ್ನೇಂ ವೇಳ್ಕುಂ
ಭಾರತಕೆ? ಎಲ್ಲವಗೆಯ ಜನಜಂಗುಳಿಗಳೊಳ್

ಶ್ರೇಷ್ಠತಮ ವ್ಯಕ್ತಿಗಳ್ ಉದ್ಭವಿಸುವರೆಂಬುದು
ಸತ್ಯಸ್ಯ ಸತ್ಯಂ. ಇದನುಂ ಮನಗೊಳುವೊಡೆ ನೀಂ
ಭಾರತದ ಭವಿಷ್ಯವ ಅಂತಃಚಕ್ಷುಗಳಿಂದೆ
ಅಳೆದು ನೋಡು! ಕುಲೀನರ್ ಮತ್ತಂ
ಕುಲಹೀನರ್ ಎಂಬುವ ವಿಚಾರವ ಬದಿಗೊತ್ತಿ
ಉದಾರತೆಯ ಭಾವದಲಿ ಯೋಚಿಸಿ ಮನಗೊಂಡು
ಅರ್ಥೈಸಿಯೆ ತಿಳಿಯಲಕ್ಕುಂ. ಕರ್ಮಾಕರ್ಮಗಳ್
ಇಲ್ಲದಾರ ಬರ್ದುಕು ಇರ್ಪುದೀ ಧರಣಿಯೊಳ್?

"ಕರ್ಮಣ್ಣೇವೇವ ಕರ್ಮಾಣಿ
ಜಿಜೀವಷೇತ್ ಶತಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮಲಿಪ್ಯತೆ ನರೇ ॥"

ಇದರ ಅಂತರಾರ್ಥ ಅರಿಯೆಯಾ ಭಾಯಿ?"
ಪ್ಯಾರಿಸ್ ನಗರಿಯ ಮಧುರ ವಾತಾವರಣದಲಿ
ಕಳೆದುವು ಸರಾಗದಲಿ ಒಂದೆರಡು ದಿನಂಗಳ್
ಜ್ಞಾನವೇತ್ತರ ಮಧ್ಯೆ. ಗುರುವರಂ ತಮ್ಮೆಲ್ಲ
ನೇಹಿಗರೊಡಗೂಡಿ ಪೊರಮಟ್ಟರ್ ಅಲ್ಲಿಂದೆ
ಇಂಗ್ಲೆಂಡ್ ದೇಶಮಂ ಗುರಿಗೊಂಡು. ಮುಂಬಯಣ
ಸಾಗುತಿರೆ ಯೂರೋಪೀಯ ಹಲಕಲ ಪ್ರಾಂತ್ಯಗಳ್
ಬೊಕ್ಕು ಅಲ್ಲಲ್ಲಿ ಸುತ್ತಾಡಿ ಮಹೋನ್ನತ
ಸಂದೃಶ್ಯಮಾನಮಾದ ದೃಶ್ಯಾವಳಿಗಳಂ
ಕಂಡರಿದು ಹೃನ್ಮನಂಗಳ್ ತಣಿಸಿ ಸಂಮುದಿತ
ಭಾವನಾವೇಶದಲಿ ಮುಂಬರಿಸಿದರ್ ತಮ್ಮ
ಪಯಣಮಂ. ಓಡಿತಾ ವಾಹನಂ ಕರ್ರನೆಯ
ಕರ್ಪು ಮೈಯ್ಯಂ ರವಿಭವಿಗೊಡ್ಡಿ, ಬಲು ದೂರದಿಂ

ಹಾದಿಯಿಕ್ಕೆಲಗಳಲೆಸೆವ ಪ್ರಕೃತಿಮಾತೆಯ
ಸೌಂದರ್ಯ ರಾಜಿಯಂ ನೋನೋಡಿ ಮನದುಂಬಿ
ಮುದವಟ್ಟರ್, ಸ್ವಾಮಿಜಿ. ನೋಳ್ಪನಯನಂಗಳ್
ಪಚ್ಚಪಸುರಾದಪುವೊ ಎನಲ್ ಹಸುರೇ ಹಸುರು!
ಲಂಡನ್ ನಗರಿಯುಂ ಸಮಿೂಪಿಸುತ್ತಿರಲ್ ಅಲ್ಲಿ
ಆಳರಸರ ಮಹದೈಶ್ವರ್ಯ ಭರಿತ ನಾಡಿನಲಿ
ಬಿಂಕ ಬಿನ್ನಾಣಗಳ ಜನರಾಶಿ ಇನ್ನೆಂತು
ಸ್ವಾಗತಿಪುದೊ ಎಂದೆಂಬ ಕುತೂಹಲಂ ಕೊನರಿ
ಮಲರಿದುದು ಮನಮಂಡಲಂ ಬಿರಿವವೊಲ್. ಕರ್ಪು
ವರ್ಣಾಂತ ವಾಹನಂ ಓಡಿದುದು ಆಳರಸರ
ರಾಜಧಾನಿಯ ಹರವಾದ ಸುಂದರ ವೀಥಿಯಂ
ಪಿಡಿದು. ಲಂಡನ್ ಮಹಾನಗರಿ! ಆಳ್ವ ಅರಸರ
ಮಹದ್ ರಾಜಧಾನಿ ! ಮಹದೈಶ್ವರ್ಯದಿಂ ತುಂಬಿ
ಸಡಗರದಲಿ ಓಲಾಡುವ ವಿಲಾಯತಿ ! ಜ್ಞಾನ
ವಿಜ್ಞಾನ ತಂತ್ರಜ್ಞಾನಗಳ ವೈಖರಿಯಲ್ಲಿ
ಜೃಂಭಿಸುವ ಆಂಗ್ಲಜನ! ವೇಗ ಗತಿಯಂ ತಗ್ಗಿಸಿ
ಮಿರುಮ್ಮೆ ಮೆರುಗಿನಲಿ ನಗರಿಯ ಹೆದ್ದಾರಿಯಲಿ
ಹರಿಯಿತು ಗುರುವರನಂ ಒಳಗೊಂಡ ವಾಹನಂ.
ಸುತ್ತಮುತ್ತಲ್ ಕೌತುಕದಿಂ ನೋಡುತಿರೆಯಿರೆ
ಸ್ವಾಮಿೂಜಿ ಎಲ್ಲಿಯುಂ ಆರಾರ ಮೊಗಬಿಂಬಂ
ಕಪಿಬಗೆಯ ಸೊಗಡಿನೊಗರ್ ಕಾರಿದ ಚಿತ್ರಂ
ಕಂಡರಿಲ್ಲ. ಜನಮನವ ಓದುತಲಿ ಮುಟ್ಟಿದೊಡನೆ
ನಗರ ಹೃದಯ ಮಧ್ಯೆ ನೆಲೆಗೊಂಡ ಸಜ್ಜನನ
ಮಹಾನ್ ಭವನಂ, ಆನೆವಾಗಿಲ್ ತೆರೆದು ಬಲು
ಗೌರವಾದರದಿಂದೆ ಸ್ವಾಗತಿಸಿತು ತಮ್ಮಯ

ನಿರೀಕ್ಷೆಯೊಳಿರ್ದ ಮಿಸ್॥ ಮುಲ್ಲರ್ ಮಿ॥ ಸ್ಪರ್ಧಿಯರು
ಮುಂದ್ಯೆದು ಎದುರ್ಗೊಂಡು ಕರೆದೊಯ್ದರ್ ಬಿಡದಿಗೆ.
ಭವನದಾ ಉತ್ತರಾಂಗದೊಳ್ ದೊರೆತ ಬಿಡದಿಯು
ಪ್ರತ್ಯೇಕಮಿರುತಿರೆ ಗುರುವಿನ ಏಕಾಂತತೆಗೆ
ಹಿತಮಾಯ್ತು; ದರ್ಶಕರ ಗಮನಾಗಮನಗಳಿಗೆ
ಚೆಲುವಾಯ್ತು. ಹರವಾದ ಪ್ರಾಂಗಣದ ಅಂಚಿನಲಿ
ಮುಂಬೆಳದ ಭೂಜೇಶವೈಭವಮೆಸೆದುದು ಕಣ್
ಮನ ತುಂಬುವ ಮಾಳ್ಕೆಯಲಿ. ನಭಚುಂಬೀ ಹಚ್ಚ
ಹಸುರಿನಲಿ ಕೆಂಬಣ್ಣದ ಕೆಂದಳಿರ್ ಹರಡಿರಲ್
ಕೆಂಬೆಂಕೆಯ ಕುಡಿಯೋ ಎನಲ್ ಮೆರೆದುದಯ್ ವೃಕ್ಷ
ರಾಜನಾ ಸಂಮೋಹನ ರೂಪು. ಸುರಸುಂದರ
ಮನಮೋಹನಕರ ಅಂಗಣದೊಳ್ ಹಚ್ಚಹಸುರಿನ
ಗರಿಕೆಯ ಹರವಾದ ರಮಣೀಯತಮ ಹಾಸು.
ಸುತ್ತಲುಂ ನಳನಳಿಪ ನಯನಾಕರ್ಷಿತಮಾದ
ಪೂದುಂಬಿದ ಉದ್ಯಾನದ ಬಂಧುರ ಚಿತ್ರಂ.
ಮನಕೆ ಮುದವೀವ ಸೊಬಗಿನ ಬೀಡಿನಲಿ ಬೀಡು
ಬಿಟ್ಟ ಗುರುವರಂ ಸೊಗದ ಸುದೆಯಲಿ ತೇಲಿದರ್.
ಮಿತ್ರರುಂ ತಂಗಿದರ್ ಜೊತೆಗೆ ಅದೆ ಬಿಡದಿಯಲಿ.
ಮರುದಿನಂ ಸಭೆಯೊಂದು ನಡೆಯಿತ್ತು. ಸಭಿಕರುಂ
ಮನಗೊಟ್ಟು ಕಿವಿಗೊಟ್ಟು ಹೃದಯದ ಕಲಸವೇ
ನಟ್ಟು ನಾಂಟಿದ ತೆರದಿ ಶ್ರೀಮಂತ ಭಾವದಿಂ
ಆಲೈಸಿದರ್ ಸದ್ದಿನ ಸೊಲ್ಲು ಇನಿತಿಲ್ಲದವೊಲ್.
ನೆಲಹಾಸಿನಲಿ ಕಾಲ್ಮಡಿದು ಕುಳಿತ ಕೇಳುಗರ
ದೃಷ್ಟಿಯಷ್ಟಿಗಳ್ ಹರಿದುದು ಸೂಜಿ ಸೂಜಿಗಳವೊಲ್
ವೇದಿಕೆಯ ಮೇಲೆ. ಅಹ ಆ ದೃಶ್ಯಮಾನವೇ

ಸಾಲ್ಗುಂ ಅಮೂಲ್ಯ ಭಕ್ತಿರಸವಂ ಸೂಸಾಡೆ.
ಶ್ರೋತೃಗಳ್ ವೆರ್ಚುತಿರೆ ಪುಡುಪುಡುಕಿ ಪಿಕಡೆಲ್ಲಿ
ಎಂಬೊಂದು ನಲ್ತಾಣದಲಿ ಶ್ರಮವತ್ ಪಡೆದರ್
'ರಾಜಕುಮಾರ ಮಂದಿರ' ಎಂಬುವ ಸಿರಿನಾಮದ
ಫಲಕಮಂ ಪೊತ್ತ ಪಿರಿಭವನಮಂ. ಬಳಿಕಲಾ
ವ್ಯವಸ್ಥಾಪಕ ಮಂಡಲಿಯುಂ ಮನಮತಿವೆರ್ಚೆ
ತೋಷದಿಂ ಪುರುಡಿನಿಂ ಮುಂದಿನ ಸಭೆ ನಡೆಸಲ್
ಸಜ್ಜುಗೊಳಿಸಿದರ್ ಅಲ್ಲಿಯೇ. ತೋಷದ ಹೊನಲ್
ಉಕ್ಕಿತೋ ಭಕ್ತಿರಸ ಘನಿಸಿತೋ ಸನಾತನ
ಧರ್ಮ ಚಿಂತನೆ ಬೆಳೆಯಿತೋ ಎನಲ್ ದಿನದಿನಂ
ಜನಪದಂ ಕಿಕ್ಕಿರಿದು ತುಂಬತೊಡಗಿತು ಸಭೆಯಲಿ.
ಸ್ವಾಮೀಜಿ ಬೃಹದ್ ಸಭೆಯಲಿ ನುಡಿಸಿದರಿಂತು,
....''ಉದ್ಧರೇತ್ ಆತ್ಮನಾತ್ಮಾನಂ ವಿದ್ಧಿ'' ಎಂಬುವ
ಸೂಕ್ತಿಯಂ ಕುರಿತು ವಿವರಿಸಿ ಅಕ್ಕರಕ್ಕರದ
ಸವಿ ಕಂಪಿಡಿದ ಧ್ವನಿ ಚಾರು ಹರ್ಷದೊಳಿಳಿಸಿ
ಆಲಿಸುವಾತ್ಮಗಳಂ ಆನಂದ ಮಡುವಿನಲಿ ನಲ್
ಮುಳುಗಿಸಿದರ್ ಎಳವೆಳಗಿನ ತಣ್ಪಿನಲಿ. ಅಲ್ಲಿ
ನೆರೆದ ಪತ್ರಿಕಾ ಪ್ರತಿನಿಧಿಗಳ್ ಬೆರಗಾಗಿ
ಹಾಡಿಪಾಡಿ ಕೊಂಡಾಡಿ ಗುರುವರನ ಚಿತ್ರದ
ಸಹಿತ ಲೇಖಿಸಿದರುಲ್ಲೇಖಮಂ. ತಂತಮ್ಮ
ಪತ್ರಿಕಾ ಪ್ರಪಂಚವದು ತುಂಬಿ ತುಳುಂಕುವ
ತೆರದಿ! ಹಿಂದೂ ಯೋಗಿಯ ಸುವಾರ್ತೆ ಹರಡಿದುದು
ಕುಂದಿಲ್ಲದವೊಲ್. ಸಭೆಗಳ್ ಹಿಗ್ಗಿದುವು; ಜನರ
ಒತ್ತಡಂ ವೆರ್ಚುತಿರೆ ನಿಯಂತ್ರಣವದು ತಮ್ಮ
ಕೈಸಾಗದಿರೆ ತಲೆಕಿಡಿಸಿತು ಹಿರಿಯ ನಾಯಕ

ಮಂಡಳಿಯ. ಆಗಳ್ ಮಿ॥ ಸ್ಪರ್ಡಿ ಮಹನೀಯನುಂ
ತಾಂ ಮುಂದ್ವೈದು ಯುವಕರ ನೆರಂ ಪಡೆದು ತಾನೇ
ಸ್ವಯಂ ಸೇವಕನಾದನ್ ಗುರು ಭಕ್ತಿಯು ಘನಿಸಿ.
ಶ್ರೀಮಂತ ಮೇದಾವಿಯುಂ ಆದ ಮಾನನೀಯ
ಮಿ॥ ಸ್ಪರ್ಡಿಯು ಕ್ರಮಾನುಕ್ರಮದೊಳ್ ಸದ್ಭಕ್ತ
ಶಿರೋಮಣಿ ತಾನಾದನ್ ಗುರವಿಂಗೆ ಕೊನೆವರಂ.
ಅಧಿಕಾಧಿಕ ಬೌದ್ಧಿಕ ಸ್ಥಿತಿಯ ಕರ್ಮರಂಗ
ಅವನಂ ಬಿಗಿದು ಬಂಧಿಸಿತ್ತು ಅತ್ತಿತ್ತಲ್
ಅಲುಗದವೊಲ್. ಕಳೆದುವು ಮುಹೂರ್ತಗಳ್. ಮತ್ತೆ
ಗತಿಸಿದುವು ತಾಸುಗಳ್. ಜನನಿಯಂತ್ರಣ ಕಾರ್ಯ
ಸಾಗಿದುದು ಘನವಾಗಿ. ಪಿಂದೊರ್ಮೆ ಹಿಮಾಲಯ
ಪರ್ವತದ ಪದತಲಕ್ಕೈದು ಅನೇಕ ಹಿರಿಕಿರಿ
ಮಹರ್ಷಿಗಳ ಪರಿಚಯಮಂ ಬೆಳೆಸಿ ಅವರೊಳ್
ನಿತ್ಯ ಸೇವಾವೃತ್ತಿಯಲಿ ನಿಂದು ಧ್ಯಾನಾದಿ
ಭಕ್ತಿ ವೈರಾಗ್ಯಮಂ ಗಳಿಸಿ ಪ್ರಜ್ಞಾನಮಂ
ಪಡೆಯಲುಜ್ಜುಗಿಸಿದ ಮಹಾನ್ ಜ್ಞಾನ ಪಿಪಾಸಿ
ಸ್ಪರ್ಡಿ ಮಹನೀಯಂ! ಮನದಲಿ ಮತ್ತೇನೇನ್
ಹುಗಲಿಲ್ಲದೊಂದು ನಿಯತಿಯೊಳವನ್ ಮುಂಬರೆ
ಎನಿತೆನಿತೊ ಹಗುರಮಾಯಿತ್ತು ಬೃಹದ್ ಸಭೆಯ
ನಿರ್ವಹಣೆಯ ಕಾರ್ಯಗತಿಗೆ. ದಿನನಿತ್ಯ ವರ್ಚಿನ
ಶ್ರೋತೃಗಳ್ ಗಮಿಸುತಿರೆ ಸಕ್ಕರೆಗೆ ಮುತ್ತಬಹ
ಇರುಂಬೆಗಳ ಮಾಳ್ಕೆಯಲಿ ಬಹುಜನ ಮುಂದ್ವೈದರ್
ಸ್ವಯಂ ನಿಯಂತ್ರಣದ ನೌಕರರಾಗಿ. ಇಂತು
ಜನಪ್ರಿಯತೆ ಬೆಳೆದುದು ಸರಾಗದಲಿ. ಮತ್ತಂ
ಧಾರ್ಮಿಕ ಸಂಸ್ಥೆಗಳ್ ಸಜ್ಜನ ಸಂಘಗಳ್ ತಮ್ಮ

ತಮ್ಮ ಸಭೆಗಳಿಗೆ ಆಮಂತ್ರಣವನೀಯುವರ್
ಉಪದೇಶಮಂ ಪಡೆಯೆ. ಇಂತಿಂತು ಸನಾತನ
ಧರ್ಮಜ್ಞಾನದಭಿರುಚಿ ಮುಂಬೆಳೆದು ಘನವೆತ್ತು
ರಾರಾಜಿಸಿದುದು ಆಳರಸರ ಸುರಸುಂದರ
ಸಾಮ್ರಾಜ್ಯದಲಿ. ಕೆಮ್ಮೊಗ್ಗದ ಧರ್ಮವೇತ್ತರುಂ
ನೆರೆದರ್. ಸನಾತನ ಧರ್ಮ ಪಿಪಾಸಿಗಳೈದರ್.
ಹಿಂದೂಧರ್ಮದಾರಾಧಕರ್ ಗಮಿಸಿದರ್. ಗುರು
ಭಕ್ತಜನರ್ ತುಂಬಿದರ್. ಶ್ರದ್ಧಾವಂತ ಸ್ತ್ರೀ
ಕುಲವೆ ಅಧಿಕಮಾಯಿತು ಸಭೆಯಲಿ. ಅನುದಿನವುಂ
ಎಡೆಬಿಡದೊಲ್ ಕಾರ್ಯಕಲಾಪಗಳ್ ರೂಪುಗೊಳೆ
ಬಿಡುವು ದೊರೆಯದಾಯ್ತು ಗುರುದೇವಂಗೆ. ದಿನವುಂ
ನಿಶಾರಾಣಿಯುಂ ತನ್ನ ಸಾಮ್ರಾಜ್ಯಮಂ ಹರಡಿ
ಹಬ್ಬಿಸಿ ಬೆಳಸಿದ ಬಳಿಕಮೆ ಬಿಡುವಿನಂಕವದು
ತನ್ನಯಧ್ಯಾಯಮಂ ತೆರೆದು ವಿಶ್ರಾಂತಿಯಂ
ಬಲವಂದು ಕರುಣಿಸುವೊಡೆ. ಸ್ವಾಮಿಜಿ ರಾತ್ರಿಯ
ಏಕಾಂತ ಪ್ರಾರ್ಥನೆಯನುಂ ಸಲಿಸುವರ್ ತಮ್ಮ
ಸೆಜ್ಜೆಯಂ ಏರ್ದು ವಿಶ್ರಾಂತಿಯಂ ಪಡೆವಮುನ್ನ.

"ಅಶೇಷ ಕಲ್ಯಾಣ ಗುಣ
ನಿತ್ಯಾನುಭವ ಸತ್ತನು: ।
ಅಶೇಷ ದೋಷರಹಿತಂ
ಪ್ರಿಯಾತಾಂ ಪುರುಷೋತ್ತಮ: ॥"

ಮೂಡಣದ ಭಿತ್ತಿಯ ತಟಾಂತ ಸೀಮೆಯಂ ಸೀಳಿ
ಬಂದಪುದೊ ಎಂಬವೊಲ್ ಬೆಳ್ಳನೆ ತುಳುಕಿ ಮಿಂಚಿ
ಮೂಡಿದುದು ಮುಂಬೆಳಕಿನ ಬೆಳ್ಳಿಯ ರಸವಾಹಿ.
ಬೆಳಗಿದುದು ಜಗತ್‌ವಲಯ ಹೊಂಬೆಳಕಿನ ದಿವ್ಯ

ಹೊನಲಿನಲಿ ಮಿಂದು ಮಡಿಯುಟ್ಟಂತೆ. ಲಗುಬಗನೆ
ದಿನಚರಿಯನಾರೈದುದು ಲಂಡನ್ ನಗರಿ. ತಮ್ಮ
ಪ್ರಾತ:ವಿಧಿಯಂ ತೀರ್ಚಿದರ್ ಸ್ವಾಮಿ ವಿವೇಕಾ
ನಂದರ್, ಅರುಣಾರುಣನ ಹೊಂದೇರು ಬೆಳ್ಮುಗಿಲ್
ಬೆಟ್ಟವೇರಿ ನಿಂದು ಜಗತ್ ಶಿರೋಮಣಿಯೈಸಿತು
ಪ್ರಫುಲ್ಲ ತೇಜ:ಪುಂಜ ವಜ್ರಗಳ ಮಂಡಲ
ತಾನಾಗಿ. ಪಗಲ್ ಉಜ್ಜಲಿಸಿದುದು ಇಂಗ್ಲೆಂಡ್
ದೇಶೀಯ ರಾಜಧಾನಿ. ಲಂಡನ್ ಪತ್ತನದ
ಸುಜ್ಞಾನ ಮಂಡಲಿಯ ಮಹೋನ್ನತ ಸದಸ್ಯರ
ಪುರುಷು ಮೂಸೆಯಲಿ ಕುದಿಸಿ ಬೆನ್ನಂ
ತಟ್ಟುವಂತೆ. ಅಂದಿನ ಸಭೆಯ ಕಾರ್ಯಕ್ರಮಗಳ್
ನಿರೂಪಿಸಿ ಸ್ವಾಮಿಜಿಯಂ ಕರೆವ ಸಲುವಾಗಿ
ಜ್ಞಾನವೇತ್ತರ್ ಗಮಿಸಿದರ್ ದಿವ್ಯ ಸನ್ನಿಧಿಗೆ.
ಆ ಜನ ಸಮೂಹದ ಉತ್ಸಾಹ ವೆರ್ಚುತಿರೆ
ಗುರುವರಂ ಅದೆ ಮಹಾ ಭವನದೊಳ್ ವೇದಾಂಗ
ಶಿಕ್ಷಣಮಂ ಶಾಲೆಯ ತರಗತಿಗಳೋಪಾದಿಯಲಿ
ಪಾಠಮಂ ಆರಂಭಿಸಿದರ್ ಅನುದಿನಂಗಳ್.
ದಿವ್ಯ ಅಧ್ಯಾಪನದ ಸುವಿಚಾರ ರಸವಾಹಿ
ಕರ್ಣಾಕರ್ಣಿಯಾಗಿ ವಿದ್ಯುಚ್ಛಕ್ತಿಯಂತೆವೊಲ್
ಹಬ್ಬಿ ಹರಡಿತು ಕ್ಷಿಪ್ರಗತಿಯಲಿ ನಗರಿಯಗಲ.
ಅಹ ಪರ್ವುತಿರೆ ಸುವಾರ್ತೆಯ ಪ್ರಳಯ ವೇಳಾ
ಜಲಧಿಯಬ್ಬರಂ ಮೀರುತ್ತುರ್ವರೆಯ ನವ್ವಳಿಪ
ಅಲೆಯಂತೆ. ಎಗಳುಂ ತುಂಬಿ ತುಳುಕುವುದು ಸಭೆ
ಧರ್ಮಜ್ಞಾನ ಪಿಪಾಸಿಗಳಿಂದೆ. ಕೆಲಬರೆಂದರ್,
"ಮಿನ್ನೆ ಭಾರತ ವರಿಷ್ಠರೆನೆ ರಾಜಾರಾಮ

ಮೋಹನ ರಾಯ್ ಮೇಣ್ ಕೇಶವ ಚಂದ್ರಸೇನರ್
ಇದೆ ವೇದಿಕೆಯನೇರಿ ನಲ್ವಾತಿನ ಮಳೆಯಂ
ಕಾರ್ದು ಜಡಿಸುರಿಸಿ 'ಸೈ' ಎನಿಸಿಕೊಂಡ ಭಾರತದ
ಧೀಮಂತ ಸುಪುತ್ರರ್ ಎಂಬುದು ದಿಟ. ತರ್ವಾಯಿ,
ಈ ವೇದಿಯ ಮೇಲೇರಿದ ಭಾರತ ವ್ಯಕ್ತಿಯನೆ
ಸ್ವಾಮಿ ವಿವೇಕಾನಂದರ್ ಮಾತ್ರಮೆ".
ಪಾದ್ರಿಗಳ್
ಇರ್ದರ್ ಜೊತೆಯೊಳ್ ವೇದಿಯಮೇಲೆ. ಸುಜ್ಞಾನ
ವೇತ್ತರಿರ್ದರ್ ನೆರೆಯ ಪೀಠದಲಿ. ಅಂದಿನಾ
ಉಪನ್ಯಾಸವೆನೆ "ಆತ್ಮಜ್ಞಾನ" ಎಂಬುವ ಪರಮ
ವಾಕ್ಪ್ರವಾಹ. ಉನ್ನೆಬರಮಾರುಂ ಕೇಳರಿದ
ವಿಷಯಮಲ್ಲಮದು. ಎಡೆವಿಡದೆ ಹರಿದುದಾ ಉಪ
ನ್ಯಾಸ ಮಾಲೆ, ತಿಳಿನೀರ ಕಿರುಧಾರೆಯ ತೆರದಿ.
"ಜ್ಯೋತಿಷ್ಮತಃ ಪದೋರಕ್ಷ ಧಿಯಾ ಕೃತಾನ್"
ಎಂದೆನುತೆ ಶ್ಲೋಕಾರ್ಥಮಂ ವಿವರಿಸಿ ನುಡಿದರ್
ಮತ್ತೆ ಇಂದಿನೀ ಸಾಹಿತ್ಯ ರಚನೆಯಿಂದಲಿ
ಆಗುತಿಹ ಹಾವಳಿಯ ಬಣ್ಣಿಸಲ್ ಆಗದೆನೆ
ಅನ್ಯಮಲ್ತು. ಈ ಎಲ್ಲ ಗ್ರಂಥಗಳ ರಾಶಿಯ
ಸುರಿದು ಆರಿಸಿದೊಡಮದರಿಂ ಒಂದೇ ಒಂದು
ಯೇಸುಕ್ರಿಸ್ತ ಬುದ್ಧ ರಾಮಕೃಷ್ಣ ಮೊದಲಪ್ಪ
ಮಹಾತ್ಮರ ಕೆಲವೇ ಕೆಲವು ವಚನಗಳ ಮುಂತೆ
ನಿಲ್ಲಲಾರವು ಎನ್ನಲದು ಅನ್ಯಮೇನಲ್ತು,
ಪರ್ಯಾಲೋಚಿಸಿರ್ಪೆ ಮಮ ಆತ್ಮೀಯ ಮಿತ್ರರೇ!

"ಪುರಾಣ ಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಂ ।

ಸಂತ: ಪರೀಕ್ಷ್ಯಾನ್ಯ ತರದ್ಭಜಂತೆ
ಮೂಢ: ಪರತ ಪ್ರತ್ಯಯನೇಯ ಬುದ್ಧಿ: ॥"

ಆಶುಭಾಷಣ ಭೂಷಿತ ಗುರುವರ್ಯನ ಸಭೆಗೆ
ಮನಶಾಂತಿಯಿಂ ದೂರಾಗಿ ಬೇಸರ ಬಲಿತ
ಲಲನೆಯೊರ್ವಳೈತಂದಳ್ ಗೆಳತಿಯೊಡಗೂಡಿ.
ವದನಾರವಿಂದದಲಿ ಘನವೆತ್ತ ಅಶಾಂತಿಯ
ಮುದ್ರೆ. ಪರಿಮ್ಲಾನಮಾದ ಸುನೀಲಿಯ ಕಂಗಳ್.
ಬರ್ದುಕು ಮಣಭಾರಮಿರೆ ಮಂದಗಮನೆ ತಾನೈಸಿ
ಮಂಡಿಸಿದಳ್ ಸಭೆಯಲಿ. ಕತ್ತೆತ್ತಿ ನೋಡಲಾ
ಗುರುವರ್ಯನಂ, ಚಿಕಾಗೋ ನಗರಿಯ ಸರ್ವ
ಧರ್ಮಗಳ ಸಭೆಯೊಳ್ ಅಧ್ವರ್ಯುಎನೆ ಗಂಭೀರ
ತೇಜದಲಿ ವಿಜೃಂಭಿಸಿದ ಶ್ರೀಗುರುವೆಂಬುದಂ
ಗುರುತಿಸಿ ಹರುಷದಿಂದಲಿ ಮನಃಚಿತ್ತಗಳ ಭಾರ
ಇಳಿಸಿದಳ್ ಭಾವನಾಮಯಿ. ಒಡನೆ ಭೇಟಿಗೈಯೆ
ಪ್ರಯತ್ನಿಸಿಯುಂ ಸಫಲತೆಯು ಮೂಡದಾಯಿತ್ತು.
ಮರುದಿನದ ಯತ್ನವುಂ ಫಲಿಸದಿರೆ ಮತ್ತೆ ಮತ್ತೆ
ಐತಂದಳಾ ಸಭೆಗೆ ವಿದ್ಯಾವಿನಯಶೀಲೆ.
ಅಂದಂದಿನ ನಿರಾಶೆಯ ಖಡ್ಗಘತಿಗೆ ಮಣಿಯದೆ
ನಿರಾಸೆಗೊಳದೆ ತಾನೈದಳ್ ಮತ್ತೆ. ಪೆಣ್ಮಣಿಯ
ಸಿರಿ ನಾಮಧೇಯವದು 'ಎಲಿಜಬೆತ್ ಮಾರ್ಗರೆಟ್
ನೋಬಲ್' ಎಂದು. ಸತ್ಕುಲ ಪ್ರಸೂತೆ. ಘನವೆತ್ತ
ವಿದ್ಯಾಭೂಷಣೆ. ಅಧ್ಯಯನ ಮೇಣ್ ಅಧ್ಯಾಪನ
ಇವುಂಗಳಲಿ ನಿರತ ಲಲನಾಮಣಿಯು ಇರುತಿರೆ
ಆವೊಂದು ರುಚಿಸದವೊಲ್ ಅಶಾಂತಿಯ ಬೆಂಕೆಯ
ಕಿಡಿಯಲಿ ಬಿರಿಬೆಂದು ನಲುಗಿ ನೊಂದು ನೀರಾಗಿ

ಗುರುವರನ ಪದ ಸನ್ನಿಧಿಗೆ ಗಮಿಸಿದಾ ಕರ್ಮ
ಶೀಲೆ. ಮತ್ತಂ ಮುಂದೆ ತನ್ನಯಾ ಬದುಕಿನೊಳ್
ಸಾಧನೆ ಗೈವ ಪುರ್ಚು ಅಧಿಕ ಗೊಳ್ಳುತಲಿರ್ದುದು
ದಿನದಿನಂ. ಅಂದೊರ್ಮೆ ಸ್ವಾಮೀಜಿಯಂ ಕಂಡು
ಮಾತಾಡುವ ಸುಯೋಗವೊದವಿದುದು ಅದೃಷ್ಟ
ಪರವಶತೆಯಿಂ. ಆಶು ಭಾಷಣಗಳ ಮೌಕ್ತಿಕ
ಮಣಿಮಾಲೆಯ ಮನಗೊಂಡು ಆನಂದ ಭಾಷ್ಪವ
ಸುರಿಸಿದಳ್ ಹನಿಹನಿಯ್ಯೆಸಿ. ಹೃದಯಹಾರೀ
ಅಭಿನಂದನೆಯಂ ಸಲಿಸುತೆಂದಳ್ "ಸ್ವಾಮೀಜಿ,
ಆನೆನಿತೆನಿತು ಕರ್ಮಚಾರಿಣಿಯಿರುತಿರೆಯುಂ
ಉನ್ನೆಬರಮೆನಗೆ ಮನಶ್ಶಾಂತಿಯುಂ ಲಭಿಸದೆ
ಪರಿತಪಿಸುತಿಹೆನಾಂ ಮನದಲಿ. ಈಗಳ್ ನಿಮ್ಮ
ಪ್ರವಚನಗಳ ಕೇಳರಿದು ಶಾಂತಿ ರಸಧಾರೆ
ಮೊಗೆದುಂಡು ಸಂತೃಪ್ತಿಬಡೆದೆನ್ನೈ ಗುರುವರ್ಯ!
ಎನ್ನಾತ್ಮವಿಂದು ನಿಮ್ಮ ಗುರುತನದಲಿ ಕಂಡ
ಶಾಂತಿ ಸಂಚಯನಮಂ ಮಿನ್ನೆಂದು ಕಂಡಿರದೆ
ಪರಿತಪಿಸುತಲಿರ್ದೆನ್ ಗುರುವೆ! ಮುಂದೆಯುಂ ತವ
ಮಾರ್ಗದರ್ಶನವೇಳ್ಕುಮೆನಗೆ".
"ಆಯಾಯ್ತು, ನೀಂ
ಬಯಸಿದೊಡೆ ನಿನಗಕ್ಕು ಶಾಂತಿಮಂತ್ರ. ಸೋದರಿ,"

"ಸಂಸಾರ ವಿಷವೃಕ್ಷಸ್ಯ
ದ್ವೇ ಫಲೇ ಅಮೃತೋಪಮೇ ।
ಕಾವ್ಯಾಮೃತ ರಸಸ್ವಾದಃ
ಸಲ್ಲಾಪಸಜ್ಜನೈಃ ಸಹ ॥"

ಗುರುವರಂ ಭಾವನಾ ಲೋಕದಲಿ ಮುಳುಂಗಿರೆ

ತಮ್ಮನ್ನೆ ಅಥ ಪುರಾಣೇತಿ ತತ್ವವನ್ನೇ
ಪ್ರತಿಪಾದನೆ ಗೈವರೆಂಬುದದು ಅಪವಾದ
ಎಂಬೊಡೇಂ ಅಲ್ಲಗಳೆಯಲ್ ಸಲ್ಲ. "**ಸಮಸ್ತ
ಲೋಕಾ: ಸುಖಿನೋ ಭವಂತು**" ಎಂಬುದರ
ಗುರಿಯೊಂದೆ ಪ್ರವಚನಗಳ ಸಂಯೋಜನೆಗೆ ನೆರೆ
ಪುರುಪು. ಆ ಭಾಸಮಾನ ಸಭೆಯಲಿ ನೆರೆದಿರ್ದ
ಬಹುತರದ ವಿದ್ವನ್ಮಣಿಗಳ ಬೆಳ್ಮೊಗಗಳಲ್ಲಿ
ಅಲೆಯಲೆಯಾಗಿ ಹರಿವ ಭಾವನಾಲಹರಿಯದು
ಆಂತರಂಗಿಕ ವಿಚಾರವಾಹಿಗೆ ದರ್ಪಣವ
ಹಿಡಿದವೊಲೆಸೆವುದು ಸೂಕ್ಷ್ಮ ದೃಷ್ಟಿಯ ವೀಕ್ಷಣೆಗೆ.
ಚಂದನದ ದ್ರುಮದವೊಲ್ ಎತ್ತರದ ಕಾಂಚನ
ಕಾಂತಿಯ ಸುಸುಂದರ ಸುರಮ್ಯ ಬೊಂಬೆಯ ತೆರದಿ
ಸಭೆಗೈದ ಗುರುವಂ ಎಲಿಜಬೆತ್ ಮಾರ್ಗರೆಟ್ ನೆಟ್ಟ
ಕಣ್ಣಾಗಿ ನೋಡೆ ಮೈಯೆಲ್ಲ ಮನವೆನೆ ಭಕ್ತಿ
ಗೌರವಗಳ್ ತುಂಬಿ ತುಳುಕಿದುವು. ಅಲ್ಲಿಂದ
ಕಣ್ಮನಂ ಕೀಲಿಸದೆ ತಲ್ಲೀನಳಾದಳಾ
ನಾರೀಮಣಿ, ಎಲಿಜಬೆತ್ ಮಾರ್ಗರೆಟ್ ನೋಬಲ್.
ಗುರುದೇವನ ಶ್ರೀಕಂಠದುಲಿ ಹರಿಯಿತು "ಕೇಳಿ,
ಭಗವದ್ಭಕ್ತರೇ, ಪ್ರತಿಯೊಂದು ಆತ್ಮದಲಿಯುಂ ದಿವ್ಯ
ಅನಂತಾನಂತ ಶಕ್ತಿ ಅಡಗಿಹುದು ಎಂಬುವ
ಶ್ರದ್ಧೆ ಉಕ್ಕೇರುತಿರಲಿ ಸದಾ. ಇಡೀ ರಾಷ್ಟ್ರಮಂ
ನೀವ್ ಚೈತನ್ಯಶ್ರೀಮಯಗೊಳಿಸಬಲ್ಲಿರಿಮ್.
ಸೃಜನ ಶಕ್ತಿಯು ಬೆಳೆದು ಬಲಿತು ಶರೀರಮಂ
ಆವರಿಸಿತು ಎಂದೆಸಲ್ ಭಗವತ್ಪ್ರಾಪ್ತಿಯೆ ಸೈ!
ಎಂಬುದನು ವೇದಗಳ್ ಉಲಿವ ದೃಢೀಕರಣ

ಅಥ ದಿವ್ಯ ಸಾರಾಂಶ.”
ಅವರ ಅಮೋಘತರ
ಉಪನ್ಯಾಸಗಳ ಮಾಲೆಯಲಿ ವೇದದ ಗಭೀರ
ವೀರ ಘೋಷದ ವೈಖರಿಯಲಿ ಸರ್ವತ್ರ ವರ
ಜ್ಞಾನಿಗಳನುಂ ಮೂರ್ಖರಂ ಏಕ ಚಕ್ರಪಥ
ಹಿಡಿಸಿ ದೈವತ್ವಕೇರಿಸುವ ಪ್ರಯತ್ನಮಂ
ಏಕಮನದಿಂ ತದೇಕ ಚಿತ್ತದಿಂ ಗ್ರಹಿಸುತೆ
ಅಕ್ಕರಕ್ಕರದ ಸಾರಸರ್ವಸ್ವವನುಂಡು
ಹೃನ್ಮನಂ ತುಂಬಿದಳ್ ಪ್ರಜ್ಞಾನ ಪಿಪಾಸಿನಿ
ಮಿಸ್ ಮಾರ್ಗರೆಟ್ ನೋಬಲ್. ಅನುಭವ ಘನಿಸಿತು
ಸುವಿದ್ಯಾ ಸುಸಂಪನ್ನ ಸುಂದರಿ ತಾನೈಸಿದ
ಪರಮ ಕನ್ಯೆಯ ಜ್ಞಾನದೈಸಿರಿಯಲಿ. ವೇದಾಂಗ
ಕೀಲಿಸಿತು ಮನದಾಳದಲಿ. ಸನಾತನಧರ್ಮ
ಕೀಲಿಸಿತು ನೆತ್ತರ ಕಣಕಣದಲಿ. ಎದೆಯುಸಿರ್
ಕೀಲಿಸಿತು ಶಾಂತಿರಸಕೆ. ಚಿತ್ತವು ಕೀಲಿಸಿತು
ದೈವತ್ವದೆಡೆಗೆ. ಭಾವಕಲ್ಪವು ಕೀಲಿಸಿತು
ಮನೋದಧಿಗೆ. ಕಾಲ್ ಕೀಲಿಸಿತು ಸಭಾ ಭವನ
ಪಥಕೆ. ಚಲನವಲನ ಕೀಲಿಸಿತು ಕೀಲ್ಗೊಂಬೆಯ
ತೆರದಿ ಭಾರತತ್ವಕ್ಕೆ. ಅನುದಿನ ಪ್ರತಿದಿನ
ವಿಚಾರಾತ್ಮಕ ದಿವ್ಯವಾಹಿನಿಯಲಿ ಮುಳುಂಗಿ
ಹಿಂದೂ ಯೋಗಿಯ ಪದತಲದಲಿ ಸತ್ಯದ ಸ್ವಚ್ಛ
ಕಿರಣಗಳಿಗಾಗಿ ಅರಸುವಳ್ ಅಂತರಾತ್ಮನ
ಸಂತೃಪ್ತಿಯಂ ಬಯಸಿ. ಇನ್ನೆಬರಂ ಕ್ರಿಯಾತ್ಮಕ
ಕಾರ್ಯದಿಂ ಶಾಂತಿ ಲಭಿಸದಿರಲ್ ವಿಚಾರಾತ್ಮಕ
ಸಾಹಿತ್ಯದಿಂದಲುಂ ಶಾಂತಿ ದೂರದೂರವೆ.

ನಿತ್ಯ ಅಶಾಂತಿಯ ಅಖಾಡದಲಿ ಹೆಣಗಾಡಿ ಮನ
ನೊಂದು ಮತಿನೊಂದು ಹಿಂದೂ ಸಂಪ್ರದಾಯಕ್ಕೆ
ಮೇಣ್ ಆ ಹಿಂದೂಯೋಗಿಯ ಕರುಣೆಯಾ ಕರೆಗೆ
ಮಾರುವೋದಳಾ ತರುಣಿ ಮಿಸ್ ಎಲಿಜಬೆತ್ ಮಾರ್ಗ
ರೆಟ್ ನೋಬಲ್. ತನ್ನಂ ತಾಂ ಸೈಪಿ ಮಂತ್ರಮುಗ್ಧ
ವಕ್ಷದಾ ಮಹಾಬ್ಧಿಯಂ ಕಡೆಕಡೆದು ಯೋಚಿಸುತ
ವೇದಾಂತ ಜ್ಞಾನವಂ ದ್ರವ್ಯದವೊಲ್ ಪಡೆವುದೆ
ಮನಶಾಂತಿಯ ಪೂರೈಕೆಗೆ ಘನಮಾದಪುದೆಂಬ
ಶ್ರದ್ಧೆಯಿಂ ಸ್ವಾಮಿಜಿಯ ಪ್ರವಚನಗಳಾಳ
ನೀಳಮಂ ಅಳೆದಳೆದು ಮನದುಂಬಿ ಹೃದಯದ
ಹಂಬಲಂ ಪೂರೈಸುವಳ್. ಆ ಗುರುವಿನ ವಿಶ್ವ
ವಿಶಾಲದೃಷ್ಟಿ ಸರ್ವಧರ್ಮ ಸಮನ್ವಯತತ್ತ್ವ
ಸದ್ಗುಣಂಗಳ ಸೌಶೀಲ್ಯತೆ, ಷೋಡಶಕಳೆಗಳ್
ಬೆಳಗುವ ಪರಮ ತೇಜರಾಶಿಯ ಮುಖಬಿಂಬದ
ಮುಂದೆ ಮುಂಗೆತ್ತು ನಿಲ್ವುದೆನೆ ಎದೆಯೊಳ್ ಅಳುಕು.
ಗುರುದೇವನ ಅಸ್ಖಲಿತ ವಾಣಿಯ ರಸಧಾರೆಯ
ಕಲ್ಪವೋತು ಆಲೈಸುವಳ್ ಮೈಮನ ಸುಮಂತ್ರಿತ
ಫಣಿಯಂತೆ ಮರವಟ್ಟು. ವೇದಿಕೆಯ ಮೇಲೆ ಲಘು
ಪದಚಾರಣ ಗೈಯುತೆ ನುಡಿಸಿದರ್ ಸ್ವಾಮಿಜಿ,
"ಜೀವನಮೆಂದೊಡದು ಬ್ರಹ್ಮದ ಒಂದು ತೋರಿಕೆ"
"ಜಡ ಮೇಣ್ ಚೇತನಗಳೆರಡುಂ ಒಂದೇ ಸತ್ಯದ
ಇಕ್ಕೆಲಗಳ್" "ಆತ್ಮನ್ ಜಡ ಚೇತನಾತೀತ
ಎಂಬುದಂ ಘನಾನುಭವದಿಂ ತಿಳಿವುದೆ ಸಿದ್ಧಿ"
"ಮಾಯಾವಾದವುಂ ಆವ ಸಮಸ್ಯೆಯ ಉಪಪತ್ತಿಯು
ಅಲ್ಲ; ಅದು ಸಮಸ್ಯೆ ಸ್ಥಿತಿ ಸೂಚಕ ಸಮಸ್ಯೆ–

ಗಳಿಂಗೆ ಅನುಭವದಿಂ ಅರ್ಥವಂ ಕಲ್ಪಿಸುವುದೆ
ಮಾಯಿಯಂ ಗೆಲ್ವಿಕೆ" "ಸ್ವಾರ್ಥದಿಂ ಸತ್ಯವೆ ಮುಚ್ಚಿ
ಮರೆಯಾಗಿಹುದು" "ವಿಶ್ವವೊಂದು ಪಿರಿಯ ಜೇಡರ
ಬಲೆರುಂತೆ, ಮನಸುಗಳ್ ಅಲ್ಲಲ್ಲಿಹ ಜೇಡರ
ಹುಳಗಳ್. ಏಕೆನಲ್, ಮನಸ್ಸು ಭಿನ್ನಭಿನ್ನಗಡ"
ಶ್ರೋತೃಗಳ್ ಮಂತ್ರಿತ ಫಣಿಯವೊಲ್ ಸುಮುಗ್ಧತೆಯ
ವಶೀಭೂತರಾದರ್; ಉಸಿರಿಲ್ಲ. ಸೊಲ್ಲಿಲ್ಲ;
ವಿವೇಕಾಮೃತ ಸಾರವಂ ತನುಮನಗಳ್ ದುಂಬಿ.
ಮತ್ರತಂತ್ರ ಮುಗ್ಧಿತ ಫಣಿಗಳ ಮಾಳ್ಕೆಯಲಿ.
  ಧೀಮಂತ ಧರ್ಮ ಪ್ರಭು ಯುಗಪ್ರವರ್ತಕ
ಭರತದ ಚಾರುಧೀರ ಯೋಗೀಶ್ವರನ ನೆನೆ
ಮನವೆ! ಸರ್ವಧರ್ಮ ಪ್ರವರ್ತಕನಂ ನೆನೆ
ಮನವೆ! ಲೋಕಕಲ್ಯಾಣಾರ್ಥ ಉಜ್ವಲೋಜ್ವಲ
ದಾರಿ ದೀವಿಗೆಯಂ ಬೆಳಗಿದ ರಿಸಿ ಕುಲಜನಂ
ನೆನೆ ಮನವೆ! ಲೋಕದೆದುರ್ ನಿಂತು ಧೈರ್ಯದಿಂ
ವಿಜಯ ಕೇತನವ ಹಾರಿಸಿದ ಯುಗ ಶ್ರೇಷ್ಠನಂ
ನೆನೆ ಮನವೆ! ಶ್ರೀರಾಮ ಕೃಷ್ಣರಾ ಆತ್ಮ ಜ್ಯೋ
ತಿಯೆ ತಾನಾದ ದಿವ್ಯ ಚೇತನವಂ ನೆನೆ
ಮನವೆ! ನಿತ್ಯ ಪ್ರಾತಃಸ್ಮರಣೀಯ ಧರ್ಮವಿದ
ಗುರುದೇವನಂ ನೆನೆಮನವೆ! ಆಪನಿತು ನೆನೆ ಮನವೆ!
  ಪಗಲಿನ ಬಿಳಿಗಾಲಿಯುರುಳಿರಲ್ ನಿಶಿಯ ಕರ್ಪು
ತೆರೆ ಹರಡಿತು ಇಡಿ ಇಳೆಯ ಮೇಲೆ. ಗುರುವರ್ಯ
ರಾತ್ರಿಯ ಸುವಿಶ್ರಾಂತಿಗೆ ಶರಣೆಂದು ಬೆಳ್ಳನೆ
ಬೆಳ್ಮಡಿಯ ಸೆಜ್ಜೆಯಂ ಸೇರಿದರ್. ಕಾಲ್ಚಾಚಿ
ಮಲಗುವ ಮೊದಲ್ ಪ್ರಾರ್ಥನಾ ಶ್ಲೋಕ

ಹರಿದುದು ಎದೆಯ ಕುಂಡಲಿಯಿಂದ ಭಕ್ತಿಯಿಂ,

"ಕೃಷ್ಣಾಯ ಯಾದವೇಂದ್ರಾಯ
ಜ್ಞಾನ ಮುದ್ರಾಯ ಯೋಗಿನೇ ।
ನಾಥಾಯ ರುಕ್ಮಿಣೇಶಾಯ
ನಮೋ ವೇದಾಂತ ವೇದಿನೇ ॥"

ತಣ್ಣಗೆ ಕಳಿದುದು ತನಿಯೂಡುತ ನಿಶ್ಯಬ್ದತಾ
ರುಂದ್ರ ರಾತ್ರಿ. ಅಭಿಜಿನ್ ಮುಹೂರ್ತದೊಳ್ ನಿದ್ದೆಯುಂ
ಹರಿದು ಮೊಬ್ಬುಕಳೆಯೆ ಕಣ್ತೆರೆದರ್ ಗುರುವರ್ಯರ್ಂ.
ಅದೇನಚ್ಚರಿಯೊ ಎಂಬವೊಲ್ ಕಡು ಕತ್ತಲೆಯ
ಮಧ್ಯೆ ಮಿಸುನಿಯೆಳೆಯಂತೆ ಮಿನುಮಿನುಗುವ ಕಿರಣ
ಧಾರೆ! ಒಂದೇ ಒಂದೆಳೆಯೆಲ್ಲಿಂದ್ಯೆದುದೆಂದು
ನೋಡೆ, ಅಚ್ಚರಿಯ ನಿಟ್ಟೋಟಕೆಸೆದುದು ಕೊಠಡಿಯ
ಮೇಲಿನೆತ್ತರದ ಬೆಳಕಿಂಡಿಯಿಂ ನೇರವಾಗಿ
ಹರಿದು ಬಂದಿರ್ದ ಆ ಕಿರಣಧಾರೆ! ಅರುಣಂ
ಮೂಡದಿರಲೆಲ್ಲಿಯ ಕಿರಣಮೆಂಬಚ್ಚರಿಯ ರಸ
ಬೋಂಕನಾಕ್ರಮಿಸಿತು ಮನಮತಿಯಂ. ಅತ್ತಲೇ
ನೆಟ್ಟ ನೋಟಮುಂ ಚಲಿಸದೆ ನೋಡೆ ಎತ್ತರದ
ಕಿಟಿಕಿಯಲಿ ಕುಳಿತಿತ್ತಲ್ ನಿಟ್ಟಿಸಿ ನೋಡುತಿದೆ
ದೇವ ಗರುಡ ಪಕ್ಷಿ! ಅದರ ಕೆಂಗಣ್ಣ ಹರಳಿಂ
ಹರಿದತ್ತು ಆ ಚೆಂಬಳಕಿನ ಛವಿಯ ಕಿರುಧಾರೆ!
ಕೆಂಪು ಕರ್ಪು ಬಿಣ್ಪುಗಳ ವರ್ಣ ಮಿಶ್ರಿತಮಾದ
ಸುಸುಂದರ ಮನೋಹರ ಪಕ್ಷಿ ಕಿಟಿಕಿಯ ಚಿಣ್ಣ
ಕಿಂಡಿಯಲಿ ಕೊರಳಾನಿಸಿ ನೋಡುತಿದೆ! ಕೆಂಚಿನ
ಕಂಗಳ ಪರಮ ದೃಷ್ಟಿಧಾರೆಯಂ ಹರಿಸಿ. ಆ
ಪಕ್ಷಿಯಂ ಕಂಡು ಪೊರಗೈದು ನೋಡಲ್ ಪಕ್ಷಿಯುಂ

ಎರೆಂಕೆಗಳ್ ಬೀಸುತ್ತೆ ತಟ್ಟನೆ ಪಾರ್ವುದುದೈ
ತಲೆಯ ಮೇಲೆ ಭರ್ರನೆ ಬಿಸುಗಾಳಿಯಂ ಬೀಸಿ.
ಅವಾವ ಶುಭಾಶೀರ್ವಾದವೊ ಎನಿಸಿತು ಗುರು
ವಿವೇಕಾನಂದರಿಂಗೆ. ಅಹ ಎನಿತೆನಿತು ಮನಕೆ
ಆಪ್ಯಾಯಮಾನವೊ ಗುರುಮಾತೆಯ ಹಾರೈಕೆಯು
ಲಭಿಸಿದವೊಲ್ ಮುದದಿಂ. ತಣಿದುದು ಹೃದಯಧಾತ್ರಿ

ಡಾ॥ ಸ್ಟ್ರೀಟ್ ಎಂಬ ಮಹನೀಯ ಘನತರ ವಿದ್ಯೆ
ಬುದ್ಧಿಗಳಲಿ ನುರಿತು ಕಲಿತು ಬಲಿತ ವಿದ್ವಾಂಸ.
ಗುರುದೇವನ ಸನ್ನಿಧಿಯಲಿ ಕಳೆದುದೆನಿತೊ ದಿನ
ಮಾನಂ ಬಹುಲ ಶಿಷ್ಯಗಣ ಸಮುದಯದಲಿ. ಅನು
ದಿನಂ ಭಕ್ತಿಭಾವ ಬಲಿತು ಕೇಳಿದನವನೊರ್ಮೆ
ಗುರುದೇವನಂ "ಗುರುವೆ, ಇನ್ನಾಂ ತವ ಪಾದದ
ಸನ್ನಿಧಿಯೊಳ್ ದೀಕ್ಷಾವ್ರತಮಂ ಪಡೆಯುವೊಡೆ
ಇಚ್ಛಿಸಿಹೆನ್ ಕೃಪೆಗೈದೆನಗೆ ದೀಕ್ಷೆಯನಿತ್ತು
ಪುನೀತನನುಗೊಳಿಸಿಮೆಂದು ಬೇಡುವೆನ್ನೈ ನಿಮ್ಮ!"
ಡಾ॥ ಸ್ಟ್ರೀಟ್ ಮನದಾಸೆ ಫಲಿಸಿ ಫಲಪ್ರದವಾಯ್ತು.
ಗುರುವರಂ ತೋಷದಿಂ ಪ್ರೀತಿಯಿಂ ಹರಸಿದರ್
ದೀಕ್ಷೆಯಂ ಪ್ರದಾನಗೈದು. ಒಡನೊಡನೆ ಯುವ
ಶ್ರೇಷ್ಠರ್ ಕೆಲರ್ ಪುರುಪಿನಿಂ ಭಕ್ತಿಪರವಶ
ಭಾವದಿಂ ಮುಂದೈದು ಸ್ವಾಮಿಜಿಯಂ ಬೇಳ್ದು
ಶಿಷ್ಯತ್ವವನೊಪ್ಪುತೆ ದೀಕ್ಷೆಯಂ ಪಡೆದು ಯಶಃ
ಕಾವ್ಯಕೆ ಬರೆದರ್ ಪೀಠಿಕೆಯನಮೃತ ಕರದಿಂ.
ಪ್ರಜ್ಞಾನ ರಸಾಮೃತಮಂ ಕೂಡಿದುದು ಸರಳ
ಸುಜ್ಞಾನ ಸಲಿಲ ಸಾರವತ್ತಾಗಿ.

ದಿನದಿನಂ.

ಸ್ವಾಮಿಜಿಯ ಕೀರ್ತಿಯ ಪರಿಮಳಂ ಹರಡಿದುದು
ಸುವಾರ್ತೆಯ ನೇಮದಲಿ ಲಂಡನ್ ನಗರಿಯಗಲಂ.
ಸದಾ ತುಂತುರು ತುಂತುರು ತುಂತುರೈಸಿ ಸುರಿದಿಹ
ತುಂತುರು ಮಳೆಯ ಹೂ ಸರಿ ಸುರಿದು ಸುರಿದು ಮುಗಿಲ್
ಮೋಡಗಳ್ ಬೇಸತ್ತು ಸೋಲ್ದು ಸೊರಗಿದುವೊ ಎನೆ
ನಿಂತುದೊಯ್ಯನೆ ಕೊರಳೊತ್ತಿ ಕಿಮುಳ್ಚಿದ ತೆರಂ.
ಹೂಮಳೆಯ ಹಗರಣ ನೆರೆ ವಿಜೃಂಭಿಸಿದತ್ತು
ಆರೇಳು ದಿವಸಗಳ ಯಜ್ಞಕಾರ್ಯಹೂಡಿತ್ತೊ ಎಂಬ
ನೇಮದಲಿ; ಕಳೆದುವಾ ದಿನಗಳ್ ವರ ಮಂಗಳ
ಸ್ನಾನದಾ ಲೋಲುಪ್ತಿಯಲಿ. ಚಳಿಯ ಕಟುತರದ
ಹಿಂಸೆಯಂ ತಾಳದಾಯಿತ್ತು ಸ್ವಾಮಿಜಿಯ ಜೀವ.
ವಾರವೊಂದು ಕಳಿದುದು ಬಿಡದಿಯಲಿಯೆ. ಪರಿಜನ
ಭಕ್ತಜನ ಮಾತ್ರಮೆ ಇರ್ದರ್ ಜೊತೆಗೆ. ಅಂತು,
ಕಳಿಯಿತಾ ತುಂತುರು ಮಳೆಯ ಕಾಲಮಾನಂ, ತನು
ಮನಗಳಿಗೆ ಅಂಟಿದ ಚಳಿ ಬಾಧೆಯ ಪಿಂದೊತ್ತಿ.
ಹೂವಿಸಿಲ್ ಹರಿಯಿತು ನಸು ಬೆಚ್ಚನೆ ಮುದ್ದಿಟ್ಟು.
ಅರುಣಾರುಣಂ ಮುಗಿಲ್ವೊಟ್ಟೆಯ ತೆರೆಯ ಹೊರೆಯ
ಮರೆಯಲಿ ಹುಗಿದು ತಾನಿರುತಿರ್ದಂ ಕಣ್ಮರೆಯ
ಆಟದಲಿ ನೆರೆ ಮುಳುಗಿ. ರವಿ ಇರ್ಪನೊ ಇಲ್ಲವೊ
ಎಂಬವೊಲ್ ಹೂವಿಸಿಲಿಂಗೆ ಲಭಿಸದು ಆಧಾರಂ.
ದಿವ್ಯ ದೃಶ್ಯಾದೃಶ್ಯ ಸಂದೃಶ್ಯಮಾನಮಾ
ಬಾಂದಳದ ವೈಭವಿಕ ಕಲಾಕಲೆಯ ಕ್ಷೇತ್ರದಿ.
ಮಂಜು ಮುಗಿಲ್ ಕ್ಷಣಕ್ಷಣಕೆ ಭವ್ಯಾದಮ್ಯ
ಭೀಮ ಭೀಷಣ ರೂಪಿನಲಿ ಹರಿಯುತೆ ಮುಂಮುಂ
ಚಲಿಸಿ ಚಲಿಸಿ ರವಿಕಿರಣಗಳಿಗೆ ಮಾರೊಡ್ಡಿ ಬಲ್

ಠೀವಿಯಲಿ ಜೃಂಭಿಸಿದುವು ಅಗಲಗಲ ಬಾನಗಲ.
ಆಶ್ವೀಜದಾದಿಯೊಳ್ ದಿವ್ಯಮಾ ವರುಣ ದಿಗ್
ವೇದಿಯಲಿ ರಂಜಿಸಿತು ಸಾಯಂ ಸಮಯಂ. ರವಿ
ಪಾದ ವೀಥಿಯೊಳ್ ಪುಂಜೀಭೂತ ತರತರದ
ಬೃಹಜ್ಜೀಮೂತದೊಡ್ಡುಗಳ್ ಬಂಡೆಳ್ದು ಬರೆ
ಓಳಿಗೊಂಡು ಅರುಣನ ಕಿರಣಂಗಳಿಗೆ ಹರವಾದ
ತಾವಿಲ್ಲ. ನುರ್ಗಿ ಬರೆ ನಿಡಿದಾದ ಎಡೆಯಿಲ್ಲ.
ರವಿಯಿರ್ದು ಇಲ್ಲದ ಪರಿಯೊಳಾಯ್ತು ನತದೃಷ್ಟ
ಲಂಡನ್ನಿನ ಪ್ರಜಾಸಮೂಹಕೆ. ಪೆರ್ಗಾಳಿ
ಇನಿಗಾಳಿ ಚಳಿಗಾಳಿ ಬೋರ್ಗಾಳಿ ಮಾರ್ಗಾಳಿ
ಕುಳಿರ್ಗಾಳಿ ಎಲ್ಲವಗೆಯ ಗಾಳಿಯಾನದಿಂ,
ಮಳೆ ನಿಲ್ದೊಡಂ ಚಳಿಯ ಅಂಕ ಮುಗಿಯದಾಯಿತು.
ನಾಳನಾಳಗಳುಂ ನಡುಗಿ ನಡುಗಿ ಮುದುಡುವೊಲ್
ಭೀಕರ ಚಳಿಯ ಘಾತದಿಂ ಅಗ್ಗಿಷ್ಟಿಕೆಯೆದುರು
ಕಳಿದುವು ಗಳಿಗೆಗಳಿಗೆಗಳ್. ಈವಗೆಯಲಿ ಪಗಲ್
ಮೇಣೊಂದಿರುಳ್ ಕಳಿಯಿತು ಮನಕೆ ಬೇಸರವೂಡಿ.
ಮಾರನೆಯ ದಿವಸಾವತಾರದಲಿ ಮುಗಿಲ್ಮಂಜು
ಹರಿದು ಅರುಣಾರುಣಂ ಉಜ್ಜಲೋಜ್ವಲಿಸುತ್ತೆ
ಮೆರೆದನಂದಿನ ಮಾಳ್ಕೆಯಲಿ. ಗುರುದೇವನುಂ
ಪೊರಗೈದು ಪ್ರಾಂಗಣದೊಳ್ ನಿಂದರ್ ಬೆಚ್ಚನೆಯ
ಚೆಂಬಸಿಲಿಗೆ ಮೈಗೊಟ್ಟು. ನಿನ್ನೆಮೊನ್ನೆಗಳ ಚಳಿ
ಗಾಳಿಯಬ್ಬರ ದೂರದೂರಮಾದತ್ತು. ಪಿರಿ
ಮರಂಗಳ ಎಲೆ ಎಲೆಗಳ ನಡುನಡುವೆ ನುಸುಳಿಬಹ
ರವಿಕಿರಣ ಮಾಲೆಗಳ್ ಚೆಂಬಲೆಯ ನೆಯ್ದಿತ್ತು. ಚೆಂದದಿಂ
ಮೆರೆದಿತ್ತು. ನೋನೋಡುತೆ ನಿಂದಿರುತಿರೆ ಸ್ವಾಮಿ

ವಿವೇಕಾನಂದರ್ ಹೆಮ್ಮರದ ಕುಡಿಯೆಲೆಗಳ
ಗೊಂಚಲಿನ ಕುಚ್ಚೊಂದು ದೊಪ್ಪನೆಯ ಬಿಳ್ದುದಯ್
ತಲೆಯಮೇಲೆ ಮಿಡಿಮೊಗ್ಗು ಹೂಗಳ ಸಹಿತ. ಅದು
ದೇವಗಂಧರ್ವರ ಸೃಷ್ಟಿವೃಷ್ಟಿಯೊ ಎಂದೆನಲ್
ಹಿತವಾಯ್ತು ಹೃನ್ಮನಗಳಿಂಗೆ. ಸ್ವಾಮಿಜಿಯುಂ
ತಲೆಯೆತ್ತಿ ನೋಡಿದರ್. ನಭೋದೇಶಂ ಸ್ವಚ್ಛ
ನೀಲವರ್ಣಾಂತು ನಳನಳಿಸುತಿರ್ದುದು ತನಗೆ
ಎಣೆಯಿಲ್ಲದವೊಲ್. ಬೆಳ್ಮುಗಿಲ್ ಶಿಶುಗಳ್ ತೇಲಿ
ತೇಲಾಡಿ ಸಂಮೋದದಿಂ ನಲಿಯುತಿವೆ ಅಂದ
ಚೆಂದದಿಂ ಬೆಳ್ಳಿಯ ಪದರಂಗಳ ಹೋಲಿ! ಆ
ಸ್ವಚ್ಛ ಪರಿಶುಭ್ರ ನೀಲಾಕಾಶಮೆಸೆದತ್ತು
ಕಣ್ಮನಗಳಿಗೆ ಹಿತವಾಗಿ. ಲೋಕೋತ್ತರವಾಗಿ.

ಹರಿಃ ಓಂ ತತ್ ಸತ್

❋ ❋

ತ್ರಿಶತತೋಲ್ಲಾಸಂ

ಪ್ರಜ್ಞಾನಂ ಬ್ರಹ್ಮ

"ಶ್ರೀಮತ್ಪರಂ ಬ್ರಹ್ಮ ಗುರುಂ ಸ್ಮರಾಮಿ
ಶ್ರೀಮತ್ಪರಂ ಬ್ರಹ್ಮ ಗುರುಂ ಭಜಾಮಿ ।
ಶ್ರೀಮತ್ಪರಂ ಬ್ರಹ್ಮ ಗುರುಂ ವಿದಾಮಿ
ಶ್ರೀಮತ್ಪರಂ ಬ್ರಹ್ಮ ಗುರುಂ ನಮಾಮಿ ॥"

ಬಿಡುವಿನಿತಿರದ ದುಡಿತದಿಂ ಜೀವ ಬಳಲುತಿರೆ
ಅನಿತಿನಿತು ವಿಶ್ರಾಂತಿಯಂ ಪಡೆವ ಅಗತ್ಯದ
ಬೆದರುಬೊಂಬೆ ಎದುರ್ವೆತ್ತು ನಿಂದುದು ಗುರುವರನ
ಮುಂತೆ; ಆಗಳಾ ಗುರುವರ್ಯ ಮಿಸ್॥ ಮುಲ್ಲರ್
ಮಿಸ್॥ ಎಲಿಜಿಬೆತ್ ಮಾರ್ಗರೆಟ್ ಡಾ॥ ಸ್ಟ್ರೀಟ್
ಮುಂತಪ್ಪ ಸಂಗಡಿಗರೊಡಗೂಡಿ ದೂರಸ್ಥಿತ
ಗ್ರಾಮೀಣ ಪ್ರದೇಶಗಳಕಡೆ ಪಯಣಂಬೋದು
ಶಾಂತಿ ವಿಶ್ರಾಂತಿಗಳನಾರೈದು ಮನಮತಿಗಳ್
ತುಂಬಿ ಮೈಭಾರಮಂ ಕಳಿವರ್ ತನುಮನಗಳ್
ಹಗುರವಾಗುವತನಕ. ಆದೊಡೇಂ ಅನುದಿನಂ
ದೊರಕದಾಯ್ತು ಪರಿಭ್ರಮಣದ ವಿಶ್ರಾಂತಿಯದು
ಸರಾಗದಲಿ. ಶ್ರೋತೃಗಳ್ ಪೆರ್ಚುತಿರೆ ದಿನದಿನ
ಬಲೂ ಪ್ರಯಾಸ ಬಿಡುವುಪಡೆಯೆ ಗುರುವರಂಗೆ.
ನ್ಯೂಯಾರ್ಕ್ ಮಿತ್ರ ಗುರುಭಾಯಿಗಳ ಮತ್ತಮಾ
ಸಂಯೋಜಕ ಮಂಡಳಿಯ ಪತ್ರೋಲೆಯೈದುವು,
ಮೇಲಿಂದ ಮೇಲೆ ಬಲ್ಮೆ ಒಲ್ಮೆಗಳ್ದುಂಬಿದ
ದಿವ್ಯ ಕಟ್ಬೊತ್ತಾಯಮಂ ಹೇರಿ. ಅಂದಿನಿಂ
ಧರ್ಮಕಾರ್ಯ ನಿರತರಿರುತಿರ್ದು ಮುಂದೆಸಾಗದೆ

ದಯನೀಯ ಸ್ಥಿತಿಯೊಳ್ ಬೇಡಿದಪರ್ ತಮ್ಮಯ
ಪ್ರಜ್ಞಾನ ಬ್ರಹ್ಮನಂ. ತಾವಲ್ಲಿ ಬಿತ್ತಿರ್ದ
ವೇದವೇದಾಂತಗಳ ಬೀಜವದು ಮೊಳೆತುಕುಡಿ
ಒಡೆದು ಸಸಿಯಾಗಿರಲ್ ಮುಂಕಾರ್ಯಮಂ ತಾಮೆ
ತಳುವಲಹುದೆ? ತಮ್ಮೊಳ್ ಯೋಚಿಸಿದ ಗುರುವರಂ
ನ್ಯೂಯಾರ್ಕ್ ನಗರಕ್ಕೆ ಪೋಗಿಬರೆ ಅಣಿಗೊಂಡರ್.
ಮನದೊಳ್ ತವಕ. ಎದೆಯೊಳ್ ತವಕ. ಮತ್ತೆ
ತೀವ್ರಕಾರ್ಯಗತಿಗೆ ಶರಣಾಗುವೊಡೆ ತವಕ.
ಹಗುರವಾದ ಮನೋಗತಿಗೆ ಆತುರಾತುರಂ
ಸುಳಿಸುತ್ತಿತು ಮುಂಗಟ್ಟು ಬಿಗಿದಂತೆ.
ಬೋಸ್ಟನ್
ನಗರಿಯಲಿ ಬೌದ್ಧಿಕಸ್ತರದೊಳುದಿಸಿದ ಜ್ಞಾನ
ಸಂಪನ್ನೆಯಾದ ಶ್ರೀಮಂತ ಮಹಿಳಾಮಣಿಯು
ಆಧ್ಯಾತ್ಮ ಧರ್ಮದ ಸಸಿಯ ಬೆಳವಣಿಗೆಗಾಗಿ
ತೋಷದಿಂದುರ್ಬಿ ಮನಮೆಚ್ಚಿ ಹೃದಯಮೆಚ್ಚಿ
ತನ್ನ ಹೃತ್ ಕುಂಡದೈಶ್ವರ್ಯಮಂ ಸುರಿವಂತೆ,
ಅಪಾರತಮ ಸಂಪತ್ತಿನ ಕೋಂಟೆಯಂ ಒಡೆದು
ಸುರಿವೊಲ್ ಅದ್ಭುತ ನಿಧಿಯ ಥೈಲಿಯಂ ನೀಡಿದಳ್
ಆಧ್ಯಾತ್ಮ ಸಂಘಕೆ. ಅದರ ಸದ್ವಿನಿಯೋಗದ
ವಿಷಯ ಕುರಿತು ನಿರ್ಣಯಿಸುವೊಡೆ ಗುರುವರನಿರದೆ
ಸಾಗದಾಯ್ತು ಅಲ್ಲಿನ ಆಧ್ಯಾತ್ಮ ಸಂಘಿಗರಿಗೆ.
ಇತ್ತಲಿತ್ತಲ್, ಇದೀಗಾಗಳೆ ಕಳಿಪಲಿಚ್ಚೆ
ಪಡದ ಲಂಡನಿಗರಿಂಗೆ ನಯದಿಂ ನಲ್ನುಡಿಯ
ಮೋಡಿಯಿಂ ಸಮಾಧಾನಗೊಳಿಸಿ ಬಲು ಬೇಗನೆ
ಪಿಮ್ಮಗಳಿ ಬಂದಪೆನ್ ಎಂದೆಂದು ತೀವ್ರತರದಲಿ

ಸಮಾಧಾನ ಪಡಿಸಿದರ್ ಅಸಮಾಧಾನಿಗಳಿಗೆ.
ಬಳಿಕಂ ಸ್ವಾಮೀಜಿ ಅಸವಸದ ಪಯಣ ಕ್ರಮ
ಕೈಗೂಡಿತು. ಗೆಳೆಯ ವೃಂದಂ ಗೌರವಾದರಗಳ
ಬೀಳ್ಕೊಡಿಗೆಯನಿತ್ತರ್. ಎಲ್ಲರೊಗ್ಗಿನಿಂದಲಿ.
ಜಹಜು ಬಂದರಂ ಬಿಟ್ಟು ಪೊರಮಟ್ಟಿತು ಶಿಳ್ಳೆ
ಊದಿ. ಮುಂಬಯಣವದು ಸಾಗಿದುದು ಚಂಡ
ಪ್ರಚಂಡ ಅಲೆಗಳೋಳಿಯಮೇಲೆ ಏರಿಳಿದು.
ಜಲರಾಶಿಯಲಿ ಮಿನುಮಿನುಗುವ ಮಿಂಗಳರಾಶಿ
ಚೆಂಬಿಸಿಲ್ ಮೋಹದಾಸೆಯಲಿ ಮೇಲೆ ಮೇಲೆಯೆ
ತೇಲಾಡುತಿರೆ ಕಂಡುವು ಸುಂದರ ರೂಪಿನಲಿ.
ಬಗೆಬಗೆಯ ಮೀನುಗಳ ಸಂದೋಹ ಮುಲಮುಲನೆ
ಮುಲುಗುಡಿಯುತಿರೆ ತರತರದ ಜಲಚರಗಳೊಡನೆ
ಮುಳುಗಾಡಿ ಮಿಂಚಿನೊಲ್ ಮಿಂಚುತಿರ್ದುವು ನೋಳ್ಪ
ನೋಟಮಂ ಮಮ್ಮಲಿಸುವಂತೆ. ಗುರುವರ್ಯಂಗೆ
ಧ್ಯಾನದೊಳ್ ನಸುವೊಳ್ತು. ಪ್ರಕೃತಿವೈಭವದೊಳ್
ನಸುವೊಳ್ತು ಚಿಂತನೆಯೊಳ್ ನಸುವೊಳ್ತು ಜಹಜಿನ
ನಾವಿಗರ ಕಾರ್ಯನಿರ್ವಹಣೆಯ ಬಳಿ ನಸುವೊಳ್ತು
ಆಕಾಶ ಮಹಾಕಾಯದ ಸಂವೀಕ್ಷಣೆಯಲಿ
ನಸುವೊಳ್ತು ಸಹಪಯಣಿಗರೊಡಗೂಡಿ ನಸುವೊಳ್ತು
ಕಳೆವುದು. ಈವಗೆಯಲಿ ಉರುಳುತಿರೆ ನಿಡುವೊಳ್ತು
ಪಯಣದ ಕಿನಿಸಿಗೆ ತಟ್ಟದಾಯ್ತು ಮನಕೆ. ದೂರ
ನೀಲಸಾಗರಿಯ ಯಾತ್ರೆ ಮುಗಿಬಗಿಯಾಗುತ್ತೆ
ನ್ಯೂಯಾರ್ಕ್ ಜಲ ಸಂಪದದಲಿ ಬೊಕ್ಕ ನೌಕೆಯು
ಶಿಳ್ಳೆ ಹಾಕಿ ನಿಂದತ್ತು ತೋಷಾತಿಶಯದಿಂ.
ಗುರುದೇವನ ಸುಖಾಗಮನಕಾಗಿ ಕಾದಿರ್ದ

ಎದುರು ನೋಡುತಲಿರ್ದ ವಿಪುಲಜನ ಕೋಟಿಯುಂ
ಆನಂದ ರಸಪೂತ ಮನದಿಂದೆ ಕೈಪರೆಯಂ
ತಟ್ಟಿ ಬಲ್ ಪ್ರಸನ್ನ ವದನದಿಂ ಗೌರವಾ-
ದರ ತೋರ್ದು ಸ್ವಾಗತಿಸಿದರ್ ತಮ್ಮ ಮನಬಿಚ್ಚಿ.
ತಿಳಿನೀಲಿಯ ವರ್ಣಂಬೆತ್ತ ವಾಹನವೊಂದು
ಕಾದಿರ್ದುದು ಗುರುವರನಿಗಾಗಿ. ಕೆಲಬರುಂ
ಗುರುದೇವನೊಡನೆ ಏರಿದರದೇ ವಾಹನಂ.
ಒಡನೆಯೇ ಪಿರಿಯ ಸದ್ದಿನೊಡನೆ ಓಡಿದುದು
ಪುಣ್ಯವಂತ ವಾಹನಂ ನಾಗಾಲೋಟದಿಂದಲಿ
ನಗರಹೃದಯದಲಿನ ಬಡದಿಗಭಿಮುಖಿಯಾಗಿ.
ರಾಜಮಾರ್ಗದೊಳ್ ಜನ, ವಾಹನಗಳ ಪಿಂತಿರ್ಕಿ
ವೀದಿ ವೀದಿಗಳ್ ದಾಂಟಿ ನಿಜವೇಗದಿಂದಲಿ
ಮುಟ್ಟಿದುದು ಬಿಡದಿಯ ನೆಲೆಮನೆಯಂ. ಅಲ್ಲಿಯುಂ
ಕಾದಿರ್ದುದು ವರಶಿಷ್ಯರ ಮಂಡಳಿ. ತಮ್ಮಯ
ಕರೆಗೆ ಓಗೊಟ್ಟು ಪಿಂಮರಳಿವಂದ ಗುರುವಿನ
ಉದಾರತನವಂ ಮೆಚ್ಚಿ ಪ್ರೇಮಾದರದಿಂದೆ,
ಸ್ವಾಗತಿಸಿತು ಮಿತ್ರಜನರ ಕೂಟ. ಅಮೆರಿಕೆಯ
ಶ್ರೀಮಂತಿನಿಯೊರ್ವಳ್ ಶ್ರೀಮಂತ ಹೃದಯದ
ಶ್ರೀಮಂತ ಜೀವನದ ಶ್ರೀಮಂತ ವ್ಯವಹಾರದಲಿ
ನುರಿತು ಬಲಿತು ಗೆಲುವಿನ ಪಥವಿಡಿದಿರ್ದು
ಸಾರ್ಥಕ ಬದುಕಂ ಕಂಡಮಾನಿನಿ. ಅವಳೊರ್ಮೆ
ಗುರುದೇವನ ಧರ್ಮಶಿಖರಮಂ ಏರಿಳಿದು ಮನು
ಕುಲಜರೆಲ್ಲರ ಆತ್ಮೋದ್ಧಾರಮಂ ಮನಗೊಂಡು
ಶ್ರೀಮಂತ ಹೃದಯದ ಸಾರಮಂ ಬಸಿದುಂಡು
ಬೃಹದ್ ಹಣದ ಥೈಲಿಯಂ ನೀಡಿದಳ್ ವಿವೇಕ

ಪ್ರಸರಣ ಕಾರ್ಯಕ್ಕಾಗಿ. ಇಕ್ಕೆಡೆಯ ಹಣ
ಕೈಗೂಡಿದುದು. ಆಗಳೇಂ ಜ್ಞಾನವೇತ್ತರುಂ
ಪುರುಡೆತ್ತ ಪರಿಯ? ಧಾರ್ಮಿಕ ಚಿಂತನೆ ಘನವೆತ್ತು
ಹೃತ್ ತಂತ್ರಿಗಳ್ ಮಿಡಿದುವು ಧರ್ಮಕಾತರದಿ.
ಮಿತ್ರ ಮಂಡಲಿಯು ಒಮ್ಮನದೊಮ್ಮತದಿಂ ಭಾರತ
ಸನಾತನ ವೇದಾಂತ ಧರ್ಮಸಸಿ ಮುಂಬೆಳಸೆ
ಸಂಭ್ರಮ ಸಡಗರಗಳ ಒಕ್ಕೂಟಮೆನೆ ಕೂಡಿದರ್
ಮಂದ್ಯೈಸಿ. ಗುರುವರನ ಸುಮುಖದೊಳ್ ಸುಲಭಕಾರ್ಯ
ಕ್ರಮಗಳ್ ಮೂಡಿದುವು. ಗ್ರಂಥಪ್ರಕಟಣೆಯುಂ
ರೂಪಿತಮಾಯ್ತು. ನಿಚ್ಚ ಪ್ರಾತಪ್ರವಚನಗಳ
ಸಂಯೋಜನೆಗೆ ಭಾರತದಿಂ ಗುರುಭಾಯಿಯಂ
ಬರಮಾಡಿ ಮುಂಬರಿಸುವ ಯೋಜನೆ ಇರ್ದತ್ತು.
ಗುರುದೇವ ವಿವೇಕಾನಂದರ್ಗೆ. ಅಂದಿನಾ
ಸಭೆಯೊಳ್ ಉಪನ್ಯಾಸವ ನೀಡುತೆ ನುಡಿಸಿದರಿಂತು,
"ಎಲೆ, ಮಿತ್ರರೇ, ಈ ಜೀವನದಲಿ 'ಸಾವು' ಎಂಬುದು
ಭೀಕರವದೇನಲ್ಲ. ವೇದಾಂತದ ಪ್ರಕಾರ
ಸಾವಿನಿಂದೆ ಸ್ಥಳಾಂತರ ಮಾತ್ರ. ಸಾವು ಈ
ಬಳಿಯಲಿ ಸುಳಿದಾಗಳ್ ಎನ್ನೆಲ್ಲ ದೌರ್ಬಲ್ಯ
ಕೊಂಡಿ ಕಳಚಿದೊಲ್ ಮಾಯಮಾದಪುದು. ಎನಗೇಂ
ಭಯ ಸಂಶಯಗಳ ಸಂಕೆ ಮೂಡದು. ಆನಾಗ
ಕೇವಲ ಅದೆ ಸಿದ್ಧತೆಯೊಳಿರ್ಪೆನ್. ಏಕೆನಲ್
ಭಗವಂತನ ಪಾದಗಳನಾಗಳೇ ಆನ್
ಮುಟ್ಟಿರ್ಪೆನ್. ಸ್ವರ್ಗ–ಮರ್ತ್ಯಗಳೆರಡುಮೆನಗೆ
ಒಂದೇ ಎನಲನ್ಯಮಲ್ತು. ಯೋಚಿಸಿ ತಿಳಿಯಿರ್ಕೆ.

"ತತೇಜತಿ ತನ್ನೈಜತಿ ತದ್ವಂತಿಕೇ ।
ತದಂರಸ್ಯ ಸರ್ವಸ್ಯ ತದು
ಸರ್ವಸ್ಯಾಸ್ಯ ಬಾಹ್ಯತ ॥"

ಪರಮಾತ್ಮನಿರುವು ಎಲ್ಲೆಡೆಯಲಿರುತಿರಲ್ ಮತ್ತೆ
ಎಲ್ಲವುಂ ಪರಮಾತ್ಮ ಸನ್ನಿಧಿಯೆನಲೆಲ್ಲಿಯ
ಸುಖದುಃಖ? ಅಂದಬಳಿಕಂ ಎಲ್ಲಿರ್ದೊಡೆಮಗೆ
ಒಂದೆಯಲ್ತೆ? ಬದುಕೇನು? ಸಾವೇನು? ಯೋಚಿಸಿ."
ಸಂಜೆಯ ಮಸುಗಪ್ಪು ಕವಿದು ಬರುತಿರೆ ಪಗಲಿನ
ಅಗಾಧ ಚಟುವಟಿಕೆಯಿಳಿದಿಳಿದು ಸುಶಾಂತಿಯಾ
ಅವತರಣಮಾಗತೊಡಗಿತು ನಗರದಲಿ. ಸಭೆಯು
ಚದುರಿ ಮುಂಬಾಗಿಲನು ಮುಚ್ಚಿದ ಬಳಿಕ ಗೆಳೆಯರ್ಗೆ
ಪತ್ರವಂ ಬರೆಯಲಣಿಗೊಳ್ಳುವುದವರ ದಿನಚರಿ.
ಅಂದು, ಗುರುನಾಯಕಂ ಬಿತ್ತಿ ಬೆಳೆಸಿದ ಪರಮ
ಸನಾತನ ಧಾರ್ಮಿಕ ಸಸಿಯ ಪರಿಪೋಷಣೆಗೆಂದು
ಗಮಿಸಿರ್ದ ಸ್ವಾಮಿ ಕೃಪಾನಂದ ಸ್ವಾಮಿ ಅಭಯಾ
ನಂದ ಇವರೀರ್ವರುಂ ಕೂಡಿದರ್ ಗುರುವರನ
ಜೊತೆಗೆ. ಬಲುದಿನಗಳ ಬಳಿಕಲೊದವಿದ ಭೇಟಿಯು
ಆನಂದ ಸಾಗರದೊಳ್ ಮುಳುಗಿಸಿತು, ಭಾಯಿಗಳ.
ಮನಮುದಿಸಿ ನಲ್ಮಾತುಗಳ್ ನಲಿದುವು ಜಿಪ್ಸೆಯಲಿ.
ತರುವಾಯ, ದಿವಸಾನ ಸಮಯೆ ಎಂದಿನಂತೆ
ಪತ್ರಲೇಖಂ ಪ್ರಿಯ ಗೆಳೆಯ ಅಳಸಿಂಗಾಚಾರ್ಯ
ಅವರಿಂಗೆ. ಸ್ವಾಮೀಜಿಯು ಬರೆದರದಂ ಕಿರಿ
ವಗೆಯಲ್ಲಿ "..... ಆನೀಗಳ್ ಸದಾ ಎಡೆವಿಡದೆಯೆ
ಚಿಂತಿಪ ವಿಚಾರವೆನಲ್ ನಮ್ಮ ದೇಶದ ತೀವ್ರ
ಪ್ರಗತಿ. ಪಾಶ್ಚಿಮಾತ್ಯ ರಾಷ್ಟ್ರಗಳ ಮಾಳ್ಕೆಯಲಿ

ರಾಷ್ಟ್ರವೆಮ್ಮ ಪ್ರಗತಿಯ ಪಥವಿಡಿಯುವೊಡೆ ನಮ್ಮ
ಯುವ ಜನಾಂಗ ಜಪಾನೀಯರಂ ಅನುಕರಿಸುವುದು
ಲೇಸೆಂಬೆ. ದೇಶಪ್ರೇಮವಂ ಆತ್ಮದ್ರಾವೇಶ
ಮಾತ್ರದಿಂ ಸಾಧಿಸಲಕ್ಕು. ಆವೇಶದೊಳ್ ಆ
ಸ್ಫೂರ್ತಿ ಮೂಡಿಬರಲ್ವೇಳ್ಕುಂ. ಜಪಾನೀಯರೊಳ್
ಕಾಂಬ ದೇಶಪ್ರೇಮದ ಘನತೆ ಬೇರಾವಾವ
ದೇಶದಲಿ ಕಾಂಬುದಿಲ್ಲ. ಗ್ರೀಸಿನಲಿ ಅಥ ಬೇರೆ
ಇನ್ನೆಲ್ಲು ಕೇಳರಿದೆನಿಲ್ಲ. ಜಪಾನೀಯರುಂ
ಮಾತಾಡರ್. ಮಾಡಿಯೇ ತೋರ್ಪ ಸಾಹಸಿಗರ್!
ದೇಶಪ್ರೇಮದಿಂ ಸಮಸ್ತವಂ ತ್ಯಜಿಸಬಲ್ಲ
ತ್ಯಾಗಿಗಳ್. ಇಂದು, ಜಪಾನ್ ದೇಶದಲಿ ತಮ್ಮ
ರಾಜಕೀಯ ಅಧಿಕಾರ ಸೌಲಭ್ಯಗಳನುಂ
ತ್ಯಾಗಗೈದು ದೇಶದ ಏಕತೆಯ ಸಂಪದಕೆ
ದುಡಿಯುವ ಅನೇಕ ಮಹಾತ್ಮರಿರ್ಪರ್. ಅಲ್ಲಿ
ಆರೊಬ್ಬ ದೇಶದ್ರೋಹಿಯುಂ ಕಂಡುಬರಲಿಲ್ಲ
ಎಂದೊಡದು ಎಂತಪ್ಪ ಅದ್ಭುತ ಸಮಾಚಾರ!"
ತರ್ವಾಯ ನೂಯಾರ್ಕ್ ನಗರಿಯಂ ಪಿಂತಿರ್ಕಿ
ಪೊರಮಟ್ಟರ್ ತಮ್ಮಯ ಗೆಳೆಯರ ಬಳಗದೊಡಂ,
ಲಂಡನ್ ನಗರಿಯಂ ಕುರಿತು. ಜಲಧಿಯಂ ಕೊರೆದು
ಕೀಸುವ ತೆರದಿ ಜಲಸ್ಫಾಲನೆಯಂಗೈಯುತ್ತಲಿ
ಪಯಣಿಸಿತು ಬೃಹದ್ ಜಹಜು, ಗುರುವರನ ದಿವ್ಯ
ಪರಿವಾರಮಂ ಪೊತ್ತು. ಅತ್ತಿತ್ತ ಓಲಾಡಿ
ತುಯ್ಯಲಾಡುತಿರೆ ತೊಟ್ಟಿಲ್ ತೂಗುವ ತೆರದಲಿ
ಚಿತ್ತ ಮತ್ತಾಗಿ ತನುಮನಗಳಿಗೆ ಮಲಗಿ
ನಿದ್ದೆಗೈಯುವನಿತು ಹಿತಮಿತವಾ ಯಾನಂ.

ಮಹಾ ಸಾಗರಿಯ ಪಯಣ ಕಳೆದು ಮುಗಿದ ಬಳಿಕ
ಉತ್ತರೋತ್ತರ ಪಯಣವದು ಕೆಂಪಿನ ರಂಗೊರೆದ
ಉಗಿ ಬಂಡಿಯಲಿ ಸಾಗಿ ಕೊನೆಯಾದುದು ಸೊಗದಿಂ.
ಅಲ್ಲಿರ್ದ ಶಿಷ್ಯಗಣ ಎದುರ್ವೆತ್ತು ಸ್ವಾಗತ
ನೀಡಿದರ್ ಪ್ರಜ್ಞಾನ ಬ್ರಹ್ಮನಿಗೆ. ಮರುದಿನದ
ಆರಂಭದೊಳ್ ಸಭೆಯ ಕಾರ್ಯಕ್ರಮಗಳ ಸುರಿ
ಮಳೆಯೆ ಸುರಿದವೊಲಾಯ್ತು! ಆನಂದವೆ ಮೈಗೊಂಡು
ಕುತೂಹಲ ಕೊನರಿದವೊಲ್ ಸಡಗರ ಸಂಭ್ರಮದ
ಸನ್ನಿವೇಶಂ ಮೂಡಿದತ್ತು ಸಭೆಯಲಿ. ಆದೊಡೆ
ಸ್ವಾಮೀಜಿಯ ಪ್ರವಚನ ಮಾಲೆಗಳಂ ಬರೆದು
ಉಲ್ಲೇಖಿಸಿಡದಿರಲೆಲ್ಲವುಂ ಗಾಳಿಯಲ್ಲಿ
ತೇಲಾಡಿ ವಿರಮಿಸಿದುವು ನಷ್ಟದ ಪಥವಿಡಿದು.
ಅದಂ ಮನದೊಳಾರ್ ನೆನೆದರಿಲ್ಲ ಅನ್ನೆಬರಂ.
ಸಭೆಯ ವ್ಯವಸ್ಥಾಪಕರ್ಗೆ ಎನಿತೆನಿತು ದಿವ್ಯ
ಸಾಹಿತ್ಯ ದ್ರವ್ಯ ವ್ಯರ್ಥಮಾದಪುದೆಂಬೊಂದು
ಕಳಕಳಿಯು ತುಂಬಿ ಮನದೊಳ್, ಶೀಘ್ರಲಿಪಿಕಾರ
ಜನರಂ ಅರಸುವ ಪರಿಶ್ರಮ ಒದವಿದತ್ತು.
ವ್ಯವಸ್ಥಾಪಕರೊಂದು ಕಡೆ, ಹಿರಿಯ ಶಿಷ್ಯರೊಂದು
ಕಡೆ, ಭಕ್ತಜನರೊಂದು ಕಡೆ ಅರಸುತಿರುತಿರಲ್,
ಮುಂದ್ಪೈದರ್ ಹಲಕೆಲವು ಶೀಘ್ರಲಿಪಿಕಾರರುಂ
ನಾಮುಂದು ತಾಮುಂದು ಎಂದೆನುತೆ ಗುರುವರನ
ಮಹಾನ್ ಸಭೆಗೆ. ಆದೊಡೇನವರ ಅಸ್ಖಲಿತ
ಮುಖವಾಣಿಯಲುಣ್ಮಿಬಹ ಬಿರುಸಿನ ಪದಪುಂಜ
ಧಾರೆಯಂ ಸೆರೆಹಿಡಿಯೆ ಕೈಸಾಗದೆ ಮನಸೋತು
ತತ್ತರಿಸಿ ತಲೆವಾಗಿ ಏನೊಂದು ನುಡಿಯಲ್ಕೆ

ಬಾಯಿ ಬಾರದೆ ಮರಳಿದರ್ ಬಂದ ಹಾದಿಯಂ
ಹಿಡಿದು. ಮತ್ತೆ ವ್ಯವಸ್ಥಾಪಕರಿಗದು ತಮ್ಮ
ತಲೆ ತಿಂಬುವ ಪುಳುವಾಯ್ತು. ಮತ್ತೆಮತ್ತೆಮೇಣತ್ತೆ
ಪುಡುಕುವ ಕತಮೊದವಿ ಬರೆ ಕಾರ್ಯಪ್ರಮತ್ತತೆಯು
ಬಲಿಯಿತ್ತು. ಆಗಳೊರ್ವನುಂ ಎಂತೊ ಏನೊ ಎನೆ
ಕೆಮ್ಮೊಗ್ಗದಮಂಡಲದಲಿ ಕಿರುನಗೆ ಹೊನಲ್ ನೆರೆ
ಹರಿಸುತೆ ಸಭೆಗೈದನ್ ರೋಮ ಹರ್ಷಿತ ಮನದಿ.
ಗರಿ ಹಗುರಮಾದ ಚಿತ್ತಾಲೋಕಮೆಸೆದುದಾ
ಮುಖಮುದ್ರೆಯಲಿ. ಸಧ್ಯ ಅವನಾಗಮನಮೆಲ್ಲ
ಸದಸ್ಯರಿಗೆ ತಂದಿತು ಹರ್ಷದುಸಿರ್. ಒರ್ಮೆಗೇ
ಧೀಮಂತ ಶೀಘ್ರಲಿಪಿಕಾರನೇರಿದನ್ ಪೆರ್
ಸಭೆಯ ಮಹಾವೇದಿಕೆಯಂ. ಇಡಿ ಸಭೆಯೊಳಿಹ
ದೃಷ್ಟಿಯಷ್ಟಿಗಳ್ ನಟ್ಟು ನಾಂಟಿದುವು ಅತ್ತಲೆ.
ನವಾಗತ ಶೀಘ್ರಲಿಪಿಕಾರಂ ಗುರುದೇವನ
ಪ್ರವಚನಗಳ ಅಕ್ಕರಕ್ಕರಗಳೊಂದೊಂದೂ
ಜುಗುಳಿ ಹೋಹದವೊಲ್ ಮಸಿಯೊರತೆಯ
ಯಕ್ಷಿಣಿಯಲಿ ಸೆರೆಹಿಡಿದಂ. ಲೆಕ್ಕಣಿಕೆಯನುಂ
ಪಿಡಿದವನ ಹೃದಯಾಂತರಿತ ಭಾವನಾವೇಗ
ಮೆಸೆದುದು ಅಕ್ಷಿಛಾಯೆಯಲಿ, ಆತ್ಮದರ್ಶನಮೊ
ಎಂಬವೊಲ್. ಕೈಯೆಂತು ಸೋಲದಂತಂತು ಮಸಿ
ಯೊರತೆಯದು ಮುಗಿಯದೆಂಬಂತೆ ಹರಿದೋಡಿತಾ
ಉಲ್ಲೇಖನಧಾರೆ ಸರಳ ಸಲಿಲ ಶೈಲಿಯಲಿ.
ಜೆ.ಜೆ. ಗಾಡ್ಗಿಲ್ ಎಂದೆಂಬ ಪರಿಪುಣ್ಯ ನಾಮವ
ಪೊತ್ತಮಹನೀಯ ಆ ಪೊಸ ಶೀಘ್ರಲಿಪಿಕಾರಂ.
ದೈವದತ್ತ ವರವೊ ಎನೆ ಗಮಿಸಿ ಜಗದ ಜ್ಞಾನ

ಯಜ್ಞದಗ್ಗಿಗೆ ತೈಲವೆರೆದು ಉಪಕರಿಸಿದಂ.
ಗುರುವರಂ ಉಪನ್ಯಾಸಮಂ ಆರಂಭಿಸಿದರಿಂತು
"ಹೇ, ಸೋದರ ಸೋದರಿಯರೆ, ಭಾರತದ ವೇದ
ಸಂಪದಂ ಜನರ ಹಿತಕಾಗಿ ಲೋಕಹಿತಕಾಗಿ
ನೀಡಿರ್ಪ ಅಗಾಧ ಸಾಹಿತ್ಯದೊಳ್ ಏನುಂಟು?
ಏನಿಲ್ಲ? ಸದ್ಭಾವನೆಯರಸವು ಹಿತವಾಗಿ
ಅನನ್ಯ ಕಠಿಣತರವಾಗಿ ಹರಿದಿಹುದು ಎಲ್ಲರ
ಮನ ಸೆಳೆವ ಮಾಳ್ಕೆಯಲಿ. ಮನವಿಟ್ಟು ಕೇಳಿರೈ.

"ಯು ವೈವ ಧರ್ಮಶೀಲ: ಶ್ಯಾತ್
ಅನಿತ್ಯಂ ಖಲು ಜೀವಿತಂ ।
ಕೋಹಿ ಜಾನಾತಿ ಕಸ್ಯಾದ್ಯಿ
ಮೃತ್ಯುಕಾಲೋ ಭವಿಷ್ಯತಿ ॥"

ಈವಗೆಯ ಕೋಟ್ಯಾಂತರ ಶುಭಾಷಿತಗಳೊರೆದ
ಋಷಿ ಶ್ರೇಷ್ಠರ್ ಲೋಕಹಿತವಲ್ಲದೆ ಮತ್ತೇನ್
ಬಯಸದೆ ಬದುಕಿ ಬಾಳಿ ಸಗ್ಗಕ್ಕೆ ಸಂದವರ್.
ಶ್ರೀಕೃಷ್ಣ ಭಗವಾನ್ ಇಂತೊರೆದಿಹನ್ ಕೇಳಿ.

"ಕ್ಲೈಬ್ಯಂ ಮಾ ಸ್ಮಗಮ: ಪಾರ್ಥ
ನೈತತ್ತ್ವಯ್ಯುಪಪದ್ಯತೇ ।"

ಇದಂ ಕೇಳಿರೈ ಮತ್ತೆ ಮುಂಬರಿದು ನುಡಿದರ್,

"ತಸ್ಮಾತ್ತ್ವಮುತ್ತಿಷ್ಠ ಯಥೋ ಲಭಸ್ವ"

ಎಂಥ ಕೆಚ್ಚುಗುವ ನುಡಿಗಳಿವು? ಅರಿದು ನೋಳ್ಪುದು.
ಇನ್ನೊರ್ ವಿಪರ್ಯಾಸಮಂ ನಿಮ್ಮೊಳ್ ತಿಳಿವುದು;
ಯೂರೋಪೀಯ ದೇವರಾದ ಯೇಸುಕ್ರಿಸ್ತನುಂ
ಉಪದೇಶಿಸಿದ ಪರಿಯಿದು. "ಆರ್ರೂ ವೈರಿಯಾ

ಗದಿರ್. ನಿನ್ನಂ ಶಪಿಸಿದರಂ ನೀಂ ಪರಸು. ಬಲ
ಕಪೋಲಕೆ ಬಾರಿಸಿದರಿಂಗೆ ಎಡ ಕಪೋಲವ
ತೋರು.'' ಎಂಬುದಲ್ತೇ? ಏಸು ಸ್ವಾಮಿಯ ದಿವ್ಯ
ಉಪದೇಶ? ಅದೇ ನಿಟ್ಟಿನೊಳೆಮ್ಮ ಭಗವಾನ್
ಕೃಷ್ಣನ ಉಪದೇಶಮಿದು. ''ಪ್ರಚಂಡ ಶಕ್ತಿಯಲಿ
ಶತೃನಿರ್ಮೂಲನಗೊಳಿಸಿ ಜಗದ ಸುಶಾಂತಿಯ
ಸಕ್ಕರೆ ಸವಿಯಂ ಸವಿ.'' ಆದೊಡೇಂ. ಈ ಜಗತ್
ಕ್ರಿಸ್ತದೇವನ ಮೇಣ್ ಶ್ರೀಕೃಷ್ಣ ಭಗವಾನನ
ಮನದಿಚ್ಛೆಗೆ ಸಂಪೂರ್ಣ ವಿರುದ್ಧ ಗತಿಯಲಿ
ನಡೆದಿಹುದು ದಿಟ. ಕ್ರೈಸ್ತರ್ ಏಸುವಿನ ಬಳಿಕಂ
ಅವನ ಉಪದೇಶಮಂ ಗಣನೆಗಿನಿತು ತಾರದೆ
ತಾವುಂ ರಜೋಗುಣದ ಪಾಲಾಗಿ ಪ್ರಪಂಚ
ಪರಿಶ್ರಮ ಪರಿಕ್ರಮಗಳಿಂದೆ ನೆಚ್ಚು ಕೆಚ್ಚು
ರೋಷತೋಷ ಕಾಮಭೋಗಗಳಂ ಮನವಾರೆ
ಅನುಭವಿಸುತೆ ಬಾಳ್ದಪರ್ ಎನಲ್ ತಪ್ಪಲ್ಲ.
ಎಲ್ಲರ ಬದುಕಿನೊಳ್ಪಿಗಾಗಿ ಉನ್ನತಮಾದ
ಉದ್ದೇಶವೊಂದಿರ್ಪುದಂ ಒಳ್ಳಿತೆಂಬೆನೆನ್.
ಉದ್ದೇಶಮೆನಲ್ ಒಡಲ್‌ದುಂಬುವ ಉದ್ದೇಶ
ಮೆನ್ನದಿರಿ. ಮಹೋದ್ದೇಶಮೆನಲ್ ನಿಂನಿಮ್ಮಗಳ
ಕರ್ತವ್ಯದ ಹಾದಿಯೊಳ್ ಬೋಂಕನೆ ಹೆಗ್ಗಲ್ಲು
ಬಿಳ್ದೊಡಂ ಬೆದರಿ ಬೆರ್ಚಿ ಪಿಂಜರಿಯದೆ ಹೋರುವ
ಎದೆಗಾರಿಕೆ ಇಹುದೇಂ ನಿಮ್ಮೊಳ್? ನಿಮ್ಮ ಅನನ್ಯ
ಸಂಪದಂ ಕೈವಿಟ್ಟು ಹೋದೊಡಂ ನಿಮ್ಮೆಲ್ಲ
ಕಾರ್ಯಮಂ ಮುನ್ನಡೆಸುವೊಡೆ ದೃಢ ಹೆಜ್ಜೆಯಂ
ಮುಂದಿಡುವಿರಾ? ಅಂತಿರುವೊಡಿದಂ ಕೇಳಿರ್ಕೆ

“ನಿಂದಂತು ನೀತಿ ನಿಪುಣ ಯದಿ ವಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ ।
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ಪಥಃ ಪ್ರವಿಚಲಂತಿ ಪಥಂ ಸಧೀರಾಃ ॥”

ಭಾರತದ ಜ್ಞಾನ ಬಂಢಾರದಲಿ ಪ್ರಜ್ಞಾನ
ಇರುತಿರಲ್ ನಾವ್ ನಮಗಾಗಿ ಮುಂಪೀಳಿಗೆಯ
ಸಲುವಾಗಿ ಪೊಚ್ಚಪೊಸ ಆವಿಸ್ಕಾರಮಂ
ಗೆಯ್ಯುವ ಅಗತ್ಯಮಿಲ್ಲ ಎನಲ್ ಪೆರ್ಮೆಕಣಾ!
ಅಂದು, ತಾನಾಗಿ ಆಗಮಿಸಿದ ಸಜ್ಜನ
ಪೊಚ್ಚಪೊಸ ಶೀಘ್ರಲಿಪಿಕಾರನಂ ಮೆಚ್ಚಿದರ್
ಸಭೆಯ ವ್ಯವಸ್ಥಾಪಕರ್ ಮೇಣ್ ಎಲ್ಲರುಂ.
ಸಗ್ಗವೇ ಧರೆಗಿಳಿದು ಬಂದವೊಲ್ ಸಂತಸದ
ಝುರಿ ಹರಿಯಿತು ಉಕ್ಕುಕ್ಕಿ ಗುರುದೇವನ ಪರಮ
ಶಿಷ್ಯ ಕೋಟಿಗೆ; ಮತ್ತಮಾ ಭಕ್ತಜನ ವೃಂದಕ್ಕೆ.
ಅಂದಿನಿಂ ಕೊನೆವರಂ ಬೆಂಬಿಡದೆ ಗುರುವರನ
ಪ್ರವಚನಗಳನೆಲ್ಲ ಬರೆಬರೆದು ಒಟ್ಟಿದಂ
ಚಿತ್ರಗುಪ್ತನ ತೆರದಿ, ಜೆ.ಜೆ.ಗಾಡ್ಗಿಲ್ ತನ್ನಂ
ತಾಂ ಗುರುತಲದೊಳೊಪ್ಪಿಸಿ. ಅನುದಿನಂ ಗುರುವಿನ
ಬೆಂಬಿಡದೆ ಪ್ರಾಣಶಿಷ್ಯತ್ವವಂ ಪಡೆದು ಆ
ಜೀವನ ಪರ್ಯಂತ ದಾಸನೆನೆ ಒಡನಾಡಿ,
ಗೆಳೆಯನೆನೆ ನೇಹದಿಂ ಎಡವಿಡದಿರ್ದು, ಹಿಂದೂ
ತತ್ತ್ವವೊಪ್ಪಿ ಹಿಂದೂಗಳಂ ಮೀರ್ದ ಹಿಂದೂ
ತಾನೆನಿಸಿದಂ ಜೆ.ಜೆ. ಗಾಡ್ಗಿಲ್ ಮಹೋದಯನುಂ.
ಎಲ್ಲಿಯವರೆಗೆ ಗುರುವರನ ಪುಣ್ಯ ನಾಮವದು
ಚಿರಂತನಮಲ್ಲಿಯವರೆಗೆ ಜೆ.ಜೆ. ಗಾಡ್ಗಿಲ್ ಪೆಸರ್

ಸ್ಥಿರವಾಯ್ತು; ಚಿರಂತನಮಾಯ್ತು; ಭಾರತದ
ಇತಿಹಾಸ ಪುಟಗಳಲಿ. ಧನ್ಯ! ಜೆ.ಜೆ. ಗಾಡ್ಗಿಲ್!
ಬೆಣ್ಣೆ ಬಿಣ್ಪಿನ ಬಿಳಿಯ ಕಾಗದಗಳ ಮೇಗಡೆ
ಕರ್ಪುರ ಮಸಿಯೊರತೆಯಂ ಶ್ರದ್ಧಾಭಕ್ತಿಗಳಿಂ
ಹರಿಸಿದ ಉಲ್ಲೇಖನಗಳ ರಾಶಿಯಂ ನೋಡಿದನ್
ಕಣ್ತುಂಬ ಜೆ.ಜೆ. ಗಾಡ್ಗಿಲ್ ಮಹೋದಯಂ! ಆಗ
ಹೃನ್ಮನಂ ತುಂಬಿ ಆನಂದರಸ ಉಕ್ಕುಕ್ಕಿ
ಹರಿದಿರಲ್ ಏನ್ ಅಮೋಘಮಾ ಲೇಖನಗಳ
ರಾಶಿ ರಾಶಿ! ತಾನೇ ಶೃತಿಯಾದಂತೆ ತಾನೇ
ಧರ್ಮವಾದಂತೆ ತಾನೇ ಸನಾತನ ಮುನಿಯಾ
ದಂತೆ ಮೇಣೆಲ್ಲ ವಿಷಯಗಳ್ ತನ್ನೊಳಗೊಳಗೆ
ಆಧ್ಯಾತ್ಮವಾದಂತೆ ಪ್ರಭಾಸಮಾಗಿ ಆ
ಭೂಮಾನುಭೂತಿಯಲಿ ಜಗಮರೆತನಾ ಶೀಘ್ರ
ಲಿಪಿಕಾರ! ಇಂತಿಂತು ಗುರುವಿನಾತ್ಮ ಪ್ರಭೆಯಂ
ಜಗಕೆ ಸಾರುವೊಡೆ ಗೆಯ್ದಾ ಕರ್ಮಯೋಗವದು
ಪರಿಪೂರ್ಣ ಕಾರ್ಯಮಾದುದು ಭಾರತ ಧಾತ್ರಿಗೆ!
ಜೆ.ಜೆ. ಗಾಡ್ಗಿಲ್ ಸಾಧಿಸಿದ ಅನನ್ಯ ಸಾಹಸದ
ಪ್ರವೃತ್ತಿಯುಂ ಜಗದ ಪ್ರಾಣ ತಂತುಗಳನುಂ
ಮಿಡಿದು ಎಚ್ಚರಿಸಿ ಸಾಧನಾಯೋಗಕೆ ಅದ್ಭುತ
ಪೂರಕವು ತಾನಾಯ್ತು. ಜಗದ ಚೆಂಬೆಳಕಿಂಗೆ
ಚೆಲುವಾಂತು ಪ್ರಕಾಶಿತಮಾದ ಗುರುವರ್ಯನ
ಕೃತಿಶ್ರೇಣಿಗಳೆಲ್ಲಂ ಜೆ.ಜೆ. ಗಾಡ್ಗಿಲ್–ನ ಹಸ್ತ
ಪ್ರತಿಗಳಿಂದೈದ ಸಾಹಿತ್ಯನಿಧಿ ಎನೆ ಭವ್ಯವೆಸಲೆ?
ಲಂಡನ್ ನಗರಿಯಲ್ಲಿ ಕ್ರಿಸ್‌ಮಸ್ ಹಬ್ಬವುಂ
ಒದವಿಸಿದ ಸಂಪೂರ್ಣ ಬಿಡುವಿನ ದಿನಂಗಳುಂ

ಅಮಿತ ಶಾಂತಿಪ್ರಶಾಂತಿಸುಶಾಂತಿಗಳಿತ್ತ
ಮಾನಸಿಕ ವಿಶ್ರಾಂತಿ ಗ್ರಂಥಪಠಣಕೆ ಸಧ್ಯ:
ಪೂರಕಮಾಗಿ ತೋಷವಟ್ಟರಾ ಸ್ವಾಮೀಜಿ.
ಕೆಲವಾನು ದಿನಗಳಲಿ ಹಬ್ಬದ ಗಡು ಬಿಮ್ಮನೆ
ಕಳೆಯಿತ್ತು. ಚಳಿಗಾಳಿ ಬರ್‍ನೆಲ್ ಬೀಸಿತ್ತು.
ಕ್ರಿಸ್‌ಮಸ್ ತಾತ ನಿರ್ಗಮಿಸಿದ್ದ. ಪ್ರಜೆಗಳ
ಆನಂದ ಪ್ರಮೋದ ಪ್ರಲಾಪಗಳ ಅಂಕ
ಮುಗಿದತ್ತು. ಕಟ್ಟಕಡೆಯಲಿ ಶಾಂತಿ ಮಂತ್ರಗಳ
ಹಾಡಿದೊಲ್ ತಣ್ಣಗಾಗಿ ತನಿರಸವುಣಿಸಿತ್ತು
ತನಿಗಾಳಿ ಮನ ತಣಿಸುವ ತೆರದಲಿ. ಮರುದಿನಂ
'ಹಾರ್ಡ್‌ಮನ್ ಹಾಲ್' ಎಂಬೊಂದು ಪಿರಿ ಭವನದೊಳ್
ವೇದಾಂತ ಸಭೆಯುಂ ನೆರೆದು ಕೂಡಿದುದು ದಿವ್ಯ
ಸಂಭ್ರಮದಿಂ. ತಾಮುದ ಪ್ರತಿಮೆಯೊ ಎನಲ್ಕೆ
ಸ್ವಾಮೀಜಿಯುಂ ಶಾಂತ ಶೈಲಿಯಲಿ ನಡೆತಂದು
ವೇದಿಕೆಯನೇರಿದರ್. ವಾಕ್ಪ್ರವಾಹ ಹರಿದುದು
ಜಳಜಳಿಸಿ. ಜೆ.ಜೆ. ಗಾಡ್ಗಿಲ್ ಇರ್ದನ್ ಬಳಿಯಲ್ಲಿ.
ಶ್ರೋತೃಗಳ್ ನಿಶ್ಯಬ್ದ ಗತಿಯಲ್ಲಿ ಕೇಳಿದರ್
ಕಿವಿಗೊಟ್ಟು. ಕ್ಷಿಪ್ರಲಿಪಿಕಾರ ಬರೆದನ್ ಪೂರ್ಣ
ಮನಗೊಟ್ಟು. 'ಸನಾತನ ಹಿಂದೂಧರ್ಮಸಾರವು
ವೇದೋಪನಿಷತ್ತಿನ ಕೊಡಿಗೆ' ಎಂಬುದಂ ಬಲ್
ರಸವತ್ತಾಗಿ, ವಿವರಿಸಿದರ್ ಸ್ವಾಮೀಜಿ. ಬಳಿಕಂ
ಭಾವನಾವೇಶದಲಿ ಕೊರಳ್ ತುಂಬಿ ನುಡಿದರ್

"ಶ್ಲೋಕಾರ್ಥೇನ ಪ್ರವಕ್ಷ್ಯಾಮಿ
ಯದುಕ್ತಂ ಗ್ರಂಥಕೋಟಿ ಭಿಃ ।

ಪರೋಪಕಾರಾಯ ಪುಣ್ಯಾಯ
ಪಾಪಾಯ ಪರಪೀಡನಂ ।।"

ಶ್ಲೋಕಾರ್ಥಮಂ ವಿವರಿಸಿ ತಿಳಿಪಿದ ಬಳಿಕಲಾ
ಗುರುದೇವನುಂ ನುಡಿಸಿದರಿಂತು "ಎಲೆ, ಮಿತ್ರರೆ,
ಎಲ್ಲರ ಬದುಕಿನೊಳ್ ಹಿರಿಕಿರಿ ದೋಷಗಳ್ ನೆರೆ
ಸಂಭವಿಪುದು ದಿಟಂ. ಎನಿತೆನಿತೋ ಪಾಪಗಳ್
ನಾವ್ಗೆಯ್ದಿರ್ಪುವೆಂ. ಆದೊಡಾವ್ ದಿನದಿನಕ್ಕು
ಮುನ್ನಡೆವುದದು ಸತ್ಯವೆ. ಹಿಂದಿನ ಬರ್ದುಕಂ
ಒರ್ಮೆ ಪರಿಶೀಲಿಸಿರಿಮ್. ನಿಮ್ಮಿಂದಿನ ಸ್ಥಿತಿ
ಗತಿಯದುಂ ಉತ್ತಮಿಸಿರಲದು ಸಾಧ್ಯವಾದುದು
ಎಂತೈ? ನಿಮ್ಮೆಲ್ಲ ತಪ್ಪೊಪ್ಪುಗಳ ಸಾಧನೆಯ
ಯಶಸ್ಸಲ್ತೇ ಇದು? ನಮ್ಮಯ ತಪ್ಪುಗಳಿಗೆಲ್ಲ
ಜಯವಾಗಲಿ? ಯಶಸ್ಸುಗಳಿಂಗೆ ಜಯವಾಗಲಿ!
ಮಿನ್ನೆ ಆಗಿಪೋದುದನೇ ನೆನೆನೆನೆದು ಮನಕೆ
ತಾರದೆಯೆ ಚಿಂತಿಸುತ ಕಾಲಹರಣಗೆಯ್ಯದೆ
ದಿಟ್ಟತನದಿಂ ಮುನ್ನಡೆಯಿರಿ ಏಳಿ! ಎಚ್ಚರ
ಗೊಳ್ಳಿ!"

ಮತ್ತೆ 'ಎನ್ನಯ ಆಚಾರ್ಯ' 'ಭಕ್ತಿಯೋಗ'
'ಜೀವಾತ್ಮ ಮತ್ತು ಪರಮಾತ್ಮ' ಮೊದಲಪ್ಪಮಿತ
ವಿಷಯಗಳ್ ಜನಮನವ ಸೂರೆಗೈದುದು ಭರತ
ವರ್ಷದ ಗುರುದೇವನ ಸತ್ಕೀರ್ತಿಯಂ ಪೊಗಳಿ
ಪಾಡಿ ಕೊಂಡಾಡುವಂತೆ. ಮತ್ತೊರ್ಮೆ ಪತ್ರಿಕೆ
ಪ್ರಪಂಚ ಪುರುಡೆತ್ತುದೊ ಎನಲ್ಕೆ ಉತ್ಸಾಹ
ಬೇರುಬಿಟ್ಟಿತು. ಮೂಲೆಮೂಲೆಗಳ್ ಧೀಂಕಿಡುವ

ಮಾಳ್ಕೆಯಲಿ ಹರಡಿತು ಸುಸುದ್ದಿ. ಆ ವಾರ್ತೆಯಿಂ
ಸುಜ್ಞಾನವೇತ್ತರ್ಗೆ ಹಾಲ್ಜೇನ್ ಸವಿದಂತೆ
ಅಂತರಂಗವೆಲ್ಲಂ ಸಿಹಿಸಿಹಿಯಾಯ್ತು. ನಿಚ್ಚಂ
ಸಂದರ್ಶನಾಕಾಂಕ್ಷಿಗಳ್ ವೆರ್ಚಿದರ್. ಸರ್ವ
ಧರ್ಮ ಸಮನ್ವಯಾಚಾರ್ಯ ಗುರುದೇವನ ಸಕ್ಕದ
ಸಕ್ಕರೆಯ ಸವಿಯುಗುವ ವಾಗ್ಧಾರೆಯುಂ ಹರಿದು
ಬೋಧನೆಗೆ ಹಿನ್ನೆಲೆಯಾಗಿ ಬೆಂಬಲಿಸಿ ಎಲ್ಲ
ಬಗೆಯ ಜನಮಾನ್ಯರಂ ತಣಿಸಿದುವು. ಮಣಿಸಿದುವು.
    ಸಾವಿರದೆಂಟನೂರತೊಂಬತ್ತಾರನೆಯ ಇಸವಿ
ಫೆಬ್ರುವರಿ ತಿಂಗಳಿನ ಶುಭದಿನದೊಳ್ ಕೂಡಿದ
ಮಹಾಸಭೆಯಲಿ 'ಜ್ಞಾನಯೋಗ' 'ಸಾಂಖ್ಯಮತ್ತು
ವೇದಾಂತ' ಮೊದಲಪ್ಪ ಅನೇಕ ಬಗೆವಗೆಯಲಿ
ಉಪನ್ಯಾಸಗಳ್ ನಡೆದುವು ಎಡೆವಿಡದೆ. ಮತ್ತಂ
ಅದೇ ಸಮಯಾಂತರದಲಿ ಸ್ವಾಮಿಗಳ್ ಮತ್ತೊರ್ವ
ಶಿಷ್ಯವರ್ಯಂಗೆ ಸಂನ್ಯಾಸ ದೀಕ್ಷೆಯನಿತ್ತು
ಹರಸಿದರ್ ಬಹುಲ ತೋಷಾತಿಯರಸವೆರಸಿ.
ಆಗಳಾ, ಆತ್ಮೀಯ ಭಾವನಾವೇಶಿಯುಂ
ಶುದ್ಧಚರಿತನುಂ ಆದ ಶಿಷ್ಯಂಗೆ ಸಗ್ಗದ
ಸುಧೆಯೇ ಲಭಿಸಿದವೊಲ್ ಸಂತಸದ ಊಟೆಯೆನೆ
ನಲಿನಲಿದಂ ಗುರುದೇವನ ಸಹವಾಸಂ ಲಭಿಸಿ.
ಅವನಿಂಗೆ ಯೋಗಾನಂದ ಎಂಬುವ ಪೆಸರಾಯ್ತು.
ಸ್ವಾಮೀಜಿಯ ಪ್ರೀತಿ ವಿಶ್ವಾಸಗಳ ಮೂಸೆಯಲಿ
ಬೆಂದು ಪುಟಿದು ಅಪರಂಜಿಯಾದನಾ ಯುವ ಪ್ರಭೃತಿ.
ಒರ್ಮೆ ಯೋಗಾನಂದರುಂ ತಮ್ಮ ಪತ್ರದಲಿ
ಲೇಖಿಸಿದರೆಂತೆನಲ್ – ''ಸ್ವಾಮೀಜಿ, ಇಂದಿನೀ

ಪರಿಸ್ಥಿತಿಯಲಿ ಮೊದಲ್ ಭಾರತಜನನಿಯುಂ ತವ
ಪುತ್ರರತ್ನನ ಮೇಲೆ ತನಗಿರುತಿಹ ಹಕ್ಕಂ
ಈಗಳೇ ದೃಢಪಡಿಸಿಕೊಂಬುದು ಶ್ರೇಯಸ್ಕರ
ಎನೆ ವಿಶೇಷತರಮಲ್ತು. ಅದಾಗಳೇ ಗುರು
ವರ್ಯನ ಘನವಾದ ಸುಜೀವನ ಚರಿತ್ರೆಯಂ
ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯತೆಯ ವಿಶ್ವ
ಕೋಶದೊಳ್ ಸೇರಿಸಿಕೊಳ್ಳಲಿಚ್ಛಿಸಿಹರ್. ಸಧ್ಯ,
ಇಲ್ಲಿಯ ಧುರೀಣ ಧೀಮಂತ ಶಿಷ್ಯವರ್ಯರ್!
ಅಂದಬಳಿಕ ಗುರುದೇವ ವಿವೇಕಾನಂದರುಂ
ಮುಂದೆ ಮುಂದೆ ಪಾಶ್ಚಾತ್ಯ ರಾಷ್ಟ್ರೀಯ ಪ್ರಜೆಯೆ
ಆದಪುದು ದಿಟಂ! ಹೋಮರ್ ಕವಿಯಂ ಕುರಿತಂತೆ
'ಪೆತ್ತವಳಾಂ' 'ಪೆತ್ತವಳಾಂ' ಎನುತೆನುತೆ ಅಂದು
ಏಳೇಳು ಭವ್ಯ ನಗರಿಗಳ್ ಬಡಿದಾಡಿದುವು
ಎಂಬೊಂದು ಕುಚೋದ್ಯದ ನಲ್‌ವಾತು. ಅಂತೆಯೇ
ನಮ್ಮ ಶ್ರೀಗುರು ವಿವೇಕಾನಂದರಂಬಡೆಯ
ಏಳೇಳು ರಾಷ್ಟ್ರಗಳ ಪ್ರಜೆಗಳ್ ಹೊಡೆದಾಡ್ವ
ಕಾಲ ಮಿಂಚಿ ಬಂದೊಡೆ ಅಚ್ಚರಿಯ ವಿಷಯಮಲ್ತು!
ಅಲ್ಲದೇ ದಿವ್ಯಜನನಿ ಭಾರತಿಯು ತನ್ನಯ
ಅಮೋಘ ಸುತನಂ ಬಿಟ್ಟುಕೊಡುವ ದುರದೃಷ್ಟಕರ
ಪ್ರಸಂಗ ಒದವೀತು! ಜೋಕೆ!!"

ಸ್ವಾಮೀಜಿಯುಂ
ಲಂಡನ್ನಿನ ಕಾರ್ಯಕ್ಷೇತ್ರದ ದ್ವಿತೀಯಂಕಮಂ
ಪೂರೈಸಿ ಸಮಾಧಾನದಿಂ ಮೇಣಧಿಕಮಾದ
ಸಂತೃಪ್ತಿಯಿಂ ಅನುಚರರೊಡಗೂಡುತಲ್ಲಿಂ
ಕಾಲ್ನಡೆಯೊಳ್ ತಮ್ಮಯ ಬಿಡದಿಗೆಯ್ದರ್. ನಿಶಿಯ

ರಾಜ್ಯಭಾರಂ ಶಾಂತಿಯಂ ಕಳೆಯಿತು. ನಸುಕಿನ
ಪೊಳ್ತಿನಲಿ ತಿಳಿಬೆಳಕು ತುಳುಕಿತು ಪವರ ಪದರ
ಪದರವಾಗಿ, ಖಗಗಾನ ಮೊಳಗಿತು ವಿವಿಧ ಕೊರಳ್
ಉಲಿಯೋಳ್ ಸುಪ್ರಭಾತಮಂ ಕೋರಿ. ಗಿಡಮರ
ಸಸ್ಯಗಳ ಎಲೆಎಲೆಗಳ್ ಮರ್ಮರ ಶೃತಿಯಂ
ಮೀಂಟಿದುವು. ಸ್ವಾಮೀಜಿ ಅವಲೋಕಿಸಿದರ್ ಆ
ಚಿತ್ರವತ್ ಸೌಂದರ್ಯ ರಾಶಿಯಂ. ಅಹ ಕನಕ
ಕಮನೀಯ ಕಾಂತಿಯಿಂ ರಂಜಿತಮಾದ ಸುಂದರ
ಕೌಶೇಯ ವಸ್ತ್ರಭೂಷಿತ ಸ್ವಾಮಿ ವಿವೇಕಾ
ನಂದರುಂ ಉದಯರವಿಯ ಉತ್ಸವ ಮೂರ್ತಿಯೋ
ಪುರಾತನ ಮಹರ್ಷಿಯ ವಿಶಿಷ್ಟ ಸ್ವರೂಪವೋ
ಭಾರತಜನನಿಯ ಹೃದಯ ದೀಪ್ತಿಯ ಕಿಡಿಯೋ
ಎನಲ್ ಚಂದನ ಕಾಂತಿಯಿಂದೊಪ್ಪಿ ನಿಂದರಯ್
ಸಭೆಗಾಗಿ ಶ್ರೀಮಂತ ಚಣಮಂ ನಿರೀಕ್ಷಿಸುತೆ.
ಪೊಳ್ತುರುಳಿತು, ಅಂಬರ ಬಿತ್ತಿಯಲಿ ಮುಗಿಲ್ಗಳ
ದಿಣ್ಣೆಯಂ ತುಳಿದು ಮಾರೊಡ್ಡು ಮುರಿದು ಭಾಸ್ಕರ
ಬಾನೇರಿದಂ. ನಿಯಮಿತ ಸಮಯದೊಳ್ ದೂರದ
ಸಭೆಯ ವ್ಯವಸ್ಥಾಪಕರ್ಯೆದರ್ ಸಂತೋಷ
ಸಾಗರದಲಿ ಮುಳುಗೆದ್ದು ತೇಂಕಾಡುತೆ ಅಮಿತ
ಪುರುಷಿನಿಂ ಕರೆದೊಯ್ಯಲ್ ಗುರುದೇವನಂ. ಕರ್ಪು
ವರ್ಣಾತ ನುಣ್ಮೆಯಿನ ವಾಹನಂ ಬಾಗಿಲೊಳ್
ನಿಂದತ್ತು ಸಜ್ಜಿನ ಸುಸುಂದರ ರಥ ತಾನಾಗಿ.
ಅದರಿಂದಿಳಿದ ವ್ಯವಸ್ಥಾಪಕರ್ ಮುಂದ್ಯೆದು
ಬೆಳಗಿನ ನಮನಮಂ ಸಲಿಸುತೆ ಕರೆದೊಯ್ದರಾ
ದೂರದ ಸಭೆಗೆ. ವೇದಿಕೆಯನೇರಿದ ಸ್ವಾಮೀಜಿ

'ವೇದಾಂತ ದರ್ಶನಂ' ಎಂಬೊಂದು ಬಹು ಮೂಲ್ಯ
ಉಪನ್ಯಾಸವಂ ಬಿತ್ತರಿಸಿದರ್ ಸಭೆಯ ದಿವ್ಯ
ಮನಮತಿಗಳಂ ತಣಿಪಂತೆ. ಶ್ರೋತೃಗಳ್ ಆನಂದ
ಸುಧಾಬ್ಧಿಯಲಿ ಈಸಾಡಿ ತೇಲಿ ಅಪರಿಮಿತ
ಭಾವನಾವೇಗದಿಂ ಗುರುದೇವನಂ ವಂದಿಸಿ
ವಿಸರ್ಜಿಸಿದರ್ ಸಭೆಯ ಕಾರ್ಯಕ್ರಮಂಗಳಂ.
ತರ್ವಾಯ ಸಭೆಯೊಳ್ ಉಪಸ್ಥಿತರ್ ಇರುತಿರ್ದ
ವಿಶ್ವವಿದ್ಯಾಲಯದ ಅಧ್ಯಾಪಕ ವರ್ಗವುಂ
ಸ್ವಾಮಿಜಿಯಂ ಸುತ್ತುವರಿದು ಪ್ರೀತ್ಯಾದರದ
ಸೊಲ್ಲಿನಲಿ ನುಡಿಸಿದರ್ ಇಂತಿಂತು "ಸ್ವಾಮೀಜಿ,
ನಮ್ಮ ವಿಶ್ವವಿದ್ಯಾಲಯದೊಳ್ ಪ್ರಾಚ್ಯತತ್ತ್ವ
ಶಾಸ್ತ್ರಗಳ ಪೀಠಮಂ ಸ್ಥಾಪಿಸುವ ಸದಿಚ್ಛೆಯು
ಇರ್ಪುದೆಮಗೆ. ಮುಂದದರ ಹೊಣೆಯಂ ಹೊರಲ್ನೀವ್
ಇಲ್ಲಿರ್ದು ಪೀಠದ ಮಹೋಪಾಧ್ಯಾಯರೆನೆ ದಿವ್ಯ
ಪೀಠಮಂ ಅಲಂಕರಿಸಿ ನಡೆಸಿದೊಡೆ ಒಳ್ಳಿತು.
ನೀವೊಪ್ಪಿದೊಡೆಮ್ಮಯ ಅಹೋಭಾಗ್ಯಮೆನಲಕ್ಕುಂ."
ಸ್ವಾಮೀಜಿ ಪ್ರಸನ್ನ ಮುಖಿಯಾದರ್. ಭಾವ
ಮುದ್ರಿತ ನಯನಗಳಲಿ ಆತ್ಮಜ್ಯೋತಿರ್ಕಿಡಿಯು
ಮಿಂಚಿದುದು. ನುಡಿದರೊಡನೆಯೆ "ಕೇಳಿ, ಮಿತ್ರರೇ!
ಸಂನ್ಯಾಸ ಧರ್ಮದೊಳ್ ಪಗಾರಂಬಡೆಯುತ್ತೆ
ಬೋಧಿಸುವ ಪರಿಪಾಠಮಿಲ್ಲ. ಸಂನ್ಯಾಸಿಗಳ
ಧರ್ಮಕಿದು ಸಂಪೂರ್ಣ ನಿಷಿದ್ಧಂ"
ತರುವಾಯಿ
ವಿಶ್ವವಿದ್ಯಾಲಯದ ಪ್ರಾಧಿಕಾರಂ ಜೆ.ಜೆ.ಗಾಡ್ಗಿಲ್
ಉಲ್ಲೇಖಿಸಿರ್ದ. ಉಪನ್ಯಾಸಗಳ್ ಮುದ್ರಿಸುವೊಡೆ

ಡಿ.ಡಿ.ಎಲ್.ಎಲ್.ಡಿ.ಎಂಬುವ ಪ್ರಾಧ್ಯಾಪಕರೊರೆದ
ಬಹುಮೂಲ್ಯತರ ಒಳ್ನುಡಿಯ ಮುನ್ನುಡಿಯಂ ಕೋದು
ಚೆನ್ನುಡಿಗಳ ಗ್ರಾಂಥಿಕ ಲೋಕಕೆ ಸೊಬಗಿನ ಬಿಗಿ
ಗಟ್ಟು ಬಿಗಿದು ಸುಂದರ ಮುದ್ರಣದಲಿ ಪ್ರಕಟ
ಪಡಿಸಿದರ್. ಆ ಗ್ರಂಥಗಳ ಮುನ್ನುಡಿಯೊರೆದಿಹ
ನುಡಿಗಟ್ಟಿದು 'ಏಕಮೇವಾದ್ವಿತೀಯಂ' ಸತ್ಯದ
ಬೋಧನೆಗೈಯ್ಯೆ ಪ್ರಾಚ್ಯಪ್ರಾಂತ್ಯಕ್ಕೆ ತಕ್ಕಿನಾ
ಗುರುವೆಂದೊಡೆ ಸ್ವಾಮಿವಿವೇಕಾನಂದರ್ ಎನಲ್
ತೋಷಮಕ್ಕುಂ, ಪೆರ್ಮೆಯಕ್ಕುಂ, ಕಗ್ಗಂಟೆನೆ
ಬಲ್ ಕಠಿಣಮಾದ ವೇದಾಂತಮಂ ಪರಿಣಾಮ
ಕಾರೀ ರೀತ್ಯ ಬೋಧಿಸಿದ ಸ್ವಾಮಿ ವಿವೇಕಾ
ನಂದರಿಂಗೆ ನಾವೆಲ್ಲರ್ ಚಿರಋಣಿ ಎನುವೊಡೆ
ತೋಷಮಿದೆ. ಅಂತೆಯೆ ವಿವೇಕಾನಂದರಿಂಗೆ
ಭಗವಂತನುಂ ಆಯುರಾರೋಗ್ಯಮಂ ನೀಡಿ
ಕಾಪಿಡಲಿ ಎಂದಾವ್ ಪ್ರಾರ್ಥಿಸೋಣ ಎಂಬೆನ್."
ಇಂತಿಂತು ಗ್ರಂಥಪ್ರಕಟಣಕಾರ್ಯಮಂ ನಡೆಸಿ
ಚೆಂಬೆಳಕಿಗೆ ಬಿಡಲ್ 'ರಾಜಯೋಗ' 'ಭಕ್ತಿಯೋಗ'
'ಕರ್ಮಯೋಗ' ಎಂದೆಂಬ ಮೂಮೂರು ವಿಭಾಗ
ರೂವಿನಲಿ ಪ್ರಕಟಣೆಯ ಮನೆಯಿಂ ಪೊರಬಿಳ್ದು
ಆಸಕ್ತರ ಕರಗತಮಾದುವು ಗುರುದೇವನ
ಗ್ರಂಥಗಳ್. ಅವುಂ ಪ್ರಕಟವಾದುವೆಂತಂತು
ಬಲ್ಲಿದರ ಕೈಸೇರಿ ಮುಗಿದುವಂತಂತು. ಆ
ಗಳಿಗೆಯೊಳ್ ಮರುಮುದ್ರಣ, ಮರುಮರುಮುದ್ರಣದ
ಕಾರ್ಯ ನಡೆದತ್ತು ಕೈಸೋಲಲೀಯದ ಪರಿಯಲಿ.
ಆದೊಡೇನಾ ಶ್ರೀಗುರುದೇವಂ ಎಡೆವಿಡದೆ

ಶ್ರಮಿಸುತಿರಲ್ ಬಳಲಿ ಬೆಂಡಾಯ್ತು ಶರೀರದ
ಪರಿಸ್ಥಿತಿ. ದಣಿಯಿತ್ತು ಜೀವಕಣ. ಕೈಕೊಂಡ
ಕಾರ್ಯಾಂಗಮಂ ಮುಗಿಸದೆಯೆ ಬಿಡುವ ಮನಸಿಲ್ಲ.
ಅಂತಿಂತು ಹಠ ಸಾಧನೆಯಲ್ಲದೆ ಬೇರೊಂದು
ಕಾಣಿಸದು. ಧೈರ್ಯ ದ್ರುಮದ ಬೇರ್ಗೆ ಜ್ಞಾನಬಲ
ಹರಿಸಿ ಧೃಢತೆಯಂ ಬೆಸೆದು ಕಾರ್ಯವಾಹಿನಿಗೆ
ಧುಮಕುವರ್ ಮತ್ತೆಮತ್ತೆ, ಮುಗಿಸುವ ಹಠದಿಂದೆ.

ರತ್ನೈಃ ಮಹಾಬ್ಧೆಃ ತುತುಷುಃ ನ ದೇವಾಃ
ನಭೇಜಿರೇಭೀಮ ವಿಷೇಣ ಭೀತಿ ।
ಸುದಾಂವಿನಾಸ ಪ್ರಯಯುಃ ವಿರಾಮಂನ
ನಿಶ್ಚಿತಾರ್ಥಾತ್ ವಿರಮಂತಿಧೀರಾಃ ॥

ಆವ ನೀತಿ ಶತಕಮೊ ತಲೆಯೊಳ್ ನುಸಿದು ಮನವ
ದೃಢಗೊಳಿಸಿತು. ಗುರುವರಂ ಕಾರ್ಯನಿರತರೆನೆ
ಮೈಮರೆತರ್. ಕರ್ತವ್ಯನಿರ್ವಹಣೆ ತೆಕ್ಕನೆ
ಭುಜವೇರ್ದುದು. ಮೈಮನ ಪುರುಪಿನಿಂ ಬಿಗಿಗೊಳಿಸಿ,
ರಾತ್ರಿಯೊಳ್ ಭಾರತವರ್ಷೀಯ ಆತ್ಮೀಯರಪ್ಪ
ಶಿಷ್ಯರಿಂಗೆ ಪತ್ರವನಿಂತಿಂತು ಬರೆಸಿದರ್,
''ಹಿಂದೂ ಮತದಭಿಪ್ರಾಯ ದ್ರವ್ಯಂ ಇಂಗ್ಲಿಷಿಗೆ
ಸುರಿದದಂ ಶುಷ್ಕ ತತ್ವದ ಶಾಸ್ತ್ರದಿಂದಲುಂ
ಜಟಿಲತೆಯ ಪುರಾಣಮತದಿಂದಲುಂ ವಿಲಕ್ಷಣ
ಮನಶಾಸ್ತ್ರದಿಂದಲುಂ ಸರಳತರ, ಸುಲಭತರ
ಗೊಳಿಸುತ್ತೆ ಜನಪ್ರಿಯ ಮೇಧಾವಿಗಳ ಮನಂ
ಒಪ್ಪುವೊಲ್ ಧರ್ಮವೊಂದಂ ಕಡೆದು ರೂಪುಗೊಳೆ
ಶ್ರಮಿಸುವ ಪ್ರಯಾಸಮಂ ಅರಿಯಬಲ್ಲವರ್
ಮಾತ್ರಮೆನ್ನಂ ಅರ್ಥೈಸಬಲ್ಲರ್. ಅತೀಂದ್ರಿಯ

ಗಹನಮಾದ ಅದ್ವೈತಮಂ ನಿತ್ಯಜನ ಜೀವ-
ನದಾ ಸುಂದರ ಕಾವ್ಯದೊಳ್ ಪ್ರವೇಶಿಸವೇಳ್ಕುಂ .
ಬಲ್ ಸಿಕ್ಕು ಸಿಕ್ಕಾದ ಪುರಾಣ ಕಥನವಾಹಿ
ಅಳೆದು ಸುರಿದು ಧಾರ್ಮಿಕಮೂರ್ತಿಗಳ್ ಬರಮಾಡಿ
ನಿಲ್ಲಿಸಲ್ವೇಳ್ಕುಂ. ಮಿದುಳು ಕದಡುವಂತೆವೊಲ್
ಹೆಣೆದಿರ್ಪ ಯೋಗ ಸಂಕುಲಗಳಿಂ ಕಾರ್ಯಕಾ-
ರಿಯಾದ ಮೇಣ್ ವೈಜ್ಞಾನಿಕಮಾದ ಮನಶಾಸ್ತ್ರ
ಮೂಡಿಸಲಕ್ಕುಂ. ಇಂತಿದನೆಲ್ಲವಂ ಮಕ್ಕಳುಂ
ಅರ್ಥೈಸುವೊಲ್ ಸುಲಲಿತಮಿರ್ಪಂತೆ ತಿಳಿಸಿಕುಡುವ-
ಉಲ್ಲೇಖಿಸುವ ಇಚ್ಛೆಯುಂ ತುಂಬಿ ತುಳುಕುವುದು
ಮನಮತಿಯೊಳ್. ಸಧ್ಯ ಅದೆನ್ನಯ ಗುರಿಯೆಂಬೆನ್.
ಉನ್ನೆಬರಮಾ ಸಮಾಜದೊಳ್ ತತ್ವಶಾಸ್ತ್ರಗಳ್
ವೇದೋಪನಿಷತ್ತುಗಳ್ ಕೇವಲ ಕೆಲಪಂಡಿ-
ತೋತ್ತಮರ ಆಸ್ತಿಯಾಗಿರ್ದು ಅತಿ ಕ್ಲಿಷ್ಟತರ
ಪ್ರಕರಣಮಾದುದು ದಿಟಂ. ತತ್ವಜ್ಞಾನಮಂ
ಬರಿಯ ವಾದವಿವಾದಗಳಲಿಯೇ ಪರಿಸರಮಾಪ್ತಿ-
ಗೊಳಿಸದೆಯೆ ಪ್ರತಿಯೊರ್ವನ ದಿನಚರಿಯೊಳ್ ಸರಿ
ಬೆರೆತು ಕಾರ್ಯದಲಿ ಮೈದೋರ್ದು ಮುಂಬೆಳೆಸಲೆನ್ನ
ಎದೆಯ ಹಾರೈಕೆ. ವೇದಮೆನೆ ಅದೊರ್ ಪ್ರಜ್ಞಾನ
ಸಂಪುಟಂ. ವೇದಾಂಗ ಜ್ಞಾನದಿಂ ಉಳುವ ರೈತ
ಇನ್ನು ಹದವರಿತು ಉಳುವಂ. ಬಡಗಿಯುಂ ವೇದ
ಜ್ಞಾನಿಯರೆ ಮಹೋನ್ನತ ಕಾರ್ಯಕಾರಿಯೈಸುವಂ. ಇಂತೆಯೇ
ಕುಂಬಾರ ಕಾರ್ಮಿಕ ಮಹಾರಾಜ ಮತ್ತಂ
ಲೇಖಕ ಇವರೆಲ್ಲರ್ ಪ್ರಜ್ಞಾನಿಗಳಿರುತಿರೆ
ಎಲ್ಲೆಡೆಗಳಲಿ ನೈಪುಣ್ಯತೆಯುಂ ಬಲಿತು ನೆರೆ

ಬೆಳಗಿ ದೇಶ ಸಮೃದ್ಧಿಯಪ್ಪುದು, ಎಂಬೆನೆನ್....''

ಸಾವಿರದೆಂಟನೂರತೊಂಬತ್ತಾರನೆ ಇಸವಿಯ
ಚೈತ್ರಮಾಸದೊಳ್ ಭಾರತಧಾತ್ರಿಯಿಂ ತಮಗೆ
ಆತುರದ ಪತ್ರೋಲೆಗಳ್ ಬರತೊಡಂಗಿದುವು
ಮತ್ತೆಮತ್ತೆ ಮೇಲಿಂದಮೇಲೆ. ಗುರುವರ್ಯರ
ಮಾನಸ ಪಕ್ಷಿ ಗರಿಗೆದರಿ ಹಾರಲುರೆ ಪಗಲಿರುಳ್
ಹಂಬಲಿಪುದು, ಹಂಬಲಿಪುದು ಕಕ್ಕುಲತೆಯಂ ಜಡಿತುಂಬಿ.
ಮತ್ತಮಾ ಹೃದಯ ಬನದ ಕೋಗಿಲೆ ''ಭಾರತ
ಭಾರತ'' ಎನುತೊರಲ್ವುದು ಸರ್ವತ್ರ ಸದಾ.
ಬಿಸಿನೆತ್ತರ್ ನಾಳನಾಳದಲಿ ಆರೋಹಣ
ಅವರೋಹಣ ನಡೆಸುತೆ 'ಭಾರತ ಭಾರತ' ಎಂದು
ಮರ್ಮರಿಸುತ ಹರಿವುದು. ಆ ಪುಣ್ಯ ದಾತ್ರಿಯನು
ಬಿಟ್ಟು ಕಾಲವದೆನಿತೊ ಸಂದುದು ಮನಕೆಟುಕದ
ಪರಿಯಲಿ. ಭರತವರ್ಷದ ಗಿರಿವನ ಬೆಟ್ಟಗಳ್
ನದನದಿಗಳ್ ನಲಿದುವು ದೃಷ್ಟಿಪಟಲದ ಮೇಲೆ. ಆ
ದೇವದಾರು, ಸಿರಿಹೊನ್ನೆ, ನಾಗದಾಳಿ ಶಾಲ್ಮಲಿ
ಹಾಲಿವಾಣ ತುಂಬಾರಲ ಮಾವು ಬೇವು ಕಂಗು
ತೆಂಗು ಮೇಣ್ ಬಗೆಬಗೆಯ ಭೂಜೇಶಗಳ್ ಹರೆ
ಕೈಚಾಚಿ ಜಟಿಲ ಕುಟಿಲ ಭೀಮಭೀಷಣತಾ
ವಿನ್ಯಾಸದಿಂ ಶಾಖೆಶಾಖೆಗಳ್ ಬೀಸಿವೀಸಿ
ಕುಲ ಕೀರ್ತಿಯಂ ಮೆರೆದು ಹರದಿ ಹಬ್ಬಿದ ಅದ್ಭುತ
ಪರ್ಣಾರ್ಣವಮೆಸೆದುದು ಹಚ್ಚ ಹಸುರಾಗಿ. ಆ
ಘನ ನಿಬಿಡ ನೀರವ ವನಾಂತರಂ ನಡುವಗಲ
ಮಾರ್ತಾಂಡನುಗ್ರನುರವಣೆಯಡಗಿಸಿ ತನಿಯಂ
ಸೂಸುವಾತನಿಯಿಂಪು ಭೀಷ್ಮಸಂಮೋಹನವ

ಮೆರೆವ ಚಿತ್ರಣಂ ಕಣ್ ಸೆಳೆವುದು ಕರವೀಸುತೆ
ಕರೆವವೊಲ್. ಆ ಗಂಗಾ ನದೀ ವಾಹಿನಿಯುಂ
ಜುಳುಜುಳಿಸುತೆ ಹರಿವ ಹೃದಯ ಹಾರಿ ಚಿತ್ತಾರ
ಸ್ವರ್ಗ ಸದೃಶಂ. ಪರ್ಣವರ್ಣಾಂತ ಕುಸುಮ
ಕೋಟಿಗಳ ವರ್ಣನಾತೀತ ದೃಶ್ಯದೈಶ್ವರ್ಯ
ಸೆಳೆವುದು ಮನವಂ. ಆ ಬಲ್ ಬಲೋನ್ನತ್ತತರ
ದಂತಿಗಳ್ ಕಾಡ್ಕೋಣ ಮಿಗ ಶೃಂಗಿಗಳ ಮನೋ
ರಮಾ ವಳಗಂ. ಮಯೂರ ಕೋಗಿಲೆ ಪಿಕಳಾರ
ಮೈನೆ ತೇನೆ ಗಿಳಿ ಮುಂತಪ್ಪ ಪಕ್ಷಿ ಕೂಜಿತಗಾನ
ಮಾಧುರ್ಯಂ. ಮೇಣಧಿಕ ಪುಣ್ಯಕ್ಷೇತ್ರಗಳ್. ಗುರು
ದೇವ ರಾಮಕೃಷ್ಣ ಪರಮಹಂಸರ್, ಮಾತೃಕಾ
ಮಯೀ ಶ್ರೀ ಶಾರದಾಮಣಿದೇವಿ, ಮಾತೃಶ್ರೀ
ಭುವನೇಶ್ವರೀದೇವಿ, ಆತ್ಮೀಯ ಗುರುಭಾಯಿ
ಬಂಧುಗಳ್, ಪುಣ್ಯ ಚರಿತರಾದಾ ಮುನಿಜನಂ
ಅಹ ಏನುಂಟು, ಏನಿಲ್ಲ ಭಾರತ ಭೂಮಿಯಲಿ?
ಶಿವಖೇಲಿ ಸ್ಥಲಮೆಂದು ಪ್ರಖ್ಯಾತಮಾದಾ
ಹಿಮವಂತನ ರಜತ ಕಿರೀಟಧಾರಿ ಶಿಖರಗಳ
ಮಹಾಶ್ರೇಣಿ ಎಲ್ಲವುಂ ನಲಿವುದು ಕಣ್ಣುಗಳ
ಮುಂತೆ. ಶಿವ-ಶಿವೆ ಖೇಲೀ ಗಿರಿವನವು ಒಂದೆಮಗೆ
ಸಾಲ್ದುಂ ಭರತವರ್ಷವಂ ಅರಿತು ತಿಳಿತಿಳಿದು
ಹೃನ್ಮನಂ ತುಂಬಿಕೊಳೆ! ಹಾ, ಭವ್ಯ ಭಾರತವರ್ಷ!
ಎಲ್ಲಿಲ್ಲದ ಪರಿಪುಣ್ಯನಾಮದ ಭಾರತವರ್ಷ!
ಲಂಡನ್ ಮಹಾ ಪತ್ತನದಲಿ ತಮ್ಮೆಲ್ಲ ಲಘು
ಬಗೆಯ ಕಾರ್ಯಕ್ರಮವನುಂ ತೀರ್ಚಿರುತಿರಲ್
ಮನದೊಳ್, ತರಾತುರಿಯು ಮೂಡಿತ್ತು ಭಾರತಕೆ

ಪಿಂಮರಳೆ. ತಮ್ಮ ಮಿತ್ರಮಂಡಳಿಯಂ ಮೇಣ್
ಶಿಷ್ಯಮಂಡಳಿಯಂ ಬಳಿಗೆ ಬರಿಸಿ ನಲ್ಮೆಯಿಂ
ನುಡಿದರಿಂತು ''ಇಂ ಮಂತಣ ಕಾರ್ಯಕ್ರಮಗಳ್
ನಿಮಗೊಪ್ಪುವೊಲ್ ನೀಮೇ ನಡೆಸಿರೈ. ಅಲ್ಲದೊಡೆ
ಸ್ವಾಮಿ ಶಾರದಾನಂದರಂ ಕರೆಸುವೆನ್. ಕೆಲ
ಗಾಲ ಅವರಿರ್ದೊಡಿಲ್ಲಿ ಎಲ್ಲವೂ ಗರಿಗೂಡಿ
ಮುಂಬರಿವುದು ಸಮರ್ಪಕವಾಗಿ. ಅದುಕಾರಣ
ಆನಿನ್ನು ಪಿಂಮರಳಿ ಪೋದಪೆನ್ ಭಾರತಕೆ.''
   ಆ ಮಾತು ಕೇಳಲತಿ ಬೇಸರಮೆನಿಸುತಿರೆ
ಮರುನುಡಿಯೆ ಬಿರಿಯದಾದುವು ತುಟಿಗಳ್, ಮಿಣ್ಣನೆ
ಶಿರಮಂ ಮಣಿವುದಲ್ಲದೆಯೆ ಬೇರೆ ಗತಿಯಿಲ್ಲವು.
   '' ಮತ್ತೆ ತಾವೆಲ್ಲಿರ್ದೊಡಲ್ಲಿಂದೆ ಇಂತೆಯೇ
ಮಾರ್ಗದರ್ಶನಗೈವೆನ್'' ಗುರುದೇವನಂತೆಂದ
ಅಭಿವಚನ ಎರ್ದೆಯಾಳದಿಂ ಪೊಣ್ಮಿರಲ್ ಆ
ಮಾತಿಗೆ ಮರು ನುಡಿವುದೆಂತು? ಸಮ್ಮತಿ ದೊರೆಯಿತ್ತು,
ಮಿತ್ರಮಂಡಳಿ ಮೇಣ್ ಶಿಷ್ಯಗಣಗಳಿಂದಂ.
ಸ್ವಾಮೀಜಿ ಎಲ್ಲರ್ಗೆ ಶುಭಕೋರಿ ತೋಷದಿಂ
ಹೊಂಚಿದರ್ ಭಾರತದ ಯಾತ್ರೆಯಂ. ಮಿಂಚಿದರ್
ಸಸ್ನೇಹದ ನೋಂಪಿಯಲಿ. ಮತ್ತೆರಡು ದಿನಗಳ್
ಸಂದುವೆಂತೊ ಭೋಂಕನೆ ಪ್ರತ್ಯಕ್ಷಮಾದರಾ
ಗುರುಭಾಯಿ ಶಾರದಾನಂದರುಂ. ಹಾ, ಎಂಥ,
ಅನಿರೀಕ್ಷಿತಮಾ ದರ್ಶನ ಭಾಗ್ಯ! ಒಡನೊಡನೆ
ವದನಾರವಿಂದಗಳ್ ಅರಳಿ ಹೂವಾಗಿ ಬಿರಿ
ನಗೆ ಬೀರಿದವು ಪ್ರಸನ್ನ ಭಾವನದಿಯುಕ್ಕಿ
ಪರಸ್ಪರ ಗಾಢಾಲಿಂಗನೆಗೈದು ತೋಷದಿಂ

ಕೇಳಿದರ್ ಸ್ವಾಮೀಜಿ ''ಇದೇನಿಂತೈದೆ ಇನಿತು
ಸುದ್ದಿಯಂ ಕುಡದೆ ? ಏಂ ಸಮಾಚಾರಮೊ ಭಾಯಿ?''
ಶಾರದಾನಂದರುಂ ತಮ್ಮ ಭೇಟಿಯ ವಿವರ
ತಿಳಿಪಿ ಉಭಯ ಕುಶಲೋಪರಿಯಂ ಬೆಳೆಸಿದರ್
ಅಕ್ಕರೆಯ ಸಕ್ಕರೆಯ ಸವಿಸೂಸಿ. ತರ್ವಾಯ
ಅಂದಿಂದಿನ ವಿಚಾರವಾಹಿನಿಯನರಿದಳೆದು
ಮಾನಿಸುತೆ ಪ್ರೇಮದಿಂ ಪೆರ್ಮೆಯಿಂ ಬೀಗಿದುವು
ಹೃನ್ಮನಗಳ್. ಗುರುವರಂ ಕೇಳಿಸಿದರಿಂತು,
''ಈ ಬರ್ದುಕೆಂದು ಕ್ಷಣಿಕ ಮೆಂತಂತು ನಮ್ಮಯ
ಯೋಜನೆಯುಮಂತಂತು ಕ್ಷಣಿಕಮೆ. ಆದೊಡಂ
ನೀತಿ ನಿಯತಿಯೊಳ್ ಮುನ್ನಡೆ ಲೇಸು ಲೇಸೆಂಬೆ.''

''ಆ ಕರ್ತವ್ಯಂ ನ ಕರ್ತವ್ಯಂ
ಪ್ರಾಣೈಃ ಕಂಠಗತೈರಪಿ ।
ಕರ್ತವ್ಯಮೇವ ಕರ್ತವ್ಯಂ
ಪ್ರಾಣೈಃ ಕಂಡಗತೈರಪಿ ॥''

ಶಾರದಾನಂದರುಂ ತಲೆದೂಗಿ ಮನಮೆಚ್ಚಿ
ನುಡಿಸಿದರ್ ಸಾನಂದ ಭಾವದಿಂ ''ಸೋದರಾ,
ಇತ್ತೀಚೆಗೆ ನಾಮೆಲ್ಲ ಅಲಂಬಜಾರಿನೊಳ್
'ಶ್ರೀರಾಮ ಕೃಷ್ಣ ಮಠ' ವಂ ಸ್ಥಾಪಿಸಿದ್ದಾಯ್ತು.
ಅದರೊಳೀಗಳ್ ದೀನಜನಸೇವೆ ಸಲ್ಲುತಿದೆ.
ನಾವೆಂಗೈಯಲಿಚ್ಛಿಸಿ ಯೋಜಿಸಿದೆವೋ ಅದಿಂದು
ಪ್ರಥಮತಂ ಕೈಗೂಡಿ ನಡೆದಿದೆ ಸರಳ ಸಲಿಲ
ರೀತಿಯಲಿ. ಕಾಳಿಯ ರಕ್ಷೆ ಗುರುದೇವನ ರಕ್ಷೆ.''

ಹರಿಃ ಓಂ ತತ್ ಸತ್

* *

ಶಪ್ತವಿಂಶೋಲ್ಲಾಂಸಂ

ಪ್ರವಾಸಿ

"ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವ ಶಿಷ್ಯತೇ ॥"

ಕುಳ್ಳಿರ್ದ ಸುಡುವಿಸಿಲ್ ಭೂಪನುಂ ನಿಂತನೆನೆ
ಬೆಂಕೆಯ ಉಸಿರ್ ಕಾರಿ; ಬಿಸಿಯುಂಡು ಬಿಸುಪಾಗಿ
ಸೋಲ್ದು ಸಯ್ದು ಕಳೆದು ಬೆದರ್ದ ಭೀಮ ಭೀಕರ
ಮುಂಗಾರ್ ನೂಲ್ ಸೋನೆಯಾ ತೆರೆಯೆತ್ತಲ್ಕೆ
ಸುರಿದುದು ಮಣಿ ಮುತ್ತುಗಳ ಜಳಧಾರೆ ಜಳಜಳ
ಜೋಗುಳಿಸಿ. ಶೈಲೇಶವರನಕೊ ಸುಖ ಮಂಗಳ
ಮಜ್ಜನಂಗೈದು ಕರ್ರನೆ ಥಳಿಸಿರೆ ಎದೆಯುರ್ಬಿ
ಮಂಜುಹನಿ ವಧುವವನ ಎರ್ದೆಗೊರಗಿದೊಡಲ್ಲಿ
ನೆಲೆಯೊಳಿರಲಾರದೆಯೆ ಜರುಗಿ ಇಳಿದೋಡುವಳ್
ಬೆಸನವೊತ್ತಿ, ಲಂಬಾಯಮಾನದಿ ಸೋರ್ವ ಸರಿ
ಧಾರೆ ತುಂಬಿ ಕಾವಳಿಸಿದುದು ನೀಲಾಂಬರಂ.
ಕೆಮ್ಮಣ್ಣು ಕಾವಿಯನಳಿಸೆ ಸ್ವಚ್ಛ ಪೊಚ್ಚಪೊಸ
ಶ್ಯಾಮಲಾಂಬಿಕೆಯಾದ ವನಧಿಯೈಸಿರಿಯ ನೋಡಾ!
ತಣ್ಪುವೆತ್ತ ತಣ್ಣನೆ ಮೇ ತಿಂಗಳಿನಾ ಆದಿ
ಭಾಗದಿಂ ಸ್ವಾಮೀಜಿ ಜ್ಞಾನಯೋಗಮಂ ಕುರಿತು
ಉಪನ್ಯಾಸ ಮಾಲೆಯಂ ಸ್ಫುರಿಸಿದರ್ ಮುಂಗಾರ್
ಸುರಿಮಳೆಯ ಹೋಲಿ! ಆ ಸಭಾ ಭವನಗಳಿಂಗೆ
ಜನಗಣಂ ಕಿಕ್ಕಿರಿದು ತುಂಬುವರ್ ಪ್ರಜ್ಞಾನ

ಪಿಪಾಸೆಯಲಿ. ಮೇ ತಿಂಗಳಾಂತ್ಯದ ಭಾಗದಲಿ
`Royal Institute of painters'
ಎಂಬೊಂದು ಸಂಘದ ಪರವಾಗಿ 'ವೈರಾಗ್ಯ'
'ಭಕ್ತಿಯೋಗ', 'ಆತ್ಮಸಾಕ್ಷಾತ್ಕಾರ' 'ಸಾರ್ವಭೌ-
ಮಿಕ ಧರ್ಮ; ಮೊದಲಪ್ಪ ಉಪನ್ಯಾಸಗಳ ಹೊಳೆ
ಹರಿದುದು ಯಥೇಚ್ಛವಾಗಿ. ದಿನದಿನಂ ಸಜ್ಜನರ್
ಸಾಲುಸಾಲ್ಗೈಸಿ ಬಂದಪರ್, ಪ್ರಶ್ನೋಪಪ್ರಶ್ನೆಗಳ್
ಎಳ್ದು ಪ್ರತ್ಯುತ್ತರಗಳ್ ಸಿಡಿದಪವು ಕಡಲೆಯಂ
ಹುರಿದ ತೆರದಿ ಪಟಪಟಿಸಿ. ಆ ಸಭೆ, ಆ ಭವನ
ಆ ವಾಗ್ಮಿ ಎಲ್ಲವುಂ ಸಂಮಿಳಿಸಿ ಬ್ರಹ್ಮಾಂಡ
ತಾನಾದಪುದು ರಸಾನ್ವಿತಗಳಿಗೆಯಂ ವೆರಸಿ.
ಇತಿ ಮಧ್ಯೆ ಆ ಮಹಾ ನಗರಿಯಾ ಶ್ರೀಮಂತ
ಧೀಮಂತ ಲೋಗರುಂ ತಂತಮ್ಮ ಮನೆಗಳಿಗೆ
ಕರೆಯಿತ್ತು ಗೌರವಾದರಗಳಿಂ ಆದರಿಸಿ
ಉಪನ್ಯಾಸಮಂ ಸದ್ದುಗದ್ದಲದ ಸೊಲ್ಲಿನಿತು
ಇಲ್ಲದ ಸುಶಾಂತಿಯಲಿ ಆಲೈಸುವ ಭಾಗ್ಯಮಂ
ಪಡೆದು ಧನ್ಯರಾದರ್. ಥಿಯಾಸೊಫಿ ಮಂದಿರದೊಳ್
ಉಪನ್ಯಾಸಮಂ ನೀಡಿಮೆಂದು ಡಾ॥ ಆ್ಯನಿಬೆಸೆಂಟ್
ಬೇಡಿದರದರ ಸಂಘದ ಸದಸ್ಯರೊಡಗೂಡಿ.
ಅಲ್ಲೇಂ ಸಭಾ ಸದಸ್ಯರ ಸಂಭ್ರಮಿತ ಕೂಟ?
ರಂಗುರಂಗಿನ ವೇಶ ಭೂಷಿತ ಜನರಾಶಿಯ
ಸಮಾವೇಶ! ಸ್ವಾಮೀಜಿಯುಂ ಎಲ್ಲರೆಡೆಗೆ
ಕೈವೀಸಿ ತೋಷಿಗರ ಸಂತೋಷಗೊಳಿಸಿದರ್
ಪ್ರಸನ್ನ ಮೊಗದಲಿ ಸಿತಸ್ಮಿತವರಳಿಸಿ. ಕರ
ಮುಗಿದು ಆರಂಭಿಸಿದರ್ ಪ್ರವಚನವನಿಂತು,

''ಭಾರತೀಯರ ದೃಷ್ಟಿಯೊಳ್ ಆತ್ಮ ಎಂದರೇಂ ?''
ಪ್ರತಿಭಾ ಪೂರ್ಣಮಾದ ಉಪನ್ಯಾಸವಂ ಬಲ್
ಅರ್ಥವತ್ತಾಗಿ ವಿವರಿಸಿದರ್ ಎಲ್ಲ ಸಭಿಕರ
ಮನವೊಪ್ಪುವ ಪಾಂಗಿನಲಿ. ಬಳಿಕಂ, 'ಸಸೇಮ್ ಕ್ಲಬ್'
ಎಂಬಲ್ಲಿಂದೆ ಆಹ್ವಾನವೈದುದು ಮಧುರಮಂ
ಸುಮಧುರಗೊಳಿಪಂತೆವೊಳ್. ಆ ಕರೆಯಂ ಒಪ್ಪಿ
ಅಲ್ಲಿಗುಯ್ದು ''ವಿದ್ಯಾಭ್ಯಾಸ'' ಎಂಬ ವಿಷಯಂ
ಕುರಿತು ರಸವತ್ ಪೂರ್ಣ ಉಪನ್ಯಾಸ ನೀಡಿದರ್
ಅಮೃತೋಮವಾದ ನುಡಿಮುತ್ತುಗಳ್ ಚೆಲ್ಲಿ
ಸೂಸಾಡಿ; ಭವ್ಯ ವೇದಿಕೆಯ ಗೌರವಂ ತಾಂ
ವೆರ್ಚಿಸಿದರ್ ರಾಜರ್ಷಿ ತೇಜದಿಂ ವಿಜೃಂಬಿಸಿ,
''ಎಲೈ ಅಮೃತ ಪುತ್ರರಿರಾ, ಎದ್ದೇಳಿ! ಈ
ವೇದವಾಣಿಯಂ ಕಿವಿಗೊಟ್ಟು ಕೇಳಿರೈ, ಕೇಳಿ!

ಧರ್ಮಂ ಚರತ ಮಾಽಧರ್ಮಂ
ಸತ್ಯಂ ವದತ ನಾನೃತಂ ।
ದೀರ್ಘಂ ಪಶ್ಯತ ಮಾ ಹ್ರಸ್ವಂ
ಪರಂ ಪಶ್ಯತ ಮಾಽ ಪರಂ ॥

ಶ್ಲೋಕಾರ್ಥಮಂ ವಿವರಿಸಿ ಪ್ರತಿಪರ್ಥಾಗಳಂ
ಪರಿಭೋಧಿಸಿ ಶ್ರೋತೃಗಳ ಮನವಂ ರಂಜಿಸಿದರ್
ತಮ್ಮ ಶ್ರೀಕಂಠದುಲಿಯೊಳ್ ಮೇಣ್ ಮುಂಬರಿದು,
''ಚಿತ್ತ ಸಂಪುಟವೊಂದು ಮಹಾಜ್ಞಾನಸಾಗರ
ಇರುತಿರಲ್ ಭೂತ ಭವಿಷ್ಯದ್ವರ್ತಮಾನಗಳ್
ವ್ಯಕ್ತಾವ್ಯಕ್ತಗಳ್ ಇಷ್ಟಾನಿಷ್ಟಗಳ್ ಕಲೆತು
ಹುದುಗಿರ್ಪುದೇ ಅಲ್ಲಿ. ಅಂಥ ದಿವ್ಯ ಪವಿತ್ರಮಯ
ಜ್ಞಾನ ಕಲ್ಪಮಂ ತೆರೆದು ಅಮೂಲ್ಯ ದ್ರವ್ಯವಂ

ಹೊರಗೆಡಹಲ್ ತಕ್ಕಿನ ಸಮಯೋಚಿತಮಾದಾ
ಸನ್ನಿವೇಶಮಂ ಕಲ್ಪಿಸಿದಲ್ಲದೆ ಯಾವತ್ತು
ಉತ್ತರೋತ್ತರ ಅಭಿವೃದ್ಧಿಗಿಲ್ಲ ಅವಕಾಶ.
ಉದಾಹರಣೆಯನೀಯುವೊಡೆ ಈ ಭುವಿಯೊಂದೇ
ಸಾಲ್ಗುಂ. ಭುವಿಗೆ ಜನ್ಮದಾರಭ್ಯ ಆಕರ್ಷಣ
ಶಕ್ತಿಯಿರ್ಪುದದು ದಿಟವೈಸಲೇ ? ಸೇಬಿನ ಫಲಂ
ಕೆಳಬಿಳ್ದುದಂ ಕಂಡ ನ್ಯೂಟನ್ ಮನದೊಳ್ ಸೆಳೆ
ಮಿಂಚಿ ಪ್ರಬುದ್ಧಮಾಗಿ ಹೊರ ಬಿಳ್ದುದು ನಿಯಮ
ರೂಪಿನಲಿ, ಅಂತೆಯೇ ಸೂಕ್ತ ಸನ್ನಿವೇಶವು
ದೊರಕಲುರೆ ಸುಪ್ತಜ್ಞಾನದ ಬೆಳಕಿನ ಕಿರಣಂ
ಹೊರಹೊಮ್ಮಿ ಬರಲೊಂದು ಅವಕಾಶವೇಳ್ಕುಮನೆ
ಸರಿಯಕ್ಕುಂ....''

ಸ್ವಾಮಿ ವಿವೇಕಾನಂದರಾ ಕೈ
ಗೂಡಿದುದು ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರ್‌ರವರು
ಮೇ ತಿಂಗಳ ಇಪ್ಪತ್ತೆಂಟನೆಯ ತೇದಿಯಂದು
ಬರೆದು ಕಳಿಪಿದ ಪತ್ರ. ಸಕ್ಕರೆ ಸವಿ ಸೂಸುವ
ಸವಿನಯಂ ತುಂಬಿ ತುಳುಕುವ ಸಮಂತ್ರಣಂ.
ಮ್ಯಾಕ್ಸ್‌ಮುಲ್ಲರ್‌ರವರ ಹಸ್ತಾಕ್ಷರ ಮೆಸೆದುದು
ಹೃತ್ ಕಲಶದಮೃತರಸವೆ ಹರಿದವೊಲ್.
ಸ್ವಾಮೀಜಿ ಪೊರಮಟ್ಟರ್ ಆಮಂತ್ರಣಂ ಮುದದಿಂ
ಸ್ವೀಕರಿಸಿ. ಅಂದಿನದಿನಂ ಮ್ಯಾಕ್ಸ್‌ಮುಲ್ಲರಂ
ಕಂಡ ಪ್ರಪ್ರಥಮದ ದರ್ಶನಂ ಕುರಿತಿಂತು
ಲೇಖಿಸಿಹರ್ ಸ್ವಾಮೀಜಿ ''....ಆ ಗೃಹದೇಶಂ
ದೂರದಿಂ ಕಣ್ಗೆಸೆಯೆ ಕಾಲ್ಗೆ ಆದೇಶಮಂ
ಈಯದಿರ್ದೊಡಂ ಚುರುಕಾದುದಾ ಮುನ್ನಡೆ.

ಪ್ರಾಕಾರದ ಪೆರ್ವಾಗಿಲ್ ದಾಂಟಿ ಒಳಗೆಯ್ಯೆ
ಪೊರ ಜಗಲಿಯೊಳ್ ಕುಳ್ಳಿರ್ದ ಮಹನೀಯರ ದಿವ್ಯ
ದರ್ಶನಂ ಪಡೆದೆನ್. ಬೆಳ್ನವಿರಿನ ಸುಂದರ
ಗಂಭೀರ ವ್ಯಕ್ತಿ ಒಡನೆ ಪೀಠವ ಬಿಟ್ಟೆಳ್ದು
ಒಂದೆರಳ್ದು ಹೆಜ್ಜೆಗಳ್ ಮುಂಬರಿದು ನಯದಿಂ
ಸ್ವಾಗತಿಸಿದರೆನ್ನಂ! ಪ್ರೊ॥ ಮ್ಯಾಕ್ಸ್‌ಮುಲ್ಲರುಂ
ಅನನ್ಯ ಅಸಾಧಾರಣ ವ್ಯಕ್ತಿ! ಸ್ನೇಹ ಪ್ರೇಮದ
ಗಣಿ. ಸವಿಮನದಿ ಸಕ್ಕರೆಯಕ್ಕರೆಯುಣಿಸುವಾ
ಪರಮ ಪುರುಷ. ಅವರಂ ಕಂಡೊಡನೆ ಭಕ್ತಿಯಿಂ
ವಂದಿಸಿದೆನ್ ಶಿರಮಣಿದು. ಆರ್ ಶ್ರೀಗುರುದೇವ
ರಾಮಕೃಷ್ಣರಂ ಭಕ್ತಿಯಿಂ ಧ್ಯಾನದಿಂ ಮನ
ತುಂಬಿ ಸಂಭಾವಿಸುವರೊ ಅವರಾವ ಮತವಿರಲಿ
ವರ್ಗವಿರಲಿ ಪರದೇಶೀಯರಿರಲಿ ಅವರೆಮ್ಮ
ಪೂಜ್ಯರ್. ಅವರ ದರ್ಶನವೆನಗೆ ಪರಮ ತೀರ್ಥ
ಯಾತ್ರೆಯೇ ಸೈ... ಅವರೊಮ್ಮೆನ್ನ ಕೇಳ್ದರೆಂತೆನೆ
ಕೇಶವ ಚಂದ್ರಸೇನರ ಬದುಕಿನೊಳ್ ಅನನ್ಯ
ಪರಿವರ್ತನೆಯಾದುದು ಆವಶಕ್ತಿಯಮಹಿಮೆ
ಎಂಬುದನರಿದು ಮನೋಮಂಡಲಂ ತುಂಬಿರಲ್
ಪೇಳ್ವುದೇಂ? ಶ್ರೀಗುರುವರ ರಾಮಕೃಷ್ಣ ಪರಮ-
ಹಂಸರ ಬದುಕು ಮೇಣ್ ಉಪದೇಶಗಳಲೆನಗೆ
ಅನನ್ಯ ಕುತೂಹಲವು ಕೊನರಿದುದು ಹೃನ್ಮನದಿ....
ಆ ಪರಮ ಪುರುಷರ್ಗಲ್ಲದೇ ಇನ್ನಾರ್ಗಂಥ
ಗೌರವಾರಾಧನೆಯು ಸಲ್ವುದೈ ಲೋಕದೊಳ್?"
ಅಂತೆಂದವರಮಾತಿನಿಂದೆನಗೆ ಆನಂದ
ರಸದುಂಬಿದ ಹೃದಯದ ಹೆಗ್ಗಡಲಿನ ಹಿರಿಯ

ಹೆದ್ದಲೆಗಳ್ ತುಂಬಿ ತುಳುಕಿ ತುಯ್ಯಲಾಡಿದುವು
ಮೈರೋಮ ಹರ್ಷಕಗೊಳುವ ತೆರದಿ. ಪ್ರೊಫೆಸರ್
ಮಾಕ್ಸ್‌ಮುಲ್ಲರ್‌ರವರ್ ಎನ್ನನುಂ ಆಕ್ಸ್‌ಫರ್ಡ್
ವಿದ್ಯಾಪೀಠದ ವಿಶ್ವವಿದ್ಯಾಲಯಂಗಳಂ
ಮೇಣ್ ಬ್ಲೋಡಿಯನ್ ಗ್ರಂಥಾಲಯಗಳ್ ತೋರೆ
ಕರೆದೊಯ್ದರ್. ಅವರೆಲ್ಲವಂ ತೋರಿಸಿದ ಬಗೆ
ವಿವರಿಸಿದ ಬಗೆ ಹಾಲ್ಜೇನಿನ ಸವಿಯನೊಸರಿಸಿತು
ಒಡಲಿನೊಳ್. ಮರುದಿನದ ಮುಂಬೆಳಗಿನ ಸಮಯದ
ತನಿಯುಗುವ ತಣ್ಪಿನಲಿ ಉಗಿಬಂಡಿಯ ನಿಲ್ಮನೆಯ
ತನಕೈದು ಬೀಳ್ಕೊಟ್ಟರ್ ಪ್ರೇಮದ ಸವಿತೋರಿ.
ಆ ರಿಸಿವರ್ಯನ ಮೊಗದೊಳುಕ್ಕುವ ಷೋಡಶ
ಕಳೆಯ ಹರವಿನಲಿ ಹೊಳೆಹೊಳೆವ ಸುನೀಲಿವರ್ಣದ
ಕಂಗಳಲಿ ಆತ್ಮಶಾಂತಿಯ ಕಾಂತಿ ಎಸೆದತ್ತು
ಸಮುಜ್ವಲವಾಗಿ.
ಮತ್ತೊರ್ಮೆ ಅವರ ಭೇಟಿಯ
ಸತ್ಸಮಯಮೊದವಿತು, ಅವರದೊಂದು ಮುದ್ದಾದ
ಕುಟೀರ. ಹೊರಾಂಗಣದಲಿ ಸುಂದರ ಹೂದೋಟ.
ಸ್ವಚ್ಛ ಶುಭ್ರತೆಯ ವೈಭವ ಮೆರೆದುದೊಳಹೊರಗೆ.
ನವಿರ್ ನೆರೆದಿರ್ದಾ ವಯೋವೃದ್ಧ ದಂಪತಿಯ
ಚಿತ್ರಣಂ ವಶಿಷ್ಠ ಅರುಂಧತಿಯರ ನೆನಪಿಗೆ
ತರ್ಪಂತೆ ಕಣ್ಗೆಡ್ಡಮಾದುದು, ಶಿರಮಣಿದೆನ್
ಗೌರವದಲಿ. ಅವರ ಮುಖಬಿಂಬದೊಳ್ ಮೂಡಿದ
ಒಂದೊಂದು ರೇಖೆಯುಂ ಆತ್ಮವೈಭವಂ ಸಾರ್ವುದು
ಜೀವನದ ವೈಜಯಂತಿಗಳ ಹೋಲಿ! ಪತಿಗನು-
ಗುಣಮಪ್ಪಿದ ಸತಿಯುಂ ಅಪೂರ್ವ ಗೃಹಲಕ್ಷ್ಮಿ

ಎನ್ನ ಅಂತರ್ವಾಣಿಯು ಉಲಿಯಿತು “**ಸಾವಿದ್ಯಾ**
ಯಾ ಮುಕ್ತಯೇ” ಒರ್ಮೆ ಕೇಳ್ದಿನವರಂ “ಆರ್ಯ,
ನೀಮಿನ್ನೊರ್ಮೆ ಭಾರತಧಾತ್ರಿಗೆ ಬರಲುಂಟೇ?”
ಭಾರತ ಸನಾತನ ಧರ್ಮ ಗಂಧ ಪರಿಮಳಮಂ
ಜಗದ ಚೆಂಬೆಳಕಿನ ಛವಿಗೆ ಬಿಟ್ಟವರ್ ನೀವ್
ಎಂಬಪಾರ ಭಕ್ತಿ ಗೌರವಂಗಳ್ ಸಲ್ವುವುದು
ನಿಮಗೆ.”
ಧೀಮಂತರಿಸಿಯಾಗಳ್ ಸರಳಸ್ಮಿತ
ವದನದಿಂ ನುಡಿಸಿದರ್ “ಸ್ವಾಮೀಜಿ, ಆನೀಗ
ಅಲ್ಲಿಗೈದೊಡೆ ಪಿಂದಿರುಗಿ ಬಂದಪೆನೆನಲುಂಟೆ?
ಮುಂದೆನ್ನ ಬದುಕಿನ ಸಕಲತರದ ಭಾರಮಂ
ಮೇಣ್ ಉತ್ತರೋತ್ತರೀ ಕ್ರಿಯಾದಿಗಳನುಂ
ಗೆಯ್ವ ಭಾಗ್ಯ ನಿಮಗಕ್ಕುಂ!” ಸಕ್ಕರೆಯ ಸವಿಯಂ
ಸೂಸುವ ತಿಳಿಹಾಸ್ಯದ ವಾಕ್ಯಲಹರಿಯ ಸ್ವನ
ಮೊಳಗಿತು ನಗೆಯ ಹೊನಲಿನೊಡನೆ.
“ಅಹುದಹುದು” ಎನೆ
ತಲೆದೂಗಿದರ್ ಶ್ರೀಮತಿ ಮ್ಯಾಕ್ಸ್‌ಮುಲ್ಲರ್. ಆ
ದೈವಜ್ಞ ಜೋಡಿಯಭಿಮತ ಮನವಂ ಮುಟ್ಟಿದುದು
ಆಪ್ಯಾಯಮಾನವಾಗಿ. ಹೃದಯ ತಣಿಯಿತು
ಮೌನಗತಿಯಲಿ. ನಾಲಿಗೆ ಮರುನುಡಿಯದಾಯಿತು.
ಏತನ್ಮಧ್ಯೆ ಕ್ಸೇವಿಯರ್ ಎನೆ ದಿವ್ಯ ನಾಮವ
ಪೊತ್ತು ಧನ್ಯತೆಯಂ ಬಡೆದವರುಂ ಕಣ್ಸೆತ್ತರ್
ಗಣ್ಯಜನ ಸಮಾಜದೊಳ್ ಅಗ್ರಗಣ್ಯರೆನಿಸಿದ
ಸುಜ್ಞಾನ ವೃದ್ಧರೆನೆ ಸುಶೋಭಿತ ಕ್ಸೇವಿಯರ್
ದಂಪತಿಗಳ ಸುಪರಿಚಯಮೊದವಿದುದು ಸ್ವಾಮಿ

ವಿವೇಕಾನಂದರಿಂಗೆ. ದಿವಸದಿವಸಮುವರ
ಸ್ನೇಹ ಸಂಬಂಧದ ಸಿರಿಬಳ್ಳಿಯು ಮುಂಬೆಳೆದು
ಕುಡಿಯೊಡೆದು ದಾಂಗುಡಿಯ್ಯೆಸಿ ನಳನಳಿಸಿರ್ದುದು
ಎಂದುಂ ಕಡಿಯದ ಮಾಳ್ಕೆಯಲಿ. ನಲ್ ಬದುಕಿರ್ದು
ಜೀವನದ ಸಂಜೆಯಲಿ ದೇವ ಪುರುಷನ ತೆರದಿ
ನೆರೆಮೆರೆದು ಜನಮಾನ್ಯತೆಯುಂಬಡೆದ ಸಜ್ಜನ
ದಂಪತಿಗಳ್ಯೆದರೊರ್ಮೆ ಧರ್ಮಸಭೆಗೆ ಅನೇಕ
ಶ್ರೋತೃಗಳ ಜೊತೆಗೆ. ಸ್ವಾಮಿಜಿಯ ಉಪನ್ಯಾಸದ
ತತ್ವೋಪದೇಶವಂ ಕೇಳಿ ಮನಗೊಂಡು ಮತಿ
ಗೊಂಡು ಒಡಲ್ ದುಂಬಿ ಸಂಪ್ರೀತರಾಗಿ ಭಾವನಾ
ವೇಶದಿಂ ನುಡಿದರಿಂತು "This is man
and this philosaphy that we have
been seeking invain all though
our life" ಆತ್ಮಾನಂದದಿಂ ಬಿತ್ತರಿತಮಾಯ್ತು
ಆ ಒಳ್ನುಡಿಗಟ್ಟು ಕೊರಳ್‌ತುಂಬಿ. ಗುರುವರಂ
ಇಂಗ್ಲೆಂಡ್ ರಾಜ್ಯಮಂ ಬಿಟ್ಟು ಭಾರತ ರಾಷ್ಟ್ರ
ಪಥಮಂ ಪಿಡಿಯುವಂದು ಅವರೊಡಂ ಪೊರಮಟ್ಟ
ಕ್ಸೇವಿಯರ್ ದಂಪತಿಗಳ್ ಭಾರತದಲಿಯೆ ನೆಲಸಿ
ಪರಮ ಶಿಷ್ಯರಾದರ್ ಗುರುವರಂಗೆ. ಶ್ರೀಮತಿ
ಕ್ಸೇವಿಯರ ದಿವ್ಯತಮ ವ್ಯಕ್ತಿತ್ವವಂ ಮೆಚ್ಚಿ
'ತಾಯಿ-ಮಾತೆ' ಎಂದೇ ನಲ್ಮೆಯಿಂ ಭಕ್ತಿಯಿಂ
ಸಂಬೋಧಿಸುತಿರ್ದರ್ ಸ್ವಾಮಿವಿವೇಕಾನಂದರ್.
ಅವರವರ ಸ್ನೇಹಸಂಬಂಧ ನೀರುಣಿಸಿರ್ದ
ಎಳೆಬಾಳೆ ಸಸಿಯವೊಲ್ ಬೆಳೆಯಿತ್ತು ಸೊಂಪಾಗಿ.
ಏಗಳ್ ಸಂದರ್ಶಕರ ಬಿರುವೊಳೆ ಹರಿಯುತಿರಲ್

ಇತಿಮಿತಿಗಳ್ ಮೀರಿ ಜಡಿಮಳೆಸುರಿದ ಸಸಿಯ
ಮಾಳ್ಕೆಯಲಿ ಬಳಲಿ ಬಾಡಿದರ್ ಗುರುದೇವಂ.
ಜ್ಞಾನವುಂ ದಣಿಯಿತ್ತು. ಮನಮತಿಗಳ್ ದಣಿದುವು.
ಚೈತ್ಯಾಕ್ಷಿಗಳ್ ದಣಿದುವು. ಉದ್ದಂಡ ದೇಹವೆ ದಣಿಯಿತ್ತು.
ಸ್ವಾಮೀಜಿಯ ಸ್ಥಿತಿಗತಿಯಂ ಅರಿತುದು ಶಿಷ್ಯ
ಮಂಡಳಿ. ಮಿಸ್ ಮಾರ್ಗರೆಟ್ ನೋಬಲ್, ಕ್ಸೇವಿಯರ್
ದಂಪತಿಗಳ್ ಮೇಣ್ ಮಿಸ್ ಮುಲ್ಲರ್ ಕೂಡಿ ಮುಂ
ಕಾರ್ಯವಾಹಿಯಂ ತಡೆಗಟ್ಟೆ, ತಂತಮ್ಮೊಳ್ಗೆ
ನೆರೆ ಯೋಚಿಸಿ ನಿರ್ಣಯಿಸಿ ನಗರಿಯ ಪರಿಸರಂ
ದಾಂಟಿ 'ಪೊರಗುಯ್ವುದೇ ಸರಿದಾರಿಯಾದಪುದು'
ಎಂಬೊಂದು ದೃಢ ನಿರ್ಧಾರದಿಂದೆ ಅವರಂ
ಸ್ಥಳಾಂತರಿಪ ಸಿದ್ಧತೆಗೆಲ್ಲ ಅಣಿಗೊಂಡರ್.
ತಮ್ಮೊಳಗೊಳಗಣ ನಿಶ್ಚಿತ ವಿಚಾರಮಂ ಮಿಸ್
ಮಾರ್ಗರೆಟ್ ನೋಬಲ್ಲಳಿಂತೊರೆದಳ್ ಗುರುವಿನ
ಮುಂತೆ "ಸ್ವಾಮೀಜಿ, ನೀಮಿಲ್ಲಿ ಇಂತಿಂತು ಅತಿ
ಶ್ರಮವಹಿಸಿ ಎಡೆವಿಡದೆ ದುಡಿದೊಡೆ ಶರೀರದ
ಗತಿಗೆಡಗು. ಕೆಲವಾನು ಕಾಲಮಾನ ನಗರದ
ಗದ್ದಲಗಳಿಂ ದೂರೈದು ತಣ್ಣಗೆ ವಿಶ್ರಾಂತಿ
ಪಡೆವುದೊಳ್ಳಿತು ಇದೆಮ್ಮಯ ಬಿನ್ನಪಂ."
ಎರ್ದೆ
ಕರಂಡದ ಅಮೃತರಸನೆಯು ಹರಿದುಬಂದೊಲ್
ನುಡಿಸಿದ ನುಡಿಗಟ್ಟಿನ ಧ್ವನಿ ಮನದಾಳದಲಿ
ನೆರೆನಿಂತುದು. ಒಪ್ಪಿದರ್ ಸ್ವಾಮೀಜಿ. ಒಡನೆಯೆ
ಮುತ್ತುವಣ್ಣದ ನುಣ್ಮೆಯಿನ ವಾಹನವೊಂದುಂ
ಅಣಿಯಾಯ್ತು. ಮಿತ್ರಮಂಡಳಿಯ ನಾಲ್ವರ್ಗೂಡಿ

ಪೊರಮಟ್ಟರ್ ಪರುಷದಿಂ. ಸರ್ವಾಂಗ ಸುಂದರ
ವಲಯಮಂ ಇಬ್ಭಾಗಗೊಳಿಸಿದ ಪಥವನಿಡಿದು
ಓಡಿತಾವಾಹನಂ ಪತ್ತನದ ಗಡಿಬಿಡಿಯ
ಗದ್ದಲಗಳ ಇಕ್ಕುಳದ ಹಿಡಿತದಿಂ ಬಿಡುತೆಗೊಂಡ
ತೋಷದಿಂ. ಮುಂದೆ ಮುಂದೆ ಮುಂಕೊಂಡು ಸಾಗಿರೆ
ಬೊಕ್ಕರ್ ಅನನ್ಯ ನೈಸರ್ಗಿಕ ಸುಸೌಂದರ್ಯ
ರಾಶಿಯಿಂದೊಪ್ಪುವ ಮಹಾ ಗ್ರಾಮ್ಯ ವಲಯಮಂ.
ಆ ಪಚ್ಚ ವರ್ಣದ ಪಸುರ್ಗಡಲಿನೊಡಲಿಂಗೆ
ಶಿಶುವಾಗಿ ಸೇರಿದರ್ ಸ್ವಾಮಿಜಿ. ಬೆಟ್ಟಗಳ
ಮೆತ್ತನೆಯ ಪುಲ್ವಾಸಿನ ಪಚ್ಚ ರನ್ನ ಹಾಸಿನ
ಉಡಿಯಲ್ಲಿ ಕಾಲ್ಚಾಚಿ ಕುಳಿತರೆಲ್ಲ ಶಾಂತಿಯ
ಸುಧಾಸೂತಿಯಲಿ ಮುಳುಗೇಳುತ್ತೆ, ನೈಸರ್ಗಿಕ
ಮಹದೈಶ್ವರ್ಯಮಂ ಮನದುಂಬಿ ಆನಂದ
ಸುಧೆಯಲಿ ತೇಲಿ ನಲಿದರ್. ಆ ಪಚ್ಚವರ್ಣಾಂತ
ಪಸುರ್ಗಡಲ ಮನೋರಮಾ ಶೈಲಿಗೆ ಮನವಂ
ತೆತ್ತು ಮಾರುವೋದರ್ ಸ್ವಾಮಿಜಿ. ಕೆಲದಿನಂ
ಕಳಿದುವು ಮಧುರ ವಾಯು ಸೇವನೆಯ ಯಾತ್ರೆಯಲಿ.
ತರುವಾಯ ಪ್ಯಾರಿಸ್ ನಗರಿಯ ಪಥವಿಡಿಯಿತಾ
ಮಿತ್ರಮಂಡಳಿ. ಮಾರ್ಗದ ಮಧ್ಯೆ ಸುನೀಲ ನಭ
ಚುಂಬೀ ಗಿರಿ ಮಸ್ತಕದ ಕರ್ಮಿಲೆಯುಂ ಪೊತ್ತ
ಮಂಜುಮಣಿ ಮುಕುಟದ ವಿರಾಟ್ರೂಪದ ದರ್ಶನಕೆ
ಹೃನ್ಮನಗಳ್ ವೆರ್ಚಿ ತುಡಿಯುತಿರಲ್ ಪಜ್ಜೆಗಳ್
ಕೀಲಿಸಲ್ ಬಾರದೆಯೆ ಅಲ್ಲಿಯೇ ಕುಳ್ತು ನಸು
ವೊಳ್ತು ಆನಂದರಸಾನ್ನವನುಂಡು ಮುಂಮುಂದೆ
ಪಯಣಮಂ ಬೆಳೆಸಿದರ್ ಪ್ಯಾರಿಸ್ ನಗರಕ್ಕೆ.

ಆ ಸುಂದರ ಸ್ವರ್ಗತುಲ್ಯನಗರಿಯಲಿ ಸುತ್ತಿ
ಸುತ್ತಾಡಿ ನಿಸರ್ಗದ ಸೌಂದರ್ಯದೊಡನಾಡಿ
ಅಲ್ಲಿರ್ದ ಶಾಲೆ ಕಾಲೇಜುಗಳಿಗೆ ಭೇಟಿಯ
ಕಾಯಕವೆಸಗಿ ಸಕಲತರ ಬಿಜ್ಜೆಯಭಿವೃದ್ಧಿ
ವೈಶೇಷಿಕ ನೀತಿಯನವಲೋಕಿಸಿ ಮೆಚ್ಚಿದರ್
ಗೆಳೆಯರೊಡಗೂಡಿ. ಅಲ್ಲಿ ಕಳಿದುವು ಮುಮ್ಮೂರು
ದಿನಮಾನಗಳ್, ತೋಷದ ತನಿರಸವಂ ಊಡಿ.
ಬಳಿಕಲಲ್ಲಿಂದೆ ಸ್ವಿಡ್ಜರ್ಲೆಂಡ್ ರಾಜ್ಯಮಂ
ಕುರಿತು ಹೂಡಿದರ್. ಮುಂಪಯಣಮಂ
ಓಹ್, ಇಂದ್ರನ ನಂದನ ವನವೆತ್ತ? ಈ ವನ
ವಾರ್ಧಿಯ ಶಿವ ಸದನವದಿನ್ನೆತ್ತ? ಪೊಚ್ಚಪೊಸ
ಪಸುರಲ್ಲದೆ ಮತ್ತೇನಿರದಾ ಪಸುರ್ಲೋಕಂ!
ವನ ಬೆಟ್ಟ ಹೊಳೆ ಕೆರೆ ತೊರೆಗಳ ಬಹುಮೂಲ್ಯತಾ
ಸಮಗ್ರ ಸೊಬಗಿನ ಚಿತ್ತಾರ! ಆ ರೋಮಾಂಚ-
ಕಾರೀ ನಿಸರ್ಗಸೌಂದರ್ಯರಾಶಿಯಲಿ ನೆರೆ
ಮುಳುಗಿ ಹೃನ್ಮನಗಳಂ ತಣಿಸಿದರ್ ಸ್ವಾಮಿಜಿ.
ಸಗ್ಗಸಿರಿಯೆ ಧರಣಿಗೆ ಬಂದಿಳಿದಿಹುದೊ, ಶಿವನ
ಕೈಲಾಸ ಪರ್ವತವೊಗೆದ ಖೇಲಿವನವೊ ಅಥ
ಜಗದ್ಧಾತ್ರಿಯ ನಿವಾಸಕಿದು ಮೀಸಲೊ ಎನಲ್
ಚಿತ್ತಕಲ್ಪಮಂ ಮಂತ್ರಮುಗ್ಧಗೊಳಿಪುವಂತೆ
ಸೊಗಸಿದುದು ಕಣ್ದೃಷ್ಟಿಗೆ. ಭಾರತದಾ ಸಸ್ಯ
ಧಾತ್ರಿಯಂ ಕ್ಷಣಕ್ಷಣವುಂ ಅಕ್ಷಿ ಪಟಲಗಳಲಿ
ನಲಿಯುವಂತೆ ವಿಜೃಂಭಿಸಿದ ವನಧಾತ್ರಿ! ಹಾ!
ಪಜ್ಜೆ ಪಜ್ಜೆಗುಂ ಭಾರತ ಜನನಿಯಾಪಾದ
ಪದ್ಮಂಗಳೆ ಕಾಂಬವೊಲ್ ಸಂದೃಶ್ಯಂಗಳಿಂ

ಮನಸೆಳೆಯುವ ಭೂವಲಯಂ. ಎಲ್ಲಿಯುಂಕೃಷಿ
ಕ್ಷೇತ್ರಮಿಲ್ಲಂ. ಓಷಧಿಗಳ ಉತ್ಪನ್ನಮೇ
ಸತ್ ಸಂಮೃದ್ಧ ಬೆಳೆ ದೇಶಕೋಶಕೆ. ಬಗೆಬಗೆಯ
ವ್ಯಾಪಾರಮದುವೆ ಆಧಾರ ಕರ್ಮಕೌಶಲಕೆ. ಯಾಂತ್ರಿಕ
ಸಾಧನಾ ಸೌಲಭ್ಯವೆ ದೇಶಾಂತರದ ನವ
ನವೋನ್ಮೇಶಶಾಲೀನತೆಗೆ ಸೊಗಸಾದ ಬಿತ್ತು.
ಅಲ್ಲಿಂದ ಮುಂಬಯಣಂ ಜಿನೀವಾ ದೇಶಕ್ಕೆ.
ಶಾಂತಶೀತಲ ಶೈತ್ಯವಾತಾವರಣದಿಂದೆ
ಸ್ಫೂರ್ತಿಯ ನೆಲೆಯಾದ ಪರಿಪಾವನ ಭೂದೇಶಂ.
ಸಾಗರಾನಿಲಂ ಬೀಸಿವೀಸಿ ಬರುತ್ತೆ ಸುಯ್
ಸುಯ್ಯನೆ ಸುಳಿದು ಸುತ್ತಿ ಮೈನವಿರೇಳಿಸುವಂತೆ
ತಣ್ಣನೆಯ ತನಿಯಂ ತಳೆದು ಸಿಂಪಡಿಸುತಿರಲ್
ಸ್ಫೂರ್ತಿಯ ಝುರಿ ಹರಿವುದೈ ನಾಳನಾಳಗಳ್ ನೆರೆ
ಶೀಳಿಹೋಹ ತೆರದಲಿ.

ಪಾಶ್ಚಾತ್ಯ ನಾಗರಿಕ
ಉಚ್ಛೃಂಖಲ ಸಂಸ್ಕೃತಿಯ ಗುರಿಯೆತ್ತ? ನಡೆಯತ್ತ?
ಯೋಚಿಸಿದೊಡನೆ ಭಯಾವಹ ಚಿತ್ರಣಮೆಸೆವುದು
ಆಂತರಿಕ ಮನೋದರ್ಪಣಕಾಂತದ್ಯೆಸಿರಿಗೆ.
ಸ್ವಾಮಿ ವಿವೇಕಾನಂದರ್ ದೂರ ಭವಿಷ್ಯದಾ
ವೇದಿಯಲಿ ಅಂಡಲೆದು ಮನುಕುಲದ ಕೀರ್ತಿಯುಂ
ಇನ್ನೇನಾದಪುದೊ ಜಗದೊಳ್ ಎನಿಸಿ ಯೋಚನಾ
ಶೀಲರಾದರ್ ತಮ್ಮೊಳ್. ಹಿಮಧೂಳಿಯು ತಳ್ತ
ಹೇಮಂತ ಕಮಲಿನಿಯ ತೆರಂ ಮ್ಲಾನಭಾವದ
ರಿಸಿಮೂರ್ತಿಯ ಚಿಂತಾಂತರಂಗ ಕದಡಿದತ್ತು
ಬಗೆಗೆಟ್ಟ ಪಾಂಗಿನಲಿ. ಆದೊಡೇಂ ಎಲ್ಲವುಂ

ಶ್ರೀಭಗವದ್ ನಿಯಮಮಿರುತಿರೆ ಯೋಚಿಸುವುದೇಂ
ಫಲಂ? ನಿಯತಿಕೃತ ನಿಯಮಮಿದಾಯ್ತು ಎನಲ್ಕೆ
ಎಲ್ಲವುಂ "**ಶ್ರೀ ಭಗವದ್ ಪಾದಾರ್ಪಣ ಮಸ್ತು.**"
ಎನುವೊಡೊಂದು ದಿವ್ಯ ಸೈಪು ಮನಮತಿಗಳಿಂಗೆ.
ಅಲ್ಲಿನ ಬಹುಮುಖೀ ಪ್ರಗತಿಯ ಶಾಲೆಗಳ್, ಬಗೆ
ಬಗೆಯಲಿ. ಮೆರೆವ ಕಲಾಕಲೆಯ ಶಾಲೆಗಳ್,
ವಿಶ್ವವಿದ್ಯಾಲಯಂಗಳ್, ಬಹುತರದ ಬೃಹದ್
ಕಛೇರಿಗಳ್ ಚರ್ಚುಗಳ್ ಇವೆಲ್ಲವುಂ ನಿಚ್ಚ
ಪರಿವೀಕ್ಷಣೆಯ ವಸ್ತುಗಳಾದುವು ಎಲ್ಲರಿಗೆ.
ಒರ್ಮೆ ಆಕಾಶ ಬುಟ್ಟಿಗಳ ಬಣ್ಣಬಣ್ಣದ
ವಿಮಾನವನೇರ್ದು ಭವ್ಯಾಂಬರದ ಗಾಳಿಯಲಿ
ತೇಲಿ ತೇಲಾಡಿ ಆನಂದರಸವಂ ಪೀರ್ದು
ಪ್ರಕೃತಿಯ ವೈಭವೋಪೇತಮಾದ ದರ್ಶನ
ಭಾಗ್ಯಮಂ ಪಡೆದು ಹರ್ಷಿತರಾದರ್ ಎಲ್ಲರೊಡಂ.
ಒರ್ಮೆ, ತಮ್ಮಯ ಬಿಡದಿಯಂ ಮರೆತರೊ ಎನಲ್ಕೆ
ಬೆಟ್ಟದಾಣಗಳಿಂದಿಳಿಯದೆ ಅಲ್ಲಲ್ಲೆ ನೆರೆ
ಅಡ್ಡಾಡಿ ಬೆಟ್ಟನೇರಿ ಬೆಟ್ಟವಿಳಿದು ನದಿಯ
ತೀರದಲಿ ಕೆರೆಯ ದಂಡೆಯಲಿ ಪಚ್ಚ ಪಸುರಿನ
ರತ್ನ ಗಂಬಳಿಯಲಿ ಕುಳಿತು ನಲ್ನುಡಿ ಮುತ್ತಿನ
ಬಿಡಿ ಮಣಿಗಳಂ ಚೆಲ್ಲಿ ಸೂಸಾಡಿ ಮೃಣ್ಮಯದ
ವೈಶಾಲ್ಯ ತಡಿಯಲ್ಲಿ ಎಳೆಯರೊಲ್ ಕಳಿದರಾ
ಸ್ನೇಹ ಕೂಟದೊಡನೆ ಬಲುವೊಲ್ತು. ಪ್ರಮೋದದಿಂ
ತನುಮನಗಳ್ ಹಗುರಾದುವು. ತಲೆಭಾರ ಕಳಿಯಿತು.
ಹೃದ್ವೀಣೆಯ ತಂತಿಗಳ್ ನಿಕ್ವಣಿಸಿ ಮುದದಿಂ
ಹಾಡಿದುದು "**ಶರೀರ ಮಾದ್ಯಂ ಖಲು ಧರ್ಮ**

ಸಾಧನಂ" ಉಜ್ವಲೋಜ್ವಲ ರವಿಯು ಪಶ್ಚಿಮದ
ಸೀಮಾಂತ ತಟನಿಯಲಿ ಅಸ್ತಂಗತನಾಗಿ ಸಿರಿ
ವಲಯದಲಿ ಹೊನ್ನಹೊಳೆ ಹರಿದತ್ತು ಭವ್ಯತಮ
ವೈವಿಧ್ಯಮಯ ಗುಡಿಗೋಪುರಗಳಂ ನಿರ್ಮಿಸಿದ
ಮುಗಿಲ್‌ಮಾಲೆಗಳ್ ರಂಗುರಂಗಿನ ವೈಭವಂ
ಮೆರೆದಿರ್ದುವು ಎಂದಿನವೊಲ್. ಬೆಟ್ಟ ದಾಣದಿಂ
ಸುತ್ತುಮುತ್ತಣ ಪ್ರಕೃತಿಯ ದೃಶ್ಯಮಾನದಾ
ಸೌಂದರ್ಯರಾಶಿಯಂ ಪೀರ್ದು ಒಡಲ್ ತುಂಬಿದ
ಆನಂದಮೋದದಿಂ ತನುಮನಂಗಳ ಭಾರ
ಇಳಿಸಿ ಕಳೆದು ಹಿಡಿದರ್ ಬಿಡದಿಯ ಪಥಮಂ. ಆ
ದೂರದ ನಡಿಗೆ ಸಾಗಿದುದು ನಿಧಾನ ಗತಿಯಲಿ.
ಗುಡ್ಡವಿಳಿದು ಕಂದರಗಳ ದಾಂಟಿ ಹಾದಿಯೊಳ್
ಅಡ್ಡೈಸಿ ಹರಿವ ಕಾಲ್ವಾಯಿಗಳಲಿಳಿದು ಬೊಗಸೆಯ
ನೀರೆತ್ತಿ ಕೈಕಾಲ್ ಮಜ್ಜನಂಗೊಳಿಸೆ ತನಿ
ಇನಿಯುಗುವ ತಣ್ಣನೆಯ ಸುಖಸ್ವಾದದಿಂ ಹರ್ಷ
ಚಿತ್ತರಾಗಿ ಬಿಡದಿ ಮನೆಯಂ ಸೇರಿದರ್ ಕಣ್
ಆಲಿಗಳಿಗೆ ಕತ್ತಲೆ ಕವಿದು ಬರುವ ಮುನ್ನಂ.
ಶ್ರೀಗುರು ಕೃಪೆಯನಾಂತ ಸಾಧಕವರೇಣ್ಯನ
ಮನೋಮಯಂ ಪ್ರಾಣಮಯಂ ಜ್ಞಾನಮಯಂ ಕೂಡಿ
ಆಕ್ರಮಿಸಿ ಊರ್ಧ್ವಮುಖೀ ಸ್ನೇಹ ಬಂಧುರತೆಗೆ
ಮನವೊಡ್ಡಿ ಮಿತ್ರ ಮಂಡಳಿಯಂ ಕುರಿತು ನುಡಿದರ್,

"ಯಾದೃಶೀ ಜಾಯತೇ ಬದ್ಧಿರ್ವ್ಯವ
ಸಾಯಶ್ಚ ತಾದೃಶಃ ।
ಸಹಾಯ ಸಾದೃಶೋಽಪ್ಯೇವ
ಯಾದೃಶೀ ಭವಿತವ್ಯತಾಃ ॥"

ದಿನದಿನಂ ಮತ್ತೆಮತ್ತೆ ಹಿರಿ ಬೆಟ್ಟಗಳ ಕಟು
ಕಠಿಣ ಏರಿಳಿತ ಕಲ್ಲುಬಂಡೆಗಳ ಅಗಾಧ
ಪ್ರದೇಶವ ಹರಿಹಾಯ್ದು ವನದಿಯ ಒಡಲಿನೊಳ್
ಧುಮುಧುಮಿಸಿ ಭೋರ್ಗರೆದು ನೀರ್‌ಬೀಳುವಬ್ಬಿಯೊಳ್
ಸಂಶೋಧನಾ ವಿಜ್ಞಾನಿಗಳ್ ಅಲೆಯುವ ತೆರದಿ
ಅಲೆಯುವರ್ ಅಲೆಮಾರಿಗಳ ಹೋಲಿ! ದೂರದಿಂ
ಝೇಯೆಂದ್ಯೆವ ಲಕ್ಷೋಪಲಕ್ಷ ಇಂದಿಂದಿರಗಳ್
ಪೂವಿಂಪೂವಿಂಗಲೆಯುತೆ ಮಧುಕರಂಡವ ಮುತ್ತಿ
ಮಕರಂದಮಂ ಪುಡುಕಿ ಬಗೆದು ಕೊಂಡೊಯ್ವ ನಿಜ
ಕಾಯಕವದು ಕಣ್ಸೆಳೆವುದು ತೋಷಕರವಾಗಿ.
ಬೈಗುವೊಳ್ತಿನಲಿ ರಂಗುರಂಗಿನ ಎಳೆಎಳೆಯ
ತಟ್ಟುಗಳನೇರಿ ಸಂಚಳಿಸಿದರ್ ಬಯಲಗಲ.
ಖುರಪುಟ ಧ್ವನಿಯೊಡಂ ಬನವೆ ಕೆನೆವ ತೆರದಲಿ
ಹೇಷಾರವಂಗೈದು ಜಿಗಿವ ತೇಜಿಗಳ ಬಿಗಿ
ವಾಘೆಯಂ ಹಿಡಿಯೆ, ಬೀಸುಗಾಳಿಯ ಸೀಳುವೊಲ್
ಮುನ್ನುಗ್ಗುವ ತೇಜಿಗಳ ದಿವ್ಯ ಶಕ್ತಿಗೆ ತನುಮನ
ಪುಳಕಗೊಳ್ಳುವುವು ರೋಮ ಹರ್ಷಕಗೊಳುವಂತೆ.
ಮತ್ತೊರ್ಮೆ ಚಿಲಾನ್ ದುರ್ಗಮಂ ಸಂದರ್ಶಿಸಲ್
ನಡೆದರೆಲ್ಲರ್, ಸಾಗಿತಾ ಪಥ ಸುಲಭದಲಿ.
ದುರ್ಗದಾಣದಿಂ ಕಣ್ಣೋಟವಟ್ಟಿದೊಡಮಲ್ಲಿಂ
ದೂರದೂರ ನಾಲ್ವತ್ತು ಮೈಲಿಗಳಾಚೆಯಾ
ಮೌಂಟ್ ಬ್ಲಾಂಕ್ ಪರ್ವತಗಳ ಮಹಾ ಶ್ರೇಣಿಯುಂ
ಕಂಗೊಳಿಪುದು ಚಿತ್ರವತ್ ಶಂಕರ ರೂಪಿನಲಿ.
ಸ್ವಾಮೀಜಿಯುಂ ದೂರದರ್ಶಕ ಸುಲೋಚನದ
ಮುಖೇನ ಇಣಿಕಿ ತುಷಾರಾವೃತ ಸುರಸುಂದರ

ಮಹೋನ್ನತ ಸೌಂದರ್ಯದ ಮಹಾನ್ ಬ್ರಹ್ಮಾಂಡ
ವೈಭವಂ ಪರಿವೀಕ್ಷಿಸಿದರ್ ಮನತಣಿವವೊಲ್.
ನೋನೋಡಿ ಕಣ್ ದಣಿಯುವನಿತು ಸಂದೃಶ್ಯಗಳ
ಸ್ವರ್ಗ ಸದೃಶಭೂಸುವಿಸ್ತಾರಂ ನೋಡಿದರ್
ಸ್ವಾಮಿಜಿ. ಮನತುಂಬಿ ಹೃದಯವೆ ತುಂಬಿ ನಿಜ
ಕೋಡಿ ಉಕ್ಕಿ ಹರಿಯಿತೊ ಎನೆ ಉಣ್ಮಿ ಹರಿದುದು
ಆತ್ಮವಾಣಿ ಎದೆಯಾಳದಿಂ ಭಾವಸ್ಫೂರ್ತಿಯಲಿ,

"ಅಪ್ರಗಲ್ಭಸ್ಯ ಯಾ ವಿದ್ಯಾ
ಕೃಪಣಸ್ಯ ಚ ಯುದ್ಧನಂ ।
ಯಚ್ಚ ಭಾಹುಬಲಂ ಭೀರೋಃ
ವ್ಯರ್ಥಮೇ ತತ್ ತ್ರಯಂ ಭುವಿ ॥"

ಒರ್ಮೆ ಕ್ಷೇವಿಯರ್ ನುಡಿಸಿದರಿಂತು "ಸ್ವಾಮಿಜಿ,
ಇನ್ನೆ ಬರಮಾವ್ ವನ್ಯ ಪ್ರದೇಶದೊಳಲೆದು
ನಲಿದುದಾಯ್ತು. ಇನ್ನುಂ, ಗ್ರಾಮೀಣ ಜನಪದದ
ಬದುಕುಬಾಳ್ ನೋಡಿ ತಿಳಿವುದೊಳಿತು. ಈಯೆಡೆಯ
ಲೋಗರ ಬರ್ದುಕಿನ ಒಳಗೊಳಗೊಳಗಣಶ್ರಮಿಕ
ಪ್ರವೃತ್ತಿಯನರಿಯುವೊಡೆ ಹಳ್ಳಿಗಳಲಿ ನೀವ್
ಓಡಾಡಿ ಅರಿವುದೆ ಸರಿಯಕ್ಕು"

ಅದರ್ಕಾ ಶ್ರೀಮತಿ
ಕ್ಷೇವಿಯರ್, ಮಾರ್ಗರೆಟ್ ನೋಬಲ್, ಮೇಣ್‌ಮಿಸ್
ಮುಲ್ಲರ್‌ರವರುಂ ತೋಷದಿಂದೊಪ್ಪಿ ಹರುಷದ
ಧ್ವನಿಯೊಳ್ ಉದ್ಗರಿಸಿದರ್ "ಹೌದೌದು! ಅದುಸರಿ."
ಗುರುದೇವನ ಮನ ತಣಿದುದು ಮುಂದಣ ಮಾರ್ಗದ
ಸೂಚಿಯಿಂ. ದೂರ ಕರ್ವೆಟ್ಟುಗಳ ಪದತಲದ
ಗ್ರಾಮ್ಯ ಬರ್ದುಕಿನ ಮನೆಮನೆಗಳ ಗುಡಿಗೋಪುರ

ಕಂಗೊಳಿಸಿದುವು ಸ್ವಚ್ಛ ಶುಭ್ರ ಶೈಲಿಯಲಿ, ನಳ
ನಳಿಪ ಹೊಲ ತೋಂಟಗಳ ಹಚ್ಚ ಹಸಿರ್ ಎಸೆದುದು
ಕಣ್ಮನ ಸೆಳೆಯುವಂತೆ. ಒಂದೆಡೆಯೊಳ್ ಇರ್ದುವು
ಕುದುರೆಗಳ ಹಿಂಡು ಬಿಗಿ ಕಾವಲಿನ ಬೇಲಿಯಲಿ.
ಇನ್ನೊಂದೆಡೆ ಗಜಗಾತ್ರದ ರಂಗುರಂಗಿನಾ
ಧೇನುಗಳೆಸೆದುವು ಪುಲ್ಗಾವಲಿನಲಿ. ಮಿಂಚಿನ
ಮೆಯ್ಗಳ ಸುರಸುಂದರ ಪ್ರಾಣಿಗಳ ಕೂಟದಲಿ
ನೆಟ್ಟ ಕಣ್ ಮರಳದಾದುವು ಎನಲ್ ಸ್ವರ್ಗೀಯ
ಸೌಂದರ್ಯಲೋಕವೇ ಮೆರೆದುದಲ್ಲಿ. ಎಲ್ಲರ್
ಗ್ರಾಮೀಣ ಜೀವನದ ಒಳಹೊರಗೆ ಅಡ್ಡಾಡಿ
ಮಾತಾಡಿ ಅರಿದು ತಿಳಿದು ಮುದವೆತ್ತು ಜೀವನ
ಪ್ರತಿಭೆಯ ಚೆಂಬೆಳಕಿನ ಛವಿಯಲಿ ಮಿಂದಂತೆ
ತೋಷಾಂಬುಧಿಯಲ್ಲಿ ಮುಳುಗೆದ್ದರ್. ಶ್ರಮವಂ
ಶ್ರಮಿಸಿ ಬೆಮರ್ ಬಸಿದು ಸರ್ವಾಂಗ ಸೌಂದರ್ಯ
ಸೂಸುತಿಹ ಸಂಜೀವನ ಯೋಗಕೆ ತಲೆದೂಗುವೊಲ್
ಘನವೆತ್ತ ಬರ್ದುಕು ನಿರಾಳಮಾದತ್ತು. ಕವಿಕಲ್ಪನಾ
ಸುರಧನುರ್ಯಾನಮಂ ಏರುತ್ತೇರಿ ತೆಕ್ಕನೆ
ಸಚ್ಚಿದಾನಂದಮಂ ಪಡೆಯೆ ಕವಿಪ್ರತಿಭೆಯ
ಸ್ಫೂರ್ತಿ ದಿವ್ಯ ವೈವಿಧ್ಯಮಯ ವಿರಾಡ್ರೂಪಿ
ವಿಶ್ವವೈಶಾಲ್ಯಮಂ ಅಳೆದಳೆದು ಸೋಸೋಲ್ದು
ಬೆಂಡಾದವೊಲ್ ದಣಿದುವು ಕಲ್ಪನೆಯ ಕಂಗಳ್.

"ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ ।
ತೇಷಾ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್ ॥"

ಆ ದಯಾಘನನ ಭರವಸೆಯಿಂ ಕವಿ ಕಾವ್ಯದ
ನಂದನೋದ್ಯಾನದ ಕುಸುಮಾಂಜಲಿಯನರ್ಪಿಸಿ
ಶಿರಮಣಿವೆನ್ಯೆ ಹೇ ಜಗಜ್ಜನನೀ ಕಾವ್ಯ
ಸರಸತಿಯೆ!
ಮೂಡಿದನು ರವಿ ಉದಯಗಿರಿಶಿಖರದ
ಮೇಲೆ. ಉಜ್ವಲೋಜ್ವಲ ಸ್ವರ್ಣ ಕಿರಣ ಜಾಲವ
ಹರಡಿ. ವನವಿಹಂಗಗಳ್ ಎಳ್ಚತ್ತು ಸುಪ್ರಭಾತ
ಹಾಡುವ ಮೊದಲೆ ಕಾಗೆಯಬಳಗಂ ಹಾರಾಡಿ
ಗದ್ದಲವನೆಬ್ಬಿಸಿದುವು ಕಾಕಾಕರಿಸುತ್ತೆ, ಗುರುವರ್ಯಂ
ಧ್ಯಾನ ಗಾಂಭೀರ್ಯದ ಪ್ರಶಾಂತ ಮಂಡಲದ
ಶೋಭೆಯಲಿ ಪೊರಗೈದರ್, ಅಂಗಣದಂಚಿನಲಿ
ಬೇರೂರಿ ಮುಂಬೆಳೆದು ಜೃಂಭಿಸಿದ 'ಬರ್ಚವುಡ್'
ಮರವನೆತ್ತಿಯಮೇಲೆ ಕುಳಿತ ಕೆನ್ನೀಲಿಯೆನೆ
ವರ್ಣದಿಂಬೆತ್ತ ಪಕ್ಷಿಯಂ ನೋಡುತಿರೆಯಿರೆ
ಮಾನಸ ಮುರುಳಿ ಮಿಂಟಿತು ರಾಗಾರುಣತಾನ
ದೈಶ್ವರ್ಯಂ. ಅದೆ ಚಣದಲಿ ಬೆಣ್ಣೆ ಬಿಣ್ಪಿನ
ಬೆಳ್ಳಕ್ಕಿಯೊಂದು ಬಾನಂಗಣದಲಿ ಸುಳಿಸುತ್ತಿ
ರೊಯ್ಯನೆ ಇಳಿದು ಕುಪ್ಪಳಿಸಿ ಮತ್ತೆ ಮೇಲೇರ್ದು
ತೇಲ್ದು ಒಯ್ಯನೊಯ್ಯನೆ ತೇಲಾಡಿ ಸುತ್ತುತ್ತೆ
ಕಣ್ಮರೆಸಿ ಮಾಯಮಾಯ್ತು ಲೋಕಾಂತರಂಬೊಕ್ಕು.
ಅಂದು ಗುರುವರೇಣ್ಯನ ದಿವ್ಯ ಸನ್ನಿಧಿಯೆಡೆಗೆ
ಆಗಮಿಸಿದ ಗ್ರಾಮೀಣ ಬದುಕಿನ ಜನಗೋಷ್ಠಿ
ನಲ್ಮೆಯಿಂ ಭಕ್ತಿಯಿಂ ಮಂದೈಸುತ್ತೆ ಮುಂದೈದು
ಕೂಡಿದರ್ ಪ್ರವಚನರೂಪೀ ಬಹುಲ ಶಾಂತಿ
ರಸಪಾನಮಂ ಬಯಸಿ. ಸ್ತ್ರೀಪುರುಷರ್ ಒಮ್ಮನ

ಒಮ್ಮತದ ಹೇರಾಸೆಯಲಿ, ಪಚ್ಚವುಲ್ಲಿನ ರನ್ನ
ಗಂಬಳಿಯಮೇಲೆ ಕಾಲ್ಮಡಿದು ಕುಳಿತರ್ ಮನದ
ಆತುರಾಕರಬಲಿತು. ಆಗಳಾ ಸಂಮುದಿತ
ಜನ ಗೋಷ್ಠಿಯಂ ಕಂಡ ಸ್ವಾಮಿಜಿ ಕೈಮುಗಿದು
ತೋಷದಿಂ ಸ್ವಾಗತಿಸಿ ಪಚ್ಚಪುಲ್ ಪ್ರಾಂತದೊಳ್
ತಾಂ ನಿಂತು ಶ್ರೀಮಂತ ಕೊರಳ್ ದನಿಯಲಿ ಇಂತು
ನುಡಿಸಿದರ್,
"ಎಲೈ ಅಮೃತಾತ್ಮರೇ ಕೇಳಿ!
ನಿಮ್ಮೆಲ್ಲರಿಗೆ ಎನ್ನೊಂದು ಸಂಶೋಧನೆಯಂ
ವಿವರಿಸುವೆನ್. ಧರ್ಮದ ಸಮಸ್ತ ವಿಚಾರಂ
ವೇದಾಂತ ತತ್ತ್ವದೊಳ್ ಸಂಮಿಳಿತವಾಗಿಹುದು.
ಮೇಣದರ ಮೂರುಸ್ತರಗಳೈದ ದ್ವೈತ-ಅದ್ವೈ
ತ- ವಿಶಿಷ್ಟಾದ್ವೈತಗಳಲಿ ಅಡಕಂ. ಈ ಮೂರುಂ
ಒಂದಾದ ಬಳಿಕೊಂದು ಸರದಿಯೊಳ್ ಬಂದಪುದು.
ಇವುಂ ಮನುಕುಲದ ಆಧ್ಯಾತ್ಮಿಕ ಪ್ರಗತಿಯ
ಮೂಮೂರು ಹಂತಗಳ್ ಇವೆಲ್ಲವುಗಳ್ ಪರಮ
ಸಂಜೀವನೋಚಿತಂ. ಧರ್ಮಸಾರವೆನಲಿದೆ
ಎಂದರಿತು ಕೊಳ್ವುದು. ವೇದಾಂತಮಂ ಭವ್ಯ
ಭಾರತದ ಬೇರೆವೇರೆ ಜನಾಂಗಗಳ ಸಂ-
ಪ್ರದಾಯಗಳಿಗೆ ಮೇಣ್ ಮತಗಳಿಗೆ ಅನ್ವಯಿಸಿ-
ದೊಡದು ಹಿಂದೂಧರ್ಮ. ಪ್ರಥಮ ಸ್ತರವಂ ಎನೆ
ದ್ವೈತವಂ ಯೂರೋಪಿನ ಜನಾಂಗಗಳಿಗೆ ಅನ್ವ-
ಯಿಸಿದೊಡದು ಕ್ರೈಸ್ತಧರ್ಮ, ಮೇಣದಂ ಸಿಮಿಟಿಕ್
ಪಂಗಡಗಳಿಗೆ ಅನ್ವಯಿಸಿದೊಡದು ಇಸ್ಲಾಂಧರ್ಮ.
ಅದ್ವೈತಮಂ ಯೌಗಿಕ ದೃಷ್ಟಿಯಿಂ ನೋಡಿದೊಡದು

ಬೌದ್ಧಧರ್ಮ, ಈಗಳ್ ಧರ್ಮವೆನೆ 'ವೇದಾಂತ'
ಎಂದೇ ಅರ್ಥ. ಬೇರೆವೇರೆ ದೇಶಗಳ ಬೇರೆವೇರೆ
ಪರಿಸರ ಅವಶ್ಯಕತೆಗಳ್ ಮೇಣಿತರ ಪರಿಸ್ಥಿತಿಗೆ
ಅನುಗುಣಮಪ್ಪಿ ವೇದಾಂತಮಂ ಅನ್ವಯಿಸಿಕೊಳ್ವ
ರೀತಿನೀತಿಯುಂ ಬದಲ್ಗೊಳ್ಗವೇಳ್ಕುಮೆಂಬೆನೆನ್.
ತತ್ತ್ವವೊಂದೇ ಇರ್ದೊಡದಂ ಶಾಕ್ತರ್ ಶೈವರ್
ಮೊದಲಪ್ಪ ಜನಂ ತಂತಮ್ಮಯ ಪಂಗಡಗಳಿಗೆ
ಅಥ ಆಚರಣೆಗಳಿಗೆ ಮನವೊಪ್ಪುವೊಲ್ ತಾವ್
ಅನ್ವಯಿಸಿಕೊಂಬರ್. ಈ ಮೂರು ಸಿದ್ಧಾಂತಗಳ
ಸಮನ್ವಯಮಂ ಎತ್ತಿತೋರ್ದು ಮೇಣ್ ಬರಿಯ
ಬಾಹ್ಯಾಚರಣೆಯ ಸಂಬಂಧಮಂ ಸಂಪೂರ್ಣ
ಬದಿಗೊತ್ತಿ ನಡೆವುದೇ ನಿತ್ಯಸತ್ಯ. ಆನಿದರ
ಮಹತ್ವದ ಮೇಲೊಂದು ಗ್ರಂಥಮಂ ಉಲ್ಲೇಖಿಸಿ
ಪ್ರಕಾಶಗೊಳಿಪ ಸಂಯೋಜನೆಯೊಳಿರ್ಪೆನೆನ್..."
    ಮುಂದಿನುಪನ್ಯಾಸಂಗಳ್‌ತೀರ್ಚಿದ ಬಳಿಕಲಾ
ಸಭೆಯುಂ ಕರತಾಳವನಿಕ್ಕಿ ಸಂತಸ ವ್ಯಕ್ತ
ಪಡಿಸಿದುದು ಆನಂದ ಮೋದದಾ ರಸತುಂಬಿ.
ಸಭೆ ಚೆದುರಿ ಪ್ರಶಾಂತಿಯ ತಣ್ಗಂಪಿನ ದಿವ್ಯ
ಮನೋರಮ ರಸಾಯನ ಮೆರೆದತ್ತು ಹರವಾಗಿ.
ಮಹೋನ್ನತ ಶಾಂತಿ ಸಮುದಾಯದಲಿ ಜಗಮರೆತ
ಸ್ವಾಮೀಜಿಯುಂ ಧ್ಯಾನನಿರತರಾದರ್ ಏಕ
ಮನದಿಂ ತದೇಕ ಚಿತ್ತದಿಂ. ಜಗ ಮರೆಯಾಯ್ತು
ಆವುದೋ ಅನಿರ್ವಚನೀಯಮಾದ ಅನನ್ಯ
ಅನುಭಾವ ಹೆಪ್ಪಿಟ್ಟವೊಲ್ ಹೃನ್ಮನಂಗಳಂ
ಆಕ್ರಮಿಸಿತು ಹೆಡೆಮುರಿಗಟ್ಟಿದ ತೆರದಿ. ಬೃಹದ್

ಬ್ರಹ್ಮಾಂಡ ಮೇಣದರ ಕಾರ್ಯಕರ್ಮಕಾಂಡದ
ಕೋಲಾಹಲಂ ಸ್ವೀಯ ಪ್ರವಚನ ಪ್ರಚಾರಂ
ದಾರ್ಶನಿಕ ವಿಚಾರ ಪ್ರವಾಹಂ ಇವೆಲ್ಲವುಂ
ಸರಿದು ಮರೆಯಾಯ್ತು; ವಿಸ್ಮೃತಿಲೋಕವೊಂದೇ
ಸಂಪೂರ್ಣ ಘನಾನುಭವ. ಅಂದು, ಹಿಮಾಲಯದ
ಮಡಿಲ ಶಿಶುವಾಗಿ ಪಡೆದೊಂದು ದಿವ್ಯ ಅನನ್ಯ
ರಸಾನುಭವ ತುಂಬಿದುದು ಮತ್ತೆ ಮನೋರಾಜ್ಯಂ.
ಕಳೆದುವು ಚಣಮಾನಗಳ್, ಸರಿದುವು ಸಿರಿಗಳಿಗೆಯ
ಅಟನಗಳ್, ಸುಖ ಶಾಂತಿಯ ಹಾಲ್ಸಕ್ಕರೆಯ ಸರಿ
ಹರಿಸಿ. ಕಣ್ಮನಗಳ್ ತಣಿಯುವೊಲ್ ಸುಶಾಂತಿಯೇ
ಎಲ್ಲ! ಧಮನಿಧಮನಿಗಳಲಿ ನೆತ್ತರ್ ತಣ್ಣಗೆ
ತಣಿದು ತನಿರಸವಾಗಿ ಹರಿಯಿತು ತಣಿಸುವಂತೆ,
ಜೀವ ಕಣಕಣಗಳಂ, ರೋಮರೋಮಂಗಳಂ.
    ಮರುದಿನದ ದಿನಚರಿಯಲ್ಲಿ ಕೀಲ್ ಯೂನಿವರ್ಸಿಟಿಯೊಳ್
ನೆಲೆಯಂಪಡೆದ ಮಹಾತತ್ತ್ವವೇತ್ತ ಪ್ರಾಚ್ಯದ
ಮನೀಷಿ ಪಾಲ್ ಡಾಯ್ಸನ್-ನಿಂ ಆಮಂತ್ರಣವೈದುದು
ಸ್ವಾಮಿ ವಿವೇಕಾನಂದ ಮಹೋದಯರಿಗೆ. ಆ
ಆಮಂತ್ರಣ ಮೌಲ್ಯವದು ಅತಿಮಹತ್ತರಂ.
ಸದ್ದಿಲ್ಲದ ಶಾಂತಿಯ ಮಧ್ಯೆ ದೊಪ್ಪೆಂದು ಕಡು
ಮಿಂಚಿನ ಮುರಿವೊಂದೊಗೆದು ಬಿಳ್ದವೊಲಾಯಿತ್ತು!
ಮಿತ್ರಮಂಡಲಿಯ ಹೃತ್ ಕುಂಡಗಳ್ ಉಕ್ಕುವ
ಹಾಲಿನಕೊಡಗಳಾದುವು. ಅಮಿತ ನುಡಿಗಟ್ಟುಗಳ
ಸುರುಳಿಯೇ ಬಿಚ್ಚಿದೊಲ್ ಕೋಲಾಹಲವೆದ್ದುದು.
ಸಂಭ್ರಮ ಸಡಗರಗಳ್ ಒಡಮೂಡಿ ಪುರುಪೆದ್ದು
ಆಗಳೇ ಪೊರಡಲ್ ಅಣಿಯಾದರ್ ನೇಹಿಗರ್.

ಪೆರ್ಮೆಯ್ಯಿನ ರಕ್ತಾಕ್ತ ವರ್ಣವನಾಂತೊಂದು
ಯಂತ್ರುಸಜ್ಜಿತ ವಾಹನವುಂ ಅಣಿಯಾಯ್ತೊಡನೆ.
ಎಲ್ಲರುಂ ಗುರುದೇವನೊಡಂಗೂಡಿ ಪೊರಟರ್
ವಾಹನವನೇರಿ. ದೂರದೂರದ ಪಯಣದಲಿ
ಹಿರಿಕಿರಿ ನಗರಗಳ್ ಸುಸುಂದರ ಅಟವಿ ಬಯಲು
ಗ್ರಾಮ ಹೊಳೆ ಕೆರೆ ನದಿಗಳ್ ಎಲ್ಲವು ಎದುರಾಗಿ
ಅರುಗಾಗಿ ಸರಿದು ಹೋದುವು. ಹಿಂದೆ, ಗುರುವರನ
ಸಂಯಾತ್ರೆ ನಡೆಯುತಿರೆ ಹಾದಿಯ ಕೆಲದಲಿ, ಕಣ್
ತಣಿಯುವೊಲ್ ಆಡುಕುರಿಗಳ ತಂಗುದಾಣವದು
ಎಸೆಯಿತು ಕಣ್ಗೆ. ನಲ್ ಆರೈಕೆಯಲಿ ತನುದುಂಬಿದ
ಮುದ್ದುಮುದ್ದಾದ ಪ್ರಾಣಿಗಳಿರ್ದುವು ಸಹಸ್ರಾರು
ಸಂಖ್ಯೆಯಲಿ. ಮೈದುಂಬಿ ನುಣ್ಮೆಯ್‌ಗಳ್ ಬಿಸಿಲಿನ
ಚಿನ್ಮುದ್ರೆಯಿಂ ಮಿಂಚುತಿರೆ ಚಂಗ್‌ಚಂಗನೆಯೆ
ಜಿಗಿದಾಡುತೆ ಕೊರಳ್ ದನಿ ಹರಿಸುತಿರ್ದುವು ಹರುಷ
ಸೂಸಿ. ಬಿಣ್ಪಿನ ಕರ್ಪಿನ ಕೆಂಪಿನ ಬಗೆಬಗೆಯ
ರಂಗುರಂಗಿನ ಪ್ರಾಣಿಗಳ್ ತಮ್ಮಯ ಮಾರಣೀ
ಹೋಮವಂ ಅರಿಯದಿಹ ಮುಗ್ಧದುಗ್ಧ ಭಾವದ
ದಿವ್ಯಾತ್ಮಗಳ ಕೂಟಮೆಸೆದತ್ತು ಚೆಂದದಿಂ
ಸುಖದುಃಖಮೆಸೆವ ಭಂಗಿಯಲಿ. ಪುಲ್ಗಾವಲಿನಲಿ
ಬೊಂತೆಬೊಂತೆಯೊಲ್ ಮೈದಳೆದಿರ್ದ ಶಾದ್ವಲಂ
ನೆರೆಬೆಳೆದುದು ಪ್ರಾಣಿಕುಲಕನುಗುಣಮಪ್ಪಿ. ಆ
ಬೃಹದ್ ಗಿರಿವೆಟ್ಟಂಗಳ ಪದತಲಂ ನಿಜದಿ
ಪ್ರಾಣಮಯಮಾದತ್ತು. ಗುರುವರನ ಸುಖದುಃಖ
ತುಂಬಿದೊಡಲ್ ಮಮ್ಮಲ ಮರುಗಿರಲ್ ತಮ್ಮೊಳಗೆ
ಆತ್ಮವಾಣಿ ನುಡಿದತ್ತು ಮರ್ಮರ ಧ್ವನಿಯಲಿ,

"ಜೀವೊ ಜೀವಸ್ಯ ಜೀವನಂ" ಜಗತ್ ವ್ಯಾಪಾರವೆ
ಇದು. ಅಬಲತೆ ಸಬಲತೆಯ ಸೊತ್ತು ಎನಲದು ದಿಟಂ.
ಪಯಣ ಮುಂಸಾಗಿದುದು ಗಮ್ಯದಾಣಮಂ ಗುರಿ
ಗೊಂಡು. ಹರ್ಷಿತ ಪಯಣ. ಹರ್ಷಿತ ಕೂಟಂ.
ಪಾಲ್ ಡಾಯ್ಸನ್-ಗೆ ಸುದ್ದಿ ಮುಟ್ಟಿತು, ಕ್ಷಿಪ್ರದಲಿ.
ಆಗಳಾ ಪಾಲ್ ಡಾಯ್ಸನ್ ಆನಂದರಸ ತುಂಬಿದ ಮನೋ
ಭಾವದಿಂ ಕುತೂಹಲವೆರ್ಚುತ್ತೈತಂದನಾ
ಸ್ವಾಮೀಜಿಯ ಬಿಡದಿಗೆ. ಬಾಗಿಲ್ ಮಿಡಿದೊಡೆ, ಒಳ
ಕೊಠಡಿಯೊಳ್ ಇಣಿಕಿದೊಡೆ ಮಾರುತ್ತರವದಿಲ್ಲಂ.
ಸ್ವಾಮೀಜಿಯುಂ ಗ್ರಂಥಪಠಣದಲಿ ತೀವ್ರ ಮುಳುಗಿ
ಮೈಮರೆತಿರೆ ಇತ್ತಣ ಪರಿವೆಯೇ ಇರದಾಗಿತ್ತು,
ಪಾಲ್ ಡಾಯ್ಸನ್ ಗಳಿಗೆಕಾಲ ನಿಂತು ನೋಡಿದಂ;
ಒಳಗಿನಿಂ ಪೊರಗೈತರಲಿಲ್ಲವು ಸ್ವಾಮೀಜಿ.
ಮಿತ್ರವಳಗಮಿರ್ದುದು ಬೇರೆಬೇರೆ ಕೊಠಡಿಯಲಿ.
ಪಾಲ್ ಡಾಯ್ಸನ್ ಬಂದುದರರಿವುಂ ಆರ್ಗಿರದಿರೆ
ಅತಿಥಿಯುಂ ಮನದೊಳ್ ಕಿನಿಸಿಗೆ ಬೇಸರ ತುಂಬಿ
ಬೇವಾಗಿ ಕಾದು ಕುಳಿತಂ ಹೊರಜಗಲಿಯಲ್ಲಿ.
ಗುರುವರಂ ಗ್ರಂಥಮಂ ಮುಚ್ಚಿ ಪೊರಗಡೆಗೈದು
ನೋಡಲೇಂ ಅಚ್ಚರಿಯ? ಋಷಿ ಸದೃಶ ಹಿರಿಯ
ವ್ಯಕ್ತಿ! ಬೆಳ್ನಮಿರಿನ ಬಲು ಗೌರವ ರೂಪಿನಲಿ
ಕಣ್ಗೆಸೆದರ್ ಮನಮಿಡುಕುವಂತೆ! ಚಣಂ ತಾವ್
ತಬ್ಬಿಬ್ಬುಗೊಂಡರೆನೆ ಸ್ವಾಮೀಜಿ – "ಹಾ, ನೀವ್
ಇಲ್ಲಿಗೈದುದರರಿವೆ ಇಲ್ಲವಾಯ್ತು! ದಯದಿಂ
ಮನ್ನಿಸಿಂ ಆರ್ಯ!" ಹಸ್ತದ್ವಯಂಗಳ್ ನೀಡಿ
ಪ್ರೇಮಾತುರದಿಂ ಕುಲುಕುಲುಕಿ ಒಳಬರಮಾಡಿ

ನಲ್ಮೆಯಿಂ ಉಚಿತಾಸನದೊಳ್ ಕುಳ್ಳಿರಿಸಿದರ್.
ಉಭಯ ಕುಶಲೋಪರಿಯು ನಡೆದತ್ತು ನಸುವೊಳ್ತು.
ಆದೊಡಾ ಪ್ರಜ್ಞಾನ ವೃದ್ಧ ಮಹೋದಯನ
ಮನದೊಳ್ ನಿರ್ಲಕ್ಷ್ಯದ ಒಗರು ಮೆತ್ತಿರ್ದುದೆನೆ
ಒಳಗೊಳಗೆ, ಕಿಂಚಿತ್ ಅಸಮಾಧಾನ ಮಿರ್ದುದು;
ಶಿಸ್ತು ಕ್ರಮಗಳೊಳ್ ಬಲ್ ನಿಸ್ಸೀಮನಿರ್ದಾ
ಪಾಲ್‌ಡಾಯ್ಸನ್ ಮನಕೆ. ಆಗಳ್ ಗುರುವರಂ
ವಯೋವೃದ್ಧ ಪಾಲ್ ಡಾಯ್ಸನ್ನನಂ ಕುರಿತು
ನುಡಿದರೆಂತೆನೆ "ಆರ್ಯ ಆನಾಗಳೋದಿದಾ
ಶ್ಲೋಕಗಳ ಕೇಳಿ, ಇಂತಿಹುದು ಅವುಗಳ ಸ್ವನ.

"ಅಜ್ಯೇಷ್ಠಾನ ಅಕನಿಷ್ಠಾನ ಏತೇ ಸಂ
ಭ್ರಾತರೋ ವಾವೃಧುಃ ಸೌಭಾಗಾಯ ।
ಯುವಾ ಪಿತಾ ಸ್ವಪಾ ರುದ್ರ ಏಷಾಂ
ಸುರುಘಾ ಪೃಶ್ನಿಃ ಸುದಿನಾ ಮರುಭ್ಯಃ ॥"

"ಮಹಾಶಯ, ಇದೊ ಕೇಳಿ! ಪುರಾಣದ ಕಾಲೀನ
ಪ್ರಪಿತೃವರ್ಗವೆಮ್ಮ ಇಂತೀ ವಗೆವಗೆಯ
ಧರ್ಮ ಗ್ರಂಥಂಗಳಂ ಬರೆಬರೆದು ನಮಗಾಗಿ
ಎನೆ ತಮ್ಮಯ ಮುಂದಿನ ಪೀಳಿಗೆಯ ಉದ್ಧಾರ
ಕಾರ್ಯಗತಿಗಾಗಿ ಉತ್ತಮ ಬಾಳ್ಮೆಗಾಗಿ ಬಿಟ್ಟು
ನೇಪಥ್ಯವನೇರಿದ ಧೀಮಂತರ್. ತಮಗಾಗಿ
ಸತ್ಕೀರ್ತಿಯಂ ಬಯಸದೆ ತಮ್ಮ ಪೆಸರ್ ಬಹಿರ್
ಪಡಿಸದೆ ಅನಾಮಿಕ ತೇಜದಿಂ ಬಾಳಿ ಅಳಿದ
ಪರಿಯದು ಪರಮ ಅಚ್ಚರಿಯೆ. ಇಂಥ ಮಹೋನ್ನತ
ಗ್ರಂಥಕೋಶಗಳಿನ್ನೆಬರಂಮುಳಿದುದುದೆಮ್ಮ
ಭಾಗ್ಯವೇ ಭಾಗ್ಯ! ಈಗಳನ್ನೊರ್ ಗೀತೆ ಕೇಳ್,

"ಸಂಸಾರ ವಿಷವೃಕ್ಷಸ್ಯ
ಫಲೇ ಅಮೃತೋಪಮೇ ।
ಕಾವ್ಯಾಮೃತ ರಸಾಸ್ವಾದಃ
ಸಲ್ಲಾಪಸ್ಸಜ್ಜನೈಃ ಸಹ ॥"

ಭಾವಪೂರ್ಣ ದನಿಯಲಿ ಹರಿದ ಸಿರಿಗೊರಳಿನ
ಮಾಧುರ್ಯ ಹೃನ್ಮನಗಳಂ ಅರಳಿಸಿತು ಮದನ
ಮಲ್ಲಿಗೆಯ ಮಾಳ್ಕೆಯಲಿ! ಪಾಶ್ಚಾತ್ಯ ಮನೀಷಿಯುಂ
ಆಶ್ಚರ್ಯ ವಿಸ್ತೃತ ನಯನಗಳಿಂ ನೋಡುತ್ತೆ,
ವಿಸ್ಮಯ ವಿಮೂಕತೆಯ ಪಾಂಗಿನಲಿ ಗಳಿಗೆಯೊರ್
ಕಳೆದ ಬಳಿಕ ಕೇಳ್ದರ್ ಪ್ರಸನ್ನ ಭಾವದಲಿ
ಗುರುವಂ– "ಸ್ವಾಮೀಜಿ, ಇಂತೊಂದು ದಿವ್ಯ ಸ್ಮೃತಿ
ಶಕ್ತಿಯದು ಎಂತೊದವಿತು ನಿಮ್ಮಯ ಪರಿಜ್ಞಾನ
ಬಂಢಾರಕೆ? ನೀವೊರ್ ಬೃಹದ್ ನಿಘಂಟು ಎನೆ
ಸಲ್ವುದು ಗುರುವೆ!"
ಗುರುವರಂ ಎಳೆನಗೆಯರಳಿಸಿ
ತೋಷಭರಿತ ದನಿಯಲಿ ನುಡಿದರ್ "ಆರ್ಯ ದಿನದಿನಂ
ಗೈವ ವೇದಪಠಣದ ಕ್ರಮವತ್ ಅಭ್ಯಾಸ
ಧ್ಯಾನ ಇವುಗಳಿಂದಾಂ ಎಲ್ಲವಂ ಮನಗೊಳಲ್
ಸುಸಾಧ್ಯಂ."
ಪ್ರೊಫೆಸರ ಕುತೂಹಲಿತ ಮನವಂ
ತುಂಬುವಂತೆವೊಲ್ ದರ್ಶನ ಶಾಸ್ತ್ರಮಂ ಕುರಿತು
ಎನಿತೊವೊಳ್ತು ಗಭೀರ ತರ್ಕವಿತರ್ಕಗಳಿಂಗೆ
ಇಂಬಿತ್ತು ಬಹುತರದೊಳ್ ಅಭಿಜ್ಞಾನದ ಕುಸುಮ
ಅರಳಿದಳಬಿರಿಸೆ ನೆರವಿತ್ತರ್ ಮುದದಿಂದಲಿ.
ಹಿಂದೂ ಶಾಸ್ತ್ರದ ದರ್ಶನ ಧಾರೆಯ ಹುರುಳರಿತು

ಸ್ವಾಮೀಜಿಯ ಘನ ಪ್ರತಿಭಾ ಸಂಪದಮಂ ಮನ
ಮೆಚ್ಚಿದರ್ ಪಾಲ್ ಡಾಯ್ಸನ್. ತಾವ್ ಗೆಯ್ಯುತಿಹ
ಸಂಸ್ಕೃತ ಗ್ರಂಥದ ಭಾಷಾಂತರದ ಕಾರ್ಯದೊಳ್
ಶ್ರೀಗುರುವಿನ ಅಮೂಲ್ಯ ಸಲಹೆಯಂ ಪಡೆಯುತ್ತೆ
ಇಳುಹಿದರ್ ಶಿರೋಭಾರಮಂ. ದಿನದಿನಂ ತರ್ಕ
ಹೂಡಿ ಜಟಿಲ ಕಠೋರತಮ ವಿಚಾರಗಳ ಎಳೆ
ಎಳೆಯಂ ಬಿಡಿಸಿ ಭಾವನಾ ವೇಗದಲಿ ಕೊಚ್ಚಿ
ಹೋದರಾ ಪ್ರೊಫೆಸರ್ ಪಾಲ್ ಡಾಯ್ಸನ್. ಮತ್ತಂ
ಶ್ರೀಗುರು ಕೆಲದಿನಂ ಅವರೊಡನಿರ್ದು ಪೊರಟರ್
ಮುಂಬಯಣಂ ಹೂಡಿ. ವಯೋವೃದ್ಧ ಧೀಮತಿ
ಪ್ರೊಫೆಸರನ ಸಹವಾಸ ಮುದವೂಡಿಸಿತು ಶ್ರೀ
ಗುರುವಿಂಗೆ. ತಾನಂತೆಯೆ ರಿಸಿ ಸದೃಶ ಹಿರಿಯನ
ಮನವರಳಿಸಿ ತನ್ನೆಲ್ಲ ಸಹಾಯವನೀಯುತೆ
ಹೃತ್ ಕುಂಡಮಂ ತುಂಬಿದರ್ ಸ್ನೇಹಾಮೃತದ
ರಸಧಾರೆಯಂ ಹರಿಸಿ.
ಕ್ಸೇವಿಯರ್ ದಂಪತಿಗಳ್
ತಮ್ಮೊಡನಿರುತಿರೆ ಸ್ವಾಮೀಜಿಯ ತನುಮನಗಳ್
ತುಂಬಿ ತುಳುಕಿದುವು ಆತ್ಮಾನಂದ ಮೋದದಿಂ.
ತಾಯ್ತಂದೆಯರ ರೂಪಿನಲಿ ಪ್ರೇಮದ ಖನಿಯಾಗಿ
ಎಡೆಬಿಡದಿರುತಿಹ ಜಂಪತಿಗಳ್ ನಿಜದಿಂ
ಅನನ್ಯ ಪರಮ ಬಂಧುಗಳಾದರ್ ಗುರುವಿಂಗೆ.
ಅಲ್ಲಿಂದ ಮುಂಬಯಣಮಂ ಹೂಡಿ ಪೊರಡಲುರೆ
ಹ್ಯಾಂಬರ್ಗ್ ನಗರದಾಣಮಂ ಮುಟ್ಟಿದರ್, ಆ
ಬೈಗುವೊಳ್ತಿನ ತನಿಯು ಕೊರೆದು ಕೋರೈಸುತಿರಲ್
ತನುಮನಗಳಂ ಬೆಚ್ಚನೆಯ ಉಣ್ಣೆ ಬಟ್ಟೆಯೊಳ್

ತೂರಿ, ಸಣ್ಣಗೆ ನಡುಗುವ ಶರೀರ ಯಷ್ಟಿಯುಂ
ಸೆಟೆದುದು ಬಿಗಿವಿಡಿದೊಲ್. ಆ ಮಧುರ ಮನೋರಮ
ಕಿನ್ನರ ನಗರಿಯಲಿ ಪದಚಾರಣಗೈದರ್ ನಿಶಿ
ಕರ್ಪುರ ಸೆರಗು ಹರಡಿ ನಕ್ಷತ್ರಗಳ ಮಾಲೆಯಂ
ಸೂಡುವನ್ನ. ಮರುದಿನ ಹೊನ್ನ ಹೊತ್ತರೆಯ ಸಿರಿ
ವೊಳ್ತು ದಳದಳನೇರುವ ಮುನ್ನಮೆ ಪ್ರೊಫೆಸರ್
ಪಾಲ್‌ಡಾಯ್ಸನ್ ಗಮಿಸಿದರ್ ಎಲ್ಲರ ಮನಕೆ
ಅಚ್ಚರಿಯ ವ್ಯಕ್ತಿಯಾಗಿ. ಅನಿರೀಕ್ಷಿತವಾದ
ದರ್ಶನದ ಲಾಭದಿಂದೆಲ್ಲರ ಮುಖಬಿಂಬಂ
ಅರಳಿದುವು ಮಂದಾರ ಪುಷ್ಪದೊಲ್. ಆಗಳಾ
ಪ್ರೊಫೆಸರ್ ಅಸವಸದಲಿ ತಾನೈದ ಸುದ್ದಿಯಂ
ವಿವರಿಸುತೆ ನುಡಿದರಿಂತು "ಭಾಷಾಂತರವೆನ್ನ
ಕೆಲ ಕ್ಲಿಷ್ಟಪದಗಳಿಂ ಮುಂಬರಿಯದೆ ನಿಲ್ಲುವ
ಕತಮೊದವಿತು. ಇದಂ ಬಗೆಹರಿಸಿಕೊಳಲೆಂದೇ
ನಿಮ್ಮ ಬಳಿಗೈದೆನೆನ್"
ಸ್ವಾಮೀಜಿಯುಂ ಹರ್ಷ
ವಿಸ್ಮಯ ಭರಿತ ವದನದಿಂ ಪಾಲ್‌ಡಾಯ್ಸನ್ನನ
ಸಂಸ್ಕೃತ ಭಾಷೆಯ ಕ್ಲಿಷ್ಟ ಪದಾರ್ಥದ ಕಗ್ಗಂಟು
ಬಿಡಿಸಿ ಸುಲಲಿತಗೊಳಿಸಿ ಪೂರೈಸಿದರ್ ಶಂಕಿತ
ಮನಕೆ ಆನಂದರಸವೂಡಿಪಂತೆ. ಮತ್ತಂದೆ
ಪಿಂದಿರುಗಿ ಪೊರಟರಾ ಪಾಲ್ ಡಾಯ್ಸನ್ ತಮ್ಮ
ಊರಿನ ಪಥವಿಡಿದು. ಇವರಿತ್ತಲ್ ಹಾಲೆಂಡ್
ದೇಶೀಯ ರಾಜಧಾನಿ ಅಥ ಪ್ರಮುಖ ಪತ್ತನವೆನೆ
ಪ್ರಸಿದ್ಧಿವೊಡೆದ ಆಮ್ ಸ್ಟರ್ಡಾಮ್ ನಗರಿಯಂ
ಪೊಕ್ಕರ್. ಅಹ, ನೋಡೆ! ಅದೇನಚ್ಚರಿಯೊ ಎನಲ್

ಇಡಿ ನಗರಿಯದು ಜಲಧಿಯಲಿಯ ನೆಲೆ ನಿಂದತ್ತು!
ನೀರೇ ನೀರು! ಅದ್ಭುತ ತಳಹದಿಯೆ ಮಹಾಜಲದಿ
ನಗರಿಗೆ. ಮನೆಮನೆಗಳಿಗೆ ಕಾಲ್ವಾಯಿಗಳೆ ಪಥ
ಓಡಾಟಕೆ, ನಾವೆಗಳಲಿ ಪಯಣ ಹೊರ ಜಗಕೆ.
ಹೊಸ ಪರಿಯಲಿ ಜೃಂಭಿಸಿದ ನಗರದ ಕಮನೀಯ
ಕಠೋರತಮ ತಂಪು ಸೊಂಪು ಕಂಪುಗಳ ಪೆಂಪಿನ
ಆಗರಂ ನೋನೋಡಿ ಕಣ್ಮನಂ ದ್ರವಿಸಿದುವೊ
ಎನಲ್ ಪ್ರಜ್ಞಾನ ತಂತ್ರಜ್ಞಾನಗಳ್ ಕೇಂದ್ರೀ
ಕೃತ ಪತ್ತನದಲಿ ಕಳೆಯಿತೊರ್ ದಿನಂ. ಐಂದ್ರ
ಜಾಲಿಕ ನಗರಿಯ ಮಾಯಾಜಾಲದಲಿ ನಿಂದು.

ಹರಿಃ ಓಂ ತತ್ ಸತ್

❋ ❋

ದ್ವಾತ್ರಿಂಶತಿತೋಲ್ಲಾಸಂ

ಪ್ರೇಮದ ಮೂರ್ತರೂಪ

ಅಂಬರವೆ ತೂತುಬಿಳ್ದು ಸುರಿದುದೆಂಬಿನಂ ಘನ
ಘೋರ ಮಳೆ ಹೊಯ್ದು ನಿಂತಿರಲ್ ರವಿಕಿರಣಗಳ್
ಮುಂಚಿವಂದುವು ಅಮೋಘ ಹಾಲ್ಬೆಳಕಂ ಹೋಲಿ!
ಆ ಸಗ್ಗ ಸುಧೆಯ ಹೂವಿಸಿಲ್ ಆ ತನಿಯುಗುವ
ತಂಪು. ಆ ಸುಗಂಧಂಗಂಧಿತ ಬನಗಾಳಿಯ
ಇಂಪು ಮನವಂ ಮುದಿಸಿತು. ಗುರುವರ್ಯಂ ಮಿತ್ರ
ಮಂಡಲಿಯೊಡಂ ಹೂವಿಸಿಲ್ ಮಿಹಮಂಬಡೆಯೆ
ತೋಷದಿಂ ಅಂಗಣದಲಿ ಪದಚಾರಣಗೆಯ್ದರ್.
ಮೋಹನೀಯ ಕಾಲಂ, ಮೋಹನೀಯ ರೂವುಂ
ಹೃನ್ಮನಗಳಂ ಹೆಡೆಮುರಿಗಟ್ಟುತಿರೆ ಅಂಗಣ
ವಲಯದಿಂ ಒಳಬರಲೊಪ್ಪದುಮನಂ. ಗುರುವರಂ
ಇನ್ನಿನಿತು ಮತ್ತಿನಿತು ಅಡ್ಡಾಡಿ ಚಾರಣಂ
ತೀರ್ಚಿದರ್ ಮನತಣಿಯುವನ್ನ. ತನುತಣಿಯುವನ್ನ.
ಹಾಲೆಂಡ್ ಪ್ರವಾಸ ಮುಗಿದತ್ತು. ತರ್ವಾಯ
ಲಂಡನಿಗರ ಅಕ್ಕರೆಯ ಬೇಡಿಕೆಗೆ ಕಿವಿಯಂ
ಕುಡಲ್ ಬಳಲ್ಕೆಯಂ ಬದಿಗೊತ್ತಿ ಸಿದ್ಧಮಾದುದು
ಗುರುದೇವನ ಅಮೂಲ್ಯ ಪ್ರೇಮದ ಮೂರ್ತರೂಪ.
ಮೈಯಲ್ಲಿ ಅಶ್ವಬಲ ಕೂಡಿತ್ತು, ಹೃನ್ಮನಗಳಲಿ ಪುರುಪು
ಮೂಡಿತ್ತು. ಕಾರ್ಯವಾಹಿಯ ನೆನವರಿಕೆಯಿಂದೆ.
ತದನಂತರಂ ಭರತವರ್ಷದ ಪಥವಂಪಿಡಿವ
ಯೋಗ ಕೈಗೂಡಿದಪುದದು ಹೃದಯ ಹಾರೀ
ವಿಷಯಂ ಎನಲ್ ಆಪನಿತು ತರಾತುರಿ ಮನದಿ.

ಅಂದಿನದಿನಂ ನೇಹಿಗರ ಮೇಣ್ ಇತರಿತರ
ವಿದ್ವ್ಯಜ್ಜನರ ಭೇಟಿಯು ನಡೆದುದು, ಪಗಲೊಂದು
ಉರುಳಿ ಬಯ್ಗುವೊಳ್ತು ಅಡರಿ ಮಿಂಚುವನ್ನೆಗಂ.
ಮರುದಿನದ ಮುಂಜಾವದಲಿ ಪೊರಡುವೊಂದು
ಸಂಯೋಜನೆ ಇರುತಿರೆ ತಂತಮ್ಮ ಪೆಟ್ಟಿಗೆಯ
ತುಂಬಿ ಅಣಿಗೊಂಡರೆಲ್ಲ, ವಾಹನವೈದುದಲ್ಲಿನ
ಬಿಡದಿಯಾ ಬಳಿಗೆ. ಪೊಳ್ತು ಮೂಡಿಬಹ ಮುನ್ನಮೆ
ಮಿತ್ರರಂ ಕೂಡಿ ಪೊರಮಟ್ಟರ್ ಗುರುವರ್ಯರ್ಂ
ಲಂಡನ್ ನಗರಿಗಭಿಮುಖವಾಗಿ, ಕದಿಗುದಿಯಲಿ
ಬೀಳುಕೊಟ್ಟಳು ಗುರುವನಾ ಹಾಲೆಂಡ್ ರಾಜ್ಞಿ
ತಾಂ ಉದಯ ಮುಖದಿಂ. ಕಮಲಕೋಮಲಶೋಭಾ
ಮುಖದ ಪ್ರಸನ್ನ ಮನೋಹರತೆ ಜೃಂಭಿಸಿದುದು ಪೊಳಲ್
ಗಡಿ ದಾಂಟುವನ್ನ. ಒಯ್ಯನೊಯ್ಯನೆ ಬೀಸುತಿತ್ತು
ಸವಿಗಾಳಿ. ಅಮೃತರಚಿತ ಮುದ್ದು ಉಲ್ಕಮನೆ
ವಿಹಗಾಕೃತಿಗಳ್ ಹಾರುತಿರ್ದುವು ಸುಳಿಸುತ್ತಿ.
ಮುಂಬೊಳ್ತಿನ ಹೊನ್ನೆರಚಿದ್ದ ಮುಗಿಲ್ ಬಣಗಳ
ಮಧ್ಯೆ ರಜತಮಯಿ ವಿಹಗಗಳ್ ಎಲ್ಲಿಯೊ ಎಂತೊ
ಕಣ್ಮರೆಸಿ ಮಾಯಮಾದುವು ಚಮತ್ಕೃತಿಯವೊಲ್.
ಪಯಣದೊಳ್ ಕಳಿದುವು ಎರಳ್ಮೂರು ನಾಲ್ಕೈದು
ದಿವಸಗಳು ಸಂಯಾತ್ರೆಯೊಲ್. ಅತ್ತಲ್ ಲಂಡನ್
ನಗರಿಯ ಪರಮ ಶಿಷ್ಯಮಂಡಳಿಯು ಕಾದಿರುತಿರೆ
ಗುರುವಿನಾಗಮನವಂ ಆತುರಾತುರಗಳಿಂ
ಕ್ಲುಪ್ತಕಾಲದೊಳ್ ಗಮಿಸಿದರಾ ಗುರುದೇವಂ.
ಸಂತನ ಮುಖಾವಲೋಕನದಿಂ ಪುರುಡು ಪುರುಪು
ಇರ್ಮಡಿಸಿದೊಲ್ ಎದುರ್ವೆತ್ತು ತಡೆ ಬಡೆಯದೇಂ

ಇಲ್ಲದ ಪರಿಯಲಿ ಕರೆದರೊಡನೆ ಸಭೆಯಂ ಸೂಕ್ತ
ಸ್ಥಲದಲಿ. ಜ್ಞಾನವೇತ್ತರ್ ಕೂಡಿದರ್ ಸುತ್ತಲ್
ಬಳಗದಂತೆ. ಮೈನಡುಗಿಸುವ ಚಳಿಯ ಕೊರೆತವ
ಲೆಕ್ಕಿಸದೆ ಉಣ್ಣೆಯಂಗಿಗಳ ಭಾರಂಪೊತ್ತು
ಕಾದಿರ್ದುದು ಜನಜಂಗುಳಿ. ಸಭಾ ವೇದಿಕೆಯ
ಮೇಲಿಂದ ಗುರುದೇವನ ಕಂಠಕಹಳೆ ಮೊಳಗಿತು
ಮಾಡುಮರುದನಿಗುಡುವ ಮಾಳ್ಕೆಯಲಿ. ವಾಣಿಶ್ರೀ
ಕಂಠದುಲಿ ಜಳಜಳನೆ ಪರಿದುದೋ, ಜರ್ಮನಿಯ
ಯಂತ್ರಶಾಲೆಗಳ ವಿಜ್ಞಾನ ಭಾಗ್ಯವೇ ಈ
ಪರಿಯಲಿ ಪ್ರವಹಿಸಿದುದೊ, ಶೀತದೇಶಗಳ ಕಡು
ಶೈತ್ಯವೇ ಸಲಿಲವಾದುದೋ, ಆಲ್ಫ್ ಪರ್ವತದ
ತೇಜೋನ್ವಿತ ರಾಶಿಯೆ ಘನವೆತ್ತು ನಿಂದುದೋ
ಎನಲ್ ಶ್ರೀರಾಮಕೃಷ್ಣ ಗುರುದೇವನ ಮಾನಸ
ಪುತ್ರ ಜೃಂಭಿಸಿದರ್ ಸಭೆಯ ವೇದಿಕೆಯ ಮೇಲೆ.
ಜಗದದ್ಭುತ ಭವದುರಿಯ ಮೇಲೆ ಶೀತಲಶೈತ್ಯ
ವಾರಿಯಂ ಸೇಚನೆಗೈವ ಪರಿಯೊಳಾಯ್ತು ನವ
ಉಪನ್ಯಾಸಗಳ ಮಾಲೆ "Maya and Illusion"
"Maya and the Evelution of the
conception of God" "Maya and
Manifestation" "God in every thing"
"The freedom of the soul" ಎಂಬೆಲ್ಲ ಚಂಡ
ಪ್ರಚಂಡತರ ಭಾಷಣ ಮಾಲೆಗಳ್ ಮೊಳಮೊಳಗಿ
ವೇದವೇದಾಂತಗಳ ಜಯ ಡಿಂಡಿಮದ ಮಹಾ ರವದಂತೆ
ಇಂಗ್ಲೆಂಡ್ ಪ್ರಾಂತ್ಯದ ಗಿರಿಶಿಖರಂಗಳಂ ನೆರೆ
ತಾಗಿ ಪ್ರತಿಧ್ವನಿತಮಾದುದು ಭಾರತ ವರ್ಷದ

ಸುಸಂಸ್ಕೃತಿ ಪರಿಮಳಂ ಬೀರಿ. ಆಗಳೇನಾ
ಜನಮನಗಳ ಗಲಿಬಿಲಿ? ದಲಿತ ರಾಷ್ಟ್ರದ ದಲಿತ
ಜನಾಂಗೀಯ ತರುಣ ಮನೀಷಿಯ ಮನೋಜ್ಞಾನ
ಬೀಸಿವೊಗೆದ ಬಾಣಾವಲಿ ತೂರಿದುದು ಎಲ್ಲ
ಪ್ರಾಣಗಳ ಕೋಷಮಂ. ವಿಜ್ಞಾನ ತಂತ್ರಜ್ಞಾನ
ವಿಶ್ವಜ್ಞಾನಂಗಳ್ ತಿಣುಕಿ ತತ್ತರಿಪ ತೆರಂ.
ನವೆಂಬರ್ ಮಧ್ಯ ಕಾಲದೊಳ್ ಸ್ವಾಮಿಜಿಯುಂ
ಮಾತೃಭೂಮಿಯಂ ಕುರಿತು ಪೊರಡಲ್ ಸನ್ನಾಹ
ಗೈಯಲಾ ವಿಷಯ ಹರಡಿ ಹಬ್ಬಿದುದು ಕ್ಷಿಪ್ರತರ
ವೇಗದಲಿ. ಆಗಳೇಂ ಜನ ಸಂದಣಿ ತುಂಬಿದ
ವಿಶೇಷಂ? ಜನವೇ ಜನ. ಕಣ್ಣಿಗೆ ಹಬ್ಬವಾಗಿ,
ಮನಕೆ ಆನಂದವಾಗಿ, ಭಾವಕೆ ವಿಭುವಾಗಿ
ಚಿತ್ತಪ್ರವೃತ್ತಿಗೆ ಪರಮೋಚ್ಚ ಚಿರನೂತನ
ಚಿಂತನಾವೇಶದಾವೇಶವಂ ಊಡಿಸುವ
ಮಹಾಗುರುವಾಗಿ ತೋರಿದ ಸ್ವಾಮಿ ವಿವೇಕಾ
ನಂದರಂ ನೆಚ್ಚಿ ಮೆಚ್ಚಿರ್ದ ಆಂಗ್ಲೇಯ ವರ
ಶಿಷ್ಯಮಂಡಳಂ ಮುಂದೈದು ವಿಜೃಂಭಣೆಯಿಂ
ಸಭೆಕೂಡಿ ಬಿನ್ನವತ್ತಳೆಯಂ ಸಮರ್ಪಿಸಿದರ್
ಮುದವನಾಮೋದಗೊಳಿಪಂತೆವೊಲ್.
ಡಿಸೆಂಬರ್
ಹದಿಮೂರನೆಯ ತೇದಿಯುಂ ಸಾರಿಬರೆ ಸ್ವಾಮಿ
ವಿವೇಕಾನಂದರುಂ ತಮ್ಮ ಆತ್ಮೀಯ ಗೆಣೆಯ
ಬಂಧುಗಳಾದ ಕ್ಸೇವಿಯರ್ ದಂಪತಿಗಳೊಡಂ
ಭಾರತ ಭುವಿಗೆ ಪೊರಡುವ ಉದ್ದೇಶಮಿರುತಿರೆ
ಕೊನೆಯ ದಿನಗಳ ಚಟುವಟಿಕೆ ಕೊನರಿ ಹಣ್ಣಾಗಿ

ಬಿಡುವಿಲ್ಲವಾಯ್ತು ಸ್ವಾಮಿಜಿಯ ಕರಕಮಲಕೆ
ಮೇಣ್ ಹೃನ್ಮನಗಳಿಗೆ. ಸಂದರ್ಶಕರ್ ನಿಚ್ಚ
ಎಡವಿಡದ ಪಾಂಗಿನಲಿ ಬಂದಪರ್. ಪ್ರಶ್ನೋಪ
ಪ್ರಶ್ನೆಗಳ್ ಏಳ್ದಪವು. ನಲ್ಮೆಯಿಂ ಉತ್ತರಿಸಿ
ಸ್ವಾಮಿಜಿ ತಣಿಪುವರ್ ಪ್ರಾಶ್ನಿಕರ ಜಟಿಲತೆಯ
ಸಮಸ್ಯೆಯಂ ತೊಡೆದಳಿಸೆ. ಮತ್ತೆ ಕಟ್ಟ ಕಡೆಯೊಳ್
  **"ಸುಖೇ ದುಃಖೇ ಸಮಕೃತ್ವಾಲಾಭಾಲಾಭೌ
ಜಮಾ ಜಮೌ"** ಎಂಬ ವೇದ ವಾಕ್ಯಮಂ ಬಿತ್ತರಿಸಿ
ಸಂತೈಸಿ ಕಳಿಪುವರ್.
                ಅಂತಿಂತು, ಪೊರಡುವಾ
ದಿನಂ ಬಳಿಸಾರ್ದುದು ಶುಭಗಳಿಗೆಯನಾರೈದಿಹ
ಮಾಳ್ಕೆಯಲಿ. ಮುನ್ನಾದಿನಮೆ ತಮ್ಮಯ ಗ್ರಾಂಥಿಕ
ಲೋಕಮಂ ಮೇಣಮಿತ ವಸನಂಗಳಂ ತುಂಬಿ
ಕಟ್ಟಿ ಜೋಡಿಸಿ ಪೇರಿಸಿಟ್ಟು ಸರಾಗದಿಂ ತಾವ್
ನಡೆದರ್ ಚರಣಪಥವಿಡಿದು.
                      ಅನ್ನೆವರಂ ತಿಳಿ
ನೀಲಮಾಗಿರ್ದ ಆಗಸಂ ಕೆನ್ನೀಲರಸ
ವಾಹಿನಿಯೊಳ್ ಮಿಂದುದೊ ಎನೆ ಚಂದನ ವರ್ಣಂ
ವೆರಸಿ ರಂಗು ರಂಗಾಯ್ತು ದಿವಸಾನ ಸಮಯಂ
ಕೂಡಿ. ಇಂದ್ರ ದಿಙ್ಮಂಡಲದಿಂದ್ಯೆದ ಸಾಯಂ
ಸಾಗರಾನಿಲ ವೀಸಿದಂ ತಣ್ಣನೆ ತಣ್ಗಂಪು
ಸೂಸಿ. ಪಕ್ಷಿ ಸಂಕುಲಂ ಉಲಿದುವು ಸಂಧ್ಯಾರಾಗ
ಮೋಹನದ್ಯೆಸಿರಿ ಹರಿಸಿ. ನೋಡದೊ, ಸಾಲ್ವರಿದ
ಪಶ್ಚಿಮಾದ್ರಿ ಸೀಮಾ ತಟಾಂತ ಲಗ್ನದಲಿ ಮೆಲು
ಮೆಲ್ಲನೆ ಇಳಿದನು ರವಿ ಅಸ್ತಮಾನ ಶೋಭಾ

ಶೈಲಿಯಲಿ. ಚಣಚಣಂ ಘನಿಸಿತು ಚಂದನಕಾಂತಿ
ಮಿಸುನಿ ಛಾಯೆಯಂ. ಚೆಲ್ಲಿ ರವಿ ಇಳಿದು ದಿಗಂತ
ಪ್ರಾಂತ್ಯದಲಿ ಜಾರಿದನು ಮಹಾಜಲಧಿಯ ತಟನಿಗೆ.
ಕೆಂಬಣ್ಣದ ಮುಸ್ಸಂಜೆ ಕವಿಯಿತು ಬ್ರಹ್ಮಾಂಡ
ಮಂಡಲಂ. ವಾಯುವಿನ ವಿಹಾರಂ ತೀರ್ಚಿ ಪಿಂ
ಮರಳಿದರ್ ಬಿಡದಿಗೆ ಗುರುವರ್ಯಂ. ಮರುದಿನಮೆ
ಪಯಣ ಭಾರತಕೆ ಬೃಹದ್ ಜಹಜಿನ ಯಾನದ
ಮುಖೇನಂ. ಅದಾಗಳೆ ಮನಃಪ್ರಾಣಗಳ್ ಹಾರಿ
ಪುಣ್ಯಧಾರಿಣಿಯ ಮಣ್ಣಹುಡಿಯಲಿ ಹೊರಳಾಡಿ
ಸವಿಯುತಿವೆ ಭಾರತದ ಗಂಧಪರಿಮಳವನುಂ.
ಎರ್ದೆಯಾಳದಲಿ ಬಿಸಿಯುಸಿರಿನ ಆರೋಹಣ
ಅವರೋಹಣ ಕ್ರಿಯೆಗಳಲಿ 'ಭಾರತ' ಎಂಬುವ
ಶ್ರುತಿಯು ಮಿಡಿಯುತಿದೆ ಭಾವನಾವೇಶದಲಿ.
ಭವ್ಯಾಂಬರದೊಳ್ ತಾರಾಕೋಟಿಯುಂ ಮಿಂಚಿ
ಮಿನುಗಿ ಮೈದೋರುತಿವೆ ವ್ಯಾಪಕತರತಮದಲಿ.
ಮನೆಮನೆಯ ವಾಗಿಲ್‌ಗಳ್ ಮುಚ್ಚಿರೆ ಇಡಿ ಪೊಳಲ್
ಸುಖನಿದ್ದೆಯ ಮಡಿಲಲಿ ಮಲಗಿತ್ತು ಮಗುವಿನೊಲ್.
ರಾತ್ರಿ! ತನಿಯಿಂಪುಗುವ ನಡುರಾತ್ರಿ!
ಮಾತೆ ಭುವನೇಶ್ವರೀ ದೇವಿಯುಂ ಬಲುದೂರ
ಬೆಟ್ಟದಾಣದಲಿ ಮುನ್ನಡೆಯುತ್ತೆ ಪಿಂದಿರುಗಿ
ನೋಡಿ "ಬಾ ಕಂದ! ಬಾ!' ಎನುತೆ ಕರೆದಿಹಳ್
ನೇರ ಹಾದಿಯಂಬಿಡಿದು. ಹೆಜ್ಜೆ ಮುಂದಿಡುವುದರೊಳ್
ಕ್ಷಣಾರ್ಧದಲಿ, ಕನಸೊಡೆದು ಎಲ್ಲ ಬಯಲಾಯ್ತು.
ನೆರೆಮನೆಯ ಅಂಗಣದಲಿ ಬೊಗಳಿತು ಪೆರ್ದನಿಯ
ಸ್ವಾನಂ. ಪೆತ್ತಮ್ಮೆಯಂ ನೋಳ್ಪ ಗೀಳು ಅಂಟಿತು

ಮನಕೆ. ಎದ್ದು ಪ್ರಾಥಃರ್ವಿಧಿಯಂ ತೀರ್ಚಿದರ್
ಲಗುಬಗನೆ. ಪೊರಡುವಾಗಳ್ ಆಂಗ್ಲಮಿತ್ರನುಂ
ಕೇಳ್ದನೆಂತೆನೆ "ಸ್ವಾಮಿಜಿ, ನೀಮಿೊಯಡೆಯೊಳ್ ನಾಲ್ಕು
ವರ್ಷಂಗಳ ಕಾಲಂ ಇರುತಿರ್ದುಂ ಪಾಶ್ಚಾತ್ಯ
ಭೋಗ ಭೂಮಿಯನುಭವ ಪಡೆದ ನಿಮಗೆಂತೆಂತು
ತೋರ್ಪುದಾ ಭಾರತವರ್ಷಂ?"
"ಕೇಳ್ ಮಿತ್ರ! ಆನೆನ್ನಯ ಮಾತೃಭೂಮಿಯಂ
ಪರಮ ಪ್ರೀತಿ ಭಕ್ತಿಗಳಿಂ ಗೌರವಿಸುತಿರ್ದೆಂ.
ಈಗಳದು ಪರಿಪುಣ್ಯ ಭೂಮಿಯಾಗಿ ಇರ್ಮಡಿಯ
ಗೌರವಾದರ ಮೂಡಿಸಿಹುದೆನ್ನದೆಯೊಳ್. ಆ
ಹಿಡಿಹಿಡಿ ಸಿರಿ ಮಣ್ಣು ಎನೆ ಪವಿತ್ರ ಮೃತ್ತಿಕೆಯು
ಎಂತಪ್ಪ ಪಾವಿತ್ರ್ಯ ಎಂಬುದಂ ಅರಿದೆನಾಂ,
ಭಾರತದ ಶಿಶುವಾಗಿ, ಸತ್ಯವಿದನಾಗಿ, ನಿಜ
ಸಂನ್ಯಾಸಿಯಾಗಿ. ಎಂದಿಗುಂ ಭಾರತವು ಮಿಗೆ
ಪವಿತ್ರವು. ಬೀಸಿಬಹ ಗಾಳಿಯೆನಗೆ ಪಾವನಂ.
ಹರಿವ ಸಲಿಲವೆನಗೆ ಅಮೃತ ರಸನೆಯೆ ವಲಂ.
ಇಂದೆನಗದು ಎಲ್ಲಿಯುಮಿರದ ಸಂಯಾತ್ರೆಯಾ
ಸ್ಥಾನಮಾದ ತೀರ್ಥಕ್ಷೇತ್ರವೆ ಸೈ! "ಆ ಗಳಿಗೆಯೊಳ್
ದಿವ್ಯ ಕಳೆಯಿಂ ಬೆಳಗಿ ತೇಜಃಪುಂಜಮಾಗಿ
ದೇವಮೂರ್ತಿಯೊ ಎನಲ್ ಸುಶೋಭಿತಮಾದುದು
ಅವರ ದೇವ ಮನೋಹರ ಮುಖಾರವಿಂದಂ.
ಆಗಳಾ ಮನೋಭಾವವನೋದಿದ ಎಲಿಜಬೆತ್
ಮಾರ್ಗರೆಟ್ ನೋಬಲ್ ಬರೆದಳೆಂತೆನೆ– "ಅಹ ಕಂಡೆನ್,
ಗುರುವರ್ಯನಾತ್ಮಧಾರೆಯೇ ಎರ್ದೆಯಾಳದಿಂ
ನುರ್ಗಿ ಬಂದವೊಲ್ ತೇಜಃಪುಂಜವಾಯಿತ್ತು,

ಆ ಭಾವಸೌಂದರ್ಯ ಬಣ್ಣನೆಗೆ ಸರ್ವಥಾ
ನಿಲುಕದೆನೆ ತಪ್ಪಲ್ಲ. ಆನಂತು ಬೆರಗಾದೆಂ!”
 ಲಂಡನ್ ನಗರಿಯ ಸೂರ್ಯ ಜಗಜಗಿಸುತಲಿರ್ದ.
ಪ್ರಾತಃಕಾಲೀನ ಸ್ವಚ್ಛ ಸುಂದರ ಪೊಳ್ತಿನಲಿ
ಸ್ವಾಮೀಜಿ ಉಗಿಬಂಡಿಯ ನಿಲ್ದಾಣಕೈದರ್
ಸ್ಸೇವಿಯರ್ ದಂಪತಿಗಳನೊಡಗೂಡಿ. ಆಗಲೆ
ಲಂಡನಿನ ಆತ್ಮೀಯ ಗೆಣೆಯರ್ ಭಕುತಜನರ್
ಬಂದು ನೆರೆದಿರ್ದರ್ ಪುಷ್ಪಗುಚ್ಛಗಳ ಸಹಿತ.
ಎಲ್ಲರ ಮುಖಬಿಂಬಗಳಲಿ ಅಗಲಿಕೆಯ ಮ್ಲಾನ
ಕಳೆಯ ಮುದ್ರೆಯೊತ್ತಿರ್ದುದು ಸೊಗಡು ಸೊಪ್ಪಾಗಿ.
ಕಡುಬೇಸರದ ಭಾರದಲಿ ಪುಷ್ಪಗುಚ್ಛಗಳ
ನೀಡಿ ಶುಭ ಹಾರೈಸಿದರ್ ಲಂಡನಿಗರ್. ಬಂಡಿಯು
ಕಕ್ಕಸದನಿಯಲಿ ಶಿಳ್ಳೆಯನೂದಿ ಮುಂಚಲಿಸಿತು.
ಮೆಲುಮೆಲ್ಲನೆ ಬಂಡಿಯನೇರಿ ನಿಲ್ದ ಗುರುವರ
ವಿವೇಕಾನಂದರುಂ ಭಾರತದ ಶೈಲಿಯಲಿ
ಕರದ್ವಯಗಳಿಂ ಮುಗಿದು ವಂದಿಸಿ ವಿದಾಯವ
ಸಲಿಸಿದರ್ ಮತ್ತೆ ಮತ್ತೆ. ಚಲಿಸಿತು ಉಗಿಬಂಡಿ
ಮುಂದೆಮುಂದೆ ಗುರುದೇವನಂ ಒಡಲಿನೊಳಾಂತು.
ಗೆಳೆಯರ್ ಮರೆಯಾದರ್. ನಿಲ್ದಾಣವುಂ ದೂರ
ದೂರವಾಗಿ ಮರೆಯಾಯ್ತು. ಸ್ವಾಮೀಜಿ ಪಿಂಜರಿದು
ತಮ್ಮ ಸ್ಥಳದೊಳ್ ಕುಳಿತರ್. ಮೈಭಾರ ಇಳಿಯಿತು.
ತಲೆಭಾರ ಅರುಗಾಯ್ತು. ಬಹುದೂರದಿಂ ಹೊರೆಯ
ಭಾರಮಂ ಪೊತ್ತು ದಣಿದ ಪಾಂಥ ಬೆಮರಿಳಿಸಿ
ತಣ್ಣೆಳಲಲಿ ವಿಶ್ರಮಿಸಲೆಳಸುವ ತೆರದಿ ನಿಜ
ಶಾಂತಭಾವದಲಿ ಶ್ರಾಂತಗತಿಯಂ ಅಳಿಸಿದರ್

ಸ್ವಾಮೀಜಿ. ಪಯಣವದು ಸಾಗಿತಯ್ ಮುಂಮುಂದೆ.
ಇಟಲಿಯ ದೇಶಮಂ ಒಳಗೊಂಡು ಹಲವಾರು
ಪತ್ತನದ ಸ್ಥಲಗಳನು ದರ್ಶಿಸುವ ಯೋಜನೆಯು
ಇರುತಿರಲ್ ಉಲ್ಲಸಿತಮಾಯ್ತು ಹೃದಯಬನದ
ಪಕ್ಷಿ. ಲಂಡನ್ ನಗರಿಯಿಂ ಡೋವರ್ ಪೊಳಲಂ
ಮುಟ್ಟುವನ್ನ ಉಗಿಬಂಡಿಯಯಲಿಯೆ ಪಯಣಂ.
ತರುವಾಯಿ ಯಂತ್ರಸಜ್ಜಿತ ಜಹಜು ಮುಂದಾಯ್ತು.
ಇಂಗ್ಲಿಷ್ ಮಹಾ ಕಾಲ್ವಾಯಿಯಂ ದಾಂಟಿ ಹೋಹುದೆ
ಪ್ರಥಮಾಂಕಂ. ಉಗಿಯ ಬಂಡಿಯಿಂದಿಳಿದು ಪೆರ್
ಭೈತ್ರಮಂ ಏರಿದರ್ ಪಯಣಿಗರ್. ಒಡನೊಡನೆ
ಭೈತ್ರಂ ಹರಿದುದು, ಹರಿದುದು ಜಲಧಿಯಂ ಕೀಸಿ
ಕೋರೈಸಿ. ಭರದಲಿ ಮುಂದೆಮುಂದೆ ಪಯಣಂಬೋಗೆ
ಫ್ರಾನ್ಸ್ ದೇಶೀಯ ನಗರಿ ಕೆಲೇಸ್ ತೀರದಲಿ
ನಿಂದತ್ತು ಲಂಗರೂರಿ. ಪಯಣಂ ಮುಗಿಯಿತ್ತು.
ರುದ್ರರಮಣೀಯ ಜಲರಾಶಿಯ ಪರಿಧಿಯಂಚು
ಚೆಂದದಿಂ ಶೋಭಿಸುವ ಪರಿಯಲಿ ಕಿರಿಕಿರಿತರ
ನಾವೆಗಳ್ ಜಹಜುಗಳ್ ನಿಂದಿರ್ದುವು ಸಾಲ್ಗೈಸಿ.
ಪಯಣಿಗರಿಳಿದರ್. ವಿವಿಧ ದೇಶೀಯ ವಿಧವಿಧ
ಮೋರೆಗಳೆಸೆದುವು ತಂತಮ್ಮ ನೈಸರ್ಗಿಕಗುಣ
ವೈಭವೀಕರಿಸಿ. ಮುಂಸ್ಸಂಜೆಯ ಮುಗಿಲ್ ಮಂಜು
ಇಳಿಯುತಿರ್ದುದು ಇಳೆಯಮೇಲೆ. ಕರ್ವೆಟ್ಟುಗಳ
ಶಿಖರ ಶ್ರೇಣಿಗಳ್ ಮಂಜಿನೈಕಿಲ್ ಕಿರೀಟವ
ಧರಿಸಿ ರಜತ ತೇಜದಲಿ ಮೆರೆದಿವೆ ಸಾಲಾಗಿ.
ನವನವೋದೇಶಂಗಳ ಸಂದೃಶ್ಯಮಾನ
ಸೌಂದರ್ಯರಾಶಿಯಂ ಮನತುಂಬಿ ಮತಿತುಂಬಿ

ತುಷ್ಟಿಯಂ ಪಡೆದರಂತರಾತ್ಮಂ ಪುಷ್ಟಿಗೊಳ್ವ
ಮಾಳ್ಕೆಯಲಿ. ಎಲ್ಲರ್ಶೈದರ್ ತಮ್ಮಯ ಬಿಡದಿಗೆ.
ಮಂಜು ಇಳಿದುದು ಇಳಿದುದು ಮನೆಮಠಗಳ್ ಮುಚ್ಚಿ
ಹೋಹ ತೆರದಲಿ. ಓ, ಮರವಿಲ್ಲ ಗಿಡಗಳಿಲ್ಲ.
ಗಿರಿವೆಟ್ಟಗಳಿಲ್ಲ. ಬರೀ ಮಂಜುವೊಳೆ ತುಂಬಿ
ಹರಡಿತು ಇಡೀ ಪರಿಸರದಗಲಂ. ಎಲ್ಲೆಡೆಯು
ಮಂಜು, ಮಂಜು, ಮಂಜೇ ಮಂಜು! ಲೋಕೋತ್ತರಂ
ರಜತವಾರಾಶಿ! ತಂಗಾಳಿಯಾ ತೀಟವಿಲ್ಲ.
ಅತಿಯಾದ ಚಳಿಯ ಕೊರೆತವು ಇಲ್ಲದಿಹ ಬಲೂ
ಸಾಮಾನ್ಯತರದಿಂದೆಸೆವ ಹವಾಮಾನವುಂ
ಹರಡಿತ್ತು ಮಂಜಿನ ಅಪೂರ್ವತರ ವಿಶೇಷತೆ
ಶೋಭಾಶೈಲಿಯ ಮೆರಗು ವೆರಸಿ. ಕಳೆದುದಲ್ಲೊಂದು
ದಿನಮಾನವದು ಮಂಜುಗಡಲಲಿ ಮುಳುಗಿ ಮಿಂದು.
ಚಂದ್ರನಿಲ್ಲ ರಾತ್ರಿಯೊಳ್. ರವಿಯಿಲ್ಲ ಪಗಲೊಳ್.
ಊರು ಕೇರಿಗಳ ಸಂವೀಕ್ಷಣೆಯುಂ ಇರದಾಯ್ತು.
ಬರೀ ಸುಮ್ಮನೆ ಆವುದೆ ಕಾರ್ಯಕ್ರಮಗಳಿರದೆ
ಕಾಲಹರಣಗೈದುದುಗುರುವಿನ ಗೆಳೆಯರ ಕೂಟ.
ನಿಸರ್ಗ ಪ್ರಿಯ ಗುರುದೇವಂ ಶಾಂತಿಯಿಂ ಅತೀ
ಶ್ರಾಂತಗತಿಗೆ ವಿದಾಯ ಪೇಳ್ದರ್ ವಿರಾಮದಲಿ.
ಮೈಮನ ಹಗುರಾಯಿತು. ಮತಿಗತಿ ಹಗುರಾಯಿತು.
ಕಳೆದುವೆರಡು ದಿನಂಗಳು ಮುಗಿಲ್ ಮಂಜಿನ ಸಿರಿಯಲಿ.
    ಮರುದಿನಂ ನಗರದ ಸುಸುಂದರ ಪ್ರೇಕ್ಷಣೀಯ
ಕಲಾಶಾಲೆಗಳಂ, ಪ್ರದರ್ಶನಾಲಯಗಳಂ
ದೇವ ಕ್ರಿಸ್ತನ ದೇಗುಲಮಂ, ಲೋನಾರ್ದೋದ
ವಿಂಚಿಯ ಜಗತ್ಪ್ರಸಿದ್ಧ ಕಲಾಕೃತಿ 'Last

Supper' (ಕೊನೆಯ ಭೋಜನ) ಎಂಬ ವರ್ಣಚಿತ್ರಮಂ
ನೋಡಿದರ್ ಕಣ್‌ದಣಿಯೆ. ಮನದಣಿಯೆ. ಮೂದಿನಂ
ಕಳೆದುವಲ್ಲಿ, ಮಿತ್ರವಳಗದೊಡಂ ಕೂಡಾಡೆ
ಕಳಿದುದು ಸಮಯಂ ಸಾನಂದದಿಂ. ಅಲ್ಲಿಂದ
ಮುಂಪಯಣದ ಗುರಿ ಪೀಸಾನಗರಿ. ಆತ್ಮೀಯ
ಗೆಳೆಯ ವೃಂದದ ಸರಸ ಸಂಭಾಷಣೆಗಳಿಂದೆ
ಕೂಡಿ ರಸವತ್ತಾಯ್ತು ಪಯಣದಾ ಸಿರಿವೊಳ್ತು.
ದೇಶ-ದೇಶಾಂತರಗಳ ಸಂಸ್ಕೃತಿ ವಿಜ್ಞಾನ
ತಂತ್ರಜ್ಞಾನಗಳೆಸೆದುವು ಮನಮುಟ್ಟಿಸುವಂತೆ.
ಪೀಸಾ ನಗರಿಯಲಿ ಮೊದಲ್ ಪೀಸಾ ಗೋಪುರಂ
ಬಗೆಬಗೆಯ ಪಳೆಯುಳಿಕೆಗಳ್ ಕ್ರಿಸ್ತ ದೇಗುಲಂ
ಮೇಣಿತರ ಸಂದೃಶ್ಯಮಾನ ಪ್ರಕೃತಿಯ ಶಿವ
ಸದನಮೊ ಎನಿಪ ಮಹೋನ್ನತ ದಿವ್ಯ ಸೌಂದರ್ಯ
ರಾಶಿಯಂ ನೋಡಿದರ್ ಮನಮತಿಯು ತಣಿವನ್ನ.
ಪರ್ವತ ಪದತಲದಲಿ ಒಡಮೂಡಿ ಜ್ಯಂಭಿಸಿಹ
ಫ್ಲಾರೆನ್ಸ್ ನಗರವಂ ಬೊಕ್ಕು ಅಲ್ಲಿಯ ಸಕಲ
ಕಲೆಗಳಂ ಕಣ್ತುಂಬ ನೋಡಿ ತನುತುಂಬಿದರ್.
ಇಂದ್ರನ ನಂದನವನವಂ ಮೀರಿ ಮುಂಬೆಳೆದ
ಉದ್ಯಾನಗಳಲ್ಲಿ ಅಡ್ಡಾಡಿ ಪುಷ್ಪಲೋಕದ
ಸೌಂದರ್ಯ ರಾಶಿಯಲಿ ಮುಳುಗೆದ್ದು ಆನಂದ
ರಸಾನ್ನವನುಂಡು ಮನದುಂಬುತಿರೆ ತೆಕ್ಕನೆ
ಕಣ್ಣೆಸೆದುದು ಅಚ್ಚರಿಯ ವಿಶೇಷಂ! ಅಮೆರಿಕ
ದೇಶೀಯ ಪರಮಾಪ್ತ ನೇಹಿಗರಾಗಿ ತನಗೆ
ಸಂಪೂರ್ಣ ಸಹಕಾರಮಿತ್ತು ಸಂಪೋಷಿಸಿದ
ಶ್ರೀಮತಿ ಮತ್ತಮಾ ಶ್ರೀ ಜಾರ್ಜ್ ಹೇಲ್‌ರವರ್

ಎದುರ್ವೆತ್ತರ್! ಅಹ ಅನಿರೀಕ್ಷಿತ ಭೇಟಿಯದು!
ಸ್ವಾಮಿಜಿಯ ಮಾನಸ ಪಕ್ಷಿ ಒರ್ಮೆಗೆ ಸ್ವರ್ಗ
ಗಾಮಿಯಾದುದು! ಪ್ರಸನ್ನ ಭಾವದಿಂದಲಿ
ಸವಿನಮನವಂ ಸಲಿಸಿ ಕರದ್ವಯಗಳ್ ಚಾಚಿ
ಕುಲುಕುಲುಕಿ ಲಾಘವಂ ನೀಯುತ್ತೆ ಸರ್ವತ್ರ
ಉಭಯ ಕುಶಲೋಪರಿಯಂ ನಡೆಸಿದರ್ ಆನಂದ
ಮೋದದಿಂ. ಗುರುವರನ ಅಕ್ಷಿಪಟಲದ ಮೇಲೆ
ಥಟ್ಟನೆ ತಮಗಂದೊದವಿದ ದುರ್ಭರ ಚಣದಲಿ
ಉಪಕರಿಸಿದ ಚಿತ್ರ ಸುಳಿಯಿತು ಸ್ಪಷ್ಟವಾಗಿ.
ಅತ್ಯಂತ ಮಾತೃಭಾವದ ಭಕ್ತಿರಸ ತುಂಬಿ
ಹರಿಯಿತು ಎದೆಯ ಸ್ವರ್ಣ ಕರಂಡದಲಿ. ಅತೀವ
ಗೌರವಾದರದಿಂದವರೊಡಂ ಕಳೆದರೆನಿತೊ
ಪೊಳ್ತು ಸಂತಸದಾಗರದಲಿ ಮುಳುಗಿ. ತರ್ವಾಯ,
ಪೊರಮಟ್ಟರ್ ನಿಸರ್ಗದಧಿದೇವಿಯ ಪದಯುಗ
ಪಾವನಿಯೆನೆ ಸಗ್ಗವೆ ಧರೆಗಿಳಿದು ಬಂದಂತೆ
ಕಂಗೊಳಿಪ ನೇಪಲ್ಸ್ ನಗರಿಯ ಪಥವಿಡಿದು.
ಉಗಿಬಂಡಿ ಓಡಿದುದು ಗುಜುಗುಜು ಕಠಿಣಸದ್ದು
ಗದ್ದಲಗಳ ಹೂಡಿ, ಜಗತ್ ಪ್ರಖ್ಯಾತಮಾದಾ
ನೇಪಲ್ಸ್ ನಗರಿಯಂ ಗುರಿಗೊಂಡು, 'ನೇಪತ್ಯ
ಏರುವಾ ಮುನ್ನ ನೇಪಲ್ಸ್ ನೋಡು' ಎಂಬುದು
ಬಲ್ ಹಳೆಹಳೆಯ ರೂಢಿವಾತು. ಆ ನಾಣ್ನುಡಿಯ
ಕೇಳಿಯುಂ ನೋಡದಿರುವುದೆ ಎನಿಸಿ ನೇಪಲ್ಸ್
ನೋಡ್ವ ಸಲುವಾಗಿಯೇ ಪೊರಟರಾ ಸ್ವಾಮಿಜಿ.
ಪಯಣ ಕೊನೆಗೊಳ್ಳುತಿರೆ ದೂರದೂರದಿಂದಲೇ
ಕಣ್ಸೆಳೆದುದು ನೇಪಲ್ಸ್ ನಗರಿ! ಕಲಾಕಾರನ

ಕುಂಚದಿಂ ಮಿಂಚಿದುದೊ ಎನೆ ಸುಸುಂದರಮಾದ
ರೂಪು ರಂಗುರಂಗಿನಿಂ ಕೂಡಿ ಸ್ವರ್ಗಧಾಮವ
ನಾಣ್ಕಿಸುವೊಲ್ ಭೂಸ್ವರ್ಗ ತಾನಾಗಿ ಮೆರೆದುದು,
ಕಂಗಳೆದುರಿಗೆ. ನಗರಿಯ ಒಳಹೊರಗೆ ತಿರುಗಾಡಿ
ನೋನೋಡಿ ಮನತಣಿಸಿದರ್. ಚೆಲ್ವಿನೊಳಗೆ ಕಡು
ಚೆಲ್ವಾದ ನೆಲೆವೀಡುಗಳ್ ದಿವ್ಯ ಕರಕುಶಲ
ಕಲೆಯ ಸೊಬಗು ಶೋಭಾಯಮಾನಮಾಗಿರ್ದುದು.
ನೆರೆಯ ಪ್ರಾಚೀನ ನಗರಿ ಪಾಂಪೆಯಂ ಸಂಪೂರ್ಣ
ನಾಶಗೈದ 'ವೆಸೂವಿಯಸ್' ಅಗ್ನಿ ಪರ್ವತವಂ
ಕಂಡುಬರೆ ಹಿಡಿದರೆಲ್ಲ ಉಗಿಬಂಡಿಯಂ. ಆ
ಪರ್ವತದ ನೆತ್ತಿಗೇರುವೊಡೆ ಸುತ್ತಿ ಸುತ್ತಿಯೆ
ಮೇಲೆ ಮೇಲೇರಿ ಪೋಗುವ ಪರಿಯಲಿ ಕಡೆದಿಹ
ಪಥಮಿರಲ್ ಬಂಡಿಯೇರಿದುದು ಪರ್ವತದ ಮೈ
ಸುತ್ತಿಸುತ್ತಿ ಶಿಖರಾಗ್ರಕೆ. ನೇಪಲ್ಸ್ ನಗರಿಯಲಿ
ಸ್ವಾಮಿಜಿಗಾಗಿ ಕಾದಿರ್ದ ಶೀಘ್ರಲಿಪಿಕಾರ
ಕೂಡಿದರ್ ಸ್ವಾಮಿಜಿಯ ಬಳಗಂ ತೋಷದಿಂ.
ಬಂಡಿಯಿಂದಿಳಿದು ಎಲ್ಲರ್ ಸಮಿಪಿಸಿದರಾ
ಪರ್ವತದ ತೆರೆದ ಬೃಹದ್ ಬಾಯಿಯಾಬಳಿಗೆ.
ನೋಡಲೇನಾ ಆ ಮಹಾ ಅಗ್ನಿ ರಾಶಿಯಂ
ಭಸ್ಮಧೂಳಿಯಿಂ ತುಂಬಿದ ಹೊಂಡದ ದೃಶ್ಯಂ?
ಬಹುಕಾಲದಿಂ ಸುಪ್ತಮಾಗಿರ್ದುದು ಆಗೊರ್ಮೆ
ಈಗೊರ್ಮೆ ಕೆಮ್ಮುವಂತೆ ಶಬ್ದವಂ ಸೂಸುವ
ಗುಣಮಿರುತಿರೆ ಸ್ವಾಮಿಜಿಗೆ ತೋರಿಕುಡುವವೊಲ್
'ಊಫ್' ಎಂಬ ಘೋರತರ ಶಬ್ದವಂಗೈದು ಹಲ
ಕೆಲ ಸಣ್ಣ ಪುಟ್ಟ ಕಲ್ಲುಗಳ ಸಹಿತ ಭಸ್ಮವಂ

ಎರಚಿತು ಗಗನದೆತ್ತರಕೆ! ಮರುದಿವಸಂ ಗಿರಿ
ತಲದ ಪಾಪೆ ನಗರಮಿಹ ದಾಣಕೈದರ್. ಅಂದು,
ನಗರವದೆಂತಿರ್ದುದಂತೆಯೇ ಇರ್ದುದು ದಿವ್ಯ
ಪ್ರದರ್ಶನದ ರೂವಿನಲಿ. ಭಸ್ಮಧೂಳಿಯಿಂ
ಲಾವಾರಸ ಕೆಸರು ಕೊಚ್ಚೆಗಳಿಂದೆ ಮುಚ್ಚಿರ್ದ
ನಗರದ್ದೇಶಮಂ ಬಳಿದು ಸ್ವಚ್ಛಗೊಳಿಸಿ ಪಳೆಯ
ಉಳಿಕೆಯವೊಲ್ ಇಟ್ಟಿಹರ್ ಸಂದರ್ಶಕರಿಗಾಗಿ.
ಅಗ್ನಿ ಪರ್ವತದ 'ಊಫ್' ದನಿಯ ಮೊಳಗು ಪಾಂಪೆ
ನಗರಕ್ಕೆ ಕೇಳಿಸುತಲಿರ್ಪುದು ತನುಮನ 'ಜುಂ'
ಎನಿಸುವ ತೆರದಲಿ. ಪಾಂಪೆಯಂನೋಡುವುದರೊಳ್
ಕಳಿದುವೊಂದೆರಳ್ಡು ದಿನಗಳ್. ಭಾರತ ಪುಣ್ಯ
ಭೂಮಿಗೆ ಪೊರಡುವ ದಿನ ಬಳಿ ಸಾರಿ ಬಂದತ್ತು.
ಸಂಭ್ರಮದ ರಸ ತುಂಬಿ ಉಕ್ಕೇರಿತು ಹೃದಯ
ಕುಂಡ. ಪ್ರಾತಃಕಾಲೀನ ಶುಭ್ರಸುಂದರ ಪೊಳ್ತು
ಸಡಗರದಲಿ ಸ್ವಾಗತಿಸಿತು ಸಾಗರ ತೀರಕೆ.
ಪಕ್ಷಿಗಳ್ ಉಲಿದುವು ಭವ್ಯ ಸುಪ್ರಭಾತಮಂ ಕೋರಿ.
ಎಲೆಎಲೆಗಳ್ ಮರ್ಮರಿಸಿ ಶ್ರುತಿಯಂ ಮಿಂಟಿದುವು
ಪಕ್ಷಿಗೊರಳಿನ ಸುಪ್ರಭಾತ ರಾಗ ಮಾಲೆಗಾಗಿ.
ಸಾವಿರದೆಂಟನೂರತೊಂಬತ್ತಾರನೆಯ ಇಸವಿ
ಡಿಸೆಂಬರ್ ಮೂವತ್ತನೆಯ ತೇದಿ! ಸಾಗರದ
ಅಂಚಿನಲಿ ಲಂಗರೊತ್ತಿ ನಿಲ್ದ ಚೈತ್ರ ಚಲಿಸದೆ
ನಿಂದತ್ತು ಖಚಿತಗಳಿಗೆಗಾಗಿ. ಅರುಣಾರುಣ
ಬೆಳ್ಮುಗಿಲ್ ದಿಣ್ಣೆಯೇರಿ ನಿಂದು ಜ್ವಲಿಸಿರೆ,
ಚೆಂಬಿಸಿಲ್ ಹೊನ್ನಿನರಸದೊಲ್ ಹರಿದುದುಭುವಿಯ
ಮೇಲೆ. ಕ್ಲುಪ್ತ ಸಮಯದೊಳ್ ಪಯಣಿಗರ್ ಜಹಜಂ

ಏರಿದರ್ ತಂತಮ್ಮ ಸ್ಥಳವಂ ಆಕ್ರಮಿಪ
ಆತುರದಿ. ಚಲಿಸಿತು ಚಲಿಸಿತು ಪ್ರಥಮ
ಶಿಳ್ಳೆಹಾಕಿ ಬೃಹದ್ ಭೈತ್ರಂ. ವಿಶ್ವವಿಜಯೀ
ಯುಗಾಚಾರ್ಯರ್ನನಂ ಪೊತ್ತು ಪೆರ್ಮೆಯ ನೋಂಪಿಯಲಿ
ನುರ್ಗಿ ಜರ್ರನೆ ಜಳಜಳಿಸಿ ಜಲಸ್ಫಾಲನೆ
ಗೆಯ್ಯುತೆ ಚರಿಸಿತು ದಕ್ಷಿಣ ಸೂಚಿಗಭಿಮುಖೀ
ದಿಕ್ಕು ದಿಶೆಯನಾರ್ಯೆದು. ಪಗಲುರುಳಿ ನಿಶಿಯುಂ
ಮುಂಬಂದುರುಳ್ದು ಬೆಳಗುಂಬೊಳ್ತು ಅರಳ್ವಂದು
ಕಳೆಯಿತೆನೆ ದಿನಮಾನವೊಂದು ಹತ್ತಿರ ಹತ್ತಿರ
ಬಂದಪುದೆಮ್ಮ ಜನ್ಮಭೂಮಿ ಎಂಬೊಂದು ಎರ್ದೆಯ
ತುಡಿತ ಮಿಡಿವುದು 'ಭಾರತ ಭಾರತ' ಎಂದೆಂದು,
ನಡುಹಗಲಿನ ಸುಡುಬಿಸಿಲ್ ಜಳಜಳಿಸಿ ಇಳಿದುದು
ಪಡುಗಡಲಿನ ಮೇಗಡೆ ಕೆಂಪಿನೋಕುಳಿಯ ಚೆಲ್ಲಿ
ಸೂಸಾಡಿ. ಸಾಯಂ ಸೊಬಗಿನ ಸುವರ್ಣಛವಿಯು
ಕಣ್ಗೆಡ್ಡಮಾಯ್ತು ಮನವಂ ಸೂರೆಗೊಳ್ವಂತೆವೋಲ್.
ಕಡಲ್ ಪಕ್ಷಿಗಳ್ ಹಿಂಡು ಹಿಂಡೈಸಿ ಭರ್ ಭರ್ರನೆ
ಹಾರಿ ಹಾರಾಡಿ ಗೂಡಿನ ಜಾಡನರಸುತಿವೆ
ಕದಿಗುದಿಯಲಿ. ಇನ್ನಾ ರಾತ್ರಿಯೊಂದು ಉರುಳ್ದೊಡೆ
ಲಂಕಾಧರಿತ್ರಿಯಂ ಮುಟ್ಟಿ ನಿಲ್ವುದು ಜಹಜು.
ಹಾ, ಒಂದೇ ಒಂದು ರಾತ್ರಿ ಮಾತ್ರಮೆ ಉಳಿದತ್ತು
ಸಾಗರಯಾನಮಂ ತೀರ್ಚಲ್, ಒಡಲ್ ಪಾತ್ರದಲಿ
ಧುಮುಧುಮಿಸಿದುದು ಚಿದ್‌ಘನಛಾಯೆ ನಯನಗಳಲಿ
ಮಿಂಚಿನ ಛವಿಯಂ ಮೂಡಿಸುವೊಲ್. ಮುಸಂಜೆಯಂ
ತುಳಿದು ನಿಶಿಯು ಅವತರಿಸೆ ಕರ್ಪುಡೆಯಂ ಧರಿಸಿ,
ಸ್ವಾಮಿಜಿ ಕೊಠಡಿಯೊಳ್ ಸೇರುತ್ತೆ ಸೆಜ್ಜೆಯಂ

ಏರ್ದು ರಾತ್ರಿಯ ಪ್ರಾರ್ಥನೆಯಂ ಸಲ್ಲಿಸಿದರ್,

“ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವ ವ್ಯಾಪೀ ಸರ್ವಭೂತಾಂತರಾತ್ಮಾ ।
ಕ್ರಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತ ದೇವಲೋ ನಿರ್ಗುಣಶ್ಚ ॥”

ಮೈತುಂಬ ಹೊದ್ದಿಕೆಯನೆಳೆದು ಮಲಗಿದರೆಂತೊ
ಸ್ವಾಮೀಜಿ ಸವಿನಿದ್ದೆಯುಮಂತಂತು ತೆಕ್ಕನೆ
ಆವರಿಸಿತು ತಾವರಿಯದವೊಲ್. ನಡುರಾತ್ರಿಯು
ಕಳೆಯಿತ್ತು. ಬ್ರಾಹ್ಮೀ ಮುಹೂರ್ತಮಡರುತಿದೆ. ತನಿ
ಯಿಂಪಿನ ತನಿಗಾಳಿಯು ತಣ್ಣಗೆ ತನು ತಂಪಿನ
ಕೊರಡಾಗುವೊಲ್ ತೀಡುತಿದೆ. ಗಾಢ ನಿದ್ದೆಯೊಳ್
ಸ್ವಾಮೀಜಿ ಕಂಡರೊಂದು ಕನಸಂ. ಬೆಳ್ಳವಿರ್
ವೆಳ್ಳಿಯೊಲ್ ನೆರೆತ ಗಡ್ಡಧಾರೀ ರಿಸಿ ತುಲ್ಯ
ವೃದ್ಧ ವ್ಯಕ್ತಿಯೊಂದು ಎದುರ್ವೆತ್ತು ನುಡಿಯಿತಿಂತು,
‘‘ಎಲೆ, ಬುದ್ಧಿಮಾನ್ ಕೇಳ್! ನಿನಗಾನ್ ತೋರುವ
ಸ್ಥಳಮಂ ಪೂರ್ಣಗಮನವನಿಟ್ಟು ನೋಡೆಲೈ!
ಆನೆಂಬುವ ವಿಷಯಮುಂ ಸಂಪೂರ್ಣ ಪರಾಮರಿಸು.
ಈಗ ‘ಕ್ರೀಟ್’ ದೀವಿಯ ಸನಿಹದೊಳ್ ನೀನಿರ್ಪೆ.
ಅದರೆಡೆಗೆ ಸರಿಯಾಗಿ ಕಣ್‌ನೆಟ್ಟು ನೋಡಿಕೋ
ಕ್ರೈಸ್ತಧರ್ಮ ಪುಟ್ಟಿದುದು ಈ ನಾಡಿನಲ್ಲಿಯೆ...!
ನೀನಿಲ್ಲಿಯೆ ಇರ್ದು ನಮ್ಮಯ ಧರ್ಮವಂ ಪುನರ್
ಸಂಸ್ಥಾಪಿಸು! ನಿಜದಿಂ, ಕೇಳ್, ಆನೊರ್ವ ಪುರಾತನ
ತೇರ ಪುತ್ತ. ತಿಳಿದಿರು, ತೇರ ಪುತ್ತರ ಧರ್ಮ
ಭಾರತೀಯ ಋಷಿಗಳ ಬೋಧನೆಯಾಧರಿತಂ!
ನಾವಾವುದದಂ ಬೋಧಿಸಿದೆವದು ಏಸುಕ್ರಿಸ್ತ

ಬೋಧಿಸಿದನೆಂದೆಂದಿಂದು ಪ್ರಚಲಿತಂ ಕಣ! ನಮ್ಮ
ಜೀವನಾದರ್ಶಗಳ್ ಸತ್ಯ ದರ್ಶನಂಗಳ್
ಎಲ್ಲವುಂ ಏಸುಕ್ರಿಸ್ತ್ ಪ್ರಣೀತ ಎಂದಾಯ್ತು!
ನಿಜದಿಂ ವಿಷಯವನೊರೆವೆನೆನ್. ಏಸುಕ್ರಿಸ್ತಂ
ಎಂಬ ಪೆಸರಿನ ವ್ಯಕ್ತಿಯುಂ ಪುಟ್ಟಿದುದಿಲ್ಲಂ!
ಆ ಸ್ಥಲಮಂ ಅಗೆದುಬಗೆದು ನೋಡಿದೊಡೆ ತಿಳಿವುದು,
ಎನ್ನವಾತಿನ ಸತ್ಯಾಂಶಂ ಸಮರ್ಥಿಪನೇಕ
ಆಧಾರಗಳ್ ಎಂದೊಡೆ ಸತ್ಯಂ!"
ಒಡನೊಡನೆ
ಕೇಳಿದರ್ ಸ್ವಾಮಿಜಿ "ಅಯ್ಯಾ, ತೇರಪುತ್ತ.....
ಆವ ಸ್ಥಲವಂ ಅಗೆದು ನೋಡಿದೊಡೆಮಗೆ ನಿನ್ನ
ಮಾತಿಗಾಧಾರದೊರೆವುದು?"
"ಟರ್ಕಿ ದೇಶೀಯ
ಪಕ್ಕದಾ ತಾಣಮಂ ನೋಡು! ಅಗೊ ಅಲ್ಲಿ!"
ತಟ್ಟನೆಳ್ಚರಮಾಯ್ತು ತಟ್ಟಿ ಎಬ್ಬಿಸಿದವೊಲ್!
ಸ್ವಾಮಿಜಿ ಬಿರಿಬಿರಿ ಕಣ್ ತೆರೆದರಳಿಸಿ ನೋಡೆ,
ಎಲ್ಲಿಹನ್ ತೇರಪುತ್ತ? ಆಕ್ಷಣಮೆ ಡೆಕ್ಕಿನ
ಬಳಿಗೋಡಿದರ್ ಸ್ವಾಮಿಜಿ. ಎದುರ್ವೆತ್ತನೊರ್ವಂ
ನೌಕಾಧಿಕಾರಿ. ಅವನನ್ನೆ ಕೇಳಿದರ್ "ಎಲೆ
ಸೋದರಾ! ಈಗ ವೇಳೆ ಎನಿತ್ತೈ?"
"ಸ್ವಾಮಿಜಿ,
ಮಧ್ಯರಾತ್ರಿ!"
"ನಾವಾವ ಪ್ರದೇಶದೊಳಿಪ್ಪೆವು?"
"ಕ್ರೀಟ್ ಎಂಬ
ದೀವಿಯಿಂ ಐವತ್ತು ಮೈಲಿ ದೂರದಲಿ.

ಗುರುದೇವಂ ನುಡಿಸಿದರಿಂದು "ಕೇಳೈ! ತೇರಪುತ್ತ
ಎನೆ ಬೌದ್ಧಗುರುದೇವನ ಶಿಷ್ಯಗಣದೊಳೊರ್ವಂ.
ಅವನೆನ್ನ ಕನಸಿನೊಳೈದು ನುಡಿದ ವಿಷಯಮಂ
ಅರಿದು ಅಚ್ಚರಿಯೊಳಾನ್ಯೆದೆ ನಿನ್ನಯಾಬಳಿಗೆ."
ವಿಷಯಮಂ ತಿಳಿಯೆ. 'ಆ ನೌಕಾಧಿಕಾರಿಯು
ಮುಗುಳ್ನಗೆಯೊಳ್ ನಿವಾರಿಸಿದಂ, ಮರುನುಡಿಯದೆ.
ಸಾಗರ ಜಲರಾಶಿಯು ಬೋರ್ ಬೋರೆಂದೆನುತೆ
ಬೋರ್ ಗುಡಿಯುತಲಿರ್ದುದು ರೋಷಾವೇಶದಲಿ.
ಮೇಲ್ಮೆಯ್ಯ ಸುಳಿಗಳ್ ಸುತ್ತಿ ಸುತ್ತಿ ತಿರ್ರನೆ ತಿರುಗಿ
ಬಾನ್ನೀಲಿಯ ಕೋಟಿ ಶತಕೋಟಿ ನಕ್ಷತ್ರಗಳ
ತಿರುಗಿಸುತಿರ್ದುವು ಎರ್ದೆಯ ದರ್ಪಣದಲಿ. ಆ
ಮೋಹಕರ ದೃಶ್ಯಂ ಕ್ಷಣಕಾಲ ನೋಡಿದ ಗುರುವು
ಪಿಂಮರಳಿದರ್ ಕೊಠಡಿಗೆ. ಕನಸಿನ ವೃತ್ತಾಂತ
ಮನದೊಳ್ ನಲಿನಲಿಯುತಿರೆ ನಿದ್ದೆಯು ದೂರಾಯ್ತು
ಕಣ್ಣಿನಿಂ. ಸ್ವಾಮಿಜಿ ಕುಳಿತರ್ ಪದುಮಾಸನ
ಹೂಡಿ. ಮಾನಸ ಕಲ್ಪ ಗುರುವರನಂ ನೆನೆನೆನೆದು
ನಿರ್ವಿಕಲ್ಪ ಸಮಾಧಿಯಲಿ ಮುಳುಗಿದುದಾಗಳ್.

ಸರ್ವಸ್ಯಾಹಮಾತ್ಮ । ಸರ್ವೋಽಹಮಸ್ಮಿ ।
ಸರ್ವಾಧಾರೋಽಹಮಸ್ಮಿ । ಸರ್ವಾತಿರಿಕ್ತೋಽಹಮಸ್ಮಿ ।
ವರ್ಣಾದಿವಿಕಲ್ಪಾತೀತ ಬ್ರಹ್ಮಾಹಮಸ್ಮಿ ।
ನಿತ್ಯ ನಿಷ್ಕಳ ಬ್ರಹ್ಮಾವಸ್ಮಿ । ನಿರ್ಮಲನಿಷ್ಕ್ರಿಯ ಬಹ್ಮಾಹಮಸ್ಮಿ ।

ಅಖಂಡೈಕರಸ ಚಿನ್ಮಾತ್ರ ಬಹ್ಮಾಹಮಸ್ಮಿ ।
ನಿರ್ವಿಶೇಷ ಚಿನ್ಮಾತ್ರ ಬ್ರಹ್ಮಾಹಮಸ್ಮಿ ।
ಕೇವಲ ಚಿನ್ಮಾತ್ರ ಬ್ರಹ್ಮಾಹಮಸ್ಮಿ ।
ಕೇವಲ ಸನ್ಮಾತ್ರ ಬ್ರಹ್ಮಾಹಮಸ್ಮಿ ।

ಪೊಳ್ತುರುಳುರುಳಿ ಬ್ರಾಹ್ಮೀ ಮುಹೂರ್ತಮಡರುತಿರೆ,
ಮೂಡಣದಲಿ ಎಳೆ ಬೆಳಕಿನ ಕಿರುಛವಿ ಮೊಳೆಯಿತು
ಸೀಮಾಂತ ರೇಖೆಯೊಳನುಕ್ರಮದಲಿ. ಕಾಣಾ,
ದೂರ ಸೀಮಾಕ್ಷೇತ್ರದೊಳ್, ಸದ್ಯಃ ಪೊಗರೇರುವ
ಪೊಳ್ತಿನಲಿ 'ಉಕ್ಕಿಬಹ ತಿಳಿಗೆಂಪು ನಸುಗೆಂಪು
ಕಡುಗೆಂಪು ಹೂಗೆಂಪು ಹಳದಿಗೆಂಪು ಸುನೀಲ
ಕೆಂಪು ಕನಕ ಚಂದನ ವರ್ಣವರ್ಣೋಪಮಯ
ಮುಗಿಲ್ ಮಾಲೆಗಳ್ ಸಾಲು ಸಾಲ್ಗೈಸಿ ಹರಿಹರಿದು
ಜ್ವಾಲೋಪಮಾರಕ್ತಮಾಯಿತಾ ಮೂಡಣದ
ದಿಶಾಭಿತ್ತಿ! ದಲದಲದಲಮೆಂದರಳಿ ಮಲರ್ದುದೈ
ಮೂಡು ಬಾನಂಚಿನೊಳ್ ಪ್ರತೀಕ್ಷಿತ ಪವಿತ್ರ
ಪುಣ್ಯೋದಯದ ಉಷಃಕಾಂತಿ! ಧಳಧಳಂ
ಮೊಳಗಿದುದು ಪ್ರಸ್ಥಾನ ವಂಶಿ ಭೇರೀರವಂ.
ದಳದಳ ಸಮುದ್ರಮುಕ್ಕಿದುದು ದಂಡೆಯ ಮೇಲೆ
ಅವ್ವಳಿಸಿ ಸುದ್ದಿ ಸಾರ್ವಂದದಲಿ. ಓಗ್ಗಿದುದು
ಕೊರಳ್ ಸುವಾರ್ತೆಯನುಲಿಯೆ ಕೋಗಿಲೆ ಕುಲಕೋಟಿಗೆ.
ಪೊಳ್ತು ಮಿಂಚುತಿರೆ ಖಗಗಾನ ಮೊಳಗಿತು. ಗಾಳಿ
ಸುಯ್‌ಸುಯ್ಯನೆ ಸುಯ್ದುಯ್ದು ಬೀಸಿತು ಚಾಮರಿಪ
ಪಾಂಗಿನಲಿ. ಅದೊ ತಿಳಿಬೆಳಕು ತುಳುತುಳುಕಿ ಹರಿದು
ಬರುತಿದೆ ಇಳೆಯಮೇಲೆ ಎಳೆದಿಂಗಳ ತೆರದಲಿ.
ದೂರದಲಿ ಸಿಂಹಳೀ ದೀವಿಯಾ ಧಾತ್ರಿಯದು
ಕಣ್ಗೆಸೆಯೆ ತನುಮನಗಳ್ ಮಿಳ್ಳನೆ ಪುಳಕಮಾಗಿ
ಸ್ವಾಮಿಜಿಯ ಉತ್ಸಾಹ ಇರ್ಮಡಿಯಾದತ್ತು
ಜಹಜಿನಾ ಮುಂಚೂಣಿಯಲಿ ನಿಂತು ನೋಡಿದರ್
ಓ ಅಲ್ಲಿ ! ಅಲ್ಲಿ! ಭೂಮಿ! ಲಂಕಾಧಾರಿಣೀ!

ನಭ ಚುಂಬೀ ಕಲ್ಪವೃಕ್ಷಗಳ್ ಸಾಲ್ಗೈಸಿ ಮೆರೆವ
ಕೋಟೆ! ಕೆನ್ನೀಲಿಯ ಹಿನ್ನೆಲೆಯಲಿ ಅರುಣರವಿ
ಇನಿದಿನಿದು ಮೇಲೇರ್ವ ಉಜ್ವಲಭರಿತ ತೇಜಃ
ಪೂರ್ಣಬಿಂಬ ವಿಜೃಂಭಿಸಿದೆ ಮುಗಿಲ್ ದಿಣ್ಣೆಯ
ಮೇಲೆ. ಜಹಜು ಜರ‍್ರನೆ ಸೈವರಿದು ನಿಂದತ್ತು
ತೀರದಂಚಿನಲಿ. ಆಗಳೇಕಾದಿರ್ದ ಜನರಾಶಿಯುಂ
ಕೈಪರೆಯ ತಟ್ಟಿ, ಸ್ವಾಗತಿಸಿತು, ಜನ ಘೋಷವ
ಮೊಳಗಿಸಿ. ಒಕ್ಕೊರಲಘೋಷ 'ಸ್ವಾಮಿ ವಿವೇಕಾ
ನಂದರಿಗೆ ಜೈ! ಜಯಜಯ ರಾಮಕೃಷ್ಣ! ಜಯ
ಜಯ!" ಒಕ್ಕೊರಲ ಮೊಳಗು ಗಗನಭೇರಿಯಾದತ್ತು.
ಭವ್ಯ ಸಂತೋಷದಾಗರದಲಿ. ಗುರುವರ್ಯಂ
ಇಳಿದರೆಲ್ಲ ಪಯಣಿಗರ ಜೊತೆಗೂಡಿ. ಅನುಪಮ
ಸಂತೋಷದ ಹೊನಲೇ ಹರಿದು ಬಂದವೊಲ್ ಜನ
ರಾಶಿಯು ಸರಸರ ಮುಂಬರಿದುದು ಗುರುವರಂಗೆ
ಸುಸ್ವಾಗತವ ಬಯಸೆ, ಬಹುಲ ಜನರಾಶಿಯಲಿ
ಮಾತಿನ ಮರ್ಮರ ನಗೆಯ ಹೊನಲು ಗಜಬಜಿಸಿ
ಶಬ್ದಾಯಮಾನಮಾದತ್ತು ಬಂದರಿನೊಳ-
ಹೊರಗೆ. ಸಾಗರ ಮೊರೆತಕೆ ಹೊಯ್ಕಯ್ ಎಂಬವೊಲ್
ಜೃಂಭಿಸಿದುದು ಸಂಭ್ರಮ ಸಡಗರಗಳ ಕೂಟಂ.

ಹರಿಃ ಓಂ ತತ್ ಸತ್

❋ ❋

ತ್ರಯೋಸ್ತ್ರಿಂಶೋಲ್ಲಾಸಂ

ಯುಗಾಚಾರ್ಯ

ಹೇಳು, ಹೇಳೆನ್ನ ಹೃತ್ ವೀಣಾ! ಕಲಾಕಲೆಯ
ಶೃಂಗಾರ ಸುಂದರಿಯೆ! ಅಂತರ್ಯಾಮಿ ಪ್ರಭಾ
ಚಿಂತಾಖನಿಯೆ, ಹೇಳು! ಮುಂದಿನ ಕಥಾನಕಂ.
ಯೋಗಭೋಗದ ಮಧುರಮಯ ವೇದಾಂತ ತೇಜೋ
ಮಯ, ಧರ್ಮಬಂಧುರ ಚರಿತಾಮೃತದ ಸಾರ
ಸರ್ವಸ್ವಮಂ ನೀನೆ ಬಣ್ಣಿಸುತ ಹೇಳಮ್ಮ
ಹೃದಯದ ರಾಗಿಣಿಯೆ! ಯುಗಾಚಾರ್ಯನ ದಿವ್ಯ
ಕಥಾಮೃತವ. ನೀನುಲಿವ ಚರಿತೆಯು ಎಂದಿಗುಂ
ಮಾಸದಿರಲಿ. ಸರ್ವತ್ರ ಸದಾ ಕರುನಾಡಿನ
ಹೃದಯದಲಿ ಬೆಳಗುವ ವೇದಾಂತ ಜ್ಯೋತಿಯುಂ
ಉಜ್ವಲಿಸುವೊಲ್! ಹರಸೌ ಭಾಗ್ಯದಾಯಿನೀ
ಓ ಎನ್ನ ಸರಸ ಸರಳ ಶ್ರೀಮಂತಿನಿ ದೇವಿ
ಅಂತರ್ರಾಗಿಣಿಯೆ, ಪ್ರಾಣಮಯ ತಂತ್ರಿಯ ಮಿಂಟಿ!

ಸ್ವಾಮಿ ವಿವೇಕಾನಂದರ ಪುಣ್ಯಾಗಮನದ ಹಿರಿ
ಸುದ್ದಿ ಹರಡಿತು ಕತ್ತುರಿಯ ಪರಿಮಳದ ತೆರದಿ.
ಲಂಕೆಯೊಳ್ ಮಾತ್ರಮಲ್ಲದೆ ಭಾರತದಗಲಂ
ಹರಡಿದುದು ಜನಗಣಮನ ಪುಳಕಗೊಳಿಸುವಂತೆ.
ಭಾರತಜನನಿಯ ಹೃದಯಾಬ್ಧಿಯು ಆನಂದ
ಮೋದದಿಂ ತುಂಬಿ ಕೋಡಿವರಿದುದು ಉಕ್ಕುಕ್ಕಿ.
ವಿಶ್ವವಿಜಯೀ ಔರಸ ಪುತ್ರನ ಸುಖಾಗಮನ
ಬಾರ್ತೆ ರೋಮಾಂಚನಗೈದುದು ಹೃದಯ ಬನದ
ಕೋಗಿಲೆಯ ಪ್ರಾಣಮಂ.

ಯುಗಾಚಾರ್ಯನುಂ ತಮ್ಮ
ಭುವಿಯಮೇಲೆ ಮೊದಲಿಗೆ ಪದಾರ್ಪಣೆ ಗೈದುದೊಂದು
ಹೆಗ್ಗಳಿಕೆ ಸಿಂಹಳೀ ಪ್ರಜೆಗಳಿಗೆ. ಕುಣಿದರ್ ಜೈಕಾರ
ಮೊಳಗಿಸಿ. ನಲಿದರ್ ಒಲವಿನ ಮಾತಾಡಿ. ಹರ್ಷಿತ
ಮನಮತಿಯನಿನ್ನಿನಿತು ಸಂಹರ್ಷಗೊಳಿಸಿದರ್.
ಮುನಿರಿಸಿಗಳ್, ಮಹರ್ಷಿಗಳ್ ಜ್ಞಾನಪ್ರಜ್ಞಾನ
ಬಂಧುಗಳ್ ಮಿತ್ರಜನರುಂ ಮೆಚ್ಚಿ ನೆಚ್ಚಿದರ್.
ದೂರ ಭಾರತವರ್ಷದಿಂ ಮಠದ ಸೋದರ
ಸಂನ್ಯಾಸಿಗಳೀರ್ವರ್ ಆಗಮಿಸಿದರ್ ಗುರು
ಭ್ರಾತೃವಂ ಕಣ್ತುಂಬ ಕಂಡು ಆನಂದದಿಂ
ಎದುರುಗೊಂಬುವ ಮಹೋದ್ದೇಶದಿಂ. ಭಾರತದ
ಸವಿಗಾಳಿ ಕಡಲ್‌ದಾಂಟುತ್ತೈದು ತೀಡಿತು ಹರ್ಷ
ಭಾವದಿಂ. ಸ್ವಾಮಿಜಿ ಗೈರಿಕೋಷ್ಣೀಷ ಮಂಡಿತ
ಶಿರೋದೇಶಮಂ ಬಾಗಿ ಎಲ್ಲರಿಗೆ ವಂದಿಸುತ
ತಮ್ಮೊಡನಿರುತಿರ್ದ ಸ್ಸೇವಿಯರ್ ದಂಪತಿಗಳ
ಪರಿಚಯಿಸಿ ಗೌರವ ತೋರ್ದರ್ ತೋಷದಿಂದಲಿ.
ಹಿಂದೂ ಸಮಾಜದೊಳ್ ಮಹಾಧೀಮಂತನೆನೆ
ಪ್ರಖ್ಯಾತನಾಮ ಮಾನನೀಯ ನಂದಕುಮಾರ
ಸ್ವಾಮಿಗಳ್, ಸ್ವಾಮಿ ಶಿವಾನಂದ ಮೇಣ್ ನಿರಂಜನಾ
ನಂದರೊಡಗೂಡಿ ಗಮಿಸಿದರ್ ಸಾಗರತೀರ
ಪ್ರದೇಶಕೆ. ಸ್ವಾಮಿ ವಿವೇಕಾನಂದರಂ ಬಲ್
ಗೌರವಾದರದಿಂ ಬರಮಾಡಿ ಸ್ವಾಗತಿಸಿ
ಶ್ರೀ ಕೊರಳಿಗೆ ಭಾರತಜನನಿಯ ಸುಕೋಮಲ
ಕರ ಸದೃಶ ಮೊಲ್ಲೆಯ ಮೊಗ್ಗುಗಳ ಹಾರವಂ
ತೊಡಿಸಿ ವಿನಯ ಶೀಲತೆಯಲಿ ಶಿರಮಣಿದರ್!

ಬಳಿಕಲೆಲ್ಲರ್ ಪುಷ್ಪ ಮಾಲಾರ್ಪಣೆಗೈದರ್.
ಮೈಮುಚ್ಚಿ ಹೋಹನಿತು ಚೆಲ್ಲಿಸೂಸಾಡಿದುದು
ಸುಗಂಧಿತ ಪುಷ್ಪರಾಜಿ. ಜೈಕಾರದ ಘೋಷಣೆ
ಮೊಳಗಿತ್ತು ಮತ್ತೆ ಮತ್ತೆ. ತರುವಾಯ ಶ್ವೇತ
ವರ್ಣೀಯ ಅಶ್ವಗಳ್ ಹೂಡಿರ್ದ ಸಾರೋಟು
ಸಿದ್ಧವಾಯ್ತು ಸ್ವಾಮಿಜಿಯ ಪಯಣಕೆ. ಸುತ್ತಲ್
ನೂರಾರು ಮಂದಿಯುಂ ಜಯಘೋಷಗೈಯುತೆ ಜೊತೆ
ಗೂಡಿನಡೆದರ್. ಜನೋತ್ಸಾಹಕನುಗುಣಮಪ್ಪಿ
ಪೊರಟಿತ್ತು ಸಾರೋಟು ಶಿಸ್ತಿನಾ ರೂವಿನಲಿ.
ಜನರಾಶಿ ಅಲ್ಲಲ್ಲಿ ಸೇರಿ ಕೂಡಿ ಬರುತಿರೆ
ಹಿಗ್ಗಿ ಹಿಗ್ಗಿ ಹಿರಿದಾಯ್ತು ಮೆರವಣಿಗೆ. ಕಾಂಚನ
ಕಾಂತಿಯುಗುವ ಗೆಜ್ಜೆಸರಂಗಳಿಂ ರೌಪ್ಯಮಣಿ
ಹಾರಂಗಳಿಂ ಅಲಂಕೃತ ಅಶ್ವದ್ವಯಂಗಳ್
ನಿಯೋಜಿತ ಸಾರೋಟು ಮುಂಚಲಿಸಿತು ನಿಧಾನ
ಗತಿಯಲಿ. ಅದಂ ಸುತ್ತುವರಿದ ಭಕ್ತಜನರುಂ
ನಡೆದರ್ ಬಹುಲ ಸಂಖ್ಯೆಯಲಿ ಹರ್ಷಿತದನಿಗಳ
ಜಯಘೋಷ, ಪದ ಚಾರಣಗಳ ಪಟಪಟತ್ಕಾರ,
ಮುಮ್ಮಾತುಗಳ ಮರ್ಮರ ಎಲ್ಲವು ಒಗ್ಗೂಡಿ
ಶಬ್ದಾಯಮಾನಮಾದುದು ಮೆರವಣಿಗೆ. ನಗರ
ಪ್ರವೇಶಮಾದೊಡನೆ ಕಣ್ಗೆಸೆದುದು ವಿಧವಿಧ
ತಳಿರ್ಗಳ ತೋರಣವು ಪುಲ್ಲಕುಸುಮಕೋಟಿಯ
ಸಿಂಗರದೊಳ್ ಸುಂದರವಾಗಿ. ಆ ಅಪರಿಮಿತ
ಉತ್ಸಾಹ ಆ ವಿಜೃಂಭಣೆ ಧರ್ಮಜಯದ ಶುಭ
ಸಂಕೇತಮೆಂಬಿನಂ ಮಧುರಮಯ, ಹರುಷಮಯ.
ಧರ್ಮ ಬಾವುಟವು ದೇಶೀಯ ಬಾವುಟದೊಡನೆ

ಮೆರೆದತ್ತು ತಂಗಾಳಿಯಲೆಪದಿಂ ಓಲಾಡಿ.
ಮನೆಮನೆಗಳ ತಲೆ ಬಾಗಿಲಿನಲಿ ಹಸುಮಕ್ಕಳ
ಸಹಿತ ಅಂಗನೆಯರು ಗುರುದೇವನ ಸಂದರ್ಶನ
ಬಡೆಯೆ ಕಾದಿರ್ದರ್. ಕುಸುಮಗಳ ಸುರಿಮಳೆಯೇ
ಸುರಿಯಿತು ಶಿರೋದೇಶದ ಮೇಲೆ. ಕಪ್ಪುರದ
ಮಂಗಳಾರತಿ ಬೆಳಗಿದರ್ ಮಂಗಳವ ಹಾಡಿ.
ಪಾದಧೂಳಿ ಪಡೆದರ್ ಕಾಲ್ಮುಟ್ಟಿ ನಮಸ್ಕರಿಸಿ.
ಮೆರವಣಿಗೆ ಮುಂಚಲಿಸಿ 'ದಾಲಚಿನ್ನಿ' ತೋಂಟದಾ
ದ್ವಾರದೊಳ್ ನಿಂದುದು. ಒಳಹೊರಗೆ ಜನರಾಶಿಯು
ತುಂಬಿರ್ದುದು ಕಿಕ್ಕಿರಿದು ಎಲ್ಲೆಡೆಯು ಸಂಭ್ರಮದ
ದೃಶ್ಯಾವಳಿಗಳೆಸೆದುವು ಮನಮೋಹಕವಾಗಿ.
ಸುರಲೋಕದೊಲ್ ಮೆರೆಯಿತು ಲಂಕಾ ಪತ್ತನಂ.
ಅಲ್ಲಿನ ಪೆರ್ ಭವನದ ಭವ್ಯ ವೇದಿಯನೇರಿ
ನುಡಿಸಿದರಿಂತು "ನಲ್ಮೆಯ ಅಮೃತ ಪುತ್ರರೆ ಕೇಳಿ!
ನಿಮ್ಮೆಲ್ಲರ ಪರಮಾದರದ ಸ್ವಾಗತಕೆನ್ನಯ
ವಂದನೆಗಳ್. ಇಂದಿನ ಬಗೆಬಗೆಯ ಪ್ರತಿಕೂಲದ
ನಡುವೆ ನಳನಳಿಪ ಸ್ವಧರ್ಮದ ಸುಜೀವನಂ ಮೇಣ್
ಸದ್ಭಾವನೆಯ ಸುಸುಂದರ ಬದುಕು ಕಾಂಬುದದು
ಎನಿತು ಬಂಧುರಮಯ ಎಂಬುದ ಬಲ್ಲರೆ ಬಲ್ಲರು.
ಜನರ ಧಾರ್ಮಿಕ ಮನೋಭಾವನೆಯ ಪುರುಪು
ಎನ್ನ ಹೃನ್ಮನಗಳಿಂಗೆ ತೋಷರಸದೌತಣವ
ನೀಡಿದುದು. ಸ್ವಧರ್ಮಸಂಪ್ರೀತರಾಗಿರ್ಪ
ನಿಮ್ಮೆಲ್ಲರಿಗೆ ಮೇಣೆಲ್ಲಜನಸಮುದಯಕೆನ್ನ
ವಂದನಂ. ಎಲ್ಲರ ದರುಶನ ಭಾಗ್ಯವೆನಗತಿ
ಉಲ್ಲಸವನೂಡಿಸಿದೆ. ನಿಮಗೆಲ್ಲ ಮತ್ತೊರ್ಮೆ

ವಂದನಂ!" ಎನುತೆ ಕೈಗಳಂಜೋಡಿಸಿದರಾ
ಸ್ವಾಮಿವಿವೇಕಾನಂದ ಮಹೋದಯಂ.
ಅಂದಿಗೆ
ವಂದನೆಯನಷ್ಟೆ ತಿಳಿಪಿ ವೇದಿಕೆಯನಿಳಿದರ್
ಸ್ವಾಮೀಜಿ. ಸ್ವಾಗತ ಸಮಿತಿಯ ಮುಂಬಿಗರೆದ್ದು
ದೂರ ವಿಶ್ರಾಮ ಮಂದಿರಕ್ಕೆ ಕರೆದೊಯ್ದುದರ್
ಗುರುದೇವನಂ ಮತ್ತವರ ಮಿತ್ರಮಂಡಲಿಯಂ.
ಅಲ್ಲಿಯುಂ ಜನ ಜಾತ್ರೆಯು ನೆರೆದತ್ತು ಗುರುಗಳ
ದರ್ಶನದ ಭಾಗ್ಯಮಂ ಬಯಸಿ. ಸ್ವಾಮೀಜಿಯುಂ
ನಸುವೊಳ್ತು ಪೊರಗುಳಿದು ಎಲ್ಲರೆಡೆಗೆ ಕರಗಳ್
ಜೋಡಿಸಿದರ್ ಪ್ರಸನ್ನ ಮನೋಹರ ಮೊಗದಲಿ
ಸಿತಸ್ಮಿತವನರಳಿಸಿ. ಭಕ್ತಜನರ್ ಮುಂದೈದು
ನಮಸ್ಕರಿಸಿ ಪದಧೂಳಿಯಂ ಶಿರದೊಳ್ ಧರಿಸಿ
ಸಂತುಷ್ಟರಾದರ್ ಜನುಮ ಸಾರ್ಥಕತೆ ಪಡೆದು
ಧನ್ಯರಾದವೊಲ್! 'ನಾರಾಯಣ ನಾರಾಯಣ'
ಎನುತೆ ಭಗವಂತನಿಗರ್ಪಿಸಿ ಮಧುರ ಚಿತ್ತದಿಂ
ವಿರಮಿಸಿದರ್ ವಿಶ್ರಾಂತಿ ಕೊಠಡಿಗೆ.
ಜನವರಿಯ
ಇಪ್ಪತ್ತಾರನೆಯ ತೇದಿ ಅಪರಾಹ್ಣಂ ನೆರೆದುದು
ಸಭೆಯುಂ 'ಫ್ಲೋರಲ್ ಹಾಲ್' ಎಂಬೊಂದು ಮಹಾನ್
ಭವನದಲಿ, ಬಹುಲ ಜನರಾಶಿಯುಂ ಗೌರವಾ
ದರದಿಂ ಶಿರವ ಬಾಗಿ ಕೈಮುಗಿದು ಸ್ವಾಗತಿಸಿ
ಬರಮಾಡಿದುದು. ಭವನದೊಳ್ ಅಲಂಕೃತಮಾದ
ಎತ್ತರದ ವೇದಿಯಲಿ ಅಧ್ಯಕ್ಷರಿರ್ದರ್. ಮೇಣ್
ಕ್ಸೇವಿಯರ್ ದಂಪತಿಗಳಿರ್ದರ್ ಪುರ ಪ್ರಮುಖ

ಜನರಿರ್ದರ್. ಆಗಳ್ ಗುರುವರ್ಯರುಂ ತಮ್ಮ
ಸಿರಿಕಂಠದೊಳ್ ದೀರ್ಘೋತ್ತೇಜನಗೈಯಲುರೆ
"ಪುಣ್ಯಭೂಮಿ ಭಾರತವರ್ಷ" ಎಂಬ ಭಾಷಣ
ನೀಡಿದರ್, ಜನರಾಶಿಯು ಮನಮತಿಗಳ್ ಪುಳಕ
ಗೊಳ್ಳ ತೆರದಿ. ಮರುದಿನ ಬುದ್ಧಿಮಾನ್ಯರ್ ನೆರೆದರ್
ಭವನಂ ಗಜಭಜಿಸುವೊಲ್. ಆ ಸಂದರ್ಶಕರ
ವೃಂದದೊಡಂ ನಡೆಸಿದ ಅನನ್ಯ ಧರ್ಮಾಲೋಚನೆ
ಸುದೀರ್ಘಮಾಗಿರೆ ಪೊಳ್ತುರುಳಿದುದರ ಪರಿವೆಯೇ
ಇಲ್ಲಮಾಯಿತ್ತು. ಸಾಯಂ ಸಮಯದೊಳ್ ಶಿವನ
ದರ್ಶನಂ ಬಯಸಿ ಪೊರಮಟ್ಟರ್ ಶಿವಮಂದಿರಂ
ಕುರಿತು. ಹಾದಿಯೊಳ್ ಜನರುಂ ಗುಂಪುಗುಂಪಾಗಿ
ಕೂಡಿ ಎದುರ್ಗೊಂಡು ಫಲಪುಷ್ಪಧನಗಳಿತ್ತು
ಗೌರವದಲಿ ಕಾಣಿಕೆ ಸಲಿಸಿದರ್ ಕಾಲ್ಮುಟ್ಟಿ.
ಮನೆಮನೆಯ ಮಂಗಳೆಯರ್ ಮುಂದ್ಯೆದು ಕಪ್ಪುರದ
ಮಂಗಳಾರತಿಯೆತ್ತಿದರ್ ಮಂಗಳವ ಹಾಡಿ.
ಹೂಮಳೆಯ ಸುರಿದರ್ ಶಿರೋದೇಶದ ಮೇಲೆ.
ಬಹುಜನರ್ ಪಿಂಬಾಲಿಸಿದರ್ ಶಿವಮಂದಿರಕೆ.
ಸ್ವಾಮೀಜಿಯುಂ ಮಂದಿರದ ಬಳಿಗೈತರೆ ಪುರ
ಜನರ್ 'ಜಯಮಹಾದೇವ' ಎಂದೆಂದು ಪರುಷದಿ
ಜಯ ಘೋಷಗೈದರ್ ಅತಿ ಗೌರವಾದರದ
ಪುರುಪಿನಲಿ. ಪುರೋಹಿತರ್ಯೆದು ಪೂರ್ಣ ಕುಂಭ
ಸಹಿತ ಸ್ವಾಗತವನಿತ್ತರ್. ಶಿವದರುಶನಮಾಯ್ತು
ಶಿವಭಕ್ತರ ದರ್ಶನವಾಯ್ತು. ಸಂಧ್ಯಾಧ್ಯಾನ
ಸಲ್ಲಿಸಿದ್ದಾಯ್ತು. ಬಿಡದಿಗೆ ಪಿಂದಿರುಗಿದಾಗಳ್
ರಾತ್ರಿಯ ಕರಿವಸನವನುಟ್ಟು, ನಕ್ಷತ್ರಗಳ

ಮಾಲೆ ಸೂಡಿದ್ದಳ್ ನಭೋರಾಣಿ. ತಂಗಾಳಿ
ಸುಯ್ ಸುಯ್ಯನೆ ಬೀಸುತ್ತೆ ತಣ್ಪೂಡಿಸಿದತ್ತು
ತನುಮನಗಳಿಗೆ. ಕ್ಸೇವಿಯರ್ ದಂಪತಿಗಳಿರ್ದರ್
ಪಕ್ಕದ ಕೊಠಡಿಯಲಿ. ಗುರುವರ್ಯಂ ಅವರೊಡಂ,
ನಸುವೊಳ್ತು ಕಳಿದು ತಮ್ಮಕ್ರೊಠಡಿಗೆ ಮರಳಿದರ್
ಅಂದಿನಾ ರುಂದ್ರರಾತ್ರಿಯುರುಳ್ದು ತನಿವೆಳಗು
ಬೆಳ್ಳನೆ ಬೆಳಗಿ ತೊಳಗಿತೆನೆ ಮೂಡಿತು ಮತ್ತೊರ್
ಸಭೆ ಮಹಾನ್ ಭವನದೊಳ್. ಮಂಟಪವಂ ಸುತ್ತಲ್
ಕೆಂದಾವರೆ ಹೊಂದಾವರೆ ಬೆಳ್ದಾವರೆಗಳಿಂ
ಮೇಣಿತರ ಕುಸುಮಾವಳಿಯಿಂ ತಳಿರು ತೋರಣ
ಮಾಲೆಗಳಿಂ ಅಲಂಕರಿಸಿರೆ ಮೋಹನೀಯತರ
ವಿನ್ಯಾಸದಿಂ ಮೆರೆದುದು ಸಭಾಭವನಂ ಬಹು
ತರದಲಿ ವನಲಕ್ಷ್ಮಿಯರಮನೆಯಂ ಪೋಲ್ವಂತೆ!

ಸನ್ಮಾನ್ಯ ನಂದಕುಮಾರ ಸ್ವಾಮಿಗಳ್ ಪ್ರಾಚ್ಯ
ಪದ್ಧತಿಯ ರೀತ್ಯ ಪರಮಗೌರವ ಭಾವದಿಂ
ಸ್ವಾಮೀಜಿಯ ಪಾದಂಗಳಿಗೆ ಸಾಷ್ಟಾಂಗವೆರಗಿ
ಅಭಿನಂದನ ಪತ್ರಮಂ ಓದಿದರ್. ಗುರುವರಂ
ಎದ್ದು ಸಿರಬಾಗಿ ಕರಮುಗಿದರ್ ಮಹಾ ಸಭೆಗೆ.
ಕರತಾಡನದ ಮಹಾರವದ ಸ್ವನ ಅಡಗಿದ
ಬಳಿಕ ತಮ್ಮಯ ಭಾಷಣದ ನಡುವೆಂದರಿಂತು,

"ಓ ಆತ್ಮೀಯ ಪುತ್ರರಿರಾ, ಕೇಳಿರೈ! ನಿಮ್ಮೊ
ಸುಸ್ವಾಗತಕೆ ವಂದನೆಗಳ್ ಮೋಣಾಭಾರಿ
ಆನ್. ಕೇಳಿ, ಆಂ ಮಹಾರಾಜನಲ್ಲ. ಧನ
ಕನಕ ಹೊಂದಿದ ಕುಬೇರನಲ್ಲ. ಸುಪ್ರಸಿದ್ಧ
ವಿಜ್ಞಾನ ವೇತ್ತನಲ್ಲ. ರಾಜನೀತಿಜ್ಞನಲ್ಲ.

ಇಂದಾನ್ ಕಪರ್ದರಹಿತ ಸಂನ್ಯಾಸಿ ಮಾತ್ರಂ.
ನೀಮೆಲ್ಲರ್ ಒಮ್ಮನದಿಂ ಒಲಿದಿತ್ತ ಈ ಪರಿ
ಸ್ವಾಗತವಿಶೇಷವದು ಸಾಮಾನ್ಯಮೇನಲ್ಲ.
ಭಾರತವರ್ಷದೊಳ್ ಏಗಳುಂ ಆಧ್ಯಾತ್ಮಿಕ
ಮೌಲ್ಯದ ಸಂಪದಕೆ ಅಭಾವ ವಿನಿತಿಲ್ಲವೆನಲಿದು
ನಿಜಸಾಕ್ಷಿ! ಭಾರತ ಸಂನ್ಯಾಸಿಯೊರ್ವನ ಪುನರ್
ಆಗಮನ ತೀರ ಸಾಮಾನ್ಯಮೆನೆ ಸಲ್ವುದೈ.
ಇನಿತೊಂದು ಸಂಭ್ರಮ ಸಡಗರಗಳ್ ನಿಮ್ಮಗಳ
ಸುಹೃದಯತೆಯಂ ತೋರ್ಪಡಿಪುದೆನಲ್ ಸಂತಸಂ.
ಪರಂತು, ನಮ್ಮ ಜನಾಂಗದ ಧಾರ್ಮಿಕ ಜೀವನಂ
ಎಂದಿಗುಂ ನಶಿಸಿ ಅಳಿವ ಸಂಭವಮಿಲ್ಲಮೆನೆ
ದೃಢವಾದ ನಂಬಿಗೆಯಿಹುದುದೆಮ್ಮ ಒಡಲೊಳ್.
ಈ ಸಂತಸ ರಸಾನ್ನವಂ ಹಂಚಿಕೊಂಬುವೆನ್
ನಿಮ್ಮಗಳೊಡನಾಂ..." ಕೈಪರೆಗುಟ್ಟಿದರೆಲ್ಲರ್
ಸಂತಸದ ಅಲೆ ಮರ್ಮರಿಸಿತು ವ್ಯಾಪಕವಾಗಿ.
ಮತ್ತೆ ಮುಂಬರಿಯುತೆ ನುಡಿಸಿದರಿಂತು "ಮಿತ್ರರೆ,
ನಮ್ಮಗಳ ಬದುಕಿನೊಳ್ ಬಹು ಸಾರವತ್ತಾದ
ಸುಧಾರಣೆಯ ಅಗತ್ಯಮಿರ್ಪುದು. ಮೊದಮೊದಲಿಗೆ
ರೈತಾಪಿ ವರ್ಗೀಯ ಪ್ರಜ್ಞಾನ ಸಂಪದಂ
ಬೆಳೆದೊಡೆ ಪಸುರ್ಲೋಕ ಬೆಳೆದಪುದು ನಳನಳಿಸಿ.
ಇರ್ಮಡಿಯ ಮುಮ್ಮಡಿಯ ಬೆಳೆ ಬಂದಪುದು
ನಿತ್ಯ ನೂತನತಮ ತಾಂತ್ರಿಕ ಜ್ಞಾನದಿಂ. ಅದನರಿದು
ರೈತಾಪಿಯರು ಎಚ್ಚರಗೊಳಲಕ್ಕುಂ. ದೇಶದ
ಉದ್ದಗಲದೊಳ್ ಪರಸ್ಪರ ಸ್ನೇಹ ಭಾವದೊಡಂ
ಸೋದರತ್ವ ಬೆಳೆದು ಜಾತ್ಯಾತೀತವಾಗಲಕ್ಕುಂ

ನಮ್ಮ ಈ ಸಮಾಜ. ಯೋಚಿಸಿ ನೋಡಿ, ಪರಿಭಾವಿಸಿ
ನೋಡಿ. ಶಾಂತ ಸಮೃದ್ಧ ಬದುಕಿನೊಳ್ ಸಮತಾ
ಜ್ಞಾನ ಹಬ್ಬಿದೊಡಿಲ್ಲ ದ್ವೇಷ ಭಾವ.."

ಬಳಿಕಂ

ಮತ್ತೆನಿತೊ ಸುರಿದುವು ಪ್ರವಚನಗಳ ಮಾಲೆ
ಕತ್ತಲೆಯ ಮುಸುಕು ಮುಸುಕುವನ್ನ. ವಿಹಂಗಮಗಳ
ಕೊರಳ ಸಾಂಧ್ಯಗೀತಂ ಮುಗಿದತ್ತು. ಕತ್ತಲೆಯ
ಸಾಮ್ರಾಜ್ಯ ದಟ್ಟೈಸುತಿರೆ ಚದುರಿತು ಸಭೆ ತುಂಬು
ಹೃದಯದ ಭಾರಮಂ ಇಳಿಸಿ. ಇಂತು ಅಪಾರ
ತೋಷದಿಂ ಗುರುಗಳಂ ವಂದಿಸಿ ಅಭಿವಾದಿಸಿ
ಪೊರಮಟ್ಟರ್ ಹಾಲ್ಜೇನಿನ ಹೊಂಗೊಡಗಳಾಗಿ.
ಸ್ವಾಮೀಜಿ ಮಿತ್ರರೊಡಗೂಡಿ ಸೇರಿದರವರ
ಬಿಡದಿಯಂ. ಬೃಹದ್ ಭವನದ ಮುಂಗಡೆಯಲ್ಲಿ
ಸುರ ಸುಂದರ ಪುಷ್ಪೋದ್ಯಾನ ಅದರ ನಡುವಣ
ವಿಶಾಲತರ ತಲದೊಳ್ ಮಂದ ಹಸುರು ಪುಲ್ಲಿನ
ಹಾಸು ಮೆರೆದತ್ತು ಹಚ್ಚ ಹಸುರುಕ್ಕುವ ರನ್ನ
ಗಂಬಳಿಯ ಹೋಲಿ! ರಾತ್ರಿಯಲಿ ಬೆಳಂದಿಂಗಳೂಟ
ನಡೆದುದಲ್ಲಿಯೆ. ಸುತ್ತಣ ಪಾತಿಗಳಲಿ ಅರಳಿ
ನಲಿನಲಿಯುತಿಹ ಹೂಗಳ ಹೇರಾಶಿಯ ಹರವು
ಹರಡಿತ್ತು ಉದ್ಯಾನದ ತುಂಬೆಲ್ಲ. ಸುಗಂಧ
ಪರಿಮಳಂ ಪಂಚೇಂದ್ರಿಯಗಳ ಮುತ್ತುತಿರೆ ಆ
ಉದ್ಯಾನಮಂ ಬಿಟ್ಟೇಳಲ್ ಮನ ಮಣಿಯದನಿತು
ಆನಂದ. ಮೊಲ್ಲೆ ಗುಲಾಬಿ ಜಾಜಿ ಇರುವಂತಿಗೆ
ಕಸ್ತೂರಿ ತುರಾಯಿ ಮದನ ಮಲ್ಲಿಗೆ ಮಂದಾರ
ಸೇವಂತಿಗೆ ಸುರಭಿ ಕರ್ಣಕುಂಡಲ ಚಂಪಕಾ

ಸುರಗಿ ಕನಕಾಂಬರ ಬಕುಳಾದಿ ಮುಂತಪ್ಪ ಬಗೆ
ವಗೆಯ ಕುಸುಮ ಲೋಕದೊಳ್ ಪೊಣ್ಮುವ ಬಹುಮೂಲ್ಯ
ಸುಗಂಧ ಪರಿಮಳವ ಪೇಳ್ವುದೇಂ? ಸುಗಂದವೇ
ಸುಗಂಧ!
ಕಳೆಯಿತು ಆ ರಾತ್ರಿ ಸುಖ ಶಾಂತಿಯಲಿ.
ಪ್ರಾತಃರ್ವಿಧಿಯಂ ತೀರ್ಚಿ ಅಣಿಗೊಳ್ವನಿತರೊಳ್
ಬಿಡದಿಗೆ ಗಮಿಸಿದುದು ಜನರಾಶಿ! ಶಾಸ್ತ್ರಜ್ಞರ್
ಸಂತರ್ ಗುರುಜನರ್ ಧಾರ್ಮಿಕವಿದರ್ ಪ್ರಜ್ಞಾನ
ವೇತ್ತರ್ ಕಣ್ತುಂಬ ನೋಡಿ ತಣಿವ ಮನಮುಗ್ಧರ್
ಎಲ್ಲವಗೆಯ ಜನರೈದರ್. ಅಡೆ ತಡೆಯಿಲ್ಲದ
ಪರಿಯೊಳಾಯ್ತು ಜನರ ಗಮನಾಗಮನಂ. ಬಿಡದಿಯೆ
ಸಭೆಯ ತೆರನಾಯ್ತು ಪೊಳ್ತು ಇಳಿಯುವನ್ನ. ಆ
ಜನ ಜಾತ್ರೆಯಂ ನೋಡಿ ತಣಿದರಾ ಕ್ಲೇವಿಯರ್
ದಂಪತಿಗಳ್. ಈರ್ವರ್ ವಯೋವೃದ್ಧರಿರ್ದೊಡಂ
ಹೃನ್ಮನಗಳಿನಿತು ಮಣಿಯಲಿಲ್ಲವು ಆ ವೃದ್ಧ
ಗತಿಗೆ. ಸ್ವಾಮೀಜಿಯ ಜನಪ್ರಿಯತೆ ಅಚ್ಚರಿಯ
ಹುಚ್ಚು ಹೊಳೆಯಲಿ ಮುಳುಗಿಸೆ ಸಂಪ್ರೀತಿ ವಾತ್ಸಲ್ಯ
ಪೂರಿತ ಮನದಿಂ ಮೈವೆರ್ಚಿದರ್. ಆದಿನಂ
ಕಳೆಯಿತು ಬಿಡದಿಯಲಿಯೆ. ರಾತ್ರಿಧ್ಯಾನವ ತೀರ್ಚಿ
ಸೆಜ್ಜೆಯಂ ಸೇರುವೆನೆನೆ ಪರಮ ಶಾಸ್ತ್ರಜ್ಞರಿರ್ದ
ಬ್ರಾಹ್ಮಣೋತ್ತಮರ್ ಗಮಿಸಿದರ್ ಅಭಿನಂದಿಸುವ
ಸಲುವಾಗಿ. ಆದೊಡೇಂ ಮಾತು-ಮುಮ್ಮಾತುಗಳ್
ಬೆಳೆದು ಧರ್ಮಚಿಂತನೆ ನಡೆದತ್ತು. ಪ್ರಶ್ನೋಪ-
ಪ್ರಶ್ನೆಗಳ್ ಮೂಡಿದುವು ಯಥೇಚ್ಛವಾಗಿ. ಪೊಳ್ತು
ಉರುಳುರುಳಿ ಬ್ರಾಹ್ಮೀ ಮುಹೂರ್ತವಡರಿತು. ಬ್ರಾಹ್ಮಣ

ಚಿಂತಕರ್ ಮನ ಮಸಗಿ ಬಾಯ್ವೋತು ಕೈಮುಗಿದು
ನಿರ್ಗಮಿಸಿದರ್. ಅಂತಿಂತು ಕಳೆದುಳಿದ ರಾತ್ರಿಯು
ಕಳಿಯಿತು ಸಿಹಿನಿದ್ದೆಯಲಿ. ಮರುದಿವಸದ ನಿತ್ಯ
ಚರಿಯು ಆರಂಭಮಾದುದು ಎಂದಿನಂತೆವೊಲ್.
ಬಿಡುವಿನಿತು ದೊರೆಯದಿರೆ ಶರೀರ ಬಲು ಬಳಲಿ
ಬಾಡಿದುದು ನೀರಾರಿದ ಗಿಡದವೊಲ್. ಜೀವದ
ಕಣವುಂ ಬಾಡಿದತ್ತು. ವಿಚಾರಾತ್ಮಕವಿಹಾರ
ಮಾತ್ರ ಮುಗಿಯದಾಯ್ತು.
                    ಬೆಳಗುಂಬೊಳ್ತು ನೇಸರ್
ಮೇಲೇರುವ ಮುನ್ನಮೆ ಕರೆಯೈದುದು ಗುರುವಿಂಗೆ
ಬಲ್ ಬಲ್ಮೆಯಿಂದಲಿ; ಕೊಲೊಂಬೊ ನಗರಿಯಲ್ಲಿನ
''ಪಬ್ಲಿಕ್ ಹಾಲ್'' ಎಂಬೆಡೆಯೊಳ್ 'ವೇದಾಂತ ದರ್ಶನ'
ಎಂಬೊಂದು ಅಮೋಘತಮ ಉಪನ್ಯಾಸಗೈದರ್
ಜನಮನಂ ಮೆಚ್ಚುವೋಲ್ ವಿವರಿಸಿ ವಿವರಿಸಿ.
ಅಮಿತ ಸಂಭ್ರಮಾಶ್ಚರ್ಯಭರಿತ ಮನಮತಿಗಳ್
ಸಂಮುಗ್ಧಮಾಗಿ ಲಿಖಿತ ಚಿತ್ರಗಳ ತೆರದಲಿ
ಕುಳಿತು ಆಲೈಸುವ ಪರಿಯಂ ಮೆಚ್ಚಿ ನೋಡುತಿರೆ
ಕೆಲಮಂದಿ ಯುವಜನಂ ಆಂಗ್ಲೋಚಿತ ಉಡುಪಿನ
ಶೋಭಾಶೈಲಿಯಲಿ ಮೆರೆದಿರ್ದುದು ಕಣ್ ಗೊಳಿಸಿತು.
ಗುರುವರಂ ಪ್ರವಚನದ ಕೊನೆಯಲಿ ನುಡಿದರಿಂತು,
    ''ದೇಶೀಯ ಬಂಧುಗಳೆ, ಉಡಿಗೆತೊಡಿಗೆಗಳಿಂದೆ
ಶ್ರೀಮಂತಿಕೆಯನಿಪುದೆ? ''**ನಹಿ ಜ್ಞಾನೇನ ಸದೃಶಂ**''
ಮೊದಲ್ ಜ್ಞಾನದ ಬುತ್ತಿಯಂ ಪಡೆಮೊಡಮಳಿವುದು
ಕೊನೆವರಂ ಕಣಾ! ನಿಮ್ಮೊಳ್ ನೀವೇ ಯೋಚಿಸಿರಿ.
'ಸ್ವಧರ್ಮೇ ನಿಧನಂ ಶ್ರೇಯಃ' ಎಂಬುದದು ದಿವ್ಯ

ವೇದವಾಣಿ. ನಿಮ್ಮಂ ನೀವ್ ತಿಳಿವುದೆ ಜಾಣ್ಮೆ.
ಇದನರಿದರಿದು ಸಿದ್ಧರಾಗಿ, ಪ್ರಬುದ್ಧರಾಗಿ!"
ಸಭೆಯುಂ ವಿಸರ್ಜನೆಗೊಳೆ ಚದರಿತು ಜನರಾಶಿ.
ಲಂಕಾ ದಿಗ್‌ದೇಶಂ ರಂಗಡರಿ ರಕ್ತಾಕ್ತ
ವರ್ಣರಂಜಿತಮಾಯ್ತು. ಸಂಧ್ಯಾರುಣ ತೇಜದ
ಚಂದನದ ಛವಿ ಹರಡಿ. ಬಿಡದಿಗೆತ್ತ ಸ್ವಾಮೀಜಿ
ಮಿತ್ರಮಂಡಲಿಯೊಡಂ ಲಂಕಾ ಪ್ರಾಂತ್ಯದ ಊಟ
ಉಪಚಾರಮಂ ಪಡೆದು ಶಯ್ಯಾಶಾಯಿಯಾದರ್
ಪೂರ್ಣ ವಿಶ್ರಾಂತಿಯಂ ಬಯಸಿ. ನಿದ್ರಾದೇವಿ
ಕೃಪೆದೋರ್ದು ಸಂತುಷ್ಟಿಯಿಂ ಅಭಯ ಹಸ್ತಮಂ
ಚಾಚಿ ತನುತಟ್ಟಿ ಮುಟ್ಟಿ ಲಾಲಿಸೆ ನಿದ್ರೆಯುಂ
ಆಕ್ರಮಿಸಿತು ಹೆಡೆಮುರಿಗಟ್ಟಿದೊಲ್, ರಾತ್ರಿಯುಂ
ಕಳೆಯಿತು ಸತ್ ಶಾಂತಿಯಲಿ. ನಸುಕಿನಲಿ ಶಯ್ಯೆಯಂ
ಬಿಟ್ಟೆಳ್ದೊಡೆ ಗರಿಹಗುರಮಾದುದು ತನುಮನಂ.
ಪೊಳ್ತು ಏರ್ದುದೇ ತಡಂ ಪುನರಾರಂಭಮಾದುದು
ಕಾರ್ಯಕ್ರಮಗಳ್ ಭೋರನೆ ಭೋರ್ಗಾಳಿ ಬೀಸಿದೊಲ್.
ಡಿಸೆಂಬರ್ ಕಳೆಯಿತ್ತು. ಜನವರಿಯ ಮೊದಲನೆಯ
ವಾರಸಂಪುಟವುಂ ಉರುಳ್ದುದು ಯಥೋಚಿತಂ.
ಹಲವಾರು ದಿನಗಳ್ ಉರುಳುರುಳಿ ಗಮಿಸಿದುದೈ
ಜನವರಿಯ ಹತ್ತೊಂಬತ್ತನೆಯ ತೇದಿ! ಗುರು
ವರ್ಯನ ಮತ್ತವರ ಮಿತ್ರಜನರ ಪಯಣಕಾಗಿ
ವಿಶೇಷ ಉಗಿ ಬಂಡಿಯು ಅಣಿಯಾಯ್ತು. ಮಿತ್ರಜನ
ಪರಿವಾರದೊಡಂಗೂಡಿ ಸ್ವಾಮೀಜಿ ದೂರದ
ನಿಲ್ದಾಣಮಂ ಮುಟ್ಟಿದರ್ ಅಮೋಘವಾದಾ
ಬೀಳ್ಕೊಡಿಗೆಯಂ ಪಡೆದು. ಬಹುಜನಂ ಬೆಂಬಿಡಿದು

ಆಗಮಿಸಿದರ್ ನಿಲ್ದಾಣಕೆ. ಮುಂದೆ ಕಾಂಡಿಗೆ
ಪಯಣಂ. ಬೃಹದ್ ಬ್ರಹ್ಮಾಂಡ ಲೋಕಂ
ಮನದಿ ನೆನೆನೆದು ಆದಿ ಅಂತ್ಯಮಿಲ್ಲದ ಮೇಣ್
ಬಹುಮೂಲ್ಯಮಾದ ಸ್ಥಿತಿಗತಿಯಂ ನೆನೆನೆನೆದು
ಉದ್ಗರಿಸಿದರಿಂತು ಗುರುವರಂ "ಅಹ ಎನಿತ್ತು
ಬೃಹತ್ತು? ಎನಿತೆನಿತು ಮಹತ್ತು? ಏಂ ನಿಗೂಢ
ತಂತ್ರಮೋ ಈ ಬ್ರಹ್ಮಾಂಡ ಕಾಯ? ಇದರ ಆಳ
ನೀಳಮಂ ಅಳೆಯಲಹುದೆ ಭಗವಂತ? ನೀನೇ
ಕರ್ತೃ! ನೀನೇ ದಾತೃ! ನಿನ್ನನರ್ಥೈಸಲಳವೆ?"
ಉಗಿಬಂಡಿಯ ವೇಗಂ ತಗ್ಗಿ ನಸುನಿಧಾನದ
ಗತಿಯಲ್ಲಿ ಕಾಂಡಿ ನಿಲ್ಮನೆಯಂ ಬೊಕ್ಕು ನಿಲ್ದುದು
ಯಂತ್ರ ಗರ್ಜನೆಯಂ ನಿಲಿಸಿ. ಎನಿತೆನಿತೊ ಭಕ್ತ
ಜನರ್ ಕಾದಿರ್ದರ್ ಯಾಗಾಚಾರ್ಯನೆದುರುಗೊಳಲ್
ಹರ್ಷದಿಂ ನಿಲ್ದಾಣದಲಿ. ಸ್ವಾಮಿ ವಿವೇಕಾ
ನಂದರುಂ ಭಕ್ತಜನ ಬಂಧುಗಳಿಗೆ ವಿನಯದಿ
ಕರಮುಗಿದು ಇಳಿದರಾ ಬಂಡಿಯಿಂ. ಒಡನೊಡನೆ
ಪುಷ್ಪಾಲಂಕೃತ ಸಾರೋಟಿನಲಿ ಮೆರವಣಿಗೆಯ
ಏರ್ಪಡಿಸಿ ಕರೆದೊಯ್ದರ್ ಚಂದನ ಕಾಂತಿಯಲಿ
ಜೃಂಭಿಸುವ ಕಾಂಚನದ ಮೂರ್ತಿಯಂ. ಶೃಂಗಾರ
ತೇಜದಿಂದೊಪ್ಪುವ ಮೆರವಣಿಗೆಯು ಸಾಲ್ವರಿಯುತೆ
ಹರಿದುದು ಬಲುದೂರದ ವಿಶ್ವವಿದ್ಯಾಲಯದ
ಪ್ರಾಂಗಣದೊಳ್ ಘನವೆತ್ತ ಮಹಾನ್ ಮಂಟಪಕೆ.
ತಳಿರ್ ತೋರಣಗಳ್ ಇನಿಗಾಳಿಯಲಿ ತೂಗುತೆ
ಓಲಾಡಿ ಸ್ವಾಗತ ಬಯಸಿದುವು ಜೊಂಪೆ ಪುಷ್ಪಿತ
ಕೈನೀಡಿ. ಬಾಜಾ ಬಜಂತ್ರಿಗಳ್ ಬಾಜಿಸುತಿರೆ

ಧಾರ್ಮಿಕ ಪತಾಕೆಗಳ್ ಬೆಳ್ಳಗೆ ಬೆಳಗಿ ತೊಳಗಿ
ನಲಿದುವು ಎಡಬಲಗಳಲಿ. ಜಯ ಘೋಷ ಬೋಂಕನೆ
ಉದ್ಘೋಷಿಸಿತು ಲಂಕಾ ಧರಿತ್ರಿಯ ಹೃದಯಂ
ಪುಳಕಗೊಳ್ವವೊಲ್. ಭಕ್ತಜನ ಸಂದೋಹ ನಲಿದುದು
ಆನಂದಭಾವದಿಂ. ಅಲ್ಲಿ ಸಮಯೋಚಿತಮಾದ
ಕಿರು ಪ್ರವಚನವ ನಲ್ನುಡಿಗಳಲಿ ಬಿತ್ತರಿಸಿ
ಪೊರಮಟ್ಟರ್. ಬಿಡದಿಯಲಿ ಕಳಿಯಿತೊಂದು ರಾತ್ರಿಯು
ಮತ್ತೆ ಪಗಲೊದು ಸುಖ ಶಾಂತಿಯಲಿ. ಆವಾವ
ಕಾರ್ಯಕ್ರಮಗಳ ಗೊಂದಣಮಿಲ್ಲ. ದರ್ಶಕರ
ಗೋಜಿಲ್ಲ. ಶಾಂತಿ ಸಮೃದ್ಧಿಯಲಿ ಕಳೆಯಿತ್ತು
ಪೊಳ್ತು. ಕ್ಸೇವಿಯರ್ ದಂಪತಿಗಳೊಡಂ ಮಾತಾಡಿ
ಅಂಗಣದಲಿ ಅಡ್ಡಾಡಿ ತನುಮನಗಳ ಭಾರ
ಇಳುಹಿದರ್ ಸರಾಗದಲಿ.
ಜಾಪ್ನಾದಿಂ ಕರೆಯೋಲೆ
ಧಾವಿಸುತ್ತೈದುವು ಮೇಲಿಂದಮೇಲೆ. ಭಾರತ
ಧಾತ್ರಿಗೆ ಪಯಣಿಸುವೊಡೆ ಜಾಪ್ನಾಮೂಲಕವೆ ಎನೆ
ಈಗಳೇ ಪೊರಡುವುದು ಒಳ್ಳಿತೆಂಬ ಬಯಕೆಗೆ
ರೆಕ್ಕೆ ಬಲಿಯಿತು. ಸಾರಿಗೆ ಸೌಕರ್ಯಮಿಲ್ಲದ
ಕಾಲ. ಮಣ್ಣು ಹಾದಿಯಲಿ ದೂರ ಪಯಣ. ಅದಂ
ನೆನೆದೊಡೆ ಇನ್ನೊಂದೆರಲ್ಡು ದಿನಗಳ ವಿಶ್ರಾಂತಿ
ಲೇಸು ಲೇಸೆಂಬ ಆಸೆ ಮನದೊಳ್. ಆದೊಡೇಂ
ಭಾರತವನುಳಿದು ಎನಿತು ಕಾಲ ಅಲ್ಲಿರಲು
ಸಾಧ್ಯ? ಮನದ ತುಡಿತ ಜೀವದ ತುಡಿತ ಮಸಗಿತು
ಒಗ್ಗೂಡಿ. ಆತುರದಿ ಕಾತರಂ ವೆರ್ಚಿರಲ್
ಗಾಣಕ್ಕೆ ಕೊಟ್ಟವೊಲ್ ತುಡಿಯಿತು ಹೃದಯಂ.

ಮರುದಿನಮೆ ಸಿದ್ಧಮಾದುದು ಮುಂಬಯಣಕೊಂದು
ಅಶ್ವದ್ವಯಂಗಳ್ ಎಳೆವ ದಿವ್ಯಸಾರೋಟು.
ಗಾಡಿಯುಂ ಉತ್ತಮ. ಎಳೆಯ ತೇಜಿಗಳುಂ ಬಲು
ಉತ್ತಮವೆ. ಪೊರಡುವುದೆ ತಡ ಎಂಬವೊಲ್ ಒಡನೆ
ಅಣಿಯಾದತ್ತು ಕುದುರೆಗಳ ಸಾರೋಟು. ಮರುದಿನಂ
ಮುಂಗೋಳಿಗಳ್ ಮೊಳಗುವ ಮುನ್ನಮೆ ಪೊರಟರಯ್
ಸಾರೋಟನೇರ್ದು. ಮುಂಬಿನೆರಳ್ದು ನೂರು ಮೈಲಿ
ಪಯಣಮೆನಲದರ ಅರಿವಿರುತಿರ್ದು ಬೇರೊಂದು
ಮಾರ್ಗಮಿಲ್ಲಮೆನೆ ಸ್ವಾಮಿಜಿಯದಂ ತಳ್ಳಿಬಿಡೆ
ದಾರಿ ಕಾಣದಾದರ್. ಎಳೆಮೆಯ ಪುರುಡೆತ್ತ
ಅಶ್ವದ್ವಯಂಗಳ್ ಪುರುಪಿನಿಂ ಕುಣಿಕುಣಿಯುತೆ
ಓಡಿದುವು ನಾಗಾಲೋಟದಿಂದಲಿ. ಮೊದಲನಡೆ
ಮೊದಲಪುರುಪು ನಡೆಸಿದುದು ಸ್ವಾಮೀಜಿಯ ಎಲ್ಲ
ಪರಿವಾರಮಂ ಪೊತ್ತು. ಮುಂದೆ ಎಪ್ಪತ್ತು ಮೈಲಿ
ದೂರಾಂತರದೊಳ್ ನೆಲೆಗೊಂಡ ಅನುರಾಧಪುರ
ಮುಟ್ಟುವ ಬಯಕೆಯಿರುತಿರೆ ಪೊಳ್ತದು ಉರುಳುವ
ಮುನ್ನ ಸಾಗಿದ ಹಾದಿಯ ಮೇಲೆಯೆ ಕಣ್‌ದಿಟ್ಟಿ.
ಸನಿಹದೊಳೆಲ್ಲಿಯು ಊರುಕೇರಿಗಳೆ ಇಲ್ಲವೆನೆ
ಬಟ್ಟ ಬಯಲಲಿಯೆ ಸಾಗಿತ್ತು ಹಾದಿ. ಹೊಳೆತೊರೆ
ಕೆರೆಕಟ್ಟೆಗಳ್ ಆವೊಂದು ಇಲ್ಲದಿಹ ಹಳ್ಳತಿಟ್ಟು
ತುಂಬಿದ ಪಥವೊಂದೆ ದೃಷ್ಟಿಯಷ್ಟಿಯ ನೇರ
ಗತಿಗೆ. ಸಾರೋಟನಿಕ್ಕೆಲಗಳಲಿ ಪೊತ್ತುರಿವ
ದೀಪವರ್ತಿಕೆಗಳಿರುತಿರೆ ಹಾದಿಯು ಸುಸ್ಪಷ್ಟ.
ಗಾಡಿಗಾರನೊರೋರ್ಮೆ ಸಿಂಹಳೀ ಭಾಷೆಯೊಳ್
ಜಾನಪದ ಸಂಗೀತೆಯಂ ಹಾಡಿ ತಣಿಸುವಂ.

ಮಗದೊರ್ಮೆ ಊರಿನ ಜನಜೀವನದ ಕಥೆಗಳ
ಬಣ್ಣಿಸುವಂ. ಮತ್ತೊರ್ಮೆ ತೇಜಿಗಳ ಮೈದಡವಿ
ಪುರಿದುಂಬಿಸುವಂ. ತಣ್ಪುವೊಳ್ತಿನ ಪಯಣವದು
ಮಲೆ ವೆಟ್ಟ ಗಿರಿಗಳ ನಡುವೆ ಸಾಗಿದುದು ಏಕ
ರೀತಿಯಲಿ. ದೂರದೂರು ದಂಬೂಲ್ ಮುಟ್ಟುವನ್ನ
ಸುಖಕರವಾಗಿ ನಡೆದುದುಪಯಣಂ. ಕುಪಥದ
ಪಯಣ ಮೈಕೈಕುಲಕಿಕುಲುಕಿ ಹಣ್ಣಾಯ್ತು ಆ
ವೃದ್ಧ ದಂಪತಿಗಳ. ದಂಬೂಲಿನೊಳ್ ಇಳಿದು
ಕುದುರೆಗಳ·ನೊಗಗಳಚಿದರ್ ಪುಲ್ಮೇಯೆ. ಅಲ್ಲಿ
ತೀರಿದುವು ಹಸಿವು ತೃಷೆಗಳ್. ವಿಶ್ರಾಂತಿ ಸುಖ
ಶಾಂತಿಗಳ್ ದೊರೆತುವು ಕೆಲಗಾಲಂ. ಕುದುರೆಗಳ
ಮೈಯುದ್ದಿಯುದ್ದಿ ನೋವು ಮುಡಿಸಿ ನಲ್ ಮುದ್ದಿಸಿ
ಸುವಿಶ್ರಾಂತಿಯಂ ನೀಡಿದರ್ ಕೆಲವೊಳ್ತು. ಆ
ಸತ್ ಶಾಂತಿಯಲಿ ಇನ್ನಿನಿತು ಪೊಳ್ತು ಕಳೆವೆನೆನೆ
ಅನುರಾಧಪುರದ ದೂರದ ಹಾದಿಯಂ ನೆನೆಯೆ
ಮೈ 'ಜುಂ' ಎನಿಪುದು ತಣ್ಣೆತ್ತರ್ ಬಿಸಿಗೊಳ್ವಂತೆ.
ಉರುಳಿತು ನಿಡುವೊಳ್ತು ಅರುಣಾರುಣಂ ಮಂಜು
ಮುಗಿಲ್ ದಿಣ್ಣೆಯನೇರಿದಂ. ಖಗಗಾನ ಹರಿದತ್ತು
ಹೃದಯಂಗಮವಾಗಿ. ಗಂಧಗಾಳಿ ಬೀಸಿತ್ತು
ಮನೋಹರ ಶೈಲಿಯಲಿ. ವಿಶ್ರಾಂತಿಯಂ ಪಡೆದು
ಕ್ಷೇವಿಯರ್ ದಂಪತಿಗಳೊಡಂ ಮೇಣ್ ದೇಶೀ
ಬಂಧುವೊರ್ವನಂ ಕೂಡಿ ಏರಿದರ್ ಕುದುರೆಯ
ಶಕಟಮಂ ಗುರುವರಂ. ಕಾಲ್ಗಳಗೆ ಕೆಂಧೂಳ್
ಏಳುವ ಅಸಮಪಥ. ಬಹುದೂರದ ಪಯಣಂ
ಸಾಮಾನ್ಯ ಶಕಟದಲಿ ಎನಲ್ಕಾ ಬವಣೆಯಂ

ಪರಿಭಾವಿಸು ಮನವೇ! ಪೊಳ್ತುರುಳ್ದೊಡಂ ಆ
ತಗ್ಗುದಿಣ್ಣೆಗಳ ಪಥ ಸಮೆಯದು. ಪಯಣಿಪರ್ಗೆ
ಗೋಳಾಯ್ತು. ಮುಂಮುಂದೆ ಪಯಣಂಗೈಯುತ್ತಿರಲ್
ಬಳಲಿಬೆಂಡಾದ ತೇಜಿಯೊಂದು ಎಳೆಯಲಾರದೆ
ಚಂಡಿಹಿಡಿದು ಜಗ್ಗಿ ಕುಸಿದು ತಗಾದೆ ಹೂಡಿತು.
ಗಾಡಿಗಾರಂ ಸಿಟ್ಟನಿಂ ಚಬುಕಿನೇಟು ಬಾರಿಸಿದನೊರ್ಮೆ.
ಒಡನೆ ಅದರಿಂ ಇನ್ನಿನಿತು ಕೆರಳ್ದುದೆನೆ ಎಳೆ
ಮೆಯ್ಯ ಕೆಂದುವರ್ಣದ ತೇಜಿ ಮತಿಗೆಟ್ಟವೊಲ್,
ಹುಚ್ಚೆದ್ದು ಓಡತೊಡಗಲುರೆ ಗಾಡಿಯಗಾಲಿ
ಮುರಿದು ಬಿಳ್ದುದು ಕುದುರೆಯ ಭಾಗ್ಯಮೊ ಎಂದೆನಲ್!
ಆಗಳ್ ಪಯಣಿಗರ್ ಉರುಳಿ ಬೀಳದುಳಿದುದು
ಆವಾವ ದೈವದ ಕೃಪೆಯೋ. ಅಂತಿಂತು ಅಪಾಯ
ತಪ್ಪಿತಾದೊಡಂ ಮುಂಬರಿಯೆ ಗತಿ ಇರದಾಯ್ತು!
ನಿರ್ಜನಗತಿಯ ನಡುಹಾದಿ. ಸುಡುವಿಸಿಲ್ ಸುಡುತಿರೆ
ಒಡಲ ಪಸಿವೆ ಭುಗಿಲೆಳ್ದು ಕಾಡತೊಡಗಿತು ಅಗ್ನಿ
ಜಿಹ್ವೆಯಂ ಮುಂಚಾಚಿ. ಕ್ಸೇವಿಯರ್ ದಂಪತಿಗಳ್
ಬಲು ಬಾಡಿ ಬಳಲಿದರ್. ದೇಶೀಯ ಮಿತ್ರರುಂ
ಕಂಗೆಟ್ಟರ್ ಮುಂಗಾಣದ ಪರಿಯಲಿ. ಮಿಣ್ಣನೆ
ಹೆಮ್ಮರದ ತಣ್ಣೆಳಲಲಿ ಕಾದು ಕುಳಿತಿರ್ಪುದು
ಮಾತ್ರಮಲ್ಲದೆ ಬೇರೆ ಗತಿಯಿಲ್ಲವಾಯಿತ್ತು.
ಕ್ಸೇವಿಯರ್ ದಂಪತಿಗಳ್ ಈತೆರನ ಭಂಗಮಂ
ಕಂಡಿರದಿರೆ ಎಲ್ಲಿಲ್ಲದಿಹ ಗೋಳ್ ಕಂಡರ್.
ಪೊಳ್ತುರುಳಿತು. ಘಟಿಗಳು ಸೇರಿದುವು ಗತಕಾಲಕೆ.
ನಡುವಗಲ ಸುಡುವಿಸಿಲ್ ರಣರಣಿಸಿದುದು ನೆತ್ತಿ
ಉರಿಯುವ ತೆರದಿ. ಬೆಮರ್ ತುಂತುರು ತುಂತುರಾಗಿ

ಮೂಡಿದುವು ಮೈತೊಯ್ಯುವಂತೆ. ನಿರ್ಜನ ಧಾತ್ರಿ.
ನಿಶ್ಶಬ್ದ–ನೀರವತೆಯನಡುವೆ ಅನಾಥ ಗತಿ
ಒದವಿತು ಫಥಿಕರಿಂಗೆ ಒಂದೆರಡು ತಾಸುಗಳ್
ಕಳೆಯಲಾ ಗಳಿಗೆಯೊಳ್ ಆವ ದೈವದ ದಯೆಯೊ
ಜೋಡೆತ್ತಿನ ಗ್ರಾಡಿಯು ಗಡಬಡಿಸುತ ಬಂದುದು
ಅದೆ ಹಾದಿಯೊಳ್. ಒಡನೊಡನೆ ಅದಂ ತಡೆಹಿಡಿದು
ಎಲ್ಲರ ಸಕಲ ವಸ್ತುಗಳ್ ತುಂಬಿ ಶ್ರೀಮತಿ ಕ್ಸೇ–
ವಿಯರಂ ಅದರೊಳ್ ಕುಳ್ಳಿರಿಸಿ ಅದರೆಡಬಲ
ಪಕ್ಕದಲಿ ನಡೆದರೆಲ್ಲರ್. ಮುಂದಿನ ದೂರದ
ಹಾದಿಯಲಿ. ಕಾಲ್ನಡಿಗೆಯದೇಂ ಸಾಮಾನ್ಯಮೆ?
ಗಾಡಿಯೊಳ್ ಕುಳಿತು ಕುಲುಕಿ ಹಣ್ಣಾದರ್ ಶ್ರೀಮತಿ
ಕ್ಸೇವಿಯರ್. ನಡೆದು ನಡೆದು ಹಣ್ಣಾದರ್ ಮಿಕ್ಕ
ಯಾತ್ರಿಗಳ್. ಸ್ವಾಮೀಜಿಯ ಅನುಭವಾಮೃತವದು
ಹರಿಯುತಿರೆ ಮಾತಿನ ಸಿರಿಮೋಡಿಯಲಿ ಹಾದಿಯು
ಕಳೆವುದು ಸಮಯೋಚಿತವಾಗಿ. ಬಾನೇರಿದ ರವಿ
ಇಳಿಮುಖನಾದಂ. ಮುಸ್ಸಂಜೆಯ ಸೊಂಪು ತಂಗಾಳಿ
ತೀಟದಿಂಪು, ಭಾವನಾತ್ಮಕ ಪೆಂಪು ಮುಸುಗಿದುದು
ತನುಮನಗಳಂ. ಸಂಜೆಯ ಸೊಂಪಳಿದು ನಿಶಿಯುಂ
ಪಜ್ಜೆ ಪಜ್ಜೆಗಳ್ ಮುಂದಿಡುತಿರಲ್ ಮುಟ್ಟಿದರ್
ಗಮ್ಯಸ್ಥಾನಮಂ. ತಮಗಾಗಿ ಕಾದಿರ್ದ ಭಕ್ತ
ಮಂಡಲಿಯದು ಗುರುವಿನ ಪಯಣದೊಳ್ ಒದವಿದ
ಅಪಾರ ಭಂಗ ಬನ್ನವನರಿದು ಮನದಿ ನೋಯುತೆ
ತಹತಹಿಸಿ ಅತಿಥಿಗಳಿಗೆ ತಕ್ಕಿನ ಪೋಡಶೋ–
ಪಚಾರವನಿತ್ತರ್ ಬಲು ಭಕ್ತಿಯಲಿ. ಅತೀವ
ಭಂಗದಲಿ ಸೋಲ್ದು ಸೊಗಡಪ್ಪಿದ ಅತಿಥಿಗಳುಂ

ಕೆಡೆದರ್ ಮಡಿಗೊಂಡಿಹ ಸೆಜ್ಜೆಯಲಿ. ಒಡನೊಡನೆ
ಗಾಢನಿದ್ದೆಯಾವರಿಸಿ ನೀಡಿದುದು ಅನನ್ಯ
ವಿಶ್ರಾಂತಿಯಂ.
ಕಳಿಯಿತು ರಾತ್ರಿ. ಪಡುವಣ ದಿಗ್
ಭಿತ್ತಿಯಲಿ ಬಾಲಕೋಮಲ ಉದಯಮಾನದಾ
ಮಹೋತ್ಸವ ನಡೆದತ್ತು ಖಗಗಾನದ ಮಂಗಳ
ವಾದ್ಯದ ಸುನಾದದೊಡನೆ. ಅಂದು ವಿಶ್ರಾಂತಿ
ಪ್ರಶಾಂತಿಗಳ್ ಒಗ್ಗೂಡಿ ಲಾಲಿಸಿ ಪಾಲಿಸಿದುವು, ಸಿರಿ
ಜೋಗುಳವ ಹಾಡಿ ನಲಿಸುವಂತೆ; ತನುಮನಗಳ್
ಹಾಯೆನಿಸಿ ಪಡೆದುವು ಅಮೋಘಮಾದಾ ಶಾಂತಿ
ಮೇಣ್ ವಿಶ್ರಾಂತಿ.
ಆ ನಗರಿಯೊಳ್ ಎರಡೆರಡು
ಸಹಸ್ರವರುಷಮಾನಗಳ ವಸಂತನ ಸೊಂಪಿನ
ಸವಿಯಂ ಒಡಲ್ದುಂಬಿ ವಿಜೃಂಭಿಸಿಹ ಭವ್ಯ
ಮಹೋನ್ನತ ಅಶ್ವತ್ಥ ವೃಕ್ಷರಾಜನಸ್ತಿತ್ವ
ಪ್ರಸಿದ್ಧಂ. ಬುದ್ಧಗಯೆಯಿಂ ತಂದ ಮಹಾಸ್
ಬೋಧಿವೃಕ್ಷದ ಶಾಖೆಯಿಂ ಮೊಳೆತು ಬೆಳೆಬೆಳೆದು
ಬೃಹದ್ ಬೋಧಿವೃಕ್ಷವೆ ತಾನಾದುದು ನಿಜದಿಂ.
ಭಗವಾನ್ ಬುದ್ಧಗುರುವಿನ ಪ್ರತಿಮೆಯೆನೆ ವರ
ಗೌರವ ಪಡೆದ ಅಭೂತಪೂರ್ವ ವೃಕ್ಷದೇವಂ!
ಸ್ವಾಮೀಜಿ ಮಿತ್ರಮಂಡಲಿಯೊಡನೆ ಅಲ್ಲಿಗೆಯ್ದಿ
ನೆಟ್ಟ ಕಣ್ಣಾಲಿಯಂ ಕೀಲಿಸದೆ ನೋಡಿದರ್
ಆ ವೃಕ್ಷಶಿವನಂ. ನಭಶ್ಚುಂಬಿ ಭೂಜೇಶ
ಕುಲಕೀರ್ತಿಯಂ ಮೆರೆದು ಶಾಖೋಪಶಾಖೆಗಳ್
ಬೆಳೆಸಿ ಬಲೋನ್ಮತ್ತ ಭೀಷಣ ದೈತ್ಯ ಬಾಹುಗಳ

ಸುತ್ತಮುತ್ತಲ್ ಚಾಚಿ ಚಾಚಿ ಭೀಮ ಭೀಕರ
ವಿನ್ಯಾಸದಲಿ ಸ್ವಚ್ಛಂದದಿಂ ಬೆಳೆದಿರ್ದುದಲ್ಲಿ
ಮಹಾ ಪ್ರಪ್ರಪಿತಾಮಹನಂ ಹೋಲಿ! ಕಾಲಾನು
ಕಾಲದಿಂ ಪೋಷಿತಂ ಪೂಜಿತಂ ಮಾನಿತಂ!
ಆ ಮಹಾ ಬೋಧಿ ವೃಕ್ಷದೇವನ ಸುವಿಶಾಲ
ಪದತಲದಲ್ಲಿಯೆ ಕೂಡಿತು ಅಂದಿನ ಮಹೋನ್ನತ
ಧಾರ್ಮಿಕ ಸಭೆ. ಬೆಲ್ಲಕೆ ಮುತ್ತ ಬಹ ಇರುಂಬೆಗಳ
ಮಾಳ್ಕೆಯಲಿ ಸಾಲ್ಗಟ್ಟುತಲೈದುದು ಜನರಾಶಿ.
ಸ್ವಾಮಿಜಿ ತೋಷದಿಂದೀಕ್ಷಿಸಿದರಾ ಭಕ್ತ
ಜನರಾಶಿಯ ಉತ್ಸಾಹ ಪೂರಿತಾಗಮನಮಂ.
ಆ ಜನ ಸಂದೋಹ ಆ ಧಾರ್ಮಿಕ ನಿಷ್ಠೆ ಮತ್ತಂ
ಸ್ವಜನ ಮಧುರ ಪ್ರೇಮ ವಿಶ್ವಾಸ ಎಲ್ಲವುಂ
ಸಂಮ್ಮಿಳಿಸಿ ವೆರ್ಚಿದುದು ಸಭೆಯ ಘನತೆ. ಪ್ರಮುಖ
ಮಂಡಲಿಯು ತಮಗಿತ್ತ ಬಹುಮೂಲ್ಯ ಸುಸುಂದರ
ಬಿನ್ನವತ್ತಳಿಗೆ ಭಾವರಸಪೂರಿತಮಾದ
ಪ್ರತ್ಯುತ್ತರಮಂ ನೀಡಿದರ್ ಆಶುಭಾಷಣ
ಶೈಲಿಯಲಿ. ಬಳಿಕ 'ಭಗವಂತನ ಆರಾಧನೆ'
ಎಂಬುವ ಶಿರೋನಾಮೆಯಲಿ ಭಕ್ತಿ ಪೂರ್ಣತಾ
ನಲ್ವಾತುಗಳ್ ಹರಿಯುತಿರೆ ಮುಗ್ಧದುಗ್ಧಮನ
ಮತಿಗಳ್ ತಪೋಮಯ ಅನುಭವ ಬೆಳೆದಂತೆವೊಲ್
ಮಂತ್ರಿತ ಫಣಿಗಳಾದರಾ ಸಭಾ ಮಂಡಿತರ್.
ಜೊತೆಗೆ ತರ್ಜುಮೆದಾರರಿರುತಿರ್ದು ಸಿಂಹಳೀ
ಭಾಷೆಯಲಿ ವಿವರಿಸುತಿರೆ ವೇದಿಯಲಿ ಪ್ರತ್ಯಕ್ಷ
ಆರಾಧನೆಯು ನಡೆದಿದೆಯೊ ಎನಲ್ಕೆ ಸಭೆಯಲ್ಲಿ
ಭಾವನಾವೇಶಮೆಸೆದತ್ತು ವ್ಯಾಪಕವಾಗಿ.

ಕಾಣಾ ದೇವದಾರುತರುವಂತೆಸೆವ ಗುರುವಿನ
ದೇಹಚ್ಛವಿಯ! ಶೈವಾಲಾಚ್ಛನ್ನ ಕಾಸಾರ
ಸದೃಶಾನನಂ ಎನಿತು ಗಂಭೀರ! ಮೋಡಗಳ
ಮರೆಯ ಮಿಂಚಂ ಬಗೆದು ದೃಗ್ವಿಷಯಗಳಾಚೆಗೆ
ನಿಟ್ಟಿಪ ಮುಕುಲ ನೇತ್ರುಗಳಂ ಭರದಿ ನೋಡ.
ವದನ ಬಿಂಬವೊ ಮಹರ್ಷಿ ವಶಿಷ್ಟನ ಸುತನೆನೆ
ಮೆರೆವ ಮುಗ್ಧಾಕೃತಿಯ ನೋಡಾ. ವಾಗ್ಜಾಹ್ನವಿಯು
ಹರಿಯುತಿಹ ಸಿರಿವಾಯ್ ನೋಡಾ. ಸಕಲೇಂದ್ರಿಯ
ಬ್ರಹ್ಮಚರ್ಯಾಂತ ಶೀತಲೋಜಸ್ವಿತೆಯ ನೋಡ!
ಜ್ಞಾನದೀ ಧ್ಯಾನದೀ ವಿನಯ ಸಂಪನ್ನನೀ
ಸನಾತನ ಧರ್ಮವೇತೃವೀ ದೇವ ಮಾನುಷ್ಯ
ಶಾಸ್ತ್ರವೀ ತ್ರಿಲೋಕಹಿತ ಧೀಮತಿಯ ನೋಡಾ!
ಶತ ಸಹಸ್ರ ಜನ ಸಂದೋಹವದು ವೇದಾಂತ
ಧರ್ಮ ಸಾರದಲಿ ಮುಳುಗಿ ಮೈಮರೆತಿರುತಿರಲ್ಕೆ
ಇದ್ದಕಿದ್ದಂತೆ ಬೌದ್ಧಜನರ್ ಮನಗೆಟ್ಟು ಮತಿ
ಗತಿಯೆ ತಪ್ಪಿ ಧಾಳಿಯಿಟ್ಟರ್! ವೇದಿಯ ಬಳಿಗೆ
ನುಗ್ಗಿ ಜೋರಿನಿಂ ಡೋಲು ಜಾಗಟೆ ಇವುಗಳಂ
ಬಡಿದು ಬಾಜಿಸಿ ಗದ್ದಲವೆಬ್ಬಿಸಿದರ್! ಸಿಟ್ಟು
ರೋಷಗಳ ಗಣಿಯಾಗಿ! ಉಪನ್ಯಾಸಮಂ ಬಲು
ಆಸಕ್ತಿಯಿಂ ಆಲೈಸುತಲಿರ್ದ ಸಭಿಕರ್ಗೆ
ಮನರೋಸಿ ರೊಚ್ಚಿಗೆಲ್ದು ಭುಗಿಲೆಲ್ದು ಇನ್ನೇನ್
ಬೌದ್ಧರೊಡಂ ಕೈಕೈಮಿಲಾಯಿಸಿ ಜಡಿದು ಕುಟ್ಟಿ
ಮಾರಾಮಾರಿಯಾಗುವ ಸಂದರ್ಭವೊದಗಿ ಬರೆ,
ಸ್ವಾಮಿಜಿಯುಂ ಎಲ್ಲರಂ ಕುರಿತು ಕಳಕಳಿಯ
ದನಿಯೊಳ್ 'ಸುಶಾಂತಿಯಲಿ ತಾಳಿ' ಎಂದು ನಯದಿಂ

ಕೋರಿದರ್ ಕರಗಳಂ ಜೋಡಿಸಿ. ಬಳಿಕಲವರ್
ಬೌದ್ಧಜನ ಗೋಷ್ಠಿಯಂ ಕುರಿತು "ಈವಗೆಯ ಅತಿ
ಗಂಭೀರ ಮತೀಯ ಗಲಭೆಯದು ಸರಿಯಲ್ಲಂ.
ಸಿಂಹಳರ್ ನಿಮ್ಮಯ ಸಹಚರಿಗಳೈಸಿಹ ನಿಜ
ಸೋದರರಲ್ತೆ? ಕೇಳಿಲ್ಲಿ, ಭ್ರಾತೃಗಳಿರಾ! ಆಂ
ಸರ್ವಧರ್ಮ ಸಮನ್ವಯತೆಯಂ ತಿಳಿಪಡಿಪೆಂ"
ಎನುತೆ ಎಲ್ಲರ ಮನಂ ಒಪ್ಪುವೊಲ್ ವಿವರಿಸುತ
ಭಾವನಾತ್ಮಕವಾಗಿ ನುಡಿಸಿದರ್ ಆರಾರಂ
ಶಿವನೆಂದು ವಿಷ್ಣುವೆಂದು ಬುದ್ಧನೆಂದು ಪೂಜಿಸಿ
ಆರಾಧಿಸಿ ಭಜಿಸುವರೊ ಅವರೆಲ್ಲರುಂ ಒಂದೇ
ಅಲ್ಲದೆಯೆ ಬೇರೆಯಲ್ಲ ತಿಳಿಯಿರಿ. ಯೋಚಿಸಿರಿ."
ಅಲ್ಲಿಂದ ಮುಂಪಯಣ ಜಾಪ್ನಾ ಪೊಳಲಂ ಗುರಿ
ಗೊಂಡು. ನೂರಿಪ್ಪತ್ತು ಮೈಲಿಗಳ ಯಾತ್ರೆಯುಂ
ಮತ್ತೆ ಕುದುರೆಗಳ ಸಾರೋಟಿನಲಿ ಎನಲದೇಂ
ಸಾಮಾನ್ಯಮಲ್ಲಂ. ಪಯಣದ ಪರಿಶ್ರಮವದು
ಎರ್ದೆಗೆಡಿಸುವಂತಿರ್ದೊಡಂ ಗತಿಯಿರದಾಯ್ತು.
ಜಾಪ್ನಾ ಪುರ ಪ್ರಜೆಗಳ ಕಟ್ಟೊತ್ತಾಯವದು
ವಿಶ್ವಾಸ ಭಕ್ತಿಗಳ ಪೂರ್ವಕಮಿರೆ ತಳ್ಳುವ
ಪ್ರಶ್ನೆಯೇಳ್ವಂತಿಲ್ಲವಾಯ್ತು. ಸ್ವಾಮೀಜಿಯುಂ
ಆ ಆದರದ ಮಧುರ ಕರೆಯಂ ಮಧುರವಾಗಿಯೆ
ಸ್ವೀಕರಿಸಿದರ್. ಪಾಶ್ಚಾತ್ಯ ಮಿತ್ರಜನಮಂಡಲಿ
ಗುರುಭಾಯಿಗಳ್ ಮೇಣಧಿಕ ದೇಶೀಯ ಅನೇಕ
ಪ್ರಜೆಗಳ್ ವೆರಸಿ ಪೊರಮಟ್ಟರ್ ಹಿರಿಯ ತಂಡ
ಕೂಡಿರುತೆ. ವರ್ಣಮಯ ಘನ ಪರ್ಣರಾಜಿಗಳ
ಮಧ್ಯೆ ಸಾಗಿರೆ ಪಯಣ ಮನೋಲ್ಲಾಸದಿಂ ತನಿ

ಗೊಂಡ ದೇಹ ಸಂಪದಮದು ತಾಳ್ದು ಬಾಳ್ದುದಾ
ಶ್ರಮಿಕ ಪಯಣಮಂ. ಎಲ್ಡು ಮೂರು ದಿವಸಗಳ
ಪಯಣದ ಬಳಿಕ 'ಎಲಿಫೆಂಟ್ ಪಾಸ್' ಎಂಬೊಂದು
ನಲ್ದಾಣಮಂ ಮುಟ್ಟಿದರ್. ಪ್ರಕೃತಿಯ ದಿವ್ಯ
ಉಡಿಯಲಿ ಸುರಬಂಧುರಮಾದ ಮಹಾನ್ ಸೇತು
ಕಂಗೊಳಿಸಿತು. ಸಿಲೋನ್ ಮೇಣ್ ಜಾಪ್ನಾ ದೀವಿ
ಎರಡನೊಂದುಗೊಳಿಪ್ಪ ಸೇತು. ಅಲ್ಲಿಂದ ಮುಂ
ಮುಂದೆ ಹನ್ನೆರಡು ಮೈಲಿಗಳ ದೂರ ಜಾಪ್ನಾ
ನಗರಿಗೆ. ಅದೆ ಸೇತುವೆಯ ಬಳಿಯೊಳಲ್ಲಿನ ಅಗ್ರ
ಗಣ್ಯ ನಾಗರೀಕರ್ ಧೀರ ಧೀಮಂತ ಜನ
ನಾಯಕರ್ ಮೇಣ್ ವಿದ್ಯುಜ್ಜನರ್ ಕಾದಿರ್ದು
ಸಹಸ್ರ ಸಹಸ್ರ ಕಂಠಗಳ ಜಯಕಾರಮಂ
ಮೊಳಗಿಸಿ ಸಡಗರ ಸಂಭ್ರಮಗಳಿಂದ ಸ್ವಾಗತವ
ಬಯಸಿದರ್ ಪರಮಾದರ ಪೂರ್ವಕವಾಗಿ. ಆ
ಜನರಾಶಿ ಆ ಸಂತಸದ ಕೂಟ ಸ್ವರ್ಗೀಯ
ಸೌಂದರ್ಯಮಂ ಬಿಂಬಿಸಿದುದು ಹೃನ್ಮನಗಳಂ
ಪುಳಕಿಸುವೊಲ್. ಕಹಳೆಕೊಂಬುಗಳ್ ಮೊಳಗಿದುವು.
ಬೀದಿಬೀದಿಗಳ್ ತಳಿರು ತೋರಣಗಳಿಂ ವರ್ಣ
ವರ್ಣಮಯ ಕುಸುಮಲೋಕದ ಪರಮ ಶೃಂಗಾರ
ವೈಭವದಿಂ ಮೆರೆದುವು. ಮನೆಮನೆಯು ರಂಗೋಲಿ
ಚಿತ್ತಾರದಿಂ ಹಸಿರುವಾಣಿ ಚಪ್ಪರಗಳಿಂ
ಬಾಳೆಕಂಬಗಳ ಶೋಭೆಯಿಂ ಪೂರ್ಣ ಕುಂಭದ
ಗೌರವದಿಂ ನಂದಾದೀಪಗಳ್ಬೆಳಗಿದುವು.
ಮತ್ತೆ ಮುಸ್ಸಂಜೆ ಕವಿದುಬರೆ ಧಗಧಗ ಉರಿದು
ಬೆಳಗಿದುವು ಪಂಜುಗಳ್. ಜಾಪ್ನಾನಗರದ ಜನ

ರಾಶಿಯೆಲ್ಲ ಕಿತ್ತೆದ್ದು ಬಂದಂತೆ ಕೂಡಿತು
ಜನಸಂದಣಿ. ಪಂಜುಗಳ ಮೆರವಣಿಗೆಯೊಳ್ ಎಡ
ಬಲಗಳಲಿ ವಾಲಗ ಕಹಳೆ ಕಾಳ ಮದ್ದಳೆಯ
ಮೇಳ ಮೆರೆದತ್ತು ಜಯಕಾರದೊಡನೆ. ಕಿನ್ನರ
ಲೋಕವೇ ಧರೆಗಿಳಿದುದೊ ದೇವೇಂದ್ರನ ಇಂದ್ರ
ಲೋಕವೇ ಜಾಪ್ನಾನಗರಿಗೈದುದೊ ಎನಲ್ಕೆ
ಘನಿಸಿದುದು ಸಂಭ್ರಮಿತ ಲೋಕಂ. "**ನ ಭೂತೋ**
ನ ಭವಿಷ್ಯತಿ" ಎಂಬವೊಲ್. ದೃಷ್ಟಿ ಕಕ್ಷೆಯೊಳ್ ಎಲ್ಲಿ
ಯಾವೆಡೆಯೊಳ್ ನೋಡಿದೊಡಮಲ್ಲಿಯ ದೃಶ್ಯಗಳ
ಚಿತ್ರಮೆಲ್ಲವುಂ "**ಬ್ರಹ್ಮಮಯಂ ಜಗತ್**" ಅಲ್ಲದೆ
ಮತ್ತವೇನಲ್ಲಂ. ಮೆರವಣಿಗೆಯೊಳ್ ಕಂಗಳ್
ಸೆಳೆಯುವ ತೆರದಲಿ ಮಧ್ಯೆ ಮಧ್ಯೆ ಕಣ್‌ಗೊಳಿಸಿದ
ಈಶ್ವರನ ಮೇಣ್ ಕಾರ್ತಿಕೇಯನ ದೇಗುಲಂ
ಚೊಕ್ಕ ಉದ್ದಂಡ ಪ್ರಣಾಮ ಸಲ್ಲಿಸಿದರಾ
ಶ್ರೀಗುರು ಮಹೋದಯಂ. ಅಲ್ಲಿ ನೆರೆದ ಜನಗಳ
ಆದರಾತಿಥ್ಯಮಂ ಸ್ವೀಕರಿಸಿದರ್ ಬಹುಲ ಪ್ರೀತಿಯಿಂ.
ಭಕ್ತ ಕೋಟಿಯುಂ ಭಕ್ತಿಯಿಂ ತಂದು ಕೊರಳ್ಗೆ
ತೊಡಿಸಿದ ಕುಸುಮಹಾರಗಳಲಿ ಮುಳುಗಿ ಹೋದರ್
ಸ್ವಾಮಿಜಿ. ಅವರಿತ್ತ ಬಿನ್ನವತ್ತಳೆಯನುಂ
ಕುರಿತು ತಮ್ಮ ಉತ್ತರವಂ ಸುಸುಂದರವಾದ
ಭಾಷೆಯೊಳ್ ನಿರರ್ಗಳವಾಗಿ ತಾಸೊಂದರಾ
ಪರ್ಯಂತ ಉಪನ್ಯಾಸಮಂಗೈದರ್. ಅಂದಿನ
ಕಾಲಮಾನದಲಿ ಧ್ವನಿವರ್ಧಕಗಳ ಪೆಸರ್
ಕೇಳ್ದರಿಲ್ಲ. ಆ ಬೃಹದ್ ಸಭೆಗೆ ಗುರುವರನ
ಧ್ವನಿಯೆಂತು ಮುಟ್ಟಿದುದೊ ಎನಲ್ಕೆ ಸಂಪೂರ್ಣ

ಪ್ರವಚನ ನಡೆದುದು ಸರಿರಾತ್ರಿಯಡರುವನ್ನ,
ಬಳಿಕಂ ವಿಸರ್ಜಿತಮಾಯ್ತು ಆ ಬೃಹತ್ಸಭೆ.
ಗುರುದೇವನೆಂತಂತು ಮಿತ್ರರಂತು ಬಲ್ ಬಳಲಿ
ಬೆಂಡಾಗಿ ಬಳಲ್ಕೆಯ ಪ್ರತಿಮೂರ್ತಿಗಳಾಗಿ
ಬಿಡದಿ ನೆಲೆಯಂ ಸೇರ್ದೊಡನೆ ನಿಶ್ಯಬ್ದಾಬ್ಧಿಯ
ಅಂತರಾಳಕೆ ಧುಮುಕಿದವೊಲಾಯ್ತು ಪ್ರಶಾಂತ
ಬಿಡದಿಯ ಸಮುದಯದ ಸುಖಾಶ್ರಯದವಾಸಂ.
ಕರಿಯಿರುಳು ಉರುಳ್ದುದು ಮೂಡಣದಿ ಮುಂಬೆಳಗು
ಮೂಡಿ ಚೆಂಗಾಂತಿ ಹರಡಿ ಚಂದನಮಯಮಾಯ್ತು
ಭೂದೇಶದೊಡು ಕೆಂಗಲಿಪಂತೆ. ಹಗಲೆಲ್ಲ
ಬಿಡದಿಯ ಮಹಾವಲಯದೊಳ್ ಪದ ಚಾರಣಂ
ಗೆಯ್ಯುತೆ ಸುವಿಶ್ರಾಂತಿಯಂಬಡೆದರ್ ತಮ್ಮಯ
ಮಿತ್ರಮಂಡಲಿಯೊಡನೆ ಗುರುವರಂ. ಹಲಹಲವು
ನಗೆವಾತುಗಳನಾಡಿ ಕಳೆದ ಪಗಲ್ ಮುಡಿಸಿತು
ಮೆಯ್ಯ ನೋವು ನಿಡಿಗಳನಿನಿತನಿತು. ಸಂಜೆಯಲಿ
ಹಿಂದೂ ಕಾಲೇಜಿನೊಳ್ ದೀರ್ಘಾಯತ ಉಪನ್ಯಾಸ
ಗೈದರ್ ಶಿರಿಕಂಠದುಲಿಯಿಂ ಹರಿಸಿ. ಆ ಜನ
ಸ್ತೋಮದ ಮನವಂ ಸೂರೆಗೊಂಬವೊಲ್ ಪುರಾಣ
ಪ್ರಥಿತ ಶ್ಲೋಕವೊಂದಂ ತಮ್ಮ ಸಿರಿ ಕಂಠದಿಂ
ಬಿತ್ತರಿಸಿದರ್ ಭಾವನಾ ಪೂರ್ವಕ ರಾಗದಲಿ,

“ತ್ವರೋತ್ತಿಷ್ಟ ಶ್ರೇಷ್ಠಂ ಸುಯುಗಮಿಹ ನೇದಿಷ್ಠಮ ಭಯಂ,
ಸಕೃದೃಷ್ಟ್ವಾ ಪ್ರೇಷ್ಠಂ ಭುವನಪರಮೇಷ್ಠಂ ತವಪುರಾ ॥
ಯುಗೋಪಾಸ್ಯಂ ವಿಶ್ವಾ ಸ್ತುತ ಚರಣರೇಣುಂ ನರಹರಿಂ,
ಕೃತಾರ್ಥತ್ವಂ ಯಾತು ಪ್ರಭವತು ಚ ಜೀವಃ ಸಪದಿತೇ ॥

ಹಿಂಜಿದರಳೆಯಂತೆವೊಲ್ ಶ್ಲೋಕಾರ್ಥಮಂ ಬಿಡಿಸಿ

ಎಳೆಎಳೆಯ್ಯೆಸಿ ಅನುಭವಾಮೃತವಂ ಸುರಿದು
ತಿಳಿಪಿ ತಣಿಸಿದರ್ ಶ್ರೋತೃಗಳ ಮನವಂ. ಅಹ
ನಭೋದೇಶದಿಂ ಅಮೃತರಸವೇ ಸುರಿದು
ತನುಮನಂ ತಣಿಸಿದವೊಲಾಯ್ತು ಸಭಿಕ ಶರೀರ
ಹೃದಯದ ಪ್ರಪಾತಗಳಿಗೆ. ಕೀಲಿಸಿತು ಸಿರಿ
ದೃಷ್ಟಿ ವೇದಿಯ ಕಾಂಚನ ಮೂರ್ತಿಯ ಸನ್ನಿಧಿಯಲಿ.
ಕೀಲಿಸಿತು ಮನಂ ಧರ್ಮರಸ ಧಾರೆಯಲಿ. ಜನ
ನಿಬ್ಬೆರಗಾದವೊಲ್ ಕುಳಿತರ್ ಮಂತ್ರಮುಗ್ಧದುಗ್ಧ
ಗತಿಯಲ್ಲಿ. 'ವೇದಾಂತ ಧರ್ಮ' ಎಂಬೊಂದು ಬಲ್
ದೀರ್ಘತಮ ಉಪನ್ಯಾಸಮಂಗೈದರ್ ಶ್ರೋತೃಗಳ
ಮನೋಧರ್ಮವಂ ಸಗ್ಗದ ಮೆಟ್ಟಿಲಿಗೊಯ್ವಂತೆ.
ಬಳಿಕಲಾ ಕ್ಯಾಪ್ಟನ್ ಕ್ಸೇವಿಯರಂ ಮಾತಾಡೆ
ಕೋರಿದರ್ ಅಗ್ರಗಣ್ಯ ಸಿಂಹಳೀ ಪ್ರಜೆಗಳ್.
    ಕ್ಯಾಪ್ಟನ್ ಕ್ಸೇವಿಯರ್ ಎಳ್ದುನಿಂತು ತಮ್ಮಯ
ಅನುಭವಾಮೃತವಂ ಕುರಿತು ತಿಳಿಪಿದರಿಂತು,
    ತಾವುಂ ಸನಾತನ ಹಿಂದೂಧರ್ಮವಂ ಒಪ್ಪಿ
ಮೆಚ್ಚಿ ಸ್ವೀಕರಿಸಿ ಗುರುಗಳ ಶಿಷ್ಯನಾಗಿಯೆ
ಭಾರತಕ್ಕೈದುದು ಆತ್ಮಸಂತೋಷಕೆಂಬುದು
ಆವ ಕಾರಣಮೆಂಬುದಂ ವಿವರಿಸಿದರ್, ಭಕ್ತ
ಜನರಾಶಿಗೆ, ಆತ್ಮರಸಧಾರೆಯನ್ನೇ ಪ್ರೇಮ
ಭಾವದಿಂ ಸುರಿವವೊಲ್. ಹರ್ಷಚಿತ್ತರಾಗಿ ವಿವರಿಸುತ್ತೆ
ಹರ್ಷವೇ ಮೈವೆತ್ತಿ ಬಂದವೊಲೆಸೆದರವರ್,
ನೆಟ್ಟ ನೋಟಗಳ್ ಮುದದಿಂ ಮಮ್ಮಲಿಪಂತೆ.
    ಜಾಪ್ನಾ ಪ್ರಾಂತ್ಯದಿಂದಿತರ ನಗರಗಳ ಜನರಿಂದೆ
ಅಮಿತ ಕಟ್ಟೊತ್ತಾಯದ ಕರೆಯೋಲೆಗಳೈದು

ಹಸ್ತಗತಮಾದುವು ಗುರುವರನ. ಕರೆ–ಕರೆಗಳ
ಮೇಲೆ ಕರೆಯೋಲೆಗಳ್ ಬರತೊಡಗಿದುವು ಆಸೆ–
ಮಹದಾಸೆಯ ರಸ ಪೂಸಿ. ಗುರುದೇವಂಗೆ ಆ
ಕರೆಗಳಿಗೆ ಮನ್ನಣೆಯನೀಯಲಿನಿತು ಸಮಯಂ
ದೊರೆಯದಾಯ್ತು. ಆಗಳ್ ಶ್ರೀಮತಿ ಕ್ಸೇವಿಯರ್,
  “ಗುರುವರಂ ಈಗಳೇ ಬಳಲಿ ಬೆಂಡಾಗಿಹರ್.
ಇನ್ನಿಲ್ಲಿ ಪೆರ್ಚುಸಮಯಮುಳಿದೊಡೆ ಸಿಂಹಳೀ
ಪ್ರಜೆಗಳ ಪ್ರೇಮ ಗೌರವಾಧಿಕ್ಯದಿಂ ಗುರುವೆ
ಸಾಯ್ವುದು ದಿಟಂ! ಸಮಯದ ಅಭಾವವೆ ರಕ್ಷಿಸಿತು
ಗುರುದೇವನಂ!” ಎಂದರ್ ಸುಖದುಃಗಳ್ ತುಂಬಿ.

ಹರಿಃ ಓಂ ತತ್ ಸತ್

❋ ❋

ಚತುಸ್ತ್ರಿಂಶೋಲ್ಲಾಸಂ

ಭಾರತೋತ್ತಮನ ಭಾರತಾಗಮನ

ನಿರಾಕಾರ ನಿರ್ಗುಣ
ನಿರ್ವಿಶೇಷ ಬ್ರಹ್ಮಾಹಮಸ್ಮಿ ।
ನಿರುಪಾಧಿಕ ನಿಷ್ಕಳ
ಬಹ್ಮಾಹಮಸ್ಮಿ ।
ನಿರ್ಭಯ ನಿರವಯವ
ಬ್ರಹ್ಮಾಹಮಸ್ಮಿ ।

ರಾಮನಾಡಾಧಿಪ ರಾಜಭಾಸ್ಕರ ವರ್ಮ ಸೇ-
ತುಪತಿಯುಂ ತಮ್ಮ ಸಕಲ ಪರಿವಾರ ಸಮೇತ
ಪಾಂಬಾನ್ ತೀರ ಪ್ರಾಂತ್ಯಕ್ಕೈದಿರ್ದನ್ ಓಡಿ-
ಓಡೋಡಿ ಭಕ್ತಿ ಗೌರವ ಕಾತರತೆ ತುಂಬಿ.
ಆಗಳೇ ಅಲ್ಲಿ ಕೂಡಿರ್ದುದು ಜನರಾಶಿಯು
ಗಜಬಿಜಿಯ ಸದ್ದುಗದ್ದಲ ಹೂಡಿ. ದೂರದಲಿ
ತೇಲಾಡಿ ಬಹ ಜಹಜುಗಳ ಮೇಲೆ ಕಣ್ಣನಂ
ನೆಟ್ಟು ಕಾದಿರ್ದುದು ಜನರಾಜಿ. "ಅದೊ ಅದೊ,
ಅಲ್ಲಿ! ಬರುತಿಹುದಲ್ತೆ ಅದೇ ಗುರುಗಳ ಜಹಜು!"
ಜಹಜುಗಳ್ ಎನಿತೆನಿತೊ ಹರಿದು ಬರುತಿರ್ಪುವೀ
ಎಡೆಗೆ. ಆವುದಾವುದು ಗುರುದೇವನಂ ಪೊತ್ತು
ಬರುತಿಹುದೊ ತಿಳಿಯದಿರೆ, ಅದೆಂದು ಇದೆಂದು
ಗುರುತಿಸುವ ಆತುರಾತುರ ಕುತೂಹಲಿತ ಜನ
ಮತಿಗತಿಗೆ. ಉದ್ಗ್ರೀವ ಶಿರೋದೇಶಗಳ್ ದೂರ
ಚೈತ್ರದತ್ತ ಕೇಂದ್ರೀಕೃತಮಾದುವು. 'ಅದೇ
ಜಹಜು! ಹೌದು ಅದೇ ಜಹಜು!' ಕೂಗಿದರೆಲ್ಲ

ಒಕ್ಕೊರಲಲಿ. ಬಂದೇ ಬಂದಿತಾ ಭೈತ್ರು ಜಳ
ಜಳನೆ ನೀರಾಟವಾಡಿದವೊಲ್ ಹರಿದು ಸರಿದು
ಸೈವರಿದುದು ಬಂದರಿನಂಚಿಗೆ. ಜಹಜಿನ ಮುಂ-
ಚೂಣಿಯಲಿ ನಿಂತಿರ್ದ ಸ್ವಾಮಿಜಿ ಕಾಶಾಯ
ವಸನದಾರಿಯಾಗಿ ಕನಕ ಕಾಂತಿಯೊಳೆಸೆದರ್
ಕಾಂಚನದ ಮೂರ್ತಿಯಂ ಹೋಲಿ! ಆಗಳೇನಾ
ಜನರಾಶಿ ಕೈಪರೆಗುಟ್ಟಿ ಕೇಕಾ ಧ್ವನಿಯೊಳ್
ಜಯಕಾರ ಮೊಳಗಿಸಿದ ಪರಿಯ? ನಲಿನಲಿದಾಡಿ
ಸ್ವಾಗತಿಸಿದರ್ ಪರಮ ತೋಷದಿಂ ಗುರುವರನ.
    ಜಹಜಿನಿಂದಿಳಿದರ್ ಗುರುವರ್ಯಂ. ಮುಟ್ಟಿದುವು
ಪಾದ ಪದ್ಮಗಳ್ ಭಾರತ ಭೂಮಿಯಂ. ಮತ್ತೆ
ಮೈಬಾಗಿ ನಮಸ್ಕರಿಸಿದರ್ ಸ್ವಾಮಿಜಿ ಆ
ಪವಿತ್ರನೆಲವಂ ಮುಟ್ಟಿ. ಒಡನೆ ಮುಂದೈದ ರಾಜಾ
ಭಾಸ್ಕರವರ್ಮ ಸೇತುಪತಿಯುಂ ಭಕ್ತಿಯಿಂದೆ
ಶಿರವಂ ಮಣಿದು ನಮಸ್ಕರಿಸಿ ಪಾದಧೂಳಿಯ
ವಿನಮ್ರತೆಯಿಂ ಸ್ವೀಕರಿಸಿ ಎರಡೂ ಕೈಗಳಂ
ನೀಡಿ ಸ್ವಾಗತಿಸಿದಂ. ಸಂದರ್ಶಕರ್ ಒರ್ಮೆ
ಇರ್ಮೆ ಮತ್ತೊರ್ಮೆ ನಮಿಸಿದೊಡಮದು ಸಾಲದೆನೆ
ಮುಗಿದ ಕೈ ಇಳಿಸದಾದರ್. ಜನಜಂಗಳಿಯ ಗಜಿ
ಬಿಜಿ ಹರ್ಷೋದ್ಗಾರ ಮುಮ್ಮಾತುಗಳ ಮರ್ಮರಂ
ಇವೆಲ್ಲವುಂ ಕೂಡಿ ಕಡಲ ಮೊರೆತಕೆ ಹೆಗಲೆಣೆ
ಎನಲ್ಕೆ ಗಗನ ಭೇರಿ ತಾನಾಯ್ತು, ತೋಷರಸ
ಉಕ್ಕಿ ರಾಜಯೋಗ್ಯಮೆನಿಪ್ಪ ಸರ್ವಾಲಂಕೃತ
ರಥವೊಂದು ಅಣಿಯಾಗಿ ನಿಂದತ್ತು ಮಿಂಚುಮೈ
ಹೊನ್ನಾದ ಶ್ವೇತಾಶ್ವಗಳ ಸಹಿತ. ಸ್ವಾಮಿಜಿ

ಸೈಕತತಡಿಯ ರಜತ ಪಟ್ಟದಲಿ ತೋಷದಿಂ
ಸತ್ಪಾದಗಳ ಬೆಳಸಿರೆ ಕಂಡುಕೇಳ್ದವರೆಲ್ಲ
ಎದ್ದು ಬಿದ್ದೆಳ್ದವರ ಮಾಳ್ಕೆಯಲಿ ಓಡೋಡಿ
ಬಂದು ಅಡ್ಡ ಬಿಳ್ದು ಶಿರಮಣಿದು ಪದಧೂಳಿಯಂ
ಸ್ವೀಕರಿಸಿದರ್ ಗೌರವ ಭಾವದಲಿ. ಆಗಳ್
ಸ್ವಾಮಿಜಿ 'ನಾರಾಯಣ ನಾರಾಯಣ' ಎನುತೆ
ನಿವೇದಿಸಿದರ್ ಭಗವಾನ್ ಲೋಕೇಶ್ವರನಾ
ಪಾದಾರವಿಂದಗಳಿಗೆ. ಪಾಂಬಾನ್ ನೇಸರ್
ಕೆಮ್ಮುಗಿಲ್ ದಿಣ್ಣೆಯೇರುತ್ತಿರೆ ಮೆಲುಮೆಲ್ಲನೆ
ಕೆಂಗಾಂತಿಯ ಮುಗಿಲ್ಗಡಲ ಮಹಾವೈಭವ
ರಾಶಿಯಲಿ ಮೂಡುತಲ್ಯೆದ ಮುಗಿಲ್ ರಿಸಿಯೊರ್ವ
ವಿಶ್ವವಿಜಯೀ ಕುವರನ ಆಶೀರ್ವದಿಸಲೋ
ಎನಲ್ ವಿಜೃಂಭಿಸಿದನ್ ದಿಗ್ ಭಿತ್ತಿಯ ವರ್ಣ
ಲೋಕದಲಿ, ಬೃಹದಾಕಾರವೆತ್ತು.
                                        ಇತ್ತಲ್,
ಪ್ರಾತಃಕಾಲೀನ ಶೀತಲ ಮಂದ ಮಾರುತನ
ಪದ ಹತಿಗೆ ಚಂದನದ ವರ್ಣದುತ್ತರೀಯಂ
ಹಾರುತಿರೆ ಪಟಪಟಿಸಿ ಮಂದಸ್ಮಿತವದನದ
ಸ್ವಾಮಿಜಿಯುಂ ಪಾಶ್ಚಾತ್ಯ ಮಿತ್ರ ಬಂಧುಗಳಂ
ಒಡಗೂಡಿ ರಥವೇರಿದರ್ ಕಿವಿಗಡಚಿಕ್ಕುವ
ಚಪ್ಪಾಳೆಗಳ ಮಹಾರಮದ ಮಧ್ಯೆ! ಹಿಂದೂ
ಧರ್ಮದಾ ಪ್ರಪ್ರಥಮ ಪ್ರತಿನಿಧಿಯಾದ ಶ್ರೀ
ವಿವೇಕಾನಂದರೆಸೆದರ್ ಭರತ ಮಾತೆಯ ದಿವ್ಯ
ಕಣ್ಮಣಿಯ ಪಾಂಗಿನಲಿ. ಮೆರವಣಿಗೆಯ ಸಡಗರ
ಸಂಭ್ರಮಗಳ ಅಬ್ಬರದಲಿ ಪಗಲುರುಳಿ ಬೈಗು

ಪೊಳ್ತಡರ್ದು ಉರುಳ್ದುದಯ್ ಗಜಿಬಿಜಿಯಿಂದೆ.
ತಣ್ಪುಗುವ ತಣ್ಣನೆಯ ನಿಶಿಯಡರಿಬರೆ ಪೂರ್ಣ
ಚಂದ್ರಾತಪ ಸುಶೋಭಿಪ ಸಾಗರ ತೀರದೊಳ್
ಸಹಸ್ರಾರು ಪ್ರಜೆಗಳುಂ ಕೂಡಿರೆ ರಾಜನುಂ
ಅಭಿನಂದನ ಪತ್ರದ ದ್ರುವ್ಯವಂ ಸಮರ್ಪಿಸಿ
ಆನಂದ ರಸನೆಯ ಪಡೆದರೆಲ್ಲರೊಗ್ಗಿನಲಿ.
ಗುರುವರಂ ಸಮಯೋಚಿತಮಪ್ಪ ಅತೀ ಸರಳ
ಉತ್ತರವನಿತ್ತು ಸಭೆಯ ಸಭಿಕರ ಉತ್ಸಾಹ
ಪೂರಿತ ಹೃತ್ ಕರಂಡಕೆ ಪ್ರೇಮಾಮೃತವಂ
ಸುರಿದು ತುಂಬಿ ಹರಸಿದರ್ ಪೂರ್ಣಮನದಿಂದಲಿ.
ಬಳಿಕ ಸಭೆಯಂ ವಿಸರ್ಜಿಸಿ ಬೀಳುಕೊಂಡಿರ್ದ
ಸ್ವಾಮೀಜಿ, ರಾಜಭವನದ ಬಿಡದಿಯಂ ಸೇರ್ದು
ವಿಶ್ರಾಂತಿಪಡೆದರ್ಯೆ ನಿಶ್ಯಬ್ದಾಬ್ಧಿಯಲಿ ನೆರೆ ಮುಳುಗಿ
ತೇಲಿ. ಶ್ರಾಂತ ರಾತ್ರಿಯದು ಉರುಳ್ದು ಮುಂಬೆಳಕು
ಮೂಡಿದುದು ಮೂಡುವೆಟ್ಟ ಪಂಕ್ತಿಯ ಮೇಗಡೆಯೊಳ್.
ಖಗಗಾನ ಮೊಳಗಿತು ಸುಪ್ರಭಾತವಂ ರಾಗಾನು
ರಾಗದಲಿ. ಅಂದಾವ ಜನರ ಸಂದರ್ಶನದ
ಕಾರ್ಯಕ್ರಮಮಿರದಿರೆ ಶಾಂತಿಯಲಿ ಕಳೆಯಿತು
ಪೊಳ್ತು. ಪಗಲುರುಳ್ದು ಅಡರಿತು ಸಾಯಂ ಸಮಯ
ಸೊಂಪಿನ ತನಿಯಿಂಪೂರೆದು. ರಾಜ ಪರಿವಾರವದು
ಬಿಡದಿಗೈದುದು ದಿವ್ಯ ಸರ್ವಾಲಂಕೃತ ರಥ–
ವೊಂದಂ ಏರಿ. ಮಿಂಚು ಮೆಯ್ಯಿನ ಧವಳಕಾಂತ
ಶ್ವೇತಾಶ್ವಗಳೆಸೆದುವು ಮನಮೋಹಕ ತರದಲಿ.
ಬಹು ಜನರ ತಂಡ ಮುಂದೈದುದು ಗುರುದೇವನಂ
ಧಾರ್ಮಿಕ ಸಭೆಗೆ ಕರೆದೊಯ್ಯೆ. ಸ್ವಾಮೀಜಿ ರಥವಂ

ಏರಿ ಕುಳಿತರ್. ಸಡಗರ ತುಂಬಿದುದು ಜನಗಣದ
ಹೃದಯಾಬ್ಧಿಯಲಿ. ವಿಶ್ವಧರ್ಮ ಸಹಸ್ರಾಕ್ಷ
ಮೂರ್ತಿಯಂ ತೇಜಿಗಳ ತೇಜಿಯಪ್ಪ ಜನರುಂ
ಎಳೆವುದೇ ಲೇಸುಲೇಸೆಂದೆನುತೆ ಪ್ರಭುಗಳ್
ತೇಜಿಗಳ ನೊಗಗಳಚಿ ಪರಿವಾರದ ಸಂಗಡಂ
ಎಳೆದರ್ ರಥಮಂ ಆನಂದಾಬ್ಧಿಯಲಿ ಮುಳುಗಿ!
ಸ್ವಾಮಿಜಿಯುಂ ಅಂದು, ಎಲ್ಲಿ ಪ್ರಥಮ ಹೆಜ್ಜೆ
ಊರಿದರೊ, ಅಮೆರಿಕೆಯಿಂ ಪಿಂಮರಳಿ ಬಂದಂದು
ಆ ಪವಿತ್ರ ಭೂಮಿಯಲಿ ವಿಶ್ವವಿಜಯೀ ಸ್ಮೃತಿ
ಸ್ತಂಭವೊಂದಂ ನೆಡುವ, ನೆಟ್ಟು ಸಂಸ್ಥಾಪಿಸುವ
ಕಾರ್ಯಮಂ ತೀರ್ಚಿದರ್ ಪ್ರಭುಗಳ್ ಅಖಿಲ ಜನ
ಗೋಷ್ಠಿಯಾ ಸಡಗರದ ಮಧ್ಯೆ. ಆ ಪರಮಾರ್ಥ
ಸ್ತಂಭದ ಮೇಲೊರೆದ ಒಕ್ಕಣೆಯುಮಿಂತಿರ್ಪುದಯ್,
    "ಸತ್ಯಮೇವಾ ಜಯತೇ.....ಈ ಸ್ಥಳದೊಳ್ ಮಹಾತ್ಮಾ
ಸ್ವಾಮಿ ವಿವೇಕಾನಂದರುಂ ಪಾಶ್ಚಾತ್ಯ ಜಗದಲಿ
ವೇದಾಂತ ಧರ್ಮದ ವಿಜಯ ವೈಜಯಂತಿಯಂ
ಸ್ಥಾಪಿಸಿ ಜಯಭೇರಿ ಹೊಡೆದು ಅದ್ವಿತೀಯಮಾದ
ವಿಜಯಾನಂತರ ತಮ್ಮಯ ಆಂಗ್ಲ ಶಿಷ್ಯಗಣದ
ಜೊತೆಗೂಡಿ ಭರತ ಖಂಡದ ಪುಣ್ಯ ಮೃತ್ತಿಕೆಯಲಿ
ಮೊತ್ತಮೊದಲ್ ಪದಾರ್ಪಣೆಗೈದ ಸ್ಥಾನಮಂ ಚಿರ
ಸ್ಮರಣೀಯಗೊಳಿಪ ಮಹೋದ್ದೇಶದಿಂ ಇಲ್ಲಿ,
ಈ ಸ್ಮೃತಿಸ್ತಂಭಮಂ ಸಂಸ್ಥಾಪಿಸಲಾಯಿತು."
– ರಾಮನಾಡಾಧಿಪ ಭಾಸ್ಕರವರ್ಮ ಸಾವಿರದ
ಎಂಟನೂರ ತೊಂಬತ್ತೇಳನೆಯ ವರ್ಷೀಯ
ಜನವರಿ ಇಪ್ಪತ್ತಾರನೆಯ ದಿನದಂದು ಇದಂ

ಸ್ಥಾಪಿಸಿದರ್.''

ಸಾಯಂ ಸಮಯದ ಇನಿವೊಳ್ತದು
ಮುಳುಗಿದುದು ಮಲೆಮುಡಿಯ ಮರೆಗೊಂಡು. ಮತ್ತಮಾ
ಬಾನ್ ಬಯಲಿಂಗೆ ಮಲರಿದುವರಿಲ್ ಚುಕ್ಕಿಗಳ್.
ಹಾಡುವಕ್ಕಿಗಳ ರಾಗ ಕಂಠದೊಳ್ ಹುಗಿಯಿತು.
ಮರಗಳೆಡೆ, ಬಂಡೆಯೆಡೆ, ಮೆಳೆಗಳೆಡೆ ಮನೆಗಳೆಡೆ
ಗುಡಿಗಳೆಡೆ ಇನಿಗಾಳಿ ಸವಿಯಾಗಿ ತೀಡಿದುದು
ಮನಮನದ ಎದೆಎದೆಯ ಮುಟ್ಟಿ ತಟ್ಟಿ ಮುದ್ದಿಪ
ಪಾಂಗಿನಲಿ. ಜನಕೋಟಿಯಲ್ಲಿಂದ ಪಿಂತಿರುಗಿ
ಬರುತಿರೆ ಗುರುವಿನೊಡನೆ ಕಾಲ್ನಡೆಯ ಮೋದದಲಿ
ಸಭಾ ಮಂಟಪಕೆ, ಧರ್ಮರಹಸ್ಯವನುಸಿರ್ವ
ಬೇಹುವಿನೊಲ್ ಮೆಲ್ಲನೆ ಬಲು ಮೆಲ್ಲನೆ ಸುಯ್ಯುತೆ
ಹೊಂಚಿರ್ದ ಸಂಚಿನಿಂ ತೀಡಿತ್ತೆಲರ್ ಮತ್ತೆ
ಮತ್ತೆಮೇಣ್ಮತ್ತೆ ಎಡೆವಿಡದೆ. ಸಭೆಯಭವನಂ
ಮುಟ್ಟಿ ವೇದಿಯೇರಿದರ್ ಗುರುದೇವಂ. ಜೊತೆಗೆ
ಇರ್ದರ್ ಮಹರಾಜರ್ ಕ್ಸೇವಿಯರ್ ದಂಪತಿಗಳ್
ಮೇಣಿತರ ಗಣ್ಯರ್. ಸ್ವಾಮಿಜಿಯುಂ. ''ಓವನ್ನ
ಅಮೃತ ಪುತ್ರರಿರಾ! ಕೇಳಿ, ಸುದೀರ್ಘ ರಾತ್ರಿಯಿಂದು
ಕೊನೆ ಗಾಣುತಿದೆ! ಬಹುಕಾಲದ ಶೋಕ ತಾಪಗಳ್
ಕಡೆಗಿಂದು ಮಾಯವಾಗುತಿವೆ! ಅದೊ ಕಿವಿಗೊಟ್ಟು
ಕೇಳಿ! ವಾಣಿಯೊಂದು ಕೇಳಿಬರುತಿದೆ, ಕಾಲಗರ್ಭ-
ದಾಳದಿಂ ಹೊಮ್ಮಿ ಜ್ಞಾನ ಪ್ರೇಮ ಕರ್ಮಗಳ
ಅನಂತ ಶಿಖರಗಳಿಂ ಮರುದನಿಯಾಗಿ ಚಿಮ್ಮಿ
ಬರಬರುತ್ತೆ ಪ್ರಬಲವಾಗಿ ಬಂದಂತೆಲ್ಲ ಅಪ್ರತಿ
ಹತವಾಗಿ ಸುಸ್ಪಷ್ಟ ನಿನದಮಾಗಿ ಮೊಳಗುತಿದೆ!!

•

ಅಗೋ, ಅಗೋ ನೋಡಿ! ನಿದ್ರಾಪರವಶಮಾದ
ಭಾರತವಿಂದು ಮೈಕೊಡವಿ ಎಚ್ಚರಗೊಳುತಿದೆ!
ಹಿಮಾಲಯದಿಂ ಬೀಸಿ ಬಹ ಮಂದ ಮಂದಾನಿಲ
ಬೋರಾಡಿ ಬೀಸುತಿದೆ! ನಿರ್ಜೀವವಾದೊಲಿರ್ದ
ಅಸ್ತಿಮಾಂಸಗಳಿಂಗೆ ಜೀವದಾನವಗೈಯಲುರೆ
ಜಡನಿದ್ರೆಯಂ ಹೊಡೆದೋಡಿಸುತಿದೆ. ಆದರದುಂ
ಕುರುಡರಿಗೆ ಕಾಣದು ಕುಹುಕಿಗಳಿಗೆ ವಿಕೃತ
ಬುದ್ಧಿಯವರಿಗೆ ಅರಿವಾಗದು. ಜ್ಞಾನ ವಿಜ್ಞಾನ
ಮಂಡಲಂ ಮಿಡುಕಿ ಬಿಳ್ದಿದ್ದ ತೆರದಿ ಭಾರತಿ
ಯುಗಯುಗಗಳ ನಿದ್ರೆಯಿಂ ಮೇಲೇಳುತಿಹಳ್ ಕಣಾ!
ಇನ್ನಾಕೆಯನಾರುಂ ತಡೆದು ಮೂಲೆಗೊಳಿಸರ್!
ಆವ ಬಾಹ್ಯ ಶಕ್ತಿಯುಂ ಆಕೆಯಂ ಕೆಳಗೊತ್ತಿ
ತಳ್ಳಲಾರದಯ್. ಏಕೆಂದೊಡೆ ಅಗೋ ನೋಡಿ!
ಮಹಾಕಾಳಿ ಮತ್ತೊಮ್ಮೆ ಎಚ್ಚೆತ್ತು ಮೈಕೊಡವಿ
ಉಸಿರೆಳೆದು ನಿಲ್ಲುತಿಹಳ್! ಒಳಗಣ್ ತೆರೆದುನೋಡಿ!"
ರಾಮನಾಡಿನಾ ಪ್ರವಾಸಮಂ ತೀರ್ಚಿ ಪೊರ
ಮಟ್ಟು ಗುರುಗಳ್ ಪರಮಕುಡಿ ಮನಮಧುರೆ ಮೇಣ್
ತಿರುಚನಾಪಳ್ಳಿ ಮೊದಲಪ್ಪ ಊರು ಕೇರಿಯ
ಪ್ರವಾಸದಲಿ ಯಥೋಚಿತ ಅಭಿನಂದಿತರಾಗಿ
ಕುಂಭಕೋಣ ಪೊಳಲಿಂಗೈದರ್. ಆ ಸಣ್ಣ ಕಿರು
ವಗೆಯ ಪೊಳಲಿನಲಿ ಪುರ ಪ್ರಜೆಗಳ್ ಆನಂದ
ಸಾಗರದಲಿ ಮುಳುಗಿ ನಲಿದು ತೇಲಿ ತೇಲಾಡಿ
ಯುಗಪ್ರವರ್ತಕನ ಚರಣತಲಕೆ ಶಿರವಂ
ಬಾಗಿ ಮಣಿದು ಪದ ಧೂಳಿಯಂ ಸ್ವೀಕರಿಸಿದರ್
ಭಕ್ತಿಯಿಂ. ಸಭೆಯಂ ಕರೆದು ಮಾನಪತ್ರಮಂ

ಸಮರ್ಪಿಸಿ ಸನ್ಮಾನಿಸಿದರ್. ಎಲ್ಲ ಜನಗಳ್
ಹೃತ್ಪಾತ್ರದಲಿ ತಕಪಕನೆ ಕುದಿದೆದ್ದುದೊ ಭಕ್ತಿ
ರಸಮೆನಲ್ ಘನಿಸಿದತ್ತು ವ್ಯಾಪಕವಾಗಿ. ಆ
ಉತ್ಸಾಹಮೆಂತಂತು ಭಕ್ತಿರಸಮಂತಂತು
ಹೃದಯಂಗಮವಾಯ್ತು, ಗುರುಮಹೋದಯರಿಂಗೆ.
ಈಗಳೇ ಮದರಾಸ್ ನಗರಿಗೆತ್ತೊಡೆ ತಮಗೆ
ಕಿಂಚಿತ್ ಬಿಡುವುದೊರೆಯದೆಂಬರಿವು ಇರುತಿರಲ್
ಮನದಿ ಒಂದೆರಳ್ಡು ದಿನಗಳಲ್ಲಿಯೇ ಕಳೆದು
ಸುವಿಶ್ರಾಂತಿ ಪಡೆದು ಉಲ್ಲಸಂಬಡೆವುದೊಳ್ಳಿತು
ಎಂಬುವ ಮನದಿಚ್ಛೆಗೆ ಮಣಿದರ್ ಗುರುವರಂ.
ಆ ಕಿರುಪೊಳಲಿನಲ್ಲಿ ಮಹೋನ್ನತಮಾದ ಗುಡಿ
ಗೋಪುರಗಳಿಗೆ ಕೊರಮಿಲ್ಲಂ. ಸ್ವಾಮಿಜಿಯುಂ ದಿನ
ನಿಚ್ಚ ದೈವದರ್ಶನಗೈದು ಶಾಂತಿ ಸಮುದಯದಿ
ವಿರಾಮಗತಿಯಲಿ ಕಳೆದರ್ ಮಿತ್ರರೊಡಗೂಡಿ
ತೋಷದಿಂ. ಅಂದು ತನಿಯೆಲರ್ ಬಿರುಬಿರುಸಾಗಿ
ಬೀಸಿವೀಸಿ ದಿಶೆದಿಶೆಯ ಹೂಗಂಪು ತರಿದು
ತಂದು ಹರಡುತಿರೆ ಹಸನಾಯ್ತು ಸಿರಿಗಂಧಮಯ
ಹವಾಮಾನಂ. ಕರ್ಮೋಡಗಳ್ ಕೂಡಿದುವು ನಭ-
ದಂಗಣಂ ತುಂಬಿ ಮೆರೆವಂತೆವೊಲ್. ತಾಸೊಂದು
ಕಳಿಯೆ ಕರ್ನೀಲ ಮೋಡಗಳ್ ಮುದವೆತ್ತುವೋ
ಎನೆ ಚೆಲ್ವಿನೊಳ್ ಚೆಲ್ವಾಂತ ತುಂತುರು ಮಳೆಗಳ
ಸೋನೆ ಬಿಳ್ದುದು ಇಳೆಯಮೇಲೆ. ಧೂಳ್ ಅಡಂಗಿ
ಮಣ್ಗಂಪು ಎಳ್ದತ್ತು ಘ್ರಾಣಕ್ಕೆ ಹಿತವಾಗಿ.
ಹೂಮಳೆಯು ಹರ್ಷದಕ್ಷತೆಯೊ ಎಂಬೊಲ್ ಸುರಿದು
ತನುಮನಗಳಂ ತಣಿಸಿದತ್ತು. ಮರಂಗಳಲೆಲರ್

ನುಗ್ಗಿ ಸುಯ್ಯುವ ಸದ್ದು ಪೆರ್ಚುತಿರೆ ಮಳೆಗಾಳಿ
ಕಾಳೆಗವ ಹೂಡಿ ಬೋರಾಡಿ ಸುರಿಯಿತು ಹೂಮಳೆ
ಜಡಿಮಳೆಯು ತಾನಾಗಿ. ಇಬ್ಬಣಂ ಸೋಲದಿರೆ
ಮಿಂಚುಗುಡುಗುಗಳ್ ಫಳ್ಳನೆ ಮಿಂಚಿ ಘೋರತರ
ಮುಂಗಾರ್ ಮಳೆ ಸುರಿಯಿತು ಧರಿತ್ರಿ ತಣಿವಂತೆ.
ಅಂಬರವೆ ತೂತಾಯ್ತೊ ಮೋಡಗಳ್ ಕಳಚಿದುವೊ
ಎಂದಚ್ಚರಿಬಡುವೊಲ್ ಸುರಿದತ್ತು ಮಳೆ ಬೋರ್ಗೈಸಿ.
ಬೃಹದ್ ದೇಗುಲದ ಗೋಪುರ ಪರಿಶುಭ್ರಮಾಯಿತ್ತು
ಊರು ಕೇರಿಗಳ್ ಸ್ವಚ್ಛಮಾದುವು; ಗಿಡುಮರದ
ಎಲೆಎಲೆಗಳ್ ತೊಳೆದಂತೆ ಪಚ್ಚ ಪಸುರಾದುವು;
ಮೂದಿನಗಳು ಮುಮ್ಮಳೆಯು ತಣ್ಣಗೆ ತನಿಯೂಡೆ.
ಸ್ವಾಮೀಜಿಯ ಪರಿವಾರ ಮದರಾಸ್ ನಗರಂ
ಕುರಿತು ಪೊರಮಟ್ಟಿತು ಉಗಿಬಂಡಿಯಲಿ. ಊರಿನ
ಪ್ರಮುಖರ್ ನೆರೆದು ಆನಂದ ಭಾವದಿಂ ಭಕ್ತಿ
ಗೌರವಗಳಿಂ ಬೀಳುಕೊಟ್ಟರ್ ಉಗಿ ಬಂಡಿಯ
ನಿಲ್ದಾಣದಲಿ. ಜನ ಜನವೇ ಜನ. ಶಿರೋ
ದೇಶಗಳೆ ತೋರತಿರ್ದುವು ಉದ್ದಗಲದಲ್ಲಿ.
ಸ್ವಾಮೀಜಿ ಪ್ರೀತಿ ವಾತ್ಸಲ್ಯದಿಂ ಕೈಮುಗಿದು
ಎಲ್ಲರಂ ಅಭಿನಂದಿಸಿ ಬೀಳುಕೊಂಡಂತೆಯೆ
ಚಲಿಸಿತು ಉಗಿಬಂಡಿ ಗುಜುಗುಜಸಿ. ಗುರುವರ್ಯಂ
ಬಾಗಿಲೊಳ್ ನಿಂತು ಕೈವೀಸಿದರ್ ಕಣ್ ಮರೆಸಿ
ದೂರಗೊಳುವನ್ನ. ಸಾಗಿದುದು ಉಗಿ ಬಂಡಿ ನೆರೆ
ಹೊರೆಯ ಊರುಕೇರಿಗಳ್ ದಾಂಟಿ, ನಿಸರ್ಗದುಡಿ
ತೊಟ್ಟಿಲಲಿ ಕಂದಿರುವೆಸಾಲ್ ಹರಿವಂತೆ. ಮುಂ
ನಿಲ್ದಾಣದಲಿ ಪೆರ್ಚುವೊಳ್ತು ನಿಲ್ವ ಯೋಜನೆ

ಇಲ್ಲದಿರೆ ಭಕ್ತಜನ ಸಮುದಯಂ ಕಾದಿರ್ದು
ನಿಲ್ದಾಣದ ಅಧಿಕಾರಿ ವರ್ಗಮಂ ಕಾಡಿದರ್
ಬೇಡಿದರ್ ಗೋಗರೆದು, ಗುರುವರನ ದರ್ಶನದ
ಭಾಗ್ಯಮಂ ಬಯಸಿ. ಆದೊಡಾ ದರ್ಪೋದ್ವಾತ
ಅಧಿಕಾರಿಯುಂ ಕಿವಿಗೊಡದಾದಂ. ನಿಯಮಿತ
ಸಮಯಮದು ಮಾತ್ರವೇ ಎನಲ್ ಕೆಲಗಳಿಗೆಯಲಿ
ಭಕ್ತರಿಗೆ ಗುರುವರನ ದರ್ಶನಲಾಭವದೆಂತು
ಸಲ್ವುದಯ್? ದರ್ಶನಾ ಕಾಂಕ್ಷಿಗಳು ಬಗೆಗೆಟ್ಟು
ಮನಗೆಟ್ಟು ಕುಪಿತರಾಗಿ ರೋಷಗದ್ಗದಿತ
ಮನರಾಗಿ ಮುಂಬಿನ ಹಳಿಯಮೇಲೆ ಮಲಗಿದರ್
ಸಾಲಾಗಿ! ಎನಿತೆನಿತು ಪ್ರಯತ್ನಿಸಿಯುಂ ಭಕ್ತ
ಜನರ್ ಅಲುಗದಾದರ್. ಉಗಿಬಂಡಿ ಜೋರಿನಿಂ
ಕಕ್ಕಸದನಿಯಲಿ ಕೂಗಿದುದು ಗುಜುಗುಜು ಸದ್ದು
ಹೂಡಿ. ಜೈಕಾರ ಮೊಳಗಿತು ಗಗನ ಭೇರಿಯಾಗಿ.
ಗದ್ದಲ ಗಜಿಬಿಜಿಯೆದ್ದಿತು ಅಧಿಕರೀತಿಯಲಿ.
ಶ್ರೇಷ್ಠ ಅಧಿಕಾರಿ ತಲ್ಲಣಿಸಿದಂ. ಚಾಲಕಂ
ಬೆರ್ಚಿಬಿಳ್ದು ಯಾಂತ್ರಿಕ ಚಾಲನೆಯಂ ತಟ್ಟನೆ
ನಿಲ್ಲಿಸಿರೆ ಉಪಕಾರಮಾಯ್ತು. ಆಗಳೇಂ ಜನ
ಜಂಗುಳಿಯು ಬಂಡಿಯಂ ಮುತ್ತಿದ ಪರಿಯ? ಒಡನೆ
ಬಂಡಿಯಲಿ ಬಾಗಿಲಿನ ಬಳಿಗೈದರ್ ಸ್ವಾಮಿಜಿ.
ಅವರ ಸಂದರ್ಶನದ ಭಾಗ್ಯದಿಂ ಸಂತೃಪ್ತಿ
ಪಡೆದ ಜನಮಾನ್ಯರುಂ ಶಿರಬಾಗಿ ಕೈಮುಗಿದು
ಜಯಕಾರಗೈದು ಬೀಳುಕೊಟ್ಟರ್ ಭಕ್ತಿಯಿಂ.
ಸಾಗಿತು ಪಯಣಂ ತೀವ್ರಗತಿಯಲಿ. ಪೊಳ್ತುರುಳಿ
ಪರ್ವಿತ್ತಿಳೆಯ ಮೇಲೆ. ಮುಸ್ಸಂಜೆಯುಂ ಉರುಳಿ

ನಿಶಿಯು ಸೆರಗು ಹಾಸಿತು ಅರಿಲ್ ಚುಕ್ಕಿಯವೆರಸಿ.
ಮಬ್ಬುರ್ಮದಿಂಗಳ ಮಂಜುಜೊನ್ನಂ ಪೊನಲ್ವರಿದು
ಬಂದುದು ಮಸುಗಾಂತಿಯ ನಲ್ವೆಳಕು ಹರಡುತ್ತೆ.
ಅಂತಿಂತು ಕಾಲಪಕ್ಷಿಯೊಡಂ ನಿಜದಿ ಸ್ಪರ್ಧೆ
ಹೂಡುವುದೊ ಎನಲ್ ಓಡಿದುದಾ ಉಗಿಯ ಬಂಡಿ
ಸಹಸ್ರಚಕ್ರಗಳ ಕಾಲೋಟದೊಳ್ ಎಲ್ಲಿಯುಂ
ಅಡೆತಡೆಯುಮಿಲ್ಲದೆಯೆ. ಇಕ್ಕೆಲಗಳಲಿ ಗದ್ದೆ
ಹೊಲಂಗಳ್ ಮೈತುಂಬಿ ಮುಂಬೆಳೆದು ನಳನಳಿಪ
ದೃಶ್ಯಮೆಸೆಯಿತ್ತು ನಯನ ಮನೋಹಾರಿಯಾಗಿ.
ಮುಂದೆ ಮುಂದೆ ನಿಬ್ಬಯಲಂಚಿನಲಿ ಕೃಷ್ಣಾನದಿ
ಪ್ರವಾಹದ ಮಹಾನ್ ದೃಶ್ಯಮೆಸೆದುದು ನೋಳ್ಪ
ನೋಟ ಮಮ್ಮಲಿಪಂತೆ. ನದಿ ತಟನಿಯಲಿ ಬೇರ್
ಊರಿ ಮೈವೆತ್ತ ಗಗನ ಚುಂಬೀ ತರುನಿಚಯ
ಪಚ್ಚರ್ರಾಗದ ಪಟ್ಟುಡೆಯಲಿ ವಿಜೃಂಭಿಸಿರೆ,
ನೂರಾರು ಬೆಳ್ಳಕ್ಕಿಗಳಿಗೆ ಆಶ್ರಯಮಿತ್ತು
ಸೊಗಮಾಯ್ತು ನಿಸರ್ಗದ ಸೌಂದರ್ಯಕೆ ವಿಶೇಷ
ರೂಪುಕೊಟ್ಟಂತೆ. ಆಯೆಡೆಯಲ್ಲಿ ನವಿಲ್‌ಗಳ
ಜೋಡಿ ಮಿರುಮೈ ಹೊಂಗಲಿಸಿ ಬೀಗಿ ಕ್ರೇಂಕರಿಸಿ
ಚಲಿಸುತಿವೆ ಕಾಳ್ಗಳ್ ಬೆದಕಿ ಬೆದಕಿ. ನಿಬ್ಬಯಲ
ತುಂಬ ಅಡ್ಡಾಡಿ ಪುಲ್ಮೇವ ಕುರಿ ಮೇಕೆಗಳ್
ಪಶುಗಳ್ ದಿಟ್ಟಿಗೆತ್ತುವು ರಂಗುರಂಗಾಗಿ. ಮುಂದೆ
ಮುಂದೆ ಪಯಣಂಬೋಗೆ ಉರುಳಿತ್ತು ಪಗಲೊಂದು.
ಬೈಗುವೊಳ್ತಡರ್ದು ಕಳೆಯಿತ್ತಾ ರಾತ್ರಿಯುಂ.
ಮುಂಬೆಳಗುವೊಳ್ತು ಮೂಡಿ ಬಾನ್ ಬಯಲಲಿ ರವಿ
ಜೃಂಭಿಸಿದ ಸ್ವರ್ಣದುಂಡೆಯಂ ಹೋಲಿ! ಸುಯ್ಯುವ

ತಂಬೆಲರ್ ಸದ್ದು ಬಂಡುಂಡುಲಿವ ಹೂವಕ್ಕಿ
ಸಂಕುಲದ ಸುದ್ದು ಎಲೆಎಲೆಗಳಲುಗಿ ಮೆಲ್ಲನೆ
ಮರ್ಮರಿಪ ಸದ್ದು ಒಗ್ಗೂಡಿ ಸರಸದಿಂದಲಿ
ಎಳೆಯರಾಟವಾಡಿರೆ ಘೋರಶಬುದದಿಂದಲಿ
ಪೂತ್ಕರಿಸಿ ಚೀತ್ಕರಿಸಿ ನುರ್ಗಿದುದಯ್ ಯಾಂತ್ರಿಕ
ಬಿಸಿಯುಸಿರ್ಗರೆವ ಉಗಿಬಂಡಿ ಮದರಾಸಿನಾ
ನಿಲ್ಮನೆಯು ಧಣಧಣಿಸುವಂತೆ! ಇಂತುಮಿಂತು
ಭಾರತೋತ್ತಮನ ಭಾರತಾಗಮನವಾಯಿತ್ತು!
ಭಾರತ ಜನನಿಯ ವಿಶ್ವವಿಜೇತ ಪುತ್ರ ಪುಣ್ಯನ
ಸುಖಾಗಮನದ ವಾರ್ತೆ ಪರಿದುದು ಎಡೆಎಡೆಯಲಿ
ತಂತಿವರ್ತಮಾನದ ಪರಿಯಲ್ಲಿ. ಎಲ್ಲಿಯಾವೆಡೆಯಲ್ಲಿ
ನಿಣಿಕಿದೊಡಮದೇ ಬಿಸಿಬಿಸಿ ಸುದ್ದಿ! ಶಾಲೆಯಲಿ
ವಿಶ್ವವಿದ್ಯಾಲಯಗಳಲ್ಲಿ ನ್ಯಾಯಾಲಯಗಳಲಿ ಮನೆ
ಮನೆಗಳಲಿ ಬಗೆಬಗೆಯ ವ್ಯಾಪಾರ ಕೇಂದ್ರಗಳಲಿ
ಖಾನಾವಳಿಗಳಲ್ಲಿ ಎಲ್ಲೆಲ್ಲಿ ಯಾರ್ಯಾರು
ಸಂಧಿಸಿದೊಡಮದೆ ಸುದ್ದಿ ಮುಮ್ಮಾತುಗಳಿಂಗೆ.
"ಓ, ನೀಂ ಸ್ವಾಮಿ ವಿವೇಕಾನಂದರ ಸುದ್ದಿಯಂ
ಬಲ್ಲಿರಾ? ಅವರಿಲ್ಲಿಗೆ ಬಂದಿಹರ್!"
"ನಿಜವೇಂ?
ಎಲ್ಲಿಹರ್?"
ಇಂಥಿಂಥ ಪ್ರಶ್ನೋಪಪ್ರಶ್ನೆಗಳ್
ಎಳ್ದಪವು ಪುಳಕಿತ ಚಿತ್ತೋತ್ಸಾಹ ಭುಗಿಲ್ಗೊಂಡು.
ಆಬಾಲವೃದ್ಧರ್ ಮನಮಿಳ್ಳನೆ ಮಿಡುಕಿದವೊಲ್
ಧಾವಿಸಿದರ್ ನಿಲ್ಮನೆಯೆಡೆಗೆ. ತಲೆದೂಗಿದುವು
ಸಾಲ್ ಮರಗಳ ಹಂತಿ. ಚೀರಿದುವು ಹರ್ಷದಿಂ

ನಿಲ್ಮನೆಯ ಹಕ್ಕಿ ಬಹುತರದ ನುಡಿಸೊಲ್ಲಿಗೆ
ರೆಕ್ಕೆ ಪುಕ್ಕಗಳ್ ಬೆಳೆದು ಬಲಿತುವು ಸಡಗರಿಸಿ.
ಶಾಲೆ ಮುಗಿದು ಮಹಾ ವಿದ್ಯಾಲಯಗಳ್ ಮುಚ್ಚಿ
ರಜೆಘೋಷಿಸಿರಲ್ ಅಂತೇವಾಸಿಗಳ್ ತಮ್ಮ
ಊರು ಕೇರಿಗಳಿಂಗೆ ಪಿಂಮರಳದೆ ಉಳಿದು
ಕಾದಿರ್ದರ್ ಸ್ವಾಮೀಜಿಯ ದರ್ಶನಂ ಬಯಸಿ.
ನಿಶ್ಚಿತ ಸಮಯದೊಳ್ ಮದರಾಸಿ ವರಶಿಷ್ಯರ್
ನಿಲ್ದಾಣದಲಿ ದೇವಗುರುವಂ ಎದುರ್ಗೊಂಡು
ಜೈಕಾರ ಮೊಳಗಿಸಿ ಕುಸುಮ ಹಾರ ತುರಾಯಿಯ
ಸಮರ್ಪಿಸಿ ಸ್ವಾಗತಿಸಿದರ್ ಗೌರವಾದರದಿಂ.
ಜನ ಜನವೇಜನ! ನಿಲ್ಮನೆಯಮಾಡು ಮರುನುಡಿದು
ಶಬ್ದಾಯಮಾನಮಾಯಿತು ಧಣಧಣಿಸಿ. ಇಡೀ
ನಿಲ್ಮನೆಯ ಉದ್ದಗಲಮೆಲ್ಲ ನರಶಿರಂಗಳ
ಪ್ರದರ್ಶನಮೆಂಬವೊಲ್ ಮೆರೆದುದು ಜನರಕೂಟ.
ಜಗದ್ವಿಖ್ಯಾತ ಗುರುವರ್ಯನ ಪುಣ್ಯಾಗಮನ
ವಾರ್ತೆ ಪರ್ವಿರಲ್ ಬುದ್ಧಿಮಾನ್ಯರ್ ಉಳಿದಪರೆ
ಮನೆಯೊಳ್? ಗುರುವರ್ಯಂ ಬಂಡಿ ಬಾಗಿಲಿಗೈದು
ಕೈಮುಗಿದು ಕೈವೀಸಿ ಪ್ರಸನ್ನವದನದೊಳ್
ಸಿತಸ್ಮಿತವನರಳಿಸಿ ಇಳಿದರ್ ಕೆಳಗೆ. ಆಗ
ನೋಡಾ ಭಕುತ ವೃಂದ ಶಿರಮಣಿವುದ, ಕಂಬನಿ
ಪನಿಯಲಿ ಪದ ಪ್ರಕ್ಷಾಲನೆಗೈವುದ, ಹರ್ಷದಿ
ಕೈನೀಡಿ ಸ್ವಾಗತಿಸುವುದ, ತೋಷ ಭಾಷ್ಪಮಂ
ಸುರಿಸುವುದ! ಅಹ ಒಂದೆ ಎರಡೆ ವಿಧವಿಧ ಭಕ್ತಿ
ಭಾವ ಸ್ಫುರಿಸಿದತ್ತು ಜನದಗಲ. ಸನಾತನ
ಧರ್ಮಜಯದ ಜಯಭೇರಿ ಇಲ್ಲಿಯೆ ಮೊಳಗಿದುದೊ

ಎನೆ ಎತ್ತಲೆತ್ತಲ್ ಪುರುಡೇ ಪುರುಡು! ತೋಷವೇ
ತೋಷ! ನಗರಿಯುಂ ಸ್ವಚ್ಛಶುಭ್ರಗತಿಯಲಿ ಮೈ
ಕೊಡವಿ ಮಡಿಯುಟ್ಟು ಸಿಂಗರವೆತ್ತೊಲ್ ಮನೆಮನೆಯ
ಆನೆವಾಗಿಲಿನಲಿ ನವನೂತನ ಶೈಲಿಯ ರಂಗ–
ವಲ್ಲಿಗಳ ಚಿತ್ತಾರ ಮೆರೆದತ್ತು ಸ್ವಾಮಿಗಳ
ಸ್ವಾಗತ ಬಯಸಿ. ಹಾದಿಬೀದಿಗಳಲಿ, ರಾಜ
ಮಾರ್ಗಗಳಲಿ ತಳಿರು ತೋರಣಗಳಂ ಸ್ವಾಗತ
ಮಂಟಪಗಳಿಂ ಬಾವುಟಗಳಿಂ ಜೃಂಭಿಸಿದುದು
ಮನೋರಮ ಶೈಲಿಯಲಿ. ಸ್ವಾಗತ ಫಲಕಗಳಲಿ
"Long live the venarble viveka-
nanda" "Hail servent of God"
"Hail servent of the great seges of
the past" "The Avakend India's Hearty
greetings to Swami Vivekananda"
"Hail Harbener of peas" "Hail, Sree
Rama Krishana's worthy son!" "welcome
prince of men" "ಏಕಂ ವಿಪ್ರ ಬಹುಧಾ ವದಂತಿ"
"ಉತ್ತಿಷ್ಠತ ಜಾಗ್ರುತ ಪ್ರಾಪ್ಯವರಾನ್ನಿಬೋಧತ" "ಸರ್ವೇ
ಜನಾಃ ಸುಖಿನೋ ಭವಂತು" "ಸತ್ಯಮೇವಾ ಜಯತೇ"
ಇಂಥಿಂಥ ನಲ್ಮೆಯ ಲಿಖಿತಂಗಳ್ ಕಣ್ಮನಂ
ಆಕರ್ಷಿಸುವಂತೆವೋಲ್ ವಿಜೃಂಭಿಸಿರ್ದುವು
ದಪ್ಪದಪ್ಪ ಅಕ್ಕರಗಳ ಮಾಲೆಯಲಿ ಮೂಡಿ.
ಸಹಸ್ರ ಸಹಸ್ರ ಜನ ಕಂಠೋತ್ಥಿತ ಜಯಜಯ
ಧ್ವನಿಯುಂ ಗಗನ ಮಂಡಲವನೇರಿ ಅಂಡಲೆದು
ಮರುದನಿ ಪಡೆದುದು ದಿವ್ಯ ನಗಾರಿಯಂ ಬಡಿದು

ಬಾರಿಸಿದವೊಲ್. ಬಳಿಯ ಲೋಗರೊಡನೆ ನಲವಿಂ
ಮಾತಾಡಿ ತಮಗಾಗಿ ಅಣಿಗೊಂಡ ಅಶ್ವಗಳ
ಬಂಡಿಯಂ ಏರಿದರ್ ಸ್ವಾಮಿಜಿ. ಮದರಾಸ್
ನಗರದ ಪ್ರಸಿದ್ಧ ನ್ಯಾಯಾಧೀಶ ಸುಬ್ರಮಣ್ಯ
ಐಯ್ಯರ್, ಸ್ವಾಮಿಶಿವಾನಂದ ಸ್ವಾಮಿನಿರಂಜನಾ
ನಂದ ಮೂವರುಂ ಸ್ವಾಮೀಜಿಯ ಎಡಬಲಗಳ
ಪಾರ್ಶ್ವದಲಿ ಮಂಡಿಸಿದ ತರ್ವಾಯ ಗಾಡಿಯುಂ
ಮೆಲುಮೆಲ್ಲನೆ ಪೊರವಂಟಿತಲ್ಲಿಂದೆ. ನಸುವೇ
ದೂರ ಹೋಹನಿತರೊಳ್ ನಾಗರಿಕ ಪ್ರಭೃತಿಗಳ್
ಕುದುರೆಗಳ ನೊಗಗಳಚಿ ತಾಮೆ ಎಳೆದರ್ ಬಹುಲ
ಗೌರವಾದರಗಳಿಂ. ಮುಂಪಥದೊಳ್ ಮನೆಮನೆ
ಬಾಗಿಲಲಿ ಹೂಮಳೆ ಕರೆದು ಮಙ್ಗಳಾರತಿಯ
ಬೆಳಗಿದರ್ ನಾರೀ ಮಣಿಯರ್. ಮೆರವಣಿಗೆಯುಂ
ಸಾಗುತಿರೆ ಇಕ್ಕೆಲಗಳಲಿ ಸಾಲ್ಗೈಸಿ ನಿಂದಿಹ
ಆಬಾಲವೃದ್ಧರಾದಿಯಾಗಿ ಬಹು ಜನಸ್ತೋಮ
ಹರ್ಷಧ್ವನಿಗೈದು ಕೈಚಪ್ಪಾಳೆ ತಟ್ಟಿದರ್ ಪಟ
ಪಟಿಸಿ. ಯುವ ಪ್ರಭೃತಿಗಳಿಂದೆಳೆಯಲಾದಗಾಡಿ
ಬಿಡದಿಯ ಮನೆಯಂ ಮುಟ್ಟಿತು, ಇಂದ್ರುವೈಭವದಿ.
ಧಾರ್ಮಿಕಪತಾಕೆಯದು ಗಗನ ಗಾಮಿಯಾಗಲ್,
ಕ್ರತುಪುರುಷನ ಪುಣ್ಯಕೀರ್ತಿಪರಿಮಳಂ ಬಲ್
ಗಂಧಮಯಮಾಗಿ ಹರಡಿದತ್ತು ಮನಮತಿಗಳ್
ಮಿಡಿವ ಪಾಂಗಿನಲಿ. ಪಿಂತೆ ಮದರಾಸ್ ನಗರಿಯು
ಈ ಪರಿಯ ಮಹದ್ ಗೌರವಪಾತ್ರರಂ ಕಂಡು
ಕೇಳರಿದುದಿಲ್ಲ. ಇದೊರ್ ಅಹೋಭಾಗ್ಯಮಾದುದು
ಮದರಾಸ್ ನಗರಿಗೆ. ಮರುದಿನದಿಂ ಸಭೆ ಕಾರ್ಯ

ಕಲಾಪಗಳ್ ಮೂಡಿ ಅಭಿನಂದನ ಪತ್ರಗಳ
ಸುರಿಮಳೆಗರೆದುದು ನಾನಾ ಎಡೆಗಳಲಿ. ವೈದಿಕ
ಸಭೆಯ ಪರವಾಗಿ, ನಗರ ಸಭೆಯ ಪರವಾಗಿ
ಇನ್ನಿತರ ಸಂಘಸಂಸ್ಥೆಗಳ ಪರವಾಗಿ ಜನ
ಸಮುದಾಯದ ಪರವಾಗಿ ಇಂಗ್ಲಿಷ್ ತೆಲುಗು ತಮಿಳು
ಭಾಷೆಗಳಲಿ ಹಲವು ಅಭಿನಂದನ ಪತ್ರಗಳ್
ಸಲಿಸಿ ಸಲಿಸಿ ತಂತಂಮ್ಮ ಒಡಲಿನ ಕರುಣೆಯಂ
ತೋರಿದರ್ ತಂತಮ್ಮ ಕಂದನೋ ಎಂಬವೊಲ್.
ಮಿನ್ನೆ ಆವಾವ ಸಭೆಗಳಲಿಯು ಕೂಡಿರದ ಜನ
ಸ್ತೋಮ ತುಂಬಿತು ಕಿಕ್ಕಿರಿದು. ಸ್ಥಳ ಸಂಕೋಚ
ಮೂಡಿ ಉಸಿರ್‌ಗಟ್ಟುತಿರೆ ಜನಪದಕೆ ಕಣ್ಣಿಂ
ಕಂಡದಂ ಮನದಲಿ ಕುದಿಗೊಂಡ ಗುರುದೇವಂ
ಸಭೆಯಿಂ ಪೊರಬಿಳ್ದು ಕುದುರೆಗಾಡಿಯ ಸಾರಥಿ
ಸ್ಥಾನದೊಳ್ ನಿಂತು ಪ್ರವಚನಗಳಂ ಸಿರಿಕಂಠ
ಧ್ವನಿಯೊಳ್ ಬಿತ್ತರಿಸಿದರ್ ಎಲ್ಲರ ಹೃನ್ಮನಂ
ತಣಿಯುವಂತೆ. ಅಂದು, ತ್ರೇತಾಯುಗದೊಳ್ ಶ್ರೀಕೃಷ್ಣ
ಪರಮಾತ್ಮನುಂ ಅರ್ಜುನನಂ ಕುರಿತು ಬೋಧಿಸಿದ
ಚಿತ್ರಮಂ ನೆನಪಿಗೆ ತರುವಂತಿರ್ದುದು
ಸ್ವಾಮೀಜಿಯ ಚಿತ್ತಾರ. ಅಲ್ಲಿಯು ತುಂಬಿದುದು
ಜನಸ್ತೋಮ. ಆ ಅಂಗಣವದು ಸಾಲದಾಯಿತು;
ಮತ್ತೆ ಜನ ರಾಶಿ ಬಂದು ತುಂಬುತಿರೆ ಎಲ್ಲಿಯ
ದಾಣಂ? ಗುರುವರಂಗೆ ಮನವೊಪ್ಪದಾಗಲಾ
ಪ್ರವಚನವಂ ಮೊಟಕುಗೊಳಿಸಿ ತೀರ್ಚಿ ಇಳಿದರ್
ಗಾಡಿಯಿಂ.

ಮರುದಿನಂ ಮತ್ತೆ ಕೂಡಿದುದು ಸಭೆ

ಬೃಹದ್ ಭವನದಲಿ. ಸುವಿಶಾಲ ಭವನಂ ನೆರೆ
ತುಂಬಿದುದು ಬಿರಿಯುವ ತೆರದಿ "ವಿಕ್ಟೋ-
ರಿಯಾ ಹಾಲ್" ಸಹಸ್ರಾರು ಮಂದಿಯು ಕೂಡುವೊಲ್
ವಿಶಾಲಮೆನೆ ಸುಖಮಾಯ್ತು. ಹೊತ್ತರೆಯ ತಣ್ಣನೆ
ತಣ್ಪಾರುವ ಮುನ್ನಮೆ ಜನವಾರ್ಧಿಯು ತುಂಬಿತು
ಸಭೆಯಲಿ. ಗುರುದೇವಂ ಅಂದಿನ ಉಪನ್ಯಾಸದಲಿ
"ನನ್ನ ಸಮರ ನೀತಿ" ಎಂಬುದಂ ವಿವರಿಸಿದರ್.
ವೀರಾವೇಶದಿಂ ಹೊಮ್ಮಿದ ನುಡಿಗಳಮಾಲೆಯು
ಹೃತ್‌ಕಲಶದ ಅಮೃತವೇ ಸುರಿದುದೊ ಮನೋ
ಮಂಡಲದ ಮುತ್ತುಗಳ ಚಿಪ್ಪೇ ಒಡೆದುದೊ ಎನೆ
ಭಾವಾವೇಶದಾವೇಶವದು ಸ್ಫುರಿಸಿದುದೈ
ಸ್ವಾನುಭವ ಪೂರ್ಣವಾಗಿ. "ಅಮೃತ ಪುತ್ರರಿರಾ!
ಪೂಜ್ಯತೆ ಗೌರವ ವಿಶ್ವಾಸ ಇವುಗಳ ವಿಚಾರವೆ
ಬೇರೆ. ಪೇಳ್ದುದನಿನಿತು ವಿಚಾರವಿಮರ್ಶೆಗೈಯದೆ
ನುಂಗಿ ಕೊಂಬುದೆ ಬೇರೆ. ಸುಧಾರಕರ್ ತಿಳಿಯಲಿ
ಆನವರಿಗಿಂತಲ್ ಉತ್ತಮತರ ಸುಧಾಕರ
ಎಂದೆಂದು. ಕೊಂಬೆಗಳ ಕುಡಿಯನವರ್ ಕಸಿಗೈಯೆ
ಆನಾಗಿಡಗಳ ಬೇರು ಸಹ ಕಸಿಗೈವೆನೆಂಬೆ.
ನಮ್ಮನಮ್ಮೊಳ್ ತಾರತಮ್ಯಮಿರ್ಪುದು ದಿವ್ಯ
ಸುಧಾರಣೆಯ ವಿಧಾನದೊಳ್. ಅವರದು ವಿನಾಶದ
ಮಾರ್ಗ. ಎನ್ನದು ವಿರಚನಾಮಾರ್ಗ. ಅಶಿವಂ
ಎಲ್ಲೆಲ್ಲಿಯುಂ ಇಹುದು. ವಾತರೋಗದವೊಲ್
ಒಂದೆಡೆಯಿಂದಲೋಡಿಸಿದೊಡೆ ಮತ್ತೊಂದೆಡೆಯೊಳ್
ತಲೆದೋರ್ವುದದು. ಕಾಲಿನಿಂ ಶಿರೋದೇಶಕ್ಕೆ.
ಶಿರೋದೇಶದಿಂ ಕಾಲಿಂಗೆ. ಆರೊರ್ವನಿದಂ

ಅಥ ಬೇರೊಂದರ ಒಳಿತು– ಕೆಡುಕುಗಳ ನಿರ್ಣಯಿಸೆ,
ಜನಾಂಗಮೆಲ್ಲ ಪಿಂಬಾಲಿಪುದು ಗಂಭೀರ
ಮೌಢ್ಯಮಲ್ತೇ? ಯೋಚಿಸಿರ್ಪೈ, ಸರ್ವಜನಾಂಗದ
ಬುದ್ಧಿಭಾವವಂ ವಿದ್ಯಾಭ್ಯಾಸದಿಂ ಮೊದಲ್
ಸಂಸ್ಕರಿಪುದೆ ಋಜು ಮಾರ್ಗಂ. ಅಂತೆನಲೆನ್ನಯ
ಸಮರ ನೀತಿಯೇಂ? ನಮ್ಮಯ ಪೂರ್ವಿಕ ಮಹರ್ಷಿ
ವರ್ಯರಾ ದಾರಿಯೊಳ್ ನಾವ್ ನಡೆವುದೆನ್ನಯ
ನೀತಿ.....ಆ ಮಹರ್ಷಿಗಳ್ ಸಾಮಾಜಿಕ ನೀತಿಯ
ಸೃಷ್ಟಿಕರ್ತರ್. ಸರ್ವ ಜನಕೋಟಿಗೂ ಶಕ್ತಿ ಮತ್ತಮಾ
ಶುದ್ಧ ಬದುಕಂ ದಯಪಾಲಿಸುವ ಮಹೋದಯರ್.
ರೀತಿನೀತಿಗಳ್ ರೂಪಿಸುವ ಮಹತ್ ಕಾರ್ಯಂ
ಎಸಗಿರ್ಪರ್. ನಾವಿಂದವರ ಪದ ಚಿನ್ಹೆಯಂ
ಅನುಸರಿಪುದೆ ಸರಿಯಾದ ಮಾರ್ಗಾಚರಣೆ. ಕೇಳಿ,
ಇಂದಿನೀ ಸನ್ನಿವೇಶದಲಿ ಅಲ್ಪಸ್ವಲ್ಪವೆ
ಅದಲ್ ಬದಲಾಗಿರ್ಪುದು ದಿಟಂ. ಅದರ ನಿಮಿತ್ತಂ,
ಎಮ್ಮಗಳ ಕಾರ್ಯವಿಧಾನಮಂ ಅಲ್ಪಸ್ವಲ್ಪ
ಬದಲ್‌ಗೊಳಿಪುದು ಮಾತ್ರಮಲ್ಲದೇನಂ ನಾವ್
ಯೋಚಿಸುವ ಅಗತ್ಯಮಿರದು. ಪ್ರತಿಯೊಂದು ಜನಾಂ–
ಗಕ್ಕು ಪ್ರತಿಯೊರ್ವ ವ್ಯಕ್ತಿಗಿರ್ಪಂತೆ ಒಂದೊಂದು
ಜೀವಗುಣಮಿರ್ಪುದೆಂಬುದಂ ಮರೆಯಲಾಸಲ್ಲ.
ಆ ಕೇಂದ್ರೀಯ ಜೀವಗುಣದಾಧಾರದ ಮೇಲೆ
ಇತರ ಗುಣಗಣಗಳಂ ಕಟ್ಟಲ್ವೇಳ್ಕುಂ. ಭರತ
ಖಂಡದೊಳ್ ಜೀವಗುಣಮೆಂದೊಡಿದುವೇ. ಈ
ಜೀವಗುಣಗಳಂ ಬಿಟ್ಟು ವರ್ತಿಸತೊಡಗಿದೊಡೆ
ಜನಾಂಗದ ಪಥನಕ್ಕೆ ದಾರಿ. ಓ ಕೇಳಿರ್ಪೈ

ಭಾರತ ಜನನಿಯ ದಿವ್ಯಾತ್ಮ ಪುತ್ರರಿರಾ,

"ಯೂಯಂ ತತ್ ಸತ್ಯಶವಸ ಆವಿಷ್ಕರ್ತ
ಮಹಿತ್ವನಾ, ವಿಧ್ಯತಾ ವಿದ್ಯುತಾ ರಕ್ಷಃ"

ಆರುಂ ಸದಾ ಬೌದ್ಧಿಕಲಾಭಕಾಗಿ ಎರವಲು
ಪಡೆಕೊಂಬುವ ಅಗತ್ಯಮದಿಲ್ಲಂ. ಸುವಿಚಾರ
ಶೀಲರೇ, ನಿಮ್ಮೊಳೇ ಯೋಚಿಸಿರಿ. ಎಲ್ಲವುಂ
ನಿಂನಿಮ್ಮೊಳಗಿಪ್ಪುದು ಎನಲೇಂ ಪುಡುಕುವ ಕತಂ?
ನಿಂನಿಮ್ಮ ಆತ್ಮಜ್ಯೋತಿಯೆ ನಿಮಗೆ ದಾರಿದೀ-
ಪವಾಗಲಿ! ನೀಮೇ ತಿಳಿದು ನೋಡಿದೊಡೆ ಕಾಂಬುದು,
ಯಾ ತಿಳಿವುದು. ಇದರಿಂ ಭರತ ಖಂಡದ ಬಾಳು
ಬದುಕಿನಲಿ ಧರ್ಮಕ್ರಾಂತಿಯುಂ ಆಗದಿರುತಿರೆ
ಸುಧಾರಣೆ ಸಾಧ್ಯಮಾಗದು. ಭಾರತದ ರಾಜ
ಕೀಯ ಸಮತೆ ಅಥ ಸಾಮ್ಯವಾದದ ಬೀಜಮಂ
ಬಿತ್ತುವೊಡೆ ಮೊತ್ತಮೊದಲ್ ಧರ್ಮದಾರೆಯಹೊನಲ್
ತಳಹದಿಯನೆ ಹಾಯಿಸವೇಳ್ಕುಂ. ಅದರ್ಕಾಗಿ
ಸತ್ಯದ್ರುವ್ಯಂ ಮಠಗಳಿಂ ದೇಗುಲಗಳಿಂ
ಜನವರ್ಗ ಪಂಗಡಗಳಿಂ ಋಷಿ ಕುಟಿಗಳಿಂ
ಓರಿದು ತಂದು ಓಂಜಿ ಬಿತ್ತಿಯೇ ಬೆಳಸಲಕ್ಕುಂ.
ಬಾಳಿಸಲಕ್ಕುಂ. ದೇಶದೊಳ್ ಬೆಂಕಿಯ ಜ್ವಾಲೆಯಂ
ಹರಿಸುವಂತೆ ಮಾಳ್ಪುದೆ 'ಪ್ರಾಥಮಿಕ ಸುಧಾರಣೆ'
ಎಂಬುದದರ ಪ್ರಥಮ ಹೆಜ್ಜೆ! ಓ, ಭ್ರಾತೃಗಳೇ

ತಂ ಪೃಚ್ಛತ ಸ ಜಗಾಮಾ ಸ ವೇದ
ಸ ಚಿಕಿತ್ವಾನ್ ಈಯತೇ ಸಾ ನ್ವೀಯತೇ ।

ಆ ಪರಮಾತ್ಮನಂ ಅರಿಯುವೊಡೆ ಸತ್‌ಚಿಂತನೆಯ

ಪಾರಾವಾರದೊಳೀಸಿದೊಡಮಲ್ಲದೆ ದಕ್ಕದು.
ರಾಜಕೀಯ ವಿದ್ಯೆಯನು ಬೋಂಕನೆ ತುತ್ತೂರಿ
ಊದಿಯೂದಿ ಸಾರಲಹುದು. ಆರ್ಥಿಕ ಸಮಾ-
ಜಿಕ ವಿಚಾರಂಗಳಂ ಕತ್ತಿಗೈಯಾಗಿ, ಬೆಂಕಿ
ಹಚ್ಚಿ ಪರಿಬೋಧಿಸಬಹುದು. ಆದೊಡೇಂವೇಳ್ವೆಂ?
ಧರ್ಮ ಬೋಧೆಯಂ ನೀರವಗತಿಯಲಿ ನಡೆಸುವುದೆ
ಸರಿಯಪ್ಪ ಪಥಂ. ಸೂಕ್ಷ್ಮತರದೊಳ್ ನಡೆಸಲಕ್ಕುಂ.
ಅನುದಿನಂ ಹೊತ್ತಾರೆ ಮಲರುವ ಗುಲಾಬಿ ಮೊಗ್ಗು
ಮೇಣೆಲ್ಲವಗೆಯ ಮೊಗ್ಗುಗ್ಗಳಮೇಲೆ ಬೀಳುವ
ಇಬ್ಬನಿಯೊಲ್ ಬಲ್ ಸೂಕ್ಷ್ಮಾತಿಸೂಕ್ಷ್ಮಗತಿಯಲಿ
ಸಾಧಿಸಲ್ವೇಳ್ಕುಂ. ಭರತ ಖಂಡವುಂ ಜಗಕೆ
ನೀಡಬಹುದಾದ ಮಹೋನ್ನತ ಕಾಣಿಕೆಯೆನೆ ಧರ್ಮ..!
“ಆದ್ದರಿಂ ಮಿತ್ರರಿರಾ, ಭಾರತೀಯ ತರುಣರ
ತಂಡಮಂ ಧರ್ಮ ಪ್ರಚಾರಕೆ ತಯಾರಿಪ ಸಂಘ
ಸಂಸ್ಥೆಗಳನೆಲ್ಲೆಡೆಯಲಿ ಸ್ಥಾಪಿಸಿ ತರಬೇತು
ಗೈದು ವಿದೇಶಗಳಿಗೆ ಕಳುಹಿಪುದು ಎನ್ನೊಂದು
ಮಹೋದ್ದೇಶಂ. ನಮಗೀಗಳ್ ಪುರುಷವೀರರ್
ವೇಳ್ಕುಂ. ಬಲಿಷ್ಠರ್ ದೃಢಿಷ್ಠರ್ ಆಶಿಷ್ಠರ್
ಆಗಿರ್ಪ ಮೇಧಾವಿ ಪುರುಷ ಸಿಂಹರ್ ವೇಳ್ಕುಂ.
ಅಂತಪ್ಪ ಜನರ್ ನೂರು ಮಂದಿ ಮುಂದ್ಯೆದೊಡೆಮಗೆ
ಭುಜಬಲಂ ಬಂದಪುದು. ನಮಗೆ ಜಗತ್ತಂ ನೇರ
ದಾರಿಗೆ ಹಚ್ಚುವ ಶಕ್ತಿ ಬಂದಪುದು. ಮಿತ್ರರಿರಾ,
ಅನಂತಾನಂತ ಶಕ್ತಿದಾಯಕಮಾದ ಈ ಧರ್ಮಸ-
ತ್ಯಗಳಂ ಸಕಲ ಜನಾಂಗಕ್ಕು ಸರಿ ಸಮಗೊಳಿಸಿ
ಹಂಚಿ ಪರಿಬೋಧಿಪುದೆ ಜೀವನದ ಜಾಗೃತಿ ಕಣಾ!

ಈ ಸತ್ಕಿರಣಗಳಂ ತುಲನೆಗೈದು ಪರಾಮರ್ಶಿರೈ.
ಇಂಥ ಅಮೃತ ರಸ ಪಾನಕ್ಕಾಗಿ ಜಗತ್ ಬಲ್
ಬಾಯಾರಿ ಗಂಟಲೊಣಗಿ ಕಾಯುತ್ತಲಿದೆ ಎನೆ
ಯೋಚಿಸಿ ತಿಳಿಯಿರಿ! ಅಲ್ಲದೆ ನಮ್ಮೊಳ್ ಇರುತಿಹ
ಪರಿಸ್ಥಿತಿಯನವಲೋಕಿಸಿ. ಕಾಲಾನುಕಾಲದಿಂ
ನಡೆದು ಬಂದೊಂದು ನಮ್ಮವರ ನೈಚ್ಯಧರ್ಮದ
ಸ್ಥಿತಿ ಸಾಮಾನ್ಯಮೆನಲುಂಟೆ? ವರ್ಗಭೇದದ
ಅಂಧಕಾರದೊಳ್ ದೀನದಲಿತರ ಕಡೆಗಣಿಸಿ
ಗಣ್ಯ ಸಮಾಜದಿಂ ದೂರೀಕರಿಸಿ ಸುಜ್ಞಾನ
ವಲಯದಿಂ ಪೊರಗಿರಿಸಿದ ದೈತ್ಯನೀತಿಯದೇಂ
ಸಾಮಾನ್ಯಮೆನಲುಂಟೆ? ಇದತಿದಾರಣಮಲ್ತೆ?
ಈ ದುರ್ನೀತಿಯಂ ಕಡಿಖಡ್ಗ ಬೀಸಿವೀಸಿಯೆ
ನಿರ್ದಯೆ ನಿಷ್ಕರುಣೆಗಳಿಂ ಜಾಡಿಸಿ ಒಗೆವ ವೀರ
ಪಟುಗಳಾಗಿ! ಧೀರ ಯೋಧರಾಗಿ! ಇದೆಲ್ಲವಂ
ನಿಂನಿಮ್ಮೊಳ್ ಪರ್ಯಾಲೋಚಿಸಿರೈ ಮಿತ್ರರೆ!
ಬಡ ದೀನದಲಿತರಿಗೆ ಅಸಂಬದ್ಧ ಕಲಂಕ
ನೈಚ್ಯಭಾವಗಳಂ ತಿಳಿಪಿ ಪರಿಪರಿ ಬೋಧಿಸಿ
ನೀವ್ ಕೈಲಾಗದ ಕ್ರಿಮಿಗಳೆನುತೆ ಧೂಷಿಸುವ,
ಅಸಹ್ಯಿಸಿ ತುಚ್ಛೀಕರಿಸುವ ವರ್ಗವಂ ನೀವ್
ಗಮನಿಸಿರಿ. ಇಂತೊಂದು ದುರ್ಬೋಧೆಯಂ ಕೇಳಿ
ಕೇಳಿ ದಲಿತರುಂ ಹೀನ ಮೃಗಗಳೇ ಆಗಿ
ಬಾಳುತಿಹುದಂ ಕಾಣಿರಾ? ಇನ್ನೆಬರಂ ಆ
ಕುಸಾಹಿತ್ಯಮಂ ಕೇಳ್ದು ಕುಗ್ಗಿದ ಕರ್ಣಗಳ
ಸ್ವರ್ಣಮಂಡಲಕೆ ಅವರಾತ್ಮದಾ ಮಹಿಮೆಯಂ
ಕೇಳಿಸಿ ತಿಳಿಪಿ ಮನದಟ್ಟುಗೊಳಿಪುದೆ ಇಂದಿನೀ

ಕಾರ್ಯಭಾರಮಿಹುದು ಯುವ ಶ್ರೇಷ್ಠರಿಗೆ. ಮತ್ತಂ
ಅವರಿಂಗೆ ನಿತ್ಯ ಶುದ್ಧ ಬುದ್ಧ ಮುಕ್ತಾತ್ಮರ್
ತಾವೆಂದರಿಯುವಂತವರ ನಾಳನಾಳಗಳಿಗೆ
ವಜ್ರಸಾಣೆ ಹಿಡಿದು ಮನಮತಿಗಳ್ ತೊಳಗಿ ಬೆಳಗಿ
ಬಾಳ್ವಂತೆ ಎಳ್ಚರಿಸವೇಳ್ಕುಂ! ನಮಗೀಗಳ್
ಬೇಕಿರ್ಪುದು ಕಬ್ಬಿನದ ಮಾಂಸ ಖಂಡಗಳ್!
ಉಕ್ಕಿನ ನರನಾಡಿಗಳ್! ಕಾಲಾನುಕಾಲದಿಂ
ಕಂಬನಿ ಕಡಲಲಿ ಈಸಿ ಬಾಳಿನ ಜಾಡು ತಪ್ಪಿ
ಕಂಗೆಟ್ಟವರಂ ಮೇಲೆತ್ತುವ ಹಠವೀರರ್
ವೇಳ್ಕುಂ! ಎಲೆ, ಭಾರತ ಮಾತೆಯ ಸುಪುತ್ರರಿರಾ!
ಇಂ ಸಾಲ್ಗುಮಿೂ ಶಂಡತನ! ಅಳುಕು ಪಿಂಜರಿಕೆ
ಬದಿಗೊತ್ತಿ ಏಳಿ! ಎದ್ದುನಿಲ್ಲಿ! ಪರಮ ವೀರ
ಕೇಸರಿಗಳಾಗಿ. ಗಂಡರ ಗಂಡರಾಗಿ! ಓ
ನಮಗಿಂದು ಬೇಕಾದುದು ಅದೇ! ವೀರ ಧರ್ಮ!
ಸರ್ವತ್ರ ನಿರ್ಮಾಣಕಧರ್ಮ! ಅದೇ ಒರೆಗಲ್ಲು
ಸತ್ಯಕೆ! ದೇಹ–ಮನಸ್ಸು–ಆತ್ಮಗಳ ಮಹೋನ್ನತ
ಮಂಗಳ ದ್ರವ್ಯವಂ ವಿನಾಶದ ಪಥಕೆ ತಳ್ಳುವ
ಎಲ್ಲವಗೆಯ ವ್ಯಾಪಾರ ಕ್ಷೇತ್ರಗಳಂ ಜಡಿದು
ಬದಿಗೊತ್ತಿ! ಸತ್ಯಂ ಬಲಕಾರಿಣಿ. ವೇದೋಪ–
ನಿಷತ್ತಿನ ಸತ್ಯವೇ ನಿಮ್ಮಗಳ ಮುಂದಿರಲ್
ಚಿಂತೆಯೇಕೆ? ಅದಂ ಅನುಷ್ಠಾನಗೈದು ಭಾರತದ
ಮಹೋನ್ನತ ಧೀರ ಪುರುಷರಾಗಿ! ಭರತ ಖಂಡದ
ವಿಮೋಚನೆ ಸಮಿೂಪವಾಗುತಿದೆ! ಹೇ ವಿಚಾರ
ಶೀಲರೇ ವಿಚಾರವಂತರಾಗಿರಿ! ಒಳಗಣ್ಣು
ತೆರೆದು ನೋಡಿ!

“ಆಲಿಸಾಲಿಸಿ! ಈ ತರುಣ ಕೊರಳ
ತೂರ್ಯಮಂ! ಈ ಎಲ್ಲ ಮಹತ್ಕಾರ್ಯಮಂಗೈದು
ಪೂರೈಸೆ ಪರಮ ತ್ರಿಗುಣತ್ರಯಂಗಳ್ ವೇಳ್ಕುಂ
ನರರ್ಗೆ. ಪ್ರಥಮಗುಣವದು ಹೃದಯದಿ ಕರುಣೆ.
ದ್ವಿತೀಯ ಗುಣವದು ಮನದಿ ವೈಚಾರಿಕತೆ. ಚಿತ್ತ
ಪ್ರವೃತ್ತಿಯೊಳ್ ಸಹಕಾರ ಎಂಬೀ ಪರಮೋನ್ನತ
ಸುಗುಣತ್ರಯಂಗಳಂ ಪಡೆದಪುದೇ ಮಾನವೀಯ
ಸದ್ಭಾವನೆಗೆ ತಕ್ಕಿನ ಗುಣಗಳೈಸಲೇ? ಕೇಳಿಲ್ಲಿ,
ಸೋದರರೆ! ಕ್ರಿಮಿಕೀಟಗಳಂತೆವೊಲ್ ಬಾಳಿ
ಬದುಕುತಿಹ ಕೋಟ್ಯಾನುಕೋಟಿ ಕಡು ಬಡತನದ
ಸೋದರರಿಗಾಗಿ ನಿಮ್ಮೆದೆ ಮರ್ಮರ ಮರುಗುವುದೆ?
ಅವರಿಂಗೆ ಪಗಲಿರುಳ್ ನೊಂದು ನೋಯುತಿರ್ಪಿರಾ?
ಅಂತಿರ್ಪೊಡೆ ನೀವ್ ಸುಧಾರಕರರ ಪಟ್ಟಕ್ಕೆ
ಅರ್ಹರಾಗಲ್ ಮೊದಲ ಹಂತಗಳ ಮೆಟ್ಟಿಲಂ
ಹತ್ತಿರ್ಪಿರಿ. ಎರಡನೆಯ ಹಂತದೊಳ್ ಮನದಲಿ
ಬರಿದೆ ಮರುಗಿದೊಡೆ ಸಾಲ್ಗುಮೆ? ಮರುಕ ಸರ್ವತ್ರ
ಕಾರ್ಯಕಾರಿಯಾಗಲ್ವೇಳ್ಕುಂ. ತ್ರಿಗುಣಗಳೊಳ್
ಕೊನೆಯದಾಗಿ ಸತ್ಸಾಧನೆಯ ಪಥದೊಳ್ ಬರಲಿಹ
ಎಡರು ತೊಡರುಗಳಂ ಜಡಿಕುಟ್ಟಿ ಜಯಿಸಿ ಗೆಲ್ದು
ಮುಂಬರಿವ ಇಚ್ಛಾಶಕ್ತಿಯುಜ್ವಲಿಸಿ ಬೆಳಗಿಸಿ
ಧೈರ್ಯಸ್ಥೈರ್ಯಗಳ ಬಿಗಿಗಟ್ಟು, ಬಿಗಿಯವೇಳ್ಕುಂ.
ಇರ್ಕೆ ಜಗತ್ ಬಿಗುರ್ತು ಬಿಮ್ಮಾನದಿಂ ಸಿಡಿದು
ನಿಮ್ಮಮೇಲೆ ಖಡ್ಗಗಳಂ ವೀಸಿ ಕೊಚ್ಚಿದೊಡಂ
ಹೆದರದೆ ಬೆದರದೆ ಸತ್ಯಕಾಗಿ ಹೋರಾಡು–
ಪಿರಾ? ಹೆಂಡಿರು ಮಕ್ಕಳೇ ನಿಮಗೆದುರು ಬಿಳ್ದರೆ..?

ನಿಮ್ಮ ಆರ್ಥಿಕ ಥೈಲಿ ಕೈವಿಟ್ಟು ಬೀದಿ ಭಿಕಾರಿ-
ಎನಿಸಿದೊಡೆ...? ಅಸಹ್ಯಕರ ಅಪಕೀರ್ತಿ ಪಡೆದೊಡೆ?
ಇಂತೆಲ್ಲವಗೆಯ ಸಂಕಷ್ಟಗಳ್ ಬಂಡೆಳ್ದು
ಬಂದೊಡಂ ನೀವ್ ಎರ್ದೆಗೆಡದೆ ಎದುರಿಸುವಿರಾ?
ಅಂತಿಪ್ಪೊಡೆ ನೀವ್ ನಲ್ ಸುಧಾರಕರಾಗಲ್
ಸರ್ವೋತ್ಕೃಷ್ಟ ಅಧಿಕಾರಿಗಳಾದಪುದು ದಿಟಂ.
ಪರಮಾತ್ಮ ನಿಮ್ಮೆಲ್ಲ ಕಾರ್ಯಗಳಲಿ ಎಲ್ಲಾ
ಬಗೆಯ ನೆರವಿತ್ತು ಮುನ್ನಡೆಸುವಂ. ಅವನೆಮ್ಮ
ತಂದೆತಾಯಿ ಎಲ್ಲಾ. ಅವನೆ ದಾರಿಯ ದೀಪ.

"ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।
ತದಂರಸ್ಯ ಸರ್ವಸ್ಯ ತದು ಸರ್ವಸ್ವಾಸ್ಯ ಬಾಹ್ಯತ ॥

ಮಹಾನ್ ಸಭಾಭವನದ ಮಾಡು ಪ್ರತಿ ಅಕ್ಕರ
ಅಕ್ಕರಗಳಂ ಮೂಡಿಸಿತು ಮರುದನಿಯಂ ಕೊಟ್ಟು.
ತಣಿದರ್ ಸಭಿಕರ್. ತಣಿದುದು ಬುದ್ಧಿಮತ್ತೆ. ಆ
ಜನರಾಶಿ ಆ, ಹುರುಪು ಆ ಉತ್ಸಾಹ, ಆ ಭವನ,
ಆ ಸಂಭ್ರಮ ಎಲ್ಲವುಗಳ ಸಂಮಿಲನದಿಂದೆ
ಆಲೋಡಿತಮಾದತ್ತು ಮದರಾಸ್ ನಗರಂ!
ತರುವಾಯಿ, ದಿನದಿನಂ ಬೇರೆವೇರೆ ಕಡೆಯಲಿ
ಕ್ರಮಾನುಕ್ರಮದಲಿ ಜರುಗಿದ ಮಹಾ ಸಭೆಗಳಲಿ
ಬಹುತರದ ಬುದ್ಧಿಮಾನ್ಯರ ಮುಂತೆ ಉಪನ್ಯಾಸ-
ಭಾಷಣ. ಪ್ರವಚನಗಳ ಮಾಲೆಗಳ್ ಹರಿದತ್ತು
ಸರಾಗದಲಿ. ಕೊರಳ್ ಸಿರಿಕಂಠದುಲಿ ಜಳಜಳ
ಹರಿದಿರೆ ಮಹಿಮಾಮಯ ಶೈಲಿಯಲಿ ಕಟ್ಟುಸಿರ್
ಬಿಗಿವಿಡಿದು ಕೇಳ್ದರೆಲ್ಲ ತುಟಿ ಬಿರಿಯದಂತೆ.
"ಭರತ ಖಂಡದ ಮಹಾ ಪುರುಷರು" "ಭಾರತೀಯ

ಜೀವನದಲಿ ವೇದಾಂತ ಪ್ರಯೋಗ" "ನಮ್ಮಮುಂ-
ದಿನ ಕರ್ತವ್ಯ" "ಭಾರತವರ್ಷದ ಭವಿಷ್ಯದ ಗತಿ"
ಇಂತಿಂತು ಸರ್ವೋಚ್ಚ ಸುವಿಚಾರದೋಹನಂ
ಉಕ್ಕಿ ಹರಿದುದು ಹೃದ್ಗಡಲಿಂ ಸಿಂಹ ಗರ್ಜನೆ
ಮೊಳಗಿ. ವಿಷಯ ವಿಶ್ವಶಕ್ತಿಯ ತೇಜಿಯವೊಲ್
ಮಿಂಚುತ್ತೋಡಿತಾ ಜನಗಣಮನ ಮಿಡುಕುವಂತೆ.
"**ಅಶ್ವಲಕ್ಷಣಂ ವೇಗೋ**" ಎಂದೊಡಂ ಸಾಸಿರ
ಪಟ್ಟು ಮಿಂಚಿತಾ ವಾಕ್ಯಕ್ತಿ ಅಶ್ವಲಕ್ಷಣಂ
ಮೀರಿ. ಮಂತ್ರ ಮುಗ್ಧತೆಯ ಬಿಗಿಗಟ್ಟು ಬಿಗಿದಿಹ
ಜನತೆ ಮಾರುವೋದುದು ಸ್ವಾಮೀಜಿಯ ಮಾತಿನ
ಮಾಧುರ್ಯದ ಮಾಯಾ ಮೋಹಜಾಲಕ್ಕೆ. ಆ
ಜನಸಾಗರ ಆ ಧರ್ಮದೇಶನ ಒಂದಾಗಿ
ಬೆರೆತುವು ಮನಮೋಹಕ ರೀತಿಯಲಿ. ಸುಪ್ತಮನ
ಸುಪ್ತಮತಿ ಪರಿಸುಪ್ತ ಚಿಂತನಾ ಶಕ್ತಿಯಂ
ಬೆಂಕೆಯ ಒರೆಗಲ್ಲಿಗೆ ಹಚ್ಚಿ ತೀಡಿತೀಡಿ ನಿಜ
ದರ್ಪಣವಿಡಿದರ್ ಸ್ಥಿತಿಗತಿಯರಿವು ಮೂಡಿಸೆ.
ಪಗಲುರುಳಿರಲ್ ಕಳ್ತಲೆಯ ತೆರೆ ಹರಡಿತು ಕಿರು
ತಾರಗೆಗಳ ಸರಮಾಲೆ ಸೂಡಿ. ನಿಶಾ ಕಾಳಿಕೆ
ಮೆರೆದಳ್ ಕರಿಯ ವಸನ ಧಾರಿಣಿಯಾಗಿ, ಶಾಂತಿ
ಪ್ರದ ರಾತ್ರಿ ಕಳೆಯಿತು ಸವಿನಿದ್ದೆಯ ಸುಖದಲಿ.
ಮೂಡಣದಲಿ ಕೆಮ್ಮುಗಿಲ್ ಹೇರಾಶಿಯೊಳೆದ್ದು
ಪೊಳ್ತು ಮೂಡಿತು ಎಳೆಬೆಳಕು ಚೆಲ್ಲಿ. ಸ್ವಾಮೀಜಿ
ಪ್ರಾತಃರ್ವಿಧಿಯಂ ತೀರ್ಚಿ ಪೊರಗೈದರ್. ರವಿಯ
ಸ್ವರ್ಣರೇಖೆಗಳ್ ಮರಗಳ ಎಲೆಎಲೆಗಳ ಕಿರು
ಸಂಧಿ ಸಂಧಿಯಲಿ ತೂರಿ ಬರುತಿವೆ ಮಿಂಚಿನೊಲ್

ಮಿಂಚಿ. ಕೆಂಪು ಗುಲಾಬಿಯ ಗಿಡದಲಿ ಕುಳಿತೊಂದು
ಹಳದಿ ಚುಕ್ಕಿಯ ಹೂವಕ್ಕಿ ಕೊರಳೆತ್ತಿ ಕೂಗಿತು
ಕುವುವುವುವುವು! ಅತ್ತಲ್ ಹೊರಳಿತು ಕಣ್ ದೃಷ್ಟಿ
ಮಿಂಚಿನೊಲ್. ಅಹ ಎಂತುಟು ಮನೋಹರ ದೃಶ್ಯಂ.
ಕ್ಸೇವಿಯರ್ ದಂಪತಿಗಳ್ ಸೆಜ್ಜೆಮನೆಯಿಂ ಪೊರ
ಬೀಳದಿರೆ ಸದ್ದುಗಳ ಸೊಲ್ಲಿಲ್ಲ. ಎಲ್ಲೆಡೆಯು
ಶಾಂತವಾಶಾಂತಪ್ರಶಾಂತನಿಶಾಂತಸುಶಾಂತತಾ
ಘನಗಾಂಭೀರ್ಯತೆ ಹೆಪ್ಪಿಟ್ಟವೊಲ್ ಮೆರೆದತ್ತು ಆ
ಪಿರಿಯಂಗಣದುದ್ಯಾನದ ಉದ್ದಗಲಂ. ಅಹ
ಮನೋರಮ ಉದ್ಯಾನದ ತುಂಬೆಲ್ಲ ರೋಮಗಳು
ನಿಮಿರುವೊಲ್ ರೋಮಹರ್ಷಕ ಕುಸುಮಕೋಟಿ ಅರೆ
ಬರೆ ಬಿರಿದು ಪಿರಿ ಗಂಪು ಬೀರುತಿರೆ ಗಂಧಮಯ
ಮಧುರ ಮಾಧುರ್ಯ ಮುತ್ತಿತು ಹೃನ್ಮನಂಗಳಂ.
ದಳದಳ ಬಿರಿದ ಗುಲಾಬಿಗಳ ಕಂಪು. ಜಾಜಿಯ
ನರುಗಂಪು. ದಿರ್ಗಂತಿಯ ಸುಗಂಪು. ಪಾದರಿಯ
ಅಲರ್ಗಂಪು ನೀಲನೀರುಹದ ಸೊರ್ಕುಗಂಪು
ತಾವರೆ ನೈದಿಲೆಗಳ ಸಿರಿಗಂಪು. ಷಡ್ದಳಿಯ
ಕಿರುಗಂಪು ಇರವಂತಿಗೆಯುರವಣೆಗಂಪು. ಗಿರಿ
ಮಲ್ಲಿಗೆಯ ಎಳೆಗಂಪು ಕೇತಕಿಯ ಪರಮೋಚ್ಛ
ಗಂಪು ಕೂಡಾಡಿ ಪಿರಿದಾಯ್ತು ಕಂಪಿನಲೋಕ
ಮಘಮಘಿಸುವಂತೆ. ಸಾಗರದೆಲರ್ ತೀಡಿತ್ತು
ತಣ್ಪುಮಯಮಾಗಿ. ಗಂಧಮಯಮಾಗಿ. ಮೈಮನ
ಪುಳಕಗೊಂಡು ಉದ್ಯಾನದಲಿ ತಿರುಗುತಿರ್ದಾ
ಸ್ವಾಮೀಜಿಯುಂ ಸುಗಂಧಮಯ ವಾಯುಸೇವನೆಯ
ಮೋದದಲಿ ಮುಳುಂಗಿರಲ್ ಕ್ಸೇವಿಯರ್ ದಂಪತಿಗಳ್

ಬಳಿಗೈದರ್ ಹರ್ಷಿತ ವದನದಿಂ. ಪುಷ್ಪವಾಟಿಯ ಅಂದ
ಚೆಂದಮಂ ಗ್ರಹಿಸಿ ನುಡಿದರ್ "ಉದ್ಯಾನವನ
ಬಲೂ ಆಪ್ಯಾಯಮಾನಮಾಯ್ತು. ಅಪೂರ್ವತರ
ಕುಸುಮಗಳ್ ಸಸ್ಯಗಳ್ ಕಾಣಿಸುತಿವೆ. ಇವೆಲ್ಲ
ಈ ಪ್ರಾಂತ್ಯದ ಭೂಗುಣವನವಲಂಭಿಸಿ ಬೆಳೆಯುವ
ಸಸ್ಯರಾಜಿಯಲ್ತೇ?"
ಅಹುದೆನುವೊಲ್ ಗುರುವುಂ
ತಲೆದೂಗುತಿರಲ್ ಅಳಸಿಂಗಾಚಾರ್ಯರಂಗೂಡಿ
ಹಲಹಲವು ಗಣ್ಯರೈದರ್ ಗುರುವರನಂ ಕರೆ
ದೊಯ್ಯಲಂದಿನ ಸಭೆಗೆ. ಪ್ರಸನ್ನ ಮನೋಹರ
ಭಾವನಾಪನ್ನತೆಯಲಿ ಕರಗಳ್ ಜೋಡಿಸುತೆ
ಶಿರಮಣಿದ ಶಿಷ್ಯಗಣವ ಮಾನಿಸುತೆ ತಮ್ಮಯ
ಮಿತ್ರರಂ ಪರಿಚಯಿಸಿದರ್ ಎಲ್ಲರಿಗೆ ಸ್ವಾಮಿ
ವಿವೇಕಾನಂದರ್. ತಮ್ಮ ಜನ್ಮಸ್ಥಳವಾದ
ವಂಗ ಭೂಮಿಗೆ ಪಯಣಿಪ ಮನದಿಚ್ಛೆಯಂ ತಿಳಿ
ಪಡಿಸುತೆಂದರ್ "ಇಂದು ಮಧ್ಯಾಹ್ನದ ಪಯಣಕೆ
ಅಣಿಗೊಳ್ವೆನೆನ್. ಜಹಜಿನ ಮೂಲಕಮಾದೊಡದೆ
ಬಳ್ಳಿತು. ಒರ್ ದಿನದ ಸುವಿಶ್ರಾಂತಿ ಬಂದಪುದು."
ಅಳಸಿಂಗಾಚಾರ್ಯರುಂ ಗುರುಭಾಯಿಗಳುಂ ನೆರೆ
ಗೂಡಿ ಪಯಣದ ಸಿದ್ಧತೆಯಂ ನಡೆಸಿದರ್.
ಅದೆ
ಆಗಳ್ ನೆರೆದ ಸಭೆಯೊಳ್ ನುಡಿಸಿದರೆಂತೆನಲ್,
"ಹೇ! ಭಾರತಜನನಿಯ ಒಡಲ ಸಂಜಾತರಿರಾ,
ಹಳೆಹಳೆಯ ಕಲ್ಪನೆಗಳ್ ಬರಿಯ ಅಸಹ್ಯತರ
ಮೂಢನಂಬಿಕೆಯ ಜಡಿಕುಟ್ಟಿ ಮನ ಬಿಚ್ಚಿಯೆ

ಯೋಚಿಸಿರಿ, ಆದೊಡೆ ಆ ಮೂಢನಂಬಿಕೆಗಳ
ಮುದ್ದೆಯಲ್ಲು ಸತ್ಯಾಂಶದ ಮಸುನಿಯ ಗಟ್ಟಿಯು
ಇರ್ಪುದು ದಿಟ. ಹೊರಗಿನ ಕಸವಂ ಬಳಿದು ತೆಗೆದು
ಒಳಗಿನ ಮಿಸುನಿಯ ಗಟ್ಟಿಯಂ ಉಳಿಸಿಕೊಂಬುವ
ವಿಧಾನಂ ನೀವ್ ಕಂಡುಕೊಂಡಿರ್ಪಿರಾ? ಬರಿ
ಪೊಳ್ಳು ಹರಟೆಯೊಳ್ ನಿಮ್ಮ ಶಕ್ತಿಯ ಪಾಳ್ಗೈಯುವ
ಬದಲ್ ಆವೊಂದು ವ್ಯಾವಹಾರಿಕ ಪರಿಹಾರ
ಕಂಡುಕೊಂಡಿರ್ಪಿರಾ? ಕೇವಲ ಖಂಡನೆ ಭರ್ತ್ಸನೆ
ಗೈವ ಬದಲ್ ದೀನರ್ಗೆ ನೆರವಂ ಕೊಡಬಲ್ಲಿರಾ?
ಅವರ ದುಃಖದೊಡಲ್ ತಣಿಪಂತೆ ಕೆಲವು ಪ್ರೇಮ
ಮಮತೆ ತುಂಬಿದ ಒಳ್ನುಡಿಯ ನುಡಿದು ನಡೆವೆಣಂ
ತಾವೈಸಿದ ದಲಿತರಂ ಸ್ವಾಂತನಗೊಳಿಸುವಿರಾ?
ಅಂತಾದೊಡೆ ಆ ದುಸ್ಥಿತಿಯಿಂದವರ ಹೊರಗೆ
ತರ್ಪಂತಾದಪುದು. ದೀನರ್ಗೆ ದಾರಿ ದೀಪವೆ
ನೀವಾಗಿರಿ. ಕೇಳಿ, ಜಡನಿದ್ದೆಯು ಸಾಲ್ಗುಂ. ಇಂ
ಏಳಿ, ತತ್‌ಕ್ಷಣ ಕಾರ್ಯೋನ್ಮುಖರಾಗಿ. ಪುರುಷ
ವೀರರಾಗಿ. ಸದ್ಧರ್ಮಾಚರಣೆಯಲಿ ಮುಂದೆ
ಮುಂದೆ ಸಾಗಿ! ಧೃತಿಗೆಡದಿರಿ. ಮತಿ ಸೋಲದಿರಿ.

"ಧರ್ಮಂ ಚರತ ಮಾಽಧರ್ಮಂ
ಸತ್ಯಂ ವದತ ನಾನೃತಂ ।
ದೀರ್ಘಂ ಪಶ್ಯತ ಮಾ ಹ್ರಸ್ವಂ
ಪರಂ ಪಶ್ಯತ ಮಾಽಪರಂ ॥"

ಹರಿಃ ಓಂ ತತ್ ಸತ್

❋ ❋

ಪಂಚಸ್ತ್ರಿಂಶೋಲ್ಲಾಸಂ

ದರಿದ್ರ ದೇವೋಭವ

ತ್ವಂ ಸ್ತ್ರೀ ತ್ವಂ ಪುಮಾನಸಿ
ತ್ವಂ ಕುಮಾರ ಉತವಾ ಕುಮಾರೀ ।
ತ್ವಂ ಜೀರ್ಣೋ ದಂಡೇನ ವಂಚಸಿ
ತ್ವಂ ಜಾತೋ ಭವಸಿ ವಿಶ್ವತೋ ಮುಖಃ ॥

ಕಲ್ಪನೆಗೆ ಕೆಚ್ಚಿರಲ್ ಕಾಣಾ ಸುನೀಲ ನಭ
ಚುಂಬೀ ಮಹೇಂದ್ರಗಿರಿ ಕುತ್ಕಿಲಂ. ಕಾಣಿಮಾ
ಭವ್ಯಮಾ ಶಕುನಿಶಿಲೆಗಿಳಿದ ಮಂಜುಮೋಡಂ
ವೆಳ್ಳಿಯ ಕಿರೀಟದೊಲ್ ಸಿಂಗರಗೊಳಿಸಿದ ನವ
ನವೊ ಚಿತ್ರದ ವೈಖರಿಯ! ಏನಾಪರಮ ಪಚ್ಚ
ಪಟ್ಟುಡೆಯಲಿ ಕೆಂದಳಿರ್ ಶೋಭೆಯೈಶ್ವರ್ಯಂ
ಮೆರೆದ ಮೋಹನೀಯ ದೃಶ್ಯಂ? ಬೆಟ್ಟದ
ಪೆರ್ಗೋಡಿನ ವೆಳ್ಳಿಯ ಕಿರೀಟಕ್ಕನುಗುಣಮಪ್ಪ
ಮೆಯ್ ಸಿಂಗರಂ. ಪದ ಪ್ರಾಂತದಲಿ ತುಂಬಿ ತುಳುಕುವ
ಸರೋವರವೊಂದು ಜಲಕಳೆಯುಂ ಪುಟ್ಟಿ ನೀರ್
ಕಾಣದಿನಿತು ಬೆಳೆದುದು ಸಂವೃದ್ಧವಾಗಿ. ಆ
ಉದ್ವಗಲದೊಳ್ ಮತ್ತೇನಿಲ್ಲವಾ ಸರೋವರ
ಸಂಜೀವನ ಶೈಲಿಗಾಗಿ. ಕೆರೆಯಂಗಣದಲ್ಲಿ
ಹುಲುಸಾಗಿ ಹೊನ್ನಾಗಿ ಮುಂಬೆಳೆದ ಶಾದ್ವಲದ
ಹಸುರಿನ ಹೊಲಂ ಬೆಳೆದುದು ಆಳೆತ್ತರಕ್ಕೆ
ನಿತ್ತರಿಸಿ, ಸಕಲ ಪ್ರಾಣಿಕೋಟಿಗೆ ಸೊಬಗುಗುವ
ನಲ್ ದಾಣವಾಗಿ.
ಅಂದು, ಯುವ ತರುಣನೊರ್ವಂ

ಗುರುದೇವನ ಬಳಿಗೈದು ಕೇಳಿಸಿದನೆಂತನೆ,
"ಸ್ವಾಮಿಜಿ, ಎನ್ನನುಂ ಸದಾ ಕಾಡುವುದೊಂದು
ದಿವ್ಯಪ್ರಶ್ನೆ. ದ್ವೈತ ಅದ್ವೈತ ವಿಶಿಷ್ಟಾದ್ವೈತ ಈ
ಮೂರು ಸತ್ಯಂಗಳ ಚರಮೋಪಲಬ್ಧಿಯು ಮಾರ್ಗ
ದರ್ಶಿಯೆಂದೇಕೆಮಗೆ ಬೋಧಿಸದೆ ಉಳಿದರಾ
ಪೂರ್ವಾಚಾರ್ಯರ್?"
"ಅದೆಮಗೆ ಉಳಿಸಿದ ಕಾರ್ಯಭಾ-
ರಂ ಎನಲನ್ಯಮಲ್ತು. ಅದರಿಂದೆಮ್ಮಯ ಜನ್ಮ ಕಣಾ!"
ಸಧ್ಯ ಯುಗಾಚಾರ್ಯಂ ತಂಬೆಲರ ಸೇವೆಯಲಿ
ಮನತಣಿಸಿ ಪೆತ್ತಮ್ಮ ವಂಗ ಭೂಮಿಯಂ ನೆನೆದು
ಪೊರಡುವೊಡೆ ಆತುರಕಾತರದೊಳಿರೆ ಹೃನ್ಮನಂ
ತುಡಿದುವು ಧಣಧಣಿಸಿ. ಅದಲ್ಲದೆ, ಗುರುದೇವ
ಶ್ರೀರಾಮಕೃಷ್ಣ ಪರಮಹಂಸರ ಜನ್ಮದಿನ
ಬಳಿಸಾರಿಬರುತಿದೆ. ಪರಮಾಪ್ತ ಶಿಷ್ಯಕೋಟಿ
ಭಕ್ತವೃಂದ ದಕ್ಷಿಣೇಶ್ವರದ ಅರ್ಚಕ ವರ್ಗ
ಎಲ್ಲರೊಗ್ಗಿನಲಿ ಉತ್ಸಾಹದಶ್ವವನೇರಿ ಉತ್ಸವದ
ತಯಾರಿಯಲಿ ತೊಡಂಗಿ ತಮ್ಮ ಗುರುನಾಯಕನ
ನಿರೀಕ್ಷೆಯೊಳಿರ್ದರ್. ಮೇಲಿಂದಮೇಲೆ ಕಾಗದ
ಪತ್ರಗಳೈದು ಕೈಸೇರುತಿವೆ ಎನಲ್ಕೆ ಕಿಂಚಿತ್
ನಿಧಾನಿಪ ಮನವಿಲ್ಲ. ವೊಳ್ತುವೊಳೆ ಹರಿಯುತಿದೆ
ಹರಿಯುತಿದೆ ಚಣಂ ತಳುವದೆ. ಮೈಯೊಳ್ ಬಳಲ್ಕೆ
ಚೇತನದೊಳ್ ಬಳಲ್ಕೆ, ಮಾನಸೀ ಸಂಪುಟವುಂ
ಬಳಲಿತ್ತು, ಬೆಂಡಾಗಿ ನರಳಿತ್ತು. ಸ್ವಾಮಿಜಿ
ಅಸವಸದಲಿ ಅಣಿಯಾದರ್ ದೇಹ ಬಳಲ್ಕೆಯ
ಬದಿಗೊತ್ತಿ. ಜಹಜಿನ ಪಯಣಕೆ ಪ್ರವೇಶಗಳ

ಪತ್ರುವೈದುದು ಎಲ್ಲರ್ಗೆ. ಮದರಾಸ್ ಪುರಜನ
ಸಮುದಾಯವದು ಸಂಭ್ರಮ ಗೌರವಗಳ್‌ವೆರಸಿ
ಬೀಳ್ಕೊಡಿಗೆಯ ಮಹೋತ್ಸವದೊಳ್ ಸತ್ಕರಿಸಿದರ್
ಬಹುಮಂದಿ ಕೂಡಿ. ಆ ಸಮಾರಂಭದ ಪ್ರೇಮ
ಜಲಧಿಯೊಳ್ ಮಿಂದು ಮುಳುಗಾಡಿ ಬಿದ್ದೆದ್ದಂತೆ
ಪಿಂದಿರುಗಿ ಬಿಡದಿಗೈತರೆ ನಿಶಿಯ ಕಾಳಿಕೆಯು
ರಾಜ್ಯಭಾರವಿಡಿದಿದ್ದಳ್, ತಾರೆಗಳ ಮಾಲೆಯ
ಧರಿಸಿ, ತಣ್ಣಗೆ ತಣ್ಪುಗುವ ರಾತ್ರಿ. ಸೆಜ್ಜೆಯುಂ
ಕೈವೀಸಿ ಕರೆಯಿತು ದಣಿದ ಸುತನ ತಳ್ಕೈಸುವ
ತೆರದಿ. ಮೇಲುಡುಪುಗಳಚಿ ಪ್ರಶಾಂತ ಭಾವದೊಳ್
ಕಾಲ್ಮಡಿದು ಬೆಳ್ಮಡಿಯ ಸೆಜ್ಜೆಯಲಿ ಕುಳ್ಳಿರ್ದು
ಸಿದ್ಧಾಸನಸ್ಥರಾಗಿ ಪ್ರಾರ್ಥಿಸಿದರ್ ಕೊರಳಿನ
ಧ್ವನಿಯಂ ಹರಿಸಿ. ನೆಟ್ಟಿನ ಕಿಡಿಯು ಕೆಚ್ಚಾಯ್ತು.
ಹೃದ್ಗಡಲಿನಿಂ ಹರಿದು ಬಂದತ್ತು ವೀರರಸ.

"ಶರೀರ ನಿರಪೇಕ್ಷಸ್ಯ
ದಪಸ್ಯ ವ್ಯವಸಾಯಿನಃ ।
ಬುದ್ಧಿ ಪ್ರಾರಬ್ಧ ಕಾರ್ಯಸ್ಯ
ನಾಸ್ತಿ ಕಿಂಚಿನ ದುಷ್ಕರಂ ॥"

"ಹೇ ಭಗವನ್ ನೀನಿರಲೆಲ್ಲಿಯದು ಚಿಂತೆ? ಈ
ಕಾಲಮಾನ ನಡೆಯಲಿ ಇಂತೆಯೇ. ಎಲ್ಲವಂ
ನಿನ್ನೊಳಗೆ ಒತ್ತೆಯಿಟ್ಟಿರಲಾನು ಎನಗಿಲ್ಲ
ಕ್ಲೇಶ ಕಿನಿಸಿಗೆ ಎಂಬೆನ್. ಎಲ್ಲಕ್ಕು ನೀನೇ
ಕಾರಣಂ. ನೀನೇ ನಿಜ ಕರ್ತಂ, ಪ್ರಭುವೇ!

ತ್ವಮೇವ ಮಾತಾ ಚ ತ್ವಮೇವ ಪಿತಾ
ತ್ವಮೇವ ಬಂಧು ಸಖಾ ತ್ವಮೇವ
ಸರ್ವಂ ಹೇ ಮಮದೇವಾಧಿದೇವ ।

ಮುಂಬೆಳಗಿನ ಚೆಲುವಾದ ಚೆಲುವುಗುವ ಮುಂಬೊಳ್ತು
ಬೆಳಗಿ ಬಲಿವ ಮುನ್ನಮೆಯೆ ಜಹಜು ಅಣಿಯಾದುದು
ಪಯಣಂಬೋಗೆ. ಶಿಷ್ಯ ಜನರುಂ ಪೊರಮಟ್ಟರ್
ಗುರುದೇವನೊಡಗೂಡಿ. ಬಂದರಿನ ದಾಣದಲಿ
ತುಂಬಿರ್ದುದು ಜನರಾಶಿ, ಗುರುವರ್ಯರುಂ ತಮ್ಮ
ಶಿಷ್ಯರೊಡನೆ ಏರಿದರ್ ಭೈತ್ರಮಂ. ಜಲಧಿಯ
ಯಾನದಿಂ ಒರ್ದಿನದ ಸುವಿಶ್ರಾಂತಿಯ ಲಾಭ
ಲಭಿಸಿದುದು ಗುರುವರಂಗೆ. ಸಹ ಪಯಣಿಗರೊಡಂ
ಒಡನಾಟ ತೋಷದ ತನಿರಸವನುಣಿಸಿತು ಮನ
ಮುದಿಸುವೊಲ್. ಯಾನ ಮುಂಬರಿಯುತಿರೆ ಶ್ರೀಮಾತೆ
ಶಾರದಾಮಣಿದೇವಿಯವರ ಆಶೀರ್ವಾದಗಳ
ಶುಭನುಡಿಯ ಕೂರ್ಮೆ, ಪೆತ್ತಮ್ಮೆಯೊಡಲ್ ತುಂಬಿದ
ಕರುಣಾಯಿತ ಪ್ರೇಮದ ಸವಿ ಆಗಲೇ ತಮ್ಮ
ಸುತ್ತಲ್ ಸುಳಿಯುತಿವೆ ಸುಗಂಧ ಪರಿಮಳದವೊಲ್.
ಸ್ವಾಮೀಜಿ ರೋಮ ಹರ್ಷಿತ ಪುಳಕರಾದರ್.
ವಂಗಭೂಮಿಯ ಇಂಚು ಇಂಚು ನೆಲವುಂ ಸದ್ದು
ಗದ್ದಲದ ಸೊಲ್ಲಿಲ್ಲದೆ ಕರೆಯುತಿದೆ ತೋಷದಲಿ.
ಜುಳುಜುಳಿಪ ಜಲಧಿ ಸುಯ್ಯನೆ ಸುಯ್ವ ಸುಯ್ಗಾಳಿ
ಹಾಡುತಿವೆ ವಂಗೀಯ ರಾಗಾರುಣ ತಾನವ
ನೆರೆ ಹರಿಸಿ. ಮನಮತಿಗಳ್ ಆಗಳೆ ಪುಟಿಪುಟಿದು
ಪಾರ್ದುದು ಪರಿಪೂರ್ಣ್ಯತಮ ವಂಗೀಯ ಭೂಮಿಗೆ.

ಸಾಗರದೆಲರೊಳ್ಯೈಕ್ಯಮಾದ ದಕ್ಷಿಣೇಶ್ವರ
ಗುಡಿಯೆಲರ್ ಬೀಸಿವೀಸಿ ಮುದದಿಂ ಮುದ್ದಿಪುದು
ಮೈಮನಗಳಂ ಸವಿಯ ರಸಸ್ಫೂರ್ತಿ ತಾನಾಗಿ.
ಮಾನಸೀ ಪಕ್ಷಿಯುಂ ಪಾಡಿದತ್ತು ಮುದದಿಂ,

> **"ಸುಖಾರ್ಥಂ ಸರ್ವಭೂತಾನಾಂ**
> **ಮತಾಃ ಸರ್ವಾಃ ಪ್ರವೃತ್ತಃ ।**
> **ಸುಖಂಚ ನ ವಿನಾಧರ್ಮಾತ್**
> **ತಸ್ಮಾಧ್ಧರ್ಮ ಪರೋಭವೇತ್ ॥"**

ದೂರದೂರದಲಿ ಪಚ್ಚ ಪಸುರಿನ ಕೋಂಟೆಯೊಲ್
ಕಣ್ಗೆಸೆದುವು ತಟಿನಿಯ ಅಂಚಿನಲಿ ಎತ್ತರದ
ಗಾಳಿಮರಗಳ್. ಚೂಪು ಚೂಪಗೆ ಗರಗಸದೊಲ್
ನಿಂದು ಮೆರೆದಿವೆ ಸಾಲ್ ಸಾಲ್ಯೆಸುತ ಬೇರೂರಿ
ನಟ್ಟುನಾಂಟಿರ್ದ ಪಂಕ್ತಿ. ನೋಡುತಿರೆಯಿರೆ ಅಲ್ಪ
ಸ್ವಲ್ಪ ಪೊಳ್ತಿನೊಳಗಾಗಿ ಮುಂದೆ ಸರಿದು ಸರಿದು
ಬಜ್‌ಬಜ್ ನಿಲ್ದಾಣವ ಮುಟ್ಟಿದುದು ಜಹಜು, ಓರಿ
ಶಿಳ್ಳೆಯಲಿ ಕೂಗಿ, ಕೂಗಿ ಸಾರಿತು ಗುರುವಿನಾ
ಸುಖಾಗಮನದ ಸುವಾರ್ತೆಯುಂ. ಅಲ್ಲಿ ತಮ್ಮ
ನೆಚ್ಚಿನ ಯುವನಾಯಕನಂ ಸ್ವಾಗತಿಸಲೆಂದು
ಕೂಡಿರ್ದ ಸಹಸ್ರಾರು ಮಂದಿಯ ಕಂಠೋತ್ಥಿತ
ಧ್ವನಿಗಳ ಜಯಕಾರ ನಭೋಭೇರಿಯಾದುದು.
ನೂಕುನುಗ್ಗುಲಿನಲಿಯೆ ಮುಂಗೆತ್ತು ಪೂಮಾಲೆ
ತೊಡಿಸಿ ಗಾಢಾಲಿಂಗನಗೈದರ್ ಗುರುಭಾಯಿ
ಬಂಧುಗಳ್. ಸಾನಂದದವೊಳೆ ಹರಿಯಿತು ಅಮಿತ
ಜನರಾಶಿಯಲಿ. ಮರುದಿನ ಮುಂಬೆಳಗಿನಲಿ ಗುರು
ವರ್ಯಂ ಗೆಳೆಯ ವೃಂದದೊಡನೆ ಜೆ.ಜೆ. ಗುಡ್‌ವಿನ್

ಕ್ಸೇವಿಯರ್ ದಂಪತಿಗಳ್ ಮುಂತಪ್ಪ ಮಹತ್ತರ
ಹಿತ್ತೈಸಿಗಳ ಬೃಹದ್ ಕೂಟದೊಡನೆ ವಿಶೇಷ
ಉಗಿ ಬಂಡಿಯಲ್ಲಿ ಪೊರಮಟ್ಟರ್ ಬಹುದೂರದ
ಸಿಯಾಲ್ದ ನಿಲ್ದಾಣಕೆ. ಆನಂದ ಸಡಗರಗಳ
ಮೇಳವೇ ಅಲ್ಲಿ ನೆರೆದತ್ತು ಸಹಸ್ರ ಸಂಖ್ಯೆಯಂ
ಮೀರಿ. ನೋಡೆ ನರಶಿರಗಳೆ ಕಣ್ಗೆಸೆಯುತಲಿವೆ
ನಿಲ್ದಾಣದ ತುಂಬೆಲ್ಲಾ. ಓವೊ, ನೋಡಲ್ಲಿ!
ಕಾಲ್ಪಿಡಿವವರ, ಕೈಮುಗಿವವರ ಇಣಿಕಿಣುಕುತೆ
ನೋಳ್ಪರ, ಜಯಕಾರ ಮೊಳಗಿಪರ, ಹರುಷಭರಿತ
ಧ್ವನಿಯಲಿ ಉದ್ದರಿಪರ, ನೋಡ! ದೇವ ಪುರುಷನೊ
ಅಥ ಯಕ್ಷ ಗಂಧರ್ವನೊ ಎಂಬೊಲ್ ಬೆರಗಾಗಿ
ಬೆಕ್ಕಸದಲಿಯೆ ನಿಂದುದು ಜನಗಣಂ. ಹಾದಿಗಳ
ಇಕ್ಕೆಲಂಗಳಲಿ ತಳಿರು ತೋರಣಗಳೆಸೆದುವು
ಕಣ್ಗಿಂಬು ತಾನಾಗಿ. 'ಜೈರಾಮಕೃಷ್ಣ!' 'ಜೈ
ವಿವೇಕಾನಂದ; ಎಂದೆಂಬ ಫಲಕಗಳ್ ನೆರೆ
ಮೆರೆದುವು ಪಥದಲಿ ಸಾಲ್ಗೆಸಿ. ವಾದ್ಯ
ವೃಂದ ಮೊಳಗಿದುವು ನಯವಾದ ರಾಗಧುನಿಯಂ
ಹರಿಸಿ. ಸಂಘ ಸಂಸ್ಥೆಗಳ ಪರವಾಗಿ ಅನೇಕ
ಪ್ರಮುಖರೈದು ಫಲ ಕುಸುಮ ಹಾರಗಳರ್ಪಿಸಿ
ಶಿರಮಣಿದರ್. ಆ ರಾಶಿ ರಾಶಿ ಹೂವಿನಲಿ
ಮುಳುಗಿ ಹೋದರ್ ಸ್ವಾಮಿ ವಿವೇಕಾನಂದರುಂ.
ನಿಲ್ದಾಣಮಂ ದಾಂಟಿ ಪೊರಗೈತರೆ ಸುಂದರ
ಚಪಲ ಚತುರಾಶ್ವಸಂಯೋಜಿತ ಶಕಟವೈದುದು.
ಅದರೊಳ್ ಕ್ಸೇವಿಯರ್ ದಂಪತಿಗಳ್, ಗುಡ್‌ವಿನ್
ಮೇಣ್ ಗುರುಭಾಯಿಗಳೊಡಂಗೂಡಿ ಕುಳಿತರ್

ಸ್ವಾಮೀಜಿ. ಪೊರವಂಟಿತಾ ಮೆರವಣಿಗೆ ವಂಗ
ಮಾತೆಯು ಮನೋಜನಿತ ಆನಂದಮೋದದಿಂ
ಪುಳಕಮಪ್ಪಂತೆ. ಯುವಜನಂ ಮುಂದ್ಯೆದು ಮಧುರ
ಕ್ಷಣದಲಿ ಕುದುರೆಗಳ ನೊಗಗಳಚಿ ಎಳೆದರ್ ಆ
ರಾಜ ಬೀದಿಯಲಿ. ಮುಂಮುಂದೆ ಪಜ್ಜೆ ಪಜ್ಜೆಗೆ
ಜನ ಸಂದಣಿಯದು ವೆರ್ಚಿ ಮೆರವಣಿಗೆಯದು ಹಿರಿ
ಹಿರಿ ಹಿಗ್ಗಿ ವಿಜೃಂಭಿಸಿದತ್ತು ದಶದಿಶೆಗಳ್
ಧೀಂಕಿಡುವ ತೆರದಿ. ರಿಪ್ಪನ್ ಮಹಾವಿದ್ಯಾ-
ಲಯದ ಆನೆವಾಗಿಲ್ ಮುಟ್ಟಿದುದು ಮೆರವಣಿಗೆ.
ಆನಂದವ್ಯಾಬದ್ಧ ಸೂತ್ರದಿಂ ಬಂಧಿಸಿರೆ
ಬಹುಲ ವಿದ್ವನ್ಮಣಿಗಳೈದರ್ ಸಂತಸದ ಸಿರಿ
ವಾರ್ಧಿಯೊಳ್ ಮುಳುಗೆದ್ದು ಮೂರ್ತೀಭವಿಸಿದವೊಲ್,
ಪ್ರಸನ್ನ ವದನದೊಳ್ ಸಿತಸ್ಮಿತವನರಳಿಸಿ!
ಸ್ವಾಮೀಜಿಯುಂ ಅಲ್ಲಿನ ವೇದಿಕೆಯನೇರುತೆ
ಸಮಯೋಚಿತ ಮಾದೊಂದು ಕಿರುಭಾಷಣವನುಂ
ಗೈದರ್. ವಿಷಯ 'ಭಾರತದ ಬಡತನ' "**ದರಿದ್ರ
ದೇವೋಭವ**" ಎಂಬುದೆಲ್ಲರ ಪರಿಪಾಠಮಾದೊಡೆ
"**ಸರ್ವೇ ಜನೋ ಸುಖಿನೋ ಭವಂತು**" ಎಂಬುದಕೆ
ನಿಜವಾದ ಬುನಾದಿ. ಇದುವೆ ಇಂದಿನ ಕರ್ತವ್ಯ.
ಕೇಳಿಲ್ಲಿ, ಭಾರತ ಜನನಿಯ ದಿವ್ಯಾತ್ಮರಿರಾ,

"**ತ್ವರೋತ್ತಿಷ್ಟ ಸುಯುಗಮಿಹ ನೇದಿಷ್ಠಮಭಯಂ
ಸಕೃದೃಷ್ಟ್ವಾ ಪ್ರೇಷ್ಠಂ ಭುವನಪರಮೇಷ್ಠಂ ತವಪುರಾ**"
**ಯುಗೋಪಾಸ್ಯಂ ವಿಶ್ವಾ ಸ್ತುತ ಚರಣರೇಣುಂ ನರಹರಿಂ
ಕೃತಾರ್ಥತ್ವಂ ಯಾತು ಪ್ರಭವತು ಚ ಜೀವಃ ಸಪದಿತೇ ॥**

ಎಂಬುದಂ ಎಲ್ಲರ್ ಮನಗೊಳ್ಳಿರಿ. ಈ ಮಹತ್
ಕಾರ್ಯಮಮಂ ನಿಂನಿಮ್ಮ ಬರ್ದುಕಿಗೆ ಅಳವಡಿಸಿ
ವ್ರತಮಂ ಕಟ್ಟುನಿಟ್ಟಿನಿಂ ಕೈಕೊಳ್ಳಿ. ಎಂಬುದೆಮ್ಮ
ಮನವಿ."

ಮತ್ತೆನಿತೊ ವಿಷಯಂಗಳಂ ತಿಳಿಪಿ ಕಿರು
ಭಾಷಣಂ ಪೂರೈಸಿದರ್. ತಾವಿನ್ನು ಈ ಪೊಳಲ್
ವಲಯದೊಳುಳಿದೊಡೆ ಕಿಂಚಿತ್ ವಿಶ್ರಾಂತಿಯೆಂಬ
ಉತ್ತಮೋತ್ತಮ ದ್ರವ್ಯ ದೊರೆಯದೆಂದು ಮನದೊಳ್
ಬಗೆದು ಕಾಶೀಪುರದ ಗೋಪಾಲ ಬಾಲಶೀ-
ಲರ ತೋಂಟದಮನೆಯೊಳಿರಲ್ ಆಶಿಸಿದರ್ ಗುರು
ದೇವಂ. ಅದರಂತೆಯೆ ಅಲ್ಲಿನ ಬಿಡದಿಯ ಮನೆ
ಅಣಿಯಾಯ್ತು. ನಲವಿಂ ಮನವೊಪ್ಪಿ ಬಹುಲ ತೋಷ
ಭರಿತ ಹೃದಯದಿಂ ತೆರಳಿದರಲ್ಲಿಗೆ ತಮ್ಮ
ಮಿತ್ರಮಂಡಲಿಯೊಡಂ. ನಿರ್ಜನ ತಾಣಮೆನಲ್
ಸದ್ದು ಗದ್ದಲಗಳಿನಿತಿರದೆ ಸತ್ ಶಾಂತಿಯೇ
ಘನಿಸಿದತ್ತು ವ್ಯಾಪಕಮಾಗಿ. ಸ್ವಾಮಿಜಿಯುಂ
ಮಿತ್ರರೊಡಗೂಡಿ ಪರಮಾನಂದದಿಂ ಪೊಳ್ತು
ಕಳೆವೆನೆನೆ ಬಿಡುವರೇಂ ದರ್ಶಕರ್? ದಿನದಿನಂ
ಪೆರ್ಚಿದುದು ದರ್ಶಕರ ನಿತ್ಯಯಾತ್ರೆ. ಊರಿಗೆ
ವಿಶ್ವವಿಜೇತ ಧಾರ್ಮಿಕ ಗುರುವರಂ ಮರಳಿರಲ್
ಕಣ್ತುಂಬ ಕಾಣದೆಯೆ ಇರಲುಂಟೆ? ಮನದಣಿಯೆ
ಮಾತಾಡಿ ತಿಳಿಯದಿರ್ಪರೇಂ? ಸುದ್ದಿಯುಮೆಂತು
ಹರಡಿತಂತು ಜನರಾಶಿಯಂತು ಬರತೊಡಗಿದುದು
ಗುರುವರನ ಪದ ಸನ್ನಿಧಿಗೆ. ದಿನವಿಡೀ ಜಾತ್ರೆ

ಕೂಡಿದೊಲಾಯ್ತು ಆಶ್ರಮದಾಣದಲಿ. ಪ್ರಜೆಗಳು
ಸಾಧುಸಂತರು ಗೃಹೀ ಭಕ್ತರು ಮೊದಲಪ್ಪ
ಎಲ್ಲಬಗೆಯ ಪರಿಜನರು ಗುರುದರ್ಶನ ಪಡೆದು
ಹರ್ಷಿತವದನದಿಂ ಮರುಳುವರ್ ಮನೆಗಳಿಂಗೆ.
ಮುಸುಗತ್ತಲ್ ಮುಸುಂಕಿ ಜನಸಮುದಯ ಕರಂಗಿ
ಶಾಂತವಾಯಿತು ಮಠದ ಪಡಶಾಲೆ. ಪಡುವಣದ
ಖೇದೇಶದಲಿ ಪೊಳೆಪೊಳೆವ ನಕ್ಷತ್ರವೊಂದುರುಳಿ
ನೆಲೆದಪ್ಪಿ ಗತಿತಪ್ಪಿ ಬೀಳ್ವುದು ಕಣ್‌ನೋಟಕೆ
ಎದುರಪ್ಪಿ. ಕಣ್ಣಿಟ್ಟು ನೋಡಿದರ್ ಸ್ವಾಮೀಜಿ,
ತಾರಗೆಯ ಸ್ಥಳ ಪಲ್ಲಟಮಂ. ಕರಿಯ ಕಾಳ
ರಾತ್ರಿಯಲಿ ಮಿಂಚು ಮೊಗದ ತಾರೆ ಜಾರಿದುದು
ಎನಿತೆನಿತು ಮನಮೋಹಕಮೊ, ಕುತೂಹಲಕುದಿಯೆ
ಅತ್ತಲೇ ನೋಡಿದರ್ ಸ್ವಾಮೀಜಿ. ಉಜ್ವಲಿಪ
ನಕ್ಷತ್ರಗಳ್ ಸ್ಥಿರವಿರ್ದು ನೋಟಕೆ ತೆರೆಬಿತ್ತು.
ಮಂಜು ಕವಿಯಿತು. ಗುರುವರ ವಿವೇಕಾನಂದರುಂ
ಕೊಠಡಿಗೈದು ಗುರುಭಾರದ ಹೊರೆಯನಿಳುಹಿ ಶಿಶು
ಭಾವದಲಿ ದಿನಾಂತ ಕಾಲೀನ ಪ್ರಾರ್ಥನೆಯಂ
ಸಲಿಸಿದರ್ ಸೆಜ್ಜೆಯಲಿ ಸಿದ್ಧಾಸನದೊಳ್ ಕುಳಿತು.

ಅಜ್ಞಾನ ತಿಮಿರಾಂಧಸ್ಯ
ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ
ತಸ್ಮೈ ಗುರವೇ ನಮಃ ॥

ಸಾವಿರದೆಂಟನೂರತೊಂಬತ್ತೇಳನೆಯ ಇಸವಿ
ಪೆಬ್ರುವರಿ ಇಪ್ಪತೆಂಟನೆಯ ತೇದಿ ಬಳಿಸಾರಿತು.
ಆ ಶುಭದಿವಸದಂದು ಗುರುದೇವನಿಗೆ ಸಾರ್ವ

ಜನಿಕಮಾದ ವಿಜೃಂಭಣೆಯಲಿ ಸ್ವಾಗತೋ–
ತ್ಸವವಂ ನಡೆಸುವೊಡೆ ಅಪಾರತರ ಸಿದ್ಧತೆಯು
ನಡೆದತ್ತು ಸಂಭ್ರಮದಿಂ. ಭಕುತಜನರ ಉತ್ಸಾಹ
ಗರಿಗೆದರಿ ಮೇರೆ ಮೀರಿ ಪಾರ್ದುದು ಸಡಗರಿಸಿ.
ಓಲೆಗಳ್ ಲೇಖಿಸುವ ತಳಿರು ತೋರಣಂಗಳ್
ಬಿಗಿಯುವ ಕೆಲಸ ಕಾರ್ಯಗಳ್ ಬಂಡೆಳ್ದುನಿಂದುವು.
ಎಲ್ಲವಂ ಆತುರಾತುರಗತಿಯಲಿ ಮುಗಿಸುವ
ಕತಮೊದವಿತು ಭಕ್ತಜನಕೋಟಿಗೆ. ಆ ಶುಭದ
ದಿನಂ ಬಳಿ ಸಾರಿಬರುತಿರೆ ಪಗಲದೆಂತುರುಳಿ
ರಾತ್ರಿಯೆಂತೈದುದೊ ಎನೆ ಕಳೆಯುತಿರ್ದುದು ಕಾಲ
ಗತಿ. ಶ್ರದ್ಧೆಯೇ ಮೈದಾಳಿ ಬಂದ ತೆರದಲಿ ಒಡ
ಮೂಡಿದುದು ಸಭಾಮಂಟಪಂ. ಸಡಗರ–ಪುರುಪು
ಮೈಗೂಡಿರುತಿರೆ ಭಕ್ತರ ಮನೋಭವ ತೋಷ
ರಸ ಹರಿಯಿತುಹೊನಲಾಗಿ. ಬೃಹದ್ ಸಭೆ ಮೆರೆಯಿತು
ಲೋಕೋತ್ತರವಾಗಿ. ಬಹುತರದ ಜನರಾಶಿಯಿಂ
ಮೆರೆದುದು ಸಭೆ ಮಹೋನ್ನತ ವಿದ್ವನ್ಮಣಿಗಳಿಂ
ತುಂಬಿ. ರಾಜ ಮಹಾರಾಜರಿಂದೆಯುಂ, ಪಂಡಿತ
ಜನರಿಂದೆಯಿಂ, ಸಂನ್ಯಾಸಿಗಳಿಂದೆಯಿಂ, ಪರಮ
ಸ್ತ್ರೀಪುರುಷರಿಂದೆಯಿಂ, ಆಂಗ್ಲೇಯರಿಂದೆಯಿಂ
ಆ ಬಾಲ ವೃದ್ಧರಿಂದೆಯಿಂ ಸಬೆ ಕಿಕ್ಕಿರಿದು
ತುಂಬಿ ತುಳುಕಿದತ್ತು ಇನಿತು ತಾವಿರದ ತೆರದಿ.
ನಿಗದಿತ ಸುಗಳಿಗೆಯುಂ ಕೂಡಿಬರೆ ಗಮಿಸಿದರ್
ಗುರುದೇವಂ ಮುಗಿದ ಕೈಗಳ್ ಇಳಿಸದೆಯೆ, ವದನ
ಬಿಂಬದಲಿ ಪ್ರಸನ್ನ ಮಧುರಭಾವದ ಮುಗುಳ್
ನಗೆಯಂ ಹರಿಸಿ. ಜನಗಳ ಮಧ್ಯೆ ನಡೆದುಬರೆ

ಜೊತೆಯೊಳ್ ಇರುತಿರ್ದರ್ ಕ್ಸೇವಿಯರ್ ದಂಪತಿಗಳ್
ಗುಡ್‌ವಿನ್ ಮತ್ತಂ ಪುರ ಪ್ರಮುಖರ್. ಬಹುಲ ಪರಮ
ಜನೋನ್ಮಣಿಗಳಿಂ ಪರಿಶೋಭಿತಮಾದುದಾ
ಎತ್ತರದ ವೇದಿಕೆಯ ದಿವ್ಯಪೀಠ. ಸ್ವಾಮಿಜಿ ತುಂಬಿದ
ಸಭೆಯಮೇಲೆ ಸಮ್ಯಕ್ ದೃಷ್ಟಿಯಂ ಬೀರಿದರ್
ಏಂ ಸಂಭ್ರಮ? ಏಂ ಸಡಗರ? ಏಂ ಕುತೂಹಲ?
ಮೈಯೆಲ್ಲ ಮನಸ್ಸಾಗಿದೆ ಜನಗಣ ಸಂದಣಿ.
ಕರತಾಳಗಳ್ ಮೊಳಗಿದುವು ಹರ್ಷದ ಹೊನಲದು
ಮರ್ಮರಿಸಿತು. ಮನುಕುಲದ ಸನ್ಮಿತ್ರ ಯೋಗಿವರ್ಯ
ಕಲಿಯುಗದ ಮಹಾಚಾರ್ಯ! ಮಹಾನ್ ಪುರುಷೋತ್ತಮ!
ವಿಶ್ವಧರ್ಮಮೇಳದ ಅಧ್ವರ್ಯು! ಎನಲದೇಂ
ಸಾಮಾನ್ಯಮೆ? ಕತ್ತಲೆಗೆ ದೀಪದ ಕಿರಣಗಳ್
ಮೂಡಿದವೊಲಾಯ್ತು.
ಸ್ವಾಮಿಜಿಯುಂ ಭಾಷಣದ
ಮಾಲೆಯಂ ಹರಿಸಿದರ್."ಹೇ, ಭ್ರಾತೃಗಳೆ ಕೇಳಿ,
ನಿಮ್ಮ ಧರ್ಮನಿಧಿಯಂ ನೀವ್ ಕಾಯ್ದುಕೊಳುವೊಡೆ
ಮುಂದಾಗಿ! ಏಳಿ, ಎದ್ದೇಳಿ! ನಮ್ಮ ನಾಡಿನ
ತಾಯಿಯೈಸಿಹ ಸನಾತನ ಧರ್ಮದೊಳ್ ನಿಮಗೆ
ಉತ್ಕಟರಸ ಭಕ್ತಿಭಾವಮಿರ್ದೊಡೆ ತವ
ಹಿಂದೂ ಸೋದರರ್ ಕ್ರೈಸ್ತಧರ್ಮಕೆ ಮತಾಂತರ
ಹೊಂದುವುದನುಂ ಸಹಿಸಿಕೊಂಡಿರೆಂತು? ನಿಮ್ಮೊಳ್
ತಿಳಿದರಿದು ಪರಿ ಭಾವಿಸಿ ನೋಡಿರೈ! ಯೋಚಿಸಿ,
ಅಲ್ಲಿಗಾಯ್ತು ಧರ್ಮಗೊಲೆ! ಇಂದು ತವ ತೆರೆದಿಹ
ಕಂಗಳೆದುರಿಂಗೆ ನಡೆದಿಹುದೀ ಕುಕರ್ಮ. ದಿನ
ನಿತ್ಯವುಂ ಕಂಡು ಕೇಳಿದ ಧರ್ಮಗೊಲೆಯಾಯ್ತು.

ಎಂತಿದಂ ಮನಮತಿಗಳ್ ತಾಳ್ದುವು ಪೇಳಿರೈ.
ಧರ್ಮಶ್ರದ್ಧೆ ದೇಶಭಕ್ತಿ ಇವೆಲ್ಲವುಂ ಎಲ್ಲಿ,
ಯಾವೆಡೆಯಲಿ ಅಡಗಿದುವು ಪೇಳಿಮ್! ಭಾರತದ
ಧರ್ಮಪುರುಷರುಂ ಮತಿಮಾಂದ್ಯದಿಂ ಮತಾಂತರ
ಪೊಂದುವುದೆನೆ ಸಾಮಾನ್ಯಮಲ್ತು. ದಿನನಿತ್ಯಂ
ಕ್ರೈಸ್ತಪಾದ್ರಿಗಳ್ ನಿಮ್ಮಮೊಗಮಂ ಅವ್ವಳಿಪ
ಮಾಳ್ಕೆಯಲಿ ಹಿಂದೂಧರ್ಮವಂ ತೆಗಳ್ವರಲ್ತೆ?
ಆದೊಡಂ ಅದಂ ಕಂಡು ಸಾತ್ವಿಕ ಕ್ರೋಧದಿಂ
ನಿಮ್ಮ ಕೆನ್ನೆತ್ತರ್ ಕುದಿದೇಳದೆ ಜಡವಾಗಿ
ಮಿಣ್ಣನಿರ್ದುದೆಂತು? ಸ್ವಧರ್ಮದ ಮಾನವಂ ಕಾಯ್ದು
ಕೊಳ್ಳುವೊಡೆ ಮುಂದ್ವೈದು ನಿಲ್ವವರ್ ಎನಿತೆನಿತು
ಮಂದಿ ಇರ್ಪರಿಲ್ಲಿ? ಎಲೆ, ಅಮೃತ ಪುತ್ರರಿರಾ!
ಬಿಜ್ಜೆ ಎಂದೊಡದು ಬರಿ ಅಕ್ಕರಂಗಳ ಮೇಣ್
ಶಬ್ದಗಳ ಸಂಗ್ರಹಮಲ್ಲಂ! ವ್ಯಕ್ತಿವ್ಯಕ್ತಿಯಾ
ವಿಶಿಷ್ಟ ಮನೋಗುಣಗಣಗಳ ನಿರ್ಮಾಣಮೇ
ಆಗಲಕ್ಕು. ವ್ಯಕ್ತಿವ್ಯಕ್ತಿಯೊಳ್ ಯೋಗ್ಯ ಆಕಾಂಕ್ಷೆ
ಮೂಡಿಸಿ ಪರಿಪೂರ್ಣಗೊಳಿಪುವ ಸತ್ಪಾತ್ರುವೇ
ಬಿಜ್ಜೆ. ಕೇಳಿ, ಅಂತೊಂದು ಘನ ವಿದ್ಯೆಯಿಂದಲಿ
ಸಂಘಮಿತ್ರಾ ಲೀಲಾ ಅಹಲ್ಯಾಬಾಯಿ ಮೀರಾ
ಬಾಯಿ ಇಂತಿಂಥ ಪಾವನ ಪರಂಪರೆಯಿಂದೆ
ಮುಂಬರಿವ ನಿರ್ಭೀತ ಶ್ರೇಷ್ಠ ಮಹಿಳಾಮಣಿಯರ
ನಿರ್ಮಾಣವಾಗವೇಳ್ಕುಂ! ಪರಮೇಶ್ವರನ ಪಾದದ
ಸ್ಪರ್ಶದಿಂದ್ವೈದುವ ಪರಮಸಾಮರ್ಥ್ಯಮುಳ್ಳಂಥ
ವೀರಮಾತೆಯರುಂ ತ್ಯಾಗಮಯೀ ಮಹಿಳೆಯರುಂ
ಮುಂದ್ವೈದು ವರ ವೀರಾಗ್ರಣಿಗಳ ನೆಚ್ಚೆದೆಗೆ

ಕೆಚ್ಚಂ ಸುರಿದು ಬಾಳ್ ಬೆಳಗಿಪ ಬೆಳಕೆ ಪವಿತ್ರ
ಜ್ಯೋತಿ! ಅದರಿಂದೆ ವಿದ್ಯೆಬುದ್ಧಿ ಜ್ಞಾನ ಎಲ್ಲಾ.
ವಿದ್ಯೆಯೋಳ್ ಸಂಜೀವನಯಾಪನೆ ಮಾತ್ರಂ
ಅಲ್ಲವು. ಅದರೊಳ್ ಧಾರ್ಮಿಕಾಂಶವು ಜಡಿತುಂಬಿ
ತುಳುಕಲ್ವೇಳ್ಕುಂ. ವಿದ್ಯೆಗಳ ಆತ್ಮವೆ ಧರ್ಮ,
ಎಂಬುದಂ ಆರ್ ಮರೆಯದಿರಿ. ಹೇ, ಬಂಧುಗಳೆ!
ಕೇಳಿ, ಆನಿಂದು ಶ್ರೀ ಗುರುದೇವ ರಾಮಕೃಷ್ಣ
ಪರಮಹಂಸರಂ 'ಯುಗಾವತಾರ' ಎಂದು ಸಾರಿ
ಘಂಟಾಘೋಷವಾಗಿ ನುಡಿದಪೆನ್. ಭಾರತದ
ಜನಾಂಗಮಂ ಮೇಣ್ ಸನಾತನ ಧರ್ಮಮಂ
ಉದ್ಧರಿಸಲೆಂದ್ಯೆದ ಮಹಾಪುರುಷ ಶ್ರೀರಾಮ
ಕೃಷ್ಣದೇವ! ಈ ರಾಷ್ಟ್ರದ ಚರಮಲಕ್ಷ್ಯ ಆ
ಮಹಾನ್ ಮಹಿಮಾಮಯನಿಂದಲೇ ಎಂದೊಡದು
ಅನ್ಯಮಲ್ತು! ಯೋಚನೆಯಾಳದಲಿ ಮುಳುಗೆದ್ದು
ನಿಮ್ಮೊಳಗೆ ನೀವ್ ತಿಳಿದುನೋಡಿರಿ! ಕೇಳಿಲ್ಲಿ,
ಹಿಂದೂ ಧರ್ಮವುಂ ಮನುಕುಲದೆದುರಿಗಿಟ್ಟಿರ್ಪುದು
ಒಂದೇ ಒಂದು ದೃಢಗತಿಯ ನಿಲುವು ಅದೇನೆನೆ
'ಕರ್ತವ್ಯ'. ಆ ಕರ್ತವ್ಯವೆಂಬುದು ಬರಿಯಕೈ
ಕೆಲಸವಲ್ಲಂ, ತಿಳಿಯಿರ್ಪೈ ಹಾರ್ದಿಕವಾದ 'ಧರ್ಮ
ಕರ್ಮಾಂತ' ಪರಮ ಕರ್ತವ್ಯ. ನಶ್ವರತೆಗಳ
ಮಧ್ಯೆ ಶಾಶ್ವತ ಸತ್ಯಮಂ ಕಾಂಬುದೇ ದಿವ್ಯ
ಕರ್ತವ್ಯದ ಹೆಗ್ಗುರಿಯಾಗಿರವೇಳ್ಕುಂ. ಆದೊಡಾ
"**ತ್ರಿಸತ್ಯಸ್ಯ ಭಕ್ತಿರೇವ ಗರೀಯಸಿ**" ಎಂಬುದೆ
ನಿಮ್ಮಯರಕ್ಷಾ ಕವಚ. ಮಿತ್ರ ಬಂಧುಗಳೇ,
ಈಗ ನಮ್ಮ ವೈಚಾರಿಕ ದೃಷ್ಟಿ ಭರತಖಂಡದ

ಆದ್ಯಂತ ಹರಿದೊಡೆ ಸರಕಾರದ ಗುಣದೋಷ
ತೋರ್ವುದೆಮಗೆ. ಬ್ರಿಟಿಷರ ಆಡಳಿತದೊಳೊಂದು
ಒಳ್ಳೆಯಂಶಮೆನೆ ಪಾಟಲೀ ಪುತ್ರ ಸಾಮ್ರಾಜ್ಯ
ಪತನದ ಬಳಿಕ ಇಡೀ ಸಾಮ್ರಾಜ್ಯದುದ್ದಗಲಕ್ಕೆ
ಪ್ರಬಲ ಏಕಚಕ್ರ ಆಳ್ವಿಕೆಯ ಸಂಸ್ಥಾಪನೆ!
ಅವರ ವೈಶ್ಯ ಸಹಜ ಪ್ರಭುತ್ವಮಿತ್ತ ವ್ಯಾಪಾರ
ಮೇಣದ್ಭುತ ವ್ಯವಹಾರದ ಪರಿಣಾಮದ ಫಲದಿಂ
ಭಾರತದ ನರನಾಡಿಗಳಿಗೆ ಬೇರೆವೇರೆಯ
ದೇಶಂಗಳ ಕಲ್ಪನೆಗಳ್ ವಿಚಾರಗಳ್ ಜಳ
ಜಳ ನುರ್ಗ್ಗಿರೆ ಪ್ರಗಾಢ ನಿದ್ರೆಯಿಂದೆಳ್ಚ್ತರುವ
ಪೊಳ್ತು ಒದವಿದುದು ಒಳ್ಳಿತಾಯ್ತು ಭಾರತೀಯರ್ಗೆ.
"ಓ, ಕೇಳಿರೈ! ಮುಂದೆ ನಿಮ್ಮ ದಾಕ್ಷಿಣ್ಯಕ ಬುದ್ಧಿ
ಗರಿಗೆದರಿ ಮೈಕೊಡವಿ ಎಳ್ಚತ್ತು ನಿಲ್ವೊಂದು
ಅಳ್ಕರೆಯೆನಗುಂಟು! ಪರಮ ಸೋದರರೆ, ಏಳಿ,
ಎದ್ದೇಳಿ! ಪುರುಷ ಸಿಂಹರಾಗಿ! ಜಡತನಮಂ
ಕಿತ್ತೊಗೆದು ಸಿಡಿದೇಳಿ! ಭಾರತ ಜನನಿಯ ಕಡು
ಸಂಕಟದ ಕರೆಯ ದನಿಯಂ ಕೇಳಿ! ಜಡರಲ್ಲ
ನೀವ್! ಕುರಿಗಳಲ್ಲ ನೀವ್! ಭರತ ವಂಶ
ಸಂಜಾತರ್! ವಿಚಾರಶೀಲರ್! ಅನನ್ಯ ಜಾಗ್ರತ
ಮನಮತಿಯ ಪಾರಾವಾರದೊಳ್ ಬಗೆದು ಸ್ವತಂತ್ರ
ಸುವಿಚಾರ ದೋಹನಂ ಬೆಳೆಯಲಕ್ಕುಂ. ಈಗಳ್
ನಿಮ್ಮಗ್ಗಳ ಜನ್ಮಸಿದ್ಧ ಹಕ್ಕಾದ ಭೌತಿಕ
ಶಕ್ತಿಗಳ ಪ್ರಯೋಗ ಸನ್ನಿಹಿತ. ವಸ್ತುನಿಷ್ಠ
ಸಂಗತಿ ಭವ್ಯ ತೇಜದಿಂ ಉಜ್ವಲಿಪುದೊಂದು
ಕಡೆ, ಮತ್ತಮಾ ಪಾಶ್ಚಾತ್ಯ ವಿಜ್ಞಾನಜ್ಞಾನ

ಎದುರ್ವೆತ್ತುದಿನ್ನೊಂದು ಕಡೆ, ನಮ್ಮ ಪ್ರಾಚೀನ
ವೈಭವದ ರಾಶಿಯಲಿ ಗುರುತ್ವದ ಪರಂಪರೆ
ಶಿಖರವೇರಿ ಬಲಪ್ರದಮಾದುದು ಇನ್ನೊಂದು
ಕಡೆ. ಪಾಶ್ಚಾತ್ಯರ ನಿರ್ಲಜ್ಜ ಸ್ವೈರತೆಯನುಭೋಗ
ವಾಸನೆಯು ರಾಚುತಿರ್ಪುದು ಇನ್ನೊಂದು ಕಡೆ. ಈ
ಎಲ್ಲ ಬಗೆವಗೆಯ ಆಕರ್ಷಣೆಯ ಜಂಜಡದ
ಗೊಂದಣದ ವಿಚಿತ್ರವೈಭವದಲಿ ಕಂಗೆಟ್ಟು ಪಥ
ಗೆಡದಿರಿಮ್. ಪ್ರಾಚ್ಯ-ಪಾಶ್ಚಾತ್ಯಗಳ ತತ್ತ್ವವಂ
ತೂಗಿ ನೋಡಿ! ಅಂತರಂಗಮಂ ಬೊಕ್ಕು ನೋಡಿ!
“ಓ ಮಾನವಾ ಅತೀತದ ಪೂಜೆಯಿಂ ಪ್ರತ್ಯ-
ಕ್ಷದ ಪೂಜೆಗೆ ನಿನಗಿದೊ ಆಹ್ವಾನ! ಗತಾನು-
ಶೋಚನೆಯಿಂ ಆಧುನಿಕ ನವ ಪ್ರಯತ್ನಕೆ ನಿನ-
ಗಿದೋ ಆಹ್ವಾನ! ಲುಪ್ತಪಂಥದ ಪುನರುದ್ಧ-
ರಣ ಸಾಹಸದ ವೃಥಾ ಶಕ್ತಿ ಕ್ಷಯದಿಂ ಸದ್ಯೋ-
ನಿರ್ಮಿತ ವಿಶಾಲ ಸನ್ನಿಕಟ ಪಥಕೆ ನಿನಗಿದೊ
ಆಹ್ವಾನ! ಓ, ಬುದ್ಧಿಮಾನ್ ಮಾನವಾ ಇದಂ
ತಿಳಿದು ನೀಂ ಸಿದ್ಧನಾಗು, ಪ್ರಬುದ್ಧನಾಗು! ಆವ
ಶಕ್ತಿಯಾ ಉನ್ಮೇಷ ಮಾತ್ರದಿಂ ದಿಗ್ದಿಗಂತ
ವ್ಯಾಪಿಯಾದ ಪ್ರತಿಧ್ವನಿಯಿಂದೆ ಜಗಜ್ಜಾಗ್ರತ-
ಮಾದಪುದೋ ಆ ಶಕ್ತಿಯ ಪೂರ್ಣತ್ವವಂ ಪರಿ-
ಭಾವಿಸಿ ಅನುಭವಿಸು! ವೃಥಾ ಸಂದೇಹ ಬೇಡ,
ದುರ್ಬಲತೆ ಬೇಡ, ದಾಸಜಾತಿ ಸುಲಭ ಈರ್ಷ್ಯಾ
ದ್ವೇಷಗಳನು ದೂರಗೈದು ಈ ಮಹಾಯುಗಚಕ್ರ
ಪರಿವರ್ತನೆಯ ಸಹಾಯಾರ್ಥಂ ಹೆಗಲುಕೊಟ್ಟು
ನಿಲ್ಲು; ಸೊಂಟಕಟ್ಟಿನಿಲ್ಲು, ಧೀರನಾಗಿ ನಿಲ್ಲು!

“ನಾವ್ ಪ್ರಭುವಿನ ದಾಸರ್ ಪ್ರಭುವಿನ ಪುತ್ರರ್;
ಪ್ರಭುವಿನ ಲೀಲೆಗೆ ಸಹಾಯಕರ್ ಎಂಬುದಂ ತಿಳಿ!
ವಿಶ್ವಾಸ ಭರಿತ ಹೃದಯದಿಂ ದೃಢಭಾವಧಾ-
ರಿಯಾಗಿ ಕಾರ್ಯಕ್ಷೇತ್ರಕೆ ಧುಮುಕು! ನಿರ್ಭರತೆಯಿಂ,
ಧುಮುಕು. **“ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್**
ನಿಬೋಧತ”

ಆ ಸಿಡಿಲಾಳ್ ಸಿಂಹವಾಣಿಯಲಿ
ಅನುಭವ ಬೆಂಕೆಯುಗುಳಿ ಸಿಡಿಲ್ಮಿಂಚೆರೆಚಿರ್ದ
ಸಿರಿಗೊರಳಿನ ವಾಗ್ಜಾಲವಂ ಕೇಳ್ದವರ ಸುಪ್ತ
ಚಿತ್‌ಶಕ್ತಿ ಆತ್ಮಶಕ್ತಿ ಮಿಡುಕಿ ಗೌರವಾ-
ಭಿಮಾನದ ಕಿಡಿಗಳ್ ಸಿಡಿದೆದ್ದುವು ಕಣ್‌ಕಂಗ-
ಲಿಸುವಂತೆ. ಮೆಯ್ಯ ನರನಾಡಿಗಳಲಿ ಹೊಮ್ಮಿಂಚು
ಹೆಮ್ಮಿಂಚುಗಳ ಝುರಿಯದು ಚಳಚಳಿಸುತೆ ಸಂಚ-
ರಿಸಿತು. ಸ್ವಾಮೀಜಿಯುಂ ಮುಂದುವರಿಸಿದರ್ ಅದೆ
ಧಾಟಿಯಲಿ “ಓ, ಕೇಳಿಲ್ಲಿ! ಪುರಾಣ ಪ್ರಥಿತ ವಾಣಿ,

“ಆಕರ್ತವ್ಯಂ ನಕರ್ತವ್ಯಂ
ಪ್ರಾಣೈಃ ಕಂಠಗತೈರಪಿ
ಕರ್ತವ್ಯಮೇವ ಕರ್ತವ್ಯಂ
ಪ್ರಾಣೈಃ ಕಂಡಗತೈರಪಿ ॥”

ಸ್ವಮುಕ್ತಿಯ ಸಲುವಾಗಿ ಮನುಜಂ ಜಗತ್ತಿನ
ಬಂಧು ಬಾಂಧವ್ಯ ಸಂಬಂಧಮೆಲ್ಲಂ ತಾಂ ಕಡಿದು
ಒಂದೇ ಸಲಿಗೆ ಕಳ್ತರಿಸಿಕೊಳೆ ಪ್ರಯತ್ನಿಸಿದೊಡೆ.
ಮಡದಿ ಮಕ್ಕಳ ಮಾಯೆಯಂ ಖಡಿ ಖಂಡಿಸುತೆ
ಭವಧಿಯಲಿ ಸಂಸಾರ ಬಂಧನಂ ಹರಿದು
ದೂರ-ಬಹುದೂರ ಸಾಗಿಹೋಗುವ ಸಾಹಸಂ

ಗ್ಯವಂ. ದೇಹಗತ ಆತ್ಮಗ್ರತ ಮನೋಗತ ಸಕಲ
ತರದ ಸಂಬಂಧಗಳ ಪುರಾತನ ಸಕಲ ಸಂ–
ಸ್ಕಾರಗಳ್ ಅಲ್ಲದೆಯೆ ಮಾನವ ಸಹಜ ಲಕ್ಷಣ
ಕಡೆಗಣ್ಚಿ ಛಲದಿಂ ಹಠದಿಂ ಬಿಗಿಮಾನಸದ
ವಾಘ್ ವಿಡಿದು ಹೆಣಗುವಂ. ಅಂಥ ವಿರಕ್ತಮಾ–
ರ್ಗೀಯ ಹೃನ್ಮನಗಳಾಂತರ್ಯದಾಳದಲಿ ಸರ್ವತ್ರ
ಸದಾ ಅಸ್ಫುಟ ಧ್ವನಿಯೊಂದು ಕೇಳಿಬರುತಿರ್ಪ
ಮೆಲ್ಲುಲಿಯದೇಂ ಬಲ್ಲಿರಾ? "**ಜನನೀ ಜನ್ಮ ಭೂ–
ಮಿಶ್ಚ ಸ್ವರ್ಗಾದಪಿ ಗರೀಯಸಿ!**"
ಪೆರ್ಮರದಲಿ
ನಡುನೆತ್ತಿಯಮೇಲೆ ಕುಳಿತೊಂದು ಸವಿಗೊರಳಿನ
ಕೋಗಿಲೆಯು ಹಾಡಿದುದು ಸವಿಯಾದ ರಾಗರಸ
ಹರಿಸಿ. ಪ್ರಾತಃಕಾಲೀನ ತನಿವೊಳ್ತಿನಲಿ ಪೊರ
ಮಟ್ಟರ್ ಗುರುವರಂ ದಕ್ಷಿಣೇಶ್ವರದ ಕಾಳಿಕಾ
ಮಾತೆಯ ಗುಡಿಗೆ. ತಮ್ಮ ಪ್ರಾಚ್ಯ ಪಾಶ್ಚಾತ್ಯ ಶಿಷ್ಯ
ಗಣದೊಡಂಗೂಡಿ. ಪಯಣಂ ಮುಗಿದುದು ನಸುವೇ
ಪೊಳ್ತಿನಲಿ. ಗುರುದರ್ಶನಂಬಡೆಯೆ ಪರಿಸರದ
ಜನರಾಶಿ ಬಂದು ತುಂಬಿದುದು ದೇಗುಲದಲಿ–
ಮುಖಭೂಮಿಯ ಹೊರಾಂಗಣದಲ್ಲಿ. ಗುರುವರನ
ವದನಾರವಿಂದಮಂ ಕಂಡೊಡನೆ ಸಹಸ್ರತರ
ಕಂಠೋತ್ಥಿತ ಜಯಧ್ವನಿಯು ಮೆರೆದುದು ಅದ್ಭುತ
ವೈಖರಿಯಲಿ "ಜಯ ರಾಮಕೃಷ್ಣ! ಜಯಜಯಾ
ವಿವೇಕಾನಂದ"! "ಜಯ ಜಯತೇ!" ಬಹು ಕಂಠ
ಧ್ವನಿಗಳ ಘೋಷ ಪ್ರತಿಧ್ವನಿ ಪಡೆದುದಮಿತ
ಆನಂದ ಭಾವದಿಂ. ವಿದ್ವನ್ಮಣಿಗಳೈದರ್. ವಟುಗಳ್

ಗಮಿಸಿದರ್, ಭಕ್ತಜನ ಕೂಡಿದರ್, ಪಾಮರರ್
ಸೇರಿದರ್ ಗುರುದೇವನ ಸಂದರ್ಶನಾರ್ಥಂ.
ಒಂದೆರಳ್‌ಮೂರ್‌ನಾಲ್ಕುಮೈದಾರೇಳೆಂಟು
ಪೊಚ್ಚಪೊಸ ವಟುಗಳೈದರ್ ದೀಕ್ಷೆಯಂಬಡೆವ
ಮಹದಾಸೆಯಿಂದೆ. ಪುರುಪು ಪುರುಡುಗಳಿಂ ಕೂಡಿ
ಮುಂದೈದ ವಟುಗಳ ದರ್ಶನದಿಂ ಪ್ರಸನ್ನ
ಮುಖಿಯಾದರ್ ಸ್ವಾಮಿಜಿ. ಪೂಜಾವ್ರತದೊಳ್
ವಾದ್ಯಗಳ್ ಮೊಳಗಿದುವು ಮಂಗಳ ಘೋಷದಿಂದೆ.
ದೇಗುಲದ ಅರ್ಚಕರ್ ಪೂರ್ಣಕುಂಭಗಳ್ ಹೂಡಿ
ಪೂಜಿದರ್. ಕಾಲ್ಮಡಿದು ಧರ್ಬಾಸನದ ಮೇಲೆ
ಗುರುವರಂ ಮಂಡಿಸಿರೆ ಜನಗೋಷ್ಠಿಯು ಕೈಮುಗಿದು
ಪ್ರವಚನಮಂ ನೀಡಿಮೆಂದು ಬೆಸಸಿದರ್ ಬಲ್
ವಿನಯದಿಂ, ''ಆಗಳಾ ಜನರಿಂಗೆ ಕಿರಿದೊಂದು
ಪ್ರವಚನವ ನೀಡಿದರ್ ಸ್ವಾಮಿಜಿ'' ಕೇಳಿರಿ,
ಧ್ಯನ್ಯಾತ್ಮರೆ! **''ಧರ್ಮೋ ರಕ್ಷತಿ ರಕ್ಷಿತಃ''** ಎಂಬೀ
ವೇದವಾಣಿಯಂ ನೀವ್ ಕೇಳಿ ಅರಿತುನುರಿತು
ಬಲ್ಲವರ್. ಆದೊಡಂ ಕರ್ಮಾಕರ್ಮಂಗಳಂ
ಅರಿದು ಆಚರಿಪುದದುವೇ ಮಾನವೀಯ ಗುಣ.
ಯೋಗೀಶ್ವರ ಯಾಜ್ಞವಲ್ಕರುಂ ಪೇಳ್ದ ಮಂತ್ರವ
ಕೇಳಿ, **''ಸಮ್ಯಕ್ ಸಂಕಲ್ಪಜಃ ಕಾಮಃ ಧರ್ಮ**
ಮೂಲಮಿದಂ ಸ್ಮೃತಮ್'' ಶಾಸ್ತ್ರವಿರೋಧಮಲ್ಲದಿಹ
ಇಚ್ಛೆಯೇ ಧರ್ಮಗಳ ಮೂಲ. ಗೀತೋಪದೇ-
ಶದಲಿಯಂ ಗೀತಾಚಾರ್ಯನುಂ ನುಡಿಸಿದುದಿದೇ
ಎನಲ್ ಸತ್ಯಸ್ಯ ಸತ್ಯಂ. ಧರ್ಮಮಿರದ ಬಾಳ್ಮೆ
ಸುವ್ಯರ್ಥಂ. ನಮ್ಮೊಳ್ಗೊಗೊಳಗಣ ಪ್ರಮುಖದೋಷ

ಮೇನೆಂಬುದ ನೀವ್ ತಿಳಿಯಿರಿ. ಜೋಪಡಿ ಗುಡಿಸಲಲಿ
ವಾಸಿಸುವ ನಮ್ಮೆಲ್ಲ ಸೋದರಗಣಮಂ ಕಣ್
ಇರ್ದು ಕುರುಡಾದ, ಕಲಿತು ಬಲಿತಿಹ ಬಲ್ಲಿದರ್
ದುರ್ಲಕ್ಷಿಸುತಿಹುದು ಎಲ್ಲೆಡೆಯು ಕಾಂಬುದೆಮ್ಮ
ಕಣ್‌ದಿಟ್ಟಿಗೆ. ಆ ಅಧಿಕಾಧಿಕ ಜನಗಣಮಂ
ಉದ್ಧರಿಸುವೊಡೆ ಪ್ರಯತ್ನ ಪಡವೇಳ್ಕುಂ. ಮೊದಲ್
ವಿದ್ಯಾದಾನ ಬಳಿಕಂ ಜೀವನ ಪಟುತ್ವ ಕಲಿಪಿ
ಕುಪಥದಿಂ ಸುಪಥಕೆ ಹಚ್ಚದೆಯೆ ಎಲ್ಲಿಹುದು
ಉತ್ತಮೋತ್ತಮ ಪ್ರಗತಿ ಈ ರಾಷ್ಟ್ರಕೆ? ಅವಿದ್ಯೆ
ಅಜ್ಞಾನಗಳ ಕೂಪಮೆನೆ ಮನಂ ಮರುಕದಿಂ
ತುಡಿಯುವುದು ''**ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ
ಕಾರ್ಯಾಕಾರ್ಯ ವ್ಯವಸ್ಥಿತಾ**'' ನಮ್ಮ ಸೋದರೀ
ವರ್ಗಂ ವಿದ್ಯಾವಿಹೀನತೆಯ ಜಾಡಿನಲಿ ಕಡು
ಭಂಗದಿಂ ತೊಳಲಿ ಬಳಲುವ ದೃಶ್ಯಮಿಲ್ಲಿ ಅತಿ
ಸಾಮಾನ್ಯಮನೆ ಅನ್ಯಮಲ್ತು. ಮುಂದೆಲ್ಲ ಜನ
ಗಣಮನಮತಿ ಅರಳ್ವೊಡೆ ಸುವಿದ್ಯಾಯೋಗಮೆ
ಭಾಗ್ಯಪ್ರಧಾನಂ. ಜಗದ ಮುನ್ನಡೆಗೆ ಜನನಿಯೆ
ಸೂತ್ರದಾರಿ. ಅಂದುಬಳಿಕಂ ಸ್ತ್ರೀ ವರ್ಗಕ್ಕೆ
ಕೈತುಂಬ ವಿದ್ಯಾದಾನಗೈಯದೊಡೆ ಗತಿಯೆಂತು?
ವಿದ್ಯೆಯೆ ಸಕಲ ಸಜ್ಜನಿಕೆಗೆ ವೈಭೋಗಕ್ಕೆ
ದಾರಿ. ನೀವ್ ನಿಂಸಿಮ್ಮ ಕುಟುಂಬ ವರ್ಗಕ್ಕೆ
ಸುವಿದ್ಯಾದಾನಗೆಯ್ವೊಡಾಯ್ತು. ಬಳಿಕಲವರೆ
ತಂತಮ್ಮ ಉದ್ಧಾರಗೈದಪರ್. ಅವರವರ
ಜಾಗತೀಕರಣ ಅವರವರಿಂದಲೇ ಆಗಿ
ಬೆಳೆದು ಬಲಿವುದು, ಎನಲ್ ನಾಗರಿಕ ಯಜ್ಞಕ್ಕೆ

ಅಧ್ವರ್ಯುರ್ನೇತಾರಹೋತಾರರ್ ತಾವೇ ಆಗಿ
ವಿಜೃಂಭಿಪುದು ಬಾಳ್ಪೆಳಕು."
ಅಲ್ಲಿಗೆ ಮುಗಿದುದು
ಪ್ರವಚನದ ವಿಮಲಧಾರೆ, ಭಕ್ತಜನರ ಅಮಿತ
ಸಂಭ್ರಮದ ಕಾವೇರಿಳಿದ ಬಳಿಕ ಪೊರಮಟ್ಟು
ಎಲ್ಲರಿಂ ಬೀಳ್ಕೊಂಡು ಮೆಟ್ಟಿಲಿಳಿದರ್ ಸ್ವಾಮಿ
ವಿವೇಕಾನಂದರ್ ಗೆಳೆಯ ಮಂಡಲಿಯೊಡಂಗೂಡಿ.
ಅಲಂಬಜಾರಿನ ಮಠದ ಹಾದಿ ಹಿಡಿದರ್ ತಮ್ಮ
ಗುರುಭಾಯಿಗಳಂ ಕಾಂಬ ಉತ್ಸುಕತೆ ಬೆಳೆದುದು
ಹೃನ್ಮನಗಳಂ ತುಡಿತಗಳಿಗೊಡ್ಡಿ. ಪಾಶ್ಚಾತ್ಯ
ಭೂಮಿಯಲಿಹ ತಳುಕು ಬೆಳಕಿನ ಜ್ವಲಂತ ಸಮಸ್ಯೆ
ಪುಟಿದೇಳ್ವ ಉಬ್ಬರಮಿರದೆ ತಿಳಿನೀರೊಳ್ ಮಿಂದು
ತಣಿದಂತೆ ತಣ್ಣಗಾಯ್ತು ಜೀವ. ಗುರುದೇವಂ
ಅಲಂಬಜಾರಿನ ಆಶ್ರಮದಲಿ ಸಹಾಧ್ಯಾಯಿ
ಸೋದರರ ಅನನ್ಯ ಸುಖಾಶ್ರಯದಿ ಕಳೆದರೊಂದು
ವಾರಮಂ. ಒರ್ಮೆ ಥಿಯಾಸೊಫಿಯ ಸಾಂಘಿಕಕಾರ್ಯ
ಕರ್ತನೊರ್ವನುಂ ಗುರುವಿನ ಬಳಿಗೈತಂದನ್.
ನೊಂದ ಹೃನ್ಮನಂಗಳ್ ಕುದಿಗೊಂಡು ಬೆಂದಂತೆ
ಬೇವಾಗಿ ಮ್ಲಾನವದನದಿಂ ಎದುರ್ವೆತ್ತು ನಿಂದಂ.
ನುಡಿಯಲಾರ ಬಿಡಲಾರನೆನೆ ಸಂಕಟದ ಗಣಿ
ತಾನಾಗಿ. ಕೇಳಿದರ್ ಸ್ವಾಮಿಜಿ "ಎನ್ನೈ ಈ
ಪರಿಯಲಿ ಮನನೊಂದಂತೆ ಪಡಿಮೊಗದೊಳ್ ನಿಂದೆ?
ಏಂ ಸಮಾಚಾರಮೋ ಪೇಳ್ಕೆ ಸಹೋದರಾ?"
"ಸ್ವಾಮಿಜಿ, ಅನಿನ್ನೆಬರಂ ಆವಾವುದೋ
ಪಂಥಮಂ ಅನುಸರಿಸಿ ನಿಷ್ಠೆಯಿಂ ನಡೆದೆನೆನ್.

ಆದೊಡೇಂ ಕಿಂಚಿತ್ ಸುಶಾಂತಿಯಂ ಪಡೆಯದೆಯೆ
ಪರಿತಪಿಸುತಿಹೆನ್. ಬಹು ಶಾಸ್ತ್ರ ಸೂತ್ರಂಗಳಲಿ
ಮುಳುಗಿ ಈಸಾಡಿ ಅಕ್ಕರಕ್ಕರಂ ಮನನಗೈದು
ಬಳಲಿದೆನೆನ್. ಎಂಗೆಯ್ದೊಡಂ ಇನ್ನೆಬರಮೆನಗೆ
ನಿಜ ಶಾಂತಿಯಂ ಲಭಿಸದಾಯ್ತು. ಸಂಘದ ರೀತಿ
ನೀತಿಗಳ್ ಹಿಡಿಸದಾದುವು ಮನೋಗತಿಗೆ. ಆಂ
ಬಯಸೀಬಯಸಿ ಸತ್ಯಧರ್ಮಗಳ ಕಿರಣಮಂ
ಅರಸಿಯುಂ ಕಾಣದಾದೆನೆನೆ ದುಃಖ ಸಂಕಟದ
ಝುರಿ ಶೀಳುವುದೆನ್ನ ಕೊರಳ್. ನೀಮೆ ಎನ್ನೆಲ್ಲ
ಸಮಸ್ಯೆಯ ಬಗೆಹರಿಸಿಮೆಂದು ಕೇಳಿಕೊಂಬೆನ್."
ಗುರುವರಂ ತರುಣನ ಮುಖಬಿಂಬವ ಪ್ರಸನ್ನ
ವದನದಿಂ ನೋಡುತ್ತೆ ನುಡಿಸಿದರ್ "ಹೇ ವತ್ಸ!
ಚಿಂತಿಸದಿರ್. ಆನೊರ್ ಕಾಲದೊಳ್ ಇಂತೆಯೇ
ಅಶಾಂತಿಯ ಜಾಲದಲಿ ಸಿಲ್ಕಿ ತತ್ತರಿಸಿರ್ದು
ಕಂಡಕಂಡ ಗುರುಗಳ ಬಳಿಗೆತ್ತು ಮುಂದಾರಿ
ಕಾಣದೆಯೆ ಪರಿತಪಿಸುತ ಅಂಡಲೆದು ಜಾನಿಸುತ
ಬಗೆಗೆಟ್ಟಿರ್ದೆನಯ್, ನೀನಾವ ಪಂಥವಂ ನಂಬಿ
ಅನುಸರಿಸಿರ್ದೆ? ಸಾಧನೆಯ ಗುಟ್ಟೇನ್? ಪೇಳಯ್."
ಯುವಕಂ ಮನದೊಳ್ ಕಹಿರಸವಂ ಉಂಡಂತೆ
ಮುಜುಗರದಿ ಮುದುಡಿ ಉಸುರಿದನ್ "ಗುರುವರ್ಯನೆ,
ಥಿಯಾಸೊಫಿ ಪಂಥಿಯಾಂ. ಅಂತುಮಲ್ಲದೆ ಇತರ
ಪಂಥಗಳ ನೀತಿರೀತಿಗಳನರಿತಿಹೆನೆನ್. ಅವುಂಗಳಿಂ
ಕಿಂಚಿತ್ತೆನಗೆ ಮನಶ್ಶಾಂತಿಯದು ಬಾರದೆಯೆ ಉಳಿದೆನ್.
ಇದರಿಂ ವಿವಿಧ ರೀತಿಯ ಭಾವನೆಗಳಲಿ ಮುಳುಗಿ
ತೇಲಾಡಿ ಮನಸಿಗಿಸಿತು ಸತ್ ಶಾಂತಿಯಂ ಪಡೆಯದಾದೆಂ.

ಥಿಯಾಸಫಿ ಸಂಘದ ಸದಸ್ಯರ್ ಗೆಯ್ವ ಮೂರ್ತಿ ಪೂಜೆಯಂ
ನೋಡಿ ಮನಗೊಂಡು ಪೂಜೆ ಧ್ಯಾನ ಭಜನೆಗಳಂ
ಗೆಯ್ದೊಡಂ ಫಲವಿಲ್ಲಮಾಯಿತ್ತು. ಎನಿತೆನಿತೊ
ಸಾಧನೆಯ ರಂಗದಲಿ ಅಂಡಲೆದೆನ್ ಕದವಂ
ಮುಚ್ಚಿ ತಪವಗೆಯ್ದು ಗವಿಯಲಿ ಕುಳಿತು, ಶಾಂತಿಯ
ಕಿರಣಗಳಿಗಾಗಿ ಆಶಿಸಿ ಪಡೆಯಲಾಗದೆಯೆ
ಸೋಲ್ದು ಸೋಲೊಪ್ಪಿದೆನ್. ಅದರಿಂದಾನ್ಯೆದೆ ತವ
ಪಾದ ಸನ್ನಿಧಿಗೆ....ನೀಮೆನಗೆ ದಯೆಗೆಯ್ಯುತೆ
ಉಪಕರಿಸಿಮೆಂದಾನ್ ಬೇಡಿಕೊಂಬೆನ್ ಗುರವೆ."
"ವತ್ಸ! ನೀನೆನ್ನ ಮಾತು ಕೇಳ್ಕೈ. ಮೊದಲ್ ನಿನ್ನ
ಮನೆಯ ಕಿಟಕಿ ಬಾಗಿಲ್ ತೆರೆದು ಹೊರ ಜಗತ್ತಂ
ನೋಡೈ! ಕಣ್ಮುಚ್ಚಿ ನೀಂ ಒಳಗೆ ಕುಳಿತೊಡೇಂ ಫಲ?
ಬೆಳಕಿನ ಕಿರಣಗಳ್ ನಿನಗೆ ದಾರಿ ದೀಪ ಕಣಾ!
ನಿನ್ನ ಪರಿಸರದ ದೀನ ಜನರಂ ಕಣ್ತೆರೆದು
ನೋಡು! ದುಃಖಿತರು ದರಿದ್ರರು ತುಂಬಿರುವ ಈ
ನಾಡಿನ ಸಮಸ್ಯೆಗಳೆಡೆಗೆ ಗಮನವಂ ಹರಿಸು.
ಸಂತ್ರಸ್ತರಿಂಗೆ ಮನ ಮುಟ್ಟಿ ನೆರವಿತ್ತು ಕಡು
ರೋಗಿಗಳ ಶುಶ್ರೂಷೆಯಂಗೈ ಮೇಣ್ ಮೂರ್ಖರ
ಮನ ತಿದ್ದಿ ನೇರ್ಪಡಿಸೆ ಪ್ರಯತ್ನಿಸೈ. ವತ್ಸಾ!
ಈಯೊಂದು ಉನ್ನತಮಿಹ ಸೇವೆಯೆ ನಿನ್ನಯಾ
ಮನಮತಿಗಳಿಗೆ ಶಾಂತಿರಸವಂ ಹರಿಪುದು ದಿಟಂ,
ನಿನ್ನೊಳ್ ತಿಳಿದುನೋಡು. ಮನಮಥಿಸಿ ಪರಿಭಾವಿಸಿ
ತುಲನೆಗೆಯ್ದು ನೋಡು. ಇದೇ, ಈ ಸತ್ ಸೇವೆಯೆ
ನಿನ್ನಯ ಮನಕೆ ಶಾಂತಿಯಂ ದೊರಕಿಪುದು ತಿಳಿಯ."
"ಸ್ವಾಮಿಜಿ, ರೋಗಿಗಳಿಗಾಂ ಶುಶ್ರೂಷೆಗೈಯುವ

ಕತದೊಳೆನಗೆ ನಿದ್ರಾಹಾರಗಳ್ ತಪ್ಪಿ ಆಂ
ರೋಗವಶನಾದೊಡೇಂ ಗತಿ?''
ಆ ಮಾತುಗಳಂ
ಕೇಳ್ದು ಮನಗೆಟ್ಟು ಮೇಲೆಳ್ದು ಕೇಸರಿಯಂತೆ
ಗರ್ಜಿಸಿದರ್ ಸ್ವಾಮಿಜಿ ''ಸರಿ ಸರಿ, ನಿನ್ನೆಲ್ಲ
ನಡೆನುಡಿಗಳಿಂ ಎಲ್ಲರುಂ ನಿನ್ನನರಿದಪರ್.
ನಿನ್ನಂಥ ಪರಮ ಸುಖಿಗಳ್ ದೀನ ದಲಿತರಿಗೆ
ತಮ್ಮ ಬಹುಮೂಲ್ಯತರ ಆರೋಗ್ಯಭಾಗ್ಯವಂ
ಕಳೆದುಕೊಂಬರೆ, ನಾಬಲ್ಲೆನದಂ!''
ಇನ್ನೊರ್ಮೆ
ಪಂಡಿತನೊರ್ವನುಂ ಗುರುಗಳ ಬಳಿಗೈದು-''ಸ್ವಾಮಿ
ನೀಮೆಲ್ಲರ್ಗೆ ಜನ ಸೇವೆಗೆಯ್ಯುತ ಜಗತ್ತಿಗೆ
ಉಪಕರಿಸುವೊಡೆ ಮುಂಬರಲ್ ಬೋಧಿಪುದುದಿಟಂ.
ವೇದಾಂತವುಂ ಎಲ್ಲರ್ಗೆ ಮಾಯಾತೀತಮಾದ
ಮುಕ್ತಿಯೆ ಚರಮಧ್ಯೇಯ ಎಂದೆಂದು ಸಾರುತಿರೆ
ಮನವಂ ಜಗತ್ತಿಗೆಳೆವ ಸೇವೆ ನೆರವುಗಳಿಂ
ಏಂ ಫಲಂ?''
ಗುರುವರ್ಯನ ಕಂಗಳುಂ ಬಜ್ಜರದ
ಕಿಡಿಗಳೊಲ್ ಮಿಂಚಿದುವು ಥಳಥಳಿಸಿ. ಜಡಿ ನೆಟ್ಟು
ನಿಟ್ಟಾಲಿಗಳ್ ಕೀಲಿಸದೆ ನುಡಿದರ್ ''ಮಿತ್ರನೇ,
ಮುಕ್ತಿಯಂಪಡೆವ ಅಭಿಲಾಷೆಯುಂ ಮಾಯೆಗೊಳ-
ಪಟ್ಟುದಲ್ಲವೇನಯ್? ಆತ್ಮ ನಿತ್ಯ ಮುಕ್ತಂ
ಎಂಬುದಂ ಸಾರುವುದಲ್ತೆ ವೇದಾಂತ? ಎನಲ್ಕೆ
ಮುಕ್ತಿಗಾಗಿ ಪ್ರಯತ್ನಂಬಡುವ ಪರಿಶ್ರಮ
ಏತಕ್ಕೆ?''

ದೃಢ ಕಂಠದಿಂ ಮೊಳಗಲ್ ಕಂಚು
ಮಿಡಿದ ಪಾಂಗಿನಲಿ ಪಂಡಿತವರ್ಯರ್ನ್ ಬಾಯೊಳ್
ಸೊಲ್ಲುಡುಗಿ ಪೊರಮಟ್ಟನಲ್ಲಿಂದೆ. ಇಂತಿಂತು
ತಮ್ಮ ಬಳಿಗೆಯ್ದುವ ಜಿಹಾಸುಗಳಿಗೆ ಬರಿ ಒಣ
ತತ್ತ್ವಂ ಬೋಧಿಸಿ ಕಳುಹದೆ ಮನಮತಿ ಮುಟ್ಟುವೊಲ್
ಮತಿ ಖಡ್ಗವಂ ಝುಳಪಿಸುತೆ ಅವರವರ ಮನೋ
ದೌರ್ಬಲ್ಯಮಂ ಮತಿ ಕ್ಲೈಬ್ಯಮಂ ಇತರಿತರ
ಮೂಢನಂಬಿಕೆಯಂ ಶಿಶುವಿವಾಹ ಮುಂತಪ್ಪ
ಹೀನ ನೀಚ ಅನಾಗರಿಕ ರೂಢಿಯಂ ಜಡಿದು
ಖಂಡಿಸುತೆ ತಿಕ್ತವಾಕ್ಯ ಬಾಣಾ ಜಲಧಿಯಂ
ಹರಿಸುತ ಗಂಭೀರ ವಿಷಯದ ವಿಶ್ವದೊಳ್ ಅದ್ದಿ
ಶುದ್ಧಸ್ನಾತರಂಗೊಳಿಸೆ ಕೆಟ್ಟಿನ ಕಿಡಿಯಿರದಿಹ
ಪೆಟ್ಟಿರ್ದೆಯಾಳಕ್ಕೆ ಕಿಡಿಸೂಸಿ ಕಿಟ್ಟಿಡುವ
ಧೀಮಂತನೆನೆ ಸಲ್ಲಿದರ್ ಮನುಕುಲಾಂಬುಧಿಗೆ.
ಒರ್ಮೆ ಗೋಸಂಗೋಪನೆಯ ಸಂಘದ ಸದಸ್ಯ
ನೊರ್ವಂ ಗುರುದೇವನ ದರ್ಶನ ಬಯಸುತವರ
ಬಳಿಗೈದನ್. ಉಭಯಕುಶಲೋಪರಿಯಲಿ ಕಳೆದುವು
ಮುಹೂರ್ತಗಳ್. ಮಾನಸಿಕ ಪರವಶತೆ ಮಾಣ್ದುದು.
ಗುರುವರಂ ಕೇಳಿಸಿದರ್ "ಏನಯ್, ನಿಮ್ಮಗಳ
ಸಂಘದಲಿ ಹಮ್ಮಿಕೊಂಡಿಪ್ಪ ಕಾರ್ಯವದೇನ್?"
"ಸ್ವಾಮೀಜಿ, ಇಳಿವಯಸ್ಸಿನ ಪಶುಗಳ್ ಕಟುಕರ
ಕಡಿಗತ್ತಿಗೆ ಸಿಲುಕದವೊಲ್ ಕಾಪುದು ಪಾಲಿಪುದು
ಎಮ್ಮ ಗುರಿ. ಅದುವೆ ಈ ಸಂಘದುದ್ದೇಶ ಕಣಾ!
ಪಿಂಜರಾಪೋಲಿಗೆ ಕರೆದೊಯ್ದು ಸಲಹುದೆ
ದೈನಂದಿನ ಕಾರ್ಯಂ."

"ಒಳ್ಳಿತು, ನಿಮಗೆಲ್ಲಿಯ
ದ್ರುವ್ಯ ಸಹಾಯಂ?"
"ಉದಾರ ಹೃದಯಿಗಳೆಮಗೆ
ಧನ ಸಹಾಯಗೈದಪರ್. ಅದರ ಅನನ್ಯತಮ
ನಿರ್ವಹಣೆ ನಡೆದಪುದು ತೊಡಕಿಲ್ಲದೆಯೆ. ಸ್ವಾಮಿ."
"ಕೇಳಿ, ಮಧ್ಯಪ್ರಾಂತ್ಯಗಳಲಿ ಭಯಂಕರ ಕ್ಷಾಮ
ಕಾಡುತಿಹುದಷ್ಟೆ? ಸರಕಾರದ ಪ್ರಹೇಳಿಕೆಯ
ಪ್ರಕಾರ ಇನ್ನೆಬರಮಲ್ಲಿ ಎಂಟುಲಕ್ಷ ಜನರ್
ಮೃತ ಪಟ್ಟಿಹರೆಂದು ತಿಳಿದು ಬಂದಿಹ ಸುದ್ದಿ.
ಆ ನತದೃಷ್ಟ ದುರ್ದೈವಿ ಮಂದಿಗೆ ನೀವೇನ್
ಗೈವಿರ್ರೈ?"
"ನಾವದಂ ಹಚ್ಚಿಕೊಂಬುದಿಲ್ಲಂ.
ಎಲ್ಲವುಂ ಅವರವರ ಕರ್ಮ. ಗೋರಕ್ಷಣೆಯು
ಮಾತ್ರಮೇ ನಮ್ಮ ಕಾರ್ಯರಂಗಂ."
"ಇದೇನಯ್,
ಮನುಕುಲದೊಳ್ ಪುಟ್ಟಿ ಇಂತೆನುವೊಡೆ ಮನವದೆಂತು
ಸಂತು? ಸಹಸ್ರಗತಿಯಲಿ ಸ್ವದೇಶೀ ದೀನಜನ
ಅನ್ನನೀರಿಲ್ಲದೆಯೆ ಸಾಯುತ್ತಿರಲವರಿಂಗೆ
ಒಂದು ತುತ್ತು ಅನ್ನವನೀಡಲ್ ಮನಸ್ಸಾಗದೆ
ನಿಮಗೆ?"
"ಇದಕಾವ್ ಬದ್ಧರಲ್ಲಂ, ಅವರವರ
ಕರ್ಮಪಾಕ ಬಲಿತಿರೆ ಬರಗಾಲ ಬಂದಪುದು
ಸಹಜವೇ!"
ಆ ಮಾತುಗಳ್ ಕೇಳ್ದು ಕಿಡಿಕಿಡಿಯು
ತಾನಾಗಿ ಪೊಳಪಿನಿಂ ರಂಗೇರಿದ ಕಂಗಳಲಿ

ಉರಿದುರಿದು ನೋಡುತ್ತೆ ಇಂತೆಂದರ್ ಸ್ವಾಮಿಜಿ,
"ಕೇಳ್, ಅಯ್ಯಾ! ನಿಮ್ಮವೊಲ್ ಕುರುಡು ಮನಸಿಗರ
ಸಂಘದ ಗೊಡವೆ ಎನಗೆ ಬೇಡವೇಬೇಡ. ಆರ್
ನರಳುತಿಹ ಸೋದರರಿಗಾಗಿ ಮರುಗರೊ ಆರು
ತಮ್ಮ ಕಣ್ಣೆದುರೆ ಕೂಳಿಲ್ಲದೇ ಸಾಯ್ವ ಜನ
ಕೋಟಿಯತ್ತ ಲಕ್ಷ್ಯ ಹರಿಸದೆ ವೃದ್ಧ ಪಶುಗಳ
ಪಾಲನೆಗೆ ಲಕ್ಷ ಲಕ್ಷಗಟ್ಟಲೆ ಧನವ್ಯಯ
ಗೆಯ್ದು ಸಂತೃಪ್ತಿವೊಂದುವರೊ ಅವರಂ ಆನ್
ಮನ್ನಿಸೆನ್. ಅವರವರ ಕರ್ಮವಂತೆ! ಎನಯ್
ಅಂತೆನಲ್ ಲಜ್ಜೆಯೆನಿಸದೆ? ಅದವರ ಕರ್ಮಮೆನೆ
ಪಶುಗಳಿಂಗಿದು ಕರ್ಮವಲ್ತೆ?"
"ಸ್ವಾಮಿಜಿ! ತವ
ಪ್ರಶ್ನೆಯದುಸರಿಯೆಂಬೆನ್. ಆದೊಡೆ, ನಮ್ಮಗಳ
ಶಾಸ್ತ್ರ ಗೋವಂ ನಮ್ಮ ಮಾತೆಯಂದೆಮಗೆ ಸಾರಿ
ಪೇಳ್ವುದು ದಿಟಮಪ್ಪೆ?"
ನಗುನಗುತಿಂದರ್ ಸ್ವಾಮಿ
ವಿವೇಕಾನಂದರ್ "ಅಹುದಹುದು ಅದುವೇ ಸರಿ!
ಪಶುವೇ ನಿಮ್ಮನುಂ ಪಡೆದ ತಾಯಿ! ಸುನಿಶ್ಚಯಂ!
ಅಂತಲ್ಲದೊಡೆ ನಿಮ್ಮಂಥ ಪ್ರತಿಭಾ ಶಾಲಿಯಂ
ಇನ್ನಾರ್ ಪೆತ್ತಾರ್?"
ಪ್ರಚಾರಕಂ ಎದ್ದು
ಮರುಮಾತಿನಗೋಜಿಗಿಳಿಯದೆ ಪೋಪೊಂಟಂ.
ಸ್ವಾಮಿಜಿಯುಂ ಶಿಷ್ಯರಿಗೆಂದರ್ – "ನೋಡಿದಿರಾ,
ಇವರ ಕರ್ಮ ತತ್ತ್ವಂ? ಎನಿತು ಹೀನ ಮತಿಯ
ಕೀಳರಿಮೆಯುಮಿದು? ಅಂತಿಂತು ನಮ್ಮದೇಶದ

ದುರ್ಗತಿಗೆ ಎಲ್ಲ ಮತಿಹೀನರದೊಂದೊಂದು ಕಲ್ಲು!
ದೀನ ದಲಿತ ಮನುಕುಲಕಾಗಿ ಕಿಂಚಿತ್ ನೊಂದು
ಮರುಗಿ ಕರಗದವರ್ ಮನುಜರೇಂ? ತಿಳಿಯಿರಯ್ಯ"
ಮತ್ತೊರ್ಮೆ ಹಲಕೆಲವು ಪಂಡಿತರ್ಯೆದರ್ ಗುರು
ದೇವನೆಡೆಗೆ. ದೇವ ಸಂಸ್ಕೃತ ಭಾಷೆಯೊಳ್ ವಾದ
ವಿವಾದಗಳ್ ಮೊಳಗಿದುವು. ವಿಚಾರ ಮಂಥನಂ
ಮುಂಬೆಳೆಯಿತು. ಮಾತಿನ ಮಧ್ಯೆ ಒರ್ ಗಳಿಗೆಯಲಿ
ಬಾಯಿ ತಪ್ಪಿತು ಗುರುವರಂಗೆ. 'ಸ್ವಸ್ತಿ' ಎನುವೆಡೆ
ಮಾತು ಕೆಟ್ಟು 'ಅಸ್ತಿ' ಎನಲಾ ಪಂಡಿತ ಜನಂ
ಗಹಗಹಿಸಿ ನಗುತೆ ಕೈಪರೆ ಗುಟ್ಟಿದರ್ ಉರ್ಬಿ
ಪೆರ್ಮೆಗಳ ಗಣಿಯಾಗಿ. 'ವ್ಯಾಕರಣ ದೋಷವೆನೆ
ಸಾಮಾನ್ಯ ಮೇನಲ್ತು.' ಎಂದೆಂದು ಸ್ವಾಮೀಜಿ
"ಆಂ ಪಂಡಿತರ ದಾಸ. ನೀಮೆನ್ನ ಮನ್ನಿಪುದು."
ಎಂದರೊಡನೆ ಕೈಮುಗಿದು. ಅವರ ವಿನಮ್ರತೆಯ
ಸವಿಮಾತಿಗೆ ಮರುನುಡಿಯದೆ ಪೊರಟರ್ ಪಂಡಿತ
ವರ್ಗಂ. ಬಳಿಕಂ ಸ್ವಾಮೀಜಿ ಮಿತ್ರಜನರಿಗೆ
ಕೇಳಿಸಿದರಿಂತು "ಕೇಳಿ, ಪಾಶ್ಚಿಮಾತ್ಯರೊಳ್
ವಿದ್ಯಾವಂತರ್ ಮಾತಿನ ಅಂತರಾರ್ಥವಲ್ಲದೆ
ವ್ಯಾಕರಣ ದೋಷಮಂ ಗಮನಿಸರ್. ಈ ಎಡೆಯ
ಪಂಡಿತರಿಗೆ ರಂದ್ರಾನ್ವೇಷಣೆಯೆ ನಿಜಕಾರ್ಯ.
ತಿರುಳಂ ಕಡೆಗಣ್ಚಿ ಹೊರ ಸಿಪ್ಪೆಯನುಂಬುವರ್.
ತನ್ನ ಬಾಲವಂ ಕಡಿಯಲಿಚ್ಚಿಪ ಶುನಕದೊಲ್.
ಆವ ಸಿದ್ಧಾಂತಮಂ ಪಡೆಯಲಾಗದ ಹೊಲಬುತನ!"

ಹರಿಃ ಓಂ ತತ್ ಸತ್

❋ ❋

ಷಟ್‌ಸ್ತ್ರಿಂಶತೋಲ್ಲಾಸಂ

ಸಾಧನಾ ಶೀಲಂ

ವದನಂ ಪ್ರಸಾದ ಸದನಂ ಸದಯಂ
ಹೃದಯ ಸುಧಾ ಮುಂಚೋ ವಾಚಃ ।
ಕರಣಂ ಪರೋಪಕರಣಂ ಯೇಷಾ
ಕೇಷಾಂ ನ ತೇ ವಂದ್ಯಾಃ ॥

ಆಲಿಸಿದರ್ ಆಲಿಸಿದರ್ ಆಲಿಸಿದರ್ ಕಣ್
ಕಿವಿನಟ್ಟು ನುರ್ಗುತಿರ್ದತ್ತಾಶ್ವಯುಜ ವರ್ಷಾಶ್ವ
ದಳಂಗೈವ ಮಹಾರವದ ಘನಘೋಷಂ! ಆಲಿಸಿ
ಅರಳಿದುವು ಕಣ್ಣಾಲಿ. ವರ್ಷಧಾರೆ ಸುರಿದುದು
ಸದ್ದಿನ ಸರಸವ ಹೂಡಿ. ಸಾಗರದಿ ಚಿಮ್ಮುತ
ಬಹ ಹನಿಗಳ ಮುತ್ತಿನ ತೆರಂ ಹನಿಗಳ ಧಾರೆ
ಹನಿಯುತಿವೆ, ಹನಿಯುತಿವೆ ವೆಳ್ಳಿಧಾರೆಯ ಹೋಲಿ!
ಪರಿ ಶುಭ್ರಧಾರೆ ಸುರಿದಿರೆ ಗಿಡುಮರ ದ್ರುಮಗಳ
ಎಲೆ ಕಡ್ಡಿ ಮಿಡಿಮೊಗ್ಗು ತೊಟ್ಟುಕಳಚಿ ಮುರಿಮುರಿದು
ಬಿಳ್ದುವು ನೆಲವಂ ಮುಚ್ಚುವಂತೆ. ಗಿಡುಮರಗಳ
ಕೊಂಬೆಕೊಂಬೆಗಳಲಿ ಕಲೆತ ಪಕ್ಷಿಸಂಕುಲಂ
ಮೈಮುದುಡಿ ನೀರಿಳಿವ ತೆರದಿ ಚೂಪಗೆ ಕುಳಿತು
ಕಾದಿರ್ದುವು ಮಳೆ ನಿಲ್ವ ಚಣಕಾಗಿ. ಮಳೆಯುಂ
ನಿಂತುದು ಬಲುಹೊತ್ತಿನಬಳಿಕ. ಪಕ್ಷಿಗಳೆಲ್ಲ
ಎರೆಂಕೆಯೊದರಿ ನೀರ್ ಸಿಡಿಸಿ ಹಾರಾಡುತ್ತೆ
ಮೈಯಾರಿಸಿದುವು ನಲಿನಲಿದು. ಸುಯ್ಗಾಳಿಯುಂ
ಸುಯ್ ಸುಯ್ಯನೆ ಸುಯ್ಯುತೆ ದಿಶೆದಿಶೆಯೊಳಲೆದಾಡಿ
ಭಾವನೋಚ್ಛ್ವಾಸದಿಂದೊರ್ಮೆ ರುದ್ರೋಚ್ಛ್ವಾಸ

ದಿಂದೊರ್ಮೆ ಸುಖೋಚ್ಛ್ವಾಸದಿಂದೊರ್ಮೆ ಭೀಮಿಸುತೆ
ಬಿಜ್ಜಣಿಗೆಯಾಡಿಸುತಿರೆ ಸಮಯಂ ಸುಖಮಾಯ್ತು.
ತಣ್ಪುಹವೆ ಬಲಿಯಿತ್ತು. ಸುರಿದ ನೀರ್ ಹರಿಯಿತ್ತು
ಓಣಿಯಲಿ. ಪಶ್ಚಿಮಾದ್ರಿಯ ಕೃಪಾ ಪೋಷಿತ
ಸುವಿಸ್ತೃತ ವಿಪಿನ ಪರ್ಣರಾಜಿಯು ಮುಮ್ಮಳೆಯ
ದಿವ್ಯ ಹೊನಲಲಿ ಮಿಂದು ಸ್ವಚ್ಛವಾಯ್ತು ಪಸುರಿನ
ಪಚ್ಚೆಯೆಂಬಿನಂ.

ಸಾಧನಾ ಶೀಲ ಶ್ರೀಗುರು

ದೇವನುಂ ಮಿಂದು ಮಡಿಯುಟ್ಟು ಬೆಳಗಿನ ನಿತ್ಯ
ಪ್ರಾರ್ಥನೆಯ ಸಲಿಸಿದರ್ ವಂದನಾಪೂರ್ವಕಂ.
ಬಳಿಕಲವರ್ ಲಘು ಉಪಹಾರಮಂ ತೀರ್ಚಿ ಪೊರ
ಬರಲ್ ಅದಾಗಳೇ ಬಹು ಮಂದಿ ನೆರೆದಿರ್ದರ್
ತಮ್ಮಯ ದರುಶನಮಂ ಬಯಸಿ. ಅನಿತರೊಳಲ್ಲಿಗೆ
ಮಿತ್ರರೈದರ್ ಗುರುವರನಂ ಕರೆದೊಯ್ಯೆ ಆ
ದಿನದ ಧರ್ಮ ಸಭೆಗೆ. ಆದೇಚಣಂ ಚಿತ್ರವತ್
ಕಣ್ಸೆಳೆದಿರ್ದ ಮಿಂಚುಂಬುಳಗಳ ಕಣ್ಮಾಯದ
ಮನೋರಮ ಚಿತ್ರದೀಕ್ಷಣೆಯ ಬದಿಗೊತ್ತುತ್ತೆ
ಪೊರಮಟ್ಟರ್ ಸ್ವಾಮೀಜಿ. ಅಂದು ನುಡಿಸಿದೊಂದು
ನುಡಿಗಟ್ಟಿದು, "ಬನ್ನಿ ಸೋದರರೆ ಬನ್ನಿ! ಸುಧೀರ
ಧೀರ ಗಂಡುಗಳಾಗಿ ಬನ್ನಿ! ಆಯುಷ್ಯವಿಡಿ
ಮಾತಾಡಿ ಉಂಡಾಡಿ ಕಾಲಹರಣಗೈದಿಹ
ನೀವ್ ನಿಮ್ಮನ್ನೇ ವಿಮರ್ಶೆಗೈಯಿರಿ! ಎಳೆಯ
ತನದೊಳೇ ಮುಪ್ಪಡರಿದ ಬರಿಮಂದೆ! ಮುಂಬರೆ
ನಿಮ್ಮ ಜಾತಿ – ಕೀಳ್ಮೆಯ ಜಾತಿ ಮುಸುಗಿದಪ್ಪುದೆ
ನಿಮ್ಮ ತಲೆಯಲಿ? ಭಟ್ಟಿ ಇಳಿಸಿದೊಲ್ ಕಲೆತ ಮೂಢ

ನಂಬಿಕೆಯೊಳ್ ಹುಗಿದು ಕುಳಿತಿರ್ಪಿರಿ! ನೀವ್ ಮನು
ಕುಲಜರೇಂ? ಶತಶತಮಾನಗಳಿಂ ಆಹಾರ
ಮಡಿ ಮೈಲಿಗೆಗಳ ಶುಷ್ಕ ವಿಚಾರ ಕಂತೆಯಲಿ
ಮುಳುಗಿಹುದು ನಿಮ್ಮ ಜನ್ಮ! ಕೈಯೊಳ್ ಗ್ರಂಥವಿಡಿದು
ಸಮುದ್ರದಡದಲಿ ಅಲೆದಾಡುತೆ ಬಿಳಿಯರ ತಲೆ
ಮೆದುಳಿನಲಿ ಜೀರ್ಣವಾಗದ ತುಣುಕುಗಳ ಮೆಲುಕು
ಹಾಕುವಿರಿ. ನಿಮ್ಮ ಅದ್ಭುತ ಧ್ಯೇಯವೇಂ? ಬರಿಯ
ಶುಷ್ಕ ಆಚಾರ, ಜಾತಿನೀತಿಗಳಲಿ ಮೇಲು
ಕೀಳು ಅಜ್ಞಾನ ಕೂಪದಲಿ ಕುಯ್ಯೊ ಮುರ್ರೋ
ಮಕ್ಕಳ ಅದುಭುತ ಸಂಸಾರ! ಛಿಃ ಹೊಲಸಿನ
ಬೀಡು. ಇದು ಮಾತ್ರಮಲ್ತೇ ನಿಮ್ಮಯ ಅನನ್ಯ
ಧ್ಯೇಯ ಸಾಧನೆ? ಮನುಕುಲಕೆ ಸಾಲ್ಗುಮೇ ಇಂಥ
ಅರ್ಥಹೀನ ವ್ಯವಹಾರ? ನಾಚಿಗೆಗೇಡು ಗಡ!
ಈ ಮಾತಿನಕ್ಕರಕ್ಕರಮಂ ನಿಮ್ಮ ತಲೆಯೊಳಗಡೆಯ
ತಕ್ಕಡಿಯೊಳಿಟ್ಟು ತೂಗಿ ನೋಡಿ. ಇದುವೇ ಈ
ದಿನಮಾನಗಳ ಜೀವನೀಯ ಚಿತ್ರಣಮೆನಲ್
ಸತ್ಯಸ್ಯ ಸತ್ಯಂ. ಯೋಚಿಸಿ, ಯೋಚಿಸಿ ತಿಳಿಯಿರಿ.
"ಆದದೀತ ಪರಾಂ ವಿದ್ಯಾಂ ಪ್ರಯತ್ನಾದವರಾದಪಿ
ಅಂತ್ಯದಪಿ ಪರಂ ಧರ್ಮಂ ಸ್ತ್ರೀರತ್ನಂ ದುಷ್ಕುಲಾದಪಿ ॥"
   ಮರುದಿನ ಬೆಳಗಿನ ಹತ್ತರ ಸಮಯದಲಿ ಮತ್ತೆ
ಕೂಡಿದೊಂದು ಸಭೆಯಂ ಕುರಿತು ನುಡಿಸಿದರವರು
ತಮ್ಮ ಶ್ರೀಕಂಠದುಲಿಯಲಿ "ಕೇಳಿ, ಹೇ ಉಚ್ಚ
ಜಾತಿಯವರೇ, ನೀವ್ ಆರ್ಯರಾ ವಂಶೀಕ-
ರೆಂದೆಂದು ಎನಿತೆನಿತು ಮೆರೆದಾಡಿರಿ! ಎಂತೇ
ಇರಿ, ಭಾರತ ಸಾಮ್ರಾಜ್ಯದ ಗತವೈಭವವಂ

ಕುರಿತು ಎಷ್ಟೇ ಗುಣಗಾನ ಮಾಡಿರಿ! ನಿಮ್ಮಗಳ
ವಂಶದ ಗರಿಮೆಯಂ ಕುರಿತು ನೀವ್ ಎಷ್ಟೆಷ್ಟು
ಬಡಾಯಿ ಬಡಬಡಿಸಿರಿ, ಭಾರತದ ಅತ್ಯುಚ್ಛ
ವರ್ಗೀಯವರಾದ ನೀವೀಗ ಬದುಕಿರುವಿರೆಂದು
ಭಾವಿಸುವಿರೇಂ? ಹತ್ತು ಸಾವಿರ ವರ್ಷಗಳ
ಹಿಂದಿನ 'ಮಮಿ' (ಕಾಯ್ದಿಟ್ಟ ಶವ)ಗಳಂತೆವೊಲ್
ನೀವಿರ್ಪಿರಿ! ನಿಮ್ಮ ಪೂರ್ವಜರ್ ಕೇವಲ ನಡೆ-
ವೆಣಗಳೆಂದು ಕರೆದವರಲ್ಲಿಯೇ ಇಂದು ಈ
ಭಾರತ ರಾಷ್ಟ್ರದಾ ಪ್ರಾಣನಾಡಿ ಅಲ್ಪಸ್ವಲ್ಪವೆ
ಆದೊಡಂ ಮಿಡಿದಿದೆ ನೋಡಿ! ಮೇಣ್ ವಾತ್ಸವವೆನಲ್
ಬರೀ 'ಜೀವಶವಗಳ್' ನೀವೆನಲ್ ಅನ್ಯಮಲ್ತು.
ನಿಮ್ಮಮನೆಗಳ್ ಪುರಾತನ ಚಿತ್ರ ಶಾಲೆ – ಸ್ತ್ರೀ
ಜನರ ದಿವ್ಯ ಸೆರೆಮನೆ!
"ಮಾಯಾಮಯಮಾದಾ
ಈ ಜಗದೊಳ್ ಮಾಯೆ ಎಂದೊಡೆ ನೀವೆ! ಮರುಭೂಮಿ
ಅಥ ಮರುಳುಗಾಡಿನಲ್ಲಿನ ಮೃಗ ಜಲದಂತೆ!
ಭೂತಕಾಲದ ಆ ಎಲ್ಲ ಚಿತ್ರವಿಚಿತ್ರಗಳ್
ಮೂರ್ತೀಭವಿಸಿದ ರೂಪ ನೀವ್! ಈ ವರ್ತಮಾನ
ಕಾಲದೊಳ್ ನಿಮ್ಮನಾಂ ಕಾಣುತ್ತಿರುವುದೊಂದು
ಹುಸಿಗನಸು! ದೊಡ್ಡಸೊನ್ನೆ! ಅರ್ಥಶೂನ್ಯ ಭ್ರಮೆ
ಭ್ರಾಂತಿ! ಅಜೀರ್ಣದಿಂದಾದ ದುಃಸ್ವಪ್ನ. ಮತ್ತಂ
ಅಸ್ತಿತ್ವ ಶೂನ್ಯ! ಹೇ ಕನಸಿನ ಲೋಕದ ಮರುಳು
ಜೀವಿಗಳೆ! ರಕ್ತ ಮಾಂಸಶೂನ್ಯ ಅಸ್ಥಿಪಂಜ-
ರಗಳೇ, ಧೂಳಾಗಿ ಗಾಳಿಯಲಿ ತೇಲಿ ನೀವ್
ಅದೃಶ್ಯವಾಗದಿಹುದೇಕೆ? ನೀವ್ ಶೂನ್ಯದೊಳ್

ವಿಲೀನವಾಗಿ! ನಿಮ್ಮ ಸ್ಥಾನದೊಳ್ ನವಭಾರತ
ಮೇಲೇಳಲಿ! ರೈತರ ಗುಡಿಸಲಿಂದ ನೇಗಿಲು
ಒಡಿದು ಭಾರತಿಯು ಮೇಲೇಳಲಿ! ಬೆಸ್ತರ
ಚಮ್ಮಾರರ ಜಲಗಾರರ ಜೋಪಡಿಗಳಿಂದ
ಭಾರತಿ ಹೊರ ಬೀಳಲಿ! ಕುಂಬಾರರ ಮಳಿಗೆಗಳಿಂ
ಕಾರ್ಖಾನೆಗಳಿಂ ಅಂಗಡಿಗಳಿಂ ಪೇಟೆಗಳಿಂ
ಭಾರತಿ ಹೊರ ಬರಲಿ! ವನ ಉಪವನಗಳಿಂ ಗಿರಿ
ಪರ್ವತ ಪ್ರದೇಶಗಳಿಂ ಭಾರತಿಯು ಮೈದಾಳಿ
ಬರಲಿ!
"ಈ ಎಲ್ಲ ಜನ ಸಾಮಾನ್ಯರ್ ಸಹಸ್ರಾರು
ವರ್ಷಮಾನಗಳಿಂ ದಬ್ಬಾಳಿಕೆಯಲಿ ನರಳುತೆ
ಸಹಿಸಿ ಬದುಕಿದವರ್, ಅದರಿಂದವರ್ಗೆ ಅದ್ಭುತ
ಸಹನ ಶಕ್ತಿ ಬಂದಿಹುದು. ಯಾವತ್ಕಾಲವುಂ
ನೊಂದು ನೋವುಂಡು ಅನುಭವಿಸಿದ ಅಪಾರತರ
ಸಂಕಷ್ಟಗಳಿಂ ದುರ್ದಮ್ಯ ಜೀವಶಕ್ತಿಯು
ಬೆಳೆದಿರ್ಪುದು. ಅವರಿಗೊರ್ ತುತ್ತು ಅನ್ನವಂ
ಕೊಡಿ ಜಗತ್ತನ್ನೆ ಅಲ್ಲೋಲ ಕಲ್ಲೋಲಗೈವರ್.
ಒಂದು ರೊಟ್ಟಿಕೊಡಿ ಸಾಕು, ಅವರ ಪರಾಕ್ರಮಕೆ
ಇಡೀ ಜಗತ್ತು ಸಾಲದಾದೀತು! ರಕ್ತಬೀಜಾ-
ಸುರರಂತೆ ಅವರ ರಕ್ತ ಬಿಂದು ಬಿಂದುವಿನಿಂದಲುಂ
ಅವರಂತೆಯೆ ಪ್ರತಿಭಾ ಸಂಪನ್ನರುಂ ಮೂಡಿ
ಬಂದಪರ್. ಅಲ್ಲದೆಯೆ ಜಗದೊಳಿನ್ನಾವ ದೇಶ
ಕೋಶದೊಳ್ ಕಾಣದಿಹ ಸ್ವಚ್ಛಉಚ್ಛ ನೀತಿಯ
ಜೀವಿಗಳಿವರ್. ಅವರೊಳ್ ಓಜಸ್ಸು ತುಂಬಿದೆ
ಇಂತೊಂದು ಸಹನ ಶಕ್ತಿ ಪ್ರೇಮಗಳ್ ಶಾಂತರಸ

ಹರಿವುದು ಸತತ. ಕರ್ತೃತ್ವವ ಉದ್ಯಮಿಸುವ ಬಲ
ಬಂದಪುದು. ಇಂತೊಂದು ಸಿಂಹಶಕ್ತಿ ಇನ್ನೆಲ್ಲಿ
ದೊರೆಕೊಂಬುದು?
"ಹೇ ಗತಕಾಲೀನ ಅಸ್ತಿಪಂ-
ಜರಗಳೇ! ನಿಮ್ಮೆದುರಿಗೆ ಮುಂದಿನ ಪೀಳಿಗೆಯು
ಇರ್ಪುದು. ನವ ಭಾರತಮಿದೆ. ನಿಮ್ಮ ಖಜಾನೆಯಂ
ತೆರೆದು ಮುದ್ರೆಯುಂಗುರಗಳಂ ನೀವ್ ಆಪನಿತು
ಬೇಗನೆ ಅವರಿಗೆ ಕೊಟ್ಟು ಹೋಗಿರಿ! ಆದೊಡೆ
ಕಿವಿಗಳಂ ಮಾತ್ರ ತೆರೆದಿಟ್ಟುಕೊಂಡಿರಿ. ನೀವ್
ಕಣ್ಮರೆಯಾದ ಗಳಿಗೆಯೊಳ್ ಕೋಟಿಸಿಡಿಲ್ ಸಿಡಿವ
ಧ್ವನಿಯುಂ ಮೊಳಗಿ ಲೋಕದೊಳ್ ಪ್ರತಿಧ್ವನಿಪ
"ವಾಹ ಗುರು ಕೀ ಪತ್ತೇ" ಎಂಬೊಂದು ಜಾಗೃತ
ಭಾರತದ ಆರಂಭ ಘರ್ಜನೆ ಕೇಳ ಬಹುದು.
ಸೋದರರೆ! ಮನಗೊಟ್ಟು ಕೇಳಿ, ಕೇಳಿ! ಹಿಂದೂ
ಧರ್ಮದಿಂದಾಂ ಕಲಿತದ್ದು ಇದು ಕಣಾ! ನೀವುಂ
ಪರಿಭಾವಿಸಿ ಮೇಣುಂ ಪರ್ಯಾಲೋಚಿಸಿ ತನುಮನ
ತುಂಬಿ ಕೆಚ್ಚಿನ ನೆಚ್ಚಿನ ಕಿಡಿಯೈಸಿ ಎಳಿ! ಎದ್ದೇಳಿ!!

"ಮನುಷ್ಯತ್ವಂ ಮುಮುಕ್ಷತ್ವಂ
ಮಹಾಪುರುಷ ಸಂಶ್ರಯಃ ।
ದುರ್ಲಭಂ ತ್ರಯಮೇ ವೈತತ್
ದೈವಾನುಗ್ರಹ ಹೇತುಕಂ ॥"

ಪ್ರಾತಃಮುಹೂರ್ತಮಡರಿ ಮುಂಬೆಳಗಿನ ಅರುಣನ
ಚೆಲುವಾಂತ ಚೆಂಗಿರಣಗಳ್ ಸೂಜಿ ಸೂಜಿಗಳ
ಮಾಳ್ಕೆಯಲಿ ಹರಿದು ಬರುತಿವೆ ಮೈಮನ ಮುದ್ದಿಪ
ತೆರದಿ. ಕೆಮ್ಮನೆ ದಿಗ್ ಭಿತ್ತಿಯಲಿ ರಕ್ತಾಕ್ತಮಯ

ಹೆಮ್ಮುಗಿಲ್ ಹೊನಲ್ ಹರಿದತ್ತು ಗುಡಿಗೋಪುರವ
ನಿಮಿರ್ಚಿ. ಬಂಭ್ರಮದ್ಭ್ರಮರಂಗಳ್ ಮಂದೈಸಿದ
ಪರಿಯಲ್ಲಿ ಹಾರಿ ಹಾರಾಡಿ ಮಕರಂದವಂ
ಅರಸುತ್ತಿವೆ ಪೂವಿಂ ಪೂವಿಂಗೆ ದಂಡೆತ್ತಿ.
ಸ್ವಾಮಿಜಿಯುಂ ಶ್ರೀಶಾರದಾಮಣಿದೇವಿಯ
ದರ್ಶನಂ ಪಡೆದು ಅಡಿಗೆರಗಿ ಪದ ಧೂಳಿಯಂ
ಶಿರಸಾಧರಿಸಿ ಅವರೊಡನಿರ್ದು ಮಾತಾಡಿ ಮನಕೆ
ಆನಂದ ರಸಾಯನವನುಣಿಸಿ ತೆರಳಿದರಾ
ಗುರುವರ್ಯ ದತ್ತ ಭವನಕೆ. ಅಲ್ಲಿ ಕಾದಿರ್ದ
ಪೆತ್ತಮ್ಮ ಭುವನೇಶ್ವರೀದೇವಿಯಂ ಕಂಡು
ಕಾಲ್ವಿಡಿದು ಶಿರಮಣಿದು ಪದಧೂಳಿಯಂ ಪಡೆದು
ತೋಷದ ಗಣಿಯಾಗಿ ಕುಟುಂಬ ಸೌಖ್ಯದೊಳ್ ನಿಂದು
ಒಂದೆರಳ್ದು ಮೂರು ದಿನಗಳ್ ಕಳೆದರಲ್ಲಿ ಬಲು
ತೋಷದಿಂ. ಮಿತ್ರಗಣವೈದುದು; ಸಂಬಂಧಿಗಳ್
ಗಮಿಸಿದರ್ ಶುಭ ಹಾರೈಸೆ. ವಿಶ್ವ ವಿಜೇತನಂ
ಕಂಡು ಧನ್ಯತೆಯಂಬಡೆಯೆ ವಿದ್ವನ್ಮಣಿಗಳ್
ಕೂಡಿದರ್ ಬಹುಲ ತೋಷದಿಂ. ರಾಜರೈದರ್
ಕೈಮುಗಿದು ಗೌರವಂದೋರೆ. ಅಂತಿಂತಲ್ಲಿ
ಬಿಡುವಿನಿತಿಲ್ಲದೊಲ್ ಕಳೆದುವು ದಿವಸಮಾನಗಳ್.
ಕಟ್ಟಕಡೆಯೊಳ್ ತಮ್ಮವರಿಗಿತ್ತ ಸಂದೇಶ.

"ಧರ್ಮ ಲಾಭಾತ್ ಪರಂ ನ ಸ್ಯಾತ್
ತಸ್ಮಾತ್ ಧರ್ಮಂ ಚರ ಉತ್ತಮಮ್."

ಭ್ರಾತೃ ಸಂನ್ಯಾಸಿಗಳ್ ವ್ಯಷ್ಟಿದೃಷ್ಟಿಯನಗಲ
ಹರಿಸಿ ಲೋಕ ಪ್ರಜ್ಞೆಯನರಳಿಸಿ ಗುರುತೇಜವ
ಬೆಳಗಿಸಿದರ್. ವಿಶ್ವತೋಮುಖೀ ಪಥವಿಡಿಸುವೊಡೆ

ಪರಿ ಬೋಧಿಸಿದ ಗುರು ಸ್ವಾಮಿ ವಿವೇಕಾನಂದರ್,
ನುಡಿಸಿದರ್. ಮಹರ್ಷಿ ಯಾಜ್ಞವಲ್ಕರ ಸ್ಮೃತಿಯಂ

"ಅಹಿಂಸಾ ಸತ್ಯ ಮಸ್ತೇಯಂ
ಶಾಚಮಿಂದ್ರಿಯ ನಿಗ್ರಹಃ ।
ದಾನಂ ದಮೋದಯಾಕಾಂಕ್ಷಿಃ
ಸರ್ವೇಷಾಂ ಧರ್ಮಸಾಧನಂ ॥"

ದಿನದಿನಂ ಗುರುಶಿಷ್ಯರ ಸಂಬಂಧಮಿನ್ನಿನಿತು
ಬಲಿಯಿತ್ತು. ಗುರುವರ್ಯನ ಸಹ ಬಾಳ್ಮೆಯುಂ ನೆರೆ
ಒದವಿ ಬರೆ, ಕಳೆದುವು ದಿವಸಮಾನಗಳ್ ಹರುಷ
ಕಲಸಂ ಎದೆಯೊಳ್ ತುಂಬಿ. ಬರಡು ಬಾಳಿನಲಿ ಸಿಲ್ಕಿ
ತಹತಹಿಸಿದೆಳೆ ಜೀವಗಳ್ ನಲಿದುವು ಗುರುವಿನ
ಸಹವಾಸದಿಂ. ಸಧ್ಯ ಪ್ರಚಾರ ಕಾರ್ಯದಲಿ
ದಿವ್ಯ ಕರ್ಮಯೋಗದ ಆದರ್ಶವೆ ನಿತ್ಯಂ.
ದೀನದಲಿತೋದ್ಧಾರ, ರಾಷ್ಟ್ರೋದ್ಧಾರಕ ತತ್ತ್ವ.
ಜಾತ್ಯಾತೀತಧರ್ಮ ಇವೆಲ್ಲವುಗಳಿಂದಧಿಕ
ಸನಾತನ ಧರ್ಮದ ಕಿರೀಟಧಾರಣೆಯಿಂದೆ
ಹಮ್ಮುಬಿಮ್ಮುಗಳ್ ಸುತ್ತ ಧುಮುಧುಮಿಸುತ್ತಿರಲ್
ಹೃನ್ಮನದಿ ಶ್ರದ್ಧೆಯ ಹಿರಿಮೆ ಬಲಿಯಿತು ಕಟಿಬದ್ಧ
ತೇಜದಲಿ. ಕೇವಲ ಧ್ಯಾನ ತಪಸ್ಸುಗಳ ಮುಖೇನ
ಮುಕ್ತಿಲಾಭ ಪಡೆವುದೆ ಜೀವನಾದರ್ಶಮೆನೆ
ಪೂರ್ಣ ನಂಬಿದ ಶಿಷ್ಯಗಣದ ಚಿಂತನೆ ಸಡಲಿ
ಕೊಂಡಿ ಕಳಚಿದ ಬಂಡಿಯಾಯ್ತು. ಶಿಷ್ಯಗಣಮಂ
ಕುರಿತು ಇಂತೆಂದರ್ ಗುರುವರ್ಯಂ "ಭಾಯಿಗಳೆ,
ಕೇಳಿ! ಭಾರತ ವರ್ಷದಾದ್ಯಂತ ಮೈಗೊಂಡ
ಮಹೋನ್ನತ ದೇವಾಲಯಗಳ ಪ್ರತಿಮೆಗಳಲಿ

ಸುಪ್ತ ದೇವರ ದೇವರುಗಳಂ ಹೊರಗೆಳೆಯುತೆ
"ಯತ್ರ ಜೀವ ತತ್ರಶಿವ" ಎಂಬುವ ಮಂತ್ರದಿಂ
'ವಿರಾಟ್' ಪೂಜೆಯಂ ಕೈಕೊಂಬುವ ಸಮಯವೊದವಿ
ಬಂದಿದೆ. ಸನಾತನ ಕಾಲೀನ ಋಷಿವರೇಣ್ಯರ
ಪಾಂಗಿನಲಿ ಗಿರಿಗುಹೆಗಳಲಿ ಪರ್ಣಕುಟಿಗಳಲಿ
ಸಂವಾಸಿಸುತೆ ಆತ್ಮಸಂಸ್ಕಾರಲಂಪಟತನ
ಎಂಬುದರೊಳ್ ಮುಳುಂಗಿ ಬರ್ದುಕುವುದೇಂ ಪೆರ್ಚಳಂ?
ಬರ್ದುಕಿನ ಕರ್ಮ ಕ್ಷೇತ್ರದಲಿ ದೃಢಗಮನವ
ನೆಟ್ಟು ಎರ್ದೆಗೊಡುವುದೆ ಜೀವನದ ಗುರಿಯಿರ್ಕೆ.
ಮಾನವೀಯತೆ ಏನೆಂಬುದಂ ನೀವರಿದು ಮನ
ದುಂಬಿ ಬಾಳ್ದೊಡೆ ಸಾರ್ಥಕಮಾದಪುದು ಬರ್ದುಕು.
ಭಾಗ್ಯಹೀನ ಭಾರತ ಪರಕೀಯರ ಹಿಂಸ್ರಕ
ಪದ ಘಾತಕೆ ಸಿಲ್ಕಿ ನರಳುವುದಂ ಕಾಣಿರಾ?
ಈ ದೇಶ ಸೇವೆಯೊಳ್ ನಿಮ್ಮ ಜನ್ಮ ಸಾರ್ಥಕ
ಪಡೆಯದೇಂ? ಸಂನ್ಯಾಸಿ ಜೀವನಂ ಸ್ವಚಿಂತನೆ
ಸ್ವಹಿತಗಳಿಗೆ ಮಾತ್ರಮೆ ಮೀಸಲಾದಪುದೆನಲ್
ಜೀವನಮೆ ವ್ಯರ್ಥಂ. ಸದಾಚಾರ ಸಾಹಸಮೆ
ಸುವ್ಯರ್ಥಂ, ಎನಲ್ಕೆ ನಿಮ್ಮೊಳ್ ನೀವ್ ತಿಳಿದುನೋಡಿ.
"ವಿದ್ವದ್ಭಿಃ ಸೇವಿತಂ ಸದ್ಭಿರ್ನಿತ್ಯಂ ಅದ್ವೇಷರಾಗಿಭಿಃ ।
ಹೃದಯೇ ಸಾಭ್ಯನುಜ್ಞಾತೊ ಧರ್ಮಃ ತಂ ನಿಬೋಧತ ॥
ಕೇಳಿ, ಸಂಸಾರ ಕರ್ಮಕ್ಷೇತ್ರದೊಳ್ ದೃಢಮನ-
ದೃಢಗತಿಯಲಿ ಕಾಲ್‌ನೆಟ್ಟು ನಿಲ್ವಂತೆಯೇ
ಮನುಕುಲದೊಳ್ ಕಾರ್ಯಕರ್ಮಠಗಳಿಗೆ ಸಲ್ವಂತೆ
ನಾವ್ ಸಲ್ಲಿದರಾಯ್ತು. ಪೊರಗೈದೊಡೆ ಮುಂಪಥ
ವಿಶ್ವಪ್ರಗತಿಗೆ. ನಿಮ್ಮೊಳ್ ನೀವ್ ತಿಳಿದು ನೋಡಿ!

ರಾಮಕೃಷ್ಣ ಮಿಷನ್ನಿನ ಸಂನ್ಯಾಸಿ ಸದಸ್ಯರ
ಜೀವನದ ಮಹೋದ್ದೇಶಮಂ ಲೋಕಮರಿಯಲಿ,
ಭಾರತ ಜನನಿಯ ಪಾದಸೇವೆಗೆ ಸಲ್ಲದೆಯೆ
ಇನ್ನಾರಿಗೆ ಸಲ್ಲಲಕ್ಕುಂ ನಮ್ಮಯ ನಿಜ ಸೇವೆ?
ಸಂನ್ಯಾಸಿ ಜೀವನದ ಮಹೋನ್ನತಮಾದೊಂದು
ಸಂಪ್ರದಾಯಮೇನೆಂಬುದಂ ಇತರ ಸಂನ್ಯಾಸಿ
ವರ್ಗ ಅರಿತುಕೊಳ್ಳಲಿ. ಅರಿತು ಗೊಡ್ಡು ಪದ್ಧತಿಯ
ಮೊಟ್ಟೆಯೊಡೆದು ಹೊರಬರೆ ನಮ್ಮಗಳ ಸೇವೆಯುಂ
ಉದಾಹರಣೆಯಾದಪುದು ಒಳ್ಳಿತಲ್ತೆ? ಬಹುಜನ
ಹಿತಕಾಗಿ ಬಹುಜನ ಸುಖಕಾಗಿ ಶ್ರೀರಾಮಕೃಷ್ಣ
ಪರಮಹಂಸರ್ ಅವತರಿಸಿದರ್. ಅವರ ಸಧ್ಯ
ಶಿಶ್ಯರಾವು ಸ್ವಸುಖದ ನೇಮದಲಿ ಜಗವಂ
ಮರೆತೊಡೆ ಜನಸಾಮಾನ್ಯರಿಂಗು ನಮಗುಂ ಏಂ
ವ್ಯತ್ಯಾಸ? ಇದಂ ಯೋಚಿಸಿ. ನಿಮ್ಮ ಮನವೊಂದು
ಸದಾಚಿಂತನ ಶೀಲ ಕರ್ಮ ಶಾಲೆಯಾಗಿರಲ್ಕೆ!"
ಶಿಷ್ಯಗಣದ ತನುಮನ ತುಂಬಿ ಕೋಡಿವರಿದುದು
ಗುರುದೇವನ ಅಮೃತವಾಣಿಯಿಂದೆ. ಮರುದಿನ
ಮೂಡಣದಲಿ ಮುಂಬೆಳಗು ಮೂಡಿ ಇಳೆಯಮೇಲೆ
ಹರಿದಾಗಳ್ ಶಿಷ್ಯರ್ ಮುಂದೈದರ್ ಗುರುವಿನಪ್ಪಣೆಯ
ಬಯಸಿ. ಕಾರ್ಯಕ್ರಮಗಳ ವಿತರಣೆಯು ನಡೆದುದು
ಎಲ್ಲರಾ ಸುಮುಖದೊಳ್. ಒಮ್ಮನದೊಮ್ಮತದ ಹಂಚಿಕೆ
ಘನವಾಯ್ತು. ಸ್ವಾಮಿರಾಮಕೃಷ್ಣಾನಂದರುಂ
ಮುಂದೈದರ್ ವೇದಾಂತ ಪ್ರಚಾರೋದ್ದೇಶಮಂ
ಮನಗೊಂಡು. ಸ್ವಾಮಿ ಅಖಂಡಾನಂದರುಂ ಸ್ವತಃ
ಮುಂದೈದರ್ ಕ್ಷಾಮನಿವಾರಣಾ ಕಾರ್ಯಕ್ರಮವ

ಕೈಕೊಳಲ್. (ಮರ್ಷಿದಾಬಾದ್ ಘನಘೋರತರ
ಕ್ಷಾಮಡಾಮರಗಳ ಅದುಭುತ ದಾಡೆಯಲಿ ಸೆರೆ
ಸಿಲ್ಕಿ ನರಳುತಲಿರ್ದುದು ಅವ್ಯಾಹತವಾಗಿ)
ಸ್ವಾಮಿ ಅಬೇಧಾನಂದರುಂ ಮೇಣ್ ಸ್ವಾಮಿ
ಶಾರದಾನಂದರುಂ ಪಶ್ಚಿಮದ ಕಡೆಗೆಯಾನ
ಹೂಡಲೊಪ್ಪಿದರ್. ಸ್ವದೇಶೀಯ ಜನರಿಂಗೆ
ಅಕ್ಷರಾಭ್ಯಾಸದೊಡನೆ ಮತಿಮೌಢ್ಯ ಮತ್ತಂ
ಮೂಢನಂಬಿಕೆಗಳ ನಿವಾರಣಾ ಕಾರ್ಯಮಂ
ಸ್ವತಃ ಕೈಕೊಂಡರ್ ಬ್ರಹ್ಮಾನಂದರುಂ. ಉಳಿದ
ಸಂನ್ಯಾಸಿ ಬಾಂಧವರ್ ಸ್ವಾಮಿಗಳ ಮನದಿಚ್ಛೆಯ
ಪ್ರಕಾರಂ ಅವರ ಬಳಿಯಲುಳಿದು ದಿನಚರಿಯಲಿ
ವಿವಿಧ ಕಾಯಕವೆಸಗುವರ್ ಎಡೆಬಿಡದ ತೆರಂ.
ಇಂತಿಂತು ಜಗದ್ವಿಖ್ಯಾತ ದೀನ ಬಾಂಧವ
ಮನುಕುಲದ ಪರಮಮಿತ್ರ ವೇದಾಂತ ಕೇಸರಿ
ಸ್ವಾಮಿ ವಿವೇಕಾನಂದರುಂ ಸುವರ್ಣಾಕ್ಷರದಲಿ
ದಿವಿನಾದ ಪರಮ ಪೀಠಿಕೆಯನೊರೆದರ್ ದಿವ್ಯ
'ಶ್ರೀರಾಮಕೃಷ್ಣಾಶ್ರಮ ಸಂಘ'ಕೆ. ಅಂದಿನಿಂ
ಪವಿತ್ರತಮ ಕಾರ್ಯಕ್ಷೇತ್ರವಾಗಿ ಸೇವಾಸದನ-
ವೆನಿಸಿ ಬೆಳೆದು ಬರೆ ಗುರುವರನ ಆಶೀರ್ವಾದ
ರಕ್ಷಾ ಕವಚಮೆಂಬುದು ಪರಮ ಸತ್ಯ. ಅಂದಿನ
ಪೂಣ್ಕೆಯೇ ಪೂಣ್ಕೆ. ಎಂದೆಂದಿಗುಂ ಮುಗಿಯದಿಹ
ಕರ್ತವ್ಯ ಭಾರಂ. ನಡೆದಿದೆ ನಿತ್ಯ ನಿರಂತರ.
ಅಂದು, ಗುರುಭಾಯಿಗಳಿಗಾಗಿ ಅವರ್ ರಚಿಸಿದ
ಕರ್ತವ್ಯಜ್ಞಾನಪೂರ್ಣಹಿತ ಗೀತಾಂಜಲಿ
ಹರಿದುದೀ ದಿವ್ಯ ಭಾವನಾತ್ಮಕ ಶೈಲಿಯಲಿ,

ಸಂನ್ಯಾಸಿ ಗೀತೆ*

ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ದೂರದಡವಿಯೊಳೆಲ್ಲಿ ಲೌಕಿಕವಿಷಯವಾಸನೆ ಮುಟ್ಟದೊ,
ಎಲ್ಲಿ ಗಿರಿಗುಹೆಕಂದರರದ ಬಳಿ ಜಗದ ಗಲಿಬಿಲಿ ತಟ್ಟದೊ,
ಎಲ್ಲಿ ಕಾಮವು ಸುಳಿಯದೊ,–ಮೇಣ್
ಎಲ್ಲಿ ಜೀವವು ತಿಳಿಯದೊ
ಕೀರ್ತಿ ಕಾಂಚನವೆಂಬುವಾಸೆಗಳಿಂದ ಜನಿಸುವ ಭ್ರಾಂತಿಯ,
ಎಲ್ಲಿ ಆತ್ಮವು ಪಡೆದು ನಲಿವುದೊ ನಿಚ್ಚವಾಗಿಹ ಶಾಂತಿಯ,
ನನ್ನಿಯರಿವಾನಂದವಾಹಿನಿಯೆಲ್ಲಿ ಸಂತತ ಹರಿವುದೊ,
ಎಲ್ಲಿ ಎಡೆಬಿಡದಿರದ ತೃಪ್ತಿಯ ಸರಿ ನಿರಂತರ ಸುರಿವುದೊ
ಅಲ್ಲಿ ಮೂಡಿದ ಹಾಡನುಲಿಯ್ಯೆ, ವೀರ ಸಂನ್ಯಾಸಿ–
ಓಂ! ತತ್! ಸತ್! ಓಂ!

೨

ಕುಟ್ಟಿ ಪುಡಿಪುಡಿಮಾಡು ಮಾಯೆಯು ಕಟ್ಟಿಬಿಗಿದಿಹ ಹಗ್ಗವ;
ಕಿತ್ತುಬಿಸುಡೈ ಹೊಳೆವ ಹೊನ್ನಿನ ಹೆಣ್ಣು ಮಣ್ಣಿನ ಕಗ್ಗವ!
ಮುದ್ದಿಸಲಿ ಪೀಡಿಸಲಿ ದಾಸನು ದಾಸನೆಂಬುದೆ ಸತ್ಯವು;
ಕಬ್ಬಿಣವೊ? ಕಾಂಚನವೊ? ಕಟ್ಟಿದ ಕಣ್ಣಿ ಕಣ್ಣಿಯೆ ನಿತ್ಯವು.
ಪಾಪ ಪುಣ್ಯಗಳೆಂಬವು, – ಮಾ
ತ್ಸರ್ಯ ಪ್ರೇಮಗಳೆಂಬವು
ದ್ವಂದ್ವರಾಜ್ಯದ ಧೂರ್ತಚೋರರು; ಬಿಟ್ಟುಕಳೆ, ಕಳೆಯವರನು!
ಮೋಹಗೊಳಿಪರು, ಬಿಗಿವರಿರಿವರು; ಎಚ್ಚರಿಕೆಯಿಂದವರನು
ತಳ್ಳು ದೊರಕೆ, ಓ ವಿರಕ್ತನೆ! ಹಾಡು ಚಾಗಿಯ ಹಾಡನು!

ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಮುಕ್ತಿಯ ಗಾನವನು, ಓ ವೀರ ಸಂನ್ಯಾಸಿ–
ಓ! ತತ್! ಸತ್! ಓಂ!

೩

ಕತ್ತಲಳಿಯಲಿ; ಮಬ್ಬುಕವಿಸುವ ಭವದ ತೃಷ್ಣೆಯು ಬತ್ತಲಿ;
ಬಾಳಮೋಹವು ಮರುಮರೀಚಿಕೆ; ಮಾಯೆ ಕೆತ್ತಿದ ಪುತ್ತಳಿ!
ಜನನದೆಡೆಯಿಂ ಮರಣದೆಡೆಗಾಗೆಳೆವುದೆಮ್ಮನು ದೇಹವು!
ಜನ್ಮಜನ್ಮದಿ ಮರಳಿ ಮರಳುವುದೆಮ್ಮ ಬಿಗಿಯಲು ಮೋಹವು!
ತನ್ನ ಜಯಿಸಿದ ಶಕ್ತನು–ಅವ
ನೆಲ್ಲ ಜಯಿಸಿದ ಮುಕ್ತನು;
ಎಂಬುದನು ತಿಳಿ; ಹಿಂಜರಿಯದಿರು. ಸಂನ್ಯಾಸಿಯೇ, ನಡೆ ಮುಂದಕೆ.
ಗುರಿಯು ದೊರಕುವವರೆಗೆ ನಡೆ, ನಡೆ; ನೋಡದಿರು ನೀ ಹಿಂದಕೆ.
ಏಳು ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಹಾಡು ಸಿದ್ಧನೆ, ಓ ಪ್ರಬುದ್ಧನೆ, ಹಾಡು ಸಂನ್ಯಾಸಿ–
ಓಂ! ತತ್! ಸತ್! ಓಂ!

೪

"ಬೆಳೆಯ ಕೊಯ್ವನು ಬಿತ್ತಿದಾತನು; ಪಾಪ ಪಾಪಕೆ ಕಾರಣ;
ವೃಕ್ಷ ಕಾರ್ಯಕೆ ಬೀಜ ಕಾರಣ; ಪುಣ್ಯ ಪುಣ್ಯಕೆ ಕಾರಣ;
ಹುಟ್ಟಿ ಮೈವಡೆದಾತ್ಮ ಬಾಳಿನ ಬಲೆಯ ತಪ್ಪದೆ ಹೊರುವುದು;
ಕಟ್ಟು ಮೀರಿಹನಾವನಿರುವನು? ಕಟ್ಟು ಕಟ್ಟನೆ ಹೆರುವುದು!"

ಎಂದು ಪಂಡಿತರೆಂಬರು–ಮೇಣ್
ತತ್ತ್ವದರ್ಶಿಗಳೆಂಬರು!
ಆದೊಡೇನನಂತಾತ್ಮವೆಂಬುದು ನಾಮರೂಪಾತೀತವು;
ಮುಕ್ತಿಬಂಧಗಳಿಲ್ಲದಾತ್ಮವು ಸರ್ವನಿಯಮಾತೀತವು!
ತತ್ತ್ವಮಸಿ ಎಂದರಿತು, ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಸಾರು ಸಿದ್ಧನೆ, ವಿಶ್ವವರಿಯಲಿ! ಹಾಡು ಸಂನ್ಯಾಸಿ.
ಓಂ! ತತ್! ಸತ್! ಓಂ!

೫

ತಂದೆ ತಾಯಿಯು ಸತಿಯು ಮಕ್ಕಳು ಗೆಳೆಯರೆಂಬುವರರಿಯರು;
ಕನಸು ಕಾಣುತಲವರು ಸೊನ್ನೆಯೆ ಸರ್ವವೆನ್ನುತ ಮೆರೆವರು.
ಲಿಂಗವರಿಯದ ಆತ್ಮವಾರಿಗೆ ಮಗುವು? ಆರಿಗೆ ತಾತನು?
ಆರ ಮಿತ್ರನು? ಆರ ಶತ್ರುವು? ಒಂದೆಯಾಗಿರುವಾತನು?
ಆತ್ಮವೆಲ್ಲಿಯು ಇರುವುದು; – ಮೇಣ್
ಆತ್ಮವೊಂದಾಗಿರುವುದು.
ಭೇದವೆಂಬುವ ತೋರಿಕೆಯು ನಮ್ಮಾತ್ಮನಾಶಕೆ ಹೇತುವು.
ಭೇದವನು ತೊರೆದೊಂದೆಯೆಂಬುದನರಿಯೆ ಮುಕ್ತಿಗೆ ಸೇತುವು.
ಧೈರ್ಯದಿಂದನೆಲ್ಲರಾಲಿಸೆ ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ಸಾರು, ಜೀವನ್ಮುಕ್ತ! ಸಾರೈ ಧೀರ ಸಂನ್ಯಾಸಿ–
ಓಂ! ತತ್! ಸತ್! ಓಂ!

೬

ಇರುವುದೊಂದೇ! ನಿತ್ಯಮುಕ್ತನು, ಸರ್ವಜ್ಞಾನಿಯು ಆತ್ಮನು!
ನಾಮರೂಪಾತೀತನಾತನು; ಪಾಪಪುಣ್ಯಾತೀತನು!

ವಿಶ್ವಮಾಯಾಧೀಶನಾತನು; ಕನಸು ಕಾಣುವನಾತನು!
ಸಾಕ್ಷಿಯಾತನು: ಪ್ರಕೃತಿಜೀವರ ತೆರದಿ ತೋರುವನಾತನು!
ಎಲ್ಲಿ ಮುಕ್ತಿಯ ಹುಡುಕುವೆ?-ಏ
ಕಿಂತು ಸುಮನೆ ದುಡುಕುವೆ?
ಇಹವು ತೋರದು, ಪರವು ತೋರದು; ಗುಡಿಯೊಳದು
ಮೈದೋರದು.
ವೇದ ತೋರದು, ಶಾಸ್ತ್ರ ತೋರದು; ಮತವು ಮುಕ್ತಿಯ
ತೋರದು!
ನಿನ್ನ ಕೈಲಿದೆ ನಿನ್ನ ಬಿಗಿದಿಹ ಕಬ್ಬಿಣದ ಯಮಪಾಶವು;
ಬರಿದೆ ಶೋಕಿಪುದೇಕೆ? ಬಿಡು, ಬಿಡು! ನಿನಗೆ ನೀನೇ
ಮೋಸವು!
ಬೇಡ. ಪಾಶವ ಕಡಿದು ಕೈಬಿಡು! ಹಾಡು ಸಂನ್ಯಾಸಿ-
ಓಂ! ತತ್! ಸತ್! ಓಂ!

೭

"ಶಾಂತಿ ಸರ್ವರಿಗಿರಲಿ" ಉಲಿಯೈ, "ಜೀವಜಂತುಗಳಾಳಿಗೆ
ಹಿಂಸೆಯಾಗದೆ ಇರಲಿ ನನ್ನಿಂದೆಲ್ಲ ಸೊಗದಲಿ ಬಾಳುಗೆ!
ಬಾನೊಳಾಡುವ, ನೆಲದೊಳೋಡುವ ಸರ್ವರಾತ್ಮನು ನಾನಹೆ;
ನಾಕ ನರಕಗಳಾಸೆ ಭಯಗಳನೆಲ್ಲ ಮನದಿಂ ದೂಡುವೆ!"
ದೇಹ ಬಾಳಲಿ, ಬೀಳಲಿ; – ಅದು
ಕರ್ಮನದಿಯಲಿ ತೇಲಲಿ!
ಕೆಲರು ಹಾರಗಳಿಂದ ಸಿಂಗರಿಸದನು ಪೂಜಿಸಿ ಬಾಗಲಿ!
ಕೆಲರು ಕಾಲಿಂದೊದೆದು ನೂಕಲಿ! ಹುಡಿಯು ಹುಡಿಯೊಳೆ
ಹೋಗಲಿ!
ಎಲ್ಲ ಒಂದಿರಲಾರು ಹೊಗಳುವರಾರು ಹೊಗಳಿಸಿಕೊಂಬರು?
ನಿಂದೆ ನಿಂದಿಪರೆಲ್ಲ ಕೂಡಲು ಯಾರು ನಿಂದೆಯನುಂಬರು?

ಪಾಶಗಳ ಕಡಿ! ಬಿಸುಡು, ಕಿತ್ತಡಿ! ಹಾಡು ಸಂನ್ಯಾಸಿ–
ಓಂ! ತತ್! ಸತ್! ಓಂ!

೮

ಎಲ್ಲಿ ಕಾಮಿನಿಯೆಲ್ಲಿ ಕಾಂಚನದಾಸೆ ನೆಲೆಯಾಗಿರುವುದೊ,
ಸತ್ಯವೆಂಬುವುದಲ್ಲಿ ಸುಳಿಯದು! ಎಲ್ಲಿ ಕಾಮವು ಇರುವುದೊ,
ಅಲ್ಲಿ ಮುಕ್ತಿಯು ನಾಚಿ ತೋರದು! ಎಲ್ಲಿ ಸುಳಿವುದೊ
ಭೋಗವು
ಅಲ್ಲಿ ತೆರೆಯದು ಮಾಯೆ ಬಾಗಿಲನಲ್ಲಿಹುದು ಭವರೋಗವು;
ಎಲ್ಲಿ ನೆಲಸದೊ ಚಾಗವು–ದಿಟ
ವಲ್ಲಿ ಸೇರದು ಯೋಗವು!
ಗಗನವೇ ಮನೆ! ಹಸುರೆ ಹಾಸಿಗೆ! ಮನೆಯು ಸಾಲ್ವುದೆ
ಚಾಗಿಗೆ?
ಹಸಿಯೊ, ಬಿಸಿಯೋ? ಬಿದಿಯು ಕೊಟ್ಟಾಹಾರವನ್ನವು
ಯೋಗಿಗೆ!
ಏನು ತಿಂದರೆ, ಏನು ಕುಡಿದರೆ, ಏನು? ಆತ್ಮಗೆ ಕೊರತೆಯೆ?
ಸರ್ವಪಾಪವ ತಿಂದುತೇಗುವ ಗಂಗೆಗೇಂ ಕೊಳೆ ಕೊರತೆಯೆ?
ನೀನು ಮಿಂಚೈ! ನೀನು ಸಿಡಿಲೈ! ಮೊಳಗು ಸಂನ್ಯಾಸಿ–
ಓಂ! ತತ್! ಸತ್! ಓಂ!

೬

ನಿಜವನರಿತವರೆಲ್ಲೊ ಕೆಲವರು; ನಗುವರುಳಿದವರೆಲ್ಲರೂ
ನಿನ್ನ ಕಂಡರೆ, ಹೇ ಮಹಾತ್ಮನೆ! ಕುರುಡರೇನನು ಬಲ್ಲರು?
ಗಣಿಸದವರನು ಹೋಗು, ಮುಕ್ತನೆ, ನೀನು ಊರಿಂದೂರಿಗೆ.
ಸೊಗವ ಬಯಸದೆ, ಅಳಲಿಗಳುಕದೆ! ಕತ್ತಲಲಿ ಸಂಚಾರಿಗೆ
ನಿನ್ನ ಬೆಳಕನು ನೀಡಲೈ – ಸಂ
ಸಾರ ಮಾಯೆಯ ದೂಡಲೈ!

ಸಾಧನಾ ಶೀಲಂ / ೧೦೩೭

ಇಂತು ದಿನದಿನ ಕರ್ಮಶಕ್ತಿಯು ಮುಗಿವವರೆಗೂ ಸಾಗೆಲೈ!
ನಾನು ನೀನುಗಳಳಿದು ಆತ್ಮದೊಳಿಳಿದು ಕಡೆಯೊಳು
ಹೋಗೆಲೈ
ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!
ತತ್ತ್ವಮಸಿ ಎಂದರಿತು ಹಾಡೈ ಧೀರ ಸಂನ್ಯಾಸಿ–
ಓಂ! ತತ್! ಸತ್! ಓಂ!

*ಸ್ವಾಮಿ ವಿವೇಕಾನಂದರ ಗೀತೆಯನ್ನು ಭಾಷಾಂತರಿಸಿದವರು 'ಕುವೆಂಪು'

❋ ❋

ಅಂದಿಂದಿನ ಕಠಿಣಾತಿಕಠಿಣ ಪರಿಶ್ರಮದಿಂ
ಸ್ವಾಮೀಜಿಯ ವಜ್ರಕಾಯಂ ಬಳಲಿ ಬೆಂಡಿನ
ತನುವಾಯ್ತು. ಪೆರ್ಚಿನ ಪರಿಶ್ರಮವ ಭರಿಸುವೊಡೆ
ತಲ್ಲಣಿಪ ಜೀವಗತಿಯಿಂ ಶ್ರಮಿಕ ಪ್ರವೃತ್ತಿ
ನಡೆಯದಾಯ್ತು. ವೈದ್ಯಮಹೋದಯರ್ ಗಮಿಸಿದರ್
ದೈಹಿಕ ಪರೀಕ್ಷೆಯಬಳಿಕಂ ಚಿಕಿತ್ಸೆಯೊಡಂ
ಪಥ್ಯಪಾನಗಳ್ ಮೈಗೂಡಿದುವು, ಕ್ರಮವಾಗಿ.
ಆದೊಡವರ ಭುಜಗಳಮೇಲೆ ಗುರುತರದ ಬಹು
ಬಗೆಯ ಕಾರ್ಯಮಿರುತಿರೆ ಬಿಡುವು ದೊರೆವುದುಂಟೇ?
ನವದೀಕ್ಷಿತ ಸಂನ್ಯಾಸಿಗಳಿಂಗೆ ಅನುದಿನಂ
ಗೀತೋಪದೇಶ ಮೇಣ್ ವೇದೋಪನಿಷತ್ತು
ಸಂಸ್ಕೃತ ಪಾಠ ವೇದಾಂತ ತತ್ತ್ವೋಪದೇಶಗಳ್
ಇಂತು ಎಲ್ಲವಗೆಯ ಪ್ರವಚನಂಗಳಂ ಬಿತ್ತಿ
ಬಿತ್ತರಿಸಿ ನವತರುವಲಿಗಳಂ ತರಬಿಯತ್ತು–

ಗೊಳಿಪ ಕಾರ್ಯಮಂ ನಿರ್ವಹಿಸದೆ ಗತಿಯಿಲ್ಲಂ.
ಮತ್ತಮಾ ಭ್ರಾತೃಭಾಯಿಗಳ್ ತಂತಮ್ಮಗಳ
ಕ್ಷೇತ್ರದೊಳಿಹ ಎಡರು ತೊಡರುಗಳಂ ಮತ್ತಮಾ
ಅಪಾರತರ ಭಂಗಬನ್ನಂಗಳಂ ಬರೆಬರೆದು
ಉಲ್ಲೇಖನ ರೂಪಿನಲಿ ಕಳುಹಿಸುತಿರುತಿರಲ್
ಪತ್ರಗಳ ಬೊಂತೆಯೇ ಕೈಸಾರ್ವುದು ದಿನದಿನ.
ಸ್ವಾಮಿಜಿಯ ಹೃನ್ಮನಗಳ್ ಚಿಂತನಾವೇಶದ
ಬೀಡಾಗಿರೆ ವಿಶ್ರಾಂತಿಗೆಲ್ಲಿಯ ನೆಲೆ? ಪ್ರತಿ
ದಿನವುಂ ನಡುರಾತ್ರಿ ಕಳೆವನ್ನ ಸಂದರ್ಶಕರ್
ತುಂಬಿರ್ಪರ್. ಶಾಂತಿ ಸುವಿಶ್ರಾಂತಿಗಳ್ ದೂರ
ದೂರವೇ ಉಳಿದಪುದು. ದೈಹಿಕಾರೋಗ್ಯಕ್ಕೆ
ಕತ್ತರಿಯನೊಡ್ಡಿ, ಗುರುದೇವ ಬಳಲಿದರ್, ಬಾಡಿ
ಬೆಂಡಾದರ್ ತಾವರಿಯದ ತೆರದಲಿ. ಗುರುವಿನ
ಸ್ಥಿತಿಗತಿಯನರಿದು ಶಿಷ್ಯರುಂ ಕೊರಗಿ ಕರಗಿ
ಇನ್ನಿಲ್ಲಿರುತಿರ್ದೊಡೆ ಗತಿಯಿಲ್ಲಮೆಂದೆಂದು
ದೂರ ಡಾರ್ಜಲಿಂಗಿಗೆ ಕರೆದೊಯ್ದರ್ ಗುರುಗಳಂ
ವಿದೇಶೀ ಮಿತ್ರರುಗಳ ಸಹಿತ. ಡಾರ್ಜಲಿಂಗ್
ಶ್ವೇತ ವರ್ಣೀಯ ಆಳರಸರುಗಳ ಬೇಸಿಗೆ
ರಾಜಧಾನಿ! ಸುರಸುಂದರ ಬಂಧುರ ವನದಾತ್ರಿ!
ಮಹಾ ಪಚ್ಚೆಪಡಲ್ ಎನೆ ಎತ್ತಲೆತ್ತಲ್ ಮನವ
ಮಿಡಿಸುವ ಹಸುರೇ ಹಸುರು! ತಣ್ಣಗೆ ತನಿಯುಗುವ
ತನಿಗಾಳಿ. ಬಿಮ್ಮನೆ ಬಿಗಿದು ಬರುವ ಬಿರುಗಾಳಿ,
ಒಯ್ಯನೆ ಒಲಿದು ಬಹ ಅಲೆಗಾಳಿ, ಸುಳಿಸುತ್ತುತೆ
ಸುಯ್ಯುಬೀಸುವ ಬೀಸುಗಾಳಿ, ಮೆಯ್ ಮುದ್ದಿಸುವ
ಮುದ್ದುಗಾಳಿ ಸುತ್ತಮುತ್ತಲಿರೆ ಜಯವಿಜಯರೇ

ಕಾಪಿಗಿರ್ದೊಲ್ ಸೊಗದ ಸುಧೆಯಾಯ್ತು ಗೆಲುವಾಯ್ತು.
ಪಕ್ಷಿಗೊರಳಿಂದುಗುವ ರಾಗಾನುರಾಗದಿಂ
ಮನತುಂಬಿ, ಪುಷ್ಪಿತ ವನಧಿಯ ಸೌರಭದಿಂ
ತನುತುಂಬಿ ಹಸನಾಯ್ತು ದಿನಚರಿಯು. ಆದೊಡೇಂ
ವಿವೇಕಾನಂದರ ಸಮಯ ಪ್ರಜ್ಞೆ ಮಿಣ್ಣನಿರೆ
ಬಿಡುವುದೇಂ? ಲೇಖನಿಯ ಕೂರ್ಮೆಳ್ಳು ಹರಿತಮಾಯ್ತು.
ಸುಧಾರ್ಮಿಕ ಚೇತನ ಪುಟಿದೆಳ್ದುದು; ಬರಣಿಗೆಯಲಿ.
    ಸೋದರಿ ನಿವೇದಿತಳಿಗೆ ಬರೆಯೆ ಪತ್ರವೊಂದಂ
ಕೈಕೊಂಡರ್, ರಾತ್ರಿಯುಣಿಸು ಮುಗಿದು ವಿರಾಮದಾ
ವೇಳೆಯಲಿ ಲೆಕ್ಕಣಿಕೆಯ ಕರಿಯಕ್ಕರದ ಮಸಿಯ
ಧಾರೆ ಹರಿಯಿತು ಈ ಪರಿಯ ಸೊಬಗಿನ ಸವಿಯಾಗಿ,
ಅದಂ ಕನ್ನಡಿಗರಿಂಗಾಗಿ ಕನ್ನಡಿಸಿದ ಮಹನೀಯರ್
ಸ್ವಾಮಿ ಶಾಸ್ತ್ರಾನಂದ ಶ್ರೀಗುರುಭಾಯಿಗಳ್.

ಕೂಗಿ ಕರೆಯುವಾ!

ನುಡಿಗಳೆರಡರಲ್ಲಿ ಅರುಹೆ, ಇರುವ ಎನ್ನ ಆ-ದರ್ಶ-
ಮನುಜ ಕುಲಕೆ ತಮ್ಮೊಳಿರ್ಪ ದಿವ್ಯಭಾವ ಬೋಧೆಗೈದು
ಅದನು ಬಾಳಯಾತ್ರೆಯಲ್ಲಿ, ಅಡಿಗು ಅಡಿಗು ಬೆಳಗಿಸಲ್ಕೆ
ತದನುರೂಪ ಪಥಗಳನ್ನು ತೋರಿಕೊಡುವ ಯತ್ನ-ಕೃತಿಯು.

ಜಗವು ಬದ್ಧ, ಮೌಢ್ಯದಿಂದ-ಅದರ ಆಟ ಬಾಳನೋಟ
ಮೌಢ್ಯಗ್ರಸ್ತ ಜನರೆ ಎಲ್ಲ. ಅರಸೆ ಆಯ್ತು ಆಳೆ ಆಯ್ತು.
ತುಳಿದ, ದಳಿತ ಜೀವಿಗಳನು ನೋಡೆ ಉಕ್ಕಿಬಹುದು ಮರುಕ
ಅದಕು ಅಧಿಕ ಕರುಣಾಜನಕ, ತುಳಿವ ಮೂಢ ಜನರ ಬಾಳು.

ಜಗದ ದುಃಖ ದುಗುಡಕೆಲ್ಲ ಒಂದೆ ಮೂಲ, ಬೇರೆ ಅಲ್ಲ
ಅ-ಜ್ಞಾನ! ಅ-ಜ್ಞಾನ! ಸ್ಪಷ್ಟವಲ್ತೆ ಹಗಲಿನೊಲು...?

ಕತ್ತಲಲ್ಲಿ ತೊಳಲುತಿರ್ಪ ಜಗಕೆ ಬೆಳಕ ಕೊಡುವರಾರು?
ಇದಕೆ ಬೇಕು ಧೀರತಮರು, ಸ್ವಾರ್ಥರಹಿತ ಸತ್ಯತಮರು.

ಯುಗದಿ ಯುಗದಿ ಒಂದೆ ನಿಯಮ, ಹಿಂದಿನಿಂದ ಬಂದ ನಿಯಮ
ಆತ್ಮತ್ಯಾಗ, ಆತ್ಮಬಲಿಯು–ಅದುವೆ ಒಂದೆ, ನೀತಿ ನಿಯಮ!
ಹಿಂದೆ ಮಾತ್ರ ಮುಗಿದುದಲ್ಲ, ಇಂದು ಸಹಿತ ಅದುವೆ ಧರುಮ
ಮುಂದೆ ಬರುವ ಎಲ್ಲ ಯುಗಕು, ಅದುವೆ ಅಕಟ! ಒಂದೆ ಧರುಮ.

ಆತ್ಮಬಲಿಯ ನೀಡಬೇಕು ಭುವಿಯ ಧೀರ–ಸಾರತಮರು
ಸಕಲ ಭೂತ ಹಿತಕೆ, ಸುಖಕೆ, ಸರ್ವ ಜೀವರಭ್ಯುದಯಕೆ.
ಬೇಕು ಇಂದು 'ಬುದ್ಧ' ಮರು, ಒಬ್ಬರಲ್ಲ–ನೂರು ಜನರು,
ಅತುಲ ನಿತ್ಯ ಪ್ರೇಮಯುತರು ಸತತ ಕರುಣಾಜಲಧಿ ಸಮರು.

ಜಗದ ಧರ್ಮ–ಮತಗಳಿಂದು ಜೀವರಹಿತ ವಿಕಟ ಆಟ
ಬೇಕು ಇಂದು 'ಶೀಲ'ಯುತರು, ನಿತ್ಯನಿಷ್ಠ 'ಚರಿತ' ಯುತರು
ಪ್ರೇಮದಿಂದ ಜ್ವಲಿಸುತಿರ್ಪ ಸ್ವಾರ್ಥರಹಿತ–ಕೀರ್ತಿಯುತರು–
ಇಂಥ ಜನಕೆ ಕಾದು ಭುವಿಯು ಹಾ–ತೊರೆದು ಮೊರೆಯುತಿಹುದು.

ಮಾತು ಮಾತು, ಮತ್ತೆ ಮಾತು, ಬಾಳ ತುಂಬ ಬರಿಯ ಮಾತು
ನೆಲೆಯು ಇಲ್ಲ, ಬೆಲೆಯು ಇಲ್ಲ, ಉಕ್ತಿಯಲ್ಲಿ ಶಕ್ತಿಯಿಲ್ಲ.
ಒಲವಿನಿಂದ ಉರಿಗೆ ಬಲವು, ಚೊಕ್ಕ ಪ್ರೇಮ ಶಕ್ತಿಧಾಮ;
ಪ್ರೇಮ ಬಲದಿ ನುಡಿಗಳೆಲ್ಲ ಸಿಡಿಲಿನಿಂದೆ ಎರಗಿಬಹವು.

ನಿನ್ನಲಿಹುದು ಸತ್ಯಶ್ರದ್ಧೆ, ನಿನ್ನಲಿಹುದು ಸುಪ್ತಶಕ್ತಿ
ಜಗವನೆಲ್ಲ ಚಲಿಪಶಕ್ತಿ, ಕಾಲೇನ ತದಭಿವ್ಯಕ್ತಿ.

ಬೇಕು ಎಮಗೆ ಧೀರವಾಣಿ, ಧೀರತರದ ಕೃತಿಯು ಬೇಕು
ಏಳಿರೇಳಿ, ಎದ್ದುನಿಲ್ಲಿ! ಕೇಳಿ ಕರೆಯ ಮಹೋದಯರೇ!
ದುಃಖಜ್ವಾಲೆ ದಹಿಸುತಿಹುದು ಜಗವನೆಲ್ಲ, ಏಳಿರೇಳಿ!
ಸಾಕು ಇನ್ನು ನಿಮ್ಮ ನಿದ್ರೆ....ಉತ್–ತಿಷ್ಠತ !ಜಾ–ಗ್ರತ !

'ಏಳಿರೇಳಿ' ಎಂದು ಕರೆವ, ಎಲ್ಲ ಜಗವ ಕೂಗಿ ಕರೆವ
ಸುಪ್ತದೈವರೆಲ್ಲ ಕೇಳಿ ಎದ್ದು ಬರುವವರೆಗೆ ಕರೆವ
ಅಂತರಾತ್ಮ ದಿವ್ಯ ಆತ್ಮ ಓ–ಗೊಡುವವರೆಗೆ ಕರೆವ
ಇದುವೆ ಬಾಳ ಹಿರಿಯ ಕರ್ಮ, ಪರಮ ಸೇವೆ, ಮಹಾನ್ ಧರುಮ.

ಇದುವೆ ಎನ್ನ ಕೃತಿಯ ಸಾರ, ಮಿಕ್ಕುದೆಲ್ಲ ಇದರ ವಿವರ.
'ಏಳಿರೇಳಿ, ಎದ್ದು ನಿಲ್ಲಿ' – ಇದುವೆ ಎನ್ನ ನುಡಿಯ ಸಾರ.

❋ ❋

ಮತ್ತೊರ್ಮೆ, ಸೋದರಿ ನಿವೇದಿತೆಯಂ ಕುರಿತಂತೆ
ಬರೆದರಿಂತು 'ಸೋದರಿ, ಕೇಳಿದಂ ಇಲ್ಲಿರ್ಪ
ಬಲುಘೋರ ಅನಕ್ಷರತೆಯಲಿ ಹುಗಿದ ಅದ್ಭುತ
ಅ–ಜ್ಞಾನದ ಕೂಪದಲಿ ನರಳ್ವ ಸ್ತ್ರೀಜನರ್ಗೆ
ಬಾಳಿನಲಿ ಕಡು ಕತ್ತಲೆಯುಮಲ್ಲದೇನಿಲ್ಲ.
ತೀವ್ರ ಕರುಣಾಜನಕ ಸ್ಥಿತಿಯಲಿರುತಿರ್ದುದು
ಜ್ಞಾನಕ್ಕೆ ಕುತ್ತಾದೊಡಂ, ಭಾರತೀಯರಾದ
ಸ್ತ್ರೀಜನರ್ ಧಾರ್ಮಿಕ ರೇಖೆಯಂ ದಾಂಟಿನಿಲ್ವ
ಯೋಚನೆಯನೆಂದೂ ಮಾಣರ್. ಕೇಳ್, ಸೋದರೀ!
ಭಾರತದ ಲಲನೆಯರ್ ನಿಮ್ಮೊಲ್ ಸುವಿದ್ಯೆಯಂ
ಕಲಿತು ಬಲಿತು ಬುದ್ಧಿಯಲಿ ವಿದ್ಯೆಯಲಿ ಅನನ್ಯ
ರೀತಿಯೊಳ್ ಅಭಿಜ್ಞಾನಿಗಳಾದೊಡೆ ಅದೊಂದು

ಭಾರತದ ಭಾಗ್ಯ ಎಂಬೆನೆನ್. ಆದೊಡದರಿಂ
ಸಾಮಾಜಿಕ ಕ್ಲೈಬ್ಯಂ ತೊಳೆದುಹೋಪುವ ಬದಲ್
ಪಾವಿತ್ರ್ಯವನಿನಿತು ಕಳೆದುಕೊಂಬುವುದಾದೊಡೆ
ಅದರ ವಾಸನೆಯು ಸರ್ವಥಾ ಬೇಕಿಲ್ಲವೆಂಬೆ.
ಘನವಂತಿಕೆಯಲಿ ನಮ್ಮವರ್ ನಿಷ್ಣಾತರಿರೆ
ಆ ಚಿಂತೆಯು ದೂರವೆ. ಸೋದರೀ ಒಳ್ಳಿತೆಂಬೆ!"
ಆ ವನಧಿ, ಆ ತಣ್ಣನೆಯ ತಂಪು, ಆ ಕಂಪು
ಆ ಶಾಂತಿ, ಆ ಅಭೂತಪೂರ್ವ ವಾಯುಮಾನ
ಒಂದಕ್ಕೊಂದು ಹೊಂದಿ ಬಹುಲ ಅನ್ಯೋನ್ಯತೆಯಿಂ
ಬಾಳ್ದಿರಲದರಿಂದೇಂ ಸ್ವಾಮಿಜಿಯ ಆರೋಗ್ಯ
ಭಾಗ್ಯಂ ತನುಗೂಡದಾಯ್ತು. ತಿಂಗಳೆರಡುಮೂರು
ಕಳಿದುವು ಹಗುರವಾಗಿ. ಇನ್ನಲ್ಲಿ ಉಳಿಯಲುರೆ
ಪೊಳ್ತಿಲ್ಲ. ಗುರುಭಾಯಿಗಳ್ ಪೊತ್ತ ಭುಜಭಾರ
ತನ್ನಯ ಶಿರೋಭಾರಮಿರೆ ಭರಿಸದಿರ್ಪುದೆನೆ
ಸಾಧ್ಯವೇಂ? ಸ್ವಾಮಿಜಿಯುಂ ತಮ್ಮವರ ಕಠಿಣ
ಒತ್ತಾಯದೊಲ್ಮೆಗೆ ಮಣಿಯದಾದರ್. ಅನನ್ಯ
ಪ್ರಕೃತಿಯ ಸುಸುಂದರ ಉಡಿಯಿಂ ಪೊರಮಟ್ಟರ್
ತಮ್ಮಯ ಅನುಯಾಯಿಗಳೊಡಗೂಡಿ. ಡಾರ್ಜಿಲಿಂಗ್
ಪ್ರದೇಶಮಂ ಬಿಟ್ಟು ಪೊರಡಲಾರದೆ ಪೊರಡೆ
ಗುರುದೇವನಂ ಕರುಣೆಯಿಂ ಬೀಳುಕೊಟ್ಟಿತಾ
ಸಸ್ಯ ಸಂಮೃದ್ಧಮಾದ ವನಧಾತ್ರಿ. ತಮ್ಮಯ
ಅನುಯಾಯಿಗಳೊಡಗೂಡಿ, ನಡೆಯುತಿರೆ ವನಧಿಯ
ಹಾದಿಯಲಿ ಕಂಡುವೆನಿತೆನಿತೋ ವನ್ಯ ಪ್ರಾಣಿಗಳ್
ಆಕರ್ಷಣೀಯಮಾಗಿ ಹೃನ್ಮನಗಳಂ ಸೆಳೆವ
ಪಾಂಗಿನಲಿ. ಬಿದಿರುಮೆಳೆಯೊತ್ತಿನಲಿ ಪೊಸಮೊಳಕೆ

ಮೂಡಿರಲ್ ಚೂಪುಚೂಪಗೆ, ಸೊಂಡಿಲಂ ಚಾಚಿ
ಲರಿಲರಿಲರಿಲೆಂದು ಮುರಿಮುರಿದು ತಿನುತಿರ್ದುವು
ಆನೆಗಳ್ ತಮ್ಮಯ ಒಳಗದೊಡಂ. ನೇರೀಳೆ
ಮರವಿಡಿದು ಕೊಂಬೆಯಲುಗಿಸಿ ಪಣ್ಗಳಂ ತಿಂದು
ಉದಹರಿಸುತೆ ಕೊಂಬೆಯಿಂ ಕೊಂಬೆಗೆ ಜಿಗಿದಾಡುವ
ಕಪಿಗಳಿಂಡು. ಗೆಡ್ಡೆಗೆಣಸಿನ ಗಿಡು ಬಳ್ಳಿಗಳ
ಬುಡವಂ ಬಗೆದುಬಗೆದು ತಿಂಬುವ ಸೂಕರಂಗಳ್.
ಗರಿಕೆವುಲ್ಲಿನ ಕುಡಿಯಣಿಸಿಗಾಗಿ ಅತ್ತಿತ್ತ
ಜಿಗಿದಾಡುವ ಮೊಲಗಳ್. ಕಾಡುಬೆಕ್ಕುಗಳ್, ಮರ
ಕುಟುಕ ಹಕ್ಕಿಗಳ್ ಇತ್ಯಾದಿ ಜೀವ ರಾಶಿಯ
ಚಟುವಟಿಕೆಯಂ ಗಮನಿಸುತೆ ಕಳೆದರ್ ಹಾದಿಯ.
ಮುಂದೆಮುಂದೆ ಮುಂಕೊಂಡು ಬರೆ ಕಣ್ಗೆಸೆಯಿತ್ತು
ಸುಂದರತರ ಗ್ರಾಮ್ಯಬದುಕು. ಭೂವಲಯವೆನಿತು
ಸಂಮೃದ್ಧಮೆಂತಂತು ನೆಲದೊಡೆಯರಂತಂತು
ಸಡ್ಡೆ ಶ್ರದ್ಧೆಯಿಂ ದೂರದೂರಂ. ತಾವ್ ಪಿರಿಯ
ನಗರಗಳಲಿ ನೆಲಸಿ ವಿಲಾಸಮಯ ಬದುಕಿನಲಿ
ಬದುಕಿ ಮೆರೆವರ್ ಲೋಕೋತ್ತರ ವೈಭವದಲಿ!
ಗೇಣಿದಾರರ್ ಗದ್ದೆತೋಂಟಗಳಲಿ ನೆಲೆನಿಂದು
ದುಡಿದು ದುಡಿದು ಬೆವರ್ ಬಸಿದು ಬೆಳೆಸಿರ್ದ ಮಿಸುನಿ
ಬೆಳೆಯಲಿ ಸಿಂಹಪಾಲ್ ಒಡೆಯರ್ಗಿತ್ತು ಅರೆಹೊಟ್ಟೆ
ಅರೆಬಟ್ಟೆಯ ಬಡಬಾಳಿನಲಿ ಬಾಳ್ವರ್ ಕಂಬನಿ
ಬಸಿದು. ಅವರ ದಯನೀಯ ಬದುಕಿಗೆ ಮನಕರಗಿ
ಕಂಡಕಂಡಲ್ಲಿ ಕುಶಲೋಪರಿಯಂ ನಡೆಸಿದರ್
ನಸುವೊಳ್ಳು. ಮತ್ತಲ್ಲಿಂದೆ ಮುಂಪಯಣ ನಡೆದುದು
ಕಲಿಕತ್ತಾಭಿಮುಖವಾಗಿ. ಬಹುಜನ ಬಾಹುಳ್ಯ

ಭರಿತ ನಗರಿ ಸದಾ ಶಬ್ದಾಯಮಾನಂ. ವಿವಿಧ
ಹಂತಗಳ ಮಜಲುಮಜಲಂ ದಾಂಟಿ ಪತ್ತನದ
ಪೊರವಲಯದ ಆಶ್ರಮವಂ ಬೊಕ್ಕರ್. ಮತ್ತಂ
ಆರಂಭಮಾದುದ್ಯೆ ಎಂದಿನ ದಿನಚರಿ. ಎನಿತೆನಿತೋ
ಪೊಸಪೊಸ ವಟುಗಳ್ ಸನ್ನಿಧಿಗೈದು ಬೇಡಿದರ್
ಅಡಿಗೆರಗಿ ಸಂನ್ಯಾಸ ದೀಕ್ಷೆಗಾಗಿ. ಆಗಳ್
ಪಿರಿಯ ಭ್ರಾತೃಭಾಯಿಗಳಿಂಗಿದು ಅಸಹನೀಯ
ಇರಿಸು ಮುರಿಸು. ಆರಾರೊ ಗೊತ್ತುಗುರಿಯಿಲ್ಲದ
ತರುವಲಿಗಳ್ ಕೂಡಿದೊಡೆ ಗತಿಗೆಡಗು ಎಂಬುವ
ಕಳಕಳಿ. ಗುರುವರ್ಯಂ ಎಲ್ಲರ ಮನವೋದುತೆ
ನಿಜ ವಿಚಾರಮರಿತು ಮನದುಂಬಿ ಪಿರಿಯ ಶಿಷ್ಯ
ಗಣಮಂ ಬಳಿಗೆ ಬರಿಸಿ ಸಮಾಧಾನಂ ಪೇಳ್ದು
ಮನವೊಲಿಸಿ ದೀಕ್ಷೆಯಿತ್ತರ್ ಪೊಸ ತರುವಲಿಗಳ
ಬರಮಾಡಿ. ಮತ್ತೆ ಕೆಲಬರ್ಯೆದರ್ ದೀಕ್ಷೆಯಂ
ಬಯಸಿ. ತುಂಬಿತು ಮಠ ವಟುಗಳಂದೆ. ಸ್ವಾಮಿಜಿ
ತೋಷಭರಿತರಾದರ್, ಕಾಷಾಯ ವಸನದಿಂ
ಸುಶೋಭಿತ ವಟುಗಳ್ ಮಠದೊಳ್ ಸಾಲ್‌ಸಾಲ್ಯೆಸಿ
ಕುಳಿತರ್, ಎಳೆಮೊಗದಲಿ ತಿಳಿನಗೆಯ ಹೂಹರಡಿ.
ದೀಕ್ಷೆಯ ಮಹೋದ್ದೇಶಮಂ ತಿಳಿಪಿ ವೇದಾಂತ
ಪಾಠ ಸಂನ್ಯಾಸ ವ್ರತದಾಚರಣೆಯ ವಿವರ,
ಸನಾತನ ಧರ್ಮದ ಮಹತ್ವ ಇಂತಿಂತಿಂತೀ
ಬಗೆವಗೆಯ ವಿಷಯ ವಿಶ್ವವಂ ಬಿಚ್ಚಿಬಿಡಿಸಿಯೆ
ತೋರ್ವರ್ ಇನಿದಿನಿದಾಗಿ ಮನ ಮುಟ್ಟುವ ತೆರದಿ.
ಬಳಿಕಲಾ ಪಿರಿಕಿರಿಯ ವಟುಗಳಂ ಉದ್ದೇಶಿಸಿ
ನುಡಿದರಿಂತಿಂತು "ಎಲೆ, ಅಮೃತ ಪುತ್ರರಿರಾ,

ಕೇಳಿ, ಕೇಳಿಲ್ಲಿ! ಇಂದಿನೀ ದಿನಗಳೊಳ್ ನಿಮ್ಮ
ಮನ ತುಂಬಲ್ ತಿಳಿಪುವೆನೆನ್ ಕೆಲವು ಸಂಗತಿಯ.
ಮಿನ್ನೆ ಒರ್ ಅಪೂರ್ವತಮ ಕಾಲದೊಳೀ ವಂಶ
ವಾಹಿಯಲಿ ಜಿಜ್ಞಾಸೆಯ ಪ್ರವೃತ್ತಿ ಭೋಂಕನೆ
ತಲೆದೋರಿದತ್ತು. ಅದರೊಡಂ ನಿರ್ಭಯ ಭರಿತ
ವಿಶ್ಲೇಷಣೆಯ ರೂಪುಮೈದಾಳಿತು. ಪ್ರಥಮ
ಪ್ರಯತ್ನವುಂ ಪ್ರಕಂಪಿತಮಾದೊಡಮದಂ
ಕೈವಿಡದೆ ಮುಂಬರಿಸಲದೊಂದು ಪರಿಪುಷ್ಟ
ಕಟ್ಟುನಿಟ್ಟಿನ ಶಾಸ್ತ್ರಕೆ ಮೇಣ್, ಮೇಣ್....ಉತ್ತಮ
ಸಾಹಸದ ಉದ್ಯಮಗಳಿಂಗೆ ಮತ್ತದರ ವರ
ಫಲಿತಾಂಶಗಳಿಂಗೆ ಎಡೆಗೊಟ್ಟು ಬೆಳೆಯಿಸಿತು.
    "ಆ ಬೌದ್ಧಿಕ ಸಾಹಸವೇ ಜನತತಿಯಂ ತಮ್ಮ
ಯಜ್ಞವೇದಿಕೆಯ ಒಂದೊಂದು ಇಟ್ಟಿಗೆಗಳಂ
ತೆಗೆತೆಗೆದು ಪರಿಕಿಸಲ್ ಪ್ರೇರೇಪಿಸಿತು. ತಮ್ಮ
ಧಾರ್ಮಿಕ ವಾಙ್ಮಯದ ಒಂದೊಂದು ಸ್ವರ-ಪದಗಳಂ
ತೆಗೆಯುತ್ತೆ ಬಿಡಿಬಿಡಿಸಿ ಹಿಂಜಿಸಿ ಛಿದ್ರಛಿದ್ರ-
ಗೊಳಿಪಂತೆ ಗೈದತ್ತು. ತಮ್ಮಯ ಧಾರ್ಮಿಕ ವಿಧಿ
ವಿಧಾನಂಗಳಂ ಶಂಕಿಸಿ ವಿರಚಿಸಿ ಪುನರ್ರಚಿಸಿ
ತಿರಸ್ಕರಿಪ-ಪುರಸ್ಕರಿಪ ಕೆಚ್ಚು ನೆಚ್ಚುಗಳ
ಅರಿವು-ತಿಳಿವು ಮೂಡಿತು.
                    "ಆ ಕೆಚ್ಚು ತಮ್ಮೆಲ್ಲ
ಉಪಾಸ್ಯ ದೇವತೆಗಳ ಕಲ್ಪನೆಯ ಗತಿಯಂ
ತಿರುತಿರುಚಿ ತಿರುಗು ಮುರುಗುಗೈದುದು. ಆ ಸರ್ವ
ಶಕ್ತ ಸರ್ವವ್ಯಾಪಿ ಸರ್ವಜ್ಞನಾದ ಮಹಾ ಸೃಷ್ಟಿ
ಕರ್ತನನ್ನೇ - ಅವರ ಪುರಾತನ ಪ್ರಜಾಪ-

ತಿಯನ್ನೇ–ಎರಡನೇ ಸ್ಥಾನಕೆ ಇಳಿಸಿದತ್ತು.
ಅದುಮಲ್ಲದೆ ಆ ದೇವರನ್ನೇ ನಿಷ್ಪ್ರಯೋ–
ಜಕನೆನುತೆ ಕಡೆಗಣಿಸಿ ಬದಿಗೊತ್ತಿ ಅವನಿರದ
ಒಂದು ವಿಶ್ವಧರ್ಮವನ್ನೇ ಸೃಜಿಸಿತು. ಇಂದಿಗುಂ
ಉಳಿದೆಲ್ಲವಗೆಯ ಧರ್ಮಂಗಳಿಗಿಂ ಹೆಚ್ಚೆಚ್ಚು
ಅನುಯಾಯಿಗಳಂಬಡೆದ ಧರ್ಮ ಅದಾಗಿಹುದು!
ಕೇಳಿ, ವಿಧವಿಧ ಯಜ್ಞವೇದಿಗಳ್ ಕಟ್ಟುವೆಡೆ
ಇಟ್ಟಿಗೆಯ ರಚನೆಯಿಂ ರೇಖಾಗಣಿತ ಶಾಸ್ತ್ರ–
ಮಂ ನಿರೂಪಿಸಿತದು. ಅನಂತರ ಅರ್ಘ್ಯ ಅರ್ಚನೆ–
ಗಳ ಮುಹೂರ್ತಮಂ ನಿಕರವಾಗರಿದು ನಿಶ್ಚಯಿಸುವ
ಪ್ರಯತ್ನದಲಿ ಜ್ಯೋತಿಷ್ಯಶಾಸ್ತ್ರವು ಮೊಳೆಯಿತ್ತು.
ಅದನರಿತು ತಿಳಿದೊಡನೆ ಇಡೀ ಜಗತ್ ಆಶ್ಚರ್ಯ–
ಚಕಿತ ಮಾದುದು ದಿಟಂ. ಗಣಿತ ಶಾಸ್ತ್ರಕೆ ಹಿಂದಿನ
ಅಥ ಇಂದಿನ ಜನಾಂಗಕಿಂತಲ್ ಯಜ್ಞವೇದಿ ಕೊಡುಗೆ
ಮೇಲುಗೈ ಆಯಿತ್ತು. ಆಧುನಿಕ ಯೂರೋಪಿನ
ನಾಗರಿಕತೆಯ ನಿರ್ಮಾಣದಲಿ ಅತ್ಯಂತ ನೆರ–
ವಿತ್ತ ರಸಾಯನಶಾಸ್ತ್ರ ವೈದ್ಯಶಾಸ್ತ್ರ ಸಂಗೀತ
ಶಾಸ್ತ್ರಗಳ್ ರೂಪಿಸಿದುದು ಅದುವೇ. ಇಂತಿಂತು
ಅನ್ವೇಷಕ ಪ್ರವೃತ್ತಿಯಿಂದಲಿ ರಸಪೂರ್ಣ
ದಂತಕತೆಗಳ ಮೂಲಕ ಚಿಣ್ಣ ಚಿಣ್ಣ ಮಕ್ಕಳ
ಮನಸ್ಸಂ ತಿದ್ದಿ ಸಂಸ್ಕರಿಸುವಾ ಶಾಸ್ತ್ರವುಂ
ಮೈದಳೆದುದು. ಇಂತಿಂತಿಂತು ಮೂಡಿ ಮೈದಾಳ್ದ
ಬಿಜ್ಜೆಗಳಂ ಆಯಾಯಾ ದೇಶವುಂ ಶಾಲೆಯಲಿ
ಶಿಶುವಿಹಾರಗಳಲಿ ಬಗೆವಗೆಯ ದಂತ ಕಥೆಗಳ್
ಅಳವಡಿಸಿ ಬದುಕಿನುದ್ದಕೂ ಅಚ್ಚಳಿಯದಿಹ

ವಿವಿಧ ಸಂಸ್ಕಾರಮಂ ಪಡೆಯುತಿದೆ ಅಂದಿಂದಿಗುಂ,
ಕೇಳಿಲ್ಲಿ ದಿವ್ಯಾತ್ಮರಿರಾ ಕಿವಿಗೊಟ್ಟು ಕೇಳಿ!

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಯೋ ಭಾರತ ಭೂಮಿ ಭಾಗೇ ।
ಸ್ವರ್ಗಾಪವರ್ಗಾಸ್ಪದ ಮಾರ್ಗ ಭೂತೇ
ಭವಂತಿ ಭೂಯಃ ಪುರುಷಾನ್ ಸುರತ್ವಾತ್ ॥

"ಶಿಷ್ಯರೇ, ಯಾವತ್ಕಾಲವುಂ ಸಂಸಾರಗಳ
ಸಾಗರಂ ಶಾಂತಿಸುಖದ ಬೀಡೆನ್ನದಿರಿ. ದುಃಖ
ಮೂಲವೇ ಈ ಸಂಸಾರ. ಸುಖ ಶಾಂತಿಯರಸೆ
ಮೋಕ್ಷಕ್ಕೆ ಸಾಧನಮಾದ ಭಕ್ತಿಯೊಂದೇ
ದಾರಿದೀಪಮಾದಪುದು. ಮುಂದಿನ ನಿಮ್ಮಗಳ
ಸಂನ್ಯಾಸಿ ಜೀವನದ ಸಾಧನೆ ಸುಲಭಮಲ್ಲಂ.
ನೆಚ್ಚಿನಿಂ ಕೆಚ್ಚಿನಿಂ ಧೈರ್ಯದಿಂ ಸ್ಥೈರ್ಯದಿಂ
ವೀರನಾವೇಶದಿಂ ಅಗ್ಗಿಯಂ ಪುಗುವವೊಲ್
ನಿಂನಿಮ್ಮ ಪಜ್ಜೆ ಪಜ್ಜೆಯಂ ಮುಂದಿಡಿ. ಮನ
ಮತಿಯರಿದು ಮುನ್ನಡೆವುದೇ ದಿವ್ಯ ಸಾಧನಾ
ಶೀಲತೆಯ ಪ್ರಪ್ರಥಮ ಹಂತಮಾತ್ರ ಮೆನಲಕ್ಕುಂ.

"ಸಂಪದೋ ಜಲತರಂಗ ವಿಲೋಲಾಃ
ಯೌವ್ವನಂ ತ್ರಿಚತುರಾಣಿ ದಿನಾನಿ ।
ಶಾರದಾಭ್ರ ಪರಿಚಂಚಲಂ ಆಯುಃ
ಕಿಂ ಧನೈಃ ಪರಹಿತಾನಿ ಕುರುಧ್ವಂ ॥"

ಭಾಯಿಗಳೆ, ಬಹುಜನರ ಹಿತಕೆ ಬಹುಜನರ ಸುಖ
ತೋಷಗಳಿಗೆ ಅನುಗಾಲವುಂ ಸಂನ್ಯಾಸಿಗಳ
ಜನ್ಮ ಸಂಪದಂ ಮೀಸಲೆಂಬುದಂ ಮರೆಯದಿರಿ.
ಪರಬಾಳಿಗೆ ಬೆಳಕಿನ ಆಸರೆಯನಿತ್ತು ತಾಂ

ಬೆಳಗುವುದೆ ಸಂನ್ಯಾಸಿ ಧರ್ಮ. ಮತ್ತಂ ಮೋಕ್ಷ
ಸಾಧನೆಯ ಹಾದಿಯೊಳ್ ಭಕ್ತಿಯೇ ಪ್ರಾಧಾನ್ಯಂ
''**ಮೋಕ್ಷ ಸಾಧನ ಸಾಮಗ್ರ್ಯಾಮ್ ಭಕ್ತಿರೇವ
ಗರೀಯಸೀ**'' ನಿಂನಿಮ್ಮ ಕಾರ್ಯಕ್ರಮಗಳಂ
ಪರಿಶೀಲಿಸಿ ಪರಿಶೋಧಿಸಿಕೊಳ್ಳಲಕ್ಕುಂ. ದೀನ
ದಲಿತರಲಿ, ರೋಗಿಷ್ಠರಲಿ ದುಃಖಿಗಳಲಿ ದಯೆ
ಇರಲಿ ಮೇಣ್ ಮಾತೆಯರಲಿ ಮಮತೆಯಿರಲಿ. ಅವರ
ಕಣ್ಣೀರ್ ತೊಡೆಯುವೊಡೆ ಮುಂದಾಗಿ. ಅಜ್ಞಾನಿ
ಪಂಗಡಗಳಿಗೆ ಜ್ಞಾನ ದಾನಂಗೈದುಪಕರಿಸಿ.
ಸಂನ್ಯಾಸಿ ಪದಂ ಇಂತಿಂಥ ಸಂಯೋಜನೆಗೆ
ಮೊಸಲೆನೆ ಸಲ್ವುದು ಗಡ? ಎಲ್ಲರ್ ಜಡನಿದ್ದೆಯಂ
ಜಡಿಕುಟ್ಟಿ ಏಳಿ! ಎದ್ದೇಳಿ! ಇತರರ ನೇಳಿಸಿ!
ಗುರಿ ಮುಟ್ಟುವನ್ನ ನಿಲ್ಲದಿರಿ ಮುಂದೆ ಸಾಗಿರಿ.
''**ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಭೋಧತ**''
''ಭ್ರಾತೃ ಭಾಯಿಗಳೆ, ಮನಗೊಟ್ಟು ಕೇಳಿ! ಆನುಂ
ಅನೇಕವಗೆಯ ದೇಶಗಳಂ ಸುತ್ತಿ ಬಂದಿಹೆ.
ದೇಶಪ್ರಗತಿಯುಂ ಬಹುಜನರ ಭುಜಬಲದಿಂ
ನಡೆದಿಹುದು. ಇಲ್ಲಿಯುಂ ಸಂಘ ಬದ್ಧರಿರದೆಯೆ
ಆವೊಂದು ಶಾಶ್ವತ ಕೆಲಸ ಕಾರ್ಯಮಂ ನಾವ್
ಸಾಧಿಸುವುದಸಾಧ್ಯಂ. ಪ್ರಕೃತ, ಬಹುಜನಮತ
ತತ್ತ್ವವನನುಕರಿಸುತೆ ಜನ ಸಾಮಾನ್ಯರಿಂಗೆ
ವಿದ್ಯಾಭ್ಯಾಸವನೀವುದು ಪ್ರಥಮ ಹೆಜ್ಜೆ. ನವ
ಪ್ರಗತಿ ಪಥದೊಳ್ ವಿದ್ಯೆಯುಂ ಸರ್ವತ್ರ ಸಾ-
ರ್ವಜನಿಕಮಾಗದೆ ದೇಶ ಪ್ರಗತಿಯು ಕನಸಿನ
ಗಂಟು. ಆದ್ದರಿಂ ವಿದ್ಯೆಯೆ ಪ್ರಥಮ ಮಜಲ್

ರಾಷ್ಟ್ರದ ಸುಧಾರಣೆಗೆ. ಕೇಳಿ, ಮಿನ್ನೆ ನಾವಾರ
ಪೆಸರಿನೊಳ್ ಸಂನ್ಯಾಸ ದೀಕ್ಷೆಯಂ ಸ್ವೀಕಾರ
ಗೈದೆವೋ ಆ ದೀಕ್ಷಾವ್ರತಕೆಂದೆಂದಿನಿತು
ಧಕ್ಕೆಯುಂ ಬಾರದವೊಲ್ ಬಾಳ್ದು ಸಂಘಮಂ
ಸಂಘಟಿಸಿ ಕಾರ್ಯಮಂ ನೆರೆ ಸಾಧಿಸರ್ವೇಳ್ಕುಂ.
ಕಟಿಬಂಧನಗೈದು ಪಟ್ಟುಬಿಡದೆ ಕಾರ್ಯಮೆಸಗಿರಿ
ಶ್ರೀರಾಮಕೃಷ್ಣಪರಮಹಂಸರ ದೇಹಾವ-
ಸಾನಮಾದ ಬಳಿಕಲವರಾ ತತ್ತ್ವೋಪದೇಶ
ಅಳಿಯಿತೆಂಬುವ ಆಡು ಮಾತಿಗೆ ಅವಕಾಶಂ
ನೀಡಲಾಸಲ್ಲ. ಶಿಷ್ಯರಾವು ಗುರುಗಳಾದೇಶ
ಏನುಮೇನೆಂದರಿತವರ್. ಏನುಮೇನಿರ್ದೊಡೆ
ಅದಂ ಶಿರಸಾವಹಿಸಿ ಕಾರ್ಯನಿರ್ವಹಿಸಲಕ್ಕುಂ.
ಪರರಾಳ್ವಿಕೆಯಲಿ ನಲುಗಿದ ರಾಷ್ಟ್ರ ನಮ್ಮದೆನೆ
ನಿಮ್ಮೊಳಗೊಳಗೆ ನೀವ್ ಯೋಚಿಸಿರಿ, ಉದ್ಧಾರ
ಕಾರ್ಯಮಂ ಕುರಿತು. ನಮ್ಮಿಂದೆ ಆಪನಿತು ಸತ್
ಸೇವೆಯಂ ಸಲ್ಲಿಪುದೆ ಮಾನವ ಸಹಜಗುಣಂ.
ಅದುವೆ ಮಾನವೀಯತೆ. ಈ ಬಗೆಯ ಗುಣಾವಳಿ
ಕಲ್ಯಾಣಗುಣವೆನಿಪುದು. ಇದೇ ಪರಮಾತ್ಮತಾ
ಭಾವ. ಇದೇ ಜೀವನ್ಮುಕ್ತಿಗೆ ಸತ್ಯ ಮಾರ್ಗ ಗಡ?
'ಇದೋ, ಮಮ ಆತ್ಮೀಯ ವಟುಗಳೆ ಕೇಳಿಲ್ಲಿ!

ಕಿಂ ತಸ್ಯ ದಾನೈಃ ಕಿಂ ತೀರ್ಥೈಃ
ಕಿಂ ತಪೋ ಭಿಃ ಕಿಮಧ್ವರೈಃ ।
ಹೃದಿಸ್ಥೋ ಯಸ್ಯ ಭಗವಾನ್
ಮಂಗಳಾಯತನೋ ಶಿವಃ ॥

ಯುಕ್ತ ಸಮಯಂ ಕೂಡಿ ಬರಲ್ ಗೃಹೀಭಕ್ತ

ಶಿಖಾಮಣಿಗಳೈದರ್ ಗುರುಗಳ ವರ ಸನ್ನಿಧಿಗೆ.
ಪಿರಿಯ ವ್ಯಕ್ತಿ ಗಿರೀಶ್ ಚಂದ್ರಘೋಷರೊಂದಿಗೆ
ಕೂಡಾಡಿ ಸಂಘದ ಬಗೆವಗೆಯ ವಿಚಾರಾತ್ಮಕ
ಕಾರ್ಯಕ್ರಮಂಗಳ ವಿವರವಿತ್ತು ಸಹಕಾರ
ಹಸ್ತಮಂ ಕೋರಿದರ್ ಸ್ವಾಮೀಜಿ. ತರುವಾಯಿ
ಎಲ್ಲರೊಗ್ಗಿನಲಿ ಶ್ರೀರಾಮಕೃಷ್ಣ ಸಂಘದ
ಕಾರ್ಯಕ್ರಮಗಳ್ ರೂಪಿತಮಾದುವು. ಅನೇಕ
ನಗರಗಳಲಿ ಶ್ರೀರಾಮಕೃಷ್ಣ ಮಠಗಳ್ ಮೊಳೆತು
ಹಬ್ಬಿ ಹರಡಿ ರೂಪಿಸಿದುವು ಸೇವಾ ಕಾರ್ಯಮಂ.
ಓವೋ! ಚಿರದುಃಖಿನಿ ಭಾರತ ಜನನಿಯ ನೊಂದ
ಪರಿಮ್ಲಾನ ಮುಖಬಿಂಬದೊಳ್ ಆಶಾಕಿರಣಂ
ಒಡಮೂಡಿ ಪ್ರಸನ್ನ ವದನೆಯಾದಳ್ ಒಡಲ
ಕುಡಿಗಳ ಚಿರನೂತನ ಪುರುಪು ಪುರುಡುಗಳಮಿತ
ಓಟವಂ ನೋಡಿ! ಎದೆಯಂತರಾಳದ ಬಿಸಿಯುಸಿರ್
ತಣಿಸಿದುದೋ ಎನೆ ಸಮಾಧಾನದ ಉಸಿರ್ವಿಟ್ಟಳ್
ಒಡಲ್ ತುಂಬಿ.

ಶ್ರೀ ರಾಮಕೃಷ್ಣ ಪರಮಹಂಸ
ಮಹೋದಯಂ ಪುಣೀತ ತತ್ತ್ವಂಗಳ ಬಿತ್ತವು
ಮೊಳಕೆಯೊಡೆದು ಸಸಿಗಳಾದುವು ಮಠಮಠಗಳಲಿ.
ಶಾರೀರಿಕ ಮಾನಸಿಕ ಪಾರಮಾರ್ಥಿಕ ತತ್ತ್ವ
ನಿರೂಪಣೆ ಮೆರೆದುದು ಸಮುನ್ನತ ಪರಮಗತಿಯ
ಸಾಧನ ಸದನಗಳೆಂಬವೊಲ್, ಸರ್ವಧರ್ಮದ
ಸಮನ್ವಯತೆ ಮೂಡಿ ಘನವಾಯ್ತು. ಹೊರದೇಶಕೆ
ಭ್ರಾತೃಭಾಯಿಗಳಂಕಳಿಪಿ ಸ್ತನಾತನ ಧರ್ಮ
ಪ್ರಚಾರ ಪಡಿಸುವ ಉದ್ದೇಶ ಸಫಲತೆಗೇರ್ದು

ವಿದೇಶಗಳಲಿ ಮೂಡಿದುವು 'ರಾಮಕೃಷ್ಣ ಪರಮ
ಹಂಸ ಮಿಷನ್' ನಾಮಾಂಕಿತವೊತ್ತಿ. ಗುರುಭಾಯಿಗಳ
ಸಹಕಾರ ಗೃಹೀಭಕ್ತರ ಸ್ನೇಹ ಗೌರವಾ-
ದರ ಇವೆಲ್ಲವುಂ ಒಗ್ಗೂಡಿ ಭುಜ ಬಲವು
ಕೂಡಿದತ್ತು ಗುರುದೇವಂಗೆ, ಮುಂಬಿಗನಾಗಿ
ಇರುತಿರೆ ಗುರುವರ್ಯಂ ಅಧ್ಯಕ್ಷತೆಗೆ ಸ್ವಾಮಿ
ಬ್ರಹ್ಮಾನಂದರ್ ಭುಜಕುಡಲ್ ಮುಂದ್ಯೆದರ್. ಸ್ವಾಮಿ
ಯೋಗಾನಂದರ್ ಒಪ್ಪಿದರ್ ಉಪಾಧ್ಯಕ್ಷ ಪದವಂ.
ವಟುಗಳ್ ಹೊರಗಣಭಕ್ತರ್, ಸಾರ್ವಜನಿಕರ್ ಮೇಣ್
ಸಂದರ್ಶಕರ್ ಇಂತು ಎಲ್ಲವಗೆಯ ಮಹಾನ್
ಅನುರಾಗಿಗಳಿಂ ಕೂಡಿ ಬೆಳೆಯತೊಡಗಿತು ಸಭೆ:
ಅಥ ಮಠಗಳ್ ಬೆಳೆಯ ತೊಡಗಿದುವು ಜಲವೂಡಿಸಿದ
ಎಳೆಬಾಳೆಯ ಸಸಿಯೊಲ್, ಮನುಕುಲ ಸಂಜಾತರ
ನೋವು ನಿಡಿಗಳಿಂಗೆ, ಸಕಲಕರ ಸುವಿದ್ಯಾದಿ
ಜ್ಞಾನ ಪರಿಪೋಷಣೆಗೆ, ಯೋಗ ಪಿಪಾಸಿಗಳಿಗೆ
ಅನುಗುಣಮಪ್ಪಿಯೆ ಭೋಧನಾಕ್ರಮ ಶುರುವಾಯ್ತು
ಮಠಮಠಗಳಲಿ. ಶ್ರೀ ರಾಮಕೃಷ್ಣ ಪರಮಹಂಸ
ಮಹೋದಯರ ಕೀರ್ತಿಯಪರಿಮಳಂ ಹರಡಿದುದು
ಮತ್ತೆ ಕತ್ತುರಿ ಪರಿಮಳದವೊಲ್! ಭುಗಿಲೆದ್ದಿರ್ದ
ಕ್ರೈಸ್ತ ಪಾದ್ರಿಗಳ ಮನ ಮಿಡುಕಿತು; ಗುರುಕುಲದೊಳ್
ನಡೆಸಿರ್ದ ಸಕಲತರ ಸಾಧನಾ ಸಾಮರ್ಥ್ಯ
ಅಚ್ಚರಿಯ ಮುದ್ರೆಯೊತ್ತಿರೆ ಸಕಲೇಂದ್ರಿಯಗಳಿಗೆ,
ಪ್ರಣತಿಯ ಪ್ರಾಣ ಕುಡಿಯಂ ಹೋಲಿ, ಕಣ್ಪೊಲದೊಳ್
ಕಣ್ ಕಳಿಕೆಯು ವಿಸ್ತೃತಮಾಯ್ತು; ಮಾನಸಪಟಲಮಿಡುಕಿ
ಜಾಲಂದ್ರಮಾಯ್ತು. ಮಿಣ್ಣನೆ ಮೂಕ ಮೌನತಾ

ಶೋಭೆಯಂ ಒತ್ತಿ ಮಿಣ್ಣನಾದರ್ ಪಾದ್ರಿಕುಲ
ಸೋದರರ್.
ಗುರುವರಂ ಅನುದಿನದ ಎಣೆಯಿರದ
ಕಾರ್ಯಕ್ರಮದೊಳ್ ಮುಳುಗಿ ನಲುಗಿ ಬಳಲಿ ಬಾಡಿ
ಸೊಪ್ಪಾಗುತಿರೆ ಬೈಗುವೊಳ್ತಿನ ಸತ್ ಸಮಯಂ
ತಂಪುಗುವ ತನಿಗೈಗಳಿಂ ಮೈದಡವಿ ಮುದದಿ
ಬೋಳೈಸುವುದು ಸ್ವಾಂತನ ನೀಡುವಂತೆ. ಆಗಣ
ತಂಪು ತನಿಯಿಂಪು ಮುತ್ತುತಿರೆ ತನುಮನಗಳಲಿ
ಬಳಲ್ಕೆಯೆನಿತೊ ಹರಿವುದು ಇನಿದಿನಿದೆಂಬಿನಂ.
ಆದೊಡಂ ದುರದೃಷ್ಟವಶದಿಂದೆ ಗುರುವರ್ಯ
ವಿವೇಕಾನಂದರುಂ ಆರೋಗ್ಯ ಭಾಗ್ಯಮಂ
ಪಡೆಯದಾದರ್. ದಿನದಿನಂ ಬಳಲಿ ಬಾಡುತ್ತೆ
ತೊಟ್ಟು ಕಳೆದ ಹೂವಿನ ಪರಿಯೊಳಾಯ್ತು ಬರ್ದುಕು.
ಆ ಧೀರೋದ್ದಾತ ವಜ್ರಕಾಯಂ ಕ್ಷೀಣಿಸುತೆ
ರೋಗವಶವಾಗುತಿರೆ ಶಿಷ್ಯರ್ ತಳಮಳಿಸಿದರ್.
ವೈದ್ಯವಾಚಸ್ಪತಿಗಳೈತಂದರ್ ಚಿಕಿತ್ಸೆಯು
ಎಡೆವಿಡದೆ ಮೈಗೂಡಿದೊಡಂ ರೋಗ ಬಾಧೆಯು
ಪಿಂಜರಿಯದಾಯ್ತು. ಬೆಂಡಿನೊಲ್ ತೇಲಾಡಿದುದು
ದೇಹ ಸಂಪುಟಂ. ವೈದ್ಯ ವೃಂದಂ ತಮ್ಮಗಳ
ಬೌದ್ಧಿಕ ಕರಂಡಮಂ ಸವೆಸಿಯುಂ ಸೋಲೊಪ್ಪಿ
ಚಿಂತಿತ ಮನದಿಂದಲಿ ಹವೆ ಬದಲಿಸಿಕೊಳ್ಳಲ್
ಸಲಹೆಯಂ ನೀಡಿದರ್ ಒಮ್ಮತದೊಳ್. ಶಿಷ್ಯರ್
ಮಿತ್ರ ಮಂಡಲಿಯುಂ ಒಡನೊಡನೆ ಪಯಣ ಹೂಡೆ
ಮನವಿತ್ತರ್; ಕಡು ದುಃಖ ಭಾರಮಂ ಭರಿಸಿರೆ
ಎದೆ ಬಿರಿಯುವೊಲ್ ಭಾಸಮಾದಪುದು. ಕಂಗಳ್

ತುಂಬಿದಪವು ಅಶ್ರುಜಲದಿಂದೆ ಮರೆಯೊಳಳ್ತು
ಅಳ್ತು ಹರಿಯ ಬಿಡುವರ್ ಸಂಕಟದ ಬಿಸಿಯುಸಿರ್.
ಆಶ್ರಮವು ತುಂಬಿದುದು ದುಃಖಾಶ್ರುಪೂರದಿಂ.
ಮೇತಿಂಗಳ ಆರನೆಯ ತೇದಿಯ್ಯೆತಂದುದು
ಪರಿಶುಭ್ರವೇಶದಲಿ, ಮಳೆಯಿಲ್ಲ, ಧಗೆಯಿಲ್ಲ.
ಶಾಂತ ಪರಿಶಾಂತ ವಾತಾವರಣವೇ ಎಲ್ಲೆಲ್ಲು.
ಗುರುದೇವನುಂ ಆಶ್ರಮವಂ ಬಿಟ್ಟು ತಮ್ಮಯ
ಶಿಷ್ಯಮಂಡಲಿಯೊಡಂ ಪೊರಮಟ್ಟರ್ ದೂರದ
ಹಿಮಾಲಯ ಪ್ರದೇಶದೊಳ್ ತಣ್ಪುಗುವ ಸುಂದರ
ಪ್ರಶಾಂತ ನಗರಿ ಅಲ್ಮೋರಕೆ. ಸುಪಥವಿಡಿದಿರೆ
ಪ್ರಕೃತಿಯ ಸೊಬಗಿನುಡಿಯೊಳ್ ಅಲ್ಲಲ್ಲಿ ಕಣ್ಗೆಸೆವ
ಹಿಮವಂತನ ಕೃಪಾಪೋಷಿತ ಹಿರಿಕಿರಿತರ
ಪೊಳಲ್‌ಗಳ ಗ್ರಾಮಂಗಳ ಜನ ಗುರುವಂ ಕಂಡು
ಕಾಣುತ್ತೆ ಬಲು ತೋಷದಿಂ ಗೌರವದಿಂ ಕರ
ಮುಗಿದು ಉದ್ದಂಡವೆರಗಿ ಫಲಪುಷ್ಪಗಳಿತ್ತು
ಆದರಿಸಿದರ್ ಬಹುಲ ತೋಷದಿಂ. ಮುಂಮುಂದೆ
ಮುಂಕೊಂಡು ತಾವ್ ಪಯಣಂಬೋಗೆ ದೂರದಾ
ಲಕ್ನೋ ನಗರ ಪ್ರಾಂತ್ಯಮಂ ಬೊಕ್ಕರೆಲ್ಲರುಂ.
ಆಗಳಾ ನಗರದೇಶದ ಪ್ರಜೆಗಳ್ ಮಂದ್ಯೆಸುತ್ತೆ
ಮುಂದ್ಯೆದು ಬಲು ಗೌರವದಿಂ ಶಿರಸ್ಸಂ ಮಣಿದು
ವಿನಯದಿಂ ಸುಸ್ವಾಗತದ ಮಳೆಯಂ ಕರೆದರಯ್
ಬೃಹದ್ ನಗರಿಯೇ ಮಣಿವ ತೆರದಲಿ. ಸಂಭ್ರಮ
ಸಡಗರಗಳ್ ಮೂಡಿ ನಲಿನಲಿದುವು ತೇಲ್ಯಾಡಿ.
ಅಲ್ಲಿಂದ ಸವಿಮಾತುಗಳ ಮಳೆಗರೆಯುತ್ತೆ ಮುಂ
ಪಯಣಂ ಗುರಿಗೊಂಡ ನಗರಿ ಅಲ್ಮೋರ! ಮಹಾ

ಮಹಿಮಾಮಯ ಭೀಮಾಭೀಲ ಹಿಮ ಪರ್ವತದ
ತನುಸಂಪದದಲಿ ಮೈದಾಳಿ ಹಬ್ಬಿ ಹರಡಿದ
ದೇವೇಂದ್ರ ನಗರ ಸದೃಶ ಶೀತಳ ಶೈತ್ಯಂ
ಮೆರೆದ ಅಲ್ಮೋರ! ಹಿಮರಾಜನ ಪದಸನ್ನಿದಿಯ
ನಿಮ್ನೋನ್ನತ ಪ್ರದೇಶದಲಿ ಏರುಪೇರೆನೆ
ಮೆಟ್ಟಿಲು ಮೆಟ್ಟಿಲ್ಗಳಾಗಿ, ಹಂತ ಹಂತವಾಗಿ
ಕಣ್ಗೆಸೆವ ಹರ್ಮ್ಯಗಳೈಸಿರಿ ಹಚ್ಚಹಸುರಿನ
ಮಧ್ಯೆ ಶೋಭಾಯಮಾನದಿಂದೊಪ್ಪುತಿರ್ದುದು
ಕಣ್ಮನಂ ಸೆಳೆವಂತೆ. ರುಕ್ಮರಾಗಾತಪದಿ
ಪರಿಸ್ನಾತ ನಗರವಧು ಸ್ವಾಗತಿಸಿದಳ್ ಬಲು
ಅನುರಾಗದಿಂ. ತಂಪುಹವೆ ಕಂಪುಗುವ ಪುಷ್ಪ
ಪರಿಷತ್ತು ಮನಮೋಹಕಂ. ಅಲ್ಲಿ ವಾಸ್ತವ್ಯ
ಹೂಡಿದ ಬಳಿಕ ತನುಮನಗಳ್ ಹಗುರಮಾದುವು.
ಸ್ವಾಮೀಜಿ ಹಾಯಾಗಿ ಉಸಿರಾಡಿದರ್. ತಂಪು
ಹವೆ ಒಪ್ಪಿತು ಮೈಗೆ. ದಿನದಿನಂ ಗಿರಿಯನೇರಿ
ಗಿರಿಯನಿಳಿದು. ಪಚ್ಚ ಪಸುರ್ವೆತ್ತು ಪಸುರಾಗಿಹ
ಪಸುರಿನ ಪಸಲೆಯಲಿ ಪದಚಾರಣಗೈಯುತೆ
ತಂಪು ಹವೆಯಂ ಪೀರ್ದು ಹರ್ಷ ಚಿತ್ತರಾದರ್
ಸ್ವಾಮೀಜಿ. ಬೆಳಗುವೊಳ್ತಿನಲಿ ವ್ಯಾಯಾಮ, ಲಘು
ಕುದುರೆ ಸವಾರಿ, ಹಿತಮಿತ ಸಂದರ್ಶಕರ ಭೇಟಿ.
ದಿನಚರಿಯಧ್ಯಾನ. ಶಿಷ್ಯಮಂಡಲಿಯೊಡನಾಟ ಇವು
ಹಿತವಾಯ್ತು ತನುಮನಗಳಿಗೆ. ಅಮಿತ ಆನಂದ
ಮೋದದಿಂ ಕಳೆದುವಾದಿನಗಳ್, ಹಗುರವಾಗಿ.
ಸ್ವಾಮೀಜಿ ಅಲ್ಲಿಂದೆ ತಮ್ಮ ಮೈದ್ಯವಾಚಸ್ಪತಿ
ವರ್ಯಂಗೆ ಬರೆದೊಂದು ಪತ್ರವಿದು "ಎಲೆ ಆರ್ಯ!

ಕೇಳ್, ಆನಿಲ್ಲಿಗೈದಾ ಕೆಲವು ದಿವಸಗಳ
ಬಳಿಕ ದೇಹದೊಳ್ ಭೀಮಬಲ ಬಂದಂತೆವೊಲ್
ತೋರ್ಪುದೆನಗೆ. ಲವಲವಿಕೆಯು ತುಂಬಿ ಸ್ಫೂರ್ತಿರಸ
ಹರಿದಾಡಿತು ಮೈಯೊಳ್. ದಿನದಿನಂ ಸುಧಾರಿಸಿ,
ಸುಧಾರಿಸಿ ನಿಜ ಸ್ವಾಸ್ಥ್ಯಮಂ ಪಡೆಯುತಿಹೆ. ಹೇ,
ವೈದ್ಯರೇ, ನೀವ್ ಇಲ್ಲಿಗೈದು ಕಣ್‌ನೆಟ್ಟು ನೋ-
ಳ್ಪುದೆನ್ನ ಚಟುವಟಿಕೆಯ! ಶುಭ್ರ ತುಷಾರಾವೃತ
ಧವಳಕಾಂತಿಯ ಹಿಮಗಿರಿಗಳ ಶೃಂಗದ ಮಡಿಲ
ತೊಟ್ಟಿಲೊಳ್ ಪದ್ಮಾಸನದಲಿ ಕುಳಿತಾನ್ ಕಣ್
ಮುಗಿದು ಉಪನಿಷತ್ತಿನ "ನ ತಸ್ಯ ಮೃತ್ಯುಃ
ನ ಜರಾ ನ ವ್ಯಾಧಿಃ, ಪ್ರಾಪ್ತಂ ಹಿ ಯೋಗಾಗ್ನಿ
ಯಯಂ ಶರೀರಂ," ಎಂಬ ವಚನಂ ಘೋಷಿಸುತೆ
ಧ್ಯಾನಗೈವ ಮಹಿಮಾಮಯ ದೃಶ್ಯಂ! ಅಹ ಅಭೂತ
ಪೂರ್ವ ಶ್ಲೋಕದ ಮುಂತೆ ನಾವೆತ್ತ? ಯೋಚಿಸಿರಿ!"
   ಕಳೆದುವು ಹಲಕೆಲವು ದಿನಮಾನಗಳ್. ಬಲಿಯಿತ್ತು
ದೈಹಿಕಬಲಂ. ಅನುದಿನದ ದಿನಚರಿಯ ಗಾತ್ರ
ಪೆರ್ಚಿದುದು ಅನುಕ್ರಮದೊಳ್. ಉಲ್ಲಸಿತಮಾಯ್ತು
ಜೀವಕಣ. ಪಂಜಾಬ್ ಮೇಣ್ ಕಾಶ್ಮೀರಗಳ
ಪ್ರಾಂತೀಯ ವಿದ್ವನ್ಮಣಿಗಳಿಂದೆ ಆಹ್ವಾನ
ಪತ್ರಗಳೈದುವು ಸ್ವಾಮೀಜಿಗೆ ಬಹುತರದಲಿ
ವರಭಕ್ತಿ ಗೌರವಗಳಿಂ ತುಂಬಿ. ಮೇಲಿಂದ
ಮೇಲ್ಬೈವ ಮಹತ್ ಗೌರವಾದರಗಳಿಂ ತುಂಬಿ
ಘನವೆತ್ತ ಕರೆಗಳಿಗೆ ಒಲ್ಲೆನೆನೆ ಬಾಯಿಯೇ
ಬರದಾಯ್ತು. ವಿಧಿಯುಮುಂದಣ ಮಾರ್ಗ ಸೂಚಿಯೆನೆ
ತಮ್ಮದೇನಿಹುದು ಮಂತ್ರಿಸುವೊಡೆ? ಮನಮತಿಯೊಪ್ಪಿ,

ಗಿರಿಪದತಲದ ಸಿರಿವಲಯದಿಂದ ಇಳಿಯದೆಯೆ
ಗತಿಯಿಲ್ಲವಾಯಿತು. ಒರ್‌ದಿನಂ ನಗರದಯಿತೆ
ಮ್ಲಾನಮುಖದಿಂ ಬೀಳ್ಕೊಟ್ಟಳು ಗುರುವರನಂ
ಮತ್ತಮಾ ಪರಿವಾರಮಂ. ನಗರಿಯ ದೂರದ
ಅಂಚಿನವರೆಗೆ ಬೆಂಬಳಿಯೆ ನಡೆದುದು ಪ್ರಮುಖ
ಜನಪದಂ. ಅಲ್ಮೋರ ನಗರಿ ಪಿಂದುಳಿಯಿತ್ತು.
ಒರ್ಮೆ ಕಾಲ್ನಡೆಯಾದೊಡೆ ಮಗದೊರ್ಮೆ ಬಂಡಿಯ
ಪಯಣಂ. ಹಾದಿಯೊಳ್ ಅಲ್ಲಲ್ಲಿ ಕಣ್ಗೆಸೆದ
ನಗರದಲಿ ಹಳ್ಳಿಯಲಿ ಪ್ರಜೆಗಳಿತ್ತ ಅಮೂಲ್ಯ
ಅಭಿನಂದನೆಗಳಂ ಪಡೆದು ಮಾನಿಸಿ ಹಲಕೆಲವು
ಹಿತವಚನಗಳ ಮುತ್ತು ಮಾಣಿಕ್ಯಗಳ ಚೆಲ್ಲಿ
ಸೂಸಾಡಿ ಮುಂಬರಿದು ಅಂಬಾಲ ನಗರಮಂ
ಬೊಕ್ಕರ್. ಬಿಡದಿಯ ಬಳಿಯೊಳಾಗಳೆ ಸೇರಿರ್ದ
ಜನರಾಶಿ ಕೈಪರೆಗಳ್ ತಟ್ಟಿ ಜಯಕಾರದ
ಹರ್ಷಧ್ವನಿಗೈದರ್. ಕೇಗಿಯು ದನಿಯನೆತ್ತಿ
ಕ್ರೇಂಕರಿಸಿದವೊಲಾಯ್ತು ಹರ್ಷಿತದನಿಯಿಂಪಿನ
ಶ್ರುತಿ. ಹಿರಿಯ ಸಂತ ಜನರಿಂ ಪಂಡಿತಲೋಕ
ಮಾನ್ಯರಿಂ ಕಿಕ್ಕಿರಿದು ತುಂಬಿತು ಬಿಡದಿ ಮನೆ.
ಒಡಲಾಳದಲಿ ಜೀವ ದ್ರವ್ಯ ಬಳಲಿರ್ದೊಡಂ
ಸ್ವಾಮೀಜಿ ದಿನಚರಿಯಲಿ ಪಾಲ್ಗೊಂಡರ್ ಸತತ.
ದಿನವೊಂದೆರಡು ಉರುಳಿ ಸರಿದುವು ಗತಕಾಲಕೆ.
ಪ್ರಾತಃಕಾಲೀನ ಪ್ರಶಾಂತಮಯ ಪೊಳ್ತಿನಲಿ
ಸಿಮ್ಲಾದಿಂ ಕ್ಸೇವಿಯರ್ ದಂಪತಿಗಳೈದು ಕೂಡಿ
ನೆರೆದರ್ ಜೊತೆಗೆ, ತೋಷರಸಂ ಸಂತೋಷಮಂ

ಕೂಡಿ ತೋಷ ದ್ರವ್ಯ ಬೆಳೆಯಿತು ಚಿನ್ನದ ಗಣಿಯು
ತಾನಾಗಿ. ಗುರುದೇವನ ಹೃನ್ಮನಗಳ್ ತಣಿದು
ಭಾವನಾ ಪೂರ್ವಕವಾಗಿ ಪ್ರಾತಃಪ್ರಾರ್ಥನೆ ಸಲಿಸಿದರ್,

"ಏಕೊ ದೇವಃ ಸರ್ವ ಭೂತೇಷುಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತಃ ।
ಕರ್ಮಾಧ್ಯಕ್ಷಃ ಸರ್ವಭೂತಾದಿ ವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥"

ಹರಿಃ ಓಂ ತತ್ ಸತ್

❋ ❋

ಸಪ್ತಸ್ತ್ರಿಂಶತೋಲ್ಲಾಸಂ

ದೇವಮಾನವ

ಹೇಳು ವಾಣಿಯೆ ಹೇಳು! ಎನ್ನೆದೆಯ ತಂತ್ರಿಗಳಂ
ಮಿಡಿಮಿಡಿದು, ಮುಂದಿನ ಯಜನಗಾಥೆಯಿದು ಹರಿಯಲಿ
ಜಳಜಳನೆ ಸ್ವಚ್ಛಂದ ಛಂದದ ಧುನಿರಸವಾಗಿ.
ಹೇಳು, ಹೇಳೌ ತಾಯೇ! ಭಾರತ ಸನಾತನ
ಧರ್ಮದುದ್ಧರಣಕ್ಕೆ ಸದ್‌ಭಾರತ ಧರಿತ್ರಿಯ
ಪರಮೋದ್ಧಾರಕ್ಕೆ ಪಣಕಟ್ಟಿ ಸತತ ಶ್ರಮಿಸಿ
ತನ್ನ ಬಹುಮೂಲ್ಯ ಜೀವನವ ಮುಡಿಪಾಗಿರಿಸಿ
ದುಡಿದ ಏಕೈಕ ಸಾಸಿ ದೇವಮಾನವನ ಪರಿ
ಪುಣ್ಯಚರಿತಾಮೃತ ಹರಿಯಲಿ ಸಹಸ್ರತರ
ಶ್ರೋತವಾಗಿ, ಭಾರತೀಯರ ಹೃದಯ ಕುಂಡವು
ತುಂಬಿತುಳುಕುವಂತೆವೊಲ್. ತಾಯೇ, ಬಡಿಬಡಿದು
ಬಾರಿಸೌ ಯತಿ ಚಕ್ರೇಶ್ವರನಾಲಯದ ರನ್ನ
ಗಂಟೆಯ ದಶದಿಗ್‌ಗಜಗಳ್ ಧೀಂಕಿಡುವ ತೆರದಿ.

ಓ, ಕಾಲ ಪುರುಷನೇ! ಶ್ರೀಮತ್ಪ್ರಭುವೇ! ನಿನ್ನ
ಪದಾಂಭೋಜಗಳಿಗೆ ಶಿರವಮಣಿದು ಬಿನ್ನವಿಪೆ
ಮುಂದಣದೀ ಕಾರ್ಯನಿರ್ವಹಣೆಗೆ ಆಪನಿತು
ಕಾಲಾವಕಾಶಮುಂ ಇತ್ತೆನಗೆ ದಯೆಗೈದು
ಅನುಗ್ರಹಿಸೈ ದಯಾನಿಧಿಯೆ! ನೀಂ ಬರೆಸಿದ
ಚಿಂಕೃತಿಯುಮಿದು ನಿಮ್ಮಯ ಪದತಲಕೆ ಅರ್ಪಿತಂ
ಎನಲಾಂ ನೀನಲ್ತೇ ಅದರ ಪರಿಪೋಷಕಂ?
ಕಾಯೌ ಪರಮಾತ್ಮನೇ ಕೈಮುಗಿದು ಬೇಡುವೆನೈ.

ನಮೋ ಮಹತ್ ಕಾವ್ಯಕೃತಿ ಚೂಡಾಮಣಿ ಸರವೆ!

ನಮೋ ನಮೋ ಅಕ್ಕರವರಿಯದ ಮಹಿಳಾ
ವಾಗ್ಜಾಹ್ನವಿಯೆ! ನಮೋ ಭಾರತ ಜನನಿಯೊಡಲ
ಮಹಾನ್ ಔರಸ ಪುತ್ರನ ಚರಿತಾಮೃತವೇ
ನೀಂ ಬಹುಕಾಲಂ ಬಾಳ್ಗೆ, ಬಾಳ್ದು ಬೆಳಗಿ ತೊಳಗೆ
ಬಹು ಕಾವ್ಯಕೃತಿಗಳಲೊಂದಾಗಿ ಎಂದಾಂ
ಪರಕೆಗೈವೆನ್, ಎನ್ನಮಲ ಕೃತಿ ರತ್ನವೇ!!
ಈ ಚಿಂಕೃತಿ ಕಾರ್ತಿಯುಮಾದಾನ್ ಪ್ರಸಿದ್ಧ
'ಬಾಗಮನೆ' ಎಂದೆಂದು ಪೆಸರ್ವೆತ್ತು ಕುಲಕೀರ್ತಿ
ಮೆರೆದು ವಿಜೃಂಭಿಸಿದ ಧೀರ ಧೀಮಂತಮಯ
ಸದ್ವಂಶ ಸುಸಂಜಾತೆ ಕಣಾ. ಬಾಗಮನೆ ಶ್ರೀ
ಚನ್ನೇಗೌಡಾರ್ಯ ಶ್ರೀಮತಿ ಪಾರ್ವತಮ್ಮ ಇವರ
ಗರ್ಭಾಂಬುಧಿಯಲಿ ಸಂಜನಿಸಿರ್ದನೆಗೆ ಬಾಲ್ಯ
ಕಾಲದೊಳ್ ಮೂಡಿಮೆರೆದಾ ಸಿದ್ಧನಾಮವದು
'ಲಕ್ಷ್ಮೀ' ಎಂದಾಯ್ತು. ಪ್ರರೂಢಸಮಯಾಂತರದಿ
'ಲಕ್ಷ್ಮೀದೇವಿ' ಎಂಬಿನಂ ಬೆಳೆಯಿತ್ತು. ಸಾಹಿತ್ಯ
ಬನಕೆ ಸಿಡಿದ ಬಿತ್ತನೆ ಕುಡಿಮೂಡಿ·ಮಿಡಿಮೊಗ್ಗಾಗಿ
'ಮಲ್ಲಿಕಾ' ಪೂವರಳಿತೆನೆ ಅದೇ ವರವಾಯ್ತು,
ನಿಚ್ಚ ಕಾವ್ಯನಾಮದ ನೇಮದಲಿ. ಮತ್ತಮಾ
ರಾಜಕೀಯರಂಗದ ದುರಂಧರ ಕಡಿದಾಳ್
ಮಂಜಪ್ಪ ಎಂದೆಂಬ ನಾಮಧೇಯಂಬಡೆದ
ಕಟ್ಟಾಳಿನ ಧರ್ಮಪತ್ನಿಯಾಗಿ ಸತೀತ್ವದಲಿ
ಮೂಮಕ್ಕಳ ತಾಯಾಗಲಾ ಮಾತೃಪದವದು
ಘನಿಸಿದುದು ಮನುಕುಲದ ಬಾಳ್ಬದುಕು ತುಂಬಿ.
ಧವಳಿಸಿತವುಂಚಿ ಕೌಮುದಿ ಧೌತ ಧರಿತ್ರಿಯಂ
ಲೋಕಾಂತರಿತ ಸುಪ್ತ ರಾತ್ರಿ. ಬೆಳುದಿಂಗಳಿನ

ಹಾಲ್‌ಹೊಳೆ ಹರಿದತ್ತು ಬ್ರಾಹ್ಮಾಂಡದ ಮೌನ
ನಿಶ್ಯಬ್ದಾಬ್ಧಿಯಾಳಕೆ. ಮಿನುಗಿರ್ದುವರಿಲ್‌ಗಳ್
ಮೊಬ್ಬು ಮೊಗದಿಂ ಗಗನದೊಳ್. ಕಿವಿಗೆ ಕೆಪ್ಪೆನಿಸಿ
ಬಗೆಗೆ ಬೆಪ್ಪು ಮೂಡಿಸುವಂತೆ ಮರೆದಿರ್ದುದಾ
ಕೌಮುದಿಯ ಗಂಭೀರ ರಾತ್ರಿಯಾತ್ಮವೈಭವದ
ಶ್ರೀದ್ಯುತಿಯೊ ಎನಲ್ಕೆ ಪೂರ್ಣ ಚಂದ್ರಮನ ಬಿಂಬ.
ಜ್ವಲದ್‌ಜ್ವಲಿಸುತಿರ್ದಾ ಧ್ರುವತಾರೆಯ ದೀಪ್ತಿ
ತಳತಳಿಸಿದುದು ಬೆಣ್ಣೆ ತುಂತುರ್ ಮುಗಿಲ್ ಮಧ್ಯೆ
ತನ್ನೊಂದು ಜಯಘೋಷದಾವೇಶವೈಭವದಿ.
ಉರುಳುತಿರ್ದುದಯ್ ಮಧುರರಾತ್ರಿ, ಘಟಿಘಟಿಗಳ
ಪಿಂತಿರ್ಕ್ಕಿ. ಓವೊ, ಪೂರ್ವೀದಿಗಂತ ತಟಾಂತ
ಸಂಲಗ್ನದಲಿ ಕೆಂಬೆಂಕೆಯಾ ಮುಗಿಲುಗಳೆದ್ದು
ಕಟ್ಟಿದುವು ಗುಡಿಗೋಪುರಂಗಳಂ ಸಾಲ್ಸೆಸಿ.
ನಸುನಸುವೆ ತುಳುಕಿದುದು ತಿಳಿಬೆಳಕು ಇಣಿಕಿಣಿಕಿ.
ಪ್ರಾತಃಮುಹೂರ್ತಮಡರಿ ಮುಂಬೆಳಗಿನ ಸುಂದರ
ಬಂಧುರ ಚೆಲುವಾಂತ ಚೆಂಗಿರಣಗಳ್ ಸೂಜಿಯೊಲ್
ಹರಿಹರಿದು ಬರುತ್ತಿವೆ ಕೆಮ್ಮನೆ ಕಡು ಚೆಲುವಿನ
ಬಂಗಾರದ ಕಿರಣಗಳ ಹೋಲಿ! ಮತ್ತದೊ ಕಾಣಾ
ಬಂಭ್ರಮದ್ಭ್ರಮರಗಳ್ ಮಕರಂದ ಕರಂಡಂ
ಅರಸುತ್ತೆ ಝೇಂಕಾರನಾದಂ ಮೊರೆವುದಂ ಬನ
ದೇಶದಲಿ. ಒಡನೊಡನೆ ಸಸ್ಯಮರ ಬಳ್ಳಿಗಳ
ಹೊದರಿಂದೆ ಸಕಲ ಪಕ್ಷಿಸಂಕುಲಂ ಕೊರಳ್‌ದನಿ
ಹರಿಸಿದುವೈ ರಾಗಾನುರಾಗದಲಿ ಪೊನ್ನಕಿರು
ಗೆಜ್ಜೆಗಳನಲುಗಿಸಿದ ಪರಿಯೊಳ್. ಸುನಾದ ಸಿರಿ
ಮೊಳಗಿದುದು ರವಿಯಾಗಮನಕೆ ಸುಪ್ರಭಾತ

ದ್ಯೆಸಿರಿಯ ಸೂಸಿ ಗುರುದೇವಂ ಪದಚಾರಣ
ಯಾತ್ರೆಯಲಿ ಮನವಿಟ್ಟು ಅಲ್ಲಲ್ಲೆ ತಿರುಗಾಡಿ
ಮೈಮನಗಳಿಂಗೆ ಪುರುಪೀಯುತಿರೆ ಶಾಂತಿಯಲಿ
ಕಳೆದುದೆನಿತೋವೊಳ್ತು. ಮೂಡುರವಿ ಬೆಳ್ಮುಗಿಲ್
ದಿಣ್ಣೆಯೇರ್ದು ರಾರಾಜಿಸಿದನ್ ಸುನೀಲಾಂತ
ಗಗನ ಭಿತ್ತಿಯಲಿ. ಸ್ವಾಮೀಜಿ ತಮ್ಮೊಳಗೊಳಗೆ
ಸಂಗೀತೆಯನೊಂದಂ ಗುನುಗಿದರ್ ಮಿದುವಾಗಿ.

"ಅಕೃತ್ವಾ ಪರ ಸಂತಾಪಂ
ಅಗತ್ವಾ ಖಲ ಮಂದಿರಂ ।
ಅಕ್ಲೇಷಯಿತ್ವಾ ಚಾತ್ಮಾನಂ
ಯದಲ್ಪಮಪಿ ತದ್ಬಹು ॥"

"ಅನಿತ್ಯಾಣಿ ಶರೀರಾಣಿ
ವಿಭವೋ ನೈವ ಶಾಶ್ವತಃ ।
ನಿತ್ಯ ಸನ್ನಿಹಿತೋ ಮೃತ್ಯು
ಕರ್ತವ್ಯೋ ಧರ್ಮ ಸಂಗ್ರಃ ॥"

ಸ್ವಾಮೀಜಿಯುಂ ಪೂರ್ಣ ವಿಶ್ರಾಂತಿಯಂ ಪಡೆಯೆ
ಆಶಿಸಿಯು ಮನದಿಚ್ಛೆ ಕೈಗೂಡದಾಯಿತ್ತು.
ಕಾಲಗತಿ ಹರಿತಮಿರೆ ಎಲ್ಲಿಯ ಬಿಡುವು? ನನ್ನಿಗೆ
ಬಲುಮೆ ಸಾಕ್ಷಿಯೆನೆ ಸಂದರ್ಶಕರ್ ಬಂದಪರ್
ಎಡೆವಿಡದೆ. ಸಭೆ ಪ್ರವಚನಂಗಳ್ ನಡೆದಪವು
ಮತ್ತೆ ಮತ್ತೆ. ತನು ಬಳಲಿ ಸೋಲ್ದೊಡೆ ಕಜ್ಜವೇಂ
ಕಮ್ಮಿಯಾದಪುದೇ? ಮನಮತಿಯಲಿ ಸ್ಫೂರ್ತಿರಸ
ಉಕ್ಕಿ ಹರಿಯುತಿರೆ ಸೋಲು ಮುದುಡಿದಪುದು ಒಡಲ್
ಬಳ್ಳಿಯೊಳ್. ದಿನಚರಿಯು ಬೆಳೆವುದು ಮನಮೋಹಕ

ಶೈಲಿಯಲಿ. ಸಕಲತರ ವಿದ್ವನ್ಮಣಿಗಳ್ ಕೂಡಿ
ಷೋಡಶಕಳೆಯಿಂ ತೊಳಗಿ ಬೆಳಗುವುದು ಜನಗಣ
ಮನ ತಣಿವ ಪಾಂಗಿನಲಿ. ಸ್ವಾಮೀಜಿ ಮುನ್ನಿನೊಲ್
ಕಾರ್ಯಾಂಗವಾಹಿಯಲಿ. ಮುಳುಗಿ ಕೊಚ್ಚಿ ಪೋಗುತಿರೆ
ಮಿತ್ರಜನ ಶಿಷ್ಯಜನ ಮನಮಿಡುಕಿ ಕೊರಗಿದರ್
ಮುಂದೇಂ ಗತಿಯೆನಿಸಿ. ಗುರುವರಂ ಮನಕದನುಂ
ತಾರದೆಯೆ ಸಭಾ ವೇದಿಕೆಯಿಂ ನುಡಿಸಿದರಿಂತು,
“ಎಲೆ, ಅಮೃತಾತ್ಮರಿರಾ, ಕೇಳಿ! ಈ ರಾಷ್ಟ್ರದಾ
ಮೇಲೆ ದೃಷ್ಟಿಹರಿಸಿದೊಡೆ ನಮ್ಮ ಜನಗೋಷ್ಠಿಗೆ
ಪ್ರಜ್ಞೆ ತಪ್ಪಿದೆ ಎಂದೆನಿಪುದು ದಿಟ. ಆದೊಡಾ
ಭಗವಂತನುಂ ಬಾರಿಬಾರಿಂಗು ಅವತಾರ
ಎತ್ತಿ ಬಂದು ಇವರಂ ಪುನಶ್ಚೇತನಗೊಳಿಸಿ
ಮುನ್ನಡೆಸುವುದು ಹಂತಹಂತದಲಿಯುಂ ಕಂಡು
ಬರ್ಪುದು. ಬಹುತೇಕತರ ಗಂಡಾಂತರವೆಲ್ಲ
ಕಳೆದುದು ಪರದೈವ ಕೃಪೆಯಿಂದಲೆ. ಕೇಳಿರೈ!
ನಿಮ್ಮೊಳಗೆ ಶ್ರದ್ಧೆ ಸದ್ಗುಣಗಳ ಅತಿ ಅಭಾವವೆ
ರಾಷ್ಟ್ರೀಯ ಅಧೋಗತಿಗೆ ಕಾರಣವೆಂಬಲದು
ಅನ್ಯಮಲ್ತು. ‘ಶ್ರದ್ಧೆ’ ಎಂಬ ಪರಮ ದ್ರವ್ಯಂ
ಆರಾರ್ ಪೊಂದಿರ್ಪರೊ ಅವರೆಲ್ಲರ್ ವಜ್ರ
ಸ್ನಾತರ್! ಎಲೆ ಸೋದರರೆ, ಇಂತಿಂತಿಂತು ನಿಜ
ಶ್ರದ್ಧೆ ಸದ್ಗುಣಗಳ್ ಮೂಡಿ ರಕ್ತಗತಮಾಗುತೆ
ಬೆಳೆದು ಬಂದೊಡೆ ಭಾರತ ರಾಷ್ಟ್ರದ ಚರಿತೆಯೇ
ಬದಲಾದಪುದು. ಕೇಳಿ ಮನಗೊಟ್ಟು ಕೇಳಿ! ಎಳಿ,
ಎದ್ದೇಳಿ! ಎಚ್ಚೆತ್ತು ಕೊಳ್ಳಿ! ನಿಮ್ಮತನವಂ
ನೀವ್ ಅರಿತುಕೊಳ್ಳಿ! ದೇವರೆ ನಿಮ್ಮಪಥದರ್ಶಿ!

"ಯದಾ ಯದಾಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನ ಮಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ ॥"

ಭಗವಂತನ ಈ ಸಂದೇಶಮಂ ಎಂದಿಗುಂ
ಮರೆಯದಿರಿ, ಮರೆಯದಿರಿ."

ಗುರುವಿನ ಶುಭನುಡಿಗಳ್

ಮನವನುಂ ಮುಟ್ಟಿ ಎರ್ದೆಯಂ ತಟ್ಟಿ ಧಳಧಳಿಸಿ
ಮೆರೆದಿರೆ ಶ್ರೋತೃಗಳ ಕರ್ತವ್ಯ ಪ್ರಜ್ಞೆ ಪುಟಿದು
ಎಚ್ಚೆತ್ತ ಫಣಿಗಳಾದುವು ಜೀವ ಕೋಟಿಗಳ್.
ಅಲ್ಲಲ್ಲಿ ಕಾರ್ಯಕ್ರಮಗಳ್ ಮೂಡಿದುವು ಬಲು
ನೇಮದಿಂ. ಭಾಷಣ – ಅಭಿನಂದನೆಗಳಿಗೆ ಕೊನೆ
ಮೊದಲಿಲ್ಲವಾಯ್ತು. ಸ್ವಾಮೀಜಿ ರೋಗಬಾಧೆಯಂ
ಮರೆತರ್. ತನುಮನಗಳ ಸೋಲು ಮರೆತರ್. ಅಮಿತ
ಜನರಾಶಿಯ ಮಧ್ಯೆ ಮೆರೆದರ್ ಧೀರಧೀಮಂತ
ಗುರುವಾಗಿ. ಕಳೆದುವು ಕೆಲವಾನು ದಿನಮಾನಂ
ಸರಾಗದಲಿ. ಅಲ್ಲಿಂದೆ ಕಾಶ್ಮೀರ ರಾಜ್ಯದ ಅಭಿಮುಖೀ
ಪಯಣ ಬೆಳೆಯಿತು ಎಲ್ಲರೊಗ್ಗಿನಲಿ. ಕಾಶ್ಮೀರ!
ನಿಸರ್ಗ ಸೌಂದರ್ಯ ರಾಶಿಯ ಮುದ್ದು ಮುದ್ದಾದ
ಶಿಶು ತಾನೆನಲ್ಕೆ ಜೃಂಭಿಸಿದ ಕಾಶ್ಮೀರ! ಆ
ತಣ್ಣನೆಯ ತಣ್ಪಿನ ಅಲಂಪಿನಲಿ ಶಾದ್ವಲದ
ಪಚ್ಚವರ್ಣದ ರನ್ನ ಹಾಸಿನಲಿ ಅಡ್ಡಾಡಿ
ತನುಮನಂಗಳಿಗೆ ಸೊಂಪೂಡಿ ತಣಿದರ್ ಸ್ವಾಮಿ
ವಿವೇಕಾನಂದರು ಮಿತ್ರಮಂಡಲಿಯೊಡಗೂಡಿ.
ಅದೆಂತು ಹರಡಿತೊ ಗುರುವರನಾಗಮನ ವಾರ್ತೆ,

ಊರು ಕೇರಿ ನಗರಗಳಲಿ ಗುಜಗುಜುಮೆರೆದುದು
ಸುದ್ದಿ. ಅತ್ತ ಜನ ಜಾಗ್ರುತರಾಗುತಿರೆ ಇತ್ತ
ಗುರುವರ್ಯ ಪ್ರಕೃತಿಯ ಸೌಂದರ್ಯ ಲಕ್ಷ್ಮಿಯಂ
ಆರಾಧಿಸುತೆ ಸತ್ಯ ಮನೋಹರ ಶೋಭೆಯಲಿ
ಮೈಮರೆವರ್ ಶಿಷ್ಯರೊಡಂಗೂಡಿ. ಪ್ರಕೃತಿಯು
ಸೌಮ್ಯ ಸರಸತಿಯೆಂತಂತು ಭೀಕರ ಭಯಾನ್ವಿತ
ಕಾಳಿಕೆಯು ತಾನಹುದು. ಸುಯ್‌ಸುಯ್‌ನೆ ಸುಯ್ಯುತ್ತೆ
ಬೀಸಿವೀಸಿ ಬೋರೆಂದು ನುರ್ಗಿತು ಬಿರುಗಾಳಿ
ಜಡಿಕುಟ್ಟಿ ಝಾಡಿಸುವ ತೆರದಿ! ಗಿಡು ಮರಂಗಳ್
ತಲ್ಲಣಿಸಿದುವು. ನಿಂತೆಡೆಯೊಳ್ ನಿಲ್ಲಲಾರದೆ
ಸ್ವಾಮಿಜಿಯುಂ ಮಿತ್ರರೊಡಂ ನೆಲಗಚ್ಚಿ ಮುಖ
ಮಡಿಯಾಗಿ ಕುಳಿತರ್. ಬಿರುಗಾಳಿಯ ಬೋರಾಟ
ನಡೆದುದು ಅದೆನಿತೊವೊಳ್ತು. ಬಳಿಕ ಮಳೆಯು ಧೂರ್ತ
ತನದಿ ಇಳಿದುದು ಅಖಾಡಕೆ ಪ್ರತಿಭಟನೆ ಹೂಡಿ.
ಬಿರುಮಳೆಯೊಳ್ ತೊಯ್ಯದೆ ಗತಿಯಿಲ್ಲವಾಯಿತ್ತು.
ಮರಗಿಡಂಗಳಂ ತಿರುತಿರುಚಿ ಮುರಿಮುರಿದೊಟ್ಟಿ
ಬೀಳಿಸಿತು ಬಿರುಗಾಳಿ. ಭೀತಿ ವೀಚಿಯು ತಟಿತ್
ತಾಡನಿಯ ಪೊಯ್ಲೊ ಎಂಬೊಲ್ ಗಾಳಿ ಧೂಳುಕಸ
ಕಡ್ಡಿಗಳ ಅಂತರ ಪಟವೇರಿತು ಅಂಬರಕೆ. ಮಿಂಚು ಸಿಡಿಲ್
ಗುಡುಗುಗಳ್ ಮೊಳಗಿ ಚೀತ್ಕರಿಸಿತು ಗಗನ ಕಂಠ.
ಕಾಲಲೀಲಾ ಖೇಲನ ಮೆರೆದುದು ಭಯಂಕರ
ತೇಜದಿಂ. ಬಿಡದಿಯುಂ ನಸುದೂರಮಿರುತಿರಲ್
ಓಡಿಯೋಡಿ ಸೇರಿದರೆಲ್ಲರ್ ಪ್ರಯಾಸದಿಂ.
ಅಂತಿಂತು, ಕಳೆದುವೆರಡು ದಿನಗಳ್ ಮಂಜುಮಯ
ವೇಶದಲಿ. ಹಿಮವೊತ್ತಿ ಗಡಗಡ ನಡುಗಿದುದಸು

ಒಳಗೊಳಗೆ. ಕದಮುಚ್ಚಿ ಕಳೆದರ್ ಪಗಲ್ ಇರುಳ್.
ಮತ್ತೆ ಅನುಕ್ರಮದೊಳ್ ಮಂಜು ಹರಿದು ತಿಳಿದುದು
ಹವಾಮಾನ. ಅಂಗಣದಲಿ ಹಬ್ಬಿ ಹರಡಿರ್ದ
ಹಚ್ಚ ಹಸುರಿನ ಪುಲ್ಲಾಸಿನ ಮೇಲೆ ಕಾಲ್ಮಡಿದು
ಪದ್ಮಾಸನದೊಳ್ ಮಂಡಿಸಿದ ಗುರುವರಂ
ನಸುವೊಳ್ತಿನೊಳ್ ಧ್ಯಾನಲೀನರಾದರ್ ಭಾವಾ-
ವೇಶದಲಿ. ವದನಾರವಿಂದವದು ಗಂಭೀರ
ತರಮಾಯ್ತು. ಪ್ರಕೃತಿಯ ಚಿತ್ರಂ ಅರುಗಾಯಿತು.
ಶಿಷ್ಯಮಂಡಲಿ ಕಣ್ಮರೆಯಾದುದು. ಮೈಮನಂ
ತಿಳಿಯದಾಯ್ತು. ಪಗಲ್ ಉರುಳಿತು ರವಿ ಇಳಿಮುಖಿ
ಪಥವಿಡಿದನ್. ತಂಗಾಳಿ ತೀಡಿದುದು ತಣ್ಣನೆಯ
ತನಿಯೂಡಿ. ಸ್ವಾಮೀಜಿಯಾಗ ನಿದ್ದೆತಿಳಿದೆಳ್ದ
ಮಾಳ್ಕೆಯಲಿ ಬಿಡದಿಗೈದರ್. ಸಂಜೆಯ ತಣ್ಪಿನ
ಸಮಯಂ ಕಳೆದು ಮಿತ್ರಜನರೊಡನೆ ಆನಂದ
ರಸವುಂಬುತೆ ಶಿಷ್ಯರಿಗೆ ಇಂತೆಂದು ನುಡಿದರ್,
"ಅರಮನೆಯ ಆಹ್ವಾನವೈತರಲಿಹುದಂ ಕಂಡೆ
ಭಾವ ಸಮಾಧಿಯೊಳ್. ನಾವಿಲ್ಲಿಂದೆ ಪಿಂಮರಳಿ
ಹೋಹ ಯೋಚನೆಯುಮಿರ್ದುದೆನ್ನಯ ಚಿತ್ತದೊಳ್."
ಕ್ಲೇವಿಯರ್ ದಂಪತಿಗಳ್ ಮುಗುಳ್ ನಗೆಯ ದಿವ್ಯ
ಕಳೆಯಂ ಹರವಿ ಸ್ವಾಗತಿಸಿದರ್, ವಿಷಯಮಂ.
ಅದೇಂ ಕೌತುಂಕಮಯಮೊ ನಸುವೊಳ್ತಿನೊಳಗಾಗಿ
ಅರಮನೆಯ ಕೆಂಪಂಗಿಯ ದೌವಾರಿಕನ್ಯೆದಂ
ಅಚ್ಚರಿಯನಚ್ಚರಿಗೊಳಿಪಂತೆ! ನಯವಿನಯದಿಂ
ಶಿರಬಾಗಿ ಕರಮುಗಿದು ಪತ್ರೋಲೆಯಂ ನೀಡಿ
ನುಡಿದಂ "ಗುರೂಜಿ, ಮಹಾರಾಜರ್ ನಿಮಗಾಗಿ ಈ

ಕರೆಯೋಲೆಯಂ ಕಳಿಪಿಹರ್. ಪಿರಿಯ ಸಚಿವರೈದು
ನಿಮ್ಮನುಂ ಕರೆದೊಯ್ವರರಮನೆಗೆ.
ಅಂದಿನಾ
ಸಾಯಂ ಭಜನೆಯೊಳ್ ಪಾಲ್ಗೊಂಡ ಸ್ವಾಮೀಜಿ
ತಮ್ಮಯ ಸಿರಿಕಂಠದುಲಿಯಂ ಹರಿಸಿದರಿಂತು,

"ಯಸ್ಮಿನ್ಸರ್ವಂ ಯತಸರ್ವಂ
ಯಸ್ಸರ್ವಂ ಸರ್ವ ತಶ್ಚಯಃ ।
ಯಶ್ಚ ಸರ್ವಮಯೋ ದೇವಃ
ತಸ್ಮೈ ಸರ್ವಾತ್ಮನೇ ನಮಃ ॥"

ಕಾಶ್ಮೀರೀ ರಾಜ್ಯದಾ ಅಂಗಾಂಗಗಳ ಪ್ರಾಣ
ಪಾತ್ರದಲಿ, ಹೂಬಳ್ಳಿ ಪಲ್ಲವ ಪಾಣಿಗಳಲಿ
ತರು ಶರೀರದ ನಾಡಿನಾಡಿಗಳಲಿ, ಖಗಮೃಗ
ಪಕ್ಷಿಕೀಟಗಳ ಜೀವನಾಲವಾಲದಲಿ, ಅಣು
ತೃಣಂಗಳ ಬದುಕಿನಲಿ ಪ್ರವಹಿಪಾ ಸ್ಫೂರ್ತಿ
ವಾಹಿ ಮೆಯ್ಯನಾಕ್ರಮಿಸಿದೊಲ್ ಶಕ್ತಿ ಸಂಚಯನ
ಮಾಯ್ತೆನೆ ಗುರುದೇವಂ ಹರ್ಷ ಚಿತ್ತರಾಗಿರೆ
ತನುಮನಗಳ್ ಗರಿ ಹಗುರಮಾದುವು. ಅಲ್ಲಲ್ಲಿ
ಕಣ್ಗೆಸೆವ ಹೊಳೆ ತೊರೆ ಕೆರೆಗಳ ತಿಳಿಜಲರಾಶಿ
ನೀಲ ನೀರಧಿಯ ತೆರದಿ ಜಳಜಳಿಸುತಿರುತಿರೆ
ತರಂಗಿತ ನಿರ್ಝರಣಿಯ ಜುಳುಜುಳು ರಾಗಮಯ
ಮಧುರ ಮಾಧುರ್ಯ ಮುತ್ತಿದುದು ಹೃದ್ದೇಶಮಂ.
ಆ ಕೆಮ್ಮೊಗಗಳ ಜನರಾಶಿ ಪುರಾತನ ವೇಶ
ಭೂಷಣಗಳ್. ಭಾರತೀಯಮಾದ ಸತ್ ಸಂಸ್ಕೃತಿ
ಪರಿಮಳ ಮೆರೆದುದು ತನುಮನಂಗಳ ಮುತ್ತುವೊಲ್.
ಗುರುವರನ ವೃಂದವದು ಕಾಶ್ಮೀರದ ಸಿರಿಯಂ

ಸವಿದು ಆನಂದರಸದಲಿ ಮುಳುಗಿ ತೇಲಿದರ್.
ಒರ್‌ದಿನಂ ತನಿವೊಳ್ತಿನ ತನಿಯಳಿವ ಮುನ್ನಮೆ
ಅರಮನೆಯ ಶ್ವೇತವರ್ಣೀಯ ಮಿಂಚು ಮೆಯ್ಯಿನ
ಚತುರಾಶ್ವಗಳ ರಥವೈದುದು ಬಿಡದಿಯ ಬಳಿಗೆ.
ಪೊನ್ನ ಕಿರುಗೆಜ್ಜೆಗಳ್ ಜಣಿಜಣಿರೆನ್ನುತಿರಲ್
ಮುಖ್ಯ ಸಚಿವ ಶಿರೋಮಣಿಯದರಿಂದಿಳಿದು ಬರು
ಬರುತ್ತೆ ಶಿರಮಣಿದಂ ಗುರುವರಂಗೆ. ಬಳಿಕಂ
ಕುಶಲೋಪರಿಯಂ ನಡೆಸಿ ಆದರದಿಂದವರಂ
ಮಿತ್ರಮಂಡಳಿಯ ಸಹಿತ ಕರೆದೊಯ್ದನರಮನೆಗೆ.
ಆಗಳೇ ಮಹಾರಾಜರ ಭೇಟಿಯಂ ನಡೆದು
ಪರಸ್ಪರ ಸ್ನೇಹಾನುರಾಗದ ಚಿಗುರು ಬಳ್ಳಿ
ಕವಲೊಡೆದು ಹಬ್ಬಿ ಹರಡಿತು ಹಚ್ಚ ಹಸಿರಾಗಿ.
ಅರಮನೆಯಲಿಯೆ ನಲ್ ಬಿಡದಿಯು ದೊರೆತುದವರ
ಪರಿವಾರಕೆ. ಒಂದೆರಳ್ದು ವಾರಗಳ್ ಕಳೆದುವು
ಸರಾಗದಲಿ. ದಿನದಿನವು ಸ್ವಾಮೀಜಿಯ ವೇದ
ಘೋಷದೊಡನೆ ಉಪನ್ಯಾಸ ನಡೆಯುವುವು ರಾಜನ
ಆಸ್ಥಾನದೊಳ್. ಸಜ್ಜನ ಗೋಷ್ಠಿಯು ಏಗಳುಂ
ಕೂಡುತಿರ್ದುದು ಬೈಗುವೊಳ್ತಿನಲಿ. ರಾಜರುಂ
ಆನಂದ ಪುಳಕ ಮನದಿಂ ಕೂಡುವರ್ ಸಭೆಯೊಳ್,
ಅನುಕ್ರಮದೊಳಲ್ಲಿನ ಬುದ್ಧಿಮಾನ್ಯರ ಕೂಟ;
ಗ್ರಂಥ ಬಂಢಾರಗಳಿಗೆ ಭೇಟಿ; ತರುವಾಯಂ
ಪರ್ವಿದುದು ಗುರುಗಳಾಗಮನದ ಸುವಾರ್ತೆಗಳು
ತಂತಿ ವರ್ತಮಾನದವೊಲ್ ಅತ್ತಲಿತ್ತಲುಂ.
ಶ್ರೀನಗರದ ಪ್ರಜೆಗಳ ಹೃದಯ ನಿಕುಂಜಂ
ಕಾತರಿಸಿತು ಗುರುದರ್ಶನಕಾಗಿ. ಸ್ವಾಮೀಜಿ

ತಮ್ಮೆಯ ಪರಿಜನರ ಸಹಿತ ಅರಮನೆಯಂಬಿಟ್ಟು
ಪೊರಮಟ್ಟರು ಶ್ರೀನಗರಾಭಿಮುಖವಾಗಿ. ಪುರ
ಪ್ರಮುಖರೊಡನೆ ನಲವಿಂ ಬೀಳ್ಕೊಟ್ಟರು ರಾಜರುಂ
ಸಕುಟುಂಬಿಗರಾಗಿ. ಜಹಜು ಶ್ರೀನಗರ ತೀರ
ಪಾತ್ರಮಂ ಮುಟ್ಟುವನ್ನ ಕಾದಿರ್ದರಲ್ಲಿನ
ಪುರ ಪ್ರಮುಖರ್ ಪರಮೋತ್ಸಾಹದಿಂ. ನೋಡಲಾ,
ಸಂತೆಮೇಳವೇ ಮೇಳೈಸಿರ್ದುದು ತಟಿನಿಯ
ವಿಸ್ತಾರದಲಿ. ಒಡನೆ ಪುಷ್ಪಹಾರಗಳಂ ಗುರು
ಕೊರಳ್ಗೆ ತೊಡಿಸಿ ಗೌರವಾದರದಲಿ ಅವರಂ
ಕರೆದೊಯ್ದರ್ ಪೊಳಲಿಗೆ. ಕಳೆದುವೆರಡು ದಿನಗಳ್
ಸರಾಗದಲಿ. ಅಲ್ಲಿ ಇಲ್ಲಿ ಎಲ್ಲೆಲ್ಲಿ ಬಹುಲ
ಜನಸಾಂದ್ರಮಲ್ಲಲ್ಲಿ ಕಿರುವಗೆಯ ಪ್ರವಚನ
ಮಾಲೆಗಳ್ ಬಿತ್ತರಿಸಿದರ್ಯೆ ಹಿತಮಿತವಾಗಿ.

"ಧರ್ಮಂ ಚರತ ಮಾಽಧರ್ಮಂ
ಸತ್ಯಂ ವದತ ನಾನೃತಂ ।
ದೀರ್ಘಂ ಪಶ್ಯಮಾ ಹ್ರಸ್ವಂ
ಪರಂ ಪಶ್ಯತ ಮಾ ಪರಂ ॥"

ಎಂಬೊಂದು ಘನವಾದ ಸಂದೇಶಮಂ ನೀಡಿ
ಪೊರಮಟ್ಟರಲ್ಲಿಂದೆ, ಮುನ್ನಡೆದುದು ಪಯಣಂ
ಆವಾವ ಎಡುರುತೊಡರುಗಳ್ ಸುಳಿಯದ ಮೋದ
ಪ್ರಮೋದದಿಂ. ಜಮ್ಮು ಶ್ರೀನಗರಿಯ ಮುಖೇನ
ಲಾಹೋರಿಗೈದುದು ಗುರುವರ್ಯನ ಬಳಗಂ. ವರ
ಭಾರತದ ಇಂಚು ಇಂಚು ನೆಲಮಂ ಮೆಟ್ಟುತಿರೆ
ಮನಮತಿಗಳಲಿ ಪವಿತ್ರ ಭಾವನೆಯುಕ್ಕುವುದು
ಎದೆಯ ಗಿಂಡಿಗೆ ಹರಿದು ಮೆಯ್ಯ ನರನಾಡಿಗಳಿಗೆ

ಬಸಿಯುವಂತೆ. ಭಾರತ ಜನನಿಯುಂ ಧನ್ಯಳೋ
ಅಥ ಕುವರ ವಿವೇಕಾನಂದನೇ ಧನ್ಯನೋ
ಅರಿತು ನಿಮ್ಮೊಳ್ ನೀವ್ ತೂಗಿ ನೋಡಿರೈ ಹೇ,
ಬಂಧುಗಳೆ! ಲಾಹೋರ್ ನಗರಿಯ ನಿವಾಸಿಗಳ್
ಬಲ್ಮೆಯಿಂ ಗೌರವದಿಂ ಪರಮಾದರದಿಂ ಮನ
ಒಲಿದಿತ್ತ ಸನ್ಮಾನ ಸತ್ಕಾರಗಳ ಪುಷ್ಪ
ರಾಶಿಯಂ ಸ್ವೀಕರಿಸಿ ಅಮೃತ ಹೃದಯ ಗಿಂಡಿಯ
ಹೊನ್ನೀರ್ ಹರಿಸಿ ನುಡಿದ ನುಡಿಮುತ್ತುಗಳಿಂತು,
"ಓ ಅಮೃತ ಪುತ್ರರಿರಾ ಕೇಳಿರೈ! ಎಂಥಹ
ಅದ್ಭುತ ನಾಡಿದು? ಈ ಪವಿತ್ರ ಭೂಮಿಯಮೇಲೆ
ನಿಲ್ವ ಪ್ರತಿಯೊರ್ವಂ ಅವನೀ ಮಣ್ಣಿನ ಮಗು-
ವಿರಲಿ ಅಥ ಹೊರಗಿನವನಿರಲಿ ಇಲ್ಲಿಯ ಪುಣ್ಯ
ಜಲಧಾರೆಯನೀಂಟಿದ ಬಳಿಕಲವಂ ಸರ್ವಶ್ರೇಷ್ಠ
ಭಾರತೀಯನೆ ವಲಂ, ಈ ರಾಷ್ಟ್ರೀಯ ಸತ್ವಜೆ
ತಾನಾಗವೇಳ್ಕುಮನೆ ಅನ್ಯಮಲ್ತು. ಮನುಕುಲ
ಸಂಜಾತರಂ ದೇವತ್ವಕೇರಿಸಲ್ ಸನಾತನ
ಧರ್ಮವುಂ ಶತಶತಶತಮಾನಂಗಳ ದೀರ್ಘ
ತಪಶ್ಚರ್ಯಗೆಯ್ಯುತ್ತಲಿರ್ಪುದು. ಆ ತಪಸ್ಸು
ಎಂದಿನಿಂ ಆರಂಭಮಾಯ್ತೋ ಅದಂ ನಮ್ಮ
ಇತಿಹಾಸ ಗುರುತಿಸದಿದೆ! ಇಲ್ಲಿನ ಗಂಧಗಾಳಿ
ಅಲೆಯಲೆಗಳಲ್ಲಿಯುಂ ಅಧ್ಯಾತ್ಮಿಕತೆಯ ನಿಜ
ಸ್ಪಂದನಂ ತುಂಬಿ ತುಳುಕುತಿಹುದಂ ಬಲ್ಲರೇ
ಬಲ್ಲರ್. ಅಂತರ್ನಿಹಿತ ಪಶುತ್ವದ ತೃಪ್ತಿಯ
ಸಲುವಾಗಿ ಸದಾ ತುಯ್ದಾಡುವ ಮನುಜನಿಂಗೆ
ಮನಶ್ಶಾಂತಿ ನೀಡುವ ತತ್ತ್ವಜ್ಞಾನ ಮತ್ತಂ

ಅಧ್ಯಾತ್ಮಗಳ ಜನ್ಮಭೂಮಿಯಿದು! ಮನುಜನುಂ
ಪಾಶವಿಕತೆಯ ಮೇಲ್ಮುಸುಗಂ ಕಿತ್ತೆಸೆದು ಜನನ
ಮರಣರಹಿತತನಮಂ ತಾಂ ಕಂಡುಕೊಂಬುವೊಡೆ
ವಿದ್ಯೆಗಳ ಸಾಧನಾ ಸ್ಥಳವೇ ಈ ಭಾರತ!
ಸುಖಭೋಗಗಳನುಂಡು ಮೇಣಧಿಕರತರ ದುಃಖ
ಸಂಕಷ್ಟಗಳ ಕಹಿರಸಂ ಪೀರ್ದು ಕಟ್ಟಕಡೆಗೆ
ಈ ಎಲ್ಲವುಂ ಅಸಾರಂ ಎಂಬ ಅನುಭವಾ–
ಮೃತವಂ ಪ್ರಥಮಥಃ ಮನುಜ ಕಂಡರಿದಿರ್ದ
ಭೂಮಿಯೇ ಈ ಭಾರತ! ನವಯೌವ್ವನದ
ಮದದಲಿ, ವಿಲಾಸದ ಅಮಲಿನಲಿ ಮುಳುಗಿದ ಮನುಜ
ಈ ಎಲ್ಲ ಮಾಯಾಪಾಶಗಳಂ ಮೆಟ್ಟಿ ಮೊದಲಿಗೆ
ಹರಿದೊಗೆದುದು ಇದೇ ಭೂಮಿಯಲ್ಲೇ!
"ಇಲ್ಲಿ ಈ
ಮನುಕುಲದ ಮಹಾಸಾಗರದೊಳ್ ನಲಿವು–ನೋವು
ಸಬಲತೆ–ದುರ್ಬಲತೆ, ಸಂಮೃದ್ಧಿ–ದಾರಿದ್ರ್ಯ
ಸುಖ–ದುಃಖ, ನಗೆ–ಅಳಲು, ಜನನ–ಮರಣ ಇವುಗಳ
ಪ್ರಬಲಿತ ಪ್ರವಾಹಗಳ ತೀವ್ರ ಮಂಥನದಿಂ
ಪೊರಬಿಳ್ದ ನಿಸ್ಸೀಮ ಶಾಂತಿ ಸಮತೆಗಳ ದಿವ್ಯ
ಕುಲುಮೆಯೊಳಗಿಂದೆ ವೈರಾಗ್ಯದ ಸಿಂಹಾಸನಂ
ಮೂಡಿ ಮೇಲೆದ್ದಿರ್ಪುದು.
"ಬದುಕಿನಲಿ ಪಂಬಲವ
ಉಳಿಸಿಕೊಳ್ವ ವ್ಯರ್ಥ ಹೋರಾಟದಿಂ ಪುಟ್ಟುತಿಹ
ಕಡು ದುಃಖ ಪರಂಪರೆ ಜೀವನ್ಮರಣದ ಕಟು
ಕಠಿಣ ಅನುಭವ ಈವಗೆಯ ಮಹಾ ಸಮಸ್ಯೆಗಳಂ
ಪ್ರಪ್ರಥಮದೊಳ್ ಇಲ್ಲೇ– ಈ ನೆಲದೊಳ್ ಸರ್ವತ್ರ

ಬಗೆ ಹರಿಸಲಾಯಿತ್ತು, ಓಂದೆಂದು ಬಿಡಿಸದನಿತು
ಸುಸುಂದರ ಶೈಲಿಯಲಿ - ಮುಂದೆಂದು ಬಿಡಿಸದಿನಿತು
ಸಂಪೂರ್ಣ ರೀತಿಯಲಿ ಬಿಡಿಸಲಾಯಿತ್ತು. ಈ
ಜೀವನಂ ಮತ್ತಾವುದೊ ಒಂದು ಶಾಶ್ವತ ಸತ್ಯದ
ನೆರಳು ಮಾತ್ರ ಎಂಬುದಂ ಕಂಡುಕೊಂಡಿರ್ಪುದು
ಇಲ್ಲಿಯೇ, ಕೇವಲ ಈ ನೆಲದಲಿಯೆ!

"ಧರ್ಮವಂ
ವಾಸ್ತವಿಕ ಸತ್ಯವೆಂಬುದಂ ಗ್ರಹಿಸಿ ವ್ಯವಹಾರ
ಸತ್ಯದೊಳ್ ಇಳಿಸಿದ ಪರಿಪುಣ್ಯ ಭೂಮಿ ಇದೇ!
ಕೇಳಿ, ಅನ್ಯದೇಶಗಳ ಜನಸಮುದಾಯಮದು
ತಮ್ಮಗ್ರಳ ದೀನ ದುರ್ಬಲ ಸೋದರರಂ ಸುಲಿದು
ಭೋಗ ವಿಲಾಸಗಳ ಬೆನ್ನಟ್ಟಿ ಹುಚ್ಚರವೊಲ್
ಧಾವಿಸಿದೊಡೆ, ನಮ್ಮಯ ನಾಡಿನ ಸ್ತ್ರೀಪುರುಷರ್
ಉಚ್ಚಧ್ಯೇಯ ಸಾಧನೆಗಾಗಿ ಧಾವಿಸುತಿಹರ್.
ಮನುಜ ಹೃದಯಂ ಮನುಜರಂ ಮಾತ್ರಮಲ್ಲದೆ,
ಪಶು ಪಕ್ಷಿ ಸಸ್ಯಕೋಟಿಯಂ ಪ್ರೇಮಿಸುವನಿತು
ವಿಶ್ವ ವೈಶಾಲ್ಯಮಂ ಪಡೆದುದು ಇಲ್ಲಿಯೇ!
ಕೇವಲ ಈ ಪುಣ್ಯ ಭೂಮಿಯಲ್ಲೇ! ಭಾರತದ
ಹೃದಯದೊಳ್ ಭವ್ಯೋದ್ದಾತ ಅಗ್ರ ದೇವತೆಗಳಿಂ
ಹಿಡಿದು ಮರುಳು ಕಣಂಗಳನಕ ಸರ್ವ ಉಚ್ಚ-
ನೀಚ ವಸ್ತುಗಳಿಗುಂ ಸಮ ಸ್ಥಾನಮಾನಮಿರ್ಪಂತೆ.
ಏಕ ರೀತಿಯೊಳ್ ಮಾನವ ಜೀವಿಯುಂ ಸಮಸ್ತ
ವಿಶ್ವದಾ ಏಕಾತ್ಮತೆಯಂ ಕಂಡ ಬಗೆ ಇಲ್ಲಿಯೇ!
ವಿಶ್ವದಾ ಒಂದೊಂದು ನಾಡಿ ಮಿಡಿತವುಂ ತನ್ನ
ನಾಡಿ ಮಿಡಿತವೇ ಎಂಬುದಂ ಮನುಜನುಂ ಕಂಡು

ಕೊಂಡ ಚಿರ ಸತ್ಯ ಇಲ್ಲಿಯೇ! ಈ ನೆಲದಲಿಯೇ!
ಓ ಭ್ರಾತೃಗಳೇ, ಕಿವಿಗೊಟ್ಟು ಮನಗೊಟ್ಟು. ಕೇಳಿ!

ಮಾತೃದೇವೊಭವ
ಪಿತೃದೇವೋಭವ
ಗುರುದೇವೋಭವ
ದರಿದ್ರದೇವೋಭವ

ಈ ವಾಕ್ಯ ಹುಟ್ಟಿದುದು ಇಲ್ಲಿಯೇ! ಈ ವಾಕ್ಯ
ವೇದವಾಕ್ಯ. ವೇದ ಕಾಲೀನ ನೀತಿಧರ್ಮದ
ಸರಿ ಸಮಾನಮಿನ್ನೊಂದಿಲ್ಲ. ಅದನ್ನೇ ನಾವ್
ಪ್ರತಿಪಾದಿಸುವುದಲ್ಲದೆ ಬೇರೊಂದಿಲ್ಲವೆನೆ
ಅನ್ಯಮಲ್ತು..."
ಸಭೆ ಚದುರಿತು ಬೈಗುವೊಳ್ತಿನ ಮಸಿ
ಗಪ್ಪು ಮುಸುಗಿ ಬರೆ! ಸ್ವಾಮಿಜಿ ಪೊರಮಟ್ಟರಾ
ಸಭೆಯಿಂದೆ; ತಮ್ಮಯ ಪರಿವಾರದೊಡಗೂಡಿ.
ಮುಂದಿನ ಸಭೆಯ ಅಧಿವೇಶನಂ ನಡೆದುದು ಅದೇ
ಮರುದಿವಸದ ಸಂಜೆಯಲಿ. "ನಮಗಿರುವ ಕರ್ತವ್ಯ"
ಎಂಬೊಂದು ವಿಷಯಮಂ ಕುರಿತು ಶ್ರೀ ಕಂಠದುಲಿ
ಹರಿಸಿದರ್ ಗುರುದೇವಂ. ದರಿದ್ರ ನಾರಾಯಣನ
ಸೇವೆಯೇ ಶ್ರೀಮನ್ ನಾರಾಯಣನ ಸೇವೆ ಎಂಬ
ತತ್ತ್ವವೇ ಪ್ರಧಾನಮಾದೆಲ್ಲ ನುಡಿಗಟ್ಟು
ಹರಿದುದು ಜಳಜಳನೆ ಜಳಧಾರೆಯ ಮಾಳ್ಕೆಯಲಿ.
ನುಡಿದರಾ ಶ್ರೀಮದ್ಗುರುವರ್ಯಂ "ಕೇಳಿ, ಹೇ,
ಬಾಂಧವರೇ! ಆತ್ಮಿಕ ಗುಣ ಶ್ರದ್ಧೆಯಲಿ ಬರ್ಪ
ಧೈರ್ಯವೇ ಧೈರ್ಯ! ಇದಂ ಮನಗೊಳ್ಳಿ.....ಮನಗೊಳ್ಳಿ!
ಪಿಂದೊರ್ಮೆ ಗತಕಾಲದೊಳ್ ಫ಼ಿದೇಶೀ ಧೀರ

ಚಕ್ರವರ್ತಿಯೊರ್ವಂ ಭಾರತದ ಪುಣ್ಯ ಭೂಮಿಯ
ಮೇಲೆ ದಂಡೆತ್ತಿ ಬರಲುರೆ ಅಣಿಗೊಂಡು ತನ್ನಯ
ಗುರುವಿನ ಬಳಿಗೈದಂ ಗುರ್ವಾಶೀರ್ವಾದವಂ
ಪಡೆಯೆ. ಆಗಳಾ ಗುರು ತೋಷದಿಂ ಶುಭನುಡಿಯ
ನುಡಿದು ಶುಭಹಾರೈಸಿದ ಬಳಿಕಲಿಂತೆಂದನಯ್
"ಅಯ್ಯ ಚಕ್ರವರ್ತಿಯೇ! ವೀರಾಧಿವೀರನೇ
ಕೇಳ್! ಭಾರತೀಯರ್ ಯುದ್ಧ ವೀರರಲ್ಲಂ.
ಆಧ್ಯಾತ್ಮ ವೀರರ್. ಅವರಂ ನೀಂ ಗೆಲ್ವುದದು
ಸುಲಭವೇ. ಅಲ್ಲಿಂದ ನೀಂ ಪಿಮ್ಮರ್ಳುವಾಗಳ್
ನಿನ್ನೊಡನೆ ಓರ್ವಸಂತನಂ ಕರೆತರ್ಪುದು
ಒಳ್ಳಿತೆಂಬೆ."
"ಏಕೆಂಬುದನೆನಗೆ ತಿಳಿಪುವಿರಾ?"
ಚಕ್ರವರ್ತಿಯಂ ಎಕ್ಕಟಿಗೆ ಬರಿಸಿ "ಕೇಳಯ್ಯ
ಅಲ್ಲಿನ ಗುರುಕುಲದಲಿ ಕಲಿತ ಸಾಧುಸಂತರು
ವೇದಾಂತಮಂ ಆಧ್ಯಾತ್ಮ ತತ್ತ್ವವಂ ಕಲಿತು
ಬಲಿತು ಶ್ರೀಮಂತರಾದವರು. ಅವರಿಂದೆಮಗೆ
ಬಹುಲ ಪ್ರಯೋಜನಮಿರ್ಪುದು ಎನೆ ನಿನ್ನೊಳ್
ತಿಳಿದು ನೋಡು."
ಒಡನೊಡನೆ ಗುರುವಿನ ಇಂಗಿತವ
ನರಿತು ಸಾವಧಾನದಲಿ ಮನತುಂಬಿ ನಮಿಸುತೆ
ಅನನ್ಯ ಭಕುತಿಯಲ್ಲಿ ಪರಕೆಯಂ ಸ್ವೀಕರಿಸಿ
ಶಿರಬಾಗಿ ಧನ್ಯವಾದವನರ್ಪಿಸಿ ಪೊರಟಂ
ಭಾರತ ಧರಿತ್ರಿಯಮೇಲೆ ದಂಡೆತ್ತಿ! ತನ್ನಯ
ವೀರ ಸೇನೆಯ ಮುಂಬಿಗನಾಗಿ ಭಾರತಮಂ
ಬೊಕ್ಕಂ. ಜನರಂ ಕಂಡಕಂಡೆಡೆ ಕಂಡರಿಸಿ

ಕೊಚ್ಚಿ ಬೀಸಾಡುತೆ ಒಳನುರ್ಗಿಯೆ ನುರ್ಗಿದಂ!
ದೀನ ಪ್ರಜೆಗಳ ಜಡಿದು ಬಡಿದು ಕಡಿ ಕಂಡಿಸಿ
ಜಾಡಿಸುತೆ ಮುಂಬರಿದನ್ ರಣಧೀರ ತಾನ್ನೈಸಿ.
ಮಡಿದರಾರ್? ಓಡಿದರಾರ್? ಎದುರು ನಿಲ್ವರಾರ್?
ಕೇಳ್ವರಾರ್? ಎನೆ ಆರ್ ಕಂಡು ಕಾಣದಾದರ್
ಹಾದಿಯೊಳ್. ಮುಂಕೊಂಡು ಬರುತಿರೆ ಕಣ್‌ದಿಟ್ಟಿಗೆ
ಎಲ್ಲಿಯುಂ ಸಾಧು ಸಂತರ್ ಕಾಣದೆ ಅರಸುತೆ
ಮುಂಬರಿದಂ. ಗೆಲುಮೆ ಕೈಗೂಡಿಯುಂ ಒಲುಮೆಯಂ
ಸಾಧಿಸಲ್ ಬಾರದೆ ಮನದಿ ಹೂಂಕರಿಸಿ ಕಯ್ಯ
ಖಡ್ಗಮಂ ಜಳಪಿಸುತೆ ಮಾಂಕರಿಸಿ ಮುನ್ನಡೆದ
ಚಕ್ರವರ್ತಿ. ಬೊಬ್ಬಿರಿದು ಕ್ರೌರ್ಯ ಸಾಸಂ ಮೆರೆದು
ಅರಸುತರಸುತಲಿ ಮುಂಬರಿಯಲೆಲ್ಲಿಯುಂ ಮುನಿ
ಜನಗಳಂ ಕಂಡನಿಲ್ಲವಂ. ಮುಂದೆಮುಂದೆ
ನಡೆದಿರಲ್ ಹಾದಿಯಂಚಿನ ಕರ್ಬಂಡೆಯಮೇಲೆ
ಕುಳಿತಿರ್ದ ವಯೋವೃದ್ಧನೊರ್ವಂ ಕಣ್ಗೆಸೆದಂ.
ಸಂತನಂತೆಸೆವ ವೃದ್ಧಂ ಬಿಳಿಯ ದೋತರಂ
ಉಟ್ಟು, ಮಾಸಲು ಬಿಳಿಯ ಉತ್ತರೀಯಮಂ ಹೊದ್ದ
ಬಲ್ ಸರಳ ವ್ಯಕ್ತಿಯಿರೆ ಚಕ್ರವರ್ತಿಯು ಅವನ
ಬಳಿ ಸಾರ್ದು ನೋನೋಡಿ ಸಂತಸದಲಿ ಸಂತನೆ
ವಲಂ ಎಂದೆನುತೆ ನುಡಿಸಿದಂ "ಎಲೆ, ಸಂತನೇ,
ನೀನೇಕೆ ಕುಳಿತಿರ್ಪೆ ಇಲ್ಲೊರ್ವನೆ?"
"ನನ್ನಿಚ್ಛೆಯುಮಿದೇ."
ಮೈಮನಂ ಮುದುಡಿ ಹಣ್ಣುಹಣ್ಣಾದ ಮುದುಕನ
ದೃಢದನಿಯಂ ಕೇಳ್ದು ಮನದಲಿ ಕುತೂಹಲಂ
ಕೊನರಿ ನುಡಿದನಾ ಚಕ್ರವರ್ತಿಯು ಸರಾಗದಿ,

"ಕೇಳ್ಕೆ, ಮುದುಕ!" ಎನುತ್ತೆ ಮುಮ್ಮಾತುಗಳಮಾಲೆ
ಪರಿಸಿ ಸೂಸಾಡಿದಂ, ವೃದ್ಧನಮನವನರಿಯೆ
ಬುದ್ಧಿಭಾವವಂ ಕೆಣಕಿ ಕೊಣಕಿಸಿ ನೋಳ್ಪಂತೆ.
ವಯೋವೃದ್ಧಂ ವಿದೇಶೀಯನ ಅಟಾಟೋಪದ
ಬೆಡಗು ಬಿನ್ನಾಣಮಂ ಕಣ್ಣಿಟ್ಟು ನೋಡುತ್ತೆ.
ಮನಗೆಡದೆ ಎದೆಗೆಡದೆ ಆತನಭಿಲಾಷೆಯಂ
ಅರಿಯೆ ಮಿಣ್ಣನಿರ್ದಂ; ಮಾತುಳಿದುವು ಕೊರಳಲಿ.
ಆಗಳಾ ರಣಧೀರ ಚಕ್ರವರ್ತಿ ಖಡ್ಗಂ
ಪಿಡಿದ ಕೈಯ್ಯಂ ಅತ್ತಿತ್ತ ಬೀಸಿ ಜಳಪಿಸುತ್ತೆ
ದರ್ಪಭರಿತ ಆವೇಶದಿಂ ಚೀರಾಡಿ ಲಘು
ಭಾವದಿಂ ಬಾಯ್ಬಿಟ್ಟನ್ "ಕೇಳ್ಕೆ, ಮುದುಕಾ! ಆಂ
ಚಕ್ರವರ್ತಿ! ಇಲ್ಲೆನಗೆ ಎದುರ್ವೆತ್ತು ನುರ್ಗಿದ
ಬಂಡುಕೋರರಂ ಸದೆಬಡಿದು ಕೊಚ್ಚಿ ಕಂಡರಿಸಿ
ನರಿನಾಯ್ಗಳಿಗೆ ಪರ್ಬವೆಸಗಿ ಬಂದಿಹೆ ಕಾಣ್!
ಎನ್ನ ವಿಜಯೋತ್ಸವದ ಸಲುವಾಗಿ ನಿನ್ನನುಂ
ಎನ್ನೊಡನಾನ್ ಕರೆದೊಯ್ಯಲಕ್ಕು! ಕೇಳ್ಕೆ, ಹೇ
ಮುದುಕಾ! ಪೊರಡೀಗಳ್ ಎನ್ನೊಡನೆ!"
"ಆನೊಲ್ಲೆ!"
ತಲೆಯಾಡಿಸುತೆ ನುಡಿದನವ "ಆನೇಕೆ ಬರಲ್ಕೆ
ತವ ರಾಜ್ಯಕೆ? ಎನಗಿಲ್ಲಿಯೇ ಸುಖ ಸಂಪದಂ
ಇರುತ್ತಿರೆ ಕಟ್ಟಿಟ್ಟ ಬುತ್ತಿಯೊಲ್. ಆನೇಕೆ ಬಂದಪೆನ್?"
"ನೀಂ ಬರವೇಳ್ಕುಂ. ಇದೆನ್ನ ಕಟ್ಟಪ್ಪಣೆ!"
"ಉಹೂಂ ಆಂ ಬರಲಾರೆ! ಆನೊಲ್ಲೆ!"
"ನೀಂ ಅಂತೆನಲ್ ಆಂ ಬಿಡುವೆನೇನ್ನೆ? ಎಲೆಗೊಡ್ಡು
ಮುದುಕಾ! ನಿನ್ನ ನಾನೆಳೆದೊಯ್ವೆ!"

"ಅಯ್ಯಾ, ದೊರೆಯೆ,
ಕೇಳ್! ಇದೆನ್ನಯ ಜನ್ಮಭೂಮಿಯಿರೆ ಆನಿಲ್ಲೆ
ಸತ್ತು ಈ ಮಣ್ಣಹುಡಿಯಲಿಯೆ ಬೆರೆತುಕೊಳ್ಳಲ್
ವೇಳ್ಕುಂ ಇದೆನ್ನಯಾ ಕಟ್ಟಕಡೆಯಾಸೆ ಕಣಾ!"
"ಇಂ ಸಾಲ್ಗು ನಿನ್ನ ಬೊಗಳೆವಾತು. ಮೊದಲ್ ಪೊರಡು!
ನೀನ್ ಏನೆಂದರಿದೆನೆನ್ನ ಆಂ ಚಕ್ರವರ್ತಿ!"
"ಅಯ್ಯ ಮಹರಾಯ! ನೀನಿರೆಲೆ ಚೆಂದದಿಂ!
ಅದನಲ್ಲಗಳೆಯಲಾರೆಂ. ನಿನ್ನೊಳ್ ಏನೇನ್
ಇರ್ದೊಡಂ ನಿನ್ನ ಹಿರಿತನಕ್ಕೆ ಮಣಿವನೇನ್
ಈ ಮುದುಕ? ನಿನ್ನೈಸಿರಿ ನಿನಗಿರ್ಕೆ ನಿನ್ನದಾಗಿ.
ಎನ್ನ ಬಡತನವೆನಗೆ ಸಾಲ್ಗುಂ ಮಹಾರಾಜ!
ಈ ದೀನ ದರಿದ್ರುಂ ಆವೊಂದು ಸಿರಿತನಕೆ
ಮಣಿಯಲಾರ ಆಸೆಪಡಲಾರ ಎನಲ್ ಇದಂ
ಪುಸಿಯೆನ್ನದಿರ್. ಎಲೈ ಚಕ್ರವರ್ತಿ! ಕೇಳಿಲ್ಲಿ,
ಆಂ ದೀನದರಿದ್ರನೆ ಇರ್ದೊಡಂ ನಿನ್ನೆಲ್ಲ
ಐಶ್ವರ್ಯ, ಅಧಿಕಾರ ಶೌರ್ಯ ದರ್ಪಗಳಿಂಗೆ
ಬೆದರುವೆನೆ? ಅಥ ಸೋಲ್ತು ಶರಣಾದಪೆ ಎಂಬೆಯಾ
ಛಿಃ!ಛಿಃ! ನೀನೀಗಳೆ ತೊಲಗಿಲ್ಲಿಂದ ಮಹರಾಜಾ!
ಸಾಲ್ಗುಮೀ ಆಟಾಟೋಪ!"
"ಎಲೆ, ಅಧಿಕ ಪ್ರಸಂಗಿ!
ಕೇಳ್, ನೀನೇನೆಂದು ಪರಿಭಾವಿಸಿಹೆನೆನ್ನ
ರಾಜ್ಯ ಕೋಶಗಳಂ? ಮಹಾರಾಜನೆನೆ ಸಣ್ಣ
ಪಾಳೆಗಾರ ಎಂದೆಂಬೆಯಾ? ಆಂ ಚಕ್ರವರ್ತಿ!!
ಬಹು ರಾಜ್ಯಗಳೊಕ್ಕೂಟದ ಒಡೆಯ ತಿಳಿಯಯ್ಯ!"
ಥಳಥಳಿಪ ಖಡ್ಗಮಂ ಮತ್ತೆಮತ್ತೆಮೇಣತ್ತೆ

ಸೆಳೆದು ಝಳಪಿಸಿ ಅಟ್ಟಹಾಸದ ಹಿರಿ ಧ್ವನಿಯ
ಹರಿಸಿದಂ ಹೊಲಗದ್ದೆ ಮರುದನಿಗುಡುವ ತೆರದಿ!
"ಅಯ್ಯಾ! ದೊರೆಯೆ ಕೇಳ್, ನಿನ್ನೈಸಿರಿ ನಿನಗಿರ್ಕೆ
ಚೆಂದದಿಂ ನೂರ್ಕಾಲ ಬಾಳ್! ಅದರೊಡಂ ಧರ್ಮ
ಮಾರ್ಗಮಂ ಬಿಡದೆ, ಆರಿಂಗು ಮಿತ್ತಾಗದೆಯೆ
ಧರ್ಮವಿದ ಸತ್ಯವಿದನೆನೆ ಕೀರ್ತಿಶಾಲಿಯಾಗಿ
ಬಾಳೆಲೆ ರಾಜ! ನೀನೆಂದು ಪ್ರಜಾ ಕಂಟಕ
ಎನಿಸಿಕೊಳ್ಳದಿರ್ ಎಂಬುದೆನ್ನೆದೆಯ ಅಮೂಲ್ಯ
ಸಲಹೆಯಂ ಮಾತ್ರ ನಿನಗೀವೆನಾಂ. ಇದನಿಷ್ಟು
ಮನಗೊಳಿಸಿಕೊ ದೊರೆಯೇ!"
"ಎಲೈ, ಏನಿದೇನಿದು?
ನಿನ್ನ ತಲೆ ಹರಟೆ? ಹುಚ್ಚುಚ್ಚಾಗಿ ಗಳಪದೆಯೆ
ಪೊರಡೀಗಳೆ ಎನ್ನೊಡನೆ!"
"ಎಲಾ, ಎಲಾ ಧೀರ!
ಚಕ್ರವರ್ತಿ! ಇದೇನ್ ಪುರ್ಚು ನಿನಗೆ? ಆನ್ ಬಂದಪನೆ
ನಿನ್ನ ರಾಜ್ಯಕೆ? ಸುಡು, ದೊರೆತನದ ಅಹಂಕಾರ!
ತೊಲಗೀಗಳೆ ಇಲ್ಲಿಂದ!"
ಆ ದೊರಣೆಗೆ ಕಡು
ರೋಷದ ಗಣಿಯೆನೆ ಒದರಿದನಿಂತು ಆ ಯುವ
ಚಕ್ರವರ್ತಿ "ಛಿಃ! ನಾನಿನ್ನಂ ಬಿಡುವೆನೇನ್ನೈ
ತಲೆ ಕಡಿದು ತುಂಡಿಸಿ ಪರಮಾನಂದದಿಂದೆ
ನಾಯ್ನರಿಗಳಿಗೆ ಪರ್ಬದ ಉಣಿಸಂ ಇಕ್ಕುವೆನ್."
ಚಕ್ರವರ್ತಿಯ ಗಡಸು ಗರ್ಜನೆಯದು ಮೊಳಗಲ್
ಆ ಸಾಧು ಶಾಂತ ಪ್ರಸನ್ನ ಭಾವದಿಂದಲಿ
ಮುಗುಳ್ನಗೆ ಅರಳಿಸಿ ನುಡಿದನೆಂತೆನೆ "ಕೇಳಯ್,

ಇದಕಿಂತ ಬುದ್ಧಿಹೀನ ಮಾತಿನ್ನಿರದು. ನೀಂ
ಎನ್ನನುಂ ಕೊಲ್ಲುವುದು ಶುದ್ಧಸುಳ್ಳು! ರಾಜಾ,
ರವಿಯೆನ್ನಂ ಒಣಗಿಸಂ, ಬೆಂಕೆಯೆನ್ನಂ ಸುಡದು,
ಖಡ್ಗವೆನ್ನ ಕತ್ತರಿಸದು. ಜನನ ಮರಣಮಿಲ್ಲ
ಎನಗೆ. ಕೇಳೆಲೇ ಚಕ್ರವರ್ತಿ! ತವ ಸಾಸಂ
ವ್ಯರ್ಥಮೆಂದೆ ತಿಳಿ ! ನೀನೊರ್ವ ಆಧ್ಯಾತ್ಮವಂ
ಅರಿಯದಿಹ ಹುಂಬ! ಈ ದೇಹದೊಳಿಹ ಆತ್ಮನು
ಸರ್ವಶಕ್ತ, ಸರ್ವವ್ಯಾಪಿ. ಮೇಣ್ ಚಿರಂಜೀವಿ!
ಅವನಂ ನೀನೆಂತು ಕೊಲ್ವೆ? ತಿಳಿದಿರ್ ನಿತ್ಯಾತ್ಮ
ನಾನ್!"

ಇಂತೊಂದು ನಲ್‌ಗತೆಯಂ ತಿಳಿಪಿದ ಗುರು
ದೇವನೆಂತೆಂದರೆನೆ ಕೇಳಿ, ಪರಮ ಪುತ್ರರೇ,
ಆಧ್ಯಾತ್ಮಿಕ ಧೈರ್ಯಮೆನೆ ಇದುವೇ ತಿಳಿಯಿರೈ"
ಎಂಬರಿವಿನ ಪಥವಂ ತೋರಿದಬಳಿಕ ಗುರು
ವರ್ಯಂ ಸನಾತನ ವೇದಾಂತ ಧರ್ಮವಂ ಅರೆ
ತಾಸು ಮಾತಾಡಿ ಶಿಷ್ಯಜನರ ಮನಮತಿಯಂ
ಅರಳಿಸಿದರ್ ಸ್ವಚ್ಛಂದ ಶೈಲಿಯಲಿ. ಅಂದಿನ
ಸಭೆಯೊಳ್ ಉಪಸ್ಥಿತರಿರ್ದ ಲಾಹೋರ್ ಕಾಲೇಜ್
ಗಣಿತ ಶಾಸ್ತ್ರದ ಪ್ರಾಧ್ಯಾಪಕ ತೀರ್ಥರಾಮ
ಗೋಸ್ವಾಮಿಯುಂ ಕೆಲದಿನಗಳೊಳ್ ತಮ್ಮ ಬಾಳಿನ
ಗತಿಯಂ ಬದಲಿಸಿ ರಾಮತೀರ್ಥರೆನೆ ಪೆಸರಂ
ಬದಲಿಸುತೆ ಪೆಸರಾಂತ ಯೋಗಿಯೈಸಿ ಮೆರೆದರ್
ಅಭ್ಯುದಯದ ಹಂತವನೇರಿ. ಸ್ವಾಮಿ ವಿವೇಕಾ
ನಂದರಂತೆವೊಲ್ ಅಮೆರಿಕ ಮುಂತಪ್ಪ ವಿದೇಶ
ಯಾತ್ರೆಯಂಗೈದು ಸನಾತನ ಧರ್ಮೋಪದೇಶ–

ವನಿತ್ತು ನಿರರ್ಗಳ ಉಪನ್ಯಾಸಕರಾದರ್
ಕಾಲಕ್ರಮದೊಳ್. ಆದೊಡೇಂ ರಾಷ್ಟ್ರದ ದೌರ್ಭಾಗ್ಯ!
ರಾಮತೀರ್ಥ ಮಹೋದಯರ್ ಸ್ವಾಮಿ ವಿವೇಕಾ
ನಂದರ ಬಲಗೈಯಾಗಿಯುಂ ಜಗದೊಳ್ ಕರ್ಮ
ರಂಗದಂಕದಿಂ ಅಲ್ಪಕಾಲದೊಳೇ ಕಣ್ಮರೆಯಾದರ್
ಗುರುವರನ ಎದೆಯಮೃತ ಕುಂಡದಲಿ ದುಃಖದ
ಬಿಸುಸುಯ್ಲು ಮೂಡಿಸಿ. ಅವರಾಗಮನ ಎನಿತೆನಿತು
ಆನಂದರಸವನೂಡಿಸಿತೊ, ಅಂತೆಯೆ ನಿರ್ಗಮನ
ದುಃಖರಸವನೂಡಿಸಿತು ಗುರುವರನ ಒಡಲಿಂಗೆ.
    ಸ್ವಾಮೀಜಿಯಾ ದೈಹಿಕಾರೋಗ್ಯವುಂ ದಿನದಿನಂ
ಕುಗ್ಗುತಿರೆ ವಿಶ್ರಾಂತಿಗಾಗಿ ಸ್ವಾಮಿ ಅಚ್ಯುತಾ-
ನಂದರಂ ಮೇಣ್ ಪ್ರಕಾಶಾನಂದರಂ ಒಡ
ಗೂಡಿ ಡೆಹರಾಡೂನಿಗೆ ಪಯಣಿಸಿದರ್; ಅಲ್ಪ
ಕಾಲಮಂ ಅಲ್ಲಿ ಆರೋಗ್ಯಭಾಗ್ಯಕ್ಕಾಗಿ
ಸದ್ದುಗದ್ದಲಂಗಳ ಸೋಲ್ಲಿಲ್ಲದೆ ತಣ್ಣಗೆ
ಕಾಲಹರಣಗೈಯ್ಯಲ್; ಆ ಪರ್ಣಾರ್ಣವದ
ಸಖ್ಯ, ಕುಸುಮಕೋಟಿಯ ಸೌರಭದ ಸಖ್ಯ ನದಿ,
ತೊರೆ ಕೆರೆಗಳ ಸಖ್ಯ, ವನವಿಹಂಗಮುಗಳುಗುವ
ರಾಗಾನುರಾಗಗಳ ಸಖ್ಯ, ತಂಗಾಳಿಯತಿ
ತನಿಯಿಂಪಿನ ಸಖ್ಯ ವನ್ಯಪ್ರಾಣಿಗಳ ಅನನ್ಯ
ಸಖ್ಯ ಭ್ರಾತೃಭಾಯಿಗಳಕ್ಕರೆಯ ಸಖ್ಯ ಮಿತ್ರ
ಮಂಡಲಿಯ ಸ್ನೇಹಾದರದ ಸಖ್ಯ ಎಲ್ಲವುಂ
ಒಗ್ಗೂಡಿ ತುಂಬಿದುವು ಗುರುವಿನ ತನುಮನಗಳ.
ಅಂದಿನ ದಿವಸಾನಸಮಯದಲಿ ಮಸಿಗಪ್ಪಿನ
ಕರಿಛಾಯೆ ಮುಸುಗುತಿರುತಿರೆ ಇಳೆಯನು ಕರ್ರಗೆ

ಕರಿಕಾಳಿಕೆಯಾಗಿ. ಗುರುದೇವಂ ಆಗಳೇ
ಕಾಲ್ಮಡಿದು ಕುಳಿತರ್ ಅನುದಿನದ ಪ್ರಾರ್ಥನೆಗೆ.

ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾ
ಆಯೇ ಧಾಮಾನಿ ದಿವ್ಯಾನಿ ತಸ್ತುತಃ ।

"ಆಯಂ ನಾಭಾ ವದತಿ ವಲ್ಗುವೋ ಗೃಹೇ
ದೇವ ಪುತ್ರಾ ಋಷಯಸ್ತಚ್ಛೃಣೋತನ ।
ಸುಬ್ರಹ್ಮಣ್ಯಮಂಗಿರಸೋ ವೊ ಅಸ್ತು
ಪ್ರತಿ ಗೃಭ್ಣೀತ ಮಾನವಂಶು ಮೇಧಸಃ ॥"

ಪಕ್ಷಮಾನವೊಂದುರುಳಿದುದು ಶಾಂತಿ ಸಮುದಯ
ಧಾತ್ರಿಯಲಿ. ಹೃನ್ಮನಂಗಳು ಹರ್ಷದ ಊಟೆಯೆ
ಆದೊಡಂ ದೈಹಿಕ ಬಾಧೆಯು ಒಳಗೊಳಗೆ ಸುಡುವ
ಸುಡುಬೆಂಕೆಯ ಕಿಡಿಯಾಗಿ ಉಳಿದುದು ಮೈಯೊಳ್.
ಖೇತ್ರಿ ಮಹರಾಜರ್ ಆತ್ಮೀಯ ಗೌರವ ಪೂರ್ಣ
ಸುಮಧುರಾಹ್ವಾನಮಂ ಕಳಿಪಿದರ್ ಸ್ವಾಮೀಜಿಗೆ.
ಓದಿದರ್ ಸ್ವಾಮಿಜಿ ಗೌರವ ಝುರಿ ಹರಿದಿಹ ಓಲೆಯಂ.
ಖೇತ್ರಿ ರಾಜ್ಯ ನಲಿದುದು ಕಣ್ಮುಂತೆ. ಮಹರಾಜರ
ಸ್ನೇಹಾದರ ಸೆಳೆದುದು ಮನವಂ. ಸಮುಲ್ಲಾಸ
ಭರಿತ ಮನದಿಂ ಪೊರಟರ್ ಖೇತ್ರಿ ಮಹರಾಜರ
ಕರೆಗೆ ಓಗೊಟ್ಟು. ವೀರಭೂಮಿ ರಾಜಪುತ್ರ
ಸ್ಥಾನದಭಿಮುಖೀ ಪಯಣದ ಗತಿಯುಂ ಮುಂದೆ
ಮುಂದೆ ಸಾಗುತಿರೆ ಭಾರತ ಧಾತ್ರಿಯ ದರ್ಶನ
ಭಾಗ್ಯದಿಂ ಕಣ್ಮನಗಳ್ ತುಂಬಿದುವು ಹೃತ್
ಕರಂಡದ ಆನಂದರಸ ಉಕ್ಕೇರುವವೊಲ್.
ವಾರ್ಧಿಯುಂ ತಣಿಯಿತು. ಬಗೆಬಗೆಯಲಿ ಕಣ್ಸೆತ್ತ
ದೃಶ್ಯ ದೇವೇಂದ್ರನಂ ಮೈಯೆಲ್ಲ ಕಣ್ಣಾಗಿ

ಕಣ್ಣೆಲ್ಲ ಮನಸ್ಸಾಗಿ ಮೆಯ್ಮರೆತು ಜಗಮರೆತು
ಕಂಡರೆಲ್ಲ ಇಂದ್ರಿಯಮಿಲ್ಲದಾತ್ಮಾನಂದ
ರಸವಾಗಿ. ಸಾಗಿದುದು ಪಯಣಂ ವರಸ್ಫೂರ್ತಿಯ
ಆಗರಮೆನೆ ಎಲ್ಲಿಯು ನಿಲುಗಡೆಯಿರದ ತೆರದಿ.
ಆಳ್ವಾರ್ ಸಂಸ್ಥಾನಮಂ ಮುಟ್ಟಿ ಒಂದೆರಳ್ಕು
ದಿನಮಾನಮಂ ಕಳೆದರ್ ಸುವಿಶ್ರಾಂತಿಯಲಿ. ಪೂರ್ವ
ಸುಪರಿಚಿತ ನಗರಿ. ಪರಿಚಿತ ಪ್ರಜೆಗಳ್ ಎನಲ್
ವಿಶ್ರಾಂತ ಮನಂ. ವಿಶ್ರಾಂತ ದಿನಂ. ಸಮಯಂ
ಕಳೆದುದು ನಿರಾಳವಾಗಿ. ಖೇತ್ರಿಮಹರಾಜರ
ಒಡಗೂಡಿ ವಾಯುಸೇವನೆಯೊಳ್ ಕಾಲಹರಣ.
ಮಿತ್ರಮಂಡಲಿಯ ಬಳಿ ನಲ್ನುಡಿಗಳ ಚಟಾಕಿ.
ಮಧ್ಯೆ ಮಧ್ಯೆ ಬರುವರೆನಿತೊ ಸಂದರ್ಶಕರ್
ಎಲ್ಲರಿಗೊರ್ಮೆ ಕಿರು ಉಪನ್ಯಾಸಂಗೈದು ಬದುಕಿನ
ಹುರುಳ್ ತೋರ್ಪರ್, ಹುರುಪುಗೊಳಿಪಂತೆ.
ಮರುದಿನದ
ಉದಯರವಿ ಬಾನೇರುವ ಪೊಳ್ತಿನಲಿ ಬೆಳ್ನವಿರ್
ಮಿಂಚುವ ಹರೆಯವಳಿದ ವೃದ್ಧೆಯೊರ್ವಳೈದಳ್
ಸ್ವಾಮಿಜಿಯ ಬಳಿಗೆ. ಮುದುಡಿದ ಮೊಗದೊಳ್ ಬೊಚ್ಚು
ಬಾಯಿನ ಕಿರುನಗೆ ಸೂಸಿ ನುಡಿದಳ್ "ಸ್ವಾಮಿಜಿ,
ನೀಮಿಂದು ಕೃಪೆಗೈದೆನ್ನಯ ಕುಟಿಯೊಳ್ ಬಡ
ಮುದುಕೆಯ ಬಡತನದ ಒಣರೊಟ್ಟಿಯ ಉಣಿಸನುಂ
ಉಂಡು ಉದ್ಧರಿಸವೇಳ್ಕುಂ. ಕ್ಷಮಿಸಿರೆನ್ನಯ
ಧೈರ್ಯದುಸಿರಿನ ಬೇಡಿಕೆಯಂ....ಎಂದಾಂ ಬೇಳ್ದು
ಕೈಮುಗಿವೆಂ."
ಸ್ವಾಮಿಜಿಯುಂ ವೃದ್ಧೆಯಂ ನೆಟ್ಟು

ನಿಟ್ಟ್ವಾಲಿಯಿಂ ನಿಟ್ಟ್ವಿಸಲ್ ಹಳೆಯ ನೆನಪಿನೊಳ್
ನುಸಿದು ಬಂದಳ್ ವೃದ್ಧೆ. ಮಿನ್ನೆ ತಾವ್ ಯಯಾವರ
ವೃತ್ತಿಯೊಳ್ ಅದೇ ಅಜ್ಜಿಯ ಬಡಕುಟಿಯೊಳುಂಡು
ರಾತ್ರಿ ತಂಗಿದ ವಿಚಾರಂ ಸ್ಮರಣೆಯ ಭಿತ್ತಿಯ
ಮೇಲೆ ಚಿತ್ರಿತಮಾಯ್ತು. ಅಂದಾಕೆಯಾತಿಥ್ಯಂ
ಒಡಲ ಪ್ರೇಮದಿಂ ಕೂಡಿತ್ತು. ಅಕ್ಕರವರಿಯದ
ಜೀವವಾದೊಡವಳ ಅನನ್ಯ ಪ್ರೇಮ ಮೆರೆದುದು
ಮಿಸುನಿಯೊಡಲ ಜ್ಞಾನದ ರಸವಂ ಹೊರ ಹರಿಸಿ.
ಸ್ವಾಮಿಜಿ ಸಂತುಷ್ಟರಾದರ್. ಮುಖಾರವಿಂದ
ಅರಳಿ ಹೂವಾಯ್ತು. ನುಡಿಸಿದರೊಡನೆ "ಎಲೆ ತಾಯೆ,
ನಿನ್ನೊಳೊರ್ಮೆ ತಂಗಿರ್ದು ನಿನ್ನ ರೊಟ್ಟಿಯೂಟಂ
ಉಂಡಿರ್ಪೆನೆನ್ ಒಡಲ್ತುಂಬ. ಅದನಿನ್ನಾನ್
ಮರೆತೆನಿಲ್ಲ. ನಿನ್ನಯ ಕುಟಿಗಿನ್ನೊರ್ಮೆ ಬರಲುರೆ
ತೋಷಮಕ್ಕು. ಆಂ ಬಂದಪೆಂ ರೊಟ್ಟಿಯೂಟಕೆ."
"ಅಂಬಡವೆ, ಕೂಲಿಗಾತಿ ಕಾಳಿಲ್ಲದ ಕೂಳು,
ಎನ್ನ ಸ್ಥಿತಿಗತಿಗೆ ಮನದೊಳ್ ಜುಗುಪ್ಸೆಗೊಳ್ಳದಿರ್."
"ಅಯ್ಯೊ, ಅಂತೆನಲುಂಟೆ ತಾಯೇ ಮಿನ್ನೊರ್ಮೆ
ನಿನ್ನೊಳ್ ಉಳಿದವನಾಂ. ಮತ್ತೆಲ್ಲಿಯ ಜುಗುಪ್ಸೆ?"
"ಆಯ್ತು, ಪ್ರಭುವೇ!" ಎನುತೆ ಪೊರಮಟ್ಟಳ್ ವೃದ್ಧೆ.
ಹೃತ್ ಕುಂಡದೊಳ್ ಹರ್ಷಾಶ್ರುಗಳುಕ್ಕಿ ಹರಿದುವು
ಹನಿಹನಿಯ್ಯೆಸಿ. ಕುಟಿಯೊಳ್ ಕಾಯಿಪಲ್ಲೆಯದೇನ್
ಇರದಿರಲ್ ಬರಿರೊಟ್ಟಿ ಮಾತ್ರವೆ ಪುಷ್ಕಳದೂಟ
ಗುರುವಿಂಗೆ. ಅಲ್ಲಿ ಇಲ್ಲಿ ಬೇಡಿಯು ದೊರೆಯದೆಯೆ.
ಖಿನ್ನಮನದಲಿ ಕಳೆದಳ್ ರಾತ್ರಿಯನಾ ವೃದ್ಧೆ.
ಮುಸ್ಸಂಜೆಯುರುಳ್ದು ನಿಶಿಯ ರಾಜ್ಯಭಾರದಲಿ

ಬೆಳಗಾಯಿತು. ಉದಯ ರವಿ ಮೂಡಿಬರೆ ಮೂಡಣ
ದಿಗ್ದೇಶದಲಿ ಬಡಮುದುಕಿ ದಪ್ಪದಪ್ಪನೆಯ
ರೊಟ್ಟಿಗಳ್ ತಟ್ಟಿ ಕುಡಿಕೆ ನೀರ್ ತಂದಿರಿಸಿ ಗುರು
ದೇವನ ಬರುವಿಗಾಗಿ ಕಾದಿರುತಿರೆ ಸಮಯಕೆ
ಸರಿಯಾಗಿ ಗಮಿಸಿದರ್ ತಮ್ಮೊರ್ವ ಶಿಷ್ಯನಂ
ಒಡಗೂಡಿ. ಮುದುಕೆಯ ಮನವರಳಿತು. ಗುರುವರನ
ಆಗಮನದ ಭಾಗ್ಯದೈಶ್ವರ್ಯವೊದಗಿರಲ್
ತಾಯಿಯ ಕಣ್ ಕೊಳಗಳಲಿ ಆನಂದಾಶ್ರುಗಳ್
ಮೊಳೆತುವು. ಕರವಮುಗಿದು ತುಂಬಿದೊಡಲ ನೋಂಪಿಯಿಂ,
ಕೈನೀಡಿ ಬರಮಾಡಿದಳ್ ಗುರುವರನಂ. ಆ
ಮನರೋಚಕಗಳಿಗೆಯಲಿ ಹೃದಯದ ತುಡಿತಮಂ
ತಾಳಲಾರಳೋ ಎನೆ ಪ್ರಯತ್ನಿಸಿಯುಂ ತುಟಿ
ಬಿರಿಯದಾಯ್ತು. ಮುಗಿದ ಕರಗಳ್ ಇಳಿಯಲಿಲ್ಲಂ.
ಸ್ವಾಮೀಜಿ ಅವಳ ತಲೆಯಮೇಲೆ ವರದ ಹಸ್ತ
ಇರಿಸುತ್ತ ಸಮಾಧಾನಿಸಿ ಒಳಗೈದರ್. ನೆಲದಿ
ಕೂರಲೊಂದು ಹರಕಲು ಚಾಪೆ. ಮುಂದೆ ಉಣ್ಣಲು
ಮುತ್ತುಗದ ಎಲೆಗಳ್. ಕುಡಿಯಲ್ಕೆ ಕುಡಿಕೆ ನೀರು
ಮಾತ್ರವೇ. ಮುದುಕಿಗೆ ಕೊರಳ್ ಹಿಸುಕುವಂತಂತು
ಸಂಕೋಚ ಮನದೊಳ್. ಒಣರೊಟ್ಟಿಗಳಿರೆ ನಂಜಿ
ತಿಂಬುವೊಡೆ ಕಾಯಿಪಲ್ಲೆಯ ಖಾದ್ಯಮಿನಿತಿಲ್ಲ.
ಗುರುಗಳಂ ಕೂಡಿಸಿ ಒಣರೊಟ್ಟಿಗಳ್ ಮುಂದಿರಿಸಿ
ನುಡಿಸಿದಳ್ ಸಂಕೋಚದ ಮುದ್ದೆಯಾಗಿ "ಅಯ್ಯ
ಗುರುವೆ, ಒಣರೊಟ್ಟಿ ಮಾತ್ರಮೇ ಇರ್ಪುದು ಚಟ್ನಿ
ಇಲ್ಲವಾಯ್ತು."
"ಇರಲಿರಲಿ, ತಾಯೆ, ಇದೆನಗಂತು

ಪರಮ ಅಮೃತವಾಯ್ತು. ನೀನ್ ಸಂಕೋಚಮೇಂ
ಪಡದೆಯೆ ಬಡಿಸು. ತಾಯೆ, ನಾನುಂಬುವೆನೆಲ್ಲಂ''
''ಮತ್ತೆಂದರ್ ಶಿಷ್ಯಂಗೆ 'ನೋಡೈ, ರೊಟ್ಟಿಯೆನಿತು
ರುಚಿಕರಮಿದೆ ಅಲ್ಲವೆ? ಇದಕ್ಕಿಂತ ಇನ್ನೇಂ
ಔತಣಮೊ ಪೇಳ್?''
''ಅಹುದು ಸ್ವಾಮೀಜಿ. ಅಜ್ಜಿಯದು ಬರಿ ಸಂಕೋಚ.''
ಊಟೋಪಚಾರಮಾಯ್ತು, ಮುದುಕಿಯ ಮುಮ್ಮಗನ
ಕೈಗೆ ನೂರು ರೂಪಾಯಿನ ನೋಟೊಂದನೀಯುತೆ
ಆ ಅಜ್ಜಿಗೆ ವಿನಯದಲಿ ಕೈಮುಗಿದು ನಮಿಸುತೆ
ಅವಳಂ ಬಲುಮೆಯಿಂದೆ ಬೀಳುಕೊಂಡು ಪೊರಟರ್,
ಸಾತ್ವಿಕ ರುಚಿಕರವಾದ ಸವಿರೊಟ್ಟಿಯೂಟದ
ನಿಜ ಪರ್ಬವನುಂಡು. ಬಿಡದಿಗೈದ ಸಮಯದಿ
ಆಕಾಶಗಂಗೆಯ ನಡುರೇಖೆಯ ದಾಂಟಿರ್ದ
ರವಿ ಇಳಿಮುಖನಾಗಿದ್ದ. ಖೇತ್ರಿಯೊಳ್ ದೊರೆಕಿದ
ಅಪೂರ್ವ, ಅನನ್ಯತರ ಸನ್ಮಾನ ಅಸದೃಶ
ವೈಭವದಲಿ ನಡೆದತ್ತು, ಸಂಭ್ರಮದ ಸವಿಯಂ
ಸೂಸಿ. ಜೈಕಾರದ ಮೊಳಗು ಮೊಳಗಿದುದು ಮಹಾ
ನಭೋಭೇರಿಯಾಗಿ! ಸುಸುಂದರ ರಥ ಹರಿದುದು
ರಾಜಮಾರ್ಗದಲಿ. ಮಾರ್ಗದಿಕ್ಕೆಲಗಳಲಿ ನೆರೆ
ಮೆರೆದುವು ಕುಸುಮಾಂತ ತಳಿರು ತೋರಣಗಳ್, ಎಳೆ
ಬಾಳೆಯ ಕಂಬಗಳ್, ಬಾವುಟಗಳ್, ಪಗಲ್ ದೀವಿ
ಪಂಜುಗಳ್, ಬೆಳ್ಗೊಡೆಗಳ್, ಪುಷ್ಪದ ಗೊಂಡೆಗಳ್
ರಂಜಿಸಿದುವು ಹಾದಿಯ ಉದ್ದಗಲದೊಳ್, ಹರ್ಷ
ಪ್ರಮತ್ತ ಕೋಲಾಹಲಗಳ್ ಧ್ವನಿಸಿದ ಮೊರೆ
ಜಲಧಿಯ ಮೊರೆಗೆ ಹೊಯ್‌ಕೈಯಾಯ್ತು. ಸ್ವತಃ ಮಹ

ರಾಜರ್ ವೈಭವೋಪೇತ ಮೆರವಣಿಗೆಯಂ ಅರಮ-
ನೆಯ ಮಹಾದ್ವಾರಕೆ ನಡೆಸಿ, ಮುಂದೈದು ತಾಮೆ
ಸ್ವಾಗತಿಸಿದರ್ ತಮ್ಮ ಅರಮನೆಗೆ.
ಮರುದಿನಂ
ರಾಷ್ಟ್ರೀಯ ಮಹಾಭವನದ ವೇದಿಕೆಯಮೇಲೆ
ಸ್ವಾಮೀಜಿಯ ಕಂಠಧ್ವನಿ ಕಂಚುಮಿಡಿದ ತೆರಂ
ಮೊಳಗಿತು ಸಭಾಭವನದ ಮಾಡು ಮರುದನಿಯಂ
ಗುಡುವೊಲ್; ಉಪನ್ಯಾಸಾವಳಿ ವೇದಾಂತ ವಿಚಾರ
ಸಾಹಿತ್ಯಮಂ ಹರಿಸಿತು. ಮಹರಾಜರ ದಿವ್ಯ
ಅಧ್ಯಕ್ಷತೆಯಲಿ ನಡೆದುದು ಧರ್ಮಸಭೆ. "**ಏಕಂ ಸತ್
ವಿಪ್ರಾ ಬಹುಧಾ ವದಂತಿ**" ಎಂಬ ಸೂಕ್ತಿಯಂ
ಎಳೆಎಳೆಯೈಸಿ ಹಿಂಜಿ ವಿವರಿಸಿ ಹೃದಯ ಕರಂಡದ
ಹೊನ್ನೀರ್ ಹೊಯ್ದು ತಾಸುತಾಸುಗಳ್ ಕೊರಳುಲಿ
ಹರಿಸಿ ಚೆಲ್ಲಿ ಸೂಸಾಡಿದರ್. ನುಡಿ ಮುತ್ತಗಳಂ
ಆಬಾಲವೃದ್ಧರಾದಿಯಾಗಿ ಮಿಸುಕಾಡದೆ
ಆಲೈಸಿದರ್. ಮಧುರ ವಾಣಿಯಲಿ. ಸ್ವಾಮೀಜಿಯ
ಸುದೀರ್ಘಾಯತ ಆಶುಭಾಷಣಂ ಹರಿದಿರೆ
ಕಿವಿಗೊಟ್ಟು ಆಲಿಸಿಯೇ ಆಲಿಸಿದರ್ ಸಭಿಕರ್.
ಭಾರತ ಧರಿತ್ರಿಯಂ ಕುರಿತು ಬಲ್ ಗೌರವದ
ಭಾವನೆಯಲಿ ಮನೋಭವ ಧಾರೆಯ ನೆಚ್ಚಿನಿಂ
ಭಕ್ತಿಯಿಂ ರೂಪಗಾನ ಗಂಧಗಳ ಭಾವೋ-
ತ್ಫುಲ್ಲ ಧುನಿಯೊಲ್ ಇಂತೆಂದು ಹಾಡಿ ಪಾಡಿದರ್,

**"ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಯೇ ಭಾರತ ಭೂಮಿ ಭಾಗೇ ।**

ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ
ಭವಂತಿ ಭೂಯಃ ಪುರುಷಾನ್ ಸುರತ್ವಾತ್ ॥"

ಭಾರತ ಧರಿತ್ರಿಗೆ ಬ್ರಹ್ಮಾಂಡದೊಳೆಲ್ಲಿಯು
ಸಾಟಿಯಿಲ್ಲಮೆನೆ ತಪ್ಪಲ್ಲ. ಅತ್ಯುಕ್ತಿಯುಂ ಅಲ್ಲ.
ಇಂತಪ್ಪ ಅಮೋಘತಮ ರಾಷ್ಟ್ರವುಂ ಭಾರತೀಯರ
ಕೈತಪ್ಪಿ ಪರಾಕ್ರಾಂತತೆಯಲಿ ಕಡುದಾರಿದ್ರ್ಯ
ಸ್ಥಿತಿಯಲಿ ರೋಗಗಳ ಬೇಗೆಯಲಿ ಬೇಯುವುದು
ನಮ್ಮಯ ದುರದೃಷ್ಟಮೆಂಬೆ. ಇನ್ ಇದರ ನೆಲೆಬೆಲೆ
ಅರಿತರಿತು ಎಲ್ಲರುಂ ಒಂದೈಸಿ ಮಂದೈಸಿ ಮೇಣ್
ಮುಂದೈಸಿ ಧೈರ್ಯಸ್ಥೈರ್ಯದಲಿ ದೇಶ
ಬಂಧವಿಮೋಚನೆಗಾಗಿ ದುಡಿದಲ್ಲದೆಯೇ ಗತಿ
ಯಿಲ್ಲಕಣಾ! ಭಾರತೀಯರೇ ಏಳಿ, ಎದ್ದೇಳಿ!
ವೀರರಾಗಿ! ಪುರುಷ ಸಿಂಹರಾಗಿ! ಈ ಭರತ
ಖಂಡ ನಮ್ಮದು! ಭಾರತೀಯರಾವು ಭರತ
ವಂಶಜರು! ಭರತ ಭೂಮಿಯ ಸೇವೆಗೆ ಎಲ್ಲರ್
ಸನ್ನದ್ಧರಾಗಿ! ಪ್ರಬುದ್ಧರಾಗಿ ವಿನಮ್ರ ಸೇವಕರು
ನೀವಾಗಿ! "ಸಂಗಚ್ಛಧ್ವಂ! ಸಂಪದಧ್ವಂ ಸಂ
ಮೋಮನಾಂಸಿ....! ನಿಮ್ಮನುಂ ನೀಮೆ ತಿಳಿಯಿರಿ!
ಒಂದಾಗಿ ಯೋಚನೆಗೈಯಿರಿ! ನೀಮೆಂದೂ ಕುರಿ-
ಗಳಲ್ಲಂ. ಪುರುಷಸಿಂಹರ್! **'ದೇಶ ಧರ್ಮಸ್ತು**
ಪೂಜ್ಯತಾಂ!' ಇಂದಿನ ಪರಿಸ್ಥಿತಿಯವಲೋಕನ
ಗೈದು ನೀವ್ ಎಚ್ಚೆತ್ತುಕೊಳ್ಳಿ! ಎಚ್ಚೆತ್ತುಕೊಳ್ಳಿ!

"ಅತ್ರಾಪಿ ಭಾರತಂ ಶ್ರೇಷ್ಠಂ
ಜಂಬೂದ್ವೀಪೇ ಮಹಾ ಮುನೇ ।

ಯತೋಹಿ ಕರ್ಮಯೋರೇಷಾ
ಹ್ಯತೋನ್ಯಾ ಭೋಗ ಭೂಮಯಂ ॥"

ವಾರವೊಂದುರುಳಿದತ್ತು ವಿಶ್ವದೇಹಮಂ
ಪರಿಮಳಿಪ ಪರಿಪುಣ್ಯ ಪವನಂ ಪಸರಿಸುತ್ತೆ
ಕೀರ್ತಿಯಂ ರಾಚಿರಾಚಿ ಸತ್ಕೀರ್ತಿಸೆ ಭುವನ
ಹೃದಯಾಂತರಾತ್ಮದ ಸುಧೀರ ಲಕ್ಷ್ಮಿಯ ವೀರ
ಗಾಥೆ ಹರಡಿತು ಸಚ್ಚಿನಮೃತಮಯ ಶೋಭಾ
ಶೈಲಿಯಿಂದೆ! ನಮೋ ಸ್ವಾಮಿ ವಿವೇಕಾನಂದ!
ನಮೋನಮೋ ಭಾರತ ಜನನಿಯ ಧೀರ ಪುತ್ರ!!
ಬ್ರಹ್ಮ ಸಾಕ್ಷಾತ್ಕಾರದದ್ವೈತದ ವರಸಿದ್ಧಿ
ಸಂಕೇತಮೆನೆ ನಿನ್ನ ಗೊಮ್ಮಟನ ರುಂದ್ರಮಯ
ಘೋಷಂ ಜಗದಿಂ ಎಂದುಮಂದಿಗುಮಳಿಯದಿರಲಿ.
ನಮೋ ನಮೋ! ಸಕಲೇಂದ್ರಿಯ ಬ್ರಹ್ಮಚಾರಿಯೇ,
ನಮೋ ನಮೋ! ನಮೋ ಕಲಿಗುರುವೆ ಪುನರ್ನಮೋ
ಮುಹುರ್ನಮೋ! ಓಂನಮೋ! ಹ್ರೀಂನಮೋ ಶ್ರೀಂ ನಮೋ!

ಹರಿಃ ಓಂ ತತ್ ಸತ್

❃ ❃

ಅಷ್ಟಸ್ತ್ರಿಂಶತೋಲ್ಲಾಸಂ

ಉತ್ಫುಲ್ಲ ಭಾರತ

ಯಸ್ತು ಸರ್ವಾಣಿ ಭೂತಾನಿ
ಆತ್ಮನ್ಯೇ ವಾನು ಪಶ್ಯತಿ ।
ಚಾತ್ಮಾನಂ ಸರ್ವಭೂತೇಷು
ನ ತತೋ ವಿಜುಗುಪ್ಸತೇ ॥

ಮಧುರಂ ರಸವದ್ವಾಚಿ
ವಸ್ತು ನ್ಯಪಿ ರಸಸ್ಥಿತಿಃ ।
ಯೇನ ಮಾದ್ಯಂತಿ ಧೀಮಂತೋ
ಮಧುನೇನ ಮಧುವ್ರತಾಃ ॥

ಇಂದ್ರ ದಿಗ್ನಗರಿಯಿಂ ಒಯ್ಯನೊಯ್ಯನೆ ಬೀಸಿ
ಮೋದದಿಂದ್ಯೆದ ಮಂದ ಮಾರುತನ ಬಿರುಸಿರದ
ಬಿಜ್ಜಣಿಗೆಯ ಸುಖಸೇವೆ ಹಸನಾಯ್ತು, ಸುಂದರ
ಸೊಬಗಾಯ್ತು. ತ್ರಿಲೋಕ ಕಲ್ಯಾಣಕರಮಾದ
ಧರ್ಮಪರ್ವವೆ ರಕ್ಷೆಯೆನೆ ಅಶೋಕಮೋಕ್ಷದ
ಪುಣ್ಯ ಕೃತಿ ಶೃತಿಯಲಿ ತೋಷದ ಸಿರಿಹೊನಲ್
ಹರಿದುದ್ಯೆ ರಾಗಾರುಣತಾನರಸವೆರಸುತೆ
ಜೋಗುಳಿಸುವವೊಲ್! ಮನಮನಂದಳದಳವಿರಿದು
ದಿನದಿನ ಅರಳುತಿರಲ್ ಉನ್ಮುಖೀ ಜನಕೋಟಿ
ಬೆಕ್ಕಸ ಬೆರಗುವಟ್ಟು ಘನವೆತ್ತು ಉಬ್ಬೆಗಂ
ಮೈದೋರೆ ಉತ್ಫುಲ್ಲ ಭಾರತ ಮುಂದಾಯ್ತು
ಜಗತ್ಪಥಮಂ ಹಿಡಿದು ಮುಂಬರಿವ ನಿಟ್ಟಿನಲಿ!
ಚಿಂತನಂಮಂಥನಂ ನೆರೆನಡೆದು ತಮ್ಮತನ
ಮಿಂಚಿದುದು ಮೈರೋಮಾಂಚನಗೊಳ್ಳ ತೆರದಲಿ.

ಜಡತನಂ ಒಂದೊಂದು ಹೆಜ್ಜೆ ಹಿಂಜರಿದು ಮೈ
ಕೊಡವಿ ನಿಮುರ್ದುದು ಜನಗತಿಯ ಕೋಡು. ಎಂದಿನಾ
ಜಪಭರತತನಂ ಮುದುಡಿ ಮುರುಂಟತೊಡಗಿದತ್ತು
ಜಗತ್ ಪ್ರಜ್ಞಾನಂ ಮಿಳ್‌ಮಿಳ್ಳನೆ ನೋಳ್ಪಂತೆ!
ಆದೊಡೇಂ ಅಪಾರತರ ಪರಿಶ್ರಮಯೋಗದಿಂ
ಬಳಲ್ದು ತನು ಸೋಲುತಿರೆ ದಿವ್ಯಾತ್ಮ ಸ್ಫೂರ್ತಿರಸ
ಹಿಂಗುವುದೊರ್ಮೆ ಉಕ್ಕುವುದೊರ್ಮೆ ಶ್ರೀಗುರುವಿನ.
ಭಾರತೀಯರ ಜೀವನ ಧರ್ಮದ ಸ್ಫೂರ್ತಿಯಂ
ಸಂಸ್ಫೂರ್ತಿಸುವ ಜಟಿಲ ಕಾರ್ಯಭಾರದಲಿ ತಾಂ
ಮುಳುಗುವರ್. ಗ್ರಾಂಥಿಕ ಬರವಣಿಗೆಯಲಿ ಕಳೆವರ್,
ಎನಿತೊವೊಳ್ತು. ಪ್ರಾಣ ಕಣದಲಿ ತುಂಬಿರ್ದುದನೆ
ಧರ್ಮದೇಶನದ ಕೇತಕಿಯೆಲರ ಕಂಪು, ಜಡ
ನಿದ್ರಿತರ ಮುಟ್ಟಿತಟ್ಟಿ ಎಬ್ಬಿಸುವ ಹಮ್ಮಿನ
ಬಿಮ್ಮು ತಗ್ಗದು. ಶಾಂತಿ ವಿಶ್ರಾಂತಿಗಳ ನೆನಹು
ಸುಳಿಯದು ಬಳಿಯಲಿ. ಭವ್ಯ ಭಾರತದ ನಿಶ್ಚಲ
ಕನಸು ನಲಿದಿರೆ ಮನೋಭಿತ್ತಿಯಲಿ ದುಡಿಮೆಯದು
ಸರಾಗಂ. ತುಂಬಿತ್ತೊಯ್ಯನೆ ಖೇತ್ರಿಧಾತ್ರಿಯಂ
ಹೇಮಂತ ಪ್ರಭುವಿನ ಶ್ರೀಮಂತ ಶಾಂತಿರಸ
ದಿವಿನಾದ ಆತ್ಮಸ್ಫೂರ್ತಿಯಂ ಚೋದಿಸುವಂತೆ.
ಸಂದರ್ಶಕರ್ ಬಂದಪರ್, ಸಾಲ್ ಸಾಲ್ಗಟ್ಟಿ.
ವೇದಾಂತ ಪ್ರವಚನಗಳ್ ಗೀತೋಪದೇಶದ
ಹಿತವಚನಗಳ್ ಹರಿಸಿ ಹೃನ್ಮನಂ ತಣಿಸುವರ್
ತಾಂ ದಣಿಯುವನ್ನ. ಅಲ್ಲಿಂದ ಮುಂ ಪ್ರಯಾಣ
ಕೈಕೊಳ್ವ ಮುನ್ನ "ಶ್ರೀರಾಮಕೃಷ್ಣ ಮಿಷನ್"
ಎಂಬೊಂದು ಮಠವಂ ತೆರೆದರ್; ಕಿರುರೂವಿನಿಂ

ಮೈದಾಳ್ದದು ಗುರುಕುಲವಾಯ್ತು ಕಲಿಕೆಯ ಬಾಲ
ವಟುಗಳಿಗೆ. ಸ್ವಾಮೀಜಿಯವರೊಡನೆ ಖೇತ್ರೀಯ
ಮಹಾರಾಜಂ ಪೊರಡಲ್ ರಾಜ್ಯಲಕ್ಷ್ಮಿಯುಂ ಬಲು
ವೈಭವದೊಳ್ ಬೀಳ್ಕೊಟ್ಟಳು ಗೌರವಾದರದಿಂ
ಗುರು ಮಹಾರಾಜರಂ, ಹೊನ್ನಹೊತ್ತಾರೆಯಲಿ.
ಸನ್ಮಿತ್ರ ಖೇತ್ರೀಯ ಮಹಾರಾಜಂ ತನ್ನ
ದೇವಗುರುವಿನ ಪ್ರಕೃತಿಯಾತ್ರೆಯೊಳ್ ಮುಂದೈದು
ಪಡಿಯಾಳ್ ತಾನಾಗಿ ಪಾಲ್ಗೊಂಡನ್. ಮುಂದಿನ
ಪಯಣಂ ಸರಾಗದಿಂ ಸಾಗಿದುದು ಗುರುವರನ.
ಜಯಪುರದಲಿ ಕಳೆದುವು ಒಂದೆರಳ್ಡು ದಿನಗಳ್.
ಅನಂತರಮಾ ಪಯಣಂ ಕೃಷ್ಣಗಡ ಆಜ್ಮೀರ್
ಜೋದಪುರಗಳ ಮುಖೇನ ಮುಂಬರಿದುದು ಆವುದೆ
ಬಗೆಯೊಳಿಡರುತೊಡರುಗಳ ಗೋಜಿನಿತಿಲ್ಲದೆಯೆ.
ಅಲ್ಲಲ್ಲಿ ಕಣ್ಗೆತ್ತ ಹಳ್ಳಿಗಳ್ ಊರುಗಳ್
ನಗರಗಳ್ ಎಲ್ಲೆಡೆಯಲಿ ಬೊಕ್ಕು ಜನರಾಶಿಯ
ಭೇಟಿಗೈದು ಕಿರು ಉಪದೇಶಮಂ ನೀಡುತ್ತೆ,
ಜನಮನವ ಕೆರಳಿಸಿ ಅರಳಿಸಿ ಸಾಮಾಜಿಕರ
ಸುಧಾರಣೆಗೆ ಒತ್ತುಗುಡುತ್ತೆ ಮತಿಮೌಢ್ಯಮಂ
ಕಳೆದು ನೆಮ್ಮದಿಯ ಬದುಕಂ ಬಾಳಿಮೆಂದೆಂದು
ಸಾರಿ ಹೇಳಿ ಪರಿಬೋಧಿಸಿ ಮೌಕ್ತಿಕ ಮಣಿಗಳ್
ಚೆಲ್ಲಿಸೂಸಿ ನೊಂದವರಿಗೆ ಸ್ವಾಂತನದ ನುಡಿಗಳ್
ನುಡಿಸಿ ಬೆನ್ತಟ್ಟಿ ಎಲ್ಲರ ಮನದಲಿ ಉಳಿದರ್
ದೇವಗುರು ತಾನಾಗಿ.
ತಮ್ಮ ಬಳಿ ಮಿಸ್ ಮ್ಯಾಕ್ಸ್
ಮುಲ್ಲರ್ ಕೊಡುಗೆಯಾಗಿ ನೀಡಿರ್ದ ಹಣದ ಥೈಲಿ

ಇರ್ದುದು ಇಡುಗಂಟಾಗಿ. ಅದರಿಂ ನದಿತೀರಕೆ
ಎದುರಾಗಿ ನಿವೇಶನಮಂ ಕೊಂಡು ತಮಗಾಗಿ
ತಮ್ಮ ಶಿಷ್ಯರಿಗಾಗಿ ಅನುಕೂಲಿತ ಮಠಮಂ
ಕಟ್ಟಿಸುವ ಇಚ್ಛೆಯುಂ ಮೊಳೆತುದು ಮನದಿ. ಒಡನೆ
ತಮ್ಮಯ ಗುರುಭಾಯಿಗಳಿಂಗೊರೆದು ಅಲ್ಲೊಂದು
ಉತ್ತಮ ನೆಲೆಯಂ ತೋರ್ದು "ನದೀ ತಟನಿಗೆದುರು
ಮುಖಮಿರೆ ಸೊಗಮಕ್ಕು ಅದೆ ನೆಲೆಯೊಳ್ ಭೂಮಿಯಂ
ಕೊಂಡು ಮಠಮಂ ಕಟ್ಟವೇಳ್ಕುಂ." ಎಂದ ಗುರುವಿನ
ಇಚ್ಚೆಯುಂ ಪ್ರಕಟಗೊಳಲ್ ಭ್ರಾತೃಭಾಯಿಗಳ್
ಕಾರ್ಯ ಪ್ರಮತ್ತರಾದರ್. ಇಚ್ಚಿತ ಎಡೆಯೊಳ್
ಭೂಮಿಯಂ ವಿಕ್ರಯಿಸಿ ಸುರಸುಂದರ ರೂವಿನ
ಮಠವಂ ಕಟ್ಟಿ ಪೂರೈಸಿದರ್, ವರ್ಷಾಂತ್ಯದಲಿ.
ಭವನದಾ ರೂಪುರೇಷೆಯುಂ ಸುಂದರ. ಕಟ್ಟಿ
ಪೂರೈಸಿದ ಬಗೆಯುಂ ಬಲು ಸುಂದರ. ಬೆಳ್ಮಿಯಿನ
ಅಪ್ಸರೆಯೊ ಎನಲ್ ಸರ್ವಾಂಗ ಸುಂದರ ಮಂದಿರ
ಪೊಚ್ಚ ಪೊಸ ಶೈಲಿಯಲಿ ಜೃಂಭಿಸಿದುದು "ಬೇಲೂರು
ಮಠ" ಎಂಬ ಅಧಿಕೃತ ನಾಮಧೇಯಮಂ ತಾಂ
ಪಡೆದು. ಆ ಪರಿಸರದ ಪ್ರಕೃತಿಯ ಉಡಿಯಲ್ಲಿ
ಜುಳುಜುಳಿಸಿ ಹರಿವ ಭಾಗೀರಥಿಯ ಪರಮೋಚ್ಛ
ಪ್ರವಾಹವದು ಸ್ವರ್ಗಧಾಮದ ಮಹಾಭಾಗ್ಯ
ಶ್ರೀಯಂ ಒದವಿಸಿದುದು ಗುರುಜನರ ಗುರುಕುಲಕೆ.
ಭಾಗೀರಥಿಯ ತಣ್ಪಿನೆರೆಯ ತನಿರಸಮುಂಡು
ದಟ್ಟೈಸಿ ಮಂದೈಸಿ ಪಚ್ಚನೆ ಪಸುರೈಸಿ
ಮೈದುಂಬಿದ ವನರಾಜಿಯ ಚಿತ್ರಮೆಸೆಯುವುದು
ಚಿತ್ರಕಾರನ ಚಿತ್ರಕೆ ಮೈಯಾಂತು ನಿಂದೊಲ್.

ವರ್ಣವರ್ಣಮಯ ತಳಿರ್‌ಗಳ್ ಗಾಳಿಯಲೆಪದ
ಆಟೋಟದಲಿ ಮರ್ಮರನೆ ಮರ್ಮರಿಪ ಶೃತಿ
ಲೀಲೆ. ಮಠದಾವರಣದಲಿ ನಿಂದು ಪ್ರಕೃತಿಯ
ವೈಭವೋಪೇತ ಸಂದೃಶ್ಯಾವಳಿಯ ನೋಡುತಿರೆ
ತನುಮನಗಳಂ ಪುಳಕಗೊಳಿಪುದು ಸಾನಂದ
ದೈಶ್ವರ್ಯ ತುಂಬುವಾ ತೆರದೊಳ್. ಗುರುದೇವಂ
ಪ್ರಾಂಗಣದೊಳ್ ಪದಚಾರಣಗೈಯುತೆ ಪರಿಸರ
ವ್ಯಾಪ್ತಿಯಲಿ ಹಬ್ಬಿಹರಡಿದ ರುದ್ರರಮಣೀಯ
ನಿಸರ್ಗದ ಆರಾಧನೆಯಲಿ ಮೈಮರೆಯುವರ್
ತಾವರಿಯದೊಲ್. ಪಗಲುರುಳುರುಳಿ ನಿಶಿಯುರಾಜ್ಯ
ಸೂತ್ರವಿಡಿಯೆ ಮೈಮನವೆರ್ಚೆ ತೋಷದ ಮೂರ್ತಿ
ತಾನಾದಪರ್, ಪೂರ್ಣಿಮಾ ಜ್ಯೋತ್ಸ್ನಾ ಮಧುರಮಯ
ಸುಧೌತಾಂಬರವ ಧರಿಸಿ ಧವಳ ಕೀರ್ತಿಮಾಲಾ
ಭರಿತ ಭೂರಮೆಯ ಸಿರಿ ಸೊಬಗಿನ ಪರಿಯಲಿ ಸತ್
ಕೀರ್ತಿಯ ಶಿಖರವೇರ್ದ ಸ್ವಾಮೀಜಿಯ ಜೀವನ
ಧಾರೆ ಪ್ರವಹಿಸಿದತ್ತು ತದೇಕ ವೈಖರಿಯಲಿ.
ಎಲ್ಲೆಲ್ಲಿ ಪಜ್ಜೆಯಂ ಮುಂದಿಟ್ಟೊಡಲ್ಲಲ್ಲಿಯು
ದಿಗ್ವಿಜಯ ಲಕ್ಷ್ಮಿಯೇ ಮುಂಬರಿದು ಸ್ವಾಗತಿಸಿ
ಕೀರ್ತಿಮಾಲೆಗಳ ರಾಶಿ ರಾಶಿಯಂ ಪ್ರೇಮದಿಂ
ಅನುನಯದ ಮಾಧುರ್ಯದಿಂ ತೊಡಿಸುವಳ್ ಪರಮ
ಶುಭವ ಹಾರೈಸಿ.
ಶ್ರೀ ಶಾರದಾನಂದರುಂ ದೂರ
ಅಮೆರಿಕಾ ದೇಶದೊಳ್ ಸನಾತನ ಸದ್ಧರ್ಮದ
ಉಪನ್ಯಾಸ ಯಾತ್ರೆಯಂ ತೀರ್ಚಿದರ್ ತಿಂಗಳಾರ್
ಏಳೆಂಟರಲಿ. ಭಾರತಾಧಿದೇವಿಯ ಆತ್ಮ

ಸ್ಫೂರ್ತಿಧಾರೆಯಂ ಹರಿಸಿ ನಲವಿಂ ತೋಷದಿಂ
ಬೀಳ್ಕೊಂಡರಾ ಜನಸಮುದಯಮಂ, ಸುಸುಂದರ
ವನಸ್ಥಲಿಗಳಂ; ಜಲಸ್ಥಲಿಗಳಂ; ಪುಲಿನಮಯ
ಸ್ಥಲಿಗಳಂ; ಮಹಾ ಯಂತ್ರಸ್ಥಲಿಗಳಂ. ಬಳಿಕ್ಕಂ
ಭಾರತಕೆ ಯಾನಮಂ ಬೆಳೆಸಿದರ್. ಪಯಣಮಂ
ಮುಗಿಸಿ ಭಾರತ ಭೂಮಿಯಂ ಮಟ್ಟಿದೊಡನವರ್
ಧಾವಿಸುತ್ತೈದರ್ ಬೇಲೂರ್ ಮಂದಿರಕೆ. ಆ
ಮುಹೂರ್ತಂ ಮಂಗಳಕರಮಾ ಎನಲ್ ಎಲ್ಲರುಂ
ಸಂತುಷ್ಟರಾದರ್. ಗುರು ಮಠದ ಕಳೆವೆರ್ಚುವ
ತೆರದಿಂ. ಗುರುದೇವನ ಮುಂತೆ ಅಂದಿಂದಿನಾ
ವಿಚಾರಾವಳಿಯು ಸುರಿಯೆ ಹರಿದುದು ಚಿತ್ರವತ್
ರೂವಿನಲಿ. ಸುಖದುಃಖಮುರುಳಿ ಮತ್ತೆರಡು ದಿನ
ಕಳೆದು ಸಿಂಹಳೀಯ ಹಲಕೆಲವು ರಾಜ್ಯಗಳಲಿ
ವೇದಾಂತ ಪ್ರಸಾರ ಕಾರ್ಯಮಂ ಕೈಕೊಂಡು
ಉದ್ವಗಲದೊಳ್ ಪ್ರವಾಸಗೈದು ಜ್ಞಾನಸುಧೆಯಂ
ಹರಡಿ ತೋಷದಿಂ ಪಿಂಮರಳಿಬಂದರ್ ಸ್ವಾಮಿ
ಶಿವಾನಂದರ್. ಶಿಷ್ಯಗಣಂ ತನುದಣಿಯೆ ಮನ
ದಣಿಯೆ ಸಹಕಾರಮೀವುದರಿಂ ಹೃನ್ಮಗಳ ನೆರೆ
ಏರ್ದವೊಲ್ ಸಂತಸದ ಊಟೆಯಾದುವು ಸ್ವಾಮಿ
ವಿವೇಕಾನಂದರ. ತರುವಾಯಿ, ದಿನಜಪುರದಿ
ಹಬ್ಬಿ, ಹರಡಿರ್ದ ಕ್ಷಾಮ ನಿರ್ಮೂಲನಾ ಕ್ಷೇತ್ರ
ವ್ಯಾಪ್ತಿಯಲಿ ದುಡಿದು ಪರಮ ಸೇವೆಯನು ಸಲ್ಲಿಸಿ
ಪಿಂದಿರುಗಿ ಬಂದರಾ ತ್ರಿಗುಣಾತೀತ ಸ್ವಾ-
ಮೀಜಿ. ಬಲು ದಿವಸಮಾನಗಳಾದ ಬಳಿಕಲಾ
ಗುರುಭಾಯಿಗಳ ಪರಸ್ಪರ ಭೇಟಿ, ದರ್ಶನದ

ಲಾಭ ಆನಂದ ಭಾಗ್ಯಮಂ ತಂದಿತು ಎಲ್ಲ
ಗುರುಭಾಯಿಗಳಿಗೆ. ಎಲ್ಲರುಂ ತಂತಮ್ಮಗಳ
ಅನುಭವಾಮೃತರಸಮಂ ಹರಿಸಿ ಹಂಚುತಿರೆ
ಸಂತೃಪ್ತಿಯ ಸರೋವರಗಳಲಿ ಮುಳುಗೇಳುತೆ
ಸುಖದುಃಖಗಳ ಬಿಸಿಯುಸಿರ್ ಹರಿಸಿದರ್ ಕೊರಳ್
ತುಂಬಿ. ಪ್ರಪ್ರಥಮ ಹೆಜ್ಜೆಗಳ್ ಗುರಿ ಮುಟ್ಟುವೊಲ್
ಗುರಿಯತ್ತ ನಡೆಯುತ್ತೆ, ಹಲವಾರು ಯೋಜನೆಯ
ಹೂಡುತ್ತೆ, ಮಿಂಚಿನೊಲ್ ಹೊಂಚಿರ್ದ ಕಾರ್ಯಮಂ
ಕರಗೂಡಿಸುತ್ತೆ, ಬರಿಗೈಲಿ ಗೆಲ್ಲುತ್ತೆ, ಅಡ್ಡೈಸಿದ
ಕಾಳ್ಕಿಚ್ಚಿನ ಕಿಡಿಯಂ ನುಂಗಿ ನೊಣೆಯುತ್ತೆ ಮುಂ
ಪಥವಂ ಹಿಡಿದುದು ಗುರುಕುಲದ ಕತ್ತುರಿಯ ಕಂಪು,
ಭಾರತಜನನಿಯ ಕಂಗಳ್ ಸುಖಾಶ್ರುವಿನ ಹನಿ
ತೀರ್ಥಮಂ ಹರಿಸುವಂತೆ. ಅನುದಿನ ಕರಗಿದತ್ತು
ಕಾಲಮಾನಂ. ಮೂಡಿದುವು ಸತತ ಹೊಚ್ಚಹೊಸ
ದಿನಂಗಳ್. ಕಾಲ ಪುರುಷನಂ ಹಿನ್ನೂಂಕಿ ಹಲ
ಯೋಜನೆಗಳ್ ನೆರೆ ಮೆರೆದುವು ಕಳೆಕಟ್ಟಿದನನ್ಯ
ರೀತಿಯಲಿ. ಮುಂದೆ ಒಂದೆರಡು ತಿಂಗಳ್ ಉರುಳೆ
ಶ್ರೀರಾಮಕೃಷ್ಣ ಪರಮಹಂಸರ ಜಯಂತುತ್ಸವ
ಸಾರ್ದು ಸಜ್ಜುಗೊಳ್ಳತೊಡಗಿತು ದಕ್ಷಿಣೇಶ್ವರ
ಕಾಳಿ ದೇಗುಲಂ. ತಳಿರ್ ತೋರಣಗಳೆಸೆದುವು
ಮಂಗಳಮಯ ರೂಪಿನಲಿ. ಬಾಲವಟುಗಳಿಂದೆಯುಂ.
ಹಿರಿಯ ಶಿಷ್ಯಗಣದಿಂದೆಯಿಂ, ಭಕ್ತಜನರಿಂ-
ದೆಯುಂ, ಪಂಡಿತರಿಂದೆಯುಂ, ವಿದ್ವನ್ಮಣಿಗಳಿಂ-
ದೆಯುಂ ಸಕಲ ಶಾಸ್ತ್ರ ಕೋವಿದರಿಂದೆಯುಂ
ಗೃಹೀ ಭಕ್ತರಿಂದೆಯುಂ ನೆರೆ ತುಂಬಿ ತುಳುಕಿದುದು

ದಿವ್ಯ ದೇವಾಲಯಂ. ಪುಷ್ಪಮಾಲೆಗಳ ಸಿರಿ
ತೋರಣಗಳ್ ಮಘಮಘಿಸುತಿರ್ದುವು ವರ್ಣಮಯ
ರಾಗದಲಿ. ಧೂಪ ದೀಪಗಳ್ ಬೆಳಗಿರೆ ಘಂಟೆ
ಜಾಗಟೆಗಳ್ ಮೊಳಗಿದುವು ಢಣಢಣಿಸುತೆ.
ಅಂದು
ಮುಂಬೆಳಗಿನ ಪೂಜೆಯ ಸಮಯೋಚಿತ ಸಮಯಂ
ಕೂಡಿಬರೆ ಶ್ರೀಗುರು ವಿವೇಕಾನಂದರುಂ ಗಮಿಸಿದರ್
ತಮ್ಮ ಮಿತ್ರಮಂಡಲಿಯೊಡಗೂಡಿ. ವಿವಿಧತರ
ಧರ್ಮೀಯರ್ ಕೂಡಿ ಕಳೆಕಟ್ಟಿತು ಮಹೋತ್ಸವ
ವಿರಾಜಮಾನವಾಗಿ. ಹಲವು ಬಾಲ ವಟುಗಳ್
ಮುಂದ್ಯೆದು ಗುರುವರನ ಅಡಿಗೆರಗಿ ಶಿರವಬಾಗಿ
ಪರಮಾಸ್ಥೆಯಿಂ ಬೇಡಿದರ್ ದೀಕ್ಷೆಯಂ, ವಿನಯ
ವಂತಿಕೆಯ ನಲ್ನುಡಿ ಹರಿಸಿ. ಆಗಳೆಲ್ಲರಂ
ಸಾನಂದದಿಂ ಸ್ವಾಗತಿಸಿದರ್ ಗುರುವರ್ಯಂ.
ಬಹುಜನ ಅಣುಗರ್ ಎಳೆಯ ಮೊಗಗಳಲ್ಲಿ ಮನೋ
ಹರ ಹೂನಗೆಯಾ ಚೆಲುವಂ ಹರವಿ ತೋಷದಿಂ
ಒಳಗೈದರ್. ಸಾಲಾಗಿ ದರ್ಭಾಸನವಿತ್ತು
ಆನಂದ ಭಾವದಿಂ ಮೆಲ್ನುಲಿಯ ಬೆಳ್ನುಡಿಗಳ
ಮಣಿಮುತ್ತುಗಳ್ ಸೂಸಿ ಹೃನ್ಮನಂ ತಣಿಸುವೊಲ್
ಸನ್ಯಾಸಿ ಜೀವನದ ವ್ರತಮಂ ಕುರಿತು ನಲ್
ಬೋಧಿಸಿ ಉಪದೇಶಿಸಿದರ್ ಶ್ರೀಗುರುದೇವಂ.
ಬಳಿಕಲವರಿಂಗೆ ಗಾಯತ್ರಿ ಮಂತ್ರವಂ ಮನ
ಮುಟ್ಟುವೊಲ್ ಅರುಹಿ ತಿಳಿಪಿ ಆಶೀರ್ವದಿಸಿದರ್.
ಆಗಳುಂ ಅಲ್ಲಿರ್ದ ಅನೇಕಾನೇಕ ಲಘು
ಮನದ ಪ್ರಾಚೀನ ಸಂಪ್ರದಾಯಿಗಳ ಮನದಿ

ಉಕ್ಕುತಿರ್ದ ಮೂಕಮೌನತಾ ಅಚ್ಚರಿಯೊಳಚ್ಚ
ರಿಯ ತಾನವಿತಾನದ ಕಹಿಯಂ ಮನಗೊಳ್ಳುತೆ
ಸಾವಧಾನದಿಂ ತಮ್ಮ ಸಿರಿಕಂಠದುಲಿಯಂ
ಸೂಕ್ತ ರೀತಿಯಲಿ ಪರಿಸಿದರಿಂತು ಹಸನ್ಮುಖಿಯಾಗಿ,
“ಎಲೈ ಭ್ರಾತೃಗಳೆ, “**ಜ್ಯೋತಿಷ್ಮತಃ**
ಪದೋರಕ್ಷ ಧಿಯಾ ಕೃತಾನ್” ಎಂದೆಂಬುದು
ಪರಮವೇದವಾಕ್ಯಂ. ಎಲ್ಲಮರಿತೇನಿಲ್ಲದ
ಪರಿಯಲಿ ವಿವಶರಾದಪುದು ತರವೇಂ? ನಿಮ್ಮೊಳುಂ
ನೀಮೆ ಯೋಚಿಸಿ ನೋಡಿ. ಮನುಕುಲಜರೆಲ್ಲರುಂ
ಈಶ್ವರನ ಮಕ್ಕಳೇ, ಎಲ್ಲರೊಳ್ ನಾರಾಯಣ-
ನಿರ್ಪುದು ದಿಟಂ. ಅದ್ವಿಜರನೆಲ್ಲ ಮೇಲೆತ್ತಿ
ದ್ವಿಜರಂಗೈವುದೆ ಆಚಾರ್ಯವರ್ಗದ ಧರ್ಮ!
ಅದಲ್ಲದೆಯೆ ಆಚಾರ್ಯ ವರ್ಗದವರೆ ತುಳಿದು
ಹೊಸಕ ತೊಡಗಿದರೇಂ ಗತಿ? ಎಲ್ಲರನು ತಿದ್ದುವ,
ತಿದ್ದಿ ತಿಳಿಪಿ ಬ್ರಾಹ್ಮಣತ್ವಕೇರಿಪುವ ಕಾರ್ಯಂ
ಅಗಾಧವಾದ ಪರಮೋಚ್ಚ ಮಾನವೀಯ ಗುಣಗಡ?
ಮುಂದೆ ಅತ್ಯಲ್ಪಕಾಲದೊಳ್ ಇದೆ ಶೂದ್ರ ಶಕ್ತಿ
ಯುಗವನಾಳ್ವುದು ದಿಟಂ! ತಿಳಿದಿರಿ, ಇದರೊಳೇನ್
ಉತ್ಪ್ರೇಕ್ಷೆಯುಮಿಲ್ಲಂ, ಶೂದ್ರಶಕ್ತಿಗಿಂ ಈ
ಬ್ರಾಹ್ಮ ಶಕ್ತಿಯೇ ಮಿಗಿಲಪ್ಪಿರಲ್ ಅದರೆತ್ತ-
ರಕೆ ಎಲ್ಲ ಮನುಕುಲಂ ಮೇಲೆತ್ತುವುದೆ ಲೇಸು!!
ರಾಷ್ಟ್ರದೊಳ್ ಅತ್ಯಂತ ಉತ್ತಮೋತ್ತಮ ಶಕ್ತಿ
ಬೆಳೆದು ಬಲಿತು ಆಳ್ವಿಕೆಯ ಸೂತ್ರವಿಡಿದು ನಿಚ್ಚ
ಕುರುಡುಗಣ್ಣಿನ ಕುರುಡು ಬಟ್ಟೆಯಂ ಕಡಿದೊಗೆದು
ಸತ್ಪಥಕೆ ಹಚ್ಚುವುದೆ ಬ್ರಾಹ್ಮಶಕ್ತಿಯ ಸಧ್ಯ

ಗುರಿಯಕ್ಕುಂ!! ರಾಷ್ಟ್ರೀಯ ಮುನ್ನಡೆಯ ಹೆಗ್ಗುರಿಯ
ಸಾಧನೆಗಾಗಿ ಜನತೆಬೆಳೆದು ಬಲಿತು ಆಳ್ವಿಕೆಯ
ಉತ್ತಮೋತ್ತಮ ಸೂತ್ರಮಂ ಹಿಡಿಯವೇಳ್ಕುಂ ಗಡ?
ಇದನರಿದ ಪ್ರಾಚೀನ ಆಚಾರ್ಯರ್, ಪಂಡಿತ
ಕುಲಜರ್ ಮಹಾ ಪುರುಷರ್ ರಾಷ್ಟ್ರದ ಪರಿಸ್ಥಿತಿ
ಮೇಣ್ ಪ್ರಜೆಗಳ ಸ್ಥಿತಿಗತಿಯರಿತು ಮನದ ಮಬ್ಬು
ಹರಿಸೆ, ಜಡಿತುಂಬಿದ ಬರಿ ಜೊಳ್ಳಂ ತೂರಿದರ್.
ಸಮಾಜದ ಹಿತಕಾಗಿ ರಾಷ್ಟ್ರದ ಒಳಿತಿಗಾಗಿ
ಅಬ್ರಾಹ್ಮಣ ಶಿಷ್ಯರಂ ಬರಿಸಿ ಕಲಿಸಿ ಬಲಿಸಿದ
ಬಳಿಕ ದ್ವಿಜತ್ವಮಂ ದಯಪಾಲಿಸಿದ ವಿಷಯ
ತಿಳಿಯದಿರ್ಪಿರಾ? ಇಂದಿನೀ ನಾಗರಿಕ ದಿನ
ಮಾನಗಳಲಿ ಸಂಕುಚಿತ ಭಾವನೆ ಇರಲೇಕೆ?

"ನ ಚರ್ಮಣೋ ನ ರಕ್ತಸ್ಯ
ನ ಮಾಂಸಸ್ಯ ನ ಚಾಸ್ತಿನಃ ।
ನ ಜಾತಿರಾತ್ಮನೋ ಜಾತಿ
ವ್ಯವಹಾರ ಪ್ರಕಲ್ಪಿತಾ ॥"

ಡಿಸೆಂಬರ್ ಹಿಮವತ್ ಪುರುಷಂ ತೇರಿನಗಾಲಿ
ಉರುಳುರುಳಿಸುತೆ ಪಜ್ಜೆಯಂ ಮಂಜಿನ ಕುಂಡದ
ಕೋಳ್ಕೆಸರೊಳೂರಿ ನಿಂದು ಪ್ರಾಣಿಕುಲಕೆ ಮೇಣ್
ಗಿಡು ಮರಗಳ ಸಂಕುಲಕೆ ತನಿ ಮುದ್ರೆಯನೊತ್ತಿ
ಹಿಂಸ್ರಕನಿರುತಿರೆ ಒತ್ತಾಸೆಯ ಬೆಳ್ಗೊಡೆ ಪಿಡಿದು
ಗಮಿಸಿದಳ್ ಜನವರಿಯ ಮಹಾರಾಣಿ ನವೀನ
ವೈಯ್ಯಾರದ ಶೋಭೆಯಲಿ. ಪೊಸ ಮಿಡಿಮೊಗ್ಗುಗಳ್
ಮೂಡಿಸಿ ಚಿಲಿಪಿಲಿ ಹಕ್ಕಿಗಳ ಕೊರಳುಲಿ ಹರಿಸಿ
ಅನುರಾಗದ ಸೋನೆಮಳೆ ಬರಿಸಿದಳ್ ಬೃಹದ್

ಭುವನ ಮಂಡಲದ ಮೇಲೆ. ಜನವರಿ ತಿಂಗಳಿನ
ಉತ್ತರೋತ್ತರ ದಿವಾಮಾನ ಜೃಂಬಿಸುತಿರಲ್
ಹೂವಿಸಿಲ ಸುಂದರ ಹರವಿನಲಿ ಮೈದಾಳಿದಾ
ಸಂಜೆಗತ್ತಲ್ಗೆ ಇನಿ ದನಿಯಲಿ ಪಕ್ಷಿಸಂಕುಲ
ಹಾಡಿದುದು ಪ್ರಭು ವಸಂತನ ಸುಖಾಗಮನವಂ
ಹಾರೈಸಿ ಸುಮನೋಹರ ಸಂಧ್ಯಾ ಸತ್ ಶಾಂತಿಯ
ಪ್ರಶಾಂತ ತನುವಿಗೆ ಚರಮ ಗೀತಾಂಜಲಿ ಹಾಡಿ.
ಇಂಗ್ಲೆಂಡ್ ದೇಶ ಸಂಜಾತೆ, ಪರಮ ಯೋಗಿನಿ
ನಿತ್ಯ ಗೀತಾ ಪರಾಯಣೆ, ಶುದ್ಧ ಸತ್ಚರಿತೆ.
ಸಲ್ಲಕ್ಷಣೆ, ನವತರುಣಿ 'ಮಿಸ್ ಮಾರ್ಗರೆಟ್ ನೊಬಲ್'
ಲಂಡನ್ನಿನಿಂ ಗಮಿಸಿದಳ್ ಪಾಶ್ಚಾತ್ಯದೇಶದ
ಸಾಮಾಜಿಕ ಸಂಬಂಧಮಂ ಸಂಪೂರ್ಣತೊರೆದು.
ಮಿಸ್ ಮಾರ್ಗರೆಟ್ ನೋಬಲ್-ಳುಂ ಅಂದಿಂದಿಗುಂ
ಭಾರತ ಸಂಸ್ಕೃತಿಯ ಪರಿಮಳಕೆ ತಾಂ ಸಂಪೂರ್ಣ
ಮಾರುವೋಗಿ ಸ್ವಾಮಿಜಿಯ ಶಿಷ್ಯತ್ವವನೊಪ್ಪಿ
ಭಾರತಕೈದ ದಿವ್ಯ ಪರಂಜ್ಯೋತಿ! ಗುರುವರ
ಸ್ವಾಮಿ ವಿವೇಕಾನಂದರ ಸೋದರೀ ಭಾವ ಪರಿ
ಪೂರ್ಣತಾ ಆಹ್ವಾನದ ಮೇರೆಗೆ ಭರತ ಖಂಡ
ಕೈದ ಶ್ರೀವನಿತೆಯು ಪಥವನರಸುತೆ ಮಠದ ಕಡೆ
ನಡೆದಿರ್ದಳ್ ಮಸುಗತ್ತಲಿನ ಮುಸ್ಸಂಜೆಯಲಿ.
ಸ್ವಾಮಿ ವಿವೇಕಾನಂದರ್ ಇರ್ದರ್ ಒಳಕೊಠಡಿಯಲಿ
ಕದ ಮುಚ್ಚಿ, ಮಿಸ್ ಮಾರ್ಗರೆಟ್ ನೋಬಲ್ ಬೇಲೂರು
ಮಠದ ಮೆಟ್ಟಿಲೇರಿದಳ್. ಹಜಾರದೊಳಿರ್ದಾ
ವಟುದ್ವಯರೆದುರ್ಗೈದು ತಾಯೊಲ್ಮೆ ನಾಡೊಲ್ಮೆ
ಶಿಷ್ಯರೊಲ್ಮೆಯ ಬಲ್ಮೆಯುಂ ಸೂಸಿ ತೋಷದಿಂ

ಕೈಮುಗಿದು ಬರಮಾಡಿದರೊಳಗೆ ಗುರುದೇವ
ವಿವೇಕಾನಂದರ ಪಾದ ಸನ್ನಿಧಿಗಾಗಿ. ಆ
ವಿನಯಾರ್ತಿ ಶರಣಾರ್ತಿಗಳ ದಿವ್ಯ ಚಿತ್ತಾರ
ಒರ್ಮೆಗೇ ಮಂತ್ರಮುಗ್ಧಗೊಳಿಸಿತು ಮಾನಿನಿಯ.
ಹಜಾರದಲಿ ಚಾಪೆಯ ನೆಲಹಾಸು. ಅಲ್ಲಲ್ಲಿ
ಕಣ್ಮನಂಗಳ್ ಮುಗಿದು ಗಂಭೀರ ಧ್ಯಾನದಾ
ಆಬದ್ಧತೆಯಲಿ ಮುಳುಗಿ ಮಿಸುಕದೆ ಕುಳಿತಿರ್ದ
ಅನೇಕ ವಟುಗಳ್ ಕಣ್ಗೆಸೆದರು ಕನಸಿನವೊಲ್.
ಭಾವನಾವೇಶದಲಿ ಕುಳಿತಳ್ ನೆಲಹಾಸಿನ
ಮೇಲೆ. ಒಂದೆರಳ್ಗುಗಳಿಗೆ ಕಳೆದುವು ತನಗೇಂ
ತಿಳಿಯದೊಲ್. ಗುರುದೇವನ ದರ್ಶನದ ನಿರೀಕ್ಷೆ
ತುಡಿಯುತಿರೆ ಮನದಲಿ, ಜಗತ್ತೇ ಮರೆಯಾದುದು
ಬೌದ್ಧಿಕವಲಯದಿಂ. ಮೆಲುಮೆಲ್ಲನಿಳಿಯಿತು ಪೊಳ್ತು.
ಮುಸ್ಸಂಜೆಯ ಮಸುಗಪ್ಪು ಹರಡಿತಿಳೆಯ ಮೇಲೆ.
ಮತ್ತೆ ನವುರಾದ ಕರ್ಪುಡಿಗೆಯಾವೇಶದಲಿ
ಮೆರೆದಳ್ ನಿಶಾರಾಣಿ ತಾರಗೆಗಳ ಸರಮಂ
ಸೂಡಿ. ಗಗನ ಮಂಡಲದೊಳ್ ಬಂಧುರ ರೇಖಾ
ಚಂದ್ರಮ ವಿರಾಜಮಾನನಾದಂ. ಒಳಗಡೆಯ
ಭಜನ ಕೊಠಡಿಯ ಕರೆಗಂಟೆಯು ಠಣಠಣನೆ ಬಡಿದು
ಬಾಜಿಸಿ ಕರೆಯಿತ್ತಿತು ಭಕ್ತಜನ ಮಂಡಳಿಗೆ.
ಸ್ವಾಮೀಜಿಯುಂ ಉಪ್ಪರಿಗೆಯ ಮೆಟ್ಟಿಲುಗಳಂ
ಇಳಿದು ಬಂದರ್. ಒಡನೆ ದಿಗ್ಗನೆಳ್ದು ನಿಂತಳಾ
ವಿದೇಶೀ ಮಹಿಳಾಮಣಿ. ದರ್ಶನ ಲಾಭದಿಂ
ಪರಸ್ಪರ ಮುಖಬಿಂಬಗಳರಳಿ ದಳ ಅರಳಿದ
ಮದನಮಲ್ಲಿಗೆಯಂತೆ ಸಿತಸ್ಮಿತಮಾದುವು.

ಶ್ರೀವನಿತೆ ಮುಗಿದ ಕೈಇಳಿಸಲಿಲ್ಲಂ. ಬಾಗಿದ
ಶಿರಮಂ ನೆಗಳಲಿಲ್ಲಂ. ಭಾವನೋದ್ವೇಗದಿಂ
ತುಟಿಗಳ್ ಬಿರಿಯದಾದುವು. ಅತ್ತ ಭಜನಾವಳಿಯ
ಮೊಳಗು ಇತ್ತ ತುಂಬಿದ ಹೃನ್ಮನಗಳ ಮಂಗಲ
ಮೊಳಗು. ಒಂದೆರಳ್ಡು ಗಳಿಗೆಗಳ್ ಉರುಳಿಬಿಳ್ದು
ಸರಿದುವು ಗತಕಾಲಕೆ. ಸ್ವಾಮಿಜಿ ತೋಷದಿಂ
ನುಡಿಸಿದರ್ "ಸೋದರೀ, ಬಾಮ್ಮಾ ಮನಗೆಡದಿರ್,
ಅಂಜಿಕೊಂಬುದು ಬೇಡ. ನಿಶ್ಚಿಂತೆಯಿಂದಲಿರ್
ಭಗಿನೀ. ಭಗವಂತ ನಿನಗೆ ಸತ್ಪಥ ತೋರ್ರ್ಪನ್."
ಗುರುವಿವೇಕಾನಂದರ ಶುಭವಚನಂಗಳುಂ
ಹೃನ್ಮನಂಗಳಿಗೆ ಅಮೃತವನೂರೆದವೊಲಾಯ್ತು.
ಮಿಸ್ ಮಾರ್ಗರೆಟ್‌ನೋಬಲ್ ಗುರುಗಳ ಅನುಗ್ರಹ
ಪಡೆದು ಬ್ರಹ್ಮಚರ್ಯದ ದೀಕ್ಷೆಯಂ ಕೈಕೊಂಡಳ್,
'ಸೋದರೀ ನಿವೇದಿತಾ' ಎಂಬ ಪವಿತ್ರ ನಾಮ-
ಧೇಯ ದೊರೆಯಿತ್ತು. ಗುರುವರನ ಮಾನಸ
ಪುತ್ರಿಯಾಗಿ ಭಾರತದ ಕಣ್ಮಣಿ ತಾನಾಗಿ
ಭಾರತದ ಮಣ್ಣ ಹುಡಿಯಲಿ ಬೆರೆತು ಮಣ್ಣಾದ
ಪುಣ್ಯಾವನಿ. ಅನುದಿನಂ ಗುರುವರನ ಮುಖದಿಂ
ಪೊಣ್ಮುವ ಹಿತವಚನಂ ಪ್ರವಚನಂ ಮನದುಂಬಿ
ತನುತುಂಬಿ ಹೊಂಗೊಡವು ತಾನಾಯ್ತು ಹೃದಯದ
ಆಡುಂಬೊಲಂ. ವಿದೇಶಿ ಸಂಜಾತೆ. ನಾಗರಿಕ
ಗಣ್ಯಸ್ತ್ರೀ. ಸಂಪೂರ್ಣವಿದ್ಯಾವನಿ. ಅಪೂರ್ವ
ರಮಣೀಮಣಿ. ಭಾರತ ಧರಿತ್ರಿಯ ಸಾಮಾಜಿಕ
ವಲಯದಲಿ ತೆರೆಮರೆಯ ಪೆಣ್ಮಣಿಯರ ಬದುಕಿನ
ದಯಾಪೂರ್ಣ ಸ್ಥಿತಿಯಂ ಕಂಡು ಕಾಣುತ್ತೆ, ಆ

ಕಳ್ತಲೆಯ ಜಾಡಿಂಗೆ ಚೆಂಬೆಳಕು ಬೀರುವಾ
ಆಸೆಯೊಳ್ ಬಡ ಕುಟಿಯಳೊಂದು ಪುಟ್ಟಶಾಲೆಯಂ
ತೆರೆಯೆ ಬಹುಲ ಪ್ರಯತ್ನಂಬಟ್ಟಳ್ ಸೋದರಿ.
ಕೈಯೊಳ್ ಹಣವಿಲ್ಲಂ. ಕೋ ಎಂಬರಿಲ್ಲಂ. ತಾಂ
ಭಾರತೀಯತೆಯ ಆಳದಲಿ ಮುಳುಗಿ ತೆರೆದಳ್
ಕಿರುಶಾಲೆಯಂ ಪೆಣ್ಮಣಿಯರ ಜೀವನ ಕ್ಷೇತ್ರ
ತೊಳಗಿ ಬೆಳಗೆ. ತೆರೆಯಮರೆಯೊಳ್ ಬದುಕಿ ಬಾಳಿದ
ಪೆಣ್ಕುಲಕೆ ಅದುವೆ ಶುಭವಲಯಮೆನಲ್ ಪೊರಬರೆ
ಮನವಳ್ಕಿ ಎದೆಯಳ್ಕಿ ಪಿಂಜರಿದರ್ ಹಲಕೆಲ
ದಿನಂ. ಆದೊಡಂ ಬಿಡದೆ ಒತ್ತಾಸೆಯ ದಿವ್ಯ
ಮುನ್ನುಡಿಯಂ ಸುವರ್ಣಾಕ್ಷರಗಳಲಿ ಬರೆದಳ್
ಸೋದರಿ ನಿವೇದಿತಾ. ಭಾರತದ ಸನಾತನ
ಧರ್ಮೀಯ ಸುಸಂಸ್ಕೃತಿಯ ಜಳದಲಿ ಈಸಾಡಿ
ಮುಳುಗೆದ್ದು ಅನೇಕ ಸದ್ಗ್ರಂಥಗಳ ಬರೆಬರೆದು
ಜಗದ ಚೆಂಬೆಳಕಿಗೆ ಹರಿಯ ಬಿಟ್ಟಳ್ ಮಂಗಳೆ.
ಭಾರತ ಜನನಿಯ ಧೀಮಂತ ಪುತ್ರಿಯೈಸುತೆ
ನಿರ್ವಹಿಸಿದ ಹೊಣೆಯದು ಸಾಮಾನ್ಯಮೇನಲ್ಲ.
 ಜಗಜಗಿಪ ನಕ್ಷತ್ರದೊಡ್ಡೋಲಗದೊಳ್ ಮಸು
ಗಾಂತಿಯ ಶಶಿಯಿರ್ದನ್ ತಾನಿಲ್ಲದ ಪರಿಯಲಿ.
ದಿವ್ಯಾಂಬರದ ನೀಲಗಪ್ಪು ದಟ್ಟೈಸಿ ಹೆಪ್ಪುಗಟ್ಟಿರ್ದ
ಮಾಳ್ಕೆಯಲಿ ಕಳ್ತಲೆಯು ಕಾವಳಿಸಿ ಕಣ್ಣುಗಳ್
ತಿವಿಯುವಂತಿರ್ದುದು ನಿಶಾಕಾಳಿಕೆಯ ವೀರ
ಗಾಥೆ. ಮೇಲೆ ತಾರಗೆಗಳ ಮೇಳ ಕೆಳಗೆ ಜಗ
ಜಗಿಪ ವಿದ್ಯುದ್ದೀಪಗಳ ಮಾಲೆ, ನಗರಿಯುಂ
ನಿದ್ದೆಯಮಡಿಲಿನಲಿ ಮೈಮರೆತಿರೆ, ಪ್ರಶಾಂತಿಯ

ಮಹಾದ್ರುವ್ಯ ಹರಡಿತ್ತು ತಣ್ಣಗೆ ತನಿಯೂಡಿ
ತಣಿಸುವ ತೆರದಲಿ. ಅದೆ ಆಗಳೆ ಮಠದ ಪೊಚ್ಚ
ಪೊಸವಟುಗಳಿಗೆ, ಬ್ರಹ್ಮಚಾರಿಗಳಿಗೆ ಮತ್ತಂ
ಐರೋಪ್ಯ ಶಿಷ್ಯ ಶಿಖಾಮಣಿಗಳಿಗೆ ವೇದಾಂತ
ತತ್ತ್ವಬೋಧೆಯನಿತ್ತು ಪ್ರಾಂಗಣಕೈತಂದರ್
ಸ್ವಾಮಿವಿವೇಕಾನಂದರ್. ಕೊರಳೆತ್ತಿನೋಡಲ್
ವಿಭಾವರಿಯ ಚೈತನ್ಯ ಗಾಯತ್ರಿ ಹೊಳೆದಿದೆ
ರಯ್ಯನೊಯ್ಯನೆ ವಿಶ್ವದಾದ್ಯಂತ. ಗಿರಿವಿಪಿನ,
ಹರ್ಮ್ಯಗಳ ಸಾಲ್ ರಮಣೀಯಮಾ ನೋನೋಳ್ಪ
ಕಣ್ ಸೋಲ್ವಂತೆ. ಮಹಾನ್ ಬೆಳ್ಮುಗಿಲ್ ಮಾಲೆ
ತೇಲುತ್ತಿಹವೊ ಸರಿಯುತ್ತಿಹವೊ ತಿಳಿಯಲ್ಕೆ
ಬಾರದವೊಲ್ ಸೂಕ್ಷ್ಮವಾ ಮುಗಿಲ್ ಲೋಕದ ತಂತ್ರ.
ತೈಲವರ್ಣಾಳಿಯಿಂ ಸಮೆದ ಚಿತ್ರಂಗಳಿಂ ಕೈಗಯ್ದ
ಬೃಹದ್ ಕಲೆಯ ಪಟಲ ಎಂಬವೊಲ್ ಮೆರೆದುದಾ
ದಿವ್ಯಾಂಬರದ ನೀಲಿ. ಕಣ್ಣೆತ್ತಿ ನೋಡಲಾ
ಬಾನ್ ಬಿತ್ತರಂ ರಜತಲಿಪ್ತಂ ಕಣ್ಮನಕೆ.
ಮನದಲೆಗಳ್ ಒರ್ಮೆಗೆ ತಟಸ್ಥಗೊಳೆ ಚಿಂತನ
ಮಂಥನಗಳ್ ಅಳಿದುವು. ಸುಖಸ್ವಪ್ನದಾ ಶುಭ್ರ
ಲೋಲುಪ್ತಿಯಲಿ ತೇಲುತಿದೆ ಜಗತ್ ಮನೋರಮ
ಶೈಲಿಯಲಿ. ತಂಗಾಳಿಯ ಸುಯ್ಲಿಗೆ ಶ್ರುತಿಯಂ
ಮೊಂಟುವೊಲ್ ನಸುದೂರದಲಿ ಕೇಳಿಸುತ್ತಲಿದೆ
ದುಃಖದೊಡಲ್ ಸೀಳಿ ಹೊರ ಬಿಳ್ದೊರ್ ಗೋಳ್‌ದನಿ,
ಪೆಣ್ದನಿಯ ರೋದನವದು ಕೊರೆದುದು ಹೃದಯದ
ಹೊಂಗಿಂಡಿಯಂ. ಮನಮರುಗಿ ಕಾರುಣ್ಯದ್ರುವ್ಯ
ಕರಗಿ ಹರಿದುದು ನಾಳನಾಳಗಳಲಿ. ಜೊತೆಗೇ

ಪುರುಷನೊರ್ವನ ಏರುದನಿಯದು ಮೊಳಗಿದತ್ತು.
ದತ್ತಸೂನುವಿನ ಕೊಡಂಕೆಯಂ ಕೋರೈಸುವೊಲ್.
ಸ್ವಾಮೀಜಿಯ ಕೊರಳೊಳ್ ಒಡಲಾಳದ ಗುಹೆಯಿಂ
ನುಡಿಗಟ್ಟು ಹೊರಹೊಮ್ಮಿತ್ತು "ವಿಪದೋನೈವ ವಿಪದಃ
ಸಂಪದೋನೈವ ಸಂಪದಃ" ನಡುರಾತ್ರಿಯಲಿ ಕೇಳ್ದ
ಅಳಲದು ಸುರಾಪಾನಮತ್ತ ಧೂರ್ತನ ಕಠಿಣ
ಕಟು ಹೃದಯದ ಕಿಡಿಯು ಕಾರ್ದ್ದ ಕುಡಿಬೆಂಕೆಯುಂ
ಸುಟ್ಟು ಪ್ರಕರಣಮಲ್ಲದೆ ಬೇರಲ್ಲಮೆನಿಸೆ, ಹಾ!
ನಮ್ಮಯ ಸಮಾಜವೇ ಎಂದೆಂದು ಮರುಗಿದರ್
ಸ್ವಾಮೀಜಿ. ಪೊರವಾಗಿಲ ಕದವಿಕ್ಕಿ ಒಳಬಂದು
ತಮ್ಮ ಕೊಠಡಿಯಂ ಸೇರಿದರ್ ಕಳೆದುರುಳಿದುವು
ಮುಹೂರ್ತಗಳ್. ಪರವಶತೆ ಮಾಣ್ದುದು. ಹೃನ್ಮನಂ
ನಿದ್ದೆಸ್ಥಿತಿಯ ಕರ್ಮರಂಗಕೆ ಇಳಿದುವು, ಪೊರ
ಜಗತ್ತನದರ ಪಾಡಿಗೆ ಬಿಟ್ಟು. ನಸುವೊಳ್ತಿನ
ತರ್ವಾಯ ನಿದ್ರಾಪರವಶರಾದರ್. ಮನದ
ಗೂಡಿನಿಂ ಸುಖದುಃಖಗಳ್ ಸರಿದುಹೋದುವು.
ಜಗತ್ತು ನಿರಾಳ, ಹೃನ್ಮನಂ ನಿರಾಳ. ನಿದ್ದೆಯ
ಸಾಮ್ರಾಜ್ಯವೆ ಸಾಮ್ರಾಜ್ಯ. ಕನಸಿನ ಲೋಕದಲಿ
ವಿಹರಿಸುತಿರೆ ಎದುರ್ವೆತ್ತ ಶ್ರೀಮಾತೆ ಶಾರದಾ
ಮಣಿದೇವಿ ನುಡಿದರ್ ಕಳಕಳಿಯ ದನಿಯಲಿ "ಎಲೆ,
ವತ್ಸ! ಚಿಂತಿಸದಿರ್, ಇಡೀ ಜಗತ್ತೇ ಹಾಗೆ,
ಸುಖದುಃಖಗಳ ಧಾತ್ರಿ ಇದು. "**ಜೀವೋ ಜೀವಸ್ಯ
ಜೀವನಂ.**"
ಅಭಿಜಿನ್ ಮುಹೂರ್ತಮದರಿ ಕಳೆಯಿತು.
ಮತ್ತೆ ಇಂದ್ರಮುಹೂರ್ತ ಮೂಡಿ ಅಳಿದು ಚಣಗಳ

ಆವರ್ತನಕೆ ಸಿಲ್ಕಿ ಪುರಾತನಮೆನಿಸಿದುದು.
ಬಳಿಕಲಾ ಪ್ರಾತಃಮುಹೂರ್ತಂ ಬರಲುರೆ ಮೂಡಿ
ಮೊಳಗಿತು ವನವಿಹಂಗಮಗಳ ಸವಿ ಗೊರಳ್ಗಳ
ರಾಗಾನುರಾಗಮಾಲೆಗಳ ಸುಪ್ರಭಾತಂ.
ದೇಗುಲಗಳಲಿ ಪ್ರಾತಃಪೂಜೆಯಲಿ ಗಂಟೆ ಜಾ–
ಗಟೆ ಶಂಖ ನಗಾರಿಗಳ ಮೇಳಂ ಮೊಳಗಿದುದು
ಮಂತ್ರ ಘೋಷಣೆಯ ಮಧ್ಯೆ. ಪ್ರಾತಃರ್ವಿಧಿಗಳಂ
ತೀರ್ಚಿ ಎಂದಿನೊಲ್ ಪದ್ಮಾಸನದೊಳ್ ಮಂಡಿತ
ಸ್ವಾಮೀಜಿಯ ಶರೀರ ಸಂಪುಟದಲಿ ಅತೀವ
ಬಳಲ್ಕೆಯ ಝುರಿ ಹರಿದಾಡಿ ಸೋಲ್ಗೆಡಗಿದುದು
ಪ್ರಾಣನಿಧಿಯಂ. ಎದ್ದು ಸೆಜ್ಜೆಯಂ ಸೇರಿದರ್
ಸ್ವಾಮೀಜಿ. ನಿಡು ಉಸಿರ್ ಏರಿಳಿದುದು ಪೆರ್ಚಿನ
ಭಾರಾಕ್ರಾಂತತೆಯಲಿ. ತುಂತುರುತುಂತುರ್ಕೈಸಿದ
ಸ್ವೇದ ಬಿಂದುಗಳ್ ಮೂಡಿದುವು ಮೈತೊಯ್ಯುವೊಲ್.
ಬೆಳಕಿಂಡಿಯೊಳ್ ನುರ್ಗಿವಂದ ಮಂದಮಾರುತ
ಮುಖಮೈಯ್ಯಂ ಮುದ್ದಿಸಿ ರಮಿಸುತಿರೆ ಮುದಿಸಿತು
ಜೀವಕಣ. ಶಿಷ್ಯರೈದರ್, ಮಿತ್ರರೈದರ್
ವೈದ್ಯ ವಾಚಸ್ಪತಿಗಳೈದರ್, ಚಿಕಿತ್ಸೆಯಘಟಕ
ಬೆಳೆಯಿತ್ತು. ಬಗೆಬಗೆಯ ಓಷಧಿಗಳ್ ಉದರಮಂ
ಸೇರಿದುವು. ಸ್ವಾಮೀಜಿ ಶ್ರಮಿಕ ಪ್ರವೃತ್ತಿಯಂ
ಕಡಿತಗೈದು ಸರಳಗತಿಯ ದಿನಚರಿಯೊಳ್ ತೊಡಗಿ,
ಮಠದ ಆವರಣದಲಿ ಭಾಗೀರಥಿಯ ತೀರದಲಿ
ಪದಚಾರಣಗೈವರ್, ಗ್ರಂಥ ಪಠಣದಲಿ ಜಪ
ತಪಧ್ಯಾನದಲಿ ಲೇಖನಗಳುಲ್ಲೇಖನದಲಿ
ಕಳೆಯುವರ್ ಎನಿತೊವೊಳ್ತು. ಮುಸ್ಸಂಜೆಯ ಸಮಯ

ಬರುವರ್ ಹಲಕೆಲವು ಸಂದರ್ಶಕರ್. ಅವರೊಡಂ
ಕೆಲವೊಳ್ತು ಕಳೆವರ್ ನಗೆ ಚಾಟಿಕೆಯ ಮಾತಿನ
ಮಳೆಗರೆದು. ಅಂತಿಂತು ಸರಳಗತಿಯ ದಿನಚರಿ
ಅಳವಟ್ಟುದು ಸ್ವಾಮಿಜಿಯ ಗಭೀರತೆಯ ಬಾಳ್
ಬರ್ದುಕಿಗೆ. ಆದೊಡಾ ದೇಹ ಸಂಪುಟದೊಳ್
ರೋಗ ಭಾದೆಯುಂ ಹರಿಯದಾಯ್ತು. ಬಳಲ್ಕೆಯುಂ
ಮುಡಿಯದಾಯ್ತು. ಶಿಷ್ಯರ್ ಮುಂಗೆಟ್ಟು ಕಂಗೆಟ್ಟು
ಚಿಂತೆಯಲಿ ಬೆಂದು ಬೆಂಡಾಗಿ ನಗರದೇಶದ
ಕಲುಷಿತ ಹವೆಯಿಂ ದೂರ ಕರೆದೊಯ್ದೊಡೊಳ್ಳಿತು
ಎಂದೆಂಬ ಅಭಿಲಾಷೆಯಿಂದೆ ಡಾರ್ಜಿಲಿಂಗಿಗೆ
ಕರೆದೊಯ್ದರ್ ಎಲ್ಲರ್ ಒಗ್ಗೂಡಿ. ವನವಲಯ
ಸ್ವಾಗತಿಸಿತು, ಪಲ್ಲವ ಪಾಣಿಗಳಂ ಬೀಸುತ.
ರಾಗಾರುಣತಾನದಿ ರಾಗಮಂ ಹಾಡಿದುವು
ಹಕ್ಕಿ. ಓಂಕಾರಮಂ ಸೂಸಿ ಝೇಂಕರಿಸಿದುವು
ತುಂಬಿ, ಬೀಸಿವೀಸಿ ಶುಭಹಾರೈಸಿತು ಮಾರುತ-
ಮಂದಮಾರುತ. ಪರ್ಣ ಕೋಟಿಯಲಿ ದಳಬಿರಿದ
ಸಕಲ ಕುಸುಮರಾಜಿಯ ನರುಗಂಪು ಗಂಧಿಸಿತು
ಹೃನ್ಮನಗಳಂ ಅರಳಿಸುವೊಲ್. ಎಲ್ಲವುಂ ಶಿವ
ಸನ್ನಿದಿಯೋ ಎನಲ್ ಚೆಲ್ವಾಯ್ತು ಕಾಯಕಲ್ಪ
ಗೈವವೊಲ್. ಸುಂದರ ಸಮಯಮಾಯ್ತು ಮನಶಾಂತಿಗೆ.
ಸುಖಶಾಂತಿಯ ಮಡಿಲಲಿ ಜಗದ ಜಂಜಡವ ಬದಿ
ಗೊತ್ತಿ ತಣ್ಣಗೆ ಕಳೆದುವು ಕೆಲದಿನ ಮಾನಗಳ್,
ರುದ್ರ ಗಂಭೀರ ಚಿಂತನಮಂಥನಗಳ ಪರಿ
ಪಾಡಿನಿತಿರದೆ ಸರಳೀಕರಣಮಾಯ್ತು ದಿನಚರಿ.
ಸ್ವಾಮಿಜಿಯುಂ ಅಲ್ಲಿ ಬೆಟ್ಟಗುಡ್ಡಗಳೇರಿ

ಇಳಿವರ್. ವನವನಾಂತರದಲಿ ಅಡ್ಡಾಡಿ ನಿಜ
ಕಾಡಾಡಿಯಾಗಿ ಫಲಗಳನುಂ ತರಿದು ತಂದು
ತಿಂದು ಗೆಳೆಯರಿಗೆ ತಿನಿಸಿ ನಲಿವರ್ ಅಣುಗರೊಲ್.
ಬಾಲ್ಯದೆಳೆಯಾಟಮಂ ನೆನೆನೆನೆದು ಅದರ ಸವಿ
ಸಕ್ಕರೆಯ ಹಂಚುವರ್ ಒಡನಿರ್ದ ಗುರುಭಾಯಿ
ಮಂಡಲಿಗೆ. ನಕ್ಕು ನಗಿಸಿ ನಲಿಸಿ ಸಮಾಧಾನ
ಚಿತ್ತದಿಂ ಕಳೆಯಿತೊಂದು ವಾರಂ. ದೇಹದಲಿ
ಪುರುಪು ಪುರುಡೇಳ್ವ ಮುನ್ನಮೆಯೆ ಕಲಿಕತ್ತ
ನಗರಿಯಿಂ ಘೋರವಾರ್ತೆಯೊಂದು ಕಿವಿಗಪ್ಪಳಿಸಿದತ್ತು ನಿಜ
ಸಿಡಿದೊಡೆಯುವ ಪರಿಯಲಿ ಅಪ್ಪಳಿಸಿದತ್ತು ನಿಜ
ದಡಾಕಿಯೊಳ್! "ನಗರಿಯಲಿ ಭೀಕರ ಪ್ಲೇಗಿನಾ
ರೋಗ ಹರಡಿದೆ ಆಳ್ವರ ನಿರ್ಲಕ್ಷ್ಯದಿಂ. ರುದ್ರ
ಭಯಂಕರ ಬಡತನದ ದಂಷ್ಟ್ರನದ ದುರ್ರೋಗ
ಒದವಿ ಕ್ರಿಮಿಗಳವೊಲ್ ಪ್ರಜೆಗಳ್ ಪ್ರಾಣನೀಗಿ
ನೇಪಥ್ಯ ವೇರುತಿಹರೆಂದು!" ಸುದ್ದಿ ಹರಡುತೆ
ಕರ್ಣಾಕರ್ಣಿಯೈಸಿ ತಡೆಗಟ್ಟೆಯ ಮುರಿಮುರಿದು
ಮುಟ್ಟಿತು ಗುರುವರ್ಯನ ಕರ್ಣಕಮಲಂಗಳಿಗೆ.
ಒಡನೆ ಪೊರಮಟ್ಟರಾ ಆಚಾರ್ಯ ತಮ್ಮೆಲ್ಲ
ಅಸ್ವಾಸ್ಥ್ಯಮಂ ಬದಿಗಿರಿಸಿ. ಮತ್ತೆ ಬೇಲೂರು ಮಠ
ಮುಟ್ಟಿದಾಗಳ್ ಬೈಗುಗಪ್ಪಿರ್ದುದು ಇಳೆಯಮೇಲೆ.
ದಿನದಿನಂ ಸಾವಿನ ಕಡು ಸಂಕಟಕರ ಸುದ್ದಿ!
ಬಡ ಬಂಧುಗಳ ಗೋಳಿನ ಕರೆ. ಮನೆ ಮನೆಗಳಲಿ
ಗಂಜಿ ಬೇಯಿಸುವವರಿಲ್ಲ, ಉಣಿಸುವವರಿಲ್ಲ,
ಆರೈಕೆಯ ಸೊಲ್ಲೇ ಇರದಾಯ್ತು. ಶವಸಂಸ್ಕಾರ
ಗೈವರಿಲ್ಲ, ಎಲ್ಲೆಡೆಯು ಅಳುಗೋಳಿನ ಕಣಜ.

ಸಂಕಟದ ಆಕ್ರಂದನ. ನೋಡುತೆ ಸುಮ್ಮನಿರೆ
ಮನವೊಪ್ಪುವುದೇ ಸ್ವಾಮೀಜಿಗೆ? ಒಡಲ ಕರುಣೆ
ಕರಗಿ ದ್ರವಿಸಿ ನೀರಾಗಿ ಹರಿಯಿತು ನರಗಳಂ
ಸೀಳ್ವತೆರದಿ. ರೋಗಿಗಳಾ ಚರಮ ಸೇವೆಯಂ
ಗೈಯಲ್ ಗುರುಭಾಯಿಗಳ ಮನವಂ ಒಲಿಸಿದರ್
ಹಿತವಾದವಂ ನುಡಿದು. ಅಮಿತ ವಟುಗಳ ಮೇಣ್
ಬ್ರಹ್ಮಚಾರಿಗಳೆಲ್ಲರ ಬೆನ್ನತಟ್ಟಿ ಪುರುಪಿತ್ತು
ಸ್ವಯಂ ಸೇವಕರ ಕಿರುತಂಡಮಂ ನಿರ್ಮಿಸುತೆ
ಮುಂಬಿಗಂ ತಾನಾದರ್ ಸ್ವಾಮೀಜಿ. ಆಗಳ್
ಆತಂಕಿತ ಮನದಿಂ ಕೇಳ್ದನೊರ್ವ ಎಳೆಯಂ
"ಸ್ವಾಮೀಜಿ, ಸೇವಾಕ್ರಮಕೆ ತಗಲುವ ವೆಚ್ಚಂ
ಭರಿಸುವುದು ಸಾಮಾನ್ಯಮೆ? ಹಣಮಂ ತರ್ಪುದೆಂತು?"
ಗುರುವರ್ಯ ಕಿಂಚಿತ್ ವಿಚಲಿತಗೊಳದೆ ಸದೃಢ
ವಾಣಿಯಲಿ ಬಿತ್ತರಿಸಿದರ್ "ಅಹಾ, ಎಲ್ಲಿಂದ
ಎಂಬಿರಾ? ಅವಶ್ಯಮೊದವಿ ಬರಲ್ ಪೊಸದಾಗಿ
ನಾವಿಕ್ರಯಿಸಿದ ಮಠದ ಭೂಮಿಯಿದೆಯಲ್ತೇ
ಅದಂ ಮಾರಿದೊಡಾಯ್ತು! ನೂರಾರು ಸಂಖ್ಯೆಯಲಿ
ದೀನ ಜನರೆಮ್ಮ ಕಂಗಳ ಮುಂತೆಯೆ ನರಳಿನರಳಿ
ಸಾಯುತಿರೆ ಮಠದೊಳೆಮಗೆ ಸುಖದ ಜೀವನಮೆ?
ನಾವ್ ಸಂನ್ಯಾಸಿಗಳ್ ಮರದಡಿಯಲಿ ವಿಶ್ರಮಿಸಿ
ತಿರುಪೆಯಿಂ ಒಡಲ್ದುಂಬೆ ಸಿದ್ಧರಿರವೇಳ್ಕುಂ!"
ಸ್ವಾಮೀಜಿ ಶುಶ್ರೂಷಾರಂಗಕಿಳಿಯೆ ದೈವಕೃಪೆ
ಒದವಿದತ್ತು ಪರಿಸರದಿಂ ದೂರದೂರದಿಂ
ತಾನೆತಾನೈಸಿ. ಅಂತಿಂತು ನಾಲ್ದೆಸೆಗಳಿಂ
ಧನ ಸಹಾಯಮೊದವಿದುದು ನವತರುಣರ ಧಮನಿ

ಧಮನಿಗಳಲಿ ಬಿಸಿನೆತ್ತರ್ ಝಿಲ್ಲನೆ ಪ್ರವಹಿಸಿ
ಆರೋಹಣ ಅವರೋಹಣ ನಡೆಸುವ ತೆರದಲಿ!
ಸ್ವಾಮಿಜಿಯುಂ ಹುಡುಕುಡಿಕಿ ಕಣ್ಮನಕೊಪ್ಪುವ
ಸುವಿಶಾಲ ಬಯಲ್ದಾಣಮಂ ಪಡೆದರ್ ನಿಯಮಿತ
ಬಾಡಿಗೆಯಲಿ. ಆ ಅಜಿರ ಭುವಿಯಲಿ ತಾವಿನಿತು
ಉಳಿಯದವೊಲ್ ಉದ್ದಗಲವುಂ ಗುಡಿಸಿ ಸಾರಿಸಿ
ಪರಿಶುಭ್ರಗೊಳಿಸಿ ತೆಂಗಿನಗರಿ ಹೊದಿಸಿ ಸಣ್ಣ
ಸಣ್ಣ ಗುಡಿಸಲುಗಳಂ ನಿರ್ಮಿಸಿ ಮನೆಮನೆಯಿಂದೆ
ರೋಗಿಗಳ್ ಕರೆತಂದರ್ ಉತ್ತಮ ಶುಶ್ರೂಷೆ
ಗೈಯ್ಯುವೊಡೆ. ಬಡರೋಗಿಗಳ ಆರೈಕೆ ಭರದಿಂ
ಸಾಗಿದುದು ಕಿಂಚಿತ್ ತಳುವದ ರೀತಿಯಲಿ. ಆ
ನೋವು ಆ ಚೀರಾಟಗಳ ನಡುವೆ ನಡೆಯಿತ್ತು
ಸತ್ ಸೇವೆಯಾಕರ್ಮಕಾಂಡ. ಸೇವೆ-ಸೇವೆಯೇ
ಪರಮಗುರಿ. ದಯೆ ಕರುಣೆಗಳ ಮಹಾ ಪೂರವೇ
ಹರಿದತ್ತು ಕರ್ಮಯೋಗಿಗಳ ಕರ್ಮಕಾಂಡದಲಿ.
ಆಗಳೇನಾ ಪೊರಗಣಿಂದೈದ ಸಂನ್ಯಾಸಿಗಳ್
ಸಾಧುಸಂತರ್ ಕೂಡಿದ ಪರಿಯ? ಗಲ್ಲಿಗಲ್ಲಿಗಳ
ಬಡಜನರ ಸ್ಥಿತಿಗತಿಯರಿದು ಕ್ರಿಮಿನಾಶಕ
ಓಷಧಿಯ ಸಿಂಪಡಿಸಿ ನಿಜನ್ನೈರ್ಮಲ್ಯದರಿವು
ಮೂಡಿಸುವರ್. ಕ್ರಮವತ್ ಆರೈಕೆಯಾ ಅರಿವು
ಮೂಡಿಸಿ ಮತಿಮೌಢ್ಯಂ ಕಳೆದು ಜಾನಂ ಬೆಳಗೆ
ಸತತ ಪ್ರಯತ್ನಿಪರ್. ಗಂಜಿಗೈಯ್ದು ಉಣಿಪರ್.
ಎತ್ತಲೆತ್ತಲ್ ಹೀಹೀಕರಿಸಿದುವು ಪ್ರೇತಗಣ!
ಹಾ!ಹಾ! ಕರಿಸಿದುವು ಅಮಿತ ದೇವ ಗಣ! ಸಗ್ಗ
ಯಾತ್ರೆಗೆ ಅಣಿಯಾದವರೆನಿತೊ ಮಂದಿಯು ಬದುಕಿ

ಉಳಿದರ್ ನಲ್ ಆರೈಕೆಯಲಿ. ಉರುಳಿದುವನೇಕ
ಭಯಂಕರ ದಿನಮಾನಗಳ್. ನಗರದೇಶವಂ
ಅಲ್ಲೋಲಕಲ್ಲೋಲಗೊಳಿಪಂತೆ ಭೋಂಕನೆಯೆ
ಬಂದೆರಗಿದ ಪ್ಲೇಗ್ ಮಾರಿಯುಂ ತನ್ನಬ್ಬರಂ
ಕಳಿದು ರೆಕ್ಕೆಪುಕ್ಕವಳಿದ ಪಕ್ಕಿ ತಾನಾಗಿ
ಪಿಂಜರಿಯ ತೊಡಗಿದಳ್ ಅನುಕ್ರಮದಲಿ. ದುಃಖ
ಸಂಕಟಗಳ ಸುಯ್ಲು ಮೆಲುಮೆಲ್ಲನೆ ಅಡಗಿದುದು
ಒಡಲಾಳದಲಿ. ಆದೊಡೇಂ ಎಲ್ಲವುಂ ಕಳಿದು
ಗೆಲುವು ಮೂಡಿತು ಎಂಬುದೇನಿಲ್ಲಂ. ಒಂದೆರಳ್
ಮೂರ್‌ನಾಲ್ಕುಮೈದಾರ್ ರೋಗಿಗಳುಂ ಪ್ರಾಣ
ಬಿಟ್ಟೊಡಂ ಉಳಿದೆಲ್ಲ ರೋಗಿಗಳ್ ಮೃತ್ಯುವಿನ
ಹಿಡಿತದಿಂ ಪಾರಾಗಿ ಉಳಿದರ್. ಬಿಳಿಯರ್ ಈ
ಕೀಳ್ಜನರ್ ಸಾಯ್ವನಿತು ಸಾಯಲೆಂದು ಮಿಣ್ಣನೆ
ಕಣ್ಮುಚ್ಚಿರೆ ಬಿಳಿಯರ ಬಂಟರೆನೆ ಮೆರೆದಿರ್ದ
ರಾಜರುಗಳ್ ತುಳಿದರದೇ ಪಥವ. ಎನಲಿನ್ನು
ಕಾಯ್ವರಾರ್? ನೋವರಾರ್? ಸಮಯಕೊದವಿದವರೆ
ತಾಯಿತಂದೆ. ಸೋದರಿ ನಿವೇದಿತಾ ಕೂಡಿದಳ್
ಸೋದರ ಗುರುಭಾಯಿಗಳ ಸೇವೆಯ ಕೂಟದಲಿ.
ತಾನೊರ್ವ ಬೆಳ್ಳಕ್ಕಿಯ ಮಾಳ್ಕೆಯಲಿ ಓಷಧಿ
ಗಂಜಿಗಳ ಸಹಿತ ಓಡಾಡಿ ಸೇವೆ ಸಲಿಪಳ್
ರೋಗಿಯಿಂ ರೋಗಿಗೆ ಚಲಿಸಿ ಚಲಿಸಿ. ಹನ್ನೆರಡು
ವರ್ಷಗಳ ಬದುಕಂ ಬಾಳ್ದ ಬಾಲಕನೊರ್ವನುಂ
ನಿವೇದಿತೆಯಂ 'ತಾಯಿ' ಎಂಬ ಭಾವದಿಂ 'ಅಮ್ಮ'
ಎಂದೇ ಸಂಬೋಧಿಸುತೆ 'ಅಮ್ಮ ಅಮ್ಮ ಅಮ್ಮ!'
ಎಂದೆಂದು ಕೂಗಿಕರೆವನ್. ಕರೆದು ಚೀತ್ಕರಿಸಿ

ಕಂಬನಿಯಸುರಿಸುವನ್ ನೋವು ತಾಳಲಾರದೆ.
ಎನಿತೆನಿತು ಸೇವೆ ಸಲ್ಲಿಸಿದೊಡಂ ಅಬ್ರಕನ
ರೋಗವದಿನಿತು ಕುಗ್ಗದೆ ತಗ್ಗದೆ ದಿನದಿನಂ
ಉಲ್ಬಣಿಸಿ 'ಅಮ್ಮಾ!' ಎನುತೆ ಚೀರಿ ಇಹಲೋಕ
ತೊರೆದನಾ ಬಡ ಬಾಲಕಂ. ಆ ಕಠಿಣ ಕಠೋರ
ಧಾರಣಮಯ ಸಂಕಟದ ಅಂತ್ಯಮಂ ಕಣ್ಣಿಂದ
ಕಂಡು ಮರ್ಮರ ಮರುಗಿದಳಾ ಮೃದು ಹೃದಯಿ
ದೇವಮಾನಿನಿ ಸೋದರಿ ನಿವೇದಿತಾ. ಕಂಗಳ್
ಮತ್ತೆ ಮತ್ತೆ ತೊಯ್ಯುತಿರೆ ಆ ದುಃಖಿನಿಯ ಕಡು
ಸಂಕಟದ ಗೋಳನರಿದು ಸಂತೈಸುತೆ ನುಡಿದರ್
ಗುರುವರ್ಯ ವಿವೇಕಾನಂದರುಂ ಕರುಣೆಯಿಂ,
"Love death Margaret, worship
the terrible. God is a circle whose
centre is everywhere and whose
circumference is now here. Death is
nothing but the displacement of
the centre from one point to the other,
seek life in death and death in life.
Margaret, worship the terrible."
ತುಂಬುಗಂಗಳಲುಕ್ಕಿದ ಕಂಬನಿಯಂ ತೊಡೆದು
ನುಡಿದಳಂಗನೆ ದುಃಖಗದ್ಗದಿತ ಧ್ವನಿಯಲಿ
"ಸ್ವಾಮೀಜಿ, ಶಿಬಿರದೊಳ್ ಅನೇಕರ್ ತೀವ್ರತರ
ರೋಗಿಗಳ್ ಬದುಕುಳಿದರ್, ಆದೊಡೆ ಈ ಚಿಣ್ಣಂ
ಅಷ್ಟೇನ್ ತೀವ್ರತರ ರೋಗಿಯಿರಲಿಲ್ಲವೆನೆ
ತಪ್ಪಲ್ಲ, ಇದಕೇನೆನಲಕ್ಕುಂ?"

"ಎಲೆ, ಸೋದರಿ
ಕೇಳ್, ಈ ಜಗದ್ವ್ಯಾಪಾರವದು ಇಂತೆಯೇ,

"ಭವಿತವ್ಯಂ ಭವಿತ್ಯೇನ
ಕರ್ಮಣಾಂ ಮೇಷ ನಿಶ್ಚಯಃ ।
ವಿಪತ್ತೌ ಕಿಂ ವಿಷಾದೇನ
ಸಂಪತ್ತೌ ವಿಸ್ಮಯೇನ ಕಿಂ ॥"

ಮಗದೊರ್ಮೆ ಸೋದರಿ ನಿವೇದಿತೆಯಂ ಕುರಿತಿಂತು
ಗಂಭೀರ ವಾಣಿಯಲಿ, ನುಡಿಸಿದರ್ ಸ್ವಾಮಿಜಿ,
"The mother's heart, the hero's will,
The sweetness of the southern breeze,
The sacred charrm and strength that dwell,
on aryn altrs flaming, free;
all these be yours and maney more
No ancient soul could dream before-
be thou to India's future son
The mistress, servent, friend in one.
ರಾಜ್ಯದಲಿ ಭೀಕರತರ ರೋಗದ ಅತ್ಯುಗ್ರ
ಹಾವಳಿಯು ತಗ್ಗಿ ಕುಗ್ಗಿ ಹತೋಟಿಗೊಂಡು ಕೊನೆ
ಕೊನೆಯೊಳದರ ಸತ್ವಹರಿದು ನಾಳ ಸತ್ತು ಗತಿ
ತಪ್ಪಿ ಹುಟ್ಟಡಗಿ ಹೋಹೆ ಶಿಬಿರ ಬರಿದಾಯಿತ್ತು.
ವಟುಗಳುಂ ಮಿತ್ರಮಂಡಲಿಯುಂ ಪೊರಗಡೆಯಿಂ
ಬಂದು ಕೂಡಿರ್ದ ಸಂನ್ಯಾಸಿವಳಗವುಂ ಆ
ಶಿಬಿರಗಳ ದಾಣಮಂ ಕೊಡವಿಕಿತ್ತೊಗೆದು ಪೊರ
ಮಟ್ಟರ್ರೈ ತಂತಮ್ಮ ಪಥವಿಡಿದು. ಗುರುವರಂ
ಪಗಲಿರುಳ್ ಶಿಬಿರದೊಳಿರುತೆ ಸಲಿಸಿದ ಸೇವೆಯ

ಪರಿಣಾಮದ ಫಲದಿಂ ಬಳಲಿದುದು ಶರೀರದ
ಯಷ್ಟಿಯದು ಯಥೋಚಿತವಾಗಿ. ದೂರದೂರದ
ಹಿಮಾಲಯ ಪರ್ವತ ಪದತಲದಲಿ ನೆಲೆಗೊಂಡ
ತಣ್ಣನೆಯ ಸಾನು ಪ್ರದೇಶಗಳ ಸತ್‌ಶಾಂತಿ
ಸಂಮೃದ್ಧ ಗಾಳಿಸೇವನೆಯಂ ಬಯಸಿಬಯಸಿ
ತಮ್ಮಯ ಬಳಗದೊಡನೆ ಸರಸ ಸರಳ ಯಾತ್ರೆಗೆ
ಅಣಿಯಾದರ್ ಗುರುದೇವಂ. ನೈನಿಟಾಲ್! ಸುರಮ್ಯ
ಮನಮೋಹನಕರ ಸುಸುಂದರವಾದ ಪ್ರದೇಶ
ನೈನಿಟಾಲ್! ದೇವೇಂದ್ರನಮರಾವತಿ ನಗರ
ದೇಶಮಂ ಮೀರಿ ಮೆರೆವ ಸೌಂದರ್ಯರಾಶಿಯ
ಮಹದೈಶ್ವರ್ಯವೇ ತುಂಬಿರ್ದ ಹಿಮವಂತನ
ಪದಪ್ರಾಂತಮಂ ತಲುಪಿ ಆನಂದರಸಾಯನ
ಉಂಡು ತಣಿದರ್ ಗುರುವರಂ. ಅಂದು ಅಲ್ಲಿನಾ
ಪ್ರಜೆಗಳಿಗೆ ಪಂಡಿತವರ್ಯರಿಗೆ ಮತ್ತಮಾ
ವಿದ್ವನ್ಮಣಿಗಳಿಗೆ ಒದವಿದ ದರ್ಶನ ಭಾಗ್ಯ
ಸ್ವರ್ಗೋಪಮವಾಯ್ತು. ಅಮೂಲ್ಯತರ ಬಿಡದಿಯಂ
ಒದವಿಸಿ ಸಕಲತರದ ಸ್ವಾಗತವ ನೀಡಿದರ್
ಪರಮಾದರದಿಂ.
ಏವೊಳ್ತು ತನಿಯುಗುವವೊಲ್
ತಣ್ಗಂಪು ಹರಡಿರುತಿರೆ ಸುತ್ತಲಿನ ವನಧಿಯ
ಒಳಾಂತರಮಂ ಬೊಕ್ಕು ಅಲೆಯುವರ್, ಬೆಟ್ಟಗಳ
ಏರಿ ಇಳಿಯುವರ್, ದಟ್ಟ ಪುಲ್ಲಾಸಿನ ಮೇಲೆ
ಮೈಚಾಚಿ ವಿಶ್ರಾಂತಿ ಪಡೆಯುವರ್, ಒರ್ಮೊರ್ಮೆ
ಕುದುರೆ ತಟ್ಟುಗಳನೇರಿ ಸವಾರಿಗೈಯುವರ್.
ಮುಸ್ಸಂಜೆಯಲ್ಲಿ ಸಂದರ್ಶಕರ ಭೇಟಿಯಿಂ

ಜಗತ್ ಮರೆಯುವರ್. ಇಂತಿಂತಿಂತು ಸೊಗದಸುಧೆ
ಉಂಬುವರ್ ಸಹಪಾಟಿಗಳೊಡಂ. ಬಳಿಕಮಾ
ಅನುದಿನದ ಭಜನಾವಳಿಯು ಕ್ರಮವತ್
ನಡೆಯುವುದು ದಿನಚರಿಯ ಮುಕ್ತಾಯಗೊಳಿಪಂತೆ.
ಶ್ರೀಕಂಠದುಲಿ ಹರಿಯುತಿರೆ ದೇವ ನಾರದರೆ
ಕೀರ್ತಿಸುತಿಹರೊ ಎನಲ್ ಸುರಮ್ಯಮಯಮೆಂಬುವ
ಸಂಗೀತರಸಧಾರೆ ಹರಿವುದು ಭವನದ ಒಳ
ಮುಖ ಮರುದನಿಗುಡುವ ತೆರದಲಿ. ತುರುವಾಯಿಯೊಳ್
ಭಾರತದ ಭವ್ಯ ಭವಿತವ್ಯವಂ ಕುರಿತಂತೆ
ನುಡಿದರಿಂತು "ಗುರುಭಾಯಿಗಳೆ! ಕೇಳಿ, ಮುಂದಿನ
ವಿಚಾರದ ವಿಶ್ವಮಂ ಬೊಕ್ಕು ಕ್ರಾಂತಿಕಾರೀ
ಯೋಧರಾಗದಿರೆ "**ನ ಭೂತೋ ನ ಭವಿಷ್ಯತಿ**" ಎಂಬ
ಗತಿ ತಪ್ಪದು ಎನೆ ಅನ್ಯಮಲ್ತು. ಅದನೆಲ್ಲರ್
ಈಗಿನಿಂದಲೇ ಮನವರಿತು ಎದೆ ತುಂಬಿ ಸತ್
ಕಾರ್ಯಶೀಲರಾಗದೆ ಇರ್ದೊಡೆಲ್ಲಿ ಭಾರತ
ಸಾಮ್ರಾಜ್ಯಕೆ ಉತ್ತಮ ಭವಿಷ್ಯ? ಯುವಜನಾಂಗ
ಎಚ್ಚೆತ್ತುಕೊಳ್ಳದಿರ್ದೊಡೆಂತು ಭವಿತವ್ಯದ
ಭವ್ಯ ನಿರ್ಣಯಮೊ ಪೇಳಿ! ಜಡತನದ ಚಂದನ
ಬೊಂಬೆಗಳ್ ತಾನಾದ ವ್ಯಕ್ತಿತ್ವ ಮುಂಬರಿಯ-
ದೆಲ್ಲಿಂದೈವುದು ಉತ್ತಮ ಭವಿಷ್ಯ? ನಿಂನಿಮ್ಮ
ತರ್ಕವಿತರ್ಕಗಳ ಕಳ್ತರಿಗೆ ವಿಷಯಮಂ ಒರೆ
ಹಚ್ಚಿ ನೋಡಿ! ಬರಿ ಧರ್ಮ ಪ್ರಸಾರ ಮಾತ್ರಮೆ
ಸಾಲದು ಜನ ಜೀವನ ಪ್ರಗತಿಯ ಪ್ರಸಾರ
ಜೊತೆಜೊತೆಗೇ ನಡೆಯಲಕ್ಕುಂ. ಈದೇಶ ಸಾವಿರ
ನ್ಯೂನ್ಯತೆಗಳ ರಂದ್ರುಂಬಿಳ್ದು ಜಾಲಂದ್ರುಮೇ

ಆಗಿರ್ಪುದ ಕಾಣಿರಾ? ಸಾಮಾಜಿಕ ಶಿಥಿಲ
ರಾಜಕೀಯ ಶಿಥಿಲಗಳಿಂ ಆಡಳಿತ ಶಿಥಿಲ
ಎಂದೆನಲ್ ಅನ್ಯಮಲ್ತು. ಈದೇಶರಥಮಂ
ನಿಚ್ಚ ಕೋಟಿಕೋಟಿಕೈಗಳಿಂದೆಳೆದೆಳೆದೇ
ರಾಜ ಮಾರ್ಗಕ್ಕೆ ಹಚ್ಚವೇಳ್ಪುಂ. ತಳುವದಿರಿ.

"ಆಯಂ ನಾಭಾ ವದತಿ ವಲ್ಗುರ್ವೋ ಗೃಹೇ
ದೇವಪುತ್ರಾ ಋಷಯಸ್ತಚ್ಛೃಣೋತನ ।
ಸುಬ್ರಮಣ್ಯಮಂಗಿರಸೋ ವೋ ಅಸ್ತು
ಪ್ರತಿ ಗೃಭ್ಣೀತ ಮಾನವಂಶು ಮೇಧಸಃ ।"

ಅವರ ದಿವ್ಯಾತ್ಮದ ತುಡಿತ ಕುದಿತಗಳನಿಂತು
ಬಣ್ಣಿಸಿಹಳ್ ಸೋದರಿ ನಿವೇದಿತಾ.
"ಹಾ.....! ಸ್ವಾಮಿ
ವಿವೇಕಾನಂದರುಂ ಸಂನ್ಯಾಸಿ ಧರ್ಮಮಂ
ಸ್ವೀಕರಿಸಿ ಪ್ರಾಪಂಚಿಕ ಸಂಬಂಧಮಂ ಕಡಿ-
ದೊಗೆದು ತ್ಯಾಗ ಜೀವಿಯೈಸಿರ್ದೊಡಮವರಿಂಗೆ
ಭರತಭೂಮಿ ಹೃತ್ಕಮಲ ಕೋರಕಮಾದತ್ತು.
ಓವೊ! ಯಾವತ್ಕಾಲಂ ದೇಶಭಕ್ತಿ ಉಕ್ಕುಕ್ಕಿ
ಹರಿಯುತಿರ್ದುದು ಭಾವಧಾರೆಯಲಿ. ಆ ವದನ
ಮಂಡಲಂ ಚಿಂತನಾವೇಶಾವವೇಶದಲಿ
ಗಾಂಭೀರ್ಯದ ಕೆಂಗೆಂಪು ಮೂಡುತಲಿರ್ದತ್ತು,
ಒಡಲ್ ಸಿಡಿದೊಡೆದುದೊ ಎನಲ್, ಮಾತೃಭೂಮಿಯಾ
ಸ್ಥಿತಿಗತಿಯ ನೆನೆನೆನೆದು ಹಲುಬುತಿರ್ದರ್ ಮನಂ
ಮರುಗಿ. ಕಾರುಣ್ಯದ್ರವ್ಯ ಧಮನಿಧಮನಿಗಳಲಿ
ಭಕ್ತಿಯ ಝುರಿಯಾಗಿ ಹರಿದೊಡೇಂ, ಕಾಲ ಪಕ್ವತೆಯು
ಕೂಡಿಬರದೆ ಅಸಹಾಯಕ ಸ್ಥಿತಿಯಲಿರುತಿರಲ್

ವಿಧಿಯಿಲ್ಲಮಾದೊಡಂ 'ದೇಶಭಕ್ತಿ' ಎಂಬುದು
ಅವರ ಬಾಳಿನ ಬಾಳಾಗಿತ್ತು, ಉಸಿರಿನ ಉಸಿ-
ರಾಗಿತ್ತು . ಧನ್ಯೆ! ಭಾರತ ಜನನಿ ಸುಪುತ್ರನ
ಶ್ರೀಮಾತೆ! ವೀರಾತಿವೀರರ ಜನುಮದಾತೆ!....."
ನೈನಿಟಾಲಿನಿಂ ಅಲ್ಮೋರಕೈದರ್ ಸ್ವಾಮಿಜಿ.
ಅಹಾ, ಎಲ್ಲಿಂದ ಎಲ್ಲಿಯವರೆಗು ಕಣ್ಣರಳಿ
ಮಲರುವವೊಲ್ ಹಬ್ಬಿ ಹರಡಿರ್ದನಿಸರ್ಗ ಸಿರಿ
ಸೊಬಗಿನ್ನೈಸಿರಿ ಉಕ್ಕೇರಿಸಿತು ಹೃನ್ಮನಗಳಂ.
ಬಾನಂಚಿನ ಪಡುವೆಡೆಯೊಳ್ ಮನೋಧ್ಯಾನದಾ
ನೇಮಿಯೊಳ್ ಸೂರ್ಯೋದಯದ ಲಸತ್ ಗೌರವದಿ
ಗೋಚರಿಸಿತು ಉಷಃಸ್ಮಿತಂ. ಪ್ರಾತಃಪೂರ್ವದಲಿ
ಪ್ರತ್ಯುಷೆಯ ನಿಶ್ಯಬ್ದತೆಗೆ ಮನಮುದಿಸಿ ಸೊರ್ಕಿ
ಉಲಿಯಿತೊಂದು ನಲ್‌ಗೊರಳಿನ ಕರ್ಪುಕಾಮಳ್ಳಿ.
ಸನಿಹದೊಳ್ ಹೆಮ್ಮರದ ನೆತ್ತಿಯೊಳ್ ಕುಳ್ಳಿರ್ದ
ಮತ್ತೊಂದು ಮಾರುಲಿಯಿತು ಅದೆ ರಾಗವ ಹಾಡಿ.
ನಲ್‌ಕೊರಳ್ ದನಿಯ ಹಾಸು ಹೊಕ್ಕುಗಳಿಂದೆ ಆ
ವನಧಿಯೊಡಲ ನವಿರ್ ನಿಮಿರುವುದು ನಿಜ ತೋಷವ
ಸೆಳೆಗೊಂಡವೊಲ್. ಅಲ್ಲಿ ನಂದಿ ಮರದಿಂದಿತ್ತ
ಹೊನ್ನೆಮರದಿಂದತ್ತ ಎಲ್ಲಿ ಕಿವಿಯಿತ್ತೊಡನೆ
ಅತ್ತಣಿಂ ಒಯ್ಯನೊಯ್ಯನೆ ಕೇಳಬಹುದೊಂದು
ಸಿಳ್ಳಿರಿಯ ಕೋಗಿಲೆಯ ಸಿರಿದನಿ. ವನವಾರ್ಧಿಯ
ಪಚ್ಚ ಪಸುರಂ ಸಿಂಗರಿಸಿದ ಕುಸುಮ ಲೋಕಂ
ಪೊಸ ಪಲ್ಲವಪಾಣಿಗಳಿಂ ಸ್ವಾಗತ ಬಯಸಿರೆ
ಸಗ್ಗಧಾಮಮಂ ಪೋಲ್ದತ್ತು ನಿಸರ್ಗದೈಸಿರಿ
ಸೊಬಗಿನ ಪಿರಿನಾಡು. ಗಿರಿಶಿಖರಂಗಳ್ ಮುಗಿಲ್

ಮಂಜಿನ್ನೈಕಿಲ್ ರಜತ ಕಿರೀಟವ ಧರಿಸಿ ಮೆರೆವ
ಸಿಂಗರದ ಸಿರಿಯಲಿ ಮೆರೆದಿರೆ ಚೆಂಗದಿರ್ಗಳ್
ಚೆಲುವಾಂತ ಮುದ್ದಿಡೆ ಚೆಲುವಾಯ್ತು ಚೆಲುವನ್ನೇ
ಚೆಲುವುಗೊಳಿಸುವ ಮಾಳ್ಕೆಯಲಿ. ಕೊನೆಯಿರದ ಪರ್ಣ
ರಾಜಿ ಹಬ್ಬಿತ್ತು ಕಣ್ಗೆಡ್ಡಮಾಗಿ. ಬೆಟ್ಟದ
ಕಂದರಗಳ ಕೊರೆಕೊರೆದು ಇಳಿತರ್ಪ ತಿಳಿಜಲ
ಧಾರೆ ಮಿಂಚಿನ ಹೊನಲ್ ಮಿಂಚುವೊಲ್ ಥಳಥಳಿಸಿ
ಇಳಿಯುತಿರೆ ಹರಿವುದು ಮಧುರ ಮಂಜುಳಗಾನಂ.
ನೀರವ ವಿಭಾವರಿಯ ನೀಲಿಮಾ ಭಿತ್ತಿಯಲಿ
ಥಳಥಳಿಪ ಏರುರವಿಯ ಭುವನ ಮನೋಹರಿಯ
ದೃಶ್ಯ ಸಂಪದಂ ಮೆರೆದತ್ತು ಗಗನ ಪಟಲದ
ಮೇಲೆ. ಬೆಳ್ಮುಗಿಲ್ ಮುತ್ತಿ ಪುಬಾಳೆ ನೆಯ್ದಿರೆ
ದ್ವಿಗುಣಿತಮಾಯ್ತು ರವಿಯ ಶೋಭಾಶ್ರೈಲಿ. ಗಿರಿ
ಪದತಲದ ಜಲರಾಶಿಯಿಂ ಮೇಲೆ ಎಳ್ದವೊಲ್
ಸಪ್ತವರ್ಣಗಳ ಮಳೆಬಿಲ್ಲು ಏರಿತ್ತು ಗಗನದೇಶಕೆ.
ಭೂವ್ಯಾಕಾಶಗಳಿಂಗೆ ಸೇತುವೆ ನಿರ್ಮಿರ್ಚಿದೊಲ್
ಎಸೆದುದು ವರ್ಣರಂಜಿತವಾಗಿ. ಹೃದಯದ
ಹೊಂಗೊಡಂ ತುಂಬಿದುದು ಆನಂದ ಸಂಮೃದ್ಧ
ಭಾವದಿಂ. ಸುಗಂಧಾನಿಲಂ ಒಯ್ಯನೊಯ್ಯನೆ
ಸಂಯೋಜನಾಪೂರ್ವಕವಾಗಿ ಬಹಂ ಗಿಡುಮರ
ಅಣುತೃಣಗಣಗಳಲಿ ಮೂಸಾಡಿ ಮಲರಾಡಿ
ಮುದದಿ ಮುದ್ದಿಸುವ ಪಾಂಗಿನಲಿ. ಗುರುವರಂ ಆ
ಶಾಂತಿ ಸೊಬಗಿನಾ ರಸಪಾನಂಗೈದು ತಣಿದಿರೆ
ಸ್ವಸ್ಥಿಪಾನಗೈದೊಲ್ ತನುಮನಗಳಿಗೆ ಶಕ್ತಿ
ಸಂಚಯನಮಾಗಿ ದೈಹಿಕ ಸ್ಥಿತಿ ಸುಧಾರಿತ–

ಮಾಗತೊಡಗಿದುದು ಅನುಕ್ರಮವಾಗಿ. ಎನಿತೋ
ಬಗೆಯಲಿ ಪುರುಪು ಮೂಡಿತು ಮೈಗೆ. ಗುರುವರ್ಯರ್ಂ
ಮತ್ತೊರ್ಮೆ ಕಾರ್ಯ ನಿರತರಾದರ್ ತೋಷದಿಂ.
ಸಂದರ್ಶಕರಿಗೆ ವಿಶ್ವತೋಮುಖಿಜಾನಮಂ
ಹೃದಯಂಗಮವಾಗಿ ಬಿತ್ತರಿಸಿ ಮನಮನಂ
ತುಂಬುವರ್ ಹೊನ್ನಹೊಂಗೊಡಗೊಳಿಸೆ. ಕೆಲವೊರ್ಮೆ
ಘನನಿಬಿಡ ಪರ್ಣಾರ್ಣವದೊಳ್ ನುಸುಳ್ದು ಜಾನದ
ಧ್ಯಾನ ತೇಜಿಯನೇರಿ ಕಣ್ಮಾಯಮಾದಪರ್
ಆರ್ಗು ತಿಳಿಯದ ಪರಿಯಲಿ. ಹಸಿವುತೃಷೆಗಳಂ
ಲೆಕ್ಕಿಸರ್. ಪಗಲಿಡೀ ಕಳೆವುದಾ ನಿರ್ಜನರ
ನೀರವತೆಯ ನಲ್ದಾಣದಲಿ. ಬೈಗುಗಪ್ಪದು
ಮುಸುಂಗಿದ ಬಳಿಕ ಪಿಂದಿರುಗಿ ಬಂದಪರವರ್
ತಮ್ಮ ಬಿಡದಿಯ ಮನೆಗೆ.
ಅಂದು ದಟ್ಟಡವಿಯಿಂದೆ
ಪಿಂದಿರುಗಿ ಬರಲ್ ಕಡು ದುಃಖ ಜಾರ್ತೆಯದೊಂದು
ಕಾದಿರ್ದುದು ಎದೆಯೊಡೆವ ಪಾಂಗಿನಲಿ. ಪಾಶ್ಚಾತ್ಯ
ಪ್ರಾಣಪ್ರಿಯ ಮಿತ್ರನಿರುತಿರ್ದಾ ಗುಡ್ವಿನ್–ನು
ಮತ್ತಮಾ ಗುರು ಪಹಾರಿ ಬಾಬಾರವರು ಮಡಿದು
ನೇಪಥ್ಯವೇರಿದ ಘನಘೋರತರ ಸುದ್ದಿಯು
ಮುಟ್ಟಿದುದು ಕಿವಿಗಳಂ ಅಪ್ಪಳಿಸುವ ತೆರದಲಿ!
ಗುರುದೇವಂ ಸಂನ್ಯಾಸಿಧರ್ಮವಂ ಮರೆತರ್.
ದೃಢಗತಿಯ ಹೃನ್ಮನಗಳ್ ದ್ರವಿಸಿ ನೀರಾಗಿ
ಹರಿದುವು. ಕಣ್ ಕೋಡಿಯೊಳುಕ್ಕುವ ಒಡಲ ಕಡಲ
ಧಾರೆಯಂ ತಡೆಯದಾದರ್. ಅಪಾರ ಶೋಕದ
ಭಾರದಿಂ ಮಿಣ್ಣನುರುಳಿತು ಪೊಳ್ತು. ಸನ್ಮಿತ್ರ

ಮಹನೀಯನಾ ವ್ಯಕ್ತಿ ಚಿತ್ರ ಮನಃಭಿತ್ತಿಯಲಿ
ಸುಳಿಸುಳಿದುದು ಮರಳಿಮರಳಿ. ಚಿಂತಾಕ್ರಾಂತತೆ
ಹೃನ್ಮನಗಳಂ ಕಾಡಿದುವು ಮತ್ತೆ ಮತ್ತೆ.
   ಪ್ರಾಣಮಿತ್ರ ಪರಮೋಚ್ಛ ಕಾರ್ಯಕರ್ತ ಮತ್ತಂ
ಪರಮ ಭಕ್ತ ಶಿಖಾಮಣಿ ಎನಿಸಿರ್ದ ಗುಡ್‌ವಿನ್
ಇತ್ತೀಚಿನ ದಿನಗಳಲಿ ಪೆತ್ತಮ್ಮೆಯಂ ತವ
ಕುಟೀರಕೆ ಬರಿಸಿದ್ದಂ, ಭಾರತದ ವೇದಾಂತ
ಸಂಸ್ಕೃತಿಯ ಪರಿಚಯಂಬಡಿಸುವ ಪ್ರೀತ್ಯಾದರಂ
ಪಣ್ತು. ಆ ಮಾತೃಮಯಿ ವೇದಾಂತ ಸಂಸ್ಕೃತಿಯ
ಕಂಡುಂಡು ಒಡಲ್ ತಣಿಸುವ ಮುನ್ನಮೆ ಕುವರನ
ಘೋರ ಮರಣಮಂ ಕಾಂಬ ದುರ್ಯೋಗ ಲಭಿಸಿತು
ದುರದೃಷ್ಟವಶದಿಂದೆ. ಆ ತಾಯಿಯಂ ಕುರಿತು
ತೀವ್ರತರ ತಮ್ಮೊಡಲ ಸಂತಾಪ ಸೂಚಿಸುವ
ಪತ್ರವಂ ಉಲ್ಲೇಖಿಸಿದರಿಂತು ಗುರುದೇವ,

   "ನುಗ್ಗಿ ನಡೆಯಲೆ ಆತ್ಮ! ಮುನ್ನುಗ್ಗಿ ನಡೆ ಜಗದಿ
ಚುಕ್ಕಿ ಚೆಲ್ಲಿದ ನಿನ್ನ ಹಾದಿಯಲ್ಲಿ;
ನುಗ್ಗಿ ನಡೆ ಅಮೃತಾತ್ಮ ಕಾಲದೇಶಗಳೆಲ್ಲ
ನಿನ್ನ ಕಾಣ್ಕೆಯದೆಂದು ಮಸುಳದಲ್ಲಿ–
   ಶಾಂತಿ ಶುಭವದೆಂದು ನಿನಗಾಗಲಿ!
ನಿನ್ನ ಸೇವೆಯು ಸತ್ಯ, ನಿನ್ನ ತ್ಯಾಗವು ಪೂರ್ಣ,
ನಿನ್ನ ಒಲವಿನೆದೆ ತನ್ನ ಮನೆಯ ಕಾಣುವುದು.
ಕಾಲದೇಶವ ಕೊಲ್ವ ಚಿರ ಮಧುರ ಸ್ಮೃತಿಗಳವು
ದೇವಗರ್ಪಿತಮಾದ ಕುಸುಮರಾಶಿಗಳಂತೆ
ನೀನಡೆದ ಹಾದಿಯನು ಹಿಂದೆ ತುಂಬುವುದು!
   ಬಂಧಗಳ ಹರಿದೆನೆದೆ, ಆನಂದವನು ಸವಿದೆ

ಜನನಮರಣದ ರೂಪಧರಿಸಿ ಬಹ ಸತ್ಯದಲಿ
ಎಂದೆಂದು ಒಂದಾಗಿ ಸ್ಥಿರದಿ ನಿಂದೆ.
ನೆರವ ನೀಡುವ ನೀನು, ನಿಸ್ಸೀಮ–ನಿಸ್ವಾರ್ಥಿ.
ಬವಣೆ ತುಂಬಿದ ಜಗಕೆ ನಿನ್ನೊಲವ ಹರಿಸುತ್ತ
ಎಂದೆಂದು ಮುನ್ನಡೆದು ನೆರವ ನೀಡು!

ಅದರೊಡನೊರೆದ ಪತ್ರವೊಂದಿರ್ದುದೆಂತೆನೆ,
“ತಾಯಿ, ಆನವನ ಋಣಮಂ ಎಂದುಮೆಂದಿಗುಂ
ತೀರಿಸಲಾರೆನ್. ಅಂತುಮಲ್ಲದೆ ಎನ್ನೊಂದು
ಭುಜಬಲವೆ ಮುರಿಯಿತ್ತು. ಕಳೆಯಿತ್ತು. ಹಾಳಾಯ್ತು.
ಆರಾರ್ ಮರೆಯದಿರಲಿ ಗುಡ್ವಿನ್ನನ ಲೇಖನ ಕೃಷಿಯೆ
ಎನ್ನಯ ಬಹುತೇಕ ವಿಚಾರಧಾರೆಯಂ ಈ
ಜಗತ್ ಬೆಳಕಿಗೆ ಇತ್ತುದೆಂದು, ಮಿತ್ರ ಗುಡ್‌ವಿನ್.
ಮಹಾ ಮೇಧಾವಿ. ಘನವಂತ! ಆತನಾ
ನಿಸ್ವಾರ್ಥ ಶ್ರಮ; ನಿಜ ಭಕ್ತಿಯಂ ಕಾಂಬೆನೆಲ್ಲಿ?
ಬಳಲ್ಕೆಯದೇನೆಂಬುದನರಿಯದ ಮಿತ್ರನಂ–
ಕರ್ಮಯೋಗಿಯಂ ಕಳೆದುಕೊಂಡಾನು ಅಪಾರ
ದುಃಖಿತನಿಹೆ. ಇತರರಿಗಾಗಿಯೇ ಜನ್ಮಿಸಿಹ
ಕೆಲವೇಕೆಲರೊಳೊರ್ವನಂ ಕಳೆದು ಕೊಂಡಿರ್ಪ
ಸಮಾಜವೆಮ್ಮ ಬಡವಾಯ್ತು! ಜಗತ್ತು ಬಡವಾಯ್ತು!”
ಸ್ವಾಮಿ ಪುರುಷೋತ್ತಮಾನಂದರಿಂ ಕನ್ನಡಿಸಿದ
ಕೃತಿಯಿದು, ಕನ್ನಡಿಗರ ಹೃದಯ ತುಂಬಿಸಲ್.
ಕಳೆದುವು ದಿವಸ ಮಾಸಗಳ್ ಸುಖದುಃಖಗಳ
ಹೊಳೆ ಹರಿಸಿ. ಮಿತ್ರಮಂಡಲಿಯು ಸುತ್ತಮುತ್ತಲ್
ಕೂಡಿರುತಿರೆ ಗತಕಾಲದ ವಿಚಾರ ವಾಹಿನಿ
ತಂಗಿದುದು ಅಲ್ಲಲ್ಲೆ. ಮುಂದಿನ ಬಹು ಮೂಲ್ಯ

ಪ್ರಸಂಗಗಳಲಿ ನೆರೆ ಮುಳುಗಿ. ಆದೊಡೇಂ ಆ
ಪರಮಾಪ್ತ ಪ್ರಾಣಗೆಳೆಯನ ನಷ್ಟಮಂ ತುಂಬುವ
ಪುಣ್ಯವೊದಗಲಿಲ್ಲಂ ಗುರುದೇವನ ಬಾಳ್ಮೆಗೆ.

"ಸ್ಥಾನೇಷು ಶಿಷ್ಯನಿವಹೈರ್ವಿ-
ಯುಜ್ಯಮಾನಾ ।
ವಿದ್ಯಾಗುರುಂಹಿ
ಗುಣವತ್ತರಮಾತನೋತಿ ॥"

ಹರಿಃ ಓಂ ತತ್ ಸತ್

❋ ❋

ಏಕೋನಚತ್ವಾರಿಶತೋಲ್ಲಾಸಂ

ಕ್ಷಮಯಾ ಧರಿತ್ರೀ

ಪೂರ್ಣ ಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣ ಮದುಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವ ಶಿಷ್ಯತೇ ॥

ಸಾಯಂ ಸೊಗಸಿನ ವಿಪಿನ ಧಾತ್ರಿಯಲಿ ಮೂಡಿದ
ಕುಸುಮ ಸೌರಭ ಗೋಚರಿಸದಿರ್ದೊಡೇಂ ಕಣ್ಗೆ?
ಘ್ರಾಣಕ್ಕೆತಂದುದಯ್ ಕೇತಕಿಯೆಲರ ಕಂಪು
ಕೂಡಿ. ಮೊಲ್ಲೆ ಜಾಜಿಗಳ ಸುಗಂಪು ಸೊಗಸಾಯ್ತು.
ಮುಂದೆ ದೀಪಾಲೋಕ ಸಂಶೋಭೀ ಕಾಶ್ಮೀರ
ದೇಶಾಂತರಿತ ಬಂಧುರಮಯ ತುಮುಲ ಘೋಷದ
ಮಂದ್ರಮರ್ಮರಂ ನೀಲ ಜಲಧಿಯ ಮೊರೆವೆರೆಸಿ.
ಪಂಚೇಂದ್ರಿಯಂಗಳಂ ಮಿಡಿದು ಮೀಂಟಿ ಪುಳಕಿಸಿ
ಸೆಳೆಯಿತ್ತು. ಪೊಸತೆಂಬವೊಲಾ ಕಾಶ್ಮೀರ ದೇಶ
ಕ್ಷಮಯಾ ಧರಿತ್ರಿಯೆನೆ ಕಂಗಳಿಗೆ. ನಭದಲಿ
ವಿರಳವಾಗಿರ್ದ ಚುಕ್ಕಿಗಳ್ ಕಳ್ತಲೆಯ ತೆರೆ
ಗತಿಗೆ ಮಿಂಚುಣಿಸುವ ಪರಿಯಲಿ ಲೋಕದಾಚೆಗೆ
ಮಿಕ್ಕು ಮೀರಿ ಮೂಡಿದುವು ಕಿಕ್ಕಿರಿಗೊಂಡವೊಲ್
ಅಂಬರಕೆ ಕೆಚ್ಚುದಿಸಿ ಕಿಡಿಕೆತ್ತಿದಂತೆ! ಮುನ್
ತನಗೆ ಮೈದೋರ್ದುದಾಶಾ ದಿಗ್ ತಟಾಂತದೆಡೆ
ಶಾಂತಿರೂಪ ಶೋಭೀ ದೇವದಯದ ತೆರದಲಿ
ಹರಡಿತ್ತೈ ಚಂದ್ರೋದಯದ ಕೋಕನದ ಕಾಂತಿ,
ಜಯಶ್ರೀಯ ಕೈಯಾರತಿಯ ರೋಚಿಯೋಕುಳಿ

ತಳ್ತವೊಲ್. ಶಾಂತಿಪ್ರಶಾಂತಿವಾಶಾಂತಿಯಾ
ಅವತರಣಮಾಯ್ತು ಲೋಕೋತ್ತರದ ರೂವಿನಲಿ.
ಕಾಶ್ಮೀರ ರಾಜ್ಯದಲಿ ಅದ್ದೂರಿಯ ಸ್ವಾಗತ
ದೊರೆಯಿತು. ಪುರಪ್ರಮುಖ ಜನರೈದರ್ ದರ್ಶನ
ಭಾಗ್ಯಮಂ ಬಯಸಿ. ಬಿಡದಿಯ ಬಳಿಯಲಿ ತುಂಬಿತು
ಜನರಾಶಿ ಮುನ್ನಿನೊಲ್. ಐದಾರು ದಿನಮಾನ
ಕಳಿದುವು ತಮಗರಿಯದ ಮಾಳ್ಕೆಯಲಿ. ಶ್ರೋತೃಗಳ
ಅಮಿತ ಒತ್ತಡಮಂ ಭರಿಸಲಾರದೆಯೆ ತಾನ್
ಪೊರಡುವೊಡೆ ಸಿದ್ಧತೆ ನಡೆಸಿದರ್ ಗುರುವರ್ಯರ್ಂ.
ಸಾಯಂ ಸಮಯದ ಭಜನ ಮಂಡಳಿಯೊಳವರ
ಶ್ರೀಕಂಠದುಲಿ ಮೊಳಗಿತು ಸುಶ್ರಾವ್ಯಭಾವದಲಿ.

"ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾಽಮೃತಂಗಮಯ
ಓಂ ಶಾಂತಿ ಶಾಂತಿ ಶಾಂತಿಃ ॥"

ಒಂದರಮೇಲೊಂದರಂತೆ ಸುಮಧುರತಮ
ವಾಣಿಯಲಿ ಎನಿತೆನಿತೊ ಸಂಗೀತೆ ಮತ್ತಮಾ
ಶ್ಲೋಕಗಳ್ ಹಾಡಿ ತಣಿಪರ್ ಮಿತ್ರ ಮಂಡಲಿಯ.
ಭಕ್ತಿಧಾರೆ ಹರಿವುದು ಧ್ಯಾನಗಾಂಭೀರ್ಯದಲಿ.
ಪೊಳ್ತುರುಳಿದುದರ ಪರಿವೆಯಿರದವೊಲ್ ಕಳೆವುದು
ಧ್ಯಾನಮುಗ್ಧ ಸಮಯಂ. ಮತ್ತೆರಡುದಿನಗಳಲಿ
ರಾವಲ್ಪಿಂಡಿಗೆ ಪೊರಮಟ್ಟರ್, ಎಲ್ಲರೊಡಗೂಡಿ.
ಅಲ್ಲಿಯುಂ ಸತತ ಕಾರ್ಯಕ್ರಮಗಳೊದವಿದುವು
ಬಿಡುವು ದೊರೆಯದ ಪರಿಯಲಿ. ಮತ್ತಂ
ದರ್ಶಕರ್ ಬಂದಪರ್ ಮೇಲಿಂದಮೇಲೆ. ಆ

ಬಿಡುವಿರದ ಕೆಲಸ ಕಾರ್ಯಗಳಿಂ ಶರೀರದಲಿ
ಬಳಲಿಕೆಯು ಮೂಡಿದುದು ತಾನರಿಯದ ತೆರದಲಿ.
ಅಲ್ಲಿಂದ ಮುಂಬಯಣ ಸಾಗಿದುದು ಶ್ರೀನಗರ
ಧಾತ್ರಿಯಂ ಗುರಿಗೊಂಡು. ದೂರದಿಂ ಕಣ್ಸೆಗೆದ
ಭಾರತದ ಶಿರೋದೇಶ. ಮುಗಿಲ್ಮಂಜಿನ ಮುಕುಟ
ವೊತ್ತ ಪರ್ವತಾಗ್ರಗಳ್ ಪಚ್ಚೆ ಪಟ್ಟುಡೆಯುಟ್ಟ
ಗಿರಿಬೆಟ್ಟಗಳ ಹೇರಾಶಿ. ಗುರುವಿಗಿದು ಪೊಸತೇಂ
ಅಲ್ಲಮಾದೊಡಂ ನಿಸರ್ಗ ಪ್ರೇಮಿಯಾದ ಮನ
ಮತಿಗಳೇ ಮಮ್ಮಲಿಂ. ಆ ನಿಸರ್ಗಸೌಂದರ್ಯ
ರಾಶಿಯಲಿ ಸುಖಮುಚ್ಚೆಗೆ ಸಂದೊಲ್ ಶರೀರದ
ವ್ಯಾಪಾರವೇ ತಟಸ್ಥವಾದುವೊ ಎನಲ್ ನಸು
ವೊಳ್ತು ಭಾವಸಮಾಧಿಗೆತ್ತರ್ ಗುರುವರ್ಯಂ.
ತನುವೆಂತು ಸಂಚಲಿಸಿದುದೊ ಮನವದೆಂತು ಘನ
ವೆತ್ತುದೊ ಎನುತಚ್ಚರಿಬಡುವೊಲ್ ಮುಗಿಸಿದರಾ
ಮುಂದಿನ ಪಯಣಂ. ಶ್ರೀನಗರದೊಳ್ ಕಳೆದಿರ್ದುವು
ಒಂದೆರಳ್ತು ದಿನಮಾನಗಳ್. ಒರ್ಮೆ ಮುಂಬೆಳಗು
ಘು[illegible]ವಾಗಳೆ ಪೊರಗುಯ್ದು ಗುರುವರಂ ಆ
ಬೆಟ್ಟ ಸಮುದಯದಲಿ ಪದಚಾರಣ ಗೈಯುತ್ತೆ
ಗಿರಿಬೆಟ್ಟವಲಯದಿ ನುಸುಳ್ದು ಕಣ್ಮರೆಯಾದರ್,
ಪಗಲುರುಳ್ದೊಡಂ ಸುಳಿವಿಲ್ಲ. ನಿಶೆಯುರುಳುರುಳಿ
ಮುಂಬೆಳಗುಬರುವಂದು ಬಂದಪರೆಂದೆಂದು, ಮತ್ತೆದೆ
ಬೈಗುಪೊಳ್ತಿನಲಿ ಬಂದೆಬಂದಪರೆಂದೆಂದು
ಕಳೆದುವು ದಿನಗಳ್ ಮೂರು. ಮಿತ್ರರ್ ಶಿಷ್ಯರ್
ಕಾದಿರ್ದು ಸೋಲೊಪ್ಪಿ ಭಯವಿಹ್ವಲತೆಯಲ್ಲಿ
ಮುಳುಗಿ ದಿಕ್ಕಾಣದೆ ತಹತಹಿಸುತಿರೆ ಸಂಜೆಯ

ಕೆಂಬೊಳ್ತು ಕಂತು ಮಸುಗತ್ತಲ್ ಕವಿವಮುನ್ನ
ಪಿಮ್ಮಗಳಿದರ್ ಸ್ವಾಮಿ ವಿವೇಕಾನಂದರುಂ
ಬಿಡದಿಗೆ. ಭಯದ ತೆರೆ ಸರಿಯಿತು. ಬೆದರಿ ಬೆದರಿ
ಬೆಂಡಾಗಿ ಕರ್ಪುತಳೆದ ಶಿಷ್ಯ ಮಹೋದಯರ್
ತೋಷದಿಂ ದಳಬಿರಿದ ಮೊಲ್ಲೆಗಳ ಹೂವಾದರ್.
ಗುರುವರಂ ಧ್ಯಾನಗಾಂಭೀರ್ಯದಿಂದಿರುತಿರಲ್
ತಿಳಿದೊ ತಿಳಿಯದೆಯೊ ಸಂಪೂರ್ಣ ಸಂಕಲ್ಪದಿಂ ಪರಮ
ಗಂಭೀರ ಮಹರ್ಷಿಗಳಾದಪರ್ ಪೊಳ್ತಲ್ಲದ
ಪೊಳ್ತಿನಲಿ. ಮುಂದೇನ್ ಗೈದಪರ್? ತಮ್ಮಿಚ್ಛೆ
ಏನಿಹುದು? ಪೋಪುದಲ್ಲಿಗೆ? ಗುರಿಯು ಎತ್ತಣಂ?
ಎಂಬುದದು ಗಹನಾತಿಗಹನಂ. ವರಶಿಷ್ಯರ್
ಮಿಳ್‌ಮಿಳ್ಳನೆ ನೋಳ್ಪುದಲ್ಲದೆಯೆ ಬೇರೆ ಗತಿ
ಇಲ್ಲವಾಯ್ತು. ಅದನರಿದು ತನುಮನಗಳ್ ತುಂಬಿ
ಸೋದರಿ ನಿವೇದಿತೆಯುಮಿಂತು ಲೇಖಿಸಿರ್ಪಳ್,
"ಅವರ್ ಜನ್ಮತಃ ಗೊತ್ತುಗುರಿಯಿಲ್ಲದಿರ್ಪುದು
ನಿಜ. ಅಕಸ್ಮಿಕವೆನ್ನಲಾರೆನೆನ್. ಅವರೊಂದು,
ಓದಿದೋಲೆಯಂ ಕುರಿತು ಆನೆಂದ ಮಾತಂ
ಕೇಳ್ದು ಪ್ರಾಪಂಚಿಕ ಹಿತವಾದಂ ಆಲೈಸುತೆ
ಕನಲ್ದು ಸಿಡಿದೆಳ್ದು ತಿಳಿಗೆಂಪು ತಳೆದ ವದನ
ಶ್ರೀಯಿಂ ದುರುಗುಟ್ಟಿ ಕಣ್ ಅರಳಿಸಿ ನೋಡುತ್ತೆ
ನುಡಿದರಿಂತು "ಕ್ರಮವಂತೆ ಕ್ರಮ! ಏವೊಳ್ತು
ಕ್ರಮ! ಕ್ರಮದಾಚರಣೆಯಿಂ ಪಾಶ್ಚಾತ್ಯರುಂ
ಒಂದು ಮತ - ಒಂದು ತತ್ತ್ವ ಏನಾದೊಡಂ ಸೃ-
ಷ್ಟಿಸಿದರೇಂ? ನಿಮ್ಮೊಳಗೆ ಕ್ಯಾಥೋಲಿಕ್ ಪಂಥಿಯ
ಸಾಧುಸಂತರ್ ಸೃಷ್ಟಿಸಿರ್ದ ಮತ ಮಾತ್ರಮೇ

ಉಳಿದು ಬೆಳೆದು ಬಾಳುತಿದೆ. ಅಂದೊಡೆ,
ಅವರಾವ ಕಾರ್ಯಕ್ರಮದ ಗುಲಾಮರಿರಲಿಲ್ಲ.
ಕ್ರಮಗಳ ದಾಸರಿಂದೆ ಎಂದೆಂದಿಗುಂ ಧರ್ಮ
ಪ್ರಚಾರಮಾಗದು...."
"ಅಹ ಆ ಮಾತುಗಳ
ದಿಟ್ಟತನಮಂ ಆನ್ ಮರೆಯೆ; ನಿಜದಿಂ ಮರೆಯೆ..."
ಉರುಳಿದುದು ದಿವಸಮಾನ, ಕಳೆದುದೊಂದು ಚಾಂದ್ರ
ಮಾನ ಸತ್ ಶಾಂತಿಯಲಿ. ಸಂಯಾತ್ರಿಕರ್ ವಿವಿಧ
ತೀರ್ಥಂಗಳಿಗೆ ಪೋಗಿ, ಎಲ್ಲವಗೆಯ ಸುಂದರ
ಬಂಧುರ ಗುಡಿಗೋಪುರಗಳ್ ಸ್ತೂಪಗಳ್ ಭವ್ಯ
ದೇಗುಲಗಳ್ ಕಂಡಕಂಡಲ್ಲಿ ಭಕ್ತಿ ಪೂಜೆಯಂ
ಸಲಿಸಿ ದಂಡವತ್ ನಮಸ್ಕಾರಂಗೈದು ಪ್ರಸಾದ
ತೀರ್ಥಗಳ್ ಸ್ವೀಕರಿಸಿ ಮುನ್ನಡೆವರ್ ಒಗ್ಗೂಡಿ.
ಮಹಾ ಪರ್ವತ ಪ್ರದೇಶಗಳ ದಿಬ್ಬವೇರಿ
ದಿಬ್ಬವಿಳಿದು ಮೇಣ್ ನದಿ ತೊರೆ ಕಂದಕಗಳನುಂ
ದಾಂಟಿ ಶ್ರಮವನ್ನೆ ಶ್ರಮಿಸಿ ಬೆಮರ್ಬಸಿದುದೇಹ
ದಂಡಮಂ ದಣಿಸಿ ಆಗಸ್ಟ್ ಎರಡನೆಯ ತೇದಿ
ಅಮರನಾಥನ ಪುಣ್ಯಕ್ಷೇತ್ರಮಂ ಗುರಿಗೊಂಡು
ಹಿಡಿದರಾ ದೀರ್ಘಾತಿದೀರ್ಘಪಥವಂ. ಸದಾ
ಕಾಲಂ ಮುಗಿಲ್ಮಂಜುಗಳ್ ಮುಸುಂಕಿ ದಟ್ಟೈಸಿರೆ
ಅತ್ಯದ್ಭುತ ಕಮನೀಯ ಕಠೋರಮಾದೃಶ್ಯ
ದೇವೇಂದ್ರ ಸನ್ನಿಧಿ. ಮಹಿಮಾಮಯ ಮಹೋನ್ನತ
ಪ್ರಕೃತಿವೈಭವೋಪೇತದೈಶ್ವರ್ಯ ರಾಶಿಯು
ಎತ್ತೆತ್ತಲುಂ ಕಣ್ಮನಗಳಿಂಗೆ ಅಪ್ಪಳಿಪುದು.
ದೂರದೂರದಾ ಕಾಲ್ ಪಥದಲಿ ನಡೆನಡೆದು

ಸೋತು ಅಲ್ಲಲ್ಲಿ ಕುಳಿತು ವಿಶ್ರಮಿಸುವ ಪೊಳ್ತು
ಒದವಿಬರೆ ಸ್ವಾಮಿಜಿ ಸರಳ ಸರಸ ಸವಿಮಯ
ಸಂಭಾಷಣೆಯಲಿ ಮುಳುಗಿ ನಲಿವರ್ ಎಲ್ಲರಂ
ನಗಿಸಿ. ಪಯಣದ ಬಳಲ್ಕೆಯಂ ಕಳೆವರ್ ಸ್ನೇಹ
ಪಾಶವಂ ಬೀಸಿ, ಮಾತಿನ ಬೆಲೆಯನನುಕರಿಸಿ
ನುಡಿಸಿದರ್ "ಮಿತ್ರರೇ ಕೇಳಿ ವೇದವಾಕ್ಯಂ,

"ತಾಶ್ಚವಾಚಃ ಸಭಾಯೋಗ್ಯಾಃ
ಯಾಶ್ಚಿತ್ತಾಕರ್ಷಣ ಕ್ಷಮಾಃ ।
ಸ್ವೇಷಾಂ ಪರೇಶಾಂ ವಿದುಷಾಂ
ವಿದ್ವಿಷಾಮ ವಿದುಷಾಮತಿ ॥"

ಮುಂದೆಮುಂದೆ ಬಲು ಮುಂದೆ ಸಾಗಿತು ಪಯಣದಾ
ಮುಂಪಥಂ. ಅಸಮ ಪಥ, ಮಂಜುಮುಸುಕಿದ ಬೆಟ್ಟ
ಗುಡ್ಡಗಳ ತಾಣ. ತಾಳಲಾರದ ಚಳಿಯಿಂದೆ
ಮೈಕೈ ಕೊರೆತ, ಅಲಕನಂದಾ ಸರಸ್ವತಿ ಮತ್ತಂ
ಬಾಗೀರಥಿ ನದಿಗಳ ಮಹೋನ್ನತ ಘನ ಪ್ರವಾಹ
ಭೋರ್ಗರೆಯುತ ಹರಿಯುವ ದೃಶ್ಯಮಾನಮಾದಾ
ಚಿತ್ತಾರದ ಪರಿವೀಕ್ಷಣೆಯೊಳ್ ಮನವಂ ನಟ್ಟು
ನಾಂಟಿದರ್. ಹಾದಿಯ ಕೆಲದಲಿ ಗವಿಯೊಳಗೊಳಗೆ
ಮೈವೆತ್ತ ಘನಮಂಜಿನೈಕಿಲ್ ಸ್ತೂಪಗೊಳ್ಳುತೆ
ಲಿಂಗದಾಕಾರದಲಿ ಜೃಂಭಿಸಿದತ್ತು ಭಕ್ತಕುಲ
ಕೋಟಿಗಳ ಹೃನ್ಮನವ ಸೆಳೆದುನ್ಮನಗೊಳಿಸುವ
ವೈಭವೀಕರಣಮಾಗಿ. ಇದೇನ್ ವೆಳ್ಳಿಯೊಳ್
ನಿರ್ಮಿತಮೊ ಎನಲ್ ಥಳಥಳಿಸುತಿರ್ದುದು ಕಂಗಳ್
ಸೆಳೆಯುವಂತೆ. ಗುರುವರ ವಿವೇಕಾನಂದರುಂ

ಶಿರಸ್‌ಬಾಗಿ ಗವಿಯೊಳಗೊಳಗೆ ನುಸುಳ್ದು ಮಂಜಿನ
ಲಿಂಗಕ್ಕೆ ದಂಡವತ್ ಪ್ರಣಾಮ ಸಲಿಸಿದರ್
ಭಕ್ತಿಯಾವೇಶದಲಿ. ಉದ್ದಂಡ ಶರೀರವು
ಗೈದ ಉದ್ದಂಡ ವಂದನೆಯ ದೃಷ್ಯವೈಭವ
ಕಣ್ಮನಂಗಳಂ ಸೆಳೆಯೆ ಪುಳಕಿತಳಾದ ಭಗಿನಿ
ನಿವೇದಿತಾ ಅಚ್ಚರಿಯ ನೋಟಬೀರಿ 'ಎಂತಹ
ಅಮೋಘ' ಎನುತೆನುತೆ ತನುಮನಂ ಪುಳಕಿಸಿದಳ್.
ಗುರೂಜಿಯು ಪ್ರಣಾಮ ಪ್ರಧಾನಗೈಯುವೊಡೆ
ಎನಿತು ಶಾಂತಿರಸಮುಂಡರೊ ಎನಲ್ ಪ್ರಶಾಂತ
ಮುಗ್ಧತೆಯಲಿ ಗಳಿಗೆಗಳಿಗೆಗಳ್ ಸರಿದುವು ಗತ
ಕಾಲಕೆ. ಮುಗಿದ ಮನ ಮುಗಿದ ಪ್ರಾಣ ಎನಲವರ
ಭಕ್ತಿಯಂ ಅಳೆಯಲಕ್ಕುಮೆ? ಗವಿಯ ಬಾಗಿಲೊಳ್
ನಿಂತು ಪ್ರಕೃತಿಯಾಮಹೋನ್ನತ ಮಹದೈಶ್ವ-
ರ್ಯದ ಮೇಲೆ ನೆಟ್ಟ ನಿಟ್ಟಾಲಿಯಾಗಿ ತಟ್ಟನೆ
ಉದ್ಗರಿಸಿದರ್ 'ಅಹಾ, ಎನದ್ಭುತ ಸತ್ ಶಾಂತಿ!
ಎನದ್ಭುತಮಯ ಈ ಜಗತ್ತು? ಇದರ ಮುಂದೆ
ನಾವೆತ್ತ? ನಾವೆತ್ತ?? ಸೋದರೀ ಯೋಚಿಸಿ ತಿಳಿ!
ನೀ ಕೇಳ್, ಇನ್ನೊರ್ ವಿಷೇಶಮಂ ಸೋದರೀ,
ತಿಂಗಳಾರರಾ ಮುನ್ನಂ ದೇಗುಲಮಿದನುಂ
ಮಾಗಿಯ ಸಲುವಾಗಿ ಕದ ಮುಚ್ಚುವರ್, ಅರ್ಚಕ
ಜನಗೋಷ್ಠಿ.ಅಂದು ಉರಿಸಿರ್ದನಂದಾದೀಪವುಂ
ಇಂದು ಕದ ತೆರೆವಾಗಳ್ ಉರಿಯುತಿರ್ಪುದಂ ನೀಂ
ಕಾಂಬೆ. ಸರ್ವತ್ರ ಸದಾ ಉರಿವ ಜ್ಯೋತಿರ್ಪುಡಿಯೆ
ನಂದಾದೀಪ ಎನಿಪುದು. ಈ ಜ್ಯೋತಿದರ್ಶನಂ
ಅಮರನಾಥನ ದರ್ಶನದನಿತೇ ಎರಿದು ಜನ

ಗಣಮನಕೆ. ಅಂತೆಯೇ ಮಂಜಿನೈಕಿಲ್ ಲಿಂಗ
ಈ ಶ್ರಾವಣಪೌರ್ಣಮಿಯಂದೆ ಮೈದುಂಬುವುದು
ದಿವ್ಯಮುಹೂರ್ತವನಾರೈದು! ಹಲಕೆಲ ದಿನಗಳಿಂ
ಮೊಳೆಮೊಳೆತು ಇಂದಿಗೆ ಪರಿಪೂರ್ಣಗೊಳುವ ಲಿಂಗ
ಇನ್ನೆಂಟು ಹತ್ತಾರು ದಿನಗಳಲಿ ಕರಕರಗಿ
ನೀರಾಗಿ ಪೋದಪುದು. ಕಾಲಾನುಕಾಲದಿಂ
ನಡೆದು ಬಂದ ದೈವಾಂಶ ಸಂಭೂತ ವ್ಯಾಪಾರ
ಮುಂದೆಯುಂ ನಡೆವುದು ಜಗತ್ತು ತನ್ನ ಅದ್ಭುತ
ಅಸ್ತಿತ್ವವಂ ಕಳೆದುಕೊಳ್ವನಕ. ಇದು ಉದ-
ಯಾಸ್ತಮಾನಗಳನಿತೆ ಕಟು ಸತ್ಯ ಸೋದರೀ!
    ಕೌಪೀನಧಾರಿ ಸ್ವಾಮೀಜಿಯ ಮೆಯ್ಯಂ ಮುಟ್ಟಿ
ಮುದ್ದಿಸಿದ ರವಿರಶ್ಮಿಗಳ ಲೇಪದಿಂ ಮಿಂಚಿ
ಮಿನುಗಿದುದು ಮಿಸುನಿ ದೇಹದ ಯಷ್ಟಿ. ಭಾವನಾ
ವೇಗದಲಿ ವದನಾರವಿಂದದೊಳ್ ಸಿತಸ್ಮಿತ
ಬೆಳುದಿಂಗಳ್ ಹರಿಸಿ ನುಡಿದರಿಂತು ಸ್ವಾಮೀಜಿ,

"ಯೋಗರತೋ ವಾ ಭೋಗರತೋ ವಾ
ಸಂಗರತೋ ವಾ ಸಂಗವಿಹೀನಃ ।
ಯದ್ಯ ಬ್ರಹ್ಮಣಿ ರಮತೇ ಚಿತ್ತಂ
ನಂದತಿ ನಂದತಿ ನಂದತ್ಯೇವ ॥"

ಈ ಅದ್ಭುತ ಜಗದೊಳ್ ಬ್ರಹ್ಮಜ್ಞಾನವೇ ಸರ್ವ
ಶ್ರೇಷ್ಠ ಕಣಾ! ಬ್ರಹ್ಮಾಂಡ ಜ್ಞಾನವು ಅಡಿಗಲ್ಲು.
ಇತರಿತರ ಪ್ರಜ್ಞಾನದ ಪ್ರತಿ ಪಂಕ್ತಿ ಪಂಕ್ತಿಯ
ಸಂಚಾಲನೆಗೆ ತೋರ್ಪುದಿದುವೆ ವಿಶ್ವಪಥವಂ!

"ಜಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ
ಯಜ್ಜ್ಞಾತ್ವಾನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ ॥"

ಎಂದಿರ್ಪನ್ ಶ್ರೀ ಕೃಷ್ಣಪರಮಾತ್ಮ ತಿಳಿಯಿರಿ.
   ಸಾರಿಗೆಯ ಸೌಕರ್ಯಮಿರದ ಕಾಲಮಾನಂ.
ಕಲ್ಲು ಮುಳ್ಳು ಮಂಜುಗಳ್ ತುಂಬಿದ ಕಠಿಣತರ
ಪಥವಲ್ಲದ ಪಥದಲಿ ಸಾಗಿದುದು ಮುಂಬಯಣ
ಮುಂದೆ ಮುಂದೆ. ಗುರುದೇವನ ಮನತುಂಬಿದ
ಸದ್‌ಭಕ್ತಿರಸ ಘನಿಸುತಿರೆ ರೋಮ ರೋಮದಲಿ
ಅಗ್ನಿ ಸ್ಫುಲಿಂಗಗಳ್ ಹೊಮ್ಮಿ ಜ್ಯೋತಿರ್ಕಿಡಿಯು
ಚಲಿಸಿದವೊಲ್ ಸಂಚಲಿಸಿತು ದಿವ್ಯ ವಜ್ರಕಾಯ,
ವೀರೋಚಿತವಾಗಿ. ಸಮಯೋಚಿತವಾಗಿ. ಆ
ಅಂಕುಡೊಂಕು ಹಾದಿಯ ತಿರುವುಮುರುವುಗಳಲ್ಲಿ
ನಿಂತು ಕೊನೆಯಂ ಕಂಡರಿತು ತೋರ್ದು "ಅದೊ, ನೋಡಿ!
ಅಮರನಾಥ ಗುಡಿ ಈ ತಿರುವಿನೊಳ್ ಕಾಣುತಿದೆ!
ಎಲ್ಲರತ್ತ ಕೊರಳೆತ್ತಿ ಕಣ್ ಹೊರಳಿಸಿ ನೋಡಿ."
   "ನಿಜವೇ ನಿಜ! ಇಲ್ಲಿಗೆ ಸ್ಪಷ್ಟವಾಗಿ ಕಾಂಬುದು!
ಇಲ್ಲೊಂದಿನಿತು ವಿಶ್ರಮಿಸಿ ಪೋದೊಡೊಳ್ಳಿತೆನೆ
ನೀವ್ ಒಪ್ಪುವಿರಾ? ಅಹ ಅಮೋಘ ದೃಶ್ಯವಂ
ಇಲ್ಲಿಂದ ನೋಳ್ಪುದೇ ಚೆಂದ! ಏಂ ಸೊಗಸಾದ
ಚಿತ್ರಣಂ!"
            ಎಲ್ಲರಲ್ಲಿ ಕುಳಿತಿರೆ ಮನನೆಟ್ಟು
ತಂಗಾಳಿಯ ಸೇವೆಯು ಸಂದುದು ಮನೋಜ್ಞವಾಗಿ.
ನಸುವೊಳ್ತು ಸುವಿಶ್ರಾಂತಿಯ ಬಳಿಕ ಅಲ್ಲಿಂದ
ಪೊರಮಟ್ಟರ್ ಮುಂಪಥವಿಡಿದು. ಪಜ್ಜೆಪಜ್ಜೆಗು
ಮುಂಬರಿಯುತಿರೆ ಪಥ ಅಮರನಾಥ ದರ್ಶನಂ
ಸಮೀಪಗತಮಾದತ್ತು ತನುಮನ ತುಡಿಯುವೊಲ್.
ಜೊತೆಜೊತೆಗೆ ಸಂಯಾತ್ರಿಕರುಂ ಸ್ಥಳೀಕರುಂ

ಕೂಡಿ ಗಜಿಬಿಜಿಯಾದುದು ದೇಗುಲದ ಪರಿಸರಂ!
ಪ್ರಸ್ಥಾನ ನಗಾರಿಯು ಬಾಜಿಸಿತು ಅಂಬರಂ
ಧಣಧಣಿಸುವಂತೆ!! ಇತರ ವಾದ್ಯಗಳಪ್ಪ ಶಂಖ
ಗಂಟೆ ಜಾಗಟೆ ತಾಳ ಮದ್ದಳೆಗಳ್ ಒಗ್ಗೂಡಿ
ಮೊಳಗಿದುವು ಗಂಭೀರ ದನಿಯಲಿ. ಸ್ವಾಮೀಜಿ
ಹೃದಯಾಂತರಿತ ಭಾವನಾವೇಶದಲಿ ಕಣ್
ಮುಗಿದು ಕರಮುಗಿದು ಜೀವ ದ್ರವ್ಯವೆ ಮುಗಿದು ಶಿರ
ಮಣಿದು ಹಾಡಿದರ್ ಭಕ್ತಿರಸವು ಘನಿಸಿದೊಲ್.
ಗುಡಿಯ ಗರ್ಭಗುಡಿಯೊಳ್ ಉರಿಯುತಿದೆ ಎಂದಿಗುಂ
ನಂದದಾ ನಂದಾದೀಪ! ಅಲ್ಲಿ, ಮುಂಗಡೆಯಲ್ಲಿ
ಉಜ್ವಲಿಸುತಿದೆ ಉಸಿರ್ ಗಟ್ಟಿನಿಂದ ಸಮಸ್ತ
ಜೀವಜ್ಯೋತಿ! ಪೌಳಿಯಲಿ ಅಂಗಣದಲಿ ಮತ್ತೆ
ಪರಿಸರದಲಿ ಸಂದರ್ಶನಕಾಗಿ ಕಾದಿರ್ದ
ಜನಜಂಗುಳಿಯ ಮೇಣಧಿಕ ಸಾಧು ಸಂತರಾ
ಕೂಟ ಹಿಡಿಸಲಾರದನಿತು ಕಿಕ್ಕಿರಿದು ತಂಬಿದೆ.
ಮಂತ್ರಘೋಷ ವಾದ್ಯಘೋಷ ಮಾತಿನ ಮರ್ಮರ
ಎಲ್ಲವುಂ ಕೂಡಿ ಹಿರಿದಾಯ್ತು ಗದ್ದಲದ ಮೊರೆ.
ಅಮರನಾಥನ ದರ್ಶನವಾಯ್ತು ಮನಸ್ ತೃಪ್ತಿ
ಧ್ಯಾನ ಪ್ರಾರ್ಥನೆ ಸಲಿಸಿದರ್ ಗುರುವರಂ. ಅಂದು,
ಬೈಗುಂಬೊಳ್ತಿನ ಚೆಂಗಿರಣಗಳ ಛವಿ ಹರಿದುದು
ಇಳೆಯಮೇಲೆ ಹೊನ್ನಾರತಿಯೆತ್ತುವ ತೆರದಲಿ
ದಟ್ಟಣಿಸಿ. ಪರಿಜನರೊಡಗೂಡಿ ಗುರುದೇವಂ
ಪೊರಬಿಳ್ದರ್ ಗುಡಿಯ ಮಹಾದ್ವಾರದಿಂ. ಮುಂದೆ,
ಮುಂದೆ ಮುಂಕೊಂಡು ಬರುತಿರೆ ಕಲ್ಗಳಿಕ್ಕಟ್ಟಿನ
ಕಂಠಕಂಠದೊಳ್ ನುರ್ಗಿ ಭೋರ್ಗರೆದು ಬೋರಾಡಿ

ಪ್ರವಹಿಸುವ ಅಲಕನಂದಾ ನದಿಯ ತೀರಕ್ಕೆ
ಇಳಿದರ್ ಸುಖ ಮಜ್ಜನಮಂ ಬಯಸಿ, ಜಳಜಳನೆ
ಹರಿವಜಲ ರಾಶಿಯು ಮುದಿಸಿಮದಿಸಿ ನೊರೆನೊರೆಯ್ಯೆಸಿ
ಪಾಲ್ನದಿಯ ಪಾಂಗಿನಲಿ ಫೇನ ಪುಂಜವನೊಟ್ಟಿ
ಇಕ್ಕೆಲಗಳಲಿ, ಜುಳುಜುಳಿಸಿ ಹರಿವುದು ಮಂಜುಳ
ಗಾನವಂ ಹಾಡಿ. ಭಸ್ಮದ್ಧೂಳೀ ಭೂಷಿತ
ಮೆಯ್ಯಂ ಅದ್ದಿ ಮುಳುಗಿ ಸುಖಮಜ್ಜನಂ
ಗೈದು ಮೈನೋವು ಮುಡಿಸಿ ಗರಿಹಗುರಮಾಗಿ
ತೇಲುವೊಲ್ ತೋರಿವಂದರ್ ಗುರುವರಂ.
ಎಲ್ಲರುಂ ನದಿಯೊಳ್ ಮುಳುಮುಳುಂಗಿ ಮೈಯುದ್ದಿ
ಸ್ವಚ್ಛ ಸ್ನಾನಂಗೈದು ಮಡಿಗೊಂಡು ಕಳೆದ ಬಟ್ಟೆ
ಬರಿಯನೊಗೆದು ಮಡಿಗೊಳಿಸಾರಿಸಿ ಪಿಂಮರಳುವ
ಯಾತ್ರೆಗೆ ಅಣಿಯಾದರ್ ಗುರುದೇವನ ಜೊತೆಗೆ.
ಉನ್ನೆಬರಮೆಲ್ಲರುಂ ನಡೆದೂನಡೆದು ಸೋಲ್ದು
ಬಳಲ್ದಿರೆ ಪಿಮ್ಮರಳುವ ತವಕಂ ಇರ್ದುದದು
ಹಾರಲಿಹ ಹಕ್ಕಿಗಳ ತೆರದಿ.
ಮುಗಿಲ್ಮುಂಜುದೆರೆ
ದಟ್ಟೈಣಿಸಿ ಹರಡಿರೆ ಧವಳಿಮಾ ತೆರೆಯ ತೆರದಿ
ಬೆಳ್ಪನೆಯ ಪ್ರಬಾಳೆಯ ಮಧ್ಯೆ ದೇವದಾರು
ತರುವಿನೊಲ್ ಮೆರೆವ ಗುರುವಿನ ಭವ್ಯ ಶರೀರದ
ಪರಮಚ್ಛವಿಯ ನೋಡಾ! ಶೈವಾಲಾಚ್ಛನ್ನಮಯ
ಕಾಸಾರದಂತಾನನಂ ದೃಗ್ವಿಷಯದಾಚೆ
ನಿಟ್ಟಿಸುವದ ನೋಡಾ! ಪಂಚೇದ್ರಿಯಗಳ ಬ್ರಹ್ಮ
ಚರ್ಯದೋಜಸ್ವಿತೆಯ ನೋಡಾ! ಅಹ ಪ್ರಜ್ಞಾನಿ
ನೇಹಿಗರ ಮಧ್ಯೆ ಮೇಣ್ ಗುರುಭಾಯಿಗಳ್ ಮಧ್ಯೆ

ರಂಜಿಸುವ ಕಾಷಾಯ ವಸನಧರನ ನೋಡಾ!
ಪುರುಷದಮ್ಯನ ಸಾರ್ಥಕ್ಯ ಬರ್ದುಕೊಗೆದ ದಿವ್ಯ
ದೇವಮಾನುಷಿಯ ನೋಡಾ! ತ್ರಿಲೋಕ ಹಿತೈಸಿ
ತಾನಾದವನ ಆತ್ಮ ಪ್ರದೀಪವ ನೋಡಾ!
ಕಂಗಳಲಿ ಮಿಂಚಿನೊಲ್ ಮಿಂಚುತಿರ್ಹ ಪ್ರಜ್ಞಾನ
ದೃಷ್ಟಿಯಿೀ, ಚಿಂತನಮನನೀ, ಅಮಿತ
ದಯಾವಂತನೀ ಕ್ಷಮಯಾಧಾರಿಣಿಯಿೀ ಅಪರ
ಭೂಮಿಯೌರಸ ಪುತ್ರನೀ, ಪ್ರಬುದ್ಧ ಸಂತನೀ
ಧರೆಯಲಿ ಜನ ಮೃಗಚರಣಂ ಬರೆದ ಕುರೇಖಾ
ಪಥದಲಿ ತಾನೊಂದು ಇರುಂಬೆಯ ಪಾಂಗಿನಲಿ
ನಡೆಯುವುದ ನೋಡಾ! ಸರಳತನದಿ ವಿರಳತನಂ
ಮೂಡಿಸಿ ಜಗತ್ತಿಗೆ ಸರಿಯಪ್ಪ ಸುಬೋಧಕನೆನೆ
ಸೈಯೆನಿಸಿ ಭಾರತದೊಡಲಲಿ ಮಡಿದು ಮಲಗಿ
ಮಣ್ಣ ಹುಡಿಯೇ ತಾನಾದನ ಸೌಭಾಗ್ಯವ ನೋಡಾ!
ಮಂಜುಮಯ ಲೋಕದಲಿ ತನುಮನಗಳ್ ಮಂಜಿನ
ಗಣಿಯಾದುವೊ ಎನಲ್ ಸತ್ ಶಾಂತಿರಸ ತುಂಬಿದ
ಸ್ವಾಮಿಜಿಯಾ ಸ್ಮಶ್ರು ಭೀಷ್ಮಾನನದ ಸಿಂಹ
ಗಾಂಭೀರ್ಯ ತಪಸ್ತೇಜೋ ಮಹಿಮ ವದನಾರ
ವಿಂದದೊಳ್ ಬೆಳಗುತಿರ್ದುದು ಪ್ರದೀಪ್ತಿಯ ತೀಕ್ಷ್ಣ
ಕಳೆ. ಐರಾವತಮ ನಡೆತಂದವೊಲ್ ನಡೆಯುತಿರೆ
ಪಜ್ಜೆಪಜ್ಜೆಯುಂ ತಾಳಲಯ ಛಂದೋಬದ್ಧ
ಗತಿಯಲ್ಲಿ ನೋನೋಳ್ಪ ಕಂಗಳೇಮಮ್ಮಲಂ.
ಮಿತ್ರ ಕ್ಸೇವಿಯರ್ ಭುಜದಮೇಲೆ ಕೈಯಿರಿಸಿ ಮೈ
ಭಾರವಿನಿತು ಇಳಿಸಿದವೊಲ್ ನಡೆಯುತೆ ಒಡಲಿನ

ಭಕ್ತಿಭಾವನಾರಸವಂ ರಾಗಪೂರ್ಣದನಿ
ಮೊಳಗಿಸಿ ಮೊಳಗಿಸಿ ಹರಿಸಿದರ್ ಬಾಯ್ದೆರೆದು,

"ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ
ತ್ವಮೇಕಂ ಜಗತ್ಪಾಲಕಂ ಸ್ವಪ್ರಕಾಶಂ ॥
ತ್ವಮೇಕಂ ಜಗತ್ಕರ್ತೃ ಪಾತೃ ಪ್ರಹರ್ತೃ
ತ್ವಮೇಕಂ ಪರಂ ನಿಶ್ಚಲಂ ನಿರ್ವಿಕಲ್ಪಂ ॥"

ಪಥವಲ್ಲದ ಪಥದಲಿ ನಡೆಯುವುದೆನೆ ಪಯಣಂ
ನಿಜದಿಂದೆ ಸಾಹಸವೆ ಎಂಬವೊಲ್ ಕಳೆದತ್ತು
ಅಮರನಾಥನ ಯಾತ್ರೆಯ ಪ್ರಕರಣ. ಅಲ್ಲಿಂದ
ಮುಂಬಯಣಕಿಳಿವ ಮುನ್ನ ಮೂರ್ನಾಲ್ಕು ದಿನಗಳ
ಸುವಿಶ್ರಾಂತಿಯ ಅಗತ್ಯಮಿರೆ ಪಥದಂಚಿನಲಿ
ಕುಳಿತರೆಲ್ಲರ್ ಸಾಲ್ಗೈಸಿ, ತಿಳಿ ಮುಗಿಲ್ ಮಂಜಿನ
ತೆರೆ ಆಕ್ರಮಿಸುತಾಕ್ರಮಿಸಿ ಮುಚ್ಚಿದುದು ಭವ್ಯ
ಪ್ರದೇಶಮಂ. ಒಬ್ಬರನೊಬ್ಬರ್ ಕಾಣದೊಲ್
ದಟ್ಟ ಬೆಳ್ದೆರೆ ಎದ್ದಿತು. ಪ್ರಾತಃಕಾಲೋಚಿತ
ವೈಭವದಲಿ. ಶೀತಲ ಶೈತ್ಯವನ್ನತಿ ಶೀತ
ಸಂಮೋಹ ಶಕ್ತಿವೃದ್ಧಿಸುವಂದದಲಿ ಬಲು
ಘನೀಕರಿಸಿದತ್ತು. ಗುರುದೇವಂ ಕುಳಿತಲ್ಲೆ
ಧ್ಯಾನಶೀಲರಾದರ್. ಪ್ರಾತಃರವಿಕಿರಣಗಳ
ಜಾಲ ಮೂಡಿ ಹರಿದು ಇಳೆಯಂ ಮುದ್ದಿಡುವನ್ನ.
ಚಳಿಯ ಕೊರೆತವದೆಂತು ತಾಳ್ದಳೊ ಎನೆ ಸೋದರಿ
ನಿವೇದಿತಾ ಶೀತದೇಶದ ಮಡಿಲೊಳ್ ಪುಟ್ಟಿಯು
ತಡೆಯದಾದಳ್ ಚಳಿಯ ಕೊರೆತಮಂ ಎಂಬಂತೆ
ನಡುಗಿದಳ್ ನಡುಗಿದಳ್ ಗಾಳಿಯೊಲಿದು ಅರಳೀ

ಎಲೆಯ ತೆರದಿ. ಎಂದಿಗೆ ರವಿಯ ಬಿಂಬ ಏರ್ವುದೊ ಎನೆ
ಆತುರದಕ್ಷಿಗಳ್ ಈಕ್ಷಿಸಿದುವು ಅರುಣಾರುಣ
ತೇಜಃಪುಂಜ ಬಿಂಬಾಲೋಕಮಂ. ನಸುನಸುವೆ
ಏರಿದನು ರವಿ ಬೆಳ್ಮುಗಿಲೊಡ್ಡಂ ಸರಿಸರಿದು
ಮುಂಬರಿದು ಹೋಹೆ ಹಾದಿ ತಿಳಿಯಾಯ್ತು; ಬೆಟ್ಟದ
ಮೆಯ್ಯೊಳ್ ಹರಡಿ ಹಬ್ಬಿದ ಶಾದ್ವಲದ ತಡಿಯು
ಇಬ್ಬನಿ ಹನಿಗಳ್ ತುಂಬಿ ರವಿಕಿರಣಗಳ ಪ್ರತಿ
ಫಲನದಿಂ ಮಿರುಮಿರುಗುತಿವೆ ಬಜ್ಜರದ ಲಕ್ಷ
ಲಕ್ಷಾಂತರ ಕಿಡಿಗಳ್ ಹೋಲಿ! ಎಲ್ಲಿಂದಲೆ-
ಲ್ಲಿಯವರೆಗು ಥಳಥಳಿಪ ಬಜ್ಜರದ ಕಿಡಿಗಳೇ
ಎಂಬೊಲಾ ಇಡೀ ಬೆಟ್ಟಗುಡ್ಡಗಳ್ ಮಿಂಚಿನ
ಚೆಂಬಟ್ಟೆಗಳಾದುವು ಚೆಲುವೆ ರೂಪುಗೊಂಡೊಲ್!
ಸ್ವಾಮಿ ವಿವೇಕಾನಂದರ್ ಇನ್ನುಂ ಮುಗಿದ ಕಣ್
ತೆರೆಯಲಿಲ್ಲಂ. ಇತ್ತಣ ಪರಿವೆಯೆ ಇಲ್ಲದೊಲ್
ಮೈಮರೆವು. ಜಗಮರೆವು. ಗಂಭೀರ ಸ್ಥಿತಿಗತಿ.
ತಪೋಧನ ಗುರುದೇವನ ಧ್ಯಾನಾಸಕ್ತಿಯಲಿ
ಹೃನ್ಮನಂ ನಿಶ್ಚಲಂ. ಶರೀರದ ಸಂಪದಂ
ನಿಶ್ಚಲಂ. ಚಿತ್ತಪ್ರವೃತ್ತಿಯೇ ನಿಶ್ಚಲಂ.
ತಪಸ್‌ಚರಿ ಪೂರೈಸುವನಕ ಕಾದಿಹ ಶಿಷ್ಯಗಣ
ತುಟಿಗಳ್ ಬಿರಿಯರ್. ಬಿರಿ ಉಸಿರ್ ಬಿಡರ್. ಸದ್ದಿನ
ಸೊಲ್ಲಿಲ್ಲದೆ ಉರುಳಿತು ಪೊಳ್ತು. ಗಳಿಗೆಗಳಿಗೆಯು
ಸರಿಯುತಿರೆ ಗತಕಾಲಕೆ ಉರುಳಿತು ತಾಸೊಂದು
ನಿರಾತಂಕವಾಗಿ. ಅಹ ಕೋಗಿಲೆಯ ಸಿರಿಕಂಠದ
ರಾಗಮಾಲೆಯ ಮೊಳಗು ಮುಟ್ಟಿದುದು ಕರ್ಣಗಳ
ಗಹ್ವರಗಳಂ. ಕಣ್ತೆರೆದರ್ ಸ್ವಾಮಿಜಿ. ಹಾ!

ತೆಕ್ಕನೆ ಉದಯರವಿಯ ಚೆಂಗಿರಣಗಳ್ ಕಣ್ಣಂ
ಮುದ್ದಿಸಿದುವು ಮುದ್ದಿನ ಮುದ್ರೆಯೊತ್ತಿ. ಒಡನೆಯೆ
ಮನತಿಳಿದು ಪುಚ್ಚೆತ್ತಿ ನೋಡೆ, ಶುಭ್ರ ಧವಳಿಮಾ
ಕಾಂತಿಯಲಿ ಜೃಂಭಿಸುವ ಪಾರಾವತ ಪಕ್ಷಿಯ
ಮಹಾ ಸಂದೋಹವೊಂದು ಪಾರ್ದುದು ಎರಂಕೆಯ
ಬಿಚ್ಚಿ ಬೀಸುತ್ತೆ! ಅದರ ಬಿಸುಗಾಳಿ ಸೋಂಕಲ್
ನಿಟ್ಪಾಲಿಯಂ ವಿಚಲಿಸದೆ ನೋಡಿದರಾ ಪಕ್ಷಿ
ಸಂದೋಹದ ಚಿತ್ರಂ ಪರಮಾತ್ಮಭಾವದಿಂ.
ಬೆಳ್ಮೆಯಿನ ಪಾರಾವತ ಪಕ್ಷಿಗಳ್ ರೊಯ್ಯನೆಯೆ
ಬೀಸುಗಾಳಿಯಂ ಭೇದಿಸುತೆ ಏರ್ದವು, ನೀಲ
ನೀಲಾಂಬರಮಂ ಕೊರೆದು ತೂರ್ದುವೊ ಎನುವಂತೆ
ಕಣ್ಮಾಯಮಾದುವು ಚಣದೊಳ್ ತೆರೆದ ಕಣ್ಮುಂತೆ.
“ಅಹಾ! ಏಂಸೊಬಗಿನಾ ಚಿತ್ರಮೋ! ಸೋದರೀ,
ಮಾದೇವ ಇಂದೆಮಗೆ ವರದಾನಗೈದಿಹನ್
ಎಂದೊಡೆದನೇಂ ಮೂಢ ನಂಬಿಕೆ ಅಥ ಜೊಳ್ಳಿನ
ಕಂತೆ ಎನ್ನದಿರ್. ಉತ್ಪ್ರೇಕ್ಷೆಯಲ್ತಿದು. ದೈವ
ರಕ್ಷೆ ಪರೋಕ್ಷಗತಿಯಲಿ ಬಪ್ಪುದಿಂತೆಯೆ, ಭಗಿನಿ!”
ಸೋದರಿಯು ಮರುನುಡಿಯದೆ ವಿನಮ್ರಭಾವದಿಂ
ನೋಡಿದಳ್. ಮನೋಮಯ ಪ್ರಾಣಮಯ ಚಿತ್ತಮಯ
ಪ್ರವೃತ್ತಿಗಳ್ ತರ್ಕವಿತರ್ಕದ ಕಳ್ತರಿಯ
ಅಲುಗಿನಲಿ ಸಿಲ್ಕಿದುವು. ವಿಷಯ ಚರ್ವಿತ ಚರ್ವಣ
ಮಾದುದು. ಪೊಳ್ತನಿತಿನಂತರಂ ಸ್ವಾಮಿಜಿ
ಇಂತೆಂದರ್ “ಜಗನ್ಮಾಯೆ ಕಣಕಣಗಳಲಿಯುಂ
ಇರ್ದು ಮಾಯಾಸೂತ್ರದಿಂ ಜಗತ್ ನಿಯಂತ್ರಣ
ಗೈದಪುದು ಸತ್ಯ. ನಿನ್ನೊಳ್ ಯೋಚಿಸಿ ನೋಳ್ಪುದು.

“ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।.
ಕರ್ಮಾಧ್ಯಕ್ಷಃ ಸರ್ವ ಭೂತಾಧಿ ವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥”

ನಿವೇದಿತೆಯುಂ ಗುರುವರನ ಸಂತಸ ಪ್ರಮತ್ತ
ಮನೋನಿಧಿಯಂ ಕಂಡು ಮನದುಂಬಿ ನೆಚ್ಚಿಯುಂ
ಮರುನುಡಿಯೆ ತುಟಿಗಳ್ ಬಿರಿಯದಾದುವು. ಗುರುವಿನ
ಅಭೂತಪೂರ್ವ ವ್ಯಕ್ತಿತ್ವವೇ ತುಂಬಿದತ್ತು
ಮನಃಭಿತ್ತಿಯಲಿ. ಭಕ್ತಿಸಾಗರದಲಿ ಮುಳುಗಿ
ಹೋದಳ್ ಲಲನಾಮಣಿ. ಎಲ್ಲರುಂ ಶ್ರೀನಗರ
ಯಾತ್ರೆಯಂ ಕೈಕೊಂಡರ್. ಆಗಸ್ಟ್ ತಿಂಗಳ
ದಿನಮಾನಗಳ್ ತಿಳಿಯಾಗಿರೆ ಸುಮಧುರಮಾಯಿತು
ಎಲ್ಲ ಸಂಯಾತ್ರಿಗಳ ಚರಿತಾರ್ಹ ತೀರ್ಥಯಾತ್ರೆ.
ಸ್ವಾಮೀಜಿ ಶಿಷ್ಯಮಂಡಳಿಯ ಮನಕೆ ಮುದವಂ
ಊಡುವ ಸಲುವಾಗಿ ಹಳೆಹಳೆಯ ವಿಚಾರಗಳ
ಬೊಂತೆಯಂ ಬಿದಕಿ ಹಾಸ್ಯಪರಿಹಾಸ್ಯಗಳ ಕಿರು
ಚಟಾಕಿಗಳ್ ಹಾರಿಸಿ ನಗಿಸಿ ತಾವುಂ ನಕ್ಕು
ನಲಿವರ್ ಶ್ರಮಿಕ ವೃತ್ತಿಯ ದಣಿವಂ ಕಳೆವಂತೆ.

“ಶುಕ್ರಂ ಅಕಾಯಂ, ಅವ್ರಣಂ
ಅಸ್ನಾವಿರಂ, ಶುದ್ಧಂ, ಅಪಾಪವಿದ್ಧಂ ।
ಕವಿಃ ಮನೀಷೀ ಪರಿಭೂಃ ಸ್ವಯಂಭೂಃ ॥”

ಎನಲ್ಕವನಂ ರೂಪಿಸಿಕೊಂಬುದೆ ಮಹತ್ತರಂ
ಈ ಜಗದೊಳ್. ಯೋಚಿಸಿ, ಪರ್ಯಾಲೋಚಿಸಿ ಮನಕೆ
ತಿಳಿವು ಮೂಡಿಪುದೆ ಸರ್ವತ್ರ ಸರ್ವಾಂತರ್ಯಾಮಿ

ಭಗವಂತನ ಮೂರ್ತಿ ರಚನೆಯ ಊಹೆಗೆ ದಾರಿ.
ಜಗಜ್ಜನನಿ ಕಾಳಿಕಾದೇವಿಯೊಳ್ ರುಂಡಮಾ-
ಲಾಧಾರಿಣಿ ಚಿತ್ತಾರಮಂ ನೋಡಲಾರದ
ಅಳುಕುಮನದ ಭೀರುಗಳ್ ಆಕೆ ಕೊರಳಿಂಗೆ
ಪೂಮಾಲೆಯಂ ತೊಡಿಸಿ ಅವಳಂ ಕರುಣಾಕರಿ
ದಯಾಮಯಿ ಮುಂತಾಗಿ ಬಣ್ಣಿಪುದು ಸಾಮಾನ್ಯಂ.
ಮೃತ್ಯುವಿಗೆ ಮೃತ್ಯು ಪೂಜೆಯಲ್ಲದೆ ಅಮೃತತ್ವ
ಲಭಿಸದು....ಇದೆಲ್ಲಮಂ ಮನಗೊಳ್ಳುವುದೆನೆ ನೀಂ
ಪರ್ಯಾಲೋಚಿಸಿಯೆ ತಿಳಿಯಲಕ್ಕು. ತಿಳಿದು ಬಾಳಿ
ಬೆಳೆಯಲಕ್ಕು. ಅದುವೇ ಜ್ಞಾನದ ಕಿರಣಗಳಂ
ಚೋದಿಪ ಶಕುತಿಯಾದಪುದು."

ಮುಂದೊರ್ಮೆ

ಶ್ರೀನಗರದ ಸನಿಹದೊಳ್ ಕಂಡರೊಂದು ಪಾಳು
ಬಿದ್ದಿರ್ದ ಕಾಳಿಕಾ ದೇಗುಲಂ ಅದಾವ ಸಿರಿ
ಮುಹೂರ್ತವದಕೆ ಅಡಿಗಲ್ ಹವಣಿಸಿತೊ ಅಂತೆಯೆ
ದುರ್ಗಳಿಗೆಯೊಂದು ಪಾಳ್ಗೆಡಿಗಿತ್ತು. ಹಾ! ಅಂದಿಗಾಯಿತ್ತು
ಭವ್ಯತೆಯ ಸಿರಿ ಸೊಬಗು! ಈಗಳದು ಪಾಳ್ಬಿದ್ದು
ಪೋಷಕರಿರದ ಬರಿಯ ಕಲ್ಗುಡಿ! ಅಲ್ಲಲ್ಲಿ ಕಲ್ಲು
ಕಲ್ಲುಗಳ್ ಉದುರಿ ಜಜ್ಜರಿತಮಾಗಿರುತಿರಲ್, ಅದರ ಸುತ್ತ
ಮುತ್ತಲು ಕಟ್ಟಡವಿಯ ಮುಳ್ಳು ಕಂಟಿಗಳ್ ಪುಟ್ಟಿ
ಮುಂಬೆಳೆದು, ಬೆಳೆದು ಸುತ್ತಲುಂ ತುಂಬಿ ಬೃಹದ್
ದೇಗುಲಂ ಆವರಿಸಿ ಆಕ್ರಮಿಸಿ ಜಗದ ಕಣ್
ದಿಟ್ಟಿಗೆ ತೆರೆಯೊಡ್ಡಿ ಪರಿಸ್ಥಿತಿಯ ಮರೆಮಾಚಿ
ಗೈದುಪಕಾರವದೆತೇಷ್ಟಂ. ಸ್ವಾಮಿ ವಿವೇಕಾ

ನಂದರುಂ ನೋಡಿಯೇ ನೋಡಿದರ್! ದೇಗುಲದ
ಕಲ್ಲುಕಲ್ಲುಗಳ್ ಕಳಚಿ ಬಿಳ್ದು ಅತಿ ಜೀರ್ಣಾ-
ವಸ್ಥೆಯೊಳಿಹ ದೇಗುಲಂ. ನೋವರಿಲ್ಲ, ಕಾವರ್
ಇಲ್ಲ. ಇಲಿ ಹೆಗ್ಗಣಗಳ ನೆಲೆ ವೀಡು. ಸಹಸ್ರ
ಸಹಸ್ರತರ ಬಾವಲಿಗಳಾಸ್ಥಾನ! ತರಗೆಲೆ
ಕಸಕಡ್ಡಿಗಳ್ ತುಂಬಿ ಕರುಣಾಜನಕಮಿರಲ್
ಸ್ವಾಮಿ ವಿವೇಕಾನಂದರಾ ಎರ್ದೆ ಗುಡಿಯೊಳ್
ಕಾರುಣ್ಯದ್ರವ್ಯಂ ಕರಗಿ ನೀರು ನೀರಾಗಿ
ತೊರೆಯಾಗಿ ಹರಿದುದು ನರನಾಡಿಗಳಿಗೆ. ಮನಂ
ಮರುಗಿ ಮಮ್ಮಲಿಪಂತೆ. ಅಗಳಾ ದೇಗುಲದ
ದೇವಿಯುಂ ಸಿಡಿದೆಳ್ದ ಪರಿಯಲಿ ನುಡಿಸಿದಳಾ
ಸ್ವಾಮೀಜಿಯ ಕಿವಿಗಳ ಸನಿಹದಲಿ ಭೋಂಕನೆ
ಬಿರುಸಾಗಿ "ನೀನೆನ್ನ ಕಾಪಿಡುವೆಯೊ? ನಾನಿನ್ನ
ಕಾಪಿಡುವೆನೊ?"
"ಹಾ, ಎಂತಹ ಪ್ರಶ್ನೆ? ಆನೆಂಥ
ಮೂರ್ಖ!" ಸ್ಥಂಭೀಭೂತ ಸ್ಥಿತಿಯೊಳ್ ನಿಂದಿರ್ದ
ಸ್ವಾಮೀಜಿ ಉಸುರಿದರ್ ತಮ್ಮೊಳ್ "ಇದಂತೂ,
ಕಟು ಸತ್ಯ! ಇನ್ನೆನಗೆ ದೇಶಾಭಿಮಾನಮಿಲ್ಲಂ.
ಎಲ್ಲವುಂ ಜಗನ್ಮಾತೆಯ ಕೈಯೊಳಿರ್ಪುದೆನೆ
ಆನೊರ್ ಶಿಶುಮಾತ್ರಂ, ಶಿಶುಮಾತ್ರಮೇ ತಾಯಿ!"
ಕಾಶ್ಮೀರ ಧಾತ್ರಿಯಾ ಸಂಯಾತ್ರೆ ಮುಗಿದತ್ತು.
ಪ್ರಕೃತಿಯ ವೈಭವೋಪೇತ ವಿರಾಟ್ ಶರೀರ
ಗಾತ್ರಮಂ ಮತ್ತಮಾ ಲೋಚನಾಗೋಚರ
ಬ್ರಹ್ಮಾಂಡ ವಿಶೇಷದ ಸಂಯೋಜನೆಯಂ ನೆನೆದು

ಜಗಜ್ಜನನಿಯ ಪಾದ ಕಮಲಗಳಿಗರ್ಪಿಸುತೆ
ನಿರಾಳತನದಿಂ ಉಸಿರಾಡಿದರ್ ಸ್ವಾಮಿಜಿ.
ಭಾರತವರ್ಷದ ಭೂಯಾತ್ರೆಯಲಿ ಭಾರತಿಯ
ದಿವ್ಯ ದರ್ಶನಮಾಯ್ತು. ಸಾಲ್ವಿನೆಗಂ ನಿಸರ್ಗ
ದೇವತೆಯ ಪರಮಾತ್ಮ ದರ್ಶನವು ಜೊತೆಗೂಡಿ
ದೊರೆಯಿತ್ತು. ಮಿತ್ರಮಂಡಲಿಯೊಡಂ ಪ್ರಶಾಂತ
ಶಾಂತಿಯಾತ್ರೆಯಾಯಿತ್ತು. ಮುಂದೆರಡು ದಿನಗಳಲಿ
ಲಾಹೋರ್ ನಗರಕ್ಕೈದರ್. ಕಳಿದುವಲ್ಲಿ ಸುಖ
ಶಾಂತಿಯಲಿ ಮೂರ್ನಾಲ್ಕೈದಾರ್ ದಿನಮಾನಗಳ್.
ಅಕ್ಟೋಬರ್ ತಿಂಗಳಿನ ಉತ್ತರ ಭಾಗದಲಿ
ತೆರಳಿದರ್ ಬೇಲೂರು ಮಠದ ಪುಣ್ಯ ಪಥವಿಡಿದು.
ಸೋದರಿ ನಿವೇದಿತೆಯು ಆರಂಭಿಸಿದೊರ್ ಕಿರು
ವಗೆಯ ಶಾಲೆಯ ಉದ್ಘಾಟನೆಯು ಸಮಾ
ರಂಭದ ಶುಭದಿನವುಂ ಬಳಿಸಾರಿ ಬಂದತ್ತು.
ಬೈಗುವೊಳ್ತಿನ ಶಾಂತಿ ಸಮುದಯದ ಮುಸ್ಸಂಜೆ
ಓಕುಳಿಯನೆರಚಿತೇಂ ಎನೆ ಹೊಂಗಾಂತಿಯ ಹೊಳಪು
ಹೊನ್ನಾರತಿಯೆತ್ತಿತು ಧಾರಿಣಿಗೆ. ಮುಗಿಲಂಚು
ಹೊನ್ನೀರ್ ಸುರಿದಂತೆ ಹೊನ್ನಿನೆಳೆಯೆಳೆಯಾಗಿ
ರಂಜಿಸಿತು ನಭದ್ದೇಶಂ. ಶಶಿಯ ತನುಕಾಂತಿ
ಚಳಿಗದಿರ್ಗಳ ಸೂಸಿತು ಕುಳಿರ್ಗಾಳಿಯ ತಣಿಸಿ.
ಮೂಡಿದುವು ಪೇರರಿಲ್ಗಳ್ ಗಗನ ತುಂಬೆಲ್ಲ
ಬಜ್ಜರದ ಕಿಡಿಗಳಂತೆವೊಲ್. ಸಂಧ್ಯಾಶಾಂತಿಯ
ಗೌರವಕೆ ನಿಡುನೆಳಲ್‌ಗಳು ಮೂಡಿ ಚಾಚಿದುವು
ಗಿಡಕೆ ಮರಕೆ ಮನೆಮನೆಗೆ ಭೀಮತನು ಬೆಳೆಸಿದೊಲ್

ಭೀಮ ಭೂಜ ಸ್ಥಾಣು ಸಮಾವೇಶ ಮೆರೆದುದಾ
ಬೆಳುದಿಂಗಳ್ ಮೀಹದಲಿ ಮೋಹಕ ರೂವಾಗಿ.
ಸ್ವಾಮೀಜಿಯುಂ ನಿಶಾಕಾಂತನಾಮಹೋನ್ನತ
ವೈಭವದ ಒಡ್ಡೋಲಗದ ವೀಕ್ಷಣೆಯ ರಸಾ ೪೪೦
ಸ್ವಾದದಿಂ ಮೈದುಂಬಿ ಬೇಲೂರು ಮಠದ ಮೆ-
ಟ್ಟಿಲೇರಿದರ್ ಮಿತ್ರಜನರೊಡಗೂಡಿ. ಮರುದಿನ
ಬೆಳಗಿನ ಸುಮೂರ್ತದಲಿ ಸೋದರಿ ನಿವೇದಿತೆಯ
ಬಾಲಿಕಾ ಪಾಠಶಾಲೆಯಾರಂಭದುತ್ಸವ
ನಡೆದತ್ತು ಸರಳತರ ಸಮಾರಂಭದಲಿ. ಹಲ
ಕೆಲವು ಬಾಲಿಕೆಯರಂ ಕೂಡಿ ಶಾಲೆಯುಂ ನೆರೆ
ಮೆರೆದತ್ತು ಮುದ್ದು ಮಂದಿರವಾಗಿ.
ಗುರುವರಂ
ಸನಾತನ ವೇದಾಂತ ಧರ್ಮಮಂ ರಾಷ್ಟ್ರದಲಿ
ಪ್ರಚುರಗೊಳಿಸೆ, 'ಉದ್ಬೋಧನ' ಎನೆ ಪೆಸರ್ವೆತ್ತ ೪೫೦
ವಂಗೀಯ ಮಾಸ ಪತ್ರಿಕೆಯೊಂದನುಂ ಬರೆದು
ಪೊರಡಿಸಿದರ್ ಜನಮನಮಂ ಮುಟ್ಟಿಸುವ ತೆರದಿ.
ಪತ್ರಿಕೆಯ ಅಭಿವೃದ್ಧಿ ಭುಜವೇರಿ ನಿಂದುದು
ಬಿಡುವಿರದ ದುಡಿಮೆಯಂ ಹೊರಿಸಿ. ಮನುಕುಲಜರಂ
ನಭಕೇರ್ವಡಿಸುವ ಜಾತಿಬೇಧ ವರ್ಗಭೇಧ
ಮುಂತಪ್ಪ ಹೀನ ಪ್ರವೃತ್ತಿಯಂ ಸರ್ವತ್ರ
ತತ್ತಳ ತುಳಿದು ಸರ್ವಸಮಾನತೆಯ ಬಿತ್ತಂ
ಬಿತ್ತುವೊಂದು ಹುಮ್ಮಸ್ಸು ಎರ್ದೆಯ ಕುಂಡದೊಳ್
ಮೂಡಿದತ್ತು ಮೊಲ್ಲೆಯ ಮೊಗ್ಗಾಗಿ. ಗುರುವರನ
ಲೇಖನಿಯ ಕೃಷಿ ಮುಂಬೆಳೆದುದು ದಿವಸ ದಿವಸ ೪೬೦

ಗೊಬ್ಬರವಿಟ್ಟ ಎಳೆ ಸಸಿಯ ತೆರದಿ. ಉದ್ಬೋಧನ
ಮನೆಮನೆಗಳಂ ಮುಟ್ಟಿ ಮನಮನವ ತಟ್ಟಿದುದು
ಜಡನಿದ್ದೆಯ ತೆರೆಯಂ ಹರಿದು ಹೊರಬರಿಸುವೊಲ್!

"ಯಸ್ತು ಸರ್ವಾಣಿ ಭೂತಾ-
ನ್ಯಾತ್ಮನ್ಯೆವಾಸು ಪಶ್ಯತಿ ।
ಸರ್ವ ಭೂತೇಷು ಚಾತ್ಮಾನಂ
ತತೋ ನ ವಿಜುಗುಪ್ಸತೇ ॥"

ಹರಿಃ ಓಂ ತತ್ ಸತ್

❋ ❋

ಚತ್ವಾರಿಂಶತೋಲ್ಲಾಸಂ

ಪುತ್ರಾವರ್ತನಂ

“ಭಾರತಮಹೋದಯರಿರ. ಅಮೃತ ಪುತ್ರರಿರ,
ಸತ್ಪ್ರಜೆಗಳಿರ, ಆರ್ಯವಂಶಜರಿರ ಕೇಳಿರೈ
“ಜ್ಯೋತಿಷ್ಮತಃ ಪದೋರಕ್ಷ ಧಿಯಾ ಕೃತಾನ್”
ಎಂಬುವುದು ವೇದಪ್ರಜ್ಞೆ, ಆದೊಡೆ ನಮ್ಮವರ
ರೀತಿಯೇ ಬೇರೆ. ಆಚಾರವೇ ಬೇರೆ. ಈ
ರಾಷ್ಟ್ರೀಯ ಸ್ಥಿತಿಗತಿಯನಿನಿತು ಮನಮತಿಯಂ
ಮಸೆದು ತಿಳಿಯಿರಿಮ್. ಸತ್ವಗುಣಗಳ ಸೋಗಿನಲಿ
ಘೋರತರ ಅಜ್ಞಾನ ಕುಂಡದಲಿ ಮುಳುಗುವುದ
ನೀವ್ ಕಾಣಿರಾ? ಅತಿ ಮತಿಹೀನರ್ ತಮ್ಮಯ
ಬುದ್ಧಿಹೀನತನವಂ ಮುಚ್ಚಿಕೊಳೆ ಹ್ಯನ್ಮನದ
ಪ್ರಕ್ರಿಯೆಗಳಂ ಮೀರ್ದ ಪ್ರಜ್ಞಾನದ ಸೋಗಿನ
ಬಣ್ಣ ಬಳಿದು ಕೊಂಬುದು. ಪುಟ್ಟಿನಿಂ ಅಲಸಿಯಾಗಿ
ಕೈಕರ್ಯಮಂ ಕೈಕೊಳ್ಳಲಾಗದ ಅಶಕ್ತತೆಯ
ಜನರ್ ತಮ್ಮ ಕ್ರೌರ್ಯವ ಧರ್ಮರಂಗವಾಗಿಯೆ
ತೋರುವೊಡೆ ಕರ್ಮಠತೆಯಾ ಸೋಗು ಹಾಕುವುದು.
ತನ್ನಯ ಅಯೋಗ್ಯತೆಯ ಲೆಕ್ಕಿಸದೆ, ತಮ್ಮೆಲ್ಲ
ಅಪರಾಧಗಳಂ ಇತರರಮೇಲೆ ಹೊರಿಸುವುದು
ಏಗಳ್ ಇತರರ ವಿಷಯದೆಂಜಲ್ ಮೆಲುಕುತ್ತೆ
ಅದೆ ದಿವ್ಯ ಜ್ಞಾನವೆಂದು ನಂಬುವುದು ತಮ್ಮಯ
ಪೂರ್ವಜರ ನಾಮಸ್ಮರಣೆಯೊಂದೆ ತಮ್ಮಗಳ
ವೈಭವವೆಂದು ಭಾವಿಸುವುದು, ಇಂತಿರ್ಪ ಈ
ರಾಷ್ಟ್ರವು ದಿನದಿನಕ್ಕೂ ಅವನತಿಯ ಹಾದಿಯಂ

ಹಿಡಿವುದಲ್ಲದೆ ಬೇರೆ ಗತಿಯೇವುದು? ಯೋಚಿಸಿ.
"ಮನುರ್ಭವ ಜನಯಾ ದೈವಂ ಜನಂ"
ಈ ಮಹತ್ತರಮಾದ ವೇದಾಂತ ರಾಶಿಗಳ
ಮಧ್ಯೆ ಪುಟ್ಟಿ ಬರ್ದುಕಿ ಬಾಳಿದವರ ಗತಿಯುಂ
ಇಂತಾದೊಡೆಂತು? ಪೂರ್ವಜರ್ ನಮಗಾಗಿಯೇ
ಅತುಲವಾದ ವೇದಾಂತದ ವಿಪುಲೈಶ್ವರ್ಯ
ದ್ರವ್ಯವಂ ಬರೆಬರೆದು ಇಟ್ಟು ಹೋಗಿರುವರೆನೆ
ಅವರ ಪರಿಶ್ರಮಕ್ಕೆ ಪ್ರೀತಿ ವಿಶ್ವಾಸಕ್ಕೆ
ವೇದಾಂತ ದರ್ಶನಕ್ಕೆ ಯೋಗ ಜೀವನಕ್ಕೆ
ಆವ ಬೆಲೆಯು ಬಂದಂತಾಯಿತು ಪರಿಭಾವಿಸಿ!
"ವಿವೇಕ ಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖೀ"
ಎಂಬುದಂ ಸದಾ ಗಮನದೊಳಿರಿಸಿ, ಬಂಧುಗಳೇ!
ದೀನ ದುಃಖಿಗಳ್ ಜಡತನ ಬಡತನ ತುಂಬಿಹ
ರಾಷ್ಟ್ರದಲಿ ಎಲ್ಲಿ ಯಾವ ಕಡೆಯ ಎಳೆಯಂ ಪಿಡಿದು
ಜಗ್ಗಿದೊಡಮದು ಅನಾಹುತಮೆ ಆದೀತು! ಈ
ಸೂಕ್ಷ್ಮತಮ ವಿಚಾರವ ಸೂಕ್ಷ್ಮವಾಗಿಯೆ ಬಗೆಹ-
ರಿಸದೆ ಗತಿಯಿಲ್ಲ. ಈ ಸುವಿಚಿತ್ರ ಜಗತ್ತೇ
ಅಂತಿರ್ಪುದು. ಇದೊಂದು ಬಗೆ ಹರಿಸಲಾರದಿಹ
ಸಮಸ್ಯೆ. ಇದಂ ನಿಮ್ಮೊಳ್ ನೀವ್ ತಿಳಿದುನೋಡಿ!"
    ಮುಸ್ಸಂಜೆಯು ಕವಿಯಿತು. ಸಭೆಯು ಚದುರಿತು. ಮತ್ತೆ
ಗುರುವರಂ ಮಠಕೆ ಪಿಂದಿರುಗಿದರ್. ಮೆಯ್ಯೊಳತಿ
ಬಳಲ್ಕೆಯು ತುಂಬಿ ಸೋಲ್ಗೆಡಗಿದುದು ಸೆಜ್ಜೆಯಲಿ
ಕೊರಡಿನಂತೆ. ಬಲು ಆಯಾಸದಿಂ ಉಸಿರಾಡಿ
ಕಟ್ಟುಸಿರ್ ಬಿಟ್ಟರು ಗುರುದೇವ. ಗವಾಕ್ಷಿಯಲಿ
ಅರ್ಧ ಚಂದ್ರಮನ ದರ್ಶನಮಾಯಿತು ಬಳಲಿದ

ಕಂಗಳಿಗೆ. ನೋನೋಡುತೆ ಕಣ್ಮುಚ್ಚಿದರ್ ಶಾಂತ
ಭಾವದಿಂ. ಪಗಲುರುಳಿರುಳಿಪಂದು ತುಂಬಿ ಬಹ
ಶಾಂತಿ ಆಕ್ರಮಿಸಿದುದು ತನುಮನಗಳಂ. ನಿದ್ದೆಯೋ
ನಿದ್ದೆಯಾ ಮಂಪರವೊ ಆವುದೋ ಬಲವಂದು
ಮುಚ್ಚಿತ್ತು ಕಣ್ಮನಗಳಂ ಮಂಜು ಮುಸುಕಿದೊಲ್.
ಕಳೆದುವೈ ಐದಾರೇಳೆಂಟು ದಿನಮಾನಗಳ್
ಚಿಕಿತ್ಸೆಯ ಜೊತೆಜೊತೆಗೆ ವಿಶ್ರಾಂತಿಯಂ ವೆರಸಿ.
ಆದೊಡಂ ದೈಹಿಕಗತಿಯುಮದೇಂ ಸುಲಭದಲಿ
ಕೈಗೂಡಿಬಂದಪುದೆನಲಕ್ಕುಮೆ? ಆ ಕಾಲ
ಆ ಚಿಕಿತ್ಸಕರ್ ಒಂದಕ್ಕೊಂದು ಹೊಯ್ಕಯ್ಯಾಗಿ
ಗುರುದೇವನ ದೇಹದ ಮೇಲೆ ಅಧಿಕಾರಮಂ
ನಡೆಸಿದರ್ ಬಹುಲತರದಲಿ. ಕಳೆದುದು ದಿನಮಾನ.
ನಡೆಯಿತ್ತು ವ್ಯರ್ಥಸಾಹಸ. ದೈಹಿಕ ಶಕ್ತಿಯ
ಕಣಕಣವದು ಕುಂದುತಲಿರ್ದುದು ದಿನದಿನವುಂ.
ಗುರುವರಂ ಸಹಿಸಲಾರದೆ ಸಹಿಸಿ ದಿನಚರಿಯ
ಲಘುತರದಕಾರ್ಯಮಂ ನಿರ್ವಹಿಸುವರ್ ಧೈರ್ಯ
ಸ್ಥೈರ್ಯಂಕೂಡಿಸಿ, ಅಮೆರಿಕೆಯ ಮಿತ್ರಮಂಡಲಿಯ
ಅನೇಕರ್ ಪತ್ರೋಲೆಯ ಕರೆಯಿತ್ತರ್ ಅತುಲ
ಗೌರವಾದರಗಳಿಂ. ಅಲ್ಲಿನ ಕಳೆದುಳಿದಿಹ
ಕಾರ್ಯಮಂ ಪೂರೈಸುತೆ ವೇದಾಂತ ಸಂಪದಂ
ತುಂಬಿಕೊಡಿ ಎಂದುಮೆಂದು. ಅದನರಿದರಿದು ಕಿರಿ
ಕಿರಿಯ ಶಿಷ್ಯರಿಂಗೆ ಮೇಣಧಿಕ ವೈದ್ಯವಾಚಸ್ಪ-
ತಿಗಳಿಂಗೆ ಹೃನ್ಮನಂಗಳ್ ಹಗುರವಾದುಮನೆ
ಸಲ್ಪುದು. ಸಮುದ್ರಯಾನದ ಜೊತೆಗೆ ಅಮೆರಿಕೆಯ
ಅತ್ಯುತ್ತಮ ಚಿಕಿತ್ಸೆಯ ಲಾಭಮಿದೆ ಎಂಬುವ

ಮಹದಾಸೆಯ ಕುಡಿ ಕೊನರಿದತ್ತು ಹಸುರಸುರಾಗಿ.
ಸಮುದ್ರ ಪಯಣದ ಹವೆಯ ಹಿತಾಹಿತಮೇನಿರೆ
ದೀರ್ಘಾಯತ ಪಯಣದ ಕಾಲಗತಿಯೊಂದು ಬೆದರು
ಬೊಂಬೆ. ಅಂತಿಂತು ಪುನರಪಿ ಪ್ರತ್ಯಾವರ್ತನಂ
ಕೈಗೂಡೆ ಬೀಳ್ಕೊಡಿಗೆಯ ಸಲುವಾಗಿ ಬಂದರು
ಬಹುಲಮಂದಿ, ಪುಷ್ಪಗುಚ್ಛಗಳ ಸಹಿತ ಮಠಕೆ.
    ಸಾವಿರದೆಂಟನೂರತ್ತೊಂಬತ್ತೊಂಬತ್ತನೆಯ
ಇಸವಿ ಜೂನ್ ಇಪ್ಪತ್ತಾರನೆಯ ತೇದಿ ಬಳಿ
ಸಾರಿ ಬಂದತ್ತು ದಿನದಿನಂಗಳನೊದ್ದು ತಾಂ
ಜೃಂಭಿಸಿದವೊಲ್. ಸೋದರಿ ನಿವೇದಿತಾ ಮೇಣ್
ಸ್ವಾಮಿ ತುರಿಯಾನಂದರೊಡಂಗೂಡಿ ಜಹಜಂ
ಏರಿದರ್, ಉತ್ಸಕ ಮನ ಉತ್ಸುಕ ಹೃದಯದ
ಪುರಡಿನೊಳ್ ಮೆಯ್ಯ ಸೋಲು ಮರೆತ ಗುರುವರ್ಯಂ
ಎಲ್ಲರೆಡೆಗೆ ಕೈವೀಸಿದರ್ ಮೃದು ಮುಗುಳಂ
ಹರಿಸಿ. ಜಹಜು ಶಿಳ್ಳೆಯನೂದಿತು ಹಿರಿದನಿಯಲಿ.
"ಎನ್.ಎಸ್. ಗೋಲ್ಕೊಂಡ" ಎಂಬ ನಲ್ವೆಸರಿನ ಬಹುಲ
ಪುಣ್ಯವಂತ ಜಹಜು ಕಲಿಕತ್ತೆಯ ಬಂದರಂ
ಬಿಟ್ಟು ಪೊರವಂಟುದಾ ಹೂಗ್ಲಿ ನದಿ ಜಲಧಿಯಂ
ಕೊರೆಕೊರೆದು ಕೀಸಿ. ಮುಂದೆ ಬಂಗಾಳ ಕೊಲ್ಲಿಯ
ಮುಟ್ಟಿದ ಬಳಿಕಂ ಮುಂಪಯಣದ ಮಹಾಯಾನಂ.
ಹೂಗ್ಲಿನದಿಯ ಪಯಣವದೊಂದು ತ್ರಾಸದಾಯಕ.
ಬಲು ನಿಧಾನ ಗತಿಯಲಿ ತಿಣುತಿಣುಕಿ ಸರಿಯದೆಯೆ
ಗತಿಯಿಲ್ಲ. ಸಾಗರ ತಟಿನಿಯ ಮುಟ್ಟುವೊಡದೇಂ
ದೂರಮಿಲ್ಲಂ. ಆದೊಡಾ ಹೂಗ್ಲಿ ನದಿಯುಪಟಳ
ವೆರ್ಚಿರಲ್ ಪಯಣದ ಕಾಲಾವಧಿ ಎರಡು ದಿವಸ

ಹಿಡಿದತ್ತು ಮೈಕೈ ಕುಲುಕಿಸಿ. ಗುರುವರಂ ತಮ್ಮ
ದ್ವಿತೀಯ ಪಾಶ್ಚಾತ್ಯ ಯಾತ್ರೆಯ ರಸಾನುಭವ
ಕುರಿತು ಭಾರತೀಯ ಪತ್ರಿಕೆಗಳಿಂಗೆ ಮತ್ತಂ
ತಮ್ಮ ಉದ್ಬೋಧನ ಪತ್ರಿಕೆಗೆ ಕಳಿಪುವ ಇಚ್ಛೆ
ಘನಿಸಿರೆ ಮನದಿ 'ಪರಿವ್ರಾಜಕ' ಎಂದೆಂಬುವ
ಶಿರೋನಾಮೆಯೊಳ್ ಲೇಖಿಸ ತೊಡಗಿರಲ್ ನಿತ್ಯ
ಚರಿಗೆ ನಲ್ ಬಿತ್ತಾಯ್ತು. ಲೇಖನಗಳ ಇಂಗ್ಲಿಷ್
ಭಾಷೆಯ ಶಿರೋನಾಮೆ "Memoirs of
Europian traval" ಎಂದೆಂದು, ಮತ್ತಂ,
ಸ್ವಾಮೀಜಿಯ ಕೃತಿ ಶ್ರೇಣಿಯೊಳಿರ್ಪ ಆಯೆಲ್ಲ
ಲೇಖನದ ಮಾಲೆಗಳ್ ಮುಂಪೀಳಿಗೆಗಳಿಂಗೆ
ಅಮೂಲ್ಯವರದಾನಮೆನುವೊಡೆ ಸರಿಯಪ್ಪುದು.
ಮಹಾಜಲದೇಶದಲಿ ಬಂಗಾಳ ಕೊಲ್ಲಿಯಂ
ಸೇರ್ದ ಜಹಜು ಮದರಾಸ್ ಪತ್ತನಂ ಗುರಿಗೊಂಡು
ಜರ್‍ರನೆ ಹರಿದುದು ಮಹಾಜಲಧಿಯ ಮೇಲಾಡಿ,
ಭೋರ್ಗರೆವ ಅಲೆಗಳಲಿ ತೇಲಾಡಿ ತೂಗಾಡಿ
ಪಯಣಮಂ ಮುಂಬರಿಸಿದುದು ಜಹಜುಜುಳುಜುಳಿಸಿ.
ಡೆಕ್ಕಿನಂಗಣದಲಿ ತನಿಗಾಳಿಗೆ ಮೈಯೊಡ್ಡಿ
ಮುಸ್ಸಂಜೆಯ ಸುಂದರ ಸೊಬಗಿನೈಶ್ವರ್ಯದಲಿ
ಮನವಿಟ್ಟು ನೋನೋಡುತಿರೆ ಪಡುವಣ ಭಿತ್ತಿಯು
ಸಾಗರಕೊನೆಯಂ ಮುಟ್ಟಿ ಮುದ್ದಿಸುವೆಡೆ ಕಾಣ್ಬ
ಸಂದೃಶ್ಯಮಾನ ವೈಭವತೇಜಮಂ ಕಂಡು
ಪುಳಕಿತ ಮನದಿಂ ಉದ್ಗರಿಸಿದರಿಂತು "ಅಹಾ!
ಈ ದೃಶ್ಯಮಾನ ರಾಜ್ಯಮೆ ಇಂತಿರ್ಕೆ ದೃಷ್ಟಿಯ
ಆಚೆಗಿನ ಮಾಯಾ ಜಗತ್ ಇನ್ನು ಎಂತಿಹುದೊ

ಊಹಿಸಲಸದಳ. ಆ ಸತ್ಯದ ಹರವು ಅರಿತು
ಕೊಂಬುವೊಡೆ ಮನದ ಕಳ್ತಲೆಯ ತೆರೆಯಂ ಹರಿದು
ಬಗೆವುದೆನ್ನ ಹಾರೈಕೆ. ಮೇಣರಕೆ...'' ಎನುತೆನುತೆ
ಮೈಯೆಲ್ಲ ಕಣ್ಣಾಗಿರಂ ಎಂಬವೊಲ್ ಮೈಮರೆತು
ತನ್ಮಯತೆಯಲಿ ಮುಳುಗಿದರ್ ಗುರುವರಂ. ಪಗಲ್
ಉರುಳುರುಳ್ದು ನಿಶಿಯಡರುವನ್ನ ಸುಗಾಲವೆಂತು
ಕಳೆದುದೋ ಎಂಬೊಲಿರಲ್ ಧ್ರುವ ನಕ್ಷತ್ರವದು
ಮೂಡಿ ಉಜ್ವಲಿಸಿತ್ತು ತಾರಕಿತ ಗಗನದಲಿ.
ಆ ಥಳಥಳಾಯಮಾನ ಧ್ರುವ ತಾರೆಯ ಮೇಲೆ
ಕಣ್ ನೋಟವಂ ನಟ್ಟು ಸೋದರಿ ನಿವೇದಿತೆಯಂ
ಕುರಿತು ನುಡಿದರ್ ಸ್ವಾಮಿ ವಿವೇಕಾನಂದರ್,
''ಕೇಳ್ ಭಗಿನಿ, ಯೂರೋಪೀಯ ಘನಪಂಡಿತರ್
ನುಡಿವುದಂ ಅರಿದೆಯಾ? ನಮ್ಮದೇಶೀಯ ಎನೆ,
ಭಾರತದ ಆರ್ಯರುಂ ಆವುದೊ ಪರದೇಶದ
ನೆಲೆಯಿಂದೈದೆಮ್ಮ ರಾಷ್ಟ್ರೀಯ ಮೂಲನಿವಾಸಿ-
ಗಳಿಂ ಭೂಮಿಯಂ ಕಸಿದು ಅವರಂ ಹೊಡೆದಟ್ಟಿ
ತಾವ್ ಭಾರತದೊಳ್ ನೆಲೆನಿಂದರ್ ಇತ್ಯಾದಿ.
ಅದುಮಲ್ಲದೆ ಭಾರತದ ವಿದ್ವಾಂಸರ್ ಅದಂ
ಒಪ್ಪಿ 'ಹೂಂ' ಗುಡುವರೆಂಬುದು ಎನಿತು ಅಚ್ಚರಿಯ
ಸಂಗತಿ! ಇದೆಲ್ಲವುಂ ಬರೀ ಬುರುಡೆ! ಮೂರ್ಖರ
ಪುಲಾಪ! ಈವಗೆಯ ಗಂಭೀರ ಸುಳ್ಳುಗಳ
ನೆಯ್ದು ಶಾಲಾಗ್ರಂಥಗಳಲಿ ಕೋದು ನಮ್ಮಯ
ಬಾಲಕರ ತಲೆಯೊಳ್ ತುಂಬುವುದದು ಘೋರತರ
ಅನ್ಯಾಯ!
''ಆನುಂ ಸ್ವತಃ ಅಜ್ಞನೆ! ಎನಗಾವ

ಪಾಂಡಿತ್ಯವುಂ ಇಲ್ಲ! ಆನರಿದ ಹಲಕೆಲವು
ಅಪಾರ್ಥಗಳಂ ಧರ್ಮಪರಿಷತ್ತಿನೊಳ್ ಕಲ್ಪ-
ನೆಯ ಕಂತೆಯುಮಿದೆಂದು ಕೊಡವಿ ತೀವ್ರತರದಲಿ
ವಿರೋಧಿಸಿಹೆನೆನ್. ಇದಂ ಕುರಿತು ಭಾರತೀಯ
ವಿದ್ವಾಂಸರೊಳ್ ಮೇಣ್ ಯೂರೋಪೀಯ ಪಂಡಿತ
ವರ್ಯರೊಳ್ ತರ್ಕವಿತರ್ಕ ಹೂಡಿ ನಿಜ ಹುರುಳ್
ಬಗೆಯುತಿಹೆ. ಯುಕ್ತ ಸಮಯವೊದವಿ ಬರೆ ಎನ್ನಯ
ಆಕ್ಷೇಪಗಳಂ ವಿಸ್ತೃತವಾಗಿ ಮಂಡಿಸಲಿಹೆನೆನ್. ಈ
ಪಂಡಿತರಿಗೆ ಆಂ ಪೇಳುವುದಿಷ್ಟೆ, ನೀವ್ ಪಂಡಿತ
ವರ್ಗಂ ನಿಮ್ಮೆಲ್ಲ ಹಳೆಯ ಗ್ರಂಥವ ತೆರೆದು ಪುಟ
ಪುಟಗಳ ಪರಿಶೀಲಿಸಿ ನೋಡಿ! ಧರ್ಮ ಸಾಹಿತ್ಯವ
ಸೋಸಿ ನೋಡಿ! ಅಂತರದೊಳ್ ನಿಮ್ಮಯ ಸ್ವತಃ
ನಿಷ್ಕರ್ಷೆಗಳಿಗೆ ಮನಗೊಡಿ, ಎಂದು! ಭಗಿನೀ,
ನೀನಿನ್ನೊಳ್ ಯೋಚಿಸಿ ತಿಳಿ. ವಿಚಾರ ವಿಶ್ವಂ
ಬೊಕ್ಕು ಪರಿಶೀಲಿಸಿ ತಿಳಿ. ಬರಿ ಮುಮ್ಮಾತಿನಿಂ
ಏನ್ ಪ್ರಯೋಜನಂ?"
ಮಹಾಸಾಗರದಲೆಯ
ಅಲೆಅಲೆಗಳ್ ಬೆಂಬಿಡಿದು ಅಪ್ಪಳಿಸಿ ಪೊಯ್ಯುತೆ
ಭೋರ್ಗರೆದು ಬೋರಾಡಿ ಮುನ್ನುಗ್ಗುವಾ ಚಂಡ
ಪ್ರಚಂಡ ಹೋರಾಟದ ಮಹಾನ್ ಚಿತ್ರಗಳ
ದರ್ಶನಂ ಕಮನೀಯ ಕಠೋರತರಮಿರುತಿರೆ
ನೆಟ್ಟ ನಿಟ್ಟಾಲಿಗಳ್ ಪಿಂಮರಳವು. ಬೀಸಿತು
ಸುಯ್ ಸುಯ್ಯನೆ ಸುಯ್ಗಾಳಿ ಸುಯ್ಯುತೆ. ಅತ್ತಿತ್ತ
ತುಯ್ಯಲಾಡುತೆ ತೇಲಿದುದು ನೌರಿವಂ ದಿಕ್ಕೆಟ್ಟು
ಮುಂಗೆಟ್ಟ ಮಾಳ್ಕೆಯಲಿ. ಅತೀವ ಚಳಿಯ ಕೊರೆತ.

ಉಣ್ಣೆಯರಿವೆಗಳ ಮಧ್ಯೆ ನಡುಗುವ ನಿಡುಕಾಯ.
ತಾಳಲಾರೆನೊ ಎಂಬವೊಲ್ ಜೀವ ತಹತಹಿಸೆ
ತನಿವೊಳ್ತಿನಲಿ ಕಳೆವುದು ಸಮಯಂ ಕೊಠಡಿಯೊಳ್.
ಬೆಚ್ಚನೆಯ ಬಿರುಬಿಸಿಲ್ ಮೇಲೇರಿದ ಬಳಿಕಂ
ಪ್ರಾಂಗಣಕ್ಕೈದು ಜಹಜಿನ ಅಧಿಕಾರಿಗಳೊಡಂ
ಮೇಣ್ ಸಹಪಯಣಿಗರೊಡನೆಯುಂ ಗುರುದೇವಂ
ಸಹ ಬಾಳ್ವೆಯಲಿ ಪಾಲ್ಗೊಂಬರ್. ಜಹಜಿನ ಪ್ರಮುಖ
ವೇದಿಕೆಯ ಮೇಲೆ ಶತಪಥ ತಿರುಗುತೆ ಶಿಷ್ಯರಿಗೆ
ಸೌಂದರ್ಯರಸ ತತ್ತ್ವದ ವಿಷಯಂ ಬಣ್ಣಿಸುತೆ
ನುಡಿದರ್ ಮನತುಂಬಿ "ಎಲೆ ಶಿಷ್ಯರೇ, ಮಿತ್ರರೇ,

"ಏಕಮೇವಾದ್ವಿತೀಯಃ
ಸತ್ಯದ್ರಾಜನ್ ನಾವಬುಧ್ಯಸೇ ।
ಸತ್ಯಂ ಸ್ವರ್ಗಸ್ಯ ಸೋಪಾನಂ
ಪಾರಾವಾರಸ್ಯ ನೌರಿವ ॥"

ಎತ್ತೆತ್ತಲುಂ ತುಂಬಿ ಹರಡಿದ ಸುಶಾಂತತಾ
ಶಾಂತಿಯಲಿ ಪದಚಾರಣಗೈದಿರ್ದ ಸ್ವಾಮಿಜಿ
"ಎಲೈ ಪರಮ ಆತ್ಮೀಯ ಶಿಷ್ಯರೇ ಸತ್ಯದಿಂ
ಜಗ ಮಂಡಲದೊಳ್ ಸೌಂದರ್ಯರಸ ತತ್ತ್ವದಾ
ವಿಚಾರವ ಗಮನಿಸಿರಿ; ಪರಿಶುಭ್ರ ಜ್ಯೋತ್ಸ್ನಾಸು-
ದೌತ ಸುನೀಲ ಜಗತ್ ಮಹಾ ಮಂಡಲಮಂ ಗುರಿ
ಗೊಂಡು ನೋಡಿ, ಜೀವ ಜಗತ್ತಿನ ಅಂಶವಾಗಿ
ಇದನಾರ್ ಸೃಷ್ಟಿಸಿದರ್? ಇದೆಂತು ಮೂಡಿದುದು?
'ಸೃಷ್ಟಿ' ಇದರ ಗುಟ್ಟೇನ್? ಈ ವಿಷಯದೊಳ್ ಮನ
ತೊಡಗಿಸಿದೊಡೆ ಕಾಂಬುವ ಸತ್ಯಚಿತ್ರವೇ ಬೇರೆ.

"ಸರ್ವಂ ರೂಪಮಯೀ ದೇವಿ
ಸರ್ವಂ ದೇವಿಮಯಂ ಜಗತ್ ।
ಅತೋಽಹಂ ವಿಶ್ವರೂಪಾಂ
ತ್ವಾ ನಮಾಮಿ ಪರಮೇಶ್ವರೀಮ್ ॥"

ಈ ಬಗೆಯೊಳಾವು ಪೂಜಿಪುದು ದೇವಿಯನ್ನೇ,
ಇಡೀ ಜಗತ್ ಮಂಡಲಮಂ 'ದೇವಿ' ಎಂದಾವ್
ಸಂಬೋಧಿಪುದು ಭಕ್ತಿಗೌರವಗಳಿಂ. ಇದುಂ
ಮೂಢ ನಂಬಿಕೆಯಲ್ತು, ವಿಶೇಷತಮ ಗೌರವ!
ಸೋದರೀ, ಈ ಮಹತ್ ಗೌರವವದು ನಂತರ
ನೇರವಾಗಿ ಸಲ್ವುದು ಭಾರತದ ಸ್ತ್ರೀಯರಿಗೆ.
ಕಾಳಿಕಾಮಾತೆಯಮ್ಮ ಜಗಜ್ಜನನಿ! ಆಕೆಯೆ
ಸೃಷ್ಟಿಕರ್ತೆಯನೆ ಅನ್ಯಮಲ್ತು. ಅವಳೆ ಸರ್ವಸ್ವ.

"ತ್ವಂ ಸ್ತ್ರೀ ಪುಮಾನಸಿ
ತ್ವಂ ಕುಮಾರ ಉತವಾ ಕುಮಾರೀ ।
ತ್ವಂ ಜೀರ್ಣೋ ದಂಡೇನ ವಂಚಸಿ
ತ್ವಂ ಜಾತೋ ಭವಸ ವಿಶ್ವತೋ ಮುಖಃ ॥"

"ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖಭಾಗ್ ಭವೇತ್ ॥"

ಎಂದಾವ್ ಪ್ರಾರ್ಥಿಸುವುದು ಅವಳನ್ನೇ, ಅದೇ
ದೇವಿಯನ್ನೆ. ಒಳಮನಸ್ಸು ತೆರೆದು ನೋಡಿ! ಆ
ದೇವಿಯ ಅನುಗ್ರಹಂ ಕಣಕಣದಲಿಯು ಎಂತು
ಉದ್ಘೋತಮಾಗಿರ್ಪುದು? ಈ ವಿಶ್ವಜಗದೊಳ್
ಆವ ವಸ್ತು ನಿರಾಕರಿಸಲ್ ಸಾಧ್ಯ? ಬ್ರಹ್ಮಾಂಡ

ಪ್ರತಿಷ್ಠೆಗೆ ಧಾರ್ಮಿಕ ತಳಹದಿಯು ಇಲ್ಲದೆಯೆ
ನಡೆವುದೇಂ? "**ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ**"
ಸನಿಹದೊಳ್ ಸೋದರಿ ನಿವೇದಿತೆಯು ಕಾಣದಿರೆ
ತಿರುಗಿ ನೋಡಿದರ್ ಸ್ವಾಮಿಜಿ ಕೊಠಡಿಯ ಕಡೆಗೆ.
ಶ್ರೀವನಿತೆ ತಲೆಬಾಗಿ ಗ್ರಂಥದೊಳ್ ಮನವಿಟ್ಟು
ಓದಿನಲಿ ತೀವ್ರಮಗ್ನೆಯಾಗಿರ್ದುದಂ ಕಣ್
ತುಂಬ ಕಂಡರ್ ಗುರುವರಂ. ಅವಳಂ ಕೂಗಿ
ಕರೆಯಲ್ ದನಿಕೇಳ್ದು ಗ್ರಂಥವಂ ಮುಚ್ಚಿ ಬಳಿಗೈದ
ಶಿಷ್ಯೆಯಂ ಕುರಿತು "ಏನೋದುತಲಿಹೆ ಭಗಿನೀ?
"ಕವಿತಾ ಗ್ರಂಥವನೋದುತಲಿರ್ದೆನೆನ್ ಸ್ವಾಮಿಜಿ."
"ಓ ನೋಡಲ್ಲಿ! ಗಗನಾಂಗಣದ ನೀಲದ್ರುವ್ಯಂ
ಸಾಗರದ ರಜತ ದರ್ಪಣಮಂ ಮುಟ್ಟಿ ಮುದ್ದಿಪ
ನಯನ ಬಂಧುರ ದೃಶ್ಯವೈಭವದ ಚಿತ್ರವೇ
ಎದುರಿಗಿದೆ! ಆ ಆಶುಕವಿತೆಯಂ ನೋಡು!" ಎನೆ.
ಭಾವನಾದ್ವೇಗದಲಿ ಮುಖಬಿಂಬ ವರ್ಣಮಯ
ತಳೆದವೊಲ್ ರಂಗುಮೂಡಿತ್ತು. ಮತ್ತೆಂದರ್
ಸ್ವಾಮಿಜಿ "ಅಹ, ಕವಿತೆಯ ದಿವ್ಯತರ ಸಾರವೆ
ಸಮ್ಮುಖದೊಳಿರೆ ಒಳಗೆ ಕುಳ್ಳಿರ್ದು ಕವಿತೆಗಳ
ಓದುವುದರಿಂದೇಂ ಫಲ? ಕಣ್ತೆರೆದು ನೋಡಾ
ಸ್ವರ್ಗೀಯ ಸೌಂದರ್ಯ ರಾಶಿಯಂ. ಧಾರ್ಮಿಕ
ಬಿಗಿತಮಿಲ್ಲದೆಯೆ ಬ್ರಹ್ಮಾಂಡ ಚಕ್ರವದಿಂತು
ಕ್ರಮವತ್ ನಡೆಯಲಕ್ಕುಮೆ? ಧರ್ಮವೇ ಜಗಕೆ
ಆಸರೆ. ಧರ್ಮವೇ ಜೀವನಕೆ ಆಸರೆ. ಕೇಳ್

"**ಧಾರಣಾದ್ಧರ್ಮಮಿತ್ಯಾಹುಃ**
ಧರ್ಮೋಧಾರಯತೇ ಪ್ರಜಾ ।

ತಸ್ಮಾದ್ಧರ್ಮಂ ಪ್ರಶಂಸಂತಿ
ಧರ್ಮೋ ರಕ್ಷತಿ ರಕ್ಷಿತಃ ॥"

ನ್ಯೂಯಾರ್ಕ್ ನಗರಿಯಂ ಸೇರ್ದಾಗಳೇ ಲೆಗೆಲ್
ದಂಪತಿಗಳ ಪ್ರೇಮಾದರದ ಸ್ವಾಗತ ದೊರೆತು
ಸುಪ್ರಸನ್ನರಾದರ್ ಗುರುವರ್ಯರ್ಮಿ. ಆದೊಡಂ
ದಂಪತಿಗಳಿಂಗೆ ಸ್ವಾಮೀಜಿಯ ಶಿಥಿಲಮಾದ
ವಜ್ರಕಾಯಮಂ ಕಂಡು ತಲ್ಲಣಿಸಿ ಬೆಕ್ಕಸ
ಬೆರಗುವಟ್ಟು ವ್ಯಥಿತ ಹೃನ್ಮನಗಳಿಂ ನೊಂದು
ನೀರಾಗಿ ತಮ್ಮ ದೂರದ–ನಗರವಲಯದಿಂ–
ಬಲುದೂರದ ಹಳ್ಳಿಯ ಭವನಕೆ ಕರೆದೊಯ್ದರ್.
ನಿಶ್ಶಬ್ದ ನೀರವ ನಿರಾತಂಕಮಯಮಾದ
ವಾತಾವರಣದೊಳ್ ಗಳಿಗೆಗಳಿಗೆಗಳ್ ಬಹುಲ
ತೋಷಮಯಮಾಗಿ ರಾಗರಂಜಿತಮಾಗಿ ಸತ್
ಶಾಂತಿಮಯಮಾಗಿ ಕಳೆಯುತಲಿರೆ ಗುರುದೇವಂ,
ಧೀಮಂತ ಚಿಕಿತ್ಸಕರ್ಯೆದರ್ ಗುರುದೇವನಾ
ದೇವಧನ್ವಂತ್ರಿಗಳ್ಯೆಸಿ. ದೈಹಿಕ ರೋಗಂ
ಎಂತೆಂತು ಚಿಕಿತ್ಸೆಯುಮಂತಂತು ದೊರೆಯಿತ್ತು
ಕಟ್ಟುನಿಟ್ಟಿನ ಪಥ್ಯಗಳುಂ ನೆಲೆ ನಿಂತಂತೆ
ಕಳೆದುವೆನೆ ಒಂದೆರಳ್ಡುಮೂರ್ನಾಲ್ಕೆದಾರೇಳ್
ದಿನಮಾನಗಳ್. ನಸುನಸುವೆ ಸುಧಾರಿಸಿ, ಕೊಂಚ
ಕೊಂಚವೇ ಚೇತರಿಸಿ ಕೊಳ್ಳತೊಡಗಿದುದು ಗುರು
ದೇವನಾ ದೈಹಿಕ ಪ್ರವೃತ್ತಿ. ಹಸಿರು ಹೊಲಗಳ
ಸವಿಗಾಳಿಯು ನವುರಾಗಿಯೇ ಬೀಸುತಿರ್ದುದು
ಅಹೋರಾತ್ರಿ ಚಾಮರಿಸುವೊಲ್. ಲೆಗೆಲ್ ದಂಪತಿ–
ಗಳಿತ್ತಾ ಪರಮೋಪಚಾರವದು ಓತವಾಯ್ತು,

ಭರವಸೆಯು ತಾನಾಯ್ತು ಮಾನಸೀ ಲೋಕಕ್ಕೆ
ಉದ್ದಂಡ ಶರೀರೀ ಲೋಕಕ್ಕೆ. ಸ್ವಾಮೀಜಿ
ಕಳೆದರಲ್ಲಿ ಎರಡೆರಡು ವಾರಗಳ್ ಶಿಷ್ಯರೊಡಂ
ಪ್ರಶಾಂತಿಯಲಿ. ಅಲ್ಲಿನ ಜನಗಳ ಪರಿಚಯಂ
ಬೆಳೆಯಿತ್ತು. ಸ್ನೇಹ ಸಂಬಂಧವುಂ ಬೆಳೆಯಿತ್ತು
ಹೊಲಗದ್ದೆಗಳಲಿ ಅಡ್ಡಾಡಿ ಮೈಗೆ ಸತ್ವದ
ಹೊಳೆ ಹರಿಸುವರ್, ನಗೆ ನುಡಿಗಳ ಎಳೆ ಚಟಾಕಿಯಂ
ಹರಿಸಿ ಹೃನ್ಮನಗಳಿಗೆ ರಸದೂಟ ನೀಡುವರ್.
ಅಲ್ಲಿನ ಬದುಕಿನ ಸಂವೃದ್ಧಿ ಮತ್ತಮಾ ಸ್ತ್ರೀ
ಪುರುಷರ ಸಮಾನತೆ ಸಹಕಾರ ಒಂದೊಂದು
ಹೃತ್ ತಂತ್ರಿಯಂ ರಾಗಾರುಣತಾನದಲಿ
ಮಿಡಿಸುವುದು ಕರ್ಣಪಟಲಂಗಳಿಗೆ ತಾಗುವೊಲ್.
ತಮ್ಮಿಯಾ ಮನೋಮಯ ಪ್ರಾಣಮಯ ಹಂಬಲವ
ಇಂತಿಂತು ಉಸುರಿದರ್ ನಿವೇದಿತೆಯಂ ಕುರಿತು,
"ಭಗಿನೀ, ಕೇಳೆಮ್ಮ ದೇಶೀಯ ಬಡತನಂ,
ಸುಸಂಸ್ಕಾರವಶಾತ್ ಹಿಂದೂಧರ್ಮದೊಳ್ ಸಂ-
ಜನಿಸಿಯುಂ ವಿದ್ಯೆಬುದ್ಧಿಗಳ್ ಕರಗತಗೊಳದೆ
ಹಿಂದುಳಿಯಿತು ಹಿಂದೂ ಸಮಾಜ, ಎನದಿರಲಾರೆ.
ಎಲ್ಲೆಡೆಯು ಶಾಲೆ ಕಾಲೇಜುಗಳ್ ಒಡಮೂಡಿ
ಸಕಲ ಶಾಸ್ತ್ರಾಧ್ಯಯನಗಳ್ ಸಾಂಗಮರಿತರಿತು
ತಿಳಿದು ಜನ ಸಾಮಾನ್ಯರು ಕಣ್ತೆರೆದ ಬಳಿಕಂ
ನಿರ್ಣಯಂ. ಈಗಳೇನೆಂದು ಪೇಳ್ವೆ ಭಗಿನಿ?
ಈಗಳೆಮ್ಮಿಯ ಸುವಿದ್ಯಾದ್ರವ್ಯವದು ಅಲ್ಪ
ಸ್ವಲ್ಪ ವಿದ್ವಾಂಸರ ಕೈಯೊಳಿದ್ದು, ಉಳಿದೆಲ್ಲ
ಪ್ರಜೆಗಳ ಜ್ಞಾನದಾರಿದ್ರ್ಯಕದುವೆ ಕಾರಣ

ಎಂದೊಡದು ಅನ್ಯಮಲ್ತು. ಈ ಅಧ್ಯಾಯವದು
ಕೊನೆಗೊಳ್ಳದೆ ರಾಷ್ಟ್ರದ ಉದ್ಧರೀಕರಣಮಿಲ್ಲ.

"ಬೋದ್ಧಾರೊ ಮಸ್ತರಗ್ರಸ್ತಾಃ
ಪ್ರಭವಸ್ಮಯ ದೂಷಿತಾಂ ।
ಅಬೋಧೋಪಹಾಶ್ಚಾನ್ಯೇ
ಜೀರ್ಣಮಂಗೇ ಸುಭಾಷಿತಂ ॥"

ಎಂಬುದರೊಳ್ ಪೂರ್ಣ ಸತ್ಯಾಂಶವಿದೆ ಎಂದೊಡದು
ಸುಳ್ಳಲ್ಲ. ಕಟ್ಟೊಡೆದು ಈ ಕೆಟ್ಟ ಪ್ರವಾಹ
ಹೊರ ಹರಿಯುವನ್ನ ರಾಷ್ಟ್ರೀಯ ಏಳಿಗೆಗನ್ಯ
ಪಥಮಿಲ್ಲ. ಸೋದರೀ! ಇದೊರ್ ಸಂಕಟಪ್ರದ.

"ಪ್ರಾಗ್ ಜ್ವಾಲಿತಾತ್ ಪ್ರದೀಪಾದ್
ಹಿ ದೀಪಿಕಾ ಸಂತತಿಃ"

ಎಂಬುದದು ಸತ್ಯಸ್ಯ ಸತ್ಯ. ಎಲ್ಲವುಂ ಕಾಲ
ಪರಿಪಕ್ವತೆಯ ಮೇಲೆ ಅವಲಂಬಿತಂ. ನೂರು-
ನೂರೇ ಜನ ಸಧ್ಯಪರಿಸ್ಥಿತಿಯೊಳ್ ಮುಂದ್ಯೆದು
ಬೆಂಬಲಿಸಿದೊಡೆಮ್ಮಕಾರ್ಯಗತಿಗೆ ಎನಿತೆನಿತೋ
ಅನುಕೂಲಮಾದಪುದು. ದೈವಬಲ ಒದವಿದೊಡೆ
ಅದರ ಕೊರಮಂ ತುಂಬಿ ಕೊಂಬುವೆನ್ ಒಂದಲ್ಲ
ಒಂದುದಿನ..."
ಮತ್ತೆಂದರ್ ತುರಿಯಾನಂದರಂ
ಕುರಿತಿಂತು "ಗುರುಬಾಯಿ, ಎನ್ನೆಲ್ಲ ಕಾರ್ಯವಂ
ನಿರ್ವಹಿಸುವೊಡೆ ಎನಿತೆನಿತು ಜನರ ಬೆಂಬಲಂ
ವೇಳ್ಕುಮೆಂಬುದುದರ ಅರಿವಿರುವುದು ದೇಶಕ್ಕೆ.
ಆದೊಡೇಂ ಗಮನಮಿನ್ನಿತ್ತ ಹರಿಯಲಿಲ್ಲವು.

"ಸರ್ವೇಽಪಿ ಸುಖಿನಸ್ಸಂತು
ಸರ್ವೇ ಸಂತು ನಿರಾಮಯಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾಕಶ್ಚಿದ್ದುಃಖ ಭಾಗ ಭವೇತ್ ॥"

ಕೇಳ್ಳೈ, ವೇದಗಳ್ ಸಾರಿ ಪೇಳ್ವ ನುಡಿಗಟ್ಟಿದು.
ಆದೊಡತ್ತಣಂ ಮನವಿಡುವವರಿಲ್ಲಮಾಯಿತು,
ನಮ್ಮ ಭಾರತದೊಳ್. ಇದಂ ಸರಿಪಡಿಸುವುದೇ
ಇಂದಿನವರ ಮುಂದಿನ ಕರ್ತವ್ಯ. ಸೋದರೀ,
ಇದಂ ನೀಂ ಪರಾಮರ್ಶಿಸು. ಎಲ್ಲರ್ಗ್ಗ ಎಲ್ಲಾ
ಕಾಲಕ್ಕು ಇರತಕ್ಕ ಮೇಣ್ ಚಿಂತಿಸತಕ್ಕ
ವಿಷಯ ಎಂಬುದಂ ಮರೆಯದಿರ್. ಮಾನವೀಯತೆಗೆ
ಇದುವೇ ಸರಿಯಪ್ಪ ಪಥ. ಸರಿಯಪ್ಪ ನೀತಿ.."
ಮಿನ್ನೆ ಆಚಾರ್ಯನಿತ್ತ ಆದೇಶದ ಮೇರೆ
ವಿದೇಶಗಳಲಿ ಸನಾತನ ಧರ್ಮ ಪ್ರಸಾರ
ಕಾರ್ಯದೊಳ್ ನಿರತರಿರ್ದ ಸ್ವಾಮಿ ಅಬೇಧಾನಂ-
ದರಿಂಗೆ ಗುರುದೇವನ ಪುನರಾಗಮನವಾರ್ತೆ
ತಿಳಿದು ಬರಲವರವಿಳಾಸಮರಿತು ಓಡೋಡಿ
ಬಂದರಾ ಲೆಗೆಲ್ ದಂಪತಿಗಳ ಭವನಮಿರ್ದ
ಹಳ್ಳಿಗೆ. ಪರಸ್ಪರ ಗುರು ಭಾಯಿಗಳ ಭೇಟಿಯಿಂ
ಆನಂದ ಭಾವನಾ ವೇಗದಿಂ ಗಳಿಗೆಯೊಂದು
ಮಾತು ಹೊರಡದಾಯ್ತು. ಪರಸ್ಪರಾಲಿಂಗನದ
ಬಳಿಕ ಉಭಯ ಕುಶಲೋಪರಿ ನಡೆದುದು ಪ್ರೇಮದ
ರಸಸೂಸಿ. ಬಳಿಕ ನಾಲ್ವರುಂ ಕೂಡಿ ತಂತಮ್ಮ
ಅನುಭವಾಮೃತರಸವಂ ಹಂಚಿಕೊಂಡರ್ ಸವಿ
ಮಾತಿನಲಿ. ಆತ್ಮೀಯ ಪ್ರೇಮ ಬಾಂಧವ್ಯದಾ

ಮಧ್ಯೆ ಕಳೆಯಿತು ಪೊಳ್ತು ತೋಷಮಂ ಸಂತೋಷ
ಬಂಧಾರ ಗೊಳಿಸಿ. ವಾರವೊಂದು ಕಳೆಯಿತಲ್ಲಿಯೆ
ಲೆಗೆಲ್ ದಂಪತಿಗಳಾ ಶೋಡಷೋಪಚಾರದ
ಸತ್ಸೇವೆಯಿಂ ಸುವಿಶ್ರಾಂತಿಯಾ ಪ್ರಶಾಂತಿಯಿಂ ಶಿಷ್ಯ
ಮಂಡಲಿಯ ಸಹವಾಸದಿಂ ಸ್ವಾಮಿ ವಿವೇಕಾ ೩೨೦
ನಂದರ ಶರೀರಗತಿ ಅಲ್ಪಸ್ವಲ್ಪ ಪುರಸ್ಕ-
ರಿಸಿದವೊಲ್ ಗೆಲವು ಕಂಡಿತು ಮೊಗದಲಿ. ಮಿತ್ರರ್,
ಶಿಷ್ಯರ್ ಸಮಾಧಾನದ ಉಸಿರಾಡಿದರ್, ಆ
ದಿನಗಳಲಿ. ಸ್ವಾಮಿ ಅಬೇಧಾನಂದರುಂ ಗುರು
ದೇವನಂ ಬೀಳ್ಕೊಂಡು, ಲೆಗೆಲ್ ದಂಪತಿಗಳಂ
ಅಭಿನಂದಿಸಿ ಪೊರಮಟ್ಟರ್ ತಮ್ಮ ಕಾರ್ಯಾರ್ಥ
ಮುಂಪಥವನಿಡಿದು. ಸಾಯಂಕಾಲೀನ ಚರಿಯಂ
ತೀರ್ಚಿ ಸೆಜ್ಜೆಯಂ ಸೇರಿದರ್ ಸ್ವಾಮೀಜಿ. ಕಿಟಿಕಿಯ
ದ್ವಾರದೊಳ್ ನುರ್ಗಿಬಹ ತಂಗಾಳಿ ತನುಮನಕೆ
ತಣ್ಣನೆಯ ಮುದ್ರೆಯೊತ್ತಿ ಹೋಹುದು ಸಲಸಲಂ. ೩೩೦
ಸ್ವಾಮಿ ವಿವೇಕಾನಂದ ಮಹೋದಯರಾಗಳ್
ಸಿದ್ಧಾಸನದೊಳ್ ಕುಳಿತು ರಾತ್ರಿಯ ಪ್ರಾರ್ಥನೆಯ
ಇಂತಿಂತು ಸಲಿಸಿದರ್ ಕೊರಳ್ ಇನಿಧ್ವನಿಯಲಿ,

"ತ್ಯಕ್ತ್ವಾ ಸುದುಸ್ತ್ಯ ಜ ಸುರೇಪ್ಸಿತ ರಾಜ್ಯಲಕ್ಷ್ಮೀಂ
ಧರ್ಮಿಷ್ಠ! ಆರ್ಯವಚಸಾ ಯದಗಾದರಣ್ಯಂ ।
ಮಾಯಾಮೃಗಂ ದಯಿತಯೋಪ್ಸಿತ ಮನ್ವಧಾವತ್
ವಂದೇ ಮಹಾ ಪುರುಷ! ತೇ ಚರಣಾರವಿಂದಂ ॥"

ಕಲ್ಪನೆಗೆ ಕೆಚ್ಚಿರಲ್ ಮನಮತಿಯಟ್ಟಿ ಕಾಣಾ
ಕಾಳನಿಶಿಯ ಬ್ರಹ್ಮಾಸ್ಮಿಯನುಭೂತಿಯನುಭವ
ದರ್ಶನಂ; ತಾರಕಿತ ದಿವ್ಯಾಂಬರ ಶೋಭೀ

ಚಂದ್ರದರ್ಶನಂ! ನಭ ಚುಂಬೀ ಮಹೇಂದ್ರಗಿರಿ
ಕುತ್ಕಿಲ ಮಸ್ತಕದ ದರ್ಶನಂ! ಶೈಲವನ
ಶೃಂಗದ ತುಹಿನಗಿರಿ ಶಿವಶಿವಾಣಿಯರ ದಿವ್ಯ
ದರ್ಶನಂ! ನೀಲಪಟಲ ವೇಶ್ಟಿತ ಮುಗಿಲ್ಗಳ
ನಟನಾಟನಾಟವಿಯ ಆನಂದ ದರ್ಶನಂ!
ಎಲ್ಲಂ ಮನಗೊಳುತೆ ರಸನಿಧಿಗೆ ಧುಮುಕುವಾತ್ಮ
ತಾಂ ರಸಸ್ವರೂಪಂಬೆತ್ತು ಭಾವಿಪ ದರ್ಶನಂ
ಸೊಗಮಾಯ್ತು. ವರವಾಯ್ತು ಭಾವನಾ ವೇಗಕ್ಕೆ.
    ಸ್ವಾಮಿಜಿ ಸಾನಂದದಿಂ ಕಳೆದರಲ್ಲಿಯೇ
ಮತ್ತೊಂದುವಾರಕಾಲಂ ಲೆಗೆಲ್ ದಂಪತಿಗಳ
ಅಪೂರ್ವತರ ಶೈತ್ಯೋಪಚಾರಂ ಬಿಗಿಯುತಿರೆ
ಪ್ರೇಮಪಾಶದಿಂ ಪೊರಡಲಪ್ಪಣೆಯಂ ತಾವ್
ಬೇಡಿಕೊಂಬುದದು ದುಸ್ತರಮೆಂಬೊಲ್ ಕಿನಿಸಿಗೆ
ಮನೋಗತಿಗೆ. ಆದೊಡವರ ಕಾರ್ಯವಾಹಿನಿಯ
ಸೆಳೆತವನಿತೇ ಸೂಜಿಗಲ್ಲು. ಅಂತಿಂತು ಆ
ಮಾತಾಪಿತೃಸದೃಶ ಲೆಗೆಲ್ ದಂಪತಿಗಳೊಪ್ಪಿ
ಶಿಷ್ಯರೊಪ್ಪಿ ಮಿತ್ರರೊಪ್ಪಿ ಎಲ್ಲರ ಶುಭನುಡಿಯ
ಹಾರೈಕೆಗಳ ಅಕ್ಷತೆಯ ಸೇಚನೆಯಂ ಶಿರೋ
ದೇಶದೊಳ್ ಪೊತ್ತು ನಲ್ ವಿದಾಯಂ ಪಡೆಯುತ್ತೆ
ಪೊರಮಟ್ಟರಲ್ಲಿಂದೆ. ಉಗಿಬಂಡಿಯ ಪಯಣಂ
ಸುಖಪ್ರದಮಾಯ್ತು. ನಿಶ್ಚಿತ ಸಮಯದೊಳ್ ಬೃಹದ್
ನ್ಯೂಯಾರ್ಕ್ ನಗರಿಯಂ ಮುಟ್ಟಿದರ್. ಮಿತ್ರಜನ
ಭಕ್ತಜನ ಸಂದೋಹ ಕಾದಿರ್ದುದು ಬಿಡದಿಯ
ಬಾಗಿಲಿನಲಿ. ಪರಮಾತ್ಮೀಯ ಸ್ವಾಗತದೊಡಂ
ಗುರುವರನಂ ಬರಿಸಿಕೊಂಡರ್. ಮನಮನಕೆ ಹೃದಯ

ಹೃದಯಕೆ. ಕೈಪರೆಗಳ್ ಮೊಳಗಿದುವು ಭವನದ
ಮಾಡು ಮೊಳಗುವ ತೆರದಲಿ. ಆಗಳೊಂದು ಕಿರಿಯ
ಪ್ರವಚನವೊಂದನಿತ್ತು ಬಿತ್ತರಿಸಿದರ್ "ಎಲೆ,
ಜಗಜ್ಜನನಿಯ ಅಮೃತ ಪುತ್ರರಿರಾ ಕೇಳಿ,
ಬರ್ದುಕಿನ ಹಲಹಲವು ಹಂತಗಳಲಿಯು ಏಳು
ಬೀಳುತೆ ಹರಿಯುತಿಹ ಜೀವನನದಿಯು ದೂರದ
ತೀರಮಂ ನೇರಗತಿಯಲಿ ಮುಟ್ಟುವೊಡೆ ದಿವ್ಯ
ಭರವಸೆಯ ವಿಜ್ಞಾನ ತಾಂತ್ರಿಕ ಜ್ಞಾನಗಳ ಜೊತೆ
ಜೊತೆಗೆ ಧರ್ಮಜ್ಞಾನ ಮಿರುತಿರೆ ಅದರ ಶೋಭೆಯೆ
ಬೇರೆ. ವೈಶಿಷ್ಟ್ಯವೇ ಬೇರೆ. ಇಂತಿಂಥ ಗುರಿಗೆ
ಸುದ್ಧಾರ್ಮಿಕ ಪಥವೆ ಪಥ ಎಂಬುದಂ ಸರ್ವಾಂಗೀಣ
ರೀತಿನೀತಿಯಲಿ ತಿಳಿಯಿರೈ ಬಂಧುಗಳೇ!

"ಧರ್ಮೇಣ ಸರ್ವ ಮಿದಂ
ಪರಿಗೃಹೀತಂ ಧರ್ಮಾನ್ನಾಸ್ತಿ
ದುಷ್ಕರಂ ತಸ್ಮಾದ್ಧರ್ಮೇರಮಂತೇ ॥"

ಸನಾತನ ಮಹರ್ಷಿಗಳ್ ಎನಿತೆನಿತು ಪರಿಯಲಿ
ಬೋಧನಾಮೃತಮಂ ಮುಂಪೀಳಿಗೆಗೆನುತ್ತೆ
ಹುಟ್ಟು ಹಾಕಿರ್ದ ಧರ್ಮವಿದು ಕಾಲಾನುಕಾ-
ಲಕ್ಕು ಪ್ರಸ್ತುತಿ. ಆ ಮಹರ್ಷಿವರ್ಯರುಂ ಸದಾ
ಕಾಲಂ ಪ್ರಾತಃಸ್ಮರಣೀಯರ್. ಮೇಣ್ ನಮನೀಯರ್.
ಕೇಳಿರೈ, ಇಂತಪ್ಪ ಮಹಾನ್ ಬ್ರಹ್ಮಾಂಡದಾ
ಕಾರ್ಯವಾಹಿಗೆ ಸದ್ಧರ್ಮದ ಆಸರೆಯೊಂದು
ಇಲ್ಲದೆಯೆ ಬರಿಯ ಯಂತ್ರಜ್ಞಾನ ಎನಲುಂಟೇ?
ನಿಂನಿಮ್ಮೊಳ್ ಯೋಚಿಸಿ ನೋಡಿರೈ ಮಿತ್ರರೇ!

"ಧರ್ಮಲಾಭಾತ್ ಪರಂ ನ ಸ್ಯಾತ್
ತಸ್ಮಾತ್ ಧರ್ಮಂ ಚರ ಉತ್ತಮಮ್"

ವೇದಾಂತ ಭವನದೊಳ್ ಅನುದಿನಂ ಬಗೆವಗೆಯ
ಕಾರ್ಯಕ್ರಮಗಳ್ ನಡೆಯುವೊಡೆ ವೇಳಾಪಟ್ಟಿ
ಕ್ರಮವತ್ ನಿರೂಪಿತಮಾದತ್ತು. ವೇದಾಂತ
ಧರ್ಮಗಳ ಪ್ರಚಾರಕನುಗುಣಮಪ್ಪಿ ಪುಸ್ತಕ
ಪ್ರಕಟಣೆಯ ಕಾರ್ಯಂ ನಡೆದುದು ಅನುಕ್ರಮದಿ.
ದಿನಕ್ಕೊರ್ಮೆ ಪ್ರವಚನವನೀವರ್ ಸ್ವಾಮಿಜಿ.
ನ್ಯೂಯಾರ್ಕ್ ನಗರಿಯಾ ಉತ್ತರೀ ತಟದೊಳಿಹ
'ಮೌಂಟ್ ಕ್ಲೇರ್' ಎಂಬುವ ಘನವಾದ ಸ್ಥಳದೊಳ್
ಬಹುಜನರ ಬಾಹುಳ್ಯದಿಂ ತುಂಬಿದ ಸಭೆಯಲಿ
ಧರ್ಮೋಪದೇಶಮಂ ಕೈಕೊಂಡರ್ ಸ್ವಾಮೀಜಿ,
ತಮ್ಮಯ ಗಂಭೀರ ಕೊರಳುಲಿಯಲಿ ಬೆಸಸಿದರ್,
"Awake Awake great one
This world is in chains of superstition,
I pity the oppressed, whether man or
woman, and I pity more the oppressors.
One Idia that I see clear as daylight
is that misery is caused by Ignorance
and nothing else.
Religions of the world have become
lifeless mockeries. What the world wants
is character. The world is in need of those
whose life is one burning love, selfless.
Bold words and bolder deeds are
what we want. Awake, Awake, Awake,

great one! The world is burning with
misery can you sleep?"
ನ್ಯೂಯಾರ್ಕ್ ಯೂನಿವರ್ಸಿಟಿಯ ಮಹದ್ ಸಭಾ
ಭವನದೊಳ್ ಶ್ರೀಶಂಕರಾಚಾರ್ಯರಂ ಕುರಿತು
ಬರೆದೊಂದು ಉಲ್ಲೇಖನವನೋದಿದರ್ ಜನರ
ಹೃನ್ಮನಂ ತಣಿಸುವಂತೆ, ಗುರುವರನ ಶ್ರೀಕಂಠ
ವಾಹಿನಿಯು ಹೊಮ್ಮಿದುದು ಮಾಡುವೊಳಗುವ ತೆರದಿ.
ನವೆಂಬರ್ ತಿಂಗಳ ಹದಿನೆಂಟನೆಯ ಮಂಗಳ
ವಾರದಿಂ ಅನುದಿನಂ ಕ್ರಮವತ್ ಪಾಠಪ್ರ-
ವಚನಂಗಳ್ ಆರಂಭಮಾದುವು ಬಹುಜನರ
ಸಮ್ಮುಖದೊಳ್. ಶ್ರೋತೃಗಳ್ ಮಂತ್ರಮುಗ್ಧರವೊಲ್
ಕುಳಿತು ಕೇಳ್ವಪರ್ ಪ್ರಾಚ್ಯಧಾರ್ಮಿಕ ಸಂದೇಶ
ಧಾರೆಯಂ; ಪಾಶ್ಚಾತ್ಯ ತಾಂತ್ರಿಕತಾ ಭವ್ಯ
ವೈಭವದಲಿ ಮೂಡಿ ಮುಗುಳ್ದರಳ್ದು ಬಾಳ್ವಾ
ಜ್ಞಾನಿಗಳ್ ಮುಗ್ಧರ್ ನಿಜ ಸಂತರ್ ಆಕರಿಸಿ
ಕಾತರಿಸಿ ಕಣ್ಮನಂ ಮಿಟುಕಿಸದೆ ಕೇಳ್ವೊಂದು
ಗಂಭೀರ ಬಂಧುರತಮ ಚಿತ್ತಾರಮೆಸೆದಿರೆ
ನೋಳ್ಪ ಕಣ್ ಮಮ್ಮಲಿಪವೊಲ್, ವೇದಿಯ ಮೇಲಿನ
ಡಾ|| ರೈಟ್ ಮೊದಲಪ್ಪ ಹಿರಿಯರೇ ಬೆರಗುವಟ್ಟು
ಮಿಳ್ ಮಿಳನೆ ಪರಾಮರಿಸುವರ್ ತುಟಿಯ ಬಿರಿಸದೆ.
"ಹೇ, ಆತ್ಮೀಯ ಅಮೃತ ಪುತ್ರರೇ ಕೇಳಿಲ್ಲಿ!
ಪಾಶ್ಚಾತ್ಯ ನಾಗರಿಕತೆಯನೊಂದು ವಸ್ತ್ರಕ್ಕೆ
ಹೋಲಿಸಿದೊಡೆ ಸಾಗರತೀರದೊಳಿಹ ಸಮಶೀ-
ತೋಷ್ಣ ಹವೆಯ ಗಿರಿಬೆಟ್ಟಗುಡ್ಡಗಳ ವಿಶಾಲ
ಪ್ರದೇಶವುಂ ಅದರ ಮಗ್ಗಮೆನಿಪುದು. ವಿವಿಧ

ವಂಶಗಳ ಸಂಮಿಶ್ರಣದಿಂ ನಿರ್ಮಿತ ಯುದ್ಧ
ಪಿಪಾಸೀ ಬಲಿಷ್ಠ ಜನಾಂಗಮೇ ಅದರ ಹತ್ತಿ;
ತನ್ನ ಸ್ವಾರ್ಥಸಾಧನೆಗಾಗಿ ನಡೆಸುವ ಯುದ್ಧವೇ
ಅದರ ನೆಯ್ಗೆ; ಆರ ಖಡ್ಗದ ಹರಿತ ಪೆರ್ಚಿನದೊ
ಆತನೇ ದೊಡ್ಡವ. ಅದಿಲ್ಲದವ ಸ್ವಾತಂತ್ರ್ಯ-
ವಂ ಕಳೆದುಕೊಳುತೆ ಯೋಧನೊರ್ವನ ಖಡ್ಗಗಳ
ಕಾಪಿನೊಳ್ ಬದುಕಲಕ್ಕುಂ. ಎರಡನೆಯ ಅಂಕಂ
ಎನಲ್ ವ್ಯಾಪಾರವೇ ಅದರ ಹಾಸು ಹೊಕ್ಕು.
ಖಡ್ಗವೇ ನಾಗರಿಕತೆಯ ಸಾಧನ. ಇವುಂಗಳ
ನಾಯಕರ್ ಶಕ್ತಿಸಾಹಸಿಗಳ್. ಅದರ ಗುರಿಯು
ಐಹಿಕ ಸುಖಸಂಪದಂ. ಎಂಬುದದು ಸುಸ್ಪಷ್ಟಂ.
ಅದೇ ಭಾರತೀಯರ ಜೀವನವದೆಂತಿಹುದು?
ಕೇಳಿ, ಕೇಳಿರೈ! ನಾವ್ ಆರ್ಯರ್ ಶಾಂತಿ ಪ್ರಿಯರ್.
ಕೃಷಿಕ್ಷೇತ್ರುವೆ ಮುಖ್ಯವೃತ್ತಿ. ಅನ್ನದಾತರ್
ನಾವ್. ತಂತಮ್ಮಗ್ಗಳ ಕುಟುಂಬದ ಪಾಲನೆಯು
ಸಾಲ್ಗುಮೆಲ್ಲರ್ಗೆ. ಅದುವೇ ಸಂತೃಪ್ತಿ. ಮಹದ್
ಆನಂದ. ಅತ್ಯಾಸೆಯ ಗೋಜದು ಮೈಲಿ
ಮೈಲಿ ದೂರ. ಅಂಥೊಂದು ಸಂತೃಪ್ತಿಯ ಬಾಳ್
ಬರ್ದುಕಿನಲಿ ಚಿಂತನ ಶೀಲರಾಗೆ, ಸಾಧನ
ಶೀಲರಾಗೆ ಕಾಲಾವಕಾಶಂ ಇರುತಿರಲ್
ಜೀವನಂ ಶುಚಿರ್ಭೂತಮಾದಪುದು. ನಮ್ಮಯ
ಸನಾತನ ಚಕ್ರವರ್ತಿ ಜನಕರಾಜಂ ತನ್ನ ಭೂಮಿಯಂ
ಉತ್ತಿ ಬಿತ್ತುತಲಿರ್ದಂ, ಆ ಕಾಲದೊಳ್ ಪರಮ
ಮಹಿಮಾಮಯ ಸತ್ಯಧರ್ಮಂಗಳ ಮಹಾ ತತ್ತ್ವ
ಜ್ಞಾನಿಯೇ ಅವಂ. ಅಂದಿಂದಿಗುಂ ಅಪರಿಮಿತ

ಮುನಿರಿಸಿಗಳ್ ಮಹಾನ್ ಯೋಗಿಗಳ್ ಸಂಜನಿಸಿ
ಬೆಳಗಿಹರ್ ಭಾರತದ ಒಡಲಲಿ. ಬ್ರಹ್ಮಜ್ಞಾನ
ತತ್ತ್ವಜ್ಞಾನಗಳಿಂಗೆ ಕೊರಮಿಲ್ಲ; ಶಾಂತಿಸಂ–
ಚಯನಕ್ಕು ಕೊರಮಿಲ್ಲ, ನೇಹಕ್ಕು ಕೊರಮಿಲ್ಲ.
ನೀವ್ ಎನಿತೆನಿತು ಯುದ್ಧಗೈದು ಇತರರನುಂ
ಹೊಡೆದು ಬಡಿದು ಹಿಂಸಿಸಿ ಗಳಿಸಿಕೊಂಡ ದ್ರವ್ಯಂ
ನಿಮಗೆಂದು ನೀಡದು ಮನಶಾಂತಿ ಅಥ ಆತ್ಮಕೆ
ಶಾಂತಿ. ಅಂದಬಳಿಕಲಾ ಅಪರಿಮಿತ ದ್ರವ್ಯದ
ಫಲವೇಂ? ತಿಳಿಯಿರಿ ಭೌತಿಕ ಭೋಗ ತ್ಯಾಗದಿಂ
ಮಾತ್ರಮೇ ಸತ್‌ಶಾಂತಿಯಲಾಭ. ಭೌತಿಕ ಭೋಗ
ಭಾಗ್ಯದಿಂ ಆವಾವ ಪ್ರಗತಿಯು ಆಗದೆನೆ
ಮನಃಚಿತ್ತಗಳ ಸಂಸ್ಕಾರಕೆ ಅವಕಾಶವು
ಇನ್ನೆಲ್ಲಿ? ನಿಮ್ಮೊಳಗೊಳಗೆ ಚಿಂತನಮಂಥನ
ಹೂಡಿ ಅರೆದರೆದು ಮನಮಥಿಸಿಮಥಿಸಿ ತಿಳಿಯಿರಿ.
ಜ್ಞಾನದೈಶ್ವರ್ಯಮಂ ಪಡೆದ ಬುದ್ಧಿಮಾನ್ಯರ್
ಹೊಲಗದ್ದೆಗಳಂ ನಿರ್ಮಿಸಿದರ್ ನವನಾಗರಿಕ
ಸಂಪದಂ ಬೆಳೆಸಿದರ್ ಕಾಲಗತಿಗನುಗುಣಮಪ್ಪಿ.
"ಭುವಿಯ ಸ್ವಚ್ಛ ಶುಭ್ರ ಪ್ರದೇಶದಲಿ
ಯಜ್ಞವೇದಿ ಮೂಡಿತು. ಭಾರತದ ನಭೋಮಂ–
ಡಲದೊಳಾಡಿತು ಯಜ್ಞದ ಪವಿತ್ರ ಹೋಮಧೂಮ.
ಶಾಂತ ವಾತಾವರಣದೊಳ್ ವೇದ ಮಂತ್ರಗಳ್
ಮೊಳಗಿ ಪ್ರತಿಧ್ವನಿಸಿದುವು. ವಿದ್ವತ್ತು–ಧರ್ಮಗಳ
ಕಾಲಡಿಯೊಳ್ ಖಡ್ಗವೈದಿತು. ಧರ್ಮರಕ್ಷೆ ಮೇಣ್
ದನಕರುಗಳ ಸಂರಕ್ಷಣೆಯಷ್ಟೇ ಖಡ್ಗಗಳ
ಕಜ್ಜ, ದುರ್ಬಲರ ರಕ್ಷಣೆಗೈವವಂ ಕ್ಷತ್ರಿಯ.

ನೇಗಿಲ್ ಮೇಣ್ ಕತ್ತಿ ಇವೆರಡರ ಮೇಲೆಯುಂ
ಧರ್ಮದಾಳ್ವಿಕೆಯೆ! ಧರ್ಮವೆನೆ ಸರ್ವರಕ್ಷಕಂ.
ಧರ್ಮ ಎನಲ್ ರಾಜಾಧಿರಾಜಂ! ಬ್ರಹ್ಮಾಂಡಂ
ನಿದ್ರಿಸುವಾಗಳುಂ ಎಚ್ಚತ್ತಿರ್ಪುದು ಧರ್ಮ!
ಧರ್ಮದ ನೆರಳಲಿ ಎಲ್ಲರುಂ ಸ್ವತಂತ್ರಗತಿಯಲಿ
ನಿರ್ಭಯದೊಳ್ ಬಾಳ್ವರ್. ಧರ್ಮ ರಕ್ಷೆಯೇ ಪರಮ
ರಕ್ಷೆ. ಆದ್ದರಿಂದೆಲ್ಲರುಂ ಸನಾತನ ವೇದ
ವೇದಾಂತ ಧರ್ಮವಂ ಅನುಸರಿಸಿ ಧರ್ಮದಾ
ಶ್ರೀರಕ್ಷೆಯೊಳ್ ಬಾಳ್ವು ವೇದಾಂತ ಪ್ರಚಾರಕೆ
ನೆರವಾಗಿಮೆಂದು ಮನವಿಗೈವೆಂ ಮಾನ್ಯರೇ!

"ಅನಿತ್ಯಾನಿ ಶರೀರಾಣಿ ವಿಭವೋನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯು ಕರ್ತವ್ಯೊ ಧರ್ಮಸಂಗ್ರಹ ॥"

ಮಿನ್ನೆ ಪ್ರಪ್ರಥಮದೊಳ್ ವಿದೇಶದ ಭೂಮಿಯಲಿ
ಪದಾರ್ಪಣೆಗೈದಾಗಳ್ ಅಲ್ಲಿಯ ತಳುಕು ಬೆಳಕಿನ
ಅಗಾಧತರ ಥಾಳಥಳ್ಯಕೆ ಬೆರಗುವಟ್ಟಂತೆ
ದ್ವಿತೀಯ ಯಾತ್ರೆಯೊಳ್ ಅದೇಂ ಪೆರ್ಚಳಮೆನಿಸಿ
ಚಕ್ಕಸಗೊಳಿಸದಾಯ್ತು. ಆ ಧೀರ ಧೀಮಂತ
ವಿಜ್ಞಾನದಂತರಾಳಕೆ ಸೂಕ್ಷ್ಮ ದೃಷ್ಟಿಯಂ
ಹರಿಸುತಲ್ಲಿನ ದುಃಖಕಾರ್ಪಣ್ಯ ಅಶಾಂತಿಯ
ಹಿಂಸೆ ರಕ್ತತೃಷ್ಣೆ ಅನೀತಿ ಗರ್ವ ಇವುಗಳ
ಬೃಹತ್ತಮ ಕೋಂಟೆಯಂ ಭೇದಿಸಿ ಛಿದ್ರಿಸುತೆ
ಒಳಗಿನೊಳಗಣ ಜೀವನರಂಗದೊಳ್ ಪುದುಗಿ
ಮೆರೆವಾ ಅವಕುಂಠಿತ ಕ್ರೂರ ಡಾಕಿನಿಯೆಸೆದಳ್
ಒಳಗಣ್ಗೆ, ಪಾಶ್ಚಾತ್ಯ ಘನ ಸಾಮ್ರಾಜ್ಯದಾ ಬಿಗಿ
ಗಟ್ಟಿನೊಳ್ ಎತ್ತಲೆತ್ತಲ್ ಸಹಸ್ರಮುಖಿಯೆನೆ

ವಿಜೃಂಭಿಸಿಹ ಶಾಖಿನಿಯು ನೆತ್ತರ್ ಪೀರ್ವ ಮುಖ
ನಖಗಳಂ ಕಂಡು ನೊಂದು ಮಿಣ್ಣನೆ ನಿಡುಸುಯ್ದು
ಚಿಂತಾಪರರಾದಪರ್ ಗುರುದೇವಂ. ಮುಂದೆ
ಭರತಖಂಡಕೆ ಪೋದಬಳಿಕ ಗುರುಭಾಯಿಗಳಂ
ಕುರಿತಿಂತೆಂದರ್ ಗುರುವರಂ. "ಅಃ ತೋಳಂಗಳಾ
ಮಂದೆಯೊಳ್ ನಿಮ್ಮಗಳ ದೃಷ್ಟಿಯಂ ಜಡಿನೆಟ್ಟು
ನೋಡಿ! ಎನಿತೆನಿತು ಸಹಜ ಸೌಂದರ್ಯಮಿರ್ಪುದು?
ಅದರ ಮುಂತೆ ಹೋಲಿಸಿ ನೋಡೆ, ಪಾಶ್ಚಾತ್ಯ ಜನ
ಜೀವನದ ಕಾಂಡವೊಂದು ನರಕದರಮನೆಯೇ
ಸರಿ."

ಆ ಜಡಮತಿಯ ಹರವಿನಲಿನಿತು ಅಂಕೆಯು
ಸಂಕೆಯುಮೇನಿಲ್ಲದ ಮಾನವಂತಿಕೆಯ ಗೋಜು
ಅರಿಯದ ತಳುಕಿನ ಬದುಕು ಗುರುವರನಂ ಮೋಸ
ತಂತ್ರದಿಂ ನರಕಕುಂಡಕೆಳೆಯಲ್ ಪ್ರಯತ್ನ–
ಪ್ರಪ್ರಯತ್ನಂಬಟ್ಟು ಸೋಲ್ದು ಸುಣ್ಣವಾಯ್ತೆನೆ
ಓಮ್ಮೆಟ್ಟಿ ಓಂಜರಿದುದು ಮುಖಮರೆಸಿ. ನಾಗರಿಕ
ವೇಶದಲಿ ಅವಿತೆಲ್ಲ ಅನಾಗರಿಕಾ–ಮೃಗೀಯ
ಮದ್ರುಭೀಕರಾಯಾಸೀ ಆತ್ಮವಿನಾಶದ
ಘೋರ ವಿಷವರ್ತುಲಂ. ಆಮೋದಪ್ರಮೋದ
ಅಟ್ಟಹಾಸಗಳ ಓಂದೆ ಅಶಾಂತಿಯ ರಣಗೋಳು.

ಆ ವಿಷಾದಕರ ವಿಷಯ ಕುಂಡದಲಿ ಮುಳುಂಗಿ
ನೊಂದು ನೀರಾದ ಮನದಿಂ ನಿವೇದಿತೆಯೊಡಂ
ನುಡಿದರಿಂತು "**ಉದರ ನಿಮಿತ್ತಂ ಬಹುಕೃತವೇಶಂ**"
ಎಂಬೊಂದು ಸೂಕ್ತಿಯನವಲೋಕಿಸಿದೊಡೆ ಮತ್ತಂ
ಪಾಶ್ಚಾತ್ಯರ ದಿವ್ಯ ಚರಿತ್ರೆಗೆ ದರ್ಪಣವಿಡಿಯುವ

ಮಾಳ್ಕೆಯಲಿ ಮೂಡಿಹುದು ಸನಾತನ ನುಡಿಗಟ್ಟು.
ಕಾಮಕಾಮನೆಗಳೇ ಮಹತ್ತರಮಾದವರ
ಪ್ರಬುದ್ಧಿಯಿಂದೇಂ ಫನಂ? ಐಹಿಕ ವ್ಯಾಪಾರ–
ಅಲ್ಲದೆಯೆ ಮತ್ತೇನ್ ಸಾಧ್ಯಮಾದಪುದು ಪೇಳ್?
ದೀರ್ಘಾಲೋಚನೆಯ ಕುಂಡದೊಳ್ ಮುಳುಗಿದೊಡೆದುವೆ
ಸಾಧನಾ ತತ್ತ್ವಗಳನರಿಯಲ್ ಸುಲಭದಾರಿ. ಅಲ್ಲದೊಡೆ
ಮನುಕುಲಮೆ ವ್ಯರ್ಥ. ಜ್ಞಾನ ಮಂಡಲಮೇ ವ್ಯರ್ಥ.

"ಆಶಾಪಿಶಾಚಿಕಾವಿಷ್ಟಃ ಪುರತೋ
ಯಸ್ಯ ಕಸ್ಯಚಿತ್ ।
ವಂದತೇ ನಿಂದತಿ ಸ್ತೌತಿ
ರೋದಿತಿ ಪ್ರಹಸತ್ಯಪಿ ॥"

ಎಂಬಲ್ಲಿಗೆ ಮುಗಿಬಗಿಯಾದಪುದು ಸುಜೀವನಂ.
ಪಾಶ್ಚಾತ್ಯರ ಜೀವನ ಮೇಲ್ನೋಟಕೆ ತಳುಕಿನ
ಬೆಳಕುಗಳ ಬೀಡು, ಮುಂದದು ಗೋಳಿನಲಿಯೆ ಕೊನೆ
ಗೊಳ್ವುದಂ ಅರಿಯದಿಹ ಮುಗ್ಧ ಮಂದಿ."
ಮುಂದೆ....
ಯೂರೋಪಿನೊಳ್ ಸಾವಿರದೊಂಬೈನೂರಹದಿನಾ–
ಲ್ಕನೆಯಾ ಮಹಾಯುದ್ಧದ ರಣಭೇರಿಯುಂ ಬಡಿದು
ದಳದಳ ಮೊಳಗುವ ಹದಿನೆಂಟು ಸಂವತ್ಸರಗಳ
ಮುನ್ನಮೆಯೆ ತಮ್ಮ ಆತ್ಮೀಯ ಶಿಷ್ಯಗಣಕ್ಕೆ
ಸ್ವಾಮಿ ವಿವೇಕಾನಂದರುಂ ಬರೆದ ಪತ್ರಮಿದು,
"ಪ್ರಿಯ ಗುರು ಭಾಯಿಗಳೆ, ಮನಗೊಟ್ಟು ಕೇಳಿರೈ!
.....ಅಖಿಲ ಯೂರೋಪ್ ಖಂಡ ನಿಜದಿಂ ಭಯಂಕರ
ಜ್ವಾಲಾಮುಖಿಯಮೇಲೆ ಕುಳಿತವೊಲ್ ತೋರ್ವುದೆನಗೆ.
ಆ ಅಗ್ನಿಕುಂಡಮಂ ನಂದಿಸದೆ ಇರ್ದೊಡದು

ಆಸ್ಫೋಟಿಸದಿರದು. ಅದಂ ಧರ್ಮಧಾರೆಯಿಂ
ಮಾತ್ರಮಲ್ಲದೇನ್ ಆಗದು. ಅಗ್ನಿಕುಂಡದಿಂ
ಮುಂಮುಂದೆ ಬರಲಿಪ ಮಹಾ ರಕ್ತಾಕ್ತ ವಿಪ್ಲವ
ರಷ್ಯಾ ಅಥ ಚೀನಾ ದೇಶಗಳಿಂದುಕ್ಕಿ
ಹರಿವುದು ದಿಟಂ. ಆವ ದೇಶದಿಂ ಎಂಬುದಂ
ಖಚಿತವಾಗಿ ವಿಷದೀಕರಿಸಲಾರೆ. ಇದಂತು
ಖಂಡಿತ....ಕರಾರುವಾಕ್ಕೆನಲ್ ಅನ್ಯಮಲ್ತಿದು.
ಜಗತ್ತಿಂದು ಮೂರನೆಯ ಘಟ್ಟದೊಳ್ ನಿಂದತ್ತು.
ಬ್ರಾಹ್ಮಶಕ್ತಿ ಕ್ಷಾತ್ರಶಕ್ತಿಗಳ ಘನತರದಾಳ್ವಿಕೆ
ಅಂಕಣಂ ಮುಗಿದುದಾಯ್ತು. ಇಂ ನಾಲ್ಕನೆಯಂಕ
ವಿಜೃಂಭಿಪುದು ಶೂದ್ರ ಶಕ್ತಿಯಿಂ. ಕಾರ್ಮಿಕರ್
ರೈತರ್ ಜನ ಸಾಮಾನ್ಯರುಂ ಆಳ್ವಿಕೆಯ ಸೂತ್ರ
ಕೈಕೊಂಡು ಸಾಮ್ಯವಾದವಂ ಪ್ರಚುರಗೊಳಿಪರ್
ಇಡಿ ಜಗತ್ತಿನೊಳ್!"
ಅಂದು, ಒಂದೆರಳ್ದುದಶಮಾನ
ಪೂರ್ವಂ ನುಡಿದ ಭವಿಷ್ಯದ ದೃಢ ನುಡಿಗಟ್ಟು
ಎನಿತೊಂದು ಕಟು ಸತ್ಯ? ಅವರೆಂದ ಭವಿಷ್ಯದ
ಅಕ್ಕರಕ್ಕರಗಳುಂ ಅಂದಿಂದಿಗುಂ ಪ್ರಸ್ತುತ.
ಸ್ವಾಮಿ ವಿವೇಕಾನಂದರುಂ ಯೋಗಿ ಮಾತ್ರಮಲ್ತು.
ವೀರ ಯೋಧರ ಯೋಧ! ವೃದ್ಧರೊಳ್ ಸುಜ್ಞಾನ
ವೃದ್ಧ! ಯುವಕರೊಳ್ ದೃಢ ಯುವಕ! ಎನಲ್ಕಾ
ಭವ್ಯ ವ್ಯಕ್ತಿತ್ವವಂ ಪರಿಭಾವಿಸು ಮನವೇ!
ಅವರ ಘನವಾದ ಜೀವನದ ಚಣಚಣಗಳಂ
ಜಾನಿಸಿ ಅರಿದರಿದು ಮನಮಥಿಸಿ ತಿಳಿ ಮನವೇ!
ಧೀರ ಧೀಮಂತನ ವಿಚಾರ ಕ್ರಾಂತಿಯ ಮನದುಂಬಿ

ಭಾವನಾತ್ಮಕವಾಗಿ ಪರ್ಯಾಲೋಚಿಸು ಮನವೇ!
ಅಸೀಮಾಕಾಂಕ್ಷೆಯುಂ ಹೊಮ್ಮಿಮಿಂಚುವ ಭುವನ
ಮೋಹನೀಯ ಕಂಗಳ ಕಾಂತಿಯಂ ಪರಿಭಾವಿಸು
ಮನವೇ! ಅಪೂರ್ವ ಕಾಂಶೀಯ ಕಂಠದ ಅಮಲ
ವಾಗ್ಜಾಹ್ನವಿಯ ಆಲಿಸು ಮನವೇ! ಮಂತ್ರದುಕ್ತಿ
ಜಾನದುಕ್ತಿಗಳ ಆಲಿಸಾಲಿಸು ಮನವೇ! ಗಂಭೀರ
ಮುಗ್ಧ ತೇಜೋರಾಶಿಯೊಳುಕ್ಕುವ ಪವಿತ್ರಾತ್ಮ
ಧಾರೆಯಂ ಗಮನಿಸು ಮನವೇ! ಭಾರತಜನನಿಯ
ಹೃತ್‌ಮುಕುಲ ಮಂಗಳ ಮೂರ್ತಿಯಂ ನೆನೆಮನವೇ!
   ನ್ಯೂಯಾರ್ಕ್ ನಗರಿಯಲಿ ಕಳೆದುವೆರಡು ವಾರಗಳ
ಕಾಲಮಾನಂ. ಸಕಲ ಸಜ್ಜನಿಂ ದೃಢವಾಗಿ
ನಿಂದುದಾ ವೇದಾಂತ ಮಂದಿರಂ. ಉಪನ್ಯಾಸ
ಮಾಲೆಗಳ್ ಚರ್ಚೆಗಳ್ ನಡೆದುವು ಅನುದಿನಗಳ್.
ಅನಿತರೊಳ್ ಕ್ಯಾಲಿಫೋರ್ನಿಯಾದಿಂ ಮಧುರತರ
ಕರೆಯೈದುದು ಬಲವತ್ತರದಿಂ ಬರಲ್‌ವೇಳ್ಕುಂ
ಎಂದೆಂದು. ಸ್ವಾಮೀಜಿಯುಂ ಆ ಕರೆಯ ಕೇಳ್ದು
ಮುದದಿಂದಲಿ ಓಗೊಟ್ಟು ಪೊರಮಟ್ಟರಲ್ಲಿಗೆ,
ಮಿತ್ರಮಂಡಲಿಯೊಡಂಗೂಡಿ. ಅಲ್ಲಿನ ಕಾರ್ಯ
ಕ್ಷೇತ್ರಂ ಬೊಕ್ಕು ಲಗುಬಗನೆ ಕಜ್ಜವನೆಸಗಿ ಆ
ನೇಹಿಗರ ಮನಕೆ ಮುದವನೂಡಿದರ್. ಮೈಯೊಳ್
ಆಯಾಸ ಹಿಂಡುತಲಿರುತಿರೆ ಮನಕೆ ತಾರದೆ
ಎಂದಿನವೊಲ್ ದಿನಚರಿಯಂ ಆರಂಭಿಸಿದರಾ
ದೇಶದೊಳ್. ವಾರವೊಂದು ಉರುಳಿತು. ಶ್ರೋತೃಗಳ್
ಸಂದರ್ಶಕರ್ ಗಮಿಸುವರ್ ಎಡೆವಿಡದೆ. ಪೊಚ್ಚ
ಪೊಸ ಸ್ಥಳ, ಪೊಚ್ಚ ಪೊಸ ಜನರಾದದೊಡಮದೇಂ

ತಡೆದು ನಿಲ್ಲದಾಯ್ತು ಕಾರ್ಯಗತಿಯ ಪ್ರವಾಹ.
ಅಂದು,
ನಿಶ್ಶಬ್ದ ನೀರವತೆಯ ಮಡಿಲಿನಲಿ ಬಿಡದಿಯ
ವಸತಿಯುಂ ತೊಟ್ಟಿಲ ಶಿಶುವಿನೊಲ್ ಸವಿನಿದ್ದೆಯ
ಮಂಪರದಲಿ ತಾನಿತ್ತು; ಗುರುವಿನ ಮಾನಸಿಕ
ಭೌತಿಕ ಸುಶಾಂತಿಗೆ ಪರಿಪೋಷಕವಾಗಿ. ರಾತ್ರಿ
ತಣ್ಣಗೆ ವಸರುತಿರ್ದುದು ತನಿಯಿಂಪಿನ ಜೇನ್
ಬನಿಯುಂ. ಗುರುವರಂ ಬಿಳಿ ಮಡಿಯಂ ಹಾಸಿರ್ದ
ಸೆಜ್ಜೆಯಲಿ ಸಿದ್ಧಾಸನದೊಳ್ ಕುಳಿತು ಪ್ರಾರ್ಥನೆ
ಸಲಿಸಿದರ್ ಗುರುದೇವನಂ ಮನದಿ ನೆನೆನೆನೆದು,

"ಶ್ರೀ ಮತ್ಪರಂ ಬ್ರಹ್ಮಂ ಗುರುಂ ಸ್ಮರಾಮಿ
ಶ್ರೀಮತ್ಪರಂ ಬ್ರಹ್ಮಂ ಗುರುಂ ಬಜಾಮಿ ।
ಶ್ರೀಮತ್ಪರಂ ಬಹ್ಮಂ ಗುರುಂ ವಿದಾಮಿ
ಶ್ರೀಮತ್ಪರಂ ಬ್ರಹ್ಮಂ ಗುರುಂ ನಮಾಮಿ ॥"

ತರುವಾಯ ತಮ್ಮಯ ಗುರು ಬಾಯಿಗಳಿಂಗೊಂದು
ಪತ್ರಮಂ ಲೇಖಿಸಿದರ್ ಎರ್ದೆಯ ಹಾರ್ಯೆಕೆಯ
ಹಾಲ್ಬನಿಯಹರಿಸಿ. "ಎನ್ನ ಆತ್ಮೀಯ ಮಕ್ಕಳೆ!
ಎನ್ನೆಲ್ಲ ಕಾರ್ಯವಾಹಿಯಂ ತೀರ್ಚಿ ಪ್ರಥಮ
ಪರಮೋಚ್ಛ ಪ್ರಕರಣಮಂ ತಿರಿಪಿ ಹಾಕಿರ್ಪೆಂ...
ಇಂ ಮುಂದಿನ ಪ್ರಸಂಗಂ ನಿಮ್ಮೊಳಗೊಳಗೇ
ನಿರ್ಣಯಿಪುದು. ಇಂ ಎನಗಾಗಿ ಮನ
ದುಂಬಿ ಪ್ರಾರ್ಥಸುವಿರಾ! ಎನ್ನೆಲ್ಲ ಕರ್ಮವುಂ
ಸಂಪೂರ್ಣ ಸಮೆದು ಹೋಗಲಿ ಎಂದು! ಎನ್ನಾತ್ಮ
ದಿವ್ಯ ಶಾಂತಿಯಿಂ ಜಗಜ್ಜನನಿಯಲಿ ಲೀನವಾಗಿ
ತಣಿಯಲಿ ಎಂದು! ಇಲ್ಲಿನೆಲ್ಲ ಕಜ್ಜವನಾಂ

ಮುಗಿಸಿರ್ಪೆ. ಮೇಣಿಲ್ಲಿ ಆನ್ ಕ್ಷೇಮದಿಂದಿಹೆ.
ದೈಹಿಕ ಸುವಿಶ್ರಾಂತಿಗಿಂ ಹೃನ್ಮನಂಗಳಾ
ಸಂತೃಪ್ತಿ ಮೇಣ್ ಆತ್ಮ ಶಾಂತಿಯಂ ಮೊದಲಿನ
ಆನಂದಮೋದದಿಂ ಅನುಭವಿಸುತಿಹೆ. ನಿಜದಿ
ರಣರಂಗದೊಳ್ ಸೋಲು ಗೆಲುವುಗಳ್ ಇದ್ದದ್ದೆ.
ಇನ್ ಮುಂದಿನ ಕಾರ್ಯದ ಭಾರಕ್ಕೆ ಭುಜಕೊಡಲ್
ಎಲ್ಲರುಂ ಮುಂದಿರಲ್ ಆ ಚಿಂತೆ ಎನಗಿಲ್ಲ.
ಓ, ಸೋದರರರೇ ಕೇಳಿ! ಆಂ ಗಂಟು ಮೂಟೆಯ
ಕಟ್ಟಿ ಪೊರಡಲ್ ಸಿದ್ಧನಿರ್ದು ಕಾಯುತಿಹೆ ಶ್ರೀ
ಮುಕ್ತಿದಾತನಿಗಾಗಿ. ಶಿವಾ, ಓ ಶಿವಾ ಈ
ನೌಕೆಯಂ ಆಚೆಯ ದಡಕೆ ಸಾಗಿಸೈ! .....ಆಂ ಬರಿ
ಪಸುಳೆ! ಗಂಗಾ ತೀರದೊಳ್ ದಕ್ಷಿಣೇಶ್ವರದ
ವಟತರುತಲದಲ್ಲಿ ಕುಳಿತು, ಶ್ರೀರಾಮಕೃಷ್ಣರ
ಅಮೃತವಾಣಿಯಂ ಮುಗ್ಧಭಾವದಲಿ ಆಲಿಸಿ
ಮನದುಂಬುತಿರ್ದ ಅದೇ ಅಣುಗ ಆನಿನ್ನು! ಓ
ಅಂದಿನಿಂ ಅದೆ ಎನ್ನಯ ಸ್ವಭಾವ. ಅದೆ ಎನ್ನಯ
ನಿಜವಾದ ಸ್ಥಾನ! ಉಪನ್ಯಾಸ ಉಪದೇಶಗಳ್
ಪರೋಪಕಾರಂ ಎಲ್ಲವುಂ ಬರಿಯ ಮೌಢ್ಯಗಳೆ!
ಮತ್ತೆ, ಮತ್ತದೇ ಅವರ ದಿವ್ಯವಾಣಿಯ ಮೊಳಗು!
ಎಲ್ಲತರ ಬಂಧನಗಳ್ ಕಳಕಳಚಿ ಬೀಳುತಿವೆ!
ಒಲುಮೆಯು ಸಾಯುತಿದೆ. ಕೈಂಕರ್ಯ ಮುಗಿಯುತಲಿದೆ!
ಬಾಳಿನಾಮನಮೋಹಕ ಕಾಂತಿಯು ತೊಲಗುತಿದೆ!
ಗುರುದೇವ ಕೂಗಿ ಕರೆವ ದೃಢವಾಣಿ ಮಾತ್ರಮೆ
ಕೇಳುತಿದೆ, ''ಇದ್ದವರು ಸತ್ತವರಂ ಹೂಳುವರ್
ನೀನೆನ್ನ ಹಿಂಬಾಲಿಸು''. ಎಂಬುದೆ ಆವಾಣಿ!

"ಓ ಬಂದೆ! ಎನ್ನಯ ಪ್ರಿಯ ಮಧುರ ಪ್ರಭುವೇ!
ಇದೋ ಬಂದೆ! ಓ ಬಂದೆ!" ಎಂದೊರೆದಿಹೆ, ಈಗ
ಎನ್ನೆದುರ್ ಸುಸುಂದರ ನಿರ್ವಾಣವಿದೆ. ಅದುವೇ
ಶಾಂತಿ ಸಮುದ್ರ. ಗಂಬೀರ ನಿಸ್ತರಂಗ.....ನೀರವ...
ನಿಷ್ಪಂದ! ಮನುಕುಲದಿ ಪುಟ್ಟಿಬಂದೆ ಸಂತೋಷ.
ಕಷ್ಟಪಟ್ಟೆ ಸಂತೋಷ. ಎಡವಿ ಬಿದ್ದು ತಪ್ಪುಗೈದೆ
ಸಂತೋಷ. ಓ! ಸತ್ ಶಾಂತಿ ಪ್ರವೇಶಗೈವೆನ್
ಸಂತೋಷ. "**ತ್ವಮೇವ ಶರಣಂ ಮಮ**" ಆನಾರಂ
ಬಂಧನದೊಳಿರಿಸಿ ಪೋಗಲಾರೆನ್. ಆವಾವ
ಬಂಧನಂ ಪೊತ್ತೊಯ್ಯಲಾರೆನ್ ಕೈಕಾಲ್ ಆಡಿ-
ಸಲ್ ಭಯ! ಎಲ್ಲಿ, ಆ ನಿಶ್ಚಲ ಶಾಂತಿಗೆ ಭಂಗಂ
ಬಂದಪುದೊ ಎಂದು! ಎನಿತೆನಿತು ನಿಶ್ಚಲ ನೀರವ
ಈ ಸುಶಾಂತಿ? ಹಾ ಇದು ಮಾಯೆಯೆಂದು ಇದೀಗ
ಅರಿದಿಹೆನ್. ಎನ್ನ ಕೃತಿಗಳ ಹಿಂದೆ ಕೀರ್ತಿಯಾ-
ಸೆ ಇರ್ದುದು. ಎನ್ನ ಪ್ರೀತಿಯ ಹಿಂದೆ ಅಹಂಭಾವ
ಇರ್ದುದು. ಎನ್ನ ನೀತಿಯ ಹಿಂದೆ ಭೀತಿಯಿರ್ದುದು.
ಈಗಳೆಲ್ಲವುಂ ಮಾಯಮಾಗುತಿವೆ. ಆಂ ಸುಮ್ಮನೆ
ಗಾಳಿಯೊಲ್ ತೇಲುತಿಹೆ!....ಇನ್ ಪಯಣ. ಓ, ಬಂದೆ!
ತಾಯಿ, ಬಂದಪೆನ್. ನಿನ್ನ ಬೆಚ್ಚನೆಯೆದೆಗೆ. ಆಂ
ತೇಲುವೆ ನೀಂ ತೇಲಿಸಿದೆಡೆಗೆ. ನೇರವಾದ, ಆ
ಅನಿರ್ವಚನೀಯವಾದ ಸೀಮೆಗೆ, ಬರುವೆನಾಂ.
ನೋಟಗಾರನಾಗಿ ಅಲ್ಲ, ಆಟಗಾರನಾಗಿ ಅಲ್ಲ,
ಓ ತಾಯೆ! ಕರೆದುಕೋ. ಏಂ ಶಾಂತಿ? ಎನ್ನೆಲ್ಲ
ಆಲೋಚನೆಗಳ್ ಹೃದಯದಾಳದಿಂ ದೂರ-
ಬಹುದೂರದಂತರಾಳದಿಂ ಬರುವಂತೆವೊಲ್

ತೋರುತಿವೆ. ಬಹುದೂರದಾ ಪಿಸುದನಿಗಳ ಪಿಸು
ಮಾತುಗಳಂತಿವೆ. ಶಾಂತಿ, ಸುಸುಂದರ ಶಾಂತಿಯೇ
ಸರ್ವವ್ಯಾಪಿಯಾಗಿದೆ....ಬಂದೆ. ಗುರುದೇವ ಈ
ಜಗತ್ ಇದೆ...ಸುರೂಪವಾಗಿಯೂ ಅಲ್ಲ, ಕುರೂಪ-
ವಾಗಿಯೂ ಅಲ್ಲ. ಆವಾವ ಭಾವನಂ ಅದು
ಉದ್ರೇಕಿಸದೆ ನಿರ್ಭಾವದಿಂ ತಟಸ್ಥವಾಗಿದೆ.
ಎನಿತು ಧನ್ಯಮೊ ಶಾಂತಿ ಪ್ರಶಾಂತಿವಾಶಾಂತಿ
ಈ ಸತ್ಯಾರ್ಥ ಚಿಂತನೆಗೆ? ಸುಖದುಃಖಗಳಿಲ್ಲದ,
ಆದೊಡವೆರಡಂ ಮೀರಿದ- ಬುದ್ಧಿಗ್ರಾಹ್ಯವಲ್ಲದ
ಸುರಸುಂದರ ಶಾಂತಿಯ ನೆಲೆಯಂ ಪಡೆಯುತ್ತಿಹೆ!
ಕಳೆದೆರಡು ವರ್ಷಮಾನಗಳಲ್ಲಿ ಮಾನಸಿಕ-
ದೈಹಿಕ-ಮರಣಗಳ ಕಣಿವೆಯೊಳ್ ತದೇಕ ಶಾಂತ
ಭಾವದಿಂ ಏಕಾಂಗಿಯಾಗಿ ಸಂಚರಿಸಿದುದು
ಎನಗಿಂದು ಸಹಾಯವೆ ಆಯ್ತು. ಹಿಂದೆಯುಂ ಆಂ
ಮುಕ್ತನೇ. ಇಂದೂ ಮುಕ್ತನೇ. ಮುಂದೆಯುಂ ಆಂ
ಮುಕ್ತನೇ. ಇದೇ ವೇದಾಂತ ತತ್ತ್ವ. ಇದೊಂದು
ಆನಂದ! ಆನಿಂದದಂ ನಿರಾತಂಕದಿಂ
ಅನುಭವಿಸುತಿಹೆ! ಹೌದು, ಆನ್‌ಮುಕ್ತ, ಏಕಾಂಗಿ.
ಆಂ ಅದ್ವಿತೀಯ....ಆಂ ನಿಜದಿಂ ವಿವೇಕಾನಂ-
ದನಾಗುತಿಹೆ. ಒಳ್ಳಿತು ಕೆಡಕುಗಳೆರಡಂ ಉಂಡು
ಆನಂದಿಸುತಿಹೆ. ಉಷ್ಟ್ರಪಕ್ಷಿಯು ಮಣ್ಣಿನೊಳ್
ತನ್ನಯ ತಲೆಯಂ ಹುಗಿದು ತಾನ್ ಸುರಕ್ಷಿತವೆಂದು
ಭಾವಿಸುವ ಪರಿಯಲ್ಲವಿದು. ಒಳಿತು ಕೆಡಕುಗಳ್
ದಂಡೆತ್ತಿ ಬರಲಿ ಎರಡಕ್ಕೂ ಸ್ವಾಗತ. ಆನಿಂ
ಹಿಡಿದಿಡಬಹುದಾದ ಆದರ್ಶವಿಲ್ಲ. ಅನಿನ್ನು

ಹೊಂದಬೇಕಾದ ಶ್ರೇಯಸ್ಸಿಲ್ಲ. ಎನಗಿನ್ನು
ಈಡೇರಿಸಿಕೊಳ್ಳುವ ಆಕಾಂಕ್ಷೆ ಏನಿಲ್ಲ.

"ಸರ್ವಸ್ತರತು ದುರ್ಗಾಣಿ
ಸರ್ವೋ ಭದ್ರಾಣಿ ಪಶ್ಯಂತು ।
ಸರ್ವೇಸ್ಸದ್ಬುದ್ಧಿಮಾಪ್ನೋತು
ಸರ್ವಃ ಸರ್ವತ್ರ ನಂದತು ॥"

ಇದಕ್ಕಿಂತಲಿನ್ನೇಂ ಬಯಸುವೆನೆನ್ ಪೇಳ್!
ಕೇಳ್ ವಜ್ರಗಳ ಖನಿಯಾದಾನ್ ಒಳಿತುಕೆಡಕು
ಎಂಬೆರಡು ಕಲ್ಗುಂಡುಗಳೊಡನಾಡುತ್ತಲಿಹೆ....
ಓ, ಒಳ್ಳಿತೇ ಬಾ, ನಿನಗೆ ಶುಭವೈತರಲಿ
ಓ, ಕೆಡುಕೇ ಬಾ, ನಿನಗೆ ಶುಭವಾಗಲಿ ಸಮಸ್ತ
ವಿಶ್ವವೇ ಉರುಳಿಬಿದ್ದೊಡಂ ಅದರಿಂದೆನಗೇಂ?
ಆಂ ಚಿಚ್ಛಕ್ತಿಯಂ ಮೀರಿ ನಿಂತಿಹ ಶಾಂತಿಸ್ವ-
ರೂಪ. ಆದೊಡಾಂ ಅತೀತ. ಆಂ ಶಾಂತಿ! ಶಾಂತಿ!!
ಪ್ರತಿಯೊಂದು ಮಂಗಲ ಮಯಂ. ಸತ್ಯ ಸುಂದರಂ.
ಏಕೆಂಬಿರಾ, ಮಾಯಾತೀತವಾಗಿಹವೆಮ್ಮ
ತನುಮನಂಗಳ್. ಓಂ! ತತ್ ಸತ್!

"ಸತ್ಯಪಿ ಭೇದಾಗಮೇ ನಾಥ
ತವಾಹಂ ನ ಮಾಮಕಿನಸ್ತ್ವಂ ।
ಸಾಮುದ್ರೋ ಹಿ ತರಂಗಃ ಕ್ವಚನ
ಸಮುದ್ರೋ ನ ತಾರಂಗಃ ॥"

ಓವೊ, ವೇದಾಂತ ದಿವ್ಯ ದರ್ಶನೀಯ ಮಹಾ
ಸಾಗರದ ಅಲೆಗಳುಕ್ಕಿ ಭೋರ್ ಭೋರನೆ ಮೊರೆದು
ಧುಮುಧುಮಿಸಿ ನೊರೆಗರೆದು ಮಿಂಚಿನೊಲ್ ಮಿಂಚೂಡಿ
ಸಂಚಲಿಸುತಿದೆ ಇಮ್ಮಡಿಸಿ ಮುಮ್ಮಡಿಸಿ ಮುನ್ನುಗ್ಗಿ

ಜನಗಣಮನ ತಣಿಸಿ ಕುದಿನೀರೊಳ್ ಕುದಿಕುದಿಸಿ
ಸಂಸ್ಕಾರವತ್ ಸಂಸ್ಕರಿಸಿ ಬಗೆಗೆಟ್ಟು ನರಳುವ
ಮತಿಗತಿಗೆ ಸತ್ ಶಾಂತಿರಸ ಪಾನ ಮಾಡಿಸಿದ
ಶ್ರೀಗುರು ಮಹಾತ್ಮ ಶ್ರೀರಾಮಕೃಷ್ಣಪ್ರಭೋ!
ಲೋಕ ಪ್ರಿಯ ಸ್ವಾಮಿಜಿಯೇ ನಿನಗೆ ನಮೋನ್ನಮಃ!"
ಅಂತಿಂತು, ಮರುಭೂಮಿಗೆ ಜಲವಂ ಪೊತ್ತುಯ್ದು
ಬಳಲಿರ್ದ ಗುರುವಿನ ಬತ್ತಳಿಕೆಯಿಂ ಪೊದಲ್ದಾ
ಬಾಣ ಅಗ್ಗಿಕಿಡಿಯಾಗಿ ಗುರಿಯಂ ನಿರ್ಲಕ್ಷಿಸಿ
ಅಥ ಗುರಿಗತಿತಪ್ಪಿ ಅಥ ಆತ್ಮಶಾಂತಿಯಂಬಯಸಿ,
ಬಯಸಿ ಅಥ ಲೋಕೋತ್ತರ ಕೀರ್ತಿಯ ಪೀಡನೆಗೆ
ಪೇಸಿದುದೊ ಎಂದೆನಿಸಲ್ ರಸಯಾತ್ರೆಯಂಕಂ
ಬಲವಂದು ಮುಚ್ಚುವೊಲ್ ತರಾತುರಿಯೊಳಿರ್ದುದು
ಸುಗಳಿಗೆಯ ನಿರೀಕ್ಷಿಸುವ ಅಂತರಾತ್ಮ ದೇವಂ.
ಕ್ಯಾಲಿಫೋರ್ನಿಯಾದಿಂ ಸ್ವಾಮಿಗಳ್ ಲಾಸ್‌ಎಂ
ಜಲಿಸ್ ಎಂಬೆಡೆಗೆ ಬಿಜಯಂಗೈದರ್ ತಮ್ಮವರ
ಬೆಂಬಿಡಿದು. ಗೆಣೆಯರ ಬಳಗಂ ಆನಂದದಿಂ
ಯಾತ್ರೆಯಂಗೈದುದು ಗುರುವರ್ಯನ ಒಡಂಗೂಡಿ.
ವಾಹನಂ ಲಾಸ್ ಎಂಜಲ್ಸ್ ಮುಟ್ಟಿದಾಗಳ್
ಪಾಶ್ಚಾತ್ಯ ಅರುಣಾರುಣಂ ಜಗಜಗನೆ ಜ್ವಲಿಸು-
ತಲಿರ್ದ ನಡುನೆತ್ತಿಯ ಮೇಲೆ. ಮುಖಮೈಗಳಲ್ಲಿ
ಸ್ವೇದ ಬಿಂದುಗಳ್ ಮೂಡಿ ಹರಿದುವು ಧಾರೆಧಾ-
ರೆಯಾಗಿ. ಅಪರಿಮಿತ ಧಗೆಯಿಂ ತಳಮಳಿಸುವೊಲ್
ಇರ್ದುದು ಬಿಸಿಲ್ ತಾಪ. ಬೆಮರ್ದ ಮೊಗಮಂ ಕರ
ವಸ್ತ್ರದಿಂ ಒರಿಸಿ ಕೊಳ್ಳುತೆ ಬೊಕ್ಕರ್ ತಮಗಿತ್ತ
ಬಿಡದಿಯಂ. ರೆವರೆಂಡ್ ಡಾಕ್ಟರ್ ಬೆಂಜಮಿನ್

ಫೇಮಿಲ್ಸ್ ಎಂಬ ಪುಣ್ಯನಾಮನ ಅತಿಥಿಯ್ಯೆಸೆ,
ಚೆಲುವಾಯ್ತು. ತೋಷಮಯಮಾಯ್ತು ಎಲ್ಲರಿಂಗೆ.
　ಮರುದಿನಂ ಧಾರ್ಮಿಕ ಸಭೆಗೂಡಿದುದು ಬೃಹದ್
ಚರ್ಚಿನ ಸಭಾಂಗಣದಲಿ, ಕಿಕ್ಕಿರಿದು ತುಂಬಿತು
ಜನರಾಶಿ. ಸ್ವಾಮಿಜಿ ಸರಳಂ ಸರಳೀಕರಿ–
ಸುವಂತೆವೊಲ್ ದೇವಪ್ರತಿಮೆಯೆನೆ ವೇದಿಕೆಯಂ
ಏರಿದರ್. ಆ ಸಭಾಮಂಟಪದಲಿ ಭಾಷಣ
ಮಾಲೆಗೆತ್ತ ವಿಷಯಂ "ಹಿಂದೂ ಧರ್ಮದೊಳ್
ಮುಕ್ತಿ ಮಾರ್ಗ" ಅರೆತಾಸು ವಿವರಿಸಿದ ಗುರುವರಂ
ಜನಗಣಮನವಂ ತಣಿಸಿದರ್, ತಮ್ಮ ಸಿರಿಗೊರಳ್
ಉಲಿಯಲಿ. ಸಭೆಯ ಅಧ್ಯಕ್ಷ ಪೀಠಮಂ ಅಲಂಕ–
ರಿಸಿರ್ದ ರೆವರೆಂಡ್ ಡಾಕ್ಟರ್ ಬೆಂಜಮಿನ್ ಫೇಮಿಲ್ಸ್
ತಮ್ಮಯ ಉಪಸಂಹಾರ ಭಾಷಣದೊಳಿಂತು
ಗೌರವಾದರದಿಂ ನುಡಿದ ನುಡಿಮುತ್ತುಗಳಿವು,
　"A man of gigantic intellect,
indeed, one to whom our greatest
University professors were us
mere children"
　　　　　　ಇಂತಿಂತು ಅಮೆರಿಕಾ
ಖಂಡದೊಳ್ ನಡೆಯಿತ್ತು ಸಾಮಿಗಳ ಮಹೋನ್ನತ
ಧಾರ್ಮಿಕ ಜೈತ್ರಯಾತ್ರೆ. ಎಲ್ಲೆಡೆಯಲಿ ಸಂಚರಿಸಿ
ಸಂಚಲಿಸಿ ಜನ ಹೃದಯಮಂ ಸೂರೆಗೊಳ್ಳುತೆ
ಕೀರ್ತಿಯಂ ಗಳಿಸಿದ ಸುರಸುಂದರ ಸುಧರ್ಮದ
ದುರೀಣ ವಿವೇಕಾನಂದಮಯ ಗುರುವರ್ಯನುಂ
ಪುಣ್ಯಪುರುಷಂ. ಅಲ್ಲಿ ನಾಲ್ಕಾರು ದಿನಂಗಳ್

ಕಳೆದುವು ಬಿಡುವು ಇಲ್ಲದೊಲ್. ಬಳಿಕಮಲ್ಲಿಂದ
ಪಿಂತಿರುಗಿದರ್ ನ್ಯೂಯಾರ್ಕ್ ನಗರಿಗೆ. ಅಂದಿನಾ
ಸುದ್ದಿಯೊಳ್ ತಿಳಿದುಬಂದೊಂದು ವಿಷಯವಿಶೇಷ
ಮೆನಲ್ ಪ್ಯಾರಿಸ್ ಪೊಳಲೊಳ್ ಮತ್ತೆ ಸರ್ವಧರ್ಮಗಳ
ಸಭೆಗೂಡುವುದೆಂದೆಂದು. ಮೆಯ್ಯೊಳ್ ಬಳಲ್ಕೆಯುಂ
ತುಂಬಿ ಹಿಂಡುತಿರೆಯುಂ ಸೋಲದಾಯ್ತು ಉತ್ಸುಕ
ಮನಂ. ಪರ್ಯಾಲೋಚಿಸಲಿನಿತ್ತು ಪೊಳ್ತಿಲ್ಲ.
ಸಾಗರ ಪಯಣಮೆ ಗತಿಯಿರೆ ಅಸವಸದಿಂ ಪೊರ
ಮಟ್ಟರ್, ಮಿತ್ರರಂ ಒಡಂಗೂಡಿ. ಸಾಗರದ
ಅಲೆಗಳೋಳಿಯಲಿ ಏರಿಳಿಯುತ್ತೆ ತೇಲಾಡಿ
ಮುಂಬರಿಯಿತು ನೌರಿವಂ ತೂಗುತೊಟ್ಟಿಲಿನವೊಲ್.
ಸಂಚಲಿಸಿದುದು ಮುಂಮುಂಮುಂದಕೆ ಒಯ್ಯೊಯ್ಯನೆ
ಓಲ್ಯೆಸುತೆ. ಮತ್ಸ್ಯಗಂಧ ನೀರ್ಗಂಧ ನುರ್ಗಿತು
ಪಂಚೇಂದ್ರಿಯಂಗಳಂ ಮುಟ್ಟಿ ಮುರ್ದಿಸುವಂತೆ.
ದೂರದ ನಭೋದೇಶದಲಿ ಕಣ್ಗೆಸೆದುದೊಂದೇ
ಒಂದು ಚುಕ್ಕಿ. ಅಂತಿಂತು, ಅನಿತಿನಿತು ಕಣ್‌ಕಣ್
ನೆಟ್ಟು ಗಮನಿಸುವನಿತರೊಳ್ ಪಯಣಮಂ ತೀರ್ಚಿ
ಫ್ರಾನ್ಸ್ ದೇಶಮಂ ಮುಟ್ಟಿದುದು ಜಹಜು, ಇಳಿದರ್
ಪಯಣಿಗರ್. ಗುರುವರಂ ಗೆಳೆಯರ ಬಳಗದೊಡನೆ
ಬೊಕ್ಕರೊಂದು ಕಿರು ಖಾನಾವಳಿಯೊಡಲಂ. ಆ
ನಗರಿಯ ಪಥದೊಳ್ ಚಂದನಕಾಂತಿಯ ವಸನಂ
ಧರಿಸಿರ್ದ ಗುರುದೇವಂ ಜನದೃಷ್ಟಿಗೆ ಬಿದ್ದೊಡನೆ
ಹರಡಿತು ಸುವಾರ್ತೆ ಗುರ್ವಾಗಮನಮಂ ಕುರಿತು.
    ಫ್ರಾನ್ಸ್ ದೇಶೀಯ ದಿವಿನಾದ ಅನಿಲಮಾನಂ
ವಿಪರೀತಮೆನಿಪ್ಪಾ ಸೋಂಕಿಲ್ಲದಿತ್ತು. ಮೈ

ನಡುಗಿಪ ಚಳಿಯಿಲ್ಲ, ಬೆಮರ್ ಬಸಿವ ರಣರಣಿಪ
ಸುಡುವಿಸಿಲ್ ಝುಳವಿಲ್ಲ. ಸುರಮ್ಯ ಸಮಶೀತೋ-
ಷ್ಣತೆಯಿಂದೆ ಚೆಲುವಾಯ್ತು ಪ್ಯಾರಿಸ್ಸಿನ ವಾಸಂ.
ಸಾಯಂ ಸಮಯದೊಳ್ ಗುರುವರ್ಯಂ ಪ್ರಾಂಗಣದ
ಪೂದೋಂಟದಲಿ ಶತಪಥತಿರುಗುತಿರೆ ಖಾನಾ-
ವಳಿಯೊಡತಿಯುಂ ಎದುರ್ವೆತ್ತು ನುಡಿಸಿದಳಿಂತು,
“ಗುರುವೆ, ಇಲ್ಲಿ ನಡೆಯಲಿಹ ಸಭೆಯುಂ ನಿಮ್ಮಾಗ-
ಮನ ಸುದ್ದಿಯರಿತು ಬರಿ ಧರ್ಮಸಭೆಯೈಸುತೆ
ಮಾರ್ಪಡಿಸಿದರ್ ಸಭೆಯ ಸಂಯೋಜಕರ್ ಎಂಬ
ಸುದ್ದಿಯಂ ಅರಿದೆನೆನ್. ಅಂದೊಡೆ, ಈ ಸಲಂ
ತಮ್ಮ ಆಕಾಂಕ್ಷೆಯಂತೆವೊಲ್ ಹಿಂದೂಧರ್ಮದ
ಪ್ರವಚನಗಳಿಗಿಲ್ಲ ಅವಕಾಶಮೆಂದಾಯ್ತು.”
“ಜನನಿ, ಅಂತಿರೆ ಬರಿ ಉಪನ್ಯಾಸಕನೆಂದಾಂ
ಪೋದಪೆನ್ ಆ ಸಭೆಗೆ.”
“ಆಯ್ತಾಯ್ತು, ನಿನಗೆಂತು
ಸರಿದೋರ್ವುದಂತು ಮಾಡ್ಯೆ ಗುರುವೇ!” ಎಂದಳಾ
ಸ್ವಾಮಿನಿಯು. ಅಂದಿನ ಸರ್ವಧರ್ಮ ಸಭೆಯೊಳ್ ಆ
ರೋಮನ್ ಕ್ಯಾಥೋಲಿಕ್ ಪಾದ್ರಿಗಳ್ ಪಡೆದ
ಕಹಿ ಅನುಭವವಿಂ ಮಾಸಿಲ್ಲದಿರ್ಪುದೆ ಇದರ
ಕಾರಣ ಎನಿಸಿ ಮಂದಸ್ಮಿತರಾದರ್ ಸ್ವಾಮಿ
ವಿವೇಕಾನಂದರುಂ. ಧರ್ಮ ಸಭೆಯುಂ ನಡೆಯೆ
ಸದ್ಯ ಆರೇಳುದಿನಗಳ ಕಾಲಾವಕಾಶ
ಇರುತಿರಲ್ ನಲ್ ವಿಶ್ರಾಂತಿಯಂಬಡೆಯಲೊರ್
ಸದವಕಾಶ ದೊರೆಯಿತ್ತು ಗುರುವರ್ಯಂಗೆ, ಆ
ಬಿಡುವಿನೊಳ್ ಉದ್ಗ್ರಂಥಗಳ ಪಠಣ ನಡೆಸಿದರ್

ಎಡೆವಿಡದೆ. ಖಾನಾವಳಿಯ ಪ್ರಾಂಗಣದೊಳ್ ಎಳೆ
ಬಿಸಿಲಿಂಗೆ ಮೈಗೊಟ್ಟು ಗ್ರಂಥಗಳ ಓದಿಯೇ
ಓದಿದರ್ ಸ್ವಾಮೀಜಿ. ಶಾಂತಿ ವಿಶ್ರಾಂತಿಗಳ
ಮೋದದಿಂ ಕಳೆಯಿತ್ತು ಕಾಲವಾಹಿ. ಪೆರ್ಚಿನ
ಸಂದರ್ಶಕರುಂ ಇಲ್ಲದಿರಲೆಲ್ಲವುಂ ಸತ್
ಸರಾಗಮೆ. ಒರೊರ್ಮೆ ಹಲ ಕೆಲ ವಿದ್ವಾಂಸರ್
ಬಂದಪರ್. ಸಾನಂದದಿಂ ಧರ್ಮ ತತ್ತ್ವಗಳ
ವಿಮರ್ಶೆಯಲಿ ತೊಡಗಿ ಪರಸ್ಪರ ವಿಚಾರಾಂತ
ವಿಶ್ವದಲಿ ಮುಳುಗೇಳುವರ್ ಮಿತ್ರರೊಡಗೂಡಿ.
ಧರ್ಮ ಸಭೆಯ ಸಮ್ಮೇಳನಂ ಕೂಡೆ ಅಲ್ಲಿಗೆ
ಬಿಜಯಂಗೈದು ವೇದಿಯ ನೇರಿದರ್ ಸ್ವಾಮೀಜಿ.
ರಂಗುರಂಗಿನಿಂ ವಿಜೃಂಭಿಸಿತು ವರ್ಣಮಯ
ವಿದ್ವಜ್ಜನರಿಂ ಕಿಕ್ಕಿರಿದು ತುಂಬಿದ ಸಭೆಯ
ಕೂಟ. ವೇದಿಯೊಳಿರ್ದರ್ ವಿಧವಿಧದ ಧಾರ್ಮಿಕ
ಪಂಗಡಗಳ ಗುರುಗಳ್ ಸಾಲ್ವರಿದು. ಪಾದ್ರಿಗಳ್
ಸಂಚಾಲಕರ್ ಸುಸ್ಥಾನ ವೈಭವದೊಳಿರ್ದರ್.
ಮೊದಮೊದಲ್ ಇತರಿತರ ಧಾರ್ಮಿಕ ಗುರುಜನರ
ಭಾಷಣಗಳ್ ಹರಿದುವು ಉದ್ದುದ್ದ ರೀತಿಯಲಿ.
ನೀರಸ ಭರಿತ ವಾಕ್ಸರಣಿಯಿಂದೆ, ಸಭಿಕರುಂ
ಮನಂಗೆಟ್ಟು ಕಸಿವಿಸಿಗೊಳ್ಳುತಿರೆ ನೋನೋಡಿ
ತಮ್ಮಸರದಿಯಲಿ ಎಳ್ದು ನಿಂತರ್ ಸ್ವಾಮೀಜಿ,
ನಂದ್ಯಾವರ್ತ ತರುವಿನೊಲ್. ಭಾರತ ರಾಷ್ಟ್ರೀಯ
ಎಲ್ಲ ಪ್ರಜೆಗಳ ಪರವಾಗಿ ಬಹು ಬಗೆಬಗೆಯ
ಸಂಘ ಸಂಸ್ಥೆಗಳ ಪರವಾಗಿ ಕರವ ಜೋಡಿಸಿ
ವಂದಿಸಿದರ್ ಸವಿನಯದಲ್ಲಿ, ತರುವಾಯಿಯೊಳ್

ಕಿರುವಗೆಯ ಪ್ರವಚನಮಂ ಬಿತ್ತರಿಸಿ ಎಲ್ಲ
ಸಭಿಕರ ಮನತಣಿಸಿ ಪೊರಬಿಳ್ದರ್ ಸಭೆಯಿಂದೆ.
ಅನಂತರಮಾ ದೇಶದಿಂ ತಾಂ ಪೊರಮಟ್ಟರ್
ಮಿತ್ರರಂ ಕೂಡಿ. ಮುಂದೆ ಲಂಡನ್ ನಗರಕ್ಕೆ
ಉಗಿ ಬಂಡಿಯ ಪಯಣಂ. ಪಸುರಿನಲಿ ಪಸುರುಕ್ಕಿ
ನಳನಳಿಪ ವನವಾರ್ಧಿಯಂ ಸೀಳಿ ಕೊರೆಕೊರೆದು
ಹರಿದ ಕರ್ಬುನದ ಹಳಿಗಳ ಮೇಲೆ ಓಡಿದುದು
ಉಗಿಬಂಡಿ ಗುಜುಗುಜಿಸಿ. ಪಯಣಮಂ ತೀರ್ಚುತೆ
ಲಂಡನ್ನಿನ ನಿಲ್ಮನೆಯಂ ಬೊಕ್ಕು ದೀರ್ಘತರ
ಶಿಳ್ಳೆಯೂದಿ ನಿಂದುದು ಕ್ಲಪ್ತಸಮಯದೊಳ್. ಅಲ್ಲಿ
ಗುರುದೇವನಿಗಾಗಿ ನೆರೆದು ಕಾದಿರ್ದ ಮಿತ್ರರ್
ಪ್ರಸನ್ನ ಭಾವದಲಿ ಮುಗುಳ್ದ ಮುಗುಳುನಗೆಯ
ಬೆಳುದಿಂಗಳ್ ಹರಿಸಿ ಹರುಷದಿಂ ವಂದನೆ ಸಲಿಸಿ
ಸ್ವಾಗತಿಸಿದರ್. ಪುಷ್ಪಗುಚ್ಚಗಳ್ ಗಮಗಮಿಸಿ
ಮೆರೆದುವು, ಅಧಿಕ ಸಂಖ್ಯೆಯಲಿ. ಕಳೆದುವಾ ಭವ್ಯ
ಲಂಡನ್ ನಗರಿಯಲ್ಲಿ ಏಳೆಂಟು ದಿವಸಗಳ್
ಅಮಿತ ಕಾರ್ಯಕ್ರಮಗಳಿಂ ಕೂಡಿ.
ಅಂತಿಂತು
ಕೈಕೊಂಡ ಕೈಂಕರ್ಯವದು ಕೊನೆಯಮುಟ್ಟಿರಲ್
ಬಲ್ಲಿದವರ ಮನತಣಿಯಿತು. ಧರ್ಮವಿದರ ಮನ
ತಣಿಯಿತು. ಪೆಣ್ಮಣಿಯರ ಮನತಣಿಯಿತು. ಮೆಚ್ಚಿನ
ನೇಹಿಗರ ಮನ ತಣಿಯಿತು. ಎಲ್ಲರ ಅಮಿತ ಶುಭ
ಹಾರೈಕೆಯ ವಚನಗಳ್ ಮೊಳಗಿದುವು ಬಾಯ್ತುಂಬ.
ಮುಂದೆ ಒಂದೆರಳ್ಡು ದಿನಗಳಲಿ ಭರತವರ್ಷ–
ದಭಿಮುಖೀ ಯಾತ್ರೆಯಂ ಕೈಕೊಳಲ್ ಅಣಿಯಾಯ್ತು

ಸ್ವಾಮೀಜಿಯ ತಂಡ. ಸಂತೃಪ್ತಿ ಸಂತಸಗಳ
ಮೂರ್ತಿಯಾಗೆಸೆದರ್ ಗುರುದೇವಂ. ಭಾರತದ
ದಿವ್ಯ ದರ್ಶನಕೆ ಹಾ ತೊರೆದುದು ಜೀವದ್ರವ್ಯಂ.
ಪಯಣಂ ಮುಗಿಬಗಿಯಾಯ್ತೆನೆ ಬಹುದೂರದಿಂ
ಭಾರತದ ಸವಿಗಾಳಿಯು ಸುಯ್ದುಯ್ದು ಸುಳಿಸುತ್ತಿ
ಸುಯ್ಯೆಂದು ಸುಯ್ಯುತೈದು ಸ್ವಾಂತನಗೊಳಿಸುವೊಲ್
ಮುಟ್ಟಿ ಮುಟ್ಟಿ ಮುದ್ದಿಸಿತು ನಲವಿಂ. ಜಲಧಿಯೊಳ್
ಸೈವರಿದ ಜಹಜು ತಟನಿಯಂಚಂ ಮುಟ್ಟಿ ಮೆಟ್ಟಿ
ಲಂಗರೂರಿ ನಿಂದತ್ತು ಸುದೀರ್ಘ ಶಿಳ್ಳೆಯಂ
ಊದಿ. ಗುರುದೇವನಿಳಿದರ್ಯೆ ಬಳಲ್ಕೆಯಿಂದೆ
ಬಳಲಿ ಸೋಲ್ದ ಪರಿಯಲಿ. ಆದೊಡಂ ಮೊಗವಿನಿತು
ಬಾಡಿಲ್ಲ. ದನಿಯಣಂ ಕುಗ್ಗಿಲ್ಲ. ನವಿರಿನಿತು
ನೆರೆತಿಲ್ಲ, ಕಂಗಳಿನಿತು ಬೆಳತಿಲ್ಲ, ಕಾಣಾ,
ತೇಜಃಪುಂಜಮಾಗಿಹ ವದನಾರವಿಂದಮಂ!!
ಅಲ್ಲಿಂದ ಮುಂದೆ ಉಗಿಬಂಡಿಯೊಳ್ ಪಯಣವೇ
ಗತಿ ಕಲ್ಕತ್ತನಗರಿಗೆ. ಗುರುವರಂ ನಿಲ್ಮನೆಯಂ
ಬೊಕ್ಕು ಹತ್ತಿದರ್ ಉಗಿ ಬಂಡಿಯ ಕೊಠಡಿಗೆ. ಕಟು
ಕಠಿಣ ಕರ್ಬುನದ ಕಾಯದಿಂ ಮೈದಾಳಿರ್ದು
ಪಂಜರಾಯಮಾನದಲಿ ಧೀರ್ಘಾತಿದೀರ್ಘತರ
ಮೆಯ್ಯಂ ಎಳೆದೆಳೆದೊಯ್ಯುವ ಸಹಸ್ರಾರು ಚಕ್ರ
ಚರಣಾಂತ ಬಂಡಿಗಳ ಮುಂದೋಟ ಮುಟ್ಟಿದುದು
ಕಲ್ಕತ್ತ ನಿಲ್ದಾಣಮಂ. ಗಡಬಡಿಸಿ ಇಳಿದರ್
ಪಯಣಿಗರ್, ಪಡುವಣ ದಿಗ್‌ಭಿತ್ತಿಯಲಿ ನೇಸರ್
ಇಳಿದಿಂ ಹೊಳೆಯುವ ಹೊನ್ನ ಹರಿವಾಣದ ತೆರದಿ.
ಹರಿದಿದೆ ಸುಮನೋಹರ ರಾಗಾರುಣತಾನಂ

ಬಗೆಬಗೆಯ ಪಕ್ಷಿಗೊರಳಿಂಚರದಲಿ. ಗುರುವರಂ
ಬಂಡಿಯಿಂದಿಳಿದು ಮಿತ್ರವಳಗಮಂ ಪಿಂತಿರ್ಕಿ
ಭ್ರಾತೃಭಾಯಿಗಳಂ ಕಾಂಬುವ ಆತುರ ಕಾತರ
ತುಂಬಿ ಮನದಲಿ ಪೊರಬರೆ ಅಂಗಣದಂಚಿನಲಿ
ಕಂಗೊಳಿಸಿತೊಂದು ಶಕಟಂ. ಥಟ್ಟನದನೇರಿ
ಬೇಲೂರು ಮಠದ ಹಾದಿ ಹಿಡಿದರ್. ಒಂಟೆತ್ತು
ಎಳೆಯ ಹೋರಿಯಿರೆ ಪುರುಪು ಪುರುಡುಗಳಿಂಕೂಡಿ
ಓಡಿದುದು ಗಡಬಡಿಸಿ. ಗೈಲ್‌ಗೈಲೆಂದೆಂದು
ಗೆಜ್ಜೆಗಳಲುಗುತಿರಲ್ ಸಂಧ್ಯಾ ಪ್ರಾರ್ಥನೆಗದು
ಶೃತಿಯಾಯ್ತು. ಮನೋಜನಿತ ಆನಂದರಸವದು
ಹೃತ್ ಕುಂಡದಲಿ ತುಂಬಿ ಮಾಯೆಯೊ ಎಂದೆನಲ್
ದಕ್ಷಿಣೇಶ್ವರದ ಗುರು ಮಹಾರಾಜರುಂ ಚಿತ್ರವತ್
ಚಿತ್ತಭಿತ್ತಿಯಲಿ ಮೂಡಿನಿಂದರ್ ಭಾಷ್ಪಮಯ
ವದನಾರವಿಂದದಿಂ. ಕರಜೋಡಿಸಿದರ್ ಗುರು
ದೇವನಿಗೆ, ಭಕ್ತಿಭಾವ ತುಂಬಿದ ಕೊರಳ್‌ಸ್ವನ
ಗದ್ಗದಿಸುತಿರಲ್ ನಮಿಸಿದರ್ "ಗುರುವೇ! ನಮೋ
ನಮೋನ್ನಮಃ"
ಪಯಣ ಮುಗಿದತ್ತು. ಕಳ್ತಲೆಯಕರಿ
ಛಾಯೆಯು ಮುಸುಗಿದುದು ಧರಿತ್ರಿಯಂ. ಕತ್ತಲೆಯ
ತೆರೆ ಹರಡಿರೆ ದಟ್ಟೈಸಿ ದೀಪವಿರದ ನೆಲೆಯಲಿ
ಏನೇನ್ ಕಾಣಿಸದು ಕಣ್ಗೆ. ಪ್ರಾಕಾರದಾ
ವಾಗಿಲಂ ಮುಚ್ಚಿ ಬೀಗ ಮುದ್ರೆಯ ಜಡಿದಿರಲ್
ಮಠದೊಳಗಡೆ ಪುಗುವಂತಿಲ್ಲವಾಯಿತ್ತು.
ಕೂಗಿ ಕರೆವೆನೆನೆ ಮಠದ ನಿವಾಸಿಗಳಿಂಗದು
ಕೇಳಿಸದನಿತು ದೂರವಾ ಭವನಂ. ಗುರುವರಂ

ಪೆರ್‌ಬಾಗಿಲ್ ಹತ್ತಿ ಒಳಗಡೆಗೆ ತಿಳಿಸದೇನಂ
ದೊಪ್ಪನೆ ದುಮುಕಿದರ್. ಒಳಗಣಿಂ ಗಣಗಣಿಸುತ
ಭೋಜನದ ಕರೆ ಗಂಟೆ ಬಾಜಿಸಿತು! ಓ ಗಂಟೆ
ಒಂಬತ್ತು! ಸರಸರನೆ ನಡೆದು ಮೆಟ್ಟಿಲ್‌ಗಳಂ
ಹತ್ತಿದರ್ ಕಾಪಿನವ ಬೆದರಿ ಒಳಗೋಡಿ ಪೆರ್
ಬಾಯೊಳ್ ಒದರಿದನಾ ಸುದ್ದಿಯಂ "ಆರೊ, ಸಾ-
ಹೇಬರ್ ಬರುತಿಹರ್!"
ಗುರುವರನ ಆಂಗ್ಲ ಉಡುಪು
ನಿಜದಿಂ ಅವನಂ ವಂಚಿಸಿರ್ದುದು! ವಟುಗಳಿಗೆ
ವಿಷಯ ಅಚ್ಚರಿಯಂ ಮೂಡಿಸಲ್ ಹಿಡಿದ ಕೆಲಸ
ಕಾರ್ಯವನಲ್ಲಿಯೆ ಬಿಟ್ಟು ಓಡೋಡುತಲ್ಯೆದರ್
ಜಗಲಿಗೆ! ನೆಟ್ಟ ನಿಟ್ಟಾಲಿಯಲಿ ನಿಟ್ಟಿಸಿ ನೋಡೆ
ಸ್ವಾಮಿಜಿ! ಒಡನೆಯೆ ನಗೆಯ ಗುಲ್ಲೆದ್ದುದು "ಓ! ಓ!
ಸ್ವಾಮಿಜಿ!" ಈ ರಾತ್ರಿಯಲಿ ಬರ್ಪ ಸಾಹೇಬರಾರಿರ್ಕುಂ
ಎಂಬಚ್ಚರಿಯೊಳ್ಯೆದ ವಟುಗಳೊರ್ಮೆಗೆ ಅಮಿತ
ಸಂತಸದ ಮೂಟೆಯಾದರ್ ಗುರುವರನಂ ಕಂಡು.
ಸ್ವಾಮಿಜಿಯುಂ ಎಲ್ಲ ಗುರು ಭಾಯಿಗಳನಪ್ಪಿ
ಆತ್ಮೀಯ ಆಲಿಂಗನದ ಸುಖೀ ಮುದ್ರೆಯೊತ್ತಿ
ಬೆನ್ತಟ್ಟಿ ಪುರುಪು ಮೂಡಿಸಿದರ್. ಉಭಯಕುಶಲೋ-
ಪರಿಯ ಬಳಿಕ ತಣ್ಣೀರ್ ಸುಖ ಮಜ್ಜನಮಾಯ್ತು,
ಗುರುವಿಂಗೆ. ಮೆಯ್ಯನೋವು ಅಳಿಯಿತು. ಜೀವದ
ಸೋಲು ದಣಿವು ಕಳೆಯಿತು. ಸರಸ ಸಲ್ಲಾಪದೊಳ್
ಮುಳುಂಗಿರಲ್ ಭೋಜನ ಶಾಲೆಯಿಂದೆ ಢಣಢಣಿಸಿ
ಕರೆಯಿತ್ತುದು ಮತ್ತದೆ ಕರೆಗಂಟೆ. ವಟುಗಳೊಡ-
ಗೂಡಿ ಸಹಭೋಜನಮೊದವಿರೆ ಸಂತಸದಿಂದೆ

ನುಡಿಸಿದರ್ ಸ್ವಾಮಿಜಿ "ಕೇಳಿರೈ, ಆನಾಗ
ಪ್ರಾಕಾರದ ವಾಗಿಲಿಂಗೈದೊಡನೆಯೆ ಊಟದ
ಕರೆಗಂಟೆ ಬಾಜಿಸಿತು. ಇನ್‌ತಳುವಿದೊಡೆನಗೇಂ
ಉಳಿಯದು ಎನುತೆನುತ್ತೆ ಓಡೋಡಿ ಬಂದೆನೆನ್!
ಆಗಳ್ ಬುಗಿಲೆಳ್ದೊಲ್ ಎಲ್ಲರುಂ ಹೋ ಎನುತೆ
ನಗೆಯ ಗುಲ್ಲೆಬ್ಬಿಸಿರೆ ತಾವುಂ ನಗುತೆ ಮತ್ತಂ,
"ಭಾಯಿ, ಅಲ್ಲದೊಡೆ ಭೋಜನವೆನಗೆ ಸೊನ್ನೆಯೇ!"
ಮತ್ತೆ ಹರಿಯಿತಾ ನಗುವಿನ ಲಹರಿ, ಕೊರಳ್‌ಗಳ್
ತುಂಬಿ. ಗೋಡೆಗೋಡೆಗಳ್ ಧಳಧಳ ಮೊಳಗಿದುವೊ
ಎನಲ್ ಹಿರಿದಾಯ್ತು ನಗೆಯಗುಲ್ಲು. ಮುದವನೊತ್ತಿ
ಸಂಮುದಗೊಳಿಸಿತು ರಸಭರಿತಗಳಿಗೆಯೊಳ್

ಹರಿಃ ಓಂ ತತ್ ಸತ್

❋ ❋

ಏಕಚತ್ವಾರಿಂಶತ್ತೋಲ್ಲಾಸಂ

ಜೀವನ ಸಂಜೆ

ಅಹಿಂಸಾ ಪ್ರಥಮ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ
ಸರ್ವಭೂತದಯಾ ಪುಷ್ಪಂ ಕ್ಷಮಾ ಪುಷ್ಪ ವಿಶೇಷತಃ ।
ಜ್ಞಾನಪುಷ್ಪಂ ತಪಃ ಪುಷ್ಪಂ ಧ್ಯಾನಂ ಪುಷ್ಪಂ ತಥೈವಚ
ಸತ್ಯಮಷ್ಟಮಿದಂ ಪುಷ್ಪಂ ವಿಷ್ಣೋಃ ಪ್ರೀತಿಕರಂ ಭವೇತ್ ॥

ಏರುತೇರಿ ವಿಧಿಕಲ್ಪನಾ ಸುರಧನುರ್ಧ್ಯಾನ
ವೈಭವದ ಸಚ್ಚಿದಾನಂದಮಂ ಸಾಧಿಸಿ ಋಷಿ
ಪ್ರತಿಭೆಯನಾಕ್ರಮಿಸಿ ಧರ್ಮಮಯ ವಿಶ್ವತಾ
ವೈಶಾಲ್ಯಮಂ ಬೆಳಗಿಸಿತು ಎದೆಯ ಗವಿಯಲ್ಲಿ,
ಕುಸಿದ ನೈತಿಕ ಧಾರ್ಮಿಕ ಮರುಭೂಮಿಯ ರಂಗ
ಕರುಣಾಜನಕ ರೂವಿನೊಳೆಸೆದುದು ಚಿಂತನೆಗೆ.
ಹಿಂದೂ ಧರ್ಮದ ಸ್ವಾಪ್ನಿಕ ಲಸಲ್ಲೋಕದೊಳ್
ಸಂಜನಿಸಿ ನರೇಂದ್ರನಾಥದತ್ತನೆನೆ ದೀಪದ
ಕುಡಿಬೆಳಗಿ ಬೌದ್ಧಿಕ ಕುಶಾಗ್ರತೆಯ ತರ್ಕಗಳ
ವಿದ್ಯಾತತ್ತ್ವ ಚಂದ್ರಿಕೆಯಿಂದೆ ಲೆಕ್ಕಣಿಕೆಯಾ
ಖಡ್ಗವ ಸೆಳೆದು ವೇದವಿಖ್ಯಾತಿಯಕ್ಕರಕ್ಕರ
ಮಣಿಗಳಂ ಕೊರೆಕೊರೆದು ಸತ್ಯಾರ್ಥಮಂ ಸಾರಿ
ಬರ್ದುಕಿನ ಸಾರ್ಥಕತೆಯಂ ಪಡೆದು ವಿವೇಕಾ
ನಂದ ನಾಮಧೇಯವ ಗಗನಕೇರ್ವಡಿಸಿ ಸಿರಿ
ಭಾರತದ ತೇಜೋನ್ವಿತ ಅರುಣಾರುಣನಾಗಿ
ನಭೋದೇಶದಿಂದಿಳಿಮುಖನಾಗಿರೆ ಹೃನ್ಮನಂ
ನಿರಾಳ. ಸಂಯೋಜನಾ ಸಾಗರಂ ನಿರಾಳ.

ನಿರಾತಂಕ, ನಿಶ್ಚಿಂತ.
ನಡೆದುದ್ದೈ ಸುಮಧುರ
ರಾತ್ರಿ, ಉಜ್ವಲ ತಾರಕಿತ ಸುರಮ್ಯತಾರಾತ್ರಿ,
ಕೋಟ್ಯನುಕೋಟ್ಯನುಕೋಟ್ಯನುಕೋಟ್ಯನುಕೋಟಿ,
ಕೋಟಿ ಉಜ್ವಲ ನಕ್ಷತ್ರಗಳ ವಜ್ರಮಾಲಿನಿ
ನಿಶಿಯು ಅಭಯ ಹಸ್ತಂ ಚಾಚಿರಲ್ ತನ್ನೊಡಲ
ಮಹೋನ್ನತ ಪರ್ಯಂಕದೊಳ್ ಮುದ್ದು ಶಿಶುವೆನಲ್
ಧೀರಧೀಮಂತ ಕುವರನ ಶಾಂತಪ್ರಶಾಂತ
ವಿಶ್ರಾಂತಿಗೆ ಬೇಲೂರು ಮಠವುಂ ತಣ್ಣನೆಯ
ಕಂಪಿಡಿದ ಲಾಲಿಯಂ ಹಾಡಿದುದು ಜೋಗುಳಿಸಿ.
ಮೂಡಣ ದಿಗ್‌ದೇಶದ ಕೆನ್ನೀಲ ಲಲಾಟದಿ
ಮುಂಬೆಳಕಿನ ಮಿಸುನಿಛವಿ ತುಳುಕಿತು ಸಂಭ್ರಮ
ಸಡಗರಗಳ ಚಿಲುಮೆಯೋ ಎಂಬೊಲ್ ಚಳಚಳಿಸಿ.
ಪ್ರಕೃತಿಯಾತ್ಮದಾನಂದ ಮೋದಕೆ ಸ್ವಾಪ್ನ
ಸ್ವರ್ಣರೇಖಾಲಿಪಿಯ ಹಸ್ತಾಕ್ಷರವೊ ಎನಲ್ಕೆ
ಸಾಲ್ಗೈಸಿ ಚೆಂಬೆಳಕಿನ ಸುವರ್ಣಝರಿ ತುಳುಕಿತು
ಅರುಣಾರುಣನ ಕಿರಣಗಳ್ ಸೂಜಿ ಸೂಜಿಯೊಲ್;
ಮುಗಿಲ್ ಮಾಲೆಯಂ ಚುಚ್ಚಿ ನುಗ್ಗುತೆ ಎರಗಿದುವು
ದಂಡೈಸಿ ಭುವಿಯಮೇಲೆ. ಆ ಮಂಗಳ ಮುಹೂರ್ತವು
ಸಾರಿಬರೆ ಕಾಮಳ್ಳಿವಿಂಡುಗಳ್ ಪಿಕಳಾರಿ
ವಿಂಡುಗಳ್ ಮಡಿವಾಳವಿಂಡುಗಳ್ ಗುಂಪೆದ್ದು
ಗುಂಪುಗುಂಪಾಗಿ ಹಾರಿ ಹಾರಾಡಿ ರೆಕ್ಕೆಯ
ಬಡಿದು ಮುಕ್ತಕಂಠಗಳಾಗಿ ಹಾಡಿದುವು ದನಿ
ವರ್ಷವ ಹರಿಸಿ. ಉಷೆಯ ಬೆಳಗಿಂಗೆ ಸುಮಂಗಳ
ಗಾನವಂ ಪಾಡಿ ಪಕ್ಷಿಯಕ್ಷತೆಯ ತಳೆದುವು

ಲಕ್ಷಪಲ್ಲವಿಯುಲಿಯಲಿ. ಅರೆಬಿರಿದ ಸುಮಕುಲ
ಕೋಟಿಯ ನರುಗಂಪುಗಳ ಸೌರಭದೈಸಿರಿಯು
ಹರಡಿದುದು ಊರಗಲ.

ಬೇಲೂರ್ ಮಠದ ತಲೆ
ಬಾಗಿಲ್ ತೆರೆಯಿತು. ಗುರುಭಾಯಿಗಳ್ ಅರುಣ ರವಿ
ತೇಜದಾ ಚೆಂಗಿರಣಗಳಂ ಸ್ವಾಗತಿಸಿದರ್ ಪ್ರಸನ್ನ
ಮೊಗದಿಂದೆ. ದಿನಚರಿಯ ಪ್ರಥಮಾಂಕಮೆನೆ ದಿವ್ಯ
ಕಸಬರಿಗೆಯನಾಂತು ಸುಕಾರ್ಯೋತ್ತಿಷ್ಠ ಪುರುಡಿನ
ಆಳಾಗಿ ಮೈಯ್ಯನೆತ್ತರಿನಾರೋಹಣಮಂ
ತೀವ್ರಗೊಳಿಸುವ ಪಾಂಗಿನಲಿ ಭ್ರಾತೃ ಭಾಯಿಗಳ
ಹಿರಿಕಿರಿಯರೆನ್ನದೆಲ್ಲರ್ ಕಾರ್ಯದುತ್ಸಾಹ
ತತ್ಪರತೆಗೆ ಶರಣೆಂದರ್ ತ್ವರಿತಗತಿಯಲಿ.
ಓರೊರ್ವರೊಂದೊಂದು ಕಜ್ಜಮಂ ಕೈಕೊಳ್ಳಲ್
ಕೈಗೂಡಿದುದೆಲ್ಲವಗೆಯ ಸ್ವಚ್ಛತಾಕಾರ್ಯ.
ಸ್ವಾಮಿ ಶಾರದಾನಂದರ್ ಬಾಣಸಿಗ ಕಜ್ಜ
ವೆಸಗೆ ಅಡಿಗೆಮನೆಯಂ ಬೊಕ್ಕರ್, ನಳಪಾಕದ
ಹೊಣೆಹೊತ್ತು. ಅಂತಿಂತು ಎಲ್ಲವಗೆಯ ಕಜ್ಜಂ
ನಡೆಸುವರ್ ನಡೆಸುವರ್ ಪೆಣ್ಮಣಿಯರಂ ಹೋಲಿ!
ಎಲ್ಲರ ಪೊಣೆಯ ಪೂಣ್ಕೆ ನಡುನಡುವೆ ಕೈಬದಲ್
ಆದಪುದು ಸಮಯೋಚಿತಮಪ್ಪಿ. ಗುರುದೇವಂ
ಒಳಗೈತರೆ ಉಪಹಾರಗೋಷ್ಟಿಗೆ ಸಿಹಿ ಸಕ್ಕರೆ
ಬೆರಸಿದ ಅವಲಕ್ಕಿಯು ಅಣಿಯಾದುದು, ಗುರುವುಂ
ಗಂಟೆಯಂ ಅಲುಗಿಸಿ ಜಣಿಜಣಿರೆನಿಸಲ್ ಎಲ್ಲ
ವಟುಗಳೈದರ್. ತಂತಮ್ಮ ಉಪಹಾರಂಬಡೆಯೆ.
ಕುಳಿತರೆಲ್ಲರ್ ಸಾಲ್ಗೈಸಿದ ಮಣೆಗಳಲಿ. ಸ್ವಾಮಿ

ವಿವೇಕಾನಂದರುಂ ಕುಳಿತರೆಲ್ಲರೊಡಗೂಡಿ.
ಅಂದಿಂದಿನ ವಿಚಾರವಾಹಿ ನಗೆವಾತಿನಲಿ
ಹರಿಯಿತು. ಆತ್ಮೀಯ ಭಾವದ ಸವಿಜೇನಿನ
ರಸಸೂಸಿ. ಬಹುದಿನಗಳಬಳಿಕ ತಮಗೆ ದೊರೆತ
ಅವಲಕ್ಕಿ ರುಚಿರವಾಯ್ತು, ಹಿತಕರವಾಯಿತ್ತು.
ಒಡಲಿಂಗೆ ಸ್ವಾಮಿಜಿ ಹರ್ಷ ಚಿತ್ತರಾದರ್.
ಭ್ರಾತೃಭಾಯಿಗಳ ಮಧ್ಯೆ ಪ್ರಾಂಗಣದೊಳ್ ಹರಿದ
ಬೆಚ್ಚನೆಯ ಚೆಂಬಿಸಿಲಲಿ ಅಡ್ಡಾಡಿ ಮಾತಿನ
ಝರಿ ಹರಿಸಿ ಸ್ವರಚಿತ ಕವನಮಂ ಹಾಡುವರ್.
ಮತ್ತೆಮತ್ತೆಮೇಣ್ಮತ್ತೆ ಹಾಡಿ ತಣಿಸಿ ಮುದಿಸಿ
ನಲಿಸುವರ್ ಸಾನಂದದಿಂ. ಬೈಗುವೊಳ್ತಿನಲಿ
ಭಜನ ಮಂಡಲಿಯೊಡನೆ ಬೆರೆಯುವರ್ ಗೃಹೀ
ಭಕ್ತಜನರಂ ಕೂಡಿಸಿ. ಕೊರಳ್ ದನಿಯ ಹರಿಸಿ
ಹಾಡುವರ್ ಹೃನ್ಮನಂ ತುಂಬಿ ಹೊಂಗೊಡಮಾಡಿ,
ಸ್ವಾಮಿಜಿಯ ಉತ್ಸಾಹ ಹುರುಪು ಗುರುಭಾಯಿಗಳ
ಕಣ್ಮನಂ ತಣಿಯೆ ಹೃದಯದ ಭಾರವುಂ
ಇಳಿಯಿತ್ತು. ಮನಸೇಚ್ಛೆ ಎದೆಯೇಚ್ಛೆ ಕೈಗೂಡಿ
ಬಂದವೊಲ್ ಸಿತಸ್ಮಿತಮಂ ಬೆಳಗಿದುದು ಶಿಷ್ಯ
ಗಣಂ. ಸಾಯಂ ಭಜನಮಂಡಳಿಯ ಮಧ್ಯೆ
ಕುಳಿತ ಗುರುವರಂ ದನಿಗೂಡಿದರ್ ಶಿಷ್ಯರೊಡಂ.

ಬ್ರಹ್ಮಾಹ ಮಸ್ಮಿ
ನಿರುಪಾಧಿಕ ನಿಷ್ಕಳ
ಬ್ರಹ್ಮಾಹ ಮಸ್ಮಿ
ನಿರ್ಭಯನಿರವಯುವ
ಬ್ರಹ್ಮಾಹ ಮಸ್ಮಿ

ದಿನಗಳ್ ಕಳೆದಪವು ಸರಾಗದಲಿ. ದಿನಚರಿಯು
ಪೊಳ್ತುಪೊಳ್ತಿಗೆ ಕಳೆವುದು ಸ್ವಚ್ಛಂದ ಚೆಂದದಿಂ.
ಹಳೆಹಳೆಯ ಗೆಳೆಯರ್ಬೈದುವರ್ ಸಂದರ್ಶನವ
ಬಯಸಿ. ಗೃಹೀಭಕ್ತರ್ ಗಮಿಸುವರ್ ಪ್ರವಚ-
ನೋಪಖ್ಯಾನವ ಬಯಸಿ. ಗುರುಭಾಯಿಗಳೈವರ್
ಸದುಪದೇಶವ ಬಯಸಿ. ಅಂತಿಂತು ಕಳೆದುವಾ
ದಿನಮಾನಗಳ್ ಪೂರ್ಣ ಸಮಾಧಾನದಿಂದಲಿ.
ಶ್ರೀಮಾತೆ, ಪೆತ್ತಮ್ಮಯರ ಭೇಟಿಯಲಿ ಮತ್ತೆ
ಕಳೆದುದೊಂದು ವಾರಂ. ಪೆರ್ಚಿನ ಕೆಲಸಕಾರ್ಯ
ಧಾಮಕೆ ಧುಮುಕದೆ ಭಾವನಾ ಸಾಗರದೊಳಗೆ
ಮುಳುಗೇಳುವರ್ ಗುರುವರಂ. ಜೆ.ಹೆಚ್. ಕ್ಸೇವಿಯರ್
ಗತಿಸಿ ಕಡುದುಃಖಿನಿ ವಿಧವೆ ತಾಯಿಯಂ ಕಂಡು
ಬಹ ಇಚ್ಚೆಯಿರಲ್ 'ಮಾಯಾವತಿ'ಯ ಆಶ್ರಮದ
ಹಾದಿ ಪಿಡಿದರ್ ಗುರುವರಂ, ಪೊಳ್ತು ಮೇಲೇರ್ವ
ಮುನ್ನ. ತನಿವೊಳ್ತಿನಲಿ ಸಾಗಿದುದು ಮುಂಪಥಂ
ಕಾಲ್ನಡೆಯಲಿ ದೂರದ ಮಾಯಾವತಿಯಾಶ್ರಮ
ಧಾಮಮಂ ಕುರಿತು. ಮಾಗಿಯ ಕಾಲಪ್ರಭುವುಂ
ಅತಿಶೀತಲತೆಯ ಶೈತ್ಯವನೊತ್ತಿ ಗಡಗಡನೆ
ನಡುಗಿಸಿದನ್ ಉಣ್ಣೆಯುಡುಪಿನೊಳಗಣ ಮೆಯ್ಯಂ.
ಬೆಟ್ಟಗುಡ್ಡಗಳ ನಿಮ್ನೋನ್ನತ ಕುಪಥದಲ್ಲಿ
ಸಾಗಿದುವು ಪಜ್ಜೆಪಜ್ಜೆಗಳ್, ಬೆಟ್ಟಗುಡ್ಡಗಳಂ ಹತ್ತಿ
ಇಳಿದು ಹಳ್ಳಕೊಳ್ಳಗಳನಲ್ಲಲ್ಲಿ ದಾಂಟುತೆ
ನಡೆನಡೆದು ನಡುವಿಸಿಲಿನಲಿ ಮರಗಳ ತಲದಲಿ
ವಿಶ್ರಮಿಸಿ ಪೊಳ್ತಿಳಿವ ಸಮಯದೊಳ್ ಆಶ್ರಮವ
ಮುಟ್ಟಿದರ್ ಗುರುಭಾಯಿಗಳೊಡಂ. ನಿಸರ್ಗದಾ

ಉಡಿಯಲಿ ಸುಸುಂದರ ಶಿಶುವಿನೊಲ್ ನೆಲೆಗೊಂಡಿಹ
ಮಾಯಾವತಿ ಆಶ್ರಮ ಮೆರೆದುದು ತಪಸ್ವಿಗಳ
ಕುಟೀರದೊಲ್. ಸ್ವಾಮೀಜಿ ಶ್ರೀಮತಿ ಕ್ಸೇವಿಯರ್
ಬಳಿಗೆತ್ತು ಅನನ್ಯ ಮಾತೃಭಾವದಲಿ ಬಲ್ಮೆಯ
ಸವಿಮಾತುಗಳಿಂ ಸಂತೈಸುತೆ ನೆರೆನೊಂದೆದೆಗೆ
ಸ್ವಾಂತನದ ಝುರಿ ಹರಿಸಿದರ್. ಆಶ್ರಮದ ದುಃಖ
ಪೂರ್ಣ ಛಾಯೆ ಉಡುಗಿ ಅಳಿದು ಸಮೆದು
ಕಲಕಲಮಯಮಾಯಿತ್ತು. ಶ್ರೀಮತಿಯು ಅಂತೆಯೆ
ಗುರುವಿನ ಸಹವಾಸದಲಿ ಸಂತುಷ್ಟಳಾಗುತೆ
ತನ್ನೊಡಲ ಕುಡಿಯನ್ನೆ ಕಂಡವೊಲ್ ವ್ಯಸನದ
ಕೊಂಡಿಯಂ ಕಳಚಿ ಸ್ವಾಮೀಜಿಯೊಡಗೂಡಿದಳ್.
ಸತತ ಲೌಕಿಕಾಲೌಕಿಕಗಳಂ ಕುರಿತಂತೆ
ಸುವಿಚಾರ ವಿಶ್ವದಲಿ ಮುಳುಗಿ ತೇಲುತೆ ತಮ್ಮ
ಒಡಲಿಂಗೆ ಪರಮ ಸ್ವಾಂತನವ ತುಂಬಿದಳ್
ಸರಾಗದಲಿ. ಸವಿನುಡಿಗಳಲಿ ನಗೆವಾತಿನಲಿ
ಆ ತಾಯಿಯ ಮನೋದದಿಗೆ ಹರ್ಷದ ಹೊನಲಂ
ಹರಿಸುವರ್ ಅಲ್ಲಿನೆಲ್ಲ ವಟುಗಳನೊಟ್ಟಯಿಸಿ.

"ಕುರ್ವನ್ನೇವೇಹ ಕರ್ಮಾಣಿ
ಜಿಜೀವಿಷೇತ್ ಶತಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ
ನ ಕರ್ಮ ಲಿಪ್ಯತೇ ನರೇ ॥"

ಮಾಗಿಯ ಪುರುಷಂ ಜಡಿ ನಿಂದು ಹಿಮ ಮಂಜುಮಯ
ಕಟುಕರಿಣ ಪಾಶವನೊಗೆಯುತಿರೆ ಹಿಮರಾಜಿಯು
ಒತ್ತೊತ್ತಿ ಮೈಮೂಳೆಗಳ್ ಲಟಲಟನೆ ಮುರಿವ
ಪಾಂಗಿನಲಿ ಬಲು ಹಿಂಸ್ರಕಮಾಯ್ತು. ಹೊರಬಪ್ಪುದೆ

ಕಷ್ಟಕರಮೆನಿಪ್ಪೊಲ್ ದಟ್ಟೈಸಿದುದು ಮಂಜುಮಯ
ಹಿಮರಾಶಿ. ಅಂಗಣದಲಿ ಗರಿಕೆಯ ಮೇಯಲ್ಕೈವ
ಮೊಲಗಳ್ ಬಿಸಿಲೇರುವನಕ ಗುಹೆಗಳಿಂ ಹೊರಗೆ
ಬಾರದಾದುವು. ಮುಂಬೆಳಗಿನ ತನಿಯಿಂಪಿನಲಿ
ಕಾಣುತಿರ್ದ ಜೀವಗಳಿರದೆ ಬಣಬಣಮೆನಿಸಿತು
ಅಂಗಣಂ. ಪಕ್ಷಿಗಳ ಕೊರಳ್‌ದನಿ ಉಡುಗಿದುದೊ
ಎನೆ ಪ್ರಾತಃಕಾಲೀನ ಸುಪ್ರಭಾತದ ಮೊಳಗು
ಕೇಳದಾಯ್ತು. ಆಶ್ರಮ ವಾಸಿಗಳ್ ಹೊರಬರದೆ
ಅಗ್ಗಿಷ್ಟಿಕೆಯ ಮುಂತೆ ಕಳೆವರ್ ದಿವಾರಾತ್ರಿ.
ಇಂತಿಂತಿರುತಿರೆ ದುರದೃಷ್ಟವಶದಿಂ ಸ್ವಾಮಿ
ವಿವೇಕಾನಂದರ ಶರೀರಾರೋಗ್ಯವುಂ ನಸು
ನಸುವೆ ಕುಸಿಯತೊಡಗಿದುದು, ಆರುಂ
ಅರಿಯದೊಲ್. ಮಾಗಿಯಗತಿಯೇರ್ದುದು ನೆಣಗೊಬ್ಬಿ.
ಮಜ್ಜನದ ಬಿಸಿಲ್ ಮೈಗಟ್ಟುವನ್ನ ಸುಡುಸುಡು
ಅಗ್ಗಿಷ್ಟಿಕೆಯೇ ಜೀವಾಳ ಎಲ್ಲರ್ಗೆ. ಆ
ದುರ್ಭರ ದಿನಗಳವಕೃಪೆ ಗುರುದೇವನಾ
ಜೀವದ ನರನಾಡಿಗಳಂ ಹಿಂಡುತಿರುತಿರಲ್
ಅಲ್ಲಿಂದ ಪೊರಡದೆಯೆ ಬೇರೆ ಗತಿಯಿರದಾಯ್ತು.
ಆಶ್ರಮದ ಕಂದುವರ್ಣ ಮಿಶ್ರಿತ ಸೊಣಗವದು
ಕುಂಯಿ ಕುಂಯಿ ಎನುತೆ ಮುರುಗುಡುತಲಿ ಒಳಗಿನಿಂ
ಹೊರಬರದೆ ಅಗ್ಗಿಷ್ಟಿಕೆಯ ಬಳಿಯೆ ಮೈಮುದುಡಿ
ಕೂಡುವುದು ವಟುಗಳ ಜೊತೆಗೆ. ಅದ್ವೈತಾಶ್ರಮದ
ಒಳ ಕೊಠಡಿಯೊಳ್ ಪದ್ಮಾಸನಸ್ಥ ಶ್ರೀಗುರು
ವರ್ಯರ್ಗಿಂ ವಿರಾಟ್‌ವಿಶ್ವಮುಂ ತಾಂ ಬದಿಗೊತ್ತಿ
ಧ್ಯಾನಾಂಧತೆಯಲಿ ಮುಳುಗಿದರ್ ತೀವ್ರತರದಲಿ.

ಮುಗಿದ ಮನ, ಮುಗಿದ ಕೈ, ಮುಗಿದ ಹೃದಯಧಾತ್ರಿ
ಎನಲ್, ಇತ್ತಣ ಪರಿವೆಯಿಲ್ಲದೊಲ್ ಉರುಳಿಮುದು
ತನಿವೊಳ್ತು. ಚಳಿ ಹಸಿವೆಗಳ್ ಅರುಗಾಮುವು.
ಮನಶಾಂತಿ ಎನಿತಿರ್ದೊಡೇಂ ರೋಗದ ಬಾಧೆಯು
ಹರಿವ ಬದಲ್ ಪಿರಿದಪ್ಪುತಿರ್ದುದು ದಿನದಿನಂ.
ದೇಹ ಸಂಪುಟಂ ಕರಕರಗಿ ಕೃಷ್ಣಪಕ್ಷದಾ
ಚಂದ್ರಮನ ಮಾಳ್ಕೆಯಲಿ ಕಾಂತಿಯಳಿಯತೊಡಗಿತು.
ಪಥ್ಯಮಿರ್ದುದು. ಓಷಧಿಮಿರ್ದುದು. ವಿಶ್ರಾಂತಿ
ಇರ್ದುದು. ಒಳ್ಳಿದರ ಸಹವಾಸ ಮಿರ್ದುದು. ಎಲ್ಲ
ಮಿರ್ದೇನಿರದ ಪರಿಯಲಿ ಗುರುದೇಹಂ ಪ್ರತಿ-
ದಿನಂ ಹದಗೆಡುತಲಿರ್ದುದು; ಆವ ವಕ್ರಗಣ್
ದೃಷ್ಟಿ ಕುಗಳಿಗೆಯಲ್ಲಿ ತಾಗಿದುದೊ ಎನಲ್ಕಾ
ರೋಗ ಪರವಶತೆ ಕಾಡುವುದು ಪಿಚಂಡಿ ಹಸ್ತವ
ಚಾಚಿ ಬಿಗಿವಿಡಿದು. ಬಡವಾಗುತಿಹ ಶರೀರಂ
ಜಾಳಂದ್ರಮಾದವೊಲ್ ಬಣ್ಣಗೆಡುತ್ತೆ ಪಳಕು
ಗಾಜುಗಳ ನೆಳಲಿನವೊಲಾಯ್ತು. ಒರ್ಮೆ ನಸು
ಚೇತರಿಕೆ. ಮಗದೊರ್ಮೆ ಪಿಂಜರಿಕೆ. ಮತ್ತೊರ್ಮೆ
ಎಲ್ಲವುಂ ಸರಿಯಪ್ಪಿ ಸ್ಥಿತಿಗತಿ ಉತ್ತಮಿಕ
ಪಥವಿಡಿವುದು ಕಾಲಪುರುಷಂಗೆ ಮಣಿದು. ಮನದೊಳ್
ಉಲ್ಲಸಂಬಡೆದೊಡಂ ಒಡಲ ಹಿಂಸೆಯುಮದೇಂ
ಪಿಂಜರಿಯದು. ಒಳಗೊಳಗೊಳಗೆ ಕೊರೆಕೊರೆಯುತಲಿ
ನೆತ್ತರಿನ ಕಣಕಣಗಳಂ ಪೀರುತಿರ್ದುದಯ್
ಎಡೆವಿಡದೆ. ಶಿಷ್ಯಗಣ ಕಳವಳದ ಮೂಸೆಯಲಿ
ಬೆಂದು ಬೇಯುತಿರ್ದುದು ತಮ್ಮೊಳಗೊಳಗೆ, ಆ
ಮುಂಬೆಳಗಿನ ತನಿವೊಳ್ತಿನಲಿ ಆಶ್ರಮದೆಮುರು

ಬೆಚ್ಚನ್ನ ಚಿಂಬಿಕಲಿಗೆ ಮೈಗೊಟ್ಟು ಮೆಲ್ಲನೆ
ಪದಚಾರಣಗೆಯ್ಯುತಲಿರ್ದ ಗುರುವರ್ಯರಂ
ವಿರಜಾನಂದ ಸ್ವಾಮಿಗಳ ಭುಜದಮೇಲೊರಗಿ
ನುಡಿಸಿದರ್ "ಎಲೆ, ವತ್ಸ! ಶರೀರಮಿದು ಆಗಲೇ
ಸೋಲ್ತು ಸೊಪ್ಪು ಸೊಗದಾಗಿ ಬೆಂಡೆನೆ ತೇಲುತಿದೆ.
ಎನ್ನೆಲ್ಲ ಕರ್ತವ್ಯಭಾರಮಂ ಅಪನಿತು
ಇಳಿಸಿರ್ಪೆನೆನ್ ಎಂದೆಂಬ ಮಾನಸಿಕ ಶಾಂತಿಯಲಿ
ಕಳೆವೆನ್ ಚಣಚಣಗಳ್. ಶರೀರಮಿದು ದಿನದಿನ
ಶೀರ್ಣವಿಶೀರ್ಣಿತಗತಿಗಿಳಿದಿಪ್ಪುದು. ಶಕ್ತಿಯು
ಕುಗ್ಗಿ ಕುಸಿದಿದೆ. "ಜಾತಸ್ಯ ಮರಣಂ ಧ್ರುವ" ಎಂಬ
ನುಡಿಯನೆಲ್ಲರ್ ಬಲ್ಲರ್. ಇದರಿಂದಾವೇನ್
ಮರುಗುವ ಕತಮಿಲ್ಲಂ. ಎಲ್ಲವುಂ ಜಗಜನನಿ
ಮಾಕಾಳಿಯಾ ಇಚ್ಛೆ. ನಾವವಳ ಸೂತ್ರದೊಳ್
ನಲಿದಾಡುವ ಪಾತ್ರಗಳ್ ಮಾತ್ರ. ತಿಳಿದುಕೊ ಬಾಯಿ!
ಭಗವತಿಯ ಇಚ್ಛೆ! ಗುರುದೇವನಿಚ್ಛೆ! ಎಂಬುದು
ಸತ್ಯಸ್ಯ ಸತ್ಯಂ." ಭಾವನಾ ವೇಶದಲಿ ನುಡಿ
ಗಟ್ಟಿ ಹೊರ ಬಿಳ್ದುದು ಕೊರಳ್ ಕುಸಿದ ಮಾಳ್ಕೆಯಲಿ.
   ಮುಂದೊರ್ಮೆ ತರ್ಕಬದ್ಧರಾಗಿ ಭವಿತವ್ಯದ ಬವಸ್ಥಿತಿ
ಗತಿಗೊಂದು ಆಕ್ತಿಪಾರವಂ ಹೂಡುವೊಡೆ ಮನ
ಮಂಡಲದೊಳ್ ವಿಚಾರ ಭರಿತ ವಿಶ್ವಮಂ ಕಡೆ
ಕಡೆದು ಮನಮಥಿಸಿ ಮಥಿಸಿ ಪರಮ ಗುರುಭ್ರಾತೃ
ಬಾಯಿ ಸ್ವಾಮಿ ಸ್ವರೂಪಾನಂದರಂ ಕರೆದು
ಬಳಿಗೆ ಬರಮಾಡಿಕೇಳ್ದರಂತನೆ ಗುರುಭಾಯಿ
ಕೇಳ್, ಪ್ರಬುದ್ಧಭಾರತ ಮಾಸಿಕಮಿಂಗಳ್
ಉಪ್ಪಾಯಸ್ಥಿತಿಯೊಳ್ ಮನೆಮನೆಮನೆಯಲಿ ಸ್ವಾನು

ಪಡೆದು ಮನೆವಾರ್ತೆಯಾಗಿಹುದು. ಇನ್ನದೆಂದೂ
ಬೀಳ್ಗೊಡದ ಮಾಳ್ಕೆಯಲಿ ಸಂಪೋಷಿಸಲಕ್ಕುಂ.
ಬಳಿಕ ಆಶ್ರಮದ ಸಾಂಘಿಕ ಕಾರ್ಯಕ್ರಮಗಳಂ
ಮುಂಬೆಳಸುವ ಸಂಯೋಜನೆಯಂ ನಿರೂಪಿಸುವ
ಅಗತ್ಯವ ಕುರಿತು ತರ್ಕವಿತರ್ಕ ಹೂಡಿದರ್.
ಈರ್ವರುಂ ಸುದೀರ್ಘವಿಚಾರಶೀಲತೆಯಲಿರೆ
ಶ್ರೀಮತಿ ಕ್ಸೇವಿಯರ್ ಬಳಿಗೈದು ಕೂಡಿದರ್.
ವೈಚಾರಿಕ ದೋಹನಂ ಸ್ಫೂರ್ತಿರಸವಾಗಿ ಜಳ
ಜಳ ಹರಿದಿರಲೆಲ್ಲ ವಿಚಾರಂಗಳಿಗೆ ಪರಮ
ಸ್ವರೂಪವನಿತ್ತು ಒಮ್ಮತವಂ ಪಡೆದರ್. ಆ
ರಸಸ್ಫೂರ್ತಿಯಂ ಹೊರಹರಿಬಿಡುತೆಂತಿಂತೆಂದರ್,
"ಎನ್ನ ಆತ್ಮೀಯ ಭಾಯಿಗಳೆ! ಕೇಳಿ, ಇದೆನ್ನ
ಅನುಭವವೆಂದಾಂ ವಿವರಿಸುವೆಂ. ಎನ್ನವೊಲ್
ನೀವಾರ್ ಕಠಿಣ ಸಾಧಕತನಕಿಳಿಯದಿರಿಮ್.
ಕಠೋರ ಸಾಧನೆಯು ಸಾಧಕನ ದೈಹಿಕನರ
ತಂತುಗಳ ಸಿಥಿಲಗೊಳಿಸಿ ಆರೋಗ್ಯಭಾಗ್ಯವ
ಕೆಡಿಪಿ ಸೋಲ್ಗೆಡಗುವುದೆ ದಿಟಂ. ಜಪತಪ ಧ್ಯಾನ
ಇತ್ಯಾದಿಗಳಲಿ ಇತಿಮಿತಿಯಿರ್ಪುದೊಳ್ಳಿತೆಂಬೆ..
ಎನ್ನಯ ಶರೀರ ಸ್ಥಿತಿಯನರಿದು ಮನಗೊಂಡು
ಸಾಧನೆಯ ಮಿತಿಯಂ ಮನದೊಳಿರ್ಕಿ ದುಡಿಯುವುದೆ
ಲೇಸುಲೇಸು. ಧ್ಯಾನಯೋಗದ ಕಟ್ಟು ಕಟ್ಟಳೆಗೆ
ಒಳಪಡದಿರಿ. ದಿನದಿನಂ ಉದಯಾಸ್ತ ಸಮಯದ
ತನಿವೊಳ್ತಿನಲ್ಲಿ ಐದೈದುಗಳಿಗೆ ಮಾತ್ರಮೇ
ಸಾಧನೆಗೈದೊಡೆ ಸಾಲ್ಗುಂ. ಉಳಿದ ಕಾಲವಂ
ದೇಶಸೇವೆಯೊಳ್ ಕಳೆಯಲಕ್ಕುಂ. ಭರತಮಾತೆ

ಅತ್ಯುಗ್ರ ದಾರಿದ್ಯತೆಯ ಅಪಾರ ಕ್ಲೇಶದಿ
ಕಷ್ಟಕಾರ್ಪಣ್ಯಗಳಿಂ ನರಳುತಿಹುದನಾರ್
ಕಾಣರೈ? ನಿಂನಿಮ್ಮ ಮನದಿ ತಿಳಿದು ನೋಳ್ಪುದು.
ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯರಿಗೆ
ಇಂದು ಸೇವೆಯೇ ನಿಜ ತಪಸ್ಸು! ನಿಷ್ಕಾಮಕ-
ರ್ಮವೇ ನಿಜ ಯಜ್ಞ! ಎಂಬುದಂ ಆರ್ ಮರೆಯದಿರಿ.
ಇದೆಲ್ಲವ ಯೋಚಿಸಿಯೆ ಪಜ್ಜೆಯಂ ಮುಂದಿಡಲಕ್ಕುಂ.
ದೇಶ–ದೇಶ–ದೇಶವೇ ಮೊದಲ ದೇವರು! ತಾಯಿ!
ಎಲ್ಲಾ.....! ಗುರು ಭ್ರಾತೃಗಳೇ ಕೇಳಿ! ನಾವಾವ
ಪ್ರವಾದಿಗಳಂ ಕುರಿತು ಮುದದಿಂ ಮಾತಾಡಿ
ತೋಷಿಸಿದಪೆವೊ ಆ ಪ್ರವಾದಿಗಳಿಗೆ ಆ ಶಕ್ತಿ
ಸಾಮರ್ಥ್ಯಗಳ್ ಎಂತು ಸಂದುದವರಿಗೆಂಬುದ
ಅರಿಯೆ ಗತೇತಿಹಾಸದ ಪುಟಪುಟಗಳ ತೆರೆದು
ತಿರುವಿ ನೋಡಿ! ಅವರೊಳಗಣ ತತ್ತ್ವಜ್ಞಾನದ
ತರ್ಕ ಶಾಸ್ತ್ರದ ನಿಗೂಢ ಪ್ರಮೇಯಂಗಳಂ
ಕುರಿತಂತೆ ಮಹದ್ಗ್ರಂಥಗಳಂ ರಚಿಸಿರ್ದರೇ?
ಎಂಬುದಂ ಯೋಚಿಸಿದೊಡಾವ್ ತಿಳಿದಪುದವರ
ಸತ್ವಗುಣ. ಬರಿದೆ ಕೆಲವಾನು ಒಳ್ನುಡಿಗಳಂ
ನುಡಿದು ನೀತಿ ಪಾಠವ ಬೋಧಿಸಿ ಜನಮನಮಂ
ಮಧುರಾನುಭೂತಿಯಿಂದೊಲಿಸಿ ತಿದ್ದಿ ಪೋಗಿಹರ್.
ಭಾವಗಳೆ ಜೀವಾಳ. ಅದೇ ನಿಜವಾದ ಪ್ರಾಣ.
ಸಾಮರ್ಥ್ಯ. ಅದರ ಹೊರತು ಎಷ್ಟೇ ಬೌದ್ಧಿಕ
ವ್ಯವಹಾರಗೈದೊಡದು ವ್ಯರ್ಥಂ, ಸುವ್ಯರ್ಥಂ!
ಬುದ್ಧಿ ಎಂದೊಡೇಂ? ಯೋಚಿಸಿ, ಅದೊಂದು ಇತರಿತರ
ಅಂಗಾಂಗಗಳೊಲ್ ಸ್ವಯಂಪ್ರೇರಣೆಯುಮಿರದ

ಒಂದಂಗ ಮಾತ್ರಂ! ಮನೋಭಾವನೆಗಳಿದ್ದು
ಧುಮುಧುಮಿಸಿ ಚಾಲನೆಯ ಕೊಟ್ಟಿಲ್ಲದೇನೇನ್
ನಡೆಯದು. ಜಗತ್ತಿನೆಲ್ಲೆಡೆಯ ಜನರ್ಗಿದು
ಅನ್ವಯಿಪುದು. ಬುದ್ಧಿವಂತಿಕೆಗೆ ಭಾವನೆಗಳೇ
ಅದ್ಭುತಸ್ಫೂರ್ತಿ! ಭಾವನೆಗಳೇ ಸಂಚಾಲಕ
ಶಕ್ತಿ! ನೆನಪಿಡಿ. ಮಿನ್ನಪೂರ್ವೇತಿಹಾಸದೊಳ್
ವಾಲ್ಮೀಕಿ ಋಷಿಯು ಗಂಗಾ ನದಿಗಭಿಮುಖವಾಗಿ
ನಡೆದಿದ್ದನ್ ವನದೇಶದ ಹಾದಿಯಂ ಹಿಡಿದು.
ಮುಂಬೆಳಗಿನ ತನಿಪೊಳ್ತು ಹರಡಿರಲ್ ಅಶೋಕ
ದ್ರುಮದಲಿ ಅಡ್ಡಗೊಂಬೆಯಮೇಲೆ ಕುಳಿತಿರ್ದ
ಕ್ರೌಂಚ ದಂಪತಿವಕ್ಕಿಗಳ್ ಪ್ರಣಯ ಲೀಲೆಯ
ನಡೆಸಿರ್ದುವು ಆನಂದ ಮೋದದಲಿ. ವಾಲ್ಮೀಕಿ
ನಸುಪೊಳ್ತು ನಿಂತಲ್ಲಿ ನೋಡುತಿರೆಯಿರೆ ಮುದಿತ
ಮನ ಭಾವಮುಗ್ಧಮಾದತ್ತು, ಕಣ್ಣಾಲಿಗಳ್
ನಟ್ಟು ನಾಂಟಿದುವು, ಅತ್ತಲೆ. ಅದೆ ಸಮಯದೊಳ್
ಸರ್ರನೆರಗಿ ಬಂದೊಂದು ಬಾಣವುಂ ನಾಂಟಿತಾ
ಗಂಡುಕ್ರೌಂಚ ಪಕ್ಷಿಯ ಎರ್ದೆಯಂ. ಚಿರ್ರೆಂದು
ಚೀರ್ರು ಕ್ರೌಂಚಪಕ್ಷಿಯುಂ ಕೆಳಗುರುಳ್ದುದು ಕೆಮ್ಮನೆ
ಕೆನ್ನೆತ್ತರಂ ಕಾರಿ. ಹೆಣ್ಣು ಕ್ರೌಂಚ ಪಕ್ಷಿಯುಂ
ಮಡಿದ ಹಕ್ಕಿಯ ಬಳಿಗೆ ಹಾರಿ ಕರುಣ ಕ್ರಂದನ
ಹರಿಸಿದುದು ಚೀರಾಡಿ. ಆ ಕರುಣ ಕಾತರಿತ
ದುಃಖಾಂತ ದೃಶ್ಯದಿಂ ಮಹರ್ಷಿಯ ಹೃದಯದ
ದಯಾ ದ್ರವ್ಯ ಕರಂಗಿ ನೀರಾಗಿ ಹರಿಯಿತ್ತು.
ಮಹರ್ಷಿ. ಕಡು ದುಃಖ ಸಂಕಟದಲಿ ಅತ್ತಲ್
ತಿರುಗಿ ನೋಡಲ್ ಕೊಲೆಗಾರ ಕ್ರೂರ ವ್ಯಾಧಂ

ಎಸೆದನ್ನೈ ಕಣ್ಗೆ. ಮಾಂಸದಾಸೆ ಕಣ್ ಛಾಯೆಯಲಿ
ತುಳುಕುತಿದೆ! ಮಹರ್ಷಿ ಕುಪಿತಮನದಿ ರೋಷಾಂತ
ದನಿಯಲಿ ನುಡಿದಂ "ಛಿಃ! ಎಂತಪ್ಪ ದುರುಳತನಂ?
ಪ್ರೇಮದೆಮರಿನಲಿಯುಂ ನಿನ್ನ ಕೊಲೆಗಡುಕಕ್ಕೈ
ನಿಲದಾಯ್ತೆ?" ಎಂದರತಿ ಬೆಂದು ಬೆಬ್ಬಳಿಸಿರ್ದ
ಮನಮತಿಗಳಿಂ. ಮತ್ತೆ ಆಕ್ರೋಷದಿಂ ಸುಯ್ದಂ,
"ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ಕ್ರೌಂಚ ಮಿಥುನಾದೇ ಕಮವಧೀಃ ಕಾಮಮೋಹಿತಮ್ ॥"
ಆ ಮುಹೂರ್ತದೊಳ್ ನುಡಿಯದೆಂತು ಪೊಣ್ಮಿದುದೊ!
ಅಂತಂತು ಸ್ಫುರಿಸಿದ ಸಮಯ ಸ್ಫೂರ್ತಿಯಿಂದಲಿ
ಆ ವ್ಯಾಧ ತಾನಾದನ್ ಆದಿಕವಿ. ಅಕ್ಕರವ
ಅರಿಯದಿರ್ದವಂಗೆ ಸಮಯ ಸ್ಫೂರ್ತಿ ಒದವಿದುದು,
ಅದೊಂದು ಸುಸಂದರ್ಭವಾಗಿ. ಇಂತಿಂತಿಂತು
ಆರ್ಗೆ ಆವಾವ ಗಳಿಗೆಯೊಳ್ ಸ್ಫೂರ್ತಿ ಬಂದಪುದೊ
ಅದಂ ಮಿಂಚಿ ಹೋಹದೊಲ್ ಬಿಗಿವಿಡಿವುದೆ ಜಾಣ್ಮೆ.
ವಾಲ್ಮೀಕಿಯುಂ ತನ್ನೊಳ್ ಯೋಚಿಸಿದಂ; ತನ್ನ
ಬಾಯಿಯೊಳ್ ಸ್ಫುರಿಸಿದ ನುಡಿಗಟ್ಟಿಗಾಗಿ ತಾಂ
ಛಂದೋಲಯ ವ್ಯಾಕರಣಗಳಂ ಕುರಿತು ಏನ್
ಯೋಚಿಸದೆ ಒದರಿದೆನೆನೆ. ಎಂತಿದೆನ್ನ ಕೊರಳ್
ದನಿಯಲಿ ಹರಿಯಿತು ಎನಿಸೆನಿಸಿ ತನಗೆ ತಾನೇ
ವಿಮರ್ಶಿಸುತಿರೆ ಅತನು ವಾಣಿಯೊಂದು ಕೊಡಂಕೆಯ
ಸನಿಹದಲಿಯೇ ನುಡಿಯಿತಿಂತು "ಎಲೈ ಮುನಿಯೇ!
ಮುಂದಿಂತೆ ತವ ಬಾಯೊಳ್ ರಾಮಾಯಣದ ಕವಿ
ಕಾವ್ಯ ಸ್ಫುರಣಮಾಗಿ ವಾಲ್ಮೀಕಿ ರಾಮಾಯಣ
ಎಂಬುವ ಮಹಾಕಾವ್ಯವೊಂದು ಸ್ಫುರಣಗೊಳ್ವುದು!"

"ಎಲೆ ಅಮೃತ ಪುತ್ರರಿರ, ಆತ್ಮೀಯ ಚಿಂತನ
ಶೀಲರಿರ, ಭ್ರಾತೃಭಾಯಿಗಳಿರ ನಿಮಗಾನುಂ
ಪೇಳ್ವುದೆನೆ ಸ್ಫೂರ್ತಿ ಉದಿತಮಾದ ಚಣದೊಳ್ ಕಣ್
ತೆರೆದೊಡದೆ ಅನುಗಾಲದ ಬುತ್ತಿ. ಇದನೆಂದು
ಮರೆಯದಿರಿ "**ಯದಸ್ತಿ ಹೃದಯಂ ಮಮ ತದಸ್ತು**
ಹೃದಯಂ ತವ"
ಮಾಯಾವತಿಯ ಆಶ್ರಮವದು
ಅದ್ವೈತಾಶ್ರಮಮಾದುದೆನೆ ಮೂರ್ತಿ ಪೂಜೆಯುಂ
ನಿಷಿದ್ಧ. ಅದಂತು ಧ್ಯಾನ ಜಪ ತಪಗಳಿಗೇ
ಮೀಸಲು. ಅದಂ ಅರಿತೊ ಅರಿಯದೆಯೊ ವಟುಗಳಿಗೆ
ದೈವಪೂಜೆ ಇಲ್ಲದೊಡಮಾದೊಡಮಲ್ಲಿ ಗುರು
ಪೂಜೆಯಿರ್ಕುಮೆಂಬಾಸೆ. ಗುರುವರನ ಕಣ್ಣಿಗೆ
ಬೀಳಿಸದವೋಲ್ ಒಳಕೋಣೆಯಲಿ ಶ್ರೀರಾಮ
ಕೃಷ್ಣ ಪರಮಹಂಸರ ಕಿರಿದಾದ ಮೂರ್ತಿಯಂ
ಇರಿಸಿ ಭಕ್ತಿಯಿಂ ಪೂಜಿಸುತಿರ್ದರ್ ಸುಳಿವಿನಿತು
ಕೊಡದೆ. ಸಂದುವು ಕೆಲ ದಿನಮಾನಂ. ಸುರಗಿಯ ಹೂ
ಎಂದು ದಳಬಿರಿದರಳಿ ಮೆರೆದುವೋ ಸಂಪಗೆಯು
ಮಲ್ಲಿಗೆಯು ಇರವಂತಿಗೆಯು ಅರಳಿದುವೆಂತೋ
ಅರಿಯದೊಲ್ ಉರುಳಿದುದು ಕಾಲಚಕ್ರ ಮಾನಸೀ
ದೃಷ್ಯಕೆ ತಿಳಿಯದವೊಲ್. ಸ್ವಾಮೀಜಿಯುಂ ನಿಚ್ಚ
ಸಾಯಂ ಭಜನ ಮಂಡಳಿಯ ಕೂಡಿಸುತೆ ತಾವುಂ
ಹಾಡುವರ್ ಮೆಯ್ಯಿನಬಳಲ್ಕೆಯಂ ಕಡೆಗಣಿಸಿ.
ಪ್ರವಚನ ಪಾಠಗಳ್ ನಡೆದಪವು, ಜೊತಜೊತೆಗೆ
ತತ್ತ್ವಬೋಧನೆ ನಡೆಸುವರ್ ಕಾಲಗತಿಗೊಪ್ಪಿ.
"**ಜ್ಯೋತಿಷ್ಮತಃ ಪದೋರಕ್ಷ ಧಿಯಾ ಕೃತಾನ್**"

ಎಂಬುದರ ಪ್ರತಿ ಪದಾರ್ಥವನುಂ ತಿಳಿಪಿ ವಟು
ಮಹೋದಯರ ಮನವಂ ತುಂಬಿ ಪರಮ ಗುರುಗಳ
ಪಂಕ್ತಿಗೇರೆ ಅನುಗೊಳಿಪರ್. ಅಂದು, ಅಕಸ್ಮಿಕ
ಭೇಟಿಯಿತ್ತರ್ ಒಳಗಣ ಕಿರು ಕೊಠಡಿಗೆ ಸ್ವಾಮಿ
ವಿವೇಕಾನಂದರ್. ಒಡನೆ ಕಣ್ಗೆಸೆದುದು ಗುರು
ದೇವನ ಕಿರುಮೂರ್ತಿ! ಅಹ ಮೂರ್ತಿ ಪೂಜೆ ಸಲ್ವುದೆ
ಇಲ್ಲಿ? ಅದ್ವೈತಾಶ್ರಮದೊಳ್ ಮೂರ್ತಿ ಎಂದೊಡೇಂ?
ಸ್ವಾಮಿಜಿಯುಂ ಎಲ್ಲ ವಟುಗಳಂ ಕರೆಕರೆದು
ಬಳಿಗೆ ಬರಮಾಡಿ ಅದ್ವೈತಾಶ್ರಮದ ಗುರಿಯಂ ೩೪೦
ಒಳ್ನುಡಿ ಬಿರುನುಡಿಗಳಲಿ ವಿವರಿಸಿ ಏಗಳುಂ
ಇಲ್ಲಿ ಬಾಹ್ಯಪೂಜೆಯದು ನಿಶಿದ್ಧ ಮಿರಲೇನ್
ಕತಮೆಂಬುದಂ ಎಲ್ಲರ ಮನಗೊಳಿಸಿದರ್ ಗುರು
ದೇವಂ. "**ಮನುರ್ಭವ ಜನಯಾ ದೈವಂ ಜನಂ**"
ಎಂದ ಬಳಿಕಲಿಂತೆದರ್ "ಹೇ ಮಮ ಸುತರಿರ?
ಸಂಗಚ್ಛಧ್ವಂ ಸಂವದದ್ವಂ ಸಂಮೋಹನಾಂಸಿ....
ಕೇಳಿ, ಎಲ್ಲ ಕಾರ್ಯಕ್ರಮಗಳಲಿ ಒಮ್ಮನ ಮಿ-
ರಲಿ, ಒಮ್ಮತಮಿರಲಿ, ಸುಪಥಮಿರಲಿ. ನಿಮ್ಮಿಂದೆ
ದೇಶಕ್ಕೆ ಜನಪದಕ್ಕೆ ನಿಮ್ಮಾತ್ಮಕ್ಕೆ ಹಿತ
ಎಂಬುದೇನೆಂಬುದಂ ಅರಿತು ಮುಂಬರಿಯಿರಿಮ್. ೩೫೦
ಗುಣದೋಷಗಳಿಗಾಗೆಮ್ಮ ಧರ್ಮವನುಂ ತೆಗಳಿ
ಪ್ರಯೋಜನಮಿಲ್ಲಂ. ನಿಮ್ಮೊಳಗೆ ನೀವರಿತು
ಸುಪರ್ಯಾಲೋಚಿಸಿ ಗುಣದೋಷಗಳಂ ಹೆಕ್ಕಿ
ಬೇರ್ಪಡಿಸಿಕೊಂಬುದದು ನಿಮಗಕ್ಕುಂ. ಕೇಳಿರೈ
ನಮ್ಮ ರಾಷ್ಟ್ರಮಿರ್ಪುದು ಜೋಪಡಿ ಗುಡಿಸಲುಗಳ
ನೆಲೆಯಲ್ಲಿ. ಅದೇ ನಿಜವಾದ ರಾಷ್ಟ್ರ! ನಮ್ಮಯ

ಆ ಜನ ಸಮುದಯವೇ ನಮ್ಮ ರಾಷ್ಟ್ರ! ತಮ್ಮಗಳ
ಪೌರುಷಂ ವ್ಯಕ್ತಿತ್ವಂ ಮೇಣ್ ಹೊರಜಗವಂ
ಮರೆತು ಬರ್ದುಕುವ ಮುಗ್ಧ ಜನಗಣ ವರ್ಗಕ್ಕೆ
ಪ್ರಪ್ರಥಮದೊಳ್ ಸುವಿದ್ಯಾದಾನಮಂ ನೀಡಿ,
ಅವರಿಗೆ ಸುವಿಚಾರದ ಸಾಹಿತ್ಯವ ಕೊಡಿರಿ.
ಸುತ್ತಮುತ್ತಣ ಜಗದೊಳ್ ಏನೇನ್ ನಡೆದಿದೆ
ಎಂಬುದರ ಕಡೆಗವರ ಗಮನವಂ ಸೆಳೆದುಬಿಡಿ!
ತರುವಾಯಿ, ಅವರೆಲ್ಲರ್ ತಂತಮ್ಮ ಉದ್ಧರಣ
ಕಾರ್ಯಮಂ ತಾಮೆ ಉದ್ಯಮಿಸಿಕೊಂಬರ್. ಪ್ರತಿ–
ಯೊಂದು ರಾಷ್ಟ್ರವುಂ, ಪ್ರತಿಯೊಬ್ಬ ಸ್ತ್ರೀಪುರುಷರುಂ
ತಂತಮ್ಮ ಉದ್ಧಾರಮಂ ತಾಮೆ ಗೈದಪರ್.
ಅವರಿಂಗೆ ಅತ್ಯುತ್ತಮ ವಿಚಾರಗಳಂ ಕೊಡಿ.
ನೀವವರ್ಗೆ ಗೆಯ್ಯಬೇಕಾದ್ದು ಅದೊಂದೇ ನೆರವು.
ನೀವ್ ಪೂಜಿಸತಕ್ಕುದು ಆ ಗುಡಿಸಲ ಗುರುವನ್ನೆ!
ಅದರ ಪ್ರತಿಫಲಮೆನಲ್ ಉಳಿದೆಲ್ಲವುಂ ತಾನೆ
ಕೈಗೂಡಿಬಂದಪುದು. ಭರತವರ್ಷದೊಳಿಂದು
ಅಗತ್ಯಮಿಹುದು ಇಷ್ಟು ಮಾತ್ರಂ. ಸಾಮಾನ್ಯ
ಜನತೆಯಂ ಅವರವರ ಧರ್ಮಕ್ಕೆ ಧಕ್ಕೆಯಂ
ತಾರದಂತೆವೊಲ್ ಮೇಲೆತ್ತಿ! ಇದುವೇ ನಿಮ್ಮ
ಸರ್ವೋನ್ನತ ಧ್ಯೇಯವಾಗಿರಲಿ, ತಿಳಿದಿರಿ, ತಿಳಿದಿರಿ.
ಸಾಧನೆಯ ಹಾದಿಯೊಳ್ ಎಡರುತೊಡರು ಬಪ್ಪುದು
ದಿಟಂ. ತಾಳ್ಮೆಯಿಂ ಧೈರ್ಯದಿಂ ಎದುರ್ಚುವುದೇ
ಧೀರತನ....''
ಸ್ವಾಮಿಜಿಯುಂ ಕೆಲವು ದಿನಂಗಳ
ಬಳಿಕ ಬೇಲೂರು ಮಠಕೆ ಪಿಮ್ಮರಳ್ದಮೇಲೆ

ಒರ್ಮೆ ಇದೆ ವಿಚಾರದ ಸಂಪುಟಮಂ ತೆರೆದು
ಮತ್ತೆ ಪ್ರಸ್ತಾಪಿಸುತೆ ಶಿಷ್ಯ ಸಮುದಯದೆದುರು
ನುಡಿಸಿದರ್, ಸಿದ್ರಿಸಿದ ಧರ್ಮಬುದ್ಧಿಯ ಜಾಗೃತ
ಗತಿಗೆತ್ತುವ ಉದ್ದೇಶದೊತ್ತಡವೊತ್ತುತಿರೆ
ಒಡಲ್ ಕುಡಿಯಲಿ, "ಪ್ರಿಯ ಬಂಧುಗಳೆ, ಕೇಳಿರೈ
ಆವೊಂದು ಆಶ್ರಮದೊಳಾದೊಡಂ ಬಾಹ್ಯ
ಪೂಜೆಯುಂ ಇಲ್ಲದಿರಲೆಂದು ಮಾಯಾವತಿಯ
ಆಶ್ರಮದೊಳದಂ ನಿಶಿದ್ಧಗೊಳಿಸಿದೆನ್. ಅಲ್ಲಿ
ನೋಡಿದೊಡೆ ಆ ಮುದುಕಂ (ಶ್ರೀರಾಮಕೃಷ್ಣರ್)
ಎನಗಿಂತ ಮುನ್ನಮೇ ಅಲ್ಲಿ ನೆಲೆಸಿದ್ದಾನೆ!
ಹೂಂ ಆಗಲಿ...ಆಗಲಿ. ಏನೇನ್ ನಡೆಸುವನೋ
ನೋಡುವಾ!"
ದಿವ್ಯ ಧೀರೋದ್ದಾತ ಮತಿವಂತರ
ಪ್ರತಿಭಾರಂಗದೊಳೆಂತಂತು ಸಣ್ಣ ಕಿರುವಗೆ
ಕಜ್ಜಗಳಲಿಯುಂ ಒಂದೊಂದು ಬಗೆ ಬಯಲಪ್ಪಿ
ಉಳಿವುದು ಚರಿತ್ರೆಯಲಿ. ಮತ್ತೊರ್ಮೆ ಸ್ವಾಮೀಜಿ
ಬೇಲೂರು ಮಠದೊಳಿರುತಿರೆ ನಡೆದೊಂದು ಕಿರು
ಸಂಗತಿಯುಮಿದು. ಅದರೊಳವರ ಹೃದ್ದೇಶದಾ
ಗಂಭೀರ-ಸರಳ-ಅಸೀಮಪ್ರೇಮ-ಸ್ನೇಹ ಮೇಣ್
ಕೋಪಗಳ ರಸನಿಮಿಷಗಳೆಮ್ಮೆಯ ಆತ್ಮೀಯ
ಅಂತರಂಗಮಂ ಮುಟ್ಟಿ ತಟ್ಟಿ ಸೆಳೆವುದು ಮನಃ
ಪ್ರಾಣಗಳ್. ಸ್ವಾಮೀಜಿಯಂದು ಬೇಲೂರು ಮಠದ
ಪ್ರಾಂಗಣದಲಿ ಪದಚಾರಣಗೈಯುತಿರೆ ಮಂದ
ಬಿಸಿಲ್ ಕಾಯ್ಬಿಂಗೆ ಮೈಗೊಟ್ಟು ಮುಳುಗಿದರ್ ಮನ
ಮಂಥನದಲಿ ತೊಡಂಗಿ. ಕಳೆಯಿತು ಸುಸಮಯವದು

ಭವಿಷ್ಯದ ಭಾರದಲಿ. ಪೊಳ್ತು ಏರಿದುದು ನಡು
ನೆತ್ತಿಯನಕ. ಚುರುಚುರು ಬಿಸಿಲಟ್ಟುತಿದೆ ನೆತ್ತಿಯು
ಉರಿಯುವಂತೆ. ಒಡಲಿನ ಕ್ಷುದ್ ಬಾಧೆ ಭುಗಿಲೆದ್ದು
ಕಾಡಿದುದು ಗುರುವರನ. ಭೋಜನ ಶಾಲೆಯಿಂದೆ
ಗಂಟೆ ಕರೆಗಾಗಿ ಕಿವಿಗೊಟ್ಟು ಕಾದರ್, ಸ್ವಾಮಿ
ವಿವೇಕಾನಂದರ್. ಸಮಯ ಉರುಳಿತು, ಕರೆಯದು
ಕೇಳಿಸದೆ ಇರೆ ಕಿನಿಸಿಗೆಯಿಂ ನುರ್ಗಿದರ್
ಪಾಕಶಾಲೆಗೆ. ಏನಿಹುದು ಅಲ್ಲಿ? ದಟ್ಟ ಪುಗೆ
ದಟ್ಟಣಿಸಿ ಕಣ್ಗೇನ್ ತೋರದಾಯ್ತು. ತಟ್ಟನೆ
ಧೂಮಮಾಲೆಯು ನುರ್ಗಿಬರೆ, ಮೂಗು ಬಾಯಿಗಳ್
ಉಸಿರ್ಗಟ್ಟಿದುವು. ಒಳಗೆ ನಿಣಿಕಿಯು ಆರಾರ್
ಕಣ್ಗೆ ಕಾಣಿಸದಾದರ್. ಕರೆದರ್ ಒರ್ಮೆರ್ಮೆ.
ಉಹೂ, ಉತ್ತರಮಿಲ್ಲ, ತಳಮಳಿಸಿತು ಒಡಲಿನೊಳ್
ಕ್ಷುದ್ ಭಾದೆ. ಒಡನೆ ಒಲೆಯ ಬಳಿಗೆ ಬಿರುಹೆಜ್ಜೆ
ತುಳಿದರ್. ವಿರಜಾನಂದರುಂ ಶಿರಬಾಗಿ ಒಲೆ
ಅಗ್ನಿಯಂ ಉರಿಸೆ ಬಹುವಾಗಿ ಊದುತೆ ಶ್ರಮ
ಪಡುತಿರ್ದರ್. ಕಂಗಳಿಗೆ ಪುಗೆವೊತ್ತಿರಲ್ ಕಣ್
ಬಿಡಲಾರದೆ ಉತ್ತರಿಪೊಡೆ ದನಿ ಹೊರಡದೆ ತನು
ಮನಂಗಳ್ ತುಡಿದುವು. ಗುರುವರನ ಕರೆಗೆ ಒಲೆಯ
ಬಳಿಯೆ ಹೊಮ್ಮಿತ್ತು ಪ್ರತ್ಯುತ್ತರ. ಗುರುದೇವಂ
ಕಣ್ಣುದ್ದಿ ಮಿಳ್ ಮಿಳ್ಳನೆ ನೋಡಿದರ್. ವಿರಜಾ
ನಂದರುಂ ಹಾ ಎನುತೆ ಎಳ್ದರ್ ನಯನಗಳಲಿ
ಕೆಂಪಗೆ ನಸುರಂಗೊರೆದು ಕಂಬನಿ ತುಂಬಿದುವು.
ಗುರುವರಂ ಏನೊಂದು ನುಡಿಯದೆ ಪಿಂಮರಳಿ
ಕೊಠಡಿಯಂ ಸೇರ್ದರ್. ತಾಸೊಂದು ಉರುಳಿರ್ದ

ಬಳಿಕ ಭೋಜನ ಶಾಲೆಯ ಕರೆಗಂಟೆ ಮಿಡಿಯಿತು.
ಸ್ವಾಮೀಜಿ ಕಿವಿಕೊಡದೆ ಬಿಮ್ಮನೆ ಬಿಗಿದು ಬೀಗಿ
ಕುಳಿತರ್ ಅಲುಗದೆ. ವಿರಜಾನಂದರೈದರೊಳಗೆ
ಕೈಲಿ ಊಟದ ತಟ್ಟೆಯ ಸಹಿತ. ಬಿಸಿಬಿಸಿಯಿಹ
ಊಟದಲಿ ಹಬೆಯಾಡುತಲಿರ್ದುದು "ತಡವಾಯ್ತು,
ವಿಧಿಯಿಲ್ಲ" ಎಂದುಸರಿ ತಟ್ಟೆಯಂ ಮುಂದಿರಿಸಿ
ವಿರಮಿಸುತಿರಲ್ ಸ್ವಾಮಿ ವಿರಜಾನಂದರುಂ, ಗುರು
ದೇವಂ ಸಿಡಿದೆಳ್ದವೊಲ್ ನುಡಿದರ್ "ಎನಗೇನ್
ಬೇಡವಿಂದು ನೀಂ ತಟ್ಟೆಯಂ ಕೊಂಡೊಯ್ !" ಹೊಸ್ತಿಲ್
ದಾಂಟಲಿರ್ದ ಗುರುಭಾಯಿಯುಂ ಕಿರುನಗೆಯ ಸವಿ
ಮಿಂಚೆಸೆದು ಮೆಲ್ಲನೆಯೆ ದಾಂಟಿದರ್ ಹೊಸ್ತಿಲಂ.
ಗುರುಭಾಯಿಗಳಿಂಗವರ ಆಂತರ್ಯದ ಗುಟ್ಟು
ತಿಳಿಯದೇಂ? ಮರುನುಡಿಯದೆ ಪಿಂದಿರುಗಿದರವರ್.
ಆಕ್ಷಣಮೆ ಗುರುವರಂ ಕೈಬಾಯಿ ಕಾಳೆಗಂ
ಹೂಡಿದರ್. ನಸುವೊಳ್ತಿನಲಿ ತಟ್ಟೆಯದು ಪೂರ್ಣ
ಬರಿದಾಯ್ತು. ಒಡಲ್ ತಣಿದಬಳಿಕ ತನುಮನಂ
ಆಕ್ರಮಿಸಿರ್ದ ಶಿವ ತಾಂಡವ ಸ್ವರೂಪ ತಣಿದೊಲ್
ತಣ್ಣಗೆ ಮುದುಡಿತು ಮೈಕೈ. ವದನ ಮಂಡಲಂ
ಅರಳಿ ಪ್ರಸನ್ನಮಾಗೆ ಒಳಗೈತಂದರಾ
ಸ್ವಾಮೀಜಿ. ಎಲ್ಲ ಗುರುಭಾಯಿಗಳ ಭೋಜನಂ
ಮುಗಿದತ್ತು. ಸೊಗದಿಂ ಕೈಬಾಯ್ ಮಜ್ಜನಗೈದು
ಬಂದರೆಲ್ಲರ್ ಹಜಾರಕೆ. ಸ್ವಾಮಿ ವಿರಜಾನಂ-
ದರ್ ಎದುರ್ವೈತ್ತೊಡನೆ ಗುರು ವಿವೇಕಾನಂದ
ಮಹೋದಯರ್ ದರಹಸಿತ ಮುಖದಿಂ ನುಡಿಸಿದರ್,
"ಓವೊ, ಆನಾಗ ಬಲು ಹಸಿದಿರ್ದೆನ್. ಇದೀಗ

ಮನಂ ತಿಳಿಯಾಯ್ತು!”
ಆಗಳ್ ಗುರು ಶಿಷ್ಯರೆಲ್ಲರ್
ಕೂಗಿ ತಿಳಿ ನಗೆಯ ಗುಲ್ಲೆಬ್ಬಿಸಿದರ್. ಅನನ್ಯ
ಹಾಸ್ಯ ಪರಿಹಾಸ್ಯದ ಹೊನಲ್ ಹರಿದು ತೊರೆಯಾಯ್ತು.
ಭವನದಾಗೋಡೆಗೋಡೆಗಳ್ ಪ್ರತಿಧ್ವನಿಸಿ
ಹರ್ಷರಸದಲಿ ಪಾಲ್ಗೊಂಡುವು ಅಮಿತ ತೋಷದಿಂ.
ಮಾಯಾವತಿಯಾಶ್ರಮ ಪ್ರಕೃತಿಯ ವೈಭವಕೆ,
ಪರಿಶುಭ್ರ ಜಲ ಸಂವೃದ್ಧಿಗೆ, ಶಾಂತಿಸಮುದಯಕೆ
ಸಂಜೀವನ ಪರಮಾರ್ಥಿಕಯೋಗಕೆ ಸರಿಯಪ್ಪ
ಸ್ವರ್ಗಧಾಮ ಎಂಬೊಲ್ ಜೃಂಭಿಸಿದುದು ಮೋಹಕ
ರೂವಿನಲಿ. ಸ್ವಾಮೀಜಿ ಮತ್ತೊಂದು ವಾರವಂ
ಮಾಯಾವತಿಯೊಳ್ ಕಳೆಯಲಾ ಮಾಗಿಯ ಪ್ರಭುವುಂ
ಪಿಂಜರಿದು ಚಳಿಯ ಬರ್ಬರ ಕೊರೆತ ತೆರವಾಯ್ತು.
ಎಂದಿನೊಲ್ ದಿನಮಾನ ಸೊಗಯಿಸಿ ಸುಗಮವಾಯ್ತು.
ಹೊಂಬಿಸಿಲ್ ಹೊನ್ನಾಗಿ ಬಾಳಿನೈಸಿರಿಯಾಗಿ
ಹರಡಿರಲ್ ಗುರುವರಂ ಬಿಸಿಲ್ ಕಾಯ್ಪಿಗೆ ಮೈಯೊಡ್ಡಿ
ಅಂಗಣದಲಿ ಶಾದ್ವಲ ತಡಿಯ ಮೇಲೆ ಅಡ್ಡಾಡಿ
ತನುಮನಗಳಿಗೆ ಮುದವನೂಡಿ ಪಡೆಕೊಂಡರಯ್
ಸುವಿಶ್ರಾಂತಿಯಂ ತನುಮನತುಂಬುವೊಲ್. ಶ್ರೀಮತಿ
ಕ್ಸೇವಿಯರ್ ಮತ್ತಂ ಗುರುಭಾಯಿಗಳೊಡಗೂಡುತೆ
ಆನಂದದಿಂ ಹೊರಾಂಗಣದೋಳ್ ಅಡ್ಡಾಡಿ
ಪದಚಾರಣಂಗೈದು ಹಿತವಚನಗಳಂ ನಲವಿಂ
ಬಿತ್ತರಿಸಿ ಮನವ ಹಗುರಗೊಳಿಪರ್. ಮುಗಿಲ್ಗಳ
ಓರಿಮಂಜು ಕರಕರಗಿ ಇಳಿದುದು ಗಿರಿ ಕಂಧರ
ಕೊರಕಲೊಡಲ್ಗಳಿಗೆ. ತನಿಗಾಳಿಯ ತಣ್ಣನೆ

ತಣ್ಪಳಿದು ಇನಿಗಾಳಿಯಾಯ್ತು. ಸ್ವಾಮಿಜಿಯುಂ
ಅಲ್ಲಿಂದೆ ಬೇಲೂರು ಮಠಕೆ ಪೊರಡುವೊಡೆ ಪುರುಪು
ಗೊಂಡರ್. ಜೊತೆಗೂಡಿ ಪೊರಡೆ ವಿರಜಾನಂದರುಂ
ಅಣಿಯಾದರ್. ಸುಖದುಃಖಗಳ ಬೇಗುದಿಯಲ್ಲಿ
ಆಶ್ರಮವು ಬೀಳುಕೊಟ್ಟಿತು ಗುರುವರನಂ. ಪದ
ಚರಣ ರೇಖಾ ಪಥವಿಡಿದು ನಡೆದರ್ ಆಶ್ರಮ
ಕುಟೀರದ ಪವಿತ್ರ ವಲಯಮಂ ನೆರೆ ನಲವಿಂ
ಪ್ರೇಮದಿಂ ಪಿಂತಿರ್ಕೆ. ಮುಂಬಕ್ಕಿಗಳ್ ಎಳ್ದು
ಅನುರಾಗದಿಂ ರಾಗಾರುಣತಾನಮಂ ಬೀರಿ
ಹಾಡಿದುವು ಸುಪ್ರಭಾತಮಂ. ಇನಿಗಾಳಿಯುಂ
ಮೆಲುಮೆಲ್ಲನೆ ಬಿಜ್ಜಣಿಸಿತು ತನುಮನಂಗಳಂ
ಮುಟ್ಟಿ ಮುಟ್ಟಿ ಮುದ್ದಿಸಿ. ಕುಸುಮಕೋಟಿಯಕಂಪು,
ಹೃನ್ಮನಂ ಆಕ್ರಮಿಸಿ ಸಕಲೇಂದ್ರಿಯಂಗಳಂ
ಒತ್ತಿ ಔಂಕಿ ಚೆಂದದಲಿ ರಮಿಸುತಿರೆ ಘ್ರಾಣಕೆ
ಹಿತವಾಯ್ತು. ರೊಯ್ಯನ್ನೈವ ಇಂದಿಂದಿರಂಗಳ
ಜೇಯೆಂಬ ಸ್ವನ ರಾಗಾಲಾಪನೆ ರಂಜಿಸಿ
ಪೂಗಳೊಡಲ ಮಕರಂದಮಂ ಬಗೆಬಗೆದು
ದೋಚಿ ಪಾರುತಿರ್ದುವು ಪೂವಿಂದೆ ಗೂಡಿಂಗೆ,
ಗೂಡಿಂದೆ ಪೂವಿಂಗೆ; ಅಮಿತ ಶೋಭಾಶ್ಯೆಲಿಯ
ರೂವಿನಲಿ. ಬೆಟ್ಟಗುಡ್ಡಗಳ ಪದ ಪ್ರಾಂತ್ಯದೊಳ್
ಏರಿಳಿಯುತೆ ತೊರೆ ಕಾಲ್ವಾಯಿಗಳ್ ದಾಂಟಿ ವನ
ಗಿರಿ ಬೆಟ್ಟಗಳ್ ಪಿಂತಿರ್ಕೆ ನಡೆದರೀರ್ವರುಂ ಮುಂದೆ
ಮುಂದೆ. ಸುಡುಬಿಸಿಲೇರ್ದುದು ನಡುನೆತ್ತಿಗೆ. ಒಡಲ್
ಪಸಿವೆ ಬುಗಿಲೇಳ್ದುದು ಅಗ್ಗಿಯುರಿಯ ಮಾಳ್ಕೆಯಲಿ.
ಪೆರ್ಮರನ ತಣ್ಣೆಳಲಿ ಕುಳಿತು ಬುತ್ತಿಯಂ ಬಿಚ್ಚಿ

ಒಡಲ್ದುಂಬಿ ಕಮಂಡಲಿನ ನೀರ್ಕುಡಿದು ದಣಿವು
ಮುಡಿಸಿದರ್ ಅರೆತಾಸು ಕುಳಿತಲ್ಲಿ. ಮತ್ತೆ ಮುಂ
ಪಯಣ ಬೇಲೂರು ಮಠಮಂ ಗುರಿಯೊಳಿರ್ಕೆ, ಆ
ದಾರಿ ಆ ಪಯಣ ಸೋಲ್ಗೆಡಗಿತು ಗುರುದೇವನಂ.
ಸಾಯಂ ಸುಧಾಶ್ಯೈಲಿ ಸೊಂಪಾಗಿ ಹರಡಿದುದು
ಇಳೆಯಮೇಲೆ. ಆಗಳಾ ಸ್ವಾಮೀಜಿ ಮುಟ್ಟಿದರ್
ಬೇಲೂರು ಮಠಮಂ ಮಸುಗಪ್ಪುಗವಿಯುವ ನಸು
ಮುನ್ನಂ. ಏದುಸಿರ್ ಬಿಡುತೆ ತನುಸೋಲ್ದು ಹಸಿದು
ಬಾಯಾರಿರೆ ನೀರ್ಕುಡಿದು ತಣ್ಣನೆಯ ನೀರೊಳ್
ಸುಖಮಜ್ಜನಂಗೈದು ಕೆಡೆದರ್ ಸೆಜ್ಜೆಯ ಮೇಲೆ
ಸೋಲ್ದುಸೊಪ್ಪಾಗಿ. ಕಳೆಯಿತು ರಾತ್ರಿ. ಉರುಳಿತು
ಪಗಲ್. ಕಳೆದುವೆನಿತೊ ದಿನಮಾನಗಳ್. ದೇಹದ
ಬಳಲ್ಕೆ ಕಳೆಯದಾಯ್ತು. ಮೈಸಿರಿ ಕರಗಿತು ಸುಡು
ಬಿಸಿಲ್ ಅಟ್ಟಿದ ಮಂಜಿನ ತೆರದಲಿ. ಘನ ವೈದ್ಯ
ವಾಚಸ್ಪತಿಗಳೈದರ್, ಗುರುವಿನ ಚಿಕಿತ್ಸೆಯುಂ
ಪಿರಿದೊಂದು ಸಮಸ್ಯೆಯನೆ ಆವೊಂದು ಮದ್ದುಗಳ್
ಹಿಡಿಸದಾದುವು ಮೈಗೆ. ರೋಗದ ಪಿಚಂಡಿಹಸ್ತ
ಹಿಸುಕುತಿರೆ ತನುಮನಂಗಳಂ, ಲೆಕ್ಕಿಸದದಂ
ದಿನಚರಿಯ ಕಾರ್ಯಕಲಾಪಗಳ್ ನಡೆಸುವರ್ ಅನು
ದಿನಗಳ ತೆರದಲಿ.
ಇತಿ ಮಧ್ಯೆ ವಂಗ ಪ್ರಾಂತ್ಯದ
ಬಂಧುಗಳ್ ನೇಹಿಗರ್ ಕರೆಯೋಲೆಗಳಂ ಬಲ್
ಆತುರದೊಳ್ ಕಾತರವೆರಸಿ ಒತ್ತಡ ಹೇರ್ದು
ಕಳಿಪಿದರ್ ಮೇಲಿಂದಮೇಲೆ. ಅದುಮಲ್ಲದೆಯೆ
ತಾಯಿ ಭುವನೇಶ್ವರೀ ದೇವಿಯುಂ ಆತ್ಯಂತಿಕ

ಮನಃಪ್ರಾಣಗಳ ತುಡಿತದಿಂ, ಪೂರ್ವವಂಗೀಯ
ದೇಶಾಂತರದ ಪುಣ್ಯತೀರ್ಥಂಗಳಂ ಕಂಡು
ಸಂದರ್ಶಿಸಿ ಪೂಜೆಯ ಸಲಿಸಿ ಸಂಯಾತ್ರೆಯಂ
ಪೂರೈಸಿಬಹ ಮಹದಾಸೆಯಂ ವ್ಯಕ್ತಪಡಿಸಿರೆ,
ಅದಂ ಪೂರೈಸುವ ಇಚ್ಛೆಯುಂ ಇರ್ದುದಾ
ಗುರುದೇವನ ಮನದೊಳ್. ಒರ್ಮೆಗೇ ವಿಚಾರಾ
ಸಕ್ತಿಯಿಂ ಸಜ್ಜಾಗಿ ಅಣಿಗೊಂಡರ್ ಪಯಣಕೆ.
ಒರ್ದಿನಂ ಒದವಿದ ಸುಮುಹೂರ್ತದಲಿ ಪುರುಡಿಗೆ
ಮಣಿದೊಲ್ ಪೊರಡೆ ಮೆಯ್ಯ ಬಳಲ್ಕೆಯು ಅರುಗಾಯ್ತು.
ಶಿಷ್ಯದ್ವಯರುಂ ಅಣಿಗೊಂಡರ್ ಜೊತೆಗೂಡಲ್.
ಎಲ್ಲರುಂನಗರಿಯಂ ಮುಟ್ಟುವನ್ನ ಸಂಜೆಯ
ಸೊಂಪು ಇಳಿದತ್ತು ಬ್ರಹ್ಮಾಂಡದ ಮೇಲೆ. ತಣ್ಣನೆ
ತನಿಯೂಡುವ ಸಂಜೆಯ ಸೊಂಪಿನಲಿ ಪ್ರೇಮದಿಂ
ಸ್ವಾಗತಿಸಿತು ದತ್ತಭವನಂ, ಮನವೆರ್ಚಿದಂತೆ.
ಪ್ರೇಮಗೌರವ ಕಾತರಿತ ದೃಷ್ಟಿಗೆ ಪ್ರಥಮ
ದರ್ಶನಮೆ ಮಾತೆಯದಾಯ್ತು. ಪ್ರೇಮವೇ ಮೈವೆತ್ತು
ಮೂರ್ತಿಮತ್ತಾದವೊಲ್ ಎದುರ್ಪೈದ ಜನನಿಯಡಿಗೆ
ಶಿರಬಾಗಿ ಮುಡಿಚಾಚಿ ಮಣಿದರ್ ಗುರುದೇವಂ.
ನಲ್ಮೆಯ ಸುತನಂ ಪಿಡಿದೆತ್ತಿ ಎದೆಗೊತ್ತಿ ಬಲ್
ಪ್ರೇಮದಿಂ ಹಣೆಗೆ ಸವಿಮುದ್ದೊತ್ತಿ ಮಧುಮೇಹ
ರೋಗದ ಪಿಚಂಡಿ ಹಸ್ತದಲಿ ಸೆರೆ ಸಿಲ್ಕಿರ್ದು
ಕ್ಷೀಣಿಸಿದ ಮೈಯ್ಯಂ ನೇವರಿಸಿ ವದನಮಂ
ನೀಳ್ಪು ಲಟಿಕೆ ಮುರಿದು "ಬಿಲೇ ನಿನ್ನನುಂ ಶಿವನೆ
ದಯದಿ ಕಾಪಿಡಲಿ!" ಎನುತೆ ಕರುಣೆಯೊಡಲಿನುಡಿಗೆ
ಬರಮಾಡಿದಳ್ ತಾಯಿ, ಭುವನೇಶ್ವರೀದೇವಿ.

ದತ್ತಭವನದ್ದೇಶದಲಿ ಕಳೆದುವು ಒಂದೆರಳ್ದುದಿನಗಳ್.
ಹಳೆಹಳೆಯ ನೇಹಿಗರ ಮೇಣೆಲ್ಲ ಕುಟುಂಬದ
ಬಂಧುಗಳ ಭೇಟಿ ಕೂಟಗಳ್ ಕೈಗೂಡಿದುವು.
ತೋಷದೈಸಿರಿ ಸೂಸಿ. ಮೂದಿನಗಳತನಕಂ
ಪೆತ್ತಮ್ಮೆಯ ಮನಕೆ, ಒಡಹುಟ್ಟುಗಳಾಮನಕೆ
ನೇಹಿಗರ ಮನಕೆ ಬಂಧುಗಳ ಮನಕೆ ನೇಹದ
ಸವಿಜೇನ್ ರಸವೂಡಿ ಬೆಳ್ನಗೆಯ ಬೆಳಗಿಸಿದರ್
ಸಾನಂದದಿಂ. ಬಾಲ್ಯ ಜೀವನದ ಮೋಹನೀಯ
ಸರಸಧಾರೆ ಹರಿದತ್ತು ಸಾರಸವತ್ತಾಗಿ.
ಮಾರ್ಚ್ ತಿಂಗಳಿನ ಹದಿನೆಂಟನೆಯ ಮುಂಬೆಳಗು
ಮೂಡಿತ್ತು, ಅರಳಿತ್ತು, ಬೆಳಗಿತ್ತು, ತೊಳಗಿತ್ತು.
ಇಳೆಯಮೇಲೆ ಚೆಂಬಿಸಿಲ ಮಿಸುನಿರಸದ ಹರವು
ಹರಡಿತ್ತು. ಚೆಲ್ಲಿ ಸೂಸಾಡಿ ಬೀಸಿಬಹ ತನಿಗಾಳಿಯಂ
ಶೀಳಿ ನುರ್ಗಿ ಎರ್ದೆಗೊಟ್ಟು ಮುಂಬರಿದುದು ತೀರ್ಥ
ಯಾತ್ರಿಗಳ ತಂಡ ಮಮತೆಯ ಮಾತೆಯೊಡಗೂಡಿ.
ಢಾಕಾ ನಗರಿಯಂ ತಲುಪಿದಾಗಳ್ ಮೂಡಣ
ಮಟ್ಟಿಯ ಸಿರಿಸಾಲ್ ಬೆಳಗಿದತ್ತು ಹೊತ್ತರೆಯ
ಹೊನ್ನಾರತಿಯೆತ್ತುತಿರೆ ಉಷಾರಮಣಿ ಮುಗುಳ್
ನಗೆಯ ಮಿಸುನಿರಸ ಹರಿಸಿ, ಬಾಲರವಿ ಮೂಡಿದ
ಸ್ವರ್ಣದುಂಡೆಯೊಲ್ ಥಳಥಳಿಸಿ. ಒಡನೆ ಗಿಡ ಮರ
ಬಳ್ಳಿಗಳ್ ಬಾಯೊಡೆದುವೊ ಎನೆ ಪಕ್ಷಿಗೊರಳ್
ಉಲಿ ಹರಿದುದು ವಿಧವಿಧ ರಾಗಗಳಲಿ. ವಿಧವಿಧ
ಸ್ವನಗಳಲಿ. ಅನುರಾಗ ಮಯಮಾಯ್ತು ಬೆಳಗಿನ
ಇನಿವೊಳ್ತು. ಎಲ್ಲೆಲ್ಲಿ, ಪುಣ್ಯತೀರ್ಥಗಳ್ ಕಣ್
ಸೆಳೆದೊಡಲ್ಲಿ ಪವಿತ್ರ ಜಳದಲಿ ಮುಳುಗಿ ಮಿಂದು

ದೇವದರ್ಶನಂಗೈದು ಧ್ಯಾನ ಪೂಜೆಗಳ್ ಸಲಿಸಿ
ಸಂತೃಪ್ತಿ ಪಡೆವರ್. ಜನನಿಯ ಮನ ತಣಿದಂತೆ
ತಾವುಂ ತಣಿವರ್ ತನುಮನ ತುಂಬಿ. ಭಾವನಾ
ರಸಲ್ಲೋಕದಲಿ ಪರಿಭ್ರಮಿಸಿ ಭಕ್ತಿ ಭಾವದ
ತೇರನೇರಿ ತೇಲಾಡಿದರ್ ಸ್ವರ್ಗೀಯ ಭೋಗ
ಭಾಗ್ಯದಲಿ. ಅಲ್ಲಲ್ಲಿ ಪ್ರವಚನ ಉಪನ್ಯಾಸ
ಭಾಗ್ಯವೊದವಿಸಿ ಭಕ್ತ ಜನರಾಶಿಗೆ ಮುದದಿಂ
ಮನವಂ ತಣಿಸಿದರ್. ಮಣಿಸಿದರ್ ಭಕ್ತಿಭಾವಕೆ.
ಪೂರ್ವವಂಗೀಯ ಪ್ರಾಂತ್ಯದಾದ್ಯಂತ ಸುತ್ತುತೆ
ತೀರ್ಥಯಾತ್ರೆಯಂ ಪೂರೈಸಿದರ್, ಗುರುದೇವಂ.
ತರುವಾಯ ದತ್ತಭವನದಲಿ ಕಳೆದರೊಂದೇ
ಒಂದು ದಿನಮಾನಮಂ ತಾಯಿಯಳ್ಕರೆಯ ದಿವ್ಯ
ಆರೈಕೆಯಲಿ. ಇರುಳುರುಳಿ ಮುಂಬೆಳಕು ಮೂಡುವ
ಗಳಿಗೆಯಲಿ ಪೊರಮಟ್ಟರ್ ಗುರುದೇವಂ ತಮ್ಮ
ಗುರುಭಾಯಿಗಳೊಡಂ. ಗಗನದೆಡೆಗೆ ಮೊಗವೆತ್ತಿ
ನಾಯಿಗಳ್ ವೀತರಾಗದಲಿ ಬೊಳ್ಳಿಕ್ಕಿದುವು.
ಮುಂಬಕ್ಕಿಗಳವಿಂಡು ಶೀಳ್ದನಿಯಲಿ ಚೀರುತೆ
ಹಾಡಿದುವು. ಮುಂಗೋಳಿಗಳ ಮೊಳಗು ಕೇಳಿದುದು
ಒಡಕು ಸ್ವರದಲಿ. ಯಾಕೊ ಏನೊ ಬಹುಲ ಶಾಂತಿ
ಅಶಾಂತಿಯ ಕಡಲಲಿ ಮುಳುಗೆದ್ದವೊಲ್ ಕರುಣದ
ಕರೆಯೆ ಕೇಳಿಬಂದುದು ಸಲಸಲಕು. ಮ್ಲಾನಮುಖಿ
ಶ್ರೀಮತಿ ಭುವನೇಶ್ವರೀ ದೇವಿಯುಂ ಕಂಗಳಲಿ
ಕಂಬನಿಯ ಧಾರೆಯಂ ಹರಿಸಿ ನಲ್ನುಡಿಯಲ್ಲಿ
ಬೆಳ್ನುಡಿವೆರಸಿ ವೀತಕಂಠದಲಿ ಹರಸಿದಳ್
ಪ್ರೇಮದ ಒಡಲ ಕುಡಿಯಂ. ಆವುದೋ

ಸ್ವರ್ಗಧಾಮದ ಪುಷ್ಪವೃಷ್ಟಿಯೊ ಎನಲ್ ಒಡನೆ
ತುಂತುರು ತುಂತುರು ವರ್ಷವೃಷ್ಟಿಯಾದುದು ಮುಗಿಲ್
ಮಂಜುಮೋಡಗಳ ಸುಳಿವಿಲ್ಲದೆಯೆ, ಗುರುವರನ
ಶಿರೋದೇಶದಮೇಲೆ! ಬೇಲೂರು ಪುಣ್ಯಾಶ್ರಮ
ಮುಟ್ಟಿದ ಬಳಿಕ ನಲ್ ಸುವಿಶ್ರಾಂತಿ. ಆದೊಡೇಂ
ಪುಣ್ಯತೀರ್ಥಯಾತ್ರೆಗಳ ದೈಹಿಕ ಶ್ರಮದಿಂ
ಇನ್ನಿನಿತು ಕಂದಿ ಕುಂದಿದೊಲ್ ಜಜ್ಜರಿತಗೊಳೆ
ಕುಸಿಯತೊಡಗಿದುದು ಆರೋಗ್ಯ ಭಾಗ್ಯದ ಕಲಸ.
ವೈದ್ಯವಾಚಸ್ಪತಿಗಳೈದರ್. ಯಥಾವತ್ ದೇಹ
ಸ್ಥಿತಿಯಂ ಪರೀಕ್ಷಾವಿಧಿಯಿಂದಲಿ ಕ್ರಮವತ್
ಆರಂಭವಾಯ್ತುವರ ಚಿಕಿತ್ಸಾ ಘನಘಟಕ.
ಪಥ್ಯಪಾನಾದಿಗಳಲಿ ಇನ್ನಿನಿತು ಬಿಗಿಯಿತು
ಬಿಗಿಗಟ್ಟು. ಕಾರ್ಯಕ್ರಮಗಳ್ ಕಟ್ಟುನಿಟ್ಟಿನ
ಪಟ್ಟಿಯೊಳ್ ರಂಜಿಸಿದುವು ಮನಕೆ ಕಿನಿಸೊತ್ತಿ.
ಚಿಕಿತ್ಸೆಯ ವ್ಯಾಪ್ತಿಯಂತು ಭವ್ಯಗತಿಗೇರಿ
ನಿಂದತ್ತು. ಪ್ರಕೃತಿಯ ಸುಶೀತಲಶೈತ್ಯವುಂ
ನೀಡುವುದು ಓರೋರೊರ್ಮೆ ಸುಲಭ ಚಿಕಿತ್ಸೆಯಂ.
ಒರ್ಮೆ ಚೇತರಿಕೆ, ಮತ್ತೊರ್ಮೆ ಪಿಂಜರಿಕೆ ಎನೆ
ಏರಿಳಿತದೊಳ್ ಕಳೆಯುವುದು ದಿವಸಮಾನಗಳ್
ಧ್ಯಾನ ಜಪಗಳ್ ನೆರವೀವುದು ಅಮಿತ ಸುಶಾಂತಿಗೆ.
ಅಂತಿಂತು ಇಂತಿಂತು ಕಳೆಯುತಿವೆ ದಿನದಿನಂ,
ಶ್ರೀರಾಮಕೃಷ್ಣ ಪರಮಹಂಸರ ಮಾನಸೀ
ಪುತ್ರನಾಗಿ, ಶ್ರೀಮತಿ ಶಾರದಾಮಣಿದೇವಿ–
ಯವರ ದಿವ್ಯ ಕಣ್ಮಣಿಯಾಗಿ, ಶ್ರೀಮತಿ ಭುವನೇ–

ಶ್ವರೀದೇವಿಯವರ ಕುಮಾರ ಪುಣ್ಯನಾಗಿ,
ಧೀರ ಧೀಮಂತನಾಗಿ, ಪ್ರಜ್ಞಾನ ಘನನಾಗಿ,
ದೈವ ಭಕ್ತನಾಗಿ, ವೇದಾಂತ ಖನಿಯಾಗಿ, ನವ
ಯುಗೀಯ ಅವತಾರ ಪುರುಷನಾಗಿ, ಭಾರತದ
ಭಾಗ್ಯಸೂರ್ಯನಾಗಿ, ಗುರು ಭಾಯಿಗಳ ಸದ್ಗುರು
ದೇವನಾಗಿ, ಜಡಭರತರ ಕಣ್ತೆರೆಸಿದ ಕರ್ಮ
ಕುಶಲಿಯಾಗಿ, ಕಲುಷಿತ ಸಮಾಜ ಸಮುದ್ರದಾ-
ಳಕೆ ಧುಮುಕಿ ಕಲಕಿ ಕದಡಿ ಸದ್ಧರ್ಮದ ಶುದ್ಧ
ನವನೀತಮಂ ಜಗಕೆ ಬೊಗಸೆ ಬೊಗಸೆಯಲಿ ಹಂಚಿ
ಕಗ್ಗತ್ತಲ ಗವಿಗೆ ಚೆಂಬೆಳಕನಿತ್ತು ಪರಮೋ-
ಪಕಾರವೆಸಗಿದ ಪುರುಷೋತ್ತಮನ ಪ್ರಭುದ್ಧ
ದೇಹಶುಕ್ತಿಯಲಿ ಎಲುಬೀಳುಗಳ್ ನಲಿದುವು
ಮತ್ತೆಮತ್ತೆ. ಓಷಧಿಯ ಕಹಿರಸಮುಂಡುಂಡು
ದಣಿಯಿತ್ತು ಜೀವಕಣ.
"ಸಧ್ಯ ಹೃದಯ ಮಂದಿ-
ರದೊಳ್ ಸತ್ವರಸವದು ತುಂಬಿರುವನಕವೆನ್ನ
ಬಾಳ್ ನೌಕೆ ನಡೆಯಲಿಂತೆ. ಬಳಿಕಮೆಲ್ಲವುಂ ಗುರು-
ದೇವನಿಚ್ಛೆ. ಮತ್ತಮಾ ಮಾಕಾಳಿಮಾತೆಯ ಸದಿಚ್ಛೆ.
ಇಂ ಎನ್ನೊಳೇಂ?" ಎಂದ ಗುರುದೇವ ಎಲ್ಲವಂ
ದೈವ ಚಿತ್ತದೊಳೊತ್ತೆ ಇಡುತೆ ನಿಶ್ಚಿಂತರಾದರ್.
ಗುರುವರಂ ತಮ್ಮ ಸೆಜ್ಜೆಯಲಿ ಒರಗುದಿಂಬಿಗೆ
ತನುವಾಂತು ಕುಳಿತಿರುತಿರೆ ಬಂದರಲ್ಲಿಗೆ ಸ್ವಾಮಿ
ವಿರಜಾನಂದರ್. ನಿರ್ವಿಣ್ಣ ಮನದಿಂ ಕುಶಲಪ್ರಶ್ನೆ
ಗೈಯಲೊಡನೆ ಸ್ವಾಮೀಜಿ ಮನಗುಂದಿ ನೋಯದೆ
ನಿರಾಳತನದಿಂ ನುಡಿಸಿದರಿಂತು "ಕೇಳಯ್ಯ

"ಪ್ರಾಪ್ತವ್ಯಮರ್ಥ ಲಭತೆ ಮನುಷ್ಯೋ
ದೇವೋಪಿತಂ ಲಭಯಿತಂ ನ ಶಕ್ತಃ ।
ತಸ್ಮಾನ್ನ ಶೋಭಾಮಿನ ವಿಸ್ಮಯೋಮೆ
ಯದಸ್ಮದೀಯಂ ನಂ ಹಿ ತತ್ಪರೇ ಷಾಮಂ ॥"

ಸ್ವಾಮಿ ವಿರಜಾನಂದರ್ ಖಿನ್ನಮನದಿಂ "ಗುರೂಜಿ.
ವಿಧಿಲಿಖಿತಮೆಂಬುದು ಕಟುಸತ್ಯಂ. ನೀಮಿನ್ನು
ಗಹನ ವಿಷಯಂಗಳಂ ಕೈವಿಡುವುದೇ ಲೇಸೆಂಬೆ.
ಈಗಳ್ ವಿಧವಿಧ ಸಂದರ್ಶಕರುಗಳಿಗೆ ದಿನ
ದಿಸಂ ಭೇಟಿಯೀಯುತಿರ್ಪಿರಿ. ಇದೆಲ್ಲವನುಂ
ಕೈಬಿಡದೆ ಗತಿಯಿಲ್ಲ, ನೀಮಿಂತು ಶ್ರಮಿಪುದು
ತರವಲ್ಲ. ನೀಮೇ ತಿಳಿದು ನೋಳ್ಪುದು." ಎಂದರ್.
ಸರಳಸ್ಮಿತ ವದನದಲಿ ಬಿತ್ತರಿಸಿದರ್ ಗುರು
ವರ್ಯಂ "ಎಲೆ, ವತ್ಸಾ! ನಿನ್ನೊಳ್ ತಿಳಿದು ನೋಡೈ.
ಇದೆಲ್ಲವುಂ ಕಾಲನಿರ್ಣಯಮಲ್ತೆ? ಬಿಡು ದುಃಖ
ಬೆಸನಮಂ. ದೈವೇಚ್ಛೆಯೊಳ್ ಏನಿದೆಯೋ ಅದು
ಆಗಲ್ವೇಳ್ಕುಂ. ಮತ್ತೇಕೆ ಸುಖ ದುಃಖ? ಆಗಲಿ,
ವಿಧಿಲಿಖಿತ ಏನಿದೆಯೊ ಅದು."
ಶ್ರೀಗುರುವರ್ಯನ
ದರ್ಶನಾರ್ಥಿಗಳ್ ಬಂದೆ ಬಂದಪರ್, ಎಡೆವಿಡದೆ.
ಕ್ಷೇಮ ಕಾತರಿತ ಮನಸ್ಕರ್, ದಿವ್ಯಜ್ಞಾನಪ್ರೀತ
ಮನಸ್ಕರ್ ಭಾರಾಂತ ಹೃದಯಂ ಭರಿಸಲಾ-
ರದೆ ಭರಿಸಿದವೊಲ್ ಖಿನ್ನಮನದಿಂ ಬಂದಪರ್,
ಗುರುವರ್ಯನ ಪದಸನ್ನಿದಿಗೆ. ಅವರಂ ತಡೆಯೆ
ಒಪ್ಪುದೇಂ ಮನಕೆ. ಎಂದಿನವೊಲ್ ನಡೆಯುವುದು ದಿನ
ಚರಿ. ನೊಂದವರ ಸ್ವಾಂತನಕೆ ತಾಮೆ ಮುಂದೈವರ್.

ನಲ್ನುಡಿಗಳಲಿ ಸಮಾಧಾನಗೈವರ್. ಸಿತಸ್ಮಿತದೊಡಂ.
ಸಂದರ್ಶಕರ ಮನೋದಧಿಗೆ ತಕ್ಕಿನ ಸ್ವಾಂತನ
ಅಥ ಉಪದೇಶ ಅಥ ಉಪನ್ಯಾಸಗಳ್ ನಡೆಸಿ
ನಲ್ಮೆಯಿಂ ಬೀಳ್ಕೊಡುವರೊರ್ವನರೊರ್ವರಂ.
ಭವದ ಸುಡುಬೆಂಕೆಗೆ ತನಿರಸವಂ ಸುರಿವಂತೆ
ನುಡಿಮುತ್ತು ಬೀರಿ ತಿಳಿಪುವರ್ ಅನುನಯದಿಂದಲಿ.
ಎಲ್ಲಮಿರ್ದೇನಿಲ್ಲದ ಪರಿಯಲಿ ಅಸ್ವಸ್ಥ
ಶರೀರ ಪ್ರಕೃತಿಯು ಬಳಲಿ ಬೆಂಡಾಯ್ತು ತಾನೇ
ಅರಿಯದ ಪರಿಯಲಿ. ಪ್ರಾಂಗಣದಲಿ, ದಿವಿಜ ನದೀ
ತೀರದಲಿ ಪದಚಾರಣಗೈವರ್. ನಸುವೊಳ್ತು
ತಪವನೋಂತು ಧ್ಯಾನಾರೂಢರಾದಪರ್ ಸತ್
ಶಾಂತಿರಸವನಾರ್ಸೈದು, ಗಂಭೀರ ಗತಿಯಲ್ಲಿ.

"ಮಧುರಂ ರಸವದ್ವಾಪಿ
ವಸ್ತುನ್ಯಪಿ ರಸಸ್ಥಿತಿಃ ।
ಯೇನ ಮಾದ್ಯಂತಿ ಧೀಮಂತೋ
ಮಧುನೇನ ಮಧುವ್ರತಾಃ ॥"

ಹರಿಃ ಓಂ ತತ್ ಸತ್

❋ ❋

ದ್ವಾಚತ್ವಾರಿಂಶತೋಲ್ಲಾಸಂ

ಯೋಗನಿದ್ರಾ-ದುರ್ಗಾಪೂಜೆ

"ದೀಪ ನಿರ್ವಾಣ ಗಂಧಂಚ
ಸುಹೃದ್ವಾ ಕ್ಯ ಮರಂಧತೀಂ ।
ನ ಜಿಘ್ರಂತಿ ನ ಶೃಣ್ವಂತಿ
ನ ಪಶ್ಯಂತಿ ಗತಾಯುಷಃ ॥"

ಓ ಕಾಲಪುರುಷ! ನಿನಗಣಂ ಗುಣಮಣಮಿಲ್ಲೆ,
ಆರಾರ ಸುಖದುಃಖಗಳ ಗಣನೆಯುಮಿಲ್ಲಂ.
ನಿನ್ನಯ ಶತಸಹಸ್ರ ಕಾಲ್ ಓಟವೆ ಓಟ!
ಚಣಂ ಹಿಂಚು ಮುಂಚಾಗದೆ ನೀಂ ನಡೆವೆ ಲೋಕ
ಹಿತಕಾಗಿ, ಕಾಲಹಿತಕಾಗಿ. ಎಂದಿಗುಂ ನಡೆವೆ.
ನಿನ್ನ ಸರಿಗಟ್ಟುವರ್ ಆರ್ಯೆ ಈ ಲೋಕದೊಳ್!
ನೀನೇ ಜಗದ್ಬಾಂಧವ! ನೀನೇ ಸಂರಕ್ಷಕ!
ಆದೊಡೇಂ ನಿನ್ನವಕೃಪೆಯೇ ಸದಾ ಪ್ರಾಣಿ
ಲೋಕಕ್ಕೆ, ಜನಮರಣಗಳಿಗೇಂ ಕೊರಮಿಲ್ಲ.
ಬಾಳ್ಬದುಕಿಗೆ ಸುಖ ದುಃಖಗಳೆ ನಿಜ ಉಂಬಳಿ.

"ಕಾಲಾಯ ತಸ್ಮೈನಮಃ"

ಗಿರಿಶೃಂಗ ಶ್ರೇಣಿಯೆಸೆದುದು ನೆಟ್ಟನೋಟಕ್ಕೆ
ಗಿರಿಮೆಯ್ಗಳ ಶೃಂಗಾರ ಬೊಂತೆಬೊಂತೆಯನೆ
ಹಚ್ಚ ಹಸುರಿಂ ಮೈಯೊಡೆದು ಹರಡಿ ಹಬ್ಬಿರ್ದ
ಶಾದ್ವಲಗಳ ಹೇರಾಶಿಯುಂ ಪಚ್ಚ ರೇಶಿಮೆ
ವಸನದಿಂ ಪೊದಳ್ದುದೊ ಎನಲ್ ರವಿಛವಿಯೊತ್ತಿ
ಮಿರುಮಿರುಗುವ ಸಂದೃಶ್ಯಮಾನ ವೈಭವವದು

ಸುಖಮುಚ್ಚೆಗೂಳಿಸುವೊಲ್ ಯೋಗನಿದ್ರಾ ಸುಂದರಂ.
ಅಲ್ಲೊಂದು ಇಲ್ಲೊಂದು ಎಂಬಂತೆ ಮೈಯೊಡೆದ
ವಿರಳಗತಿಯ ದ್ರುಮಗಳ್ ಮೆರೆದಿರ್ದುವು ಅಭಿರಾಮ
ಭಂಗಿಯಲಿ. ಗಿರಿಮೆಯ್ಯಮಹಾ ವಿಸ್ತೀರ್ಣದೊಳ್
ಗಜಗಾತ್ರದ ಬಿಣ್ಪಿನ ಕರ್ಪಿನ ರಂಗುರಂಗಿನ
ಕಂದುವರ್ಣದ ಗೋಧನಗಳ್ ಮಿಂಚು ಮೆಯ್ಯಿಂ
ಶೋಭಾಯಮಾನದಿಂದೊಪ್ಪಿ ಪುಲ್ಮೇಯುತಿರೆ
ಸಗ್ಗಿಗರ ಧೇನುಗಳೊ ಎನೆ ಕಂಗಳಿಗೆ ಪರ್ಬ
ತಾನಾಯ್ತು. ಕಣ್‌ದಣಿಯೆ ಮನದಣಿಯೆ ಕುಳಿತಲ್ಲಿ
ನೋಡಿದರ್ ಸ್ವಾಮಿಜಿ ಶಿಷ್ಯಮಂಡಲಿಯೊಡಂ.
ಭಾಗೀರಥೀ ನದೀ ತೀರ.....ಬಾಲಾರುಣನ
ಹೊಂಗಿರಣಗಳ್ ಮರದೆಲೆಗಳ ಸಂದಿಸಂದಿಯಲಿ
ಕೋಲುಕೋಲ್ಗೈಸಿ ತೂರಿಬರೆ ನೆರಳುಬೆಳಕುಗಳ
ಚೆಂಬಲೆ ಹರಿದತ್ತು ಮುನಿವರನ ತನುವಿನ ಮೇಲೆ.
ಧ್ಯಾನ ಗತಿಯಲಿ ಕರ್ಪು ಶಿಲೆಯ ಹಾಸುಗಲ್ಲಿನ
ಮೇಲೆ ಕುಳಿತ ಸ್ವಾಮಿಜಿ ಮೂರ್ತಿಮತ್ತಾಗಿರೆ
ಮಿಸುಕಲಿಲ್ಲ. ನುಡಿಯಲ್ಲಿಲ್ಲ; ಕಣ್ ಮುಗಿಯಲಿಲ್ಲ. ಆ
ನಿಸರ್ಗದೈಸಿರಿಯ ಪರಿವೀಕ್ಷಣೆ ನಡೆದತ್ತು
ಏಕ ರೀತಿಯಲಿ. ಅರುಣಾರುಣನ ತೇಜೋನ್ವಿತ
ಮಂಡಳಂ ಏರುತಿರೆ, ಏನಾ ಉಜ್ವಲೋಜ್ವಲ
ಅಗ್ನಿ ಸ್ಫುಲ್ಲಿಂಗಗಳ ಹೇರಾಶಿ! ರವಿಕಿರಣ
ಮಾಲೆ ಸೂಜಿಸೂಜಿಯೊಲ್ ಹರಿದಿರೆ ವರದಾನ
ಎನಲ್ ಗುರುವರನ ಭಕ್ತಿ ಧ್ಯಾನಪೂತ ಸಿರಿ
ಮೈಯೊಳ್ ಸ್ಫುರಿಸಿದುವು ಧ್ಯಾನ ಸ್ಫುಲಿಂಗಗಳ್
ವದನ ಮಂಡಲ ಸುತ್ತಲ್ ಮಿಂಚಿನ ಪ್ರಭಾ–

ಳೆಯಂ ಹೋಲಿ! ಸ್ವಾಮೀಜಿಯುಂ ಕಣ್ ಬಿಗಿ ಮುಚ್ಚಿ
ಮನಮುಗಿದು ಸಂಪೂರ್ಣ ಧ್ಯಾನಲೀನರಾದರ್
ಜಗಮರೆತು. ಮೈಮರೆತು. ಎಡಬಲದೊಳಿರ್ದ ಗುರು
ಭಾಯಿಗಳ್ ಮಿಸುಕದೊಲ್ ತಾವುಂ ಧ್ಯಾನವ್ರತದೊಳ್
ಮುಳುಗಿದರ್. ಬಾಲಭಾಸ್ಕರಂ ಬೆಣ್ಣೆಯ ಮುಗಿಲ್
ದಿಣ್ಣೆಯೇರಿದಂ ದೃಷ್ಟಿಸೀಮೆಯಲಿ. ಹೂಬಿಸಿಲ್
ಮುದ್ರೆಯೊತ್ತಿತು ಮೈಗೆ. ಧ್ಯಾನಲೋಕದಿಂ ಬಲು
ಮೆಲ್ಲಮೆಲ್ಲನೆ ಇಳಿಯುತಿರೆ ಕಗ್ಗಲ್ಲ ಪೀಠಸ್ಥ ಗುರು
ವರ್ಯಂ ಕಣ್ ಎದುರಿನ ಹೃದಯಹಾರೀ ದೃಶ್ಯ
ಮಾನ ಸೌಂದರ್ಯದಲಿ ಮುಳುಗೆ, ನೆಟ್ಟಮನವಂ
ಕೀಲಿಸದೆ ನೋಡಿದರ್ ತಾವೊಂದು ಇರುಂಬೆಯ
ಹೋಲಿ! ಧ್ಯಾನಾವಸಾನಸಮಯೆ ಅರಿವಳಿಕೆಗೆ
ನಿಲುಕಿದ ಮಹಾ ನಿಸರ್ಗಸೌಂದರ್ಯದಲಿ ನೆರೆ
ಮೈಮರೆತವೊಲ್ ಮಿಣ್ಣನಾದರ್. ಕಳಿಯಿತು ನಸು
ವೊಳ್ತು. ಬೀಸಿತು ತಂಪುಗಾಳಿ. ಹಾಡಿದುವು ವಿನ
ವಿಹಂಗಮಗಳ್. ಲಲಿತ ಕಲೆಯೋಲ್ ನೀಹಾರ
ರಚಿತಮಾ ಮುಂಜು ಮುಗಿಲ್ ಲೋಕದ ಸುರಮ್ಯತರ
ಗುಡಿಗೋಪುರಗಳೆಸೆದುವು ದಿಗ್ ಭಿತ್ತಿಯಗಲಂ.
ಸ್ವಾಮೀಜಿ ಶಿಷ್ಯರ ಭುಜಗಳ ಮೇಲೆ ಕೈಯೂರಿ
ಸಾಲ್ಗೈಸಿದ ಸೋಪಾನಗಳನೇರಿ ಬೇಲೂರು
ಮಠಕೈದರ್. ಅದಾಗಳಲ್ಲಿಗ್ಗೈದ ಸೋದರಿ
ನಿವೇದಿತೆಯುಂ ಗುರುವಿನ ದೇಹದಸ್ಥಿತಿಯಂ
ಗಮನಿಸಿ ಮನದಿ ನೊಂದು ನೋವುಂಡದೊಮದನುಂ
ತೋರ್ಪಡಿಸದೆ ತನ್ನೊಳ್ ಹುಗಿದಿಟ್ಟು, ನುಡಿಸಿದಳ್,
“ಗುರುದೇವ, ಈಗಣದ ಓಷಧಿಯು ನಿಮಗೇನ್

ಎನಿಪುದು ?''
''ಬಿಡು, ಪೆರ್ಚಿನದೇನ್ ಅರಿತೆನಿಲ್ಲ, ಆ
ಗುರುದೇವನಿಚ್ಛೆ, ಮೇಣಾ ಕಾಳಿಕಾ ಮಾತೆಯ
ಇಚ್ಛೆ ಏನಿರ್ಪುದೋ ಅದರಂತೆಯಾದಪುದು.
ಅದಕೇಕೆ ಚಿಂತೆ? ಎನ್ನ ಕರ್ತವ್ಯಭಾರಂ
ಆಪನಿತು ತೀರ್ಚಿರುವೆ. ಉಳಿದದ್ದು ನಿಮಗಕ್ಕುಂ.''

"ಅಶೇಷದೃಶ್ಯೋ ಜ್ಝಿತ ದೃಜ್ಞಯಾನಾಂ
ಅವಸ್ಥಿತಾನಾಮಿಹ ರಾಜಯೋಗೇ ।
ನ ಜಾಗರೋ ನಾಪಿ ಸುಷುಪ್ತಿಭಾವಃ
ನ ಜೀವಿತಂ ನೋ ಮರಣಂ ವಿಚಿತ್ರಂ ॥"

ಮೌನ ಭಾರದಲಿ ತಲೆಬಾಗಿದಳ್ ಸೋದರೀ
ನಿವೇದಿತೆ. ಒಡಲೊಳ್ ಕರುಣೆಯ ಝರಿ ಹರಿದುದು.
ಮಿಣ್ಣನೆ ತಲೆಬಾಗಿದಳಾ ಲಲನೆ. ಅನೇಕಜನ
ಸಂದರ್ಶಕರ್ಯೆದರ್, ಹಿರಿಯರ್ ಕಿರಿಯರ್ ಒಳ
ಗೈದರ್. ಅವರೆಲ್ಲರ ಕಂದಿ ಕುಂದಿದ ವದನ
ಮಂಡಲದ ಹಿಂದಿನ ಕಹಿಭಾವನೆಯ ಗಮನಿಸಿ
ಅವರವರ ಮಾನಸಿಕ ತುಮುಲಕೆ ನಲ್ ಸ್ವಾಂತನದ
ಸವಿಯನೂಡಿಸುವೊಲ್ ಸಮಾಧಾನದ ನಲ್ನುಡಿ
ಬೆಳ್ನುಡಿ ವೆರಸಿ ಸಂತೈಸುವರ್ ತಮ್ಮ ಮೈಯಿನ
ಸೋಲ್ ಬದಿಗೊತ್ತಿ. ದಿನದಿನಂ ಇಮ್ಮಡಿ ಮುಮ್ಮಡಿ
ಜನರ್ ಬರುತಿರೆ ದರ್ಶನವಿತ್ತು ಮನ ನೊಂದಿಹ
ಶ್ರೋತೃಗಳ ಕಳವಳ ತಳಮಳಗಳ್ ಪೋಗಾಡಿ
ಕಳಿಪುವರ್ ಸಂತೈಸಿ. ಅವರವರ ಸಂದೇಹವಂ
ಪರಿಹರಿಸುವರ್ ಅಮಿತ ಸಾವಧಾನದಿಂ ಶ್ರೀ
ಗುರುವರಂ. ಬಳಿಕಲೊರ್ಮೆ ಚಿಂತನಾವೇಶದಿಂ

ಉರ್ಬೆದ್ದು ವಿವಿಧ ಕಾರ್ಯಂಗಳಾ ವ್ಯೂಹರಚ-
ನೆಯಲಿ ಮನವಿಡುವರ್. ಉಳಿದ ಆಶ್ರಮಂಗಳ
ವಹಿವಾಟು ಮತ್ತವುಗಳ ಕಾರ್ಯಚಟುವಟಿಕೆಯ
ಕುರಿತು ಶಿಷ್ಯರೊಡಂ ವಿಚಾರವಿನಿಮಯಗೊಳಿಸಿ
ಮನದುಂಬುವರ್. ಮತ್ತೊರ್ಮೆ ತಮ್ಮೆಡೆಗೈವವರ
ಜಿಹಾಸೆಯ ಪೋಗಾಡೆ ಪ್ರವಚನಗಳನಿತ್ತು
ಜ್ಞಾತಾಜ್ಞಾತ ವ್ಯಕ್ತಿಶಕ್ತಿಯ ಪರಿಧಿಯಲ್ಲಿ
ಮುಳುಗೆದ್ದು ಸಮಸ್ಯೆಗಳಂ ಪರಿಹರಿಸುವರ್.
ಯೋಗಧರ್ಮದ ಸಾರವಂ ಬಸಿದು ಹಂಚುವರ್
ಮೋಹಿನಿಯು ಅಮೃತವಂ ಹಂಚಿದ ತೆರದಿ. ಆ
ಭಕ್ತಜನರೊಡಂ ಸದ್ಭಕ್ತರಾಗಿ ಜ್ಞಾನಿಗಳ
ಸಂಗದಲಿ ಸುಜ್ಞಾನಿಗಳಾಗಿ ಕಳೆವರ್ ದಿನ
ಮಾನವಂ. ದಿನದಿನಗಳ್ ಉರುಳಿದುವು. ವಾರ
ವಾರಗಳ್ ಕಳಿದುವು. ಜುಲೈ-ಆಗಸ್ಟ್ ಮಾಸಗಳ್
ಶೀತಲಮಯ ಶಾಂತಿಯಲಿ ತನಿಯುಣಿಸಿ ತಣ್ಣಗೆ
ಜಾರಿದುವು. ಮೆಯ್ಯೊಳ್ ಬಳಲ್ಕೆಯುಂ ಪೆರ್ಚುತಿರೆ
ಏಕಾಂತ ಧ್ಯಾನದಲಿ ಕಳೆವರೆನಿತೋವೊಳ್ತು
ಸಂಪೂರ್ಣ ಪರಿಜ್ಞಾನದಾ ವೇದಿಯಲಿ ಅಂಡ-
ಲೆಯುತೆ. ಒರ್ಮೆ ಪರಮಾತ್ಮೀಯ ಶಿಷ್ಯ ಶರಶ್ಚಂ-
ದ್ರ ಚಕ್ರವರ್ತಿಯುಂ ಕಡು ದುಃಖ ಭಾರದಿಂದಲಿ
ಗುರುದೇವನ ಪದ ಸನ್ನಿಧಿಗೈದು ಕಳಕಳಿಯ
ಧ್ವನಿಯೊಳ್ ಗುರುವರನ ಯೋಗಕ್ಷೇಮವಂ ಬಹುಲ
ಸಂಕಟದಿಂ ಕೇಳಿದರ್ ಕಂಬನಿಗರೆಯುತೆ. ಆ
ಮಾತಿಂಗೆ ಸ್ವಾಮೀಜಿ ಬಿತ್ತರಿಸಿದರಿಂತು "ಎಲೆ, ವತ್ಸಾ!
ಇನ್ನೇಕೆ ಚಿಂತೆಗಳ ಭಾರಂ? ಈ ದೇಹಯಂತ್ರ

ಸಡಿಲ್ಚಿದೆಯೆಂದ ಬಳಿಕಲೆಲ್ಲಿ ಇದರ ಬಾಳ್ಕೆ?
ಬಿಡು, ವಂಗರಾಜ್ಯದ ಉಡಿಯಲಿ ಜನ್ಮತಳೆದಿಹ
ದೇಹಮಿದಕೆ ರೋಗ ತಪ್ಪದಾಯ್ತು ಎನಲನ್ಯ
ಮೇನಲ್ತು, ಈ ಮಿಸುನಿ ಭೂಮಿಯೊಳ್ ವಾಯುಗುಣ
ಹದಗೆಟ್ಟು ಹಾಳಾಯ್ತು. ಅಳ್ವರ ಕುರುಡುಗಣ್ಣು
ತೆರೆದು ಮನವರಿಕೆಯಾದಪುದು ಎಂದಿಗೋ, ಆ
ದೇವರೇ ಬಲ್ಲಂ. ಅನಿತಿನಿತು ಕೆಲಸಕಾರ್ಯ
ಗೈವೆನೆನೆ ಇಮ್ಮಡಿಪುದು ಬಳಲ್ಕೆ. ಈ ದೇಹ
ಇರುವನ್ನೆಗಂ ಎಲ್ಲರಿಂಗಾಗಿ ದುಡಿವೆನೆನ್.
ಅದನುಳಿದು ಬೇರೇನ್ ಕಾಣೆನಾಂ. ಎಲೆ, ವತ್ಸ!
ಮುನ್ನಿನ ದಿನಮಂ ಜಾಲಾಡಿ ನೋಡೆ ಭಗವಾನ್
ರಾಮಕೃಷ್ಣರ್ ಆವ ಶಕ್ತಿಯಂ 'ಕಾಳಿ' ಎಂದು
ಕರೆಯುತಲಿರ್ದರೋ ಆ ಶಕ್ತಿಯುಂ ಶ್ರೀಗುರುವು
ಮರಣಿಸುವ ಮೂದಿನಂಗಳ ಮುನ್ನಮೆ ಎನ್ನಯ
ಮೆಯ್ಯನಾಕ್ರಮಿಸಿಹುದು; ಅದೆನ್ನಂ ಮಿಣ್ಣನಿರೆ
ಬಿಡುವುದೇಂ? ಇನ್ನೆಬರಂ ಕೆಲಸ-ಕೆಲಸ ದೇಹದೆಡೆ
ಗಮನವಿಡೆ ಕಿಂಚಿತ್ ಸಮಯಮಿಲ್ಲವಾಯ್ತೆನಗೆ."
ಕೆಲದಿನಂಗಳ್ ಉರುಳಿದುವಿಂತೆಯೆ, ಹಲಕೆಲವು
ಏಳುಬೀಳುಗಳ ಹೊಯ್ದಾಟದಲಿ ಹೋರಾಡಿ
ಸಿದ್ಧರಾದಪರ್ ಮರುದಿನದ ಕಾರ್ಯಪ್ರವೃತ್ತಿ
ಮೂಡುವೆಡೆಗೆ, ದಿನಗಳುರುಳುತಿರಲ್ ದೇವಿ
ದುರ್ಗಾಮಾತೆಯ ಪೂಜೆಯ ಯಜ್ಞ ಬಳಿಗೆ ಸಾರಿ
ಬಂದತ್ತು. ಉತ್ಸಾಹ ಗಡಿಬಿಡಿಯು ಮೂಡಿದುದು
ಭಕ್ತಜನ ಕೋಟಿಯಲಿ. ಇಡೀ ಪ್ರಾಂತ್ಯವೆ ಎದ್ದು
ಮನೆಮನೆಗಳಲಿ ರಂಗುರಂಗಿನಿಂ ರಂಗವಲ್ಲಿ

ಸಿಂಗರಮೆಸೆದತ್ತು. ತಳಿರ್ ತೋರಣಗಳ್ ನಳ
ನಳಿಸಿದುವು ಎಲ್ಲೆಡೆಗಳಲಿ. ಗಂಧಕುಸುಮಾದಿ
ಸುಗಂಧದದ್ರವ್ಯಗಳ ಸಿರಿಗಂಪು ರಂಜಿಸಿತು ೧೪೦
ವ್ಯಾಪಕವೈಖರಿಯಲಿ. ಕಾಳಿಕಾ ದೇಗುಲದೊಳ್
ದುರ್ಗಾ ಪೂಜೆಯ ವ್ರತಾರಂಭಮಾಯ್ತು. ಎಲ್ಲವು
ಪ್ರಾಚೀನ ಸಂಪ್ರದಾಯದೊಳ್ ವಿಧಿವಿಧಾನಂ
ರಂಜಿಸಿರೆ ಗುರುವರಂ ಮುಂಗೆತ್ತು ಯಜ್ಞದಲಿ
ಮಂತ್ರದ್ರಷ್ಟ್ರಾರಧ್ವರ್ಯುರ್ಹೋತಾರಂ ತಾನ್
ಎನಲ್ಕೆ ಅದರ ನೇತೃತ್ವಂ ವಹಿಸಿದರ್ ತಮ್ಮ
ಮನಸೇಚ್ಛೆಯಲಿ. ಭಕ್ತರ್ ಕೂಡಿದರ್, ಶ್ರೋತೃ
ಗಣವೈದುದು. ಕಿಕ್ಕಿರಿ ತುಂಬಿತು ಜನಜಾತ್ರೆ;
ಒಳಹೊರಗೆ ಎಲ್ಲಿಯುಂ ತಾವಿಲ್ಲವಾಯಿತ್ತು.
ದೀಪಗಳ್ ಉರಿದುವು ಕುಡಿಕಟ್ಟದವೊಲ್. ಧೂಪ ೧೫೦
ಉರಿದುರಿದು ಸುಗಂಧಿತ ಧೂಮಮಾಲೆಯೇರ್ದುದು
ನಭೋದೇಶಕೆ. ಮಂತ್ರಘೋಷ ಮೊಳಗಿತು ರಾಗ
ಪೂರ್ಣವಾಗಿ. ಭಕ್ತಿರಸಧಾರೆ ಹರಿಯಿತು ಭಾವೋ-
ದ್ವೇಗದಿಂ. ಸ್ವಾಮಿಜಿಯ ಕಂಚಿನ ಕಂಠದುಲಿ
ಹರಿಯಿತ್ತು ಎಲ್ಲರೊಗ್ಗಿನಲಿ, ಮನಮನವತಣಿಪಂತೆ.

"ಶ್ರೀಮಾತಾ ಶ್ರೀಮಹಾರಾಜ್ಞೀ
ಶ್ರೀಮತ್ಸಿಂಹಾಸನೇಶ್ವರೀ ।
ಚಿದಗ್ನಿಕುಂಡಸಂಭೂತಾ
ದೇವಕಾರ್ಯಸಮುದ್ಯತಾ ॥"

"ದೇವರ್ಷಿಗಣಸಂಘಾತ
ಸ್ತೂಯಮಾಸಾತ್ಮವೈಭವಾ ।

ಭಂಡಾಸುರವಧೋದ್ಯುಕ್ತ
ಶಕ್ತಿಸೇನಾ ಸಮನ್ವಿತಾ ॥"

"ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಃ ।
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖಭಾಗ್ ಭವೇತ್ ॥"

ಗುರುವರಂ ಅದ್ವೈತದ ಸಂವಾದಿಯಿರ್ದುಂ ದುರ್ಗಾ
ಪೂಜೆಯಲಿ ಪಾಲ್ಗೊಂಡ ಬಗೆ ಇಬ್ಬಗೆಯಯಾನ
ಗಂಭೀರ ಸತ್ಯಚಿತ್ರಮೆನೆ ನಡೆದತ್ತು ಅಖಿಲ
ಭಕ್ತಾದಿಗಳ ಮುಂತೆ. ಹಿಂದೂಧರ್ಮವಂ ಮಡಿ
ಗೈಯಲಲ್ಲದೆ ನಾಶಬಡಿಸಲಲ್ಲ ನಾನ್ಯೆದುದು,
ಎಂಬೊಂದು ದೃಢ ಸಂಕಲ್ಪಮಿರೆ ಪ್ರತಿಕ್ರಿಯೆ
ಆವ ಬಗೆಯಾದೊಡೇಂ? ಅದರ ಗುರಿಯುವೊಂದೇ
ಎನೆ ಮೆಯ್ಮರೆತುಗೈದರಾ ದೇವಿ ಆರಾಧ-
ನೆಯ ವಿಶೇಷಮಂ.
ಸೆಪ್ಟೆಂಬರ್ ಉರುಳುರುಳಿ ಕಳಿದು
ಹೋದ ಬಳಿಕಂ ಅಕ್ಟೋಬರ್ ದೂರಮೆ? ಒಡನೆ
ಅಕ್ಟೋಬರ್ ಮಾಪ್ರಭು ತನ್ನ ಘನ ಪ್ರಭೆಯ
ಸಾಮ್ರಾಜ್ಯಮಂ ಮಿಣ್ಣನೆ ಸಂಸ್ಥಾಪಿಸಿ ತಣ್ಣನೆ
ಮೃದು ಹಸ್ತಗಳಿಂದೆ ಮುದ್ದಿಸುತ್ತೆ ಮೆರೆದನ್
ರಾಜವೈಭವದ್ಯೆಸಿರಿಯಲಿ. ಅನ್ನೆಗಂ ಆ
ದಿನ ಮುಖದ ಕೆಂಗಾಂತಿ ಸೋರ್ದುಸೂರೆಯಾಯ್ತೋ
ಎನಲ್ ಗಿಡು ಮರ ಸಸ್ಯ ಬಳ್ಳಿಗಳ್ ಹಿಮವೊತ್ತಿ
ಹೊಂಬಣ್ಣತಳೆದು ಉದುರುತಿವೆ ತೊಟ್ಟು ಕಳೆದಂತೆ.
ಮಂಜಿನ ಹನಿಮುತ್ತುಗಳ್ ಉದುರುದುರಿ ಎಲ್ಲೆಡೆ

ತುಂಬಿ ಹರಡಿರೆ ರವಿಕಿರಣಂಗಳ್ ಮುದ್ದಿಟ್ಟು
ಪ್ರತಿಫಲಿಸಿ ಥಳಥಳಿಸಿದುವು ಬಜ್ಜರದ ಕಿಡಿ
ಜಗಜಗಿಸಿ ಪೊಳೆವವೊಲ್ ಉದ್ಭಾಸಮಾಯ್ತು
ಊರಗಲಂ. ಎಲ್ಲೆಲ್ಲಿಯುಂ ಹನಿ ಹನಿ ಮುತ್ತಿನ ಶೋಭೆ
ಕಣ್ಮನಗಳಿಂಗೆ ರೋಚಕಮಾದಪುದು ನೋಡಿ
ನೋಡಿ ಮನದುಂಬುವಂತೆ. ಹಿಮಗಾಳಿ ಬೀಸಿತು
ಮೈಗಡಗಡನಡುಗುವ ಪಾಂಗಿನಲಿ.. ಕಾಲಗತಿ
ಪರಿವರ್ತನಾವರ್ತನದಲಿ ಸಿಲ್ಕಿ ಮೆರೆಯುತೆ
ದಿನದಿನಕೆ ವಾಮದಕ್ಷಿಣ ಪದನ್ಯಾಸವದು
ತೆಂಕಣ್ಗೊಮ್ಮೆ ಬಡಗಣ್ಗೊಮ್ಮೆ ತೂಗಿದುವೆನಲ್
ತೊನೆದುದಯ್ ಬೃಹದ್ ಪೃಥಿವಿ! ಕಲ್ಪನೆಗೆ ರೆಕ್ಕೆ
ಮೂಡಿರಲ್ ನೀಲವರ್ಣಚುಂಬೀ ಮಹೇಂದ್ರ
ಕುತ್ಕೀಲ ಮಸ್ತಕದ ಕಗ್ಗಲ್ಲ ಶಿಲೆಯನೊತ್ತಿ
ಮುದ್ದಿಸಿದ ಮಂಜು ಮುಗಿಲ್ ರಜತ ಕಿರೀಟಮಂ
ತೊಡಿಸಿದ ಪರಿಯಲಿ ಸೊಗಸಿ ಮೆರೆದುದು
ವಿರಾಡ್ರೂಪದ ಭವ್ಯ ತೇಜದಿಂ. ಗುರುವರನ
ಅಶಕ್ತತನು ಚಿಲ್ಲನೆ ನಡುಗಿತು ಕನಕಕಾಂತಿ
ವಸರುವ ವಸನದೊಳಗೆ. ದಿನದಿನಂ ಸರ್ವತ್ರ
ಅಸ್ವಸ್ಥತೆಯುಂ ಬಲಿಯುತಿರೆ ಪೊಳ್ತೆನಿತ್ತೋ
ಕಳೆಯುವುದು ಯೋಗನಿದ್ರೆಯಲಿ. ಮುಸ್ಸಂಜೆಯುಂ
ಒಯ್ಯನೆ ಅಡರಿ ಬರಲ್ ಶಿಷ್ಯರಂ ಬರಮಾಡಿ
ಬಳಿಗೆ ಪರಮಾದರದಲಿ ತಮ್ಮಯ ಜೀವನಾ-
ನುಭದಮೃತರಸಪಾನ ಮಾಡಿಸುತೆ ಮುಂದಿನ
ಭರತವರ್ಷದ ಭವಿಷ್ಯ ರೂಪುರೇಷೆಯುಂ
ನೇಯ್ದು ಕರ್ತವ್ಯ ಭಾರವೇನೆಂಬುದಂ ನೆರೆ

ವಿವರಿಸುವರ್.
ಇಂತಿಂತಿಂತು ಕಳೆಯುತಿರೆ ದಿನ
ಮಾನಂಗಳ್ ಶ್ರಾಂತ ಬದುಕಿಗೆ ಅಮಿತ ಶಾಂತಿಯ
ರಸವಂ ಬಡಿಸುವಂತೆ, ಮತ್ತೆ ಮತ್ತೆ ಏಳುವ
ಬೀಳುವಾ ಅಧಿಕ ಪ್ರಸಂಗಗಳ್ ಒದವಿದುವು
ಶಿಷ್ಯಗಣಕೆ ಸಂಕಟದುಂಬಳಿಯನೂಡುವೊಲ್.
ಮಾತೆಭುವನೇಶ್ವರೀ ದೇವಿಯುಂ ಮತ್ತಮಾ
ಗುರುವರನ ಸಹೋದರಂ ಆತ್ಮೀಯ ಶಿಷ್ಯರುಂ
ಗೃಹೀಭಕ್ತರುಂ ಮುಂದಾದರ್ ಗುರುವಿನ ಸತ್
ಸೇವೆಯಂಗೈಯ್ಯಲುರೆ. ದಿವಾರಾತ್ರಿಗಳ್ ಪಡಿ
ಮೊಗದಲ್ಲಿ ಬಹರ್ ಸಂದರ್ಶಕರ್, ನಿಶ್ಶಕ್ತ
ಶರೀರ ಸಮೆದು ಬೆಂಡಿನೊಲ್ ತೇಲುತಿರ್ದೊಡಂ
ಪುಸ್ತಕ ಪಠಣಂ ತಪ್ಪದು. ನಲ್ನುಡಿಗಳ್ ಸರಿ
ಪಿಂದುಳಿಯದು. ದಿನಚರಿಯಲಿ ಅದಲ್‌ಬದಲೇಂ
ಆಗದು. ಗುರುದೇವಂ ಪ್ರಾಂಗಣದಲಿ ಬಿಸಿಲ್
ಧಾರೆಯಲಿ ಮೀಯುತೆ ಪದ ಚಾರಣಗೆಯ್ಯುವರ್
ಶಿಷ್ಯರೊಡಗೂಡಿ. ಹಳೆಹಳೆಯ ನೆನಹುಗಳ ಝರಿ
ಹರಿವುದು ಸುರುಳಿ ಬಿಚ್ಚಿದ ಪರಿಯಲಿ.
ವೈದ್ಯರುಂ
ಗಮಿಸುವರ್. ಬಗೆಬಗೆಯ ಓಷಧಿಯ ತಂದುಣಿಸಿ
ಕುಡಿಸಿ ಪೋದಪರ್. ಮತ್ತೈದುವರ್ ಪೊಳ್ತುರುಳುವ
ಮುನ್ನ. ಕಳಕಳಿದುಂಬಿದಮನದಿಂ ಓಷಧಿಯ
ಪರಿಣಾಮಮಂ ತಿಳಿದರಿದು ಗಮನಿಸಿ ನೋಳ್ಪರ್.
ಏನಿರ್ದೊಡದರಿಂದೆ ಏಳುಬೀಳು ತಪ್ಪದೆ
ನಡೆದಪವು ಮುನ್ನಿನವೊಲ್. ಗುರುದೇವಂ ತನ್ನ

ಮನಮಂಡಲದಲಿ ಯಾವತ್ಕಾಲಂ ಸುಳಿಸುತ್ತಿ
ಧುಮುಧುಮಿಪ ಸಚ್ಚಿಂತನ ಮಂಥನಗಳಿಗೆಣೆಯೆ
ಇಲ್ಲವಾಯ್ತು. ಕಲಿಕತ್ತ ನಗರದ ಪರಮೋಚ್ಚ
ಧಾತ್ರಿಯಲಿ ಅತ್ಯುನ್ನತ ಸಂಸ್ಕೃತ ವಿಶ್ವವಿದ್ಯಾ-
ಲಯವಂ ತೆರೆದು ಸಾರ್ವಜನಿಕ ಶಿಕ್ಷಣಕೆ ಅನುವು
ಮಾಡಿಕೊಡುವ ಅಭಿಲಾಷೆ ಇರ್ದುದು ತಮ್ಮೊಳ್.
ವೇದೋಪನಿಷತ್ತುಗಳ ಧಾತರ್ ರಾಷ್ಟ್ರೀಯ
ಒಳ್ಪಿಗಾಗಿ ಲೋಕಹಿತಕಾಗಿ ಒಮ್ಮನದೊಮ್ಮತ
ವೆರಸಿ ರಚಿಸಿದ ಮಹೋನ್ನತಮಾ ಪ್ರಜ್ಞಾನ
ಸಂಪದಂ ಕೇವಲ ಕೆಲವು ಮಾನಿಸರ ದಿವ್ಯ
ಸೊತ್ತಾಗುಳಿಯದೆ ಲೋಕವ್ಯಾಪಿಗೊಳಿಪ ಪರಮ
ಚಿಂತನೆಯು ನಡೆದತ್ತು ಎಲ್ಲರೊಡನೆ. ಸೋದರ
ಸೋದರಿಯರಂಗೂಡಿ ಯೋಚಿಸುವರ್. ದಿನದಿನ
ಗೃಹೀಭಕ್ತರಂ ಬರಿಸಿ ವೆರಸಿ ಮನದಾಸೆಯ
ತಿಳಿಸಿ ಭವ್ಯ ಭಾರತದ ಸುಂದರ ಚಿತ್ರಮಂ
ನಿರೂಪಿಸುವರ್. "ರಾಷ್ಟ್ರದುದ್ಧಾರಕೆ ವಿದ್ಯೆಯೆ
ತಳಹದಿ. ಪರರಾಳ್ವಿಕೆಯಲಿ ನಮ್ಮ ರಾಷ್ಟ್ರೀಯ
ಗರುಡದೇವನ ರೆಕ್ಕೆಗಳೆ ಮುರಿದು ಬಿಳ್ದತ್ತು
ಎಲ್ಲರೊಗ್ಗಿನಿಂ ದುಡಿಯದೆ ಆಗದು" ಎಂಬುವರ್
ಚಿಂತನೆಯ ತೇರೇರಿ. ಕಲ್ಪನೆಯ ಎರೆಂಕೆಗಳ
ವೀಸಿವೀಸಿ ತೇಲುವರ್ ಬಾರತದಂಬರದಲಿ.
ಆ ಅನನ್ಯ ಗಂಭೀರ ಚಿಂತನೆಯ ಸಾರವೇ
ಪುಣ್ಯಭಾರತದ ಉತ್ಥಾನ. ಪುನರುತ್ಥಾನ.
ಆ ಮಹೋನ್ನತ ಭಾವನಾ ಸಾಗರದಿ ಮುಳುಗಿ
ಏಳದೆಯೆ ಪೇಳಲೆನಗಳವೇ? ಅವರ ಭವ್ಯ

ಚಿಂತನೆಯ ವಿಚಾರಂ? ಕೇಳ್, ಭಾಗೀರಥಿಯ;
ಕೇಳ್, ಅಲಕನಂದೆಯ; ಕೇಳ್, ಗುರುಭ್ರಾತೃಗಳ;
ಕೇಳ್, ಸಂದರ್ಶಕರ; ಕೇಳ್, ವರ ಧರಿತ್ರಿಯ;
ಕೇಳ್, ಬೇಲೂರು ಮಠವ; ಕೇಳ್, ಮಲಯಾದ್ರಿಯ;
ಕೇಳ್, ಅರಣ್ಯಾನಿಯ; ಕೇಳ್ ದಕ್ಷಿಣೇಶ್ವರದ
ಮಹಾಕಾಳಿಕೆಯ ಕೇಳ್, ಶ್ರೀಗುರುದೇವನಾ
ಕೇಳ್, ಬಂಗಾಲದೇಶವ ಕೇಳರಿತು ಮನದಿ
ಮಥಿಸಿ ತಿಳಿಯಿರೊ ಆಪನಿತು ಬಂಧು ಬಾಂಧವರೆ!
ಅಮೇಯಂ ಅಪ್ರಮೇಯಂ ಗುರುವರನ ಪರಮ
ಪ್ರಜ್ಞಾನದ ಪ್ರಜ್ಞಪ್ತಿ ಪ್ರಜ್ಞೆ!
                    ದಿನಗಳೆದಂತೆ
ಗೃಹೀ ಭಕ್ತರುಂ ಸಂದರ್ಶಕರುಂ ಭೇಟಿಯ
ಭಾಗ್ಯವ ಬಯಸಿ ಕರುಣೆದುಂಬಿ ಕಾತರಮನದಿ
ಬಂದಪುದು ವೆರ್ಚಿದುದು. ಪಾಠಪ್ರವಚನಗಳ್
ಅಂದಿಗಾದುವೆಂದೊಡಮದರ ಒಡಲ್ ನಲ್ನುಡಿ
ಮೆಲ್ನುಡಿಗಳಿಗೇಂ ಕೊರಮಿಲ್ಲಂ. ಬರು-ಹೋಗುವ
ದರ್ಶಕರ್ಗೆ ಅದರೊಳೆ ಸಂತೃಪ್ತಿ. ನೋನೋಡಿ
ಮಾತಾಡಿ ಹೊರವಂದು ಕಣ್ ಮರೆಯಲಿ ಕಂಬನಿ
ಧಾರೆಯಂ ಬಸಿದು ಅಳುತಳುತೆ ಪಿಂಮರಳುವರ್
ಖಿನ್ನ ಮನದಲಿ ನೊಂದು ನೋಯುತ್ತೆ.
                    ಕಲ್ಕತ್ತ
ನಗರದೊಳಂದು ರಾಷ್ಟ್ರೀಯ ಕಾಂಗ್ರೆಸ್ ಮಹಾಸಭೆ
ಅಧಿವೇಶನ ಕೂಡಲಿರುತಿರೆ ಅಖಿಲ ರಾಷ್ಟ್ರೀಯ
ಧೀಮಂತ ದ್ರಷ್ಟಾರರ್ ಬಂದು ನೆರೆದರ್ ಶತ
ಸಹಸ್ರ ಸಂಖ್ಯೆಯಲಿ. ಆಗಳೇಂ ಬರು-ಹೋಗುವ

ಭಕ್ತಜನ ಸಮುದಯಂ? ಹಲಕೆಲವು ವಿದ್ವಾಂಸ
ಭೂಪತಿಗಳ ದರ್ಶನವೊದವಿತು ಗುರುವರ್ಯಂಗೆ.
ಆಗಳ್ ಜಗದೊಳ್ಳಿಗೆ ದೇಶದೊಳ್ಳಿಗೆ ಸಲ್ವ
ವಿಷಯಗಳ್ ಚರ್ಚೆಗೈದುವು ಸಮಯಸ್ಫೂರ್ತಿಯಿಂ!
ಅಂತು, ಎಲ್ಲ ಸಂದರ್ಶಕರ್ ಸುಖದುಃಖಗಳ
ನದಿಯಲಿ ಮುಳುಗೆದ್ದು ನಿಡುಸುಯ್ಯುತೆ
ದುಃಖವಂ ಅದುಮಿಟ್ಟು ದೇಶಭಕ್ತ ವೇದಾಂತಿ
ವಿಶ್ವವಿಖ್ಯಾತ ಸ್ವಾಮಿ ವಿವೇಕಾನಂದರ
ದಿವ್ಯ ದರ್ಶನಂ ಪಡೆದು ಶುಭವಂ ಹಾರೈಸಲ್
ಭಾರಭಾರವಾದಪುದು ಹೃದಯ ಬಿರಿದವೊಲ್.
ಕಾಲದರ್ಝರಿ ಹರಿದು ಹರಿದು ಡಿಸೆಂಬರ್ ತಿಂಗಳ್
ಬಳಿ ಸಾರ್ದುದು; ಹಿಮಪುರುಷನ ಬೆನ್ನ ಹಿಂದಟ್ಟಿ
ಬಂದಿರ್ದಮುಗಿಲ್ಮಂಜು ದಟ್ಟಣಿಸಿ ಇಳಿದಿರೆ
ಧರೆಗೆ ಹಿಮವೊತ್ತಿ ಮೆರೆದುದು ತನುಮನಂಗಳಿಗೆ
ತನಿಮುದ್ರೆಯ ಮುದದಿಂದೊತ್ತಿ. ಗುರುದೇವಂಗೆ
ಪ್ರಾಂಗಣದೊಳ್ ಹಿಮಮಯ ಹವೆಯಿಂ ಪದಚಾರಣ
ಗೈವುದದು ಸಾಧ್ಯಮಾಗದಿರೆ ಅಗ್ಗಿಷ್ಟಿಕೆಯ
ಬಳಿ ಕಳೆವರ್ ನಸುವೊಳ್ತು. ಮಾಗಿಯ ಪ್ರಭುವಿನ
ಒಡ್ಡೋಲಗಂ ಮೆರೆದುದು ಜವರಾಯನ ತೇಜ
ರಾಶಿಯಲಿ. ಪೊಂಬಿಸಿಲ್ ಕಾವೇರೆ ಪೊರಗುಯ್ಯು
ಸುಡುವಿಸಿಲ್ ಮಜ್ಜನಂ ಪಡೆದು ಸುಖಸ್ನಾತರೆನೆ
ಸಮಾಧಾನದಿಂ ಒಳಗೈದು ಕವಿತೆಗಳಂ ಕೋದು
ಶಿಷ್ಯರಿಂಗೆ ಹಾಡಿ ತೋರಿಸುವರ್, ಕಲಿಸುವರ್.
ಮತ್ತೆ ಮತ್ತೆ ಭಕ್ತಿಯ ಗೀತೆಗಳ್ ಹಾಡುವರ್
ಕೊರಳ್ತುಂಬಿ. ಗುರುದೇವನಾ ಭಾವಸ್ಫೂರ್ತಿಯ

ಕಿರಣ ಜಾಲ ಹರಿವುದು ಮನತುಂಬಿ ಜಗತುಂಬಿ. ೩೦೦
ದನಿತುಂಬಿ ಹಾಡಿದರ್ ಸಂಗೀತೆಯನಿಂತಿಂತಿಂತು,

ಸಮಾಧಿ*

ಅಲ್ಲಿ ಶಶ ಸೂರ್ಯರಿಲ್ಲ,
ಅಲ್ಲಿ ನಿಶೆ ದಿನಗಳಿಲ್ಲ,
ಆ ಮಹಾ ಶೂನ್ಯದೊಳು
ಬಿಂಬ ಬ್ರಹ್ಮಾಂಡಮಹ!
ತೇಲುತಿದೆ ಛಾಯೆಯಂತೆ!

ಸುಳಿಮನದ ಶೂನ್ಯದಲ್ಲಿ
ಅಚಿರ ಮಾದೀ ವಿಶ್ವವೂ
ಮಳುಗುತಿದೆ ತೇಲುತಿದೆ
ಮುಳುಮುಳುಗಿ ತೇಲಿ ಸದಾ
'ಅಹಮಸ್ಮಿ' ಸೆಳೆವಿನಲ್ಲಿ!

ಮೆಲುಮೆಲನೆ ಆ ಛಾಯೆಯೂ
ಬ್ರಹ್ಮಾಂಡ ಗತಮಾಗೆ ತಾಂ
'ನಾನಿಹೆನ್' 'ನಾನಿಹೆನ್'
ಎಂಬಾ ಪ್ರವಾಹವೊಂದೇ
ಪ್ರವಹಿಂಪುದು ಬಿಡುವಿಲ್ಲದೆ!

ಆಹಹ! ಅದು ನಡೆಗೆಟ್ಟಿತು!
ಹೊಸಲು ಮುಂಬರಿಯದಿಹುದು!
ಶೂನ್ಯತಾಂ ಶೂನ್ಯಗತ!
ವಾಙ್ಮನಾತೀತವದು!
ಸಿದ್ಧನಿಗೆ ವೇದ್ಯಮಹುದು!

---

*ಕುವೆಂಪು ಅನುವಾದಿತಂ

ಶಿಷ್ಯ ಭಾಯಿಗಳ ಕೈಯಾಸರೆಯಲಿ ಮಹಾನ್
ದೇವನದಿಯ ತಟಿಸಿಯಲಿ ಕಗ್ಗಲ್ಲ ಪೀಠವ
ನಾರೈದು ಕುಳಿತುಕೊಂಬರ್; ಉದಯಾಸ್ತಂಗಳಲಿ
ಮನವಿಟ್ಟು, ಧ್ಯಾನಮಯಲೋಕದಲಿ ಸಂಪೂರ್ಣ
ಮುಳುಗಿ ವಿಹರಿಪರ್ ತಾನೇತಾನಾಗಿ. ನದಿಯಲಿ
ಜಲಚರಂಗಳ ಪೊಲ್ಲಾಟ, ಪ್ರವಾಹದ ಜುಳು
ಜುಳು ಮಂಜುಳಗಾನ, ಜಲಪಕ್ಷಿಗಳ ಮೇಲಾಟ
ಮಿಂಚುಳ್ಳಿಯ ಮಿಮಿಮಿಮಿಯ ರಾಗಮಯ
ಸಂಗೀತೆ ಮುಟ್ಟುವುದು ಅಂತರಂಗಮಂ. ಆ
ಒಂದೇ ಒಂದಾದ ಕೋಗಿಲೆಯ ರಾಗಮಾಲೆಯು
ಹೊಮ್ಮುತ್ತಿರೆ ಮತ್ತೆ ಮತ್ತೆ ತಮಗೂ ದನಿಗುಡುವ
ಹುಮ್ಮಸ್ಸು!
ಸದ್ದಿಲ್ಲದ ಶಾಂತಿಯಲಿ ಅರಳಿದ
ಬೈಗುವೊಳ್ತಿನ ಪಡುವಣೆಡೆಯು ಕೆಚ್ಚು ಸೋರ್ದೊಲ್
ಕೆಂಬೊಳ್ಳು ಕೊಲೆಗೈದ ಕಮ್ಮುಗಿಲ್ಗಳ ಕೆಂಪು
ನೆತ್ತರ್ಗೆಸರು ಪಸರಿಸಿದತ್ತು ಗುಡಿಗೋಪುರ
ನಿರ್ಮಿಸಿ. ನವನವೀನ ಕಲಾಕಲೆಯಂ ಭವ್ಯ
ವಿಶ್ವಾತ್ಮದಲಿ ಕೊರೆದು ಪ್ರದರ್ಶಿದುದೊ ಎನಲ್
ಗಗನ ಭಿತ್ತಿಯಮೇಲೆ ವರಚಿತ್ರವೊರೆದತ್ತು
ಅತ್ಯದ್ಭುತ ಶೈಲಿಯಲಿ. ಆ ಸಂದೃಶ್ಯಮಾನ
ಸೌಂದರ್ಯಮಂ ಮನಂದುಂಬಿ ಶಿಷ್ಯರೊಡಂ
ಸಾಲು ಮೆಟ್ಟಿಲುಗಳಂ ಏರುತೇರುತೆ ಮೇಲೆ
ಬಂದರಂಗಣಕೆ. ಏದುಸಿರ್ ಮೇಲೇರಿದುದು
ಬುಸಬುಸನೆ. ನಸುವೊಳ್ತು ವಿಶ್ರಮಿಸಿ ತರ್ವಾಯ
ಕೊಠಡಿಗೈದರ್, ಸೆಜ್ಜೆಯಮೇಲೆ ಕುಳಿತು ಬಯಲ

ಭಕ್ತಿಯಲಿ ಬೈಗಿನಾ ಪ್ರಾರ್ಥನೆಯ ಸಲಿಸಿದರ್.

"ಭಕ್ತಿ ಲಕ್ಷ್ಮೀ ಸಮೃದ್ಧಾನಾಂ
ಕಿಮನ್ಯದುಪ ಯಾಚಿತುಂ ।
ಭಕ್ತಿ ಲಕ್ಷ್ಮಾವಿಹೀನಾನಾಂ
ಕಿ ಮನ್ಯದುಪಯಾಚಿತುಂ ॥"

"ವಿಶ್ವ ತಶ್ಚಕ್ಷುರುತ ವಿಶ್ವತೋಮುಖೋ
ವಿಶ್ವತೋ ಬಾಹುರುತ ವಿಶ್ವತಸ್ಪಾತ್ ।
ಸಂ ಭಾಹುಭ್ಯಾಂ ಧಮತಿ ಸಂ ಪತತ್ರೈರ್ದ್ಯಾವಾ
ಭೂಮಿೂ ಜನಯನ್ ದೇವ ಏಕಃ ॥"

ಡಿಸೆಂಬರ್ ತಿಂಗಳಾಂತ್ಯ ಭಾಗದೊಳ್ ಗುರುವರ
ವಿವೇಕಾನಂದರ ದೈಹಿಕ ಸ್ಥಿತಿಗತಿಯದೆನಿತೊ
ಸುಧಾರಿಸಿ ರೋಗದ ಕಪಿಮುಷ್ಟಿಯ ಬಿಗಿತಂ
ಸಡಲ್ಚಿತು ದೈವಯೋಗದಿಂ. ಎದೆಯ ಕಟ್ಟುಸಿರ್
ನಿರ್ಭಾರವಾಗಿ ಹರಿದಾಡಿತು. ಲವಲವಿಕೆಯ
ತೇಜದಿಂ ತೊಳಗಿ ಬೆಳಗಿತು ಜೀವ. ಸ್ವಾಮೀಜಿ
ದಿನಚರಿಯ ವಿದ್ಯಮಾನಮಂ ಬರೆದರ್ ಸ್ವಚ್ಛ
ಸುವರ್ಣಾಕ್ಷರಗಳಲಿ. ಆನಂದ ಮೋದದಿಂ
ನಲಿದಾಡಿದುದು ಶಿಷ್ಯಗಣಂ. ಗೃಹೀ ಭಕ್ತರುಂ
ತೋಷದಿಂ ವಿಶೇಷತಮ ಪ್ರಾರ್ಥನೆ ಪೂಜೆಗಳ್
ಸಲಿಸಿದರ್ ದೇವಾದಿದೇವಗಣಕೆ. ಎಲ್ಲರ
ತನುಮನಗಳ್ ಪುಟಿಪುಟಿದುವು ಸೆಂಡಿನ ತೆರದಲಿ.
ತೋಷದ ನೆರೆ ಉಕ್ಕಿಹರಿಯಿತು ಮನಮನಗಳಲಿ.
ಜಪಾನ್ ದೇಶೀಯ ಒಕಾಕುರ ಒಂಬೊರ್ವ
ಘನವೆತ್ತ ವಿದ್ವಾಂಸನೈತಂದನ್ ಬೇಲೂರು

ಮಠದ ಪರಿಪುಣ್ಯ ಮಂದಿರಕೆ. ದಿವ್ಯಗುರುಗಳ
ಸಂದರ್ಶನಂಬಡೆದು ಹೃದಯ ಧಾತ್ರಿಯುಂ ಮಹ-
ದಾನಂದದಿಂ ಬಿರಿವೊಲಾಯ್ತು ಗುರುದೇವನ
ಸನ್ನಿಧಿಯಲಿ. ಪರಮಾತ್ಮನಂ ಕಂಡಂತೆವೊಲ್
ಭಕ್ತಿರಸ ಧುಮುಧುಮಿಸಿತು ಹೃದ್ದೇಶದಲಿ 'ಹಾ!
ಇಂತಪ್ಪ ಮಹಾನ್ ಗುರುದೇವನಂ ಆನಿನ್ನೆ-
ಬರಂ ಕಂಡೆನಿಲ್ಲಂ!' ಎಂದೆಂದು ಶರಣೆಂದು
ಶಿರವಂ ಮಣಿದಂ. ಮೇಣವರೊಡಂ ತಂಗಿರ್ದು
ಪ್ರವಚನಾದಿಗಳಿಂ ಸನಾತನ ಧರ್ಮಸಾರವ-
ನರಿದು ಪೀರ್ದು ಒಡಲಂ ತುಂಬಿ ನಲ್ ಶಿಷ್ಯನೆನೆ
ಜೃಂಭಿಸುತೆ ಮೆರೆದಂ, ಗುರುವರ್ಯನ ಸಂಗದಲಿ.
ಬೇಲೂರು ಮಠವೊಂದು ಸ್ವರ್ಗಧಾಮ ಎನಿಸಿತು
ಆ ಜಪಾನ್ ವಿದ್ವಾಂಸ ಮಹೋದಯಂಗೆ. ಕೆಲ
ಗಾಲವಂ ಗುರುವಿನೊಡನೆ ಸಾನಂದದಿಂ ಬಲ್
ಭಕ್ತಿಯಿಂ ಕಳೆದಂ. ಗುರುದೇವ ವಿವೇಕಾನಂ-
ದರ ಪ್ರಜ್ಞಾನ ಪ್ರದೀಪ್ತಿಯ ಕಿರಣ ಜಾಲದೊಲ್
ಸೆರೆಸಿಲ್ಕಿ ಸಂಸ್ನಾತನೈಸಿ ಪ್ರಿಯ ಭಕ್ತನುಂ
ತಾನಾಗಿ ಗುರುವಿನ ಸಹಚರಿಯಾಗಿ ನಿಂದಂ.
ಸ್ವಾಮಿಜಿಯ ಬೆಂಬಿಡದೆ. ಪಕ್ಷಮಾನಂಗಳುಂ
ಕಳೆದುವು. ಕೆಲ ಮಾಸಂಗಳ್ ಉರುಳಿದುವು. ದಿನವು
ಧರ್ಮಚರ್ಚೆಯದು ಕಳೆಯೇರ್ದುದು. ಅಭಿಜ್ಞಾನದ
ಝುರಿಯಂ ಹರಿಸಿ. ಪೊಳ್ತು ಶಾಂತಿಯಲಿ ಸಂವಿಧಾ-
ನದಲಿ ಉರುಳುವುದು ತಾವರಿಯದ ತೆರದಿ. ಮತ್ತೆ
ಒಕಾಕುರಂ ಗುರುವರ್ಯನ ಮನವೊಲಿಸಿ ಕೆಲದಿನ
ಮಾನಗಳ ಕಿರುಪ್ರವಾಸಕನುಗೊಳಿಸಿ ತನ್ನಯ

ಜೊತೆಗೂಡಿ ಬುದ್ಧಗಯೆಗೆ ಪೊರಡುವೊಡೆ ಗುರುವಿನ
ಮನವೊಲಿಸಿ ಪುರಿದುಂಬಿಸಿದನಾ ಒಕಾಕುರಂ.
ಗುರುವೊಪ್ಪಿ ಶಿಷ್ಯರೊಪ್ಪಿ ಪೊರಡುವ ಗಳಿಗೆಯದು
ಒದವಿಬರೆ ಸುಖಪಯಣಕೆ ಅಣಿಗೊಳಿಸಿ ಗುರುವಿನ
ಒಡಗೂಡಿ ಪೊರಮಟ್ಟನ್ ಒಕಾಕುರಂ. ಅಂದು
ಗುರುವರಂ ಶಿಷ್ಯರಿಬ್ಬರೊಡಗೂಡಿ ಮತ್ತಂ
ಪೊಚ್ಚಪೊಸ ಶಿಷ್ಯ ಒಕಾಕುರನ ಜೊತೆ ವಾಹನವ
ಏರಿದರ್ ದೂರದಾ ಬುದ್ಧಗಯೆಯಂ ಕುರಿತು.
ಪಚ್ಚವರ್ಣದ ವಾಹನಂ ಪೊರಟಿತು ಯಂತ್ರದ
ಒರಿಯ ಸದ್ದಂ ಕಾರಿ. ಎಲ್ಲಿಯುಂ ನಿಲ್ಲದೆಯೆ
ರೊಯ್ಯನೊಯ್ಯನೆ ಸಾಗಿದುದು ಸಾಗಿದುದು ತನ್ನ
ಯಾಂತ್ರಿಕಮಯ ವೇಗಾತಿವೇಗದಲಿ. ಅಗೋ ಅಲ್ಲಿ!
ಬುದ್ಧಗಯೆ! ಸಿದ್ಧಾರ್ಥ ಮಹನೀಯನಾ ಭವ್ಯ
ಬುದ್ಧತ್ವಂ ವಿಜೃಂಭಿಸುತೆ ಪ್ರಬುದ್ಧತ್ವಕ್ಕೆ
ಏರ್ವಡಿಸಿದ ಮಹಾನ್ ಬುದ್ಧಗಯೆ! ವಿರಾಡ್ರೂಪಿ
ಬೋಧಿವೃಕ್ಷ ದೇವ! ಸರ್ವತ್ರ ಆಕರ್ಷಣೀಯ
ಎಂಬೊಲ್ ಮೆರೆದತ್ತು ಕಣ್ಮನಗಳ ಸೆಳೆವಂತೆ.
ಕಾಲಕಾಲಾಂತರದ ಕಾಯಕಲ್ಪದಿಂದಲಿ
ಘನರೂಪದೊಳ್ ಬಲಿತು ಬಲ್ಲಿದರ್ಗೆ, ನಂಬಿದ
ಸುಜ್ಞಾನೋಪಾಸಕರ್ಗೆ ಪ್ರಜ್ಞಾನ ದಾನಿಯಾಗಿ
ಧೀರಗತಿಯಲಿ ನಿಂದಿಹ ಭೋದಿ ವೃಕ್ಷದೇವ!
ನೋಡುತಿರೆಯಿರೆ ದೈಹಿಕ ರೋಗದ ಬಾಧೆಯಂ
ಮರೆತರ್ ಗುರುವರ್ಯಂ! ಬುದ್ಧದೇವನಂದಲ್ಲಿ
ಚೆಲ್ಲಿಸೂಸಾಡಿದ ಸುಶಾಂತಿಪರಿಮಳ ರಾಶಿ
ತನುಮನಗಳಂ ಹೆಡೆಮುರಿಗಟ್ಟಿ ಕೆಡವಿತು ಬಲು

ನವುರಾಗಿ, ಗುರುವರ್ಯರ್ಂ ಸಂಪೂರ್ಣ ಧ್ಯಾನದಾ
ತನ್ಮಯತೆಯಲಿ ಮುಳುಂಗಿ ಮೈಮರೆತರ್. ಭೋಧಿ
ವೃಕ್ಷದೇವನ ಪರಮಕರುಣಾಶ್ರಯದ ಪದ
ತಲದಲಿ ಕಳೆಯಿತೆನಿತೊ ತನಿವೊಳ್ತು, ಹೃನ್ಮನಗಳ್
ತಣಿಯುವನ್ನ. ಆ ಪ್ರಶಾಂತಮಯ ಸನ್ನಿವೇಶ
ತನಿಯೊರೆಯಿತು ಮನಸೇಚ್ಛೆ ಭರಿಸುವನ್ನ. ಹೃನ್ಮನಂ
ತೋಷದಿಂ ತಣಿವನ್ನ. ಗುರುದೇವನಾ ಶಾಂತಿ
ಸವಿಯಂ ಸವಿದು ಸಂತುಷ್ಟರಾದರ್ ಮೈವೆರ್ಚಿ.
ದಿನದಗಾಲಿಯುರುಳ್ದು ಬೆಳ್ಮುಗಿಲ್ ಕೊಲೆಯಕಲೆ
ಕೆತ್ತಿ ನೆತ್ತರ್ಮುಗಿಲ್ ಬಗೆದು ಅರುಣನ ಚಿತೆಯದು
ಉರಿಯಿತ್ತು ಹೊತ್ತಿ. ನಿಡುವಗಲಾಗಳ್ ತಹತಹಿಸುತೆ
ಜಾರಿ ಬಿಳ್ದುದಾ ಕರ್ದಿಂಗಳಿನ ಕತ್ತಲೆಯ
ಕರಿಮಸಣಕೆ. ಬೀಸಿತು ನಿಶಿಗಾಳಿ, ಗೂಗರೆದುವು
ಗೂಬೆ. ಮಿನುಮಿನುಗಿದುದು ಮಿಂಚು ಮೆಯ್ಯಿನಲಿ
ನಕ್ಷತ್ರಾಳಿ. ಉಜ್ವಲಿಸಿತು ಧೃವತಾರೆ. ಮಿಳ್
ಮಿಳನೆ ಬೆಳಗಿದುವು ಸಪ್ತರ್ಷಿ ಮಂಡಲಂ. ತನಿ
ಯೊತ್ತಿ ಬೀಸುತಿರೆ ತಂಗಾಳಿ ಗಡಗಡ ನಡುಗಿತು
ಸ್ವಾಮಿಜಿಯ ಅಶಕ್ತ ಶರೀರ. ಭೋದಿ ವೃ-
ಕ್ಷದ ತಲದಿಂದೆದ್ದು ಓಂಬದಿಯ ಅರಣ್ಯಂ
ಬೊಕ್ಕರ್ ಗುರುದೇವಂ. ಅಲ್ಲಿಯೆ ನಸುದೂರದ
ತಗ್ಗಿನಲ್ಲಿ ಭಾಗೀರಥಿಯ ಮಹೋನ್ನತವಾರಿ
ಧಾರೆಯದ್ಭುತ ಪ್ರವಾಹ ಹರಿದತ್ತು ಕಣ್ಣಿಗೆ
ಹಬ್ಬವಾಗಿ. ನದಿದಂಡೆಯಲ್ಲಿ ಗವಿಯೊಂದಂ
ಕಂಡ ಸ್ವಾಮಿಜಿ ಬೊಕ್ಕರದಂ. ಕಳೆದುವಲ್ಲಿ
ಮೂದಿವಸಗಳ್ ಧ್ಯಾನಯೋಗದಲಿ. ಏಕಾಂತ

ಭಾರ, ಏಕಾಂತ ಶ್ರದ್ಧೆ, ಏಕಾಂತ ಭಕ್ತಿಯು
ಪರಮ ವ್ರತ ಎಲ್ಲವದು ಒಗ್ಗೂಡಿ ಸಂದುದು
ಅಪಾರತರ ಶಾಂತಿರಸಪಾನ ಮನಮತಿಗಳ
ವಿಜೃಂಭಣೆಗೆ. ಭಾಗೀರಥಿಯಲ್ಲಿ ಮಿಂದಾದ
ಬಳಿಕ ಜುಳುಜುಳು ರಾಗದೊಡನೆ ಪ್ರವಹಿಪನದಿ
ಧಾರೆಯಡೆಗೆ ಹರಿಯಿತು ದೃಷ್ಟಿ. ತಾರಾಕೋಟಿ
ಚಿತ್ರವಂ ಬಿಂಬಿಪ ಮಹಾನದಿಯ ದರ್ಪಣಂ
ಮೆರೆದತ್ತು ಹೃನ್ಮನಗಳಂ ಸೆಳೆಯುವ ತೆರದಲಿ.
ಸ್ವಾಮೀಜಿ ಮನದೊಳ್ ನಿಸರ್ಗ ಸೌಂದರ್ಯಮಂ
ಆಸ್ವಾದಿಸುತೆ ಮೆಲು ನಡಿಗೆಯಲಿ ನಡೆದರ್ ತವ
ಮಠಕೆ. ತಲೆವಾಗಿಲೊಳ್ ನಿಂದು ಕಾತರ ಮನದಿಂ
ಕಾದಿರ್ದ ಶಿವಾನಂದರ್ ಮುಗುಳು ನಗೆಯಿಂದೆ
ಸ್ವಾಗತ ಬಯಸಿದರ್. ಒಡನೊಡನೆ ಇತರ ಭ್ರಾತೃ
ಭಾಯಿಗಳ್ ಮುಂದ್ಯೆದರ್, ಕಳವಳದ ಬೇಗೆಯಲಿ
ಬೇಯುತಿರ್ದ ಗುರುಕುಲ ಕುಟುಂಬದ ಆನಂದ
ಮೇರೆ ಮೀರಿತು. ಎಲ್ಲರ್ ಅತಿ ಆತ್ಮೀಯತೆಯ
ಗುರುಭಕ್ತಿ ಭಾವದಿಂ ಬರಮಾಡಿದರೊಗ್ಗಿನ
ಅನ್ಯೋನ್ಯತೆಯಿಂ, ಭೋಜನ ಶಾಲೆಯ ಗಂಟೆಯು
ಕರೆ ಕೊಟ್ಟಿತು ಜಣಿಜಿಣಿಸಿ. ಗುರು ಭಾಯಿಗಳೊಡನೆ
ಉಂಡು ಮುಗಿಸಿದರ್ ರಾತ್ರಿಯೂಟಂ. ದೇಹದಲಿ
ಮೂದಿನಗಳಿಂ ಕಟ್ಟುನಿಟ್ಟಿನಲಿ ಧ್ಯಾನಗೈ-
ದೊಡಂ ಪೆರ್ಚಿನ ಏರು ಪೇರುಗಳ ಬಾಧೆಯುಂ
ಇರದಿರ್ದುದು ಎಲ್ಲರಿಗೆನಿತೋ ಸಮಾಧಾನ
ಮೂಡಿ ರಸದೌತಣವನುಂಡವೊಲ್ ತುಂಬಿದುದು
ಒಡಲ್ ಬಳ್ಳಿ. ಬಾಳ್ಬದುಕಿನ ಸಂಜೆಯಲಿ ಮಿಂಚಿ

ಬಹ ಸುಸುಂದರ ಶಾಂತಿಯಿಂ, ಕೃತಕೃತ್ಯವಿದ–
ನಾದ ಶಾಂತಿಯಿಂ, ಮತಿಮೌಢ್ಯದ ಮೇಲೆಸಗಿದ
ಪ್ರಚ್ಛನ್ನ ಸಮರದಾ ಶಾಂತಿಯಿಂ, ದೇವಗುರುವಿಂಗೆ ತಾಂ
ಸತ್ಪುತ್ರನಾದ ಶಾಂತಿಯಿಂ, ದತ್ತಕುಲದಾ
ಕೀರ್ತಿಯಂ ಪಿಡಿದೆತ್ತಿದ ಶಾಂತಿಯಿಂ, ಪೆತ್ತಮ್ಮೆಯ
ಒಡಲ್ ಬಳ್ಳಿಯಂ ತಣಿಸಿ ತನಿಯೂಡಿಸಿದ ನಿಜ
ಶಾಂತಿಯಿಂ, ಮಾತಾಯಿ ಶಾರದಾಮಣಿದೇವಿಯ
ಪರಕೆಯಂ ಧೈರ್ಯ ಸ್ಥೈರ್ಯದಿಂ ಪೂರೈಸಿರ್ದಾ
ಮಹೋನ್ನತ ಶಾಂತಿಯಿಂ ತುಂಬಿ ತುಳುಕಿರ್ದವೊಲ್
ಗುರುದೇವನ ಪ್ರಜ್ಞಾನ ಮಂಡಲ ತಣಿಯಿತ್ತು.
ಹೃದಯದ ಕರಂಡಿಗೆಯುಂ ತುಂಬಿ ತಣಿಯಿತ್ತು,
ಮನೋಮಂಡಲ ಶಾಂತಿ ಸಮಾಧಾನದಿಂ ತುಂಬಿ
ತಣಿಯಿತ್ತು, ಪ್ರಾಣಕಣಕೆ ತಂಪೂಡುವ ತೆರದಿ.
ನಮೋನ್ನಮೋ ಸ್ವಾಮಿ ವಿವೇಕಾನಂದ ಗುರು!
ನಮೋನಮೋ ಗುರುಕುಲತಿಲಕ! ಕಲಿಯುಗೀಯ
ಮಹಾನ್ ಯುಗ ಪ್ರವರ್ತಕ! ಸನಾತನ ಧರ್ಮ
ಪರಿಪಾಲಕ! ಮಲ್ಲಿಕಾ ಪೂವಳಿಯನರ್ಪಿಸಿ
ಶಿರವಂ ಮಣಿವನ್ನೈ ಶ್ರೀ ಮದ್ಗುರುವೇ!

"ಶ್ರೀಮತ್ಪರಂ ಬ್ರಹ್ಮ ಗುರುಂ ಸ್ಮರಾಮಿ
ಶ್ರೀಮತ್ಪರಂ ಬ್ರಹ್ಮ ಗುರುಂ ಭಜಾಮಿ ।
ಶ್ರೀಮತ್ಪರಂ ಬ್ರಹ್ಮ ಗುರುಂ ವಿದಾಮಿ
ಶ್ರೀಮತ್ಪರಂ ಬ್ರಹ್ಮ ಗುರುಂ ನಮಾಮಿ ॥"

"ಏನ ಸೃಷ್ಟಂ ಜಗತ್ ಸರ್ವಂ
ರಕ್ಷತ್ಯಖಿಲಂ ಜಗತ್

ಜಗತ್ ಸಿಂಹರತೇಯಚ್ಚ ತಸ್ಮೈ
ಶ್ರೀ ಬ್ರಹ್ಮಣೇ ನಮೋನ್ನಮಹಃ ॥”

ಮುಂಬೆಳಗಿನ ಪ್ರಾತಃರ್ವಿಧಿಗಳಂ ತೀರ್ಚಿರ್ದ
ಬಳಿಕ ಪ್ರಾರ್ಥನೆಯಂ ಸಲಿಸಿ ಪೊರಗೈದಾಗಳೆ
ಒಕಾಕುರ ಮಿತ್ರನುಂ ಬಳಿಗೆತ್ತು ಪ್ರಣಾಮ
ಸಲಿಸಿ ಕರಮುಗಿದಂ. ವಿದಾಯಮಂ ಪೇಳಲೈದ
ವಿದ್ವಾಂಸನಂ ಪ್ರೇಮ ಗೌರವಾದಿಗಳಿಂದೆ
ಬೀಳುಕೊಡುತೆ, ಗುರುವರ್ಯಂ ಪರಮ ಪಾದಗಳ್
ಬೆಳೆಸಿದರ್ ಕಾಶಿ ಪುಣ್ಯಕ್ಷೇತ್ರಕೆ. ಬಹುಜನ
ಬಾಹುಳ್ಯದಿಂ ತುಂಬಿ ತುಳುಂಕುವ ಕ್ಷೇತ್ರವದು
ಒಳ ಪುಗಲ್ ಆಗದನಿತು ಕಿಕ್ಕಿರಿದು ತುಂಬಿತ್ತು.
ಪೂಜಾದಿ ವ್ರತಗಳಲಿ ಮನವಿಟ್ಟು ಜಗಮರೆತ
ಜನ ಸಂಪದಕೆ ಇತ್ತಣ ಪರಿವೆ ಇರದನಿತ್ತು
ಗಂಭೀರ ಭಾವ ಮೆರೆದತ್ತು ಆ ಸಂತೆಯಲಿ.
ಜಡತ್ವ ಬಡತ್ವ ಮುಗ್ಧತ್ವಗಳ ಕೆಳೆತನಂ
ಬೆಸೆದು ಗಂಭೀರ ಗತಿಯಳೊಂದಾದ ಕರುಣಾ-
ಜನಕ ದೃಶ್ಯಮೆಸೆದುದು ಕರುಳ್ ಕೋರೈಸುವವೋಲ್!
ಭಾರತದ ಸ್ಥಿತಿಗತಿಯನರಿಯುವೊಡೆ ಇಂತೊಂದು
ಮಹತ್ತರ ಪುಣ್ಯಕ್ಷೇತ್ರ ಅಥ ಸಂತೆ ಜಾತ್ರೆಯ
ಸಂದರ್ಭವಂ ಕಂಡರಿದಲ್ಲದೆ ತಿಳಿಯದಾರ್ಗು
ಒಳಗೊಳಗಣ ದುಸ್ಥಿತಿಯತ್ಯಂತದುಸ್ಥಿತಿ.
ಸ್ವಾಮೀಜಿಯುಂ ಭವ್ಯ ಭಾರತದ ಭವಿಷ್ಯವ
ಕುರಿತು ತನ್ನೊಳ್ ನೆನೆಯುವರ್, ಮರುಗಿ ಕರಗುವರ್.
ಧೀರ ಧೀಮಂತ ಧೀರೋದಾತ್ತ ಸಿಂಹದಾ
ಕೆಚ್ಚಿನ ಕಿಡಿಯಂ ಬದಿಗೊತ್ತಿ ಭಾವಾವೇಶ-

ದಾವೇಶದ ತರಂಗದಲಿ ಮುಳುಗಿ ತೇಲಿದರು.
ಮನಮರುಗಿ ಕರುಳ್ ನುಲಿದು ಸಂಕಟದವತರಣ
ಮೊಳಕೆಯೊಡೆಯಿತು ಹೃದಯ ಕರಂಡದಾಳದಲಿ.
ಅಲ್ಲಿಯೇ ಕಳೆದುದೊಂದು ವಾರ ಪರಮ ಶಿಷ್ಯ
ಗಣದೊಡಂಗೂಡಿ. ಶ್ರೀರಾಮಕೃಷ್ಣರ ಜಯಂತಿ
ಮಹೋತ್ಸವವುಂ ಬಳಿಸಾರಿರೆ ಪೊರ ಮಟ್ಟರಾ
ಸ್ವಾಮೀಜಿ ಅಸವಸದಲಿ, ಉಗಿಬಂಡಿಯನಿಡಿದು.
    ಶ್ರೀಕಾಶೀ ಕ್ಷೇತ್ರದಿಂ ದಕ್ಷಿಣೇಶ್ವರಕಾಗಿ
ಸಾಗಿತ್ತು ಪಯಣಂ ನಿರಂತರಗತಿಯಲಿ. ಜೊತೆ
ಜೊತೆಗೆ ಶಿಷ್ಯರಿರುತಿರೆ ಹಾಲ್ಸಕ್ಕರೆಯಕ್ಕರೆ
ಉಕ್ಕಿ ಹರಿದುದು ಹೃದಯಾಬ್ಧಿಯಲಿ. ಇಕ್ಕೆಲದಿ
ಸುಸುಂದರ ಬಂಧುರತೆಯೊಳೆಸೆವುದು ಭಾರತಿಯ
ಪರಮ ಪುಣ್ಯ ಪ್ರಶರೀರಂ. ಎತ್ತೆತ್ತಲುಂ ಆ
ಪಚ್ಚ ಪಟ್ಟುಡೆಯ ಶೋಭೆಯಲಿ ರಂಜಿಪ ವನಧಿಯ
ಚಿತ್ರ ಮನ ರೋಚಕಂ. ಪಶುಗಳ. ಗೋವಳಿಗರ,
ಸಸಿ ನಾಂಟುವ ಮಹಿಳೆಯರ, ಉತ್ತುವ ಕೃಷಿಕರ
ದೃಶ್ಯಮೆಸೆವುದು ಆಗಳಾಗಳ್. ಗುರುದೇವಂ
ಪಯಣದ ಪರಿಶ್ರಮವಂ ಸಹಿಸಿ ಹಾದಿಯಂ
ಕಳೆದು ಸೇರಿದರ್ ಬೇಲೂರು ಮಠವಂ. ರಾತ್ರಿ
ಬೆಳುದಿಂಗಳೂಟ ನಡೆದುದು ಎಲ್ಲ ವಟುಗಳಂ
ಕೂಡಿ ತೋಷದಿಂ. ಮರುದಿನಂ ದಕ್ಷಿಣೇಶ್ವರ
ದೇಗುಲಕ್ಕೆ ಪೊರಟರ್ ಎಲ್ಲರೊಗ್ಗಿನಲಿ. ಗುರು
ದೇವನ ಜಯಂತುತ್ಸವಕಾಗಿ ಪಚ್ಚ ಪಸುರ್
ತಳಿರ್ ತೋರಣರಂಜಿಸಿದತ್ತು ತರತರದೊಳ್
ಮೆರೆದ ಪೂವುಗಳೊಡಂ. ಬಹುಜನರ್ ಗಮಿಸಿದರ್

ಭಕ್ತರ್ ವರಶಿಷ್ಯರ್ ವಿದ್ವಾಂಸರ್ ಒಗ್ಗೂಡಿ
ನೆರೆದ ಪರಿ ಆಪ್ಯಾಯಮಾನಮಾದತ್ತು ಮನ
ಮತಿಗಳಿಗೆ. ಸ್ವಾಮೀಜಿ ಉತ್ಸವದೊಳ್ ಕೂಡಿ
ಎಲ್ಲವಂ ಸಾಂಗಗೊಳಿಸಿ ಪಿಂತಿರುಗಿದರಾ ದಿನ
ಮಾನಂ ಕಳೆದು ನಿಶಿ ಅಡರುವ ಮುನ್ನಂ. ಮಠಕೆ
ಪಿಂದಿರುಗಿದ ಬಳಿಕಂ ಸ್ವಾಮೀಜಿಯುಂ ಬಳಲಿ
ಸೋಲ್ದು ಕೆಡೆದರ್ ತಮ್ಮ ಸೆಜ್ಜೆಯಲಿ. ಊಟವುಂ
ಸೇರದು, ಸವಿ ನಿದ್ದೆಯುಂ ಬಾರದು ಕಣ್ಗೆ. ಮೈಯೊಳ್
ಸುಡುಬೆಂಕೆ ಸುಡುವ ತೆರದಿ ಪ್ರಕಾಂಡ ಹಿಂಸೆಯು
ಕಾಡಿದತ್ತು, ಒಡಲ ಬಳ್ಳಿಯುಂ ಹರಿದುದೋ ಹೃತ್
ತಂತುಗಳ್ ಕಡಿದ್ದುವೋ ಕೊರಳ್ಗೆ ಉರುಳ್ ಬಿಳ್ದು
ಕೊರೆದುದೋ ಎನಲ್ ಸೋಲ್ದು ಸೊಪ್ಪುಸೊಗಡಾದರ್.
ವೈದ್ಯರೈದರ್, ಪಂಡಿತರೈದರ್ ಮದ್ದುಗಳ್
ಮೈಸೇರಿದುವು. ಶುಶ್ರೂಷೆ ನಡೆದುದು ಯಥೋಚಿತ
ಗತಿಯಲಿ. ಸಕಲ ಕಾರ್ಯಕ್ರಮಗಳ್ ಬದಿಗೊತ್ತಿ
ಸುವಿಶ್ರಾಂತಿಯಲಿ ಕಳೆದುದು ಕಾಲನಿಧಿ ಅಮಿತ
ಶಾಂತಿಯಲಿ. ಗುರು ಭ್ರಾತೃಗಳ ಆರೈಕೆ ಹಾರೈಕೆ
ಮತ್ತಮಾ ಪ್ರಾರ್ಥನೆ ಜಪ ವ್ರತ ಪೂಜಾದಿಗಳ್
ನಡೆದುವು ಶ್ರದ್ಧಾನಿಷ್ಠೆಯಲಿ. ಆವ ಅಪದೈವದ
ಅವಕೃಪೆಯೊ ಎನಲ್ ಕಟು ಕಠಿಣಮೇ ಆದತ್ತು
ಸಾಮೀಜಿಯ ಚಿಕಿತ್ಸಾ ವಿಧಾನಂ ವೈದ್ಯರಿಗೆ.
ವಾರವೊಂದು ಉರುಳಿತು ಎಂದಿನವೊಲ್. ದುರ್ಗಾ
ಮಾತೆಯಾ ಪ್ರೇರಣೆಯೊ ಎನಲ್ ರೋಗದ ಭದ್ರ
ಮುಷ್ಠಿ ನಸು ಸಡಲ್ಚಿತು ಲಘುವಾಗಿ. ಸ್ವಾಮೀಜಿ
ಒಳಹೊರಗೆ ತಿರುಗಾಡಿ ಪದಚಾರಣಗೈಯುತೆ

ಎಲ್ಲರ ಮನಕೆ ಮುದವನೂಡಿಸಿದರ್, ಮೊಗದೊಳ್
ಎಳೆನಗು ಪಸರಿಸಿ. ದಿನಚರಿಯಲಿ ಅನಿತಿನಿತೆನೆ
ಅಲ್ಪಸ್ವಲ್ಪತರದಲಿ ಅದಲ್‌ಬದಲ್‌ಗೊಂಡಿರೆ
ಭಕ್ತಜನ ಹರ್ಷಿತರಾದರ್ ಮನಂ ಮುದಿಸಿ.
ಪದ್ಮಾಸನದೊಳ್ ಕುಳಿತು ಎಲ್ಲರೊಡನೆ ಉಂಡು
ಹಾಸ್ಯದ ಚಟಾಕಿ ಹಾರಿಸುವರ್. ಮಠಗಳ ಬಗೆ
ಬಗೆಯ ಕಾರ್ಯ ವಿಧಾನವ ಅರಿತುಕೊಂಬುವೊಡೆ
ಉತ್ಸಾಹ ತೋರುವರ್. ಮುಂದಿನಮಿತ ಕಾರ್ಯದ
ವಿಚಾರದಲಿ ಲಘುಚರ್ಚೆ ನಡೆಸುವರ್. ಓಷಧಿ-
ಪಥ್ಯಗಳಲಿ ಮನವಿಡುವರ್. ಬೆಳಗಿನ ಪೊಂಬಿಸಿಲ್
ಸ್ನಾನಗೈದಪರ್. ಅಂತಿಂತು ಸುಲಭದಿ ಮನವಂ
ಕಾರ್ಯದಲಿ ತೊಡಗಿಸುವರ್ ಭ್ರಾತೃಗಳನೊರ್ಮೆ ಕುರಿತು
ನುಡಿಸಿದರಿಂತು

"ಮಮ ಆತ್ಮೀಯ ಪುತ್ರರಿರಾ!
ಭಾರತ ಜನನಿಯ ನೆಚ್ಚಿನ ಸೇವಕರಿರ ಕೇಳಿ!
ಉಪನಿಷತ್ ಗ್ರಂಥಗಳ ಪುಟಪುಟಗಳೆನಗಿತ್ತ
ದಿವ್ಯ ಕಟ್ಟೊತ್ತಾಯದ ಉಪದೇಶಮಿದು, ನೀವ್
ಮನಗೊಟ್ಟು ತಿಳಿಯಿರಿ, '**ಬಲಮುಪಾಸ್ಯ**' ಎಂಬುದೇ
ಪ್ರಪ್ರಥಮದ ಸದುಪದೇಶ. ಅದೆನ್ನನುಂ ದಿಟ್ಟ
ಮಾರ್ಗದೊಳ್ ನಡೆಸಿರ್ಪುದು ದಿಟ. ಎನ್ನಯ ಕರ್ಣ
ಪಟಲಗಳಲಿ ಮಿಡಿವುದು ಸದಾ 'ಹೇ ಮಾನವಾ!
ಬಲಶಾಲಿಯಾಗು! ಅಶಕ್ತಿಯಂ ತೊಡೆದು ಹಾಕು !"
ಎಂಬುವ ಅನನ್ಯ ಧೀರೋದಾತ್ತ ವ್ಯಾಖ್ಯಾನ
ಎನ್ನಂ ನಿಜ ಗುರಿಯತ್ತ ನಡೆಸಿದುದು ಸತ್ಯವೆ.
ಇದು ಎಲ್ಲ ದೇಶೀಯ ಮೇಣೆಲ್ಲ ಕಾಲೀನ

ಜನಾಂಗಮರಿತು ಜೀರ್ಣಿಸಿಕೊಂಬುದೇ ಬಾಳ್
ಬೆಳಗೆ ಪ್ರಬುದ್ಧ ಸಂದೇಶ. ನಮ್ಮ ಬೃಹದ್
ಸಾಮಾಜಿಕ ಜೀವನಮಂ ದುರ್ಬಲಗೊಳಿಪ್ಪ
ಎಲ್ಲ ಸಂಗತಿಗಳಂ ಶತಶತಮಾನಗಳಿಂ
ಒಪ್ಪಿ ಅಪ್ಪಿಕೊಂಡಾವು ದಾಸ್ಯ ಜೀವನಕೆ
ಪಕ್ಕಾದುದೇ ದಿಟಂ! ಮಣ್ಣು ಹುಳುಗಳ ತೆರದಿ
ತುಳಿವವರ ಕಾಲಬಳಿಯೆ ಹರಿದಾಡುವ ಹೀನ
ದೀನತೆಯಲಿ ರಾಷ್ಟ್ರೀಯ ಜೀವನದ ಏಕ ಮಾತ್ರ
ಗುರಿಯಾಗಿ ಬಾಳ್ವುದೇ ಜಡಭರತತ್ವಕೆ ಸಾಕ್ಷಿ!
ನಿಮ್ಮೆಲ್ಲರಾ ರಕ್ತ ಬಾಂಧವ್ಯದೊಳ್ ಬದುಕಿ
ನಿಮ್ಮೊಂದಿಗೇ ಸಾಯ್ವುಗೆಳೆಯನಾಗಿ ಆನುಂ
ಪೇಳ್ವ ಕಳಕಳಿಯ ಮನವಿಯಂ ಕಿವಿಗೊಟ್ಟು ಕೇಳಿ!
"ಎಮಗೆ ಅತ್ಯವಶ್ಯಮೆನೆ ಶಕ್ತಿ-ಸಾಮರ್ಥ್ಯ, ಇಂ
ಬೇರಾವುದರ ಅಗತ್ಯಮಿಲ್ಲಂ! ಉಪನಿಷತ್
ಎಂದೊಡೆ ಸಕಲ ಶಕ್ತಿಗಳ ಗಣಿಯ ಖನಿ. ಇಡೀ
ಜಗತ್ತಂ ಸಚೇತನ-ಸಶಕ್ತ-ಸತೇಜಗೊಳಿಪ
ಲಸತ್ ಸಾಮರ್ಥ್ಯದ ಖನಿ. ಅಸಡ್ಡೆಯಂ ತಿವಿದು
ಕೊಚ್ಚಿಕಂಡರಿಪ ದಿವ್ಯ ವಜ್ರದ ಬಂಢಾರ!
ಅದುಂ ರಣದುಂದುಭಿಯ ಸ್ವನದಿಂ ಜಗದೆಲ್ಲಾ
ರಾಷ್ಟ್ರಗಳ ಮನುಕುಲಕೆ ಈವ ಸಂದೇಶಮಂ
ಕೇಳಿ! ಎಲ್ಲಾ ವಗೆಯ ಜಾತಿ ಪಂಥಗಳಲಿನ
ದುರ್ಬಲರ್ಗೆ ದೀನ ದುಃಖಿಗಳಿಂಗೆ ಪದದಲಿತ
ನತದೃಷ್ಟರಿಂಗೆ ತಮ್ಮಯ ಕಾಲಮೇಲೆದ್ದು
ನಿಲ್ವಂತೆ, ಸಂಪೂರ್ಣ ಸ್ವತಂತ್ರ ಪಡೆವಂತೆ
ಯುಗಯುಗಾಂತರಗಳಿಂ ಕರೆಕೊಡುತಿರ್ಪುದೆಮಗೆ!

ಸ್ವಾತಂತ್ರ್ಯ ಎನೆ, ದೈಹಿಕ ಸ್ವಾತಂತ್ರ್ಯ, ಮಾನಸಿಕ
ಸ್ವಾತಂತ್ರ್ಯ ಮೇಣ್ ಆಧ್ಯಾತ್ಮಿಕ ಸ್ವಾತಂತ್ರ್ಯ! ಇದೇ
ಉಪನಿಷತ್ತುಗಳ ಪಲ್ಲವಿ ಯಾ ಆದೇಶಂ!
"ಉಪನಿಷತ್ತುಗಳೇ ನಮ್ಮಯ ಧರ್ಮಗ್ರಂಥಗಳ್.
ಭಾರತದೊಳ್ ಆವುದೇ ಪಂಥಮಿರಲಿ. ಆವುದೇ
ತತ್ವಜ್ಞಾನಮಿರಲಿ ಅದರ ಆಧಾರಕೆ ಉಪನಿ-
ಷತ್ತು, ಅರ್ಥಾತ್ ವೇದಗಳಿಂಗೆ ಶರಣಾಗ
ಲ್ವೇಳ್ಕುಂ, ಅದಲ್ಲದೊಡೆ ಅವನದು ಪಾಖಂಡೀ
ಮತಮಾದಪುದು, ಅಂತದರಿಂ ಇಂದಿನಾಕಾಲ
ಮಾನದಲಿ ನಾಡಿನ ಪ್ರತಿಯೊರ್ವ ಹಿಂದುವಿಂಗೂ
'ವೇದಾಂತಿ' ಅಥ 'ವೈದಿಕ' ಎಂಬ ಅಭಿಧಾನವೇ
ಚೆನ್ನು. ಅದೆ ಅರ್ಥದೊಳ್ ಆನುಂ ಸದಾ 'ವೇದಾಂ
ತವಾದ' 'ವೇದಾಂತ' ಎಂಬ ಶಬ್ದಗಳಂ ಬಳಸಿ
ನುಡಿಯುವೆನ್ "**ಏವೇದಂ ಸರ್ವಂ**" ಎನಲ್ಕದಂ
ಎಲ್ಲರ್ ತಿಳಿದು ಅರಿದು ಪರ್ಯಾಲೋಚಿಸಿ ನೋಡಿ."
ದಿಗ್ ದೇಶದಲಿ ಅಸ್ತಗಿರಿಯ ಬೆಂಗಡೆಯೊಳ್
ಇಳಿಯುತೊಯ್ಯನೆ ಅಸ್ತಂಗತನಾದನ್ ಅರುಣರವಿ,
ಇಳೆಯಮೇಲೆ ಮಸುಗಪ್ಪುಗವಿಯ ತೊಡಗಿದತ್ತು.
ಸಾಯಂಸಮಯದ ಇನಿವೊಳ್ತು ತನಿಮುದ್ರೆಯಂ
ಒತ್ತಿ ಒಲ್ಯೆಸುತಿರಲ್ ಧ್ಯಾನಮುಗ್ಧಮಾದುವು
ಗುರುವರ್ಯನ ಹೃನ್ಮನಗಳ್. ಅನುಕ್ರಮವಾಗಿ
ಎಂದಿರದ ಔದಾಸೀನ್ಯ ಆವರಿಸಿತು. ನಗೆ
ಮಾತುಗಳ್ ಉಳಿದುವು ತುಟಿಗಳ ಹಿಂದೆ. ನಾಯಕ,
ಆಚಾರ್ಯ, ಶಿಕ್ಷಕ, ಗುರು ವಿಧವಿಧ ಮಹೋನ್ನತ
ಉಪಾಧಿಗಳೆಲ್ಲವುಂ ಸಡಲ್ಚಿ ಉದುರಿ ಬಿಳ್ಬು

ಮಣ್ಣಾದುವು ಮಣ್ಣಹುಡಿಯಲಿ ಬೆರೆತು. ಹಣ್ಣೆಲೆ
ಹಣ್ಣಾದ ಪರಿಯಲ್ಲಿ. ವಜ್ರ ಶರೀರಿ, ಸಿಡಿಲಾಳು,
ವೇದಾಂತ ಕೇಸರಿ, ಜಗತ್ ಪ್ರಸಿದ್ಧ ಪುರುಷ
ವರೇಣ್ಯಂ ಮೆಲುಮೆಲ್ಲನೆ ಬ್ರಹ್ಮಮೌನದಲಿ
ಮುಳುಗತೊಡಗಿದಂ. ಶಾಂತಪ್ರಶಾಂತನಿಶಾಂತ
ವಾಶಾಂತಸುಶಾಂತವಿಮಲಶಾಂತ ಸುವಿಶಾಲ
ವಿಶ್ವದ ಮಹಾನ್ ಪಾರಾವಾರದೆಡೆಗೆ ತಾಂ
ಸರಿಯತೊಡಗಿದುದು ದಿವ್ಯಾತ್ಮನಿಧಿ. ಮಿನ್ನೊರ್ಮೆ
ಶ್ರೀರಾಮಕೃಷ್ಣ ಪರಮ ಹಂಸರುಂ ಶಿಷ್ಯರಿಗೆ
"ನರೇಂದ್ರನೆಂದು ತನ್ನ ಸ್ವರೂಪಮಂ ಅರಿದು
ತಿಳಿದಪನೊ ಅಂದು ದೇಹ ಬಿಡುವಂ" ಎಂದೆಂದು
ತಿಳಿಪಿರ್ದುದು ನೆನವರಿಕೆಯಾಗೆ ಗುರುಭಾಯೀ
ಬ್ರಹ್ಮಾನಂದರ್ ಕೇಳಿದರ್ ಸ್ವಾಮಿ ವಿವೇಕಾ
ನಂದರಂ "ಸ್ವಾಮೀಜಿ, ನಿಮಗೆ ನಿಮ್ಮಯ ದಿವ್ಯ
ಸ್ವರೂಪದರಿವುಂಟಾಗಿದೆಯೆ?" ಕಾತರಿತ ನುಡಿ
ಪೊಣ್ಮಿರಲೊಡನೊಡನೆಯೆ ಎದೆ ಡವಡವಿಸಿತು, ಏಂ
ಉತ್ತರ ಬಂದಪುದೊ ಎಂಬ ಯೋಚನೆದುಂಬಿ.
ಆ ಗಳಿಗೆಯಲಿ. ಸ್ವಾಮಿ ವಿವೇಕಾನಂದರುಂ
ಮುಖಾಂಭೋಜದಲಿ ಎಳೆ ಮುಗುಳ್ ಅರಳಿಸಿ ಭ್ರಾತೃ
ಭಾಯಿಯ ವದನಮಂ ಪರಿವೀಕ್ಷಿಸುತ ಭಾವೋ-
ತ್ಕಂಠಿತ ನುಡಿಯ 'ಹೌದು'! ಎಂಬವೊಲ್ ಮೆಲ್ಲನೆ
ತೂಗಿದರ್ ಮಂಡೆಯಂ. ಹಾ! ಆ ನುಡಿ ಒಡಲಂ
ಕೋರೈಸಿದುದು. ಸ್ವಾಮಿ ಬ್ರಹ್ಮಾನಂದರ್ ಮರು
ನುಡಿಯದಾದರ್. ಎರ್ದೆಯೊಳ್ ಕಟ್ಟುಸಿರ್ ಸಿರ್ಕಿ
ಮಿಲಿಮಿಲಿಸಿತು. ನಿಟ್ಟುಸಿರ್ ಬಿಟ್ಟು ಕಡು ದುಃಖದ

ಕುಂಡದಲಿ ಮುಳುಗಿದರ್ ತಾವರಿಯದೊಲ್. ತಮ್ಮ
ತೀವ್ರ ತಳಮಳಮಂ ಹೊರಪಡಿಸದಿರಲ್ ನಭೋ-
ದೇಶದೆಡೆಗೆ ಕೈದೋರ್ರು "ಅದೊ, ಕಾಣಿಮದೊ, ಅಲ್ಲಿ
ಕ್ರೌಂಚಗಳ ಹಿಂಡು ಹಾರುತಿವೆ ಗುಡಿ ಗಟ್ಟಿ! ಓ,
ಜಲಾರ್ದ್ರಮಾ ಪಕ್ಷಿಗಳ ಬಿರುಮ್ಮೈಯ ನೋಡಿ!"
"ಅಹುದು ಗಡ? ಎಂ ಶಿಶ್ತಿನಿಂ ಗೂಡಿ ಹಾರುತಿವೆ!"
"ಬೆಣ್ಣೆ ಬಿಣ್ಣಿನ ಏಕ ರೀತಿಯ ತದೇಕತರ
ರೂಪಿನ ಸುಸುಂದರ ಸೃಷ್ಟಿಗೆ ಭಗವಂತಂ
ಆವ ವಸ್ತುವಂ ಮಾದರಿಯಾಗಿ ಬಳಸಿದನೊ
ಅದೇ ಅಗಮ್ಯ.."
ಮಂದಸ್ಮಿತದೊಡಂ ಹೊಮ್ಮಿತಾ
ಬ್ರಹ್ಮಾನಂದರ ನುಡಿ. ಸ್ವಾಮಿಜಿಯುಂ ಅತ್ತ
ನೆಟ್ಟ ನಿಟ್ಟಾಲಿಯಾಗಿ ನಿಟ್ಟಿಸಿ ನೋಡಿದರ್.
ಗಂಭೀರ ಮುದ್ರಾಮುದ್ರಿತ ವದನ ಮಂಡಲದಿ
ಸುಂದರ ಮಧುರ ಸ್ಮಿತವರಳಿತು ಸುಖಾನಂದ
ಭಾವದಲಿ. ಅವುಂ ಮೋಡಬಂಡೆಗಳಿಗೆ ತಾಗುವುವೊ
ಎನೆ ಏರಿದುವು ಮೋಡಮಾಲೆಯಲಿ ನುಸುಳುತ್ತೆ.
ದೃಶ್ಯ ಕಣ್ಮರೆಯಾದಬಳಿಕ ನುಡಿಸಿದರ್ ಗುರು
ದೇವಂ ಎಲೆ ಭಾಯೀ "**ವಿಪದೋನ್ನೈವ ವಿಪದಃ**
ಸಂಪದೋನ್ನೈವ ಸಂಪದಃ"
ಸ್ವಾಮಿ ವಿರಜಾ-
ನಂದರುಂ ಭಾವೋತ್ಕಂಠಿತ ಧ್ವನಿಯಲಿ "ಸತ್ಯಸ್ಯ
ಸತ್ಯಂ....." ಮುಂದೆ ಧ್ವನಿಯುಡುಗಿತು ಮಾತು
ಮೂಕವಾಯ್ತು. ಶಿಷ್ಯನ ಮನೋಗತಿಯು ತೆಕ್ಕನೆ

ವದನಶ್ರೀಯ ದರ್ಪಣದಲಿ ತನ್ನ ಪಡಿನೆಳಲ್
ಮೂಡಿಸಿರಲ್ ತೋರ್‍ಪುದು ಬಗೆಗಣ್ಣಿಗೆ ತಾನೇ
ತನಗನ್ಯನಂತೆವೊಲ್. ಯೋಚನಾ ಭಾರದಲಿ
ಭಾವನೆಗಳ ಮೆಟ್ಟಿಲ್ ಏರಿದರ್ ದೂರದಾ-
ಬಹುದೂರದಾ ಕ್ರೌಂಚ ಪಕ್ಷಿಗಳ ಪಥವಿಡಿದು.
ಮಿಂಚಿತ್ತು ಬೆಳ್ಮುಗಿಲ್ ಅಂಚು. ಸಂಘಟ್ಟಣೆಗೆ
ಸಿಡಿಲ್ ಸಿಡಿದು ಗುಡುಗಿದುವು, ಮನಕಿಡಿಸುವ ತೆರದಿ.
ಮನ ಮಿಡುಕಿ ಪಿಂಜರಿಯೆ ಕಾರ್ಮುಗಿಲ್ ದಟ್ಟಣಿಸಿ
ಮಂಡೆಮಂಡೆ ಗಟ್ಟಿಸಿ ತೋರಹನಿ ಮತ್ತಮಾ
ಆಲಿಕಲ್‌ಗಳು ಕವಣೆ ಬೀಸಿದುವು. ಸುರಿದುವೋ
ಸುರಿದುವು ಮಳೆಯಹನಿ. ಗುರುಭಾಯಿಗಳೊಡಗೂಡಿ
ಒಳಗೈದರ್ ಸ್ವಾಮೀಜಿ. ಮಳೆಗಾಳಿಗಳ್ ಕಡು
ರೋಷದಲಿ ಹೋರಾಟಕಿಳಿದಿರೆ ಎಡೆವಿಡದೆಯೆ,
ಕಟ್ಟಕಡೆಗೆ ಮಳೆಯೇ ಸೋಲ್ತು ಪಿಂಜರಿಯಿತ್ತು
ಬೇಶರತ್ತಾಗಿ. ಗಾಳಿಯುಂ ಬೀಸಿ ಬೀಸುತೆ
ಕಣದೊಳ್ ಎದುರಾಳಿಯುಮಿಲ್ಲದಿರೆ ಬೇಸತ್ತು
ಪಲಾಯನ ಬೆಳೆಸಿತೊ ಎನೆ ಮೆಲುಮೆಲ್ಲನೆ ತನ್ನ
ವೇಗದತಿ ತೀವ್ರತೆಯ ತಗ್ಗಿಸಿ ಬೆನ್ ತಿರುವಿತು
ದಿಶೆದಿಶೆಗೆ. ಗುರುವರಂ ಸಾಯಂ ಭಜನೆಯೊಳ್
ಪಾಲ್ಗೊಂಡರ್. ಭಕ್ತಿರಸ ಪೂತ ಅಮೂಲ್ಯ ಸಂ-
ಗೀತೆ ಹಾಡುತಿರೆ ಭ್ರಾತೃಭಾಯಿಗಳ್, ತಾವುಂ
ಮೆಲುದನಿ ಹರಿಸಿದರ್. ಬಲುಹೊತ್ತು ನಡೆದುದಾ
ಭಜನಾವಳಿ ಗಾಳಿಯೊಳ್ ತೇಲಿ ಸುಳಿಸುತ್ತುತೆ
ಗಗನವೇರುವೊಲ್. ದ್ವಾದಶ ಭಾಯಿಗಳ ಕೂಟ.

ದ್ವಾದಶ ದನಿಗಳ ಭೇಟ, ದ್ವಾದಶ ರಾಗಗಳ
ಮೋಹನೀಯ ಇಂಪು, ಇವೆಲ್ಲವುಂ ಭಾವನಾ
ವೇಶದಾವೇಶದಲಿ ತುಂಬಿದುವು ಹೃನ್ಮನಂ.

"ಹತೋಽಪಿ ಲಭತೇ ಸ್ವರ್ಗಂ
ಜಿತ್ವಾತು ಲಭತೇ ಯಶಃ ।
ಉಭೇ ಬಹುಮತೇ ಲೋಕೇ
ನಾಸ್ತಿ ನಿಷ್ಫಲತಾ ರಣೇ ॥"

ಹರಿಃ ಓಂ ತತ್ ಸತ್

❋ ❋

ತ್ರಿಚತ್ವಾರಿಂಶತೋಲ್ಲಾಸಂ

ಇಚ್ಛಾಮರಣ

ಓ ಭಾವನಾ ಸುಂದರಿ, ಶ್ರೀಗಾಯತ್ರಿ ವರ
ವಿದ್ಯಾವಿಶಾರದೆ ಭುವನೇಶ್ವರಿ, ಜಗಜನನಿ
ಸುಮಧುರ ಸುಭಾಷಿಣಿಯೆ ಹೇಳು, ಆನುಲಿಯಲಿಹ
ಈ ಬಿಡಿ ಬಿಡಿ ನುಡಿಯಂ ಕಾವ್ಯಮಯವಾಗಿ. ಹೇ
ವಾಗೀಶ್ವರೀ ಹರಿಯಲೀ ಕಾವ್ಯಧಾರೆಯೆಮ್ಮ
ಕರುನಾಡಿನ ಹೃನ್ಮನಗಳಂ ಮುಟ್ಟುವನಕಂ.
ಸ್ವಾಮಿ ವಿವೇಕಾನಂದ ಮಹಾತ್ಮನ ಜೀವನೀ
ಧಾರೆಯದು ಮನೋಮಯ ಪ್ರಾಣಮಯ ಧ್ಯಾನಮಯ
ಸಂಜೀವಿನಿಯಾಗಿ ರಸೋಲ್ಲಾಸ ಭರಿತಮಾಗಿ
ಹರಿದೊಲ್ ಹರಿಯಲಾ ಅಣುಕಣದಕ್ಕರಮಾಲೆ.
ಬೇಡುವೆನ್ ಕಾಲ್ವಿಡಿದು ಪಾಡುವೆನ್ ಕರಮುಗಿದು.
ಕಳಿದುವು ದಿನಮಾನಂ. ಉರುಳಿದುವು ವಾರಗಳ
ಕಾಲಮಾನಂ. ಹರಿಯುತಿದೆ ಹರಿಯುತಿದೆ ಕಾಲ
ನದಿ ಸಹಸ್ರ ಸಹಸ್ರ ಚರಣಗಳ ಓಟದಲಿ.
ಕೆರ್ಚಿನ ಪೊಗರ್ ಏರಿಸಿ ಏರಿಸಿ ತ್ರಿಲೋಕದ
ವಾಗೆಯಂ ಬಿಗಿವಿಡಿದು ಅತ್ತಿತ್ತ ಚಲಿಸದೊಲ್
ಹರಿವುದು ಹರಿವುದು ಕಾಲೋಚಿತಗತಿಗೊಪ್ಪಿ.
ಸ್ವಾಮೀಜಿ ಏಳುಬೀಳುಗಳ ಮಧ್ಯೆ ಹೆಣಗುತೆ
ಇಚ್ಛಾಮರಣಕೆ ಸುಮುಹೂರ್ತವಂ ಆರೈಸುತೆ
ಕ್ರಮವತ್ ದಿನಚರಿಯಲಿ ಪಾಲ್ಗೊಂಬುವರಿನಿತು
ಬೇಸರಿಸದೆಯೆ. ಪರ್ವಕಾಲದ ಚಣಚಣಗಳ್
ಚುಚ್ಚಿಚುಚ್ಚಿ ನೋವುಣಿಸಿ ಉರುಳುರುಳಿ ಕಳೆವುವು.

ಕಿಂಚಿತ್ ಬಿಡುವು ಕೊಡದವೊಲ್. ಒರ್ಮೆ ಚೇತರಿಸಿ
ಕೊಳಲ್ ಉಲ್ಲಸಿತ ಮನದಿಂ ಭ್ರಾತೃ ಭಾಯಿಗಳಿಗೆ
ಸುಮಧುರಾನಂದ ಭಾವದಿಂ ವೇದ ಪಾಠವ
ಕುರಿತು ವ್ಯಾಖ್ಯಾನ ಮಾಡುವರು ಸಾವಧಾನದಲಿ.
ಕೂರರೋಗ ಪಿಂಜರಿಯಿತೆನೆ ಗುರುಭಾಯಿಗಳ್
ಸಂತಸದ ಮೃಷ್ಟಾನ್ನವನುಂಬುವರ್. ಇನ್ ರುದ್ರ
ಭೀಕರತೆಯ ಗಂಡಾಂತರದಿಂದೆ ಪಾರಾಗಿ
ಉಳಿವರೆಂಬ ನಂಬುಗೆ ಬೇರುಬಿಟ್ಟಿತೆಲ್ಲರ
ಹೃದಯದ ಧರಿತ್ರಿಯಲಿ. ಸಾಯಂ ಸಮಯದಲಿ
ಎಂದಿನಂತೆವೊಲ್ ನಡೆಯ ತೊಡಗಿದುದು ದಿನಚರಿ.
ಮೆಯ್ಯೊಳ್ ಬಳಲ್ಕೆಯಿರ್ದೊಡಂ ಮೆಲುಮೆಲ್ಲನೆಯೆ
ದಿನಚರಿಗೆ ಹೊಂದಿಕೊಳ್ಳತೊಡಗಿದರ್ ಸ್ವಾಮಿಜಿ.
ಮಠವುಂ ಕಳೆಕಟ್ಟಿತು ಆನಂದ ಸಿತಸ್ಮಿತ
ಹರಿಸಿ. ಸಂದರ್ಶಕರ್ ಬಂದಪರ್. ದೂರದಿಂ
ಗೃಹೀ ಭಕ್ತರ್ ಗಮಿಸುವರ್, ಗುರು ಭಾಯಿಗಳ್
ಕೂಡುವರ್. ಎಲ್ಲರುಂ ಧೈರ್ಯೋತ್ಸಾಹಗಳಿಂ
ತುಂತುಂಬಿ ಓಲಾಡಿದರ್ ಮನಂ ತಣಿಸಿದೊಲ್
    ವಸಂತ ಪ್ರಭು ಪಿಂಜರಿಯೆ ಗ್ರೀಷ್ಮಂ
ಊಷ್ಮದುಸಿರ್ ಬಿಡದಿರ್ಪನೇ? ಇರುಳಿನ ಕರ್ಪು
ಕರಾಳ ಕಮನೀಯ ಕಾಳಿಕೆಯ ಅಲಕರಾಶಿಯು
ಹರಡಿ ಮುಚ್ಚಿದೊಲ್ ಆವರಿಸಿತು ಭಾರತಗಗನಂ
ಕರ್ಪುಸಿರಿ. ಅರುಣಾರುಣಂ ಪಡುವಣ ಮಟ್ಟಿಯ
ಗಿರಿಶಿಖರದ ಮೇಗಡೆ ಇಳಿಯ ತೊಡಗಿದಂ ಶಿರ
ಮಡಿಯಾಗಿ. ಸಾಯಂ ಸಿರಿಸೊಬಗಿನ ಸವಿಯುಂಡ
ಗುರುವರಂ ಭಾವನಾವೇಶಿಯಾಗಿ ಎರ್ದೆಯ

ಮೇಲೆ ಕೈಕಟ್ಟಿದರ್. ಕಣ್ನೋಟ ದೂರ ದಿಗ್
ಭಿತ್ತಿಯ ಕೆನ್ನೀಲ ಮೋಡಗಳ ರಾಶಿಯಲಿ
ನಲಿದತ್ತು ನೆಟ್ಟನಿಟ್ಟಾಲಿಯಾಗಿ. ಕ್ಷೀಣಿತ
ದೇಹ ಕೋಳ್ಕೆಸರಲ್ಲಿ ಕಾಲೂರಿ ನಿಂದೊಲ್
ನಿಂದಿರಲ್ ಸುಶಾಂತಿ ಸಮುದಯಲಿ ಪೊಳ್ತುವೊಳೆ
ಹರಿದುದು ಗಮನಕೆ ಬಾರದಂತೆ. ವಿಹಂಗಮಗಳ್
ಮತ್ತಮಾ ಪಾರಿವಗಳ್ ಸಂಧ್ಯಾರಾಗವಂ
ಉಲಿಯುತಿರೆ ಸಂಜೆಯಕೊನೆಯಂಕದ ಮಸುಗಪ್ಪು
ಇಳಿಯಲುಜ್ಜುಗಿಸಿದುದು ಇಳೆಯಮೇಲೆ ನವುರಾಗಿ.
ಸಂಜೆಯ ಇನಿಗಾಳಿಯಲಿ ಶ್ವಾಸೋಚ್ಛ್ವಾಸಗಳ್
ಕೂಡಾಡಿದುವು ಸರಾಗದಲಿ. ತಣ್ಗಂಪು ಮೈ
ವೆರ್ಚಿ ತನುಮನಂಗಳ ಮುಟ್ಟಿ ತಟ್ಟಿ ಮುದ್ದಿಸಿ
ಚಳಿಮೂಡಿಸಲುರೆ ಸ್ವಾಮೀಜಿ ಒಳಗೈತಂದರ್
ಶಿಷ್ಯರೊಡಗೂಡಿ. ಪೂರ್ವೀಗವಾಕ್ಷಿಯ ಮುಖೇನ
ನುಗ್ಗಿ ಬರುವ ತಣ್ಗಾಳಿ ಮುದ್ದಿಪುದು ಮೈಮನ
ಮೆಲ್ಲನೆ ನಡುಗಿಸುವ ತೆರದಲಿ. ಸಂಧ್ಯಾವಿಧಿಯ
ಪೂರೈಸಿದನಂತರಂ ಬೆಳ್ಮಡಿಯ ಸೆಜ್ಜೆಯಂ
ಸೇರಿದರ್ ಗುರುವರಂ. ಸವಿನಿದ್ದೆಯಲಿ ಕಣ್ಗೆ
ಕಂಡುದೊಂದು ಕನಸು. ಗುರುದೇವಂ ಸಮುದ್ರದ
ದರ್ಪಣದ ಮೇಲೆ ನಡೆಯುತೆ ಪಿಂದಿರುಗಿ ನೋಡಿ
'ಬಾ ಬಾರೈ!' ಎನುತೆನುತೆ ಕರೆದರ್ ಕರವಬೀಸಿ.
ಕನಸೊಡೆದು ನಿದ್ದೆ ಹರಿದುದು, ಗುರುವರಂ ಒರ್ಮೆ
ಕಣ್ಣುಜ್ಜಿ ನೋಡಿದರ್ ಕೊಠಡಿಯೊಳ್ ಹರಡಿತ್ತು
ಗುರುಗಳ ಘನವಾದ ಅನನ್ಯ ಪ್ರಭೆ. ಹೊದ್ದಿಕೆ
ತೆರೆದು ಬದಿಗೊತ್ತಿ ಕುಳಿತರ್ ಸೆಜ್ಜೆಯ ಮಡಿಯಲಿ.

ದೂರದಲ್ಲಿ ಮುಂಗೋಳಿಗಳ ಮೊಳಗು ಮೊಳಗಿದುದು
ಮೂಮೂರುಬಾರಿ. ಪ್ರಾತಃಕಾಲೀನ ಪ್ರಾರ್ಥನೆಯ
ಸಲಿಸಿದರ್ ಗುರುವರಂ, ಕೊರಳ್ದನಿ ಹರಿದತ್ತು
ರಾಗಾರುಣತಾನದಲಿ ಭಕ್ತಿರಸವಂ ಸೂಸಿ,

“ಯಸ್ಮಿನ್ ಸರ್ವಾಣಿ ಭೂತಾ-
ನ್ಯಾತ್ಮೈವಾಭೂದ್ವಿ ಜಾನತಃ ।
ತತ್ರಕೋ ಮೋಹಃ ಕಶ್ಯೋಕ
ಏಕತ್ವ ಮನಪಶ್ಯತಃ ॥”

“ಹಿರಣ್ಮಯೇ ನ ಪಾತ್ರೇಣ
ಸತ್ಯಸ್ವಾನಿ ಹಿತ ಮುಖಂ ।
ತತ್ತ್ವಂ ಪೂಷನ್ನ ಪಾವೃಣು
ಸತ್ಯ ಧರ್ಮಾಯ ದೃಷ್ಟಯೇ ॥”

ದೂರ ನದಿಯಾಚೆಗಿನ ದೃಶ್ಯಮಾನ ಗಿರಿಗಳ
ಹಿಮಮಯ ಮಲೆಯ ತಲೆಯ ಮುಗಿಲಪ್ಪಿದಡವುತ್ತೆ
ಮುತ್ತಿದ ತಲೆಯ ಕೋಡಿನ ಬಂಡೆಯು ತಪಸ್ವಿಯ
ಪಾಂಗಿನೊಳೆಸೆದತ್ತು, ಜಟಾಜೂಟಮಿದೆನಲ್ಕೆ
ಚೂಪಗಿರೆ ಅನಂತತೆಯ ಬಿತ್ತರದೊಂದು ಕಿಡಿ
ಸಿಡಿದು ಬಿಳ್ದುದೋ ಎನಲ್ ಕಾಣ್ಬುದು ಸರ್ವತ್ರ
ತಾಪಸವರನ ತೇಜದಿಂ. ಕಣ್ಬೊಲದೊಳಗಡೆ
ಪರ್ವತ ತರಂಗಕೃತ ರಂಗ ವಿರಚಿತ ದಿವ್ಯ
ಕಂದರದಿ ಪರಿವುದು ತರಂಗಿತ ತರಂಗಿಣಿಯ
ಜಲರಾಶಿ. ಜುಳುಜುಳಿಪ ನಿನಾದಂ ರಮ್ಯಮಾ
ಕರ್ಣಗಪ್ಪರಗಳಿಂಗೆ ಅದ್ರಿಯಜಲ ಮೂಡಿ ಬಹ
ಗಿರಿಬಾಹು ತಬ್ಬುತುಬ್ಬಿ ಹಬ್ಬುತ ಇಳಿದಿಳಿದು

ಪದತಲದೊಳ್ ತಂಗಿ ಪೆರ್ಮಡುವಾಗಿಸಿ ತುಂಬಿ
ತಳತ್ತಳಿಪ ಸರೋವರ ಸುಂದರಿಯು ತಾನ್ಯೆಸಿದ
ಜಲನಿಧಿ ಸಕಲ ಪ್ರಾಣಿಕೋಟಿಗಳಿಗೆ ನಿತ್ಯಂ
ತಾನಾಧಾರಂ. ಸುಡುವೇಸಗೆಯ ಸುಡುಸುಡುತಿಹ
ಬಿಸಿಲಿಂಗೆ ಇನಿತಿನಿತು ಬತ್ತಿಬಾಡದ ಪರಿಯೊಳ್
ನೆಲೆನಿಲ್ಪುದು ಜಲರಾಶಿ! ಲೋಕದಮೃತ ನಿಧಿಯು
ತಾನೆನಲ್ ಜೃಂಭಿಪುದು ಜಲರಾಶಿ! ತಂಪುಗುವ
ತಣ್ಪಿನ ತನಿರಸವಂ ಪೀರ್ದು ತಟಿನಿಯವರೆಗೆ
ಬೇರೂರಿ ವಿರಳ ವಿರಳಮಾಗಿಯೆ ಮುಂಬೆಳೆದ
ತಾಳೆಯಾಮರಂಗಳ್ ನಿಂದಿವೆ ನಭ ಚುಂಬೀ
ನಿಲುವಿನಲಿ. ಜಲನಿಧಿಯ ತನಿಯುಂಡು ಮುಂಬೆಳೆದ
ಕೆಂಬಾಳೆಯ ಹೊಂಬಾಳೆಯ ಪಚ್ಚನೆ ಬಾಳೆಯ
ಚಂದ್ರಬಾಳೆಯ ಗುಜ್ಜು ಬಾಳೆಯ ಕರಿಬಾಳೆಯ
ಕಲ್ಬಾಳೆಯ ಗಿರಿಬಾಳೆಯ ವಿಧವಿಧರೂಪುಂ
ಮೆರೆದುದು ಮೊಳಕೆಯೊಡೆದೊಡೆದು ಪಿಂಡಿಲ್ ಘನವೆತ್ತು
ಸೊಗಂಬರಿಸಿದೊಲ್. ಎಲ್ಲೆಡೆಯು ಪಸಿರೇ ಪಸಿರ್
ನೋಳ್ಪಕಣ್ ಪಚ್ಚಪಸಿರಪ್ಪಂತೆ! ಸ್ವಾಮಿಜಿ
ಆ ದೂರದ ಮನೋಹರ ದೃಶ್ಯದ ವೈಭವಂ
ಕಂಡು ಕಾಣುತ್ತೆ ನೆನೆದರ್ ತಮ್ಮ ಎಳೆತನದ
ಪುಂಡಾಟಿಕೆಯುಮದೆಂತು ನಡೆದುದು ಆ ಬೆಟ್ಟ
ಗುಡ್ಡಗಳ ಸಾನುಪ್ರದೇಶದಲಿ ಎಂದೆಂದು!
ಆ ನಿಸರ್ಗದುಡಿಯೊಳ್ ಮುಗ್ಧಮನದ ರೈತಾಪಿ
ವರ್ಗೀಯ ಜನ ಸಮುದಯ ಪಚ್ಚಪಸುರ್ಲೋಕದ
ಹರವಿನಲಿ ಬರ್ದುಕುವ ಸುಸುಂದರ ಬರ್ದುಕಂ
ನೆನೆನೆನೆದರ್ ಮನದೊಳ್. ಆ ರೈತ ಕುಲೀನರ

ಪುಣ್ಯಮೇ ಘನಿಸಿದುದೊ ಎನಲ್ ಗೋಸಂಪದಂ
ತುಂಬಿರ್ದುದರ ನೆನಹು ಮೂಡಿದತ್ತು ಮತ್ತೆ ಮತ್ತೆ.
ಅಲ್ಲಿಯೇ ಶತಪಥತಿರುಗುತೆ ಭಾವಪರವಶ-
ದಾನಂದ ಮೋದದಲಿ ಹಾಡಿದರ್ ಗುರುವರಂ,

"ಮನೋ ಬುದ್ಧ್ಯಂಕಾರ ಚಿತ್ತಾನಿನಾಹಂ
ನ ಚ ಶ್ರೋತ್ರಜಿಹ್ವೇ ನ ಚ ಘ್ರಾಣನೇತ್ರೇ ।
ನ ಚ ವ್ಯೋಮ ಭೂಮಿರ್ನ ತೇಜೋನ ವಾಯುಃ
ಚಿದಾನಂದ ರೂಪಃ ಶಿವೋಽಹಂ ಶಿವೋಽಹಂ ।।"

ಪ್ರಾಂಗಣದಂಚಿನಲಿ ನಿಂತು ಮತ್ತೆ ಹರಿಸಿದರ್
ದೃಷ್ಟಿಯಷ್ಟಿಯಂ ಆ ದೂರದೂರದ ಬೆಟ್ಟ
ಗುಡ್ಡಗಳ ತಪ್ಪಲಿನ ಜೀವನೀ ವಾಹಿನಿಯ
ಎಡೆಎಡೆಗೆ. ಆಗಳಾ ಪ್ರದೇಶದ ತಂಪಿನ
ನೆಲೆಗಳಿಗೆ ತಾನೈದ ನೆನಹು ಮೂಡಿತು ಮನದಿ.
ಒರ್ಮೆ ಏಕಾಂಗಿಯಾದೊಡೆ ಮಗದೊರ್ಮೆ ಶಿಷ್ಯರ
ಒಡಗೂಡಿ ಧ್ಯಾನ ಜಪ ತಪಗಳಲಿ ವೈಚಾರಿಕ
ವಿಮರ್ಶೆಯಲಿ ಮುಳುಗುತಲಿರ್ದುದಂ ನೆನೆನೆನೆದು
ತೋಷದಿಂ ಶಾರದಾನಂದರಿಂಗೆ ನುಡಿಸಿದರ್,
ಬಹು ರಸರುಚಿಯಾಗಿ, "ಸೋದರಾ, ಈಗಳೆನ್ನಯ
ಮನದೊಳಂದಿನ ಎಳೆತನದಾಟವದು ಸುಳಿವುದು
ಚಿತ್ರವತ್ತಾಗಿ. ನಾವೆಸಗಿರ್ದ ಪುಂಡಾಟ ಕಮ್ಮಿಯೇಂ?
ಆ ದೂರ, ಆ ಕುಪಥ, ಆ ಕುಣಿತ, ಕೋತಿಯಂ
ಮೀರ್ದ ಕೋತಿಯಾಟ ಗಣನೆಯಿರಲಿಲ್ಲವೆಮಗೆ.
ನೆನಪಿದೆಯ ನಿನಗೆ?" ಎಂದರ್ ಮುಗುಳುನಗೆಬೀರಿ.
ಒಡನೊಡನೆಯೇ ವದನ ಬಿಂಬದೊಳ್ ಎಳೆನಗೆಯ

ಬೆಳುದಿಂಗಳ್ ಹರಿಸಿರೆ ಅರಳಿ ಮಲರಿದ ತೆರದಿ
ಪ್ರಸನ್ನಮಾದುದು ಮುಖಾಂಭೋಜ. ಶಾರದಾ
ನಂದರ್ಗೆ ಮರುನುಡಿಯೆ ತುಟಿಗಳ್ ಬಿರಿಯದಾಯ್ತು.
ಅಲ್ಲಿಗೆ, ಅದೇ ವೇಳೆಯೊಳ್ ಗುರುವರನ ದಿವ್ಯ
ದರ್ಶನವ ಬಯಸಿ ಬಂದರೆನಿತೋ ಶ್ರೋತೃಗಳ್
ಸಾಲ್ಗಟ್ಟಿ. ಅವರೊಡಂ ಒಳಗೆಯ್ದು ನುಡಿಸಿದರ್
ಸ್ವಾಮೀಜಿ "ಮಮ ಮಿತ್ರರೇ! ಇಂದು ಚೈತನ್ಯ
ಪ್ರಭುವಿನ ವಿಷಯವನಿನಿತಾವ್ ತಿಳಿಯೋಣವೆ?
ಕೇಳಿ, ಚೈತನ್ಯ ಪ್ರಭುಗಳ್ ಸರ್ವಸಂಗವ
ಪರಿತ್ಯಾಗಗೆಯ್ದಾ ಮಹಾ ಪುರುಷ ವರೇಣ್ಯಂ.
ವಿಷಯವಾಸನೆಯು ಅವರ ಬಳಿ ಸುಳಿಯದೆಯೆ ಬಹು
ದೂರ ಸರಿದತ್ತು. ಪ್ರಭು ಚೈತನ್ಯರುಂ ವರ
ನಿಸ್ವಾರ್ಥ ಪ್ರೇಮದಾದರ್ಶಮಂ ಬಾಳಿನೊಳ್
ಅಳವಡಿಸಿ ಲಿಂಗಭಾವಾತೀತ ಪ್ರೇಮದಿಂ
ಪರಿಬೋಧಿಸಿದರ್. ಆದೊಡದು ಸರ್ವಮಾನ್ಯ
ಗತಿಯೊಳ್ ಅರಗದೆ ಜೀರ್ಣಿಸದೆ ಉಳಿಯಿತು ಅವರ
ಪರಿಬೋಧೆ. ಅನಿತು ಸುಲಭದೊಳ್ ಮನಗೊಳುವಂಥ
ಸಂಗತಿಯುಮಾಗಿರದೆ ಗಹನಮಾದತ್ತು ಜನ
ಗಣಮನಕೆ. ತರುವಾಯಿ, ಮುಂಬಂದ ವೈಷ್ಣವರ
ಗುರುಗಳ್ ಪ್ರಭು ಚೈತನ್ಯರ ಜೀವನದಲ್ಲಿನ
ತ್ಯಾಗ ವೈರಾಗ್ಯ ತತ್ತ್ವಬೋಧಗಳ ಮಹತ್ವದ
ಅಂಶಮಂ ಒತ್ತಿ ಹೇಳದೆಯೆ ಜನ ಸಾಮಾನ್ಯ
ಗಣಕೆ ಪ್ರೇಮಾದರ್ಶಮಂ ಪ್ರಚುರ ಪಡಿಸಿರಲ್,
ಚೈತನ್ಯ ಪ್ರಭುಗಳ ಭವ್ಯ ಪ್ರೇಮದ ಕಲ್ಪನೆಯ
ಅರಗಿಸಿಕೊಳಲದು ಸಾಧ್ಯವಾಗದೆ ಹೋಯಿತ್ತು!

ಆಗಳೇಂ ಹೀನಮನುಜರ್ ಸ್ತ್ರೀಪುರುಷರ ಕಡು
ಹೀನತಮ ಕಾಮಕಾಮನೆಗಳ ರೂಪಕೊಟ್ಟರ್!
ಇಂತಿಂತು ಹೀನಾರ್ಥಗೈವ ಜನರಿಂಗೇನೇನ್
ಇತಿಮಿತಿಯೆ ಇಲ್ಲಮಿೂ ಸಮಾಜದೊಳ್. ಇದನುಂ
ಮನದೊಳ್ ಅರಿದುತಿಳಿದು ಪರ್ಯಾಲೋಚಿಸಿ ನೋಡಿ!
ನೀಮೆ ಮನಮಥಿಸಿ ಜೊಳ್ಳಂ ತೂರಿ ಘನವಸ್ತು
ಉಳಿಸಿಕೊಳ್ಳಿ. ಇದು ಬುದ್ಧಿಮಾನ್ಯರಿಗಕ್ಕುಂ. ಓ
ಅಮೃತಪುತ್ರರಿರಾ, ಈ ಹೀನಾರ್ಥಗಳಿಂದಲಿ
ಪ್ರಗತಿ ಪಥದಲಿ ಕಲ್ಲು ಮುಳ್ಳುಗಳ ಮಾರೊಡ್ಡು! ಇವಂ
ಕತ್ತರಿಸುವೊಡೆ ಗಟ್ಟಿಜೊಳ್ಳುಗಳ ಬೇರ್ಪಡಿಪ
ಜಾಣ್ಮೆ ಎಮ್ಮವರಿಗಕ್ಕುಂ, ಅದಿಲ್ಲದೊಡೆ ಬಾಳ್
ಬದುಕು ವ್ಯರ್ಥಮಾದಪುದು. ನಮ್ಮಯ ಸಮಾಜಂ
ಗತಿಗೆಟ್ಟುದುದು ಮತಿಮೌಢ್ಯದಿಂ. ಮೂಢ ನಂ–
ಬಿಕೆಗಳ ಕಟುತರ ಜಾಡ್ಯದಿಂ. ಈ ಎಲ್ಲವಂ
ತಿದ್ದಿತಿದ್ದಿ ಸುಸ್ವರೂಪಗೊಳಿಪುದು ನಿಮ್ಮಂಥ
ಬುದ್ಧಿಮಾನ್ಯರಿಂಗಕ್ಕುಂ. ಧೀರ ಧೀಮಂತ
ಜನರ್ಗಕ್ಕುಂ. ನಿಮ್ಮೊಳ್ ನೀವ್ ತಿಳಿದು ನೋಳ್ಪುದು.''
　ಸಂದರ್ಶಕರಂ ಬೀಳುಕೊಟ್ಟು ಹಿರಿಯ ಶಿಷ್ಯ
ವಿರಜಾನಂದರೊಡಗೂಡಿ ಒಳಗೈತಂದರ್
ಗುರುವರಂ. ಭಜನ ಮಂಡಳಿ ಕೂಡಿದುದು ಎಲ್ಲ
ವಟು ಮಹೋದಯರನೊಳಗೊಂಡು. ಭಕ್ತಿರಸವದು
ಹರಿದುದು ಬಹುಲ ಭಾವಪೂರ್ಣವಾಗಿ. ಎಲ್ಲರ
ಜೊತೆಗೆ ತಮ್ಮಯ ಧ್ವನಿಯಂ ಹರಿಯ ಬಿಟ್ಟರಾ
ಸ್ವಾಮಿಜಿ. ಉರುಳಿತೆನಿತೋ ಪೊಳ್ತು ಭಜನೆಯಲಿ.
ತದನಂತರಂ ಗುರುವರಮಿಂತೆಂದರ್. ''ಭ್ರಾತೃ

ಭಾಯಿಗಳಿ! ಕೇಳಿಲ್ಲಿ, ನಮ್ಮ ನಿಜವಾದ ರಾಷ್ಟ್ರ
ಇರ್ಪುದು ಗುಡಿಸಲುಗಳಲಿ. ಕಳೆದ ಶತಮಾನದಿಂ
ನಡೆದಿಹ ಸಮಾಜ ಸುಧಾರಣೆಯ ಬಹುಪಾಲು
ಚಳುವಳಿಗಳ್ ಕೇವಲ ಅಲಂಕಾರಿಕ ಮಾತ್ರ.
ಪೆಂಗಳೆಯರಿಗೆ ಬಾಲ್ಯವಿವಾಹ ತಪ್ಪಿ ವಿಧವಾ
ವಿವಾಹದ ಕ್ರಮ ಜಾರಿಗೆ ಬರಲಕ್ಕುಂ. ಅಂದೊಡೆ
ಸುಧಾರಣೆಯ ಪ್ರಥಮ ಹಂತದ ಹತ್ತಿರಸರಿದ
ಸುದ್ದಿಯಾಯ್ತು ಅಷ್ಟೇ, ಇಂತಪ್ಪ ಎಲ್ಲವಗೆ
ಪ್ರಶ್ನೆಗಳ್ ಉಚ್ಚ ಜಾತಿಯ ವಿದ್ಯಾವಂತರ್ಗೆ
ಸಂಬಂಧಿತಂ. ಆ ವಿದ್ಯಾವಂತರ್ಗೆ ಬಿಜ್ಜೆಯುಂ
ಗಗನದಿಂದ್ಯೈದುದೇಂ? ಸಮಾಜದ ಸುಖಕೆ ಕಲ್ಲು
ಹಾಕಿಯೆ ಶಿಕ್ಷಿತರಾದವರೆಂಬುದಂ ಮರೆಯದಿರಿ!
ಪ್ರತಿಯೊಂದು ಸಂಗತಿಗಳ ಬುಡದ ಬೇರಿನಿಂ
ಸುಧಾರಣೆಯಾರಂಭಮಾಗಲಿ, ಅದೆ ನಿಜದಿಂ
ಅಮೂಲಾಗ್ರ ಸುಧಾರಣೆ. ಮೊಟ್ಟಮೊದಲ್ ತಳದಿಂ
ಉರಿ ಏಳಲಿ. ಅಂದೊಡೆ ಅದರ ಜ್ವಾಲೆಯು ಮೇಲೆ
ಮೇಲೆರುತ್ತ ತುತ್ತದಿಯವರೆಗೆ ಸುಧಾರಿಸುತ್ತ
ಪೋಗುವುದರಿಂ ತೇಜಸ್ವೀ ಭಾರತೀಯ ರಾಷ್ಟ್ರ
ಮೈದಾಳುವುದು ದಿಟಂ!
ಇದಕಾಗಿ ನಮ್ಮಿಯಾ
ಧರ್ಮಮಂ ಧೂಷಿಸಿದೊಡೇಂ ಫಲಮಿಲ್ಲಂ ಮುಖ್ಯ
ದೋಷಮಿರ್ಪುದು ಎಲ್ಲಿ ಎಂಬಿರಾ? ಜೋಪಡಿ-
ಗುಡಿಸಲುಗಳಲ್ಲಿ ಬದುಕುವ ಸರ್ವ ಸಾಮಾನ್ಯ
ಜನ-ತಮ್ಮ ಪೌರುಷಮಂ, ತಮ್ಮ ವ್ಯಕ್ತಿತ್ವಮಂ
ಮರೆತು ಮುದುಡಿರ್ಪುದು. ಅವರ್ಗೆ ಮೊದಲ್ ಸುವಿದ್ಯೆಯುಂ

ಕಲಿಸವೇಳ್ಕುಂ. ಅಂದೊಡೆ ಅವರ್ ಕಳೆಕೊಂಡಿಹ
ವ್ಯಕ್ತಿತ್ವವದು ಮತ್ತೆ ಮೈದಾಳಿ ತಂತಮ್ಮ
ಉದ್ಧರಣಮಂ ತಾಮೆ ಉದ್ಯಮಿಸೆ ಎದ್ದೆದ್ದು
ನಿಲ್ವರ್! ಪ್ರತಿಯೊರ್ವ ಸ್ತ್ರೀಯುಂ ಪುರುಷನುಂ
ಇದರೊಳ್ ಬಾಧ್ಯರ್ ಇದಂ ಪೂರ್ಣ ಗಮನಿಪುದು
ಭಾಯಿಗಳೆ!"

ಉತ್ಕಂಠಿತ ದನಿಯಲಿ ಪೊರಬಿಳ್ದ
ವ್ಯಾಖ್ಯಾನವದು ಎಲ್ಲರ ಮನಮನವ ಮುಟ್ಟಿತು,
ಎದೆಎದೆಯಂ ತಟ್ಟಿತು. ಜೀವಜೀವಗಳ್ ಪುಟಿ
ಪುಟಿದುವು. ಕಳೆಯಿತು ವಾರವೊಂದು ಗುರುದೇವನ
ಶರೀರದ ಸ್ಥಿತಿಯದು ಇರ್ದಂತೆಯೆ ಇರ್ದುದು.
ಏಳು ಬೀಳುಗಳ್, ನೋವುನಿಡಿಗಳಿಲ್ಲದ
ಶಾಂತಸಾಗರಮಾದುದು. ಹಜಾರದಲಿ ಮತ್ತೆ
ಪ್ರಾಂಗಣದಲಿ ಪದಚಾರಣಗೈವರ್. ಮೆಲ್ಲನೆ
ಅತ್ತಿತ್ತ ನಸುದೂರ ಸಂಚರಿಪರ್. ತಮ್ಮೊಳ್
ಯೋಚಿಸಿ ಪರಿಭಾವಿಸಿ ಭಾವನಾವೇಗದಲಿ
ನುಡಿಸಿದರ್ "**ಜಾತಸ್ಯ ಮರಣಂ ಧ್ರುವ**" ಆಗಳ್,
ಅಲ್ಲಿಗೆಯ್ತಂದ ವಿರಜಾನಂದರಿಂಗೆ ಒಳ
ಕೊಠಡಿಯಿಂ ಬಂಗಾಳಿ ಪಂಚಾಂಗಮಂ ತರಲ್
ಬೆಸಸಿದರ್. ಕಾಲ್ಗಳ್ ಎಡೆವಿಡದೆಯೆ ಶತಪಥ
ತಿರುಗಿದುವು, ತಿರುಗಿದುವು; ಎಳೆವಿಸಿಲ್ ಹರವಿನಲಿ.
ಸ್ವಾಮಿಸಿದ್ಧಾನಂದರ್ ಗಮಿಸಿದರ್ ಗುರುವಿನ
ಬಳಿಗೆ. ಮನಮುದುಡಿ ಎದೆಯೊಳ್ ಹುದುಗಿ ಘನಿಸಿರ್ದ
ಖಿನ್ನತಾ ಭಾವವನರಿದು ಸಂತೈಸುವೊಲ್ ಗುರು
ದೇವಂ ನುಡಿದರಿಂತು "ಎಲೆ ವತ್ಸ! ಈ ಬದುಕು

ಸದಾ ಸುಖಶಾಂತಿಯಂ ಪ್ರಾಸಾದಿಪುದು ಎಂದು
ನಂಬಲುಂಟೆ? ಸುಖದುಃಖಗಳ ಕೂಪಮಲ್ಲಮೆ
ಈ ಬರ್ದುಕು? ಅಣುತೃಣಗಳಾವು, ಎಮ್ಮದಿರ್ಕೆ
ಎಕ್ಕಟಿಗೆ. ವಿಶ್ವತೋ ಮುಖಿಯಾದ ಬೃಹದ್
ಬ್ರಹ್ಮಾಂಡಮೆ ಕಾಲಾಧಿಪನಧೀನ ಎನಲ್ಕೆ
ಎಲ್ಲವಂ ಆತನ ಪದತಲದೊಳ್ ಇಡುವುದೆಮ್ಮ
ಕರ್ತವ್ಯಮಲ್ಲದೆಯೆ ಬೇರೊಂದು ಇಲ್ಲ ಗಡ?
ಅಂದಬಳಿಕೆಲ್ಲಮಂ ಅರ್ಪಿಸಿ ಕೈಮುಗಿವುದೇ
ಸಂತೃಪ್ತಿ, ಸಮಾಧಾನ, ಕೊರಗದಿರ್ ಸೋದರಾ!

"ಪ್ರಾಪ್ತವ್ಯಮರ್ಥ ಲಭತೆ ಮನುಷ್ಯೋ
ದೇವೋಪಿತಂ ಲಘಯಿತಂ ನ ಶಕ್ತಃ ।
ತಸ್ಮಾನ್ನ ಶೋಭಾಮಿನ ವಿಸ್ಮಯೋಮೆ
ಯದಸ್ಮದೀಯಂ ನಂ ಹಿ ತತ್ಪರೇ ಷಾಮಂ ॥"

ಸ್ವಾಮಿ ವಿರಜಾನಂದರ್ ಬಂಗಾಳಿ ಭಾಷೆಯ
ಪಂಚಾಂಗಮಂ ತಂದೊಡದನ್ನೋದಲ್ ಬೆಸಸಿದರಾ
ಶಿಷ್ಯವರ್ಯಂಗೆ, ಓದುತೋದುತೆ ಗುರುವಿನ
ಮುಖ ಭಾವವಂ ತಾವ್ ಕಣ್ಣಿಟ್ಟು ಮನವಿಟ್ಟು
ನೋಡಿದರ್. ಆವುದೊ ವಿಶೇಷತಮ ಕಾರ್ಯಕ್ಕೆ
ಮುಹೂರ್ತವನಾರೈಸುತಿಹರ್ ಎಂಬ ಅನುಭವ
ಘನವಾದ ಮುದ್ರೆಯೊತ್ತಿತು ಮನ ಮತಿಗಳ ದಿವ್ಯ
ದರ್ಪಣದ ಮೇಲೆ. ನುಡಿವೆನೆನೆ ತುಟಿಗಳ್ ಬಿರಿಯೆ
ಸಂಕೋಚಿಸಲ್, ನುಡಿಗಳುಳಿದುವು ತುಟಿಯ ಹಿಂದೆ.
ಪುಟ ಪುಟಂಗಳಂ ತಿರಿವಿ ಹಾಕುತಿರಲ್ ಜುಲೈ
ತಿಂಗಳಿನ ಒಂದನೆ ಎರಡನೆ ಮೂರನೆಯ ಪುಟ
ತಿರಿವಿದ ಬಳಿಕಂ ನಾಲ್ಕನೆಯ ಪುಟವಂ ತೆರೆದು

ಓದಿದರ್ ಸ್ವಾಮಿವಿರಜಾನಂದರ್. ಮಿಣ್ಣನೆ
ಅದಂ ಆಲೈಸಿದ ಗುರುವರಂ ಮೆಲುಮೆಲ್ಲನೆ
ಶಿರವಂ ಅಲುಗಿಸಿದರ್ ಅತ್ತಿತ್ತ. ಆಗಳಾ
ಸ್ವಾಮಿ ವಿರಜಾನಂದರುಂ ಐದನೆಯ ಪುಟವ
ತೆರೆಯಲುಜ್ಜುಗಿಸೆ ಸ್ವಾಮೀಜಿಯೆಂದರ್ "ವತ್ಸ!
ಸಾಕಿನ್ನು....ಅಲ್ಲಿಗೇ ಸಾಕುಮಾಡೈ."
ವಿರಜಾ
ನಂದರುಂ ಪಂಚಾಂಗಮಂ ಮುಚ್ಚಿದರ್ ತಾವ್
ಮರುನುಡಿಯದೆ. ಮನಮಲ್ಲಿಗೆಯ ದಳ ಬಾಡಿದುದು
ತೊಟ್ಟುಕಳೆದಂತೆವೊಲ್. ಜೀವ ಮೋಕ್ಷದಂಕದ
ಚಿತ್ತಾರ ಸುಳಿದತ್ತು ಸೂಕ್ಷ್ಮತರದಲಿ ಮನದ
ಪರಮೋಚ್ಚ ಫಲಕದಂಕದಮೇಲೆ. ಹೃದಯದ
ಕರಂಡದೊಳ್ ಬಿಸುಸುಯ್ಲಾಡಿತು ನರನಾಡಿಯು
ಸೀಳ್ವ ತೆರದಲಿ. ಗುರುವರಂ ನಯನ ಮುಗಿದಂತೆ
ಚಿಂತನಾವೇಶದಲಿ ಜಗಮರೆತು ಮೈಮರೆತು
ವಿಶ್ವವೈಶಾಲ್ಯದಲಿ ಮುಳುಗಿದರ್, ಮುಳುಗಿದರ್.
ಸದ್ದಿಲ್ಲದುರುಳಿದುದು ಪೊಳ್ತು. ತರುವಾಯಿಯೊಳ್
ಜಾಗ್ರುತಿಯ ರಂಗಕೈದು ನೋಡಲ್ ಕಣ್ತೆರೆದು
ಶಿಷ್ಯಮಂಡಳಿಯು ಕುಳಿತಿರ್ದುದು ಸುತ್ತಲುಂ.
ಹೃನ್ಮನಗಳಾಳದಲಿ ಭಾರರಸ ಉಕ್ಕೇರಿ
ಶಿಷ್ಯ ಮಂಡಳಿಯ ಮೇಲೆ ದೃಷ್ಟಿಯಂ ಹಾಯಿಸಿ
ನೋಡಿದರ್! ಸುತ್ತಲೆಲ್ಲರಿರ್ದರ್ ತಮ್ಮೆಡೆಗೆ
ದೃಷ್ಟಿಯಂ ನೆಟ್ಟು. ಸುಖದುಃಖಗಳ ಬೀಡಾಗಿ
ಕಳವಳ ತಳಮಳಗಳ ನೆಲೆಯೆ ತಾವಾಗಿ
ಇರುತಿರೆ ಗುರುದೇವಂ ಸರಾಗದಲಿ ನುಡಿದರ್,

“ಭಗವಂತನಿತ್ತುದಂ ತೋಷದಿಂ ಸ್ವೀಕರಿಸೆ
ಸಿದ್ಧರಿರವೇಳ್ಕುಂ. ಅವನಿಚ್ಛೆಯೆ ನಮ್ಮಿಚ್ಛೆ.
ಭ್ರಾತೃಭಾಯಿಗಳೇ ನೆನಪಿಡಿ.” ಸಾವಧಾನದಿ
ಹೊರಬಿಳ್ದುದು ನುಡಿಗಟ್ಟು. ಗುರುಭಾಯಿಗಳೆಲ್ಲ
ಗುರುನಾಯಕನ ನುಡಿಯಂ ಕೇಳ್ದು ಮಿಣ್ಣನೆಯೆ
ಮೂರ್ತಿಮತ್ತಾದರ್ ಸುಮಂತ್ರಮುಗ್ಧಗತಿಯಲಿ.
ಮತ್ತೆಂದರ್ ಸ್ವಾಮೀಜಿ “ಹೇ ಮಮ ಪುತ್ರರಿರ!
ಕೇಳಿ, ಎನ್ನೆಲ್ಲ ಕಾರ್ಯಭಾರಕೆ ಭುಜಗುಡುವ
ಸ್ವಯಂ ಕರ್ತರಿರುತಿರೆ ನೀವ್, ಎಲ್ಲಿಹುದು ಈ
ರೀತಿಯೊಳ್ ಮಿಣ್ಣನಿರೆ ಸಮಯಂ? ಸಕಲಭಾರ
ನಿಮ್ಮಮೇಲಿಹುದು. ಸದಾ ಚಿಂತೆ ಬಿಟ್ಟು, ಕಾರ್ಯ
ಶೀಲರಾಗಿ. ನಿಮಗಿನ್ನು ಚಿಂತೆಗೆ ಪೊಳ್ತಿಲ್ಲಂ.”

“ನ ಕರ್ತಾ ಕಶ್ಯಚಿತ್ಕಶ್ಚಿನ್ನಿಯೋಗೆ
ಚಾಪಿನೇಶ್ವರಃ ।
ಸ್ವಭಾವೇ ವರ್ತತೇ ಲೋಕಃ
ತಸ್ಯ ಕಾಲಾಃ ಪರಾಯಣಂ ॥”

ದಿನಗಳುರುಳುರುಳಿ ಜುಲೈ ಒಂದನೆಯ ತೇದಿಯು
ಗಮಿಸಿದುದು ಸಹಜ ಶೈಲಿಯಲಿ. ಒಂದೊಂದು ದಿನ
ಮಾನವುಂ ಗುರುಭಾಯಿಗಳೊಡಂ ಕಳೆಯುತ್ತಿರೆ
ಸರಳ ರೀತಿಯಲಿ. ಮೂಡಣದಿಗ್ ದಿಶೆ ಕೆಮ್ಮನೆ
ಕೆಂಗಲಿಸಿ ಅರುಣೋದಯಮಾದುದು ಎಂದಿನೊಲ್.
ಭಾಗೀರಥಿಯ ಪ್ರವಾಹಧಾರೆಯು ಜೊಳಜೊಳನೆ
ಜೋಗಳಿಸುತಿರೆ ಲಾಲಿ ಹಾಡುವ ತೆರದಿಂದಲಿ.
ಉದಯಮಾನೋತ್ಸವ ಮೆರೆದುದು ಶೋಭಾಮಯದ
ಪರಿಶೋಭೆಯಲಿ. ಮುಂಬೆಳಗಿನ ಪ್ರಾರ್ಥನೆಯ ಸಲಿಸೆ

ಮನದುಂಬಿ ಕೊರಳ್ ತುಂಬಿ ಹರಿಸಿದರ್ ವಂದನೆಯಂ,

“ಏನ ಸೃಷ್ಟಂ ಜಗತ್ ಸರ್ವಂ
ರಕ್ಷತ್ಯಖಿಲಂ ಜಗತ್
ಜಗತ್ ಸಿಂಹರತೇಯಚ್ಚ ತಸ್ಮೈ
ಶ್ರೀ ಬ್ರಹ್ಮಣೇ ನಮಃ ॥”

“ಸತ್ಯಪಿ ಭೇದಾಗಮೇ ನಾಥ
ತವಾಹಂ ನ ಮಾಮಕೀನಸ್ತ್ವಂ ।
ಸಾಮುದ್ರೋ ಹಿ ತರಂಗಃ ಕ್ವಚನ
ಸಮುದ್ರೋ ನ ತಾರಂಗಃ ॥”

ಗರಿ ಹಗುರಮಾಯ್ತು ಶರೀರ ಸಂಪದಂ, ಅರಳೆ
ಹಗುರಮಾದುವು ಹೃನ್ಮನಗಳ್ ಪ್ರಾತಃರ್ವಿಧಿಯಂ
ಪೂರೈಸಿ ಪೊರಗೈತಂದರ್ ಗುರುವರಂ. ಜೊತೆಗೆ
ಇರುತಿರ್ದರ್, ಸ್ವಾಮಿ ವಿರಜಾನಂದರ್ ಮೇಣ್
ಸ್ವಾಮಿ ಶಾರದಾನಂದರ್. ಪ್ರಾಂಗಣದಲಿ ಪದ
ಚಾರಣಂ ನಡೆಸುತ್ತೆ ಶಾಂತ ಪ್ರಶಾಂತಮಯ
ಭಾವದಲಿ ಆ ಮಹಾನ್ ಜಲಧಾರೆಯ ತೀರ
ದಂಡೆಯೆಡೆಗೆ ಕೈದೋರುತೊಂದು ಸುವಿಶಾಲ ತ-
ಲಮಂ ಗುರುತಿಸಿ ನುಡಿಸಿದರಿಂತು “ಎಲೆ ವತ್ಸಾ!
ನೋಡಾ ವಲಯಂ! ಆಸೀ ದೇಹಮಂ ಬಿಟ್ಟ
ಬಳಿಕಲಾ ದಾಣದೊಳೆನ್ನ ದೇಹಕೆ ಅಗ್ನಿಸಂ-
ಸ್ಕಾರಗೊಳಿಸಿ.”
ಹೃದಯಾಂತರಿತ ಇಚ್ಛೆಯದು
ಹೊರಹೊಮ್ಮಿತು ಭಾವಾವೇಶದಲಿ. ಶಾರದಾ
ನಂದರುಂ ಸ್ವಾಮೀಜಿಯೆಡೆಗೊರ್ಮೆ ನೋಡಿದರ್,
ಕಂಚುಗೊರಳ್ ದನಿಯಿನಿತು ಕುಗ್ಗಿಲ್ಲ, ದುಃಖದ

ಛಾಯೆಯಣಮಣಮಿಲ್ಲ. ಆತ್ಮಸ್ಫೂರ್ತಿಯದೇನ್
ಕುಸಿದಿಲ್ಲ. ಚಿತ್ತ ಕಲ್ಪವುಂ ಕದಡಲಿಲ್ಲ. ಸತ್
ಶಾಂತಿಮಯ ರಸವೇ ಹರಿದತ್ತು ನರ ನಾಡಿಯಲಿ.
ಒಡನೆ ಶಿಷ್ಯಮಂಡಲಿಯ ಮೊಗಗಳ್ ಬಾಡಿದುವು
ತೊಟ್ಟು ಕಳೆದ ಹೂಗಳವೊಲ್. ಹೃದಯ ಡವಡವಿ-
ಸುತಿರುತಿರೆ ಕೊರಳ್ಗಳ್ ಬಿಗಿದುವು. ಬಿಸಿಯುಸಿರದು
ಹರಿದಾಡಿತು ಎದೆಯ ತಂತುಗಳ್ ತುಂಡುಗಡಿಯುವ
ಪಾಂಗಿನಲಿ. ಪರಿಮ್ಲಾನಮಾದುವು ಮುಖಬಿಂಬಗಳ್.
ಜುಲೈ ಎರಳ್ಡು ಮೂರ್ ದಿನಗಳ್ ಕಳೆದುವು. ನಿತ್ಯ
ಚರಿಯ ರೂಪಿನಲಿ. ದೈಹಿಕ ಸ್ಥಿತಿ ಯಥೋಚಿತ.
ಮಾನಸಿಕ ಸ್ಥಿತಿಯುಂ ಯಥೋಚಿತ. ಧೈರ್ಯವುಂ
ಯಥೋಚಿತ. ಸ್ವಾಮಿಜಿಯುಂ ಪ್ರಾಥಃಚರಿಯದಂ
ತೀರ್ಚಿದ ಬಳಿಕಂ ಪಗಲಿಡೀ ಧ್ಯಾನಗಾಂಭೀ-
ರ್ಯದಲ್ಲಿ ಕಳೆದರಮಿತ ಸುಶಾಂತಿಯ ಬೀಡಾಗಿ.
ಗುರುಭಾಯಿಗಳೊಡಂ ಸಹಭೋಜನ, ಮಾತುಕತೆ
ನಡೆದುದು ಸರಾಗದಲಿ. ಪಗಲಡರಿ ಉರುಳಿರಲ್
ಮುಸ್ಸಂಜೆಯ ಪ್ರಾರ್ಥನೆಯ ಮುನ್ನ ನುಡಿದರಿಂತು,
"ಭ್ರಾತೃಗಳೆ ಕೇಳಿ! ಶ್ರೀರಾಮಕೃಷ್ಣ ಪರಮ
ಹಂಸರ ಸಂಘಂ ಆವಾವ ಕಾರಣಕ್ಕು ಮುರಿದು
ಹಾಳಾಗದಿರಲಿ. ಎಲ್ಲವುಂ ನಿಂನಿಮ್ಮಗಳ
ಆತ್ಮ ಪ್ರೇರಣೆಯಿಂ ಸದ್ಭಾವದ ಬಂಧದಿಂ
ನಡೆಯವೇಳ್ಕುಂ. "**ಅಂಧೇ ನೈವ ನೀಯಮಾನ
ಯಥಾಂಧಃ**" ಎಂಬವೊಲ್ ಆದಪುದು ಸಲ್ಲಗಡ?
ಹೃದಯ ಶೂನ್ಯರ್, ದಯಾಶೂನ್ಯರ್ ಇರುತಿಪ ಧೀ-
ಮಂತರಂ ನಂಬದಿರಿಂ. ನಿಂನಿಮ್ಮ ಆತ್ಮದ

ಜ್ಯೋತಿಯೇ ಪಥದರ್ಶಿಯಾಗಿರಲಿ. ಶ್ರದ್ಧೆ–ಶ್ರದ್ಧೆ
ಶ್ರದ್ಧೆಯೆನೆ ಆತ್ಮಶ್ರದ್ಧೆ! ದೈವ ಶ್ರದ್ಧೆ! ಬೆಳೆದಿರಲಿ.
ಇದುವೆ ಶ್ರೇಷ್ಠತೆಯ ಮೂಲಮಂತ್ರಂ. ಕೇಳಿಲ್ಲಿ,

"ಅಕರ್ತವ್ಯಂ ನ ಕರ್ತವ್ಯಂ
ಪ್ರಾಣೈಃ ಕಂಠಗತೈರಪಿ ।
ಕರ್ತವ್ಯ ಮೇವ ಕರ್ತವ್ಯಂ
ಪ್ರಾಣೈಃ ಖಂಡಗತೈರಪಿ ॥"

ಸಾವಿರದೊಂಬೈನೂರೆಡನೆಯ ಜುಲೈತಿಂಗಳ
ನಾಲ್ಕನೆಯ ದಿವಸಮಾನಂ ಸಾರ್ದುದು ಗಭೀರ
ಗತಿಯಲಿ! ವಿಧಿಯ ಕರ್ನೆರಳೋ ಎನೆ ಅತ್ಯಂತ
ಘೋರಾತಿಘೋರ ರೂಪಿನಲಿ ಆಗಮಿಸಿದುದು
ಎಂದಿನಂತೆವೊಲ್. ಬ್ರಾಹ್ಮೀ ಮುಹೂರ್ತಮಡರ್ದುದು
ತಣ್ಣನೆಯ ಕೈಗಳಿಂ ಹೆಡೆಮುಡಿಗಟ್ಟಿಕೆಡಹುವ
ತೆರದಿ. ಗಡಗಡ ನಡುಗುತಿದೆ ಮೈಕೈ. ತನಿಯುಂಡ
ತಣ್ಗಾಳಿಯ ಹೊಡೆತದ ಬಿರುಸು ಕೊರೆವುದು ಒಡಲ್
ಬಳ್ಳಿಯಂ. ಮಳೆ ಹೊಯ್ದು ಭುವಿತೊಯ್ದು ತಂಪೂಡಿ
ವಾತಾವರಣಂ ತನಿಯಾಯ್ತು, ಥಂಡಿಯುಂ ಘನ
ವೆತ್ತುದುದು ಹೆಪ್ಪಿಟ್ಟವೊಲ್. ಬೀಸಿತು ಬಿರುಸಿನ
ಸುಯ್ಗಾಳಿ. ಆಚಾರ್ಯ ವಿವೇಕಾನಂದರುಂ
ಬ್ರಾಹ್ಮೀ ಮುಹೂರ್ತದೊಳ್ ಎದ್ದು ಪ್ರಾತಃರ್ವಿಧಿಯಂ
ತೀರ್ಚಿ ದೇವರ ಕೊಠಡಿಗೆತ್ತರ್. ಗವಾಕ್ಷಿಗಳಂ
ಮುಚ್ಚಿದುವು ಕರದ್ವಯಗಳ್. ನಿಶ್ಯಬ್ದ ನೀರವ
ಶಾಂತಿಯಲಿ ಕದವಿಕ್ಕಿ ಧ್ಯಾನನಿರತರಾದರ್
ಗುರುವರಂ. ಧ್ಯಾನ ಸಿಕ್ತಮನವದು ನಿಷ್ಪಂದ,
ನಿಷ್ಕಂಪ, ನಿರ್ಯೋಚನೆಗಳ ಆಳದಲಿ ತಾಂ

ಮುಳುಗಿತು. ತನುಮನಗಳ್ ಮರೆತರ್ ಗುರುದೇವಂ.
ಗಂಭೀರ ಮೌನದೊಳೆನಿತೊ ಸಮಯಮುರುಳ್ವುದು,
ಉರುಳ್ವುದು, ನಂತರಂ ಮೈತಿಳಿದು ಎದ್ದಂತೆ
ಪೊರಗೈದು ಶಿಷ್ಯರಿಂಗೆ ಜಗಜ್ಜನನಿ ಕಾಳಿ
ಮಾತೆಯಂ ಪೂಜಿಸಲ್ ಬೆಸಸಿದರ್ ಶ್ರದ್ಧೆಯಿಂ.
ದೇವಿ ಆರಾಧನೆಯು ಕ್ರಮವತ್ ನಡೆದುದೊಂದು
ತಾಸು ಕಳೆವನ್ನ. ಸ್ವಾಮೀಜಿಯುಂ ಕಾಳಿಕಾ
ದೇವಿಯ ಗುಡಿಯಂ ಬೊಕ್ಕು ಪೂಜೆಯಲಿ ಪಾಲ್ಗೊಂಡು
ಪದ್ಮಾಸನದೊಳ್ ಕುಳಿತರ್ ಅಂತರ್ಮುಖಿಯಾಗಿ.
ಹಾ! ಮುಂಬರಿಯದೀ ಕಿರುಲೆಕ್ಕಣಿಕೆ. ಹೃದಯ
ಭಾರ. ಚಿತ್ತಭಾರ ಮನಭಾರಮೆನೆ ಎಂತೀ
ಲೇಖನಿಯ ಮಸಿ ಹರಿವುದು? ಅನುನುಭವಿಯಾದಾಂ
ಎಂತೊರೆವೆನೀ ದುಃಖಾಂತ ಪ್ರಕರಣಮಂ? ದೇವಿ
ಕಾಳಿಕಾ ಮಾತೆಯೇ, ನೀನೆನಗೆ ಮನೋಬಲ
ಮೇಣ್ ಜ್ಞಾನಬಲಗಳನಿತ್ತು ಬರೆಸಮ್ಮ ಈ
ಮುಂದಿನಧ್ಯಾನಮಂ. ಕರಮುಗಿದು ಕಾಲ್ವಿಡಿದು
ಬೇಡುವೆನ್ನೈ ಹೇ ಗಾಯತ್ರಿ ಜಗದ್ಧಾತ್ರಿಯೇ!
ಹಾ! ಪೊಳ್ತು ಚಣಕಾಲ ನಿಂತು ನಿಡುಸುಯ್ದುಯ್ದು
ಮುನ್ನಡೆಯಿತು, ಜಗತ್ ನಿಯಂತ್ರಣವ ನೆನೆದು. ವನ
ಪಕ್ಷಿಸಂಕುಲಂ ಚೀರಿದುವು ವೀತರಾಗದಲಿ.
ನಾಯಿಗಳ್ ಕೊರಳೆತ್ತಿ ಬೊಳ್ಳಿಕ್ಕಿದುವು ಊರ್ಧ್ವ
ಮುಖಿಯಾಗಿ. ದಳಬಿರಿದ ಕುಸುಮಕೋಟಿ ನೊಂದುವೊ
ಎನಲ್ ಸೌರಭವಂ ಪಸರಿಸದಿವೆ ಮೊಗಬಾಡಿ.
ಸುಯ್ ಸುಯ್ಯನೆ ಸುಯ್ಯುತ್ತೆ ಬೀಸಿತು ಸುಯ್ಗಾಳಿ.
ಭೃಂಗವಿಂಡು ಝೇಂಕರಿಸಿದುವು ವಿಕೃತಸ್ವರ

ಮೇಳದಲಿ. ಎಲ್ಲೆಲ್ಲಿಯುಂ ಕರುಣ ಕಾತರತೆ
ತುಂಬಿದೊಲ್ ಕಾತರಮಯ ದುಃಖಮಯ ವಿಷಾದ
ಮಯಮಾಯ್ತು. ಕರುಣದಾಕರತೆಯಿಂದೆ. ದುರ್ವಿಧಿ
ಆವಗಳಿಗೆಯಲಿ ಪಾಶವನೊಗೆವುದೊ ಎಂಬುವ
ಭಯಭರಿತ ಹೃದಯಗಳ್ ಡವಡವಿಸಿದುವತಿ
ಕಳವಳದಲಿ. ದೇವಿಯ ಮಂದಿರದೊಳ್ ಧ್ಯಾನಂ
ಗೈದ ಸ್ವಾಮಿ ವಿವೇಕಾನಂದರುಂ ಪೊರವಂದು
ಪ್ರಾಂಗಣದಲಿ ಬೆಚ್ಚನ್ನ ಚೆಂಬಿಸಿಲಿಂಗೆ ಮೈ
ಗೊಟ್ಟು ಮೆಲು ಮೆಲ್ಲನೆ ಶತಪಥತಿರುಗಾಡುತ್ತೆ
"ಮನವೇ ನಡೆ ನಿನ್ನಯ ಮನೆಗೆ." ಎಂಬ ಅಂತರಾರ್ಥ
ಪೂರ್ಣ ಮನಮೋಹನಕರ ಸಂಗೀತೆಯೊಂದಂ
ಮೆಲುದನಿಯಲಿ ಗುನುಗುತೆ ಶತಪಥ ತಿರುಗಾಡಿದರ್
ಸನಿಹದೊಳಿರುತಿರ್ದ ಗುರುಭಾಯಿಗಳ್ ಶಿಷ್ಯರ್
ಗುರುವರ್ಯನ ಭಾವಾವೇಶ ಮುದ್ರಾಮುದ್ರಿತ
ಮುಖಾಂಭೋಜಮಂ ನಿಟ್ಟಿಸಿ ಮನದಿ ಮರುಮರುಗಿ
ನಿಟ್ಟುಸಿರ್‌ಗರೆದರ್. ಹೃತ್ ತಂತುಗಳ್ ರೋಧಿಸಿ
ರೋಧಿಸಿ ದುಃಖಾಶ್ರುವಂ ಸೂಸುತಿರ್ದುವು ಅಮಿತ
ಸಂಕಟದಲಿ. ಸ್ವಾಮಿ ಪ್ರೇಮಾನಂದರುಂ ಒಡಲ
ಶೋಕದ ಝುರಿಯಂ ಒಳಗೊಳಗೆ ಅದುಮಿ ಹಿಡಿದು
ಸಿಡಿದೊಡೆಯಲಿಹ ಪಟಾಕಿಯ ತೆರದಿ ಬಳಿಗೈದರ್.
ನುಡಿವೆನೆನೆ ಬಾಯಿ ಬಾರದು, ಅಳುವೆನೆನೆ ಅಶ್ರು
ಬಿಂದುವಂ ಸೂಸಲ್‌ಸಲ್ಲ. ತಮ್ಮನ್ನೆ ತಾವ್ ಸೈಪುತೆ
ನಿಂದರ್ ಗಭೀರ ಗತಿಯಲಿ.
ಯುಗಾಚಾರ್ಯನುಂ
ನೆಟ್ಟ ನಿಟ್ಟಾಲಿಯಿಂ ನೋಡುತ್ತೆ ಶಿಷ್ಯನಂ

ಕುರಿತು ಇಂತೆದರ್ "ಎಲೆ ವತ್ಸಾ! ಇನ್ನೊರ್ವ
ವಿವೇಕಾನಂದನುಂ ಇರ್ದಿರ್ದೊಡಿಂದವಂ
ಅರಿಯುತಿರ್ದಂ ಈ ವಿವೇಕಾನಂದನೇನೇಂ
ಗೈದಿಹನೆಂಬುದಂ! ಇರ್ಕೆ ಕಾಲಾಂತರದೊಳೀ
ಪುಣ್ಯಭೂಮಿಯಲಿ ಇನ್ನೆನಿತು ವಿವೇಕಾನಂದರ್
ಸಂಭವಿಸುವರೊ."
ಪ್ರೇಮಾನಂದರ್ ಅಚ್ಚರಿಯ
ದಿವ್ಯ ಕುಂಡದಲಿ ಮುಳುಗೆದ್ದರ್. ತುಟಿಗಳಿನಿತು
ಬಿರಿಯದಾದುವು, ನುಡಿಗಳುಳಿದುವು ಎದೆಯ ಬನದಿ.
ಸ್ವಾಮಿಜಿ ಗಂಭೀರ ಭಾವನಾ ಭೂಮಿಕೆಯ
ಸ್ಥಿತಿಯೊಳಿರ್ಪಾಗಲಲ್ಲದೆ ಇಂತಿಂತು ನುಡಿವುದದು
ವಿಶೇಷವೇ! ಎನಿಸಿದೊಡಮದರ ಅಂತರಾರ್ಥಂ
ಪೊಳೆಯದಾಯ್ತು. ಈ ದಿನಮೆ ದೇಹ ಪರಿತ್ಯಾಗದ
ಸಂಕಲ್ಪಿಸಿರುತಿರ್ದು ಯೋಗಾರೂಢರಾಗಿಹ-
ರೆಂಬುದು ಮನಕೆ ಬಾರದೆಯೆ ಉಳಿಯಿತು. ಏನೋ
ಒಂದು ಬಗೆಯ ಸುಖದುಃಖಗಳ್ ಕಲೆತುವು ಒಡಲ್
ಕೋಶದಲಿ. ಪ್ರೇಮಾನಂದರ್ ಗುರುವರನ ದಿವ್ಯ
ಸನ್ನಿಧಿಯೊಳಿರುತಿರ್ದು ಬೆಂಗಾವಲೆನೆ ಪಾದ
ಸಂಚಲನಗೈದರವರೊಡಗೂಡಿ. ತರ್ವಾಯ
ಕೊಠಡಿಯೊಳ್ ಸುವಿಶ್ರಾಂತಿ ಪಡೆದರ್ ಸ್ವಾಮಿಜಿ.
ಪೊಳ್ತೇರಿ ಪೊಳ್ತಿಯ್ತಿತು. ಭಾರತದ ಭಾಸ್ಕರಂ
ಅಸ್ತಂಗತನಾದ. ಅನನ್ಯ ಅಸ್ತಮಾನಂ
ಪಿಂತೆಯೇ ಉಳಿಸಿರ್ದ ನೆತ್ತರ್ಗೆಂಪಿನೋಕುಳಿ
ಸ್ನಾತ ಪಶ್ಚಿಮ ದಿಗ್ವೆಣ್ಣಿನ ಕಣ್ಣಲಿ ಕೆಮ್ಮನೆ
ಕೆಂಪಿನಶ್ರುಗಳ್ ಉದುರಿದುವೊ ಎನಲ್ ಮೆರೆದುವು

ಅಲ್ಲಲ್ಲಿ ಅಕ್ಷತೆಗಳ್ ಹೋಲ್ವ ಕೆಮ್ಮುಗಿಲ್ ಮರಿ
ತುಣುಕುಗಳ್. ತಂಗಾಳಿ ಬೀಸಿತು ಸುಯ್ ಸುಯ್ಯನೆ
ಸುಯ್ಯಾಳಿಯಾಗಿ. ಗೂಡುಗೊಂಡುವು ವನವಕ್ಕಿ.
ಹಜಾರದೊಳೆಲ್ಲ ಶಿಷ್ಯರ ಮಧ್ಯೆ ಮಂಡಿಸಿದ
ಸ್ವಾಮೀಜಿಯ ಮನವಾವ ಲೋಕದೊಳ್ ಮುಳುಂಗಿ
ವಿಹರಿಸುತಲಿರ್ದುದೊ ಎನೆ ಅಂತರ್ಮುಖಿಯಾಗಿ
ಗಂಭೀರಗತಿಯೊಳಿರುತಿರೆ ಭೋಜನ ಶಾಲೆಯ
ಘಂಟಾರವ ಮೊಳಗಿ ಝಣಝಣಿಸಿತು ಭೋಜನದ
ಕರೆಗಾಗಿ. ಎಲ್ಲರೆದ್ದರ್ ಗುರುವಿನೊಡಗೂಡಿ.
ಭೋಜನ ಶಾಲೆಯಲಿ ಸಾಲೈಸಿರಿಸಿದ್ದ ಮಣೆಗಳ
ಮುಂದೆ ಎಲೆಗಳಿರ್ದುವು. ಸರಳ ಸುಖೀ ಭೋಜನ
ಸಾಗುತಿರಲ್. ಒರ್ಮೆ ಮೌನ, ಒರ್ಮೆ ಪರಿಹಾಸ್ಯದ
ಚಟಾಕಿ. ಇವುಗಳ ಮಧ್ಯೆ ಶಿಷ್ಯರಿಗೆಂದರಾ
ಸ್ವಾಮೀಜಿ "**ಸಾವಿದ್ಯಾ ಯಾ ವಿಮುಕ್ತಯೇ**" ಎನೆ
ನಿಮಗೇಂ ಕೊರಂ? ನೀಮೆಲ್ಲರುಂ ಕಲಿತು ಅರಿತು
ಬಲಿತವರ್. ಇನ್ ನಿಮ್ಮ ಮುಂದಿಹುದು ನೇರಪಥ.
ಮುನ್ನಡೆಯು ಮಾತ್ರಮೇ ನಿಮ್ಮದು. ನಿಮಗೆಲ್ಲಂ
ಒಳಿತಪ್ಪುದು. ಚಿಂತೆಯಂ ಬದಿಗೊತ್ತಿ ನೆಮ್ಮದಿಯ
ಬರ್ದುಕಂ ಬಾಳ್ವುದದು ನಿಮಗಕ್ಕುಂ. "**ಯತ್ ಪೂರ್ವ
ವಿಧಿನಾ ಲಲಾಟ ಲಿಖಿತಂ ತತ್ ಮಾರ್ಜಿತು ಕಂ
ಕ್ಷಮಃ**"
ಗುರುಮಹಾರಾಜರ ಲವಲವಿಕೆಯ ಮಾತಿನ
ಧಾಟಿಯಂ ಗಮನಿಸಿದ ಶಿಷ್ಯರುಂ ಮುನ್ನಿನಾ
ಆರೋಗ್ಯ ಭಾಗ್ಯವದು ಪಿಂಮರಳಿತೆಂಬೊಂದು
ತೋಷದಿಂ ಉತ್ಸಾಹದಿಂ ಒಗ್ಗಿದರ್ ತಮ್ಮ

ಮನದೊಳ್. ಹಗುರಾದುವು ಜೀವಕಣಕಣಂಗಳ್.
ಊಟದ ಬಳಿಕಲೇನ್ ವಿಶ್ರಾಂತಿಯಂಬಡೆಯದೆ
ಶಿಷ್ಯರಂ ಕರೆದು ಬರಮಾಡಿ 'ಲಘುಕೌಮುದಿ'
ಎಂಬೊಂದು ಸಂಸ್ಕೃತ ವ್ಯಾಕರಣದ ಪಾಠಂ
ಕೈಕೊಂಡರ್. ನೀರಸ ಗ್ರಾಂಥಿಕ ಪಾಠದಲಿ
ಭಾಯಿಗಳ ಮನತಣಿಸೆ ಕಿರು ಹಾಸ್ಯವಂವೆರಸಿ
ಸುರುಚಿಗೊಳಿಸಿ, ಮೂರು ತಾಸುಗಳ್ ವ್ಯಾಖ್ಯಾನ
ಗೈದು, ಮುಗಿಸುತದರಿಂದಂ ವಟುಗಳ ಮನಕ್ಕೆ
ಮುದರಸವನೂಡಿಸಿದರ್! ಅಂತಪ್ಪ ಗ್ರಂಥದಿಂ
ಅಮೃತಕಣಗಳಂ ಘುಡುಕುಡಿಕಿ ತೆಗೆದು ತೋರಿ!
"ಸ್ವಾಮೀಜಿ, ವೇದಗಳನೋದುವುದರಿಂದೇನ್
ಉಪಕಾರಂ? ಏನಾದಪುದದರಿಂದೆ?" ಎಂದನ್
ಕಿರಿಯವಟು.
"ಮತಿಮೌಢ್ಯ ಹರಿದು ಮನತಿಳಿಯಾಗಿ
ಜ್ಞಾನಲಾಭಮಾದಪುದು ವತ್ಸಾ!"
ಎಲ್ಲರುಂ
ಗುರುವಿಂಗೆ ಉದ್ದಂಡ ನಮನಮಂ ಸಲಿಸಿದರ್,
ಅಂದಿನ ದಿನಚರಿ ಮುಗಿದುದಲ್ಲಿಗೆ. ಸ್ವಾಮೀಜಿ
ತಮ್ಮಯ ನಿಕಟ ಶಿಷ್ಯನೊಡಗೂಡಿ ಮಹಡಿಯಂ
ಏರಿದರ್ ಶಿಷ್ಯನ ಭುಜದ ಮೇಲೆ ಕೈಯೂರಿ.
ಬೆಳಕಿಂಡಿಯ ಬಳಿಗೆತ್ತು ತಾರಾಲೋಕದಲಿ
ಕಣ್ಣಿಟ್ಟು ಮಾನಸೀವೇದಿಯಲಿ ಅಂಡಲೆದು
ಪಿಂಮರಳಿ, ಸೇರಿದರ್ ಸೆಜ್ಜೆಯಂ. ಶಿಷ್ಯನಂ
ಕುರಿತು ಇಂತೆಂದರ್ "ಎಲ್ಲಾ ಕಿಟಕಿಯಂ
ತೆರೆದು ಬಿಡೈ. ಬಲು ಸೆಕೆಯು ಹಬೆಯಾಡುತಿದೆಯಲ್ತೆ?"

“ಹೌದು ಸ್ವಾಮೀಜಿ.”
ಕಿಟಕಿಗಳ್ ತೆರೆದು ಸನಿಹಕ್ಕೈದನ್ ಗುರುಭಾಯಿ.
“ನಿದ್ದೆಬಾರದು ಕಂಗಳಿಗೆ....” ಎನುತೆ ಸೆಜ್ಜೆಯಂ
ಬಿಟ್ಟು ಕಿಟಕಿಯೊಳ್ ಹೊರಜಗತ್ತಂ ಕಣ್ಣಿಟ್ಟು
ನೋಡಿದರ್ ನಸುವೊಳ್ತು. ತಾರಗೆಗಳ್ ಉಜ್ವಲಿಸಿವೆ.
ನಿಶಾಕಾಳಿಕೆಯ ರಾಜ್ಯಭಾರ ನಡೆದಿದೆ. ಸತ್
ಶಾಂತಿಯಲಿ ರಾತ್ರಿಗಾಳಿಯುಂ ಭರ್ರನೆ ನುಗ್ಗಿ
ಬಂದು ಮುದ್ದಿಸಿತು ತನುಮನಗಳಂ. ಕಳ್ತಲೆಯ
ಕಾರೊಡಲೊಳ್ ದೃಷ್ಟಿಯಷ್ಟಿಯನಟ್ಟಿದರ್ ದೂರ
ದಕ್ಷಿಣೇಶ್ವರದ ಕಡೆಗೆ. ಅಲ್ಲಿಯ ದೃಶ್ಯದೊಳ್
ಕಣ್ಗೆಸೆದುದೇಂ? ಕಾಳಿಕಾ ಮಾತೆಯೆ? ಅಥ ಆ
ಮಹದ್ಗುರುವರ್ಯ ಪರಮ ಹಂಸರೆ? ಆರಾರ್
ಕಣ್ಗೆತ್ತು ಅಭಯಹಸ್ತ ತೋರ್ದರೊ ಎಂಬವೊಲ್
ಕಣ್ಮನಂಗಳಂ ಕೀಲಿಸದಾದರ್ ಗುರುದೇವಂ. ವಿಶ್ವ
ಬ್ರಹ್ಮಾಂಡದ ಗೂಢಾತಿಗೂಢ ರಹಸ್ಯತಮ
ಶಕ್ತಿ ಸಂಚಾಲನಂ ನೆನೆನೆನೆದು ವಿಸ್ಮೃತಿಯ
ಕುಂಡದಲಿ ಮುಳುಗಿ ಹೋದರ್ ಗುರುವರಂ. ಜ್ಞಾನ
ದೃಷ್ಟಿಗೆ ವಿರಾಡ್ ಬ್ರಹ್ಮಾಂಡವುಂ ತೆಳ್ಳನೆಯ
ಪರಿಶುಭ್ರ ರೇಶಿಮೆಯ ತೆರೆಯಂತೆ ತೋರುತಿರೆ
ಅಲ್ಲಿಯೆ ಸೆರೆಸಿಲ್ಕಿದುದು ದೃಷ್ಟಿ. ಉರುಳಿತೆನಿತೊ
ತನಿವೊಳ್ತು. ಬಳಿಕ ಮೈಯರಿವು ಮೂಡಿದೊಲ್ ತಾಂ
ಪಿಂದಿರುಗಿ ಸೆಜ್ಜೆಯಂ ಸೇರಿದರ್. “ವತ್ಸ ನೀಂ
ಜಪಮಾಡ್ಯೆ ಪೊರಗಡೆಯಲಿ ಎಂದವನಂ ಕಳಿಪಿ
ತಾವೊಂದು ಜಪಮಾಲೆಯ ಕೈಕೊಂಡು ಶಿವನಂ
ಕುರಿತು ಜಪವನಾರಂಭಿಸಿದರ್, ಜಪದ ಸಮಯ

ಮುಗಿಯಿತ್ತು ಪ್ರಶಾಂತ ಶಾಂತಿಯಲಿ. ತರುವಾಯಿ
ಶಿಷ್ಯನಂ ಕೂಗಿ ಕರೆದು ನುಡಿದರ್ "ಎಲೆ ಮಗುವೆ,
ಬಳಲ್ಕೆಯು ಮಿಂದು ಅತಿಯಾಯ್ತು. ತಾಳಲಾರೆನ್
ಬಿಜ್ಜಣವಿಕ್ಕೆನಗೆ."
ಹಿಂದಕ್ಕೊರಗಿ ಮಲಗಿದರ್ ಸೆಜ್ಜೆಯಲಿ.
ವರ ಮಹಾಮೂರ್ತಿಯೊಲ್ ಕಣ್ಗೆಸೆದ ಶರೀರಂ
ಮಿಸುಕದಾಯ್ತು. ಜಪಮಾಲೆವಿಡಿದ ಕರಗಳ್ ಬಿಗಿ
ಮುಷ್ಟಿ ಸಡಿಲ್ಚಿದವೊಲ್ ಜಪಮಾಲೆ ಕಳಚಿದುದು.
ವದನಬಿಂಬದಲಿ ಬೆವರಿನ ತುಂತುರು ತುಂತುರು
ಹನಿಗಳ್ ಮೊಳೆತುವು ಸ್ವಾಶೋಚ್ಛ್ವಾಸಗಳ್ ಮಂದ
ಗತಿಯಲಿ ನಡೆಯುತಿರೆ, ಅಗಲವಾಗಿ ಕಣ್ ತೆರೆದು
ನೋಡುತ್ತೆ ಎದ್ದು ಕುಳಿತರ್. ಮುನ್ನಿನೊಲ್, ಮತ್ತೆ,
ಬಿರುಬಿರನೆ ನೋಡಿದರ್. ಒರ್ಮೆ ಇರ್ಮೆ ಸುದೀರ್ಘ
ಉಸಿರ್ ಬಿಟ್ಟು ಬಳಲ್ದ ಪರಿಯಲ್ಲಿ ಉರುಳಿದರ್
ಹಿಂದಕೆ. ಬೆದರಿದ ಶಿಷ್ಯಂ ಕೂಗಿ ಕರೆಯೆ ಕಣ್
ತೆರೆಯಲಿಲ್ಲಂ. "ಸ್ವಾಮೀಜಿ....!" ತರಳನ ಕರುಣೆಯ ಕರೆ
ಮತ್ತೆ ಮತ್ತೆ ಮೊಳಗಿತು. ಕರುಣಾಜನಕಮಾದ
ಆ ಕರೆ ಮೊಳಗಿಯೇ ಮೊಳಗಿತು "ಸ್ವಾಮೀಜಿ! ಸ್ವಾ..."
ಉತ್ತರ ಬರಲಿಲ್ಲಂ. ಮುಖಭಾವದೊಳ್ 'ಪ್ರಜ್ಞೆ'
ಎಂಬುದರ ಸೂಚನೆಯೆ ಇರಲಿಲ್ಲಮೆನೆ ಭಯದ
ಮೂಟೆಯಾಗಿ ಕಿಂಕರ್ತವ್ಯ ವಿಮೂಢತೆ ಮನಂ
ಅಪ್ಪಳಿಸೆ ಮಹಡಿಯಿಂ ಜಿಗಿದೋಡಿ ಹಿರಿಕಿರಿಯ
ಗುರುಭಾಯಿಗಳಿಗೆ ವಿಷಯವನೊದರಿ 'ಹೋ!' ಎಂದು
ಅಳಲಿದಂ ಎರ್ದೆ ಬಿರಿಯುವವೊಲ್. ಒಡನೆಲ್ಲರ್
ದಡದಡನೆ ಓಡಿ ಮೆಟ್ಟಿಲೇರುತೆ ನುಗ್ಗಿದರ್

ಕೊಠಡಿಯೊಳ್! ನೋಡಲೇಂ ಆ ಶಾಂತ ಮುಖಮುದ್ರೆ!
ಯೋಗಿವರ್ಯಂ ಅನಂತ ನಿದ್ರೆಯೊಳ್ ಮುಳುಂಗಿ
ಮೈಮರೆತಿರ್ದಂ! ಲೌಕಿಕ ವ್ಯವಹಾರವಂ ತಾಂ
ಬದಿಗೊತ್ತಿ ಪರಮಾತ್ಮನ ಪಾದಾರವಿಂದವ
ಸೇರಿರ್ದ್ದನ್! ಮಹಾನ್ ರಾತ್ರಿಯ ಕಡು ಕತ್ತಲೆ
ಕಡಲಿನಿಂ ಭೋಂಕನೈದಾ ಜಗಜ್ಜನನಿಯುಂ
ತನ್ನಯ ರಣ ಶ್ರಾಂತ ಸುಧೀರ ಧೀಮಂತ ಶ್ರೀ
ಪುತ್ರನಂ ಎದೆಗಪ್ಪಿ ಕರೆದೊಯ್ದು ಲಾಲಿಯಂ
ಹಾಡಿಪಾಡಿ ರಮಿಸಿರ್ದಳ್ ಕರುಣೆಯ ಮಡಿಲಲಿ!
ಯೋಗಿವರ್ಯ, ಮಂತ್ರ ದ್ರಷ್ಟಾರ, ಭಾರತಿಯ
ಔರಸಕುವರ, ಸತ್–ಚಿತ್–ಆನಂದ ಮೂರುತಿ,
ಮಹಾ ಜ್ಞಾನಿ–ಪ್ರಜ್ಞಾನಿ ಆತುರ ಕಾತರದಿ
ಸ್ವರ್ಗವಂ ಸ್ವರ್ಗೀಯಗೊಳಿಸೆ ನೇಪಥ್ಯಮಂ
ಏರಿರ್ದನ್! ಶ್ರೀರಾಮಕೃಷ್ಣ ಪರಮಹಂಸ
ಗುರುದೇವನ ಮಾನಸ ಸುತ ತನ್ನಯ ಗುರುವಿನ
ಹೃದ್ಯಸ್ಥನಾಗಿ ಶಾಂತಿಯನಾರೈದನ್! ತ್ರಿಲೋಕ
ಪೂಜ್ಯ ವೇದಾಂತ ಕೇಸರಿ! ಜಗದ್ಗುರು ಮಾನ್ಯ
ಸನಾತನ ಧರ್ಮ ತೇಜ! ಸದ್ಧರ್ಮ ದರ್ಶನ
ದರ್ಶಿ ತಾಂ ವೇದಾಂತ ಹೃದಯಗತನಾದಂ!
ನರಜನ್ಮವಂ ಸಾರ್ಥಕಗೊಳಿಸಿದ ನರೋತ್ತಮ
ಎಂದೆನಿಸಿ ನಿಚ್ಚ ದರಿದ್ರ ನಾರಾಯಣನ ಸೇವೆಗೈದಾ
ಅನನ್ಯತಮ ಕಿಂಕರರ ಕಿಂಕರಂ, ವಿರಿಂಚಿಯ
ಸೃಷ್ಟಿಯಲಿ ಕಿರಿಯ ಶಿಶುವೆನೆ ಧರೆಗೈದಿರಲುರೆ
ಕಲಿತುಬಲಿತು ಯೋಗಿದ್ರಷ್ಟಾರ ತಾನೈಸುತೆ,
ತನ್ನೆಲ್ಲ ಸಾಧನಾ ಸಂಪತ್ತಿಯಂ ಶಿಷ್ಯ

ಮಂಡಳಿಯ ಕರಕಮಲಗಳಿಗೊಪ್ಪಿಸಿದ ಬಳಿಕಲಾ
ಕರ್ಮಜ್ಞಾನಿ. ಮಹಾನ್ ವೀರಾವೇಶಿತಾಂ
ಭಾರತ ಗಗನ ಮಂಡಲದೊಳ್ ಐಕ್ಯವಾದಂ!
ಲೋಕ ಕಲ್ಯಾಣ ಕರ್ತನೆನೆ ಮುಂಗೆತ್ತು
ಸೆಣಸಿ ಸೆಣಸಿ ಬದುಕಂ ಗಂಧದೊಲ್ ತೇಯುತ್ತೆ
ಲೋಗರ್ಗೆ ಸಂಧಿಕಾಲದೊಳ್ ದಾರಿದೀಪ
ತಾನಾಗಿ ನಿಂದ ಶ್ರೀವಿವೇಕಾನಂದಗುರು
ವಿಶ್ವಪ್ರೇಮದೀ, ದಿವ್ಯ ಧೀಮಂತಿಕೆಯೀ ಮಿಗೆ
ಸತ್ ಚಿಂತನ ಮಂಥನದೀ, ಪರಮಚೇತನದೀ,
ಸುಜ್ಞಾನವೇತ್ತೃವೀ, ಲೋಕ ಪ್ರಜ್ಞಾನಿಯೀ
ಧೀರ ಧೀರೋದಾತ್ತನೀ, ಸಕಲ ಗುಣಶೀಲ
ಸಂಪನ್ನನೀ, ಸ್ವಧರ್ಮ ದುರಂಧರನೀ, ಪೂರ್ಣ
ತೇಜೋವಂತನೀ ಭಾರತ ಜನನಿಯ ಔರಸ
ಪುತ್ರನೀ, ಸತ್ಪುರುಷ ಶ್ರೇಷ್ಠನೀ, ಶ್ರೀಮಂತ
ಸಂನ್ಯಾಸಿಯೀ, ದೇವಮಾನವನೀ, ಮಹೋನ್ನತ
ವ್ಯಕ್ತಿಯೀ, ಆಚಂದ್ರಾರ್ಕ ಸತ್ಕೀರ್ತಿ ಶಾಲಿಯೀ,
ಧರ್ಮಮಾನುಷ್ಯ ವಿನಯ ವಿದ್ಯಾ ವಿಭೂಷಣನೀ
ಧರಣಿಯಲಿ ಸಂಜನಿಸಿ ಲೋಕೋತ್ತರವಾಗಿ
ಸನಾತನ ಧರ್ಮಧ್ವಜವಂ ಗಗನದೆತ್ತರಂ
ಓಡಿದೆತ್ತಿ ಬೆಳಗಿಸಿದ ಮಹಾ ಪ್ರವರಘನನೀ
ಮನುಕುಲದ ಸಕಲೇಂದ್ರಿಯಗಳಿಂಗೆ ಮಧುರರಸ
ಪಾನ ಮಾಡಿಸಿದ ಜಗದ್ವಂದ್ಯನುಂ ಭಾರತದ
ಪುಣ್ಯ ಭೂಮಿಯಂ ಭಾರತೀಯತೆಯಮೃತದ
ರಸದೊಳದ್ದಿ ಜಗದ ಚೆಂಬೆಳಕಿಗಿಟ್ಟ ಏಕೈಕ
ಪರಮ ಪುರುಷೋತ್ತಮನಂ ನೆನೆದು ಚಿಂಕೃತಿಯಂ

ಭಗವತಿಯ ಪಾದಪದ್ಮಗಳಿಂಗೆ ಸಮರ್ಪಿಸುತ
ಭಕ್ತಿಧ್ಯಾನ ಮುಗ್ಧ ನಮನಮಂ ಸಲ್ಲಿಸುವೆಂ.

"ಪ್ರಸೀದ ಮಾತುರ್ವಿನಯೇನ ಯಾಚೇ
ನಿತ್ಯಂ ಭವ ಸ್ನೇಹವತೀ ಸುತೇಷು ।
ಪ್ರೇಮೈಕ ಬಿಂದುಂ ಚಿರ ದಗ್ಧ ಚಿತ್ತೇ
ವಿಷಿಂಚ ಚಿತ್ತಂ ಕುರು ನಃ ಸುಶಾಂತಂ ॥"

ನಮೋ ನಮೋ ತ್ರಿಲೋಕ ಜನನೀ ಶ್ರೀಮಾತಾ.
ನಮೋ ನಮೋ ಸ್ವಾಮಿ ವಿವೇಕಾನಂದ.

ಬಾಂದಳದಲಿ ಮಳೆಗಾಳಿಯುಮಿರದ ಪ್ರಶಾಂತ
ಸಮುದಯದಲಿ ಭೋಂಕನೆ ಬರಸಿಡಿಲ್ ಬಂದೆರಗಿ
ಬಡಿದುಬಾರಿಸಿದ ತೆರದೊಳಾಯಿತ್ತು, ಶ್ರೀಮದ್
ಗುರುಮಹೋದಯನ ಭೀಕರ ಮರಣದ ದುರ್ವಾರ್ತೆ
ಹರಡಿಬರೆ! ತ್ರಿಲೋಕವೆ ತಲ್ಲಣಿಸಿತು ಅಕಾಲ
ಮರಣದಾ ದುರ್ವಾರ್ತೆಯಿಂದೆ. ಕೆಲಬರ್ ನಂಬ-
ಲಾರದೆ ಕುಸಿದರ್. ಕೆಲಬರ್ ಮತಿಗತಿ ತಪ್ಪಿದ
ಮಾಳ್ಕೆಯಲಿ ಕಂಗೆಟ್ಟರ್. ಕೆಲಬರ್ ನಡುಗಿದರ್
ಗಡಗಡನೆ ಗರಬಡಿದ ತೆರದಲಿ. ವಿಸ್ಮಯ ಸ್ತಂಭಿತ
ಚಿತ್ತ ಪ್ರವೃತ್ತಿ ಧಗ್ಧಮಾಯ್ತು. ಗುರು ಭ್ರಾತೃಗಳ್
ದುಃಖ ಸಾಗರದಲಿ ಮುಳುಗಿ ಮುಂಗೆಟ್ಟವೊಲ್
ತತ್ತರಿಸಿದರ್ ಕಂಬನಿಯ ಕೋಡಿಯಂ ಹರಿಸಿ,
ಸೂಸಾಡಿ, ಕೊನೆಯ ಕಾಣಿಕೆ ಸಲಿಸಿದರ್ ತಮ್ಮ
ಪರಮಾಪ್ತ ಗುರುದೇವನ ಪದ ಸನ್ನಿದಿಗೆ. ಆ
ದುಃಖ ಸಂಕಟದ ಸನ್ನಿವೇಶಂ ದುಃಖವನೆ
ಪರಮ ದುಃಖಗೊಳಿಸಿತು! ದುಃಖಾರ್ತ ಬಿಸುಸುಯ್ಲು

ದಶದಿಶೆಗಳಿಗೆ ಮುಟ್ಟಿ ಕಿಟ್ಟಿ ತಟ್ಟಿ ಧೀಂಕಿಡೆ
“ಏನಾಯ್ತು?...ಹಾ, ಏನಾಗಿ ಹೋಯ್ತು?” ಎಂದರ್
ಮರ್ಮರ ಮರುಗಿ ಕರಗಿ ಕಂಬನಿ ಮಿಡಿದರ್ ಬಲು
ಸಂಕಟದಲಿ. ದುಃಖದ ಕಡಲುಕ್ಕಿ ಹರಿಯಿತ್ತು
ಘೋರತರವಾಗಿ. ಕಕ್ಕಸಮಯ ಸುದ್ದಿಯದು
ಊರೂರುಗಳಲಿ ಕೇರಿಕೇರಿಗಳಲಿ ಹಳ್ಳಿ
ಹಳ್ಳಿಗಳಲಿ ಹಬ್ಬಿಹರಡಿ ಕರ್ಣಾಕರ್ಣಿಯೈಸಿ
ಜನವಾರ್ಧಿ ನುರ್ಗಿವಂದುದು ಅಂತ್ಯದರ್ಶನಕೆ.
ಭಾರತ ಜನನಿ ಕಂಬನಿ ಕಡಲಲಿ ಮುಳುಗೆದ್ದು
ತೇಲಿದಳ್. ತಂತಿವರ್ತಮಾನಗಳ್ ಪೂರ್ವಾರ್ಧ
ಪಶ್ಚಿಮಾರ್ಧಗೋಳಗಳಲ್ಲಿ ಸಂಚರಿಸಿದುವು
ದುಃಖಭಾರ್ತೆಯಂ ಪೊತ್ತು. ಪಾಶ್ಚಾತ್ಯಗೋಳಂ
ತತ್ತರಿಸಿ ನಡುಗಿ “ಏನಿದು? ಎಲ್ಲಿಯಾದರುಂಟೆ?
ಎಂಬ ವಿಸ್ಮಯ ಮೂಕ ಪ್ರಶ್ನೆಗಳ್ ಏಳುತಿರೆ
ಉತ್ತರಿಸುವರಾರ್? “ಅಯ್ಯೋ! ಹೀಗೂ ಉಂಟೆ?
ಎಳೆ ವಯಸ್ಸು! ನೂರ್ಕಾಲ ಬಾಳ್ಕೆ ಇರಬೇಕಿತ್ತು!”
ಎಂಬ ವಿಸ್ಮಯ ಮೂಕ ಪ್ರಶ್ನೆಗಳಿಗೆ ಉತ್ತರ
ನೀಡುವ ವಿಧಿ ಮೌನದ ಮುದ್ರೆಯೊತ್ತಿರ್ದು ತೆರೆ
ಮರೆಯೊಳ್ ಸರಾಗದಲಿ ಸೂತ್ರದಾಟವಾಡಿದ್ದ.
ದುಃಖದ ಬಿಸುಸುಯ್ಲಾಡಿತು ವ್ಯಾಪಕವಾಗಿ.
ಹಾಹಾ! ಕರಿಸಿತು ಜನಗಣಮನಮತಿಗತಿ ಗರ
ಬಡಿದ ತೆರದಲಿ! ಒಡಲ ಸಂಕಟದ ಝರಿ ಹರಿಯಿತು.
ಬೆಳಗಾಯಿತು, ಎಂದಿನೊಲ್ ದೂರದಿಗಂತದಲಿ
ಮೂಡಿದನು ಮೂಡಣರವಿ, ಕ್ರಮವತ್ ಕ್ರಮದಲಿ.
ದೀನದುಃಖಿಗಳ್ ಸಾಧು ಸಂತರ್ ಸಜ್ಜನರ್

ಶಿಷ್ಯರ್ ಮಿತ್ರರ್ ದೇಶಿಗರ್, ಬಂಧು ಬಾಂಧವರ್
ಸ್ತ್ರೀಯರ್ ಮಕ್ಕಳ್ ಗುರುಜನರ್ ಬಂದು ನೆರೆದರ್,
ನಯನದ್ವಯಗಳಲಿ ದುಃಖಾಶ್ರು ಕೋಡಿಯ ನೆರೆ
ಹರಿಸುತ್ತೆ. ಗೋಳಿನ ಕಡಲಾಯ್ತು ನತದೃಷ್ಟದ
ಬೇಲೂರು ಮಠ. ಅಳು-ಅಳು. ರಣಗೋಳಿನ ಅಳುವೆ
ಅಳು! ಪೆತ್ತಮ್ಮೆಯು ಮಗ್ಗುಲು ಬಿಡದಾದಳ್. ಶಿಷ್ಯ
ಗಣ್ಯರುಂ ಮನದಿ ಶಂಕೆಯಂ ತುಂಬಿ ಗುರುಗಳ್
ದೀರ್ಘ ಸಮಾಧಿಯೊಳಿಹರೆ ಎಂದೆಂದು ವೈದ್ಯರಂ
ಕರೆತಂದರ್. ಶರೀರ ಸಂಪಟಂ ಜೀವನೀ
ದ್ರವ್ಯ ಅಳಿದಿರ್ದೊಡಂ ಮೃದುವಾಗಿ ಮತ್ತಂ
ಪರಿಸ್ಫುಟವಾಗಿ ಇರ್ದುದಂ ಕಂಡವರ್ ಕಂಬನಿ
ಮಿಡಿದರ್ ಪಡಿಮೊಗದಲಿ. ಶಿಷ್ಯರಿಗಿರುತಿರ್ದ
ಕಿಂಚಿತ್ ಕಿರಿಯಾಸೆಯ ಕುಡಿ ಮುರುಟಿ ಹೋಯಿತು!
ಗುರುದೇವನ ಶೀತಲ ನಿಷ್ಪಂದ ಶರೀರಂ
ಸುಖನಿದ್ದೆಯ ಭಂಗಿಯಲಿ ಕಣ್ಮುಗಿದು ಮಲಗಿತ್ತು.
ಪ್ರಸನ್ನ ಶಾಂತಿಯ ಕಳೆಯ ಬೆಳಗು ತಿಂಗಳಿನ
ಜೊನ್ನಮಂ ಮರ್ಬುಗೈದತ್ತು. ಮಹಿಮಾಸ್ಪದ
ದೈವ ಭಕ್ತಿಯ ಧರ್ಮದೃಢತೆಯ ಮಹೋದಾರ
ವೈಭವದ ಮಹಾ ಕಾವ್ಯವೇ ಮುದ್ರಿಸಿರ್ದುದು.
ಗುರುದೇವನ ಭೌತಿಕ ದೇಹವಂ ಮಹಡಿಯಿಂ
ಕೆಳಗಿಳಿಸಿ ನಡುಮನೆಯೊಳ್ ಮಲುಗಿಸಿ ಗಂಧಚಂದನ
ಸುಗಂಧಿತ ದ್ರವ್ಯವಂ ಲೇಪಿಸಿದರ್. ಕಾಂಚನ
ಕಾನ್ತಿಯಲಿ ಮಡಿಗೊಂಡ ಕಾಷಾಯ ವಸನಮಂ
ಉಡಿಸಿ ವಿವಿಧ ಹೂಗಳ ಹಾರವಂ ತೊಡಿಸಿದರ್.
ಪಗಲುರುಳಿತು ಅರುಣಾರುಣಂ ಇಳಿಮುಖನಾದ.

ಮಠದಿಂ ಮಸಣಯಾತ್ರೆಯುಂ ಪೊರಮಡಲ್ ಬಹುಲ
ಜನರ ಮಹಾ ಮೇಳದಲಿ ಮೊಳಗಿತು ವೀತರಾಗದ
ಜಯಧ್ವನಿ! "ಗುರು ಮಹಾರಾಜ ಕೀ ಜೈ! ವಿವೇಕಾ
ನಂದ ಗುರುವರ್ಯ ಕೀ ಜೈ! ಪ್ರಭೋ ಶ್ರೀರಾಮ
ಕೃಷ್ಣ ಪರಮ ಹಂಸ ಕೀ ಜೈ!"
ಜಗಜ್ಜನನಿ, ಮಾತೆ
ಭುವನೇಶ್ವರೀ ದೇವಿಯುಂ ಔರಸ ಪುತ್ರನ
ಮಸಣ ಯಾತ್ರೆಯಲಿ ಪಾಲ್ಗೊಂಡು ಗುರುಭಾಯಿಗಳ
ಒಡಗೂಡಿ ಶೋಕಗೀತೆಯಲಿ ತನ್ನಯ ದುಃಖ
ಗದ್ಗದಿತ ದನಿವೆರಸಿ ಪಾಡಿದಳ್ ದುಃಖಮಂ
ಒಡಲೊಳ್ ಧರಿಸಿ. ರುದ್ರ ಭೂಮಧ್ಯೆ ವಿರಚಿಸಿದ
ಗಂಧಚಂದನ ಚಿತೆಯನೇರಿತು ಶವ ಮಂತ್ರಗಳ
ಘೋಷದ ನಡುವೆ. ಗಗನ ಭೇರಿಯಾಯ್ತು ಸನ್ಮಂತ್ರ
ಘೋಷ ಗಾಯತ್ರಿ! ಮೊಳಗಿತು ಬಹುಜನರ ದುಃಖ
ಗದ್ಗದಿತ ಕೊರಳ್ ದನಿಯಲಿ ಅಸ್ಫುಟವಾದಂತೆ.
ನಡು ಹರೆಯದ ತುರಣನ ದಿವ್ಯ ಭೌತಿಕದೇಹ
ಸಂಪುಟಂ ಅಗ್ನಿದೇವನಿಗಾಹುತಿಯಾದತ್ತು
ಭಕ್ತ ಜನ ಮಹಾ ಮಂಡಲಿಯ ರೋದನದನು-
ಸ್ವರಗಳ ನಡುವೆ. ಗಂಧಚಂದನ ರಾಶಿಯಾ
ಚಿತೆಯುರಿದುದೆಣ್ಣೆ ತುಪ್ಪವ ನೆಕ್ಕಿಯೇ ನೆಕ್ಕಿ
ಧಗಧಗಿಸಿತು ಕೆನ್ನಾಲಿಗೆಗಳ್ ಚಾಚಿ ಚಾಚಿ.
ಚಿತಾ ಪ್ರದಕ್ಷಿಣೆಗೈಯುತೆಲ್ಲರ್ ಕಟ್ಟಕಡೆಯ
ನಮನಮಂ ಸಲಿಸಿದರ್ ಕಂಬನಿಯ ಕಾಣಿಕೆಯ
ನೀಡಿ. ಅರುಣಾರುಣನ ಸ್ವರ್ಣಮಂಡಲಂ ಅಪರ
ವಾರ್ಧಿಯಲಿ ಬಿಳ್ದು ಅದೃಶ್ಯಮಾದುದು ದುಃಖ

ಚಿತ್ರವಂ ನೋಡಲಾರದೆ ಎಂಬೊಲ್. ಗುರುವರನ
ತೇಜೋಭರಿತ ಕಾಯ ಕಾಲವಶವಾದೊಡೇಂ?
ಸದ್ಗುರುವಿನ ಸನಾತನ ಹಿಂದೂ ಧರ್ಮಗಳ
ಸಂದೇಶಾಮೃತ ತ್ರಿಲೋಕದ ಹೃದಯ ಗಿಂಡಿಯಲಿ
ತುಂಬಿಹುದು ಎಂದುಮೆಂದಿಗುಂ ನಶಿಸದ ತೆರದಿ.
ಓ ಸ್ವರ್ಗೀಯ ಸಜ್ಜನನೆ! ಸ್ವಾಮಿ ವಿವೇಕಾ
ನಂದ ಪ್ರಭೋ! ನಿನ್ನಮಲ ಪಾದಪದ್ಮಗಳಿಗೆ
ನಮಿಪೆನ್ನೈ ಶಿರಬಾಗಿ! ಸ್ವೀಕರಿಸೆಮ ಭಕ್ತಿರಸ
ಪೂತ ಪ್ರಣಾಮಗಳನುಂ. ಮಲ್ಲಿಕಾ ಪುಷ್ಪ
ಹಾರವನರ್ಪಿಸುವೆ ವಿನಮ್ರತೆಯಿಂದಲಿ ಗುರುವೆ!
ಕರೆಯುತಿದೆ ನವನವೀನ ಯುಗಧರ್ಮವಾಣಿ!
ಓ ಅಮೃತ ಪುತ್ರರಿರಾ, ಕೇಳಿ! ಕಿವಿಗೊಟ್ಟು
ಕೇಳಿ! ಕೇಳಿಲ್ಲಿ!! ನಿಮ್ಮೊಳ್ ಅಸಡ್ಡೆ ಅಲಕ್ಷ್ಯ
ಬೆಳೆಯದಿರಲಿ. ಕಂಗೆಟ್ಟರ್ಗೆ ಕಣ್ಬೆಳಕಾಗಿ!
ನೆಚ್ಚುಗೆಟ್ಟರ್ಗೆ ಎದೆಗೆಚ್ಚಾಗಿ! ಜಡಮತಿಗೆ
ಪುರುಡಾಗಿ, ಮೃತಪ್ರಾಯರ್ಗೆ ಸಂಜೀವನಾ-
ಮೃತವಾಗಿ, ಎಂದೆಂದು ತಾರಸ್ವರದಲಿ ಕೂಗಿ
ಕರೆಯುತಿದೆ ನವಯುಗ ಧರ್ಮವಾಣಿ! ಉಲ್ಲೋಲ
ಕಲ್ಲೋಲಿತ ಮಹಾ ಸಾಗರ ತರಂಗದ ಚಂಡ
ಪ್ರಚಂಡ ಘೋಷದೊಲ್; ನಿಶ್ಚಲ ನೀರವದಿ
ಭೂಮ ಧೀರ ಮಹಾ ಪರ್ವತದ ಧ್ಯಾನ ಗಾಂಭೀ-
ರ್ಯದ ಅವ್ಯಕ್ತ ನಿನಾದದವೊಲ್; ಚೈತ್ರಾಟವಿಯ
ಪಕ್ಷಿಸಂಕುಲದ ತುಮುಲಮಯ ಕಾಕಲಿಯೊಲ್
ಸುಂದರವಾಗಿ, ಸುಮನೋಹರವಾಗಿ, ವೀರ ಧೀ-
ರವಾಗಿ ರುದ್ರಶಂಕರವಾಗಿ ಕರುಣ ಕಾತರ-

ವಾಗಿ ಕರೆಯುತಿದೆ ನವ ನವೀನ ಯುಗಧರ್ಮ
ವಾಣಿ! ಮನಗೊಟ್ಟು ಕೇಳಿ! ಕಿವಿಗೊಟ್ಟು ಕೇಳಿ!
ಆ ಸಮ್ಯಕ್ ಔದಾರ್ಯ ಪೂರ್ಣತಾ ವಾಣಿಯಲಿ
ಕಾಲದೇಶ ಜನ್ಯ ಸಂಕುಚಿತ ದೃಷ್ಟಿಯ ಅಪ
ಸ್ವರದ ಗಂಧವಿಲ್ಲ, ಸ್ವೈರವಿಲ್ಲ, ಜುಗುಪ್ಸೆಯುಂ
ಇಲ್ಲ, ಅಸೂಯೆಯಿಲ್ಲ, ಮೂಢಬುದ್ಧಿಯ ಹ್ರಸ್ವತೆಯು
ಇಲ್ಲ, ಅಂಧ ಶ್ರದ್ಧೆಯ ಕುಬ್ಜತೆಯುಮಿಲ್ಲ, ಅದು
ನಿರಂಕುಶವಾಗಿ ಸ್ವತಂತ್ರವಾಗಿ ವಿಚಾರ ಪೂರಿತ
ಮಾಗಿದೆ, ಸಂಯಮ ನಿಯಮ ಶೀಲವಾಗಿದೆ. ಆ
ಅಸೀಮ ವಾಣಿಯಂ ಕಿವಿಗೊಟ್ಟು ಕೇಳಿ! ಪ್ರತಿ
ಅಕ್ಕರಮಂ ಮನನಮಾಡಿ! ಎಲ್ಲವನು ಕಾರ್ಯಗತ
ಗೊಳಿಸಿಕೊಳ್ಳಿ! ಅದು ಸಲ್ಲಲಿ ಭಾರತ ಮಾತೆಯ
ಪದತಲಕೆ! ಮನಗೆಡದೆ ಮತಿಗೆಡದೆ ಮುಂದೆ ಸಾಗಿ!

"ಆಸ್ತೇ ಭಗ ಆಸೀನಸ್ಯ
ಊರ್ಧ್ವ ತಿಷ್ಠತಿ ತಿಷ್ಠತಿಃ ।
ಶೇತೆ ನಿಪದ್ಯಮಾನಸ್ಯ
ಚರಾತಿ ಚರತೋ ಭಗಃ
ಚರೈವೇತಿ! ಚರೈವೇತಿಃ!!"

ಸಂಪೂರ್ಣಂ

❋ ❋

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧. ಜೀವನಗಂಗಾ
೨. ಡಾ॥ ಅಘೋರ
೩. ಡಾ॥ ಕಮಲೇಶ್
೪. ವಂದೇ ಮಾತರಂ
೫. ಅನಂತಾನಂತದೆಡೆಗೆ
೬. ಮನೋನ್ಮಣಿ
೭. ಸಂತ್ರಾಸಿನಿ
೮. ಆಸೆಯ ಸುಳಿಯಲ್ಲಿ
೯. ಪದ್ಮಾಲಯ
೧೦. ಶ್ರದ್ಧಾಲಯ

ಕಮಲಾನಿ ಕಥಾ
(ಕಥಾ ಸಂಕಲನ)

೧೧. ಬಹುರತ್ನಾವಸುಂಧರಾ
೧೨. ರತ್ನಗರ್ಭಾವಸುಂಧರಾ
೧೩. ಸುಧಾಮಣಿ
೧೪. ರಮಣೀಮಣಿ
೧೫. ಲಿಯೋನಾ
೧೬. ಶ್ರೀಮುಖಿ
೧೭. ಶ್ರೀಹರ್ಷಲಾ
೧೮. ವೈಶಾಖೀಪರ್ವ
೧೯. ಫಾಲ್ಗುಣೀ ಪರ್ವ
೨೦. ಮಣಿಮೇಖಲಾ
೨೧. ಮಣಿಕರ್ಣಿಕಾ

(ಕವಿತಾ ಸಂಕಲನ)

೨೨. ಪೂಜಾವಸಾನ ಸಮಯೇ...!
೨೩. ಧ್ಯಾನಾವಸಾನ ಸಮಯೇ...!
೨೪. ಗಗನ ಕುಸುಮ
೨೫. ಜೀವನ ಕುಸುಮ
೨೬. ಚಂಪಕರಾಜಿ
೨೭. ಬಕುಳ ರಾಜಿ
೨೮. ಕಸ್ತೂರಿ ಮಾಲಿಕಾ
೨೯. ಮಂದಾರ ಮಾಲಿಕಾ
೩೦. ವಿಜಯ ಗಾಥಾ
೩೧. ಗಾನ ತೀರ್ಥ
೩೨. ನಾದ ಬಿಂದು
೩೩. ಕಾವ್ಯಾನಂದ ನಂದಿನಿ
೩೪. ಭವಾನಂದ ನಂದಿನಿ
೩೫. ಸಂಗೀತ ಪುಷ್ಪಾಂಜಲಿ
೩೬. ಆತ್ಮ ಗೀತಾಂಜಲಿ

(ಸಂಜೀವನ ಕಾವ್ಯ)

೩೭. ಮಂಗಳ ಭಾರತಿ
೩೮. ಕಲ್ಯಾಣ ಭಾರತಿ
೩೯. ಉತ್ತರೋತ್ತರಣಿ
೪೦. ರಾಗಾನುರಾಗಿಣಿ
೪೧. ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೪೨. ಪುಣ್ಯಾಭಿಸಾರ
೪೩. ಪುಣ್ಯಪಯೋನಿಧಿ

(ಸಾನೆಟ್‌ಗಳು)

೪೪. ತರಂಗಿಣಿ

(ಗದ್ಯಕಾವ್ಯ)

೪೫. ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೪೬. ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೭. ದೂರ ದೇಶದಲ್ಲಿ
೪೮. ಬೆಳದಿಂಗಳ ರಾತ್ರಿ
೪೯. ರಂಗನ ಸಾಹಸ
೫೦. ಓಹಿಯೋಜ ಸರೋವರ
೫೧. ಕೌಶಿಕನ ಗೊಂಬೆ
೫೨. ವಿಶೇಷ ಸುದ್ದಿ
೫೩. ಕಲ್ಯಾಣಿ ರಾಗಿಣಿ
೫೪. ಶ್ರೀ ವಿವೇಕಾನಂದ ವಿಜಯಂ

(ಮಹಾಕಾವ್ಯ)



ಅಮೆರಿಕೆಯೊಳ್ ಸ್ತ್ರೀಯರ ಕಾರಾಗೃಹದ ದಕ್ಷ
ಅಧಿಕಾರ ಪೀಠಸ್ಥೆಯುಂ ತನ್ನೆಲ್ಲ ಕಾರ್ಯ-
ಭಾರಮಂ ವಿವರಿಸಿದಳಂತು 'ಗುರುವೇ ಕೇಳ್ಕೆ
ಮಹಿಳೆಯರ ಕಾರಾಗೃಹವ ನಾವ್ ಸುಧಾರಣಾ
ಗೃಹವೆಂದೆಂಬ ನಲ್ಪೆಸರಿಂ ಕರೆವುದೆ ರೂಢಿ.
ಖೈದಿಗಳ ಮುಂದಿನ ಭವಿಷ್ಯಮಂ ಚೆಂದದಿಂ
ನಿರೂಪಿಸಲ್ ಮಾರ್ಗದರ್ಶನಗೈವುವು ನಮ್ಮಯ
ಸುಧಾರಣ ಗೃಹಗಳ್' ಎಲ್ಲ ತಿಳಿದು ನೋಡಿ!
ಇಂತಪ್ಪ ಸುವ್ಯವಸ್ಥೆಯ ಕ್ರಮಗಳೆಮ್ಮೊಳ್
ದೂರಾತಿದೂರವೇ. ಸೋದರಿಯರ ಸಂಕಟವ
ನೆನೆದು ಮರುಗುವೆನ್. ಕರಗುವೆನ್. ಪುರುಷವರ್ಗ
ನಿರ್ದಯ ನಿರಾದರದಲಿ ನೀರೆಯರಂ ಸರ್ವಥಾ
ತಮ್ಮ ಸೊತ್ತಾಗಿ ತೊತ್ತಾಗಿ ಸೆರೆಯಿಕ್ಕುವರ್.
ಮಾನವತೆಯ ಹಿರಿಮೆಯಂ ಕುರಿತಂತೆ ಹಿಂದೂ
ಧರ್ಮದವೊಲ್ ಮತ್ತಾವ ಧರ್ಮವುಂ ನೀತಿಯಂ
ರೀತಿಯಂ ಬೋಧಿಸಿ ಜನಮನವಂ ತಣಿಸಿಲ್ಲ.
ಆದೊಡಿದು ಏಂ ಕಟುಕತನಮೋ ಹಾ....!

CHICAGO ADDRESSES

RESPONSE TO WELCOME

At the World's Parliament of Religions, Chicago, 11th September 1893

Sisters and Brothers of America,

It fills my heart with joy unspeakable to rise in response to the warm and cordial welcome which you have given us. I thank you in the name of the most ancient order of monks in the world; I thank you in the name of the mother of religions; and I thank you in the name of the millions and millions of Hindu people of all classes and sects.

My thanks, also, to some of the speakers on this platform who, referring to the delegates from the Orient, have told you that these men from far-off nations may well claim the honour of bearing to different lands the idea of toleration. I am proud to belong to a religion which has taught the world both tolerance and universal acceptance. We believe not only in universal toleration, but we accept all religions as true. I am proud to belong to a nation which has sheltered the persecuted and the refugees of all religions and all nations of the earth. I am proud to tell you that we have gathered in our bosom the purest remnant of the Israelites, who came to southern India and took refuge with us in the very year in which their holy temple was shattered to pieces by Roman tyranny. I am proud to belong to the religion which has sheltered and is still fostering the remnant of the grand Zoroastrian nation. I will quote to you, brethren, a few lines from a hymn which I remember to have repeated from my earliest boyhood, which is every day repeated by millions of human beings: *"As the different streams having their sources in different places all mingle their water in the sea, so, O Lord, the different paths which men take through different tendencies, various though they appear, crooked or straight, all lead to Thee."*

The present convention, which is one of the most august assemblies ever held, is in itself a vindication, a declaration to the world, of the wonderful doctrine preached in the Gita: *"Whosoever comes to Me, through whatsoever form, I reach him; all men are struggling through paths which in the end lead to Me."* Sectarianism, bigotry, and its horrible descendant, fanaticism, have long possessed this beautiful earth. They have filled the earth with violence, drenched it often and often with human blood, destroyed civilisation, and sent whole nations to despair. Had it not been for these horrible demons, human society would be far more advanced than it is now. But their time is come; and I fervently hope that the bell that tolled this morning in honour of this convention may be the death-knell of all fanaticism, of all persecutions with the sword or with the pen, and of all uncharitable feelings between persons wending their way to the same goal.